ಶ್ರೀ ಗೋವಿಂದ ರಘುನಾಥ ದಾಬೋಲ್ಕರ್ ವಿರಚಿತ

# ಶ್ರೀ ಸಾಯಿ ಸಚ್ಚರಿತೆ (ಕನ್ನಡ)

Govind Raghunath Dabolkar's

# SHRI SAI SATCHARITRA (Kannada)

SHRI SAIBABA SANSTHAN TRUST, SHIRDI
ಶ್ರೀ ಸಾಯಿಬಾಬಾ ಸಂಸ್ಥಾನ ವಿಶ್ವಸ್ತ ಮಂಡಳಿ, ಶಿರಡಿ
Post: Shirdi - 423109
Tal: Rahata, Dist. Ahmednagar, Maharashtra

**Publisher :**
Chairman
Shri Saibaba Sansthan Trust, Shirdi
Tal. : Rahata, Dist. Ahmednagar - 423109.
Tel : 02423 - 258500, Fax : 02423 - 258770
Email : saibaba@sai.org.in
Website : www.sai.org.in

**Mumbai Office :**
804-B, Sai Niketan, Dr. Ambedkar Road,
Dadar, Mumbai - 400 014.

**Edition :** 1st (2016)

**Copies :** 1000

**Price :** Rs. 187.00

© Shri Saibaba Sansthan Trust, Shirdi.

**Printed By :**
Cherry Offset,
Solapur - 413 001.

---

**Translated in Kannada by: Dr. R. Seethalakshmi M.D.,**
(Retd., Director of Medical Education, Govt. of Karnataka,) **Mysore Karnataka.**
ಕನ್ನಡ ಅನುವಾದಕರು: ಡಾ॥ ಆರ್. ಸೀತಾಲಕ್ಷ್ಮಿ, M.D.
(ನಿವೃತ್ತ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಕರ್ನಾಟಕ ಸರಕಾರ,) ಮೈಸೂರು, ಕರ್ನಾಟಕ.

# ಪ್ರೇರಣೆ

ಓಂ ಶ್ರೀ ಸಾಯಿರಾಮ್. ಸಕಲ ಜೀವರಾಶಿಗಳಲ್ಲೂ ಅತಿ ಶ್ರೇಷ್ಠವಾದ ಮಾನವಜನ್ಮವನ್ನು ಹೊತ್ತು ಈ ಜಗತ್ತಿಗೆ ಬಂದಿರುತ್ತೇವೆ. ನಮಗೆ ಪ್ರೀತಿಪಾತ್ರರಾದ ಮಾತಾ-ಪಿತೃಗಳು, ಬಂಧು-ಬಳಗ, ಪತಿ-ಪತ್ನಿ, ಮಕ್ಕಳು-ಮೊಮ್ಮಕ್ಕಳು ಎಲ್ಲರೂ ಜೀವನದಲ್ಲಿ ಸಂತೋಷಗಳನ್ನು ನೀಡಬಲ್ಲರು. ಆದರೆ ಜೀವನದ ಪರಮ ಗುರಿಯಾದ ಮೋಕ್ಷವನ್ನು ನೀಡಲು ಯಾರಿಂದಲೂ ಸಾಧ್ಯವಿಲ್ಲ. ಜೀವನದ ಅತ್ಯಮೂಲ್ಯ ಗುರಿಯಾದ ಆತ್ಮಸಾಕ್ಷಾತ್ಕಾರಕ್ಕೆ ಹಾಗೂ ಇಹ-ಪರಗಳೆರಡಕ್ಕೂ ಮಾರ್ಗತೋರಿಸುವವನೇ ಸದ್ಗುರು. ಸಾಕ್ಷಾತ್ ಪರಬ್ರಹ್ಮ ವಸ್ತುವೇ ಸದ್ಗುರುವಾಗಿ ಈ ಬುವಿಯ ಶಿರಡಿಯಲ್ಲಿ ಮಾನವ ದೇಹದಿಂದ ಅವತರಿಸಿ ಬಂದಿರುವುದು ನಮ್ಮೆಲ್ಲರ ಸುಕೃತ. ನಿತ್ಯ ನಿರ್ಮಲ ನಿರ್ಗುಣ ನಿರಂಜನ ಪರಬ್ರಹ್ಮವಸ್ತುವೇ ನಾನಾಗಿರುವೆನೆಂಬ ಸ್ವಸ್ವರೂಪಾನಂದದಲ್ಲಿ ಸದಾ ನೆಲಸಿರುವವರೇ ಶ್ರೀ ಶಿರಡಿಸಾಯಿ ಬಾಬಾರವರು. ಅಂತಹವರ ಜೀವನ ಚರಿತ್ರೆಯಾದ 'ಶ್ರೀ ಸಾಯಿ ಸಚ್ಚರಿತೆ'ಯು ಶ್ರೀ ಗೋವಿಂದ ರಘುನಾಥ ದಾಬೋಲ್ಕರ್‌ರವರಿಂದ ಮರಾಠಿ ಭಾಷೆಯಲ್ಲಿ 9309 ಶ್ಲೋಕಗಳ ರೂಪದಲ್ಲಿ ಸದ್ಗುರು ಬಾಬಾರವರ ಕೃಪೆಯಿಂದಲೇ ರಚಿಸಲ್ಪಟ್ಟ ಅತ್ಯಮೂಲ್ಯ ವೇದಾಂತ ತತ್ವಗಳನ್ನೊಳಗೊಂಡ ಖನಿ. ಮೂಲ ಮರಾಠಿ ಭಾಷೆಯ ಕೃತಿಯನ್ನು ಆಂಗ್ಲ ಭಾಷೆಗೆ ಅನುವಾದಿಸಿದವರು ಶ್ರೀಮತಿ ಝರೀನ್‌ರವರು. ಆಂಗ್ಲಭಾಷೆಯ ಅನುವಾದಿತ ಕೃತಿಯ ಸಹಾಯದಿಂದ ಕನ್ನಡ ಭಾಷೆಯಲ್ಲಿ ಈ ಕೃತಿ ಮೂಡಿಬಂದಿರುವುದು ಬಾಬಾರವರ ಇಚ್ಛೆಯಷ್ಟೆ. ವೃತ್ತಿಯಲ್ಲಿ ವೈದ್ಯಳಾಗಿ, ಬೋಧಕಳಾಗಿ, ಸಮಾಜಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ನನ್ನನ್ನು ಅನುಗ್ರಹಿಸಿ ಅಗಾಧವಾದ ಅಂತರಾರ್ಥವುಳ್ಳ ವೇದಾಂತ ತತ್ವವೇ ಆದ ಈ ಶ್ರೀ ಸಾಯಿ ಸಚ್ಚರಿತೆಯ ಕನ್ನಡ ಅನುವಾದವನ್ನು ಬಾಬಾರವರೇ ಕೈಹಿಡಿದು ಬರೆಸಿರುವರೆಂಬುದು ನನ್ನ ದೃಢವಿಶ್ವಾಸ. ಮರಾಠಿ ಭಾಷೆಯಲ್ಲಿ ಚತುಷ್ಪದಿಯಲ್ಲಿರುವ ಈ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಒಂದೊಂದು ಪದಿಗೂ ಅನುಗುಣವಾಗಿ ಅರ್ಥೈಸಲು ಮೂಲ ಕಾರಣರಾದ ಶಿರಡಿಯ ಶ್ರೀ ಜ್ಯೋತಿಲಾಲ್ ಜಾಧವ್ ಹಾಗೂ ಶಿರಡಿಯ ಅರ್ಚಕರಾದ ಶ್ರೀ ಸುಲಾಖೆ ಶಾಸ್ತ್ರಿಮಹಾರಾಜ್‌ರವರ ನಿರಂತರ ಪ್ರೋತ್ಸಾಹವನ್ನು ಇಲ್ಲಿ ಸ್ಮರಿಸುತ್ತೇನೆ. ಈ ಗ್ರಂಥದ ವಿಮರ್ಶಾವಲೋಕನ ಮಾಡಿ ಪ್ರತಿಹೆಜ್ಜೆಗೂ ಸಲಹೆ ನೀಡಿದ ನನ್ನ ಗುರುಗಳಾದ ಮೈಸೂರಿನ ಪ್ರೊ. ಕೆ. ಬಿ. ಪ್ರಭುಪ್ರಸಾದ್‌ರವರಿಗೆ ನನ್ನ ವಂದನೆಗಳು.

ಭಗವಂತನ ಅವತಾರ ಸ್ವರೂಪರಾದ ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರು ಪ್ರೇಮದಿಂದ ನನ್ನನ್ನು 'ಸೀತಾಮಹಾಲಕ್ಷ್ಮಿ' ಎಂದು ಕರೆಯುತ್ತಾ ಶಿರಡಿಸಾಯಿಯ ಅವತಾರವೇ ತಾವೆಂಬ ಅರಿವನ್ನು ಮೂಡಿಸಿ ಶಿರಡಿಸಾಯಿ ಸ್ವರೂಪದಲ್ಲಿ ಅನುಗ್ರಹಿಸಿರುತ್ತಾರೆ.

ಸೆಪ್ಟೆಂಬರ್ 1ನೇ ತಾರೀಖು 1946ರಂದು ಭದ್ರಾವತಿಯಲ್ಲಿ ನನ್ನ ಜನ್ಮಕ್ಕೆ ಕಾರಣರಾದ ಭಾರದ್ವಾಜಗೋತ್ರಜರಾದ ತಂದೆ ದಿ॥ ಶ್ರೀ ಡಿ. ಎಸ್. ರಾಮಚಂದ್ರ ಅಯ್ಯರ್ ಮತ್ತು ತಾಯಿ ಕಮಲಮ್ಮನವರಿಗೆ ನನ್ನ ಪ್ರಥಮ ವಂದನೆ ಸಲ್ಲಿಸುತ್ತೇನೆ. ಮನೆದೇವರಾದ ಮಾರೇಹಳ್ಳಿ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಗೆ ಸಾಷ್ಟಾಂಗ ಪ್ರಣಾಮಗಳು. ಹಾಗೆಯೇ ಈ ಆಧ್ಯಾತ್ಮ ಮಾರ್ಗದಲ್ಲಿ ಕರೆದೊಯ್ದ ನನ್ನ ದೀಕ್ಷಾಗುರುಗಳಾದ ಹಿಮಾಲಯದ ಮಹಾನ್ ಯೋಗಿ ಸ್ವಾಮಿ ರಾಮರವರಿಗೆ ಅನಂತ ಪ್ರಣಾಮಗಳು. ಮಂತ್ರಾಲಯದ ಗುರುರಾಘವೇಂದ್ರ ಸ್ವಾಮಿಗಳು, ಗುರುಪರಂಪರೆಯ ಮಹಾವತಾರ ಬಾಬಾಜಿ, ಲಾಹಿರಿ ಮಹಾಶಯ, ಯುಕ್ತೇಶ್ವರಗಿರಿ, ಪರಮಹಂಸ ಯೋಗಾನಂದರು, ಮಾತಾ ಅಮೃತಾನಂದಮಯಿ ದೇವಿ, ಮಾತಾ ವಿಜಯೇಶ್ವರಿ ದೇವಿ, ಪರಬ್ರಹ್ಮ ಆಶ್ರಮದ ಗುರು ಭಗವಾನ್ ಶ್ರೀ ಗಂಗಾಧರ್ ಗುರೂಜಿ, ಕಿನ್ನಿಗೋಳಿಯ ಶಕ್ತಿದರ್ಶನಯೋಗಾಶ್ರಮದ ಗುರೂಜಿ ಶ್ರೀ ದೇವಬಾಬಾ, ತಟ್ಟೆಕೆರೆಯ ಅವಧೂತ ಶ್ರೀ ಸಿದ್ದಪ್ಪಾಜಿ, ಇವರ ಅನುಗ್ರಹವೂ ಅಪಾರ. ನನ್ನ ಆಧ್ಯಾತ್ಮ ಮಾರ್ಗಕ್ಕೆ ಸಹಕಾರಿಗಳಾದ ಪತಿದೇವರಾದ ಡಾ॥ ಎ. ಪಿ. ನರಸಪ್ಪ, ಸಹೋದ್ಯೋಗಿ ಡಾ॥ ನಾಗ್, ಮೈಸೂರಿನ ವೇದಾಂತಮಾಸ್ತರರಾದ ಶ್ರೀ ನಾಗರಾಜ್ ಇವರೆಲ್ಲರ ಮಮತೆಯ ಮಗುವಾಗಿ ಬೆಳೆದು ನಿಮ್ಮೆದುರಿಗೆ ನಿಂತಿರುವುದು ನನ್ನ ಸೌಭಾಗ್ಯ. ಹಾಗೂ ಸಹಕಾರ ನೀಡಿದ ಶ್ರೀಮತಿ ರಾಧಾನರಸಪ್ಪ ಮತ್ತು ಅರ್ಜುನ್ ಕೃಷ್ಣಮೂರ್ತಿ ಇವರನ್ನೂ ಸ್ಮರಿಸುತ್ತೇನೆ.

ಈ ಗ್ರಂಥರಚನೆಯಲ್ಲಿ ಸಹಾಯ ಹಸ್ತನೀಡಿದ ನನ್ನ ಆತ್ಮೀಯ ಗೆಳತಿ ಹಾಗೂ ಆಧ್ಯಾತ್ಮ ಬಂಧುವಾದ ಡಾ॥ ಹೆಚ್. ವಿ ಚಂದ್ರಲೇಖಳಿಗೆ ನನ್ನ ಕೃತಜ್ಞತೆಗಳು. ಪುಸ್ತಕದ ಡಿ.ಟಿ.ಪಿ.(ಬೆರಳಚ್ಚು) ಮಾಡಿದಂತಹ ಶ್ರೀ ಎ. ಪಿ. ಜಯರಾಮ, ಅಳಿಕೆ ಮತ್ತು ಶ್ರೀಮತಿ ಚಂದ್ರಕಲಾ, ಪ್ರತಿ ಹೆಜ್ಜೆಯಲ್ಲೂ ತಮ್ಮ ಅಗಾಧವಾದ ಸಾಯಿಭಕ್ತಿಯನ್ನು ತುಂಬಿದ್ದಾರೆ. ಶ್ರೀ ಸಾಯಿಯವರ ಸೇವೆಯಲ್ಲಿ ನಿರತಳಾಗಿದ್ದನಾನು ಸದ್ಗುರುವಿನ ಪ್ರೇರಣೆಯಂತೆ ಊರಿನ ಸದ್ಭಕ್ತರ ನೆರವು ಹಾಗೂ ಸಹಕಾರಗಳೊಂದಿಗೆ ಮೈಸೂರಿನ ರಾಮಕೃಷ್ಣ ನಗರದಲ್ಲಿ "ಶ್ರೀ ಶಿರಡಿಸಾಯಿ ಶಕ್ತಿಸನ್ನಿಧಿ" ಮಂದಿರವನ್ನು ನಿರ್ಮಿಸಿ 2010ರ ನವಂಬರ್ 18 ಮತ್ತು 19, ಉತ್ಥಾನ ದ್ವಾದಶಿ ದಿನದಂದು ಸ್ವಾಮಿಯ ಶ್ರೀಚರಣಗಳಲ್ಲಿ ಅರ್ಪಿಸಿ ಕೃತಾರ್ಥಳಾದೆನು. ಶ್ರೀಚಕ್ರದ ಮೇಲೆ ಆಸೀನರಾಗಿರುವ ಸದ್ಗುರುವಿನ ಸನ್ನಿಧಿಯಲ್ಲಿ ಪ್ರತಿದಿನ ಪೂಜಾಕೈಂಕರ್ಯಗಳು ಸಾಂಗವಾಗಿ ನೆರವೇರುತ್ತಿವೆ ಹಲವಾರು ಬಾರಿ ಶ್ರೀ ಶಿರಡಿ ದಿವ್ಯಕ್ಷೇತ್ರಕ್ಕೆ ಭೇಟಿನೀಡಿ ಸದ್ಗುರುವಿನ ಕೃಪಾಕಟಾಕ್ಷಕ್ಕೆ ಪಾತ್ರಳಾಗುವ ಅವಕಾಶ ದೊರೆತಿದೆ. ಈ ಮಂದಿರದ ಪೂರ್ಣ ಉಸ್ತುವಾರಿಯನ್ನು

ಹೆಗಲಿಗೇರಿಸಿಕೊಂಡು ನಡೆಸುತ್ತಿರುವ ಶ್ರೀ ಪಿ. ಟಿ. ಗಂಗಾಧರಯ್ಯ ಮತ್ತು ಡಾ। ಆರ್. ಪಿ. ಸಾಯಿನಾಥ್ ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಶ್ರೀ ಸಾಯಿ ಸದ್ಗುರುವಿನ ಪ್ರೇರಣೆ ಹಾಗೂ ಅನುಗ್ರಹದಂತೆ ಸಮಸ್ತ ಕನ್ನಡ ಸಾಯಿಬಂಧುಗಳಿಗೂ ಈ ದಿವ್ಯಕೃತಿಯನ್ನು ಸದ್ಭಾವನೆಯಿಂದ ಸೇವಾರ್ಥವಾಗಿ ಸಮರ್ಪಿಸುತ್ತಿದ್ದೇನೆ. ಸಹೃದಯರು ಈ ಕೃತಿಯನ್ನು ಆದರಾಭಿಮಾನಗಳಿಂದ ಗುರುಭಕ್ತಿಯಿಂದ ಸ್ವೀಕರಿಸಿ ಸದ್ಗುರುವಿನ ಅನುಗ್ರಹಕ್ಕೆ ಪಾತ್ರರಾಗಲಿ ಎಂದು ಹಾರೈಸುತ್ತೇನೆ.

12–7–2014, ಗುರುಪೂರ್ಣಿಮೆ,

ಡಾ॥ ಆರ್. ಸೀತಾಲಕ್ಷ್ಮಿ, M.D.
(ನಿವೃತ್ತ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಕರ್ನಾಟಕ ಸರಕಾರ,)
ಮೈಸೂರು, ಕರ್ನಾಟಕ.
Dr. R. Seethalakshmi, M.D.
Retd. Director of Medical Education Govt. of Karnataka.
Ph: 09620567111
Email - dr.seethamahalakshmi@rediffmail.com

# ಹೇಮಾಡಪಂತ

(ಗೋವಿಂದ ರಘುನಾಥ ದಾಬೋಲ್ಕರ್) – ಅಣ್ಣಾಸಾಹೇಬ – ಮರಾಠಿ ಭಾಷೆಯಲ್ಲಿ ಶ್ರೀಸಾಯಿ ಸಚ್ಚರಿತೆಯ ಮೂಲ ಲೇಖಕರು.

ಶ್ರೀ ಸಾಯಿಸಚ್ಚರಿತೆಯು ಅಣ್ಣಾಸಾಹೇಬ ದಾಬೋಲ್ಕರ್‌ರವರಿಂದ ರಚಿಸಲ್ಪಟ್ಟಿತ್ತಾದರೂ ಪ್ರತಿ ಅಧ್ಯಾಯದ ಕೊನೆಯಲ್ಲಿ ಸಾಯಿಬಾಬಾರವರ ಪ್ರೇರಣೆಯಂತೆ ಹೇಮಾಡಪಂತನಿಂದ ರಚಿಸಲ್ಪಟ್ಟಿತೆಂದು ಕೃತಿಯೇ ತಿಳಿಸುತ್ತದೆ. ಸಾಯಿಬಾಬಾರವರು ಮೊದಲು ಭೇಟಿಯಲ್ಲೇ ದಾಬೋಲ್ಕರ್‌ಗೆ ಇಟ್ಟ ಹೆಸರು 'ಹೇಮಾಡಪಂತ್' ಎಂಬುದು. ಇದರ ಪ್ರಾಮುಖ್ಯತೆಯನ್ನು ಸಾಯಿಸಚ್ಚರಿತೆಯ 2ನೇ ಅಧ್ಯಾಯದಲ್ಲಿ ತಿಳಿಸಿರುತ್ತಾರೆ.

ಶ್ರೀ ದಾಬೋಲ್ಕರ್‌ನು 1859ರಲ್ಲಿ ಒಂದು ಬಡ ಆದ್ಯಗೌಡಬ್ರಾಹ್ಮಣ ಕುಟುಂಬದಲ್ಲಿ ಥಾಣಾ ಜಿಲ್ಲೆಯ ಕೆಳವೆ ಮಾಹಿಮ್ ಎಂಬ ಹಳ್ಳಿಯಲ್ಲಿ ಜನಿಸಿದನು. ಅವನ ತಂದೆ ಮತ್ತು ತಾತ ಬಹಳ ಧಾರ್ಮಿಕ ವ್ಯಕ್ತಿಗಳಾಗಿದ್ದರು. ಬಡತನದಿಂದಾಗಿ ಪ್ರಾಥಮಿಕ ಶಿಕ್ಷಣ ಅವನ ಊರಿನಲ್ಲೂ, ಆಂಗ್ಲ ಶಾಲೆ 5ನೇ ತರಗತಿವರೆಗೆ ಪುಣೆಯಲ್ಲೂ ನಡೆಯಿತು. ಅದನ್ನು ಮುಂದುವರಿಸಲು ಆಗದೆ ಸಾರ್ವಜನಿಕ ಸೇವಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ತನ್ನ ಸ್ವಗ್ರಾಮದಲ್ಲಿ ಶಾಲೆಯ ಮಾಸ್ತರನಾದನು.

ಅವನ ಒಳ್ಳೆಯ ಗುಣ, ಬುದ್ಧಿವಂತಿಕೆ ಮತ್ತು ಕಾರ್ಯವೈಖರಿಯನ್ನು ಗಮನಿಸಿದ ಕೊಲಾಬಾ ಜಿಲ್ಲೆಯ ಮಾಮಲೇದಾರನಾಗಿದ್ದ ಶ್ರೀ ಸಾಬಾಜಿ ಚಿಂತಾಮನ್ ಚಿಟ್ನಿಸ್‌ನು ಅವನನ್ನು ತನ್ನ ಕಛೇರಿಯಲ್ಲಿ ತಲಟಿಯಾಗಿ(ಹಳ್ಳಿಯ ಕ್ಲರ್ಕ್) ನೇಮಿಸಿ ನಂತರ ಅವಲ್(ಕ್ಲರ್ಕ್) ಆಗಿ ನೇಮಿಸಿದನು. ಮತ್ತೆ ಅರಣ್ಯ ನಿರ್ವಹಣಾಧಿಕಾರಿಯಾಗಿ, ನಂತರ ಕ್ಷಾಮ ನಿರ್ವಹಣಾ ಕಾರ್ಯದಲ್ಲಿ ವಿಶೇಷ ಅಧಿಕಾರಿಯಾಗಿ ಬ್ರೋಚ್(ಗುಜರಾತ್)ನಲ್ಲಿ ನೇಮಕಾತಿ ಪಡೆದು ಅಲ್ಲಿ ತೃಪ್ತಿಕರವಾದ ಸೇವೆ ಸಲ್ಲಿಸಿದನು. 1901ರಲ್ಲಿ ಥಾಣಾ ಜಿಲ್ಲೆಯ ಷಹಾಪುರದಲ್ಲಿ ಮಾಮಲೇದಾರನಾಗಿ ಮತ್ತು 1903ರಲ್ಲಿ ಬಾಂದ್ರಾದಲ್ಲಿ ಮೊದಲ ದರ್ಜೆಯ ಸ್ಥಾನಿಕ ನ್ಯಾಯಾಧೀಶನಾಗಿ ನೇಮಕನಾಗಿ 1907ರವರೆಗೆ ಸೇವೆಸಲ್ಲಿಸಿದನು. ಅಲ್ಲಿಂದ ಮುರ್ಬಾದ್, ಅನಂದ್, ಬೋರ್ಸದ್(ಖೇಡಾಜಿಲ್ಲೆ)ಗಳಲ್ಲಿ ಕೆಲಸ ಮಾಡಿ 1910ರಲ್ಲಿ ಮತ್ತೆ ಬಾಂದ್ರಾಗೆ ವರ್ಗಾಯಿಸಲ್ಪಟ್ಟನು. ಆ ವರ್ಷಗಳಲ್ಲಿ ಶಿರಡಿಗೆ ಹೋಗಿ ಸಾಯಿಬಾಬಾರವರ ದರ್ಶನ ಪಡೆಯುವ ಅದೃಷ್ಟ ದೊರಕಿತು. 1916ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದನು. ಅಲ್ಪ ಸಮಯದವರೆಗೆ ಸರ್ಕಾರದ ತಾತ್ಕಾಲಿಕ ನೌಕರಿ ಮಾಡಿದನಂತರ ಬಾಬಾರವರ ಸೇವೆಯಲ್ಲಿ ತನ್ನನ್ನು ತಾನು ಆತ್ಮಪೂರ್ವಕವಾಗಿ ತೊಡಗಿಸಿಕೊಂಡನು. ಅಲ್ಲಿಂದ 1929ರಲ್ಲಿ ಅವನ ದೇಹಾವಸಾನದ ವರೆಗೆ ಶಿರಡಿಯ ಸಾಯಿಬಾಬಾ ಸಂಸ್ಥಾನವನ್ನು ಬಹಳ ಸಮರ್ಪಕವಾಗಿ ನಡೆಸಿಕೊಂಡು ಬಂದನು. ಅವನು ಪತ್ನಿ, ಒಬ್ಬ ಮಗ ಮತ್ತು ಐವರು ಪುತ್ರಿಯರನ್ನು ಒಳಗೊಂಡ ಸುಖೀಕುಟುಂಬ ಜೀವನ ನಡೆಸಿದನು.

ಆಧಾರ: ಶ್ರೀ ಎನ್. ವಿ. ಗುಣಾಜಿಯವರ ಆಂಗ್ಲ ಭಾಷೆಯ ಪುಸ್ತಕದ ಮೊದಲ ಮುದ್ರಣದಲ್ಲಿ ಮೂಲ ಮರಾಠಿ ಗ್ರಂಥದಿಂದ ಆಯ್ದು ಸೇರಿಸಲ್ಪಟ್ಟಿದೆ.

# ವಿಷಯಾನುಕ್ರಮಣಿಕೆ


| ಅಧ್ಯಾಯ ವಿಷಯ | ಪುಟಸಂಖ್ಯೆ |
|---|---|
| ಪ್ರೇರಣೆ | 3–5 |
| ಹೇಮಾಡಪಂತ | 6 |
| ವಿಷಯಾನುಕ್ರಮಣಿಕೆ | 7–8 |
| ಮುನ್ನುಡಿ | 9–32 |
| 1 – ಒಂದು ಪ್ರಾರ್ಥನೆ | 33–48 |
| 2 – ನಾಮಕರಣ ಮಹೋತ್ಸವದ ಬಗ್ಗೆ ವಿವರಿಸುವ ಉದ್ದೇಶ | 49–67 |
| 3 – ಈ ಗ್ರಂಥ ರಚನೆಗೆ ನೀಡಿದ ಒಪ್ಪಿಗೆ | 68–84 |
| 4 – ಸಾಯಿ ಸಮರ್ಥರ ಅವತರಣ | 85–102 |
| 5 – ಸಾಯಿಯ ಪುನರ್ದರ್ಶನ | 103–118 |
| 6 – ರಾಮಜನ್ಮ ದಿನಾಚರಣೆಯ ನಿರೂಪಣೆ | 119–133 |
| 7 – ವಿವಿಧ ಕಥೆಗಳ ನಿರೂಪಣೆ | 134–147 |
| 8 – ಸಾಯಿ ಸಮರ್ಥರ ಅವತಾರ | 148–162 |
| 9 – ದಾಬೋಲ್ಕರ್‌ನಿಂದ ಹೆಸರಿಡದೆ ಇರುವ ಅಧ್ಯಾಯ | 163–177 |
| 10 – ಸಾಯಿ ಸಮರ್ಥರ ಅವತಾರ | 178–192 |
| 11 – ಶ್ರೀ ಸಾಯಿಯ ಮಹತ್ವದ ವರ್ಣನೆ | 193–206 |
| 12 – ರಾಮನ ದರ್ಶನ–ಶ್ರೀ ಸಂತ ಘೋಲಪರು | 207–223 |
| 13 – ಭೀಮಾಜಿಯ ಕ್ಷಯರೋಗ ನಿವಾರಣೆ | 224–240 |
| 14 – ರತನ್‌ಜೀಗೆ ಸಾಯಿಯ ಭೇಟಿ | 241–260 |
| 15 – ಚೋಳ್ಕರ್‌ನ ಸಕ್ಕರೆಯ ಕಥೆ | 261–272 |
| 16 – ಬ್ರಹ್ಮಜ್ಞಾನದ ನಿರೂಪಣೆ | 273–289 |
| 17 – ಬ್ರಹ್ಮಜ್ಞಾನದ ನಿರೂಪಣೆ | 290–305 |
| 18 – ನನ್ನ ಮೇಲೆ ದಯಪಾಲಿಸಿದ ಕರುಣೆ | 306–320 |
| 19 – ನನ್ನ ಮೇಲೆ ದಯತೋರಿದ ಕರುಣೆ | 321–343 |
| 20 – ಈಶಾವಾಸ್ಯ ಸಾರದ ಪಾಠ | 344–356 |
| 21 – ಅನುಗ್ರಹ ವರ್ಷ | 357–369 |
| 22 – ಅಕಾಲ ಮೃತ್ಯು ನಿವಾರಣೆ | 370–390 |
| 23 – ಗುರು ಮತ್ತು ಶಿಷ್ಯರ ಲೀಲೆಯ ನೋಟ | 391–408 |
| 24 – ಹಾಸ್ಯ ರಸಾಯನ | 409–422 |
| 25 – ಭಕ್ತಾಭೀಷ್ಟ ಸಂಪಾದನೆ | 423–433 |
| 26 – ಅಪಸ್ಮಾರ ಮತ್ತು ಆತ್ಮಹತ್ಯೆಯ ನಿವಾರಣೆ ಹಾಗೂ ತನ್ನ ಗುರುಪದಗಳಲ್ಲಿ ಸ್ಥಿರೀಕರಣ | 434–447 |

27 – ದೀಕ್ಷೆ ಮತ್ತು ಅನುಗ್ರಹಗಳ ಕೃಪೆ 448–466
28 – ದರ್ಶನಗಳ ನಿರೂಪಣೆ 467–486
29 – ಸ್ವಪ್ನಕಥೆಗಳ ನಿರೂಪಣೆ 487–504
30 – ಹರಕೆ ಮತ್ತಿತರ ಕಥೆಗಳ ನಿರೂಪಣೆ 505–516
31 – ದರ್ಶನದ ಮಹತ್ವ 517–531
32 – ಗುರುವಿನ ಮಹತ್ವದ ನಿರೂಪಣೆ 532–547
33 – ಉದಿಯ ಶಕ್ತಿ 548–570
34 – ಉದಿಯ ಮಹತ್ವ 571–587
35 – ಸಂಶಯ ಮತ್ತು ತಪ್ಪು ಗ್ರಹಿಕೆಗಳ ನಿವಾರಣೆ
ಹಾಗೂ ವಿಭೂತಿ ವೈಭವ 588–607
36 – ಸಾಯಿಯ ಸರ್ವವ್ಯಾಪಕತೆ
ಹಾಗೂ ಆಶೀರ್ವಚನ ಸಾಫಲ್ಯತೆ 608–622
37 – ಚಾವಡಿಯ ವಿವರಣೆ 623–642
38 – ಹಂಡೆಯ ನಿರ್ವಹಣೆ 643–660
39 – ಗೀತೆಯ ಶ್ಲೋಕಾರ್ಥದ ವಿಶಿಷ್ಟ ವ್ಯಾಖ್ಯಾನ
ಮತ್ತು ಸಮಾಧಿ ಮಂದಿರ ನಿರ್ಮಾಣ 661–676
40 – ಉದ್ಯಾಪನ ಕಥೆಯ ನಿರೂಪಣೆ 677–692
41 – ಸಾಯಿಯ ಕೃಪೆ ಮತ್ತು ಅನುಗ್ರಹ ಪ್ರದಾನ 693–707
42 – ಸಾಯಿನಾಥರ ನಿರ್ಯಾಣ (ದೇಹತ್ಯಾಗ) 708–721
43 – ಸಾಯಿನಾಥರ ನಿರ್ಯಾಣ (ದೇಹತ್ಯಾಗ) 722–737
44 – ಸಾಯಿನಾಥರ ನಿರ್ಯಾಣ (ದೇಹತ್ಯಾಗ) 738–754
45 – ಶ್ರೀ ಗುರುಚರಣಗಳ ಮಹಿಮೆ 755–767
46 – ಕಾಶಿ ಮತ್ತು ಗಯಾ ಯಾತ್ರೆ;
ಮೇಕೆಗಳ ಜನ್ಮ ಕಥನ 768–779
47 – ಶ್ರೀ ಸಾಯಿಮುಖದಿಂದ ಬಂದ
ಕಥೆಗಳ ನಿರೂಪಣೆ 780–795
48 – ಶಂಕೆಯುಳ್ಳ ಭಕ್ತರಿಗೆ ಅನುಗ್ರಹ 796–810
49 – ಸಂತರ ನಿಜ ಪರೀಕ್ಷೆ ಮತ್ತು ಮನೋನಿಗ್ರಹ 811–826
50 – ಅಜ್ಞಾನ ನಿರ್ಮೂಲನ 827–846
51 – ಮೂವರು ಭಕ್ತರ ಚರಿತ್ರೆ 847–867
52 – ಗ್ರಂಥದ ಸಿಂಹಾವಲೋಕನ 868–877
53 – ಅವತರಣಿಕೆ (ಸಂಕ್ಷಿಪ್ತ ನಿರೂಪಣೆ) 878–896
ಸಾಯಿಬಾಬಾರವರ ಜೀವನದ ಘಟನೆಗಳು 897–912

# ಮುನ್ನುಡಿ

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



ಶ್ರೀ ಗಣೇಶನಿಗೆ ಪ್ರಣಾಮಗಳು.
ಸರಸ್ವತಿ ಮಾತೆಗೆ ಪ್ರಣಾಮಗಳು.
ಸದ್ಗುರುವಿಗೆ ಪ್ರಣಾಮಗಳು.
ಶ್ರೀ ಗುರುವೇ ಬ್ರಹ್ಮನು.
ಶ್ರೀ ಗುರುವೇ ವಿಷ್ಣುವು.
ಶ್ರೀ ಗುರುವೇ ಮಹೇಶ್ವರನು.
ಶ್ರೀ ಗುರುವೇ ಸಾಕ್ಷಾತ್ ಪರಬ್ರಹ್ಮನು.
ಆ ಸದ್ಗುರುವಿಗೆ ಸಾಷ್ಟಾಂಗ ಪ್ರಣಾಮಗಳು.

ಸುಮಾರು 50 ವರ್ಷಗಳ ಹಿಂದೆ[1] ಶ್ರೀಸಾಯಿನಾಥ ಮಹಾರಾಜರು ಶಿರಡಿಗೆ ಆಗಮಿಸಿದರು. ಅಹಮದ್‌ನಗರ ಜಿಲ್ಲೆಯ ಕೋಪರಗಾಂವ ತಾಲುಕಿ[1A]ನಲ್ಲಿ ಶಿರಡಿ ಗ್ರಾಮವಿದೆ. ಶ್ರೀ ಸಾಯಿನಾಥರ ಮಾತಾಪಿತೃಗಳು ಯಾರು, ಮೂಲತಃ ಸಾಯಿನಾಥರು ಯಾವ ಊರಿನವರು ಎಂಬುದರ ಬಗ್ಗೆ ನಿಖರವಾದ ಮಾಹಿತಿ ಇರುವುದಿಲ್ಲ. ಆದರೆ ಮಹಾರಾಜರು ಮೊಗಲರೊಂದಿಗೆ ಸಾಕಷ್ಟು ಸಂಪರ್ಕ ಹೊಂದಿದ್ದರೆಂಬುದು ನಿಶ್ಚಿತವಾಗಿದೆ. ಮೊಗಲರ ಆಡಳಿತದಲ್ಲಿದ್ದ ಶೇಲು, ಜಿಲ್ಹ, ಮಾಣ್ವದ, ಪಾಥರಿ, ಪರಭಣಿ, ನೌರಂಗಾಬಾದ್ (ಪ್ವ, ಔರಂಗಾಬಾದ್), ಬೀಡ, ಬೇದರ ನಗರಗಳ ಬಗ್ಗೆ ಮಹಾರಾಜರು ಪದೇ ಪದೇ ಉಲ್ಲೇಖಿಸುತ್ತಿದ್ದರು. ಒಮ್ಮೆ ಪತ್ರಿಯಿಂದ ಒಬ್ಬರು ಮಹಾರಾಜರ ದರ್ಶನಕ್ಕಾಗಿ ಬಂದಿದ್ದರು. ಆಗ ಮಹಾರಾಜರು ಅವನೊಡನೆ ಪತ್ರಿಯ ಪ್ರಮುಖ ವ್ಯಕ್ತಿಗಳ ಬಗ್ಗೆ, ಅವರ ಕುಶಲಗಳ ಬಗ್ಗೆ ಪ್ರಶ್ನಿಸಿದ್ದರು. ಅಂದರೆ ಇದರಿಂದ ಮಹಾರಾಜರಿಗೆ ಪತ್ರಿಯ ಬಗ್ಗೆ ವಿವರಗಳು ತಿಳಿದಿದ್ದವೆಂದು ನಿರ್ಣಯಿಸಿದರೂ, ಪತ್ರಿ ಅವರ ಜನ್ಮಸ್ಥಳವೆಂದು ಹೇಳಲಾಗದು.

ಹಾಗೆಯೇ ಮಹಾರಾಜರು ಮುಸ್ಲಿಮರೋ, ಬ್ರಾಹ್ಮಣರೋ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಅದೂ ಅಲ್ಲದೆ ಅವರ ಅನೇಕ ಭಕ್ತರು ಇವರು ಮಾನವ ಗರ್ಭಾಶಯದಿಂದ ಜನಿಸಿದವರಲ್ಲವೆಂದು ನಂಬಿದ್ದರು. ಆದರೆ ಈ ಲೇಖಕನು ಹಾಗೆ ನಂಬುವುದಿಲ್ಲ. ಮಹಾರಾಜರೇ ಈ ಲೇಖಕನೊಡನೆ ಹೀಗೆ ಹೇಳಿದ್ದರು, "ಈಗ ನಾನು ಹೊರಡುತ್ತೇನೆ. ಮತ್ತು ಎಂಟು ವರ್ಷದ ಬಾಲಕನಾಗಿ ಮತ್ತೆ ಕಾಣಿಸಿಕೊಳ್ಳುತ್ತೇನೆ. ಶ್ರೀಕೃಷ್ಣನು ದೇವಕಿಮಾತೆಗೆ ಪ್ರಕಟಗೊಂಡಾಗಲೂ ಎಂಟು ವರ್ಷದವನಾಗಿದ್ದನು. ಹಾಗೆ ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. "ಆ ಬೆಳಕು ಊಹಿಸಲು ಅಸದಳವಾಗಿತ್ತು, ಎಂಟು ವರ್ಷದ ಬಾಲಕನಿಂದ ಹೊರಹೊಮ್ಮಿ ದಶದಿಕ್ಕುಗಳನ್ನೂ ಪ್ರಜ್ವಲಗೊಳಿಸಿದ್ದು, ಅದರ ಮುಂದೆ ಸೂರ್ಯ ಚಂದ್ರರೂ ಮಂಕಾಗಿ ಅಲ್ಪವಾಗಿದ್ದರು." (ಹರಿವಿಜಯ, ಅಧ್ಯಾಯ –3, ಶ್ಲೋಕ– 126) ಮಹಾರಾಜರು ಸಾಧನೆಯಿಂದ ಸಿದ್ಧಪುರುಷರಾದರೆಂದು ಅವರ ಅನೇಕ ಭಕ್ತರು ನಂಬುವುದಿಲ್ಲ. ಆದರೆ ಅವರು ಖಚಿತವಾಗಿಯೂ ಅವತಾರವೇ ಆಗಿದ್ದರು. ಮತ್ತು ಮಹಾರಾಜರ ಲೀಲೆಗಳನ್ನು ಹಾಗೂ ಅಪರಿಮಿತ ಶಕ್ತಿಯನ್ನು ನೋಡಿ ಅವರು ಶ್ರೀಕೃಷ್ಣನ ಅವತಾರವೆಂದೇ ಪರಿಗಣಿಸಿದ್ದರು. ಮಹಾರಾಜರೇ ಯಾವುದೇ ಶಕ್ತಿಗಳನ್ನು ತಮ್ಮದೆಂದುಕೊಳ್ಳುತ್ತಿರಲಿಲ್ಲ. ಅವರು ಮಾತನಾಡಿದಾಗಲೆಲ್ಲ ತಮ್ಮನ್ನು ಭಗವಂತನ 'ದಾಸ' ಹಾಗೂ 'ಭಕ್ತನೆಂದೇ ಹೇಳಿಕೊಳ್ಳುತ್ತಿದ್ದರು. "ನನಗೆ ನನ್ನ ಗುರುವಿನ ಕೃಪೆ ವಿಶಾಲವಾಗಿದೆ ಮತ್ತು ಅವನ ಅನುಗ್ರಹದಿಂದ ಭಕ್ತರ ಸಂಕಟಗಳು ನಿವಾರಣೆಯಾಗಿ ಅವರು ಫಲಾನುಭವಿಗಳಾಗುತ್ತಾರೆ" ಎಂದು ಹೇಳುತ್ತಿದ್ದರು. ಅವರು ಭಕ್ತರಿಗೆ ಆಶೀರ್ವದಿಸುವಾಗ, "ಅಲ್ಲಾನು ನಿಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುವನು" ಎಂಬುದು ಸಾಮಾನ್ಯವಾಗಿತ್ತು. ಅವರು ಎಂದಿಗೂ ಯಾವುದೇ ಮಹತಿಯನ್ನು ತಮಗೆ ಅನ್ವಯಿಸಿಕೊಳ್ಳುತ್ತಿರಲಿಲ್ಲ. ಅವರು ಎಂದಿಗೂ "ಅನಲ್ ಹಕ್ ಅಂದರೆ ನಾನು ದೇವರು" ಎಂದು ಹೇಳಲಿಲ್ಲ. ಆದರೆ ಅವರು ಆಗಾಗ್ಗೆ (ಯಾದೇ ಹಕ್ – ಅಂದರೆ ನಾನು ದೇವರನ್ನು ನೆನಪಿಸಿಕೊಳ್ಳುತ್ತಿದ್ದೇನೆ" ಎಂದು ಹೇಳುತ್ತಿದ್ದರು.

ಮಹಾರಾಜರು ಶಿರಡಿಗೆ ಬಂದಾಗ, ಒಂದು ಮದುವೆಯ ದಿಬ್ಬಣದೊಂದಿಗೆ ಒಬ್ಬ ಮುಸ್ಲಿಮ್ ಮಹಾಶಯನೊಂದಿಗೆ ಆಗಮಿಸಿದರು. ಅವನ ಹೆಸರು ಚಾಂದ್‌ಭಾಯ್. ಅವನು ಧೂಪಖೇಡ ಗ್ರಾಮದ ಪಟೇಲನಾಗಿದ್ದನು. ಒಂದು ದಿನ ಅವನ ಕುದುರೆಯು ಕಾಣದಾಗಿದ್ದು ಅದನ್ನು ಹುಡುಕುತ್ತಾ ನಡೆಯುತ್ತಿದ್ದನು. ಆಗ ಒಂದು ಮರದ ಕೆಳಗೆ ಕುಳಿತಿದ್ದ ಮಹಾರಾಜರನ್ನು ಕಂಡನು. ಅವನು ಮಹಾರಾಜರನ್ನು ಹಿಂದೆಂದೂ ನೋಡಿರಲಿಲ್ಲ. ಮಹಾರಾಜರು ಅವನನ್ನು ಕರೆದು, "ಹುಕ್ಕಾದಿಂದ ಒಂದು ಧಮ್ಮನ್ನು ಎಳೆದು ಮುಂದೆ ಹೊರಡು" ಎಂದರು. ಅವನು ಹೇಳಿದನು, "ನನ್ನ ಕುದುರೆ ಕಳೆದು ಹೋಗಿದೆ. ಅದನ್ನು ಹುಡುಕುತ್ತಿದ್ದೇನೆ." ಆಗ ಮಹಾರಾಜರು "ಅದಕ್ಕಾಗಿ ದೂರ ಏಕೆ ಹೋಗುವೆ? ಅದು ಇಲ್ಲಿಯೇ ಈ

ಬೇಲಿಯ ಆಚೆ ಮೇಯುತ್ತಿದೆ" ಎಂದು ಹೇಳಿದರು. ಅದರಂತೆಯೇ ಚಾಂದ್‌ಭಾಯಿಯು ಮಹಾರಾಜರ ನಿರ್ದೇಶನದಂತೆ ಆ ಬೇಲಿಯ ಕಡೆ ಹೊರಟನು. ಅಲ್ಲಿ ನಿಜವಾಗಿಯೂ ಕುದುರೆಯು ಹುಲ್ಲು ಮೇಯುತ್ತಿತ್ತು. ಅವನು ಕುದುರೆಯನ್ನು ಹಿಡಿದುಕೊಂಡು ಮಹಾರಾಜರ ಬಳಿಗೆ ಬಂದನು. ಮಹಾರಾಜರು ಕೊಟ್ಟ ಚಿಲುಮೆಯನ್ನು ಸೇದಿದ ನಂತರ ಅವನು ಮಹಾರಾಜರನ್ನು ತಮ್ಮ ಮನೆಗೆ ಬರಲು ಒತ್ತಾಯಿಸಿದನು. ಮಹಾರಾಜರು, "ನಾಳೆ ಬರುವೆನು" ಎಂದು ಹೇಳಿದರು. ಚಾಂದ್ ಭಾಯಿಗೆ ಸೇದಲು ಚಿಲುಮೆ ನೀಡಿದಾಗ ಅದರಲ್ಲಿ ಕೆಂಡವಿರಲ್ಲಿ. ಮಹಾರಾಜರು ನೆಲವನ್ನು ತಮ್ಮ ಕೈಯಲ್ಲಿನ ಸಟಕಾದಿಂದ ಘಾತಿಸಿ ಉರಿಯುವ ಕೆಂಡವನ್ನು ಸೃಷ್ಟಿಸಿ ತಮ್ಮ ಉದ್ದೇಶ ನೆರವೇರಿಸಿದ್ದರು.

ಚಾಂದ್‌ಭಾಯಿಯ ಮನೆಯಲ್ಲಿ ಮಹಾರಾಜರು ಕೆಲ ದಿನ ಉಳಿದರು. ನಂತರ, ಚಾಂದ್‌ಭಾಯಿಯ ಪತ್ನಿಯ ಸೋದರಳಿಯನ ವಿವಾಹವು ಶಿರಡಿಯ ವಧುವಿನೊಂದಿಗೆ ನಿಶ್ಚಿತಾರ್ಥವು ಆಯಿತು. ಆ ಮದುವೆಯ ದಿಬ್ಬಣದ ಜೊತೆಯಲ್ಲಿ ಮಹಾರಾಜರು ಶಿರಡಿಗೆ ಬಂದರು. ಹಳ್ಳಿಯ ಹೊರಗಡೆ ಖಂಡೋಬ ದೇವಾಲಯದ ಹತ್ತಿರವಿದ್ದ ದೊಡ್ಡಿಯ ಕಣದಲ್ಲಿ ದಿಬ್ಬಣವು ಬಿಡಾರಹೂಡಿತ್ತು. ಮಹಾರಾಜರು ಖಂಡೋಬಮಂದಿರಕ್ಕೆ ಹೋದಾಗ ಅಲ್ಲಿ ಮ್ಹಾಳಸಾಪತಿಯೆಂಬುವವನನ್ನು ಸಂಧಿಸಿದರು. ಮ್ಹಾಳಸಾಪತಿಯು ಶಿರಡಿ ನಿವಾಸಿಯಾದ ಅಕ್ಕಸಾಲಿಗನಾಗಿದ್ದನು. ಅವನು ಖಂಡೋಬನ ಭಕ್ತನಾಗಿದ್ದು ಖಂಡೇರಾಯರನ್ನು ದರ್ಶಿಸಲು ವಂಶಪಾರಂಪರ್ಯವಾಗಿ ಅಧಿಕಾರಯುಕ್ತನಾಗಿದ್ದನು.

ಮಹಾರಾಜರು ಖಂಡೋಬ ಮಂದಿರಕ್ಕೆ ಹೋದಾಗ ಅವರ ಉಡುಪು ಒಂದು ಕಫ್ನಿ ಒಂದು ಟೋಪಿ ಮತ್ತು ಒಂದು ಧೋತಿಯಾಗಿತ್ತು. ಮ್ಹಾಳಸಾಪತಿಯು ಅವರನ್ನು ನೋಡುತ್ತಿದ್ದಂತೆಯೇ, ಅವರನ್ನು "ಸಾಯಿ ಬಾಬಾ, ಸ್ವಾಗತ" ಎಂದು ಸ್ವಾಗತಿಸಿದನು. ಮತ್ತು ಆ ಹೆಸರು ಅಂದರೆ "ಸಾಯಿಬಾಬಾ" ಎಂಬ ನಾಮವನ್ನೇ ಮಹಾರಾಜರು ಕೊನೆಯವರೆಗೂ ಅಳವಡಿಸಿಕೊಂಡರು. ಮಹಾರಾಜರ ಭಕ್ತರನೇಕರು ಅವರನ್ನು "ಸಾಯಿಬಾಬಾ" ಅಥವಾ ಕೇವಲ "ಬಾಬಾ" ಎಂದು ಕರೆಯುತ್ತಿದ್ದರು. ಒಮ್ಮೆ ಮಹಾರಾಜರು ಜಿಲ್ಲಾಧಿಕಾರಿಯ ಮುಂದೆ ಸಾಕ್ಷ್ಯ ನೀಡುವಾಗ ಅವರ ಹೆಸರನ್ನು ಕೇಳಲಾಯಿತು. ಅವರು ಉತ್ತರಿಸಿದರು, "ನನ್ನನ್ನು ಸಾಯಿಬಾಬಾ ಎಂದು ಇವರೆಲ್ಲ ಕರೆಯುತ್ತಾರೆ" ಮ್ಹಾಳಸಾಪತಿಯು ಮಹಾರಾಜರನ್ನು ಹಳ್ಳಿಗೆ ಕರೆತಂದು ತಮ್ಮ ಸ್ನೇಹಿತರಾದ ಕಾಶೀರಾಮ್ ಶಿಂಪಿ ಹಾಗೂ ಅಪ್ಪಾ ಜಾಗಲೆಯರಿಗೆ ಪರಿಚಯಿಸಿದ್ದನು. ಈ ಮೂವರೂ ಸಾಮಾನ್ಯವಾಗಿ ಶಿರಡಿಗೆ ಭೇಟಿ ನೀಡುತ್ತಿದ್ದ ಸಾಧುಗಳು, ಸಂತರು, ಗೋಸಾವಿಗಳು, ಫಕೀರರು ಮತ್ತು ಸನ್ಯಾಸಿಗಳನ್ನು ತಮ್ಮ ಶಕ್ತಿಮೀರಿ ಉಪಚರಿಸುತ್ತಿದ್ದರು. ಮತ್ತು ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಏಕೆಂದರೆ ಶಿರಡಿ ಗ್ರಾಮವು ಈ ರೀತಿಯ ಯಾತ್ರಿಕರು, ಸಾಧು ಸತ್ಪುರುಷರು ಕೈಗೊಂಡ ತೀರ್ಥಯಾತ್ರೆಯ ದಾರಿಯಾಗಿತ್ತು.

ಯಾತ್ರಿಕರ ಗುಂಪುಗಳು ಆಗಾಗ್ಗೆ ಬರುತ್ತಿದ್ದು ಈ ಮೇಲೆ ಹೇಳಿದ ಮೂವರು ಅವರಿಗೆ ತಮ್ಮ ಶಕ್ತ್ಯಾನುಸಾರ ಆದರದಿಂದ ಸತ್ಕಾರ ನೀಡುತ್ತಿದ್ದರು. ಈ ಮೂವರು (ಕಾಶೀರಾಮ, ಅಪ್ಪಾ ಮತ್ತು ಮ್ಹಾಳಸಾಪತಿ) ಮಹಾರಾಜರ ಪರಿಪೂರ್ಣ ಭಕ್ತರಾದರು. ಇವರಲ್ಲಿ ಕಾಶೀರಾಮ ಮತ್ತು ಅಪ್ಪಾ ಕೆಲವು ವರ್ಷಗಳ ನಂತರ ಕಾಲವಾದರು.

ಕಾಶೀರಾಮನು ಮೊದಲು, ನಂತರ ಕೆಲವು ವರ್ಷಗಳಾದ ಮೇಲೆ ಅಪ್ಪಾ ನಿಧನಹೊಂದಿದರು. ಆದರೆ, ಇಬ್ಬರೂ ಏಕಾದಶಿಯ ದಿವಸ ಮರಣಹೊಂದಿದ ಭಾಗ್ಯಶಾಲಿಗಳಾಗಿದ್ದರು. ಈ ವಿಶೇಷ ದಿನದಂದು ಹರಿಭಕ್ತರು ದೇಹ ತ್ಯಜಿಸುವುದು ಸೂಕ್ತವಾಗಿದ್ದು ಅದೇ ರೀತಿಯಲ್ಲಿ ಅವರ ಮರಣ ಸಂದಿತ್ತು. ಕಾಶೀರಾಮನು ಸತ್ಯವಾಗಿ ತನು, ಮನ, ಧನಗಳಿಂದ ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಮಹಾರಾಜರ ಸೇವೆಮಾಡಿದ್ದನು.

ಮೊದಮೊದಲು ಮಹಾರಾಜರ ಕಫನಿಯು ಕೇಸರಿ ಅಥವಾ ಬಿಳಿ ಬಣ್ಣದ್ದಾಗಿತ್ತು. ಕಾಶೀರಾಮನು ಹಸಿರು ಬಣ್ಣದ ಕಫನಿ ಹಾಗೂ ಹಸಿರು ಟೋಪಿಯನ್ನು ಮಹಾರಾಜರಿಗೆ ಹೊಲಿಸಿದನು. ಆದರೆ ಸಾಮಾನ್ಯವಾಗಿ ಮಹಾರಾಜರು ಬಿಳಿಯ ಕಫನಿಯನ್ನು ಧರಿಸಿ ಒಂದು ಧೋತಿಯನ್ನು ತಲೆಗೆ ಸುತ್ತಿಕೊಳ್ಳುತ್ತಿದ್ದರು. ಹಾಗೆಯೇ ಮಹಾರಾಜರಿಗೆ ಅವರ ಚಿಲುಮೆಗೆ ತಂಬಾಕನ್ನೂ ಅವರ ಧುನಿಗೆ[11] ಕಟ್ಟಿಗೆಯನ್ನೂ ಒದಗಿಸುತ್ತಿದ್ದನು. ಅಲ್ಲದೆ ಸಮಯ ಬಂದಾಗ ಹಣವನ್ನೂ ಸಹ – ಇದನ್ನೇ ಕಾಶೀರಾಮನು ಸ್ವ–ಇಚ್ಛೆಯಿಂದ ಆರಿಸಿಕೊಂಡಿದ್ದನು.

ಅನಂತರ, ಅವನು ತನ್ನ ಹಣದ ಚೀಲವನ್ನು ಮಹಾರಾಜರ ಸಮ್ಮುಖದಲ್ಲಿರಿಸಿ ತಮ್ಮ ಇಚ್ಛೆಯಷ್ಟು ಅದರಲ್ಲಿರುವ ಹಣ ಸ್ವೀಕರಿಸಲು ದೈನ್ಯದಿಂದ ಬೇಡುತ್ತಿದ್ದನು. ಆ ದಿನಗಳಲ್ಲಿ ಮಹಾರಾಜರು ದಕ್ಷಿಣೆ[12] ಸ್ವೀಕರಿಸುವ ಅಭ್ಯಾಸವಿರಲಿಲ್ಲ. ಆದರೂ ಕಾಶೀರಾಮನಿಂದ ಒಂದು–ಎರಡು ಪೈಸೆಗಳನ್ನು ಸ್ವೀಕರಿಸುತ್ತಿದ್ದರು. ಕಾಶೀರಾಮನಿಗೆ ಮಹಾರಾಜರು ದಕ್ಷಿಣೆ ಸ್ವೀಕರಿಸಲೇಬೇಕೆಂಬ ಇಚ್ಛೆ ಪ್ರಬಲವಾಗಿತ್ತು. ಎಂದಾದರೂ ಆಕಸ್ಮಿಕವಾಗಿ ಮಹಾರಾಜರು ದಕ್ಷಿಣೆ ಸ್ವೀಕರಿಸದೇ ಇದ್ದಾಗ ಕಾಶೀರಾಮನಿಗೆ ಬಹಳ ಖೇದವಾಗಿ ಕಣ್ಣುಗಳಿಂದ ಅಶ್ರುಗಳು ಚಿಮ್ಮುತ್ತಿದ್ದವು.

ಈ ರೀತಿ ದುಃಖಿಸುವುದೂ ಆಧ್ಯಾತ್ಮಿಕ ಪ್ರಗತಿಯನ್ನು ಕುಂಠಿತಗೊಳಿಸುತ್ತದೆ. ಕಾರಣ, ಅದು ತಾನು ಕೊಡಬಲ್ಲೆ ಎಂಬ ಅಹಂಭಾವವನ್ನು ಉಂಟುಮಾಡುತ್ತದೆ. ಭಕ್ತನ ಆಧ್ಯಾತ್ಮ ಪ್ರಗತಿಯ ಮಾರ್ಗದಲ್ಲಿ ಬರುವ ಎಲ್ಲ ಅಡೆತಡೆಗಳನ್ನು ನಿವಾರಿಸುವುದೇ ಭಗವಂತನ ಸಹಜಕೃಪೆ.

ಕಾಶೀರಾಮನ ಸಂಗತಿಯಲ್ಲಿಯೂ ಹೀಗೆಯೇ ಆಯಿತು. ಕೆಲಕಾಲಾನಂತರ ಕಾಶೀರಾಮನು ಹಣದ ಕೊರತೆಯನ್ನು ಅನುಭವಿಸಲಾರಂಭಿಸಿದನು. ಮತ್ತು ಮಹಾರಾಜರು ಅವನಿಂದ ಮತ್ತೆ ಮತ್ತೆ ದಕ್ಷಿಣೆ ಬೇಡಲಾರಂಭಿಸಿದರು. ತನ್ನಲ್ಲಿ ಇನ್ನೇನೂ ಹಣ ಉಳಿದಿಲ್ಲ

ಎಂಬುದನ್ನು ಒಪ್ಪಿಕೊಳ್ಳಬೇಕಾಯಿತು. ಆಗ ಮಹಾರಾಜರು, "ಕಿರಾಣಿ ಅಂಗಡಿಯವನಿಂದ ಸಾಲ ಕೇಳಿ ನನಗೆ ತಂದುಕೊಡು" ಎಂದರು. ಅದೇ ರೀತಿ ಕೆಲವು ಸಮಯ ಕಿರಾಣಿ ಅಂಗಡಿಯವನಿಂದ ಸಾಲಕೇಳುವುದು, ತಂದುಕೊಡುವುದು ನಡೆಯಿತು. ಅನಂತರ, ಅವನೂ ಸಾಲ ನೀಡಲು ನಿರಾಕರಿಸಿದನು. ಸತ್ಯವಾಗಿಯೂ ಈ ಆಟವು ಕಾಶೀರಾಮನ 'ಅಹಂ'ಭಾವವನ್ನು ನಿರ್ಮೂಲನ ಮಾಡುವುದಕ್ಕಾಗಿಯೇ ಇತ್ತು. ತನಗೆ ನೀಡಲು ಶಕ್ತಿ ಇಲ್ಲವೆಂದು ಆಗ ಅವನಿಗೆ ಅರಿವಾಯಿತು. ಇದು ಅವನ ಅರಿವಿಗೆ ಬರುತ್ತಿದ್ದಂತೆಯೇ ಅವನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತ ಬಂದಿತು. ಆಗ ಅವನು ಹಿಂದಿನಂತೆಯೇ ಆರಾಮವಾಗಿರಲು ಆರಂಭಿಸಿದನು. ಅವನಿಗೆ ಮಹಾರಾಜರು ದಕ್ಷಿಣೆ ಸ್ವೀಕರಿಸುತ್ತಿರಲಿ ಎಂಬ ಆಕಾಂಕ್ಷೆ ತೀವ್ರವಾಗಿ ಮುಂದೆಂದೂ ಉಂಟಾಗಲಿಲ್ಲ.

ಕಾಶೀರಾಮನು ಜವಳಿ ವ್ಯಾಪಾರಿಯಾಗಿದ್ದನು. ಅವನು ಬೇರೆ ಬೇರೆ ಗ್ರಾಮಗಳಲ್ಲಿ ಸಂತೆಯ ದಿನಗಳಲ್ಲಿ ಹೋಗಿ ಜವಳಿ ಅಂಗಡಿ ತೆಗೆಯುತ್ತಿದ್ದನು. ಒಮ್ಮೆ ಸೌರ ಎಂಬ ಊರಿನಿಂದ ಸಂತೆಯ ದಿನ ಹಿಂತಿರುಗುತ್ತಿದ್ದಾಗ ಭಿಲ್ ದರೋಡೆಕೋರರು ಎದುರಾದರು. ಕಾಶೀರಾಮನು ಕುದುರೆಯ ಮೇಲೆ ಕುಳಿತಿದ್ದನು. ಅವರು ಮೊದಲು ಅವನ ಬಳಿಗೆ ಹೋಗಲಿಲ್ಲ. ಆದರೆ ಪಕ್ಕದಲ್ಲಿ ಹೋಗುತ್ತಿದ್ದ ಗಾಡಿಗಳ ಬಳಿ ನಡೆದರು. ನಂತರ ಕಾಶೀರಾಮನನ್ನು ಪತ್ತೆಹಚ್ಚಿ ಅವನ ಬಳಿಗೆ ಓಡಿದರು. ದರೋಡೆಕೋರರು ಕಾಶೀರಾಮನನ್ನು ಲೂಟಿಮಾಡುತ್ತಅವನ ಕೆಲವು ವಸ್ತುಗಳನ್ನು ತೆಗೆದುಕೊಂಡರು. ಕಾಶೀರಾಮನು ಯಾವುದೇ ಪ್ರತಿಭಟನೆ ತೋರಲಿಲ್ಲ. ನಂತರ ಅವರು ಕಾಶೀರಾಮನ ಬಳಿ ಇದ್ದ ಸಣ್ಣ ಗಂಟಿಗೆ ಕೈಹಾಕಿದರು. ಅದರಲ್ಲಿ ಏನೋ ಬೆಲೆಬಾಳುವುದು ಇರಬಹುದೆಂದು ನಂಬಿದ್ದರು. ಆದರೆ ಅದರಲ್ಲಿ ನಿಜವಾಗಿಯೂ ಮೃದುವಾದ ಪುಡಿ ಸಕ್ಕರೆ ತುಂಬಿತ್ತು. ಕಾಶೀರಾಮನಿಗೆ ಒಬ್ಬ ಸತ್ಪುರುಷರೆಂದು ಕರೆಯಲ್ಪಡುತ್ತಿದ್ದ ಜಾನಕೀದಾಸ ಬಾಬಾರವರು, ಪ್ರತಿದಿನವೂ ಇರುವೆಗಳಿಗೆ ಸಕ್ಕರೆ ತಿನ್ನಿಸುವಂತೆ ತಿಳಿಸಿದ್ದರಿಂದ, ಕಾಶೀರಾಮನು ಸಾಮಾನ್ಯವಾಗಿ ತನ್ನ ಬಳಿ ಸಕ್ಕರೆಯನ್ನು ಇಟ್ಟುಕೊಂಡಿರುತ್ತಿದ್ದನು. ಆದ್ದರಿಂದ ಈ ಚೀಲವು ಅವನಿಗೆ ಅತ್ಯಮೂಲ್ಯವಾಗಿತ್ತು ಮತ್ತು ಆ ಗಂಟನ್ನು ಯಾವುದೇ ರೀತಿಯಿಂದಲೂ ಬಿಟ್ಟುಕೊಡಬಾರದೆಂದು ನಿಶ್ಚಯಿಸಿದನು. ಆ ಕ್ಷಣದಲ್ಲಿ ಕಳ್ಳನೊಬ್ಬನ ಕತ್ತಿಯು ಕೆಳಗೆ ಬಿದ್ದಿರುವುದು ಕಾಶೀರಾಮನ ಗಮನಕ್ಕೆ ಬಂದಿತು. ಅವನು ಅದನ್ನು ಎತ್ತಿಕೊಂಡು ಇಬ್ಬರು ದರೋಡೆಕೋರರನ್ನು ಸಾಯಿಸಿದನು. ಮೂರನೆಯ ಕಳ್ಳನು ಅದೇ ಸಮಯದಲ್ಲಿ ಹಿಂದಿನಿಂದ ಬಂದು ಪಿಕಾಸಿಯಿಂದ ಕಾಶೀರಾಮನ ತಲೆಗೆ ಪ್ರಹಾರ ಮಾಡಿದನು. ಅದರಿಂದಾಗಿ ಕಾಶೀರಾಮನು ಪ್ರಜ್ಞೆ ತಪ್ಪಿ ಕೆಳಗೆ ಉರುಳಿದನು. ಕಾಶೀರಾಮನು ಸತ್ತನೆಂದು ಭಾವಿಸಿ ಉಳಿದ ಕಳ್ಳರು ಅವನನ್ನು ಅಲ್ಲಿಯೇ ಬಿಟ್ಟು ಹೊರಟುಹೋದರು. ಆದರೆ ಅವನು ಸತ್ತಿರಲಿಲ್ಲ. ಸ್ವಲ್ಪ ಸಮಯದ ನಂತರ ಅವನಿಗೆ ಪ್ರಜ್ಞೆ ಬಂದಿತು. ಕೆಲವು ದಿನಗಳ ನಂತರ ಪೂರ್ಣವಾಗಿ ಗುಣಮುಖನಾದನು.

ಅವನಿಗೆ ಮಹಾರಾಜರಲ್ಲಿ ಪೂರ್ಣ ಶ್ರದ್ಧೆ ಇದ್ದುದರಿಂದ, ಆಸ್ಪತ್ರೆಗೆ ದಾಖಲಾಗಲು ನಿರಾಕರಿಸಿದನು. ಮತ್ತು "ನನ್ನನ್ನುಶಿರಡಿಗೆ ಕರೆದುಕೊಂಡು ಹೋಗಿ" ಎಂದು ಮನಃಪೂರ್ವಕವಾಗಿ ಬೇಡಿಕೊಂಡನು. ಹಾಗೆಯೇ, ಅವನನ್ನು ಅಲ್ಲಿಗೆ ಕರೆತರಲಾಯಿತು ಮತ್ತು ಮಹಾರಾಜರ ಆದೇಶಾನುಸಾರ ಮಾಧವರಾವ್ ದೇಶಪಾಂಡೆಯು ಔಷಧೋಪಚಾರಮಾಡಿದನು. ಸಾಯಿಮಹಾರಾಜರ ಕೃಪೆಯಿಂದ ಕಾಶೀರಾಮನ ಆರೋಗ್ಯವು ಸುಧಾರಿಸಿತು ಮತ್ತು ಅವನು ಪೂರ್ಣವಾಗಿ ಆರೋಗ್ಯವಂತನಾದನು.

ಮುಂಬಯಿ ಸರಕಾರವು ಕಾಶೀರಾಮನಿಗೆ ದರೋಡೆಕೋರರನ್ನು ಧೈರ್ಯದಿಂದ ಎದುರಿಸಿದ್ದಕ್ಕಾಗಿ ಒಂದು ಕತ್ತಿಯನ್ನುಬಹುಮಾನವಾಗಿ ನೀಡಿತು. ಅಲ್ಲಿ ಕಾಶೀರಾಮನು ಕಳ್ಳರೊಂದಿಗೆ ಹೋರಾಡುತ್ತಿದ್ದಾಗ, ಮಹಾರಾಜರು ಶಿರಡಿಯಲ್ಲಿ ಒಂದು ಕೋಲಾಹಲವನ್ನೇ ಸೃಷ್ಟಿಸಿದರು. ಬೈಗಳ, ಕೂಗಾಟಗಳ ಮತ್ತು ಅದೇ ರೀತಿಯ ಗಲಭೆಗಳ ಪ್ರವಾಹವೇ ಹರಿಯಲಾರಂಭಿಸಿತು.

ಮಹಾರಾಜರ ಸನಿಹದಲ್ಲಿದ್ದ ಭಕ್ತರಿಗೆ ತಕ್ಷಣ ಮಹಾರಾಜರ ನಿಕಟವರ್ತಿಯಾದ ಭಕ್ತನೊಬ್ಬನಿಗೆ ಏನೋ ಸಂಕಟ ಒದಗಿ ಬಂದಿದ್ದು, ಅವನ ರಕ್ಷಣೆಗಾಗಿಯೇ ಈ ಗದ್ದಲ ಎಂಬ ವಿಷಯದ ಅರಿವಾಯಿತು. ಮತ್ತು ಸತ್ಯವೆಂದೂ ತಿಳಿದುಬಂದಿತು. ಕಳ್ಳರು ಅನೇಕ ಮಂದಿ ಇದ್ದು ಮಾರಕ ಆಯುಧಗಳಿಂದ ಸುಸಜ್ಜಿತರಾಗಿದ್ದರು. ಅಂತಹ ಮಾರಕ, ಕ್ರೂರ ಹೊಡೆತಗಳಿಂದ ಕಾಶೀರಾಮನು ಜೀವದೊಡನೆ ತಪ್ಪಿಸಿಕೊಂಡು ಬರುವನೆಂದರೆ ಯಾರೂ ನಂಬಲಾರರು. ಆದರೆ ರಕ್ಷಕನು ಇರುವಾಗ ಯಾರು ತಾನೇ ಹಿಂಸೆ ಮಾಡಲು ಸಾಧ್ಯ? ತದನಂತರ ಕಾಶೀರಾಮನು ಬಹಳ ಕಾಲ ಬಾಳಿ ಬದುಕಿ ಶಕೆ 1830 (ಕ್ರಿ.ಶ. 1908) ಚೈತ್ರಶುದ್ಧ ಏಕಾದಶಿಯಂದು ಸ್ವರ್ಗಸ್ಥನಾದನು.

ಮೇಲೆಹೇಳಿದ ಮೂವರಲ್ಲಿ ಮ್ಹಾಳಸಾಪತಿಯು ದೀರ್ಘಕಾಲ ಜೀವಿಸಿದ್ದು ಭಾದ್ರಪದ ಶಕೆ 1844 (ಕ್ರಿ. ಶ. 1922)ರಲ್ಲಿ ಕಾಲವಾದನು. ಅವನು ಮಹಾರಾಜರ ನಿಕಟವರ್ತಿಯಾಗಿದ್ದನು. ಮಹಾರಾಜರು ಮಸೀದಿ[13]ಯಲ್ಲಿ ಕುಳಿತಿರುತ್ತಿದ್ದು ದಿನಬಿಟ್ಟು ದಿನ ಮಸೀದಿಯಲ್ಲಿ ಮತ್ತು ಚಾವಡಿಯಲ್ಲಿ ನಿದ್ರಿಸುತ್ತಿದ್ದರು. ಮಹಾರಾಜರು ಮಸೀದಿಯಲ್ಲಿ ನಿದ್ರಿಸುವಾಗ ಮ್ಹಾಳಸಾಪತಿಯು ಮಹಾರಾಜರ ಹತ್ತಿರ ಕುಳಿತಿರುತ್ತಿದ್ದನು. ಆ ರಾತ್ರಿಗಳಲ್ಲಿ ಬೆಳಗಾಗುವವರೆಗೆ ಕುಳಿತಿದ್ದು ಆಗಾಗ್ಗೆ ಪರಸ್ಪರ ಬಹಳ ಪ್ರೀತಿಯಿಂದ ಮಾತನಾಡುತ್ತಿದ್ದರು. ಹೀಗೆ ಮಹಾರಾಜರು ಇರುವವರೆಗೂ ಮ್ಹಾಳಸಾಪತಿಯು ರಾತ್ರಿ ಪೂರ್ತಿ ಮಸೀದಿಯಲ್ಲಿ ಅವರೊಡನೆ ಕುಳಿತಿರುವ ಪರಿಪಾಠವನ್ನು ಮುಂದುವರೆಸಿದ್ದನು.ತಾನು ಪ್ರಭಾವಿ ವ್ಯಕ್ತಿಯಾಗಿದ್ದರೂ ಅವನಿಗೆ ಯಾವುದೇ ನಿರೀಕ್ಷೆಗಳಿಲ್ಲದ ಕಾರಣ ಮಹಾರಾಜರ ಭಕ್ತರು ಅವನಿಂದ ಒಳ್ಳೆಯ ಸಲಹೆಗಳನ್ನು ಪಡೆದು ಸುಖವಾಗಿರುತ್ತಿದ್ದರು. ಮಹಾರಾಜರ ದೇಹತ್ಯಾಗದ ನಂತರ ಭಕ್ತರಿಗೆ ಅವನೇ ಶಾಂತಿಯ ನಿವಾಸವಾಗಿದ್ದನು.

ಮಹಾರಾಜರು ಇಲ್ಲಿಗೆ ಆಗಮಿಸಿದಾಗಿನಿಂದ ಮಸೀದಿಯಲ್ಲೇ ನೆಲೆಸುತ್ತಿದ್ದನು. ಆ ಮಸೀದಿಯಾದರೋ ಬಹಳ ಶಿಥಿಲವಾಗಿತ್ತುಹಗಲಿನಲ್ಲಿ ಮಹಾರಾಜರು ಅಲ್ಲಿ ಇಲ್ಲಿ ಸುತ್ತಾಡುತ್ತಿದ್ದು ರಾತ್ರಿ ವೇಳೆಯಲ್ಲಿ ಮಸೀದಿಯಲ್ಲಿ ಇರುತ್ತಿದ್ದರು. ಯಾರಾದರೂ ಊಟಕ್ಕೆ ಕರೆದರೆ ಹೋಗುತ್ತಿದ್ದರು. ರೋಗಿಗಳಿಗೆ ಔಷಧೋಪಚಾರ ಹೇಳುತ್ತಿದ್ದರು, ಔಷಧಿಯನ್ನೂ ಕೊಡುತ್ತಿದ್ದರು. ಅದಕ್ಕಾಗಿ ಹಣ ಸ್ವೀಕರಿಸುತ್ತಿರಲಿಲ್ಲ. ಅಷ್ಟೇ ಅಲ್ಲದೆ ರೋಗಿಗೆ ಉಪಚರಿಸಲು ಯಾರೂ ಇಲ್ಲದಿದ್ದರೆ ತಾವೇ ರೋಗಿಯ ಉಪಚಾರಕ್ಕೆ ನಿಲ್ಲುತ್ತಿದ್ದರು. ಆ ರೀತಿ ಉಪಚಾರಪಡೆದವರು ಇಂದೂ ಸಹ ಬಹಳ ಜನರಿದ್ದಾರೆ. ನಂತರ ಮಹಾರಾಜರು ಔಷಧಿಕೊಡುವುದನ್ನು ನಿಲ್ಲಿಸಿ ಕೇವಲ ವಿಭೂತಿ[15]ಯನ್ನು ಮಾತ್ರ ನೀಡುತ್ತಿದ್ದು ರೋಗಿಗಳು ಅದರಿಂದ ಗುಣಮುಖರಾಗುತ್ತಿದ್ದರು.

ಈ ಲೇಖಕನಿಗೆ ಒಮ್ಮೆ ತಾವೇ, "ಮೊದಲು ನಾನು ಜನರಿಗೆ ಔಷದಿಗಳನ್ನು ಕೊಡುತ್ತಿದ್ದೆ" ಎಂದು ತಿಳಿಸಿದ್ದರು. ಅವರು ಹೇಳಿದ್ದರು, "ಕಾಕಾ (ಈ ಲೇಖಕನನ್ನು ಕಾಕಾ ಎಂದೇ ಅವರು ಸಂಬೋಧಿಸುತ್ತಿದ್ದರು) ನಂತರ ಔಷದಿ ಕೊಡುವುದನ್ನು ನಿಲ್ಲಿಸಿ, ಹರಿ, ಹರಿ ಎಂದು ಜಪಿಸಲು ಪ್ರಾರಂಭಿಸಿದೆ. ಹಾಗೆಯೇ 'ಹರಿ, ಹರಿ' ಎಂದು ಜಪಿಸುತ್ತಲೇ ಆತ್ಮಸಾಕ್ಷಾತ್ಕಾರ ಪಡೆದೆ."

ಮಹಾರಾಜರು ಮೊದಲು ಇಲ್ಲಿಗೆ ಬಂದಾಗ 'ದೇವೀದಾಸ್' ಎಂಬ ಸಾಧುವಿದ್ದನು. ಇತರ ಸಾಧುಗಳು ಬೇರೆಬೇರೆ ಸಮಯಗಳಲ್ಲಿ ಇವರನ್ನು ನೋಡಲು ಬರುತ್ತಿದ್ದರು. ಅದೇರೀತಿ, ರಾಮೇಶ್ವರ, ಪಂಡರಾಪುರ ಮತ್ತು ದಕ್ಷಿಣ ಭಾರತದ ಅನೇಕ ಯಾತ್ರಾಸ್ಥಳಗಳಿಗೆ ಪಾದಯಾತ್ರೆ ಮಾಡುವವರಿಗೆ ಇದು ದಾರಿಯಾಗಿದ್ದರಿಂದ ಅನೇಕ ಸಜ್ಜನರು ಆಗಾಗ ಇಲ್ಲಿಗೆ ಬರುತ್ತಿದ್ದರು.

ಅವರಲ್ಲಿ ಜಾನಕೀದಾಸ ಎಂಬ ಸಾಧು ಸುಮಾರು ದೀರ್ಘಕಾಲ ಇಲ್ಲಿದ್ದನು. ಇವನಿಗೆ ಅಧ್ಯಾತ್ಮ ವಿಚಾರಗಳಲ್ಲಿ ಅತ್ಯುತ್ತಮಪಾಂಡಿತ್ಯವಿತ್ತು ಎಂದು ಹೇಳುತ್ತಿದ್ದರು. ಮಹಾರಾಜರು ಮತ್ತು ಇವನು ಬಹಳ ಹರಟೆ ಹೊಡೆಯುತ್ತಿದ್ದರು. ಪ್ರಖ್ಯಾತ ಗಂಗಾಗೀರ್ ಬಾಬಾ ಸಹ ಇಲ್ಲಿಗೆ ಆಗಮಿಸುತ್ತಿದ್ದನು. ಮಹಾರಾಜರು ಇಲ್ಲಿಗೆ ಬಂದನಂತರ ಗಂಗಾಗೀರನು ಮೊದಲಬಾರಿ ಬಂದಾಗ, ಮಹಾರಾಜರು ಎರಡು ಕೈಗಳಲ್ಲಿ ಬಾವಿಯ ನೀರು ತುಂಬಿದ ಎರಡು ಮಡಕೆಗಳನ್ನು ಹಿಡಿದುಕೊಂಡಿದ್ದರು. ಅವರನ್ನು ಕಂಡ ಕ್ಷಣವೇ ಗಂಗಾಗೀರ್ ಬಾಬಾನು ಅಲ್ಲಿದ್ದ ಗ್ರಾಮಸ್ಥರಿಗೆ ಕೂಡಲೇ ಹೀಗೆಂದನು, "ಇವರು ಇಲ್ಲಿಗೆ ಯಾವಾಗ ಬಂದರು? ಇವರು ಒಂದು ನಿರ್ಮಲರತ್ನ, ಅವರಿಗೆ ಅತ್ಯಂತ ಯೋಗ್ಯತೆಯು ಇದೆ. ಈ ರತ್ನವನ್ನು ಪಡೆದಿರುವಂತಹ ಈ ಗ್ರಾಮಸ್ಥರು ಅತ್ಯಂತ ಭಾಗ್ಯಶಾಲಿಗಳು." ನಂತರ ಗಂಗಾಗೀರಬಾಬಾನು ಮಹಾರಾಜರ ದರ್ಶನಕ್ಕೆ[16] ಹೊರಟನು. ಅವರಿಬ್ಬರೂ ಪರಸ್ಪರ ಬಹುಪ್ರೇಮದಿಂದ ಸಂಭಾಷಣೆಯಲ್ಲಿ ತೊಡಗಿದರು. ಅಕ್ಕಲಕೋಟೆಯ ಆನಂದನಾಥ ಮಹಾರಾಜರು ಸಹ ಇದೇ ದಾಟಿಯಲ್ಲಿ

ಮಹಾರಾಜರ ಬಗ್ಗೆ ಹೇಳಿರುತ್ತಾನೆ. ಈ ಆನಂದನಾಥ ಮಹಾರಾಜನು ಖ್ಯಾತ ಅಕ್ಕಲಕೋಟೆ ಸ್ವಾಮಿಯವರ ಶಿಷ್ಯನು. ಒಮ್ಮೆ ಅವನು ಯೋಲ ಊರಿನ ಬಳಿ ಇರುವ ಸಾವರಗಾಂವ ಎಂಬ ಊರಿಗೆ ಹೋಗಿದ್ದಾಗ, ಶಿರಡಿಯ ಮಾಧವರಾವ್ ಬಲವಂತ ದೇಶಪಾಂಡೆ, ದಗಡುಭಾವು ಗಾಯಕೆ, ನಂದರಾಮ ಶಿವರಾಮ್ ಮಾರ್ವಾಡಿ ಮತ್ತು ಭಾಗ ಚಂದ ಮಾರ್ವಾಡಿ ಎಲ್ಲರೂ ಅವನ ದರ್ಶನಕ್ಕೆ ಹೋದರು. ದರ್ಶನದ ನಂತರ ಈ ಗುಂಪು ಶಿರಡಿಗೆ ಹಿಂತಿರುಗಲು ಸಜ್ಜಾದರು. ಆಗ ಆನಂದನಾಥ ಮಹಾರಾಜನು ತತ್‌ಕ್ಷಣವೇ ಓಡಿಬಂದು ಅವರ ಗಾಡಿಯಲ್ಲಿ ಹತ್ತಿ ಕುಳಿತನು. ಮತ್ತು ಹೇಳಿದನು, "ನಾನೂ ನಿಮ್ಮೊಡನೆ ಬರುತ್ತೇನೆ." ಸವರಗಾಂವ ಮತ್ತು ಯೋಲ ಊರುಗಳ ಜನರು ಅವನನ್ನು ಬರದಂತೆ ತಡೆಯಲು ಪ್ರಯತ್ನಿಸಿದರೂ ವಿಫಲವಾಯಿತು. ಆನಂದನಾಥ ಮಹಾರಾಜನು ಇಲ್ಲಿಗೆ ಬಂದಾಗ ಮಹಾರಾಜರ ಬಗ್ಗೆ ಹೀಗೆ ನುಡಿದನು, "ಇದೊಂದು ವಜ್ರ, ಇದರ ಮೌಲ್ಯ ನೀವು ಅರಿತಿಲ್ಲ. ಇದು ಸಗಣಿಯ ಗುಡ್ಡೆಯ ಮೇಲಿದ್ದರೂ ವಜ್ರವೇ." ಆ ಸಮಯದಲ್ಲಿ ಮಹಾರಾಜರಕೀರ್ತಿ ಅಷ್ಟು ಹರಡಿರಲಿಲ್ಲ. ಮತ್ತು ಗ್ರಾಮಸ್ಥರು ಅವರನ್ನು (ಸಾಯಿಯನ್ನು) ಸಾಮಾನ್ಯ ಹಾಗೂ ಹುಚ್ಚು ಫಕೀರ ಎಂದು ತಿಳಿದಿದ್ದರು.

ಆ ಸಮಯದಲ್ಲಿ ಮಹಾರಾಜರ ಸ್ಥಿತಿಯು "ಹರಿದ ಉಡುಪನ್ನು ಧರಿಸಿ. ಇಚ್ಛೆಪಟ್ಟಲ್ಲಿ ಕುಳಿತುಕೊಳ್ಳುತ್ತ ಒಬ್ಬ ಉನ್ಮತ್ತನಾದ ಹುಚ್ಚನಾಗಿ ಕಾಣುತ್ತಿದ್ದರೂ ಸದಾ ಬ್ರಹ್ಮನಲ್ಲಿಯೇ ಲೀನವಾಗಿರುತ್ತಿದ್ದರು." ಮಹಾರಾಜರು, ಒಮ್ಮೆ ನೀರಿನ ಝರಿಯ ಬಳಿ, ಒಮ್ಮೆ ಹಳ್ಳಿಯ ಗೋಡೆಯ ಹತ್ತಿರವಿದ್ದ ಒಂದು ನಿರ್ದಿಷ್ಟ ಬೇವಿನ ಮರದ ಕೆಳಗೆ, ಒಮ್ಮೆ ಯಾರದೋ ಹೊಲದಲ್ಲಿ ಹರಿದು ಚಿಂದಿಯಾದ ಉಡುಪನ್ನು ಧರಿಸಿ ಆಗಾಗ ಬಹಳ ಭಯಂಕರವಾಗಿ ಕಾಣುತ್ತಿದ್ದರು. ಈ ರೀತಿಯ ನಡೆವಳಿಕೆಯಿಂದಾಗಿ ಇವರು ಸಾಮಾನ್ಯರಿಗೆ ಹುಚ್ಚರಂತೆ ಕಾಣುತ್ತಿದ್ದರು. ಆದರೆ ಬೇಗನೆ ಜನರಿಗೆ ಅವರ ತಪ್ಪುಗ್ರಹಿಕೆಯ ಅರಿವಾಯಿತು. ಶಿರಡಿಯ ಜನರಿಗೂ ಮಹಾರಾಜರ ಮೌಲ್ಯದ ಅರಿವಾಯಿತು. ಇದು ಹೀಗೆ ನಡೆಯಿತು:

ಮಹಾರಾಜರಿಗೆ ಮಸೀದಿಯಲ್ಲಿ ಹಾಗೂ ದೇವಾಲಯಗಳಲ್ಲಿ ಅನೇಕ ದೀಪಗಳನ್ನು ಬೆಳಗಿಸುವ ಇಚ್ಛೆ ಉಂಟಾಯಿತು. ನಿಜವಾಗಿ 'ಒಂದು ಮಹದಾಸೆ' ಎನ್ನುವುದು ಸಾಮಾನ್ಯ ಮಾತಿನ ಧಾಟಿ. ನಿಜ ಹೇಳಬೇಕೆಂದರೆ ಅವರ ಯಾವುದೇ ಕಾರ್ಯ ಅಥವಾ ಯಾವುದೇ ಮಹದಾಸೆಯನ್ನು ಪೂರೈಸುವಂತಹುದಾಗಿರಲಿಲ್ಲ. ಏಕೆಂದರೆ ಅವರಿಗೆ ಯಾವ ಇಚ್ಛೆಯೂ ಇರಲಿಲ್ಲ. ಆದರೆ ಅವುಗಳಿಗೆ ಬೇರೆಯೇ ಉದ್ದೇಶವಿರುತ್ತಿತ್ತು. ಅಂದರೆ ಅದು ಜನಗಳ ಉಪಯೋಗಕ್ಕಾಗಿತ್ತು, ಅದು ಏನಾದರೂ ಆಗಿರಲಿ. ಈ ದೀಪಗಳಿಗಾಗಿ ಮಹಾರಾಜರು ತೈಲವ್ಯಾಪಾರಿಗಳ ಬಳಿಗೆ ಹೋಗಿ ತೈಲವನ್ನು ಬೇಡಿ ತರುತ್ತಿದ್ದರು. ಕೆಲವು ದಿನ ಅವರು ಮಹಾರಾಜರಿಗೆ ಎಣ್ಣೆಯನ್ನು ನೀಡಿದರು. ಎಷ್ಟು ದಿನ ಎಂದು ಹೀಗೆ ಕೊಡುತ್ತಿರುತ್ತಾರೆ? ಒಂದು ದಿನ "ಎಣ್ಣೆ ಇಲ್ಲ" ಎಂದು ಹೇಳಿದರು. ಅದು ಮಹಾರಾಜರ ನಿತ್ಯ ರೂಢಿಗೆ ಏನಾದರೂ ಬದಲಾವಣೆ ತಂದಿತೇನು? ಮಹಾರಾಜರು ಆ

ಮಣ್ಣಿನ ಹಣತೆಗಳಲ್ಲಿ ಎಣ್ಣೆಯ ಬದಲು ನೀರು ತುಂಬಿ, ಬತ್ತಿಗಳನ್ನಿಟ್ಟು, ನಿತ್ಯದಂತೆ ಬೆಂಕಿಕಡ್ಡಿಯಿಂದ ಬೆಳಗಿಸಿದರು. ಮಹಾರಾಜರು ಈ ರೀತಿ ಮಾಡಲು ಪ್ರಾರಂಭಿಸಿದಾಗ, ಜನರು ಅವರನ್ನು ನಿಜವಾಗಿಯೂ ಹುಚ್ಚರೆಂದೇ ನಿರ್ಧರಿಸಿದ್ದರೂ ದೀಪಗಳು ಬೆಂಕಿಕಡ್ಡಿಯಿಂದ ಬೆಳಗಿದಾಗ ಮತ್ತು ರಾತ್ರಿಯೆಲ್ಲ ಉರಿದಾಗ ಆಶ್ಚರ್ಯಚಕಿತರಾದರು. ಅವರೆಲ್ಲರೂ ಮಹಾರಾಜರ ಬಳಿ ನಡೆದು ಅವರೊಡನೆ ಕಠಿಣವಾಗಿ ವರ್ತಿಸಿದ್ದಕ್ಕಾಗಿ ಕ್ಷಮೆ ಬೇಡಿದರು. ಅನೇಕರು ಬೇರೆ ಬೇರೆ ವಿಧಗಳಲ್ಲಿ ದೌರ್ಜನ್ಯ ತೋರಿಸಿದವರೂ ಹೆದರಿದ್ದರು. ಆದರೆ ಮಹಾರಾಜರು ದಯೆಯಿಂದ ತುಂಬಿದ್ದರು. ತಮ್ಮನ್ನು ಹೀಯಾಳಿಸಿದವರಿಗೂ, ತಮ್ಮ ಮೇಲೆ ದೌರ್ಜನ್ಯ ತೋರಿಸಿದವರಿಗೂ ಸಹ ಔದಾರ್ಯವನ್ನು ತೋರುವುದು ಸಾಯಿಮಹಾರಾಜರ ಸ್ವಭಾವವಾಗಿತ್ತು. ಆದ್ದರಿಂದ ಯಾರೂ ಭಯಭೀತರಾಗುವ ಕಾರಣವಿರಲಿಲ್ಲ. ಮಹಾರಾಜರು ಎಲ್ಲರನ್ನೂ ಪ್ರೀತಿಸುತ್ತಿದ್ದರು. ಅವರನ್ನು ಸ್ವಂತ ಮಕ್ಕಳಂತೆಯೇ ನೋಡಿಕೊಳ್ಳುತ್ತಿದ್ದರು. ಗ್ರಾಮಕ್ಕೆ ಏನಾದರೂ ಆಪತ್ತು ಒದಗುವಂತಿದ್ದರೆ ಮಹಾರಾಜರು ಪೂರ್ವಭಾವಿಯಾಗಿಯೇ ಅದರ ಬಗ್ಗೆ ಎಚ್ಚರ ನೀಡುತ್ತಿದ್ದರು. ಅವರು ಹೇಳಿದಂತೆ ನಡೆದವರಿಗೆ ಯಾವ ಭಯವೂ ಇರುತ್ತಿರಲಿಲ್ಲ.

ಗ್ರಾಮಸ್ಥರೆಲ್ಲರೂ ಮಹಾರಾಜರನ್ನು ನಂಬಿದ್ದರೂ, ಕೆಲವರು ಮಾತ್ರ ಅವರ ನಿಕಟವರ್ತಿಗಳಾಗಿದ್ದರು. ಮಹಾರಾಜಘೋರಸ್ವಭಾವದವರೂ ಮತ್ತು ತೀಕ್ಷ್ಣರೂ ಆಗಿದ್ದರಿಂದ ಅನಾವಶ್ಯಕವಾಗಿ ಅವರೊಡನೆ ಸಲಿಗೆ ಬೆಳೆಸಲು ಧೈರ್ಯಮಾಡುತ್ತಿರಲಿಲ್ಲ. ಮತ್ತು ಮಸೀದಿಯಲ್ಲಿ ಜನರು ಹೋಗಿ ಬಂದು ಮಾಡುವುದು ಸೀಮಿತವಾಗಿತ್ತು. ಈ ಸಮಯದಲ್ಲಿ ದೇಶಪಾಂಡೆ ವಂಶದ ಮಾಧವರಾವ್ ಬಲವಂತ ಆಗಾಗ ಬರಲಾರಂಭಿಸಿದನು. ಆ ಸಮಯದಲ್ಲಿ ಮಸೀದಿಯ ಕಾಂಪೌಂಡಿನ ಹತ್ತಿರ ಒಂದು ಸಣ್ಣ ಮನೆಯಲ್ಲಿ ಮರಾಠಿ ಪಾಠಶಾಲೆಯಿತ್ತು. ಮಾಧವರಾವ್ ಆ ಪಾಠಶಾಲೆಯಲ್ಲಿ ಉಪಧ್ಯಾಯನಾಗಿದ್ದನು. ಮತ್ತು ಆಗಾಗ ಮಸೀದಿಗೆ ಹೋಗುವ ಪರಿಪಾಠವನ್ನಿಟ್ಟುಕೊಂಡಿದ್ದನು. ಅವನು ಅಲ್ಲಿಗೆ ಹೋದಾಗ ಚಿಲುಮೆಯಲ್ಲಿ ತಂಬಾಕು ಸೊಪ್ಪನ್ನು ತುಂಬಿ ತಾನು ಒಂದು ದಮ್ಮನ್ನು ಎಳೆದು ಮಹಾರಾಜರಿಗೆ ಸೇದಲು ಕೊಡುತ್ತಿದ್ದನು. ಅದೇನೆಕಾರಣವಿರಲಿ, ಮಾಧವರಾವ್ ಮಹಾರಾಜರಿಗೆ ಹತ್ತಿರವಾಗುತ್ತ ಬಂದನು ಮತ್ತು ಮಹಾರಾಜರು ಮಾಧವರಾವ್‌ನನ್ನು ಆಕರ್ಷಿಸಿದ್ದರು.

ಕೆಲವರ್ಷಗಳ ನಂತರ ಅವನು ಎಲ್ಲ ಉದ್ಯೋಗವನ್ನು ತ್ಯಜಿಸಿ ಕೇವಲ ಮಹಾರಾಜರನ್ನು ಮತ್ತು ಮಹಾರಾಜರ ದರ್ಶನಕ್ಕೆ ಬರುವ ಭಕ್ತರನ್ನು ಸೇವಿಸಲಾರಂಭಿಸಿದನು. ಅದಕ್ಕೆ ಬದಲಾಗಿ ಯಾವುದೇ ರೀತಿಯ ಸಂಭಾವನೆಯನ್ನೂ ನಿರೀಕ್ಷಿಸಲಿಲ್ಲ. ಈ ದಿನದವರೆಗೆ ಮಹಾರಾಜರ ಭಕ್ತರು ಮತ್ತು ಅವನು ನಿಕಟವರ್ತಿಗಳಾಗಿದ್ದಾರೆ. ಅನೇಕ ಭಕ್ತರು ಅವನ ಬೆಂಬಲ ಪಡೆಯುತ್ತಿದ್ದರು. ಅನೇಕ ಭಕ್ತರು ಇವರಿಂದ ಸಲಹೆ ಪಡೆಯದೆ ಒಂದು ಹೆಜ್ಜೆಯನ್ನೂ ಮುಂದಿಡುತ್ತಿರಲಿಲ್ಲ.

ಸಾಮಾನ್ಯವಾಗಿ ಮಹಾರಾಜರು ಶಿರಡಿಯನ್ನು ಬಿಟ್ಟು ಎಲ್ಲಿಗೂ ಹೋಗುತ್ತಿರಲಿಲ್ಲ. ತಮ್ಮ ಭಕ್ತ ಬಾಬಾ ಸಾಹೇಬ ಡೆಂಗ್ಲೆಯನ್ನು ಕಾಣಲು ಒಮ್ಮೊಮ್ಮೆ ನೀಮಗಾಂವ್‌ಗೆ[17] ಮತ್ತು ಒಮ್ಮೊಮ್ಮೆ ಚಂದ್ರಭಾನ ಶೇಠ್ ಮಾರ್ವಾಡಿಯು ಇದ್ದ ರಾಹತಾ[18] ಎಂಬ ಊರಿಗೆ ಹೋಗುತ್ತಿದ್ದರು. ಚಂದ್ರಭಾನಶೇಠನ ಮರಣಾನಂತರ ಕುಶಾಲಚಂದ ಶೇಠ ದಿನಸಿ ವ್ಯಾಪಾರವನ್ನು ಸಂಭಾಳಿಸುತ್ತಿದ್ದನು. ಮಹಾರಾಜರು ಆಗಾಗ ಕುಶಾಲಚಂದನನ್ನು ವಿಚಾರಿಸುತ್ತಿದ್ದರು. ಮತ್ತು ರಾಹತಾದವರು ಯಾರಾದರೂ ಬಂದಲ್ಲಿ ಕುಶಾಲಚಂದನ ಕುಶಲವನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಅದು ಹಾಗಿರಲಿ ಈಗ.

ಬಾಬಾ ಸಾಹೇಬ ಡೆಂಗ್ಲೆಯ ಸೋದರ ನಾನಾಸಾಹೇಬ ಡೆಂಗ್ಲೆಯು ಜಾಲಿ ನೀಮಗಾಂವ್‌ನಲ್ಲಿ ಇರುತ್ತಿದ್ದನು. ಅವನಿಗೆ ಪುತ್ರರಿಲ್ಲದುದರಿಂದ ಮತ್ತೆ ಮದುವೆಯಾದನು. ಆದರೂ ಪ್ರಯೋಜನವಾಗಲಿಲ್ಲ. ಆಗ ಬಾಬಾ ಸಾಹೇಬನು ಅವನನ್ನು ಮಹಾರಾಜರ ದರ್ಶನಕ್ಕೆಂದು ಕಳುಹಿಸಿದನು. ನಾನಾಸಾಹೇಬ ಡೆಂಗ್ಲೆಯು ಮಹಾರಾಜರ ದರ್ಶನಕ್ಕೆಂದು ಬಂದಾಗ ಮಹಾರಾಜರು ಅವನಿಗೆ ಪುತ್ರಸಂತಾನವಾಗಲೆಂದು ಆಶೀರ್ವದಿಸಿದರು. ಕಾಲಾನಂತರದಲ್ಲಿ ಅದು ಫಲಪ್ರದವಾಗಿ ಅವನು ಪುತ್ರವಂತನಾದನು. ನಂತರ ನಾನಾಸಾಹೇಬನಿಗೆ ಸಾಯಿಯಲ್ಲಿ ಶ್ರದ್ಧೆಯುಂಟಾಗಿ ಆಗಾಗ ದರ್ಶನಕ್ಕೆ ಬರಲಾರಂಭಿಸಿದನು. ಸರ್ಕಾರಿ ಅಧಿಕಾರಿಗಳೊಂದಿಗೆ ವಿಪುಲ ಸಂಪರ್ಕವಿದ್ದು ಅವರೆದುರು ಮಹಾರಾಜರನ್ನು ಹೊಗಳುತ್ತಿದ್ದರು. ಫಲವಾಗಿ ಚಿದಂಬರ ಕೇಶವ ಉರುಫ್ ಅಣ್ಣಾ ಸಾಹೇಬ ಗಾಡ್ಗಿಲ್ ಎಂಬವನು ಅಂದಿನ ಜಿಲ್ಲಾಧಿಕಾರಿಯ ಚಿಟ್ನಿಸ್ ಆಗಿದ್ದವನು ಮಹಾರಾಜರ ದರ್ಶನಕ್ಕೆ ಸಾಕಷ್ಟು ಜನಗಳೊಡನೆ ಬಂದನು. ದಿನೇ ದಿನೇ ಅಣ್ಣಾಸಾಹೇಬ ಗಾಡ್ಗಿಲ್‌ನ ಶ್ರದ್ಧೆಯು ಹೆಚ್ಚಿ ಮಹಾರಾಜರ ಪೂರ್ಣಭಕ್ತನಾದನು.

ಮಹಾರಾಜರು ವಾಸಿಸುತ್ತಿದ್ದ ಮಸೀದಿಯು ಶಿಥಿಲವಾಗಿ, ಧೂಳಿನಿಂದ ತುಂಬಿಹೋಗಿ, ಮೇಲಿನಿಂದಲೂ ಧೂಳು ಬೀಳುವ ಪರಿಸ್ಥಿತಿ ಇದ್ದುದರಿಂದ, ನಾನಾ ಸಾಹೇಬ ಡೆಂಗ್ಲೆಯು ಮಹಾರಾಜರಿಗಾಗಿ ಮಲಗಲು ಒಂದು ದಪ್ಪಮರದ ಹಲಗೆಯನ್ನು ತಂದುಕೊಟ್ಟನು. ಮಹಾರಾಜರು ಬರಿ ನೆಲದ ಮೇಲೆ ಮಲಗದೆ ಹಲಗೆಯ ಮೇಲೆ ಮಲಗಲೆಂಬುದೇ ಅವನ ಉದ್ದೇಶವಾಗಿತ್ತು. ಮಹಾರಾಜರು ಮಲಗಲು ಹಲಗೆಯನ್ನು ಉಪಯೋಗಿಸಲಾರಂಭಿಸಿದರು. ಆದರೆ ಬೇರೆಯೇ ರೀತಿಯಲ್ಲಿ ಮಸೀದಿಯ ತೊಲೆಗೆ, ಅದನ್ನು ಚಿಂದಿಬಟ್ಟೆಗಳಿಂದ ನೇತುಹಾಕಿ ಅದರ ಮೇಲೆ ಮಲಗಲು ಪ್ರಾರಂಭಿಸಿದರು. ಆ ಚಿಂದಿಯನ್ನು ನೋಡಿದವರಿಗೆ ಅದು ಹಲಗೆಯ ತೂಕವನ್ನು ತಡೆಯಲಾಗದೆ ಕಿತ್ತುಬರುವಂತೆ ಕಂಡುಬರುತ್ತಿತ್ತು. ಆದರೆ ಮಹಾರಾಜರ ಅತಿ ಮಾನವ ಶಕ್ತಿಯಿಂದ ಅವು ಹಲಗೆಯ ಭಾರವನ್ನೂ ಅದರ ಮೇಲೆ ಮಲಗುತ್ತಿದ್ದ ಸಾಯಿಮಹಾರಾಜರ ತೂಕವನ್ನೂ ತಡೆಯುತ್ತಿದ್ದವು. ನಿದ್ರಿಸುವ ಮೊದಲು ಸಾಯಿನಾಥರು ಹಲಗೆಯ ನಾಲ್ಕು ಮೂಲೆಗಳಲ್ಲಿ ನಾಲ್ಕು ಉರಿಯುವ ಹಣತೆಗಳನ್ನು ಇಡುತ್ತಿದ್ದರು.

ಮಹಾರಾಜರು ಈ ಹಲಗೆಯ ಮೇಲೆ ಮಲಗುವುದನ್ನು ಮಹಾಅದ್ಭುತವೆಂದೇ ಪರಿಗಣಿಸಿದ್ದರು. ಮತ್ತು ಈ ಅದ್ಭುತವನ್ನು ವೀಕ್ಷಿಸಲು ಬಹು ದೂರದಿಂದ ಜನರು ಬರುತ್ತಿದ್ದರು. ಆದರೆ ಸಾಯಿನಾಥರು ಈ ಹಲಗೆಯ ಮೇಲೆ ಹೇಗೆ ಹತ್ತುತ್ತಿದ್ದರು ಮತ್ತು ಇಳಿಯುತ್ತಿದ್ದರು ಎಂಬುದನ್ನು ಯಾರೂ ನೋಡಿರಲಿಲ್ಲ. ಆಗಾಗ್ಗೆ ಜನರ ಗುಂಪು ಸರದಿಯಪ್ರಕಾರ ಕಾದರೂ ಸಹ ಯಾರೂ ಮಹಾರಾಜರು ಹಲಗೆಯನ್ನು ಹತ್ತುವುದನ್ನಾಗಲಿ ಇಳಿಯುವುದನ್ನಾಗಲಿ ಎಂದಿಗೂ ನೋಡಲಿಲ್ಲ. ಈ ಅದ್ಭುತವನ್ನು ನೋಡಲು ಒಂದು ದೊಡ್ಡ ಗುಂಪು ಕಾಯುತ್ತಿತ್ತು. ಆದ್ದರಿಂದ ಈ ತೊಂದರೆಯನ್ನು ತಪ್ಪಿಸಲು ಮಹಾರಾಜರು ಒಂದು ದಿನ ಹಲಗೆಯನ್ನು ಮುರಿದು ಹಾಕಿದರು.

ಕೋಪರಗಾಂವನ ಸರ್ಕಲ್ ಇನ್‌ಸ್ಪೆಕ್ಟರ್ (ಕಂದಾಯ) ಆದ ಗೋಪಾಲರಾವ್ ಗುಂಡನೂ ಸಹ ನಾನಾಸಾಹೇಬ ಡೆಂಗಳೆಯ ಮೊದಲು ಕಾರಣದಂತೆಯೇ ದರ್ಶನಕ್ಕಾಗಿ ಬಂದನು. ಇವನಿಗೆ ಮೂರು ಜನ ಪತ್ನಿಯರಿದ್ದರೂ ಪುತ್ರ ಸಂತಾನವಿರಲಿಲ್ಲ. ಮಹಾರಾಜರ ಅನುಗ್ರಹದಿಂದ ಇವನೂ ಪುತ್ರವಂತನಾದನು. ಅವನೂ ಸಹ ಸಾಯಿಯ ಪೂರ್ಣ ಭಕ್ತನಾದನು. ಒಂದು ದಿನ ಮಸೀದಿಯು ಶಿಥಿಲವಾಗಿರುವುದನ್ನು ನೋಡಿ ಅದರ ಪುನರ್ನಿರ್ಮಾಣ ಮಾಡಬೇಕೆಂದೆಣಿಸಿ ಅದಕ್ಕಾಗಿ ಬಹಳ ಕಲ್ಲುಗಳನ್ನು ಸಂಗ್ರಹಿಸಿದನು. ಆದರೆ ಮಹಾರಾಜರು ಅವನಿಗೆ ಅನುಮತಿ ನೀಡಲಿಲ್ಲ. ಮತ್ತೊಬ್ಬ ಭಕ್ತನಿಂದ ಆ ಕಾರ್ಯ ಜರುಗಬೇಕಾಗಿತ್ತು, ಅದರ ಬಗ್ಗೆ ಮುಂದೆ ತಿಳಿಸಲಾಗಿದೆ. ಗೋಪಾಲರಾವ್ ಸಂಗ್ರಹಿಸಿದ ಕಲ್ಲುಗಳನ್ನು ಮಹಾರಾಜರ ಆದೇಶಾನುಸಾರ ಶನಿ ದೇವಾಲಯವನ್ನು ನಿರ್ಮಿಸಲು ಮತ್ತು ಹಳ್ಳಿಯ ಇತರ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲು ಉಪಯೋಗಿಸಲಾಯಿತು. ಮಹಾರಾಜರು ಬೇರೆ ಎಲ್ಲ ದೇವಾಲಯಗಳ ಸ್ಥಿತಿಗತಿಯನ್ನೂ ಗಮನಿಸುತ್ತಿದ್ದರು. ಮಹಾರಾಜರಿಂದಾಗಿ ಮಾರುತಿ ದೇವಾಲಯವು ಜೀರ್ಣೋದ್ಧಾರ ಹೊಂದಿದ್ದೇ ಅಲ್ಲದೆ ವಿಶಾಲವೂ ಆಯಿತು. ಹಳ್ಳಿಯ ದೇವಾಲಯಗಳಿಗೆ ಗಮನ ನೀಡಿದಂತೆ ಅವರು ಸಮಾಧಿಗಳಿಗೂ ಅಷ್ಟೇ ಗಮನ ನೀಡಿದರು. ಮಹಾರಾಜರು ಕೆಲವು ಸಲ ಹಳ್ಳಿಯ ಸರಹದ್ದಿನಲ್ಲಿದ್ದ ಬೇವಿನ ಮರದ ಕೆಳಗೆ ಕುಳಿತಿರುತ್ತಿದ್ದುದರಿಂದ ಈ ವಿಷಯವನ್ನು ಇಲ್ಲಿ ತಿಳಿಸಿದೆ. ಒಮ್ಮೆ ಅವರು, "ಒಬ್ಬ ಪೀರನ ಸಮಾಧಿಯು ಇಲ್ಲಿದೆ" ಎಂದು ಹೇಳಿದಾಗ ಆ ಜಾಗವನ್ನು ಅಗೆದಾಗ ಅಲ್ಲಿ ನಿಜವಾಗಿಯೂ ಒಂದು ಗೋರಿಯು ಕಂಡು ಬಂದಿತು. ನಂತರ ಅದೇ ದಿನ ಭಕ್ತರು ಸಂಗೀತ ವಾದ್ಯಗಳೊಂದಿಗೆ ಪರಾಕು ಘೋಷಿಸುತ್ತಾ ಮಹಾರಾಜರ ಮೆರವಣಿಗೆ ಮಾಡಿದರು. ಮಹಾರಾಜರು ಹೇಳಿದರು, "ಇದು ನನ್ನ ತಂದೆಯ ಸ್ಥಾನ. ಪ್ರತಿ ಗುರುವಾರ ಮತ್ತು ಶುಕ್ರವಾರಗಳಂದು ನಿಮ್ಮ ಕ್ಷೇಮಕ್ಕಾಗಿ ಆಗರಬತ್ತಿಯನ್ನು ಹಚ್ಚಿರಿ."

ಒಮ್ಮೆ ಗೋಪಾಲರಾವ ಗುಂಡನು ವಾರ್ಷಿಕ ಹಬ್ಬವಾದ ಉರುಸ್‌ನ್ನು ಆಚರಿಸಲು ಯೋಚಿಸಿದನು. ಅವನು ಈ ಯೋಚನೆಯನ್ನು,

ತಾತ್ಯಾಪಾಟೀಲ್, ದಾದಾಕೋತೆ ಪಾಟೀಲ, ಮಾಧವರಾವ್ ದೇಶಪಾಂಡೆ ಮತ್ತು ಗ್ರಾಮದ ಇತರ ಭಕ್ತರಿಗೆ ತಿಳಿಸಿ, ಅವರಅನುಮೋದನೆಯನ್ನು ಪಡೆದು, ಅದಕ್ಕೆ ಬೇಕಾದ ತಯಾರಿಯ ಉಸ್ತುವಾರಿಯನ್ನು ತಾನೇ ವಹಿಸಿಕೊಂಡನು. ಆದರೆ ಕುಲಕರ್ಣಿಯು ಇದನ್ನು ವಿರೋಧಿಸಿದನು. ಪರಿಣಾಮವಾಗಿ ಕಲೆಕ್ಟರನು ಈ ಉರುಸ್ ನಡೆಯಬಾರದೆಂದು ಆದೇಶ ನೀಡಿದನು. ಆದರೆ ಉರುಸ್ ನಡೆಸುವ ಯೋಜನೆಗೆ ಮಹಾರಾಜರ ಪೂರ್ಣ ಆಶೀರ್ವಾದವಿತ್ತು. ಆದುದರಿಂದ, ಮೇಲೆ ತಿಳಿಸಿದಂತಹ ಈ ಭಕ್ತರೆಲ್ಲರೂ ಮತ್ತೊಮ್ಮೆ ಕಲೆಕ್ಟರ್‌ನ್ನು ಭೇಟಿಮಾಡಿ ಮೊದಲ ಆದೇಶವನ್ನು ರದ್ದುಪಡಿಸಿ, ಉರುಸ್ ನಡೆಸಲು ಪರವಾನಿಗೆಯನ್ನು ಪಡೆದರು. ಈ ಉತ್ಸವವನ್ನು ಮಹಾರಾಜರ ಅನುಮತಿ ಪಡೆದು ರಾಮನವಮಿಯಂದೇ ನಡೆಸಲು ನಿಶ್ಚಯಿಸಿದರು. ಮತ್ತು ಅಂದಿನಿಂದ ಇಂದಿನವರೆಗೆ ಅದನ್ನು ರಾಮನವಮಿಯಂದೇ ಆಚರಿಸಲಾಗುತ್ತಿದೆ.

ತಾತ್ಯಾಗಣಪತಿ ಕೋತೆ ಪಾಟೀಲನು ಉತ್ಸವದ ಎಲ್ಲ ವ್ಯವಸ್ಥೆ ಹಾಗೂ ಉಸ್ತುವಾರಿಯನ್ನು ಆರಂಭದಿಂದಲೂ ಶಿರಡಿಯಲ್ಲಿ ನೋಡಿಕೊಳ್ಳುತ್ತಿದ್ದನು. ಮಹಾರಾಜರು ಅವನನ್ನು ಅತ್ಮೀಯವಾಗಿ ಪ್ರೀತಿಸುತ್ತಿದ್ದರು. ಅವನು ಮಹಾರಾಜರನ್ನು ಸೋದರ ಮಾವನೆಂದೇ ಸಂಬೋಧಿಸುತ್ತಿದ್ದನು. ಅವನ ತಾಯಿ ಸೌಭಾಗ್ಯವತಿ ಬಾಯಜಾಬಾಯಿಯು ಮಹಾರಾಜರ ಸೇವೆಯನ್ನು ಭಕ್ತಿಯಿಂದ ಮಾಡುತ್ತಿದ್ದಳು. ಅದೂ ಹಳ್ಳಿಯ ಅನೇಕ ಜನ ಸಾಮಾನ್ಯರು ಮಹಾರಾಜರನ್ನು ಹುಚ್ಚನೆಂದೇ ಎಣಿಸುತ್ತಿದ್ದಾಗ!

ಆರಂಭದ ದಿನಗಳಲ್ಲಿ ಮಹಾರಾಜರು ನಾಲ್ಕು ಅಥವಾ ಐದು ಸಲ ಹಳ್ಳಿಯ ಒಳಗೆ ಭಿಕ್ಷೆಗೆಂದು ಹೋಗುತ್ತಿದ್ದರು. ಆದರೆ ಸೌಭಾಗ್ಯವತಿ ಬಾಯಜಾಬಾಯಿ ಅವರನ್ನು ಎಂದಿಗೂ ಹಿಂದಕ್ಕೆ ಕಳುಹಿಸಲಿಲ್ಲ. ಸಹಜವಾಗಿಯೇ ಆ ಮಹಿಳೆ ತನ್ನ ಭಕ್ತಿಯ ಸುಫಲವನ್ನು ಅನುಭವಿಸಿದಳು. ಆದರೆ ಅವಳ ಇಡೀ ಕುಟುಂಬವೇ ಅದರಲ್ಲೂ ವಿಶೇಷವಾಗಿ ತಾತ್ಯಾನು ಫಲಾನುಭವಿಯಾಗಿದ್ದನು. ಮಹಾರಾಜರು ತಾತ್ಯಾನಿಗೆ ಹಣವನ್ನು ಕೊಡುತ್ತಿದ್ದುದೇ ಅಲ್ಲದೆ ಎಲ್ಲ ವಿಷಯಗಳಲ್ಲಿಯೂ ತೃಪ್ತಿಪಡಿಸುತ್ತಿದ್ದರು. ಪ್ರತಿದಿನ ಸಾಯಂಕಾಲ ತಾತ್ಯಾನು ಮಹಾರಾಜರಲ್ಲಿಗೆ ಬಂದಾಗ ಮಾವ ಮತ್ತು ಸೋದರಳಿಯ ಇವರಿಬ್ಬರ ಪ್ರೇಮಪ್ರಸಂಗವು ನೋಡಲು ತಕ್ಕುದಾಗಿದ್ದು ಅವರ ಪ್ರೇಮಚರ್ಚೆಯು ಕೇಳಲು ಯೋಗ್ಯವಾಗಿತ್ತು. ಅದೇ ರೀತಿ ಮಸೀದಿ ಮತ್ತು ಚಾವಡಿಯಲ್ಲಿ ಎಲ್ಲ ಸಿದ್ಧತೆಗಳೂ ತಾತ್ಯಾನ ಕೈಯಲ್ಲಿಯೇ ಇದ್ದವು. ಮಹಾರಾಜರು ತಾತ್ಯಾನು ಬಂದು ಅವರನ್ನು ಏಳಿಸಲು ಸಹಾಯಮಾಡುವವರೆಗೆ ಏಳುತ್ತಿರಲಿಲ್ಲ. ತಾತ್ಯಾನೇ ಅವರ ತೋಳನ್ನು ಹಿಡಿದು ಎತ್ತಿ ತಾನೇ ಹರಡಿದ್ದ ಆಸನ[6] ಮೇಲೆ ಮಹಾರಾಜರು ಕುಳಿತುಕೊಳ್ಳುವಂತೆ ಮಾಡುತ್ತಿದ್ದನು. ಇದು ನಿತ್ಯದ ಪರಿಪಾಠವಾಗಿತ್ತು. ಚಿಲುಮೆಯನ್ನೂ ಸಹ ತಾತ್ಯಾನೇ ತುಂಬುತ್ತಿದ್ದನು.

ರಾಮನವಮಿ ಹಬ್ಬದ ದಿನವೇ ಎರಡು ದೊಡ್ಡ ಬಾವುಟಗಳನ್ನು ಅತಿ ವಿಜೃಂಭಣೆಯಿಂದ ಮಸೀದಿಗೆ ತೆಗೆದುಕೊಂಡು ಹೋಗಿ ಅಲ್ಲಿ

ಎರಡು ತುದಿಗಳಲ್ಲಿ ಕಟ್ಟುತ್ತಿದ್ದರು. ಅವುಗಳಲ್ಲಿ ಒಂದು ಬಾವುಟವು ಶಂಕರರಾವ್ ರಘುನಾಥ ದೇಶಪಾಂಡೆ ಅಲಿಯಾಸ್ ನಾನಾಸಾಹೇಬ ನಿಮೋಣಕರ್ ಮತ್ತು ಎರಡನೆಯದು ನಗರ ಊರಿನ ದಾಮೂಶೇಠ ಕಾಸರ್‌ರವರಿಂದ ಬರುತ್ತಿತ್ತು. ನಾನಾಸಾಹೇಬ ನಿಮೋಣಕರನು ನಿಮೋಣದ ದೇಶಪಾಂಡೆಯಾಗಿದ್ದನು. (ಜಿಲ್ಲಾ ಲೆಕ್ಕಾಧಿಕಾರಿ). ನಿಮೋಣ ಗ್ರಾಮವು ಸಂಗಮನೇರ್ ತಾಲೂಕಿನಲ್ಲಿದೆ. ನಾನಾ ಸಾಹೇಬನು ತಾಲೂಕಿನ ಮುಖ್ಯಸ್ಥರಲ್ಲಿ ಒಬ್ಬನಾಗಿದ್ದನು. ಸರಕಾರವು ಅವನನ್ನು ಗೌರವ ಜಿಲ್ಲಾ ನ್ಯಾಯಾಧಿಕಾರಿಯಾಗಿ ನೇಮಿಸಿತ್ತು. ಅವನು ತನ್ನ ಮುಪ್ಪಿನ ಕಾಲದಲ್ಲಿ ಅದನ್ನು ತ್ಯಜಿಸಿದ್ದನು. ಅವನ ಮಾವನು ಅಲ್ಲಿಯೇ ವಾಸವಾಗಿದ್ದನು. ಅಲ್ಲಿಗೆ ಬಂದಾಗಲೆಲ್ಲ ಮಾವನ ಸೂಚನೆಯಂತೆ ಮಹಾರಾಜರ ದರ್ಶನಕ್ಕೆ ಹೋಗುತ್ತಿದ್ದನು. ದಿನೇ ದಿನೇ ಮಹಾರಾಜರಲ್ಲಿ ಅವನ ಭಕ್ತಿ ಹೆಚ್ಚುತ್ತಿತ್ತು ಮತ್ತು ಅವನ ಕೊನೆಯ ಮೂರು ವರ್ಷಗಳನ್ನು ಸದಾಕಾಲ ಮಹಾರಾಜರ ಸೇವೆಯಲ್ಲಿ ಕಳೆದನು. ಅವನು ತನ್ನ ಮನೆಗೆ ಕೇವಲ ಸ್ನಾನ, ಬೆಳಗಿನ ಮತ್ತು ಸಂಜೆಯ ಪ್ರಾರ್ಥನಾ ವಿಧಿಗಳುತ್ತು ದಿನನಿತ್ಯದ ವಿಧಿವಿಧಾನಗಳಿಗಾಗಿ ಮಾತ್ರ ಹೋಗುತ್ತಿದ್ದನು. ಉಳಿದ ಸಮಯದಲ್ಲಿ ಮಹಾರಾಜರ ಕೈ ಸಂಜ್ಞೆಯ ಆಜ್ಞಾಧಾರಕನಾಗಿದ್ದನು. 60 ವರ್ಷಗಳು ಮೀರಿದ್ದರೂ ಅವನು ವಿಶ್ರಾಂತಿಗಾಗಿ ಅಥವಾ ಮಹಾರಾಜರ ಯಾವುದೇ ಸೇವೆಯನ್ನು ತಪ್ಪಿಸಲು ಯೋಚಿಸಲಿಲ್ಲ ಹಾಗೂ ಅದಕ್ಕಾಗಿ ಎಂದಿಗೂ ಇಚ್ಛಿಸಲಿಲ್ಲ.

ಮಹಾರಾಜರು ಅವನನ್ನು ಕಾಕಾ ಎಂದು ಕರೆಯುತ್ತಿದ್ದರು. ಮಹಾರಾಜರ ನಂತರ ಅವನು ಹೆಚ್ಚು ಕಾಲ ಬದುಕಿರಲಿಲ್ಲ. ನಂತರ ಬೇಗನೆ ಮಹಾರಾಜರ ಚರಣಕಮಲಗಳಲ್ಲಿ ಸೇರಿಹೋದನು. ಮಹಾರಾಜರ ಕೃಪೆಯಿಂದ ಅವನ ಅಂತ್ಯ ಸುಖಕರವಾಯಿತು. ಕೊನೆಯ ಮೂರು ದಿನಗಳಲ್ಲಿ ಅವನು ಎಲ್ಲೆಲ್ಲೂ ಮಹಾರಾಜರನ್ನೇ ಕಾಣುತ್ತಿದ್ದನು. ಮತ್ತು ಹತ್ತಿರ ಬಂದವರನ್ನೆಲ್ಲ 'ಸಾಯಿಬಾಬಾ'ಎಂದೇ ಸಂಬೋಧಿಸುತ್ತಿದ್ದನು. (ಮಹಾರಾಜರನ್ನು ಬಾಬಾ ಎಂದು ಕರೆಯಲಾಗುತ್ತಿತ್ತೆಂದು ಈಗಾಗಲೇ ಹೇಳಿದೆ.) ತನ್ನ ಪತ್ನಿಯನ್ನೂ ಸಹ 'ಬಾ ಸಾಯಿ ಬಾಬಾ' ಎಂದು ಕರೆದನು. ಅವನ ಪತ್ನಿಯು ಆತನು ಯಾವುದೇ ಭ್ರಮೆಯಲ್ಲಿರುವನೆಂದು ಭಾವಿಸಿ, "ನಾನು ಬಾಬಾ ಅಲ್ಲ, ನಾನು ನಿಮ್ಮ ಪತ್ನಿ" ಎಂದಳು. ಆಗ ಅವನು, "ನಿನ್ನಲ್ಲಿ ಯಾರಿದ್ದಾರೆ? ಬಾಬಾನೇ. ನೀನು ಬಾಬಾ" ಎಂದನು. ಈ ರೀತಿ ಮಹಾರಾಜರ ನಿರಂತರ ನೆನಪಿನಲ್ಲೇ ಅವನ ಅಂತ್ಯವು ಬಂದಿತು.

ರಾಮನವಮಿಯ ಸಮಯದಲ್ಲಿ ಬರುವ ಎರಡನೆಯ ಬಾವುಟವು ದಾಮೋದರ ಸವಲಾರಾಮ ಅಲಿಯಾಸ್ ದಾಮುಅಣ್ಣಾಕಾಸರ್‌ನಿಂದ ಎಂದು ಈಗಾಗಲೇ ಮೇಲೆ ತಿಳಿಸಿದೆ. ಅವನಿಗೆ ಇಬ್ಬರು ಪತ್ನಿಯರಿದ್ದರೂ, ಇಬ್ಬರಿಂದಲೂ ಪುತ್ರಸಂತಾನವಿರಲಿಲ್ಲ. ಆದ್ದರಿಂದ ಆ ವಿಷಯದಲ್ಲಿ ಬಹಳ ದುಃಖಿತನಾಗಿದ್ದನು. ಒಮ್ಮೆ ಗೋವಿಂದರಾವ್ ಸಪಕರ್, ಮಾಧರಾವ್ ದೇಶಪಾಂಡೆಯ ಮಾವ, (ಹೆಂಡತಿಯ ತಂದೆ) ಇಲ್ಲಿಗೆ ಬಂದು

ಮಹಾರಾಜರು ಆಶೀರ್ವಾದ ತೆಗೆದುಕೊಳ್ಳುವಂತೆ ಸೂಚಿಸಿದನು. ಹಾಗೆಯೇ ಅವನು ಇಲ್ಲಿಗೆ ಬಂದನು ಮತ್ತು ಮಹಾರಾಜರ ಆಶೀರ್ವಾದ ಪಡೆದನು. ಸಹಜವಾಗಿ ಮಹಾರಾಜರಲ್ಲಿ ಅವನ ಶ್ರದ್ಧೆಯು ಸ್ಥಿರಗೊಂಡಿತು. ಮತ್ತು ಅಂದಿನಿಂದ ರಾಮನವಮಿಯಂದು ಒಂದು ಹೊಸ ಪತಾಕೆಯನ್ನು ತಂದು ಅಲ್ಲಿ ನೆರೆದಿರುವ ಎಲ್ಲ ಫಕೀರರಿಗೆ ಅನ್ನದಾನ ಮಾಡುವುದನ್ನು ರೂಢಿಸಿಕೊಂಡಿದ್ದನು. ಮತ್ತು ಈ ಆಚರಣೆ ದಿನದವರೆಗೂ ಮುಂದುವರೆದಿದೆ.

ರಾಮನವಮಿಯ ಉತ್ಸವ ಪ್ರಾರಂಭವಾಗುವುದಕ್ಕೆ ಕೆಲವು ವರ್ಷಗಳ ಮೊದಲು ಮಹಾರಾಜರು ತಮ್ಮಲ್ಲಿಗೆ ಒಬ್ಬ ನಿಸ್ವಾರ್ಥ ಭಕ್ತನೊಬ್ಬನನ್ನು ಸೆಳೆದುಕೊಂಡಿದ್ದರು. ಆ ಭಕ್ತನು ನಾರಾಯಣ ಗೋವಿಂದ ಅಲಿಯಾಸ್ ನಾನಾ ಸಾಹೇಬ ಚಂದೋರಕರ್. ಅವನು ಕಲ್ಯಾಣದ ನಿವಾಸಿಯಾಗಿದ್ದರೂ ಅಹಮದ್ ನಗರದ ಜಿಲ್ಲಾಧಿಕಾರಿಯ ಚಿಟ್ನಿಸ್[19], ಅಂದರೆ ಸಂಪರ್ಕ ಕಾರ್ಯದರ್ಶಿಯಾಗಿದ್ದನು. ಒಂದು ದಿನ ಆ ಊರಿನ ಕುಲಕರ್ಣಿಯಾದ ಕೇಶವ ಅನಂತ ಅಲಿಯಾಸ್ ಅಪ್ಪಾನು ಮಹಾರಾಜರು ಅವನಿಗಾಗಿ ಹೇಳಿಕಳುಹಿಸಿದ್ದಾರೆಂದು ತಿಳಿಸಿದನು. ಮೊದಲು ನಾನಾ ಸಾಹೇಬನಿಗೆ ಅಪ್ಪಾನಲ್ಲಿ ವಿಶ್ವಾಸ ಮೂಡಲಿಲ್ಲ. "ನೀನೇಕೆ ವ್ಯರ್ಥವಾಗಿ ಮಹಾರಾಜರ ಹೆಸರನ್ನು ಎತ್ತುವೆ? ನಿನಗೆ ನನ್ನಿಂದ ಏನಾದರೂ ಆಗಬೇಕಿದ್ದರೆ ಸರಳವಾಗಿ ತಿಳಿಸು" ಎಂದು ಹೇಳಿದನು. ಅದಕ್ಕೆ ಅಪ್ಪಾನು ಮಹಾರಾಜರು ನಿಜವಾಗಿಯೂ ಕರೆದಿದ್ದಾರೆಂದು ದೃಢವಾಗಿ ಹೇಳಿದನು. ಈ ರೀತಿ ಅಷ್ಟು ಖಚಿತವಾಗಿ ಹೇಳಿದ ನಂತರ ನಾನಾ ಸಾಹೇಬನು ಮಹಾರಾಜರ ದರ್ಶನಕ್ಕೆ ಬಂದು ಶೀಘ್ರದಲ್ಲಿಯೇ ಮಹಾರಾಜರಲ್ಲಿ ವಿಶ್ವಾಸ ಬೆಳೆಸಿಕೊಂಡನು. ಅನಂತರ ಅವನು ಆಗಾಗ ಬಂದು ಮಹಾರಾಜರ ಜ್ಞಾನದ ಮಧುವನ್ನು ಪಡೆಯುವ ಸದವಕಾಶವನ್ನು ಪಡೆದನು. ಮಹಾರಾಜರು ಮತ್ತು ಅವನು ಒಮ್ಮೊಮ್ಮೆ ಗಂಟೆಗಟ್ಟಲೆ ಒಟ್ಟಾಗಿರುತ್ತಿದ್ದರು. "ಸಾಷ್ಟಾಂಗ ನಮಸ್ಕಾರ[20] ಮಾಡುವುದರಿಂದ, ಗುರುವನ್ನು ಪ್ರಶ್ನಿಸುವುದರಿಂದ, ಅವನನ್ನು ಸೇವಿಸುವುದರಿಂದ, ಜ್ಞಾನವೇನೆಂಬುದನ್ನು ಕಲಿ. ಅನಂತರ ಸದ್ವಸ್ತುವಿನ ಸತ್ಯಜ್ಞಾನವನ್ನು ಸಾಕ್ಷಾತ್ಕರಿಸಿಕೊಂಡಂತಹ ಜ್ಞಾನಿಗಳು ನಿನಗೆ ಜ್ಞಾನೋಪದೇಶ ಮಾಡುತ್ತಾರೆ." ಭಗವಂತನ ಈ ವಚನದಂತೆ, ನಾನಾ ಸಾಹೇಬನು ನಮಸ್ಕರಿಸಿ, ಪ್ರಶ್ನಿಸಿ ಮತ್ತು ಸೇವಿಸಿದಾಗ ಮಹಾರಾಜರು ಅವನಿಗೆ ಉಪದೇಶ ನೀಡಿದರು. ಒಂದು ಸಂದರ್ಭದಲ್ಲಿ ಮಹಾರಾಜರು ಈ ಒಂದು ಶ್ಲೋಕದ ಸಂಪೂರ್ಣವಾದ ಅರ್ಥವನ್ನು ಒಂದು ಗಂಟೆಗೂ ಹೆಚ್ಚು ಸಮಯದವರೆಗೆ ವಿವರಿಸಿದರು. ಈ ಬೋಧನೆಯಿಂದ ನಾನಾ ಸಾಹೇಬನಿಗೆ, ಮಹಾರಾಜರಿಗೆ ಸಂಸ್ಕೃತದ ಪರಿಪೂರ್ಣ ಜ್ಞಾನವಿದೆಯೆಂಬುದು ಮನದಟ್ಟಾಯಿತು. ನಾನಾ ಸಾಹೇಬನು ತನ್ನ ಕೈಲಾದಷ್ಟು ಮಹಾರಾಜರ ಸೇವೆ ಮಾಡಿದನು. ಭಕ್ತರು ಎರಡು ವಿಶೇಷ ವಿಚಾರಗಳಿಗಾಗಿ ಅವನನ್ನು ಇಂದೂ ನೆನಸಿಕೊಳ್ಳುತ್ತಾರೆ. ಒಂದು ಮಹಾರಾಜರ ಹಳೆಯ ಮಸೀದಿಯನ್ನು ಒಡೆದು ಹಾಕಿ ಪುನರ್ನಿರ್ಮಾಣಮಾಡಿ ವಿಸ್ತರಿಸಿದ್ದಕ್ಕಾಗಿ. ಈ ಕೆಲಸವನ್ನು ನಾನಾ ಸಾಹೇಬನು ಖುದ್ದಾಗಿ ಮಾಡಲು ಅನುಕೂಲವಿಲ್ಲದಿದ್ದರಿಂದ ನಾನಾ ಸಾಹೇಬ ನಿಮೋಣಕರನು ಅವನ

ಬೇಡಿಕೆಯಮೇರೆಗೆ ಅಲ್ಲಿಯೇ ಉಳಿದುಕೊಂಡು ಕೆಲಸದ ಉಸ್ತುವಾರಿಯನ್ನು ಕೈಗೆತ್ತಿಕೊಂಡು ಸಮರ್ಪಕವಾಗಿ ಉತ್ತಮವಾಗಿ ಮಾಡಿ ಮುಗಿಸಿದನು. ಮಸೀದಿಯ ನಿರ್ಮಾಣಕ್ಕಾಗಿ ಮಹಾರಾಜರ ಒಪ್ಪಿಗೆಯನ್ನು ಮ್ಹಾಳಸಾಪತಿಯವರ ಮೂಲಕ ಪಡೆಯಲಾಗಿತ್ತು. ಆದರೂ ಕೆಲಸ ಮುಂದುವರೆಯುತ್ತಿರುವಾಗ ಮಹಾರಾಜರು ಆಗಾಗ ಕಟ್ಟಿದವನ್ನು ಕೆಡವಿ ದೊಡ್ಡದಾದ ಭಾರವಾದ ಕಲ್ಲುಗಳನ್ನೂ, ಕಂಭಗಳನ್ನೂ ಕಿತ್ತು ದೂರಕ್ಕೆಸೆಯುತ್ತಿದ್ದರು. ಅನಂತರ ಆ ಕೆಲಸವನ್ನು ಮತ್ತೆ ಮಾಡಲಾಗುತ್ತಿತ್ತು. ಇತರರು, ಮಹಾರಾಜರ ಕೃತ್ಯವನ್ನು ವಿಪರೀತವೆಂದುಕೊಂಡರೂ, ಇದರ ಅಂತರಾರ್ಥವನ್ನು ತಿಳಿದವರು ಮಹಾರಾಜರ ಕಾರ್ಯಗಳಿಂದಾಗಿ ಅಚ್ಚರಿಪಡುತ್ತಿರಲಿಲ್ಲ.

ಅಂತೂ ಮಸೀದಿಯ ಕೆಲಸ ಪೂರ್ಣವಾಯಿತು. ಮಹಾರಾಜರು ಆ ದಿನ ನೀಮಗಾಂವಕ್ಕೆ ಹೋಗಿದ್ದರು. ಹೊಸ ಮಸೀದಿಯಲ್ಲಿ ವಾಸಮಾಡಲು ಅತ್ಯಂತ ವಿಜೃಂಭಣೆಯ ಮೆರವಣಿಗೆಯಲ್ಲಿ ಅವರನ್ನು ಕರೆತರಲಾಯಿತು. ಮರಗೆಲಸದವರಾದ ಕೊಂಡಾಜಿ, ಗಬಜಿ ಮತ್ತು ತುಕಾರಾಮ ಈ ಮೂವರು ಸೋದರರು ಮಸೀದಿಯ ಕೆಲಸದಲ್ಲಿ ಬಹು ಒಳ್ಳೆಯ ಸಹಾಯಕರಾಗಿದ್ದರು. ಮಹಾರಾಜರ ದೇಹತ್ಯಾಗದವರೆಗೂ ಮಸೀದಿಯನ್ನು ಗುಡಿಸುವುದು, ಮಹಾರಾಜರ ಪಾತ್ರೆಗಳನ್ನು ತೊಳೆಯುವುದು, ಮಹಾರಾಜರು ಮುಖತೊಳೆಯಲು ಬಿಸಿನೀರು ಕಾಯಿಸುವುದು – ಈ ಎಲ್ಲ ಕೆಲಸಗಳನ್ನೂ ತುಕಾರಾಮನೇ ಮಾಡುತ್ತಿದ್ದನು. ಈ ಕೆಲಸವನ್ನು ಮಹಾರಾಜರು ಸಾಮಾನ್ಯವಾಗಿ ಇತರರಿಂದ ಮಾಡಿಸುತ್ತಿರಲಿಲ್ಲ. ಇಂದಿಗೂ ರಾಮನವಮಿಗಾಗಿ ಬೇಕಾಗಿರುವ ಪತಾಕೆಗಳನ್ನು ಈ ಮರಗೆಲಸದವನ ಮನೆಯಲ್ಲಿಯೇ ಸಿದ್ಧಮಾಡುತ್ತಾರೆ ಅಲ್ಲಿಂದಲೇ ಮೆರವಣಿಗೆಯು ಪ್ರಾರಂಭವಾಗುತ್ತದೆ.

ನಾನಾಸಾಹೇಬನ ಎರಡನೆಯ ಮುಖ್ಯಸೇವೆ ಮಹಾರಾಜರ ಕೀರ್ತಿಯನ್ನು ಲೋಕಪ್ರಸಿದ್ಧವಾಗಿ ಮಾಡಿ ಜನರು ಮಹಾರಾಜರ ಅನುಗ್ರಹವನ್ನು ಪಡೆಯುವಂತೆ ಮಾಡುವುದಾಗಿತ್ತು. ಅವನು ಮಾಮಲೇದಾರನಾಗಿದ್ದರಿಂದ ಮತ್ತು ಅನಂತರ ಡೆಪ್ಯುಟಿ ಕಲೆಕ್ಟರ್ ಆಗಿದ್ದರಿಂದ, ಅವನು ಅನೇಕ ಸಾರಿ ಸರ್ಕೀಟು ಪ್ರವಾಸ ಮಾಡಬೇಕಾಗುತ್ತಿತ್ತು. ನಾನಾ ಸಾಹೇಬನೇ ಈ ಗ್ರಂಥಕರ್ತೃವಿಗೆ ಮಹಾರಾಜದರ್ಶನ ಭಾಗ್ಯದೊರೆಯಲು ಕಾರಣನಾದವನು. ಮುಂಬಯಿಯಿಂದ ಮತ್ತು ಥಾನೆ ಜಿಲ್ಲೆಯ ಸಾವಿರಾರು ಜನರು ಮಹಾರಾಜರ ದರ್ಶನ ಲಾಭ ಪಡೆದಾನಂದತುಂದಿಲರಾಗಿದ್ದರು. ಇದಕ್ಕೆಲ್ಲ ಕಾರಣ ನಾನಾ ಸಾಹೇಬನು. ಮುಂಬಯಿಯಿಂದ ಜನರನ್ನು ಆಕರ್ಷಿಸಿ ಎಳೆತರಲು ನಾನಾಸಾಹೇಬನಲ್ಲದೆ ಮತ್ತಿಬ್ಬರು ಕಾರಣರಾಗಿದ್ದರು. ಅವರಲ್ಲಿ ಒಬ್ಬನು ಗಣೇಶ ದತ್ತಾತ್ರೇಯ ಸಹಸ್ರಬುದ್ಧಿ ಅಲಿಯಾಸ್ ದಾಸಗಣು. ಮೊದಲು ಅವನು ಪೋಲಿಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದನು. ಅವನು 'ತಮಾಷಾ'[21]ದಲ್ಲಿ ಮುಳುಗಿರುತ್ತಿದ್ದನು. ನಾನಾ ಸಾಹೇಬನಿಂದಾಗಿ ಅವನು ಮಹಾರಾಜರ ದರ್ಶನಕ್ಕೆ ಬಂದನು. ಮೆಲ್ಲಮೆಲ್ಲನೆ ಅವನ

ಮನಸ್ಸಿನ ಮೇಲೆ ಮಹಾರಾಜರು ಅದೆಂತಹ ಪರಿಣಾಮಬೀರಿದರೆಂದರೆ ಅವನು ಉದ್ಯೋಗವನ್ನು ತ್ಯಜಿಸಿ ಸಂತರ ಕಥೆಯನ್ನು ಕೀರ್ತನೆ[22] ಮತ್ತು ಪುಸ್ತಕಗಳ ಮೂಲಕ ಜನತೆಗೆ ಪ್ರಸಾರಮಾಡುವ ಕಾರ್ಯವನ್ನು ಪ್ರಾರಂಭಿಸಿದನು. ಅವನು ಇಂದೂ ಈ ಕೆಲಸವನ್ನು ಮುಂದುವರಿಸಿದ್ದಾನೆ. ಅವನು, 'ಭಕ್ತಲೀಲಾಮೃತ', 'ಸಂತ ಕಥಾಮೃತ', 'ಭಕ್ತಿಸಾರಾಮೃತ' ಎಂಬ ಸಂತರ ಜೀವನ ಕುರಿತಾದ ಗ್ರಂಥಗಳನ್ನು ರಚಿಸಿದ್ದಾನೆ. ಅದೂ ಅಲ್ಲದೆ ಅವನು 'ಈಶಾವಾಸ್ಯೋಪನಿಷತ್' ಮೇಲೆ ಮರಾಠಿಭಾಷೆಯಲ್ಲಿ ಸರಳ, ಸುಂದರ ಭಾಷ್ಯವನ್ನು ರಚಿಸಿದ್ದಾನೆ. ಮತ್ತು ಶ್ರೀಜ್ಞಾನೇಶ್ವರ ಮಹಾರಾಜರ 'ಅಮೃತಾನುಭವ', ಇವುಗಳಲ್ಲದೆ ಇನ್ನೂ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಇವನನ್ನು ಮುಂಬಯಿಯಿಂದ ಕರೆತಂದು ನಾನಾಸಾಹೇಬ ಚಾಂದೋರಕರನು ಮುಂಬಯಿಯ ನಿವಾಸಿಗಳಿಗೆ ಭಕ್ತಿರಸಾಮೃತಭರಿತ ಕೀರ್ತನೆಗಳನ್ನು ಮಾಡಿಸುತ್ತಿದ್ದನು. ಅವುಗಳಿಂದ ಮಹಾರಾಜರ ಸ್ವಭಾವ ಮತ್ತು ಗುಣಗಳನ್ನು ಅರಿಯುವ ಸಂತಸ ದೊರೆಯುತ್ತಿತ್ತು. ಅವನ ಕೀರ್ತನೆಗಳಿಗೆ ಧನ್ಯವಾದಗಳು. ಮುಂಬಯಿ ಮತ್ತು ಸುತ್ತಮುತ್ತಲಿನ ಜನರ ಗುಂಪುಗಳು ಮಹಾರಾಜರ ದರ್ಶನಕ್ಕಾಗಿ ಉತ್ಸುಕರಾಗಿ ಬರತೊಡಗಿದರು.

ಮೇಲೆ ಹೇಳಿದ ಎರಡನೆಯ ವ್ಯಕ್ತಿಯು ಈ ಗ್ರಂಥ ಕರ್ತೃವೇ. ಮಹಾರಾಜರ ಪದತಲದಲ್ಲಿ ಅನೇಕಬಾರಿ ದೀರ್ಘಾವಧಿ ನೆಲಸಿ ಸಾಮಾಜಿಕ ಚಟುವಟಿಕೆಗಳಿಂದ ವಿಮುಖನಾಗಿ ತಾನೂ ಒಬ್ಬ 'ಬಾಬಾ' ಆಗಿರುವನೆಂದು ಪಾರಸಿ ಮತ್ತಿತರೆ ವಾರ್ತಾಪತ್ರಿಕೆಗಳಲ್ಲಿ ಪ್ರಚಾರ ಸಿಕ್ಕಿದ್ದರಿಂದ ಸಾಕಷ್ಟು ಜನರು ಈ ಪರಿವರ್ತನೆಗೆ ನಿಮಿತ್ತ ಮಾತ್ರರಾದವರ ದರ್ಶನಕ್ಕೆಂದು ಬರಲಾರಂಭಿಸಿದರು. ಸುಮಾರು ಕ್ರಿ. ಶ. 1910ರಿಂದ ಮಹಾರಾಜರ ದರ್ಶನಾಕಾಂಕ್ಷಿಯಾಗಿ ಬರುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಲೇ ಇದ್ದಿತು.

ನಾನಾಸಾಹೇಬ ಚಂದೋರಕರನು ಇಲ್ಲಿಗೆ ಬಂದಾಗ, ದರ್ಶನಕ್ಕೆಂದು ಬಂದ ಜನರಿಗೆ ಉಳಿದುಕೊಳ್ಳಲು ಒಂದು ವಾಡೆಯೂ[23] ಇರಲಿಲ್ಲ. ಆದರೆ ಮಹಾರಾಜರು ಈ ಕೊರತೆಯನ್ನು ಕ್ಷಿಪ್ರವಾಗಿಯೇ ನಿವಾರಿಸಿದರು. ರಾವ್ ಬಹದ್ದೂರ್ ಹರಿವಿನಾಯಕ ಸಾಠೆಯು ಜಿಲ್ಲೆಯ ಡೆಪ್ಯುಟಿ ಕಲೆಕ್ಟರ್ ಆಗಿದ್ದನು. ಅವನ ಮೊದಲನೆಯ ಹೆಂಡತಿಯು ಬಹಳ ಹಿಂದೆಯೇ ಕಾಲವಾಗಿದ್ದಳು. ಅವನಿಗೆ ಮರು ಮದುವೆಯಾಗುವ ಇಚ್ಛೆಯಿರಲಿಲ್ಲ. ಅವನಿಗೆ ಪುತ್ರ ಸಂತಾನವಿಲ್ಲದ ಕಾರಣ ಅವನ ಸ್ನೇಹಿತರು ಅವನನ್ನು ಮರುಮದುವೆ ಮಾಡಿಕೊಳ್ಳಲು ಒತ್ತಾಯಿಸುತ್ತಿದ್ದರು. ಅನಂತರ, ಅವನು ಮಹಾರಾಜರ ದರ್ಶನಪಡೆದು ಅವರ ಇಚ್ಛೆಯಂತೆ ನಡೆಯುವುದೆಂದು ನಿರ್ಧರಿಸಿದನು. ಹಾಗೆಯೇ ಅವನು ದರ್ಶನಕ್ಕೆ ಬಂದನು. ಮಹಾರಾಜರು ಅವನಿಗೆ ಮರುಮದುವೆಮಾಡಿಕೊಳ್ಳಲು ಹೇಳಿದರು ಮತ್ತು ಪುತ್ರವರವನ್ನೂ ಅನುಗ್ರಹಿಸಿದರು. ರಾವ್ ಬಹಾದೂರನು ಒಬ್ಬ ವಧುವನ್ನು ಆರಿಸಿ ಆಕೆಯ ತಂದೆ ಗಣೇಶ ದಾಮೋದರ ಕೇಳ್ಕರನಿಗೆ ಮಹಾರಾಜರಲ್ಲಿಗೆ ಕರೆತರಲು ತಿಳಿಸಿದನು. ಹಾಗೆಯೇ ಆ ವಧುವು

ಅಲ್ಲಿಗೆ ಬಂದಾಗ ಮಹಾರಾಜರು ಅವಳ ಸೀರೆಯ ಸೆರಗಿನಲ್ಲಿ[24] ಒಂದು ಕಲ್ಲಂಗಡಿ ಹಣ್ಣಿನಿಂದ ಉಡಿತುಂಬಿ ಅವಳ ಹಣೆಗೆ ಕುಂಕುಮ ಹಚ್ಚಿದರು. ಅನಂತರ ಸರಿಯಾದ ಸಮಯದಲ್ಲಿ ಮದುವೆ ನಡೆಯಿತು. ನಂತರ ಮಹಾರಾಜರ ಆದೇಶದಂತೆ ಬೇವಿನ ಮರದ ಸುತ್ತಲೂ ಇದ್ದ ಜಾಗವನ್ನು ಖರೀದಿಸಿ, ಈಗಾಗಲೇ ತಿಳಿಸಿದಂತೆಯೇ ಅಲ್ಲೊಂದು ವಾಡೆಯನ್ನು ಕಟ್ಟಿದರು.

ಅದರಿಂದಾಗಿ ದರ್ಶನಕ್ಕೆ ಬರುವ ಜನರಿಗೆ ವಸತಿ ಸೌಕರ್ಯ ದೊರಕಿತು. ಮೂರು ವರ್ಷಗಳ ನಂತರ ಮಹಾರಾಜರು ಮತ್ತೊಂದು ವಾಡೆಯನ್ನು ಈ ಕೆಳಗೆ ರುಜುಮಾಡಿರುವವರಿಂದ ಕಟ್ಟಿಸಿದರು. ತದನಂತರ ಮತ್ತೊಂದು ವಾಡೆಯನ್ನು ನಾಗಪುರದ ಲಕ್ಷಾಧಿಕಾರಿಯಾದ ಗೋಪಾಲರಾವ್ ಅಲಿಯಾಸ್ ಬಾಪುಸಾಹೇಬ ಬೂಟಿಯಿಂದ ಕಟ್ಟಿಸಿದರು. ಈ ವಾಡೆ ವಿಶಾಲವಾಗಿದ್ದು ಕಲ್ಲುಗಳಿಂದ ನಿರ್ಮಿಸಲ್ಪಟ್ಟು ಬಹಳ ದೃಢವಾಗಿದ್ದು ಅದರ ನಿರ್ಮಾಣಕ್ಕೆ ಬಹಳ ಹಣವು ವ್ಯಯವಾಗಿತ್ತು, ಅದಕ್ಕೆ ಹೋಲಿಸಬಹುದಾದ ಇನ್ನೊಂದು ಕಟ್ಟಡ ಶಿರಡಿ ಅಥವಾ ಅದರ ಸುತ್ತಮುತ್ತ ಅಥವಾ ಯಾವುದೇ ತಾಲೂಕಿನಲ್ಲಿ ಎಲ್ಲೂ ಇರುವುದಿಲ್ಲ. ಮಹಾರಾಜರ ಸಮಾಧಿಯು ಈ ವಾಡೆಯಲ್ಲೇ ಇದೆ.

ಶೀಘ್ರದಲ್ಲಿ, ಶಿರಡಿಯು 'ಸಂಸ್ಥಾನ'[25] ಎನಿಸಿಕೊಂಡಿತು. ಮಹಾರಾಜರಿಗೆ ಆರತಿ[26]ಗಳನ್ನು ಮಾಡಲಾರಂಭಿಸಿದರು. ಆರತಿಯ ಸಮಯದಲ್ಲಿ ಚಾಮರ, ಛತ್ರಿ ಮತ್ತಿತರೆ ರಾಜಲಾಂಛನಗಳು ಉಪಯೋಗಿಸಲ್ಪಡುತ್ತಿದ್ದವು. ಮಹಾರಾಜರು ಚಾವಡಿಗೆ ಹೋಗುವಾಗ ಅನೇಕ ಮಂಗಳವಾದ್ಯಗಳು, ಕುದುರೆ, ಪಲ್ಲಕ್ಕಿ,[27] ರಾಜದಂಡ,[28] ಭಜನೆ ಹಾಡುವವರು,[29] ಬಾವುಟಗಳು ಮತ್ತು ಇತರೆ ಎಲ್ಲ ಸಾಮಗ್ರಿಗಳು ಅವರ ಜೊತೆಯಲ್ಲಿ ಮೆರವಣಿಗೆಯಲ್ಲಿ ಸಾಗುತ್ತಿದ್ದವು. ಚಾವಡಿಯನ್ನು ಕನ್ನಡಿಗಳು, ದೀಪಗಳು, ಗೊಂಚಲು ತೂಗುದೀಪಗಳು ಮತ್ತು ಚಿತ್ರಪಟಗಳಿಂದಾಲಂಕರಿಸಲಾಗುತ್ತಿತ್ತು. ಮಸೀದಿಯ ಮತ್ತು ಚಾವಡಿಯ ನೆಲಕ್ಕೆ ಟೈಲ್ಸ್‌ನಿಂದ ಹೊದಿಸಲಾಗಿತ್ತು. ಇದರ ಕೀರ್ತಿಯೆಲ್ಲವೂ ಸುಂದರಾಬಾಯಿ ಕ್ಷೀರಸಾಗರ ಅಲಿಯಾಸ್ ರಾಧಾಕೃಷ್ಣ ಆಯಿಗೆ ಸಲ್ಲುತ್ತದೆ. ಈಕೆ ಪ್ರೇಮಭಕ್ತಿಯ ಗುರು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಅವಳ ಹತ್ತಿರ ಧನಸಂಪತ್ತು ಇರಲಿಲ್ಲ. ಆದರೆ ತನ್ನ ತನುಮನಗಳನ್ನು ಮಹಾರಾಜರ ಸೇವೆಗೆ ಸಮರ್ಪಿಸಿದ್ದು ಮಹಾರಾಜರ ಬೇರೆ ಬೇರೆ ಭಕ್ತರಿಂದ ಬೇರೆ ಬೇರೆ ವಸ್ತುಗಳನ್ನು ಸಂಗ್ರಹಿಸಿ ಉಪಯೋಗಿಸಿ ಶಿರಡಿ ಸಂಸ್ಥಾನವನ್ನು ಕಟ್ಟಿದ್ದಳು. ದುರದೃಷ್ಟವಶಾತ್ ಅವಳ ಜೀವನವು ಕೇವಲ 35 ವರ್ಷದವಳಾಗಿದ್ದಾಗಲೇ ಅಂತ್ಯಗೊಂಡಿತು.

ಅವಳು ಇಲ್ಲಿ ಕೇವಲ 8 ಅಥವಾ 9 ವರ್ಷಗಳು ಮಾತ್ರ ಇದ್ದಳು. ಆದರೆ ಇಷ್ಟು ಅಲ್ಪ ಸಮಯದಲ್ಲಿಯೇ ಇಪ್ಪತ್ತೈದು ವರ್ಷಕಾಲ ಹಿಡಿಯುವಷ್ಟು ಕೆಲಸಗಳನ್ನು ಸಾಧಿಸಿದ್ದಳು. ಈ ಮಹಿಳೆಯಿಂದಾಗಿಯೇ ಮಹಾರಾಜರ ರಾತ್ರಿ ಆರತಿ ಮತ್ತು ಬೆಳಗಿನ ಜಾವ ಕಾಕಡಾರತಿಗಳು ಚಾವಡಿಯಲ್ಲಿ ಪ್ರಾರಂಭವಾದವು. ಮೊದಮೊದಲು ಮಹಾರಾಜರು ತಮ್ಮ ಪೂಜೆಗೆಅನುಮತಿಸಿರಲಿಲ್ಲ. ಮೊದಲ ಪೂಜೆಯು ಮಾಳಸಾಪತಿಯಿಂದ

ಮಾಡಲ್ಪಡುತ್ತಿತ್ತು. ಸ್ವಲ್ಪ ಕಾಲಾನಂತರ ನಿಮಗಾಂವನ ಸೀತಾರಾಮಡೆಂಗ್ಲೆಯು ಪೂಜೆ ಮಾಡಲು ಬಂದಾಗ ಮಹಾರಾಜರು ಅವನ ಮೇಲೆ ಕೋಪಿಸಿಕೊಂಡರು. ಕೊನೆಗೆ ಪೂಜೆ ಮಾಡಲು ಅನುವುಮಾಡಿಕೊಟ್ಟರು.

ಕೆಲಕಾಲಾನಂತರ ನಾನಾ ಸಾಹೇಬ ಚಂದೋರಕರನ ಚಿಕ್ಕ ಮಗ ಮಹಾದೇವ ಅಲಿಯಾಸ್ ಬಾಪುವಿಗೆ ಸಮರ್ಪಕವಾಗಿ ಪೂಜೆಮಾಡಲು ಅವಕಾಶ ದೊರೆಯಿತು. ಮತ್ತು ಅಲ್ಲಿಂದಾಚೆಗೆ ಎಲ್ಲರಿಗೂ ಪೂಜೆ ಮಾಡಲು ಅನುಮತಿ ದೊರೆಯಿತು. ಆದರೆ ಆ ಸಮಯದಲ್ಲಿ ಮಹಾರಾಜರು ಆರತಿಗಳನ್ನು ಮಾಡಲು ಅವಕಾಶ ನೀಡಿರಲಿಲ್ಲ. ಸ್ವಲ್ಪ ಸಮಯದ ನಂತರ ಮೊದಲ ಬಾರಿಗೆ ಆರತಿ ಮಾಡುವ ಭಾಗ್ಯವು ತಾತ್ಯಾಸಾಹೇಬ ನೂಲ್ಕರನದಾಯಿತು. ಪಂಡರಾಪುರದಲ್ಲಿ ಪೌರನ್ಯಾಯಾಧೀಶನಾಗಿದ್ದವನು ಅನಾರೋಗ್ಯಕ್ಕೆ ತುತ್ತಾಗಿ ರಜೆಯ ಮೇಲೆ ಇಲ್ಲಿಗೆ ಬಂದನು. ಅವನ ಇಚ್ಛೆಯು ತನ್ನ ಉದ್ಯೋಗವನ್ನು ತೊರೆದು ಉಳಿದ ಜೀವಿತವನ್ನು ಮಹಾರಾಜರ ಪಾದಸನ್ನಿಧಿಯಲ್ಲಿ ಕಳೆಯಬೇಕೆಂದಿದ್ದು, ಕೊನೆಯಲ್ಲಿ ಅದೇ ಆಯಿತು.

ರಾಧಾಕೃಷ್ಣ ಆಯಿಯು ಸಾಧ್ಯವಾದ ಎಲ್ಲ ರೀತಿಗಳಲ್ಲೂ ಸೇವೆ ಮಾಡಿದಳು. ದಿನಕ್ಕೆರಡು ಬಾರಿ ಮಹಾರಾಜರು ನಡೆಯುತ್ತಿದ್ದ ಮಾರ್ಗವನ್ನು ಗುಡಿಸಿ ಸ್ವಚ್ಛಗೊಳಿಸುತ್ತಿದ್ದಳು. ಕೊನೆಯಲ್ಲಿ ತಾನೇ ಎಲ್ಲ ಕಸವನ್ನೂ ತೆಗೆದುಹಾಕುತ್ತಿದ್ದಳು. ಇದಕ್ಕೆ ಹಿಂದೆ ಈ ಕೆಲಸವು ಬಾಲಾಜಿ ಪಾಟೀಲ ನೆವಾಸ್ಕರ್‌ನಿಂದ ಆರಂಭಗೊಂಡಿತ್ತು. ಆ ಭಕ್ತನು ಪ್ರಾಪಂಚಿಕ ಬಂಧನದಿಂದ ಮುಕ್ತನಾಗಿ ಎಲ್ಲ ಲೌಕಿಕ ಪಾಶಗಳನ್ನೂ ಕಳಚಿ ಇಲ್ಲಿಗೆ ವಾಸಮಾಡಲು ಬಂದಿದ್ದನು. ಅನೇಕರು ಬಂದು ಅವನನ್ನು ಹಿಂತಿರುಗಲು ಪುಸಲಾಯಿಸಿದರೂ ಅವನು ಬಿಡಲಿಲ್ಲ. ಅವನು ಹಾದಿಯನ್ನು ಸ್ವಚ್ಛಗೊಳಿಸಿ ಮಸೀದಿಯನ್ನು ಗೋಮಯದಿಂದ ಸಾರಿಸುತ್ತಿದ್ದನು. ಅವನು ಮಹಾರಾಜರ ದರ್ಶನವನ್ನು ದೂರದಿಂದಲೇ ಪಡೆಯುತ್ತಿದ್ದನು. ಅವನು ಅವರ ಹತ್ತಿರ ಹೋಗುತ್ತಿರಲಿಲ್ಲ. ಅವನು ಕೇವಲ ಮಹಾರಾಜರ ಪಾದ ತೊಳೆದ ನೀರನ್ನು ಅಥವಾ ಮಹಾರಾಜರು ಸ್ವಲ್ಪ ಕುಡಿದು ಇಟ್ಟ ನೀರನ್ನು ಮಾತ್ರ ಸೇವಿಸುತ್ತಿದ್ದನು. ಅದೇ ರೀತಿ ಅವನು ತನ್ನ ಜಮೀನಿನ ಉತ್ಪತ್ತಿಯನ್ನು ಮಹಾರಾಜರ ಸಮ್ಮುಖದಲ್ಲಿರಿಸಿ ಮಹಾರಾಜರು ದಯಪಾಲಿಸಿದುದನ್ನು ಮಾತ್ರ ತೆಗೆದುಕೊಳ್ಳುತ್ತಿದ್ದನು. ಅಲ್ಲಿ ಎರಡು ವರ್ಷಗಳ ಕಾಲ ವಾಸಮಾಡಿದ ಮೇಲೆ ಮಹಾರಾಜರು ಬಾಲಾಜಿ ಪಾಟೀಲನಿಗೆ ಮನೆಗೆ ಹಿಂತಿರುಗಲು ರಜೆ ನೀಡಿದರು. ಅಂತೆಯೇ ಅವನು ಹೊರಟನು. ಅದೇನೇ ಆಗಲಿ, ಅವನು ಆಗಾಗ ದರ್ಶನಕ್ಕೆಂದು ಬಂದು ತನ್ನ ಉತ್ಪತ್ತಿಯನ್ನು ಮಹಾರಾಜರಿಗೆ ಅರ್ಪಿಸುತ್ತಿದ್ದನು. ಕೆಲವು ವರ್ಷಗಳ ನಂತರ ಅವನು ಮರಣಹೊಂದಿದನು.

ರಾಧಾಕೃಷ್ಣ ಆಯಿಯು ಮಹಾರಾಜರಿಗೆ ತಾನೇ ಎಲ್ಲ ರೀತಿಯ ಸೇವೆಗಳನ್ನೂ ಮಾಡುತ್ತಿದ್ದುದೇ ಅಲ್ಲದೆ, ಅನೇಕ ಭಕ್ತರಿಂದ ಮಹಾರಾಜರ

ಎಲ್ಲ ರೀತಿಯ ಸೇವೆಗಳನ್ನೂ ಮಾಡಿಸುತ್ತಿದ್ದಳು. ಅವಳು ವಿವಿಧ ರೀತಿಯ ಚಿಲ್ಲರೆ ಕೆಲಸಗಳನ್ನು ಮಾಡುತ್ತಿದ್ದುದಲ್ಲದೆ, ಇತರರನ್ನೂ ಅದರಲ್ಲಿ ಮಗ್ನರನ್ನಾಗಿಸುತ್ತಿದ್ದಳು. ಮತ್ತು ಭಕ್ತರು ಕೆಲಸಗಳನ್ನು ಪ್ರೀತಿ ಮತ್ತು ಉತ್ಸಾಹದಿಂದ ಮಾಡುತ್ತಿದ್ದರು. ಎಲ್ಲ ಸ್ತರಗಳ ಪುರುಷರು ಹಾಗೂ ಸ್ತ್ರೀಯರು ಅದರಲ್ಲಿ ಪಾಲ್ಗೊಳ್ಳುತ್ತಿದ್ದರು. ಮಣ್ಣು ಮತ್ತು ಕಲ್ಲುಗಳನ್ನು ಹೊರುವುದು, ರಸ್ತೆಗಳನ್ನು ಗುಡಿಸುವುದು, ನೀರು ಕಲಸಿ ರಾಡಿ ಮಾಡುವುದು, ಚಿರಂಡಿಗಳನ್ನು ನೋಡುವುದು, ಅವುಗಳನ್ನು ಮುಚ್ಚುವುದು, ಕಟ್ಟಿಗೆ ಸೀಳುವುದು, ದೀಪಗಳನ್ನು ಮತ್ತು ತೂಗು ದೀಪಗಳನ್ನು ಒರಸುವುದು, ಮಸೀದಿಯನ್ನು ತೊಳೆಯುವುದು, ಬಣ್ಣ ಬಳಿಯುವುದು, ಕಾಗದದ ಹೂಗಳನ್ನು ಮಾಡುವುದು, ಚಾಮರಗಳನ್ನು ಹಿಡಿದುಕೊಳ್ಳುವುದು, ನವಿಲುಗರಿಯಿಂದ ಬೀಸಣಿಗೆ ತಯಾರಿಸುವುದು, ಅಲಂಕೃತವಾದ ಛತ್ರಿಗಳು, ಬಾವುಟಗಳನ್ನು ಹೊಲಿಯುವುದು – ಈಕೆಲಸಗಳನ್ನೆಲ್ಲ ಉಚ್ಚಸ್ತರದ ಜನರು ಮತ್ತು ಆದರ್ಶ ಕುಲಸ್ತ್ರೀಯರು ಎಲ್ಲರೂ ಮಾಡಿ ತಮಗೆ ಸೇವೆ ಸಲ್ಲಿಸಲು ದೊರಕಿದ ಅವಕಾಶಕ್ಕಾಗಿ ಅತ್ಯಂತ ಸಂತಸಪಡುತ್ತಿದ್ದರು.

ಮಹಾರಾಜರ ನಿತ್ಯ ವಿಧಿಗಳು ನಿಯಮಿತವಾಗಿ ಸಾಗುತ್ತಿದ್ದವು. ಅವರು ಪ್ರಾತಃಕಾಲ ಬೇಗನೆ ಎದ್ದು ಧುನಿಯ ಬಳಿ ಕುಳಿತಿರುತ್ತಿದ್ದರು. ಸ್ವಲ್ಪ ಕಾಲಾನಂತರ ಶೌಚಾದಿ ಕ್ರಿಯೆಗಳನ್ನು ಮಾಡಿ ಮುಗಿಸುತ್ತಿದ್ದರು. ನಂತರ ಸುಮ್ಮನೆ ಸ್ವಲ್ಪ ಸಮಯ ಕುಳಿತಿರುತ್ತಿದ್ದರು. ಆ ಸಮಯದಲ್ಲಿ ಭಾಗೋಜಿ ಸಿಂಧೆ ಎಂಬವನು ಮಹಾರಾಜರ ತೋಳಿನ ಪಟ್ಟಿಗಳನ್ನು ಮಡಚಿ ಪೂರ್ಣ ದೇಹವನ್ನೂ ಮಾಲೀಶು ಮಾಡುತ್ತಿದ್ದನು. ಅನಂತರ ಅವನು ಚಿಲುಮೆಯನ್ನು ತುಂಬಿ ಅದನ್ನು ಹಚ್ಚಿ ಮಹಾರಾಜರಿಗೆ ಸೇದಲು ಕೊಡುತ್ತಿದ್ದನು. ಮಹಾರಾಜರು ಅದನ್ನು ಸೇದಿದ ನಂತರ ಭಾಗೋಜಿಗೆ ಸೇದಲು ಕೊಡುತ್ತಿದ್ದರು. ಈ ರೀತಿ 5–6 ಸಲ ಆದ ನಂತರ ಭಾಗೋಜಿಯು ಅಲ್ಲಿಂದ ತೆರಳುತ್ತಿದ್ದನು.

ಭಾಗೋಜಿಯು ಕುಷ್ಠರೋಗದಿಂದ ನರಳುತ್ತಿದ್ದನಾದರೂ ಮಹಾರಾಜರು ಅವನ ಸೇವೆಯನ್ನು ಎಂದಿಗೂ ನಿರಾಕರಿಸಲಿಲ್ಲ. ಅಥವಾ ತಮ್ಮ ನಿತ್ಯ ಪರಿಪಾಠವನ್ನು ಕಿಂಚಿತ್ತೂ ಬದಲಾಯಿಸಲಿಲ್ಲ. ಭಾಗೋಜಿಯು ತೆರಳಿದನಂತರ ಮಹಾರಾಜರು ಅಲ್ಲಿಯೇ ಸ್ವಲ್ಪ ಹೊತ್ತು ಕುಳಿತಿರುತ್ತಿದ್ದರು. ಆ ಸಮಯದಲ್ಲಿ ಕೆಲವು ನಿಯಮಿತ ಭಕ್ತರು ಬಂದು ಸೇವೆಸಲ್ಲಿಸುತ್ತಿದ್ದರು. ಮಹಾರಾಜರು ಮುಖತೊಳೆಯುತ್ತಿದ್ದ ರೀತಿಯು ನೋಡಲು ಯೋಗ್ಯವಾಗಿತ್ತು. ಅವರು ತಮಗೆ ಬೇಕಾದಷ್ಟು ನೀರನ್ನು ತಮ್ಮ ತೋಳು, ಪಾದ, ಮುಖ, ಕಿವಿ ಇವುಗಳ ಮೇಲೆ ಸುರಿದು ಎಲ್ಲಾ ಭಾಗಗಳನ್ನೂ ನವಿರಾಗಿ ತೊಳೆಯುತ್ತಿದ್ದರು.

ಏಕನಾಥ ಮಹಾರಾಜರು ಈ ರೀತಿ ವಿವರಿಸಿದ್ದಾರೆ, "ದೇಹದಲ್ಲಿರುವ ರೋಮಗಳೆಲ್ಲವನ್ನೂ ಉಜ್ಜುತ್ತಿದ್ದರು. ಆದರೆ ಆ ಉದ್ದೇಶಕ್ಕಾಗಿ ದೇಹವನ್ನು ಮಾಲೀಶು ಮಾಡುತ್ತಿರಲಿಲ್ಲ. ಹಾಗೆ ಅವರು ತಮಗೂ ಯಾವ ಕ್ರಿಮಿ ಕೀಟಗಳಿಗೂ ವ್ಯತ್ಯಾಸ ಎಣಿಸುತ್ತಿರಲಿಲ್ಲ. ಇಲ್ಲದಿದ್ದಲ್ಲಿ ಅವು

ಹಾನಿಕಾರಕವಾಗುತ್ತಿದ್ದವು."

ಸ್ನಾನವೂ ಸಹ ಇದೇ ರೀತಿ ಆಗುತ್ತಿತ್ತು, ಮುಖ ತೊಳೆದ ನಂತರ ಅವರು ಹಳ್ಳಿಗೆ ಭಿಕ್ಷೆಗಾಗಿ ಹೋಗುತ್ತಿದ್ದರು. ಅವರು ಐದು ನಿಗದಿತ ಸ್ಥಳಗಳಿಗೆ ಹೋಗುತ್ತಿದ್ದರು ಮತ್ತು ನಿಯಮಿತ ಜಾಗದಲ್ಲೇ ನಿಲ್ಲುತ್ತಿದ್ದರು. ಅವರು ಭಾಕರಿ (ರೊಟ್ಟಿ)[32] ಅಥವಾ ಏನಾದರೂ ಒಣ ಅಡುಗೆಯನ್ನು ಪಡೆಯುತ್ತಿದ್ದರು ಮತ್ತು ಮಸೀದಿಗೆ ಹಿಂತಿರುಗುತ್ತಿದ್ದಂತೆಯೇ ಸ್ವಲ್ಪ ಮಾತ್ರ ತಿನ್ನುತ್ತಿದ್ದರು. ನಂತರ ಒಂದು ಜಾಗದಲ್ಲಿ ಸ್ವಲ್ಪ ಹೊತ್ತು ಇರುತ್ತಿದ್ದರು. ಆ ಸಮಯದಲ್ಲೇ ಭಕ್ತರ ದೊಡ್ಡ ಗುಂಪು ಸೇರುತ್ತಿತ್ತು, ಆಗ ಮಹಾರಾಜರು ಕಥೆಗಳ ರೂಪದಲ್ಲಿ ಜ್ಞಾನವನ್ನು ಬೋಧಿಸುತ್ತಿದ್ದರು. ಕೆಲವು ಸಲ ಹಾಗೆ ಕುಳಿತಿದ್ದಾಗ ಮಹಾರಾಜರು ಬಾಳೆ ಹಣ್ಣು, ಸೀಬೆ ಹಣ್ಣು, ಮತ್ತು ಮಾವಿನ ಹಣ್ಣುಗಳನ್ನು ಖರೀದಿಸಿ, ಅಲ್ಲಿದ್ದ ಗುಂಪಿಗೆ ಹಂಚುತ್ತಿದ್ದರು. ತಮ್ಮ ಸ್ವತಃ ಕೈಗಳಿಂದಲೇ ತಿನ್ನಿಸುತ್ತಲೂ ಇದ್ದರು.

"ತಮ್ಮ ಸ್ವತಃ ಕೈಗಳಿಂದ ತಿನ್ನಿಸುತ್ತಿದ್ದರು" ಎಂದು ಹೇಳಿದಾಗ, ಮಹಾರಾಜರು ಬಾಳೆ ಹಣ್ಣಿನ ಸಿಪ್ಪೆ ತೆಗೆಯುತ್ತಿದ್ದು, ಸೀಬೆ ಹಣ್ಣುಗಳನ್ನು ತಾವೇ ಕತ್ತರಿಸಿ ಸಣ್ಣ ಹೋಳಾಗಿ ಮಾಡುತ್ತಿದ್ದರು, ಮಾವಿನ ಹಣ್ಣುಗಳನ್ನು ಮೆತ್ತಗೆ ಮಾಡಿ ಚೀಪಲು ಕೊಡುತ್ತಿದ್ದರು ಎಂದು ಅರ್ಥ.

ತದನಂತರ ಅವರು ಲೇಂಡಿಗೆ ಹೋಗುತ್ತಿದ್ದರು ಮತ್ತು ಮಹಾರಾಜರು ಅಲ್ಲಿಯೇ ಸುಮಾರು ಒಂದು ಗಂಟೆ ಕಾಲ ಇರುತ್ತಿದ್ದರು. ಲೇಂಡಿಯಿಂದ ಹಿಂತಿರುಗಿದ ನಂತರ ಮಧ್ಯಾಹ್ನ 2 ಘಂಟೆಯವರೆಗೆ ಅವರು ಮಸೀದಿಯಲ್ಲೇ ಉಳಿದಿರುತ್ತಿದ್ದರು. ಆ ಸಮಯದಲ್ಲಿ ಭಕ್ತರು ಮಹಾರಾಜರಿಗೆ ಪೂಜೆ, ಆರತಿಗಳನ್ನು ಮಾಡುತ್ತಿದ್ದರು. ಅನಂತರ ಮಹಾರಾಜರ ಭೋಜನಾನಂತರ ಪುನಃ ಲೇಂಡಿಗೆ ಹೋಗುತ್ತಿದ್ದರು. ಅಲ್ಲಿಂದ ಸುಮಾರು ಮುಕ್ಕಾಲು ಗಂಟೆಯ ನಂತರ ಹಿಂತಿರುಗಿ ಬಂದು ಸಂಜೆಯ ತನಕ ಮಸೀದಿಯಲ್ಲೇ ಉಳಿದಿರುತ್ತಿದ್ದರು. ಸಾಯಂಕಾಲ ಸ್ವಲ್ಪ ಹೊತ್ತು ಹೊರಬಂದು ಕೂಡಲೇ ಹಿಂತಿರುಗಿ ಮಸೀದಿಯಲ್ಲಿ ಉಳಿಯುತ್ತಿದ್ದರು. ಸಾಮಾನ್ಯವಾಗಿ ದಿನದಲ್ಲಿ ಮೂರು ಬಾರಿ, ಒಮ್ಮೆ ಬೆಳಿಗ್ಗೆ ತಿಂಡಿಯಾದ ನಂತರ, ಎರಡನೆಯದು ಲೇಂಡಿಯಿಂದ ಹಿಂತಿರುಗಿದಮೇಲೆ ಮತ್ತು ಮೂರನೆಯದು ಸಂಜೆ ಸುಮಾರು 5 ಗಂಟೆ ವೇಳೆಗೆ – ಈ ಮೂರು ಸಮಯಗಳಲ್ಲೂ ಮಹಾರಾಜರು ಕಥೆಗಳ ರೂಪದಲ್ಲಿ ಜ್ಞಾನೋಪದೇಶ ನೀಡುತ್ತಿದ್ದರು. ಮಹಾರಾಜರ ವಚನಗಳು ಅಲ್ಲಿ ನೆರೆದಿದ್ದ ಬೇರೆ ಬೇರೆ ಭಕ್ತರ ಬೇರೆ ಬೇರೆ ತರಹದ ತೊಂದರೆಗಳನ್ನು ಮತ್ತು ಸಂದೇಹಗಳನ್ನು ನಿವಾರಿಸುತ್ತಿದ್ದವು. ಸಮಸ್ಯೆಗಳಿಗೆಲ್ಲ ಪರಿಹಾರಗಳು ದೊರೆಯುತ್ತಿದ್ದವು.

ಮಹಾರಾಜರು ಎಂದಿಗೂ ಗಹನವಾದ ವೇದಾಂತಗಳ ವಿಷಯಗಳನ್ನು ಮನಬಿಚ್ಚಿ ಮಾತನಾಡುತ್ತಿರಲಿಲ್ಲ ಅಥವಾ ಅವರು ಉಪನಿಷತ್ತುಗಳ

ಬಗ್ಗೆ ಉಪನ್ಯಾಸಗಳನ್ನೂ ನೀಡುತ್ತಿರಲಿಲ್ಲ. ಅವರ ಬೋಧನೆಗಳೆಲ್ಲ ಒಳ್ಳೆಯ ನಡತೆಯ ಬಗ್ಗೆಯೇ ಪ್ರಮುಖವಾಗಿ ಸಂಬಂಧಪಟ್ಟಿದ್ದಾಗಿದ್ದವು.

ಶಿಷ್ಯನ ಮನಸ್ಸನ್ನು ಶುದ್ಧಗೊಳಿಸಿ, ಜ್ಞಾನದ ಬೀಜವನ್ನು ಅದರಲ್ಲಿ ಬಿತ್ತುವುದೇ ಸದ್ಗುರುವಿನ ಶಾಸ್ತ್ರೀಯ ರೀತಿ ಹಾಗೂ ಕ್ರಮ. ಮತ್ತು ಮಹಾರಾಜರು ಅದನ್ನು ಅನುಸರಿಸಿದರು. ಆದ್ದರಿಂದ ಅವರ ಬೋಧನೆಗಳು ನೀತಿಯುತವಾಗಿ ಧರ್ಮಸಮ್ಮತವಾಗಿದ್ದವು. ಆದರೆ ಮನಃಬಿಚ್ಚಿ ಮಾಡುವ ವಾಕ್ ಉಪದೇಶಗಳಿಗಿಂತಲೂ ಮಹಾರಾಜರಿಂದ ಬಂದ ಮಾತುಗಳು ಅಮೂಲ್ಯವಾಗಿದ್ದವು. ಮತ್ತು ಅನೇಕ ಉಪಯುಕ್ತ ಉದಾಹರಣೆಗಳು ಅವುಗಳಲ್ಲಿದ್ದುದರಿಂದ ಭಕ್ತರು ಮಹಾರಾಜರಲ್ಲಿ ಪೂರ್ಣ ಶ್ರದ್ಧೆಯಿಟ್ಟು ಅತ್ಯುನ್ನತ ಲಾಭವನ್ನು ಪಡೆಯುತ್ತಿದ್ದರು.

ಭಕ್ತರಲ್ಲಿ ಅನೇಕರು, ಇಷ್ಟಾರ್ಥಗಳನ್ನೂ, ಆಶೆಗಳನ್ನೂ, ಪೂರೈಸಿಕೊಳ್ಳಲು ಮಹಾರಾಜರ ಬಳಿಬರುತ್ತಿದ್ದರು. ಆದರೆ ಮಹಾರಾಜರು ಅವರ ಆಶೆಗಳನ್ನು ಪೂರೈಸುತ್ತ, ಅವರ ಮನಸ್ಸುಗಳನ್ನು ಅವರಿಗೆ ತಿಳಿಯದಂತೆಯೇ ಅವರ ಮಹೋನ್ನತಿಯ ಕಡೆಗೆ ತಿರುಗಿಸುತ್ತಿದ್ದರು. ಮಹಾರಾಜರು ಜನರ ಉದ್ಧಾರಕ್ಕಾಗಿ ಅವತಾರ[33]ವೆತ್ತಿದ್ದರು. ಮತ್ತು ಅವರು ಎಲ್ಲರ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಿದ್ದರು. ಇದರ ಬಗ್ಗೆ ಎಳ್ಳಷ್ಟೂ ಸಂದೇಹ ಬೇಡ. ಅವರ ಲೀಲೆಗಳು ಮತ್ತು ಅವರ ಗುಣಗಳನ್ನು ಸರಿಯಾಗಿ ವಿವರಿಸಲು ಸಾಧ್ಯವಾಗುವುದಿಲ್ಲ.

"ಭಗವಂತನು ಅನಂತ ಸದ್ಗುಣಭರಿತನು. ಮಗುವಿನ ರೀತಿಯಲ್ಲಿ ವರ್ತಿಸುವವರು ಭಗವಂತನಿಗೆ ಸಮಾನ. ಯಾವರೀತಿ ಭೂಮಿಯ ಮೇಲಿನ ಕಣಗಳನ್ನು ಎಣಿಸಲು ಅವನು ಎಷ್ಟೇ ಸಮಯವನ್ನು ವ್ಯಯಮಾಡಿದರೂ ಸಾಧ್ಯವಿಲ್ಲವೋ, ಅದೇ ರೀತಿ ಅತಹ (ಭಗವಂತನಂತಹ)ವನ ಶಕ್ತಿಯನ್ನು ಯಥೋಚಿತವಾಗಿ ವಿವರಿಸಲು ಸಾಧ್ಯವೇ ಇಲ್ಲ!"

ಆದರೂ ಮಹಾರಾಜರ ಲೀಲೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಂಗ್ರಹಿಸಿದ್ದು ಎಲ್ಲರ ಉಪಯೋಗಕ್ಕೆ ಬರುತ್ತದೆ. ಇದನ್ನು ನಾನು ನಿಸ್ಸಂದೇಹವಾಗಿ ನಂಬುತ್ತೇನೆ. ಅಂತಹ ಸಂಕಲನವನ್ನು ಗೌರವಾನ್ವಿತ ಮಿತ್ರ ಗೋವಿಂದ ರಘುನಾಥ ಅಲಿಯಾಸ್ ಅಣ್ಣಾಸಾಹೇಬ ದಾಭೋಲ್ಕರ್‌ನು ಮಾಡಿರುತ್ತಾನೆ. ಅದರ ಬಹುಭಾಗವೂ ಅವನಿಂದ ಓವಿ ಛಂದಸ್ಸಿನಲ್ಲಿ ಮಾಡಲ್ಪಟ್ಟಿದೆ. ಕೃತಿಯು ಓವಿ ಛಂದಸ್ಸಿನಲ್ಲಿ ಪ್ರಾರಂಭಗೊಂಡಿದ್ದು ಮಹಾರಾಜರು ದೇಹದಲ್ಲಿ ಇದ್ದಾಗಲೇ ಅವರ ನಿರ್ದಿಷ್ಟ ಅನುಮತಿಯಿಂದಲೇ ನಡೆದಿತ್ತು. ಮತ್ತು ಇಂದಿನವರೆಗೆ ಮೂವತ್ತೈದು ಅಧ್ಯಾಯಗಳು ಸಿದ್ಧವಾಗಿರುತ್ತವೆ.

ಈ ಗ್ರಂಥವು ಪ್ರೇಮಭರಿತವಾಗಿಯೂ ಹೃತ್ಪೂರ್ವಕವಾಗಿಯೂ ರೂಪುಗೊಂಡಿದ್ದು, ಮಹಾರಾಜರ ಭಕ್ತರಿಗೆ ಮತ್ತುಇತರ ಓದುಗರಿಗೂ ಅತ್ಯಂತ ಉಪಯುಕ್ತವಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಇದರಲ್ಲಿನ ಓವಿಗಳು ಏಕನಾಥ ಮಹಾರಾಜರ ಓವಿಗಳ ರೀತಿಯಲ್ಲಿ ರೂಪುಗೊಂಡಿರುತ್ತವೆ. ಈ ಕೃತಿಯನ್ನು ಓದುತ್ತಿರುವಾಗ ಅನೇಕ ಬಾರಿ ಏಕನಾಥ ಮಹಾರಾಜರು ನೆನಪಿಗೆ ಬರುತ್ತಾರೆ. ಸಂಕ್ಷಿಪ್ತವಾಗಿ ಹೇಳಬೇಕೆಂದಿದ್ದರೆ ಈ ಕೃತಿಯು ಶ್ರೀಸಾಯಿನಾಥ ಮಹಾರಾಜರ ಪ್ರಸಾದದ[24] ಫಲವಾಗಿದೆ. ಇದು ಹೆಜ್ಜೆಹೆಜ್ಜೆಗೂ ಅನುಭವಕ್ಕೆ ಬರುತ್ತದೆ.

ಅಂತಿಮವಾಗಿ, ನಾನು ಈ ಮುನ್ನುಡಿಯನ್ನು ಮಹಾರಾಜರಿಗೆ ಪ್ರಾರ್ಥನೆ ಸಲ್ಲಿಸುತ್ತ ಮುಗಿಸುತ್ತೇನೆ. "ಅವರ ಭಕ್ತರೂ ಮತ್ತು ಇತರ ಓದುಗರೂ ಆನಂದದಿಂದ ತುಂಬಿ, ಈ ಕೃತಿಯಲ್ಲಿನ ಜ್ಞಾನವನ್ನು ಪಡೆಯುವಂತಾಗಲಿ ಮತ್ತು ಮಹಾರಾಜರಲ್ಲಿನ ಅವರ ಭಕ್ತಿಯು ಇನ್ನೂ ಹೆಚ್ಚಾಗಲಿ."

ಬಾಬಾರವರ ಮಕ್ಕಳಲ್ಲಿ ಒಬ್ಬನಾದ
ಹರಿಸೀತಾರಾಮ ದೀಕ್ಷಿತ್.

ಟಿಪ್ಪಣಿ:

1. ಈ ಹೇಳಿಕೆಯಿಂದ, ಕರ್ತೃವು ಈ ಮುನ್ನುಡಿಯನ್ನು ಸುಮಾರು 1908ರಲ್ಲಿ ಬರೆದಿರಬಹುದೆಂದು ಕಾಣುತ್ತದೆ. ಆದರೆ ದಾಭೋಲ್ಕರನು ತನ್ನ ದಾಖಲೆಗಳನ್ನು ಆ ದಿನದ ನಂತರವೇ ಶೇಖರಿಸಲು ಪ್ರಾರಂಭಿಸಿರುತ್ತಾನಾದ್ದರಿಂದ ಇದು ಆಗಿರಲಾರದು.

ಈ ಮುನ್ನುಡಿಯ ತಾರೀಖು ಬರೆಯುವುದರಲ್ಲಿ ಒಂದು ಇಪ್ಪತ್ತು ವರುಷಗಳಷ್ಟು ಸ್ಪಷ್ಟವಾದ ತಪ್ಪು ಎಲ್ಲೋ ಉಂಟಾಗಿದೆ.

1.A. ಈಗ ಶಿರಡಿಯು ರಾಹತಾ ತಾಲೂಕಿನಲ್ಲಿದೆ.

2. ಇದು ಗುಡಗುಡಿಯ ಭಾಗ. ಬೆಂಕಿ ಮತ್ತು ತಂಬಾಕನ್ನು ಇದರಲ್ಲಿ ಇಡಲಾಗುತ್ತದೆ.

3. ಶಿವನ ಮತ್ತೊಂದು ಅವತಾರ.

4. ಜೇಜೂರಿಯ ದೇವರು, ಅವನು ಖಂಡೋಬಾನೇ.

5. ಪಾದದವರೆಗಿನ ಉದ್ದದ ಶರಟಿನ ತರಹದ ನಿಲುವಂಗಿ.

6. ಗಂಡಸರು ಸೊಂಟಕ್ಕೆ ಸುತ್ತಿಕೊಂಡು ಒಂದು ತುದಿಯನ್ನು ಹಿಂದಕ್ಕೆ ಸಿಕ್ಕಿಸಿಕೊಳ್ಳುವುದು. (ಪಂಚೆ)

7. ಒಡವೆಗಳ ಕಳ್ಳತನದ ವಿಷಯ.

8. ಪರಿವ್ರಾಜಕ, ಅಲೆಮಾರಿ ಸನ್ಯಾಸಿ – ಕೇಸರಿ ಬಟ್ಟೆ ಧರಿಸಿದವನು.
9. ಶುಕ್ಲಪಕ್ಷದ ಮತ್ತು ಕೃಷ್ಣಪಕ್ಷದ ಹನ್ನೊಂದನೆಯ ದಿನ.
10. ತನು, ಮನ, ಧನಗಳ ಪೂರ್ಣ ಸಮರ್ಪಣೆ. ಅದರಿಂದ ಎಲ್ಲ ಬಂಧನಗಳೂ, ಅಹಂಭಾವವೂ ಕಳಚಿ ಬೀಳಬೇಕು.
11. ಪವಿತ್ರವಾದ ಅಗ್ನಿ, ಬಾಬಾರವರಿಂದ ಹಚ್ಚಲ್ಪಟ್ಟು ವರ್ಷಪರ್ಯಂತ ಉರಿಯುತ್ತಲೇ ಇರುತ್ತದೆ.
12. ಗುರುವಿಗೆ ಅಥವಾ ಪವಿತ್ರ ವ್ಯಕ್ತಿಗೆ ನೀಡಿದ ಸಮರ್ಪಣೆ, ಹಣ ಅಥವಾ ವಸ್ತುವಿನದು.
13. ಇಂದಿನ ದ್ವಾರಕಾಮಾಯಿ.
14. ಗ್ರಾಮಸ್ಥರು ಸೇರುವ ಜಾಗ ಮತ್ತು ಕುಲಕರ್ಣಿಯ ಕಛೇರಿ.
15. ಬಾಬಾರವರ ಧುನಿಯ ಭಸ್ಮ (ಬೂದಿ) ಪವಾಡ ಸದೃಶ ಮತ್ತು ರೋಗಗುಣಪಡಿಸುವ ಶಕ್ತಿಯಿಂದ ಕೂಡಿರುವುದು.
16. ದಿವ್ಯದೃಷ್ಟಿ ಅಥವಾ ಒಬ್ಬ ಮಹಾನ್ ಸಂತರ ಸನ್ನಿಧಿ.
17. ಶಿರಡಿಯ ಹತ್ತಿರ ಇರುವ 4–5 ಕಿ.ಮೀ. ದೂರದಲ್ಲಿನ ಊರುಗಳು.
18. ಒಬ್ಬ ಸನ್ಯಾಸಿಯ, ರಾಜನ ಅಥವಾ ಗೌರವಾನ್ವಿತ ಅತಿಥಿಯ ಆಸನ.
19. ಗ್ರಾಮದ ಕಂದಾಯಗಳ ದಾಖಲೆಗಳನ್ನು ಇಡುವವನು.
20. ಕೋಲಿನ ರೀತಿಯಲ್ಲಿ ನೆಲದ ಮೇಲೆ ಬೀಳುವುದು. ದೇಹದ ಎಂಟು ಭಾಗಗಳು ನೆಲವನ್ನು ಮುಟ್ಟುವಂತೆ. ಇದುಸಂಪೂರ್ಣ ಶರಣಾಗತಿಯನ್ನು ತೋರಿಸುತ್ತದೆ.
21. ಒಂದು ಭಾವನಾತ್ಮಕ ಮನೋರಂಜನೆ – ಶೃಂಗಾರ ಭಾವದ್ದು.
22. ಧಾರ್ಮಿಕ ಉಪನ್ಯಾಸ – ಮಧ್ಯೆ ಮಧ್ಯೆ ಸಂಗೀತ ಮತ್ತು ಹಾಡುಗಳಿಂದ ಕೂಡಿರುವುದು.
23. ಒಂದು ದೊಡ್ಡ ಭವನ.
24. ಸೀರೆಯ ಸೆರಗು – ಜರಿಯಿಂದ ಕೂಡಿರುವುದು.
25. ಸಂಸ್ಥೆ.

26. ದೀಪವನ್ನು ಬೆಳಗಿಸಿ ಆರತಿ ಮಾಡುವ ಪೂಜೆ.
27. ಪಲ್ಲಕ್ಕಿ.
28. ಪಿಕಾಸಿ.
29. ಭಕ್ತಿ ಸಂಗೀತ.
30. ನಿರ್ದಿಷ್ಟವಾದ ಪೂಜಾವಿಧಾನ.
31. ಮುಸ್ಲಿಮರು ನಮಾಜಿಗೆ ಮೊದಲು ಮಾಡುವ ವಿಧಿ ವಿಧಾನದ ರೀತಿಯಲ್ಲಿರುವುದು.
32. ಹಳ್ಳಿಯವರು ಉಪಯೋಗಿಸುವ ದಪ್ಪನಾದ ಚಪ್ಪಟೆಯಾದ ರೊಟ್ಟಿ.
33. ಭೂಮಿಯ ಮೇಲೆ ದಿವ್ಯಸೃಷ್ಟಿಯಿಂದ ರೂಪುಗೊಂಡಿರುವುದು.
34. ಗುರುವು ಆಶೀರ್ವಾದ ಮಾಡಿ ನೀಡಿದ ಯಾವುದೇ ಸಹಾಯ ಅಥವಾ ಏನಾದರೂ ವಸ್ತು.

– ಮಂಗಳಂ –

# ಅಧ್ಯಾಯ - 1

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಒಂದು ಪ್ರಾರ್ಥನೆ"

ಶ್ರೀ ಗಣೇಶನಿಗೆ ಪ್ರಣಾಮಗಳು.

ಶ್ರೀ ಸರಸ್ವತಿಗೆ ಪ್ರಣಾಮಗಳು.

ಶ್ರೀ ಗುರುವಿಗೆ ಪ್ರಣಾಮಗಳು.

ಶ್ರೀ ಕುಲದೇವತೆಗೆ ಪ್ರಣಾಮಗಳು.

ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.

ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಬುದ್ಧಿವಂತರು ಯಾವುದೇ ಕಾರ್ಯವನ್ನು ಪ್ರಾರಂಭಿಸುವ ಮೊದಲು ತಮ್ಮ ಇಷ್ಟದೇವರನ್ನು ಸ್ತುತಿಮಾಡಿ, ತಮ್ಮ ಕಾರ್ಯ ನಿರ್ವಿಘ್ನವಾಗಿ ಪೂರ್ಣವಾಗಲೆಂದು ಅನುಗ್ರಹವನ್ನು ಬೇಡುತ್ತಾರೆ. ॥1॥ ಅವರು, ಎಲ್ಲ ವಿಘ್ನಗಳೂ ದೂರವಾಗಲೆಂದು ಮತ್ತು ತಮ್ಮ ಕೋರಿಕೆಗಳು ಈಡೇರಲಿ ಎಂದು ಪ್ರಾರ್ಥಿಸುತ್ತಾರೆ. ಎಲ್ಲರಿಗೂ ನನ್ನ ಸಾಷ್ಟಾಂಗ ಪ್ರಣಾಮ. ॥2॥ ಪ್ರಪ್ರಥಮವಾಗಿ ಗಣಪತಿಯನ್ನು ಪೂಜಿಸುವೆನು. ಹೇ ವಕ್ರತುಂಡ, ಹೇರಂಭ, ಹದಿನಾಲ್ಕು ಧರ್ಮಶಾಸ್ತ್ರಗಳ[1] ಒಡೆಯ, ಮಂಗಳಕರ ಮೂರ್ತಿ ಗಜವದನ. ॥3॥ ಹದಿನಾಲ್ಕು ಲೋಕಗಳು[2] ನಿನ್ನ ಉದರದಲ್ಲಿ ಅಡಗಿವೆ. ಆದ್ದರಿಂದ ನಿನ್ನನ್ನು ಲಂಬೋದರ ಎನ್ನುವರು. ಕೈಯಲ್ಲಿ ಹೊಳೆಯುತ್ತಿರುವ ಪಾಶಾಂಕುಶಗಳನ್ನು ಭಕ್ತರ ಕಷ್ಟಗಳನ್ನು ನಾಶಪಡಿಸುವುದಕ್ಕೋಸ್ಕರ ಧರಿಸಿರುವೆ. ॥4॥ ಹೇ ಗಣಗಳ ಒಡೆಯ, ಗಜಾನನ, ವಿಘ್ನಗಳನ್ನು ನಿವಾರಿಸುವವನೇ, ನೋವುಗಳನ್ನು ಪರಿಹರಿಸುವವನೇ, ನನ್ನ ಪ್ರಣಾಮವಚನಗಳನ್ನು ಪೂರೈಸುವಂತೆ ಅನುಗ್ರಹಿಸು. ನಾನು ನಿನಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ॥5॥ ನೀನು ಭಕ್ತರಿಗೆ ಸಹಾಯ ಮಾಡುವವನು. ಎಲ್ಲಾ ವಿಘ್ನಗಳು ನಿನ್ನ ಚರಣಗಳಲ್ಲಿ ಕರಗಿ ಹೋಗುತ್ತವೆ. ನೀನು ನೇರವಾಗಿ ದೃಷ್ಟಿಸಿದರೆ ಎಲ್ಲಾ ಲೋಪಗಳು ಮಾಯವಾಗುತ್ತವೆ. ॥6॥ ನೀನು,

ಭವಸಾಗರವನ್ನು ದಾಟಿಸುವ ನೌಕೆಯಾಗಿರುವೆ. ಅಜ್ಞಾನದ ಅಂಧಕಾರವನ್ನು ಹೋಗಲಾಡಿಸುವ ಜ್ಯೋತಿಯ ಪ್ರಕಾಶವಾಗಿರುವೆ. ನನಗೆ ಸುಖ, ಸಂತೋಷ, ಸಮೃದ್ಧಿಗಳನ್ನು[5] ದಯಪಾಲಿಸು. ॥7॥ ಮೂಷಕ ವಾಹನನಿಗೆ ಜಯವಾಗಲಿ. ವಿಘ್ನಗಳೆಂಬ ಅಡವಿಯನ್ನು ನಾಶಮಾಡುವವನಿಗೆ ಜಯವಾಗಲಿ. ನೀನು ಗಿರಿಜೆಯ[6] ಪುತ್ರ, ನೀನು ಮಂಗಳ ಸ್ವರೂಪನು. ಅಂತಹ ನಿನಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ॥8॥ ನಾನು ಈ ಕಾರ್ಯಗಳನ್ನು ಯಾವುದೇ ಕಷ್ಟಗಳಿಲ್ಲದೆ ಪೂರ್ಣಗೊಳಿಸುವಂತೆ ಆಗಲಿ. ಆದುದರಿಂದ ಎಲ್ಲಾ ಶುಭ-ಮಂಗಳಗಳು ಉಂಟಾಗಲಿ ಎಂದು ನನ್ನ ಇಷ್ಟ ದೇವತೆಯ ಅನುಗ್ರಹ ಬೇಡುತ್ತೇನೆ. ॥9॥ ಸಾಯಿಯೇ ಗಜಾನನ, ಗಣಪತಿ, ಸಾಯಿಯೇ ತನ್ನ ಕೈಯಲ್ಲಿ ಪಾಶಾಂಕುಶವನ್ನು ಹಿಡಿದಿದ್ದಾನೆ. ನನ್ನ ಕಷ್ಟಗಳೆಲ್ಲವನ್ನೂ ಸಂಪೂರ್ಣವಾಗಿ ಪರಿಹರಿಸು. ನಾನು ಈಗ ನನ್ನ ಪವಿತ್ರವಾದ ಕಾರ್ಯವನ್ನು ಪ್ರಾರಂಭಿಸುತ್ತೇನೆ. ॥10॥ ಸಾಯಿಯೇ ಬಾಲಚಂದ್ರ, ಸಾಯಿಯೇ ಗಜಾನನ, ಏಕದಂತ, ಗಜಕರ್ಣ, ವಕ್ರತುಂಡ, ಮಹಾಕಾಯ, ಕಷ್ಟಗಳ ಸಮೂಹವನ್ನೇ ನಾಶಮಾಡುವವನು. ॥11॥ ಹೇ! ಪಾವನ ಗಣಪತಿಯೇ, ದೇಹಾತೀತ ರೂಪನೇ, ನಿನಗೂ ಸಾಯಿಗೂ ಯಾವ ಅಂತರವೂ ಇಲ್ಲ. ದಯಮಾಡಿ ನನ್ನನ್ನು ನೀನು ನೆಲೆಸಿರುವ ಸಂತೃಪ್ತ ನಿವಾಸಕ್ಕೆ ಕರೆದುಕೋ. ॥12॥ ಈಗ ನಾನು ಬ್ರಹ್ಮನ ಪುತ್ರಿ, ಬುದ್ಧಿಶಕ್ತಿಯನ್ನು ಪ್ರಚೋದಿಸುವ ಸರಸ್ವತಿಗೆ ಶಿರಬಾಗಿ ನಮಿಸುತ್ತೇನೆ. ನನ್ನ ಬುದ್ಧಿಶಕ್ತಿಯನ್ನು ನಿನ್ನ ಹಂಸವನ್ನಾಗಿ ಮಾಡಿಕೋ ಮತ್ತು ನಿನ್ನ ಅಧೀನದಲ್ಲಿಟ್ಟುಕೊ. ॥13॥ ಅವಳು ತನ್ನ ಕೈಯಲ್ಲಿ ಬ್ರಹ್ಮನ ವೀಣೆಯನ್ನು ಹಿಡಿದಿದ್ದಾಳೆ. ಹಣೆಯಲ್ಲಿ ಕುಂಕುಮದ ತಿಲಕ ಶೋಭಿಸುತ್ತಿದೆ. ಶ್ವೇತವಸ್ತ್ರ ಧರಿಸಿದ್ದಾಳೆ. ವಾಹನ ಹಂಸವಾಗಿದೆ. ಅಮ್ಮ, ಆಶೀರ್ವಾದ ಮಾಡು. ॥14॥ ಅವಳು ವಾಗ್ದೇವಿ ಮತ್ತು ವಿಶ್ವಮಾತೆ. ಅವಳ ಅನುಗ್ರಹವಿಲ್ಲದೆ ಯಾವ ಸಾಹಿತ್ಯದ ಸೃಷ್ಟಿಯೂ ಸಾಧ್ಯವಿಲ್ಲ. ಅವಳ ಆಶೀರ್ವಾದವಿಲ್ಲದೆ ನಾನು ಈ ಪವಿತ್ರವಾದ ಕಾವ್ಯವನ್ನು ರಚಿಸಲು ಸಾಧ್ಯವಿಲ್ಲ. ॥15॥ ಈ ಜಗನ್ಮಾತೆಯು ವೇದಗಳಿಗೆ ಮೂಲ. ಅವಳು ಜ್ಞಾನದ ಪ್ರಕಾಶವಾಗಿದ್ದಾಳೆ ಮತ್ತು ಅಸೀಮ ಮನೋಶಕ್ತಿ ಉಳ್ಳವಳಾಗಿದ್ದಾಳೆ. ಸಾಯಿಸಮರ್ಥ ಚರಿತಾಮೃತವನ್ನು ಓದುಗರು ನನ್ನ ಮೂಲಕ ಪಾನಮಾಡುವಂತಾಗಲಿ. ॥16॥ ಸಾಯಿಯೇ ಸರಸ್ವತೀ ಮಾತೆ. ಓಂಕಾರ ಹೊರಹೊಮ್ಮುತ್ತಿರುವ ವೀಣೆಯನ್ನು ನುಡಿಸುತ್ತ ತನ್ನ ಜೀವನಗಾಥೆಯನ್ನು ಭಕ್ತರ ಬಂಧ ಮುಕ್ತಿಗಾಗಿ ತಾನೇ ಹಾಡುತ್ತಿದ್ದಾಳೆ. ॥17॥ ವಿಶ್ವದ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣರಾದ ಹಾಗೂ ಸತ್ವ, ರಜ ಮತ್ತು ತಮೋ[10] ಗುಣಗಳಿಗೆ ಅತೀತರಾದ ಬ್ರಹ್ಮ, ವಿಷ್ಣು, ಶಂಕರರಿಗೆ ಪ್ರಣಾಮಗಳು. ॥18॥ ಓ! ಸಾಯಿನಾಥ, ಜ್ಯೋತಿಸ್ವರೂಪದ ಅವತಾರನೇ, ನಮಗೆ ನೀನೇ ಗಣೇಶ, ಸವಿತೃನ ಒಡೆಯ, ರಮೇಶ ಮತ್ತು ಉಮೇಶ.[11] ॥19॥ ನಮಗೆ ನೀನೇ ಸದ್ಗುರು. ಭವಸಾಗರವನ್ನು ದಾಟಿಸುವ ನಾವೆಯು ನೀನೇ. ನಾವು ನಿನ್ನ ಭಕ್ತರು, ಅದರಲ್ಲಿ ಪ್ರಯಾಣಿಕರು. ನಮ್ಮನ್ನು ಪಾರುಮಾಡು. ॥20॥ ಹಿಂದಿನ ಜನ್ಮದ ಪುಣ್ಯಫಲವಿಲ್ಲದೇ ಹೋಗಿದ್ದರೆ ನಿನ್ನ

ಚರಣಗಳಲ್ಲಿ ಆಶ್ರಯ ಹೇಗೆ ದೊರಕುತ್ತಿತ್ತು? ॥21॥ ನನ್ನ ಕುಲದೇವರೂ, ಕ್ಷೀರಸಾಗರವಾಸಿಯೂ, ಸರ್ವದುಃಖನಿವಾರಕನೂ ಆದ ಆದಿನಾಥ[12] ನಾರಾಯಣನಿಗೆ ಪ್ರಣಾಮಗಳು. ॥22॥ ಪರಶುರಾಮರು ಸಮುದ್ರವನ್ನೇ ಆಪೋಶನ ಮಾಡಿ ಹೊಸ ಭೂಮಿಯನ್ನು ಸೃಷ್ಟಿಸಿದರು. ಅದನ್ನು ಕೊಂಕಣ[13] ಎನ್ನುತ್ತಾರೆ. ಅಲ್ಲಿ ನಾರಾಯಣನೇ ಪ್ರತ್ಯಕ್ಷವಾಗಿ ಕಾಣುತ್ತಾನೆ. ॥23॥ ಅಂತರ್ಯಾಮಿ ನಾರಾಯಣನನ್ನೇ ಪೂರ್ತಿ ಅವಲಂಬಿಸಿದ್ದೇನೆ. ಅವನು ಸರ್ವವ್ಯಾಪಿ. ಎಲ್ಲ ಜೀವಿಗಳನ್ನು ನಿಯಂತ್ರಿಸಿ ತನ್ನ ಕೃಪಾಕಟಾಕ್ಷದಿಂದ ಸಂರಕ್ಷಿಸುತ್ತಾನೆ. ಅವನೇ ನನಗೆ ಪ್ರೇರಕ. ॥24॥ ಅದೇ ರೀತಿ ನನ್ನ ಮೂಲಪುರುಷರಿಗೆ ಗೌಡ ರಾಜ್ಯದ ಶ್ರೇಷ್ಠ ಸಂನ್ಯಾಸಿ, ಭಾರ್ಗವರಿಂದ ಪೋಷಿಸಲ್ಪಟ್ಟವರು, ತನ್ನ ಯಜ್ಞವನ್ನು ಪೂರ್ಣಗೊಳಿಸಿದವರಿಗೆ ಅತ್ಯಂತ ಗೌರವಪೂರ್ವಕವಾಗಿ ವಂದಿಸುತ್ತೇನೆ. ॥25॥ ಈಗ ನಾನು ಋಷಿರಾಜರಾದ ಭರದ್ವಾಜರಿಗೆ ವಂದಿಸುತ್ತೇನೆ. ಅವರು ನನ್ನ ಗೋತ್ರವನ್ನು[14] ಪ್ರಾರಂಭಿಸಿದವರು. ಋಗ್ವೇದ ಶಾಖೆಗೆ ಸೇರಿದವರು. ಶಕಲ್ ನಮ್ಮ ಕುಲದ ಹಿರಿಯರ ಹೆಸರು. ಗೌಡಸಾರಸ್ವತಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರು. ॥26॥ ನಾನು ಬ್ರಹ್ಮನಿಗೆ ವಂದಿಸುತ್ತೇನೆ. ಪರಬ್ರಹ್ಮನ ಅವತಾರ ಅವರು. ನಂತರ ಯಾಜ್ಞವಲ್ಕ್ಯ[15], ಭೃಗು[16], ಪರಾಶರ[17] ಮತ್ತು ನಾರದ[18] ಇಂತಹ ಋಷಿಶ್ರೇಷ್ಠರಿಗೆ ವಂದನೆಗಳು. ॥27॥ ವೇದವ್ಯಾಸರಿಗೆ, ಪರಾಶರರಿಗೆ, ಸನಕ, ಸನಂದನ, ಸನತ್‌ಕುಮಾರ, ಶುಕ[19], ಶೌನಕರು ಸೂತ್ರಗಳ ರಚನಕಾರರು. ವಿಶ್ವಾಮಿತ್ರ[20] ಮತ್ತು ವಸಿಷ್ಠ[21] ಇವರಿಗೂ ನನ್ನ ವಂದನೆಗಳು. ॥28॥ ಮತ್ತೆ, ವಾಲ್ಮೀಕಿ[22], ವಾಮದೇವ[23], ಜೈಮಿನಿ[24], ವೈಶಂಪಾಯನ[25] ಮತ್ತಿತರರಿಗೂ ನನ್ನ ವಂದನೆಗಳು. ಹಾಗೂ ಸಪ್ತಋಷಿಗಳಿಗೂ ಇತರ ಮುನಿ[26]ಗಳಿಗೂ ವಂದಿಸುತ್ತೇನೆ. ॥29॥ ನಾನು ಈಗ ಸಂತರಿಗೂ, ಸದ್ಗುಣಿಗಳಾದ ನಿವೃತ್ತಿ[27], ಜ್ಞಾನೇಶ್ವರ[28], ಮುಕ್ತಾಬಾಯಿ[29], ಸೋಪಾನದೇವ[30], ಏಕನಾಥ[31] ಮತ್ತು ಅವರ ಗುರು ಜನಾರ್ದನ, ತುಕಾರಾಮ[32], ಕಾನ್ಹ (ಪತ್ರ)[33] ಮತ್ತು ನರಹರಿ[34] ಇವರಿಗೂ ವಂದಿಸುತ್ತೇನೆ. ॥30॥ ಪ್ರತಿಯೊಬ್ಬ ಸಂತರನ್ನೂ ಹೆಸರಿಸುತ್ತ ಹೋದಲ್ಲಿ ಈ ಪುಸ್ತಕ ಸಾಲುವುದಿಲ್ಲ. ಆದುದರಿಂದ ಪ್ರತಿಯೊಬ್ಬರಿಗೂ ನಮಸ್ಕರಿಸುತ್ತ ಎಲ್ಲರ ಆಶೀರ್ವಾದವನ್ನು ಬೇಡುತ್ತೇನೆ. ॥31॥ ಈಗ ನಾನು ಅಸೀಮ ತೇಜಸ್ಸುಳ್ಳ ನನ್ನ ತಾತನವರನ್ನು, ಈ ಪ್ರಾಪಂಚಿಕ ಜೀವನ ನಶ್ವರ ಎಂದು ಅರಿತು ಬದರಿ ಮತ್ತು ಕೇದಾರದಲ್ಲಿ ನೆಲೆಸಿರುವ ಸದಾಶಿವರವರಿಗೂ ವಂದಿಸುತ್ತೇನೆ. ॥32॥ ಹಾಗೆಯೇ, ನಾನು ನನ್ನ ತಂದೆಯವರಿಗೆ, ಯಾವಾಗಲೂ ರುದ್ರಾಕ್ಷಿ ಮಾಲೆಯನ್ನು ಕೊರಳಲ್ಲಿ ಧರಿಸಿ ಇಷ್ಟದೇವರಾದ ಸದಾಶಿವನನ್ನು ಪೂಜಿಸುತ್ತಿದ್ದ ಅವರಿಗೆ ವಂದಿಸುತ್ತೇನೆ. ॥33॥ ಈಗ ನಾನು, ಜನ್ಮ ಕೊಟ್ಟ ತಾಯಿ, ನನ್ನನ್ನು ಹಗಲು-ರಾತ್ರಿ ಕಷ್ಟಪಟ್ಟು ಜೋಪಾನವಾಗಿ ಸಾಕಿದವಳಿಗೆ ವಂದಿಸುತ್ತೇನೆ. ಅವಳ ಉಪಕಾರಗಳನ್ನು ನಾನೆಷ್ಟು ನೆನೆದರೂ ಸಾಲದು. ॥34॥ ನಾನು ಮಗುವಾಗಿದ್ದಾಗಲೆ ಅವಳು ನನ್ನನ್ನಗಲಿ ಹೋದಳು. ನನ್ನ ಚಿಕ್ಕಮ್ಮ ನನ್ನನ್ನು ಅತ್ಯಂತ ಅಕ್ಕರೆ, ಸಹನೆಗಳಿಂದ ಬೆಳೆಸಿದಳು. ಸದಾ ಹರಿಯನ್ನು ನೆನೆಯುತ್ತ ಅದರಲ್ಲಿಯೇ ತಲ್ಲೀನಳಾಗಿರುತ್ತಿದ್ದಳು.

ಆಕೆಯ ಚರಣಗಳಿಗೆ ಹಣೆಯಿಟ್ಟು ನಮಿಸುತ್ತೇನೆ. ॥35॥ ಹೋಲಿಸಲಾರದಂತಹ ಸೋದರ ಪ್ರೀತಿಯನ್ನು ತೋರಿಸಿದ ನನಗಾಗಿ ತನ್ನ ಜೀವನವನ್ನೇ ಒತ್ತೆ ಇಟ್ಟಂತಹ, ನನ್ನ ಹಿರಿಯ ಸೋದರನ ಚರಣಗಳಲ್ಲಿ ನನ್ನ ಮಸ್ತಕವನ್ನು ಇಡುತ್ತೇನೆ. ॥36॥ ಈಗ ನಾನು ಶ್ರೋತೃಗಳಿಗೆ ವಂದಿಸುತ್ತ, ಅವರ ತನ್ಮಯತೆಯನ್ನು ಕೋರುತ್ತೇನೆ. ಅವರು ಗಮನವಿಟ್ಟು ಕೇಳದಿದ್ದರೆ ನನಗೆ ಹೇಗೆ ತಾನೇ ತೃಪ್ತಿಯಾದೀತು? ॥37॥ ಶ್ರೋತೃಗಳು ಬುದ್ಧಿವಂತರಾಗಿ ಹೊಗಳುವಂತರಾದಲ್ಲಿ ಮತ್ತು ಮುಂದಿನ ಕತೆಯನ್ನು ಕೇಳುವುದರಲ್ಲಿ ಕುತೂಹಲಿಗಳಾದಲ್ಲಿ ಕಥನ ಹೆಚ್ಚು ಹೆಚ್ಚು ಉತ್ಸಾಹಭರಿತವಾಗುತ್ತದೆ. ॥38॥ ನೀವು ಗಮನ ನೀಡದಿದ್ದಲ್ಲಿ, ನಾನು ಕಥನ ಮಾಡುವುದರ ಉದ್ದೇಶ ಏನು? ಆದುದರಿಂದ ನಾನು ನಿಮ್ಮನ್ನು ಆನಂದಭರಿತರಾಗಿ ಕೇಳಿರೆಂದು ಶಿರಬಾಗಿ ಬೇಡುತ್ತೇನೆ. ॥39॥ ನನಗೆ ಯಾವುದೇ ಶಾಸ್ತ್ರಗಳ ಗಂಧವಿರುವುದಿಲ್ಲ. ಯಾವುದೇ ಶಾಸ್ತ್ರವನ್ನು ಅರಿತಿಲ್ಲ, ಪವಿತ್ರವಾದ ಕತೆಗಳನ್ನು ಕೇಳಿರುವುದಿಲ್ಲ. ನಿಮಗೂ ಇದು ಚೆನ್ನಾಗಿ ಗೊತ್ತು. ॥40॥ ನನಗೆ ನನ್ನ ಲೋಪದೋಷಗಳು ತಿಳಿದಿವೆ. ನನ್ನ ಅಲ್ಪತ್ವವೂ ತಿಳಿದಿದೆ. ಆದರೂ ಗುರುಗಳಿಗೆ ನೀಡಿರುವ ಪ್ರಮಾಣವಚನವನ್ನು ಪೂರೈಸಲು ನಾನು ಈ ಕಥನ ಪ್ರಯತ್ನವನ್ನು ಮಾಡುತ್ತಿದ್ದೇನೆ. ॥41॥ ನನ್ನ ಪ್ರಜ್ಞೆಯು ನನಗೆ ಹೇಳುತ್ತಿದೆ, ನಾನು ನಿಮ್ಮ ಮುಂದೆ ಒಂದು ಹುಲ್ಲುಕಡ್ಡಿ ಎಂದು. ಆದರೆ, ದಯೆತೋರಿ ನನ್ನನ್ನು ನಿಮ್ಮವನೆಂದು ಸ್ವೀಕರಿಸಿ. ॥42॥ ಈಗ ನಾನು ನನ್ನ ಸದ್ಗುರುವನ್ನು ನೆನೆಸಿಕೊಂಡು, ಅವನ ಚರಣಗಳಿಗೆ ಪ್ರೀತಿಯಿಂದ ಕಾಯಾ, ವಾಚಾ, ಮನಸಾ ಶರಣಾಗಿದ್ದೇನೆ. ನನಗೆ ಜ್ಞಾನವನ್ನು ಮತ್ತು ಪ್ರೋತ್ಸಾಹವನ್ನು ನೀಡುವಂತಹವನು ನನ್ನ ಗುರು. ॥43॥ ನಾವು ಭೋಜನಕ್ಕೆ ಕುಳಿತಾಗ, ಸಿಹಿಯನ್ನು ಊಟದ ಕೊನೆಯಲ್ಲಿ ಬಡಿಸುವ ರೀತಿಯಲ್ಲಿ, ನನ್ನ ನಮಸ್ಕಾರಗಳಿಗೆ ಸಿಹಿಯಾದ ಅಂತ್ಯವೆಂಬಂತೆ ನನ್ನ ಗುರುವಿಗೆ ನಮಿಸುತ್ತೇನೆ. ॥44॥ ‘ಓಂ’ ಸದ್ಗುರುರಾಯ! ನಿನಗೆ ಪ್ರಣಾಮಗಳು. ಚರ ಮತ್ತು ಅಚರ ಎರಡಕ್ಕೂ ನಿವಾಸನೇ ನೀನು. ನೀನು ಸಕಲ ಬ್ರಹ್ಮಾಂಡವನ್ನೇ ಧರಿಸಿರುವವನು ಮತ್ತು ಅತ್ಯಂತ ಕರುಣಾಮಯಿಯೂ ಆಗಿರುವೆ. ॥45॥ ಪೃಥ್ವಿ, ಏಳು ದ್ವೀಪಗಳು[5], ಒಂಭತ್ತು ದೇಶಗಳು[6], ಏಳು ಸ್ವರ್ಗಲೋಕಗಳು[7] ಮತ್ತು ಅಧೋಲೋಕಗಳು ಎಲ್ಲವೂ ಹಿರಣ್ಯಗರ್ಭದಿಂದ ಸೃಷ್ಟಿಯಾಗಿವೆ. ಅದೇ ಬೃಹತ್ ಬ್ರಹ್ಮಾಂಡವಾಗಿದೆ. ॥46॥ ಸದ್ಗುರುವು ಮಾಯೆಯಿಂದಾಚೆಗೆ ನೆಲಸಿರುತ್ತಾನೆ. ಮಾಯೆಯನ್ನು ಬ್ರಹ್ಮಾಂಡವು ಸೃಷ್ಟಿಸಿದೆ ಮತ್ತು ಅದು ಅಗೋಚರವಾಗಿದ್ದು ಭ್ರಮೆಯನ್ನುಂಟುಮಾಡುವುದೂ ಆಗಿದೆ. ॥47॥ ವೇದಗಳಿಗೂ ಸದ್ಗುರುವಿನ ಮಹತ್ತನ್ನು ವಿವರಿಸಲು ಅಸಾಧ್ಯವಾಗಿವೆ. ಆದುದರಿಂದಲೇ ಅವು ಮೌನವಾಗಿವೆ. ಅವನ್ನು ದೃಢೀಕರಿಸುವಂತಹ ಯಾವುದೇ ಉಪಕರಣಗಳಾಗಲೀ ಇಲ್ಲ. ॥48॥ ನಾನು ಯಾವಾಗಲಾದರೂ ನಿನ್ನನ್ನು ಹೋಲಿಸಲು ಯಾವುದಾದರೂ ಸದ್ಗುಣಗಳನ್ನು ಉಪಯೋಗಿಸಿದರೆ ನೀನು ಅವುಗಳನ್ನು ಹೊಂದಿರುವೆ. ನನ್ನ ದೃಷ್ಟಿಗೆ ಗೋಚರವಾಗುವುದೆಲ್ಲವೂ ನಿನ್ನ ಸೃಷ್ಟಿಯೇ. ॥49॥ ಶ್ರೀ ಸಾಯಿನಾಥನು ಅಂತಹ ದಯಾಳು ಮತ್ತು ಪ್ರಭುಶಕ್ತಿವಂತ ಸದ್ಗುರು. ಅಂತರಾತ್ಮನಲ್ಲೇ

ಅರಿಯಬಲ್ಲವನು, ಸರ್ವವ್ಯಾಪಿ, ಶಾಶ್ವತ ಸ್ವರೂಪನಾದ ನಿನಗೆ ವಂದಿಸುತ್ತೇನೆ. ॥50॥ ನಿನಗೆ ಸಾಷ್ಟಾಂಗ ಪ್ರಣಾಮಗಳು. ನೀನು ಸರ್ವೋತ್ತಮನು, ಸದಾನಂದ ಸ್ವರೂಪನು, ಪೂರ್ಣಸಂತೃಪ್ತನು, ಸ್ವಯಂಪ್ರಕಾಶನು, ಮಂಗಳಕರನು, ಆತ್ಮಸ್ವರೂಪನು ಮತ್ತು ಸದ್ಗುರುವು. ॥51॥ ನಿನ್ನ ಸದ್ಗುಣಗಳನ್ನು ವಿವರಿಸಲು ವೇದಗಳು ಮತ್ತು ಶೃತಿಗಳಿಗೆ ಸಾಧ್ಯವಾಗಿಲ್ಲ. ಹಾಗಿರುವಾಗ ನಿನ್ನ ಗುಣಗಾನ ಮಾಡುವ ಪ್ರಯತ್ನ ಮತ್ತು ನಿನ್ನನ್ನು ಅರ್ಥಮಾಡಿಕೊಳ್ಳುವ ಬುದ್ಧಿಶಕ್ತಿ ನನ್ನಲ್ಲೆಲ್ಲಿದೆ? ॥52॥ ಹೇ! ಹೇ ಸದ್ಗುರು! ಕರುಣಾನಿಧಿಯೇ! ನಿನಗೆ ಜಯವಾಗಲಿ. ಗೋದಾವರೀ ನದಿಯ ತೀರದಲ್ಲಿ ವಾಸಿಸುವವನಿಗೆ ಜಯವಾಗಲಿ. ಬ್ರಹ್ಮ, ಶಂಕರ ಮತ್ತು ವಿಷ್ಣು ಮತ್ತು ದತ್ತಾತ್ರೇಯ ಸ್ವರೂಪನೇ, ನಿನಗೆ ವಂದಿಸುತ್ತೇನೆ. ॥53॥ ಬ್ರಹ್ಮಾನಂದವು ಸದ್ಗುರುವಿಲ್ಲದೆ ದೊರೆಯುವುದಿಲ್ಲ. ನನ್ನ ಪಂಚಪ್ರಾಣಗಳನ್ನು[38] ನಿನಗೆ ಅರ್ಪಿಸುತ್ತೇನೆ[39] ಮತ್ತು ರಕ್ಷಣೆಗಾಗಿ ನಿನ್ನಲ್ಲಿ ಸಂಪೂರ್ಣ ಶರಣಾಗಿದ್ದೇನೆ. ॥54॥ ನಾನು ಶಿರಬಾಗಿ ಪ್ರಣಾಮ ಮಾಡುತ್ತೇನೆ. ನನ್ನ ಕೈಗಳಿಂದ ನಿನ್ನ ಚರಣಗಳನ್ನು ಸ್ಪರ್ಶಮಾಡುತ್ತೇನೆ. ನಿನ್ನ ಸುಂದರ ವದನದಲ್ಲಿ ದೃಷ್ಟಿಯಿಡುತ್ತೇನೆ ಮತ್ತು ನಿನ್ನ ಚರಣೋದಕವನ್ನು ಸೇವಿಸುತ್ತೇನೆ. ॥55॥ ಸಾಯಿಯ ಗುಣಗಾನವನ್ನು ಆಲಿಸುತ್ತೇನೆ. ಸಾಯಿ ಸ್ವರೂಪವನ್ನು ನಿರಂತರ ಧ್ಯಾನ ಮಾಡುತ್ತೇನೆ. ಚಿತ್ತದಲ್ಲಿ ಅಖಂಡ ಸಾಯಿ ಚಿಂತನದಲ್ಲಿ ನಿರತನಾಗುತ್ತೇನೆ. ಸಂಸಾರ ಬಂಧನದಿಂದ ವಿಮುಕ್ತನಾಗುತ್ತೇನೆ. ॥56॥ ನನ್ನ ತನು, ಮನ, ಧನ[40]ಗಳನ್ನು ಸಂಪೂರ್ಣವಾಗಿ ಸದ್ಗುರುವಿನ ಚರಣಗಳಲ್ಲಿ ಅರ್ಪಿಸುತ್ತೇನೆ. ಉಳಿದ ಜೀವನವೆಲ್ಲವನ್ನೂ ಗುರುಸೇವೆಯಲ್ಲಿ ಸವೆಸುತ್ತೇನೆ. ॥57॥ ಗುರುನಾಮ, ಗುರುಸಾನ್ನಿಧ್ಯ, ಗುರುವಿನ ಅನುಗ್ರಹ, ಗುರುಚರಣಾಮೃತ, ಗುರುದೀಕ್ಷೆ, ಗುರುಮಂತ್ರ, ಗುರುಗೃಹವಾಸ ಇವು ಮಹಾಪ್ರಯಾಸದಿಂದ ಲಭಿಸುತ್ತವೆ. ॥58॥ ಅವನಲ್ಲಿರುವ ಅಸೀಮ ಶಕ್ತಿಯಿಂದ, ಭಕ್ತರನ್ನು ಪರೀಕ್ಷೆಮಾಡಿ ಅವನ ಅರಿವಿಗೆ ಬಾರದಂತೆಯೇ ಮೋಕ್ಷಕ್ಕೆ[41] ಕರೆದೊಯ್ಯುತ್ತಾನೆ. ॥59॥ ಗುರುವಿನ ಸಹವಾಸ ಪವಿತ್ರ ಗಂಗೆಯ ರೀತಿಯಲ್ಲಿ ಶುದ್ಧಿಗೊಳಿಸಿ ಪವಿತ್ರನನ್ನಾಗಿ ಮಾಡುತ್ತದೆ. ಅದರಿಂದ ಚಂಚಲ ಮನಸ್ಸು ಭಗವಂತನ ಮೇಲೆ ನಿಶ್ಚಲವಾಗಿ ನಿಲ್ಲುತ್ತದೆ. ॥60॥ ನಮ್ಮ ವೇದಗಳು, ಶಾಸ್ತ್ರಗಳು ಮತ್ತು ಪುರಾಣಗಳು ಗುರುಸೇವೆಗೆ ಪ್ರಮಾಣಗಳು. ನಮ್ಮ ಯಾಗ, ಯಜ್ಞ, ತಪಸ್ಸು ನಮ್ಮನ್ನು ಗುರುವಿನ ಚರಣಗಳೆಡೆಗೆ ಕರೆದೊಯ್ಯುತ್ತವೆ ಮತ್ತು ಅವು ನಮಗೆ ಆಧಾರ. ॥61॥ ನಮ್ಮ ವೇದ ಶಾಸ್ತ್ರಗಳು ಶ್ರೀ ಸದ್ಗುರುವಿನ ಪವಿತ್ರ ನಾಮಗಳನ್ನೇ ಪ್ರಮಾಣಿಸುತ್ತವೆ. ನಮ್ಮ ಮಂತ್ರವೇ ಸಾಯಿಸಮರ್ಥ. ಅದೇ ನಮ್ಮ ಪವಿತ್ರ ಜೀವ, ಪವಿತ್ರ ಪೂಜೆ. ॥62॥ 'ಬ್ರಹ್ಮ ಸತ್ಯ' ಎಂಬುದನ್ನು ಪ್ರತಿನಿತ್ಯ ಅನುಭವಿಸಬೇಕು. ಜಗತ್ ಮಿಥ್ಯ ಎಂಬುದು ನಿತ್ಯದ ಅರಿವಾಗಬೇಕು. ಸಾಯಿಯು ತನ್ನ ಭಕ್ತರಿಗೆ ಈ ರೀತಿಯ ಪರಮಾನಂದದ ಸ್ಥಿತಿಯನ್ನು ದಯಪಾಲಿಸುತ್ತಾರೆ. ॥63॥ ಪರಮಾನಂದದ ಅನುಭವ, ಮೋಕ್ಷದ ಆನಂದ, ಬ್ರಹ್ಮಾನಂದದ ಅನುಭೂತಿ ಇವು ಮೂರೂ ಪರಸ್ಪರ ಅನುಬಂಧಿತವಾಗಿವೆ. ಶಾಶ್ವತ ಆನಂದದ ಸ್ಥಿತಿಯ ಅವಶ್ಯಕತೆ ಇದೆ. ॥64॥ ಈ ರೀತಿಯ ಮನಸ್ಥಿತಿಯನ್ನೂ, ಅನುಭೂತಿಯನ್ನೂ ಪಡೆದವರು ಅದೇ

ಆನಂದದ ಶಾಂತಿ ಹಾಗೂ ಸಂತೃಪ್ತಿಯ ಸ್ಥಿತಿಯಲ್ಲಿರುತ್ತಾರೆ. ಅದೇ ಆತ್ಮಸಾಕ್ಷಾತ್ಕಾರದ ಸ್ಥಿತಿ. ॥65॥ ಸಾಯಿಯು ಆನಂದದ ಗಣಿ, ಒಬ್ಬ ಅದೃಷ್ಟವಂತ ಭಕ್ತನಿಗೆ ಪರಮಾನಂದದ ಕೊರತೆ ಇರುವುದಿಲ್ಲ. ಅಂತಹ ಭಕ್ತನು ಸಾಗರದೋಪಾದಿಯಲ್ಲಿ ಶಾಂತವಾಗಿ ತೃಪ್ತಿಯಿಂದ ಇರುತ್ತಾನೆ. ॥66॥ ಶಿವ ಮತ್ತು ಶಕ್ತಿ[42], ಪುರುಷ ಮತ್ತು ಪ್ರಕೃತಿ[43], ಪ್ರಾಣಾಯಾಮಗಳು ಮತ್ತು ಅವುಗಳ ಚಲನ, ಜ್ಯೋತಿ ಮತ್ತು ಪ್ರಕಾಶ – ಇವುಗಳಲ್ಲಿ ದ್ವೈತವನ್ನು ಪರಿಗಣಿಸುವುದು ಶುದ್ಧ ಪರಬ್ರಹ್ಮನ ಸ್ವಭಾವವನ್ನು ವಿರೂಪಗೊಳಿಸುವುದು ಎರಡೂ ಒಂದೇ. ॥67॥ ವೇದಗಳು ಹೇಳುತ್ತವೆ, ಬ್ರಹ್ಮನು ಒಬ್ಬನೇ ಇರಲು ಇಚ್ಛಿಸುವುದಿಲ್ಲ ಮತ್ತು ಆಸೆಗಳು ಅನೇಕ. ಅದರಿಂದಲೇ ದ್ವೈತವು ಹುಟ್ಟಿತು ಮತ್ತು ಏಕತ್ವದಲ್ಲೇ ಲೀನವಾಯಿತು. ॥68॥ ಪೂರ್ಣ ಪರಿಶುದ್ಧ ಬ್ರಹ್ಮ ಸ್ಥಿತಿಯಲ್ಲಿ ಪರಮಾತ್ಮನೂ ಇಲ್ಲ, ಪ್ರಕೃತಿಯೂ ಇಲ್ಲ. ಎಲ್ಲಿ ಸೂರ್ಯನು ನೆಲೆಸಿಲ್ಲವೋ ಅಲ್ಲಿ ಹಗಲು, ರಾತ್ರಿಗಳು ಇರಲು ಹೇಗೆ ಸಾಧ್ಯ? ॥69॥ ನಿಜವಾದ ಅಸ್ತಿತ್ವವು ಯಾವುದೇ ಗುಣಗಳಿಗೆ ಅತೀತವಾಗಿದೆ. ಆದರೆ ತನ್ನ ಭಕ್ತರಿಗಾಗಿ ಅವನು ರೂಪ ಧರಿಸುತ್ತಾನೆ. ಅದೇ ಸಾಯಿ, ಪರಿಶುದ್ಧಸ್ವರೂಪಿ. ನಾನು ಅವನಿಗೆ ಸಂಪೂರ್ಣ ಶರಣಾಗಿದ್ದೇನೆ. ॥70॥ ಸಾಯಿ ಸಮರ್ಥರಲ್ಲಿ ಶರಣಾದವರನ್ನು, ಸಾಯಿಯು ಅನೇಕ ಅಪಘಡಗಳಿಂದ ರಕ್ಷಿಸಿದ್ದಾರೆ. ಆದುದರಿಂದ ನನ್ನ ಸ್ವಾರ್ಥಸುಖಕ್ಕಾಗಿ ನಾನು ಅವರ ಚರಣಗಳಿಗೆ ವಂದಿಸುತ್ತೇನೆ. ॥71॥ ಸತ್ಯವಾದ ಸ್ಥಿತಿಗನುಗುಣವಾಗಿ ಅವನು ಪೂರ್ಣವಾಗಿ ಬೇರೆಯಾಗಿದ್ದಾನೆ. ಭಕ್ತಿಯ ಸಂತೋಷವನ್ನು ಅನುಭವಿಸಲೆಂದು ಅವನು ಅನೇಕ ರೂಪಗಳನ್ನು ಧರಿಸುತ್ತಾನೆ ಮತ್ತು ಭಕ್ತರಿಗಾಗಿ ಅನೇಕ ಲೀಲೆಗಳನ್ನು[44] ಪ್ರದರ್ಶಿಸುತ್ತಾನೆ. ಅಂತಹ ಪ್ರೀತಿಪಾತ್ರನಿಗೆ ನಾನು ವಂದಿಸುತ್ತೇನೆ. ॥72॥ ಯಾರು ಸಕಲ ಜೀವಿಗಳಲ್ಲೂ ಪರಬ್ರಹ್ಮಸ್ವರೂಪನಾಗಿರುವನೋ, ಯಾರು ಆತ್ಮಜ್ಞಾನದ ನೆಲೆಯಾಗಿರುವನೋ, ಯಾರು ಸೂಕ್ಷ್ಮಜ್ಞಾನ ರೂಪವಾಗಿರುವನೋ ಅಂತಹ ಪ್ರೀತಿಪಾತ್ರನಿಗೆ ನಾನು ವಂದಿಸುತ್ತೇನೆ. ॥73॥ ನೀನೇ ನನ್ನ ಅಂತಿಮ ಗುರಿ. ನೀನೇ ನನಗೆ ಆಶ್ರಯದಾತ, ನಿನ್ನ ಭಕ್ತರ ಭಕ್ತಿಯನ್ನು ನೆರವೇರಿಸುವವನೇ, ಓ ಗುರುರಾಯ, ನೀನೆ ಪರಮಾನಂದದ ಅವತಾರ. ॥74॥ ಈಗ ಸಕಲ ಜೀವಜಂತುಗಳಿಗೂ ವಂದಿಸುತ್ತೇನೆ. ದೇವರು ಸಕಲ ಜೀವರಾಶಿಗಳಲ್ಲೂ ಇದ್ದಾನೆ. ನನಗೆನಿನ್ನ ಆಶ್ರಯ ನೀಡು. ॥75॥ ಸಕಲ ಜೀವಜಂತುಗಳಿಗೂ ಪ್ರಣಾಮ ಸಲ್ಲಿಸುತ್ತೇನೆ. ಅದರಿಂದ ವಿಶ್ವಾತ್ಮನು ಸಂತಸಗೊಳ್ಳಲಿ. ದೇವರು ಸರ್ವವ್ಯಾಪಿ ಎಲ್ಲೆಲ್ಲೂ ಹಾಸುಹೊಕ್ಕಾಗಿರುವವನು ಮತ್ತು ನಿಷ್ಪಕ್ಷಪಾತಿಯು. ॥76॥ ನಾನು ಪ್ರಾರಂಭಿಸುವುದನ್ನು ಪೂರ್ಣಗೊಳಿಸಲು ಈ ನಮಸ್ಕಾರಗಳು. ಇದು ಈ ಗ್ರಂಥದ ಮಂಗಳಾಚರಣೆ. ಮುಂದೆ ಈ ಗ್ರಂಥದ ಪ್ರಯೋಜನವನ್ನು ನಿವೇದಿಸುತ್ತೇನೆ. ॥77॥ ಸಾಯಿಯು ನನ್ನನ್ನು ಅನುಗ್ರಹಿಸಿ ಸಹಾಯ ಮಾಡಿದ ಸಮಯದಿಂದ ನಾನು ಅವನನ್ನೇ ಹಗಲು- ರಾತ್ರಿ ನೆನೆಯುತ್ತೇನೆ. ಅವನು ನನ್ನ ಪ್ರಾಪಂಚಿಕ ಭಯವನ್ನು ನಾಶಮಾಡಿದ್ದಾನೆ ಮತ್ತು ಜನನ–ಮರಣಗಳೆಂಬ ಸಂಸಾರ ಚಕ್ರದ ಭಯವನ್ನು ದೂರಮಾಡಿದ್ದಾನೆ. ॥78॥ ನನಗಾಗಿ ಅಲ್ಲ, ಕೇವಲ ಯಾವುದೇ ಪ್ರಾರ್ಥನೆಗಾಗಿ ಅಲ್ಲ, ಇನ್ನು ಯಾವುದೇ ತಪಸ್ಸಿಗಾಗಿ ಅಲ್ಲ,

ನಾನು ಕೇವಲ ಒಂದೇ ಒಂದು ರೂಪವನ್ನು ಮನಸ್ಸಿನಲ್ಲಿ ಹಿಡಿದಿಟ್ಟುಕೊಂಡಿದ್ದೇನೆ. ಅದೇ ಪರಿಶುದ್ಧವಾದ ಸಾಯಿಯ ಸ್ವರೂಪ. ॥79॥ ಸಾಯಿಯ ಮುಖವನ್ನು ದೃಷ್ಟಿಸಿದೊಡನೆ, ಹಸಿವು-ಬಾಯಾರಿಕೆಗಳು ಮರೆತು ಹೋಗುತ್ತವೆ. ಇತರ ಸುಖಗಳ ಬೆಲೆ ಏನು? ಪ್ರಾಪಂಚಿಕ ದುಃಖಗಳೆಲ್ಲವೂ ಮರೆತು ಹೋಗುತ್ತವೆ. ॥80॥ ಭಕ್ತನು ಬಾಬಾರವರ ಕಣ್ಣುಗಳನ್ನು ದೃಷ್ಟಿಸಿದೊಡನೆ, ತನ್ನನ್ನು ತಾನೇ ಮರೆಯುತ್ತಾನೆ. ಪ್ರೀತಿಯ ಅಲೆಗಳು ಅಂತರಂಗದಿಂದ ಉಕ್ಕಿಬಂದು ಇಡೀ ವಿಶ್ವವನ್ನೇ ಭಕ್ತಿಯ ಸಾಗರದಲ್ಲಿ ಮುಳುಗಿಸುತ್ತವೆ. ॥81॥ ಕರ್ಮ, ಧರ್ಮ, ಮತ, ಗ್ರಂಥಗಳು, ಪುರಾಣಗಳು, ಯೋಗ, ಯಜ್ಞಗಳು, ವಿಧಿವತ್ತಾದ ಕರ್ಮಗಳು, ತೀರ್ಥಯಾತ್ರೆ, ತಪಶ್ಚರ್ಯೆ- ಎಲ್ಲವೂ ಸಾಯಿಯ ಚರಣಗಳಲ್ಲೇ ಇವೆ. ॥82॥ ಗುರುವಿನ ಬೋಧನೆಗಳನ್ನು ಪೂರ್ಣವಾಗಿ ಚಾಚೂ ತಪ್ಪದೆ ಪರಿಪಾಲಿಸುವುದರಿಂದ ನಿಶ್ಚಲವಾದ ಶ್ರದ್ಧೆ ಮತ್ತು ಸ್ಥಿರತೆ ಉಂಟಾಗುತ್ತವೆ. ॥83॥ ನನ್ನ ಹಿಂದಿನ ಜನ್ಮದ ಪುಣ್ಯಕರ್ಮಗಳ ಫಲದಿಂದಲೇ ಸಾಯಿ ಚರಣಗಳಲ್ಲಿ ಆಸಕ್ತಿ ಹೆಚ್ಚಾಗಿದೆ ಮತ್ತು ಅವನ ಅಸೀಮಿತ ಶಕ್ತಿಯನ್ನನುಭವಿಸಲು ಪ್ರಾರಂಭಿಸಿದ್ದೇನೆ. ಅದನ್ನು ಪೂರ್ಣವಾಗಿ ಹೇಗೆ ವರ್ಣಿಸಲಿ? ॥84॥ ಸಾಯಿ ಚರಣಗಳಲ್ಲಿ ಆಸಕ್ತಿ ಮತ್ತು ಭಕ್ತಿಯನ್ನು ಸೃಷ್ಟಿಸುವ ಶಕ್ತಿಯು, ನಾನು ಪ್ರಾಪಂಚಿಕ ಕಾರ್ಯದಲ್ಲಿ ತೊಡಗಿದ್ದರೂ ವಿಶೇಷವಾಗಿ ನಿರ್ಮೋಹತ್ವವನ್ನು ಉಂಟುಮಾಡಿ ಪರಮಾನಂದವನ್ನು ನೀಡುತ್ತದೆ. ॥85॥ ಅನೇಕ ಜನರು ವಿವಿಧ ಭಕ್ತಿಮಾರ್ಗಗಳನ್ನು ವಿವರಿಸಿದ್ದಾರೆ. ನಾನು ನನಗೆ ತಿಳಿದಂತೆ ಅವುಗಳ ಗುಣಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ॥86॥ ಅಂತರಾತ್ಮದ ಜೊತೆ ಸಾಮರಸ್ಯ ಸಂಬಂಧವನ್ನು ರೂಪಿಸುವುದು ಅತ್ಯಂತ ಪ್ರಧಾನವಾದ ಭಕ್ತಿ ಮಾರ್ಗವಾಗಿದೆ. ವೇದಶಾಸ್ತ್ರಗಳ ಪಾರಂಗತರು ಮತ್ತು ಜ್ಞಾನಿಗಳಾದ ಅಧ್ಯಾತ್ಮ ಗುರುಗಳು ಈ ರೀತಿ ತಿಳಿಸಿದ್ದಾರೆ. ॥87॥ ಪೂಜೆ ಮತ್ತು ಅರ್ಚನೆಗಳು ನಾವು ಭಗವಂತನಿಗೆ ತೋರಿಸುವ ಪ್ರೀತಿಯ ಸಂಕೇತಗಳೆಂದು ಪರಾಶರರು[45] ಮತ್ತು ವ್ಯಾಸರು[46] ಬೋಧಿಸಿದ್ದಾರೆ. ॥88॥ ಗುರುವಿಗಾಗಿ ಪಾರಿಜಾತ ಮತ್ತಿತರ ಹೂವುಗಳನ್ನು ತೋಟದಿಂದ ತೆಗೆದುಕೊಂಡು ಬಂದು ಗುರುವಿನ ನಿವಾಸದ ಅಂಗಳವನ್ನು ಗುಡಿಸಿ, ನೀರು ಚಿಮುಕಿಸಿ, ಗೋಮಯದಿಂದ ಚೊಕ್ಕಟಮಾಡಬೇಕು. ॥89॥ ಮೊಟ್ಟಮೊದಲಿಗೆ ಸ್ನಾನಮಾಡಿ, ಸುಪ್ರಭಾತವನ್ನು ಹೇಳಿ, ಸುಗಂಧವನ್ನು ಸಿದ್ಧಪಡಿಸಿ, ಗುರುದೇವರಿಗೆ ಗಂಧವನ್ನು ಲೇಪಿಸಿ ಗುರುವಿಗೆ ಪಂಚಾಮೃತ ಅಭಿಷೇಕಮಾಡಿ (ಹಾಲು, ಜೇನು, ತುಪ್ಪ, ಮೊಸರು ಮತ್ತು ಸಕ್ಕರೆ), ಅಗರ ಬತ್ತಿಯನ್ನು ಹಚ್ಚಿ ದೀಪವನ್ನು ಬೆಳಗಬೇಕು. ॥90॥ ಅನಂತರ ನೈವೇದ್ಯವನ್ನು[47] ಸಮರ್ಪಿಸಿ, ಕರ್ಪೂರ ದೀಪ ಮತ್ತು ಧೂಪಗಳಿಂದ ಆರತಿಮಾಡಬೇಕು. ಈ ರೀತಿ ಎಲ್ಲಾ ಸೇವೆಗಳನ್ನು ಪ್ರೀತಿಯಿಂದ ಮಾಡುವುದೇ ಅರ್ಚನೆ. (ಉಪಾಸನೆ.) ॥91॥ ಮೊದಲು ಮನೋಬುದ್ಧಿಗಳನ್ನು ನಿಷ್ಕಳಂಕಗೊಳಿಸಿ, ಶುದ್ಧ, ಬುದ್ಧ, ದಿವ್ಯ ಮೂರ್ತಿಯನ್ನು ಆಮಂತ್ರಿಸಿ, ಅರ್ಚನೆಯಲ್ಲಿ ನಿರತರಾಗಿ. ॥92॥ ಅನಂತರ ದೈವಭಾವವನ್ನು ತುಂಬಿಕೊಂಡು ಅರ್ಚನೆಯನ್ನು ಪೂರೈಸಿ, ನಿಮ್ಮ ಹೃದಯದಲ್ಲಿ ಹಿಂದಿನ ದೈವತ್ವದ ಸ್ಥಿತಿಯನ್ನು[48] ಪೂರ್ಣವಾಗಿ,

ಸ್ಥಿರಗೊಳಿಸಿರಿ. ॥93॥ ಗರ್ಗಾಚಾರ್ಯರ[49] ಅಭಿಪ್ರಾಯದಲ್ಲಿ ಇನ್ನೂ ಅನೇಕ ರೀತಿಯ ಭಕ್ತಿಗಳು ಇವೆ. ಭಗವಂತನನ್ನು ಕುರಿತು ಭಜನೆ ಹಾಡುವಾಗ ಮನಸ್ಸು ಸಂಪೂರ್ಣವಾಗಿ ತಲ್ಲೀನವಾಗಿರಬೇಕು. ॥94॥ ತನ್ನ ಸ್ವಸ್ವರೂಪದಲ್ಲೇ ಸದಾ ಸ್ಥಿರವಾಗಿರುವವನು, ಧಾರ್ಮಿಕ ಕತೆ ಮತ್ತು ಹಾಡುಗಳನ್ನು ಹಾಡುತ್ತ, ಶಿಸ್ತಿನ ವರ್ತನೆಯನ್ನು ಅನುವು ಮಾಡಿಕೊಂಡಿರುವುದು ಮತ್ತೊಂದು ರೀತಿಯ ಭಕ್ತಿಮಾರ್ಗ ಎಂದು ಶಾಂಡಿಲ್ಯರು[50] ವಿವರಿಸಿದ್ದಾರೆ. ॥95॥ ತಮಗೆ ಒಳ್ಳೆಯದು ಯಾವುದೆಂದು ಅರಿತಿರುವವರು, ವೇದಗಳಲ್ಲಿ ತಿಳಿಸಿರುವ ಮಾರ್ಗದಲ್ಲಿ ನಡೆಯುವವರು, ದುರ್ಮಾರ್ಗದಿಂದ ದೂರ ಇರುವವರು, ತಮ್ಮ ಎಲ್ಲ ವಿಘ್ನಗಳನ್ನು ದೂರಮಾಡಿರುತ್ತಾರೆ. ॥96॥ ನಾನು ಯಾವುದೇ ಕರ್ಮವನ್ನು ಮಾಡುವವನಲ್ಲ ಹಾಗೂ ಕರ್ಮಫಲಗಳನ್ನು ಅನುಭವಿಸುವವನೂ ಅಲ್ಲ ಎಂದು ಮಾಡುವ ಕರ್ಮದಲ್ಲಿ ಅಹಂಕಾರ ಇರುವುದಿಲ್ಲ ಮತ್ತು ಪರಮಾತ್ಮನಲ್ಲಿ ಒಂದಾಗುವ ಶರಣಾಗತ ಭಾವ ಇರುತ್ತದೆ. ॥97॥ ನಿನ್ನ ಎಲ್ಲ ಕರ್ಮಗಳನ್ನು ಇದೇ ಭಾವನೆಯಲ್ಲಿ ಮಾಡು ಅಂದರೆ, ನೀನು ಕರ್ಮವನ್ನು ಮಾಡದೇ ಇರುವ ಸ್ಥಿತಿಯನ್ನು ತಲುಪುವೆ. ಕರ್ಮಗಳನ್ನು ತ್ಯಾಗಮಾಡಲು ಸಾಧ್ಯವಾಗದಿದ್ದರೂ ಕರ್ಮಫಲಗಳನ್ನು ಮಾತ್ರ ತ್ಯಾಗಮಾಡಲು ಸಾಧ್ಯವಾಗುತ್ತದೆ. ॥98॥ ಒಂದು ಮುಳ್ಳನ್ನು ಮತ್ತೊಂದು ಮುಳ್ಳಿನಿಂದ ತೆಗೆಯಬಹುದು. ಕರ್ಮಗಳನ್ನು ಮಾಡದಿರುವಾಗ ಕರ್ಮಗಳಿಗಾಗಿ ಕರ್ಮಮಾಡಬೇಕು. ಆತ್ಮಸಾಕ್ಷಾತ್ಕಾರವಾದಾಗ ಮಾತ್ರ ಕರ್ಮಗಳ ಅಂತ್ಯವಾಗುತ್ತದೆ. ॥99॥ ಆಸೆಗಳನ್ನು ಪೂರ್ಣವಾಗಿ ದೂರಮಾಡಬೇಕಾದರೆ ಕರ್ಮಫಲವನ್ನು, ಆಸೆಯನ್ನು ಪೂರ್ಣವಾಗಿ ತ್ಯಾಗಮಾಡಬೇಕಾಗುತ್ತದೆ. ನಿನ್ನ ನಿತ್ಯ ಕರ್ಮಗಳನ್ನು ಮುಖ್ಯವಾಗಿ ಕರ್ತವ್ಯಗಳನ್ನು ಮಾಡು. ಇದನ್ನೇ ಕರ್ಮನಿಯಮ ಎನ್ನುತ್ತಾರೆ. ॥100॥ ಎಲ್ಲಾ ಕರ್ಮಗಳನ್ನು ಭಗವಂತನಿಗೆ ಸಮರ್ಪಿಸು. ಒಂದುಕ್ಷಣ ಭಗವಂತನ ನೆನಪು ದೂರವಾದರೂ ಕ್ಷಮೆಯಾಚಿಸು. ಇದನ್ನು 'ನಾರದೀಯ ಭಕ್ತಿ' ಎನ್ನುತ್ತಾರೆ. ಇದು ಇತರ ಭಕ್ತಿ ಮಾರ್ಗಗಳಿಗಿಂತ ಭಿನ್ನವಾಗಿದೆ. ॥101॥ ಇದೇ ರೀತಿ ಇನ್ನೂ ಅನೇಕ ರೀತಿಯ ಭಕ್ತಿಮಾರ್ಗಗಳು ಇವೆ. ಅವುಗಳು ಒಂದಕ್ಕಿಂತ ಮತ್ತೊಂದು ವಿಶಿಷ್ಟವಾದುದು. ಗುರುವಚನದ ಅನುಕರಣೆಯಿಂದ ಈ ಸಂಸಾರಸಾಗರವನ್ನು ನೀರುಸೋಕದೆಯೇ ದಾಟಬಹುದು. ॥102॥ ಗುರುವಿನ ಚರಿತ್ರೆಗಳನ್ನು ಕೇಳುವ ಒಂದು ಮಹದಾಸೆಯನ್ನು ಬೆಳೆಸಿಕೊಂಡೆ ಮತ್ತು ಅವುಗಳಿಂದ ಮೋಹಿತನಾದೆ. ಆಗ ನನಗೆ ನಾನೂ ಅವನ ಬಗ್ಗೆ ನನ್ನ ಅನುಭವಗಳನ್ನು ಬರೆಯಬೇಕೆನಿಸಿತು. ॥103॥ ಅನಂತರ, ಒಮ್ಮೆ ನಾನು ಶಿರಡಿಯಲ್ಲಿದ್ದಾಗ, ಅವನ (ಸಾಯಿಯ) ದರುಶನಕ್ಕೆ ಮಸೀದಿಗೆ ಹೋಗಿದ್ದೆ. ಬಾಬಾ ಗೋಧಿಯನ್ನು ಬೀಸುತ್ತಿದ್ದುದನ್ನು ನೋಡಿ ಬಹಳ ಅಚ್ಚರಿ ಉಂಟಾಯಿತು. ॥104॥ ಮೊದಲು ಆ ಕತೆಯನ್ನು ಹೇಳುತ್ತೇನೆ. ನಿಶ್ಚಲವಾದ ಮನಸ್ಸಿನಿಂದ ಕೇಳಿ. ಆ ಘಟನೆಯಿಂದಲೇ ಸಚ್ಚರಿತೆಯ ಯೋಚನೆ ಹುಟ್ಟಿತು. ॥105॥ ಭಗವಂತನನ್ನು ಹೊಗಳುವಂತಹ ಶ್ಲೋಕಗಳು ಅತ್ಯುತ್ತಮವಾದವುಗಳು. ಸಾಯಿಯ ಸತ್ಕಾರ್ಯಗಳನ್ನು ವಿವರಿಸುವುದು, ಸಾಯಿಯ ಪ್ರೀತಿಯ ಸಂಭಾಷಣೆಯಲ್ಲಿ ನಿರತರಾಗುವುದು,

ಮನಸ್ಸನ್ನು ಶುದ್ಧಮಾಡಿ ಬುದ್ಧಿಶಕ್ತಿಯನ್ನು ಪವಿತ್ರಗೊಳಿಸುತ್ತದೆ. ॥106॥ ಅವನ ಲೀಲೆಗಳನ್ನು, ಚರಿತ್ರೆಗಳನ್ನು ಕೇಳುವುದರಿಂದ ತಾಪತ್ರಯಗಳೂ[51] ದೂರವಾಗುವುವು ಮತ್ತು ಸಂತೃಪ್ತಿ ಉಂಟಾಗುವುದು. ॥107॥ ತಾಪತ್ರಯಗಳಿಂದ ಬಾಧಿತರಾದವರು ಮತ್ತು ಮುಕ್ತಿಮಾರ್ಗವನ್ನು ಬಯಸುವವರು ಅವನ ಚರಣಗಳಲ್ಲಿ ರಕ್ಷಣೆ ಪಡೆದು ಆನಂದ ಹೊಂದುವರು ಮತ್ತು ತಮ್ಮ ಆಧ್ಯಾತ್ಮ ಅನುಭವಗಳಿಂದ ತುಂಬಿಕೊಳ್ಳುವರು. ॥108॥ ಈಗ ನನ್ನ ಕಡೆ ನಿಮ್ಮ ಗಮನ ಹರಿಸಿ. ಸುಮಧುರ ವಿಷಯಗಳನ್ನು ಕೇಳಿದಲ್ಲಿ ನೀವು ಬಾಬಾರವರ ದಯಾಳುತನಕ್ಕೆ ಅಚ್ಚರಿಪಡುವಿರಿ. ॥109॥ ಒಂದು ದಿನ ಬೆಳಗ್ಗೆ ಬಾಬಾರವರು ಹಲ್ಲುಜ್ಜಿಕೊಂಡು ಮುಖತೊಳೆದು, ಹಿಟ್ಟನ್ನು ಬೀಸಲು ಪ್ರಾರಂಭಿಸಿದರು. ॥110॥ ಅವರು ಕೈಯಲ್ಲಿ ಬುಟ್ಟಿಯನ್ನು ಹಿಡಿದು ಗೋಧಿಶೇಖರಿಸಿದ್ದ ಮೂಟೆಯಬಳಿ ಹೋಗಿ ಹಿಡಿಹಿಡಿ ಗೋಧಿಯನ್ನು ಬುಟ್ಟಿಯಲ್ಲಿ ತುಂಬಿದರು. ॥111॥ ಅವರು ನಂತರ ಒಂದು ಗೋಣಿಚೀಲದ ಮೇಲೆ ಬೀಸುವ ಕಲ್ಲನ್ನಿಟ್ಟು ಹಿಡಿಯನ್ನು ಜೋರಾಗಿ ಕಿತ್ತುಬರದ ಹಾಗೆ, ಸುತ್ತಿಗೆಯಿಂದ ಹೊಡೆದರು. ॥112॥ ನಿಲುವಂಗಿಯ ತೋಳುಗಳನ್ನು ಮೇಲೇರಿಸಿ, ಕಫನಿಯ[53] ಸಡಿಲವಾದ ಬಟ್ಟೆಯನ್ನು ಸೇರಿಸಿ ಹಿಡಿದುಕೊಂಡು ಬೀಸುವ ಕಲ್ಲಿನ ಹತ್ತಿರ, ಕೆಳಗೆ, ಕಾಲುಗಳನ್ನು ಉದ್ದಕ್ಕೆ ಚಾಚಿಕೊಂಡು ಕುಳಿತುಕೊಂಡರು. ॥113॥ ನನಗೆ ಬಹಳ ಅಚ್ಚರಿ ಉಂಟಾಯಿತು. ಯಾವುದೇ ಆಸ್ತಿ, ಯಾರ ಸಂಬಂಧವೂ ಇಲ್ಲದವರು ಈ ರೀತಿ ಹಿಟ್ಟನ್ನು ಬೀಸುವುದರ ಉದ್ದೇಶವಾದರೂ ಏನು? ಎಂದು ನಾನು ಪ್ರಶ್ನಿಸಿದೆ. ಅವರು ಇದನ್ನು ಏಕೆ ಯೋಚಿಸಬೇಕು? ॥114॥ ಅದೇನಾದರೂ ಆಗಲಿ. ಕೈಯಲ್ಲಿ ಹಿಡಿಯನ್ನು ಹಿಡಿದುಕೊಂಡು, ತಲೆ ತಗ್ಗಿಸಿಕೊಂಡು ಬಾಬಾ ತಮ್ಮ ಕೈಗಳಿಂದಲೇ ಬೀಸುವ ಕಲ್ಲಿನಲ್ಲಿ ಬೀಸಲು ಪ್ರಾರಂಭಿಸಿದರು. ನಿಸ್ಸಂಕೋಚವಾಗಿ ಹಿಟ್ಟನ್ನು ತೆಗೆಯುತ್ತಿದ್ದರು. ದುಷ್ಟಶಕ್ತಿಗಳನ್ನು ಪುಡಿಮಾಡುವ ರೀತಿಯಲ್ಲಿ ಕಂಡರು. ॥115॥ ನಾನು ಅನೇಕ ಸಂತರನ್ನು ನೋಡಿದ್ದರೂ ಯಾರ ಹತ್ತಿರವೂ ಬೀಸುವ ಕಲ್ಲು ಇರಲಿಲ್ಲ. ಇವರೊಬ್ಬರಿಗೇ ಗೋಧಿ ಬೀಸುವ ಸಂತೋಷ, ಉದ್ದೇಶದ ಅರಿವು ಇತ್ತು. ॥116॥ ಅಲ್ಲಿದ್ದ ಪ್ರೇಕ್ಷಕರೆಲ್ಲರಿಗೂ ಅಚ್ಚರಿಯಾಯಿತು. ಅವರು ಮಾಡುತ್ತಿರುವ ಬಗ್ಗೆ ಯಾರಿಗೂ ಪ್ರಶ್ನಿಸಲು ಧೈರ್ಯವಿರಲಿಲ್ಲ. ಹಳ್ಳಿಯಲ್ಲಿ ಈ ಸುದ್ದಿ ಹರಡುತ್ತಲೇ ಅಲ್ಲಿಯ ಸ್ತ್ರೀಯರು ಮತ್ತು ಪುರುಷರು ಓಡೋಡಿ ಬಂದರು. ॥117॥ ಅಲ್ಲಿಗೆ ಓಡಿ ಬಂದ ಮಹಿಳೆಯರೆಲ್ಲರೂ ದಣಿದಿದ್ದರು. ನಾಲ್ವರು ಮಹಿಳೆಯರು ಮಸೀದಿಯ ಮೆಟ್ಟಿಲುಗಳನ್ನು ಅವಸರದಿಂದ ಹತ್ತಿಬಂದು ಬಾಬಾರವರ ಕೈಗಳಿಂದ ಬೀಸುವ ಕಲ್ಲಿನ ಹಿಡಿಯನ್ನು ಬಲವಂತವಾಗಿ ತೆಗೆದುಕೊಂಡರು. ॥118॥ ಬಾಬಾರವರು ಕೋಪೋದ್ರಿಕ್ತರಾದರು. ಆದರೂ ಅವರು ಒಮ್ಮೆಲೆ ಗೋಧಿಯನ್ನು ಬೀಸಲು ಪ್ರಾರಂಭಿಸಿದರು. ಬೀಸುವಾಗ ಸಾಯಿಯನ್ನು ಹೊಗಳುತ್ತಾ ಅವರ ಲೀಲೆಗಳನ್ನು ಹಾಡಲು ಪ್ರಾರಂಭಿಸಿದರು. ॥119॥ ಆ ಮಹಿಳೆಯರ ಪ್ರೀತಿಯನ್ನು ನೋಡಿ, ತನ್ನ ಕೋಪ ತಣ್ಣಗಾದಂತೆ ತೋರಿಸಿಕೊಂಡರು. ಕೋಪವು ಪ್ರೀತಿಗೆ ತಿರುಗಿ ಬಾಬಾರವರು ಮುಗುಳ್ನಗೆ ತೋರಲು ಪ್ರಾರಂಭಿಸಿದರು. ॥120॥ ಸ್ವಾಸೇರು[54]ಗಳಷ್ಟು ಗೋಧಿಯನ್ನು,

ಹಿಟ್ಟು ಮಾಡಿದ್ದರು. ಬುಟ್ಟಿ ಖಾಲಿಯಾಗಿತ್ತು. ಅನಂತರ ಆ ಮಹಿಳೆಯರು ಉನ್ಮತ್ತರಾಗಿ ನೃತ್ಯ ಮಾಡಲು ಪ್ರಾರಂಭಿಸಿದರು. ॥121॥ “ಬಾಬಾರವರು ಚಪಾತಿ[55] ಮಾಡುವುದಿಲ್ಲ, ಅವರು ಭಿಕ್ಷೆಬೇಡುವವರಂತೆ ತಿರುಗುತ್ತಾರೆ. ಅವರು ಈ ಗೋಧಿ ಹಿಟ್ಟಿನಿಂದ ಏನು ಮಾಡುತ್ತಾರೆ?” ಎಂದು ಮಹಿಳೆಯರು ಚರ್ಚಿಸಿದರು. ॥122॥ “ಬಾಬಾರವರಿಗೆ ಹೆಂಡತಿ ಮಕ್ಕಳು ಯಾರೂ ಇಲ್ಲ. ಬಾಬಾ ಒಬ್ಬಂಟಿಗರು. ಅವರಿಗೆ ಯಾವುದೇ ಸಂಸಾರ, ಮನೆ ಇರುವುದಿಲ್ಲ. ಅವರಿಗೇಕೆ ಇಷ್ಟು ಹಿಟ್ಟು?” ॥123॥ ಅವರಲ್ಲೊಬ್ಬರು ಹೇಳಿದರು – “ಬಾಬಾ ಅತ್ಯಂತ ಕರುಣಾಮಯಿ. ಈ ಲೀಲೆಯೂ ನಮ್ಮ ಮೇಲಿನ ಪ್ರೀತಿಗಾಗಿ. ಈಗಲೇ ಅವರು ಈ ಹಿಟ್ಟೆಲ್ಲವನ್ನು ನಮ್ಮವರಿಗೆ ಹಂಚುತ್ತಾರೆ.” ॥124॥ “ಈಗ ಅವರು ಅದನ್ನು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ – ನಮ್ಮೆಲ್ಲರಿಗೂ ಒಂದೊಂದು ಭಾಗ.” ಈ ರೀತಿ ಎಲ್ಲರೂ ಯೋಚಿಸುತ್ತ ಗಾಳಿಯಲ್ಲೇ ಅರಮನೆ ಕಟ್ಟಲಾರಂಭಿಸಿದರು. ॥125॥ ಬಾಬಾರವರ ಆಟ ಅವರೊಬ್ಬರಿಗೇ ಗೊತ್ತು. ಯಾರೂ ಅವರ ಆಳವನ್ನು ಅರಿಯಲಾರರು. ಆದರೆ ಬಾಬಾರವರನ್ನು ಲೂಟಿಮಾಡುವ ಆಸೆ ಮಹಿಳೆಯರಲ್ಲಿ ಮೂಡಿತು. ॥126॥ ಗೋಧಿಯೆಲ್ಲವನ್ನೂ ಉಪಯೋಗಿಸಿ ಹಿಟ್ಟನ್ನು ಹರಡಿದರು. ಬೀಸುವ ಕಲ್ಲನ್ನು ತೆಗೆದು ಗೋಡೆಗೆ ಒರಗಿಸಿ ಇಟ್ಟರು. ಮಹಿಳೆಯರು ತಮ್ಮ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗಲು ಮೊರಗಳಲ್ಲಿ ಹಿಟ್ಟನ್ನು ತುಂಬಿಕೊಂಡರು. ॥127॥ ಅಷ್ಟರವರೆಗೆ ಬಾಬಾರವರು ಒಂದು ಮಾತನ್ನೂ ಆಡಲಿಲ್ಲ. ನಾಲ್ವರು ಮಹಿಳೆಯರು ಹಿಟ್ಟನ್ನು ನಾಲ್ಕು ಭಾಗಗಳನ್ನಾಗಿ ಮಾಡಿದಾಗ ಬಾಬಾರವರು ಏನು ಹೇಳಿದರು, ಕೇಳಿ ಶ್ರೋತೃಗಳೇ; ॥128॥ “ನೀವುಗಳು ಆಸೆಯಿಂದ ಹುಚ್ಚರಾಗಿದ್ದೀರಿ, ಇದನ್ನು ಎಲ್ಲಿಗೆ ಏತಕ್ಕೆ ತೆಗೆದುಕೊಂಡು ಹೋಗುತ್ತಿರುವಿರಿ? ಇದು ನಿಮ್ಮಪ್ಪನಿಗೇನಾದರೂ ಸೇರಿದೆಯಾ? ಈಗ ನೀವು ಈ ಹಳ್ಳಿಯ ಸರಹದ್ದಿಗೆ ಹೋಗಿ ಅಲ್ಲಿ ಈ ಹಿಟ್ಟನ್ನು ಹರಡಿ. ॥129॥ “ನೀವು ನಿಷ್ಪ್ರಯೋಜಕರು, ನನ್ನನ್ನು ಕೊಳ್ಳೆ ಹೊಡೆಯಲು ಓಡಿ ಬಂದವರು. ನೀವೇನಾದರೂ ನನಗೆ ಹಿಟ್ಟನ್ನು ಸಾಲ ಕೊಟ್ಟಿದ್ದಿರಾ ಈಗ ತೆಗೆದುಕೊಂಡುಹೋಗಲು?” ॥130॥ ಆ ಮಹಿಳೆಯರು ಮನಸ್ಸಿನಲ್ಲಿಯೇ ಗೊಣಗಲು ಪ್ರಾರಂಭಿಸಿದರು. ಅವರ ಆಸೆಯಿಂದಾಗಿ ಅವಮಾನ ಹೊಂದಿದವರಾದರು. ತಮ್ಮಲ್ಲಿಯೇ ಪಿಸುಗುಟ್ಟುತ್ತ ತಕ್ಷಣವೇ ಹಳ್ಳಿಯ ಸರಹದ್ದಿನ ಕಡೆಗೆ ಬೇಗನೆ ನಡೆದರು ॥131॥ ಬಾಬಾರವರ ಉದ್ದೇಶಗಳನ್ನೂ ಯಾರೂ ಊಹಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರಾರಂಭದಲ್ಲಿ ಯಾರಿಗೂ ಏನು ಮಾಡಬೇಕೆಂಬುದೇ ತಿಳಿದಿಲ್ಲ. ಆದರೆ ತಾಳ್ಮೆಯಿಂದ ಇದ್ದಲ್ಲಿ ಪರಿಣಾಮದ ಅರಿವಾಗುತ್ತದೆ. ಬಾಬಾರವರ ಕಾರ್ಯವೈಖರಿಗಳು ಅನೇಕ. ॥132॥ ಅನಂತರ ನಾನು ಅಲ್ಲಿಯ ಜನರನ್ನು ಪ್ರಶ್ನಿಸಿದೆ – ಬಾಬಾ ಏಕೆ ಆ ರೀತಿ ವರ್ತಿಸಿದರು? ಅದಕ್ಕೆ ಅವರು ಉತ್ತರಿಸಿದ್ದು – ಬಾಬಾರವರು ಇದೇ ರೀತಿಯಲ್ಲಿ ಹಳ್ಳಿಯಲ್ಲಿ ರೋಗ ಹರಡದಂತೆ ತಡೆದಿದ್ದರು ಎಂದು. ॥133॥ ಬಾಬಾರವರು ಬೀಸುವ ಕಲ್ಲಿನಲ್ಲಿ ಹಿಟ್ಟುಮಾಡಿದ್ದು ಗೋಧಿಯನ್ನಲ್ಲ, ಕಾಲರಾದ ಕ್ರಿಮಿಗಳನ್ನು. ಅನಂತರ ಅದನ್ನು ಹಳ್ಳಿಯ ಸರಹದ್ದಿನಲ್ಲಿ

ಕೈಯಾರೆ ಹರಡಿದ್ದರು. ॥134॥ ಹಿಟ್ಟನ್ನು ಕೆರೆಯ (ಕಾಲುವೆಯ) ದಡಗಳಲ್ಲಿ ಹರಡಿಸಿದ್ದರು. ಆ ಸಮಯದಿಂ ರೋಗ ಹಿನ್ನಡೆಯಿತು. ಪ್ರಾಮಾಣಿಕವಾಗಿ ಕೆಟ್ಟ ಸಮಯ ಕಳೆಯಿತು. ಇದೇ ಬಾಬಾರವರ ನೈಪುಣ್ಯತೆ. ॥135॥ ಆ ಹಳ್ಳಿಯಲ್ಲಿ ಕಾಲರಾ ಸೋಂಕಿನ ಭೀತಿ ಹರಡಿತ್ತು, ಅದಕ್ಕಾಗಿ ಸಾಯಿನಾಥರು ಪರಿಹಾರವನ್ನು ಗುರುತಿಸಿದ್ದರು. ಹಳ್ಳಿಯಿಂದ ಸಂಪೂರ್ಣವಾಗಿ ರೋಗವು ನಿರ್ಮೂಲವಾಯಿತು ಮತ್ತು ಶಾಂತಿ ಸ್ಥಾಪಿತವಾಯಿತು. ॥136॥ ಈ ಒಂದು ಹಿಟ್ಟನ್ನು ಮಾಡುವುದನ್ನು ನೋಡಿದ ನನಗೆ ಅಚ್ಚರಿಯುಂಟಾಯಿತು. ಕಾರ್ಯ-ಕಾರಣಗಳನ್ನು ಯಾವರೀತಿ ಸಂಬಂಧ ಕಲ್ಪಿಸಬಹುದು? ಅದಕ್ಕೆ ಪುರಾವೆ ಹೇಗೆ ತಿಳಿಯುತ್ತದೆ? ॥137॥ ಗೋಧಿಗೂ ರೋಗಕ್ಕೂ ಯಾವ ರೀತಿಯ ಸಂಬಂಧ ಕಲ್ಪಿಸಬಹುದು? ಈ ರೀತಿ ನಂಬಲಾಗದಂತಹ ಘಟನೆಯನ್ನು ನೋಡಿದ ನಾನು ಈ ಪುಸ್ತಕವನ್ನು ಬರೆಯುವ ಯೋಚನೆಮಾಡಿದೆ. ॥138॥ ಸಮುದ್ರದ ಅಲೆಗಳ ರೀತಿಯಲ್ಲಿ ಪ್ರೀತಿಯು ನನ್ನಲ್ಲಿ ಉಕ್ಕಿಹರಿಯಿತು. ಮತ್ತು ಬಾಬಾರವರ ಸಿಹಿಯಾದ ಕತೆಯನ್ನು ಹೃದಯಪೂರ್ವಕವಾಗಿ ಹಾಡಬೇಕೆನ್ನಿಸಿತು. ॥139॥ಹೇಮಾದನು, ಸಾಯಿನಾಥರಿಗೆ ಶರಣಾಗಿದ್ದಾನೆ. ಮಂಗಳಕರ ಪ್ರಾರ್ಥನೆಯು ಇಲ್ಲಿಗೆ ಮುಗಿಯುತ್ತದೆ. ಬಂಧುಗಳಿಗೆ, ಮಿತ್ರರಿಗೆ, ಸಂತರಿಗೆ ಪ್ರಣಾಮಗಳು. ಮತ್ತೆ ಎಂದೆಂದಿಗೂ ನನ್ನ ಸದ್ಗುರುವಿಗೆ ಪ್ರಣಾಮಗಳು. ॥140॥ ಮುಂದಿನ ಅಧ್ಯಾಯದಲ್ಲಿ ನಾನು ಈ ಪುಸ್ತಕದ ಉದ್ದೇಶದ ಬಗ್ಗೆ ತಿಳಿಸುತ್ತೇನೆ. ಮತ್ತು ಇದರ ಶಕ್ತಿ ಮತ್ತು ಅದರ ಬಗ್ಗೆ ನನ್ನ ಕೈಲಾದಷ್ಟು ಅಂತರ್ದೃಷ್ಟಿ ಕೊಡುತ್ತೇನೆ. ಶ್ರೋತೃಗಳು ಗಮನವಿಟ್ಟು ಕೇಳಬೇಕು. ॥141॥ ಈ ರೀತಿ ಶ್ರೋತೃಗಳು ಮತ್ತು ಲೇಖಕ ಇಬ್ಬರೂ ಈ ಶ್ರೀ ಸಾಯಿಸಚ್ಚರಿತೆಯಿಂದ ಲಾಭಪಡೆಯಬಹುದು. ಇದರ ಬರಹಗಾರ ಹೇಮಾದಪಂತ ಯಾರು ಎಂಬುದು ಮತ್ತೆ ಸ್ಪಷ್ಟವಾಗುತ್ತದೆ. ॥142॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಒಂದು ಪ್ರಾರ್ಥನೆ" ಎಂಬ ಮೊದಲನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

**ಟಿಪ್ಪಣಿ**

1. ಪ್ರೀತಿಯ.
2. ಆರು ವಿವಿಧ ವೇದಗಳು (ಅವುಗಳಲ್ಲಿ ಎರಡು ಕಳೆದು ಹೋಗಿವೆ.), ಧರ್ಮಶಾಸ್ತ್ರ, ಪುರಾಣಗಳು, ಮೀಮಾಂಸೆ, ವಿಮರ್ಶೆಗಳು – ಇತ್ಯಾದಿ.
3. ಭೂಲೋಕ ಅಂದರೆ ಭೂಮಿ, ಭುವರ್ಲೋಕ – ಸೂರ್ಯ ಮತ್ತು ಭೂಮಿಯ ಮಧ್ಯೆ ಇರುವ ಲೋಕ. ಸ್ವರಲೋಕ – ಸೂರ್ಯ ಮತ್ತು ಧ್ರುವತಾರೆಗಳ ಮಧ್ಯೆ ಇರುವ ಲೋಕ. ಮಹರ್ಲೋಕ – ಸೂರ್ಯ ಮತ್ತು ಗ್ರಹಗಳ ಮಧ್ಯೆ ಇರುವುದು. ತಪೋಲೋಕ – ತಪಸ್ವಿಗಳ ಸ್ವರ್ಗ. ಜನೋಲೋಕ – ಬ್ರಹ್ಮನ ಪುತ್ರರ ಲೋಕ. ಸತ್ಯಲೋಕ – ಬ್ರಹ್ಮನ ಮತ್ತು ಋಷಿಗಳ ಸ್ವರ್ಗ. ಸಪ್ತಪಾತಾಳ – ಏಳು ಅಧೋಲೋಕಗಳು –ಅತಲ, ವಿತಲ, ಮುತ್ತಲ, ತಲಾತಲ, ಮಹಾತಲ, ರಸಾತಲ ಮತ್ತು ಪಾತಾಳ.
4. ಸಾಷ್ಟಾಂಗ – ದೇಹದ ಎಂಟು ಅಂಗಗಳು ಭೂಮಿಯನ್ನು ಮುಟ್ಟಿದಾಗ ಸಂಪೂರ್ಣ ಶರಣಾಗತಿಭಾವ.
5. ರಿದ್ಧಿ ಮತ್ತು ಸಿದ್ಧಿ – ಗಣೇಶನ ಇಬ್ಬರು ಪತ್ನಿಯರು – ಮಾನಸಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳ ಸಂಕೇತ.
6. ಪಾರ್ವತಿ – ಶಿವನ ಪತ್ನಿ.
7. ಅವನು ಪರಶುರಾಮ – ವೀರನಾಯಕ – ರಾಜ – ವಿಷ್ಣುವಿನ ಅವತಾರ.
8. ಸರಸ್ವತಿಯ ವಾಹನ.
9. ಭಾರತೀಯ.
10. ಸತ್ವ, ರಜೋ, ತಮೋ ಗುಣಗಳು ಪ್ರಕೃತಿಯ ಮೂರು ಗುಣಗಳು.
11. ಬ್ರಹ್ಮ, ವಿಷ್ಣು ಮತ್ತು ಶಂಕರ.
12. ಆದಿದೇವ – ವಿಷ್ಣುವಿನ ಒಂದು ಗುಣ.
13. ಅವನು ಸೌರಾಷ್ಟ್ರದಲ್ಲಿನ ಬರಾವಲ್‌ನಿಂದ ಕನ್ಯಾಕುಮಾರಿಯ ದಿಕ್ಕಿನೆಡೆಗೆ ಒಂದು ಕೊಡಲಿಯನ್ನು ಎಸೆದು ಅಲ್ಲಿಯವರೆಗೆ ಬ್ರಾಹ್ಮಣ ಜಾಗ ಎಂದು ಹೇಳಿದನು. (ಪರಶುರಾಮನು ತನ್ನ ಪರಶು(ಕೊಡಲಿ)ಯನ್ನು ಸಮುದ್ರಕ್ಕೆ ಎಸೆದಾಗ ಸಮುದ್ರದ ಜಲವು ಹಿಂದೆ ಸರಿದು ಸೃಷ್ಟಿಯಾದ ಭೂಪ್ರದೇಶವನ್ನೇ ಕೊಂಕಣ ರಾಜ್ಯ ಎಂಬ ಪ್ರತೀತಿ ಇದೆ.)

14. ಅನುವಂಶಿಕ.
15. ಶುಕ್ಲ ಯಜುರ್ವೇದದ ಕರ್ತೃ, ಸೀತೆಯ ಸಾಕು ತಂದೆಯಾದ ಜನಕ ಮಹಾರಾಜ.
16. ಅವನನ್ನು "ಮನು ಪುತ್ರ" ಎನ್ನುತ್ತಾರೆ. ಮಾನವ ಜಾತಿಯ ಸೃಷ್ಟಿಗೆ ಕಾರಣರಾದ ಏಳು ಜನರಲ್ಲಿ ಒಬ್ಬನು.
17. ವಿಷ್ಣುಪುರಾಣವನ್ನು ಹೇಳಿದವನು.
18. ಬ್ರಹ್ಮನ ಪುತ್ರ.
19. ಬ್ರಹ್ಮನ ನಾಲ್ವರು ಪುತ್ರರು – ಸೃಷ್ಟಿಸಲ್ಪಟ್ಟವರು – ಜನಿಸಿದವರಲ್ಲ.
20. ಬ್ರಹ್ಮರ್ಷಿ – ಮೂಲತಃ ಕ್ಷತ್ರಿಯ ಬಾಲಕ ರಾಮನ ಸಹಪಾಠಿ ಮತ್ತು
21. ಸಪ್ತರ್ಷಿಗಳಲ್ಲಿ ಒಬ್ಬರು. ಸೂರ್ಯವಂಶದ ಗುರುಗಳು. ಶ್ರೀರಾಮಚಂದ್ರನ ಗುರುಗಳೂ ಸಹ.
22. ರಾಮಾಯಣದ ಲೇಖಕರು.
23. ತಾಯಿಯ ಗರ್ಭದಲ್ಲಿದ್ದಾಗಲೇ ಬ್ರಹ್ಮಜ್ಞಾನ ಪಡೆದವರು.
24. ಮೀಮಾಂಸೆಯ ಕರ್ತೃ.
25. ಯಾಜ್ಞವಲ್ಕ್ಯರ ಬಂಧು ಹಾಗೂ ಋಗ್ವೇದದ ಕರ್ತೃ.
26. ಒಂಭತ್ತು ಜನ ಯೋಗಿಗಳು. ಬಹುಶಃ ನವ ನಾರದರು – ಮಚ್ಛೀಂದ್ರ, ಗೋರಕ್ಷ, ಜಾಲಂದರ, ಕನೀಫ, ಚರಪತಿ, ನಾಗೇಶ, ಭರತ, ರೇವಣ ಮತ್ತು ಗಾಹಿನಿ.
27. ನವನಾಥರನ್ನು ಅನುಕರಣೆ ಮಾಡುವವರು ಮತ್ತು ಜ್ಞಾನೇಶ್ವರರ ದೊಡ್ಡ ಅಣ್ಣ ಮತ್ತು ಗುರು.
28. 13ನೆಯ ಶತಮಾನದಲ್ಲಿ ಆಲಂದಿಯಲ್ಲಿ ಜನಿಸಿದವರು. ಜ್ಞಾನೇಶ್ವರಿ ಮತ್ತು ಅಭಂಗಗಳು.
29. ಜ್ಞಾನೇಶ್ವರನ ಸೋದರಿ ಮತ್ತು ಒಬ್ಬ ಮಹಾ ಸಂತರು.
30. ಜ್ಞಾನೇಶ್ವರನ ಕಿರಿಯ ಸೋದರ.
31. 16ನೆಯ ಶತಮಾನದಲ್ಲಿ ಪೈತಾನ್‌ನಲ್ಲಿ ಹುಟ್ಟಿ ಅಲ್ಲಿಯೇ ಸಮಾಧಿ ಹೊಂದಿದರು. ಅನೇಕ ಪುಸ್ತಕಗಳನ್ನು, ಅಭಂಗಗಳನ್ನು ರಚಿಸಿದ್ದಾರೆ.

ದತ್ತಗುರು ಅವರಿಗೆ ದರ್ಶನವಿತ್ತಿದ್ದರಂತೆ.

32. ಪಾಂಡುರಂಗನ ನಿಷ್ಠಾವಂತ ಭಕ್ತ. ಯಾವಾಗಲೂ ದೇಹುವಿನಲ್ಲಿ ವಾಸಮಾಡುತ್ತ ಆಳಂದಿಯಲ್ಲಿ ತನ್ನ ಬರವಣಿಗೆಗಳನ್ನು ಮಾಡುತ್ತಿದ್ದ.

33. ಪಂಡರಾಪುರದ ಅತ್ಯಂತ ಭಕ್ತೆ. ಅತಿ ಸುಂದರವಾದ ಸ್ತ್ರೀ.

34. ಅಕ್ಕಸಾಲಿಗ, ಈತನೂ ಪಂಡರಾಪುರದವನು. ಆದರೆ ಶಂಕರನ ಭಕ್ತ. ವಿಠಲನ ಕೃಪೆಯಿಂದ ಶಂಕರನ ಸಾಕ್ಷಾತ್ಕಾರ ಪಡೆದವರು. ವಿಠಲನು ನರಹರಿಗಾಗಿ ತಲೆಯಮೇಲೆ ಲಿಂಗವನ್ನು ಧರಿಸಿದವನು.

35. ಜಂಬು, ಕುಶ, ಪ್ಲಾಕ್ಷ, ಶಾಲ್ಮಲಿ, ಕ್ರೌಂಚ, ಶಕ, ಪುಷ್ಕರ.

36. ಇಳಾವೃತ್ತ, ಭದ್ರಾಶ್ವ, ಹರಿವರ್ಷ, ಕಿಂಪುರುಷವರ್ಗ, ಕೇತುಮೂಲ, ರಾಮಾಂಯಾಕ, ಭರತವರ್ಷ, ಹಿರಣ್ಯ, ಉತ್ತರಕುರು.

37. 3ನೆಯ ನಂಬರಿನ ಟಿಪ್ಪಣಿ ನೋಡಿ.

38. ಪ್ರತ್ಯಕ್ಷವಾಗಿ ಪಂಚಪ್ರಾಣಗಳನ್ನು ಆರತಿಯ ರೀತಿಯಲ್ಲಿ ತಿರುಗಿಸು.

39. ಐದು ಪ್ರಾಣಗಳು – ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ.

40. ಇದು ಸಂಪೂರ್ಣ ಶರಣಾಗತಿಯ ಭಾವನೆ. ಅಹಂಕಾರವನ್ನು ಬಿಟ್ಟಿರುವುದು.

41. ಮೋಕ್ಷ.

42. ಪರಮಾತ್ಮ ಮತ್ತು ದೈವಶಕ್ತಿ.

43. ಪರಮಾತ್ಮ ಮತ್ತು ಪ್ರಕೃತಿ.

44. ದೈವಲೀಲೆ, ದೇವರಾಟ.

45. ವ್ಯಾಸರ ತಂದೆ.

46. ವೇದಗಳನ್ನು ರಚಿಸಿದವರು

47. ಆಹಾರವನ್ನು ಸಮರ್ಪಿಸುವುದು – ಹಾಲು, ಹಣ್ಣು, ಜೇನು ಇತ್ಯಾದಿ.

48. ಪರಿಶುದ್ಧ ಸ್ಥಿತಿ ಮತ್ತು ನಿಷ್ಪಾಪ.

49. ವಿಜ್ಞಾನ ಮತ್ತು ಜ್ಯೋತಿಶ್ಶಾಸ್ತ್ರದ ರಚನಕಾರ.
50. ಕಾನೂನು ಪುಸ್ತಕದ ಲೇಖಕ.
51. ಆದಿಭೌತಿಕ, ಆದಿದೈವಿಕ, ಆಧ್ಯಾತ್ಮಿಕ.
52. ಧಾನ್ಯಗಳನ್ನು ಗಾಳಿಸು(ಕೇರುವ)ವ ಸಲುವಾಗಿ ಬುಟ್ಟಿಯಲ್ಲಿ ತುಂಬುವುದು.
53. ಉದ್ದನೆಯ ಸಾಲು.
54. ಒಂದು ತೂಕ.
55. ಗೋಧಿಹಿಟ್ಟಿನ ಚಪ್ಪಟೆಯಾಗಿರುವ ವರ್ತುಲಾಕಾರದ ಬ್ರೆಡ್, ಕಾಳು ಇತ್ಯಾದಿ. (ರೊಟ್ಟಿ, ಪಲ್ಯ ಇತ್ಯಾದಿ.)



# ಅಧ್ಯಾಯ – 2

॥ಅಥಃ ಶ್ರೀ ಸಾಯಿ ಸಚ್ಚರಿತೆ॥



## "ನಾಮಕರಣ ಮಹೋತ್ಸವದ ಬಗ್ಗೆ ವಿವರಿಸುವ ಉದ್ದೇಶ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದಲ್ಲಿ ದೇವತೆಗಳಿಗೆ, ಕುಟುಂಬದ ಹಿರಿಯರಿಗೆ ಮತ್ತು ಗುರುಗಳಿಗೆ ಪ್ರಾರ್ಥಿಸುತ್ತ ಮಂಗಳಾಚರಣೆಯನ್ನು ಮಾಡಿ ಆಯಿತು. ಸಾಯಿಸಚ್ಚರಿತೆಯ ಬೀಜಗಳನ್ನು ಬಿತ್ತಿದಮೇಲೆ ಕೈಗೆತ್ತಿಕೊಂಡ ಯೋಜನೆಯ ಉದ್ದೇಶವನ್ನು ಪ್ರಾರಂಭಿಸೋಣ. ॥1॥ ನಾನು ಈಗ ಲೇಖಕನ ಅರ್ಹತೆ ಮತ್ತು ಸಂಕಲ್ಪವನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತೇನೆ. ಅದರಿಂದ ಶ್ರೋತೃಗಳು ಅನಾಯಾಸವಾಗಿ ಗ್ರಂಥದ ಒಳನೋಟವನ್ನು ಪಡೆಯುವರು. ॥2॥ ಮೊದಲನೆಯ ಅಧ್ಯಾಯದಲ್ಲಿ, ಗೋಧಿಯನ್ನು ಬೀಸಿ ಹಿಟ್ಟು ಮಾಡುವ ಮತ್ತು ಕಾಲರಾರೋಗವನ್ನು ತಡೆದ ಬಗ್ಗೆ ಹಳ್ಳಿಗರಿಗೆ ಆಶ್ಚರ್ಯ ಉಂಟುಮಾಡುವ ರೀತಿಯಲ್ಲಿ ತಿಳಿಸಲಾಯಿತು. ॥3॥ ಈ ರೀತಿ ಸಾಯಿಯ ಲೀಲೆಗಳು ಅವರ್ಣನೀಯವಾದುವು. ಅವುಗಳನ್ನು ಕೇಳಿದರೇನೇ ಮುದಗೊಳಿಸುತ್ತವೆ. ಆ ಸಂತೋಷವು ಪ್ರೀತಿಯ ಸಾಗರದಿಂದ ಉಕ್ಕಿಬಂದಿದೆ, ಕಾವ್ಯರೂಪವನ್ನು ಪಡೆದುಕೊಂಡಿದೆ. ॥4॥ ಆದುದರಿಂದ ಸಾಯಿಗೆ ನನ್ನ ಧನ್ಯವಾದ. ಭಕ್ತರಿಗೆ ಬೋಧಪ್ರದವಾದ ಅನುಭವಗಳನ್ನು ನನ್ನ ಕೈಲಾದಮಟ್ಟಿಗೆ ನೆನಪಿಸಿಕೊಂಡು ಬರೆಯಲು ಯೋಚಿಸಿದೆ. ಅವುಗಳು ಅವರ ಪಾಪಗಳನ್ನು ನಾಶಮಾಡುತ್ತವೆ. ॥5॥ ಈ ಉದ್ದೇಶದಿಂದಲೇ ಗೌರವಪೂರ್ವಕವಾಗಿ ಪವಿತ್ರತೆಯಿಂದ ಸಾಯಿಯ

ಈ ಕಥಾಸಂಕಲನವನ್ನು ಬರೆದಿದ್ದೇನೆ. ಅವು ಇಹದಲ್ಲೂ ಪರದಲ್ಲೂ ಆನಂದ ತರುವಂತಹವು. ॥6॥ ಸಂತರ ಜೀವನ ಧರ್ಮಮಾರ್ಗವನ್ನು ತೋರಿಸುತ್ತದೆ. ಅದು ಯಾವುದೇ ತರ್ಕಬದ್ಧ ಶಾಸ್ತ್ರವೂ ಅಲ್ಲ, ಕಾನೂನು ಸಹ ಅಲ್ಲ. ಸಂತರ ಅನುಗ್ರಹ ಪಡೆಯುವ ಪುಣ್ಯಪಡೆದಲ್ಲಿ ಅವನಿಗೆ ಯಾವುದೂ ಅಪರೂಪದ ಅಚ್ಚರಿಯಿಲ್ಲ. ॥7॥ ಆದುದರಿಂದ, ಈ ಆನಂದವನ್ನು ಹಂಚಿಕೊಳ್ಳುವಂತೆ ಶ್ರೋತೃಗಳನ್ನು ಪ್ರಾರ್ಥಿಸುತ್ತೇನೆ. ಯಾರು ಸತ್ಸಂಗದಲ್ಲಿ ನಿರತರೋ, ಯಾರು ಸಂತರ ಜೀವನದ ಕಥೆಗಳನ್ನು ಭಕ್ತಿಯಿಂದ ಓದುತ್ತಿರುವರೋ ಅವರು ಅತ್ಯಂತ ಅನುಗ್ರಹೀತ ಅದೃಷ್ಟವಂತ ವ್ಯಕ್ತಿಗಳು. ॥8॥ ನನ್ನ ಆತ್ಮೀಯ ಸ್ನೇಹಿತ, ಯಾರ ಜೊತೆಯಲ್ಲಿ ಹಗಲು-ರಾತ್ರಿ ಸಹವಾಸದಲ್ಲಿರುವೆನೋ ಅಂತಹ ದೀರ್ಘಕಾಲದ ಸ್ನೇಹಿತನ ಜೀವನಚರಿತ್ರೆಯನ್ನೇ ಬರೆಯಲು ಸಾಧ್ಯವಾಗುತ್ತಿಲ್ಲ. ಮತ್ತೆ ಒಬ್ಬ ಸಂತರ ಜೀವನ ಚರಿತ್ರೆಯನ್ನು ಹೇಗೆ ಬರೆಯಲಿ? ॥9॥ ನನ್ನ ಸ್ವಭಾವವನ್ನೇ ಪೂರ್ಣವಾಗಿ ನಾನು ಅರಿತಿಲ್ಲ. ಮತ್ತೆ ನಾನು ಒಬ್ಬ ಸಂತರ ಯೋಚನಾಲಹರಿಯನ್ನು ಚಾಚೂ ತಪ್ಪದೆ ಹೇಗೆ ವಿವರಿಸಲಿ? ॥10॥ ನಾಲ್ಕು ವೇದಗಳೇ ನಮ್ಮ ಅಂತರಾತ್ಮವನ್ನು ವರ್ಣಿಸಲಾಗದೆ ಮೌನವಾಗಿರುವಾಗ ನಾನು ನಿನ್ನ ಆತ್ಮದ ಸತ್ಯಸ್ವರೂಪವನ್ನು ಹೇಗೆ ಅರ್ಥಮಾಡಿಕೊಳ್ಳಲಿ? ॥11॥ ತಾನೇ ಸಂತನಾಗಬೇಕು. ಮತ್ತೆ ಸಂತರ ಸತ್ಯಸ್ವರೂಪವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಡಬೇಕು. ಆದುದರಿಂದ ಸಂತರ ವಿವರಣೆ ಮಾಡಲು ನನಗಿರುವ ಪರಿಮಿತಿಯನ್ನು ನಾನು ಆಗಲೇ ಅರಿತಿದ್ದೇನೆ. ॥12॥ ಸಪ್ತಸಾಗರಗಳ ನೀರನ್ನು ಅಳೆಯಬಹುದು. ಆಗಸವನ್ನು ಅಳತೆ ಮಾಡಬಹುದು. ಆದರೆ ಒಬ್ಬ ಸಂತನ ಜೀವನವನ್ನು ಬಿಂಬಿಸುವ ಕನ್ನಡಿಯು ಇಲ್ಲವೇ ಇಲ್ಲ. ॥13॥ ನಾನೊಬ್ಬ ಪರಿಗಣಿಸಲ್ಪಡದಿರುವ ವ್ಯಕ್ತಿ ಎಂದು ಅರಿತಿರುವೆ. ಆದರೆ ಬಾಬಾರವರ ಅಸಾಧಾರಣ ಶಕ್ತಿಯನ್ನು ಅರಿತಮೇಲೆ ತಡೆಯಲಾರದ ಭಾವನಾತ್ಮಕ ಗೀತಾ ತರಂಗಗಳು ಉಕ್ಕಿ ಬಂದವು. ॥14॥ ಜಯ! ಜಯ! ಸಾಯಿರಾಯ! ನೀನು ನಿರಾಶ್ರಿತರಿಗೆ ಅನಾಥರಿಗೆ ಆಶ್ರಿತನು. ನಿನ್ನ ಪ್ರೀತಿ ಅನಂತ ಮತ್ತು ಅವರ್ಣನೀಯ. ನನ್ನ ಮೇಲೆ ಕೃಪೆಮಾಡು, ನಾನು ನಿನ್ನ ದಾಸನು. ॥15॥ ಈ ರೀತಿ ಸೀಮಿತವಾದ ಬಲ ಸಧೃತೆಗಳಿಂದ ನಾನು ಈ ಕೃತಿ ರಚಿಸುವ ಸಾಹಸಕ್ಕೆ ಕೈಹಾಕಿದ್ದೇನೆ. ನನ್ನನ್ನು ಯಾರೂ ಮೂದಲಿಸದಂತೆ ಮಾಡು. ॥16॥ ಜ್ಞಾನೇಶ್ವರ ಮಹಾರಾಜರು ಹೇಳುತ್ತಾರೆ – ಯಾರು ಸಂತರ ಜೀವನ ಚರಿತ್ರೆಯನ್ನು ಬರೆಯುತ್ತಾರೋ; ಅವರು ದೇವರಿಂದ ಅನುಗ್ರಹೀತರಾಗಿದ್ದಾರೆ. ಹಾಗಿರುವಾಗ ನನಗೆ ಏಕೆ ಹೆದರಿಕೆ? ॥17॥ ಇದನ್ನು ಬರೆಯುವ ಸ್ಫೂರ್ತಿಯು ದೇವರಿಂದಲೇ. ನಾನು ದಡ್ಡನೂ, ಮೂರ್ಖನೂ ಆಗಿದ್ದೇನೆ. ತನ್ನ ಕೆಲಸವನ್ನು ಹೇಗೆ ಪೂರ್ಣಗೊಳಿಸಬಹುದೆಂದು ಅವನಿಗೇ ತಿಳಿದಿದೆ. ॥18॥ ಸಂತರಿಗೆ ಯಾವ ರೀತಿಯ ಸೇವೆ ಮಾಡಬೇಕೆಂದು ಭಕ್ತರು ಯೋಚಿಸುತ್ತಾರೋ ಅವುಗಳನ್ನು ಸಂತರು ತಾವೇ ಸ್ವೀಕರಿಸುತ್ತಾರೆ. ಭಕ್ತರು ಕೇವಲ ಅವರ ಕೈಯ ಉಪಕರಣಗಳು. ನಿಜವಾದ ಸ್ಫೂರ್ತಿಗೆ ಸಂತರೇ ಕಾರಣಕರ್ತರು. ॥19॥ ನಿಜವಾಗಿ ಸಾಯಿಯು ತಾನೇ ಈ

ಮೂರ್ಖನಿಂದ ತನ್ನ ಜೀವನ ಚರಿತ್ರೆಯನ್ನು ಬರೆಸುತ್ತಿದ್ದಾನೆ. ಅದರಲ್ಲಿಯೇ ಈ ಗ್ರಂಥದ ಮಹತ್ವವು ಅಡಗಿದೆ. ಆದರಿಂದ ಗೌರವ, ಆದರಗಳು ಹೊರಹೊಮ್ಮುತ್ತವೆ. ॥20॥ ತಪಸ್ವಿಗಳು, ಸಂತರು ಅಥವಾ ದೇವರು ತಮ್ಮ ಕಥೆಯನ್ನು ಬರೆಯಲು ಯಾರನ್ನು ಬೇಕಾದರೂ ಆರಿಸಬಹುದು. ಅವರನ್ನು ಅನುಗ್ರಹಿಸಬಹುದು. ॥21॥ ಶಕೆ 1700ರಲ್ಲಿ ಸಂತರು ಮಹೀಪತಿ ಎಂಬ ವ್ಯಕ್ತಿಗೆ ತಮಗೆ ಸೇವೆಮಾಡಲು ಪ್ರೋತ್ಸಾಹಿಸಿ ತಮ್ಮ ಜೀವನ ಚರಿತ್ರೆಯನ್ನು ಅವನಿಂದ ಬರೆಸಿದರು. ॥ 22 ॥ ಅದೇರೀತಿ, ಹದಿನೆಂಟುನೂರು ಶಕೆಯಲ್ಲಿ ಸಂತರು ದಾಸಗಣು ಎಂಬುವವರ ಸೇವೆಯನ್ನು ಸ್ವೀಕರಿಸಿ ಸಕಲರನ್ನೂ ಪಾವನಗೊಳಿಸುವ ಸಂತರ ಜೀವನ ಚರಿತ್ರೆಯನ್ನು ಬರೆಸಿದರು. ॥23॥ ಮಹೀಪತಿಯವರು ನಾಲ್ಕು ಗ್ರಂಥಗಳನ್ನು ರಚಿಸಿದ್ದಾರೆ. 'ಭಕ್ತವಿಜಯ' 'ಸಂತವಿಜಯ' 'ಭಕ್ತಲೀಲಾಮೃತ್' ಮತ್ತು 'ಸಂತಲೀಲಾಮೃತ್'. ಅದೇ ರೀತಿ ದಾಸಗಣುರವರು ಎರಡು ಅಂತಹ ಗ್ರಂಥಗಳನ್ನು ರಚಿಸಿದ್ದಾರೆ. ॥24॥ ಆ ಗ್ರಂಥಗಳಲ್ಲಿ ಒಂದು 'ಭಕ್ತಲೀಲಾಮೃತ್'. ಮತ್ತೊಂದು 'ಸಂತ ಕಥಾಮೃತ್'. ಈ ಎರಡು ಗ್ರಂಥಗಳಲ್ಲಿಯೂ ಆಧುನಿಕ ಕಾಲದ ಭಕ್ತರ ಮತ್ತು ಸಂತರ ಬಗ್ಗೆ ತಿಳಿದಿರುವಷ್ಟು ವಿಷಯಗಳನ್ನು ವಿವರಿಸಲಾಗಿದೆ. ॥25॥ ಶ್ರೀ ಸಾಯಿ ಕಥಾಮೃತವನ್ನು 'ಭಕ್ತಲೀಲಾಮೃತ್' ಗ್ರಂಥದಲ್ಲಿ ಮೂರು ಅಧ್ಯಾಯಗಳಲ್ಲಿ ವಿವರಿಸಿದ್ದಾರೆ. ಓದುಗರು ಅದನ್ನು ಅಲ್ಲಿಂದ ಓದಬೇಕು. ॥26॥ ಅದೇರೀತಿ, 'ಸಂತ ಕಥಾಮೃತ್' ಪುಸ್ತಕದಲ್ಲಿನ 57ನೆಯ ಅಧ್ಯಾಯದಲ್ಲಿ ಸಾಯಿಯವರು ಒಬ್ಬ ಭಕ್ತನಿಗೆ ಹೇಳಿದ ಬೋಧಪ್ರದವಾದ ಕತೆಯೂ ಇರುವುದು. ಅದನ್ನೂ ಸಹ ಓದುಗರು ಓದಬೇಕು. ॥27॥ ಅದಲ್ಲದೆ, ಸಾಯಿಯ ಲೀಲೆಗಳು ರಘುನಾಥ ಮತ್ತು ಸಾವಿತ್ರಿರವರ ಸ್ವಾನುಭವದಿಂದ ಹೊರಬಂದ 'ಭಜನಮಾಲಾ' ಎಂಬುದರಲ್ಲಿಯೂ ಕಾಣಸಿಗುತ್ತದೆ. ನಿಶ್ಚಯವಾಗಿ ಅವುಗಳು 'ಅಭಂಗ'ಗಳು ಮತ್ತು 'ಪದ'ಗಳು ಹಾಡಲು ಪ್ರೇರೇಪಿಸುತ್ತವೆ. ॥28॥ 'ಭಜನಮಾಲಾ' ಗ್ರಂಥಕ್ಕೆ ಸಾಯಿಯವರ ಮಗು, ಹರಿಸೀತಾರಾಮ ದೀಕ್ಷಿತ್‌ರವರು ಪ್ರೀತಿಯಿಂದ ಬರೆದ ಮುನ್ನುಡಿಯಲ್ಲಿ ಸಾಯಿಯ ಜೀವನದ ಅಮೃತ ಕಥಾಧಾರೆಯನ್ನು ಹರಿಸಿದ್ದಾರೆ. ಅದು ಬಾಯಾರಿದ ಚಕೋರಪಕ್ಷಿಗೆ ಜಲಧಾರೆ ಸುರಿದಂತಿದೆ. ಶ್ರೋತೃಗಳು ಸಹ ಅವುಗಳನ್ನು ಗೌರವಪೂರ್ವಕವಾಗಿ ಸ್ವೀಕರಿಸಬೇಕು. ॥29॥ ದಾಸಗಣುರವರು ರಚಿಸಿದ ವಿವಿಧ ಕವಿತೆಗಳು ಭಾವಪೂರ್ವಕವಾಗಿವೆ. ಬಾಬಾರವರ ಲೀಲೆಗಳನ್ನು ಓದುತ್ತಿದ್ದರೆ ಶ್ರೋತೃಗಳ ಹೃದಯಕ್ಕೆ ಮಹದಾನಂದವನ್ನುಂಟುಮಾಡುತ್ತದೆ. ॥30॥ ಅದೇ ರೀತಿ ಗುಜರಾತಿ ಭಕ್ತರಿಗೆ, ಅಮೀದಾಸ ಭವಾನೀದಾಸ ಮೆಹತ ಎಂಬ ಭಕ್ತನು ಬಹಳ ಪ್ರೇಮಪೂರ್ವಕವಾಗಿ ಅನೇಕ ಪವಾಡಗಳ ಕತೆಗಳನ್ನು ಬರೆದಿರುತ್ತಾನೆ. ॥31॥ ಅದಲ್ಲದೆ, ಕೆಲವು ಅಸೀಮ ಭಕ್ತರು 'ಪೂಣೆ' ನಗರದಿಂದ 'ಸಾಯಿಪ್ರಭ' ಎಂಬ ಹೆಸರಿನಿಂದ ಬಾಬಾರವರ ಅನೇಕ ಕತೆಗಳನ್ನು ಪ್ರಕಟಿಸಿರುತ್ತಾರೆ. ॥32॥ ಅಂತಹ ಕತೆಗಳು ಇರುವಾಗ, ಈ ಗ್ರಂಥದ ಅವಶ್ಯಕತೆ ಎಲ್ಲಿತ್ತು? ಈ ರೀತಿಯ ಸಂಶಯ ಶ್ರೋತೃಗಳ ಮನಸ್ಸಿನಲ್ಲಿ ಉಂಟಾಗಬಹುದು. ಆದ್ದರಿಂದ ದಯಮಾಡಿ ಈ ವಿವರಣೆಯನ್ನು

ಗಮನವಿಟ್ಟು ಕೇಳಿರಿ. ॥33॥ ಸಾಯಿಯ ಜೀವನ ಚರಿತ್ರೆಯು ಒಂದು ಮಹಾಸಾಗರವಾಗಿದೆ. ಅದಕ್ಕೆ ಅಂತ್ಯವಿಲ್ಲ. ಅದು ಅನರ್ಘ್ಯ ಮುತ್ತುಗಳಿಂದ ತುಂಬಿದೆ. ನಾನೊಬ್ಬ ಕೇವಲ ಸಣ್ಣ ಹಕ್ಕಿ[7]. ಸಾಗರವನ್ನು ಕುಡಿದು ಹೇಗೆ ಖಾಲಿ ಮಾಡಲಿ? ಅದು ಎಂದಿಗಾದರೂ ಸಾಧ್ಯವೇ? ॥34॥ ಅದೇ ರೀತಿ, ಸಾಯಿಯ ಜೀವನ ಅಗಾಧವಾಗಿದೆ. ಅದನ್ನು ಪೂರ್ತಿಯಾಗಿ ವಿವರಿಸಲು ಸಾಧ್ಯವಿಲ್ಲ. ಆದ್ದರಿಂದ ನಾನು ಎಷ್ಟು ಸಾಧ್ಯವೋ ಅಷ್ಟು ಮಾಡುವೆ. ದಯಮಾಡಿ ಅದರಿಂದಲೇ ತೃಪ್ತಿಪಡುವುದು. ॥35॥ ಅಪರಿಮಿತವಾದ, ಅಸಾಮಾನ್ಯವಾದ ಸಾಯಿಯ ಕತೆಗಳು ಈ ಭವಸಾಗರದಲ್ಲಿ ಮುಳುಗಿ ಹೋದವರಿಗೆ ಶಾಂತಿಯನ್ನು ನೀಡುತ್ತದೆ. ಶ್ರೋತೃಗಳು ಅವುಗಳನ್ನು ಕೇಳಿ ಆನಂದಭರಿತರಾಗುತ್ತಾರೆ ಮತ್ತು ತನ್ನ ಭಕ್ತರ ಮನಸ್ಸಿಗೆ ಶಾಂತಿಯನ್ನುಂಟುಮಾಡುತ್ತದೆ. ॥36॥ ಬಾಬಾರವರು ಅನೇಕ ಕತೆಗಳನ್ನು ಹೇಳುತ್ತಿದ್ದರು. ಅವುಗಳಲ್ಲಿ ಜನಸಾಮಾನ್ಯರ ನಿತ್ಯ ಅನುಭವಗಳ ಬಗ್ಗೆ ಪ್ರಾಸಂಗಿಕ ಸಲಹೆ ಹಾಗೂ ಅವರವರ ಕರ್ಮಗಳ[8] ರಹಸ್ಯಗಳನ್ನು ಒಳಗೊಂಡಿರುತ್ತಿದ್ದವು. ॥37॥ ದೈವಿಕ ಗ್ರಂಥಗಳಾದ ವೇದಗಳು ಎಲ್ಲರಿಗೂ ತಿಳಿದ ವಿಷಯ. ಅವುಗಳಿಂದ ಅನೇಕ ಅಸಾಧಾರಣ ಸಾಹಿತ್ಯಗಳು ಹೊರಬಂದಿವೆ. ಬಾಬಾರವರು ಇಂತಹ ಅನೇಕ ಅರ್ಥಗರ್ಭಿತವಾದ, ಮಧುರವಾದ, ಲೆಕ್ಕವಿಲ್ಲದಷ್ಟು ಕತೆಗಳನ್ನು ಹೇಳುತ್ತಿದ್ದರು. ॥38॥ ಅವುಗಳನ್ನು ಗಮನವಿಟ್ಟು ಆಲಿಸಿದಾಗ,ಇತರ ಸಂತೋಷಗಳು ತುಚ್ಛವಾಗುತ್ತವೆ. ಹಸಿವೆ, ಬಾಯಾರಿಕೆಗಳು ಮಾಯವಾಗುತ್ತವೆ. ಅಂತರಾಳದಿಂದ ಆಳವಾದ ತೃಪ್ತಿ ಉಂಟಾಗುತ್ತದೆ. ॥39॥ ಕೆಲವರು ಬ್ರಹ್ಮತ್ವದ ಸಾರದಲ್ಲಿ ಲೀನವಾಗುತ್ತಾರೆ. ಕೆಲವರು ಅಷ್ಟಾಂಗ ಯೋಗದಲ್ಲಿ[10] ಸಿದ್ಧರಾಗುತ್ತಾರೆ. ಕೆಲವರು ಸಮಾಧಿಯ ಪೂರ್ಣತ್ವದಲ್ಲಿ ಒಂದಾಗುತ್ತಾರೆ. ಈ ಅನುಭವಗಳು ಕತೆಗಳನ್ನು ಆಲಿಸಿದಾಗ ಉಂಟಾಗುತ್ತವೆ. ॥40॥ ಕರ್ಮಬಂಧನವು[11] ಪೂರ್ಣವಾಗಿ ಕಳಚಿಕೊಳ್ಳುತ್ತದೆ. ಮನಸ್ಸು ಪ್ರಕಾಶಮಾನವಾಗುತ್ತದೆ ಮತ್ತು ಬ್ರಹ್ಮಾನಂದವನ್ನು ಎಲ್ಲಾ ಶ್ರೋತೃಗಳೂ ಅನುಭವಿಸಬಹುದು. ॥41॥ ಆದುದರಿಂದ, ಈ ಅಮೂಲ್ಯವಾದ ಕತೆಗಳ ಮಾಲೆಯನ್ನು ಹೆಣೆಯಲು ಅತ್ಯಂತ ಉತ್ಸಾಹ ಹಾಗೂ ಮಹದಾಸೆ ಉಂಟಾಗಿದೆ. ಇದನ್ನು ಅತ್ಯಂತ ಉತ್ತಮವಾದ ಉಪಾಸನೆ ಎಂದು ನಂಬಿದ್ದೇನೆ. ॥42॥ ಕಿವಿಗಳ ಮೇಲೆ ಕೆಲವೇ ಪದಗಳು ಬಿದ್ದಲ್ಲಿ ಆಜೀವಪರ್ಯಂತದ ದುರಾದೃಷ್ಟಗಳು ಮಾಯವಾಗುತ್ತವೆ. ಈ ಪೂರ್ಣ ಕತೆಯನ್ನುಆದರದಿಂದ ಶ್ರದ್ಧಾಪೂರ್ವಕವಾಗಿ ಕೇಳಿದಲ್ಲಿ ಈ ಭವಸಾಗರವನ್ನು ದಾಟಬಹುದು. ॥43॥ ಅವನು ನನ್ನ ಕೈಯನ್ನು ಹಿಡಿದು ಲೇಖನಿಯನ್ನಾಗಿ ಮಾಡುತ್ತಾನೆ, ಮತ್ತು ಬರೆಸುತ್ತಾನೆ. ನಾನು ಹೆಸರಿಗಷ್ಟೇ ಅದರ ಕರ್ತೃ. ಅವನ ಬರವಣಿಗೆಗೆ ನಾನು ಕೇವಲ ನಿಮಿತ್ತಮಾತ್ರ. ॥44॥ ಬಾಬಾರವರ ಲೀಲೆಗಳನ್ನು ಅವಲೋಕಿಸುತ್ತ, ವರ್ಷಗಳಮೇಲೆ ವರ್ಷಗಳು ಕಳೆದಂತೆ ಬಾಬಾರವರ ಕತೆಗಳನ್ನು ಅವರ ಪ್ರೀತಿಯ ಸರಳ ಭಕ್ತರಿಗಾಗಿ ಸಂಗ್ರಹಿಸುವುದೇ ಒಂದು ಕೆಲಸವಾಯಿತು. ॥45॥ ಬಾಬಾರವರ ದರ್ಶನದಿಂದ ಯಾರ ಕಣ್ಣುಗಳಿಗೆ ತೃಪ್ತಿ ಉಂಟಾಗುವುದಿಲ್ಲವೋ, ಅವರಿಗೆ ಬಾಬಾರವರ ಕತೆಗಳ ಶ್ರವಣವು ಪುಣ್ಯಕರವು.

ಪರಿಶುದ್ಧತೆಯನ್ನು ನೀಡುವಂತಹದೂ ಆಗಿದೆ. ॥46॥ ಈ ಗ್ರಂಥವನ್ನು ಓದಲು ಇಚ್ಛಿಸುವ ಪುಣ್ಯವಂತರು ಸದಾ ಸಂತೋಷ, ಆನಂದ ಮತ್ತು ತೃಪ್ತಿಯಿಂದ ಕೂಡಿರುತ್ತಾರೆ. ॥47॥ ಈ ಯೋಚನೆಗಳು ನನ್ನ ಮನದಲ್ಲಿ ಮೂಡಿದಾಗ ನಾನು ಮಾಧವ ರಾವ್[12] ಅವರಿಗೆ ಇದರ ಬಗ್ಗೆ ತಿಳಿಸಿದೆ. ಆದರೆ ಅವುಗಳನ್ನು ನಾನು ಹೇಗೆ ಸಾಧಿಸಬಲ್ಲೆ ಎಂಬುದರ ಬಗ್ಗೆ ಸಂಶಯ ಹುಟ್ಟಿತು. ॥48॥ ನನಗೆ 60 ವರ್ಷಗಳು ಕಳೆದಿವೆ. ಬುದ್ಧಿಯು ಅರಳು-ಮರಳು ಆಗಿದೆ ಮತ್ತು ದೈಹಿಕ ಕುಂದಿನಿಂದಲೂ ನನ್ನ ಪ್ರಯತ್ನಗಳು ಮುದುಕನ ಪ್ರಯತ್ನಗಳಂತೆ ಅಂತ್ಯಗೊಳ್ಳಬಹುದು. ॥49॥ ಸಾಯಿಯ ಪ್ರೀತಿಗಾಗಿ ನನ್ನ ಪ್ರಯತ್ನಗಳೆಲ್ಲ ಇರಲಿ, ನನಗೆ ಇದನ್ನು ಅನುಭವಿಸಲು ಸಾಧ್ಯವಾಗಬಹುದು. ಇಲ್ಲದಿದ್ದಲ್ಲಿ ಇವೆಲ್ಲ ಅಪ್ರಯೋಜಕ. ಆದ್ದರಿಂದಲೇ ಈ ಪ್ರಯತ್ನ. ॥ 50 ॥ ಹಗಲು ಇರುಳು ದಿವ್ಯ ಅನುಭವಗಳನ್ನು ಅನುಭವಿಸಿದ ನಾನು ಇದರ ಬಗ್ಗೆ ಮಾಹಿತಿಯನ್ನು ಬರೆಯಲು ನಿರ್ಧರಿಸಿದೆ. ಅದರ ಅಧ್ಯಯನದಿಂದ ಮನಸ್ಸು ಶಾಂತಿ ಮತ್ತು ವಿಶ್ರಾಂತಿಯನ್ನು ಪಡೆಯುತ್ತದೆ. ॥51॥ ಸ್ವಯಂ ವೇದ್ಯವಾದ ಮತ್ತು ಸ್ವಸ್ವರೂಪ ಸ್ಥಿತಿಯ ಆಧಾರದ ಮೇಲೆ ಹೊರಬಂದ ಸಾಯಿಯ ವಚನಗಳನ್ನು ಯಾವುದೇ ಬದಲಾವಣೆಗಳಿಲ್ಲದೆ ಶ್ರೋತೃಗಳ ಮುಂದಿಡಲು ಯೋಚಿಸಿದೆನು. ॥52॥ ಬಾಬಾರವರು ಅನೇಕ ಉಪಮೆಗಳನ್ನು ತಿಳಿಸಿ ಭಕ್ತಿಮಾರ್ಗದಲ್ಲಿ ಅನೇಕರನ್ನು ಕರೆದೊಯ್ದಿದ್ದಾರೆ. ಎಲ್ಲವನ್ನೂ ಸಂಗ್ರಹಿಸಿದಲ್ಲಿ ಅದು ಸಾಯಿ ಧರ್ಮದ ಕೃತಿಯಾಗುತ್ತದೆ. ॥53॥ ಯಾರು ಈ ಕತೆಗಳನ್ನು ಹೇಳುತ್ತಾರೋ, ಯಾರು ಇವುಗಳನ್ನು ಗೌರವದಿಂದ ಕೇಳುತ್ತಾರೋ ಇಬ್ಬರೂ ಶಾಶ್ವತವಾದ ಸುಖ ಮತ್ತು ಶಾಂತಿಗಳನ್ನು ಪಡೆಯುತ್ತಾರೆ. ॥54॥ ಬಾಬಾರವರು ಹೇಳಿದ ಕತೆಗಳನ್ನು ಕೇಳುತ್ತಲೇ ತಮ್ಮ ದೇಹದ ವ್ಯಾಧಿಗಳನ್ನೆಲ್ಲ ಮರೆಯುತ್ತಾರೆ. ಅವುಗಳನ್ನು ಶ್ರದ್ಧೆಯಿಂದ ಮನನ ಮಾಡಿದಲ್ಲಿ ಸ್ವಾಭಾವಿಕವಾಗಿಯೇ ಬಂಧನಗಳಿಂದ ಮುಕ್ತರಾಗುತ್ತಾರೆ. ॥55॥ ಸಾಯಿಯವರ ಬಾಯಿಯಿಂದಲೇ ಕೇಳಿದ ಕತೆಗಳು ಅಮೃತಕ್ಕಿಂತಲೂ ಮಧುರವಾಗಿವೆ. ಅವುಗಳನ್ನು ಕೇಳಿ ಶ್ರೋತೃಗಳು ಪರಮಾನಂದದಿಂದ ಕುಣಿಯಲಿದ್ದಾರೆ. ಅವುಗಳ ಮಾಧುರ್ಯವನ್ನು ಹೇಗೆ ವರ್ಣಿಸಲಿ? ॥56॥ ಆ ಕತೆಗಳನ್ನು ಯಾವುದೇ ಉದ್ದೇಶವಿಲ್ಲದೆಯೇ ಗುಣಗಾನಮಾಡುತ್ತಾರೋ, ಹಾಡುತ್ತಾರೋ ಅಂಥಹವರ ಚರಣಧೂಳಿಯಲ್ಲಿ ಹೊರಳಾಡಿದರೆ ಮೋಕ್ಷವನ್ನು[13] ಪಡೆಯಲು ನನಗೆ ಸಾಧ್ಯವಾಗುತ್ತದೆ ಎಂಬುದು ನನ್ನ ಅನಿಸಿಕೆ. ॥57॥ ಆ ಕತೆಗಳ ವಿಶೇಷ ನಿರೂಪಣೆಯಲ್ಲಿ ನಿಶ್ಚಿತವಾದ ಪದಗಳ ಜೋಡಣೆಯು ಶ್ರೋತೃಗಳನ್ನು ಪೂರ್ಣವಾಗಿ ಅವನಲ್ಲಿ ಲೀನವಾಗಿಸಿ ಪೂರ್ಣಾನಂದದ ಅನುಭವವನ್ನು ದಯಪಾಲಿಸುತ್ತದೆ. ॥58॥ ಆ ಕತೆಗಳನ್ನು ಆಲಿಸಲು ಕಿವಿಗಳು ಕಾತರಗೊಳ್ಳುವ ರೀತಿಯಲ್ಲಿ ಅಥವಾ ಕಣ್ಣುಗಳು ದರ್ಶನಕ್ಕಾಗಿ[14] ಹಾತೊರೆಯುವ ರೀತಿಯಲ್ಲಿ ಮನಸ್ಸು ಸಹ ಏಕಾಗ್ರತೆಗಾಗಿ ಕಾತರಗೊಳ್ಳುತ್ತದೆ ಮತ್ತು ಸುಲಭವಾಗಿ ದಿವ್ಯಾನಂದದ ಸಾಗರದಲ್ಲಿ ಮುಳುಗುತ್ತದೆ. ॥59॥ ಗುರುಮಾತೆಯು[15] ನನ್ನ ತಾಯಿ, ಮತ್ತು ಆಕೆಯ ಬಗೆಗಿನ ಕತೆಗಳನ್ನು ಬಾಯಿಯಿಂದ ಬಾಯಿಗೆ ಕೇಳಿದಲ್ಲಿ ಅವುಗಳನ್ನು ಹೃದಯದಲ್ಲಿ ಆದರದಿಂದ ಪೋಷಿಸಬೇಕು. ॥60॥ ಅದೇ

ಕತೆಯನ್ನು, ಮತ್ತೆ ಮತ್ತೆ ಮರುಕಳಿಸಿ ನಮಗೆ ಸಾಧ್ಯವಾದಷ್ಟು ಅರಗಿಸಿಕೊಂಡು ಅವುಗಳನ್ನು ಪ್ರೀತಿಯೆಂಬ ಬಂಧನದಿಂದ ಬಂಧಿಸಿ ನಂತರ ನಮ್ಮನಮ್ಮಲ್ಲಿ ಹಂಚುತ್ತೇವೆ. ॥61॥ ಈ ಗ್ರಂಥದಲ್ಲಿ ನಾನು ಸ್ವಂತದ್ದಾಗಿ ಏನನ್ನೂ ಬರೆದಿಲ್ಲ. ಇದೆಲ್ಲವೂ ಸಾಯಿನಾಥನಪ್ರೇರಣೆಯೇ. ನಾನು ಏನನ್ನು ಹೇಳಬೇಕೆಂದು ಅವನು ಇಚ್ಛಿಸುತ್ತಾನೋ, ಅದನ್ನೇ ನಾನು ತಿಳಿಸುವಂತೆ ಮಾಡುತ್ತಾನೆ. ॥62॥ 'ನಾನು ಹೇಳುತ್ತೇನೆ' ಎಂಬುದನ್ನು ಮರೆತಿದ್ದೇನೆ. ಸಾಯಿ ತಾನೇ ಸರಪಳಿಗಳಿಂದ ನನ್ನನ್ನು ಆಡಿಸುತ್ತಿದ್ದಾನೆ. ಅವನೇ ನನ್ನ ಮೂಲಕ ಮಾತನಾಡಿಸುತ್ತಿದ್ದಾನೆ. ಇನ್ನು 'ನಾನು ಹೇಳುತ್ತಿದ್ದೇನೆ' ಎಂದು ಹೇಳಲು ನಾನು ಯಾರು? ॥63॥ ಯಾರು 'ಅಹಂ'ಭಾವವನ್ನು ಅವನ ಚರಣಗಳಲ್ಲಿ ಸಂಪೂರ್ಣವಾಗಿ ಅರ್ಪಿಸಿದ್ದಾರೋ ಅವರಿಗೆ ಪರಮಾನಂದವು ದೊರೆಯುತ್ತದೆ. 'ಅಹಂ'ಭಾವ ನಾಶವಾದಕೂಡಲೇ ಪ್ರಾಪಂಚಿಕ ಜೀವನವೆಲ್ಲವೂ ಆನಂದಮಯವಾಗುತ್ತದೆ. ॥64॥ ನನಗೆ ಯೋಚನೆಗಳು ಮೂಡಿಬಂದಾಗ, ಬಾಬಾರವರನ್ನು ಕೇಳುವ ಅವಕಾಶವೂ ಇರಲಿಲ್ಲ, ಕೇಳುವ ಧೈರ್ಯವೂ ಬರಲಿಲ್ಲ. ಮಸೀದಿಯ ಮೆಟ್ಟಲು ಹತ್ತಿ ಬಂದ ಮಾಧವರಾವ್ ಹತ್ತಿರ ಅದನ್ನು ಹೇಳಿದೆ. ॥65॥ ಅದೇ ಸಮಯದಲ್ಲಿ ಸುತ್ತಮುತ್ತಲು ಯಾರೂ ಇಲ್ಲದ್ದನ್ನು ನೋಡಿಕೊಂಡು ಮಾಧವರಾವ್ ಬಾಬಾರವರನ್ನು ಕೇಳುವ ಅವಕಾಶ ಪಡೆದನು. ॥66॥ "ಬಾಬಾ, ಅಣ್ಣಾ ಸಾಹೇಬನಿಗೆ ನಿಮ್ಮ ಜೀವನ ಚರಿತ್ರೆಯನ್ನು ಬರೆಯುವ ಮನಸ್ಸಾಗಿದೆ. ನೀವು ಒಪ್ಪಿಗೆ ನೀಡಿದಲ್ಲಿ ತನಗೆ ಸಾಧ್ಯವಾದಷ್ಟು ಬರೆಯುವುದಾಗಿ ಹೇಳುತ್ತಿದ್ದಾನೆ. ॥67॥ "ನಾನೊಬ್ಬ ಫಕೀರ. ಬಾಗಿಲಿಂದ ಬಾಗಿಲಿಗೆ ಭಿಕ್ಷೆ ಬೇಡುತ್ತ ಅಲೆದಾಡುವವನು. ಭಾಕ್ರಿ(ರೊಟ್ಟಿ)ಯನ್ನು ತರಕಾರಿ ಇದ್ದೋ ಇಲ್ಲದೆಯೋ ತಿನ್ನುತ್ತ ದಿನಗಳೆಯುವವನು. ಹಾಗಿರುವ ನನ್ನ ಜೀವನಚರಿತ್ರೆ ಏಕೆ? ॥68॥ "ಅದು ಅಸಂಬದ್ಧವಾಗುತ್ತದೆ." ಈ ರೀತಿ ಈ ರತ್ನದ ಬಗ್ಗೆ ಹೇಳಬೇಡಿ. ಅದನ್ನು ಅಸಾಮಾನ್ಯವಾದ ಆಭರಣವನ್ನಾಗಿ ಮಾಡಬೇಕು. ॥69॥ "ಅದು ಹೇಗಾದರೂ ಆಗಲಿ. ನಿಮ್ಮ ಅನುಮತಿ ಮಾತ್ರ ಬಹಳ ಮುಖ್ಯವಾದುದು. ತಾವು ಸಹಕಾರ ನೀಡಿದಲ್ಲಿ ಅವನು ಬರೆಯುತ್ತಾನೆ. ಅಥವಾ ನಿಮ್ಮ ಅನುಗ್ರಹವು ಅವನ ಮೂಲಕ ಬರೆಸುತ್ತದೆ, ಮತ್ತು ಎಲ್ಲ ದುಷ್ಟಶಕ್ತಿಗಳನ್ನೂ ನಿವಾರಿಸುತ್ತದೆ. ॥70॥ "ಸಂತರ ಆಶೀರ್ವಾದಗಳಿಂದ ಮಾತ್ರ ಗ್ರಂಥ ರಚನೆಯನ್ನು ಪ್ರಾರಂಭಿಸಬಹುದು. ನಿಮ್ಮ ಅನುಗ್ರಹವಿಲ್ಲದೆ ಬರವಣಿಗೆಯು ಸುಲಲಿತವಾಗಿ ಸಾಗುವುದಿಲ್ಲ." ॥71॥ ನನ್ನ ಅಂತರಂಗದ ಅಭಿಲಾಷೆಯನ್ನು ಅರಿತು ಸಾಯಿಸಮರ್ಥರಲ್ಲಿ ಕರುಣೆ ಉಕ್ಕಿಬಂದಿತು ಮತ್ತು ಹೇಳಿದರು, "ಅವನ ಆಸೆ ನೆರವೇರುತ್ತೆ". ನಾನು ನನ್ನ ಮಸ್ತಕವನ್ನು ಅವರ ಚರಣಗಳಲ್ಲಿ ಇಟ್ಟೆನು. ॥72॥ ಸಾಯಿಯು ಈ ಎಲ್ಲಾ ವಿಧಿಗಳ ಉಪಾಸನೆ ಹಾಗೂ ದೈವಶ್ರದ್ಧೆಗಳಲ್ಲಿ ಪರಿಣತರು ಮತ್ತು ಎಲ್ಲಾ ಭಕ್ತರ ರಕ್ಷಕರೂ ಹೌದು. ಅವರು ನನಗೆ 'ಉದಿಯ'[17] ಪ್ರಸಾದವನ್ನು ಕೊಟ್ಟು ವರಪ್ರದಾಯಕ ಹಸ್ತವನ್ನು ನನ್ನ ತಲೆಯಮೇಲೆ ಇಟ್ಟರು. ॥73॥ ಮಾಧವರಾವ್‌ನ ಪ್ರಾರ್ಥನೆಯನ್ನು ಆಲಿಸಿದ ಮೇಲೆ ಸಾಯಿಯು ನನ್ನ ಮೇಲೆ ದಯೆತೋರಿ ನನ್ನ ಚಂಚಲವಾದ ಮನಸ್ಸನ್ನು ಪರಿಶುದ್ಧಗೊಳಿಸಿ

ನನ್ನಲ್ಲಿ ಧೈರ್ಯವನ್ನು ತುಂಬಿದರು. ॥74॥ ನನ್ನ ಆಸೆಯನ್ನು ಅರಿತನಂತರ ನನಗೆ ಮುಂದುವರೆಯಲು ಅನುಮತಿ ನೀಡುತ್ತ ಹೇಳಿದರು – "ಒಳ್ಳೆಯ ಕತೆಗಳನ್ನು, ಘಟನೆಗಳನ್ನು ಮತ್ತು ಅನುಭವಗಳನ್ನು ಸಂಗ್ರಹಿಸು. ॥75॥ "ಎಲ್ಲವನ್ನೂ ದಾಖಲಿಸಿದರೆ ಒಳ್ಳೆಯದು. ನನ್ನ ಮನಃಪೂರ್ವಕ ಪ್ರೋತ್ಸಾಹ ಇದೆ. ಲೇಖಕ ಕೇವಲ ನಿಮಿತ್ತ ಮಾತ್ರ, ನಾನೇ ಸ್ವತಃ ಬರೆಯುತ್ತೇನೆ. ॥76॥ "ನನ್ನ ಕತೆಯನ್ನು ನಾನೇ ಸ್ವತಃ ಬರೆಯುವೆ. ಭಕ್ತರ ಇಚ್ಛೆಗಳನ್ನು ಪೂರೈಸಬೇಕಾಗುತ್ತದೆ. ಅದರಿಂದ ನಿನ್ನ 'ಅಹಂ'ಭಾವವನ್ನು ಅಳಿಸಿ ನನ್ನ ಚರಣಗಳಲ್ಲಿ ಹಾಕಿಕೊಳ್ಳುತ್ತೇನೆ. ॥77॥ ತನ್ನ ಜೀವನದಲ್ಲಿ ಈ ರೀತಿ ಜೀವಿಸುವವನಿಗೆ ಸಂಪೂರ್ಣ ಸಹಕಾರ ನೀಡುತ್ತೇನೆ. ಅವನು ಜೀವನ ಚರಿತ್ರೆಯನ್ನು ರಚಿಸುವುದಷ್ಟಕ್ಕೇ ಅಲ್ಲ ಅವನ ಮನೆಯಲ್ಲಿ ವಾಸಮಾಡಿ ಅವನ ಸೇವೆ ಮಾಡುತ್ತೇನೆ. ॥78॥ "'ಅಹಂ'ಭಾವವು ಕಡಿಮೆಯಾಗಿ, ಕೊನೆಯಲ್ಲಿ ಪೂರ್ಣವಾಗಿ ನಾಶವಾದಾಗ, ನಾನು ಅವನಲ್ಲಿ ನೆಲಸುತ್ತೇನೆ ಮತ್ತು ನಾನೇ ಸ್ವತಃ ಕೈಗಳಿಂದ ಬರೆಯುತ್ತೇನೆ." ॥79॥ ಈ ಪ್ರಮಾಣ ವಚನವು ಈ ದೃಢತೆಯಿಂದ ಪ್ರಾರಬ್ಧವಾಯಿತು. ಯಾವುದೇ ಆಲೋಚನೆಯು, ಬರವಣಿಗೆಯು, ಅವನಿಂದಲೇ ರಚಿಸಲ್ಪಟ್ಟಿತು. ಲೇಖಕರು ಕೇವಲ ನಿಮಿತ್ತಮಾತ್ರ. ॥80॥ "ನೀನು ಮನೆಯಲ್ಲಿರು ಅಥವಾ ಹೊರಗಿರು, ದಾಖಲೆಗಳನ್ನು ಮಾತ್ರ ಖಂಡಿತವಾಗಿ ಇಟ್ಟುಕೊ. ಆಗಾಗ್ಗೆ ಅವುಗಳನ್ನು ನೆನಪಿಸಿಕೊ. ನಿನಗೆ ಶಾಂತಿ ದೊರೆಯುತ್ತದೆ. ॥81॥ "ನೀನು ನನ್ನ ಕತೆಗಳನ್ನು ಕೇಳಿದಾಗ, ಹೇಳಿದಾಗ ಮತ್ತು ಅವುಗಳ ಬಗ್ಗೆ ಮನನ ಮಾಡಿದಾಗಲೂ ನನ್ನ ಬಗ್ಗೆ ಭಕ್ತಿ ಹುಟ್ಟಿ ಅಜ್ಞಾನವು ಪೂರ್ಣವಾಗಿ ನಾಶವಾಗಿತ್ತದೆ. ॥82॥ "ಭಕ್ತಿ ಇದ್ದಲ್ಲಿ ಶ್ರದ್ಧೆ ಉಂಟಾಗುತ್ತದೆ. ಆಗ ನಾನು ಸದಾ ಶಕ್ತಿವಂತನಾಗಿ ಇರುತ್ತೇನೆ. ಅದರ ಬಗ್ಗೆ ಸಂಶಯ ಬೇಡ. ನನ್ನನ್ನು ಪಡೆಯಲು ಅಸಾಧ್ಯವಾಗಿರುತ್ತದೆ. ॥83॥ "ಈ ಕತೆಯನ್ನು ಮನಸ್ಸಿಟ್ಟು ಕೇಳಿದ ಶ್ರೋತೃಗಳಲ್ಲಿ ಅಸೀಮ ಶ್ರದ್ಧೆಯು ಜಾಗೃತವಾಗುತ್ತದೆ. ಮತ್ತುಅವರು ಅತಿ ಸುಲಭವಾಗಿ ಬ್ರಹ್ಮಾನಂದವನ್ನು ಅನುಭವಿಸುತ್ತಾರೆ. ಮತ್ತು ಶಾಶ್ವತ ಆನಂದದ ಸ್ಥಿತಿಯನ್ನು ಪಡೆಯುತ್ತಾರೆ. ॥84॥ "ಭಕ್ತರು ನಿಶ್ಚಯವಾಗಿ ಆತ್ಮಸಾಕ್ಷಾತ್ಕಾರವನ್ನು ಪಡೆಯುತ್ತಾರೆ. ಆತ್ಮವು ಬ್ರಹ್ಮತ್ವದಲ್ಲಿ ಒಂದಾಗಿರುತ್ತದೆ. ನಿರ್ಗುಣ, ನಿರಾಕಾರ ಪರಬ್ರಹ್ಮನನ್ನು ಅರಿತು ಜೀವಾತ್ಮ ಬ್ರಹ್ಮತ್ವದಲ್ಲಿ ಐಕ್ಯವಾಗುತ್ತದೆ. ॥85॥ "ಇದೇ ನನ್ನ ಕತೆಗಳ ಉದ್ದೇಶ. ಮತ್ತೇನನ್ನು ಇಚ್ಛಿಸಬಹುದು? ಇದು ವೇದಗಳ ಗುರಿಯೂ ಆಗಿದೆ. ಇದರಿಂದಾಗಿ ಭಕ್ತರು ಜ್ಞಾನಸಂಪನ್ನರಾಗುತ್ತಾರೆ. ॥86॥ ವಾದ-ವಿವಾದಗಳ ಬುದ್ಧಿ ಇರುವಲ್ಲಿ ಅವಿದ್ಯೆ ಮತ್ತು ಮಾಯೆ ಸಮೃದ್ಧಿಯಾಗಿರುತ್ತದೆ. ಸ್ವಹಿತದೃಷ್ಟಿ-ಸ್ವಾರ್ಥ ಇರುತ್ತವೆ. ಸದಾ ಕುತರ್ಕಿಗಳೂ ದುರ್ಬುದ್ಧಿಯುಳ್ಳವರೂ ಆಗಿರುತ್ತಾರೆ. ॥87॥ "ಅಂತಹ ವ್ಯಕ್ತಿಯು ಆತ್ಮಜ್ಞಾನಕ್ಕೆ ಅರ್ಹನಲ್ಲ, ಅಜ್ಞಾನವು ಅವನನ್ನು ತನ್ನ ಹಿಡಿತದಲ್ಲಿಟ್ಟಿರುತ್ತದೆ. ಅವನಿಗೆ ಈ ಜಗತ್ತಿನಲ್ಲಾಗಲೀ ಇನ್ನು ಮುಂದಾಗಲೀ ಮತ್ತೇನೂ ಇರುವುದಿಲ್ಲ. ಅವನಿಗೆ ಎಂದೆಂದಿಗೂ, ಎಲ್ಲೆಲ್ಲೂ ದುಃಖವೇತುಂಬಿರುತ್ತದೆ. ॥88॥ "ಪ್ರತಿವ್ಯಕ್ತಿಯೂ ಅವನದೇ ಆದ ಯೋಚನಾ ಲಹರಿಯನ್ನು ಪರಿಗಣಿಸಿದರೆ ಪ್ರಯೋಜನವಿಲ್ಲ. ಮತ್ತೆ ಇನ್ನೊಬ್ಬರ ಆಲೋಚನೆಗಳನ್ನು ತಿರಸ್ಕರಿಸುವ

ಕಾರಣವೂ ಇಲ್ಲ. ಮತ್ತೊಬ್ಬರದು ತಪ್ಪೆಂದು ಚರ್ಚೆ ಮಾಡಿ ಸಾಧಿಸುವ ಕಾರಣವೂ ಇಲ್ಲ. ಇವುಗಳೆಲ್ಲವೂ ಆಧಾರ ರಹಿತ ಪ್ರಯತ್ನಗಳು. ॥89॥ "ಮತ್ತೊಬ್ಬರ ಆಲೋಚನೆಗಳನ್ನು ತಿರಸ್ಕರಿಸುವ ಅವಶ್ಯಕತೆಯೂ ಇಲ್ಲ." ಈ ವಾಕ್ಯವು ನಾನು ಶ್ರೋತೃಗಳಿಗೆ ನೀಡಿದ ಪ್ರಮಾಣವಚನವನ್ನು ನೆನಪಿಸಿಕೊಡುತ್ತದೆ. ॥90॥ ಈ ಒಂದನೆಯ ಅಧ್ಯಾಯವನ್ನು ಮುಗಿಸುವ ಮೊದಲು ನಾನು ನನ್ನ ಹೆಸರು 'ಹೇಮಾಡ್' ಎಂದು ಹೇಗಾಯಿತು ಎಂಬ ಚರಿತ್ರೆಯನ್ನು ತಿಳಿಸುತ್ತೇನೆಂದು ನಾನು ನನ್ನ ಶ್ರೋತೃಗಳಿಗೆ ವಚನ ನೀಡಿರುತ್ತೇನೆ. ಮೊದಲು ಅದನ್ನು ನಾನು ಹೇಳುವೆನು. ॥91॥ ಇದು ಮುಖ್ಯ ಕತೆಯಿಂದ ವಿಷಯಾಂತರ ಆದರೂ ತಾವು ಅದನ್ನು ಕೇಳಿದಾಗ ಅದರ ಯುಕ್ತಾಯುಕ್ತತೆಯನ್ನು ಅರಿಯುತ್ತೀರಿ. ನಿಮ್ಮ ಜಿಜ್ಞಾಸೆಯು ತೃಪ್ತಿಯಾಗುತ್ತದೆ. ಇದೂ ಸಹ ಸಾಯಿ ಪ್ರೇರಣೆಯೇ ಆಗಿದೆ. ॥92॥ ಅನಂತರ ನಾನು ಸಾಯಿಯ ಜೀವನ ಚರಿತ್ರೆಯತ್ತ ಬರುತ್ತೇನೆ. ಆದುದರಿಂದ ಶ್ರೋತೃಗಳು ಅತ್ಯಂತ ಗಮನವಿಟ್ಟು ಕೇಳಬೇಕು. ॥93॥ ಸಾಯಿಲೀಲೆಗಳ ಈ ಗ್ರಂಥದಲ್ಲಿ, ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಒಂದು ಸಾಲು ಇದೆ. "ಭಕ್ತನಾದ ಹೇಮಾಡಪಂತನಿಂದ ರಚಿಸಲ್ಪಟ್ಟಿದೆ" ಎಂದು. ಈ ಪಂತ ಯಾರು? ॥94॥ ಇದು ಶ್ರೋತೃಗಳ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಏಳುವ ಪ್ರಶ್ನೆ. ಅವರ ಕುತೂಹಲವನ್ನು ತೃಪ್ತಿಪಡಿಸಲು, ನನಗೆ ಈ ಹೆಸರು ಹೇಗೆ ಬಂದಿತು ಎಂಬುದನ್ನು ವಿಶ್ವಾಸಪೂರ್ವಕವಾಗಿ ಆಲಿಸಬೇಕು. ॥95॥ ಹಿಂದೂ ಧರ್ಮಶಾಸ್ತ್ರಗಳ ಅನುಸಾರ ಹುಟ್ಟಿನಿಂದ ಸಾವಿನ ವರೆಗೆ ಹದಿನಾರು ಅತಿಮುಖ್ಯವಾದ ಕರ್ಮಗಳನ್ನು[18] ಗೊತ್ತುಪಡಿಸಲಾಗಿದೆ. ಅದರಲ್ಲಿ ಒಂದು ನಾಮಕರಣ ಮತ್ತು ಇದು ಎಲ್ಲರಿಗೂ ತಿಳಿದಿರುವಂತಹ ವಿಚಾರವಾಗಿದೆ. ॥96॥ ಈ ಸಂದರ್ಭದಲ್ಲಿ ಒಂದು ಸಣ್ಣ ಕತೆ ಹೇಳುತ್ತೇನೆ. – ಶ್ರೋತೃಗಳು ಗಮನವಿಟ್ಟು ಕೇಳಿರಿ. 'ಹೇಮಾಡಪಂತ' ಎಂದು ನಾಮಕರಣವಾದ ಸನ್ನಿವೇಶದ ಬಗ್ಗೆ ಹೇಳುತ್ತೇನೆ. ॥97॥ ಈ ರಚನಕಾರನು ಯಾವಾಗಲೂ ತುಂಟನಾಗಿ, ಸೋಮಾರಿಯಾಗಿ, ಅವಿದ್ಯಾವಂತನಾಗಿಯೂ ಇದ್ದನು. ॥98॥ ಈತನು ಸದ್ಗುರುವಿನ ಶಕ್ತಿಯನ್ನು ಅರಿಯದೆ, ದುರ್ಗುಣವಂತನೂ, ಮೂರ್ಖಶಿಖಾಮಣಿಯೂ, ತಾನು ಬುದ್ಧಿವಂತನೆಂಬ ಅಹಂಕಾರಿ. ವಾಗ್ಯುದ್ಧಕ್ಕೆ ತಯಾರಾಗಿದ್ದವನು. ॥99॥ ಆದರೆ ವಿಧಿಬರಹದಂತೆ ಸಾಯಿಯ ಚರಣಕಮಲಗಳನ್ನು ಸೇರಲು ಸಾಧ್ಯವಾಯಿತು. ನನ್ನ ಭಾಗ್ಯ ಮಾತ್ರದಿಂದಲೇ ಸಾಯಿಚರಣಗಳ ದರ್ಶನ ಲಾಭವಾಯಿತು, ಸಂಶಯವಿಲ್ಲ. ॥100॥ ನನ್ನ ಪೂರ್ವ ಜನ್ಮದ ಪುಣ್ಯಫಲದಿಂದ ಕಾಕಾಸಾಹೇಬ್[19] ಮತ್ತು ನಾನಾಸಾಹೇಬ್ ಚಂದೋರಕರ್[20]ರಂತಹ ಅಂತರಂಗದ ಭಕ್ತರ ಸಹವಾಸ ದೊರಕದಿದ್ದರೆ ನಾನು ಶಿರಡಿ ತಲುಪಲು ಹೇಗೆ ಸಾಧ್ಯವಾಗುತ್ತಿತ್ತು? ॥101॥ ಕಾಕಾಸಾಹೇಬ್‌ರವರ ಒತ್ತಡಕ್ಕೆ ಮಣಿದು ಶಿರಡಿಗೆ ಹೋಗಲು ನಿರ್ಧರಿಸಿದೆ. ಆದರೆ ಹೊರಡುವ ದಿನವೇ ಅನಿರೀಕ್ಷಿತವಾಗಿ ನನ್ನ ಮನಸ್ಸು ಬದಲಾಯಿತು. ॥102॥ ನನ್ನ ಆಪ್ತಮಿತ್ರರಲ್ಲಿ ಒಬ್ಬನು ಗುರುವಿನ ಕೃಪೆಗೆ ಪಾತ್ರನಾಗಿ ಒಬ್ಬ ಪುತ್ರನನ್ನು ಪಡೆದವನು, ತನ್ನ ಪತ್ನಿಯೊಡನೆ ಲೋಣಾವಳದಲ್ಲಿದ್ದನು. ಆಗ ಒಂದು ಅನಿರೀಕ್ಷಿತವಾದ ಘಟನೆ

ನಡೆಯಿತು. ॥103॥ ಅಲ್ಲಿ ಉತ್ತಮ ಹವಾಮಾನ ಸಹ ಇತ್ತು. ಅವನ ಒಬ್ಬನೇ ಪುತ್ರ ಆರೋಗ್ಯವಂತ ಮತ್ತು ಗುಣವಂತನಾದವನು ವಿಪರೀತ ಜ್ವರದಿಂದ ಬಳಲಿದನು. ॥104॥ ಅವನು ಮನುಷ್ಯಪ್ರಯತ್ನಗಳನ್ನೆಲ್ಲ ಮಾಡಿದನು. ಅನೇಕ ಯಂತ್ರ-ತಂತ್ರ ವಿಧಿಗಳು ನಡೆದಿದ್ದವು. ಗುರುವನ್ನು ಹುಡುಗನ ಹತ್ತಿರ ಕರೆದುಕೊಂಡು ಬಂದರು. ಆದರೂ ಅವನ ಮಗ ದೈವಾಧೀನನಾದನು. ॥105॥ ಈ ರೀತಿ ಕ್ಲಿಷ್ಟಪರಿಸ್ಥಿತಿಯನ್ನು ತೀರ್ಮಾನಿಸಿ ಮಾರಣಾಂತಿಕ ಕಷ್ಟಗಳನ್ನು ದೂರಮಾಡಲು ಗುರುವನ್ನು ಮಗನ ಹತ್ತಿರ ಕರೆದುಕೊಂಡು ಬಂದಿದ್ದರು. ಎಲ್ಲ ವ್ಯರ್ಥವಾಯಿತು. ॥106॥ ಎಂತಹ ವಿಚಿತ್ರ ಈ ಜೀವನ! ಒಬ್ಬನಿಗೆ ಮಗ ಮತ್ತು ಒಬ್ಬನಿಗೆ ತಾಯಿ ಎಲ್ಲವೂ ಪೂರ್ವಜನ್ಮದ ಕರ್ಮಗಳ ವಿಧಿ ನಿಯಮ. ಎಲ್ಲಾ ಸ್ಥಳಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ವಿಧಿ ಬರಹ ಅನಿವಾರ್ಯ. ॥107॥ ಈ ಕೆಟ್ಟ ವಾರ್ತೆಯನ್ನು ಕೇಳಿದ ಕೂಡಲೇ ನನ್ನ ಮನಸ್ಸು ಕುಂದಿತು. "ಗುರುವಿನ ಉಪಯೋಗ ಇಷ್ಟೇನಾ? ಅವನು ಒಬ್ಬನೇ ಮಗನನ್ನು ರಕ್ಷಿಸಲಾರದೇ ಹೋದನು." ॥108॥ ವಿಧಿ ಬರಹದ ಒತ್ತಡ ಸಾಯಿ ದರ್ಶನ ಮಾಡುವ ಆಸೆಯನ್ನು ತಣ್ಣಗಾಗಿಸಿತು. ಇದು ನನ್ನ ಪ್ರಯಾಣಕ್ಕೆ ಅಡ್ಡಿ ಉಂಟುಮಾಡಿತು. ॥109॥ "ನಾನು ಶಿರಡಿಗೆ ಏಕೆ ಹೋಗಲಿ? ನನ್ನ ಸ್ನೇಹಿತನ ಅವಸ್ಥೆ ಏನಾಯಿತು? ಗುರುವಿಗೆ ಅಂಟಿಕೊಂಡು ಆದ ಫಲ ಇದೇನು? ವಿಧಿ ಬರಹದ ಮುಂದೆ ಗುರು ಏನು ಮಾಡಲು ಸಾಧ್ಯ?" ॥110॥ ವಿಧಿ ಬರಹದ ರೀತಿ ನಡೆಯುವ ಹಾಗಿದ್ದರೆ, ಗುರುವನ್ನು ಹೊಂದಿರುವ ಅವಶ್ಯಕತೆಯೇನು? ಆದುದರಿಂದ ಶಿರಡಿಯ ಪ್ರಯಾಣವನ್ನು ರದ್ದುಗೊಳಿಸಿದೆ. ॥111॥ ತನ್ನ ಸ್ವಗೃಹವನ್ನು ಯಾವ ಕಾರಣಕ್ಕಾಗಿ ತ್ಯಜಿಸಬೇಕು? ಗುರುವನ್ನು ಹುಡುಕಿಕೊಂಡು ಏಕೆ ಹೋಗಬೇಕು? ಕಷ್ಟವನ್ನು ಬರಮಾಡಿಕೊಂಡು ಗೃಹಸುಖವನ್ನು ಏಕೆ ಬಿಡಬೇಕು? ಇದರ ಬಗ್ಗೆ ಏನೂ ಅರ್ಥವಾಗುವುದಿಲ್ಲ. ॥112॥ ತಾನಾಗಿಯೇ ಏನಾಗುತ್ತದೋ ಅದು ನಡೆಯಲಿ. ಕಷ್ಟವೋ ಸುಖವೋ ಏನಾದರೂ ಸರಿ. ನಡೆಯುವುದೇ ನಡೆಯುವಾಗ ಗುರುವಿನ ಅವಶ್ಯಕತೆಯಾದರೂ ಏಕೆ? ॥113॥ ಆದರೆ ಇಚ್ಛೆಯು ಬೇರೆ ಆದಾಗ್ಯೂ ವಿಧಿಬರಹವೇ ನೆರವೇರುತ್ತದೆ. ಅದರ ಮುಂದೆ ಬೇರೆ ಎಲ್ಲವೂ ಶಕ್ತಿ ಹೀನವಾಗುತ್ತವೆ. ಹಾಗೆ ನನ್ನನ್ನು ಶಿರಡಿಗೆ ಎಳೆತಂದಿತು. ॥114॥ ಜಿಲ್ಲಾಧಿಕಾರಿಗಳಾಗಿದ್ದ ನಾನಾಸಾಹೇಬ್‌ರವರು ಬೇಸಿನ್‌ಗೆ ಯಾತ್ರೆಹೊರಟರು. ಅವರು ಥಾಣೆಯಿಂದ ದಾದರ್‌ಗೆ ಬಂದು ರೈಲುನಿಲ್ದಾಣದಲ್ಲಿ ಸ್ವಲ್ಪ ಕಾಲ ಕಾಯುತ್ತಿದ್ದರು. ॥115॥ ಬೇಸಿನ್‌ಗೆ ರೈಲು ಆಗಮಿಸಲು ಒಂದು ಗಂಟೆಯ ಕಾಲ ಇತ್ತು. ಈ ದೀರ್ಘ ಸಮಯವನ್ನು ಬೇರೆ ಏನಾದರೂ ಕಾರ್ಯಕ್ಕೆ ಉಪಯೋಗಿಸಬಹುದಿತ್ತೆಂದು ಅನಿಸಿತು. ॥116॥ ಈ ಯೋಚನೆ ಮನಸ್ಸಿಗೆ ಬಂದಕೂಡಲೇ, ಬಾಂದ್ರಾಗೆ ಹೋಗುವ ರೈಲು ಬಂದಿತು ಮತ್ತು ಅವರು ಅದನ್ನು ಹತ್ತಿದರು. ॥117॥ ರೈಲು ನಿಲ್ದಾಣವನ್ನು ತಲಪುತ್ತಲೇ, ನನಗೆ ಆ ಸಮಾಚಾರ ತಿಳಿಯಿತು ಮತ್ತು ಅವರನ್ನು ಭೇಟಿಯಾಗಲು ಕೂಡಲೇ ಹೊರಟೆನು. ಭೇಟಿಯಾದ ಕೂಡಲೇ ಶಿರಡಿಯ ಬಗ್ಗೆ ಮಾತುಕತೆ ಪ್ರಾರಂಭವಾಯಿತು. ॥118॥ "ನೀವು

ಯಾವಾಗ ಸಾಯಿದರ್ಶನಕ್ಕೆ ಹೋಗುವಿರಿ? ಶಿರಡಿಗೆ ಹೋಗಲು ಆಲಸ್ಯವೇಕೆ? ಏಕೆ ವೃಥಾಕಾರಣ ನೀಡುತ್ತಿರುವಿರಿ? ನಿಮ್ಮ ಮನಸ್ಸು ಏಕೆ ಶಾಂತವಾಗಿಲ್ಲ?" ॥119॥ ನಾನಾರವರ ಕಾತುರತೆಯನ್ನು ಕಂಡು ನನಗೆ ನಾಚಿಕೆಯಾಯಿತು. ನನ್ನ ಮನಸ್ಸಿನ ಚಂಚಲತೆಯನ್ನು ಸ್ಪಷ್ಟವಾಗಿ ಅವರಿಗೆ ತಿಳಿಸಿದೆನು. ॥120॥ ಆದ್ದರಿಂದ, ನಾನಾರವರ ಶ್ರದ್ಧಾಯುಕ್ತವಾದ, ಪ್ರೀತಿಯ, ಪರಿಶುದ್ಧವಾದ ಉಪದೇಶ ನನ್ನಲ್ಲಿ ಶಿರಡಿಗೆ ಪ್ರಯಾಣಮಾಡುವ ಇಚ್ಛೆಯನ್ನು ಉತ್ಕಟಗೊಳಿಸಿತು. ॥121॥ ನಾನಾರವರು, ನನ್ನಿಂದ, "ನಾನು ಕೂಡಲೇ ಹೊರಡುತ್ತೇನೆ" ಎಂಬ ಪ್ರಮಾಣವಚನ ಸ್ವೀಕರಿಸಿದ ನಂತರವೇ ಅಲ್ಲಿಂದ ಹೊರಟರು. ನಾನು ಹಿಂತಿರುಗಿದೆನು ಮತ್ತು ಒಂದು ಶುಭಮುಹೂರ್ತದಲ್ಲಿ ಪ್ರಯಾಣ ಮಾಡಲು ನಿರ್ಧರಿಸಿದೆನು. ॥122॥ ನನ್ನ ಸಾಮಾನುಗಳನ್ನು ಜೋಡಿಸಿ ಮನೆಯ ಕಡೆ ಎಲ್ಲಾ ತಯಾರಿ ನಡೆಸಿದೆನು. ಅದೇ ದಿನ, ಸಂಜೆ ಶಿರಡಿಯ ಕಡೆ ಪ್ರಯಾಣ ಬೆಳೆಸಿದೆನು. ॥123॥ ಸಂಜೆಯ ಮೇಲ್ ರೈಲು ದಾದರ್‌ನಲ್ಲಿ ನಿಲ್ಲುತ್ತದೆಂದು ನಾನು ಯೋಚಿಸಿದೆ. ಆದ್ದರಿಂದ ಅದರ ಹಣವನ್ನು ಪಾವತಿಸಿ ದಾದರ್ ನಿಲ್ದಾಣಕ್ಕೆ ಟಿಕೆಟ್ ತೆಗೆದುಕೊಂಡೆ.[21] ॥124॥ ನಾನು ಕೂಡಲೇ ರೈಲು ಹತ್ತಿದೆನು. ರೈಲು ಇನ್ನೂ ಬಾಂದ್ರಾದಲ್ಲೇ ನಿಂತಿತ್ತು. ಆಗ ಒಬ್ಬ ವಯಸ್ಸಾದ ಮುಸ್ಲಿಮನು ಬೋಗಿಯೊಳಗೆ ಅವಸರದಿಂದ ಹತ್ತಿದ. ಕೂಡಲೇ ರೈಲು ಚಲಿಸಲು ಪ್ರಾರಂಭಿಸಿತು. ॥125॥ ನಾನು ದಾದರ್ ನಿಲ್ದಾಣಕ್ಕೆ ಟಿಕೇಟು ತೆಗೆದುಕೊಂಡಿದ್ದು, ನನ್ನ ಯಾತ್ರೆಯ ಪ್ರಾರಂಭದಿಂದಲೇ ಮೇಣದ ನೊಣದಂತೆ ಒಂದು ಅಡಚಣೆಯಾಗಿತ್ತು. ॥126॥ ನನ್ನ ಪ್ರಯಾಣದ ಚೀಲ ಮತ್ತು ಸಾಮಾನುಗಳನ್ನು ನೋಡಿ ಆ ಮುಸಲ್ಮಾನನು, ಎಲ್ಲಿಗೆ ಹೋಗುತ್ತಿರುವೆನೆಂದು ಕೇಳಿದನು. ನಾನು ದಾದರಿಗೆ ಹೋಗಿ ಅಲ್ಲಿಂದ ಮೇಲ್ ಹಿಡಿದು ಮನಮಾಡ್‌ಗೆ ಹೋಗುತ್ತಿರುವೆನೆಂದು ತಿಳಿಸಿದೆನು. ॥127॥ ಆಗ ಅವನು ನನಗೆ ಸಮಯೋಚಿತವಾಗಿ, 'ದಾದರ್‌ನಲ್ಲಿ ಮೇಲ್ ನಿಲ್ಲದೆ ಇರುವುದರಿಂದ ವಿಕ್ಟೋರಿಯಾ ಟರ್ಮಿನಲ್‌ವರೆಗೆ ಪ್ರಯಾಣ ಮುಂದುವರಿಸಿ ಅಲ್ಲಿಂದ ಮೇಲ್‌ಗಾಡಿ ಹಿಡಿಯಿರಿ' ಎಂದು ತಿಳಿಸಿದನು. ॥128॥ ಈ ಸಮಯೋಚಿತವಾದ ಸಲಹೆ ನನಗೆ ದೊರಕದಿದ್ದಲ್ಲಿ ನಾನು ದಾದರ್‌ನಲ್ಲಿ ಮೇಲ್‌ನ್ನು ಹಿಡಿಯುತ್ತಿರಲಿಲ್ಲ. ಆಗ ನನ್ನ ಚಂಚಲ ಮನಸ್ಸು ಯಾವರೀತಿ ಪ್ರತಿಕ್ರಿಯಿಸುತ್ತಿತ್ತೋ ತಿಳಿಯದು. ॥129॥ ಆದರೆ ಆ ದಿನ ನನ್ನ ಯಾತ್ರೆ ನಿಗದಿಯಾಗಿತ್ತು. ಅದೃಷ್ಟವಶಾತ್ ಈ ಅನುಕೂಲಕರವಾದ, ನಾನು ಹೇಳಲಿರುವ ಘಟನೆ ಅನಿರೀಕ್ಷಿತವಾಗಿ ನಡೆಯಿತು. ॥130॥ ಮಾರನೆ ದಿನ ಬೆಳಿಗ್ಗೆ 9 ರಿಂದ 10 ಗಂಟೆ ಒಳಗೆ ನಾನು ಶಿರಡಿ ತಲುಪಿದೆನು. ಅಲ್ಲಿ ಭಾವುಸಾಹೇಬ್ ದೀಕ್ಷಿತ್‌ರು ನನಗಾಗಿ ಕಾಯುತ್ತಿದ್ದರು. ॥131॥ ಅದು ಕ್ರಿ. ಶ. 1910ರಲ್ಲಿ ನಡೆಯಿತು. ಆಗ ಅಲ್ಲಿ 'ಸಾಠೇವಾಡಾ'ದಲ್ಲಿ[22] ಮಾತ್ರ ಯಾತ್ರಿಗಳಿಗೆ ತಂಗಲು ಅವಕಾಶ ಇತ್ತು. ॥132॥ ನಾನು ಟಾಂಗಾ[23]ದಿಂದ ಇಳಿಯುತ್ತಿದ್ದಂತೆಯೇ, ನನ್ನ ಮನಸ್ಸು ಸಾಯಿ ದರ್ಶನಕ್ಕಾಗಿ ಕಾತರಪಟ್ಟು ಉಸಿರುಕಟ್ಟಿದಂತಾಯಿತು. ನಾನು ಯಾವಾಗ ಅವರ (ಸಾಯಿಯ) ಚರಣಗಳಲ್ಲಿ ನನ್ನ ಶಿರವನ್ನು ಇಟ್ಟೇನೋ ಎಂದೆನಿಸಿತು. ನಿರೀಕ್ಷೆಯಿಂದ

ಸಂತಸದ ಅಲೆಗಳು ನನ್ನ ಹೃದಯದಲ್ಲಿ ಉಕ್ಕಿ ಬಂದವು. ॥133॥ ಆ ಕೂಡಲೇ ತಾತ್ಯಾ ಸಾಹೇಬ್ ನೂಲ್ಕರ್[24]- ಅತ್ಯಂತ ಹೆಸರಾಂತ ಮತ್ತು ಪ್ರಮುಖ ಸಾಯಿಭಕ್ತನು - ಮಸೀದಿಯಿಂದ ಹಿಂತಿರುಗಿ ಬಂದು ಕೂಡಲೇ ದರ್ಶನಕ್ಕಾಗಿ ಹೋಗಲು ತಿಳಿಸಿದನು. ॥134॥ ಬಾಬಾರವರು, ತಮ್ಮ ಶಿಷ್ಯರೊಡನೆ ವಾಡಾದ ಒಂದು ಮೂಲೆಯಲ್ಲಿದ್ದಾರೆ. ಬನ್ನಿ, ಅವರ ಚರಣಗಳಿಗೆ ವಂದಿಸೋಣ, ಅನಂತರ ಅವರು ಲೇಂಡಿಗೆ[5] ಹೋಗುತ್ತಾರೆ. ॥135॥ "ಅನಂತರ ಸ್ನಾನಮಾಡಿ, ಬಾಬಾರವರು ಹಿಂದಿರುಗಿದ ಮೇಲೆ ನೀವು ಮಸೀದಿಗೆ ಹೋಗಬಹುದು. ಮತ್ತು ಸಾಯಿಯ ದರ್ಶನವನ್ನು ಪುನಃ ಸಾವಕಾಶವಾಗಿ ಪಡೆಯಬಹುದು." ॥136॥ ಅದನ್ನು ಕೇಳಿದಕೂಡಲೇ ನಾನು ಆತುರವಾಗಿ ಬಾಬಾರವರು ಇದ್ದ ಜಾಗಕ್ಕೆ ಓಡಿಹೋದೆ ಮತ್ತು ಅವರ ಚರಣಧೂಳಿಯಲ್ಲಿ ಹೊರಳಾಡಿದೆ. ನನ್ನ ಸಂತಸಕ್ಕೆ ಪಾರವಿಲ್ಲದಾಯಿತು. ॥137॥ ನಾನು ಪ್ರತ್ಯಕ್ಷವಾಗಿ ಕಂಡಿದ್ದು ನಾನಾಸಾಹೇಬ್‌ರವರು ಹೇಳಿದ್ದಕ್ಕಿಂತಲೂ ಮಿಗಿಲಾಗಿತ್ತು. ನಾನು ಕೃತಾರ್ಥನಾದೆನೆಂದೂ ಅನುಗ್ರಹೀತನಾದೆನೆಂದೂ ಭಾವಿಸಿದೆ. ನನ್ನ ಕಣ್ಣುಗಳು ತುಂಬಿಬಂದುವು. ॥138॥ ಅಂತಹ ವ್ಯಕ್ತಿಯನ್ನು ನಾನೆಂದೂ ನೋಡಿರಲಿಲ್ಲ ಮತ್ತು ಕೇಳಿಯೂ ಇರಲಿಲ್ಲ. ಅಂತಹ ಗೌರವಾನ್ವಿತ ವ್ಯಕ್ತಿಯನ್ನು ನೋಡಿ ಕೃತಾರ್ಥನಾದೆ. ನನ್ನ ಹಸಿವು ಬಾಯಾರಿಕೆಗಳು ಮಾಯವಾದವು. ನನ್ನ ಇಂದ್ರಿಯಗಳು ಸ್ತಬ್ಧವಾದುವು. ॥139॥ ಸಾಯಿಯ ಚರಣ ಸ್ಪರ್ಶದಿಂದ ನಾನು ನನ್ನ ಜೀವನದ ಉನ್ನತ ಸ್ತರವನ್ನು ಗಳಿಸಿದೆ. ಅಲ್ಲಿಂದ ನನ್ನ ಹೊಸ ಜೀವನದ ಶುಭಾರಂಭವಾಯಿತು. ॥140॥ ಯಾರ ಕಾರಣದಿಂದ ಈ ಸಂತರ ಸಂಗ ದೊರೆಯಿತೊ ಅವರಿಗೆ ನಾನು ಸಂಪೂರ್ಣವಾಗಿ ಕೃತಜ್ಞನಾಗಿದ್ದೇನೆ. ಪ್ರತಿನಾಡಿಯಲ್ಲೂ ಸಂತಸ ಉಕ್ಕಿಬರುತ್ತಿದೆ. ॥141॥ ಅವರು ನನ್ನ ನಿಜವಾದ ಬಂಧು-ಬಾಂಧವರು. ಅವರಿಂದಲೇ ನಾನು ಪರಮಾನಂದವನ್ನು ಅನುಭವಿಸಲು ಸಾಧ್ಯವಾಯಿತು. ಅವರಿಗಿಂತಆತ್ಮೀಯ ಬಂಧುಗಳು ಇನ್ನು ಯಾರೂ ಇಲ್ಲ. ನನ್ನ ಹೃದಯಾಂತರಾಳದಲ್ಲಿ ಇದನ್ನು ನಂಬಿದ್ದೇನೆ. ॥142॥ ಇದೆಂತಹ ಮಹತ್ತಾದ ಸಂಬಂಧ! ನಾನು ಇದನ್ನು ತಾಳಲಾರದವನಾಗಿದ್ದೇನೆ. ಆದುದರಿಂದ ನನ್ನ ಕರಗಳನ್ನು ಜೋಡಿಸಿ ವಂದಿಸುತ್ತ, ನನ್ನ ಶಿರವನ್ನು ಅವರ ಚರಣಗಳಲ್ಲಿಡುತ್ತೇನೆ. ॥143॥ ನನಗೆ ಸಾಯಿಯ ದರ್ಶನ ಭಾಗ್ಯ ದೊರಕಿತು. ಮತ್ತು ನನ್ನ ಮನಸ್ಸಿನ ಸಂದೇಹಗಳೆಲ್ಲ ಮಾಯವಾದವು. ಅದಕ್ಕಿಂತ ಮಿಗಿಲಾಗಿ ನನಗೆ ಸಾಯಿಯ ಸಂಪರ್ಕ ದೊರಕಿತು. ಅದು ನಾನು ಅನುಭವಿಸಿದ ಆನಂದಕ್ಕಿಂತ ಮಿಗಿಲಾದುದು. ॥144॥ ಸಾಯಿದರ್ಶನವು ಒಂದು ಅಭೂತಪೂರ್ವ ಅನುಭವ. ಅವರೊಂದಿಗೆ ಸ್ವಭಾವ ಸಂಪೂರ್ಣವಾಗಿ ಬದಲಾಗುತ್ತದೆ. ಪೂರ್ವಕರ್ಮಗಳ ನೆನಪು ಮಾಯವಾಗುತ್ತದೆ. ಮತ್ತು ಕ್ರಮೇಣ ಲೌಕಿಕ ಸುಖಗಳ ಬಗ್ಗೆ ಅನಾಸಕ್ತಿ ಉಂಟಾಗುತ್ತದೆ. ॥145॥ ಹಿಂದಿನ ಅನೇಕ ಜನ್ಮಗಳ ಸಂಚಿತ ಪಾಪಕರ್ಮಗಳು ಅವರ ಒಂದು ಕರುಣಾಪೂರಿತ ದೃಷ್ಟಿಯಿಂದಲೇ ನಾಶವಾಗುತ್ತವೆ. ಸಾಯಿ ಚರಣಗಳಲ್ಲಿ ಭರವಸೆ ಮತ್ತು ಅಪರಿಮಿತವಾದ ಸಂತಸವು ದೊರಕ್ಕುತ್ತದೆ ॥146॥ ಅದೃಷ್ಟವಶಾತ್ ನಾನು

ಸಾಯಿ ಚರಣಗಳನ್ನು ಸೇರಿದೆ. ಅವು ಮಾನಸ ಸರೋವರದಷ್ಟು ಪವಿತ್ರವಾಗಿವೆ. ಅವು ನನ್ನಂತಹ ಕಾಗೆಯನ್ನೂ ಸಹ ಹಂಸವನ್ನಾಗಿ ಪರಿವರ್ತಿಸುತ್ತವೆ. ಸಾಯಿಯು ಒಬ್ಬ ಮಹಾತ್ಮ, ಸಂತರಲ್ಲಿ ಅಗ್ರಗಣ್ಯ, ಮಹಾತಪಸ್ವಿ ಮತ್ತು ಮಹಾಯೋಗಿ. ॥147॥ ಅವನು ಪಾಪನಾಶಕ, ದುಃಖನಾಶಕ ಮತ್ತು ಕಷ್ಟಗಳನ್ನು ಪರಿಹರಿಸುವವನು. ಅಂತಹ ಸಾಯಿಯ ದರ್ಶನ ಪಡೆದು ನಾನು ಅತ್ಯಂತ ಪುನೀತನಾಗಿದ್ದೇನೆ. ಅಂತಹವರ ಸಹವಾಸ ಪಡೆದು ಅನುಗ್ರಹೀತನಾಗಿದ್ದೇನೆ. ॥148॥ ಸಾಯಿನಾಥ ಮಹಾರಾಜರನ್ನು ಸಂಧಿಸಿದ್ದು ನನ್ನ ಪೂರ್ವ ಜನ್ಮಗಳ ಫಲವೇ ಆಗಿದೆ. ಕಣ್ಣುಗಳಲ್ಲಿ ಸಾಯಿರೂಪವನ್ನು ತುಂಬಿಕೊಂಡಲ್ಲಿ ಇಡೀ ಪ್ರಪಂಚವೇ ಸಾಯಿಮಯವಾಗುತ್ತದೆ. ॥149॥ ಶಿರಡಿಯಲ್ಲಿ ಕಾಲಿಟ್ಟ ಮೊದಲನೆಯ ದಿನ ಬಾಳಾಸಾಹೇಬ್ ಭಾಟೆ[27]ಯವರೊಂದಿಗೆ ಗುರುವಿನ ಅವಶ್ಯಕತೆಯ ಬಗ್ಗೆ ವಾಗ್ವಾದ ಉಂಟಾಯಿತು. ॥150॥ "ಒಬ್ಬರ ಸ್ವಾತಂತ್ರ್ಯವನ್ನು ತ್ಯಜಿಸಿ ಮತ್ತೊಬ್ಬರ ಮೇಲೆ ಹೇಗೆ ನಂಬಿಕೆ ಇಡಬೇಕು? ತನ್ನ ಕರ್ತವ್ಯಗಳನ್ನು ತಾನೇ ಸ್ವತಃ ಮಾಡುವ ಸ್ವಸಾಮರ್ಥ್ಯ ಇರುವಾಗ ಗುರುವಿನ ಅವಶ್ಯಕತೆ ಏಕೆ?" ॥151॥ ಪ್ರತಿಯೊಬ್ಬನೂ ತನ್ನ ಕರ್ತವ್ಯಗಳನ್ನು ತಾನೇ ನಿರ್ವಹಿಸಬೇಕು. ಯಾರು ತಮ್ಮ ಕರ್ತವ್ಯಗಳನ್ನು ಮಾಡುವುದಿಲ್ಲವೋ ಅವರಿಗೆ ಗುರುವು ತಾನೆ ಏನು ಮಾಡಲು ಸಾಧ್ಯ? ಯಾರು ಐಷಾರಾಮಿಗಳೋ, ವಿಲಾಸಿ ಮತ್ತು ಆಲಸಿಗಳೋ ಅವರಿಗೆ ಯಾರು ತಾನೆ ಏನನ್ನು ಕೊಡಬಲ್ಲರು?" ॥152॥ ಇದು ನನ್ನ ಸಾಧಾರಣವಾದ ಅಹವಾಲು. ಮತ್ತೊಂದೆಡೆ ಇದಕ್ಕೆ ವಿರುದ್ಧವಾದ ಅಭಿಪ್ರಾಯವಿತ್ತು, ವಾದ–ವಿವಾದಗಳು ಎರಡೂ ಕಡೆಯಲ್ಲಿ ಸಮನಾಗಿದ್ದವು. ಹಾಗಾಗಿ ವಿರೋಧಾಭಾಸ ಮುಂದುವರೆಯಿತು. ॥153॥ ಈ ವಿರೋಧಾಭಾಸಕ್ಕೆ ಕಾರಣ ನಮ್ಮಲ್ಲಿ ಆತ್ಮವಿಶ್ವಾಸ ಇಲ್ಲದಿರುವುದು. ಇದು 'ಅಹಂ'ಕಾರಕ್ಕೆ ಕುರುಹು, ಅದಿಲ್ಲದೆ ಈ ಜಗತ್ತಿನಲ್ಲಿ ಯಾವುದೇ ವಾದವಿವಾದಗಳು ಇರುವುದಿಲ್ಲ. ॥154॥ ವಿರುದ್ಧಪಕ್ಷದವರ ವಾದವೇನೆಂದರೆ, ಒಬ್ಬ ವ್ಯಕ್ತಿಯು ವಿದ್ಯಾವಂತನಾಗಿದ್ದರೂ, ವೇದಪಾರಂಗತನಾಗಿದ್ದರೂ ಗುರುವಿನ ಕೃಪೆಯಿಲ್ಲದಿದ್ದಲ್ಲಿ ಅಂತಹ ವ್ಯಕ್ತಿ ಕೇವಲ ಬಂಧಿಯಾದ ಪಂಡಿತನಂತಿರುತ್ತಾನೆ. ॥155॥ ಒಬ್ಬನ ಸ್ವಪ್ರಯತ್ನಕ್ಕಿಂತ ವಿಧಿಬರಹ ಮುಖ್ಯವೇ? ವೃಥಾವಾದವು ಉಲ್ಬಣಗೊಂಡಿತು. ಮತ್ತು ನಾನು ಹೇಳಿದೆ "ಕೇವಲ ವಿಧಿಬರಹದ ಮೇಲೆ ಪೂರ್ಣವಾಗಿ ಅವಲಂಬಿಸಿ ಏನು ಸಾಧಿಸುವೆ?" ॥156॥ ಆಗ ವಿರೋಧಪಕ್ಷದವರು ಹೇಳಿದರು – "ವಿಧಿಬರಹವನ್ನು ತಪ್ಪಿಸಲಾಗುವುದಿಲ್ಲ. ಭವಿಷ್ಯವನ್ನು ಬದಲಾಯಿಸಲಾಗುವುದಿಲ್ಲ. ಎಷ್ಟೇ ಸ್ವಾಭಿಮಾನಿಯಾದರೂ ಇದರ ಬಗ್ಗೆ ವಿವಶ॥157॥ "ವಿಧಿಯನ್ನು ಎದುರಿಸಲು ಯಾರಿಗೆ ತಾನೇ ಸಾಧ್ಯ? ನೀನು ಏನಾದರೂ ಮಾಡಲು ಪ್ರಯತ್ನಿಸಬಹುದು. ನಿನ್ನ ವಾಕ್‌ಚಾತುರ್ಯವನ್ನು ನಿನ್ನಲ್ಲೇ ಇಟ್ಟುಕೋ. ನಿನ್ನ 'ಅಹಂ'ಕಾರವನ್ನು ಬಿಡಲೇಬೇಕು." ॥158॥ ನಾನು ಹೇಳಿದೆ – "ಹಾಗೆಂದು ನೀವು ಹೇಗೆ ಹೇಳುವಿರಿ? ಪ್ರಯತ್ನಶೀಲ ವ್ಯಕ್ತಿಯು ಎಲ್ಲವನ್ನೂ ಪಡೆಯುತ್ತಾನೆ. ವಿಧಿಯು ಆಲಸಿಗನಿಗೆ ಹೇಗೆ ಸಹಾಯಮಾಡುತ್ತದೆ?" ॥159॥ ಪ್ರತಿಯೊಬ್ಬ ವ್ಯಕ್ತಿಯೂ ಸ್ವಪ್ರಯತ್ನದಿಂದಲೇ ಮೇಲೆ ಬರಬೇಕು –

ಎಂದು ಸ್ಮೃತಿಗಳು ವಿವರಿಸುತ್ತವೆ. ಅದನ್ನು ಕಡೆಗಣಿಸಿ ಮುಂದುವರೆಯಲು ಸಾಧ್ಯವಿಲ್ಲ. ॥160॥ ಏನನ್ನಾದರೂ ಮಾಡಬೇಕೆಂದಿದ್ದರೆ ತಾನೇ ಸ್ವತಃ ಮಾಡಬೇಕು. ಗುರುವನ್ನು ಏಕೆ ಅನುಸರಿಸಬೇಕು? ಒಬ್ಬ ವ್ಯಕ್ತಿಯು ಎಚ್ಚರಿಕೆ ತಪ್ಪಿದರೆ ಗುರು ಒಬ್ಬ ಸಾಲದು. ॥161॥ ದುಷ್ಟ ಕೆಲಸ ಮಾಡುವವರಿಗೆ ಪಕ್ಷಪಾತಿಗಳಿಗೆ ಅಶುದ್ಧರಿಗೆ ಗುರುವು ಸಫಲತೆಯನ್ನು ಹೇಗೆ ತಾನೇ ಕೊಡಲು ಸಾಧ್ಯ? ॥162॥ ವಾದಕ್ಕೆ ಅಂತ್ಯವಿಲ್ಲ. ಅದರಿಂದ ಫಲವಿಲ್ಲ. ಅದರ ಒಂದೇ ಸಾಧನೆ ಎಂದರೆ ನನ್ನ ಮನಶ್ಶಾಂತಿಯನ್ನು ಕಳೆದುಕೊಳ್ಳುವುದು. ॥163॥ ಈ ರೀತಿ ವಾದ ಪ್ರತಿವಾದಗಳು ಮುಂದುವರೆದವು. ಯಾರಿಗೂ ಕ್ಷಣವಾದರೂ ದಣಿವಾಗಲಿಲ್ಲ. ಸುಮಾರು ಐವತ್ತು ನಿಮಿಷಗಳು ಕಳೆದವು. ಕೊನೆಗೆ ಅದು ನಿಂತಿತು. ॥164॥ ಕೆಲವು ಭಕ್ತರೊಡನೆ ಮಸೀದಿಗೆ ಬಂದ ಕೂಡಲೇ, ಬಾಬಾರವರು ಕಾಕಾಸಾಹೇಬರನ್ನು ಏನು ಕೇಳಿದರೆಂದು ಆಲಿಸಿ. ॥165॥ "ವಾಡೆಯಲ್ಲಿ ಏನು ನಡೆಯಿತು? ವಿರೋಧಾಭಾಸವು ಏನದು? ಹೇಮಾಡಪಂತ ಏನು ಹೇಳಿದ?" ಸಾಯಿ ನನ್ನ ಕಡೆ ನೋಡುತ್ತ ಕೇಳಿದರು? ॥166॥ ವಾಡಾ ಮತ್ತು ಮಸೀದಿಗಳ ಮಧ್ಯೆ ಸಾಕಷ್ಟು ದೂರವಿತ್ತು, ಹಾಗಿದ್ದಲ್ಲಿ ಬಾಬಾರವರಿಗೆ ಹೇಗೆ ತಿಳಿಯಿತು? ನನ್ನಲ್ಲಿ ಅಚ್ಚರಿ ಮೂಡಿಸಿತು. ॥167॥ ಅದೇನಾದರಾಗಲಿ, ಬಾಬಾರವರ ಪದಗಳು ನನ್ನನ್ನು ಬೆಚ್ಚಿಸಿದವು ಮತ್ತು ನನಗೆ ನಾಚಿಕೆಯಾಯಿತು. ನಾನು ಮೌನಿಯಾದೆ. ಈ ರೀತಿಯ ನನ್ನ ಅಜ್ಞಾನವು ಮೊದಲನೆಯ ಭೇಟಿಯಲ್ಲೇ ಬಯಲಾಯಿತು. ॥168॥ ಬೆಳಗ್ಗೆ ನಡೆದ ಈ ವಾಗ್ವಾದವೇ ಬಾಬಾರವರು ನನಗೆ "ಹೇಮಾಡಪಂತ" ಎಂದು ನಾಮಕರಣ ಮಾಡಲು ಕಾರಣವಾಯಿತು. ಅವರು ಅದರಿಂದಲೇ ಹೇಮಾಡನನ್ನು ನೆನಪಿಸಿಕೊಂಡಿರಬೇಕು. ॥169॥ ದೇವಗಿರಿಯ ಯಾದವ ರಾಜರು ದೌಲತಾಬಾದ್‌ನ ಜಾಧವರೆಂದು ಕರೆಯಲ್ಪಟ್ಟಿದ್ದರು. 13ನೆಯ ಶತಮಾನದಲ್ಲಿ ಅವರ ರಾಜ್ಯದ ವೈಭವವು ಮಹಾರಾಷ್ಟ್ರದ ಹೆಮ್ಮೆಯನ್ನು ಹೆಚ್ಚಿಸಿತ್ತು. ॥ 170 ॥ ರಾಜಾ ಮಹಾದೇವನು ಅತ್ಯಂತ ಗೌರವಯುತ ವೈಭವೋಪೇತ ಚಕ್ರವರ್ತಿ[28]ಯಾಗಿದ್ದನು. ಅವನ ಸೋದರಳಿಯನೂ ಸಹ ಅನೇಕ ಧರ್ಮಕಾರ್ಯಗಳಿಗಾಗಿ ಹೆಸರುವಾಸಿಯಾದನು. ॥171॥ ಅವನು 'ರಾಮರಾಜ'ನಾಗಿದ್ದನು. ಯಾದವರ ರಾಜ್ಯದ ಒಂದು ಮಾಸದ ವಜ್ರವಾಗಿದ್ದನು. ಹೇಮಾದ್ರಿಯು ಇಬ್ಬರಿಗೂ ಮಂತ್ರಿಯಾಗಿದ್ದನು. ತುಂಬಾ ಗುಣವಂತನೂ, ಅನೇಕ ಸಾಧನೆಗಳನ್ನು ಮಾಡಿದವನೂ ಆಗಿದ್ದನು. ॥172॥ಹೇಮಾದ್ರಿಯು ಧರ್ಮಶಾಸ್ತ್ರದ ಬಗ್ಗೆ ಒಂದು ಗ್ರಂಥವನ್ನು ರಚಿಸಿದ್ದನು. ಅವನು ಬ್ರಾಹ್ಮಣರನ್ನು[29] ಕಂಡು ಬಹುವಾಗಿ ಗೌರವಿಸುತ್ತ ಧರ್ಮಶಾಸ್ತ್ರವನ್ನು ಪ್ರಥಮವಾಗಿ ರಚಿಸಿದವನು. ॥173॥ ಹೇಮಾದ್ರಿಯು 'ಚತುರ್ವರ್ಗ ಚಿಂತಾಮಣಿ'[30] ಎಂಬ ಗ್ರಂಥವನ್ನೂ ರಚಿಸಿದನು. ಅದು ಒಂದು ಧರ್ಮಮಾರ್ಗದ ಆಚರಣೆಗಳ, ಪವಿತ್ರ ತೀರ್ಥಯಾತ್ರೆ ಮತ್ತು ಮುಕ್ತಿಮಾರ್ಗದ ಬಗ್ಗೆ ಇರುವ ವಿಷಯಗಳ ಗಣಿಯಾಗಿದೆ. ॥174॥ ಸಂಸ್ಕೃತದ ಹೆಸರಾದ 'ಹೇಮಾದ್ರಿಪಂತ' ಎನ್ನುವುದು ಪ್ರಾಕೃತಭಾಷೆಯಲ್ಲಿ[31] 'ಹೇಮಾಡಪಂತ' ಎಂದಾಯಿತು. ಅಂದಿನ ಕಾಲದಲ್ಲಿ ಅವನು ಆಡಳಿತದಲ್ಲಿ ವಿಶಾರದನೂ, ಪರಿಣತನೂ ಆಗಿದ್ದನು. ॥175॥

ಅವನದು 'ವತ್ಸ' ಎಂಬ ಋಷಿಗೋತ್ರ ಮತ್ತು ನನ್ನದು 'ಭರದ್ವಾಜ ಗೋತ್ರ'. ಅವನ ಗೋತ್ರದಲ್ಲಿ ಐದು ಪ್ರಮುಖ ವ್ಯಕ್ತಿಗಳು. ಆದರೆ, ನನ್ನದರಲ್ಲಿ ಮೂರು ಜನ. ಅವನು ಯಜುರ್ವೇದಿಯು, ನಾನು ಋಗ್ವೇದಿ. ಅವನು ಧರ್ಮಶಾಸ್ತ್ರ ವಿಶಾರದನು, ನಾನಾದರೋ ಅಜ್ಞಾನಿ. ॥176॥ ಅವನು ಮಾಧ್ಯಂದಿನ[32], ನಾನಾದರೋ ಶಾಕಲ[33]. ಅವನು ಕಲಿತವನು, ನಾನು ಒಬ್ಬ ಮೂರ್ಖ. ಅವನು ಪಂಡಿತ, ನಾನು ಅಜ್ಞಾನಿ. ಹಾಗಿರುವಾಗ ಈ ಅನ್ವರ್ಥನಾಮ ನನಗೇಕೆ? ॥177॥ ಅವನು ಕುಶಲ ರಾಜಕಾರಣಿ ಮತ್ತು ರಾಜ್ಯದ ವ್ಯಕ್ತಿ (ಸ್ಟೇಟ್ಸ್ ಮನ್) ನಾನಾದರೋ ಬುದ್ಧಿಹೀನ. ಅವನ ಸಂಸ್ಕೃತ ಗ್ರಂಥ 'ರಾಜ್ಯಪ್ರಶಸ್ತಿ'ಯು ಬಹಳ ಪ್ರಸಿದ್ಧವಾಗಿತ್ತು, ಆದರೆ ನಾನು ಕಾವ್ಯದ ಒಂದು ಸಾಲನ್ನೂ ರಚಿಸಲಾರದವನಾಗಿದ್ದೆನು. ॥178॥ ಅವನು ಲೇಖಕ ಮತ್ತು ಅಂದಿನ ದಿನಗಳಲ್ಲಿ ಕುಶಲ ಕಲೆಗಳಲ್ಲಿ ಪರಿಣಿತನು. ನಾನು ಅವಿದ್ಯಾವಂತ ಮತ್ತು ಅಜ್ಞಾನಿ. ಅವನು ಬುದ್ಧಿವಂತ ಮತ್ತು ಧರ್ಮಶಾಸ್ತ್ರದಲ್ಲಿ ಪಂಡಿತೋತ್ತಮ, ನಾನಾದರೋ ದಡ್ಡನು. ॥179॥ ಅವನ ಗ್ರಂಥ 'ಲೇಖನ ಕಲ್ಪತರು'[34] ಅನೇಕ ವಿಧವಾದ ಕಾವ್ಯಗಳ ಗಣಿಯೇ ಆಗಿದೆ. ನಾನು ಬಾಬಾರವರ ಒಬ್ಬ ಮುಗ್ಧ ಮಗು. 'ಓವಿ' ಛಂದಸ್ಸಿನಲ್ಲಿ ಒಂದು ಸಾಲನ್ನೂ ರಚಿಸದವನು. ॥180॥ ಗೋರ, ಚೋರ, ಸಪ್ತಮಾಲಿ, ನಿವೃತ್ತಿ, ಧ್ಯಾನೋಬಾ, ನಾಮ ಮತ್ತಿತರರು ಭಾಗವತ ಧರ್ಮವನ್ನು ಪ್ರಾಮುಖ್ಯತೆಗೆ ತಂದು ಈ ಕಾಲದಲ್ಲಿ ಮೇಲೇರಿದರು॥181॥ ವಿದ್ಯಾವಂತರ ಸಂಗದಲ್ಲಿ ಹೇಮಾದ್ರಿಪಂತನು ಆಡಳಿತಾಧಿಕಾರಿಯಾಗಿದ್ದು ಪಂಡಿತ್ ಬೋಪೇಡಿಯೋ ವಿದ್ವಾಂಸರಲ್ಲಿ ವಜ್ರದಂತೆ ಹೊಳೆದವರು. ಅಂತಹವರಿಗೆ ಸಮನಾದ ಸ್ಥಾನವನ್ನು ಗಳಿಸಿದರು. ॥182॥ ಆದುದರಿಂದ ಉತ್ತರಭಾರತದಿಂದ ಮುಸ್ಲಿಂ ಸೈನಿಕರು ಕೆಳಗೆ ಬಂದರು ಮತ್ತು ಮುಸ್ಲಿಮರ ರಾಜ್ಯಭಾರ ಎಲ್ಲೆಡೆ ಪ್ರಾರಂಭವಾಯಿತು. ದಕ್ಷಿಣದ ಆಡಳಿತ ಕೊನೆಗೊಂಡಿತು. ॥183॥ ನನ್ನ ಬುದ್ಧಿಶಕ್ತಿಗಾಗಿ ಈ ಬಿರುದನ್ನು ನನಗೆ ಕೊಟ್ಟಿಲ್ಲ. ಆದರೆ ನನ್ನ ವಾಗ್ವಾದದ ವೈಖರಿಗಾಗಿ ನೀಡಿದ ಇದು ನನ್ನ 'ಅಹಂ'ಕಾರವನ್ನು ನಾಶಮಾಡಲು ಸಹಕಾರಿಯಾಯಿತು. ॥184॥ ನನಗೆ ಸಾಕಷ್ಟು ಜ್ಞಾನ[35]ವಿರಲಿಲ್ಲ ಮತ್ತು ಆವಶ್ಯಕವಾದ ಯೋಗ್ಯತೆ ಇಲ್ಲದೆ ನಾನು ಮಾತನಾಡುತ್ತಿದ್ದೆ. ಅವರು ಅಂಜನದಿಂದ ನನ್ನ ಕಣ್ಣುಗಳನ್ನು ತೆರೆಸಿ ಸ್ಥೂಲತಪ್ಪುಗಳನ್ನು ಸಂದರ್ಭೋಚಿತವಾಗಿ ತಿದ್ದಿ ಅರಿವನ್ನುಂಟು ಮಾಡಿದರು. ॥185॥ ಈ ರೀತಿ, ಇದು ನನ್ನ ಅಸ್ವಾಭಾವಿಕ ಹೆಸರು. ಸಾಯಿಯ ಬಾಯಿಯಿಂದ ಬಂದಂತಹ ವಿಷಯದ ಮೂಲದ ಹಿನ್ನೆಲೆ, ಈ ರೀತಿಯ ಅತಿ ಪ್ರಾಮುಖ್ಯವಾದ ನಾಮಕರಣವು ಸಮಯೋಚಿತವಾಗಿ ಅವಕಾಶಕ್ಕನುಗುಣವಾಗಿ ಇತ್ತು. ಇದನ್ನು ನಾನು ಗೌರವ ಎಂದು ತೀರ್ಮಾನಿಸಿದ್ದೇನೆ. ॥186॥ ಇದರಿಂದಾಗಿ ನಾನು ಒಂದು ಪಾಠಕಲಿಯಬೇಕು. ಏನೆಂದರೆ, ವ್ಯರ್ಥವಾದ ವಾಗ್ಯುದ್ಧಗಳು ಕೆಟ್ಟಸಂಕೇತ. ಅದರಲ್ಲಿ ನಾನೆಂದೂ ನಿರತನಾಗದಿರಲಿ, ಏಕೆಂದರೆ ಅವು ಅತ್ಯಂತ ಹಾನಿಕಾರಕ. ॥187॥ ನನ್ನ ಅಹಂಕಾರವನ್ನು ನೀಗಲೆಂದೇ ಈ ಬಿರುದನ್ನು ನನಗೆ ಕೊಡಲಾಗಿದೆ ಮತ್ತು ಅದರಿಂದ ನಾನು ಸಾಯುವವರೆಗೂ ನಮ್ರನಾಗಿರಬೇಕೆಂಬುದನ್ನು ಮನಸ್ಸಿನಲ್ಲಿ ನೆನಪಿಡಬೇಕು. ॥188॥

ಶ್ರೀರಾಮನು ದಶರಥನ ಪುತ್ರ, ಭಗವಂತನ ಅವತಾರ, ಸರ್ವವ್ಯಾಪಿ, ಜಗದ್ರಕ್ಷಕ, ಎಲ್ಲ ಮುನಿಪುಂಗವರ ಮನಗಳಲ್ಲಿ ವಾಸವಾಗಿರುವವನು; ಅವನೂ ಗುರು ವಸಿಷ್ಠರ ಚರಣಗಳಿಗೆ ನಮಿಸುತ್ತಿದ್ದನು. ॥189॥ ಶ್ರೀಕೃಷ್ಣ, ಪರಬ್ರಹ್ಮನ ಅವತಾರವಾಗಿದ್ದರೂ ಸಹ ಗುರುವನ್ನು ಆಶ್ರಯಬೇಕಾಯಿತು. ಸಾಂದೀಪನಿ ಗುರುಕುಲದಲ್ಲಿ ಕಟ್ಟಿಗೆ (ಸೌದೆ) ಹೊತ್ತು ಕಷ್ಟಪಟ್ಟು ಗುರುಸೇವೆ ಮಾಡಿದನು. ॥190॥ ಅವರಿಗೆ ಹೋಲಿಸಿದರೆ ನಾನು ಎಷ್ಟರವನು? ನಾನೇಕೆ ವಾದಕ್ಕೆ ಇಳಿಯಲಿ? ಗುರುವಿಲ್ಲದೆ ಜ್ಞಾನವೂ ಇಲ್ಲ. ಸ್ವರ್ಗೀಯ ಬ್ರಹ್ಮಾನಂದವೂ ಇಲ್ಲ. ಇದೂ ಸಹ ಶಾಸ್ತ್ರಸಮ್ಮತವಾಗಿದೆ. ॥191॥ ನಿಷ್ಫಲವಾದ ವಾದಸರಣಿ ಒಳ್ಳೆಯದಲ್ಲ. ಅದು ಸ್ಪರ್ಧಾತ್ಮಕವೂ ಆಗಿರಬಾರದು. ಶ್ರದ್ಧೆ ಮತ್ತು ತಾಳ್ಮೆ ಇಲ್ಲದೆ ಎಳ್ಳಷ್ಟೂ ಪರಮಾರ್ಥಸಾಧನೆ ಸಾಧ್ಯವಿಲ್ಲ. ಮೋಕ್ಷವನ್ನೂ ಸಾಧಿಸಲು ಸಾಧ್ಯವಿಲ್ಲ. ॥192॥ ನನಗೆ ಅನುಭವವೂ ಆಗಿತ್ತು. ಅನಂತರ ಈ ರೀತಿ ನಾನ ವಿನಮ್ರನಾಗಿ ಈ ಬಿರುದನ್ನು ಸ್ವೀಕರಿಸಿದೆ. ಇದನ್ನು ಪ್ರೀತಿ ಮತ್ತು ಆಶೀರ್ವಾದ ಪೂರ್ವಕವಾಗಿ ನೀಡಲಾಗಿತ್ತು. ॥193॥ ಈಗ ಈ ಕತೆಯನ್ನು ಒಂದು ಹಂತಕ್ಕೆ ಅಂತ್ಯಗೊಳಿಸೋಣ. ವಾದಗಳು ಒಂದರ ಮೇಲೊಂದು ಹೆಚ್ಚಾಗಿ ಬಿಸಿ ಬಿಸಿ ಚರ್ಚೆ ಉಗಮವಾಗುತ್ತದೆ. ಅದರಿಂದ ಒಂದನ್ನೊಂದು ಸಮಗೊಳಿಸುವುದು ಎಂಬ ಪಾಠವನ್ನು ಕಲಿಸುತ್ತದೆ. ॥194॥ ಇದು ಈ ಗ್ರಂಥದ ಆರಂಭ, ರಚನಗಾರನ ಗುಣಗಳನ್ನು ಮತ್ತು ಸಾಯಿಯೊಡನೆ ಇರುವ ಬಾಂಧವ್ಯವನ್ನು ತೋರಿಸುತ್ತದೆ. ಸಾಯಿಯು ಲೇಖಕನಿಗೆ ಮರುನಾಮಕರಣಮಾಡಿ, ಇದನ್ನು ಉಲ್ಲೇಖಿಸಿ ತಾವುಗಳು ಆಲಿಸುವಂತೆ ಮಾಡಿರುವರು. ॥195॥ ಈ ಅಧ್ಯಾಯವು ಈಗಾಗಲೇ ಉದ್ದವಾಗಿದ್ದು ಇದನ್ನು ಮುಗಿಸೋಣ, ಹೇಮಾದ ಸಾಯಿ ಚರಣಗಲ್ಲಿ ಗೌರವಪೂರ್ವಕವಾಗಿ ನಮಿಸುತ್ತಾನೆ. ಮುಂದುವರೆದು ಕತೆಯನ್ನು ವಿವರವಾಗಿ ತಿಳಿಸಲಾಗುತ್ತದೆ. ದಯಮಾಡಿ ಆಲಿಸಿ. ॥196॥ ಕೇವಲ ಸಾಯಿ ಮಾತ್ರ ನಮ್ಮ ಆನಂದ ಹಾಗೂ ಸೌಭಾಗ್ಯ. ಕೇವಲ ಸಾಯಿ ಮಾತ್ರ ನಮ್ಮ ಪೂರ್ಣಜ್ಞಾನದಿಂದ ಲಭಿಸಿದವನು. ಕೇವಲ ಸಾಯಿ ಮಾತ್ರ ಶ್ರೇಷ್ಠ ತ್ಯಾಗಿ, ನಮ್ಮ ಅಂತಿಮಗುರಿಯೂ ಸಾಯಿಯೇ. ॥197॥ ಸಾಯಿಯ ಅನುಗ್ರಹದಿಂದ ನಾವು ಸಾಯಿಯ ಜೀವನ ಚರಿತ್ರೆಯನ್ನು ಕೇಳೋಣ. ಅದರಿಂದ ಭಯಂಕರವಾದ, ಅತಿ ಕ್ಲಿಷ್ಟವಾದ ಸಂಸಾರದಿಂದ ಕಲಿಯುಗದ ಎಲ್ಲ ಕಷ್ಟಗಳನ್ನು ನಿರ್ಮೂಲನಮಾಡಿ ಪಾರಾಗಬಹುದು. ॥198॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ನಾಮಕರಣದ ಉದ್ದೇಶ ಮತ್ತು ಅದರ ವಿವರಣೆ" ಎಂಬ ಎರಡನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

॥ಸನ್ಮಂಗಳವಾಗಲಿ॥

ಟಿಪ್ಪಣಿ

1. ಉಪ್ಪಿನ ಸಾಗರ, ಸಕ್ಕರೆಯ ಸಾಗರ, ಘೃತಸಾಗರ, ದಧಿಸಾಗರ, ಸಿಹಿನೀರಿನಸಾಗರ ಮತ್ತು ಕ್ಷೀರಸಾಗರ.
2. 1778
3. 1878
4. ತುಕಾರಾಮರ ಮಹಾರಾಷ್ಟ್ರದ ಅಭಂಗಗಳಲ್ಲಿ ಅತಿಮುಖ್ಯವಾದುದು.
5. ಭಕ್ತಿ ಸಂಗೀತದ ಛಂದಸ್ಸು.
6. ಗ್ರೀಕ್ ಸಂಸ್ಕೃತಿಯಲ್ಲಿ.
7. ಕಪ್ಪು ತಲೆಯ ಹಕ್ಕಿ, ಶಕುನ ಹೇಳುತ್ತದೆ. ಈ ಚಿಕ್ಕ ಪಕ್ಷಿಯು ಸಮುದ್ರಪಾನ ಮಾಡಿತೆಂದು ಹೇಳುತ್ತದೆ.
8. ಭಕ್ತರ ಆವಶ್ಯಕತೆಗಳು.
9. ಹುಲ್ಲು ಕಡ್ಡಿಯ ಹಾಗೆ.
10. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ.
11. ಕರ್ಮಫಲ, ಕಾರಣ ಮತ್ತು ಫಲ, ಇವುಗಳ ನಿಯಮ.
12. ಮಾಧವರಾವ್ ದೇಶಪಾಂಡೆ ಅಥವಾ ಶ್ಯಾಮ, ಒಬ್ಬ ಶಾಲಾ ಶಿಕ್ಷಕರು. ಬಾಬಾರವರ ಆತ್ಮೀಯರಲ್ಲೊಬ್ಬರು.
13. ಮೋಕ್ಷ.
14. ದೈವ ದೃಷ್ಟಿ / ದಿವ್ಯದೃಷ್ಟಿ
15. ಗೋರ, ಒಬ್ಬ ಪ್ರೀತಿಯ ತಾಯಿ.
16. ದಪ್ಪನಾದ ಸಮವಲ್ಲದ ಬ್ರೆಡ್, ಹಳ್ಳಿಗರು ತಿನ್ನುವಂತಹದು, ಕಾಳುಗಳಿಂದ ಮಾಡಲ್ಪಟ್ಟದ್ದು.
17. ಬಾಬಾರವರ ಪವಿತ್ರ ಅಗ್ನಿ, ಧುನಿಯ ವಿಭೂತಿ ಭಸ್ಮ.

18. ಬೆಳವಣಿಗೆಗೆ ಮೊದಲೇ ಬಲಿಕೊಡುವುದು. ಭ್ರೂಣದ ಜೀವಶಕ್ತಿಯನ್ನು ಬಲಿಕೊಡುವುದು. ಗರ್ಭನಿಂತ ಮೂರನೆಯ, ನಾಲ್ಕನೆಯ, ಐದನೆಯ, ಆರನೆಯ, ಏಳನೆಯ ಅಥವಾ ಎಂಟನೆಯ ತಿಂಗಳಲ್ಲಿ ಭ್ರೂಣ ಹತ್ಯೆ. ಮಗುವಿಗೆ ಹುಟ್ಟಿದ ಕೂಡಲೇ ಹೊಕ್ಕಳನ್ನು ಕತ್ತರಿಸುವ ಮೊದಲು ಚಿನ್ನದ ಚಮಚದಲ್ಲಿ ಹಸಿಬೆಣ್ಣೆಯನ್ನು ಕೊಡುವುದು, ಮಗುವಿಗೆ ನಾಮಕರಣ ಮಾಡುವುದು, ಮನೆಯಿಂದ ಹೊರಗೆ ಕರೆದುಕೊಂಡು ಹೋಗಿ ಮೂರನೆಯ ಶುಕ್ಲಪಕ್ಷದ ತದಿಗೆಯ ಚಂದ್ರನನ್ನು ತೋರಿಸುವುದು, ಆರನೆಯ ಅಥವಾ ಎಂಟನೆಯ ತಿಂಗಳಲ್ಲಿ ಅನ್ನಪ್ರಾಶನ ಮಾಡುವುದು, ಎರಡನೆಯ ಅಥವಾ ಮೂರನೆಯ ವರ್ಷದಲ್ಲಿ ಅಕ್ಷರಾಭ್ಯಾಸ ಮಾಡುವುದು. ಬ್ರಹ್ಮೋಪದೇಶ ಮಾಡುವುದು. ಗಾಯತ್ರೀ ಮಂತ್ರವನ್ನು ಉಪದೇಶಿಸುವುದು. ಉಡುದಾರವನ್ನು ಸಡಿಲಿಸುವುದು, ಮದುವೆ ಮತ್ತಿತರ ಧರ್ಮಕಾರ್ಯಗಳು.

19. ಹರಿ ಸೀತಾರಾಮ ದೀಕ್ಷಿತ್, ಮುಂಬಯಿನಲ್ಲಿದ್ದ ವಕೀಲರು. ಬಾಬಾರವರು ಅವರನ್ನು 'ಕಾಕಾ' ಎಂದು ಕರೆಯುತ್ತಿದ್ದರು. ಅವರು ಶ್ರೇಷ್ಠಭಕ್ತರಲ್ಲಿ ಒಬ್ಬರು.

20. ನಾರಾಯಣ ಗೋವಿಂದ ಚಂದೋರಕರ್ – ಬಾಬಾರವರಿಂದ ನಾನಾ ಎಂದು ಕರೆಸಿಕೊಳ್ಳುತ್ತಿದ್ದವರು ಬಾಬಾರವರಿಂದ ಕಳಿಸಲ್ಪಟ್ಟವರು. ಮತ್ತು ಆ ಕಾರಣದಿಂದಾಗಿ ದರುಶನಕ್ಕಾಗಿ ಹೋದರು.

21. ಬಾಂದ್ರಾದಿಂದ ದಾದರಿಗೆ ಹೋಗುವ ಲೋಕಲ್ ರೈಲು.

22. ರಾವ್ ಬಹಾದೂರ್ ಎಚ್. ವಿ. ಸಾಠೆರವರು ಮೊದಲು ಯಾತ್ರಿಕರಿಗಾಗಿ ವಾಡಾವನ್ನು ಕಟ್ಟಿಸಿದರು.

23. ಕುದುರೆ ಎಳೆಯುವ ಗಾಡಿ – ನಾಲ್ಕು ಜನರಿಗಾಗಿ.

24. ಮಾರುತಿ ಲಕ್ಷ್ಮಣಕೃಷ್ಣ ನಲ್ಗೂರ್, ಪಂಡರಾಪುರದ ಉಪ ನ್ಯಾಯಾಧೀಶರು.

25. 'ಲೇಂಡಿ' ಎನ್ನುವುದು ಒಂದು ಸಣ್ಣ ತೊರೆ. ಮೇಕೆ, ಒಂಟೆಗಳ ಹಿಚುಕೆ ಒಂದು ನಿರ್ದಿಷ್ಟ ಆಕಾರದವು. ಬಾಬಾರವರು ಲೇಂಡಿಬಾಗ್‌ಗೆ ಪ್ರತಿನಿತ್ಯ ಯೋಗಸಾಧನೆ ಮಾಡಲು ಹೋಗುತ್ತಿದ್ದರು. ಅದರ ಬಗ್ಗೆ ಮುಂದೆ ತಿಳಿಯುವಿರಿ.

26. ಮಾನಸ ಸರೋವರ, ಕೈಲಾಸ ಪರ್ವತದ ಆಗ್ನೇಯ ದಿಕ್ಕಿನಲ್ಲಿ ಹದಿನೆಂಟು ಮೈಲುಗಳ ದೂರದಲ್ಲಿದೆ. ಬೇರೆಯಾವುದರ ಜೊತೆಯಲ್ಲಿಯೂ ಹೋಲಿಸಲು ಅಸಾಧ್ಯವಾದುದು.

ಸರೋವರವು ಪ್ರಕೃತಿಯ ಅಂಶ, ಪರ್ವತವು ಶಕ್ತಿಯ ಅಂಶ. ಬಹಳ ಆಳವಾದ ಎತ್ತರ. ಅತಿ ಹೆಗ್ಗಳಿಕೆಗೆ ಕನ್ನಡಿ ಇಟ್ಟಂತೆ.

ಮಾನಸ ಸರೋವರವು ಬ್ರಹ್ಮಮಾನಸ ಪುತ್ರ, ಹಿಂದೂಗಳ ಅತ್ಯಂತ ಪವಿತ್ರವಾದ ಹಾಗೂ ಪುರಾತನವಾದ ಯಾತ್ರಾಸ್ಥಳಗಳಲ್ಲಿ ಅತ್ಯಂತ

ಪ್ರಾಚೀನವಾದುದು. ಹಿಂದೂಗಳ ಇತಿಹಾಸ 12 ಋಷಿಗಳ ಬಗ್ಗೆ ವಿವರಿಸುತ್ತದೆ. ಅವರು ಧ್ಯಾನ, ಪ್ರಾರ್ಥನೆಗಳಿಗಾಗಿ ಅತ್ಯಂತ ನಿಗೂಢ ಸ್ಥಳಗಳಿಗೆ ಹೋದರು. ಅಲ್ಲಿ ಅವರು ಅನೇಕ ವರ್ಷಗಳ ಕಾಲ ಧ್ಯಾನ, ತಪಸ್ಸುಗಳನ್ನು ಮಾಡಿದರು. ಅಲ್ಲಿ ಅವರಿಗೆಶಿವ ಮತ್ತು ಪಾರ್ವತಿಯರ ದಿವ್ಯ ದರ್ಶನ ದೊರಕಿತು. ಆದರೂ ನಿತ್ಯಕರ್ಮಗಳನ್ನು ಆಚರಿಸಲು ಸೂಕ್ತವಾದ ಸ್ಥಳವು ದೊರಕಲಿಲ್ಲ. ಋಷಿಗಳುಬ್ರಹ್ಮನನ್ನು ಪ್ರಾರ್ಥಿಸಿದರು. ತನ್ನ ಅನಂತವಾದ ಮನದಾಳದಿಂದ ಬ್ರಹ್ಮನು ಮಾನಸಸರೋವರವನ್ನು ಸೃಷ್ಟಿಸಿದನು. ಅದು ಮನಸ್ಸಿನ ಸರೋವರ, ಹಿಂತನಕ್ಕೆ ಕನ್ನಡಿ ಇಟ್ಟಹಾಗೆ. ಸೃಷ್ಟಿಯ ಸಮಯದಲ್ಲಿ ಋಷಿಗಳು ಹಿರಣ್ಯಗರ್ಭನನ್ನು ಪೂಜಿಸಿದರು. ಅದು ಶಿವನ ಸೃಷ್ಟಿಯ ಚಿಹ್ನೆ. ಹೊಸದಾಗಿ ಹುಟ್ಟಿದ ನೀರಿನ ಮಧ್ಯದಲ್ಲಿ ಆವಿರ್ಭವಿಸಿದೆ.

27. ಚಾಂದೋರ್ಕರ್ ಮತ್ತು ಭಾಟೆ ಇಬ್ಬರೂ ಕಾಲೇಜಿನ ಸ್ನೇಹಿತರು. ಭಾಟೆ ಶಿರಡಿಗೆ 1884ರಲ್ಲಿ ಬಂದರು. ಬಾಬಾರವರು 6 ತಿಂಗಳವರೆಗೆ ಅವರನ್ನು ನಿಲ್ಲಿಸಿಕೊಂಡರು. ರಜೆ ಮುಗಿದನಂತರ ಭಾಟೆ ಕರ್ತವ್ಯಕ್ಕೆ ಹಾಜರಾಗಲಿಲ್ಲ. ಮತ್ತು ಸಾಕೋರಿ ಎಂಬ ಊರಿನಲ್ಲಿ ಮಾಮಲೇದಾರ್ ತನ್ನ ಹುದ್ದೆಯನ್ನು ಬಿಟ್ಟನು.

ಅವನೊಬ್ಬ ನಾಸ್ತಿಕನಾಗಿದ್ದು ದೈವಭಕ್ತನಾಗಿ ಪರಿವರ್ತಿತನಾದವನು.

28. ಪಂಡರಾಪುರದಲ್ಲಿ ಚಕ್ರವರ್ತಿ ಮಹಾದೇವ ಕ್ರಿ, ಶ. 1270 ಇದರ ಬಗ್ಗೆ ವಿವರವಾಗಿ ಬರೆದ ಶಿಲಾ ಶಾಸನವಾಗಿದೆ.

29. ಪ್ರತಿದಿನವೂ ನೂರಾರು ಬ್ರಾಹ್ಮಣರಿಗೆ ಭೋಜನ ನೀಡಿದರು.

30. ನಾಲ್ಕು ವಿಧದ ಉಪವಾಸಗಳು – ದಾನಕಾರ್ಯ, ತೀರ್ಥಯಾತ್ರೆ ಮತ್ತು ಮುಕ್ತಿ/ಮೋಕ್ಷ ಇವುಗಳ ಬಗ್ಗೆ ಚರ್ಚಿಸಲಾಗಿದೆ.

31. ಎಲ್ಲ ಸ್ಥಳೀಯ ಭಾಷೆಗಳು. ಉದಾ: ಮರಾಠಿ.

32. ವಿವಿಧ ಬ್ರಾಹ್ಮಣರು.

33. ಮಾಸಿಕ ಪತ್ರಿಕೆ 'ಆನಂದ' ಏಪ್ರಿಲ್ 1923, ಸಂಚಿಕೆ 29, ಪುಟ 414ನ್ನು ನೋಡಿರಿ.

34. ಮಹಾರಾಷ್ಟ್ರದ ಮಹಾ ಸಂತ, ಕವಿ.

35. ಮರಾಠಿಯಲ್ಲಿ ಒಂದು ಹೇಳಿಕೆ ಇದೆ – "ಒಂದು ಸಣ್ಣ ಅರಿಶಿನ ತುಂಡು ಸಾಕಷ್ಟು ಹಳದಿಯನ್ನು ಕೊಡಲಾರದು."

36. ಅವನ ಗುರು.



# ಅಧ್ಯಾಯ - 3

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಈ ಗ್ರಂಥ ರಚನೆಗೆ ನೀಡಿದ ಒಪ್ಪಿಗೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಈಗ ನಾನು ಪೂರ್ವಕತೆಯನ್ನು ತೆಗೆದುಕೊಳ್ಳುತ್ತೇನೆ. ಸಾಯಿಯು ನನಗೆ ಸಂಪೂರ್ಣ ಆಶ್ವಾಸನೆ ನೀಡಿ ಹೇಳುತ್ತಾರೆ – "ನನ್ನ ಚರಿತ್ರೆಯನ್ನು ವರ್ಣಿಸಲು ಸಂಪೂರ್ಣ ಅನುಮತಿಯನ್ನು ನೀಡುತ್ತೇನೆ. ॥1॥ "ನೀನು ನಿನ್ನ ಕಾರ್ಯವನ್ನು ಮಾಡು, ಮನಸ್ಸಿನಲ್ಲಿ ಸ್ವಲ್ಪವೂ ಸಂಶಯವನ್ನು ಇಟ್ಟುಕೊಳ್ಳಬೇಡ. ನನ್ನ ಮಾತಿನಲ್ಲಿ ಪೂರ್ಣ ವಿಶ್ವಾಸವನ್ನಿಡು. ಮನಸ್ಸಿನಲ್ಲಿ ದೃಢತೆ ಇರಲಿ. ॥2॥ "ನೀನು ನನ್ನ ಲೀಲೆಗಳನ್ನು ಬರೆದಲ್ಲಿ, ಅದು ಅಜ್ಞಾನದಿಂದ ಮಾಡಿದ ಅಪರಾಧಗಳನ್ನು ನಾಶಮಾಡುತ್ತದೆ. ನೀನು ಅವುಗಳನ್ನು ಶ್ರದ್ಧೆಯಿಂದ ಆಲಿಸಿದಾಗ ನಿನ್ನ ಸಂಸಾರ ಬಂಧನಗಳೆಲ್ಲವೂ ಕಳಚಿ ಹೋಗುತ್ತವೆ. ॥3॥ "ಅವು ಮನಸ್ಸೆಂಬ ಸಾಗರದಲ್ಲಿ ಭಕ್ತಿಪ್ರೇಮಾಮೃತವೆಂಬ ಅಲೆಗಳನ್ನು ಉಂಟುಮಾಡುತ್ತವೆ. ಮತ್ತು ಅವುಗಳಲ್ಲಿ ಮುಳುಗಿದಾಗ ಆಗಾಗ್ಗೆ ಜ್ಞಾನ ರತ್ನಗಳನ್ನು ಮೇಲೆ ತರಬಹುದು." ॥4॥ ಈ ಮಾತುಗಳನ್ನು ಕೇಳಿದಾಗ ನನ್ನಲ್ಲಿ ಎಲ್ಲಾ ಸಂದೇಹಗಳೂ ನಿವಾರಣೆಯಾದವು. ನಂತರ ಸಾಯಿಯ ಚರಣಗಳಿಗೆ ನಮಿಸಿದೆನು ಮತ್ತು ಅನಂತರ ನನ್ನ ನೆನಪಿನಲ್ಲಿದ್ದಂತೆ ನಾನು ಸಾಯಿ ಸಚ್ಚರಿತೆಯನ್ನು ಬರೆಯಲು ಪ್ರಾರಂಭಿಸಿದೆನು. ॥5॥ ಬಾಬಾರವರ ಮುಖದಿಂದ ಆಶೀರ್ವಾದದ ಮಾತು ಹೊರಹೊಮ್ಮುತ್ತಲೇ, ನಾನು ಅದನ್ನು ಒಂದು ಶುಭ ಶಕುನವೆಂದು ಅರಿತೆ. ಗ್ರಂಥವು

ತಾನಾಗಿಯೇ ಪೂರ್ಣಗೊಳ್ಳುತ್ತದೆ. ನಾನು ಕೇವಲ ಭೌತಿಕವಾಗಿ ಬರೆಯುವ ಸಾಧನವಷ್ಟೇ. ॥6॥ ನೋಡಿ! ಹರಿಯ ಲೀಲೆಯು ಎಷ್ಟು ಅಗಮ್ಯ! ವರ್ಣನಾತೀತ! ಅವು ಅನುಭವಕ್ಕೆ ಮೀರಿದವು. ಕೇವಲ ಅವನಿಗೆ ಮಾತ್ರ ತಿಳಿದಿದೆ. ಶೃತಿ, ಶಾಸ್ತ್ರ, ವೇದಗಳೂ ಮೌನವಾಗಿವೆ ಮತ್ತು ಯಾರೂ ಅದರ ಆಳವನ್ನು ಅರಿಯಲು ಸಾಧ್ಯವಿಲ್ಲ. ॥7॥ ವೇದ-ಶಾಸ್ತ್ರ ವಿಶಾರದರು, ಮೇಧಾವಿಗಳು, ವಿದ್ವಾಸರು, ಓದಿದವರು, ತರ್ಕವೇತ್ತರು ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ॥8॥ ಭಗವಂತನು ತನ್ನ ನಿಜ ಭಕ್ತರ ಸ್ವಸ್ವರೂಪವೇ. ಅವನು ಮುಗ್ಧ ನಿಷ್ಕಲ್ಮಶ ಭಕ್ತರಿಗಾಗಿ ಕಾತರಿಸುತ್ತಾನೆ. ಅವನನ್ನು ಪ್ರೀತಿಸುವವರಿಗೆ ಪೂರ್ಣವಾಗಿ ಆಭಾರಿಯಾಗಿರುತ್ತಾನೆ. ಆದರೆ ಆಷಾಢಭೂತಿಗಳನ್ನು ದೂರಮಾಡುತ್ತಾನೆ॥9॥ "ಇದರಲ್ಲಿ ಕೇವಲ ನಿನ್ನ ಕಲ್ಯಾಣ ಅಡಗಿದೆ. ಇದು ನನ್ನ ಅವತಾರದ ಸಾರ್ಥಕತೆಯೂ ಸಹ. ಇದು ನನ್ನ ನಿತ್ಯ ಬೋಧನೆ. ನನಗೆ ಯಾವಾಲೂ ಇದರ ಬಗ್ಗೆ ಕಾಳಜಿ ಇದೆ. ॥10॥ "ಓ ಶ್ಯಾಮ, ನಾನು ಹೇಳುತ್ತೇನೆ. ಇನ್ನು ಮುಂದೆ ನನ್ನ ನಾಮವನ್ನು ಯಾರು ಪ್ರೀತಿಯಿಂದ ಸ್ಮರಿಸುತ್ತಾರೋ ಅವರ ಆಸೆಗಳನ್ನು ಪೂರೈಸುತ್ತೇನೆ ಮತ್ತು ಅವರ ಭಕ್ತಿಭಾವವನ್ನು ಹೆಚ್ಚಿಸುತ್ತೇನೆ. ॥11॥ "ಯಾರು ನನ್ನ ಚರಿತ್ರೆಯನ್ನು ಅನುಭವದಿಂದ ಹಾಡುತ್ತಾರೋ ಅವರು ನನ್ನ ಶಕ್ತಿ, ಸದ್ಗುಣ ಮತ್ತು ಪಾಂಡಿತ್ಯಗಳನ್ನು ಪಡೆಯುತ್ತಾರೆ. ನಾನು ಅವರನ್ನು ಪೂರ್ಣವಾಗಿ ಆವರಿಸಿ ರಕ್ಷಿಸುತ್ತೇನೆ. ॥12॥ "ಯಾವ ಭಕ್ತರು ಹೃದಯಪೂರ್ವಕವಾಗಿ ಆತ್ಮಪೂರ್ವಕವಾಗಿ ನನ್ನಲ್ಲಿ ಒಂದಾಗುತ್ತಾರೋ ಅವರು ನನ್ನ ಜೀವನ ಚರಿತ್ರೆಯನ್ನು ಕೇಳುತ್ತ ಆನಂದವಾಗಿರುವರು. ॥13॥ "ನನ್ನ ಗುಣಗಾನ ಮಾಡುವವರಿಗೆ, ಸಂಪೂರ್ಣ ಆನಂದ, ಶಾಶ್ವತ ಸುಖ ಮತ್ತು ಸಂತೃಪ್ತಿಯನ್ನು ದಯಪಾಲಿಸುತ್ತೇನೆ. ಇದು ಸತ್ಯವೆಂದು ನಂಬಿ. ॥14॥ "ಯಾರು ನನ್ನಲ್ಲಿ ಅನನ್ಯ ಶರಣಾಗತರಾಗಿರುವರೋ, ಶ್ರದ್ಧೆಯಿಂದ ನನ್ನ ಗುಣಗಾನಮಾಡುವರೋ, ನನ್ನ ಸ್ಮರಣೆ, ಚಿಂತನೆಗಳನ್ನು ಮಾಡುವರೋ, ಅವರನ್ನು ಉದ್ಧರಿಸುತ್ತೇನೆ. ಇದು ನನ್ನ ಆಶ್ವಾಸನೆ. ॥15॥ "ನನ್ನ ನಾಮ ಸ್ಮರಣೆ ಮಾಡುವವನು, ಭಕ್ತಿಯಿಂದ ಪೂಜಿಸುವವನು, ಅಧ್ಯಯನ ಮಾಡುವವನು, ನನ್ನ ಚರಿತ್ರೆಯನ್ನು ಪಾರಾಯಣ ಮಾಡುವವನು, ನನ್ನನ್ನು ಧ್ಯಾನಿಸುವವನು, ಸದಾ ಸ್ಮರಿಸುವವನು ಹೇಗೆ ತಾನೆ ಲೌಕಿಕ ವಿಷಯ ವಸ್ತುಗಳನ್ನು ಬಯಸುತ್ತಾನೆ? ॥16॥ "ನನ್ನ ನಿಜಭಕ್ತರನ್ನು ಸಾವಿನ ದವಡೆಗಳಿಂದ ಪಾರುಮಾಡುತ್ತೇನೆ. ನನ್ನ ಚರಿತ್ರೆಯನ್ನು ಕೇಳಿದಮಾತ್ರದಿಂದಲೇ ರೋಗಗಳು ವಾಸಿಯಾಗುತ್ತವೆ. ॥17॥ "ಆದರಪೂರ್ವಕವಾಗಿ ನನ್ನ ಚರಿತ್ರೆಯನ್ನು ಕೇಳುವವನು, ಪೂರ್ಣವಾಗಿ ಧ್ಯಾನಿಸುವವನು, ಮನಸ್ಸಿನಲ್ಲಿ ನಿದಿಧ್ಯಾಸನ ಮಾಡುವವನು ನಿಶ್ಚಯವಾಗಿ ಶಾಂತಿಯನ್ನು ಪಡೆಯುತ್ತಾನೆ. ॥18॥ "'ನಾನು ಮತ್ತುನೀನು' ಎಂಬುದು ಮಾಯವಾಗುತ್ತದೆ. ಶ್ರೋತೃಗಳ ಮನಸ್ಸು ಭಗವಂತನಲ್ಲಿ ಲೀನವಾಗುತ್ತದೆ. ಚಿತ್ತವು ಚೈತನ್ಯದ ಗಣಿಯಾಗುತ್ತದೆ ಮತ್ತು ಮನಸ್ಸು ಅನನ್ಯ ಪರಿಪೂರ್ಣತೆ ಮತ್ತು ಶ್ರದ್ಧೆಯಿಂದ ತುಂಬುತ್ತದೆ. ॥19॥ "'ಸಾಯಿ, ಸಾಯಿ' ಎಂಬ ನಾಮಸ್ಮರಣೆಯು ಸಕಲ ಕಲಿದೋಷವನ್ನು ನಾಶಮಾಡುತ್ತದೆ. ಒಮ್ಮೆ ನಮಸ್ಕರಿಸಿದರೆ

ಸಾಕು ಹಿಂದಿನ ವಾಕ್ ಮತ್ತು ಶ್ರವಣದ ಪಾಪಗಳನ್ನು ನಾಶಮಾಡುತ್ತದೆ." ॥20॥ ಈ ಕಾರ್ಯವು ಸಾಮಾನ್ಯವಾದುದಲ್ಲವಾದರೂ ನಾನು ಶಿರಸಾವಹಿಸಿ ಆಜ್ಞೆಯನ್ನು ಪರಿಪಾಲಿಸಿರುವೆ. ವಾಕ್ಕೋವಿದರಾದ ಬಾಬಾರವರು ಇರುವಾಗ ನಾನು ದೀನನೆಂದೇಕೆ ಭಾವಿಸಬೇಕು. ॥21॥ ಕೆಲವು ಭಕ್ತರನ್ನು ಮಂದಿರಗಳನ್ನು ನಿರ್ಮಿಸಲು, ಕೆಲವರನ್ನು ಸಂಕೀರ್ತನೆಯಲ್ಲಿ ಮೈಮರೆಯುವಂತೆ ಮಾಡಿದರು. ಕೆಲವರನ್ನು ತೀರ್ಥಯಾತ್ರೆ ಮಾಡಲು ಕಳಿಸಿದರು ಮತ್ತು ನನ್ನನ್ನು ಕುಳಿತುಕೊಂಡು ಬರೆಯುವಂತೆ ಮಾಡಿದರು. ॥22॥ ಭಕ್ತರಲ್ಲೆಲ್ಲ ನಾನು ಪಾಪಿ. ಕರುಣಾಸಾಗರ ಮತ್ತು ದಯಾಘನನಾದ ಸಾಯಿಯು ನನ್ನ ಯಾವ ಗುಣವನ್ನು ಕಂಡು ನನ್ನ ಮೇಲೆ ತಮ್ಮ ಕರುಣೆಯನ್ನು ಹರಿಸಿದರೋ ನನಗೆ ತಿಳಿಯದು. ॥23॥ ಗುರುವಿನ ಕೃಪೆ ಎಷ್ಟು ಅಭೂತಪೂರ್ವವಾಗಿದೆ. ಒಣಗಿರುವ ಗಿಡವು ಯಾವುದೇ ಪ್ರಯತ್ನವಿಲ್ಲದೆಯೇ ಚಿಗುರುತ್ತದೆ. ಎಂತಹ ಒಣಗಿದ ಮಣ್ಣೂ ಫಲಭರಿತವಾಗುತ್ತದೆ. ॥24॥ ಭವಿಷ್ಯದಲ್ಲಿ ಕೆಲವರು ಆಶ್ರಮಗಳನ್ನು, ಕೆಲವರು ಮಂದಿರಗಳನ್ನು, ಕೆಲವರು ಸ್ನಾನಘಟ್ಟಗಳನ್ನು ಕಟ್ಟಬಹುದು. ಆದರೆ ನಾನು ಮಾತ್ರ ಸಾಯಿಯ ಗುಣಗಾನ ಮಾಡುವ ನೇರವಾದ ಮಾರ್ಗವನ್ನು ಹಿಡಿಯುವೆ. ॥25॥ ಕೆಲವರು ಭಕ್ತಿಯಿಂದ ಸಾಯಿಯ ಉಪಾಸನೆ ಮಾಡಬಹುದು. ಕೆಲವರು ಪಾದವೊತ್ತಿ ಸೇವೆ ಮಾಡಬಹುದು. ಆದರೆ ನನ್ನ ಮನಸ್ಸು ಸಾಯಿಯ ಗುಣಗಾನ ಮಾಡಲು ಉತ್ಕಂಠಿತವಾಗಿದೆ. ॥26॥ ಕೃತಯುಗದಲ್ಲಿ ಧ್ಯಾನದಿಂದ ಪ್ರಾಪ್ತವಾಗುವ, ತ್ರೇತಾಯುಗದಲ್ಲಿ ಯಜ್ಞಕಾರ್ಯಗಳಿಂದ, ದ್ವಾಪರಯುಗದಲ್ಲಿ ಅರ್ಚನೆಯಿಂದ ಲಭಿಸುವುದನ್ನು ಈಗ ಕಲಿಯುಗದಲ್ಲಿ ನಾಮಸಂಕೀರ್ತನೆಯಿಂದ ಗುರುಭಜನೆಯಿಂದ ಪಡೆಯಬಹುದು. ॥27॥ ನಾನಾದರೂ ಅರ್ಹನಲ್ಲ, ಯಾವುದೇ ಕೆಲಸಕ್ಕೆ ಬಾರದವನು ಹಾಗೂ ಏನನ್ನೂ ತಿಳಿಯದವನು, ಹಾಗಿರಲು ಇಂತಹ ಕಷ್ಟ ಸಾಧ್ಯವಾದ ಕೆಲಸವನ್ನು ನಾನು ನಿರ್ವಹಿಸಲು ಹೇಗೆ ಸಾಧ್ಯ? ॥28॥ ನಾನು ಏನೂ ಪ್ರಯತ್ನಪಡದೆಯೇ ನಿಷ್ಕ್ರಿಯನಾಗಿ ಕುಳಿತಲ್ಲಿ ಅದು ಅವಿಧೇಯತೆಯ ಪಾಪಕರ್ಮವಾಗುತ್ತದೆ. ಮತ್ತು ಆಜ್ಞಾಪಾಲನೆ ಮಾಡಿದಲ್ಲಿ ಈ ಕಾರ್ಯವನ್ನು ನಿರ್ವಹಿಸಲು ಸಾಧ್ಯವೇ? ॥29॥ ಸಾಯಿ ಸಮರ್ಥರ ಸಹಜ ಸ್ಥಿತಿಯನ್ನು ವರ್ಣಿಸಲು ಯಾರಿಗೆ ಸಾಧ್ಯ? ಕೇವಲ ಸಾಯಿ ಮಾತ್ರ ಕೃಪೆತೋರಿ ಭಕ್ತನ ಮೂಲಕ ಮಾಡಿಸಲು ಸಾಧ್ಯ. ॥30॥ ಮಾತು ಸಮರ್ಥವಾಗಿ ತನ್ನ ಕೆಲಸ ಮಾಡಲಾರದು ಎಂದಾಗ ನಾನೇಕೆ ಹಂಬಲ ಬೆಳೆಸಿಕೊಂಡೆ? ಈ ವಿಚಾರವಾಗಿ ಮಾತನಾಡಲು ಸಾಯಿಯು ಯಾವುದೇ ಅವಕಾಶವನ್ನಾಗಲೀ ಸಂದರ್ಭವನ್ನಾಗಲೀ ಕೊಡಲಿಲ್ಲ. ॥31॥ ನಾನು ಲೇಖನಿಯನ್ನು ಹಿಡಿದಾಗ ಬಾಬಾರವರು ನಾನು ನನ್ನ ಭಾವವನ್ನೇ ಕಳೆದುಕೊಳ್ಳುವಂತೆ ಮಾಡಿದರು. ತಮ್ಮ ಕತೆಯನ್ನು ತಾವೇ ಬರೆಯಲು ಪ್ರಾರಂಭಿಸಿದರು. ಆದ್ದರಿಂದ ಎಲ್ಲಾ ಹೆಗ್ಗಳಿಕೆಯೂ ಅವರದೇ. ॥32॥ ಒಬ್ಬ ಸಂತನ ಚರಿತ್ರೆಯನ್ನು ಸಂತನೇ ಬರೆಯಬಲ್ಲನು. ಸಾಯಿಯ ತರ್ಕರಹಿತ ಗುಣಗಳನ್ನು ಅರ್ಥಮಾಡಿಕೊಳ್ಳುವುದು ಆಕಾಶವನ್ನು ಆಲಿಂಗನ ಮಾಡಿದಂತೆ. ॥33॥ ಸಾಯಿಯ ಅತಿ ಗಹನವಾದ ಮಹಿಮೆಗಳನ್ನು ವಿವರಿಸಲು ನಾನು

ಬುದ್ಧಿಹೀನ. ತಾವೇ ಸ್ವತಃ ಇದನ್ನು ಮಾಡಬಹುದಿತ್ತು ಮತ್ತು ಕೊಟ್ಟ ವಚನದಿಂದ ಮುಕ್ತರಾಗಬಹುದಿತ್ತು. ||34|| ಆದರೆ, ಬಾಬಾ! ನಾನು ಬ್ರಾಹ್ಮಣನಾಗಿ ಜನಿಸಿದ್ದರೂ, ನನಗೆ ಶೃತಿ ಮತ್ತು ಸ್ಮೃತಿಗಳ ಜ್ಞಾನವಿಲ್ಲದಿದ್ದರೂ, ಅದು ನನ್ನ ಹುಟ್ಟಿಗೆ ಬಂದ ಕಪ್ಪು ಚುಕ್ಕೆಯಾಗಿದ್ದರೂ ನಾನು ನಿಮ್ಮ ಸಹವಾಸದಲ್ಲಿ ಇರುವುದೇ ಒಂದು ಭೂಷಣವಾಗಿದೆ. ||35|| ಶೃತಿ ಮತ್ತು ಸ್ಮೃತಿಗಳು ಬ್ರಾಹ್ಮಣನ ಎರಡು ಕಣ್ಣುಗಳು. ಒಂದರ ಜ್ಞಾನವಿಲ್ಲದಿದ್ದರೂ ಅವನು ಮಾಲೆಗಣ್ಣಿನವನು, ಎರಡೂ ಇಲ್ಲದವನು ಪೂರ್ಣ ಕುರುಡ. ನಾನಾದರೂ ಅತೀ ಕೆಳಮಟ್ಟದವನೂ, ನಮ್ರನೂ, ದೀನನೂ ಆಗಿರುವೆ. ಏಕೆಂದರೆ ನನಗೆ ಎರಡರಲ್ಲೂ ಕೊರತೆಯಿದೆ. ||36|| ಅಂಧರಿಗೆ ಊರುಗೋಲು ಹೇಗೋ ಹಾಗೆ ನೀನು ನನಗೆ ಆಸರೆ. ಹಾಗಿರುವಾಗ ನಾನೇಕೆ ಚಿಂತಿಸಲಿ? ನಿನ್ನ ಆಧಾರದಿಂದ ನಾನು ಈ ಕಷ್ಟವಾದ ಮಾರ್ಗದಲ್ಲಿ ನಿನ್ನನ್ನು ಹಿಂಬಾಲಿಸುತ್ತೇನೆ. ||37|| ಹೇಗೆ ಮುಂದುವರೆಯಬೇಕೆಂದು ನನಗೆ ತಿಳಿಯದು. ದೀನನಾದ ನನಗೆ ಏನು ಮಾಡಬೇಕೆಂದು ತಿಳಿಯುತ್ತಿಲ್ಲ. ನೀವೇ ನನಗೆ ಬುದ್ಧಿಶಕ್ತಿಯನ್ನು ನೀಡಿ ನಿಮ್ಮ ಕೆಲಸವನ್ನು ನೀವೇ ಮಾಡಿಸಿಕೊಳ್ಳಿರಿ. ||38|| ಮೂಕನನ್ನು ‘ಬೃಹಸ್ಪತಿ’[3]ಯಂತೆ ವಾಚಾಳನನ್ನಾಗಿ ಮಾಡುವ, ಹೆಳವನಿಗೆ ಮೇರುಪರ್ವತವನ್ನು ದಾಟುವ ಶಕ್ತಿನೀಡುವ, ಮತಿಗೆ ಮೀರಿದ ದೈವೀ ಶಕ್ತಿಯ ನಿಗೂಢತೆಯನ್ನು ಬಾಬಾ ಮಾತ್ರ ಅರಿಯಬಲ್ಲರು. ||39|| ನಾನು ಕೇವಲ ನಿಮ್ಮ ನಮ್ರನಾದ ದಾಸ. ನನ್ನನ್ನು ಪರಾವಲಂಬಿಯಾಗಿ ಮಾಡಬೇಡಿ. ನನ್ನ ಈ ದೇಹದಲ್ಲಿ ಉಸಿರು ಇರುವವರೆಗೆ ನನ್ನಿಂದ ನಿಮ್ಮ ಕೆಲಸವನ್ನು ನನ್ನ ಕೈಯಲ್ಲಿ ಮಾಡಿಸಿರಿ. ||40|| ಈಗ, ಓ ಶ್ರೋತೃಗಳೇ! ನಿಮಗೆ ಈ ಗ್ರಂಥದ ಉದ್ದೇಶ ತಿಳಿದಿದೆ. ಸಾಯಿಯು ತಾವೇ ಸ್ವತಃ ಭಕ್ತರ ಕಲ್ಯಾಣಕ್ಕಾಗಿ ಬರೆಯುತ್ತಿದ್ದಾರೆ. ನಾನು ಕೇವಲ ಅವರ ಉಪಕರಣ. ||41|| ಮುರಳಿಗಾಗಲೀ, ಹಾರ್ಮೋನಿಯಂ ಪೆಟ್ಟಿಗೆಗಾಗಲಿ ಅವುಗಳಿಂದ ಹೊರಡುವ ಸ್ವರಗಳ ಬಗ್ಗೆ ಯೋಚನೆ ಇಲ್ಲ. ಕೇವಲ ವಾಚಕರಿಗೆ ಮಾತ್ರ ಅದರ ಬಗ್ಗೆ ಕಾಳಜಿ ಇದೆ. ಅದೇ ರೀತಿ ನಾವು ಏಕೆ ತೊಂದರೆಪಟ್ಟುಕೊಳ್ಳಬೇಕು? ||42|| ‘ಚಂದ್ರಕಾಂತ’[4] ಸುರಿಸುವ ಅಮೃತ ಅದರದ್ದೇ! ಚಂದ್ರೋದಯವಾಗುವಾಗ ಚಂದ್ರ ನಿರ್ಮಿತವಾದದ್ದು. ಚಂದ್ರನಿಂದ ಸೃಷ್ಟಿಸಲ್ಪಟ್ಟ ಪವಾಡವೇ ಆಗಿದೆ. ||43|| ಸಮುದ್ರದ ಪೂರ್ಣ ಉಬ್ಬರ ಅದರ ಕಾರ್ಯವಲ್ಲ. ಅದೂ ಸಹ ಚಂದ್ರನ ಕೈಯಲ್ಲಿದೆ. ಸಾಗರಕ್ಕೆ ಅದನ್ನುಂಟುಮಾಡುವ ಶಕ್ತಿ ಇಲ್ಲ. ||44|| ಹಾಗೆಯೇ ಆಗಲಿ. ಸಾಗರದಲ್ಲಿ ಕೆಂಪುದೀಪವನ್ನು, ಹಡಗಿನ ಮಾರ್ಗದರ್ಶನಕ್ಕಾಗಿ ಹಾಗೂ ಅವು ಬಂಡೆಗಳಿಗೆ ಬಡಿಯದಿರಲಿ ಮತ್ತು ಸುಳಿಗಳಲ್ಲಿ ಸಿಕ್ಕಿಕೊಳ್ಳದಿರಲಿ ಎಂದು ಎಚ್ಚರಿಕೆ ನೀಡಿ ರಕ್ಷಿಸಲು ಇಟ್ಟಿರುತ್ತಾರೆ. ||45|| ಹಾಗೆಯೇ ಸಾಯಿನಾಥನ ಕತೆಗಳು ಅಮೃತದ ಮಧುರತ್ವವನ್ನೂ ಮೀರಿಸುತ್ತವೆ. ದುಸ್ತರವಾದ ಭವಸಾಗರದ ಕಠಿಣ ಮಾರ್ಗಗಳನ್ನು ಸುಲಭವಾಗಿ ದಾಟಿಸಿ ನಮ್ಮನ್ನು ಸುಕ್ಷೇಮವಾಗಿ ದಡಸೇರಿಸುತ್ತವೆ. ||46|| ಆ ಸಂತಕಥೆಗಳು ಧನ್ಯ, ಧನ್ಯ. ಅವು ನಮ್ಮ ಕಿವಿಗಳಿಂದ ಒಳಗೆ ಪ್ರವೇಶಿಸಿ ಅಂತರಂಗವನ್ನು ಸ್ಪರ್ಶಿಸಿ ದೇಹದ ‘ಅಹಂ’ಭಾವವನ್ನು ಹೊಡೆದೋಡಿಸಿ ಶುದ್ಧಮಾಡಿ ದ್ವಂದ್ವ

ಭಾವವನ್ನು ನಾಶಮಾಡುತ್ತವೆ. ॥47॥ ನಮ್ಮ ಹೃದಯದಲ್ಲಿ ಹೆಚ್ಚು ಹೆಚ್ಚು ಕತೆಗಳು ಸೇರಿದಾಗ, ಸಂದೇಹ ಅತ್ತಿತ್ತ ಓಡುತ್ತವೆ ಮತ್ತು ಜ್ಞಾನವೃದ್ಧಿಯಾಗುತ್ತದೆ. ನಮ್ಮ ದೇಹದೊಡನೆ ನಮ್ಮನ್ನು ಗುರುತಿಸಿಕೊಳ್ಳುವುದು ಕ್ಷೀಣವಾಗುತ್ತದೆ. ॥48॥ ಬಾಬಾರವರ ಶುದ್ಧ ಯಶೋಗಾಥೆಯನ್ನು ವಿವರಿಸುವುದು ಮತ್ತು ಅವುಗಳನ್ನು ಹೃದಯಪೂರ್ವಕವಾಗಿ ಕೇಳುವುದು ಭಕ್ತರ ಪಾಪಗಳನ್ನೆಲ್ಲ ಸುಟ್ಟು ಹಾಕುತ್ತವೆ. ಇದು ಮೋಕ್ಷಕ್ಕೆ ಸುಲಭ ಸಾಧನೆ. ॥49॥ ಬ್ರಹ್ಮನ ಸೃಷ್ಟಿಯೂ ಮಾಯಾತೀತವಾಗಿದೆ. ಮಾಯೆಯನ್ನು ಗೆಲ್ಲುವ ಉಪಾಯಗಳೇನು? ನೈತಿಕ – ಸಾತ್ವಿಕ ಜೀವನವನ್ನು ನಡೆಸುವ ಭಕ್ತರನ್ನು ದೇವರು ಅನುಗ್ರಹಿಸುತ್ತಾನೆ. ಹಾಗಲ್ಲದೆ ಭಕ್ತರು ಮಾಯೆಯನ್ನು ಹೇಗೆ ತಾನೆ ಗೆಲ್ಲಲು ಸಾಧ್ಯ? ॥50॥ ಪರಿಪೂರ್ಣವಾದ ಆನಂದ ಎಂದರೇನು? ಭಕ್ತಿ, ಮುಕ್ತಿ, ವಿರಕ್ತಿಗಳು ಎಂದರೇನು? ನಾಲ್ಕು ವರ್ಣಗಳಿಗೆ ಮತ್ತು ನಾಲ್ಕು ಆಶ್ರಮಗಳಿಗೆ ಸೇರಿದ ತತ್ತ್ವಗಳೆಲ್ಲವೂ ಒಂದೇ, ಅಮೂರ್ತ ವಿಚಾರಗಳು. ॥51॥ ಈ ವಿಷಯಗಳ ಬಗ್ಗೆ ತಿಳಿಯಲು ಇಚ್ಛಿಸುವವರು ಜ್ಞಾನೇಶ್ವರ, ಏಕನಾಥ ಮತ್ತಿತರರು ರಚಿಸಿದ ಗ್ರಂಥಗಳನ್ನು ಅಧ್ಯಯನ ಮಾಡಿ ಅವು ನೀಡುವ ಸಂತೋಷವನ್ನು ಅನುಭವಿಸಲಿ. ॥52॥ ಕೃತಯುಗದಲ್ಲಿ 'ಶಮ' – ಇಂದ್ರಿಯನಿಗ್ರಹ ಮತ್ತು 'ದಮ' – ವಾಸನೆಗಳನ್ನು ತ್ಯಜಿಸುವುದು, ತ್ರೇತಾಯುಗದಲ್ಲಿ ಯಜ್ಞಯಾಗಾದಿಗಳು, ದ್ವಾಪರಯುಗದಲ್ಲಿ ಉಪಾಸನೆ ಮತ್ತು ಕಲಿಯುಗದಲ್ಲಿ ನಾಮಜಪ ಮತ್ತು ಸಂಕೀರ್ತನೆಯು ಮೋಕ್ಷಪಡೆಯಲು ಸರಳ ಸಾಧನೆಯಾಗಿವೆ. ॥53॥ ಬ್ರಾಹ್ಮಣ ಇತ್ಯಾದಿ ನಾಲ್ಕು ವರ್ಣದವರೆಲ್ಲರಿಗೂ ಗುರುಕಥಾಶ್ರವಣವು ಸರಳ ಸಾಧನೆ. ಸ್ತ್ರೀ, ಶೂದ್ರ ಅಥವಾ ಜಾತಿಹೀನರಿಗೂ ಇದೇ ಒಂದು ಸರಳ ಸಾಧನೆ. ॥54॥ ಹಿಂದಿನ ಜನ್ಮದ ಪುಣ್ಯಕಾರ್ಯಗಳ ಫಲಹೊಂದಿರುವವರು ಮಾತ್ರ ಈ ಕಥೆಗಳನ್ನು ಶ್ರವಣ ಮಾಡುವರು. ಯಾರಾದರೂ ನಿದ್ರೆಹೋದರೆ ದೇವರೇ ಅವರನ್ನು ಎಚ್ಚರಗೊಳಿಸುವನು. ॥55॥ ಯಾರು ವಿಷಯಭೋಗಗಳಲ್ಲೇ ಸದಾ ಮುಳುಗಿರುತ್ತಾರೋ ಮತ್ತು ಅವು ದೊರಕದಿದ್ದಲ್ಲಿ ದೀನಚಿತ್ತರಾಗಿರುವರೋ ಅವರನ್ನು ಈ ಸಂತ ಕಥಾಮೃತವು ವಿಷಯವಾಸನೆಗಳಿಂದ ವಿಮುಕ್ತಗೊಳಿಸುವುದು. ॥56॥ ಯೋಗ, ಯಾಗಗಳಿಗೆ, ಧ್ಯಾನಕ್ಕೆ, ಏಕಾಗ್ರತೆಗೆ ಸತತಾಭ್ಯಾಸ ಪ್ರಯತ್ನ ಬೇಕಾಗುತ್ತದೆ. ಆದರೆ ಕಥಾಶ್ರವಣಕ್ಕೆ ಗಮನವಿಟ್ಟು ಕೇಳುವುದು ಹೊರತು ಪ್ರಯಾಸಪಡಬೇಕಾಗಿಲ್ಲ. ॥57॥ ಈ ರೀತಿ ಸಾಯಿ ಕತೆಯು ನಿರ್ಮಲವಾಗಿದೆ. ಇದನ್ನು ಪರಿಶುದ್ಧ ಮನಸ್ಸಿನ ಸಜ್ಜನರು ಪ್ರೇಮದಿಂದ ಆಲಿಸಿದರೆ ಪ್ರಯೋಜನವುಂಟು. ಪ್ರಬಲವಾದ ಪಂಚಮಹಾಪಾಪಗಳೂ ಭಸ್ಮವಾಗುತ್ತವೆ. ॥58॥ ನಾವು ಭವಪಾಶದಿಂದ ಬಂಧಿತರಾಗಿದ್ದೇವೆ. ಇದರಿಂದ ನಮ್ಮ ಸ್ವಸ್ವರೂಪವು ಮರೆಯಾಗಿದೆ. ಈ ಕತೆಗಳನ್ನು ಕೇಳಿದ ನಂತರ ಬಂಧಗಳು ಸಡಿಲಗೊಂಡು ನಾವು ಆತ್ಮಸ್ವರೂಪವನ್ನು ಅರಿಯುತ್ತೇವೆ. ॥59॥ ಈ ಕತೆಗಳನ್ನು ಜೀವನ ಪೂರ್ತಿ ನೆನೆಸಿಕೊಳ್ಳುತ್ತಿರಬೇಕು ಮತ್ತು ನಿತ್ಯವೂ ಅವುಗಳನ್ನು ಪಠನ ಮಾಡುತ್ತಿದ್ದರೆ ಅವು ಶ್ರೋತೃಗಳನ್ನು ಭವಬಂಧನದಿಂದ ಬಿಡಿಸಿ ಅವರಿಗೆ ಶಾಂತಿ, ಸಮಾಧಾನಗಳನ್ನು ತಂದುಕೊಡುತ್ತವೆ. ॥60॥ ಭಕ್ತಿ ಮತ್ತು ಶ್ರದ್ಧೆಯಿಂದ ಓದುವಾಗ, ಶ್ರವಣ ಮಾಡುವಾಗ, ನಾನು

ಸಾಯಿಯನ್ನು ಧ್ಯಾನಿಸುವಂತಾಗಲಿ. ಅವರು ತಮ್ಮ ಸಗುಣ ರೂಪದಲ್ಲಿ ನನ್ನ ಮುಂದೆ ದರ್ಶನ ನೀಡಲಿ ಮತ್ತು ಅದು ನನ್ನ ಮನಸ್ಸಿನ ಮೇಲೆ ಶಾಶ್ವತ ಮುದ್ರೆ ಒತ್ತಲಿ. ॥61॥ ಈರೀತಿ ಸದ್ಗುರು ಭಕ್ತಿಯು ಹೆಚ್ಚಲಿ. ಪ್ರಪಂಚದಿಂದ ವಿರಕ್ತಿ ಉಂಟಾಗಲಿ, ಗುರುಸ್ಮರಣೆಯನ್ನು ಪ್ರೇಮದಿಂದ ಮಾಡಲು ಉತ್ಸಾಹ ತುಂಬಲಿ ಮತ್ತು ನನ್ನ ಮನಸ್ಸನ್ನು ಪರಿಶುದ್ಧಗೊಳಿಸಲಿ. ॥62॥ ಈ ಉದ್ದೇಶವನ್ನು ಮನದಲ್ಲಿಟ್ಟುಕೊಂಡು ಸಾಯಿನಾಥರು ನನ್ನನ್ನು ಅನುಗ್ರಹಿಸಲಿ. ನನ್ನನ್ನು ನಿಮಿತ್ತಮಾತ್ರವನ್ನಾಗಿ ಮಾಡಿ ತಾವೇ ಸ್ವಯಂ ಗ್ರಂಥ ರಚನೆ ಮಾಡಲಿ. ॥63॥ ಹಸುವಿನ ಕೆಚ್ಚಲಿನಲ್ಲಿ ಹಾಲು ಉಕ್ಕಿ ಹರಿಯುತ್ತಿದ್ದರೂ ಅದು ತನ್ನ ಕರುವಿಗೆ ಮಾತ್ರ ಹಾಲು ಕುಡಿಸುತ್ತದೆ. ಅದೇ ರೀತಿ ಸಾಯಿನಾಥರ ಪ್ರೇಮವೂ ಸಹ. ॥64॥ ಚಾತಕಪಕ್ಷಿ[9]ಯಂತೆ ಕಾತರದಿಂದ ನನಗಾಗಿ ಸಾಯಿಮಾತೆಯು ಘನವಾದ ಆನಂದದ ಮಳೆ ಸುರಿಸಿದಳು, ನನ್ನ ಅಲ್ಪ ಬಾಯಾರಿಕೆಯನ್ನು ಹಿಂಗಿಸಿದಳು ಮತ್ತು ತನ್ನ ಭಕ್ತರ ಬಾಯಾರಿಕೆಯನ್ನು ಪೂರ್ಣವಾಗಿ ಇಂಗಿಸುತ್ತಾಳೆ. ॥65॥ ಪ್ರೀತಿ ಮತ್ತು ಭಕ್ತಿಗಳು ಎಷ್ಟು ಕೌತುಕ. ತಾಯಿಯು ತನ್ನ ಮಗುವಿನ ಬಗ್ಗೆ ಉಕ್ಕಿ ಬರುವ ಪ್ರೀತಿಯಿಂದ ಮಗು ಕೇಳದಿರುವಾಗಲೂ ತನ್ನ ಹಾಲನ್ನು ಆ ಮಗುವಿನ ಬಾಯಿಗೆ ಒತ್ತಾಯಪೂರ್ವಕವಾಗಿ ಕುಡಿಸುತ್ತಾಳೆ. ॥66॥ ಅವಳ ಆಯಾಸ ಯಾರಿಗೆ ಗೊತ್ತು? ಮಗು ಏನನ್ನೂ ಅರಿಯದು. ತಾಯಿಯಲ್ಲದೆ ಮತ್ತ್ಯಾರು ಆ ಮಗುವಿಗೆ ಕೇಳದೇನೇ ತನ್ನ ಮೊಲೆಯೂಡಿಸುತ್ತಾಳೆ? ॥67॥ ಆ ಮಗುವನ್ನು ಆಭರಣಗಳಿಂದ ಅಲಂಕರಿಸಿದಾಗ ಮಗುವಿಗೆ ಅದರ ಯಾವ ಪ್ರಾಮುಖ್ಯತೆಯೂ ತಿಳಿದಿರುವುದಿಲ್ಲ. ತಾಯಿ ಈ ಆನಂದವನ್ನು ಅನುಭವಿಸುತ್ತಾಳೆ. ಸದ್ಗುರುವಿನ ರೀತಿಯೂ ಹಾಗೇನೆ. ॥68॥ ನನ್ನಲ್ಲಿರುವ ಈ ಮಗುವಿನ ಮುಗ್ಧತೆಯನ್ನು ಯಾರು ಪ್ರೀತಿಯಿಂದ ತೃಪ್ತಿಪಡಿಸುತ್ತಾರೆ? ತಾಯಿಯಲ್ಲದೆ ಮತ್ತ್ಯಾರಿಗೆ ಈ ರೀತಿಯ ನಿಜವಾದ ಕಾಳಜಿ ಇರುತ್ತದೆ. ಈ ರೀತಿಯ ವಾತ್ಸಲ್ಯ ಬಹು ಅಪರೂಪವಾದದ್ದು. ॥69॥ ಸದ್ಗುಣಿಮಾತೆಯನ್ನು ಪಡೆಯುವುದೂ ಭಗವಂತನ ಅನುಗ್ರಹ ಪಡೆಯುವುದೂ ಮಹಾ ಪುಣ್ಯದ ಫಲ. ಆದರೂ ಮಗು ತಾಯಿಯ ಪ್ರಸವವೇದನೆಯನ್ನು ಅರಿತಿರುವುದಿಲ್ಲ. ॥70॥ ಅದೇನೇ ಇರಲಿ, ಈ ಬಗ್ಗೆ ಬಾಬಾರವರು ಮತ್ತಷ್ಟು ಹೆಚ್ಚಿಗೆ ಹೇಳಿರುವುದನ್ನು ನಾನು ನಿಮಗೆ ಹೇಳುತ್ತೇನೆ. ಓ ಸಜ್ಜನ ಶ್ರೋತೃಗಳೇ, ದಯಮಾಡಿ ಅದನ್ನು ಗಮನವಿಟ್ಟು ಆದರಪೂರ್ವಕವಾಗಿ ಕೇಳಿರಿ. ॥71॥ ಕ್ರಿ. ಶ. 1916 ರಲ್ಲಿ ನನ್ನ ಸರ್ಕಾರಿ ಸೇವೆ ಮುಗಿಯಿತು ಮತ್ತು ಒಂದು ನಿಶ್ಚಿತವಾದ ಪಿಂಚಣಿಯನ್ನು ನಿಗದಿಪಡಿಸಲಾಯಿತು. ನನಗೆ ಶಿರಡಿ ಯಾತ್ರೆ ಮಾಡುವ ಸಮಯ ಕೂಡಿ ಬಂದಿತು. ॥72॥ ಅದು ಗುರು ಪೂರ್ಣಿಮೆಯ ದಿನ. ಗುರುಪೂಜೆಯನ್ನು ಮಾಡಲು ಭಕ್ತರು ನೆರೆದಿದ್ದರು. ಚಿಂಚೋಣಿಕರ ಅಣ್ಣಾನು[10], ತಾನಾಗಿಯೇ ಬಾಬಾರವರಲ್ಲಿ ವಿನಂತಿ ಮಾಡಿದನು. ಅವನ ಕೋರಿಕೆ ಏನೆಂದು ನೋಡೋಣ. ॥73॥ ನನ್ನ ಬಗ್ಗೆ ಅಣ್ಣಾನಿಗೆ ಬಹಳ ಕಾಳಜಿ ಇತ್ತು. ಅವನು ಬಾಬಾರವರಲ್ಲಿ ನಿವೇದಿಸಿಕೊಂಡನು. "ಸಂಸಾರವು ಬೆಳೆಯುತ್ತಿರುವುದರಿಂದ ಅವನ ಮೇಲೆ ಕರುಣೆ ತೋರಿ ॥74॥ "ಅವನಿಗೆ ಮತ್ತೇನಾದರೂ

ಕೆಲಸ ಕೊಡಿ. ಈ ಪಿಂಚಣಿ ಸಾಕಾಗುವುದಿಲ್ಲ. ಅಣ್ಣಾ ಸಾಹೇಬನ ಚಿಂತೆಯನ್ನು ದೂರಮಾಡಿ. ಈ ರೀತಿ ಏನನ್ನಾದರೂ ಮಾಡಿ." ॥75॥ ಅದಕ್ಕೆ ಉತ್ತರವಾಗಿ ಬಾಬಾ ಹೇಳಿದರು – "ಅವನಿಗೆ ಮತ್ತೊಂದು ನೌಕರಿಯು ಸಿಗುತ್ತದೆ. ಈಗ ಅವನು ನನ್ನ ಸೇವೆ ಮಾಡಲಿ. ಅವನಿಗೆ ಸಂಸಾರ ಸುಖವೂ ದೊರೆಯುತ್ತದೆ. ॥76॥ "ಅವನ ಸಂಸಾರ ಯಾವಾಗಲೂ ಉದ್ಧಾರವಾಗುತ್ತದೆ ಮತ್ತು ಯಾವಜ್ಜೀವಪರ್ಯಂತ ಅವನಿಗೆ ಬೇರೆ ಏನೂ ಬೇಕಾಗುವುದಿಲ್ಲ. ಅವನು ಪೂರ್ಣ ಶ್ರದ್ಧೆಯಿಂದ ನನ್ನನ್ನು ಅವಲಂಬಿಸಿದ್ದೇ ಆದಲ್ಲಿ ಅವನ ಆಪತ್ತುಗಳನ್ನೆಲ್ಲಾ ಪರಿಹರಿಸುತ್ತೇನೆ. ॥77॥ "ತಮ್ಮ ಇಚ್ಛಾನುಸಾರ ವರ್ತಿಸುತ್ತೇವೆ ಎಂದು ಹೇಳುವ ಜನರು ಇರುತ್ತಾರೆ, ಅವರು ದಾರಿ ತಪ್ಪಿದವರಾಗಿರುತ್ತಾರೆ. ಧರ್ಮಾಚರಣೆಯಿಂದ ವಿಮುಖರಾದವರು ಮೊದಲು ಅಂತಹ ಜನರಿಂದ ದೂರವಾಗಿರುತ್ತಾರೆ. ॥78॥ "ಅಂತಹ ಜನರು ಸಿಕ್ಕಲಿ ಅವರಿಂದ ದೂರವಾಗಿರಿ. ಅವರನ್ನು ಅತಿಭಯಂಕರವೆಂದು ತಿಳಿಯಿರಿ. ಅವರ ನೆರಳಿಗೂ ಸಹ ಭಯಪಡಬೇಕು ಮತ್ತು ಅವರನ್ನು ಅತ್ಯಂತ ಕಷ್ಟದಿಂದಾದರೂ ದೂರವಿಡಬೇಕು. ॥79॥ "ಆಚಾರಹೀನನೂ, ಶೀಲಭ್ರಷ್ಟನೂ, ವಿಚಾರಹೀನನೂ, ಕರ್ಮಭ್ರಷ್ಟನೂ, ಇಷ್ಟಾನಿಷ್ಟಗಳನ್ನು ಪರಾಮರ್ಶಿಸದೆ ಇರುವವನೂ ಜೀವನದಲ್ಲಿ ಏನಾದರೂ ಒಳ್ಳೆಯದನ್ನೂ, ಅಭೀಷ್ಟವನ್ನೂ ಹೇಗೆ ಸಾಧಿಸಬಲ್ಲನು? ॥80॥ "ಹಿಂದಿನ ಜನ್ಮಗಳ ವಿಶೇಷ ಅನುಬಂಧಗಳ ಪಾಶವಿಲ್ಲದಿದ್ದಲ್ಲಿ ಯಾರೂ ನನ್ನ ಹತ್ತಿರ ಬರುವುದಿಲ್ಲ. ಅದು ನಾಯಿಯೋ, ಹಂದಿಯೋ, ಸೊಳ್ಳೆಯೋ ಆಗಿರಬಹುದು. ಆದುದರಿಂದ ಯಾರನ್ನೂ ದೂರಮಾಡಬೇಡ. ॥81॥ "ಇಂದಿನಿಂದ ಅವನು ನನ್ನ ಸೇವೆಯನ್ನು ಪ್ರೀತಿ ಮತ್ತು ಭಕ್ತಿಗಳಿಂದ ಮಾಡಲಿ. ದೇವಾದಿ ದೇವನು ಅವನನ್ನು ಅನುಗ್ರಹಿಸುವನು. ಅವನು ಅಕ್ಷಯ ಫಲವನ್ನು ಪಡೆಯುವನು. ॥82॥ "ಅವನು ಯಾವ ರೀತಿ ಪೂಜೆ ಮಾಡಬೇಕು? 'ನಾನು ಯಾರು' ಎಂಬುದನ್ನು ಅವನು ನಿಶ್ಚಯವಾಗಿ ಅರಿಯಬಹುದು. ಸಾಯಿಯ ದೇಹವೂ ನಶಿಸುತ್ತದೆ. ಆದರೆ ಬ್ರಹ್ಮನು ಮಾತ್ರ ಅವಿನಾಶಿ ಮತ್ತು ಪೂಜಿಸಲ್ಪಡುವವನು. ॥83॥ "ನಾನು ಸರ್ವವ್ಯಾಪಿ. ನಾನು ಅಷ್ಟಧಾತು ಪ್ರಕೃತಿ ಸ್ವರೂಪದ ಮೂರ್ತಸ್ವರೂಪ" ಹೀಗೆಂದು ಅರ್ಜುನನಿಗೆ ಭಗವಂತನು ಭಗವದ್ಗೀತೆಯಲ್ಲಿ ಹೇಳಿರುವನು. ॥84॥ "ಈ ಜಗತ್ತು ಅನೇಕ ನಾಮ, ರೂಪಗಳಿಂದ, ಚರ ಮತ್ತು ಅಚರ ವಸ್ತುಗಳಿಂದ ಉಂಟಾಗಿದೆ. ಅದು ನನ್ನಲ್ಲಿ ಅಷ್ಟಧಾತುಗಳ ಪ್ರಕೃತಿಯನ್ನೊಳಗೊಂಡಿದೆ. ಈ ತತ್ತ್ವವು ನನ್ನಿಂದಲೇ ಸೃಷ್ಟಿಸಲ್ಪಟ್ಟಿದೆ. ॥85॥ "ನನ್ನ ಸ್ವಸ್ವರೂಪವೇ 'ಓಂ'ಕಾರ. ನಾನು ಕೇವಲ ಅದರ ವಾಚಕ. ವಿಶ್ವದಲ್ಲಿ ಅನೇಕ ವಸ್ತುಗಳಿವೆ. ಅದರಲ್ಲೆಲ್ಲಾ ವ್ಯಾಪಿಸಿರುವವನು ನಾನೇ. ॥86॥ "ಆತ್ಮಕ್ಕಿಂತ ಭಿನ್ನ ವಸ್ತುವಿಲ್ಲ. ಆದುದರಿಂದ ಯಾವ ಕಾಮನೆಯು ಇರಬೇಕು? ನಾನು ದಶ ದಿಕ್ಕುಗಳಲ್ಲಿಯೂ ಎಲ್ಲದರಲ್ಲಿಯೂ ವ್ಯಾಪಿಸಿದ್ದೇನೆ. ॥87॥ ಎಲ್ಲವೂ ಪರಿಪೂರ್ಣದಿಂದ ಕೂಡಿರುವಾಗ, 'ನಾನು' ಮತ್ತು 'ನನ್ನದು' ಎಂಬ ಭಾವಗಳು ಕರಗಿ ಹೋಗುತ್ತವೆ. ಸರ್ವ ವಸ್ತುಗಳಲ್ಲಿಯೂ ಸರ್ವಸ್ವ ನಾನೇ ಇರುವಾಗ ಯಾವ ಆಸೆಗಳನ್ನು ಹೊಂದಲಾಗುತ್ತದೆ? ॥88॥ ಕಾಮನೆಗಳು

ಬುದ್ಧಿಯಿಂದ ಹುಟ್ಟುತ್ತವೆ. ಅವುಗಳಿಗೆ ಆತ್ಮದ ಜೊತೆ ಯಾವುದೇ ಸಂಬಂಧ ಇರುವುದಿಲ್ಲ. ಸಾಯಿ ಮಹಾರಾಜರೂ ಆತ್ಮ ಸ್ವರೂಪರು. ಅವರಲ್ಲಿ ಆಸೆಗಳು ಹೇಗೆ ಹುಟ್ಟುತ್ತವೆ? ॥89॥ ಅನೇಕ ಪ್ರಕಾರಗಳ ಕಾಮನೆಗಳು ಇವೆ. ಆದರೆ ಅದರ ಸಾರವಾದ 'ನಾನು ಯಾರು?' ಎಂಬುದನ್ನು ಅರಿತಾಗ ಆ ಕಾಮನೆಗಳು ಸೂರ್ಯನ ಬಿಸಿ ಕಿರಣಗಳು ಕರಗಿಸುವ ಮಂಜಿನ ಹನಿಗಳಂತೆ ಕರಗಿಹೋಗುತ್ತವೆ. ॥90॥ "ನಾನ ಮನಸ್ಸು, ಬುದ್ಧಿ, ಇಂದ್ರಿಯಗಳು ಅಲ್ಲ. ಅಥವಾ ನಾನು ಸ್ಥೂಲವಾದ ವಿರಾಟ್ ಸಹ ಅಲ್ಲ. ವಿಶ್ವ ಸೃಷ್ಟಿಯ ಮೊದಲಿನ ಹಿರಣ್ಯ ಗರ್ಭದ ರೂಪವೂ ನಾನಲ್ಲ. ಆದರೆ ನಾನು ಆದಿ ಇಲ್ಲದ ಸನಾತನದ ಸಾಕ್ಷಿ ಆಗಿರುವೆ. ॥91॥ "ಈರೀತಿ ನಾನು ಇಂದ್ರಿಯಾತೀತನಾಗಿರುವೆ. ನನಗೆ ಯಾವುದೇ ಇಂದ್ರಿಯ ವಸ್ತುಗಳಲ್ಲಿ ಆಸಕ್ತಿ ಇಲ್ಲ. ಆದರೆ ನಾನಿಲ್ಲದ ಸ್ಥಳ ಯಾವುದೂ ಇಲ್ಲ. ನಾನು ಕರ್ತನೂ ಅಲ್ಲ ಅಥವಾ ಯಾವುದೇ ಕಾರ್ಯದ ಕಾರಣನೂ ಅಲ್ಲ. ॥92॥ ಮನಸ್ಸು, ಬುದ್ಧಿ, ಮತ್ತಿತರ ಇಂದ್ರಿಯಗಳು ಸ್ಥೂಲ ದೇಹದ ಕರಣಗಳು. ಇದನ್ನು ಅರಿತಲ್ಲಿ ಈ ಜ್ಞಾನದಿಂದ ಅಂತರಾತ್ಮದ ಆವರಣವನ್ನು ತೆಗೆದಲ್ಲಿ ವಿರಕ್ತಿಯು ಪ್ರಕಟವಾಗುತ್ತದೆ. ॥93॥ "ತನ್ನ ಆತ್ಮಸ್ವರೂಪವನ್ನು ಮರೆಯುವುದೇ ಮಾಯೆ. ಶುದ್ಧ ಪೂರ್ಣಾನಂದವನ್ನು ಸ್ಮರಿಸುವುದೇ ನಾನು. ಚೈತನ್ಯ ಘನರೂಪನೇ ನಾನು. ॥94॥ ಎಲ್ಲರನ್ನೂ ಆತ್ಮದೆಡೆಗೆ ಅಂದರೆ ನನ್ನೆಡೆಗೆ ತಿರುಗಿಸುವುದೇ ಒಂದು ಸೇವೆ ಮತ್ತು ನನಗೆ ತೋರುವ ಭಕ್ತಿ. ನಾನು ಯಾವಾಗ ಚಿದಾನಂದವನ್ನು ಅನುಭವಿಸುವೆನೋ ಅದೇ ಶುದ್ಧ ಸ್ಥಿತಿಯ ಜ್ಞಾನ. ॥95॥ "ನಾನೇ ಬ್ರಹ್ಮ ಸ್ವರೂಪ.ಪ್ರಜ್ಞಾನವೇ ಬ್ರಹ್ಮ. ಮಿಥ್ಯಾ ಜಗತ್ತಿನ ಬಗ್ಗೆ ಅರಿತೊಡನೆ ಲೌಕಿಕ ಮಾಯೆ ಹೊರಟುಹೋಗುತ್ತದೆ. ಬ್ರಹ್ಮನೇ ಸತ್ಯಸ್ವರೂಪ. ಅದೇ ನಾನು. ॥96॥ "ನಾನು ಶುದ್ಧ, ಬುದ್ಧ, ಮುಕ್ತ, ನಾನು ವಾಸುದೇವ (ಸರ್ವವ್ಯಾಪಿ). ನಾನೇ ಓಂಕಾರ. ನಾನೇ ಸತ್ಯ. ನನ್ನನ್ನು ಶ್ರದ್ಧಾಭಕ್ತಿಗಳಿಂದ ಪೂಜಿಸುವುದರಲ್ಲೇ ನಿನ್ನ ಹಿತವು ಅಡಗಿದೆ. ॥97॥ "ಈ ರೀತಿ ನನ್ನ ಸತ್ಯಸ್ವರೂಪವನ್ನು ಅರಿತು ಸೇವಿಸುವುದೇ ಸರಿಯಾದ ಮಾರ್ಗ. ಮತ್ತೆ ನನ್ನಲ್ಲಿ ಪೂರ್ಣ ಶರಣಾಗಿ ಮತ್ತು ನನ್ನಲ್ಲೇ ಒಂದಾಗಿ. ॥98॥ "ನದಿಯು ಸಮುದ್ರದಲ್ಲಿ ಶರಣಾದಾಗ, ಅದು ಹಿಂದೆ ಬರಲು ಸಾಧ್ಯವೇ? ನದಿಯು ಸಾಗರವನ್ನು ಆಲಿಂಗಿಸಿದಾಗ ಪ್ರತ್ಯೇಕತೆಯು ಎಲ್ಲಿ ಉಳಿಯುತ್ತದೆ? ॥99॥ "ಎಣ್ಣೆಯಲ್ಲಿ ನೆನೆಸಿದ ಬತ್ತಿಯನ್ನು ದೀಪಕ್ಕೆ ಹಿಡಿದಾಗ ಅದೇ ಪ್ರಕಾಶಯುಕ್ತ ಜ್ಯೋತಿಯಾಗುತ್ತದೆ. ಅದೇ ರೀತಿ ಸಂತರ ಚರಣಗಳಲ್ಲಿ ಶರಣಾದ ವ್ಯಕ್ತಿಯೂ ಸಂತನಾಗುತ್ತಾನೆ. ॥100॥ 'ಅಲ್ಲಾ–ಮಾಲಿಕ್'ನು ಚೈತನ್ಯಘನ ಪರಬ್ರಹ್ಮನು. ಅವನನ್ನೇ ಚಿಂತಿಸುವವನು ಶಾಂತನಾಗಿರುತ್ತಾನೆ. ಆಶೆಗಳಿರುವುದಿಲ್ಲ ಮತ್ತು ಸಮದೃಷ್ಟಿಯುಳ್ಳವನಾಗಿರುತ್ತಾನೆ. ಅವನಿಗೆ ಪರಬ್ರಹ್ಮನಲ್ಲದೆ ಬೇರೆ ಅಸ್ತಿತ್ವವೆಲ್ಲಿದೆ? ॥101॥ ಆತ್ಮಜ್ಞಾನ ಎಲ್ಲಿರುವುದಿಲ್ಲವೋ, ಅಹಂಭಾವ ಎಲ್ಲಿರುವುದಿಲ್ಲವೋ, ಶಾಂತಿ ಮತ್ತು ಜಗಳ (ಲೌಕಿಕವಾದ) ಎರಡು ಮುಖಗಳು ಎಲ್ಲಿರುವುದಿಲ್ಲವೋ, ಲೌಕಿಕ ವಸ್ತುಗಳ ಮೇಲೆ ಮೋಹವಿಲ್ಲವೋ ಈ ನಾಲ್ಕೂ ಗುಣಗಳು ಇರುವಲ್ಲಿ 'ಅಹಂಕಾರ' ಹೇಗೆ ಇರಲು ಸಾಧ್ಯ?" ॥102॥ ಸಾರಾಂಶದಲ್ಲಿ, ಸಾಯಿಯಲ್ಲಿ ಈ ಎಂಟುಗುಣಗಳೂ

ಸಂಪೂರ್ಣವಾಗಿ ಇದ್ದುವು. ಆಗ ಅಹಂಕಾರಕ್ಕೆ ಜಾಗ ಎಲ್ಲಿದೆ? ಹಾಗಿರುವಾಗ ಅಹಂಕಾರವನ್ನು ಹೇಗೆ ಪ್ರಚೋದಿಸಲಿ. ॥103॥ ಯಾರ ಆತ್ಮವು ವಿಶ್ವದ ಕಣಕಣಗಳಲ್ಲಿ ಸಮ್ಮಿಳಿತವಾಗಿದೆಯೋ ಅಂತಹವನ ಭಾಗವೇ ನಾನು ಆಗಿದ್ದೇನೆ. ಸಾಯಿ ಚರಣಗಳಲ್ಲಿ ಸಮರ್ಪಿಸಿಕೊಳ್ಳಿ. ಅದೇ ನನ್ನ ಸೇವೆ. ॥104॥ "ನನ್ನ ಸೇವೆ ಮಾಡುವುದು, ನನ್ನ ಭಜನೆ ಮಾಡುವುದು ಮತ್ತು ನನ್ನಲ್ಲಿ ಸಂಪೂರ್ಣ ಶರಣಾಗುವುದು ನನ್ನಲ್ಲಿ ಒಂದಾಗುವಂತೆ ಮಾಡುತ್ತವೆ." ಹೀಗೆಂದು ಶ್ರೀಕೃಷ್ಣನು ಭಾಗವತದಲ್ಲಿ ಹೇಳಿರುವನು. ॥105॥ "ಕೀಟವು ಭ್ರಮರದ ಧ್ಯಾನದಲ್ಲೇ ಇದ್ದರೆ ತಾನೇ ಭ್ರಮರವಾಗಿಬಿಡುತ್ತದೆ. ಅದೇ ರೀತಿ ಒಬ್ಬ ಶಿಷ್ಯನು ನಿರಂತರ ತನ್ನ ಗುರುವಿನ ಭಜನೆ ಮಾಡುತ್ತಲೇ ಅವನು ಗುರುಸಮಾನನೇ ಆಗುವನು. ॥106॥ 'ಸಮಾನ' ಎಂಬ ಪದವನ್ನು ಉಪಯೋಗಿಸಿದರೂ ಒಂದು ಪ್ರತ್ಯೇಕತೆ ಉಳಿಯುತ್ತದೆ. ಗುರುವು ಅದನ್ನು ಸಹಿಸಲಾಗದಿದ್ದರೂ, ಒಂದು ಕ್ಷಣವಾದರೂ ಗುರುವಿನ ಇರುವಿಕೆಯು ಶಿಷ್ಯನಿಲ್ಲದೆ ಇರಲು ಸಾಧ್ಯವಿಲ್ಲ ಮತ್ತು ಶಿಷ್ಯನು ಗುರುವಿನಿಂದ ಪ್ರತ್ಯೇಕವಾಗಿಲ್ಲ. ॥107॥ ಅದು ಈ ರೀತಿ ಆಯಿತು. ನಾನು ಪೂಜಿಸಬೇಕೆಂದು ಅಪ್ಪಣೆ ನೀಡಿದವನು, ಅವನು ತಾನು ಯಾರೆಂದು ವಿವರಿಸಿದನು. ನಾನು ಹೇಳುತ್ತಿರುವುದನ್ನು ಸಮರ್ಥಿಸುತ್ತಿರುವುದಕ್ಕೆ ನನ್ನ ನೆನಪಿನಿಂದ ಮರುಕಳಿಸಿದ ಘಟನೆಯನ್ನು ನಾನು ಈಗ ತಿಳಿಸುತ್ತೇನೆ. ॥108॥ ಒಬ್ಬ ಪಠಾಣನು (ರೋಹಿಲ) ಶಿರಡಿಗೆ ಬಂದನು. ಅವನು ಬಾಬಾರವರ ಸದ್ಗುಣಗಳಿಂದ ಆಕರ್ಷಿತನಾದನು. ಅಲ್ಲಿ ಬಹಳ ಕಾಲ ನೆಲೆಸಿದನು ಮತ್ತು ಬಾಬಾರವರಿಗೆ ಪ್ರೀತಿಯಿಂದ ಭಕ್ತಿಪೂರ್ವಕವಾಗಿ ಅರ್ಪಿಸಿಕೊಂಡನು. ॥109॥ ಅವನು ಕೋಣದ ರೀತಿಯಲ್ಲಿ ಭಾರಿ ದೇಹದವನಾಗಿದ್ದನು. ಅವನು ಸ್ವೇಚ್ಛಾಚಾರಿಯೂ, ಯಾರನ್ನೂ ಲಕ್ಷಿಸದವನೂ ಆಗಿದ್ದನು. ಕೇವಲ ಕಫನಿಯನ್ನು ಕೀಲುಗಳ(ಮಣಿಕಟ್ಟಿನ)ವರೆಗೆ ಧರಿಸುತಿದ್ದನು. ॥110॥ ಹಗಲಾದರೇನು,ಇರುಳಾದರೇನು, ಮಸೀದಿಯಾದರೇನು, ಚಾವಡಿ[11]ಯಾದರೇನು, ಅವನು ಕುರಾನ್ ಪಠಣವನ್ನು ಎತ್ತರದ ಧ್ವನಿಯಲ್ಲಿ, ಅತಿ ಉತ್ಸಾಹದಿಂದ ಮತ್ತು ಮೈಚಳಿಬಿಟ್ಟು ಮಾಡುತ್ತಿದ್ದನು. ॥111॥ ಮಹಾರಾಜರು ಶಾಂತಿಯ ಅಪರಾವತಾರ. ಆದರೆ ಹಳ್ಳಿಗರು ಅತಿಯಾಗಿ ಅಶಾಂತಿ ಹೊಂದಿದ್ದರು. ಅರ್ಧರಾತ್ರಿಯಲ್ಲೂ ನಿಲ್ಲದಅವನ ವಾಚನವು ಎಲ್ಲರ ನಿದ್ರೆಯನ್ನು ಭಂಗಗೊಳಿಸುತ್ತಿತ್ತು. ॥112॥ ಹಗಲಲ್ಲಿ ಜನರು ಸುಡುತ್ತಿರುವ ಸೂರ್ಯನ ಬಿಸಿಲಲ್ಲಿ ಹೊಲಮತ್ತು ಕಾಡುಗಳಲ್ಲಿ ಕಷ್ಟಪಡಬೇಕಾಗುತ್ತಿತ್ತು. ರಾತ್ರಿಯಾದಾಗ ಆರಾಮವಾಗಿ ನಿದ್ರೆಮಾಡಲು ಆಗುತ್ತಿರಲಿಲ್ಲ. ಆದುದರಿಂದ ಜನರು ಬೇಸರಗೊಂಡಿದ್ದರು. ॥113॥ ಅದಿರಲಿ. ಬಾಬಾರವರು ಮಾತ್ರ ಏನೂ ತೊಂದರೆಗೊಂಡಿರಲಿಲ್ಲ. ಜನರ ಮಟ್ಟಿಗೆ ತಾವು ದೊಡ್ಡ ಪಾಪವನ್ನು ಮಾಡಿದ್ದೇವೆಂದೇ ಅಂದುಕೊಂಡರು. ರಾತ್ರಿಶಾಂತಿಯುತ ನಿದ್ರೆಯಿಲ್ಲ. ಅವರು ರೋಹಿಲಾನ ಮೇಲೆ ಬೇಸರಗೊಂಡಿದ್ದರು. ॥114॥ ಅವರು ಸಂದಿಗ್ಧಪರಿಸ್ಥಿತಿಯಲ್ಲಿದ್ದರು. ಎಷ್ಟು ಸಮಯ ಇದನ್ನು ಸಹಿಸಲು ಸಾಧ್ಯ? ಹಗಲು ರಾತ್ರಿ ಈ ಪೀಡೆಯು ಅವರಿಗೆ ಒಂದು ದೊಡ್ಡ ಸಮಸ್ಯೆಯಾಯಿತು. ಅವರು ಇದರಿಂದ ಚಿಂತಿತರಾದರು. ॥115॥ ರೋಹಿಲಾನಾದರೋ

ಬಹುದೊಡ್ಡ ತಲೆಹರಟೆಯ ಮನುಷ್ಯ. ಅದಕ್ಕೆ ಸರಿಯಾಗಿ ಅವನಿಗೆ ಬಾಬಾರವರ ಉತ್ತೇಜನವೂ ಇತ್ತು. ಮೊದಲಿಗಿಂತ ಹೆಚ್ಚಾಗಿ ಅವನನ್ನು ಹಿಡಿಯುವರೇ ಇಲ್ಲದ ಪರಿಸ್ಥಿತಿ ಹದಗೆಟ್ಟಿತು. ॥116॥ ಅವನು ಬಹಳ ದುರಹಂಕಾರಿಯೂ, ಅವಿಧೇಯನೂ, ಜನರ ಹತ್ತಿರ ದುರ್ವರ್ತನೆ ಮಾಡುತ್ತಲೂ ಇದ್ದನು. ಮತ್ತೆ ಇಡೀ ಹಳ್ಳಿಯೇ ಅವನ ಮೇಲೆ ತಿರುಗಿಬಿದ್ದಿತು. ॥117॥ ಸಾಯಿಯಾದರೋ ಅತ್ಯಂತದಯಾರ್ದ್ರ ಹೃದಯಿಯಾಗಿ, ತಾಯಿಯ ರೀತಿಯಲ್ಲಿ ಸದಾ ತನ್ನಲ್ಲಿ ಶರಣಾಗತರಾದವರ ಪರ ವಹಿಸುತ್ತಿದ್ದರು. ಆದುದರಿಂದ ಎಲ್ಲಾ ಹಳ್ಳಿಗರೂ ಒಟ್ಟಾಗಿ ಅವನಿಗೆ ತಿರುಗಿಬಿದ್ದರು. ॥118॥ ಆದರೆ ಬಾಬಾರವರು ಯಾವುದಕ್ಕೂ ಗಮನಕೊಡಲಿಲ್ಲ. ಬದಲಾಗಿ, ಅವರು ಹಳ್ಳಿಗರಿಗೆ ಹೇಳಿದರು, "ರೋಹಿಲನಿಗೆ ತೊಂದರೆ ಕೊಡಬೇಡಿ. ಅವನು ನನಗೆ ಅತ್ಯಂತ ಪ್ರಿಯವ್ಯಕ್ತಿ. ॥119॥ "ಈ ರೋಹಿಲನ ಪತ್ನಿ ಒಬ್ಬ ತಾಟಕಿ. ಮತ್ತು ಅವನೊಡನೆ ವಾಸಮಾಡಲು ತಯಾರಿಲ್ಲ. ಅವನನ್ನು ಮೋಸಗೊಳಿಸಿ ನನ್ನಲ್ಲಿಗೆ ಬರಲು ಕಾತರಳಾಗಿದ್ದಾಳೆ. ॥120॥ "ಆ ಲಜ್ಜೆಗೆಟ್ಟ ಹೆಂಗಸು ಪರದೆ ಮರ್ಯಾದೆಯಿಂದ ಇರುವುದಿಲ್ಲ. ಅವಳು ನೀತಿಗೆಟ್ಟವಳು ಮತ್ತು ಲಜ್ಜೆಗೆಟ್ಟವಳು. ಅವಳನ್ನು ಹೊರಗೋಡಿಸಿದರೆ ಮತ್ತೆ ಬಲವಂತವಾಗಿ ಮನೆಯೊಳಗೆ ನುಗ್ಗುತ್ತಾಳೆ. ॥121॥ "ಅವನು ಜೋರಾಗಿ ಕೂಗಿ ಹೇಳುವುದನ್ನು[12] ನಿಲ್ಲಿಸಿದ ಕೂಡಲೇ ಈ ದುರ್ಬುದ್ಧಿಯುಳ್ಳ ಹೆಂಗಸು ಒಳಗೆ ಪ್ರವೇಶಿಸಲು ಅವಕಾಶಪಡೆಯುತ್ತಾಳೆ. ಅವನು ಕೂಗಿದಾಗ ಅವಳು ಅವನನ್ನು ಕಾಯಾ, ವಾಚಾ, ಮನಸಾ ಶುದ್ಧನನ್ನಾಗಿ ಮಾಡಿ ಓಡಿಹೋಗುತ್ತಾಳೆ. ಆದ್ದರಿಂದ ನನಗೆ ಅಗಾಧವಾದ ಸಂತೋಷ ಉಕ್ಕಿಬರುತ್ತದೆ. ॥122॥ "ಯಾರೂ ಅವನನ್ನು ವಿರೋಧಿಸಬೇಡಿ. ಅವನ ಮನಸ್ಸಿಗೆ ತೃಪ್ತಿಯಾಗುವಷ್ಟು ಅರಚಲಿ. ಅವನಿಲ್ಲದೆ ನಾನು ರಾತ್ರಿಯನ್ನು ಕಳೆಯಲಾರೆ. ಅವನಿಂದಾಗಿ ನನಗೆ ಅತಿ ಸಂತೋಷವಾಗುತ್ತದೆ. ॥123॥ "ಈ ರೀತಿಯ ಕೂಗಾಟಗಳಷ್ಟೇ ಅತ್ಯಂತ ಹಿತಕರವಾಗಿರುತ್ತವೆ. ಈ ರೀತಿಯಿಂದಲಾದರೂ ರೋಹಿಲನು ಪರೋಪಕಾರಿಯಾಗಿರುತ್ತಾನೆ. ನನ್ನನ್ನು ಬಹುಸಂತೋಷ ಪಡಿಸುತ್ತಾನೆ. ॥124॥ ಅವನು ಯಥೇಚ್ಛವಾಗಿ ಕೂಗಲಿ. ಅದೇ ನನಗೆ ಬಹಳ ಇಷ್ಟ. ಇಲ್ಲದಿದ್ದಲ್ಲಿ ರೋಹಿಲನ ಪತ್ನಿ ಬಹಳ ದುಷ್ಟಳು. ನನಗೆ ತುಂಬ ಕಷ್ಟಕೊಡುತ್ತಾಳೆ. ॥125॥ "ಆಯಾಸಗೊಂಡಾಗ, ತಾನಾಗಿಯೇ ಶಾಂತನಾಗುತ್ತಾನೆ. ನಿಮ್ಮ ಉದ್ದೇಶ ನೆರವೇರುತ್ತದೆ. ಮತ್ತು ದುಷ್ಟ ಹೆಂಗಸು ನನಗೆ ತೊಂದರೆ ಕೊಡುವುದಿಲ್ಲ." ॥126॥ ಈ ರೀತಿ ಸಾಯಿಗುರು ಹೇಳಿದಾಗ, ಮುಂದಿನ ಯಾವುದೇ ಪ್ರಯತ್ನವೆಲ್ಲ ವ್ಯರ್ಥ. ಬಾಬಾರವರ ಮನಸ್ಸು ಆಂದೋಲನಗೊಳ್ಳದಿದ್ದಲ್ಲಿ ನಾವು ಏಕೆ ಅದರಬಗ್ಗೆ ಯೋಚಿಸಬೇಕು? ॥127॥ ಹಾಗೆಯೇ ರೋಹಿಲನೂ ಬಹಳ ಉತ್ತೇಜಿತನಾಗಿದ್ದನು. ಅದಲ್ಲದೆ ಈಗ ಅವನಿಗೆ ಬಾಬಾರವರ[13] ಅನುಮತಿಯೂ ದೊರಕಿದೆ. ಆದ್ದರಿಂದ ಅವನು ಕುರಾನಿನ ಪದಗಳನ್ನು ಬಹಳ ಜೋರಾಗಿ ಹೇಳಲು ಪ್ರಾರಂಭಿಸಿದನು ಮತ್ತು ಗಲಾಟೆ ಎಬ್ಬಿಸಿದನು. ॥128॥ ಬಾಬಾರವರ ತಾಳ್ಮೆಯನ್ನು ನೋಡಿ ಜನರು ಬಹಳ ಅಚ್ಚರಿಗೊಂಡರು. ಅದರಿಂದ ಉಂಟಾಗುವ ತಲೆಸಿಡಿತದ ಬದಲು ಅವನ ಜೋರಾದ

ಕೂಗುವಿಕೆಯೂ ಅವರನ್ನು ತಲ್ಲೀನರನ್ನಾಗಿಸಿತು. ॥129॥ ಅವನ ಅರಚಾಟ ಎಷ್ಟು ಭಯಂಕರವಾಗಿತ್ತು? ಅವು ಅವನ ಗಂಟಲನ್ನು ಹೇಗೆ ಒಣಗಿಸಿಲ್ಲವೋ? ಆದರೂ ಬಾಬಾರವರು ಒಂದೇ ಸಮನೆ ಹೇಳುತ್ತಿದ್ದರು, 'ಅವನನ್ನು ದೂಷಿಸಬೇಡಿ.' ॥130॥ ತೋರಿಕೆಗೆ, ರೋಹಿಲನು ಹುಚ್ಚನಾದ ಆಧುನಿಕ ಸಂತನ ರೀತಿ ಕಾಣುತ್ತಿದ್ದನು. ಆದರೆ ಅವನು ಬಾಬಾರವರನ್ನು ಅತ್ಯಂತ ಆದರದಿಂದ ನೋಡುತ್ತಿದ್ದನು. ಅವನು ಧರ್ಮದತತ್ತ್ವಗಳಿಗನುಸಾರವಾಗಿ ಸಂತೋಷದಿಂದ ಕುರಾನಿನ ಪದಗಳನ್ನು ಹಾಡುತ್ತಿದ್ದನು. ॥131॥ ಅವನು ತನ್ನ ಧ್ವನಿಯು ಮೃದುವಾಗಿದೆಯೋ ಕೀರಲು ಆಗಿದೆಯೋ ತಿಳಿಯದೆ ಅವನಿಗೆ ಸ್ಫೂರ್ತಿ ಬಂದೊಡನೆ ಭಗವಂತನ ನಾಮವನ್ನು ಗರ್ಜಿಸುತ್ತಿದ್ದ. ॥132॥ ಗೊಗ್ಗರ ದನಿ ಅವನಿಗೆ ನಿಸರ್ಗದತ್ತವಾಗಿತ್ತು. ಅವನು ನಿರಂತರ ಗರ್ಜಿಸುತ್ತಿದ್ದನು – ಅಲ್ಲಾಹೋ ಅಕ್ಬರ್[14] ಎಂದು ಮತ್ತು ಗೀತೆಗಳನ್ನು ಆನಂದದಿಂದ ಹಾಡುತ್ತಿದ್ದನು. ॥133॥ ಬಾಬಾರವರು ನಾಸ್ತಿಕರ ಸಂಗವನ್ನು ಇಷ್ಟಪಡುತ್ತಿರಲಿಲ್ಲ. ಹೀಗಿರುವಾಗ ನಿರಂತರ ಭಗವನ್ನಾಮಸ್ಮರಣೆಮಾಡುತ್ತಿದ್ದ ಆಸ್ತಿಕನಾದ ರೋಹಿಲನನ್ನು ಓಡಿಸಲು ಯೋಚಿಸುವರೇ? ॥134॥ ಎಲ್ಲಿ ನನ್ನ ಭಕ್ತರು ನನ್ನ ಭಜನೆಗಳನ್ನು ಹಾಡುತ್ತಾರೋ, ಅಲ್ಲೆಲ್ಲ ನಾನು ನೆಲಸಿರುತ್ತೇನೆ. ಅಲ್ಲಿ ನಾನು ನಿದ್ರೆ ಮಾಡದೆ ಎಚ್ಚರವಾಗಿ ಇರುತ್ತೇನೆ. ಭಗವದ್ಗೀತೆಯ ಈ ಭಗವದ್ವಾಣಿಯನ್ನು ನಿಜವಾಗಿಸುವಂತೆ ಬಾಬಾರವರು ಈ ರೀತಿ ವರ್ತಿಸಿದರು. ॥135॥ ರೋಹಿಲನು ಭಿಕ್ಷೆಯಿಂದ ಬಂದಿದ್ದರಲ್ಲಿ ಬದುಕುತ್ತಿದ್ದನು. ಆಗಾಗ್ಗೆ ಉಪವಾಸವೇ ಇರುತ್ತಿದ್ದನು. ಅವನಿಗೆ ಹೆಂಡತಿ ಹೇಗಿರಲು ಸಾಧ್ಯ ಮತ್ತು ಆಕೆ ಬಾಬಾರವರನ್ನು ತೊಂದರೆಕೊಡಲು ಹೇಗೆ ಸಾಧ್ಯ? ॥136॥ ರೋಹಿಲನು ದಟ್ಟದರಿದ್ರನು. ಅವನ ಮದುವೆ ಹೇಗೆ ಸಾಧ್ಯ? ಅಥವಾ ಹೇಗೆ ಪತ್ನಿ ಇರುವಳು? ಬಾಬಾರವರು ಬಾಲ್ಯದಿಂದಲೇ ಬ್ರಹ್ಮಚಾರಿ. ಹಾಗಿರುವಾಗ ಇಡೀ ಕತೆಯೇ ಅಯೋಮಯ. ॥137॥ ಅವನು ಕಂಠಶೋಷಣೆ ಮಾಡಿಕೊಳ್ಳಲಿ. ಬಾಬಾರವರು ನಾಮಸ್ಮರಣೆಯಿಂದ ತೃಪ್ತರಾಗಿದ್ದಾರೆ. ಪ್ರತಿನಿತ್ಯ ಅವರು ಅವುಗಳನ್ನು ಆಲಿಸಿದ್ದಾರೆ. ಆ ಪಠನೆಯಮುಂದೆ ನಿದ್ರೆಯು ವಿಷವಾಗಿತ್ತು. ॥138॥ ಪದಗಳ ಮೋಕ್ಷಪ್ರದಾಯಕ ಬೋಧನೆಗಳಿಗೆ ಹೋಲಿಸಿದಾಗ ಹಳ್ಳಿಗರ ಫಿರ್ಯಾದು ಬಹಳ ಹಗುರವಾಯಿತು. ಬಾಬಾರವರ ಈ ನಡವಳಿಕೆ ಹಳ್ಳಿಗರಿಗೆ ಸರಿಯಾದ ನೀತಿಪಾಠಕಲಿಸುವ ಹಾಗಿತ್ತು. ॥139॥ ಭಗವಂತನ ನಾಮವನ್ನು ಪ್ರೀತಿಸುವ ಕಾರಣಕ್ಕಾಗಿ ತಾವು ರೋಹಿಲನ ಸಹವಾಸವನ್ನು ಇಷ್ಟಪಡುತ್ತಾರೆಂಬ ವಿಷಯವನ್ನು ಎಲ್ಲರಿಗೂ ತಿಳಿಸಿದರು. ॥140॥ ದೃಶ್ಯ, ದೃಷ್ಟಾರ, ದೃಕ್ ಇವು ಮೂರೂ ಅವನಿಗೆ ಭಗವತ್ಸ್ವರೂಪವೇ. ಅಂತಹ ವ್ಯಕ್ತಿ ಬ್ರಾಹ್ಮಣನೇ ಆಗಲಿ, ಪಠಾಣನೇ ಆಗಲಿ ಸರಿಸಮಾನರೆಂದು ಪರಿಗಣಿಸಲ್ಪಡುತ್ತಾರೆ. ॥141॥ ಒಮ್ಮೆ, ಮಧ್ಯಾಹ್ನದ ಆರತಿಯ ನಂತರ ಜನರು ತಮ್ಮ ಮನೆಗಳಿಗೆ ಹಿಂತಿರುಗಲು ಪ್ರಾರಂಭಿಸಿದಾಗ ಬಾಬಾರವರು ಮಧುರ ವಚನಗಳನ್ನು ತಮ್ಮ ಮುಖದಿಂದ ನುಡಿದರು. ಅದನ್ನು ಕೇಳಿ. ॥142॥ "ನೀವು ಎಲ್ಲೇ ಇರಲಿ, ಏನೇ ಮಾಡುತ್ತಿರಲಿ, ಯಾವಾಗಲೂ ನೆನಪಿಡಿ; ಏನೆಂದರೆ ನೀವು

ಮಾಡಿದ ಕಾರ್ಯಗಳ ಒಂದು ಸಣ್ಣ ವಿವರವೂ ನನಗೆ ತಿಳಿಯುತ್ತಿರುತ್ತದೆ. ॥143॥ "ಈ ರೀತಿ, ನಾನು ವಿವರಿಸಿದ ಹಾಗೆ, ನಾನು ಎಲ್ಲರ ಹೃದಯವಾಸಿ, ಸರ್ವವ್ಯಾಪಿ. ನಾನು ಸರ್ವೇಶ. ॥144॥ "ನಾನು ಇಡೀ ಸೃಷ್ಟಿಯನ್ನು ಒಳಗೆ ಮತ್ತು ಹೊರಗೆ ಉಕ್ಕಿ ಹೋಗುವಷ್ಟು ವ್ಯಾಪಿಸಿದ್ದೇನೆ. ಈ ವಿಶ್ವಕ್ಕೆ ಭಗವಂತನೇ ಸೂತ್ರಧಾರ ಮತ್ತು ನಾನು ಸೂತ್ರವನ್ನು ಹಿಡಿದವನು. ॥145॥ "ನಾನು ಸಕಲ ಜೀವಿಗೂ ತಾಯಿ. ನಾನು ತ್ರಿಗುಣಗಳಲ್ಲೂ[5] ಸಮಾನಾವಸ್ಥೆಯಲ್ಲಿರುತ್ತೇನೆ. ನಾನು ಸಕಲ ಇಂದ್ರಿಯಗಳನ್ನು ಪ್ರವರ್ತನಗೊಳಿಸುವವನು. ನಾನೇ ಸೃಷ್ಟಿ ಸುರಕ್ಷಕ ಮತ್ತು ಸೃಷ್ಟಿ ಸಂಹಾರಕ. ॥146॥ "ನನ್ನನ್ನೇ ಧ್ಯಾನಿಸುವವನಿಗೆ ಯಾವ ಸಂಕಟವೂ ಇರುವುದಿಲ್ಲ. ಆದರೆ ನನ್ನ ಮರೆತ ಕ್ಷಣವೇ ಮಾಯೆಯು ಅವನನ್ನು ಆವರಿಸುತ್ತದೆ. ॥147॥ "ಯಾವ ರೂಪವನ್ನು ಆವಾಹಿಸಿದರೂ ಅದು ನನ್ನ ಪ್ರತಿಬಿಂಬಮಾತ್ರ, ಅದು ಒಂದು ಹುಳವೋ, ಇರುವೆಯೋ, ಬಡಪಾಯಿಯೋ, ರಾಜನೋ ಆಗಿರಬಹುದು." ಈ ಅಪರಿಮಿತ ವಿಶ್ವವು ಚರ ಮತ್ತು ಅಚರ ವಸ್ತುಗಳಿಂದ ಕೂಡಿದೆ. ಇವೆಲ್ಲವೂ ಬಾಬಾರವರ ಸ್ವಸ್ವರೂಪವೇ. ॥148॥ ಇದೆಂತಹ ಆಶ್ಚರ್ಯ ಸಂಕೇತ? ಸಂತನಿಗೂ ಭಗವಂತನಿಗೂ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲ. ಅಭೇದ ರೂಪಿಯಾಗಿ, ಚರ ಮತ್ತು ಅಚರವಾದ ವಿಶ್ವದ ಉದ್ಧಾರಕ್ಕಾಗಿ ಅವತಾರವೆತ್ತುತ್ತಾನೆ. ॥149॥ ಗುರುವಿನ ಚರಣಗಳಲ್ಲಿ ಶರಣಾಗಲು ಇಚ್ಛಿಸುವವನು ಗುರುವಿನ ಗುಣಗಾನ ಮಾಡಬೇಕು ಅಥವಾ ಗುರುಚರಿತ್ರೆಯ ಕೀರ್ತನೆ ಮಾಡಬೇಕು ಅಥವಾ ಅಂತಹ ಕತೆಗಳನ್ನು ಭಕ್ತಿಯಿಂದ ಕೇಳಬೇಕು. ॥150॥ ಈ ಜ್ಞಾನವನ್ನು ಪಡೆಯಲು ಇಚ್ಛಿಸುವವನು, ತೀವ್ರವಾಗಿ ಆಲಿಸಿ ಅವನು ಅದರೊಂದಿಗೆ ಲೀನವಾಗಿ ಉಪದೇಶಮಾಡುತ್ತಲೇ ತದ್ರೂಪನಾಗುವನು. ಅದರಿಂದ ಪರಮಚೇತನವು ಅವನ ಮುಂದೆ ಪ್ರಕಟವಾಗುತ್ತದೆ ಮತ್ತು ಅವನ ಮನಸ್ಸು ಉನ್ನತ್ತವಾಗುತ್ತದೆ. ॥151॥ ಲೌಕಿಕ ಸಂಸಾರದಲ್ಲಿ ಪೂರ್ಣವಾಗಿ ಮುಳುಗಿದ್ದರೂ ಸಂತರ ಚರಿತ್ರೆಗಳನ್ನು ಕೇಳುವವರು ಸ್ವಲ್ಪವೂ ಪ್ರಯತ್ನವಿಲ್ಲದೆ ಸದ್ಗುಣಿಗಳಾಗುತ್ತಾರೆ. ಏಕೆಂದರೆ ಅದು ಅವರ ಸ್ವಭಾವವೇ ಆಗುತ್ತದೆ. ॥152॥ ಹಾಗಿದ್ದಲ್ಲಿ, ಶ್ರದ್ಧಾ ಭಕ್ತಿಗಳಿಂದ ಕೇಳಿದವರು ಮತ್ತೆಷ್ಟು ಒಳ್ಳೆಯದನ್ನು ಪಡೆಯಬಹುದು. ಓ ಶ್ರೋತೃಗಳೇ, ಕೇಳಿರಿ, ನಿಮ್ಮ ಸ್ವಹಿತಕ್ಕಾಗಿಯೇ ಯೋಚಿಸಿರಿ. ॥153॥ ಗುರುವಿನ ಚರಣಗಳಲ್ಲಿ ಭಕ್ತಿ ವೃದ್ಧಿಯಾಗುತ್ತದೆ ಮತ್ತು, ಯಾವುದೇ ನೇಮನಿಷ್ಠೆಗಳೂ ಬೇಕಾಗುವುದಿಲ್ಲ. ಪರಮಾನಂದವು ದೊರಕುತ್ತದೆ. ॥154॥ ಒಮ್ಮೆ ಮನಸ್ಸನ್ನು ನಿರ್ಬಂಧಗೊಳಿಸಿದಲ್ಲಿ, ಕಥಾಶ್ರವಣದ ಆಕಾಂಕ್ಷೆ ಉತ್ಕಟವಾಗುತ್ತದೆ. ಇಂದ್ರಿಯಾಭಿಲಾಷೆಯ ಚಾಪಲ್ಯ ಸುಲಭವಾಗಿ ಬಿಡಿಸಿಕೊಳ್ಳುತ್ತದೆ ಮತ್ತು ಪರಮಾನಂದವು ಪ್ರಕಟವಾಗುತ್ತದೆ. ॥155॥ ಬಾಬಾರವರ ಈ ಮಧುರ ವಚನಗಳನ್ನು ಕೇಳಿ, ನಾನು ನನ್ನ ಮನಸ್ಸಿನಲ್ಲೇ ಯಾವ ಉದ್ಯೋಗವನ್ನೂ ಇನ್ನು ಮುಂದೆ ತೆಗೆದು ಕೊಳ್ಳಬಾರದೆಂದೂ ಮತ್ತು, ನನ್ನ ಉಳಿದ ಜೀವನವನ್ನು ಗುರುಸೇವೆಗೆ ಮೀಸಲಾಗಿಡಬೇಕೆಂದು ನಿರ್ಧರಿಸಿದೆನು. ॥156॥ ಆದರೆ ನನ್ನ ಮನಸ್ಸು ಬಾಬಾರವರ ಭರವಸೆಯ ಸುತ್ತ ಸುತ್ತುತ್ತಿತ್ತು– "ಅವನಿಗೆ ಉದ್ಯೋಗ ಸುಲಭವಾಗಿ ದೊರೆಯುತ್ತದೆ."

ನನಗೆ ಅದರ ಬಗ್ಗೆ ರುಜುವಾತು ದೊರೆಯುವ ಬಗ್ಗೆ ಅಚ್ಚರಿಯಾಯಿತು. ॥157॥ ಬಾಬಾರವರ ಶಬ್ದಗಳು ಎಂದಿಗೂ ಸುಳ್ಳಾಗುವುದಿಲ್ಲ. ಅವು ಎಂದಿಗೂ ನಡೆಯದಿರುವುದಿಲ್ಲ. ನಾನು ಮತ್ತೆ ಅದೇ ಜನರ ಮಧ್ಯೆ ಕೆಲಸಮಾಡಬೇಕಾಗಬಹುದು. ಆದರೆ ಅದು ನನಗೆ ಹಿತಕಾರಿಯಾಗಿರುವುದಿಲ್ಲ. ॥158॥ ಅಣ್ಣಾನು ಸ್ವಯಂಪ್ರೇರಿತನಾಗಿ ನನ್ನ ಬಗ್ಗೆ ಕೇಳಿದ್ದು ನಿಜವೇ. ನನಗೆ ಇಚ್ಛೆ ಇರಲಿಲ್ಲ. ಆದರೆ ನಮ್ಮ ಪ್ರಾರಬ್ಧಕರ್ಮವನ್ನು ನಾವೇ ಭೋಗಿಸಬೇಕಲ್ಲವೆ? ॥159॥ ನನ್ನ ಅಂತರಂಗದಲ್ಲಿ ನನ್ನ ಸಂಸಾರದ ನಿರ್ವಹಣೆಗಾಗಿ ಉದ್ಯೋಗ ಮಾಡಲು ಆಸೆ ಪಟ್ಟೆ, ಸಾಯಿಯು ಪರಿಹಾರ ರೂಪಕವಾಗಿ ಒಂದು ಸಿಹಿ ಗುಳಿಗೆಯನ್ನು ಔಷಧಿಯ ರೂಪದಲ್ಲಿ ನೀಡಿದರು. ॥160॥ ಆ ಔಷಧಿಯು ಸಿಹಿ ಇರುವುದೆಂಬ ನಿರೀಕ್ಷೆಯಲ್ಲಿ ನಾನು ಪಡೆದು ಭಾಗ್ಯವಂತನಾದೆ. ಅನಿರೀಕ್ಷಿತವಾಗಿ ಒಂದು ಉದ್ಯೋಗ ಬಂದಿತು[16], ನಾನು ಅದನ್ನು ಹಣದಾಸೆಗಾಗಿ ಸ್ವೀಕರಿಸಿದೆ. ॥161॥ ಅದು ಬೆಲ್ಲವಾದರೂ ಸಿಹಿ, ಸದಾಕಾಲ ಅದನ್ನೇ ತಿನ್ನುತ್ತಿದ್ದರೆ ಸಾಕಾಗುತ್ತದೆ. ನಾನು ಬಾಬಾರವರ ಉಪದೇಶಾಮೃತದಲ್ಲಿ ಅದ್ದಿದ ಬೆರಳುಗಳನ್ನು ನೆಕ್ಕುವುದನ್ನು ಆರಿಸಿಕೊಂಡೆನು. ॥162॥ ಆ ಉದ್ಯೋಗವು ಶಾಶ್ವತವಾದುದಲ್ಲ. ಅದು ಅನಿರೀಕ್ಷಿತವಾಗಿ ಬಂದ ರೀತಿಯಲ್ಲೇ ನಿಂತು ಹೋಯಿತು. ಬಾಬಾರವರು ನನ್ನನ್ನು ಒಂದೇ ಸ್ಥಳದಲ್ಲಿರಿಸಿ ನಾನು ಮಾಡುತ್ತಿದ್ದುದರ ಆನಂದವನ್ನು ಅವರೊಡನಿದ್ದುಕೊಂಡೇ ಆಸ್ವಾದಿಸುವಂತೆ ಮಾಡಿದರು. ॥163॥ ವಿಶ್ವವು ಪೂರ್ಣವಾಗಿ ಜಡ ಹಾಗೂ ಅಚರ ವಸ್ತುಗಳು ಪರಮಾತ್ಮನ ಸ್ವರೂಪವೇ ಆದ ಜೀವದಿಂದ ತುಂಬಿದೆ, ಆದರೆ ಪರಮಾತ್ಮನು ಬ್ರಹ್ಮಾಂಡದ ಆಚೆಗೂ ಇದ್ದಾನೆ ಮತ್ತು ಪರಬ್ರಹ್ಮ ವಸ್ತು ಪರಾತ್ಪರನಾಗಿದ್ದಾನೆ ॥164॥ ಭಗವಂತನು ಜಗತ್ತಿಗಿಂತ ಬೇರೆ ಇಲ್ಲ. ಆದರೆ ಜಗತ್ತು ಭಗವಂತನಿಗಿಂತ ಬೇರೆಯೇ, ಏಕೆಂದರೆ ಜಗತ್ತು ಅವನಿಂದ ಚೇತನವನ್ನು ಸ್ವೀಕರಿಸುತ್ತದೆ ಮತ್ತು ಅದರಿಂದಲೇ ಅಸ್ತಿತ್ವದಲ್ಲಿದೆ. ಆದರೆ ಭಗವಂತನು ಜಗತ್ತಿಗೇ ಆಧಾರ. ॥165॥ ದಯಮಾಡಿ ಅರ್ಥಮಾಡಿಕೊಳ್ಳಿರಿ. ಭಗವಂತನ ಉಪಾಸನೆಗೆ ಎಂಟು ಮಾರ್ಗಗಳು[17] ಇವೆ. ವಿಗ್ರಹಾರಾಧನೆ, ಯಜ್ಞ ಇತ್ಯಾದಿ. ಎಲ್ಲವನ್ನೂ ಹೋಲಿಸಿದಾಗ ಗುರುವೇ ಉತ್ತಮನು. ॥166॥ ಕೃಷ್ಣನು ತಾನೇ ಸ್ವತಃ ಪೂರ್ಣ ಬ್ರಹ್ಮನು. ಆದರೂ ಸಹ ಅವನು ಸಾಂದೀಪನಿಯ ಚರಣಗಳಿಗೆ ಶಿರಬಾಗಿ ಹೇಳುವನು – "ಸದ್ಗುರುವಿನ ಸ್ಮರಣೆಯು ನಾರಾಯಣನಾದ ನನ್ನನ್ನು ಸಂತಸಗೊಳಿಸಲು ಸತ್ಯವಾದ ಮಾರ್ಗ. ॥167॥ "ಸದ್ಗುರುವಿನ ಭಜನೆಯು ನನ್ನನ್ನು ಸ್ತುತಿಮಾಡುವುದಕ್ಕಿಂತ ಸಹಸ್ರಪಾಲು ಶ್ರೇಷ್ಠವಾದದ್ದು, ಅದೇ ಸದ್ಗುರುವಿನ ಶ್ರೇಷ್ಠತೆ ಮತ್ತು ಗಹನವಾದ ಮಹಿಮೆ" ॥168॥ ಯಾರು ಗುರು ಸ್ಮರಣೆಯಿಂದ ವಿಮುಖನಾಗಿರುವನೋ ಅವನು ದುರದೃಷ್ಟವಂತ ಮತ್ತು ಪಾಪಿ. ಅವನು ದುಃಖಕರವಾದ ಜನನ ಮರಣದ ಚಕ್ರದಲ್ಲಿ ಸಿಲುಕಿ ತನ್ನ ನಾಶಕ್ಕೆ ತಾನೇ ಕಾರಣನಾಗುತ್ತಾನೆ. ॥169॥ ಹುಟ್ಟು ಮತ್ತು ಸಾವು, ಒಂದರ ನಂತರ ಮತ್ತೊಂದು. ಇದು ಅಂತ್ಯವಿಲ್ಲದ ಚಕ್ರವ್ಯೂಹ. ಆದ್ದರಿಂದ ಈ ಕತೆಗಳ ಶ್ರವಣ ಮಾಡಿ ಆತ್ಮೋದ್ಧಾರ ಮಾಡಿಕೊಳ್ಳಿರಿ.॥170॥ ಸಂತರ ಮುಖದಿಂದ

ಬರುವ ಸಹಜವಾಣಿಯೂ ಅವಿದ್ಯೆಯ ಬಂಧವನ್ನು ಹರಿದು ನಮ್ಮನ್ನು ಅತಿ ಸಂಕಟದಿಂದ ಪಾರುಮಾಡುತ್ತದೆ. ಆದುದರಿಂದ ನಾವೆಲ್ಲರೂ ಈ ಕತೆಗಳನ್ನು ಜೀರ್ಣಿಸಿಕೊಳ್ಳೋಣ. ॥171॥ ನಮಗೆ ಭವಿಷ್ಯ ಯಾವ ರೀತಿ ಇರಬಹುದೆಂಬುದು ತಿಳಿದಿಲ್ಲ. ಅಂತಹ ಸಮಯಗಳಲ್ಲಿ ಯಾವ ರೀತಿಯ ಸಹಾಯ ದೊರೆಯುವುದೆಂಬುದು ತಿಳಿದಿಲ್ಲ. ಇದು ವಿಧಿಯ ಆಟ. ಪ್ರೀತಿಯ ಭಕ್ತನು ಕೇವಲ ಒಬ್ಬ ಪ್ರೇಕ್ಷಕನಷ್ಟೇ. ॥172॥ ಸಾಕಷ್ಟು ಬುದ್ಧಿಶಕ್ತಿ ಅಥವಾ ಯಾವುದೇ ವಿವೇಚನಾ ಶಕ್ತಿಯಿಲ್ಲದಿರುವಾಗ, ಸಾಯಿಯಂತಹ ಸಮರ್ಥ ಗುರುವು ನನಗೆ ದೊರಕಿದ ಅದೃಷ್ಟವನ್ನು ಹೇಗೆ ತಾನೇ ವಿವರಿಸಲಿ! ಇದೂ ಸಹ ಅವರ ಲೀಲೆ. ॥173॥ ಈ ಗ್ರಂಥದ ಪ್ರಯೋಜನವನ್ನು ಈಗಾಗಲೇ ನಿವೇದಿಸಿದ್ದೇನೆ ಮತ್ತು ಬಾಬಾರವರು ನೀಡಿರುವ ಆಶ್ವಾಸನೆಗಳನ್ನೂ ಸಹ. ಅವರಿಂದಾಗಿ, ನಾನು, ನೀನು ಮತ್ತು ಉಪಾಸನೆ ಈ ಮೂರು ವಿಷಯಗಳ ಭಿನ್ನತೆಯ ಬಗ್ಗೆ ನಿರ್ದೇಶನ ದೊರಕಿತು. ॥174॥ ಈಗ ನೀವು ಶ್ರೋತೃಗಳು ಕೇಳುತ್ತಿರುವಿರಿ. ಮುಂದಿನ ಅಧ್ಯಾಯದಲ್ಲಿ ಸಾಯಿನಾಥ ಸಮರ್ಥರು ಶಿರಡಿಯಲ್ಲಿಯಾವ ರೀತಿ ಪ್ರಕಟಗೊಂಡರು ಎಂಬುದರ ಬಗ್ಗೆ ಆಲಿಸಿರಿ. ॥175॥ ನೀವೆಲ್ಲರೂ, ಯುವಕರು ಮತ್ತು ವೃದ್ಧರು, ಸರಳರು ಮತ್ತು ನಂಬಲರ್ಹರ, ನಿಮ್ಮ ಸಂಸಾರ ಜೀವನದ ಕೆಲವು ಕ್ಷಣಗಳನ್ನು ವಿನಿಯೋಗಿಸಿ ಸಾಯಿಯ ಅದ್ಭುತವಾದ ಚರಿತ್ರೆಯನ್ನು ಆಲಿಸಿರಿ. ॥176॥ ಸಾಯಿಯು ಸ್ವತಃ ಅವತಾರಪುರುಷರಾಗಿದ್ದರೂ, ನಿರ್ವಿಕಾರಿಯಾಗಿ ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾರೆ. ಒಬ್ಬ ಗೃಹಸ್ಥನು ತನ್ನ ನಿತ್ಯ ಜೀವನದಲ್ಲಿ ವ್ಯವಹಾರಿಕ ಕಾರ್ಯಗಳಲ್ಲಿ ನಿಮಗ್ನರಾಗಿರುವಂತೆ, ಮಾಯೆಯು ನಿರ್ದೇಶಿಸಿದಂತೆ ನಟಿಸುತ್ತಾರೆ. ॥177॥ "ಸಮರ್ಥ ಸಾಯಿ" ಈ ಮಂತ್ರ ಜಪಿಸುತ್ತ ಅವರ ಪವಿತ್ರ ಚರಣಗಳಲ್ಲಿ ಸೇವಿಸುವವರಿಗೆ ಅವರು ಸೂತ್ರವನ್ನು, ಭಕ್ತರನ್ನು ಸಾಂಸಾರಿಕ ಬಂಧನದಿಂದ ಮುಕ್ತ ಮಾಡಲು ಬೇಕಾದಂತೆ ಆಡಿಸುತ್ತಾರೆ ಅವರ ಜೀವನ ಚರಿತ್ರೆಯು ಪವಿತ್ರವಾದುದು. ॥178॥ ಸಾರಾಂಶದಲ್ಲಿ, ಸಾಯಿ ಚರಿತ್ರೆಯು ಪವಿತ್ರವಾದುದು. ಯಾರು ಇದನ್ನು ವಾಚನ ಮಾಡುತ್ತಾರೋ, ಯಾರು ಆಲಿಸುತ್ತಾರೋ, ಅಂತಹವರ ಹೃದಯಗಳು ಶುದ್ಧೀಕರಣ ಹೊಂದುತ್ತದೆ. ಅಂತರಂಗಗಳು ಪವಿತ್ರವಾಗುತ್ತವೆ. ॥179॥ ಪ್ರೀತಿಯಿಂದ ಕಥಾ ಶ್ರವಣ ಮಾಡಿದಲ್ಲಿ ಎಲ್ಲಾ ಭವ ಬಂಧನಗಳೂ ಕಳಚಿಕೊಳ್ಳುವುವು. ಸಾಯಿ ಕೃಪಾಘನನು. ತನ್ನ ಕೃಪೆಯನ್ನು ಸುರಿಸುತ್ತಾನೆ. ಪರಿಪೂರ್ಣ ಶುದ್ಧಜ್ಞಾನವು ಪ್ರಕಟಗೊಳ್ಳುತ್ತದೆ. ॥180॥ ಆಲಸಿ, ಚಂಚಲ ಮನಸ್ಸು ಇಂದ್ರಿಯ ವಸ್ತುಗಳಿಗೆ ಅಂಟಿಕೊಳ್ಳುವುದು ಮತ್ತು ಜಿಹ್ವಾ ಚಾಪಲ್ಯ ಇವುಗಳು ಶ್ರವಣ ಮಾರ್ಗದಲ್ಲಿ ಅಡಚಣೆಯಾಗಿ ನಿಲ್ಲುತ್ತವೆ. ಅವುಗಳನ್ನು ದೂರಮಾಡಿದಾಗ ಮಾತ್ರ ಶ್ರವಣವು ಒಂದು ಸುಂದರ ಅನುಭವ. ॥181॥ ವ್ರತಗಳನ್ನು ಪೂರ್ಣಗೊಳಿಸಲು ಉದ್ಯಾಪನೆ ಮಾಡಬೇಕಾಗಿಲ್ಲ. ದೇಹವನ್ನು ಹಿಂಸಿಸಲು ಉಪವಾಸ ಮಾಡಬೇಕಗಿಲ್ಲ. ತೀರ್ಥಯಾತ್ರೆ ಮಾಡಬೇಕಾಗಿಲ್ಲ. ಕಥಾ ಶ್ರವಣ ಮಾಡಿದರೆ ಸಾಕು. ॥182॥ ಅಕೃತ್ರಿಮವಾದ ಪ್ರೀತಿ ಮತ್ತು ಭಕ್ತಿಯ ತಿರುಳನ್ನು ಅರಿತಾಗ ಪರಮಾರ್ಥ ಸ್ಥಿತಿಯನ್ನು ಸುಲಭವಾಗಿ ಪಡೆಯಬಹುದು. ದ್ವೈತಭಾವವು

ನಾಶವಾಗುತ್ತವೆ. ॥183॥ ನೀವು ಬೇರೆ ಯಾವುದೇ ರೀತಿಯ ಸಾಧನೆ ಮಾಡಬೇಕಿಲ್ಲ, ಸಾಯಿ ಸಚ್ಚರಿತೆಯ ಶ್ರವಣ ಮಾಡೋಣ. ಅದು ಎಲ್ಲಾ ಸಂಚಿತ ಕರ್ಮಗಳನ್ನು, (ಹಿಂದಿನ ಮತ್ತು ಈಗಿನ ಜನ್ಮದ ಕರ್ಮಗಳು ಪುನರ್ಜನ್ಮಕ್ಕೆ ಕಾರಣವಾದುದು.) ಅವುಗಳನ್ನು ನಾಶಮಾಡುತ್ತದೆ. ಇಲ್ಲದಿದ್ದರೆ ಅವು ಕ್ಷೀಣವಾಗುತ್ತವೆ. ॥184॥ ಒಬ್ಬ ಜಿಪುಣಾಗ್ರೇಸರನು ಎಲ್ಲಿದ್ದರೂ, ಅವನ ಮನಸ್ಸು ಹುದುಗಿರುವ ಸಂಪತ್ತಿನ ಮೇಲೆಯೇ ಹಗಲು – ರಾತ್ರಿ ಇರುತ್ತದೆ. ಅದೇ ರೀತಿ ಸಾಯಿಯು ನಮ್ಮ ಮನಸ್ಸಿನಲ್ಲಿ ನೆಲೆಯಾಗಬೇಕು. ॥185॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಈ ಗ್ರಂಥ ರಚನೆಗೆ ನೀಡಿದ ಒಪ್ಪಿಗೆ" ಎಂಬ ಮೂರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ

1. ಸಂಗೀತದ ಮೂಲಕ ಭಗವಂತನ ಗುಣಗಾನ – ಭಜನೆ.
2. ವಾಗ್ದೇವಿ.
3. ಒಂದು ಕಲ್ಪಿತ ಪರ್ವತ. ಅದರ ಸುತ್ತಲೂ ಗ್ರಹಗಳು ಸುತ್ತುತ್ತಿರುತ್ತವೆ. ಅದರಲ್ಲಿ ಚಿನ್ನ ಮತ್ತು ರತ್ನಗಳೂ ಸಹ ಇವೆಯೆಂದು ಹೇಳುತ್ತಾರೆ.
4. ಚಂದ್ರ ರತ್ನ.
5. ನಾಲ್ಕು ವರ್ಣಗಳು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ.
6. ಜೀವನದ ನಾಲ್ಕು ಆಶ್ರಮಗಳು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ.
7. ಅಧ್ಯಾಯ – 9 ರಲ್ಲಿ ವಿವರವಾಗಿ ಇದೆ.
8. ಸ್ಥೂಲ ಆಕಾರ ಮತ್ತು ಗುಣಗಳೊಡನೆ.
9. ಚಾತಕಪಕ್ಷಿ ಮೋಡಗಳ ನೀರನ್ನು ಮಾತ್ರ ಕುಡಿಯುತ್ತವೆ. ಆದ್ದರಿಂದ ಮಳೆಗಾಗಿ ಅತ್ಯಂತ ಕಾತರದಿಂದ ಕಾಯುತ್ತವೆ.

10. ದಾಮೋದರ ಘನಶ್ಯಾಮ ಬಾಬಾರೆ – ಮುಂದೆ ಅಧ್ಯಾಯ – 24 ರಲ್ಲೂ ಉಲ್ಲೇಖಗೊಂಡಿದೆ.
11. ಹಳ್ಳಿಮನೆ – ಸಮುದಾಯ ಭವನ.
12. ಅವನ ಕಲ್ಮ ಅಥವಾ ಕುರಾನಿನ ಪದಗಳು.
13. ಮರಾಠಿಯಲ್ಲಿ ಒಂದು ನಾಣ್ನುಡಿ ಇದೆ – "ಫಲ್ಗುಣಮಾಸ ಬಂದಿದೆ ಎಂದರೆ ವಸಂತ ಮಾಸ ಬಂತು" ಎಂದು – ಅವನು ಅರಳಿದ.
14. ಪರಮಾತ್ಮನು ಶ್ರೇಷ್ಠವರ್ಯನು.
15. ತ್ರಿಗುಣಗಳು – ಸತ್ವ, ತಮಸ್ಸು ಮತ್ತು ರಜಸ್ಸು ಈ ಮೂರು ಗುಣಗಳೂ ಪ್ರಕೃತಿಯ ಸ್ವರೂಪಗಳು.
16. ಆರು ತಿಂಗಳಕಾಲ ಲೇಖಕನು ಸಚಿವಾಲಯದಲ್ಲಿ ಉದ್ಯೋಗ ನಡೆಸಿದರು. ಶ್ರೀ ಮೀಡ್‌ರವರನ್ನು ಅನಿರೀಕ್ಷಿತವಾಗಿ ವಿಶ್ರಾಂತಿ ವೇತನವನ್ನು ತರಲು ಮಹಾ ಲೆಕ್ಕಿಗರ ಕಛೇರಿಗೆ ತೆರಳಿದಾಗ ಭೇಟಿಯಾದರು. ಅವರಿಗೆ ಅನಂತ ಧನ್ಯವಾದಗಳು. ಇದು 1921ರಲ್ಲಿ ನಡೆಯಿತು. ಶ್ರೀಮೀಡ್‌ರವರು ಲೇಖಕರಿಗೆ ಪರಿಚಿತರು. ಏಕೆಂದರೆ ಅವರು ಮುಖ್ಯ ಗುಮಾಸ್ತರಾಗಿ ಕರ್ತವ್ಯನಿರತರಾಗಿದ್ದರು ಮತ್ತು ಮರಾಠಿ ಉಪಾಧ್ಯಾಯರಾಗಿ ಸರ್ಕಾರದಲ್ಲಿ ಮುಖ್ಯಕಾರ್ಯದರ್ಶಿಯಾಗಿ ಕೆಲಸಮಾಡುತ್ತಿದ್ದಾಗ ಸೇವೆಸಲ್ಲಿಸಿದ್ದಾರೆ.
17. ನಿಜವಾಗಿ ಶಾಸ್ತ್ರೀಯವಾಗಿ 9 ವಿಧವಾದ ಭಕ್ತಿಮಾರ್ಗಗಳನ್ನು ವಿವರಿಸಲಾಗಿದೆ. 1) ಶ್ರವಣಂ – ಪರಮಾತ್ಮನ ಲೀಲೆಗಳನ್ನು ಕೇಳುವುದು. 2) ಕೀರ್ತನಂ – ಅವನ ನಾಮಗಳನ್ನು ಅಥವಾ ಲೀಲೆಗಳನ್ನು ಅಥವಾ ಕಥೆಗಳನ್ನು ರಾಗವಾಗಿ ಹಾಡುವುದು. 3) ಸ್ಮರಣಂ – ಭಗವಂತನನ್ನು ಸ್ಮರಿಸುವುದು. 4) ಪಾದಸೇವನಂ – ಅವನ ಚರಣಗಳ ಸೇವೆಮಾಡುವುದು, ಗುರುಸೇವೆ, ಮಾತಾಪಿತರ ಸೇವೆ, ದೇಶಸೇವೆ ಮತ್ತು ಸಮಾಜಸೇವೆ. 5) ಅರ್ಚನಂ – ಪುಷ್ಪ ಮತ್ತು ಪತ್ರಗಳನ್ನು ಸಮರ್ಪಿಸುವುದು. 6) ವಂದನಂ – ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದು ಮತ್ತು ಸಕಲ ಜೀವಿಗಳಿಗೂ ಮಾನಸಿಕ ವಂದನೆಮಾಡುವುದು. 7) ದಾಸ್ಯಂ – ದೇವರೊಡನೆ ಒಡೆಯ ಮತ್ತು ಸೇವಕ ಎಂಬ ಸಂಬಂಧವನ್ನಿಟ್ಟುಕೊಳ್ಳುವುದು. 8) ಸಖ್ಯಂ – ದೇವರೊಡನೆ ಸ್ನೇಹಭಾವವನ್ನಿಟ್ಟುಕೊಳ್ಳುವುದು. 9) ಆತ್ಮನಿವೇದನಂ – ಭಗವಂತನಲ್ಲಿ ಪರಿಪೂರ್ಣ ಶರಣಾಗತಿಭಾವ.



# ಅಧ್ಯಾಯ - 4

॥ ಅಥ ಶ್ರೀ ಸಾಯಿ ಸಚ್ಚರಿತೆ ॥



## "ಸಾಯಿ ಸಮರ್ಥರ ಅವತರಣ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಎರಡು ಅಧ್ಯಾಯಗಳಲ್ಲಿ ಪ್ರಥಮ ಪ್ರಾರ್ಥನೆ ಮಾಡಲಾಯಿತು. ಅನಂತರ ಈ ಗ್ರಂಥ ರಚನೆಯ ಉದ್ದೇಶ ತಿಳಿಸಲಾಯಿತು ಮತ್ತು ಗ್ರಂಥರಚನಕಾರನ ಅರ್ಹತೆ, ಮುನ್ನುಡಿಯಲ್ಲಿ ಗ್ರಂಥ ರಚನೆಯ ಗುಣಲಕ್ಷಣ ಮತ್ತು ಇತರ ವಿವರಗಳನ್ನು ಚರ್ಚಿಸಲಾಯಿತು. ॥1॥ ಸಂತರು ಯಾವ ಕಾರಣಕ್ಕಾಗಿ ಭೂಮಿಯ ಮೇಲೆ ಅವತಾರವೆತ್ತುತ್ತಾರೆ ಮತ್ತು ಮಾನವರ ಪಾಪಕರ್ಮಗಳೇ ಅದಕ್ಕೆ ಕಾರಣವೆಂಬುದನ್ನೂ ಈಗ ಪ್ರಸ್ತಾಪಿಸುತ್ತೇನೆ. ॥2॥ ಓ ಶ್ರೋತೃ ಮಹಾಶಯರೇ! ನಾನು ನಿಮ್ಮ ಚರಣಧೂಳಿಯ ಒಂದು ಕಣ, ಗಮನವಿಟ್ಟು ಕೇಳಿರಿ ಎಂದು ನಿಮ್ಮನ್ನು ಯಾಚಿಸುತ್ತೇನೆ. ನನಗೇನೂ ಯಾಚಿಸಲು ನಾಚಿಕೆ ಇಲ್ಲ. ॥3॥ ಅದಾಗಿ ಒಬ್ಬ ಸಂತರ ಜೀವನ ಚರಿತ್ರೆಯು ಆಹ್ಲಾದಕರ. ಅದೂ ಅಲ್ಲದೆ ಸಾಯಿಕಥೆಯಂತೂ ಅಮೃತವೇ. ಸಾಯಿಯ ಅಸಂಖ್ಯಾತ ಭಕ್ತರು ಇದನ್ನು ಅನುಭವಿಸಿ ಆನಂದ ಭರಿತರಾಗುತ್ತಾರೆ. ॥4॥ ಬ್ರಾಹ್ಮಣರು ತಮ್ಮ ವರ್ಣಾಶ್ರಮ ಧರ್ಮವನ್ನು ಅಲಕ್ಷ್ಯ ಮಾಡುತ್ತಿದ್ದಾರೆ. ಶೂದ್ರರು ಬ್ರಾಹ್ಮಣರನ್ನು ಮೀರುತ್ತಿದ್ದಾರೆ. ಧಾರ್ಮಿಕ ಪರುಗಳು ಅಗೌರವ ಹೊಂದುತ್ತಿದ್ದಾರೆ ಮತ್ತು ಜನರು ಇತರರನ್ನು ಮೂರ್ಖರನ್ನಾಗಿ ಮಾಡುತ್ತಿದ್ದಾರೆ. ॥5॥ ಧರ್ಮ ಸೂಕ್ಷ್ಮಗಳನ್ನು ಯಾರೂ ಪಾಲಿಸುತ್ತಿಲ್ಲ. ಪ್ರತಿ ಮನೆಯಲ್ಲೂ ಎಲ್ಲರೂ

ಸ್ವಾರ್ಥಪರ ಪಂಡಿತರೇ. ಒಬ್ಬರು ಮತ್ತೊಬ್ಬರನ್ನು ವಶೀಕರಣ ಮಾಡುತ್ತಿದ್ದಾರೆ ಮತ್ತು ಯಾರೂ ಇನ್ನೊಬ್ಬರ ಪಕ್ಷವನ್ನು ಕೇಳುತ್ತಿಲ್ಲ. ॥6॥ ನಿಷಿದ್ಧವಾದ ಪಾನೀಯಗಳನ್ನು ಸೇವಿಸುತ್ತಿದ್ದಾರೆ. ಭಕ್ಷ್ಯಗಳನ್ನು ಭಕ್ಷಿಸುತ್ತಿದ್ದಾರೆ. ಆಚಾರ ವಿಚಾರಗಳನ್ನು ಪೂರ್ಣವಾಗಿ ನಿರ್ಲಕ್ಷಿಸುತ್ತಿದ್ದಾರೆ ಮತ್ತು ಬ್ರಾಹ್ಮಣರು ಮದ್ಯ, ಮಾಂಸ ಇತ್ಯಾದಿಗಳನ್ನು ಬಹಿರಂಗವಾಗಿ ತೆಗೆದುಕೊಳ್ಳುತ್ತಿದ್ದಾರೆ. ॥7॥ ಧರ್ಮದ ಮುಖವಾಡ ಹಾಕಿ ಅತ್ಯಾಚಾರದಲ್ಲಿ ಮಗ್ನರಾಗುತ್ತಾರೆ ಮತ್ತು ಪರಸ್ಪರ ಮತದ್ವೇಷವನ್ನು ಹರಡುತ್ತಾರೆ. ಅದರಿಂದಾಗಿ ಜನರು ಬಳಲುತ್ತಾರೆ. ॥8॥ ಬ್ರಾಹ್ಮಣರು ಸಂಧ್ಯಾಸ್ನಾನ ಮಾಡದೆ ಕರ್ಮಗಳ ಅನುಷ್ಠಾನ ಮಾಡುತ್ತಾರೆ. ಯೋಗಿಗಳು ತಪ, ಧ್ಯಾನಗಳಿಂದ ವಿಮುಖರಾಗಿದ್ದಾರೆ. ಆಗಲೇ ಸಂತರ ಅವತಾರದ ಸಮಯ. ॥9॥ ಯಾವಾಗ ಜನರು ಸಮಾಜದಲ್ಲಿ ಆಸ್ತಿ, ಅಧಿಕಾರ, ವಂಶ ಮತ್ತು ಕುಟುಂಬದಲ್ಲೇ ಸಂತೋಷ ಇರುವುದೆಂದು ನಂಬುತ್ತಾರೋ, ಪರಮಾರ್ಥ ವಿಷಯಗಳಿಂದ ವಿಮುಖರಾಗುವರೋ, ಆಗಲೇ ಸಂತರು ಜನ್ಮತಾಳುತ್ತಾರೆ. ॥10॥ ಸಂಸಾರ, ಸಮಾಜ, ಹಣ, ಅಂತಸ್ತು, ಮಕ್ಕಳು, ಮರಿ ಅಂತ ಲೌಕಿಕ ವಿಚಾರಗಳನ್ನೇ ಮುಖ್ಯ ಎಂದು ನಂಬಿ ಆಧ್ಯಾತ್ಮಿಕ ಮೌಲ್ಯಗಳಿಂದ ಜನತೆ ವಿಮುಖರಾದಾಗ, ಸಂತರು ಅವತರಿಸುತ್ತಾರೆ. ॥11॥ ಜನರು ಯಾವಾಗ ಆಯಸ್ಸು, ಆರೋಗ್ಯ, ಐಶ್ವರ್ಯಗಳನ್ನು ಕಳೆದುಕೊಳ್ಳುತ್ತಾರೋ, ಯಾವಾಗ ಕಾಮದಾಟದಲ್ಲಿ ದಾರಿತಪ್ಪಿದವರಾಗುತ್ತಾರೋ, ಆಗ ಅವರು ಸಂಪೂರ್ಣವಾಗಿ ಮುಕ್ತಿ ಮಾರ್ಗದಿಂದ ದೂರವಾಗುತ್ತಾರೆ. ಆಗ ಸಂತರು ಜನ್ಮತಾಳುತ್ತಾರೆ. ॥12॥ ವೇದದಲ್ಲಿರುವ ವರ್ಣಾಶ್ರಮಧರ್ಮವನ್ನು ಕಾಪಾಡಲು, ಅಧರ್ಮವನ್ನು ನಾಶಮಾಡಲು, ದೀನರನ್ನು, (ಉದ್ಧಾರ ಮಾಡಲು) ಬಡವರು ಮತ್ತು ಅಶಕ್ತರನ್ನು ಸಂರಕ್ಷಣೆಮಾಡಲು ಸಂತರು ಅವತರಿಸುತ್ತಾರೆ. ॥13॥ ಸಂತರು ಸ್ವತಃ ಮುಕ್ತರು, ದೀನರನ್ನು ಉದ್ಧಾರಮಾಡಲು ಸದಾ ನಿರತರಾಗಿರುತ್ತಾರೆ. ಅವತಾರವಾಗುವುದು ಕೇವಲ ಪರಾರ್ಥಕ್ಕಾಗಿ. ಅವರಲ್ಲಿ ಸ್ವಲ್ಪವೂ ಸ್ವಾರ್ಥವಿರುವುದಿಲ್ಲ. ॥14॥ ನಿವೃತ್ತಿ ಎಂಬ ಅಡಿಪಾಯವನ್ನು ಹಾಕಿ, ಸಂಸಾರವೆಂಬ ಗರ್ಭಗುಡಿಯ ಸುತ್ತಲೂ ಹಾಕುತ್ತಾರೆ. ಪರಮ ಶಿವ ಮಂದಿರವನ್ನು ಕಟ್ಟಿ ಭಕ್ತರನ್ನು ಸುಲಭವಾಗಿ ಉದ್ಧರಿಸುತ್ತಾರೆ. ॥15॥ ಧರ್ಮ ಕಾರ್ಯಕ್ಕಾಗಿ, ಧರ್ಮಜಾಗೃತಿಗಾಗಿ ಬಂದ ಅವರು ತಮ್ಮ ಜೀವನದಲ್ಲಿ ಆ ಧ್ಯೇಯವನ್ನು ಸಾಧಿಸುತ್ತಾರೆ ಮತ್ತು ತಮ್ಮ ಕಾರ್ಯ ಮುಗಿದಕೂಡಲೇ ತಮ್ಮ ಪಾರ್ಥಿವ ಶರೀರವನ್ನು ತೊರೆದು ಬಿಡುತ್ತಾರೆ. ॥16॥ ಪ್ರತಿಯೊಂದು ಜೀವಾತ್ಮನೂ, ಪರಮಾತ್ಮನೇ ಇಡೀ ಪ್ರಪಂಚಕ್ಕೆ ಆನಂದದಾಯಕನು ಮತ್ತು ಪರಮಾತ್ಮನೇ ಗುರುವೂ ಸಹ. ಶಂಕರನು ಮಂಗಳಕರನು. ॥17॥ ಅವನು ಸರ್ವಶ್ರೇಷ್ಠ ಪ್ರೇಮ ಮಂದಿರ; ಅವನು ನಿತ್ಯ, ನಿರಂತರ, ಅಭೇದ್ಯ; ಅವನು ದೇಶ, ಕಾಲ, ವಸ್ತುಗಳಿಗೆ ಅತೀತ ಮತ್ತು ಪರಿಚ್ಛೇದನಾತೀತನೂ ಹೌದು. ॥18॥ ನಾಲ್ಕು ರೀತಿಯ ವಾಣಿಯು ಇರುತ್ತದೆ. ಅವುಗಳು ಪರ (ಕೇವಲ ಯೋಗಿಗಳು ತಪಸ್ಸಿನಿಂದ ಸಾಧಿಸಿದ ಓಂಕಾರ) ಪಶ್ಯಂತಿ (ವಾಣಿಯು ತನ್ನ ಎರಡನೆಯ ಸ್ಥಿತಿಯನ್ನು ಮನಸ್ಸಿನಲ್ಲಿಟ್ಟಿದೆ.) ಮಧ್ಯಮ (ವಾಣಿಯು

ಮೂರನೆಯ ಸ್ಥಿತಿಯಲ್ಲಿ ಅದು ಗಂಟಲಿನಲ್ಲಿರುವ ಶ್ವಾಸನಾಳದಲ್ಲಿದೆ.) ವೈಖರಿ (ಸ್ಪಷ್ಟೋಚ್ಚಾರಣೆಯ ಮಾತುಗಳು) ಈ ನಾಲ್ಕು ವಾಣಿಗಳೂ ಅವನನ್ನು ವರ್ಣಿಸಲಾರದೆ ಹೋಗಿವೆ. ಜ್ಞಾನವೂ ವೇದ ಸಾರಗಳೂ ತಮ್ಮ ಸೋಲನ್ನು ಒಪ್ಪಿಕೊಂಡಿವೆ ಮತ್ತು ತಿಳಿಸುತ್ತವೆ ನೇತಿ; ನೇತಿ; ಇದು ಅಲ್ಲ, ಇದು ಅಲ್ಲ ಎಂದು ಮಾತ್ರ. ॥19॥ ಷಟ್ ದರ್ಶನಗಳು[1] ಮತ್ತು ಅವುಗಳ ಆರು ಶಾಖೆಗಳೂ ಅವನನ್ನು ವಿವರಿಸಲು ಆಗದೆ ದೂರ ಸರಿದಿವೆ. ಪುರಾಣಗಳು ಮತ್ತು ಕೀರ್ತನೆಗಳು ಸಹ ದಣಿದಿವೆ. ಕಾಯಾ, ವಾಚಾ, ಮನಸಾ ಪ್ರಾರ್ಥನೆ ಮಾಡುವುದೊಂದೇ ಅವನನ್ನು ಅರ್ಥ ಮಾಡಿಕೊಳ್ಳಲು ಇರುವ ಮಾರ್ಗ. ॥20॥ ಈ ರೀತಿ ಇರುವುದು ಸಂತ ಸಾಯಿ ಸಮರ್ಥರ ಚರಿತ್ರೆ, ಅವರ ಲೀಲೆಗಳು ಅತ್ಯಂತ ವಿಚಿತ್ರವಾದುವು. ಅವರ ಪವಿತ್ರ ಕತೆಯನ್ನು ಕೇಳಿ ನಮ್ಮ ಕಿವಿಗಳೇಕೆ ಪಾವನವಾಗುವುದಿಲ್ಲ? ॥21॥ ಸಕಲ ಇಂದ್ರಿಯಗಳಿಗೂ ಚಾಲಕರು ಅವರೇ. ಈ ಗ್ರಂಥ ರಚನೆ ಮಾಡಲು ಬುದ್ಧಿಯನ್ನು ಕೊಡುವವರೂ ಅನಾಯಾಸವಾಗಿ ಕ್ರಮಬದ್ಧವಾಗಿ ಚರಿತ್ರೆಯನ್ನು ಬರೆಯಲು ಪ್ರೋತ್ಸಾಹ ನೀಡುವವರೂ ಅವರೇ. ॥22॥ ಅವರು ಸರ್ವಾಂತರ್ಯಾಮಿ, ಅವರು ಒಳಗೂ ಹೊರಗೂ ವಾಸಿಸುವರು. ಅವರು ಎಲ್ಲೆಲ್ಲೂ ಇರುವವರು. ಹಾಗಿರಲು ನಾನು ಅನವಶ್ಯಕವಾಗಿ ಏಕೆ ಚಿಂತಿಸಲಿ? ಮತ್ತು ಯಾವುದಕ್ಕಾಗಿ ಚಿಂತಿಸಲಿ? ॥23॥ ಅವರ ಒಂದೊಂದು ಗುಣಗಳನ್ನು ನೆನಸಿಕೊಂಡಾಗಲೂ ನನ್ನ ಮನಸ್ಸು ಬಾಗುತ್ತದೆ. ಹಾಗಿರುವಾಗ ಮಾತಿನಲ್ಲಿ ಅವುಗಳನ್ನು ವರ್ಣಿಸಲು ಹೇಗೆ ಸಾಧ್ಯ? ಅವರ ಬಗ್ಗೆ ಮೌನವಾಗಿರುವುದೇ ಉತ್ತಮ. ॥24॥ ನಾಸಿಕವು ಹೂವಿನ ಪರಿಮಳವನ್ನು ಆಘ್ರಾಣಿಸುತ್ತದೆ. ಚರ್ಮವು ಸ್ಪರ್ಶಜ್ಞಾನದಿಂದ ಬಿಸಿ ಅಥವಾ ತಣ್ಣಗಿರುವುದನ್ನು ಅರಿಯುತ್ತದೆ. ಕಣ್ಣುಗಳು ಸೌಂದರ್ಯವನ್ನು ಅನುಭವಿಸುತ್ತವೆ. ಈ ರೀತಿ ಇಂದ್ರಿಯಗಳು ಸುಖಪಡುತ್ತವೆ. ॥25॥ ನಾಲಿಗೆಗೆ ಸಕ್ಕರೆಯ ಸಿಹಿಯು ತಿಳಿಯುತ್ತದೆ. ಆದರೆ ಅದನ್ನು ವಿವರಿಸಲು ಅದಕ್ಕೆ ಸಾಧ್ಯವಿಲ್ಲ. ಅದೇ ರೀತಿ ನಾನು ಸಾಯಿಯ ಗುಣಗಾನ ಮಡಲು ಅಸಮರ್ಥನಾಗಿದ್ದೇನೆ. ॥26॥ ಸದ್ಗುರುವು ನಿರ್ಧಾರ ಮಾಡಿದಾಗ, ಅವರು ತಾವೇ ದೈವೀಪ್ರೇರಣೆಯನ್ನು ದಯಪಾಲಿಸುತ್ತಾರೆ. ಅವರು ವಿವರಣೆಯನ್ನು ನೀಡಲಾಗದ ಪದಗಳ ಅರ್ಥಕ್ಕಾಗಿ ಅಂಥ ವ್ಯಕ್ತಿಗಳಿಂದ ಮಾಡಿಸುತ್ತಾರೆ. ॥27॥ ಇದು ಕೇವಲ ಶಿಷ್ಟಾಚಾರವಲ್ಲ. ಈ ಮಾತುಗಳು ಕೇವಲ ಉಪಚಾರಕ್ಕಾಗಿ ಅಲ್ಲ. ಇವುಗಳು ಮನಃಪೂರ್ವಕವಾಗಿ ಹೊರಬಂದ ಸತ್ಯವಾದ ಉದ್ಗಾರಗಳು. ನಾನು ತಾವೆಲ್ಲರೂ ಆದರದಿಂದ ನೀಡುವ ಗಮನಕ್ಕಾಗಿ ಪ್ರಾರ್ಥಿಸುತ್ತೇನೆ. ॥28॥ ಗಾಣಗಾಪುರ, ನರಸಿಂಹವಾಡಿ, ಔದುಂಬರ ಮತ್ತು ಬಿಲ್ಲವಾಡಿ[2] ಇವುಗಳ ರೀತಿಯಲ್ಲಿ, ಹಾಗೆಯೇ ಪವಿತ್ರ ಗೋದಾವರಿ ನದಿ ತೀರದಲ್ಲಿರುವ ಶಿರಡಿ ಕ್ಷೇತ್ರವೂ ಪ್ರಸಿದ್ಧವಾಗಿದೆ. ॥29॥ ಗೋದಾವರಿ ನದಿಯ ಪವಿತ್ರ ಜಲ, ಪರಿಶುದ್ಧವಾದ ತಂಗಾಳಿ, ಇವೆಲ್ಲವೂ ಭವ ಸಾಗರದ ಅಂಧಕಾರವನ್ನು ನಾಶಮಾಡುತ್ತವೆ. ॥30॥ ಗೋದಾವರಿ ನದಿಯ ಪಾವಿತ್ರ್ಯವು ಸಕಲ ಜಗತ್ತಿನಲ್ಲಿ ಪ್ರಖ್ಯಾತವಾಗಿದೆ. ಅವಳ ಮಡಿಲು ಒಬ್ಬರಿಗಿಂತ ಮತ್ತೊಬ್ಬ ಮಹಾನ್ ಸಂತರು ನೆಲೆಸಿದ

ಭೂಮಿಯಾಗಿದೆ. ॥31॥ ಗೋಮತೀ ನದಿಯ ತೀರದಲ್ಲಿ ಅನೇಕ ಪವಿತ್ರ ತೀರ್ಥಕ್ಷೇತ್ರಗಳಿವೆ. ಅವಳ ನೀರು ಪಾಪನಾಶಕ. ಆ ನೀರಿನ ಪಾನ ಹಾಗೂ ಸ್ನಾನಗಳಿಂದ ಭವರೋಗಗಳೆಲ್ಲವೂ ನಿವಾರಿಸಲ್ಪಡುತ್ತದೆ. ಹೀಗೆಂದು ಪುರಾಣಗಳು ವರ್ಣಿಸಿವೆ. ॥32॥ ಆ ಗೋದಾವರಿಯು ಅಹಮದ್ ನಗರ ಜಿಲ್ಲೆಯ ಕೋಪರಗಾಂವ ತಾಲೂಕಿನ ಕೋಪರಗಾಂವನ ಹತ್ತಿರವೇ ಇರುವ ಶಿರಡಿಗೆ ಮಾರ್ಗದರ್ಶನ ಮಾಡುತ್ತದೆ. ॥33॥ ಗೋದಾವರಿಯ ಮತ್ತೊಂದು ತೀರದಲ್ಲಿ ಆರು ಮೈಲು ದೂರದಲ್ಲಿ ಟಾಂಗಾವ್ ನೀಂವರ್ಗಾವ್ ತಲಪುತ್ತಲೇ ಶಿರಡಿಯ ಕ್ಷೇತ್ರವು ದೃಷ್ಟಿಗೆ ಬೀಳುತ್ತದೆ. ॥34॥ ನಿವೃತ್ತಿದೇವ, ಜ್ಞಾನದೇವ, ಮುಕ್ತಾಬಾಯಿ, ನಾಮದೇವ, ಜನೀಬಾಯಿ, ಗೋರಕುಂಬಾರ, ಗೋರಾಯಿ, ತುಕಾರಾಮ, ನರಹರಿ, ನರಸೀಬಾಯಿಮೆಹ್ತ, ಸಾಜನ್ ಕಸಾಯಿ ಮತ್ತು ಸಾವತಾ ಮಾಲಿ ॥35॥ ಇವರೆಲ್ಲರೂ ಪೂರ್ಣಕಾಲದ ಸಂತರು. ಈ ಕಾಲದಲ್ಲಿಯೂ ಅಂತಹ ಅನೇಕ ಜನರಿದ್ದಾರೆ. ಇಡೀ ವಿಶ್ವ ಒಂದೇ ಕುಟುಂಬವೆಂದು ಭಾವಿಸಿದವರು ಮತ್ತು ದೀನರಿಗೆ, ದುಃಖಿಗಳಿಗೆ, ಆಸರೆ ನೀಡುವವರು. ॥36॥ ರಾಮದಾಸರೆಂಬ ಸಂತಶ್ರೇಷ್ಠರು ಗೋದಾವರಿ ತೀರವನ್ನು ತೊರೆದು ಕೃಷ್ಣಾನದಿಯ ದಡದಲ್ಲಿ ಜಗತ್ತಿನ ಉದ್ಧಾರಕ್ಕಾಗಿ ಪ್ರಕಟಗೊಂಡರು. ॥37॥ ಅದೇ ರೀತಿಯಲ್ಲಿ ಯೋಗಿಶ್ರೇಷ್ಠ ಸಾಯಿಯೂ ಶಿರಡಿಯ ಮಹಾ ಪುಣ್ಯವಶಾತ್ ಜಗತ್ತಿನ ಉದ್ಧಾರಕ್ಕಾಗಿ ಗೋದಾವರಿಯ ತಟದಲ್ಲಿ ಅವತರಿಸಿದರು. ॥38॥ 'ಪರಸ್'ಮಣಿಯು ಕಬ್ಬಿಣವನ್ನು ಚಿನ್ನವನ್ನಾಗಿ ಮಾಡುತ್ತದೆ. ಅದೇ ರೀತಿ ಸಂತರೆಲ್ಲರೂ ಸಹ ಪರಸು ಮಣಿಗಳೇ. ಸಂತರ ಕೆಲಸಗಳೆಲ್ಲವೂ ಅಲೌಕಿಕವೆ. ತಮ್ಮ ಭಕ್ತರಿಗೆ ತಮ್ಮ ನಿಜ ಸ್ವರೂಪವನ್ನು ತೋರಿಸುತ್ತಾರೆ. ॥39॥ ಸಂತರು ಯಾವಾಗಲೂ ಭೇದ ಭಾವವನ್ನು ದೂರ ಮಾಡಿ ಪ್ರತಿಯೊಂದರಲ್ಲೂ ಇಡೀ ವಿಶ್ವವನ್ನೇ ಬ್ರಹ್ಮಸ್ವರೂಪವೆಂದು ತನ್ನಲ್ಲೂ ಸುತ್ತಲಿನ ಜಗತ್ತಿನಲ್ಲೂ ಇರುವುದು ಒಂದೇ ಎಂದು ಅರಿತವರು. ॥40॥ ಈ ರೀತಿ ಯಾವಾಗ ಇಡೀ ವಿಶ್ವವೇ ತನ್ನ ಆತ್ಮಸ್ವರೂಪ ಎಂಬ ಅರಿವು ಉಂಟಾಗುತ್ತದೋ ಆಗ ಆ ಆನಂದವನ್ನು ಯಾವ ರೀತಿ ವರ್ಣಿಸಬಹುದು? ಅದು ಪರಮಸತ್ಯದ ಸಾಕ್ಷಾತ್ಕಾರವನ್ನು ಅನುಭವಿಸುವುದು. ॥41॥ ಈ ರೀತಿ ಏಕತ್ವವನ್ನು ಅನುಭವಿಸಿದನಂತರ ಯಾರ ಬಗ್ಗೆಯಾದರೂ ದ್ವೇಷ ಅಥವಾ ಭಯ ಏಕಿರಬೇಕು? ನೀವು ಯಾರ ಆಶ್ರಯವನ್ನೂ ಪಡೆಯಬೇಕಿಲ್ಲ. ॥42॥ ಮಂಗಳವಾಡೆಯ ದಾಮಾಜಿ, ಸಜ್ಜನಗಡದ ರಾಮದಾಸ, ವಾಡಿಯ ನರಸಿಂಹಸರಸ್ವತಿ, ಅದೇ ರೀತಿ ಸಾಯಿನಾಥರು ಶಿರಡಿಯಲ್ಲಿದ್ದರು. ॥43॥ ಈ ಸಂಸಾರದಲ್ಲಿ ಜೀವಿಸುವುದು ಅತಿಕಷ್ಟಕರವಾದದ್ದು. ಅಂತಹುದನ್ನು ಗೆದ್ದಿರುವವರು. ಶಾಂತಿಯೇ ಅವರ ಆಭರಣ ಮತ್ತು ಅವರು ಗುಣನಿಧಿಯು. ॥44॥ ಅವರು ವೈಷ್ಣವರ ವೈಕುಂಠಧಾಮ[5], ಕರುಣಾಳುಗಳಲ್ಲಿ ದಯಾಳು, ಪರಮಾರ್ಥ ಜ್ಞಾನವನ್ನು ಕರುಣಿಸುವವರು, ಕೃಷ್ಣನ ಅಪರಾವತಾರವೂ ಹೌದು. ಸಾಯಿಯು ಸತ್ಯಸ್ವರೂಪದ ಸಾರವೂ ಹೌದು. ॥45॥ ನಶ್ವರವಸ್ತುವಿನ ಮೇಲೆ ಯಾವುದೇ ಅಭಿಲಾಷೆ ಇಲ್ಲದೆ, ಆತ್ಮಸ್ವರೂಪದಲ್ಲೇ ತಲ್ಲೀನರಾಗಿ, ಪರಮಾರ್ಥದ ಪ್ರಾಪ್ತಿಯ ಲಕ್ಷ್ಯವೊಂದೇ

ಉಳ್ಳವರು. ಅಂತಹವರು ಆ ಸ್ಥಿತಿಯನ್ನು ನಿಜವಾಗಿಯೂ ವರ್ಣಿಸಲಾರರು. ॥46॥ ಲೌಕಿಕ ಸಂಪತ್ತಿಗೆ ಯಾವುದೇ ಬಂಧನವಿಲ್ಲದೆ ಅಥವಾ ಅದಿಲ್ಲದೆ ಇರುವಾಗಲೂ ಪರಲೋಕದ ಸುಖದುಃಖಗಳಿಂದ ವಿಚಲಿತನಾಗದೆ (ಮೃತನಾದಮೇಲೆ ಉಂಟಾಗುವ ಅನುಭವ);ಅವನ ಹೃದಯವು ಕನ್ನಡಿಯಷ್ಟು ಪರಿಶುದ್ಧವಾಗಿರುತ್ತದೆ ಹಾಗೂ ವಾಣಿಯು ಅಮೃತವರ್ಷ ನೀಡುತ್ತಿರುತ್ತದೆ. ॥47॥ ರಾಜ, ದರಿದ್ರ, ಬಡವ, ಅಬಲ ಎಲ್ಲರೂ ಅವರ ದೃಷ್ಟಿಯಲ್ಲಿ ಸರಿಸಮಾನರು. ಅವರಾದರೋ ಮಾನಾಪಮಾನಗಳನ್ನು ಮೀರಿದವರು. ಅವರು ಪ್ರತಿಯೊಂದು ಜೀವಿಯಲ್ಲಿಯೂ ಪರಮಾತ್ಮನನ್ನು ಕಾಣುತ್ತಿದ್ದರು. ॥48॥ ಅವರು ಎಲ್ಲ ಜನರೊಡನೆಯೂ ಸಾಧಾರಣವಾಗಿಯೇ ವ್ಯವಹರಿಸುತ್ತಿದ್ದರು. ನೃತ್ಯವನ್ನು ವೀಕ್ಷಿಸುತ್ತಿದ್ದರು. ಮುರಳಿನಾದವನ್ನು[5] ಸವಿಯುತ್ತಿದ್ದರು. ಹಾಡುಗಳನ್ನು, ಗಜಲ್‌ಗಳನ್ನು ಆಲಿಸುತ್ತ ಅವಕ್ಕೆ ಆನಂದದಿಂದ ತಲೆದೂಗುತ್ತಿದ್ದರು. ಆದರೂ ಅವರ ಅಂತರಂಗದ ಸಮಾಧಿಸ್ಥಿತಿಯು ನಿಶ್ಚಲವಾಗಿರುತ್ತಿತ್ತು. ॥49॥ 'ಅಲ್ಲಾ'ನ ಹೆಸರು ಅವರ ಹೃದಯದಲ್ಲಿ ಅಚ್ಚಾಗಿತ್ತು. ಅವರು ಜಗವೆಲ್ಲ ಮಲಗಿರಲು ಎಚ್ಚರವಾಗಿದ್ದರು. ಮತ್ತು ಜಗತ್ತು ಎಚ್ಚರವಾಗಿದ್ದಾಗ ತಾನು ಮಲಗುತ್ತಿದ್ದರು. ಅವರ ಸ್ವಭಾವ ಸಮುದ್ರದ ಅಂತರಾಳವು ಶಾಂತವಾಗಿರುವಂತೆ ಇರುತ್ತಿತ್ತು. ॥50॥ ಅವರು ಯಾವ ಆಶ್ರಮ್[6] ಅಥವಾ ಜೀವನದ ಹಂತದಲ್ಲಿದ್ದಾರೆ ಎಂಬುದನ್ನು ನಿರ್ಧರಿಸುವುದು ಬಹಳಷ್ಟು ಕಷ್ಟ ಅಥವಾ ಅವರ ಕಾರ್ಯಗಳ ವ್ಯವಹಾರಗಳ ಉದ್ದೇಶವನ್ನು ತಿಳಿಯುವುದೂ ಕಷ್ಟ. ಬಹುಮಟ್ಟಿಗೆ ಅವರು ತಮ್ಮ ಜಾಗದಿಂದ ಕದಲದಿದ್ದರೂ ಅವರಿಗೆ ಎಲ್ಲಾ ವ್ಯವಹಾರಗಳೂ ತಿಳಿದಿರುತ್ತಿತ್ತು. ॥51॥ ಹೊರನೋಟಕ್ಕೆ ದರ್ಬಾರ್ ರೀತಿಯ ವೈಭವ ಇತ್ತು. ಅವರು ಸಾವಿರಾರು ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು. ಇದು ಒಂದು ನಿತ್ಯ ಪ್ರದರ್ಶನವಾಗಿತ್ತು. ಆದರೆ ಅವರು ಅಂತರಂಗದಲ್ಲಿ ಅಖಂಡವಾದ ಮೌನದಲ್ಲಿ ನೆಲಸಿದ್ದರು. ॥52॥ ಅವರು ಗೋಡೆಗೊರಗಿಕೊಂಡು ನಿಂತಿರುತ್ತಿದ್ದರು. ಬೆಳಗಿನಹೊತ್ತು ಓಡಾಡುತ್ತಿದ್ದರು. ಮಧ್ಯಾಹ್ನ ಲೆಂಡಿಗೆ ಅಥವಾ ಚಾವಡಿಗೆ ಹೋಗುತ್ತಿದ್ದರು. ಆದರೆ ಅವರ ಚಿತ್ತ ಕದಡದೆ ಶಾಂತವಾಗಿರುತ್ತಿತ್ತು. ॥53॥ ನಾನು ಯಾವ ಜನ್ಮದಲ್ಲಿ ಯಾವ ಕಾಲದಲ್ಲಿ ಯಾವ ಸಂದರ್ಭದಲ್ಲಿ ಯಾವ ರೀತಿಯ ತಪಸ್ಸು ಮಾಡಿದ್ದೇನೆಂದು ನನಗೆ ತಿಳಿದಿಲ್ಲ. ಅದರ ಫಲವಾಗಿ ಈಗ ಸಾಯಿಯು ನನ್ನನ್ನು ತಮ್ಮ ಆಶ್ರಯಕ್ಕೆ ತೆಗೆದುಕೊಂಡಿದ್ದಾರೆ. ॥54॥ ನನ್ನ ತಪಸ್ಸಿನ ಫಲವೆಂದು ಹೇಳಬೇಕೇ? ಆದರೆ, ಇಲ್ಲ. ನಾನು ಪಾಪಿಯಾಗಿ ಹುಟ್ಟಿದ್ದೇನೆ. ಸಾಯಿಯೇ ದಯಾಳು, ಪ್ರೇಮಮಯಿ, ನಿಶ್ಚಲವಾಗಿ ಇದು ಅವರ ಕೃಪೆ. ॥55॥ 'ಸಿದ್ಧ'[7]ರಾಗಿ ಹುಟ್ಟಿದ್ದರೂ ಅವರ ರೀತಿಗಳು, 'ಸಾಧಕ'[8]ರಂತೆ ಇದ್ದುವು. ಅವರಿಗೆ ಯಾವುದೇ ಅಹಂಕಾರವಿರಲಿಲ್ಲ. ಕರುಣಾಮಯಿಯಾಗಿದ್ದರು. ಮತ್ತು ಎಲ್ಲರನ್ನೂ ಸಂತೋಷಪಡಿಸುತ್ತಿದ್ದರು. ॥56॥ ಸಂತ ಏಕನಾಥರು ಪೈಠಾಣ ಮತ್ತು ಜ್ಞಾನದೇವರು ಆಳಂದಿಯನ್ನು ಪ್ರಖ್ಯಾತಗೊಳಿಸಿದಂತೆ ಸಾಯಿಯು ಶಿರಡಿಯನ್ನು ಮಹಿಮಾಸಂಪನ್ನವಾಗಿ ಮಾಡಿದರು. ॥57॥ ಶಿರಡಿಯ ಹುಲ್ಲು, ಶಿಲೆಗಳು ಧನ್ಯ. ಅನಾಯಾಸವಾಗಿ ಪ್ರತಿನಿತ್ಯ ಅವು ಬಾಬಾರವರ ಚರಣಗಳನ್ನು ಮುತ್ತಿಡುತ್ತಿದ್ದವು.

ಬಾಬಾರವರ ಚರಣಧೂಲಿಯನ್ನು ಮಸ್ತಕದಲ್ಲಿ ಧರಿಸುತ್ತಿದ್ದವು. ॥58॥ ನಮಗೆ ಶಿರಡಿಯೇ ಪಂಡರಾಪುರ, ಶಿರಡಿಯೇ ಜಗನ್ನಾಥಪುರಿ, ದ್ವಾರಕ, ಗಯ, ಕಾಶಿಯ ವಿಶ್ವೇಶ್ವರ (ದೇವಾಲಯ) ಶಿರಡಿಯೇ ನಮ್ಮ ರಾಮೇಶ್ವರ[10A]. ॥59॥ ಶಿರಡಿಯೇ ನಮ್ಮ ಬದರಿ, ಕೇದಾರ, ಶಿರಡಿಯೇ ನಾಸಿಕ, ತ್ರಯಂಬಕೇಶ್ವರ, ಶಿರಡಿಯೇ ಉಜ್ಜೈನಿ ಮಹಾಕಾಳೇಶ್ವರ, ಶಿರಡಿಯೇ ಮಹಾಬಲೇಶ್ವರ ಮತ್ತು ಗೋಕರ್ಣ.[10B] ॥60॥ ಶಿರಡಿಯಲ್ಲಿ ಸಾಯಿಯ ಸಮಾಗಮವೇ ಆಗಮ (ವೇದ) ಮತ್ತು ನಿಗಮ (ವೇದಾನಂತರದ ಶೈವ, ಶಾಕ್ತ ಮತ್ತು ವೈಷ್ಣವ ಶಾಸ್ತ್ರಗಳ) ಅಧ್ಯಯನ ಮಾಡಿದಂತೆ. ಮತ್ತು ಎಲ್ಲಾ ನೋವಿಗೂ ಗುಣಪಡಿಸುವ ಸ್ಪರ್ಶ. ಪರಮಾರ್ಥವನ್ನು ಸಾಧಿಸಲು ಅತ್ಯಂತ ಸುಗಮ ಮಾರ್ಗ. ॥61॥ ಸಮರ್ಥ ಸಾಯಿಯ ದರ್ಶನವೇ ನಮ್ಮ ಯೋಗಸಾಧನ. ಅವರ ಜೊತೆಯ ಸಂಭಾಷಣೆಯಿಂದಲೇ ನಮ್ಮ ಪಾಪಗಳೆಲ್ಲವೂ ತೊಳೆದುಹೋಗುತ್ತವೆ. ॥62॥ ಅವರ ಪಾದನಮಸ್ಕಾರ ಮಾಡುವುದು ನಾವು ತ್ರಿವೇಣಿ (ಗಂಗಾ, ಯಮುನಾ, ಸರಸ್ವತಿ) ಸಂಗಮದಲ್ಲಿ ಸ್ನಾನ ಮಾಡಿದಂತೆ. ಮತ್ತು ಅವರ ಚರಣ ತೀರ್ಥವನ್ನು ಸೇವಿಸುವುದರಿಂದ ನಮ್ಮ ವಾಸನೆಗಳು ನಿರ್ಮೂಲನವಾಗುತ್ತವೆ. ॥63॥ ಅವರ ಆಜ್ಞೆಯು ನಮಗೆ ಘೋಷವು. ಅವರ ಉದಿ ಮತ್ತು ಪ್ರಸಾದಗಳು ನಮ್ಮನ್ನು ನಿರ್ಮಲಗೊಳಿಸುವುವು. ಮತ್ತು ಎಲ್ಲ ರೀತಿಯಲ್ಲೂ ಪುಣ್ಯ ಪಾವನವಾದವು. ॥64॥ ಸಾಯಿಯೇ ನಮಗೆ ಪರಬ್ರಹ್ಮ. ಸಾಯಿಯೇ ನಮ್ಮ ಶ್ರೇಷ್ಠವಾದ ಪರಮಾರ್ಥ ಮತ್ತು ಸಾಯಿಯೇ ಶ್ರೀಕೃಷ್ಣ, ಶ್ರೀರಾಮ ಮತ್ತು ಸಾಯಿಯೇ ನಮಗೆ ಆಶ್ರಯ ಮತ್ತು ಆರಾಮ. ॥65॥ ಸಾಯಿಯು ಸ್ವತಃ ದ್ವಂದ್ವಾತೀತ. ನಿರಂತರ ತನ್ನ ಸ್ವಸ್ವರೂಪದಲ್ಲಿ ನೆಲೆಸಿರುವವರು ಮತ್ತು ಶಾಶ್ವತವಾಗಿ ಬ್ರಹ್ಮನಲ್ಲಿ ಸ್ಥಿತವಾದವರು॥66॥ ಶಿರಡಿಯು ಕೇವಲ ಕೇಂದ್ರಸ್ಥಾನ. ಬಾಬಾರವರ ಕ್ಷೇತ್ರ ಅತ್ಯಂತ ವಿಸ್ತಾರವಾಗಿದೆ. ಪಂಜಾಬ್, ಕಲಕತ್ತ, ಸಿಂಧುಸ್ಥಾನ, ಗುಜರಾತ, ದಕ್ಷಿಣಕನ್ನಡ ಇವೆಲ್ಲವನ್ನೂ ವ್ಯಾಪಿಸಿದೆ. ॥67॥ ಶಿರಡಿಯಲ್ಲಿರುವ ಸಾಯಿಯ ಸಮಾಧಿಯು ಎಲ್ಲಾ ಸಂತರು ಸೇರುವ ಸ್ಥಳವಾಗಿದೆ. ಅದರ ಕಡೆಗೆ ಇಡುವ ಪ್ರತಿಯೊಂದು ಹೆಜ್ಜೆಯೂ ಒಂದೊಂದು ಭವಬಂಧನವನ್ನು ಕಳಚುತ್ತದೆ. ॥68॥ ಕೇವಲ ಸಮಾಧಿ ದರ್ಶನದಿಂದಲೇ ಪ್ರತಿಯೊಬ್ಬರ ಜೀವನ ಸಾರ್ಥಕವಾಗುತ್ತದೆ. ಹಾಗಿರುವಾಗ ಅವರ ಸೇವೆಯಲ್ಲಿ ಜೀವನ ಕಳೆದವರ ಭಾಗ್ಯವನ್ನು ಹೇಗೆ ವರ್ಣಿಸಲಿ? ॥69॥ ಮಸೀದಿ ಮತ್ತು ವಾಡಾಗಳ ಮೇಲೆ ಸುಂದರವಾದ ಬಾವುಟಗಳು ಸಾಲುಸಾಲಾಗಿ ಆಕಾಶದಲ್ಲಿ ಎತ್ತರವಾಗಿ ರಾರಾಜಿಸುತ್ತಿವೆ. ಅವು ತಮ್ಮ ಭಕ್ತರಿಗೆ ಮಾರ್ಗದರ್ಶಕ ಬೆಳಕಾಗಿವೆ. ॥70॥ ಬಾಬಾರವರು ಪ್ರಸಿದ್ಧ ಸಂತರು. ಅವರ ಕೀರ್ತಿ ಹಳ್ಳಿಹಳ್ಳಿಗೆ ಹರಡಿದೆ. ಕೆಲವರು ತಮ್ಮ ಇಷ್ಟಾರ್ಥಗಳು ನೆರವೇರಿದುದಕ್ಕೆ ಅವರಿಗೆ ಋಣಿಯಾಗಿದ್ದಾರೆ. ಕೆಲವು ಜನರು ಕೇವಲ ದರ್ಶನಮಾತ್ರದಿಂದ ಶಾಂತಿ ಪಡೆಯುತ್ತಾರೆ. ॥71॥ ಯಾರೊಬ್ಬನ ಮನದಾಳದ ಆಸೆಗಳೇನೇ ಇರಲಿ, ಶುದ್ಧ ಬುದ್ಧಿ ಅಥವಾ ಕುತ್ಸಿತ ಬುದ್ಧಿಯದಾಗಲಿ, ಬಾಬಾರವರ ದರ್ಶನ ಮಾತ್ರದಿಂದಲೇ ಮನಸ್ಸು ಶಾಂತವಾಗುತ್ತದೆ. ಜನರು ಅದರಿಂದ ಅಂತರಂಗದಲ್ಲೇ ವಿಸ್ಮಿತರಾಗುವರು. ॥72॥ ಪಂಡರಾಪುರದ

ವಿಠಲ ಮತ್ತು ರಖುಮಾಯಿಯವರ ಅತ್ಯದ್ಭುತ ದರ್ಶನದಿಂದ ಆಗುವ ಅನುಭವವೇ ಶಿರಡಿಯಲ್ಲಿ ಬಾಬಾರವರ ಧ್ಯಾನದಿಂದಲೂ ದೊರೆಯುತ್ತದೆ. ॥73॥ ಯಾರಾದರೂ ಇದನ್ನು ಅತಿಶಯೋಕ್ತಿ ಎಂದು ಭಾವಿಸಿದರೆ ಗೌಳಿ ಬುವಾನ ಮಾತುಗಳನ್ನು ಕೇಳಿರಿ. ಅವನು ವಿಠಲನ ಪರಮಭಕ್ತನು. ಸಂದೇಹಗಳು ನಿಶ್ಚಯವಾಗಿ ದೂರವಾಗುವುದು. ॥74॥ ಅವನು ಪಂಡರಾಪುರಕ್ಕೆ ನಿಯತಕಾಲಿಕ ಯಾತ್ರಿಕ. ಅಷ್ಟು ಪ್ರತಿವರ್ಷವೂ ಪಂಡರಾಪುರಕ್ಕೆ ಯಾತ್ರೆ ಹೋಗುತ್ತಿದ್ದನು. ಅವನು ಶಿರಡಿಗೂ ವರ್ಷಕ್ಕೊಮ್ಮೆ ಬರುತ್ತಿದ್ದನು. ಬಾಬಾರವರನ್ನು ಕಂಡರೆ ಬಹಳ ಪ್ರೀತಿ. ॥75॥ ಬುವಾನು ಒಂದು ಕತ್ತೆ ಮತ್ತು ಒಬ್ಬ ಶಿಷ್ಯನ ಜೊತೆ ಇದ್ದನು. ನಿರಂತರ ರಾಮ, ಕೃಷ್ಣ, ಹರಿ ಎಂದು ಭಜಿಸುತ್ತಿದ್ದನು. ॥76॥ ಅವನಿಗೆ 94 ವರ್ಷ ವಯಸ್ಸು. ಅವನು ಚಾತುರ್ಮಾಸವನ್ನು ಗೋದಾವರಿ ತೀರದಲ್ಲಿ ಮಾಡುತ್ತಿದ್ದನು. ಸುಮಾರು 8 ತಿಂಗಳುಗಳ ಕಾಲ ಪಂಡರಾಪುರದಲ್ಲಿ ವಾಸಮಾಡುತ್ತಿದ್ದನು. ಹಾಗೆಯೇ ಅವನು ಬಾಬಾರವರನ್ನು ಪ್ರತಿವರ್ಷ ದರ್ಶಿಸುತ್ತಿದ್ದನು. ॥77॥ ಬಾಬಾರವರನ್ನು ನಮ್ರತೆಯಿಂದ ನೋಡುತ್ತ ಹೇಳುತ್ತಿದ್ದನು – "ಇದು ಪಂಡರೀನಾಥನ ಅವತಾರ, ಅನಾಥರಕ್ಷಕ, ದಯಾಮಯ." ॥78॥ ಕೇವಲ ರೇಶ್ಮೆಯ ಅಂಚಿನ ಧೋತಿಯನ್ನು ತೊಟ್ಟಮಾತ್ರಕ್ಕೆ ಅವರು ಸನ್ಯಾಸಿಯಾಗುತ್ತಾರೆಯೇ? ಸಂತನಾಗಬೇಕಾದರೆ ಕಠಿಣ ತಪಸ್ಸು ಮಾಡಬೇಕು. ಎಷ್ಟೆಂದರೆ ಮೂಳೆ ಸವೆಯಬೇಕು ಮತ್ತು ರಕ್ತ ನೀರಾಗಬೇಕು. ॥79॥ ಯಾರಾದರೂ ಪ್ರಯತ್ನ ಮಾಡದೆ ದೈವತ್ವವನ್ನು ಪಡೆಯಲು ಸಾಧ್ಯವೇ? ಇದು ಪಂಡರೀನಾಥನ ಅವತಾರ, ಈ ಪ್ರಪಂಚವು ಅಜ್ಞಾನದಿಂದ ತುಂಬಿದೆ. ಅದನ್ನು ದೃಢವಾಗಿ ನಂಬಿ ಅದರ ಹಿಂದೆ ಇರುವ ದೈವತ್ವವನ್ನು ನಿಮ್ಮದಾಗಿಸಿಕೊಳ್ಳಿರಿ. ॥80॥ ಇವು ಪಂಡರೀನಾಥನ ಪ್ರೀತಿಯ ಪರಮ ಭಕ್ತನ ವಚನಗಳು. ಅವನಿಗೆ ಹೋಲಿಸಿದಾಗ ದೀನನಾದ ನಾನು ಏನನ್ನು ಅನುಭವಿಸಲಿ? ಶ್ರೋತೃಗಳ ಅವರವರ ಅನುಭವಗಳೇ ಉತ್ತಮವಾದ ಮಾರ್ಗದರ್ಶಿ. ॥81॥ ನಾಮಸ್ಮರಣೆ ಬಾಬಾಗೆ ಅತಿಪ್ರಿಯ. ಅವರೇ ನಿರಂತರ 'ಅಲ್ಲಾ–ಮಾಲಿಕ್' ಎಂದು ಪುನರುಚ್ಚರಣ ಮಾಡುತ್ತಿದ್ದರು. ಅವರು ನಾಮ ಸಪ್ತಾಹಗಳನ್ನು ಏರ್ಪಡಿಸುತ್ತಿದ್ದರು. (ಸಪ್ತಾಹ ತಡೆಯಿಲ್ಲದೆ ಹಗಲು ರಾತ್ರಿ ಭಜಿಸುವುದು.) ॥82॥ ಬಾಬಾರವರು ಒಮ್ಮೆ ದಾಸಗಣುವಿಗೆ[1] ಈ ರೀತಿಯ ನಾಮಸಪ್ತಾಹವನ್ನು ಆಚರಿಸಲು ಆಜ್ಞಾಪಿಸಿದರು. ಆಗ ದಾಸಗಣು ಬಾಬಾರವರಿಂದ ವಿಠಲನ ಪ್ರತ್ಯಕ್ಷ ದರ್ಶನವಾಗಬೇಕೆಂಬ ಭರವಸೆಯನ್ನು ಪಡೆದನು. ॥83॥ ಬಾಬಾರವರು ಅವನ ಹೃದಯದ ಮೇಲೆ ಕೈಯಿಟ್ಟು ಆತ್ಮವಿಶ್ವಾಸದಿಂದ ಭರವಸೆ ನೀಡಿದರು ಮತ್ತು ಜೋರಾಗಿ ಹೇಳಿದರು, "ಹೌದು, ಮತ್ತೆ, ವಿಠಲನು ಪ್ರತ್ಯಕ್ಷನಾಗುವನು. ಆದರೆ ಭಕ್ತನು ಪೂರ್ಣ ವಿಶ್ವಾಸವನ್ನಿಡಬೇಕು." ॥84॥ ಡಕುರನಾಥದ ಡಂಕಪುರಿ ಅಥವಾ ಪಂಡರಿಯ ವಿಠಲ ಅಥವಾ ರಣಛೋಡದ ದ್ವಾರಕಾನಗರ ಅವುಗಳು ಇಲ್ಲಿ ಇವೆ. ಇವುಗಳನ್ನು ಹುಡುಕಿಕೊಂಡು ಬಹಳ ದೂರ ಹೋಗಬೇಕಾಗಿಲ್ಲ. ॥85॥ ವಿಠಲನು ತನ್ನ ಏಕಾಂತವನ್ನು ಬಿಟ್ಟು ಬರುತ್ತಾನೆಯೇ? ಎಲ್ಲಿಂದಾದರೂ ಬರುವನೆ? ಇಲ್ಲಿ ಭಕ್ತನ ಉತ್ಕಟ ಭಕ್ತಿಯಿಂದ

ಬರುತ್ತಾನೆ. ॥86॥ ತನ್ನ ಮಾತಾಪಿತೃಗಳ ಸೇವೆಯನ್ನು ಮಾಡುತ್ತ ಪುಂಡಲೀಕನು ದೇವಾದಿದೇವನನ್ನು ಒಲಿಸಿಕೊಂಡನು. ಪುಂಡಲೀಕನ ಭಕ್ತಿಯನ್ನು ನೋಡಿ ಪರಮಾತ್ಮನು ಒಂದು ಇಟ್ಟಿಗೆಯ ಮೇಲೆ ನಿಂತನು. ॥87॥ ಏಳನೆಯ ದಿನದ ನಾಮ ಸ್ಮರಣೆಯಾದ ಮೇಲೆ ಬಾಬಾರವರ ನುಡಿಗಳು ಸತ್ಯವಾದವು. ಶಿರಡಿಯಲ್ಲಿ ದಾಸಗಣುವಿಗೆ ವಿಠಲನ ದರ್ಶನವಾಯಿತೆಂದು ಹೇಳುತ್ತಾರೆ. ಈ ರೀತಿ ಬಾಬಾರವರ ಭವಿಷ್ಯವಾಣಿಯನ್ನು ಅನುಭವಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು ಎಂದು ತಿಳಿಯಿತು. ॥88॥ ಒಮ್ಮೆ ಕಾಕಾಸಾಹೇಬ ದೀಕ್ಷಿತ್‌ನು ಧ್ಯಾನಸ್ಥನಾಗಿದ್ದನು. ಬೆಳಗಿನ ನಿತ್ಯ ಸ್ನಾನವಾದ ನಂತರ ಅವನೂ ವಿಠಲನ ದರ್ಶನ ಮಾಡಿದನು. ॥89॥ ಅನಂತರ, ಬಾಬಾರವರ ದರ್ಶನಕ್ಕಾಗಿ ಹೋದಾಗ ಬಾಬಾರವರು ಅವನನ್ನು – "ವಿಠಲ ಪಾಟೀಲನು ಬಂದಿರಲಿಲ್ಲವೇ? ಅವನನ್ನು ಭೇಟಿಮಾಡಿದೆಯಾ? ॥90॥ "ಆ ವಿಠಲನು ಬಹಳ ಜಾರಿಕೊಳ್ಳುವವನು. ಅವನನ್ನು ಗಟ್ಟಿಯಾಗಿ ಹಿಡಿದುಕೋ. ಇಲ್ಲದಿದ್ದಲ್ಲಿ ಅವನು ಜಾರಿಕೊಳ್ಳುತ್ತಾನೆ. ನಿನ್ನ ಗಮನ ಒಂದು ಕ್ಷಣ ತಪ್ಪಿದರೂ ಸಾಕು." ॥91॥ ಈ ಘಟನೆ ಬೆಳಗ್ಗೆ ನಡೆಯಿತು. ಪುನಃ ಮಧ್ಯಾಹ್ನದ ಸಮಯದಲ್ಲಿ ವಿಠಲನು ಸಂತಸದ ದರ್ಶನ ನೀಡಿದ ನಿದರ್ಶನವನ್ನು ನೋಡಿರಿ. ॥92॥ ಒಬ್ಬ ಸಂಚಾರಿ ವ್ಯಾಪಾರಿಯು ಶಿರಡಿಯ ಹೊರಗಿನ ಬೇರೊಂದು ಊರಿಂದ ಹಳ್ಳಿಗೆ 20–25 ಸುಂದರವಾದ ವಿಠಲನ ಫೋಟೋಗಳನ್ನು ಮಾರಲು ಬಂದನು. ॥93॥ ಅದು ಬೆಳಗಿನ ಧ್ಯಾನದಲ್ಲಿ ಕಂಡ ಮೂರ್ತಿಯ ಪ್ರತಿರೂಪವಾಗಿತ್ತು. ದೀಕ್ಷಿತನು ಅಚ್ಚರಿಗೊಂಡನು. ಬಾಬಾರವರ ಮಾತುಗಳೆಲ್ಲವನ್ನು ಸ್ಮರಿಸಿಕೊಂಡನು. ॥94॥ ದೀಕ್ಷಿತನು ಅತಿ ಪ್ರೀತಿಯಿಂದ ಒಂದು ಚಿತ್ರಪಟವನ್ನು ಬೆಲೆಕೊಟ್ಟು ಕೊಂಡನು. ಅದನ್ನು ನಿತ್ಯ ಪೂಜೆಗಾಗಿ ಭಕ್ತಿಯಿಂದ ಪ್ರತಿಷ್ಠಾಪಿಸಿದನು. ॥95॥ ಮತ್ತೊಂದು ಅತಿಸುಂದರವಾದ ಘಟನೆಯು ವಿಠಲನ ಪೂಜೆಯೂ ಸಾಯಿಯ ಆರಾಧನೆಗೆ ಸಮನಾದದ್ದು ಎಂದು ತಿಳಿಸುತ್ತದೆ. ಅದನ್ನು ಸಂತೋಷದಿಂದ ಆಲಿಸಿರಿ. ॥96॥ ಭಗವಂತರಾವ್ ಕ್ಷೀರಸಾಗರ್‌ನ ತಂದೆ, ವಿಠಲನ ಪ್ರಮುಖ ಭಕ್ತರಲ್ಲೊಬ್ಬನು. ಆಗಾಗ್ಗೆ ಪಂಡರಾಪುರಕ್ಕೆ ಹೋಗಿ ಬರುತ್ತಿದ್ದನು. ॥97॥ ಅವನ ಮನೆಯಲ್ಲಿ ವಿಠಲನ ಒಂದು ಮೂರ್ತಿಯು ಇತ್ತು, ಆದರೆ ತಂದೆಯ ಕಾಲವಾದನಂತರ ಪೂಜಾ ಕೈಂಕರ್ಯ, 'ನೈವೇದ್ಯ'[12] ಸಮರ್ಪಣೆ ಇತ್ಯಾದಿಗಳು ನಿಂತು ಹೋದವು. ವಾರ್ಷಿಕ ಶ್ರಾದ್ಧ, ತಿಥಿಕರ್ಮಗಳೂ ನಿಂತುಹೋದವು. ॥98॥ ಭಗವಂತರಾಯನು ಪಂಡರಾಪುರದ ವಾರ್ಷಿಕ ತೀರ್ಥಯಾತ್ರೆಯನ್ನೂ ಬಿಟ್ಟುಬಿಟ್ಟನು. ಆದರೆ ಅವನು ಶಿರಡಿಗೆ ಬಂದಾಗ ಬಾಬಾ ಅವನ ತಂದೆಯನ್ನು ನೆನಪಿಸಿಕೊಂಡು ಈ ರೀತಿ ಹೇಳಿದರು; "ಅವನು ನನ್ನ ಮಿತ್ರನಾಗಿದ್ದನು. ॥99॥ "ಇವನು ನನ್ನ ಆಪ್ತ ಮಿತ್ರನ ಪುತ್ರ, ಆದ್ದರಿಂದಲೇ ನಾನು ಅವನನ್ನು ಶಿರಡಿಗೆ ಎಳೆದು ತಂದೆ. ಅವನು ನೈವೇದ್ಯವನ್ನು ಕೊಡುವುದಿಲ್ಲ. ನನ್ನನ್ನೂ ಉಪವಾಸ ಕೆಡವುತ್ತಾನೆ. ॥100॥ "ಅವನು ವಿಠಲನನ್ನೂ ಉಪವಾಸದಲ್ಲಿರಿಸುತ್ತಾನೆ. ಆದ್ದರಿಂದ ನಾನು ಅವನನ್ನು ಶಿರಡಿಗೆ ಕರೆತಂದೆ. ಈಗ ನಾನು ಅವನಿಗೆ ಜ್ಞಾಪಿಸುತ್ತೇನೆ ಮತ್ತು ಪೂಜೆಮಾಡುವ

ಹಾಗೆ ಮಾಡುತ್ತೇನೆ." ॥101॥ ಒಂದು ಸಲ ಪರ್ವ ಕಾಲವೆಂದು ದಾಸಗಣು ಪ್ರಯಾಗತೀರ್ಥದಲ್ಲಿ ಸ್ನಾನ ಮಾಡಬೇಕೆಂದು ಇಚ್ಛಿಸಿ ಬಾಬಾರವರ ಅನುಮತಿಗಾಗಿ ಬಂದನು. ॥102॥ ಪ್ರತ್ಯುತ್ತರವಾಗಿ ಬಾಬಾರವರು ಹೇಳಿದರು – "ನೀನು ಅದಕ್ಕಾಗಿ ಅಷ್ಟು ದೂರಹೋಗಬೇಕಾಗಿಲ್ಲ. ಇದೇ ನಮ್ಮ ಪ್ರಯಾಗದ ತೀರ. ನಿನ್ನ ಹೃದಯದಲ್ಲಿ ದೃಢವಾದ ವಿಶ್ವಾಸವನ್ನಿಡು." ॥103॥ ಓಹ್! ಬಾಬಾರವರ ಮಹತ್ವವನ್ನು ನಾನು ಹೇಗೆ ತಾನೇ ಹೊಗಳಲಿ? ದಾಸಗಣು ತನ್ನ ಮಸ್ತಕವನ್ನು ಬಾಬಾರವರ ಚರಣಗಳಲ್ಲಿಟ್ಟಕೂಡಲೇ ಪವಿತ್ರ ಜಲವು ಅವರ ಎರಡೂ ಹೆಬ್ಬೆರಳಿನಿಂದ ಗಂಗಾ ಮತ್ತು ಯಮುನೆಯರ ರೀತಿಯಲ್ಲಿ ಉಕ್ಕಿಬಂದವು. ॥104॥ ಈ ಪವಾಡವನ್ನು ವೀಕ್ಷಿಸಿದ ದಾಸಗಣು ಭಾವೋದ್ವೇಗಕ್ಕೊಳಗಾದನು. ಅದೆಂತಹ'ಹದುಪಕಾರ ಬಾಬಾರವರು ಅವನ ಮೇಲೆ ಅನುಗ್ರಹಿಸಿದರು! ಎರಡು ಕಣ್ಣುಗಳಿಂದಲೂ ಆನಂದಭಾಷ್ಪ ಹರಿಯಿತು. ॥105॥ ಅವರ ಮಾತು ಪ್ರೋತ್ಸಾಹಕರವಾಗಿತ್ತು, ಅವರ ಹೃದಯ ಪ್ರೇಮದಿಂದ ಉಕ್ಕಿ ಬಂತು. ಬಾಬಾರವರ ಅನಂತ ಗುಣಗಾನ, ಅಳತೆಗೆ ಸಿಕ್ಕದ ಮಹತ್ತು ಮತ್ತು ಅಚ್ಚರಿಮೂಡುವಂತಹ ಕಾರ್ಯಗಳನ್ನು ವಿವರಿಸಿದಾಗಲೇ ತೃಪ್ತಿಹೊಂದಿದನು. ॥106॥ ಶ್ರೋತೃಗಳ ಕುತೂಹಲವನ್ನು ತಣಿಸಲು ನಾನು ಅವರ ಒಂದು ಮಧುರ ರಚನೆಯನ್ನು ಈ ಮಧ್ಯದಲ್ಲಿ ಅಳವಡಿಸುತ್ತೇನೆ. ॥107॥

ಹಾಡು

ಪಲ್ಲವಿ: ಓ ಸದ್ಗುರುರಾಯ, ನಿನ್ನ ಶಕ್ತಿ ಅಪಾರ. ನಿನ್ನ ಲೀಲೆಗಳು ಅಸಾಧಾರಣ. ಜಡ ಮತ್ತು ಜೀವಿಗಳನ್ನು ಭವಸಾಗರದಿಂದ ದಾಟಿಸುವ ನಾವೆಯು ನೀನು.

1) ನೀನು ನಿನ್ನನ್ನೇ ವೇಣಿಮಾಧವ(ವಿಷ್ಣು)ನಾಗಿ ರೂಪಾಂತರಗೊಂಡು, ನಿನ್ನ ಪಾದಗಳನ್ನು ಇಲ್ಲಿ ಪ್ರಯಾಗವನ್ನಾಗಿ ಮಾಡಿದೆ. ನಿನ್ನ ಹೆಬ್ಬೆರಳುಗಳಿಂದ ಗಂಗೆ ಮತ್ತು ಯಮುನೆಯರು ಪ್ರವಹಿಸುವುದನ್ನು ತೋರಿಸಿದೆ.
2) ನೀನು ಕಮಲದಿಂದ ಉತ್ಪತ್ತಿಯಾದ ಬ್ರಹ್ಮನು. ಕಮಲಾಕರನಾದ ವಿಷ್ಣು ಮತ್ತು ಶಿವ ಮತ್ತು ತ್ರಿಮೂರ್ತಿಸ್ವರೂಪನು. ಈ ಭೂಮಿಯಲ್ಲಿ ಸಾಯಿ ಸಮರ್ಥನಾಗಿ ಅವತರಿಸಿರುವೆ.
3) ಬೆಳಗಿನ ಜಾವದಲ್ಲಿ ಬ್ರಹ್ಮನ ಹಾಗೆ ಜ್ಞಾನದ ನುಡಿಗಳನ್ನು ನುಡಿಯುವೆ ಮತ್ತು ಕೆಲವೊಮ್ಮೆ ನೀನು ನಿನ್ನ ಆವೇಶಭರಿತ ಸ್ವಭಾವ ಮತ್ತು ಭಯಹುಟ್ಟಿಸುವಂತಹ ರುದ್ರನ ತೋರಿಕೆ, ತಮೋಗುಣಗಳನ್ನು ಅವಲಂಬಿಸಿರುವೆ.
4) ಕೆಲವೊಮ್ಮೆ ಶ್ರೀಕೃಷ್ಣನ ಬಾಲಲೀಲೆಗಳನ್ನು ಪ್ರಕಟಿಸಿರುವೆ. ಭಕ್ತನ ಹೃದಯ ಸರೋವರದಲ್ಲಿ ಹಂಸನಾಗಿರುವೆ.

5) ನಿನ್ನನ್ನು ಮುಸಲ್ಮಾನನೆಂದು ಕರೆಯೋಣವೆಂದರೆ ನಿನಗೆ ಶ್ರೀಗಂಧದ ಲೇಪನವು ಪ್ರಿಯ. ನಿನ್ನನ್ನು ಹಿಂದುವೆಂದು ಕರೆಯೋಣವೆಂದರೆ ನೀನು ಯಾವಾಗಲೂ ಮಸೀದಿಯಲ್ಲಿ ವಾಸಮಾಡುತ್ತಿರುವೆ.

6) ನಿನ್ನನ್ನು ಶ್ರೀಮಂತನೆಂದು ಕರೆಯೋಣವೇ? ನೀನು ಭಿಕ್ಷಾಟನೆಗಾಗಿ ಹೋಗುವೆ. ನಾನು ನಿನ್ನನ್ನು ಫಕೀರನೆಂದು ಕರೆಯೋಣವೇ? ನಿನ್ನ ದಯಾಸ್ವಭಾವದಿಂದ ನೀನು ಕುಬೇರನನ್ನೇ ನಾಚಿಸುವೆ.

7) ಮಸೀದಿಯೇ ನಿನ್ನ ಮನೆಯೆಂದು ಕರೆಯೋಣವೇ? ಅಲ್ಲಿ ಅಗ್ನಿಯು ಪ್ರಜ್ವಲಿಸುತ್ತಿದೆ. ಧುನಿ (ಬಾಬಾರವರು ಉರಿಸಿದ ಅಗ್ನಿ) ಯಾವಾಗಲೂ ಉರಿಯುತ್ತಿದ್ದು ಉದಿ(ಭಸ್ಮ)ಯನ್ನು ಜನರಿಗೆ ಕೊಡಲಾಗುತ್ತಿದೆ.

8) ಬೆಳಗಿನಿಂದಲೂ ಭಕ್ತರು ಸರಳತೆಯಿಂದ ಬಂದು ನಿನ್ನನ್ನು ಪೂಜಿಸುವರು. ಮಧ್ಯಾಹ್ನ ಸೂರ್ಯನು ನೆತ್ತಿಯ ಮೇಲೆ ಬಂದಾಗ ನಿನ್ನ ಆರತಿ ಮಾಡಲಾಗುವುದು.

9) ಭಕ್ತರು ನಿನ್ನ ಸುತ್ತಲೂ ಭಗವಂತನ ಮುಂದೆ ನಿಲ್ಲುವ ಸೇವಕರಂತೆ ನಿಲ್ಲುತ್ತಾರೆ. ಕೈಯಲ್ಲಿ ಚಾಮರ ಹಿಡಿದು ಬೀಸುತ್ತಾರೆ.

10) ಕಹಳೆ, ಶಹನಾಯಿ, ಜಾಗಟೆ, ಘಂಟೆಗಳು ಧ್ವನಿಗೈಯುತ್ತಿವೆ. ಪರಿಚಾರಕರು ಸಮವಸ್ತ್ರಗಳಲ್ಲಿ ದ್ವಾರದಲ್ಲಿ ನಿಂತು ನಿನ್ನ ಕೀರ್ತಿಯನ್ನು ಉಗ್ಗಡಿಸುತ್ತಾರೆ.

11) ಆರತಿಯ ಸಮಯದಲ್ಲಿ ವಿಷ್ಣುವಿನ ಹಾಗೆ ಕಾಣುವೆ. ಸಂಜೆ ಹೊತ್ತಿನಲ್ಲಿ ನೀನು ಧುನಿಯ ಮುಂದೆ ಕುಳಿತಾಗ ಕಾಮನನ್ನು ಸುಟ್ಟುಹಾಕಿದ ಶಿವನ ಹಾಗೆ ಶೋಭಿಸುವೆ.

12) ಓ ಬಾಬಾ ಸಾಯಿ! ಈ ರೀತಿ ನಿನ್ನಲ್ಲಿ ಪ್ರದರ್ಶಿತವಾಗುತ್ತಿರುವ ತ್ರಿಮೂರ್ತಿ ಸ್ವರೂಪದ ಲೀಲೆಗಳು ನಿತ್ಯವೂ ನಮ್ಮ ಅನುಭವಕ್ಕೆ ಬರುತ್ತಿವೆ.

13) ಹೀಗಿದ್ದರೂ ನನ್ನ ಮನಸ್ಸು ಚಂಚಲವಾಗಿ ಸುತ್ತುತ್ತಿರುತ್ತದೆ. ದಯ ತೋರಿ ಈ ಮನಸ್ಸನ್ನು ಸ್ಥಿರಗೊಳಿಸು ಎಂದು ಪ್ರಾರ್ಥಿಸುತ್ತೇನೆ.

14) ಅಧಮಾಧಮನೂ, ಮಹಾಪಾತಕಿಯೂ ಆದ ನಾನು ನಿನ್ನಲ್ಲಿ ಆಶ್ರಯ ಬೇಡಿ ಬಂದಿದ್ದೇನೆ. ದಯವಿಟ್ಟು ಈ ದಾಸಗಣುವಿನ ತಾಪತ್ರಯಗಳನ್ನು (ಆದಿಭೌತಿಕ, ಆದಿದೈವಿಕ, ಆಧ್ಯಾತ್ಮಿಕ) ಪರಿಹರಿಸು.

ಅದು ಹಾಗಿರಲಿ. ಅಘೋರವಾದ ಪಾಪಗಳನ್ನು ಪರಿಹಾರ ಮಾಡಲು ಜನರು ಗಂಗೆಯ ನೀರಿನ ಮೊರೆಹೋಗುತ್ತಾರೆ. ಆದರೆ ಗಂಗೆಯು ತನ್ನಲ್ಲಿನ

ಪಾಪಗಳನ್ನು ತೊಳೆಯಲು, ತಾನೇ ಸಂತರ ಚರಣಗಳನ್ನು ಆಶ್ರಯಿಸುತ್ತಾಳೆ. ॥108॥ ಪವಿತ್ರ ಚರಣಗಳನ್ನು ಬಿಟ್ಟು, ಗಂಗಾ-ಗೋದಾವರಿಯಲ್ಲಿಗೆ ತೀರ್ಥಯಾತ್ರೆ ಮಾಡುವ ಅವಶ್ಯಕತೆ ಇರುವುದಿಲ್ಲ. ಸಂತ ಸಾಯಿಯ ಮಧುರವಾದ ಜೀವನ ಚರಿತ್ರೆ ಹಾಗೂ ಕೀರ್ತನೆಯನ್ನು ಆಲಿಸಿರಿ. ॥109॥ ಅದೃಷ್ಟವಶಾತ್ ಭೀಮಾರತಿ ನದಿಯಲ್ಲಿ ಗೋಣಾರು ನಾಮದೇವರನ್ನು ಕಂಡಂತೆ, ಭಾಗೀರಥಿ ನದಿಯಲ್ಲಿ ಮುತ್ತಿನ ಕಪ್ಪೆಚಿಪ್ಪಿನಲ್ಲಿ ತಾಮಲನಿಗೆ ಕಬೀರರು ಕಂಡರು. ॥110॥ ಅದೇ ರೀತಿಯಲ್ಲಿ, ಶ್ರೀ ಸಾಯಿನಾಥರು ಭಕ್ತರಿಗಾಗಿ ಶಿರಡಿಯೆಂಬ ಹಳ್ಳಿಯಲ್ಲಿ ಬೇವಿನ ಮರದ[13] ಕೆಳಗೆ 15 ವರ್ಷಗಳ ಬಾಲಕನಾಗಿ ಕಾಣಿಸಿಕೊಂಡರು. ॥111॥ ಅವರು ಪ್ರಕಟವಾದಾಗಲೇ ಬ್ರಹ್ಮಜ್ಞಾನಿಯಾಗಿದ್ದರು. ಅವರಿಗೆ ಕನಸಿನಲ್ಲಿಯೂ ವಿಷಯವಾಸನೆ ಇರಲಿಲ್ಲ. ಮುಕ್ತಿಯು[14] ಅವರ ಚರಣಗಳಲ್ಲಿ ನೂಪುರವಾಗಿ ಶೋಭಿತವಾಗಿದೆ. ॥112॥ ಬಾಬಾರವರು ಯಾವ ದೇಶದಲ್ಲಿ ಜನ್ಮತಾಳಿದರು ಅಥವಾ ಯಾವ ಪವಿತ್ರ ವಂಶದವರು. ಅವರ ಮಾತಾಪಿತೃಗಳು ಯಾರು ಎಂಬ ವಿಷಯ ಯಾರಿಗೂ ತಿಳಿದಿಲ್ಲ. ॥113॥ ಯಾರಿಗೂ ಅವರ ಪೂರ್ವಾವಸ್ಥೆಯು ತಿಳಿದಿಲ್ಲ. ಅವರ ತಂದೆ. ತಾಯಿ ಯಾರು? ಎಂಬುದನ್ನು ತಿಳಿಯಲು ಜನರು ತಮ್ಮ ಬುದ್ಧಿಯನ್ನೆಲ್ಲ ಖರ್ಚುಮಾಡಿದರೂ ಆಗಲಿಲ್ಲ. ॥114॥ ತಂದೆ, ತಾಯಿ, ಬಂಧುಗಳು, ಆಪ್ತರು ಮತ್ತು ಜಾತಿ, ಅಷ್ಟೇಕೆ ಎಲ್ಲಾ ಸಂಸಾರ ಬಂಧನಗಳನ್ನು ತ್ಯಾಗ ಮಾಡಿ ಜನರ ಹಿತಕ್ಕಾಗಿ ಶಿರಡಿಯಲ್ಲಿ ಪ್ರಕಟಗೊಂಡರು. ॥115॥ ಶಿರಡಿಯಲ್ಲಿನ ಒಬ್ಬ ವೃದ್ಧ ಮಹಿಳೆ, ನಾನಾ ಚೋಪದಾರ್‌ನ ತಾಯಿ, ಸಾಯಿಬಾಬಾರವರ ಆಶ್ಚರ್ಯಕರವಾದ ಅತ್ಯದ್ಭುತವಾದ ಚರಿತ್ರೆಯನ್ನು ಹೇಳುತ್ತಿದ್ದಳು. ॥116॥ ಆಕೆ ಈ ರೀತಿ ಹೇಳುತ್ತಾಳೆ. 'ಪ್ರಾರಂಭದಲ್ಲಿ ಈ ಸಣ್ಣ ಬಾಲಕ ಬೆಳ್ಳಗೆ, ಅತಿ ಸುಂದರವಾಗಿ ಮತ್ತು ಮನೋಹರವಾಗಿ ಮೊದಲು ಕಾಣಿಸಿದ್ದು ಬೇವಿನ ಮರದ ಕೆಳಗೆ, ಶಾಂತವಾಗಿ ಪದ್ಮಾಸನದಲ್ಲಿ ಕುಳಿತಿದ್ದನು. ॥117॥ 'ಆ ಎಳೆ ವಯಸ್ಸಿನಲ್ಲಿ ಚಳಿ, ಬಿಸಿಲನ್ನು ಲೆಕ್ಕಿಸದೆ ಅತ್ಯಂತ ಕಠಿಣ ತಪಸ್ಸಿನಲ್ಲಿ ನಿರತನಾಗಿದ್ದ ಆ ಸುಂದರ ಬಾಲಕನ ರೂಪವನ್ನು ನೋಡಿದ ಜನರು ಅತ್ಯಂತ ವಿಸ್ಮಯಗೊಂಡರು. ॥118॥ ಆ ಎಳೆ ವಯಸ್ಸಿನ ಬಾಲಕನ ಈ ಸ್ಥಿತಿಯು ದೂರದಿಂದ ಮತ್ತು ಹತ್ತಿರದಿಂದ ಬಾಲಕನ ದರ್ಶನಕ್ಕೆಂದು ಬಂದ ಎಲ್ಲಾ ಹಳ್ಳಿಗರನ್ನೂ ಅಚ್ಚರಿಗೊಳಿಸಿತ್ತು. ॥119॥ ಅವನಿಗೆ ಹಗಲಿನಲ್ಲಿ ಯಾರ ಸಹವಾಸವೂ ಇರಲಿಲ್ಲ. ರಾತ್ರಿಯಲ್ಲಿ ಎಂದಿಗೂ ಭಯಗೊಂಡಿರಲಿಲ್ಲ. ಇಂತಹ ಚಿಕ್ಕಬಾಲಕ ಎಲ್ಲಿಂದ ಬಂದು ಕಾಣಿಸಿಕೊಂಡನು ಎಂದು ಎಲ್ಲರೂ ಆಶ್ಚರ್ಯಚಕಿತರಾಗಿದ್ದರು. ॥120॥ ಅವನು ಬಹು ಸುಂದರನಾಗಿದ್ದನು. ಅವನನ್ನು ನೋಡುತ್ತಲೇ ಜನರು ಅವನ ಕಡೆಗೆ ಆಕರ್ಷಿತರಾಗುತ್ತಿದ್ದರು. ಅವನು ಯಾರ ಮನೆಯಲ್ಲಿಯೂ ವಾಸಿಸಲಿಲ್ಲ ಅಥವಾ ಯಾರ ಬಾಗಿಲಿಗೂ ಹೋಗಲಿಲ್ಲ. ಹಗಲೂ ರಾತ್ರಿ ಅವನು ಆ ಬೇವಿನ ಮರದ ಕೆಳಗೆಯೇ ವಾಸಿಸುತ್ತಿದ್ದನು. ॥121॥ ಪ್ರತಿಯೊಬ್ಬರೂ ಆ ಬಾಲಕನನ್ನು ನೋಡಿ ವಿಸ್ಮಯ ಪಟ್ಟಿದ್ದರು. ಈ ಎಳೆ ವಯಸ್ಸಿನ ಬಾಲಕ ಇಷ್ಟು ಸ್ಫುರದ್ರೂಪಿ, ಹಗಲು - ರಾತ್ರಿ ಬಯಲಿನಲ್ಲಿ ವಾಸವಾಗಿದ್ದನು. ॥122॥ ಪ್ರತಿಯೊಬ್ಬರೂ ಆಶ್ಚರ್ಯ ಚಕಿತರಾಗಿದ್ದರು. ಈ ಹುಡುಗ

ಹೊರನೋಟಕ್ಕೆ ಮಗುವಿನಂತೆ ಕಂಡರೂ, ಕರ್ಮದಲ್ಲಿ ಮಹಾನ್‌ಗಿಂತ ಮಹಾನ್ ಆಗಿ, ವೈರಾಗ್ಯದಲ್ಲಿ ಪೂರ್ಣಾವತಾರವಾಗಿದ್ದನು. ॥123॥ ಒಂದು ದಿನ, ಒಂದು ಅಪರೂಪದ ಸಂಗತಿ ನಡೆಯಿತು. ಕೆಲವು ಜನರ ಮೇಲೆ ಖಂಡೋಬಾದೇವರು ಬಂದು ಮೈತಿರುಗಿಸುತ್ತಿದ್ದು, ಜನರು ಪ್ರಶ್ನೆಗಳನ್ನು ಕೇಳತೊಡಗಿದರು. ॥124॥ "ಆ ಚಿಕ್ಕ ಬಾಲಕನ ಮಾತಾಪಿತೃಗಳು ಯಾರು? ಮತ್ತು ಅವನು ಎಲ್ಲಿಂದ ಹೇಗೆ ಇಲ್ಲಿಗೆ ಬಂದನು? ಖಂಡೋಬಾದೇವನೇ, ನೀನಾದರೂ ಅದನ್ನು ಕಂಡುಹಿಡಿ" ಎಲ್ಲರ ಪ್ರಶ್ನೆಯೂ ಇದೇ ಆಗಿತ್ತು. ॥125॥ ಆ ದೇವನು ಉತ್ತರಿಸಿದನು, "ಹೋಗಿ, ಒಂದು ಪಿಕಾಸಿಯನ್ನು ತೆಗೆದುಕೊಂಡು ಬನ್ನಿ. ನಾನು ತೋರಿಸಿದ ಜಾಗದಲ್ಲಿ ಅಗೆಯಿರಿ. ಆಗ ನಿಮಗೆ ಆ ಬಾಲಕನ ಪತ್ತೆಯ ಬಗ್ಗೆ ತಿಳಿಯುತ್ತದೆ. ಈ ಜಾಗದಲ್ಲಿ ಅಗೆಯಿರಿ. ॥126॥ ಅನಂತರ ಹಳ್ಳಿಯ ಸರಹದ್ದಿನಲ್ಲಿ, ಅದೇ ಬೇವಿನ ಮರದ ಕೆಳಗೆ ಮತ್ತೆಮತ್ತೆ ಅಗೆದಾಗ ಅವರಿಗೆ ಅಲ್ಲಿ ಇಟ್ಟಿಗೆಗಳು ಕಂಡವು. ॥127॥ ಇಟ್ಟಿಗೆಗಳ ಕೊನೆಯ ಸಾಲಿನವರೆಗೆ ಅಗೆದಾಗ ಮತ್ತು ಕೆಳಗಿದ್ದ ಕಲ್ಲು ಚಪ್ಪಡಿಯನ್ನು ಅರ್ಧ ಸರಿಸಿದಾಗ, ಆ ಚಪ್ಪಡಿಯು ಪ್ರವೇಶ ದ್ವಾರವನ್ನು ಮುಚ್ಚಿತ್ತು. ಅಲ್ಲಿ ಅವರಿಗೆ ಕಂಡದ್ದು ಒಂದು ನೆಲದಡಿಯ ಗುಹೆ. ಅದರಲ್ಲಿ ನಾಲ್ಕು ದೀಪದ ಕಂಬಗಳು ಉರಿಯುತ್ತಿದ್ದವು. ॥128॥ ಆ ಗುಹೆಯ ನಾಲ್ಕು ಕಡೆಯಲ್ಲೂ ಕಲ್ಲು ಚಪ್ಪಡಿ ಹಾಸಲಾಗಿತ್ತು. ಅಲ್ಲಿ ಗೋಮುಖಿ ಆಕಾರದ ಮರದ ಮಣೆಯು, ಸುಂದರವಾದ ಜಪಮಾಲೆಯೂ ಇದ್ದುವು. ಆ ದೇವನು ಹೇಳಿದನು – "ಇದೇ ಜಾಗದಲ್ಲಿ ಆ ಬಾಲಕನು 12 ವರ್ಷಗಳ ಕಾಲ ತಪಸ್ಸು ಮಾಡಿದ್ದನು." ॥129॥ ಎಲ್ಲ ಜನರೂ ಅಚ್ಚರಿಗೊಂಡರು ಮತ್ತು ಆ ಹುಡುಗನನ್ನು ಪ್ರಚೋದಕರ ಪ್ರಶ್ನೆಗಳನ್ನು ಕೇಳಿದರು. ಆದರೆ ಈ ಹುಡುಗ ಬಹಳ ತುಂಟತನದಿಂದ ಅವರಿಗೆ ಬೇರೆಯೇ ಒಂದು ಕಥೆಯನ್ನು ಹೇಳಿದನು. ॥130॥ ಅವನು ಹೇಳಿದನು, "ಇದು ನನ್ನ ಗುರುವಿನ ಸ್ಥಾನ. ಈ ಪವಿತ್ರ ಸ್ಥಳವು ಅನುವಂಶಿಕವಾದುದು. ಇದನ್ನು ಇದೇ ರೀತಿಯಲ್ಲಿ ಸಂರಕ್ಷಣೆ ಮಾಡಿ" ॥131॥ ಬಾಬಾರವರು ಈ ರೀತಿ ಹೇಳಿದುದನ್ನು ಜನರು ಕೇಳಿದರು. ಆದರೆ ನನ್ನ ನಾಲಿಗೆ ಏಕೆ ಬಾಬಾರವರು ತಿಳಿಸಿದ ವಿಷಯವು ಸತ್ಯವಲ್ಲ ಎಂದು ಹೇಳುತ್ತೆ? ॥132॥ ನನ್ನ ಬಗ್ಗೆಯೇ ನನಗೆ ಅಚ್ಚರಿ ಆಗಿದೆ. ನನಗೆ ಏಕೆ ಬಾಬಾರವರ ಬಗ್ಗೆ ಈ ಅಭಿಪ್ರಾಯ ಉಂಟಾಯಿತು? ಬಾಬಾರವರು ಇದನ್ನು ತೇಲಿಸಿ ಹೇಳಿದ್ದಾರೆ ಎಂಬುದು ನನಗೆ ಈಗ ಮನವರಿಕೆಯಾಯಿತು. ॥133॥ ಬಾಬಾರವರು ಸ್ವಭಾವತಃ ವಿನೋದ ಪ್ರಿಯರು. ಆ ಗುಹೆಯು ಅವರದೇ ನಿವಾಸ ಸ್ಥಾನವಾಗಿದ್ದಿರಬಹುದು. ಅದನ್ನು ಗುರುವಿಗೆ ಅನ್ವಯಿಸಿದರೆ ಏನಾಗುತ್ತದೆ? ಪ್ರಾಮುಖ್ಯತೆಗೆ ಏನೂ ಕುಂದಾಗುವುದಿಲ್ಲ. ॥134॥ ಹಾಗೆಯೇ ಇರಲಿ, ಬಾಬಾರವರ ಆಜ್ಞೆಯ ಪ್ರಕಾರ ಆ ಗುಹೆಯನ್ನು ಇಟ್ಟಿಗೆಗಳಿಂದ ಮುಚ್ಚಲಾಯಿತು. ಅದನ್ನು ಬಾಬಾರವರು ಗುರುಸ್ಥಾನವೆಂದು ತಿಳಿಸಿದ್ದರು. ॥135॥ ಅಶ್ವತ್ಥ ವೃಕ್ಷ ಮತ್ತು ಔದುಂಬರ[5] ವೃಕ್ಷಗಳು ಪ್ರಾಮುಖ್ಯವಾಗಿವೆ. ಅದೇ ರೀತಿ ಬೇವಿನ ಮರವು ಬಾಬಾರವರಿಗೆ ಮುಖ್ಯವಾದುದು. ಅವರು ಅದನ್ನು ತುಂಬಾ ಪ್ರೀತಿಸುತ್ತಿದ್ದರು ಮತ್ತು ಅದಕ್ಕೆ ಮಹತ್ತಾದ ಸ್ಥಾನ ಕೊಟ್ಟಿದ್ದರು.

॥136॥ ಮ್ಹಾಲಸಾಪತಿ ಮತ್ತಿತರರು, ಶಿರಡಿ ಗ್ರಾಮಸ್ಥರು ಆ ಸ್ಥಳಕ್ಕೆ ಬಂದು ವಂದಿಸುತ್ತಿದ್ದರು. ಅದು ಬಾಬಾರವರ ಗುರುವಿನ ಸಮಾಧಿ ಸ್ಥಳವೆಂದು ನಂಬಿದ್ದರು. ॥137॥ ಸಮಾಧಿಯ ಹತ್ತಿರದ ಜಾಗದಲ್ಲಿ, 12 ವರ್ಷಗಳ ಕಾಲ ಬಾಬಾರವರು ತಪಸ್ಸು ಮಾಡಿದ್ದರು. ಇದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಹಾಗೆಂದೇ ಪ್ರಸಿದ್ಧವಾಗಿತ್ತು. ॥138॥ ಬಾಬಾರವರ ಭಕ್ತರಲ್ಲಿ ಒಬ್ಬನಾದ ಸಾಠೆಸಾಹೇಬನು ಸಮಾಧಿಯ ಮತ್ತು ಬೇವಿನ ಮರದ ಜಾಗವನ್ನು ಸ್ವಾಧೀನ ಪಡಿಸಿಕೊಂಡನು ಮತ್ತು ಸುತ್ತಲೂ ವರಾಂಡವಿರುವ ಕಟ್ಟಡವೊಂದನ್ನು ಕಟ್ಟಿಸಿದನು. ॥139॥ ಇದೇ ಕಟ್ಟಡ ಮತ್ತು ವಾಡಾ ಮೊದಲು ಯಾತ್ರಾರ್ಥಿಗಳಿಗೆ ಕೇಂದ್ರ ಸಭಾಗೃಹವಾಗಿತ್ತು, ಅದು ಸದಾ ಕಾಲ ಜನಜಂಗುಳಿಯಿಂದ ಕೂಡಿರುತ್ತಿತ್ತು ಮತ್ತುಅಲ್ಲಿ ಅನೇಕ ವಾಗ್ಯುದ್ಧಗಳು ನಡೆಯುತ್ತಿದ್ದವು. ॥140॥ ಸಾಠೆಯು ಬೇವಿನ ಮರದ ಸುತ್ತಲೂ ಕಟ್ಟೆಯನ್ನು ಕಟ್ಟಿಸಿದನು. ಉತ್ತರದಕ್ಷಿಣಕ್ಕೆ ಮಹಡಿಯನ್ನು ಕಟ್ಟಿಸಿದನು. ಅವನು ಮಹಡಿಯ ಮೆಟ್ಟಲು ಕಟ್ಟಿಸುವಾಗ ನೆಲಮನೆಯ ಬಗ್ಗೆ ಸೂಚಿಸಿದ್ದನು. ॥141॥ ಸೋಪಾನ ಮಾರ್ಗದ (ಮೆಟ್ಟಲು) ಕೆಳಗೆ, ದಕ್ಷಿಣಾಭಿಮುಖವಾಗಿ ಒಂದು ಸುಂದರವಾದ ಮಾಡು ಇದೆ. ಅದರ ಮುಂದೆ ಒಂದು ಜಗಲಿ ಇದ್ದು ಅಲ್ಲಿ ಭಕ್ತರು ಉತ್ತರಾಭಿಮುಖವಾಗಿ ಕುಳಿತುಕೊಳ್ಳುತ್ತಾರೆ. ॥142॥ ಗುರುವಾರ ಮತ್ತು ಶುಕ್ರವಾರಗಳಂದು ಸೂರ್ಯಾಸ್ತಮವಾದ ನಂತರ ಯಾರಾದರೂ ನೆಲವನ್ನು ಸೆಗಣಿಯಿಂದ ಸಾರಿಸಿ ಅಗರಬತ್ತಿಯನ್ನು ಹಚ್ಚಿಟ್ಟು ಕ್ಷಣವಾದರೂ ಪ್ರಾರ್ಥಿಸಿದಲ್ಲಿ ಶ್ರೀಹರಿಯಿಂದ ಅನುಗ್ರಹಿಸಲ್ಪಡುತ್ತಾನೆ. ॥143॥ ಬಹುಶಃ ಶ್ರೋತೃಗಳು ತಮ್ಮ ಮನಸ್ಸಿನಲ್ಲಿ ಇದನ್ನು ಅತಿಶಯೋಕ್ತಿಯೆಂದೇ ಊಹಿಸಬಹುದು ಮತ್ತು ಅದರ ಸತ್ಯಾಸತ್ಯತೆಯನ್ನು ಪ್ರಶ್ನಿಸಬಹುದು, ಆದರೆ ಇವುಗಳು ಸಾಯಿಯ ಮಾತುಗಳೇ ಮತ್ತು ನಾನು ಅವುಗಳನ್ನು ಸ್ವತಃ ಬಾಬಾರವರ ಮುಖದಿಂದಲೇ ಬಂದಿರುವುದನ್ನು ಕೇಳಿರುತ್ತೇನೆ. ॥144॥ ಇದು ನಾನು ಕಲ್ಪಿಸಿ ಹೇಳಿದುದಲ್ಲ, ಕಿಂಚಿತ್ತೂ ಶಂಕೆ ಬೇಡ, ಅವುಗಳನ್ನು ಪ್ರತ್ಯಕ್ಷವಾಗಿ ಕೇಳಿದವರು ಇನ್ನೂ ಬದುಕಿದ್ದಾರೆ ಮತ್ತು ಅವರು ಇದಕ್ಕೆ ಸಾಕ್ಷಿಯಾಗಿದ್ದಾರೆ. ॥145॥ ಅನಂತರ ದೀಕ್ಷಿತ ವಾಡೆಯನ್ನು ಕಟ್ಟಲಾಯಿತು. ಅದರಲ್ಲಿ ದೊಡ್ಡ ಕುಟುಂಬಗಳು ವಿಶ್ರಮಿಸಬಹುದು. ಅನಂತರ ಅಲ್ಪಕಾಲದಲ್ಲಿಯೇ ಅಲ್ಲಿಕಲ್ಲಿನ ಒಂದು ವಾಡೆಯನ್ನು ಕಟ್ಟಲಾಯಿತು. ॥146॥ ಮೊದಲಿನಿಂದಲೂ ದೀಕ್ಷಿತನು ಪುಣ್ಯವಂತನೆಂದು ಕೀರ್ತಿಪಡೆದಿದ್ದನು. ಭಕ್ತಿಭಾವದ ಸಾಕಾರಮೂರ್ತಿಯಾಗಿದ್ದನು ಅವನೊಮ್ಮೆ ಇಂಗ್ಲೆಂಡಿಗೆ ಯಾತ್ರೆ ಹೋಗಿದ್ದಾಗ ಅಲ್ಲಿ ತನ್ನದೇ ಆದ ಭಕ್ತಿಯ ಬೀಜವನ್ನು ಬಿತ್ತಿದನು. ॥147॥ ಈ ಹಂತದಲ್ಲಿ ಶ್ರೋತೃಗಳಿಗೆ ಶಂಕೆ ಏಳಬಹುದು. ಮಥುರ, ಕಾಶಿ, ದ್ವಾರಕ ಇವುಗಳಲ್ಲದೆ ಆಂಗ್ಲ ಭೂಮಿಯಲ್ಲಿಯೂ ಬೇರೆ ಬೇರೆ ಮತಗಳನ್ನು ಅವಲಂಬಿಸಿರುವ ಜನರು ಪರಮ ಸತ್ಯವನ್ನು ಅರಿಯುವ ಮಾರ್ಗ ತೋರಿಸುವ ಕಾರಣಕರ್ತನಾಗುವುದು ಹೇಗೆ? ॥148॥ ಶ್ರೋತೃಗಳ ಶಂಕೆಯು ಸಹಜ. ಅದನ್ನು ನಿವಾರಿಸಿದಾಗ ಅವರು ಆಶ್ಚರ್ಯಚಕಿತರಾಗುವರು. ನಾನೇನಾದರೂ ಸ್ವಲ್ಪ ಮಿತಿಮೀರಿದರೆ ದಯಮಾಡಿ ಎಲ್ಲರೂ ನನ್ನನ್ನು ಕ್ಷಮಿಸವರೆಂದು ನಂಬುತ್ತೇನೆ. ॥149॥

ಕಾಶಿ, ಪ್ರಯಾಗ, ಬದರಿ, ಕೇದಾರ, ಮಥುರ, ಬೃಂದಾವನ, ದ್ವಾರಕ ಇತ್ಯಾದಿ ಯಾತ್ರಾ ಸ್ಥಳಗಳನ್ನು ದರ್ಶಿಸಿ ಈ ಮೊದಲೇ ಸಾಕಷ್ಟು ಪುಣ್ಯಗಳಿಸಿದ್ದನು. ॥150॥ ಅದಲ್ಲದೆ, ಅವನ ತಂದೆಯ ಪುಣ್ಯಕಾರ್ಯಗಳ ಫಲದಿಂದ ಅವನ ಅಪೂರ್ವವಾದ ಅದೃಷ್ಟದಿಂದ ಅವನ ಹಿಂದಿನಜನ್ಮದ ಪುಣ್ಯಕರ್ಮಗಳ ಫಲದಿಂದ, ಅವನಿಗೆ ಸಾಯಿ ದರ್ಶನ ಭಾಗ್ಯ ದೊರಕಿತು. ॥151॥ ಮೂಲವಾದ ಕಾರಣ ಸಾಯಿದರ್ಶನವಾಗಲು ಅವನು ಆಂಗ್ಲಭೂಮಿಯಲ್ಲಿದ್ದಾಗ, ಬಿದ್ದು ವಿಧಿವಶಾತ್ ಕುಂಟನಾಗಿದ್ದುದು. ॥152॥ ಹೊರನೋಟಕ್ಕೆ ಅದು ಒಂದು ದುಷ್ಫಲವಾಗಿ ಕಂಡರೂ, ಅದರ ಪರಿಣಾಮವೊಂದು ಶುಭ ಶಕುನವಾಯಿತು. ಏಕೆಂದರೆ ಅದು ಫಲಪ್ರದವಾಗಿ ಸಾಯಿ ಸಂಗ ಸಿಗುವಂತಹ ಅಪರೂಪದ ಅವಕಾಶ ಕಲ್ಪಿಸಿತು. ॥153॥ ನಾನಾಚಂದೋರ್ಕರ್‌ನನ್ನು ಭೇಟಿಮಾಡಲಾಗಿ ಸಾಯಿಯ ಕೀರ್ತಿಯ ಬಗ್ಗೆ ಅರಿತನು. ಚಂದೋರ್ಕರ್‌ನು ತಿಳಿಸುತ್ತಾನೆ – "ಸಾಯಿಯು ಅನುಗ್ರಹವನ್ನು ವರ್ಷಿಸಿದರೆ ಈ ಅಂಗನ್ಯೂನತೆಯು ಕೂಡಲೇ ಮಾಯವಾಗುತ್ತದೆ." ॥154॥ ಆದರೆ ದೀಕ್ಷಿತ್ ತನ್ನ ಅಂಗವಿಕಲತೆಯನ್ನು ಒಂದು ನ್ಯೂನತೆಯಾಗಿ ಪರಿಗಣಿಸಲಿಲ್ಲ. ಅವನು ಸಾಯಿಯಲ್ಲಿ ತನ್ನ ಮನಸ್ಸಿನ ಕೊರತೆಗಳನ್ನು ನಿವಾರಿಸಲು ಪ್ರಾರ್ಥಿಸಿದನು. ॥155॥ ಈ ಮಾನವ ದೇಹ ಕೇವಲ ಕ್ಷಣಿಕ. ಚರ್ಮ, ರಕ್ತ, ಮಾಂಸ, ಮೂಳೆಗಳಿಂದಾದ ಆಕಾರ ಮಾತ್ರ, ಈ ಸಂಸಾರದಲ್ಲಿ ಕೆಲಸ ಮಾಡುವ ಸಾಧನವಷ್ಟೇ. ಅದರಿಂದ ಒಂದು ಕಾಲು ಕುಂಟಾದರೂ ಏನಾಗುತ್ತೆ? ॥156॥ ಸನ್ 1909ನೆಯ ಇಸವಿಯ ನವಂಬರ್ 2ನೆಯ ತಾರೀಖು ದೀಕ್ಷಿತನು ಮೊದಲಬಾರಿಗೆ ಸಾಯಿಯನ್ನು ಭೇಟಿಮಾಡಿದ್ದು, ಪುಣ್ಯ ಪಾವನ ದರ್ಶನ ಪಡೆದನು. ॥157॥ ಅನಂತರ, ಅದೇ ವರ್ಷದಲ್ಲಿ, ಡಿಸಂಬರ್ ತಿಂಗಳಲ್ಲಿ ಅವನು ಶಿರಡಿಗೆ ಮತ್ತೆ ದರ್ಶನಕ್ಕಾಗಿ ಹೋದನು ಮತ್ತು ಅಲ್ಲಿಯೇ ನೆಲಸಲು ಯೋಚಿಸಿದನು. ॥158॥ ಅವನು ಮೊದಲು ತನ್ನ 25 ಶೇರ್‌ಗಳನ್ನು ಮಾರಾಟಮಾಡಿ ಒಂದು ತೆಳುವಾದ ತಗಡಿನ ಗುಡಿಸಲನ್ನು ಕಟ್ಟಬೇಕೆಂದು ಯೋಚಿಸಿದನು. ಅದು ಯಾತ್ರಾರ್ಥಿಗಳಿಗೂ ಸಹಾಯಕವಾಗಿತ್ತು. ॥159॥ ಅನಂತರ ಅವನು ಒಂದು ವಾಡೆಯನ್ನು ಕಟ್ಟಲು ನಿಶ್ಚಯಿಸಿದನು. ಮತ್ತು ಬರುವ ಸಂವತ್ಸರದಲ್ಲಿ ತಳಪಾಯ ಹಾಕಲು ಒಂದು ಶುಭ ಮುಹೂರ್ತವನ್ನು ನಿರ್ಧರಿಸಲು ಯೋಚಿಸಿದನು. ॥160॥ ಡಿಸೆಂಬರ್ 9ನೆಯ ತಾರೀಖು, ಅವನು ಬಾಬಾರವರ ಅನುಮತಿ ಪಡೆದನು. ಆ ದಿನವೇ ಅಸ್ತಿಭಾರ ಹಾಕಲು ಮಂಗಳಕರ ದಿನವೆಂದು ನಿರ್ಧರಿಸಿದನು. ॥161॥ ದೀಕ್ಷಿತನ ಸೋದರನು, ಆಹ್ವಾನಿಸಿದರೂ ಬಾರದೇ ಇರುವವನು, ಆ ಮಂಗಳಕರ ಶುಭಮುಹೂರ್ತದಂದೇ ಬಂದಿಳಿದನು. ॥162॥ ದಾದಾ ಸಾಹೇಬ್ ಖಾಪರ್ಡೆ[17]ಯು ಈಗಾಗಲೇ ಒಬ್ಬನೇ ಅಲ್ಲಿಗೆ ಬಂದನು. ಅವನು ಬಾಬಾರವರಿಂದ ತನ್ನ ಮನೆಗೆ ಹಿಂದಿರುಗುವ ಬಗ್ಗೆ ಅನುಮತಿ ಪಡೆಯಲು ಸ್ವಲ್ಪ ಎಡವಟ್ಟು ಅನುಭವಿಸಿದನು. ॥163॥ ಆದರೆ ಡಿಸೆಂಬರ್ 10ನೆಯ ತಾರೀಖು ಖಾಪರ್ಡೆಯು ಶಿರಡಿಯಿಂದ ಹೊರಡಲು ಮತ್ತು ದೀಕ್ಷಿತನು ಅಸ್ತಿಭಾರ ಹಾಕಲು – ಈ ಎರಡಕ್ಕೂ ಆ ದಿನ ಅನುಮತಿಯನ್ನು ನೀಡಲಾಯಿತು. ॥164॥ ಮತ್ತೊಂದು

ಮುಖ್ಯವಾದ ಘಟನೆ ಆ ದಿವಸ ನಡೆಯಿತು. ಆ ದಿನ ಶೇಜಾರತಿಯು ಚಾವಡಿಯಲ್ಲಿ ಅತಿ ಪರಮಭಕ್ತಿ ಶ್ರದ್ಧೆಗಳಿಂದ ಪ್ರಾರಂಭವಾಯಿತು. ॥165॥ ಅನಂತರ, ಸನ್ 1911ನೆಯ ಇಸವಿಯಲ್ಲಿ ಅತಿ ಮಂಗಳಕರವಾದ ರಾಮನವಮಿಯಂದು ಗೃಹಪ್ರವೇಶ ಸಂಸ್ಕಾರವನ್ನು ವಿಧಿವಿಧಾನಪೂರ್ವಕವಾಗಿ ನೆರವೇರಿಸಲಾಯಿತು. ॥166॥ ಅನಂತರ, ಶ್ರೀಮಂತನಾದ ಬೂಟಿಯು ಭವ್ಯವಾದ ಕಟ್ಟಡವನ್ನು ಬಹಳ ಹಣವನ್ನು ಖರ್ಚುಮಾಡಿ ಕಟ್ಟಿಸಿದನು. ಆದರೆ ಈ ಹಣವು ಅತ್ಯಂತ ಉಪಯುಕ್ತವಾಯಿತೆಂದು ಸಾಬೀತಾಯಿತು. ಏಕೆಂದರೆ ಬಾಬಾರವರ ಸಮಾಧಿಯನ್ನು ಅಲ್ಲಿ ಮಾಡಲಾಗಿದೆ. ॥167॥ ಈಗ ಅಲ್ಲಿ ಮೂರು ವಾಡೆಗಳು ಇವೆ. ಮೊದಲು ಅಲ್ಲಿ ಏನೊಂದೂ ಇರಲಿಲ್ಲ, ಆದರೆ ಮೊದಲು ಸಾಠೆಯ ವಾಡೆಯು ಎಲ್ಲರಿಗೂ ಅತ್ಯಂತ ಉಪಯುಕ್ತವಾಗಿತ್ತು. ॥168॥ ಈ ವಾಡೆಗೆ[8] ಮತ್ತೊಂದು ಮಹತ್ವವಿದೆ. ಏನೆಂದರೆ ಆ ಜಾಗದಲ್ಲಿ ಬಾಬಾರವರು ಒಂದು ಹೂವಿನ ತೋಟವನ್ನು ಅವರ ಕೈಯಿಂದಲೇ ನಿರ್ಮಿಸಿದ್ದರು. ॥169॥ ಈ ತೋಟದ ಅಲ್ಪ ಕಥೆಯನ್ನು ಮುಂದಿನ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗುತ್ತದೆ. ಹೇಮಾಡನು ಎಲ್ಲಾ ಶ್ರೋತೃಗಳೊಡನೆ ಸಾಯಿ ಚರಣಗಳಲ್ಲಿ ಮಸ್ತಕವನ್ನು ಇಡುತ್ತಾನೆ. ॥170॥ ವಾಮನ ತಾತ್ಯಾ, ಸಾಯಿ ಸಮರ್ಥರಿಗೆ ಮಣ್ಣಿನ ಮಡಕೆಗಳನ್ನು ತಂದು ಕೊಡುತ್ತಿದ್ದನು. ॥171॥ ಅನಂತರ ಚಾಂದ್ ಪಾಟೀಲ್ ಅವನನ್ನು ಔರಂಗಾಬಾದ್ ಹತ್ತಿರ ಭೇಟಿಯಾದನು ಮತ್ತು ಸಾಯಿಯು ಅವನ ಜೊತೆಯಲ್ಲಿ ಶಿರಡಿಗೆ ಮದುವೆಯ ದಿಬ್ಬಣದ ಜೊತೆಯಲ್ಲಿ ಬಂದರು. ॥172॥ ಅನಂತರ ಅವನೇವಿದಾಸನನ್ನು ಭೇಟಿಯಾದನು. ಜಾನಕಿದಾಸನ ಸಹಿತ ಗಂಗಾಗೀರ್ ಸಹ ಅವನ ಗಮನದಲ್ಲಿ ಬಂದನು. ಈ ರೀತಿ ಈ ಮೂವರೂ ಶಿರಡಿಯಲ್ಲಿ ಒಂದಾಗಿ ಭೇಟಿಯಾದರು. ॥173॥ ಅನಂತರ ಮೊಹಿದ್ದೀನನ ಜೊತೆ ಕುಸ್ತಿ ಪಂದ್ಯ ನಡೆಯಿತು. ಅದರ ನಂತರ ಅವರು ಮಸೀದಿಗೆ ಬಂದು ನೆಲೆಸಿದರು. ಅಲ್ಲಿ ಅವರು ಡೆಂಗಲೆಯವರ ಜೊತೆ ಬಾಂಧವ್ಯ ಬೆಳಸಿದರು ಮತ್ತು ಜನರು ಅವರ ಸುತ್ತ ಸೇರಲು ಪ್ರಾರಂಭಿಸಿದರು. ॥174॥ ಈ ಎಲ್ಲ ಕಥೆಗಳನ್ನು, ವಚನಗಳನ್ನು ಮುಂದಿನ ಅಧ್ಯಾಯಗಳಲ್ಲಿ ತಿಳಿಸಲಾಗುತ್ತದೆ. ಈಗ ಹೇಮಾಡನು ಸಾಯಿಗೆ ಶರಣಾಗಿ ಸಾಷ್ಟಾಂಗ ಪ್ರಣಾಮಗಳನ್ನು ಅನನ್ಯ ಭಾವದಿಂದ ಮಾಡುತ್ತಾನೆ. ॥175॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿ ಸಮರ್ಥರ ಅವತರಣ" ಎಂಬ ನಾಲ್ಕನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕಾ, ಮೀಮಾಂಸೆ ಮತ್ತು ವೇದಾಂತ.
2. ಭಗವಾನ್‌ದತ್ತ, ನರಸಿಂಹಸರಸ್ವತಿ ಮತ್ತು ಗೊಂದಾವಾಲೇಕರ್ ಮಹಾರಾಜ್ ಅವರಿಗೆ ಸಂಬಂಧಿಸಿದ ಪವಿತ್ರ ಸ್ಥಳಗಳು.
3. ಗೋದಾವರಿಯ ಇನ್ನೊಂದು ಹೆಸರು.
4. ಕುದುರೆಗಾಡಿ – ಜಟಕಾಬಂಡಿ.
5. ತವರುಮನೆ.
6. ಕೌರವ ಪಕ್ಷದ ಮಹಾಸೇನಾಧಿಪತಿ. ಪಾಂಡವರ ದೊಡ್ಡ ಅಣ್ಣ. ಅವನ ಗುರುತನ್ನು ಎಲ್ಲರಿಂದ ರಹಸ್ಯವಾಗಿಡಲಾಗಿತ್ತು, ಅವನು ದಾನಶೂರನಾಗಿದ್ದನು.
7. ಖಂಡೋಬಾ ದೇವತೆಗೆ ಅರ್ಪಿಸಲ್ಪಟ್ಟ ಮಹಿಳೆಯರು.
8. ನಾಲ್ಕು ಧಾರ್ಮಿಕ ಆಶ್ರಮಗಳು ಬ್ರಾಹ್ಮಣನ ಜೀವನದಲ್ಲಿರುವುವು – ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ.
9. ಆತ್ಮಸಾಕ್ಷಾತ್ಕಾರ ಪಡೆದ ಆತ್ಮ.
10. ಅನುಭವ ಜ್ಞಾನವನ್ನು ಪಡೆಯಲಿಚ್ಛಿಸುವ ವಿದ್ಯಾರ್ಥಿ. ಅದಕ್ಕಾಗಿ ಅನೇಕ ಪರಿಶ್ರಮ ಪಡೆಯಲು ತಯಾರಾಗಿರುವವನು.

10A+10B. ವಿಷ್ಣು ಮತ್ತು ಶಿವ ವಾಸಿಸುವ ಸ್ಥಾನಗಳು.

11. ಒಬ್ಬ ಸಾಮಾನ್ಯ ಪೋಲಿಸ್ ಪೇದೆ ಮುಂದೆ ಕೀರ್ತನಕಾರನಾದವನು. ಒಬ್ಬ ಕವಿ, ಸಂತ ಮತ್ತು ರಚನಕಾರ.
12. ಹಣ್ಣುಗಳು, ಹೂವು, ಹಾಲು ಮತ್ತು ಇತರೆ ಅಂಷ್ಟ ಖಾದ್ಯಗಳು. ಪೂಜಿಸುವ ವಸ್ತುಗಳು.
13. ಮಾರ್ಗೋಸಾ ಮರ. (ಬೇವಿನ ಮರ.)
14. ಮುಕ್ತಿ.
15. ಅಶ್ವತ್ಥ – (ಬೋಧಿವೃಕ್ಷ) ಬುದ್ಧನು ಸಾಕ್ಷಾತ್ಕಾರ ಪಡೆದುಕೊಂಡ ಸ್ಥಳ.
    ಔದುಂಬರ ವೃಕ್ಷ (ಭಗವಾನ್ ದತ್ತರಿಗೆ ಮೀಸಲಾದದ್ದು. (ಅತ್ತಿಮರ).

16. ಗುರು ಮತ್ತು ಪುಷ್ಯ ಗ್ರಹಗಳ ಸಮ್ಮಿಳನದಿಂದ ಉಂಟಾಗುವ ಮಂಗಳ ಸಂಕೇತ.
17. ಬೊಂಬಾಯಿಯಿಂದ ಬಂದ ಭಕ್ತ. ಅವರ ಬಗ್ಗೆ ಮತ್ತಷ್ಟು ಮುಂದೆ ತಿಳಿಯುತ್ತದೆ.
18. ಬುಟಿಂಯ ವಾಡಾ.



# ಅಧ್ಯಾಯ - 5

॥ ಅಥ ಶ್ರೀ ಸಾಯಿ ಸಚ್ಚರಿತೆ ॥



## "ಸಾಯಿಯ ಪುನರ್ದರ್ಶನ"

ಶ್ರೀ ಗಣೇಶನಿಗೆ ಪ್ರಣಾಮಗಳು
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು
ಶ್ರೀ ಕುಲದೇವತೆಗೆ ಪ್ರಣಾಮಗಳು
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಈಗ ಹಿಂದಿನ ಅಧ್ಯಾಯದಿಂದ ಕತೆಯನ್ನು ಮುಂದುವರಿಸಬೇಕೆಂದರೆ, ಬಾಬಾರವರು ಶಿರಡಿಯಿಂದ ಮರೆಯಾದಮುತ್ತು ಪುನಃ ಚಾಂದಪಾಟೀಲನ ಜೊತೆಯಲ್ಲಿ ಆಗಮಿಸಿದರು. ಇದೆಲ್ಲ ಹೇಗೆ ನಡೆಯಿತೆಂಬುದನ್ನು ಆಲಿಸಿರಿ. ॥1॥ ಬಾಬಾರವರು ತೋಟವನ್ನು ಹೇಗೆ ನಿರ್ಮಾಣ ಮಾಡಿದರು ಮತ್ತು ತಾವೇ ಸ್ವತಃ ನೀರನ್ನು ಹಾಯಿಸುತ್ತ ಹೇಗೆ ಕಾಪಾಡಿದರು, ಗಂಗಾಗೀರ್ ಮತ್ತಿತರ ಸಂತರ ಸಂಗ ಮಾಡಿದರು ಅಂತಹ ಪಾವನ ಕತೆಯನ್ನು ಕೇಳಿರಿ. ॥2॥ ಅನಂತರ ಬಾಬಾರವರು ಸ್ವಲ್ಪ ಕಾಲ ಮರೆಯಾಗಿದ್ದವರು. ಈ ಮಾನವರತ್ನ ಮುಸಲ್ಮಾನನ ಮನೆಯ ಮದುವೆ ದಿಬ್ಬಣದ್ ಜೊತೆಯಲ್ಲಿ ಹೇಗೆ ಶಿರಡಿಗೆ ಹಿಂತಿರುಗಿದರು ಎಂಬುದನ್ನು ಹೇಳುತ್ತೇನೆ. ॥3॥ ಅದಕ್ಕೆ ಮೊದಲು ದೇವಿದಾಸನು ಶಿರಡಿಯಲ್ಲಿ ನೆಲೆಯೂರಿದ್ದನು. ಅನಂತರ ಜಾನಕೀದಾಸ ಎಂಬ ತಪಸ್ವಿಯೂ ಅಲ್ಲಿಗೆ ಬಂದಿದ್ದನು. ॥4॥ ಇವೆಲ್ಲವೂ ಯಾವ ರೀತಿ ನಡೆದವು, ನಾನು ಅದನ್ನೆಲ್ಲ ವಿವರವಾಗಿ ಹೇಳುತ್ತೇನೆ. ಶ್ರೋತೃಗಳೇ, ಆದರಪೂರ್ವಕವಾಗಿ ಗಮನವಿಟ್ಟು ಕೇಳಿರಿ. ॥5॥ ಔರಂಗಾಬಾದ್ ಜಿಲ್ಲೆಯ ಧೂಪ ಎನ್ನುವ ಒಂದು ಸಣ್ಣ ಹಳ್ಳಿಯಲ್ಲಿ ಒಬ್ಬ ಭಾಗ್ಯಶಾಲಿಯಾದ ಮುಸಲ್ಮಾನನಿದ್ದನು. ಅವನ ಹೆಸರು ಚಾಂದಪಾಟೀಲ. ॥6॥ ಅವನು ಔರಂಗಾಬಾದಿಗೆ ಹೋಗುತ್ತಿದ್ದಾಗ

ಅವನ ಕುದುರೆಗಳಲ್ಲಿ ಒಂದು ತಪ್ಪಿಸಿಕೊಂಡಿತು. ಸುಮಾರು 2 ತಿಂಗಳವರೆಗೆ ಅದರ ಸುಳಿವಿರಲಿಲ್ಲ. ಅವನು ನಿರಾಶನಾದನು. ॥7॥ ಪಾಟೀಲನು ಪೂರ್ಣ ನಿರಾಶನಾಗಿ, ಕುದುರೆ ಕಳೆದುಹೋಗಿದ್ದರಿಂದ ಬಹಳ ಸಂಕಟಪಟ್ಟನು. ಅದರ ಜೀನನ್ನು ತನ್ನ ಬೆನ್ನ ಮೇಲೆ ಹೊತ್ತು ಹಿಂತಿರುಗಲು ಪ್ರಾರಂಭಿಸಿದನು. ॥8॥ ಔರಂಗಾಬಾದ್‌ನಿಂದ $4\frac{1}{2}$ ಕೋಸು[2] ಪಯಣಿಸಿದ ಮೇಲೆ, ದಾರಿಯಲ್ಲಿ ಒಂದು ಮಾವಿನ ಮರ ಸಿಕ್ಕಿತು. ಅದರ ಕೆಳಗೆ ಆ ರತ್ನ(ಸಾಯಿ)ವನ್ನು ಕಂಡನು. ॥9॥ ತಲೆಯ ಮೇಲೆ ಟೋಪಿ ಮತ್ತು ದೇಹದ ಮೇಲೆ ಕಫನಿಯನ್ನು ಧರಿಸಿ, ಒಂದು ಮರದ ಕೋಲ(ಸಟಕ)ನ್ನು ಕಂಕುಳಲ್ಲಿಟ್ಟು, ಹೊಗೆಸೊಪ್ಪನ್ನು ತನ್ನ ಚಿಮಣಿಯಲ್ಲಿ ಸೇದಲು ಪುಡಿಮಾಡುತ್ತ ಇದ್ದನು. ಆಗ ಒಂದು ವಿಚಿತ್ರ ಘಟನೆ ನಡೆಯಿತು. ॥10॥ ಚಾಂದ ಪಾಟೀಲನು ಪಕ್ಕದಲ್ಲಿ ಹಾದುಹೋದಾಗ ಫಕೀರನು ಕರೆಯುತ್ತಿದ್ದುದನ್ನು ಕೇಳಿದನು. "ಹೇ, ಬಾ ಇಲ್ಲಿ. ಒಂದು ದಮ್ ಎಳೆದುಕೋ; ಮತ್ತೆ ಮುಂದೆ ನಡಿ. ನೆರಳಿನಲ್ಲಿ ಸ್ವಲ್ಪಕಾಲ ಕುಳಿತುಕೋ." ॥11॥ ಫಕೀರನು ಕೇಳುತ್ತಾನೆ – "ಈ ಜೀನು ಏತಕ್ಕಾಗಿ?" ಪಾಟೀಲ ಉತ್ತರಿಸುತ್ತಾನೆ, "ನನ್ನ ಕುದುರೆ ತಪ್ಪಿಸಿಕೊಂಡಿದೆ." ಅನಂತರ ಫಕೀರನು ಹೇಳುತ್ತಾನೆ, "ಹೋಗು, ಆ ನಾಲೆಯ ಹತ್ತಿರ ಹುಡುಕು." ತಕ್ಷಣವೇ ಕುದುರೆಯು ಕಾಣಿಸಿತು. ॥12॥ ಚಾಂದಪಾಟೀಲನು ಆಶ್ಚರ್ಯಚಕಿತನಾದನು. ಮನಸ್ಸಿನಲ್ಲೇ ತಾನೊಬ್ಬ 'ಅವಲಿಯ'ನ್ನು[3] ಭೇಟಿಮಾಡಿದೆನೆಂದು ಯೋಚಿಸಿದನು. ಅವನ ಶಕ್ತಿ ಅಪರಿಮಿತ. ಅವನನ್ನು ಸಾಮಾನ್ಯ ಮಾನವನೆಂದು ಕರೆಯುವ ಹಾಗಿಲ್ಲ. ॥13॥ ಅನಂತರ ಪಾಟೀಲನು ಕುದುರೆಯೊಂದಿಗೆ ಸ್ಥಳಕ್ಕೆ ಬಂದನು. ಫಕೀರನು ಅವನನ್ನು ಪಕ್ಕದಲ್ಲೇ ಕುಳ್ಳಿರಿಸಿಕೊಂಡನು. ನಂತರ ತನ್ನ ಕೈಯಲ್ಲಿ ಚಿಮಟವನ್ನು ತೆಗೆದುಕೊಂಡನು. ॥14॥ ಅನಂತರ ಅವನು ಅದನ್ನು ನೆಲದ ಮಣ್ಣಿನ ಒಳಗೆ ಚುಚ್ಚಿದನು. ಒಂದು ಕೆಂಡವನ್ನು ತೆಗೆದನು. ಅದನ್ನು ತನ್ನ ಕೈಯಲ್ಲಿದ್ದ ಚಿಲುಮೆಯಲ್ಲಿ[4] ಹಾಕಿದನು. ನಂತರ ಅವನು ತನ್ನ ಸಟಕವನ್ನು[5] ಎತ್ತಿಕೊಂಡನು. ॥15॥ ಮತ್ತೆ ಅಲ್ಲಿ ಚಿಲುಮೆಗೆ ಬೇಕಾದ ಚಪ್ಪಿಯನ್ನು[6] ಒದ್ದೆಮಾಡಲು ನೀರು ಇರಲಿಲ್ಲ. ಅದಕ್ಕಾಗಿ ಅವನು ಸಟಕವನ್ನು ನೆಲಕ್ಕೆ ಬಡಿಯಲು ಅಲ್ಲಿ ನೀರು ಚಿಮ್ಮಿತು. ॥16॥ ಚಪ್ಪಿಯನ್ನು ನೀರಿನಲ್ಲಿ ನೆನೆಸಿ ಅದನ್ನು ಹಿಂಡಿ ಒಣಗಿಸಲಾಯಿತು. ಅವನು ಅದನ್ನು ಚಿಲುಮೆಗೆ ಸುತ್ತಿದನು. ಅದನ್ನು ತಾನೇ ಒಮ್ಮೆ ಸೇದಿ ನಂತರ ಪಾಟೀಲನನ್ನೂ ಸೇದುವಂತೆ ಮಾಡಿದನು. ಪಾಟೀಲನಾದರೋ ದಿಗ್ಭ್ರಮೆಹೊಂದಿದನು. ॥17॥ ಅವನು ಫಕೀರನನ್ನು ತನ್ನ ಮನೆಗೆ ಬರಬೇಕೆಂದು ಪ್ರಾರ್ಥಿಸಿದನು. ಈ ದಿವ್ಯ ಲೀಲೆಗಳ ಪ್ರದರ್ಶನಕಾರನಾದ ಫಕೀರನು ಅವನ ಮಾತಿಗೆ ಒಪ್ಪಿದನು. ॥18॥ ಮಾರನೆಯ ದಿನ ಅವನು ಹಳ್ಳಿಗೆ ಹೋದನು. ಸ್ವಲ್ಪ ಸಮಯ ಪಾಟೀಲನ ಜೊತೆ ಇದ್ದನು. ನಂತರ ಶಿರಡಿಗೆ ಹಿಂತಿರುಗಿದನು. ॥19॥ ಈ ಚಾಂದಪಾಟೀಲನು ಕಾರಭಾರಿ. ಧೂಪಖೇಡ ಹಳ್ಳಿಯ ಗ್ರಾಮಾಧಿಕಾರಿಯೂ ಆಗಿದ್ದನು. ಅವನ ಪತ್ನಿಯ ಸೋದರಳಿಯನ ಮದುವೆಯು ಶಿರಡಿಯ ಹುಡುಗಿಯೊಂದಿಗೆ ಆಯೋಜಿಸಲಾಗಿತ್ತು. ॥20॥ ಚಾಂದಭಾಯಿಯ ಪತ್ನಿಯ ಸೋದರಳಿಯನಿಗೆ ಶಿರಡಿಯವಿವಾಹಯೋಗ್ಯ ವಧುವಿನ

ಜೊತೆ ಮದುವೆ ನಿಗದಿಪಡಿಸಲಾಗಿದ್ದು ಸುಯೋಗವೇ ಸರಿ. ॥21॥ ಕುದುರೆಗಳು, ಗಾಡಿಗಳು, ಇವುಗಳೊಡನೆ ಮದುವೆಯ ದಿಬ್ಬಣ ಶಿರಡಿಯ ಕಡೆಗೆ ಹೊರಟಿತು. ಚಾಂದಭಾಯಿಯ ಮೇಲಿನ ಪ್ರೀತಿಯಿಂದ ಬಾಬಾರವರೂ ದಿಬ್ಬಣದ ಜೊತೆ ಸೇರಿದರು. ॥22॥ ಮದುವೆಯು ನೆರವೇರಿತು. ಮದುವೆಯ ಪರಿವಾರ ಹಿಂತಿರುಗಿತು. ಬಾಬಾರವರು ಮಾತ್ರ ಅಲ್ಲಿಯೇ ಉಳಿದರು ಮತ್ತು ಅಲ್ಲಿಯೇ ನೆಲೆಸಿದರು. ಈ ರೀತಿ ಶಿರಡಿಯ ಭಾಗ್ಯ ಉದಯಿಸಿತು. ॥23॥ ಸಾಯಿಯು ಅವಿನಾಶಿ ಮತ್ತು ಪುರಾತನರು. ಹಿಂದುವೂ ಅಲ್ಲ ಮುಸಲ್ಮಾನನೂ ಅಲ್ಲ. ಅವರಿಗೆ ಯಾವುದೇ ಜಾತಿಯಾಗಲಿ, ಕುಲವಾಗಲಿ, ಗೋತ್ರವಾಗಲಿ ಇಲ್ಲ. ಅವರು ಆತ್ಮಸಾಕ್ಷಾತ್ಕಾರ ಪಡೆದ ಮಹಾತ್ಮನೆಂದು ತಿಳಿ. ॥24॥ ಜನರು 'ಸಾಯಿ, ಸಾಯಿ' ಎಂದು ಕರೆದರು. ಈ ಹೆಸರು ಹೇಗೆ ಬಂತು? "ಬಾ ಸಾಯಿ" ಎಂದು ಗೌರವಪೂರ್ವಕವಾಗಿ ಸ್ವಾಗತಿಸಲ್ಪಟ್ಟರು. ಅದೇ ರೀತಿ ಸಂಬೋಧಿಸಲ್ಪಟ್ಟರು. ॥25॥ ಖಂಡೋಬಾ ಮಂದಿರದ ಹತ್ತಿರ ಮ್ಹಾಲಸಾಪತಿಯವರ ಒಕ್ಕಣೆ ಮಾಡುವ ಜಾಗದಲ್ಲಿ ಬಾಬಾರವರು ಮದುವೆ ದಿಬ್ಬಣದೊತೆಯಲ್ಲಿ ಬಂದಿಳಿದಾಗ, ಆ ದಿನದಂದು ಈ ಹೆಸರು ಕೊಡಲಾಯಿತು. ॥26॥ ಪ್ರಾರಂಭದಲ್ಲಿ ಆ ಒಕ್ಕಣೆಯ ಜಾಗ ಮ್ಹಾಲಸಾಪತಿಯವರದ್ದಾಗಿತ್ತು, ಆನಂತರ ಅದು ಅಮೀನಾಭಾಯಿಯವರದಾಯಿತು. ಮದುವೆಯ ದಿಬ್ಬಣ ಬಂದಾಗ ಅದು ಒಂದು ಆಲದ ಮರದ ಕೆಳಗಡೆ ಇಳಿಯಿತು. ॥27॥ ಗಾಡಿಗಳನ್ನು ಆ ಒಕ್ಕಣೆಯ ಭೂಮಿಯಲ್ಲಿ ಬಿಡಿಸಲಾಯಿತು. ಖಂಡೋಬಾ ಮಂದಿರದ ಮುಂದೆ ಇದ್ದ ವಿಶಾಲವಾದ ಬಯಲಿನಲ್ಲಿ ನಿಲ್ಲಿಸಲಾಯಿತ. ಬಾಬಾರವರು ಮದುವೆಯ ಇತರ ಅತಿಥಿಗಳೊಡನೆ ಅಲ್ಲಿ ಇಳಿದರು. ॥28॥ ಈ ಬಾಲ ಫಕೀರನು ಗಾಡಿಯಿಂದ ಇಳಿದಕೂಡಲೇ ಮೊದಲಿಗೆ ಮ್ಹಾಲಸಾಪತಿಯವರ ದೃಷ್ಟಿಗೆ ಬಿದ್ದನು. ಅವನು ಮುಂದೆಹೋಗಿ "ಬಾ ಸಾಯಿ, ಸ್ವಾಗತ" ಎಂದು ಹೇಳಿದನು. ಅಲ್ಲಿಂದೀಚೆಗೆ ಅವನು ಆ ಹೆಸರಿನಿಂದಲೇ ಕರೆಯಲ್ಪಟ್ಟನು. ॥29॥ ಅನಂತರ, ಆ ಸಮಯದಿಂದಲೇ ಎಲ್ಲರೂ ಅವನನ್ನು "ಸಾಯಿ, ಸಾಯಿ" ಎಂದು ಕರೆದರು. ಅದು ಅವನ ಅಂಕಿತ ನಾಮವಾಯಿತು. ॥30॥ ಅವನು ಅಲ್ಲಿ ಹುಕ್ಕವನ್ನು ಸೇದುತ್ತಿದ್ದನು. ಮಸೀದಿಯಲ್ಲಿ ವಾಸಮಾಡುತ್ತ ದೇವಿದಾಸನ ಸಹವಾಸದಲ್ಲಿ ಸಂತೋಷವಾಗಿರುತ್ತಿದ್ದನು. ಹೀಗೆ ಆತ ಶಿರಡಿಯಲ್ಲಿ ಆನಂದವಾಗಿದ್ದನು. ॥31॥ ಕೆಲವು ಸಲ ಅವನು ಚಾವಡಿಯಲ್ಲಿ ಕುಳಿತಿರುತ್ತಿದ್ದನು. ಕೆಲವೊಮ್ಮೆ ದೇವಿದಾಸನ ಸಹವಾಸದಲ್ಲಿ, ಕೆಲವು ಸಲ ಮಾರುತಿ ದೇವಸ್ಥಾನದಲ್ಲಿ ಸದಾಕಾಲ ಸ್ವಾತ್ಮಾನಂದದಲ್ಲಿ ಸಂಪೂರ್ಣವಾಗಿ ಮುಳುಗಿರುತ್ತಿದ್ದನು. ॥32॥ ಈ ದೇವೀದಾಸನು ಈಗಾಗಲೇ ಶಿರಡಿಯಲ್ಲಿ ಬಾಬಾರವರು ಶಿರಡಿಗೆ ಬರುವ ಮೊದಲೇ ನೆಲಸಿದ್ದನು. ಆನಂತರ ಮಹಾನುಭವ ಪಂಥದ್ ಸನ್ಯಾಸಿ ಜಾನಕೀದಾಸ ಗೋಸಾವಿ ಬಂದನು. ॥33॥ ಜಾನಕೀದಾಸರ ಜೊತೆಯಲ್ಲಿ ಸಾಯಿ ಮಹಾರಾಜರು ಕುಳಿತು ಮಾತುಕತೆ ಆಡುತ್ತಿದ್ದರು. ಇಲ್ಲದಿದ್ದಲ್ಲಿ ಜಾನಕೀದಾಸರು ಮಹಾರಾಜರು ಕುಳಿತಿದ್ದ ಜಾಗಕ್ಕೇ ಬರುತ್ತಿದ್ದರು. ॥34॥ ಇಬ್ಬರೂ ಒಬ್ಬರನ್ನೊಬ್ಬರು ಬಹಳ ಪ್ರೀತಿಸುತ್ತಿದ್ದರು ಮತ್ತು ನಿತ್ಯವೂ ಭೇಟಿಯಾಗುತ್ತಿದ್ದರು. ಅವರ ಈ

ರೀತಿಯ ಸಮಾಗಮ ಪ್ರತಿಯೊಬ್ಬರಿಗೂ ಅತ್ಯಂತ ಸಂತಸ ತರುತ್ತಿತ್ತು. ॥35॥ ಅದೇ ರೀತಿ, ಒಬ್ಬ ಪ್ರಸಿದ್ಧ ವೈಷ್ಣವ ಗೃಹಸ್ಥಾಶ್ರಮಿ ಗಂಗಾಗೀರ್ ಮತ್ತು ಪುಣತಾಂಬೆಯ ಶಿರಡಿಗೆ ಆಗಾಗ್ಗೆ ಬಂದು ಹೋಗುವ ಯಾತ್ರಾರ್ಥಿಯಾಗಿದ್ದರು. ॥36॥ ಆರಂಭದಲ್ಲಿ ಗಂಗಾಗೀರರ ಅಚ್ಚರಿ ಬಹಳವಾಗಿತ್ತು, ಸಾಯಿಯು ಎರಡೂ ಕೈಗಳಿಂದ ಮಣ್ಣಿನ ಮಡಕೆಗಳಲ್ಲಿ ಬಾವಿಯಿಂದ ನೀರನ್ನು ಹೊತ್ತು ತರುತ್ತಿದ್ದರು. ॥37॥ ಅದೇ ರೀತಿ ಬುವಾನ ದೃಷ್ಟಿಗೆ ಸಾಯಿಯು ಮೊದಲು ಕಂಡಾಗ ಅವನು ಹೇಳಿದ್ದು – "ಇದು ಶಿರಡಿಯ ಮಹಾಪುಣ್ಯ. ಈ ರೀತಿಯ ರತ್ನ ಶ್ರೇಷ್ಠವು ಶಿರಡಿಯಲ್ಲಿರುವುದು ಶಿರಡಿಯ ಮಹಾಭಾಗ್ಯ. ಶಿರಡಿಯು ಧನ್ಯ" ಎಂದು ಸ್ಪಷ್ಟೀಕರಿಸಿದನು. ॥38॥ ಈ ದಿನ ಅವನು ಹೆಗಲಮೇಲೆ ನೀರನ್ನು ಹೊತ್ತು ತರುತ್ತಿದ್ದರೂ, ಅವನು ಸಾಧಾರಣ ಮಾನವನಲ್ಲ. ಅವನ ಪಾದ ಸೋಕಿದ ಶಿರಡಿಯ ನೆಲವೇ ಧನ್ಯ. ॥39॥ ಅದೇ ರೀತಿ ಮತ್ತೊಬ್ಬ ಖ್ಯಾತ ಸಂತ ಆನಂದನಾಥರು ಅವರ (ಸಾಯಿ) ಬಗ್ಗೆ, ಅವರು ಅದ್ಭುತಗಳನ್ನು ಮಾಡುವರೆಂದು ಭವಿಷ್ಯ ನುಡಿದಿದ್ದರು. ॥40॥ ಈ ಮಹಾ ಪ್ರಸಿದ್ಧ ಆನಂದನಾಥರು ಯೇವಲಾ ಎಂಬ ಗ್ರಾಮದಲ್ಲಿ ಒಂದು ಮಠವನ್ನು ಸ್ಥಾಪಿಸಿದ್ದರು. ಒಮ್ಮೆ ಅವರು ಕೆಲವು ಶಿರಡಿ ನಿವಾಸಿಗಳೊಂದಿಗೆ ಶಿರಡಿಗೆ ಬಂದರು. ॥41॥ ಆನಂದನಾಥರು ಅಕ್ಕಲಕೋಟೆಯ ಮಹಾಪುರುಷರ ಶಿಷ್ಯರು. ಸಾಯಿಯನ್ನು ನೋಡಿದ ಕೂಡಲೇ ಘೋಷಿಸಿದರು –"ಇದು ನಿಜವಾಗಿಯೂ ಒಂದು ವಜ್ರ, ಒಂದು ಅಸಲಿ ವಜ್ರ" ಎಂದು. ॥42॥ "ಈದಿನ ಅವನು ಒಂದು ಕಸದ ರಾಶಿಯ ಮೇಲೆ ಇದ್ದರೂ (ತಿರಸ್ಕರಿಸಲ್ಪಟ್ಟಿದ್ದರೂ) ಇದು ಕೇವಲ ಒಂದು ಹರಳಲ್ಲ, ಆದರೆ ಅಸಲಿ ವಜ್ರ" ಎಂದು ಘೋಷಿಸಿದರು. ಇವು ಬಾಬಾರವರು ಇನ್ನೂ ಬಾಲಕನಿದ್ದಾಗ ಹೇಳಿದ ಆನಂದನಾಥರಮಾತುಗಳು. ॥43॥ "ನನ್ನ ಮಾತುಗಳನ್ನು ಧ್ಯಾನದಿಂದ ಕೇಳಿರಿ. ಅನಂತರ ನೀವು ಇವುಗಳನ್ನು ಮತ್ತೆ ಜ್ಞಾಪಿಸಿಕೊಳ್ಳುವಿರಿ" ಈ ರೀತಿ ಭವಿಷ್ಯವಾಣಿಯನ್ನು ನುಡಿದು ಯೇವಾಲ ಗ್ರಾಮಕ್ಕೆ ಹಿಂತಿರುಗಿದರು. ॥44॥ ಆ ದಿನಗಳಲ್ಲಿ ಸಾಯಿಯು ಯುವಕರಾಗಿದ್ದು, ಕೇಶಮುಂಡನವನ್ನೂ ಮಾಡಿಕೊಳ್ಳದೆ ಕೂದಲನ್ನು ಉದ್ದವಾಗಿ ಬೆಳೆಸಿದ್ದರು ಮತ್ತು ಒಬ್ಬ ಕುಸ್ತಿಪಟುವಿನ ರೀತಿ ಉಡುಪು ಧರಿಸುತ್ತಿದ್ದರು. ॥45॥ ಬಾಬಾರವರು ರಾಹತಾಗೆ ಹೋದಾಗಲೆಲ್ಲಾ ಚಂಡು ಹೂವು ಮತ್ತು ಮಲ್ಲಿಗೆ ಹೂವಿನ ಸಸಿಗಳನ್ನು ತರುತ್ತಿದ್ದರು. ಅವುಗಳನ್ನು ಬಂಜರು ಭೂಮಿಯಲ್ಲಿ ನೆಟ್ಟು ದಿನವೂ ನೀರು ಹಾಕುತ್ತಿದ್ದರು. ॥46॥ ವಾಮನ ತಾತ್ಯಾ ಎಂಬ ಭಕ್ತನೊಬ್ಬನು ನಿತ್ಯವೂ ಎರಡು ಹಸಿ ಮಡಕೆಗಳನ್ನು ಬಾಬಾರವರಿಗೆ ಕೊಡುತ್ತಿದ್ದನು. ಅದರಿಂದ ಬಾಬಾರವರು ತಮ್ಮ ಕೈಗಳಿಂದಲೇ ನೀರು ಹಾಕುತ್ತಿದ್ದರು. ॥47॥ ಬಾಬಾರವರು ಬಾವಿಯ ಹತ್ತಿರವಿದ್ದ ಕೊಳದಿಂದ ನೀರು ತುಂಬಿ ಹೆಗಲಮೇಲೆ ಹೊತ್ತು ತರುತ್ತಿದ್ದರು. ಸೂರ್ಯಾಸ್ತಮ ಸಮಯದಲ್ಲಿ ಆ ಮಡಕೆಗಳನ್ನು ಬೇವಿನ ಮರದ ಬುಡದಲ್ಲಿ ಇಡುತ್ತಿದ್ದರು. ॥48॥ ನೆಲದ ಮೇಲೆ ಇಟ್ಟ ಕೂಡಲೇ ಆ ಮಡಕೆಗಳು ಒಡೆದು ಹೋಗುತ್ತಿದ್ದವು. ಮಾರನೆಯ ದಿನ ಬೆಳಿಗ್ಗೆ ತಾತ್ಯಾ ಹೊಸ ಮಡಕೆಗಳನ್ನು ತಂದು ಕೊಡುತ್ತಿದ್ದನು. ॥49॥ ಸುಟ್ಟ ಮಡಕೆಯು ಬಹಳ ಬಾಳಿಕೆ

ಬರುತ್ತದೆ. ಆದರೆ ಬಾಬಾರವರಿಗೆ ಕೇವಲ ಹೊಸದಾದ ಹಸಿ ಮಡಕೆಗಳೇ ಬೇಕಾಗಿದ್ದವು. ಆದ್ದರಿಂದ ಸುಡುವ ಗೋಜಿಗೇ ಹೋಗದೆ ಕುಂಬಾರನು ಮಡಕೆಗಳನ್ನು ಮಾರುತ್ತಿದ್ದನು. ॥50॥ ಮೂರು ವರ್ಷಗಳ ಕಾಲ ಇದು ಮುಂದುವರೆಯಿತು. ನಿರರ್ಥಕವಾದ ಜಮೀನು ಒಂದು ತೋಟವಾಗಿ ಪರಿವರ್ತಿತವಾಯಿತು. ಈ ನೆಲದ ಮೇಲೆಯೇ ಇಂದು 'ವಾಡಾ' ನೆಲೆಸಿದೆ ಹಾಗೂ ಭಕ್ತರಿಗೆ ನಿಕಟ ಸಂಬಂಧ ಉಂಟುಮಾಡುವ ಸ್ಥಳವಾಗಿದೆ.[10] ॥51॥ ಇಲ್ಲಿ[11], ಬೇವಿನ ಮರದ ಕೆಳಗಡೆ ಭಾಯಿ[12] ಎಂಬ ಭಕ್ತನು ಅಕ್ಕಲಕೋಟೆ ಸ್ವಾಮಿಯವರ ಪಾದುಕೆಗಳನ್ನು ಭಕ್ತರು ಪೂಜಿಸಲೆಂದು ಸ್ಥಾಪನೆಮಾಡಿದ್ದಾನೆ. ॥52॥ ಅಕ್ಕಲಕೋಟೆಯ ಸ್ವಾಮಿ ಸಮರ್ಥರು ಭಾಯಿಯ ಉಪಾಸ್ಯ ದೈವವಾಗಿದ್ದರು. ಭಾಯಿಯು ನಿತ್ಯವೂ ಭಕ್ತಿಯಿಂದ ಅವರ ಚಿತ್ರಪಟವನ್ನು ಪೂಜಿಸುತ್ತಿದ್ದನು. ॥53॥ ಅವನೊಮ್ಮೆ ಅಕ್ಕಲಕೋಟೆಗೆ ಹೋಗಿ ಅಲ್ಲಿ ಪಾದುಕೆಗಳ ದರ್ಶನಮಾಡಿ ತನ್ನ ಮನಃಪೂರ್ವಕವಾಗಿ ಪೂಜಿಸಲು ಯೋಚಿಸಿದನು. ॥54॥ ಮಾರನೆಯ ದಿನ ಬೊಂಬಾಯಿನಿಂದ ಹೊರಡಲು ಸಿದ್ಧನಾದನು. ಆದರೆ ಅವನ ನಿರ್ಧಾರ ನೆರವೇರದೆ ಬದಲಾಗಿ ಶಿರಡಿಗೆ ಹೊರಟನು. ॥55॥ ಹೊರಡುವ ಹಿಂದಿನ ದಿನ ಅವನಿಗೆ ಒಂದು ಸ್ವಪ್ನವಾಯಿತು. ಅಕ್ಕಲಕೋಟೆ ಸ್ವಾಮಿಗಳು ಆಜ್ಞಾಪಿಸುತ್ತಾರೆ – "ಈಗ ಶಿರಡಿಯೇ ನನ್ನ ವಾಸ ಸ್ಥಾನ. ನೀನು ಅಲ್ಲಿಗೇ ಹೋಗು" ಎಂದು. ॥56॥ ಅತಿ ಪೂಜ್ಯಭಾವನೆಯಿಂದ ಆಜ್ಞಾಧಾರಕನಾಗಿ ಭಾಯಿಯು ಬೊಂಬಾಯಿನಿಂದ ಹೊರಟನು. ಶಿರಡಿಯಲ್ಲಿ ಆರು ತಿಂಗಳುಗಳ ಕಾಲ ನೆಲೆಸಿ ಶಾಂತಿ, ಸಂತೋಷಗಳನ್ನು ಹೊಂದಿದರು. ॥57॥ ಭಾಯಿಯು ಪೂರ್ಣನಿಷ್ಠಾವಂತನಾಗಿದ್ದನು. ಆದ್ದರಿಂದ ಸ್ವಪ್ನದರ್ಶನದ ಸ್ಮರಣಾರ್ಥವಾಗಿ ಸ್ವಾಮಿಯವರ ಪಾದುಕೆಗಳನ್ನು ಬೇವಿನಮರದ ಕೆಳಗೆ ಸ್ಥಾಪಿಸಿದನು. ॥58॥ ಶಕೆ 1834ರಲ್ಲಿ[13] ಶುಕ್ಲ ಪಕ್ಷ; ಶ್ರಾವಣ ಮಾಸದ ಒಂದು ಮಂಗಳಕರವಾದ ದಿನದಂದು ಪಾದುಕೆಗಳನ್ನು ಬೇವಿನಮರದ ಕೆಳಭಕ್ತಿಪೂರ್ವಕವಾಗಿ ನಾಮಸಂಕೀರ್ತನೆ ಮಾಡುತ್ತ ಪ್ರತಿಷ್ಠಾಪಿಸಿದನು. ॥59॥ ಆ ಶುಭಮುಹೂರ್ತದಲ್ಲಿ[14] ಪ್ರತಿಷ್ಠಾಪನಾ ಸಮಾರಂಭವು ದಾದಾ ಕೇಳ್ಕರ್‌ರವರಿಂದ ನೆರವೇರಿಸಲ್ಪಟ್ಟಿತು. ಶಾಸ್ತ್ರಪೂರ್ವಕ ವಿಧಿವಿಧಾನಗಳು ಉಪಾಸನಿ[15] ಅವರಿಂದ ನೆರವೇರಿಸಲ್ಪಟ್ಟಿತು. ॥60॥ ಮುಂದೆ, ಆಚರಣೆಗಳನ್ನು ದೀಕ್ಷಿತ್[16] ಎಂಬ ಬ್ರಾಹ್ಮಣನಿಗೆ ಒಪ್ಪಿಸಲಾಯಿತು. ಅವನು ಪೂಜೆ ಮಾಡುವವನು. ಆಡಳಿತ ವ್ಯವಸ್ಥೆಯನ್ನು ಸಗುಣ್ ಎಂಬ ಭಕ್ತನಿಗೆ ವಹಿಸಲಾಯಿತು. ಇದು ಪಾದುಕೆಗಳ ಕತೆಯು. ॥61॥ ಈ ರೀತಿ ಸಂತರು ಅನಿರ್ಬಾಧಿತರು. ಭಗವಂತನ ನಿಜವಾದ ಅವತಾರ ಪುರುಷರು. ಭೂಮಿಯ ಮೇಲೆ ಮುಕ್ತಿಗಾಗಿ ಮತ್ತು ಮಾನವ ಕಲ್ಯಾಣಕ್ಕಾಗಿ ಅವತರಿಸುತ್ತಾರೆ. ॥62॥ ಕೆಲವು ದಿನಗಳ ನಂತರ ಒಂದು ವಿಶೇಷ ನಡೆಯಿತು. ಶ್ರೋತೃಗಳು ಶ್ರದ್ಧೆಯಿಂದ, ಗೌರವದಿಂದ ಕೇಳಿದಲ್ಲಿ ಆಶ್ಚರ್ಯಪಡುತ್ತಾರೆ. ॥63॥ ಅಲ್ಲಿ ವೀಳೆಯದೆಲೆ ಮಾರುವ ಮೊಹಿದೀನ್ ಭಾಯಿ ಎಂಬುವವನಿದ್ದನು. ಅವನ ಮತ್ತು ಬಾಬಾರವರ ಮಧ್ಯೆ ಒಂದು ವಾಗ್ವಾದ ಹುಟ್ಟಿ ಕುಸ್ತಿ ಪಂದ್ಯಕ್ಕೆ ಪ್ರಜ್ವಲಿಸಿತು. ॥64॥ ಇಬ್ಬರೂ ನುರಿತ ಕುಸ್ತಿಪಟುಗಳೇ. ಆದರೆ ವಿಧಿಯು ಶಕ್ತಿಯ ಮೇಲೆ

ನಿರ್ಧಾರವಾಗುತ್ತದೆ. ಮೊಹಿದೀನ್ ಶಕ್ತಿವಂತನೆಂದು ಸಾಧಿಸಿದನು. ಬಾಬಾರವರು ನಿಶ್ಶಕ್ತರಾಗಿದ್ದರಿಂದ ಸೋತರು. ॥65॥ ಅನಂತರ ಅವರು ಒಂದು ನಿರ್ಧಾರ ತೆಗೆದುಕೊಂಡರು. ಬಾಬಾರವರು ಸಂಪೂರ್ಣವಾಗಿ ತಮ್ಮ ಉಡುಗೆಯನ್ನು ಬದಲಿಸಿದರು. ಅವರು ಒಂದು ಕಫನಿಯನ್ನು ಧರಿಸಿ, ಒಂದು ಕೌಪೀನವನ್ನು ಧರಿಸಿದರು. ತಮ್ಮ ತಲೆಯ ಸುತ್ತಲೂ ಒಂದು ಬಟ್ಟೆಯನ್ನು ಸುತ್ತಿದರು. ॥66॥ ಅವರು ಒಂದು ಗೋಣಿಚೀಲವನ್ನು ಕುಳಿತುಕೊಳ್ಳಲು ಮತ್ತು ಹಾಸಿಗೆಯನ್ನಾಗಿಸಲು ಉಪಯೋಗಿಸುತ್ತಿದ್ದರು. ಅವರು ಹರಿದು ಹೋದ, ಸವೆದು ಹೋದಚಿಂದಿಗಳಿಂದ ತೃಪ್ತರಾಗಿದ್ದರು. ॥67॥ ಸಾಯಿಯು ನಿತ್ಯವೂ ಹೇಳುತ್ತಾರೆ. – "ಬಡತನವು ಒಡೆತನಕ್ಕಿಂತ ಮಿಗಿಲು, ಸಿರಿತನಕ್ಕಿಂತ ಅತಿ ಉತ್ತಮ, ಪರಮಾತ್ಮನು ಬಡವರ ಬಂಧು" ॥68॥ ಗಂಗಾಗೀರರೂ ಇದೇ ರೀತಿಯ ಸ್ಥಿತಿಯನ್ನು ದಾಟಿದ್ದರು. ಅವರಿಗೆ ಅಂಗಸಾಧನೆ ಅತಿ ಪ್ರಿಯವಾಗಿತ್ತು. ಒಮ್ಮೆ ಒಂದು ಕುಸ್ತಿಯ ಆಟದಲ್ಲಿ ಮಗ್ನರಾಗಿದ್ದಾಗ ಅವರಿಗೂ ಇದೇ ರೀತಿಯ ನಿರ್ವಿಕಾರತೆಯ ಭಾವ ಉಂಟಾಯಿತು. ॥69॥ ಒಂದು ಪ್ರಾಪ್ತ ಕಾಲದಲ್ಲಿ ಅವರಿಗೆ ಒಬ್ಬ ಸಿದ್ಧನ ವಾಣಿಯು ಕೇಳಿಸಿತು. "ಪ್ರತಿಯೊಬ್ಬನ ದೇಹ, ಪರಮಾತ್ಮನ ಸೇವೆಗಾಗಿ ಇದೆ ಮತ್ತು ಆ ಪರಮಾತ್ಮನ ಸೇವೆಯಲ್ಲಿಯೇ ಸವೆದುಹೋಗಬೇಕು." ॥70॥ ಅವರು ಕುಸ್ತಿಮಾಡುತ್ತಿರುವಾಗಲೇ ಈ ಅನುಗ್ರಹವಾಣಿಯು ಕೇಳಿಸಿತು. ಆದುದರಿಂದ ಅವರು ತಮ್ಮ ಸಾಂಸಾರಿಕ ಜೀವನವನ್ನು ತ್ಯಜಿಸಿ ಅಧ್ಯಾತ್ಮದ ಹಾದಿಯನ್ನು ಹಿಡಿದಿದ್ದರು. ॥71॥ ಪುರಿತಂಬೆಯ ಹತ್ತಿರ ನದಿಯ ಮಧ್ಯದಲ್ಲಿದ್ದ ಒಂದು ದ್ವೀಪದಲ್ಲಿ, ಬುವಾನ ಮಠವು ಇದ್ದಿತು. ಅಲ್ಲಿ ಕೆಲವರು ಶಿಷ್ಯರು ಅವರ ಸೇವೆಗಾಗಿ ನೆಲೆಸಿದ್ದರು. ॥72॥ ಸಾಯಿನಾಥರು ತಮಗೆ ಹಾಕಿದ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿ ತಮ್ಮಷ್ಟಕ್ಕೆ ಎಂದೂ ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ॥73॥ ಹಗಲು ವೇಳೆ ಅವರು ಬೇವಿನಮರದ ಕೆಳಗೆ ಕುಳಿತಿರುತ್ತಿದ್ದರು. ಕೆಲವೊಮ್ಮೆ ಹಳ್ಳಿಯ ಹೊರವಲಯದಲ್ಲಿದ್ದ ಒಂದು ಹೊಳೆಯ ಪಕ್ಕದಲ್ಲಿದ್ದ ಬಾಬುಲ್ ಮರದ ಹರಡಿದ್ದ ಕೊಂಬೆಗಳ ನೆರಳಿನಲ್ಲಿ ಕುಳಿತಿರುತ್ತಿದ್ದರು. ॥74॥ ಕೆಲವು ಸಲ ಹಗಲಿನಲ್ಲಿ ಮನಸೋ ಇಚ್ಛೆ ತಿರುಗಾಡುತ್ತಿದ್ದರು. ಅಥವಾ ಮಧ್ಯಾಹ್ನದಲ್ಲಿ ಅಥವಾ ಬೆಳಗಿನ ಜಾವದಲ್ಲಿ ಸುಮಾರು ಐದು ಮೈಲು ದೂರದಲ್ಲಿರುವ ನೀಮಗಾಂವಕ್ಕೆ ನಡೆಯುತ್ತಿದ್ದರು. ॥75॥ ಪ್ರಸಿದ್ಧವಂಶವಾದ ತ್ರಿಂಬಕ್‌ಡಿಂಗ್ಲೆ ಕುಟುಂಬದವರು ನೀಮಗಾಂವನ ಜಾಗಿರದಾರಿಯನ್ನು[19] ಹೊಂದಿದ್ದರು. ಬಾಬಾ ಸಾಹೇಬ್ ಡಿಂಗ್ಲೆ ಆ ಕುಟುಂಬದವನು. ಅವನನ್ನು ಕಂಡರೆ ಬಾಬಾಗೆ ಅತ್ಯಂತ ಪ್ರೀತಿ. ॥76॥ ಬಾಬಾರವರು ನೀಮ್‌ಗಾಂವನ್ನು ಸುತ್ತಿ ಬಂದಾಗಲೆಲ್ಲಾ ಅವನ ಮನೆಗೆ ಹೋಗಿ ಅವನೊಡನೆ ಬಹಳ ಪ್ರೀತಿಯಿಂದ ಮಾತನಾಡುತ್ತ ದಿನವನ್ನು ಕಳೆಯುತ್ತಿದ್ದರು. ॥77॥ ಅವನಿಗೆ ನಾನಾಸಾಹೇಬ್ ಎಂಬ ಕಿರಿಯ ಸೋದರನೊಬ್ಬನಿದ್ದನು. ಅವನಿಗೆ ಸಂತಾನವಿಲ್ಲದುದರಿಂದ ಖಿನ್ನ ಮನಸ್ಕನಾಗಿದ್ದನು. ॥78॥ ಅವನ ಮೊದಲ ಪತ್ನಿಯಿಂದ ಸಂತಾನದ ಸಾಧ್ಯತೆ ಇರಲಿಲ್ಲ. ಆದ್ದರಿಂದ ಅವನು ಎರಡನೆ ಬಾರಿ ಮದುವೆಯಾಗಿದ್ದನು. ಆದರೂ ವಿಧಿ ಬದಲಾಗಲಿಲ್ಲ. ವಿಧಿಬರಹವನ್ನು

ತಪ್ಪಿಸುವವರಾರು? ॥79॥ ಅನಂತರ ಬಾಬಾಸಾಹೇಬರು ಸಾಯಿಯ ದರ್ಶನಕ್ಕಾಗಿ ಕಳಿಸಿದರು. ಸಾಯಿಯ ಆಶೀರ್ವಾದದಿಂದ ಒಬ್ಬ ಮಗನ ರೂಪದ ಪ್ರಸಾದ ಪಡೆದರು. ॥80॥ ಸಮಯ ಕಳೆದಂತೆ ಜನಸಮುದಾಯವು ಸಾಯಿಯ ದರ್ಶನಕ್ಕಾಗಿ ಮುಗಿಬೀಳುತ್ತಿತ್ತು, ಸಾಯಿಯ ಕೀರ್ತಿ ಹರಡಿ ಈ ವರ್ತಮಾನವು ಅಹಮದ್‌ನಗರವನ್ನು ತಲಪಿತು. ॥81॥ ಅಲ್ಲಿ ನಾನಾಸ[20] ಸರಕಾರಿ ವಲಯದಲ್ಲಿ ಓಡಾಡುತ್ತಿದ್ದನು. ಅಲ್ಲಿ ಅನೇಕ ಅಧಿಕಾರಿಗಳಿಂದ ಪ್ರಭಾವಿತನಾಗಿದ್ದ ಅವರಲ್ಲಿ ಚಿದಂಬರ ಕೇಶವ ಎನ್ನುವವನೊಬ್ಬನು ಜಿಲ್ಲಾಧಿಕಾರಿಗಳ ಕಾರ್ಯದರ್ಶಿಯಾಗಿದ್ದನು. ॥82॥ ಅವನಿಗೆ ಒಂದು ಪತ್ರ ಬರೆದು ಸಾಯಿ ಸಮರ್ಥರು ದರ್ಶನಕ್ಕೆ ಯೋಗ್ಯರು ಮತ್ತು ಅವನು ತನ್ನ ಪತ್ನಿ, ಪುತ್ರ ಮತ್ತು ಬಂಧುಮಿತ್ರರೊಡನೆ ಸಾಯಿಯ ದರ್ಶನಮಾಡಬೇಕೆಂದು ತಿಳಿಸಿದನು. ॥83॥ ಒಬ್ಬರಾದ ಮೇಲೊಬ್ಬರು ಈ ರೀತಿ ಅನೇಕ ಜನರು ಶಿರಡಿಗೆ ಬರಲು ಪ್ರಾರಂಭಿಸಿದರು. ಬಾಬಾರವರ ಕೀರ್ತಿ ಹರಡುತ್ತಿದ್ದಂತೆ ಭಕ್ತವೃಂದವೂ ಬೆಳೆಯತೊಡಗಿತು. ॥84॥ ಸಾಯಿಗೆ ಸಂಗದ ಅವಶ್ಯಕತೆಯಿಲ್ಲದಿದ್ದರೂ ದಿನವೆಲ್ಲ ಭಕ್ತಪರಿವಾರದಿಂದ ಸುತ್ತುವರೆದಿರುತ್ತಿದ್ದರು. ಆದರೆ ಸೂರ್ಯಾಸ್ತದನಂತರ ತಮ್ಮ ಶಿಥಿಲವಾದ ಮಸೀದಿಯಲ್ಲಿ ವಿಶ್ರಮಿಸುತ್ತಿದ್ದರು. ॥85॥ ತಂಬಾಕಿನ ಚಿಲುಮೆ ಮತ್ತು ಒಂದು ಲೋಟ, ಜೊತೆಗೆ ಒಂದು ಸಟಕಾವನ್ನು ಯಾವಾಗಲೂ ತಮ್ಮೊಡನೆ ಇಟ್ಟುಕೊಳ್ಳುತ್ತಿದ್ದರು. ಮೊಣಕಾಲಿನವರೆಗಿನ ಒಂದು ಕಫನಿಯನ್ನು ಧರಿಸಿ ತಲೆಯ ಸುತ್ತ ಒಂದು ಬಿಳಿಯ ವಸ್ತ್ರವನ್ನು ಸುತ್ತಿಕೊಂಡಿರುತ್ತಿದ್ದರು. ॥86॥ ಆ ಒಗೆದ ವಸ್ತ್ರವನ್ನು ತಮ್ಮ ಎಡ ಕಿವಿಯ ಹಿಂದೆ ಕಲಾತ್ಮಕವಾಗಿ ಕೂದಲಿಗೆ ಗಂಟುಹಾಕಿ ಇಳಿಬಿಡುತ್ತಿದ್ದರು. ॥87॥ ಈ ರೀತಿ ಅವರ ಉಡುಪು ಇರುತ್ತಿತ್ತು. ಕೆಲವೊಮ್ಮೆ ಎಂಟು ದಿನಗಳವರೆಗೆ ಸ್ನಾನ ಮಾಡದೆ ಬರಿಗಾಲಲ್ಲಿ ಓಡಾಡುತ್ತಿದ್ದರು. ಅವರು ಕೇವಲ ಒಂದು ಗೋಣಿಚೀಲದ ಮೇಲೆ ಕುಳಿತಿರುತ್ತಿದ್ದರು. ॥88॥ ಅವರ ಆಸನವು ಸದಾ ಒಂದು ಚೀಲದ ತುಂಡು. ಅವರಿಗೆ ಮೆತ್ತನೆಯ ಒರಗುದಿಂಬು ಏನೆಂಬುದು ತಿಳಿದಿರಲಿಲ್ಲ. ಅವರಿಗೆ ಹಾಸಿಗೆ, ಆಡಂಬರಗಳು ಇರಲು ಹೇಗೆ ಸಾಧ್ಯ? ॥89॥ ಆ ದಿನಗಳಲ್ಲಿ, ಒಂದು ಹಳೆಯ ಚೀಲದ ತುಂಡು ಅವರ ಪ್ರೀತಿಪಾತ್ರ ಆಸನವಾಗಿತ್ತು, ಅದು 24 ಗಂಟೆಗಳೂ ಅಲ್ಲಿಯೇ ಇರುತ್ತಿತ್ತು. ॥90॥ ಅದೊಂದೇ ಅವರ ಆಸನ ಮತ್ತು ಹಾಸಿಗೆ. ಅವರು ಕೌಪೀನವನ್ನು[21] ಸೊಂಟಕ್ಕೆ ಬಿಗಿದಿರುತ್ತಿದ್ದರು. ಮತ್ತಾವುದೇ ಉಡುಪು ಇರಲಿಲ್ಲ, ಚಳಿಯನ್ನು ಓಡಿಸಲು ಕೇವಲ ಒಂದು ಧುನಿ ಇತ್ತು. ॥91॥ ಬಾಬಾರವರು ದಕ್ಷಿಣಾಭಿಮುಖವಾಗಿ ಎರಡು ಕಾಲುಗಳನ್ನೂ ಮಡಚಿ ಪದ್ಮಾಸನದಲ್ಲಿ ಕುಳಿತು ಎಡಗೈಯನ್ನು ಮಸೀದಿಯ ಕಟಕಟೆಯ ಮೇಲಿಟ್ಟು ಮುಂದಿರುವ ಧುನಿಯನ್ನು ತೀವ್ರವಾಗಿ ದೃಷ್ಟಿಸುತ್ತಿರುತ್ತಿದ್ದರು. ॥92॥ ಅಹಂಕಾರ ಮತ್ತು ವಾಸನೆಗಳ ಜೊತೆಗೆ ಎಲ್ಲಾ ರೀತಿಯ ಆಸೆಗಳನ್ನು ಆಹುತಿಯಾಗಿ ಕೊಡುತ್ತಿದ್ದರು. ಸಾಂಸಾರಿಕ ಲೋಭ ಪ್ರವೃತ್ತಿಗಳನ್ನು ಬೇರೆ ಬೇರೆ ರೀತಿಯಲ್ಲಿ ಧುನಿಗೆ ಆಹುತಿ ನೀಡುತ್ತಿದ್ದರು. ॥93॥ ಈ ರೀತಿಯಲ್ಲಿ, ಅವರು ಜ್ಞಾನದ ಅಹಂಕಾರವನ್ನು ಪ್ರಜ್ವಲಿಸುತ್ತಿರುವ ಅಗ್ನಿಗೆ ಸಮರ್ಪಿಸಿ 'ಅಲ್ಲಾ ಮಾಲಿಕ್' ಎಂದು

ಪುನಶ್ಚರಣೆ ಮಾಡುತ್ತ ಪರಮಾತ್ಮನ ನಾಮ ಪತಾಕೆಯನ್ನು ಅತಿ ಎತ್ತರದಲ್ಲಿ ಹಾರಿಸುತ್ತಿದ್ದರು. ॥94॥ ಆ ಮಸೀದಿಯು ಎಷ್ಟು ದೊಡ್ಡದಾಗಿತ್ತು? ಎಲ್ಲಾ ಜಾಗವನ್ನು ಸೇರಿಸಿದರೂ ಎರಡು ಕೋಣೆಗಳಷ್ಟು[22] ಇದ್ದು ಅಲ್ಲಿ ಅವರು ಕುಳಿತು, ವಾಸಮಾಡಿ, ನಿದ್ರಿಸುತ್ತಿದ್ದರು ಮತ್ತು ಎಲ್ಲರಿಗೂ ಸಂದರ್ಶನ ನೀಡುತ್ತಿದ್ದರು. ॥95॥ ಹಾಸಿಗೆ, ಮೆತ್ತನೆಯ ದಿಂಬು ಇವು ಇತ್ತೀಚಿನವುಗಳು. ಭಕ್ತರು ಅವರ ಸುತ್ತುವರೆದಿದ್ದಾಗ ಇದ್ದುದು. ಮೊದಲಿನ ದಿನಗಳಲ್ಲಿ ಯಾರೂ ಧೈರ್ಯವಾಗಿ ಅವರ ಹತ್ತಿರ ಹೋಗುತ್ತಿರಲಿಲ್ಲ. ॥96॥ ಸನ್ 1912 ಇಸವಿಯ ನಂತರ ಈ ಬದಲಾವಣೆ ಬಂದಿತು. ಮಸೀದಿಯ ಜೀರ್ಣೋದ್ಧಾರದ ಕೆಲಸವೂ ಆನಂತರವಷ್ಟೇ ಪ್ರಾರಂಭವಾಯಿತು. ॥97॥ ಮಸೀದಿಯ ನೆಲದಲ್ಲಿ ಮೊಳಕಾಲುದ್ದದ ಹಳ್ಳಗಳಿದ್ದವು. ಆದರೆ, ಭಕ್ತರ ಶ್ರದ್ಧಾಭಕ್ತಿಗಳಿಂದ ನೆಲವನ್ನು ಸಮತಟ್ಟುಮಾಡಿ ಶಹಬಾದಿ ಕಲ್ಲುಚಪ್ಪಡಿಗಳನ್ನು ಹಾಸಲಾಯಿತು॥98॥ ಮಸೀದಿಗೆ ಸ್ಥಳಾಂತರಮಾಡುವ ಮೊದಲು ಬಾಬಾರವರು ಟಾಕಿಯಾದಲ್ಲಿರುತ್ತಿದ್ದರು.[23] ಅಲ್ಲಿ, ಬಹಳ ಸಮಯ ಶಾಂತರಾಗಿ, ಯಾರಿಂದಲೂ ತೊಂದರೆಗೊಳಗಾಗದೆ ಅಲ್ಲಿದ್ದರು. ॥99॥ ಇಲ್ಲಿ ಕಾಲಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು ಮನೋಹರವಾಗಿ ನಾಟ್ಯಮಾಡುತ್ತಿದ್ದರು. ಭಕ್ತಿಯಿಂದ ಮಧುರವಾಗಿ ಹಾಡುತ್ತಿದ್ದರು. ಜೊತೆಗೆ ತಂಬೂರಿಯ ಶೃತಿಯೂ ಇರುತ್ತಿತ್ತು. ॥100॥ ಮೊದಲ ದಿನಗಳಲ್ಲಿ ಸಾಯಿ ಸಮರ್ಥರು ಎಣ್ಣೆಯಿಂದ ದೀಪ ಉರಿಸಲು ಇಷ್ಟಪಡುತ್ತಿದ್ದರು. ಅದಕ್ಕಾಗಿ ಅವರು ಸ್ವತಃ ಅಂಗಡಿಗಳಿಗೆ ಹೋಗಿ ಎಣ್ಣೆಯನ್ನು ಬೇಡುತ್ತಿದ್ದರು. ॥101॥ ಕೈಯಲ್ಲಿ ಒಂದು ಲೋಟದ ತರಹದ ಕುಡಿಯುವ ಪಾತ್ರೆಯನ್ನು ಹಿಡಿದು ಎಣ್ಣೆಗಾಗಿ ದಿನಸಿ ಅಂಗಡಿಯವರನ್ನು ಮತ್ತು ಎಣ್ಣೆ ಅಂಗಡಿಯವರನ್ನು ಬೇಡುತ್ತಿದ್ದರು. ಅದನ್ನು ತಂದು ಮಣ್ಣಿನ ಹಣತೆಯಲ್ಲಿ ತುಂಬಿಸುತ್ತಿದ್ದರು. ॥102॥ ಅವರು ಮಂದಿರಗಳಲ್ಲಿ ಮತ್ತು ಮಸೀದಿಗಳಲ್ಲಿ ದೀಪವನ್ನು ಉರಿಸುತ್ತಿದ್ದರು. ಇದು ಕೆಲವು ಸಮಯದವರೆಗೆ ಮುಂದುವರೆಯಿತು. ॥103॥ ದೀಪಾರಾಧನೆಯ ಬಗ್ಗೆ ಇದ್ದ ಒಲವಿನಿಂದಾಗಿ ದೀಪಾವಳಿಯನ್ನು ಬೆಳಕಿನಿಂದ ಆಚರಿಸುತ್ತಿದ್ದರು. ಹಗ್ಗವನ್ನು ಬತ್ತಿಯಾಗಿ ಹೊಸೆದು ಮಸೀದಿಯಲ್ಲಿ ದೀಪಗಳನ್ನು ಪ್ರಜ್ವಲಿಸುತ್ತಿದ್ದರು. ॥104॥ ಅವರು ಪ್ರತಿನಿತ್ಯವೂ ಎಣ್ಣೆಯನ್ನು ಉಚಿತವಾಗಿ ತರುತ್ತಿದ್ದರು. ಆದ್ದರಿಂದ ಒಮ್ಮೆ ಎಣ್ಣೆ ವ್ಯಾಪಾರಿಗಳೆಲ್ಲರೂ ಅವರಿಗೆ ತಿರುಗಿಬಿದ್ದು ಈ ಉಪದ್ರವವನ್ನು ತಪ್ಪಿಸಬೇಕೆಂದು ಪಿತೂರಿ ನಡೆಸಿದರು. ॥105॥ ಅನಂತರ, ಬಾಬಾರವರು ನಿತ್ಯದಂತೆ ಎಣ್ಣೆಯನ್ನು ಕೇಳಲು ಹೋದಾಗ, ಎಲ್ಲರೂ ನಿರಾಕರಿಸಿದಾಗ ಎಂತಹ ಸೋಜಿಗ ನಡೆಯಿತೆಂದು ನೋಡಿ. ॥106॥ ಬಾಬಾರವರು ಒಂದು ಮಾತನ್ನೂ ಆಡದೆ ಹಿಂತಿರುಗಿದರು. ಹಸಿ ಬತ್ತಿಯನ್ನು ಹಣತೆಗಳಲ್ಲಿಟ್ಟರು. ಎಣ್ಣೆ ಇಲ್ಲದಿದ್ದಾಗ ಅವರು ಏನು ಮಾಡಲು ಸಾಧ್ಯ? ಎಣ್ಣೆ ವ್ಯಾಪಾರಿಗಳು ಈ ತಮಾಷೆಯನ್ನು ನೋಡಲು ಕಾತರತೆಯಿಂದ ಕಾದರು. ॥107॥ ಬಾಬಾರವರು ಮಸೀದಿಯ ದಿಡ್ಡಿ ಗೋಡೆಯಮೇಲಿದ್ದ ಒಂದು ಮಡಕೆಯನ್ನು ತೆಗೆದುಕೊಂಡರು. ಅದರಲ್ಲಿ ಸ್ವಲ್ಪವೇ ಎಣ್ಣೆ (ಸಂಜೆ ದೀಪಹಚ್ಚಲೂ ಸಾಕಾಗದಷ್ಟು) ಇತ್ತು. ॥108॥ ನಂತರ ಆ ಎಣ್ಣೆಗೆ ನೀರನ್ನು ಹಾಕಿ ಬಾಬಾರವರು ಸ್ವಲ್ಪ ಕುಡಿದರು.

ಈ ರೀತಿ ಪರಬ್ರಹ್ಮನಿಗೆ ಸಮರ್ಪಿಸಿ ಸ್ವಲ್ಪ ಶುದ್ಧವಾದ ನೀರನ್ನು ತೆಗೆದುಕೊಂಡರು. ॥109॥ ನಂತರ ಆ ನೀರನ್ನು ಹಣತೆಗಳಿಗೆಲ್ಲಾ ಹಾಕಿದರು. ಒಣ ಬತ್ತಿಗಳನ್ನು ಪೂರ್ತಿ ನೆನೆಸಿದರು. ಬೆಂಕಿ ಕಡ್ಡಿಗಳಿಂದ ಎಲ್ಲಾ ದೀಪಗಳನ್ನೂ ಎಲ್ಲರಿಗೂ ಕಾಣುವಂತೆ ಉರಿಸಿದರು. ॥110॥ ನೀರಿನಲ್ಲಿ ದೀಪಗಳು ಉರಿಯುತ್ತಿರುವುದನ್ನು ನೋಡಿ ಆ ವ್ಯಾಪಾರಿಗಳು, ವರ್ತಕರು ನಿಬ್ಬೆರಗಾದರು. ಅವರಿಗೆ ತಮ್ಮ ಮೇಲೆಯೇ ಬಾಬಾರವರಿಗೆ ಸುಳ್ಳು ಹೇಳಿದ್ದಕ್ಕಾಗಿ ಜಿಗುಪ್ಸೆ ಉಂಟಾಯಿತು. ॥111॥ ಒಂದು ತೊಟ್ಟು ಎಣ್ಣೆ ಇಲ್ಲದಿದ್ದರೂ ದೀಪಗಳು ಇಡೀ ರಾತ್ರಿಯೆಲ್ಲಾ ಪ್ರಜ್ವಲಿಸಿದವು. ವರ್ತಕರು ಸಾಯಿಕೃಪೆಯನ್ನು ಕಳೆದುಕೊಂಡರೆಂದು ಜನರು ಟೀಕೆ ಮಾಡಲು ಪ್ರಾರಂಭಿಸಿದರು. ॥112॥ ವ್ಯಾಪಾರಿಗಳು ಬಾಬಾರವರನ್ನು ಕಾರಣವಿಲ್ಲದೆ ಕಾತರಗೊಳಿಸಿ ಕಾಡಿದ್ದಕ್ಕಾಗಿ ಪಶ್ಚಾತ್ತಾಪಪಟ್ಟರು. ಸುಳ್ಳು ಹೇಳಿದ ಪಾಪಕ್ಕೊಳಗಾದರು. ಬಾಬಾರವರ ಶಕ್ತಿ ಎಷ್ಟು ಅಪರಿಮಿತವಾದದ್ದು ಎಂದು ಊಹಿಸಿದರು. ॥113॥ ಬಾಬಾರವರು ಇದರ ಬಗ್ಗೆ ಯಾವಾಗಲೂ ಯೋಚಿಸಲೇ ಇಲ್ಲ. ಅವರಿಗೆ ಯಾರ ಮೇಲೆಯೂ ಕೋಪ, ದ್ವೇಷಗಳಿರಲಿಲ್ಲ. ಅವರಿಗೆ ಹಿತರಾಗಲೀ, ಬಂಧುಗಳಾಗಲೀ ಇರಲಿಲ್ಲ. ಅವರಿಗೆ ಎಲ್ಲ ಜೀವಿಗಳಲ್ಲೂ ಸಮ ಭಾವವಿತ್ತು. ॥114॥ ಅದು ಹಾಗಿರಲಿ. ನಾವು ಹಿಂದಿನ ಘಟನೆಯ ಬಗ್ಗೆ ಮುಂದುವರೆಸೋಣ. ಕುಸ್ತಿಯಲ್ಲಿ ಮೊಹಿದ್ದೀನನು ಜಯಗಳಿಸಿದನು. ಅನಂತರದ ಚರಿತ್ರೆ ಬಹಳ ಕುತೂಹಲಕಾರಿಯಾಗಿದೆ. ದಯಮಾಡಿ ಗಮನವಿಟ್ಟು ಆಲಿಸಿರಿ. ॥115॥ ಕುಸ್ತಿಯ ಆಟದ ಐದು ವರ್ಷಗಳ ನಂತರ, ಅಹಮದ್‌ನಗರವಾಸಿಯಾದ ಜವಹರ್ ಆಲಿ ಎಂಬ ಫಕೀರನು ತನ್ನ ಶಿಷ್ಯರೊಡನೆ ರಾಹತಾದಲ್ಲಿ ನೆಲಸಲು ಬಂದನು. ॥116॥ ವೀರಭದ್ರ ದೇವಸ್ಥಾನದ ಹತ್ತಿರ ಇದ್ದ ಬಯಲು ಪ್ರದೇಶದಲ್ಲಿ ಫಕೀರನು ಮೊಕ್ಕಾಮು ಹೂಡಿದನು. ಆ ಫಕೀರನು ಬಹಳ ಅದೃಷ್ಟವಂತನು. ॥117॥ ಅವನು ಭಾಗ್ಯವಂತನಲ್ಲದಿದ್ದಲ್ಲಿ ಸಾಯಿಯಂತಹ ಮಹಾನ್ ಶಿಷ್ಯನನ್ನು ಹೇಗೆ ಪಡೆಯುತ್ತಿದ್ದ? ಸಾಯಿಯ ಪ್ರಖ್ಯಾತಿ ಈಗಾಗಲೇ ಹರಡಿತ್ತು. ॥118॥ ಆ ಹಳ್ಳಿಯಲ್ಲಿ ಅನೇಕ ತರಹದ ಜನರಿದ್ದರು. ಅವರಲ್ಲಿ ಕೆಲವರು ಮರಾಠಿಗಳೂ ಇದ್ದರು. ಅವರಲ್ಲೊಬ್ಬನು ಭಾಗು ಸದಾಫಲ್ ಅವರ ಸೇವಕನಾಗಿ ಬಂದನು. ॥119॥ ಫಕೀರನು ಒಬ್ಬ ಮಹಾನ್ ಪಂಡಿತನು. ಖುರಾನ್ ಶರೀಫ್[24] ಅವನಿಗೆ ಕರತಲಾಮಲಕವಾಗಿತ್ತು. ಅನೇಕ ಸ್ವಾರ್ಥಪರರು, ನಿಜವಾದ ಭಕ್ತರು, ಪರಮಾರ್ಥ[25] ಇಚ್ಛಿಸುವವರು ಎಲ್ಲರೂ ಒಂದೇ ತರಹ ಅವನನ್ನು ಆರಾಧಿಸುತ್ತಿದ್ದರು. ॥120॥ ಅವನು ಈದ್‌ಗಾವನ್ನು[26] ಕಟ್ಟಲು ಪ್ರಾರಂಭಿಸಿದನು. ಕೆಲವು ಕಾಲಾನಂತರ, ಅವನು ವೀರಭದ್ರಸ್ವಾಮಿಯನ್ನು ಅಪವಿತ್ರಗೊಳಿಸಿದನೆಂಬ ಆಪಾದನೆಗೆ ಗುರಿಯಾದನು. ॥121॥ ಅಲ್ಲಿಗೆ ಈದ್‌ಗಾ ನಿರ್ಮಾಣ ನಿಂತಿತು. ಫಕೀರನನ್ನು ಹಳ್ಳಿಯಿಂದ ಹೊರಗೆ ಓಡಿಸಲಾಯಿತು. ಅಲ್ಲಿಂದ ಅವನು ಶಿರಡಿಗೆ ಬಂದು ಬಾಬಾರೊಡನೆ ಮಸೀದಿಯಲ್ಲಿ ವಾಸಮಾಡಿದನು. ॥122॥ ಫಕೀರನು ಮಧುರಭಾಷಿಯಾಗಿದ್ದನು. ಇಡೀ ಹಳ್ಳಿಯೇ ಅವನನ್ನು ಪೂಜಿಸಲಾರಂಭಿಸಿತು. ಬಾಬಾರವರೊಡನೆ ಅವನು ವರ್ತಿಸಿದ ರೀತಿಯನ್ನು ನೋಡಿ ಜನರು ಅವನು ಬಾಬಾರವರನ್ನು ವಶೀಕರಿಸಿಕೊಂಡಿದ್ದಾನೆಂದೇ

ಭಾವಿಸಿದರು. ॥123॥ "ನೀನು ನನ್ನ ಶಿಷ್ಯನಾಗಿರು" ಎಂದು ಫಕೀರನು ಹೇಳಿದನು. ಬಾಬಾರವರು ಲೀಲಾ ವಿನೋದದಿಂದ ಒಪ್ಪಿದರು. ಫಕೀರನು ಸಂತೋಷದಿಂದ ಬಾಬಾರವರನ್ನು ತನ್ನೊಡನೆ ಕರೆದೊಯ್ದನು. ॥124॥ ಅವನಿಗೆ ಬಾಬಾರಂತಹ ವಿಧೇಯ ಶಿಷ್ಯ ದೊರಕಿದರು. ಜವಹರ್ ಅಲಿ ಗುರುವಾದನು. ಇಬ್ಬರೂ ಒಟ್ಟಿಗೆ ರಾಹತಾದಲ್ಲಿ ವಾಸಮಾಡಲು ನಿಶ್ಚಯಿಸಿದರು. ॥125॥ ಗುರುವಿಗೆ ಶಿಷ್ಯನ ಪಾಂಡಿತ್ಯದ ಅರಿವಿರಲಿಲ್ಲ. ಆದರೆ ಶಿಷ್ಯನಿಗೆ ಗುರುವಿನ ನ್ಯೂನತೆಗಳು ತಿಳಿದಿದ್ದುವು. ಆದರೂ ಅವರು ಎಂದಿಗೂ ಅಗೌರವವನ್ನು ವ್ಯಕ್ತಪಡಿಸಲಿಲ್ಲ, ಶಿಷ್ಯಕರ್ತವ್ಯವನ್ನು ನೆರವೇರಿಸಿದರು. ॥126॥ ಗುರುವಿನ ಆಜ್ಞೆಯನ್ನು ಎಂದಿಗೂ ವಿಮರ್ಶಕವಾಗಿ ಆಲೋಚಿಸಲಿಲ್ಲ. ಅವುಗಳನ್ನು ಕೂಲಂಕಶವಾಗಿ ನೆರವೇರಿಸಿದರು. ಅವರು ಗುರುವಿಗೆ ನೀರು ಹೊತ್ತುಕೊಂಡು ಬರುವಂತಹ ಕೆಲಸದಾಳು ಮಾಡುವ ಕೆಲಸಗಳನ್ನೂ ಮಾಡುತ್ತಿದ್ದರು. ॥127॥ ಈ ರೀತಿ ಗುರುವಿನ ಶುಶ್ರೂಷೆ ಮುಂದುವರಿಯಿತು. ಶಿರಡಿಯ ಭೇಟಿ ವಿರಳವಾಯಿತು. ಈ ರೀತಿ ನಡೆದಾಗ ಮುಂದೇನಾಯಿತೆಂದು ಹೇಳುವೆನು. ॥128॥ ಸ್ವಲ್ಪ ಸಮಯ ಇದು ನಡೆಯಿತು. ಅವರು ರಾಹತಾದಲ್ಲೇ ವಾಸಮಾಡಲು ಪ್ರಾರಂಭಿಸಿದರು. ಅವರು ಪೂರ್ಣವಾಗಿ ಶಿರಡಿಯನ್ನು ತೊರೆದು ಫಕೀರನ ಅಧೀನರಾದರು ಜನರು ಯೋಚಿಸಿದರು. ॥129॥ ಜವಹರ್ ಅಲಿಯು ತನ್ನ ಯೋಗಶಕ್ತಿಯಿಂದ ಸಾಯಿಯನ್ನು ಪೂರ್ಣವಾಗಿ ವಶಪಡಿಸಿಕೊಂಡಿರುವನೆಂದು ಜನರು ಯೋಚಿಸಿದರು. ಆದರೆ ಸಾಯಿಯ ದೃಷ್ಟಿಕೋನ ಬೇರೇ ಇತ್ತು. ಅವರು ದೇಹಾಭಿಮಾನವನ್ನು ನಾಶಮಾಡಲು ಇಚ್ಛಿಸಿದ್ದರು. ॥130॥ ಜನರು ಊಹಿಸಿದರು, "ಸಾಯಿಗೆ ಅಭಿಮಾನವಾದರೂ ಎಲ್ಲಿತ್ತು?" ಆದರೆ ಈ ವರ್ತನೆ ಜನರಿಗಾಗಿ ಒಂದು ಉದಾಹರಣೆಯಾಗಿ ನಿರೂಪಿಸಲು ಆಗಿತ್ತು, ಇದೇ ಅವತಾರದ ನಿಜವಾದ ಉದ್ದೇಶ. ॥131॥ ಶಿರಡಿಯಲ್ಲಿ ಬಾಬಾರವರನ್ನು ಪ್ರೀತಿಸುವ ಅನೇಕ ಭಕ್ತರಿದ್ದರು. ಅವರು ಬಾಬಾರವರಲ್ಲಿ ಆಸಕ್ತರಾಗಿದ್ದರು. ಬಾಬಾರವರಿಂದ ದೂರ ಇರುವುದು ನ್ಯಾಯಸಮ್ಮತವಲ್ಲ ಎಂದು ಆಲೋಚಿಸಿದರು. ॥132॥ ಆದರೆ ಸಾಯಿಯಾದರೋ ಜವಹರ್ ಅಲಿಗೆ ಸಂಪೂರ್ಣವಾಗಿ ಶರಣಾಗಿದ್ದರು. ಈ ಪರಿಸ್ಥಿತಿಯನ್ನು ಕಂಡ ಹಳ್ಳಿಯವರು ಅತಿಯಾಗಿ ನೊಂದುಕೊಂಡರು. ಅವರು ಬಾಬಾರವರನ್ನು ಹಿಂದಕ್ಕೆ ಪಡೆಯುವ ಬಗ್ಗೆ ಗಂಭೀರವಾಗಿ ವಿಚಾರಮಾಡಲಾರಂಭಿಸಿದರು. ॥133॥ ಚಿನ್ನದ ಜೊತೆಯಲ್ಲಿಯೇ ಅದರ ಹೊಳಪು, ದೀಪದ ಜೊತೆಯಲ್ಲಿಯೇ ಅದರ ಪ್ರಕಾಶ ಇರುವ ರೀತಿಯಲ್ಲಿ ಗುರುಶಿಷ್ಯರ ಅವಿನಾಭಾವ ಸಂಬಂಧ ಇರುತ್ತದೆ. ॥134॥ ಭಕ್ತರ ಗುಂಪೊಂದು ಶಿರಡಿಯಿಂದ ರಾಹತಾಗೆ ಹೋಯಿತು. ಅಲ್ಲಿ ಈದ್ಗಾ ಹತ್ತಿರ ಇದ್ದ ಬಾಬಾರವರನ್ನು ಒಪ್ಪಿಸಿ ತಮ್ಮೊಡನೆ ಕರೆದೊಯ್ಯುವ ಪ್ರಯತ್ನ ಮಾಡಲು ಬಂದರು. ॥135॥ ಆದರೆ ಬಾಬಾರವರು ತದ್ವಿರುದ್ಧವಾಗಿ ಹೇಳಿದರು. "ಫಕೀರನು ಬಹಳ ಮುಂಗೋಪಿ. ಅವನೊಡನೆ ಅಷ್ಟ ಮಾತನಾಡಬೇಡಿ. ಅವನು ನನ್ನನ್ನೆಂದಿಗೂ ಬಿಡುವುದಿಲ್ಲ. ॥136॥ "ನೀವು ಇಲ್ಲಿಂದ ಹೊರಟರೆ ಒಳ್ಳೆಯದು. ಯಾವ ಕ್ಷಣವಾದರೂ ಅವನು ಹಳ್ಳಿಯಿಂದ ಹಿಂತಿರುಗಬಹುದು. ಅವನು

ನಿಮ್ಮನ್ನು ಬೈಯುತ್ತಾನೆ. ಅವನ ಕ್ರೋಧ ಅತಿ ಭಯಂಕರ. ॥137॥ "ಅವನು ಹಿಂತಿರುಗಿದ ಕೂಡಲೇ ಕೋಪದಿಂದ ಕೆಂಡಾಮಂಡಲವಾಗುತ್ತಾನೆ. ಅವನ ಕೋಪ ಅತಿ ಭಯಂಕರ. ಓಹ್! ನೀವು ಕೂಡಲೇ ಹೊರಡಿ. ಶಿರಡಿಯ ಮಾರ್ಗ ಹಿಡಿಯಿರಿ." ॥137॥ ಈಗ ಯಾವ ತಿರುವು ತೆಗೆದುಕೊಳ್ಳುತ್ತದೆ? ಬಾಬಾರವರು ವಿರುದ್ಧವಾದ ದೃಷ್ಟಿಕೋನವನ್ನು ಪ್ರಕಟಿಸಿದರು. ಆ ಕೂಡಲೇ ಫಕೀರನು ಅನಿರೀಕ್ಷಿತವಾಗಿ ಹಿಂತಿರುಗಿದನು ಮತ್ತು ಅವರನ್ನು ಈ ರೀತಿ ಪ್ರಶ್ನಿಸಿದನು. ॥138॥ "ನೀವು ಈ ಯುವಕನಿಗಾಗಿ ಬಂದಿರಾ? ಇಲ್ಲಿ ಏನು ಮಾಡುತ್ತಿದ್ದೀರಿ? ಅವನನ್ನು ಶಿರಡಿಗೆ ಕರೆದೊಯ್ಯುವ ಚಿತ್ತವಿತ್ತೇನು? ಆದರೆ ಆ ತೊಂದರೆ ತೆಗೆದುಕೊಳ್ಳಬೇಡಿ." ॥139॥ ಮೊದಲು ಈ ರೀತಿ ಮಾತನಾಡಿದ್ದರೂ, ಅವನು ಹಳ್ಳಿಗರ ಒತ್ತಾಯಕ್ಕೆ ಮಣಿದು ಹೇಳಿದನು – "ನನ್ನನ್ನೂ ಹಳ್ಳಿಗೆ ಏಕೆ ಕರೆದೊಯ್ಯಬಾರದು? ನಾವು ಈ ತರುಣನನ್ನೂ ನಮ್ಮ ಜೊತೆಗೆ ಕರೆತರುತ್ತೇವೆ." ॥140॥ ಹಾಗೆ ಫಕೀರನು ಅವರ ಜೊತೆಯಲ್ಲಿ ಹೊರಟನು. ಅವನು ಬಾಬಾರವರನ್ನು ಬಿಡಲಿಲ್ಲ ಮತ್ತು ಬಾಬಾರವರೂ ಅವನನ್ನು ಬಿಡಲಾಗಲಿಲ್ಲ. ಈ ರೀತಿ ಹೇಗೆ ಆಯಿತೆಂದು ಯಾರಿಗೂ ತಿಳಿಯಲಿಲ್ಲ. ॥141॥ ಸಾಯಿಯು ಸಾಕ್ಷಾತ್ ಪರಬ್ರಹ್ಮನ ಅವತಾರ. ಆದರೆ ಜವಹರ್ ಅಲಿಯು ಒಬ್ಬ ನಕಲಿ ವೇಷಧಾರಿ. ದೇವೀದಾಸನು ಅವನನ್ನು ಪರೀಕ್ಷಿಸಿದನು. ಅದೇ ರೀತಿ ಶಿರಡಿಯಲ್ಲಿ ಬೆಕ್ಕು ಚೀಲದಿಂದ ಹೊರಗೆ ಬಂದಿತು. ॥142॥ ದೇವಿದಾಸನಿಗೆ ಒಳ್ಳೆಯ ದೇಹದಾರ್ಢ್ಯವಿತ್ತು, ಹೊಳೆಯುವ ಕಣ್ಣುಗಳು ಮತ್ತು ಆಕರ್ಷಕ ನೋಟ. ಅವನು ಶಿರಡಿಗೆ ಬಂದಾಗ 10–11 ವರ್ಷ ವಯಸ್ಸಿನವನಾಗಿದ್ದನು. ॥144॥ ಆ ಕೋಮಲ ಮನಸ್ಸಿನಲ್ಲಿ ಕೌಪೀನಧಾರಿಯಾಗಿ, ಯಾತ್ರಾರ್ಥಿಯಾಗಿ ಬಂದವನು ಮಾರುತಿದೇವಾಲಯದಲ್ಲಿ ನೆಲೆಸಿದನು. ॥145॥ ಅಪ್ಪ ಭಿಲ್ಲ ಮತ್ತು ಮ್ಹಾಳಸಾಪತಿಯವರು ನಿಯಮಿತವಾಗಿ ಅವನನ್ನು ಭೇಟಿಯಾಗುತ್ತಿದ್ದರು. ಕಾಶೀರಾಂ[27] ಮತ್ತಿತರರು ಅವನಿಗೆ ಭಿಕ್ಷೆ ನೀಡುತ್ತಿದ್ದರು. ಈ ರೀತಿ ಅವನ ಕೀರ್ತಿ ಹರಡಿತು. ॥146॥ ಬಾಬಾರವರು ಮದುವೆಯ ದಿಬ್ಬಣದ ಜೊತೆಯಲ್ಲಿ ಶಿರಡಿಗೆ ಬಂದ ಹನ್ನೆರಡು ವರ್ಷಗಳ ಮೊದಲು ದೇವೀದಾಸನು ಬಂದು ಶಿರಡಿಯಲ್ಲಿ ನೆಲೆಸಿದ್ದನು. ॥147॥ ಅಪ್ಪ ಭಿಲ್ಲನಿಗೆ ಬಳಪದ ಕಲ್ಲಿನ ಮೇಲೆ ಬರೆಯುತ್ತ ವೆಂಕಟೇಶ ಸೂತ್ರವನ್ನು ಕಲಿಸಲಾಯಿತು. ಎಲ್ಲರೂ ಬಾಯಿಪಾಠಮಾಡಿ ಕಲಿಯುವಂತಾಯಿತು. ಈ ಪಾಠಗಳನ್ನು ಕ್ರಮವಾಗಿ ಪ್ರತಿನಿತ್ಯ ಕಲಿಸಲಾಯಿತು. ॥148॥ ದೇವಿದಾಸನು ಮಹಾಜ್ಞಾನಿಯಾಗಿದ್ದನು. ತಾತ್ಯಾಬಾ[28] ಅವನನ್ನು ಗುರುವೆಂದು ಪರಿಗಣಿಸಿದ್ದನು. ಕಾಶೀನಾಥ ಮತ್ತಿತರರು ಅವನ ಪ್ರಮುಖ ಶಿಷ್ಯರಾದರು ಮತ್ತು ಅವನನ್ನು ಆರಾಧಿಸಿದರು. ॥149॥ ಫಕೀರ(ಜವಹರ್ ಅಲಿ)ನನ್ನು ದೇವೀದಾಸರ ಮುಂದೆ ಕರೆತರಲಾಯಿತು. ಶಾಸ್ತ್ರಗಳ ಬಗ್ಗೆ ವಾಗ್ವಾದವನ್ನು ಏರ್ಪಡಿಸಲಾಯಿತು. ಬೈರಾಗಿಯು (ದೇವೀದಾಸ) ಫಕೀರನನ್ನು ಸೋಲಿಸಿದನು. ಫಕೀರನನ್ನು ಅಲ್ಲಿಂದ ಓಡಿಸಲಾಯಿತು. ॥150॥ ಅವನು ಅಲ್ಲಿಂದ ಓಡಿಹೋದಮೇಲೆ, ವೈಜಾಪುರದಲ್ಲಿ ನೆಲೆಸಿದನು. ನಂತರ ಅನೇಕ ವರ್ಷಗಳ ನಂತರ ಹಿಂತಿರುಗಿ ಬಂದು ಸಾಯಿನಾಥರಿಗೆ

ಶರಣಾದನು. ॥151॥ ಈ ರೀತಿ 'ನಾನು ಗುರು ಮತ್ತು ಸಾಯಿಯು ಶಿಷ್ಯ'[29] ಎಂಬುದು ತಪ್ಪು ಎಂದು ತಿಳಿಯಿತು. ಬಾಬಾರವರು ಹಿಂದಿನಂತೆಯೇ
ಅವನನ್ನು ಸ್ವೀಕರಿಸಿದರು. ಅವನು ಪಶ್ಚಾತ್ತಾಪದಿಂದ ಪರಿಶುದ್ಧನಾಗಿದ್ದನು. ॥152॥ ಬಾಬಾರವರ ಲೀಲೆಗಳು ಈ ರೀತಿಯಾಗಿ ನಿಗೂಢ. ಫಕೀರನ
ಭ್ರಮೆ ದೂರವಾಗುವ ಕಾಲ ವಿಧಿವತ್ತಾಗಿ ಬರುವವರೆಗೆ ಸಾಯಿಯು ನಾಟಕವನ್ನಾಡಿದರು. ॥153॥ ಸಾಯಿನಾಥರು ಗುರುಶಿಷ್ಯರ ಸಂಬಂಧವನ್ನು
ತಾವೇ ಕಾರ್ಯರೂಪವಾಗಿ ತೋರಿಸಿ ಗೌರವಿಸಿದರು. ಅವರು ಅವನಿಗೆ ಗುರುವಿನ ಸ್ಥಾನಮಾನವನ್ನು ಅನುಭವಿಸಲು ಅನುವುಮಾಡಿಕೊಟ್ಟು
ತಾವು ಸ್ವತಃ ವಿದ್ಯಾರ್ಥಿ ಸ್ಥಾನವನ್ನು ಒಪ್ಪಿಕೊಂಡರು. ॥154॥ ನಾವು ಒಬ್ಬರಿಗಾಗಿ ಆಗಬೇಕು ಅಥವಾ ಮತ್ತೊಬ್ಬರು ನಮಗಾಗಿ. ಇದರಿಂದ ಬೇರೆ
ಯಾವುದೇ ಆದರೂ ಅದು ಸರಿಯಲ್ಲ. ಅದಿಲ್ಲದೆ ಭವಸಾಗರವನ್ನು ದಾಟಲು ಸಾಧ್ಯವಿಲ್ಲ. ॥155॥ ಅವರ ವರ್ತನೆಯಿಂದ ಈ ಪಾಠವನ್ನು ಮಾತ್ರ
ಕಲಿಯಬಹುದು. ಈ ರೀತಿಯ ಧೈರ್ಯ, ಆತ್ಮಸ್ಥೈರ್ಯ ಮತ್ತು ನಿರ್ಭಯತೆಗಳನ್ನು ನೋಡುವುದು ಅತಿದುರ್ಲಭ. ಈ ಉದಾಹರಣೆಯನ್ನು
ಅನುಸರಿಸುವವರು ನಿರಭಿಮಾನವನ್ನು ಪಡೆಯುವರು. ॥156॥ ಇಂತಹ ವಿಷಯಗಳಲ್ಲಿ ಸ್ವಬುದ್ಧಿ, ಚತುರತೆಗಳು ಕೆಲಸಕ್ಕೆ ಬರುವುದಿಲ್ಲ. ತನಗೆ
ಒಳ್ಳೆಯದಾಗಲೆಂದು ಬಯಸುವವನು ನಿರಭಿಮಾನಿಯಾಗಿ ವರ್ತಿಸಬೇಕು. ॥157॥ ದೇಹಾಭಿಮಾನವನ್ನು ಸುಟ್ಟಿರುವಂತಹ ಮಾನವನು ಮಾತ್ರವೇ
ತನ್ನ ದೇಹವನ್ನು ಸಾರ್ಥಕವಾಗಿ ಉಪಯೋಗಿಸಿರುತ್ತಾನೆ. ಪರಮಾರ್ಥವನ್ನು ಸಾಧಿಸಲು ಅವನು ಯಾರದಾದರೂ ಶಿಷ್ಯ ಅಥವಾ
ಹಿಂಬಾಲಕನಾಗಬಹುದು. ॥158॥ ಕಿರಿಯರು ಮತ್ತು ಹಿರಿಯರೆಲ್ಲರೂ ಒಬ್ಬ ಚಿಕ್ಕ ತರುಣ, ಸುಂದರ ಯುವಕನಲ್ಲಿನ ಮನಸ್ಸಿನ ಅಸಮಾನತೆಯ
ಸ್ಥಿತಿಯನ್ನು ನೋಡಿ ಅಚ್ಚರಿಗೊಂಡರು. ಜನರೆಲ್ಲರೂ ಅವನನ್ನು ಆರಾಧಿಸಿದರು ಮತ್ತು ಅಚ್ಚರಿಗೊಂಡರು. ॥159॥ ಆತ್ಮಜ್ಞಾನಿಯ ಕರ್ಮಗಳು
ಅವನ ಹಿಂದಿನ ಕರ್ಮಗಳ ಮೇಲೆ ಆಧಾರಿತವಾಗಿರುತ್ತವೆ. ಆದರೆ ಅವು ಯಾವುವೂ ಬಂಧನವಲ್ಲ. ಅವನು ನಿಜವಾಗಿ ಕರ್ತೃವೇ ಆಗುವುದಿಲ್ಲ.
॥160॥ ಸೂರ್ಯನು ಕತ್ತಲಲ್ಲಿ ನಿಲ್ಲಲಾರ. ಅದೇ ರೀತಿ ಜ್ಞಾನಿಯು ದ್ವೈತಭಾವದಲ್ಲಿ ನಿಲ್ಲಲಾರನು. ಅವನಿಗೆ ಇಡೀ ವಿಶ್ವವೇ ಅವನ ಸ್ವಸ್ವರೂಪವು.
ಅವನು ಅದ್ವೈತದಲ್ಲಿಯೇ ನೆಲಸಿರುತ್ತಾನೆ. ॥161॥ ಈ ಗುರು ಶಿಷ್ಯರ ಚರಿತ್ರೆಯನ್ನು ಸಾಯಿನಾಥರ ಪರಮಭಕ್ತಮ್ಹಾಳಸಾಪತಿಯವರು ತಿಳಿಸಿರುತ್ತಾರೆ.
ಅದನ್ನು ಮೊದಲಿನಿಂದ ಕೊನೆಯವರೆಗೆ ನಾನು ಅವರಿಂದ ಕೇಳಿದಂತೆ ತಿಳಿಸಿರುತ್ತೇನೆ. ॥162॥ ಈ ಚರಿತ್ರೆಯನ್ನು ಈಗ ಮುಗಿಸೋಣ. ಮುಂದಿನದು
ಇನ್ನೂ ಹೆಚ್ಚು ಗಾಢಪ್ರಜ್ಞೆಯುಳ್ಳದ್ದು. ಅದನ್ನು ಅನುಕ್ರಮಾನುಸಾರ ತಿಳಿಸುತ್ತೇನೆ. ದಯಮಾಡಿ ಗಮನವಿಟ್ಟು ಕೇಳಿರಿ. ॥163॥ ಮಸೀದಿಯ
ಪೂರ್ವಸ್ಥಿತಿ ಯಾವ ರೀತಿ ಇತ್ತು, ಅದನ್ನು ಎಷ್ಟು ಶ್ರಮವಹಿಸಿ ಸಮತಟ್ಟು ಮಾಡಿದರು. ಸಾಯಿಯು ಹಿಂದುವೋ ಮುಸ್ಲಿಮನೋ ಯಾರಿಗೂ
ನಿಖರವಾಗಿ ತಿಳಿದಿಲ್ಲ. ॥164॥ ಮುಂದಿನ ಅಧ್ಯಾಯದಲ್ಲಿ ಅನುಕ್ರಮವಾಗಿ ಈ ವಿವರಗಳು ತಿಳಿಸಲ್ಪಟ್ಟಿವೆ. ಬಾಬಾರವರ ಯೋಗಶಕ್ತಿಯಲ್ಲಿ ಧೂತಿಪೋಟಿ

ಮತ್ತು ಋಣಸಂಯೋಗ[31] ಮತ್ತು ಭಕ್ತರ ಕರ್ಮಫಲಗಳನ್ನು, ತಾವು ಸ್ವೀಕಾರಮಾಡಿರುವ ಬಗ್ಗೆ. ॥165॥ ಹೇಮಾಡನು ಸಾಯಿಗೆ ಶರಣಾಗುತ್ತಾನೆ. ಈ ಕಥಾಚರಿತ್ರೆಯ ವಿವರಣೆಯು ಅವನ ಅನುಗ್ರಹದಿಂದ ಮಾತ್ರ, ಇಂತಹ ಪುಣ್ಯಕರ ಮತ್ತು ಪವಿತ್ರ ಕಥೆಯು ಅಜ್ಞಾನವನ್ನು ದೂರಮಾಡುತ್ತದೆ. ॥166॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿಯ ಪುನರ್ದರ್ಶನ" ಎಂಬ ಐದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಮದುವೆ ದಿಬ್ಬಣ, ಮೆರವಣಿಗೆಯಲ್ಲಿ ಗಂಡಿನ ಅಥವಾ ಹೆಣ್ಣಿನ ಮನೆಗೆ ಹೋಗುವುದು.
2. ಒಂದು ಕೋಸ – ಸುಮಾರು ನೂರು ಮೈಲುಗಳು.
3. ಸಂನ್ಯಾಸಿ.
4. ಹುಕ್ಕ ಸೇದುವ ಪಾತ್ರೆ – ತಂಬಾಕು ಹಾಕುವುದಕ್ಕಾಗಿ.
5. ಬೇಟನ್ – ಸಂನ್ಯಾಸಿಗಳು ಅದರಲ್ಲೂ ನವನಾಥ ಪಂಥಕ್ಕೆ ಸೇರಿದವರು ತೆಗೆದುಕೊಂಡು ಹೋಗುವ ಪಾತ್ರೆ,
6. ಬಟ್ಟೆಯ ತುಂಡು.
7. ಬೆಂಕಿ ಹಚ್ಚುವುದು.
8. ಬಹಳ ಶಿಸ್ತುಗಾರ, ಗಟ್ಟಿ ಹಾಗೂ ಜ್ಞಾನಿ.
9. ಆನಂದನಾಥನ ದರ್ಶನಕ್ಕೆ ವೈಯೋಲಾಗೆ ಹೋದವನು. ಅವರುಗಳು ಮಾಧವರಾವ್, ಬಲವಂತ್ ದೇಶಪಾಂಡೆ, ನಂದನ್ ಶಿವರಾಮ್ ಮಾರ್ವಾಡಿ ಮತ್ತು ಭಾಗಚಂದ್ ಮಾರ್ವಾಡಿ.

ತಿಳಿದುಬಂದ ವಿಷಯ – ಆನಂದನಾಥ ಮಹಾರಾಜ್ ರವರು ಅನಿರೀಕ್ಷಿತವಾಗಿ ಮತ್ತು ಒತ್ತಾಯಪೂರ್ವಕವಾಗಿ ಶಿರಡಿಗೆ ಹೋಗುತ್ತಿರುವ ಎತ್ತಿನ ಗಾಡಿಯಲ್ಲಿ ಜೊತೆಯಾದರು. ಈ ಆನಂದನಾಥರು ಮೂಲತಃ ದಕ್ಷಿಣ ಕೊಂಕಣ ಜಿಲ್ಲೆಯವರು ಮತ್ತು ಅವರು ಕುಡಾಲ್ ದೇಶ್ಕರ್ ಗೌಡ ಸಾರಸ್ವತ ಬ್ರಾಹ್ಮಣ ಜಾತಿಗೆ ಸೇರಿದವರು. ಅವರು ಬಹಳ ಕಾಲ ಬೊಂಬಾಯಿಯಲ್ಲಿಯೂ ವಾಸವಾಗಿದ್ದರು.

10. ಬುಟ್ಟಿಯವರ ವಾಡಾ – ಈಗಿನ ಸಮಾಧಿ ಮಂದಿರ.
11. ಹತ್ತಿರ.
12. ಭಾಯಿ ಕೃಷ್ಣಾಜಿ ಆಲಿಬಾಗ್ಕರ್.
13. ಕ್ರಿ, ಶ. 1912.
14. ಗಂಟೆ – ಜ್ಯೋತಿಶಾಸ್ತ್ರದ ರೀತಿ.
15. ಕಾಶೀನಾಥ ಗೋವಿಂದ ಉಪಾಸನಿಮಹಾರಾಜ್ ಸಕೋರಿಯವರು.
16. ಗೋವಿಂದ ಕಮಲಾಕರ ದೀಕ್ಷಿತ್.
17. ಸಗುಣ ಮೇರು ನಾಯಕ.
18. ವಿವರವಾಗಿ ಸಾಯಿಲೀಲ ಸಂಪುಟ 11, ನಂ. 1, ಪುಟ 25.
19. ಸರ್ಕಾರದ ಭೂಕಂದಾಯ ಇಲಾಖೆಯ ಕರ್ತವ್ಯ, ಇದು ಸಾರ್ವಜನಿಕ ಸೇವೆಗಾಗಿಟ್ಟ ಸಮೂಹ ಅಥವಾ ಕೆಲವು ಕುಟುಂಬದ ಆಧಾರಕ್ಕಾಗಿ ಇಟ್ಟಿದ್ದು.
20. ಚಂದೋರ್ಕರ್.
21. ಲಂಗೋಟಿ ಅಥವಾ ಕೌಪೀನ.
22. ಕೋಣೆಗಳ ಅಳತೆಯು ಎರಡು ಆಧಾರ ಕಂಭಗಳ ಅಥವಾ ಅಡ್ಡಪಟ್ಟಿಗಳ ಅಂತರದ ಸ್ಥಳ.
23. ಫಕೀರ ವಾಸಮಾಡುವ ಸ್ಥಳ. ಇಂದು (1944) ಭಕ್ತರು ಅಭಿಷೇಕದಲ್ಲಿ ಭಾಗವಹಿಸುವ ಮೊದಲು ಕಾದುಕುಳಿತುಕೊಳ್ಳುವ ಸ್ಥಳ.
24. ಮುಸ್ಲಿಮರ ಪವಿತ್ರ ಗ್ರಂಥ.

25. ಅಧ್ಯಾತ್ಮ ಜ್ಞಾನ.
26. ಪ್ರಾರ್ಥನಾ ಸ್ಥಳವನ್ನು ಬೇರ್ಪಡಿಸುವ ಗೋಡೆ.
27. ಶಿಂಪಿ – ದರ್ಜಿ.
28. ತಾತ್ಯಾ ಗಣಪತ್ (ಪಾಟೀಲ್) ಕೋತೆ.
29. ಶಿಷ್ಯ.
30. ದೇಹದ ಒಳಗಿನ ಅಂಗಗಳನ್ನು ಶುದ್ಧೀಕರಿಸುವುದು.
31. ದೇಹದ ಭಾಗಗಳನ್ನು ತುಂಡುಮಾಡಿ ಬೇಕೆಂದಾಗ ಜೋಡಿಸುವುದು.



# ಅಧ್ಯಾಯ - 6

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ರಾಮಜನ್ಮ ದಿನಾಚರಣೆಯ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಲೌಕಿಕ ಜೀವನವಾಗಲಿ, ಅಧ್ಯಾತ್ಮ ಜೀವನವಾಗಲಿ ಸದ್ಗುರುವೇ ನಾವೆಂಬ ನಾವಿಕನಾಗಿರುವಾಗ ಅವನು ಪ್ರಯಾಣಿಕರನ್ನು ನಾವೆಯಲ್ಲಿ ಇನ್ನೊಂದು ತೀರದವರೆಗೆ ದಾಟಿಸುವನು. ॥1॥ ಸದ್ಗುರುವೆಂಬ ಹೆಸರೇ ಸಾಯಿಯು ನನ್ನ ಮುಂದೆ ನಿಂತು ತನ್ನ ಹಸ್ತವನ್ನು ನನ್ನ ತಲೆಯ ಮೇಲಿಟ್ಟು ಆಶೀರ್ವದಿಸುವುದನ್ನು ಕಣ್ಣಮುಂದೆ ತರುತ್ತದೆ. ॥2॥ ಅವರ ವರದ ಹಸ್ತದಿಂದ ಧುನಿಯಿಂದ್ ತಂದ ಉದಿ(ವಿಭೂತಿ)ಯು ನನ್ನ ಶಿರವನ್ನು ತಾಗುತ್ತಲೇ ನನ್ನ ಹೃದಯ, ಅಂತರಂಗದ ಸಂತಸದಿಂದ ಉಕ್ಕುತ್ತದೆ ಹಾಗೂ ನನ್ನ ಕಣ್ಣುಗಳು ಪ್ರೀತಿಯಿಂದ ಅರಳುತ್ತವೆ. ॥3॥ ಗುರುವಿನ ಹಸ್ತದ ಸ್ಪರ್ಶವು ದಿವ್ಯಾನುಭವ. ನನ್ನ ಸೂಕ್ಷ್ಮಶರೀರವನ್ನು ಅಳಿಸುವ ಶಕ್ತಿ ಆ ಕೈಗಳಿಗಿದೆ. ಇಲ್ಲದಿದ್ದಲ್ಲಿ ಇಡೀ ಪ್ರಪಂಚವೇ ಕರಗಿಹೋದರೂ ಈ ಸೂಕ್ಷ್ಮ ಶರೀರವನ್ನು ಅಳಿಸಲಾಗದು. ॥4॥ ಭಗವಂತನ ನಾಮ ಅಥವಾ ಚರಿತ್ರೆಗಳನ್ನು ಅಕಸ್ಮಾತ್ತಾಗಿ ಶ್ರವಣ ಮಾಡಿದಾಗ ಉಂಟಾಗುವ ಮನಸ್ಸಿನ ಉದ್ವೇಗವು ಅಶಾಂತಿಗೊಂಡ ಮನಸ್ಸುಗಳನ್ನೂ ಸಾಂತ್ವನಗೊಳಿಸುತ್ತದೆ. ॥5॥ ಅವನ ಹಸ್ತ ಕಮಲಗಳನ್ನು ತಲೆಮೇಲಿಟ್ಟ ಕೂಡಲೇ, ಪೂರ್ವಜನ್ಮಗಳ ಅನೇಕ ಸಂಚಿತಕರ್ಮಗಳು ತೊಳೆದುಹೋಗುತ್ತವೆ. ಸಾಯಿಯ ಪ್ರೀತಿಯ ಭಕ್ತರು ಪರಿಶುದ್ಧರಾಗುತ್ತಾರೆ. ॥6॥ ಈ ದೃಶ್ಯಾವಳಿಗಳನ್ನು ನೋಡಿದ

ಕೂಡಲೇ ನಿಮ್ಮಲ್ಲಿ ಬ್ರಹ್ಮಾನಂದ ಉಕ್ಕುತ್ತದೆ. ಆನಂದ ಭಾಷ್ಪಗಳು ಉದುರುತ್ತವೆ ಮತ್ತು ಹೃದಯವು ಶ್ರದ್ಧಾಯುಕ್ತ ಸಾತ್ವಿಕ ಭಾವದಿಂದ ವಿಕಸಿಸುತ್ತದೆ. ॥7॥ ಅವನು ಸಮಸ್ತ ಭಾವವನ್ನು ಎಚ್ಚರಿಸುತ್ತಾನೆ. ಆಗ ಆತ್ಮಾನಂದವು ತಾನೇ ಪ್ರಕಟವಾಗುತ್ತದೆ ಮತ್ತು ದ್ವೈತ ಭಾವವನ್ನು ಅಳಿಸಿಹಾಕುತ್ತದೆ. ಏಕೆಂದರೆ ಪರಮಾತ್ಮನೊಡನೆ ಐಕ್ಯಹೊಂದಿದ ಭಾವ ಸಮಸ್ತಭಾವವನ್ನು ಸಮನಾಗಿ ಹರಡುತ್ತದೆ. ॥8॥ ಪವಿತ್ರಗ್ರಂಥಗಳನ್ನು ಮತ್ತು ಪುರಾಣಗಳನ್ನು ಓದಲು ಪ್ರಾರಂಭಿಸಿದಾಗ ಸದ್ಗುರುವು ಅವನ ಮನಸ್ಸಿನಲ್ಲಿ ಹೆಜ್ಜೆ ಹೆಜ್ಜೆಗೂ ಬರುತ್ತಾನೆ. ಸಾಯಿಯೇ ರಾಮ ಮತ್ತುಕೃಷ್ಣ ಮತ್ತು ತನ್ನ ಆತ್ಮಚರಿತ್ರೆಯನ್ನು ನಾವು ಕೇಳುವಂತೆ ಮಾಡುತ್ತಾನೆ. ॥9॥ ಭಾಗವತ ಪುರಾಣವನ್ನು ಆಲಿಸುವಾಗ ಶ್ರೀಕೃಷ್ಣನು ತಾನೇ ಸಾಯಿಸ್ವರೂಪನಾಗಿ ಉದ್ಧವನ ಗೀತೆಗಳನ್ನು ಹಾಡುತ್ತಾ ಭಕ್ತರಿಗೆ ಮಂಗಳವನ್ನುಂಟುಮಾಡುತ್ತಾನೆ. ॥10॥ ಸಾಮಾನ್ಯ ಸಂಭಾಷಣೆಯಲ್ಲಿಯೂ ಅನಿರೀಕ್ಷಿತವಾಗಿಯೆ ಜೀವನದ ಘಟನೆಗಳನ್ನೂ, ಕಥೆಗಳನ್ನೂ, ಒಂದು ವಿಷಯವನ್ನು ದೃಢೀಕರಿಸಲು ನೆನಪಿಸಿಕೊಳ್ಳಲಾಗುತ್ತದೆ. ॥11॥ ಬರೆಯುವ ಉದ್ದೇಶದಿಂದ ಕೈಯಲ್ಲಿ ಕಾಗದ ಮತ್ತು ಲೇಖನಿ ಹಿಡಿದಲ್ಲಿ ಪದಗಳು ತೊದಲುತ್ತವೆ. ಆದರೆ ಅವನೇ ಬರೆಯಲು ಆಜ್ಞಾಪಿಸಿದಾಗ ಪದಗಳ ಜೋಡಣೆಯ ಜೊತೆಗೆ ಪೂರೈಸಲು ಸುಲಭವಾಗುತ್ತದೆ. ॥12॥ ಅಹಂಭಾವವು ತಲೆ ಎತ್ತಿದ ಕೂಡಲೇ ಅವನು ಅದನ್ನು ತಗ್ಗಿಸುತ್ತಾನೆ ಮತ್ತು ಉತ್ತಮ ಚೇತನದ ಅರಿವನ್ನು ಸೃಷ್ಟಿಸಿ ಶಿಷ್ಯನಲ್ಲಿ ಒಂದು ತೃಪ್ತಿಭಾವವನ್ನು ಉಂಟುಮಾಡುತ್ತಾನೆ. ॥13॥ ಅತಿಶಕ್ತಿವಂತ ಸಾಯಿಗೆ ಶರಣಾಗುವಾಗ ದೇಹ, ಆತ್ಮ, ಸದ್ಗುಣ, ಆಪ್ತಪ್ರೀತಿ ಮತ್ತು ಅನುಗ್ರಹಗಳನ್ನು ಶ್ರಮ ಪಡದೆಯೇ, ಕೇಳದೆಯೇ ಅನುಭವಿಸಬಹುದು. ॥14॥ ನಾಲ್ಕು ವಿವಿಧ ಮಾರ್ಗಗಳಾದ ಕರ್ಮ, ಜ್ಞಾನ, ಯೋಗ ಮತ್ತು ಭಕ್ತಿ ಇವುಗಳು ಪ್ರತ್ಯೇಕವೆಂದು ಕಂಡರೂ ಎಲ್ಲದರ ಗುರಿಯೂ ಒಂದೇ ಆಗಿರುತ್ತದೆ. ॥15॥ ಭಕ್ತಿಮಾರ್ಗವು ಮುಳ್ಳಿನ ಬಾಬುಲ್,ಕಾಡಿನಲ್ಲಿನ ರಸ್ತೆಯ ತರಹ. ಅದರ ತುಂಬ ಹಳ್ಳ ಕೊಳ್ಳಗಳು ಇವೆ. ಒಂದೆರಡು ಹೆಜ್ಜೆಗಳನ್ನು ಸರಿಯಾದ ದಿಕ್ಕಿನಲ್ಲಿಟ್ಟರೆ ನಿಜವಾಗಿಯೂ ಪರಮಾತ್ಮನೆಡೆಗೆ ಕರೆದೊಯ್ಯುತ್ತದೆ. ॥16॥ ಮುಳ್ಳುಗಳನ್ನು ದಾಟಿ ಮುಂದಕ್ಕೆ ಹೆಜ್ಜೆ ಇಡಬೇಕು. ಆಗ ನಿರ್ಭಯವಾಗಿ ಗುರಿ ತಲಪಬಹುದು ಎಂದು ಗುರುಮಾಯಿಯವರು ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾರೆ. ॥17॥ ಮನೋಉದ್ಯಾನವನ್ನು ಭಕ್ತಿಯಿಂದ ನೀರೆರೆದಾಗ ವೈರಾಗ್ಯ ವೃದ್ಧಿಯಾಗುತ್ತದೆ. ಜ್ಞಾನವು ಅರಳುತ್ತದೆ. ಪರಮಾತ್ಮನೊಡನೆ ಐಕ್ಯ ಫಲಿತವಾಗುತ್ತದೆ ಮತ್ತು ಪರಮಾನಂದ ಉಕ್ಕಿ ಬರುತ್ತದೆ. ಖಂಡಿತವಾಗಿ ಜನನ ಮರಣಗಳೆಂಬ ಚಕ್ರದಿಂದ ತಪ್ಪಿಸಿಕೊಳ್ಳಬಹುದು. ॥18॥ ಸನಾತನ ಪರಮಾತ್ಮನು ಸತ್‌ಸ್ವರೂಪನು. ಅದೇ ಮೂರು ವಿಧದ ಅನುಭವವಾದ ಸತ್, ಚಿತ್ ಮತ್ತು ಆನಂದ. ಅದು ದೃಷ್ಟಿ ಚಿತ್ರಣಕ್ಕೆ ಪರಿಪೂರ್ಣ ತ್ಯಾಗದಂತೆ ಕಂಡರೂ ನಿಜವಾಗಿಯೂ ಭಕ್ತರಿಗಾಗಿ ಪ್ರಕಟಗೊಳ್ಳುತ್ತದೆ. ॥19॥ ಬ್ರಹ್ಮನು ಮೂರು ಗುಣಗಳ ಮೂಲಕ ಪ್ರಕಟವಾದಾಗ ಮಾಯೆಯು ಚಲನಶೀಲಳಾಗಿ ಆಡುತ್ತಾಳೆ. ಸತ್ವ, ರಜಸ್, ತಮಸ್ಸು ಇವುಗಳು ಅವಳ ಗುಣಗಳು. ॥20॥ ಜೇಡಿ ಮಣ್ಣಿಗೆ ಒಂದು ರೂಪವನ್ನು ಕೊಟ್ಟಾಗ ಮಡಕೆ

ಎಂದು ಸರಿಯಾಗಿ ನಾಮಕರಣ ಮಾಡಲಾಗುತ್ತದೆ. ಆದರೆ ಮಡಕೆ ಒಡೆದಾಗ ಅದರ ಸ್ವಭಾವ, ರೂಪ ಮತ್ತು ಗುಣತನ್ನು ಕಳೆದುಕೊಳ್ಳುತ್ತದೆ. ॥21॥ ಇಡೀ ಜಗತ್ತೇ ಮಾಯೆಯಿಂದ ಜನಿಸುತ್ತದೆ ಮತ್ತು ಅವೆರಡೂ ಕಾರಣ ಮತ್ತು ಪರಿಣಾಮ ಪರಸ್ಪರವಾಗಿವೆ. ಈ ರೀತಿ ಮಾಯೆಯು ವಿಶ್ವದ ವಿವಿಧ ಅಂಗಾಂಗಗಳಂತೆ ರೂಪುಗೊಳ್ಳುತ್ತಾಳೆ. ॥22॥ ಮಾಯೆಯ ಸ್ವಭಾವವನ್ನು ನೋಡಿದಲ್ಲಿ, ಈ ಜಗತ್ತಿನ ಅಸ್ತಿತ್ವಕ್ಕೆಮೊದಲು ಯಾವುದೂ ಸಹಜವಾಗಿ ಕಾಣುವುದಿಲ್ಲ. ಅವಳು ಪರಮಾತ್ಮನಲ್ಲಿ ಲೀನವಾಗಿದ್ದು ಅವಳು ಅವ್ಯಕ್ತವಾಗಿಯೇ ಇದ್ದಾಳೆ. ॥23॥ ಅವಳು ವ್ಯಕ್ತವಾದರೂ ಪರಮಾತ್ಮ ಸ್ವರೂಪವೇ. ಅವಳು ಅವ್ಯಕ್ತವಾದರೂ ಪರಮಾತ್ಮ ಸ್ವರೂಪವೇ. ಈ ರೀತಿ ಮಾಯೆಯು ಪರಮಾತ್ಮ ಸ್ವರೂಪಳೇ ಆಗಿರುವುದರಿಂದ ಪರಮಾತ್ಮನಿಂದ ಬೇರ್ಪಡಿಸಲು ಸಾಧ್ಯವಿಲ್ಲ. ॥24॥ ಪ್ರಾರಂಭದಲ್ಲಿ ಮಾಯೆಯು ತಮೋಗುಣದಿಂದ ಜಡ ಪದಾರ್ಥಗಳನ್ನು, ನಿರ್ಜೀವವಾದ ಚಲನವಲನವಿಲ್ಲದ ವಸ್ತುಗಳನ್ನು ಸೃಷ್ಟಿಸಿ ಪ್ರಥಮ ಭಾಗವನ್ನು ಪೂರ್ಣಗೊಳಿಸಿದಳು. ॥25॥ ಅನಂತರ ಪರಮಾತ್ಮನು ಮಾಯೆಯ ರಜೋಗುಣ ಸ್ವರೂಪನಾಗಿ ಅವಶ್ಯವಾದ ಕ್ರಿಯೆಗಳನ್ನು ಗ್ರಹಿಸಿ ಎರಡೂ ಗುಣಗಳಿಂದ ರೂಪುಗೊಂಡನು. ॥26॥ ಅನಂತರ ಮಾಯೆಯ ಸತ್ವಗುಣದಿಂದ ಬುದ್ಧಿಯು ಜನಿಸಿತು. ಅದು ಪರಮಾತ್ಮನ ದಿವ್ಯಾನಂದ ಗುಣದೊಡನೆ ಮಿಲಿತವಾಗಿ ಸೃಷ್ಟಿಯ ಸಂಪೂರ್ಣ ಕ್ರಿಯೆಯನ್ನು ಪೂರ್ಣಗೊಳಿಸಿತು. ॥27॥ ಈ ರೀತಿ ಮಾಯೆಯು ಮಹಾಪರಿವರ್ತನೆಗೊಳಗಾಗಿ ಮೇಲೆ ಹೇಳಿದ ವಸ್ತುಗಳನ್ನು ಕ್ರಿಯಾತ್ಮಕ ಶಕ್ತಿ ಪ್ರೇರೇಪಿಸುವವರೆಗೆ ಸೃಷ್ಟಿಸುವುದಿಲ್ಲ. ಅಲ್ಲಿಯವರೆಗೆ ಮೂರು ಗುಣಗಳೂ ಅವ್ಯಕ್ತವಾಗಿಯೇ ಉಳಿಯುತ್ತವೆ. ॥28॥ ಈ ಮೂರು ಗುಣಗಳು ಕ್ರಿಯಾತ್ಮಕವಾಗುವವರೆಗೆ ಮಾಯೆಯು ವ್ಯಕ್ತವಾಗುವುದಿಲ್ಲ. ಅವಳು ಅವ್ಯಕ್ತಳಾಗಿಯೇ ಅಸ್ತಿತ್ವದಲ್ಲಿರಬಲ್ಲಳು ಮತ್ತು ನಿಷ್ಕ್ರಿಯತೆಯನ್ನು ಅಭ್ಯಸಿಸಬಲ್ಲಳು. ॥29॥ ಮಾಯೆಯು ಪರಮಾತ್ಮನ ಸೃಷ್ಟಿ, ಜಗತ್ತು ಮಾಯೆಯ ಸೃಷ್ಟಿ. ಸರ್ವಂ ಬ್ರಹ್ಮಮಯಂ ಅಂದರೆ ಈ ಜಗತ್ತು, ಮಾಯೆ ಮತ್ತು ಪರಬ್ರಹ್ಮ ಎಲ್ಲವೂ ಒಂದೇ. ॥30॥ ಈ ಅದ್ವೈತಭಾವವನ್ನು ಅರಿಯುವ ತೀವ್ರ ಇಚ್ಛೆಯುಳ್ಳವರು ವೇದಗಳನ್ನು ಮತ್ತು ಶಾಸ್ತ್ರಗಳನ್ನು ಪರಿಶೀಲಿಸಬಹುದು. ॥31॥ ವೇದಗಳು, ಶಾಸ್ತ್ರಗಳು, ಶ್ರುತಿಗಳು, ಸ್ಮೃತಿಗಳು, ಗುರುಗಳು ಮತ್ತು ಗ್ರಂಥಗಳು ಜ್ಞಾನವನ್ನು ನೀಡಿ ವೇದಾಂತ ತತ್ವವನ್ನೂ ಪರಮಾನಂದವನ್ನೂ ಕೊಡುತ್ತವೆ. ॥32॥ "ನನ್ನ ಭಕ್ತರ ಮನೆಗಳಲ್ಲಿ ಆಹಾರಕ್ಕೆ ಮತ್ತು ವಸ್ತ್ರಕ್ಕೆ ಯಾವ ಕೊರತೆಯೂ ಉಂಟಾಗುವುದಿಲ್ಲ." ಇದು ಶ್ರೀ ಸಾಯಿಯವರು ನೀಡಿರುವ ಅಭಯ ವಚನ ಮತ್ತು ಭಕ್ತರೆಲ್ಲರಿಗೂ ತಿಳಿದ ವಿಷಯ. ॥33॥ "ಯಾರು ನನ್ನನ್ನು ಮನಃಪೂರ್ವಕವಾಗಿ ಆರಾಧಿಸುತ್ತಾರೋ ಮತ್ತು ಸದಾ ಪ್ರೀತಿಯಿಂದ ಸೇವೆ ಸಲ್ಲಿಸುತ್ತಾರೋ ಅವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ. ಇದೇ ನನ್ನ ಧ್ಯೇಯವಾಕ್ಯ." ॥34॥ ಇದು ಭಗವದ್ಗೀತೆಯ ಪ್ರಮಾಣ ವಚನವೂ ಹೌದು. ಸಾಯಿ ಇದನ್ನು ಸರ್ವಮಾನ್ಯ ಸತ್ಯವೆಂದು ಸ್ವೀಕರಿಸಲು ತಿಳಿಸಿದ್ದಾರೆ. "ಆಹಾರ ಮತ್ತು ವಸ್ತ್ರದ ಕೊರತೆ ಎಂದಿಗೂ ಇರುವುದಿಲ್ಲ. ಆದ್ದರಿಂದ ಎಂದಿಗೂ ಅವುಗಳ ಮೇಲೆ

ತೀವ್ರವಾದ ಆಶೆಬೇಡ. ||35|| "ಪ್ರತಿಯೊಬ್ಬರೂ ಪರಮಾತ್ಮನ ಬಾಗಿಲಿಗೆ ಮಾತ್ರ ಹೋಗಬೇಕು ಮತ್ತು ಕೇವಲ ದೇವರನ್ನು ಬೇಡಬೇಕು. ಅವನ ಪ್ರಸಾದ(ಆಶೀರ್ವಾದ)ವನ್ನು ಮಾತ್ರ ಬೇಡಬೇಕು. ಲೌಕಿಕ ಭಾವವನ್ನು ಪಕ್ಕಕ್ಕಿರಿಸಬೇಕು. ||36|| "ಸಮಾಜವು ಕೊಡುವ ಗೌರವದಿಂದ ಏಕೆ ತೃಪ್ತನಾಗುವೆ? ಮತ್ತು ಅದಕ್ಕಾಗಿ ಏಕೆ ಮೋಹಪರವಶನಾಗಿರುವೆ? ಅದರ ಬದಲು ತೀವ್ರವಾದ ಭಕ್ತಿಯಿಂದ ನಿನ್ನ ಇಷ್ಟದೈವದ ಕರುಣೆಯನ್ನೂ, ಸಾತ್ವಿಕಭಾವದಿಂದ ಉಕ್ಕುವ ಆನಂದವನ್ನೂ ಪ್ರಕಟಿಸುವಂತೆ ಬೇಡು. ||37|| "ಅಂತಹ ತೀವ್ರ ಬಯಕೆಯಲ್ಲಿ ನಿನಗೆ ಸಂತಸವಾಗಲಿ, ನಿನ್ನ ಎಲ್ಲಾ ಇಂದ್ರಿಯಗಳೂ ಅಂತಹ ಭಕ್ತಿಯ ಉನ್ನತ್ತತೆಯಿಂದ ಸ್ತಬ್ಧಗೊಳ್ಳಲಿ. ವಿಷಯವಾಸನೆಗಳು ಪೂರ್ಣವಾಗಿ ಪರಿವರ್ತಿತವಾಗಿ ಭಕ್ತಿಯ ಆರಾಧನೆ ಮೊಳಗಲಿ, ಮತ್ತೆ ಯಾವ ಆಶೆ ನಿನ್ನಲ್ಲಿ ಉಳಿಯುತ್ತದೆ? ||38|| "ಅಂತಹ ಭಕ್ತಿ ನಿನ್ನಲ್ಲಿ ಸದಾ ಆವರಿಸಿ ಬೇರೆ ಯಾವುದರಿಂದಲೂ ಸುಖ ಪಡೆಯದಂತೆ ಆಗಲಿ. ನಿನ್ನ ಮನಸ್ಸು ಸದಾ ನನ್ನ ನಾಮಸ್ಮರಣೆ ಮಾಡುತ್ತಿರಲಿ ಮತ್ತು ಬೇರೆ ಎಲ್ಲವನ್ನೂ ಮರೆಯುವಂತಾಗಲಿ. ||39|| "ಆಗ ನಿನ್ನ ದೇಹ, ಮನೆ, ಆಸ್ತಿ ಇವುಗಳ ಯೋಚನೆ ಇರುವುದಿಲ್ಲ. ನಿನ್ನ ಚಿತ್ತವು ಪರಮಾನಂದದಲ್ಲಿಯೇ ನೆಲೆಯಾಗುತ್ತದೆ. ಮನಸ್ಸು ಸಮದರ್ಶಿಯಾಗಿಯೂ ಪ್ರಶಾಂತವಾಗಿಯೂ ಇರುತ್ತದೆ. ಆಗ ನಿಶ್ಚಯವಾಗಿಯೂ ಪರಿಪೂರ್ಣವಾಗುತ್ತದೆ." ||40|| ಪ್ರಶಾಂತವಾದ ಮನಸ್ಸಿನ ಸತ್ಸಂಗದ ಕುರುಹು. ಅಲೆದಾಡುವ ಮನಸ್ಸನ್ನು ಪರಮಾತ್ಮನಲ್ಲಿ ಶರಣಾಗಿಸುವುದು ಹೇಗೆ? ||41|| ಆದುದರಿಂದ ಶ್ರೋತೃಗಳೇ, ಪೂರ್ಣ ಸಾವಧಾನ ಚಿತ್ತರಾಗಿ ಶ್ರದ್ಧೆಯಿಂದ ಈ ವಿವರಣೆಯನ್ನು ಕೇಳಿರಿ. ಸಾಯಿ ಸಚ್ಚರಿತೆಯನ್ನು ಕೇಳುವುದರಿಂದ ನಿಮ್ಮ ಮನಸ್ಸು ಭಕ್ತಿಭಾವದಿಂದ ತುಂಬಲಿ||42|| ಕಥಾಸಂಗತಿಯ ಜೊತೆಯಲ್ಲಿ ನೀವು ಪ್ರಶಾಂತತೆಯನ್ನು ಅನುಭವಿಸುವಿರಿ. ನಿಮ್ಮ ಚಂಚಲ ಮನಸ್ಸು ಶಾಂತವಾಗುತ್ತದೆ. ಮನದ ಆಂದೋಲನ ಮಾಯವಾಗಿ ನೀವು ಸುಖಶಾಂತಿಯನ್ನು ಪಡೆಯುವಿರಿ. ||43|| ಈಗ, ನಾವು ಹಿಂದಿನ ಕತೆಯ ಅನುಸಂಧಾನ ಮಾಡೋಣ. ಮಸೀದಿಯನ್ನು ಪುನರ್ನಿರ್ಮಾಣ ಮಾಡಿ ರಾಮನ ಜನ್ಮದಿನದ ಅಂಗವಾಗಿ ಸಂಕೀರ್ತನ ಮಾಡಿದ ಬಗ್ಗೆ ನಿರೂಪಣೆಯನ್ನು ಮುಂದುವರೆಸೋಣ. ||44|| ಗೋಪಾಲಗುಂಡ್ ಎಂಬ ಭಕ್ತನೊಬ್ಬನಿದ್ದನು. ಅವನಿಗೆ ಬಾಬಾರವರ ಮೇಲೆ ಅತ್ಯಂತ ಭಕ್ತಿ. ಅವನು ತನ್ನ ಸಮಯವನ್ನೆಲ್ಲ ನಿರಂತರವಾಗಿ ಬಾಬಾರವರ ನಾಮಸ್ಮರಣೆಯಲ್ಲೇ ಕಳೆಯುತ್ತಿದ್ದನು. ||45|| ಅವನಿಗೆ ಸಂತಾನವಿರಲಿಲ್ಲ. ಅನಂತರ ಸಾಯಿಯ ಆಶೀರ್ವಾದದಿಂದ ಒಬ್ಬ ಪುತ್ರನನ್ನು ಪಡೆದನು. ಅವನ ಮನಸ್ಸು ಅತ್ಯಂತ ಪ್ರಸನ್ನವಾಗಿತ್ತು. ||46|| ಅದರಿಂದಾಗಿ ಗೋಪಾಲಗುಂಡ ಒಂದು ಯಾತ್ರೆ (ಮೆರವಣಿಗೆ) ಮಾಡಲು ಯೋಚಿಸಿದನು. ವರ್ಷಕ್ಕೊಮ್ಮೆ ಶಿರಡಿ ಗ್ರಾಮದಲ್ಲಿ ಉರುಸ್ ನಡೆಸಲು ನಿಶ್ಚಯಿಸಿದನು. ಪ್ರತಿಯೊಬ್ಬರೂ ಆನಂದಪಟ್ಟರು. ||47|| ತಾತ್ಯಾಕೋತೆ, ದಾದಾಕೋತೆ, ಮಾಧವರಾವ್ ಮತ್ತು ಇತರ ಪ್ರಮುಖ ಭಕ್ತರು ಈ ಸಲಹೆಯನ್ನು ಒಪ್ಪಿದರು ಮತ್ತು ಅದಕ್ಕಾಗಿ ಎಲ್ಲಾ ತಯಾರಿ ನಡೆಸಲು ಆರಂಭಿಸಿದರು. ||48|| ಆದರೆ ಅಂತಹ ವಾರ್ಷಿಕ ಸಮಾರಂಭಗಳಿಗೆ

ಕೆಲವು ನಿಯಮಾವಳಿಗಳಿದ್ದವು. ಜಿಲ್ಲಾಧಿಕಾರಿಯವರಿಂದ ಅನುಮೋದನೆ ಅತ್ಯವಶ್ಯಕವಾಗಿತ್ತು. ॥49॥ ಅಂತಹ ಒಪ್ಪಿಪತ್ರ ಪಡೆಯಲು ಪ್ರಯತ್ನಿಸಿದಾಗ ಅಲ್ಲೊಬ್ಬ ಹಳ್ಳಿಯವ, ಕುಲಕರ್ಣಿ ಎಂಬ ವಕ್ರಬುದ್ಧಿಯವ ಇದಕ್ಕೆ ವಿರುದ್ಧವಾಗಿ ಅನೇಕ ಅಡಚಣೆಗಳನ್ನು ಉಂಟುಮಾಡಿದನು. ॥50॥ ಕುಲಕರ್ಣಿಯು ಅಡ್ಡಿಪಡಿಸಿದಾಗ ಅದರ ಪರಿಣಾಮ ಏನಾಯಿತೆಂದು ನೋಡಿ. ಜಿಲ್ಲಾಧಿಕಾರಿಯು ಶಿರಡಿಯಲ್ಲಿ ಯಾತ್ರೆಯು (ಮೆರವಣಿಗೆಯು) ನಡೆಯಬಾರದೆಂದು ಆದೇಶ ನೀಡಿದನು. ॥51॥ ಆದರೆ ಶಿರಡಿಯಲ್ಲಿ ಈ ಯಾತ್ರೆ ನಡೆಸುವುದು ಬಾಬಾರವರ ಇಚ್ಛೆಯೂ ಆಗಿತ್ತು. ಅವರು ತಮ್ಮ ಅನುಗ್ರಹದೊಂದಿಗೆ ಅದನ್ನು ನೆರವೇರಿಸಲು ಆದೇಶ ನೀಡಿದರು. ॥52॥ ಹಳ್ಳಿಯವರು ಪಟ್ಟು ಹಿಡಿದು ತಮ್ಮ ಅವಿರತ ಪ್ರಯತ್ನ ಮಾಡಿದರು. ಆಗ ಅಧಿಕಾರಿಗಳು ಹಿಂದಿನ ಆದೇಶವನ್ನು ಮಾರ್ಪಡಿಸಿ ಜನರ ಅಭೀಷ್ಟವನ್ನು ನೆರವೇರಿಸಿದರು. ॥53॥ ಅಲ್ಲಿಂದೀಚೆಗೆ ಬಾಬಾರವರ ಇಚ್ಛಾನುಸಾರ ಮೆರವಣಿಗೆಯು ರಾಮನವಮಿಯಂದು ನಡೆಸಲ್ಪಡುತ್ತದೆ. ತಾತ್ಯಾಕೋತೆ ಅದರ ತಯಾರಿಯನ್ನು ನೋಡಿಕೊಳ್ಳುತ್ತಿದ್ದನು. ಜನಸಮುದಾಯ ಅಲ್ಲಿ ಸೇರುತ್ತಿತ್ತು. ॥54॥ ರಾಮನವಮಿಯ ದಿನದಂದು ಭಕ್ತಿಗೀತೆಗಳ ಭಜನೆ ಮತ್ತು ಪೂಜೆ ತಾಳವಾದ್ಯಗಳ ಸಮೇತ ನಡೆಯುತ್ತಿತ್ತು. ಜನರು ನಾಲ್ಕೂ ದಿಕ್ಕುಗಳಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ॥55॥ ಪ್ರತಿವರ್ಷ ಎರಡು ಹೊಸ ಬಾವುಟಗಳನ್ನು ವಿಧಿವತ್ತಾಗಿ ಮೆರವಣಿಗೆಯಲ್ಲಿ ತೆಗೆದುಕೊಂಡುಹೋಗಿ ಮಸೀದಿಯ ಗೋಪುರಕ್ಕೆ ಕಟ್ಟಿ ಅಲ್ಲಿಯೇ ಶಾಶ್ವತವಾಗಿ ನಿಲ್ಲಿಸುತ್ತಿದ್ದರು. ॥56॥ ಎರಡರಲ್ಲಿ ಒಂದು ನಿಮೋಣಕರ್‌ನದ್ದು ಮತ್ತು ಇನ್ನೊಂದು ದಾಮು ಅಣ್ಣನದ್ದು.[8] ಅವುಗಳನ್ನು ಅದ್ದೂರಿಯಿಂದ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಗೋಪುರದ ತುದಿಯಲ್ಲಿ ಅತಿ ಎತ್ತರಕ್ಕೆ ಹಾರಿಸುತ್ತಿದ್ದರು. ॥57॥ ಈಗ ಅತಿ ವಿಶೇಷವಾಗಿ ಉರುಸ್‌ನಿಂದ ರಾಮನವಮಿಯ ಆಚರಣೆಯು ಹೇಗೆ ಪ್ರಾರಂಭವಾಯಿತು ಎಂಬ ಗಮನ ಸೆಳೆಯುವ ವಿಷಯವನ್ನು ಕೇಳಿರಿ. ಶಿರಡಿಗೆ ಜಯವಾಗಲಿ, ಆನಂದವಾಗಲಿ. ॥58॥ ಉರುಸ್‌ನಿಂದ ಪ್ರಾರಂಭವಾದ ರಾಮನವಮಿಯನ್ನು ಪ್ರಥಮವಾಗಿ ಶಕೆ 1833ರಲ್ಲಿ[9] ಆಚರಿಸಲಾಯಿತು. ತದನಂತರ ನಿರಂತರವಾಗಿ ಈಗಲೂ ಆಚರಿಸಲಾಗುತ್ತಿದೆ. ॥59॥ ಪ್ರಖ್ಯಾತರಾದ ಕೃಷ್ಣ ಜೋಗೇಶ್ವರ ಭೀಷ್ಮನು[10] ರಾಮನ ಜನ್ಮದಿನವನ್ನು ಆಚರಿಸಬೇಕೆನ್ನುವ ಸೂಚನೆಯನ್ನು ಪ್ರಪ್ರಥಮವಾಗಿ ಕಲ್ಪಿಸಿದನು. ಅದರಿಂದ ಜನರಿಗೆಲ್ಲ ಪರಮಕಲ್ಯಾಣವಾಗುತ್ತದೆಂಬುದು ಅವನ ಯೋಚನೆಯಾಗಿತ್ತು. ॥60॥ ಅಲ್ಲಿಯವರೆಗೆ ಕೇವಲ ಉರುಸ್‌ನಲ್ಲಿ ಮಾತ್ರ ಜನರು ಭಾಗವಹಿಸುತ್ತಿದ್ದರು. ಆ ಸಂವತ್ಸರದಿಂದ ರಾಮನು ಜನ್ಮ ತಾಳಿದ ದಿನದ ಸುಂದರವಾದ ಹಬ್ಬವು ಪ್ರಾರಂಭವಾಯಿತು. ॥61॥ ಒಮ್ಮೆ, ಭೀಷ್ಮನು ವಾಡೆಯಲ್ಲಿ ಶಾಂತನಾಗಿ ಕುಳಿತಿದ್ದಾಗ, ಕಾಕಾನು[11] ಪೂಜಾ ಸಾಮಾಗ್ರಿಗಳೊಡನೆ ಮಸೀದಿಗೆ ಹೊರಡಲು ಸಿದ್ಧನಾಗುತ್ತಿದ್ದನು. ॥62॥ ಅವನು (ಕಾಕಾ) ಅಂತರಂಗದಲ್ಲಿ ಸಾಯಿದರ್ಶನದ ಬಗ್ಗೆ ಯೋಚಿಸುತ್ತಿದ್ದು ಹೊರ ನೋಟಕ್ಕೆ ಉರುಸ್ ಬಗ್ಗೆ ಉತ್ಸಾಹಿತನಾಗಿದ್ದನು. ಕಾಕಾನು ಶಿರಡಿಗೆ ಈ ಸಮಾರಂಭಕ್ಕೆ ಒಂದು

ದಿನ ಮೊದಲೇ ಬಂದಿದ್ದನು. ॥63॥ ಈ ಸದವಕಾಶವನ್ನು ಪರಿಗಣಿಸಿ ಭೀಷ್ಮನು ಕಾಕಾನನ್ನು ಕೇಳಿದನು – "ನನ್ನಲ್ಲಿ ಉದಿಸಿರುವ ಒಂದು ಒಳ್ಳೆಯ ಕಾರಣಕ್ಕಾಗಿ ಸಹಾಯ ನೀಡುವಿರಾ? ॥64॥ "ಇಲ್ಲಿ ಪ್ರತಿ ವರುಷ ಉರುಸ್‍ನ್ನು ರಾಮ ಹುಟ್ಟಿದ ದಿನವೆಂದು ಆಚರಿಸಲಾಗುತ್ತದೆ. ಆದ್ದರಿಂದ ಇದು ರಾಮನ ಜನ್ಮ ದಿನವನ್ನು ಆಚರಿಸಲು ಒಂದು ಸಹಜವಾದ ಅವಕಾಶ." ॥65॥ ಕಾಕಾನಿಗೆ ಈ ಸಲಹೆ ಇಷ್ಟವಾಯಿತು. ಭೀಷ್ಮನಿಗೆ ಬಾಬಾರವರ ಒಪ್ಪಿಗೆ ಪಡೆಯಲು ಸೂಚಿಸಿದನು. ಸಾಯಿಯ ಇಚ್ಛೆಯನ್ನು ಅದು ಅವಲಂಬಿಸುತ್ತದೆ. ಆಗ ಆ ಕೆಲಸಕ್ಕೆ ಯಾವುದೇ ಅಡೆತಡೆಗಳಿರುವುದಿಲ್ಲ. ॥66॥ ಆದರೆ ಈ ಸಮಾರಂಭಕ್ಕೆ ಸಂಕೀರ್ತನೆ ಇರಬೇಕು. ಅದು ಒಂದು ಸಮಸ್ಯೆಯಾಯಿತು. ಏಕೆಂದರೆ, ಈ ಸಣ್ಣ ಹಳ್ಳಿಯಲ್ಲಿ ಒಬ್ಬ ಹರಿದಾಸನನ್ನು ಹುಡುಕುವುದು ಹೇಗೆ? ಇದೇ ಒಂದು ಪ್ರಶ್ನೆಯಾಯಿತು. ॥67॥ ಭೀಷ್ಮನು ಹೇಳಿದನು, "ನಾನೇ ಕೀರ್ತನಕಾರನಾಗುತ್ತೇನೆ;[12] ನೀವು ಹಾರ್ಮೋನಿಯಂ ಬಾರಿಸಿರಿ ಮತ್ತು ರಾಧಾಕೃಷ್ಣಮಾಯಿಯು[13] ಸಮಯಕ್ಕೆ ಸರಿಯಾಗಿ ಶುಂಠಿವಾಡಾವನ್ನು[14] ತಯಾರಿಸಿಕೊಡುತ್ತಾಳೆ. ॥68॥ "ಬನ್ನಿ; ಬಾಬಾರವರಲ್ಲಿಗೆ ಹೋಗೋಣ. ಶುಭ ಕೆಲಸಕ್ಕೆ ವಿಳಂಬಮಾಡಿದಲ್ಲಿ ಅಡಚಣೆಗಳು ಉಂಟಾಗುತ್ತವೆ. ನಿಸ್ಪೃಹತೆಯಿಂದ ಕೂಡಿದ ಒಂದು ಉದ್ದೇಶವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ॥69॥ "ನನ್ನೊಡನೆ ಬನ್ನಿ, ಸಂಕೀರ್ತನೆ ಮಾಡಲು ಅಪ್ಪಣೆಯನ್ನು ಪಡೆಯೋಣ" ಈ ರೀತಿ ಹೇಳುತ್ತ ಇಬ್ಬರೂ ಆ ಸಮಯದಲ್ಲಿ ಮಸೀದಿಗೆ ಬಂದರು. ॥70॥ ಕಾಕಾನು ಪೂಜೆ ಮಾಡಲು ಪ್ರಾರಂಭಿಸಿದ ಕೂಡಲೇ, ಬಾಬಾರವರು ತಾವೇ ವಾಡಾದಲ್ಲಿ ಯಾವುದರ ಬಗ್ಗೆ ಚರ್ಚೆಯಾಯಿತೆಂದು ಕೇಳಿದರು. ಕಾಕಾನಿಗೆ ಏನೂ ಉತ್ತರಿಸಲಾಗಲಿಲ್ಲ. ॥71॥ ಕೂಡಲೇ ಬಾಬಾರವರು ಭೀಷ್ಮನನ್ನು ಅದೇ ಪ್ರಶ್ನೆಯನ್ನು ಮತ್ತೊಂದು ರೀತಿಯಲ್ಲಿ ಕೇಳಿದರು. "ಬುವಾ ಏನು ಹೇಳುತ್ತಾನೆ?" ॥72॥ ಆಗ ಕಾಕಾನು ನೆನಪಿಸಿಕೊಂಡು ತನ್ನ ಉದ್ದೇಶವನ್ನು ಪ್ರಕಟಿಸಿದನು. ಬಾಬಾರವರಿಗೆ ಈ ವಿಚಾರ ಇಷ್ಟವಾಯಿತು. ಈ ಸಮಾರಂಭವನ್ನು ಆಚರಿಸಲು ಉದ್ದೇಶಿಸಲಾಯಿತು. ॥73॥ ಮಾರನೆಯ ದಿನ, ಬೆಳಗಿನ ಜಾವದಲ್ಲಿ ಬಾಬಾರವರು ಲೇಂಡಿಗೆ[15] ಹೋಗಿರಲು, ಒಂದು ತೊಟ್ಟಿಲನ್ನು ಬಯಲಿನಲ್ಲಿ ಕಟ್ಟಿ ಕೀರ್ತನೆಗೆ ಸಿದ್ಧಪಡಿಸಲಾಯಿತು. ॥74॥ ಪ್ರೇಕ್ಷಕರು ಅಲ್ಲಿ ಸೇರಿದರು. ಅನಂತರ ಬಾಬಾರವರು ಸಮಯಕ್ಕೆ ಸರಿಯಾಗಿ ಹಿಂತಿರುಗಿದರು. ಭೀಷ್ಮನು ಎದ್ದು ನಿಂತನು. ಕಾಕಾನು ಹಾರ್ಮೋನಿಯಂ ಹಿಡಿದು ಕುಳಿತನು. ಆಗ ಬಾಬಾರವರು ಕಾಕಾನನ್ನು ಬರ ಹೇಳಿದರು. ॥75॥ "ಬಾಬಾರವರು ನಿನ್ನನ್ನು ಕರೆಯುತ್ತಿದ್ದಾರೆ." ಅದನ್ನು ಕೇಳಿ ಕಾಕಾನು ಬೆಚ್ಚಿಬಿದ್ದನು. ಏನಾಯಿತೆಂದು ಅರ್ಥಮಾಡಿಕೊಳ್ಳಲಾರದೇ ಹೋದನು. ಯಾವುದೇ ಅಪಜಯವಾಗದಂತಾಗಲಿ. ॥76॥ ಬಾಬಾರವರ ಕರೆಯನ್ನು ಕೇಳುತ್ತಲೇ ಕಾಕಾನು ಭಯಭೀತನಾದನು. "ಬಾಬಾ ಏಕಿಷ್ಟು ಕೋಪಗೊಂಡಿದ್ದಾರೆ? ಕೀರ್ತನೆಯು ಯಾವ ತೊಂದರೆಯೂ ಇಲ್ಲದೆ ನಡೆಯುವುದೋ ಇಲ್ಲವೋ?" ॥77॥ ಅವನು ತಿರುಗಿ ತಿರುಗಿ ನೋಡುತ್ತಲೇ ಮುಂದೆ ನಡೆದನು. ಅವನು ಮೆಟ್ಟಿಲುಗಳನ್ನು ಭಯದಿಂದ ಹತ್ತಿಹೋದನು. ಅವನ

ಹೆಜ್ಜೆಗಳು ಬಹಳ ಮೆದುವಾಗಿದ್ದುವು. ಕಾಕಾನು ಬಹಳ ಚಿಂತಿತನಾಗಿದ್ದನು. ॥78॥ ಬಾಬಾ ಅವನನ್ನು ಪ್ರಶ್ನಿಸಿದರು – "ಈ ತೊಟ್ಟಿಲನ್ನು ಇಲ್ಲಿ ಏಕೆ ಕಟ್ಟಿದೆ?" ಸಂಕ್ಷಿಪ್ತವಾದ ಕತೆಯನ್ನು, ಅದರ ಹಿಂದಿರುವ ಕಾರಣವನ್ನೂ, ಮತ್ತು ಕಾರ್ಯಕ್ರಮವನ್ನೆಲ್ಲ ಕೇಳಿದ ನಂತರ ಸಂತಸಗೊಂಡರು. ॥79॥ ನಂತರ ಗೂಡಿನಿಂದ[16] ಒಂದು ಸುಂದರವಾದ ಹಾರವನ್ನು ತೆಗೆದು ಕಾಕಾನ ಕೊರಳಿಗೆ ಹಾಕಿದರು. ಮತ್ತೊಂದನ್ನು ಭೀಷ್ಮನಿಗೆ ಕೊಟ್ಟರು. ॥80॥ ತೊಟ್ಟಿಲಿನ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಅಲ್ಲೆಲ್ಲ ಕಾತರತೆ ಉಂಟಾಯಿತು. ಆದರೆ ಕೊರಳಿಗೆ ಹಾರಗಳನ್ನು ಹಾಕಿದಾಗೆಲ್ಲರಿಗೂ ಆರಾಮವಾಯಿತು. ॥81॥ ಭೀಷ್ಮನು ಒಬ್ಬ ಅಸಾಧಾರಣ ವ್ಯಕ್ತಿ. ಕತೆಗಳನ್ನು ವಿವರಿಸುವಲ್ಲಿ ಅಗಾಧವಾದ ಪಾಂಡಿತ್ಯವಿತ್ತು. ಕೀರ್ತನೆಯು ಅತಿ ಮಧುರವಾಗಿದ್ದು ಶ್ರೋತೃಗಳೆಲ್ಲರೂ ಬಹಳ ಸಂತಸಗೊಂಡರು. ॥82॥ ಬಾಬಾರವರೂ ಸಹ ಅತ್ಯಂತ ಪ್ರಸನ್ನರಾದರು. ಅವರ ಒಪ್ಪಿಗೆಯ ಮೇರೆಗೆ ಹಬ್ಬವನ್ನು ಆಚರಿಸಲಾಯಿತು. ಭಜನೆ, ಕೀರ್ತನೆ ಇತ್ಯಾದಿಗಳಿದ್ದವು. ॥83॥ ರಾಮನು ಜನ್ಮತಾಳಿದ ಸಮಯದಲ್ಲಿ ಕೆಂಪು ಗುಲಾಬಿ ಪುಡಿಯನ್ನು[17] ಎರಚಾಡಿದಾಗ ಬಾಬಾರವರ ಕಣ್ಣಿನಲ್ಲಿ ಬಿದ್ದು ಬಾಬಾರವರು ಅತ್ಯಂತ ಕ್ರೋಧಿತರಾದರು. ಅವರು ನರಹರಿಯ[18] ಹಾಗೆ ಭಯಂಕರವಾಗಿ ಕಂಡರು. ಆ ಸಮಯ ಕೌಸಲ್ಯೆಯ ಅರಮನೆಯಲ್ಲಿ ರಾಮನ ಜನನವಾಗಿತ್ತು. ॥84॥ ಗುಲಾಲು ಕೇವಲ ಒಂದು ನೆಪಮಾತ್ರ, ಈ ಘಟನೆಯು ರಾವಣನೋಪಾದಿಯಲ್ಲಿರುವ ಅಹಂಕಾರವನ್ನು, ರಾಕ್ಷಸರೂಪೀ ಕ್ರೌರ್ಯವನ್ನು ನಾಶಮಾಡಲು ಅವತರಿಸಿ ಬಂದ ರಾಮನ ಉದ್ದೇಶವನ್ನು ಪ್ರಕಟಿಸಿತು. ॥85॥ ತತ್‌ಕ್ಷಣವೇ ಅವರು ಅಸಮಾಧಾನಗೊಂಡರು. ನರಸಿಂಹನ[19] ಹಾಗೆ ಆದರು. ಅನೇಕ ವಿಧದ ಶಾಪಗಳನ್ನು ಎಲ್ಲರ ಮೇಲೂ ಸುರಿಸಿದರು. ॥86॥ ರಾಧಾಕೃಷ್ಣಬಾಯಿಯು[20] ವಿಶೇಷವಾಗಿ ತೊಟ್ಟಿಲನ್ನು ಪುಡಿಮಾಡುವರೆಂಬ ಚಿಂತೆಗೆ ಒಳಗಾದಳು. ಅದನ್ನು ಸರಿಮಾಡುವುದು ಹೇಗೆ? ಅದು ಅವಳ ಚಿಂತೆಗೆ ಕಾರಣವಾಗಿತ್ತು. ॥87॥ "ದಯಮಾಡಿ ತೆಗೆದುಬಿಡಿ. ಬೇಗ ತೆಗೆದುಬಿಡಿ" ಅವಳು ಒಂದೇ ಸಮನೆ ಒತ್ತಾಯಿಸುತ್ತಿದ್ದಳು. ಕಾಕಾನು ತೊಟ್ಟಿಲನ್ನು ತೆಗೆಯಲು ಮುಂದೆ ಹೋದನು. ॥88॥ ಆಗ ಬಾಬಾರವರು ಅತ್ಯಂತ ಕ್ರೋಧಿತರಾಗಿ, ಕಾಕಾನ ಕಡೆಗೆ ಮುನ್ನುಗ್ಗಿದರು. ತೊಟ್ಟಿಲನ್ನು ತೆಗೆಯುವುದು ಮರೆತುಹೋಯಿತು. ಬಾಬಾರವರು ಮತ್ತೆ ಶಾಂತರಾದರು. ॥89॥ ಮಧ್ಯಾಹ್ನದ ವೇಳೆಯಲ್ಲಿ ಬಾಬಾರವರ ಅಪ್ಪಣೆ ಬೇಡಿದಾಗ ಅವರ ಉತ್ತರ ಎಲ್ಲರನ್ನೂ ಬೆರಗುಗೊಳಿಸಿತು. – "ತೊಟ್ಟಿಲನ್ನು ಇಷ್ಟು ಅವಸರವಾಗಿ ಏಕೆ ಬಿಚ್ಚುವಿರಿ? ಅದರ ಅವಶ್ಯಕತೆ ಇನ್ನೂ ಇದೆ." ॥90॥ ಅದರ ಆವಶ್ಯಕತೆಯಾದರೂ ಏನಿತ್ತು? ಸಾಯಿಯ ಮಾತುಗಳು ಎಂದಿಗೂ ವ್ಯರ್ಥವಾಗುವುದಿಲ್ಲ. ಸ್ವಲ್ಪ ಯೋಚಿಸಿದಲ್ಲಿ, ಹಬ್ಬ ಇನ್ನೂ ಪೂರ್ಣವಾಗದಿರುವ ಬಗ್ಗೆ ಅರಿವುಂಟಾಗುತ್ತದೆ. ॥91॥ ಹಬ್ಬವು ಒಂದು ಮಟ್ಟದವರೆಗೆ ಮಾತ್ರ ಸಾಗಿತ್ತು, ಆದರೆ ಮಾರನೆಯ ದಿನದ ಸಂಜೆಯವರೆಗೆ ಮತ್ತು ಗೋಪಾಲಕಾಲದ[21] ಸಮಯದವರೆಗೆ ಉತ್ಸವ ಪೂರ್ಣವಾಯಿತೆಂದು ತಿಳಿಸಲು ಆಗುವುದಿಲ್ಲ. ॥92॥ ಈ ರೀತಿಯಲ್ಲಿ, ಎರಡನೆಯ ದಿನ

ಗೋಪಾಲಕಾಲ ಮತ್ತು ಸಂಕೀರ್ತನೆಯ ನಂತರ ಬಾಬಾರವರು ತೊಟ್ಟಿಲನ್ನು ತೆಗೆಯಲು ಒಪ್ಪಿಗೆ ನೀಡಿದರು. ॥93॥ ಮಾರನೆಯ ವರ್ಷದಲ್ಲಿ ಭೀಷ್ಮನು ಇರಲಿಲ್ಲ. ಬಾಳಾ ಬುವಾ ಸತಾರ್ಕರ್‌ನನ್ನು ಕೀರ್ತನೆಗಾಗಿ ಕರೆಸಬೇಕಾಗಿತ್ತು, ಆದರೆ ಅವನು ಕವಟೆಗೆ[22] ಹೋಗಬೇಕಾಯಿತು. ॥94॥ ಆದ್ದರಿಂದ, 'ಆಧುನಿಕ ತುಕಾರಾಂ' ಎಂದು ಕರೆಯಲ್ಪಡುತ್ತಿದ್ದ ಬಾಳಾ ಬುವಾ ಭಜನಿಯನ್ನು ಕಾಕಾ ಮಹಾಜನಿಯು ಕರೆತಂದನು. ಅವನ ಕೈಗಳಿಂದ ಉತ್ಸವ ಆಚರಿಸಲಾಯಿತು. ॥95॥ ಭಜನಿಯೂ ದೊರಕದಿದ್ದಲ್ಲಿ ಕಾಕಾನೇ ಕೀರ್ತನೆ ಮಾಡುತ್ತಿದ್ದನು. ಏಕೆಂದರೆ ಅವನಿಗೆ ದಾಸಗಣು ರಚಿಸಿದ್ದ ರಾಮನವಮಿಯ ರಚನೆ ಬಾಯಿಪಾಠವಾಗಿತ್ತು. ॥96॥ ಮೂರನೆಯ ವರ್ಷ, ಬಾಳಾ ಬುವಾ ಸತಾರಕರ್‌ನೇ ಶಿರಡಿಗೆ ಆ ಸಮಾರಂಭದ ಸಮಯಕ್ಕೆ ಸರಿಯಾಗಿ ಆಗಮಿಸಿದನು. ಈ ಘಟನೆಯ ಬಗ್ಗೆ ಆದರಪೂರ್ವಕವಾಗಿ ಆಲಿಸಿರಿ. ॥97॥ ಸಾಯಿಬಾಬಾರವರ ಕೀರ್ತಿನೆಯನ್ನು ಕೇಳಿದ್ದ ಅವನಿಗೆ ದರುಶನದ ಆಕಾಂಕ್ಷೆ ಉದಯಿಸಿತು. ಆದರೆ ಮಾರ್ಗದಲ್ಲಿ ಅವನಿಗೆ ಜೊತೆಗಾರರು ಬೇಕಾಗಿತ್ತು, ಯಾರಾದರೂ ಸಿಗುವರೇ ಎಂದು ಕಾತರದಿಂದ ಕಾಯುತ್ತ ಇದ್ದನು. ॥98॥ ಬಾಳಾ ಬುವಾನು ತಾನೇ ಒಬ್ಬ ಹರಿದಾಸ (ಕೀರ್ತನಕಾರ)ನಾಗಿದ್ದನು. 'ಸತಾರಾ'ದವನಾಗಿದ್ದ ಅವನು ಆ ಸಮಯದಲ್ಲಿ ಬೊಂಬಾಯಿಯ ಪರೇಲ್‌ನಲ್ಲಿ ವಾಸವಾಗಿದ್ದನು. ॥99॥ ಸತಾರಾ ಜಿಲ್ಲೆಯ ಬೃಹತ್ ಸಿದ್ಧಕವಾಟೆ ಎಂಬಲ್ಲಿಒಂದು ದೇವಸ್ಥಾನವಿದ್ದು[23] ಅಲ್ಲಿ ಬುವಾನು ಪ್ರತಿವರ್ಷ ರಾಮನವಮಿಯ ದಿನ ಕೀರ್ತನೆ ನಡೆಸುತ್ತಿದ್ದನು. ಅದಕ್ಕಾಗಿ ಪ್ರತಿವರ್ಷ ಸಂಭಾವನೆ ಪಡೆಯುತ್ತಿದ್ದನು. ॥100॥ ಬಾಳಾ ಬುವಾನು ಎರಡು ವಾರ್ಷಿಕ ಉತ್ಸವಗಳಲ್ಲಿ ಸಂಬಂಧಿಸಿದ್ದನು. ಒಂದು ಆಷಾಢ ಏಕಾದಶಿ, ಮತ್ತೊಂದು ರಾಮನವಮಿ. ಇವೆರಡು ಚೈತ್ರ ಮಾಸದಲ್ಲಿಯೇ ಬರುತ್ತಿದ್ದವು. ॥101॥ ಮೊಘಲ್ ಚಕ್ರವರ್ತಿಯ ಶಾಸನಾಧಿಕಾರದ ಅನುಸಾರ ರೂ. 2400/=ಗಳನ್ನು ಮೂರ್ತಿಯ (ಬಡೇಬಾಬಾ)ರವರ ಖರ್ಚಿಗಾಗಿ ನಿಗದಿಪಡಿಸಲಾಗಿತ್ತು. ಮತ್ತು ಸಂಸ್ಥೆಯಿಂದಲೇ ಎಲ್ಲ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ॥102॥ ಈ ಎರಡು ಉತ್ಸವಗಳಿಗೆ ಬುವಾನಿಗೆ ರೂ. 30/=ಗಳನ್ನು ಕೊಡುತ್ತಿದ್ದರು. ಆದರೆ ಆ ವರ್ಷ ಕವಾಟೆ ಹಳ್ಳಿಯಲ್ಲಿ ಕಾಲರಾ ಸಾಂಕ್ರಾಮಿಕ ರೋಗ ಹರಡಿತ್ತು, ಹಳ್ಳಿಯವರು ಕಷ್ಟ ಕಾರ್ಪಣ್ಯದಲ್ಲಿದ್ದರು. ॥103॥ ಆದುದರಿಂದ ಅಲ್ಲಿ ರಾಮನವಮಿಯ ಹಬ್ಬವನ್ನು ರದ್ದುಗೊಳಿಸಲಾಗಿತ್ತು. ಬುವಾನು ಛುಟಿಯನ್ನು ತೆರವು ಗೊಳಿಸಿದ್ದರಿಂದ ಮುಂದಿನ ವರ್ಷ ಬರುವಂತೆ ಆಹ್ವಾನಪತ್ರಗಳನ್ನು ಸ್ವೀಕರಿಸಿದನು. ॥104॥ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಅವನಿಗೆ ರಾಮನ ಸೇವೆ ಮಾಡುವ ಅವಕಾಶ ತಪ್ಪಿತು ಮತ್ತು ಸಂಭಾವನೆಯನ್ನೂ ಸ್ವೀಕರಿಸಲಾಗಲಿಲ್ಲ. ಆದರೆ, ಅದು ಅವನಿಗೆ ಶಿರಡಿಗೆ ಹೋಗುವ ಅವಕಾಶಮಾಡಿಕೊಟ್ಟಿತು. ಅದರಿಂದಾಗಿ ಅವನು ದೀಕ್ಷಿತನನ್ನು[25] ಭೇಟಿಯಾದನು. ॥105॥ ದೀಕ್ಷಿತನು ಬಾಬಾರವರ ಪರಮ ಭಕ್ತ. ಶಿರಡಿಗೆ ಹೋಗುವ ಬಯಕೆಯೂ ನೆರವೇರುವಂತಾಗಿ ಅದು ತನ್ನ ಮೇಲೆ ಆಧರಿಸಿದ್ದರಿಂದ ಅವನಿಗೆ ಲೌಕಿಕ ಲಾಭದ ಜೊತೆಯಲ್ಲಿ ಆಧ್ಯಾತ್ಮಿಕ ಲಾಭವೂ ದೊರಕುವಂತಾಯಿತು.

॥106॥ ಆದ್ದರಿಂದ ಅವನು ದೀಕ್ಷಿತನಿಗೆ ಈ ರೀತಿ ತಿಳಿಸಿದನು. ವಾರ್ಷಿಕ ಆದಾಯವೂ ತಾತ್ಕಾಲಿಕವಾಗಿ ತಡೆಹಿಡಿಯಲ್ಪಟ್ಟಿದ್ದರಿಂದ ಬಾಬಾರವರ ದರ್ಶನ ಮಾಡಿ ಅಲ್ಲಿ ಕೀರ್ತನೆ ನಡೆಸುವೆನೆಂದು ತಿಳಿಸಿದನು. ॥107॥ ಭಾವು ಸಾಹೇಬನು ಅದಕ್ಕೆ ಹಣ ಪಾವತಿಯಬಗ್ಗೆ ನಿಶ್ಚಿತವಿಲ್ಲವೆಂದು ಉತ್ತರಿಸಿದನು. ಕೊಡಬೇಕಾ ಬೇಡವಾ ಎನ್ನುವುದು ಬಾಬಾರವರ ಕೈಯಲ್ಲಿದೆ ಮತ್ತು ಕೀರ್ತನೆ ಮಾಡಲೂ ಸಹ ಬಾಬಾರವರ ಅನುಮತಿ ಪಡೆಯಬೇಕಾಗುತ್ತದೆಂದನು. ॥108॥ ಈ ಮಾತುಕತೆ ನಡೆಯುತ್ತಿರುವಾಗಲೇ ಕಾಕಾ ಮಹಾಜನಿಯು ಅನಿರೀಕ್ಷಿತವಾಗಿ ಅಲ್ಲಿಗೆ ಬಂದು ಶಿರಡಿಯ ಪ್ರಸಾದವೆಂದು ಉದಿಯನ್ನು ಹಂಚಿದನು. ಇದನ್ನು ಶುಭಶಕುನವೆಂದು ಪರಿಗಣಿಸಲಾಯಿತು. ॥109॥ ಮಹಾಜನಿಯು ಆಗ ತಾನೇ ಶಿರಡಿಯಿಂದ ಹಿಂತಿರುಗಿದ್ದನು. ಅಲ್ಲೆಲ್ಲವೂ ಚೆನ್ನಾಗಿಯೇ ಇದೆಯೆಂದು ತಿಳಿಸಿ ಅನಂತರ ತನ್ನ ಮನೆಗೆ ಮರಳಿದನು. ॥110॥ ಅನಂತರ ದೀಕ್ಷಿತನು ಬಹಳ ಪ್ರೀತಿಯಿಂದ ಬುವಾನಿಗೆ ತಾನು ಬಾಬಾರವರ ಅನುಮತಿ ಕೇಳುವುದಾಗಿ ತಿಳಿಸಿದನು. ಅದು ದೊರಕಿದಲ್ಲಿ ಕೂಡಲೇ ನಿಶ್ಚಯವಾಗಿ ತಿಳಿಸುವುದಾಗಿ ಹೇಳಿದನು. ॥111॥ "ಪತ್ರ ಕೈಸೇರಿದ ಕೂಡಲೇ ಶಿರಡಿಗೆ ಹೊರಟು ಬಾ, ಪ್ರಯಾಣದ ವೆಚ್ಚದ ಬಗ್ಗೆ ಚಿಂತಿಸಬೇಡ. ನೀನು ಅದನ್ನು ಭರಿಸಬೇಕಾಗಿ ಬರುವುದಿಲ್ಲ. ಅದರ ಬಗ್ಗೆ ಸಂಶಯಬೇಡ." ॥112॥ ಅನಂತರ ದೀಕ್ಷಿತನು (ಬಾಳಾ ಬುವಾನಿಗಿಂತ) ಮುಂಚಿತವಾಗಿ ಹೋದನು. ಬಾಬಾರವರು ಅನುಮತಿ ನೀಡಿದರು. ಬಾಳಾ ಬುವಾನು ಶಿರಡಿಗೆ ಬಂದನು. ಮನಃಪೂರ್ತಿಯಾಗಿ ಸಾಯಿಯ ದರ್ಶನ ಪಡೆದನು. ॥113। ಸಾಯಿಬಾಬಾರವರು ರಾಮನವಮಿ ಉತ್ಸವವನ್ನು ತಮ್ಮ ಸಮಕ್ಷಮದಲ್ಲಿ ಅತಿ ಪ್ರೀತಿಯಿಂದ ಬಾಳಾ ಬುವಾನ ಕೈಯಿಂದ ಬಹು ವಿಜೃಂಭಣೆಯಿಂದ ನಡೆಸಿದರು. ॥114॥ ಬಾಳಾ ಬುವಾನು ಮನಸ್ಸಿನಲ್ಲೇ ಸಂತಸಗೊಂಡನು. ಅವನ ಉದ್ದೇಶ ಸಫಲವಾಯಿತು. ಸಾಯಿಯೂ ಬಹಳ ಆನಂದಪಟ್ಟರು. ಈ ರೀತಿ ಪ್ರತಿಯೊಬ್ಬರ ಆಶೆಗಳೂ ನೆರವೇರಿದವು. ॥115॥ ಅವರ ನಿರೀಕ್ಷೆಗಿಂತ ಅಧಿಕವಾಗಿಯೇ ಪೂರ್ಣಗೊಂಡಿದ್ದವು. ಅವನು150/= ರೂಪಾಯಿಗಳನ್ನು ಸ್ವೀಕರಿಸಲು ಅಪ್ಪಣೆಯಾಯಿತು. ಬುವಾನು ಅತೀವ ಆನಂದ ಪಟ್ಟನು. ॥116॥ ಬಾಳಾ ಬುವಾನಿಗೆ ಏಕೆ ಸಂತಸವಾಗಿಲ್ಲ? ಕವಾಟೆಯಲ್ಲಿನ 5 ವರ್ಷಗಳ ಕಾಲದ ಸಂಪಾದನೆಯಷ್ಟು ಒಂದೇ ಉತ್ಸವದಲ್ಲಿ ಬಾಬಾರವರು ನೀಡಿದ್ದರು. ಈ ರೀತಿ ಅವನು ಬಾಬಾರವರಿಗೆ ಋಣಿಯಾದನು. ॥117॥ ಮತ್ತೆ, ನಂತರ ದಾಸಗಣು ಶಿರಡಿಯಲ್ಲಿದ್ದಾಗ, ಬಾಬಾರವರನ್ನು ಪ್ರಾರ್ಥಿಸಿಕೊಂಡಾಗ ಅವರು ದಾಸಗಣುವಿಗೆ ಪ್ರತಿವರ್ಷಉತ್ಸವದಲ್ಲಿ ಕೀರ್ತನೆಯನ್ನು ಮಾಡುವ ಕಾರ್ಯವನ್ನು ಒಪ್ಪಿಸಿದರು. ॥118॥ ಅಲ್ಲಿಂದ ಇಲ್ಲಿಯವರೆಗೆ ಜನ್ಮೋತ್ಸವವನ್ನೇ ಬಹಳ ವೈಭವ, ಆಡಂಬರಗಳಿಂದ ಆಚರಿಸಲಾಗುತ್ತಿದೆ. ಮನಃಪೂರ್ತಿಯಾಗಿ ಅನ್ನವನ್ನು ಹಂಚಲಾಗುತ್ತಿದೆ. ಬಡವರು, ದೀನರು ಸಂತಸಪಡುತ್ತಾರೆ. ॥119॥ ಸಮಾಧಿಮಂದಿರದ ಮುಖ್ಯ ಪ್ರವೇಶದ್ವಾರದಲ್ಲಿ ಜಾನಪದ ಸಂಗೀತ, ವಾದ್ಯ ಸಂಗೀತದೊಡನೆ (ಚಂಗ್ ಬದ ಮತ್ತು ಶಹನಾಯಿ) ಬಾಬಾರವರ ನಾಮವು ಆಕಾಶದವರೆಗೆ ಪ್ರತಿಧ್ವನಿಸುತ್ತದೆ ಮತ್ತು

ಇಡೀ ವಾತಾವರಣವು ಉಲ್ಲಾಸದಿಂದ ತುಂಬಿರುತ್ತದೆ. ॥120॥ ಯಾವ ರೀತಿಯಲ್ಲಿ ಅವರು ಉತ್ಸವ ಮತ್ತು ಉರುಸ್‌ನ್ನು ಯೋಚಿಸಿದ್ದರೋ ಅದೇ ರೀತಿ ಗೋಪಾಲಗುಂಡನು ಹಳೆಯ ಶಿಥಿಲವಾದ ಮಸೀದಿಗೆ ಹೊಸರೂಪ ಕೊಡಲು ಪ್ರೇರಿತನಾದನು. ॥121॥ ಭಕ್ತನಾದ ಗೋಪಾಲಗುಂಡನು ತನ್ನ ಕೈಯಿಂದಲೇ ಮಸೀದಿಯನ್ನು ಜೀರ್ಣೋದ್ಧಾರ ಮಾಡಲು ನಿಶ್ಚಯಿಸಿ ಬೇಕಾದ ಕಲ್ಲುಚಪ್ಪಡಿಗಳನ್ನು ಸಿದ್ಧಪಡಿಸಿದನು. ॥122॥ ಆದರೆ ಜೀರ್ಣೋದ್ಧಾರದ ಕೆಲಸವು ಗುಂಡನಿಗೆ ನಿಯಮಿತವಾಗಿರಲಿಲ್ಲ. ಈ ಮಂಗಳ ಕಾರ್ಯಕ್ಕೆ ಬೇಕಾದ ಸಂದರ್ಭ ಅನಂತರ ನಿಶ್ಚಿತ ರೂಪದಲ್ಲಿ ಕೂಡಿಬಂದಿತು. ॥123॥ ಬಾಬಾರವರು ಜೀರ್ಣೋದ್ಧಾರದ ಕೆಲಸವು ನಾನಾ(ಚಂದೋರಕರ್)ನಿಂದ ಆಗಬೇಕೆಂದು ಇಚ್ಛಿಸಿದರೆಂದು ತೋರುತ್ತದೆ. ಮತ್ತೆ ನೆಲಕ್ಕೆ ಕಲ್ಲು ಹಾಸುವ ಕೆಲಸ ಕಾಕಾ(ದೀಕ್ಷಿತ್)ನದಾಯಿತು. ॥124॥ ಅದೇ ರೀತಿ ಅದು ಅನಂತರ ನೆರವೇರಿತು.ಪ್ರಾರಂಭದಲ್ಲಿ ಅನುಮತಿಗಾಗಿ ಪ್ರಾರ್ಥಿಸಿ ದಣಿದಿದ್ದರೂ, ನಂತರ ಅವನು ಮ್ಹಾಳಸಾಪತಿಯ ಮಧ್ಯಸ್ತಿಕೆ ಮಾಡಿದಾಗ ಬಾಬಾರವರು ಅನುಮತಿ ನೀಡಿದರು. ॥125॥ ಅದುಹಾಗಿರಲಿ. ಮಸೀದಿಯಲ್ಲಿ ನೆಲಕ್ಕೆ ಕಲ್ಲುಹಾಸುವ ಕೆಲಸ ಒಂದು ರಾತ್ರಿಯಲ್ಲೇ ಪೂರ್ಣಗೊಂಡಿತು. ಅಲ್ಲಿ ಮಾರನೆಯ ದಿನವೇ ಬಾಬಾರವರು ಬಂದು 'ಗಾದಿ'ಯ[28] ಮೇಲೆ ಕುಳಿತರು. ॥126॥ ಸನ್ 1911ನೆಯ ಇಸವಿಯಲ್ಲಿ ಸಭಾ ಮಂಟಪವನ್ನು ನಿರ್ಮಿಸಲಾಯಿತು. ಅದು ಅತ್ಯಂತಕಷ್ಟಸಾಹಸವಾದ ಕೆಲಸವಾಗಿತ್ತು, ಅದು ಅನೇಕ ಅಪಾಯಗಳನ್ನೊಳಗೊಂಡಿದ್ದು ಜನರು ಭಯಭೀತರಾಗಿ[9] ನಡುಗಿಹೋದರು. ॥127॥ ಈ ಕೆಲಸವನ್ನೂ ಸಹ ಭಕ್ತರು ರಾತ್ರಿಯೆಲ್ಲ ಕೆಲಸಮಾಡಿ ಪೂರೈಸಿದರು. ಅದೇ ರೀತಿಯಲ್ಲಿ ಅದೇ ಸನ್ನಿವೇಶಗಳಲ್ಲಿ ಮಾಡಿದರು. ॥128॥ ರಾತ್ರಿ ವೇಳೆಯಲ್ಲಿ ಬಹಳ ಕಷ್ಟದಿಂದ ಕಂಭಗಳನ್ನು ನಿಲ್ಲಿಸುತ್ತಿದ್ದರು. ಹಗಲಲ್ಲಿ ಬಾಬಾರವರು ಬಂದು ಅವುಗಳನ್ನು ತೆಗೆಸುತ್ತಿದ್ದರು. ಮತ್ತೆ ಅವಕಾಶ ದೊರೆತಾಗಲೆಲ್ಲಾ ಅವುಗಳನ್ನು ಮತ್ತೆ ನಿಲ್ಲಿಸುತ್ತಿದ್ದರು. ಈ ರೀತಿ ಎಲ್ಲರೂ ದಣಿದುಹೋದರು. ॥129॥ ಪ್ರತಿಯೊಬ್ಬರೂ ಸೊಂಟಕ್ಕೆ ಪಟ್ಟಿ ಕಟ್ಟಿ ರಾತ್ರಿಯನ್ನು ಹಗಲನ್ನಾಗಿ ಮಾಡಿದರು. ಬಹಳ ಶ್ರಮವಹಿಸಿಯಾದರೂ ತಮ್ಮ ಗುರಿಯನ್ನು ಸಾಧಿಸುವುದೇ ಉದ್ದೇಶವಾಗಿತ್ತು. ॥130॥ ದೀಕ್ಷಿತ್‌ನು ಆ ನಿವೇಶನವು ಸಭಾ ಮಂಟಪವನ್ನು[30] ಕಟ್ಟಲು ತಕ್ಕುದಾದ, ಯೋಗ್ಯವಾದ ಸ್ಥಳವೆಂದು ಯೋಚಿಸಿದ್ದನು. ಅಲ್ಲಿ ಮೊದಲು ಒಂದು ಬಯಲು ಜಾಗವೂ ಒಂದು ಚಿಕ್ಕ ಆಟದ ಮೈದಾನವೂ ಇದ್ದುವು. ॥131॥ ಅದಕ್ಕೆ ಬೇಕಾದ ಹಣವನ್ನು ಹೂಡಿ ಕಬ್ಬಿಣದ ಸ್ತಂಭಗಳಿಗೆ ಮತ್ತು ಕೋನಸಹಿತ ಆಧಾರದಕಂಭ, ಇವುಗಳನ್ನು ಬಾಬಾರವರು ಚಾವಡಿಯಲ್ಲಿದ್ದ[31] ಸಮಯ ನೋಡಿಕೊಂಡು ಮುಗಿಸಿದರು. ॥132॥ ಭಕ್ತರು ರಾತ್ರಿಯನ್ನು ಹಗಲಾಗಿ ಮಾಡಿ ಶ್ರಮವಹಿಸಿ ಕಂಭಗಳನ್ನು ನಿಲ್ಲಿಸುತ್ತಿದ್ದರು. ಆದರೆ, ಬಾಬಾರವರು ಚಾವಡಿಯಿಂದ ಹಿಂತಿರುಗಿದ ಕೂಡಲೇ ಅವುಗಳನ್ನು ತೆಗೆಸಿಹಾಕುತ್ತಿದ್ದರು. ॥133॥ ಒಂದು ಸನ್ನಿವೇಶದಲ್ಲಿ ಬಾಬಾರವರು ಅತಿಯಾಗಿ ಉದ್ರೇಕಗೊಂಡು ತಾತ್ಯಾನನ್ನು[32] ಒಂದು ಕೈಯಿಂದ ಕುತ್ತಿಗೆ ಪಟ್ಟಿಹಿಡಿದು ಮತ್ತೊಂದು ಕೈಯಿಂದ ಕಂಭವನ್ನು ಅಲ್ಲಾಡಿಸಿ ಅದನ್ನು

ತಲೆಕೆಳಗಾಗಿ ಮಾಡಲು ಹೊರಟರು. ॥134॥ ಅವರು ಅದನ್ನು ಅಲ್ಲಾಡಿಸಿ ಸಡಿಲಗೊಳಿಸಿದರು. ತಾತ್ಯಾನ ತಲೆಯ ರುಮಾಲನ್ನು ತೆಗೆದು ಒಂದು ಬೆಂಕಿಕಡ್ಡಿಯಿಂದ ಬೆಂಕಿ ಹಚ್ಚಿದರು ಮತ್ತು ಅದನ್ನು ಕೋಪದಿಂದ ಒಂದು ಹಳ್ಳಕ್ಕೆ ಎಸೆದರು. ॥135॥ ಆ ಸಮಯದಲ್ಲಿ ಅವರ ಕಣ್ಣುಗಳು ಬೆಂಕಿಯ ಉಂಡೆಗಳಾಗಿದ್ದವು. ಅವುಗಳನ್ನು ನೇರವಾಗಿ ದೃಷ್ಟಿಸಲು ಯಾರಿಗೆ ತಾನೇ ಸಾಧ್ಯ? ಪ್ರತಿಯೊಬ್ಬರೂ ಧೈರ್ಯಗುಂದಿದರು. ॥136॥ ಕೂಡಲೇ ಅವರು ತಮ್ಮ ಜೇಬಿಗೆ ಕೈ ಹಾಕಿ ಒಂದು ರೂಪಾಯಿಯನ್ನು ತೆಗೆದು ಒಂದು ಶುಭಗಳಿಗೆಯ ಸಂಕೇತದಂತೆ ಅಲ್ಲಿ ಬಿಸಾಡಿದರು. ॥137॥ ಶಾಪಗಳು ಮತ್ತು ಬೈಗಳು ಸುರಿದವು. ತಾತ್ಯಾನೂ ಸಹ ಮನದಲ್ಲೇ ಬಹಳ ಭಯಭೀತನಾಗಿದ್ದನು. ಅದೊಂದು ಕ್ಲಿಷ್ಟ ಸನ್ನಿವೇಶದಂತೆ ತೋರಿತು. ಇವೆಲ್ಲವೂ ಹೇಗೆ ನಡೆದವು? ॥138॥ ಅಲ್ಲಿದ್ದ ಪ್ರೇಕ್ಷಕರೆಲ್ಲರೂ ಬೆರಗಾಗಿ ನಿಶ್ಚೇತನರಾದರು. ಈ ಅಪಶಕುನ ಈ ದಿನ ಏಕೆ? ತಾತ್ಯಾನ ಮೇಲೆ ಬಂದಿರುವ ಈ ಕಷ್ಟದ ನಿವಾರಣೆ ಹೇಗೆ? ॥139॥ ಭಾಗೋಜಿ ಶಿಂಧೆಯು[33] ಧೈರ್ಯ ಮಾಡಿ ಎಚ್ಚರಿಕೆಯಿಂದ ಮುಂದೆ ಹೆಜ್ಜೆಯಿಟ್ಟನು. ಅವನೂ ಸಹ ಸುಲಭವಾಗಿ ಬಲಿಪಶುವಾದನು ಮತ್ತು ಬಾಬಾರವರ ಘರ್ಜನೆಗೊಳಗಾದನು. ॥140॥ ಮಾಧವರಾವ್‌ನೂಸಹ ಅವರಿಂದ ಹಿಡಿಯಲ್ಪಟ್ಟನು ಮತ್ತು ಬಾಬಾರವರಿಂದ ಬೈಗಳ ಮಳೆ ಪಡೆದನು. ಧೈರ್ಯ ಮಾಡಿ ಮಧ್ಯಸ್ತಿಕೆ ಮಾಡಲು ಹೋದವರೆಲ್ಲರಿಗೂ ಇದೇ ರೀತಿ ಬಾಬಾರವರಿಂದ ಪ್ರಸಾದ ದೊರೆಯಿತು. ॥141॥ ಬಾಬಾರವರ ಮುಂದೆ ಹೋಗುವ ಸಾಹಸ ಯಾರು ಮಾಡುತ್ತಾರೆ? ತಾತ್ಯಾನನ್ನು ರಕ್ಷಿಸುವುದು ಹೇಗೆ? ಈ ರೀತಿ ಎಲ್ಲರೂ ಮಾತನಾಡುತ್ತಿರುವಾಗಲೇ ಬಾಬಾರವರ ಕೋಪ ಇಳಿದು ಅವರು ಶಾಂತರಾದರು. ॥142॥ ಕೂಡಲೇ ಒಬ್ಬ ವರ್ತಕನನ್ನು ಕರೆಸಲಾಯಿತು ಮತ್ತು ಒಂದು ಜರಿ ಅಂಚಿನ ರುಮಾಲಿಗಾಗಿ ಆಜ್ಞಾಪಿಸಲಾಯಿತು. ಅವರೇ ಸ್ವತಃ ಅದನ್ನು ತಾತ್ಯಾನ ತಲೆಗೆ ಸುತ್ತಿದರು. ಅದು ಒಬ್ಬ ರಾಜನಿಗೆ ತೋರಿಸುವ ಗೌರವದಂತಿತ್ತು. ॥143॥ ಜನರು ಬೆರಗಾಗಿ ಆ ಕೋಪಕ್ಕೆ ಕಾರಣವಾಗಲೀ ತಾತ್ಯಾನ ಮೇಲಾದ ಆಘಾತವಾಗಲೀ ಬಾಬಾರವರು ಇಷ್ಟೊಂದು ಗುಲ್ಲೆಬ್ಬಿಸಲು ಕಾರಣವನ್ನು ಅರಿಯದಾದರು. ॥144॥ ಕೋಪಗೊಳ್ಳಲು ಕಾರಣವೇನು? ಮತ್ತೆ ಮುಂದಿನ ಕ್ಷಣಗಳಲ್ಲಿ ಅದನ್ನು ಸಂತಸದ ಭಾವಕ್ಕೆ ತಿರುಗಿಸಿದ್ದೇಕೆ? ಅದಕ್ಕೆ ಮೂಲಕಾರಣ ಯಾರಿಗೂ ಗೊತ್ತಿಲ್ಲ. ॥145॥ ಕೆಲವೊಮ್ಮೆ ಅವರು ಶಾಂತವಾಗಿರುವರು ಮತ್ತು ಪ್ರೀತಿಯಿಂದ ಮಾತನಾಡಿಸುವರು. ಮತ್ತೊಮ್ಮೆ ಯಾವುದೇ ಸಹಜ ಕಾರಣವಿಲ್ಲದೆ ಕಣ್ಣು ಮಿಟುಕಿಸುವಷ್ಟರಲ್ಲಿ ಅವರು ಅನಿರೀಕ್ಷಿತವಾಗಿ ಕ್ರೋಧಿತರಾಗುತ್ತಾರೆ. ॥146॥ ಅದು ಹಾಗಿರಲಿ. ಬಾಬಾರವರ ಚರಿತ್ರೆಗಳು ಈ ರೀತಿ ಇವೆ. ಒಂದನ್ನು ವಿವರಿಸಲು ಹೊರಟಾಗ ಮತ್ತೊಂದು ನೆನಪಿಗೆ ಬರುತ್ತದೆ. ಆಗ ಯಾವುದನ್ನು ಹೇಳಲಿ, ಯಾವುದನ್ನು ತಡೆಹಿಡಿಯಲಿ? ಮನಸ್ಸನ್ನು ಬೇರೆಡೆಗೆ ತಿರುಗಿಸುವ ಪ್ರವೃತ್ತಿ ಯೋಗ್ಯವಲ್ಲ. ॥147॥ ನನಗೆ ಯಾವುದೇ ಪಕ್ಷಪಾತವಿಲ್ಲ ಮತ್ತು ಯಾವುದನ್ನೂ ಆಯ್ಕೆಮಾಡುವುದಿಲ್ಲ. ಯಾವ ಚರಿತ್ರೆಯು ಆ ಸನ್ನಿವೇಶಕ್ಕೆ ತಕ್ಕುದೋ ಅದು ಶ್ರೋತೃಗಳ ಇಚ್ಛೆಗಳನ್ನು ಪೂರೈಸುತ್ತದೆ ಮತ್ತು

ಅವರ ಹೃದಯಗಳಲ್ಲಿ ಆನಂದ ತುಂಬುತ್ತದೆ. ॥148॥ ಮುಂದಿನ ಅಧ್ಯಾಯದಲ್ಲಿ ಹಿರಿಯರಿಂದ ಸಂಗ್ರಹವಾದ ಕತೆಗಳನ್ನು ಆಲಿಸಿ ಬಾಬಾರವರು ಹಿಂದುವೋ ಮುಸ್ಲಿಮರೋ ನಾನು ಕೇಳಿದಷ್ಟು ಚೆನ್ನಾಗಿ ಅದನ್ನು ಪುನರ್ ನಿರೂಪಿಸುತ್ತೇನೆ. ॥149॥ ದಕ್ಷಿಣೆಯಾಗಿ[35] ಸಂಗ್ರಹಿಸಿದ ಹಣವನ್ನು ಯಾವ ರೀತಿ ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲು ಉಪಯೋಗಿಸುತ್ತಿದ್ದರು ಮತ್ತು ಅವರು ಹೇಗೆ ಧೋತಿ ಪೋಟಿ ಮತ್ತು ಖಂಡಯೋಗದ ಮೂಲಕ ತಮ್ಮ ದೇಹದಂಡನೆ ಮಾಡುತ್ತಿದ್ದರು. ॥150॥ ಅವರು ಇತರರ ಒಳಿತಿಗಾಗಿ ಎಷ್ಟು ಶ್ರಮವಹಿಸುತ್ತಿದ್ದರು[36] ಮತ್ತು ತಮ್ಮ ಭಕ್ತರ ಕಷ್ಟಗಳನ್ನು ಹೇಗೆ ಪರಿಹರಿಸುತ್ತಿದ್ದರು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಪುತ್ತ್ರೋತೃಗಳು ಅದರಿಂದ ಸಂತಸಹೊಂದುತ್ತಾರ ॥151॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ರಾಮಜನ್ಮ ದಿನಾಚರಣೆಯ ನಿರೂಪಣೆ" ಎಂಬ ಆರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಬಾಬಾರವರು ಹೊತ್ತಿಸಿದ ಅಗ್ನಿಯಿಂದ ತಂದ ಪವಿತ್ರವಾದ ಬೂದಿ. ಅದು ಶಾಶ್ವತವಾಗಿ ಇಂದಿಗೂ ಉರಿಯುತ್ತಿದೆ.
2. ಎಂಟು ರೀತಿಯ ಸಾತ್ವಿಕ ಬದಲಾವಣೆಗಳು ದೇಹ ಮತ್ತು ಮನಸ್ಸಿನಲ್ಲಿ ಉಂಟಾಗುತ್ತವೆ. ಅವು – ನಿಶ್ಚಲತೆ, ಬೆವರುವಿಕೆ, ಭಯದಿಂದಾಗುವ ರೋಮಾಂಚನ, ಮಾತುನಿಲ್ಲುವಿಕೆ, ನಡುಕ, ಬಿಳಿಚಿಕೊಳ್ಳುವುದು, ಕಣ್ಣೀರು, ಪ್ರಜ್ಞೆ ತಪ್ಪುವಿಕೆ.
3. ಕೃಷ್ಣನ ಉತ್ತಮ ಶಿಷ್ಯ.
4. ಅವರು ಕೋಪರಗಾಂವನಲ್ಲಿ ಕಂದಾಯ ಇಲಾಖೆಯಲ್ಲಿ ಮುಖ್ಯ ಪರಿವೀಕ್ಷಕರಾಗಿದ್ದರು.
5. ಧಾರ್ಮಿಕ ಉತ್ಸವ.
6. ಹಳ್ಳಿಯ ಅಧಿಕಾರಿ.

7. ನಾನಾ ಸಾಹೇಬ್ ನಿಮೋಣಕರ್ ಅಂದರೆ ಶಂಕರರಾವ್ ರಘುನಾಥ ದೇಶಪಾಂಡೆ.

8. ಅಹಮದ್ ನಗರದ ದಾಮೋದರ ರಾಣೆ.

9. ಕ್ರಿ. ಶ. 1911.

10. ಆರತಿ ಪುಸ್ತಕದ ಲೇಖಕರು.

11. ಲಕ್ಷ್ಮಣ ಗಣೇಶ ಅಲಿಯಾಸ್ ಕಾಕಾ ಮಹಾಜನಿ.

12. ಕೀರ್ತನಕಾರ.

13. ಅವಳು ಸುಂದರಾಬಾಯಿ ಕ್ಷೀರಸಾಗರ ಎಂಬ ಬಾಲವಿಧವೆ. ಪಂಡರಾಪುರದಿಂದ ಬಂದು ತಾನೇ ಇಚ್ಛೆಪಟ್ಟು ಶಿರಡಿಯಲ್ಲಿ ಸುಮಾರು ಕ್ರಿ. ಶ. 1907ರಿಂದ ನೆಲೆಸಿದಳು.

14. ಶುಂಠಿ ಸಹಿತವಾದ ಸಿಹಿ ಮಿಠಾಯಿ.

15. ಸಣ್ಣ ಕಾಲುವೆಯ ಪಕ್ಕದ ತೋಟ.

16. ಪ್ರತಿ ಮಸೀದಿಯಲ್ಲೂ ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಒಂದು ಬಿರುಕು ಇಟ್ಟಿರುತ್ತಾರೆ.

17. ಮಂಗಳವಾಗುವುದಕ್ಕಾಗಿ.

18. ಅರ್ಧ ಸಿಂಹದ ನಾರಾಯಣನ ಅವತಾರ.

19. ---"---- " ---- "----

20. ಅವಳು ಉತ್ಸವಕ್ಕಾಗಿ ತೊಟ್ಟಿಲನ್ನು ನೀಡಿದಳು.

21. ಹಬ್ಬ ಮತ್ತು ಸಂತೋಷಪಡುವುದು. ಒಂದು ಮಣ್ಣಿನ ಮಡಕೆಯನ್ನು ಒಡೆಯುವುದು. ಅದರಲ್ಲಿ ಮೊಸರು, ಅನ್ನ, ನಾಣ್ಯ ಇತ್ಯಾದಿ ಹಾಕುತ್ತಾರೆ. ಮಡಕೆಯನ್ನು ಎತ್ತರದಲ್ಲಿ ಕಟ್ಟಿ ಮಾನವ ಗೋಪುರಮಾಡಿ ಕೋಲಿನಿಂದ ಮಡಕೆ ಒಡೆದು ಖುಷಿಪಡುತ್ತಾರೆ.

22. ಬೃಹತ್ ಸಿದ್ಧ ಕವಾಟೆಯು ಸತಾರಾ ಜಿಲ್ಲೆಯ ಒಂದು ಸಣ್ಣ ಸ್ಥಳ. ಸತಾರಕರ್‌ನು ಅನೇಕ ವರ್ಷಗಳಿಂದ ಅಲ್ಲಿ ರಾಮನವಮಿ ಕೀರ್ತನೆ ನಡೆಸುತ್ತಿದ್ದನು.

23. ಸಂಸ್ಥೆ.

24. ಅಕ್ಬರ್, ಆ ಸಂಸ್ಥೆಯಲ್ಲಿ ಶಿವರಾತ್ರಿಯನ್ನೂ ಆಚರಿಸುತ್ತಿದ್ದರು.
25. ಹರಿ ಸೀತಾರಾಂ ದೀಕ್ಷಿತ್.
26. ಶಿರಡಿಯಲ್ಲಿ ಈಗಲೂ ರಾಮನವಮಿ ಉತ್ಸವವನ್ನು ಆಚರಿಸಲಾಗುತ್ತದೆ.
27. ಖಂಡೋಬಾ ದೇವಸ್ಥಾನದ ಅರ್ಚಕನೇ ಅಲ್ಲದೆ ಒಬ್ಬ ಅಕ್ಕಸಾಲಿಗನೂ ಆಗಿದ್ದನು.
28. ಕುಳಿತುಕೊಳ್ಳಲು ಕೊಡುವ ಆಸನ.
29. ಪೂರ್ಣಗೊಳಿಸಲು ಉಂಟಾಗುವ ಅಡಚಣೆಗಳ ಭಯ.
30. ಜನರು ಸೇರಲು ನಿಗದಿ ಪಡಿಸಿದ ಬಯಲುಪ್ರದೇಶ.
31. 10 ಡಿಸೆಂಬರ್ 1909 ರಿಂದ ಬಾಬಾರವರು ಚಾವಡಿಯಲ್ಲಿ ದಿನಬಿಟ್ಟು ದಿನ ಮಲಗುತ್ತಿದ್ದರು. ಶೇಜಾರತಿಯನ್ನು ಅಲ್ಲಿಯೇ ಬೆಳಗಲಾಗುತ್ತಿತ್ತು.
32. ತಾತ್ಯಾಕೋತೆ ಪಾಟೀಲ್, ಬಾಯಜಾ ಬಾಯಿಯ ಪ್ರೀತಿಯ ಮಗ.
33. ಅವನಿಗೆ ಕುಷ್ಠರೋಗ ಆವರಿಸಿತ್ತು. ಆದರೂ ಅವನು ಬಾಬಾರವರ ಶ್ರೇಷ್ಠ ಭಕ್ತನಾಗಿದ್ದನು. ಅದಕ್ಕಾಗಿ ಬಾಬಾರವರು ಮಸೀದಿಯಲ್ಲಿ ತುಪ್ಪದಿಂದ ತಮ್ಮ ಕೈಯಿಂದ ಕಾಲಿನವರೆಗೆ ಬೆಳಗಿನ ಸಮಯದಲ್ಲಿ ಮಾಲೀಶು ಮಾಡಲು ಹೇಳಿದ್ದರು.

    ಬಾಬಾರವರು ಬೆಳಗ್ಗೆ ಲೇಂಡಿಗೆ ಹೋಗುವಾಗ ಬಾಗೋಜಿಯೇ ಬಾಬಾರವರ ತಲೆಯ ಮೇಲೆ ಛತ್ರಿಯನ್ನು ಒಂದು ಕೈಯಲ್ಲಿ ಹಿಡಿದು ಮತ್ತೊಂದು ಕೈಯಲ್ಲಿ ನೀರಿನ ಮಡಕೆಯನ್ನು ಹಿಡಿದು ಹೋಗುತ್ತಿದ್ದನು.
34. ದೇಶಪಾಂಡೆ, ಬಾಬಾರವರ ಅತ್ಯಂತ ಪ್ರಿಯಭಕ್ತ, ಅವನೊಬ್ಬ ಮಾತ್ರ ಬಾಬಾರವರನ್ನು ಸಮಜಾಯಿಸಿ ಸಲಿಗೆಯುಮಾತನಾಡಬಲ್ಲವನಾಗಿದ್ದನು.
35. ಬಹುಮಾನ ನೀಡುವುದು.
36. ಸೇವಿಸಲ್ಪಡುವವನು.



# ಅಧ್ಯಾಯ - 7

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## " ವಿವಿಧ ಕಥೆಗಳ ನಿರೂಪಣೆ "

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದ ಎಳೆಗಳನ್ನು ತೆಗೆಯೋಣ. ಬಾಬಾರವರು ದೇವಸ್ಥಾನಗಳ ಜೀರ್ಣೋದ್ಧಾರವನ್ನು ಎಷ್ಟು ಇಷ್ಟಪಡುತ್ತಿದ್ದರೆಂಬುದನ್ನು ನೆನೆಯೋಣ. ॥1॥ ಅವರು ಇತರರಿಗೆ ಎಷ್ಟು ಕರುಣೆ ತೋರುತ್ತಿದ್ದರು, ತಮ್ಮ ಭಕ್ತರನ್ನು ಹೇಗೆ ರಕ್ಷಣೆ ಮಾಡುತ್ತಿದ್ದರು ಮತ್ತು ಅವರನ್ನೆಲ್ಲ ಎಷ್ಟರ ಮಟ್ಟಿಗೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು! ಅದರಲ್ಲೇ ಅವರು ತಮ್ಮನ್ನು ತಾವು ಸವೆಸಿಕೊಳ್ಳುತ್ತಿದ್ದರು. ಭಕ್ತರಿಗಾಗಿ ಎಷ್ಟು ಕಷ್ಟ ಅನುಭವಿಸುತ್ತಿದ್ದರು! ॥2॥ ಅವರು ಖಂಡಯೋಗ ಅಭ್ಯಾಸ ಮಾಡುವಾಗ ಸಮಾಧಿಯಲ್ಲಿರುತ್ತಿದ್ದರು[1]. ಅವರು ಧೋತಿ-ಪೋತಿ ಮತ್ತಿತರ ಯೋಗಾಭ್ಯಾಸಗಳನ್ನೂ ಮಾಡುತ್ತಿದ್ದರು. ಕೆಲವು ವೇಳೆ ಅವರು ತಮ್ಮ ತಲೆ, ಕಾಲುಗಳು ಮತ್ತು ತೋಳುಗಳನ್ನು ದೇಹದಿಂದ ಬೇರ್ಪಡಿಸಿ ಮತ್ತೆ ಹಿಂದಿನ ಹಾಗೆ ಒಟ್ಟಿಗೆ ಜೋಡಿಸುತ್ತಿದ್ದರು. ॥3॥ ಅವರನ್ನು ಹಿಂದುವೆಂದು ಕರೆಯೋಣವೆಂದರೆ ಮುಸ್ಲಿಮರ ತರಹ ಕಾಣುತ್ತಿದ್ದರು. ಮುಸ್ಲಿಂ ಎಂದಾದರೆ ಅವರಿಗೆ ಹಿಂದುವಿನ ಎಲ್ಲಾ ಮಂಗಳಕರ ಲಕ್ಷಣಗಳೂ ಇದ್ದವು. ಈ ರೀತಿ ಅವರದು ವಿಶಿಷ್ಟವಾದ ಅವತಾರವಾಗಿತ್ತು, ಯಾವ ಪಂಡಿತನು ಅವರನ್ನು ವರ್ಣಿಸಬಲ್ಲನು? ॥4॥ ಅವರು ಹಿಂದೂವೋ, ಮುಸ್ಲಿಮರೋ ಸ್ವಲ್ಪ ಮಾತ್ರವಾದರೂ ಸಹ ಯಾರೂ ಊಹೆಮಾಡಲು ಆಗುತ್ತಿರಲಿಲ್ಲ. ಎರಡೂ

ಪಂಗಡದವರಿಗೆ ಅವರ ವರ್ತನೆ ಒಂದೇ ರೀತಿಯದಾಗಿತ್ತು. ||5|| ರಾಮನವಮಿಯು ಒಂದು ಹಿಂದೂ ಹಬ್ಬವಾಗಿತ್ತು. ಅದನ್ನು ಅವರು ಸ್ವಂತ ಹಬ್ಬದಂತೆಯೇ ತೊಟ್ಟಿಲನ್ನು ಸಭಾಮಂಟಪದಲ್ಲಿ ಕಟ್ಟಿ ಕಥೆ ಮತ್ತು ಕೀರ್ತನೆಗಳನ್ನು ನಡೆಸುತ್ತಿದ್ದರು. ||6|| ರಸ್ತೆಯ ಚೌಕದಲ್ಲಿ ಅವರ ಎದುರಿನಲ್ಲೇ ತೊಟ್ಟಿಲನ್ನು ಕಟ್ಟಿ ಕೀರ್ತನೆಗಳನ್ನು ಮಾಡಲಾಗುತ್ತಿತ್ತು. ಅದೇ ರಾತ್ರಿಯಂದು ಅವರು ಮುಸ್ಲಿಮರ ಚಂದನದ ಮೆರವಣಿಗೆಗೂ[2] ಅನುಮತಿ ಇತ್ತಿದ್ದರು. ||7|| ಬಹಳ ಜನ ಮುಸ್ಲಿಮರು ಬರಲು ಇಚ್ಛಿಸಿ ಚಂದನದ ಮೆರವಣಿಗೆಯಲ್ಲಿ ಅತ್ಯಂತ ಅಬ್ಬರ ವೈಭವಗಳಿಂದ ಭಾಗವಹಿಸುತ್ತಿದ್ದರು. ಅವರು ಈ ಎರಡೂ ಸಮಾರಂಭಗಳನ್ನು ಸಮನಾದ ಸಂತೋಷದಿಂದ ಆಚರಿಸುತ್ತಿದ್ದರು. ||8|| ರಾಮನವಮಿಯ ದಿನವು ಮುಗಿಯುತ್ತಿದ್ದಂತೆಯೇ ಕುಸ್ತಿಯ ಪಂದ್ಯವನ್ನು ಆಡಿಸಿ ಬಹಳ ಉತ್ಸಾಹದಿಂದ ಕುದುರೆ, ಕಡಗ ಮತ್ತು ರುಮಾಲು ಇವುಗಳನ್ನು ಬಹುಮಾನವಾಗಿ ಕೊಡುತ್ತಿದ್ದರು. ||9|| ಗೋಕುಲಾಷ್ಟಮಿ[3] ಹಬ್ಬ ಬಂದಾಗ ಅವರು ಗೋಪಾಲಕಾಲ ನಡೆಸುತ್ತಿದ್ದರು. ಈದ್ ದಿನದಲ್ಲಿ ಮುಸ್ಲಿಮರಿಗೆ ನಮಾಜ್‌ನಿಂದ ವಿನಾಯಿತಿ ಇರಲಿಲ್ಲ. ||10|| ಒಮ್ಮೆ ಮೊಹರಮ್ ಹಬ್ಬ ಬಂದಿತು. ಕೆಲವು ಮುಸ್ಲಿಮರು ಒಂದು ಹಳ್ಳಿಯಲ್ಲಿ ತಾಜಿಯಾ ಮೆರವಣಿಗೆಯನ್ನು ನಡೆಸಲು ಅಪ್ಪಣೆ ಬೇಡಿದರು. ||11|| ಅವರ ಅಪ್ಪಣೆ ಮೇರೆಗೆ ತಾಜಿಯಾವನ್ನು ಕಟ್ಟಲಾಯಿತು. ಅದನ್ನು ಕೆಲವು ದಿನಗಳು ಅಲ್ಲಿಟ್ಟು 5ನೆಯ ದಿನ ತೆಗೆಯಲು ಹೇಳಲಾಯಿತು. ಇಂತಹ ಸಂತೋಷ ಅಥವಾ ಅಗಲಿಕೆಯ ನೋವು – ಬಾಬಾರವರಿಗೆ ಅಂತಹ ಯಾವ ಭಾವನೆಯೂ ಇರಲಿಲ್ಲ. ||12|| ಇವರನ್ನು ಮುಸ್ಲಿಮರೆಂದು ತಿಳಿಯೋಣವೆಂದರೆ ಕಿವಿಗಳನ್ನು ಚುಚ್ಚಿಸಿಕೊಂಡಿದ್ದರು. ಹಿಂದುವೆಂದರೆ ಅವರಿಗೆ ಸುನ್ನತಿಯಲ್ಲಿ ನಂಬಿಕೆಯಿತ್ತು. ಈ ರೀತಿ ಹಿಂದೂವೂ ಅಲ್ಲ ಮುಸ್ಲಿಮರೂ ಅಲ್ಲ. ಈ ರೀತಿ ಸಾಯಿಯ ಅವತಾರ ಪವಿತ್ರವಾಗಿತ್ತು. ||13|| ಅವರು ಹಿಂದೂವಾದರೆ ಸದಾ ಮಸೀದಿಯಲ್ಲಿ ವಾಸಮಾಡುತ್ತಿದ್ದರು. ಮುಸ್ಲಿಮರೆಂದಾದರೆ ಮಸೀದಿಯಲ್ಲಿ ಹಗಲು ರಾತ್ರಿ ಸದಾ ಅಗ್ನಿಯನ್ನು ಉರಿಸುತ್ತಿದ್ದರು. ||14|| ಮಸೀದಿಯಲ್ಲಿಯೇ ಒಂದು ಬೀಸುವ ಕಲ್ಲು ಇದ್ದು ಅಲ್ಲಿ ಬೀಸುವಿಕೆ ನಡೆಯುತ್ತಿತ್ತು. ಮಸೀದಿಯಲ್ಲಿ ಘಂಟಾನಾದ ಮೊಳಗುತ್ತಿತ್ತು ಮತ್ತು ಶಂಖವನ್ನೂ ಊದಲಾಗುತ್ತಿತ್ತು. ಮಸೀದಿಯಲ್ಲಿ ಪವಿತ್ರ ಅಗ್ನಿಗೆ ಆಹುತಿಕೊಡಲಾಗುತ್ತಿತ್ತು. ಅವರು ಇದೆಂತಹ ಮುಸ್ಲಿಮರಾಗಿದ್ದರು? ||15|| ಮಸೀದಿಯಲ್ಲಿ ಸದಾ ಭಜನೆ ನಡೆಯುತ್ತಿತ್ತು. ಉಚಿತ ಅನ್ನದಾನ, ಭಗವಂತನಿಗೆ ನೈವೇದ್ಯ, ಪಾದಪೂಜೆ ಇವುಗಳು ನಡೆಯುತ್ತಿದ್ದವು. ಅವರು ಅದೆಂತಹ ಮುಸ್ಲಿಮರಾಗಿದ್ದರು? ||16|| ಇವರನ್ನು ಮುಸ್ಲಿಮರೆಂದರೆ ಬ್ರಾಹ್ಮಣರ ಉತ್ತಮ ಕರ್ತವ್ಯವಾದ ಪೂಜೆ, ಅಗ್ನಿಹೋತ್ರಗಳನ್ನೇ ಆಚರಿಸಿ ತಮ್ಮ ಅಹಂಭಾವವನ್ನು ಅದರಲ್ಲಿ ಒಪ್ಪಿಸಿ ಪರಿಶುದ್ಧರಾಗಿ ಶರಣಾಗತರಾಗಿ ವಂದಿಸುತ್ತಿದ್ದರು. ||17|| ಈ ರೀತಿ ಜನರು ಮನಸ್ಸಿನಲ್ಲಿಯೇ ಅಚ್ಚರಿಪಟ್ಟರು. ಏನೇ ಅನುಭವವಾಗಲಿ ಅದೇ ರೀತಿ ವರ್ತಿಸುತ್ತ ದರ್ಶನ ಸಮಯದಲ್ಲಿ ಮೌನವಾಗಿರುತ್ತಿದ್ದರು. ||18|| ಪರಮಾತ್ಮನಲ್ಲಿ ಪೂರ್ಣ ಶರಣಾದ ವ್ಯಕ್ತಿಯನ್ನು ಹಿಂದೂ ಅಥವಾ ಮುಸ್ಲಿಂ ಎಂದು ಕರೆಯಲಾಗುವುದೇ? ಅವನು

ನೀಚ ಜಾತಿಯಲ್ಲಿ ಹುಟ್ಟಿರಲಿ ಅಥವಾ ಜಾತಿಯಿಲ್ಲದೆ ಹುಟ್ಟಿರಲಿ (ಸಮಾಜದ ಹೊರಗಡೆ), ಜಾತಿಯು ಅವರಿಗೆ ಪ್ರಾಮುಖ್ಯತೆಯು ಒದಗಲ್ಲಾಗಿರಲಿಲ್ಲ. ॥19॥ ದೇಹಭಾವವನ್ನು ತ್ಯಜಿಸಿರುವವನು, ಹಿಂದೂವೋ ಮುಸ್ಲಿಮನೋ ಅವರಿಗೆ ಎಲ್ಲಾ ಜಾತಿಪಂಥಗಳೂ ಸಮನಾಗಿದ್ದವು. ಜಾತಿ ಆಧಾರಿತ ಪಕ್ಷಪಾತ ಅವರಿಗೆ ಅನ್ವಯಿಸುತ್ತಿರಲಿಲ್ಲ. ॥20॥ ಅವರು ಫಕೀರರಿಂದ ಮಾಂಸವನ್ನು ಸ್ವೀಕರಿಸುತ್ತಿದ್ದರು. ತಾವಾಗಿಯೇ ಮೀನು ಸೇವಿಸುತ್ತಿದ್ದರು. ಅವರು ಊಟಮಾಡುವಾಗ ಒಂದು ನಾಯಿಯು ಬಾಯಿ ಹಾಕಿದರೂ ಅಸಹ್ಯಪಟ್ಟುಕೊಳ್ಳುತ್ತಿರಲಿಲ್ಲ. ॥21॥ ಒಬ್ಬ ರೈತನು ಆ ವರ್ಷದಲ್ಲಿ ಬೆಳೆದ ಧಾನ್ಯವನ್ನು ಉಗ್ರಾಣದಲ್ಲಿ ಸಂಗ್ರಹಿಸಿಡುತ್ತಾನೆ. ಮರು ವರ್ಷ ಎಲ್ಲಾದರೂ ಕೊರತೆ ಉಂಟಾದರೆ ಅದು ಉಪಯೋಗಕ್ಕೆ ಬರುತ್ತದೆ. ॥22॥
° ÁUÉÄ BÉÃ MÀz À UÉÃÄ ÀÃ®z ÀvÀA§ UÉÃÄ¢ ÀÀ ÀCÀß±ÉÃR j ¸ÃÀ/vÀÄ° ÁUÉÄ BÉÃ z ÀÉ À ÀÀß©Ã ÀÃ MÀz À ©Ã À ÀPÀÀ
ಮಸೀದಿಯಲ್ಲಿತ್ತು. ಅಲ್ಲಿ ಧಾನ್ಯವನ್ನು ಕೇರಲು ಬೇಕಾದ ಮೊರಗಳೂ ಇದ್ದುವು. ಒಬ್ಬ ಗೃಹಸ್ಥನ ಜೀವನಕ್ಕೆ ಯಾವುದೂ ಕೊರತೆ ಇರಲಿಲ್ಲ. ॥23॥ ಪೆಂಡಾಲಿನಲ್ಲಿ ಒಂದು ಅಲಂಕೃತವಾದ ಸುಂದರ ಮತ್ತು ವಿಶೇಷವಾದ ತುಳಸಿ ಬೃಂದಾವನ್ ಇತ್ತು. ಹತ್ತಿರವೇ ಸುಂದರ ಕೆತ್ತನೆ ಉಳ್ಳ ಮರದ ತೇರು[9] ಇತ್ತು. ॥24॥ ನನ್ನ ಪೂರ್ವಜನ್ಮದ ಪುಣ್ಯಕಾರ್ಯಗಳಿಂದಲೇ ನಾನು ಈ ಒಳ್ಳೆಯದೆಲ್ಲದರ ಸಂಗಕ್ಕೆ ಬಂದೆನು. ಇವುಗಳನ್ನು ನನ್ನ ಮನಸ್ಸಿನಲ್ಲಿ ಬಂಧಿಸಿಟ್ಟುಕೊಂಡು ಕೊನೆಯವರೆಗೆ ಯಾವ ಕೊರತೆಯನ್ನೂ ಅನುಭವಿಸುವುದಿಲ್ಲ. ॥25॥ ನನ್ನ ಹಿಂದಿನ ಜನ್ಮಗಳ ಪುಣ್ಯಗಳಿಗೆ ಧನ್ಯವಾದಗಳು. ಅವರ ಚರಣಗಳಲ್ಲಿ ಮನಃಶಾಂತಿಯನ್ನೂ ಪ್ರಾಪಂಚಿಕ ಧನ್ಯತೆಯನ್ನೂ ಅನುಭವಿಸಲು ಸಾಧ್ಯವಾಯಿತು. ॥26॥ ಅನಂತರ ನಾನು ಎಷ್ಟೇ ಅಭಿವೃದ್ಧಿಹೊಂದಲಿ, ಆ ಸಂತೋಷವನ್ನು ಶ್ರೀ ಸಾಯಿ ಸಮರ್ಥರ ಸತ್ಸಂಗದಲ್ಲಿ ಪಡೆದ ಅನುಗ್ರಹವನ್ನು ಅನುಭವಿಸಿದಷ್ಟು ಆನಂದವನ್ನು ಮತ್ತೆಲ್ಲೂ ಅನುಭವಿಸಲಿಲ್ಲ. ॥27॥ ಸಾಯಿಯು ಪರಮಾನಂದದ ಭಂಡಾರ. ಅವರ ವೈಶಿಷ್ಟ್ಯವನ್ನು ಹೇಗೆ ವರ್ಣಿಸಲಿ? ಅವರಲ್ಲಿ ಪೂರ್ಣ ಶರಣಾದವರು ಮಾತ್ರ ತಮ್ಮ ಒಳಿತಿಗಾಗಿ ಅಲ್ಲಿಯೇ ಶಾಶ್ವತವಾಗಿ ನೆಲೆಸಿದರು. ॥28॥ ತಪಸ್ಸು ಮಾಡಿದ ಸಂನ್ಯಾಸಿಗಳು, ದಂಡವನ್ನು ಹಿಡಿದವರು, ಕಾವಿಯನ್ನು ವಸ್ತ್ರವಾಗಿ ಧರಿಸಿದ್ದವರು ಮತ್ತು ಜಿಂಕೆಯ ಚರ್ಮವನ್ನು ಆಸನ ಮಾಡಿಕೊಂಡವರು, ಹರಿದ್ವಾರ ಮುಂತಾದ ತೀರ್ಥಯಾತ್ರೆ ಮಾಡಿದವರು, ಕಠಿಣ ತಪಸ್ಸು ಮಾಡಿದವರು, ಲೌಕಿಕವನ್ನು ತ್ಯಾಗಮಾಡಿದವರು ಮತ್ತು ನಿರ್ಮೋಹರಾಗಿರುವವರು ಎಲ್ಲರೂ ಅಲ್ಲಿಗೆ ಬಂದರು. ॥29॥ ಅವರು ತುಂಬ ಓಡಾಡುತ್ತ, ಮಾತನಾಡುತ್ತ, ನಗುತ್ತ ಇರುತ್ತಿದ್ದರು. ಬಾಬಾರವರು ಸದಾ 'ಅಲ್ಲಾ ಮಾಲಿಕ್' ಎನ್ನುತ್ತಿದ್ದರು. ವಾದ ವಿವಾದಗಳನ್ನು, ಚರ್ಚೆಗಳನ್ನೂ ಇಷ್ಟಪಡುತ್ತಿರಲಿಲ್ಲ. ಕೈಯಲ್ಲಿ ಯಾವಾಗಲೂ ಒಂದು ಸಟಕ್[10] ಇರುತ್ತಿತ್ತು. ॥30॥ ಒಬ್ಬ ತಪಸ್ವಿಯಾಗಿ, ಸ್ವಭಾವತಃ ನಿರ್ಮೋಹಿಯಾಗಿ, ಅಲ್ಪ ವಾಸನಾಯುಕ್ತರಾಗಿ, ಯಾರನ್ನೂ ದ್ವೇಷಿಸದೆ, ಅವರ ಉಪನ್ಯಾಸವು ವೇದಾಂತದ ತತ್ವವನ್ನುಚ್ಚರಿಸುತ್ತಿರಲು ಕೊನೆಯವರೆಗೆ

ಬಾಬಾರವರು ಯಾರೆಂದು ಊಹಿಸಲೂ ಸಾಧ್ಯವಾಗಲಿಲ್ಲ. ॥31॥ ಶ್ರೀಮಂತರಾಗಲಿ, ಬಡವರಾಗಲಿ ಇಬ್ಬರನ್ನೂ ಸಮಭಾವದ ಅವರು ನೋಡುತ್ತಿದ್ದರು. ಶ್ರೀಮಂತ ಪುತ್ರನೇ ಆಗಲಿ ನಿರ್ಗತಿಕ ಭಿಕ್ಷುಕನೇ ಆಗಲಿ ಇಬ್ಬರನ್ನೂ ಒಂದೇ ಮಾಪನದಿಂದ ಅಳೆಯುತ್ತಿದ್ದರು. ॥32॥ ಯಾರದ್ದಾದರೂ ಒಳ್ಳೆಯ ಅಥವಾ ಕೆಟ್ಟ ಕೆಲಸಗಳನ್ನೂ, ಅಂತರಂಗದ ಆಸೆಗಳನ್ನೂ, ಅರಿಯಬಲ್ಲವರಾಗಿದ್ದರು. ಅವರ ವೈಯುಕ್ತಿಕ ರಹಸ್ಯಗಳನ್ನು ಸಾಂಕೇತಿಕವಾಗಿ ಅವರಿಗೆ ತಿಳಿಸುತ್ತಿದ್ದರು. ಅದರಿಂದಾಗಿ ಭಕ್ತರು ನಿಬ್ಬೆರಗಾಗುತ್ತಿದ್ದರು. ॥33॥ ಅವರು ಜ್ಞಾನ ಮತ್ತು ಬುದ್ಧಿಯ ಸಾರವಾಗಿದ್ದುದನ್ನು ಮರೆಮಾಡಿ ಅಡಗಿಸಿಟ್ಟಿದ್ದರು. ಗೌರವ-ಸನ್ಮಾನ ಅವರಿಗೆ ಒಂದು ಹೂಮಾಲೆಯಾಗಿತ್ತು. ಇವು ಶ್ರೀ ಸಾಯಿಯವರ ಲಕ್ಷಣಗಳು. ॥34॥ ಅವರಿಗೆ ಭೌತಿಕ ದೇಹವಿದ್ದರೂ ಅವರ ಕಾರ್ಯಗಳು ಪ್ರತಿಯೊಂದೂ ಪರಮಾತ್ಮನ ಕಾರ್ಯಗಳ ರೀತಿ ಅಸ್ವಾಭಾವಿಕವಾಗಿದ್ದವು. ಅವರು ಶಿರಡಿಯ ಪ್ರತ್ಯಕ್ಷ ದೈವವಾಗಿದ್ದರು. ಜನರೆಲ್ಲರೂ ಅತಿ ಶ್ರದ್ಧೆಯಿಂದ ನಂಬಿದ್ದರು. ॥35॥ ಬಾಬಾರವರ ಪವಾಡಗಳು ಅದೆಷ್ಟು? ಅವುಗಳಲ್ಲಿ ಕ್ಷುಲ್ಲಕ ವ್ಯಕ್ತಿಯಾದವನು ಎಷ್ಟನ್ನು ಹೇಗೆ ವಿವರಿಸಬಹುದು? ಬಾಬಾರವರು ಅನೇಕಾನೇಕ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿಸಿದರು. ॥36॥ ಶಿರಡಿಯಲ್ಲಿಯೇ ತಾತ್ಯಾ ಪಾಟೀಲನ ಕೈಯಲ್ಲಿ ಶನಿ, ಗಣಪತಿ, ಶಂಕರ, ಪಾರ್ವತಿ, ಗ್ರಾಮ ದೇವತೆ ಮತ್ತು ಮಾರುತಿಯ ದೇವಾಲಯಗಳನ್ನು ಅಭಿವೃದ್ಧಿಪಡಿಸಿದರು. ॥37॥ ಜನರಿಂದ ದಕ್ಷಿಣೆಯಾಗಿ[11] ಪಡೆದ ಹಣವನ್ನು ಭಾಗಶಃ ಈ ಧರ್ಮಕಾರ್ಯಗಳಿಗಾಗಿ ಮತ್ತು ಉಳಿದ ಸ್ವಲ್ಪ ಭಾಗವನ್ನು ಸಾಧಾರಣವಾಗಿ ಹಾಗೆಯೇ ದಾನಮಾಡಿಬಿಡುತ್ತಿದ್ದರು. ॥38॥ ಕೆಲವರಿಗೆ ನಿತ್ಯವೂ 30 ರೂಪಾಯಿಗಳನ್ನು, ಕೆಲವರಿಗೆ 10, 15 ಅಥವಾ 50 ರೂಪಾಯಿಗಳನ್ನು ಕೊಡುತ್ತಿದ್ದರು. ಅವರ ಮನಸೋ ಇಚ್ಛೆ ಸಂತೋಷವಾಗಿ ಹಂಚುತ್ತಿದ್ದರು. ॥39॥ ಈ ಹಣವು ಎಲ್ಲಾ ಜಾತಿ ಧರ್ಮಗಳ ಜನರದು. ಅದನ್ನು ಸ್ವೀಕರಿಸಿದವರಿಗೆ ಇದು ತಿಳಿದಿತ್ತು. ಬಾಬಾರವರಿಗೆ ಅದು ಸದ್ವಿನಿಯೋಗವಾಗಬೇಕೆಂಬ ಇಚ್ಛೆಮಾತ್ರ ಇತ್ತು. ॥40॥ ಅದುಹಾಗಿರಲಿ, ಅನೇಕರು ಅವರ ದರ್ಶನದಿಂದಲೇ ಉದ್ಧಾರವಾದರು. ಅನೇಕ ದುಷ್ಟರು ಒಳ್ಳೆಯವರಾದರು. ಅನೇಕ ಜನರ ಕಾಯಿಲೆಗಳು (ಕುಷ್ಠ ಸಹ) ವಾಸಿಯಾದವು. ಬಹಳ ಜನರು ತಮ್ಮ ಕ್ಷೇಮವನ್ನು ಪಡೆದರು. ॥41॥ ಯಾವುದೇ ಕಾಡಿಗೆ ಇಲ್ಲದೆ, ಮುಲಾಮೂ ಹಾಕದೇ ಅಥವಾ ಗಿಡಮೂಲಿಕೆಗಳ ರಸವಿಲ್ಲದೆ ಅನೇಕ ಕುರುಡರು ದೃಷ್ಟಿ ಪಡೆದರು. ಕುಂಟರು ನಡೆಯಲಾರಂಭಿಸಿದರು. ಅವರೆಲ್ಲ ಶ್ರೀ ಸಾಯಿ ಚರಣಗಳಲ್ಲಿ ಶರಣಾಗಿದ್ದರು. ॥42॥ ಅವರ ಮಹತ್ತು ಈ ರೀತಿ ಅನಂತವಾಗಿತ್ತು. ಯಾರೂ ಅದರ ಆಳವನ್ನು ಅಳೆಯಲು ಸಾಧ್ಯವಿರಲಿಲ್ಲ. ನಾಲ್ಕೂ ನಿಟ್ಟಿನಿಂದ ಅಸಂಖ್ಯಾತ ಜನರು ಪ್ರವಹಿಸಲು ಪ್ರಾರಂಭಿಸಿದರು. ॥43॥ ಅವರು ಧುನಿಯ ಹತ್ತಿರ ಅದೇ ಜಾಗದಲ್ಲಿ ಕುಳಿತಿರುತ್ತಿದ್ದರು. ಅಲ್ಲಿಯೇ ದೇಹಬಾಧೆ ತೀರಿಸಿಕೊಳ್ಳುತ್ತಿದ್ದರು. ಅವರು ಅದೇ ಜಾಗದಲ್ಲಿ ಸ್ನಾನಮಾಡಿ ಕೆಲವೊಮ್ಮೆ ಸ್ನಾನವಿಲ್ಲದೆ ಇರುತ್ತಿದ್ದರು. ಸದಾ ಧ್ಯಾನಸ್ಥಿತಿಯಲ್ಲಿರುತ್ತಿದ್ದರು. ॥44॥ ಅವರು ತಲೆಯ ಮೇಲೆ ಒಂದು ಬಿಳಿಯ ಶಿರವಸ್ತ್ರ ಮತ್ತು ಸೊಂಟಕ್ಕೆ ಕಟ್ಟಿದ

ಶುಚಿಯಾದ ಧೋತಿ, ಒಂದು ಶರಟು ಅಥವಾ ಪೆಹರಾನ್ ಧರಿಸುತ್ತಿದ್ದರು. ಅವರ ವೇಷಭೂಷಣ ಮೊದಲು ಈ ರೀತಿ ಇತ್ತು ॥45॥ ಪ್ರಾರಂಭದಲ್ಲಿ ಹಳ್ಳಿಯಲ್ಲಿ ಆಯುರ್ವೇದವನ್ನು ಅಭ್ಯಸಿಸುತ್ತಿದ್ದರು. ರೋಗಿಗಳನ್ನು ಪರೀಕ್ಷಿಸಿ ಔಷಧ ಕೊಡುತ್ತಿದ್ದರು. ಅವರ ಹಸ್ತಸ್ಪರ್ಶಕ್ಕೇ ಗುಣಪಡಿಸುವ ಶಕ್ತಿಯಿತ್ತು. ಹೆಸರಾಂತ ಹಕೀಮರಾದರು[12]. ॥46॥ ಒಮ್ಮೆ ಒಬ್ಬ ಭಕ್ತನ ಕಣ್ಣುಗಳು ಬೆಂಕಿಯ ಚೆಂಡಿನಂತೆ ಕೆಂಪಗಾಗಿದ್ದವು. ಶಿರಡಿಯಲ್ಲಿ ಯಾವ ವೈದ್ಯರೂ[12+] ಇರಲಿಲ್ಲ. ॥47॥ ಸರಳ ಹಾಗೂ ಧರ್ಮಶ್ರದ್ಧೆಯುಳ್ಳ ಭಕ್ತನು ಅವನ ಕಣ್ಣುಗಳನ್ನು ಬಾಬಾರವರಿಗೆ ತೋರಿಸಿದನು. ಕೂಡಲೇ ಬಾಬಾರವರು ಬೀಬಾ[13] ಬೀಜ[14]ವನ್ನು ಪುಡಿಮಾಡಿ ಉಂಡೆಗಳಾಗಿ ಮಾಡಿದರು. ॥48॥ ಈ ಸನ್ನಿವೇಶದಲ್ಲಿ ಸುರಮಾ(ಮುತ್ತಿನ ಪುಡಿ)ಯಿಂದಾಗಲಿ, ಕೆಲವರು ಬಟ್ಟೆಯನ್ನು ಹಸುವಿನ ಹಾಲಿನಲ್ಲಿ ಒದ್ದೆಮಾಡಿ, ಕೆಲವರು ಕರ್ಪೂರದ ಗಟ್ಟಿಯನ್ನಿಟ್ಟು ತಣ್ಣಗಾಗಿಸಿ ಅಥವಾ ಕೆಲವರು ಕಾಡಿಗೆಯನ್ನು ಉಪಯೋಗಿಸಿ ಚಿಕಿತ್ಸೆ ನೀಡಬಹುದು. ॥49॥ ಆದರೆ ಬಾಬಾರವರ ಚಿಕಿತ್ಸೆ ಪೂರ್ಣವಾಗಿ ವಿಶಿಷ್ಟವಾಗಿತ್ತು. ಅವರು ಬೀಬಾದ ಉಂಡೆಯನ್ನು ತಮ್ಮ ಕೈಯಲ್ಲೇ ಹಿಡಿದು ಎರಡೂ ಕಣ್ಣುಗಳ ಮೇಲೆ ಆದಷ್ಟು ಜೋರಾಗಿ ಒತ್ತಿ ಹಿಡಿದು ಒಂದು ಬಟ್ಟೆಯನ್ನು ಅವುಗಳ ಮೇಲೆ ಕಟ್ಟಿದರು. ॥50॥ ಮಾರನೆಯ ದಿನ ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ತೆಗೆದು ಕಣ್ಣುಗಳಿಗೆ ತಣ್ಣೀರನ್ನು ಒಂದು ಸ್ಥಿರವಾದ ಪಿಚಕಾರಿಯಂತೆ ಬಿಡುತ್ತಾ ತೊಳೆದರು. ಎಲ್ಲ ಊತವೂ ಮಾಯವಾಗಿತ್ತು. ಕಣ್ಣಾಲಿಗಳು ತಿಳಿಯಾಗಿದ್ದವು. ॥51॥ ಅತಿಸೂಕ್ಷ್ಮವಾದ ಅಂಗಗಳಾದ ಕಣ್ಣುಗಳನ್ನು ಬೀಬಾನಿಂದ ಚಿಕಿತ್ಸೆಮಾಡಿದರೂ ಉರಿಯಲಿಲ್ಲ. ರೋಗವು ಗುಣವಾಗಿತ್ತು. ಇಂತಹ ಅನುಭವಗಳು ಎಣಿಸಲಾರದಷ್ಟು. ॥52॥ ಅವರಿಗೆ ಧೋತಿ–ಪೋತಿಯೆಂಬ ಯೋಗ ಕ್ರಿಯೆಯು ತಿಳಿದಿತ್ತು. ಯಾರಿಗೂ ತಿಳಿಯದ ಹಾಗೆ ಅವರು ಏಕಾಂತವಾದ ಜಾಗಕ್ಕೆ ಹೋಗಿ ಸ್ನಾನಮಾಡುವಾಗ ತಮ್ಮ ಕರುಳನ್ನು ವಾಂತಿಮಾಡಿ, ತೊಳೆದ ಒಣಗಲು ಹಾಕುತ್ತಿದ್ದರು. ॥53॥ ಮಸೀದಿಯಿಂದ ಬಾವಿಗಿದ್ದಷ್ಟು ದೂರದಲ್ಲಿಯೇ ಮುಂದೆ ಒಂದು ಆಲದ ಮರವಿತ್ತು. ಅದರಿಂದ ಮುಂದೆ ಮತ್ತೊಂದು ಬಾವಿ ಇತ್ತು. ಅಲ್ಲಿಗೆ ಪ್ರತಿ ಮೂರನೆಯ ದಿನ ಹೋಗುತ್ತಿದ್ದರು. ॥54॥ ಸರಿಯಾಗಿ ಮಧ್ಯಾಹ್ನದ ಸಮಯದಲ್ಲಿ ಉರಿಯುತ್ತಿರುವ ಸೂರ್ಯನ ಕೆಳಗೆ ಅಲ್ಲಿ ಸುತ್ತಲೂ ಯಾರೂ ಇಲ್ಲವೆಂಬುದನ್ನು ಖಚಿತಪಡಿಸಿಕೊಂಡು ಕೈಯಾರೆ ಬಾವಿಯಿಂದ ನೀರನ್ನು ತೆಗೆದುಕೊಂಡು ತಮ್ಮ ಮುಖ ತೊಳೆದುಕೊಂಡು ಶೌಚಕರ್ಮಗಳನ್ನು ನೆರವೇರಿಸುತ್ತಿದ್ದರು. ॥55॥ ಅಂತಹ ಒಂದು ಸಂದರ್ಭದಲ್ಲಿ ಅವರು ಸ್ನಾನಮಾಡುತ್ತಿರುವಾಗ ತಮ್ಮ ಕರುಳನ್ನು ಬೇಗನೇ ತೆಗೆದು ಅಲ್ಲಿಯೇ ತೊಳೆಯಲು ಪ್ರಾರಂಭಿಸಿದರು. ॥56॥ ಒಂದು ಮೇಕೆಯನ್ನು ಬಲಿಕೊಟ್ಟಾಗ ಅದರ ಕರುಳನ್ನು ಹೊರತೆಗೆದು ಚೆನ್ನಾಗಿ ತೊಳೆದು ಶುಚಿಮಾಡಿ ಸುತ್ತಿಡುತ್ತಾರೆ. ॥57॥ ಅದೇ ರೀತಿ, ಅವರು ತಮ್ಮ ಕರುಳುಗಳನ್ನು ಹೊರತೆಗೆದು ತೊಳೆದು, ಮರದ ಮೇಲೆ ಹರಡಿದರು. ಜನರಿಗೆ ಬಹಳ ಅಚ್ಚರಿಯಾಯಿತು. ॥58॥ ಅದನ್ನು ಕಣ್ಣಾರೆ ನೋಡಿದವರಲ್ಲಿ ಕೆಲವರು ಈಗಲೂ ಶಿರಡಿಯಲ್ಲಿ ಇದ್ದಾರೆ. ಬಾಬಾ ಒಬ್ಬ ಅಸಾಧಾರಣ

ಸಂತನೆಂದು ಅವರು ಹೇಳುತ್ತಾರೆ. ॥59॥ ಕೆಲವೊಮ್ಮೆ ಅವರು ಖಂಡಯೋಗವನ್ನು ಅಭ್ಯಸಿಸುತ್ತಿದ್ದರು. ತಮ್ಮ ಕೈಗಳು ಮತ್ತು ಕಾಲುಗಳನ್ನು ಬೇರ್ಪಡಿಸುತ್ತಿದ್ದರು. ಈ ರೀತಿ ಅವುಗಳನ್ನು ಮಸೀದಿಯಲ್ಲಿ ಅಲ್ಲಿ ಇಲ್ಲಿ ಹರಡುತ್ತಿದ್ದರು. ॥60॥ ಈ ರೀತಿ ದೇಹವನ್ನು ಭಾಗಭಾಗವಾಗಿ ಬೇರ್ಪಡಿಸುತ್ತಿದ್ದರು. ಈ ದೃಶ್ಯವು ಅತಿ ಭಯಂಕರವಾಗಿತ್ತು. ಇದನ್ನು ನೋಡಲು ಅನೇಕರು ಓಡಿ ಬಂದಾಗ ಅಲ್ಲಿ ಬಾಬಾರವರು ಎಂದಿನಂತೆ ಸಹಜವಾಗಿ ಕುಳಿತಿರುವುದು ಕಾಣುತ್ತಿತ್ತು. ॥61॥ ಒಮ್ಮೆ ಇಂತಹ ಘಟನೆಯನ್ನು ನೋಡಿದವನೊಬ್ಬನು ಬಹಳ ಹೆದರಿ, ಯಾರೋ ದುಷ್ಟರು ಬಾಬಾರವರನ್ನು ಕೊಲೆಮಾಡಿ ಈ ರೀತಿ ಅತ್ಯಾಚಾರವೆಸಗಿದ್ದಾರೆಂದುಕೊಂಡನು. ॥62॥ ಮಸೀದಿಯಲ್ಲಿ ನಾಲ್ಕೂ ದಿಕ್ಕಿನ ಮೂಲೆಗಳಲ್ಲಿ ಅಲ್ಲಲ್ಲಿ ಕೈಕಾಲುಗಳು ಕಂಡು ಬಂದವು. ಅದು ಅರ್ಧ ರಾತ್ರಿಯಾಗಿದ್ದು ಮತ್ತೆ ಯಾರೂ ಸುತ್ತ ಇರಲಿಲ್ಲ. ಅವನು ಚಿಂತಿತನಾದನು. ॥63॥ ಈ ಘಟನೆಯನ್ನು ಯಾರಿಗೆ ತಿಳಿಸಬೇಕು? ಅದಕ್ಕೆ ಬದಲಾಗಿ ತನ್ನನ್ನೇ ಗಲ್ಲಿಗೇರಿಸಬಹುದು. ಈ ರೀತಿ ಆಲೋಚಿಸಿ ಅವನು ಹೊರಗೆ ಹೋಗಿ ಕುಳಿತುಕೊಂಡನು. ॥64॥ ಅದು ಸಾಯಿಯ ಯೋಗಕ್ರಿಯೆಯೆಂದು ಅವನಿಗೆ ಕನಸು ಮನಸಿನಲ್ಲಿಯೂ ತೋಚಲಿಲ್ಲ. ದೇಹದ ಭಾಗಗಳನ್ನು ನೋಡಿ ಅವನ ಹೃದಯ ಹೆದರಿಕೆಯಿಂದ ಬಡಿಯಲಾರಂಭಿಸಿತು. ॥65॥ ಈ ಘಟನೆಯನ್ನು ಯಾರಿಗಾದರೂ ತಿಳಿಸಬೇಕು. ಈ ಯೋಚನೆ ಅವನಿಗೆ ಮತ್ತೆ ಮತ್ತೆ ಬರಲಾರಂಭಿಸಿತು. ಆದರೆ ಮೊದಲು ವರದಿ ಮಾಡುವುದರಿಂದ ತನ್ನನ್ನೇ ಅಪರಾಧಿಯನ್ನಾಗಿ ಭಾವಿಸಬಹುದು. ॥66॥ ಆದ್ದರಿಂದ ಅವನು ಯಾರಿಗೂ ತಿಳಿಸಲಿಲ್ಲ. ಅನೇಕ ಬಗೆಯ ಊಹೆಗಳು ಅವನಿಗೆ ಬಂದವು. ಆದ್ದರಿಂದ ಬೆಳಗ್ಗೆ ಅವನು ಮತ್ತೆ ನೋಡಲು ಅಲ್ಲಿಗೆ ಹೋದನು. ಆಗ ಕಂಡುದು ಆಶ್ಚರ್ಯವನ್ನುಂಟುಮಾಡಿತು. ॥67॥ ಅಲ್ಲಿ ಮೊದಲು ನಡೆದುದರ ಸುಳಿವೂ ಇರಲಿಲ್ಲ. ಬಾಬಾರವರು ಆರೋಗ್ಯವಂತರಾಗಿ ತಮ್ಮ ದಿನನಿತ್ಯದ ಜಾಗದಲ್ಲಿ ಕುಳಿತುಕೊಂಡಿದ್ದರು. ಆ ಪ್ರೇಕ್ಷಕನು ದಿಗ್ಭ್ರಮೆಹೊಂದಿ ತಾನೇನಾದರೂ ಕನಸು ಕಂಡೆನೊ ಎಂದುಕೊಂಡು ಅಚ್ಚರಿಗೊಂಡನು. ॥68॥ ಈ ಯೋಗಕ್ರಿಯೆಗಳಾದ ಧೋತಿ-ಪೋತಿ ಇವುಗಳನ್ನು ಬಾಬಾರವರು ಬಾಲ್ಯದಿಂದಲೇ ಮಾಡುತ್ತಿದ್ದರು. ಅದರ ಆಳವನ್ನಾಗಲೀ, ಯೋಗಸ್ಥಿತಿಯ ಮಟ್ಟವನ್ನಾಗಲೀ ಯಾರೂ ಅರಿಯಲಾರರು. ॥69॥ ಅವರು ಯಾರಿಂದಲೂ ಒಂದು ನಾಣ್ಯವನ್ನೂ ಸ್ವೀಕರಿಸಲಿಲ್ಲ. ತಮ್ಮದೇ ಆದ ಗುಣಗಳಿಂದ ಅವರು ಹೆಸರುವಾಸಿಯಾದರು. ದೀನರು ಮತ್ತು ಬಡವರಿಗೆ ಒಳ್ಳೆಯ ಆರೋಗ್ಯ ನೀಡಿದರು. ಆ ಪ್ರಾಂತದಲ್ಲೇ ಹೆಸರಾಂತ ಹಕೀಮರಾದರು. ॥70॥ ಅವರು ಬೇರೆಯವರಿಗೆ ಮಾತ್ರವೇ ಹಕೀಮರಾಗಿದ್ದರು. ಅವರು ತಮ್ಮ ವೈಯಕ್ತಿಕ ಲಾಭದಿಂದ ವಿಮುಖರಾಗಿದ್ದರು. ಇತರರಿಗೆ ಒಳ್ಳೆಯದನ್ನು ಸಾಧಿಸಬೇಕಾದರೆ ಅವರು ಅತಿ ಕಷ್ಟ, ನೋವುಗಳನ್ನು ಅನುಭವಿಸಬೇಕಾಯಿತು. ॥71॥ ಇದನ್ನು ವಿವರಿಸುವಂತಹ ಒಂದು ವಿಶೇಷವಾದ ಕಥೆಯನ್ನು ಶ್ರೋತೃಗಳಿಗಾಗಿ ಹೇಳುವೆನು. ಅದು ಬಾಬಾರವರ ಕರುಣೆ ಹಾಗೂ ವಿಶ್ವಾತ್ಮಕವಾದ ಸರ್ವವ್ಯಾಪಕತ್ವವನ್ನು ತೋರಿಸುತ್ತದೆ. ॥72॥ ಕ್ರಿ. ಶ. 1910ರಲ್ಲಿ ದತ್ತಾತ್ರೇಯ

ಜಯಂತಿ[15]ಯ ದಿನ ಬಾಬಾರವರು ಸ್ವಾಭಾವಿಕವಾಗಿ ಧುನಿಯ ಬಳಿ ಕಟ್ಟಿಗೆ ಉರಿಸುತ್ತ ಕುಳಿತಿದ್ದರು. ॥73॥ ಧುನಿಯು ಬಹಳ ಬಿಸಿಯಾಗಿ ಜೋರಾಗಿ ಉರಿಯಲು ಪ್ರಾರಂಭಿಸಿತು. ಅವರು ತಮ್ಮ ಕೈಯನ್ನೇ ಬೆಂಕಿಯ ಒಳಗೆ ಹಾಕಿ ಶಾಂತವಾಗಿ ಕುಳಿತರು. ಕೈ ಪೂರ್ತಿ ಸುಟ್ಟಿತು. ॥74॥ ಅವರ ಸೇವೆ ಮಾಡುತ್ತಿದ್ದ ಮಾಧವನು[16] ಅದನ್ನು ಆಕಸ್ಮಾತ್ತಾಗಿ ನೋಡಿದನು. ಮಾಧವ ರಾವ್ ದೇಶಪಾಂಡೆ ಸಹ ಹತ್ತಿರ ಇದ್ದನು. ಅವನೂ ಕೂಡಲೇ ಹತ್ತಿರ ಓಡಿದನು. ॥75॥ ಅವರು ಹೋಗಿ ಬಾಬಾರವರ ಹಿಂದೆ ಕಾಲುಗಳನ್ನು ಅಡ್ಡಮಾಡಿ ಕುಳಿತು ತಮ್ಮ ಕೈಗಳನ್ನು ಬಿಗಿಯಾಗಿ ಅವರ ಸೊಂಟದ ಮೇಲಿಟ್ಟು ಹಿಂದಕ್ಕೆ ಎಳೆದರು. ಅವರು ಹೇಳಿದರು, "ನೋಡಿ ಏನಾಯಿತು?" ॥76॥ "ಓ ದೇವಾ! ಇದೇನು ಮಾಡಿದಿರಿ?"[17] ಈ ಮಾತುಗಳನ್ನು ಕೇಳುತ್ತಲೇ ಬಾಬಾರವರಿಗೆ ಪರಿಸ್ಥಿತಿಯ ಅರಿವಾಯಿತು. ಆಗ "ತಾಯಿಯ ಕಂಕುಳಲ್ಲಿದ್ದ ಮಗು ಜಾರಿ ಬೆಂಕಿಕುಂಡದೊಳಗೆ ಬಿತ್ತು." ॥77॥ ಗಂಡನ ಕರೆಗಳನ್ನು ಕೇಳುತ್ತ ಕೇಳುತ್ತ ಗಾಬರಿಯಿಂದ ಅಕ್ಕಸಾಲಿಗನ ಪತ್ನಿಯು ತನ್ನ ಮಗುವನ್ನು ಕಂಕುಳಲ್ಲಿ ಎತ್ತಿಕೊಂಡೇ ಕುಲುಮೆಯ ತಿದಿಯನ್ನು ಒತ್ತುತ್ತಿದ್ದಳು. ॥78॥ ತಿದಿಯೊತ್ತುತ್ತಾ ಕಂಕುಳಲ್ಲಿದ್ದ ಮಗುವಿನ ಕಡೆಗೆ ಲಕ್ಷ್ಯತಪ್ಪಿತು. ಮಗು ಸಹ ತುಂಬಾ ಚಡಪಡಿಸುತ್ತಿತ್ತು. ಕ್ಷಣದಲ್ಲಿ ಕೈಜಾರಿತು. "ಶಾಮಾ, ಅವಳ ಕೈಯಿಂದ ಮಗು ಬೀಳುತ್ತಿದ್ದಂತೆ ನಾನು ಎತ್ತಿಕೊಂಡೆ. ॥79॥ ನಾನು ಆ ಎಳೆ ಹುಡುಗಿಯನ್ನು ಹೊರತೆಗೆಯುವಾಗ ಹೀಗಾಯಿತು. ನನ್ನ ಈ ಹಾಳು ಕೈ ಸುಟ್ಟರೂ ಪರವಾಗಿಲ್ಲ, ಸಧ್ಯ ಮಗುವಿನ ಜೀವ ಉಳಿಯಿತಲ್ಲ!" ॥80॥ ಆ ಕೈನಿಂದಾದಕಷ್ಟ ಮತ್ತು ನೋವುಗಳಿಗೆ ಪರಿಹಾರ ಏನು? ಯಾರಿಂದ ಪಡೆಯಬಹುದು? ಮಾಧವರಾವ್ ಚಂದೋರಕರ್‌ಗೆ ಪತ್ರ ಬರೆಯಲು ನಿಶ್ಚಯಿಸಿದನು.॥81॥ ಅವರು ವಿವರವಾಗಿ ಪತ್ರ ಬರೆದನು. ಕೂಡಲೇ ಚಂದೋರಕರ್‌ನು ಶಿರಡಿಗೆ ಬಂದನು. ಜೊತೆಯಲ್ಲಿ ಖ್ಯಾತ ವೈದ್ಯ ಡಾ॥ ಪರಮಾನಂದನನ್ನೂ ಕರೆತಂದನು. ॥82॥ ಉರಿಯನ್ನು ಉಪಶಮನಮಾಡಲು ಡಾ॥ ಪರಮಾನಂದನು ತನ್ನ ಜೊತೆಯಲ್ಲಿ ಅನೇಕ ಔಷಧಿಗಳನ್ನು ತಂದನು.ಎಲ್ಲವೂ ಉಪಯೋಗವಾಗಲೆಂದು ತಂದು ಸಾಯಿ ಸೇವೆ ಮಾಡಲು ನಾನಾನ ಜೊತೆ ಬಂದನು. ॥83॥ ಬಾಬಾರವರಿಗೆ ನಮಸ್ಕರಿಸಿದನು. ಅವರ ಯೋಗಕ್ಷೇಮವನ್ನು ವಿಚಾರಿಸಿದನು. ತಾನು ಬಂದ ಕಾರಣವನ್ನು ಅರಿಕೆಮಾಡಿಕೊಂಡು ತಮ್ಮ ಕೈಯನ್ನು ತೋರಿಸುವಂತೆ ಪ್ರಾರ್ಥಿಸಿದನು. ॥84॥ ಆದರೆ, ಕೈ ಸುಟ್ಟಾಗಿನಿಂದ ಭಾಗೋಜಿ ಶಿಂಧೆಯು ತುಪ್ಪ ಹಚ್ಚುತ್ತಿದ್ದನು. ಅದರ ಮೇಲೆ ಒಂದು ಎಲೆಯನ್ನು ಇಟ್ಟು ಗಟ್ಟಿಯಾಗಿ ಪಟ್ಟಿಯನ್ನು ದಿನವೂ ಕಟ್ಟುತ್ತಿದ್ದನು. ॥85॥ ಪಟ್ಟಿಗಳನ್ನು ತೆಗೆದುಹಾಕಿ, ಕೈಯನ್ನು ಡಾ॥ ಪರಮಾನಂದನಿಗೆ ತೋರಿಸಿ ಚಿಕಿತ್ಸೆ ಪಡೆದು ಬಾಬಾರವರ ಸುಟ್ಟಗಾಯ ವಾಸಿಯಾಗಲೆಂಬುದು ಉದ್ದೇಶ. ॥86॥ ಈ ಒಂದು ಒಳ್ಳೆಯ ಉದ್ದೇಶದಿಂದ ನಾನಾನು ಬಹಳವಾಗಿ ಕಾಲಿಗೆ ಬಿದ್ದು ಬೇಡಿಕೊಂಡನು. ಪರಮಾನಂದನೂ ಸಹ ಪಟ್ಟಿಗಳನ್ನು ಬಿಚ್ಚಿ ಕೈಯನ್ನು ನೋಡಲು ಪ್ರಯತ್ನಿಸಿದನು. ॥87॥ ಆ ದಿನವಲ್ಲ, ಮರುದಿನವೂ ಅದೇ ರೀತಿ ಕೇಳಿಕೊಂಡನು. ಬಾಬಾ ತಮ್ಮ ಕೈಯನ್ನು ನೋಡಲು

ಬಿಡಲೇ ಇಲ್ಲ. ಅಲ್ಲಾನೇ ತಮ್ಮ ವೈದ್ಯರು ಎನ್ನುತ್ತಿದ್ದರು. ಅವರಿಗೆ ಕಿಂಚಿತ್ತಾದರೂ ಕ್ಷೋಭೆಯುಂಟಾಗಲಿಲ್ಲ. ॥88॥ ಪರಮಾನಂದನು ತಂದಿದ್ದ ಔಷಧಿಗಳಲ್ಲೊಂದನ್ನೂ ಶಿರಡಿಯಲ್ಲಿ ಬಿಚ್ಚಲೇ ಇಲ್ಲ. ಆದರೆ ಸಾಯಿ ದರ್ಶನವಾದದ್ದು ವೈದ್ಯನ ಪುಣ್ಯ. ಅದಕ್ಕಾಗಿಯೇ ಬಹುಶಃ ಈ ಘಟನೆ ಸಂಭವಿಸಿರಬಹುದು. ॥89॥ ಭಾಗೋಜಿಯೇ ಸದಾ ಸೇವೆಮಾಡುತ್ತಿದ್ದನು. ಭಾಗೋಜಿಯೇ ಕೈಯನ್ನು ಸಹ ನೋಡಿಕೊಂಡನು. ಕೆಲವು ದಿನಗಳಲ್ಲೆ ಕೈ ಪೂರ್ತಿ ಗುಣವಾಯಿತು. ಎಲ್ಲರಿಗೂ ಸಂತೋಷವಾಯಿತು. ॥90॥ ಈ ರೀತಿ ಕೈಯು ಪೂರ್ಣವಾಗಿ ಗುಣವಾಗಿದ್ದರೂ ಭಾಗೋಜಿ ನಿತ್ಯವೂ ಬೆಳಿಗ್ಗೆ ಪಟ್ಟಿ ಕಟ್ಟುವುದಕ್ಕೆ ಅವಕಾಶ ಕೊಡಲು ಬಾಬಾರವರ ಮನಸ್ಸಿನಲ್ಲಿ ಏನಿತ್ತು ಎಂಬುದು ಯಾರಿಗೂ ತಿಳಿಯದು. ॥91॥ ನೋವಿಲ್ಲದಿದ್ದರೂ ಪ್ರತಿನಿತ್ಯವೂ ತುಪ್ಪದಿಂದ ಮಾಲೀಷು ಮಾಡುತ್ತ ಕೈಯನ್ನು ಎಚ್ಚರಿಕೆಯಿಂದ ಧ್ಯಾನ ಸಮಾಧಿಯ ಹೊತ್ತಿನವರೆಗೂ ನೋಡಿಕೊಳ್ಳಲಾಗುತ್ತಿತ್ತು. ॥92॥ ಈ ಸೇವೆಗಳು ಭಾಗೋಜಿಗಾಗಿಯೇ ಇರುತ್ತಿತ್ತು. ಸಿದ್ಧರಾದ ಸಾಯಿಗೆ ಯಾವುದೂ ಬೇಕಿರಲಿಲ್ಲ. ಭಾಗೋಜಿಗೆ ನಿತ್ಯ ಸೇವೆಯನ್ನು ಭಕ್ತಿಯಿಂದ ಮಾಡುವಂತೆ ಅನುವುಮಾಡಿಕೊಟ್ಟರು. ॥93॥ ಪೂರ್ವಜನ್ಮಗಳ ಪಾಪ ಕಾರ್ಯಗಳಿಂದಾಗಿ ಭಾಗೋಜಿಯು ಕುಷ್ಠರೋಗದಿಂದ ನರಳುತ್ತಿದ್ದನು. ಆದರೆ ಅವನು ಪುಣ್ಯವಶಾತ್ ಸಾಯಿಯ ಸಂಪರ್ಕದಲ್ಲಿ ಬಂದನು. ॥94॥ ಬಾಬಾರವರು ಲೇಂಡಿಗೆ ಸುತ್ತು ಹೊರಟಾಗಲೆಲ್ಲ ಭಾಗೋಜಿಯು ಬಾಬಾರವರ ತಲೆಯಮೇಲೆ ಛತ್ರಿಯನ್ನು ಹಿಡಿಯುವನು. ಅವನ ದೇಹವೆಲ್ಲ ಕುಷ್ಠದ ಕಪ್ಪುಕಲೆಗಳಿಂದ ತುಂಬಿದ್ದರೂ ಅವನು ಬಾಬಾರವರ ಸೇವೆಯಲ್ಲಿ ಅಗ್ರಗಣ್ಯನಾಗಿದ್ದನು. ॥95॥ ಬಾಬಾರವರು ಬೆಳಗಿನ ಜಾವ ಧುನಿಯ ಹತ್ತಿರ ಕಂಭಕ್ಕೆ ಒರಗಿ ಕುಳಿತುಕೊಂಡಾಗಲೆಲ್ಲ, ಅವರ ಸೇವೆಮಾಡುತ್ತಿದ್ದುದು ಅವನ ಪುಣ್ಯವೇ ಸರಿ. ॥96॥ ಅವನು ಪಟ್ಟಿಗಳನ್ನು ತೆಗೆದು ಆ ಮಾಂಸಖಂಡಗಳನ್ನೆಲ್ಲ ಮಾಲೀಷು ಮಾಡಿ, ಆ ಜಾಗಕ್ಕೆ ತುಪ್ಪ ಸವರುತ್ತಿದ್ದನು. ॥97॥ ಭಾಗೋಜಿ ಶಿಂಧೆಯು ತನ್ನ ಹಿಂದಿನ ಜನ್ಮಗಳಲ್ಲಿ ಮಹಾ ಪಾಪಿಯಾಗಿದ್ದನು. ಅವನ ದೇಹವಿಡೀ ಹುಣ್ಣುಗಳಾಗಿ ಕೀವು ವಸರುತ್ತಿತ್ತು. ಅವನು ಅಂತಹ ಮಾರಣಾಂತಿಕ ರೋಗಕ್ಕೆ ಬಲಿಯಾಗಿದ್ದನು. ಆದರೆ ಅವನು ಬಾಬಾರವರ ಅಸಾಮಾನ್ಯ ಭಕ್ತನಾಗಿದ್ದನು. ॥98॥ ಅವನ ಬೆರಳುಗಳು ಕುಷ್ಠರೋಗದಿಂದಾಗಿ ಮೊಂಡಾಗಿದ್ದವು. ಅವನ ದೇಹವಿಡೀ ಅಸಹ್ಯಕರವಾದ ವಾಸನೆ ಬರುತ್ತಿತ್ತು. ಈ ರೀತಿ ದುರದೃಷ್ಟವಂತನೊಬ್ಬ ಸಾಯಿ ಸೇವೆಯಿಂದ[8] ನಾಲ್ಕಡಿ ಲಾಭ ಹೊಂದಿದನು. ॥99॥ ಈ ರೀತಿ ಬಾಬಾರವರ ಮಹಾನ್ ಪವಾಡಗಳನ್ನು ಶ್ರೋತೃಗಳಿಗೆ ಹೇಗೆ ನಿರೂಪಿಸಲಿ! ಒಮ್ಮೆ ಹಳ್ಳಿಯಲ್ಲಿ ಪ್ಲೇಗ್ ಬಂದಾಗ ಎಂತಹ ಪವಾಡ ನಡೆಯಿತು ಎಂಬುದನ್ನು ಕೇಳಿರಿ. ॥100॥ ದಾದಾ ಸಾಹೇಬ್ ಖಪರ್ಡೆಯವರ[9] ಚಿಕ್ಕ ಮಗ ತನ್ನ ತಾಯಿಯ ಜೊತೆಯಲ್ಲಿ ವಾಸಿಸುತ್ತಿದ್ದ ಮತ್ತು ಬಾಬಾರವರ ಸಂಗದಲ್ಲಿ ಬಹಳ ಸಂತೋಷವಾಗಿದ್ದನು. ॥101॥ ಆ ಹುಡುಗ ಬಹಳ ಚಿಕ್ಕ ಬಾಲಕ. ಹೀಗಿರುವಾಗ ಅವನಿಗೆ ವಿಪರೀತ ಜ್ವರ ಬಂದಿತು. ತಾಯಿಯ ಹೃದಯ ಕಾತರಗೊಂಡಿತು ಮತ್ತು ಪ್ರಕ್ಷುಬ್ಧವಾಯಿತು. ॥102॥ ಆಕೆಯ ಮನೆ

ಅಮರಾವತಿಯಲ್ಲಿತ್ತು. ಆದ್ದರಿಂದ ಅವಳು ಅಲ್ಲಿಗೆ ಹೋಗಲು ಯೋಚಿಸಿದಳು. ಸಂಜೆ ವೇಳೆ ಸರಿಯಾದ ಹೊತ್ತಿನಲ್ಲಿ ಬಾಬಾರವರಿಂದ ಅನುಮತಿ ಬೇಡಲು ಬಂದಳು. ॥103॥ ಸಂಜೆಯ ತಿರುಗಾಟ ಮುಗಿಸಿ ಬಾಬಾರವರು ವಾಡಾ ಹತ್ತಿರ ಬಂದರು. ಅಲ್ಲಿ ಆ ಹೆಂಗಸು ಅವರ ಚರಣಗಳಿಗೆ ಬಾಗಿ ನಮಸ್ಕರಿಸಿ, ತನ್ನ ಮಗನ ಜ್ವರದ ಬಗ್ಗೆ ತಿಳಿಸಿದಳು. ॥104॥ ಹೆಂಗಸರು ಸ್ವಭಾವತಃ ಅಂಜಿಕೆಯುಳ್ಳವರಾಗಿರುವರು, ಮಗನ ಜ್ವರ ಹಾಗೂ ನಡುಕವೂ[20] ನಿಲ್ಲಲಿಲ್ಲ. ಅಲ್ಲಿ ಪ್ಲೇಗಿನ ಹೆದರಿಕೆಯೂ ಇತ್ತು, ಆದ್ದರಿಂದ ಅವಳು ಏನಾಯಿತೆಂದು ಭಿನ್ನವಿಸಿದಳು. ॥105॥ ಬಾಬಾರವರು ಪ್ರೀತಿಯಿಂದ ಆಶ್ವಾಸನೆ ನೀಡುವ ಈ ಮಾತುಗಳನ್ನು ಹೇಳಿದರು – "ಇದನ್ನು ತಿಳಿ. ಆಕಾಶದಲ್ಲಿ ಮೋಡಗಳು ಕವಿಯುತ್ತವೆ. ಮಳೆ ಬರುತ್ತದೆ ಮತ್ತು ಮೋಡಗಳು ಚದುರಿ ಹೋಗುತ್ತವೆ. ಋತುಮಾನ ಮುಗಿಯುತ್ತದೆ. ॥106॥ "ನೀನೇಕೆ ಭಯಪಡುವೆ?" ಈ ರೀತಿ ಹೇಳುತ್ತ ಅವರು ಕಫನಿಯನ್ನು ಸೊಂಟದವರೆಗೆ ಎತ್ತಿ ಅಲ್ಲಿದ್ದ ಗಂಟುಗಳನ್ನು ಎಲ್ಲರಿಗೂ ತೋರಿಸಿದರು. ॥107॥ ನಾಲ್ಕು ಜಾಗದಲ್ಲಿ ಕೋಳಿಮೊಟ್ಟೆ ಅಳತೆಯ ನಾಲ್ಕು ಗಂಟುಗಳು ಇದ್ದುವು. ಅವರು ಹೇಳಿದರು, "ನೋಡು, ನಿಮ್ಮ ಕಷ್ಟಗಳಿಂದಾಗಿ ನಾನು ಅನುಭವಿಸಬೇಕಾಗುತ್ತದೆ." ॥108॥ ಜನರು ಈ ದಿವ್ಯ ಹಾಗೂ ವಿಶಿಷ್ಟವಾದ ಸಂಕಷ್ಟವನ್ನು ನೋಡಿ ಆಶ್ಚರ್ಯ ಚಕಿತರಾದರು. ತಮ್ಮ ಭಕ್ತರಿಗಾಗಿ ಸಂತರು ಎಷ್ಟು ಕಷ್ಟಪಡುತ್ತಾರೆಂಬುದು ತಿಳಿಯಿತು. ॥109॥ ಅವರ ಹೃದಯ ಮೇಣಕ್ಕಿಂತಲೂ ಮೃದು. ಬೆಣ್ಣೆ ಹೊರನೋಟಕ್ಕೆ ಕಾಣುವ ರೀತಿ ಇರುತ್ತದೆ. ಅವರಿಗೆ ತಮ್ಮ ಸ್ವಂತ ಭಕ್ತರಮೇಲೆ ಬಂಧು ಬಳಗವೋ ಎಂಬಷ್ಟು ನಿಸ್ವಾರ್ಥವಾದ ಪ್ರೇಮವಿರುತ್ತದೆ. ॥110॥ ಒಮ್ಮೆ ಈ ರೀತಿ ನಡೆಯಿತು. ನಾನಾ ಸಾಹೇಬ್ ಚಂದೋರ್ಕರನು ನಂದೂರ್‌ಬಾರ್‌ನಿಂದ ಪಂಡರಾಪುರಕ್ಕೆಂದು ಹೊರಟನು. ॥111॥ ನಾನಾ ಅದೃಷ್ಟವಂತನು. ಅವನಿಗೆ ಸಾಯಿ ಬಗೆಗಿನ ಅಂತರಾಳದ ಭಕ್ತಿ ಫಲ ನೀಡಿತ್ತು, ಅವನಿಗೆ ಭೂಲೋಕದ ಸ್ವರ್ಗ[21] ಕೈಗೆಟುಕಿತ್ತು, ಆ ಊರಿನ ಮಾಮಲೇದಾರರ ಹುದ್ದೆ ದೊರಕಿತ್ತು. ॥112॥ ಅವನು ನಂದೂರ್ ಬಾರ್‌ನಲ್ಲಿ ಆದೇಶ ಪಡೆದಾಗ ಕೂಡಲೇ ಅಲ್ಲಿಂದ ಬಿಡಬೇಕಾಯಿತು. ಅವಸರದಲ್ಲಿ ಎಲ್ಲ ತಯಾರಿಯೂ ಮಾಡಿಕೊಂಡು ಮನದಲ್ಲಿ ಬಾಬಾರವರ ದರ್ಶನ[22] ಮಾಡಲು ಇಚ್ಛಿಸಿದನು. ॥113॥ ಪತ್ನಿ ಮತ್ತು ಕುಟುಂಬದವರ ಜೊತೆಯಲ್ಲಿ ಶಿರಡಿಗೆ ಹೋಗುವ ಯೋಚನೆಮಾಡಿದನು. ಶಿರಡೀ ಅವನಿಗೆ ಪಂಡರಾಪುರವಾಗಿತ್ತು, ಬಾಬಾರವರಿಗೆ ತನ್ನ ಗೌರವ ಅರ್ಪಿಸಲು ಇಚ್ಛಿಸಿದನು. ॥114॥ ಅವನು ಯಾರಿಗೂ ಪತ್ರವನ್ನಾಗಲೀ ಸಂದೇಶವನ್ನಾಗಲೀ ಕಳಿಸಲಿಲ್ಲ. ತನ್ನ ಸಾಮಾನುಗಳನ್ನೆಲ್ಲ ಒಟ್ಟಾಗಿ ಅವಸರದಿಂದ ಗಾಡಿಯಲ್ಲಿ ತುಂಬಿದನು. ॥115॥ ಈ ರೀತಿ ನಾನಾ ಹೊರಟನು. ಶಿರಡಿಯಲ್ಲಿ ಯಾರಿಗೂ ಇದರ ಅರಿವು ಇರಲಿಲ್ಲ. ಆದರೆ ಸರ್ವಜ್ಞರಾದ ಸಾಯಿಗೆ ಎಲ್ಲವೂ ತಿಳಿದಿತ್ತು. ॥116॥ ನಾನಾ ಹೊರಟು ನೀಮಗಾಂವನ ಹೊರವಲಯ ತಲುಪಿರಬಹುದು. ಅದೇ ಸಮಯದಲ್ಲಿ ಶಿರಡಿಯಲ್ಲಿ ಎಂತಹ ಪವಾಡ ನಡೆಯಿತೆಂಬುದನ್ನು ಎಚ್ಚರಿಕೆಯಿಂದ ಆಲಿಸಿರಿ. ॥117॥ ಬಾಬಾರವರು ಮಸೀದಿಯಲ್ಲಿದ್ದರು.

ಮ್ಹಾಳಸಾಪತಿಯ ಜೊತೆಯಲ್ಲಿದ್ದನು. ಭಕ್ತರಾದ ಅಪ್ಪಾ ಶಿಂಧೆ ಮತ್ತು ಕಾಶೀನಾಥನು ಮಾತುಕತೆಯಾಡುತ್ತ ಕುಳಿತಿದ್ದರು. ॥118॥ ಆ ಸಮಯದಲ್ಲಿ ಬಾಬಾರವರು ಆಕಸ್ಮಿಕವಾಗಿ ಹೇಳಿದರು – "ನಾವು ನಾಲ್ಕು ಜನರೂ ಭಜನೆ ಮಾಡೋಣ. ಪಂಡರಾಪುರದ ಬಾಗಿಲುಗಳು ತೆಗೆದಿವೆ. ನಾವು ಸಂತೋಷವಾಗಿ ಹಾಡಬಹುದು." ॥119॥ ಸಾಯಿಗೆ ಭೂತ, ವರ್ತಮಾನ ಮತ್ತು ಭವಿಷ್ಯತ್ತಿನ ಅರಿವು ಇತ್ತು, ಅವರು ಈಗಾಗಲೇ ಸುದ್ದಿಯನ್ನು ತಿಳಿದಿದ್ದರು. ನಾನಾ ಊರ ಹೊರವಲಯದ ಕಾಲುವೆ ಹತ್ತಿರ ಇರುವಾಗಲೇ ಬಾಬಾರವರು ಉತ್ಸಾಹದಿಂದ ಭಜನೆ ಹಾಡುತ್ತಿದ್ದರು. "ನಾನು ಪಂಡರಾಪುರಕ್ಕೆ ಹೋಗುತ್ತಿರುವೆ. ಹೋಗುತ್ತಿರುವೆ, ಅಲ್ಲಿ ನಾನು ನೆಲೆಸುವೆ, ನೆಲೆಸುವೆ .... ಅದು ನನ್ನ ಗುರುವಿನ ನಿವಾಸ." ॥120॥ ಬಾಬಾ ಖುದ್ದಾಗಿ ಭಜನೆ ಹಾಡುತ್ತಿದ್ದರು. ಸುತ್ತಲೂ ಕುಳಿತಿದ್ದ ಭಕ್ತರು ಅದಕ್ಕೆ ದನಿಗೂಡಿಸುತ್ತಿದ್ದರು. ಅವರೆಲ್ಲರೂ ಪಂಡರಾಪುರದ ಬಗ್ಗೆ ಇದ್ದ ಪ್ರೀತಿಯಲ್ಲಿ ಮುಳುಗಿಹೋಗಿದ್ದರು. ಆಗಲೇ ನಾನಾ ಆಗಮಿಸಿದನು. ॥121॥ ಅವನು ಸಾಯಿ ಚರಣಗಳಿಗೆ[3] ಪತ್ನೀ ಸಮೇತನಾಗಿ ನಮಿಸಿದನು. ಮಹಾರಾಜರು ಅವನೊಡನೆ ಪಂಡರಾಪುರಕ್ಕೆ ಹೋಗಿ ಅಲ್ಲಿ ನಿರಾತಂಕವಾಗಿ ನಿಶ್ಚಿಂತೆಯಿಂದ ನೆಲೆಸಬೇಕೆಂದು ಪ್ರಾರ್ಥಿಸಿದನು. ॥122॥ ಆಹ್ವಾನದ ಅವಶ್ಯಕತೆಯೇ ಇರಲಿಲ್ಲ, ಈಗಾಗಲೇ ಬಾಬಾರವರು ಉತ್ಸಾಹ ಭಾವದಲ್ಲಿದ್ದರು. ಅಲ್ಲಿದ್ದ ಜನರು ಹೇಳಿದರು[4] – ಭಜನೆಯ ವಾಕ್ಯಗಳು ತಿಳಿಸುವಂತೆ ಈಗಾಗಲೇ ಬಾಬಾ ಪಂಡರಾಪುರಕ್ಕೆ ಹೋಗಲು ತಯಾರಾಗಿದ್ದಾರೆ. ॥123॥ ನಾನಾ ಅತ್ಯಂತ ಅಚ್ಚರಿಗೊಂಡನು. ಈ ಲೀಲೆಯನ್ನು ನೋಡಿ ದಿಗ್ಭ್ರಮೆಗೊಂಡನು. ಅವರ ಪಾದಗಳಲ್ಲಿ ತಲೆಯಿಟ್ಟು ಭಾವೋನ್ಮತ್ತನಾದನು. ॥124॥ ಅವರ ಆಶೀರ್ವಾದ, ಉದಿ ಮತ್ತು ಪ್ರಸಾದಗಳನ್ನು ತೆಗೆದುಕೊಂಡು ಮತ್ತೆ ನಮಸ್ಕರಿಸಿ ಚಂದೋರಕರ್‌ನು ಪಂಡರಾಪುರಕ್ಕೆ ಹೊರಟನು. ಅವರ ಅನುಮತಿಯನ್ನು ಪಡೆದಿದ್ದನು. ॥125॥ ಈರೀತಿಯ ಕತೆಗಳನ್ನು ಹೇಳುತ್ತಿದ್ದರೆ ಈ ಪುಸ್ತಕವು ಅಳತೆ ಮೀರಿಹೋಗುತ್ತದೆ. ಆದ್ದರಿಂದ ಇಲ್ಲಿಗೆ ಇತರರ ದುಃಖ ಉಪಶಮನದ ವಿಷಯವನ್ನು ನಿಲ್ಲಿಸೋಣ. ॥126॥ ಬಾಬಾರವರ ಸತ್ಕರ್ಮಗಳಿಗೆ ಕೊನೆಯೇ ಇಲ್ಲದಿರುವುದರಿಂದ ಇಲ್ಲಿಗೆ ಈ ಅಧ್ಯಾಯವನ್ನು ಮುಗಿಸೋಣ. ಮುಂದಿನ ಅಧ್ಯಾಯದಲ್ಲಿ, ನನ್ನದೇ ಕ್ಷೇಮಕ್ಕಾಗಿ ಇನ್ನು ಬೇರೆ ಚರಿತ್ರೆಗಳನ್ನು ವಿವರಿಸುತ್ತೇನೆ. ॥127॥ ನಾನು ಎಷ್ಟೇ ಪ್ರಯತ್ನಪಟ್ಟರೂ 'ನನ್ನದು' ಎಂಬ ಅಹಂಭಾವವನ್ನು ನಾಶಮಾಡಲು ಸಾಧ್ಯವಾಗುತ್ತಿಲ್ಲ. 'ನಾನು ಯಾರು?' ಎಂಬುದನ್ನು ನಾನು ಅರ್ಥಮಾಡಿಕೊಳ್ಳಲು ಆಗುತ್ತಿಲ್ಲ. ಸಾಯಿಯೇ ತಮ್ಮ ಕತೆಗಳನ್ನು ಹೇಳಲಿ. ॥128॥ ಅವರೇ ಮಾನವ ಜನ್ಮದ ಮಹತ್ವವನ್ನು ಹೇಳುತ್ತಾರೆ. ಅವರು ಏಕೆ ಭಿಕ್ಷೆ ಬೇಡುತ್ತಿದ್ದರು, ಬಾಯಜಾ ಬಾಯಿಯ ಭಕ್ತಿ ಮತ್ತು ಊಟಮಾಡುವಾಗ ಅವರ ಮನಃಸ್ಥಿತಿ ಯಾವರೀತಿ ಇತ್ತು ಎಂಬುದನ್ನು ಅವರೇ ತಿಳಿಸುವರು. ॥129॥ ಮತ್ತೆ ಸಹ ಬಾಬಾರವರು ಮಸೀದಿಯಲ್ಲಿ ಮ್ಹಾಳಸಾಪತಿ ಮತ್ತು ತಾತ್ಯಾ ಗಣಪತಿ ಕೋತೆಯವರೊಡನೆ ಹೇಗೆ ಮಲಗುತ್ತಿದ್ದರು – ಅದನ್ನು ಕೇಳಿರಿ. ॥130॥ ಹೇಮಾಡಪಂತನು ಸಾಯಿಗೆ ಶರಣಾಗಿದ್ದಾನೆ. ತಾನೊಬ್ಬ ಕ್ಷುಲ್ಲಕ ಭಕ್ತ,

ಅವರ ಚರಣ ಪಾದುಕೆಗಳಂತೆ ವಿನೀತ. ಅವನು ಸಾಯಿಯ ಆದೇಶಗಳನ್ನು ವಿಧೇಯಪೂರ್ವಕವಾಗಿ ಪಾಲಿಸುವವನು ಮತ್ತು ಇಲ್ಲಿಯವರೆಗಿನ ಕಥಾನಕವನ್ನು ಪೂರ್ಣಗೊಳಿಸಿರುತ್ತಾನೆ. ॥131॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ವಿವಿಧ ಕಥೆಗಳ ನಿರೂಪಣೆ" ಎಂಬ ಏಳನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಇದು ಅತ್ಯುನ್ನತ ಮಟ್ಟದ ಪರಮಾನಂದಪೂರ್ಣ ಧ್ಯಾನಸ್ಥ ಸ್ಥಿತಿ. ಎಲ್ಲಾ ಶಾರೀರಿಕ ಮತ್ತು ಮಾನಸಿಕ ಸಹನಶಕ್ತಿಗಳ ಮೇಲೆ ಪೂರ್ಣ ಹತೋಟಿ ಇರುವ ಸ್ಥಿತಿ. ಇದು ಅತ್ಯುನ್ನತಮಟ್ಟದ ಯೋಗಸ್ಥಿತಿ.
2. ಗಂಧದ ಮರದಿಂದ ಮಾಡಿದ ವಿಶೇಷವಾದ ಪಾತ್ರೆ, ಅದನ್ನು ಮಸೀದಿಯಲ್ಲಿನ ಬರುಕಿನಲ್ಲಿ ವಿಶೇಷ ದಿನದಂದು ಇಡಲಾಗುತ್ತದೆ.
3. ಕೃಷ್ಣನ ಜನ್ಮದಿನ.
4. ಈದ್ ದಿನಗಳು ಮುಸ್ಲಿಮರ ಹಬ್ಬದ ದಿನಗಳು.
5. ಮೊಹರಂ ಹಬ್ಬದಂದು ಹಸನ್ ಮತ್ತು ಹುಸೇನ್ ಎಂಬ ಹುತಾತ್ಮರ ಗೋರಿಗಳ ಸಂಕೇತವಾಗಿ (ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುವ) ಶವವಾಹನದ ಸಂಕೇತ.
6. ಪವಿತ್ರ ಅಗ್ನಿಯನ್ನು ಉರಿಸಿಕೊಂಡು ಪೂಜೆಗಳಲ್ಲಿ ತೊಡಗುವ ಬ್ರಾಹ್ಮಣರು.
7. ಲಕ್ಷ್ಮೀಬಾಯಿ ಶಿಂಧೆಯವರು ಕೊಟ್ಟಿದ್ದ ಒಂದು ದೊಡ್ಡ ಬೀಸುವ ಕಲ್ಲು.
8. ಚಿಕ್ಕ ಗೋಪುರದ ತೋಟದ ಹತ್ತಿರ ಪವಿತ್ರವಾದ ತುಳಸಿಗಿಡವನ್ನು ಪೂಜೆಗಾಗಿ ನೆಡಲಾಯಿತು.
9. ಆ ರಥವನ್ನು ಎಂ. ಬಿ. ರೇಗೆ, ದಾಜಿ ಸಾಹೇಬ್ ಅವಸ್ಥಿ ಮತ್ತು ಇತರರು ಸಂಸ್ಥಾನಕ್ಕೆ ದಾನ ಮಾಡಿದ್ದರು. ಆದರೆ ಈಗ ಅದನ್ನು ಪಕ್ಕದ

ಕೋಣೆಯಲ್ಲಿ ಇಟ್ಟಿದ್ದಾರೆ.

10. ಒಂದು ಕಪ್ಪು ದೊಣ್ಣೆ, $2^1/_2$ ಅಡಿ ಉದ್ದ ಮತ್ತು ಪಾದದ ಹೆಬ್ಬೆರಳಿನಷ್ಟು ದಪ್ಪದ್ದು, ಬಾಬಾರವರ ಹತ್ತಿರ ಯಾವಾಗಲೂ ಇರುತ್ತಿತ್ತು, ಮಸೀದಿಯಿಂದ ಚಾವಡಿಗೆ ಹೋಗುವಾಗ ಮತ್ತು ಹಿಂತಿರುಗುವಾಗ ತಮ್ಮ ಚಿಲುಮೆಯನ್ನೂ, ಹೊಗೆಸೊಪ್ಪಿನ ಚೀಲವನ್ನೂ ಒಂದು ಕೈಯಲ್ಲಿ ಹಾಗೂ ಇನ್ನೊಂದು ಕೈಯಲ್ಲಿ ಈ ಲಾಟಿಯನ್ನೂ ಇಟ್ಟುಕೊಂಡಿರುತ್ತಿದ್ದರು.
11. ಸಂತರ ದರ್ಶನಕ್ಕೆ ಹೋದಾಗ ನೀಡುವ ಹಣ.
12. ಔಷಧ ಗಿಡಮೂಲಿಕೆಗಳನ್ನು ಅರಿತವರು.
13. ಅಳಲೆಕಾಯಿ.
14. ಅಳಲೆಕಾಯಿ.
15. ದೀಪಾವಳಿಯ ಎರಡು ದಿನಗಳ ಮುಂಚೆ ಮಹಾಲಕ್ಷ್ಮಿ(ಐಶ್ವರ್ಯದ ಒಡತಿ)ಯನ್ನು ಪೂಜಿಸುವ ದಿನ.
16. ಮಾಧವ ಫಾಸ್ಲೆ.
17. ಮಾಧವರಾವ್ ಉದ್ಗರಿಸಿದರು.
18. ಬಾಬಾರವರು ತಮ್ಮನ್ನು ಸೇವಿಸುವವರನ್ನು ಎಂದಿಗೂ ತಡೆಯಲಿಲ್ಲ. ಒಮ್ಮೆ ಭಯಂಕರ ವ್ಯಾಧಿಯಿಂದ ನರಳುತ್ತಿದ್ದ ಹೆಂಗಸೊಬ್ಬಳು ಬಂದಳು. ಮಹಾರಾಜರು ಭೀಮಾಬಾಯಿ ಎಂಬ ಮರಾಠ ಹೆಂಗಸೊಬ್ಬಳಿಗೆ ಅವಳನ್ನು ಮನೆಗೆ ಕರೆದುಕೊಂಡುಹೋಗಿ ಇರಲು ಸ್ವಲ್ಪ ಜಾಗ ಕೊಡಲು ಹೇಳಿದರು. ಭೀಮಾಬಾಯಿ ಹೇಳಿದಳು – "ಮಹಾರಾಜ್, ಅವಳಿಗೆ ಭಯಂಕರ ವ್ಯಾಧಿ ಇದೆ. ಅವಳಿಗೆ ನನ್ನ ಮನೆಯಲ್ಲಿರಲು ಜಾಗ ಹೇಗೆ ಕೊಡಲಿ?" ಮಹಾರಾಜ್ ಉತ್ತರಿಸಿದರು. "ಅವಳಿಗೆ ಭಯಂಕರ ವ್ಯಾಧಿ ಇದ್ದರೇನಂತೆ? ಅವಳು ನನ್ನ ಸೋದರಿ. ನನ್ನ ಸ್ವಂತ ಸೋದರಿ. ಅವಳನ್ನು ನಿನ್ನ ಮನೆಗೆ ಕರೆದುಕೊಂಡು ಹೋಗು." ಬಾಬಾರವರು ಈ ನುಡಿಗಳನ್ನಾಡಿದ ಮೇಲೆ ಭೀಮಾಬಾಯಿ ಆಕೆಯನ್ನು ಕರೆದುಕೊಂಡು ಹೋಗಿ ತನ್ನ ಮನೆಯಲ್ಲಿಟ್ಟುಕೊಂಡಳು. ಆ ಹೆಂಗಸು ಅಲ್ಲಿ ಒಂದು ತಿಂಗಳ ಕಾಲ ಇದ್ದು ಮೃತ್ಯುವನ್ನಪ್ಪಿದಳು.

ಮತ್ತೊಂದು ಘಟನೆ – ಬಾಲಾಜಿ ಪಾಟೀಲ್ ನೇವಾಸ್ಕರ್‌ನಿಗೆ ಸಂಬಂಧಿಸಿದ್ದು. ಅವನೊಮ್ಮೆ ತನ್ನ ಹಳ್ಳಿಮನೆಗೆ ಹಿಂತಿರುಗಲು ಅಪ್ಪಣೆ ಕೇಳಲು ಬಂದನು. ಮಹಾರಾಜ್ ಹೇಳಿದರು – "ಆ ದಗಡು ಭಾವು ಅನಾರೋಗ್ಯಪೀಡಿತನಾಗಿದ್ದಾನೆ. ಅವನನ್ನು ನೋಡಿಕೋ." ಆತನಾದರೋ

ಒಬ್ಬ ಮುಸ್ಲಿಮನು. ಕಪ್ಪು ಕುಷ್ಠದಿಂದ ನರಳುತ್ತಿದ್ದನು. ಪ್ರತಿನಿತ್ಯ ಪಾಟೀಲನು ಅವನ ದೇಹದಿಂದ ಕ್ರಿಮಿಕೀಟಗಳನ್ನು ತೆಗೆದು, ಕೀವನ್ನೆಲ್ಲ ಶುಚಿಗೊಳಿಸಿ ಸ್ನಾನ ಮಾಡಿಸುತ್ತಿದ್ದನು. ಈ ರೀತಿ ಒಂದು ತಿಂಗಳು ಕಳೆಯಿತು. ನಂತರ ಆ ದಗಡು ಮೃತಹೊಂದಿದನು.ಪಾಟೀಲನಿಗೆ ಮನೆಗೆ ಹಿಂತಿರುಗಲು ಅಪ್ಪಣೆ ದೊರೆಯಿತು.

19. ಗೌರವಾನ್ವಿತ ಗಣೇಶ ಶ್ರೀಕೃಷ್ಣ ಕಪರ್ಡೆ. ಲೋಕಸಭಾ ಸದಸ್ಯರು.
20. ಅತಿಯಾದ ಜ್ವರ.
21. ಪಂಡರಾಪುರವನ್ನು ಭೂಮಿಯಮೇಲಿನ ಸ್ವರ್ಗ ಎಂದು ಭಾವಿಸುತ್ತಾರೆ.
22. ಶಿರಡಿಯಲ್ಲಿ ಬಾಬಾರವರದು.
23. ಬಾಬಾರವರ ಚರಣಗಳು.
24. ನಾನಾ.



# ಅಧ್ಯಾಯ - 8

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಸಾಯಿ ಸಮರ್ಥರ ಅವತಾರ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದಲ್ಲಿ ಬಾಬಾರವರು ಹಿಂದುವೂ ಅಲ್ಲ ಮುಸ್ಲಿಮರೂ ಅಲ್ಲ ಎಂಬುದನ್ನು ನಿರೂಪಿಸಲಾಗಿದೆ. ಬಾಬಾರವರ ವಾಸಸ್ಥಾನವಾದ ಶಿರಡಿಯು ಅದೆಷ್ಟು ಪುಣ್ಯ ಮಾಡಿದೆ? ॥1॥ ಪ್ರಾರಂಭದಲ್ಲಿ ಬಾಬಾರವರು ಒಬ್ಬ ಸಾಧಾರಣ ಬಾಲಕ. ಅನಂತರ ಅವರು ವಿಲಕ್ಷಣ ಫಕೀರರಾಗಿ ಬದಲಾದರು. ಮೊದಲು ಬಂಜರಾಗಿದ್ದ ಸ್ಥಳದಲ್ಲಿ ಹೇಗೆ ಒಂದು ಸುಂದರ ತೋಟವನ್ನು ಮಾಡಿದರು. ॥2॥ ಕಾಲಾಂತರದಲ್ಲಿ ಅದೇ ಜಾಗದಲ್ಲಿ ವಾಡಾ ಹೇಗೆ ಕಟ್ಟಲ್ಪಟ್ಟಿತು ಮತ್ತು ಬಾಬಾರವರ ಸಾಹಸಮಯ ಕ್ರಿಯೆಗಳಾದ ಖಂಡಯೋಗ, ಧೋತಿ–ಪೋತಿ ಇವುಗಳನ್ನು ನಿಮಗೆ ವಿವರಿಸಲಾಗಿದೆ. ॥3॥ ಇತರರ ಸೇವೆ ಮಾಡುತ್ತ ತಮ್ಮನ್ನೇ ಸವೆಸಿಕೊಳ್ಳುವಾಗ ಬಾಬಾರವರು ಅನೇಕ ಕಷ್ಟಗಳನ್ನು ಅನುಭವಿಸುತ್ತಿದ್ದರು. ಸಾಯಿಯವರು ಎಲ್ಲ ಭಕ್ತರಿಗೂ ರಕ್ಷಕರಾಗಿದ್ದರು. ಅವುಗಳನ್ನು ಹೇಗೆ ವಿವರಿಸಲಿ? ॥4॥ ಈಗ ಮಾನವ ಜನ್ಮದ ಮಹತ್ವವನ್ನು ಕೇಳಿರಿ. ಸಾಯಿಯ ಭಿಕ್ಷುಕತನ, ಬಾಯಜಾ ಬಾಯಿಯ ಸಂತ ಸೇವೆ, ಸಾಯಿಗೆ ಊಟಮಾಡಿಸುವ ಅದ್ಭುತ ಇವುಗಳನ್ನು ಕೇಳಿರಿ. ॥5॥ ತಾತ್ಯಾ, ಬಾಬಾ ಮತ್ತು ಮ್ಹಾಳಸಾಪತಿಯವರು ಮೂವರೂ ಒಟ್ಟಿಗೆ ಮಸೀದಿಯಲ್ಲಿ ಹೇಗೆ ಮಲಗುತ್ತಿದ್ದರು, ಈ ಮಹಾತ್ಮರು ರಾಹತಾದಲ್ಲಿನ ಕುಶಾಲಚಂದರ ಮನೆಗೆ ಹೇಗೆ ಹೋಗಿ ಬರುತ್ತಿದ್ದರು?

॥6॥ ಪ್ರತಿ ದಿನ ಸೂರ್ಯ ಹುಟ್ಟುತ್ತಾನೆ, ಮುಳುಗುತ್ತಾನೆ. ಈ ರೀತಿ ವರ್ಷಗಳು ಉರುಳಿದವು. ಜೀವನದ ಅರ್ಧ ಸಮಯ ನಿದ್ದೆಯಲ್ಲಿ
ಕಳೆಯುತ್ತದೆ. ಉಳಿದ ಕಾಲದಲ್ಲಿ ಶಾಂತವಾಗಿ ಸುಖ ಪಡೆಯುವುದಿಲ್ಲ. ॥7॥ ಮಗುವಾಗಿದ್ದಾಗ ಮಾನವನು ಆಟ ಪಾಠದಲ್ಲಿ ಕಳೆಯುತ್ತಾನೆ.
ಯೌವನದಲ್ಲಿ ಹೆಣ್ಣಿನ ಮಾಯೆಯಲ್ಲಿ, ಅನಂತರ ವೃದ್ಧಾಪ್ಯದಲ್ಲಿ ದೇಹವು ಬಲಹೀನವಾಗುತ್ತದೆ. ಈ ರೀತಿ ಪ್ರತಿಯೊಬ್ಬನೂ ದುರ್ಬಲವಾಗಿಯೇ
ಕಳೆಯುತ್ತಾನೆ. ॥8॥ ಹುಟ್ಟುವುದು, ದೇಹವನ್ನು ಬಲವಾಗಿಸುವುದು, ಉಸಿರಾಡುವುದು ಮತ್ತು ಜೀವಿತ ಕಾಲವನ್ನು ಹೆಚ್ಚುಮಾಡುವುದು ಇವುಗಳೇ
ಜೀವನದ ಉದ್ದೇಶವೇನು? ॥9॥ ಪರಮಾತ್ಮನನ್ನು ತಲುಪುವುದೇ ಮಾನವ ಜನ್ಮದ ಗುರಿ. ಇಲ್ಲದಿದ್ದಲ್ಲಿ ಮಾನವನಿಗೂ, ನಾಯಿ–ಹಂದಿ ಮುಂತಾದ
ಪ್ರಾಣಿಗಳಿಗೂ ಇರುವ ವ್ಯತ್ಯಾಸವೇನು? ॥10॥ ನಾಯಿ, ಹಂದಿಗಳೂ ತಿನ್ನುತ್ತವೆ ಮತ್ತು ಯಥೇಚ್ಛವಾಗಿ ಸಂತಾನೋತ್ಪತ್ತಿ ಮಾಡುತ್ತವೆ. ಹಾಗಿರುವಾಗ
ಇಬ್ಬರ ಜೀವನವೂ ಒಂದೇ ಇದ್ದಲ್ಲಿ ಮಾನವ ಜೀವನದ ಉತ್ಕೃಷ್ಟತೆಯೆಲ್ಲಿ? ॥11॥ ತಿನ್ನುವುದು, ಸಂತೋಷವಾಗಿರುವುದು, ಸಂತತಿಹೊಂದುವುದು
– ಈ ಮೂರಕ್ಕೆ ಮಾತ್ರ ಈ ಮಾನವ ಶರೀರವನ್ನು ಉಪಯೋಗಿಸುವುದಾದರೆ ಇದೇ ಜೀವನದ ಗುರಿಯಾದರೆ ಈ ಮಾನವ ಜನ್ಮವು
ಅರ್ಥಹೀನ. ॥12॥ ಇಡೀ ಜೀವನವನ್ನೇ ಹಸಿವು, ನಿದ್ರೆ, ಭಯ, ಮೈಥುನ ಈ ನಾಲ್ಕು ಕಾರ್ಯಗಳಿಗೆ ಮಾತ್ರ ಮೀಸಲಿಟ್ಟಲ್ಲಿ ಮಾನವ ಜನ್ಮಕ್ಕೂ
ಪ್ರಾಣಿಗಳಿಗೂ ವ್ಯತ್ಯಾಸವೇನು? ನಿನ್ನ ವಿವೇಚನೆಯನ್ನು ಉಪಯೋಗಿಸಿ ನೀನೇ ನಿರ್ಧರಿಸು. ॥13॥ ಮಾನವ ದೇಹದಸಾರ್ಥಕತೆಯು ಇದೊಂದೇ
ಆದರೆ ಒಂದು ಮರದ ಜೀವನವೂ ಇದಕ್ಕಿಂತ ಕಡಿಮೆ ಬೆಲೆಯದಲ್ಲ. ತಿದಿ ಕೂಡಾ ಗಾಳಿಯನ್ನು ಹೊರಹಾಕುತ್ತದೆ. ನಾಯಿಗಳೂ ದೇಹವನ್ನು
ಪೋಷಿಸುತ್ತವೆ. ॥14॥ ಮಾನವನು ಸ್ವತಂತ್ರ ಜೀವಿ. ಅವನು ನಿರ್ಭಯನು, ಸ್ವತಂತ್ರ ಮತ್ತು ಶಾಶ್ವತ – ಈ ಜ್ಞಾನವನ್ನು ಪಡೆದಲ್ಲಿ ಅವನ ಜೀವನ
ಸಾರ್ಥಕ ಎಂದು ಹೇಳಬಹುದು. ॥15॥ ಯಾವ ವ್ಯಕ್ತಿಯು ತಾನು ಎಲ್ಲಿಂದ ಬಂದಿದ್ದೇನೆ, ತಾನು ಯಾರು ಮತ್ತು ತನ್ನ ಜನ್ಮದ ಗುರಿಯೇನು,
ಜೀವಿತದ ಉದ್ದೇಶವೇನು ಇವುಗಳನ್ನು ಅರಿತಾಗ ಜ್ಞಾನಿಯೆಂದು ಕರೆಯಬಹುದು. ಈ ಅರಿವು ಇಲ್ಲದಿದ್ದಲ್ಲಿ ಬೇರೆ ಎಲ್ಲವೂ ವ್ಯರ್ಥ. ॥16॥ ಎಣ್ಣೆ
ದೀಪದಲ್ಲಿರುವ ಬತ್ತಿಯಂತೆ ಮೊದಲು ಮತ್ತು ಕೊನೆಯಲ್ಲಿ ಒಂದೇ ಸಮನೆ ಇರುತ್ತದೆ. ಆದರೆ ಆಗಾಗ ಮಿಣುಕು ಎನ್ನುತ್ತದೆ ಮತ್ತು ಪ್ರತಿಕ್ಷಣವೂ
ಬದಲಾಗುತ್ತ ಇರುತ್ತದೆ. ಮಾನವ ದೇಹದಸ್ಥಿತಿಯೂ ಅದೇ ಆಗಿದೆ. ॥17॥ ಬಾಲ್ಯ, ಯೌವನ ಮತ್ತು ವೃದ್ಧಾಪ್ಯಇವುಗಳ ಮೂಲಕ ಪ್ರತಿಯೊಬ್ಬರೂ
ಹಾದುಹೋಗುತ್ತಾರೆ. ಆದರೆ ಎಷ್ಟು ಸ್ವಾಭಾವಿಕವಾಗಿ ಅವು ಬಂದು ಹೋಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಯಾರಿಂದಲೂ[2]
ಸಾಧ್ಯವಿಲ್ಲ. ॥18॥ ಈಗ ನೋಡಿದ್ದು ಅದೇ ಕ್ಷಣ ನಾಶವಾಗುತ್ತದೆ. ಆ ರೀತಿ ಅಸಂಖ್ಯಾತ ಹಂತಗಳು ಒಂದೇ ರೀತಿಯದ್ದಾಗಿ ಕಾಣುತ್ತವೆ. ಅದೇ
ರೀತಿ ಒಂದು ಕ್ಷಣ ಅನುಭವಿಸಲು ಸಾಧ್ಯವಾದ ಈ ದೇಹ ಮತ್ತೊಂದು ಕ್ಷಣ ಅದೇ ರೀತಿಯಾಗಿ ಇರಲಾರದು. ॥19॥ ಈ ದೇಹವು ಅತಿ

ಕ್ಷುಲ್ಲಕವಾದದ್ದು. ಅದು ಕೊಳೆ, ಮಲ, ಅನಿಲಗಳು, ಕೀವು, ಎಂಜಲು ಇತ್ಯಾದಿಗಳನ್ನು ಹೊಂದಿರುತ್ತದೆ. ಮತ್ತು ಮೃತ್ಯು ಪ್ರತಿಕ್ಷಣ ಸುಳಿದಾಡುತ್ತಿರುತ್ತದೆ. ॥20॥ ಈ ಮಾನವ ಶರೀರ ಕ್ರಿಮಿಕೀಟಗಳ ತವರೂರು. ಅನೇಕ ರೋಗಗಳ ನೆಲೆವೀಡು. ಕ್ಷಣಿಕ ಮತ್ತು ಅಲ್ಪಸಮಯದಲ್ಲೇ ನಾಶವಾಗುವಂತಹದು. ॥21॥ ಇದು ಒಂದು ಮಾಂಸ ಮಜ್ಜೆಗಳ ಶೇಖರಣೆ. ಮೂಳೆ ಮತ್ತು ಚರ್ಮದ ಪಂಜರ, ದುರ್ನಾತಹೊಡೆಯುವಮೂತ್ರದ ಗೊಬ್ಬರದ ಸಾಗಾಣಿಕೆ ಬಂಡಿ, ವಾಂತಿ ಮಾಡಲ್ಪಡುವ (ಕಫ ಮತ್ತು ಆಮದ) ಚೀಲ – ನಿಜವಾಗಿಯೂ ಇದು ಆತ್ಮೋನ್ನತಿಗೆ ಒಂದು ತಡೆಗೋಡೆ. ॥22॥ ಚರ್ಮ, ರಕ್ತ ಮತ್ತು ಮಾಂಸ, ಮಜ್ಜೆ, ಕೊಬ್ಬು, ರಕ್ತನಾಳಗಳು, ಮೂಳೆಗಳು, ವಾಯುಗಳು – ಇವೆಲ್ಲವೂ ದೇಹವನ್ನು ಅಶುದ್ಧಿಮಾಡಿ ಕೇವಲ ಅಲ್ಪಕಾಲದವರೆಗೆ ಮಾತ್ರ ಇರಲು ಅನುವು ಮಾಡುತ್ತದೆ. ॥23॥ ಈ ಮಾನವ ಶರೀರವು ಪಾಪಭರಿತವಾಗಿ, ಅಶಾಶ್ವತವಾಗಿ ಮತ್ತು ಅಲ್ಪ ಕಾಲದವರೆಗೆ ಇರುವಂತಹುದಾಗಿದ್ದರೂ, ಈ ದೇಹಮಾತ್ರದಿಂದಲೇ ಪರಿಶುದ್ಧವಾದ ಪರಮಾತ್ಮನನ್ನು ತಲುಪಬಹುದು. ॥24॥ ಜನನ ಮರಣಗಳೆಂಬ ಚಕ್ರವು ಅವಿರತವಾಗಿರುತ್ತದೆ. ಮೃತ್ಯುವಿನ ಯೋಚನೆಯೂ ಸಹ ಭಯಂಕರವಾದುದು. ಈ ಜೀವನವು ಯಾವುದೇ ಸೂಚನೆಯನ್ನೂ ಕೊಡದೇ ಅಂತ್ಯವಾಗುತ್ತದೆ. ॥25॥ ಯಾರು ಹುಟ್ಟುವರು, ಯಾರು ಸಾಯುವರು, ಹಗಲುಗಳೆಷ್ಟು, ರಾತ್ರಿಗಳೆಷ್ಟು ಇವುಗಳ ಲೆಕ್ಕವನ್ನುಯಾರು ಇಟ್ಟಿರುತ್ತಾರೆ? ಮಾರ್ಕಂಡೇಯನೆ ವರದಿಂದ ಜನಿಸಿದವರೂ ಮೃತ್ಯುದವಡೆಯಿಂದ ತಪ್ಪಿಸಿಕೊಳ್ಳಲಾರರು. ॥26॥ ಈ ರೀತಿ ಅಲ್ಪಾಯುವಾದ ಮಾನವ ಜೀವದಲ್ಲಿ ಧರ್ಮಗ್ರಂಥಗಳನ್ನು ಓದುವುದರಲ್ಲಿ ಮತ್ತು ಭಗವಂತನ ಚರಿತ್ರೆಗಳನ್ನು ಆಲಿಸುವುದರಲ್ಲಿ ಕಳೆದ ಸಮಯ ಮಾತ್ರ ಫಲಕಾರಿ ಮತ್ತು ಇನ್ನಿತರೆ ರೀತಿಯಲ್ಲಿ ಕಳೆದ ಸಮಯ ವ್ಯರ್ಥ. ॥27॥ ಕೇವಲ ಇದು ಮಾತ್ರ ಜೀವನದಲ್ಲಿ ಅತ್ಯುತ್ತಮ ಮಾರ್ಗವೆಂದು ಅಚಲವಾದ ದೃಢನಿಶ್ಚಯ ಇರಬೇಕು. ಆದರೆ ಯಾರೂ ಸ್ವತಃ ತಾವೇ ಅನುಭವಿಸುವವರೆಗೆ ಇದನ್ನು ನಂಬುವುದಿಲ್ಲ. ॥28॥ ಆದರೆ ಅದರ ಅನುಭವಪಡೆಯಲು ಆಳವಾದ ಅಧ್ಯಯನ ಮಾಡಬೇಕು – ನಂತರವೇ ಆತ್ಮವು ಶಾಶ್ವತವಾದ ಆನಂದವನ್ನು ಪಡೆದು ಆ ಸಂಪತ್ತನ್ನು ಅನುಭವಿಸುತ್ತದೆ. ॥29॥ ಭಗವಂತನ ಕೃಪೆಯಿಂದ ಒಬ್ಬ ವ್ಯಕ್ತಿಯು ಸಪ್ತಸಾಗರ ಪರ್ಯಂತ ಜಾಗದ ಒಡೆಯನಾಗಿದ್ದರೂ, ಒಳ್ಳೆಯ ಪತ್ನಿ, ಮಗ, ಶ್ರೀಮಂತಿಕೆ, ಆಸ್ತಿ ಎಲ್ಲವೂ ಇದ್ದರೂ ಸಹ ಮನಸ್ಸಿನಲ್ಲೇ ಅತೃಪ್ತನಾಗಿರುತ್ತಾನೆ. ॥30॥ ಪ್ರತಿಯೊಬ್ಬನೂ ಶಾಶ್ವತ ಸುಖ, ಶಾಂತಿಗಳನ್ನು ತಮ್ಮ ಜೀವನದ ಗುರಿಯನ್ನಾಗಿಸಿಕೊಂಡು ಅದರ ಬಗ್ಗೆ ಯೋಚಿಸುತ್ತಿರಬೇಕು. ಎಲ್ಲರಲ್ಲೂ ಇರುವ ಪರಮಾತ್ಮನ ಸೇವೆಮಾಡಬೇಕು. ಇದು ಜೀವನದಲ್ಲಿ ಅತ್ಯಂತ ಉಪಯುಕ್ತವಾದ ಶ್ರದ್ಧೆ. ॥31॥ ಈ ಮಾನವ ದೇಹವು ಚರ್ಮ, ಮಾಂಸ, ರಕ್ತ ಮತ್ತು ಮೂಳೆಗಳಿಂದ ಮಾಡಲ್ಪಟ್ಟಿದೆ. ಇದು ಪರಮಾರ್ಥದ ಮಾರ್ಗದಲ್ಲಿ ಅಡಚಣೆ. ಆದ್ದರಿಂದ ಅದಕ್ಕೆ ಅಂಟಿದ ಮೋಹವನ್ನು ಬಿಡು. ॥32॥ ಅದನ್ನು ಯಾವಾಗಲೂ ನಿನ್ನ ಸೇವಕನೆಂದು ಪರಿಗಣಿಸು. ಅದನ್ನು ಮುದ್ದಿಸಬೇಡ. ಎಂದಿಗೂ ಅದರ ಆಸೆಗಳಿಗೆ ಬಲಿಯಾಗಬೇಡ.

ಅವುಗಳಿಂದ ನರಕಕ್ಕೆ ನೀನೇ ಮೆಟ್ಟಿಲು ತೋಡಿದಂತಾಗುತ್ತದೆ. ॥33॥ ಆಹಾರ ಮತ್ತು ವಸ್ತ್ರಗಳು ಕೇವಲ ಅದನ್ನ ಸಂರಕ್ಷಿಸಲು ಮಾತ್ರ ಬೇಕು. ಅದು ಅಶಾಶ್ವತವೆಂಬುದನ್ನು ಅರಿತು ಕೇವಲ ಆತ್ಮೋದ್ಧಾರಕ್ಕಾಗಿ ಮತ್ತು ಜನನ ಮರಣಗಳೆಂಬ ಚಕ್ರದಿಂದ ಹೊರಬರಲು ಮಾತ್ರ ಉಪಯೋಗಿಸಲು ಜೋಪಾನಮಾಡಬೇಕು. ॥34॥ ಜನನ ಮತ್ತು ಮರಣಗಳೆರಡೂ ಅನರ್ಥಗಳೇ. ಪ್ರತಿಕ್ಷಣವೂ ನಾಶಕ್ಕೆ ದಾರಿ ಮಾಡಿಕೊಡುತ್ತವೆ. ಇದು ಒಂದು ಕ್ಷಣಿಕ ಸುಖವಾಗಿ ಆಜೀವಪರ್ಯಂತ ದುಃಖವನ್ನು ತರುವಂತಹುದು. ॥35॥ ಯಾವ ರೀತಿ ಬಳುಕುವ ವಿದ್ಯುಲ್ಲತೆಯು ಕೇವಲ ಕ್ಷಣಿಕವಾಗಿ ಬಂದು ಮಾಯವಾಗುತ್ತದೆಯೋ, ಸಾಗರದ ಅಲೆಗಳು ಯಾವ ರೀತಿ ಕ್ಷಣಿಕವೋ, ಈ ದೇಹವೂ ಅದೇ ರೀತಿ ಕ್ಷಣಿಕವಾದುದು. ಆದುದರಿಂದ ಯೋಚಿಸಿರಿ. ॥36॥ ಈ ದೇಹ, ಮನೆ, ಮಕ್ಕಳು ಮತ್ತು ಪತ್ನಿ – ಇವೆಲ್ಲವೂ ನಾಶವಾಗುತ್ತವೆ. ಆದರೆ ತಮ್ಮ ತಂದೆ, ತಾಯಿಗಳ ದೇಹವನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಬೀಳ್ಕೊಡುವಾಗಲೂ ಯಾರೂ ಇದನ್ನು ಆಲೋಚಿಸುವುದಿಲ್ಲ. ॥37॥ ಅವರು ಮೃತಹೊಂದಿದ್ದಾರೆ. ಈ ದಿನ ಆರೋಗ್ಯದಿಂದಿರುವವನೂ ಸಹ ಅವರ ನಂತರ ಸಾಯುತ್ತಾನೆ. ಪ್ರತಿಯೊಬ್ಬರೂ ಜನನ ಮರಣದ ಚಕ್ರದಲ್ಲಿ ಸಿಲುಕಿರುತ್ತಾರೆ. ಆದರೆ ಒಂದು ಕ್ಷಣವೂ ಇದನ್ನು ಹೇಗೆ ನಿಗ್ರಹಿಸಬಹುದೆಂದು ಯೋಚಿಸುವುದಿಲ್ಲ. ॥38॥ ಕುಟುಂಬದ ಉನ್ನತಿಯನ್ನು ನೋಡುತ್ತಲೇ ಬೇಗನೆ ಜೀವನವು ಕಳೆದು ಹೋಗುತ್ತದೆ. ಆದರೆ ತನ್ನ ಕರ್ತವ್ಯವನ್ನು ಎಂದಿಗೂ ಮರೆಯುವುದಿಲ್ಲ ಮತ್ತು ಜೀವನದ ಪರಿಮಿತಿಯನ್ನು ಲೆಕ್ಕಮಾಡಿರುತ್ತದೆ. ॥39॥ ಅಂತಿಮ ಕ್ಷಣ ಬಂದಾಗ ಅದು ಒಂದು ಅರೆಕ್ಷಣವೂ ಕಾಯುವುದಿಲ್ಲ. ಮೀನುಗಾರನು ಬಲೆಬೀಸಿದಾಗ ಮೀನುಗಳು ಸಿಕ್ಕಿಹಾಕಿಕೊಳ್ಳುವ ಹಾಗೆ ಜೀವನವು ಮೃತ್ಯುವಿನ ಸ್ಪರ್ಶದಲ್ಲಿ ವಿಲವಿಲ ಒದ್ದಾಡಿ ಜೀವನವು ಅಂತ್ಯವಾಗುತ್ತದೆ. ॥40॥ ಪೂರ್ವಜನ್ಮದ ಪುಣ್ಯಕಾರ್ಯಗಳ ಶೇಖರಣೆಯಿಂದಾಗಿ ಮತ್ತು ಪುಣ್ಯವನ್ನು ಒಟ್ಟುಮಾಡಿರುವುದರ ಫಲದಿಂದಾಗಿ ಮಾನವ ಜನ್ಮ ಪಡೆಯುತ್ತಾನೆ. ಆದ್ದರಿಂದ ಪ್ರತಿಯೊಂದು ಕ್ಷಣವನ್ನೂ ಒಳ್ಳೆಯ ರೀತಿ ಉಪಯೋಗಿಸಬೇಕು. ॥41॥ ಗಂಗೆಯನ್ನು ಶಿವನ ತಲೆಯಲ್ಲಿ ನಿಲ್ಲಿಸಲು ಮಾಡಿದಂತಹ ಭಗೀರಥ್ ಪ್ರಯತ್ನ ಮಾಡಿದರೂ ಮಾನವ ಜನ್ಮ ಪಡೆಯಲು ಸಾಧ್ಯವಿಲ್ಲ. ವಿಧಿವಶಾತ್ ಅನಿರೀಕ್ಷಿತವಾಗಿ ನಮಗೆ ಪಡೆಯಲು ಸಾಧ್ಯವಾಗಿದೆ. ಅದನ್ನು ನಿರ್ಲಕ್ಷ್ಯದಿಂದ ವ್ಯರ್ಥ ಮಾಡಬಾರದು. ॥42॥ ಮುಂದಿನ ಜನ್ಮದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವೆನೆಂದು ಯೋಚಿಸುವವನು ಮೂರ್ಖನು. ಈ ಜೀವನ ತಪ್ಪಿ ಹೋದಮೇಲೆ ಅದೇ[7] ರೀತಿ ನಡೆಯುವುದೆಂಬುದು ನಿಶ್ಚಿತವಿಲ್ಲ. ॥43॥ ಅನೇಕ ಜಾತಿಗಳು ದೇಹಧಾರಿಗಳಾಗಿದ್ದಾರೆ. ಅವರ ಅನುವಂಶಿಕ ಉತ್ಪತ್ತಿ ಕಾಗಳು ಸೃಷ್ಟಿಯ ಅಂಗಗಳನ್ನು ತಲುಪಿ, ಆಗಿನ ಕರ್ಮಾನುಸಾರ ಒಂದು ಹೊಸ ಆಕಾರವನ್ನು ಪಡೆಯುತ್ತದೆ. ॥44॥ ಇನ್ನೂ ಅನೇಕ ಅಧಮಾಧಮರೂ, ನೀಚರೂ ಇದ್ದಾರೆ. ಅವರು ಮೊದಲು ಚಲಿಸುವಂತವರಾಗಿ[8], ಅನಂತರ ಅಚಲ(ಜಡ)ರಾಗಿ[9] ತಮ್ಮ ಕರ್ಮಗಳು ಹಾಗೂ ಯೋಚನೆಗಳಿಗನುಸಾರವಾಗಿ ಹುಟ್ಟುತ್ತಾರೆ.

॥45॥ ಯಾವ ರೀತಿ ಒಬ್ಬನು ಜ್ಞಾನವನ್ನು ಸಂಪಾದನೆ ಮಾಡುತ್ತಾನೋ ಅಥವಾ ಕರ್ಮಗಳನ್ನು ಆಚರಿಸುತ್ತಾನೋ ಅವುಗಳಿಗನುಗುಣವಾಗಿ ದೇಹವನ್ನು ಪಡೆಯುತ್ತಾನೆ. ಇದು ಶ್ರುತಿಗಳಲ್ಲಿ ನಮೂದಿಸಿರುವ ವಿಷಯ. ॥46॥ "ಪ್ರತಿಯೊಬ್ಬನೂ ತನ್ನ ಪ್ರಜ್ಞೆಗನುಸಾರವಾಗಿ ಜನ್ಮ ತಾಳುತ್ತಾನೆ" ಎಂದು ಕರುಣಾಮಯಿ ಶ್ರುತಿಮಾತೆ ಹೇಳುತ್ತಾಳೆ. ಆದುದರಿಂದ ಅವನ ಪ್ರಜ್ಞೆಯ ಭಂಡಾರಕ್ಕೆ ಅನುಗುಣವಾಗಿ ಆತ್ಮವು ಜನ್ಮತಾಳುತ್ತದೆ. ॥47॥ ಪರಮಾತ್ಮನ ಲೀಲೆಗಳು ಬುದ್ಧಿಗೆ ಮೀರಿದವು. ಅವುಗಳನ್ನು ಸಂಪೂರ್ಣವಾಗಿ ಅರಿಯುವುದು ಅಶಕ್ಯ. ಆದರೆ ಮಾನವನು ಪುಣ್ಯವಂತನೆಂದು ಪರಿಗಣಿಸಬೇಕು. ಅವನು ಪರಮಾತ್ಮನ ಅಂಶವನ್ನೂ ಅರಿಯಬಲ್ಲನು. ॥48॥ ನರದೇಹವು ದೊರಕುವುದು ಶುಭ ಭಾಗ್ಯ. ಅದರಲ್ಲಿ ಬ್ರಾಹ್ಮಣನಾಗಿ ಹುಟ್ಟುವುದು ಮಹತ್ಪುಣ್ಯವು. ಪರಮಾತ್ಮನ ಕೃಪೆಯಿಂದ ಸಾಯಿ ಚರಣಗಳನ್ನು ಪಡೆಯುವುದು ಇನ್ನೂ ಅಲಭ್ಯ.ಇವೆಲ್ಲವೂ ಅತ್ಯಂತ ವಿರಳ. ॥49॥ ಬೇರೆಬೇರೆ ರೀತಿಯ ಜೀವಿಗಳಿದ್ದಾಗ್ಯೂ ಮಾನವ ಜನ್ಮವು ಎಲ್ಲಕ್ಕಿಂತಲೂ ಪರಮೋತ್ತಮ. ನಾವು ಎಲ್ಲಿಂದ ಬಂದಿರುವೆವು? ನಮ್ಮ ಸೃಷ್ಟಿಕರ್ತ ಯಾರು? ಇಂತಹ ಪ್ರಶ್ನೆಗಳಿಗೆ ವಿವೇಕಿಯಾದ ಮಾನವನ ಮನಸ್ಸು ಮಾತ್ರ ಉತ್ತರಿಸಲು ಸಾಧ್ಯ. ॥50॥ ಅನ್ಯಯೋನಿಜರಿಗೆ ಈ ಜ್ಞಾನವಿರುವುದಿಲ್ಲ. ಅವು ಹುಟ್ಟುತ್ತವೆ, ಸಾಯುತ್ತವೆ. ಅವು ಭೂತ, ವರ್ತಮಾನ ಮತ್ತು ಭವಿಷ್ಯತ್ತನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಹಾಗೂ ಭಗವಂತನ ಅಸ್ತಿತ್ವವನ್ನೂ ಅರಿಯಲಾರವು. ॥51॥ ಆದುದರಿಂದಲೇ ಪರಮಾತ್ಮನು, ಮಾನವನ ಸೃಷ್ಟಿಯಾದ ನಂತರ ಮಾನವನು ಇಂದ್ರಿಯನಿಗ್ರಹ ಮತ್ತು ವೈರಾಗ್ಯದಿಂದ ಅವನನ್ನು ಪೂಜಿಸಬಲ್ಲನೆಂದು ಯೋಚಿಸಿ ಆನಂದಸಂಪನ್ನನಾದನು. ॥52॥ ವಿನಾಶಿಯಾದ ಮಾನವನು ಸಾಧನೆಯನ್ನು[10] ಮಾಡಿದರೆ ಶಾಶ್ವತವಾದ ಪರಮಾತ್ಮನನ್ನು ಪಡೆಯುತ್ತಾನೆ. ಸಾಧನೆಯಿಂದ ಪರಮಾತ್ಮನನ್ನು ಪಡೆಯಲು ನರದೇಹಕ್ಕಿಂತ ಬೇರೆ ಉಪಕರಣ ಇನ್ನೊಂದಿಲ್ಲ. ॥53॥ ಒಬ್ಬ ಹಾವಾಡಿಗನು ಬಹಳ ಚತುರನಾಗಿರುತ್ತಾನೆ. ಅವನು ಅಜ್ಞಾನಿಗಳ ಮುಂದೆ ಆಟ ತೋರಿಸುವುದಿಲ್ಲ. ಅದಕ್ಕಾಗಿ ಕುಶಲ ಪ್ರೇಕ್ಷಕರು ಅವನನ್ನು ಹೊಗಳಬಲ್ಲಂತಹವರಿಗಾಗಿ ಕಾಯುತ್ತಾನೆ. ॥54॥ ಅದೇ ರೀತಿ ಅಸಂಖ್ಯಾತ ಕ್ರಿಮಿ, ಕೀಟಗಳು, ಪ್ರಾಣಿಗಳು, ಪಕ್ಷಿಗಳು, ಗಿಡಗಳು, ಇವುಗಳನ್ನು ಸೃಷ್ಟಿಸಿದ ಮೇಲೆ ಪರಮಾತ್ಮನಿಗೆ ಆಶ್ಚರ್ಯವಾಯಿತು ಮತ್ತು ನಿರಾಶೆಯೂ ಆಯಿತು. ಅವನಿಗೆ ತನ್ನ ಸೃಷ್ಟಿಕಾರ್ಯವು ಅರ್ಥಹೀನವಾಗಿ ಕಂಡಿತು. ॥55॥ ಈ ಅನಂತ, ವಿಶಾಲ ವಿಶ್ವದಲ್ಲಿ ಸೂರ್ಯ, ಚಂದ್ರ ಮತ್ತು ಅಸಂಖ್ಯಾತ ತಾರೆಗಳಿದ್ದವು. ಆದರೆ ಸೃಷ್ಟಿಕರ್ತನ ಸೃಷ್ಟಿಯ ಬಗ್ಗೆ ಒಂದು ಕ್ಷಣವಾದರೂ ಅಚ್ಚರಿಯನ್ನು ವ್ಯಕ್ತಪಡಿಸುವವರು ಯಾರೂ ಇರಲಿಲ್ಲ. ॥56॥ ಒಂದೇ ಒಂದು ಜೀವಿಯೂ ಭಗವಂತನ ಇಡೀ ಸೃಷ್ಟಿಯ ಹಿಂದಿನ ಉದ್ದೇಶದ ಬಗ್ಗೆ ಯೋಚಿಸ ಹೋಗಲಿಲ್ಲ. ॥57॥ "ನನ್ನ ಇಡೀ ಸೃಷ್ಟಿಯೇ ನಿರರ್ಥಕ. ಹರಿತ ಬುದ್ಧಿಶಕ್ತಿಯಿಂದ ನನ್ನ ಸೃಷ್ಟಿಯ ಅಗಾಧತೆ ಮತ್ತು ವಿಶಾಲತೆಯನ್ನು ಪ್ರಶಂಸೆ ಮಾಡುವಂತಹ ಜೀವಿಯನ್ನು ಸೃಷ್ಟಿಸುವವರೆಗೆ ಇದು ನಿಷ್ಪ್ರಯೋಜಕ. ॥58॥ ಈ ರೀತಿ ಸ್ವತಃ ತಾನೇ ಯೋಚಿಸಿ

ಪರಮಾತ್ಮನು ಮಾನವನನ್ನು ಸೃಷ್ಟಿಸಿದನು. ಅವನಿಗೆ ತನ್ನ ವಿವೇಚನಾಶಕ್ತಿಯಿಂದ ತನ್ನ ಶಕ್ತಿಯನ್ನು ಅರಿಯಬಹುದಾಯಿತು. ॥59॥ ನನ್ನ ವೈಭವವು ಅಗಾಧ, ನನ್ನ ಶಕ್ತಿಯು ಅಪೂರ್ವ. ಈ ಸೃಷ್ಟಿಯು ನನ್ನ ಮಾಯೆಯ ಫಲ. ಆಶ್ಚರ್ಯಚಕಿತನಾಗಿ ಅವನು 'ಇದೆಲ್ಲವೂ ನನ್ನ ಮಾಯೆಯ ಆಟ' ಎಂದು ತಿಳಿದುಕೊಳ್ಳುತ್ತಾನೆ. ॥60॥ ಅವನು ಮಾತ್ರ ಜ್ಞಾನ ಸಂಪಾದನೆ ಮಾಡಬಲ್ಲನು. ಅವನೊಬ್ಬನು ಮಾತ್ರ ನನ್ನಲ್ಲಿ ಏಕಾಗ್ರಚಿತ್ತನಾಗಬಹುದು ಮತ್ತು ಅರಿಯಬಲ್ಲನು. ಅವನು ಮಾತ್ರ ಅದರಿಂದ ಲಾಭಪಡೆಯಬಲ್ಲನು – ಆಗ ಮಾತ್ರ ಸೃಷ್ಟಿಕಾರ್ಯದ ನಾಟಕ ಸಂಪೂರ್ಣವಾಗುತ್ತದೆ. ॥61॥ ನನ್ನ ಸೃಷ್ಟಿಯ ನಾಟಕದ ಸಾರ್ಥಕತೆಯು ಪ್ರೇಕ್ಷಕರ ಆನಂದ ಸಂಪನ್ನತೆಯಲ್ಲಿದೆ. ಮಾನವನು ನನ್ನ ರಾಜ್ಯವನ್ನೂ ಮತ್ತು ನಾನೊಬ್ಬನೇ ಜಗನ್ನಿಯಾಮಕ ಮತ್ತು ಜಗನ್ನಿಯಂತ್ರಕ ಎಂಬುದನ್ನು ಅರಿತಾಗ ಅತ್ಯಂತ ಕೃತಾರ್ಥನಾಗುತ್ತೇನೆ. ॥62॥ ಜೀವನದಲ್ಲಿ ಕೇವಲ ಕಾಮ್ಯಕ ಕರ್ಮಗಳನ್ನು ಮಾಡಿ ಅದರಿಂದ ದ್ರವ್ಯಾರ್ಜನೆ ಮತ್ತು ಶರೀರ ಪೋಷಣೆಯು ಅಲ್ಲ. ಜೀವವು ಬದುಕಿರುವವರೆಗೆ ತತ್ವಜ್ಞಾನ ಸಂಪಾದನೆ ಮಾಡಬೇಕು. ಅದರಿಂದಲೇ ಜೀವನದ ಸಫಲತೆ. ॥63॥ ತತ್ವಜ್ಞಾನವೇ ಅದ್ವೈತದ ಭಾವ. ಅದೇ ಉಪನಿಷತ್‌ಗಳಲ್ಲಿ ವಿವರಿಸಿರುವ ಬ್ರಹ್ಮಜ್ಞಾನ. ಅದೇ ಪರಮಾತ್ಮನ ಉಪಾಸನೆ. ಅದೇ ಭಕ್ತರಿಗೆ ನಿಜವಾದ ಪರಬ್ರಹ್ಮ. ॥64॥ ಗುರು ಮತ್ತು ಬ್ರಹ್ಮ ಎರಡೂ ಬೇರೆ ಬೇರೆ ಅಲ್ಲ. ಅದ್ವೈತ ಜ್ಞಾನವನ್ನು ಅರಿತವನು ಭಕ್ತಿಯನ್ನು ಸಾಧನೆಮಾಡಿದಂತೆ. ಈ ಅರಿವು ಮಾಯೆಯನ್ನು ಜಯಿಸಲು ಸುಲಭೋಪಾಯ. ॥65॥ ಯಾರು ಶ್ರದ್ಧಾವಂತರೊಜ್ಞಾನ ಸಂಪಾದನೆ ಮಾಡಿದ್ದಾರೋ, ವೈರಾಗ್ಯಭಾವವನ್ನು ಹೊಂದಿದ್ದಾರೋ, ಆತ್ಮತತ್ತ್ವವನ್ನು[11] ಸಾಕ್ಷಾತ್ಕರಿಸಿಕೊಂಡಿದ್ದಾರೋ, ಅವರು ನಿಜವಾಗಿಯೂ ಅದೃಷ್ಟವಂತ ಭಕ್ತರು. ॥66॥ ತಮ್ಮ ಸ್ವಸ್ವರೂಪವನ್ನು ಅರಿಯದೆ ಇರುವವರು ತಮ್ಮ ಅಜ್ಞಾನವನ್ನು ದೂರಮಾಡದೆ, ತಾವೇ ಜೀವನದಲ್ಲಿ ಎಲ್ಲವನ್ನೂ ಸಾಧಿಸಿದ್ದಾರೆಂದು ನಂಬಿದ್ದಾರೋ, ಅವರಿಗೆ ಇದು ಒಂದು ವಿಲಕ್ಷಣವಾದ ಪ್ರತಿಬಂಧವಾಗಿ ಸಾಧನೆಯಲ್ಲಿ ಅಡ್ಡಿಪಡಿಸುತ್ತದೆ. ॥67॥ ಜ್ಞಾನ ಮತ್ತು ಅಜ್ಞಾನ ಇವೆರಡೂ ಅವಿದ್ಯೆ ಎಂಬ ವಿಕಾರದಿಂದ ಜನಿಸಿದವು. ಒಂದು ಮುಳ್ಳಿನಿಂದ ಇನ್ನೊಂದು ಮುಳ್ಳನ್ನು ತೆಗೆಯುವ ರೀತಿಯಲ್ಲಿ ನೀವು ಅವೆರಡನ್ನೂ ತ್ಯಜಿಸಬೇಕು. ॥68॥ ಜ್ಞಾನದಿಂದ ಅಜ್ಞಾನವನ್ನು ದೂರಮಾಡಿ. ಜ್ಞಾನ–ಅಜ್ಞಾನ ಇವೆರಡಕ್ಕೂ ಅತೀತರಾಗಿ ಹೋಗಿ, ನಿರ್ಮಲ ಸ್ವಸ್ವರೂಪಾವಸ್ಥೆಯನ್ನು ತಲುಪಿರಿ. ಇದೊಂದೇ ಮಾನವಜನ್ಮದ ಗುರಿ. ॥69॥ ಪರಿಶುದ್ಧವಾದ ಜ್ಞಾನವು ವಿಷಯವಾಸನಾ ರೂಪಿ ಅಶುದ್ಧವಾದ ಎಣ್ಣೆಯು ಮುಗಿಯುವವರೆಗೆ ಅಜ್ಞಾನದ ಕರಿಕಿಟ್ಟವನ್ನು ತೆಗೆದು ಅಹಂಕಾರವೆಂಬ[12] ದಪ್ಪನಾದ ಬತ್ತಿಯು ನಾಶವಾಗುವವರೆಗೆ ಪ್ರಕಾಶಮಾನವಾಗಿ ಪ್ರಜ್ವಲಿಸುವುದಿಲ್ಲ. ॥70॥ ಈ ನರದೇಹದಿಂದ ಮಾಡುವ ಕರ್ಮಗಳು ನಿವಾರ್ಯ ಅಥವಾ ಅನಿವಾರ್ಯವಾಗಲಿ. ಬುದ್ಧಿ, ಕರ್ತವ್ಯದ ಪರಿಮಿತಿಯೊಳಪಟ್ಟು ನಿಶ್ಚಯವಾದ ಕರ್ತವ್ಯವೆಂದು ತಿಳಿದು ನಿರ್ವಹಿಸಬೇಕು. ॥71॥ ಯಾರಿಗಾದರೂ ಯಾವುದೇ ಕೆಲಸವಿಲ್ಲದಿದ್ದಲ್ಲಿ, ಸಂಪತ್ತು ಮತ್ತ ಶಾಂತಿಗಳನ್ನು ಅನುಭವಿಸಬೇಕು.

ಇಲ್ಲದಿದ್ದರೆ ರಾಮನಾಮವನ್ನು[13] ಭಜಿಸುತ್ತ ಆತಾರಹಿತನಾಗಿ ನಿಶ್ಚಿಂತೆಯಿಂದ ಇರಬೇಕು. ॥72॥ ಶರೀರ, ಇಂದ್ರಿಯ, ಮನಸ್ಸು ಮತ್ತು ಬುದ್ಧಿ ಆತ್ಮಬೋಧೆಗೆ ಅಡಚಣೆಗಳು. ಆದರೆ ಈ ಉಪಾಧಿಗಳಿಂದಲೇ ಆತ್ಮವು ಈ ಸಂಸಾರವನ್ನು ಅಥವಾ ಅಸ್ತಿತ್ವವನ್ನು ಅನುಭವಿಸಬಹುದು. ಆತ್ಮವು ತಾನೇ ಅನಾದಿ ಮತ್ತು ನಿರ್ಮೋಹವಾದದ್ದು. ॥73॥ ಹೊರನೋಟಕ್ಕೆ ಮಾತ್ರ ಆತ್ಮವು ಸುಖಿಪಡುವಂತೆ ತೋರುತ್ತದೆ ಏಕೆಂದರೆ ಸ್ವಭಾವತಃ ಅದು ಸುಖಿಸುವುದೂ ಇಲ್ಲ. ಇದನ್ನು ತರ್ಕ ವಿಜ್ಞಾನದಿಂದ ಮತ್ತು ಊಹೆಗಳಿಂದ ಪ್ರಮಾಣೀಕರಿಸಲಾಗಿದೆ. ॥74॥ ಜೀವನದ ನಿಜಧರ್ಮವನ್ನು ಅರ್ಥಮಾಡಿಕೊಂಡು, ಮಾಡಬೇಕಾದ ಕರ್ತವ್ಯ ಕರ್ಮಗಳನ್ನು ಬುದ್ಧಿಗೆ ವಹಿಸಿ ಬುದ್ಧಿಯ ಧರ್ಮವನ್ನು ಅದಕ್ಕೇ ಬಿ. ನಿಷ್ಕಾಮವಾಗಿ ಕರ್ಮಗಳನ್ನು ಮಾಡಬೇಕು. ॥75॥ ಪ್ರತಿಯೊಬ್ಬರ ಧಾರ್ಮಿಕ ಕರ್ತವ್ಯಗಳನ್ನು ಯಾವಾಗಲೂ ಅಂತರಾತ್ಮದ ಧ್ಯಾನದಲ್ಲಿ ಲೀನಮಾಡಬೇಕು. ಇದೇ ನಮ್ಮ ಜನ್ಮದ ಗುರಿ. ಅದರಿಂದಲೇ ಅಂತರಂಗದ ಸಮಾಧಾನ ಪಡೆಯಬಹುದು. ॥76॥ ಜೀವನದ ನಾಲ್ಕು ಪುರುಷಾರ್ಥಗಳನ್ನು ಸಾಧಿಸಲು ಮಾನವ ಜನ್ಮವನ್ನು ಬಿಟ್ಟು ಬೇರೆ ಜನ್ಮದಲ್ಲಿ[14] ಯಾವುದೇ ರೀತಿಯಿಂದ ಸಾಧ್ಯವಿಲ್ಲ. ಯಾವ ಪುರುಷನು ಇವುಗಳನ್ನು ಅಭ್ಯಸಿಸಿ ಪರಿಣತನಾಗುವನೋ ಅವನು ಪರಮಾತ್ಮನನ್ನು ಪಡೆಯುತ್ತಾನೆ. ॥77॥ ಆದುದರಿಂದ, ದೇಹವು ನಾಶವಾಗುವವರೆಗೆ ಆತ್ಮಜ್ಞಾನವನ್ನು ಪಡೆಯಲು ಪ್ರಯತ್ನಿಸು. ಮಾನವ ಜನ್ಮದ ಒಂದು ಕ್ಷಣವನ್ನೂ ವ್ಯರ್ಥಗೊಳಿಸಬೇಡ. ॥78॥ ಸಮುದ್ರದಲ್ಲಿರುವ ಉಪ್ಪುನೀರು ಮೋಡವಾಗಿ[15] ಆಕಾಶದಿಂದ ಕೆಳಗೆ ಬೀಳುವಾಗ ಅಮೃತದಂತೆ ಹೇಗೆ ಮಧುರವಾಗಿರುತ್ತದೆಯೋ ಹಾಗೆಯೇ ಗುರುವಿನ ಪದತಲದಲ್ಲಿ ಆನಂದವನ್ನು ಅನುಭವಿಸಬಹುದು. ॥79 ಅದೇ ರೀತಿ ಮನುಷ್ಯ ಜನ್ಮದಲ್ಲಿ ಗುರುವಿಲ್ಲದೆ ಆನಂದಸ್ಥಿತಿಯನ್ನು ಪಡೆಯಲು ಆಗುವುದಿಲ್ಲ. ಗುರುವು ಅವಶ್ಯವಾದ ಸಹಾಯಹಸ್ತ[16] ನೀಡಿದಾಗ ಮಾತ್ರವೇ ಜೀವಿಗಳು ಉದ್ಧಾರವಾಗುವುವು. ॥80॥ ಪವಿತ್ರವಾದ ಮಂತ್ರಗಳು, ತೀರ್ಥಗಳು, ದೇವತೆಗಳು, ಬ್ರಾಹ್ಮಣರು, ಜ್ಯೋತಿಷಿಗಳು ಮತ್ತು ಔಷಧಿಕಾರರು– ಈ ಸಾಲಿನಲ್ಲಿ ಏಳನೆಯವರಾಗಿರುವರು – ಇವರೆಲ್ಲರಲ್ಲೂ ಶ್ರದ್ಧೆ ಇರಲೇ ಬೇಕು. ॥81॥ ಇವುಗಳಲ್ಲೆಲ್ಲ ಎಷ್ಟರಮಟ್ಟಿಗೆ ಶ್ರದ್ಧೆ ಇದೆಯೋ ಅಷ್ಟರಮಟ್ಟಿಗೆ ಮಾತ್ರ ಸಫಲತೆ ಸಿಗುತ್ತದೆ. ಮನಸ್ಸಿನ ತೀವ್ರತೆಯ ಆಧಾರದ ಮೇಲೆ ಸಫಲತೆಯೂ ಬದಲಾಗುತ್ತದೆ. ॥82॥ ಈ ಸಂಸಾರಕ್ಕೆ ಬಂಧಿಸಲ್ಪಟ್ಟವರಾಗಿ ಸಂತರು ಅವರ ಹೃದಯದಲ್ಲಿ ಮೋಕ್ಷದ ಬಗ್ಗೆ ಆಸೆ ಹುಟ್ಟಿಸುತ್ತಾರೆ. ಮೋಕ್ಷ ಪಡೆಯುವ ಸಾಧಕರಿಗೆ ಮೋಕ್ಷವನ್ನು ದಯಪಾಲಿಸುತ್ತಾರೆ. ಸಂತರು ಪರರಿಗೆ ಉಪಕಾರಮಾಡುವುದಕ್ಕೋಸ್ಕರವಾಗಿಯೇ ಅಗ್ರಾಹ್ಯ ಸ್ಥಿತಿಯಿಂದ ಅಸ್ತಿತ್ವ ಪಡೆಯುತ್ತಾರೆ. ॥83॥ ಪ್ರವಚನಗಳಿಂದ, ಪುರಾಣಗಳನ್ನು ಓದುವುದರಿಂದ ಯಾವುದನ್ನು ಸಾಧಿಸಲು ಅಸಾಧ್ಯವೋ ಅದನ್ನು ಒಬ್ಬ ಸದ್ಗುರುವಿನ ನಡವಳಿಕೆಯಿಂದ ಅರ್ಥಮಾಡಿಕೊಳ್ಳಬಹುದು. ಗುರುವಿನ ಮನೋವೃತ್ತಿ ಮತ್ತು ಉದಾಹರಣೆಗಳೇ ಅವರ ಮೌನವಾದ ಉಪದೇಶಗಳು. ॥84॥ ಕ್ಷಮೆ, ಶಾಂತಿ, ನಿರ್ಮೋಹತ್ವ, ದಯೆ ಇವುಗಳನ್ನು

ಅಭ್ಯಸಿಸುವವರು ಮತ್ತು ಪರೋಪಕಾರ ಮಾಡುವವರು, ಅಹಂಭಾವವನ್ನು ತೊರೆದವರು ಮತ್ತು ಇಂದ್ರಿಯನಿಗ್ರಹ ಶಕ್ತಿಯುಳ್ಳ ವ್ಯಕ್ತಿಗಳನ್ನು ಕಾಣುವುದು ಬಹು ಅಪರೂಪ. ॥85॥ ಪುಸ್ತಕಗಳನ್ನು ಓದಿ ಸಾಧಿಸದೆ ಇರುವುದನ್ನು ಶಾಸ್ತ್ರಗಳಲ್ಲಿ ತಿಳಿಸಿರುವ ಮೇಲೆ ಹೇಳಿದ ಸದ್ಗುಣಗಳನ್ನು ಅಭ್ಯಾಸಮಾಡುವ ವ್ಯಕ್ತಿಯನ್ನು ಅವಲೋಕಿಸುವುದರಿಂದಲೇ ಪಡೆಯಬಹುದು. ಅಸಂಖ್ಯಾತ ನಕ್ಷತ್ರಗಳು ಮಾಡಲಾರದೆ ಇರುವುದನ್ನು ಕೇವಲ ಸೂರ್ಯನೊಬ್ಬನೇ ಮಾಡಬಲ್ಲನು. ॥86॥ ಇದೇ ರೀತಿ, ಆದರ್ಶ ಸಂತರು ತಮ್ಮ ಅನೇಕಾನೇಕ ಅಸಾಧಾರಣ[17] ಕ್ರಿಯೆಗಳಿಂದ ಭವಸಾಗರಕ್ಕೆ ಕಟ್ಟುಬಿದ್ದವರನ್ನು ಬಿಡಿಸುತ್ತಾರೆ ಮತ್ತು ಪರಮಾನಂದದ ಸ್ಥಿತಿಗೆ ಉತ್ಪತ್ತಿಸ್ಥಾನವಾಗಿರುತ್ತಾರೆ. ॥87॥ ಅಂತಹ ಮಹಾನ್ ಸಂತರಲ್ಲಿ ಸಾಯಿಯು ಒಬ್ಬರು. ದೈವೀಗುಣಗಳಿಂದ ಮತ್ತು ಪರಿಪೂರ್ಣತೆಯಿಂದ ಕೂಡಿದವರು. ಆದರೆ ಅವರು ಫಕೀರರ ರೀತಿಯಲ್ಲಿ ಜೀವಿಸಿದ್ದರು. ಸದಾ ಸ್ವಸ್ವರೂಪದಲ್ಲಿ ನೆಲೆಸಿದ್ದವರು. ॥88॥ ಸಮತ್ವದಲ್ಲಿ ಅವಿಚ್ಛಿನ್ನ ಶ್ರದ್ಧೆಯುಳ್ಳವರು. ನಾನು ಮತ್ತು ನನ್ನದು ಎಂಬ ಪದಗಳನ್ನು ಎಂದಿಗೂ ಉಚ್ಚರಿಸದವರು. ಎಲ್ಲಾ ಜೀವಿಗಳಲ್ಲೂ ಕರುಣೆ ತೋರಿದವರು. ಅವರು ಈ ಭೂಮಿಯಮೇಲಿನ ಭಗವಂತನ ಅವತಾರ. ॥89॥ ಅವರು ಸುಖದ ಸಂತೋಷಪಡುವುದಾಗಲೀ, ಕಷ್ಟ ಬಂದಾಗ ದುಃಖಿಸುವುದಾಗಲೀ ಇರಲಿಲ್ಲ. ಅವರಿಗೆ ಬಡವ ಶ್ರೀಮಂತರಿಬ್ಬರೂ ಒಂದೇ. ಇದು ಬಹಳ ಅಸ್ವಾಭಾವಿಕವಲ್ಲವೇ? ॥90॥ ಯಾರ ಹುಬ್ಬಿನ ಚಲನೆಯೇ ದರಿದ್ರರನ್ನು ಕ್ಷಣಾರ್ಧದಲ್ಲಿ ಶ್ರೀಮಂತನನ್ನಾಗಿ ಮಾಡುವುದೋ ಅವರು ಮನೆಯಿಂದ ಮನೆಗೆ ಜೋಳಿಗೆ ಹಿಡಿದು ಭಿಕ್ಷಕ್ಕೆ ಹೋಗುತ್ತಿದ್ದರು. ॥91॥ ಯಾರ ಮನೆಗಳ ಬಾಗಿಲಿಗೆ ಬಾಬಾರವರು ಭಿಕ್ಷೆಗೆ ಹೋಗಿ ಕೈ ಚಾಚಿ, 'ಓ ಮಹಿಳೆಯರೇ! ಒಂದು ಕಾಲು ಭಾಗ ಭಾಕರಿ(ರೊಟ್ಟಿ)ಯನ್ನು ನೀಡಿ' ಎಂದು ಬೇಡುತ್ತಿದ್ದರೋ ಅಂತವರೇ ಧನ್ಯರು. ॥92॥ ಲೋಟವನ್ನು[18] ಒಂದು ಕೈಯಲ್ಲಿ ಹಿಡಿದು ಜೋಳಿಗೆಯನ್ನು[19] ಮತ್ತೊಂದರಲ್ಲಿ ಹಿಡಿದು ಅವರೇ ಬಾಗಿಲಿನಿಂದ ಬಾಗಿಲಿಗೆ ಕೆಲವು ಮನೆಗಳಿಗೆ ನಿತ್ಯವೂ ಹೋಗುತ್ತಿದ್ದರು. ॥93॥ ತರಕಾರಿ, ಸಾಂಬಾರು, ಹಾಲು ಮತ್ತು ಮಜ್ಜಿಗೆ ಎಲ್ಲವನ್ನೂ ಜನರಿಂದ ಲೋಟಕ್ಕೆ ಹಾಕಿಸಿಕೊಳ್ಳುತ್ತಿದ್ದರು. ನೋಡಿ, ಅವರು ತಿನ್ನುವ ವೈಖರಿಯಿಂದ ಅಚ್ಚರಿಗೊಳ್ಳುವಿರಿ. ॥94॥ ಬೇಯಿಸಿದ ಅನ್ನ ಅಥವಾ ರೊಟ್ಟಿಗಾಗಿ ಜೋಳಿಗೆಯನ್ನು ಹಿಡಿಯುವರು. ನೀರಾಗಿರುವ ಖಾದ್ಯವಸ್ತುಗಳನ್ನು ಲೋಟದಲ್ಲಿ ಸಂಗ್ರಹಿಸುತ್ತಿದ್ದರು. ॥95॥ ಅವರಿಗೆ ವಿವಿಧ ರೀತಿಯ ಆಹಾರ ಪದಾರ್ಥಗಳ ಬಗ್ಗೆ ಬೇರೆ ಬೇರೆಯಾಗಿ ರುಚಿ ನೋಡಲು ಆಸೆ ಹುಟ್ಟಲು ಹೇಗೆ ಸಾಧ್ಯ? ಅವರ ನಾಲಿಗೆಗೆ ರುಚಿಯ ವಾಸನೆ ಎಂದೂ ತಿಳಿಯದೆ ಇರುವಾಗ ಅವರಿಗೆ ಆಸೆ ಹುಟ್ಟಲು ಹೇಗೆ ಸಾಧ್ಯ? ॥96॥ ಅವರು ಜೋಳಿಗೆಯಲ್ಲಿ ಬೀಳುವ ಆಹಾರದಿಂದ ತೃಪ್ತರಾಗುತ್ತಿದ್ದರು. ಅದು ರುಚಿಯಾಗಿದೆಯೋ ಇಲ್ಲವೋ ಎಂಬುದನ್ನು ಅರಿಯರು. ಏಕೆಂದರೆ ಅವರ ನಾಲಿಗೆ ಎಂದೂ ಭೇದಭಾವ ಮಾಡಲಿಲ್ಲ. ॥97॥ ಬೆಳಗಿನ ಸಮಯ ಅವರು ನೆರೆಹೊರೆಯವರಿಂದ ಭಿಕ್ಷೆ ಬೇಡುತ್ತಿದ್ದರು. ಅದನ್ನು ತಮ್ಮ ಜೋಳಿಗೆಯಲ್ಲಿ ತುಂಬಿಸಿಕೊಳ್ಳುತ್ತಿದ್ದರು ಮತ್ತು

ಅದರಿಂದ ತೃಪ್ತರಾಗುತ್ತಿದ್ದರು. ॥98॥ ಅದನ್ನೂ ಪ್ರತಿನಿತ್ಯವೂ ಮಾಡುತ್ತಿರಲಿಲ್ಲ. ಅವರಿಗೆ ಹೋಗಬೇಕೆನಿಸಿದಾಗ ಹೋಗುತ್ತಿದ್ದರು. ಕೆಲವು ವೇಳೆ ಅವರು ಹಳ್ಳಿಯ ಒಳಗೆ ಹೋಗುತ್ತಿದ್ದರು. ಒಂದು ದಿನದಲ್ಲಿ ಹನ್ನೆರಡು ಬಾರಿಯೂ ಬೇಡಿದ್ದಾರೆ. ॥99॥ ಈ ರೀತಿ ಭಿಕ್ಷೆಬೇಡಿ ತಂದ ಆಹಾರವನ್ನು ಒಂದು ಮಡಕೆಯಲ್ಲಿ ಹಾಕಿ ಮಸೀದಿಯಲ್ಲಿಡುತ್ತಿದ್ದರು. ಕಾಗೆ ನಾಯಿಗಳೂ ಅದರಿಂದ ತಿನ್ನುತ್ತಿದ್ದವು. ಅವರು ಎಂದಿಗೂ ಅವುಗಳನ್ನು ಓಡಿಸುತ್ತಿರಲಿಲ್ಲ. ॥100॥ ಮಸೀದಿಯನ್ನು ಮತ್ತು ಮುಂದಿನ ಬಯಲನ್ನು ಗುಡಿಸುತ್ತಿದ್ದ ಹೆಂಗಸರು 10–12 ರೊಟ್ಟಿಗಳನ್ನು ಮಡಕೆಯಿಂದ ಮನೆಗೆ ತೆಗೆದುಕೊಂಡುಹೋಗುತ್ತಿದ್ದರು. ಆದರೆ ಯಾರೂ ತಡೆಯುತ್ತಿರಲಿಲ್ಲ. ॥101॥ ಯಾರು ನಾಯಿ ಮತ್ತು ಬೆಕ್ಕುಗಳನ್ನು ಕನಸಿನಲ್ಲಿಯೂ ತಿರಸ್ಕರಿಸಿ ಓಡಿಸುತ್ತಿರಲಿಲ್ಲವೋ ಅವರು ಬಡವರನ್ನು ದೀನರನ್ನು ಹೇಗೆ ತಿರಸ್ಕರಿಸುವರು? ಅವರ ಜೀವನವೇ ಧನ್ಯ! ॥102॥ ಪ್ರಾರಂಭದಲ್ಲಿ ಅವರನ್ನು ಜನರು ಒಬ್ಬ ಹುಚ್ಚು ಫಕೀರನೆಂದು ತಿಳಿದಿದ್ದರು. ಭಿಕ್ಷೆ ಬೇಡಿ ಹೊಟ್ಟೆತುಂಬಿಸುವವನು ಯಾವ ವೈಭವವನ್ನು ಹೊಂದಲು ಸಾಧ್ಯ? ॥103॥ ಆದರೆ ಫಕೀರನು ಸ್ವಭಾವತಃ ದಯಾಳುವಾಗಿದ್ದನು. ಯಾರಿಂದಲೂ ಏನನ್ನೂ ಪ್ರತಿಯಾಗಿ ಪಡೆಯುವ ಅಪೇಕ್ಷೆಯಿರಲಿಲ್ಲ ಪ್ರೇಮಸ್ವರೂಪನು, ಬಾಹ್ಯದಲ್ಲಿ ಚಂಚಲನಂತೆ ಕಂಡರೂ ಅಂತರಂಗದಲ್ಲಿ ಸ್ಥಿತಪ್ರಜ್ಞನಾಗಿದ್ದನು. ಅವನ ವರ್ತನೆ ವರ್ಣನಾತೀತ. ॥104॥ ಅಂತಹ ಸಾಮಾನ್ಯವಾದ ಹಳ್ಳಿಯಲ್ಲಿ ಕೆಲವು ಭಾಗ್ಯವಂತರಿದ್ದರು. ಅವರೂ ದಯಾಳುವಾಗಿದ್ದರು. ಅವರು ಅವನನ್ನು ಸಂತರೆಂದು ಗೌರವಿಸಿದರು. ॥105॥ ತಾತ್ಯಾ ಕೋತೆಯ ತಾಯಿ, ಬಾಯಜಾ ಬಾಯಿ, ಕೆಲವು ರೊಟ್ಟಿಗಳನ್ನು ಒಂದು ಬುಟ್ಟಿಯಲ್ಲಿಟ್ಟುಕೊಂಡು ತಲೆಯಮೇಲೆ ಹೊತ್ತುಕೊಂಡು ಮಧ್ಯಾಹ್ನದ ವೇಳೆ ಕಾಡಿನೊಳಗೆ ಹೋಗುತ್ತಿದ್ದಳು. ॥106॥ ಅವಳು ಮೈಲಿಗಟ್ಟಲೆ ನಡೆಯುತ್ತ, ಹುಚ್ಚು ಫಕೀರನನ್ನು ಹುಡುಕುತ್ತ, ದಟ್ಟವಾದ ಪೊದೆಗಳ ನಡುವೆ ಪಾದಚಾರಿಯಾಗಿ ನಡೆಯುತ್ತ ಬಾಬಾರವರನ್ನು ಕಂಡೊಡನೆ ಕಾಲಿಗೆ ನಮಸ್ಕರಿಸುತ್ತಿದ್ದಳು. ॥107॥ ಅವಳ ಭಕ್ತಿಯನ್ನು ವಿವರಿಸಲು ಯಾರಿಗೆ ಸಾಧ್ಯ? ರಸವಿಲ್ಲದ ಅಥವಾ ರಸಸಹಿತವಾದ ತರಕಾರಿ ಪಲ್ಯವನ್ನು, ರೊಟ್ಟಿಯನ್ನೂ ಬಾಬಾರವರಿಗೆ ಕೈಯಾರೆ ತಿನ್ನಿಸುತ್ತಿದ್ದಳು. ಕಾಡಿನಲ್ಲಿ ಮಧ್ಯಾಹ್ನ ಅಥವಾ ಅಪರಾಹ್ನದ ನಂತರ ತಿನ್ನಿಸುವಳು. ॥108॥ ಬಾಬಾರವರೂ ಸಹ ಅವಳ ಈ ಭಕ್ತಿಯನ್ನು ತಮ್ಮ ಜೀವಿತಕಾಲದಲ್ಲಿ ಮರೆಯಲಿಲ್ಲ. ಭೂತಕಾಲವನ್ನೂ ನೆನಪಿನಲ್ಲಿಟ್ಟುಕೊಂಡು ಅವರು ಅವಳಿಗೆ ಒಬ್ಬ ಭಾಗ್ಯವಂತನಾದ ಪುತ್ರನನ್ನು ಕರುಣಿಸಿದರು. ॥109॥ ಪತಿ, ಪತ್ನಿಯರಿಬ್ಬರಿಗೂ ಫಕೀರನಲ್ಲಿ ಅಪಾರ ಶ್ರದ್ಧೆ ಇತ್ತು. ಆ ಫಕೀರನೇ ಅವರಿಗೆ ದೇವರು. ಭಗವಂತನು ಭಕ್ತನ ಶ್ರದ್ಧೆಯಲ್ಲಿ ಇರುತ್ತಾನೆ ಅಲ್ಲವೇ? ॥110॥ ಫಕೀರನು ಧ್ಯಾನಸ್ಥನಾಗಿರುತ್ತಿದ್ದನು. ಆಗ ಬಾಯಜಾ ಬಾಯಿ ಎಲೆಯನ್ನು[20] ಹರಡಿ ಬುಟ್ಟಿಯಿಂದ ಆಹಾರವನ್ನು ತೆಗೆದು ಬಡಿಸುತ್ತಿದ್ದಳು. ಮತ್ತು ತಿನ್ನಿಸಲು ಪ್ರಯತ್ನಿಸುತ್ತಿದ್ದಳು. ॥111॥ "ಫಕೀರತನ ನಿಜವಾದ ರಾಜತ್ವ, ಫಕೀರತನ ಮಾತ್ರ ಎಂದೆಂದೂ ಇರುವುದು. ಐಶ್ವರ್ಯವು ಹೇಗೆ ಬೇಗ ಅದೃಶ್ಯವಾಗುತ್ತದೆ ನೋಡು!" ಬಾಬಾ

ಇದನ್ನು ಸದಾ ಹೇಳುತ್ತಿದ್ದರು. ॥112॥ ಅನಂತರ ಬಾಬಾರವರು ಕಾಡನ್ನು ದೂರ ಮಾಡಿದರು. ಅವರು ಹಳ್ಳಿಯಲ್ಲೇ ವಾಸಮಾಡಲು ಪ್ರಾರಂಭಿಸಿದರು. ಮಸೀದಿಯಲ್ಲಿ ಆಹಾರ ಸ್ವೀಕರಿಸುತ್ತಿದ್ದರು. ಹೀಗೆ ತಾಯಿಯ ತೊಂದರೆಗಳಿಗೆ ಅಂತ್ಯ ಹಾಡಿದರು. ॥113॥ ಅಲ್ಲಿಂದೀಚೆಗೆ ಇಬ್ಬರಿಂದಲೂ[21] ಪ್ರಾರಂಭವಾದ ಈ ಅಭ್ಯಾಸ ಮುಂದುವರೆಯಿತು. ಅನಂತರ ತಾತ್ಯಾ ಅದನ್ನು ಮುಂದುವರೆಸಿದನು. ॥114॥ ಯಾರಹೃದಯದಲ್ಲಿ ವಾಸುದೇವನು[22] ಶಾಶ್ವತವಾಗಿ ನೆಲೆಸುತ್ತಾನೋ ಅಂತಹವರು ಭಾಗ್ಯವಂತರು. ಅಂತಹವರ ಸಹವಾಸದಲ್ಲಿ ಪರಮಾನಂದವನ್ನು ಅನುಭವಿಸಿದಂತಹ ಭಕ್ತರೇ ಧನ್ಯರು. ॥115॥ ತಾತ್ಯಾ ನಿಜವಾಗಿಯೂ ಭಾಗ್ಯಶಾಲಿ ಮತ್ತು ಮ್ಹಾಳಸಾಪತಿಯು ಮಹಾಧರ್ಮಿಷ್ಠನು. ಅವರಿಬ್ಬರೂ ಸಮನಾಗಿ ಬಾಬಾರವರ ಸಹವಾಸವನ್ನು ಅನುಭವಿಸಿದರು. ॥116॥ ತಾತ್ಯಾ ಮತ್ತು ಮ್ಹಾಳಸಾಪತಿಯು ಸಹ ಮಸೀದಿಯಲ್ಲಿ ಮಲಗುತ್ತಿದ್ದರು. ಬಾಬಾರವರಿಗೆ ಅವರಿಬ್ಬರ ಮೇಲೆ ಸಮನಾದ ಅನುಪಮ ಪ್ರೀತಿ. ॥117॥ ಪೂರ್ವ, ಪಶ್ಚಿಮ ಮತ್ತು ಉತ್ತರ – ಈ ರೀತಿ ಮೂವರ ತಲೆಗಳು ಮೂರುದಿಕ್ಕಿನಲ್ಲಿ – ಪಾದಗಳು ಮಾತ್ರ ಒಬ್ಬರದೊಬ್ಬರಿಗೆ ತಗಲುತ್ತ ಮಧ್ಯದಲ್ಲಿ ಇರುತ್ತಿದ್ದವು. ॥118॥ ತಮ್ಮ ಹಾಸಿಗೆಗಳನ್ನು ಈ ರೀತಿ ಹಾಸಿಕೊಂಡು ಅವರು ಎಲ್ಲಾ ವಿಷಯಗಳ ಬಗ್ಗೆಯೂ ಮಾತಾಡುತ್ತಿದ್ದರು. ಒಬ್ಬರು ತೂಕಡಿಸಿದರೂ ಮತ್ತೊಬ್ಬರು ಅವರನ್ನು ಎಚ್ಚರಿಸುತ್ತಿದ್ದರು. ॥119॥ ತಾತ್ಯಾ ಗೊರಕೆ ಹೊಡೆಯಲು ಪ್ರಾರಂಭಿಸಿದರೆ ಬಾಬಾರವರು ತಕ್ಷಣವೇ ಎದ್ದು ಅವನನ್ನು ತಿರುಗಿಸಿ ತಲೆ ಒತ್ತುವರು. ॥120॥ ಮ್ಹಾಳಸಾಪತಿಯ ಸಹಾಯದೊಂದಿಗೆ ತಾತ್ಯಾನನ್ನು ತಬ್ಬಿ ಹಿಡಿದು ಅವನ ಚರಣಗಳನ್ನು ಒತ್ತುತ್ತಿದ್ದರು ಮತ್ತು ಬೆನ್ನಿಗೆ ಮಾಲೀಷು ಮಾಡುತ್ತಿದ್ದರು. ॥121॥ ಈ ರೀತಿ, 14 ವರ್ಷಗಳ ಕಾಲ, ತಾತ್ಯಾ ಮಸೀದಿಯಲ್ಲಿ ಬಾಬಾರವರ ಹತ್ತಿರ ಮಲಗುತ್ತಿದ್ದನು. ಅವರು ಅಲ್ಲಿ ಕಳೆದಂತಹ ಆ ದಿನಗಳು ಅದೆಷ್ಟು ಪುಣ್ಯಪ್ರದವಾಗಿದ್ದವು. ಅವುಗಳ ನೆನಪೇ ಇಂದಿಗೂ ಮಾಸದಾಗಿದೆ. ॥122॥ ತಂದೆ ತಾಯಿಗಳನ್ನು ಮನೆಯಲ್ಲಿಯೇ ಬಿಟ್ಟು ತಾತ್ಯಾ ಮಸೀದಿಯಲ್ಲಿ ಬಾಬಾರವರ ಜತೆ ಮಲಗುತ್ತಿದ್ದರೂ ಅದು ಅವನಿಗೆ ಅತಿ ಪ್ರಿಯವಾಗಿತ್ತು. ಆ ಪ್ರೀತಿಯನ್ನು ಹೇಗೆ ಅಳೆಯಲು ಸಾಧ್ಯ? ಆ ಅನುಗ್ರಹವನ್ನು ಬೆಲೆಕಟ್ಟಲು ಯಾರಿಗೆ ಸಾಧ್ಯ? ॥123॥ ಅನಂತರ ತಂದೆಯವರು ಕಾಲವಾದರು. ತಾತ್ಯಾ ಮನೆಗೆಲಸಗಳಲ್ಲಿ ಮಗ್ನನಾದನು. ಮದುವೆಯಾಗಿ ಗೃಹಸ್ಥನಾದನು. ಆಗ ತನ್ನ ಮನೆಯಲ್ಲಿಯೇ ಮಲಗಲು ಪ್ರಾರಂಭಿಸಿದನು. ॥124॥ ಅದು ಏನೇ ಇರಲಿ. ಶ್ರದ್ಧೆಯು ಪರಿಪೂರ್ಣವಾಗಿರಬೇಕು. ಹೃದಯ ಮತ್ತು ಮನಸ್ಸು ಒಂದಾದರೆ ಮಾತ್ರ ಸಾಯಿಯು ಅನುಭವವನ್ನು ಕೊಡಬಹುದು. ಕರೆಯದೆಯೇ ಭಕ್ತರ ಬಳಿ ನಿಲ್ಲುತ್ತಾರೆ. ಇದರಿಂದ ಭಕ್ತರಿಗೆ ಅಚ್ಚರಿಯುಂಟಾಗುತ್ತದೆ. ॥125॥ ಇದೇ ರೀತಿ, ರಾಹತಾದಲ್ಲಿ ಕುಶಾಲ ಚಂದ್ ಎನ್ನುವ ಒಬ್ಬ ಪ್ರಖ್ಯಾತ ವ್ಯಕ್ತಿ ಇದ್ದನು. ಅವನು ಬಾಬಾರವರ ಶ್ರೀಮಂತ ಭಕ್ತನಾಗಿದ್ದ ಮತ್ತು ಪಟ್ಟಣದಲ್ಲಿ ವರ್ತಕನಾಗಿದ್ದನು. ॥126॥ ಪ್ರಸಿದ್ಧನಾದ ಗಣಪತ್ ಕೋತೆ ಪಾಟೀಲ ಬಾಬಾರವರ ಅತ್ಯಂತ ಪ್ರೀತಿಯ ಭಕ್ತ. ಅದೇ ರೀತಿ ಕುಶಾಲ ಚಂದನೂ

ಬಾಬಾರವರ ಪ್ರಿಯ ಭಕ್ತನು. ॥127॥ ಜಾತಿಯಲ್ಲಿ ಮಾರವಾಡಿಯಾಗಿದ್ದರೂ ಅವನಿಗೆ[3] ಬಾಬಾರವರನ್ನು ಕಂಡರೆ ಬಹಳ ಇಷ್ಟ. ಆಗಾಗ್ಗೆ ಇಬ್ಬರೂ[4] ಪರಸ್ಪರ ಭೇಟಿಯಾಗುತ್ತಿದ್ದರು. ಈ ಭೇಟಿಗಳಿಂದ ಸಂತೋಷಪಡುತ್ತಿದ್ದರು. ॥128॥ ದೈವೇಚ್ಛೆಯಂತೆ ಸ್ವಲ್ಪ ಕಾಲಾನಂತರ ಹಿರಿಯನಾದ ಸೇಠ್ ಜೀಯು ಮರಣಹೊಂದಿದನು. ಹಾಗಿದ್ದೂ ಬಾಬಾರವರು ಬಂಧನಗಳನ್ನು ಮುರಿಯಲಿಲ್ಲ. ಬದಲಾಗಿ ಅವರ ಪ್ರೀತಿ ಇಮ್ಮಡಿಯಾಯಿತು. ॥129॥ ಅನಂತರ ಕುಶಾಲಚಂದನ ಮೇಲಿನ ಬಾಬಾರವರ ಪ್ರೀತಿ ಹೆಚ್ಚಿತು. ಮರಣ ಸಮಯದವರೆಗೆ ದಿನಂಪ್ರತಿ ಅವರು ಅವನ ಒಳ್ಳೆಯದನ್ನೇ ಬಯಸುತ್ತಿದ್ದರು. ॥130॥ ಕೆಲವು ವೇಳೆ ಎತ್ತಿನ ಗಾಡಿ ಮತ್ತು ಕೆಲವು ಸಲ ಟಾಂಗಾದಲ್ಲಿ ಬಾಬಾರವರು ತಮ್ಮ ಸ್ನೇಹಿತನ ಸಂಗಡ $1\frac{1}{2}$ ಮೈಲಿ ದೂರದಲ್ಲಿರುವ ರಾಹತಾಗೆ ಹೋಗುತ್ತಿದ್ದರು. ॥131॥ ಹಳ್ಳಿಯ ಜನರು ತಾಳ ಮದ್ದಳೆಗಳ ಜೊತೆಯಲ್ಲಿ ಸ್ವಾಗತಿಸಲು ಮುಂದೆ ಬರುತ್ತಿದ್ದರು. ಬಾಬಾ ಅವರನ್ನು ಸರಹದ್ದಿನಲ್ಲಿ ಭೇಟಿಯಾಗುತ್ತಿದ್ದರು. ಪ್ರೀತಿಯಿಂದ ಬಾಬಾರವರಿಗೆ ಪ್ರಣಾಮಗಳನ್ನು ಸಲ್ಲಿಸುತ್ತಿದ್ದರು. ॥132॥ ಅಲ್ಲಿಂದ ಅವರು ಬಾಬಾರವರನ್ನು ವಿಧಿವತ್ತಾಗಿ ಬಹಳ ಪ್ರೀತಿಯಿಂದ ಆನಂದೋತ್ಸಾಹದಿಂದ ಸಂಗೀತದ ಸಹಿತ ಕರೆದೊಯ್ಯುತ್ತಿದ್ದರು. ॥133॥ ಕುಶಾಲ ಚಂದನು ಅನಂತರ ಬಾಬಾರವರನ್ನು ತಮ್ಮ ಮನೆಗೆ ಕರೆದೊಯ್ಯುತ್ತಿದ್ದನು. ಸ್ವಲ್ಪ ಉಪಾಹಾರವನ್ನು ಬಡಿಸಿ ಸ್ವಲ್ಪ ಕಾಲ ಆರಾಮವಾಗಿ ಕುಳಿತುಕೊಳ್ಳುತ್ತಿದ್ದರು. ॥134॥ ಅನಂತರ ಅವರು ತಮ್ಮ ಗತಕಾಲದ ನೆನಪುಗಳನ್ನು ಮಾಡಿಕೊಂಡು ವಾರ್ತಾಲಾಪ ನಡೆಸುತ್ತಿದ್ದರು. ಅವರು [illegible] ಅನುಭವಿಸುವ ಸಂತೋಷವನ್ನು ವಿವರಿಸಲು ಸಾಧ್ಯವಿಲ್ಲ. ॥135॥ ಈ ರೀತಿಯಾಗಿ ವಿಶ್ರಮಿಸಿದ ನಂತರ ಫಲಾಹಾರ ಮತ್ತು ಅಲ್ಪಾಹಾರಗಳನ್ನು ಸೇವಿಸಿ ಬಾಬಾರವರು ಸಂತೃಪ್ತಿಯಿಂದ[5] ತಾವು ಬಂದ ಮಾರ್ಗದಲ್ಲೇ ಹಿಂತಿರುಗುತ್ತಿದ್ದರು. ॥136॥ ಒಂದು ಕಡೆ ರಾಹತಾ, ಮತ್ತೊಂದು ಕಡೆ ನೀಮಗಾಂವ ಇತ್ತು, ಇವೆರಡರ ಮಧ್ಯೆ ಶಿರಡಿಯು ಸಣ್ಣ ಜನಸಾಂದ್ರತೆಯುಳ್ಳ ಒಂದು ಸಣ್ಣ ಗ್ರಾಮ. ॥137॥ ಆದರೆ ಕೇಂದ್ರಸ್ಥಾನದಿಂದ ಅವರು ಭೌತಿಕವಾಗಿ ಈ ಎರಡು ಹಳ್ಳಿಗಳನ್ನು ಬಿಟ್ಟರೆ ಮತ್ತೆಲ್ಲಿಗೂ ಹೋಗಲಿಲ್ಲ. ಆದರೂ ಅವರಿಗೆ ಎಲ್ಲ ಮೂಲೆಗಳ ಅರಿವಿತ್ತು. ॥138॥ ಅವರು ಎಲ್ಲಿಗೂ ಪ್ರಯಾಣ ಮಾಡುತ್ತಿರಲಿಲ್ಲ. ರೈಲು ನಿಲ್ದಾಣವನ್ನೊಂದಿಗೂ ನೋಡಿರಲಿಲ್ಲ. ಆದರೆ ಅವರಿಗೆ ರೈಲುಗಾಡಿಯ ವೇಳೆ, ಅವುಗಳ ಆಗಮನ, ನಿರ್ಗಮನಗಳ ವೇಳಾಪಟ್ಟಿಯ ಅರಿವಿತ್ತು. ॥139॥ ರೈಲುಗಾಡಿಯನ್ನು ಹಿಡಿಯಬೇಕಾದಾಗ ಭಕ್ತರು ಎಲ್ಲಾ ತಯಾರಿಮಾಡಿಕೊಂಡು ಬಾಬಾರವರಲ್ಲಿಗೆ ಅನುಮತಿಗಾಗಿ ಹೋಗುತ್ತಿದ್ದರು. ಆಗ ಅವರು ಹೇಳುತ್ತಿದ್ದರು – "ಈಗ ಏನು ಅವಸರ?" ಎಂದು. ॥140॥ "ಬಾಬಾ, ಈಗ ನಾನು ಅವಸರ ಮಾಡದಿದ್ದಲ್ಲಿ ಬೊಂಬಾಯಿಗೆ ರೈಲು ತಪ್ಪುತ್ತದೆ. ನನ್ನ ನೌಕರಿ ಹೋಗುತ್ತದೆ. ಮಾಲಿಕ ನನ್ನನ್ನು ಹೊರಗೆ ಕಳಿಸುತ್ತಾನೆ." ॥141॥ "ಇಲ್ಲಿ ಮತ್ತೇನೂ ವಿಷಯವಿಲ್ಲ. ನೀನೇಕೆ ಇಷ್ಟು ಅವಸರದಲ್ಲಿರುವೆ? ಹೋಗು ಸ್ವಲ್ಪ ತಿನ್ನು, ಮಧ್ಯಾಹ್ನದ ಊಟದ ನಂತರ ಹೊರಡು." ॥142॥ ಆ ಮಾತುಗಳನ್ನು ಧಿಕ್ಕರಿಸುವ ಧೈರ್ಯ

ಯಾರಿಗಿದೆ? ಕಿರಿಯರು, ಹಿರಿಯರು ಮತ್ತು ಬುದ್ಧಿವಂತರು, ವಿದ್ಯಾವಂತರು ಎಲ್ಲರೂ ಸ್ವತಃ ಅನುಭವದಿಂದಲೇ ಎಲ್ಲವನ್ನೂ ತಿಳಿದುಕೊಂಡಿದ್ದರು. ॥143॥ ಅವರ ಆದೇಶಗಳನ್ನು ಪಾಲಿಸಿದವರು ಎಂದಿಗೂ ರೈಲುಗಾಡಿಯನ್ನು ತಪ್ಪಿಸಲಿಲ್ಲ. ಆದರೆ ಅವುಗಳನ್ನು ಪಾಲಿಸದವರು ಅದರ ಪ್ರತ್ಯಕ್ಷ ಪರಿಣಾಮವನ್ನು ಅನುಭವಿಸುತ್ತಿದ್ದರು. ॥144॥ ಒಂದರ ನಂತರ ಮತ್ತೊಂದು ವಿಶಿಷ್ಟವಾದ ಅಸಂಖ್ಯಾತ ಅನುಭವಗಳು, ವಿವಿಧ ಬಗೆಯದ್ದು, ಇವುಗಳನ್ನು ಅನಂತರ ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ॥145॥ ಹೇಮಾಡ ಪಂತನು ಸಾಯಿಚರಣಗಳಲ್ಲಿ ಶರಣಾಗುತ್ತಾನೆ. ಮುಂದಿನ ಅಧ್ಯಾಯದಲ್ಲಿ ಇದೇ ವಿಷಯವನ್ನು ಮುಂದುವರೆಸುತ್ತಾನೆ. ಭಕ್ತರು ಶಿರಡಿಯಿಂದ ತಮ್ಮ ಹಳ್ಳಿಗೆ ಹೇಗೆ ಹಿಂತಿರುಗುತ್ತಿದ್ದರು. ಬಾಬಾರವರು ಆದೇಶಗಳನ್ನು ಹೇಗೆ ನೀಡುತ್ತಿದ್ದರು? ॥146॥ ಅನುಮತಿ ಪಡೆದವರು ಹಿಂತಿರುಗಬಹುದಿತ್ತು, ಮತ್ತು ದೊರೆಯದವರು ಅಲ್ಲಿಯೇ ಉಳಿಯಬೇಕಾಗುತ್ತಿತ್ತು. ಅಪ್ಪಣೆ ಮೀರಿದವರು ಕಷ್ಟ ಅನುಭವಿಸುತ್ತಿದ್ದರು. ಇವುಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುತ್ತದೆ. ॥147॥ ಬಾಬಾರವರು ಭಿಕ್ಷುಕರ ರೀತಿ ನೀತಿಗಳನ್ನು ಏಕೆ ಅಳವಡಿಸಿಕೊಂಡರು? ಭಕ್ತರು ಪ್ರತಿನಿತ್ಯ ಆಚರಿಸುವ ಪಾಪಗಳನ್ನು ತೊಳೆಯಲು ಭಿಕ್ಷೆಯಿಂದಾದ ಅನ್ನವನ್ನು ಏಕೆ ತಿನ್ನುತ್ತಿದ್ದರು? ಯಾವಾಗ ಪ್ರಾಣಿಯ ಜನ್ಮ ಆಕಸ್ಮಾತ್ತಾಗಿ ನಾಶವಾಯಿತು – ಇವೆಲ್ಲವನ್ನೂ ನಂತರ ಹೇಳುತ್ತೇನೆ. ॥148॥ ಆದುದರಿಂದ ನಾನು ಶ್ರೋತೃಗಳ ಚರಣಗಳಲ್ಲಿ ಪ್ರಾರ್ಥಿಸುತ್ತೇನೆ ಮತ್ತು ಅವರನ್ನು ಪ್ರತಿಕ್ಷಣವೂ ತಮ್ಮದೇ ಒಳಿತಿಗಾಗಿ ಸಾಯಿಸಚ್ಚರಿತ್ರೆಯನ್ನು ಆಲಿಸಲು ಪ್ರೇರೇಪಿಸುತ್ತೇನೆ. ॥149॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿ ಸಮರ್ಥರ ಅವತಾರ" ಎಂಬ ಎಂಟನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಹಗಲು-ರಾತ್ರಿ ದೇವರ ಮುಂದೆ ಉರಿಸುವ ದೀಪ – ನಂದಾದೀಪ.
2. ದೇಹದಲ್ಲಿ ನಡೆಯುವ ಸೂಕ್ಷ್ಮಕ್ರಿಯೆಗಳ ಅರಿವು ಆಗುವುದಿಲ್ಲ.
3. ದೀರ್ಘಾಯುವೆಂದು ಆಶೀರ್ವದಿಸಲ್ಪಟ್ಟವನು.

4. ಚಕ್ರವರ್ತಿಯ ರೀತಿ.
5. ಪರಮೋಚ್ಛ ಅಧ್ಯಾತ್ಮ ಗುರು.
6. ಸೂರ್ಯವಂಶದ ಒಬ್ಬ ರಾಜ. ಸಗರನ ಮರಿಮಗ ಭಗೀರಥನು ಕಠಿಣ ತಪಸ್ಸು ಮಾಡಿ ಗಂಗಾ ನದಿಯನ್ನು ಸ್ವರ್ಗದಿಂದ ಭೂಮಿಗೆ, ಭೂಮಿಯಿಂದ ಪಾತಾಳ ಲೋಕಗಳಿಗೆ ತರಿಸಿದನು. (ತನ್ನ 60 ಸಾವಿರ ಪಿತೃಗಳನ್ನು) ಸಗರನ ಮಕ್ಕಳ ಬೂದಿಯನ್ನು ಪವಿತ್ರಗೊಳಿಸಿದವನು ಭಗೀರಥ.
7. ಅವನು ಮಾನವ ಜನ್ಮವನ್ನು ಪಡೆಯುತ್ತಾನೆ.
8. ಒಂದು ಪಕ್ಷಿ. ಪ್ರಾಣಿ ಅಥವಾ ಕೀಟದ ತರಹ.
9. ಮರದ ರೀತಿ.
10. ಸತ್ಕರ್ಮಗಳು. ನೀತಿಯುತ ಮತ್ತು ಧರ್ಮದ ವಿಧಿಪೂರ್ವಕ ಆಚರಣೆಯು ಪರಿಶುದ್ಧತೆ ಮತ್ತು ವೈರಾಗ್ಯವನ್ನು ಮಾಧ್ಯಮಿಕವಾಗಿ ಪಡೆಯುವುದು.
11. ಪರಮಾತ್ಮನ ಅಂಶ.
12. ನಾನು ಮತ್ತು ನನ್ನದು.
13. ರಾಮನ ಹೆಸರು ಅಥವಾ ಪರಮಾತ್ಮನ ಹೆಸರು.
14. ಧರ್ಮ, ಅರ್ಥ, ಕಾಮ, ಮೋಕ್ಷ – ಸರಿಯಾದ ಮಾರ್ಗದಲ್ಲಿ (ಧರ್ಮ) ಜೀವಿಸುವುದು. ಹಣಗಳಿಸುವುದುಸಂಸಾರವನ್ನು ಹೊಂದಿರುವುದು ಮತ್ತು ಮೋಕ್ಷವನ್ನು ಪಡೆಯುವುದು.
15. ಆವಿಯಾಗಿ ನಂತರ ಮಳೆಯಾಗುವ ಕ್ರಮ.
16. ರೆಕ್ಕೆಗಳ ಕೆಳಗೆ ತೆಗೆದುಕೊಳ್ಳುತ್ತದೆ.
17. ನೋಡಲು ಹೊರನೋಟಕ್ಕೆ ಸಾಧಾರಣವಾಗಿದ್ದು ಅಂತರಂಗದಲ್ಲಿ ಆಳವಾದ ಅರ್ಥ ಹೊಂದಿರುವುದು.
18. ನೀರಾದ ಆಹಾರವನ್ನು ಸ್ವೀಕರಿಸಲು ಉಪಯೋಗಿಸುವ ಲೋಟ (ಮಗ್).
19. ನಾಲ್ಕು ಮೂಲೆಯುಳ್ಳ ಚೌಕಾಕಾರದ ಬುಟ್ಟಿ (ಗೋಪಾಳಬುಟ್ಟಿ) ಭಿಕ್ಷೆಯನ್ನು ಸ್ವೀಕರಿಸಲು ಉಪಯೋಗಿಸುವುದು.

20. ತಟ್ಟೆಯೋಪಾದಿಯಲ್ಲಿ ಉಪಯೋಗಿಸಲ್ಪಟ್ಟಿತು.
21. ಬಾಯಜಾ ಬಾಯಿ ಮತ್ತು ಅವಳ ಪತಿ ಗಣಪತ್.
22. ಶ್ರೀಕೃಷ್ಣನ ತಂದೆ. ಅವನು ಸೂರ್ಯವಂಶದ ಯಾದವ ಕುಲಕ್ಕೆ ಸೇರಿದವನು. ವಾಸುದೇವ ಎನ್ನುವುದು ಶ್ರೀವಿಷ್ಣುವಿನ ಅನೇಕ ನಾಮಗಳಲ್ಲಿ ಒಂದು.
23. ಕುಶಾಲ ಚಂದ ಮತ್ತು ಅವನ ಚಿಕ್ಕಪ್ಪ.
24. ಬಾಬಾ ಮತ್ತು ರಾಹತಾದ ಜನರು.
25. ಹೆಚ್. ಎಸ್. ದೀಕ್ಷಿತರ ಘಟನೆಯೊಂದನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು. ಒಂದು ದಿನ, ಹಗಲಿನ ಕೊನೆಯ ಭಾಗದಲ್ಲಿ ಮಹಾರಾಜರು ನನ್ನೊಡನೆ "ಕುಶಾಲ ಚಂದನು ಇಲ್ಲಿಗೆ ಬಂದು ಬಹಳ ದಿನಗಳಾದುವು. ಹೋಗು, ರಾಹತಾಗೆ ಟಾಂಗಾ ತೆಗೆದುಕೊಂಡು ಹೋಗು. ಅವನನ್ನು ಕರೆದುಕೊಂಡು ಬಾ. ಬಾಬಾ ಕರೆದರೆಂದು ಅವನಿಗೆ ಹೇಳು" ಎಂದರು. ಹಾಗೆಯೇ ನಾನು ಒಂದು ಟಾಂಗಾದಲ್ಲಿ ರಾಹತಾಗೆ ಹೋದೆನು. ಕುಶಾಲ ಚಂದನನ್ನು ಭೇಟಿಯಾದೆನು. ಅವನು ಹೇಳಿದನು, "ನಾನು ಮಧ್ಯಾಹ್ನದ ಊಟವಾದನಂತರ ಮಲಗಿದ್ದೆನು. ನಿದ್ರೆ ಆವರಿಸುತ್ತಿದ್ದ ಹಾಗೆಯೇ ಮಹಾರಾಜರು ನನ್ನ ಕನಸಿನಲ್ಲಿ ಬಂದು ಹೇಳಿದರು – 'ಶಿರಡಿಗೆ ಬಾ'. ಆದ್ದರಿಂದ ಶಿರಡಿಗೆ ಹೋಗಲು ಇಚ್ಛಿಸಿದೆ. ಆದರೆ ಇಲ್ಲಿ ಈದಿನ ನನ್ನ ಕುದುರೆಗಳು ಇಲ್ಲದಿದ್ದುದರಿಂದ ಹೊರಡಲಾಗಲಿಲ್ಲ. ಆದ್ದರಿಂದ ಈಗ ತಾನೇ ನನ್ನ ಮಗನನ್ನು ಶಿರಡಿಗೆ ಕಳಿಸಿದೆ." ನಾನು ಉತ್ತರಿಸಿದೆ – "ಆದ್ದರಿಂದಲೇ ಮಹಾರಾಜರು ನನ್ನ ಜೊತೆ ಟಾಂಗಾ ಕಳಿಸಿದ್ದಾರೆ. ತಾವು ಬರಲು ಇಚ್ಛಿಸಿದಲ್ಲಿ ನನ್ನ ಟಾಂಗಾ ಸಿದ್ಧವಾಗಿದೆ." ಅವರು ಅನಂತರ ನನ್ನ ಜೊತೆ ಬಹಳ ಆನಂದದಿಂದ ಶಿರಡಿಗೆ ಬಂದರು.



# ಅಧ್ಯಾಯ – 9

|| ಅಥ ಶ್ರೀ ಸಾಯಿ ಸಚ್ಚರಿತೆ ||



## "ದಾಬೋಲ್ಕರ್‌ನಿಂದ ಹೆಸರಿಡದೆ ಇರುವ ಅಧ್ಯಾಯ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಈಗ ಅಧ್ಯಾಯವನ್ನು ಮುಂದುವರಿಸೋಣ. ಭಕ್ತರು ತೊಂದರೆಗಳನ್ನು ಹೇಗೆ ಎದುರಿಸಿದರು, ತಮ್ಮ ಮನೆಗಳಿಗೆ ಹಿಂದಿರುಗಲು ಬಾಬಾರವರ ಅನುಮತಿ ಕೇಳಿದಾಗ ಏನು ನಡೆಯಿತು? ||1|| ಬಾಬಾರವರು ಫಕೀರ ಜೀವನ ಶೈಲಿಯನ್ನು ತಮ್ಮದಾಗಿಸಿ ಕೊನೆಯವರೆಗೆ ಹೇಗೆ ಪರಿಪಾಲಿಸಿದರು? ಪಂಚಪಾತಕಗಳನ್ನು[1] ದೂರಮಾಡಲು, ತಮ್ಮ ಭಕ್ತರ ಒಳಿತಿಗಾಗಿ ಏನು ಮಾಡಿದರು? ||2|| ನಿಶ್ಚಲ, ಶಾಶ್ವತ ಬ್ರಹ್ಮನಿಂದ ಹಿಡಿದು ಎಲ್ಲಾ ಜಡವಸ್ತುಗಳವರೆಗೆ ಸಾಯಿಯೇ ಸರ್ವವ್ಯಾಪಿ. ದಯಾಮಯಿ ಸಾಯಿ ಪರಮಾತ್ಮನು ಎಲ್ಲಾ ಜೀವಿಗಳಲ್ಲೂ ಇರುತ್ತಾನೆಂದು ಮನಮುಟ್ಟುವಂತೆ ಹೇಳಿದರು. ||3|| ಆದ್ದರಿಂದ, ಶ್ರೋತೃಗಳೇ, ದಯಮಾಡಿ ಶ್ರದ್ಧೆಯಿಂದ ಆಲಿಸಿ ಎಂದು ಕೇಳಿಕೊಳ್ಳುತ್ತೇನೆ. ಈ ಪವಿತ್ರ ಕತೆಗಳನ್ನು ಕೇಳಿ ನಿಮ್ಮ ಇಚ್ಛೆಗಳನ್ನು ಪೂರೈಸಿಕೊಳ್ಳಿರಿ. ||4|| ಶಿರಡಿ ಯಾತ್ರೆಯ ವಿಶೇಷವೇನೆಂದರೆ ಯಾರಾದರೂ ಭಕ್ತರು ಬಾಬಾರವರ ಅನುಮತಿಯಿಲ್ಲದೆ ಹಿಂತಿರುಗಲು ಪ್ರಯತ್ನಿಸಿದಲ್ಲಿ ಕಷ್ಟಗಳನ್ನು ಆಹ್ವಾನಿಸಿದಂತೆ. ||5|| ಆದರೆ, ಒಮ್ಮೆ ಅನುಮತಿ ನೀಡಿದಲ್ಲಿ, ಶಿರಡಿಯಲ್ಲಿ ಕ್ಷಣಕಾಲವೂ ನಿಲ್ಲಲು ಅಸಾಧ್ಯವಾಗಿತ್ತು. ಏನಾದರೂ ನಿಂತಲ್ಲಿ ಕಷ್ಟಗಳನ್ನು ಎದುರಿಸಬೇಕಾಗಿತ್ತು. ಇದು ಎಲ್ಲರ ಅನುಭವವಾಗಿತ್ತು. ||6|| ಅವರ ಇಚ್ಛೆಯನ್ನು ಮೀರಿದಲ್ಲಿ ಮಾರ್ಗದಲ್ಲೇ

ತೊಂದರೆಗಳುಂಟಾಗುತ್ತಿದ್ದವು. ಕೆಲವರು ದರೋಡೆಗೊಳಗಾಗುತ್ತಿದ್ದರು. ಅವರು ಬದುಕಿರುವವರೆಗೆ ತಮ್ಮ ಅನುಭವಗಳನ್ನು ಮರೆಯುತ್ತಿರಲಿಲ್ಲ. ॥7॥ ಅವರೇನಾದರೂ ಸ್ವಲ್ಪ ಊಟ ಮಾಡಿ ಹೊರಡಿ ಎಂದು ಹೇಳಿದಾಗ ಅವಸರದಿಂದ್ ಊಟಮಾಡದೆ ಹೊರಟಲ್ಲಿ ಅವರು ರೈಲುಗಾಡಿಯನ್ನು ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಅವರು ಹಸಿವಿನಲ್ಲಿಯೇ ಹೋಗಬೇಕಾಗಿತ್ತು. ಅನೇಕ ಭಕ್ತರ ಅನುಭವವು ಇದು. ॥8॥ ಒಮ್ಮೆ ತಾತ್ಯಾಕೋತೆ ಪಾಟೀಲನು ಕೋಪರಗಾಂವಕ್ಕೆ ಸಂತೆಗಾಗಿ ಹೊರಟಿದ್ದನು. ಮಾರ್ಗದಲ್ಲಿ ಮಸೀದಿಗೆ ಬಂದನು. ॥9॥ ಅವನು ಟಾಂಗಾವನ್ನು ನಿಲ್ಲಿಸಲು ಹೇಳಿದನು. ಅಲ್ಲಿಗೆ ಬಂದು ಬಾಬಾರವರ ದರ್ಶನ ಪಡೆದನು. ಬಾಬಾರವರ ಚರಣಗಳಿಗೆ ವಂದಿಸಿ ಅಲ್ಲಿಂದ ಹೊರಡಲು ಅನುಮತಿ ಕೇಳುವಂತೆ ನಟಿಸಿದನು. ॥10॥ ಭಕ್ತನು ನುಣುಚಿಕೊಳ್ಳಲು ಪ್ರಯತ್ನಿಸಬಹುದು. ಆದರೆ ಬಾಬಾರವರಿಗೆ ಮಂಗಳಕರವಾದ ಮುಹೂರ್ತವೋ ಅಲ್ಲವೋ ಎಂಬುದರ ಅರಿವಿತ್ತು. ತಾತ್ಯಾ ಅವಸರದಲ್ಲಿದ್ದನು. ಬಾಬಾ ಅವನಿಗೆ ಸ್ವಲ್ಪ ಕಾಯುವಂತೆ ತಿಳಿಸಿದರು. ॥11॥ "ಸಂತೆ ನಡೆಯಲಿ, ನೀನು ಹಳ್ಳಿಯನ್ನು ಬಿಟ್ಟು ಕದಲಬೇಡ." ಆದರೆ ತಾತ್ಯಾ ಬಹಳ ಕಾತರನಾಗಿದ್ದುದನ್ನು ನೋಡಿ ಶಾಮನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಲು ತಿಳಿಸಿದರು. ॥12॥ "ಶಾಮನನ್ನು ಕರೆದುಕೊಂಡು ಹೋಗುವ ಉದ್ದೇಶವೇನು?." ಈ ರೀತಿ ಯೋಚಿಸುತ್ತಾ ಸಾಯಿಯ ಆದೇಶವನ್ನು ಉಲ್ಲಂಘಿಸಿ ಹೋಗಿ ಟಾಂಗಾದಲ್ಲಿ ಕುಳಿತು ಸಂತೆಗೆಂದು ಹೊರಟನು. ॥13॥ ಎರಡು ಕುದುರೆಗಳಲ್ಲಿ ಒಂದು ಬಹಳ ಚುರುಕಾಗಿಯೂ ಅಶಾಂತಿಯಿಂದ ತಳಮಳಿಸುತ್ತಿತ್ತು. ಅದರ ಬೆಲೆ ರೂ. 300/– ಅವರು ಸಾವಲ್ ಹತ್ತಿರ ಬಾವಿಯ ಬಳಿಗೆ ಬಂದಾಗ ಅದು ಹಿಡಿತ ತಪ್ಪಿತು. ॥14॥ ಯಾವತ್ತೂ ಚಾಟಿ ಏಟು ತಿನ್ನದ ಕುದುರೆ ಯಾವಾಗಲೂ ಒಂದು ಘಂಟೆಯೊಳಗೆ ಸಂತೆಯನ್ನು ಸೇರುತ್ತಿದ್ದುದು ಇದ್ದಕ್ಕಿದ್ದಹಾಗೆ ಬೆನ್ನಿನಲ್ಲಿ ಚಳುಕುಹಿಡಿದು ಕುಂಟಲು ಪ್ರಾರಂಭಿಸಿತು. ॥15॥ ಆದ್ದರಿಂದ ಮಾರುಕಟ್ಟೆಯೂ ಇಲ್ಲದಂತಾಯಿತು. ಕೊಳ್ಳುವುದೂ ಆಗಲಿಲ್ಲ. ತಾತ್ಯಾ, ಸಾಯಿಮಾತೆಯನ್ನು ನೆನೆಸಿಕೊಂಡು ತಾನು ಅವರ ಮಾತನ್ನು ಸಮಯದಲ್ಲಿ ಕೇಳಿದ್ದರೆ ಈ ಆಕಸ್ಮಿಕವನ್ನು ತಪ್ಪಿಸಬಹುದಿತ್ತು ಎಂದು ಯೋಚಿಸಿದನು. ಆದರೆ ಕಳೆದು ಹೋಗಿದ್ದಕ್ಕೆ ಏನು ಮಾಡಲೂ ಸಾಧ್ಯವಿರಲಿಲ್ಲ. ॥16॥ ಮತ್ತೊಂದು ಸಂದರ್ಭದಲ್ಲಿ ಇದೇ ರೀತಿಯ ಘಟನೆ ನಡೆಯಿತು. ತಾತ್ಯಾ ಕೊಲ್ಹಾರ್ ಹಳ್ಳಿಗೆಂದು ಹೊರಟನು. ಅವನು ಒಂದು ಟಾಂಗಾವನ್ನು ಬಾಡಿಗೆಗೆ ಪಡೆದು ಬಾಬಾರವರ ಅನುಮತಿ ಪಡೆಯಲು ಅಲ್ಲಿಗೆ ಬಂದು ಅವರ ಚರಣಗಳಿಗೆ ವಂದಿಸಿದನು. ॥17॥ "ನಾನು ಈಗಲೇ ಹೋಗಿ ಮತ್ತೆ ಬರುವೆ" ಎಂದು ಅವನು ಹೇಳಿದನು. ಅವನಿಗೆ ಒಪ್ಪಿಗೆ ಸಿಗಲಿಲ್ಲ. ಹಾಗಿದ್ದರೂ ತಾತ್ಯಾ ಮುಂದುವರೆದು ಅಲ್ಲಿಂದ ಹೊರಟನು. ಮುಂದೆ ಏನಾಯಿತೆಂಬುದನ್ನು ಕೇಳಿರಿ. ॥18॥ ಟಾಂಗಾದ ಒಂದು ಕುದುರೆ ಲಗಾಮು ತಪ್ಪಿ ಓಡತೊಡಗಿತು. ಕುದುರೆಯು ಹಿಂಗಾಲಮೇಲೆ ಎದ್ದು ನಿಂತಿತು. ದಾರಿಯಲ್ಲಿ ಯಾವುದೇ ಅಡೆತಡೆಗಳಿಗೆ ಬಗ್ಗಲಿಲ್ಲ. ಅದು ಅವನಿಗೆ ಜೀವನ್ಮರಣದ ಪ್ರಶ್ನೆಯಾಗಿತ್ತು. ॥19॥ ಅದು

ಹಾಗಿರಲಿ. ಸಾಯಿಯ ಅನುಗ್ರಹದಿಂದ ಅಪಾಯ ತಪ್ಪಿತು. ಟಾಂಗಾ ಬಾಬುಲ್ ಮರವೊಂದಕ್ಕೆ ಅಪ್ಪಳಿಸಿತು. ಅದು ಅಲ್ಲಿಯೇ ಮುರಿದದ್ದು ಅವನ ಅದೃಷ್ಟವೇ ಸರಿ. ಮುಂದೆ ಇದ್ದ ಅಪಾಯ ತಪ್ಪಿತು. ॥20॥ ಇದೇ ರೀತಿ ಒಬ್ಬ ಯೂರೋಪಿನ ಸಜ್ಜನ, ಬೊಂಬಾಯಿಯ ನಿವಾಸಿ, ಒಂದು ಅಂತರಂಗದ ಉದ್ದೇಶದಿಂದ ಸಾಯಿದರ್ಶನಕ್ಕೆ ಬಂದನು. ॥21॥ ಅವನು ಚಂದೋರ್‌ಕರ್‌ನ ಪ್ರಭಾವದಿಂದ ಬಂದಿದ್ದನು.ಅವನು ಮಾಧವರಾವ್‌ಗೆ ಬರೆದಿದ್ದ ಕಾಗದ ತಂದಿದ್ದನು. ಅವನು ಒಂದು ಡೇರೆಯನ್ನು ಕೇಳಿ ಪಡೆದು ಆರಾಮವಾಗಿ ಇದ್ದನು. ॥22॥ ಬಾಬಾರವರ ಅನುಮತಿ ಇಲ್ಲದೆ ಯಾರಾದರೂ ಮಸೀದಿಯ ಮೆಟ್ಟಿಲನ್ನು ಹತ್ತಿ ಸ್ವ ಇಚ್ಛೆಯಿಂದ ಬಾಬಾರವರ ದರ್ಶನ ಪಡೆಯಲಾಗುವುದೇ? ಇದು ಅಸಾಧ್ಯವೆಂಬುದು ಎಲ್ಲರಿಗೂ ತಿಳಿದ ವಿಷಯ. ॥23॥ ಅವನು ಮೂರು ಬಾರಿ ಮಸೀದಿಯ ಮೆಟ್ಟಿಲನ್ನು ಹತ್ತಲು ಪ್ರಯತ್ನಿಸಿದನು, ಆದರೆ ಎಲ್ಲವೂ ವ್ಯರ್ಥವಾಯಿತು. ಅತಿಥಿಯ ಉತ್ಸಾಹ ತಗ್ಗಿತು. ॥24॥ ಮಸೀದಿಯ ಮೆಟ್ಟಿಲು ಹತ್ತಿ ಬಂದು ಬಾಬಾರವರ ಚರಣಗಳಿಗೆ ಮೊಣಕಾಲೂರಿ ನಮಸ್ಕರಿಸಿ ನಂತರ ಕೈಗಳನ್ನು ಚುಂಬಿಸಿ ಕುಳಿತು ಕೊಳ್ಳುವುದು ಅವನ ಮನದ ಇಚ್ಛೆಯಾಗಿತ್ತು. ॥25॥ ಅದು ಅವನ ಇಚ್ಛೆ, ಆದರೆ ಬಾಬಾರವರು ಅವನನ್ನು ಆ ಸಮಯದಲ್ಲಿ ಮಸೀದಿಯಲ್ಲಿ ಮೇಲೆ ಬಂದು ಹತ್ತಿರ ಕುಳಿತುಕೊಳ್ಳಲು ಬಿಡಲಿಲ್ಲ. ॥26॥ ಅವನು ಬಯಲಿನಲ್ಲಿಯೇ ಇರಬೇಕು ಮತ್ತು ಅಲ್ಲಿಯೇ ಬೇಕೆಂದರೆ ಕುಳಿತುಕೊಳ್ಳಬಹುದು. ಅಲ್ಲಿಂದಲೇ ಅವನು ದರ್ಶನ ಪಡೆಯಬೇಕು. ಆದರೆ ಅವನು ಮೇಲೆ ಮಾತ್ರ ಬರಬಾರದು. ॥27॥ ಅದು ಹಾಗಿರಲಿ, ಅನಂತರ ಅವನು ಹೊರಡಲು ಯೋಚಿಸಿದನು. ಅಲ್ಲಿಂದ ಹೊರಡಲು ಅಂಗಳಕ್ಕೆ ಬಂದನು. ಆಗ ಬಾಬಾರವರು ಮರುದಿನ ಹೊರಡಲು ಹೇಳಿದರು. "ಹೊರಡಲು ಏನು ಅವಸರ?" ॥28॥ ಅನೇಕ ಜನರು ಅವನಿಗೆ ತಿಳಿ ಹೇಳಿದರು ಮತ್ತು ಅವನನ್ನು ಹೊರಡದಿರಲು ಅನೇಕ ರೀತಿಯಲ್ಲಿ ಪ್ರಾರ್ಥಿಸಿಕೊಂಡರು. ಅನುಮತಿ ಇಲ್ಲದೆ ಹೊರಟವರು ತುಂಬ ಪಶ್ಚಾತ್ತಾಪ ಪಟ್ಟಿದ್ದಾರೆಂದು ತಿಳಿಸಿದರು. ॥29॥ ವಿಧಿಬರಹವನ್ನು ಯಾರೂ ತಪ್ಪಿಸಲಾರರು. ಅವನು ಅವರ ಹಿತವಚನವನ್ನು ಪಾಲಿಸದೆ ಅನುಮತಿ ಇಲ್ಲದೆ ಹೊರಟನು. ದಾರಿಯಲ್ಲಿ ತೊಂದರೆಗೊಳಗಾದನು. ॥30॥ ಮೊದಲು ಗಾಡಿಯು ಚೆನ್ನಾಗಿ £ÀÉ ÄVÀ DEÀvÀÄPÀÌ ÀgÉÀÀz Àj vÀàèÀÀ ¸ Àª ÃI³ ಊರಿನ ಬಾವಿಯನ್ನು ದಾಟಿದ್ದನಷ್ಟೆ, ಒಂದು ಸೈಕಲ್ಲು ಅಡ್ಡ ಬಂದಿತು. ॥31॥ ಆ ಮಹನೀಯನು ಗಾಡಿಯ ಹಿಂಭಾಗದಲ್ಲಿ ಕುಳಿತಿದ್ದನು. ಇದ್ದಕ್ಕಿದ್ದಂತೆ ಗಾಡಿಯು ಒಂದು ಬಾರಿ ಜಗ್ಗಿತು, ಅದು ಆಯ ತಪ್ಪಿ ರಸ್ತೆಯಲ್ಲಿ ತಲೆಕೆಳಗಾಗಿ ಬಿದ್ದಿತು. ॥32॥ ಬಹಳ ಪ್ರಯತ್ನಪಟ್ಟು ಗಾಡಿಯನ್ನು ಹತೋಟಿಗೆ ತರಲಾಯಿತು. ಆ ಮನುಷ್ಯ ಸ್ವಲ್ಪ ದೂರದವರೆಗೆ ಎಳೆಯಲ್ಪಟ್ಟನು. ಅನಂತರ ಅವನನ್ನು ಎತ್ತಿ ಗಾಡಿಯಲ್ಲಿ ಹಾಕಿದ ನಂತರ ಗಾಡಿಯು ಮುಂದಕ್ಕೆ ಚಲಿಸಿತು. ॥33॥ ಒಂದು ಕಡೆ ಶಿರಡಿಯು ಹಿಂದಕ್ಕೆ ಆಯಿತು. ಬೊಂಬಾಯಿ ಮತ್ತೊಂದು ಕಡೆ ಆಯಿತು. ಗಾಡಿಯನ್ನು[4] ಕೋಪರಗಾಂವಿನ ಆಸ್ಪತ್ರೆಯ ಕಡೆ ಕರೆದುಕೊಂಡು ಹೋಗಲಾಯಿತು. ॥34॥ ಆ ವ್ಯಕ್ತಿಯು ಅಲ್ಲಿ ಕೆಲವು

ದಿನಗಳನ್ನು ಪಶ್ಚಾತ್ತಾಪಪಡುತ್ತ, ದುಃಖಿತನಾಗಿ ಕಳೆದನು. ಅವನ ವಿಧಿ ಬರಹಾನುಸಾರ ಅವಿಧೇಯತೆಗೆ ತಕ್ಕ ಶಿಕ್ಷೆ ಅನುಭವಿಸುತ್ತ ಕಳೆದನು. ॥35॥ ಈ ರೀತಿಯ ಅನೇಕ ಘಟನೆಗಳಿವೆ, ಜನರು ಭಯ ಮತ್ತು ಉದ್ವೇಗ ಭರಿತರಾಗಿ ಬಾಬಾರವರ ಇಚ್ಛೆಯನ್ನು ಪಾಲಿಸಲು ಪ್ರಾರಂಭಿಸಿದರು. ಅವಿಧೇಯತೆಯ ಫಲದ ಭಯ ಆವರಿಸಿತ್ತು. ॥36॥ ಕೆಲವು ಸಂದರ್ಭಗಳಲ್ಲಿ ಗಾಡಿಯ ಚಕ್ರಗಳ್ ಕಳಚಿ ಬಿದ್ದವು. ಕೆಲವು ವೇಳೆ ಕುದುರೆಗಳು ಆಯಾಸಗೊಂಡವು. ಇನ್ನು ಕೆಲವು ಸಮಯ ಅವರಿಗೆ ರೈಲುಗಾಡಿಯು ತಪ್ಪಿ ಹೋಗಿ, ಹಸಿದುಕೊಂಡಿದ್ದು ಕೇವಲ ಅಕ್ಕಿಯ ಪುರಿ ತಿಂದು ಜೀವಿಸಬೇಕಾಯಿತು. ॥37॥ ಬದಲಾಗಿ ಯಾರು ಬಾಬಾರವರ ಆದೇಶವನ್ನು ಗೌರವಿಸಿದರೋ ಅವರು ಅವೇಳೆಯಲ್ಲೂ ರೈಲುಗಾಡಿಯನ್ನು ಹಿಡಿದರು. ಅವರ ಪ್ರಯಾಣ ಸುಖಕರವಾಗಿ ಆಜೀವ ಪರ್ಯಂತ ಅದನ್ನು ನೆನಪಿನಲ್ಲಿಟ್ಟುಕೊಂಡರು. ॥38॥ ಬಾಬಾರವು ವರ್ಷಾನುಗಟ್ಟಲೆ ಭಿಕ್ಷೆ ಬೇಡುವುದನ್ನು ಏಕೆ ಹೆಚ್ಚು ಇಷ್ಟಪಟ್ಟರೆಂಬುದರ ಬಗ್ಗೆ ಸಂಶಯ ಉಂಟಾದಾಗ ಬಾಬಾರವರಲ್ಲಿ ನಿವಾರಣೆ ಮಾಡಿಕೊಂಡು ಆ ಸ್ಪಷ್ಟನೆಯನ್ನು ಮನಸ್ಸಿನಲ್ಲೇ ಇಟ್ಟುಕೊಂಡಿರುತ್ತಿದ್ದರು. ॥39॥ ಬಾಬಾರವರ ಜೀವನ ಶೈಲಿಯನ್ನು ಪರಿಶೀಲಿಸಿದಾಗ ಅವರು ಭಿಕ್ಷೆಬೇಡುತ್ತಿದ್ದುದು ಸರಿ ಎಂದೇ ತೋರುತ್ತದೆ. ಏಕೆಂದರೆ ಅದರಿಂದ ಜನರಿಗೆ ಸಂತಸ ಉಂಟಾಯಿತು ಮತ್ತು ಬಾಬಾರವರು ಅವರಿಗೆ ತಮ್ಮ ಗೃಹಸ್ಥ ಧರ್ಮವನ್ನು ಪೂರೈಸಲು ಒಳ್ಳೆಯದನ್ನೇ ಮಾಡುತ್ತಿದ್ದರು. ॥40॥ ಕಾಯಾ, ವಾಚಾ, ಮನಸಾ ಸಾಯಿಚರಣಗಳಲ್ಲಿ ಶರಣಾದ ಭಕ್ತರನ್ನಾಯಿಯು ಅಗಾಧವಾಗಿ ಪ್ರೀತಿಸುತ್ತಿದ್ದರು. ॥41॥ ಮನೆಯಲ್ಲಿ ತಯಾರು ಮಾಡುವ ಅಡಿಗೆಗೆ ಗೃಹಸ್ಥನೇ ವಾರಸುದಾರನು. ಪ್ರಥಮವಾಗಿ ಅವನು ಊಟವನ್ನ ಭಿಕ್ಷಾರ್ಥಿಗೆ ಮತ್ತು ಬ್ರಹ್ಮಚಾರಿಗೆ ಕೊಡಬೇಕು. ॥42॥ ಅವರಿಗೆ ನೀಡದೆ ತಾನೇ ಊಟಮಾಡುವಂತಹ ಗೃಹಸ್ಥನು ಚಾಂದ್ರಾಯಣವ್ರತವನ್ನು ಆಚರಿಸಬೇಕು. ಇದನ್ನು ಶ್ರುತಿಗಳು ತ್ರಿಕರಣಶುದ್ಧಿಗಾಗಿ ಹೇಳಿವೆ. ॥43॥ ಭಿಕ್ಷೆ ಬೇಡಿ ಜೀವಿಸುವವರು ಮತ್ತು ಬ್ರಹ್ಮಚಾರಿಗಳು ಅಡಿಗೆ ಮಾಡುವುದು ನಿಷಿದ್ಧ. ಅವರೇನಾದರೂ ಹಾಗೆ ಮಾಡಿದಲ್ಲಿ ಚಾಂದ್ರಾಯಣವ್ರತವನ್ನು ಮಾಡಲೇ ಬೇಕು. ॥44॥ ಆದುದರಿಂದ ಶಾಸ್ತ್ರಗಳು ಅಂತಹವರ ಅವಶ್ಯಕತೆಗಳನ್ನು ಪೂರೈಸಲು ಗೃಹಸ್ಥರಿಗೆ ನಿಯಮಿಸಿದೆ. ಭಿಕ್ಷಾರ್ಥಿಗಳು ತಮ್ಮ ಉದರ ಪೋಷಣೆಗಾಗಿ ಶ್ರಮಪಡಬೇಕಾಗಿಲ್ಲ. ॥45॥ ಬಾಬಾರವರು ಎಂದಿಗೂ ಗೃಹಸ್ಥರಾಗಿರಲಿಲ್ಲ ಮತ್ತು ನಂತರ ವಾನಪ್ರಸ್ಥಾಶ್ರಮಿಯೂ ಆಗಲಿಲ್ಲ. ಅವರು ತಮ್ಮ ಯೌವನದಿಂದಲೇ ಬ್ರಹ್ಮಚಾರಿಯಾಗಿದ್ದರು ಮತ್ತು ಸನ್ಯಾಸಿಯೂ ಆಗಿದ್ದರು. ಆದ್ದರಿಂದ ಭಿಕ್ಷೆ ಬೇಡುವುದು ಅವರಿಗೆ ತಕ್ಕುದಾಗಿತ್ತು. ॥46॥ "ಇಡೀ ವಿಶ್ವವೇ ನನ್ನ ಗೃಹ. ನಾನೇ ಸ್ವತಃ ವಾಸುದೇವ, ಸರ್ವವ್ಯಾಪಿ, ಪರಮಾತ್ಮ, ನಾನೇ ಪರಬ್ರಹ್ಮ." ಇಂತಹ ಭಾವ ಖಚಿತವಾದುದು ಮತ್ತು ದೃಢ ನಿಶ್ಚಿತವಾದುದು. ॥47॥ ಈ ಪ್ರಜ್ಞೆ ಇರುವ ವ್ಯಕ್ತಿಗೆ ಮಾತ್ರ ಭಿಕ್ಷೆ ಬೇಡುವ ಪೂರ್ಣ ಅಧಿಕಾರ ಇದೆ. ಅವರು ಇಡೀ ವಿಶ್ವವೇ ಒಂದು ಕುಟುಂಬ ಎಂಬ ವೇದಾಂತವನ್ನು ನಂಬಿದ್ದರು. ಇತರರು ಈ ವೇದಾಂತವನ್ನು ಎಲ್ಲ ಅರ್ಥ

ದಾರಿಗಳಲ್ಲಿ ಕಾಣುವ ರೀತಿ ನಾಟಕವಾಡುತ್ತಾರೆ. ॥48॥ ಅಂದಹಾಗೆ ಪ್ರತಿಯೊಬ್ಬನೂ ಪುತ್ರ ವಾಂಛೆಯನ್ನು[10] ಬಿಡಬೇಕು. ಐಶ್ವರ್ಯ ಮತ್ತು ಅಧಿಕಾರಗಳ ಮೋಹವನ್ನು ಬಿಡಬೇಕು. ಈ ಮೂರು ಆಸೆಗಳನ್ನು ತ್ಯಜಿಸಿರುವವನಿಗೆ ಮಾತ್ರ ಭಿಕ್ಷೆ ಬೇಡಲು ಅಧಿಕಾರವಿದೆ. ॥49॥ ಇಲ್ಲದಿದ್ದರೆ, ತುಕಾರಾಮರು ಎತ್ತಿ ಹೇಳುವಂತೆ – "ದಂಬೆ ಮತ್ತು ಭಿಕ್ಷೆಗಳನ್ನು ಅವಲಂಬಿಸಿದ ಜೀವನಕ್ಕೆ ಧಿಕ್ಕಾರ, ದಿಕ್ಕಾರ!" ಏಕೆಂದರೆ ಅಂತಹ ಜೀವನವನ್ನು ಅರ್ಥ ಮಾಡಿಕೊಳ್ಳದಿದ್ದರೆ ಪ್ರಯೋಜನವಿಲ್ಲ. ॥50॥ ಮಹಾನ್ ಸಾಯಿಯು ಬಹಳ ದೊಡ್ಡ ಸಿದ್ಧ ಪುರುಷರು. ಅದು ಹಿರಿಯರು, ಕಿರಿಯರು ಎಲ್ಲರಿಗೂ ತಿಳಿದಿದೆ. ಆದರೆ ನಾವು ಈ ಸಂಸಾರ ಬಂಧನಗಳಿಂದ ಬಂಧಿಸಲ್ಪಟ್ಟವರು. ಅವರ ದಿವ್ಯ ಚರಣಗಳಿಗೆ ಭಕ್ತಿಯಿಂದಂಟಿಕೊಂಡಿಲ್ಲ. ॥51॥ ಪಂಚಾಹುತಿಗಳನ್ನು[11] ನೀಡದೆ ಗೃಹಸ್ಥನು ಊಟಮಾಡುವುದು ನಿಷಿದ್ಧ. ಆದರೆ ಸಾಯಿ ಈ ಆಹುತಿಗಳನ್ನು[12] ನೀಡುತ್ತಿದ್ದರು ಮತ್ತು ಅಡುಗೆ ಮಾಡಿ ಪ್ರತಿನಿತ್ಯ ಊಟವನ್ನು ಪರಿಶುದ್ಧಗೊಳಿಸುತ್ತಿದ್ದರು. ॥52॥ ಪ್ರತಿ ದಿನ ಅವರು ಐದು ಮನೆಗಳಿಗೆ ಭಿಕ್ಷೆಗಾಗಿ ಹೋಗುತ್ತಿದ್ದರು. ಮತ್ತು ಅತಿಥಿ ಯಜ್ಞವನ್ನು ಅತಿಥೇಯರಿಗೆ ನೆನಪು ಮಾಡುತ್ತಿದ್ದರು. ಅದರಿಂದ ಜನರು ನಿಜವಾಗಿಯೂ ಪುಣ್ಯವಂತರು. ಮನೆಯಲ್ಲಿಯೇ ಇದ್ದುಕೊಂಡು ಪುಣ್ಯವನ್ನು[13] ಗಳಿಸುತ್ತಿದ್ದರು. ॥53॥ ಯಾವ ಜನರು ಪಂಚ ಮಹಾಯಜ್ಞಗಳನ್ನು ಆಚರಿಸಿ ಉಳಿದ ಆಹಾರವನ್ನು ಸೇವಿಸುತ್ತಿದ್ದರೋ, ಅವರು ಪಂಚ ಮಹಾಪಾತಕಗಳಿಂದ ರಕ್ಷಿಸಲ್ಪಡುತ್ತಿದ್ದರು. ಏಕೆಂದರೆ ಆ ಪಾಪಗಳು ಸುಟ್ಟು ಹೋಗುತ್ತವೆ. ॥54॥ ಚೆನ್ನಾಗಿ ತಿಳಿದಿರುವ ಐದು ಪಾಪಗಳು ಯಾವುದೆಂದರೆ: ಕಂಡನಿ– ಕುಟ್ಟುವುದು; ಚುಲ್ಲಿ – ಬೆಂಕಿಯನ್ನು ಪ್ರಜ್ವಲಿಸುವುದು; ಉದಕುಂಭ – ನೀರಿನ ಮಡಕೆಗಳು; ಪೇಷನಿ – ಅರೆದು ಕುಡಿಸುವುದು; ಮಾರ್ಜನಿ – ಗುಡಿಸುವುದು. ॥55॥ ಧಾನ್ಯವನ್ನು ಮಡಕೆಯಲ್ಲಿ ಹಾಕಿ, ಹೊಟ್ಟನ್ನು ತೆಗೆಯಲಾಗುವುದು. ಆಗ ತಿಳಿಯದೆಯೇ ಈ ಕಾರ್ಯಗಳಲ್ಲಿ ಅನೇಕ ಕ್ರಿಮಿಗಳು ಸತ್ತಿರುತ್ತವೆ. ॥56॥ ಆದರೆ ಧಾನ್ಯವನ್ನು ಮೇಲೆ ಹೇಳಿದ ರೀತಿ ತಯಾರಿಸದಿದ್ದರೆ ತಿನ್ನಲು ಸಾಧ್ಯವಿಲ್ಲ. ಆದ್ದರಿಂದ ಕಂಡನಿ ಎಂಬ ಪಾಪವನ್ನು ಈ ಪಂಚ ಮಹಾಪಾಪಗಳಲ್ಲಿ ಮೊದಲನೆಯದನ್ನಾಗಿ ಪರಿಗಣಿಸುತ್ತಾರೆ. ॥57॥ ಒಲೆಯಲ್ಲಿ ಕಟ್ಟಿಗೆಯನ್ನು ಉರಿಸಿ ಅಡಿಗೆ ಮಾಡಲಾಗುತ್ತದೆ, ಅಲ್ಲಿಯೂ ಅರಿಯದೆ ಜೀವನಾಶವಾಗುತ್ತದೆ. ಈ ಪಾಪವನ್ನು ಎರಡನೆಯ ಪಾಪವಾದ ಚುಲ್ಲಿ ಎನ್ನುತ್ತಾರೆ. ॥58॥ ಕಲ್ಲಿನ ಅಥವಾ ಮರದ ಅರೆಯುವ ಯಂತ್ರದಲ್ಲಿ ಧಾನ್ಯಗಳನ್ನು ಪುಡಿಮಾಡುವಾಗಲೂ ತಿಳಿಯದೆಯೇ ಅಸಂಖ್ಯಾತ ಜೀವಿಗಳು ನಾಶವಾಗುತ್ತವೆ. ಆ ಪಾಪವನ್ನು ಪೇಷನಿ ಎಂದು ಕರೆಯುತ್ತಾರೆ. ॥59॥ ಜನರು ಬಾವಿಯಿಂದ, ಕೆರೆಯಿಂದ, ತೊಟ್ಟಿಯಿಂದ, ಮಡಕೆಗಳಲ್ಲಿ ನೀರನ್ನು ತರುವಾಗ ಹೆಂಗಸರು, ಗಂಡಸರು ಬಟ್ಟೆಗಳನ್ನು ಒಗೆಯುವಾಗ ಅಸಂಖ್ಯಾತ ಜೀವಿಗಳು ಸಾಯುತ್ತವೆ. ॥60॥ ಮಡಕೆ ತೊಳೆಯುವಾಗ, ಉಜ್ಜುವಾಗ, ಕೈಗಳನ್ನು ಉಜ್ಜಿ ತೊಳೆಯುವಾಗ ಗೊತ್ತಿಲ್ಲದೆ ಜೀವಿಗಳು ನಾಶವಾಗುತ್ತವೆ. ಇದು ನಾಲ್ಕನೆಯ ಪಾಪವಾದ ಉದಕುಂಭ. ॥61॥ ಅದೇ ರೀತಿ,

ಬೆಚ್ಚನೆಯ ನೀರಿನಲ್ಲಿ ಸ್ನಾನ ಮಾಡುವಾಗ, ಸಗಣಿಯನ್ನು ನೆಲದ ಮೇಲೆ ಚಿಮುಕಿಸುವಾಗ, ಜೀವಿಗಳು ನಾಶವಾಗುತ್ತವೆ. ಈ ಪಾಪವನ್ನು ಮಾರ್ಜನಿ ಎನ್ನುತ್ತಾರೆ. ॥62॥ ಈ ಐದು ಪಾಪಗಳಿಂದ ಮುಕ್ತನಾಗಬೇಕಾದರೆ ಗೃಹಸ್ಥನು ಈ ಐದು ಮಹಾಯಜ್ಞಗಳನ್ನು ಆಚರಿಸಬೇಕು. ಅದರ ನಂತರ ಪಾಪಗಳು ನಶಿಸಿ ವ್ಯಕ್ತಿ ಪರಿಶುದ್ಧನಾಗುತ್ತಾನೆ. ॥63॥ ಮನದ ಪರಿಶುದ್ಧತೆಯ ಶಕ್ತಿಯು ಇದು. ಪವಿತ್ರ ಜ್ಞಾನವನ್ನು ಪಡೆಯುವುದು ಪಾಪರಹಿತವಾಗಿದೆ. ಜ್ಞಾನಿಯು ನಂತರ ಮೋಕ್ಷ ಪಡೆಯುವನು. ಇದೇ ಜೀವನದ ಮುಖ್ಯ ಧ್ಯೇಯ. ॥64॥ ಅದ ಹಾಗಿರಲಿ. ಇದು ಬಾಬಾರವರ ಭಿಕ್ಷಾಟನೆಯ ವೇದಾಂತ ತತ್ತ್ವ. ಇದರ ಬಗ್ಗೆ ಬರೆಯಲು ಹೊರಟರೆ ಈ ಗ್ರಂಥದ ಪುಟಗಳು ಹೆಚ್ಚುತ್ತವೆ. ಈಗ ಮತ್ತೊಂದು ರೀತಿಯ ಕಥೆಯನ್ನು ಕೇಳಿ, ನಂತರ ಈ ಅಧ್ಯಾಯವನ್ನು ಮುಗಿಸೋಣ. ॥65॥ ನಿಮ್ಮ ಹೃದಯದಲ್ಲಿ ಕೇವಲ ಪ್ರೀತಿ ಇರಬೇಕು. ಯಾರಾದರೂ ಮತ್ತೊಬ್ಬರ ಕೈಯಲ್ಲಿ ಏನನ್ನಾದರೂ ಕಳಿಸಿದ್ದು, ಅದನ್ನು ಅವರು ಮರೆತಿದ್ದರೆ, ಬಾಬಾರವರು ಅದನ್ನು ಕೇಳಲು ಮರೆಯುತ್ತಿರಲಿಲ್ಲ. ॥66॥ ಅದು ತರಕಾರಿಯೋ, ರೊಟ್ಟಿಯೋ ಅಥವಾ ಸಿಹಿ ತಿಂಡಿಯೋ, ಏನಾದರೂ ಇರಲಿ, ಭಕ್ತಿ ಮಾತ್ರ ತೀವ್ರವಾಗಿರಬೇಕು. ಅಂತಹ ಶ್ರದ್ಧೆಯುಳ್ಳ ಭಕ್ತರು ಸಾಯಿಯ ಹತ್ತಿರ ಇದ್ದಲ್ಲಿ ಅವರ ಪ್ರೀತಿ ಉಕ್ಕುತ್ತಿತ್ತು. ॥67॥ ಇದು ಒಬ್ಬ ಪ್ರಿಯ ಭಕ್ತನ ಕಥೆ. ಕೇಳಲು ಬಹು ಸಂತಸ. ಯಾರಾದರೂ ತಮಗೆ ನಿಗದಿಪಡಿಸಿದ ಕರ್ತವ್ಯವನ್ನು ಮರೆತಲ್ಲಿ, ಬಾಬಾರವರೇ ಸರಿಯಾದ ಮಾರ್ಗದಲ್ಲಿ ಮಾರ್ಗದರ್ಶನ ಮಾಡುತ್ತಿದ್ದರು. ॥68॥ಅವರ ಉಪದೇಶ ಅಷ್ಟು ಮೆಚ್ಚುಗೆಯಾಗಿತ್ತು. ಅವರು ಸಂದರ್ಭಕ್ಕೆ ಬೇಕಾದ ಅವಶ್ಯಕವಾದ, ಎಚ್ಚರಿಕೆ ನೀಡುತ್ತಿದ್ದರು. ಅದನ್ನು ಅನುಭವಿಸಿದ ಭಕ್ತರು ಭಾಗ್ಯಶಾಲಿಗಳು ಮತ್ತು ಅವರ ಆನಂದವು ವರ್ಣನಾತೀತವಾಗಿತ್ತು. ॥69॥ ಅವರ ಪ್ರಮುಖ ಭಕ್ತರಲ್ಲಿ ರಾಮಚಂದ್ರ ಮತ್ತು ಅವರ ತಂದೆ ಆತ್ಮಾರಾಮ, ಅವರ ಮನೆತನದ ಹೆಸರು ತರ್ಖಡ ಎಂದಿತ್ತು, ಅವರಿಗೆ ಸಾಯಿಯು ಆಶ್ರಯದಾತರು. ॥70॥ ಆದರೆ ಅವರು ಬಾಬಾಸಾಹೇಬ್‌ತರ್ಖಡ ಎಂದು ಎಲ್ಲರಿಗೂ ತಿಳಿದಿದ್ದರು. ಈ ಪುಸ್ತಕದಲ್ಲಿ ಅದೇ ಹೆಸರನ್ನು ಉಪಯೋಗಿಸೋಣ. ಮತ್ತೊಂದು ಹೆಸರಿನ ಅವಶ್ಯಕತೆ ಬರುವುದಿಲ್ಲ. ॥71॥ ಸಾಯಿಯ ಮೇಲಿರುತ್ತಿದ್ದ ಉತ್ಕಟ ಪ್ರೀತಿಯಿಂದ ತರ್ಖಡ ಆನಂದೋನ್ಮತ್ತನಾಗಿ ತನ್ನ ಅನುಭವಗಳನ್ನು ವಿವರಿಸುತ್ತಿದ್ದರೆ ಅವುಗಳನ್ನು ಆಲಿಸುವುದೇ ಒಂದು ಮಹದಾನಂದ. ॥72॥ ಓಹ್! ಅವನ ಭಕ್ತಿ ಅದೆಷ್ಟು ಮಹತ್ತಾದದ್ದು, ಪ್ರತಿ ಹೆಜ್ಜೆಯಲ್ಲೂ ಅವನು ಸಾಯಿಯ ಇರುವಿಕೆಯನ್ನು ಅನುಭವಿಸುತ್ತಿದ್ದನು. ಪ್ರತಿಯೊಂದು ಅನುಭವವೂ ಮತ್ತೊಂದಕ್ಕಿಂತ ಅದ್ಭುತವಾಗಿರುತ್ತಿತ್ತು, ಅವನು ಅವುಗಳನ್ನು ಭಾವಾನುಭವಗಳಿಂದ ರಂಜಿಸುವಂತೆ ವಿವರಿಸುತ್ತಿದ್ದನು. ॥73॥ ಬಾಬಾ ಸಾಹೇಬನು ಅಸಮಾನನಾದ ಭಕ್ತ, ಅವನ ಮನೆಯಲ್ಲಿ, ದೊಡ್ಡ ಸುಂದರ ಚಂದನದ ಪೂಜಾಮಂಟಪದಲ್ಲಿ ಸಾಯಿಯ ಒಂದು ವರ್ಣಚಿತ್ರವಿತ್ತು. ಅದನ್ನು ಪ್ರತಿದಿನ ಮೂರು ಸಲ ಪೂಜಿಸುತ್ತಿದ್ದನು. ॥74॥ ಅದೃಷ್ಟವಂತನಾದ ತರ್ಖಡನಿಗೆ ಅವನಷ್ಟೇ ಸಾಯಿ ಭಕ್ತಿಯುಳ್ಳ ಮಗನೊಬ್ಬನಿದ್ದನು. ಅವನು

ಸಾಯಿಗೆ ನೈವೇದ್ಯ ಅರ್ಪಿಸದೆ ಊಟವನ್ನೂ ಮಾಡುತ್ತಿರಲಿಲ್ಲ. ॥75॥ ಬೆಳಗಿನ ವೇಳೆ ಸ್ನಾನಮಾಡಿ ಪ್ರತಿನಿತ್ಯ ಚಿತ್ರಪಟವನ್ನು ಪೂಜಿಸುತ್ತಿದ್ದನು. ಕಾಯಾ, ವಾಚಾ, ಮನಸಾ ಭಕ್ತಿ ಪೂರ್ವಕವಾಗಿ ನೈವೇದ್ಯವನ್ನು ಅರ್ಪಿಸುತ್ತಿದ್ದನು. ॥76॥ ಇದು ಅವನ ನಿತ್ಯ ಪರಿಪಾಠವಾಗಿತ್ತು, ಎಂದಿಗೂ ತಪ್ಪಿಸದೆ ನಡೆಸುತ್ತಿದ್ದನು. ಅವನ ಸೇವೆ ಫಲ ನೀಡಿತು. ಅವನಿಗೆ ದಿವ್ಯವಾದ ಅನುಭವಗಳು ಆಗತೊಡಗಿದವು. ॥77॥ ಅವನ ತಾಯಿಯೂ ಸಾಯಿಯ ಶ್ರೇಷ್ಠ ಭಕ್ತೆ. ಒಮ್ಮೆ ಅವಳು ಶಿರಡಿಗೆ ಹೋಗಬೇಕೆಂದು ಆಶೆಪಟ್ಟಳು ಮತ್ತು ತಂದೆಯು ಮಗ ಹಾಗೂ ಆಕೆಯನ್ನೂ ಜೊತೆಗೆ ಕರೆದೊಯ್ಯಲೆಂದು ಆಶಿಸಿದನು. ॥78॥ ಅವಳು ಶಿರಡಿಗೆ ಹೋಗಿ ಸರ್ವಶಕ್ತ ಪರಮಾತ್ಮನನ್ನು ದರ್ಶಿಸಿ ಅಲ್ಲಿ ಕೆಲವು ದಿನಗಳನ್ನು ಕಳೆದು ನಿಜವಾಗಿ ಸಾಯಿಚರಣ ಸೇವೆ ಮಾಡಲು ಇಚ್ಛಿಸಿದಳು. ॥79॥ ತಂದೆ ಇಚ್ಛೆಪಟ್ಟರೂ, ಮಗನಿಗೆ ಹೋಗಲು ಮನಸ್ಸಿರಲಿಲ್ಲ. ಏಕೆಂದರೆ ಅವನು ಮನೆಯಲ್ಲಿದ್ದರೆ ಪ್ರತಿನಿತ್ಯವೂ ಪೂಜೆಯನ್ನು ತಪ್ಪದೆ ಮಾಡಬಹುದು. ॥80॥ ಅವನ ತಂದೆಯಾದರೋ ಪ್ರಾರ್ಥನಾಸಮಾಜಕ್ಕೆ ಸೇರಿದವನು, ಅವನಿಗೆ ಮೂರ್ತಿಪೂಜೆ ಮಾಡುವ ತೊಂದರೆ ಕೊಡುವುದು ಎಷ್ಟರ ಮಟ್ಟಿಗೆ ಸರಿ? ಮಗನಿಗೆ ದೊಡ್ಡ ಬಿಕ್ಕಟ್ಟಾಯಿತು. ॥81॥ ಹಾಗಿದ್ದರೂ, ಅವರ ಇಚ್ಛೆಯನ್ನು[16] ಅರಿತು, ಮಗನು ಹೊರಡಲು ತಯಾರಾದನು. ಅವನು ತಂದೆಯನ್ನು ಪ್ರೀತಿಯಿಂದ ಬೇಡಿಕೊಂಡನು. ಈ ವಿಚಿತ್ರವಾದ ಕಥೆಯನ್ನು ಕೇಳಿರಿ. ॥82॥ "ಮನೆಯಲ್ಲಿ ಸಾಯಿಗೆ ನೈವೇದ್ಯ ಸಮರ್ಪಣೆ ಮಾಡದೆ ಯಾರೂ ಊಟ ಮಾಡುವ ಹಾಗಿಲ್ಲ. "ಈ ವಚನ ನೀಡುವವರೆಗೆ ನಾನು ನಿಶ್ಚಿಂತೆಯಿಂದ ಹೋಗಲು ಸಾಧ್ಯವಿಲ್ಲ." ॥83॥ ತಂದೆಗೆ ಆಗಲೇ ಮಗನ ಪೂಜಾ ದಿನಚರಿಯು ತಿಳಿದಿತ್ತು, ಅವನು ಹೇಳಿದನು, "ಹೋಗು, ನಾನು ನಿತ್ಯವೂ ನೈವೇದ್ಯ ಮಾಡುತ್ತೇನೆ. ನೀನು ನಿಶ್ಚಿಂತೆಯಿಂದ ಇರಬಹುದು." ॥84॥ ಸಾಯಿಗೆ ಅರ್ಪಿಸದೆ ಯಾರೂ ಊಟಮಾಡುವುದಿಲ್ಲ, ಇದು ನನ್ನ ಪ್ರಮಾಣವಚನ ಮತ್ತು ನೀನು ಹಿಂಜರಿಯಬೇಡ. ಆರಾಮವಾಗಿ ಹೋಗು." ॥85॥ ಈ ರೀತಿಯ ಭರವಸೆ ದೊರಕಿದ ಮೇಲೆ ಮಗನು ಶಿರಡಿಗೆ ಹೊರಟನು. ಅನಂತರ ಮಾರನೆಯ ದಿನದಿಂದ ತರ್ಖಡನೇ ಪೂಜೆಯನ್ನು ಮಾಡಿದನು. ॥86॥ ಮಾರನೆಯ ದಿನ ಪೂಜೆ ಪ್ರಾರಂಭಿಸುವ ಮೊದಲು ಬಾಬಾಸಾಹೇಬ್ ತರ್ಖಡನು ವರ್ಣಚಿತ್ರದ ಮುಂದೆ ಬಂದು ಪ್ರಣಾಮಗಳನ್ನು ಮಾಡಿ ಪ್ರಾರ್ಥಿಸಿದನು. ॥87॥ "ಬಾಬಾ, ನನ್ನ ಮಗನು ಪೂಜೆಮಾಡುತ್ತಿದ್ದ ರೀತಿಯಲ್ಲಿಯೇ ಮಾಡಿರುವ ನನ್ನ ಈ ಸೇವೆಯನ್ನು ಸ್ವೀಕರಿಸು. ನನ್ನ ಪಾಲಿಗೆ ಅದು ಕೇವಲ ವ್ಯಾಯಾಮ (ಡ್ರಿಲ್) ಆಗದಿರಲಿ. ನನ್ನ ಹೃದಯದಲ್ಲಿ ನಿನ್ನ ಬಗ್ಗೆ ಪ್ರೀತಿಯನ್ನು ಸುರಿಸು." ॥88॥ ಬೆಳಗಿನ ಜಾವ ಸ್ನಾನ ಮಾಡಿ, ತರ್ಖಡನು ಭಕ್ತಿಯಿಂದ ಪ್ರತಿನಿತ್ಯವೂ ನೈವೇದ್ಯವನ್ನು ಇಡುತ್ತಾ ಪೂಜೆ ಮಾಡಲು ಪ್ರಾರಂಭಿಸಿದನು. ॥89॥ ಬಾಬಾ ಸಾಹೇಬನು ನಿತ್ಯವೂ ಒಂದು ಚೂರು ಕಲ್ಲುಸಕ್ಕರೆಯನ್ನು ನೈವೇದ್ಯ ಇಡುತ್ತಿದ್ದನು. ಈ ಅಭ್ಯಾಸ ತಡೆ ಇಲ್ಲದೆ ನಡೆಯಿತು. ಆದರೆ ಒಂದು ದಿನ ಅದು ತಪ್ಪಿತು. ॥90॥ ಒಮ್ಮೆ ಕಛೇರಿಯ ಕೆಲಸಗಳಲ್ಲಿ ಮುಳುಗಿದ ತರ್ಖಡನು ಮರೆತು

ಹೋದನು ಮತ್ತು ಎಲ್ಲರೂ ನೈವೇದ್ಯ ಇಲ್ಲದೆಯೇ ಊಟ ಮಾಡಿದರು. ॥91॥ ತರ್ಖಡ ಸಾಹೇಬನು ಒಂದು ದೊಡ್ಡ ಗಿರಣಿಯ ಮುಖ್ಯಾಧಿಕಾರಿಯಾಗಿದ್ದನು. ಆದುದರಿಂದ ಬೆಳಗಿನ ವೇಳೆ ಕರ್ತವ್ಯದ ಮೇಲೆ ದಿನವೂ ಹೊರಗೆ ಹೋಗಬೇಕಾಗುತ್ತಿತ್ತು. ॥92॥ ಮಧ್ಯಾಹ್ನದ ವೇಳೆಗೆ ಹಿಂತಿರುಗುತ್ತಿದ್ದನು. ಹಿಂದೆ ತಿಳಿಸಿದಂತೆ ಸಕ್ಕರೆಯ ಪ್ರಸಾದವನ್ನು ಅವನು ಊಟಕ್ಕೆ ಕುಳಿತಾಗ ತೆಗೆದುಕೊಳ್ಳುತ್ತಿದ್ದನು. ॥93॥ ಇದು ನಿತ್ಯದ ರೂಢಿಯಾಗಿತ್ತು. ಒಂದು ಸಂದರ್ಭದಲ್ಲಿ ಅವನು ಮರೆತು ಹೋದನು. ನೈವೇದ್ಯಕ್ಕೆ ಸಕ್ಕರೆಯನ್ನೂ ಇಡಲಿಲ್ಲುತ್ತು ಪ್ರಸಾದವನ್ನೂ ತೆಗೆದುಕೊಳ್ಳಲಿಲ್ಲ. ॥94॥ ಪ್ರತಿ ದಿನ, ಅಡಿಗೆಯವನು ಸ್ವಲ್ಪ ಸಕ್ಕರೆಯನ್ನು ಕೊನೆಯಲ್ಲಿ ಬಡಿಸುವನು. ಅವನು ಊಟ ಶುರುಮಾಡಿದಾಗ ಅದು ಆಹಾರ ಶುದ್ಧೀಕರಣ ಮಾಡುವಂತಿತ್ತು. ॥95॥ ಆದರೆ ಆ ದಿನ ಪೂಜೆಯ ಸಮಯದಲ್ಲಿ ಅವಸರವಿದ್ದುದರಿಂದ ಸಕ್ಕರೆ ನೈವೇದ್ಯ ಮಾಡಿರಲಿಲ್ಲ. ಆದ್ದರಿಂದ ಅವನು ಪ್ರಸಾದ ತೆಗೆದುಕೊಳ್ಳಲಿಲ್ಲ. ॥96॥ ಕೂಡಲೇ, ತರ್ಖಡನು ಊಟ ಬಿಟ್ಟು ಬಹಳವಾಗಿ ಪಶ್ಚಾತ್ತಾಪ ಪಟ್ಟುಕೊಳ್ಳುತ್ತ ಸಾಯಿಯ ಚಿತ್ರಪಟಕ್ಕೆ ಪ್ರಣಾಮ ಮಾಡಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಹೇಳಿದನು. ॥97॥ "ಬಾಬಾ, ಎಂತಹ ಮಾಯೆಯನ್ನು ನೀನು ತೋರಿಸಿದೆ? ನನ್ನ ಮನಸ್ಸಿನಲ್ಲಿ ಗೊಂದಲವನ್ನು ಹೇಗೆ ಉಂಟುಮಾಡಿದೆ? ಕೇವಲ ವ್ಯಾಯಾಮ ಮಾಡಲು ನನ್ನನ್ನು ಹೇಗೆ ಬಿಟ್ಟೆ? ಮೊದಲು ನನ್ನನ್ನು ಕ್ಷಮಿಸು. ॥98॥ "ಇದು ಕೇವಲ ತಪ್ಪಲ್ಲ, ಮಹಾಪರಾಧ. ನಾನು ಬಹಳ ಪಶ್ಚಾತ್ತಾಪ ಪಡುತ್ತಿದ್ದೇನೆ. ಈ ತಪ್ಪನ್ನು ನಾನು ಉದ್ದೇಶಪೂರ್ವಕವಾಗಿ ಮಾಡಿಲ್ಲ. ಮಹಾರಾಜ! ದಯಮಾಡಿ ನನ್ನ ಮೇಲೆ ಕರುಣೆ ತೋರು." ॥99॥ ಅವನು ಚಿತ್ರ ಪಟದಲ್ಲಿದ್ದ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು. ತೀವ್ರ ಪಶ್ಚಾತ್ತಾಪಗೊಂಡಿದ್ದನು. ಅವನು ಹೇಳಿದನು – "ಮಹಾರಾಜ, ಕರುಣೆಯ ಮೇಘವೇ, ನನ್ನ ಮೇಲೆ ದಯೆತೋರು." ॥100॥ ಈ ರೀತಿ ಹೇಳಿ ಅವನು ಬಹಳ ಅವಮಾನ ಮತ್ತು ನಾಚಿಕೆಗಳಿಂದ ತನ್ನ ಮಗನಿಗೆ ಒಂದು ಪತ್ರ ಕಳಿಸಿದನು "ನನ್ನಿಂದ ಒಂದು ದೊಡ್ಡ ತಪ್ಪಾಗಿದೆ. ನನ್ನನ್ನು ಕ್ಷಮಿಸೆಂದು ಪ್ರಾರ್ಥಿಸುತ್ತೇನೆ. ॥101॥ "ಪೂರ್ಣ ಶರಣಾಗತನಾದವನಿಗೆ ದಯೆತೋರು. ಸಾಯಿಯನ್ನು ಈ ಪದಗಳಿಂದ ಮೊರೆ ಇಡು. ಈ ನಮ್ರ ಸೇವಕನಿಗಾಗಿ ಪ್ರಾರ್ಥಿಸು. ಸಾಯಿಯ ಕ್ಷಮೆ ಮತ್ತು ಸುರಕ್ಷ ವಚನಗಳಿಗಾಗಿ ಬೇಡಿಕೋ." ॥102॥ ಈ ಘಟನೆ ಬಾಂದ್ರಾದಲ್ಲಿ ನಡೆಯಿತು. ಶಿರಡಿಯು ನೂರು ಕೋಸ ದೂರದಲ್ಲಿತ್ತು, ಆದರೆ ಸುದ್ದಿಯು ತಕ್ಷಣವೇ ಅಲ್ಲಿಗೆ ಮುಟ್ಟಿತ್ತು, ಅದರ ಬಗ್ಗೆ ಬಾಬಾ ಏನು ಹೇಳಿದರೆಂಬುದನ್ನು ಕೇಳಿ. ॥103॥ ಸಾಯಿ ಮಹಾರಾಜರ ಯೋಗ್ಯತೆಯ ಬಗ್ಗೆ ಪುರಾವೆ ಇದು. ಯಾವುದೇ ಅಡೆತಡೆ ಇಲ್ಲದೆ ಜ್ಞಾನ ಪಡೆಯುವುದು, ಕಾಲ ದೇಶಗಳಿಗೆ ಅತೀತರಾಗಿ ಭೂತ, ವರ್ತಮಾನ ಮತ್ತು ಭವಿಷ್ಯತ್ ಬಗ್ಗೆ ತಿಳಿದಿರುವುದು. ॥104॥ ಆದಿನ ಇಲ್ಲಿ ಮಗನು ಶಿರಡಿಯಲ್ಲಿದ್ದಾಗ, ಅದೇ ಕ್ಷಣದಲ್ಲಿ ಅವನು ಸಾಯಿ ಚರಣಗಳಿಗೆ ಎರಗಿದಾಗ ಏನಾಯಿತು ಎಂಬುದನ್ನು, ಶ್ರೋತೃಗಳು ಸಾವಧಾನದಿಂದ ಕೇಳಿರಿ. ॥105॥ ಮಗನು ತುಂಬಿದ

ಉತ್ಸಾಹದಿಂದ ತಾಯಿಯ ಜೊತೆ ವಂದನೆ ಸಲ್ಲಿಸಲು ಬಂದನು. ಸಾಯಿಯು ತಾಯಿಯೊಡನೆ ಆಡಿದ ನುಡಿಗಳನ್ನು ಕೇಳಿ ಆಶ್ಚರ್ಯಚಕಿತನಾದನು. ॥106॥ "ಓಹ್ ಅಮ್ಮ! ನಾನು ಏನು ಮಾಡಲಿ? ಈ ದಿನ ನಾನು ಸಹಜವಾಗಿ ಬಾಂದ್ರಾಗೆ ಹೋದಾಗ ಅಲ್ಲಿ ತಿನ್ನಲು, ಅಥವಾ ಗಂಜಿಯನ್ನು ಕುಡಿಯಲು ಏನೂ ಇರಲಿಲ್ಲ. ಹಸಿದುಕೊಂಡೇ ಹಿಂತಿರುಗಬೇಕಾಯಿತು. ॥107॥ "ನಮ್ಮ ಜೊತೆ ಇರುವ ಹಿಂದಿನ ಜನ್ಮಗಳ ಬಂಧಗಳನ್ನು ಗುರುತಿಸಿ ಬಾಗಿಲುಗಳನ್ನು ಮುಚ್ಚಿದ್ದರೂ ನಾನು ಊಟಮಾಡದೆ ಹಿಂತಿರುಗಬೇಕಾಯಿತು. ನಾನು ನನ್ನ ಸ್ವಇಚ್ಛೆಯಿಂದ ಪ್ರವೇಶಿಸಿದೆ. ನನ್ನನ್ನು ಯಾರು ತಡೆಯಲು ಸಾಧ್ಯ? ॥108॥ "ಮನೆಯ ಒಡೆಯ ಮನೆಯಲ್ಲಿರಲಿಲ್ಲ. ನನ್ನ ಹೊಟ್ಟೆ ಅತಿಯಾಗಿ ಹಸಿದಿತ್ತು, ಮಧ್ಯಾಹ್ನದ ಸೂರ್ಯನ ಬಿಸಿಲಲ್ಲಿ ನಾನು ಊಟವಿಲ್ಲದೆ ಹಿಂತಿರುಗಬೇಕಾಯಿತು." ॥109॥ ಈ ಮಾತುಗಳನ್ನು ಕೇಳಿ ಕೂಡಲೇ ತರ್ಖಡನ ಮಗನು, ಬಹುಶಃ ತನ್ನ ತಂದೆ ನೈವೇದ್ಯ ಅರ್ಪಿಸಲು ಮರೆತಿದ್ದಾರೆಂದು ಅರಿತನು. ॥110॥ ಮಗನು ಬಾಬಾರವರಲ್ಲಿ ಮನೆಗೆ ಹಿಂತಿರುಗಲು ಅನುಮತಿ ಬೇಡಿದನು. ಆದರೆ ಬಾಬಾ ಅದಕ್ಕೊಪ್ಪಲಿಲ್ಲ ಮತ್ತು ಅಲ್ಲಿಯೇ ಪೂಜೆ ಮಾಡುವಂತೆ ಮಾಡಿದರು. ॥111॥ ಅದೇ ದಿನ ಅವನು ಶಿರಡಿಯಿಂದ ಒಂದು ವಿವರವಾದ ಪತ್ರ ಬರೆದನು. ಆ ಕಾಗದವನ್ನು ಪಡೆದು ಓದಿದ ನಂತರ ಅವನ ತಂದೆಯ ಹೃದಯ ಕರಗಿಹೋಯಿತು. ॥112॥ ಅವನ ಕಾಗದ ತಂದೆಗೆ ತಲುಪುತ್ತಿದ್ದಂತೆ ತಂದೆಯ ಕಾಗದ ಇತ್ತ ಮಗನಿಗೆ ತಲುಪಿತು. ಮಗನಿಗೂ ಆಶ್ಚರ್ಯವಾಯಿತು. ಅವನ ಕಣ್ಣುಗಳಲ್ಲಿ ಕಣ್ಣೀರು ತುಂಬಿ ಹರಿಯಿತು. ॥113॥ ಸಾಯಿಯ ಆಟವನ್ನು ನೋಡಿ. ಪ್ರೀತಿ ಉಕ್ಕಿ ಹರಿಯುವುದಿಲ್ಲವೆ? ಇದರಿಂದ ಕರಗದೆ ಇರುವ ಕಲ್ಲು ಹೃದಯ ಯಾವುದಿದೆ? ॥114॥ ಈಗ ಇದೇ ಹುಡುಗನ ಪ್ರೀತಿಯ ತಾಯಿ ಒಮ್ಮೆ ಶಿರಡಿಯಲ್ಲಿದ್ದಾಗ ಬಾಬಾರವರು ತೋರಿದ ಪವಾಡವನ್ನು ಕೇಳಿರಿ. ॥115॥ ಒಮ್ಮೆ ಆಕೆ ಅಡಿಗೆ ಮನೆಯಲ್ಲಿದ್ದಾಗ ಬಾಳೆ ಎಲೆಗಳನ್ನು ಮಧ್ಯಾಹ್ನದ ಊಟಕ್ಕೆ ಹಾಕಲಾಗಿತ್ತು, ಒಂದು ಹಸಿದ ನಾಯಿ ಬಾಗಿಲ ಬಳಿ ಬಂದಿತು. ॥116॥ ಆಕೆಯು ತಟ್ಟೆಯಲ್ಲಿದ್ದ ಒಂದು ರೊಟ್ಟಿಯನ್ನು ನಾಯಿಗೆ ಕೊಡಬೇಕೆಂದಿದ್ದಾಗ ಅಲ್ಲಿಗೆ ಕೆಸರಿನಿಂದ ತುಂಬಿದ್ದ ಒಂದು ಹಂದಿಯು ಬಂದಿತು. ಅದು ಅತಿಯಾಗಿ ಹಸಿದಿತ್ತು ಆಕೆ ಎರಡಕ್ಕೂ ರೊಟ್ಟಿಕೊಟ್ಟು ಉಣಿಸಿದಳು. ॥117॥ ಈ ಘಟನೆಯು ಸಹಜವಾಗಿಯೇ ನಡೆಯಿತು. ಅವಳು ಅದಕ್ಕೆ ಏನೂ ಪ್ರಾಮುಖ್ಯತೆ ಕೊಡಲಿಲ್ಲ ಮತ್ತು ಅದನ್ನು ಮನಸ್ಸಿನಲ್ಲಿ ಇಡಲೂ ಇಲ್ಲ. ಆದರೆ ಸಾಯಿಯು ತಾವಾಗಿಯೇ ಆಕೆ ಅಲ್ಲಿದ್ದಾಗ ಈ ವಿಷಯ ಪ್ರಸ್ತಾಪಿಸಿದರು. ॥118॥ ಮಧ್ಯಾಹ್ನದ ಊಟವಾದ ನಂತರ ನಿತ್ಯ ರೂಢಿಯಂತೆ ಆಕೆ ಬಂದು ಮಸೀದಿಯಲ್ಲಿ ಸ್ವಲ್ಪ ದೂರದಲ್ಲಿ ಕುಳಿತಾಗ ಸಾಯಿಯು ಮೃದುವಾಗಿ ಹೇಳಿದರು. ॥119॥ "ಓಹ್ ಅಮ್ಮ! ನೀನು ಈದಿನ ಹಾಕಿದ ಊಟದಿಂದ ನನಗೆ ಕಂಠಪೂರ್ತಿ ತುಂಬಿದೆ. ನನಗೆ ಅತಿಯಾಗಿ ಹಸಿವಾಗಿತ್ತು, ತೃಪ್ತಿ ಪಡಿಸಿದೆ. ॥120॥ "ನೀನು ಯಾವಾಗಲೂ ಇದೇ ರೀತಿ ನಡೆದುಕೋ. ನಿಜವಾಗಿಯು ಕೊನೆಯಲ್ಲಿ ಇದೇ ಉಪಯೋಗಕರವಾಗಿರುತ್ತದೆ. ಮಸೀದಿಯಲ್ಲಿ ಕುಳಿತುಕೊಂಡು

ನಾನು ಎಂದಿಗೂ ಅನೃತವನ್ನಾಡುವುದಿಲ್ಲ. ಇದೇ ಸರ್ವಮಾನ್ಯ ಸತ್ಯ. ॥121॥ "ನಾನು ಈ ಕರುಣೆಯನ್ನೇ ಬೋಧಿಸುವುದು. ಇದನ್ನು ತಿಳಿ. ಮೊದಲು ಹಸಿದವರಿಗೆ ಅನ್ನ ನೀಡು. ಅನಂತರವೇ ನೀನು ತಿನ್ನು. ನಿನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿ ನೆನಪಿನಲ್ಲಿಡು." ॥122॥ ಸಾಯಿಸಮರ್ಥರು ಏನು ಹೇಳಿದರೆಂಬುದು ಆ ಮಹಿಳೆಗೆ ಸ್ವಲ್ಪವೂ ಅರ್ಥವಾಗಲಿಲ್ಲ. ಅದರ ಅಂತರಾರ್ಥ ಏನಿತ್ತು? ಅವರ ಮಾತುಗಳೆಂದಿಗೂ ವ್ಯರ್ಥವಲ್ಲ. ॥123॥ ಆಕೆ ಹೇಳಿದಳು, "ನಾನು ನಿಮ್ಮ ಸೇವೆ ಹೇಗೆ ಮಾಡಲಿ? ನನ್ನ ಕೈಗಳಿಂದಲೇ ಇದು ನಡೆಯಲು ಹೇಗೆ ಸಾಧ್ಯ? ನಾನು ಈಗ ಪರಾವಲಂಬಿ. ನನಗೆ ಸಿಕ್ಕಿದ್ದನ್ನು ಖರ್ಚು ಮಾಡಿ ತಿನ್ನುತ್ತೇನೆ. ॥124॥ ಬಾಬಾ ಅವಳಿಗೆ ಉತ್ತರಿಸುತ್ತ ಹೇಳಿದರು, "ಪ್ರೀತಿಯಿಂದ ಬಡಿಸಿದ ಚಪಾತಿಗಳನ್ನು ನೋಡಿಯೇ ಬಹಳ ತೃಪ್ತಿಯಾಗಿ ಇನ್ನೂ ಕೇಳುತ್ತಿದ್ದೇನೆ. ॥125॥ "ನೀನು ಊಟಕ್ಕೆ ಕುಳಿತ ಕೂಡಲೇ ಒಳಗೆ ಬಂದ ಒಂದು ನಾಯಿಯನ್ನು ನೋಡಿದೆ, ಅದು ಬಹಳ ಹಸಿದಿತ್ತು, ನಾನು ಅದರಲ್ಲಿ ಒಂದಾದೆ. ॥126॥ "ಅದೇ ರೀತಿ ನಾನು ಮಣ್ಣಿನಲ್ಲಿ ಹೊರಳಾಡುತ್ತಿರುವ ಹಂದಿಯಲ್ಲೂ ಇದ್ದೇನೆ. ಅದೂ ಸಹ ಹಸಿದು ಬಳಲಿತ್ತು." ॥127॥ ಬಾಬಾರವರ ಮಾತುಗಳನ್ನು ಕೇಳಿ ಆ ಮಹಿಳೆ ಆಶ್ಚರ್ಯಚಕಿತಳಾದಳು. ನಾಯಿ, ಹಂದಿ, ಬೆಕ್ಕು ಅಲೆಮಾರಿ ಪ್ರಾಣಿಗಳು ಇವುಗಳಲ್ಲೂ ಬಾಬಾ ಒಂದಾಗಿ ಇದ್ದಾರೆಯೆ? ॥128॥ "ಕೆಲವು ವೇಳೆ ನಾನು ನಾಯಿ, ಕೆಲವು ವೇಳೆ ಹಂದಿ, ಕೆಲವು ವೇಳೆ ಹಸು, ಕೆಲವು ವೇಳೆ ಬೆಕ್ಕು, ಕೆಲವು ವೇಳೆ ಇರುವೆ, ನೊಣ ಅಥವಾ ಮೀನು ಹೀಗೆ ವಿವಿಧ ರೂಪಗಳಲ್ಲಿ ಚಲಿಸುತ್ತಿರುತ್ತೇನೆ. ॥129॥ "ಯಾರು ಎಲ್ಲ ಜೀವಿಗಳಲ್ಲಿಯೂ ನನ್ನನ್ನು ನೋಡುತ್ತಾರೋ ಅವರು ನನಗೆ ಪ್ರೀತಿಪಾತ್ರರು ಎಂಬುದನ್ನು ತಿಳಿ. ಎರಡೂ ಬೇರೆ ಎಂಬ ಭಾವವನ್ನು ತ್ಯಜಿಸಿ ನನ್ನನ್ನು ಈ ರೀತಿ ಪೂಜಿಸಿರಿ." ॥130॥ ಇವು ಕೇವಲ ಸಾಧಾರಣ ಪದಗಳಲ್ಲ, ಅಮೃತ ವಚನಗಳು. ಅವಳು ಭಾವೋನ್ಮತ್ತಳಾದಳು. ಅವಳ ಕಣ್ಣುಗಳು ಆನಂದ ಭಾಷ್ಪಗಳಿಂದ ತುಂಬಿದವು. ಅವಳ ಗಂಟಲು ಭಾವದಿಂದ ಉಬ್ಬಿ ಬಂದಿತು. ॥131॥ ಇದೇ ರೀತಿ ಆ ಮಹಿಳೆಯ ಮತ್ತೊಂದು ಚರಿತ್ರೆ ಇದೆ. ಅದು ಆಶ್ಚರ್ಯಕರವಾಗಿಯೂ ಪ್ರೀತಿಯನ್ನು ತೋರಿಸುವಂತಹದೂ ಆಗಿದೆ. ಅದು ಈ ಮಹಾನ್ ಸಾಯಿಯ ಮತ್ತು ಅವರ ಭಕ್ತರ ಏಕತೆಯನ್ನು ಮತ್ತು ಎರಡು ಆತ್ಮಗಳೂ ಒಂದೇ ಎಂಬುದನ್ನು ತೋರಿಸುತ್ತವೆ. ॥132॥ ಒಮ್ಮೆ ಪುರಂಧರೆಯು ತನ್ನ ಪತ್ನಿ, ಮಕ್ಕಳೊಡನೆ ಶಿರಡಿಗೆಂದು ಹೊರಟನು. ಆಗ ಆಕೆ (ಶ್ರೀಮತಿ ತರ್ಖಡ) ಅವನಿಗೆ ಬದನೆಕಾಯಿಗಳನ್ನು ಕೊಟ್ಟು, ಆತನ ಪತ್ನಿಗೆ ಒಂದರಿಂದ ಭರ್ತ(ಮೊಸರು ಬಜ್ಜಿ)ಮಾಡಲು, ॥133॥ ಬಾಬಾರವರಿಗಾಗಿ, ಮತ್ತೊಂದರಿಂದ ಕಂದು ಬಣ್ಣದ ಗರಿಗರಿಯಾದ ಕಚರ್ಯವನ್ನು ಮಾಡಿ ಮನಃಪೂರ್ವಕವಾಗಿ ತಿನ್ನಿಸಬೇಕೆಂದು ಕೇಳಿಕೊಂಡಳು. ॥134॥ ಅವರು ಒಪ್ಪಿಕೊಂಡು ಬದನೆಕಾಯಿ ತೆಗೆದುಕೊಂಡು ಶಿರಡಿ ತಲುಪಿದರು. ಆರತಿಯ ನಂತರ ಊಟದ ಸಮಯದಲ್ಲಿ ಅವಳು ಭರ್ತವನ್ನು ತೆಗೆದುಕೊಂಡುಹೋದಳು. ॥135॥ ರೂಢಿಯಂತೆ ಆ ಹೆಂಗಸು ನೈವೇದ್ಯವನ್ನು ಸಮರ್ಪಿಸಿ ತಟ್ಟೆಯನ್ನು[20] ಬಿಟ್ಟು ಹೊರಟಳು.

ಬಾಬಾ ಎಲ್ಲರ ನೈವೇದ್ಯವನ್ನೂ ಸ್ವೀಕರಿಸಿ ಊಟಕ್ಕೆ ಕುಳಿತರು. ॥136॥ ಅವರು ಭರ್ತವನ್ನು ರುಚಿನೋಡಿ ಚಪ್ಪರಿಸಿದರು ಮತ್ತು ಪ್ರತಿಯೊಬ್ಬರಿಗೂ ಹಂಚಿದರು. ಕಚರ್ಯವನ್ನು ತಿನ್ನಲು ಇಚ್ಛಿಸಿ ಮತ್ತೆ ಕೇಳಿದರು. ॥137॥ ಆಗ ರಾಧಾಕೃಷ್ಣಆಯಿಗೆ ಬಾಬಾರವರು ಊಟಮುಗಿಸಲು ಕಾಯುತ್ತಿದ್ದಾರೆಂಬ ಸಂದೇಶ ಕಳಿಸಿದರು. ಅವರು ಕಚರ್ಯವನ್ನು ತಿನ್ನಲು ಆಸೆಪಟ್ಟಿದ್ದರು. ಯಾರಿಗೂ ಏನು ಮಾಡಬೇಕೆಂದು ತಿಳಿಯಲಿಲ್ಲ. ॥138॥ ಅದು ಬದನೆಕಾಯಿಯ ಕಾಲವಲ್ಲ. ಆದ್ದರಿಂದ ಅದನ್ನು ಹೇಗೆ ತಯಾರಿಸುವುದು? ಅದಕ್ಕಾಗಿ ಪುರಂಧರೆಯ ಪತ್ನಿಯನ್ನೂ, ಭರ್ತವನ್ನೂ ಹುಡುಕಿದರು. ॥139॥ ಭರ್ತವು ಥಾಲಿಯಲ್ಲಿತ್ತು, ಆದ್ದರಿಂದ ಆಕೆಯ ಬಳಿ ಮತ್ತಷ್ಟು ಬದನೆಕಾಯಿ ಇರುವ ಸಾಧ್ಯತೆ ಇತ್ತು. ॥140॥ ಅದರ ಬಗ್ಗೆ ಆಕೆಯನ್ನು ಪ್ರಶ್ನಿಸಿದಾಗ ಎಲ್ಲವೂ ಅರ್ಥವಾಯಿತು. ಕಚರ್ಯದ ಪ್ರಾಮುಖ್ಯತೆ ಮತ್ತು ಬಾಬಾರವರು ಅದನ್ನೇ ಉದ್ದೇಶಿಸಿ ಏಕೆ ಕೇಳುತ್ತಿದ್ದರು ಎಂಬುದು. ॥141॥ ಆ ಹೆಂಗಸು ಹೇಳಿದ್ದೇನೆಂದರೆ, ಒಂದು ಬದನೆಕಾಯಿಯಿಂದ ಭರ್ತಮಾಡಿ ಬಾಬಾರವರಿಗೆ ಮಧ್ಯಾಹ್ನ ಅರ್ಪಿಸಿದ್ದಳು ಮತ್ತು ಕಚರ್ಯವನ್ನು ಅನಂತರ ತೆಗೆದುಕೊಂಡು ಹೋಗಬೇಕೆಂದುಕೊಂಡಿದ್ದಳು. ॥142॥ ಅನಂತರ ಯಾವಾಗ ಈ ಬದನೆಕಾಯಿ ಘಟನೆ ನಿಧಾನವಾಗಿ ಎಲ್ಲರಿಗೂ ತಿಳಿಯಿತೋ, ಆಗ ಎಲ್ಲರೂ ಬಾಬಾರವರ ಸರ್ವಜ್ಞತ್ವವನ್ನು ಅರಿತು ಬೆರಗಾದರು. ॥143॥ ಮತ್ತೆ ಕ್ರಿ. ಶ. 1915 ಡಿಸೆಂಬರ್ ತಿಂಗಳಲ್ಲಿ ಅದೇ ಮಹಿಳೆ ಬಾಬಾರವರಿಗೆ ಅತಿ ಪ್ರೀತಿಯಿಂದ ಪೇಡವನ್ನು[21] ಕಳಿಸಿದ್ದಳು. ॥144॥ ಬಾಳಾರಾಮನು[22] ತೀರಿಹೋಗಿದ್ದರಿಂದ ಅವನ ಮಗ ಅಪರಕರ್ಮ ಆಚರಿಸಲು ಶಿರಡಿಗೆ ಹೋಗಬೇಕಾಯಿತು. ಅವನು ಹೊರಡಲು[23] ಅನುಮತಿ ಬೇಡಲು ಮತ್ತು ಏನಾದರೂ ಸಂದೇಶವಿದೆಯೇ ಎಂದು ಕೇಳಲು ಬಂದನು. ॥145॥ ಮಗನು ತಾನು ಹೊರಡುವೆನೆಂದು ತಿಳಿಸಲು ತರ್ಖಡನ ಹತ್ತಿರ ಬಂದನು. ಅವನ ಪತ್ನಿಯೂ ಅವನ ಹತ್ತಿರ ಬಾಬಾರವರಿಗಾಗಿ ಏನಾದರೂ ಕಳಿಸಲು ಯೋಚಿಸಿದಳು. ॥146॥ ಮನೆಯಲ್ಲಿ ಪೇಡಾ ವಿನಹ ಮತ್ತೇನೂ ಇರಲಿಲ್ಲ. ಅದೂ ಅಲ್ಲದೆ ಪೇಡಾವನ್ನು ಈಗಾಗಲೇ ನೈವೇದ್ಯವಾಗಿ ಅರ್ಪಿಸಲಾಗಿತ್ತು, ಮಗನೂ ಹೊರಡುವ ಆತುರದಲ್ಲಿದ್ದನು. ॥147॥ ಜೊತೆಗೆ ಮಗನು ಶೋಕತಪ್ತನಾಗಿದ್ದನು! ಒಂದೇ ಒಂದು ಪೇಡಾ ಉಳಿದಿತ್ತು, ಆಕೆ ಅದನ್ನೇ ಸಾಯಿಗೆ ತಿನ್ನಲು ಕಳುಹಿಸಿಕೊಟ್ಟಳು. ॥148॥ ಆಕೆ ಹೇಳಿದಳು, "ಕೊಡಲು ಮತ್ತೇನೂ ಇಲ್ಲ. ಇದನ್ನೇ ತೆಗೆದುಕೊಂಡು ಹೋಗಿ ಸಾಯಿಗೆ ಪ್ರೀತಿಯಿಂದ ಕೊಡು. ಅವರು ಸಂತೋಷದಿಂದ ತಿನ್ನುತ್ತಾರೆ." ॥149॥ ಗೋವಿಂದಜಿಯು ಪೇಡಾವನ್ನು ತನ್ನೊಡನೆ ತೆಗೆದುಕೊಂಡುಹೋದನು. ಆದರೆ ದರ್ಶನಕ್ಕೆ ಹೋಗುವಾಗ ತಾನು ಇಳಿದುಕೊಂಡಿದ್ದ ಜಾಗದಲ್ಲೇ ಮರೆತುಹೋದನು. ಬಾಬಾರವರು ತಾಳ್ಮೆಯಿಂದಲೇ ಇದ್ದರು. ॥150॥ ಅನಂತರ ಮಧ್ಯಾಹ್ನವಾದಾಗ ಅವರು ದರ್ಬಾರ್ ಹಾಲಿಗೆ ಬಂದಾಗ ಹಿಂದಿನ ಸಲದ ಹಾಗೆಯೇ ಮರೆತು ಹೋಗಿ ಬರಿಕೈಯಲ್ಲಿ ಮಸೀದಿಗೆ ಬಂದರು. ॥151॥ "ನನಗಾಗಿ ಏನು ತಂದಿರುವೆ?" ಎಂದು ಬಾಬಾರವರು ಸಹಜವಾಗಿಯೇ ಕೇಳಿದರು. ಅವನು ಹೇಳಿದನು "ಏನೂ ಇಲ್ಲ"

ಎಂದು. ಅದಕ್ಕೆ ಬಾಬಾರವರು ಅವನ ಕಡೆ ತಿರುಗಿ ನೆನಪಿಸಿದರು. ॥152॥ 'ನನಗಾಗಿ ಯಾರೂ ಏನೂ ಕೊಡಲಿಲ್ಲವೆ?" ಅದಕ್ಕೆ ಅವನು ಇಲ್ಲವೆಂದಾಗ ಸಾಯಿ ಸಮರ್ಥರು ನೇರವಾಗಿ ಕೇಳಿದರು. ॥153॥ "ಓಹ್, ನೀನು ಮನೆಯಿಂದ ಹೊರಟಾಗ, ತಾಯಿಯು ನಿನಗೆ ಪ್ರೀತಿಯಿಂದ ಸಿಹಿಯನ್ನು ಕೊಡಲಿಲ್ಲವೇ?" ಆಗ ಅವನಿಗೆ ನೆನಪಾಯಿತು. ॥154॥ ಅವನಿಗೆ ತುಂಬಾ ನಾಚಿಕೆಯಾಯಿತು. ಅದು ಹೇಗೆ ಮರೆತನು? ಅವನು ತಲೆ ತಗ್ಗಿಸಿ ಕ್ಷಮೆ ಬೇಡಿ ಪಾದಗಳಿಗೆ ಪ್ರಣಾಮ ಮಾಡಿದನು. ॥155॥ ತಾನು ತಂಗಿದ್ದ ಜಾಗಕ್ಕೆ ಓಡಿ ಹೋಗಿ ಪೇಡಾವನ್ನು ತಂದು ಬಾಬಾರವರಿಗೆ ಕೊಟ್ಟನು. ಕೈಯಲ್ಲಿ ಬಿದ್ದಕೂಡಲೇ ಬಾಯಲ್ಲಿ ಹಾಕಿಕೊಂಡು ಬಾಬಾರವರು ಆ ತಾಯಿಯ ಭಕ್ತಿ ಭಾವನೆಗಳಿಗೆ ಸ್ಪಂದಿಸಿದರು. ॥156॥ ಅಂತಹ ದೊಡ್ಡ ಯೋಗಿ ಮಹಾನುಭಾವ[5] ಮಹಾನ್ ಸಾಯಿ. ಅನುಭವಗಳನ್ನು ನೀಡುತ್ತಾ ಭಾವನೆಗಳಿಗೆ ಸ್ಪಂದಿಸುತ್ತಾರೆ, ಅವರು ಭಕ್ತರ ವರ್ಚಸ್ಸನ್ನು ಹೆಚ್ಚಿಸುತ್ತಾರೆ. ॥157॥ ಈ ಕತೆಗಳ ಸಾರವೇನೆಂದರೆ ಪ್ರತಿಯೊಬ್ಬನೂ ಭಗವಂತನನ್ನು ಎಲ್ಲಾ ಜೀವಿಗಳಲ್ಲೂ ಕಾಣಬೇಕು. ಇದು ಎಲ್ಲಾ ಶಾಸ್ತ್ರಗಳಲ್ಲೂ ಹೇಳಿದೆ. ಇದೇ ಇವುಗಳ ತತ್ತ್ವವೂ ಆಗಿದೆ. ॥158॥ ಈಗ ಮುಂದಿನ ಅಧ್ಯಾಯಗಳಲ್ಲಿ ಬಾಬಾರವರ ಜೀವನ ಶೈಲಿಯನ್ನು ಅರ್ಥಮಾಡಿಕೊಳ್ಳುವಿರಿ. ಅವರು ಎಲ್ಲಿ ಮಲಗುತ್ತಿದ್ದರು ಯಾವ ಜಾಗದಲ್ಲಿ ಮಲಗುತ್ತಿದ್ದರು ಇವುಗಳನ್ನು ಗಮನವಿಟ್ಟು ಕೇಳಿ. ॥159॥ ಹೇಮಾಡ ಪಂತ ಸಾಯಿಚರಣಗಳಲ್ಲಿ ಶರಣಾಗಿದ್ದಾನೆ. ಶ್ರೋತೃಗಳೇ, ಮುಂದಿನ ಚರಿತ್ರೆಯನ್ನು ಗಮನವಿಟ್ಟು ಕೇಳಿ ನಿತ್ಯವೂ ಮನನ ಮಾಡಿ ಸತ್ಫಲವನ್ನು ಪಡೆಯಿರಿ. ॥160॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ದಾಬೋಲ್ಕರ್‌ನಿಂದ ಹೆಸರಿಡದೆ ಇರುವ ಅಧ್ಯಾಯ" ಎಂಬ ಒಂಭತ್ತನೆ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

|ಸನ್ಮಂಗಳವಾಗಲಿ|

ಟಿಪ್ಪಣಿ:

1. ಮುಂದೆ ವಿವರವಾಗಿ ಕೊಟ್ಟಿದೆ.
2. ಒಮ್ಮೆ ತಾತ್ಯಾ ಸಾಹೇಬ್ ನೂಲ್ಕರ್ ಮತ್ತು ಭಾವು ಸಾಹೇಬ್ ದೀಕ್ಷಿತರವರು ಶಿರಡಿಯಿಂದ ತಮ್ಮ ಸ್ನೇಹಿತರೊಡನೆ ಹೊರಟರು. ಮಹಾರಾಜ್ ಅವರಿಗೆ ಹೇಳಿದರು. "ನಾಳೆ ಬೆಳಗ್ಗೆ ಹೊರಡಿ, ಕೋಪರ್ ಗಾಂವ್‌ನಲ್ಲಿ ಊಟಮಾಡಿ" ಹಾಗೆಯೇ ಅವರು ಹೊರಟು ಕೋಪರ್‌ಗಾಂವ್‌ಗೆ ಊಟ ತಯಾರಿಸುವಂತೆ ಸಂದೇಶ ಕಳಿಸಿದರು.

ಆದರೆ ಅವರು ಕೋಪರಗಾಂವ ತಲುಪಿದಾಗ ಊಟ ತಯಾರಿಸುತ್ತಿದ್ದುದರಿಂದ ಊಟಮಾಡಿಯೇ ರೈಲುನಿಲ್ದಾಣಕ್ಕೆ ಹೊರಟರು.ಅಲ್ಲಿ ಹೋದಾಗ ರೈಲುಗಾಡಿಯು $2^1/_2$ ಗಂಟೆ ತಡವಾಗಿದೆಯೆಂದು ತಿಳಿಯಿತು. ಅವರು ಟಾಂಗಾವನ್ನು ಹಿಂದಕ್ಕೆ ಕಳಿಸಿ ಬ್ರಾಹ್ಮಣ ಜಾತಿಯ ಟಾಂಗಾ ಚಾಲಕ ತಂದುಕೊಟ್ಟ ಆಹಾರ ಸೇವಿಸಿದರು. ಎಲ್ಲರೂ ರೈಲು ನಿಲ್ದಾಣದಲ್ಲಿಯೇ ಊಟಮಾಡಿದರು. ಅವರೆಲ್ಲರ ಊಟಮುಗಿದು 10 ನಿಮಿಷಗಳನಂತರ ರೈಲುಗಾಡಿ ಬಂದಿತು. ಈಗ ಒಂದು ವಿರುದ್ಧವಾದ ಘಟನೆ. ರಘುವೀರ ಭಾಸ್ಕರ್ ಪುರಂದರೆಯವರು ತಮ್ಮ ಸ್ನೇಹಿತರೊಡನೆ ಮಹಾರಾಜರ ದರ್ಶನಕ್ಕೆ ಹೋಗಿದ್ದರು. ಅವರು ತಾಯಿಯ ಇಚ್ಛೆಯಂತೆ ನಾಸಿಕ್‌ಗೆ ಹೋಗಲು ಬಾಬಾರ ಅನುಮತಿ ಬೇಡಿದರು. ಮಹಾರಾಜರು ಹೇಳಿದರು. "ಹೋಗು, ಎರಡು ದಿನ ಅಲ್ಲಿದ್ದು ನಂತರ ಹೊರಡು". ಅವರ ಗುಂಪು ನಾಸಿಕ್‌ಗೆ ಹೋಯಿತು. ಆ ದಿನ ಅವರ ತಮ್ಮನಿಗೆ ಬಹಳ ಜ್ವರಬಂದಿತು. ಎಲ್ಲರೂ ಭಯಭೀತರಾದರು ಮತ್ತು ಕೂಡಲೇ ಬೊಂಬಾಯಿಗೆ ಹೊರಡಲು ಯೋಚಿಸಿದರು. ಆದರೆ ಪುರಂದರೆ ಹೇಳಿದರು – "ಮಹಾರಾಜರು ಎರಡು ದಿನಗಳು ಇಲ್ಲಿಯೇ ನಿಲ್ಲಲು ಹೇಳಿದ್ದಾರೆ. ಆದ್ದರಿಂದ ಎರಡು ದಿನಗಳು ಇಲ್ಲಿಂದ ಅಲ್ಲಾಡುವುದಿಲ್ಲ" ಹಾಗೆ ಆ ಗುಂಪು ಅಲ್ಲಿಯೇ ಉಳಿಯಿತು. ಬೇರೆ ಯಾವ ದಾರಿಯೂ ಇರಲಿಲ್ಲ. ತಮ್ಮನ ಜ್ವರ ಮಾರನೆ ದಿನ ಕಡಿಮೆಯಾಯಿತು. ಮಾರನೆ ದಿನ ಎಲ್ಲರೂ ಸಂತೋಷವಾಗಿ ಬೊಂಬಾಯಿಗೆ ಹೋದರು.

3. ಶಿರಡಿಯಿಂದ ಸುಮಾರು $1^1/_2$ ಮೈಲು ದೂರದಲ್ಲಿರುವ ಹಳ್ಳಿ.

4. ಆ ಮಹನೀಯನೊಡನೆ.

5. ಇದು ಲೇಖಕನ ಸ್ವಂತ ಅನುಭವ. ಅವನು ಕುಟುಂಬ ಸಮೇತ ಹೊರಡಲು ತಯಾರಾದನು. ಮಹಾರಾಜ್ ಹೇಳಿದರು – "ಸ್ವಲ್ಪ ಊಟಮಾಡಿ ಮಧ್ಯಾಹ್ನ ಹೊರಡಿ" ಎಂದು. ಆದರೆ ಮೂರ್ಖನಾಗಿ ಎತ್ತಿನ ಗಾಡಿಯಲ್ಲಿ ರೈಲು ನಿಲ್ದಾಣಕ್ಕೆ ಹೊರಟನು. ರೈಲನ್ನು ಹಿಡಿಯುವ ಅವಸರದಲ್ಲಿ ಗಾಡಿಯು ಬಹಳ ವೇಗವಾಗಿತ್ತು, ಎಡಗಡೆಯ ಚಕ್ರವು ಅಕಸ್ಮಾತ್ತಾಗಿ ಕಳಚಿ ಮೋರಿಗೆ ಬಿತ್ತು, ಸುದೈವ ವಶಾತ್ ಗಾಡಿಯು ಮುರಿಯಲಿಲ್ಲ ಮತ್ತು ಯಾರಿಗೂ ಪೆಟ್ಟಾಗಲಿಲ್ಲ. ಆದರೆ ಚಕ್ರ ಸರಿ ಮಾಡಿ ಹಾಕುವ ವೇಳೆಗೆ ರೈಲು ಗಾಡಿ ಹೊರಟುಹೋಗಿತ್ತು, ಅವರು ಕೋಪರಗಾಂವನಲ್ಲಿ ಒಂದು ಖಾನಾವಳಿಗೆ ಹೋಗಿ ಊಟಮಾಡಿ ಮುಂದಿನ ರೈಲುಗಾಡಿ ಹಿಡಿದು ಬೊಂಬಾಯಿಗೆ ಹೋಗಬೇಕಾಯಿತು.

6. ಒಬ್ಬ ಬ್ರಾಹ್ಮಣ ಸಂನ್ಯಾಸಿ, ಬ್ರಹ್ಮಚರ್ಯಪಾಲಿಸುತ್ತಿರುವವನು, ಒಬ್ಬ ಋಷಿ ಅಥವಾ ಶಾಸ್ತ್ರಾಧ್ಯಯನ ಮಾಡುವ ವಿದ್ಯಾರ್ಥಿ.

7. ಹುಣ್ಣಿಮೆಯಿಂದ ಪ್ರಾರಂಭಿಸಿ 16 ದಿನಗಳು ಮಾಡುವ ಧಾರ್ಮಿಕ ವಿಧಿ. ಅನಂತರ ಕೇವಲ 16 ತುತ್ತು ಮೊದಲ ದಿನನಂತರ ದಿನಕ್ಕೊಂದರಂತೆ ಕಡಿಮೆಮಾಡುತ್ತ ಕೊನೆಯದಿನ ಏನೂ ಇಲ್ಲದೆ ಇರುವುದು.

8. ಕಾಯಾ, ವಾಚಾ, ಮನಸಾ.

9. ಸಂಸಾರವನ್ನು ತೊರೆದು ಕಾಡಿಗೆ ಹೋಗುವುದು.

10. ಅದು ಪತ್ನಿ ಮತ್ತು ಸಂತತಿಗೆ.

11. ಬ್ರಹ್ಮಯಜ್ಞ – ವೇದಪಠನ; ಪಿತೃಯಜ್ಞ – ಪಿಂಡಪ್ರದಾನ ಮಾಡುವುದು; ದೇವಯಜ್ಞ – ದೇವತೆಗಳಿಗೆ ಹವಿಸ್ಸು ನೀಡುವುದು; ಭೂತಯಜ್ಞ – ಎಲ್ಲಾ ಜೀವಿಗಳಿಗೆ ಆಹಾರನೀಡುವುದು; ಅತಿಥಿ ಯಜ್ಞ – ಮನೆಬಾಗಿಲಿಗೆ ಬಂದ ಅತಿಥಿಗಳಿಗೆ ಸತ್ಕಾರ ಮಾಡುವುದು.

12. ತನ್ನ ಭಕ್ತರಿಗಾಗಿ.

13. ಸತ್ಕರ್ಮದ ಪುಣ್ಯಫಲ.

14. ವಿಗ್ರಹಾರಾಧಕರು.

15. ಬಾಬಾರವರ ಚಿತ್ರ

16. ತಂದೆಯ ಇಚ್ಛೆ.

17. ರಘುವೀರ ಭಾಸ್ಕರ ಪುರಂದರೆ ಬೊಂಬಾಯಿಯ ಬಾಂದ್ರಾದಲ್ಲಿದ್ದವರು.

18. ಶ್ರೀಮತಿ ತರ್ಖಡ.

19. ಬದನೆಕಾಯಿ ಸುಟ್ಟು ಸಿಪ್ಪೆ ತೆಗೆದು ಒಗ್ಗರಣೆ, ಮೊಸರು ಹಾಕುವುದು.

20. ತಟ್ಟೆ, ಹರಿವಾಣ.

21. ಗುಂಡಾದ ಸಿಹಿ ತಿಂಡಿ.

22. ಬಾಳಾರಾಮ್ ಮಾನಕರ್ – ಬಾಬಾರ ಭಕ್ತರು.

23. ತರ್ಖಡರವರು.

24. ಸೂತಕ – ಅಂದರೆ ಮನೆಯವರು ತೀರಿಹೋದಾಗ 13 ದಿನಗಳು ಯಾವುದೇ ಧಾರ್ಮಿಕ ಶುಭಕಾರ್ಯಗಳನ್ನು ಮಾಡುವುದಿಲ್ಲ, ಆಷಾಢದ ಸಮಯ.

25. ಭಕ್ತಿಯಿಂದ ಮತ್ತು ಭಕ್ತಿಗಾಗಿ ಕಾತರಿಸುವ.



## ಅಧ್ಯಾಯ - 10

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



# "ಸಾಯಿ ಸಮರ್ಥರ ಅವತಾರ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸಕಲ ಜನರಿಗೂ ಒಳ್ಳೆಯದನ್ನೇ ಮಾಡಲು ನಿರತನಾದವನನ್ನು, ಶಾಶ್ವತವಾಗಿ ಬ್ರಹ್ಮನಲ್ಲಿ ನೆಲೆಸಿರುವವನೂ ಆದವನನ್ನು, ನಿಮ್ಮ ಅಂತರಂಗದಲ್ಲಿ ಭಕ್ತಿಪೂರ್ವಕವಾಗಿ ಸದಾ ನೆನೆಸಿರಿ. ॥1॥ ಕೇವಲ ಭಗವತ್ ಸ್ಮರಣೆ ಮಾತ್ರದಿಂದಲೇ ಜೀವನ್ಮರಣ ಚಕ್ರದಿಂದ ಪಾರಾಗಬಹುದು. ಇದು ಒಂದು ಚಿಕ್ಕಾಸನ್ನೂ[1] ಖರ್ಚುಮಾಡಬೇಕಾಗಿಲ್ಲದ ಉತ್ತಮ ಸಾಧನೆ. ॥2॥ ಪ್ರಯತ್ನಪಟ್ಟಲ್ಲಿ ಪ್ರತಿಯೊಬ್ಬರೂ ಅತಿ ಸುಲಭವಾಗಿ ಸಾಕಷ್ಟು ಫಲ ಪಡೆಯಬಹುದು. ಎಲ್ಲ ಇಂದ್ರಿಯಗಳೂ ಸರಿಯಾಗಿರುವಾಗಲೇ ಪ್ರತಿ ಕ್ಷಣವನ್ನೂ ಈ ರೀತಿ ಉಪಯೋಗಿಸಬಹುದು. ॥3॥ ಬೇರೆಲ್ಲ ದೇವತೆಗಳು ಮಾಯೆಯೇ. ಪರಮಾತ್ಮನೊಬ್ಬನೇ ಗುರು. ನಿನ್ನ ಶ್ರದ್ಧೆಯನ್ನು ಅವನ ಚರಣಗಳಲ್ಲಿ ಇಟ್ಟಲ್ಲಿ ಅವನು ವಿಧಿ ಬರಹವನ್ನೇ ಬದಲಾಯಿಸಬಲ್ಲನು. ॥4॥ ಪರಿಶುದ್ಧವಾದ ಗುರುಸೇವೆ ಮಾಡಿದಲ್ಲಿ ಸಂಸಾರ ಬಂಧನವು ಪೂರ್ಣವಾಗಿ ನಶಿಸಿಹೋಗುವುದು. ಅದಕ್ಕಾಗಿ ತರ್ಕಶಾಸ್ತ್ರ ಕಲಿಯಬೇಕಿಲ್ಲ. ಅಂತಹ ವಿಜ್ಞಾನಗಳನ್ನು ತಿಳಿಯುವ ಕಷ್ಟವನ್ನು ಪಡಬೇಕಾಗಿಲ್ಲ. ॥5॥ ಶ್ರದ್ಧಾವಂತ ಭಕ್ತನಿಗೆ ಗುರುವೇ ನಿಜವಾದ ನಾವಿಕನಾಗಿ ತಾಪತ್ರಯ[2]ಗಳೆಂಬ ಸಂಸಾರಸಾಗರವನ್ನು ದಾಟಿಸುತ್ತಾನೆ. ॥6॥ ಸಾಗರವನ್ನು ದಾಟಲು ಇಚ್ಛಿಸುವವನು ನಾವಿಕನಲ್ಲಿ ನಂಬುಗೆ ಇಡಬೇಕು. ಅದೇ ರೀತಿ ಸಂಸಾರಸಾಗರವನ್ನು ದಾಟಲು

ಗುರುವಿನಲ್ಲಿ ಶ್ರದ್ಧೆ ಇಡಬೇಕು. ॥7॥ ಭಕ್ತನ ಭಕ್ತಿ, ಶ್ರದ್ಧೆಗಳನ್ನು ನೋಡಿದಾಗ, ಅವನು ಮೋಕ್ಷದ, ಆನಂದದ ಸಂಪತ್ತನ್ನೆಲ್ಲ ಅಂಗೈಯಲ್ಲಿಯೇ ಅತಿ ಸುಲಭವಾಗಿ ನೀಡುವನು. ॥8॥ ಅವನ ದರ್ಶನದಿಂದ ಮನಸ್ಸಿಗೆ ಅಂಟಿಕೊಂಡಿದ್ದ ಕೆಟ್ಟ ಸ್ವಭಾವಗಳೆಲ್ಲವೂ ನಶಿಸಿ, ಎಲ್ಲಾ ವಾಸನೆಗಳಿಂದ ವಿರಕ್ತಿ ಉಂಟಾಗಿ ಪೂರ್ವಜನ್ಮಗಳ ಪಾಪಕರ್ಮಗಳ ಫಲವು ಮಾಯವಾಗುತ್ತದೆ. ನಾವೆಲ್ಲರೂ ಅವನನ್ನು ಭಜಿಸೋಣ. ॥9॥ಎಂಟನೆಯ ಅಧ್ಯಾಯದಲ್ಲಿ ಮಾನವ ಜನ್ಮದ ಉದ್ದೇಶವನ್ನು ವಿವರವಾಗಿ ತಿಳಿಸಿದೆ. ಒಂಭತ್ತನೆಯದರಲ್ಲಿ ಭಿಕ್ಷಾಟನೆಯ ನಿಗೂಢ ಮತ್ತು ಆಳವಾದ ರಹಸ್ಯವನ್ನು ವಿವರಿಸಿದೆ. ॥10॥ ಬಾಯಜಾಬಾಯಿಯ ತರಕಾರಿಗಳು ಮತ್ತು ಭಕ್ತಿ (ಆಕೆ ಅವರಿಗೆ ತಿನ್ನಿಸುತ್ತಿದ್ದ ರೀತಿ) ಕುಶಾಲಚಂದನ ಯೋಗಕ್ಷೇಮ, ಬಾಬಾರವರು ತಾತ್ಯಾ ಮತ್ತು ಮ್ಹಾಳಸಾಪತಿಯವರೊಡನೆ ಮಲಗುವುದು, ಇವುಗಳನ್ನು ಸುಂದರವಾಗಿ ವಿವರಿಸಿದೆ. ॥11॥ ಓ ಶ್ರೋತೃಗಳೇ, ಈಗ ಗಮನವಿಟ್ಟು ಕೇಳಿ – ಬಾಬಾರವರ ಮುಂದಿನ ಜೀವನ. ಅವರು ಹೇಗೆ ಬದುಕಿದರು, ಎಲ್ಲಿ ಮಲಗುತ್ತಿದ್ದರು, ಹೇಗೆ ಎಲ್ಲದರಲ್ಲೂ ಸರ್ವವ್ಯಾಪಿಯಾಗಿದ್ದರು. ॥12॥ ಆಜೀವಪರ್ಯಂತ ಬ್ರಹ್ಮಚರ್ಯ ಪಾಲಿಸಿದರು. ಹಿಂದೂ ಮತ್ತು ಮುಸ್ಲಿಮರಿಬ್ಬರಿಗೂ ತಾಯಿ ಆಗಿದ್ದರು. ಸಹಜ ಶತ್ರುಗಳ ಅಭಿಮಾನವನ್ನೂ ಗಳಿಸಿದ್ದರು. ಅವರು ನಿರ್ಭಯರಾಗಿ ಪ್ರೀತಿ ತುಂಬಿಕೊಂಡು ಓಡಾಡಬಲ್ಲವರಾಗಿದ್ದರು. ॥13॥ ಅವರ ನಿತ್ಯ ದಿನಚರಿಯನ್ನು ತಿಳಿಸಿದ್ದೇನೆ. ಈಗ ಅವರು ಜೀವಿಸಿದ ರೀತಿ ಮತ್ತು ಎಲ್ಲಿ ಮಲಗುತ್ತಿದ್ದರು, ಎಂಬುದನ್ನು ತಿಳಿಯೋಣ. ಓ ಶ್ರೋತೃಗಳೇ, ಗೌರವವಿಟ್ಟು ಕೇಳಿರಿ. ॥14॥ ನಾಲ್ಕು ಮೊಳ ಉದ್ದ ಮತ್ತು ಒಂದು ಗೇಣು (9 ಇಂಚು) ಅಗಲದ ಒಂದು ಮರದ ಹಲಗೆಯನ್ನು ಉಯ್ಯಾಲೆಯ ರೀತಿಯಲ್ಲಿ ನೇತಾಡಿಸುತ್ತಿದ್ದರು. ಅದನ್ನು ಎರಡೂ ತುದಿಯಲ್ಲಿ ಕೆಲವು ಹಗ್ಗಗಳಿಂದ ಛಾವಣಿಗೆ ಕಟ್ಟಲಾಗಿತ್ತು. ॥15॥ ಅಂತಹ ಹಲಗೆಯ ಮೇಲೆ ಬಾಬಾ ಮಲಗುತ್ತಿದ್ದರು. ಮಣ್ಣಿನ ಹಣತೆಗಳನ್ನು ತಲೆಯ ಕಡೆ ಮತ್ತು ಕಾಲಿನ ಕಡೆ ಉರಿಸುತ್ತಿದ್ದರು. ಅವರು ಯಾವಾಗ ಮೇಲೆ ಹತ್ತುತ್ತಿದ್ದರು ಮತ್ತು ಯಾವಾಗ ಇಳಿಯುತ್ತಿದ್ದರು ಯಾರಿಗೂ ತಿಳಿಯದು. ಅವರ ಚಲನವಲನಗಳೆಲ್ಲವೂ ಕಲ್ಪನಾತೀತವಾದವು. ॥16॥ ಅವರು ಅದರ ಮೇಲೆ ತಲೆ ಬಗ್ಗಿಸಿ ಕುಳಿತುಕೊಳ್ಳುತ್ತಿದ್ದರು. ಕೆಲವು ಸಲ ಅದರ ಮೇಲೆ ಮಲಗುತ್ತಿದ್ದರು. ಆದರೆ ಅವರು ಯಾವಾಗ ಮೇಲೆ ಹತ್ತಿದರು ಯಾವಾಗ ಇಳಿದರು ಎಂಬುದು ಮಾತ್ರ ಯಾರಿಗೂ ತಿಳಿಯದು. ॥17॥ ಹಗ್ಗಗಳಿಂದ ಕಟ್ಟಿದ್ದ ಹಲಗೆಯು ಬಾಬಾರವರ ತೂಕವನ್ನು ಹೇಗೆ ತಡೆಯಲು ಸಾಧ್ಯ? ಆದರೆ ಅವರು ಮಹಾನ್ ಸಿದ್ಧಿಗಳನ್ನು ಗಳಿಸಿದ್ದರಿಂದ ಹಲಗೆಯು ಕೇವಲ ಒಂದು ನೆಪಮಾತ್ರ. ॥18॥ ಒಂದು ಸಣ್ಣ ಧೂಳಿನ ಕಣವೂ ಕಣ್ಣನ್ನು ಚುಚ್ಚಬಹುದು. ಆದರೆ ಅಣಿಮಾ (ಗಾತ್ರ ಅಣುವಿನಷ್ಟಾಗುವ) ಸಿದ್ಧಿಯನ್ನು ಗಳಿಸಿದವರು ಸುಲಭವಾಗಿ ಬಚ್ಚಿಟ್ಟುಕೊಳ್ಳಬಹುದು. ಬಾಬಾರವರು ಸುಲಭವಾಗಿ ನೊಣ, ಕ್ರಿಮಿ ಅಥವಾ ಇರುವೆಯಂತೆ ಓಡಾಡಲು ಸಾಧ್ಯವಿತ್ತು. ॥19॥ ಅಣಿಮಾ ಸಿದ್ಧಿಯನ್ನು ಸಾಧಿಸಿದವರಿಗೆ ಒಂದು ನೊಣವಾಗಲು ಸಮಯಬೇಕಾಗುವುದೇ?

ಅವರು ಆಕಾಶದಲ್ಲಿ ಆಧಾರವಿಲ್ಲದೆಯೇ ನೇತಾಡುತ್ತಿರಬಹುದು. ಅವರು ಹಲಗೆಗಾಗಿ ಏಕೆ ಚಿಂತಿಸಬೇಕು? ॥20॥ ಅಷ್ಟಸಿದ್ಧಿಗಳೂ[4] (ಅಣಿಮ, ಮಹಿಮ, ಲಘಿಮ ಇತ್ಯಾದಿ) ನವನಿಧಿಗಳ ರೀತಿಯಲ್ಲಿ ಸೇವಿಸಲು ಕೈಜೋಡಿಸಿ ನಿಂತಿರುವಾಗ ಈ ಹಲಗೆ ಕೇವಲ ಒಂದು ನಟನೆ. ॥21॥ ಕ್ರಿಮಿ, ಇರುವೆ, ಹಂದಿ, ನಾಯಿ, ಪ್ರಾಣಿ, ಪಕ್ಷಿ, ಮಾನವ, ರಾಜ, ಭಿಕ್ಷುಕ, ದೊಡ್ಡದು ಅಥವಾ ಸಣ್ಣದು ಎಲ್ಲವನ್ನೂ ಸಮಭಾವದಿಂದ ನೋಡುತ್ತಿದ್ದರು. ॥22॥ ಅವರು ಶಿರಡಿಯಲ್ಲೇ ವಾಸಮಾಡಿದ್ದರೂ 3½ ಮೊಳ್[5] ದೇಹದಲ್ಲಿದ್ದಂತೆ ಕಂಡರೂ ಪ್ರತಿಯೊಬ್ಬರ ಹೃದಯದಲ್ಲಿಯೂ ನೆಲಸಿದ್ದರು. ಪುಣ್ಯದ ಆಗರವೇ[6] ಆಗಿದ್ದರು ಮಹಾರಾಜರು. ॥23॥ ಅಂತರಂಗದಲ್ಲಿ ಅವರು ನಿರ್ಮೋಹಿಯಾಗಿ ಯಾವುದರಲ್ಲೂ ಸಮಾವೇಶಗೊಂಡಿರಲಿಲ್ಲ. ಆದರೆ ಹೊರ ನೋಟಕ್ಕೆ ತಮ್ಮ ಸುತ್ತಲೂ ಜನರನ್ನು ಇಚ್ಛಿಸುತ್ತಿದ್ದರು. ಅಂತರಂಗದಲ್ಲಿ ಯಾವುದೇ ಆಸೆ ಇಲ್ಲದಿದ್ದರೂ ಹೊರನೋಟಕ್ಕೆ ಭಕ್ತರಿಂದ ಬಂಧಿತರಾಗಿದ್ದರು. ॥24॥ ಅಂತರಂಗದಲ್ಲಿ ಪೂರ್ಣವಾಗಿ ಆಶಾರಹಿತರಾಗಿದ್ದರೂ ಹೊರನೋಟಕ್ಕೆ ಭಕ್ತರ ಆಸೆಗಳನ್ನು ತೃಪ್ತಿಪಡಿಸುವಂತೆ ತೋರುತ್ತಿತ್ತು. ಅವರ ಮನಸ್ಸು ಒಳಗೆ ಶಾಂತಿನಿವಾಸವಾಗಿತ್ತು. ಆದರೆ ಅವರ ವರ್ತನೆ ಆತುರದ ಭಾವಗಳಿಂದ ಕೂಡಿತ್ತು. ॥25॥ ತಮ್ಮ ಅಂತರಂಗದಲ್ಲಿ ಪರಬ್ರಹ್ಮದ ಆನಂದದಲ್ಲಿ ತಲ್ಲೀನರಾಗಿದ್ದರು. ಆದರೆ ಹೊರಗೆ ಆಸುರಿ ಸ್ವಭಾವ ಪ್ರಕಟಿಸುತ್ತಿದ್ದರು. ಮೇಲ್ನೋಟಕ್ಕೆ ಅವರು ಲೌಕಿಕ ವಿಷಯಗಳಲ್ಲಿ ಮಗ್ನರಾಗಿದ್ದರು. ಆದರೆ ಒಳಗಡೆ ಅವರಿಗೆ ಏಕತೆ ಬಗೆಗೆ ಒಲವಿತ್ತು. ॥26॥ ಕೆಲವು ಸಲ ಅವರ ಕಣ್ಣುಗಳಲ್ಲಿ ವಾತ್ಸಲ್ಯದ ನೋಟವಿರುತ್ತಿತ್ತು ಆದರೆ ಕೆಲವು ಸಲ ಕೈಯಲ್ಲಿ ಕಲ್ಲು ಹಿಡಿದು ಹೊಡೆಯಲು ಅಟ್ಟಿಸಿಕೊಂಡು ಹೋಗುತ್ತಿದ್ದರು. ಕೆಲವು ಸಲ ಬೈಯುತ್ತಿದ್ದರು, ಶಾಪವಿಡುತ್ತಿದ್ದರು. ಕೆಲವು ಸಲ ಪ್ರೀತಿಯಿಂದ ತಬ್ಬಿಕೊಳ್ಳುತ್ತಿದ್ದರು. ॥27॥ ಕೆಲವು ಸಲ ಅವರು ಪೂರ್ಣ ಶಾಂತಿಯಿಂದ ಮೃದುವಾಗಿ ಇರುವರು. ತಾಳ್ಮೆ ಮತ್ತು ಸಹನೆಯಿಂದ ಯಾವಾಗಲೂ ಧ್ಯಾನದ ಸ್ಥಿತಿಯಲ್ಲಿರುವರು. ಆತ್ಮಸಾಕ್ಷಾತ್ಕಾರ ಪಡೆದವರು ಮತ್ತು ಆತ್ಮಚಿಂತನದಲ್ಲೇ ಸದಾ ನಿರತರಾಗಿದ್ದು ಭಕ್ತರಿಗೆ ಮೆಚ್ಚುಗೆಯಾಗಿದ್ದರು. ॥28॥ ಅವರು ಒಂದು ಆಸನದಲ್ಲಿ (ಯೋಗಿಯ) ಕುಳಿತು ಧ್ಯಾನಸ್ಥರಾಗುವರು. ಅಲ್ಲಿ ಇಲ್ಲಿ ಓಡಾಡುತ್ತಿರಲಿಲ್ಲ. ಅವರ ಒಂದೇ ದಂಡವು ಸಟಕಾ ಆಗಿತ್ತು. ಅವರು ಸ್ಥಿತಪ್ರಜ್ಞರಾಗಿ ಯಾರಮೇಲೂ ದೂರು ಹೊರಿಸುತ್ತಿರಲಿಲ್ಲ. ॥29॥ ಅವರಿಗೆ ಕೀರ್ತಿಯ ಅಥವಾ ಧನದ ಆಸೆ ಇರಲಿಲ್ಲ. ಭಿಕ್ಷೆಬೇಡಿ ಜೀವಿಸುತ್ತಿದ್ದರು. ಯೋಗದಲ್ಲಿ ಪಾಂಡಿತ್ಯವನ್ನು ಪಡೆದಿದ್ದರು. ಅದೇ ರೀತಿ ಜೀವನ ನಡೆಸುತ್ತಿದ್ದರು. ॥30॥ ನಿಜವಾಗಿಯೂ ಅವರು ಸಂನ್ಯಾಸಿಯ ಪೋಷಾಕು ಧರಿಸುತ್ತಿದ್ದರು. ಅವರ ದಂಡವು ಸಟಕಾ ಆಗಿತ್ತು. ಅವರು ಸದಾ 'ಅಲ್ಲಾ ಮಾಲಿಕ್' ಎಂಬ ಪದಗಳನ್ನು ನುಡಿಯುತ್ತಿದ್ದರು. ಅವರು ಸದಾ ತಮ್ಮ ಭಕ್ತರಿಗೆ ಪ್ರೀತಿಯನ್ನು ವರ್ಷಿಸುತ್ತಿದ್ದರು. ॥31॥ ಇವು ಮಾನವಾಕಾರ ತಳೆದಿರುವ ಸಾಯಿಯ ಗುಣಗಳ ಪ್ರಕಟರೂಪಗಳು. ಅನಿರೀಕ್ಷಿತವಾಗಿ ಈ ಖಜಾನೆಯು ನಮ್ಮ ಪೂರ್ವಕರ್ಮಗಳ ಪುಣ್ಯಫಲದಿಂದ ದೊರಕಿದೆ. ॥32॥ ವಿಧಿಯ ವಿಧಾನಗಳು ಅರ್ಥವಾಗದ ಮೂರ್ಖರು, ಅಜ್ಞಾನಿಗಳು,

ಭಾಗ್ಯವಂತರು, ಅವನಿಂದ ಆಶೀರ್ವದಿಸಲ್ಪಟ್ಟವರು. ಅವರೆಲ್ಲ ನಿಜವಾಗಿಯೂ ಅವರನ್ನು ಹೇಗೆ ತಲುಪಿದರು? ॥33॥ ಸಾಯಿಯು ಆತ್ಮಸಾಕ್ಷಾತ್ಕಾರದ ಗಣಿ. ಸಾಯಿಯು ಪೂರ್ಣ ಶಾಂತಸ್ವರೂಪ. ಭವಸಾಗರವನ್ನು ದಾಟಲು ಅವರನ್ನು ಗಟ್ಟಿಯಾಗಿ ಹಿಡಿಯಿರಿ. ॥34॥ ನಿಜವಾಗಿಯೂ ಬ್ರಹ್ಮನಿಂದ ಸ್ತಂಭದವರೆಗೆ ವ್ಯಾಪಿಸಿರುವ ಆ ಅಪರಿಮಿತ, ಶಾಶ್ವತ, ಅನಂತ ಸ್ವರೂಪದ ಅವತಾರವೇ ಬಾಬಾರವರು. ॥35॥ ಕಲಿಯುಗದಪರಿಮಿತಿಯು 4 ಲಕ್ಷ 32 ಸಾವಿರ ವರ್ಷಗಳು. ಇಲ್ಲಿಗೆ ಪ್ರಾರಂಭದಿಂದ ಸುಮಾರು 5 ಸಾವಿರ ವರ್ಷಗಳು ಕಳೆದಿವೆ. ಬಾಬಾರವರು ಆಗ ಅವತರಿಸಿದರು. ॥36॥ ಇಲ್ಲಿ ಶ್ರೋತೃಗಳು ಸಂದೇಹ ಪಡಬಹುದು. ಅವರ ಜನ್ಮ ದಿನಾಂಕ ತಿಳಿಯದೆಯೇ ನಾನು ಈ ರೀತಿ ತೀರ್ಮಾನಕ್ಕೆ ಬಂದಿದ್ದೇನೆ. ಆದ್ದರಿಂದ ಗೌರವಪೂರ್ವಕವಾಗಿ ಕೇಳಿರಿ. ॥37॥ ಅವರ ಪುನರ್ದರ್ಶನದ ನಂತರ ಶಿರಡಿಯಲ್ಲೇ ನೆಲಸಲು ನಿಶ್ಚಯಿಸಿ ಬಾಬಾರವರು 60 ವರ್ಷಗಳ ಕಾಲ ಸರ್ವಸಂಗ ಪರಿತ್ಯಾಗಿಯಾಗಿ ಬದುಕಿದರು. ॥38॥ ಅವರು ಶಿರಡಿಯಲ್ಲಿ ಮೊದಲಬಾರಿಗೆ ಕಾಣಿಸಿಕೊಂಡಿದ್ದು 16 ವರ್ಷಗಳ ಬಾಲಕನಾಗಿ. ಆ ಸಮಯದಲ್ಲಿ 3 ವರ್ಷಗಳ ಕಾಲ ಅಲ್ಲಿದ್ದರು. ॥39॥ ಅಲ್ಲಿಂದ ಎಲ್ಲಿಗೆ ಅದೃಶ್ಯರಾದರು? ಅವರು ಮತ್ತೆ ಕಂಡಿದ್ದು ದೂರದ ನಿಜಾಮನ ರಾಜ್ಯದಲ್ಲಿ. ಅಲ್ಲಿಂದ ಒಂದು ಮದುವೆಯ ದಿಬ್ಬಣದ ಜೊತೆಯಲ್ಲಿ ಶಿರಡಿಗೆ ಹಿಂತಿರುಗಿದರು. ಶಿರಡಿಯಲ್ಲೇ ಶಾಶ್ವತವಾಗಿ ನೆಲೆಸಿದರು. ॥40॥ ಆಗ ಅವರಿಗೆ 20 ವರ್ಷಗಳು. ಅಲ್ಲಿಂದಾಚೆಗೆ ಅವರು ಶಾಶ್ವತವಾಗಿ ಶಿರಡಿಯ ಜೊತೆಯಲ್ಲಿಯೇ ಬಾಂಧವ್ಯ ಬೆಳಸಿದರು. ಅಲ್ಲಿ ಅವರು 60 ವರ್ಷಗಳನ್ನು ಕಳೆದರು. ಇದು ಎಲ್ಲರಿಗೂ ತಿಳಿದ ವಿಷಯ. ॥41॥ ಶಕೆ 1840 (ಕ್ರಿ, ಶ. 1918)ರಲ್ಲಿ ಅಶ್ವಿನಿ ಮಾಸದಲ್ಲಿ ಶುಕ್ಲಪಕ್ಷದ 10ನೆಯ ದಿನ ಮಂಗಳಕರ ಪವಿತ್ರವಾದ ದಸರೆಯ ದಶಮಿಯ ದಿನ ಬಾಬಾರವರು ದೇಹವನ್ನು ತ್ಯಜಿಸಿದರು. ॥42॥ ಈ ರೀತಿ 80 ವರ್ಷಗಳ ಕಾಲ ಬದುಕಿದ್ದರಿಂದ ಬಹುಶಃ ಬಾಬಾರವರು 1760 ಅಂದರೆ ಕ್ರಿ, ಶ. 1838ರಲ್ಲಿ ಜನಿಸಿದ್ದರೆಂದು ಊಹಿಸಬಹುದು. ॥43॥ ಮಹಾನ್ ಆತ್ಮಗಳು ದೇಶ, ಕಾಲಗಳನ್ನು ಮೀರಿದವರು. ಅವರ ಜೀವಿತಕಾಲವನ್ನು ದೃಢವಾಗಿ ನಿಗದಿಪಡಿಸಲಾಗುತ್ತದೆಯೇ? ಇದು ದುಸ್ಸಾಧ್ಯವಾದ ಕೆಲಸ. ॥44॥ ಮಹಾನ್ ಆತ್ಮಗಳು ತಮ್ಮದೇ ಆದ ವ್ಯೂಹದಲ್ಲಿ ಇರುತ್ತಾರೆ. ಅವರು ಹುಟ್ಟುವುದೂ ಇಲ್ಲ ಸಾಯುವುದೂ ಇಲ್ಲ. ಸೂರ್ಯನು ನಿಜವಾಗಿಯೂ ಅಚಲನಾಗಿರುವಾಗ ಹುಟ್ಟುವನೇನು ಅಥವಾ ಮುಳುಗುವನೇನು? ॥45॥ ಶಕೆ 1603 (ಕ್ರಿ, ಶ. 1681)ರಲ್ಲಿ ರಾಮದಾಸರು ಸಮಾಧಿಹೊಂದಿದರು ಮತ್ತು ಎರಡು ಶತಕಗಳವರೆಗೆ ಯಾವ ಮಹಾತ್ಮನೂ ಹುಟ್ಟಲಿಲ್ಲ. ॥46॥ ಆ ದಿನಗಳಲ್ಲಿ, ಭಾರತವನ್ನು ಮುಸ್ಲಿಮರು ಆಕ್ರಮಿಸಿದ್ದು ಹಿಂದು ರಾಜರನ್ನು ನಿಗ್ರಹಿಸಿದ್ದರು. ಭಕ್ತಿಮಾರ್ಗ ಮಾಯವಾಗಿತ್ತು ಮತ್ತು ಜನರಿಗೆ ಧರ್ಮದಲ್ಲಿ ಶ್ರದ್ಧೆ ಕಡಿಮೆಯಾಗಿತ್ತು. ॥47॥ ಅಂತಹ ಕಾಲದಲ್ಲಿ ರಾಮದಾಸರು ಜನಿಸಿದರು, ಶಿವಾಜಿಯ ಸಹಾಯದಿಂದ ಅವರು ದೇಶವನ್ನು ಮುಸ್ಲಿಮರಿಂದ ರಕ್ಷಿಸಿದರು ಮತ್ತು ಗೋಬ್ರಾಹ್ಮಣರಿಗೆ ಆಶ್ರಯ ನೀಡಿದರು. ॥48॥ ಕೇವಲ 2 ಶತಕಗಳೂ

ಕಳೆದಿರಲಿಲ್ಲ ಮತ್ತೆ ಶಾಂತಿಯು ಒಡೆಯಿತು. ಹಿಂದು ಮುಸ್ಲಿಮರ ಮಧ್ಯೆ ವೈರತ್ವವಿತ್ತು, ಅದನ್ನು ಬಾಬಾರವರು ನಿರ್ಮೂಲ ಮಾಡಿದರು. ॥49॥ "ರಾಮ ಮತ್ತು ರಹೀಮ ಇಬ್ಬರೂ ಒಂದೇ, ಕಿಂಚಿತ್ತೂ ಭೇದವಿಲ್ಲ. ಆಗ ಭಕ್ತಿಗೆ ಅಡೆತಡೆ ಎಲ್ಲಿ ಇರುತ್ತೆ? ಪರಸ್ಪರ ವ್ಯತಿರಿಕ್ತವಾದ ವರ್ತನೆ ಏಕೆ ಇರಬೇಕು? ॥50॥ "ಓ ತಿಳಿಗೇಡಿ ಮಕ್ಕಳೇ! ಹಿಂದೂ ಮತ್ತು ಮುಸ್ಲಿಮರು ಒಟ್ಟಾಗಿ ನಿಮ್ಮ ನಿಮ್ಮ ಮಾರ್ಗದಲ್ಲಿ ನಿಶ್ಚಲವಾಗಿರಿ. ಒಳ್ಳೆಯ ಯೋಚನೆಗಳನ್ನು ಹೊಂದಿರಿ. ಆಗ ಮಾತ್ರ ನೀವು ದಾಟಿ ಇನ್ನೊಂದು ದಡಕ್ಕೆ ಹೋಗಲು ಸಾಧ್ಯ. ॥51॥ "ವಾದ ಮಾಡುವುದು ಒಳ್ಳೆಯದಲ್ಲ. ಒಬ್ಬರು ಮತ್ತೊಬ್ಬರ ಮೇಲೆ ಸ್ಪರ್ಧಿಸಬೇಡಿ. ಸದಾ ಕಾಲ ನಿಮ್ಮ ನಿಮ್ಮ ಸ್ವತಃ (ಶಾಶ್ವತ) ಒಳ್ಳೆಯದಕ್ಕಾಗಿ ಯೋಚಿಸಿರಿ, ಪರಮಾತ್ಮ ನಿಮ್ಮನ್ನು ರಕ್ಷಿಸುವನು. ॥52॥ ಯೋಗಾಭ್ಯಾಸ ಮಾಡುವುದು, ವಿಧಿವಿಧಾನಗಳನ್ನು ಆಚರಿಸುವುದು, ತಪಸ್ಸು ಮಾಡುವುದು, ಜ್ಞಾನಾರ್ಜನೆ, ಇವೆಲ್ಲವೂ ಪರಮಾತ್ಮನನ್ನು ಪಡೆಯುವ ಮಾರ್ಗಗಳು. ಇವುಗಳನ್ನು ಮಾಡಿದರೂ ಭಗವದ್ ಕೃಪೆಯಿಲ್ಲದೇ ಇದ್ದಲ್ಲಿ ಅಷ್ಟು ಜನ್ಮ ವ್ಯರ್ಥ. ॥53॥ "ಯಾರಾದರೂ ನಿನಗೆ ಯಾವ ರೀತಿಯಲ್ಲಾದರೂ ತೊಂದರೆ ಕೊಟ್ಟರೆ ನೀನು ತಿರುಗಿ ಬೀಳಬಾರದು. ಸಾಧ್ಯವಾದಲ್ಲಿ ಪರೋಪಕಾರ ಮಾಡು" ಇದೇ ಅವರ ಬೋಧನೆಯ ಸಾರ. ॥54॥ ತಮ್ಮ ಒಳಿತಿಗಾಗಿಯೇ, ತಮ್ಮ ಜೀವನದ ಪರಮ ಸುಖಕ್ಕಾಗಿ ಇದು ಎಲ್ಲಾ ಮತಾಭಿಪ್ರಾಯಗಳಿಗೂ ಒಪ್ಪಿಗೆಯಾಗಿರುವ ವಿಷಯ. ಇದು ಎಲ್ಲರಿಗೂ ದಿಟ್ಟ, ನೇರವಾದ ಮಾರ್ಗ. ಅದು ಉಚ್ಚ, ನೀಚ, ಸ್ತ್ರೀ, ಶೂದ್ರ, ಯಾರೇ ಆಗಿರಬಹುದು55॥ ಕನಸಿನ ರಾಜವೈಭೋಗವೆಲ್ಲ ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ಶೂನ್ಯವಾಗುವಂತೆ ಈ ಜಗತ್ತು ಕೇವಲ ಮಾಯೆ. ಇದು ಸಾಯಿಯ ನಿಶ್ಚಿತ ಅಭಿಪ್ರಾಯ. ॥56॥ ಸಾಯಿಯ ವರ್ತನೆ ಮತ್ತು ಮನೋಧರ್ಮವು 'ದೇಹದ ಸುಖ ದುಃಖಗಳು ಮಾಯೆಯ ಸ್ವಭಾವ' ಎಂಬ ದೃಢ ನಿಶ್ಚಯದ ಮೇಲೆ ರೂಪಿತವಾಗಿದೆ. ಅವರ ಪ್ರಕಾರ ಇವು ಚಂಚಲ ಮನಸ್ಸಿನ ಪ್ರವೃತ್ತಿ ಕನಸಿನಲ್ಲಿರುವಂತೆ. ಆದ್ದರಿಂದ ಮಾಯೆಯನ್ನು ದೂರೀಕರಿಸಿ ಮೋಕ್ಷದ ಸ್ಥಿತಿಯನ್ನು ತಲಪಿದ್ದರು. ॥57॥ ಶಿಷ್ಯರ ಲೌಕಿಕ ಮೋಹವನ್ನು ನೋಡಿದಾಗ ಅವರ ಹೃದಯ ದಯೆಯಿಂದ ಕರಗುತ್ತಿತ್ತು, ಅವರು ಹಗಲು ರಾತ್ರಿ ಆ ಬಂಧನಗಳನ್ನು ಹೇಗೆ ಬಿಡಿಸಬೇಕೆಂಬುದರ ಬಗ್ಗೆ ಚಿಂತಿತರಾಗಿರುತ್ತಿದ್ದರು. ॥58॥ ಅವರ ಪೂರ್ಣಸ್ವಭಾವವೇ ಬ್ರಹ್ಮನೊಡನೆ ಐಕ್ಯತೆ. ಅವರು ಪರಮಾನಂದದ ಸ್ವರೂಪ. ಅವರ ಮನಸ್ಸು ಸಂಶಯರಹಿತವಾಗಿತ್ತು, ಅವರು ಲೌಕಿಕ ಸಂತೋಷಗಳನ್ನು ತ್ಯಜಿಸಿದ್ದವರು. ॥59॥ ಅವರು ಯಾವುದೇ ತಾಳ ಅಥವಾ ಕೊಳಲನ್ನು ಹಿಡಿಯುತ್ತಿರಲಿಲ್ಲ. ಪ್ರತಿ ಮನೆಗೂ ಹೋಗುತ್ತಿರಲಿಲ್ಲ. ಅವರು ಪ್ರತಿ ದಾರಿಹೋಕನನ್ನೂ, ದೈನ್ಯತೆಯ ಭಾವದಿಂದ ಭಿಕ್ಷೆಬೇಡುತ್ತಿರಲಿಲ್ಲ. ॥60॥ ಅನೇಕ ಗುರುಗಳು ತಮ್ಮ ಸುತ್ತ ಶಿಷ್ಯರನ್ನು ತುಂಬಿಸಿಕೊಂಡು ಇರುತ್ತಾರೆ. ಕೇವಲ ಹಣಕ್ಕಾಗಿ ಒತ್ತಾಯ ಪೂರ್ವಕವಾಗಿ ಕಿವಿಯಲ್ಲಿ ಮಂತ್ರ ಕೊಡುತ್ತಾರೆ. ॥61॥ ಅವರು ತಮ್ಮ ಶಿಷ್ಯರಿಗೆ ಧರ್ಮವನ್ನು ಬೋಧಿಸುತ್ತಾರೆ. ಆದರೆ ಅವರ ವರ್ತನೆ ಮಾತ್ರದ್ವಿರುದ್ಧ, ಅವರು ಹೇಗೆ ಭವಸಾಗರವನ್ನು,

ದಾಟಿಸಲು ಮತ್ತು ಜೀವನ್ಮರಣವನ್ನು ತಪ್ಪಿಸಲು ಸಹಾಯ ಮಾಡಲು ಸಾಧ್ಯ? ॥62॥ ತಮ್ಮ ಧಾರ್ಮಿಕತೆಯನ್ನು ತೋರ್ಪಡಿಸುವುದಾಗಲೀ, ತಮ್ಮ ಕೀರ್ತಿ ದೂರದೂರಕ್ಕೆ ಹರಡಬೇಕೆಂದಾಗಲೀ ಅವರ ಉದ್ದೇಶವಾಗಿರಲಿಲ್ಲ. ಅಂತಹವರು ಸಾಯಿ! ॥63॥ ಅವರಿಗೆ ದೇಹಾಭಿಮಾನವಿರಲಿಲ್ಲ. ತಮ್ಮ ಶಿಷ್ಯರನ್ನು ಕಂಡರೆ ಬಹಳ ಪ್ರೀತಿ. ಸದಾ ಕಾಲ ಅದೇ ಅವರ ಸ್ವಭಾವವಾಗಿತ್ತು. ಅಂತಹವರು ಸಾಯಿ! ॥64॥ ಎರಡು ತರಹದ ಗುರುಗಳಿದ್ದಾರೆ – ನಿಯತ (ವಿಧಿ ಲಿಖಿತ) ಮತ್ತು ಅನಿಯತ. ಶ್ರೋತೃಗಳಿಗಾಗಿ, ಪ್ರತಿಯೊಬ್ಬನ ಕರ್ತವ್ಯಗಳನ್ನು ವಿವರಿಸಲಾಗುತ್ತದೆ. ॥65॥ ಅನಿಯತ ಗುರುವು ಮನಸ್ಸಿನ ಶುದ್ಧೀಕರಣ ಮತ್ತು ದೈವಿಕ ಗುಣಗಳ ಬೆಳವಣಿಗೆಗೆ ಒತ್ತುಕೊಡುತ್ತಾರೆ. ಇವುಗಳನ್ನು ಮಾತ್ರ ಅನಿಯತ ಗುರು ದಯಪಾಲಿಸಬಲ್ಲನು. ಅವನು ಮೋಕ್ಷದ ದಾರಿಯನ್ನು ತೋರಿಸಬಹುದು. ॥66॥ ನಿಯತ ಗುರುವಿನೊಂದಿಗೆ ಸಂಬಂಧ ಬೆಳೆದಾಗ ಅತ್ಮದ್ವೈತಭಾವ ಮಾಯವಾಗುತ್ತದೆ. ಪರಮಾತ್ಮನೊಡನೆ ಐಕ್ಯತೆ ಉಂಟಾಗುತ್ತದೆ. "ನೀನು ಮತ್ತು ದೇವರು ಬೇರೆ ಅಲ್ಲ" ಎಂಬ ಮಹಾನ್ ವಾಕ್ಯಕ್ಕೆ ಸಾಕ್ಷಿಯಾಗುತ್ತಾನೆ. ॥67॥ ಈ ಜಗತ್ತು ಗುರುಗಳಿಂದ ತುಂಬಿ ಹೋಗಿದೆ. ಭಕ್ತರಿಗಾಗಿ ವ್ಯಕ್ತವಾಗುತ್ತಾರೆ ಮತ್ತು ತಮ್ಮ ಧ್ಯೇಯ ಪೂರ್ಣಗೊಂಡಾಗ ಸಮಾಧಿಸ್ಥರಾಗುತ್ತಾರೆ. ॥68॥ ಸಾಯಿಯು ಎರಡನೆಯ ವರ್ಗಕ್ಕೆ ಸೇರಿದ ಗುರುಗಳು. ಅವರನ್ನು ಹೇಗೆ ವರ್ಣಿಸಲಿ? ಅವರು ಮಾರ್ಗದರ್ಶನ ಮಾಡಿದ ಹಾಗೆ ಬರೆಯುತ್ತೇನೆ. ॥69॥ ಭೌತಿಕ ವಿಜ್ಞಾನ ಕಲಿಸಲು ಅನೇಕ ಉಪಾಧ್ಯಾಯರು ಇದ್ದಾರೆ, ಆದರೆ ಯಾರು ವಿದ್ಯಾರ್ಥಿಯ ಸ್ವಸ್ವರೂಪವನ್ನು ಅರಿತಿರುತ್ತಾನೋ ಅವನು ಸದ್ಗುರು. ಅವನು ನಿಜವಾದವನು. ಭವಸಾಗರವನ್ನು ದಾಟಿಸುವ ಮಹಾನುಭಾವನು, ಅವನ ಮಹತ್ತನ್ನು ಗ್ರಹಿಸಲು ಅಸಾಧ್ಯ. ॥70॥ ಯಾರು ದರ್ಶನಕ್ಕೆ ಹೋಗುವರೋ ಅವನ ಭೂತ, ವರ್ತಮಾನ ಮತ್ತು ಭವಿಷ್ಯತ್ತನ್ನು ಹೇಳುತ್ತಿದ್ದರು. ಸಾಯಿ ವಿಚಾರಿಸದೆಯೇ, ಬಂದವರ ಉದ್ದೇಶ, ಅಭಿಪ್ರಾಯ ಮತ್ತೆಲ್ಲವನ್ನೂ ವಿವರವಾಗಿ ಹೇಳುತ್ತಿದ್ದರು. ॥71॥ ಯಾರು ಎಲ್ಲ ವಸ್ತುಗಳಲ್ಲೂ, ಎಲ್ಲ ಜೀವಜಂತುಗಳಲ್ಲೂ ಪರಬ್ರಹ್ಮನನ್ನೇ ಕಾಣುತ್ತಾರೋ, ಯಾರು ಸ್ನೇಹಿತರು ಮತ್ತು ಶತ್ರುಗಳನ್ನು ಸಮಭಾವದಿಂದ ಕಾಣುತ್ತಾ ಭೇದ ಭಾವ ಎಣಿಸುವುದಿಲ್ಲವೋ, ॥72॥ ಅವರಿಗೆ ಯಾವ ಪ್ರತಿಕ್ಷೆಯೂ ಇರುವುದಿಲ್ಲ. ಎಲ್ಲವನ್ನೂ ಸಮನಾಗಿ ಕಾಣುವರು. ತಮಗೆ ತೊಂದರೆ ಕೊಟ್ಟವರ ಮೇಲೆಯೂ ಅನುಗ್ರಹದ ಅಮೃತವರ್ಷ ಸುರಿಸುವರು. ದುಃಖ, ಸಂತೋಷಗಳಲ್ಲಿ ಮನಸ್ಸು ಕ್ಷೋಭೆಗೊಳ್ಳುವುದಿಲ್ಲ. ಅವರು ಯಾವುದೇ ಸಂದೇಹಕ್ಕೆ ಎಡೆಮಾಡಿಕೊಡುವುದಿಲ್ಲ.॥73॥ ಈ ನಶ್ವರ ದೇಹದಲ್ಲಿದ್ದರೂ ಅವರು ದೇಹದ ಬಂಧನದಲ್ಲಿ ಸಿಲುಕುವುದಿಲ್ಲ. ಹೊರನೋಟಕ್ಕೆ ಭೌತಿಕವಾಗಿ ಕಾಣುತ್ತಾರೆ. ಆದರೆ ದೇಹರಹಿತವಾಗಿರುತ್ತಾರೆ. ಅಂತಹ ವ್ಯಕ್ತಿಯು ದೇಹದಲ್ಲಿ ಇದ್ದರೂ ಮೋಕ್ಷ ಪಡೆಯುತ್ತಾನೆ. ॥74॥ ಶಿರಡಿಯ ನಿವಾಸಿಗಳಿಗೆ ಮತ್ತು ಯಾರಿಗೆ ಸಾಯಿಯು ದೇವರಾಗಿದ್ದರೋ, ಯಾರು ಸಾಯಿಯನ್ನು ಪೂಜಿಸುತ್ತಿದ್ದರೋ, ಊಟ ಮಾಡುವಾಗ, ನೀರು ಕುಡಿಯುವಾಗ, ಮಲಗಿದಾಗ ಯಾರು ಸಾಯಿಯನ್ನು ನೆನೆಯುತ್ತಾರೋ

ಅವರೇ ಭಾಗ್ಯಶಾಲಿಗಳು. ॥75॥ ಯಾರು ಸಾಯಿಯ ಮೇಲಿನ ಪ್ರೀತಿಯಿಂದ ಹೊಲದಲ್ಲಿ ಕೆಲಸ ಮಾಡುವಾಗ, ತೋಟದಲ್ಲಿ ಕೆಲಸ ಮಾಡುವಾಗ, ಬೀಸುವಾಗ, ಜೊಳ್ಳು ತೆಗೆಯುವಾಗ, ಮಜ್ಜಿಗೆ ಕಡೆಯುವಾಗ ಸಾಯಿ ಭಜನೆಗಳನ್ನು ಹಾಡುತ್ತಿದ್ದರೋ ಅವರೇ ಭಾಗ್ಯಶಾಲಿಗಳು. ॥76॥ ಕೆಲವರು ಬಾಬಾರವರಲ್ಲದೆ ಬೇರೆ ಯಾರನ್ನೂ ದೇವರಂತೆ ಯೋಚಿಸುತ್ತಿರಲಿಲ್ಲ. ಯಾರು ಸದಾ ಅವಿರತವಾಗಿ ಕುಳಿತಾಗ, ತಿನ್ನುವಾಗ, ಮಲಗಿದಾಗಲೆಲ್ಲಾ ಸಾಯಿಯನ್ನು ನೆನೆಸುತ್ತಿರುತ್ತಾರೋ ಅಂಥವರು ಇದ್ದರು. ॥77॥ ಆ ಮಹಿಳೆಯರ ಪ್ರೀತಿ ಅದೆಂತಹ ಅದ್ಭುತ? ಅವರ ಪ್ರೀತಿಯಲ್ಲಿ ಅದೆಂತಹ ಮಧುರತೆ! ಪರಿಶುದ್ಧವಾದ ಪ್ರೀತಿ ಕೇವಲ ಕಲಿಯುವುದಲ್ಲ, ಕವಿತ್ವವನ್ನೂ ಉತ್ತೇಜಿಸುತ್ತದೆ. ॥78॥ ಭಾಷೆಯು ಸರಳವಾಗಿದ್ದರೂ, ದಿಟ್ಟವಾಗಿ, ನೇರವಾಗಿ, ಪಾಂಡಿತ್ಯದ ಲವಲೇಶವೂ ಇಲ್ಲದೇ ಇದ್ದರೂ, ಅವರ ಕವಿತೆಯು ಶೋಭಾಯಮಾನವಾಗಿದ್ದು ಪ್ರೌಢ ಪಾಂಡಿತ್ಯವುಳ್ಳವನೂ ಸಹ ಮೆಚ್ಚುಗೆಯಿಂದ ತಲೆದೂಗುತ್ತಿದ್ದನು. ॥79॥ ನಿಜವಾದ ಪ್ರೀತಿಯು ವ್ಯಕ್ತವಾಗುತ್ತ ಸಹಜ ಕವಿತೆ ರಚಿಸಲಾಗುತ್ತದೆ. ಶ್ರೋತೃಗಳು ಅದನ್ನು ಆ ಮಹಿಳೆಯರ ರಚನೆಗಳಲ್ಲಿ ಆಲಿಸಬಹುದು. ॥80॥ ಸಾಯಿಬಾಬಾರವರು ಇಚ್ಛೆಪಟ್ಟಲ್ಲಿ, ಈ ಸಂಪೂರ್ಣ ಸಂಗ್ರಹವು ದೊರಕುತ್ತದೆ ಮತ್ತು ಶ್ರೋತೃಗಳ ಮನದಿಚ್ಛೆಗಳು ಪೂರೈಸಲ್ಪಡುವುವು. ಅವರು ಆ ಕಾವ್ಯ ರಚನೆಗಳನ್ನು ಕೇಳಬಲ್ಲರು. ॥81॥ ಅದು ಹಾಗಿರಲಿ. ಭಕ್ತರ ಭಕ್ತಿಯಿಂದಾಗಿ ನಿರಾಕಾರವು ಶಿರಡಿಯಲ್ಲಿ ಸಾಯಿಯಾಗಿ ಮೂರ್ತಿರ್ಭವಿಸಿತ್ತು. ದೇಹಾಭಿಮಾನವನ್ನು ತ್ಯಜಿಸಿದವನು ಮತ್ತು ವಾಸನಾರಹಿತನಾದವನು ಮಾತ್ರ ಭಕ್ತಿಯಿಂದಲೇ ಅವರನ್ನು ತಿಳಿಯಬಲ್ಲರು. ॥82॥ ಅಥವಾ ಭಕ್ತರ ಸತ್ಕರ್ಮಗಳ ಪುಣ್ಯದ ಫಲವು ತಕ್ಕ ಸಮಯದಲ್ಲಿ ಪೂರ್ಣವಾಗಿ ಫಲನೀಡುತ್ತದೆ. ಸಾಯಿಯ ರೂಪದಲ್ಲಿ ಅವು ಚಿಗುರಿ ಶಿರಡಿಯಲ್ಲೇ ಫಲ ನೀಡುತ್ತದೆ. ॥83॥ ಮೂಕನಾದವನು ಮಾತನಾಡಬಲ್ಲನು. ಹುಟ್ಟಲು ಸಾಧ್ಯವಿಲ್ಲದ್ದು ಸಜೀವವಾಗಿ ಇಲ್ಲಿ ಬಂದಿದೆ. ಸಂಕ್ಷಿಪ್ತವಾದುದು ಸಾಕಾರವಾಗಿದೆ. ಇದೆಲ್ಲವೂ ಕರುಣಾರಸವೆಂಬ ಅಚ್ಚಿನಿಂದಾಗಿದೆ. ॥84॥ ಅವರು ಷಡ್ಗುಣಗಳ ಸಾಕಾರ ಸ್ವರೂಪ. – ಸಫಲತೆ, ಶ್ರೀಮಂತಿಕೆ, ನಿರ್ಮೋಹ, ಬುದ್ಧಿಶಕ್ತಿ, ಶ್ರೇಯೋಭಿವೃದ್ಧಿ ಮತ್ತು ದಯಾಸ್ವಭಾವ. ॥85॥ ಬಾಬಾರವರ ಆತ್ಮಸಂಯಮ ಅತಿ ವಿಶಿಷ್ಟವಾದದ್ದು. ಅವರು ತಮಗಾಗಿ ಏನನ್ನೂ ಹೊಂದಿರಲಿಲ್ಲ. ಅವರು ನಿರಾಕಾರರಾಗಿದ್ದರೂ ತಮ್ಮ ಭಕ್ತರಿಗೆ ವರಪ್ರದಾನ ಮಾಡಲು ಆಕಾರವನ್ನು ತಳೆಯುತ್ತಿದ್ದರು. ॥86॥ ಓಹ್, ಅವರ ದಯೆ ಎಷ್ಟು ಆಶ್ಚರ್ಯಕರ! ಅವರು ಭಕ್ತರ ಸಂತೋಷದಲ್ಲಿ ಪ್ರೀತಿಯಿಂದ ಭಾಗಿಯಾಗುತ್ತಿದ್ದರು. ಇಲ್ಲದಿದ್ದಲ್ಲಿ ಮತ್ತೆ ಯಾವ ದೈವೀಪುರುಷನನ್ನು ಅವರು ಸಂಧಿಸಲು ಸಾಧ್ಯವಾಗುತ್ತಿತ್ತು? ॥87॥ ಸಾಯಿಮಹಾನುಭಾವರು (ಭಕ್ತರಿಗೆ ಶುಭವಾಗಲೆಂದು) ಎಂತಹ ಮಾತುಗಳನ್ನು ಆಡುತ್ತಿದ್ದರೆಂದರೆ ವಾಗ್ದೇವತೆಯೂ ಮಾತನಾಡಲು ಅಸಾಧ್ಯವಾದವುಗಳು. ಅಂತಹ ಮಾತುಗಳನ್ನು ಕಿವಿಗಳೂ ಕೇಳಲು ನಾಚಿಕೆಪಡುತ್ತವೆ. ॥88॥ ಆ ಮಾತುಗಳನ್ನು ವಿವರಿಸದೆ ಮೌನವಾಗಿರುವುದು ಲೇಸು. ಆದರೆ ನಾನು ನನ್ನ ಕರ್ತವ್ಯದಿಂದ ವಿಮುಖನಾಗಲಾರೆ. ಆದ್ದರಿಂದ ಅವುಗಳ ಬಗ್ಗೆ

ಹೇಳದೆ ವಿಧಿಯಿಲ್ಲ. ॥89॥ ತನ್ನ ಭಕ್ತರ ಮೇಲಿನ ಪ್ರೀತಿಗಾಗಿ ಬಾಬಾರವರ ಮಾತುಗಳು ಅತ್ಯಂತ ಕರುಣಾಪೂರ್ವಕವಾಗಿ ಆಡಲ್ಪಟ್ಟವು. "ನಾನು ನಿನ್ನ ದಾಸರಲ್ಲೆಲ್ಲ ಅತ್ಯಂತ ದೀನನು. ನಾನು ನಿನಗೆ ಋಣಿಯಾಗಿದ್ದೇನೆ. ನಾನು ಇಲ್ಲಿಗೆ ದರ್ಶನಕ್ಕಾಗಿ ಬಂದಿದ್ದೇನೆ. ॥90॥ "ನಾನು ನಿನ್ನ ಪಾದಗಳಿಗೆ ಸೇರಿರುವುದು ನೀನು ನನಗೆ ಮಾಡಿರುವ ಬಹುದೊಡ್ಡ ಸಹಾಯ. ನಾನು ನಿನ್ನ ಮಲದಲ್ಲಿರುವ ಒಂದು ಕ್ರಿಮಿ. ನಾನೆನ್ನನ್ನೇ ಬಹುಭಾಗ್ಯಶಾಲಿಯೆಂದು ಪರಿಗಣಿಸುತ್ತೇನೆ." ॥91॥ ಅದೆಂತಹ ದೈನ್ಯತಾಭಾವ ಬಾಬಾರವರದು. ಓಹ್! ಅವರು ದೀನರಾಗಲು ಅದೆಷ್ಟು ಇಚ್ಛಿಸುತ್ತಿದ್ದರು. ಅಹಂಕಾರದ ನಿರ್ಮೂಲನೆಯ ಅದೆಷ್ಟು ಎತ್ತರದ ಭಾವ. ಅವರು ಅಷ್ಟೇ ಸಭ್ಯರೂ ಸಹ! ॥92॥ ಈ ಮೇಲೆ ಹೇಳಿದ ಬಾಬಾರವರ ಮಾತುಗಳು ನಿಜವಾಗಿಯೂ ಅವರು ನುಡಿದ ನುಡಿಗಳೇ. ಅವುಗಳನ್ನು ನಾನು ಗೌರವಪೂರ್ವಕವಾಗಿ ತಮ್ಮ ಮುಂದೆ ಇಟ್ಟಿರುವೆನು. ಯಾರಾದರೂ ಇದನ್ನು ಅಗೌರವವೆಂದು ಪರಿಗಣಿಸಿದಲ್ಲಿ ಅವರ ಕ್ಷಮೆಬೇಡುತ್ತೇನೆ. ॥93॥ ಮಾತುಗಳು ಅಶುದ್ಧವಾದಲ್ಲಿ ಕೇಳುವ ಪಾಪವನ್ನೂ ತಪ್ಪಿಸಬೇಕು. ಸಾಯಿನಾಮವನ್ನು ನಿರಂತರ ಸ್ಮರಿಸೋಣ. ಅದು ಎಲ್ಲರ ಪಾಪಗಳನ್ನೂ ತೊಳೆದು ಶುದ್ಧಗೊಳಿಸುತ್ತದೆ. ॥94॥ ನಮ್ಮ ಹಿಂದಿನ ಜನ್ಮಗಳ ತಪಸ್ಸಿನ ಫಲ ಸಾಯಿಯ ಕೃಪೆ. ಅದು ನೀರನ್ನು ಹಂಚುವ ಜಾಗದಲ್ಲಿ ಬಾಯಾರಿದವನಿಗೆ ನೀರು ಕೊಟ್ಟಾಗ ಸಿಗುವ ಅನಂತ ತೃಪ್ತಿಯನ್ನು ತಂದು ಕೊಡುತ್ತದೆ. ॥95॥ ಅವರು ನಾಲಿಗೆಯಿಂದ ಊಟವನ್ನು ಆಸ್ವಾದಿಸುವಂತೆ ಕಂಡರೂ, ನಿಜವಾಗಿಯೂ ಅದರ ರುಚಿಯನ್ನು ಅನುಭವಿಸುತ್ತಿರಲಿಲ್ಲ. ಏಕೆಂದರೆ ಅವರ ರುಚಿಯ ಅಂಕುರಗಳು ಮೊಳೆತಿರಲೇ ಇಲ್ಲ. ॥96॥ ಯಾರಿಗೆ ಯಾವ ವಿಷಯವಾಸನೆಗಳೂ ಇಲ್ಲವೋ, ಅವರು ಯಾವುದೇ ಸಂತೋಷವನ್ನು ಅನುಭವಿಸುತ್ತಾರೆಂದು ಹೇಗೆ ಹೇಳಬಹುದು? ಸಂತೋಷಗಳು ಇಂದ್ರಿಯಗಳ ಮೇಲೆ ಪರಿಣಾಮ ಬೀರದೇ ಇರುವಾಗ, ಅವರು ಸಂತೋಷದಲ್ಲಿ ಮುಳುಗಿದ್ದರೆಂದು ಹೇಗೆ ಹೇಳುವುದು? ॥97॥ ಆದರೂ, ಅವರ ಮುಂದೆ ಬರುವ ವಸ್ತುಗಳನ್ನು (ಅವರ ಕಣ್ಣಿನಿಂದ) ಅನುಭವಿಸಿದರೂ ನಿಜವಾಗಿಯೂ ಅವರು ನೋಡುವುದೇ ಇಲ್ಲ. ಏಕೆಂದರೆ ಅವರಿಗೆ ಅವುಗಳ ಮೇಲೆ ಆಸೆಯಿಲ್ಲ. ॥98॥ ಹನುಮಂತನ ಜನನೇಂದ್ರಿಯಗಳು ಅವನ ತಾಯಿಗೆ ಮತ್ತು ಶ್ರೀರಾಮಚಂದ್ರನಿಗೆ ಮಾತ್ರ ಕಾಣುವಂತಿದ್ದವು. ಆದ್ದರಿಂದ ಮತ್ತೆ ಯಾವುದರ ಜೊತೆ ಅವರ ಬ್ರಹ್ಮಚರ್ಯವನ್ನು ಹೋಲಿಸಲು ಸಾಧ್ಯ? ॥99॥ ತಾಯಿಯೂ ಅವನ ಗುಪ್ತಾಂಗಗಳನ್ನು ನೋಡಿಲ್ಲದಿರುವಾಗ ಮತ್ತೆ ಬೇರೆಯವರ ಪಾಡೇನು? ಬಾಬಾರವರ ಬ್ರಹ್ಮಚರ್ಯ ಉನ್ನತಮಟ್ಟದ್ದು, ಸ್ವಯಂಪೂರ್ಣ ಮತ್ತು ಅಸಾಧಾರಣವಾದದ್ದು. ॥100॥ ಅವರು ಸೊಂಟಕ್ಕೆ ಒಂದು ಕೌಪೀನವನ್ನು ಧರಿಸುತ್ತಿದ್ದರು. ಅವರ ಇಂದ್ರಿಯಗಳು ಎಂದಿಗೂ ಉದ್ರೇಕಗೊಂಡಿಲ್ಲ![10] ಅವು ಕೇವಲ ದೇಹದ ಕಾರ್ಯಗಳಾದ ಮೂತ್ರ ಮತ್ತು ಮಲವಿಸರ್ಜನೆಗಾಗಿ ಇದ್ದವು. ॥101॥ ಅದು ಬಾಬಾರವರ ದೇಹಸ್ಥಿತಿಯಾಗಿತ್ತು. ಇಂದ್ರಿಯಗಳು ತಮ್ಮ ಕರ್ತವ್ಯಗಳನ್ನು ಮಾಡುತ್ತಿದ್ದರೂ ಅಣುಮಾತ್ರದ ವಿಷಯವಾಸನೆಯು ಇರಲಿಲ್ಲ. ॥102॥ ಸತ್ವ, ರಜ,

ಮತ್ತು ತಮೋಗುಣಗಳಿಂದಾಗಿ ಎಲ್ಲಾ ಇಂದ್ರಿಯಗಳೂ ತಮ್ಮ ತಮ್ಮ ಜಾಗಗಳಲ್ಲಿ ಬಂಧಿತವಾಗಿವೆ. ಆದರೆ ಕಾರ್ಯರೂಪದಲ್ಲಿ ಇಂದ್ರಿಯಗಳು ಬಹಳ ಚುರುಕಾಗಿದ್ದರೂ ಅಲ್ಲಿ ಯಾವುದೇ ಮೋಹವಿರಲಿಲ್ಲ. ॥103॥ ಬಾಬಾರವರಿಗೆ ಯಾವ ಮೋಹವೂ ಇರಲಿಲ್ಲ. ಅವು ಪರಮಾತ್ಮ ಸ್ವರೂಪ, ಆತ್ಮದ ಕಡೆ ತಿರುಗಿದ್ದವರು. ಅವರು ಆಸೆ ಮತ್ತು ಕೋಪವನ್ನು ಉಪಶಮನ ಮಾಡಿ ಆಸೆ ಮತ್ತು ಮೋಹದಿಂದ ಬಿಡುಗಡೆ ಹೊಂದಿ ಪೂರ್ಣವಾಗಿ ತಮ್ಮ ಧ್ಯೇಯವನ್ನು ಸಾಧಿಸಿದವರು. ॥104॥ ಅಂತಹುದು ಮೋಕ್ಷದ ಸ್ಥಿತಿ. ಅವರು ಇಂದ್ರಿಯ ವಸ್ತುಗಳನ್ನು ಬ್ರಹ್ಮನೆಂದು ಪರಿಗಣಿಸಿದ್ದರು. ಅವರು ಒಳ್ಳೆಯ ಮತ್ತು ಕೆಟ್ಟ ಕೆಲಸಗಳನ್ನು ಮೀರಿದವರು. ಅವರು ಪೂರ್ಣ ಪ್ರಶಾಂತಿಯ ಆವಾಸವಾಗಿದ್ದರು. ॥105॥ ಒಮ್ಮೆ ನಾನಾವಲಿಯು[11] ಅವರನ್ನು ಎಬ್ಬಿಸಿದಾಗ ತಮ್ಮ ಆಸನವನ್ನು ಬಿಟ್ಟು ಎದ್ದರು. ಅಂತಹ ಸಾಯಿಗೆ ಕಿಂಚಿತ್ತಾದರೂ ಅಹಂಕಾರವಿರಲಿಲ್ಲ. ಅಥವಾ ಕನಸಿನಲ್ಲೂ ಪಕ್ಷಪಾತವನ್ನು ಎಣಿಸುತ್ತಿರಲಿಲ್ಲ. ॥106॥ ಅವರಿಗೆ ಈ ಜಗತ್ತಿನಲ್ಲಿ ಸಾಧಿಸಬೇಕಾದ್ದು ಏನೂ ಇರಲಿಲ್ಲ ಮತ್ತು ಮುಂದೆ ಸಾಧಿಸಲು ಇನ್ನೇನೂ ಉಳಿದಿರಲಿಲ್ಲ. ಅಂತಹ ಸಂನ್ಯಾಸಿ ಮಾನವರನ್ನು ಅನುಗ್ರಹಿಸಲೆಂದೇ ಈ ಭೂಮಿಯ ಮೇಲೆ ಪ್ರಕಟಗೊಂಡಿದ್ದರು. ॥107॥ ಅಂತಹ ದಯಾಳುವಾದ ಸಂತರ ಅವತಾರದ ಉದ್ದೇಶವು ಇತರರಿಗೆ ಅವರ ಯೋಗಕ್ಷೇಮಕ್ಕಾಗಿ ಅನುಗ್ರಹಿಸುವುದಲ್ಲದೆ ಮತ್ತೇನೂ ಇಲ್ಲ. ॥108॥ ಅವರ ಹೃದಯ ಬೆಣ್ಣೆಯ ರೀತಿಯಲ್ಲಿತ್ತು. ಕೆಲವರು ಹೇಳುತ್ತಾರೆ – ಅವರು ಅತಿ ಮೃದು ಹೃದಯದವರೆಂದು. ಇತರರ ಕಷ್ಟಕ್ಕಾಗಿ ಮೃದುವಾಗಿ ಕರಗಿಹೋಗುತ್ತಾರೆ. ಅವರು ಅದು ತಮ್ಮದೇ ದುಃಖದಂತೆ ಅನುಭವಿಸುತ್ತಾರೆ. ಅದಕ್ಕಾಗಿಯೇ ಅವರು ಬೆಣ್ಣೆಯಂತೆ ಕರಗುತ್ತಾರೆ. ॥109॥ ಯಾರ ಬಟ್ಟೆಯು ತೇಪೆಹಾಕಿದ ಕಫನಿಯಾಗಿದೆಯೋ, ಯಾರ ಆಸನವು ಗೋಣಿಚೀಲವೋ, ಯಾರ ಮನಸ್ಸು ಆಸೆಗಳಿಂದ ದೂರವಾಗಿರುವುದೋ ಅವರಿಗೆ ಬೆಳ್ಳಿಯ ಸಿಂಹಾಸನವು ಏನು? ॥110॥ ತಮ್ಮ ಭಕ್ತರ ಭಕ್ತಿಯನ್ನು ನೋಡಿ, ಭಕ್ತರು ತಮ್ಮ ಕಷ್ಟ ಪರಿಹಾರದ ನಂತರ ಸಾಯಿಗೆ ಬೆನ್ನು ತೋರಿದರೆಂಬ ವಿಷಯವನ್ನು ನಿರ್ಲಕ್ಷಿಸುತ್ತಿದ್ದರು. ॥111॥ ಶಿರಡಿಯೆಂಬ ಕೆರೆಯಲ್ಲಿ ಬಾಬಾರವರು ಕಮಲವಾಗಿದ್ದರು. ಭಕ್ತರು ಪರಿಮಳದ ಸಂತಸವನ್ನು ಅನುಭವಿಸುತ್ತಿದ್ದರು. ಆದರೆ ಕೆಸರಿನಲ್ಲಿ ಸದಾ ಒದ್ದಾಡಿ ಕೆಸರನ್ನು ಮಾತ್ರ ಅನುಭವಿಸುವವರು ದುರ್ದೈವಿಗಳು.[12] ॥112॥ ಅವರು ಯಾರಿಗೂ ಯಾವುದೇ ಯೋಗಾಸನವನ್ನು ಮಾಡಲು ಅಥವಾ ಪ್ರಾಣಾಯಾಮ (ಯೋಗಾಭ್ಯಾಸ) ಮಾಡಲು ಅಥವಾ ಇಂದ್ರಿಯ ನಿಗ್ರಹ ಮಾಡಲು ಹೇಳಲಿಲ್ಲ. ಅಥವಾ ಯಾವುದೇ ಮಂತ್ರ ಕೊಡಲಿಲ್ಲ. ಅಥವಾ ಧಾರ್ಮಿಕ ವಿಧಿ–ವಿಧಾನ ಆಚರಿಸಲು ಹೇಳಲಿಲ್ಲ. ಯಾವುದೇ ಜಪ ಮಾಡಲು ಅಥವಾ ಭಜನೆ ಮಾಡಲು ಹೇಳಲಿಲ್ಲ. ಸುಳ್ಳು ಅಥವಾ ಮೋಸದ ಉಪದೇಶ ಎಂದಿಗೂ ನೀಡಲಿಲ್ಲ. ॥113॥ ಸಾಧಾರಣವಾಗಿ, ಅವರು ಸಾಮಾನ್ಯ ವ್ಯಕ್ತಿಯಾಗಿ ಕಂಡರು. ಆದರೆ ಅಂತರಂಗದಲ್ಲಿ ಅವರು ವಿಭಿನ್ನವಾಗಿದ್ದರು. ಅವರು ಜೀವಿತಾನುಭವದಲ್ಲಿ ಅತ್ಯಂತ ದಕ್ಷರಾಗಿದ್ದು ಅವರಿಗೆ ಶ್ರೀಮಂತಿಕೆ ಇರಲಿಲ್ಲ. ॥114॥ ಭಕ್ತರಿಗಾಗಿ ಸಾಕಾರವನ್ನು,

ತಾಳಿದರು. ಅವರ ಭಾವನೆಗಳು ಮತ್ತು ವಾಸನೆಗಳು ಅವರಿಗಾಗಿ ಇದ್ದುವು. ಅಂತಹ ಜನಪ್ರಿಯ ನಡೆವಳಿಕೆ ಸಂತರದು. ನೀವೆಲ್ಲರೂ ಇದೇ ಸತ್ಯವೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ॥115॥ ಸಾಯಿ ಮಹಾರಾಜರು ಶಾಂತಿಯ ನಿಧಿ, ಅವರು ಪರಿಶುದ್ಧ ಮತ್ತು ಸ್ವರ್ಗೀಯ ಆನಂದದ ನಿವಾಸ. ಕಲುಷಿತವಲ್ಲದ ಅಹಂಕಾರವಿಲ್ಲದ ಅವರಿಗೆ ನಾನು ಸ್ವತಃ ನಮಸ್ಕರಿಸುತ್ತೇನೆ. ॥116॥ ಆ ಜಾಗವು ಪವಿತ್ರವಾದದ್ದು ಮತ್ತು ಪಾವನವಾದದ್ದು. ಅಲ್ಲಿ ಮಹಾರಾಜರು ವಾಸಮಾಡಲು ತಾವಾಗಿಯೇ ಬಂದವರು. ಹಿಂದಿನ ಜನ್ಮಗಳ ಸುಕೃತಗಳ ಪುಣ್ಯಫಲಗಳು ಕೂಡಿಸಿದರೆ ಸಿಗುವಷ್ಟು ಪುಣ್ಯವಿಲ್ಲದಿದ್ದಲ್ಲಿ, ಈ ನಿಧಿಯನ್ನು ಪಡೆಯುವುದು ಕಷ್ಟ. ॥117॥ ಪರಿಶುದ್ಧವಾದ ಮೊಳಕೆಯಿಂದ ಮಾತ್ರ ರಸವತ್ತಾದ ಸಿಹಿ ಹಣ್ಣುಗಳು ಬರಬಹುದು ಎಂದು ತುಕಾರಾಮರು ಹೇಳಿದ್ದಾರೆ. ಪ್ರಸಿದ್ಧವಾದ ಈ ದ್ವಿಪದಿಯನ್ನು ಶಿರಡಿಯ ಜನತೆ ಅನುಭವಿಸಿದ್ದಾರೆ. ॥118॥ ಅವರು ಹಿಂದುವೂ ಅಲ್ಲ, ಮುಸ್ಲಿಮರೂ ಅಲ್ಲ. ಅವರು ಯಾವುದೇ ಜಾತಿ ಮತಕ್ಕೆ ಸೇರಿದವರಲ್ಲ. ಆದರೆ ಅವರು ಲೌಕಿಕ ಬಂಧನಗಳನ್ನೆಲ್ಲ ಪೂರ್ಣವಾಗಿ ನಾಶಮಾಡಿದ್ದರು. ॥119॥ ಯಾವ ರೀತಿ ಆಕಾಶವು ಅನಂತವೋ ಮತ್ತು ಅಳತೆಗೆ ಮೀರಿರುವುದೋ ಹಾಗೆಯೇ ಬಾಬಾರವರ ಜೀವನ ಬಹಳ ಅದ್ಭುತ. ಅದನ್ನು ಅವರಲ್ಲದೆ ಯಾರು ತಾನೇ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಲ್ಲರು? ॥120॥ ಮನಸ್ಸಿನ ಕೆಲಸವು ಕೇವಲ ಯೋಚನೆ ಮಾಡುವುದು. ಯೋಚನೆ ಬಾರದ ಒಂದೇ ಒಂದು ಕ್ಷಣವೂ ಇಲ್ಲ. ಅದರ ವಿಷಯ ಇಂದ್ರಿಯಗಳಾದಲ್ಲಿ ಮನಸ್ಸು ಇಂದ್ರಿಯಗಳ ಬಗ್ಗೆ ಯೋಚಿಸುತ್ತದೆ. ಆದರೆ ಅದು ಗುರುವಾದಲ್ಲಿ ಅದು ಗುರುವಿನ ಬಗ್ಗೆ ಯೋಚಿಸುತ್ತದೆ. ॥121॥ ಏಕಾಗ್ರತೆಯಿಂದ ಮನಸ್ಸಿಟ್ಟು ಕೇಳಿದಾಗ (ಎಲ್ಲಾ ಇಂದ್ರಿಯಗಳನ್ನೂ ನಿಗ್ರಹಿಸಿದಾಗ) ಗುರುವಿನ ಮಹತ್ವದ ಬಗ್ಗೆ ಕೇಳಿದ್ದೆಲ್ಲವೂ ನಿರಾಯಾಸವಾದ ಸಾಯಿ ಸ್ಮರಣೆಯಾಗುತ್ತದೆ ಮತ್ತು ಕೀರ್ತನೆಯಾಗುತ್ತದೆ. ॥122॥ ಪಂಚಾಗ್ನಿ ಸಾಧನೆ (ಧಾರ್ಮಿಕ ಕ್ರಿಯೆ) ಬಲಿನೀಡುವುದು, ಅಗ್ನಿಹೋತ್ರಮಾಡುವುದು, ಮಂತ್ರೋಚ್ಚಾರಣೆ, ತಂತ್ರಗಳು, ಅಷ್ಟಾಂಗಯೋಗದ ಸಾಧನೆ ಇವುಗಳು ಕೇವಲ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಮಾತ್ರ ಸಾಧ್ಯ. ಇತರರಿಗೆ ಇದರ ಉಪಯೋಗವೇನು? ॥123॥ ಈ ರೀತಿ ಇರುವುದು ಸಂತರ ಚರಿತ್ರೆಗಳು, ಅವು ಎಲ್ಲರನ್ನೂ ಧರ್ಮಮಾರ್ಗದಲ್ಲಿ ನಡೆಸುತ್ತವೆ. ಅವು ಪ್ರಾಪಂಚಿಕ ಭಯಗಳನ್ನು ಮತ್ತು ದುಃಖಗಳನ್ನು ಪರಿಹರಿಸುತ್ತವೆ. ಇತರರ ಯೋಗಕ್ಷೇಮಕ್ಕಾಗಿ ತಾವೇ ಪ್ರಕಟವಾಗುತ್ತವೆ ಮತ್ತು ಜೀವನದ ಧ್ಯೇಯಸಾಧಿಸಲು ಕಾರಣವಾಗುತ್ತವೆ. ॥124॥ಸಂತರ ಚರಿತ್ರೆಗಳನ್ನು ಕೇಳುವುದರಿಂದ, ಪ್ರತಿಬಿಂಬಿಸುವುದರಿಂದ, ಅವುಗಳನ್ನು ನಿಷ್ಠೆಯಿಂದ ಅನುಭವಿಸುವುದರಿಂದ ಮತ್ತು ತೀವ್ರವಾದ ಧ್ಯಾನದಿಂದ ಬ್ರಾಹ್ಮಣರು, ಶೂದ್ರರು ಮತ್ತು ಸ್ತ್ರೀಯರು ಪರಿಶುದ್ಧರಾಗುತ್ತಾರೆ. ॥125॥ ಮೋಹವಿಲ್ಲದ ಯಾವುದೇ ವ್ಯಕ್ತಿಯೂ ಇಲ್ಲ. ಅಂತಹ ವ್ಯಕ್ತಿ ಇರಲು ಸಾಧ್ಯವೂ ಇಲ್ಲ. ಕೆಲವರು ಕೆಲವು ವಸ್ತುಗಳಿಗೆ ಮೋಹಿತರಾಗುತ್ತಾರೆ. ಮತ್ತೆ ಕೆಲವರು ಬೇರೆ ಯಾವುದಕ್ಕಾದರೂ. ಈ ರೀತಿ ಒಬ್ಬ ಮಾನವನು ಯಾವುದಾದರೂ ಮೋಹಕ್ಕೆ

ಸಿಲುಕಿರುತ್ತಾನೆ. ॥126॥ ಕೆಲವರಿಗೆ ಮೋಹದ ವಸ್ತು ಮಕ್ಕಳು. ಕೆಲವರಿಗೆ ಹಣ, ಕೀರ್ತಿ ಮತ್ತು ಸಂಪತ್ತು, ಕೆಲವರು ದೇಹಕ್ಕೆ ಮೋಹಿತರಾಗುತ್ತಾರೆ. ಕೆಲವರು ಮನೆಗೆ ಅಥವಾ ಜನಪ್ರಿಯತೆಗಾಗಿ. ಮತ್ತೆ ಕೆಲವರು ಪಾಂಡಿತ್ಯವನ್ನು ಸಂಪಾದನೆ ಮಾಡಲು ಆಶಿಸುತ್ತಾರೆ. ॥127॥ ವಿವಿಧ ವಸ್ತುಗಳಿಗೆ ಯಾವುದೇ ಮೋಹಗಳು ಇದ್ದರೂ ಆ ಪ್ರೀತಿಯನ್ನೆಲ್ಲ ಒಟ್ಟಿಗೆ ಒಂದು ಅಚ್ಚಿಗೆ ಸುರಿದು ದೇವರ ಪಾದಗಳ ಬಳಿ ಇಟ್ಟಾಗ ಅದು ಭಕ್ತಿಯ ರೂಪ ತಾಳುತ್ತದೆ. ॥128॥ ಆದುದರಿಂದ ಗೃಹಸ್ಥರಿಗೆ ಇರುವ ಸುಲಭಮಾರ್ಗವೆಂದರೆ ತಮ್ಮ ಮನಸ್ಸನ್ನು ಸಾಯಿಯ ಚರಣಗಳಲ್ಲಿ ಅರ್ಪಿಸುವುದು. ಆಗ ಸಾಯಿಯು ಅನುಗ್ರಹಿಸುತ್ತಾರೆ. ॥129॥ ಸ್ವಲ್ಪ ಪ್ರಯತ್ನದಿಂದ ಇಷ್ಟು ಹೆಚ್ಚು ಒಳ್ಳೆಯ ಫಲವನ್ನು ಪಡೆಯಬಹುದಾದರೆ ಈ ಲಾಭವನ್ನು ಪಡೆಯಲು ಅನ್ಯಮನಸ್ಕತೆ ಏಕಿರಬೇಕು? ॥130॥ ಸಹಜವಾಗಿ ಶ್ರೋತೃಗಳಲ್ಲಿ ಒಂದು ಸಂಶಯ ಉದ್ಭವಿಸಬಹುದು. ಇಂತಹ ಅಮಿತ ಲಾಭವಿರುವಾಗ ಬಹಳ ಜನರು ಇದನ್ನೇಕೆ ಅಭ್ಯಸಿಸುವುದಿಲ್ಲ? ॥131॥ ಅದಕ್ಕೆ ಒಂದೇ ಒಂದು ಕಾರಣ. ಪರಮಾತ್ಮನ ಕೃಪೆ ಇಲ್ಲದೆ ಅವರಲ್ಲಿ ಅದಕ್ಕಾಗಿ ತೀವ್ರವಾದ ಆಶೆ ಹುಟ್ಟುವುದಿಲ್ಲ. ಭಗವಂತನು ಅನುಗ್ರಹಿಸಲು ಅಂಕ್ಕಿ ಮಾಡಿದಾಗ ಮಾತ್ರ ಅವನ ಗುಣಗಾನ ಕೇಳುವ ಇಚ್ಛೆ ತೀವ್ರವಾಗುತ್ತದೆ. ॥132॥ ಆದ್ದರಿಂದ ಸಾಯಿಗೆ ಶರಣಾಗಿ, ಪರಮಾತ್ಮನು ಅನುಗ್ರಹಿಸುತ್ತಾನೆ. ಅವನ ಗುಣಗಾನ ಆಲಿಸುವ ತೀವ್ರವಾದ ಇಚ್ಛೆ ಹುಟ್ಟುತ್ತದೆ. ಇದೇ ದೇವರೆಡೆಗೆ ಅತ್ಯಂತ ಸುಲಭವಾದ ಮಾರ್ಗ. ॥133॥ ಗುರು ಮತ್ತು ಸಜ್ಜನರ ಸತ್ಸಂಗವನ್ನು ಗಟ್ಟಿಯಾಗಿ ಹಿಡಿಯಿರಿ. ಪ್ರಾಪಂಚಿಕ ಬಂಧಗಳನ್ನು ಬಿಡಿಸಿಕೊಳ್ಳಿ, ನಿಶ್ಚಯವಾಗಿಯೂ ಅದರಲ್ಲೇ ನಿಮ್ಮ ಸಾರ್ಥಕತೆ ಇದೆ, ಸಂಶಯವಿಲ್ಲ. ॥134॥ ಲಕ್ಷಾಂತರ ಕುತಂತ್ರ ಮತ್ತು ಕುಬುದ್ಧಿಯ ಮಾರ್ಗಗಳನ್ನು ತೊರೆದು 'ಸಾಯಿ ಸಾಯಿ' ಎಂದು ಸದಾ ನೆನೆಸುತ್ತಿರಿ. ಭವಸಾಗರವನ್ನು ದಾಟಲು ನಿಮಗೆ ಸಾಧ್ಯವಾಗುತ್ತದೆ, ಸಂಶಯವಿಲ್ಲ. ॥135॥ ಇವು ನನ್ನ ಮಾತುಗಳಲ್ಲ, ಅವು ಸಾಯಿಯ ಅಮೋಘ ವಚನಗಳು. ಅವುಗಳಿಗೆ ಬೆಲೆ ಇಲ್ಲವೆಂದು ಯೋಚಿಸಬೇಡಿ. ಅವುಗಳಿಗೆ ಬೆಲೆಕಟ್ಟಲು ಪ್ರಯತ್ನಿಸಬೇಡಿ. ॥136॥ ದುಷ್ಟರ ಸಂಗವು ಸತ್ಯವಾಗಿಯೂ ದುಃಖವುಂಟುಮಾಡುವುದು. ತಿಳಿಯದೆಯೇ ಅದು ಓಣಿ–ಗಲ್ಲಿಗಳಲ್ಲಿ ಕರೆದುಕೊಂಡು ಹೋಗುತ್ತದೆ. ಆನಂದದ ಹೆದ್ದಾರಿಯು ತಪ್ಪಿ ಹೋಗುತ್ತದೆ. ॥137॥ ಒಬ್ಬರೇ ಒಬ್ಬ ಸಾಯಿನಾಥರಿಲ್ಲದೆ ಅಥವಾ ಸದ್ಗುರುವಿಲ್ಲದೆ ಮತ್ತೆ ಯಾರು ದುಸ್ಸಂಗದ ಕೆಟ್ಟ ಪರಿಣಾಮಗಳನ್ನು ಶುದ್ಧೀಕರಿಸಬಹುದು? ॥138॥ ಗುರುವು ಕರುಣಾಮಯಿಯಾಗಿ ನುಡಿದ ಮಾತುಗಳನ್ನು, ಓ ಭಕ್ತರೇ, ನಿಮ್ಮ ಅಂತರಂಗದಲ್ಲಿ ಹಿಡಿದಿಟ್ಟುಕೊಳ್ಳಿರಿ. ನಿಮ್ಮ ದುಷ್ಕರ್ಮಗಳು ತೊಳೆದು ಹೋಗುತ್ತವೆ. ॥139॥ ಪ್ರಕೃತಿಯ ಸೌಂದರ್ಯ ಕಣ್ಣುಗಳನ್ನು ತಣಿಸುತ್ತವೆ. ನಮ್ಮ ಸೌಂದರ್ಯ ದೃಷ್ಟಿಯನ್ನು ಆಕರ್ಷಿಸುತ್ತದೆ. ಮತ್ತು ಸಂತೋಷ ನೀಡುತ್ತದೆ. ನಾವು ಅದೇ ಕಣ್ಣುಗಳ ದೃಷ್ಟಿಯನ್ನು ಬದಲಿಸಿದರೆ ಸತ್ಸಂಗದಲ್ಲಿ ಆತ್ಮಾನಂದ ಪಡೆಯುತ್ತದೆ. ॥140॥ ಅದು ಸತ್ಸಂಗದ[13] ಮಹತ್ವ, ಅದು ಪೂರ್ಣವಾಗಿ ದೇಹಾಭಿಮಾನವನ್ನು ಅಥವಾ ಅಹಂಭಾವವನ್ನು ನಾಶಪಡಿಸುತ್ತದೆ. ಆದ್ದರಿಂದ ಸತ್ಸಂಗವಲ್ಲದೆ

ಬೇರೆ ಉಪಾಯವಿಲ್ಲ. ॥141॥ ಯಾವಾಗಲೂ ಸತ್ಸಂಗದಲ್ಲಿರಿ. ಉಳಿದ ಎಲ್ಲಾ ಉಪಾಯಗಳಲ್ಲೂ ಒಂದಲ್ಲ ಒಂದು ದೋಷವಿರುತ್ತದೆ. ಸತ್ಸಂಗ ಮಾತ್ರ ಕಳಂಕ ರಹಿತವಾದದ್ದು. ಅದು ಎಲ್ಲಾ ರೀತಿಯಲ್ಲೂ ಪರಿಶುದ್ಧವಾಗಿರುವುದು. ॥142॥ ಸತ್ಸಂಗವು ದೇಹದ ಮೋಹ ಬಂಧನಗಳನ್ನು ನಾಶಪಡಿಸುತ್ತದೆ. ಅದು ಅಷ್ಟು ಶಕ್ತಿಯುತವಾದದ್ದು. ಒಮ್ಮೆ ಅದರಲ್ಲಿ ನಿಶ್ಚಲಶ್ರದ್ಧೆ ಇದ್ದಲ್ಲಿ ಈ ಮಿಥ್ಯಾ ಜಗತ್ತಿನಿಂದುಜವಾದ ಮುಕ್ತಿ ಉಂಟಾಗುತ್ತದೆ. ॥143॥ ಯಾರಿಗಾದರೂ ಸತ್ಸಂಗದ ಭಾಗ್ಯ ಲಭಿಸಿದಲ್ಲಿ ಈ ಉಪದೇಶವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಆ ಕ್ಷಣದಲ್ಲೇ ದುಸ್ಸಂಗದ ಇಚ್ಛೆ ಕರಗಿಹೋಗುತ್ತದೆ. ಮನಸ್ಸು ಸತ್ಸಂಗವನ್ನು ಸಂತೋಷದಿಂದ ಅನುಭವಿಸಲು ಸ್ವತಂತ್ರವಾಗಿರುತ್ತದೆ. ॥144॥ ಅಂತಿಮ ಜೀವನ್ಮುಕ್ತಿಯನ್ನು ಪಡೆಯಲೋಸುಗ ಒಂದೇ ದಿವ್ಯೌಷಧವೆಂದರೆ ಇಂದ್ರಿಯ ನಿಗ್ರಹವನ್ನು ಪಡೆಯುವುದು. ಸತ್ಸಂಗಕ್ಕಾಗಿ ತೀವ್ರವಾದ ಆಸೆ ಇಲ್ಲದಿದ್ದಲ್ಲಿ ಸ್ವಸ್ವರೂಪವನ್ನು ಅರಿಯಲಾರರು. ॥145॥ ಸುಖದ ಹಿಂದೆಯೇ ದುಃಖವಿರುತ್ತದೆ. ದುಃಖದ ನಂತರ ಸುಖ. ಪ್ರತಿಯೊಬ್ಬರೂ ಸುಖವನ್ನು ಸ್ವಾಗತಿಸುತ್ತಾರೆ. ಆದರೆ ದುಃಖದಿಂದ ದೂರ ಓಡುತ್ತಾರೆ. ॥146॥ ನೀನು ವಿಧಿಯನ್ನು ಸಂತೋಷವಾಗಿ ಎದುರಿಸುವಾಗಲೇ ಆಗಲಿ, ತಿರುಗಿದಾಗಲೇ ಆಗಲಿ ಅದು ಏನಾಗಬೇಕೋ ಅದೇ ನಡೆಯುತ್ತದೆ. ಆದರೆ ಎರಡೂ ರೀತಿಯ ವಿಧಿಬರಹದ ಅನುಭವಗಳಿಂದ ಮುಕ್ತಿಪಡೆಯಲು ಸಂತರ ಸಂಗವೊಂದೇ ಉಳಿದಿರುವ ಮಾರ್ಗ. ॥147॥ ಸತ್ಸಂಗದಿಂದಾಗಿ ದೇಹದ ಮೇಲಿನ ವ್ಯಾಮೋಹ ನಾಶವಾಗುತ್ತದೆ. ಸತ್ಸಂಗವೇ ಹುಟ್ಟು ಮತ್ತು ಸಾವಿನ ಚಕ್ರವನ್ನು ಭೇದಿಸುತ್ತದೆ. ಕೇವಲ ಸತ್ಸಂಗದಿಂದ ಪರಮಾತ್ಮನ ಕೃಪೆ ಸಿಗುತ್ತದೆ. ಕೂಡಲೇ ಸಂಸಾರ ಬಂಧನ ಕಳಚುತ್ತದೆ. ॥148॥ ಪರಮೋನ್ನತ ಸ್ಥಿತಿಯನ್ನು ತಲುಪಲು ಬೇಕಾದ ಶುದ್ಧಿಯನ್ನು ಸಂತ ಸಂಗವು ನೀಡುತ್ತದೆ. ಪೂರ್ಣವಾಗಿ ಶರಣಾದಲ್ಲಿ, ಶಾಶ್ವತ ಶಾಂತಿಯು ನಿಶ್ಚಯವಾಗಿ ದೊರಕುತ್ತದೆ. ॥149॥ ಸಂತರು ಜನಸಾಮಾನ್ಯರಿಗಾಗಿ ಮತ್ತು ನಾಮಸ್ಮರಣೆ ಮಾಡದವರು, ನಮಸ್ಕರಿಸದೆ ಇರುವವರು, ಶ್ರದ್ಧೆ ಇಲ್ಲದವರು, ಭಜನೆ ಹಾಡದೇ ಇರುವವರು – ಇಂತಹವರಿಗಾಗಿಯೇ ಅವತರಿಸಿ ಬಂದು ಅನುಗ್ರಹಿಸುತ್ತಾರೆ. ॥150॥ ಗಂಗಾ, ಭಾಗೀರಥಿ, ಗೋದಾವರಿ, ಕೃಷ್ಣ, ವೇಣ್ಣ, ಕಾವೇರಿ, ನರ್ಮದ – ಈ ನದಿಗಳು ಸಹ ಸಂತರು ಬಂದು ತಮ್ಮ ನೀರಿನಲ್ಲಿ ಸ್ನಾನ ಮಾಡಲೆಂದು ಆಶಿಸುತ್ತವೆ. ಏಕೆಂದರೆ ಅದರಿಂದ ಅವರು ಸಂತರ ಪಾದಸ್ಪರ್ಶ ಮಾಡಬಹುದು. ॥151॥ ಅವರು ತಾವೇ ಪ್ರಾಪಂಚಿಕರ ಪಾಪಗಳನ್ನು ತೊಳೆಯುತ್ತಾರೆ. ಆದರೆ ಅವರು ಸ್ವತಃ ಸಂತರ ಪಾದಗಳನ್ನು ತೊಳೆಯುವವರೆಗೆ ತಮ್ಮಲ್ಲಿನ ಪಾಪಗಳಿಂದ ದೂರವಾಗುವುದಿಲ್ಲ. ॥152॥ ನನ್ನ ಹಿಂದಿನ ಜನ್ಮಗಳ ಸುಕೃತಗಳಿಂದ ನಾನು ಸಾಯಿ ಮಹಾರಾಜರ ಚರಣಗಳಲ್ಲಿ ಬಂದು ಸೇರಿದ್ದೇನೆ. ಜನನ, ಮರಣದ ವ್ಯೂಹ ಸ್ತಬ್ಧವಾಗಿದೆ ಮತ್ತು ಜೀವಭಯ ಮಾಯವಾಗಿದೆ. ॥153॥ ಈಗ ಸಜ್ಜನ ಶ್ರೋತೃಗಳೇ, ಇಲ್ಲಿಯವರೆಗೆ ಕೇಳಿದ ವಿಷಯಗಳನ್ನು ಬದುಕಿನಲ್ಲಿ ಪ್ರತಿಬಿಂಬಿಸೋಣ. ಈಗ ವಿಶ್ರಮಿಸೋಣ. ಮುಂದಿನ ನಿರೂಪಣೆ ನಂತರ ಮುಂದುವರೆಯುತ್ತದೆ.

॥154॥ ಹೇಮಾಡನು ಸಾಯಿಗೆ ಶರಣಾಗುತ್ತಾನೆ. ನಾನು ಅವರ ಚರಣಗಳ ಪಾದುಕೆ ಹಾಗೆ. ನಾನು ಚರಿತ್ರೆಗಳನ್ನು ಹೇಳುತ್ತಾ ಹೋಗುತ್ತೇನೆ ಮತ್ತು ಅದರಲ್ಲಿ ಪೂರ್ಣ ಆನಂದ ಅನುಭವಿಸುತ್ತೇನೆ. ॥155॥ ಓಹ್! ಅದೆಂತಹ ಅದ್ಭುತ ಮತ್ತು ಸುಂದರ ವ್ಯಕ್ತಿತ್ವ – ಮಸೀದಿಯ ಹೊರಗಡೆ, ತನ್ನ ಭಕ್ತರಿಗೆಲ್ಲ ಉದಿಯನ್ನು ಒಬ್ಬೊಬ್ಬರಿಗೆ, ಅವರ ಯೋಗಕ್ಷೇಮಕ್ಕಾಗಿ ಹಂಚುತ್ತಿರುವ ನೋಟ ಅದಾಗಿತ್ತು. ॥156॥ ಈ ಮಿಥ್ಯಾ ಜಗತ್ತು ಒಂದು ಮಾಯೆ ಎಂದು ಅರ್ಥ ಮಾಡಿಕೊಂಡವನಿಗೆ ಮತ್ತು ಬ್ರಹ್ಮಾನಂದದಲ್ಲಿ ಮುಳುಗಿರುವವನಿಗೆ, ಮನಸ್ಸು ಅರಳುತ್ತಿಹ ಮೊಗ್ಗಿನ ರೀತಿಯಲ್ಲಿರುವವನಿಗೆ ಪ್ರಣಾಮಗಳು. ॥157॥ ಅವರು ಕಣ್ಣುಗಳಿಗೆ ಜ್ಞಾನದ ಕಾಡಿಗೆ ಹಾಕಿದಾಗ ಅಜ್ಞಾನವನ್ನು ದೂರಮಾಡುತ್ತದೆ ಮತ್ತುನಿಮ್ಮನ್ನು ಸ್ವಸ್ವರೂಪಾನಂದಸ್ಥಿತಿಗೆ ಕರೆದೊಯ್ಯುತ್ತದೆ. ಅಂತಹ ಮಹಾನುಭಾವ ಸಾಯಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ॥158॥ ಮುಂದಿನ ಅಧ್ಯಾಯ ಇದಕ್ಕಿಂತ ಉತ್ತಮವಾದದ್ದು. ಪದಗಳು ಕಿವಿಗಳಿಂದ ನಿಮ್ಮ ಹೃದಯವನ್ನು ನಾಟಿದ ಕೂಡಲೇ, ಅವು ನಿಮ್ಮ ಹೃದಯವನ್ನು ಶುಚಿಗೊಳಿಸಿ ಎಲ್ಲ ದುಷ್ಟತನಗಳನ್ನು ಓಡಿಸುತ್ತವೆ. ॥159॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿ ಸಮರ್ಥರ ಅವತಾರ" ಎಂಬ ಹತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.


ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಬ್ರಿಟಿಷ್ ಇಂಡಿಯಾದ ಅತ್ಯಂತ ಕಡಿಮೆ ಬೆಲೆಯುಳ್ಳ ನಾಣ್ಯ.
2. ಮಾನವರಿಂದ ಉಂಟಾದ ಕಷ್ಟಗಳು, ಮೋಕ್ಷ ಸಾಧನೆಯ ಮಾರ್ಗದಲ್ಲಿ ಬರುವ ಅಧ್ಯಾತ್ಮ ಕಷ್ಟಗಳು ಮತ್ತು ಪ್ರಕೃತಿ ವಿಕೋಪದಿಂದ ಉಂಟಾದ ತೊಂದರೆಗಳು.
3. ಕುರಿ ಮತ್ತು ಹುಲಿ ಸ್ವಾಭಾವಿಕವಾಗಿ ಪರಸ್ಪರ ದ್ವೇಷಿಸುವ ಪ್ರಾಣಿಗಳು. ಅವರಲ್ಲಿ ಭಕ್ತಿ ಇಟ್ಟಿದ್ದವು.
4. 'ಲಘಿಮ' ಎಂದರೆ ಅತ್ಯಂತ ಸಣ್ಣದಾಗುವುದು. ಲಿಲಿಪುಟ್ ರೀತಿಯಲ್ಲಿ ಮತ್ತು 'ಮಹಿಮಾ' ಎಂದರೆ ರಾಕ್ಷಸನಷ್ಟು ದೊಡ್ಡದಾಗುವುದು.

5. ಆರು ಅಡಿಗಳಿಗಿಂತ ಹೆಚ್ಚು.
6. ಒಳ್ಳೆಯ ಅಥವಾ ಸತ್ಕರ್ಮಗಳು.
7. ಎಲ್ಲಾ ಸ್ಥಳ/ಜಾಗ.
8. ಅದು ಅವರ ನಿತ್ಯ ವಿಧಿಯಲ್ಲಿದೆ.
9. ದೇವರ ಆರು ಗುಣಗಳು. (ಅ) ಒಡೆತನ (ಆ) ಪರಮಶ್ರೇಷ್ಠ (ಇ) ಸರ್ವಶಕ್ತಿ (ಈ) ಪೂರ್ಣತೆ (ಉ) ಸರ್ವಜ್ಞತ್ವ (ಊ) ನಿರ್ಮೋಹತ್ವ.
10. ಹೋತದ ಕತ್ತಿನಲ್ಲಿ ತೂಗುತ್ತಿರುವ ಮಾಲೆಯ ಹಾಗೆ.
11. ನಾನಾವಲಿ ಎಂಬ ಆಜಾನುಬಾಹು ವ್ಯಕ್ತಿಯೊಬ್ಬ ಶಿರಡಿಯಲ್ಲಿ ಬಹುಕಾಲ ವಾಸವಾಗಿದ್ದವನು, ಎಲ್ಲರನ್ನೂ ತನ್ನದಾಗಿಸಬೇಕೆಂಬ ವ್ಯಕ್ತಿತ್ವವುಳ್ಳವನು. ಬಹಳ ಆತೆಬುರುಕ. ಅವನು ಬಾಬಾರವರ ದರ್ಬಾರಿನ ವ್ಯವಸ್ಥೆಯ ಬಗ್ಗೆ ನಿರ್ದಿಷ್ಟನಾಗಿದ್ದನು. ಅವನ ಇಚ್ಛೆಗನುಗುಣವಾಗಿ ಕೆಲವರನ್ನು ಅಪ್ಪಿಕೊಳ್ಳುವನು. ಕೆಲವರಿಗೆ ಕಪಾಲಮೋಕ್ಷ ಮಾಡುವನು. ಕೆಲವೊಮ್ಮೆ ಒದ್ದೆಮಣ್ಣಲ್ಲಿ ಹೊರಳಾಡುವನು, ಕೆಲವೊಮ್ಮೆ ಕೋತಿಯ ವೇಷಧರಿಸಿ ಹಳ್ಳಿಯ ಮಕ್ಕಳಿಗೂ ಅದೇ ರೀತಿಯ ವೇಷ ಹಾಕಿಸಿ ಸಭೆಯ ಮಧ್ಯಕ್ಕೆ ಬಂದು ಗಲಾಟೆ ಎಬ್ಬಿಸುವನು. ಅವನು ಮತ್ತು ಶ್ರೀ ಸಮರ್ಥರು ಪರಸ್ಪರ ಬಹಳ ಪ್ರೀತಿಸುತ್ತಿದ್ದರು. ಒಂದು ದಿನ ಅವನ ಭಾವದಲ್ಲಿ ಅವನು ಬಾಬಾರವರ ಕೈಹಿಡಿದು ಅವರ ಆಸನದಿಂದ ಎಬ್ಬಿಸಿ ಅವರ ಆಸನದ ಮೇಲೆ ಒಂದು ಕ್ಷಣ ತಾನು ಕುಳಿತನು. ತಕ್ಷಣವೇ ಗೌರವ ಪೂರ್ವಕವಾಗಿ ಸಾಯಿಯನ್ನು ಮತ್ತೆ ಅವರ ಆಸನದ ಮೇಲೆಯೇ ಕುಳ್ಳಿರಿಸಿ ಸಾಷ್ಟಾಂಗ ಪ್ರಣಾಮ ಮಾಡಿದನು. ಅವನು ಬಾಬಾರವರನ್ನು ಕಾಕಾ ಎಂದು ಕರೆಯುತ್ತಿದ್ದನು. ಬಾಬಾರವರ ಸಮಾಧಿಯ ನಂತರ ಅವನು ಬಹಳ ಅಸ್ವಸ್ಥನಾಗಿ ಹದಿಮೂರನೆಯ ದಿನ 'ಕಾಕಾ ಕಾಕಾ' ಎಂದು ಕರೆಯುತ್ತಲೇ ದೇಹತ್ಯಾಗ ಮಾಡಿದನು.ಅವನ ಸ್ಮರಣಾರ್ಥಕವಾಗಿ ಶಿರಡಿಯಲ್ಲಿ ಅವನ ಸಮಾಧಿಯ ಮೇಲೆ ಒಂದು ಶಿಲಾ ಸ್ತಂಭವನ್ನು ನೆಡಲಾಗಿದೆ.
12. ಅಜ್ಞಾನದ ಅಂಧಕಾರದಲ್ಲಿ ಉಳಿಯುತ್ತಾರೆ.
13. ಸತ್ಸಂಗ.



# ಅಧ್ಯಾಯ – 11

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಶ್ರೀ ಸಾಯಿಯ ಮಹತ್ವದ ವರ್ಣನೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಇದು ಹಿಂದಿನ ಅಧ್ಯಾಯದ ಮುಂದುವರಿಯುವಿಕೆ. ಬಾಬಾರವರು ಹಲಗೆಯ ಮೇಲೆ ಮಲಗುವುದು – ಅವರು ಅಲ್ಲಿಗೆ ಹತ್ತುವುದು ಮತ್ತು ಅಲ್ಲಿಂದ ಇಳಿಯುವುದು ಅದನ್ನು ವಿವರಿಸಲು ಅಸಾಧ್ಯ. ॥1॥ ಹಿಂದೂ ಆಗಲಿ, ಮುಸ್ಲಿಮ್ ಆಗಲಿ ಇಬ್ಬರನ್ನೂ ಸಮನಾಗಿ ನೋಡುತ್ತಿದ್ದರು. ಇದು ಅವರ ಜೀವನದ ಧ್ಯೇಯವಾಗಿತ್ತು, ಆ ರೀತಿ ಭಗವಂತ ಶಿರಡಿಯಲ್ಲಿ ಪೂಜಿಸಲ್ಪಡುತ್ತಿದ್ದರು. ॥2॥ ಈಗ ಹನ್ನೊಂದನೆಯ ಅಧ್ಯಾಯ, ಗುರುವಿನ ಅದ್ಭುತ ಜೀವನ ಚರಿತ್ರೆ, ನನ್ನ ಅನುಪಮ ಭಕ್ತಿಯೊಡನೆ ಅದನ್ನು ಸಾಯಿ ಚರಣಗಳಿಗೆ ಒಪ್ಪಿಸಲು ಯೋಚಿಸಿದ್ದೇನೆ. ॥3॥ ಇದರಿಂದ ನೀವು ಅವತಾರದ ರೂಪವನ್ನು ಧ್ಯಾನಿಸಬಲ್ಲಿರಿ, ಅವರನ್ನು ಹೇಗೆ ಆರಾಧಿಸಬಹುದೆಂದು[1] ಅರಿಯಬಹುದು ಮತ್ತು ಪಂಚಭೂತಗಳ ಮೇಲೆ ಅವರಿಗಿದ್ದ ಹತೋಟಿಯನ್ನು ತಿಳಿಯಬಹುದು. ಬಾಬಾರವರ ಮಹತ್ವವನ್ನು ಈ ರೀತಿ ಅರ್ಥ ಮಾಡಿಕೊಳ್ಳಬಹುದು. ॥4॥ ಓ ಶ್ರೋತೃಗಳೇ! ದಯಮಾಡಿ ಗಮನಿಸಿರಿ. ಇಂದ್ರ, ಅಗ್ನಿ ಮತ್ತು ವರುಣರು ಬಾಬಾರವರ ಆಜ್ಞೆಯನ್ನು ಹೇಗೆ ಪಾಲಿಸುತ್ತಿದ್ದರು ಎಂಬುದನ್ನು ನಾನು ಈಗ ವಿವರಿಸುತ್ತೇನೆ. ॥5॥ ಅವರನ್ನು ಪ್ರೀತಿಯಿಂದ ಸ್ಮರಿಸೋಣ. ಅವರು ನಿರ್ಮೋಹತ್ವದ ಸಾಕಾರರೂಪ. ಅಂತಹ ಅವತಾರ ಸ್ವರೂಪ. ಅವರು ಅಸಂಖ್ಯಾತ ಭಕ್ತರಿಗೆ

ಆಶ್ರಯದಾತರು. ॥6॥ ಗುರುವಿನ ವಚನಗಳನ್ನು ಗೌರವಿಸಿ ಮತ್ತು ಶ್ರದ್ಧೆಯಿಂದ ನಿಮ್ಮ ಹೃದಯದಲ್ಲಿ ಅವರಿಗೆ ಸ್ಥಾನ ನೀಡಿ. ಎಲ್ಲ ಅಭಿಲಾಷೆಗಳನ್ನು ಪೂರ್ಣವಾಗಿ ಕರಗಿಸಿ ನಾಶಮಾಡಿ ಕೇವಲ ಈ ಒಂದು ಇಚ್ಛೆಯಿಂದ ಆರಾಧಿಸೋಣ. ॥7॥ ಗುರುರಾಯರು ಈ ಎಲ್ಲ ಏಳು ಉತ್ತ ಗುಣಗಳಿಗಿಂತಲೂ ಮಿಗಿಲಾಗಿದ್ದಾರೆ. ದೇವರೂಪ, ಯಜ್ಞಶಾಲೆ, ಅಗ್ನಿ, ಪರಮತೇಜಸ್ಸು, ಸೂರ್ಯ, ನೀರು ಮತ್ತು ಬ್ರಾಹ್ಮಣ (ಯಜ್ಞೋಪವೀತ ಧರಿಸಿದವನು). ಎಲ್ಲರೂ ಒಮ್ಮನಸ್ಸಿನಿಂದ ಆರಾಧಿಸೋಣ. ॥8॥ ಅತೀವ ಭಕ್ತಿಯಿಂದ ಗುರುವಿನ ಚರಣಗಳಲ್ಲಿ ಶರಣಾಗುವುದರಿಂದ, ಗುರುವೇ ಅಲ್ಲದೆ ಪರಬ್ರಹ್ಮನೂ ಕರಗಿ ಹೋಗುತ್ತಾನೆ ಎಂಬುದು ಭಕ್ತರ ಅನುಭವಗಳು. ಅದು ಗುರುಪೂಜೆಯ ಮಹತ್ವ. ॥9॥ ಪೂಜಿಸುವಪ್ಪಾಗೆ ರೂಪವಿರುವವರೆಗೆ ಗುರುವಿಗೂ ದೇಹದ ಆಕಾರ ಬೇಕು. ನಿರಾಕಾರ ಭಾವನಾ ರೂಪದ ಶಕ್ತಿಗೆ ಭೌತಿಕ ರೂಪದ ಅವಶ್ಯಕತೆ ಇಲ್ಲ. ಶಾಸ್ತ್ರಗಳೂ ಇದನ್ನು ಪ್ರತಿಪಾದಿಸುತ್ತವೆ. ॥10॥ ದೇಹದ ಸ್ವರೂಪವನ್ನು ಪೂಜಿಸುವವರೆಗೆ ಭಕ್ತನಲ್ಲಿ ನಿಜವಾದ ಭಕ್ತಿಯು ಉಕ್ಕುವುದಿಲ್ಲ. ಅಂತಹ ಭಕ್ತಿಯು ಉತ್ಕಟಾವಸ್ಥೆಯ ಪ್ರೀತಿಪೂರ್ಣ ಭಕ್ತಿ ತುಂಬಿ ಬರುವವರೆಗೆ ಮನಸ್ಸು ಅರಳುವುದಿಲ್ಲ. ॥11॥ ತಾವರೆಯ ಮೊಗ್ಗು ಅರಳದಿದ್ದರೆ ಸುಗಂಧವಾಗಲಿ, ಮಾಧುರ್ಯವಾಗಲಿ ಇರುವುದಿಲ್ಲ. ನೀವು ನೋಡುವಂತೆ ದುಂಬಿಯೂ ಸಹ ಒಂದು ಕ್ಷಣವೂ ಅಲ್ಲಿ ನಿಲ್ಲುವುದಿಲ್ಲ. ॥12॥ ಯಾವುದಕ್ಕೆ ಗುಣಗಳು (ಸತ್, ರಜ, ತಮಸ್ಸು) ಇವೆಯೋ ಅದಕ್ಕೆ ಸ್ವರೂಪವಿದೆ. ಇಲ್ಲದಿದ್ದಲ್ಲಿ ಅದು ರೂಪ ರಹಿತ. ಅವೆರಡಕ್ಕೂ ಯಾವುದೇ ಭೇದವಿಲ್ಲ. ನಿರಾಕಾರ ಮತ್ತು ಸಾಕಾರ ಎರಡೂ ಒಂದೇ. ॥13॥ ಅದು ತಣ್ಣಗಾದಾಗ ತುಪ್ಪ, ಕರಗಿದಾಗಲೂ ತುಪ್ಪವೇ. ಮೂರ್ತಿಯೂ ಅಮೂರ್ತವೂ (ಭಾವನೆಯಲ್ಲಿ ಮಾತ್ರ ಇರುವಂತಹದು) ಒಂದೇ ಮತ್ತು ಅದೇ ಅಮೂರ್ತವು ಜಗತ್ತಿನಲ್ಲೆಲ್ಲ ಹರಡಿದೆ. ॥14॥ ಯಾರು ಕಣ್ಣಿಗೆ ಹಬ್ಬವಾಗುವರೋ, ಯಾರ ಚರಣಗಳಲ್ಲಿ ತಲೆ ಇಟ್ಟು ವಿಶ್ರಮಿಸಬಹುದೋ, ಯಾರ ಮೇಲೆ ಧ್ಯಾನಿಸಬಹುದೋ ಅವರಲ್ಲಿ ಪ್ರೀತಿ ಹುಟ್ಟುತ್ತದೆ. ॥15॥ ಯಾರ ಸಹವಾಸದಲ್ಲಿ ಪ್ರೀತಿಯಿಂದ ಹರಟೆ ಹೊಡೆಯಬಹುದೋ, ಯಾರು ಗಂಧಾಕ್ಷತೆಗಳಿಂದ, ಕುಂಕುಮದಿಂದ ಪೂಜಿಸಲ್ಪಡುವರೋ ಅವರಿಗೆ ಒಂದು ಸ್ವರೂಪ ಬೇಕಾಗುತ್ತದೆ. ॥16॥ ನಿರಾಕಾರಕ್ಕಿಂತ ಸಾಕಾರ ರೂಪವನ್ನು ಅತಿ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಸಗುಣಾಕಾರದ ಬಗ್ಗೆ ಒಮ್ಮೆ ಪ್ರೀತಿ ಹೆಚ್ಚಾಯಿತೆಂದರೆ ನಿರಾಕಾರದ ಬಗ್ಗೆ ಜ್ಞಾತಿ ಮೂಡಿದಹಾಗೆಯೇ. ॥17॥ ಭಕ್ತರು ನಿರಾಕಾರವನ್ನು ಅನುಭವಿಸುವಂತೆ ಮಾಡಲು ಬಾಬಾರವರು ಅನೇಕ ಮಾರ್ಗಗಳನ್ನು ಉಪಯೋಗಿಸುತ್ತಿದ್ದರು. ತಮಗಿದ್ದ ಅಧಿಕಾರದಿಂದ ಅವರನ್ನು ದೂರ ಕುಳಿತು ಬಹಳ ಹೊತ್ತಿನವರೆಗೆ ದರ್ಶನಮಾಡಲು ಅನುವು ಮಾಡಿಕೊಡುತ್ತಿದ್ದರು. ॥18॥ ಒಬ್ಬರನ್ನು ಯಾತ್ರೆಗೆ ಕಳಿಸುತ್ತಿದ್ದರು. ಮತ್ತೊಬ್ಬರನ್ನು ಶಿರಡಿಯಲ್ಲೇ ಏಕಾಂಗಿಯಾಗಿ ವಾಡಾದಲ್ಲಿದ್ದು ಪೋತಿ(ಗ್ರಂಥ)ಯನ್ನು ನಿತ್ಯವೂ ಓದುವಂತೆ ಮಾಡುತ್ತಿದ್ದರು. ॥19॥ ಅನೇಕ ವರ್ಷಗಳವರೆಗೆ ಅಂತಹ ಪ್ರಯತ್ನಶೀಲ ತರಬೇತಿ ನೀಡಿದಾಗ ನಿರಾಕಾರದ ಬಗೆಗಿನ ಅರ್ಹತೆ ಹೆಚ್ಚಾಗುತ್ತಿತ್ತು. ವಿಶ್ರಮಿಸಿದಾಗ, ನಿದ್ರೆ ಮಾಡುವಾಗ,

ತಿನ್ನುವಾಗ ಬಾಬಾರವರೊಡನೆ ಮಾನಸಿಕವಾಗಿ ಸಂಗವನ್ನು ಅನುಭವ ಮಾಡಿಕೊಳ್ಳುತ್ತಿದ್ದರು. ॥20॥ ನಿಜವಾಗಿಯೂ ಈ ದೇಹ ನಶ್ವರ. ಒಂದು ಕಾಲಕ್ಕೆ ಅಂತ್ಯವಾಗುತ್ತದೆ. ಆದ್ದರಿಂದ ಭಕ್ತರು ವ್ಯಥೆಪಡದೆ ಶಾಶ್ವತಪದಕ್ಕಾಗಿ ಏಕಾಗ್ರರಾಗಬೇಕು. ॥21॥ ಪರಿಪರಿ ರೀತಿಯ ಈ ಗ್ರಾಹ್ಯ ಜಗತ್ತು ಅಜ್ಞಾತದಿಂದ ಸ್ಪಷ್ಟೀಕರಣಹೊಂದಿದೆ. ಅದೃಶ್ಯದಿಂದ ಆಕಾರತಾಳಿದೆ. ಪುನಃ ನಿರಾಕಾರಕ್ಕೆ ತೆರಳುತ್ತದೆ. ॥22॥ ಬ್ರಹ್ಮನಿಂದ ಉತ್ಪತ್ತಿಯಾದ ಜಗತ್ತು ಪೂರ್ಣ ದೈವತ್ವದ ಸಾರವನ್ನೇ ಪ್ರತಿ ಭಾಗದಲ್ಲೂ ಹೊಂದಿದೆ. ಅದು ಎಲ್ಲಿಂದ ಹುಟ್ಟಿತೋ ಅಲ್ಲಿಯೇ ನಿರಾಕಾರದಲ್ಲಿ ಸಮಾಹಿತಗೊಳ್ಳುತ್ತದೆ. ॥23॥ ಆದ್ದರಿಂದ ಯಾವ ಜೀವಿಯೂ ಸಾಯುವುದಿಲ್ಲ. ಹಾಗಿದ್ದಲ್ಲಿ ಬಾಬಾಗೆ ಸಾವು ಹೇಗಿರುತ್ತದೆ? ಶ್ರೀ ಸಾಯಿಯು ಯಾವಾಗಲೂ ಪರಿಶುದ್ಧರು, ಜ್ಞಾನೋದಯವಾದವರು. ಪರಿಪೂರ್ಣ ಮತ್ತು ಮೃತ್ಯುವಿನಿಂದಲೂ ಸ್ಪರ್ಶಿಸಲ್ಪಡದವರು. ॥24॥ ಕೆಲವರು ಅವರನ್ನುಪರಮಾತ್ಮನ ಭಕ್ತರೆನ್ನಬಹುದು. ಕೆಲವರು ಮಹಾನ್ ಆತ್ಮವೆನ್ನಬಹುದು. ಆದರೆ ನಮಗೆ ಅವರು ನಿಜವಾಗಿಯೂ ಪರಮಾತ್ಮನ ಅವತಾರ ಪುರುಷರು. ॥25॥ ಗಂಗೆಯು ಸಮುದ್ರವನ್ನು ಸೇರಲು ಹರಿಯುತ್ತದೆ. ದಾರಿಯಲ್ಲಿ ಬಿಸಿಲ ದಗೆಯಿಂದ ಬಳಲಿದವರನ್ನು ತಣ್ಣಗೆ ಮಾಡುತ್ತದಡದಲ್ಲಿರುವ ಮರಗಳಿಗೆ ಜೀವಕೊಡುತ್ತದೆ ಪ್ರತಿಯೊಬ್ಬರ ಬಾಯಾರಿಕೆಯನ್ನೂ ತಣಿಸುತ್ತದೆ. ॥26॥ ಅದೇ ರೀತಿ ಸಂತರ ಪ್ರಕಟನೆಯೂ ಹೀಗೆಯೇ ಇರುತ್ತದೆ. ಅವರು ಬರುತ್ತಾರೆ ಮತ್ತು ಮರೆಯಾಗುತ್ತಾರೆ. ಆದರೆ ಅವರ ನಡವಳಿಕೆ ಜಗತ್ತನ್ನೇ ಶುದ್ಧೀಕರಿಸುತ್ತದೆ. ॥27॥ ಅತಿಯಾದ ಕ್ಷಮತಾಭಾವದಿಂದ ಮೃದುಭಾಷಿಕರಾಗಿ, ವಿನೀತ ಗುಣ, ಸಹಿಷ್ಣುತೆ ಮತ್ತು ಅಪರಿಮಿತ ಸಂತೃಪ್ತಿ ಹೊಂದಿರುತ್ತಾರೆ. ॥28॥ ಹೊರನೋಟಕ್ಕೆ ಒಂದು ರೂಪವನ್ನು ಹೊಂದಿದ್ದರೂ ಅವರು ನಿರ್ಗುಣ, ನಿರಾಕಾರರಾಗಿದ್ದರು. ನಿರ್ಮೋಹಿಯಾಗಿ ಸ್ವಸ್ವರೂಪದಲ್ಲಿದ್ದು ವಿಮುಕ್ತರಾಗಿದ್ದು ಸಾಮಾನ್ಯ ಜೀವನ ನಡೆಸುತ್ತಿದ್ದರು. ॥29॥ ಕೃಷ್ಣ ಪರಮಾತ್ಮನು ತಾನೇ ದೇವರಾಗಿದ್ದರೂ ಹೇಳುತ್ತಾನೆ: "ಒಬ್ಬ ಸಂತನು ಹಾಗಿದ್ದರೂ ನನ್ನ ಆತ್ಮ, ನನ್ನ ಜೀವದ ಪ್ರತಿಬಿಂಬ ಮತ್ತು ಒಬ್ಬ ಸಂತ ನನ್ನ ಪ್ರೀತಿಪಾತ್ರ ಮತ್ತು ಅವನು ನಾನೇ." ॥30॥ "ಸಂತರನ್ನು ನನ್ನ ಪ್ರತಿಬಿಂಬಗಳೆಂದು ಕರೆಯಲಾಗದು. ಸಂತರು ನಿಸ್ಸಂದೇಹವಾಗಿ ನಾನೇ. ಆದ್ದರಿಂದ ಅವರಿಗಾಗಿ, ನಾನು ಭಕ್ತರ ಹೊರೆಯನ್ನು ಹೊರುತ್ತೇನೆ. ॥31॥ "ಸಂತರಿಗೆ ಸಂಪೂರ್ಣ ಶರಣಾದವರ ಚರಣಗಳಿಗೆ ನಾನು ಕೂಡ ಎರಗುತ್ತೇನೆ." ಈ ರೀತಿ ಶ್ರೀಕೃಷ್ಣನು ಉದ್ಧವನಿಗೆ ಸಂತರ ಮಹತ್ವವನ್ನು ವಿವರಿಸಿ ಹೇಳಿದ್ದಾನೆ. ॥32॥ ಸಜ್ಜನರಲ್ಲಿ ಅತ್ಯಂತ ಶ್ರೇಷ್ಠನು, ನಿರಾಕಾರದಲ್ಲಿ ಯಾವುದೇ ಆಕಾರ ಇಲ್ಲದವನು, ಉತ್ತಮರಲ್ಲಿ ಉತ್ತಮೋತ್ತಮನು, ಅವನೇ ಸದ್ಗುಣಿಯರಲ್ಲಿ ಸದ್ಗುಣಿ. ॥33॥ ತನ್ನ ಧ್ಯೇಯಗಳನ್ನು ಸಾಧಿಸಿ ಪೂರ್ಣತೃಪ್ತನಾದವನು, ತನ್ನ ಆಸೆಗಳನ್ನು ಪೂರೈಸಿಕೊಂಡು ತೃಪ್ತನಾದವನು, ತನ್ನ ಆತ್ಮದಲ್ಲೇ ತನ್ಮಯನಾದವನು, ಸುಖ, ದುಃಖಗಳಿಗೆ ಅತೀತನಾದವನು. ॥34॥ ಅಂತರಾತ್ಮದ ಆನಂದದ ವೈಭವದ ಸಾಕಾರನಾದವನು, ಅಂತಹವನ ಮಹತ್ವನ್ನು ಯಾರು ತಾನೇ ವಿವರಿಸಬಲ್ಲರು? ಇದು ನಿಜವಾಗಿಯೂ

ಅವರ್ಣನೀಯ! ಅವನೇ ಬ್ರಹ್ಮನ ಅವತಾರ. ॥35॥ ಅಥವಾ ಇದು ವರ್ಣನಾತೀತವಾದ ಶಕ್ತಿಯೇ ಈ ಭೂಮಿಯ ಮೇಲೆ ತಾನಾಗಿಯೇ ಅವತರಿಸಿದ್ದು – ಸತ್ ಚಿತ್ ಆನಂದದ ಅಪರಾವತಾರ? ಅವನೇ ಜ್ಞಾನದ ಗಣಿ. ॥36॥ ಯಾರು ಎಲ್ಲ ರೀತಿಯಲ್ಲೂ ಪರಬ್ರಹ್ಮನೇ ಆಗಿ, ಯಾರು ಸಂಸಾರದ ಎಲ್ಲಾ ಬಂಧನಗಳಿಂದಲೂ ಮುಕ್ತರಾಗಿರುವರೋ ಶಾಶ್ವತವಾಗಿ ನಿರ್ಮೋಹರಾಗಿ, ಬ್ರಹ್ಮನೊಡನೆ ಒಂದಾಗಿರುವವರೋ ಮತ್ತು ಆನಂದ ಸ್ವರೂಪರೋ ಅವರೇ ಅವತರಿಸಿ ಬಂದಿರುವರು. ॥37॥ "ಬ್ರಹ್ಮವು ಆನಂದ ಸ್ವರೂಪ" ಎಂದು ಶ್ರುತಿಗಳು ಹೇಳುತ್ತೆ, ಶ್ರೋತೃಗಳು ಇದನ್ನು ಆಗಾಗ್ಗೆ ಕೇಳಿರಬಹುದು. ಪಂಡಿತರು ಇದನ್ನು ಶಾಸ್ತ್ರಗಳಲ್ಲಿ ಓದಿರುವರು. ಭಕ್ತರು ಇದನ್ನು ಶಿರಡಿಯಲ್ಲಿ ಅನುಭವ ಮಾಡಿಕೊಂಡಿದ್ದಾರೆ. ॥38॥ ಈ ಸಂಸಾರವು ಅತಿ ವಿಶಿಷ್ಟವಾದದ್ದು. ಅದರಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಇವೆ. ಆತ್ಮಜ್ಞಾನವಿಲ್ಲದವರು ಪ್ರತಿಕ್ಷಣದಲ್ಲೂ ಅಂತಹ ಸಂಸಾರದಿಂದ ರಕ್ಷಿಸಿಕೊಳ್ಳಬೇಕು. ॥39॥ ಆದರೆ ಆತ್ಮಸಾಕ್ಷಾತ್ಕಾರ ಪಡೆದವರಿಗೆ ಯಾವ ತೊಂದರೆಯೂ ಇಲ್ಲ. ಅಂತರಾತ್ಮನಲ್ಲಿ ಆಶ್ರಿತರಾಗಿದ್ದಾರೆ. ಅವರು ಸದಾಮುಕ್ತರು, ಆನಂದ ಸ್ವರೂಪರು ಮತ್ತು ಪರಮಾತ್ಮನಲ್ಲೇ ಸ್ಥಿತರು. ॥40॥ ಬಾಬಾರವರೇ ಎಲ್ಲರ ಆವಾಸ. ಅವರಿಗೆ ಬೇರೆ ಆಸನವೇಕೆ? ಅದೂ ಒಂದು ಬೆಳ್ಳಿಯದು ಏಕೆ? ಅದು ಕೇವಲ ಬಾಬಾರವರ ಭಕ್ತರ ಇಚ್ಛೆಗಾಗಿ ಮಾತ್ರ, ॥41॥ ಬಹಳ ಸಮಯದವರೆಗೆ ಒಂದು ಹಳೆಯ ಆಸನ ಇತ್ತು, ಅದೂ ಸಹ ಒಂದು ಗೋಣಿ ಚೀಲದ ಚೂರು. ಅದರ ಮೇಲೆ ಭಕ್ತರು ಚೆನ್ನಾಗಿರುವ ಒಂದು ಹಾಸಿಗೆಯನ್ನು ಅವರಿಗೆ ಕುಳಿತುಕೊಳ್ಳಲು ಹಾಕಿದ್ದರು. ॥42॥ ಅವರು ಕುಳಿತ ಆಸನದ ಹಿಂದುಗಡೆ ಗೋಡೆಗೆ ತಾಗಿದಂತೆ ಭಕ್ತರು ಒಂದು ಒರಗು ದಿಂಬನ್ನು ಹಾಕಿದ್ದರು. ಬಾಬಾರವರು ಭಕ್ತರ ಇಚ್ಛೆಗೆ ಓ ಗೊಟ್ಟಿದ್ದರು. ॥43॥ ಅವರ ನಿವಾಸವು ಶಿರಡಿಯಲ್ಲಿ ಇದ್ದಂತೆ ಕಂಡರೂ ಅವರು ಸರ್ವವ್ಯಾಪಿಯಾಗಿದ್ದರು ಸಾಯಿಯ ಶಕ್ತಿಯಿಂದ ಇದು ಎಲ್ಲ ಭಕ್ತರ ಅನುಭವ ಆಗಿತ್ತು. ॥44॥ ಅವರು ನಿರ್ವಿಕಾರಿಯಾಗಿದ್ದರು. ಭಕ್ತರ ಇಚ್ಛೆಗಳಿಗನುಗುಣವಾಗಿ ಪೂಜೆಯನ್ನೂ, ಗೌರವಗಳನ್ನೂ, ಸ್ವೀಕರಿಸುತ್ತಿದ್ದರು. ಅವರು ಎಲ್ಲ ವಿವಿಧ ರೂಪಗಳ ಭಕ್ತಿಯನ್ನು ಸ್ವೀಕರಿಸುತ್ತಿದ್ದರು. ॥45॥ ಕೆಲವರು ಚಾಮರ ಬೀಸುತ್ತಿದ್ದರು. ಕೆಲವರು ಗಾಳಿ ಬೀಸುತ್ತಿದ್ದರು. ಕೆಲವರು ಶಹನಾಯಿ ಅಥವಾ ಡ್ರಮ್‌ಗಳನ್ನು ಮತ್ತು ಮಂಗಳಕರ ಸಂಗೀತವಾದ್ಯಗಳನ್ನು ನುಡಿಸುತ್ತಿದ್ದರು. ಮತ್ತೆ ಕೆಲವರು ಪೂಜೆಮಾಡುತ್ತಿದ್ದರು. ॥46॥ ಕೆಲವರು ಅವರ ಕೈಗಳನ್ನು ಪಾದಗಳನ್ನು ತೊಳೆದು ಆ ನೀರನ್ನು ತೀರ್ಥವೆಂದು ಸ್ವೀಕರಿಸುತ್ತಿದ್ದರು. ಕೆಲವರು ಅತ್ತರು ಮತ್ತು ಗಂಧದ ಪಟ್ಟೆಗಳನ್ನು ಹಚ್ಚುತ್ತಿದ್ದರು. ಕೆಲವರು 13 ಪದಾರ್ಥಗಳಿಂದ[2] ಕೂಡಿದ ಎಲೆ ಅಡಿಕೆಯನ್ನು ಮಹಾ ನೈವೇದ್ಯವಾಗಿ[3] ಅರ್ಪಿಸುತ್ತಿದ್ದರು. ॥47॥ ಕೆಲವರು ಎರಡು ಬೆರಳುಗಳಿಂದ ಗಂಧವನ್ನು ಹಣೆಯ ಮೇಲೆ ಪಟ್ಟೆಯಾಗಿ ಶಿವಲಿಂಗಕ್ಕೆ ಹಚ್ಚುವ ರೀತಿಯಲ್ಲಿ ಹಚ್ಚುತ್ತಿದ್ದರು. ಕೆಲವರು ಕಸ್ತೂರಿ ಹಾಕಿದ ಸುಗಂಧ ಹಾಗೂ ಶ್ರೀಗಂಧವನ್ನು ಹಚ್ಚುತ್ತಿದ್ದರು. ॥48॥ ಒಮ್ಮೆ ತಾತ್ಯಾ ಸಾಹೇಬ್ ನೂಲ್ಕರ್‌ನ ಸ್ನೇಹಿತನು ಡಾ॥ ಪಂಡಿತ್ ಎನ್ನುವವನು ಶಿರಡಿಗೆ ಕೇವಲ

ಒಮ್ಮೆ ಬಾಬಾರವರ ದರ್ಶನ ಮಾಡಲೆಂದು ಬಂದನು. ॥49॥ ಅವನು ಶಿರಡಿಗೆ ಬಂದ ಕೂಡಲೇ ಮೊದಲು ಮಸೀದಿಗೆ ಹೋದನು. ಬಾಬಾರವರಿಗೆ ಪ್ರಣಾಮ ಸಲ್ಲಿಸಿ ಒಂದು ಕ್ಷಣ ನಿಶ್ಚಿಂತೆಯಿಂದ ಕುಳಿತನು. ॥50॥ ಆಗ ಬಾಬಾರವರು ಹೇಳಿದರು: "ದಾದಾ ಭಟ್‌ರವರಲ್ಲಿಗೆ ಹೋಗು, ಹೋಗು, ಈ ಕಡೆ ಹೋಗು" ಎಂದು ತಮ್ಮ ಕೈಬೆರಳುಗಳಿಂದ ದಾರಿಯನ್ನು ತೋರಿಸುತ್ತಾ ಹೇಳಿದರು. ॥51॥ ಪಂಡಿತ್‌ನು ದಾದಾರವರ ಹತ್ತಿರ ಹೋದನು. ದಾದಾ ಅವನಿಗೆ ತಕ್ಕ ಸುಸ್ವಾಗತ ನೀಡಿದನು. ನಂತರ ದಾದಾನು ಬಾಬಾರವರನ್ನು ಪೂಜಿಸಲು ಹೊರಟನು. ಇವನನ್ನು ತನ್ನ ಜೊತೆ ಬರುವಿಯಾ ಎಂದು ಕೇಳಿದನು. ॥52॥ ಪಂಡಿತ್, ದಾದಾನ ಜೊತೆ ಹೊರಟನು. ದಾದಾ ಬಾಬಾರವರನ್ನು ಪೂಜಿಸಿದನು. ಅಲ್ಲಿಯವರೆಗೂ ಯಾರೂ ಬಾಬಾರವರಿಗೆ ಸುಗಂಧಿತ ಶ್ರೀಗಂಧ ಮತ್ತು ತಿಲಕವನ್ನು ಹಾಕುವ ಧೈರ್ಯ ಮಾಡಿರಲಿಲ್ಲ. ॥53॥ ಯಾವ ಭಕ್ತರೇ ಆಗಲಿ, ಸುಗಂಧಿತ ಶ್ರೀಗಂಧವನ್ನು ಹಣೆಗೆ ಹಚ್ಚಲು ಬಾಬಾರವರು ಅನುಮತಿ ನೀಡಿರಲಿಲ್ಲ. ಕೇವಲ ಮ್ಹಾಳಸಾಪತಿ ಮಾತ್ರ ಅವರ ಕುತ್ತಿಗೆಗೆ ಹಚ್ಚುತ್ತಿದ್ದನು. ಇತರರು ಅವರ ಪಾದಗಳಿಗೆ ಹಚ್ಚುತ್ತಿದ್ದರು. ॥54॥ ಆದರೆ ಪಂಡಿತ್ ಬಹಳ ಸರಳ ಹಾಗೂ ಭಕ್ತಿ ಸಂಪನ್ನ ವ್ಯಕ್ತಿಯಾಗಿದ್ದನು. ಅವನು ದಾದಾನ ಪೂಜಾ ತಟ್ಟೆಯನ್ನು ತೆಗೆದುಕೊಂಡನು. ಶ್ರೀ ಸಾಯಿಯವರ ತಲೆಯನ್ನು ಹಿಡಿದು ಮೂರು ಬೆರಳುಗಳಿಂದ ತ್ರಿಪುಂಡ್ರವನ್ನು ಹಚ್ಚಿದನು. ॥55॥ ಅವನ ಧೈರ್ಯವನ್ನು ನೋಡಿ ದಾದಾನ ಹೃದಯ ಬಡಿತ ಹೆಚ್ಚಿತು. ಬಾಬಾರವರು ಕೋಪೋದ್ರಿಕ್ತರಾಗುವರೆಂದು ಅವನು ಭಾವಿಸಿದನು. ಎಂತಹ ದುಡುಕಿನ ಸಂಭವ? ॥56॥ ಈ ರೀತಿ ಕಠಿಣ ಪರಿಸ್ಥಿತಿ ಉಂಟಾಗಿತ್ತು. ಬಾಬಾರವರು ಒಂದು ಮಾತನ್ನೂ ಆಡಲಿಲ್ಲ. ಅದಕ್ಕೆ ಬದಲು ಅವರು ಸಂತಸಗೊಂಡರು. ಅವನ ಬಗ್ಗೆ ಸ್ವಲ್ಪವೂ ಕೋಪಗೊಳ್ಳಲಿಲ್ಲ. ॥57॥ ಅದು ಹಾಗಿರಲಿ, ಅವರು ಆ ಕ್ಷಣವನ್ನು ಹಾಗೆಯೇ ಕಳೆದರು. ಆದರೆ ದಾದಾ ಸ್ವಲ್ಪ ಅಶಾಂತನಾದನು. ಅನಂತರ ಅದೇ ದಿನದ ಕೊನೆಯಲ್ಲಿ ಅವನು ಅದರ ಬಗ್ಗೆ ಬಾಬಾರವರನ್ನು ಪ್ರಶ್ನಿಸಿದನು. ॥58॥ "ನಾವು ಒಂದು ಸಣ್ಣ ಗಂಧದ ತಿಲಕವನ್ನು ನಿಮ್ಮ ಹಣೆಗೆ ಹಚ್ಚಲು ಪ್ರಯತ್ನಿಸಿದರೆ ನೀವು ನಿಮ್ಮ ಹಣೆಯನ್ನು ಮುಟ್ಟಲು ಬಿಡುವುದಿಲ್ಲ. ಆದರೆ ಬೆಳಗ್ಗೆ ಏನಾಯಿತು? ॥59॥ "ನೀವು ನಮ್ಮ ತಿಲಕವನ್ನು ಇಷ್ಟಪಟ್ಟಿಲ್ಲ. ಆದರೂ ಪಂಡಿತ್‌ನ ತ್ರಿಪುಂಡ್ರವು ನಿಮಗೆ ಮೆಚ್ಚುಗೆಯಾಯಿತು ಎಂದು ಕಾಣುತ್ತದೆ. ಈ ವಿಪರೀತ ವರ್ತನೆ ಏಕೆ? ಸ್ವಲ್ಪ ಅನಿಶ್ಚಯತೆ ಇದೆ ಎಂದು ಅನಿಸುತ್ತದೆ." ॥60॥ ಅನಂತರ ಬಾಬಾರವರು ಬಹಳ ಪ್ರೀತಿಯಿಂದ ಮುಗುಳ್ನಕ್ಕರು ಮತ್ತು ದಾದಾಗೆ ಹೇಳಿದರು, ಆ ಮಧುರವಾದ ಟೀಕೆಯನ್ನು ನೀವೆಲ್ಲರೂ ಭಕ್ತಿಯಿಂದ ಆಲಿಸಿರಿ. ॥61॥ "ದಾದಾ, ಅವನ ಗುರು ಒಬ್ಬ ಬ್ರಾಹ್ಮಣ. ನಾನು ಜಾತಿಯಲ್ಲಿ ಮುಸಲ್ಮಾನ. ಆದರೆ ನನ್ನನ್ನು ತನ್ನ ಗುರುವೆಂದೇ ನಂಬಿ ಅವನು ಗುರುಪೂಜೆ ಮಾಡಿದನು. ॥62॥ "ನಾನು ಒಬ್ಬ ದೊಡ್ಡ ಪವಿತ್ರ ಬ್ರಾಹ್ಮಣ. ಅವನು ಅಪವಿತ್ರನಾದ ಯವನ (ಮುಸ್ಲಿಮ್). ಅವನನ್ನು ಪೂಜಿಸಲು ಹೇಗೆ ಸಾಧ್ಯ?" ಅವನಿಗೆ ಈ ರೀತಿಯ ಯಾವುದೇ ಸಂಶಯಗಳಿರಲಿಲ್ಲ. ॥63॥ "ಈ ರೀತಿ ಅವನು ನನ್ನನ್ನು

ಪಾಶದಿಂದ ಬಂಧಿಸಿದನು. ಅಲ್ಲಿ ನನಗೆ ಯಾವುದೇ ಪರ್ಯಾಯವಿರಲಿಲ್ಲ. ಯಾವುದೇ ಆಕ್ಷೇಪಣೆ ಎತ್ತಲು ಅವಕಾಶವೇ ಇರಲಿಲ್ಲ. ಅವನು ನನ್ನನ್ನು ಮೀರಿಸಿದ." ॥64॥ ಅಂತಹ ಪ್ರತ್ಯುತ್ತರ ಕೇಳಿದರೂ ದಾದಾನು ಅದನ್ನು ಹಗುರವಾಗಿ ಪರಿಗಣಿಸಿದನು. ಆರೆ ದಾದಾ ಮನೆಗೆ ಹಿಂತಿರುಗಿದ ಮೇಲೆ ಅದರ ಸಾರವನ್ನು ಅರ್ಥಮಾಡಿಕೊಂಡನು. ॥65॥ ಬಾಬಾರವರ ಈ ಚಂಚಲತೆ ದಾದಾನನ್ನು ಬಹಳವಾಗಿ ನೋಯಿಸಿತ್ತು, ಆದರೆ ಪಂಡಿತ್ ಹತ್ತಿರ ಮಾತನಾಡುವಾಗ ಅವನ ಸಂಶಯಗಳು ಕೂಡಲೇ ನಿವಾರಣೆಯಾದವು. ॥66॥ ಪಂಡಿತ್‌ನು ಧೂಪೇಶ್ವರನ ರಘುನಾಥ ಎಂಬ ಸಂನ್ಯಾಸಿ, 'ಕಾಕಾ ಪುರಾಣಿಕ್" ಎಂದೇ ಹೆಸರಾದವನು, ಅವರ ಚರಣಗಳ ಸೇವೆ ಮಾಡುತ್ತಿದ್ದನು. ಅವನ ಗಹನವಾದ ಸಂಬಂಧ ಶಿಷ್ಯನದಾಗಿತ್ತು. ॥67॥ ಅವನು ಕಾಕಾರವರನ್ನು ಆಹ್ವಾನಿಸಿದ್ದನು. ಬಾಬಾರವರು ಕಾಕಾರವರೊಡನೆ ಸಮಾಹಿತರಾಗಿದ್ದರೆಂದೇ ಭಾವಿಸಿದನು. ಅವರವರ ಭಕ್ತಿಗನುಸಾರವಾಗಿ ಭಕ್ತಿಯ ಪ್ರತಿಫಲ ದೊರಕುತ್ತದೆ. ॥68॥ ಅದು ಹಾಗಿರಲಿ. ಅವರು (ಬಾಬಾ) ಇಚ್ಛಿಸಿದಲ್ಲಿ ಮಾತ್ರವೇ ಎಲ್ಲಾ ವಿಧಿ ವಿಧಾನಗಳನ್ನು ಮಾಡಿಸಿಕೊಳ್ಳುವರು. ಇಲ್ಲದಿದ್ದರೆ ಪೂಜಾ ತಾಲಿಯನ್ನು ಎಸೆದು ಉಗ್ರನರಸಿಂಹನ ಅವತಾರ ತಾಳುವರು. ॥69॥ ಅವರು ಈ ಸ್ವಭಾವವನ್ನು ಪ್ರಕಟಿಸಿದ ಮೇಲೆ ಅದನ್ನು ತಡೆಯುವಷ್ಟು ಧೈರ್ಯ ಯಾರಿಗೆ ಇರುತ್ತದೆ? ಪ್ರತಿಯೊಬ್ಬರೂ ಅವರು ಕೋಪೋದ್ರಿಕ್ತರಾದಾಗ ಜೀವವುಳಿಸಿಕೊಳ್ಳಲು ಓಡುತ್ತಿದ್ದರು. ॥70॥ ಕೆಲವೊಮ್ಮೆ ಥಟ್ಟನೆ ಅವರು ಭಕ್ತರ ಮೇಲೆ ಅತ್ಯುಗ್ರರಾಗುವರು. ಬೆಂಕಿ ಮತ್ತು ಗಂಧಕಗಳಿಂದ ತುಂಬಿದವರು ಕೆಲವೊಮ್ಮೆ ಮೇಣಕ್ಕಿಂತ ಮೃದುವಾಗಿ, ಶಾಂತಿ ಮತ್ತು ಕ್ಷಮೆಯ ಪ್ರತಿಮೂರ್ತಿಯಾಗುವರು. ॥71॥ ಕೆಲವೊಮ್ಮೆ ಉಕ್ಕುವ ಜ್ವಾಲಾಮುಖಿಯಾಗಿ ಭಕ್ತರನ್ನು ಕತ್ತಿಯ ಅಲಗಿನ ಮೇಲೆ ನಿಲ್ಲಿಸುವರು. ಕೆಲವೊಮ್ಮೆ ಬೆಣ್ಣೆಗಿಂತ ಮೃದುವಾಗಿ ಪರಮಾನಂದದಿಂದ ಪ್ರಕಾಶಿಸುತ್ತಿದ್ದರು. ॥72॥ ಅವರು ಕೋಪದಿಂದ ನಡುಗುತ್ತಿದ್ದರೂ, ಕಣ್ಣುಗಳನ್ನು ಸುತ್ತ ಹೊರಳಿಸುತ್ತಿದ್ದರೂ, ಹೃದಯದಲ್ಲಿ ಕರುಣೆಯ ಚಿಲುಮೆ ಉಕ್ಕುತ್ತಿರುತ್ತಿತ್ತು, ಅದು ತಾಯಿ ಮಗುವಿನಲ್ಲಿ ತೋರಿಸುವಂತಹ ಕರುಣೆ. ॥73॥ ಮತ್ತೊಂದು ಕ್ಷಣದಲ್ಲಿಯೇ ಕೋಪ ಉಪಶಮನವಾಗಿ ಬಾಬಾ ತಮ್ಮ ಸಾಮಾನ್ಯ ವರ್ತನೆಯನ್ನು ತೋರಿಸುತ್ತಿದ್ದರು. ಅವರು ಭಕ್ತರನ್ನು ಹೆಸರು ಹಿಡಿದು ಕರೆದು ಹೇಳುತ್ತಿದ್ದರು: "ನಾನು ಯಾರ ಮೇಲಾದರೂ ಕೋಪಗೊಂಡರೆ ನನಗೆ ಅದರ ಅರಿವು ಇರುವುದಿಲ್ಲ" ಎಂದು. ॥74॥ "ತಾಯಿಯು ಮಗುವನ್ನು ಹೊಡೆದರೆ, ಇಲ್ಲಾ ಸಮುದ್ರವು ನದಿಯ ನೀರನ್ನು ಹಿಂದಕ್ಕೆ ತಿರುಗಿಸಿದರೆ ಮಾತ್ರ ನಾನು ನಿಮ್ಮನ್ನು ಧಿಕ್ಕರಿಸಲು, ನಿಮಗೆ ಕಷ್ಟ ಕೊಡಲು ಸಾಧ್ಯ. ॥75॥ "ನಾನು ನನ್ನ ಭಕ್ತರ ಋಣಕ್ಕೆ ಅಧೀನ. ನಾನು ಯಾವಾಗಲೂ ಅವರ ಪಕ್ಕದಲ್ಲಿಯೇ ಇರುತ್ತೇನೆ. ನಾನು ಪ್ರೀತಿಗಾಗಿ ಸದಾ ಹಸಿದಿರುತ್ತೇನೆ. ನಾನು ಅವರ ಕರೆಗಾಗಿ ಕಾಯುತ್ತಿರುತ್ತೇನೆ." ॥76॥ ನಿರೂಪಣೆಯ ಈ ಭಾಗವನ್ನು ಬರೆಯುವಾಗ ಒಂದು ಸೂಕ್ತವಾದ ಕತೆ ನೆನಪಾಗುತ್ತದೆ. ಅದು ಅತಿ ವಿಶಿಷ್ಟವಾದುದು. ಅದನ್ನು ಗೌರವದಿಂದ ಆಲಿಸಿರಿ. ॥77॥ ಒಮ್ಮೆ ಒಬ್ಬ ಮುಸ್ಲಿಮನು ಕಲ್ಯಾಣದ ನಿವಾಸಿ.

ಸಿದ್ದಿಕ್ ಫಾಲ್ಕೆ ಎಂಬುವನು ಮೆಕ್ಕ ಮತ್ತು ಮದಿನಾ ತೀರ್ಥಯಾತ್ರೆ ಮಾಡಿ ಶಿರಡಿಗೆ ಬಂದನು. ॥78॥ ಆ ಮುದುಕ ಹಾಜಿಯು ಚಾವಡಿಯಲ್ಲಿ[4] ಉತ್ತರ ದಿಕ್ಕಿಗೆ ಮುಖಮಾಡಿ ನೆಲೆಸಿದನು. ಮೊದಲ ಒಂಭತ್ತು ತಿಂಗಳವರೆಗೆ ಬಾಬಾ ಅವನ ಮೇಲೆ ಬೇಸರಗೊಂಡಿದ್ದುಅವನನ್ನು ಭೇಟಿಯಾಗಲು ತಯಾರಿರಲಿಲ್ಲ. ॥79॥ ಅವನಿಗೆ ಇನ್ನೂ ಶುಭ ಮುಹೂರ್ತ ಬಂದಿರಲಿಲ್ಲ. ಅವನು ಶ್ರಮವಹಿಸಿ ಚಾವಡಿಯಿಂದ ಮಸೀದಿಗೆನಡೆಸಿದ ಓಡಾಟಗಳು ನಿರರ್ಥಕವಾಗಿದ್ದವು. ಅವನು ವಿವಿಧ ಮಾರ್ಗಗಳನ್ನು, ಉಪಾಯಗಳನ್ನು ಮಾಡಿದರೂ ಬಾಬಾರವರ ದೃಷ್ಟಿಗೆ ಬೀಳಲು ಸಾಧ್ಯವಾಗಲಿಲ್ಲ. ॥80॥ ಮಸೀದಿಯು ಯಾವಾಗಲೂ ಎಲ್ಲರಿಗೂ ತೆರೆದಿರುತ್ತಿತ್ತು, ಯಾರಿಗೂ ಯಾವ ಪ್ರತಿಬಂಧವೂ ಇರಲಿಲ್ಲ. ಆದರೆ ಫಾಲ್ಕೆಗೆ ಮಾತ್ರ ಮಸೀದಿಯ ಮೆಟ್ಟಿಲು ಹತ್ತಲು ಅನುಮತಿ ಇರಲಿಲ್ಲ. ॥81॥ ಫಾಲ್ಕೆಯು ಅಂತರಂಗದಲ್ಲಿ ಖಿನ್ನನಾಗಿದ್ದನು. "ನನ್ನ ಹೆಜ್ಜೆಗಳು ಮಸೀದಿಯನ್ನು ಪ್ರವೇಶಿಸಲಾರದಂತೆ ಮಾಡಿರುವುದಕ್ಕೆ ಅದೇನು ಕರ್ಮಗಳನ್ನು ಮಾಡಿದ್ದೇನೆ? ಅದೆಂತಹ ಪಾಪಗಳನ್ನು ಮಾಡಿದ್ದೇನೆ? ॥82॥ "ಯಾವ ರೀತಿಯ ಘಟನೆಗಳ ತಿರುವಿನಿಂದ ಬಾಬಾರವರು ನನ್ನ ಮೇಲೆ ಪ್ರಸನ್ನರಾಗುತ್ತಾರ್" ಎಂಬುದು ಅವನ ಮನಸ್ಸಿನಲ್ಲಿ ಒಂದೇ ಯೋಚನೆಯಾಗಿ ಹಗಲು ರಾತ್ರಿ ಅವನ ಹೃದಯದ ಬಡಿತದಂತೆ ಆಗಿತ್ತು. ॥83॥ ಅದೇ ಸಮಯದಲ್ಲಿ ಯಾರೋ ಒಬ್ಬರು ಅವನಿಗೆ ಅಷ್ಟು ದುಃಖಿತನಾಗಬಾರದೆಂದು ಸಲಹಿತ್ತರು. "ಮಾಧವರಾವ್‌ನ ಸಹಾಯ ತೆಗೆದುಕೋ. ನಿನ್ನ ಇಚ್ಛೆ ಪೂರೈಸುತ್ತದೆ" ಎಂದರು. ॥84॥ ನಂದಿಯ ದರ್ಶನ ಮಾಡುವ ಮುಂಚೆ'ಶಂಕರನು ಅನುಕೂಲಕರನಾಗುವನೇನು? ಅವನು ಈ ಮಾರ್ಗವನ್ನು ಒಪ್ಪಿದನು. ಈ ಮಾರ್ಗವನ್ನು ಉಪಯೋಗಿಸುವ ಅಭಿಪ್ರಾಯ ಅವನಿಗೆ ಸಮ್ಮತವಾಯಿತು. ॥85॥ ಮೇಲ್ನೋಟಕ್ಕೆ ಶ್ರೋತೃಗಳು ಇದನ್ನು ಉತ್ಪ್ರೇಕ್ಷೆಯೆಂದು ಭಾವಿಸಬಹುದು. ಆದರೆ ಇದು ಶಿರಡಿಯಲ್ಲಿ ದರ್ಶನ ಸಮಯದಲ್ಲಿ ಇದ್ದ ಎಲ್ಲರ ಅನುಭವ. ॥86॥ ಯಾರಾದರೂ ಬಾಬಾರವರ ಹತ್ತಿರ ಯಾವುದೇ ತೊಂದರೆ ಇಲ್ಲದೆ ಮಾತನಾಡಬೇಕೆಂದರೆ ಮಾಧವರಾವ್‌ನ ಜೊತೆಹೋಗಬೇಕಾಗಿತ್ತಷ್ಟೆ. ॥87॥ ಯಾರು ಬಂದಿದ್ದಾರೆ? ಮತ್ತು ಎಲ್ಲಿಂದ ಬಂದಿದ್ದಾರೆ? ಇದನ್ನೆಲ್ಲ ಮಧುರವಾಗಿ, ತಕ್ಕುದಾದ ರೀತಿಯಲ್ಲಿ ಹೇಳಬೇಕೆಂದುಮತ್ತು ಪರಿಚಯಿಸಬೇಕಾದರೆ ಮಾಧವರಾವ್ ಬೇಕಾಗಿತ್ತು, ನಂತರ ಸಮರ್ಥರು ಮಾತನಾಡಲು ಇಚ್ಛಿಸುತ್ತಿದ್ದರು. ॥88॥ ಹಾಜಿಯು ಇದೆಲ್ಲವನ್ನು ಕೇಳಿ ಮಾಧವರಾವ್‌ನ ಮನವೊಪ್ಪಿಸಿದನು. ಅವನು ಹೇಳಿದನು, "ಒಮ್ಮೆ, ಇಷ್ಟಾದರೂ ನನ್ನ ಸಂದಿಗ್ಧತೆಯನ್ನು ತಿಳಿಸಿ. ಅಸಾಧ್ಯವಾದುದನ್ನುಸಾಧಿಸಲು ಸಹಾಯಮಾಡಿರಿ." ॥89॥ ಸರಿಯಾದ ಅವಕಾಶಕ್ಕಾಗಿ ಮಾಧವ ರಾವ್ ಮೇಲೆ ಒತ್ತಡ ಹಾಕಿ ಒಂದು ದೃಢ ನಿರ್ಧಾರಕ್ಕೆ ಬಂದನು. ಕಷ್ಟವಾದರೂ ಸರಿ ಪ್ರಯತ್ನ ಮಾಡುವೆ ಎಂದುಕೊಂಡನು. ॥90॥ ಅವನು ಧೈರ್ಯಮಾಡಿ ಮಸೀದಿಗೆ ಹೋದನು. ಬಹಳ ಸೂಕ್ಷ್ಮವಾಗಿ ಆ ವಿಷಯವನ್ನು ಪ್ರಸ್ತಾಪಿಸಿದ. "ಬಾಬಾ, ಆ ಮುದುಕನು ಬಹಳ ಖಿನ್ನನಾಗಿದ್ದಾನೆ. ದಯಮಾಡಿ ಅವನ ಮೇಲೆ ಕೃಪೆತೋರಿರಿ." ॥91॥ "ಆ ಹಾಜಿ ಮೆಕ್ಕಾ – ಮದೀನ ಯಾತ್ರೆ

ಮಾಡಿದ ನಂತರ ನಿಮ್ಮ ದರ್ಶನಕ್ಕಾಗಿ ಶಿರಡಿಗೆ ಬಂದಿದ್ದಾನೆ. ನೀವು ಅವನ ಮೇಲೆ ದಯೆ ತೋರದೆ ಇರಲು ಹೇಗೆ ಸಾಧ್ಯ? ಅವನನ್ನು ಮಸೀದಿಯ ಒಳಗೆ ಬರಲು ಏಕೆ ಬಿಡುತ್ತಿಲ್ಲ? ॥92॥ "ಅಸಂಖ್ಯಾತ ಜನರು ಬರುತ್ತಾರೆ, ಸ್ವತಂತ್ರವಾಗಿ ಮಸೀದಿಯನ್ನು ಪ್ರವೇಶಿಸುತ್ತಾರೆ. ದರ್ಶನ ಪಡೆಯುತ್ತಾರೆ ಮತ್ತು ಕೂಡಲೇ ಹೊರಟು ಹೋಗುತ್ತಾರೆ. ಇವನೊಬ್ಬ ಮಾತ್ರ ವ್ಯರ್ಥವಾಗಿ ಏಕೆ ಆಯಾಸ ಪಡುತ್ತಿದ್ದಾನೆ? ॥93॥ "ಅವನ ಮೇಲೆ ದಯೆತೋರಿರಿ. ಕೇವಲ ಒಂದು ಸಲ ಮಸೀದಿಯಲ್ಲಿ ಅವನನ್ನು ಭೇಟಿ ಮಾಡಿರಿ. ಅನಂತರ ಅವನು ಕೂಡಾ ಬೇಗನೆ ಹೊರಟುಹೋಗುತ್ತಾನೆ. ಅವನ ಮನದಲ್ಲಿರುವ ಪ್ರಶ್ನೆ ಕೇಳಿ ಹೊರಡುವನು." ॥94॥ "ಶಾಮ, ನಿನ್ನ ತುಟಿಯ ಮೇಲೆ ಮಗುವಿನ ಜೊಲ್ಲು ಇನ್ನೂ ಆರಿರುವುದಿಲ್ಲ. ಅಲ್ಲಾನ ಕೃಪೆ ಅವನ ಮೇಲೆ ಇಲ್ಲದೇ ಇರುವಾಗ ನಾನು ಏನು ಮಾಡಲಿ? ॥95॥ ಅವನು ಅಲ್ಲಾಹ್ ಮಿಯಾನಿಗೆ ಋಣಿಯಾಗಿಲ್ಲದಿದ್ದರೆ ಮಸೀದಿಯ ಮೆಟ್ಟಿಲನ್ನು ಯಾರಾದರೂ ಹತ್ತಲು ಸಾಧ್ಯವೇ? ಫಕೀರನ ಕೃತ್ಯಗಳೆಲ್ಲವೂ ಅರ್ಥದ ಆಚೆ ಇರುತ್ತವೆ. ಅವುಗಳಮೇಲೆ ನನ್ನ ಅಧಿಕಾರ ಇರುವುದಿಲ್ಲ." ॥96॥ ಅದು ಹಾಗಿರಲಿ, ಬಾರ್ವಿಯ ಬಾವಿಯ ಆಚೆ ನಡೆಯುವ ಹಾದಿ ಕಿರಿದಾಗಿದೆ. ಹೋಗಿ ಅವನನ್ನು ಸ್ಪಷ್ಟವಾಗಿ ಕೇಳು, ಅವನು ಸರಿಯಾಗಿ ನಡೆದುಕೊಂಡು ಅಲ್ಲಿಗೆ ಬರುತ್ತಾನಾ ಎಂದು. ॥97॥ ಹಾಜಿ ಹೇಳಿದನು, "ಅದೆಷ್ಟೇ ಕಷ್ಟವಾಗಿರಲಿ, ನಾನು ಸರಿಯಾಗಿಯೇ ನಡೆದು ಬರುತ್ತೇನೆ. ಆದರೆ ಒಂದು ವೈಯಕ್ತಿಕ ಭೇಟಿ ನೀಡಲಿ ಮತ್ತು ಅವರ ಪಾದಗಳ ಬಳಿ ಕುಳಿತಿರಲು ಅನುವು ಮಾಡಿಕೊಡಲಿ." ॥98॥ ಶಾಮನ ಉತ್ತರವನ್ನು ತಿಳಿದು ಬಾಬಾರವರು ಹೇಳಿದರು, "ಅವನನ್ನು ಮತ್ತೆ ಕೇಳು. ನಾಲ್ಕು ಸಲ ನಾಲ್ವತ್ತು ಸಾವಿರ ರೂಗಳನ್ನು ನನಗೆ ಕೊಡುತ್ತಾನಾ, ಕೇಳು" ಎಂದರು. ॥99॥ ಮಾಧವರಾವ್ ಈ ಸಂದೇಶವನ್ನು ತಿಳಿಸಿದಾಗ ಹಾಜಿಯು ಹೇಳಿದನು, "ನೀನು ಏಕೆ ಕೇಳುತ್ತಿರುವೆ? ಬಾಬಾ ಕೇಳಿದರೆ ನಾನು ನಾಲ್ವತ್ತು ಲಕ್ಷವನ್ನಾದರೂ ಕೊಡುವೆನು. ಸಾವಿರಗಳ ಪ್ರಶ್ನೆ ಎಲ್ಲಿದೆ?" ॥100॥ ಈ ಉತ್ತರವನ್ನು ಕೇಳಿ, ಬಾಬಾ ಹೇಳಿದರು, "ಅವನನ್ನು ಕೇಳು. ಈ ದಿನ ಮಸೀದಿಯಲ್ಲಿ ಒಂದು ಕುರಿಯನ್ನು ಕಡಿಯಬೇಕೆಂದಿದೆ. ಮಾಂಸದ ಯಾವ ಭಾಗ ಅವನಿಗೆ ಇಷ್ಟ? ॥101॥ "ಅವನಿಗೆ ಮಾಂಸ ಸಹಿತವಾದ ಮೂಳೆಗಳು ಬೇಕೇ? ತೊಡೆಯೇ ಅಥವಾ ವೃಷಣವೇ? ಹೋಗಿ ಅವನಿಗೆ ನಿಶ್ಚಯವಾಗಿಯೂ ಏನು ಬೇಕೆಂದು ಆ ಮುದುಕನನ್ನು ಕೇಳು" ಎಂದರು. ॥102॥ ಮಾಧವರಾವ್ ಹಾಜಿಗೆ ಬಾಬಾರವರು ಹೇಳಿದ್ದನ್ನು ವಿವರವಾಗಿ ತಿಳಿಸಿದನು. ಹಾಜಿಯು ಖಡಾಖಂಡಿತವಾಗಿ ಹೇಳಿದನು– "ನನಗೆ ಅಂತಹುದೆಲ್ಲ ಯಾವುದೂ ಬೇಡ" ಎಂದು. ॥103॥ "ಅವರಿಗೆ ಇಷ್ಟ ಬಂದದ್ದು ನನಗೆ ಕೊಡಲಿ. ಆದರೆ ಒಂದೇ ಒಂದು ಇಚ್ಛೆ ನನಗೆ. ಕೊಳಗದಿಂದ್ ಒಂದು ತುತ್ತು ಸಿಕ್ಕಿದರೆ ನನ್ನ ಉದ್ದೇಶ ಸಫಲವಾದಂತೆ. ಮತ್ತು ನನ್ನ ಯೋಗಕ್ಷೇಮಕ್ಕೆ ಅಷ್ಟೇ ಸಾಕು." ॥104॥ ಮಾಧವರಾವ್ ಹಾಜಿಯ ಉತ್ತರದೊಂದಿಗೆ ಹಿಂತಿರುಗಿದನು. ಈ ಉತ್ತರವನ್ನು ಕೇಳಿ ಬಾಬಾರವರು ಕೂಡಲೇ ಕೋಪೋದ್ರಿಕ್ತರಾದರು. ॥105॥ ಕೊಳಗವನ್ನು

ಮತ್ತು ಮಡಕೆಯನ್ನು ತಮ್ಮ ಕೈಯಿಂದಲೇ ಎತ್ತಿ ಬಾಗಿಲ ಹೊರಕ್ಕೆ ಎಸೆದರು. ತಮ್ಮ ಕೈಯನ್ನು ಶಬ್ದ ಸಹಿತವಾಗಿ ತಟ್ಟುತ್ತಾ ಹಾಜಿಯ ಬಳಿಗೆ ಬಂದರು. ॥106॥ ಕಫನಿಯನ್ನು ಎರಡೂ ಕೈಗಳಿಂದ ಎತ್ತಿ ಹಿಡಿದು ಹಾಜಿಯ ಮುಂದೆ ನಿಂತು ಹೇಳಿದರು, "ನಿನ್ನನ್ನು ನೀನು ಏನೆಂದು ತಿಳಿದಿರುವೆ? ನನ್ನ ಮುಂದೆ ನಿನ್ನ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಿರುವೆಯಾ? ॥107॥ "ನೀನು ನಿನ್ನ ವಯಸ್ಸಿನಿಂದಾಗಾಳಿಗೋಪುರ ಕಟ್ಟುತ್ತಿರುವೆಯಾ? ಇದು ಕುರಾನ್ ಓದುವ ರೀತಿಯೇ? ಮೆಕ್ಕಾ ಯಾತ್ರೆ ಮಾಡಿರುವುದೆಲ್ಲಾ ವ್ಯರ್ಥ. ನಾನು ಯಾರೆಂದೇ ನಿನಗೆ ತಿಳಿಯಲಿಲ್ಲ." ॥108॥ ಈ ರೀತಿ ಅವನನ್ನು ಆಡಬಾರದ ಮಾತುಗಳಿಂದ ಹೀಯಾಳಿಸಿದರು. ಹಾಜಿಯು ಮೂಕನಾದನು, ಬಾಬಾ ಮತ್ತೆ ಹಿಂತಿರುಗಿದರು. ॥109॥ ಮಸೀದಿಯ ಪ್ರಾಂಗಣವನ್ನು ಪ್ರವೇಶಿಸುತ್ತಿರುವಾಗ ಮಾಲಿಯ ಹೆಂಡತಿಯು ಮಾವಿನ ಹಣ್ಣುಗಳನ್ನು ಮಾರುತ್ತಿರುವುದನ್ನು ನೋಡಿದರು. ಅವರು ಎಲ್ಲಾ ಬುಟ್ಟಿಗಳನ್ನು ಕೊಂಡು ಹಾಜಿಗೆ ಕೂಡಲೇ ಕಳುಹಿಸಿಕೊಟ್ಟರು. ॥110॥ ಅದೇ ರೀತಿ, ಕೂಡಲೇ ಹಿಂತಿರುಗಿ ಮತ್ತೆ ಹಾಜಿಯ ಹತ್ತಿರ ಹೋದರು. ಜೇಬಿನಿಂದ 55 ರೂಪಾಯಿಗಳನ್ನು ತೆಗೆದು ಎಣಿಸಿ ಹಾಜಿಯ ಕೈಗಳಲ್ಲಿ ಇಟ್ಟರು. ॥111॥ ಅನಂತರ ಅಲ್ಲಿ ಪ್ರೀತಿ ಬೆಳೆಯಿತು. ಹಾಜಿಯನ್ನು ಊಟಮಾಡಲು ಕರೆದರು. ಇಬ್ಬರೂ ಹಿಂದಿನದನ್ನು ಮರೆತರು. ಹಾಜಿಯು ಮೆಚ್ಚುಗೆಯಿಂದ ಆನಂದೋನ್ಮತ್ತನಾದನು. ॥112॥ ನಂತರ ಅವನು ಅಲ್ಲಿಂದ ಹೊರಟನು ಮತ್ತು ಆಗಾಗ್ಗೆ ಬರುತ್ತಿದ್ದನು. ಅವನು ಬಾಬಾರವರ ವಾತ್ಸಲ್ಯದಲ್ಲಿ ಪೂರ್ಣ ಸಂತೋಷಪಡೆದನು. ಬಾಬಾರವರು ಅವನಿಗೆ ಕಾಲಕಾಲಕ್ಕೆ ಹಣದ ಕೊಡುಗೆ ಕೊಡುತ್ತಿದ್ದರು. ॥113॥ ಅದು ಏನೇ ಆಗಿರಲಿ. ಒಮ್ಮೆ ನಾನು ಸಾಯಿ ಸಮರ್ಥರು ಮೋಡಗಳ ಮೇಲೆ ತಮ್ಮ ಅಧಿಕಾರ ಬಳಸಿ ಇಂದ್ರನನ್ನು ಪ್ರಾರ್ಥಿಸುವುದನ್ನು ನೋಡಿ ಬೆರಗಾದೆನು. ॥114॥ ಅದು ಭಯಾನಕವಾದ ಸಮಯ. ಇಡೀ ಆಕಾಶವೆಲ್ಲಾ ಕಪ್ಪಾಗಿತ್ತು, ಮೋಡ ಕವಿದು ಕತ್ತಲೆ ಆವರಿಸಿತ್ತು, ಹಕ್ಕಿಗಳು ಮತ್ತು ಮೃಗಗಳು ಭಯಭೀತವಾಗಿದ್ದವು. ಚಂಡಮಾರುತ ಬೀಸಲು ಪ್ರಾರಂಭಿಸಿತು. ॥115॥ ಆಗ ಸೂರ್ಯನು ಅಸ್ತಮಿಸಿ, ಸಂಜೆಯಾಗಿತ್ತು, ತಕ್ಷಣವೇ ಸುಂಟರಗಾಳಿ ಹುಟ್ಟಿತು. ಶಕ್ತಿಯುತವಾಗಿ ವೇಗವಾಗಿ ಗಾಳಿ ಬೀಸಿತು. ಅಲ್ಲಿ ತಡೆಯಲಾಗದಂತಹ ಗಲಭೆ ಉಂಟಾಯಿತು. ॥116॥ ಗುಡುಗುಗಳ ಶಬ್ದದೊಡನೆ, ಮಿಂಚಿನ ಹೊಳಪಿನೊಡನೆ, ಸುಂಯ್ಗುಟ್ಟುವ ಬಿರುಗಾಳಿಯೊಡನೆ ಸತತ ಮುಸಲಧಾರೆ ಮಳೆಯೊಡನೆ, ॥117॥ ಕುಂಭದ್ರೋಣ ಮಳೆ ಸುರಿಯಿತು. ಆಲಿಕಲ್ಲುಗಳು ಶಬ್ದದೊಡನೆ ಬಿದ್ದವು. ಹಳ್ಳಿಯ ಜನ ಭಯಭೀತಿಯಿಂದ ಭಯಾನಕ ನಿರೀಕ್ಷೆಯಿಂದ ಅತ್ತರು ಮತ್ತು ಬೊಬ್ಬಿಡುತ್ತ ಗಲಭೆ ಉಂಟುಮಾಡಿದರು. ॥118॥ ಅನಾಥರಾದ ಭಿಕ್ಷುಕರು ಮಸೀದಿಯ ಸೂರಿನಡಿಯಲ್ಲಿ ಆಶ್ರಯ ಪಡೆಯಲು ಬಂದರು. ಅವರೊಟ್ಟಿಗೆ ಹಸು ಕರುಗಳೂ ಸೇರಿಕೊಂಡವು. ಮಸೀದಿಯಲ್ಲಿ ದೊಡ್ಡ ಗುಂಪಾಯಿತು. ॥119॥ ನಾಲ್ಕೂ ದಿಕ್ಕುಗಳಲ್ಲಿ ನೀರು ತುಂಬಿತ್ತು, ಹುಲ್ಲು ತೊಳೆದುಹೋಗಿತ್ತು, ಸುಗ್ಗಿಯ ಕೆಸರುಭೂಮಿಯಲ್ಲಿ ಒದ್ದೆಯಾಯಿತು. ಜನರೆಲ್ಲರೂ ದಿಗ್ಭ್ರಮೆಗೊಂಡರು.

||120|| ಇಡೀ ಹಳ್ಳಿಯು ಭಯಭೀತವಾಗಿ ಚಿಂತಾಕ್ರಾಂತವಾಗಿತ್ತು. ಅವರೆಲ್ಲ ಒಳಗೆ ಬಂದು ಮಸೀದಿಯ ಪ್ರಾಂಗಣದಲ್ಲಿ ತುಂಬಿಕೊಂಡರು. ಕೆಲವರು ಗುಹೆಗಳ ಕೆಳಗೆ ನಿಂತರು. ಅವರು ತಮ್ಮ ದುಃಖವನ್ನು ಬಾಬಾರವರಲ್ಲಿ ತೋಡಿಕೊಂಡರು. ||121|| ಶಿರಡಿಯು ಜೋಗಾಯಿ, ಜಾಖಾಯಿ, ಮಾರಾಯಿ, ಶನಿ, ಶಂಕರ, ಅಂಬಾಬಾಯಿ, ಮಾರುತಿ, ಖಂಡೋಬಾ, ಮ್ಹಾಳಸಾಯಿ – ಈ ದೇವಾಲಯಗಳಿಂದ ತುಂಬಿಹೋಗಿತ್ತು. ||122|| ಆದರೂ, ಯಾವುದೇ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾರೊಬ್ಬರೂ ಹಳ್ಳಿಯವರ ರಕ್ಷಣೆಗೆ ಬರಲಿಲ್ಲ. ಅದಕ್ಕೆ ಅಪವಾದವಾಗಿ ಕೇವಲ ಸಾಯಿಯೊಬ್ಬರೇ ತತ್‌ಕ್ಷಣವೇ ಪ್ರೇರಿತರಾಗಿ ಎಲ್ಲರಿಗೂ ಎಲ್ಲ ಸಮಯಗಳಲ್ಲೂ ಸಹಾಯ ಮಾಡಿದವರು. ||123|| ಅವರಿಗೆ ಕುರಿಗಳ ಮತ್ತು ಕೋಳಿಗಳ ಬಲಿ ಬೇಕಾಗಿರಲಿಲ್ಲ. ಹಣದ ಅರ್ಪಣೆಯೂ ಬೇಕಾಗಿರಲಿಲ್ಲ. ಅವರಿಗೆ ಬೇಕಾದದ್ದು ಕೇವಲ ನಿಜವಾದ ಭಕ್ತಿ, ಕಷ್ಟಗಳನ್ನೆಲ್ಲ ನೀಗಿಸುವಂತಹ ಭಕ್ತಿ ಮಾತ್ರ ಬೇಕಿತ್ತು. ||124|| ಜನರ ದಿಗ್ಭ್ರಮೆಯನ್ನು ನೋಡಿ ಮಹಾರಾಜ್‌ರು ಬಹಳ ವಿಚಲಿತರಾಗಿದ್ದರು. ಅವರು ತಮ್ಮ ಆಸನದಿಂದ ಎದ್ದು ಮುಂದೆ ಬಂದು, ಮಸೀದಿಯ ಕಂಬದ ಹತ್ತಿರ ನಿಂತರು. ||125|| ಆಕಾಶವು ಗುಡುಗಿನ ಶಬ್ದದಿಂದ ಪ್ರತಿಧ್ವನಿಸುತ್ತಿತ್ತು. ಮಿಂಚಿನ ಸೀಳುಗಳ ಬೆಳಕಿನಿಂದ ಪ್ರಜ್ವಲಿಸುತ್ತಿತ್ತು. ಇವುಗಳೆಲ್ಲದರ ನಡುವೆ ಸಾಯಿ ಮಹಾರಾಜರು ತಮ್ಮ ಎತ್ತರದ ಧ್ವನಿಯಲ್ಲಿ ಕೂಗಾಡುತ್ತಿದ್ದರು. ||126|| ದೇವರು ತನ್ನ ಭಕ್ತರನ್ನು, ತನ್ನ ಸಾಧುಸಂತರನ್ನು ತನಗಿಂತ ಹೆಚ್ಚಾಗಿ ಪ್ರೀತಿಸುತ್ತಾನೆ. ದೇವರು ಅವರ ಮಾತಿಗೆ ಕಟ್ಟುಬಿದ್ದು ಅವರಿಗಾಗಿ ಮಾನವ ಜನ್ಮ ತಳೆಯುತ್ತಾನೆ. ||127|| ದೇವರು ಭಕ್ತರ ಪ್ರಾರ್ಥನೆಗಳನ್ನು ಆಲಿಸುತ್ತ ಭಕ್ತರ ಕಾರಣಗಳನ್ನು ಸಮರ್ಥಿಸುತ್ತಾರೆ. ಭಕ್ತರು ಎಲ್ಲಾ ಪ್ರಾರ್ಥನೆಗಳನ್ನು ಮಾಡಿದ ಕೂಡಲೇ ಭಕ್ತರ ಶ್ರದ್ಧೆಯನ್ನು ಗಮನಿಸಿ, ಅವರು ಗ್ರಹಿಸಿ ಎತ್ತಿಹಿಡಿಯುತ್ತಾರೆ. ||128|| ಇಲ್ಲಿ ಜೋರಾದ ಕೂಗುಗಳು, ಒಂದಾದಮೇಲೊಂದು ಆಕಾಶದಲ್ಲಿ ಪ್ರತಿಧ್ವನಿಸುತ್ತಿದ್ದವು. ಮಸೀದಿಯೇ ಅಲ್ಲಾಡುವಂತೆ ಕಂಡಿತು, ಪ್ರತಿಯೊಬ್ಬರೂ ಕಿವುಡಾದರು. ||129|| ಮಸೀದಿಯು ಮತ್ತು ದೇವಾಲಯಗಳು, ಭೂಮಿಯನ್ನೇ ನಡುಗಿಸುವಂತಹ ಶಬ್ದದಿಂದ ಪ್ರತಿಧ್ವನಿಸುತ್ತಿದ್ದವು. ಅನಂತರ ಮೋಡಗಳು ತಮ್ಮ ಗುಡುಗುಗಳನ್ನು ನಿಲ್ಲಿಸಿದವು ಮತ್ತು ಮಳೆ ಸುರಿಯುವುದೂ ನಿಂತುಹೋಯಿತು. ||130|| ಬಾಬಾರವರ ಜೋರಾದ ಕೂಗು ಎಷ್ಟು ಸಮೃದ್ಧಿಯಾಗಿತ್ತೆಂದರೆ ಜನರಿಂದ ತುಂಬಿಹೋಗಿದ್ದ ಅಂಗಳವೇ ತನ್ನಲ್ಲಿ ತಾನೇ ಪಿಸುಗುಟ್ಟುತ್ತ ತಲೆಕೆಳಗಾಯಿತು. ||131|| ಬಾಬಾರವರ ಚಾತುರ್ಯ ಮತ್ತು ಶಕ್ತಿಗಳನ್ನು ಯಾರೂ ಅರಿಯಲಾರರು. ಅದು ಮಳೆಯ ಮೇಲೆ ಪರಿಣಾಮ ಬೀರಿತು. ಗಾಳಿಯೂ ಕೂಡಲೇ ಹತೋಟಿಗೆ ಬಂತು. ಮಂಜಿನಿಂದ ಉಂಟಾದ ಕತ್ತಲೆಯೂ ಮಾಯವಾಯಿತು.||132|| ನಿಧಾನವಾಗಿ, ನಿಧಾನವಾಗಿ, ಮಳೆ ಕಡಿಮೆಯಾಯಿತು. ನಕ್ಷತ್ರಪುಂಜವು ಕಾಣತೊಡಗಿತು. ಅಷ್ಟರಲ್ಲಿ ಕತ್ತಲೆಯು ಮರೆಯಾಯಿತು. ||133|| ಅನಂತರ ಮಳೆ ಸಂಪೂರ್ಣವಾಗಿ ನಿಂತಿತು, ಬೀಸುತ್ತಿದ್ದ ಗಾಳಿಯು ಶಾಂತವಾಯಿತು. ಆಗಸದಲ್ಲಿ ಚಂದ್ರಮನು ಕಾಣಿಸಿದನು. ಎಲ್ಲರೂ ಸಂತಸಗೊಂಡರು. ||134||

ಇಂದ್ರನು ಅವರ ವ್ಯಾಕುಲತೆಗೆ ಕರಗಿ ಹೋಗಿ ನಂತರ ಮಾತುಗಳನ್ನು ಎತ್ತಿಹಿಡಿದನು. ಮೋಡಗಳು ಎಲ್ಲಾ ದಿಕ್ಕುಗಳಲ್ಲೂ ಚದುರಿದವು. ಸುಂಟರಗಾಳಿಯು ಶಾಂತವಾಯಿತು. ॥135॥ ಮಳೆಯು ಒಟ್ಟಾರೆ ನಿಂತಿತು. ಗಾಳಿಯು ಮಂದವಾಗಿ ಬೀಸತೊಡಗಿತು. ಗುಡುಗಿನ ಶಬ್ದ ಕಡಿಮೆಯಾಯಿತು. ಪಕ್ಷಿಗಳು ತಮ್ಮ ಧೈರ್ಯವನ್ನು ಪುನಃ ಪಡೆದವು. ॥136॥ ಸೂರಿನ ಆಶ್ರಯವನ್ನು ತೊರೆದ ಹಸು ಮತ್ತು ಕರುಗಳು ಹೊರಗೆ ಬಂದವು. ನಿರ್ಭಯವಾಗಿ ಓಡಾಡತೊಡಗಿದವು. ಹಕ್ಕಿಗಳೂ ಆಗಸದಲ್ಲಿ ಹಾರಾಡಿದವು. ॥137॥ ಹಿಂದಿನ ಭಯಂಕರ ಘಟನೆಗಳನ್ನು ಮುಂಚಿನ ಅನುಭವಗಳನ್ನು ಪಡೆದ ಮೇಲೆ ಎಲ್ಲ ಜನರೂ ಬಾಬಾರವರಿಗೆ ಕೃತಜ್ಞತೆ ಅರ್ಪಿಸಿದ ನಂತರ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. ಹಸುಗಳೂ ಶಾಂತವಾಗಿ ಚದುರಿದವು. ॥138॥ ಸಾಯಿಯು ಕರುಣೆಯ ಸಾಕಾರ ಮೂರ್ತಿ. ಅವರಿಗೆ ಭಕ್ತರನ್ನು ಕಂಡರೆ ತುಂಬಾ ಪ್ರೀತಿ. ಅವರ ಕಾಳಜಿಯು ತಾಯಿಯು ಮಕ್ಕಳಿಗೆ ತೋರುವ ಕಾಳಜಿಯಂತೆ ಇತ್ತು. ಆ ಪ್ರೇಮ ಸ್ವಭಾವವನ್ನು ನಾನು ಹೇಗೆ ವಿವರಿಸಲಿ? ॥139॥ ಅದೇ ರೀತಿಯಾಗಿ, ಅವರಿಗೆ ಬೆಂಕಿಯ ಮೇಲೆ ಅಧಿಕಾರವಿತ್ತು. ಶ್ರೋತೃಗಳೇ, ದಯಮಾಡಿ ಈ ಒಂದು ಸಣ್ಣ ಕತೆಯನ್ನು ಉದಾಹರಣೆಗಾಗಿ ಕೇಳಿರಿ. ನೀವು ಅಂತಹ ಮಹಾನ್ ಶಕ್ತಿಯನ್ನು ಅರ್ಥಮಾಡಿಕೊಳ್ಳುವಿರಿ. ॥140॥ ಒಂದು ಮಧ್ಯಾಹ್ನ, ಧುನಿಯ ಬೆಂಕಿ ಅಂಕೆಯಿಲ್ಲದೆ ಪ್ರಜ್ವಲಿಸಿತು. ಅಗ್ನಿಯ ಜ್ವಾಲೆಯು ದೊಡ್ಡ ಅಲೆಯಾಗಿ ಉರಿಯಿತು. ಯಾರು ತಾನೇ ಅದರ ಹತ್ತಿರ ನಿಲ್ಲಲು ಸಾಧ್ಯವಿತ್ತು? ॥141॥ ಅಗ್ನಿಯ ಜ್ವಾಲೆಗಳು ಭಯಂಕರವಾಗಿ ಹೆಚ್ಚಿದವು ಮತ್ತು ಸೂರಿನಲ್ಲಿರುವ ಮರದ ದಿಮ್ಮಿಯನ್ನು ಮುಟ್ಟಿದವು. ಅದು ಹೋಲಿಯ ಬೆಂಕಿಯಂತೆ ಬೇಗನೇ ಮಸೀದಿಯನ್ನು ಸುಟ್ಟು ಬೂದಿ ಮಾಡುತ್ತದೆಂದೆನಿಸಿತು. ॥142॥ ಆದಾಗ್ಯೂ, ಜನರೆಲ್ಲರೂ ಉದ್ವಿಗ್ನರಾದರೂ ಬಾಬಾರವರು ಮಾತ್ರ ಶಾಂತರಾಗಿದ್ದರು. ಜನರೆಲ್ಲರೂ ಬಾಬಾರವರು ಎದುರಿಸುತ್ತಿರುವ ನಾಶವನ್ನು ಕಂಡು ದಿಗ್ಭ್ರಮೆಗೊಂಡರು. ॥143॥ ಒಬ್ಬ ವ್ಯಕ್ತಿ ಕೇಳಿದನು: "ಸ್ವಲ್ಪ ನೀರು ತರಲೆ?" ಮತ್ತೊಬ್ಬ ನುಡಿದನು – "ಅದನ್ನು ಯಾರು ಸುರಿಯುತ್ತಾರೆ?" ಅಲ್ಲಿ ಹತ್ತಿರ ಹೋಗಿ ಸಟಕಾದಿಂದ ತಲೆಯ ಮೇಲೆ ಪೆಟ್ಟನ್ನು ಯಾರು ಪಡೆಯುತ್ತಾರೆ?" ॥144॥ ಪ್ರತಿಯೊಬ್ಬರೂ ಚಡಪಡಿಸುತ್ತಿದ್ದರು. ಯಾರಿಗೂ ಕೇಳುವ ಧೈರ್ಯವಿರಲಿಲ್ಲ. ಆ ಕ್ಷಣದಲ್ಲಿ ಬಾಬಾ ಚಲಿಸಿ ಸಟಕಾ ಮೇಲೆ ಕೈಯಿಟ್ಟರು. ॥145॥ ಉರಿಯುತ್ತಿರುವ ಜ್ವಾಲೆಗಳನ್ನು ನೋಡಿ, ಅವರು ಸಟಕಾವನ್ನು ಕೈಯಲ್ಲಿ ಹಿಡಿದು ಜೋರಾಗಿ ಹೊಡೆಯುತ್ತ ಹೊರಟರು. ಒಂದಾದ ಮೇಲೊಂದು ಸಲ ಹೊಡೆಯುತ್ತ "ಹಿಂದಕ್ಕೆ ಹೋಗು" ಎನ್ನುತ್ತಿದ್ದರು. ॥146॥ ಧುನಿಯಿಂದ ಒಂದು ಕೈಅಳತೆ ದೂರದಲ್ಲಿ ಅವರು ಜೋರಾಗಿ ಕಂಬವನ್ನು ಹೊಡೆಯುತ್ತಿದ್ದರು. ಜ್ವಾಲೆಯನ್ನು ನೋಡುತ್ತ ಹೇಳುತ್ತಿದ್ದರು, 'ಶಾಂತನಾಗು, ಶಾಂತನಾಗು" ಎಂದು. ॥147॥ ಪ್ರತಿ ಹೊಡೆತಕ್ಕೂ ಜ್ವಾಲೆಯು ಕಡಿಮೆಯಾಗುತ್ತ ಪೂರ್ಣವಾಗಿ ನಿಂತಿತು. ಧುನಿಯು ಶಾಂತವಾಯಿತು. ಭಯವು ಸಂಪೂರ್ಣವಾಗಿ ಮಾಯವಾಯಿತು. ॥148॥ ಸಾಯಿಯು, ಸಂತಶ್ರೇಷ್ಠರು.ಭಗವಂತನ ಅವತಾರ, ನಿಮ್ಮ

ತಲೆಯನ್ನು, ಅವರ ಚರಣಗಳಲ್ಲಿಟ್ಟಾಗ ಅವರ ವರದ ಹಸ್ತವನ್ನು, ನಿಮ್ಮ ತಲೆಯಮೇಲಿಡುತ್ತಾರೆ. ॥149॥ ಯಾರು ನಿತ್ಯವೂ ಈ ಅಧ್ಯಾಯವನ್ನು, ಏಕಾಗ್ರತೆಯಿಂದ ಪಠಿಸುವರೋ ಭಕ್ತಿ, ಶ್ರದ್ಧೆಗಳಿಂದ ಇರುವರೋ, ಅವರ ಎಲ್ಲಾ ಕಷ್ಟಗಳೂ ಪರಿಹಾರವಾಗುತ್ತವೆ.॥150॥ ಇನ್ನು ಹೆಚ್ಚಿಗೆ ಮತ್ತೇನು ಹೇಳಲಿ? ಮನಸ್ಸನ್ನು, ಪರಿಶುದ್ಧಗೊಳಿಸಿದ ನಂತರ ಸಾಯಿ ಪಾರಾಯಣವನ್ನು, ಅತ್ಯಂತ ನಿಷ್ಠೆಯಿಂದ ಮಾಡಿದಲ್ಲಿ ನೀವು ಶಾಶ್ವತ ಬ್ರಹ್ಮನನ್ನು, ಪಡೆಯುವಿರಿ. ॥151॥ ಅಸಾಧ್ಯವನ್ನು, ಸಾಧ್ಯಮಾಡಿ ಪಡೆಯಿರಿ. ಅಂತಿಮವಾಗಿ ನಿರ್ಮೋಹತ್ವದಲ್ಲಿರಿ. ಬಹುಕ್ಲಿಷ್ಟವಾದ ಚತುರ್ವಿಧಮುಕ್ತಿ ಮತ್ತು ಅಖಂಡ ಶಾಂತಿಯನ್ನು, ಪಡೆಯುವಿರಿ. ॥152॥ ಅದು ಹಾಗಿರಲಿ, ಪರಮಾತ್ಮನ ಆನಂದವನ್ನು, ಅನುಭವಿಸಲು ಇಚ್ಛಿಸುವ ಭಕ್ತರು ಮತ್ತು ನುರಿತ ಜ್ಞಾನಿಯು ಈ ಅಧ್ಯಾಯವನ್ನು ಮತ್ತೆಮತ್ತೆ ಬಹು ಗೌರವದಿಂದ ಪಠಿಸಲಿ. ॥153॥ ಮನಸ್ಸುಗಳು ಶುದ್ಧವಾಗುತ್ತವೆ. ಚರಿತ್ರೆಗಳ ಶ್ರವಣವು ಆಧ್ಯಾತ್ಮದ ಕಡೆ ಒಲವನ್ನು, ವೃದ್ಧಿಗೊಳಿಸುತ್ತವೆ. ಅವರು ಏನು ಇಚ್ಛಿಸುತ್ತಾರೋ ಅದನ್ನು, ಪಡೆಯುತ್ತಾರೆ. ಅಮಂಗಳಕರವಾದುದು ಮತ್ತು ಇಚ್ಛೆ ಪಡದೆ ಇರುವುದು ನಾಶವಾಗುತ್ತವೆ. ಬಾಬಾರವರ ಸಾನ್ನಿಧ್ಯವನ್ನು, ವೈಯಕ್ತಿಕವಾಗಿ ಅನುಭವಿಸಿ. ॥154॥ ಹೇಮಾಡಪಂತ ಸಾಯಿಗೆ ಶರಣಾಗಿದ್ದಾನೆ. ಮುಂದಿನ ಅಧ್ಯಾಯ ಅತ್ಯಂತ ಪವಿತ್ರವಾದದ್ದು, ಗುರು ಶಿಷ್ಯರ ಸಂಬಂಧವನ್ನು, ಮತ್ತು ಗುರುಪುತ್ರನಿಂದ ಘೋಲಾಪರ ದರ್ಶನವನ್ನೂ, ತಿಳಿಸುತ್ತದೆ. ॥155॥ ಸಂದರ್ಭಗಳು ಏನೇ ಇರಲಿ, ಶಿಷ್ಯನು ಎಂದಿಗೂ ತನ್ನ ಗುರುವನ್ನು, ತಿರಸ್ಕರಿಸಬಾರದು. ಸಾಯಿ ಗುರು, ದೇವರು, ಇದರ ನಿರ್ದಿಷ್ಟ ಅನುಭವವನ್ನು, ನೀಡಿ ಅವರಲ್ಲಿ ಅಚಲ ಶ್ರದ್ಧೆಯನ್ನು, ವೃದ್ಧಿಗೊಳಿಸಿದರು. ॥156॥ ಆ ಭಕ್ತರು, ಅಲ್ಲಿಗೆ ಬಂದು ಹೋದವರು ಪ್ರತಿಯೊಬ್ಬರೂ ವಿವಿಧ ರೂಪಗಳಲ್ಲಿ (ಗುರು ಅಥವಾ ಇಷ್ಟದೈವ) ವಿಶಿಷ್ಟವಾದ ದರ್ಶನಮಾಡಿದ್ದರು. ಮತ್ತು ಅದರಿಂದ ಅವರ ಭಕ್ತಿಯು ದೃಢವಾಯಿತು. ॥157॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಶ್ರೀ ಸಾಯಿಯ ಮಹತ್ವದ ವರ್ಣನೆ" ಎಂಬ ಹನ್ನೊಂದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಇವು 'ರುದ್ರ'ದ ಮಂತ್ರಗಳು. ಇವುಗಳನ್ನು ಹನ್ನೊಂದು ಸಲ ಪಠಿಸುತ್ತಾರೆ.
2. ಅಡಕೆ, ಬಿಳಿ, ಲವಂಗ, ಕೇಸರಿ, ಒಣಕೊಬ್ಬರಿ, ಕರ್ಪೂರ, ಜಾಪತ್ರೆ, ಏಲಕ್ಕಿ, ಬಾದಾಮಿ, ಕಸ್ತೂರಿ, ನಿಂಬೆ.
3. ವಿಧವಿಧವಾದ ರುಚಿಕರವಾದ ಭಕ್ಷ್ಯಗಳು. ಅರವತ್ತು ತರಹದ ತಿಂಡಿಗಳು.
4. ಶಿರಡಿಯಲ್ಲಿ ಎರಡು ಚಾವಡಿಗಳಿವೆ. ಒಂದು ಉತ್ತರದಿಕ್ಕಿಗೂ ಮತ್ತೊಂದು ದಕ್ಷಿಣಕ್ಕೂ ಮುಖಮಾಡಿವೆ. ಅವು ಒಂದಕ್ಕೊಂದು ಮುಖಮಾಡಿವೆ.
5. ಮಣ್ಣಿನ ಮಡಕೆಯಲ್ಲಿ ಎಲ್ಲಾ ನೈವೇದ್ಯಗಳನ್ನು ಸೇರಿಸಿ ಸಮರ್ಪಿಸುತ್ತಿದ್ದರು. ಬಾಬಾರವರು ಭಿಕ್ಷೆ ಬೇಡಿ ತಂದ ಭಿಕ್ಷೆಯೂ ಅದರಲ್ಲಿ ಸೇರುತ್ತಿತ್ತು.
6. ದೇವರುಗಳ ಚಕ್ರವರ್ತಿ.



# ಅಧ್ಯಾಯ - 12

॥ ಅಥ ಶ್ರೀ ಸಾಯಿ ಸಚ್ಚರಿತೆ ॥



## "ರಾಮನ ದರ್ಶನ - ಶ್ರೀ ಸಂತ ಘೋಲಪರು"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸದ್ಗುರು ಸಾಯಿನಾಥರಿಗೆ ಜಯವಾಗಲಿ, ಜೈ, ನಾನು ಶಿರಬಾಗಿಸಿ ನಿಮ್ಮ ಚರಣಗಳಲ್ಲಿ ನನ್ನ ಶಿರವನ್ನಿಡುತ್ತೇನೆ. ನೀವು ನಿರ್ವಿಕಾರ, ಶಾಶ್ವತ ಮತ್ತು ಬ್ರಹ್ಮಸ್ವರೂಪರು. ನಿಮ್ಮಲ್ಲಿ ಶರಣಾದ ಮೇಲೆ ಕೃಪೆಮಾಡಿರಿ. ॥1॥ ಸಚ್ಚಿದಾನಂದನೇ, ಆನಂದದ ನಿಧಿಯೇ, ಭವಸಾಗರದ ದುಃಖಗಳಿಂದ ಬೆಂದವರಿಗೆ ಆನಂದ ನೀಡುವವರೇ, ನಿಮ್ಮನ್ನು ಅರ್ಥಮಾಡಿಕೊಳ್ಳುವಲ್ಲಿ ನಿಧಾನವಾದವರಿಗೂ ಸಹ ಅದ್ವೈತ ಜ್ಞಾನದಿಂದ ದ್ವೈತವನ್ನು ನಾಶಮಾಡುವವರೇ, ॥2॥ ನಿಮ್ಮ ತತ್ತ್ವವನ್ನು ಅನುಭವಿಸಿದ ಭಾಗ್ಯಶಾಲಿಗಳು ನಿಮ್ಮ ಸ್ವರೂಪವನ್ನು ಚಿತ್ರಿಸಿ ಆಕಾಶದಂತೆ ಮೂಲೆ ಮೂಲೆಗೂ ಹರಡಿರುತ್ತಾರೆ. ॥3॥ ಭಗವಂತನು ಪುಣ್ಯವಂತರನ್ನು ಕಾಪಾಡಲು ಭೂಮಿಯ ಮೇಲೆ ಅವತರಿಸುತ್ತಾನೆ. ದುಷ್ಟರನ್ನು ದೂರಮಾಡುತ್ತಾನೆ. ಸಂತರು ಮಾತ್ರ ಅದಕ್ಕಿಂತ ವಿಭಿನ್ನ. ॥4॥ ಸಂತರಿಗೆ ಪುಣ್ಯವಂತರೂ, ಪಾಪಿಗಳೂ ಇಬ್ಬರೂ ಸಮವೇ. ಅವರಿಗೆ ದೊಡ್ಡದು ಮತ್ತು ಚಿಕ್ಕದು ಎನ್ನುವ ವ್ಯತ್ಯಾಸವೇ ತಿಳಿದಿಲ್ಲ. ಅವರಿಗೆ ಇಬ್ಬರೂ ಒಂದೇ. ॥5॥ ಸಂತರು ಭಗವಂತನಿಗಿಂತಲೂ ಮಿಗಿಲು. ಅವರು ಪಾಪಿಗಳನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತಾರೆ. ಅವರ ಹೃದಯವು ಪ್ರೀತಿಯಿಂದ ಮಿಡಿಯುತ್ತದೆ. ಸಂಕಟದಲ್ಲಿರುವವರ ಮೇಲೆ ಕರುಣೆ ಉಕ್ಕುತ್ತದೆ. ॥6॥ ಅವರು

ಭವಸಾಗರವನ್ನು ಆಪೋಶನ ತೆಗೆದುಕೊಂಡ ಅಗಸ್ತ್ಯ ಋಷಿಗೆ[1] ಸಮ. ಅವರು ಅಜ್ಞಾನದ ಕತ್ತಲೆಯನ್ನು ದೂರಮಾಡುವ ಸೂರ್ಯನಂತೆ. ಭಗವಂತನು ಅವರಲ್ಲಿಯೇ ನೆಲೆಸಿದ್ದಾನೆ. ಒಟ್ಟಿನಲ್ಲಿ ಅವರಿಬ್ಬರೂ ಒಂದೇ. ॥7॥ ನನ್ನ ಸಾಯಿ ಅಂತಹ ಸಂತರಲ್ಲಿ ಒಬ್ಬರು! ಅವರೂ ಸಹ ತಮ್ಮ ಭಕ್ತರಿಗಾಗಿ ಅವತಾರ ಎತ್ತಿದರು. ಅವರು ಜ್ಞಾನರಾಜ. ಅವರಲ್ಲಿ ದೈವತ್ವದ ಪ್ರಕಾಶ ಪೂರ್ತಿಯಾಗಿ ತುಂಬಿದೆ. ॥8॥ಅವರಿಗೆ ಎಲ್ಲ ಜೀವಿಗಳ ಮೇಲೂ ಅಸೀಮ ಪ್ರೇಮ. ಆದರೂ ಅವರು ಪೂರ್ಣವಾಗಿ ಮೋಹ ತ್ಯಜಿಸಿದ್ದರು. ಅವರು ಶಕ್ತಿವಂತರಾಗಿದ್ದರೂ ಅವುಗಳಿಗಾಗಿ ಕಾತರಿಸಲಿಲ್ಲ. ಅವರಿಗೆ ಯಾರ ಮೇಲೆಯೂ ದ್ವೇಷಭಾವ ಇರಲಿಲ್ಲ. ಎಲ್ಲರನ್ನೂ ಸಮನಾಗಿ ಪರಿಗಣಿಸುತ್ತಿದ್ದರು. ॥9॥ ಅವರಿಗೆ ಯಾರಮೇಲೂ ಶತೃತ್ವವಾಗಲಿ ಮಿತೃತ್ವವಾಗಲಿ ಇರಲಿಲ್ಲ. ರಾಜನನ್ನಾಗಲೀ ದರಿದ್ರನನ್ನಾಗಲೀ ಒಂದೇ ರೀತಿ ಆದರಿಸುತ್ತಿದ್ದರು. ಸಾಯಿ ವಿಶಾಲ ಹೃದಯಿ, ಸಾಯಿಯ ವೈಭವವನ್ನು ಕೇಳಿರಿ! ॥10॥ ಸಂತರು ತಮ್ಮ ಭಕ್ತರ ಪ್ರೀತಿಗಾಗಿ ತಮ್ಮ ಪುಣ್ಯದ ಭಂಡಾರವನ್ನೇ ವ್ಯಯಿಸುತ್ತಾರೆ. (ತಮ್ಮ ಭಕ್ತರಿಗಾಗಿ) ಅವರು ಬಾವಿಗಳನ್ನು, ಬೆಟ್ಟಗಳನ್ನು, ಕಣಿವೆಗಳನ್ನು ಹಾರುತ್ತಾರೆ. ॥11॥ ಅಜ್ಞಾನಿಗಳು ಪರಮಾರ್ಥವೇನೆಂಬುದನ್ನು ಅರ್ಥಮಾಡಿಕೊಳ್ಳುವುದಿಲ್ಲ. ತಮ್ಮ ಪತ್ನಿ, ಮಕ್ಕಳು, ಮತ್ತು ಹಣ ಇವುಗಳಲ್ಲಿ ಮಗ್ನರಾಗಿರುತ್ತಾರೆ. ಇದನ್ನು ಅರ್ಥಮಾಡಿಕೊಳ್ಳದವರನ್ನು ಅವರಷ್ಟಕ್ಕೇ ಬಿಡಿ. ॥12॥ ಅನನುಭವಿಗಳನ್ನು ಮತ್ತು ಮುಗ್ಧರನ್ನು ದೇವರು ದಯಾಪೂರಿತವಾಗಿ ಲಾಲಿಸುತ್ತಾನೆ. ದೇವರಿಂದ ವಿಮುಖರಾದವರನ್ನು ಅವರ ಅಹಂಕಾರ ಅಂತರಂಗದಲ್ಲಿಯೇ ಬಾಧಿಸುತ್ತದೆ. ॥13॥ ಒಬ್ಬ ಸಂತನು ಒಬ್ಬ ಅಜ್ಞಾನಿಯ ಮೇಲೆ ಇಚ್ಛೆಪಟ್ಟು ದಯೆತೋರಿಸಿದಲ್ಲಿ, ಅಗಾಧವಾದ ಶ್ರದ್ಧೆ ಬೆಳೆಯುತ್ತದೆ. ಜ್ಞಾನದ ಅಹಂಕಾರ ವ್ಯರ್ಥವಾಗುತ್ತದೆ. ॥14॥ ಮೂರ್ಖಶಿಖಾಮಣಿಗಳು ಅನವಶ್ಯಕವಾಗಿ ತಮ್ಮ ಜ್ಞಾನದ ಬಗ್ಗೆ ಅಹಂಕಾರದಿಂದ ಉಬ್ಬುತ್ತಾರೆ. ಅವರು ಭಕ್ತಿಯನ್ನು ತಿರಸ್ಕರಿಸುತ್ತಾರೆ. ಅಂತಹವರ ಸಹವಾಸ ದೂರಮಾಡುತ್ತಾರೆ. ॥15॥ ಅಂತರ್ಜಾತೀಯ ಬಾಂಧವ್ಯದಿಂದ ಉಂಟಾಗುವ ಗಲಭೆಯು ಬೇಕಿಲ್ಲ. ಉಚ್ಛ ಜಾತಿಯೆಂಬ ಅಹಂಕಾರದ ಸುಳ್ಳು ವಾದದ ಅವಶ್ಯಕತೆ ಇಲ್ಲ. ಕೇವಲ ನಾಲ್ಕು ವರ್ಣ ಅಥವಾ ಧರ್ಮಗಳಿಂದಾಗಿ ಉಂಟಾಗುವ ಗರ್ವ ಪಡಬೇಡ. ಅವೈದಿಕ ಪಂಡಿತನಾಗಬೇಡ. ॥16॥ ವೇದಗಳಲ್ಲಿ, ವೇದಾಂತಗಳಲ್ಲಿ ಪಂಡಿತರಾದವರಿಗೆ ಭರವಸೆಯ ಸ್ಥಿತಿಯು ಇರುವುದಿಲ್ಲ. ಅವರು ತಮ್ಮ ಜ್ಞಾನದ ಅಹಂಕಾರದಿಂದ ತುಂಬಿರುತ್ತಾರೆ. ಇದು ಭಕ್ತಿಯ ಮಾರ್ಗದಲ್ಲಿ ಅಡ್ಡಿಯಾಗಿ ಬರುತ್ತದೆ. ॥17॥ ಅಜ್ಞಾನಿಗಳು ಭಕ್ತಿಯ ಶಕ್ತಿಯಿಂದ ಅಸ್ತಿತ್ವದ ಸಾಗರವನ್ನು ದಾಟುತ್ತಾರೆ. ಆದರೆ ಶಾಸ್ತ್ರಬಲ್ಲವರಿಗೆ ಅವರ ಸಮಸ್ಯೆಗಳಿಂದಾಗಿ ಯಾವುದೇ ಅವಕಾಶ ಇರುವುದಿಲ್ಲ. ॥18॥ ಅಜ್ಞಾನದ ಅರಿವು ಮಾಯವಾಗುತ್ತದೆ. ತಮ್ಮ ಜ್ಞಾನದ ಬಗ್ಗೆ ಇರುವ ಅಹಂಕಾರದಿಂದ ಹುಟ್ಟುವ ಸಂಶಯಗಳಿಂದ ಉಂಟಾಗುವ ತೊಂದರೆಗಳು ದೂರವಾಗುತ್ತವೆ ಮತ್ತು ಮನಸ್ಸು ಪರಿಶುದ್ಧವಾಗುತ್ತದೆ. ಅವರು ಸಂತರಲ್ಲಿ ಶ್ರದ್ಧೆಯಿಟ್ಟು ಶರಣಾಗಬೇಕು. ॥19॥ ಅದೇನೇ ಆಗಿರಲಿ. ಒಂದು ಸಂದರ್ಭದಲ್ಲಿ ಸಜ್ಜನರ

ಪುಣ್ಯಕರ್ಮಗಳಿಂದಾಗಿ ಒಂದು ಅಪರೂಪದ ಘಟನೆ ನಡೆಯಿತು. ಒಬ್ಬ ಸಂಪ್ರದಾಯಸ್ಥ ಬ್ರಾಹ್ಮಣನು ತನ್ನ ವಿಧಿಬರಹದಂತೆ ಸಾಯಿಯ ಜೊತೆ ಅಪರೂಪದ ಭೇಟಿ ಮಾಡಿದನು. ॥20॥ ಅವನ ಉದ್ದೇಶವೇ ಬೇರೆಯಾಗಿತ್ತು, ದೈವ ನಿಯಾಮಕದಂತೆ ಶಿರಡಿಗೆ ಬರುವ ಅವಕಾಶ ಬಂದಿತು ಮತ್ತು ಅದು ಆತನ ಒಳ್ಳೆಯದಕ್ಕೇ ಆಗಿತ್ತು. ॥21॥ ಗುರು ಮತ್ತು ಶಿಷ್ಯರ ಮಹತ್ವವನ್ನು ವಿವರಿಸುವ ಮಹಾ ಕುತೂಹಲಕಾರಿಯಾದ ಈ ಚರಿತ್ರೆಯನ್ನು ಕೇಳಿರಿ. ॥22॥ ಮುಳೆ ಎಂಬ ಅಡ್ಡ ಹೆಸರಿನ (ಒಬ್ಬ ಅಗ್ನಿಹೋತ್ರಿ[3]ಯು) ಒಬ್ಬ ಶ್ರೋತ್ರಿಯನು ಮತ್ತು ಸಾಧು ಸ್ವಭಾವದವನು, ನಾಸಿಕ್‌ನ ನಿವಾಸಿಯು ತನ್ನ ಪೂರ್ವಪುಣ್ಯದ ಫಲವಾಗಿ ಶಿರಡಿಗೆ ಬಂದನು. ॥23॥ ಯಾರಿಗಾದರೂ ಪೂರ್ವಪುಣ್ಯಗಳ ಫಲವಿಲ್ಲದೆ ಇದ್ದಲ್ಲಿ ಒಂದು ಕ್ಷಣವೂ ಶಿರಡಿಯಲ್ಲಿರಲು ಸಾಧ್ಯವಿಲ್ಲ. ಅವರ ನಿರ್ಧಾರ ಎಷ್ಟೇ ದೃಢವಾಗಿದ್ದರೂ ಸಹ ಬಾಬಾರವರ ಇಚ್ಛೆ ಮಾತ್ರ ನಡೆಯುವುದು. ॥24॥ ಪ್ರತಿಯೊಬ್ಬರೂ ಯೋಚಿಸಬಹುದು: "ನಾನು ಅಲ್ಲಿಗೆ ಹೋಗುತ್ತೇನೆ ಮತ್ತು ನನಗಿಷ್ಟಬಂದಷ್ಟು ಕಾಲ ಅಲ್ಲಿ ವಾಸಮಾಡುತ್ತೇನೆ" ಎಂದು. ಆದರೆ ಅದು ಅವನ ಆಯ್ಕೆಮೇಲೆ ಆಧಾರಪಡುವುದಿಲ್ಲ. ಅವನು ಸಂಪೂರ್ಣವಾಗಿ ಬಾಬಾರ ಅಧೀನನು. ॥25॥ ಅನೇಕ ಜನ ಅಹಂಕಾರಿಗಳು "ನಾನು, ನಾನು" ಎನ್ನುತ್ತ ಆ ರೀತಿಯ ತೀರ್ಮಾನ ಮಾಡಿದಾಗ ದೀನರಾದರು. ಸಾಯಿಯು ನಿರಹಂಕಾರದ ಸ್ವರೂಪವೇ ಆಗಿದ್ದರು. ॥26॥ ನಮ್ಮ ಸರದಿ ಬರುವವರೆಗೆ ಬಾಬಾರವರು ನಮ್ಮ ಬಗ್ಗೆ ಯೋಚಿಸುವುದಿಲ್ಲ. ಅವರ ಸಗುಣಗಳನ್ನೂ ಸಹ ಸ್ಮರಿಸದಿದ್ದರೆ ದರ್ಶನಕ್ಕಾಗಿ ಅಭಿಲಾಷೆ ಹೇಗೆ ಹುಟ್ಟುತ್ತದೆ? ॥27॥ ಅನೇಕರು ಸಾಯಿಸಮರ್ಥರ ದರ್ಶನಕ್ಕಾಗಿ ಕಾತರರಾಗಿದ್ದರು. ಆದರೆ ಅವರ್ಯಾರಿಗೂ ಸಾಯಿಯ ನಿರ್ವಾಣದವರೆಗೆ ಅವಕಾಶವೇ ದೊರಕಲಿಲ್ಲ. ॥28॥ ಭೇಟಿಯನ್ನು ಮುಂದೆ ಹಾಕುತ್ತ ಹೋಗಿದ್ದರಿಂದ ವಿಳಂಬ ಪ್ರವೃತ್ತಿಯಿಂದಾಗಿ ಅನೇಕರಿಗೆ ಬಾಬಾರವರು ದೇಹ ತ್ಯಜಿಸಿದ ಮೇಲೆ ಅತಿ ವಿಳಂಬವಾಯಿತೆಂಬುದರ ಅರಿವಾಯಿತು. ॥29॥ ಅವರು ವಿಷಯವನ್ನು ಇಂದಿನಿಂದ 'ನಾಳೆಗೆ' ಎಂದು ಮುಂದೆ ಹಾಕಿದರು. ಕೊನೆಯಲ್ಲಿ ಅವರು ಮುಖಿತಃ ಭೇಟಿಯ ಅವಕಾಶ ಕಳೆದುಕೊಂಡು ಅದಕ್ಕಾಗಿ ಪಶ್ಚಾತ್ತಾಪ ಪಟ್ಟರೂ, ಪ್ರತ್ಯಕ್ಷ ದರ್ಶನವು ಎಂದಿಗೂ ಭರಿಸಲಾಗದ ನಷ್ಟವಾಗಿ ಉಳಿಯಿತು. ॥30॥ ಅಂತಹ ಜನರ ಹಂಬಲವು ಈ ಚರಿತ್ರೆಗಳನ್ನು ಶ್ರದ್ಧಾಭಕ್ತಿಗಳಿಂದ ಆಲಿಸಿದಲ್ಲಿ ಸ್ವಲ್ಪ ಮಟ್ಟಿಗೆ ತೃಪ್ತಿಕರವಾಗಿ ಈಡೇರುತ್ತದೆ. ಅವರು ಇಷ್ಟು ಮಾತ್ರದ ಗಳಿಕೆಯಿಂದಲೇ ತೃಪ್ತಿಪಡಬೇಕಾಗುತ್ತದೆ. ॥31॥ ಅದೃಷ್ಟವಶಾತ್ ಒಳ್ಳೆಯ ಸಮಯದಲ್ಲಿ ಹೋಗಿ ದರ್ಶನ ಪಡೆದು ಅವರ ಚರಣಗಳನ್ನು ಸ್ಪರ್ಶಿಸಿದವರು ಸಂತೃಪ್ತಿಹೊಂದಿದ್ದರು. ಆದರೆ ಅವರು ಅಲ್ಲಿಯೇ ತಮ್ಮ ಮಧುರ ಇಚ್ಛೆಯಂತೆ ಉಳಿದರೇ? ಬಾಬಾರವರು ಅವರಿಗೆ ಅನುಮತಿ ನೀಡಲೇಬೇಕಾಯಿತು. ॥32॥ ಯಾರೂ ತಮ್ಮ ಸ್ವಇಚ್ಛೆಯಿಂದ ಹೋಗಲು ಅಥವಾ ಅಲ್ಲಿಯೇ ನೆಲೆಸಲು ಸಾಧ್ಯವಾಗುತ್ತಿರಲಿಲ್ಲ. ಅವರಿಗೆ ಅನುಮತಿ ನೀಡಿದಲ್ಲಿ ಮಾತ್ರ ಅಲ್ಲಿ ನೆಲೆಸಲು ಸಾಧ್ಯವಾಗುತ್ತಿತ್ತು, ಅವರು ಹೊರಡು ಎಂದಾಗ ಹೊರಡುತ್ತಿದ್ದರು. ॥33॥ ಒಂದು ಸಂದರ್ಭದಲ್ಲಿ

ಕಾಕಾ ಮಹಾಜನಿಯು ಶಿರಡಿಗೆ ಬೊಂಬಾಯಿಯಿಂದ ಬಂದನು. ಅವನು ಶಿರಡಿಯಲ್ಲಿ ಒಂದು ವಾರ ಇದ್ದು ನಂತರ ಹಿಂತಿರುಗಬೇಕೆಂದುಕೊಂಡನು. ॥34॥ ಅದು ಭಗವಾನ್ ಶ್ರೀಕೃಷ್ಣನ ಹುಟ್ಟಿದ ಹಬ್ಬದ ಸಮಯ. ಚಾವಡಿಯನ್ನು ಸುಂದರವಾಗಿ ಅಲಂಕರಿಸಿದ್ದರು. ಬಾಬಾರವರ ಸನ್ನಿಧಿಯಲ್ಲಿ ತೊಟ್ಟಿಲನ್ನು ಕಟ್ಟಿ ಭಕ್ತರು ಸಂತೋಷದಿಂದ ನೃತ್ಯಮಾಡುತ್ತಿದ್ದರು. ॥35॥ ಕಾಕಾ ಗೋಕುಲಾಷ್ಟಮಿಯ ವೈಭವದ ದಿನ ಹಬ್ಬದಲ್ಲಿ ಭಾಗವಹಿಸಿ ಸಂತೋಷಪಡುವ ಇಚ್ಛೆಯಿಂದ ಶಿರಡಿಗೆ ಬಂದನು. ॥36॥ ಕೂಡಲೇ ಬಾಬಾರವರ ದರ್ಶನಕ್ಕೆಂದು ಹೋದಾಗ ಬಾಬಾ ಪ್ರಶ್ನಿಸಿದರು: "ನೀನು ಮನೆಗೆ ಯಾವಾಗ ಹೋಗುತ್ತೀಯೆ?" ಕಾಕಾನಿಗೆ ದಿಗ್ಭ್ರಮೆಯಾಯಿತು. ॥37॥ ಕಾಕಾ ಬಾಬಾರವರ ಭೇಟಿಯ ಮೊದಲ ಕ್ಷಣದಲ್ಲಿಯೇ ಕೇಳಿದ ಪ್ರಶ್ನೆಗೆ ಆಶ್ಚರ್ಯಚಕಿತನಾದನು. ಏಕೆಂದರೆ ಅವನು ಶಿರಡಿಯಲ್ಲಿ ಎಂಟು ದಿನಗಳವರೆಗೆ ನಿಲ್ಲಲು ಇಚ್ಛಿಸಿದ್ದನು. ॥38॥ ಯಾವಾಗ ಬಾಬಾರವರೇ ಕೇಳಿದರೋ ಆಗ ಕಾಕಾ ಉತ್ತರ ಕೊಡಲೇ ಬೇಕಾಯಿತು. ಬಾಬಾರವರೇ ಸಲಹೆ ನೀಡಿದ ಉತ್ತರದಂತೆ ಅವನು ನಿರ್ದಿಷ್ಟವಾದುತ್ತರ ನೀಡಿದನು. ॥39॥ "ಬಾಬಾರವರು ಅನುಮತಿ ನೀಡಿದಾಗ ಮನೆಗೆ ಹಿಂತಿರುಗುವೆನು." ಕಾಕಾ ಈ ಉತ್ತರ ನೀಡಿದಾಗ ಬಾಬಾರವರು ಹೇಳಿದರು, "ನಾಳೆ ಹೋಗು." ॥40॥ ಅಪಾರ ಗೌರವದಿಂದ, ವಿಧೇಯತೆಯಿಂದ ಅಪ್ಪಣೆಯನ್ನು ಪಾಲಿಸುತ್ತ ಬಾಬಾರವರಿಗೆ ಪ್ರಣಾಮ ಮಾಡಿದನು. ನಂತರ ಅದೇ ದಿನ ಅಷ್ಟಮಿ ಹಬ್ಬವಿದ್ದರೂ ಸಹ ತನ್ನ ಊರಿಗೆ ಹೊರಟನು. ॥41॥ ಅನಂತರ ತನ್ನ ಊರಿಗೆ ಹಿಂತಿರುಗಿ ಕಛೇರಿಗೆ ಹೋದಾಗ ತಿಳಿಯಿತು, ಅವನ ಯಜಮಾನ ಕಾಕಾನ ವಾಪಸಾತಿಗಾಗಿ ಕಾತರದಿಂದ ಕಾಯುತ್ತಿದ್ದನು. ॥42॥ ಮುನೀಮನು ಅನಿರೀಕ್ಷಿತವಾಗಿ ಅನಾರೋಗ್ಯಪೀಡಿತನಾದುದರಿಂದ ಯಜಮಾನನಿಗೆ ಕಾಕಾನ ಅವಶ್ಯಕತೆ ಇತ್ತು, ಅವನು ಕಾಕಾನ ವಾಪಸಾತಿಗಾಗಿ ಶಿರಡಿಗೆ ಒಂದು ಪತ್ರವನ್ನು ಕಳಿಸಿದ್ದನು. ॥43॥ ಕಾಕಾ ಶಿರಡಿ ಬಿಟ್ಟನಂತರ ಅಂಚೆಯವನು ಬಂದು ವಿಚಾರಿಸಿದನು. ಪತ್ರವನ್ನು ಮರು ವಿಳಾಸಕ್ಕೆ ಕಳಿಸಲಾಯಿತು. ಅದನ್ನು ಕಾಕಾ ಮನೆಯಲ್ಲಿ ಸ್ವೀಕರಿಸಿದನು. ॥44॥ ಈಗ ಮತ್ತೊಂದು ಸಣ್ಣ ಚರಿತ್ರೆ, ಈಗ ತಾನೇ ಹೇಳಿದ ಕಥೆಗೆ ತದ್ರೂಪು ವಿರೋಧವಾಗಿರುವುದನ್ನು ಹೇಳುತ್ತೇನೆ, ಆಲಿಸಿರಿ. ಭಕ್ತರಿಗೆ, ತಮಗೆ ಒಳ್ಳೆಯದಾವುದೆಂದು ತಿಳಿಯದಿದ್ದರೂ ಸಾಯಿಗೆ ಅದು ಸ್ಪಷ್ಟವಾಗಿ ತಿಳಿದಿತ್ತು. ॥45॥ ಭಾವೂ ಸಾಹೇಬ್ ಧುಮಾಲ್, ನಾಸಿಕ್‌ನ ಒಬ್ಬ ಪ್ರಖ್ಯಾತ ನ್ಯಾಯವಾದಿ. ಬಾಬಾರವರ ಪರಮ ಭಕ್ತ, ಬಾಬಾರವರ ದರ್ಶನಕ್ಕಾಗಿಯೇ ಅಲ್ಲಿಗೆ ಬಂದನು. ॥46॥ ಅವನು ಅವಸರದ ದರ್ಶನಮಾಡಿ, ಬಾಬಾರವರ ಚರಣಗಳಿಗೆ ವಂದಿಸಿ, ಅವರಿಂದ ಉದಿ ಮತ್ತು ಆಶೀರ್ವಾದಗಳನ್ನು ಸ್ವೀಕರಿಸಿ ಹಿಂತಿರುಗಬೇಕೆಂದುಕೊಂಡನು॥47॥ ಹಿಂತಿರುಗುವಾಗ, ಧುಮಾಲನು ನಿಫಡ್‌ನಲ್ಲಿ ನಿಲ್ಲಬೇಕಾಗಿತ್ತು, ಅವನು ಒಂದು ವಿಚಾರಣೆಗಾಗಿ ಅಲ್ಲಿಗೆ ಹೋಗಬೇಕಾಗಿತ್ತು. ॥48॥ ಇದು ಜನ ಯೋಜನೆಯಾಗಿದ್ದರೂ, ಬಾಬಾರವರಿಗೆ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದು ತಿಳಿದಿತ್ತು. ಅವನು ಹಿಂತಿರುಗಲು ಅನುಮತಿ ಬೇಡಿದಾಗ ಬಾಬಾರವರು

ಅವನಿಗೆ ಅನುಮತಿ ನೀಡಲಿಲ್ಲ. ॥49॥ ಬಾಬಾರವರು ಒಂದು ವಾರಗಳ ಕಾಲ ಅಲ್ಲಿಯೇ ಇರಿಸಿಕೊಂಡರು. ಅವರು ನಿಶ್ಚಯ ಪೂರ್ವಕವಾಗಿ
ಅನುಮತಿ ನೀಡಲಿಲ್ಲ. ವಿಚಾರಣೆಯು ಮುಂದೂಡಲ್ಪಟ್ಟಿತು. ಇದು ಮೂರು ಬಾರಿ ನಡೆಯಿತು. ॥50॥ ಧುಮಾಲನನ್ನು ಒಂದು ವಾರಕ್ಕಿಂತ ಹೆಚ್ಚು
ಕಾಲ ಅಲ್ಲಿಯೇ ನಿಲ್ಲಿಸಲಾಗಿತ್ತು. ನ್ಯಾಯಾಧೀಶನು ವಿಚಾರಣೆಯ ದಿನವೇ ಅನಾರೋಗ್ಯ ಪೀಡಿತನಾಗಿದ್ದನು. ॥51॥ ನ್ಯಾಯಾಧೀಶನಿಗೆ ಜೀವನದಲ್ಲಿ
ಎಂದಿಗೂ ಅನುಭವಿಸದೇ ಇರುವಂತಹ ತೀವ್ರವಾದ ಹೊಟ್ಟೆನೋವು ಕಾಣಿಸಿಕೊಂಡಿತು. ಸಹಜವಾಗಿಯೇ ವಿಚಾರಣೆಯನ್ನುಮುಂದೂಡಲಾಗಿತ್ತು.
ಧುಮಾಲನ ಸಮಯ ಬಹಳ ಫಲದಾಯಕವಾಗಿ ಕಳೆದಿತ್ತು. ॥52॥ ಅದು ಹಾಗಿರಲಿ. ಧುಮಾಲನು ಸಾಯಿ ಸನ್ನಿಧಿಯನ್ನು ಅನುಭವಿಸಲು
ಸಾಧ್ಯವಾಗಿತ್ತು. ಕಕ್ಷಿದಾರನ ಆತಂಕ ಮುಗಿದಿತ್ತು. ಇದು ಯಾವುದೇ ಪ್ರಯತ್ನವಿಲ್ಲದೆ ಕೇವಲ ಸಾಯಿಯಲ್ಲಿನ ಶ್ರದ್ಧೆಮಾತ್ರದಿಂದಲೇ ನಡೆದಿತ್ತು. ॥53॥
ಅನಂತರ, ಸರಿಯಾದ ಸಮಯದಲ್ಲಿ ಧುಮಾಲನಿಗೆ ಅನುಮತಿ ದೊರಕಿತು. ಎಲ್ಲಾ ಕೆಲಸಗಳೂ ತೃಪ್ತಿಕರವಾಗಿ ಪೂರೈಸಿದವು. ಸಾಯಿಯ
ಕೆಲಸಗಳೇ ಅತಿ ಅದ್ಭುತವಾದವು. ॥54॥ ವಿಚಾರಣೆಯು ನಾಲ್ಕು ತಿಂಗಳುಗಳವರೆಗೆ ನಡೆಯಿತು. ಆ ಸಮಯದಲ್ಲಿ ನಾಲ್ಕು ನ್ಯಾಯಾಧೀಶರು
ಬದಲಾಗಿದ್ದರು. ಆದರೆ ಕೊನೆಯಲ್ಲಿ ಫಲನೀಡಿತು. ನಿರಪರಾಧಿಯು ಬಿಡುಗಡೆಹೊಂದಿದನು. ॥55॥ ಕೇಳಿ, ಒಮ್ಮೆ ಬಾಬಾರವರ ಒಬ್ಬ ಮಹಾನ್
ಭಕ್ತ ನಾನಾ ಸಾಹೇಬ್ ನಿಮೋಣಕರ್‌ನ ಪತ್ನಿಯ ಪರ ಹೇಗೆ ವಹಿಸಿದನು ಮತ್ತು ಅದು ಯಾವ ರೀತಿ ನಡೆಯಿತು ಎಂಬುದನ್ನು ಕೇಳಿರಿ. ॥56॥
ನಿಮೋಣ್ ಹಳ್ಳಿಯಲ್ಲಿ ಅವರು ವಂಶಪಾರಂಪರಿಕ ಹಕ್ಕುಳ್ಳವರಾಗಿದ್ದರು. ಸರ್ಕಾರವು ಅವನನ್ನು ನ್ಯಾಯಾಧಿಕಾರಿಯಾಗಿ ನೇಮಿಸಿತ್ತು. ಅವನು
ಬಹಳ ಪ್ರಭಾವಯುತ ವ್ಯಕ್ತಿಯಾಗಿದ್ದನು. ॥57॥ ಅವನು ಮಾಧವರಾವ್‌ನ ಹಿರಿಯ ಚಿಕ್ಕಪ್ಪ. ಅವನಿಗೆ ವಯಸ್ಸಾಗಿತ್ತು. ಆದರೆ ಬಹಳ ಗೌರವಾನ್ವಿತ
ವ್ಯಕ್ತಿಯಾಗಿದ್ದನು. ಅವನ ಪತ್ನಿ ಬಹಳ ನಿಷ್ಠಾವಂತ ಭಕ್ತಳು. ಸಾಯಿಯೇ ಅವರ ಜೀವನದ ಸರ್ವಸ್ವವಾಗಿದ್ದರು. ॥58॥ ಅವರ ಅನುವಂಶಿಕ
ಹಳ್ಳಿಯನ್ನು ತ್ಯಜಿಸಿ ಇಬ್ಬರೂ ಶಿರಡಿಯಲ್ಲಿಯೇ ನೆಲೆಸಿದ್ದರು. ಸಾಯಿಯಲ್ಲಿ ಪೂರ್ಣಶ್ರದ್ಧೆ ಇಟ್ಟು ಅವರು ಶಿರಡಿಯಲ್ಲಿ ಬಹಳ ಸ್ನೇಹಶೀಲರಾಗಿ
ಜೀವಿಸಿದರು. ॥59॥ ಸೂರ್ಯೋದಯಕ್ಕೆ ಮುಂಚೆಯೇ ಎದ್ದು, ಸ್ನಾನಮಾಡಿ, ಪ್ರಾರ್ಥನೆಗಳನ್ನು ಸಲ್ಲಿಸಿ ಚಾವಡಿಗೆ ಬೆಳಗಿನ ಕಾಕಡಾರತಿಯನ್ನು
ಮಾಡಲು ಬರುತ್ತಿದ್ದರು. ॥60॥ ಅನಂತರ ಅವರು ತಮ್ಮ ಸ್ತೋತ್ರಗಳನ್ನು ಹೇಳುತ್ತಿದ್ದರು. ನಾನಾನು ಬಾಬಾರವರ ಹತ್ತಿರ ಸೂರ್ಯಾಸ್ತಮದವರೆಗೆ
ಕುಳಿತಿರುತ್ತಿದ್ದನು. ಸದಾ ಬಾಬಾರವರ ಸೇವೆಯಲ್ಲಿಯೇ ಮಗ್ನನಾಗಿರುತ್ತಿದ್ದನು. ॥61॥ ಅವನು ಬಾಬಾರವರನ್ನು ಲೇಂಡಿಗೆ ಕರೆದುಕೊಂಡು ಹೋಗಿ
ಹಿಂದಕ್ಕೆ ಮಸೀದಿಗೆ ಕರೆದುಕೊಂಡು ಬರುತ್ತಿದ್ದನು. ಹೃದಯ ತುಂಬಿದ ಪ್ರೀತಿಯಿಂದ ಅವನು ಬಾಬಾರವರಿಗೆ ಬೇಕಾದ ಯಾವುದೇ ಸೇವೆಯನ್ನು
ಮಾಡುತ್ತಿದ್ದನು. ॥62॥ ಅವನ ಪತ್ನಿಯೂ ಸಹ ಬಾಬಾರವರ ಸೇವೆಯನ್ನು ಸಾಧ್ಯವಾದಷ್ಟು ಮಾಡುತ್ತಿದ್ದಳು. ಅತ್ಯಂತ ಪ್ರೀತಿಯಿಂದ ದಿನಪೂರ್ತಿ

ಅಲ್ಲಿ ಸೇವೆ ಮಾಡುತ್ತಿದ್ದಳು. ॥63॥ ಅವರು ತಮ್ಮ ನಿವಾಸವನ್ನು ಕೇವಲ ಸ್ನಾನಮಾಡಲು, ಊಟಮಾಡಲು, ಅಡಿಗೆ ಮಾಡಲು ಮುಂತಾದ ಕೆಲಸಗಳನ್ನು ಅಥವಾ ರಾತ್ರಿಯ ವೇಳೆ ನಿದ್ರೆ ಮಾಡಲು ಉಪಯೋಗಿಸುತ್ತಿದ್ದರು. ॥64॥ ಪ್ರೀತಿಯ ದಂಪತಿಗಳು ತಮ್ಮ ಸಮಯವನ್ನೆಲ್ಲಾ ಬೆಳಗ್ಗೆ, ಮಧ್ಯಾಹ್ನ, ಅಪರಾಹ್ನ ಮತ್ತು ಸಾಯಂಕಾಲ ಅಂದರೆ ಉಳಿದ ಎಲ್ಲ ಸಮಯವನ್ನು ಬಾಬಾರವರ ಸನ್ನಿಧಿಯಲ್ಲಿ ಕಳೆಯುತ್ತಿದ್ದರು. ॥65॥ ಅದು ಏನಾದರೂ ಆಗಲಿ. ನಾನು ಅವರಿಬ್ಬರ ಸೇವೆಯನ್ನು ವರ್ಣಿಸುತ್ತಾ ಹೋದಲ್ಲಿ ಈ ಗ್ರಂಥವು ಅತ್ಯಂತ ಬೃಹತ್ತಾಗಿ ಬೆಳೆಯುತ್ತದೆ. ಆದುದರಿಂದ ನಾನು ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಭಾಗವನ್ನು ಮಾತ್ರ ವಿವರಿಸುತ್ತೇನೆ. ॥66॥ ಒಮ್ಮೆ ಆ ಮಹಿಳೆಯು ಆಕೆಯ ಮಗನು ಅಸೌಖ್ಯನಾದ ಕಾರಣ ಬೇಲಾಪುರಕ್ಕೆ ಹೋಗಬೇಕಾಯಿತು. ಅವಳು ತನ್ನ ಪತಿಯೊಡನೆ ಸಮಾಲೋಚಿಸಿ ಅಲ್ಲಿಗೆ ಹೊರಡಲು ಎಲ್ಲ ತಯಾರಿ ಮಾಡಿದಳು. ॥67॥ ಅನಂತರ ಸಹಜ ಪದ್ಧತಿಯಂತೆ ಬಾಬಾರವರ ಸಲಹೆಗಳನ್ನು ಕೇಳಲು, ಬಾಬಾರವರು ಒಪ್ಪಿಗೆ ನೀಡಿದ ಕೂಡಲೇ ತನ್ನ ಪತಿಗೆ ತಿಳಿಸಿದಳು. ॥68॥ ಅದು ಹಾಗಿರಲಿ. ಅಂತಿಮವಾಗಿ ಆಕೆ ಬೇಲಾಪುರಕ್ಕೆ ಹೋಗಲು ನಿಶ್ಚಯಿಸಿದಳು. ಆದರೆ ನಾನಾ ಆಕೆ ಮರುದಿನವೇ ಹಿಂತಿರುಗಬೇಕೆಂದು ಹೇಳಿದನು. ॥69॥ ನಾನಾನಿಗೆ ಒಂದು ಕಾರಣವಿತ್ತು. ಆದ್ದರಿಂದ ಅವನು ಆಕೆಗೆ ಹೋಗಿ ಕೂಡಲೇ ಹಿಂತಿರುಗುವಂತೆ ತಿಳಿಸಿದನು. ಆದ್ದರಿಂದ ಅವನ ಪತ್ನಿಯೂ ಎರಡು ಮನಸ್ಸಿನಲ್ಲಿದ್ದಳು. ॥70॥ ಮಾರನೆಯ ದಿನವೇ ಪೋಲ್ ಹಬ್ಬದ ಅಮಾವಾಸ್ಯೆಯಾಗಿತ್ತು. ಆದ್ದರಿಂದ ಆ ದಿನವನ್ನು ಅಲ್ಲಿಯೇ ಕಳೆಯಬೇಕೆಂಬುದು ಆ ಮಹಿಳೆಯ ಆಶೆಯಾಗಿತ್ತು. ಆದರೆ ನಾನಾ ಅದಕ್ಕೆ ಒಪ್ಪುತ್ತಿರಲಿಲ್ಲ. ॥71॥ ಅದೂ ಅಲ್ಲದೆ, ಅಂದು ಅಮಾವಾಸ್ಯೆ ಆದುದರಿಂದ ಊರಿನಿಂದ ಹೊರಗೆ ಪ್ರಯಾಣ ಮಾಡುವುದು ಸರಿಯೆಂದು ಪರಿಗಣಿಸುತ್ತಿರಲಿಲ್ಲ. ಆದ್ದರಿಂದ ಆಕೆಗೆ ಸಂದಿಗ್ಧ ಪರಿಸ್ಥಿತಿ ಉಂಟಾಗಿ ಯಾವ ರೀತಿ ಬಗೆಹರಿಸಬೇಕೋ ಗೊತ್ತಿರಲಿಲ್ಲ. ॥72॥ ಬೇಲಾಪುರಕ್ಕೆ ಹೋಗದೆ ಇದ್ದರೆ ಅವಳಿಗೆ ಸಮಾಧಾನವಿರಲಿಲ್ಲ. ಗಂಡನ ಮನಸ್ಸನ್ನು ನೋಯಿಸಲೂ ಆಗುತ್ತಿರಲಿಲ್ಲ. ಗಂಡನಿಗೆ ಅವಿಧೇಯಳಾಗುವ ಪ್ರಶ್ನೆಯೇ ಹುಟ್ಟಲಿಲ್ಲ. ॥73॥ ಅದು ಹಾಗಿರಲಿ. ಅವಳುತಯಾರಿ ನಡೆಸಿ ಬೇಲಾಪುರಕ್ಕೆ ಹೊರಟಳು. ಬಾಬಾರವರು ಲೇಂಡಿಗೆ ಹೋಗುವ ಮಾರ್ಗದಲ್ಲಿ ಇದ್ದರು. ಆಕೆ ಅವರಿಗೆ ಬಾಗಿ ವಂದಿಸಿದಳು. ॥74॥ ಪ್ರಯಾಣಕ್ಕೆ ಹೊರಡುವ ಮುನ್ನ ದೇವರಿಗೆ ನಮಸ್ಕರಿಸಿ ದಾರಿಯಲ್ಲಿ ಬರುವ ವಿಘ್ನಗಳನ್ನು ನಿವಾರಿಸಲು ಪ್ರಾರ್ಥಿಸುವುದು ರೂಢಿಯಲ್ಲಿದೆ. ಶಿರಡಿಯಲ್ಲಿಯೂ ಈ ಪದ್ಧತಿ ಜಾರಿಯಲ್ಲಿತ್ತು. ॥75॥ ಆದರೆ ಅಲ್ಲಿ ಸಾಯಿಯು ಆರಾಧ್ಯದೈವ. ಹೊರಡಲೇ ಬೇಕಾದ ಅವಸರವಿದ್ದರೂ ಸಹ, ಹೊರಡುವ ಸಮಯದಲ್ಲಿ ಅವರು ಸಾಯಿಯ ಚರಣಗಳಿಗೆ ವಂದಿಸುತ್ತಿದ್ದರು. ॥76॥ ಈ ಅಭ್ಯಾಸವನ್ನು ರೂಢಿಯಲ್ಲಿಡಲು, ಬಾಬಾರವರು ಸಾಠೆ ವಾಡಾ ಮುಂದೆ ಒಂದು ಕ್ಷಣ ನಿಂತಾಗ, ಈ ಮಹಿಳೆ ಅವರ ಚರಣಗಳಿಗೆ ವಂದಿಸಿದಳು. ॥77॥ ನಾನಾ ಸಾಹೇಬ್ ನಿಮೋಣಕರ್ ಮತ್ತಿತರೆ ಹಿರಿಯರು, ಕಿರಿಯರು; ಬಾಬಾರವರ

ಕ್ಷಿಪ್ರ ದರ್ಶನ ಪಡೆಯಲು ನೆರೆದಿದ್ದವರು ಎಲ್ಲರೂ ಬಾಬಾರವರಿಗೆ ನಮಸ್ಕರಿಸಿದರು. ॥78॥ ಅಲ್ಲಿ ನೆರೆದಿದ್ದ ಗುಂಪಿನ ಮುಂದೆ ಅದರಲ್ಲೂ ನಾನಾನ ಅನುಪಸ್ಥಿತಿಯಲ್ಲಿಯೇ ಬಾಬಾರವರು ಸಮಯೋಚಿತವಾಗಿ ಏನು ಹೇಳಿದರೆಂದು ಗಮನಿಸಿ. ॥79॥ ಆಕೆಯು ತನ್ನ ಶಿರವನ್ನು ಬಾಬಾರವರ ಚರಣಗಳಲ್ಲಿ ಇಟ್ಟು ಹೊರಡಲು ಅನುಮತಿಯನ್ನು ಬೇಡಿದಾಗ ಬಾಬಾ ಹೇಳಿದರು: "ಬೇಗನೆ ಹೋಗು. ಎಷ್ಟು ಬೇಗ ಸಾಧ್ಯವೋ ಹೊರಡು. ಆರಾಮವಾಗಿರು. ॥80॥ "ಈಗ ನೀನು ಹೋಗುತ್ತಿರುವುದರಿಂದ ಬೇಲಾಪುರದಲ್ಲಿ ನಾಲ್ಕುದಿನ ಆರಾಮವಾಗಿರು. ಅಲ್ಲಿ ಎಲ್ಲರನ್ನೂ ಭೇಟಿಯಾಗಿ ಕ್ಷೇಮ ವಿಚಾರಿಸಿದ ಮೇಲೆ ಶಿರಡಿಗೆ ವಾಪಸ್ಸಾಗು." ॥81॥ ಬಾಬಾರವರ ವಚನಗಳು ಆ ಮಹಿಳೆಗೆ ಊಹಿಸಲಸಾಧ್ಯವಾದ ಮನಃಶಾಂತಿಯನ್ನು ನೀಡಿದುವು. ನಿಮೋಣಕರ್‌ನಿಗೂ ಸೂಚನೆ ದೊರಕಿತ್ತು, ಇಬ್ಬರಿಗೂ ತೃಪ್ತಿಯಾಯಿತು. ॥82॥ ಸಂಕ್ಷಿಪ್ತವಾಗಿ, ನಾವು ಯೋಜನೆ ರೂಪಿಸಿದಾಗ ನಮಗೆ ಪರಿಸ್ಥಿತಿಯ ಸಂಪೂರ್ಣ ಅರಿವು ಇರುವುದಿಲ್ಲ. ಸಂತರಿಗೆ ಮಾತ್ರ ಎಲ್ಲಿ ನಮ್ಮ ಕ್ಷೇಮ ಇರುತ್ತದೆ, ಎಲ್ಲಿ ಇರುವುದಿಲ್ಲ ಎಂಬುದು ತಿಳಿದಿರುತ್ತದೆ. ಅವರಿಗೆ ತಿಳಿಯದೇ ಇರುವುದು ಯಾವುದೂ ಇರುವುದಿಲ್ಲ. ॥83॥ ಭೂತ, ವರ್ತಮಾನ ಮತ್ತು ಭವಿಷ್ಯತ್ ಎಲ್ಲವನ್ನೂ ಅವರು ತಮ್ಮ ಹಸ್ತವನ್ನು ತಾವೇ ಓದಿಕೊಳ್ಳುವ ರೀತಿ ಸ್ಪಷ್ಟವಾಗಿ ಗ್ರಹಿಸುತ್ತಿದ್ದರು. ಅವರ ಮಾರ್ಗದರ್ಶನದಂತೆ ನಡೆದಲ್ಲಿ ಭಕ್ತರು ಲಾಭ ಹೊಂದುತ್ತಿದ್ದರು. ॥84॥ ನಾವು ಈಗ ಮೊದಲಿನ ಚರಿತ್ರೆಗೆ ಹಿಂತಿರುಗೋಣ. ಮುಳೆಯು ಹೇಗೆ ಅನುಗ್ರಹಿತನಾದನು ಮತ್ತು ತನ್ನ ಗುರುವಿನ ದರ್ಶನ ಪಡೆದನು ಎಂಬುದನ್ನು ನಿರೂಪಿಸೋಣ. ॥85॥ ಮುಳೆಯು ಶ್ರೀಮಾನ್ ಬಾಪುಸಾಹೇಬ್ ಬುಟ್ಟಿಯ ಭೇಟಿ ಮಾಡಿ ಕೂಡಲೇ ಹಿಂತಿರುಗಲು ಇಚ್ಛಿಸಿದ್ದನು. ॥86॥ ಅದು ಅವನ ಉದ್ದೇಶವಾಗಿದ್ದರೂ, ಬಾಬಾರವರ ಯೋಜನೆಯೇ ಬೇರೆ ಇತ್ತು, ಆ ಪವಾಡವನ್ನು ಮತ್ತು ಅದರ ಹಿಂದಿನ ರಹಸ್ಯ ಉದ್ದೇಶದ ಬಗ್ಗೆ ಗಮನವಿಟ್ಟು ಆಲಿಸಿರಿ. ॥87॥ ಅವನು ಶ್ರೀಮಾನ್‌ರನ್ನು ಭೇಟಿಯಾದನು. ನಂತರ ಆ ಗುಂಪು ಮಸೀದಿಯ ಕಡೆ ಹೊರಟಿತು. ಮುಳೆಗೂ ಅವರ ಜೊತೆ ಹೋಗಬೇಕೆಂದು ಅನಿಸಿ ಅವರನ್ನು ಸೇರಿಕೊಂಡನು. ॥88॥ ಮುಳೆಯು ಎಲ್ಲ ಶಾಸ್ತ್ರಗಳನ್ನು ಅಧ್ಯಯನ ಮಾಡಿದವನು. ಅವನು ಜ್ಯೋತಿಶ್ಶಾಸ್ತ್ರದಲ್ಲಿ ಪ್ರವೀಣನೂ, ಹಸ್ತಸಾಮುದ್ರಿಕಾಶಾಸ್ತ್ರದಲ್ಲಿ ಪಂಡಿತನೂ ಆಗಿದ್ದನು. ಅವನು ದರ್ಶನಕ್ಕಾಗಿ ಕಾತರನಾಗಿದ್ದನು. ॥89॥ ಪೇಡಾ, ಬತ್ತಾಸು, ಬರ್ಫಿ, ತೆಂಗಿನಕಾಯಿ, ಕಿತ್ತಳೆ ಮುಂತಾದ ಹಣ್ಣುಗಳು – ಇವುಗಳನ್ನು ಬಾಬಾರವರಿಗೆ ಅವರ ಪ್ರೀತಿಯ ಮತ್ತು ಮುಗ್ಧಭಾವದ ಭಕ್ತರು ಯಥೇಚ್ಛವಾಗಿ ಸಮರ್ಪಿಸುತ್ತಿದ್ದರು. ॥90॥ ಅದಲ್ಲದೆ, ಹಣ್ಣುಗಳನ್ನು ಮಾರುವ ಮಹಿಳೆಯರೂ ಸಹ ಅಲ್ಲಿಗೆ ಬಂದರು. ಮರಸೇಬು, ಬಾಳೆಹಣ್ಣು, ಕಬ್ಬು, ಅವರಿಗೆ ಬೇಕಾದ ಮತ್ತಿತರ ವಸ್ತುಗಳನ್ನು ಬಾಬಾರವರು ತಮ್ಮ ಹಣದಲ್ಲಿಯೇ ಖರೀದಿಸುವರು. ॥91॥ ಅವರು (ಸಾಯಿ) ತಮ್ಮ ಹಣದಲ್ಲಿ ಬುಟ್ಟಿ ತುಂಬಾ ಮಾವಿನ ಹಣ್ಣು ಮತ್ತು ಬಾಳೆ ಹಣ್ಣುಗಳನ್ನು ಕೊಂಡುಕೊಳ್ಳಲು ಖರ್ಚು ಮಾಡುತ್ತಿದ್ದರುಇವುಗಳನ್ನು ಮನಃಪೂರ್ವಕವಾಗಿ

ಭಕ್ತರಿಗೆ ಹಂಚುತ್ತಿದ್ದರು. ॥92॥ ಅವರು ಮಾವಿನ ಹಣ್ಣುಗಳನ್ನು ಒಂದಾದಮೇಲೆ ಮತ್ತೊಂದು, ಎರಡೂ ಹಸ್ತಗಳ ಮಧ್ಯೆ ಇಟ್ಟುಕೊಂಡು ಅದು ಮೃದುವಾಗುವವರೆಗೆ ಅಮುಕಿಹಿಡಿದು ನಂತರ ಭಕ್ತರ ಕೈಗೆ ಕೊಡುತ್ತಿದ್ದರು. ॥93॥ ಒಮ್ಮೆ ತುಟಿಗಳು ಮಾವಿನ ಹಣ್ಣುಗಳನ್ನು ಮುಟ್ಟಿತೆಂದರೆ ರಸವು ನೇರವಾಗಿ ಹೊಟ್ಟೆಗೆ ಸೇರುತ್ತಿತ್ತು. ಅದರ ಸಿಪ್ಪೆ ಮತ್ತು ಓಟೆಯನ್ನು ಬಿಸಾಡಲಾಗುತ್ತಿತ್ತು. ॥94॥ ಬಾಳೆ ಹಣ್ಣಿನ ವಿಚಾರ ತೆಗೆದುಕೊಂಡರೆ ಅದು ಅತಿ ವಿಶೇಷವಾದದ್ದು. ಅದರ ತಿರುಳನ್ನು ಭಕ್ತರಿಗೆ ನೀಡಿ ಸಿಪ್ಪೆಯನ್ನು ಬಾಬಾರವರೇ ತಿನ್ನುತ್ತಿದ್ದರು. ಓಹ್, ಎಷ್ಟು ಆಶ್ಚರ್ಯ ಅವರ ಕಾರ್ಯಗಳು! ॥95॥ ಬಾಬಾರವರು ಈ ಎಲ್ಲಾ ಹಣ್ಣುಗಳನ್ನೂ ತಮ್ಮ ಕೈಯಾರೆ ಪ್ರತಿಯೊಬ್ಬರಿಗೂ ಕೊಡುತ್ತಿದ್ದರು. ಅಪರೂಪಕ್ಕೆ ಅವರಿಗಾಗಿ ಬೇಕೆನಿಸಿದಾಗ ಅವರು ತಾವೇ ಸ್ವಲ್ಪ ರುಚಿ ನೋಡುತ್ತಿದ್ದರು. ॥96॥ ರೂಢಿಯಲ್ಲಿದ್ದಂತೆ ಆ ದಿನ ಬಾಬಾರವರು ತಮ್ಮ ಭಕ್ತರಿಗೆ ತಾವು ಖರೀದಿಸಿದ ಬುಟ್ಟಿಯಲ್ಲಿದ್ದ ಬಾಳೆ ಹಣ್ಣುಗಳನ್ನು ಹಂಚುತ್ತಿದ್ದರು. ॥97॥ ಶಾಸ್ತ್ರಿ ಬುವಾ ಮುಳೆಯು ಬಾಬಾರವರ ಚರಣಗಳನ್ನು ನೋಡಿದೊಡನೆ ಬಹ ಅಚ್ಚರಿಗೊಂಡನು. ಬಾಬಾರವರ ಪಾದಗಳಲ್ಲಿನ ಧ್ವಜ, ವಜ್ರ ಮತ್ತು ಅಂಕುಶ್ ರೇಖೆಗಳನ್ನು ಪರಿಶೀಲಿಸಲು ಇಚ್ಛಿಸಿದನು. ॥98॥ ಆ ಕ್ಷಣದಲ್ಲಿ, ಬಾಬಾರವರ ಭಕ್ತನಾದ ಕಾಕಾ ಸಾಹೇಬ ದೀಕ್ಷಿತನು ಹತ್ತಿರದಲ್ಲಿದ್ದನು. ಅವನು ನಾಲ್ಕು ಬಾಳೆಹಣ್ಣುಗಳನ್ನು ತೆಗೆದು ಬಾಬಾರವರ ಕೈಗಳಲ್ಲಿಟ್ಟನು॥99॥ ಅವರಲ್ಲೊಬ್ಬನು ಬಾಬಾರವರಲ್ಲಿ ಮನಃಪೂರ್ವಕವಾಗಿ ಬೇಡಿಕೊಂಡನು, "ಬಾಬಾ, ಈ ಮುಳೆ ಶಾಸ್ತ್ರಿ ಒಂದು ಪವಿತ್ರ ತೀರ್ಥಸ್ಥಳದಲ್ಲಿ ವಾಸಿಸುವವನು. ಪುಣ್ಯ ಫಲಗಳಿಂದಾಗಿ ನಿಮ್ಮ ಚರಣಗಳನ್ನು ಪಡೆದಿದ್ದಾನೆ. ಅವನಿಗೆ ಈ ಹಣ್ಣುಗಳನ್ನು ಪ್ರಸಾದವಾಗಿ ಕೊಡುವುದಿಲ್ಲವೇ?" ॥100॥ ಯಾರೇ ವಿನಂತಿಸಿಕೊಳ್ಳಲಿ, ಬಿಡಲಿ, ಬಾಬಾರವರಿಗೆ ತಾವಾಗಿಯೇ ಕೊಡಬೇಕೆಂದು ಅನಿಸುವರೆಗೆ ಅವರು ಯಾರಿಗೂ ಏನನ್ನೂ ಕೊಡುತ್ತಿರಲಿಲ್ಲ ಮತ್ತು ಏನನ್ನೂ ಮಾಡುತ್ತಿರಲಿಲ್ಲ. ॥101॥ ಮುಳೆಯು ಅವರ ಕೈಗಳಿಗಾಗಿ ಕೇಳಿದನೇ ವಿನಹ ಬಾಳೇಹಣ್ಣುಗಳನ್ನಲ್ಲ. ಅದಕ್ಕಾಗಿ ಅವನು ಕೈಗಳನ್ನು ಚಾಚಿದ್ದನಷ್ಟೆ. ಬಾಬಾರವರು ಅದರ ಕಡೆಗೆ ಗಮನ ಕೊಡದೆ ಪ್ರಸಾದ ಹಂಚುತ್ತಲೇ ಇದ್ದರು. ॥102॥ ಮುಳೆಯು ಬಾಬಾರವರಲ್ಲಿ ನಿವೇದಿಸಿದನು: "ನನಗೆ ಹಣ್ಣುಗಳು ಬೇಕಿಲ್ಲ. ಆದರೆ ನಿಮ್ಮ ಕೈಗಳನ್ನು ನೀಡಿ. ನನಗೆ ಹಸ್ತಸಾಮುದ್ರಿಕಾ ಶಾಸ್ತ್ರ ತಿಳಿದಿದೆ." ಬಾಬಾರವರು ತಮ್ಮ ಕೈಯನ್ನು ಅವನಿಗೆ ನೀಡಲಿಲ್ಲ. ॥103॥ ಅಷ್ಟಾದರೂ, ಮುಳೆಯು ಮುಂದಕ್ಕೆ ಸರಿಸಿ ಬಂದು ತಮ್ಮ ಕೈಗಳನ್ನು ನೀಡಿ ಅಂಗೈಯನ್ನು ಓದಲು ಹೋದನು. ಬಾಬಾರವರು ಪೂರ್ಣವಾಗಿ ನಿರ್ಲಕ್ಷಿಸಿ ತಮಗೂ ಅದಕ್ಕೂ ಏನೂ ಸಂಬಂಧವಿಲ್ಲದಂತೆ ಇದ್ದರು. ॥104॥ ಬಾಬಾರವರು ನಾಲ್ಕು ಬಾಳೆಹಣ್ಣುಗಳನ್ನು ಮುಳೆಯ ಚಾಚಿದ ಕೈಗಳಿಗೆ ಹಾಕಿ ಅವನನ್ನು ಕುಳಿತುಕೊಳ್ಳಲು ಹೇಳಿದರು. ಆದರೆ ತಮ್ಮ ಹಸ್ತವನ್ನು ಮಾತ್ರ ಮುಳೆಗೆ ಕೊಡಲಿಲ್ಲ. ॥105॥ ಸಾರಾಂಶ, ಯಾರು ಎಲ್ಲಾ ಇಷ್ಟಾರ್ಥಗಳನ್ನು ನೆರವೇರಿಸುತ್ತಾರೆಯೋ, ಯಾರು ತಮ್ಮ ದೇಹವನ್ನು ಪರಮಾತ್ಮನ ಸೇವೆಯಲ್ಲಿ ಸವೆಸಿರುತ್ತಾರೋ, ಅಂತಹವರಿಗೆ ಹಸ್ತಸಾಮುದ್ರಿಕಾಶಾಸ್ತ್ರದ

ಅವಶ್ಯಕತೆಯಾದರೂ ಎಲ್ಲಿದೆ? ಅವರು ತಮ್ಮ ಭಕ್ತರಿಗೆ ತಂದೆ, ತಾಯಿ ಎರಡೂ ಆಗಿದ್ದರು. ॥106॥ ಬಾಬಾರವರ ಮೋಹರಹಿತ ಸ್ವಭಾವವನ್ನು, ಗಮನಿಸಿದಮೇಲೆ ಹಸ್ತಸಾಮುದ್ರಿಕಾಶಾಸ್ತ್ರದ ಬಗೆಗಿನ ಔದಾಸೀನ್ಯವನ್ನು ನೋಡಿ, ಶಾಸ್ತ್ರಿ ಬುವಾ ತಮ್ಮ ಕೈಯನ್ನು ಹಿಂತೆಗೆದುಕೊಂಡನು. ಮುಂದೆ ಬಾಬಾರವರನ್ನು ನಿರ್ಬಂಧಪಡಿಸಹೋಗಲಿಲ್ಲ. ॥107॥ ಸ್ವಲ್ಪಹೊತ್ತು ಶಾಂತವಾಗಿ ಕುಳಿತನು. ನಂತರ ತಮ್ಮ ಗುಂಪಿನ ಇತರರೊಡನೆ ವಾಡಾಗೆ ಹೋಗಿ ಸ್ನಾನಮಾಡಿ ಸೋವಲೀವನ್ನು (ಮಡಿವಸ್ತ್ರ) ಧರಿಸಿ ಅಗ್ನಿಹೋತ್ರ ಮಾಡಲು ಪ್ರಾರಂಭಿಸಿದನು. ॥108॥ ಮತ್ತೊಂದು ಕಡೆ, ರೂಢಿಯಂತೆ ಬಾಬಾರವರು ಲೇಂಡಿಯ ಕಡೆ ಹೊರಟರು. ಅವರು ಹೇಳಿದರು: "ಸ್ವಲ್ಪ ಕಾವಿ (ಹಳದಿ) ಪುಡಿಯನ್ನು ತೆಗೆದುಕೊಂಡು ಹೋಗು. ನಾನು ಕಾಷಾಯವಸ್ತ್ರ ಧರಿಸಲು ಇಚ್ಛಿಸುತ್ತೇನೆ." ॥109॥ ಪ್ರತಿಯೊಬ್ಬರಿಗೂ ಆಶ್ಚರ್ಯವಾಯಿತು. ಕಾವಿ (ಹಳದಿ) ಪುಡಿಯಿಂದಬಾಬಾ ಏನು ಮಾಡುತ್ತಾರೆ? ಎಲ್ಲರೂ ಯೋಚಿಸತೊಡಗಿದರು. 'ಬಾಬಾ ಏಕೆ ಕಾವಿ (ಹಳದಿ) ಪುಡಿಯ ಬಗ್ಗೆ ಈ ದಿನ ನೆನಪಿಸಿಕೊಂಡರು?' ॥110॥ ಬಾಬಾರವರ ಮಾತುಗಳು, ಮೃದುನುಡಿಗಳು, ಯಾರು ಏನು ಅರ್ಥಮಾಡಿಕೊಳ್ಳಲು ಸಾಧ್ಯ? ಆದರೆ ಅವುಗಳನ್ನು ಕೇಳಿದ ನಂತರ ಮನಸ್ಸಿನಲ್ಲಿ ಚಿಂತನೆ ಮಾಡಿದಲ್ಲಿ ಅದರ ಸರಿಯಾದ ಅರ್ಥದ ಅರಿವಾಗುತ್ತದೆ. ಯಾರಿಗೆ ಅವುಗಳ ಮೌಲ್ಯಗಳನ್ನು ಅಳೆಯಲು ಸಾಧ್ಯ? ॥111॥ ಸಂತರ ಈ ವಚನಗಳು ಎಂದಿಗೂ ವ್ಯರ್ಥವಲ್ಲ. ಅವುಗಳು ಆಳವಾದ ಅರ್ಥದಿಂದ ತುಂಬಿರುತ್ತವೆ. ಯಾರು ಅವುಗಳಿಗೆ ಮೌಲ್ಯಕಟ್ಟಲು ಸಾಧ್ಯ? ॥112॥ ಮೊದಲು ಯೋಚನೆಗಳು, ನಂತರ ವಾಣಿಯು ಇದು ಅವುಗಳ ಸ್ವಾಭಾವಿಕವಾದ ಪದ್ಧತಿ. ಸಂತರ ವರ್ತನೆಗಳು ಸರಿಯಾಗಿ ಅವರ ಮಾತಿನಂತೆಯೇ ನಡೆಯುತ್ತವೆ. ॥113॥ ಸರ್ವಮಾನ್ಯವಾದ ಸಿದ್ಧಾಂತಕ್ಕನುಸಾರವಾಗಿರುವ ಸೂಕ್ತಿಯಂತೆ, ಸಂತರ ನುಡಿಗಳು ಎಂದಿಗೂ ಅರ್ಥಹೀನವಲ್ಲ. ನಾವವುಗಳನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದಲ್ಲಿ, ಸೂಕ್ತ ಸಮಯದಲ್ಲಿ ಅವು ಅರ್ಥಪೂರ್ಣವಾಗುತ್ತವೆ. ॥114॥ ಅದು ಹಾಗಿರಲಿ. ಬಾಬಾರವರು ಹಿಂತಿರುಗಿದರು. ಅದರ ಸಂಕೇತವಾಗಿ ಕೊಂಬು ಕಹಳೆ ಧ್ವನಿ ಮೊಳಗಲು ಪ್ರಾರಂಭವಾಯಿತು. ಬಾಪು ಸಾಹೇಬ್‌ಜೋಗ್‌ನು ಮುಳೆಯವರಿಗೆ ಒಂದು ಸಮಯೋಚಿತ ಸಲಹೆ ನೀಡಿದನು. ॥115॥ "ಇದು ಕೊನೆಯ ಅವಕಾಶ, ನಮ್ಮೊಡನೆ ಮಸೀದಿಗೆ ಬರುವೆಯಾ?" ಆದರೆ ಶಾಸ್ತ್ರಿಬುವಾನಿಗೆ ಪರಿಸ್ಥಿತಿ ಕಷ್ಟವಾಗಿ ಕಂಡಿತು. ಏಕೆಂದರೆ ಅವನು 'ಸೋವಲಾ' ಪದ್ಧತಿಯ ಪರಿಶುದ್ಧಿ–ಮಡಿಗಳನ್ನು ಮನ್ನಿಸುತ್ತಿದ್ದನು. ॥116॥ ಅದಕ್ಕೆ ಉತ್ತರವಾಗಿ ಅವನು ಹೇಳಿದನು: "ನಾನು ಮಧ್ಯಾಹ್ನದ ನಂತರ ದರ್ಶನ ಮಾಡುತ್ತೇನೆ." ಜೋಗ್‌ನು ಆರತಿಯ ತಯಾರಿ ನಡೆಸಲು ಪ್ರಾರಂಭಿಸಿದನು. ॥117॥ ಅದೇ ಸಮಯದಲ್ಲಿ ಬಾಬಾರವರು ಹಿಂತಿರುಗಿ ಬಂದು ಮಾತನಾಡುತ್ತಲೇ ತಮ್ಮ ಆಸನವನ್ನು ಗ್ರಹಿಸಿದರು. ಅನಂತರ ಒಬ್ಬಬ್ಬರಾಗಿ ಪೂಜೆ ಮಾಡಿದ ಮೇಲೆ ಆರತಿಗಾಗಿ ಅಂಗಳದಲ್ಲಿ ನೆರೆದರು. ॥118॥ ಅದೇ ಸಮಯದಲ್ಲಿ ಬಾಬಾರವರು ಹೇಳಿದರು: "ಹೋಗು ಹೊಸದಾಗಿ ಬಂದಿರುವ ಬ್ರಾಹ್ಮಣನಿಂದ ದಕ್ಷಿಣೆ

ತೆಗೆದುಕೊಂಡು ಬಾ. ಕೂಡಲೇ ಬಾಪೂ ಸಾಹೇಬಬುಟ್ಟಿಯು ದಕ್ಷಿಣೆ ಕೇಳಲು ತಾನೇ ಅಲ್ಲಿಂದ ಹೊರಟನು. ॥119॥ ಆಗತಾನೇ ಮುಳೆಯು ತನ್ನ ಸ್ನಾನ ಮುಗಿಸಿ ಸೋವಲಾವನ್ನು ಧರಿಸಿ ಚಕ್ಕಲಮಕ್ಕಲ ಹಾಕಿಕೊಂಡು ಪ್ರಶಾಂತಚಿತ್ತನಾಗಿ ಕುಳಿತಿದ್ದನು. ॥120॥ ಅವನು ಸಂದೇಶವನ್ನು ಪಡೆದಾಗ ಮುಳೆಯು ಚಂಚಲಚಿತ್ತನಾದನು. "ನಾನು ಏಕೆ ದಕ್ಷಿಣೆ ಕೊಡಬೇಕು? ನಾನಾದರೋ ಪರಿಶುದ್ಧನಾದ ಅಗ್ನಿಹೋತ್ರಿಯಾಗಿರುವೆನು." ॥121॥ "ಇರಬಹುದು, ಬಾಬಾರವರು ಸಂತ ಮಹಾನುಭಾವರು. ಆದರೆ ನಾನು ನನ್ನದೇ ಆದ ಮಾರ್ಗದಲ್ಲಿ ನಿರ್ಭಂಧಿತನಾಗಿದ್ದೇನೆ. ಅವರು ಏಕೆ ನನ್ನಿಂದ ದಕ್ಷಿಣೆ ಕೇಳುತ್ತಿದ್ದಾರೆ?" ಅವರು ಅಲ್ಲಿಯೇ ಅನುಮಾನಿಸುತ್ತಿದ್ದರು. ॥122॥ "ಆದರೂ ಸಾಯಿಯಂತಹ ವ್ಯಕ್ತಿ ದಕ್ಷಿಣೆ ಕೇಳುತ್ತಿದ್ದಾರೆ. ಈ ಸಂದೇಶವನ್ನು ಒಬ್ಬ ಕೋಟ್ಯಾಧೀಶನು ತಂದಿರುವನು. ಮುಳೆಯು ಸಂಶಯವಿದ್ದರೂ, ಕೈಯಲ್ಲಿ ದಕ್ಷಿಣೆ ಹಿಡಿದು ಹೊರಟನು. ॥123॥ ಜೊತೆಗೆ ಮತ್ತೊಂದು ಸಂದೇಹ ಇತ್ತು, ತನ್ನ ಪೂಜೆಯನ್ನು ಅರ್ಧದಲ್ಲಿಯೇ ಬಿಟ್ಟು ಮಸೀದಿಗೆ ಹೋಗುವುದೇ? ಅದೇ ಸಮಯದಲ್ಲಿ ಇಲ್ಲ ಎನ್ನಲೂ ಸಾಧ್ಯವಾಗಲಿಲ್ಲ. ॥124॥ ಒಬ್ಬ ನಾಸ್ತಿಕನಿಗೆ ಎಂದೂ ಶಾಂತಿಯಿಲ್ಲ. ಅವನ ಮನಸ್ಸು ಸದಾ ಡೋಲಾಯಮಾನವಾಗಿರುತ್ತದೆ. ಅವನಿಗೆ ಇದೂ ಇಲ್ಲ, ಅದೂ ಇಲ್ಲ. ಅವನ ಸ್ಥಿತಿಯು ತ್ರಿಶಂಕು[9] ಸ್ಥಿತಿಯಾಗಿರುತ್ತದೆ. ॥125॥ ಇಷ್ಟೆಲ್ಲ ಆದ ಮೇಲೆಯೂ, ಅವನು ಹೋಗಲು ನಿಶ್ಚಯಿಸಿದನು. ಅವನು ಪ್ರಾಂಗಣದ ಒಳಗೆ ಹೋಗಿ ದೂರದಲ್ಲಿಯೇ ನಿಂತುಕೊಂಡನು. ॥126॥ ತನ್ನನ್ನೇ ಪವಿತ್ರನೆಂದೂ ಪರಿಶುದ್ಧನೆಂದೂ ಭಾವಿಸುತ್ತಾ ಮಸೀದಿಯು ಅನ್ಯವಾದದ್ದೆಂದು ಯೋಚಿಸಿದಾಗ ಬಾಬಾ ಹತ್ತಿರ ಹೋಗಲು ಹೇಗೆ ಸಾಧ್ಯ? ಅವನು ದೂರದಲ್ಲೇ ನಿಂತು, ಕೈಗಳನ್ನು ಜೋಡಿಸಿ ಹೂಗಳನ್ನು ಬಾಬಾರವರಿಗೆ ಅಲ್ಲಿಂದಲೇ ಎರಚಿದನು. ॥127॥ ಆ ಕ್ಷಣದಲ್ಲಿ ಒಂದು ಪವಾಡ ಜರುಗಿತು; ಅವನ ಕಣ್ಣುಗಳ ಮುಂದೆಯೇ ಬಾಬಾರವರು ತಮ್ಮ ಆಸನದಿಂದ ಅದೃಶ್ಯರಾದರು ಮತ್ತು ಆ ಜಾಗದಲ್ಲಿ ಪೂಜ್ಯರಾದ ಗುರು ಘೋಲಪರು[10] ಇದ್ದರು. ॥128॥ ಬೇರೆಯವರೆಲ್ಲರಿಗೂ ಮಾಮೂಲಿನಂತೆ ಅವರು ಸಾಯಿಸಮರ್ಥರು, ಆದರೆ ಮುಳೆಯ ದೃಷ್ಟಿಗೆ ಮಾತ್ರ ಬಹು ಕಾಲದ ಹಿಂದೆ ದೈವವಶರಾಗಿದ್ದ ಘೋಲಪ ನಾಥರು. ಮುಳೆಯು ಅತ್ಯಂತ ಅಚ್ಚರಿಗೊಂಡನು. ॥129॥ ನಿಜವಾಗಿಯೂ ಗುರುವು ಆದಾಗಲೇ ಸಮಾಧಿಹೊಂದಿದ್ದರೂ, ಅವನ ಕಣ್ಣುಮುಂದೆಯೇ ಗೋಚರಿಸಿದರು. ಆದ್ದರಿಂದ ಮುಳೆಯು ಅತಿಯಾಗಿ ದಿಗ್ಭ್ರಮೆಗೊಂಡು ಸಹಜವಾಗಿ ಸಂಶಯಗೊಂಡನು. ॥130॥ ಅದು ಕನಸೆಂದುಕೊಂಡರೆ ಅವನು ನಿದ್ರಿಸುತ್ತಿರಲಿಲ್ಲ. ಅವನು ಎಚ್ಚರವಾಗಿದ್ದನೆಂದರೆ ಅವನ ಕಣ್ಣುಮುಂದೆ ಗುರುವನ್ನು ಕಾಣಲು ಹೇಗೆ ಸಾಧ್ಯ? ಅವನ ಮನಸ್ಸಿನಲ್ಲಿ ತುಮುಲವೆರ್ಪಟ್ಟು ನಾಲಿಗೆ ಕಟ್ಟಿಹೋಯಿತು. ॥131॥ ಅವನು ತಾನೇ ಚಿವುಟಿಕೊಂಡು ತನ್ನಲ್ಲೇ ಹೇಳಿಕೊಂಡನು – "ಇದು ಭ್ರಮೆಯಲ್ಲ; ಅನವಶ್ಯಕವಾಗಿ ಏಕೆ ಸಂಶಯಪಡಲಿ? ನಾನು ಇಲ್ಲೇ ಬೇರೆಯವರ ಜೊತೆ ಇದ್ದೇನೆ." ॥132॥ ಮುಳೆಯು ಮೊದಲು ಘೋಲಪರ ಭಕ್ತನಾಗಿದ್ದನು. ಬಾಬಾರವರ ಬಗ್ಗೆ ಸಂಶಯಗ್ರಸ್ತರಾಗಿದ್ದನು.

ತರುವಾಯ ದೃಢವಿಶ್ವಾಸವಿಟ್ಟು ಮನಸ್ಸಿನಲ್ಲಿ ನಿಷ್ಕಳಂಕರಾಗಿದ್ದನು. ॥133॥ ಅವನೊಬ್ಬ ಉನ್ನತ ಮಟ್ಟದ ಶ್ರೋತ್ರಿಯ ಬ್ರಾಹ್ಮಣನಾಗಿದ್ದು ವೇದ, ವೇದಾಂತಗಳಲ್ಲಿ ಪರಿಣತನಾಗಿದ್ದನು. ಅವನು ಮಸೀದಿಯಲ್ಲಿ ಘೋಲಪರ ದರ್ಶನದಿಂದ ವಿಸ್ಮಿತನಾಗಿದ್ದನು. ॥134॥ ಅನಂತರ, ಮೆಟ್ಟಿಲುಗಳನ್ನು ಹತ್ತಿ ಬಂದು ತನ್ನ ಗುರುಗಳ ಚರಣಗಳಿಗೆ ವಂದಿಸಿದನು. ಎರಡೂ ಕೈಗಳನ್ನು ಜೋಡಿಸಿ ಮೌನವಾಗಿ ಮೂಕವಿಸ್ಮಿತನಾಗಿ ನಿಂತನು. ॥135॥ ಘೋಲಪಸ್ವಾಮಿಯವರನ್ನು ಕಾಷಾಯ ವಸ್ತ್ರಗಳಲ್ಲಿ ಮತ್ತು ಕೇಸರಿ ಬಣ್ಣದ ಅಂಗವಸ್ತ್ರದಲ್ಲಿ ನೋಡಿದೊಡನೆಯೇ ಮುಳೆಯ ಮುಂದೆ ಓಡಿಹೋಗಿ ಪದೇ ಪದೇ ಅವರ ಚರಣಗಳನ್ನು ಸ್ಪರ್ಶಿಸುತ್ತಿದ್ದನು. ॥136॥ ತನ್ನ ಉಚ್ಚಜಾತಿಯ ಬಗೆಗಿನ ಅಹಂಕಾರವು ಚೂರುಚೂರಾಯಿತು. ಅವನ ದೃಷ್ಟಿಯು ತಿಳಿಯಾಯಿತು. ಆತ್ಮಸಾಕ್ಷಾತ್ಕಾರ ಪಡೆದ ತನ್ನ ಗುರುವಿನ ದರ್ಶನವಾದ ಕೂಡಲೇ ತಾನು ಅತ್ಯಂತ ಭಾಗ್ಯವಂತ[11]ನೆಂದುಕೊಂಡನು. ॥137॥ ಅವನ ಸಂದೇಹದ ಸ್ವಭಾವ ಬದಲಾಯಿತು. ಅವನಿಗೆ ಬಾಬಾರವರ ಮೇಲೆ ಪ್ರೀತಿ ಬೆಳೆಯಿತು. ಅರ್ಧ ನಿಮೀಲಿತ ಕಣ್ಣುಗಳಿಂದ ಬಾಬಾರವರ ಚರಣಗಳನ್ನು ದೃಷ್ಟಿಸಿದನು. ॥138॥ ಹಿಂದಿನ ಅನೇಕ ಜನ್ಮಗಳ ಪುಣ್ಯಕಾರ್ಯಗಳು ಇಂದು ಫಲ ನೀಡಿದ್ದವು. ಅವನ ಕಣ್ಣುಗಳು ಸಾಯಿಚರಣಗಳಲ್ಲಿ ನೆಟ್ಟು ಚರಣಾಮೃತದಿಂದ[2] ತುಂಬಿಹೋಗಿದ್ದವು. ಅವನಿಗೆ ವಿಧಿ ಉತ್ತಮಿಕೆಗೆ ಬದಲಾದುದು ಅನುಭವಕ್ಕೆ ಬಂದಿತು. ॥139॥ ಅನೇಕರಿಗೆ ಅಚ್ಚರಿಯಾಯಿತು. ಇದ್ದಕ್ಕಿದ್ದಂತೆ ಏನಾಯಿತು? ಹೂಗಳನ್ನು ಮಾತ್ರ ದೂರದಿಂದಲೇ ಹಾಕಿ, ಇಲ್ಲಿ ಬಾಬಾರವರ ಚರಣಗಳಲ್ಲಿ ತಲೆ ಇಟ್ಟನಲ್ಲ! ॥140॥ ಉಳಿದವರು ಬಾಬಾರವರಿಗೆ ಆರತಿ ಹಾಡುತ್ತಿದ್ದರು. ಆದರೆ ಮುಳೆಯ ಮಾತ್ರ ಘೋಲಪರ ಹೆಸರಿನಲ್ಲಿ ಆರತಿ ಹಾಡುತ್ತಿದ್ದನು. ಅವನ ಧ್ವನಿ ಉಚ್ಚವಾಗಿದ್ದು ಉಕ್ಕಿಬರುತ್ತಿದ್ದ ಪ್ರೀತಿಯಲ್ಲಿ ಮುಳುಗಿ ಹೋಗಿದ್ದನು. ॥141॥ ಸಾವಲಾ ಬಗೆಗಿನ ಎಲ್ಲಾ ಅಡ್ಡಿ ಆತಂಕಗಳೂ ದೂರವಾದವು. ಸ್ಪೃಶ್ಯ ಮತ್ತು ಅಸ್ಪೃಶ್ಯತೆಯ ಬಗೆಗಿನ ಪ್ರಶ್ನೆಯು ಮಾಯವಾಯಿತು. ಅವನು ಕಣ್ಣುಮುಚ್ಚಿಕೊಂಡು ಆನಂದದಿಂದ ಪ್ರಣಾಮ ಸಲ್ಲಿಸಿದನು. ॥142॥ ಅವನು ಎದ್ದು ನಿಂತು ಕಣ್ತೆರೆದಾಗ, ಘೋಲಪಸ್ವಾಮಿ ಅದೃಶ್ಯರಾಗಿ ಅವರ ಜಾಗದಲ್ಲಿ ಸಾಯಿ ಸಮರ್ಥರು ಕುಳಿತಿದ್ದು, ದಕ್ಷಿಣೆಯನ್ನು ಬೇಡುತ್ತಿದ್ದರು. ॥143॥ ಬಾಬಾರವರ ಪರಮಾನಂದಸ್ವರೂಪವನ್ನು ದೃಷ್ಟಿಸಿನೋಡುತ್ತ, ಅವರ ಅಪ್ರತಿಮ ಶಕ್ತಿಯನ್ನು ಅರಿತು ಮುಳೆಯ ದಿಗ್ಭ್ರಮೆಹೊಂದಿ ಮೈಮರೆತನು. ॥144॥ ಮಹಾರಾಜರ ಶೌರ್ಯ ಅಷ್ಟು ಇತ್ತು. ಅದನ್ನು ಅನುಭವಿಸಿದ ಅವನಿಗೆ ಅನ್ನ ನೀರುಗಳಲ್ಲಿ ಅಭಿರುಚಿ ಮಾಯವಾಯಿತು. ಮುಳೆಯ ಸ್ವಂತ ಗುರುವಿನ ದರ್ಶನಾನಂದದಿಂದಾಗಿ ಮೈಮರೆತನು. ॥145॥ ಅವನು ಸಂತೃಪ್ತನಾದನು. ಅವನು ಬಾಬಾರವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು. ಆನಂದ ಭಾಷ್ಪಗಳಿಂದ ತುಂಬಿದ ಕಣ್ಣುಗಳಿಂದ ಅವನು ತನ್ನ ತಲೆಯನ್ನು ಬಾಬಾರವರ ಚರಣಗಳಲ್ಲಿ ಇಟ್ಟನು. ॥146॥ ಅವನ ಹತ್ತಿರ ಇದ್ದ ದಕ್ಷಿಣೆಯನ್ನೆಲ್ಲಾ ಕೊಟ್ಟು ತನ್ನ ತಲೆಯನ್ನು ಬಾಬಾರವರ ಚರಣಗಳಲ್ಲಿಟ್ಟನು. ಅವನ ಕಣ್ಣುಗಳು ಪ್ರೀತಿಯ ಕಣ್ಣೀರಿನಿಂದ ತುಂಬಿಬಂದಿತು ಇಡೀ

ದೇಹ ಭಾವೋನ್ಮತ್ತತೆಯಿಂದ ಕಂಪಿಸಿತು. ॥147॥ ಅವನು ಭಾವೋನ್ಮತ್ತನಾಗಿ ಅಷ್ಟವಿಧ[13] ಭಕ್ತಿಯಿಂದ ಭಾವವಶನಾಗಿದ್ದನು. ಈಗ ನನ್ನ ಎಲ್ಲಾ ಸಂದೇಹಗಳೂ ನಿವಾರಣೆಯಾಗಿವೆ. ಅದಕ್ಕಿಂತ ಹೆಚ್ಚಾಗಿ ನಾನು ನನ್ನ ಗುರುವನ್ನು ಇಂದು ಕಂಡೆ" ಎಂದು ತನ್ನೊಳಗೆ ಅಂದುಕೊಂಡನು. ॥148॥ ಪ್ರತಿಯೊಬ್ಬರೂ, ಮುಳೆಯೂ ಸಹ ಭಾವೋನ್ಮತ್ತರಾದರು. ಬಾಬಾರವರ ವಿಶಿಷ್ಟವಾದ ಲೀಲೆಯನ್ನು ಅರಿತು ಕಾವಿಬಣ್ಣದ ಪ್ರಾಮುಖ್ಯತೆಯ ಅರ್ಥ ಅನುಭವಕ್ಕೆ[14] ಬಂದುವು. ॥149॥ ಅದೇ ಮಹಾರಾಜ್, ಅದೇ ಮುಳೆ. ಆದರೆ ಇಡೀ ಪರಿಸ್ಥಿತಿಯಲ್ಲಿ ಎಂತಹ ಬದಲಾವಣೆ! ಈ ಸಮಯದಲ್ಲಿ ಅಚ್ಚರಿಗೊಳ್ಳಲು ಏನಿತ್ತು? ಯಾರು ತಾನೇ ಬಾಬಾರವರ ವರ್ತನೆಗಳನ್ನು ಅರ್ಥಮಾಡಿಕೊಳ್ಳಬಲ್ಲರು? ಅವರ ಕೃತಿಗಳು ನಿಜವಾಗಿಯೂ ಅತ್ಯದ್ಭುತವಾದವುಗಳು. ॥150॥ ಇದೇ ರೀತಿ ಮಾಮಲೇದಾರನು ಸಾಯಿಯ ದರ್ಶನವನ್ನು ಅತ್ಯಂತ ಭಕ್ತಿಯಿಂದ ಮಾಡುತ್ತಿದ್ದವನು ತನ್ನ ವೈದ್ಯ ಮಿತ್ರರೊಡನೆ ಶಿರಡಿಗೆ ಹೊರಟನು. ॥151॥ ಆ ವೈದ್ಯನು ಬ್ರಾಹ್ಮಣ ಜಾತಿಯವನು, ಶ್ರೀರಾಮನ ಭಕ್ತನು. ವಿಧಿವತ್ತಾದ ಕಾರ್ಯಗಳಲ್ಲಿ, ಸರಿಯಾದ ವಿಧಾನಗಳಲ್ಲಿ ಅವನು ಪರಿಣತನಾಗಿದ್ದನು. ॥152॥ "ಸಾಯಿಬಾಬಾರವರು ಒಬ್ಬ ಮುಸ್ಲಿಮರು ಮತ್ತು ನಾನು ರಾಮಭಕ್ತ, ನಾನು ಅವರಿಗೆ ವಂದಿಸುವುದಿಲ್ಲ" ಎಂದು ಮೊದಲೇ ವೈದ್ಯನು ಮಿತ್ರ ಮಾಮಲೇದಾರನಿಗೆ ಹೇಳಿದ್ದನು. ॥153॥ "ನಾನು ಮುಸ್ಲಿಮನ ಚರಣಗಳಿಗೆ ವಂದಿಸಲು ಸಿದ್ಧನಿಲ್ಲ. ಎಂತಲೇ ಶಿರಡಿಯಾತ್ರೆ ಮಾಡಲು ಹಿಂಜರಿಯುತ್ತಿದ್ದೇನೆ" ಎಂದೂ ತಿಳಿಸಿದ್ದನು. ॥154॥ "ಬಾಗಿ ನಮಸ್ಕರಿಸು" ಎಂದು ಯಾರೂ ಒತ್ತಾಯ ಮಾಡುವುದಿಲ್ಲ. ಏನೂ ಆತಂಕ ಬೇಡ. ಪೂರ್ವಾಗ್ರಹವೂ ಬೇಡ – ಸಂದೇಹವೂ ಬೇಡ. ॥155॥ ಬಾಬಾರವರು "ನನ್ನ ಚರಣಗಳನ್ನು ಸ್ಪರ್ಶಿಸು" ಎಂದು ಯಾರಿಗೂ ಎಂದಿಗೂ ಹೇಳುವುದಿಲ್ಲ. ಮಾಮಲೇದಾರನಿಂದ ಈ ರೀತಿಯ ಆಶ್ವಾಸನೆ ದೊರೆತ ಮೇಲೆ ಅವನು ಹೊರಡಲು ನಿಶ್ಚಯಿಸಿದನು. ॥156॥ ಈ ದೃಢ ನಿರ್ಧಾರದಿಂದ ಅವನು ಸ್ನೇಹಿತನ ಸಲಹೆಯನ್ನು ಒಪ್ಪಿಕೊಂಡನು. ಯಾವುದೇ ಮನೋವಿಕಲ್ಪವಿಲ್ಲದೆ ದರ್ಶನಕ್ಕಾಗಿ ಹೊರಟನು. ॥157॥ ಶಿರಡಿಯನ್ನು ತಲಪಿದ ಕ್ಷಣವೇ ಮಸೀದಿಗೆ ದರ್ಶನಕ್ಕಾಗಿ ಹೊರಟನು. ಮೊದಲು ಅವನೇ ನಮಸ್ಕಾರಮಾಡಿದ್ದನ್ನು ಕಂಡು ಮಾಮಲೇದಾರನಿಗೆ ಆಶ್ಚರ್ಯವಾಯಿತು. ॥158॥ ನಂತರ ಅವನು ಪ್ರಶ್ನಿಸಿದನು, "ನಿನ್ನ ತೀರ್ಮಾನವನ್ನು ಹೇಗೆ ಮರೆತೆ? ಮುಸ್ಲಿಮನಿಗೆ ಏಕೆ ನಮಸ್ಕರಿಸಿದೆ?" ॥159॥ ಅದಕ್ಕೆ ವೈದ್ಯನು ಒಂದು ಅದ್ಭುತ ಸಂಗತಿಯನ್ನು ತಿಳಿಸಿದನು. "ನಾನು ನೀಲವರ್ಣದ ಶ್ರೀರಾಮನ ರೂಪವನ್ನು ನೋಡಿದೆನು. ಆತ ನಿರ್ಮಲ, ಸುಂದರ, ತ್ಯಾಗ ಮತ್ತು ಪ್ರೇಮಗಳ ಸಾಕಾರ ಮೂರ್ತಿಯಾಗಿದ್ದನು. ಆದ್ದರಿಂದ ನಾನು ಕೂಡಲೇ ನಮಸ್ಕಾರ ಮಾಡಿದೆನು." ॥160॥ "ನೋಡು, ಅವನು ಇನ್ನೂ ಆಸನದ ಮೇಲೆಯೇ ಕುಳಿತ್ತಿದ್ದಾನೆ. ಎಲ್ಲರ ಹತ್ತಿರ ಮಾತನಾಡುತ್ತಿದ್ದಾನೆ. ಹಾಗೆ ಹೇಳುತ್ತಿರುವಾಗ ಒಂದು ಕ್ಷಣದಲ್ಲಿಯೇ ಸಾಯಿಯ ರೂಪವು ಕಾಣಲು ಶುರುವಾಯಿತು." ॥161॥ ಅದರಿಂದಾಗಿ ವೈದ್ಯನು ಆಶ್ಚರ್ಯಚಕಿತನಾಗಿ ಇಂತೆಂದನು –

"ಇದು ಕನಸೇ? ಅವರನ್ನು ಮುಸ್ಲಿಮರೆಂದು ಹೇಗೆ ಕರೆಯುವುದು? ಅವರು ಎಲ್ಲಾ ಯೋಗಗಳಲ್ಲಿಯೂ ಸಿದ್ಧರಾದ ಸಂಪೂರ್ಣ ಅವತಾರ!". ॥162॥ ಚೋಖಮೇಲಾನು[15] ಒಬ್ಬ ಮಹರ್ ಜಾತಿಯವನು. ರೋಹಿದಾಸ್[16] ಒಬ್ಬ ಚಮ್ಮಾರ. ಸಜ್ಜನ್[17] ಒಬ್ಬ ಕಟುಕ. ಅವರ ಜಾತಿಯ ಪ್ರಶ್ನೆ ಎಲ್ಲಿ ಬಂತು? ॥163॥ "ನಿರ್ಗುಣ, ನಿರಾಕಾರ ಸ್ವಭಾವಗಳನ್ನು ತ್ಯಜಿಸಿ ಸಂತರು ಈ ಜಗತ್ತಿನಲ್ಲಿ ಮಾನವಕುಲದ ಉದ್ಧಾರಕ್ಕೆ ಮತ್ತು ಹುಟ್ಟು ಸಾವುಗಳ ಚಕ್ರವನ್ನು ದೂರಮಾಡಲು ಸಹಾಯಮಾಡುವುದಕ್ಕಾಗಿ ಅವತರಿಸುತ್ತಾರೆ. ॥164॥ "ಇದು ನಿಜವಾಗಿಯೂ ಒಂದು ಕಲ್ಪವೃಕ್ಷ[18]. ಒಂದು ಕ್ಷಣದಲ್ಲಿ ಸಾಯಿ, ಮತ್ತೊಂದು ಕ್ಷಣದಲ್ಲಿ ರಾಮ. ನನ್ನಿಂದ ತನ್ನ ಚರಣಗಳಿಗೆ ನಮಸ್ಕಾರ ಮಾಡಿಸಿ ನನ್ನ ಅಹಂಕಾರವನ್ನು ಮರ್ದಿಸಿದ್ದಾನೆ. ॥165॥ ಮಾರನೆಯ ದಿನವೇ ಅವನೊಂದು ಪ್ರತಿಜ್ಞೆ ಮಾಡಿದನು. "ಸಾಯಿನಾಥನ ಕೃಪೆ ಆಗುವವರೆಗೆ ಮಸೀದಿಯಲ್ಲಿ ಕಾಲಿಡುವುದಿಲ್ಲ" ಎಂದು. ಅವನು ಶಿರಡಿಯಲ್ಲಿ ಉಪವಾಸ ಮಾಡಲು ಪ್ರಾರಂಭಿಸಿದನು. ॥166॥ ಮೂರು ದಿನಗಳು ಹಾಗೆಯೇ ಕಳೆದವು. ನಾಲ್ಕನೆಯ ದಿನ ಬೆಳಗಾದಾಗ ಏನಾಯಿತೆಂಬುದನ್ನು ಅತಿಶ್ರದ್ಧೆಯಿಂದ ಗಮನವಿಟ್ಟು ಕೇಳಿರಿ. ॥167॥ ಅನಿರೀಕ್ಷಿತವಾಗಿ, ಅವನ ಸ್ನೇಹಿತನೊಬ್ಬ ಖಾನ್ ದೇಶದಿಂದ ಸಾಯಿಯ ದರ್ಶನಕ್ಕಾಗಿ ಅಲ್ಲಿಗೆ ಬಂದನು. ॥168॥ ಅವರು ಒಂಭತ್ತು ವರ್ಷಗಳ ನಂತರ ಭೇಟಿಯಾಗಿದ್ದರು. ಅವರ ಸಂತೋಷ ಅಪರಿಮಿತವಾಗಿತ್ತು. ವೈದ್ಯನೂ ಸಹ ಮೈಮರೆತು ಅವನೊಂದಿಗೆ ಮಸೀದಿಯೊಳಗೆ ಹೋದನು. ॥169॥ ಅಲ್ಲಿಗೆ ಹೋದ ಕೂಡಲೇ ಬಾಬಾರಿಗೆ ವಂದಿಸಿದನು. ಬಾಬಾ ಕೇಳಿದರು, "ಓ ವೈದ್ಯನೇ, ಯಾರಾದರೂ ನಿನ್ನನ್ನು ಕರೆಯಲು ಬಂದಿದ್ದರೇ? ನೀನೇಕೆ ಬಂದೆ? ಹೇಳು" ॥170॥ ಈ ಚುಚ್ಚುವ ಪ್ರಶ್ನೆಯನ್ನು ಕೇಳುತ್ತಲೇ ವೈದ್ಯನು ಉನ್ಮತ್ತರಾದನು. ತನ್ನ ದೃಢ ನಿರ್ಧಾರವನ್ನು ನೆನಪಿಸಿಕೊಂಡು ಪಶ್ಚಾತ್ತಾಪಪಟ್ಟನು. ॥171॥ ಆದರೂ, ಅದೇ ರಾತ್ರಿಯಂದು, ಮಧ್ಯರಾತ್ರಿಯಲ್ಲಿ ಅವನಿಗೆ ಅನುಗ್ರಹವಾಯಿತು. ನಿದ್ರೆಯಲ್ಲಿ ಸ್ವರ್ಗೀಯ ಆನಂದದ ಮಧುರ ಅನುಭವವಾಯಿತು ॥172॥ ಅನಂತರ ವೈದ್ಯನು ತನ್ನ ಊರಿಗೆ ಹಿಂತಿರುಗಿದನು. ಆದರೆ ಎರಡು ವಾರಗಳ ಕಾಲ ಅವನ ಮನಸ್ಸು ಸಂಪೂರ್ಣ ಆನಂದದ ಸ್ಥಿತಿಯನ್ನು ಅನುಭವಿಸುತ್ತಲೇ ಇತ್ತು. ಅವನ ಸಾಯಿಭಕ್ತಿ ತೀವ್ರವಾಯಿತು. ॥173॥ ಅದೇ ರೀತಿ, ಸಾಯಿಯ ಅನುಭವಗಳು ಅನೇಕ. ಒಂದಕ್ಕಿಂತ ಮತ್ತೊಂದು ಹೆಚ್ಚಿನದು. ಅವುಗಳನ್ನು ವಿವರಿಸಿದಲ್ಲಿ ಈ ಗ್ರಂಥದ ಪ್ರಾಮುಖ್ಯತೆ ಹೆಚ್ಚುತ್ತದೆ. ಆದರೆ ನಿರೂಪಣೆಯು ಬಹಳ ದೊಡ್ಡದಾಗುವುದರಿಂದ ಅದನ್ನು ಸಣ್ಣದಾಗಿ ಮಾಡುತ್ತೇನೆ. ॥174॥ ಹಿಂದೆ ಹೇಳಿದ ಮುಳೆಯ ಕಥೆ ಕೇಳಿ ಶ್ರೋತೃಗಳು ಆಶ್ಚರ್ಯಚಕಿತರಾಗುವರು ಆದರೆ ನೀವು ಅದರ ಪ್ರಾಮುಖ್ಯತೆಯನ್ನು ಗುರುತಿಸಿ ಅದರ ನೀತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರಿ. ॥175॥ ನಿಮ್ಮ ಸ್ವಂತ ಗುರುವಿನಲ್ಲಿ ನಿಶ್ಚಲವಾದ ಶ್ರದ್ಧೆಯಿಡಿ ಮತ್ತು ಅದು ಮತ್ತೆಲ್ಲೂ ಇರಬಾರದು. ಈ ಅಂತರಾರ್ಥವನ್ನು ಮನಸ್ಸಿನಲ್ಲೇ ಇಟ್ಟುಕೊಂಡಿರಿ. ॥176॥ ಬಾಬಾರವರ ಲೀಲೆಗಳಲ್ಲಿ ಯಾವ ಉದ್ದೇಶವೂ ಇರಲಿಲ್ಲವೆಂದು ಕಂಡುಬರುತ್ತದೆ.

ಎಂತಹ ವಿಚಾರಶೀಲ ವ್ಯಕ್ತಿಯಾದರೂ ಕೇವಲ ಇದೇ ಅರ್ಥವನ್ನು ಕಂಡುಕೊಳ್ಳುತ್ತಾನೆ. ॥177॥ ಬೇರೆ ಗುರುಗಳು ಬಹು ಪ್ರಸಿದ್ಧರಾಗಿರಬಹುದು. ಮತ್ತು ನಿಮ್ಮ ಗುರುವಾಗಿಲ್ಲದಿರಬಹುದು. ಆದರೆ ನಮ್ಮ ಶ್ರದ್ಧೆ ಮಾತ್ರ ಕೇವಲ ನಮ್ಮ ಗುರುವಿನಲ್ಲೇ ಇರಬೇಕು. ಇದರಿಂದ ನಾವು ಕಲಿಯಬೇಕಾದ ಪಾಠ ಇದೊಂದೇ. ॥178॥ ಹಿಂದಿನ ಶಾಸ್ತ್ರಗಳನ್ನು ಪರಿಶೀಲಿಸಿದಾಗಲೂ ಅವುಗಳ ತುಂಬ ಇರುವುದು ಇದೇ ಬುದ್ಧಿವಾದ. ಆದರೆ ಶ್ರದ್ಧೆ ದೃಢವಾಗಿಲ್ಲದಿದ್ದಲ್ಲಿ ನಂಬಿಕೆ ವಿಶ್ವಾಸ ಪರಿಣಾಮಕಾರಿಯಾಗಿರುವುದಿಲ್ಲ ಮತ್ತು ಬಲವಾಗಿಯೂ ಇರುವುದಿಲ್ಲ. ॥179॥ ಕೆಲವರಿಗೆ ತಮ್ಮಲ್ಲಿ ಆತ್ಮವಿಶ್ವಾಸವಿಲ್ಲದಿದ್ದರೂ, ಇದೆಯೆಂಬ ಹಾಗೆ ಪ್ರದರ್ಶಿಸುತ್ತಾರೆ. ಅಂತಹವರು ಜೀವನ ಪರ್ಯಂತ ಹೆಜ್ಜೆ ಹೆಜ್ಜೆಗೂ ಎಡುವುದನ್ನು ಕಾಣಬಹುದು. ॥180॥ ಅವರು ಇಹದಲ್ಲಿಯೂ ಅವರ ಆಸೆಗಳನ್ನು ಪೂರೈಸಿಕೊಳ್ಳುವುದಿಲ್ಲ. ಮತ್ತು ಪರಕ್ಕಾಗಿ ಮುಕ್ತಿಯನ್ನು ಪಡೆಯುವುದಿಲ್ಲ; ಜೀವನದ ಅಂತ್ಯದವರೆಗೆ ಚಿಂತಾಕ್ರಾಂತರಾಗಿಯೇ ಇರುತ್ತಾರೆ. ಅವರು ಇನ್ನೂ ಒಂದು ಕ್ಷಣದ ಪ್ರಶಾಂತಿಯನ್ನೂ ಅನುಭವಿಸದೆ ಮುಕ್ತಿಯ ಬಗ್ಗೆ ಬಡಾಯಿಕೊಚ್ಚಿಕೊಳ್ಳುತ್ತಿರುತ್ತಾರೆ. ॥181॥ ಇದು ಇಷ್ಟು ಸಾಕು. ಮುಂದಿನ ಅಧ್ಯಾಯದಿಂದ ದೊರಕುವ ಆನಂದವು ಇದಕ್ಕಿಂತ ಉತ್ತಮವಾಗಿರುತ್ತವೆ. ಸುಮ್ಮನೆಯಾದರೂ ಸಾಯಿಯ ದರ್ಶನವನ್ನು ಪದೇ ಪದೇ ಮಾಡುವುದರಿಂದ ಅಪರಿಮಿತವಾದ ಆನಂದವನ್ನು ಅನುಭವಿಸಬಹುದು. ॥182॥ ಭಕ್ತನಾದ ಭೀಮಾಜಿ ಪಾಟೀಲನ ಕ್ಷಯರೋಗ ಹೇಗೆ ವಾಸಿಯಾಯಿತು? ಮತ್ತು ಭಕ್ತ ಚಂದೋರ್‌ಕರ್‌ನಲ್ಲಿದ್ದ ಶ್ರದ್ಧೆಯು ಒಂದು ದರ್ಶನ ಮಾತ್ರದಿಂದ ವೃದ್ಧಿಯಾಯಿತು. ॥183॥ ಆ ದರ್ಶನ ಶಕ್ತಿ ಅಷ್ಟಿತ್ತು, ಆದರಿಂದ ಪಾಪಗಳು ತೊಳೆದು ಹೋದವು. ಲೌಕಿಕ ಸುಖಗಳು ಕ್ಷಣಿಕ, ಆದರೆ ಪರಲೋಕದಲ್ಲಿ ದೊರಕುವ ಫಲಗಳು ಅನಂತವಾದುವು. ॥184॥ ಒಬ್ಬ ಯೋಗಿಯು ಒಬ್ಬ ನಾಸ್ತಿಕನ ಮೇಲೆ ದೃಷ್ಟಿಹರಿಸಿದರೆ ಸಾಕು, ಅವನು ತನ್ನ ಪಾಪಗಳಿಂದ ವಿಮುಕ್ತನಾಗುತ್ತಾನೆ. ಹಾಗಿರುವಾಗ ಆಸ್ತಿಕನ ಬಗ್ಗೆ ಹೇಳುವುದೇನಿದೆ? ಅವನ ಪಾಪಗಳಂತೂ ಸರಾಗವಾಗಿತೊಳೆದು ಹೋಗುತ್ತವೆ. ॥185॥ ಯಾರಾದರೂ ಮನಸ್ಸು ನಿಶ್ಚಲವಾಗಿದ್ದಲ್ಲಿ ಪರೋಕ್ಷವಾಗಿ ಸಾಕ್ಷಾತ್ಕಾರ ಅನುಭವಿಸಿರುತ್ತಾರೆ ಮತ್ತು ಅವನು ತನ್ನ ಕಣ್ಣುಗಳಿಂದ ಅವನನ್ನು ಅವಲೋಕಿಸುತ್ತಾನೋ ಅವನ ದುಸ್ತರವಾದ ಪಾಪಗಳೆಲ್ಲವೂ ಅಳಿದು ಹೋಗುತ್ತವೆ. ॥186॥ ಬಾಬಾರವರ ಸ್ವಭಾವವು ಅಷ್ಟು ಅಗಮ್ಯವಾದುದು. ಬಾಬಾ ಎಲ್ಲರಿಗೂ ಪ್ರೀತಿಪಾತ್ರ, ಆದ್ದರಿಂದ ಜ್ಞಾನಿಗಳು, ಅಜ್ಞಾನಿಗಳು ಎಲ್ಲರೂ ಪರಿಶುದ್ಧ ಮನಸ್ಸಿನಿಂದ ಆಲಿಸಿರಿ. ॥187॥ ಎಲ್ಲಿಪ್ರೇಮ, ಭಕ್ತಿಗಳಿಂದ ತುಂಬಿರುವ ಜೀವವಿದೆಯೋ, ಎಲ್ಲಿ ಜನರು ಬಾಬಾರವರ ಪ್ರೀತಿಯಿಂದ ಬಂಧಿತರೋ ಅಲ್ಲಿ ಕೋಮಲವಾದ ಇಚ್ಛೆಯು ರೂಪಗೊಂಡು ಆಲಿಸುವ ಸಂತಸ ಇರುತ್ತದೆ. ॥188॥ ಹೇಮಾದಪಂತನು ಸಾಯಿಚರಣಗಳಿಗೆ ಶರಣಾಗಿದ್ದಾನೆ. ಅವು ಮನಃಪೂರ್ವಕವಾಗಿ ಶರಣಾಗುವವರಿಗೆ ಆಶ್ರಯ ನೀಡುತ್ತವೆ. ಅವರು ಭವದ ಭಯವನ್ನು ನಾಶಮಾಡಬಲ್ಲರು ಮತ್ತು ಅತೀವ ಶಕ್ತಿವಂತರು. ॥189॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ರಾಮನ ದರ್ಶನ–ಶ್ರೀ ಸಂತ ಘೋಲಪರು" ಎಂಬ ಹನ್ನೆರಡನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಒಂದು ಸಂದರ್ಭದಲ್ಲಿ ಆತನು ಅಂಗೈಯಿಂದ ಸಮುದ್ರದ ನೀರನ್ನು ಆಪೋಶನ ಮಾಡಿದನು.
2. ಶಾಸ್ತ್ರಗಳಲ್ಲಿ ತಿಳಿಸಿರುವ ರೀತಿ ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯಗಳಲ್ಲಿ ಅಗ್ನಿಯ ಸಹಾಯದಿಂದ ಪೂಜೆ ಸಲ್ಲಿಸುವ ವ್ಯಕ್ತಿ.
3. ಮಹಾ ಸಮಾಧಿ.
4. ಮರಾಠಾದಲ್ಲಿ ಹಾಲಿನ ಬದಲು ಮಜ್ಜಿಗೆಯನ್ನು ಉಪಯೋಗಿಸುತ್ತಾರೆ.
5. ಶ್ರಾವಣ ಮಾಸದ ಅಮಾವಾಸ್ಯೆಯಂದು ಎತ್ತುಗಳನ್ನು ಪೂಜಿಸುವ ವಾರ್ಷಿಕ ಹಬ್ಬ.
6. ವಿವಿಧ ರೀತಿಯ ಸಿಹಿತಿಂಡಿಗಳು.
7. ಬಾವುಟದ ಗುರುತುಗಳು, ಇಂದ್ರನ ಆಯುಧಗಳು (ಗುಡುಗು), ಅವತಾರದ ಪಾದಗಳಲ್ಲಿ ಕಾಣುವ ಅಂಕುಶ.
8. ಒಂದು ರೇಷ್ಮೆಯ ಬಟ್ಟೆ ಅದನ್ನು ಶ್ರೋತ್ರೀಯ ಬ್ರಾಹ್ಮಣರು ಪೂಜಾ ಸಮಯದಲ್ಲಿ ಧರಿಸುತ್ತಾರೆ. ಅದನ್ನು ಪವಿತ್ರ ಎಂದು ಪರಿಗಣಿಸಲಾಗುತ್ತದೆ. ಒಮ್ಮೆ ಧರಿಸಿದಲ್ಲಿ ಆ ವ್ಯಕ್ತಿಯಾವುದೇ ವಸ್ತುವನ್ನು ಮುಟ್ಟುವುದಿಲ್ಲ. ಏಕೆಂದರೆ ಬೇರಲ್ಲವನ್ನೂ ಅಶೌಚ ಎಂದು ಭಾವಿಸಲಾಗುತ್ತದೆ.
9. ವಿಶ್ವಾಮಿತ್ರನ ಶಿಷ್ಯನು. ಸಶರೀರಿಯಾಗಿ ಸ್ವರ್ಗಾರೋಹಣ ಮಾಡುವ ಆಸೆಯಿದ್ದ ಅವನಿಗೆ ಸ್ವರ್ಗಕ್ಕೆ ಪ್ರವೇಶ ದೊರಕದೇ ಭೂಮಿಗೂ ಹಿಂದಕ್ಕೆ ಬರಲಾಗದೆ ಮಧ್ಯದಲ್ಲಿ ನಿಂತವನು ತ್ರಿಶಂಕು.
10. ಅವನು ಬಾಬಾ ಘೋಲಪ್ ಮತ್ತು ನಾಸಿಕ್‌ನಲ್ಲಿ ವಾಸಮಾಡುತ್ತಿದ್ದನು. ಅವನು ಶಾಸ್ತ್ರಗಳಲ್ಲಿ ಪಂಡಿತನೂ ಅಗ್ನಿಹೋತ್ರಿಯೂ ಆಗಿದ್ದನು.
11. ಕುಬೇರನ ಖಜಾನೆ ಪಡೆದವನಂತೆ.

12. ಬಾಬಾರವರ ಚರಣಗಳನ್ನು ತೊಳೆದ ಪಾದೋದಕ.

13. ಭಕ್ತನು ಬೆವರುತ್ತಾನೆ, ಮಾತು ಹೊರಡದೇ ಮೂಕನಾಗುತ್ತಾನೆ. ಭಯಭೀತನಾಗಿ ಧ್ವನಿ ಗದ್ಗದವಾಗುತ್ತದೆ, ಬಣ್ಣ ಬದಲಾಗುತ್ತದೆ. ಕಣ್ಣೀರು ಸುರಿಸುತ್ತಾ ಜ್ಞಾನ ತಪ್ಪುತ್ತಾನೆ.

14. ಓವಿ 109ನ್ನು ಗಮನಿಸಿರಿ.

15. ನೀಚ ಜಾತಿಯ ವ್ಯಕ್ತಿ ಧ್ಯಾನೇಶ್ವರ್(ಜ್ಞಾನೇಶ್ವರ) ಮತ್ತು ನಾಮದೇವರ ಸಮಕಾಲೀನರು. ಅವನು ಮಂಗಳವೇಢದಲ್ಲಿದ್ದನು, ಪಾಂಡುರಂಗನ ಭಕ್ತ. ಅವನು ಕಲ್ಲಿನ ಕಂಬವನ್ನು ದೇವಾಲಯದ ಮುಂದೆ ದೀಪ ಹಚ್ಚಲು ಕಟ್ಟಿಸಿದನು. ಅವನು ಅಲ್ಲಿಯೇ ಉಳಿತುಕೊಳ್ಳಬೇಕಾಯಿತು. ಅವನು ದೇವಾಲಯವನ್ನು ಪ್ರವೇಶಿಸಲು ಅನುಮತಿ ಸಿಕ್ಕಿರಲಿಲ್ಲ. ಅವನ ಅಭಂಗಗಳು ಬಹಳ ಪ್ರಸಿದ್ಧ.

16. ನೀಚ ಕುಲದ ವ್ಯಕ್ತಿ.

17. ವಿಷ್ಣುವಿನ ಆರಾಧಕನು. ಅವನು ಜಗನ್ನಾಥಪುರಿಗೆ ಯಾತ್ರೆ ಹೊರಟಿದ್ದನು. ಮಾರ್ಗದಲ್ಲಿ ಒಬ್ಬ ಹೆಂಗಸು ಮಿಥ್ಯಾಪವಾದಹೊರಿಸಿದುದರಿಂದ ನ್ಯಾಯಾಲಯದ ತೀರ್ಪಿನಂತೆ ಎರಡೂ ಕೈಗಳನ್ನು ಕತ್ತರಿಸಲಾಗಿತ್ತು. ಆದರೆ ಅವನು ಪುರಿಯನ್ನು ತಲುಪಿದಾಗ ಭಗವಂತನು ಅವನನ್ನು ಸ್ವಾಗತಿಸಿದನು. ಅವನು ಎರಡೂ ಕೈತುಂಡುಗಳಿಂದ ಭಕ್ತಿಯ ಆವೇಶದಲ್ಲಿ ಜೋಡಿಸಿ ಭಜನೆ ಮಾಡುತ್ತಿರಲು, ಅವನ ಕೈಗಳು ಮತ್ತೆ ಪೂರ್ಣವಾಗಿ ಬಂದವು.

18. ಆಶೆಗಳನ್ನು ಪೂರೈಸುವ ವೃಕ್ಷ.



# ಅಧ್ಯಾಯ - 13

॥ ಅಥ ಶ್ರೀ ಸಾಯಿ ಸಚ್ಚರಿತೆ ॥



## "ಭೀಮಾಜಿಯ ಕ್ಷಯರೋಗ ನಿವಾರಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಬಾಬಾರವರ ನುಡಿಗಳು ವೇದಗಳಂತೆ ಸಂಕ್ಷಿಪ್ತವಾಗಿ ಸೂತ್ರರೂಪವಾಗಿ ಶಕ್ತಿಯುತವಾಗಿ ಅರ್ಥಗರ್ಭಿತವಾಗಿದ್ದವು. ಮತ್ತು ಸಂಕ್ಷಿಪ್ತವಾಗಿದ್ದರೂ ಎಲ್ಲವನ್ನೂ ಒಳಗೊಂಡಿದ್ದವು. ॥1॥ ಆಳವಾದ ಅರ್ಥಹೊಂದಿ ಬಹಳ ನಿಖರವಾಗಿದ್ದವು. ಅವು ಎಂದಿಗೂ ನಿಷ್ಪ್ರಯೋಜಕವಾಗಿರಲಿಲ್ಲ. ಅವು ಸಮತೋಲಿತವಾಗಿ ಅತ್ಯಮೂಲ್ಯವಾಗಿದ್ದವು. ॥2॥ ಅವುಗಳನ್ನು ಅರಿತು, ಸದಾ ಭೂತ ಮತ್ತು ಭವಿಷ್ಯದಲ್ಲಿ ಎಚ್ಚರದಿಂದಿರಿ. ವಿಧಿಯನ್ನು ಅರಿತು ಇರುವುದರಲ್ಲಿ ಸಾಧನೆ ಮಾಡಿ ಸದಾ ಸಂತೃಪ್ತಿಯಿಂದ ಇರಿ. ಇಲ್ಲದಿರುವುದಕ್ಕಾಗಿ ಸಿಡುಕಬೇಡಿರಿ. ॥3॥ "ಓಹ್, ನಾನು ಫಕೀರನಾಗಿದ್ದರೂ ಮನೆ ಮಠ ಇಲ್ಲದೆ ಒಂದು ಜಾಗದಲ್ಲಿ ಯಾವುದರಲ್ಲೂ ತೊಡಗಿಸಿಕೊಳ್ಳದೆ ಇದ್ದು ಎಲ್ಲಾ ಲೌಕಿಕ ವಿಷಯಗಳಿಂದ ದೂರವಾಗಿದ್ದೂ, ॥4॥ "ಎಷ್ಟಾದರೂ ಮಾಯೆಯು ಅನಿವಾರ್ಯ, ಅವಳು ಆಗಾಗ ನನ್ನನ್ನೂ ಪೀಡಿಸುತ್ತಾಳೆ. ನಾನು ಅವಳನ್ನು ಮರೆತರೂ ಅವಳು ಮರೆಯುವುದಿಲ್ಲ. ಅವಳು ಯಾವಾಗಲೂ ಬಂದು ನನ್ನನ್ನು ತಬ್ಬಿಕೊಳ್ಳುತ್ತಾಳೆ. ॥5॥ "ಆದಿಮಾಯೆಯು ಪರಮಾತ್ಮನಿಂದ ಹುಟ್ಟುತ್ತಾಳೆ ಮತ್ತು ಬ್ರಹ್ಮ ಮತ್ತಿತರರನ್ನು ದಿಗ್ಭ್ರಮೆಗೊಳಿಸುತ್ತಾಳೆ. ಹಾಗಿರುವಾಗ ನನ್ನಂತಹ ಬಡ ಫಕೀರನ ಬಗ್ಗೆ ಏನು ಹೇಳುವುದು? ॥6॥ "ಪರಮಾತ್ಮನ ಅನುಗ್ರಹ ಮಾತ್ರವೇ ನಿನ್ನನ್ನು

ಅದರ ಹಿಡಿತದಿಂದ ಬಿಡಿಸಬಹುದು. ಭಗವಂತನ ನಾಮಸ್ಮರಣೆಯನ್ನು ಸತತವಾಗಿ ಮಾಡದೇ ಇದ್ದಲ್ಲಿ ಈ ಬಂಧನವು ನಾಶವಾಗುವುದಿಲ್ಲ." ॥7॥ ಈ ವಿಧದಲ್ಲಿ ಬಾಬಾರವರು ತಮ್ಮ ಭಕ್ತರಿಗೆ ಮಾಯೆಯ ಶಕ್ತಿಯನ್ನು ವಿವರಿಸಿದರು. ಮತ್ತು ಭಗವಂತನ ನಾಮಸ್ಮರಣೆಯು ಮಾಯೆಗೆ ಪ್ರತಿರೋಧಕ ಎಂಬುದನ್ನು ಸಿದ್ಧಪಡಿಸಿದರು. ॥8॥ ಭಾಗವತದಲ್ಲಿ ಕೃಷ್ಣನು ಉದ್ಧವನ ಜೊತೆ ಮಾತನಾಡುವಾಗ ಹೇಳಿರುವನು – "ಸಂತರು ನನ್ನ ಅವತಾರ" ಎಂದು. ಸ್ಪಷ್ಟವಾದ ಈ ಪದಗಳು ಯಾರಿಗೆ ತಾನೇ ತಿಳಿಯದು? ॥9॥ ಆದ್ದರಿಂದ ಭಕ್ತರ ಕ್ಷೇಮಕ್ಕಾಗಿ, ಸಾಯಿ ಮಹಾನುಭಾವನು, ಕರುಣಾಸಾಗರನು ಈ ವಾಕ್ಯದ ಅಂತರಾರ್ಥವನ್ನು ಹೇಳಿದ್ದಾರೆ. ಅದನ್ನು ಅತ್ಯಂತ ಶ್ರದ್ಧೆಯಿಂದ ಆಲಿಸಿರಿ. ॥10॥ "ಅಂತಹ ಪುಣ್ಯವಂತರು ನನ್ನ ಅನುಯಾಯಿಗಳಾಗಿದ್ದಾರೆ. ಅವರ ಪಾಪಗಳು ನಶಿಸಿವೆ. ಮತ್ತು ಅವರು ನನ್ನನ್ನು ಅರ್ಥಮಾಡಿಕೊಂಡಿದ್ದಾರೆ. ॥11॥ "ನೀವು ನಿರಂತರ ಸಾಯಿ ಸಾಯಿ ಎಂದು ಸ್ಮರಿಸುತ್ತಿದ್ದರೆ, ನಾನು ನಿಮ್ಮನ್ನು ಸಪ್ತ ಸಾಗರದಾಚೆ ಕರೆದೊಯ್ಯುತ್ತೇನೆ." ಈ ಮಾತುಗಳನ್ನು ನೀವು ನಂಬಿದಲ್ಲಿ ನೀವು ನಿಜವಾಗಿಯೂ ಲಾಭ ಪಡೆಯುವಿರಿ. ॥12॥ "ನನಗೆ ಈ ವಿಸ್ತಾರವಾದ ಪೂಜಾ ವಿಧಾನವಾಗಲಿ, ಷೋಡಶೋಪಚಾರ ಪೂಜೆ ಅಥವಾ ಅಷ್ಟೋಪಚಾರ ಪೂಜೆಗಳಾಗಲಿ ಅವಶ್ಯವಿಲ್ಲ. ಅನಂತವಾದ ಶ್ರದ್ಧೆ ಇರುವಲ್ಲಿ ನಾನು ನೆಲೆಸಿರುತ್ತೇನೆ." ॥13॥ ಈ ರೀತಿ ಬಾಬಾರವರು ತಮ್ಮ ಶಿಷ್ಯರಿಗೆ ಆಗಾಗ ನವಿರಾದ ಪ್ರೀತಿಯಿಂದ ತಿಳಿಸುತ್ತಿದ್ದರು. ಅಂತಹ ಪ್ರೀತಿಯ ಮಾತುಗಳನ್ನು ನೆನಪಿಸಿಕೊಂಡು ಶಾಂತಿಯನ್ನು ಪಡೆಯೋಣ. ॥14॥ ದಯಾಮಯ ಸಾಯಿ ಈ ರೀತಿ ಸ್ನೇಹಿತ, ಶುಭಚಿಂತಕ, ಶರಣಾಗತರಕ್ಷಕರಾಗಿದ್ದರು. ಈಗ ಒಬ್ಬ ಭಕ್ತನ ಭಕ್ತಿಯನ್ನು ಅಂಗೀಕರಿಸಿ ನೆರವೇರಿಸಿದ ಪವಾಡದ ಬಗ್ಗೆ ಕೇಳಿರಿ. ॥15॥ ಮನಸ್ಸಿನ ಚಂಚಲತೆಯನ್ನು ಓಡಿಸಿ. ಸರಿಯಾಗಿ ಏಕಾಗ್ರಚಿತ್ತರಾಗಿ ಈ ಹೊಸ ಕತೆಯನ್ನು ಆಲಿಸಿರಿ. ನಿಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳಬಹುದು. ॥16॥ ಅಮೃತ ವಚನಗಳು ಸಾಯಿಯ ಮುಖದಿಂದ ವರ್ಷಿಸಿದುವೆಂದರೆ ಅದೇ ಜೀವನದ ಪುಣ್ಯಗಳ ಫಲ. ಮತ್ತೆ ಶಿರಡಿಯಲ್ಲಿಭೌತಿಕ ಅನಾನುಕೂಲತೆಯನ್ನು ತಮಗೆ ಸಿಗುವ ಲಾಭದ ಪರಿವೆ ಉಳ್ಳವರು ಯಾರು ದೂರುತ್ತಾರೆ? ॥17॥ ಹಿಂದಿನ ಅಧ್ಯಾಯದಲ್ಲಿ ಒಬ್ಬ ಅಗ್ನಿಹೋತ್ರಿಗೆ ತನ್ನ ಗುರುವು ದೇಹ ತ್ಯಜಿಸಿದ್ದರೂ ಅದೇ ಗುರುವಿನ ಸ್ವರೂಪದಲ್ಲಿ ದರ್ಶನ ನೀಡಿರುವ ಬಗ್ಗೆ, ಅವನಿಗೆ ಅಸೀಮ ಆನಂದ ತುಂಬಿ ಬಂದ ಬಗ್ಗೆ ತಿಳಿದಿರುವೆವು. ॥18॥ ಈ ಅಧ್ಯಾಯವು ಕ್ಷಯರೋಗದಿಂದ ನರಳುತ್ತಿದ್ದ ಭಕ್ತನೊಬ್ಬನ ಅತ್ಯಂತ ಕುತೂಹಲಕಾರಿಯಾದ ಕಥೆಯನ್ನು ತಿಳಿಸುತ್ತದೆ. ಅವನ ಕನಸಿನಲ್ಲಿ ಒಂದು ಪಾಠವನ್ನು ಕಲಿಸಿ ಅವನಿಗೆ ಆರೋಗ್ಯ ದಯಪಾಲಿಸಲಾಗಿತ್ತು. ॥19॥ ಆದ್ದರಿಂದ ಓ ಭಕ್ತರೇ, ಭಕ್ತರ ಪಾಪಗಳನ್ನು ಸುಡುವಂತಹ ಅತ್ಯಂತ ಕರುಣಾಮಯ ಸ್ವಭಾವವನ್ನು ತೋರಿಸುವ ಸಾಯಿಯ ಈ ಕಥೆಯನ್ನು ಅತ್ಯಂತ ಭಕ್ತಿಯಿಂದ ಆಲಿಸಿರಿ. ॥20॥ ಈ ಘೋಷಣೆಯು ಪವಿತ್ರವಾದುದೂ, ಗಂಗೆಯ ಪಾವನ ಜಲದಂತೆ ಶುದ್ಧೀಕರಿಸುವುದೂ ಆಗಿದೆ. ಶ್ರೋತೃಗಳ ಕಿವಿಗಳು ಅನುಗ್ರಹಿತವಾಗಿವೆ. ಏಕೆಂದರೆ ಅವು ಇಹಪರಗಳಲ್ಲಿಯೂ

ಪುಣ್ಯಕಾರಿಯಾಗಿವೆ. ॥21॥ ಇದನ್ನು ಅಮೃತಕ್ಕೆ ಹೋಲಿಸೋಣ. ಆದರೆ ಅಮೃತವು ಇದಕ್ಕಿಂತ ಮಧುರವಾಗಿರುವುದಿಲ್ಲ. ಅಮೃತವು ಈ ಜೀವವನ್ನು ಉಳಿಸಬಹುದು. ಆದರೆ ಈ ಕಥೆಯು ಜೀವನ್ಮೃತ್ಯುವಿನ ಚಕ್ರದಿಂದಲೇ ದಾಟಿಸುವುದು. ॥22॥ ಅವು ಅತ್ಯಂತ ಶಕ್ತಿಶಾಲಿಯೆಂದು ಜನರು ಹೇಳುತ್ತಾರೆ. ಎಲ್ಲವೂ ತಮ್ಮ ಇಚ್ಛೆಯಂತೆ ನಡೆಯಬಹುದು ಎಂದು ಯೋಚಿಸುವವರು ಇದನ್ನು ಎಚ್ಚರಿಕೆಯಿಂದ ಕೇಳಬೇಕು. ॥23॥ ಮಾನವ ಜೀವಿಯು ನಿಜವಾಗಿಯೂ ಸ್ವತಂತ್ರನಾಗಿದ್ದಲ್ಲಿ ಮತ್ತೆ ಅವನು ಹಗಲು ರಾತ್ರಿ ಸಂತೋಷವನ್ನು ಅನುಭವಿಸಲು ಹೋರಾಡುತ್ತಿದ್ದರೂ ಅವನು ಏಕೆ ದುಃಖವನ್ನೇ ಹೊಂದುತ್ತಾನೆ? ಇದು ಅಸ್ತಿತ್ವದ ಕಥೆ. ॥24॥ ಅಸಂತೋಷವನ್ನು ಪ್ರತಿ ಹೆಜ್ಜೆಯಲ್ಲಿಯೂ ತಡೆಯಲು ಎಚ್ಚರವಹಿಸಿದ್ದರೂ ಸಹ ದುಃಖವು ಅವನನ್ನು ಬೇಗನೇ ಹುಡುಕಿಕೊಂಡು ಬರುತ್ತದೆ. ಮತ್ತು ಅವನನ್ನು ಹಿಂಬಾಲಿಸುತ್ತದೆ. ॥25॥ ಯಾರಾದರೂ ಅವುಗಳನ್ನು ಅಲ್ಲಾಡಿಸಲು ಪ್ರಯತ್ನಿಸಿದಲ್ಲಿ ಅವು ಕುತ್ತಿಗೆಯನ್ನು ಹಿಡಿಯುತ್ತವೆ. ಅವುಗಳನ್ನು ಸರಿಸಲು ಪ್ರಯತ್ನಿಸಿದಲ್ಲಿ ಕುತ್ತಿಗೆಗೆ ನೇತಾಡುತ್ತವೆ. ಅದರ ವಿರುದ್ಧವಾಗಿ ಹೋರಾಡುವ ಮಾನವ ಜನ್ಮ ವ್ಯರ್ಥ. ಅದು ಕೇವಲ ಅವನನ್ನು ನಾಶಪಡಿಸುತ್ತದೆ. ॥26॥ ಒಬ್ಬ ವ್ಯಕ್ತಿಯು ನಿಜವಾಗಿಯೂ ಸ್ವತಂತ್ರನಾಗಿದ್ದಲ್ಲಿ ಅವನು ಪೂರ್ಣ ಸಂತಸದಲ್ಲಿಯೇ ಇದ್ದು, ಎಳ್ಳಷ್ಟು ಮಾತ್ರವೂ ಅಸಂತೋಷವಿರುತ್ತಿರಲಿಲ್ಲ. ॥27॥ ಅವನು ಸ್ವತಂತ್ರಜೀವಿಯೆಂದೇ ಪರಿಗಣಿಸಿದಲ್ಲಿ ಆತ ಎಂದಿಗೂ ಪಾಪಮಾಡುವುದಿಲ್ಲ ಮತ್ತು ಕೇವಲ ಪುಣ್ಯವನ್ನೇ ಶೇಖರಿಸಿ ಬಹು ಸುಖಿಯಾಗಿರುತ್ತಾನೆ. ॥28॥ ಆದರೆ ಮಾನವನು ಸ್ವತಂತ್ರನಲ್ಲ. ಆತನ ಹಿಂದಿನ ಜನ್ಮಗಳ ಕರ್ಮಗಳು ಅವನನ್ನು ಬಂಧಿಸಿರುತ್ತವೆ. ಮತ್ತು ಕರ್ಮಗಳು ಅತಿ ವಿಶಿಷ್ಟವಾಗಿರುತ್ತವೆ. ಅವನು ಎಂದೆಂದಿಗೂ ಕರ್ಮಗಳ ಕೈಗೊಂಬೆಯಾಗಿರುತ್ತಾನೆ. ॥29॥ ಜೀವಿಯು ಸತ್ಕರ್ಮಗಳನ್ನು ಯೋಚಿಸುತ್ತಾನೆ. ಆದರೆ ಪಾಪಗಳ ಕಡೆ ಸೆಳೆಯಲ್ಪಡುತ್ತಾನೆ. ಸದ್ಗುಣಿಯಾಗಲು ಇಚ್ಛಿಸಿದರೂ ದುಷ್ಕರ್ಮಿಯಾಗಿ ಕೊನೆಗೊಳ್ಳುತ್ತಾನೆ. ॥30॥ ಈಗ ಪುಣೆ ಜಿಲ್ಲೆಯ ಜುನ್ನೂರು ತಾಲೂಕಿನ ನಾರಾಯಣಗಾಂವ ಹಳ್ಳಿಯ ಭೀಮಾಜಿ ಪಾಟೀಲರ ಕತೆಯನ್ನು ಕೇಳಿರಿ. ಇದು ಅಮೃತದಷ್ಟೇ ಮಧುರ. ॥31॥ ಭೀಮಾಜಿಯು ಒಬ್ಬ ಶ್ರೀಮಂತ. ಅವನು ಎಲ್ಲರೊಡನೆಯೂ ಆದರದಿಂದಿದ್ದನು. ಅವನು ಎಂದಿಗೂ ದುಃಖಿತನಲ್ಲ. ಹಾಗೂ ಸದಾ ಆನಂದೋತ್ಸಾಹದಲ್ಲಿರುತ್ತಿದ್ದನು. ॥32॥ ವಿಧಿಯ ಆಟ ವಿಚಿತ್ರವಾದುದು. ಯಾವುದೇ ಕಾರಣ ಇಲ್ಲದೆ ನಾವು ಗೆಲ್ಲಬಹುದು ಅಥವಾ ಸೋಲಬಹುದು. ಕರ್ಮಗಳಿಂದ ಉಂಟಾಗುವ ದುಷ್ಫಲಗಳು ರೋಗಗಳ ರೂಪದಲ್ಲಿ ಬರುತ್ತವೆ. ॥33॥ ಕ್ರಿ. ಶ. 1909ರಲ್ಲಿ ಭೀಮಾಜಿಯ ಸ್ಥಿತಿ ಚಿಂತಾಜನಕವಾಗಿತ್ತು. ಅವನಿಗೆ ಕ್ಷಯ ರೋಗದ ಕೆಮ್ಮು ಪ್ರಾರಂಭವಾಗಿತ್ತು. ಅವನಿಗೆ ಬಹಳ ಜ್ವರ ಬಂದಿತ್ತು. ॥34॥ ಅವನ ಕೆಮ್ಮು ಅಸಹನೀಯವಾಗಿತ್ತು. ಜ್ವರ ಬಹಳ ಹೆಚ್ಚಾಯಿತು. ಮತ್ತು ದಿನೇ ದಿನೇ ಉಲ್ಬಣಗೊಂಡಿತು. ಭೀಮಾಜಿಯು ಆಶೆ ಕೈಬಿಟ್ಟನು. ॥35॥ ಅವನಿಗೆ ಯಾವಾಗಲೂ ಬಾಯಲ್ಲಿ ನೊರೆಬರುತ್ತಿತ್ತು. ಬಾಯಲ್ಲಿ ಕೆಟ್ಟ ರುಚಿ ಇತ್ತು. ರಕ್ತವನ್ನು ವಾಂತಿ ಮಾಡಲಾರಂಭಿಸಿದನು. ತೀವ್ರವಾದ ಹೊಟ್ಟೆನೋವು

ಇತ್ತು, ಸದಾ ವಾಂತಿಯ ವಾಕರಿಕೆ ಮತ್ತು ವಿಲವಿಲನೆ ಒದ್ದಾಡುತ್ತಿದ್ದನು. ॥36॥ ಅವನು ಹಾಸಿಗೆ ಹಿಡಿದ ರೋಗಿಯಾಗಿಬಿಟ್ಟನು. ಚೇತನ ಉಡುಗಿತು. ಕೈಕಾಲುಗಳು ನಿಶ್ಶಕ್ತವಾದವು. ಸಣ್ಣಗಾದನು. ಎಲ್ಲ ರೀತಿಯ ಚಿಕಿತ್ಸಾಕ್ರಮಗಳನ್ನು ಮಾಡಲೆತ್ನಿಸಿದನು. ಆದರೂ ಅವನು ಅತ್ಯಂತ ಚಿಂತಾಜನಕ ಸ್ಥಿತಿಯಲ್ಲಿದ್ದನು. ॥37॥ ಅವನಿಗೆ ಆಹಾರದ ಬಯಕೆಯು ಪೂರ್ಣವಾಗಿ ಬಿಟ್ಟುಹೋಯಿತು. ಅಶಕ್ತತೆ ಶುರುವಾಯಿತುಜೀರ್ಣಶಕ್ತಿ ಅಳಿಸಿಹೋಯಿತು. ಅನ್ನದ ಗಂಜಿ ಅಥವಾ ಹಗುರವಾದ ಆಹಾರವನ್ನೂ ಜೀರ್ಣಿಸಲಾರದಾದನು. ಅವನ ಸ್ಥಿತಿ ಅಸಹನೀಯವಾಯಿತು. ಏನಾಡಬೇಕೂ ತಿಳಿಯದಾಯಿತು. ॥38॥ ಎಲ್ಲ ವಿಧಿ ವಿಧಾನಗಳನ್ನು ಆಚರಿಸಲಾಯಿತು. ಡಾಕ್ಟರುಗಳು ಮತ್ತು ವೈದ್ಯರು ಆಸೆಬಿಟ್ಟರು. ಅವನು ಉಳಿಯುವ ಆಸೆ ಕೈಬಿಟ್ಟು ಹತಾಶನಾದನು. ॥39॥ ಪಾಟೀಲನು ಖಿನ್ನ ಮನಸ್ಕನಾದನು. ಕೇವಲ ಕೆಲವೇ ದಿನಗಳು ಬದುಕುವೆನೆಂದು ಭಾವಿಸಿದನು. ದಿನೇ ದಿನೇ ಅತಿ ನಿಶ್ಶಕ್ತಿಹೊಂದಿದನು. ಮತ್ತು ದಿನಗಳನ್ನು ಎಣಿಸತೊಡಗಿದನು. ॥40॥ ಅವನು ತನ್ನ ಕುಲದೇವರನ್ನು ಪೂಜಿಸಿದನು. ಆಕೆಯು ಅವನ ಆರೋಗ್ಯವನ್ನು ಸರಿಪಡಿಸಲಾರದೆ ಹೋದಳು. ಪಾಟೀಲನು ಎಲ್ಲಾ ಜ್ಯೋತಿಷಿಗಳನ್ನೂ, ಮಾಂತ್ರಿಕರನ್ನೂ, ಮತ್ತೆಲ್ಲರನ್ನೂ ಭೇಟಿಮಾಡಿ ಕೇಳಿದನು. ॥41॥ ಕೆಲವರು ಅವನ ದೇಹಕ್ಕೆ ಸಂಬಂಧಿಸಿದ ಕಾಯಿಲೆಯೆಂದು ತಿಳಿದರು, ಇತರರು ಅದು ವಿಧಿಬರಹ, ಯಾರೂ ತಪ್ಪಿಸಲಾರರು, ಯಾರ ಹಿಡಿತಕ್ಕೂ ಸಿಕ್ಕುವುದಿಲ್ಲ. ಅದನ್ನು ಅನುಭವಿಸಲೇಬೇಕು ಎಂದರು. ॥42॥ ವೈದ್ಯರು ಪ್ರಯತ್ನಿಸಿದರು. ಹಕೀಮರು ಪ್ರಯತ್ನಿಸಿದರು. ಎಲ್ಲ ಪ್ರಯತ್ನಗಳೂ ವ್ಯರ್ಥವಾದವು. ॥43॥ ಪಾಟೀಲನು ಬಹಳ ವ್ಯಥಿತನಾದನು. ಅವನು ಹೇಳಿದನು, "ಓ ದೇವರೇ, ನಾನು ಏನು ಮಾಡಿದೆ? ಯಾವುದೂ ಫಲ ಸಿಗುತ್ತಿಲ್ಲವೇಕೆ? ಇದೆಂತಹ ಪಾಪ?" ॥44॥ ಭಗವಂತನ ರೀತಿಗಳು ವಿಚಿತ್ರ! ನೀವು ಸಂತೋಷವಾಗಿರುವಾಗ ಒಂದು ಕ್ಷಣಕಾಲವಾದರೂ ತನ್ನ ಇರುವಿಕೆಯನ್ನು ನೆನಪಿಸುವುದಿಲ್ಲ. ನಿಜವಾಗಿಯೂ ಅವನ ಮಾರ್ಗಗಳು ಅಸಾಮಾನ್ಯ. ॥45॥ ಆದರೆ ಅವನ ಮನಸ್ಸಿಗೆ ಬಂದಾಗ ಅವನು ಕಷ್ಟಗಳನ್ನು ಒಂದಾದ ಮೇಲೊಂದು ಕಳುಹಿಸಿ ಒಬ್ಬ ವ್ಯಕ್ತಿಯು ಅವನನ್ನು ನೆನಪಿಸಿಕೊಂಡು "ಓ, ನಾರಾಯಣ, ನನ್ನ ಸಹಾಯಕ್ಕಾಗಿ ಓಡಿ ಬಾ" ಎಂದು ಕರೆಯುವಂತೆ ಮಾಡುತ್ತಾನೆ. ॥46॥ ಅದು ಹಾಗಿರಲಿ. ಅವನ ತೀವ್ರ ಮತ್ತು ಆರ್ತ ಕೂಗುಗಳು ಕೇಳಿಸಿದವು. ಭಗವಂತನು ಕರೆಗೆ ಓಗೊಟ್ಟನು. ನಾನಾನಿಗೆ ಒಂದು ಕಾಗದ ಕಳಿಸುವ ಪ್ರೇರಣೆ ಧೀಮಾಜಿಗೆ ಉಂಟಾಯಿತು. ॥47॥ ಬೇರೆ ಯಾರೂ ಮಾಡಲಾಗದ್ದನ್ನು ನಾನಾ ಏನಾದರೂ ಮಾಡಬಹುದು ಎಂದು ಪಾಟೀಲನಿಗೆ ದೃಢವಾದ ನಂಬಿಕೆಯಿತ್ತು. ॥48॥ ಅದು ಅವನ ಕಾಯಿಲೆಯು ಗುಣವಾಗುವ ಶುಭಾರಂಭವಾಯಿತು. ಅನಂತರ ಅವನು ಒಂದು ವಿವರವಾದ ಪತ್ರವನ್ನು ಬರೆದು ನಾನಾನಿಗೆ ಕಳಿಸಿದನು. ॥49॥ ನಾನಾನ ನೆನಪು ಸಹ ಸಾಯಿನಾಥನ ಪ್ರೇರಣೆಯೇ. ಅದು ಕಾಯಿಲೆಯನ್ನು ನಾಶಮಾಡುವ ಮಾರ್ಗದ ಮೆಟ್ಟಿಲಾಯಿತು. ಸಂತರ ಕಾರ್ಯಗಳು ಊಹಿಸಲಸಾಧ್ಯವಾದವುಗಳು. ॥50॥ ಕಾಲಚಕ್ರದ ಯಾವುದೇ ಸುತ್ತಿನಲ್ಲಿಯೂ

ಪರಮಾತ್ಮನ ಅಂತರಾರ್ಥವಿದೆ. ಆದ್ದರಿಂದ ಯಾರೂ ಅದಕ್ಕೆ ವಿರುದ್ಧವಾಗಿ ಯೋಚಿಸಬಾರದು. ಅದರ ಬಗ್ಗೆ ಚರ್ಚಿಸಲೂಬಾರದು. ॥51॥ ಯಾವುದೇ ಒಳ್ಳೆಯದಾಗಲಿ, ಕೆಟ್ಟದಾಗಲಿ, ಅದು ಭಗವಂತನಿಂದಾಗಿ ಮಾತ್ರ, ಅವನೇ ಸೂತ್ರಧಾರ. ಅವನೇ ರಕ್ಷ, ಅವನೇ ನಾಶಗೊಳಿಸುವವನು. ಕೇವಲ ಅವನೇ ಚೇತನಕಾರಕ ಮತ್ತು ಸೃಷ್ಟಿಕರ್ತ. ॥52॥ ಪಾಟೀಲನು ಚಂದೋರ್‌ಕರ್‌ಗೆ ಬರೆದನು, "ನನಗೆ ಔಷಧಿಗಳನ್ನು ತೆಗೆದುಕೊಂಡು ಬಹಳ ಬೇಸರವಾಗಿದೆ. ನನಗೆ ಈ ಜೀವನವೇ ಭಾರವಾಗಿದೆ. ಈ ಸಂಸಾರವು ನಿಸ್ಸಾರವಾಗಿದೆ. ॥53॥ "ವೈದ್ಯರು ಭರವಸೆ ಕಳೆದುಕೊಂಡಿದ್ದಾರೆ ಮತ್ತು ಈ ರೋಗವು ವಾಸಿಯಾಗುವುದಿಲ್ಲವೆಂದು ಘೋಷಿಸಿದ್ದಾರೆ. ಹಕೀಮರು ಮತ್ತು ವೈದ್ಯರು ವ್ಯಾಕುಲರಾಗಿದ್ದಾರೆ. ನನಗೂ ಸಹ ಯಾವುದೇ ಆಶೆ ಇಲ್ಲ. ॥54॥ "ಆದರೂ, ಕೇವಲ ಒಂದೇ ಒಂದು ಕೋರಿಕೆ ಇದೆ. ಅದನ್ನು ನಿನ್ನ ಚರಣಗಳಲ್ಲಿಡುತ್ತೇನೆ. ನಿಜವಾಗಿಯೂ ನಾನು ನಿನ್ನನ್ನು ಭೇಟಿಯಾಗಬೇಕು. ಇದೊಂದು ಬಲವಾದ ಇಚ್ಛೆಯಿದೆ." ॥55॥ ಚಾಂದೋರ್‌ಕರ್‌ನು ಪತ್ರ ಓದಿದನು, ಮನಸ್ಸಿನಲ್ಲಿಯೇ ಭೀಮಾಜಿಯ ಬಗ್ಗೆ ಬಹಳ ವ್ಯಥಿತನಾದನು. ಪಾಟೀಲನು ಒಳ್ಳೆಯ ಆಪ್ತ. ನಾನಾ ವಿಚಲಿತನಾದನು. ॥56॥ ಅದಕ್ಕೆ ಉತ್ತರವಾಗಿ ಅವನು, ಒಂದೇ ಒಂದು ಪರಿಹಾರೋಪಾಯವನ್ನು ತಿಳಿಸಿದನು. "ಸಾಯಿಯ ಚರಣಗಳಲ್ಲಿ ಸಂಪೂರ್ಣವಾಗಿ ಶರಣಾಗು. ಇದೊಂದೇ ನಿನ್ನನ್ನು ರಕ್ಷಿಸುವ ಅನುಗ್ರಹ. ಬಾಬಾ ತಾಯಿ ಮತ್ತು ತಂದೆ ಎರಡೂ ಹೌದು. ॥57॥ "ಅವರು ಎಲ್ಲರ ದಯಾಮಯಿ ತಾಯಿ. ಕರೆದೊಡನೆ ಓಗೊಟ್ಟು ಓಡಿಬಂದು ನಿನ್ನ ಮೇಲೆ ಕನಿಕರ ತೋರಿ ತಮ್ಮ ತೋಳುಗಳಲ್ಲಿ ಎತ್ತಿಹಿಡಿಯುತ್ತಾರೆ. ಮತ್ತು ಮಕ್ಕಳ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುತ್ತಾಳೆ. ॥58॥ "ಕುಷ್ಠರೋಗವೂ ಕೇವಲ ಅವಳ ದರ್ಶನಮಾತ್ರದಿಂದಲೇ ಗುಣವಾಗುತ್ತದೆ. ಇನ್ನು ಕ್ಷಯರೋಗದ ಬಗ್ಗೆ ಏನು ಹೇಳುವುದು? ಕಿಂಚಿತ್ತೂ ಸಂಶಯಬೇಡ. ಹೋಗು ಅವರ ಚರಣಗಳಲ್ಲಿ ಶರಣಾಗು. ॥59॥ "ಯಾರು ಏನು ಕೇಳಿದರೂ ಅನುಗ್ರಹಿಸುತ್ತಾರೆ. ಇದು ಅವರ ಕ್ರಮ. ಆದ್ದರಿಂದ ನಾನು ಹೇಳುತ್ತೇನೆ. ತ್ವರೆ ಮಾಡು. ಸಾಯಿಯ ದರ್ಶನ ಮಾಡು. ॥60॥ "ಮರಣದ ಭಯವು ಅತಿತೀವ್ರವಾದ ಭಯ. ಅದಕ್ಕಿಂತ ಮತ್ತೇನಿರಲು ಸಾಧ್ಯ? ಹೋಗಲಿ, ಸಾಯಿಯ ಚರಣಗಳನ್ನು ಗಟ್ಟಿಯಾಗಿ ಹಿಡಿ. ಅವನೊಬ್ಬನಿಗೆ ಮಾತ್ರವೇ ಈ ಭಯವನ್ನು ನಿವಾರಿಸಲು ಸಾಧ್ಯ." ॥61॥ ಪಾಟೀಲನ ಆತಂಕವೂ ತಡೆಯಲಸಾಧ್ಯವಾಗಿತ್ತು. ಅವನು ಜೀವನದ ಅಂತಿಮ ಕ್ಷಣವನ್ನು ತಲುಪಿದ್ದನು. "ನಾನು ಯಾವಾಗ ಸಾಯಿನಾಥನನ್ನು ಭೇಟಿ ಮಾಡಲು ಸಾಧ್ಯ? ಈ ಕಾರ್ಯವನ್ನು ಎಂದಿಗೆ ಪೂರೈಸಬಲ್ಲೆ?" ಎಂದು ಯೋಚಿಸಿದನು. ॥62॥ ಈ ರೀತಿ ಪಾಟೀಲನು ವ್ಯಥಿತನಾದನು. ಅವನು ಮರುದಿನವೇ ಶಿರಡಿಗೆ ಹೊರಡಲು ಬೇಗನೇ ತಯಾರಿ ಮಾಡಲು ಹೇಳಿದನು. ॥63॥ ಈ ರೀತಿಯ ದೃಢ ನಿಶ್ಚಯದಿಂದ ಪಾಟೀಲನು ಎಲ್ಲವನ್ನೂ ತ್ಯಜಿಸಿ ಮಹಾರಾಜರ ದರ್ಶನಕ್ಕಾಗಿ ಶಿರಡಿಗೆ ಹೊರಟನು. ॥64॥ ಭೀಮಾಜಿಯು ತನ್ನ ಬಂಧುಗಳೊಡನೆ ಅವಸರವಾಗಿ ಹೊಟನು. ಅವನು ಶಿರಡಿಯನ್ನು

ಎಂದಿಗೆ ತಲುಪುವೆನೆಂದು ತಿಳಿಯಲು ಅತ್ಯಂತ ಕಾತರನಾಗಿದ್ದನು. ॥65॥ ಗಾಡಿಯು ಮಸೀದಿಯ ಮುಂದಿನ ಅಂಗಳದ ಗೇಟಿನ ಹತ್ತಿರ ಬಂದು ನಿಂತಿತು. ನಾಲ್ಕು ಜನರು ಭೀಮಾಜಿಯನ್ನು ಹಿಡಿದು ಮೆಟ್ಟಿಲುಗಳ ಮೇಲೆ ಹೊತ್ತುಕೊಂಡು ಹೋದರು. ॥66॥ ನಾನಾ ಸಾಹೇಬ್ ಅಲ್ಲಿದ್ದನು. ಮಾಧವರಾವ್ ಸಹ ಜೊತೆಯಲ್ಲಿ ಬಂದನು. ಪ್ರತಿಯೊಬ್ಬರೂ ಮಾಧವರಾವ್ ಮೂಲಕ ಸಾಯಿಯ ಚರಣಗಳನ್ನು ಅತಿ ಸುಲಭವಾಗಿ ಪಡೆಯಬಲ್ಲವರಾಗಿದ್ದರು. ॥67॥ ಪಾಟೀಲನ ಕಡೆ ನೋಡುತ್ತಾ ಬಾಬಾ ಹೇಳಿದರು: "ಶ್ಯಾಮಾ, ಈ ಖದೀಮನನ್ನು ಎಲ್ಲಿಂದ ಹಿಡಿದುಕೊಂಡು ಬಂದೆ? ಮತ್ತು ಇಲ್ಲಿ ನನ್ನ ಮೇಲೇಕೆ ತಳ್ಳಿದೆ? ಇದು ನಿನಗೆ ತರವೇ?" ॥68॥ ಭೀಮಾಜಿಯು ಸಾಯಿಯ ಚರಣಗಳಲ್ಲಿ ಶಿರವಿಟ್ಟು ಹೇಳಿದನು: "ಓಹ್, ಸಾಯಿನಾಥಾ, ಈ ಅಸಹಾಯಕ ಜೀವಿಯ ಮೇಲೆ ಕರುಣೆತೋರಿ. ನನ್ನನ್ನು ರಕ್ಷಿಸಿ. ಓ ಅನಾಥರಕ್ಷಕ!" ॥69॥ಪಾಟೀಲನ ವ್ಯಾಕುಲತೆಯನ್ನು ನೋಡಿ ಸಾಯಿನಾಥರು ಅವನ ಮೇಲೆ ಕನಿಕರ ಹೊಂದಿದರು. ಪಾಟೀಲನಿಗೆ ತನ್ನ ದುಃಖ ಅಂತ್ಯವಾಗುವುದೆಂಬ ಭರವಸೆ ಉಂಟಾಯಿತು. ॥70॥ ಭೀಮಾಜಿಯ ನರಳುವಿಕೆಯನ್ನು ನೋಡಿ, ಸಾಯಿಸಮರ್ಥರು, ದಯಾಸಾಗರನು, ಬಹಳವಾಗಿ ಮನಕರಗಿ, ಮುಗುಳುನಗುತ್ತಾ ಹೇಳಿದರು. ॥71॥ "ಕುಳಿತುಕೋ, ದುಃಖಿಸುವುದನ್ನು ನಿಲ್ಲಿಸು. ಶಿರಡಿಯಲ್ಲಿ ಕಾಲಿಟ್ಟ ಕ್ಷಣವೇ ನಿನ್ನ ವಿಧಿಲಿಖಿತ ಕಷ್ಟಗಳೆಲ್ಲವೂ ದೂರವಾದುವು. ॥72॥ "ಎಷ್ಟೇ ಆಳವಾದ ದುಃಖಸಾಗರದಲ್ಲಿ ಮುಳುಗಿದ್ದರೂ ಅಥವಾ ಕಷ್ಟಗಳ ಕಣಿವೆಯಲ್ಲಿ ಆಳವಾಗಿ ಹುದುಗಿಹೋಗಿದ್ದರೂ, ಮಸೀದಿಯ ಮೂಲೆಯ ಮೆಟ್ಟಿಲುಗಳನ್ನು ಹತ್ತಿದ ಕೂಡಲೇ ಅವನು ಸಂತಸದ ಅಲೆಗಳ ಮೇಲೆ ತೇಲಾಡುತ್ತಾನೆ. ॥73॥ "ಫಕೀರನಾದರೋ ಅತ್ಯಂತ ದಯಾಮಯಿ. ಅವನು ನಿನ್ನ ದುಃಖಗಳನ್ನು ಮೂಲಸಹಿತ ನಾಶಮಾಡುವನು ಮತ್ತು ನಿನ್ನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾನೆಅವನು ಎಲ್ಲರನ್ನೂ ಕರುಣೆಯಿಂದ ಕಾಣುತ್ತಾನೆ. ॥74॥"ಆದ್ದರಿಂದ ನೀನು ಆರಾಮವಾಗಿರು. ಭೀಮಾಜಿಯ ಮನೆಯಲ್ಲಿ ನೆಲೆಸು. ಒಂದೆರಡು ದಿನಗಳಲ್ಲಿನಗೆ ಬಿಡುಗಡೆ ದೊರೆಯುತ್ತದೆ." ॥75॥ ಸಾಯುತ್ತಿರುವ ವ್ಯಕ್ತಿಗೆ ಅಮೃತ ವಚನವನ್ನು ಸುರಿಸಿದರೆ ಕೂಡಲೇ ಬದುಕುಳಿಯುವ ಹಾಗೆ, ಪಾಟೀಲನ ಮನಸ್ಸಿಗೆ ತೃಪ್ತಿಯಾಯಿತು. ॥76॥ ಸಾಯಿನಾಥರ ಈ ವಚನಗಳು ಮರಣಹೊಂದುತ್ತಿರುವ ವ್ಯಕ್ತಿಗೆ ಅಮೃತ ನೀಡಿದಂತೆ ಆಯಿತು. ಅಥವಾ ಬಾಯಾರಿಕೆಯಿಂದುಬಳಲುತ್ತಿರುವ ವ್ಯಕ್ತಿಗೆ ನೀರನ್ನು ಕೊಟ್ಟಂತಾಯಿತು. ॥77॥ ಬಾಬಾರವರ ಸಮಕ್ಷಮದಲ್ಲಿ ಒಂದು ಗಂಟೆ ಕುಳಿತ ನಂತರ ರಕ್ತ ವಾಂತಿಯಾಗುವುದು ನಿಂತುಹೋಯಿತು. ಅದು ಪ್ರತಿ 5 ನಿಮಿಷಗಳಿಗೊಮ್ಮೆ ಆಗುತ್ತಿತ್ತು. ॥78॥ ಅವರು (ಸಾಯಿಯು) ರೋಗಿಯ ತಪಾಸಣೆ ನಡೆಸಲಿಲ್ಲ ಅಥವಾರೋಗಿಯ ಚರಿತ್ರೆಯನ್ನೂ ಕೇಳಲಿಲ್ಲ. ಕೇವಲ ಒಂದು ಕರುಣಾಪೂರಿತ ದೃಷ್ಟಿಯಿಂದಲೇ ರೋಗವು ನಿರ್ಮೂಲವಾಯಿತು. ॥79॥ ಒಂದು ದಯಾಪೂರಿತ ದೃಷ್ಟಿಯೇ ಸಾಕು, ಒಣಗಿದ ಕಡ್ಡಿಯೂ ಚಿಗುರಿ ವಸಂತಕಾಲವಲ್ಲದಿದ್ದರೂ ಎಲೆ-ಹೂಗಳನ್ನು ಬಿಡಬಹುದು. ಮತ್ತು ಒಣಗಿದ ಮರವು ಫಲನೀಡಬಹುದು. ॥80॥

ಆರೋಗ್ಯವೊ ಅಥವಾ ಅನಾರೋಗ್ಯವೊ ಅದು ಪುಣ್ಯಕರ್ಮಗಳ ಅಥವಾ ಪಾಪಕರ್ಮಗಳ ಖಜಾನೆಯು ಬರಿದಾಗುವುದಮೇಲೆ ಅವಲಂಬಿಸಿರುತ್ತದೆ. ಕರ್ಮಫಲಗಳನ್ನು ಅನುಭವಿಸದೆ ಬೇರೆ ಮಾರ್ಗವಿಲ್ಲ. ತಪ್ಪಿಸುವುದಕ್ಕಾಗುವುದಿಲ್ಲ. ॥81॥ ಅವನಿಗೆ ರೋಗವು ಅವನದೇ ವಿಧಿಬರಹವಾಗಿತ್ತು. ಇದೇ ಜೀವನ ಮರಣವೆಂಬ ಚಕ್ರದ ನಿಯಮ. ಅದರಿಂದ ಬೇರೆ ಯಾವುದೇ ಉಪಾಯವಾಗಲೀ ಬಿಡುಗಡೆಯಾಗಲೀ ಇಲ್ಲ. ಅದರ ಫಲಗಳನ್ನು ಅನುಭವಿಸಲೇಬೇಕಾಗುತ್ತದೆ. ॥82॥ ಆದರೆ, ಅದೃಷ್ಟವಶಾತ್ ಒಬ್ಬ ಸಂತನ ದರ್ಶನಪಡೆಯಬಹುದು. ಇದೊಂದು ಯಾವುದೇ ರೋಗವಿಲ್ಲದೆ ನಿರೋಗಿಯಾಗಿರಲು ಹಾಗೂ ರೋಗಮುಕ್ತನಾಗಲು ನಿಶ್ಚಿತ ಉಪಾಯ. ॥83॥ ಯಾವುದೇ ರೋಗವೂ ವಿಧಿಬರಹವೆಂದು ತೋರುತ್ತದೆ. ಆದರೆ ಒಬ್ಬ ಸಂತನು ಕೃಪಾದೃಷ್ಟಿ ಬೀರಿದರೆ, ಅದು ವಿಧಿಬರಹದ ದುಃಖವನ್ನು ನಾಶಮಾಡುತ್ತದೆ. ॥84॥ ನಿಜವಾದ ಪರಿಹಾರ ಬಾಬಾರವರ ನುಡಿಗಳಲ್ಲಿ ನೆಲೆಸಿದೆ. ಒಂದು ಸಂದರ್ಭದಲ್ಲಿ ಅವರು ಮಲೇರಿಯಾ ರೋಗವನ್ನು ಒಂದು ಕಪ್ಪು ನಾಯಿಗೆ ಮೊಸರನ್ನ ತಿನ್ನಿಸುವುದರಿಂದ ಗುಣಪಡಿಸಿದರು. ॥85॥ ಈ ಕತೆಗಳನ್ನು ನೀವು ಅಡ್ಡ ಮಾರ್ಗವೆಂದು ಯೋಚಿಸಬಹುದು. ಆದರೆ ಅವುಗಳೆಲ್ಲವನ್ನೂ ಕೇಳುವುದರಿಂದ ಅವುಗಳ ಪ್ರಾಮುಖ್ಯತೆಯನ್ನು ಅರಿಯುತ್ತೀರಿ. ಅದೇನೇ ಆಗಲಿ, ಸಾಯಿಯೇ ಅವುಗಳನ್ನು ನನಗೆ ನೆನಪಿಸಿದ್ದಾರೆ. ॥86॥ "ನಾನು ನನ್ನ ಸ್ವಂತ ಕತೆಯನ್ನೇ ಹೇಳುವೆನು" ಎಂದು ಸಾಯಿಯೇ ಸ್ವತಃ ತಿಳಿಸಿದ್ದರು. ಈ ಸಂದರ್ಭದಲ್ಲಿ ಅವರೇ ಇವುಗಳನ್ನು ನೆನಪಿಸಿದ್ದಾರೆ. ॥87॥ ಬಾಳಾಗಣಪತ್ ಎಂಬವ್ಯಕ್ತಿಯೊಬ್ಬನಿದ್ದನು. ಅವನು ಜಾತಿಯಲ್ಲಿ ದರ್ಜಿ. ಮಹಾನ್ ಭಕ್ತನಾಗಿದ್ದನು. ಅವನು ಮಸೀದಿಗೆ ಬಂದು ಬಾಬಾರವರ ಮುಂದೆ ಕುಳಿತು ಅಸೀಮ ಭಕ್ತಿಯಿಂದ ಪ್ರಾರ್ಥಿಸಿದನು. ॥88॥ "ನಾನೇನು ಪಾಪಮಾಡಿರುವೆ? ಈ ಮಲೇರಿಯಾ ನನ್ನನ್ನೇಕೆ ಬಿಡುತ್ತಿಲ್ಲ? ನಾನು ಅನೇಕ ನಿವಾರಣೋಪಾಯಗಳನ್ನು ಪ್ರಯತ್ನಿಸಿದ್ದೇನೆ. ಆದರೆ ಅದು ನನ್ನ ದೇಹವನ್ನು ಬಿಡುತ್ತಿಲ್ಲ. ॥89॥ "ಆದ್ದರಿಂದ ಈಗ ನಾನೇನು ಮಾಡಲಿ? ನಾನು ಎಲ್ಲಾ ಔಷಧಿಗಳನ್ನೂ, ಕಷಾಯಗಳನ್ನೂ ಸೇವಿಸಿಯಾಯಿತು. ಜ್ವರ ಬಿಟ್ಟುಹೋಗುವಂತಹ ಉಪಾಯವೇನು, ನೀವು ಹೇಳಬೇಕು." ॥90॥ ಆಗ ಬಾಬಾರವರಿಗೆ ಅವನ ಮೇಲೆ ಕನಿಕರ ಉಂಟಾಯಿತು. ಅವರು ಉತ್ತರಿಸಿ – ಮಲೇರಿಯಾಗೆ ಒಂದು ಪರಿಹಾರ ಸೂಚಿಸಿದರು. ಈಗ ಆ ಅದ್ಭುತವಾದ ಕತೆಯನ್ನು ಕೇಳಿರಿ. ॥91॥ "ಮಹಾಲಕ್ಷ್ಮಿ ಮಂದಿರದ ಎದುರಿನಲ್ಲಿ ಒಂದು ಕಪ್ಪುನಾಯಿಗೆ ಸ್ವಲ್ಪ ಮೊಸರನ್ನವನ್ನು ತಿನ್ನಿಸು. ನಿನಗೆ ಕೂಡಲೇ ಗುಣವಾಗುತ್ತದೆ." ॥92॥ ಬಾಳಾ ಸ್ವಲ್ಪ ಆತಂಕಹೊಂದಿದನು. ಅವನು ಮನೆಗೆ ಹೋಗಿ ಹುಡುಕಿದನು. ಸ್ವಲ್ಪ ಅನ್ನ ಉಳಿದಿದ್ದನ್ನು ಕಂಡನು. ಸ್ವಲ್ಪ ಮೊಸರು ಸಹ ಹತ್ತಿರದಲ್ಲೇ ಇತ್ತು. ॥93॥ ಬಾಳಾ ತನಗೆ ತಾನೇ ಯೋಚಿಸಿದನು. "ಮೊಸರು ಮತ್ತು ಅನ್ನವೇನೋ ಸಿಕ್ಕಿದವು. ಆದರೆ ಕಪ್ಪು ನಾಯಿ ಅಲ್ಲಿರುವುದೇ? ಸರಿಯಾದ ಸಮಯದಲ್ಲಿ ದೇವಾಲಯದ ಹತ್ತಿರ ಬರುವುದೇ?" ॥94॥ ಆದರೆ ಬಾಳಾನ ಈ ಯೋಚನೆ ಅನಾವಶ್ಯಕವಾಗಿತ್ತು. ಅವನು ನಿಗದಿತ ಸ್ಥಳಕ್ಕೆಹೋದಾಗ

ಅಲ್ಲಿ ಒಂದು ಕಪ್ಪುನಾಯಿ ಬಾಲ ಅಲ್ಲಾಡಿಸುತ್ತಾ ಅವನ ಕಡೆಯೇ ಬಂದಿತು. ॥95॥ ಎಲ್ಲವೂ ನಿಗದಿಪಡಿಸಿದಂತೆ ನಡೆಯುತ್ತಿದ್ದುದನ್ನು ನೋಡಿ ಬಾಳಾನಿಗೆ ಸಂತೋಷವಾಯಿತು. ಅವನು ನಾಯಿಗೆ ಮೊಸರನ್ನವನ್ನು ತಿನ್ನಿಸಿ, ಬಾಬಾರವರಿಗೆ ಎಲ್ಲವನ್ನೂ ವರದಿಮಾಡಿದನು ॥96॥ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಈ ಘಟನೆಯನ್ನು ಯಾರು ಏನೆಂದಾದರೂ ಹೇಳಲಿ. ಆದರೆ ಆ ಕ್ಷಣದಿಂದಲೇ ಮಲೇರಿಯ ಅವನನ್ನು ಬಿಟ್ಟು ಹೋಯಿತು. ಬಾಳಾ ಚೇತರಿಸಿಕೊಳ್ಳತೊಡಗಿದ. ॥97॥ ಬಾಪೂ ಸಾಹೇಬ್ ಬುಟ್ಟಿಯ ವಿಷಯವೂ ಅದೇ ರೀತಿ ಆಯಿತು. ಅವನಿಗೆ ಹೊಟ್ಟೆಯಲ್ಲಿ ನಡುಕ ಇತ್ತು. ಒಂದೇ ಸಮನೆ ವಾಂತಿ, ಬೇಧಿ ಆಗುತ್ತಿತ್ತು. ॥98॥ ಅವನ ಔಷಧದ ಡಬ್ಬಿಯ ತುಂಬ ಔಷಧಗಳಿದ್ದವು. ಆದರೆಯಾವುವೂ ಪರಿಣಾಮಕಾರಿಯಾಗಿರಲಿಲ್ಲ. ಬಾಪೂ ಸಾಹೇಬನು ಚಿಂತಿತನಾದನು. ॥99॥ ವಾಂತಿ, ಬೇಧಿ ಒಂದೇ ಸಮನೆ ಇದ್ದುದರಿಂದ ಬಾಪೂಸಾಹೇಬನು ಬಹಳ ನಿಶ್ಶಕ್ತಿ ಹೊಂದಿದನು. ಅವನಿಗೆ ಬಾಬಾರವರ ನಿತ್ಯದ ದರ್ಶನಕ್ಕೆ ಬರಲು ಕೂಡ ಶಕ್ತಿ ಇಲ್ಲದ ಹಾಗಾಯಿತು. ॥100॥ ಬಾಬಾರವರಿಗೆ ಅದರ ಬಗ್ಗೆ ತಿಳಿಯಿತು. ಅವರು ಅವನಿಗೆ ಹೇಳಿಕಳಿಸಿ ತಮ್ಮ ಮುಂದೆ ಕುಳ್ಳಿರಿಸಿದರು. ಅವರು ಹೇಳಿದರು, "ಈಗಿನಿಂದ ಎಚ್ಚರ ವಹಿಸು. ನೀನು ಪಡಖಾನೆಗೆ ಹೋಗುವುದಿಲ್ಲ." ॥101॥ "ಮತ್ತೆ ವಾಂತಿಯೂ ಸಹ ನಿಲ್ಲಲೇ ಬೇಕು." ತಮ್ಮ ತೋರುಬೆರಳನ್ನು ಮುಖದ ಹತ್ತಿರ ತೋರಿಸುತ್ತ ಹೇಳಿದರು. ಮತ್ತೊಮ್ಮೆ ಅವನನ್ನು ನೋಡುತ್ತ ಈ ಮಾತುಗಳನ್ನು ಹೇಳಿದರು. ॥102॥ ಅದರ ಸಾರಾಂಶವೆಂದರೆ, ಸಾಯಿ ವಚನಗಳು ಎಷ್ಟು ತೂಕವಾಗಿದ್ದವೆಂದರೆ ಎರಡು ರೋಗಗಳೂ ಹೆದರಿ ಕೂಡಲೇ ಓಡಿ ಹೋದವು. ಬುಟಿ ಗುಣಮುಖನಾದನು. ॥103॥ ಒಮ್ಮೆ ಹಳ್ಳಿಯಲ್ಲಿ ಕಾಲರಾ ರೋಗದ ಸಾಂಕ್ರಾಮಿಕವು ಹರಡಿತ್ತು, ಆ ಸಮಯದಲ್ಲಿ ಬುಟಿಯು ಅದರಿಂದ ಪೀಡಿತನಾದನು. ಅವನಿಗೆ ವಾಂತಿ, ಬೇಧಿ ಒಂದೇ ಸಮನೆ ಆಗುತ್ತಿತ್ತು, ಅವನಿಗೆ ಬಹಳ ನಿಶ್ಶಕ್ತಿ ಇದ್ದು ತೀವ್ರವಾದ ಬಾಯಾರಿಕೆ ಆಗುತ್ತಿತ್ತು. ॥104॥ ಡಾ॥ ಪಿಳ್ಳೆ ಹತ್ತಿರವೇ ಇದ್ದು ತನ್ನಿಂದ ಸಾಧ್ಯವಾದಷ್ಟು ಚಿಕಿತ್ಸೆ ಮಾಡಿದನು. ಕೊನೆಯಲ್ಲಿ ಯಾವುದೂ ಫಲಕಾರಿಯಾಗದಿದ್ದಾಗ ಬಾಬಾರವರ ಹತ್ತಿರ ಬಂದರು. ॥105॥ ರೋಗವು ಉಲ್ಬಣಗೊಂಡ ಬಗ್ಗೆ ವಿವರವನ್ನು ಬಾಬಾರವರಿಗೆ ತಿಳಿಸಲಾಯಿತು. ಡಾ॥ ಪಿಳ್ಳೆ, ಕಾಫಿ ಅಥವಾ ನೀರನ್ನು ಕೊಟ್ಟರೆ ಒಳ್ಳೆಯದೇ ಎಂದು ಬಾಬಾರವರನ್ನು ಕೇಳಿದನು. ॥106 ॥ ಬಾಬಾರವರು ಉತ್ತರಿಸಿದರು – "ಹಾಲಿಗೆ ಬಾದಾಮಿ, ಅಕ್ರೋಟು, ಪಿಸ್ತಗಳನ್ನು ಹಾಕಿ ಕುದಿಸಿ ಕಷಾಯ ಮಾಡಿ ಕುಡಿಯಲಿ. ॥107॥ "ಇದುಅವನ ಬಾಯಾರಿಕೆಯನ್ನು ತಣಿಸುತ್ತದೆ. ರೋಗವನ್ನು ಕೂಡಲೇ ಗುಣಪಡಿಸುತ್ತದೆ." ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅವನಿಗೆ ಈ ಕಷಾಯವನ್ನು ಕುಡಿಯಲು ನೀಡಿದಾಗ ಅವನ ಕಷ್ಟಗಳೆಲ್ಲವೂ ದೂರವಾದವು. ॥108॥ "ಬಾದಾಮಿ, ಪಿಸ್ತ ಮತ್ತು ಅಕ್ರೋಟುಗಳನ್ನು ತಿಂದು ಕಾಲರಾ ರೋಗವನ್ನು ಎಲ್ಲಿಯಾದರೂ ಗುಣಪಡಿಸಲಾಗುತ್ತದೆಯೇ?" ಬಾಬಾರವರ ಮಾತುಗಳಲ್ಲಿ ಶ್ರದ್ಧೆ ಇಟ್ಟರೆ ಸಾಕು. ಸಂಶಯಕ್ಕೆ ಆಸ್ಪದವೇ ಇಲ್ಲ. ॥109॥ ಒಮ್ಮೆ ಒಬ್ಬ ಸ್ವಾಮಿಯು

ಅಳಂದಿಯಿಂದ ಶಿರಡಿಗೆ ಸಾಯಿಸಮರ್ಥರ ದರ್ಶನಕ್ಕಾಗಿ ಬಂದರು. ಬಾಬಾರವರ ನಿವಾಸ ತಲುಪಿದರು. ॥110॥ ಅವರು ಒಂದು ಕಿವಿಯ ರೋಗದಿಂದ ನರಳುತ್ತಿದ್ದರು. ಆದ್ದರಿಂದ ಅವರು ಆಯಾಸದಿಂದ, ನಿದ್ರಾಹೀನತೆಯಿಂದ ಬಳಲುತ್ತಿದ್ದರು. ಅವರು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರೂ ಏನೂ ಪ್ರಯೋಜನವಾಗಿರಲಿಲ್ಲ. ॥111॥ ಅವರು ತಡೆಯಲಾಗದ ಚುಚ್ಚುವ ನೋವಿನಿಂದ ನರಳುತ್ತಿದ್ದರು. ಅವರಿಗೆಅದನ್ನು ಯಾವ ರೀತಿಯಿಂದಲೂ ತಡೆಯಲಾಗುತ್ತಿರಲಿಲ್ಲ. ಆದರಿಂದ ಬಿಡುಗಡೆ ಹೊಂದಲು ಯೋಚಿಸಿ ಆಶೀರ್ವಾದ ಪಡೆಯಲು ಹೋದರು. ॥112॥ ಸಾಯಿಯ ಚರಣಗಳಿಗೆ ಶಿರಬಾಗಿ ವಂದಿಸಿ ಉದಿಯನ್ನು ಪ್ರಸಾದವಾಗಿ ಪಡೆದರು. ಸ್ವಾಮಿಯವರು ಆಶೀರ್ವಾದ ಬೇಡುತ್ತಾ ಪ್ರಾರ್ಥಿಸಿದರು – "ಸದಾ ನನ್ನ ಮೇಲೆ ಕೃಪೆ ಇರಲಿ." ॥113॥ ಮಾಧವ ರಾವ್ ದೇಶಪಾಂಡೆಯು ಬಾಬಾರವರಿಗೆ ಅವರ ಕಿವಿಯ ಬಗ್ಗೆ ತಿಳಿಸಿದನು. ಮಹಾರಾಜರು "ಅಲ್ಲಾನು ಎಲ್ಲಾ ಒಳ್ಳೆಯದು ಮಾಡುತ್ತಾನೆ" ಎಂದು ಭರವಸೆ ನೀಡಿದರು. ॥114॥ ಈ ಆಶೀರ್ವಚನಗಳೊಂದಿಗೆ ಸ್ವಾಮಿಯವರು ಪುಣೆಗೆ ಹಿಂತಿರುಗಿದರು. ಎಂಟು ದಿನಗಳ ನಂತರ ಅವರಿಂದ ಪತ್ರ ಬಂದಿತು. ಅವರ ನೋವು ಪೂರ್ಣವಾಗಿ ಕಡಿಮೆಯಾಗಿದೆಯೆಂದು ಪತ್ರ ತಿಳಿಸಿತು.॥115॥ ಕೇವಲ ಊತ ಮಾತ್ರ ಇನ್ನೂ ಇತ್ತು. ಆದ್ದರಿಂದ ಶಸ್ತ್ರಚಿಕಿತ್ಸೆಯ ಸಲಹೆ ನೀಡಿದ್ದರು. ಆದ್ದರಿಂದ ಎರಡನೆಯ ಬಾರಿ ಶಸ್ತ್ರಚಿಕಿತ್ಸೆಗಾಗಿ ಅವರು ಬೊಂಬಾಯಿಗೆ ಬಂದರು. ॥116॥ ಅವರು ಅದೇ ವೈದ್ಯರ ಬಳಿಗೆ ಹೋದರು. ಅಪರಿಚಿತರಾಗಿಯೂ ಬಾಬಾರವರು ಸಹಾಯಮಾಡಿದ್ದರು. ವೈದ್ಯರು ಕಿವಿಯನ್ನು ಪರೀಕ್ಷಿಸಿದಾಗ ಅಲ್ಲಿ ಎಲ್ಲಿಯೂ ಊತ ಇರಲಿಲ್ಲ. ॥117॥ ವೈದ್ಯರು ಈಗ ಯಾವುದೇ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇಲ್ಲವೆಂದು ತಿಳಿಸಿದರು. ಸ್ವಾಮಿಗಳ ಭಯಂಕರ ಆಲೋಚನೆಗಳು ಮಾಯವಾದವು. ಎಲ್ಲರೂ ಅಚ್ಚರಿಗೊಂಡರು. ॥118॥ ಇದೇ ರೀತಿಯ ಮತ್ತೊಂದು ಚರಿತ್ರೆಯು ನೆನಪಾಗುತ್ತಿದೆ. ಅದನ್ನು ಈಗ ಶ್ರೋತೃಗಳಿಗೆ ಹೇಳಿ ನಂತರ ಈ ಅಧ್ಯಾಯವನ್ನು ಮುಗಿಸುತ್ತೇನೆ. ॥119॥ ಮಸೀದಿಯ ಅಂಗಳದಲ್ಲಿ ನೆಲಹಾಸನ್ನು ಹಾಸುವ ಎಂಟುದಿನಗಳ ಮೊದಲು ಮಹಾಜನಿಯು ತೀವ್ರವಾದ ಅಜೀರ್ಣದಿಂದ ತೊಳಲುತ್ತಿದ್ದನು. ॥120॥ ಅವನಿಗೆ ಅನೇಕ ಸಲ ಬೇಧಿ ಆಯಿತು. ಬಾಬಾರವರ ಮೇಲೆ ಎಲ್ಲಾ ಭಾರವನ್ನು ಹಾಕಿ ಯಾವ ಔಷಧಿಯನ್ನೂ ತೆಗೆದುಕೊಳ್ಳಲಿಲ್ಲ ಅಥವಾ ಔಷದೋಪಚಾರ ಮಾಡಿಕೊಳ್ಳಲಿಲ್ಲ. ಬಹಳ ಹಿಂಸೆಯಾಯಿತು. ॥121॥ ಮಹಾಜನಿಗೆ ಸಾಯಿಯ ಸರ್ವಾಂತರ್ಯಾಮಿತ್ವದ ಅರಿವಿತ್ತು, ಆದ್ದರಿಂದ ತನ್ನ ಕಷ್ಟಗಳನ್ನು ಸಾಯಿಗೆ ವಿವರಿಸಲಿಲ್ಲ. ॥122॥ ಅವರಿಗೆ ಮನಸ್ಸು ಉಂಟಾದಾಗ ತಮಗೆ ತಾವೇ ಸ್ವತಃ ಉಪಶಮನ ನೀಡುತ್ತಾರೆ. ಈ ರೀತಿಯ ಅನನ್ಯ ಭಕ್ತಿಯಿಂದ ಯಾತನೆಯನ್ನು ಸಹಿಸಿಕೊಂಡನು. ॥123॥ ಯಾವ ದುಃಖವು ವಿಧಿ ಬರಹದಲ್ಲಿರುವುದೋ ಅದನ್ನು ಅನುಭವಿಸಲೇ ಬೇಕಾಗುತ್ತದೆ. ಆದರೆ ಪೂಜಾ ವಿಧಿಗಳಲ್ಲಿ ಯಾವುದೇ ತಡೆ ಉಂಟಾಗಬಾರದು. ಇದೇ ಕಾಕಾನ ಪ್ರತಿನಿತ್ಯದ ತೀವ್ರವಾದ ಇಚ್ಛೆಯಾಗಿತ್ತು. ॥124॥ ಅನಂತರ ಅವನಿಗೆ ಬಾಯಿಲೆ ಹೆಚ್ಚಾಗಿ ಅನೇಕ ಸಲ

ಬೇಧಿಯಾಗುತ್ತ ಅವನ ಅಧೀನ ತಪ್ಪಿತು. ಆಗ ಆರತಿ ಮತ್ತು ಸೇವೆಯಲ್ಲಿ ಯಾವುದೇ ತಡೆ ಉಂಟಾಗಬಾರದೆನ್ನುವುದಕ್ಕಾಗಿ ಏನು ಮಾಡುವನೆಂಬುದನ್ನು ನೋಡೋಣ. ॥125॥ ಅವನು ಒಂದು ತಾಮ್ರದ ಪಾತ್ರೆಯಲ್ಲಿ ನೀರನ್ನು ತುಂಬಿಸಿ ಕತ್ತಲೆಯಲ್ಲಿಯೂ ಕೈಗೆ ಸಿಗುವಂತೆ ಮಸೀದಿಯ ಮೂಲೆಯಲ್ಲಿ ಇಟ್ಟನು. ॥126॥ ಅವನು ಬಾಬಾರವರ ಹತ್ತಿರ ಕುಳಿತಿರುತ್ತಿದ್ದನು. ಅವರ ಕಾಲುಗಳನ್ನು ಒತ್ತುವುದು, ಆರತಿಯ ಸಮಯದಲ್ಲಿ ಯಾವಾಗಲೂ ಕುಳಿತಿರುವುದು ಅವನ ದಿನಚರಿಯೇ ಆಯಿತು. ॥127॥ ಹೊಟ್ಟೆಯಲ್ಲಿ ನೋವುಂಟಾದಾಗಲೆಲ್ಲಾ ನೀರಿನ ತಂಬಿಗೆ ಕೈಗೆ ಸಿಗುವಂತಿದ್ದು ಅವನು ಹತ್ತಿರದ ಏಕಾಂತ ಸ್ಥಳಕ್ಕೆ ಹೋಗಿ ಬಾಧೆ ತೀರಿಸಿ ಹಿಂತಿರುಗುತ್ತಿದ್ದನು. ॥128॥ ಅದು ಹಾಗಿರಲಿ, ನೆಲಹಾಸು ಹಾಕಲು ಬಾಬಾರವರ ಅನುಮತಿ ಬೇಡಿದಾಗ ತಾತ್ಯಾನಿಗೆ ಅನುಮತಿ ಕೊಟ್ಟರು. ಅನಂತರ ಅವರು ಅವನಿಗೆ ಏನು ಹೇಳಿದರೆಂಬುದನ್ನು ಕೇಳಿರಿ. ॥129॥ "ನಾನು ಲೇಂಡಿಗೆ ಹೋಗುತ್ತಿದ್ದೇನೆ, ನಾನು ಲೇಂಡಿಯಿಂದ ಹಿಂತಿರುಗಿದಾಗ ನೀವು ನೆಲಹಾಸು ಹಾಕುವ ಕೆಲಸವನ್ನು ಪ್ರಾರಂಭಿಸಬಹುದು." ॥130॥ ಅನಂತರ ಬಾಬಾ ಹಿಂತಿರುಗಿದರು ಮತ್ತು ಆಸನದ ಮೇಲೆ ಕುಳಿತರು. ಕಾಕಾ ಅದೇ ಸಮಯಕ್ಕೆ ಬಂದನು. ಮತ್ತು ಬಾಬಾರವರ ಕಾಲುಗಳನ್ನು ಒತ್ತಲು ಪ್ರಾರಂಭಿಸಿದನು. ॥131॥ ಬೊಂಬಾಯಿಯ ಭಕ್ತರು ಟಾಂಗಾದಲ್ಲಿ ಬಂದರು. ಕೋಪರಗಾಂವ್‌ವರೆಗೆ ಬಂದು ನಿಂತ ಟ್ರೈನಲ್ಲಿ ಬಂದರು. ಪೂಜೆಗಾಗಿ ಎಲ್ಲಾ ತಯಾರಿ ನಡೆಸಿಕೊಂಡು ಮೆಟ್ಟಿಲುಗಳವರೆಗೆ ಬಂದು ಬಾಬಾರವರಿಗೆ ನಮಸ್ಕರಿಸಿದರು. ॥132॥ ಬೇರೆಯವರೆಲ್ಲರ ಜೊತೆಯಲ್ಲಿ ಅಂಧೇರಿಯಿಂದ ಪಾಟೀಲನು ಅಕ್ಕಿ, ಹೂವು, ಮತ್ತಿತರೆ ಪೂಜಾ ಸಾಮಾನುಗಳ ಸಹಿತ ಬಂದು ಮುಂದಿನ ಅಪ್ಪಣೆಗಾಗಿ ಕಾದುಕುಳಿತನು. ॥133॥ ಆ ಸಮಯದಲ್ಲಿ ಅಂಗಳದ ಕೆಳಭಾಗದಲ್ಲಿ ರಥವನ್ನಿಡುತ್ತಿದ್ದ ಜಾಗದಲ್ಲಿ, ಗುದ್ದಲಿಯ ಮೊದಲ ಏಟು ಬೀಳುವ ಮೂಲಕ ಅಂಗಳದ ನೆಲಹಾಸಿನ ಕೆಲಸ ಆರಂಭವಾಯಿತು. ॥134॥ ಆ ಶಬ್ದ ಕಿವಿಗೆ ಬೀಳುತ್ತಲೇ, ಬಾಬಾರವರು ವಿಚಿತ್ರವಾಗಿ ಕೂಗುತ್ತ ಕ್ಷಣಮಾತ್ರದಲ್ಲಿ ನರಸಿಂಹನಾಗಿ ಬದಲಾದರು. ಅವರ ಕಣ್ಣುಗಳು ಕೆಂಪಾಗಿ ಉರಿಯಲು ಪ್ರಾರಂಭಿಸಿದವು. ॥135॥ "ಯಾರದು ಹಾರೆಯಿಂದ ಅಗೆಯುತ್ತಿರುವವರು? ಅವನ ಬೆನ್ನನ್ನು ನಾನು ಮುರಿಯುತ್ತೇನೆ." ಈ ರೀತಿ ಹೇಳುತ್ತ ಅವರು ಸಟಕಾವನ್ನು ಕೈಗೆತ್ತಿಕೊಂಡರು. ಅಲ್ಲಿದ್ದವರೆಲ್ಲರೂ ಭೀತಿಯಿಂದ ನಡುಗಿದರು. ॥136॥ ಕೆಲಸಗಾರರು ಹಾರೆಗಳನ್ನು ಎಸೆದು ಓಡಿಹೋದರು. ಎಲ್ಲರೂ ಅಲ್ಲಿ ಇಲ್ಲಿ ಓಡಿದರು. ಕಾಕಾ ಸಹ ಭಯಭೀತನಾದನು. ಆ ಕ್ಷಣದಲ್ಲಿ ಬಾಬಾರವರು ಅವನ ಕೈಯನ್ನು ಹಿಡಿದುಕೊಂಡರು. ॥137॥ ಮತ್ತು ಹೇಳಿದರು: "ನೀನು ಎಲ್ಲಿಗೆ ಹೋಗುವೆ? ಕುಳಿತುಕೋ." ಅದೇ ಕ್ಷಣದಲ್ಲಿ ತಾತ್ಯಾ ಮತ್ತು ಲಕ್ಷ್ಮಿ ಅಲ್ಲಿಗೆ ಬಂದರು. ಅವರ ಮೇಲೂ ಮನಸ್ಸಿಗೆ ಬಂದಷ್ಟು ಬೈಗಳ ಸುರಿಮಳೆ ಸುರಿಸಿದರು. ॥138॥ ಅಂಗಳದ ಹೊರಗಿದ್ದ ಜನರೂ ಬೈಸಿಕೊಂಡರು. ಆಮೇ ಅವರು ಅಲ್ಲಿ ಬಿದ್ದಿದ್ದ ಒಂದು ಚೀಲದಲ್ಲಿದ್ದ ಹುರಿದ ಕಡಲೆಕಾಯಿಗಳನ್ನು ಕೈಗೆತ್ತಿಕೊಂಡರು. ॥139॥ ಅದು ಅಲ್ಲಿದ್ದವರ್ಯಾರದೋ ಆಗಿದ್ದು, ಬಾಬಾರವರು ಕೋಪದಲ್ಲಿದ್ದಾಗ ಅಚೆ

ಈಚೆ ಓಡಿದಾಗ ಮಸೀದಿಯಲ್ಲಿ ಬಿದ್ದು ಹೋಗಿತ್ತು. ॥140॥ ಸುಮಾರು ಒಂದು ಸೇರಿನಷ್ಟು ಬೀಜಗಳು ಇದ್ದುವು. ಒಂದು ಹಿಡಿಯಷ್ಟು ಬೀಜಗಳನ್ನು ತೆಗೆದು ಎರಡೂ ಹಸ್ತಗಳಿಂದ ಉಜ್ಜಿ ಅದರ ಮೇಲೆ ಊದಿ ಶುಚಿಮಾಡಿದರು. ॥141॥ ಅನಂತರ ಅವರು ಸಿಪ್ಪೆ ತೆಗೆದ ಬೀಜಗಳನ್ನು ಮಹಾಜನಿಗೆ ತಿನ್ನಿಸಿದರು. ಒಂದು ಕಡೆ ಬೈಗಳ ಮಳೆ ಸುರಿಸುತ್ತ ಮತ್ತೊಂದು ಕಡೆಯಲ್ಲಿ ಬೀಜಗಳನ್ನು ಶುಚಿಮಾಡುತ್ತಲೇ ಹೋದರು. ॥142॥ "ಇವುಗಳನ್ನು ತಿನ್ನು, ಇವುಗಳನ್ನು ತಿನ್ನು" ಎಂದು ಅವರು ಹೇಳಿದರು. ಸಿಪ್ಪೆ ತೆಗೆದ ಬೀಜಗಳನ್ನು ಅಂಗೈಯಲ್ಲಿ ಹಿಡಿದರು. ಅವರೂ ಸಹ ಕೆಲವನ್ನು ತಾವೇ ತಿಂದರು. ಈ ರೀತಿ ಚೀಲವನ್ನು ಖಾಲಿಮಾಡಿದರು. ॥143॥ ಬೀಜಗಳು ಮುಗಿದ ಮೇಲೆ ಅವರು ಹೇಳಿದರು. "ಸ್ವಲ್ಪ ನೀರು ತೆಗೆದುಕೊಂಡು ಬಾ. ನನಗೆ ಬಾಯಾರಿಕೆ ಆಗಿದೆ." ಕಾಕಾ ಒಂದು ಪಾತ್ರೆಯಲ್ಲಿ ನೀರು ತುಂಬಿಸಿ ತಂದನು. ಅವರು ಸ್ವಲ್ಪ ಕುಡಿದು ಉಳಿದುದನ್ನು ಅವನಿಗೆ ಕುಡಿಯಲು ಹೇಳಿದರು. ॥144॥ ಕಾಕಾ ಕುಡಿಯುತ್ತಿದ್ದಾಗ ಅವರು ಹೇಳಿದರು, "ಹೋಗು, ನಿನ್ನ ನರಳುವಿಕೆ ನಿಂತಿತು." ಅವರು ಮತ್ತೆ ಹೇಳಿದರು. "ಆ ಅನಿಷ್ಟ ಬ್ರಾಹ್ಮಣರು ಎಲ್ಲಿದ್ದಾರೆ, ಹೋಗು ಅವರನ್ನು ಕರೆದುಕೊಂಡು ಬಾ." ॥145॥ ಅದು ಹಾಗಿರಲಿ, ಗುಂಪು ಮತ್ತೆ ಸೇರಿತು. ಮಸೀದಿಯು ಮೊದಲಿನಂತೆ ತುಂಬಿಹೋಯಿತು. ನೆಲಹಾಸು ಹಾಕುವ ಕೆಲಸ ಮತ್ತೆ ಪ್ರಾರಂಭವಾಯಿತು. ಕಾಕಾನ ಬೇಧಿ ನಿಂತುಹೋಯಿತು. ॥146॥ ಬೇಧಿಗೆ ಇದೆಂತಹ ಔಷಧ? ನಿಜವಾಗಿಯೂ ಸಂತರ ಮಾತುಗಳೇ ಔಷಧವು. ಯಾರು ಪ್ರಸಾದವೆಂದು ಸ್ವೀಕರಿಸುತ್ತಾರೋ ಅವರ ಅವಶ್ಯಕತೆಗಳು ಏನೂ ಇರುವುದಿಲ್ಲ. ॥147॥ ಹರದ ಎಂಬ ಊರಿನಿಂದ ಬಂದ ಗೃಹಸ್ಥನೊಬ್ಬನಿಗೆ ಹೊಟ್ಟೆಯಲ್ಲಿ ತೀವ್ರವಾದ ನೋವು ಇತ್ತು. ಕಳೆದ 14 ವರ್ಷಗಳಿಂದ ನರಳುತ್ತಿದ್ದನು. ಅವನು ಎಲ್ಲಾ ತರಹದ ಚಿಕಿತ್ಸೆಗಳನ್ನೂ ಮಾಡಿಸಿದ್ದನು. ॥148॥ ಅವನ ಹೆಸರು ದತ್ತೋಪಂತ, ಸಾಯಿಯ ಮಹಿಮೆಗಳನ್ನು ಮತ್ತು ಶಿರಡಿಯ ಮಹಾನ್‌ಸಂತನ ದರ್ಶನ ಮಾತ್ರದಿಂದಲೇ ಎಲ್ಲಾ ಕಷ್ಟಗಳಿಗೂ ಪರಿಹಾರ ಸಿಗುವುದೆಂದು ಬೇರೆಯವರ ಬಾಯಿಂದ ಕೇಳಿದ್ದನು. ॥149॥ ಅಂತಹ ಕೀರ್ತಿಯನ್ನು ಕೇಳಿ ಶಿರಡಿಗೆ ಬಂದನು. ತನ್ನ ತಲೆಯನ್ನು ಸಾಯಿ ಚರಣಗಳಲ್ಲಿಟ್ಟು ಕೃಪೆ ಮಾಡೆಂದು ಬೇಡಿದನು. ॥150॥ "ಬಾಬಾ, ಹದಿನಾಲ್ಕು ವರ್ಷಗಳು ಕಳೆದಿವೆ. ಹೊಟ್ಟೆಯಲ್ಲಿನ ಚುಚ್ಚುವ ನೋವು ಮುಂದುವರೆದಿದೆ. ಇಲ್ಲಿಗೆ ಸಾಕು. ಇದು ಸಹಿಸಲಸಾಧ್ಯವಾಗಿದೆ. ಅದನ್ನು ತಡೆಯುವ ಶಕ್ತಿ ನನ್ನಲ್ಲಿಲ್ಲ. ॥151॥ "ನಾನು ಎಂದಿಗೂ ನಂಬಿಕೆಗೆ ದ್ರೋಹ ಮಾಡಿಲ್ಲ. ನನ್ನ ತಂದೆತಾಯಿಯರಿಗೆ ಅಗೌರವವನ್ನು ತೋರಿಸಿಲ್ಲ. ನನ್ನ ಹಿಂದಿನ ಜನ್ಮದ ಕರ್ಮಫಲಗಳಿಂದ ಈ ಜನ್ಮದಲ್ಲಿ ದುಃಖವನ್ನು ಅನುಭವಿಸುತ್ತಿರುವೆ. ಆ ಕರ್ಮಗಳು ಯಾವುವೆಂದೂ ತಿಳಿದಿಲ್ಲ. ॥152॥ ಕೇವಲ ಒಬ್ಬ ಸಂತರ ದಯಾದೃಷ್ಟಿ, ಪ್ರಸಾದ ಅಥವಾ ಆಶೀರ್ವಾದ ಮಾತ್ರವೇ ಈ ರೋಗವನ್ನು ದೂರಮಾಡಬಹುದು. ಅದಕ್ಕಿಂತ ಹೆಚ್ಚು ಚಮತ್ಕಾರಿಯಾಗಿರುವುದು ಮತ್ತೊಂದಿಲ್ಲ." ॥153॥ ಅದು ದತ್ತೋಪಂತನ ಅನುಭವ. ಬಾಬಾರವರು ಅವನ ತಲೆಯಮೇಲೆ ಕೈ ಇಡುತ್ತಲೇ ಮತ್ತು ದತ್ತೋಪಂತನು

ವಿಭೂತಿಯನ್ನು ಪ್ರಸಾದವಾಗಿ ಸ್ವೀಕರಿಸಿ ಆಶೀರ್ವಾದ ಪಡೆದ ಕೂಡಲೇ ಹೊಟ್ಟೆನೋವು ಗುಣವಾಯಿತು. ॥154॥ ಮಹಾರಾಜರು ಅವನನ್ನು ಕೆಲವು ದಿನಗಳು ಅಲ್ಲಿಯೇ ನಿಲ್ಲುವಂತೆ ಮಾಡಿದರು. ನಿಧಾನವಾಗಿ ಹೊಟ್ಟೆಯಲ್ಲಿ ಚುಚ್ಚುವ ನೋವು[7] ಒಟ್ಟಾರೆ ಮಾಯವಾಯಿತು. ॥155॥ ಅಂತಹ ಮಹಾನ್ ಸಂತರು ಸಾಯಿ. ಅವರ ಶಕ್ತಿಯನ್ನು ಹೇಗೆ ತಾನೇ ವರ್ಣಿಸಲಿ? ಅವರ ಸಹಜ ಸ್ವಭಾವವೇ ಇತರರನ್ನು ಉಪಕೃತರನ್ನಾಗಿ ಮಾಡುವುದು ಮತ್ತು ಸಕಲ ಜೀವಿಗಳನ್ನು ಪ್ರೀತಿಸುವುದು. ॥156॥ ಅವರ ಜೀವನವನ್ನು ಮಾತುಗಳಲ್ಲಿ ಹೊಗುತ್ತಾ ಹೋದರೆ ಅವರ ಕಾರ್ಯಗಳು ಒಂದಕ್ಕಿಂತ ಮತ್ತೊಂದು ಉತ್ತಮವಾಗಿವೆ. ಈಗ ನನ್ನ ಮೊದಲಿನ ಭೀಮಾಜಿಯ ಕಥನದ ಎಳೆಯನ್ನು ಎತ್ತಿಕೊಳ್ಳಲು ಹಿಂತಿರುಗೋಣ. ॥157॥ ಅದು ಹಾಗಿರಲಿ. ಬಾಬಾರವರು ಉದಿ ಕೇಳಿದರು. ಸ್ವಲ್ಪವನ್ನು ಭೀಮಾಜಿಗೆ ಕೊಟ್ಟರು. ಸ್ವಲ್ಪವನ್ನು ಹಣೆಯ ಮೇಲೆ ಉಜ್ಜಿ ತಮ್ಮ ಕೈಯನ್ನು ಆತನ ಹಣೆಯ ಮೇಲಿಟ್ಟರು. ॥158॥ ಅವನು ವಸತಿಗೃಹಕ್ಕೆ ತೆರಳಲು ಆಜ್ಞಾಪಿಸಲಾಯಿತು. ಪಾಟೀಲನು ನಡೆಯಲು ಪ್ರಾರಂಭಿಸಿ ಗಾಡಿಯವರೆಗೆ ನಡೆದುಕೊಂಡೇ ಹೋದನು. ॥159॥ ಅಲ್ಲಿಂದ ಅವನು ಈ ಹಿಂದೆಯೇ ನಿಗದಿಪಡಿಸಿದ್ದ ಜಾಗಕ್ಕೆ ಹೋದನು. ಜಾಗ ಸಣ್ಣದಾಗಿದ್ದರೂ ಬಾಬಾರವರ ಸಲಹೆಯಂತೆ ಆಗಿದ್ದುದರಿಂದ ಅದು ಬಹಳ ಮುಖ್ಯವಾಗಿತ್ತು. ॥160॥ ನೆಲವನ್ನು ಮರದ ಕೋಲಿನಿಂದ ನಯವಾಗಿಟ್ಟಿ ಸಮತಟ್ಟಾಗಿ ಮಾಡಲಾಗಿತ್ತು. ಆದ್ದರಿಂದ ಅದು ಒದ್ದೆಯಾಗಿತ್ತು. ಆದರೂ ಸಹ ಅವನು ಬಾಬಾರವರ ಆಜ್ಞೆಯನ್ನು ಪರಿಪಾಲಿಸುತ್ತ ಅಲ್ಲಿಯೇ ಉಳಿದನು. ॥161॥ ಹಳ್ಳಿಯಲ್ಲಿ ಬೇಕಾದರೆ ಒಣಗಿರುವ ಜಾಗ ಸಿಗುತ್ತಿತ್ತು. ಭೀಮಾಜಿಗೆ ಅಲ್ಲಿ ಅನೇಕ ಪರಿಚಿತರಿದ್ದರು. ಆದರೆ ಬಾಬಾರವರು ನಿರ್ದಿಷ್ಟವಾಗಿ ಜಾಗ ಹೇಳಿದ್ದುದರಿಂದ ಅವನು ಬೇರೆಲ್ಲಿಯೂ ಹೋಗಲಿಲ್ಲ. ॥162॥ ನೆಲದ ಮೇಲೆ ಎರಡು ಗೋಣಿಚೀಲಗಳನ್ನು ಹಾಕಿ, ಅದರ ಮೇಲೆ ತಡ್ಡಾಸಿಗೆಯನ್ನು ಹಾಸಿಕೊಂಡನು. ಪಾಟೀಲನು ಶಾಂತವಾಗಿ ನಿದ್ರಿಸಿದನು. ॥163॥ ಅದೇ ರಾತ್ರಿ ಈ ಘಟನೆ ನಡೆಯಿತು. ಭೀಮಾಜಿ ಒಂದು ಕನಸು ಕಂಡನು. ಅವನು ತನ್ನ ಬಾಲ್ಯದಲ್ಲಿ ಪರಿಚಿತನಾಗಿದ್ದ ಶಿಕ್ಷಕರೊಬ್ಬರನ್ನು ಕಂಡನು. ಮತ್ತು ಅವರು ಅವನನ್ನು ಚೆನ್ನಾಗಿ ಹೊಡೆದರು. ॥164॥ ಅವರ ಕೈಯಲ್ಲಿ ಒಂದು ಬೆತ್ತ ಇತ್ತು. ಒಂದು ಪದ್ಯವನ್ನು ಬಾಯಿಪಾಠ ಮಾಡಿಸಲು ಬೆನ್ನಿನಲ್ಲಿ ಚರ್ಮ ಕಿತ್ತು ಬರುವ ಹಾಗೆ ಬೆತ್ತದಿಂದ ಹೊಡೆದರು. ವಿದ್ಯಾರ್ಥಿಯ ಸ್ಥಿತಿ ಚಿಂತಾಜನಕವಾಯಿತು. ॥165॥ ಆ ಪದ್ಯವಾದರೂ ಯಾವುದು? ಶ್ರೋತೃಗಳಿಗೆ ತಿಳಿದುಕೊಳ್ಳುವ ಕುತೂಹಲ ಇರಬಹುದು. ಆದ್ದರಿಂದ ಆ ಪದ್ಯವನ್ನು ನಾನು ಕೇಳಿದ ಹಾಗೆ ಅಕ್ಷರಶಃ ಹೇಳುತ್ತೇನೆ. "ಅವಳು ನಿಜವಾದ ಆದರ್ಶಪತ್ನಿ ಎನಿಸುವಳು. ಅವಳು ಎಂದಾದರೂ ಅಪರಿಚಿತರ ಮನೆಗೆ ಕಾಲಿಟ್ಟಾಗ ಹಾವಿನ ಹೆಡೆ ತುಳಿದಂತೆ ಭಾವಿಸುತ್ತಾಳೆ. ಅವಳ ಮಾತುಗಳು ಜಿಪುಣನ ಆಸ್ತಿಯಷ್ಟೇ ವಿರಳ. ತನ್ನ ಪತಿ ಸುಖ ನೀಡಿದಾಗ ಅತ್ಯಂತ ಹರ್ಷಿತಳಾಗುತ್ತಾಳೆ. ಮನೆಯಲ್ಲಿ ಹಣವಿಲ್ಲದಿದ್ದರೂ ಸಹ ಹಾಗಿರುವಳು. ಅವಳು ತನ್ನ ಪತಿಯ ಇಚ್ಛೆಗಳನ್ನು ಯಾವುದೇ ಆತಂಕಪಡದೆ ನೆರವೇರಿಸುತ್ತಾಳೆ. ಇದು

ಪದ್ಯದ ಸಾರಾಂಶ. ॥166॥ ಆದರೆ, ಅವನ ಈ ಶಿಕ್ಷೆಗೆ ಕಾರಣ ತಿಳಿಯಲಿಲ್ಲ. ಅಧ್ಯಾಪಕನು ಬೆತ್ತವನ್ನು ಪಕ್ಕಕ್ಕೆ ಹಾಕಲಿಲ್ಲ. ಕೋಪದಿಂದ ಕೆಂಪಾಗಿದ್ದನು ಮತ್ತು ಭಯಂಕರ ಕಠಿಣ ಮನಸ್ಸು ಹೊಂದಿದ್ದನು. ॥167॥ ಅನಂತರ ಅವನಿಗೆ ಮತ್ತೊಂದು ಕನಸು ಬಿತ್ತು, ಅದು ಮೊದಲಿಗಿಂತ ವಿಚಿತ್ರವಾಗಿತ್ತು. ಒಬ್ಬ ಅಪರಿಚಿತ ವ್ಯಕ್ತಿಯು ಬಂದನು. ಒತ್ತಾಯ ಪೂರ್ವಕವಾಗಿ ಅವನ ಎದೆಯ ಮೇಲೆ ಕುಳಿತುಕೊಂಡನು. ॥168॥ ಅವನು ಇವನ ಎದೆಯನ್ನು ಬೀಸುವ ಕಲ್ಲಾಗಿ ಮಾಡಿ ಮತ್ತೊಂದು ಕಲ್ಲನ್ನು ತೆಗೆದುಕೊಂಡು ಉರುಳು ಗುಂಡಾಗಿ ಮಾಡಿ ಬೀಸಲು ಪ್ರಾರಂಭಿಸಿದನು. ಭೀಮಾಜಿಗೆ ಉಸಿರು ಕಟ್ಟಿದಂತಾಗಿ ಸ್ವರ್ಗದ ಕಡೆ ತೆರಳುತ್ತಿರುವ ಅನುಭವವಾಯಿತು. ॥169॥ ಕೊನೆಗೆ ಕನಸು ಮುಗಿಯಿತು. ಅವನು ಸ್ವಲ್ಪ ಮಟ್ಟಿಗೆ ಹಾಯಾಗಿ ನಿದ್ರಿಸಿದನು. ಸೂರ್ಯನು ಉದಯಿಸಿದನು. ಪಾಟೀಲನು ಎಚ್ಚರಗೊಂಡನು. ॥170॥ ಅವನೂ ಸಹ ಹಿಂದೆಂದೂ ಅನುಭವಿಸದೇ ಇದ್ದ ಚೇತನಾ ಶಕ್ತಿಯನ್ನು ಅನುಭವಿಸಿದನು. ರೋಗದ ವಿಷಯವನ್ನು ಸಂಪೂರ್ಣವಾಗಿ ಮರೆತನು. ಯಾರಿಗೆ ಬೆತ್ತದಿಂದ ಹೊಡೆಯುವ ಅಥವಾ ಬೀಸುವ ಕಲ್ಲಿಟ್ಟು ಬೀಸುವ ಚಿಹ್ನೆಗಳನ್ನು ನೆನಪಿಸಿಕೊಳ್ಳಲು ಸಾಧ್ಯ? ॥171॥ ಜನರು ಕನಸುಗಳನ್ನು ಅಸತ್ಯವೆಂದು ಹೇಳುತ್ತಾರೆ. ಆದರೆ ಕೆಲವು ಸಲ ಕೆಲವರು ಅದಕ್ಕೆ ವಿರುದ್ಧವಾದ ಅನುಭವಗಳನ್ನೂ ಪಡೆಯುತ್ತಾರೆ. ಅದೇ ದಿನ ಪಾಟೀಲನು ಸಂಪೂರ್ಣವಾಗಿ ಗುಣಹೊಂದಿದನು ಮತ್ತು ಅವನ ದುಃಖ ಪರಿಹಾರವಾಯಿತು. ॥172॥ ಪಾಟೀಲನು ಬಹಳ ಸಂತೋಷವಾಗಿದ್ದನು. ಅವನಿಗೆ ಒಂದು ಹೊಸ ಜನ್ಮ ತಳೆದ ಅನುಭವವಾಯಿತು. ಅನಂತರ ಅವನು ನಿಧಾನವಾಗಿ ಬಾಬಾರವರ ದರ್ಶನಕ್ಕಾಗಿ ಹೋಗತೊಡಗಿದನು. ॥173॥ ಬಾಬಾರವರ ಮುಖಚಂದ್ರವನ್ನು ನೋಡುತ್ತಾ, ಆನಂದ ಸಾಗರ ಉಕ್ಕಿತ್ತು, ಅವನು ಭಾವ ಪರವಶನಾಗಿ ಆನಂದದಲ್ಲಿ ಉನ್ಮತ್ತನಾಗಿ ಮೂರ್ಛೆಹೋದನು. ॥174॥ ಅವನ ಮುಖದಲ್ಲಿ ಆನಂದದ ಭಾಷ್ಪಗಳು ಸುರಿಯುತ್ತಿರಲು ತನ್ನ ಹಣೆಯನ್ನು ಬಾಬಾರವರ ಚರಣಗಳ ಮೇಲಿಟ್ಟನು. ಅವನು ಅನುಭವಿಸಿದ ಹೊಡೆತ ಮತ್ತು ಬೀಸುವಿಕೆಯ ನರಳಾಟದ ನಂತರದ ಪರಿಣಾಮಗಳು ಅದೆಷ್ಟೋ ಆನಂದಕರವಾಗಿದ್ದವು? ॥175॥ "ನನ್ನಂತಹ ಒಬ್ಬ ಕ್ಷುಲ್ಲಕ ಕ್ರಿಮಿಯು ಎಂದಾದರೂ ನಿಮ್ಮ ಋಣವನ್ನು ತೀರಿಸಲಾಗುವುದೇ? ಅದು ಅಸಾಧ್ಯವೆಂದು ನನಗೆ ಗೊತ್ತು. ಆದ್ದರಿಂದ ನಾನು ನನ್ನ ತಲೆಯನ್ನು ಮಾತ್ರ ನಿಮ್ಮ ಪಾದಗಳ ಮೇಲೆ ಇಡುತ್ತೇನೆ. ॥176॥ "ಕೇವಲ ಈ ರೀತಿಯಲ್ಲಿ ಮಾತ್ರ ಋಣ ತೀರಿಸಬಲ್ಲೆ. ಬೇರೆ ಇನ್ಯಾವ ಮಾರ್ಗವೂ ಈ ನಿನ್ನ ಪವಾಡಗಳನ್ನು ಊಹಿಸಲಾರವು ಮತ್ತು ಖಂಡಿಸಲಾಗವು, ಓ ಬಾಬಾ. ॥177॥ ಪಾಟೀಲನು ಈ ರೀತಿ ಸ್ತುತಿ ಮಾಡುತ್ತಾ ಒಂದು ತಿಂಗಳು ಕಾಲ ಅಲ್ಲಿಯೇ ಉಳಿದನು. ನಾನಾನ ಉಪಕಾರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತಿದ್ದನು. ಅವನು ಸಂಪೂರ್ಣವಾಗಿ ಗುಣಮುಖನಾಗಿ ತೃಪ್ತಿಯಿಂದ ಹಿಂತಿರುಗಿದನು. ॥178॥ ಈ ರೀತಿ ಅವನು ಭಕ್ತಿ ಮತ್ತು ಶ್ರದ್ಧೆಗಳಿಂದ ಸಂತೃಪ್ತನಾಗಿದ್ದನು. ಸಾಯಿಯಲ್ಲಿ ಕೃತಜ್ಞತಾ ಭಾವವಿರಿಸಿ ಶಿರಡಿಗೆ ಆಗಾಗ ಬರುತ್ತಿದ್ದನು. ॥179॥ ಕೇವಲ

ಎರಡು ಕೈಗಳು ಮತ್ತು ತಲೆ ಇದ್ದರೆ ಸಾಕು, ಸಾಯಿನಾಥನಿಗೆ ಕೃತಜ್ಞತೆ ತೋರಿಸಲು. ಅದನ್ನು ಸ್ಥಿತಪ್ರಜ್ಞನಾಗಿ ಭಕ್ತಿಯಿಂದ ಮಾಡಿದ್ದಲ್ಲಿ ಬೇರೆಲ್ಲವನ್ನೂ ಮೀರಿಸುತ್ತದೆ. ॥180॥ ಯಾರಾದರೂ ಕಷ್ಟದಲ್ಲಿದ್ದಾಗ ಸತ್ಯನಾರಾಯಣ ಪೂಜೆಯನ್ನು ಮಾಡಿದ್ದಲ್ಲಿ ಏನಾದರೂ ಆತಂಕ ಬರುವುದಿದ್ದಲ್ಲಿ ದೂರವಾಗುತ್ತದೆ. ಇಲ್ಲದಿದ್ದರೆ ಏನಾದರೂ ಒಳ್ಳೆಯದಾಗುತ್ತದೆ. ॥181॥ ನಂತರ ಪಾಟೀಲನು ಪ್ರತಿ ಗುರುವಾರ ಬೇಗನೇ ಎದ್ದು, ಸ್ನಾನ ಮಾಡಿ, ದಿನಚರಿಯನ್ನು ಮುಗಿಸಿ, ಸಾಯಿ ಸತ್ಯನಾರಾಯಣ ವ್ರತವನ್ನು ಮಾಡಲು ಪ್ರಾರಂಭಿಸಿದನು. ॥182॥ ಜನರು ಸತ್ಯನಾರಾಯಣ ಕಥೆಯನ್ನು ಓದಿದಾಗ ಪಾಟೀಲನು ದಾಸಗಣು ರಚಿಸಿದ "ಅರ್ವಾಚೀನ ಭಕ್ತಲೀಲಾಮೃತ", ಸಾಯಿಯ ಜೀವನದ ಮಹಿಮೆಗಳನ್ನು ಪ್ರೀತಿಯಿಂದ ಓದುತ್ತಿದ್ದನು. ॥183॥ ಈ ಪುಸ್ತಕದ 45 ಅಧ್ಯಾಯಗಳಲ್ಲಿ ದಾಸಗಣು ಅನೇಕ ಭಕ್ತರ ಜೀವನಗಳನ್ನು ವರ್ಣಿಸಿದ್ದಾನೆ. ಅವುಗಳಲ್ಲಿ ಕೆಲವು ಸಾಯಿನಾಥರಿಗೆ ಸಂಬಂಧಪಟ್ಟವು. ಅವೂ ಸಾಯಿಸತ್ಯನಾರಾಯಣ ಕಥೆಯಾದವು. ॥184॥ ಎಲ್ಲಾ ವ್ರತಗಳಲ್ಲಿ ಇದು ಅತ್ಯಂತ ಶ್ರೇಷ್ಠವಾದುದು. ಪಾಟೀಲನು ಈ ಮೂರು ಅಧ್ಯಾಯಗಳನ್ನು ಓದುತ್ತಿದ್ದನು. ಅದರಿಂದ ಅಪರಿಮಿತವಾದ ಸಂತೋಷ, ಆನಂದ ಅನುಭವಿಸುತ್ತಿದ್ದ. ॥185॥ ಪಾಟೀಲನು ತನ್ನ ಬಂಧುಗಳು, ಸೋದರರು, ಮತ್ತು ನೆರೆಹೊರೆಯವರನ್ನು ಸೇರಿಸುತ್ತಾ ಸಾಯಿಸತ್ಯನಾರಾಯಣವ್ರತವನ್ನು ನಿಯಮಿತವಾಗಿ ಬಹಳ ಸಂತೋಷದಿಂದ ಮಾಡುತ್ತಿದ್ದನು. ॥186॥ ನೈವೇದ್ಯವು ಅದೇ ರೀತಿಯ ಒಂದು ಮತ್ತು ಕಾಲು ಅಳತೆಯದ್ದು. ಉಳಿದ ವಿಧಿ ವಿಧಾನಗಳು ಅದೇ ರೀತಿ. ಒಂದು ಜಾಗದಲ್ಲಿ ನಾರಾಯಣ, ಮತ್ತೊಂದರಲ್ಲಿ ಸಾಯಿ. ಒಂದೇ ಒಂದು ಕ್ರಮವನ್ನೂ ತಪ್ಪುತ್ತಿರಲಿಲ್ಲ. ॥187॥ ಪಾಟೀಲನು ಒಂದು ಹೊಸ ವ್ರತವನ್ನು ಪ್ರಾರಂಭಿಸಿದನು. ಅದು ಪದ್ಧತಿಯಾಯಿತು. ಹಳ್ಳಿಯಲ್ಲಿ ಜನರು ಒಬ್ಬೊಬ್ಬರಾಗಿ ಸಾಯಿ ಸತ್ಯನಾರಾಯಣ ವ್ರತವನ್ನು ಆಚರಿಸಲು ಪ್ರಾರಂಭಿಸಿದರು. ॥188॥ ಇದು ಸಂತರ ರೀತಿ, ಅವರು ಕರುಣಾಮಯರು, ಕಾಲ ಕೂಡಿಬಂದಾಗ ತಮ್ಮ ಭಕ್ತರ ಲೌಕಿಕ ಬಂಧಗಳನ್ನು ಕೇವಲ ಅವರ ದರ್ಶನಮಾತ್ರದಿಂದ ಕಳಚಿ ಹಾಕುತ್ತಿದ್ದರು ಮತ್ತು ಅವರ ವಿಧಿಬರಹವನ್ನೂ ಬದಲಾಯಿಸುತ್ತಿದ್ದರು. ॥189॥ ಮುಂದಿನ ನಿರೂಪಣೆಯು ಸಂತಾನ ಫಲಕ್ಕಾಗಿ ಉತ್ಕಟವಾದ ಇಚ್ಛೆ ಉಳ್ಳವನಾದ ಒಬ್ಬ ವ್ಯಕ್ತಿಯ ಮತ್ತು ಸಂತರ ಅದ್ಭುತ ಮಹಿಮೆಯ ಬಗ್ಗೆ ತಿಳಿಸುತ್ತದೆ. ॥190॥ ನಾಂದೇಡ್ ಪಟ್ಟಣದ ನಿವಾಸಿಯೊಬ್ಬ ಪಾರ್ಸಿ ಶ್ರೀಮಂತನು ಬಾಬಾರವರ ಅನುಗ್ರಹದಿಂದ ಪುತ್ರ ಸಂತಾನ ಭಾಗ್ಯವನ್ನು ಪಡೆದನು. ॥191॥ ಬಾಬಾರವರು ಮೌಲವೀ ಸಾಹೇಬನು ಆ ಊರಿನ ಸಂತನೆಂದು ಸೂಚನೆ ಕೊಟ್ಟರು. ಆ ಪಾರ್ಸಿಯು ತುಂಬಿದ ಸಂತೋಷದಿಂದ ತನ್ನ ಊರಿಗೆ ಹಿಂತಿರುಗಿದನು. ॥192॥ ಅದೊಂದು ಅತ್ಯಂತ ಪ್ರೀತಿ ತುಂಬಿದ ಕಥೆ. ಶ್ರೋತೃಗಳು ಶಾಂತರಾಗಿ ಕೇಳಬೇಕು, ಆಗ ಮಾತ್ರ ಅವರು ಸಾಯಿಯ ಸರ್ವವ್ಯಾಪಕತ್ವವನ್ನು ಮತ್ತು ವಾತ್ಸಲ್ಯಭರಿತ ಸ್ವಭಾವವನ್ನು ಅರಿಯಬಲ್ಲರು. ॥193॥ ಹೇಮಾಡಪಂತನು ಸಾಯಿಗೆ ಶರಣಾಗುತ್ತಾನೆ. ಮತ್ತು ಎಲ್ಲಾ ಸಂತರಿಗೂ, ಮತ್ತು ಎಲ್ಲಾ ಶ್ರೋತೃಗಳಿಗೂ ಪ್ರಣಾಮ ಸಲ್ಲಿಸುತ್ತಾನೆ. ಮುಂದಿನ

ಅಧ್ಯಾಯದಲ್ಲಿ ನಾನು ಈಗಾಗಲೇ ಸೂಚಿಸಿರುವ ವಿಷಯದ ಬಗ್ಗೆ ಹೇಳುತ್ತೇನೆ; ಶ್ರದ್ಧೆಯಿಂದ ಆಲಿಸಿ. ॥194॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಭೀಮಾಜಿಯ ಕ್ಷಯರೋಗ ನಿವಾರಣೆ" ಎಂಬ ಹದಿಮೂರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:


1. ಪ್ರಾರ್ಥನೆ, ಆಸನ ನೀಡುವುದು, ಪಾದಪೂಜೆ, ನೀರನ್ನು ಅರ್ಪಿಸುವುದು, ಆಚಮನ, ಸ್ನಾನ, ವಸ್ತ್ರ, ಯಜ್ಞೋಪವೀತ ಧಾರಣೆ, ಗಂಧದ ಲೇಪನ, ಪುಷ್ಪ, ಅಗರಬತ್ತಿ, ನೈವೇದ್ಯ, ದೀಪ, ದಕ್ಷಿಣೆ, ಪ್ರದಕ್ಷಿಣೆ, ಮಂತ್ರಪುಷ್ಪಾಂಜಲಿ.
2. ಗಂಧದ ಲೇಪ, ಪುಷ್ಪ, ಊದುಬತ್ತಿ, ದೀಪ, ನೈವೇದ್ಯ, ಕರ್ಪೂರ, ಅಕ್ಷತೆ, ತೆಂಗಿನ ಕಾಯಿ.
3. ನಾರಾಯಣ ಗೋವಿಂದ ಚಂದೋರಕರ್ ಅಲಿಯಾಸ್ ನಾನಾ ಸಾಹೇಬ್.
4. ವಿಷ್ಣು ನರಸಿಂಹಾವತಾರ ತಾಳಿ ಹಿರಣ್ಯಕಶಿಪು ರಾಕ್ಷಸನನ್ನು ಸಂಹರಿಸಿದನು.
5. ಸುಮಾರು ಎರಡು ಕಿಲೋ ಗ್ರಾಂಗಳು.
6. ಒಮ್ಮೆ ಶಿರಡಿಯ ಮಾಧವ ರಾವ್ ದೇಶಪಾಂಡೆಗೆ ಮೂಲವ್ಯಾಧಿ (ಪೈಲ್ಸ್) ಯ ತೊಂದರೆ ಇತ್ತು, ಅವನು ಮಹಾರಾಜರಿಗೆ ಅದರ ಬಗ್ಗೆ ಹೇಳಿದನು. ಮಹಾರಾಜ್ ಹೇಳಿದರು, "ಮಧ್ಯಾಹ್ನ ನಾವು ಏನಾದರೂ ಔಷಧಿ ತೆಗೆದುಕೊಳ್ಳೋಣ." ಅದೇ ರೀತಿ ಮಹಾರಾಜರು ಸೋನಾಮುಖಿಯ ಕಷಾಯ ಮಾಡಿ ಮಾಧವ ರಾವ್‌ಗೆ ಕೊಟ್ಟರು ಅವನಿಗೆ ಪೂರ್ಣವಾಗಿ ಗುಣವಾಯಿತು. ಎರಡು ವರ್ಷಗಳ ನಂತರ ಅವನಿಗೆ ಅದೇ ತೊಂದರೆ ಮರುಕಳಿಸಿತು.

ಮಹಾರಾಜರು ಈ ಮೊದಲು ಕಷಾಯ ಕೊಟ್ಟಿದ್ದರಿಂದ ಮಾಧವರಾವ್ ತಾನೇ ಸ್ವತಃ ಮನೆಯಲ್ಲಿ ಕಷಾಯ ತಯಾರಿಸಿ ಕುಡಿದನು. ಅದರಿಂದ ಅವನಿಗೆ ಗುಣವಾಗಲಿಲ್ಲ. ರೋಗ ಮತ್ತಷ್ಟು ಉಲ್ಬಣಗೊಂಡಿತು. ಅನಂತರ ಮಹಾರಾಜ್‌ರ ಅನುಗ್ರಹಕ್ಕೆ ಧನ್ಯವಾದಗಳು.

ಅವನು ಗುಣಮುಖನಾದನು. ಒಟ್ಟಿನಲ್ಲಿ ರೋಗಕ್ಕೆ ಔಷಧ ಕೇವಲ ಮಹಾರಾಜ್‌ರವರ ಆಶೀರ್ವಾದ ಮತ್ತು ಅನುಗ್ರಹವಷ್ಟೇ.

7. ಕಾಕಾಮಹಾಜನಿಯ ಹಿರಿಯ ಸೋದರ ಗಂಗಾಧರ ಪಂತನು ಹೊಟ್ಟೆಶೂಲೆಯಿಂದ ಅನೇಕ ವರ್ಷಗಳ ಕಾಲ ನರಳಿದನು. ಪ್ರತಿವರ್ಷ ಬಹಳ ತೀವ್ರವಾಗಿ ನರಳಿದನು. ಮಹಾರಾಜ್‌ರ ಕೀರ್ತಿಯನ್ನು ಕೇಳಿ ಅವನು ಅಲ್ಲಿಗೆ ಹೋಗಿ ಮಹಾರಾಜ್‌ರಲ್ಲಿ ಹರಕೆ ಮಾಡಿಕೊಂಡನು. ಮಹಾರಾಜ್‌ರು ಅವನ ಹೊಟ್ಟೆಯನ್ನು ಮುಟ್ಟಿ ಕೇಳಿದರು, "ಇಲ್ಲಿ ನೋವಿದೆಯೇ?" ಗಂಗಾಧರಪಂತ್ ಹೌದೆಂದನು. ಮಹಾರಾಜ್ ಹೇಳಿದರು, "ಅಲ್ಲಾನು ಗುಣಪಡಿಸುವನು." ಅಲ್ಲಿಂದಾಚೆಗೆ ಹೊಟ್ಟೆಯ ನೋವು ಗಂಗಾಧರ ಪಂತನನ್ನು ಬಿಟ್ಟು ಹೋಯಿತು. ಮತ್ತೆಂದೂ ಮರುಕಳಿಸಲಿಲ್ಲ.

ಒಮ್ಮೆ ನಾನಾ ಸಾಹೇಬ್ ಚಂದೋರಕರ ಹೊಟ್ಟೆಯಲ್ಲಿ ತೀವ್ರವಾದ ನೋವಿನಿಂದ ನರಳುತ್ತಿದ್ದನು. ಅದು ಅದೆಷ್ಟು ತೀವ್ರವಾಗಿತ್ತೆಂದರೆ ಆ ದಿನ ಹಗಲೂ ರಾತ್ರಿ ಒಂದೇ ಸಮನೆ ಬಹಳ ನರಳುತ್ತಿದ್ದನು. ವೈದ್ಯರು ಎನಿಮಾ ಕೊಟ್ಟರೂ ಸಹ ಆರಾಮವಾಗಲಿಲ್ಲ. ತಡೆಯಲಾಗದೆ ಮಹಾರಾಜ್‌ರ ಹತ್ತಿರ ಹೋದನು. ಮಹಾರಾಜ್‌ರು ಅವನಿಗೆ ಬರ್ಫಿಯನ್ನು ಬೆಣ್ಣೆಯ ಜೊತೆ ಕಲಸಿ ತೆಗೆದುಕೊಳ್ಳಲು ಹೇಳಿದರು. ಮತ್ತು ಈ ಔಷಧಿಯಿಂದ ಅವನ ಹೊಟ್ಟೆನೋವು ಪೂರ್ಣವಾಗಿ ಮಾಯವಾಯಿತು.



# ಅಧ್ಯಾಯ – 14

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ರತನ್‌ಜೀಗೆ ಸಾಯಿಯ ಭೇಟಿ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸಾಯಿನಾಥನಿಗೆ ಜಯವಾಗಲಿ. ಸಂತಶ್ರೇಷ್ಠನಿಗೆ ಜಯವಾಗಲಿ. ದಯಾಸಾಗರನಿಗೆ ಜಯವಾಗಲಿ. ಗುಣವಂತನಿಗೆ ಜಯವಾಗಲಿ. ಬದಲಾಗದವನಿಗೆ ಮತ್ತು ಪುರುಷೋತ್ತಮನಿಗೆ ಜಯವಾಗಲಿ. ಅನಂತನೂ ಸರ್ವಾಂತರ್ಯಾಮಿಯೂ ಆದವನೇ, ॥1॥ ನಿಮ್ಮ ಭಕ್ತರ ಮೇಲಿರುವ ಅನಂತ ಕರುಣೆಯಿಂದ ಅವರಿಗರಿವಿಲ್ಲದೆಯೇ ಅವರನ್ನು ಕಾಯುವ, ಅವರನ್ನು ವಿವಿಧ ಸಂದರ್ಭಗಳಲ್ಲಿ ಭೇಟಿಮಾಡಿ ಅವರನ್ನು ಕಷ್ಟಗಳಿಂದ ರಕ್ಷಿಸುತ್ತಿರುವ, ॥2॥ ನೀವು ಭಕ್ತರ ಉದ್ಧಾರಕ್ಕಾಗಿಯೇ ಅವತರಿಸಿರುವಿರಿ. ಕಾಮರೂಪಿಗಳಾದ ನಿಶಾಚರರನ್ನು, ಪರಿಹರಿಸಲಾಗದ ವಾಸನೆಗಳನ್ನು ನಾಶಮಾಡುವೆ. ॥3॥ ಶುದ್ಧಭಕ್ತಿಯಿಂದ ನಿನ್ನ ದರ್ಶನಕ್ಕಾಗಿ ಬಂದವರು ಆತ್ಮತೃಪ್ತಿಯೆಂಬ ಅಮೃತವನ್ನು ಪಾನಮಾಡಲು ಸಾಧ್ಯವಾಯಿತು. ಮತ್ತು ಅವರು ಆತ್ಮಾನಂದದಲ್ಲಿ ಸಂತೋಷಪಡುತ್ತ ಪ್ರೀತಿ ಮತ್ತು ಆನಂದದಲ್ಲಿ ತಲ್ಲೀನರಾಗುತ್ತಾರೆ. ॥4॥ ಸಾಯಿಸಮರ್ಥರ ಪುಣ್ಯಸ್ವರೂಪ ಈ ರೀತಿ ಇದೆ. ನಾನಾದರೋ ಸಾಮಾನ್ಯ, ಬಡವ ಮತ್ತು ದೀನ ವ್ಯಕ್ತಿ, ನಾನು ವಿನೀತನಾಗಿ ಅವರ ಚರಣಗಳಲ್ಲಿ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ॥5॥ ಹಿಂದಿನ ಅಧ್ಯಾಯದಲ್ಲಿ ಮಲೇರಿಯಾ ರೋಗಿಯು ಒಂದು ಕರಿ ನಾಯಿಗೆ ಮೊಸರನ್ನ ತಿನ್ನಿಸುವುದರಿಂದ ಗುಣಹೊಂದಿದ ಕಥೆಯನ್ನು ಕೇಳಿದಿರಿ. ॥6॥ ಕಾಲರಾ, ಬೇಧಿ

ಮುಂತಾದ ಭಯಂಕರ ಕಾಯಿಲೆಗಳು ಕೇವಲ ನಿಮ್ಮ ತೋರುಬೆರಳಿನ ಸನ್ನೆಯಿಂದ ಅಥವಾ ಅಕ್ಕಿ ಗಂಜಿಯನ್ನು ಸೇವಿಸುವುದರಿಂದ ಅಥವಾ ಹುರಿದ ಕಡಲೆಕಾಯಿ ಬೀಜವನ್ನು ತಿನ್ನುವುದರಿಂದ ಗುಣವಾದುವು. ||7|| ಅದೇ ರೀತಿ, ಒಬ್ಬ ವ್ಯಕ್ತಿಯ ಹೊಟ್ಟೆ ನೋವು, ಮತ್ತೊಬ್ಬನ ಕಿವಿನೋವು ಮತ್ತು ಮೂರನೆಯವನ ಕ್ಷಯ ರೋಗ ಇವುಗಳು ಕೇವಲ ದರ್ಶನ ಮಾತ್ರದಿಂದಲೇ ಗುಣವಾದುವು. ||8|| ಭೀಮಾಜಿಯು ಶ್ರೀಸಾಯಿಯ ಅನುಗ್ರಹದಿಂದ ಸಂಪೂರ್ಣವಾಗಿ ಸಂತಸಹೊಂದಿದ್ದನು ಮತ್ತು ಅವನು ಸಾಯಿಗೆ ಚಿರಋಣಿಯಾಗಿದ್ದನು. ಅವರಿಗೆ ಪೂರ್ಣವಾಗಿ ಶರಣಾಗತನಾಗಿದ್ದನು. ||9|| ಅದೇ ರೀತಿಯಲ್ಲಿ ಈ ಮುಂದಿನ ಪ್ರಸಂಗವೂ ಅದ್ವಿತೀಯ, ಅತ್ಯಾಶ್ಚರ್ಯಕರ ಹಾಗೂ ಅತ್ಯದ್ಭುತವಾದದ್ದು. ಶ್ರೋತೃಗಳ ಕಾತರತೆಯನ್ನು ಅರಿತು ನಾನು ಅದನ್ನು ನಿರೂಪಿಸುವೆನು. ||10|| ಶ್ರೋತೃಗಳು ಗಮನಕೊಡದಿದ್ದಲ್ಲಿ ಭಾಷಣಕಾರನಿಗೆ ಸ್ಫೂರ್ತಿ ಹೇಗೆ ಬರುತ್ತದೆ? ನಿರೂಪಣೆಯು ಹೇಗೆ ಪರಾಕಾಷ್ಠೆಯನ್ನು ಮುಟ್ಟುತ್ತದೆ ಮತ್ತು ಹೇಗೆ ತಾನೇ ಸ್ವಾರಸ್ಯವಾಗಿರುತ್ತದೆ? ||11|| ಹೇಳುವವನು ಏನು ಮಾಡಲು ಸಾಧ್ಯ? ಅವನು ಪೂರ್ಣವಾಗಿ ಶ್ರೋತೃಗಳನ್ನು ಅವಲಂಬಿಸಿರುತ್ತಾನೆ. ಶ್ರೋತೃಗಳು ಕಥೆಯಲ್ಲಿಯೇ ಲೀನವಾಗಿ ಅದನ್ನು ಮನರಂಜನಾಕಾರಿಯನ್ನಾಗಿ ಮಾಡುತ್ತಾರೆ. ||12|| ಇದು ಒಬ್ಬ ಸಂತರ ಜೀವನ ಚರಿತ್ರೆಯಾಗಿರುವುದರಿಂದ ಸ್ವಾಭಾವಿಕವಾಗಿಯೇ ಎಲ್ಲ ರೀತಿಗಳಿಂದಲೂ ಅತ್ಯಂತ ಆಹ್ಲಾದದಾಯಕವಾಗಿರುತ್ತದೆ. ಸಂತರ ಆಹಾರ, ವಿಹಾರ, ಅವರ ದಿನನಿತ್ಯದ ವರ್ತನೆ ಮತ್ತು ಅವರ ಸ್ವಾಭಾವಿಕವಾದ ಟೀಕೆಗಳೂ ಸಹ ಮರುಳುಮಾಡುತ್ತವೆ. ||13|| ಇದು ಸಾಯಿಮಹಾರಾಜರ ಜೀವನ ಚರಿತ್ರೆಯಲ್ಲ. ಮುಗಿಲು ತನ್ನ ಭಕ್ತರಿಗಾಗಿ ಪ್ರೀತಿಯಿಂದ ಸಿಂಪಡಿಸಿದ ಬಿಂದುಗಳು. ಇವುಗಳನ್ನು ನೆನಪಿಸಿಕೊಳ್ಳುತ್ತ ಆನಂದವನ್ನು ಅನುಭವಿಸಬಹುದು. ||14|| ಮಹಾನ್ ಸಂತರ ಕಥೆಗಳು ಈ ರೀತಿ ಇವೆ. ಅವು ಲೌಕಿಕ ಜೀವನದ ಬಗ್ಗೆ ಹೇಳುತ್ತಲೇ ಓದುಗರನ್ನು ಮುಕ್ತಿಮಾರ್ಗಕ್ಕೆ ಕರೆದೊಯ್ಯುತ್ತವೆ. ಅವರ ಕಥೆಗಳು, ಏಕಕಾಲದಲ್ಲಿ ಲೌಕಿಕ ಹಾಗೂ ಆಧ್ಯಾತ್ಮಿಕ ಜೀವನಗಳ ಬಗ್ಗೆ ಹೇಳುತ್ತವೆ. ||15|| ಅವುಗಳ ಹಿಂದಿರುವ ಉದ್ದೇಶವೇ ಅದಾಗಿರುತ್ತದೆ. ಪ್ರತಿಯೊಬ್ಬನೂ ಸಂತೋಷದ ಜೀವನವನ್ನು ಅನುಭವಿಸುತ್ತಲೇ ಜನ್ಮದ ಉದ್ದೇಶದ ಸಾಫಲ್ಯತೆಯ ಬಗ್ಗೆ ಎಚ್ಚರದಿಂದಿರಬೇಕು. ||16|| ಯಾವಾಗ ಹಲವಾರು ಪುಣ್ಯಗಳು ಒಟ್ಟಾಗುವವೋ ಆಗ ಆತ್ಮವು ಅನಿರೀಕ್ಷಿತವಾಗಿ ಮಾನವ ಜನ್ಮವನ್ನು ಪಡೆಯುತ್ತದೆ. ಅದರ ಮೇಲೆ ಆಧ್ಯಾತ್ಮ ಜೀವನವನ್ನು ನಡೆಸಲು ಸಾಧ್ಯವಾದರಂತೂ ಅತ್ಯಂತ ಅದೃಷ್ಟಶಾಲಿಯು ಅವನೇ. ||17|| ಅಂತಹ ಜೀವನದಲ್ಲಿಯೂ ಸಫಲನಾಗದಿದ್ದಲ್ಲಿ ಅವನ ಜನ್ಮವೇ ನಿರರ್ಥಕ ಮತ್ತು ಭೂಮಿಗೆ ಭಾರ. ಅವನು ಸಾಮಾನ್ಯ ಪ್ರಾಣಿಗಿಂತ ಸಂತೋಷವಾಗಿರಬಲ್ಲನೇ? ||18|| ಒಬ್ಬ ಮಾನವನು ಊಟ, ನಿದ್ರೆ, ಭಯ ಮತ್ತು ಮೈಥುನ ಇವುಗಳಲ್ಲದೆ ಬೇರೆ ಏನೂ ತಿಳಿಯದವನು ಪಶುವಿಗಿಂತ ಮಿಗಿಲೇನೂ ಅಲ್ಲ. ಕೇವಲ ಬಾಲ ಮತ್ತು ಕೊಂಬು ಮಾತ್ರ ಇರುವುದಿಲ್ಲ. ||19|| ಮಾನವ ಜೀವನ ಅದೆಷ್ಟು ಮಹತ್ತಾದದ್ದು. ಕೇವಲ ಅದರಲ್ಲಿ ಮಾತ್ರ ದೇವರಲ್ಲಿ ಭಕ್ತಿಯನ್ನು

ಪಡೆಯಬಹುದು ಮತ್ತು ನಾಲ್ಕು ವಿಧವಾದ ಮುಕ್ತಿಯನ್ನು ಪಡೆಯಬಹುದು. ಇದೊಂದೇ ಆತ್ಮಸಾಕ್ಷಾತ್ಕಾರಕ್ಕೆ ದಾರಿ. ॥20॥ ಈ ಪ್ರಪಂಚದಲ್ಲಿ ನಮ್ಮ ಅಸ್ತಿತ್ವವು ಒಂದು ಮಿಂಚಿನಷ್ಟು ಸಮಯವೂ ಇಲ್ಲ. ಅಂತಹದರಲ್ಲಿ ಜನರು ವಿಧಿಬರಹದ ದವಡೆಯಲ್ಲಿ ಸಿಲುಕಿದ್ದು ಪೂರ್ಣ ಸಂತೋಷದ ಕ್ಷಣಗಳನ್ನು ಹೇಗೆ ಪಡೆಯಬಲ್ಲರು? ॥21॥ ತಾಯಿ, ತಂದೆ, ಸೋದರಿ, ಪತ್ನಿ, ಮಗ, ಮಗಳು, ಸೋದರಸಂಬಂಧಿ – ಇವರೆಲ್ಲರೂ ನದಿಯ ಪ್ರವಾಹದಲ್ಲಿ ತೇಲುತ್ತಿರುವ ದಿಮ್ಮಿಗಳ ತರಹ ಇರುತ್ತಾರೆ. ॥22॥ ಒಂದು ಕ್ಷಣಕಾಲ ಎಲ್ಲವೂ ಒಟ್ಟಿಗೆ ಇರುವಂತೆ ಕಾಣುತ್ತದೆ. ಅನಂತರ ಅವುಗಳು ಅಲೆಯ ಅಲುಗಾಟಗಳಿಂದ ಚೆಲ್ಲಾಪಿಲ್ಲಿಯಾಗಿ ಮತ್ತೆಂದೂ ಭೇಟಿಯಾಗದ ಹಾಗೆ ಬೇರೆಬೇರೆಯಾಗುತ್ತವೆ. ॥23॥ ಆತ್ಮೋದ್ಧಾರವನ್ನು ಸಾಧಿಸದೇ ಇರುವವನು, ತನ್ನ ತಾಯಿಯನ್ನು ವೃಥಾ ಹಿಂಸಿಸಿದವನಾಗಿರುತ್ತಾನೆ. ಸಂತರ ಚರಣಗಳಿಗೆ ಶರಣಾಗತರಾಗದವರ ಜನ್ಮ ವ್ಯರ್ಥ. ॥24॥ ಒಬ್ಬ ವ್ಯಕ್ತಿ ಜನ್ಮತಾಳಿದ ಕೂಡಲೇ ಮರಣದ ಕಡೆಗೆ ಚಲಿಸುತ್ತಾನೆ. ಆದ್ದರಿಂದ ಅವನೇನಾದರೂ ಮರಣವು ಇನ್ನೂ ಕೆಲವು ಸಮಯದ ನಂತರ ಬರುತ್ತದೆ ಎಂದು ಭಾವಿಸಿದಲ್ಲಿ ಅವನೊಬ್ಬ ಮೂರ್ಖ. ॥25॥ ಮೃತ್ಯುವು ನಿನಗಾಗಿಯೇ ಕಾಯುತ್ತಿದೆಯೆಂದು ಪ್ರತಿಯೊಬ್ಬರೂ ಯಾವಾಗಲೂ ಸ್ಮರಿಸಿಕೊಳ್ಳಬೇಕು. ಈ ದೇಹವು ಒಂದು ಒಣ ಹುಲ್ಲು. ಅದರ ಮೇಲೆ ಮೃತ್ಯುವು ಸವಾರಿಮಾಡುತ್ತದೆ. ಲೌಕಿಕ ರೀತಿಗಳೇ ಈ ರೀತಿ ಇರುತ್ತವೆ. ಎಚ್ಚರದಿಂದಿರು. ॥26॥ ನಿತ್ಯ ಜೀವನದಲ್ಲಿ ಎಚ್ಚರಿಕೆಯಿಂದ ವರ್ತಿಸು. ಆಗ ಈ ಜೀವನದ ಅಂತಿಮ ಗುರಿಯನ್ನು ಪ್ರಯತ್ನವಿಲ್ಲದೆಯೇ ಸಾಧಿಸುವೆ. ಆದ್ದರಿಂದ ಈ ಪ್ರಪಂಚದಲ್ಲಿ ಆಲಸಿಯಾಗಬೇಡ ಮತ್ತು ಪ್ರಯತ್ನಶೀಲತೆಯಲ್ಲಿ ಅಲಕ್ಷ್ಯ ತೋರಬೇಡ. ॥27॥ ಸಾಯಿಯ ಕತೆಳನ್ನು ಪ್ರೀತಿಯಿಂದ ಆಲಿಸುವವರು, ಯಾವುದೇ ಶ್ರಮವಿಲ್ಲದೆ ಲಾಭಹೊಂದುತ್ತಾರೆ. ಸಾಯಿಯ ಚರಣಗಳಲ್ಲಿ ಅವರ ಭಕ್ತಿಯು ಹೆಚ್ಚಾಗುತ್ತದೆ. ಮತ್ತು ಸಂತೋಷ ಮತ್ತು ಶ್ರೇಯಸ್ಸನ್ನು ಪಡೆಯುತ್ತಾರೆ. ॥28॥ ಕತೆಗಳ ಈ ಸಂಗ್ರಹವು ಸಾಯಿಯ ಬಗ್ಗೆ ವಾತ್ಸಲ್ಯಭರಿಸಿ ಅವರ ಚರಣ ಕಮಲಗಳನ್ನು ಪ್ರತಿ ಹೆಜ್ಜೆಯಲ್ಲಿಯೂ ನೆನಪಿಸುತ್ತಿರುತ್ತದೆ. ॥29॥ ಪದಗಳಲ್ಲಿ ವರ್ಣಿಸಲಸಾಧ್ಯವಾದುದನ್ನು ವರ್ಣಿಸುತ್ತದೆ ಮತ್ತು ಇಂದ್ರಿಯಗಳಿಗೆ ಅತೀತವಾದುದನ್ನು ಸಹಿಸಲು ಸಾಧ್ಯವನ್ನಾಗಿ ಮಾಡುತ್ತದೆ. ಕತೆಗಳ ರೂಪದಲ್ಲಿ ಈ ಅಮೃತವನ್ನು ಎಷ್ಟೇ ಪಾನಮಾಡಿದರೂ ಪೂರ್ತಿಯಾಗಿ ತೃಪ್ತಿಪಡಿಸಲು ಬಹಳ ಕಷ್ಟ. ॥30॥ ಸಂತರ ಕಾರ್ಯಗಳು ಗ್ರಹಿಸಲು ಅಸಾಧ್ಯ. ಅವರ ಖ್ಯಾತಿಯು ವಿವರಣೆಗೂ ಮೀರಿದುದು. ಅವುಗಳನ್ನು ಪದಗಳಲ್ಲಿ ಹೇಳಲು ಯಾರಿಗೆ ತಾನೇ ಸಾಧ್ಯ? ॥31॥ ಒಂದು ವೇಳೆ ಈ ಕತೆಗಳನ್ನು ಕ್ರಮಬದ್ಧವಾಗಿ ಕೇಳಿದಲ್ಲಿ ಸಾಯಿಯ ರೂಪವು ನಮ್ಮ ಕಣ್ಣಮುಂದೆ ಆವಿರ್ಭವಿಸುತ್ತದೆ. ನಮ್ಮ ಮನಸ್ಸು ಮತ್ತು ನಮ್ಮ ಹೃದಯಗಳು ಅವನನ್ನು ನೆನಪಿಸಿಕೊಳ್ಳುತ್ತವೆ. ಮತ್ತು ಹಗಲು ರಾತ್ರಿ ಅದರ ಮೇಲೆ ಧ್ಯಾನ ಮಾಡುತ್ತೇವೆ.॥32॥ ಎಚ್ಚರದಲ್ಲಿ, ಕನಸಿನಲ್ಲಿ, ಕುಳಿತಾಗ, ವಿಶ್ರಾಂತಿ ತೆಗೆದುಕೊಳ್ಳುವಾಗ, ತಿನ್ನುವಾಗ ಯಾವಾಗಲೂ ಅವನನ್ನು ಪ್ರತಿಯೊಬ್ಬರೂ ಗ್ರಹಿಸಬಲ್ಲರು. ಯಾರು ಎಲ್ಲಿಯಾದರೂ ಹೋಗುತ್ತಿದ್ದಲ್ಲಿ

ಊರಿನಲ್ಲಿ ಅಥವಾ ಕಾಡಿನಲ್ಲಿ ಹೋಗುವಾಗ ಅವರು ಪಕ್ಕದಲ್ಲೇ ನಡೆಯುವರು. ॥33॥ ಈ ರೀತಿ ಹಗಲು ರಾತ್ರಿ ಅವರ ಸಹವಾಸವನ್ನು ಅನುಭವಿಸಿದಲ್ಲಿ ಆ ವ್ಯಕ್ತಿಯು ಧ್ಯಾನದಲ್ಲಿ ತಲ್ಲೀನನಾಗುವನು. ಮತ್ತು ಇದು ಪ್ರತಿದಿನ ನಡೆಯುವಾಗ ಮನಸ್ಸು ಪರಮ ಚೈತನ್ಯದಲ್ಲಿ ಒಂದಾಗುತ್ತದೆ. ॥34॥ ಈಗ ನಾನು ನಿರೂಪಣೆಯ ಎಳೆಯನ್ನು ಹಿಂದಿನ ಅಧ್ಯಾಯದಿಂದ ಆಯ್ದು ತೆಗೆಯುತ್ತೇನೆ. ನಾವು ನಿರೂಪಣೆಯನ್ನು ಮುಂದುವರಿಸೋಣ. ದಯವಿಟ್ಟು ಗಮನವಿಟ್ಟು ಕೇಳಿರಿ. ॥35॥ ಒಬ್ಬ ವ್ಯಕ್ತಿಯು ಶ್ರದ್ಧೆ ಮತ್ತು ಭಕ್ತಿಗಳನ್ನು ತಾನು ಶಿರಾ–ಪೂರಿಯನ್ನು[2] ತಿನ್ನುವಷ್ಟು ತಿನ್ನಬಹುದು. ಕಂಠ ಪೂರ್ತಿ ತಿಂದರೂ ಅವನಿಗೆ ಎಂದಿಗೂ ತೃಪ್ತಿ ಸಿಗುವುದಿಲ್ಲ. ॥36॥ ಅದು ಹಾಗಿರಲಿ, ಈಗ ಮತ್ತೊಂದು ಕತೆ. ಶ್ರೋತೃಗಳೇ, ಆದರಪೂರ್ವಕವಾಗಿ ಗಮನ ನೀಡಿ. ಒಬ್ಬ ಸಂತನ ದರ್ಶನದ ಸಾಮರ್ಥ್ಯವು ನಿಮ್ಮ ಮನಸ್ಸಿನಲ್ಲಿ ಗಟ್ಟಿಯಾಗಿ ಬೇರೂರುತ್ತದೆ. ॥37॥ ಬಾಬಾರವರು ಹೊರಮುಖವಾಗಿ ಏನನ್ನೂ ಮಾಡಲಿಲ್ಲ. ಅವರು ತಮ್ಮ ಜಾಗವನ್ನು ಬಿಟ್ಟು ಎಲ್ಲಿಗೂ ಪ್ರಯಾಣ ಬೆಳೆಸಲಿಲ್ಲ. ಆದರೆ ಅವರು ಒಂದೇ ಜಾಗದಲ್ಲಿ ಕುಳಿತು ಎಲ್ಲವನ್ನೂ ಅರಿತಿದ್ದರು. ಮತ್ತು ಎಲ್ಲರಿಗೂ ಅದನ್ನು ತಿಳಿಯಪಡಿಸುತ್ತಿದ್ದರು. ॥38॥ ಆ ಶಾಶ್ವತ ಸತ್ಯ ದೇಹದಲ್ಲಿ ನೆಲೆಗೊಂಡು ಇಡೀ ವಿಶ್ವವನ್ನೇ ವ್ಯಾಪಿಸುತ್ತದೆ. ದೇಹಭಾವವನ್ನು ತ್ಯಜಿಸಿ ಸಂಯೋಗವನ್ನು ಅನುಭವಿಸಿರಿ. ॥39॥ ಶಾಶ್ವತ ಸತ್ಯಕ್ಕೆ ಶರಣಾಗುವವರು ಎಲ್ಲರಲ್ಲಿಯೂ, ಎಲ್ಲೆಲ್ಲೂ ಒಂದಾಗುತ್ತಾರೆ. ಅದನ್ನು ಅರಿಯಿರಿ. ಭೇದಭಾವವನ್ನು ಅನುಸರಿಸುವವನು ನಿರಂತರ ಜನನ ಮರಣ ಚಕ್ರದಲ್ಲಿ ಸಿಲುಕುತ್ತಾನೆ. ॥40 ಎಲ್ಲವನ್ನೂ ಬೇರೆಬೇರೆ ಎಂದು ತಿಳಿಸುವ ಬುದ್ಧಿವಂತಿಕೆಯು ನಿಜವಾಗಿಯೂ ಅಜ್ಞಾನದಿಂದ ಉಂಟಾಗಿದೆ. ಅವನ್ನು ತ್ರಿಕರಣ[3] ಶುದ್ಧಿಯಿಂದ ಸ್ವಚ್ಛಗೊಳಿಸುವ ಅವಶ್ಯಕತೆ ಇದೆ. ಆದಾಗ್ಯೂ ಗುರುವಿನ ಮಹತ್ವದ ಪ್ರವೇಶವು ಮನಸ್ಸನ್ನು ನಿರ್ಮಲಗೊಳಿಸಿ ಆತ್ಮಸಾಕ್ಷಾತ್ಕಾರ ಪಡೆಯುವಂತೆ ಮಾಡುತ್ತದೆ. ॥41॥ ಒಬ್ಬ ವ್ಯಕ್ತಿಯು ಅವಿದ್ಯೆಯನ್ನು ದೂರಮಾಡಿದಲ್ಲಿ, ಆಗಲೇ ಏಕತ್ವದ ಸಾಕ್ಷಾತ್ಕಾರವಾಗುತ್ತದೆ. ಎಳ್ಳಷ್ಟು ವ್ಯತ್ಯಾಸವಿದ್ದರೂ ಅಲ್ಲಿ ಏಕತ್ವ ಇರಲು ಹೇಗೆ ಸಾಧ್ಯ? ॥42॥ ಬ್ರಹ್ಮತತ್ತ್ವದಿಂದ ಅಚಲವಸ್ತುಗಳವರೆಗೆ ಯಾವುದೇ ಹೆಸರಿರಲಿ, ಎಲ್ಲವನ್ನೂ ಮಿಥ್ಯಾಜ್ಞಾನದಿಂದಾಗಿ ಬ್ರಹ್ಮನಲ್ಲವೆಂದೇ ಅರ್ಥಮಾಡಿಕೊಳ್ಳುತ್ತಾರೆ. ಆದರೆ ನಿಜವಾಗಿಯೂ ಎಲ್ಲವೂ ಬ್ರಹ್ಮನಿಂದ ತುಂಬಿಕೊಂಡಿವೆ. ॥43॥ ಈ ಎಲ್ಲಾ ವಿಷಯಗಳ ಅಗಾಧ ಪಾಂಡಿತ್ಯವನ್ನು ಸಹಜವಾಗಿಯೇ ಪಡೆದವನು ಮತ್ತು ಈ ಮಿಥ್ಯಾ ಜಗತ್ತಿನ ಕಾರ್ಯಗಳಲ್ಲಿ ಯಾವುದೇ ಆಸಕ್ತಿ ಇಲ್ಲದವನು ಮತ್ತು ಯಾರ ರೂಪನಾಮಗಳು ನಶಿಸಿಹೋಗಿವೆಯೋ ಅಂತಹವನು ಅವಯವ ರಹಿತವಾದ ಬ್ರಹ್ಮನ ರೀತಿಯಲ್ಲಿರುತ್ತಾನೆ. ॥44॥ ಅವಿದ್ಯೆ ಮತ್ತು ಮೋಹದ ಕಾರಣದಿಂದ ಮತ್ತು ಬ್ರಹ್ಮನು ಬೇರೆ ಎಂಬ ನಂಬಿಕೆಯಿಂದಾಗಿ ಈ ತಪ್ಪು ಭ್ರಮೆಗಳು ಮನಸ್ಸಿನಲ್ಲಿ ಅಂಟಿಕೊಳ್ಳುವ ಅನೇಕ ಸ್ವಭಾವಗಳಿಂದ ಮೋಹಗೊಳಿಸುತ್ತವಾದರೆ ಸರಿಯಾದ ಜ್ಞಾನವಿದ್ದಲ್ಲಿ ಅದು ನಿಷ್ಫಲವಾಗುತ್ತದೆ ಮತ್ತು ಶುದ್ಧಜ್ಞಾನದಲ್ಲಿ ಒಂದಾಗುತ್ತದೆ. ॥45॥ ನಾನು ಭಿನ್ನ ವ್ಯಕ್ತಿ ಮತ್ತು ಇತರ ಜನರು ನನಗಿಂತ ಭಿನ್ನರು ಈ ರೀತಿಯ

ವ್ಯತ್ಯಾಸದ ಬಗ್ಗೆ ಯೋಚಿಸದೆ ಇರುವವನಿಗೆ ಎಲ್ಲವೂ ಪರಿಶುದ್ಧ ಚೇತನದ ಪೂರ್ಣ ಸ್ವರೂಪವೇ ಮತ್ತು ಅಲ್ಲಿ ಮತ್ತೇನೂ ಉಳಿದಿರುವುದಿಲ್ಲ. ॥46॥ ಈ ಮಿಥ್ಯಾ ಜಗತ್ತಿನ ನಾಮ ರೂಪಗಳ ಕಾರ್ಯಗಳನ್ನು ಮಾಡುವುದು ಕ್ಲೇಶಕರವೆಂದು ಭಾವಿಸುವವನು, ವೈವಿಧ್ಯತೆಯನ್ನು ಒಟ್ಟಾರೆ ತೆಗೆದು ಹಾಕಿರುವವನು ಬ್ರಹ್ಮತತ್ತ್ವವನ್ನು ತಲುಪುತ್ತಾನೆ. ॥47॥ "ನಾನು ನನ್ನನ್ನೇ ಎಲ್ಲಾ ಕಡೆ ನೋಡುತ್ತೇನೆ. ನಾನಿಲ್ಲದ ಜಾಗ ಯಾವುದೂ ಇಲ್ಲ. ನಾನು ಎಲ್ಲಾ ದಿಕ್ಕುಗಳಲ್ಲಿಯೂ ಆಕಾಶವನ್ನೆಲ್ಲ ವ್ಯಾಪಿಸಿಕೊಂಡಿದ್ದೇನೆ. ನಾನಿಲ್ಲದೆ ಮತ್ತೇನೂ ಬೇರೆ ಇಲ್ಲವೇ ಇಲ್ಲ." ॥48॥ ಈ ದೃಢ ನಿರ್ಧಾರಕ್ಕೆ ಗಟ್ಟಿಯಾಗಿ ಅಂಟಿಕೊಳ್ಳಿ ಮತ್ತು ಮಾಯೆಯ ತೆರೆಯನ್ನು ನಿಮ್ಮ ದೃಷ್ಟಿಯಿಂದ ಸರಿಸಿ ತಪ್ಪು ಮಾರ್ಗದರ್ಶನವನ್ನು ದೂರಮಾಡಿ. ಬೇರೆ ಯಾವುದೂ ನನ್ನನ್ನು ರಕ್ಷಿಸುವುದಿಲ್ಲ ಎಂಬುದನ್ನು ತಿಳಿದುಕೊಳ್ಳಿ. ॥49॥ ಶ್ರೋತೃಗಳಿಗೆ ಒಂದು ಸಹಜವಾದ ಸಂಶಯ ಬರಬಹುದು. ತಿಳಿದುಕೊಳ್ಳುವವನೂ ತಿಳಿದುಕೊಳ್ಳಬೇಕಾದವನೂ ಎರಡೂ ಆಗಿರುವ ಆತ್ಮದಲ್ಲಿ ವ್ಯತ್ಯಾಸ ಹೇಗಿರುತ್ತದೆ? ಈ ಬಗೆಯ ಸಂಶಯಕ್ಕೆ ಔಷಧಿಯೇನು? ॥50॥ ಮೋಹದಿಂದಲೇ ಭೇದಭಾವ ಉಂಟಾಗುತ್ತದೆ. ಕೂಡಲೇ ಅದು ಅನೇಕತ್ವಕ್ಕೆ ಕಾರಣವಾಗುತ್ತದೆ. ಅದೇ ಜನನ ಮತ್ತು ಮರಣಗಳಿಗೆ ಕಾರಣ. ॥51॥ ಅವಿದ್ಯೆಯ ಅಂಧಕಾರ ದೂರವಾದ ಕೂಡಲೇ, ಇಡೀ ವಿಶ್ವವೂ ಮಾಯವಾಗುತ್ತದೆ. ಎಲ್ಲೆಲ್ಲಿಯೂ ಆತ್ಮದ ಸತ್ಯಸ್ವರೂಪದ ದರ್ಶನವಾಗುತ್ತದೆ. ಮತ್ತು ಕೂಡಲೇ ವೈವಿಧ್ಯತೆಯು ಹಾರಿಹೋಗುತ್ತದೆ. ॥52॥ ಶುದ್ಧವಾದ ಜಲವನ್ನು ಶುದ್ಧಜಲಕ್ಕೆ ಸೇರಿಸಿದಾಗ ಶುದ್ಧಜಲವಾಗಿಯೇ ಉಳಿಯುತ್ತದೆ. ಮತ್ತು ಒಂದಕ್ಕೊಂದು ವ್ಯತ್ಯಾಸ ಕಾಣದಂತಾಗುತ್ತದೆ. ಭೇದಭಾವ ಅಲ್ಲಿ ಉಳಿಯುವುದಿಲ್ಲ. ॥53॥ ವಿವಿಧ ಆಕಾರಗಳ ಕಟ್ಟಿಗೆಯ ಚೂರುಗಳನ್ನು ಬೆಂಕಿಗೆ ಹಾಕಿದಾಗ ಒಂದೇ ರೀತಿ ಕಾಣುತ್ತದೆ. ಅವು ತಮ್ಮ ರೂಪಗಳನ್ನು ಕಳೆದುಕೊಂಡು ಅಸ್ಪಷ್ಟವಾಗುತ್ತವೆ. ತಾವೇ ಅಗ್ನಿಯಲ್ಲಿ ಐಕ್ಯವಾಗುತ್ತವೆ. ॥54॥ ಅದೇ ರೀತಿಯಲ್ಲಿ, ಆತ್ಮಜ್ಞಾನಕ್ಕೆ ಯಾವ ಸಾಕ್ಷಿಯೂ ಬೇಕಿಲ್ಲ. ಆತ್ಮವು ಎಲ್ಲಾ ಜೀವಿಗಳಲ್ಲಿ ಪೂರ್ಣವಾಗಿ ಆವರಿಸಿಕೊಂಡು ಯಾವುದೇ ಆಕಾರವನ್ನು ಹೊಂದದೇ ಇರುತ್ತದೆ. ॥55॥ ಅದರಿಂದ ಭಿನ್ನವಾಗಿ ಮಿಥ್ಯಾಮಾಯೆಯು ಮನಸ್ಸಿನ ತುಮುಲಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಜನನ ಮರಣಗಳ ಯಾತನೆಯ ಅನುಭವ ನೀಡುತ್ತದೆ. ಅದರಿಂದಾಗಿ ಜೀವಿಯ ಅನಿಶ್ಚಿತ ಮನೋಭಾವವನ್ನು ಉಳಿಸುತ್ತದೆ. ॥56॥ ಆತ್ಮಸಾಕ್ಷಾತ್ಕಾರದ ಶಾಶ್ವತವಾದ ಆನಂದದಲ್ಲಿ ನೆಲಸಿರುವ ಸಿದ್ಧನು ಮಾಯೆಯ ದವಡೆಯಿಂದ ಹೊರಬಂದು ರೂಪ, ನಾಮಗಳ ಪಾಪವನ್ನು ಪರಿಹರಿಸಿಕೊಂಡು ಪರಿಶುದ್ಧ ಸತ್ಯಸ್ವರೂಪದ ಆತ್ಮದಲ್ಲಿ ಏಕಾಗ್ರಚಿತ್ತನಾಗಿರುತ್ತಾನೆ. ॥57॥ ಆ ಸ್ಥಿತಿಯಲ್ಲಿರುವುದಕ್ಕೆ ಸಾಯಿನಾಥರು ಸರಿಯಾದ ಉದಾಹರಣೆ. ಅಂತಹವರ ದರ್ಶನಪಡೆದ ಭಾಗ್ಯವಂತರೆಲ್ಲರೂ ಅನುಗ್ರಹೀತರು. ॥58॥ ನೀರಿನಲ್ಲಿ ಪ್ರತಿಬಿಂಬಿಸುವ ಚಂದ್ರನು ನೀರಿನಿಂದ ಆವೃತನಾಗಿರುವಂತೆ ಕಾಣುವನು. ಆದರೆ ನಿಜವಾಗಿಯೂ ನೀರಿನಾಚೆ ಇರುವನು. ಅದೇ ರೀತಿಯಲ್ಲಿ ಭಕ್ತರಿಂದ ಸುತ್ತುವರಿಯಲ್ಪಟ್ಟ ಸಂತರು ಸತ್ಯವಾಗಿ ಅವರಿಂದ ಬೇರೆ ಇರುತ್ತಾರೆ. ॥59॥ ಭಕ್ತರಿಂದ

ಸುತ್ತುವರೆದಿದ್ದರೂ ಯಾರ ಬಗೆಗೂ ಬಂಧನವಿರುವುದಿಲ್ಲ. ಅವರು ಎಂದಿಗೂ ಆತ್ಮಸ್ಥಿತಿಯಲ್ಲೇ ನೆಲಸಿರುತ್ತಾರೆ. ಮತ್ತು ಸಂಸಾರ ಬಂಧನಗಳಿಗೆ ಯಾವುದೇ ಗಮನಕೊಡುವುದಿಲ್ಲ. ॥60॥ ಮಹಾನ್ ಸಂತರು ಮತ್ತು ಸನ್ಯಾಸಿಗಳು ಈ ರೀತಿ ಇರುತ್ತಿದ್ದರು. ಪರಮಾತ್ಮನೂ ಸಹ ಅವರ ಮಾತಿಗೆ ಬೆಲೆಕೊಡುತ್ತಾನೆ. ಅವರಿಗೆ ಸಾಧಿಸಲಸಾಧ್ಯವಾದುದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ. ಅವರ ಜ್ಞಾನಕ್ಕೆ ಮೀರಿದುದು ಯಾವುದೂ ಇಲ್ಲ. ॥61॥ ಈ ಪ್ರಪಂಚದಲ್ಲಿ ಅಸಂಖ್ಯಾತ ಗುರುಗಳು ಮತ್ತು ಶಿಷ್ಯರು ಇದ್ದಾರೆ. ಅವರು ಬೋಧನೆಗಳನ್ನು ಕೊಡುತ್ತಲೂ ತೆಗೆದುಕೊಳ್ಳುತ್ತಲೂ ಇರುತ್ತಾರೆ. ಆದರೆ ಬೋಧನೆಗಳೊಡನೆ ತಮ್ಮ ನಿಜವಾದ ಅನುಭವವನ್ನು ನೀಡಬಲ್ಲ ಗುರುಗಳು ಬಹಳ ಅಪರೂಪ. ॥62॥ ಪೂರ್ವವರ್ಣನೆ ಇಲ್ಲಿಗೆ ಸಾಕು. ಈಗ ಶ್ರೋತೃಗಳು ಕಾತರದಿಂದ ಕಾಯುತ್ತಿರುವ ಮುಖ್ಯ ಕತೆಯನ್ನು ಪ್ರಾರಂಭಿಸೋಣ. ಅದನ್ನು ಕೇಳಿ ಕೃತಾರ್ಥರಾಗಲಿ. ॥63॥ ನಿಜಾಮನ ರಾಜ್ಯದಲ್ಲಿರುವ ನಾಂದೇಡ ಎಂಬ ಊರಿನಲ್ಲಿ ಒಬ್ಬ ಪ್ರಖ್ಯಾತ ಪಾರ್ಸಿ ವ್ಯಾಪಾರಿ ಇದ್ದನು. ಅವನು ಬಹಳ ಧಾರ್ಮಿಕ ಹಾಗೂ ಜನಪ್ರಿಯ ವ್ಯಕ್ತಿಯಾಗಿದ್ದನು. ಅವನ ಹೆಸರು ರತನ್‌ಜೀ.[4] ॥64॥ ಅವನಿಗೆ ಬಹಳ ಧನ ಸಂಪತ್ತು ಇತ್ತು, ಅವನ ಹತ್ತಿರ ಕುದುರೆಗಳು, ಗಾಡಿಗಳು, ತೋಟಗಳು, ಮತ್ತು ಅಡವಿಪ್ರದೇಶಗಳು ಇದ್ದವು. ಅವನ ಮನೆಯ ಬಾಗಿಲುಗಳು ಎಲ್ಲರಿಗೂ ಸದಾ ತೆರೆದಿರುತ್ತಿದ್ದವು. ಯಾರೂ ಬರಿಗೈಯಲ್ಲಿ ಹಿಂತಿರುಗುತ್ತಿರಲಿಲ್ಲ. ॥65॥ ಈ ರೀತಿ ಅವನು ಸುಖಿಯಾಗಿದ್ದು, ಹಗಲು, ರಾತ್ರಿ ಸಂತೋಷದಿಂದಿದ್ದನು. ಆದರೆ ಅಂತರಾಳದಲ್ಲಿ ಚಿಂತೆಯ ರೂಪದ ಮೊಸಳೆಯ ಬಾಯಲ್ಲಿ ಶಾಶ್ವತವಾಗಿ ಸಿಕ್ಕಿಕೊಂಡಿದ್ದನು. ॥66॥ ಇದೇ ಪ್ರಕೃತಿ ನಿಯಮ. ಯಾರೂ ಗಟ್ಟಿಯಾದ ಆನಂದವನ್ನು ಅನುಭವಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬರಿಗೂ ಏನಾದರೂ ಒಂದು ಆತಂಕವಿದ್ದೇ ಇರುತ್ತದೆ. ॥67॥ ಯಾರಾದರೂ ನೆಮ್ಮದಿಯಿಂದ ತಾನೇ ಹೆಚ್ಚು ಮತ್ತು ತಾನೇ ಶ್ರೀಮಂತ ಎಂದು ಹೇಳಿಕೊಳ್ಳಬಹುದು. ಅವನು ಅನಗತ್ಯ ಅಹಂಕಾರದಿಂದ ಎದೆಸೆಟೆಸಿ ನಡೆಯಬಹುದು. ॥68॥ ದೋಷವೇ ಇಲ್ಲದಿರುವುದೊಂದು ಯಾವಾಗಲಾದರೂ ಕಂಡರೆ ಅದಕ್ಕೆ ಒಂದು ಕಪ್ಪು ಚುಕ್ಕೆ ಇಡುತ್ತಾರೆ. ಆದ್ದರಿಂದಲೇ ಪರಮಾತ್ಮನು ಇದನ್ನು ಸ್ವಂತ ಕೈಗಳಿಂದಲೇ ಮಾಡುವನೆಂದು ಕಾಣಿಸುತ್ತದೆ. ॥69॥ ರತನ್‌ಜೀ ಬಳಿಯಲ್ಲಿ ಅಪಾರ ಸಂಪತ್ತು ಇತ್ತು, ಅವನು ಎಲ್ಲರಿಗೂ ಸಹೃದಯಿಯಾಗಿದ್ದನು.ದೀನರಿಗೆ ಸಹಾಯಮಾಡಿ ಅವರ ಕಷ್ಟಗಳನ್ನು ದೂರಮಾಡುತ್ತಿದ್ದನು. ಅವನು ಸದಾ ಸುಪ್ರಸನ್ನನಾಗಿದ್ದನು. ॥70॥ ಈ ರೀತಿಯಲ್ಲಿ ಸಮಾಜವು ರತನ್‌ಜೀಯನ್ನು ಸುಖಿಯೆಂದು ಭಾವಿಸಿದ್ದರೂ, ಅವನ ಧನಸಂಪತ್ತಿನ ಸುಖವು ಪುತ್ರಹೀನ ವ್ಯಕ್ತಿಗೆ ಯಾವುದೇ ಪ್ರಾಮುಖ್ಯತೆಯನ್ನು ನೀಡಿರಲಿಲ್ಲ. ॥71॥ ಅವನಿಗೆ ಹೆಣ್ಣು ಮಕ್ಕಳ ಕೊರತೆ ಇರಲಿಲ್ಲ. ಒಂದಾದ ಮೇಲೊಂದರಂತೆ ಹನ್ನೆರಡು ಜನರಿದ್ದರು. ಆದರೆ ಅವನಿಗೆ ಅಲ್ಪಮಾತ್ರವಾದರೂ ಸಂತೋಷವಿರಲಿಲ್ಲ. ಅವನ ಮನಸ್ಸಿಗೆ ನೆಮ್ಮದಿ ಏಕಿರಲಿಲ್ಲ? ॥72॥ ಪ್ರೀತಿಯಿಂದ ಹಾಡದೆ ಇರುವ ಸಂಕೀರ್ತನೆಯಲ್ಲಿ ಮಧುರತೆಯೆಲ್ಲಿ? ರಾಗತಾಳಗಳಿಲ್ಲದುದು ಸಂಗೀತವೇನು?

ಯಜ್ಞೋಪವೀತ ಧರಿಸದ ಬ್ರಾಹ್ಮಣನು ಅದೆಂತಹ ಬ್ರಾಹ್ಮಣನು? ||73|| ವಿವೇಚನಾ ಶಕ್ತಿಯಿಲ್ಲದ ಎಲ್ಲಾ ಕಲೆಗಳ ಪಾಂಡಿತ್ಯದಿಂದ ಬರುವ ಲಾಭವೇನು? ಸರ್ವರಲ್ಲೂ ಕರುಣಾಭಾವ ತೋರಿಸದೆ ಇರುವುದು ಸರಿಯಾದ ಮಾನವೀಯತೆಯೇನು? ||74|| ಹಣೆಗೆ ಗಂಧವನ್ನು ಧರಿಸಿ, ಕತ್ತಿನಲ್ಲಿ ತುಳಸಿ ಮಾಲೆಯನ್ನು ಧರಿಸಿ ಸಂತರನ್ನು ಅಣಕಿಸುವವನಿಗೆ ಯಾವ ಪವಿತ್ರತೆ ಇದೆ? ||75|| ದೈವಭಕ್ತಿ, ಧರ್ಮಶ್ರದ್ಧೆ ಮತ್ತು ಪಶ್ಚಾತ್ತಾಪವಿಲ್ಲದ ತೀರ್ಥಯಾತ್ರೆಯಿಂದ ಏನು ಉಪಯೋಗ? ಕಂಠಿಹಾರ್ ಇಲ್ಲದ ಒಡವೆಗಳು ಏಕೆ? ಪುತ್ರನಿಲ್ಲದ ಮನೆಯಿಂದೇನು? ||76|| ಭಗವಂತನು ಒಬ್ಬ ಒಳ್ಳೆಯ ಮಗನನ್ನು ಕೊಡುವನೇ? ಎಂದು ನಿರಂತರ ಚಿಂತಿತನಾಗಿದ್ದನು. ಇದೊಂದು ಸದಾ ಕಾಡಿಸುತ್ತಿದ್ದ ಚಿಂತೆಯಾಗಿತ್ತು. ||77|| ಇದರಿಂದಾಗಿ ರತನ್‌ಜೀಯು ಸದಾ ಖಿನ್ನಮನಸ್ಕನಾಗಿದ್ದನು. ಊಟ ಅಥವಾ ಪಾನೀಯ ಸೇರುತ್ತಿರಲಿಲ್ಲ. ಯಾವಾಗಲೂ ದುಃಖಿತನಾಗಿ ಗಾಢ ಚಿಂತಿತನಾಗಿದ್ದನು. ||78|| "ಓ ದೇವರೇ, ನನ್ನ ಕಳಂಕಗಳನ್ನೆಲ್ಲ ಅಳಿಸಿ ನಿಷ್ಕಳಂಕನನ್ನಾಗಿ ಮಾಡು. ವಂಶಕ್ಕೆ ಒಬ್ಬ ಅಧಿಕಾರಿಯನ್ನುಕೊಡು. ನನ್ನನ್ನು ಅಪನಿಂದೆಯಿಂದ ಉಳಿಸು, ಓ ಪ್ರಭುರಾಯ!" ||79|| ಅವನಿಗೆ ದಾಸಗಣುವಿನಲ್ಲಿ ಅತ್ಯಂತ ನಂಬಿಕೆ ಇದ್ದುದರಿಂದ ಅವನು ತನ್ನ ಹೃದಯವನ್ನು ಬಿಚ್ಚಿಟ್ಟನು. ಅದಕ್ಕೆ ಅವನು ಶಿರಡಿಗೆ ಹೋದಲ್ಲಿ ಅವನ ಇಚ್ಛೆಯು ನೆರವೇರುವುದೆಂದು ಹೇಳಿದನು. ||80|| "ಹೋಗು ಮತ್ತು ಬಾಬಾರವರ ದರ್ಶನ ಮಾಡು. ಅವರ ಚರಣಗಳಿಗೆ ಸಾಷ್ಟಾಂಗ ಪ್ರಣಾಮ ಮಾಡು ಮತ್ತು ಅವರಲ್ಲಿ ನಿನ್ನ ಅಂತರಂಗದ ರಹಸ್ಯವನ್ನು ವಿವರವಾಗಿ ಅರಿಕೆಮಾಡು. ಅವರು ನಿನ್ನನ್ನು ಆಶೀರ್ವದಿಸುವರು. ||81|| "ಹೋಗು, ನಿನಗೆ ಖಂಡಿತವಾಗಿ ಒಳ್ಳೆಯದಾಗುವುದು. ಬಾಬಾರವರ ಕ್ರಮಗಳು ಗ್ರಹಿಸಲಸಾಧ್ಯವಾದವು. ಅವರಲ್ಲಿ ಪೂರ್ಣವಾಗಿ ಶರಣಾಗು. ನಿನಗೆ ಮಂಗಳವಾಗುವುದು." ||82|| ಈ ಸಲಹೆಯನ್ನು ಒಪ್ಪಿಕೊಂಡು ರತನ್‌ಜೀಯು ದೃಢನಿರ್ಧಾರ ತೆಗೆದುಕೊಂಡನು. ಕೆಲವು ದಿನಗಳ ನಂತರ ಅವನು ಶಿರಡಿಗೆ ಬಂದನು. ||83|| ಮಸೀದಿಗೆ ಸಾಯಿ ದರ್ಶನಕ್ಕಾಗಿ ಹೋದನು. ಮತ್ತು ಸಾಯಿಯ ಚರಣಗಳಲ್ಲಿ ನಮಸ್ಕರಿಸಿದನು. ಧರ್ಮನಿಧಿಯಾದ ಮಹಾರಾಜ್‌ರನ್ನು ನೋಡಿ ಪ್ರೀತಿಯ ಧಾರೆ ಉಕ್ಕಿಬಂದು ಉತ್ಕಂಠಿತನಾದನು. ||84|| ಅವನು ಬುಟ್ಟಿಯಿಂದ ಹೂವಿನ ಹಾರವನ್ನು ತೆಗೆದು ಪ್ರೀತಿಯಿಂದ ಬಾಬಾರವರ ಕೊರಳಿಗೆ ಹಾಕಿದನು. ಅವನು ಅರ್ಪಿಸಲೆಂದು ತಂದಿದ್ದ ಹಣ್ಣುಗಳನ್ನು ಬಾಬಾರವರ ಚರಣಗಳಲ್ಲಿಟ್ಟನು. ||85|| ರತನ್‌ಜಿಯು ಅತ್ಯಂತ ದೀನನಾಗಿ, ಗೌರವದಿಂದ ಹೋಗಿ ಬಾಬಾರವರ ಚರಣಗಳ ಹತ್ತಿರ ಕುಳಿತನು. ಅವನ ಬೇಡಿಕೆಯನ್ನು ಆಲಿಸಿ. ||86|| "ನಾನು ಕೇಳಿದ್ದೇನೆ. ಜನರಿಗೆ ಅಸಹನೀಯ ಕಷ್ಟಗಳು ಬಂದಾಗ ನಿಮ್ಮಲ್ಲಿ ಸಹಾಯಕ್ಕಾಗಿ ಬರುತ್ತಾರೆ. ಮತ್ತು ನೀವು ಕೂಡಲೇ ಅವರನ್ನು ರಕ್ಷಿಸುವಿರಿ. ||87|| "ಆದುದರಿಂದಲೇ ನಾನು ನಿಮ್ಮನ್ನು ಭೇಟಿಮಾಡಲು ಬಂದಿದ್ದೇನೆ. ಬಹಳ ಭರವಸೆಯಿಟ್ಟುಕೊಂಡು ಬಂದಿದ್ದೇನೆ. ಮತ್ತು ತಮ್ಮ ಚರಣಗಳಲ್ಲಿ ಒಂದು ವರವನ್ನು ಬೇಡುತ್ತೇನೆ. ದಯಮಾಡಿ ಇಲ್ಲವೆನ್ನಬೇಡಿರಿ, ಮಹಾರಾಜ್." ||88|| ಅನಂತರ ಬಾಬಾ

ಅವನಿಗೆ ಹೇಳಿದರು: "ನೀನು ಬಹಳ ದೂರದಿಂದ ಇಲ್ಲಿಗೆ ಬಂದಿರುವೆ. ನಿನಗೆ ಇಚ್ಛೆ ಆದಷ್ಟು ದಕ್ಷಿಣೆ ನೀಡು. ನಿನ್ನ ಆಸೆ ನೆರವೇರುವುದು." ॥89॥ ದರ್ಶನಕ್ಕೆ ಯಾರೇ ಬಂದರೂ, ಕಾಲಿಗೆ ನಮಸ್ಕರಿಸಿದಾಗ ಹಿಂದುವಾಗಲೀ, ಮುಸ್ಲಿಮನಾಗಲೀ, ಪಾರ್ಸಿಯಾಗಲೀ, ಅವನಿಂದ ದಕ್ಷಿಣೆಯನ್ನು ಅವರು ಕೇಳುತ್ತಿದ್ದರು. ॥90॥ ಅದೂ ಸಹ ಕಡಿಮೆ ಮೊತ್ತವೇನಲ್ಲ. ಅದು ಒಂದು ಅಥವಾ ಎರಡು ರೂಪಾಯಿಗಳು. ಅಥವಾ ಐವತ್ತು ಅಥವಾ ನೂರು ಅಥವಾ ಸಾವಿರ ಅಥವಾ ಲಕ್ಷ ಅಥವಾ ಇನ್ನೂ ಹೆಚ್ಚು, ಅವನು ಕೊಡಲು ಶಕ್ತಿ ಇರುವಷ್ಟು. ॥91॥ ಅದನ್ನು ಕೊಟ್ಟರೂ ಇನ್ನೂ ಹೆಚ್ಚಿಗೆ ಕೇಳುವರು. ಕೊಡಲು ಏನೂ ಉಳಿದಿಲ್ಲವೆಂದು ತಿಳಿಸಿದಲ್ಲಿ, ಸಾಲ ಮಾಡಿ ತಂದುಕೊಡೆಂದು ಹೇಳುವರು. ಸಾಲ ತೆಗೆದುಕೊಳ್ಳಲು ಅಸಾಧ್ಯವಾದಾಗ ಅವರು ಕೇಳುವುದನ್ನು ನಿಲ್ಲಿಸುವರು. ॥92॥ ಅವರು ಭಕ್ತರಿಗೆ ಹೇಳುತ್ತಿದ್ದರು. "ಏನೂ ಚಿಂತಿಸಬೇಡ. ನಾನು ನಿನಗೆ ತುಂಬ ಹಣ ಕೊಡುತ್ತೇನೆ. ನನ್ನ ಹತ್ತಿರ ನಿಶ್ಚಿಂತೆಯಿಂದ ಕುಳಿತುಕೋ. ॥93॥ "ಈ ಜಗತ್ತಿನಲ್ಲಿ ಎಲ್ಲರಿಗೂ ಯಾರಾದರೊಬ್ಬರು ಇರುತ್ತಾರೆ. ಆದರೆ ನನಗಿಯಾರೂ ಇಲ್ಲ. ಅಲ್ಲಾಹ್, ಕೇವಲ ಅಲ್ಲಾಹ್ ಮಾತ್ರ ನನ್ನವನು. ॥94॥ "ಯಾರಾದರೂ ನನ್ನನ್ನು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸಿದಲ್ಲಿ, ನನಗೆ ಅಂತಹ ವ್ಯಕ್ತಿಯು ಬೇಕು. ಅಂತಹವನು ನನಗೆ ಏನಾದರೂ ಕೊಟ್ಟರೆ ನಾನು ಅವನಿಗೆ ನೂರರಷ್ಟು ಕೊಡುತ್ತೇನೆ. ॥95॥ ಒಬ್ಬ ಲಕ್ಷಾಧಿಪತಿಯಿಅಲ್ಲಿಗೆ ಬಂದಲ್ಲಿ, ಮಹಾರಾಜ್‌ರು ಅವನನ್ನು ಒಬ್ಬ ಬಡ ಮನುಷ್ಯನ ಮನೆಗೆ ಹೋಗಿ ತಮಗಾಗಿ ದಕ್ಷಿಣೆ ಕೇಳಿತರಲು ಹೇಳುತ್ತಿದ್ದರು. ॥96॥ ಸಾಯಿಯು ಶ್ರೀಮಂತ, ಬಡವ, ವಿನೀತ, ದುಃಖಿತ, ದರಿದ್ರ ಇವರ ಮಧ್ಯೆ ಯಾವ ಭೇದಭಾವವನ್ನೂ ತೋರಿಸುತ್ತಿರಲಿಲ್ಲ. ಒಬ್ಬರು ಮತ್ತೊಬ್ಬರಿಗಿಂತ ಒಳ್ಳೆಯವರು. ॥97॥ ಆ ವ್ಯಕ್ತಿಯು ಅವರ ಆಜ್ಞೆಯನ್ನು ಪಾಲಿಸುತ್ತಿದ್ದನು. ತನ್ನ ತಲೆಯನ್ನು ತಗ್ಗಿಸುತ್ತಿದ್ದನು. ಮತ್ತು ಬಡವರ ಮನೆಗೆ ಹೋಗಿ ಬಾಬಾ ಪರವಾಗಿ ಭಿಕ್ಷೆ ಬೇಡುತ್ತಿದ್ದನು. ತನ್ನ ಅಹಂನ್ನು ಬಿಟ್ಟು ಹೋಗುತ್ತಿದ್ದನು. ॥98॥ ಇದೆಲ್ಲರ ಸಾರವೆಂದರೆ, ದಕ್ಷಿಣೆಯ ನೆಪದಲ್ಲಿ ಬಾಬಾರವರು ತಮ್ಮ ಭಕ್ತರಿಗೆ ವಿನಯವನ್ನು ಕಲಿಸುತ್ತಿದ್ದರು. ॥99॥ ಒಬ್ಬ ಸಾಧುವಿಗೆ ಹಣದ ಅವಶ್ಯಕತೆ ಏನು ಎಂದು ಸಂದೇಹಿಸಬಹುದು. ಆದರೆ ಈ ವಿಷಯದಲ್ಲಿ ನೀವು ಸರಿಯಾಗಿ ಯೋಚಿಸಿದರೆ ನಿಮ್ಮ ಸಂಶಯ ಪರಿಹಾರವಾಗುವುದು. ॥100॥ ಸಾಯಿಯು ಅವನ ಎಲ್ಲಾ ಇಚ್ಛೆಗಳನ್ನು ಪೂರೈಸುವಾಗ ಅವರಿಗೆ ದಕ್ಷಿಣೆ ಏಕೆ ಬೇಕಾಗುತ್ತದೆ? ಅವರು ತಮ್ಮ ಭಕ್ತರಿಂದ ಹಣವನ್ನು ಕೇಳುವಾಗ ಅವರನ್ನು ಅಶಾರಹಿತರೆಂದು ಹೇಗೆ ಕರೆಯಬಹುದು? ॥101॥ ಅವರ ದೃಷ್ಟಿಯಲ್ಲಿ ಒಂದು ಆಲಿಕಲ್ಲು ಆಗಲಿ, ವಜ್ರದ ಪದಕವಾಗಲಿ ಅಥವಾ ಚಿನ್ನದ ನಾಣ್ಯವಾಗಲಿ ಎಲ್ಲವೂ ಒಂದೇ ರೀತಿ ಇರುವಾಗ ಅವರು ತಮ್ಮ ಕೈಗಳನ್ನು ಏಕೆ ಚಾಚುತ್ತಿದ್ದರು? ॥102॥ ಅವರು ಭಿಕ್ಷೆ ಬೇಡುವಾಗ ಕೇವಲ ಅವರ ಹಸಿವೆ ಇಂಗಿಸುವುದಕ್ಕಾಗಿಯಷ್ಟೆ. ಅವರು ನಿರ್ಮೋಹತ್ವದ ಶಪಥ ಮಾಡಿದ್ದಾರೆ. ಯಾವುದೇ ಫಲಾಪೇಕ್ಷೆ ಇಲ್ಲದವರಂತೆ ಮತ್ತು ಅನಾಸಕ್ತಿಯಿಂದ ಇರುವಂತೆ ತೋರುವಾಗ ದಕ್ಷಿಣೆಯ ಆಶೆ ಏಕೆ? ॥103॥ ಒಬ್ಬ ವ್ಯಕ್ತಿಯು ಹಣಕ್ಕಾಗಿ ಬೇಡುವ

ಮಟ್ಟಕ್ಕೆ ಏಕೆ ಇಳಿಯಬೇಕು? ಅವರ ಬಾಗಿಲಲ್ಲಿಯೇ ಅಷ್ಟಸಿದ್ಧಿಗಳೆ ಅವರ ಸೇವೆಮಾಡಲು ಕೈಗಳನ್ನು ಜೋಡಿಸಿ ನಿಂತಿರುತ್ತವೆ. ಮತ್ತು ನವನಿಧಿಗಳೆ ಅವರ ಅಧೀನದಲ್ಲಿವೆ. ॥104॥ ಯಾರು ಈ ಪ್ರಾಪಂಚಿಕ ವಸ್ತುಗಳನ್ನು ಧಿಕ್ಕರಿಸುವರೋ ಮತ್ತು ಸ್ವರ್ಗಸುಖದಲ್ಲಿ ಆಸಕ್ತಿತೋರಿಸುವುದಿಲ್ಲವೋ, ಸಂಪೂರ್ಣವಾಗಿ ಆತ್ಮದಲ್ಲೇ ಮಗ್ನರಾಗಿರುವರೋ ಅಂತಹವರಿಗೆ ಹಣದ ವಿಷಯದಿಂದ ಏನಾಗಬೇಕು? ॥105॥ ಸಂತರು ಪವಿತ್ರರು ಮತ್ತು ಪೂಜನೀಯರು, ಸಕಲ ಶಾಸ್ತ್ರಕೋವಿದರು ಮತ್ತು ಭಕ್ತರ ಯೋಗಕ್ಷೇಮಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು ಅಂತಹವರಿಗೆ ಹಣದ ಅವಶ್ಯಕತೆ ಎಲ್ಲಿದೆ? ॥106॥ ಸಾಧುವಿಗೆ ದಕ್ಷಿಣೆ ಏಕೆ? ಅವನು ಆಶಾರಹಿತನಾಗಿರಬೇಕು. ಫಕೀರನಾಗಿದ್ದರೂ ಸಹ ಅವನು ದುರಾಸೆಯಿಂದ, ತಪ್ಪಿಸಿಕೊಳ್ಳಲಾರನು ಮತ್ತು ಸದಾಕಾಲ ಹಣವನ್ನು ಆರಾಧಿಸುತ್ತಿರುವವನು. ॥107॥ ಮೊದಲನೆಯ ದರ್ಶನದಲ್ಲಿ ದಕ್ಷಿಣೆಯನ್ನು ಸ್ವೀಕರಿಸುತ್ತಿದ್ದರು. ಮುಂದಿನ ದರ್ಶನದಲ್ಲಿ ಅವರು ದಕ್ಷಿಣೆ ಕೇಳುತ್ತಿದ್ದರು. ಅಲ್ಲಿಂದ ಹೊರಡುವಾಗಲೂ ದಕ್ಷಿಣೆ ಕೇಳುತ್ತಿದ್ದರು. ಪ್ರತಿಬಾರಿಯೂ ಕೇಳುವುದಕ್ಕೆ ಅರ್ಥವೇನು? ॥108॥ ಸಾಂಪ್ರದಾಯಿಕವಾಗಿ, ಪ್ರಾರಂಭದಲ್ಲಿ ಕುಡಿಯುವ ನೀರನ್ನು ಕೊಡುತ್ತಾರೆ. ಅನಂತರ ಕೈಗಳನ್ನು ಮತ್ತು ಬಾಯಿಯನ್ನು ತೊಳೆಯಲು ಕೊಡುತ್ತಾರೆ. ಅನಂತರ ಎಲೆ ಮತ್ತು ಅಡಿಕೆಯನ್ನೂ, ದಕ್ಷಿಣೆಯನ್ನೂ ಅರ್ಪಿಸುವರು. ॥109॥ ಆದರೆ ಬಾಬಾರವರ ಪದ್ಧತಿಯು ಬಹಳ ವಿಚಿತ್ರವಾಗಿತ್ತು, ಗಂಧದ ಪಟ್ಟಿಯನ್ನು ಲೇಪಿಸುವಾಗ ಅಥವಾ ಅಕ್ಷತೆ (ಅರಿಸಿನ ಸೇರಿಸಿದ ಅಕ್ಕಿ) ಮತ್ತಿತರ ಅಲಂಕಾರವಸ್ತುಗಳನ್ನು ಅರ್ಪಿಸಿದಕೂಡಲೇ ಅವರು ಆ ಸಮಯದಲ್ಲಿ ದಕ್ಷಿಣೆಯನ್ನು ನಿರೀಕ್ಷಿಸುತ್ತಿದ್ದರು. ॥110॥ ವಿಧಿವಿಧಾನಗಳ ಪೂರ್ವಕ್ರಮಗಳು ಪ್ರಾರಂಭವಾದ ಕೂಡಲೇ ಬಾಬಾರವರು ದಕ್ಷಿಣೆ ಕೇಳುತ್ತಿದ್ದರು. ಆದ್ದರಿಂದ ಆ ಕ್ಷಣದಲ್ಲಿ ಬ್ರಾಹ್ಮಣನಿಗೆ ನೀಡುವ ದಕ್ಷಿಣೆಯ ರೀತಿ ಕೊಡಬೇಕಾಗುತ್ತಿತ್ತು. ॥111॥ ಈಗ ಸಂದೇಹಗಳನ್ನು ದೂರಮಾಡಲು ಬಹಳ ಶ್ರಮ ಬೇಕಾಗಿಲ್ಲ. ಕೆಲಕಾಲ ಸ್ವಲ್ಪ ಗಮನವಿಟ್ಟಲ್ಲಿ ನೀವು ತೃಪ್ತಿಹೊಂದುವಿರಿ. ॥112॥ ಧನ ಸಂಪತ್ತನ್ನು ಸತ್ಕಾರ್ಯಕ್ಕಾಗಿ ಶೇಖರಿಸಬೇಕು. ಆದರೆ ಅದು ತುಚ್ಛವಸ್ತುಗಳಿಗಾಗಿ ಮತ್ತು ಪ್ರಪಂಚದ ವಸ್ತುಗಳಿಗಾಗಿ ವ್ಯಯಿಸಲ್ಪಡುತ್ತಿದೆ. ॥113॥ ಧನದಿಂದ ಸತ್ಕರ್ಮಗಳನ್ನು ಆಚರಿಸಬಹುದು. ಸತ್ಕರ್ಮಗಳಿಂದ ಜ್ಞಾನವು ದೊರೆಯುತ್ತದೆ. ಸ್ವಾರ್ಥವು ಆಧ್ಯಾತ್ಮಜ್ಞಾನವಾಗಿಬದಲಾಗುತ್ತದೆ. ಇದು ಸಂತೃಪ್ತಿಯನ್ನು ನೀಡುತ್ತದೆ. ॥114॥ ಪ್ರಾರಂಭದಲ್ಲಿ ಬಹಳ ಸಮಯದವರೆಗೆ ಬಾಬಾರವರು ಏನನ್ನೂ ಸ್ವೀಕರಿಸುತ್ತಿರಲಿಲ್ಲ. ಅವರು ಬಳಸಿದ ಬೆಂಕಿಕಡ್ಡಿಗಳನ್ನು ಸಂಗ್ರಹಿಸಿ ತಮ್ಮ ಜೇಬುಗಳಲ್ಲಿ ತುಂಬಿಕೊಳ್ಳುತ್ತಿದ್ದರು. ॥115॥ ಅವರು ತಮ್ಮ ಅನುಯಾಯಿಗಳಿಂದಾಗಲಿ ಅಥವಾ ಭಕ್ತರಲ್ಲದವರಿಂದಾಗಲಿ ಏನನ್ನೂ ಕೇಳುತ್ತಿರಲಿಲ್ಲ. ಯಾರಾದರೂ ಒಂದು ಅಥವಾ ಎರಡು ಪೈಸೆಯನ್ನಾದರೂ ಅವರ ಮುಂದೆ ಇಟ್ಟಲ್ಲಿ ಅದರಿಂದ ತಂಬಾಕು ಅಥವಾ ಎಣ್ಣೆಯನ್ನು ಕೊಳ್ಳುತ್ತಿದ್ದರು. ॥116॥ ಅವರಿಗೆ ತಂಬಾಕೆಂದರೆ ಬಹಳ ಪ್ರೀತಿ. ಅವರು ಬೀಡಿ ಅಥವಾ ಚಿಲುಮೆಯನ್ನು ಸೇದುತ್ತಿದ್ದರು. ಆ ಚಿಲುಮೆಯು ಅವರ

ಸೇವೆಯನ್ನು ಬಹಳ ಪ್ರಾಮಾಣಿಕವಾಗಿ ಮಾಡಿತು. ಅದನ್ನು ಹೊತ್ತಿಸಿದದ ವೇಳೆಯೇ ಅಪರೂಪ. ॥117॥ ಆನಂತರ ಯಾರೋ ಒಬ್ಬರು ಒಬ್ಬ ಸಂತನ ದರ್ಶನಕ್ಕೆ ಬರಿಗೈಯಲ್ಲಿ ಹೇಗೆ ಹೋಗುವುದೆಂದುಕೊಂಡರು. ಅಂದಿನಿಂದ ಬಾಬಾ ದಕ್ಷಿಣೆಯನ್ನು ಸ್ವೀಕರಿಸಲು ಪ್ರಾರಂಭಿಸಿದರು. ॥118॥ ಯಾರಾದರೂ ಒಂದು ಪೈಸೆ ನೀಡಿದಲ್ಲಿ ಅವರು ಅದನ್ನು ತಮ್ಮ ಜೇಬಿನಲ್ಲಿ ಹಾಕಿಕೊಳ್ಳುತ್ತಿದ್ದರು. ಆದರೆ ಎರಡು ಪೈಸೆ ನೀಡಿದಲ್ಲಿ ಅವರು ಅದನ್ನು ಹಾಗೆಯೇ ಹಿಂತಿರುಗಿಸುತ್ತಿದ್ದರು. ಇದು ಹಾಗೆಯೇ ಸ್ವಲ್ಪ ಕಾಲ ನಡೆಯಿತು. ॥119॥ ಆದರೆ ಸ್ವಲ್ಪ ಸಮಯದ ನಂತರ ಸಾಯಿಬಾಬಾರವರ ಕೀರ್ತಿ ಹೆಚ್ಚಿತು. ಭಕ್ತರು ಗುಂಪು ಗುಂಪಾಗಿ ಬರಲು ಪ್ರಾರಂಭಿಸಿದರು. ವ್ಯವಸ್ಥಿತವಾಗಿ ಪೂಜಾಕಾರ್ಯಗಳು ನಡೆಯಲು ಪ್ರಾರಂಭವಾದವು. ॥120॥ ಪೂಜೆ ಮಾಡುವವರಿಗೆ ಪೂಜಾಪದ್ಧತಿಯ ಅರಿವಿತ್ತು. ಸುವರ್ಣ ಅಥವಾ ಪುಷ್ಪಗಳ ದಕ್ಷಿಣೆಯನ್ನು ಅರ್ಪಿಸದೆ ಪೂಜಾವಿಧಿ ಪೂರ್ಣಗೊಳ್ಳುವುದಿಲ್ಲ. ॥121॥ ಗುರುಪೂಜೆಯಲ್ಲಿ ದಕ್ಷಿಣೆಯ ಅವಶ್ಯಕತೆ ಎಷ್ಟೆಂದರೆ ರಾಜನ ಪಟ್ಟಾಭಿಷೇಕ ಅಥವಾ ಗುರುಗಳ ಪಾದಪೂಜೆಯ ಸಮಯದಲ್ಲಿ ಉಡುಗೊರೆ ನೀಡುವಷ್ಟು. ॥122॥ ದಕ್ಷಿಣೆಯನ್ನು ನೀಡುವವರಿಗೆ ಅತ್ಯುತ್ತಮ ಸ್ಥಿತಿಯಾದ ಸ್ವರ್ಗಲೋಕ ಪ್ರಾಪ್ತಿಯಾಗುತ್ತದೆಂದು ವೇದಗಳಲ್ಲಿ ಉಲ್ಲೇಖಿಸಿದೆ. ಚಿನ್ನದ ನಾಣ್ಯಗಳನ್ನು ಅರ್ಪಿಸುವವರಿಗೆ ಮುಕ್ತಿ, ಜ್ಞಾನ ಸಂಪತ್ತು ಮತ್ತು ಪರಿಶುದ್ಧ ಮನಸ್ಸು ದೊರೆಯುತ್ತವೆ. ॥123॥ ಮತ್ತೆ ಇನ್ನೂ ಹೇಳಿದೆ. ಶ್ರೀಗಂಧವನ್ನು ಅರ್ಪಿಸಿದಲ್ಲಿ ಪವಿತ್ರತೆಯನ್ನೂ, ಅಕ್ಷತೆಯನ್ನು ಕೊಡುವವನಿಗೆ ದೀರ್ಘಾಯಸ್ಸು, ಪುಷ್ಪ ಮತ್ತು ಅಡಿಕೆಗಳನ್ನು ಅರ್ಪಿಸಿದರೆ ಧನ-ಸಂಪತ್ತು ಮತ್ತು ಶ್ರೀಮಂತಿಕೆ ಮತ್ತು ದಕ್ಷಿಣೆಯಿಂದ ಅಪಾರ ಶ್ರೀಮಂತಿಕೆ ಲಭಿಸುತ್ತದೆ. ॥124॥ ಸುವರ್ಣ ಪುಷ್ಪದ ದಕ್ಷಿಣೆಯು ಪೂಜಾವಿಧಾನದಲ್ಲಿ ಅದೆಷ್ಟು ಪ್ರಮುಖವೆಂದರೆ ಶ್ರೀಗಂಧ, ಅಕ್ಷತೆ, ಪುಷ್ಪ ಮತ್ತು ಅಡಿಕೆ ಇವುಗಳಷ್ಟು. ಏಕೆಂದರೆ ಅದು ಕೊಡುವವರಿಗೆ ಅಪಾರ ಸಂಪತ್ತನ್ನು ದಯಪಾಲಿಸುತ್ತದೆ. ॥125॥ ದಕ್ಷಿಣೆಯು ದೈವಪೂಜೆಯ ಸಮಯದಲ್ಲೂ ಸಿದ್ಧರನ್ನು ಪೂಜಿಸುವಾಗಲೂ ಬೇಕಾಗುತ್ತದೆ. ವ್ರತವನ್ನು[9] ಆಚರಿಸುವಾಗಲೂ, ಅದನ್ನು ಪೂರ್ಣಗೊಳಿಸಿದಾಗ ಬ್ರಾಹ್ಮಣನಿಗೆ ಸುವರ್ಣ ದಾನ ಕೊಡುವುದು ಪದ್ಧತಿ. ॥126॥ ಈ ಜಗತ್ತಿನ ಭ್ರಮಾಧೀನ ಚಟುವಟಿಕೆಗಳೆಲ್ಲವೂ ಹಣದ ಮೇಲೆಯೇ ಅವಲಂಬಿತವಾಗಿರುತ್ತವೆ. ಗೌರವವನ್ನು ಕಳೆದುಕೊಂಡಾಗಲೂ ಅದನ್ನು ಮುಚ್ಚಿಹಾಕುವುದು ಹಣದಿಂದಲೆ. ಆದ್ದರಿಂದ ಹಣವು ಅತ್ಯವಶ್ಯಕ. ॥127॥ ದೇವಪೂಜೆಯಲ್ಲಿ, 'ಹಿರಣ್ಯಗರ್ಭ-ಗರ್ಭಸ್ಥ' ಮುಂತಾದ ವೇದಮಂತ್ರಗಳ ಪಠನೆಯಿಂದ ದಕ್ಷಿಣೆಯನ್ನು ಪವಿತ್ರಗೊಳಿಸಲಾಗುವುದು. ಹಾಗಿರುವಾಗ ಸಂತರ ಪೂಜೆಯಲ್ಲಿ ಕೊಡಬಾರದೇಕೆ? ॥128॥ ಸಂತರ ದರ್ಶನಕ್ಕೆ ಹೋಗುವಾಗ ಪ್ರತಿಯೊಬ್ಬರೂ ತಮಗೆ ತಿಳಿದ ಹಾಗೆ ವರ್ತಿಸುತ್ತಾರೆ. ಪ್ರತಿಯೊಬ್ಬ ವ್ಯಕ್ತಿಗೂ ಬೇರೆ ಬೇರೆ ದೃಷ್ಟಿಕೋನ ಇರುತ್ತದೆ. ಪ್ರತಿಯೊಬ್ಬರೂ ಒಂದು ವಿಷಯದ ಮೇಲೆ ಸಮನಾಗಿರುವುದು ಬಹಳ ಕಷ್ಟವಾದದ್ದು. ॥129॥ ಕೆಲವರು ಭಜನೆಗಳನ್ನು ಮಾಡುತ್ತ ತಮ್ಮ ಗೌರವವನ್ನು ಅರ್ಪಿಸುತ್ತಾರೆ. ಕೆಲವರು ಪರೀಕ್ಷೆ ಮಾಡಹೋಗುವರು. ಕೆಲವರು ಭಾವಿಸುತ್ತಾರೆ,

ಸಂತರು ನಮ್ಮ ಮನಸ್ಸನ್ನು ಓದಿ ಹೇಳಬಲ್ಲರು ಎಂದು. ॥130॥ ಕೆಲವರು ದೀರ್ಘಾಯುಸ್ಸನ್ನು ಬೇಡುತ್ತಾರೆ. ಕೆಲವರಿಗೆ ಆನೆ, ಚಿನ್ನ, ಹಣ, ಸಂಪತ್ತು, ಆಸ್ತಿ, ಕೆಲವರಿಗೆ ಮಕ್ಕಳು, ಮೊಮ್ಮಕ್ಕಳು ಮತ್ತೆ ಕೆಲವರಿಗೆ ಶಾಶ್ವತ ಅಧಿಕಾರ ಬೇಕಾಗುತ್ತದೆ. ॥131॥ ಬಾಬಾರವರು ಜನರ ಜೊತೆ ವರ್ತಿಸುವುದು ಅದ್ವಿತೀಯವಾದದ್ದು. ಯಾರಾದರೂ ಅವರನ್ನು ಟೀಕಿಸಲು ಬಂದರೆ ಅವರ ಕ್ರೂರತನವನ್ನು ನಾಶ ಮಾಡುತ್ತಿದ್ದರು. ಬಂದವರು ವಿನೀತರಾಗಿ ಅವರ ಚರಣಗಳಿಗೆ ಶಿರಬಾಗಿ ವಂದಿಸುತ್ತಿದ್ದರು. ॥132॥ ಅವರು ಅಷ್ಟು ಭಾಗ್ಯವಂತರಾಗಿಲ್ಲದಿದ್ದರೆ ಪಶ್ಚಾತ್ತಾಪವನ್ನಾದರೂ ಪಡುತ್ತಿದ್ದರು. ನಿಸ್ಸಂದೇಹವಾಗಿ ಅವರ ಅಹಂಕಾರವನ್ನು ಕಳೆಯುತ್ತಿದ್ದರು. ಮತ್ತು ನಿಜವಾಗಿಯೂ ಬಾಬಾರವರ ಶಕ್ತಿಯ ಪ್ರತ್ಯಕ್ಷ ಅನುಭವ ಪಡೆಯುತ್ತಿದ್ದರು. ॥133॥ ಇವೆಲ್ಲವೂ ಅತಿಸಾಮಾನ್ಯವಾದವು. ಸಾಮಾನ್ಯ ಭಕ್ತರು ಪೂರ್ಣವಾಗಿ ಜಗತ್ತಿಗೆ ಅಂಟಿಕೊಂಡಿರುತ್ತಿದ್ದರು. ಅವರ ಮನಸ್ಸುಗಳನ್ನು ದಕ್ಷಿಣೆ ಅರ್ಪಿಸುವ ಹಾಗೆ ಮಾಡಿ ಪರಿಶುದ್ಧಗೊಳಿಸುತ್ತಿದ್ದರು. ಅದೇ ಬಾಬಾರವರ ಉದ್ದೇಶವಾಗಿತ್ತು. ॥134॥ ಶೃತಿಗಳು ಯಜ್ಞ, ದಾನ ಮತ್ತು ಲೋಕಹಿತಕ್ಕೆ ಸಮರ್ಪಣಾ ಭಾವದ ಶ್ರಮದಾನ ಇವುಗಳನ್ನು ಮಾರ್ಗೋಪಾಯಗಳೆಂದು ತಿಳಿಸಿವೆ. ಆತ್ಮಸಾಕ್ಷಾತ್ಕಾರವನ್ನು ಬಯಸುವವನು ದಕ್ಷಿಣೆನೀಡಬೇಕು. ಏಕೆಂದರೆ ಇದು ಸುಲಭೋಪಾಯಗಳಲ್ಲಿ ಒಂದು. ವೇದಗಳೂ ಇದನ್ನು ಪುಷ್ಟೀಕರಿಸಿವೆ. (ದಕ್ಷಿಣೆಯಿಂದ ಮೇಲೆ ಹೇಳಿದ ಮೂರು ಉದ್ದೇಶಗಳೂ ನೆರವೇರುತ್ತವೆ.) ॥135॥ ಒಬ್ಬ ಭಕ್ತನು ಸ್ವಾರ್ಥಿಯಾಗಿರಲಿ, ಅಧ್ಯಾತ್ಮ ಜೀವನ ಇಚ್ಛಿಸುವವನಾಗಲಿ ಇಬ್ಬರೂ ತಮ್ಮ ಉದ್ದೇಶ ನೆರವೇರಬೇಕಾದರೆ ತಮ್ಮ ತಮ್ಮ ಗುರುಗಳಿಗೆ ತಮ್ಮ ಒಳ್ಳೆಯದಕ್ಕಾಗಿಯೇ ದಕ್ಷಿಣೆ ನೀಡಬೇಕು. ॥136॥ ಪ್ರಜಾಪತಿಯೂ[10] ಸಹ ತನ್ನ ಮೂರುವಂಶಗಳಿಗೂ ಅಂದರೆ ದೇವತೆಗಳು, ರಾಕ್ಷಸರು ಮತ್ತು ಮಾನವರು, ತಮ್ಮ ಬ್ರಹ್ಮಚರ್ಯ ಮುಗಿಸಿ ಉಪದೇಶಕ್ಕಾಗಿ ಪ್ರಾರ್ಥಿಸಿದಾಗ ಇದೇತತ್ತ್ವವನ್ನು ಉಪದೇಶಿಸಿ[11]ದ್ದಾರೆ. ॥137॥ ಅವನು ಒಂದೇ ಒಂದು ಅಕ್ಷರ 'ದ' ಎಂದು ಎಚ್ಚರಿಸಿದನು. ಅದರ ಅರ್ಥವೇನಿತ್ತು? ಅವನು ಅವರನ್ನು ಪ್ರಶ್ನಿಸಿ ಅದರ ವ್ಯಾಖ್ಯಾನವನ್ನು ದೃಢೀಕರಿಸಿದನು. ಅದೊಂದು ಗುರುಶಿಷ್ಯರ ಮಧ್ಯೆ ನಡೆದ ಅಪೂರ್ವ ಲೀಲೆ. ॥138॥ ದೇವತೆಗಳು ಅದನ್ನು 'ದಾಂತ' ಅಂದರೆ ನಿಗ್ರಹಿಸು ಎಂದು, ರಾಕ್ಷಸರು 'ದಯ' ಅಂದರೆ ಕರುಣೆ, ಮತ್ತು ಮಾನವರು 'ದಾನ' ಅಂದರೆ ಕೊಡುವುದು ಎಂದು ಅರ್ಥಮಾಡಿಕೊಂಡರು. ಪ್ರಜಾಪತಿಯು 'ಭಲೆ, ಭಲೆ' ಎಂದು ಹೇಳಿದನು. ॥139॥ ದೇವತೆಗಳು ಬೇರೆ ರೀತಿಯ ಜನರೇನಲ್ಲ. ಅವರು ಕೂಡ ಮನುಷ್ಯರೇ, ಆದೆ ಪ್ರತ್ಯೇಕ ಸ್ವಭಾವ ಹೊಂದಿರುವವರು. ಅವರು ತಮ್ಮ ಸದ್ಗುಣಗಳನ್ನು ತಮ್ಮಲ್ಲಿಯೇ ನಿಗ್ರಹಿಸಿಕೊಳ್ಳುತ್ತಾರೆ. ಮತ್ತು ಸಂಯಮ ಹೊಂದಿರುತ್ತಾರೆ.'ಶಮದ್ಗುಣಗಳೇ ಅವರಿಗೆ ಶಿರೋನಾಮೆಯನ್ನು ನೀಡುತ್ತದೆ. ॥140॥ ಮನುಷ್ಯರಲ್ಲಿಯೇ ರಾಕ್ಷಸರು ಇರುತ್ತಾರೆ. ಅವರು ಹಿಂಸಾಚಾರಿಗಳಾಗಿ, ಕ್ರೂರಿಗಳಾಗಿ, ಒರಟಾಮತ್ತು ಅತ್ಯಾಸೆಯುಳ್ಳವರಾಗಿರುತ್ತಾರೆ. ಈ ರೀತಿ ಮೂರು ಬಗೆಯ[12] ಮಾನವರಿದ್ದಾರೆ. ॥141॥ ಮನುಷ್ಯನ ಅತಿದೊಡ್ಡ ದುರ್ವ್ಯಸನ ಅಂದರೆ ದುರಾಸೆ. ಹಾಗಿದ್ದೂ ಮನುಷ್ಯನನ್ನು

ಅಗಾಧವಾದ ಕತ್ತಲಿನಿಂದ, ಆಳವಾದ ದುರಾಸೆಯಿಂದ ರಕ್ಷಿಸಲು ದಯಾಸಾಗರನಾದ ಸಾಯಿನಾಥರು ತಮ್ಮ ಕೈಗಳನ್ನು ಚಾಚಿ ಅವರನ್ನು ಎಳೆದುಹಾಕುತ್ತಿದ್ದಾರೆ. ॥142॥ ತೈತ್ತರೀಯ ಉಪನಿಷತ್ತಿನಲ್ಲಿ ಮತ್ತು ಏಕಾದಶಿ ಶ್ರುತಿಯಲ್ಲಿ ಅನೇಕ ರೀತಿಯ ದಾನಗಳನ್ನು ಹೇಳಿದೆ ಅವೆಲ್ಲವನ್ನೂ ಕೇಳಿರಿ. ॥143॥ ಗೌರವ ಮತ್ತು ಶ್ರದ್ಧೆಗಳಿಂದ ದಾನ ಮಾಡಿ. ಶ್ರದ್ಧೆ ಇಲ್ಲದೆ ಕೊಡುವುದು ವ್ಯರ್ಥ. ಪ್ರತಿಯೊಬ್ಬರೂ ರಾಜನ ಅಪ್ಪಣೆಗಳನ್ನು ಮತ್ತು ಧಾರ್ಮಿಕ ಗ್ರಂಥಗಳಲ್ಲಿನ ನಿಯಮಗಳನ್ನು ಗೌರವಿಸಬೇಕು. ಮತ್ತು ಏನನ್ನಾದರೂ ಮರ್ಯಾದೆಗಾಗಿ ಕೊಡಬೇಕು. ॥144॥ ಮದುವೆ ಮತ್ತಿತರ ಸಾಮಾಜಿಕ ಸಮಾರಂಭಗಳಲ್ಲಿ ನೀವು ಸಮಾಜದ ಕಟ್ಟಳೆಯಂತೆ ಸದ್ಭಾವನೆಯನ್ನು ಪ್ರೋತ್ಸಾಹಿಸಲು ಕಾಣಿಕೆಗಳನ್ನು ನೀಡಬೇಕು. ಇವುಗಳು ಅವರ ಬೋಧನೆಯಾಗಿದ್ದವು. ॥145॥ ಬಾಬಾರವರು ಸಹ 'ದ' ಎಂಬ ಅಕ್ಷರದ ಪ್ರಕಾರ ತಮ್ಮ ಭಕ್ತರಿಂದ ಅವರಿಗೆ ಶುಭವಾಗಲೆಂದು ಅದನ್ನೇ ಕೇಳುತ್ತಿದ್ದರು. ದಯಾವಂತರಾಗಿ, ದಾನಿಗಳಾಗಿ, ನಿಗ್ರಹಶಕ್ತಿಯನ್ನು ಹೊಂದಿರಿ, ನೀವು ಪರಮಾನಂದವನ್ನು ಹೊಂದುವಿರಿ ಎನ್ನುವರು. ॥146॥ ಮೂರು ರೀತಿಯ ದುರ್ವ್ಯಸನಗಳು ಇವೆ. ಅವುಗಳಲ್ಲಿ ನಿಗ್ರಹತೆ ಇಲ್ಲದಿರುವುದು ಒಂದು. ಇವುಗಳ ಪರಿಣಾಮಗಳನ್ನು ತೆಗೆಯಲು ಒಂದು ಸುಲಭವಾದ ಪರಿಹಾರೋಪಾಯವೆಂದರೆ ಒಂದಕ್ಷರದ ಸಲಹೆ. ಅದನ್ನು ಗುರುಗಳು ವಿದ್ಯಾರ್ಥಿಗಳಿಗೆ ಬೋಧಿಸುತ್ತಲೇ ಇದ್ದಾರೆ. ॥147॥ ಕಾಮ, ಕ್ರೋಧ ಮತ್ತು ಮೋಹಗಳು ಪಾರಮಾರ್ಥಿಕ ಮಾರ್ಗದಲ್ಲಿರುವವರಿಗೆ ಬಹಳ ಅಶುಭಕರ. ಅವುಗಳನ್ನು ಗೆಲ್ಲುವುದು ಬಹಳ ಕಷ್ಟ. ಅದಕ್ಕೆ ಒಂದು ಸರಳವಾದ ಮಾರ್ಗವಿದೆ. ॥148॥ ಶ್ರುತಿಗಳ ಹಾಗೆಯೇ ಸ್ಮೃತಿಯೂ ಸಹ, ಅಕ್ಷರಮಟ್ಟಿಗೆ ಪುಷ್ಟೀಕರಣವಿದೆ. ನಾನು ಶ್ರೋತೃಗಳ ಉಪಯೋಗಕ್ಕಾಗಿ ಈ ಉಲ್ಲೇಖಗಳನ್ನು ಇಲ್ಲಿ ಕೊಡುತ್ತಿದ್ದೇನೆ. ಆದರಿಂದ ಅವರು ಇನ್ನೂ ಉತ್ತಮವಾಗಿ, ನಿಶ್ಚಯವಾಗಿ ಅರ್ಥಮಾಡಿಕೊಳ್ಳಬಹುದು. ॥149॥ ಕಾಮ, ಕ್ರೋಧ ಮತ್ತು ಮೋಹಗಳು ನರಕದ ಮೂರು ಬಾಗಿಲುಗಳು ಮತ್ತು ಆತ್ಮನಾಶಕ್ಕೆ ಕಾರಣಗಳು. ಆದ್ದರಿಂದ ಅವುಗಳನ್ನು ನಿಶ್ಚಯವಾಗಿಯೂ ದೂರೀಕರಿಸಬೇಕು.[13] ॥150॥ ಅತ್ಯಂತ ದಯಾಮಯನೂ ಮಹಾನ್ ವ್ಯಕ್ತಿಯೂ ಆದ ಸಾಯಿಯು ತಮ್ಮ ಭಕ್ತರಿಂದ ಅವರ ಒಳ್ಳೆಯದಕ್ಕಾಗಿಯೇ ದಕ್ಷಿಣೆಯನ್ನು ಕೇಳುತ್ತಿದ್ದರು. ಈ ರೀತಿ ಅವರಿಗೆ ತ್ಯಾಗಭಾವನೆಯನ್ನು ಕಲಿಸುತ್ತಿದ್ದರು. ॥151॥ ದಕ್ಷಿಣೆಯ ಬೆಲೆ ಏನು? ತನ್ನ ಗುರುವಿನ ಆಜ್ಞೆಯನ್ನು ಪಾಲಿಸಲು ಸಿದ್ಧನಾಗಿಲ್ಲದಿರುವಾಗ ಆಧ್ಯಾತ್ಮಿಕತೆಯೇನು? ॥152॥ ನಿಜವಾಗಿಯೂ ಬಾಬಾರವರು ತಮ್ಮ ಭಕ್ತರ ಕ್ಷೇಮಕ್ಕಾಗಿ ದಕ್ಷಿಣೆ ಕೇಳುವುದಕ್ಕೆ ಕಾರಣವೇನು? ಅವರ ಸ್ವಂತ ಜೀವನ ದಕ್ಷಿಣೆಯ ಮೇಲೆ ಅವಲಂಬಿಸಿರಲಿಲ್ಲ. ॥153॥ ಅವರು ಊಟಕ್ಕಾಗಿ ಭಿಕ್ಷೆ ಬೇಡುತ್ತಿದ್ದರು. ದಕ್ಷಿಣೆ ಬೇಡುವಾಗ ಯಾವುದೇ ಸ್ವಾರ್ಥ ಉದ್ದೇಶ ಇರಲಿಲ್ಲ. ಅವರ ಒಂದೇ ಧ್ಯೇಯವೆಂದರೆ ತಮ್ಮ ಭಕ್ತರ ಮನಸ್ಸುಗಳು ಪರಿಶುದ್ಧವಾಗಿರಬೇಕೆನ್ನುವುದು. ॥154॥ ಮೇಲೆ ಹೇಳಿದ ವೇದಗಳಲ್ಲಿನ ಉಲ್ಲೇಖಗಳ ಪ್ರಕಾರ ದಕ್ಷಿಣೆಯು ಅತ್ಯವಶ್ಯಕ. ಅದನ್ನು ಕೊಡುವವರೆಗೆ ಪೂಜೆಯು ಅಪೂರ್ಣ. ॥155॥

ಈಗ ದಕ್ಷಿಣೆಯ ವಿಭಾಗವನ್ನು ಅಂತ್ಯಗೊಳಿಸೋಣ. ಅದರ ಅರ್ಥವನ್ನು ಬಹಳ ಸ್ಪಷ್ಟವಾಗಿ ವಿವರಿಸಲಾಯಿತು. ತನ್ನ ಛತ್ರ ಒಳಿತಿಗಾಗಿ ಮಾತ್ರವೇ ದಕ್ಷಿಣೆಯನ್ನು ಸ್ವೀಕರಿಸುವ ಹಿನ್ನೆಲೆಯಲ್ಲಿ ಯಾವುದೇ ಸ್ವಾರ್ಥದ ಉದ್ದೇಶವಾಗಲೀ, ದುರಾಸೆಯಾಗಲೀ ಇರಲಿಲ್ಲ. ॥156॥ ಆದುದರಿಂದ ಮುಂದೆ ಅಪೂರ್ಣವಾಗಿ ಉಳಿದ ಕತೆಯನ್ನು ವಿವರವಾಗಿ ಹೇಳುತ್ತೇನೆ. ರತನ್‌ಜೀಯವರ ದಕ್ಷಿಣೆಯ ಬಗೆಗಿನ ಪ್ರಸಂಗವನ್ನು ಮತ್ತು ಸಾಯಿಯು ಅದ್ಭುತವಾಗಿ ಅದನ್ನು ನಿಭಾಯಿಸಿದ ಬಗ್ಗೆ ಹೇಳುವೆನು. ॥157॥ ಶ್ರೋತೃಗಳೇ, ಕೇಳಿರಿ, ಈ ಅತ್ಯದ್ಭುತ ಕತೆಯನ್ನು ಪೂರ್ಣ ಭಕ್ತಿಯಿಂದ ಕೇಳಿರಿ ಮತ್ತು ಸಾಯಿಯವರು ಅಪರೂಪದಲ್ಲಿ ಅಪರೂಪದ ವ್ಯಕ್ತಿ ಮತ್ತು ದುರಾಸೆಯಿಂದ ದೂರವಿದ್ದರು ಎಂಬುದನ್ನು ನೋಡಿ. ॥158॥ ಸೇಠ್‌ಜೀಯಿಂದ ದಕ್ಷಿಣೆಯನ್ನು ಕೇಳುವಾಗ ಸಾಯಿಯವರು ಒಂದು ಪೂರ್ವ ಪ್ರಸಂಗವನ್ನು ನಮೂದಿಸುತ್ತಾರೆ. ಆದರೆ ಸೇಠಜೀಗೆಅದನ್ನು ನೆನಪಿಸಿಕೊಳ್ಳಲಾಗಲಿಲ್ಲ. ಮತ್ತು ಅವನು ಗಾಬರಿಯಾದನು. ॥159॥ "ನೀನು ಮೂರು ರೂಪಾಯಿ ಮತ್ತು ಹದಿನಾಲ್ಕು ಆಣೆಗಳನ್ನು ಮುಂಚೆಯೇ ಕೊಟ್ಟಿರುವೆ. ಅದು ನನಗೆ ಗೊತ್ತು. ನನಗಾಗಿ ಉದ್ದೇಶಿಸಿ ಇಟ್ಟಿದ್ದ ಹಣದಲ್ಲಿ ಕೇವಲ ಉಳಿದ ಹಣವನ್ನು ಮಾತ್ರ ದಕ್ಷಿಣೆಯಾಗಿ ಕೊಡು." ॥160॥ ಇದೇ ಮೊದಲ ಬಾರಿ ಬಾಬಾರವರ ದರ್ಶನವಾಗಿತ್ತು. ಬಾಬಾರವರ ಈ ಮಾತುಗಳನ್ನು ಕೇಳಿ ರತನ್‌ಜೀ ಸೇಠ್ ಆಶ್ಚರ್ಯಚಕಿತನಾದನು. ಮತ್ತು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿದನು. ॥161॥ "ನಾನು ಶಿರಡಿಗೆ ಈ ಹಿಂದೆ ಯಾವಾಗಲೂ ಬಂದಿಲ್ಲ ಅಥವಾ ಯಾರ ಜೊತೆಯಲ್ಲೂ ಏನನ್ನೂ ಕಳಿಸಿಲ್ಲ." ಇಂತಹ ಸಂದರ್ಭದಲ್ಲಿ ಸಾಯಿ ಮಹಾರಾಜರ ಮಾತುಗಳಿಂದ ಉಂಟಾದ ಆಶ್ಚರ್ಯವನ್ನು ಗಮನಿಸಿ. ॥162॥ ಈ ರೀತಿಯ ಘಟನೆ ಸಂಭವಿಸಿರಲಿಲ್ಲ. ರತನ್‌ಜೀಯು ಪೇಚಾಟಕ್ಕೆ ಸಿಕ್ಕಿಕೊಂಡನು. ಅವನು ದಕ್ಷಿಣೆಯನ್ನು ಕೊಟ್ಟು ನಮಸ್ಕರಿಸಿದನು. ಆದರೆ ತನ್ನ ಸಂಶಯವನ್ನು ಪರಿಹರಿಸಲಾಗಲಿಲ್ಲ. ॥163॥ ಅದನ್ನು ಅಲ್ಲಿಗೇ ಬಿಡಲಾಯಿತು. ಅವನು ಬಂದ ಕಾರಣವನ್ನು ತಿಳಿಸಿದನು. ಮತ್ತೆ ಸಾಷ್ಟಾಂಗ ಪ್ರಣಾಮ ಮಾಡಿ ಸಾಯಿ ಚರಣಗಳಲ್ಲಿ ಕೈಜೋಡಿಸಿ ಕುಳಿತುಕೊಂಡನು. ॥164॥ ಸೇಠ್‌ಜೀಯು ಅತ್ಯಂತ ತೃಪ್ತಿಹೊಂದಿದನು. ಮತ್ತು ಹೇಳಿದನು, "ಬಾಬಾ, ನನ್ನ ಹಿಂದಿನ ಜನ್ಮದ ಪುಣ್ಯಕಾರ್ಯಗಳ ಫಲದಿಂದ ಒಳ್ಳೆಯದಾಗಿದೆ. ಮತ್ತು ಅದರಿಂದಾಗಿ ನಿಮ್ಮ ಚರಣಗಳ ದರ್ಶನ ಉಂಟಾಯಿತು." ॥16ರ ನಾನು ದುರಾದೃಷ್ಟವಂತ ಮತ್ತು ಅಜ್ಞಾನಿ. ಪೂಜಾವಿಧಾನ ನನಗೆ ತಿಳಿದಿಲ್ಲ. ಧಾರ್ಮಿಕ ವಿಧಿಗಳು. ಯಜ್ಞಗಳು ತಿಳಿದಿಲ್ಲ. ವಿಧಿವಶಾತ್ ನನಗೆ ಭೂತ, ಭವಿಷ್ಯತ್, ವರ್ತಮಾನಗಳನ್ನು ತಿಳಿದಿರುವ ಈ ಪ್ರಜ್ಞಾವಂತನ ದರ್ಶನವಾಯಿತು. ॥166॥ "ನನ್ನ ದುಃಖದ ಕಾರಣ ನಿಮಗೆ ತಿಳಿದಿದೆ. ಓ, ದಯಾಮಯ, ದಯಮಾಡಿ ಅದನ್ನು ದೂರಮಾಡಿ, ಓ ಕರುಣಾಮಯ! ಈ ನಿಮ್ಮ ಭಾವೋದ್ವೇಗಯುಕ್ತ ಭಕ್ತನನ್ನು ನಿಮ್ಮ ಚರಣಗಳಿಂದ ದೂರಮಾಡಬೇಡಿ." ॥167॥ ಸಾಯಿನಾಥರಿಗೆ ಅವನ ಮೇಲೆ ಕನಿಕರ ಉಂಟಾಯಿತು. ಅವರು ಹೇಳಿದರು, "ಅನವಶ್ಯಕವಾಗಿ ಚಿಂತಿಸಬೇಡ. ನಿನ್ನ ದುರಾದೃಷ್ಟಗಳೆಲ್ಲ

ಇಲ್ಲಿಂದಾಚೆಗೆ ಕಡಿಮೆಯಾಗಲು ಪ್ರಾರಂಭವಾಗುತ್ತವೆ." ॥168॥ ಅವರು ಉದಿಯ ಪ್ರಸಾದವನ್ನು ಅವನ ಕೈಯಲ್ಲಿ ಇಟ್ಟು ವರದ ಹಸ್ತವನ್ನು ಅವನ ತಲೆಯ ಮೇಲಿಟ್ಟು ಹೇಳಿದರು: "ಅಲ್ಲಾ ನಿನ್ನ ಮನದಾಸೆಯನ್ನು ಪೂರೈಸುತ್ತಾನೆ." ಈ ಮಾತುಗಳಿಂದ ಅವರು ಶೇಠ್‌ಜೀಯನ್ನು ಆಶೀರ್ವದಿಸಿದರು. ॥169॥ ಅನಂತರ, ರತನ್‌ಜೀಯು ಹಿಂತಿರುಗಲು ಅನುಮತಿ ಪಡೆದು ನಾಂದೇಡ್‌ಗೆ ವಾಪಸ್ಸಾದನು. ಅಲ್ಲಿ ನಡೆದುದೆಲ್ಲವನ್ನೂ ವಿಶದವಾಗಿ ಗಣುದಾಸ್‌ನಿಗೆ ವಿವರಿಸಿದನು. ॥170॥ "ನಾನು ಇಚ್ಛೆಪಟ್ಟಂತೆ ಒಳ್ಳೆಯ ದರುಶನವಾಯಿತು. ನನ್ನ ಹೃದಯ ಸಂತಸದಿಂದ ತುಂಬಿತು. ನಾನು ಅವರಿಂದ ವರವನ್ನು ಮತ್ತು ಆಶ್ವಾಸನೆಯನ್ನೂ ಪಡೆದಿದ್ದೇನೆ. ಮತ್ತು ಆಶೀರ್ವಚನವನ್ನೂ ಪಡೆದಿದ್ದೇನೆ. ॥171॥ "ಎಲ್ಲವೂ ಬಹಳ ಚೆನ್ನಾಗಿ ನಡೆಯಿತು. ಆದರೆ ನನಗೆ ಒಂದು ವಿಷಯ ಅರ್ಥವಾಗಲಿಲ್ಲ. ಮಹಾರಾಜರು ಅದೇನು ಹೇಳಿದರು? ಅದನ್ನು ಅನುಸರಿಸಲು ಆಗಲೇ ಇಲ್ಲ." ॥172॥ "ನೀನು ನನಗೆ ಮೂರು ರೂಪಾಯಿ ಮತ್ತು ಹದಿನಾಲ್ಕು ಆಣೆಗಳನ್ನು ಮೊದಲೇ ಕೊಟ್ಟಿರುವೆ. ಅದು ನನಗೆ ಗೊತ್ತು." ಬಾಬಾರವರ ಈ ಮಾತುಗಳ ಅರ್ಥವನ್ನು ಸ್ಪಷ್ಟವಾಗಿ ವಿವರಿಸು. ॥173॥ "ಯಾವ ರೂಪಾಯಿಗಳು. ಮತ್ತು ಯಾವ ಆಣೆಗಳು? ಈ ಹಿಂದೆ ನಾನು ಯಾವಾಗ ಅವರಿಗೆ ಕೊಟ್ಟಿದ್ದೆ? ಅದರ ರಹಸ್ಯ ನನಗೆ ತಿಳಿದಿಲ್ಲ. ಏಕೆಂದರೆ ನಾನು ಶಿರಡಿಗೆ ಹೋದದ್ದೇ ಇದೇ ಮೊದಲ ಬಾರಿ." ॥174॥ "ಈ ರಹಸ್ಯವನ್ನು ಬೇಧಿಸಲಾರೆ, ಇದು ಗೂಢ ರಹಸ್ಯವುಳ್ಳ ಕಗ್ಗಂಟಾಗಿದೆ. ಇದು ನನ್ನ ಗ್ರಹಣಶಕ್ತಿಗೂ ಮೀರಿದ್ದಾಗಿದೆ. ದಯಮಾಡಿ ಇದರ ಮೇಲೆ ಬೆಳಕು ಚೆಲ್ಲುವೆಯಾ?" ॥175॥ "ಇದು ಒಂದು ನಿಗೂಢ ರಹಸ್ಯ." ದಾಸಗಣು ತಾನೇ ಯೋಚನೆ ಮಾಡಿದ. ಅದರ ಅರ್ಥ ಏನಾಗಿರಬಹುದು? ಅವನು ಯಾವುದೇ ತೀರ್ಮಾನಕ್ಕೆ ಬರಲಾಗಲಿಲ್ಲ. ॥176॥ ಬಹಳ ಯೋಚನೆ ಮಾಡಿದ ಮೇಲೆ ಅವನಿಗೆ ಮೌಲ್ವಿ ಸಾಹೇಬ್ ಎಂದು ಕರೆಯಲ್ಪಡುತ್ತಿದ್ದ ಒಬ್ಬ ಅವಲಿಯ ನೆನಪು ಮಾಡಿಕೊಂಡನು. ॥177॥ ಅವನೊಬ್ಬ ಮುಸ್ಲಿಮನು. ಅವನ ರೀತಿ ನೀತಿಗಳು ಸಂತರ ರೀತಿಯಲ್ಲಿತ್ತು, ಅವನು ತನ್ನ ಜೀವಿತಕ್ಕಾಗಿ ಕೂಲಿ ಕೆಲಸ ಮಾಡುತ್ತ, ತನ್ನನ್ನು ವಿಧಿಯಾಟಕ್ಕೆ ಬಿಟ್ಟಿದ್ದನು. ॥178॥ ನಾನು ಅವನ ಜೀವನ ಚರಿತ್ರೆಯನ್ನು ವಿವರವಾಗಿ ಕೊಟ್ಟಲ್ಲಿ ಅದು ನನ್ನ ಸ್ವಂತ ವಿಷಯದಿಂದಲೇ ಕ್ರಮ ತಪ್ಪಿದಂತಾಗುತ್ತದೆ. ಅದೂ ಅಲ್ಲದೆ, ಈ ಮೌಲ್ವಿ ಸಾಹೇಬನ ಜೀವನ ಚರಿತ್ರೆ ನಾಂದೇಡಿನಲ್ಲಿ ಎಲ್ಲರಿಗೂ ತಿಳಿದಿದೆ. ॥179॥ ಶಿರಡಿಯಾತ್ರೆಯ ನಿರ್ಧಾರ ಮಾಡಿದ ಸಮಯದಲ್ಲಿ ಮೌಲ್ವಿ ಸಾಹೇಬನು ಸೇಠ್‌ಜಿಯ ಮನೆಗೆ ಆಕಸ್ಮಿಕವಾಗಿ ತಾನಾಗಿಯೇ ಬಂದನು. ॥180॥ ಅವರಿಬ್ಬರ ಮಧ್ಯೆ ಗಾಢವಾದ ಪರಸ್ಪರ ಪ್ರೀತಿಯಿತ್ತು, ಆದ್ದರಿಂದ ಅವರಿಗೆ ಪದ್ಧತಿಯ ಪ್ರಕಾರ ಹಣ್ಣುಗಳು, ಉಪಾಹಾರ ಮತ್ತು ಹಾರ ಇವನ್ನು ಸಮರ್ಪಿಸಲಾಯಿತು. ॥181॥ ಮೌಲ್ವಿಯವರಿಗೆ ಲಘು ಊಟವನ್ನು ಅರ್ಪಿಸಲು ಸೇಠಜಿಗೆ ಪ್ರೇರಣೆಯಾಯಿತು. ಮತ್ತು ದಾಸಗಣುವಿಗೆ ಈ ಪ್ರಸಂಗದ ಖರ್ಚನ್ನು ಪರೀಕ್ಷಿಸುವ ಯೋಚನೆ ಆ ಕ್ಷಣದಲ್ಲಿ ಉಂಟಾಯಿತು. ॥182॥ ಅವನು ಖರ್ಚುವೆಚ್ಚಗಳ ವಿವರವನ್ನು ವಿಚಾರಿಸಿದನು.

ಎಲ್ಲವನ್ನೂ ಕೂಡಿಸಿದನು ಮತ್ತು ಒಂದೊಂದು ಪೈಸೆಯನ್ನೂ ಒಟ್ಟಿಗೆ ಕೂಡಿಸಿದಾಗ ಸರಿಯಾಗಿ ಅಷ್ಟೇ ಆಯಿತು. ॥183॥ ಒಟ್ಟಾರೆ ಮೂರು ರೂಪಾಯಿಗಳು ಮತ್ತು ಹದಿನಾಲ್ಕು ಆಣೆಗಳು, ಹೆಚ್ಚೂ ಇಲ್ಲ ಕಡಿಮೆಯೂ ಇಲ್ಲ, ಸರಿಯಾಗಿ ಅಷ್ಟೇ ಇತ್ತು, ಅದನ್ನು ತಾವೇ ಸ್ವೀಕರಿಸಿ ರಶೀದಿ ಕೊಟ್ಟ ಹಾಗೆಂದು ತಿಳಿದು ಪ್ರತಿಯೊಬ್ಬರೂ ಬೆರಗಾದರು. ॥184॥ ಸಾಯಿ ಮಹಾರಾಜರು ಜ್ಞಾನದ ನಿಧಿಯೇ ಆಗಿದ್ದರು. ಮಸೀದಿಯಲ್ಲಿ ಕುಳಿತು ಎಲ್ಲವನ್ನೂ ತಿಳಿದಿದ್ದರು. ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಲ್ಲದರ ಅರಿವಿತ್ತು, ಯಾವದೇ ರಾಜ್ಯದಲ್ಲಿ ಎಲ್ಲಿ ಏನೇ ಸಂಭವಿಸಿದರೂ ಅದು ತಿಳಿದಿರುತ್ತಿತ್ತು. ॥185॥ ಸಾಯಿ ಸಮರ್ಥರು ಎಲ್ಲಾ ಜೀವಿಗಳಲ್ಲೂ ಒಂದಾಗದ ಹೊರತು ಅವರಿಗೆ ಈ ತರಹದ ವಿಷಯಗಳನ್ನು ಅನುಭವಿಸಿ ಇತರರಿಗೆ ತಿಳಿಸಲು ಆಗುತ್ತಿತ್ತೇನು? ॥186॥ ನಾಂದೇಡ್ – ಶಿರಡಿ ಇವೆರಡರ ಮಧ್ಯೆ ಬಹಳ ದೂರವಿದೆ. ಅದೂ ಅಲ್ಲದೆ ಈ ಇಬ್ಬರು ಸಂತರೂ ಪರಸ್ಪರ ಅರಿತಿರಲಿಲ್ಲ. ಹಾಗಿದ್ದಲ್ಲಿ ಸಾಯಿ ಈ ಸಮಾಚಾರವನ್ನು ಹೇಗೆ ತಿಳಿಯಬಲ್ಲವರಾಗಿದ್ದರು? ॥187॥ ಸಾಯಿ ಮಹಾರಾಜರು ಒಬ್ಬ ವ್ಯಕ್ತಿ ಮತ್ತು ಮೌಳಿಬುವಾರವರು ಮತ್ತೊಬ್ಬ ಬೇರೆ ವ್ಯಕ್ತಿ. ಇದು ದ್ವೈತಭಾವನೆಯ ತಪ್ಪು ತಿಳುವಳಿಕೆ. ನಿಜವಾಗಿಯೂ ಇಬ್ಬರ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲ. ॥188॥ ಮೌಳಿಬುವಾನ ಆತ್ಮವೂ ಎಲ್ಲ ಜೀವಿಗಳಲ್ಲಿ ಇರುವ ಆತ್ಮವೂ ಒಂದೇ. ಆದರೆ ಆತ್ಮದ ಏಕತ್ವದ ರಹಸ್ಯವನ್ನು ಅರಿತವನು ಬಹಳ ಭಾಗ್ಯವಂತನು. ॥189॥ ಹೊರಗಿನ ದೇಹಗಳು ಎರಡಾಗಿದ್ದರೂ ಅಂತರಂಗದಲ್ಲಿ ಏಕತ್ವವನ್ನು ಹೊಂದಿದೆ. 'ಅವರಿಬ್ಬರು' ಎಂಬ ಪದವನ್ನು ಉಪಯೋಗಿಸುವುದೂ ಸಹ ತಪ್ಪು, ಏಕೆಂದರೆ ಅವು ಇರಡೂ ಎಂದಿಗೂ ಬೇರೆ ಅಲ್ಲ. ॥190॥ ಇಬ್ಬರಿಗೂ ಒಂದೇ ಸುಜ್ಞಾನದ ಅರಿವಿತ್ತು, ಒಂದೇ ಆತ್ಮ, ಒಂದೇ ಗುರಿ, ಎಲ್ಲವೂ ಒಂದೇ. ಇಬ್ಬರೂ ಒಂದು ಪರಮ ಚೇತನದ ಸಾರವೇ ಮತ್ತು ಒಂದೇ ಗುಣವುಳ್ಳವರು. ॥191॥ ಶಿರಡಿ ಮತ್ತು ನಾಂದೇಡ್ ಮಧ್ಯೆ ಬಹಳ ದೂರವಿದೆ. ಆದರೆ ಅವರ ಮನಸ್ಸುಗಳು ಐಕ್ಯತೆಯಲ್ಲಿದ್ದವು. ಅವರ ಆತ್ಮ ಒಂದೇ ಆಗಿದ್ದು, ಒಂದೇ ದೇಹದ ರೀತಿ ಇದ್ದವು. ಆದುದರಿಂದ ಅವರು ಸಂಪರ್ಕವನ್ನು ಬದಲಿಸಿಕೊಂಡರು. ॥192॥ ಸಾಧುಗಳು ಸಂತರು ಅದೆಷ್ಟು ಅಸಾಧಾರಣ ವ್ಯಕ್ತಿಗಳು. ಅವರುಗಳು ತಂತಿ ಇಲ್ಲದೆ ಇರುವ ಯಂತ್ರಗಳು. ಆಧಾರ ತಂತಿ (ಲಂಗರು ತಂತಿ) ಇಲ್ಲದೆ ಇರುವಂತೆ ಇರುತ್ತಾರೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಏನಾದರೂ ನಡೆಯಬಹುದು. ಅವುಗಳನ್ನು ಮೊದಲಿನಿಂದ ಕೊನೆಯವರೆಗೆ ಅವರು ಅರಿತಿರುತ್ತಾರೆ. ॥193॥ ಅನಂತರ ಸ್ವಲ್ಪ ಸಮಯ ಕಳೆದ ಮೇಲೆ ಭಗವಂತನು ರತನ್‌ಜೀಯನ್ನು ಅನುಗ್ರಹಿಸಿದನು. ಅವನ ಪತ್ನಿ ಗರ್ಭ ತಳೆದಳು. ಭರವಸೆಯ ಮರ ಅರಳಿತು. ॥194॥ ಒಂದು ಶುಭ ಮುಹೂರ್ತದಲ್ಲಿ ಅವನ ಪತ್ನಿ ಹಡೆದಳು. ಆಶೀರ್ವಾದವು ಫಲ ನೀಡಿತು. ಒಬ್ಬ ಪುತ್ರ ಜನಿಸಿದನು. ಮತ್ತು ರತನ್‌ಜಿಯು ಆನಂದಪುಲಕಿತನಾದನು. ॥195॥ ಅವನಿಗೆ ಪುತ್ರ ಸಂತಾನದಿಂದ ಉಂಟಾದ ಸಂತೃಪ್ತಿಯನ್ನು, ಅನೇಕ ವರ್ಷಗಳ ಬರಗಾಲದ ನಂತರ ಸುರಿಯುವ ವರ್ಷಧಾರೆಯ ರೀತಿ

ವರ್ಣಿಸಲಾಯಿತು. ॥196॥ ಅನಂತರ ಅವನ ವಂಶವೃಕ್ಷ ಅರಳಿತು. ಕೊಂಬೆಗಳು ಹರಡಿದವು. ಕಾಲಾಂತರದಲ್ಲಿ ಸಮೃದ್ಧಿಯಾದವು ಮತ್ತು ಗಂಡು ಮತ್ತು ಹೆಣ್ಣು ಸಂತಾನಗಳು ಫಲಭರಿತವಾದುವು. ರತನ್‌ಜಿ ಬಹಳ ಸಂತೋಷಪಟ್ಟನು.[14] ॥197॥ ಅನಂತರ ಅವನು ಸಾಯಿ ದರ್ಶನಕ್ಕೆ ಹೋದನು. ಅವರ ಆಶೀರ್ವಾದದಿಂದ ಅವನ ಆಸೆಗಳು ಪೂರೈಸಿದ್ದವು. ಅವನು ನಿಜವಾಗಿಯೂ ಸಂತೃಪ್ತನಾಗಿದ್ದನು. ॥198॥ ಒಂದು ಮಾವಿನ ಮರವು ವಸಂತ ಕಾಲದಲ್ಲಿ ಪೂರ್ಣವಾಗಿ ಅರಳಿದ್ದರೂ ಎಲ್ಲ ಹಣ್ಣುಗಳೂ ಮಾಗುವುದಿಲ್ಲ. ಅದೇ ರೀತಿ ಹನ್ನೆರಡು ಮಕ್ಕಳಲ್ಲಿ[15] ಕೇವಲ ನಾಲ್ಕು ಜೀವ ಸಹಿತ ಉಳಿದವು. ಮತ್ತು ನಾಂದೇಡ್‌ನಲ್ಲಿ ಸಂತಸದ ಜೀವನ ನಡೆಸುತ್ತಿದ್ದರು. ॥199॥ ರತನ್‌ಜೀ ಬಹಳ ಸಾಧು ಸ್ವಭಾವದವನಾಗಿದ್ದನು. ಏನೇ ಆದರೂ ಅದು ವಿಧಿ ಬರಹವೇ ಎಂಬುದನ್ನು ನಗುನಗುತ್ತಲೇ ಒಪ್ಪಿಕೊಳ್ಳುವುದರಲ್ಲಿ ನಂಬಿಕೆ ಇಟ್ಟವನು. ಆದ್ದರಿಂದ ಅವನು ಇದಕ್ಕಾಗಿ ಪಶ್ಚಾತ್ತಾಪ ಪಡಲಿಲ್ಲ. ॥200॥ ಸಕಲ ಚರಾಚರಗಳಲ್ಲೂ ಇರುವ ಸಾಯಿಯ ವಿಶ್ವವ್ಯಾಪಕತ್ವವನ್ನು ತೋರಿಸುವುದೇ ಮುಂದಿನ ಕಥೆಯ ಸಾರ. ಯಾರು ಎಲ್ಲೇ ಇದ್ದರೂ ಇದರ ಅನುಭವ ನಿಜಕ್ಕೂ ಅವರಿಗಾಗುತ್ತದೆ. ॥201॥ ಠಾಣೆಯ ಚೋಲ್ಕರ್ ಎಂಬ ಬಡ, ಅಸಹಾಯಕ ವ್ಯಕ್ತಿಯೊಬ್ಬನ ಶ್ರದ್ಧಾಭಕ್ತಿಗಳಿಂದ ಸದ್ಗುರುಗಳು ಹೇಗೆ ಸುಪ್ರೀತರಾದರು? ॥202॥ ಯಾವ ರೀತಿ ಈ ವ್ಯಕ್ತಿಯು ಹರಕೆ ತೀರಿಸಲು ಸಾಯಿಯ ಹತ್ತಿರ ಬಂದಿದ್ದ. ಅವರನ್ನು ಆ ಹಿಂದೆ ಎಂದೂ ನೋಡಿರದಿದ್ದರೂ ಹೇಗೆ ಅವನ ಇಷ್ಟಾರ್ಥಗಳೆಲ್ಲ ಈಡೇರಿದ್ದವು ಮತ್ತು ಸಾಯಿಯಿಂದ ಯಾವ ಅನುಭವ ಅವನಿಗಾಯಿತು? ॥203॥ ಯಾವ ರೀತಿ ಪ್ರೀತಿಯಿಲ್ಲದ ಭಜನೆಯು ಭಜನೆಯಲ್ಲವೋ, ಪುಸ್ತಕವನ್ನು ಗ್ರಹಿಸದೆ ಓದುವುದು ಓದು ಅಲ್ಲವೋ, ಅದೇ ರೀತಿ ಭಗವಂತನಲ್ಲಿ ಭಕ್ತಿಭಾವವಿಲ್ಲದೆ ಪ್ರಾರ್ಥನೆ ಮಾಡುವುದೂ ಸಹ. ಈ ಎಲ್ಲಾ ಪ್ರಯತ್ನಗಳೂ ವ್ಯರ್ಥ ಎಬುದೆಲ್ಲ ತಿಳಿಯುತ್ತದೆ. ॥204॥ ಅದೇ ರೀತಿ ಅನುಭವವಿಲ್ಲದ ಜ್ಞಾನವು ಕುಂಕುಮ ತಿಲಕವಿಲ್ಲದ ಹಣೆಯಂತೆ, ಇದು ಕೇವಲ ಪುಸ್ತಕದ ವಾಕ್ಯವಲ್ಲ. ಆದರೆ ನೀನು ಇದನ್ನು ಪರೀಕ್ಷಿಸಬಹುದು ಮತ್ತು ರುಜುವಾತು ಮಾಡಬಹುದು. ॥205॥ ಸಾಯಿಲೀಲೆಗಳ ಬಗ್ಗೆ ಈ ಪುಸ್ತಕವನ್ನು ಏಕೆ ಬರೆಯುತ್ತಿದ್ದೇನೆ? ನಾನು ಇದರ ಜೊತೆಯಲ್ಲಿ ಏಕೆ ಇಷ್ಟು ತಲ್ಲೀನನಾಗಿರುವೆ ಎಂಬುದು ನನಗೆ ಗೊತ್ತಿಲ್ಲ. ಇದು ಸಾಯಿಯಿಂದ ನನ್ನ ಮೂಲಕ ಬರೆಯಲ್ಪಟ್ಟಿದೆ. ಆದ್ದರಿಂದ ಅವರಿಗೆ ಮಾತ್ರ ಇದರ ಅಂತರಾರ್ಥ ತಿಳಿದಿದೆ. ॥206॥ ಅದಲ್ಲದೆ ಇಂತಹ ಪುಸ್ತಕವನ್ನು ಬರೆಯಲು ಅಧಿಕಾರಯುಕ್ತ ಪ್ರಮಾಣವಾದ ಅರಿವಿನ ಅವಶ್ಯಕತೆ ಬೇಕಾಗಿದೆ. ಆದರೆ ನಾನು ಸಾಯಿಯನ್ನು ಸೇವಿಸುತ್ತಿರುವೆನು ಮತ್ತು ಅವರ ಅಧೀನದಲ್ಲಿರುವವನು ಮಾತ್ರ, ನಾನು ಅವರ ಆಜ್ಞಾಧಾರಕ. ॥207॥ ಶ್ರೋತೃಗಳು ಬಾಯಾರಿದ ಚಾತಕಪಕ್ಷಿಗಳ ತರಹ. ಸಾಯಿ ಸಮರ್ಥರು ಆತ್ಮತೃಪ್ತಿಯೆಂಬ ಮೋಡಗಳ ತರಹ ಬಾಯಾರಿದವರ ಬಾಯಾರಿಕೆಯನ್ನು ತಣಿಸಲು ತಮ್ಮ ಜೀವನ ಚರಿತ್ರೆಯ ರೂಪದಲ್ಲಿ ಮಳೆ ಸುರಿಸುತ್ತಾರೆ. ॥208॥ ನನ್ನ ದೇಹವು ಸಾಯಿ ಚರಣಕಮಲಗಳ ಧೂಳಿಯಲ್ಲಿ ಸಾಷ್ಟಾಂಗ

ಪ್ರಣಾಮ ಮಾಡಲಿ. ಅವರ ಅಪ್ಪಣೆಯಿಂದ ಈ ಉಪನ್ಯಾಸ ಸ್ಫೂರ್ತಿ ಹೊಂದಿದೆ ಮತ್ತು ಅವರ ಜೀವನ ಚರಿತ್ರೆಯನ್ನು ಇದವಿವರಿಸುತ್ತದೆ. ॥209॥ ಅವರು ಈ ಪದಗಳ ಹಿಂದಿನ ಸ್ಫೂರ್ತಿಯು. ಅವರು ತಮ್ಮ ಕತೆಯನ್ನು ತಾವೇ ಹೇಳುತ್ತಾರೆ. ಆದುದರಿಂದ ನನ್ನ ಅಲೆಮಾರಿ ಮನಸ್ಸು ಅವರ ಚರಣಗಳಲ್ಲಿ ವಿರಮಿಸಲಿ. ॥210॥ ಈ ಭಜನೆಗಳು ಕಾಯಾ, ವಾಚಾ ಸಾಯಿ ಸ್ಮರಣೆಯಲ್ಲಿರುವಂತೆ ನನ್ನ ಮನಸ್ಸು ಸಹ ನಿರಂತರವಾಗಿ ಸಾಯಿ ಚಿಂತನ ಮಾಡಲಿ. ಸಾಯಿಯು ಅಖಂಡ ಆನಂದದ ನೆಲೆ. ನಾನು ಮಾತ್ರ ಸಾಯಿಯ ದೀನ ಸೇವಕನು. ॥211॥ ನಿಜವಾಗಿಯೂ, ಸಾಯಿಯೂ ತಾನೇ ತನ್ನ ಜೀವನ ಚರಿತ್ರೆಯ ನಿರೂಪಣೆ ಮಾಡಿ ಸ್ಫೂರ್ತಿಯ ನೆಲೆಯಾಗಿ ರೂಪುಗೊಳ್ಳುತ್ತಾರೆ. ಆದರೆ ಅವರು ಶ್ರೋತೃಗಳಿಗಿಂತ ಭಿನ್ನರೇ? ಇಲ್ಲ. ಶ್ರೋತೃವೂ ಸಹ ಸಾಯಿಯಿಂದ ಬೇರೆಯಲ್ಲ. ॥212॥ ನೋಡುವಾಗ ಇದು ಬಹಳ ಸರಳ ಜೀವನಚರಿತ್ರೆಯಂತೆ ಕಾಣುತ್ತದೆ. ಆದರೆ ಈ ನಾಟಕವೆಲ್ಲ ಸಾಯಿಯ ನಟನೆಯಷ್ಟೆ. ಅವರು ತಾವೇ ನಟರಾಗುತ್ತಾರೆ ಮತ್ತು ಪ್ರೀತಿಯಿಂದ ಈ ಶಕ್ತಿಯುತ ನಾಟಕವನ್ನು ಆಡುತ್ತಾರೆ. ॥213॥ ಬಾಬಾರವರ ಕಥೆಯು ಅತ್ಯದ್ಭುತ. ಅವರು ವಿಚಿತ್ರ ಅನುಭವಗಳನ್ನು ತಮ್ಮ ಭಕ್ತರಿಗೆ ನೀಡುತ್ತಾರೆ. ಅವರು ನನ್ನನ್ನು ಬರೆಯಲು ಒಂದು ಉಪಕರಣವನ್ನಾಗಿ ಮಾಡಿಕೊಂಡಿದ್ದಾರೆ. ಈ ರೀತಿ ತಮ್ಮ ಭಕ್ತರಿಗೆ ಮತ್ತು ಶಿಷ್ಯರ ಸಮುದಾಯಕ್ಕೆ ಆನಂದ ನೀಡುತ್ತಾರೆ. ॥214॥ ಇದು ಕೇವಲ ಕತೆಯಲ್ಲ. ಸಂತಸದ ನಿಧಿಯು. ಇದು ಅತ್ಯುತ್ತಮವಾದುದು. ಪ್ರತಿಯೊಬ್ಬರ ಆತ್ಮಕ್ಕೆ ಮಧುರ ಅಮೃತ. ಇದನ್ನು ಶ್ರದ್ಧಾಭಕ್ತಿಗಳಿಂದ ಸಂತೋಷಿಸುವವನು ಅಸಾಧಾರಣ ಆನಂದವನ್ನು ಅನುಭವಿಸುತ್ತಾನೆ. ॥215॥ ಗುರುವಿನ ಕೃಪೆಯು ಆಶ್ಚರ್ಯಕರವಾದದ್ದು ಮತ್ತು ಮಹತ್ತಾದದ್ದು. ಅವರ ಮಹತ್ವವನ್ನು ನಾವು ಯಾವಾಗಲೂ ನೆನಪಿಸಿಕೊಳ್ಳುತ್ತಿರಬೇಕು. ಆದ್ದರಿಂದ ಅವರು ತಮ್ಮ ಭಕ್ತರ ಸಂತೋಷಕ್ಕಾಗಿ ಈ ಗ್ರಂಥವನ್ನು ನೀಡುವ ಶ್ರಮವಹಿಸಿದ್ದಾರೆ. ॥216॥ ಈ ಗ್ರಂಥವನ್ನು ಪ್ರೀತಿಯಿಂದ ಗಾನ ಮಾಡಿದಲ್ಲಿ ಕೇಳುವವರ ಆನಂದ ಅತಿಹೆಚ್ಚಾಗುತ್ತದೆ. ಮತ್ತು ಅದರ ಅರ್ಥ ಮತ್ತು ಉದ್ದೇಶವನ್ನು ಅರ್ಥಮಾಡಿಕೊಂಡಲ್ಲಿ ಭಕ್ತರಲ್ಲಿ ಪ್ರೀತಿ ಮತ್ತು ಭಕ್ತಿಗಳು ನೂರ್ಮಡಿಯಾಗಿ ಬೆಳೆಯುತ್ತದೆ. ॥217॥ ನೀವು ಹಗಲು ರಾತ್ರಿ ಇದನ್ನು ಕೇಳಿದಲ್ಲಿ ಲೌಕಿಕ ಮೋಹಗಳ ಬಂಧನಗಳು ಕಳಚಿಬೀಳುತ್ತವೆ. ಧ್ಯಾನಿಯ ಮೂರು ಚೇತನಗಳು ಧ್ಯಾನದ ವಸ್ತು ಮತ್ತು ಧ್ಯಾನವು ಮಾಯವಾಗುತ್ತವೆ. ಮತ್ತು ಶ್ರೋತೃಗಳಲ್ಲಿ ಆನಂದ ತುಂಬಿಕೊಳ್ಳುತ್ತದೆ. ॥218॥ ಹೇಮಾಡ ಪಂತನು ಸಾಯಿಯ ಚರಣಗಳಲ್ಲಿ ಏಕ ಹೃದಯದಿಂದ ಶರಣಾಗುತ್ತಾನೆ. ಅವುಗಳನ್ನು ಗಟ್ಟಿಯಾಗಿ ಹಿಡಿದು ಹೇಳುತ್ತಾನೆ, ನಾನು ನಿನ್ನನ್ನು ಒಂದು ಕ್ಷಣವೂ ಮರೆಯದಂತಾಗಲಿ. ಆದರೆ ನಿನ್ನ ಚರಣಗಳಲ್ಲಿ ಎಂದೆಂದೂ ನಿರಂತರವಾಗಿ ನೆಲೆಸಲಿ. ॥219॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ರತನ್‌ಜೀಗೆ ಸಾಯಿಯ ಭೇಟಿ" ಎಂಬ ಹದಿನಾಲ್ಕನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

**ಟಿಪ್ಪಣಿ.**

1. ಬ್ರಹ್ಮ (ಸಾರದಲ್ಲಿ) ತತ್ತ್ವದಲ್ಲಿ ಲೀನವಾಗುವುದು. ಪರಮಾತ್ಮನ ಸಾರೂಪ್ಯ, ಪರಮಾತ್ಮನ ಸಾನ್ನಿಧ್ಯ ಮತ್ತು ದೇವರ ಹತ್ತಿರ ನೆಲಸುವುದು (ಸಾಮೀಪ್ಯ).
2. ಮಿಠಾಯಿ.
3. ಕಾಯಾ, ವಾಚಾ, ಮನಸಾ ಪರಿಶುದ್ಧತೆ.
4. ರತನ್‌ಜೀ ಶಾಪುರಜಿ ವಾಡಿಯ ಒಬ್ಬ ಗಿರಣಿ ಗುತ್ತಿಗೆದಾರ.
5. ಗಾಜು ಮತ್ತು ಚಿನ್ನದ ಮಣಿಗಳ ಕಂಠೀಹಾರ ಮತ್ತು ಚಿನ್ನದ ನಾಣ್ಯ.
6. ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿರ, ವಶಿರ – ಅತೀಂದ್ರಿಯ ಶಕ್ತಿಗಳು. ಉದಾ: ಶರೀರದ ಗಾತ್ರವನ್ನು ದೊಡ್ಡದಾಗಿ ಅಥವಾ ಸಣ್ಣದಾಗಿ ಮಾಡುವ ಶಕ್ತಿ.
7. ಕುಬೇರನ ಭಂಡಾರ.
8. ಸಣ್ಣ ಬೆಲೆಯ ನಾಣ್ಯಗಳು.
9. ಹರಕೆಯ ಧಾರ್ಮಿಕ ವಿಧಿ.
10. ಸೃಷ್ಟಿಕರ್ತ.
11. ಸಲಹೆ ಅಥವಾ ಪಾಠ.
12. ಬೃಹದಾರಣ್ಯಕ ಉಪನಿಷತ್ – ಅಧ್ಯಾಯ –5.

13. ಶ್ರೀಮದ್ಭಗವದ್ಗೀತೆ ಅಧ್ಯಾಯ 16 ಶ್ಲೋಕ 21.

14. ರಾವ್ ಬಹದೂರ್ ಹರಿವಿನಾಯಕ ಸಾಠೆಯವರು ಹೇಗೆ ಶಿರಡಿಗೆ ಹೋದರು ಎಂಬುದನ್ನು ದಾಸಗಣು ವಿರಚಿತ 'ಭಕ್ತ ಲೀಲಾಮೃತ'ದ ಅಧ್ಯಾಯ 31 ರಲ್ಲಿ ವಿವರಿಸಲಾಗಿದೆ. ಆ ಸಮಯದಲ್ಲಿ ಮಹಾರಾಜ್‌ರು ಅವನನ್ನು ಆಶೀರ್ವದಿಸಿದರು – "ನೀನು ಮದುವೆಯಾಗು ಮತ್ತು ನಿನಗೆ ಒಬ್ಬ ಮಗ ಹುಟ್ಟುತ್ತಾನೆ." ಅದೇ ರೀತಿಯಲ್ಲಿ ಸಾಠೆ ಮದುವೆಯಾದನು. ಸ್ವಲ್ಪ ಸಮಯದ ನಂತರ ಅವನಹೆಂಡತಿ ಗರ್ಭಿಣಿಯಾದಳು. ಆದರೆ ಮಗನಿಗೆ ಬದಲಾಗಿ ಮಗಳು ಜನಿಸಿದಳು. ಅದರಿಂದಾಗಿ ಸಾಠೆಗೆ ಬಹಳ ನಿರಾಶೆಯಾಯಿತು. ಆ ನಂತರ ಅವನ ಪತ್ನಿಯು ಎರಡನೆಯ ಗರ್ಭಧರಿಸಿದಳು. ಆಗಲೂ ಒಂದು ಹೆಣ್ಣು ಮಗುವಾಯಿತು.

ಸಹಜವಾಗಿ ಸಾಠೆಯು ಬಹಳ ದುಃಖಿತನಾದನು. ಆದರೆ ಮಹಾರಾಜ್‌ರ ಆಶೀರ್ವಾದ ವ್ಯರ್ಥವಾಗಲಿಲ್ಲ. ಮೂರನೆ ಬಾರಿಗೆ ಸಾಠೆಯ ಪತ್ನಿ ಗರ್ಭಧರಿಸಿದಳು. ಮತ್ತು ಒಬ್ಬ ಮಗ ಹುಟ್ಟಿದನು. ಆ ಮಗನು ಚೆನ್ನಾಗಿದ್ದಾನೆ ಮತ್ತು ಮಹಾರಾಜ್‌ರ ಅನುಗ್ರಹದಿಂದ ಬಹಳ ಪ್ರವರ್ಧಮಾನಕ್ಕೆ ಬಂದನು.

15. 'ಓವಿ 72'ರಲ್ಲಿ ಅವನಿಗೆ ಮಗ ಹುಟ್ಟುವ ಮೊದಲು 12 ಹೆಣ್ಣುಮಕ್ಕಳು ಹುಟ್ಟಿದ್ದರು. ಆದ್ದರಿಂದ ಇಲ್ಲಿ ಮಕ್ಕಳ ಸಂಖ್ಯೆಯ ಬಗ್ಗೆ ಸ್ವಲ್ಪ ವ್ಯತ್ಯಾಸ ಇದೆ.



## ಅಧ್ಯಾಯ - 15

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



# "ಚೋಳ್ಕರ್‌ನ ಸಕ್ಕರೆಯ ಕಥೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಯಾರ ಹಿಂದಿನ ಜನ್ಮಗಳ ಕರ್ಮಗಳು ಫಲ ನೀಡಿವೆಯೋ ಅವರು ಮಾತ್ರ ಸಾಯಿಯ ದರ್ಶನ ಮಾಡಬಲ್ಲರು. ಅವರು ತಾಪತ್ರಯಗಳಿಂದ (ಆದಿದೈವಿಕ, ಆದಿಭೌತಿಕ, ಅಧ್ಯಾತ್ಮಿಕ ಪೀಡೆಗಳು) ಬಾಧಿಸಲ್ಪಡುವುದಿಲ್ಲ ಮತ್ತು ಅವು ಅಧ್ಯಾತ್ಮಿಕ ಉನ್ನತಿಯನ್ನು ಪಡೆಯಲು ಸಹಕಾರಿಯಾಗಿರುತ್ತವೆ. ॥1॥ ಈಗ ಒಂದು ಕ್ಷಣಕಾಲ ನಿಮ್ಮ ಗುರುವಿನ ಮೇಲೆ ಧ್ಯಾನ ಮಾಡಿರಿ. ಓ ಶ್ರೋತೃಗಳೇ! ದಯಮಾಡಿ ನಾನು ಹೇಳುತ್ತಿರುವುದನ್ನು ಮನಸ್ಸಿಟ್ಟು ಕೇಳಿರಿ ಎಂದು ಬೇಡುತ್ತೇನೆ. ॥2॥ "ನನಗೆ ಗೊತ್ತು, ನೀನು ಕತೆ ಹೇಳಲು ಇಲ್ಲಿರುವೆ. ನೀನೇಕೆ ಅನಾವಶ್ಯಕವಾಗಿಷ್ಟು ತೊಂದರೆ ತೆಗೆದುಕೊಳ್ಳುತ್ತಿರುವೆ?" ಎಂದು ದಯಮಾಡಿ ಹೇಳಬೇಡಿರಿ. ದಯವಿಟ್ಟು ನನ್ನನ್ನು ಕ್ಷಮಿಸಿರಿ. ನಿಮ್ಮನ್ನು ಸಮುದ್ರಕ್ಕೆ ಹೋಲಿಸಬಲ್ಲೆ. ॥3॥ ಏಕೆಂದರೆ ಸಮುದ್ರ ನೀರಿನಿಂದ ತುಂಬಿದ್ದರೂ ಸಹ, ನದಿಗಳನ್ನು ಹಿಂದಕ್ಕೆ ಕಳಿಸುವುದಿಲ್ಲ. ಮೋಡಗಳು ಸಾವಿರಪಟ್ಟು ಮಳೆ ಸುರಿಸಿದರೂ ಸಹ, ನೀರಿಗೆ ಆಶ್ರಯ ನೀಡುತ್ತದೆ. ॥4॥ ನೀವು ಶ್ರೋತೃಗಳು ಸಾಗರದಷ್ಟು ಪುಣ್ಯವಂತರು. ಮತ್ತು ನಾನು ಅದರಲ್ಲಿಯೇ ನನ್ನನ್ನು ಮುಳುಗಿಸಲು ಇಷ್ಟಪಡುತ್ತೇನೆ. ನಾನು ಬೇಡುತ್ತೇನೆ, ನನ್ನನ್ನು ತಿರಸ್ಕರಿಸಬೇಡಿರಿ. ದೀನರನ್ನು ತಿರಸ್ಕರಿಸುವುದು ಸರಿಯಲ್ಲ. ॥5॥ ಗಂಗೆಯ ಪರಿಶುದ್ಧವಾದ ನೀರು ಹಾಗೂ ಹಳ್ಳಿಯಲ್ಲಿ ಹರಿಯುವ ಝರಿ

ಇವೆರಡನ್ನೂ, ಸಾಗರವು ಒಟ್ಟಿಗೆ ಸೇರಿಸಿಕೊಳ್ಳುತ್ತದೆ. ಅವುಗಳು ಸಮುದ್ರದಲ್ಲಿ ಲೀನವಾದಾಗ ಯಾವುದೇ ತುಮುಲವಿಲ್ಲ. ॥6॥ ಆದ್ದರಿಂದ ಸಂತರ ಕತೆಯನ್ನು ಕೇಳುವ ತವಕ ನಿಮ್ಮಲ್ಲಿ ಉಂಟಾಗುತ್ತಿರುವುದು, ನೀವು ನನ್ನನ್ನು ಕರುಣೆಯಿಂದ ನೋಡಿದಲ್ಲಿ ಅದು ತಾನೇ ಫಲ ನೀಡುತ್ತದೆ. ॥7॥ ಈ ಚರಿತ್ರೆಯ ರೂಪದಲ್ಲಿರುವ ಅಮೃತವನ್ನು ಶ್ರದ್ಧಾ ಭಕ್ತಿಗಳಿಂದ ಸ್ವೀಕರಿಸಿದಲ್ಲಿ ಪ್ರೀತಿಯುತ ಭಕ್ತಿ ನಿಮ್ಮಲ್ಲಿ ಹುಟ್ಟುತ್ತದೆ. ಮತ್ತು ಶ್ರೋತೃಗಳು ಧನ್ಯರಾಗುತ್ತೀರಿ. ॥8॥ ಭಕ್ತರು ಅತಿ ಸುಲಭವಾಗಿ ಅಸ್ತಿತ್ವದ ಸ್ಥಿತಿಯನ್ನು ಪಡೆಯುತ್ತಾರೆ. ಶ್ರೋತೃಗಳು ಭಕ್ತಿಭಾವದಿಂದ ತುಂಬಿಕೊಳ್ಳುತ್ತಾರೆ ಮತ್ತು ಮೋಹದಿಂದ ಬಿಡುಗಡೆ ಹೊಂದುತ್ತಾರೆ. ಶ್ರದ್ಧೆಯಿಂದ ತುಂಬಿದವರು ಸಂತಸ ಮತ್ತು ಶಾಂತಿಯನ್ನು ಪಡೆಯುತ್ತಾರೆ. ಒಟ್ಟಿನಲ್ಲಿ ಎಲ್ಲರೂ ಸಂತೃಪ್ತಿ ಪಡೆಯುತ್ತಾರೆ. ॥9॥ ಈ ಕತೆಗಳನ್ನು ಗುರುವಿನ ಬಾಯಿಯಿಂದ ಕೇಳಿದಾಗ ಪ್ರಾಪಂಚಿಕ ದುಃಖಗಳು ಮತ್ತು ಕಾತರಗಳು ನಿರ್ಮೂಲವಾಗುತ್ತವೆ. ಶ್ರೋತೃಗಳ ಮನದಲ್ಲಿ ಬ್ರಹ್ಮಾನಂದ ಮೂಡಿಬರುತ್ತದೆ. ಆತ್ಮಜ್ಞಾನ ಸ್ಫುರಿಸುತ್ತದೆ. ॥10॥ ಈ ಅಧ್ಯಾಯದಲ್ಲಿ, ಯಾವ ರೀತಿ ಪ್ರೀತಿಯ ಭಕ್ತರು ಸಾಯಿಯನ್ನು ಪ್ರಾರ್ಥಿಸಿದರು ಮತ್ತು ಸಾಯಿಯು ಹೇಗೆ ದರ್ಶನ ನೀಡಿದರು ಮತ್ತು ಅವರಲ್ಲಿ ಸಂತೋಷಪಟ್ಟರು ಎಂಬುದನ್ನು ವಿವರಿಸುತ್ತೇನೆ. ಈಗ ಎಲ್ಲವನ್ನೂ ಕೇಳಿರಿ. ॥11॥ ಈಗ ಒಂದು ಬೆಕ್ಕು ಏನಾದರೂ, ಆಗ ತಾನೇ ಜನಿಸಿದ ತನ್ನ ಮರಿಗಳಿಗೆ ಹಾಲು ಕುಡಿಸಿ ಹೊರಗೆ ಹೋಗಿ, ನಂತರ ಹಿಂತಿರುಗಿ ಬಂದಾಗ ಆಕೆಯ ಮರಿಗಳು ಕಾತರದಿಂದ ಹಿಂತಿರುಗಿ ಬರುತ್ತವೆ ಹಾಗೂ ಮತ್ತೆ ಮತ್ತೆ ಆಕೆಯ ಹತ್ತಿರ ಪ್ರೇಮದಿಂದ ಹಾಲು ಕುಡಿಯಲು ಓಡಿ ಬರುತ್ತವೆ. ॥12॥ ಅನಂತರ ಆಕೆ ದಣಿದು ಗುರುಗುಟ್ಟುತ್ತ ಮರಿಗಳನ್ನು ಸ್ವಲ್ಪ ಕಾಲ ಶಾಂತಿಗೊಳಿಸುತ್ತಾಳೆ. ತಾಯಿ ಬೆಕ್ಕು ಶಾಂತಳಾಗಿ ವಿಶ್ರಮಿಸಿಕೊಳ್ಳುತ್ತಿರುವಾಗಲೇ ಮರಿಗಳು ಅವಳನ್ನು ಸುತ್ತುವರಿದು ಸ್ತನ್ಯ ಪಾನ ಮಾಡುತ್ತವೆ. ॥13॥ ಅವುಗಳು ಪ್ರೀತಿಯಿಂದ ಚೀಪುವಾಗ ತಾಯಿಯ ಹಾಲು ಹರಿಯುತ್ತದೆ. ನಂತರ ಅವಳು ತನ್ನ ಗುರುಗುಟ್ಟುವಿಕೆಯನ್ನು ಮರೆಯುತ್ತಾಳೆ ಮತ್ತು ನೆಲದ ಮೇಲೆ ಪ್ರೀತಿಯಿಂದ ಅಂಗಾತಳಾಗುತ್ತಾಳೆ. ॥14॥ ಅವಳ ಪ್ರೀತಿಯು ತಿರಸ್ಕಾರ ಭಾವವನ್ನು ಮೀರಿದಾಗ ಅವಳು ತನ್ನ ಮರಿಗಳನ್ನು ತಾನೇ ತನ್ನ ನಾಲ್ಕೂ ಕಾಲುಗಳಿಂದ ಬಿಗಿಯಾಗಿ ತಬ್ಬಿಕೊಂಡು ಮತ್ತೆ ಮತ್ತೆ ನೆಕ್ಕುತ್ತ ಪ್ರೀತಿ ತೋರಿಸುತ್ತಾಳೆ. ಓಹ್, ಅದೆಂತಹ ಆಶ್ಚರ್ಯಕರವಾದ ದೃಶ್ಯ! ॥15॥ ಅವಳ ಹೊಟ್ಟೆಯ ಮೇಲೆ ಆ ಮರಿಗಳ ಹರಿತವಾದ ಉಗುರುಗಳ ಗೀರುವಿಕೆಯು ಉಂಟಾದಾಗ ಅವಳಲ್ಲಿ ಪ್ರೀತಿ ಹೆಚ್ಚಾಗಿ ಹಾಲು ಯಥೇಚ್ಛವಾಗಿ ಹರಿಯುತ್ತದೆ. ॥16॥ ಆ ಮರಿಗಳ ಪ್ರೀತಿ ಮತ್ತು ವಾತ್ಸಲ್ಯಗಳು ತಾಯಿಯನ್ನು ಹೆಚ್ಚು ಹಾಲು ಕೊಡುವ ಹಾಗೆ ಮಾಡುವ ರೀತಿಯಲ್ಲಿ, ಸಾಯಿ ಚರಣಗಳಲ್ಲಿರುವ ನಿಮ್ಮ ಭಕ್ತಿಯು ಸಾಯಿಯ ಹೃದಯವನ್ನು ಕರಗಿಸುತ್ತದೆ. ॥17॥ ಒಂದು ಸಲ ಥಾಣಾದ ಜನರು ಆ ಅಪ್ರತಿಮ ಕೀರ್ತನಕಾರ ದಾಸಗಣುವನ್ನು ಕೌಪೀನೇಶ್ವರ ದೇವಸ್ಥಾನದಲ್ಲಿ ಕೀರ್ತನೆ ಮಾಡಲು ಪ್ರಾರ್ಥಿಸಿದರು. ॥18॥ ದಾಸಗಣು ಆ ಮಹನೀಯರ ಪ್ರಾರ್ಥನೆಯನ್ನು ಮನ್ನಿಸಿದನು. ಆದರೆ

ಅವನು ಒಂದು ಪೈಸೆಯನ್ನೂ ಕೇಳಲಿಲ್ಲ. ಬೇಡಿಕೆಯನ್ನೂ ಇಡಲಿಲ್ಲ. ॥19॥ ಸಂಕೀರ್ತನೆಗಾಗಿ ಒಂದು ಪೈಸೆಯನ್ನೂ ಕೊಡಲಿಲ್ಲ. ಅವನು ಮೈಮೇಲಿನ ಅಂಗವಸ್ತ್ರವನ್ನು ಧರಿಸಿರಲಿಲ್ಲ. ಮತ್ತು ಬರೀ ತಲೆಯಲ್ಲಿದ್ದನು. ಕೇವಲ ಪಂಚೆ ಮಾತ್ರ ಧರಿಸಿದ್ದನು. ಆದರೂ ಶ್ರೋತೃಗಳು ಅವನ ಕೀರ್ತನೆಗೆ ಮುಗಿಬಿದ್ದರು. ॥20॥ ಈ ರೀತಿಯ ವೇಷಭೂಷಣದ ಹಿಂದೆ ಒಂದು ಕಥೆಯಿದೆ. ಅದನ್ನು ಕೇಳಿದಾಗ ನೀವು ಸಂತಸಪಡುವಿರಿ. ಅದನ್ನು ಪೂರ್ಣ ಗಮನವಿಟ್ಟು ಕೇಳಿರಿ. ಬಾಬಾ ಬಗ್ಗೆ ಅಚ್ಚರಿಹೊಂದಿರಿ. ॥21॥ ಒಮ್ಮೆ ದಾಸಗಣು ಶಿರಡಿಯಲ್ಲಿ ಕಥೆ ಮಾಡಲು ಹೊರಟಿದ್ದನು. ಆದ್ದರಿಂದ ಅವನು ಯೋಗ್ಯವಾದ ವೇಷಭೂಷಣದೊಡನೆ ಹೊರಟನು. ಒಂದು ಉದ್ದವಾದ ಕೋಟು, ಮೇಲುವಸ್ತ್ರ[2] ಮತ್ತು ತಲೆಯ ಮೇಲೆ ಪೇಟಾ[3]ವನ್ನು ಧರಿಸಿದ್ದನು. ॥22॥ ರೂಢಿಯ ಹಾಗೆ ಅವನು ಬಾಬಾರ ಹತ್ತಿರ ಸಂತೋಷವಾಗಿ ಅವರ ಚರಣಗಳಿಗೆ ನಮಿಸಲು ಹೋದನು. ಅವನನ್ನು ನೋಡಿದ ಕೂಡಲೇ ಬಾಬಾ ಹೇಳಿದರು, "ಓಹ್, ಈಗ ನೀನು ನಿನ್ನನ್ನು ಒಬ್ಬ ಮದುಮಗನಂತೆ ಸಿಂಗರಿಸಿಕೊಂಡಿರುವೆ! ॥23॥ ಈ ಶೃಂಗಾರದಲ್ಲಿ ಎಲ್ಲಿ ಹೋಗುತ್ತಿರುವೆ?" ಬಾಬಾ ಅವನನ್ನು ಕೇಳಿದರು. ದಾಸಗಣು ಉತ್ತರಿಸಿದನು "ನಾನು ಈಗ ಕಥಾ ಕೀರ್ತನೆ ಮಾಡಲು ಹೋಗುತ್ತಿದ್ದೇನೆ." ॥24॥ ಬಾಬಾ ಅವನಿಗೆ ಹೇಳಿದರು, "ನೀನೇಕೆ ವೇಷ ಭೂಷಣಕ್ಕೆ ಇಷ್ಟು ತೊಂದರೆ ತೆಗೆದುಕೊಂಡಿರುವೆ? ನಿನಗೆ ಉದ್ದನೆಯಕೋಟು ಏಕೆ? ಮೇಲುವಸ್ತ್ರ, ಪೇಟಾ ಏಕೆ? ಹರಿಕಥೆ ಮಾಡಲು ಈ ವಸ್ತ್ರಗಳು ಯಾವುವೂ ಬೇಕಿಲ್ಲ. ॥25॥ "ಅವೆಲ್ಲವನ್ನೂ ಈಗಲೇ ನನ್ನೆದುರು ತೆಗೆದು ಹಾಕು. ಇವುಗಳಿಂದ ನಿನ್ನ ದೇಹವನ್ನು ಭಾರವನ್ನಾಗಿ ಏಕೆ ಮಾಡಿರುವೆ?" ಅವರ ಅಪ್ಪಣೆಯಂತೆ ಅವನು ಅವೆಲ್ಲವನ್ನೂ ತೆಗೆದುಹಾಕಿ ಅವರ ಚರಣಗಳಲ್ಲಿ ಇಟ್ಟನು. ॥26॥ ಈ ಪ್ರಸಂಗವಾದ ಮೇಲೆ ಇಂದಿನ ತನಕ ದಾಸಗಣು ಮೇಲಿನ ಅಂಗವಸ್ತ್ರವನ್ನು ಧರಿಸುತ್ತಿರಲಿಲ್ಲ ಮತ್ತು ಯಾವುದೇ ವೇಷ ಪ್ರದರ್ಶನ ಮಾಡಲಿಲ್ಲ. ಅವನು ಕೀರ್ತನೆಯ ಸಮಯದಲ್ಲಿ ಕೈಯಲ್ಲಿ ಚಿಟಿಕೆಗಳನ್ನು[4] ಹಿಡಿದು, ಕತ್ತಿನಲ್ಲಿ ಮಾಲೆಯನ್ನು[5] ಧರಿಸುತ್ತಿದ್ದನು. ॥27॥ ಇದು ಸಾಮಾನ್ಯವಾಗಿ ಒಪ್ಪಿಗೆಯಾಗದಿದ್ದರೂ, ಅದು ಪರಿಶುದ್ಧತೆಯಿಂದ ಜನಿಸಿದ್ದುದು. ಇದು ನಾರದರ ವಂಶದ ರೀತಿ. ನಾರದರು ಆತ್ಮಸಾಕ್ಷಾತ್ಕಾರ ಪಡೆದ ಋಷಿಗಳಲ್ಲಿ ಅತ್ಯಂತ ಶ್ರೇಷ್ಠರು. ॥28॥ ಇದು 'ನಾರದೀಯ ಕೀರ್ತನೆ' ಎಂಬ ಮೂಲತಃ ವಿದ್ಯಾಲಯದಿಂದಲೇ ಹರಿದಾಸರು ಜನಿಸಿದರು. ಅವರು ಹೊರಗಿನ ಆಡಂಬರದ ಬಗ್ಗೆ ಯೋಚಿಸಲಿಲ್ಲ. ಆದರೆ ಆತ್ಮಶುದ್ಧಿಗಾಗಿ ಒತ್ತಾಯ ಮಾಡುತ್ತಿದ್ದರು. ॥29॥ ದೇಹದ ಕೆಳಭಾಗವನ್ನು ಮುಚ್ಚುತ್ತಿದ್ದರು. ಚಿಟಿಕೆಗಳನ್ನು ಉಪಯೋಗಿಸುತ್ತಿದ್ದರು. ಮತ್ತು ವೀಣೆಯನ್ನು[6] ನುಡಿಸುವರು. ಹರಿಯ ನಾಮವನ್ನು ಜೋರಾಗಿ ಭಜಿಸುತ್ತಿದ್ದರು. ನಾರದರ ಪರಿಶುದ್ಧವಾದ ಸ್ವರೂಪ ಈ ರೀತಿ ಬಹಳ ಖ್ಯಾತಿಹೊಂದಿತ್ತು. ॥30॥ ಸಾಯಿಸಮರ್ಥರ ಕೃಪೆಯಿಂದ ದಾಸಗಣು ಸಂತರನ್ನು ವರ್ಣಿಸುವ ಕಥೆಗಳನ್ನು ರಚಿಸಿ ಕೀರ್ತನೆಗಳನ್ನು ಉಚಿತವಾಗಿ ನಡೆಸಿಕೊಟ್ಟನು. ಹಾಗೆ ಅವನು ಪ್ರಸಿದ್ಧಿ ಹೊಂದಿದನು. ॥31॥ ಅವನು ನಿಜವಾಗಿಯೂ ಸಾಯಿ

ಭಕ್ತಿಯ ಮಾಧುರ್ಯವನ್ನು ಹರಡಲು ಸಾಧನವಷ್ಟೆ. ಅವನು ಸಾಯಿಯ ಪ್ರೀತಿಸಾಗರ ಮತ್ತು ಆತ್ಮತೃಪ್ತಿಯನ್ನು ಎತ್ತರವಾದ ಅಲೆಗಳನ್ನು ಮಾಡಿದನು. ॥32॥ ನಾನು ಅತ್ಯಂತ ಪ್ರಮುಖ ಭಕ್ತನಾದ ಚಾಂದೋರಕರ್‌ಗೆ ಅತ್ಯಂತ ಋಣಿಯಾಗಿದ್ದೇನೆ. ಅವನು ಸಾಯಿಯ ಚರಣಗಳಲ್ಲಿ ಭಕ್ತಿ ಹೆಚ್ಚಲು ನಿಜವಾಗಿಯೂ ಮೂಲಕಾರಣನಾಗಿದ್ದನು. ॥33॥ ದಾಸಗಣು ಸಹ ಚಾಂದೋರಕರ್‌ನಿಂದಾಗಿಯೇ ಇಲ್ಲಿಗೆ ಬಂದನು. ಅವನು ಒಂದು ಜಾಗದಿಂದ ಮತ್ತೊಂದಕ್ಕೆ ಹೋಗುತ್ತ ಕೀರ್ತನೆಗಳನ್ನು ಎಲ್ಲ ಕಡೆಯೂ ನಡೆಸುತ್ತಿದ್ದನು. ಜನರು ಸಾಯಿಭಜನೆ ಮಾಡಲು ಪ್ರಾರಂಭಿಸಿದರು. ॥34॥ ಮಹಾರಾಜ್‌ರ ಕೀರ್ತಿಯು ಪುಣೆ, ನಗರ ಮತ್ತು ಸೊಲ್ಲಾಪುರ ಇವುಗಳಲ್ಲಿ ಈಗಾಗಲೇ ಹರಡಿದ್ದವು. ಆದರೆ ಇವರಿಬ್ಬರಿಂದಾಗಿ ಕೊಂಕಣದ ಜನರು ಶ್ರದ್ಧೆಯನ್ನು ಬೆಳೆಸಿಕೊಂಡರು. ॥35॥ ಅವರಿಗೂ ಸಹ ಬೊಂಬಾಯಿಯ ಸುತ್ತಮುತ್ತ ಸಾಯಿಭಕ್ತಿಯ ಬೆಳವಣಿಗೆಯ ಕೀರ್ತಿ ಸಲ್ಲುತ್ತದೆ. ಸಾಯಿ ಮಹಾರಾಜ್‌ರು ಕರುಣಾಮಯಿಯಾಗಿ ಅವರ ಮೂಲಕ ಆವಿರ್ಭವಿಸಿದ್ದರು. ॥36॥ ಕೌಪೀನೇಶ್ವರ ದೇವಾಲಯದಲ್ಲಿ, ಸಾಯಿಕರುಣೆಯ ಕೀರ್ತನದ ಕಂಪನಗಳ ಮಧ್ಯೆ ಭಗವಂತನ ಹೆಸರಿನಲ್ಲಿರುವ ಆನಂದೋತ್ಸಾಹದ ಅಲೆಗಳಿಂದಾಗಿ ಚೋಳ್ಕರ್‌ನ ಮೈ ನವಿರೇಳುತ್ತಿತ್ತು. ॥37॥ ಅಸಂಖ್ಯಾತ ಜನರು ಕೀರ್ತನೆ ಕೇಳಲು ಬಂದರು. ಆದರೆ ಅವರು ಬೇರೆ ಬೇರೆ ಕಾರಣಗಳಿಗಾಗಿ ಬಂದರು. ಕೆಲವರು ವಿಷಯದ ಬಗ್ಗೆ ಇರುವ ಬುವಾನ ಪಾಂಡಿತ್ಯವನ್ನು ಮೆಚ್ಚಿಕೊಂಡಿದ್ದರು. ಮತ್ತೆ ಕೆಲವರು ಅವನ ಭಾವಪ್ರದರ್ಶನವನ್ನೂ, ಹಾವಭಾವಗಳನ್ನೂ ಇಷ್ಟಪಡುತ್ತಿದ್ದರು. ॥38॥ ಕೆಲವರು ಕೇವಲ ಹಾಡುಗಾರಿಕೆಯನ್ನು ಮಾತ್ರ ಮೆಚ್ಚುತ್ತಿದ್ದರು. ಮತ್ತೆ ಎಷ್ಟು ಆಶ್ಚರ್ಯಕರವಾಗಿ ಬುವಾ ಹಾಡುತ್ತಾನೆಂದು ಹೇಳುತ್ತಿದ್ದರು. ವಿಠಲನ ನಾಮಗಳನ್ನು ಭಕ್ತಿಯಿಂದ ಹಾಡಿ ಮೈಮರೆಯುತ್ತಿದ್ದನು. ಮತ್ತು ಅವನು ಹೇಗೆ ವಿಠಲನ ಬಗೆಗಿನ ಪ್ರೀತಿಯಿಂದ ಉನ್ಮತ್ತನಾಗಿ ನೃತ್ಯ ಮಾಡುವನೆಂದು ಹೇಳುತ್ತಿದ್ದರು. ॥39॥ ಕೆಲವರು ಅದರ ಮೊದಲನೆಯ ಭಾಗ, ಪಾರಮಾರ್ಥಿಕ ವಿಚಾರಗಳನ್ನು ವ್ಯಾಖ್ಯಾನಿಸುವ ರೀತಿಗಳನ್ನು ಆಸ್ವಾದಿಸುತ್ತಿದ್ದರು. ಕೆಲವರು ಅವರ ಕಥಾಭಾಗವನ್ನು ಕೇಳಲು ಇಚ್ಛಿಸುತ್ತಿದ್ದರು. ಕೆಲವರು ಹರಿದಾಸನು ಆ ಊರಿನ ಪಾತ್ರಗಳ ಅನುಕರಣೆಯಲ್ಲಿ ಮಗ್ನರಾಗಿ ವ್ಯಕ್ತಪಡಿಸುವುದನ್ನು ಇಷ್ಟಪಡುತ್ತಿದ್ದರು. ಕೆಲವರು ಅವನ ಪದಗಳನ್ನೂ, ಕಾವ್ಯವನ್ನೂ ಇಷ್ಟಪಡುತ್ತಿದ್ದರು.॥40॥ ಬುವಾನು ಸಾಮಾನ್ಯನೋ ಅಥವಾ ಪಂಡಿತನೋ ಅಥವಾ ವಿವಿಧ ಅರ್ಥಗಳನ್ನು ನೀಡುವಷ್ಟು ಬುದ್ಧಿವಂತನೋ, ವಿವಿಧ ಉಲ್ಲೇಖ, ಉತ್ಪತ್ತಿಗಳನ್ನು ತಿಳಿಸುವವನೋ, ಕೀರ್ತನದ ಕೊನೆಯ ಅರ್ಧ ಭಾಗದಲ್ಲಿ ಕಥೆಗಳನ್ನು ಹೇಳುವ ನಿಪುಣನೋ, ಈ ರೀತಿಯಲ್ಲಿ ಕೀರ್ತನೆಯನ್ನು ಆಲಿಸುವುದು ವಿವಿಧ ವಿಚಾರಗಳ ಮೇಲೆ ಅವಲಂಬಿಸಿರುತ್ತದೆ. ॥41॥ ಅಂತಹ ಶ್ರೋತೃಗಳು ಅನೇಕ. ಆದರೆ ಆಲಿಸಿದಾಗ ಅವರು ಶ್ರದ್ಧಾಭಕ್ತಿಗಳನ್ನು ಬೆಳೆಸಿಕೊಳ್ಳುತ್ತಾರೆ. ಆದರೆ ಯಾವುದರಿಂದ ಒಬ್ಬ ಶ್ರೋತೃವಿನ ಮನಃಸ್ಥಿತಿಯು ದೇವರಲ್ಲಿ ಪ್ರೀತಿ ಮತ್ತು ಸಾಯಿಚರಣಗಳಲ್ಲಿ ಭಕ್ತಿಯಿಂದ ಪಕ್ವವಾಗುವುದೋ ಅದು ಅಪರೂಪ. ॥42॥ ಒಬ್ಬ

ವ್ಯಕ್ತಿಯು ಬಹಳ ಸಮಯದವರೆಗೆ ಆಲಿಸಬಹುದು. ಆದರೆ ಅದು ಪದರ ಪದರವಾದ ಮಿಥ್ಯಾಜ್ಞಾನವಾಗಿ ಶೇಖರಣೆಯಾದಲ್ಲಿ ಅದನ್ನು ಸರಿಯಾದ ಪರಿಣಾಮ ಎಂದು ಕರೆಯಲಾಗುವುದೇ? ಅಂತಹ ಕೇಳುವಿಕೆಯು ವ್ಯರ್ಥ. ॥43॥ ಶುಚಿಮಾಡಲಾರದ ವಸ್ತುವನ್ನು ಸಾಬೂನು ಎಂದು ಹೇಗೆ ಕರೆಯಬಹುದು? ಅದು ಅಜ್ಞಾನವನ್ನು ತೊಳೆಯದೆ ಇರುವಾಗ ಅದನ್ನು ಕೇಳುವಿಕೆ ಎಂದು ಹೇಗೆ ಕರೆಯುವುದು? ॥44॥ ಚೋಳ್ಕರನು ಈಗಾಗಲೇ ಭಕ್ತಿಸಂಪನ್ನ ವ್ಯಕ್ತಿಯಾಗಿದ್ದನು. ಅವನು ಸಾಯಿಗಾಗಿ ಪ್ರೀತಿಯ ತೀಕ್ಷ್ಣ ವೇದನೆಯನ್ನು ಅನುಭವಿಸಿದ. ತನಗೆ ತಾನೇ ಹೇಳಿಕೊಂಡನು – "ಬಾಬಾ, ದಯಾಸಾಗರ, ಈ ದೀನನನ್ನು ರಕ್ಷಿಸು." ॥45॥ ಅವನೊಬ್ಬ ಸಾಮಾನ್ಯ ಪರೀಕ್ಷಾವಧಿಯಲ್ಲಿರುವ ಅಧಿಕಾರಿ. ಆರ್ಥಿಕವಾಗಿ ತನ್ನ ಕುಟುಂಬವನ್ನು ನೋಡಿಕೊಳ್ಳಲು ಅಸಮರ್ಥನಾಗಿದ್ದನು. ಅವನಿಗೆ ಸರ್ಕಾರದಲ್ಲಿ ಉನ್ನತ ಹುದ್ದೆಯ ಆಶೆ ಇತ್ತು, ಮತ್ತು ಈ ಭಾರವನ್ನು ಬಾಬಾರವರ ಮೇಲೆ ಒಪ್ಪಿಸಿದನು. ॥46॥ ಹೇಡಿಗಳು ಹರಕೆಹೊರುತ್ತಾರೆ. ಅವರ ಆಸೆಯೇನಾದರೂ ನೆರವೇರಿದಲ್ಲಿ, ಅವರು ಬ್ರಾಹ್ಮಣರಿಗೆ ಭೋಜನ ನೀಡುತ್ತಾರೆ. ಅವರು ಹೇಳಿದ ಅಡಿಗೆಯನ್ನೇ ಮಾಡಿ ಬಡಿಸಿ, ಅವರ ಮನಸ್ಸಿನ ಆಸೆ ಪೂರೈಸುತ್ತಾರೆ. ಮತ್ತಅವರಿಗೆ ಉಡುಗೊರೆಗಳನ್ನೂ ಕೊಡುತ್ತಾರೆ. ॥47॥ ಶ್ರೀಮಂತರು, ಹರಕೆಯ ರೂಪದಲ್ಲಿ ಒಂದು ಸಾವಿರ ಜನರಿಗೆ ಊಟಹಾಕುತ್ತಾರೆ ಅಥವಾ ತಮ್ಮ ಆಸೆಗಳು ಪೂರೈಸಿದಲ್ಲಿ ಒಂದು ನೂರು ಹಸುಗಳನ್ನು ದಾನಮಾಡುತ್ತಾರೆ. ॥48॥ ಆದರೆ ಚೋಳ್ಕರ್‌ನು ಒಬ್ಬ ಬಡ ಮನುಷ್ಯ. ಅವನೂ ಸಹಒಂದು ಹರಕೆ ಮಾಡಬೇಕೆಂದು ಇಚ್ಛೆಸಿದನು. ಆದ್ದರಿಂದ ಶ್ರೀಸಾಯಿಚರಣಗಳನ್ನು ಸ್ಮರಿಸುತ್ತ ಅವನು ವಿನೀತನಾಗಿ ಈ ರೀತಿ ಹೇಳಿದನು. ॥49॥ "ಬಾಬಾ, ನಾನು ಬಡವ ಮತ್ತು ಒಂದು ಕುಟುಂಬವನ್ನು ಸಾಕಬೇಕು. ನನ್ನ ಜೀವನವು ನನ್ನ ವೃತ್ತಿಯನ್ನು ಅವಲಂಬಿಸಿದೆ. ಅದು ಶಾಶ್ವತವಾಗಬೇಕಾದರೆ ಒಂದು ಪರೀಕ್ಷೆಯಲ್ಲಿ ಪಾಸಾಗಬೇಕು. ॥50॥ "ನಾನು ಬಹಳ ಶ್ರಮವಹಿಸಿ ತಯಾರಿ ನಡೆಸಿದ್ದೇನೆ. ನಾನು ಕೇವಲ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದರ ಮೇಲೆಯೇ ಅವಲಂಬಿಸಿದ್ದೇನೆ. ಇಲ್ಲದಿದ್ದರೆ, ನಾನು ಈಗ ಕೇವಲ ಪರೀಕ್ಷಾವಧಿಯಲ್ಲಿರುವ ಅಭ್ಯರ್ಥಿಯಾಗಿ ಮಾಡುತ್ತಿರುವ ಕೆಲಸವನ್ನು ಕಳೆದುಕೊಳ್ಳಬೇಕಾಗುತ್ತದೆ. ನಾನು ಈಗ ಸಂಪಾದಿಸುತ್ತಿರುವ ಅಲ್ಪವನ್ನೂ ಕಳೆದುಕೊಳ್ಳಬೇಕಾಗುತ್ತದೆ. ॥51॥ "ನಿನ್ನ ಕೃಪೆಯಿಂದ ನಾನೇನಾದರೂ ಉತ್ತೀರ್ಣನಾದಲ್ಲಿ, ನಾನು ನನ್ನನ್ನೇ ನಿನ್ನ ಚರಣಗಳಲ್ಲಿ ಅರ್ಪಿಸುತ್ತೇನೆ. ನಿನ್ನ ಹೆಸರಲ್ಲಿ ಸಕ್ಕರೆ ಅಚ್ಚನ್ನು ಹಂಚುತ್ತೇನೆ. ಇದು ನನ್ನ ದೃಢವಾದ ನಿರ್ಣಯ." ॥52॥ ಈ ರೀತಿ, ಅವನು ಒಂದು ಹರಕೆ ಮಾಡಿಕೊಂಡನು. ಅವನ ಆಸೆಗಳು ನೆರವೇರಿದವು. ಮತ್ತು ಅವನು ಸಂತೋಷಪಟ್ಟನು. ಆದರೆ ಅವನಿಗೆ ಹರಕೆ ತೀರಿಸಲು ಸ್ವಲ್ಪ ಸಮಯ ಬೇಕಾಯಿತು. ಆದ್ದರಿಂದ ಅವನು ಸಕ್ಕರೆಯನ್ನು ತ್ಯಜಿಸಿದನು. ॥53॥ ಅವನಿಗೆ ಸ್ವಲ್ಪ ಹಣದ ಅವಶ್ಯಕತೆ ಇತ್ತು, ಬರಿಗೈಯಲ್ಲಿ ಹೋಗುವುದು ಸರಿಯಾಗಿರಲಿಲ್ಲ. ಆದ್ದರಿಂದ ಅವನು ಹರಕೆಯನ್ನು ಮುಂದೂಡುತ್ತಲೇ ಹೋದನು. ಈ ರೀತಿ ದಿನಗಳು ಕಳೆದವು. ॥54॥ ಅತಿ

ಎತ್ತರದ ಸಹ್ಯಾದ್ರಿ ಪರ್ವತದ 'ನಾನೆ ಘಾಟ್'ನ್ನು ದಾಟಲು ಸಾಧ್ಯ. ಆದರೆ ಒಬ್ಬ ಗೃಹಸ್ಥನಿಗೆ ಮನೆಯ ಪರಿಸ್ಥಿತಿಯನ್ನು ದಾಟುವುದು ಬಹಳ ಕಷ್ಟವಾದದು. ॥55॥ ಶಿರಡಿಗೆ ಹೋಗುವ ಹರಕೆ ಪೂರೈಸುವವರೆಗೆ ಚೋಳ್ಕರ್‌ನು ಸಕ್ಕರೆಯಿಂದ ಮಾಡಿದ ಏನನ್ನೂ ತಿನ್ನಲಿಲ್ಲ. ಅವನು ಚಹಾವನ್ನು ಕೂಡ ಸಕ್ಕರೆ ಇಲ್ಲದೆ ಕುಡಿಯುತ್ತಿದ್ದನು. ॥56॥ ಈ ರೀತಿ ಕೆಲವು ದಿನಗಳು ಕಳೆದವು. ಅನಂತರ ಸಮಯ ಒದಗಿ ಬಂದಿತು. ಅವನು ಶಿರಡಿಗೆ ಹೋದನು. ಅವನು ಹರಕೆಯನ್ನು ಕೊಟ್ಟು ಸಂತಸಪಟ್ಟನು. ॥57॥ ಸಾಯಿಯ ದರ್ಶನ ಪಡೆದಕೂಡಲೇ, ಚೋಳ್ಕರ್‌ನು ಅವರ ಚರಣಗಳಲ್ಲಿ ಹೊರಳಾಡಿದನು. ಮತ್ತು ಬಾಬಾರವರಿಗೆ ಶಿರಬಾಗಿ ನಮಿಸಿ ಅತ್ಯಾನಂದಹೊಂದಿದನು. ॥58॥ ಪರಿಶುದ್ಧವಾದ ಮನಸ್ಸಿನಿಂದ ಅವನು ಸಕ್ಕರೆಯನ್ನು ಹಂಚಿದನು. ತೆಂಗಿನ ಕಾಯಿಯನ್ನು ಸಮರ್ಪಿಸಿ ಹೇಳಿದನು – "ಈ ದಿನ ನನ್ನ ಎಲ್ಲಾ ಆಸೆಗಳೂ ಪೂರೈಸಿವೆ." ॥59॥ ಅವನು ಸಾಯಿ ದರ್ಶನದಿಂದ ಹರ್ಷೋನ್ಮತ್ತನಾದನು. ಮತ್ತು ಅವರೊಂದಿಗಿನ ಸಂಭಾಷಣೆಯಿಂದ ಸಂತಸಹೊಂದಿದನು. ಅವನು ಜೋಗ್‌ನ ಅತಿಥಿಯಾಗಿದ್ದರಿಂದ ಜೋಗ್ ಜೊತೆಯಲ್ಲಿಯೇ ಹಿಂತಿರುಗಬೇಕಿತ್ತು. ॥60॥ ಜೋಗ್‌ನು ಹೊರಡಲು ಎದ್ದ ಕೂಡಲೇ, ಅವನ ಅತಿಥಿಯೂ ಎದ್ದನು. ಬಾಬಾರವರು ಜೋಗ್‌ಗೆ ಹೇಳಿದರು: "ಅವನಿಗೆ ಲೋಟದ ತುಂಬ ಚಹಾವನ್ನು, ಹೆಚ್ಚು ಸಕ್ಕರೆ ಹಾಕಿ ಕೊಡು." ॥61॥ ಈ ಪ್ರಮುಖವಾದ ವಾಕ್ಯವನ್ನು ಚೋಳ್ಕರ್‌ನು ಕೇಳಿದಕೂಡಲೇ ಅವನು ಅಚ್ಚರಿಹೊಂದಿದನು. ಅವನ ಕಣ್ಣುಗಳು ಆನಂದಭಾಷ್ಪಗಳಿಂದ ತುಂಬಿದವು. ಮತ್ತು ಅವನ ತಲೆಯನ್ನು ಅವರ ಚರಣಗಳಲ್ಲಿಟ್ಟನು. ॥62॥ ಜೋಗ್ ಅಚ್ಚರಿಹೊಂದಿದನು. ಆದರೆ ಚೋಳ್ಕರ್‌ನಿಗೆ ಅದರ ಎರಡರಷ್ಟು ಅಚ್ಚರಿ. ಏಕೆಂದರೆ ತಾನು ಸಕ್ಕರೆ ಬಿಟ್ಟ ವಿಷಯ ಅವನಿಗೆ ಮತ್ತು ಬಾಬಾ ಅವರಿಗೆ ತಿಳಿದಿತ್ತು. ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿದ್ದರು. ॥63॥ ಬಾಬಾಗೆ ಚಹಾದ ಏನೂ ಆಗಬೇಕಿರಲಿಲ್ಲ. ಆದ್ದರಿಂದ ಅವರು ಈ ಕ್ಷಣದಲ್ಲಿ ಅದನ್ನು ಏಕೆ ನೆನಪಿಸಿಕೊಂಡರು? ಅದು ಚೋಳ್ಕರ್‌ನನ್ನು ನಂಬಿಸಲು ಮತ್ತು ಅವನಿಗೆಭಕ್ತಿಯ ಮುದ್ರೆ ಹಾಕಲು ಹಾಗೆ ಮಾಡಿದರು. ॥64॥ ಸೂಕ್ಷ್ಮ ಸೂಚನೆಗಾಗಿ ಇಷ್ಟು ಸಾಕು. ಅವರು ಹೇಳಿದರು – "ನಾನು, ನೀನು ಪ್ರಮಾಣ ಮಾಡಿದ ಸಕ್ಕರೆಯನ್ನು ಸ್ವೀಕರಿಸಿದ್ದೇನೆ. ನಿನ್ನ ತ್ಯಾಗದ ಕಾಲ ಮುಗಿಯಿತು ಚೋಳ್ಕರ್. ॥65॥ "ಹರಕೆ ಹೊರುವಾಗ ಇದ್ದ ನಿನ್ನ ಮನಃಸ್ಥಿತಿಯನ್ನು ನಾನು ಅರಿತಿದ್ದೇನೆ. ಮತ್ತು ನೀನು ಮುಂದೂಡಿದ್ದಕ್ಕಾಗಿ ನೀನೇ ವಿಧಿಸಿಕೊಂಡ ಶಿಕ್ಷೆಯ ಬಗ್ಗೆಯೂ ತಿಳಿದಿದೆ. ನೀನು ಅದನ್ನು ರಹಸ್ಯವಾಗಿಟ್ಟರೂ, ನಾನು ಅದೆಲ್ಲವನ್ನೂ ಅರ್ಥಮಾಡಿಕೊಂಡಿದ್ದೇನೆ. ॥66॥ "ನಿಮ್ಮಲ್ಲಿ ಯಾರೊಬ್ಬರೂ, ಎಲ್ಲಿಯೇ ಇದ್ದರೂ, ನನ್ನಲ್ಲಿಗೆ ಬಂದಾಗಲೆಲ್ಲ, ನಿಮ್ಮ ಜೋಡಿ ಕೈಗಳನ್ನು ಭಕ್ತಿಯಿಂದ ಚಾಚಿದಾಗ, ನಿಮ್ಮ ಶ್ರದ್ಧೆಗೆ ಉತ್ತರಿಸಲು ಹಗಲು ರಾತ್ರಿ ಅಲ್ಲಿರುತ್ತೇನೆ. ॥67॥ "ನಾನು ಈ ಸ್ಥಳದಲ್ಲಿ ದೇಹಧಾರಿಯಾಗಿ ನೆಲೆಸಿದ್ದರೂ, ನೀವು ಸಪ್ತಸಾಗರಗಳಾಚೆ ಅಲ್ಲಿ ಏನು ಮಾಡುತ್ತಿದ್ದರೂ ಕೂಡಲೇ ನನ್ನ ಅರಿವಿಗೆ ಬರುತ್ತವೆ. ॥68॥ "ನೀವು ಈ ಭೂಮಿಯ ಮೇಲೆ ಎಲ್ಲಿಯೇ

ಹೋಗಿದ್ದರೂ, ನಾನು ಸದಾ ನಿಮ್ಮೊಡನೆ ಇರುತ್ತೇನೆ. ನಾನು ನಿಮ್ಮ ಹೃದಯದಲ್ಲೇ ನೆಲಸಿರುತ್ತೇನೆ ಮತ್ತು ನಾನು ನಿಮ್ಮೊಳಗೆಯೇ ಇರುತ್ತೇನೆ. ॥69॥ "ನೀವು ಯಾವಾಗಲೂ ನಿಮ್ಮ ಹೃದಯದಲ್ಲಿ ನೆಲಸಿರುವ 'ನನಗೆ' ನಮಸ್ಕರಿಸಬೇಕು. ನಾನು, ಅದೇ 'ನಾನ್' ಎಲ್ಲಾ ಜೀವಿಗಳ ಅಂತರಂಗದಲ್ಲಿ ನೆಲಸಿರುವವನು. ॥70॥ "ಆದ್ದರಿಂದ ನೀವು ಯಾರನ್ನು ಭೇಟಿಯಾದರೂ ಸಹ, ಮನೆಯಲ್ಲಿ, ಹೊರಗಡೆ ಅಥವಾ ಎಲ್ಲಿಯಾದರೂ ನಿಮ್ಮ ಜೀವಿತ ಸಮಯದಲ್ಲೇ ಆಗಲಿ, ನಾನು ಅವರ ಅಂತರಂಗದಲ್ಲಿ ಇರುತ್ತೇನೆ ಮತ್ತು ನಾನೇ ಅವರ ಮುಂದೆ ಬರುತ್ತೇನೆ. ॥71॥ "ಎಲ್ಲ ಜೀವಿಗಳೂ – ಕ್ರಿಮಿಗಳು, ಇರುವೆಗಳು, ಜಲಚರಗಳು ಮತ್ತು ಆಕಾಶದಲ್ಲಿರುವ ಪಕ್ಷಿಗಳು, ನಾಯಿ ಮತ್ತು ಹಂದಿಗಳು – ಇವೆಲ್ಲವುಗಳ ಅಂತರಂಗದಲ್ಲಿ ನಾನು ಯಾವಾಗಲೂ ವಾಸಿಸುತ್ತೇನೆ. ನಾನು ಎಲ್ಲೆಲ್ಲೂ ಎಲ್ಲರಲ್ಲಿಯೂ ಇದ್ದೇನೆ. ॥72॥ "ನನ್ನಿಂದ ದೂರವಿರಬೇಡ. ನನಗೆ ಮತ್ತು ನಿನಗೆ ಯಾವ ಅಂತರವೂ ಇಲ್ಲ. ಯಾರಾದರೂ ನನ್ನನ್ನು ಈ ರೀತಿ ಭಾವಿಸಿ ಅನುಭವಿಸಿದಲ್ಲಿ ಅವನು ನಿಜವಾಗಿಯೂ ಭಾಗ್ಯಶಾಲಿ." ॥73॥ ಈ ಕತೆಯು ನೋಡಲು ಚಿಕ್ಕದಾಗಿದ್ದರೂ ತುಂಬ ಮೌಲ್ಯಭರಿತವಾದದ್ದು. ಚೋಳ್ಕರ್‌ಗೆ ಅದೆಂತಹ ಮಧುರ ಅನುಭವ. ಮತ್ತುಅವನ ಭಕ್ತಿಭಾವವನ್ನು ಅದೆಷ್ಟು ಪುಷ್ಟೀಕರಿಸಿತು. ॥74॥ ಅವನ ಮನಸ್ಸಿನಲ್ಲಿ ಏಳುವ ತರಂಗಗಳಿಗೆಲ್ಲ ಬಾಬಾರವರು ಈ ರೀತಿ ಸಾಕ್ಷ್ಯ ಒದಗಿಸಿಕೊಟ್ಟರು. ಅದೆಂತಹ ಜಾಣ್ಮೆ ಸಂತರದ್ದು! ॥75॥ ಬಾಬಾರವರ ವಚನಗಳು ಅತ್ಯಮೂಲ್ಯವಾದವುಗಳು. ಅವು ಭಕ್ತರ ಹೃದಯದಲ್ಲಿ ಆಳವಾ ನಾಟುತ್ತವೆ. ಅವರಲ್ಲಿ ಪ್ರೀತಿಭಾವವನ್ನು ಪೋಷಿಸುತ್ತವೆ. ಮತ್ತು ಅವರ ಭಕ್ತಿಭಾವವನ್ನು ಏಕಮುಖವನ್ನಾಗಿ ಮಾಡುತ್ತವೆ. ॥76॥ ಚಾತಕ ಪಕ್ಷಿಯ ಬಾಯಾರಿಕೆಯನ್ನು ತಣಿಸಲು ಮೋಡಗಳು ಕರುಣೆಯಿಂದ ಮಳೆಯ ಹನಿಗಳನ್ನು ಸುರಿಸುತ್ತವೆ. ಅದರಿಂದ ಭೂಮಿಯೆಲ್ಲ ತಣ್ಣಗಾಗುತ್ತದೆ. ಅದೇ ರೀತಿ ಈ ಪ್ರಸಂಗದಲ್ಲಿಯೂ ಸಂಭವಿಸಿತು. ॥77॥ ಬಡಪಾಯಿ ಚೋಳ್ಕರ್‌ನು ಪೂರ್ಣವಾಗಿ ಅಪರಿಚಿತನು. ದಾಸಗಣುವಿನ ಕೀರ್ತನೆಯು ನೆಪಮಾತ್ರವಾಯಿತು. ಅದರಿಂದಾಗಿ ಅವನು ಹರಕೆಮಾಡುವಂತಾಯಿತು. ಮತ್ತು ಬಾಬಾರವರೂ ಸಹ ಆತನ ಬಗ್ಗೆ ಬಹಳ ಸಂತಸ ಹೊಂದಿದರು. ॥78॥ ಅವನಿಂದಾಗಿಯೇ ಈ ಅದ್ಭುತವಾದ ಪ್ರಸಂಗ ನಡೆಯಿತು. ಮತ್ತು ಅವನಿಗೆ ಸಂತರ ಹೃದಯದ ಒಂದು ಕಿರುನೋಟವನ್ನು ನೀಡಿತು. ಬಾಬಾರವರು ಸಕಾಲ ಬೋಧನೆ ಮಾಡುವಂತಹ ಪ್ರಸಂಗ ಸೃಷ್ಟಿಸಲು ಸಿದ್ಧರಾಗಿರುತ್ತಿದ್ದರು. ॥79॥ ಚೋಳ್ಕರ್‌ನು ಕೇವಲ ಪ್ರಾಸಂಗಿಕನಷ್ಟೇ. ಇದು ಎಲ್ಲಾ ಭಕ್ತರಒಳಿತಿಗಾಗಿ ನಡೆಯಿತಷ್ಟೆ. ಬಾಬಾರವರ ಕುಶಲತೆಯು ಗ್ರಹಣಶಕ್ತಿಗೂ ಮೀರಿದೆ. ನಾವು ಕೇವಲ ಅದನ್ನು ನೋಡುತ್ತ ಆಶ್ಚರ್ಯಚಕಿತರಾಗಬಹುದು. ॥80॥ ಇದೇ ರೀತಿಯ ಪ್ರಸಂಗವನ್ನು ವಿವರಿಸುತ್ತ, ಈ ಅಧ್ಯಾಯವನ್ನು ಮುಕ್ತಾಯಗೊಳಿಸುತ್ತೇನೆ. ಇದು ಒಬ್ಬರು ಒಂದು ಪ್ರಶ್ನೆಯನ್ನು ಹಾಕಿದ್ದಕ್ಕೆ ಬಾಬಾರವರು ಹೇಗೆ ಅವನಿಗೆ ವಿವರಣೆ ನೀಡಿದರು ಎಂದು ತಿಳಿಸುತ್ತದೆ. ॥81॥ ಒಮ್ಮೆ ಮಸೀದಿಯಲ್ಲಿ ಬಾಬಾರವರು ತಮ್ಮ ಆಸನದ ಮೇಲೆ ಕುಳಿತಿದ್ದಾಗ, ಅವರ ಮುಂದೆ ಕುಳಿತಿದ್ದ ಒಬ್ಬ

ಭಕ್ತನಿಗೆ ಒಂದು ಹಲ್ಲಿಯ ಲೊಚಗುಟ್ಟುವಿಕೆಯು ಕೇಳಿಸಿತು. ॥82॥ ಒಂದು ಹಲ್ಲಿಯ ಕೆಳಗೆ ಬೀಳುವಿಕೆ, ಅದರ ಲೊಚಗುಟ್ಟುವಿಕೆ, ಅವು ಏನಾದರೂ ಭವಿಷ್ಯ ನುಡಿಯುತ್ತವೆಯೋ? ಅವನು ಎಚ್ಚರಿಕೆಯಿಂದ ಬಾಬಾರವರಿಗೆ ಕುತೂಹಲಕ್ಕಾಗಿ ಒಂದು ಪ್ರಶ್ನೆ ಮಾಡಿದನು. ॥83॥ "ಬಾಬಾ, ಹಿಂದುಗಡೆ ಇರುವ ಗೋಡೆಯ ಮೇಲಿರುವ ಹಲ್ಲಿ ಏಕೆ ಲೊಚಗುಟ್ಟುತ್ತಿದೆ? ಅದರ ಅರ್ಥವೇನು? ಅದೇನಾದರೂ ಕೆಟ್ಟ ಶಕುನವೇ?" ॥84॥ ಬಾಬಾರವರು ಅವನಿಗೆ ಉತ್ತರಿಸಿದರು – "ಆ ಹಲ್ಲಿ ಔರಂಗಾಬಾದಿನಿಂದ ಆಗಮಿಸುತ್ತಿರುವ ತನ್ನ ತಂಗಿಯನ್ನು ಭೇಟಿ ಮಾಡಿ ಸಂತೋಷಪಡಲು ಉತ್ಸುಕವಾಗಿದೆ!" ॥85॥ ಅಷ್ಟಿರಲಿ. ಹಲ್ಲಿಯು ಒಂದು ಕ್ಷುಲ್ಲಕ ಜೀವಿ. ಅದಕ್ಕೆ ತಂದೆ, ತಾಯಿ, ಸೋದರಿ, ಅಥವಾ ಸೋದರ ಇರಲು ಹೇಗೆ ಸಾಧ್ಯ? ಅದಕ್ಕೆ ಏನಾದರೂ ಬಂಧುತ್ವವೆಂದರೆ ಏನೆಂದು ಅರ್ಥ? ॥86॥ ಆದುದರಿಂದ ಬಾಬಾರವರು ಸುಮ್ಮನೆ ತಮಾಷೆಯಾಗಿ ಉತ್ತರಿಸಿದರು ಎಂದುಕೊಂಡನು. ಆದ್ದರಿಂದ ಅವನು ಸ್ವಲ್ಪಹೊತ್ತು ಸುಮ್ಮನೆ ಕುಳಿತನು. ॥87॥ ಅದೇ ಸಮಯದಲ್ಲಿ, ಒಬ್ಬ ಮಹನೀಯನು ಔರಂಗಾಬಾದ್‌ನಿಂದ ಕುದುರೆಯ ಮೇಲೆ ಬಾಬಾರವರ ದರ್ಶನಕ್ಕಾಗಿ ಬಂದನು. ಆಗಲೇ, ಬಾಬಾರವರು ಸ್ನಾನ ಮಾಡುತ್ತಿದ್ದರು. ॥88॥ ಅವನು ಮುಂದೆ ಹೋಗಬೇಕಾಗಿತ್ತು, ಆದರೆ ಅವನ ಕುದುರೆ ಮಾತ್ರ ಮೇವಿಲ್ಲದೆ ಒಂದು ಹೆಜ್ಜೆಯೂ ಚಲಿಸುತ್ತಿರಲಿಲ್ಲ. ಆದ್ದರಿಂದ ಅವನು ಮಾರುಕಟ್ಟೆಯಿಂದ ಸ್ವಲ್ಪ ಹಸಿರು ಹುಲ್ಲು ಕೊಂಡು ತರಲು ಹೋದನು. ॥89॥ ಹಲ್ಲಿಯ ಬಗ್ಗೆ ಪ್ರಶ್ನಿಸಿದ ವ್ಯಕ್ತಿ ಮಾತ್ರ ಈ ಹೊಸ ಪ್ರಯಾಣಿಕನನ್ನು ಕೌತುಕದಿಂದ ನೋಡುತ್ತಿದ್ದನು. ಬಂದ ಆಗಂತುಕನು ತನ್ನ ಕಂಕುಳಲ್ಲಿ ಹೊತ್ತು ತಂದಿದ್ದ ಆಹಾರದ ಚೀಲವನ್ನು ಖಾಲಿಮಾಡಿ ಒದರಿದನು. ॥90॥ ಚೀಲವನ್ನು ನೆಲಕ್ಕೆ ಹೊಡೆದಕೂಡಲೇ ಒಂದು ಹಲ್ಲಿಯು ಅದರಿಂದ ಹೊರಗಡೆ ಬಂತು. ಎಲ್ಲರೂ ನೋಡುತ್ತಿದ್ದ ಹಾಗೆಯೇ ಗಾಬರಿಯಿಂದ ಓಡಿತು. ॥91॥ ಬಾಬಾರವರು ಆಗ ಪ್ರಶ್ನೆಮಾಡಿದ ವ್ಯಕ್ತಿಗೆ ಹೇಳಿದರು, "ಈಗ ಅದರ ಮೇಲೆ ಒಂದು ಕಣ್ಣಿಡು. ಇದು ಆ ಹಲ್ಲಿಯ ಸೋದರಿ. ಈ ಅತ್ಯದ್ಭುತ ವರ್ತನೆಯನ್ನು ನೋಡು." ॥92॥ ಅವಳು ಕೂಡಲೇ ತನ್ನ ಸೋದರಿಯು ಲೊಚಗುಟ್ಟುತ್ತಿರುವ ಶಬ್ದದ ದಿಕ್ಕಿನಲ್ಲಿ ಕುಣಿದು ಕುಪ್ಪಳಿಸುತ್ತಾ ಹೊರಡಲು ಪ್ರಾರಂಭಿಸಿದಳು. ॥93॥ ಆ ಇಬ್ಬರು ಸೋದರಿಯರ ಭೇಟಿಯು ಬಹಳ ದಿನಗಳ ನಂತರ ಆಯಿತು. ಅವು ಪರಸ್ಪರ ಚುಂಬಿಸುತ್ತ ಬಹಳ ಆತ್ಮೀಯವಾಗಿ ತಬ್ಬಿಕೊಂಡವು. ಅವುಗಳ ಪ್ರೀತಿಯು ಅಸದೃಶ ರೀತಿಯಲ್ಲಿ ವ್ಯಕ್ತವಾಗಿತ್ತು. ॥94॥ ಅವು ಒಂದನ್ನೊಂದು ಸುತ್ತಿದವು. ಅವುಗಳು ಸುತ್ತಿ ಸುತ್ತಿ ಸಂತೋಷಪಟ್ಟವು. ನೆಟ್ಟಗೆ, ಅಡ್ಡಲಾಗಿ, ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಓಡಾಡುತ್ತ ಸ್ವಚ್ಛಂದವಾಗಿ ನೃತ್ಯಮಾಡಿದವು. ॥95॥ ಔರಂಗಾಬಾದ್ ಪಟ್ಟಣವೆಲ್ಲಿ? ಶಿರಡಿಯು ಎಲ್ಲಿ? ಇವೆಲ್ಲದಕ್ಕೂ ಯಾವ ವಿವರಣೆ ಇದೆ? ಮತ್ತು ಕುದುರೆ ಸವಾರನು ಅಲ್ಲಿಗೆ ಆಕಸ್ಮಿಕವಾಗಿ ಹೇಗೆ ಬಂದನು:? ಅವನ ಚೀಲದಲ್ಲಿದ್ದ ಹಲ್ಲಿ ಹೇಗೆ ಅವನ ಜೊತೆಗೆ ಬಂತು? ॥96॥ ಹಲ್ಲಿಯು ನಿಸ್ಸಂದೇಹವಾಗಿ ಔರಂಗಾಬಾದಿನಿಂದ ಕುದುರೆಯ ಮೇವಿನ ಚೀಲದಲ್ಲಿ ಯಾವುದೋ

ರೀತಿಯಲ್ಲಿ ಸೇರಿಕೊಂಡಿದೆ. ಆದರೆ ಅವಳ ಆಗಮನ ಯಾವ ರೀತಿಯಲ್ಲಿ ಪ್ರಶ್ನೋತ್ತರವಾಗುತ್ತಿದ್ದ ಸಂದರ್ಭದ ಸರಿಯಾದ ವೇಳೆಯಲ್ಲಿ ಬಂದಿದೆ? ॥97॥ ಹಲ್ಲಿಯು ಏಕೆ ಲೊಚಗುಟ್ಟಬೇಕು? ಪ್ರಶ್ನೆಯ ಹಿಂದಿನ ಸ್ಫೂರ್ತಿಯಾವುದು? ಅದಕ್ಕೆ ವಿವರಣೆ ಏಕೆ ಕೊಡಬೇಕು? ಅದನ್ನು ಕೂಡಲೇ ಏಕೆ ದೃಢೀಕರಿಸಬೇಕು? ॥98॥ ಈ ರೀತಿ ಈ ಒಂದು ವಿಶಿಷ್ಟವಾದ ಕಾಕತಾಳೀಯ ಘಟನೆ ನಡೆಯಿತು. ಹಾಸ್ಯಪ್ರಿಯತೆಯು ವಿಶ್ವವ್ಯಾಪಿಯಾದದ್ದು. ಭಕ್ತರ ಯೋಗಕ್ಷೇಮದ ಅಭಿವೃದ್ಧಿಗಾಗಿ ಸಂತರು ಈ ರೀತಿಯ ಪ್ರಸಂಗಗಳನ್ನು ಸೃಷ್ಟಿಸುತ್ತಿದ್ದರು. ॥99॥ ಒಮ್ಮೆ ಮತ್ತೆ ಪರಿಶೀಲಿಸೋಣ. ಒಂದು ವೇಳೆ ಆ ಬುದ್ಧಿವಂತ ವ್ಯಕ್ತಿ ಅಲ್ಲಿ ಇಲ್ಲದೇ ಇದ್ದಲ್ಲಿ, ಯಾರೂ ಪ್ರಶ್ನೆಯನ್ನು ಕೇಳದೇ ಇದ್ದಲ್ಲಿ, ಸಾಯಿಯ ಮಹತ್ವವು ಯಾವ ರೀತಿ ಬೆಳಕಿಗೆ ಬರುತ್ತಿತ್ತು? ಅದರ ಗೂಢಾರ್ಥವನ್ನು ಯಾರು ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು? ॥100॥ ಅನೇಕ ಸಲ, ಅನೇಕ ಜನರು ಹಲ್ಲಿಗಳು ಲೊಚಗುಟ್ಟುವುದನ್ನು ಕೇಳುತ್ತಾರೆ. ಆದರೆ ಯಾರಾದರೂ ಅವು ಲೊಚಗುಟ್ಟುವುದರ ಅರ್ಥವನ್ನು ಕೇಳಿದ್ದಾರೆಯೇ ಅಥವಾ ಅದರ ಭಾಷೆಯನ್ನು ಕೇಳಿದ್ದಾರೆಯೇ? ॥101॥ ಸಂಕ್ಷಿಪ್ತವಾಗಿ ಅಂದರೆ, ಇವೆಲ್ಲವೂ ಲೌಕಿಕ ಲೀಲಾ ನಾಟಕಗಳು. ಹತೋಟಿಯಲ್ಲಿಡಲಾಗದವುಗಳನ್ನು ಗ್ರಹಿಸಲಾಗುವುದಿಲ್ಲ. ಅವು ಅರ್ಥವಾಗುವುದನ್ನೂ ಮೀರಿರುತ್ತವೆ. ಯಾರಾದರೂ ಅದನ್ನು ಅರ್ಥಮಾಡಿಕೊಂಡಲ್ಲಿ ಎಲ್ಲರೂ ಆಶ್ಚರ್ಯಚಕಿತರಾಗುತ್ತಾರೆ. ॥102॥ ಅದಕ್ಕೆ ವಿರುದ್ಧವಾಗಿ, ಒಂದು ಹಲ್ಲಿಯ ಲೊಚಗುಟ್ಟುವಿಕೆಯನ್ನು ಆಲಿಸಿದಲ್ಲಿ ಅದು ಅಪಶಕುನವೆಂದು ತಿಳಿಯಲಾಗುತ್ತದೆ. ಯಾರಾದರೂ, 'ಕೃಷ್ಣ, ಕೃಷ್ಣ' ಎಂದು ನುಡಿದಲ್ಲಿ, ಅದರ ಕೆಟ್ಟ ಪರಿಣಾಮ ದೂರವಾಗುತ್ತದೆಂದು ಜನರು ಹೇಳುತ್ತಾರೆ. ॥103॥ ಆ ಶಬ್ದದ ಪ್ರಾಮುಖ್ಯತೆಯು ಏನೇ ಆಗಿರಲಿ, ಅದನ್ನು ಬಿಡಿ. ಒಬ್ಬ ಭಕ್ತನಿಗೆ ತಮ್ಮಲ್ಲಿ ದೃಢವಾದ ನಂಬಿಕೆ ಉಂಟಾಗುವಂತೆ ಮಾಡಲು ಬಾಬಾರವರು ಇಂತಹ ಉತ್ಕೃಷ್ಟವಾದ ಮಾರ್ಗವನ್ನು ಅನುಸರಿಸಿದರು. ॥104॥ ಯಾರೇ ಆದರೂ ಈ ಅಧ್ಯಾಯವನ್ನು ಗೌರವಪೂರ್ವಕವಾಗಿ ಓದುವರೋ ಅಥವಾ ನಿತ್ಯವೂ ಒಂದು ನಿಗದಿ ಪಡಿಸಿದ ಸಂಖ್ಯೆಯಲ್ಲಿ ಪಠಿಸುತ್ತಾರೋ, ಅವರ ಕಷ್ಟಗಳು ಗುರುರಾಯರ ಕೃಪೆಯಿಂದ ನಾಶವಾಗುತ್ತವೆ. ಇದನ್ನು ನಿಮ್ಮ ಮನದಲ್ಲಿ ಚೆನ್ನಾಗಿ ನೆನಪಿಡಿ. ॥105॥ ಯಾರು ತಮ್ಮ ಶಿರವನ್ನು ಸಾಯಿಯ ಚರಣಗಳಲ್ಲಿ ನಿಜವಾಗಿಯೂ ಏಕಮನಸ್ಸಿನ ಭಕ್ತಿಯಿಂದ ಇಡುತ್ತಾರೋ ಅವರೊಬ್ಬರೇ ಅವರಿಗೆ ರಕ್ಷಕರು, ಅವರೊಬ್ಬರೇ ಭರವಸೆ ನೀಡುವವರು, ಕರ್ತರು, ಎಲ್ಲಾ ದುಃಖಗಳನ್ನೂ ನಾಶಮಾಡುವವರು. ॥106॥ ಅದರ ಬಗ್ಗೆ ಯಾವ ಸಂಶಯವೂ ಬೇಡ. ಸಾಯಿನಾಥರು ನಿಜವಾಗಿಯೂ ಅಂತಹವರೇ. ಭಕ್ತರ ಒಳಿತಿಗಾಗಿಯೇ ನಾನು ಇದನ್ನು, ನನ್ನ ಜೀವನದ ಅನುಭವಗಳ ಸಾರವನ್ನು ನಿಮಗೆ ಹೇಳುತ್ತಿದ್ದೇನೆ. ॥107॥ "ನಾನು ಸರ್ವವ್ಯಾಪಿ. ಈ ಪ್ರಪಂಚದಲ್ಲಿ ನಾನಿಲ್ಲದೆ ಬೇರೆ ಏನೂ ಇಲ್ಲ. ನಾನು ಕೇವಲ ಈ ಲೋಕದಲ್ಲಿಯೇ ಅಲ್ಲದೆ ಮೂರು ಲೋಕಗಳಲ್ಲಿಯೂ ಸ್ಥಿತನಾಗಿದ್ದೇನೆ." ॥108॥ ಇಂತಹ ಅಸದೃಶವಾದ ನಂಬಿಕೆಯು ಎಲ್ಲಿರುವುದೋ, ಅಲ್ಲಿ ಭಯಕ್ಕೆ ಆಸ್ಪದವೂ ಇಲ್ಲ.

ಯಾವಾಗ ಜೀವಿಯು ಪರಿಶುದ್ಧ ಚೈತನ್ಯವು ಎಲ್ಲವನ್ನೂ ತುಂಬಿರುತ್ತದೆ ಎಂಬುದನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೋ ಆ ವ್ಯಕ್ತಿಯು ಅಹಂಕಾರ ಮತ್ತು ಹೆಮ್ಮೆ ಇವುಗಳನ್ನು ದೂರಮಾಡಿಕೊಳ್ಳುತ್ತಾನೆ. ॥109॥ ಹೇಮಾದ ಪಂತನು ಸಾಯಿಗೆ ಶರಣಾಗುತ್ತಾನೆ. ಅವನಕ್ಷಣ ಕ್ಷಣವೂ ಅವರ ಚರಣಗಳಿಂದ ಅಗಲಿರಲು ಇಚ್ಛಿಸುವುದಿಲ್ಲ. ಏಕೆಂದರೆ ಅವು ಅವನನ್ನು ಈ ಮಿಥ್ಯಾ ಭವಸಾಗರದಿಂದ ದಾಟಿಸುತ್ತವೆ. ಅದರ ಮಧುರ ನಿರೂಪಣೆಯನ್ನು ಕೇಳಿರಿ. ॥110॥ ಮುಂದಿನ ಅಧ್ಯಾಯದಲ್ಲಿ ಒಂದು ಸುಂದರ ಪ್ರಸಂಗ ಇದೆ. ಅದನ್ನು ಸದ್ಗುರು ಸಾಯಿಯು ಯಾವ ರೀತಿ ಜನರು ಬ್ರಹ್ಮಜ್ಞಾನವನ್ನು ಒಂದೇ ಕ್ಷಣದಲ್ಲಿ ನೀಡಬೇಕೆಂದು ಬೇಡುವ ಪ್ರಸಂಗವನ್ನು ಸೃಷ್ಟಿಸುವರು. ॥111॥ ಒಬ್ಬ ದುರಾಶೆಯುಳ್ಳ ವ್ಯಕ್ತಿ ಬ್ರಹ್ಮಜ್ಞಾನದ ಬಗ್ಗೆ ಪ್ರಶ್ನಿಸುತ್ತಾನೆ. ಮತ್ತು ಮಹಾರಾಜ್‌ರು ಜೇಬಿನಲ್ಲಿದೆಯೋ ಎಂಬಂತೆ ತೆಗೆದು ಅವನಿಗೆ ಕೊಡುವರು. ॥112॥ ಶ್ರೋತೃಗಳು ಈ ಕಥೆಯನ್ನು ಕೇಳಿದಾಗ ಅವರಿಗೆ ಬಾಬಾರವರ ಶಕ್ತಿಯ ಅರಿವಾಗತ್ತದೆ. ಆಸೆಗಳನ್ನು ಪೂರ್ಣವಾಗಿ ತೊರೆದ ಹೊರತು ಬ್ರಹ್ಮತ್ವವನ್ನು ಪಡೆಯಲು ಸಾಧ್ಯವಿಲ್ಲ. ಇದರಲ್ಲಿ ಸಂಶಯವಿಲ್ಲ. ॥113॥ ಸಾಧಕನ ಮೌಲ್ಯವನ್ನು ಪರಿಗಣಿಸಲು ಯಾರಿಗೂ ಸಾಧ್ಯವಿಲ್ಲ. ಯಾರು ಅದನ್ನು ಸಾಧಿಸಲು ಸಾಧ್ಯ ಮತ್ತು ಹೇಗೆ ಎಂಬುದನ್ನು ಮಹಾರಾಜರು ವಿವರಿಸುತ್ತಾರೆ. ॥114॥ ನಾನು ಅವರ ಅತ್ಯಂತ ದೀನನಾದ ಸೇವಕ. ನಾನು ನಿಮ್ಮನ್ನು ಬೇಡುತ್ತೇನೆ ಮತ್ತು ಸಾಯಿಯಲ್ಲಿಟ್ಟಿರುವ ಸಂಮೃದ್ಧ ಪ್ರೀತಿಯ ತರಂಗಗಳನ್ನು ಉತ್ಸಾಹದಿಂದ ಕೇಳುವಿರೆಂದು ನಿಮ್ಮಿಂದ ನಿರೀಕ್ಷಿಸುತ್ತೇನೆ. ॥115॥ ಅದು ನಿಮಗೆ ಸಂತೋಷಕೊಡುತ್ತದೆ. ಮತ್ತು ನಿಮಗೆ ಜ್ಞಾನೋದಯವಾಗುತ್ತದೆ. ಆದ್ದರಿಂದ ಶ್ರೋತೃಗಳು ಗಮನವಿಟ್ಟು ಕೇಳಿರಿ, ಆಗ ನೀವು ಸಂತರ ಮಹತ್ವವನ್ನು ಅರ್ಥಮಾಡಿಕೊಳ್ಳುವಿರಿ. ॥116॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಚೋಳ್ಕರನ ಸಕ್ಕರೆಯ ಕಥೆ" ಎಂಬ ಹದಿನೈದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಬಡವನ ಧೋತಿ ಚಿಕ್ಕದಾಗಿದ್ದು ಟವೆಲ್ (ಕೈ ಒರೆಸುವ ಬಟ್ಟೆ) ರೀತಿ ಉಪಯೋಗಿಸಲ್ಪಡುತ್ತದೆ.
2. ಭುಜದ ಮೇಲೆ ಸಡಿಲಾಗಿ ಹಾಕಿಕೊಳ್ಳುವ ಸಣ್ಣ ವಸ್ತ್ರ.

3. ರುಮಾಲು.
4. ಒಂದು ಜೊತೆಯ ಕಡ್ಡಿಗಳು. ಒಟ್ಟಿಗೆ ತಟ್ಟಲು ಉಪಯೋಗಿಸಲ್ಪಡುವುದು. ಎರಡು ತುದಿಯಲ್ಲಿ ಲೋಹದ ತಟ್ಟೆಗಳಿರುತ್ತವೆ.
5. ಹೂವಿನ ಹಾರ ಅಥವ ತುಳಸಿಯ ಮಣಿಗಳ ಮಾಲೆ.
6. ಭಾರತೀಯ ಉಡುಪು.
7. ಅವನೊಬ್ಬ ಬಡ ಮನುಷ್ಯ, ಭಕ್ತಿಯಿಂದ ತುಂಬಿದವನು. ಥಾನೆ ಸಿವಿಲ್ ನ್ಯಾಯಾಲಯದಲ್ಲಿ ಅಪ್ರೆಂಟಿಸ್ ಆಗಿ ಕೆಲಸ ಮಾಡುತ್ತಿದ್ದವನು.
8. ಅದು ಥಾನೆ ಜಿಲ್ಲೆಯಲ್ಲಿದೆ. ಮತ್ತು ಮರ್ಬಾಡ್ ತಾಲೂಕಿನಲ್ಲಿದೆ.
9. ಭೂಮಿ, ಆಕಾಶ ಮತ್ತು ಕೆಳಗಣ ಲೋಕ.



## ಅಧ್ಯಾಯ - 16

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



# "ಬ್ರಹ್ಮಜ್ಞಾನದ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ರಾಜಾಧಿರಾಜನಿಗೆ ನಮಿಸೋಣ. ಶಾಂತಿ ಸಿಂಹಾಸನವನ್ನು ಅಲಂಕರಿಸಿರುವ ಪುರುಷೋತ್ತಮ, ಆತ್ಮ ಸಂತೃಪ್ತಿಯ ರಾಜ್ಯಚಕ್ರವರ್ತಿ, ಪರಮಪೂಜ್ಯ ಗುರು ಏಕಮಾತ್ರ ನೆಲೆ ಅವರು. ॥1॥ ಪರಿಶುದ್ಧ ಭಕ್ತಿ ಮತ್ತು ಮನಸ್ಸಿನ ಸಹಜಸ್ಥಿತಿ, ಎರಡು ಕಡೆಯೂ ಕಿ ತೆಗೆಯುವ ಸಾಧನವಾಗಿ, ಆತ್ಮಸಾಕ್ಷಾತ್ಕಾರ ಮತ್ತು ಸತ್ಯಾನುಭವಗಳು ಎರಡೂ ಕಡೆಯಿಂದ ಚಾಮರಗಳಾಗಿ ಆದರಪೂರ್ವಕವಾಗಿ ಗಾಳಿ ಬೀಸುತ್ತಿವೆ. ॥2॥ ಆತ್ಮಜ್ಞಾನವೆಂಬ ರಾಜಛತ್ರಿಯು ನಿಮ್ಮ ತಲೆಯ ಮೇಲಿದೆ. ಶಾಂತಿ ಮತ್ತು ಪ್ರಜ್ಞೆಗಳು ರಾಜದಂಡಗಳನ್ನು ಹಿಡಿದಿವೆ. ಮೋಹ, ಮಾಯೆ ಇತ್ಯಾದಿ ಅರಿಷಡ್ವರ್ಗಗಳು ಇವುಗಳನ್ನು ಒಂದು ಕ್ಷಣವೂ ಸಹಿಸಲಾರವು. ॥3॥ ಓಹ್! ಆ ಸಭೆಯು ಅದೆಷ್ಟು ವೈಭವೋಪೇತವಾಗಿತ್ತು? ನಾಲ್ಕು ವೇದಗಳು, ಆರು ಶಾಸ್ತ್ರಗಳು, ಹದಿನೆಂಟು ಪುರಾಣಗಳು ಆಸ್ಥಾನ ಕವಿಗಳಾಗಿದ್ದುವು. ಪರಿಶುದ್ಧ ಚೈತನ್ಯ ಚಂದ್ರಮನಂತೆ ಅತ್ಯಂತ ಪ್ರಕಾಶಮಾನವಾಗಿ ಹೊಳೆಯುತ್ತ, ಆತ್ಮಸಂತೃಪ್ತಿಯಿಂದ ಉಂಟಾದ ಆತ್ಮಾನಂದವು ಎಲ್ಲೆಡೆ ವ್ಯಾಪಿಸಿತ್ತು. ॥4॥ ನಿರ್ಮೋಹತ್ವ, ಭಕ್ತಿ, ಶುದ್ಧಜ್ಞಾನ, ಶ್ರವಣ, ಏಕಾಗ್ರತೆ, ಧ್ಯಾನ, ಆತ್ಮಸಾಕ್ಷಾತ್ಕಾರ ಮತ್ತು ಅನುಭವ - ಈ ಎಂಟು ಮಂತ್ರಿಗಳು ನಿಮ್ಮ ಸೇವೆಗಾಗಿ ಇರುವರು. ॥5॥ ಶಾಂತಿ ಮತ್ತು ನಿಗ್ರಹ ಇವೆರಡೂ ಅಮೂಲ್ಯ ರತ್ನಗಳು. ಇವು ನಿಮ್ಮ

ಕತ್ತಿನಲ್ಲಿರುವ ದಿವ್ಯ ಕಂಠೀಹಾರದಲ್ಲಿ ಥಳಥಳನೆ ಹೊಳೆಯುತ್ತಿವೆ. ನಿಮ್ಮ ವಚನಗಳು ಮಧುರ ಸಾಗರದ ಮೇಲೆ ಅಮೃತ ಬಿಂದುಗಳ ರೀತಿಯಲ್ಲಿ ವೇದಜ್ಞಾನವು ಇದೆ. ॥6॥ ನೀವು ನಿಮ್ಮ ಕೈಯಲ್ಲಿ ಜ್ಞಾನದ ಕತ್ತಿಯನ್ನು ಹಿಡಿದಿರುವಿರಿ. ಬೀಸಲು ಸಿದ್ಧವಾಗಿ, ಅದರ ಅಲಗು ಹರಿತವಾಗಿಯೂ ಹೊಳಪಿನಿಂದಲೂ ಕೂಡಿದೆ. ಅದರ ದೃಷ್ಟಿಯಿಂದಲೇ ಲೌಕಿಕ ಪ್ರಪಂಚವೆಂಬ ಮರವು ತಲ್ಲಣಿಸುತ್ತದೆ. ॥7॥ ನಿಮಗೆ ಜಯವಾಗಲಿ, ಓ ನಿರ್ಮಲ, ನಿಶ್ಚಲರಾದವರೇ, ಗುಣಾತೀತ, ಯೋಗಿರಾಜ – ನೀವು ಇತರರ ಕ್ಷೇಮಕ್ಕಾಗಿ ಮತ್ತು ದೀನೋದ್ಧಾರಕ್ಕಾಗಿ ಈ ದೇಹರೂಪವನ್ನು ತೆಗೆದುಕೊಂಡಿರುವಿರಿ. ॥8॥ ಹಿಂದಿನ ಅಧ್ಯಾಯದಲ್ಲಿ ಭಕ್ತರ ಇಚ್ಛೆಯನ್ನು ಹೇಗೆ ಪೂರೈಸಲಾಯಿತು, ಅವರ ಹರಕೆಯನ್ನು ಯಾವರೀತಿ ಪೂರ್ಣಗೊಳಿಸಲಾಯಿತು ಮತ್ತು ಕೊನೆಯಲ್ಲಿ ಅವರ ಮನಸ್ಸಿನಲ್ಲಿ ಏನಿತ್ತು ಎಂಬುದರ ಸೂಚನೆಯನ್ನೂ ಕೊಡಲಾಯಿತು ಎಂಬುದನ್ನು ವಿವರಿಸಲಾಗಿದೆ. ॥9॥ ಒಬ್ಬ ಸದ್ಗುರುವಿಗೆ ಎಂದಿಗೂ ಯಾವ ಆಸೆಗಳೂ ಇರುವುದಿಲ್ಲ. ಆದುದರಿಂದ ಒಬ್ಬ ಶಿಷ್ಯನು ಅವನ ಇಚ್ಛೆಗಳನ್ನು ಪೂರೈಸಲು ಏನು ಮಾಡುಹುದು? ಅವರೇ ತಮ್ಮ ಶಿಷ್ಯರನ್ನು ಆಶಾರಹಿತರನ್ನಾಗಿ ಮಾಡುತ್ತಾರೆ. ॥10॥ ಅವರು ಒಂದು ಪತ್ರವನ್ನಾಗಲೀ, ಒಂದು ಪುಷ್ಪವನ್ನಾಗಲೀ, ಭಕ್ತಿಯಿಂದ ಅರ್ಪಿಸಿದರೆ ಮಾತ್ರ ಸ್ವೀಕರಿಸುತ್ತಾರೆ. ಆದರೆ ಅವುಗಳನ್ನೇ ಅಹಂಕಾರದಿಂದ ಅರ್ಪಿಸಿದಲ್ಲಿ ಅವರು ಅದರ ಕಡೆ ಕಣ್ಣೆತ್ತಿಯೂ ನೋಡುವುದಿಲ್ಲ. ॥11॥ ಸತ್, ಚಿತ್, ಆನಂದ ಸಾಗರನಾದ ಸದ್ಗುರು ಹೊರವೇಷಕ್ಕೆ ಎಂದೂ ಬೆಲೆಕೊಡುವುದಿಲ್ಲ. ಆದರೆ ಏನನ್ನಾದರೂ ಭಕ್ತಿಯಿಂದ ಅರ್ಪಿಸಿದರೆ ಮಾತ್ರ ಅವರು ನಿಜವಾದ ಆನಂದದಿಂದ ಸ್ವೀಕರಿಸುತ್ತಾರೆ. ॥12॥ ಅಜ್ಞಾನದ ಹೊದಿಕೆಯನ್ನು ಧರಿಸಿದಂತೆ ಅವರು ನಮ್ಮ ಅವಿದ್ಯೆಯನ್ನು ದೂರಮಾಡಿ ಜ್ಞಾನೋದಯ ಉಂಟುಮಾಡುತ್ತಾರೆ. ಆಗ ಯಾವುದೇ ಮರ್ಯಾದೆಯ ಉಲ್ಲಂಘನೆ ಮಾಡದೆ ಜೀವನದ ತತ್ತ್ವವನ್ನು ಮಧುರವಾಗಿ ಕಲಿಸುತ್ತಾರೆ. ॥13॥ ಅವರನ್ನು ಸ್ವಾಮಿನಿಷ್ಠೆಯಿಂದ ಸೇವಿಸಿದಲ್ಲಿ, ಸೇವಿಸಿದಾತ ಬ್ರಹ್ಮನಲ್ಲಿ ಏಕತ್ವವನ್ನು ಅನುಭವಿಸುತ್ತಾನೆ. ಆದ್ದರಿಂದ ಬೇರೆ ಎಲ್ಲಾ ರೀತಿನೀತಿಗಳನ್ನು ತ್ಯಜಿಸಿ ಗುರುಸೇವೆಯಲ್ಲಿ ತಲ್ಲೀನನಾಗು. ॥14॥ ಸೇವೆಯಲ್ಲಿ ಏನಾದರೂ ಆಲಸ್ಯಭಾವವಿದ್ದಲ್ಲಿ ಅಥವಾ ಏನಾದರೂ ಚಾಕಚಕ್ಯತೆಯ[1] ವರ್ತನೆಗೆ ಪ್ರಯತ್ನಿಸಿದಾಗಲೀ. ಅವು ಶಿಷ್ಯನಿಗೆ ತೊಂದರೆ ಉಂಟುಮಾಡುತ್ತವೆ. ಪ್ರತಿಯೊಬ್ಬರೂ ಗುರುವಿನ ಚರಣಗಳಲ್ಲಿ ಪೂರ್ಣಶ್ರದ್ಧೆ ಹೊಂದಿರಬೇಕು. ॥15॥ ಯಾವ ಶಿಷ್ಯನಾದರೂ ತನಗೆ ತಾನೇ ಏನು ಮಾಡಲು ಸಾಧ್ಯ? ಕೇವಲ ಸದ್ಗುರು ಮಾತ್ರ ಅವನನ್ನು ಲಾಭದಾಯಕ ಸ್ಥಿತಿಯಲ್ಲಿ ಇಡಲು ಸಾಧ್ಯ. ತನ್ನ ಮೇಲೆ ಬರಬಹುದಾದಂತಹ ಕಷ್ಟಗಳ ಅರಿವು ಶಿಷ್ಯನಿಗೆ ಇರುವುದಿಲ್ಲ. ಅವನ ಗಮನಕ್ಕೆ ಬರದಂತೆಯೇ ಅವುಗಳನ್ನು ಗುರುವು ದೂರ ಮಾಡುತ್ತಾನೆ. ॥16॥ ಮೂರು ಲೋಕಗಳಲ್ಲಿಯೂ ಗುರುವಿಗಿಂತ ಮಿಗಿಲಾದ ದಾನಿ ಇರುವುದಿಲ್ಲ. ನಾವು ವಿನೀತರಲ್ಲಿ ವಿನೀತರಾಗಿ ಅವನಿಗೆ, ಕೇವಲ ಅವನಿಗೆ ಮಾತ್ರ ಶರಣಾಗೋಣ. ॥17॥ ಅವನನ್ನು ನಾವು ಚಿಂತಾಮಣಿಗೆ[2] ಹೋಲಿಸಿದಲ್ಲಿ, ಚಿಂತಾಮಣಿಯು ಕೇವಲ ಬೇಡಿದ್ದನ್ನು,

ಕೊಡುತ್ತದೆ. ಆದರೆ ಗುರುವು ಊಹಿಸಲಾಗದ್ದನ್ನೂ ಸಹ ಕೊಡುತ್ತಾನೆ. ಭಕ್ತನಿಗೆ ಅಚ್ಚರಿಉಂಟುಮಾಡುತ್ತಾನೆ. ॥18॥ ಒಂದು ವೇಳೆ ಅವನನ್ನು 'ಕಲ್ಪತರು'ವಿಗೆ ಹೋಲಿಸಿದಲ್ಲಿ, ಕಲ್ಪತರುವು ನಾವು ಬೇಡಿದ್ದನ್ನು ಮಾತ್ರ ನೀಡುತ್ತದೆ. ಆದರೆ ಗುರುರಾಯರು ಅನಿರೀಕ್ಷಿತವಾಗಿ 'ನಿರ್ವಿಕಲ್ಪ' ಸಮಾಧಿಯನ್ನು ದಯಪಾಲಿಸುತ್ತಾರೆ. ॥19॥ ಕಾಮಧೇನುವು ನಾವು ಬೇಡಿದ ಆಸೆಗಳನ್ನು ಪೂರೈಸುತ್ತದೆ. ಆದರೆ ಗುರುಧೇನು ಇನ್ನೂ ಮಹಾನ್. ಅವನು 'ಅಸಾಧ್ಯವಾದುದನ್ನು ಕೊಡುತ್ತಾನೆ' ಎಂದು ಪ್ರಸಿದ್ಧಿಯಾಗಿದ್ದಾನೆ. ಈ ಹೆಸರು ಬೇರೆ ಯಾರಿಗೆ ತಕ್ಕುದಾಗಿದೆ? ॥20॥ ಈಗ ನಾನು ಶ್ರೋತೃಗಳಲ್ಲಿ ಪ್ರಾರ್ಥಿಸುವುದೇನೆಂದರೆ, ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಿದ, ಬ್ರಹ್ಮಜ್ಞಾನವನ್ನು ಇಚ್ಛಿಸುವ ವ್ಯಕ್ತಿಯು ಹೇಗೆ ಅದನ್ನು ಪಡೆದನೆಂಬ ಕತೆಯ ಬಗ್ಗೆ ಕೇಳಿರಿ. ॥21॥ ಬ್ರಹ್ಮಜ್ಞಾನವನ್ನು ಬೇಡಿದವನನ್ನು ಬಾಬಾರವರು ಯಾವ ರೀತಿ ತೃಪ್ತಿಪಡಿಸಿದರು ಮತ್ತು ತಮ್ಮ ಭಕ್ತರಿಗೆ ಉಪದೇಶಿಸಿದರು ಎಂಬುದನ್ನು ಕೇಳಿರಿ. ಈಗ ಆ ಪ್ರಮುಖವಾದ ಉಪನ್ಯಾಸವನ್ನು ಆಲಿಸಿರಿ. ॥22॥ ಸಂತರು ಯಾವಾಗಲೂ ನಿರ್ಮೋಹಿಗಳು. ಏಕೆಂದರೆ ಅವರು ಪ್ರತಿಯೊಂದು ಇಚ್ಛೆಯನ್ನೂ ತೃಪ್ತಿಪಡಿಸಿರುತ್ತಾರೆ. ಭಕ್ತರು ಮಾತ್ರ ಅತಿ ಲೋಭಿಗಳಾಗಿದ್ದು ಸದಾ ಅತೃಪ್ತಿಹೊಂದಿರುತ್ತಾರೆ. ॥23॥ ಕೆಲವರು ಸಂತತಿ ಬೇಡುತ್ತಾರೆ. ಕೆಲವರು ನಾಶವಾಗದಂತಹ ಅಧಿಕಾರ ಮತ್ತು ಅಸೀಮ ಸಂಪತ್ತು, ಕೆಲವರು ಶ್ರದ್ಧೆ ಮತ್ತು ಭಕ್ತಿ ಬೇಡುತ್ತಾರೆ. ಆದರೆ ಅಪರೂಪವಾಗಿ ಒಬ್ಬ ವ್ಯಕ್ತಿಯು ಈ ಭವಸಾಗರದಿಂದ ಮುಕ್ತಿಯನ್ನು ಬೇಡಿದನು. ॥24॥ ಒಮ್ಮೆ ಒಬ್ಬ ಸಾಮಾನ್ಯ ಭಕ್ತನು ಕೇವಲ ಸಂಪತ್ತಿನ ಶೇಖರಣೆಯಲ್ಲಿಯೇ ನಿರತನಾದವನು, ಬಾಬಾರವರ ಕೀರ್ತಿಯನ್ನು ಕೇಳಿ ಅವರ ದರ್ಶನಕ್ಕೆ ಬಂದನು. ॥25॥ ಅವನ ಗೃಹದಲ್ಲಿ ಅಸೀಮ ಸಂಪತ್ತು ಇತ್ತು. ಅನೇಕ ಮಕ್ಕಳು ಇದ್ದರು. ಮನೆ ಕೆಲಸದವರ ಹಿಂಡು ಹಿಂಡೇ ಇತ್ತು. ದಾನಶೂರನೆಂದು ಹೆಸರುವಾಸಿಯಾಗಿದ್ದ ಆ ವ್ಯಕ್ತಿಯು ಬಾಬಾರವರ ದರ್ಶನಕ್ಕೆಂದು ಬಂದನು. ॥26॥ "ಬಾಬಾರವರು ದೈವಜ್ಞಾನಿ, ಸಾಧು ಸಂತರಲ್ಲಿ ಒಂದು ವೈಢೂರ್ಯ. ನಾನು ಅವರ ಚರಣಗಳಲ್ಲಿನನ್ನ ಶಿರವನ್ನಿಡುತ್ತೇನೆ. ಅವರು ಕಲ್ಪನಾತೀತವಾದುದನ್ನು ಸಾಧಿಸಬಲ್ಲರು. ॥27॥ "ನನಗೆ ಬೇರೆ ಯಾವುದರ ಅವಶ್ಯಕತೆಯೂ ಇಲ್ಲದಿರುವುದರಿಂದ ನಾನು ಬ್ರಹ್ಮಜ್ಞಾನವನ್ನು ಯಾಚಿಸುತ್ತೇನೆ. ನಾನು ಇದನ್ನು ಸುಲಭವಾಗಿ ಪಡೆದಲ್ಲಿ ನನ್ನನ್ನು ಅತಿಯಾದ ಭಾಗ್ಯಶಾಲಿಯೆಂದು ಭಾವಿಸುತ್ತೇನೆ." ॥28॥ ಅನಂತರ ಅವನ ಸ್ನೇಹಿತನು ಅವನಿಗೆ ಹೇಳಿದನು, "ಬ್ರಹ್ಮನನ್ನು ಅರಿಯಲು ಸುಲಭವಲ್ಲ. ನಿನ್ನಂತಹ ದುರಾಶೆಯ ವ್ಯಕ್ತಿಗೆ ಅದನ್ನು ಸಾಧಿಸಲು ಬಹಳಕಷ್ಟ. ॥29॥ "ಯಾರಿಗೆ ಕೇವಲ ಸಂಪತ್ತು, ಹೆಂಡತಿ, ಮಕ್ಕಳಿಂದಲ್ಲದೆ ಬೇರೆಯಾಗಿ ದೊರೆಯುವ ಆನಂದದ ಅರಿವು ಇಲ್ಲವೋ ಅವನಿಗೆ ಬ್ರಹ್ಮನು ಕೇವಲ ಭ್ರಮೆಯಷ್ಟೆ. ಅದು ನಿನಗೆ ಶಾಂತಿನೀಡುವುದಿಲ್ಲ. ॥30॥ "ಇಂದ್ರಿಯಗಳ ಶಕ್ತಿ ಕ್ಷೀಣಿಸಿದಾಗ ಯಾರೂ ಅಂತಹ ವ್ಯಕ್ತಿಯನ್ನು ಈ ಪ್ರಪಂಚದಲ್ಲಿ ಗೌರವಿಸುವುದಿಲ್ಲ. ಆ ಸ್ಥಿತಿಯಲ್ಲಿ ಅಂತಹ ಜನರು ಸೋಮಾರಿಯಾಗಿ ಕುಳಿತು ಬ್ರಹ್ಮನ ವಿಷಯ ಮಾತನಾಡುತ್ತಾಮುಗ್ಗದ ಮೇಲಿನ ದಾರದಂತಿರುತ್ತಾರೆ.

॥31॥ "ಈ ರೀತಿ ಇರುತ್ತದೆ ನಿನ್ನ ಬ್ರಹ್ಮನ ಕುರಿತಾದ ಕಾತುರ ಭಾವ. ನೀನು ಮುಷ್ಟಿ ಹಿಡಿದ ಜಿಪುಣನ ತರಹ ಇದ್ದಲ್ಲಿ ನಿನ್ನ ಈ ಆಸೆಯನ್ನು ಪೂರೈಸುವವರು ಯಾರೂ ಸಿಗುವುದಿಲ್ಲ." ॥32॥ ಅದೂ ಅಲ್ಲದೆ ಈ ಮುಮುಕ್ಷುವು ಶಿರಡಿಗೆ ಬಂದು ಟಾಂಗಾದಲ್ಲಿ ಹಿಡಿರುಗುವ ಪ್ರಯಾಣವನ್ನೂ ನಿಗದಿಪಡಿಸಿಯೇ ಸಾಯಿಯ ಚರಣಗಳನ್ನು ತಲುಪಿದ್ದನು. ॥33॥ ಸಾಯಿಯ ದರ್ಶನ ಮಾಡಿ ಅವರ ಚರಣಗಳಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದನು. ನಂತರ ಸಾಯಿಯು ಮಧುರವಾಗಿ ಮಾತನಾಡಿದರು. ಈಗ ಅವರು ಏನು ಹೇಳಿದರೆಂಬುದನ್ನು ಕೇಳೋಣ. ॥34॥ ಸಾಯಿಯ ಕತೆಗಳು ಆಶೆಗಳನ್ನು ಪೂರೈಸುವ ಕಲ್ಪತರು. ಅದಕ್ಕೆ ಏಕಾಗ್ರತೆಯೆಂಬ ನೀರು ಹಾಕಿದಲ್ಲಿ ಬಲವಾಗಿ ಬೆಳೆಯುತ್ತದೆ. ಯಾವಾಗ ಶ್ರೋತೃಗಳು ಹೆಚ್ಚು ಹೆಚ್ಚು ಗೌರವ ಸಲ್ಲಿಸುತ್ತಾರೋ, ಆಗ ಅದು ಹೆಚ್ಚು ಹೆಚ್ಚು ಫಲಗಳನ್ನು ನೀಡುತ್ತದೆ. ॥35॥ ಎಲ್ಲ ಕೊಂಬೆಗಳೂ ಜೀವ ರಸತ್ವದಿಂದ ಕೂಡಿರುತ್ತವೆ. ಅವುಗಳಲ್ಲಿ ಸುಗಂಧ ಪುಷ್ಪಗಳು ಅರಳುತ್ತವೆ. ಅವು ಮಧುರ ರಸಭರಿತ ಹಣ್ಣುಗಳಿಂದ ಸಮೃದ್ಧವಾಗಿರುತ್ತವೆ. ಭಕ್ತರೆಲ್ಲರ ಆಶೆಗಳೂ ನೆರವೇರುತ್ತವೆ. ॥36॥ ಅವನು (ಆಗುಂತುಕ) ಹೇಳಿದನು – "ಬಾಬಾ. ನನಗೆ ಬ್ರಹ್ಮನನ್ನು ತೋರಿಸು. ನಾನು ಕೇವಲ ಕಾತರದಿಂದಲೇ ನಿನ್ನೆಡೆಗೆ ಬಂದಿರುವೆನು. ಕ್ಷಣ ಮಾತ್ರದಲ್ಲೇ ಬಾಬಾರವರು ಬ್ರಹ್ಮನನ್ನು ತೋರಿಸಬಲ್ಲರೆಂದು ಶಿರಡಿಯ ಜನರು ಹೇಳುತ್ತಾರೆ. ॥37॥ "ಆದ್ದರಿಂದ, ನಾನು ಬಹಳ ದೂರದಿಂದ ಬಂದಿದ್ದೇನೆ. ಬಹಳ ಪ್ರಯಾಣ ಮಾಡಿ ದಣಿದಿರುವೆನು. ಆದರೆ ನಾನು ಬ್ರಹ್ಮಜ್ಞಾನ ಪ್ರಾಪ್ತಿಯಾದಲ್ಲಿ ಧನ್ಯನಾದೆನೆಂದು ಪರಿಗಣಿಸುತ್ತೇನೆ." ॥38॥ ಬಾಬಾ ಹೇಳಿದರು – "ಯೋಚಿಸಬೇಡ, ನಾನು ಈಗಲೇ ಬೇಗನೇ ಬ್ರಹ್ಮನನ್ನು ತೋರಿಸುತ್ತೇನೆ. ಇಲ್ಲಿ ನಗದು ಪಾವತಿಮುಂದೂಡುವ ಪ್ರಶ್ನೆಯೇ ಇಲ್ಲ. ನಿನ್ನಂತಹ ಜ್ಞಾನಾಭಿಲಾಷಿಗಳು ಬಹಳ ಅಪರೂಪ. ॥39॥ "ಅನೇಕ ಜನ ಸಂಪತ್ತು ಕೇಳುತ್ತಾರೆ. ಅಥವಾ ರೋಗಗಳಿಗೆ ಪರಿಹಾರ ಬೇಡುತ್ತಾರೆ. ಅಥವಾ ಅಧಿಕಾರ, ಗೌರವ ಮತ್ತು ಸದಾ ಸಂತೋಷವನ್ನು ಬೇಡುತ್ತಾರೆ. ॥40॥ "ಜನರು ಶಿರಡಿಗೆ ಟಿ ಬರುತ್ತಾರೆ, ಕೇವಲ ತಾತ್ಕಾಲಿಕ ಸಂತೋಷಕ್ಕಾಗಿ. ನನ್ನಂತಹ ಫಕೀರನ ಅನುಯಾಯಿಗಳಾಗುತ್ತಾರೆ. ಯಾರೂ ಎಂದಿಗೂ ಬ್ರಹ್ಮಜ್ಞಾನವನ್ನು ಕೋರಲಿಲ್ಲ. ॥41॥ "ಲೌಕಿಕ ಸುಖವನ್ನು ಅಪೇಕ್ಷಿಸುವವರು ಬಹಳ ಮಂದಿ ಇದ್ದಾರೆ. ನಿಮ್ಮಂತಹ ಸಾಧಕರು ಕಾಳಜಿವಹಿಸುವವರು ಇಲ್ಲದ ಕಾಲ ನನಗೆ ಬರಗಾಲದಂತೆ ಅನಿಸುತ್ತದೆ. ನಾನು ಬ್ರಹ್ಮಜ್ಞಾನಾಕಾಂಕ್ಷಿಗಾಗಿ ಅತ್ಯಂತ ಕಾತರನಾಗಿದ್ದೇನೆ. ಇದು ನನಗೆ ಬಹಳ ಅದೃಷ್ಟದ ಸಮಯವಾಗಿದೆ. ॥42॥ "ಈ ಬ್ರಹ್ಮನ ಹೆದರಿಕೆಯಿಂದ ಸೂರ್ಯ ಮತ್ತು ಚಂದ್ರರು ಶಿಸ್ತಿನವರಾಗಿದ್ದಾರೆ. ಅವರು ನಿತ್ಯವೂ ಹುಟ್ಟುತ್ತಾರೆ, ಮುಳುಗುತ್ತಾರೆ. ಸೂರ್ಯ ಮತ್ತು ಚಂದ್ರನ ಬೆಳಕು ಕ್ರಮಬದ್ಧವಾಗಿ ಚಕ್ರದ ರೀತಿಯಲ್ಲಿ ತಿರುಗುತ್ತದೆ. ॥43॥ "ಚಳಿಗಾಲ, ವಸಂತಮಾಸ ಇವುಗಳ ಅಸ್ತಿತ್ವವು ಬ್ರಹ್ಮನಿಂದಾಗಿಯೇ. ಇಂದ್ರಾದಿ ದೇವತೆಗಳು ತಮ್ಮ ರಾಜ್ಯಗಳಲ್ಲಿ ಸರಿಯಾಗಿ ರಾಜ್ಯಭಾರಮಾಡುವುದು, ತಮ್ಮ ಪ್ರಜೆಗಳನ್ನು ಪಾಲಿಸುವುದೂ ಸಹ ಇವೆಲ್ಲದರ ಮೂಲ ಕಾರಣ ಬ್ರಹ್ಮನೇ. ॥44॥

"ಆದ್ದರಿಂದ, ಈ ಶರೀರವನ್ನು ತ್ಯಜಿಸುವ ಮೊದಲು, ಬುದ್ಧಿವಂತರು ಬ್ರಹ್ಮಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಏಕೆಂದರೆ ನಿಸ್ಸಂದೇಹವಾಗಿ ಜನನ ಮತ್ತು ಮರಣಗಳ ಚಕ್ರವು ನಿರಂತರ ಅಡೆತಡೆ ಇಲ್ಲದೆ ನಡೆಯುತ್ತಲೇ ಹೋಗುತ್ತದೆ. ॥45॥ "ಬ್ರಹ್ಮನನ್ನು ಅರಿಯುವವರೆಗೆ, ಈ ದೇಹ ನಶಿಸಿಹೋದರೂ, ಸಂಸಾರ ಬಂಧನಗಳು ಪರಿಣಾಮ ಉಂಟುಮಾಡುತ್ತಲೇ ಇರುತ್ತವೆ ಮತ್ತು ಪುನರ್ಜನ್ಮವನ್ನು ತಪ್ಪಿಸಲಾಗುವುದಿಲ್ಲ. ॥46॥ "ಕೇವಲ ಬ್ರಹ್ಮವೇ ಏಕೆ? ನಾನು ನಿನಗೆ ಎಲ್ಲವನ್ನೂ ತೋರಿಸುತ್ತೇನೆ. ನಿನ್ನ ತಲೆಯಿಂದ ಪಾದದವರೆಗೆ ಆವರಿಸಿರುವ ಬ್ರಹ್ಮನ ಸಾರವನ್ನು ತೋರಿಸುವೆನು. ನಾನು ಅದನ್ನು ಉಳಿದವುಗಳಿಂದ ಪ್ರತ್ಯೇಕಿಸುವೆ." ॥47॥ ಓಹ್! ಆ ಅಮೃತ ವಚನಗಳೆಷ್ಟು ಮಧುರ! ಅದು ಆನಂದದ ಗಣಿ. ಅದರಲ್ಲಿ ಆತ್ಮನನ್ನು ಅರಿಯುವ ರೀತಿ ಮತ್ತು ದಿವ್ಯ ಸಾರವು ಇರುತ್ತದೆ. ಸಂಶಯದಲ್ಲಿರುವವರಿಗೂ ಮುಕ್ತಿಯನ್ನು ದಯಪಾಲಿಸುವ ಸಾಧ್ಯತೆ ಇದೆ. ॥48॥ ಹಗಲು ರಾತ್ರಿಗಳಲ್ಲಿ ಅಲ್ಪಸಮಯದ ಇಂದ್ರಿಯ ಸುಖಗಳಲ್ಲಿ ಮಗ್ನರಾಗಿರುವವರೂ ಸಹ ಬಾಬಾರವರ ಪದಗಳಿಂದ ಶಾಸ್ತ್ರವಿಧಿತ ಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತದೆ. ॥49॥ ಚಿಂತಾಮಣಿಯ ಸಂತಸಪಟ್ಟಲ್ಲಿ ಲೌಕಿಕ ವಸ್ತುಗಳು ದೊರೆಯುತ್ತವೆ.ಮಹೇಂದ್ರನ್ ಸಂತಸಪಟ್ಟಲ್ಲಿ ಸಂಪತ್ತು ಮತ್ತು ಸ್ವರ್ಗದ ಅಧಿಕಾರಗಳು ದೊರೆಯುತ್ತವೆ. ॥50॥ ಗುರುವಿನ ಏಕಮೇವಾದ್ವಿತೀಯ ಶಕ್ತಿಯು ಇದಕ್ಕಿಂತ ಮಿಗಿಲು. ಗುರುವಿಗೆ ಸಮನಾದ ಲಾಭಕರನು ಬೇರಿಲ್ಲ. ಅವನು ಮೆಚ್ಚಿದರೆ ಭಕ್ತರು ಅಪರೂಪದ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ॥51॥ ಈ ಒಂದು ಮನೋಹರವಾದ ಕಥೆಯನ್ನು ಕೇಳಿದರೆ ಜಗತ್ತಿನ ದುಃಖಗಳು ಮಾಯವಾಗುತ್ತವೆ. ಬಾಬಾರವರಿಗೆ ಬ್ರಹ್ಮಜ್ಞಾನವನ್ನು ಅರಸುವವನಿಗೆ ಯಾವ ರೀತಿ ಬೋಧನೆ ಮಾಡಬೇಕೆಂಬುದು ತಿಳಿದಿದೆ. ॥52॥ ಅನಂತರ ಅವರು ಅವನನ್ನು ಸ್ವಲ್ಪಕಾಲ ಕುಳಿತುಕೊಳ್ಳುವಂತೆ ಮಾಡಿದರು. ಅವನನ್ನು ಬೇರೆ ವಿಷಯದ ಬಗ್ಗೆ ಮಾತುಕತೆಯಲ್ಲಿ ನಿರತನನ್ನಾಗಿ ಮಾಡಿದರು. ಅವನಿಗೆ ಅದರ ಬಗ್ಗೆ ಮರೆತೇ ಹೋಯಿತೆನ್ನುವ ಅಭಿಪ್ರಾಯ ಕೊಟ್ಟರು. ॥53॥ ಅನಂತರ ಬಾಬಾ ಏನು ಮಾಡಿದರು? ಅವರು ಒಬ್ಬ ಬಾಲಕನನ್ನು ಹತ್ತಿರ ಕರೆದು ಬೇಗನೆ ನಂದುವಿನ ಹತ್ತಿರ ಒಂದು ಸಂದೇಶವನ್ನು ತೆಗೆದುಕೊಂಡು ಹೋಗುವಂತೆ ಹೇಳಿದರು. ॥54॥ "ಐದು ರೂಪಾಯಿಗಳ ಸಾಲ ಕೊಡು. ಬಾಬಾರವರಿಗೆ ಅಗತ್ಯವಿದೆ. ಬೇಗನೇ ಅಲ್ಪ ಸಮಯಕ್ಕೆ ಅವರಿಗೆ ಕೊಡು" ಹೋಗಿ ಅವನಿಗೆ ಹೀಗೆ ಹೇಳು. ॥55॥ ಆ ಬಾಲಕನು ನಂದುವಿನ ಮನೆಗೆ ಹೋದನು. ಅವನ ಮನೆ ಬೀಗ ಹಾಕಿತ್ತು, ಕೂಡಲೇ ಹಿಂತಿರುಗಿ ಅವನು ಈ ಸಮಾಚಾರ ಮುಟ್ಟಿಸಿದನು. ॥56॥ ಬಾಬಾ ಹೇಳಿದರು, "ಮತ್ತೆ ಹೋಗು, ದಿನಸಿ ಅಂಗಡಿಯ ಬಾಲಾ ಮನೆಯಲ್ಲಿರಬೇಕು. ಅವನಿಗೆ ಅದೇ ಸಂದೇಶ ನೀಡು. ಹಣ ತೆಗೆದುಕೊಂಡು ಬಾ, ಹೋಗು." ॥57॥ ಈ ಚಿಕ್ಕ ಪ್ರಯಾಣವೂ ಸಹ ವ್ಯರ್ಥವಾಯಿತು. ಬಾಲಾ ಸಹ ಆ ಸಮಯದಲ್ಲಿ ಮನೆಯಲ್ಲಿರಲಿಲ್ಲ. ಆ ಬಾಲಕ ಬಾಬಾರವರಿಗೆ ಏನು ನಡೆಯಿತೆಂಬುದೆಲ್ಲವನ್ನೂ ತಿಳಿಸಿದನು. ॥58॥ ಬಾಬಾರವರು ಅವಸರದಲ್ಲಿ ಇನ್ನು ಒಂದು

ಅಥವಾ ಎರಡು ಜಾಗಗಳಿಗೆ ಕಳಿಸಿದರು. ಆ ಬಾಲಕನೂ ಸಹ ಈ ಲಾಭವಿಲ್ಲದ ಓಟಗಳಿಂದ ಆಯಾಸಗೊಂಡನು. ಆದರೆ ಒಂದು ಕಾಸನ್ನೂ ಪಡೆಯಲಾಗಲಿಲ್ಲ. ॥59॥ ಮಹಾರಾಜ್‌ರು ಸರ್ವಾಂತರ್ಯಾಮಿ. ಅವರಿಗೆ ನಂದುವಾಗಲಿ, ದಿನಸಿ ವ್ಯಾಪಾರಿ ಬಾಲಾ ಆಗಲೀ ಆ ಸಮಯದಲ್ಲಿ ಮನೆಯಲ್ಲಿ ಇರುವುದಿಲ್ಲವೆಂದು ನಿಖರವಾಗಿ ತಿಳಿದಿತ್ತು. ॥60॥ ಸಾಯಿಯು ಬ್ರಹ್ಮನ ಅವತಾರವೇ. ಅವರು ಕೇವಲ ಐದು ರೂಪಾಯಿಗಳಿಗಾಗಿ ವಿವಶರಾಗಲು ಹೇಗೆ ಸಾಧ್ಯ? ಆದರೆ ಈ ನಾಟಕವನ್ನು ಬ್ರಹ್ಮಜ್ಞಾನವನ್ನು ಅರಸಿ ಬಂದವನಿಗೋಸ್ಕರ ಆಡಲಾಯಿತು. ॥61॥ ಮನೆಗೆ ಯಾರಾದರೂ ಅತಿಥಿಯಾಗಿ ಆಗಮಿಸಿದಲ್ಲಿ, ಅವನ ಗೌರವಕ್ಕಾಗಿ ಅವನಿಗೆ ಸಿಹಿಯಾದ ರುಚಿಕರವಾದ ತಿಂಡಿಗಳೇನಾದರೂ ತಯಾರಿಸಿದಲ್ಲಿ, ಅವರಿಂದಾಗಿ ಇತರರೂ ಅದನ್ನು ಆಸ್ವಾದಿಸುತ್ತಾರೆ. ॥62॥ ಆದ್ದರಿಂದ ಈ ವ್ಯಕ್ತಿಯನ್ನು ಬ್ರಹ್ಮಜ್ಞಾನಕ್ಕಾಗಿ ಚುರುಕಾಗುವಂತೆ ಮಾಡುವುದು ಒಂದು ನೆಪವಷ್ಟೇ. ಮಹಾರಾಜರು ಭಕ್ತರಿಗೆ ಎಲ್ಲರಿಗೂ ಶುಭವಾಗಲೆಂದು ಇದನ್ನು ಬೋಧಿಸಿದರು. ॥63॥ ಸಾಯಿನಾಥರಿಗೆ ಬ್ರಹ್ಮಾರ್ಥಿಯು ನೂರು ಮತ್ತು ಐವತ್ತು ರೂಪಾಯಿಗಳ ನೋಟುಗಳನ್ನು ತನ್ನ ಜೇಬಿನಲ್ಲಿಟ್ಟು ಕೊಂಡಿದ್ದನೆಂಬ ವಿಷಯ ತಿಳಿದಿತ್ತು. ॥64॥ ಬ್ರಹ್ಮಾರ್ಥಿಗೆ ಇದು ಅರ್ಥವಾಗಲಿಲ್ಲವೇ? ಅವನಿಗೆ ಕಣ್ಣುಗಳಿರಲಿಲ್ಲವೇ? ತನ್ನ ಜೇಬಿನಲ್ಲಿ ನೋಟುಗಳ ಕಂತೆಯೇ ಇದ್ದರೂ ಅವನು ತನ್ನ ಸಂಶಯದಲ್ಲೇ ಸಿಕ್ಕಿಹಾಕಿಕೊಂಡು ಸುಮ್ಮನಿದ್ದನು. ॥65॥ ಸಾಯಿಗೆ ಐದು ರೂಪಾಯಿಗಳ ಸಾಲ ಬೇಕಿತ್ತು, ಅದೂ ಅಲ್ಪ ಸಮಯದವರೆಗೆ ಮಾತ್ರ, ಆದರೂ ಅವನಿಗೆ ಅದನ್ನು ಕೊಡುವ ಬುದ್ಧಿ ಇರಲಿಲ್ಲ. ಅವನು ಬ್ರಹ್ಮಜ್ಞಾನವನ್ನು ಕೇಳುತ್ತಲೇ ಹೋದನು. ॥66॥ ಸಾಯಿ ಮಹಾರಾಜರು ತಮ್ಮ ಮಾತಿಗೆ ಬದ್ಧರಾಗಿದ್ದರು. ಅವರು ಕೇಳಿದ ಹಣವೂ ಬಹಳ ಅಲ್ಪವಾಗಿತ್ತು, ಆದರೂ ಕೊಡುವ ಯೋಚನೆ ಬಂದಾಗ ಅವನಿಗೆ ಸಂದೇಹಗಳು ತಲೆದೋರಿದವು. ॥67॥ ಐದು ರೂಪಾಯಿಗಳು ಅದೆಷ್ಟು ಅಲ್ಪವಾದವು! ಆದರೆ ಅವನಿಗೆ ಅಷ್ಟುಮಾತ್ರವನ್ನೂ ಕೊಡುವ ಮನಸ್ಸಿರಲಿಲ್ಲ! ಅಷ್ಟುಮಾತ್ರವಾದರೂ ಸಹಾಯ ಮಾಡದೆ ಇರುವ ಅಂತಹ ವ್ಯಕ್ತಿಯು ದುರಾಸೆಯ ಅಪರಾವತಾರವೇ ಸರಿ. ॥68॥ ಅಲ್ಲಿ ಮತ್ತೆ ಯಾರಾದರೂ ಸರಳ, ನೇರ ಮನಸ್ಸಿನ ವ್ಯಕ್ತಿಯು ಇದ್ದಿದ್ದರೆ, ಬಾಬಾರವರ ಬಗ್ಗೆ ನಿಜವಾದ ಪ್ರೀತಿ ಇದ್ದಲ್ಲಿ ಅವನು ಸುಮ್ಮನೆ ನೋಡುತ್ತ ಕುಳಿತಿರುತ್ತಿರಲಿಲ್ಲ. ಅದೂ ಸಹ ಸಾಲ ಮಾಡುವ ವಿಚಾರ ನಡೆಯುತ್ತಿರುವಾಗ. ॥69॥ ಆ ವ್ಯಕ್ತಿಯು ಬ್ರಹ್ಮಜ್ಞಾನದ ಬಗ್ಗೆ ಅಷ್ಟು ಕಾತುರವಿದ್ದವನು, ಇಷ್ಟು ಮಾತ್ರವನ್ನು ಅರ್ಥಮಾಡಿಕೊಳ್ಳಲಿಲ್ಲವೇ? ನನಗೆ ಅದರ ಬಗ್ಗೆ ಯಾವ ಸಂದೇಹವೂ ಇಲ್ಲ. ಆದರೆ ಅವನು ಹಣದ ದುರಾಸೆಯ ಅಧೀನನಾಗಿದ್ದನು. ॥70॥ ಹೋಗಲಿ, ಅವನು ಸುಮ್ಮನೆಯಾದರೂ ಕುಳಿತುಕೊಳ್ಳಬಹುದಿತ್ತು, ಇಲ್ಲ, ಅಷ್ಟನ್ನೂ ಮಾಡಲಿಲ್ಲ! ಅವನು ಹಿಂತಿರುಗುವ ಆತುರದಲ್ಲಿದ್ದನು ಮತ್ತು ಹೇಳಿದನು– "ಓ, ಬಾಬಾ ಸಾಯಿ. ಈಗಲೇ ಈ ಜಾಗದಲ್ಲಿಯೇ ಬ್ರಹ್ಮನನ್ನು ತೋರಿಸಿ." ॥71॥ ಬಾಬಾ ಹೇಳಿದರು – "ನಿನಗೆ ಬ್ರಹ್ಮನನ್ನು ತೋರಿಸಲು, ನೀನು ಎಲ್ಲಿ ಕುಳಿತಿರುವೆ? ನಾನು ಕೆಲವು ದಾರಿಗಳನ್ನು ಇಲ್ಲಿಯವರೆಗೆ

ಪ್ರಯತ್ನಿಸಿದೆ. ನಿನಗೆ ಸ್ವಲ್ಪವೂ ಅರ್ಥವಾಗಲಿಲ್ಲವೇ?" ॥72॥ "ಬ್ರಹ್ಮನಿಗಾಗಿ. ಐದು ಪ್ರಾಣಗಳು, ಐದು ಕರ್ಮೇಂದ್ರಿಯಗಳು ಮತ್ತು ಚಿತ್ತ, ಅಹಂಕಾರ, ಬುದ್ಧಿ ಮತ್ತು ಮನಸ್ಸು ಇವುಗಳನ್ನು ಒಪ್ಪಿಸಬೇಕು." ॥73॥ ಬ್ರಹ್ಮಜ್ಞಾನದ ಹಾದಿಯು ಬಹಳ ಕಷ್ಟ. ಎಲ್ಲರಿಗೂ ಮತ್ತು ಬಗೆ ಬಗೆಯ ಜನರಿಗೆ ಅದನ್ನು ಅನುಸರಿಸಲು ಸುಲಭವಲ್ಲ. ಸಮಯ ಮಾಗಿದಾಗ. ಅಂತಹ ಅದೃಷ್ಟವಂತನಿಗೆ ಇದ್ದಕ್ಕಿದ್ದ ಹಾಗೆ ಅವನ ಮುಂದೆ ಕಾಣಿಸುತ್ತದೆ. ॥74॥ ಯಾವ ವ್ಯಕ್ತಿಯು ಎಲ್ಲ ಲೌಕಿಕ ಬಂಧನಗಳಿಂದ ಮುಕ್ತನೋ, ಬ್ರಹ್ಮದೇವನ ಪಾದಗಳನ್ನು ಸೇರುವ ಹಂತವನ್ನು ತಲುಪಿರುವನೋ, ಅವನೊಬ್ಬನು ಮಾತ್ರ ಬ್ರಹ್ಮಜ್ಞಾನಕ್ಕೆ ಅರ್ಹನು. ಅವನಿಗೆ ಬೇರೆಯಾವುದರ ಮೇಲೆಯೂ ಮೋಹವಿರುವುದಿಲ್ಲ75॥ "ಯಾರಾದರೂ ಬ್ರಹ್ಮಜ್ಞಾನವನ್ನು ಲವಲೇಶವಾದರೂ ಮೋಹವಿಲ್ಲದವನಿಗೆ ಮಾತ್ರ ನೀಡಿದಲ್ಲಿ ಅವನು ಯಶಸ್ವಿಯಾಗುತ್ತಾನೆ. ॥76॥ "ಬ್ರಹ್ಮಜ್ಞಾನವನ್ನುಅಖಂಡವಾಗಿ ಪಡೆಯಬಲ್ಲವರು ಉನ್ನತ ಮಟ್ಟದ ಜಿಜ್ಞಾಸುಗಳು ಮಾತ್ರ, ಸಾಮಾನ್ಯ ಮನುಷ್ಯರು ಯಾವಾಗಲೂ ಹಂತಹಂತವಾಗಿ ವಿಧಿಪೂರ್ವಕವಾದ ಮಾರ್ಗದಲ್ಲಿ ಮುಂದುವರೆಯಬೇಕು. ॥77॥ "ಮೊದಲನೆಯ ವರ್ಗದವರು ಅಧ್ಯಾತ್ಮದಲ್ಲಿ ಪಕ್ಷಿಯು ಹಾರುವ ಮಾರ್ಗದ ರೀತಿ ಹಾರುತ್ತಾರೆ. ಎರಡನೆಯ ವರ್ಗದವರು ಸಾಂಪ್ರದಾಯಿಕ ಹಂತಗಳನ್ನು ಶಾಸ್ತ್ರಗಳಲ್ಲಿನ ರೀತಿಯಲ್ಲಿ ನಡೆಯುತ್ತಾರೆ. ಆದರೆ ಅಶಕ್ತರಿಗೆ, ಬ್ರಹ್ಮನ ಕುರಿತಾದ ಪ್ರಯತ್ನವೆಲ್ಲವೂ ಅನುಪಯುಕ್ತವಾದುದು. ॥78॥ "ಆತ್ಮನಿಗ್ರಹ ಮತ್ತು ವಿವೇಚನಾ ಶಕ್ತಿ ಇವುಗಳಿಲ್ಲದೆ ಬ್ರಹ್ಮನನ್ನು ಪಡೆಯುವ ಖಡಾಖಂಡಿತವಾದ ಹಾದಿಯು ಇನ್ನು ಯಾವುದೂ ಇಲ್ಲ. ಈ ಸತ್ಯವನ್ನು ವೇದಗಳಲ್ಲಿ ಹೇಳಲ್ಪಟ್ಟಿದ್ದರೂ ಸಹ ಪ್ರತಿಯೊಬ್ಬರೂ ಇದನ್ನು ಅಭ್ಯಾಸ ಮಾಡಲು ಸಾಧ್ಯವೇ? ॥79॥ "ಇದು ಕೇವಲ ನಿಖರತೆ ಮತ್ತು ಅಭ್ಯಾಸ. ಯಾವಾಗ ನಿಮ್ಮ ಮೂಳೆಗಳು ಕರಗಲು ಸಿದ್ಧವಾಗಿರುವವೋ, ಆಗ ಗುರು ಕೃಪೆಯು ಇಳಿದು ಬರುತ್ತದೆ. ಮತ್ತು ಆತ್ಮಸಾಕ್ಷಾತ್ಕಾರವು ನಿಧಾನವಾಗಿ ಪ್ರಕಾಶಕ್ಕೆ ಬರುತ್ತದೆ. ॥80॥ "ನಾನು ದೇವರು. ನಾನು ನಿಯಂತ್ರಣಾಧಿಕಾರಿ" ಇಂತಹ ಅಹಂಭಾವ ಬ್ರಹ್ಮದೇವನನ್ನು ಹಿಡಿದುಕೊಂಡಾಗ, ಅವನು ತನ್ನ ಆತ್ಮವು ಪರಮಾತ್ಮನೆಂಬುದನ್ನು ಮರೆಯುತ್ತಾನೆ ಆಗ ಜಗತ್ತಿನ ಸೃಷ್ಟಿಯಾಗುತ್ತದೆ. ॥81॥ "ನಾನೇ ಆ ಬ್ರಹ್ಮ" ಯಾವಾಗ ಇದರ ಅರಿವುಂಟಾಗುವುದೋ ಆಗ ಇದನ್ನು ಸಾಕ್ಷಾತ್ಕಾರ ಮಾಡಿಕೊಂಡವನು ಆ ಪರಮಾತ್ಮನಿಗೆ ಶರಣಾಗುತ್ತಾನೆ. ಮತ್ತು ಅವನಿಗೆ ವಿಶ್ವದ ಅಸ್ತಿತ್ವದ ಮಾಯೆಯು ಮಾಯವಾಗುತ್ತದೆ. ಇದನ್ನು ಶೃತಿಗಳು ಸಾರುತ್ತಿವೆ. ॥82॥ "ಆತ್ಮದ ಸತ್ಯಸ್ವರೂಪದ ಜ್ಞಾನವನ್ನರಿತಾಗ, ಆ ವ್ಯಕ್ತಿಯ ಪೂರ್ಣ ಸ್ವಭಾವವು ಬ್ರಹ್ಮನಲ್ಲಿ ಒಂದಾಗುತ್ತದೆ. ಅಂತಹ ಸ್ಥಿತಿಯಲ್ಲಿ ಇಡೀ ಜಗತ್ತು ಬ್ರಹ್ಮಜ್ಞಾನದಲ್ಲಿ ಪ್ರಜ್ವಲಿಸುತ್ತದೆ. ಮತ್ತು ಪ್ರಪಂಚವು ಬೂದಿಯಾಗಿಬಿಡುತ್ತದೆ. ॥83॥ ಮಾಯೆಯನ್ನು ಸರಿಸಿದಾಗ ಮಾನವನ ಮನಃಸ್ಥಿತಿ ಅದೇ ಆಗಿರುತ್ತದೆ. ಹಗ್ಗ, ಸೂರ್ಯನ ಕಿರಣ ಮತ್ತು ಮುತ್ತಿನ ಕಪ್ಪೆಚಿಪ್ಪು – ಇವುಗಳು ಪ್ರತ್ಯೇಕ ಎಂಬ ಅಜ್ಞಾನವು ಕೂಡಲೇ ಮಾಯವಾಗುತ್ತದೆ. ॥84॥ "ಕಪ್ಪೆಚಿಪ್ಪಿನ ಬಗೆಗಿನ ಸತ್ಯವಾದ

ಜ್ಞಾನವು ಬೆಳ್ಳಿಯ ಜ್ಞಾನವನ್ನೇ ಹೋಲುತ್ತದೆ. ಅದೇ ರೀತಿ ಬೆಳ್ಳಿಯ ಜ್ಞಾನವು ಕಪ್ಪೆಚಿಪ್ಪಿನ ಜ್ಞಾನವೂ ಒಂದೇ. ಮಾಯೆಯು ಅಂತ್ಯವಾದಾಗ ಬೆಳ್ಳಿಯ ಬಗ್ಗೆ ಇರುವ ಅಭಿಪ್ರಾಯ ಹೊರಟುಹೋಗುತ್ತದೆ. ಮತ್ತು ಕಪ್ಪೆಚಿಪ್ಪಿನ ಬಗೆಗಿನ ಸತ್ಯಸ್ವರೂಪ ಮತ್ತುಜ್ಞಾನ ಮನಸ್ಸಿನ ಮುಂದೆ ಅರಿವಾಗುತ್ತದೆ. ॥85॥ ಇದೆಲ್ಲವೂ ನೋಡುವವನ ಮತ್ತು ನೋಡಲ್ಪಡುವ ವಸ್ತುಗಳ ನಡುವೆ ಇರುವ ವಿರೋಧಾಭಾಸದ ಆಕರ್ಷಣೆ. ಜ್ಞಾನಜ್ಯೋತಿಯನ್ನು ಬೆಳಗಿಸಿ ಅಜ್ಞಾನದ ಕಶ್ಮಲವನ್ನು ದೂರಮಾಡಿರಿ. ಇದು ಮಾಯೆಯನ್ನು ಸುಟ್ಟು ಬೂದಿಮಾಡುತ್ತದೆ. ॥86॥ "ಹುಟ್ಟು ಸಾವುಗಳ ಬಂಧನವು ಅಲ್ಲಿ ಇಲ್ಲದಿದ್ದಲ್ಲಿ ಮೋಕ್ಷ ಮಾರ್ಗದ ಪ್ರಯತ್ನವೆಲ್ಲಿರುವುದು? ವೇದಗಳಲ್ಲಿನ ವೇದಾಂತದ ಬಗ್ಗೆ ಮತ್ತು ಈ ಉಪನ್ಯಾಸದ ಬಗ್ಗೆ ಯಾರು ತಲೆಕೆಡಿಸಿಕೊಳ್ಳುತ್ತಿದ್ದರು? ॥87॥ "ನಾನು ಬಂಧನದಲ್ಲಿದ್ದೇನೆ. ಮುಕ್ತಿಹೊಂದಲು ಇಚ್ಚಿಸುತ್ತೇನೆ." ಈ ರೀತಿ ಯಾರು ದೃಢವಾಗಿ ಯೋಚಿಸುತ್ತಾನೋ ಅಂತಹ ವ್ಯಕ್ತಿ ಮಾತ್ರ ಬ್ರಹ್ಮಜ್ಞಾನವನ್ನು ಪಡೆಯಲು ಅರ್ಹನು. ಕೇವಲ ಪಂಡಿತನಾಗಲೀ ಅಥವಾ ಮಹಾಜ್ಞಾನಿಯಾಗಲೀ ಇದಕ್ಕೆ ಅರ್ಹನಲ್ಲ. ॥88॥ "ಆದರೆ ನೀನು ಯಾವಾಗಲೂ ಬಂಧಿಯಾಗಿರಲೇ ಇಲ್ಲ. ಹಾಗಿರುವಾಗ ಬಿಡುಗಡೆಯ ಮಾತೇಕೆ?" ಇದೇ ಪರಮ ಸತ್ಯ. ಪ್ರತಿಯೊಬ್ಬರಿಗೂ ತಿಳಿದಿರುವ ವಿಷಯವೇನೆಂದರೆ ಬಂಧಿಸಲ್ಪಟ್ಟಿರುವುದು ಮತ್ತು ಬಿಡುಗಡೆಹೊಂದುವುದು ಈ ಭಾವನೆಗಳು ಗುಣಗಳ ಸಮತ್ವದಿಂದಾಗಿದೆ. (ಸತ್ವ, ರಜಸ್ಸು ಮತ್ತು ತಮಸ್ಸು.) ॥89॥ ದ್ವೈತದ ಭಾವ ಇಲ್ಲದಿರುವಾಗ ಯಾರು ಯಾರನ್ನು ಬಂಧಿಸಬಲ್ಲರು? ಯಾರು ಯಾರನ್ನ ಬಿಡುಗಡೆ ಮಾಡುವವರು? ಯಾರೂ ಬಂಧಿತರಲ್ಲ ಮತ್ತು ಯಾರೂ ಸ್ವತಂತ್ರರಲ್ಲ. ದ್ವೈತ ಮತ್ತು ಏಕತ್ವಗಳೂ ಅಲ್ಲಿ ಇರುವುದಿಲ್ಲ. ॥90॥ "ಸೂರ್ಯನು ಹಗಲು ರಾತ್ರಿಗಳನ್ನು ಸೃಷ್ಟಿಸುವನೇ? ಇಲ್ಲ. ಅದು ಕೇವಲ ನೋಡುವವನ ಭ್ರಮೆ. ಅಲ್ಲಿ ಸೂರ್ಯನು ಒಳಪಟ್ಟಿರುವುದಿಲ್ಲ. ॥91॥ "ನಾನೇ ಕರ್ತ. ನಾನೇ ಸಂತೋಷಪಡುವವನು" – ಯಾರಿಗಾದರೂ ಈ ಅಹಂಭಾವ ಇದ್ದಲ್ಲಿ ಅವನು ಸ್ವರ್ಗ ಮತ್ತು ನರಕ, ಸಂತೋಷ ಮತ್ತು ದುಃಖ ಇವುಗಳನ್ನು ಅನುಭವಿಸುತ್ತಾನೆ. ಮತ್ತು ಇಂದ್ರಿಯ ಸುಖಗಳ ಮೋಹ ಹೆಚ್ಚುತ್ತಾ ಹೋಗುತ್ತದೆ. ॥92॥ ಆತ್ಮವು ಅಮರ, ಸನಾತನ, ಶಾಶ್ವತ, ಜನನ ಮರಣಗಳ ಬದಲಾವಣೆಗೆ ಒಳಗಾಗಿಲ್ಲ. ಅದು ಮೂರು ಅಕ್ಷರಗಳಿಂದ ಕೂಡಿದೆ. ಅ ಉ ಮ – ಓಂ. ಅದಕ್ಕೆ ಆದಿಯಿಲ್ಲ. ಅದು ಅನಂತ ಮತ್ತು ನಿತ್ಯ. ॥93॥ "ಯಾರು ತನ್ನ ದೇಹವನ್ನು ಆತ್ಮವೆಂದು ಆದರಿಸುತ್ತಾನೋ ಮತ್ತು ಅವನು ಬೇರೆ, ಜಗತ್ತು ಅವನಿಗಿಂತ ಬೇರೆಯೆಂದು ಭಾವಿಸಿರುವನೋ ಅವನಿಗೆಆತ್ಮಸಾಕ್ಷಾತ್ಕಾರವು ಬಹಳ ಕಷ್ಟಸಾಧ್ಯ ಮತ್ತು ಅವನಿಗೆ ಬ್ರಹ್ಮತ್ವದ ಸಿದ್ಧಿಯು ಅಸಾಧ್ಯ. ॥94॥ ಮಾತು ಮುಂತಾದ ಎಲ್ಲ ಇತರ ಇಂದ್ರಿಯಗಳನ್ನು ನಿಗ್ರಹಿಸಿ. ಮನಸ್ಸನ್ನು ಸ್ಥಿರಗೊಳಿಸಿ, ನಂತರ ಮನಸ್ಸನ್ನು ನಾಶಮಾಡಿ. ಬುದ್ಧಿಯ ಆಳಕ್ಕೆ ಭೇದಿಸಿ. ॥95॥ ಆ ಪ್ರಜ್ಞೆಯು ಜ್ಯೋತಿ ಸ್ವರೂಪವಾಗಿ ಅಸ್ತಿತ್ವದಲ್ಲಿದೆ. ನಿಮ್ಮ ಮನಸ್ಸನ್ನು ಆ ಜ್ಯೋತಿಯ ಮೇಲೆ ಇಟ್ಟು ಧ್ಯಾನಿಸಿ. ಏಕೆಂದರೆ ಇಂದ್ರಿಯಗಳ ಎಲ್ಲಾ ಕರ್ಮಗಳೂ, ಮನಸ್ಸೂ ಸಹ ಪ್ರಜ್ಞೆಯ ಅಧೀನ. ॥96॥

"ಮಡಕೆಯ ಅಸ್ತಿತ್ವಕ್ಕೆ ಮಣ್ಣು ಅತ್ಯವಶ್ಯಕ. ಇದೇ ರೀತಿಯ ಸಂಬಂಧದಂತೆ ಇಂದ್ರಿಯಗಳಿಗೆ ಪ್ರಜ್ಞೆಯು ಅವಶ್ಯಕ. ಅವುಗಳ ಶಾಶ್ವತ ಸ್ಥಿತಿಯು ಪ್ರಜ್ಞೆಯ ಶಕ್ತಿಯ ಮೇಲೆ ಅವಲಂಬಿಸಿದೆ. ॥97॥ "ಪ್ರಜ್ಞೆಯು ಸರ್ವಾಂತರ್ಯಾಮಿ. ಈ ರೀತಿ ಅದು ಎಲ್ಲ ಇಂದ್ರಿಯಗಳನ್ನೂ ನುಂಗುತ್ತದೆ. ಮತ್ತು ಮನವನ್ನೂ ಸಹ. ಆದ್ದರಿಂದ ಚಿತ್ತವನ್ನು ಪರಮಾತ್ಮನಲ್ಲಿ ಇರಿಸಿ ಮತ್ತು ಆತ್ಮವನ್ನು ಪರಮಾತ್ಮನಲ್ಲಿ ಶರಣುಗೊಳಿಸಬೇಕು. ॥98॥ "ಯಾವಾಗ ಈ ರೀತಿಯ ಸಮತ್ವವು ಸಾಧಿಸಲ್ಪಡುವುದೋ ಆಗ ಆತ್ಮಸಾಕ್ಷಾತ್ಕಾರವು ಲಭಿಸುತ್ತದೆ. ಅದರ ಪರಿಣಾಮವಾಗಿ ಬೆಳ್ಳಿಯುಗೆಗಿನ ಭ್ರಮೆಯು ಮರೀಚಿಕೆಯ ಮತ್ತು ಹಾವಿನ ರೀತಿ ಕಾಣುವ ಹಗ್ಗದ ಬಗೆಗಿನ ಭ್ರಾಂತಿಯು ಯಾವುದೇ ತಪ್ಪಿಲ್ಲದೆ ನಿಖರವಾಗಿ ಅರ್ಥವಾಗುತ್ತದೆ. ॥9॥ ಈ ಆತ್ಮವು ಪೂರ್ಣವು. ಜನನ ಮರಣಗಳಿಲ್ಲದೇ ಇರುವುದು. ಅದರ ಬಗ್ಗೆ ಋಷಿಗಳು ಸದಾ ಹೇಳುತ್ತಾರೆ. ಅದನ್ನು ಸಾಧಿಸದೆ ಶಾಶ್ವತ ಸುಖಪಡೆಯಲು ಅಸಾಧ್ಯ. ॥100॥ "ಎಲ್ಲ ಕರ್ಮಗಳಿಗೂ ಕಾರಣದ ಅವಶ್ಯಕತೆ ಇದೆ. ಆದರೆ ಆತ್ಮವು ಮಾತ್ರ ತಾನೇ ಹುಟ್ಟಿರುವುದು ಮತ್ತು ಕಾರಣ ರಹಿತವಾದುದು. ಅದು ಸನಾತನವಾದರೂ ಅದು ಬುದ್ಧಿಗೂ ನಿಲುಕದು. ॥101॥ ಅದೊಂದು ವಿಶಾಲವಾದ ಆಕಾಶದ ರೀತಿ. ಅನಾದಿ ಮತ್ತು ಅನಂತ. ಅದು ಓಂ (ಅ ಉ ಮ) ಸನಾತನ ಶಬ್ದದ ಮೇಲೆ ಆಧಾರಿತವಾಗಿದೆ. ಅದು ನಿಶ್ಚಲ ಮತ್ತು ನಿರ್ಮಲ. ॥102॥ "ಪರಬ್ರಹ್ಮ"ನನ್ನು ತಿಳಿದುಕೊಳ್ಳಬಹುದು. "ಅಪರಾಬ್ರಹ್ಮ"ನನ್ನು ಸಾಧಿಸಬಹುದು. 'ಓಂ' ಅವರ ಚಿಹ್ನೆ. ಅದು ಸದಾ ಧ್ಯಾನ ಮಾಡಬೇಕಾದ ಸಂಕೇತ ಮತ್ತು ಎಂದೆಂದಿಗೂ ಅದನ್ನು ಪೂಜಿಸಬೇಕು. ॥103॥ 'ಓಂ' ನಾಲ್ಕು ವೇದಗಳ ಸಾರವಾಗಿದೆ. ಅದು 'ಪ್ರಣವ'ಸ್ವರೂಪವಾಗಿದೆ. ನಿಜವಾಗಿಯೂ ಅದರ ಅರ್ಥವು ಅರ್ಥರಹಿತವಾಗಿದೆ. ಅದುಜ್ಞಾನದ ಹಿಂದಿರುವ ಆಲೋಚನೆ. ॥104॥ 'ವೇದಗಳು ಸ್ವತಃ ಆ ಜ್ಞಾನವನ್ನು ನೀಡುತ್ತವೆ. ಅದನ್ನು ಜನರು ಶ್ರಮವಹಿಸಿ ಪಡೆಯುತ್ತಾರೆ. ಮತ್ತು ಅದಕ್ಕಾಗಿಯೇ ಅನೇಕ ವ್ರತಗಳನ್ನು, ಬ್ರಹ್ಮಚರ್ಯ ಇತ್ಯಾದಿಗಳನ್ನು ಅನುಸರಿಸುತ್ತಾರೆ. ಅದನ್ನು ಘನ ಪಾಂಡಿತ್ಯದಿಂದ ಗಳಿಸಬಹುದು. ॥105॥ ಅದನ್ನು ಸಾಧಿಸಲು ಕಷ್ಟಸಾಧ್ಯವಾದರೂ, ಒಬ್ಬ ಜಿಜ್ಞಾಸುವಿಗೆ ಗುರುಕೃಪೆ ಇದ್ದಲ್ಲಿ ಅತಿಸುಲಭ. ॥106॥ "ಯಾರಾದರೂ ಸ್ಥೂಲರೂಪದ ಇಂದ್ರಿಯಗಳನ್ನು ನಿಗ್ರಹಿಸಲು ಪ್ರಾರಂಭಿಸಿದಲ್ಲಿ ಸೂಕ್ಷ್ಮರೂಪಗಳನ್ನು ಕ್ರಮಶಃ ವೇದಗಳಲ್ಲಿ ನಮೂದಿಸಿರುವ ವಿಧಿವಿಧಾನಗಳಿಂದ ಜಿಜ್ಞಾಸುವು ಸುಲಭವಾಗಿ ಸಾಧಿಸಬಹುದು. ॥107॥ "ಅದು – ಓಂ – ಒಂದು ಪದ, ಒಂದು ವಾಕ್ಯ, ಒಂದು ಅಕ್ಷರ – ಅದು ಎಲ್ಲಾ ತಪಸ್ಸಿನ[2] ಸಾರವು. ಅದನ್ನು ಉಚ್ಚರಿಸುವುದರಿಂದಲೇ ಅದರ ಅರ್ಥ ಪ್ರಕಟಗೊಳ್ಳುವುದು ಮತ್ತು ನಿರಂತರ ಸ್ಮರಣೆಯ ಜ್ಞಾನೋದಯವನ್ನು ನೀಡುತ್ತದೆ. ॥108॥ ಅದು ಸರ್ವಾಂತರ್ಯಾಮಿಯಾದ ಚೇತನ, ಅರಿವು. ಅದು ಬೆಳೆಯದು ಮತ್ತು ನಶಿಸದು. ಏಕೆಂದರೆ ಅದು ಅಮರ. ಅಪರೂಪಕ್ಕೆ ಸದ್ಗುರುವಿನ ಅನನ್ಯ ಭಕ್ತನು ತನ್ನ ಆತ್ಮಸ್ವರೂಪವನ್ನು ಈ ರೀತಿ ಅರ್ಥಮಾಡಿಕೊಳ್ಳುತ್ತಾನೆ. ॥109॥ ಯಾರು ಸದಾ ಕಾಲ ತಾಪತ್ರಯಗಳಿಂದ (ಭೌತಿಕ, ಮಾನಸಿಕ ಮತ್ತು ವಿಧಿಬರಹದ) ದುಃಖದಿಂದ

ಪೀಡಿತರಾಗಿರುವವರು, ಕೇವಲ ಸಂತರ ವಿಶೇಷ ಸೌಭಾಗ್ಯವಾದ ಈ ಅನುಭವವನ್ನು ಪಡೆಯಲಾರರು. ॥110॥ ಅವಿದ್ಯೆಯು ಲೌಕಿಕ ಬಂಧನಗಳನ್ನುಂಟುಮಾಡುತ್ತದೆ. ಕೇವಲ ಬ್ರಹ್ಮನೊಡನೆ ಐಕ್ಯತೆಯ ಸ್ಥಿತಿಯೊಂದೇ ಅವುಗಳಿಂದ ದೂರಮಾಡಬಲ್ಲದು. ಅದು ಕೇವಲ ಸಂತರ ಭಾಗ್ಯ ಮಾತ್ರ. ॥111॥ ಪೂರ್ಣವಾಗಿ ನಿರ್ಮೋಹಿಯಾಗಿ ಮತ್ತು ಈ ಮನಸ್ಸಿನ ಸ್ಥಿತಿಯಲ್ಲಿ ಯಾವುದೇ ಗಟ್ಟಿಯಾದ ವಿಷಯ ಅಥವಾ ಸಲಹೆ ಇರಬಾರದು. ಇದೇ 'ಅಹಂಬ್ರಹ್ಮಾಸ್ಮಿ' – 'ನಾನೇ ಬ್ರಹ್ಮ' ಎಂಬ ಸ್ಥಿತಿ. ಅದು ಸಹಜವಾದ ನಿನ್ನ ಬುದ್ಧಿಯು ಪ್ರಕಟವಾಗುವವರೆಗೆ ಈ ಭಾವದಲ್ಲಿ ಸಂಪೂರ್ಣವಾಗಿ ಲೀನವಾಗು. ॥112॥ "ಯಾವಾಗ ಒಬ್ಬ ವ್ಯಕ್ತಿಯು ತನ್ನ ಗುರುವಿನ ವಚನಗಳನ್ನು ಶಾಸ್ತ್ರಗಳೆನುವೆಂಬುದನ್ನು ಅನುಭವಿಸುತ್ತಾನೋ ಆಗ ಅಂತರಂಗದ ಮತ್ತು ಬಾಹ್ಯದ ಸ್ವಭಾವಗಳು ಶಾಂತವಾಗುತ್ತವೆ ಮತ್ತು ಮನೋನಿರ್ಧಾರ ಬಲವಾಗಿ ಅವನು ಆತ್ಮಸ್ವರೂಪವನ್ನರಿಯಲು ಸಾಧ್ಯವಾಗುತ್ತದೆ. ॥113॥ ಯಾವುದರಿಂದ ಮನಸ್ಸು ಸಂಸಾರದಲ್ಲಿ ಸಮತ್ವವನ್ನು ನೋಡುವುದೋ ಆಗ ಖುಷಿ, ಸಂಪತ್ತು ಮತ್ತು ಭೌತಿಕವಸ್ತುಗಳಲ್ಲಿ ಆಶಾರಹಿತ ಭಾವ ಇರುತ್ತದೆ. ಅದು ನಮ್ಮಲ್ಲಿಯೇ ಇರುವ ಅವಿದ್ಯೆಯ ತೆರೆಯನ್ನು ಸರಿಸುತ್ತದೆ. ಅದರಿಂದ ಅವನು ಪೂರ್ಣ ಸಾಮ್ರಾಜ್ಯವನ್ನು ತಲುಪುತ್ತಾನೆ. ॥114॥ "ನಿಸ್ಸಂದೇಹವಾಗಿ ಆತ್ಮವು, ಕಿಟಕಿಯ ಕಿಂಡಿಯಿಂದ ಬೆಳಗುತ್ತಿರುವ ಸೂರ್ಯನ ಕಿರಣಗಳಲ್ಲಿ ತೇಲುತ್ತಿರುವ ಅಣುವಿನ ಹಾಗೆ ಇರುತ್ತದೆ. ಅಷ್ಟೇಕೆ ಅದು ಅದಕ್ಕಿಂತಲೂ ಸಣ್ಣದಾಗಿದೆ. ಒಂದು ಅಣುವಿಗಿಂತಲೂ ಸಣ್ಣದು ಮತ್ತು ಸೂಕ್ಷ್ಮಾತಿಸೂಕ್ಷ್ಮ. ನಿಜವಾಗಿಯೂ ಇದು ತೀರ್ಮಾನ ರೂಪ. ॥115॥ "ಆತ್ಮವು ಮಹತ್ತಿಗಿಂತಲೂ ಮಹತ್ತಿನದು. ಆದರೆ ಈ ಎಲ್ಲಾ ಹೋಲಿಕೆಗಳೂ ಕೇವಲ ಕಾಲ್ಪನಿಕ. ಏಕೆಂದರೆ ಆತ್ಮವು ಎಲ್ಲ ಅಳತೆಗೋಲನ್ನು ಮೀರಿರುತ್ತದೆ. ॥116॥ "ಅದರ ಸೂಕ್ಷ್ಮತೆಯನ್ನು ವಿಚಾರ ಮಾಡಿದಲ್ಲಿ ಅದು ಸೂಕ್ಷ್ಮದರ್ಶಕಕ್ಕೆ ಒಳಪಡುತ್ತದೆ. ಅದರ ವಿಶಾಲತೆಯನ್ನು ಪರಿಗಣಿಸಿದಲ್ಲಿ ಅದು ಮಹತ್ತಿಗಿಂತ ಮಹತ್ತಾದದ್ದು. ಹೀಗೆ ಅದರ ಗಾತ್ರ, ಆಕಾರಗಳು ಕೇವಲ ಹೆಸರಿಗಷ್ಟೇ. ಆತ್ಮವು ಯಾವುದೇ ಪ್ರತ್ಯೇಕ ಗುಣಹೊಂದಿಲ್ಲದೆ ಕೇವಲ ತಾನೇ ಪೂರ್ಣಸ್ವರೂಪ. ॥117॥ ಆತ್ಮವು ಹುಟ್ಟಿಲ್ಲ ಮತ್ತು ಸಾಯುವುದೂ ಇಲ್ಲ. ಅದಕ್ಕೆ ಮೂಲ ಕಾರಣ ಯಾವುದೂ ಇಲ್ಲ. ಅದು ಅನಾದಿ, ಅನಂತ, ಶಾಶ್ವತ, ಸನಾತನ ಮತ್ತು ಸುಲಭವಾಗಿ ಗ್ರಹಿಸಲು ಅಸಾಧ್ಯವಾಗಿರುವುದು. ॥118॥ "ಓಂಕಾರದಲ್ಲಿ ಪ್ರಾತಿನಿಧಿಕವಾಗಿ ಕಾಣಬಹುದಾದ ಬ್ರಹ್ಮನ ಪೂರ್ಣಸ್ವಭಾವವೇ. ಯಾವ ಯೋಗಿಗಳು ಸಮಾಧಿ ಸ್ಥಿತಿಯಲ್ಲಿ ಹೋಗಿ ಬರುವುದನ್ನು ಕರಗತ ಮಾಡಿಕೊಂಡಿರುವರೋ ಅವರಿಗೇ ಅದನ್ನು ಸಾಧಿಸಲು ಕಷ್ಟವಾಗಿರುವಾಗ ಬೇರೆಯವರಿಗೆ ಅದು ಹೇಗೆ ಸಾಧ್ಯ ಅಥವಾ ಎಲ್ಲರಿಗೂ ಹೇಗೆ ಸುಲಭಸಾಧ್ಯ? ॥119॥ "ಅದರ ಸ್ವಭಾವವನ್ನು ಖಚಿತಪಡಿಸುವ ಪ್ರಯತ್ನದಲ್ಲಿ ವೇದಗಳು ಬಳಲಿವೆ. ಸನ್ಯಾಸಿಗಳು ಅರಣ್ಯವಾಸಿಗಳಾಗಿದ್ದಾರೆ. ಉಪನಿಷತ್ತುಗಳು ಬಿಟ್ಟುಬಿಟ್ಟಿವೆ. ಈ ರೀತಿ ಯಾರಿಗೂ ಅದನ್ನು ವಿಶ್ಲೇಷಿಸಿ ಖಚಿತಗೊಳಿಸಲು ಎಂದಿಗೂ ಸಾಧ್ಯವಿಲ್ಲ. ॥120॥ ಆತ್ಮಸಾಕ್ಷಾತ್ಕಾರವನ್ನು

ಪಡೆಯಲು ಕೇವಲ ಪರಮಾತ್ಮನಲ್ಲಿ ಒಂದಾದ ಗುರುವಿಗೆ ಮಾತ್ರ ಸಾಧ್ಯ. ಇತರರಿಗೆ ಯಾವ ಆಧಾರವೂ ಇರುವುದಿಲ್ಲ. ತರ್ಕಶಾಸ್ತ್ರವನ್ನು ಅಭ್ಯಸಿಸುತ್ತಿರುವವನಿಗೆ ಯಾವುದೇ ಸಾಧ್ಯತೆ ಇರುವುದಿಲ್ಲ. ॥121॥ "ಕೇವಲ ತಾರ್ಕಿಕನಿಗೆ ಯಾವುದೇ ಅವಕಾಶ ಇರುವುದಿಲ್ಲ. ಅವನು ಕೇವಲ ಭ್ರಮೆಯ ಮಧ್ಯೆ ಸುತ್ತುತ್ತ ಇರುತ್ತಾನೆ. ಅವನಿಗೆ ಈ ಪವಿತ್ರ ಜ್ಞಾನದಲ್ಲಿ ಅನುಭವಿ ಗುರುವಿಲ್ಲದಿದ್ದಲ್ಲಿ, ಅವನ ಬುದ್ಧಿಯು ವಿರಮಿಸುವುದಿಲ್ಲ. ॥122॥ "ಪ್ರತಿಯೊಬ್ಬರೂ ತಮ್ಮದೇ ಬುದ್ಧಿಶಕ್ತಿ ಮತ್ತು ಭ್ರಮೆಗಳೆಂಬ ಅಸಂಖ್ಯಾತ ನಕ್ಷತ್ರಗಳು." ಎಂಭತ್ತುನಾಲ್ಕು ಲಕ್ಷ ಜನನ ಮರಣಗಳ ಚಕ್ರಗಳಿಂದ ಬಿಡುಗಡೆ ಮಾಡಿಸಲು ಸಾಧ್ಯವಿಲ್ಲ. ಕೇವಲ ಒಬ್ಬ ಚಂದ್ರ, ಒಬ್ಬ ಗುರು – ಈ ಪವಿತ್ರ ಜ್ಞಾನದಲ್ಲಿ ಪರಿಣಿತನಾಗಿದ್ದವನಾದರೆ ಸಾಕು. ಅವನಿರುವಲ್ಲಿ ಕತ್ತಲೆಯು ಲವಲೇಶವೂ ಇರುವುದಿಲ್ಲ. ॥123॥ ಅನೇಕರ ಸಹಾಯದಿಂದ ಅತ್ಯಂತ ಪರಿಶ್ರಮದಿಂದ ಪಡೆಯಲುಅಸಾಧ್ಯವಾದುದು, ಸದ್ಬೋಧೆಯ ಪ್ರಕಾಶವನ್ನು ಬೆಳಗಿಸುವ ಒಬ್ಬ ಸದ್ಗುರುವಿನಿಂದ ಸುಲಭವಾಗಿ ಪಡೆಯಬಹುದಾಗಿದೆ. ॥124॥ ಕಾಮನೆಗಳನ್ನೀಡೇರಿಸಿಕೊಳ್ಳುವ ಉದ್ದೇಶದಿಂದ ಹುಟ್ಟಿಕೊಂಡ ಮಿಥ್ಯಾ ಜ್ಞಾನವು ಮಾಯವಾಗುತ್ತದೆ. ಸತ್ಯ ನಿಶ್ಚಲವಾಗಿ ನಿಲ್ಲುತ್ತದೆ. ಆತ್ಮಸಾಕ್ಷಾತ್ಕಾರದ ಸ್ಥಿತಿಯು ಉಟಾಗುತ್ತದೆ. ಅದರ ಮತ್ತೊಂದು ಹೆಸರೇ ಮೋಕ್ಷ. ॥125॥ ಎಲ್ಲಾ ಜೀವರುಗಳಿಗೂ ಆಳವಾಗಿ ಬೇಕಾಗಿರುವುದು ಕೇವಲ ಇದೇ. ಅದಕ್ಕಾಗಿಯೇ ಎಲ್ಲರೂ ಪ್ರಯತ್ನಶೀಲರಾಗಿದ್ದಾರೆ. ಯಾರು ಸದಾ ಆತ್ಮದ ಸ್ವರೂಪವನ್ನು ಅರಿಯುವುದರಲ್ಲಿ ಪ್ರಯತ್ನಶೀಲರಾಗಿರುತ್ತಾರೋ, ಅವರು ಎಂದೆಂದೂ ಅಂತರಂಗವನ್ನು ದೃಷ್ಟಿಸುತ್ತಲೆ ಇರುತ್ತಾರೆ. ॥126॥ ಪರಮಾತ್ಮನ ಮಾರ್ಗದಲ್ಲಿ ಮನಸ್ಸು ಚಂಚಲವಾದೊಡನೆಯೇ ಎಲ್ಲ ಇಂದ್ರಿಯಗಳೂ, ಎಲ್ಲ ವಿಕಾರಗಳೂ ಚುರುಕಾಗುತ್ತವೆ. ಆದರೆ ಮನಸ್ಸು ಆತ್ಮಸಾಕ್ಷಾತ್ಕಾರದ ಗುರಿಯಲ್ಲಿ ಸ್ಥಿರವಾದಾಗ ವಿಕಾರಗಳು ಶಕ್ತಿಹೀನವಾಗುತ್ತವೆ. ॥127॥ ಯಾರು ತಮ್ಮ ನೈಜ ಆತ್ಮದಿಂದ ವಿಮುಖವಾಗಿರುವರೋ, ಅವರು ಎಲ್ಲ ಸಾಂಸಾರಿಕ ಸುಖಗಳ, ವಿರೋಧಾಭಾಸಗಳನ್ನು ಅನುಭವಿಸುತ್ತಾರೆ. ಆದರೆ ಅವರಾತ್ಮದ ಕಡೆ ದೃಷ್ಟಿಯಿಟ್ಟಲ್ಲಿ ಅದೇ ವಸ್ತುಗಳೇ ಯಾವುದೇ ಆಕರ್ಷಣೆಯನ್ನು ತೋರಿಸುವುದಿಲ್ಲ. ॥128॥ ಯಾರು ಕೇವಲ ಮೋಕ್ಷವನ್ನು ಆಶಿಸುತ್ತಾರೋ ಮತ್ತು ತಮ್ಮೊಳಗೆ ಬೇರೆ ಯಾವುದೋ ಆಸೆ ಇಟ್ಟುಕೊಂಡಿರುವುದಿಲ್ಲವೋ ಅವರಿಗೆ ಈ ಜಗತ್ತಿನಲ್ಲಿ ಯಾವುದರ ಬಗ್ಗೆಯೂ ಲವಲೇಶವಾದರೂ ಲಾಲಸೆಯು ಇಹದಲ್ಲಿಯೂ ಪರದಲ್ಲಿಯೂ ಇರುವುದಿಲ್ಲ. ಅಂತಹ ವ್ಯಕ್ತಿಯು ಮಾತ್ರ ಮೋಕ್ಷಕ್ಕೆ ಅರ್ಹನು. ॥129॥ ಈ ಗುಣಗಳಲ್ಲಿ ಯಾವುದೇ ಒಂದು ಗುಣ ಕಡಿಮೆಯಾದರೂ ಅವನನ್ನು ನಿಶ್ಚಯವಾಗಿ ಮೋಕ್ಷ ಪಡೆಯಬಯಸಿರುವ ಅಭ್ಯರ್ಥಿ ಎನ್ನಲು ಸಾಧ್ಯವಿಲ್ಲ. ಅವನು ಕೇವಲ ಮೋಕ್ಷಾರ್ಥಿಯಂತೆ ನಟಿಸುವವನು. ಅದು ಮಾಲಗಣ್ಣಿನವನನ್ನು ಸುಂದರಾಂಗನೆಂದು ದಾಟಿಸುವ ಹಾಗೆ ಅಥವಾ ಒಬ್ಬ ಒಂದು ಕಣ್ಣು ಕುರುಡಾದವನು ನೋಡಲು ನಟಿಸುವವನ ಹಾಗೆ ಇರುತ್ತದೆ. ॥130॥ 'ಅಹಂ'ಭಾವ ಮಾಯವಾಗದೆ ಇದ್ದರೆ, ದುರಾಸೆ ನಾಶವಾಗದಿದ್ದಲ್ಲಿ, ಮನಸ್ಸು ವಿಕಾರ ರಹಿತವಾಗದಿದ್ದಲ್ಲಿ,

ಬ್ರಹ್ಮಜ್ಞಾನವನ್ನು ಪಡೆಯಲು ಅಸಾಧ್ಯ. ॥131॥ 'ದೇಹವೇ ಆತ್ಮ' ಎಂಬ ನಂಬಿಕೆಯು ಕೇವಲ ಒಂದು ಭ್ರಮೆ. ಮೋಹವೇ ಬಂಧನಗಳಿಗೆ ಕಾರಣ. ಇಂದ್ರಿಯಗಳನ್ನೂ, ಅವುಗಳಿಂದ ಸಂತೋಷ ಉಂಟಾಗುತ್ತದೆ ಎಂಬ ಭಾವನೆಗಳನ್ನೂ, ತ್ಯಾಗ ಮಾಡಿ. ಅನಂತರ ಬ್ರಹ್ಮತ್ವವನ್ನು ಪಡೆಯಬಹುದು. ॥132॥ ಪರಬ್ರಹ್ಮ ಸ್ವರೂಪವು ನಿರ್ಗುಣ. ಆದ್ದರಿಂದ ಅರಿಯಲು ಕಷ್ಟಸಾಧ್ಯ. ಈ ರೀತಿ ಇದನ್ನು ಉದಾಹರಣೆಗಳ ಸಹಿತ ವಿವರಿಸಲಾಗಿದೆ. ಅದನ್ನು ಸಾಧಿಸಲು ಕೇವಲ ಈ ಮಾರ್ಗವನ್ನು ಮಾತ್ರ ಜ್ಞಾನಿಗಳು ಅನುಸರಿಬಹುದು. ॥133॥ ವೇದಗಳಲ್ಲಿ ನಿಷ್ಣಾತರಾದವರು, ಆತ್ಮವು ಅತ್ಯದ್ಭುತ ಮತ್ತು ಸರ್ವಾಂತರ್ಯಾಮಿಯೆಂದು ತಿಳಿದವರು. ಅದನ್ನು ರುಜುವಾತುಮಾಡುವುದಾಗಲೀ ಅನುಭವಿಸುವುದಾಗಲೀ ಹೇಗೆ? ॥134॥ "ಮೊಟ್ಟಮೊದಲ ಆವಶ್ಯಕತೆಯೇ ಮನಸ್ಸಿನ ಪರಿಶುದ್ಧತೆ. ಮುಂದಿನದು ಕುಶಾಗ್ರಬುದ್ಧಿ ಮತ್ತು ಹರಿತವಾದ ಬುದ್ಧಿಶಕ್ತಿಯ ಆವಶ್ಯಕತೆ. ಇದರಿಂದಾಗಿ ತ್ರಿಕರಣಶುದ್ಧಿ ಉಂಟಾಗುತ್ತದೆ. ಆ ಸ್ಥಿತಿಯಲ್ಲಿ ಕರುಣಾರಸ ಉಕ್ಕಿ ಅವನೇ ಸ್ವತಃ ಸಾಕ್ಷಾತ್ಕರಿಸುವನು. ॥135॥ ಆತ್ಮವು ಅನಂತ ಮತ್ತು ಅಖಂಡ. ಆತ್ಮಸಾಕ್ಷಾತ್ಕಾರ ಪಡೆದಂತಹ ವ್ಯಕ್ತಿಯ ಜೀವನದಲ್ಲಿ ದುಃಖವೆಂಬುದೇ ಇಲ್ಲ. ಏಕೆಂದರೆ ಆತ ಶಾಂತ, ಬುದ್ಧಿವಂತ ಮತ್ತು ಸಂಸಾರ ಬಂಧನಗಳಿಂದ ಎಂದೆಂದಿಗೂ ಮುಕ್ತನಾದವನು. ॥136॥ ಒಂದು ಜಾಣತನದ ತಾರ್ಕಿಕ ದೃಷ್ಟಿಕೋನದಿಂದ ಉಪಯೋಗವಿಲ್ಲ. ವೇದ, ಶೃತಿಗಳು ಮತ್ತು ಗ್ರಂಥಗಳ ಅಭ್ಯಾಸ ಮಾಡಿ ಅರ್ಥೈಸುವುದರಿಂದ ಮತ್ತು ಅವುಗಳ ವಿಶ್ಲೇಷಣೆಯಿಂದ ಏನೂ ಪ್ರಯೋಜನವಿಲ್ಲ. ॥137॥ ಆತ್ಮವು ನಿತ್ಯವಾದುದು ಮತ್ತು ವಿಕಾರ ರಹಿತವಾದುದು. ದೇಹವು ಅನಿತ್ಯವಾದುದು. ಇದನ್ನು ಅರಿತುಕೊಂಡವರು ಮತ್ತು ಸ್ವಹಿತಕ್ಕಾಗಿ ಶ್ರಮಪಡುವವರು ತಮಗೆ ವಿಹಿತ ಯಾವುದು ಅವಿಹಿತ ಯಾವುದು ಎಂಬುದರ ಬಗ್ಗೆ ಎಚ್ಚರದಿಂದ ಇರುತ್ತಾರೆ. ॥138॥ ಆತ್ಮಜ್ಞಾನಿಯು ಸದಾ ನಿರ್ಭಯನಾಗಿರುತ್ತಾನೆ.ಜಗತ್ತಿನ ದ್ವಂದ್ವಭಾವವನ್ನು, ಕಷ್ಟಕಾರ್ಪಣ್ಯಗಳನ್ನು ಯಶಸ್ವಿಯಾಗಿ ನಿರ್ಮೂಲ ಮಾಡುವ ಏಕೈಕ ವಿಶಿಷ್ಟ ವ್ಯಕ್ತಿ ಆತ. ॥139॥ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ಬಹಳ ಕಷ್ಟ. ಕೀರ್ತನ-ಕಥಾಶ್ರವಣಗಳಿಂದಲೂ ಅದು ಅರ್ಥವಾಗುವುದಿಲ್ಲ. ಕೇವಲ ಬುದ್ಧಿವಂತಿಕೆಯೂ ಏನೂ ಮಾಡಲಾರದು. ಆದರೆ ವಿಶೇಷ ಮಾರ್ಗಗಳಿಂದ ಮಾತ್ರ ಅದನ್ನು ಅರ್ಥಮಾಡಿಕೊಳ್ಳಬಹುದು. ॥140॥ ಜೀವನದ ಪ್ರತಿಯೊಂದು ವೃತ್ತಿಯಲ್ಲೂ ಆಶಾರಹಿತರಾದವರು ಮತ್ತು ಆತ್ಮಜ್ಞಾನವೊಂದೇ ಗುರಿಯಾಗಿರುವವರು, ಆತ್ಮನಿಗಾಗಿ ಹಂಬಲಿಸುವವರು ಮಾತ್ರ ಮಹತ್ತಾದ ಉಪಯೋಗವನ್ನು ಪಡೆಯಬಲ್ಲರು. ॥141॥ 'ತತ್ತ್ವಮಸಿ'– 'ಅದು ನಾನೇ ಆಗಿದ್ದೇನೆ' – ಎಂಬುದರ ಬಗ್ಗೆ ಅಚಲವಾದ ನಂಬಿಕೆ ಇಟ್ಟಿರುವವನು ಅದನ್ನು ಕೇಳಿದ ಕೂಡಲೇ, ಅದನ್ನು ಅನುಭವಿಸುವ ಏಕಮಾತ್ರ ಉದ್ದೇಶವನ್ನು ನಿರ್ಧರಿಸುತ್ತಾನೆ. ಆಗ ಸಮಸ್ತ ಅಜ್ಞಾನವೂ ದೂರವಾಗುತ್ತದೆ. ॥142॥ ದುಷ್ಕರ್ಮಗಳಲ್ಲಿ ಸದಾ ನಿರತನಾಗಿರುವವನು ಮನಸ್ಸು ಗಲಿಬಿಲಿಗೊಂಡು, ಚಂಚಲ ಮನಸ್ಸಿನವನಾಗಿ ಏಕಾಗ್ರಚಿತ್ತನಾಗಲು ಆಗುವುದಿಲ್ಲ. ಅಂತಹ ವ್ಯಕ್ತಿಯು ವಿದ್ಯಾವಂತನಾಗಿದ್ದರೂ ಆತ್ಮಜ್ಞಾನವನ್ನು

ಪಡೆಯಲು ಅಸಾಧ್ಯ. ॥143॥ ಯಾರು ವೇದಶಾಸ್ತ್ರಗಳಲ್ಲಿ ತಿಳಿಸಿರುವಂತೆ ತಪ್ಪುಕೆಲಸಗಳನ್ನು ದೂರಮಾಡಿ ಸರಿಯಾದವುಗಳನ್ನು ಅಭ್ಯಸಿಸುತ್ತಾರೊ ಮತ್ತು ಯಾರ ಮನಸ್ಸು ಸದಾ ಅಧೀನದಲ್ಲಿದೆಯೋ ಅಂತಹವರ ಆತ್ಮವು ಅವರ ಅಧೀನದಲ್ಲಿಯೇ ಇರುತ್ತದೆ. ॥144॥ "ಪಾಪಜೀವನದಿಂದ ವಿಮುಖರಾದವರು, ಆಚಾರ್ಯರ ಮತ್ತು ಗುರುಗಳ ಚರಣಗಳಲ್ಲಿ ದೀನನಾಗಿರುವವರು ಕರ್ಮಫಲಗಳನ್ನು ಅಪೇಕ್ಷೆಪಡದೆ ಇರುವವರು ಮಾತ್ರ ಆತ್ಮವನ್ನು ಅರಿಯಲು ಸಾಧ್ಯ. ॥145॥ ನಿರ್ಮೋಹಿಯಾಗಿಲ್ಲದಿದ್ದಲ್ಲಿ ಕೇವಲ ಆತ್ಮನಿಷ್ಠನಾಗಿಲ್ಲದೆ ಇದ್ದಲ್ಲಿ ಎಲ್ಲ ವಾಸನೆಗಳನ್ನೂ ನಿರ್ಮೂಲನಮಾಡದೆ ಇದ್ದಲ್ಲಿ ಆತ್ಮಜ್ಞಾನ ಪಡೆಯಲು ಅಸಾಧ್ಯ. ॥146॥ ಕೇವಲ ಮೋಕ್ಷಾರ್ಥಿಯಾಗಿರುವವರ ಕಷ್ಟಗಳನ್ನು ನೋಡಿದ ಆತ್ಮವು ತಾನೇ ಕರುಣೆದೋರಿ ಅವರ ಮುಂದೆ ಪ್ರಕಟವಾಗುತ್ತದೆ. ಆದರೆ ಅದು ಗುರುವಿನ ಸಹಾಯವಿಲ್ಲದೆ ಸುಲಭವಲ್ಲ. ॥147॥ ಆದ್ದರಿಂದ ಆತ್ಮಸಾಕ್ಷಾತ್ಕಾರಕ್ಕೋಸ್ಕರ ಶಿಷ್ಯನು ಆಲಿಸಿ, ಧ್ಯಾನ ಮಾಡಿ, ಮನಸ್ಸಿನಲ್ಲಿ ಅದ್ವೈತಭಾವವನ್ನು ಅನುಸಂಧಾನ ಮಾಡಿದಲ್ಲಿ ಮಾತ್ರ ಆತ್ಮಜ್ಞಾನವನ್ನು ಸುಲಭವಾಗಿ ಪಡೆಯಬಹುದು. ॥148॥ ಈ ಪ್ರಪಂಚವು ಅಜ್ಞಾನಮಯವಾಗಿದೆ. ಅದು ಅಜ್ಞಾನದ ಆಧಾರದ ಮೇಲೆ ನಿಂತಿದೆ ಮತ್ತು ಅದರಿಂದಲೇ ಊರ್ಜಿತವಾಗುತ್ತಿದೆ. ಸತ್ಯ, ಜ್ಞಾನದಿಂದಲ್ಲದೆ ಮೋಕ್ಷ ಸಾಧ್ಯವಿಲ್ಲ. ॥149॥ ವಿಶ್ಲೇಷಣೆ ಮತ್ತು ತೀರ್ಮಾನಗಳು ಶಾಸ್ತ್ರಗಳ ವಚನಗಳಾಗಿರುತ್ತವೆ. ಯಾವಾಗ ಲೌಕಿಕಭಾವ ನಾಶವಾಗುತ್ತದೋ ಆಗ ಮಾತ್ರ ಆತ್ಮಜ್ಞಾನ ಹುಟ್ಟುತ್ತದೆ. ಇಲ್ಲದಿದ್ದಲ್ಲಿ ಅದು ಅಸಂಭವ. ॥150॥ ಯಾರು ಪುಣ್ಯವಂತನನ್ನೂ, ಪಾಪಿಯನ್ನೂ, ಒಂದೇ ಎಂದು ನಿಶ್ಚಯಿಸುವನೋ, ಯಾರು ಈ ದೇಹದಲ್ಲಿರುವ ಆತ್ಮನನ್ನು ಪರಮಾತ್ಮನೆಂದು ಭಾವಿಸುವನೋಯಾರು ಈ ರೀತಿ ವ್ಯವಹರಿಸುವನೋ, ಅಂತಹ ವ್ಯಕ್ತಿಯು ಮಹಾನ್ ವ್ಯಕ್ತಿ ಮತ್ತು ಅವನು ಎಂದಿಗೂ ಭೇದಭಾವ ತೋರುವುದಿಲ್ಲ. ॥151॥ "ಯಾವಾಗ ಬ್ರಹ್ಮನ್ ಮತ್ತು ಆತ್ಮ ಎರಡೂ ಒಂದೇ ಎಂಬ ಜ್ಞಾನ ಉದಯಿಸುವುದೋ ಆಗ ಅದೇ ಜ್ಞಾನದ ಅಂತಿಮ ಗುರಿಯಾಗುತ್ತದೆ. ಒಮ್ಮೆ ಈ ಆತ್ಮಸಾಕ್ಷಾತ್ಕಾರದಅರಿವು ಆಯಿತೆಂದರೆ ಅಜ್ಞಾನವೆಲ್ಲವೂ ಮಾಯವಾಗುತ್ತದೆ. ॥152॥ ಒಮ್ಮೆ ಆತ್ಮಜ್ಞಾನವು ಪೂರ್ಣವಾದಾಗ ಅರ್ಥಮಾಡಿಕೊಳ್ಳುವುದು ಇನ್ನೇನೂ ಉಳಿದಿರುವುದಿಲ್ಲ. ಅದು ಈ ಪ್ರಪಂಚವನ್ನು ಅಂಗೈತರಹ ಅರ್ಥಮಾಡಿಕೊಳ್ಳುವಂತೆ ಮಾಡುತ್ತದೆ. ಅದು ಆತ್ಮಸಾಕ್ಷಾತ್ಕಾರದಿಂದಾಗಿಯೇ ಉಂಟಾಗುತ್ತದೆ. ॥153॥ ಆತ್ಮಜ್ಞಾನದ ಅರಿವಿನ ಫಲವೇ ಈ ಜಗತ್ತನ್ನು ಯಾವುದೇ ಹಿಂಜರಿಕೆಯಿಲ್ಲದೆಯೇ ತ್ಯಜಿಸುವುದು. ಕೂಡಲೇ ಬ್ರಹ್ಮಾನಂದವನ್ನು ಸಾಧಿಸಬಹುದು ಮತ್ತು ಅಂತಹವನು ಮೋಕ್ಷಭಾವದಿಂದ ಪೂರ್ಣನಾಗಿರುತ್ತಾನೆ. ॥154॥ ಆತ್ಮವು ಅತಿ ಸೂಕ್ಷ್ಮತ್ವಕ್ಕಿಂತ ಸೂಕ್ಷ್ಮವಾಗಿ, ಮಹತ್ತಿಗಿಂತ ಮಹತ್ತಾಗಿ ಇರುತ್ತದೆ. ಅದನ್ನು ಈ ರೀತಿ ವರ್ಣಿಸುವುದರಿಂದ ಅದರ ಸರ್ವಾಂತರ್ಯಾಮಿತ್ವವನ್ನು ಬುದ್ಧಿಯು ಗ್ರಹಿಸುತ್ತದೆ. ॥155॥ ನಿಜವಾಗಿಯೂ ಅದು ಸೂಕ್ಷ್ಮವೂ ಅಲ್ಲ, ಮಹತ್ತೂ ಅಲ್ಲ. ಏನಾದರೂ ಹೋಲಿಕೆಯನ್ನು ಮಾಡಿದಲ್ಲಿ ಅದು ಕೇವಲ ಊಹಾಪೋಹವಾಗಿರುತ್ತದೆ.ಅದು ಸರ್ವವ್ಯಾಪಿಯಾಗಿ

ಸೃಷ್ಟಿಯೆಲ್ಲವನ್ನೂ ಆವರಿಸಿರುತ್ತದೆ. ಮತ್ತು ಅವ್ಯಕ್ತವಾದ ಚರಾಚರವಾದ ಜಗತ್ತೆಲ್ಲವನ್ನೂ ವ್ಯಾಪಿಸಿದೆ. ॥156॥ ಈ ಶಾಶ್ವತ ಸತ್ಯವು ಅವರ್ಣನೀಯ. ಅದು ತಾನೇ ಅಪರಿಮಿತವಾಗಿದ್ದರೂ ಸಹ ಬುದ್ಧಿಯ ಮಟ್ಟದಲ್ಲಿ ವಿವರಿಸಬೇಕೆಂದರೆ ಕೇವಲ ಶಬ್ದಗಳಿಗೆ ಸೀಮಿತವಾಗಿರುತ್ತದೆ. ॥157॥ ಬುದ್ಧಿಶಕ್ತಿಯ ತೀಕ್ಷ್ಣತೆಯಿಂದ ಮಾತ್ರ ಪರಮಾತ್ಮನನ್ನು ಗ್ರಹಿಸಲು ಸಾಧ್ಯವಿಲ್ಲ. ಕೇವಲ ಸಾಧುಗಳ, ಸದ್ಗುರುಗಳ ಮತ್ತು ಸಂತರ ಸತ್ಸಂಗದಿಂದ ಅವರನ್ನು ಪ್ರೀತಿಯಿಂದ ಸೇವಿಸುವುದರಿಂದ ಮಾತ್ರ ಅದನ್ನು ಸಾಧಿಸಲು ಸಾಧ್ಯ. ॥158॥ ಬ್ರಹ್ಮನ ನಿರೂಪಣೆಗಳಿಗೇನೂ ಕೊರತೆಯಿಲ್ಲ. ಅಸಂಖ್ಯಾತ ಗ್ರಂಥಗಳು, ಶಾಸ್ತ್ರಗಳು, ನಿರೂಪಣೆಗಳಿಂದ ತುಂಬಿವೆ. ಆದರೆ ಸದ್ಗುರುವಿನ ಕೃಪೆ ಇಲ್ಲದಿದ್ದಲ್ಲಿ ಅದನ್ನು ಅರ್ಥಮಾಡಿಕೊಳ್ಳಲು ಸೋಪಾನಗಳು ಕಳೆದುಹೋಗುತ್ತವೆ. ॥159॥ ನಿತ್ಯವಿಧಿವಿಧಾನಗಳು ಇಲ್ಲದಿದ್ದಲ್ಲಿ ಮನೋಶುದ್ಧಿ ಇಲ್ಲದಿದ್ದಲ್ಲಿ ಮನಸ್ಸಿಗೆ ತರಬೇತಿ ಇಲ್ಲದಿದ್ದಲ್ಲಿ ಬ್ರಹ್ಮಜ್ಞಾನ ಲಭಿಸುವುದು ಅಸಾಧ್ಯ. ॥160॥ ಕೇವಲ ಬ್ರಹ್ಮ ಮಾತ್ರ ಶಾಶ್ವತ. ಬೇರೆ ಎಲ್ಲವೂ ಅನಿತ್ಯ, ದೃಶ್ಯವಾದದ್ದು, ಗ್ರಾಹ್ಯವಾದದ್ದು, ನಾಶವಾಗುವುದಿಲ್ಲ. ಇದೇ ಸತ್ಯ, ಸತ್ಯ, ಸತ್ಯ. ॥161॥ ಬ್ರಹ್ಮನ ಬಗ್ಗೆ ಮಾತನಾಡಬಲ್ಲವನು ಬಹಳ ಅಪರೂಪ. ನಿರ್ಮಲ ಮನಸ್ಸಿನ ಶ್ರೋತೃವು ಇನ್ನೂ ಅತಿ ದುರ್ಲಭ. ಆದರೆ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡ ಸದ್ಗುರು, ಪ್ರೇಮಮಯಿಯಾಗಿರುವವನು ಇನ್ನೂ ವಿರಳ. ॥162॥ ಬ್ರಹ್ಮನನ್ನು ಅಷ್ಟು ಸುಲಭವಾಗಿ ಪಡೆಯಬಲ್ಲೆವೇ? ಗುಹೆಗಳಲ್ಲಿ ಮತ್ತು ಗಿರಿಗಳ ಮೇಲೆ ವಾಸಿಸುವವರು, ಯಮ, ನಿಯಮಾದಿಗಳಲ್ಲಿ ಬಂಧಿತರಾಗಿರುವವರು ಅಥವಾ ಧ್ಯಾನ, ಧಾರಣಗಳಲ್ಲಿ ಕುಳಿತಿರುವವರು. ॥163॥ ಅವರು ಗುರುಕೃಪೆಯಿಲ್ಲದೆ ಬ್ರಹ್ಮನನ್ನು ಕಂಡುಹಿಡಿಯಲು ಸಹ ಸಫಲರಾಗಿರುವುದಲ್ಲ. ಅಂತಹ ಬ್ರಹ್ಮನನ್ನು ದುರಾಸೆಯ ಸಾಕಾರಮೂರ್ತಿಯಾದ ನೀನು ಅರಿಯಲು ಹೇಗೆಸಾಧ್ಯ? ॥164॥ "ಯಾರು ಅತ್ಯಂತ ದ್ರವ್ಯಾಸಕ್ತಿ ಹೊಂದಿರುವರೋ, ಅವರು ಎಂದಿಗೂ ಬ್ರಹ್ಮಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ." ॥165॥ ಈ ಪರಮಾರ್ಥಜ್ಞಾನವನ್ನು ಆಲಿಸುವುದರಲ್ಲಿ ಮಗ್ನನಾಗಿದ್ದುಕೊಂಡು, ಪ್ರಾಪಂಚಿಕ ಸುಖಗಳಲ್ಲಿ ತಲ್ಲೀನನಾಗಿರುವವನು ಮತ್ತು ನಿರಂತರ ಭೌತಿಕ ಪ್ರಪಂಚದ ಬಗ್ಗೆ ಯೋಚಿಸುವವನು, ಅಂತಹ ವ್ಯಕ್ತಿಗೆ ಅಂತಹಸಾಕ್ಷಾತ್ಕಾರವೇ ಆಗುತ್ತದೆ. ॥166॥ ಮಲಿನತೆ, ತುಮುಲತೆ ಮತ್ತು ಕಾಪಟ್ಯ ಇವು ಮಾನವ ಮನಸ್ಸಿನ ಮೂರು ಸಹಜ ದೋಷಗಳು. ನಿಸ್ವಾರ್ಥಸೇವೆಯಿಂದ ಮಲಿನತೆಯನ್ನು, ಸತ್ಯನಿಷ್ಠೆಯಿಂದ ತುಮುಲತೆಯನ್ನು ಮತ್ತು ಭಗವಂತನ ಪೂಜೆ, ನಾಮಸ್ಮರಣೆಯಿಂದ ಕಾಪಟ್ಯವನ್ನು ತೊಡೆದು ಹಾಕಬಹುದು. ॥167॥ ಯಾವಾಗ ತನ್ನ ಕರ್ತವ್ಯವನ್ನು ಮತ್ತು ಪೂಜಾ ವಿಧಿಗಳನ್ನು ಆಚರಿಸುತ್ತಾನೋ, ಆಗ ಅವನ ಮನಸ್ಸು ಪಕ್ವವಾಗುತ್ತದೆ. ಅಶುದ್ಧತೆ ಮತ್ತು ಮನಸ್ಸಿನ ತುಮುಲಗಳು ದೂರವಾಗುತ್ತವೆ. ಕೇವಲ ಪರದೆ ಮಾತ್ರ ಉಳಿಯುತ್ತದೆ. ॥168॥ ಈ ಪರದೆಯು ಎಲ್ಲಾ ವಿನಾಶಕ್ಕೆ ಕಾರಣವಾದುದು ಮತ್ತು ಸುಜ್ಞಾನ ಪ್ರಕಟವಾದಾಗ ಸೂರ್ಯನ ಪ್ರಕಾಶ ಕತ್ತಲೆಯನ್ನು ಓಡಿಸುವಂತೆ ಈ ಪರದೆಯು ನಾಶವಾಗುತ್ತದೆ. ॥169॥ ವೇದಗಳಲ್ಲಿ ಪಾಂಡಿತ್ಯ

ಪಡೆದವರು ಬ್ರಹ್ಮನನ್ನು ಸತ್ಯ, ಜ್ಞಾನ, ಅನಂತ ಮುಂತಾದ ಗುಣಗಳಿಂದ ವಿವರಣೆಮಾಡುತ್ತಾರೆ. ಆ ಬ್ರಹ್ಮನು ಸ್ವಯಂಪ್ರಕಾಶನು, ಒಬ್ಬ ವ್ಯಕ್ತಿಯು ಸಾಕ್ಷಾತ್ಕಾರ ಪಡೆದವನು ಅದೇ ಆಗುವನು. ॥170॥ ಒಬ್ಬ ಏಕಾಂಗಿ ಪ್ರಯಾಣಿಕನು ಚಂದ್ರನ ಬೆಳಕಿನಲ್ಲಿ ಕಾಡಿನಲ್ಲಿ ನಡೆಯುತ್ತಿರುವಾಗ ತುಂಡು ಮರದ ದಿಮ್ಮಿಯನ್ನು ನೋಡಿ ಗಾಬರಿಯಾಗುತ್ತಾನೆ. ಅದನ್ನು ಕಳ್ಳನೆಂದು ತಿಳಿದು ಅಡಗಿಕುಳಿತು ಯೋಚಿಸುತ್ತಾನೆ. ॥171॥ "ನಾನು ಏಕಾಂಗಿ. ಹಣವನ್ನು ಬೇರೆ ಕೊಂಡು ಹೋಗುತ್ತಿದ್ದೇನೆ. ಅವನು ದಾರಿಗಳ್ಳನ ರೀತಿಯಲ್ಲಿ ಥಟ್ಟನೆ ಮೇಲೆ ಬಿದ್ದು ಹಿಡಿಯಲು ಕಾಯುತ್ತಿದ್ದಾನೆ. ಈಗ ನನ್ನ ಜೀವನವು ಅಪಾಯದಲ್ಲಿರುವಾಗ ನಾನು ಏನು ಮಾಡಲಿ? ॥172॥ ಆದರೆ ಆ ಸಮಯದಲ್ಲಿ ಮರದ ದಿಮ್ಮಿಯಮೇಲೆ ಬೆಳಕು ಬಿದ್ದಾಗ ಸತ್ಯದ ಅರಿವುಂಟಾಗುತ್ತದೆ. ಅವನ ಭಯ ನಾಶವಾಗುತ್ತದೆ. ಕಳ್ಳನ ಬಗೆಗಿನ ತಪ್ಪು ಅಭಿಪ್ರಾಯವು ದೂರವಾಗುತ್ತದೆ. ॥173॥ ಈಗ ನಾನು ಶ್ರೋತೃಗಳಿಗೆ, ಬ್ರಹ್ಮತ್ವವನ್ನು ಪಡೆಯಲು ಇರುವ ಕಷ್ಟಗಳನ್ನು ತಿಳಿಸಿದ್ದೇನೆ. ಮುಂದಿನ ಅಧ್ಯಾಯವು ಒಬ್ಬ ಜಿಜ್ಞಾಸುವಿನ ಮುಂದೆ ಯಾವ ರೀತಿ ಶಾಶ್ವತ ಸುಖ ಓಡಿಬರುತ್ತದೆ – ಎಂಬುದರ ಬಗ್ಗೆ ವಿವರಿಸುತ್ತೇನೆ. ॥174॥ ಹೇಮಾಡ ಪಂತನು ಇಚ್ಛಾಪೂರ್ವಕವಾಗಿ ಸಾಯಿಯ ಚರಣಗಳಲ್ಲಿ ಶರಣಾಗುತ್ತಾನೆ. ಮತ್ತು ಮನಸ್ಸಿಗೆ ಬಂದಂತಹ ವಿಷಯಗಳನ್ನೆಲ್ಲ ಅವಿರತವಾಗಿ ಹೇಳುತ್ತ ಬಂದಿದ್ದೇನೆ. ಭಕ್ತರು ಮತ್ತು ಮುಗ್ಧರು ಯಾವ ರೀತಿ ಸಾಯಿಯ ಕೃಪೆಯಿಂದ ಜೀವನದಲ್ಲಿ ಬಾಲಭಾಷೆ ಬರುತ್ತದೆ ಎಂಬುದನ್ನು ಆಲಿಸಿರಿ. ॥175॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಬ್ರಹ್ಮಜ್ಞಾನದ ನಿರೂಪಣೆ" ಎಂಬ ಹದಿನಾರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. 'ಚತುರಾಯಿ'ಯು ಬಾಬಾರವರ ಅತ್ಯಂತ ಮೆಚ್ಚಿನ ಪದ. ಅವರು ಆಗಾಗ್ಗೆ ತಮ್ಮ ಭಕ್ತರಿಗೆ ಹೇಳುತ್ತಿದ್ದರು. 'ಚತುರಾಯಿಯಿಂದ ಯಾವುದೇ ಉಪಯೋಗವಿಲ್ಲ. ನೀವು ಯಾವಾಗಲೂ ಹಿರಿಯರ ಮಾತನ್ನು ಕೇಳಬೇಕು ಮತ್ತು ಬುದ್ಧಿವಂತರು ನಿಮಗೆ ಹೇಳುತ್ತಾರೆ.
2. ಇಚ್ಛೆಪಟ್ಟ ವಸ್ತುವನ್ನು ದಯಪಾಲಿಸುವ ಒಡವೆ.

3. ಎಲ್ಲಾ ಆಶೆಗಳನ್ನೂ ಪೂರೈಸುವ ವೃಕ್ಷ.
4. ಸಮಾಧಿಯ ಸ್ಥಿತಿ ಅಥವಾ ಪೂರ್ಣಶಾಂತ ಸ್ಥಿತಿ.
5. ಎಲ್ಲಾ ಆಸೆಗಳನ್ನು ಪೂರೈಸುವ ಹಸು.
6. ಇಂದ್ರ,
7. ಶಿರಡಿಯಲ್ಲಿ ಅಂಗಡಿ ಇಟ್ಟಿರುವ ಮಾರ್ವಾಡಿ.
8. ಶಿರಡಿಯ ಬನಿಯ, ದಿನಸಿ ವ್ಯಾಪಾರಿ.
9. ಅದನ್ನು ಕೊಡಬೇಕೋ, ಬೇಡವೋ, ಅವನ ಸಂದೇಹಗಳು.
10. ನಿರ್ಗುಣ ಬ್ರಹ್ಮ.
11. ಸಗುಣ ಬ್ರಹ್ಮ.
12. ಸಂಶೋಧನೆ. ವಿದ್ಯಾಭ್ಯಾಸ ಪ್ರಯತ್ನ.



# ಅಧ್ಯಾಯ - 17

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಬ್ರಹ್ಮಜ್ಞಾನದ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದಲ್ಲಿ ಶಾಶ್ವತ ಸತ್ಯ (ಶ್ರೇಯಸ್) ಮತ್ತು ಸಂತೋಷ (ಪ್ರೇಯಸ್)ಗಳ ಗುಣಗಳನ್ನು ಮುಂದಿನ ಅಧ್ಯಾಯದಲ್ಲಿ ತಿಳಿಸುತ್ತೇನೆಂದು ತಿಳಿಸಿದ್ದೆನು. ಈಗ ಅದನ್ನು ಆದರ ಭಾವದಿಂದ ಕೇಳಿರಿ. ॥1॥ ಬೆಳಕು ಮತ್ತು ಕತ್ತಲು ಎರಡೂ ಪರಸ್ಪರ ಸಂಬಂಧಪಟ್ಟಿವೆ. ಆದರೂ ಅವು ಬೇರೆ ಬೇರೆಯಾಗಿವೆ. ಸತ್ಯ ಮತ್ತು ಸಂತೋಷ, ಶ್ರೇಯ ಮತ್ತು ಪ್ರೇಯ ಎರಡೂ ಅದೇ ರೀತಿ ಪರಸ್ಪರ ಸಂಬಂಧಿಸಿವೆ. ॥2॥ ಯಾರ ಮನಸ್ಸು ಪ್ರೇಯದ ಹಿಂದೆ ಓಡುತ್ತದೋ, ಅವರು ಸ್ವಾರ್ಥಬುದ್ಧಿಯಿಂದಾಗಿ ನಾಶಹೊಂದುತ್ತಾರೆ. ಶ್ರೇಯವು ವಿವೇಕಪೂರಿತ ಹಾಗೂ ಪ್ರೇಯವು ಅವಿವೇಕಪೂರಿತ. ॥3॥ ಶ್ರೇಯವು ಕೇವಲ ವಿದ್ಯೆಯಿಂದ ಮತ್ತು ಪ್ರೇಯವು ಕೇವಲ ಅವಿದ್ಯೆಯಿಂದ ಕೂಡಿರುತ್ತದೆ. ಸುಜ್ಞಾನಿಗಳು ಎಂದಿಗೂ ಪ್ರೇಯಕ್ಕೆ ಆಕರ್ಷಿತರಾಗುವುದಿಲ್ಲ. ಶ್ರೇಯವು ಅಜ್ಞಾನಿಗಳಿಗೆ ಅಪ್ರಿಯ. ॥4॥ ಪ್ರೇಮವನ್ನೇ ಸದಾ ಬಯಸುವವರು ಕಾಮಿನಿ, ಕಾಂಚನ ಇರುವವರೆಗೆ ಇಂದ್ರಿಯಗಳು ಸುಖ ಅನುಭವಿಸುವುದರಲ್ಲೇ ಮಗ್ನವಾಗಿರುತ್ತವೆ. ಮತ್ತು ಆತ್ಮನಿಗ್ರಹಕ್ಕಾಗಲಿ, ನಿರ್ಮೋಹತ್ವಕ್ಕಾಗಲಿ ಯೋಚಿಸುವುದಿಲ್ಲ. ॥5॥ ಶ್ರೇಯ ಮತ್ತು ಪ್ರೇಯಗಳು ಹಾಲು ಮತ್ತು ನೀರಿನಂತೆ ಒಂದರಲ್ಲೊಂದು ಬೆರೆತಿವೆ. ಆದರೆ ಮಾನಸ ಹಂಸವು ಕೇವಲ ಹಾಲನ್ನು ಮಾತ್ರ

ಹಿಡಿಯುತ್ತದೆ. ॥6॥ ಅದೇ ರೀತಿಯಲ್ಲಿ ಧೀರರು, ಬುದ್ಧಿವಂತರು, ವಿವೇಕಿಗಳು ಮತ್ತು ಭಾಗ್ಯವಂತರು ಮಾತ್ರ ಕೇವಲ ಶ್ರೇಯವನ್ನು ಅಭಿಲಾಷಿಸುತ್ತ ಪ್ರೇಯದಿಂದ ಸರ್ವದಾ ವಿಮುಖರಾಗಿರುವರು. ॥7॥ ಆದರೆ ಮಂದ ಬುದ್ಧಿಯವರ ಕಡೆ ನೋಡು. ಅವರು ಸದಾ ತಮ್ಮ ದೇಹ, ದನಕರುಗಳು, ಮಕ್ಕಳು, ಸಂಪತ್ತು, ಅಧಿಕಾರ ಮತ್ತು ಯೋಗಕ್ಷೇಮಕ್ಕಾಗಿ ಮಾತ್ರ ಗಮನ ನೀಡುವರು. ಅವರು ಕೇವಲ ಪ್ರೇಯವನ್ನು ಮಾತ್ರ ಅಪೇಕ್ಷಿಸುವರು. ॥8॥ ಶ್ರೇಯವೋ ಅಥವಾ ಪ್ರೇಯವೋ, ಎರಡನ್ನೂ ಸರಿಯಾಗಿ ಅರ್ಥಮಾಡಿಕೊಂಡಲ್ಲಿ, ಶ್ರೇಯವನ್ನು ಅಭ್ಯಾಸ ಮಾಡಲು ಬಹಳ ಕಷ್ಟ. ಸ್ವತಂತ್ರವಾಗಿ ಯೋಚಿಸಲು ಶಕ್ತನಾಗಿರುವ ವ್ಯಕ್ತಿಗೂ ಸಹ ಅದು ಕಷ್ಟವೇ. ॥9॥ ಆದರೂ ಸಹ, ಇವೆರಡೂ ಸಿಕ್ಕಿದಲ್ಲಿ ಅವುಗಳಲ್ಲಿ ಒಂದನ್ನು ಆಯ್ಕೆಮಾಡಲು ಕಷ್ಟ ಮತ್ತು ಮಂದ ಬುದ್ಧಿಯು ಜಯಹೊಂದಿ ಪ್ರೇಯವನ್ನು ಆಲಂಗಿಸುತ್ತದೆ. ॥10॥ 'ಪ್ರೇಯ'ವನ್ನು ಪಕ್ಕಕ್ಕೆ ಸರಿಸಿ 'ಶ್ರೇಯ'ವನ್ನು ಒಪ್ಪಿಕೊಳ್ಳುವುದು ನಿಜವಾಗಿಯೂ ಆಧ್ಯಾತ್ಮಿಕ ಸಾಧನೆ. ಅದು ಹಂಸವು ಹಾಲು ಮತ್ತು ನೀರಿನ ಮಿಶ್ರಣದಿಂದ ಹಾಲನ್ನು ಪ್ರತ್ಯೇಕಿಸುವಂತಿದೆ. ॥11॥ 'ಶ್ರೇಯ' ಮತ್ತು 'ಪ್ರೇಯ' ಇವೆರಡು ಪುರುಷಾರ್ಥಗಳನ್ನೂ ಮಾನವನು ಸಾಧಿಸಬಹುದು. ಆದರೆ ಮಂದಮತಿಗಳು ವಿವೇಕಹೀನರಾಗಿದ್ದು ವಿವೇಚನೆಮಾಡಲು ಅಸಮರ್ಥರಾಗಿರುವರು. ॥12॥ ಮೊಟ್ಟಮೊದಲು, ಮಾನವ ಶ್ರೇಯವು ಎಲ್ಲಿ ನೆಲೆಸಿದೆ ಎಂಬುದನ್ನು ದೃಢವಾಗಿ ಅರಿಯಲು ಸಮರ್ಥನಾಗಬೇಕು. ನಂತರ ಆ ಮಾರ್ಗದಲ್ಲಿ ಏನಾದರೂ ಅಡಚಣೆಗಳು ಇದ್ದಲ್ಲಿ, ಅವುಗಳನ್ನು ಪೂರ್ಣವಾಗಿ ನಿವಾರಿಸಿಕೊಳ್ಳಲು ಸಮರ್ಥನಾಗಿರಬೇಕು. ॥13॥ ಈ ಒಂದು ಸಂದರ್ಭದಲ್ಲಿ ಜೀವನದ ನಾಲ್ಕು ಪ್ರಧಾನ ಪುರುಷಾರ್ಥ[1]ಗಳನ್ನು ಸಿದ್ಧಮಾಡಿಕೊಳ್ಳಲು ಬೇಕಾದ ಮಾನವ ಪ್ರಯತ್ನಗಳು ಮಧ್ಯದಲ್ಲಿ ಪ್ರತಿಬಂಧಿಸಿ ತಮ್ಮದೇ ಆದ ಇರವನ್ನು ಚಲಾಯಿಸುವುವು. ಆದರೆ ಪ್ರತಿಯೊಬ್ಬರೂ ಶ್ರೇಯಕ್ಕಾಗಿ ಹೋರಾಡಿ ಅನೇಕ ಪರಿಣಾಮಗಳನ್ನು ಎದುರಿಸಬೇಕು. ॥14॥ ಸಂಸಾರ ಚಕ್ರಗಳು ತರ್ಕಕ್ಕೆ ಮೀರಿದವು. ಅವು ದಿನದ ಇಪ್ಪತ್ತನಾಲ್ಕು ಗಂಟೆಗಳೂ ಅವಿರತವಾಗಿ ಸುತ್ತುತ್ತಿರುತ್ತವೆ. ಮಾನವನು ಅತಿಪ್ರಖರವಾದ ಆಧ್ಯಾತ್ಮಿಕಾದಿ ತಾಪತ್ರಯ[2] (ಅದಿಭೌತಿಕ, ಆದಿದೈವಿಕ, ಆಧ್ಯಾತ್ಮಿಕ)ಗಳ ದುಃಖಗಳಿಂದ ಕಷ್ಟ ಅನುಭವಿಸುತ್ತಾನೆ. ॥15॥ ಅವುಗಳಿಂದಾಗಿ ಅತ್ಯಂತ ದುಃಖಗಳು ಉಂಟಾಗಿ ಮಾನವನನ್ನು ಜರ್ಝರಿತನನ್ನಾಗಿ ಮಾಡುತ್ತವೆ. ಅನಂತರ ಅವನು ಅವುಗಳಿಂದ ತಪ್ಪಿಸಿಕೊಂಡು ಸುಖವನ್ನು ಅನುಭವಿಸುವ ಮಾರ್ಗಗಳನ್ನು ಅರಸುತ್ತಾನೆ. ॥16॥ ಭವಸಾಗರದ'ಚಕ್ರ'ಗಳಲ್ಲಿ ಸುತ್ತುವುದು ದುಸ್ಸಹವಾದುದು. ಅದನ್ನು ನಿಲ್ಲಿಸುವುದು ಹೇಗೆ? ಅದಕ್ಕಾಗಿ ಯಾವುದಾದರೂ ಮಾರ್ಗವಿದೆಯೇ? ಈ ರೀತಿ ದಾಟಲು ಉಪಾಯಗಳನ್ನು ಅನ್ವೇಷಣೆ ಮಾಡಲು ಪ್ರಾರಂಭಿಸುತ್ತಾನೆ. ॥17॥ ಅದೃಷ್ಟವಶಾತ್ ಇಂತಹ ಯೋಚನೆಗಳು ಹುಟ್ಟಿದಾಗ ಅವನಲ್ಲಿ ಜೀವನದ ಪುರುಷಾರ್ಥಗಳನ್ನು ಸಾಧಿಸಲು ಮನಸ್ಸನ್ನು ಪ್ರಚೋದಿಸುತ್ತಾ, ಅನಂತರ ಅವನ ಸ್ವಹಿತಕ್ಕಾಗಿಯೇ ಅವನು ಸನ್ಮಾರ್ಗವನ್ನು ಅನುಸರಿಸುತ್ತಾನೆ. ॥18॥ ಅವಿದ್ಯೆಯ ಭ್ರಮೆಯು ಅನಾದಿಕಾಲದಿಂದಲೂ

ಇದೆ. ಅದು ಕಪ್ಪೆಚಿಪ್ಪಿನಲ್ಲಿರುವ ಬೆಳ್ಳಿ ಮತ್ತು ಮರೀಚಿಕೆಯ ನೀರಿನಂತೆ ವ್ಯರ್ಥವಾದ ಭ್ರಮೆಯನ್ನು ಹುಟ್ಟಿಸುತ್ತೆ. ಅವುಗಳನ್ನು ತಪ್ಪು ಅಭಿಪ್ರಾಯಗಳು ಮತ್ತು ಅಡೆತಡೆಗಳು ಎಂದು ಪರಿಗಣಿಸಿ ದೂರಮಾಡಬೇಕು. ॥19॥ ಒಂದು ಕನಸಿನಲ್ಲಿ ಅಸಂಖ್ಯಾತ ಚಿನ್ನದ ಗಟ್ಟಿಗಳ ಮಳೆ ಸುರಿದಾಗ, ಅವುಗಳನ್ನು ಶ್ರಮವಹಿಸಿ ಕೂಡಿಸಿದಾಗ, ಆಪತ್ತಿನ ಸಮಯದಲ್ಲಿ ಅವುಗಳು ಉಪಯುಕ್ತವಾಗುತ್ತವೆ ಎಂದು ಚಿಂತಿಸುತ್ತಿರುವಾಗಲೇ ಎಚ್ಚರಗೊಂಡ ಕ್ಷಣದಲ್ಲಿ ಅವು ಮಾಯವಾಗುತ್ತವೆ. ॥20॥ ಗೊತ್ತಿರಲಿ ಗೊತ್ತಿಲ್ಲದಿರಲಿ, ವಿಧಿಬರಹ, ಭೋಗವಾಸನೆ, ಆಶೆ, ತೃಷೆ, ಅಥವಾ ಕಾಮನೆ ಎಲ್ಲವೂ ಪ್ರತಿಬಂಧಕಗಳೇ ಆಗಿರುತ್ತವೆ. ಇದನ್ನು ನೆನಪಿಡಿ ಮತ್ತು ಅವುಗಳನ್ನು ಬುಡಸಹಿತ ತೆಗೆದುಹಾಕಿ. ॥21॥ ಯಾವುದನ್ನು ಸೂರ್ಯಕಿರಣವೂ ಭೇದಿಸಲು ಸಾಧ್ಯವಿಲ್ಲವೋ ಬುದ್ಧಿಯೂ ಸೋತು ಹಿಂಜರಿಯುವುದೋ ಮತ್ತು ಎಲ್ಲಿ ವೇದ ಮತ್ತು ಶೃತಿಗಳು ಆಧಾರಪಡೆಯುವುದಿಲ್ಲವೋ ಅಲ್ಲೆ ಗುರುವು ಕರೆದೊಯ್ಯುತ್ತಾನೆ. ॥22॥ ಕಾಮಕ್ರೋಧಗಳೆರಡೂ ಸತ್ಯ ಜ್ಞಾನ ಪ್ರಾಪ್ತಿಯ ಮಾರ್ಗದಲ್ಲಿ ಅಡ್ಡಲಾಗುವುವು. ಅವು ಶ್ರವಣ–ಮನನ–ಸಮಾಧಿ ಸ್ಥಿತಿಗಳನ್ನು ಬಹಳ ಚಾಕಚಕ್ಯತೆಯಿಂದ ಹರಿದುಹಾಕುತ್ತವೆ. ॥23॥ ಬೆಂಕಿ ಮತ್ತು ಕರ್ಪೂರ ಹತ್ತಿರಬಂದಲ್ಲಿ ಒಂದರಿಂದ ಮತ್ತೊಂದು ದೂರವಾಗಲು ಸಾಧ್ಯವೇ? ಅವೆರಡೂ ಹತ್ತಿರ ಬಂದ ಕೂಡಲೇ ಕರ್ಪೂರವು ಬೆಂಕಿಯಿಂದಾಗಿ ಉರಿಯಲು ಪ್ರಾರಂಭಿಸುತ್ತದೆ. ॥24॥ ಶೃತಿ ಮತ್ತು ಸ್ಮೃತಿಗಳಲ್ಲಿ ವಿಧಿಸಿರುವ ದುಷ್ಕರ್ಮಗಳಲ್ಲಿ ಅವಿರತವಾಗಿ ಮಗ್ನನಾಗಿರುವವನಿಂದ ಏನು ಉಪಯೋಗ? ಅವನು ಪಂಡಿತನೇ ಆಗಿದ್ದರೂ ಅವನಿಗೆ ಸರಿ ತಪ್ಪುಗಳ ಅರಿವು ಇರುವುದಿಲ್ಲ. ॥25॥ ಅದೇ ರೀತಿ, ಅಶಾಂತ ವ್ಯಕ್ತಿಯು, ಅಂತಃಕರಣ ಸಮತೋಲನ ಕಳೆದುಕೊಂಡು ಇಂದ್ರಿಯ ಲೋಲುಪತೆಯಿಂದ ವಿಕ್ಷುಬ್ಧ ಮನಸ್ಸಿನವನಾಗಿರಲು, ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ॥26॥ ಸಮಾಧಾನ ಚಿತ್ತದವನಾಗಿ, ಶಾಂತನಾಗಿ, ಮೋಕ್ಷಬಯಸುವ ಆ ಮಾರ್ಗದಲ್ಲಿ ನಿರತನಾಗಿರುವವನು ಗುರು ಪುತ್ರನ ರೀತಿ ಆಚರಣೆಯಲ್ಲಿ ಮಗ್ನನು, ನಿಶ್ಚಲಮನಸ್ಸಿನಿಂದ ಆತ್ಮಾನುಸಂಧಾನ ಮಾಡುವವನು ಜ್ಞಾನಸಂಪನ್ನನಾಗುವನು. ॥27॥ ಅವನು ಗೃಹಸ್ಥನಾಗಿರಲಿ, ಋಷಿಯಾಗಿರಲಿ ತನ್ನ ಗುರಿಯನ್ನು ಅರಿತಿದ್ದಲ್ಲಿ ತನ್ನ ದೇಹವೆಂಬ ಅಶ್ವದ ಒಡೆಯನಾಗಿರಬೇಕು. ಕೇವಲ ವಾಗ್ಮಿಯಾದರೆ ಏನು ಪ್ರಯೋಜನ? ॥28॥ ಕೇವಲ ಹರಟೆ ಮಾತುಗಳಿಂದ ಪ್ರಯೋಜನವಿಲ್ಲ. ಕೇವಲ ಅಭ್ಯಾಸ ಮಾತ್ರವೇ ಅದರ ಸಾರ. ಓಹ್, ನೀನು ನಿನ್ನ ದೇಹವನ್ನು ರಥವನ್ನಾಗಿ ಭಾವಿಸಿ ಅದರಲ್ಲಿ ನಿಶ್ಚಲನಾಗಿ ನೆಲೆಸು. ॥29॥ ತನ್ನದೇ ಸ್ವಂತ ಶರೀರವೆಂಬ ರಥದಲ್ಲಿ ನಿನ್ನ ಬುದ್ಧಿಯನ್ನು ಸಾರಥಿಯಾಗಿ ಮಾಡಿ ನೀನೇ ಅದರ ಒಡೆಯನಾಗು. ಆಗ ನೀನು ಅಲ್ಲಿ ಹಾಯಾಗಿ ಕುಳಿತುಕೊಳ್ಳಬಹುದು. ॥30॥ ಇಂದ್ರಿಯ ಸುಖಗಳೆಂಬ ರೂಪದಲ್ಲಿರುವ ಆ ಅಡೆತಡೆಗಳಿಂದ ತುಂಬಿದ ಈ ಎಲ್ಲ ಅಡ್ಡದಾರಿಗಳಲ್ಲಿ ಸಾರಥಿಯು ಇಂದ್ರಿಯಗಳೆಂಬ ಕುದುರೆಗಳನ್ನು ಮನಸ್ಸೆಂಬ ಪಾಶದಿಂದ ಬಂಧಿಸುವಂತೆ ಮಾಡು. ॥31॥ ಒಂದು ವೇಳೆ ಕುದುರೆಗಳು ಆ ಕಡೆ ಈ ಕಡೆ ಚದುರಿ ಓಡಲು ಪ್ರಯತ್ನಿಸಿದಲ್ಲಿ ಸಾರಥಿಯು ಕುದುರೆಗಳನ್ನು,

ಕಡಿವಾಣಗಳಿಂದ ಹತೋಟಿಗೆ ತರುತ್ತಾನೆ. ಒಮ್ಮೆ ಅವನಿಗೆ ಅದನ್ನು ವಹಿಸಿದಲ್ಲಿ ನೀವು ಆರಾಮವಾಗಿ ವಿಶ್ರಮಿಸಬಹುದು. ॥32॥ ಸಾರಥಿಯು ಕುಶಲನಾಗಿಯೂ ನಿಪುಣನಾಗಿಯೂ ಇದ್ದಲ್ಲಿ ಕುದುರೆಗಳು ಸರಿಯಾಗಿ ಓಡುತ್ತವೆ. ಆದರೆ ಒಂದು ವೇಳೆ ಮನಸ್ಸು ಲಗಾಮಿನ ಅಧೀನದಲ್ಲಿಲ್ಲದೆ ಪರಾಧೀನವಾಗಿದ್ದಲ್ಲಿ ಬಲಹೀನವಾಗುತ್ತದೆ. ॥33॥ ವಿವೇಕ ಮತ್ತು ಬುದ್ಧಿಗಳ ಸಾರಥ್ಯವಿದ್ದಲ್ಲಿ ಆ ವ್ಯಕ್ತಿಯು ತನ್ನವಮಾಹಿತ ಚಿತ್ತದ ಮೇಲೆ ಪೂರ್ಣ ಹತೋಟಿ ಹೊಂದಿರುತ್ತಾನೆ. ಅವನು ಮಾತ್ರ ಏಕಾಗ್ರ ಚಿತ್ತನಾಗಿ ಶಾಂತನಾಗಿ ಪರಮಪದವನ್ನು ಪ್ರಾಪ್ತಿಹೊಂದಲು ಸಾಕ್ಷರರೆಲ್ಲರೂ ಮಾರ್ಗದಲ್ಲಿಯೇ ದಣಿದು ನಿಶ್ರಮಿಸುತ್ತಾರೆ. ॥34॥ ಚಂಚಲ ಮನಸ್ಸು ಇದ್ದವನು ಎಂದಿಗೂ ತೃಪ್ತನಾಗುವುದಿಲ್ಲ. ಪರಮಪದದ ಮುಕ್ತಿಮಾರ್ಗದಲ್ಲಿ ಅವನಿಗೆಂದೂ ಪ್ರವೇಶವಿಲ್ಲ. ಅದರಿಂದಾಗಿ ಜನನ ಮರಣಗಳ ಚಕ್ರವನ್ನು ತಪ್ಪಿಸಲು ಸಾಧ್ಯವಿಲ್ಲ. ॥35॥ ಈ ರೀತಿ ಇರುವ ಪರಮೋಚ್ಛವನ್ನು ಹೇಗೆ ಪಡೆಯಬಹುದು? ಮನಸ್ಸಿನಲ್ಲಿರುವ ಸಂಶಯಗಳೆಲ್ಲ ನಿವಾರಣೆಯಾದಾಗ ಅದು ತನಗೆ ತಾನೇ ಪ್ರಕಟವಾಗುತ್ತದೆ. ॥36॥ ಇಲ್ಲಿ ತರ್ಕ, ವಾದ, ವಿವಾದ ಅಥವಾ ಸಂವಾದಗಳು ನಿಷ್ಪ್ರಯೋಜಕ. ಕೇವಲ ಪರಮಾತ್ಮನ ಅನುಗ್ರಹದಿಂದ ಮಾತ್ರ ಅದನ್ನು ಪಡೆಯಲು ಸಾಧ್ಯ. ಬೇರೆ ಎಲ್ಲ ರೀತಿಯ ವೈಜ್ಞಾನಿಕ ಮಾರ್ಗಗಳು ವ್ಯರ್ಥ. ॥37॥ ಈ ಸಂದರ್ಭದಲ್ಲಿ ಇದು ಒಂದು ಅಚ್ಚರಿಯ ದೃಷ್ಟಾಂತ. ಮುಗ್ಧ ನಂಬಿಕೆಯಿಂದ ಅದನ್ನು ಅರಿಯಬಹುದು. ತರ್ಕ ಮತ್ತು ಬುದ್ಧಿಯು ವ್ಯರ್ಥ ಮತ್ತು ತರ್ಕದ ಮನಸ್ಸು ಗೊಂದಲಗೊಂಡಿರುತ್ತದೆ. ॥38॥ ಸತ್ಯಜ್ಞಾನವನ್ನು ಪಡೆದವರು ಬೇರೆಯೇ ರೀತಿ. ಅವರ ಯೋಚನಾಲಹರಿಯೂ ಬುದ್ಧಿಶಕ್ತಿಯೂ ಬೇರೆ ರೀತಿಯದ್ದಾಗಿರುತ್ತದೆ. ದಯಮಾಡಿ ಅರ್ಥಮಾಡಿಕೊಳ್ಳಿ, ನಿಜವಾದ ಆಗಮ ಜ್ಞಾನಿಯು ಬಹಳ ಪ್ರತ್ಯೇಕವಾಗಿರುತ್ತಾನೆ. ಮತ್ತು ಅವನು ಮಾತ್ರ ಜ್ಞಾನ ಪಡೆಯಲು ಉತ್ತಮ ವ್ಯಕ್ತಿ. ॥39॥ ಅಮೂಲ್ಯವಾದ ಶರೀರವು ಹೇಗೆ ವ್ಯರ್ಥವಾಗುತ್ತದೆ? ಧನ ಮತ್ತು ಸುಖಗಳು ಮಧ್ಯಾಹ್ನದ ನೆರಳುಗಳ ರೀತಿ ಅಲ್ಪ ಕಾಲಿಕವು. ಇದನ್ನು ಅರ್ಥಮಾಡಿಕೊಳ್ಳಿರಿ. ಇದು ಪರಮಾತ್ಮನು ಸೃಷ್ಟಿಸಿದ ಶಕ್ತಿಯುತ ಭ್ರಮೆ. ಆದ್ದರಿಂದ ಸಂತರ ಚರಣಗಳಲ್ಲಿ ಶರಣಾಗಿರಿ. ॥40॥ ಸಂತರು ಭವಸಾಗರದಲ್ಲಿನ ಪಾತ್ರೆಯ ರೀತಿ. ನೀವು ಪ್ರಯಾಣಿಕರಲ್ಲಿ ಒಬ್ಬರು. ಇನ್ನು ಯಾರು ನಿಮ್ಮನ್ನು ಮತ್ತೊಂದು ದಡಕ್ಕೆ ದಾಟಿಸಲು ಸಮರ್ಥರು? ॥41॥ ವಿವೇಕ–ವೈರಾಗ್ಯ ಜೊತೆಯಾದಲ್ಲಿ ಭವಸಾಗರವನ್ನು ಕಷ್ಟವಿಲ್ಲದೆಯೇ ದಾಟಿಸುವರು; ಅವನು ಜಡ ಕಲ್ಲಿನ ತರಹ ಮೂಢನಾಗಿದ್ದರೂ ಪರವಾಗಿಲ್ಲ. ॥42॥ ಪರಮಾತ್ಮನಿಗೆ ಆರು ದೈವೀಗುಣಗಳು[3] ಇವೆ. ಅವುಗಳಲ್ಲಿ ಮೊದಲನೆಯದು ವೈರಾಗ್ಯ. ಅದು ಅಗ್ರ ಸ್ಥಾನದಲ್ಲಿದೆ. ಯಾರು ಅತಿ ಭಾಗ್ಯವಂತರೋ ಅವರು ಮಾತ್ರ ಅದನ್ನು ಪಡೆಯ ಬಲ್ಲರೇ ವಿನಹ ಇತರರಿಗೆ ಅದು ಸಾಧ್ಯವಿಲ್ಲ. ॥43॥ ಶಾಸ್ತ್ರವಿದಿತ ಕರ್ಮಗಳನ್ನು ಆಚರಿಸದೆ ಇದ್ದಲ್ಲಿ ಚಿತ್ತಶುದ್ಧಿಯಾಗಲು ಸಾಧ್ಯವಿಲ್ಲ. ಚಿತ್ತಶುದ್ಧಿಯಾಗುವವರೆಗೆ ಜ್ಞಾನಸಂಪಾದನೆಯು ಅಸಾಧ್ಯ. ॥44॥ ಆದ್ದರಿಂದ ಕೇವಲ ಕರ್ಮಗಳ ಆಚರಣೆಯೇ ಜ್ಞಾನಪ್ರಾಪ್ತಿಗೆ ಮೂಲಕಾರಣವೆಂಬುದನ್ನು ತಿಳಿಯಿರಿ. ನಿತ್ಯ

ನೈಮಿತ್ತಿಕ ಕರ್ಮಗಳ ಆಚರಣೆ ಮತ್ತು ಶಾಸ್ತ್ರ ವಿದಿತ ಕರ್ಮಗಳ ಆಚರಣೆಗಳೇ ಮನಸ್ಸಿನ ಅಶುದ್ಧಿಯನ್ನು ಶುದ್ಧಗೊಳಿಸುತ್ತವೆ. ॥45॥ ಈ ರೀತಿ, ಈ
ಶುದ್ಧ ಚಿತ್ತದಲ್ಲಿ ಮಾತ್ರವೇ ವಿವೇಕ, ವೈರಾಗ್ಯಗಳು ಉತ್ಪತ್ತಿಯಾಗುತ್ತವೆ. ಶಮ ದಮಾದಿ ಸಾಧನ ಸಂಪತ್ತು ಸಹ ದೊರಕುತ್ತವೆ. ಮತ್ತು ಅವು ನಿನ್ನ
ಅಧೀನವಿರುತ್ತವೆ. ಕೊನೆಯಲ್ಲಿ ಅವುಗಳ ಸಹಾಯದಿಂದ ಈ ದೇಹದಲ್ಲಿದ್ದುಕೊಂಡೇ ವಿದೇಹಮುಕ್ತಿಯನ್ನು ಪಡೆಯಬಹುದು. ॥46॥ ಕರ್ಮಫಲ
ಹಾಗೂ ಸಂಕಲ್ಪ ತ್ಯಾಗ ಮಾಡಿದವನು ಪೂರ್ಣ ಏಕಾಗ್ರತೆಯ ಸಹಾಯದಿಂದ ಮತ್ತು ಸದ್ಗುರುವಿಗೆ ಹೃತ್ಪೂರ್ವಕವಾಗಿ ಶರಣಾಗುವುದರಿಂದ
ಗುರುವು ಅವನನ್ನು ಸ್ವೀಕರಿಸುತ್ತಾನೆ. ॥47॥ ಲೌಕಿಕ ಸುಖಗಳನ್ನು ದೂರಮಾಡಿದವನು ಅನನ್ಯ ಭಕ್ತನು, ಪೂರ್ಣ ಶ್ರದ್ಧೆಯುಳ್ಳವನು, ಪ್ರಾಜ್ಞನು, ತಾನು
ಗಳಿಸಿದ ಜ್ಞಾನದಿಂದ ಬುದ್ಧಿವಂತನಾದವನು – ಅವನಿಗೂ ಬೇರೆ ಮಾರ್ಗವೇ ಇಲ್ಲ. ॥48॥ ಅಂತಹ ಜ್ಞಾನ ಪಡೆದ ನಂತರವೂ ಅಧರ್ಮಮಾರ್ಗದಲ್ಲಿ
ಆಚರಣೆ ಮಾಡುವವನು, ಇಲ್ಲಿಯೂ ಇಲ್ಲ ಅಲ್ಲಿಯೂ ಇಲ್ಲ, ಭೂಮಿಯ ಮೇಲೂ ಇಲ್ಲ, ಸ್ವರ್ಗದಲ್ಲೂ ಇಲ್ಲ – ಅಂತಹವನು ತ್ರಿಶಂಕುವಿನ ತರಹ
ಮಧ್ಯದಲ್ಲಿ ನೇತಾಡುತ್ತಿರುತ್ತಾನೆ. ॥49॥ ಒಬ್ಬ ವ್ಯಕ್ತಿಯ ಅಜ್ಞಾನವೇ ಅವನ ಸಂಸಾರ ಪ್ರವೃತ್ತಿಗೆ ಕಾರಣ. ಆತ್ಮಜ್ಞಾನ ಪ್ರಾಪ್ತಿಯ ನಿಜವಾದ ಭಾವವಿದ್ದಾಗ
ಅದು ಸಂಸಾರದ ಬಗ್ಗೆ ನಿವೃತ್ತಿ ಭಾವವನ್ನು ತಾನಾಗಿಯೇ ಹುಟ್ಟಿಸುತ್ತದೆ. ॥50॥ ಆತ್ಮಜ್ಞಾನಿಯು ಸದಾ ಅಹಂಭಾವರಹಿತನಾಗಿರುವನು. ಅವನಿಗೆ
ಧರ್ಮ-ಅಧರ್ಮಗಳು, ಶುಭ-ಅಶುಭಗಳು, ಸಂಸಾರದಲ್ಲಿನ ಹಿತ-ಅಹಿತಗಳು ಎರಡೂ ಯಾವ ಪರಿಣಾಮವನ್ನೂ ಬೀರುವುದಿಲ್ಲ. ॥51॥
ಯಾರಲ್ಲಿ ದೇಹದ ಅಹಂಕಾರ ವೃತ್ತಿಯು ಮಾಯವಾಗುತ್ತದೋ ವೈರಾಗ್ಯವು ಕೂಡಲೇ ಆ ಜಾಗವನ್ನು ಆಕ್ರಮಿಸುತ್ತದೆ ಮತ್ತು ಅದು ಸ್ವತಃ ಜೀವದ
ಅಂತಿಮ ಸ್ಥಿತಿಯಾಗಿ ಹಾಗೂ ಪರಮಾತ್ಮ ಸ್ಥಿತಿಯೂ ಆಗಿದೆ. ಇದನ್ನು ನಿಶ್ಚಿತವೆಂದು ಚೆನ್ನಾಗಿ ತಿಳಿ. ॥52॥ ಸ್ವಾಭಾವಿಕ ಜೀವನದಲ್ಲಿ ಶತ್ರುಗಳೂ
ಇದ್ದಾರೆ, ಮಿತ್ರರೂ ಇದ್ದಾರೆ. ಆದರೆ ನಿವೃತ್ತಿ ಮಾರ್ಗದಲ್ಲಿ ಇದೆಲ್ಲವೂ ಮೂರ್ಖತೆ ಎನಿಸುತ್ತದೆ. ಏಕೆಂದರೆ ಎಲ್ಲರಲ್ಲೂ, ಎಲ್ಲೆಲ್ಲೂ ನನ್ನನ್ನೇ
ನೋಡಿದಾಗ ಶತ್ರುತ್ವ ಅಥವಾ ಮಿತ್ರತ್ವವೆಲ್ಲಿ? ॥53॥ ಈ ಮಹಾಸುಖವನ್ನು ಹೋಲಿಸಿದರೆ ದೇಹದ ಮಹಾದುಃಖವೂ ಗೌಣವಾಗುತ್ತದೆ. ಈ ರೀತಿ
ಇರುವಾಗ ಪರಮಾನಂದವನ್ನು ಪಡೆದವನು ದೇಹದ ಆನಂದಕ್ಕಾಗಿ ಏಕೆ ಕಾತರಿಸುತ್ತಾನೆ? ॥54॥ ಐಹಿಕ ದುಃಖಗಳ ಪರ್ವತವೇ ಮೇಲೆ ಬಿದ್ದರೂ,
ಅವನು ಕಿಂಚಿತ್ತೂ ಚಂಚಲಿತನಾಗುವುದಿಲ್ಲ. ಮತ್ತು ಧೈರ್ಯವೆಂಬ ಬಂಡೆಯಂತೆ ನಿಶ್ಚಲನಾಗಿರುತ್ತಾನೆ. ॥55॥ ಪರಮಾತ್ಮನು ಅನುಗ್ರಹಿಸಲು
ಆಯ್ದುಕೊಂಡವನಿಗೆ ವೈರಾಗ್ಯದ ಬಹುಮಾನವನ್ನು ಕೊಡುತ್ತಾನೆ. ನಂತರ ಅದನ್ನು ವಿವೇಕದಿಂದ ದ್ವಿಗುಣಗೊಳಿಸುತ್ತಾನೆ. ಮತ್ತು ಭವಸಾಗರವನ್ನು
ದಾಟುವಂತೆ ಮಾಡುತ್ತಾನೆ. ॥56॥ ಆತ್ಮಜ್ಞಾನವನ್ನರಿಯಲಿಚ್ಛಿಸುವವನು, ತನ್ನ ಆತ್ಮವನ್ನು ಕನ್ನಡಿಯಲ್ಲಿ ಪ್ರತಿಬಿಂಬದಂತೆ ಇಡಲು ಇಚ್ಛಿಸುವವನು,
ಅಂತಹವನಿಗೆ ಈ ಜಗತ್ ಅಥವಾ ಸ್ವರ್ಗವನ್ನು ಬಿಟ್ಟರೆ ಮೂರನೆಯ ಸ್ಥಳವಿಲ್ಲ. ॥57॥ ಯಾಗ, ಯಜ್ಞಗಳನ್ನು ಆಚರಿಸಿದಲ್ಲಿ ದೇವತೆಗಳು

ಸುಪ್ರೀತರಾಗುವರು ಮತ್ತು ಅವರು ಮರಣಾನಂತರ ಸ್ವರ್ಗದಲ್ಲಿ ಆವಾಸ ನೀಡುವರು. ಕರ್ಮಗಳ ಫಲಗಳಿಂದ ಇದನ್ನು ಪಡೆಯಬಹುದೇ ವಿನಹ ಅವುಗಳಿಂದ ಆತ್ಮಜ್ಞಾನದ ಸಂಪತ್ತನ್ನು ಪಡೆಯಲು ಸಾಧ್ಯವಿಲ್ಲ. ॥58॥ ಅನೇಕ ಕಠಿಣ ಮಾರ್ಗಗಳಿಂದ ಒಬ್ಬನು ಪ್ರಾಣಿಯೂ ಗಂಧರ್ವನಾಗಬಹುದು. ಆದರೆ ಆತ್ಮದರ್ಶನ ಜ್ಞಾನವು ಬಹಳ ಗಹನವಾದದ್ದು. ಆದ್ದರಿಂದ ಆತ್ಮದ ನಿಜಜ್ಞಾನದ ಆಕಾಂಕ್ಷಿಗಳು ಭೂಲೋಕದಲ್ಲಿ ದೀರ್ಘಾಯುವನ್ನು ಇಚ್ಛಿಸುತ್ತಾರೆ. ॥59॥ ಇಲ್ಲಿ ಮನಸ್ಸು ಶುದ್ಧವಾಗುತ್ತದೆ. ಬುದ್ಧಿಯು ಕನ್ನಡಿಯಂತೆ ತಿಳಿಯಾಗುತ್ತದೆ ಮತ್ತು ಪರಿಶುದ್ಧ ಆತ್ಮಜ್ಞಾನವು ತ್ರಿಕರಣ ಶುದ್ಧಿಯಾಗಿ (ಮನಸ್ಸು, ಬುದ್ಧಿ ಮತ್ತು ಆತ್ಮ) ಪ್ರತಿಬಿಂಬಿಸುತ್ತದೆ. ॥60॥ ಮತ್ತೊಂದೆಡೆಯಲ್ಲಿ ಅಂದರೆ ಸ್ವರ್ಗಲೋಕದಲ್ಲಿ ಆತ್ಮಜ್ಞಾನವನ್ನು ಪಡೆಯಲು ಸಾಧ್ಯ. ಆದರೆ ಅದು ಬಹಳ ಕಷ್ಟ ಮತ್ತು ಅದನ್ನು ಪಡೆಯಲು ಪ್ರಚಂಡ ಯತ್ನದ ಅವಶ್ಯಕತೆ ಇದೆ. ॥61॥ ಮಾಯೆಯು ಸರ್ಪದ ರೀತಿಯಲ್ಲಿ ಸುತ್ತಿಕೊಳ್ಳುತ್ತದೆ. ಮತ್ತು ಅದು ಕರುಳನ್ನು ಸಂಪೂರ್ಣವಾಗಿ ಹಿಂಡಿಹಾಕುತ್ತದೆ. ಮಾಯೆಯು ಹೊರಗಿನಿಂದಲೂ ಸಹ ಅಪ್ಪಿಕೊಳ್ಳುತ್ತದೆ. ಅದನ್ನು ತಪ್ಪಿಸಲು ಯಾರಿಂದ ಸಾಧ್ಯ? ॥62॥ "ನೀನು ಇಲ್ಲಿ ಕುಳಿತು ನನ್ನನ್ನು ನೋಡುತ್ತಲೇ ಇರುವೆ. ನಿನ್ನ ಜೇಬಿನಲ್ಲಿ ಐವತ್ತು ಪಟ್ಟು ಹೆಚ್ಚು ಹಣ (ಐದು ರೂಪಾಯಿಗಿಂತ) ಇದೆ. ಅದನ್ನು ಹೊರತೆಗಿ. ನೋಡೋಣ. ಬ್ರಹ್ಮನಾದರೋ ನಿನ್ನ ಜೇಬಿನಲ್ಲೇ ಇದ್ದಾನೆ." ॥63॥ ಅದನ್ನು ತೆಗೆಯಲು ಹೇಳಿದಾಗ ಆ ಮಹನೀಯನು ತನ್ನ ಕೈಯನ್ನು ಜೇಬಿಗೆ ಹಾಕಿ ಒಂದು ಚೀಲವನ್ನು ಹೊರತೆಗೆದನು. ಅದರಲ್ಲಿ ಹತ್ತು ರೂಪಾಯಿನ ಇಪ್ಪತ್ತೈದು ನೋಟುಗಳು ಇದ್ದುವು. ಅದನ್ನು ಎಣಿಸಿದನು. ॥64॥ ಆ ಗೃಹಸ್ಥನು ಅಂತರಂಗದಲ್ಲಿಯೇ ನಾಚಿಕೆ ಪಟ್ಟನು ಮತ್ತು ಸ್ವತಃ ಯೋಚಿಸಿದನು. "ಮಹಾರಾಜ್‌ರಿಗೆ ಒಳಗಿನ ರಹಸ್ಯ ಎಷ್ಟು ಚೆನ್ನಾಗಿ ಗೊತ್ತು." ಅವನು ತನ್ನ ತಲೆಯನ್ನು ಅವರ ಚರಣಗಳಲ್ಲಿಟ್ಟು ಆತಂಕದಿಂದ ಅವರಆಶೀರ್ವಚನ ಬೇಡಿದನು. ॥65॥ ಆಗ ಬಾಬಾ ಹೇಳುತ್ತಾರೆ, "ಈಗ ನೀನು ನಿನ್ನ ಮಿಥ್ಯಾ ಬ್ರಹ್ಮವನ್ನು ಸುತ್ತಿಡು. ನಿನ್ನ ಲೋಭವು ನಾಶವಾಗುವವರೆಗೆ ಬ್ರಹ್ಮನನ್ನು ಎಂದಿಗೂ ಪಡೆಯಲಾರೆ. ॥66॥ "ಯಾರ ಮನಸ್ಸು ತನ್ನ ಕುಟುಂಬ ಮತ್ತು ಆಸ್ತಿ (ಮಕ್ಕಳು, ತೋಟ, ಪ್ರಾಣಿ)ಗಳಲ್ಲಿ ಆಸಕ್ತವಾಗಿರುತ್ತೋ ಅವರು ಬ್ರಹ್ಮನನ್ನು ಪಡೆಯಲು ಹೇಗೆ ಸಾಧ್ಯ? ಸದಾ ಇರುವ ಧನದ ಚಿಂತೆಯನ್ನು ನಾಶ ಮಾಡಬೇಕು. ॥67॥ 'ಧನದಾಹವು ಬಹಳ ಕಠಿಣ. ತೃಷ್ಣೆಯು ಆಳವಾದ ಕಂದರ. ಅದರ ತುಂಬ ಮೋಸ ಮತ್ತು ಅಸೂಯೆ ಎಂಬ ಮೊಸಳೆಗಳು ಸಹಿಸಲಸಾಧ್ಯವಾಗಿ ತುಂಬಿವೆ. ಆದರೆ ವೈರಾಗ್ಯ ಭಾವದವನು ಮಾತ್ರ ಇದನ್ನು ದಾಟಲು ಸಾಧ್ಯ. ॥68॥ "ಲೋಭ ಮತ್ತು ಬ್ರಹ್ಮ ಇವುಗಳ ಮಧ್ಯೆ ಅವಿರತ ಶತೃತ್ವ ಇರುತ್ತದೆ. ಧ್ಯಾನಕ್ಕೆ ಸಮಯ ಇಲ್ಲದವನು ಹೇಗೆ ಇಂದ್ರಿಯನಿಗ್ರಹವನ್ನು ಅಭ್ಯಸಿಸಿ ಮೋಕ್ಷ ಪಡೆಯಲು ಸಾಧ್ಯ? ಲೋಭಿಯು ಆಚಾರ ಭ್ರಷ್ಟನಾಗಿರುತ್ತಾನೆ. ॥69॥"ಲೋಭವಿದ್ದಲ್ಲಿ ಶಾಂತಿ ಇಲ್ಲ, ತೃಪ್ತಿ ಇಲ್ಲ, ಸಮಾಧಾನವೂ ಇಲ್ಲ. ಲೋಭವು ಮನಸ್ಸನ್ನು ಆವರಿಸಿದ ಕೂಡಲೇ ಬ್ರಹ್ಮ ಪ್ರಾಪ್ತಿಗಾಗಿ ಮಾಡಿದ ಎಲ್ಲಾ ಪ್ರಯತ್ನಗಳೂ ಧೂಳೀಪಟವಾಗುತ್ತವೆ.

॥70॥ "ಯಾರು ನೀಚ, ನಿಷಿದ್ಧ ಕರ್ಮಗಳಲ್ಲಿ ತೊಡಗಿಸಿಕೊಂಡಿರುತ್ತಾರೋ ಮತ್ತು ನೀಚ ವರ್ತನೆಗೆ ಇಳಿಯುತ್ತಾರೋ ಅವರನ್ನು ಶ್ರುತಿಗಳು, ಮತ್ತು ಸ್ಮೃತಿಗಳು ಒಪ್ಪುವುದಿಲ್ಲ. ಮತ್ತು ನಿರಂತರವಾಗಿ ಅಂತಹ ಜೀವನ ನಡೆಸುವವರು ಎಂದಿಗೂ ಮನಸ್ಸಿನ ಸಮಸ್ಥಿತಿಯನ್ನು ಹೊಂದುವುದಿಲ್ಲ. ॥71॥ "ಅಂತಹ ಪುರುಷನನ್ನು ವಿಲಕ್ಷಣ ವ್ಯಕ್ತಿಯೆಂದು ಕರೆಯುತ್ತಾರೆ. ಅವನು ಕೇವಲ ದುಷ್ಕರ್ಮಗಳಲ್ಲೇ ನಿರತನಾಗಿರುತ್ತಾನೆ. ಜಗತ್ತಿನ ಸುಖಗಳಲ್ಲಿ ಶಾಶ್ವತವಾಗಿ ಮುಳುಗಿ ಎಂದಿಗೂ ಒಳ್ಳೆಯದು, ಕೆಟ್ಟದ್ದು ಯಾವುದು ಎಂಬುದನ್ನು ಅರಿಯುವುದೇ ಇಲ್ಲ. ॥72॥ "ಬಹುಶಃ ಅವನು ಬ್ರಹ್ಮಜ್ಞಾನವನ್ನು ಅರ್ಥ ಮಾಡಿಕೊಂಡಿರಬಹುದು. ಆದರೆ ಅವನು ತನ್ನ ಕರ್ಮಗಳ ಫಲದಿಂದ ಮುಕ್ತನಾಗಿಲ್ಲದೇ ಇದ್ದಲ್ಲಿ, ಅವನ ಬ್ರಹ್ಮಜ್ಞಾನವು ವ್ಯರ್ಥ ಮತ್ತು ಅವನು ಆತ್ಮಜ್ಞಾನಸಂಪನ್ನನಾಗುವುದಿಲ್ಲ. ॥73॥ "ಯಾರಾದರೂ ಸಂತರ ಬಳಿ ಹೋಗಿ ಏನಾದರೂ ಕೋರಿದಲ್ಲಿ, ಸಂತನು ಮೊದಲು ಅವನು ಅದಕ್ಕೆ ಅರ್ಹನೇ ಎಂದು ಪರೀಕ್ಷಿಸಿ ತೀರ್ಮಾನಿಸುತ್ತಾನೆ.. ಅನಂತರ ಅವನ ಯೋಗ್ಯತಾನುಸಾರ ಅವನ ಆಸೆಗಳನ್ನು ಪೂರೈಸುತ್ತಾನೆ. ॥74॥ "ಯಾರ ಮನಸ್ಸು ಹಗಲು ರಾತ್ರಿ ತನ್ನ ದೇಹಾಭಿಮಾನದ ವಿಷಯಗಳ ಬಗ್ಗೆ ಹಾಗೂ ತನ್ನ ಲೌಕಿಕ ಸಾಧನೆಗಳಿಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಿರುವನೋ ಅಂತಹ ವ್ಯಕ್ತಿಗೆ ಗುರೂಪದೇಶದಿಂದ ಉಪಯೋಗವಿಲ್ಲ. ಇಬ್ಬರ ಸಮಯವೂ ವ್ಯರ್ಥವಾಗುತ್ತದೆ. ॥75॥ "ಯಾರು ಪರಮಾರ್ಥವನ್ನು ಚಿತ್ತಶುದ್ಧಿಯಿಲ್ಲದೆಯೇ ಸಾಧಿಸಲು ಇಚ್ಛಿಸುವರೋ, ಅವನ ಶ್ರಮವು ಪಾಂಡಿತ್ಯ ಪ್ರದರ್ಶನದ ತರಹ ಕಾಣಿಸುತ್ತದೆ. ಇದೆಲ್ಲವೂ ವ್ಯರ್ಥ ಪ್ರಯತ್ನ. ॥76॥ "ಆದ್ದರಿಂದ ವಾಸ್ತವವನ್ನು ಮಾತ್ರ ಹೇಳಬೇಕು ಮತ್ತು ತಾನು ಜೀರ್ಣಿಸುವಷ್ಟು ಮಾತ್ರವೇ ತಿನ್ನಬೇಕು. ಇಲ್ಲದಿದ್ದಲ್ಲಿ ಅಜೀರ್ಣವಾಗುತ್ತದೆ. ಇದು ಎಲ್ಲರಿಗೂ ತಿಳಿದ ವಿಷಯ. ॥77॥ "ನನ್ನ ಖಜಾನೆಯು ತುಂಬಿದೆ, ನಾನು ಯಾರು ಏನನ್ನು ಬೇಡಿದರೂ ಕೊಡಬಲ್ಲೆ. ಆದರೆ ಅದಕ್ಕಾಗಿ ನಾನು ಯಾಚಕನ ಯೋಗ್ಯತೆಯನ್ನು ಅರಿಯಬೇಕು. ಯಾರು ಏನು ಸ್ವೀಕರಿಸಲು ಸಾಧ್ಯವೋ ಅದನ್ನು ನಾನು ಕೊಡುತ್ತೇನೆ." ॥78॥ ನಾನು ಹೇಳಿದ್ದನ್ನೆಲ್ಲಾ ಗಮನವಿಟ್ಟು ಕೇಳಿದಲ್ಲಿ ನೀವು ಲಾಭ ಪಡೆಯುವಿರಿ. ಈ ಪವಿತ್ರ ಮಸೀದಿಯಲ್ಲಿ ಕುಳಿತುಕೊಂಡು ನಾನು ಎಂದಿಗೂ ಅನೃತವನ್ನು ನುಡಿಯುವುದಿಲ್ಲ." ॥79॥ ಸಂತರ ವಚನಾಮೃತವೆಂಬ ನದಿಯಲ್ಲಿ ಪೂರ್ಣ ಶ್ರದ್ಧೆಯಿಂದ ಮುಳುಗಿದವನು ಅಂತಶುದ್ಧಿ ಮತ್ತು ಬಹಿರ್ಶುದ್ಧಿಗಳನ್ನು ಪಡೆಯುತ್ತಾನೆ. ಮತ್ತು ಅವನ ಎಲ್ಲ ಮಲಿನತೆಯೂ ತೊಳೆದುಹೋಗುತ್ತದೆ. ॥80॥ ಅದು ಸಾಯಿನಾಥನ ಮಹಿಮೆ. ಅದನ್ನು ವಿವರಿಸಲು ಪ್ರಯತ್ನಿಸಿದಾಗ ಅದಕ್ಕೆ ಕೊನೆಯೇ ಇಲ್ಲ. ನಿರುಪಮನನ್ನು ಹೇಗೆ ಹೋಲಿಸಲಿ? ಅವನನ್ನು ಕೇವಲ ಶುದ್ಧ ಪ್ರೇಮದಿಂದ ಮಾತ್ರ ಪಡೆಯಬಹುದು. ॥81॥ ಅವನು ಎಲ್ಲರಿಗೂ ಮಾತೆ. ಆರ್ತರಿಗೆ ಮತ್ತು ದೀನರಿಗೆ ರಕ್ಷಕ. ಅನಾಥರಿಗೆ ಆಧಾರ. ಮರವು ಬಳ್ಳಿಗೆ ಇರುವರೀತಿಯಲ್ಲಿ ಅವರಿಗೆಲ್ಲ ಆಶ್ರಯ. ದೀನದುರ್ಬಲರಿಗೆ ತಂಪಾದ ನೆರಳಿನ ಆಶ್ರಯ ನೀಡುತ್ತಾನೆ. ॥82॥ ಅನೇಕ ಸಂತರು ಸಂಸಾರವನ್ನು ತ್ಯಜಿಸಿರುತ್ತಾರೆ. ಅವರು ಮೌನಿಗಳಾಗಿ,

ಪರ್ವತದ ಗುಹೆಗಳಲ್ಲಿ ಏಕಾಂತವಾಗಿ ವಾಸಿಸುತ್ತಾರೆ. ಮತ್ತು ಕೇವಲ ಶಾಶ್ವತ ಒಳಿತಿಗಾಗಿ ಇದನ್ನು ಸ್ವೀಕರಿಸುತ್ತಾರೆ॥83॥ ಕೇವಲ ತಮ್ಮ ಸ್ವಾರ್ಥಕ್ಕಾಗಿ ಅಥವಾ ಸ್ವಂತ ಉದ್ಧಾರಕ್ಕಾಗಿ ಪರಮಾರ್ಥ ಸಾಧನೆಯಲ್ಲಿ ಮಗ್ನರಾಗಿರುವ ಸಂತರಿಂದ ಏನು ಪ್ರಯೋಜನ? ॥84॥ ಆದರೆ ಸಾಯಿಬಾಬಾರವರು ಅಂತಹ ಸಂತರಲ್ಲ. ಅವರಿಗೆ ಬಂಧುಗಳು, ಸ್ನೇಹಿತರು, ಮನೆ, ಪತ್ನಿ, ಅಥವಾ ಪುತ್ರ ಯಾರೂ ಇಲ್ಲದಿದ್ದರೂ ಸಹಅವರು ಪ್ರಪಂಚದಲ್ಲಿ ಇದ್ದರು. ॥85॥ ಅವರು ಐದು ಮನೆಗಳಿಂದ ಅಲ್ಪ ಪ್ರಮಾಣದ ಭಿಕ್ಷೆ ಪಡೆಯುತ್ತಿದ್ದರು. ರಾತ್ರಿ–ಹಗಲು ಒಂದು ಮರದ ಕೆಳಗಡೆ ವಾಸ ಮಾಡುತ್ತಿದ್ದರು. ಅತಿ ವಿರಳವಾದ ಪ್ರಾಪಂಚಿಕ ವಸ್ತುಗಳನ್ನು ಹೊಂದಿ ಅವರು ವ್ಯವಹಾರ ಜೀವನವನ್ನು ಕಲಿಸಿದರು. ॥86॥ ಅಂತಹ ಸಂತಶ್ರೇಷ್ಠರು ಈ ಜಗತ್ತಿನಲ್ಲಿ ಬಹು ಅಪರೂಪ. ಅವರು ಆತ್ಮಜ್ಞಾನವನ್ನು ಸಾಧಿಸಿದ ನಂತರ ಜನರ ಕಲ್ಯಾಣಕ್ಕಾಗಿ ಶ್ರಮಿಸುತ್ತಾರೆ. ॥87॥ ಅಂತಹ ದೇಶ ಧನ್ಯ. ಅಂತಹ ಕುಲವು ಧನ್ಯ. ಅಂತಹ ಪವಿತ್ರ ತಂದೆ ತಾಯಿಯರು ಧನ್ಯರು. ಅಂತಹ ಪವಿತ್ರ ಗರ್ಭವು ಇಂತಹ ರತ್ನಕ್ಕೆ ಜನ್ಮ ನೀಡಿದೆ. ಅದು ಅತ್ಯಂತ ಅನುಗ್ರಹೀತವಾದುದು. ॥88 ॥ ಅನಾಯಾಸವಾಗಿ ಈ "ಪರಸು"[7] ಮಣಿ ಸಿಕ್ಕಿತು. ಆದರೆ ಅದನ್ನು ಸಾಧಾರಣ ಕಲ್ಲು ಎಂದು ಅನೇಕರು ತಿರಸ್ಕರಿಸಿದರು. ಶಿರಡಿಯಲ್ಲಿ, ಈ ಪರಮ ಭಾಗವತನನ್ನು ಬಹಳ ಸಮಯದವರೆಗೆ ಯಾರೂ ಗುರುತಿಸಲಿಲ್ಲ. ॥89॥ ಇದು ಒಂದು ರತ್ನವು ಕಸದ ರಾಶಿಯಲ್ಲಿ ಬಿದ್ದಿರುವ ರೀತಿ ಇದೆ. ಅದನ್ನು ಆಟ ಆಡುವ ಪೋರರು ಕಂಡುಹಿಡಿದು ಅದರಿಂದ ಆಟ ಆಡುತ್ತಾರೆ ಮತ್ತು ಅದನ್ನು ತುಳಿದಾಡುತ್ತಾರೆ. ಅದನ್ನುಕಲ್ಲೆಂದು ಭಾವಿಸಿರುತ್ತಾರೆ. ॥90॥ ಅದು ಹಾಗಿರಲಿ. "ಈ ರೀತಿಯಲ್ಲಿ ಬ್ರಹ್ಮನನ್ನು ಪಡೆಯಲಿಚ್ಛಿಸುವವನು ಅವರ ಆಶೀರ್ವಚನಗಳನ್ನು ಪಡೆದು ತೃಪ್ತಿ ಹೊಂದುತ್ತಿದ್ದರು. ನಮ್ಮೆಲ್ಲರ ಸ್ಥಿತಿಯೂ ಅಷ್ಟೆ. ನಾವು ವಿಕಟವಾದ ಮಾರ್ಗವನ್ನು ತೊರೆಯಬೇಕು. ॥91॥ ಎಲ್ಲಿಯವರೆಗೆ ನಾವುಬಾಹ್ಯಸುಖಗಳನ್ನು ಅನುಭವಿಸುತ್ತಿರುವೆವೋ, ಮಧುರ ಸಂಗೀತ ಆಲಿಸುವುದು, ಮೃದುವಾದ ಸ್ಪರ್ಶದ ಸಂವೇದನೆ ಅನುಭವಿಸುವುದು, ಮಧುರ ಪರಿಮಳಮತ್ತು ಆನಂದ ನೀಡುವ ದೃಶ್ಯಗಳು, ಅಂತಹ ಸ್ಥಿತಿಯಲ್ಲಿ ಇಂದ್ರಿಯಗಳ ಮೇಲೆ ಯಾವುದೇ ಅಧಿಕಾರವಿರುವುದಿಲ್ಲ. ॥92॥ ಇಂದ್ರಿಯಗಳನ್ನು ನಿಗ್ರಹಿಸದಿದ್ದಲ್ಲಿ, ಅದೇ ಗುಣವು ಬದಲಾಗುತ್ತದೆ ಮತ್ತು ಅಂತರ್ಮುಖಿಯಾಗಿ ಬ್ರಹ್ಮನನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅನುಭವಿಸುವುದು ಅಸಾಧ್ಯ. ॥93॥ ಮೊದಲು ಪ್ರತಿಯೊಬ್ಬನೂ ಸಂಪೂರ್ಣ ವೈರಾಗ್ಯ[8] ಹೊಂದಬೇಕು. ನಂತರ ಪೂರ್ಣವಾಗಿ ಗುರುವಿಗೆ ಶರಣಾಗಬೇಕು. ಈ ರೀತಿ ಯಾರು ಅಚಲ ಮತ್ತು ಪೂರ್ಣ ಶ್ರದ್ಧೆ ಹೊಂದಿರುತ್ತಾರೋ ಅಂತಹವರು ಆತ್ಮಜ್ಞಾನಕ್ಕೆ ಅರ್ಹರು. ॥94॥ ಯಾವಾಗ ಪಂಚೇಂದ್ರಿಯಗಳಾದ ಕಿವಿ ಮತ್ತಿತರೆಯವು ತಮ್ಮ ಸುಖವನ್ನು ತ್ಯಜಿಸುತ್ತವೆಯೋ ಆಗ ಮನಸ್ಸು ಸಂಶಯ ಮತ್ತು ಆಶೆಗಳನ್ನು ದೂರಮಾಡುತ್ತದೆ. ॥95॥ ಈ ರೀತಿ ಭೇದವನ್ನು ದೂರ ಸರಿಸಿ ಅಂತರಂಗದಲ್ಲಿ ಸ್ವತಂತ್ರರಾಗಿದ್ದಲ್ಲಿ ಬುದ್ಧಿಯು ನಿರ್ಧಾರ ತೆಗೆದುಕೊಳ್ಳುವ ಹೊಣೆಗಾರಿಕೆಯಿಂದ ಬಿಡುಗಡೆ ಹೊಂದುತ್ತದೆ. ಅದೇ ಮನಸ್ಸಿನ

ಪರಮಸ್ಥಿತಿ ಮತ್ತು ನಿಶ್ಚಲ ಬ್ರಹ್ಮನೂ ಅದೇ. ॥96॥ ಯಾವಾಗ ಬುದ್ಧಿಶಕ್ತಿಯು ವಿವೇಚನಾಶಕ್ತಿಯ ಸಹಾಯವನ್ನು ಅಪೇಕ್ಷಿಸುವುದಿಲ್ಲವೋ ಆಗ ಮನಸ್ಸು ಜೀವಂತವಾಗುತ್ತದೆ. ಅದೇ ಪರಿಶುದ್ಧ ಚೈತನ್ಯ ಮತ್ತು ಇನ್ನೇನೂ ಅಲ್ಲ. ಆ ಸ್ಥಿತಿಯನ್ನು ಪಡೆದವನೇ ಧನ್ಯ. ॥97॥ ಯಾವಾಗ ಇಂದ್ರಿಯಗಳು ಸಂಸಾರ ಸುಖಗಳಿಂದ ವಿಮುಖವಾಗಿ ಅಂತರ್ಮುಖಿಯಾಗುತ್ತವೆಯೋ, ಆಗ ಸ್ವಾತ್ಮದ ಆನಂದವನ್ನು ಅನುಭವಿಸಬಹುದು ಮತ್ತು ಬೇರೆಲ್ಲವೂ ಅಸಂತೋಷದ ಸ್ವರೂಪವಾಗುತ್ತದೆ. ॥98॥ ಅದು ಇಂದ್ರಿಯಗಳ ವಿಷಯ ವಿಕಾರಗಳಿಂದ ವೇಷ ಮರೆಸಲ್ಪಟ್ಟಿದೆ. ಅದು ಅತಿ ಸೂಕ್ಷ್ಮವಾಗಿದೆ. ಈ ರೀತಿ ಈ ಆತ್ಮಜ್ಞಾನ ಸಾಧಿಸಲು ಕಷ್ಟಸಾಧ್ಯ. ಅದು ಪರಮಾನಂದ ಪ್ರಾಪ್ತಿಯ ಸಾಧನೆ. ಅದು ಅತಿ ಗಹನವೂ ಅಗ್ರಾಹ್ಯವೂ ಆಗಿದೆ. ॥99॥ ಹಿರಣ್ಯಗರ್ಭದ[9] ಸ್ಥಿತಿಯನ್ನು ತಲುಪುವವರೆಗೆ ಇಹಪರಗಳ ಬಗ್ಗೆ ವಿರಕ್ತನಾಗಿರುವವನು ಮಾತ್ರ ಮುಕ್ತಿಪಡೆದಿರುವನು ಮತ್ತು ಬ್ರಹ್ಮತತ್ತ್ವದಲ್ಲಿ ಪಟ್ಟಾಭಿಷಕ್ತನು[10] ಎಂದು ತಿಳಿಯಿರಿ. ॥100॥ ಮನಸ್ಸು ನಿಧಾನವಾಗಿ ಮತ್ತು ಕ್ರಮವಾಗಿ ಇಂದ್ರಿಯ ವಸ್ತುಗಳಿಂದ ವಿಮುಖವಾಗಬೇಕು. ಆತ್ಮದ ಮೇಲೆ ಏಕಾಗ್ರಚಿತ್ತವಾಗುವಂತೆ ಮಾಡಬೇಕು. ಆತ್ಮಜ್ಞಾನವನ್ನು ಈ ರೀತಿ ಪಡೆಯಬೇಕು. ॥101॥ ಇಹಪರಗಳ ಬಗ್ಗೆ ಮತ್ತು ಕರ್ಮಫಲಗಳ ಬಗ್ಗೆ ಅನಾಸಕ್ತಿವಹಿಸಿದ ಸುಖದುಃಖ ದ್ವೈತಭಾವನೆಗಳಿಂದ ವಿಮುಖರಾದ ಬುದ್ಧಿವಂತ ಜನರು ಮಾತ್ರ ಅಧ್ಯಾತ್ಮಯೋಗವನ್ನು ಅನುಭವಿಸಬಹುದು. ॥102॥ ಭವಸಾಗರದಲ್ಲಿ ಪೀಡಿಸುವ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಅಲೆಗಳಲ್ಲಿ ವಡಬಾನಲ ಜ್ವಾಲೆಗಳಿಂದ[11] ಸುತ್ತುವರೆಯಲ್ಪಟ್ಟು ತಾಪತ್ರಯಗಳಿಂದ[1] ಪೀಡಿತರಾದವರು ಸಂತೋಷವಾಗಿರಲು ಹೇಗೆ ಸಾಧ್ಯ? ॥103॥ ಆದ್ದರಿಂದ ಸ್ವತಃ ತನ್ನ ಉದ್ಧಾರಕ್ಕಾಗಿಯೇ ಅವನಾಯಿಯ ಅನುಗ್ರಹ ಪಡೆಯಬೇಕು. ಅವರ ಕಥೆಗಳನ್ನು ಓದಿರಿ, ಆಲಿಸಿರಿ ಮತ್ತು ಅವುಗಳನ್ನು ಕುರಿತು ಧ್ಯಾನಮಾಡಿರಿ. ॥104॥ ಒಂದು ವೇಳೆ ನೀವು ಸಾಯಿನಾಥರ ಜೀವನ ಚರಿತ್ರೆಯನ್ನು ನಿಮ್ಮ ಪತ್ನಿ, ಪುತ್ರ, ಸ್ನೇಹಿತರು ಮತ್ತು ಬಂಧುಗಳ ಜೊತೆ ಕೇಳಿದಲ್ಲಿ ನೀವು ಎರಡೂ ಲೋಕಗಳ (ಇಹ ಮತ್ತು ಪರ) ಸುಖವನ್ನು ಪಡೆಯುವಿರಿ. ಬಾಬಾರವರ ಲೀಲೆಗಳು ವಿಶಿಷ್ಟವಾದವುಗಳು. ॥ 105॥ ಕೇವಲ ಭಾಗ್ಯವಂತರು ಮತ್ತು ಶ್ರದ್ಧಾಳು ಶ್ರೋತೃಗಳು ಮಾತ್ರ ಈ ಕತೆಗಳನ್ನು ಆಲಿಸಲು ಸಾಧ್ಯ. ಆಲಿಸುವಾಗ ಹಗುರಾದ ಅನುಭವ ಅವರಿಗೆ ಉಂಟಾಗುತ್ತದೆಮತ್ತು ಎಲ್ಲಾ ಕಡೆಯಿಂದಲೂ ಶಾಂತಿಯು ಆವರಿಸುತ್ತದೆ. ॥106॥ ಜೀವನ ಚರಿತ್ರೆಗಳ ಪ್ರವಾಹಗಳಲ್ಲಿ ಹರಿಯುವ ನೀರಿನಲ್ಲಿ ಕರ್ಮ ಮತ್ತು ಅಕರ್ಮಗಳ ಫಲಗಳೆಂಬ ಉಪ್ಪು ಕರಗುತ್ತದೆ. ಮತ್ತು ಕೇಳುವುದರ ಮೂಲಕ ಸಾಯಿಯ ಸುಂದರ ಸ್ವರೂಪ ಕಣ್ಣುಗಳ ಮುಂದೆ ಕಾಣುತ್ತದೆ. ॥107॥ ಅವರ ಜೀವನ ಚರಿತ್ರೆಯನ್ನು ಕೇಳುವುದರಿಂದ ಪಾಪಗಳು ನಾಶವಾಗುತ್ತವೆ. ಅವರ ಜೀವನ ಚರಿತ್ರೆಯನ್ನು ಕೇಳಿ ವಿಧಿಯನ್ನು ಎದುರಿಸಬಹುದು. ಅವರ ಜೀವನ ಚರಿತ್ರೆಯನ್ನು ಕೇಳಿದರೆ ಶ್ರೋತೃಗಳಿಗೆ ಶ್ರಮವಿಲ್ಲದೆಯೇ ಪರಮಾನಂದವು ಪ್ರಾಪ್ತಿಯಾಗುತ್ತದೆ. ॥108॥ ಕೇಳುವುದರಿಂದ ಹೃದಯವು ಪರಿಶುದ್ಧವಾಗುತ್ತದೆ.

ಹುಟ್ಟು ಸಾವಿನ ಚಕ್ರ ತಪ್ಪಿಹೋಗುತ್ತದೆ. ಕೇಳುವುದರಿಂದ ಶ್ರೋತೃಗಳು ಬ್ರಹ್ಮಜ್ಞಾನವನ್ನು ಪಡೆಯುತ್ತಾರೆ. ಕರ್ಮಗಳನ್ನು ಆಚರಿಸಿ ಅವುಗಳ ಫಲವನ್ನು ಬ್ರಹ್ಮನಿಗೆ ಅರ್ಪಿಸುವುದರಿಂದ ಮೋಕ್ಷವನ್ನು ಪಡೆಯಬಹುದು. ॥109॥ ಸಾಯಿಯ ಸೇವೆಯನ್ನು ಮಾಡಲು ಆಸಕ್ತಿವಹಿಸಿದವನನ್ನು ಸಾಯಿಯು ವಿರಕ್ತನನ್ನಾಗಿ ಮಾಡಿಸುತ್ತಾರೆ. ಮತ್ತು ಸಾಯಿರಾಮ ತಮ್ಮ ಸ್ವಂತ ಭಕ್ತರಿಗೆ ವಿಶ್ರಾಂತಿ, ಶಾಂತಿ, ಸುಖ, ಸಂತೋಷಗಳನ್ನು ನೀಡುತ್ತಾರೆ. ॥110॥ ಓ! ಶ್ರೋತೃಗಳೇ, ದಯಮಾಡಿ ಓದಿ, ಕೇಳಿ, ಅಭ್ಯಾಸಮಾಡಿರಿ ಅಥವಾ ಈ ಗ್ರಂಥದ ಮೇಲೆ ನಿತ್ಯವೂ ಭಾಗಶಃ ಧ್ಯಾನಮಾಡಿ ಅಥವಾ ಪಾರಾಯಣ ಮಾಡಿ. ॥111॥ ನಿಮ್ಮನ್ನೇ ಚೆನ್ನಾಗಿ ನಿಖರವಾಗಿ ತಿಳಿಯಿರಿ. ಆ ಆನಂದವೇ ಬ್ರಹ್ಮನ್. ಇದು ತೈತ್ತರೀಯ ಉಪನಿಷತ್ತಿನ ಪ್ರಖ್ಯಾತವಾದ ಉಲ್ಲೇಖ. ಇದನ್ನು ಶೃತಿಗಳಲ್ಲಿ ಪಾಂಡಿತ್ಯವಿದ್ದ ಬಾಬಾರವರೇ ಭಕ್ತರಿಗೆ ಉಪದೇಶಿಸಿದ್ದರು. ॥112॥ "ಕಿಂಚಿತ್ತೂ ಚಿಂತಿಸಬೇಡ. ಸದಾ ಸಂತಸದಿಂದಿರು. ಸಾಯುವವರೆಗೆ ಕಿಂಚಿತ್ತೂ ಆತಂಕ ಬೇಡ" ಈ ರೀತಿ ಬಾಬಾರವರು ನಿರಂತರ ಬೋಧಿಸುತ್ತಿದ್ದರು. ॥113॥ ಈ ಅಧ್ಯಾಯವು ಬ್ರಹ್ಮನ ಬಗೆಗಿನ ವಿವರಣೆ ಬಗ್ಗೆ ತಿಳಿಸಬಹುದು. ಆದರೆ ಅದರಿಂದ ದೊರಕುವುದು ಏನೆಂದರೆ ಸಾಯಿಯಲ್ಲಿ ಶರಣಾದವನ ಹಡಗು ಭವಸಾಗರವನ್ನು ದಾಟಲು ಸಾಧ್ಯವಾಗುವುದು. ॥114॥ ಪ್ರತಿಯೊಬ್ಬರೂ ಯಾವಾಗಲೂ ಹಿತವಚನವನ್ನೇ ನುಡಿಯಬೇಕು ಮತ್ತು ಪರೋಪಕಾರ ಮಾಡಬೇಕು. ಈ ಉದ್ದೇಶವನ್ನು ಬಾಬಾ ಅನುಸರಿಸುತ್ತಿದ್ದರು. ಮತ್ತು ಅದಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತಿದ್ದರು. ॥115॥ ಇದು ಸರಿಯೋ, ತಪ್ಪೋ ಈ ತರ್ಕಗಳು ಕೇವಲ ವೈಯಕ್ತಿಕ. ಈ ಗ್ರಂಥದಲ್ಲಿ ಸಾಮಾನ್ಯ ಜನತೆಗೆ ಉಂಟಾಗುವ ಸಂತೋಷದ ಬಗ್ಗೆ ಒತ್ತುಕೊಟ್ಟು ಹೇಳಿದೆ. ॥116॥ ಇದು ಈ ಗ್ರಂಥದ ಹಿಂದಿರುವ ಉದ್ದೇಶ. ಬಾಬಾರವರಿಗೆ ಕಾರಣ ಮತ್ತು ಫಲ ಎರಡೂ ತಿಳಿದಿದ್ದವು. ಯಾವ ರೀತಿ ಅವರು ಜನರ ಉದ್ದೇಶವನ್ನು ತಿಳಿದಿದ್ದರೋ, ಅದೇ ರೀತಿ ಅವರ ಭವಿಷ್ಯವನ್ನೂ ಅರಿತಿದ್ದರು. ॥117॥ ಆ ಕತೆಗಳನ್ನು ಗುರುಮುಖೇನ ಕೇಳಿರಿ. ಅವರ ಅಪರಿಮಿತ ಶಕ್ತಿಯನ್ನು ಅನುಭವಿಸಿರಿ. ಸಾಧ್ಯವಾದಷ್ಟು ಕತೆಗಳನ್ನು ಸಂಗ್ರಹಿಸಿ, ನೆನಪಿಸಿಕೊಂಡು ಇತರರಿಗೆ ಹೇಳಲು ಪ್ರಯತ್ನಪಡಿರಿ. ॥118॥ ಸಾಯಿಯ ಈ ಮಧುರ ಜೀವನ ಚರಿತ್ರೆಯನ್ನು ಅತಿ ಗೌರವದಿಂದ ಕೇಳಿದರೆ, ನಿರೂಪಣೆ ಮಾಡುವವನ ಮತ್ತು ಕೇಳುವವನ ದುಃಖ, ಕಷ್ಟಗಳೆಲ್ಲವೂ ನಾಶವಾಗುತ್ತವೆ ಮತ್ತು ಎಲ್ಲರ ದುಃಖಗಳೂ ಅಂತ್ಯಗೊಳ್ಳುತ್ತವೆ. ॥119॥ ನಿರ್ಭಾಗ್ಯರ ಹೊರತು ಅವರ ದಿವ್ಯಲೀಲೆಗಳನ್ನು ಅನುಭವಿಸಿಯೂ ಆಶ್ಚರ್ಯಪಡದವರು ಯಾರಿದ್ದಾರೆ? ಅವರ ದರ್ಶನ ಮಾತ್ರ ಮನಸ್ಸನ್ನು ಶಾಂತಗೊಳಿಸಿ ಅವರ ಚರಣಗಳಲ್ಲಿ ಪ್ರಣಾಮ ಮಾಡುವಂತೆ ಪ್ರೇರೇಪಿಸುತ್ತದೆ. ॥120॥ ಸಾಯಿಯ ಸರಳ ಕತೆಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಮತ್ತು ಅದರ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವ ಇಂತಹ ಆನಂದಭರಿತ ಅಪೂರ್ವ ಅವಕಾಶವನ್ನು ಯಾರು ತಾನೇ ಕಳೆದುಕೊಳ್ಳುತ್ತಾರೆ? ॥121॥ ಭರವಸೆ ಎಂಬ ನೀರಿನ ಪ್ರವಾಹದಲ್ಲಿ ಮಗ, ಹೆಂಡತಿ ಮತ್ತು ಸ್ನೇಹಿತರು ಎಂಬ ಅನೇಕ ಸುಳಿಗಳು,

ಕಾಮ–ಕ್ರೋಧ ಇತ್ಯಾದಿ ಮೊಸಳೆಗಳು[13], ನಾನಾ ರೋಗಗಳು, ತಿಮಿಂಗಿಲಗಳ ರೂಪದಲ್ಲಿ ವಿಜೃಂಭಿಸುತ್ತವೆ. ॥122॥ ಕೆಲವು ವೇಳೆ ತಾತ್ಕಾಲಿಕ ತಿರಸ್ಕಾರಭಾವ ಗಂಟೆಗಟ್ಟಲೆ ಇರುತ್ತದೆ. ಮನಸ್ಸಿನ ದ್ವಂದ್ವಭಾವ, ಒಂದು ಉದ್ವೇಗ, ಇದ್ದರೂ ಆ ಬಂಧನವನ್ನು ಮುರಿಯಲು ಸಾಧ್ಯವಿಲ್ಲ. ॥123॥ ನಿನ್ನ ಮನಸ್ಸಿಗೆ ನೀನೇ ಬೋಧಿಸಬೇಕು. ನಿನಗೆ ನೀನೇ ಪರಿಶುದ್ಧ ಬ್ರಹ್ಮ. ಆದರೆ ನೀನು ದೇಹವೆಂಬ ಪಂಜರದಲ್ಲಿಣಿಯ[14] ಹಾಗೆ ಬಂಧಿತನಾಗಿರುವೆ. ಅದು ಹಿಡಿದಿರುವ ಅಡ್ಡದಾದ ಕಡ್ಡಿಯು ಸುತ್ತುತ್ತಲೇ ಇರುತ್ತದೆ. ॥124॥ ನೀನು ಭ್ರಮಾಧೀನನಾಗಿ ಕೇವಲ ಮೋಹಮಾಯೆಯಿಂದ ಎಳೆಯಲ್ಪಟ್ಟಿರುವೆ. ಆದ್ದರಿಂದ ನೀನೇ ಸ್ವತಃ ಶುದ್ಧಬ್ರಹ್ಮನೆಂಬುದನ್ನು ಮರೆತಿರುವೆ. ಜಾಗೃತನಾಗಿ ಮತ್ತು ಕೂಡಲೇ ನಿನ್ನ ನಿಜಸ್ವರೂಪವನ್ನು ಅರಿತು ಆನಂದವನ್ನು ಅನುಭವಿಸು. ॥125॥ ಭ್ರಮೆಯು ಇನ್ನೂ ಹೆಚ್ಚು ಭ್ರಮೆಯನ್ನು ಹುಟ್ಟಿಸುತ್ತದೆ. ಈ ರೀತಿ ದೇಹಾಭಿಮಾನವು ಸಂಭ್ರಮಗೊಳ್ಳುತ್ತದೆ. 'ನಾನು', 'ನನ್ನದು' ಎಂಬುದನ್ನು ಅರಿಯಲೆತ್ನಿಸುವುದು ಮರೀಚಿಕೆಯೇ ಸರಿ. ಆದ್ದರಿಂದ ಮಮಕಾರವನ್ನು ದೂರಮಾಡಬಾರದೇಕೆ? ॥126॥ ಓಹ್, ನೀನು ಚೆನ್ನಾಗಿ ಯೋಚಿಸು. ನೀನು ಪ್ರಪಂಚದ 'ನಾನು' ಮತ್ತು 'ನನ್ನದು' ಎಂಬ ಬಂಧನದಲ್ಲಿ ಸಿಲುಕಲು ಇಚ್ಛಿಸುವೆಯೋ? ಓಹ್, ಗಿಣಿಯೇ! ಅಡ್ಡಕಡ್ಡಿಯನ್ನು ಬಿಟ್ಟು ಬಿಡು. ಆಕಾಶದಲ್ಲಿ ಅತಿ ಎತ್ತರಕ್ಕೆ ಹಾರಾಡು. ॥127॥ ಸ್ವಾತಂತ್ರವಿದ್ದಲ್ಲಿ ಬಂಧನವೂ ಇದೆ. ಬಂಧನವು ಸ್ವಾತಂತ್ರದ ಜೊತೆಯಲ್ಲೇ ಇದೆ. ಈ ಎರಡೂ ಸ್ಥಿತಿಗಳನ್ನು ದೂರಮಾಡಿ ನಿನ್ನಲ್ಲಿರುವ ಪರಿಶುದ್ಧ ಆತ್ಮನಲ್ಲಿ ಜೀವಿಸಬೇಕು. ॥128ಇದು ವೈಯಕ್ತಿಕ ಜ್ಞಾನ. ಸುಖ ಮತ್ತು ದುಃಖ ಒಟ್ಟಿಗೆ ಸೇರಿದರೆ ಮಾಯೆ. ಆದ್ದರಿಂದ ಆ ಅಜ್ಞಾನವನ್ನು ತ್ಯಜಿಸು ಮತ್ತು ನಿನ್ನ ಸತ್ಯಸ್ವರೂಪದ ಜ್ಞಾನವನ್ನು ಪಡೆ. ಅದೇ ಬ್ರಹ್ಮಜ್ಞಾನ ಮತ್ತು ಅದು ನಿನ್ನಲ್ಲಿಯೇ ಇದೆ. ॥129॥ 'ನೀನು ಮತ್ತು ನಾನು' ಎಂಬುದರ ಮಧ್ಯೆ ಭೇದಭಾವ ಇರುವವರೆಗೆ ಆತ್ಮಹಿತವನ್ನು ಸಾಧಿಸಲು ಸಾಧ್ಯವಿಲ್ಲ. ಅದನ್ನು ಬಿಟ್ಟುಬಿಡು. ಸ್ವಾರ್ಥವನ್ನು ಬಿಸಾಡಿ ನಿನ್ನ ಕಡೆಯೇ ನೀನು ದೃಷ್ಟಿಹರಿಸು. ॥130॥ ಒಬ್ಬ ವ್ಯಕ್ತಿಯು 'ಕುಬೇರ'ನಷ್ಟೇ ಶ್ರೀಮಂತನಾಗಿದ್ದು ಬಾಹ್ಯದಲ್ಲಿ ಭಿಕ್ಷುಕನ ಜೀವನ ನಡೆಸುತ್ತಿದ್ದಲ್ಲಿ ಅವನ ಮಾರ್ಗ ಸರಿಯಲ್ಲ, ಅದೊಂದು ಕಪಟವೇಷಧಾರಿಯ ವರ್ತನೆ. ಅದು ವಿಪರೀತವಾದ ಅಜ್ಞಾನದಿಂದ ಉಂಟಾಗಿದೆ. ॥131॥ ಪ್ರತಿನಿತ್ಯವೂ ಸತ್‌ಶಾಸ್ತ್ರಗಳನ್ನು ಆಲಿಸಿರಿ. ಗುರುವಿನ ಬೋಧನೆಯನ್ನು ಶ್ರದ್ಧೆಯಿಂದ ಅನುಕರಿಸಿರಿ, ಸದಾ ಎಚ್ಚರದಿಂದ ಇರಿ ಮತ್ತು ಕ್ರಮಬದ್ಧ ಸಮಾಧಾನ ಜೀವನ ನಡೆಸಿರಿ. ॥132॥ ಈ ಆಚಾರ ಪದ್ಧತಿಯನ್ನು ಅನುಸರಿಸುವವರು, ತಮ್ಮ ಉದ್ಧಾರವನ್ನು ಪಡೆಯುವ ಮಾರ್ಗವನ್ನು ಯಾಂತ್ರಿಕವಾಗಿಯೇ ಅನುಸರಿಸುತ್ತಾರೆ. ಅಸಂಖ್ಯಾತ ಜೀವಿಗಳು ತೀರ ಸಹಜವಾಗಿ ಈ ರೀತಿ ಉದ್ಧಾರವಾಗುತ್ತಾರೆ. ॥133॥ 'ಎಂದಿಗೆ ಈ ಭವಪಾಶದ ಬಂಧನದಿಂದ ಬಿಡುಗಡೆಯಾಗುವುದು?" ಎಂದು ಯಾರು ಸದಾಕಾಲ ಹಗಲು–ರಾತ್ರಿಚಿಂತನ ನಡೆಸುವರೋ ಅವರು ಮಾತ್ರ ಈ ಬಂಧನದಿಂದ ಬಿಡುಗಡೆಹೊಂದಲು ಸಾಧ್ಯ. ॥134॥ ಸಾಧ್ಯವಾದಷ್ಟು ಮಟ್ಟಿಗೆ ಏಕಾಂತವನ್ನು ಸಾಧಿಸಿ, ಈ ಸಂಸಾರವು

ನಿಸ್ಸಾರವಾದ ಬಂಧನವೆಂದು ಮನಸ್ಸಿನಲ್ಲಿ ಸದಾ ದೃಢಪಡಿಸಿ, ಆತ್ಮದ ಅಧ್ಯಯನದಲ್ಲಿ ಮತ್ತು ಆತ್ಮಚಿಂತನದಲ್ಲಿರಂತರ ನಿಶ್ಚಯ ಮಾಡಿಕೊಳ್ಳಬೇಕು. ॥135॥ ಭಕ್ತಿ ಮತ್ತು ಶ್ರದ್ಧೆಗಳಿಂದ ತುಂಬಿರುವ ಮನಸ್ಸಿನಿಂದ ಶಿಷ್ಯನು ಸಂಪೂರ್ಣವಾಗಿ ವಿನೀತನಾಗಿ ಶರಣಾಗತನಾಗಬೇಕು. ಆ ಸಮಯದವರೆಗೆ ಗುರುವು ಜ್ಞಾನ ಧನವನ್ನು ನೀಡುವುದಿಲ್ಲ. ॥136॥ ಸರ್ವಸ್ವವನ್ನೂ ಗುರು ಶುಶ್ರೂಷೆಯಲ್ಲಿ ಸಮರ್ಪಿಸಿ, ಬಂಧನ ಮತ್ತು ಮುಕ್ತಿಯ ಬಗ್ಗೆ ಚಿಂತಿಸಿರಿ. ವಿದ್ಯೆ ಮತ್ತು ಅವಿದ್ಯೆಯ ಪ್ರಶ್ನೆಗಳ ಬಗ್ಗೆ ಚಿಂತನ ನಡೆಸಿ, ಫಲವನ್ನು ಕೇವಲ ಗುರುವಿಗೆ ಸಮರ್ಪಿಸಿರಿ. ॥137॥ ಗುರುವಲ್ಲದೆ 'ಆತ್ಮ ಯಾರು; ಪರಮಾತ್ಮ ಯಾರು' ಎಂಬುದನ್ನು ಬೋಧಿಸಲು ಬೇರೆ ಯಾರಿಂದಲೂ ಸಾಧ್ಯವಿಲ್ಲ. ಗುರುವೂ ಸಹ ಸಂಪೂರ್ಣವಾಗಿ ಶರಣಾಗದೇ ಇದ್ದಲ್ಲಿ ಆತ್ಮಜ್ಞಾನದ ಕಣವನ್ನೂ ಕೊಡುವುದಿಲ್ಲ. ॥138॥ ಗುರುವಲ್ಲದೆ ಬೇರೆ ಯಾರಾದರೂ ಜ್ಞಾನವನ್ನು ನೀಡಿದಲ್ಲಿ ಅದುಸಂಸಾರದಿಂದ ಮುಕ್ತನಾಗಿಸಲು ಸಾಧ್ಯವಿಲ್ಲ. ಅವು ಮೋಕ್ಷಪ್ರಾಪ್ತಿಯ ಮಾರ್ಗವನ್ನೂ ತೋರಿಸುವುದಿಲ್ಲ. ಮತ್ತು ನಿಮ್ಮ ಮನಸ್ಸಿನ ಮೇಲೂ ಲವಲೇಶವಾದ ಪ್ರಭಾವವನ್ನೂ ಬೀರುವುದಿಲ್ಲ. ॥139॥ ಆದ್ದರಿಂದ ಗುರುವಿನಿಂದಲ್ಲದೆ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಎಲ್ಲಾ ಪಂಡಿತರಿಗೂ ಇದರ ಅರಿವಿದೆ. ಗುರುವಿನ ಸಮರ್ಥ ಚರಣಗಳು ಮಾತ್ರ ಬ್ರಹ್ಮನ ಮತ್ತು ಆತ್ಮನ ರಹಸ್ಯವನ್ನು ಭೇದಿಸಬಲ್ಲವು. ॥140॥ ಯಾವುದೇ ಅನುಮಾನವಿಲ್ಲದೆ ನಿಮ್ಮ ಅಹಂಭಾವ ಮತ್ತು ಗರ್ವವನ್ನು ಬಿಡಿ. ಗುರುವಿನ ಚರಣಗಳಲ್ಲಿ ನಿಮ್ಮ ತಲೆಯನ್ನು ಬಾಗಿಸಿ ಉದ್ದಂಡ ಸಾಷ್ಟಾಂಗ ನಮಸ್ಕಾರ ಮಾಡಿ. ॥141॥ "ನಾನು ನಿನ್ನ ದಾಸಾನುದಾಸ. ನಾನು ಸದಾ ನಿನ್ನ ಚರಣಗಳನ್ನೇ ಏಕ ಮಾತ್ರ ಭರವಸೆಯೆಂದು ಪರಿಗಣಿಸಿದ್ದೇನೆ." ಈ ವಚನವನ್ನು ನುಡಿಯಿರಿ. ಧೈರ್ಯತುಂಬಿಕೊಳ್ಳಿ ಮತ್ತು ಅವನಲ್ಲಿ ಶ್ರದ್ಧೆಯಿಡಿ. ॥142॥ ಅನಂತರ ಅವನ ಪವಾಡವನ್ನು ನೀವು ನೋಡುವಿರಿ. ಆ ದಯಾಸಾಗರನು ಗುರುವಿನ ರೂಪದಲ್ಲಿ ಕರಗಿ ಹೋಗುತ್ತಾನೆ. ಮತ್ತು ನಿನ್ನನ್ನು ಕರುಣೆಯ ಅಲೆಗಳ ಮೇಲೆ ಹಗುರವಾಗಿ ತೇಲಿಸುತ್ತ ಮೇಲೆತ್ತಿ ಉದ್ಧರಿಸುತ್ತಾನೆ. ॥143॥ ಅವನು ತನ್ನ ಅಭಯ ಹಸ್ತವನ್ನು ನಿಮ್ಮ ತಲೆಯಮೇಲಿಟ್ಟು ಎಲ್ಲ ಕೆಟ್ಟ ಶಕುನಗಳನ್ನೂ ದೂರಮಾಡುತ್ತಾನೆ. ಪಾಪರಾಶಿಗಳನ್ನೆಲ್ಲ ಸುಟ್ಟು ಹಾಕುತ್ತಾನೆ. ಮತ್ತು ಅವನು ಹಣೆಯಲ್ಲಿ ಉದಿಯನ್ನು ಲೇಪಿಸುತ್ತಾನೆ. ॥144॥ ಬ್ರಹ್ಮನ ಅರ್ಥದ ಬಗೆಗಿನ ಈ ನಿರೂಪಣೆಯು ಬ್ರಹ್ಮನನ್ನು ಅರಿಯಲು ಇಚ್ಛಿಸುವವನಿಗೆ ಕೇವಲ ನಿಮಿತ್ತ ಮಾತ್ರ, ಅವನು ಜೀವ ಮತ್ತು ಶಿವ್‌ ಇವುಗಳ ಐಕ್ಯತೆಯ ಜ್ಞಾನದ ಸಂಪೂರ್ಣ ಸಾರವನ್ನು ತನ್ನ ಎಲ್ಲಾ ಭಕ್ತರಿಗೂ ದಯಪಾಲಿಸುವನು. ॥145॥ ಮಹಾರಾಜ್‌ರಿಗೆ ಮತ್ತೇನು ಅವಶ್ಯಕತೆ ಇತ್ತು? ಅತುಲವಾದ ಪ್ರಜ್ಞೆ ಮತ್ತು ಗಾಢವಾದ ವಿದ್ಯೆಗಳುಳ್ಳ ಸಾಯಿಯು ವಿನೋದ ಮತ್ತು ಹಾಸ್ಯ ಚಟಾಕಿ ಹಾರಿಸುವ ಅವಶ್ಯಕತೆ ಏನಿತ್ತು? ॥146॥ ಅಂತಹ ಸಂದೇಹ ಸಹಜವಾಗಿ ಮನಸ್ಸಿನಲ್ಲಿ ಏಳಬಹುದು. ಆದರೆ ಎಚ್ಚರಿಕೆಯಿಂದ ವಿಚಾರಿಸಿದಾಗ, ಅದಕ್ಕೆ ಕೇವಲ ಒಂದೇ ಒಂದು ತೃಪ್ತಿಕರವಾದ ವಿವರಣೆ ಸಿಗುತ್ತದೆ. ಅದನ್ನು ಗಮನವಿಟ್ಟು ಕೇಳಿರಿ. ॥147॥ ನೀವು ಚಿಕ್ಕ ಮಕ್ಕಳ ಮಧ್ಯೆ ಇದ್ದಾಗ

ಅವುಗಳ ಜೊತೆ ಮಾತನಾಡುವುದು, ಅವರ ತೊದಲು ನುಡಿಗಳನ್ನು ಕೇಳಿ ಸಂತಸಪಡುತ್ತೀರಿ. ಪ್ರೌಢವಾದ ಮಾತುಕತೆಯೇನಾದರೂ ಎಂದಿಗಾದರೂ ನಡೆಯುತ್ತದೆಯೇ? ॥148॥ ಅವರಿಗೆ ಪ್ರೀತಿ ಇಲ್ಲವೇ? ಅದಕ್ಕೆ ಬದಲಾಗಿ ಸಾಮಾನ್ಯ ಪದಗಳಿಂದ ಪ್ರೀತಿಯನ್ನು ವಿವರಿಸಲು ಸಾಧ್ಯವಿಲ್ಲ. ಆದರೆ ಲಘುವಾದ ಮಾತು ಮತ್ತು ಹಾಸ್ಯ ಇವುಗಳು ತೀಕ್ಷ್ಣವಾದ ಬೋಧಪ್ರದ ವಿಧಾನಗಳು. ॥149॥ ಒಂದು ಮಗುವಿಗೆ ರಹಸ್ಯವಾಗಿ ಪೀಡಿಸುತ್ತಿರುವ ರೋಗದ ಬಗ್ಗೆ ತಿಳಿಯುತ್ತದೆಯೇ? ಕೇವಲ ತಾಯಿಯು ಮಾತ್ರ ಬೇಕಾದ ಔಷಧಿಗಳನ್ನು ಒತ್ತಾಯಪೂರ್ವಕವಾಗಿ, ಮಗು ಬೇಡವೆಂದು ಹಠ ಮಾಡಿದರೂ ಕುಡಿಸುತ್ತಾಳೆ. ॥150॥ ಕೆಲವು ಸಲ ಒತ್ತಾಯಿಸುತ್ತಾ, ಕೆಲವೊಮ್ಮೆ ಕಣ್ಣು ಕೆಂಪಾಗಿಸಿ ಗುರುಗುಟ್ಟಿ ನೋಡುವುದರಿಂದ, ಕೆಲವೊಮ್ಮೆ ಹೊಡೆಯುತ್ತ ಮತ್ತು ಕೆಲವೊಮ್ಮೆ ಪ್ರೀತಿಯ ಆಲಿಂಗನದಿಂದ ಕೊಡುತ್ತಾಳೆ. ॥151॥ ಯಾವಾಗ ಮಕ್ಕಳು ಪ್ರೌಢಾವಸ್ಥೆ ತಲುಪುತ್ತಾರೋ ಆಗ ಅವರು ಅದನ್ನು ಪ್ರೀತಿಸಲು ಬಯಸುವರು. ಆದರೆ ಅವರಿಗೆ ನೀಡಿದ ಜ್ಞಾನವನ್ನು ಬುದ್ಧಿಶಕ್ತಿಯ ತೀಕ್ಷ್ಣತೆ ಅಥವಾ ಮಂದಗತಿಗೆ ಅನುಕೂಲವಾಗಿ ಸರಿಪಡಿಸಲಾಗುವುದು. ॥152॥ ತೀವ್ರ ಬುದ್ಧಿಯವನು ಶೀಘ್ರವಾಗಿ ಗ್ರಹಿಸಬಲ್ಲನು. ಕೇವಲ ಒಂದು ಘಳಿಗೆ ಸಹ ಅರ್ಥಮಾಡಿಕೊಂಡು ಸಮೀಕರಣ ಮಾಡಬೇಕಾಗಿಲ್ಲ. ದಡ್ಡರಿಗೆ ಬೇರೆಯೇ ತರಹ ಅದನ್ನು ಅರ್ಥಮಾಡಿಸಿ ರಕ್ಷಿಸಲು ಬಹಳ ಪ್ರಯತ್ನ ಪಡಬೇಕಾಗುತ್ತದೆ. ॥153॥ ಸಾಯಿ ಸಮರ್ಥರು ಜ್ಞಾನದ ನಿಧಿಯಾಗಿದ್ದರು. ಅವರು ತಮ್ಮಲ್ಲಿರುವ ಜ್ಞಾನ ಸಂಪತ್ತನ್ನು, ತಮ್ಮ ಭಕ್ತರ ಬುದ್ಧಿ ಶಕ್ತಿಗೆ ಅನುಗುಣವಾಗಿ ನೀಡುತ್ತಾರೆ ಮತ್ತು ಮೊದಲು ಅವನ ನಿರ್ಧಾರ ಪ್ರವೃತ್ತಿ ಹಾಗೂ ಪಾತ್ರ ಶುದ್ಧಿಯನ್ನು ಪರಿಗಣಿಸುತ್ತಾರೆ. ॥154॥ ಅವರು ಪೂರ್ಣ ಅಂತರ್ಜ್ಞಾನಿಗಳು, ಅದಕ್ಕಿಂತ ಹೆಚ್ಚಾಗಿ ಅವರು ಎಲ್ಲರನ್ನೂ ಸಂಪೂರ್ಣವಾಗಿ ಅರಿತಿದ್ದರು. ಅವರು ಬೋಧನೆಯ ಯೋಗ್ಯ ಮಾರ್ಗವನ್ನು ಮತ್ತು ಸರಿಯಾದ ಶಿಸ್ತಿನ ಕ್ರಮವನ್ನು ಅವರವರ ಯೋಗ್ಯತಾನುಸಾರವಾಗಿ ನಿಶ್ಚಯಿಸಿ ಮಾರ್ಗವನ್ನು  ನಿರ್ಧರಿಸುತ್ತಿದ್ದರು. ॥155॥ ಒಬ್ಬ ಭಕ್ತ ಯಾವುದಕ್ಕೆ ಅರ್ಹ ಎಂಬುದನ್ನು ಈ ಮೊದಲೇ ನಿರ್ಧರಿಸಿ ಅವನ ಅರ್ಹತಾನುಸಾರ ಕೆಲಸ ಮಾಡುತ್ತಿದ್ದರು. ಬಾಬಾರವರು ಅಂತಹ ಭಕ್ತರ ಜವಾಬ್ದಾರಿಯನ್ನು ತಾವೇ ಹೊರುತ್ತಿದ್ದರು. ॥156॥ ಅದೇ ರೀತಿಯಲ್ಲಿ ನಾವು ವೃದ್ಧರೆಂದೂ ಗೌರವಾನ್ವಿತರೆಂದೂ ಕಂಡು ಬಂದರೂ, ಆ ಸಿದ್ಧಪುರುಷ ಸಾಯಿಯ ಮುಂದೆ ನಾವು ಮಕ್ಕಳಂತೆ ವರ್ತಿಸುವ ಮಕ್ಕಳಂತೆಯೇ ಆಗುತ್ತೇವೆ. ಮತ್ತು ಸದಾ ಹಾಸ್ಯವನ್ನು ಆನಂದಿಸುತ್ತೇವೆ. ॥157॥ ಬಾಬಾರವರು ವಿನೋದಗಳ ಸಾಗರವೇ ಆಗಿದ್ದರು. ಅವರು ಭಕ್ತರನ್ನು ಚಿಂತಾವಿಮುಕ್ತರನ್ನಾಗಿ ಮಾಡಿ; ಭಕ್ತನು ಚಿಂತಿಸುತ್ತಿದ್ದ ವಿಷಯವನ್ನು ಪೂರೈಸುತ್ತಿದ್ದರು॥158॥ ಒಬ್ಬ ವ್ಯಕ್ತಿಯು ಬುದ್ಧಿವಂತನೋ, ಮಂದಬುದ್ಧಿಯವನೋ ಆಗಿರಬಹುದು. ಅವನು ಇದನ್ನು ಓದಿದ್ದೇ ಆದರೆ ಇದು ಅವನಿಗೆ ಮತ್ತೆ ಮತ್ತೆ ಹೆಚ್ಚಾಗಿ ಕೇಳಬೇಕೆನಿಸುವುದು. ಇದರ ಮೇಲೆ ಧ್ಯಾನ ಮಾಡಿದಲ್ಲಿ ಇದು ಮನದಲ್ಲಿ ಸ್ವಾನಂದ ಮತ್ತು ಸಂತುಷ್ಟಿಗಳನ್ನು ನೀಡುತ್ತವೆ. ॥159॥ ಮತ್ತೆಮತ್ತೆ ಸ್ಮರಣೆಮಾಡಿದಲ್ಲಿ, ದಿವ್ಯ ಅನುಭವ

ರೂಪುಗೊಳ್ಳುತ್ತದೆ. ಅವನು ಅದರ ಮೇಲೆ ಧ್ಯಾನಿಸಿದಲ್ಲಿ ನಿತ್ಯವೂ ಅವನು ಮಹದಾಹ್ಲಾದವನ್ನು ಅನುಭವಿಸುತ್ತಾನೆ. ಯಾವುದೇ ಅಡೆತಡೆ ಇರುವುದಿಲ್ಲ. ಅವನ ಲೀಲೆಯು ಅಂತಹ ಅಗಾಧವಾದುದು. ॥160॥ ಭಾಗ್ಯವಶದಿಂದ ಯಾರಿಗಾದರೂ ಇದರ ಕಿಂಚಿತ್ ಅನುಭವವಾಗಿದ್ದರೂ ಅವರು ಕಾಯಾ, ವಾಚಾ, ಮನಸಾ ಬಾಬಾರವರಿಂದ ಪ್ರತ್ಯೇಕವಾಗಿರಲು ಸಾಧ್ಯವಿಲ್ಲ. ಸಾಯಿಯ ಲೀಲೆ ಬುದ್ಧಿಗೆ ಅತೀತವಾದುದು. ॥161॥ ಹೇಮಾಡ ಪಂತನು ಸಾಯಿಚರಣಗಳಲ್ಲಿ ಶರಣಾಗಿರುತ್ತಾನೆ. ವಿನೋದ ಮಾರ್ಗದಿಂದ ಜ್ಞಾನ ಪ್ರದಾನ ಮಾಡುವುದು. ಭಕ್ತರಿಗೆ ಬೋಧಿಸುವ ವಿಧಾನಗಳಲ್ಲಿ ಒಂದು. ಬ್ರಹ್ಮಾರ್ಥಿಯು ಕೇವಲ ಒಂದು ನಿಮಿತ್ತ ಮಾತ್ರ, ॥162॥ ಮುಂದಿನ ಅಧ್ಯಾಯವು ಇದಕ್ಕಿಂತಲೂ ಹೆಚ್ಚು ತನ್ಮಯರನ್ನಾಗಿ ಮಾಡುತ್ತದೆ. ಅದು ಶ್ರೋತೃಗಳ ಇಚ್ಛೆಗಳನ್ನು ಪೂರೈಸುತ್ತದೆ. ನನ್ನ ಮನಸ್ಸಿನಲ್ಲಿದ್ದ ಗುಪ್ತವಾದ ಅಸೊಷ್ಪಷ್ಟವಾದ ವಿವರಣೆಯೊಂದಿಗೆ ಪೂರೈಸಲ್ಪಟ್ಟಿತು. ॥163॥ ನಾನು ಮಾಧವನನ್ನು ಹೇಗೆ ಭೇಟಿ ಮಾಡಿದೆ? ಅವನಿಗೆ ಬಾಬಾರವರ ಸಂದೇಶವನ್ನು ಹೇಗೆ ಮುಟ್ಟಿಸಿದೆ? ಮತ್ತು ನನಗೆ ಹೇಗೆ ಅವರ ಆಶೀರ್ವಾದ ದೊರಕಿತು? ಇವುಗಳನ್ನೆಲ್ಲ ಮೊದಲಿನಿಂದ ಕೊನೆಯವರೆಗೆ ಕೇಳಿರಿ. ॥164॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಬ್ರಹ್ಮಜ್ಞಾನದ ನಿರೂಪಣೆ" ಎಂಬ ಹದಿನೇಳನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.


ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಧರ್ಮ, ಅರ್ಥ, ಕಾಮ, ಮೋಕ್ಷ
2. ಕಾಯಾ, ವಾಚಾ, ಮನಸಾ
3. ಹೆಗ್ಗಳಿಕೆ, ಸಂಪತ್ತು, ಕರುಣೆ, ಕೀರ್ತಿ, ಜ್ಞಾನ ಮತ್ತು ವೈರಾಗ್ಯ
4. ಶಮ, ದಮ, ತಪ, ತಿತೀಕ್ಷೆ, ಶ್ರದ್ಧೆ ಮತ್ತು ಸಮಾಧಾನ
5. ಸ್ವರ್ಗೀಯ ಸಾರಥಿ

6. 'ಬ್ರಹ್ಮ' ಎನ್ನುವ ಪದದ ಮೇಲಿನ ಅಪಭ್ರಂಶ ಮರಾಠಿಯಲ್ಲಿ
7. ಕಬ್ಬಿಣವನ್ನು ಚಿನ್ನವನ್ನಾಗಿ ಮಾಡುವ ಕಲ್ಲು
8. ಸಂಪತ್ತು, ಸಂತಾನ ಮತ್ತು ಕೀರ್ತಿ ಇವುಗಳಲ್ಲಿ ವಿರಕ್ತಿ
9. ಯೋಗ ಸಮಾಧಿಯಲ್ಲಿನ ಕೊನೆಯ ಹಂತ
10. ವಿಧಿವಿಧಾನಗಳಿಂದ ತಲಪುವ ಬ್ರಹ್ಮ ಸ್ಥಿತಿ.
11. ಸಾಗರದಡಿಯಲ್ಲಿರುವ ಚಿಂಕಿ
12. ಆದಿ ದೈವಿಕ, ಆಧ್ಯಾತ್ಮಿಕ ಮತ್ತು ಆದಿಭೌತಿಕ
13. ನಿಜವಾಗಿಯೂ ಒಂದು ದೊಡ್ಡ ಮೀನು – ತಿಮಿಂಗಿಲ
14. ಹಕ್ಕಿ ಹಿಡಿಯುವವರು ಗಿಣಿಗಳನ್ನು ಹಿಡಿಯಲು ಉಪಯೋಗಿಸುವ ಒಂದು ಸಾಧನ. ಗಿಣಿಯು ಅಡ್ಡ ಕಡ್ಡಿಯ ಮೇಲೆ ಕುಳಿತೊಡನೆ ತಿರುಗಲು ಪ್ರಾರಂಭಿಸುತ್ತದೆ. ಗಿಣಿಯು ಅದನ್ನು ಸುಳ್ಳು ರಕ್ಷಕ ಎಂದು ಭಾವಿಸಿ ಅದನ್ನು ಹಿಡಿದುಕೊಂಡು ಜೋತಾಡುತ್ತದೆ. ಹಾರಲು ಬಿಟ್ಟರೆ ಹೊರಗೆ ಹಾರಿ ಹೋಗಬಹುದು. ಆದರೆ ಅದು ಅದನ್ನು ಹಿಡಿದು ನೇತಾಡಿ ಸಿಕ್ಕಿಬೀಳುತ್ತದೆ.
15. ಸ್ವರ್ಗದ ಖಜಾನೆ
16. ಆತ್ಮ ಮತ್ತು ಪರಮಾತ್ಮ



# ಅಧ್ಯಾಯ - 18

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ನನ್ನ ಮೇಲೆ ದಯಪಾಲಿಸಿದ ಕರುಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಪರಮ ನಿತ್ಯ ಸದ್ಗುರುವಿಗೆ ಜಯವಾಗಲಿ. ಬ್ರಹ್ಮನ ಸತ್ಯಸ್ವರೂಪನಾದ ಸದ್ಗುರುವಿಗೆ ಜಯವಾಗಲಿ. ಈ ಜಗತ್ತುಸ್ವಪ್ನವೆಂಬ ಅನುಭವ ನೀಡುವವನಿಗೆ ಜಯವಾಗಲಿ. ಮಾಯೆಯನ್ನು ನಿಯಂತ್ರಿಸುವವನಿಗೆ ಜಯವಾಗಲಿ. ॥1॥ ಅನಾದಿ, ಅನಂತನಾದ ನಿನಗೆ ಜಯವಾಗಲಿ!ದ್ವಂದ್ವಾತೀತನಿಗೆ ಜಯವಾಗಲಿ! ವಿಕಾರರಹಿತನಿಗೆ ಜಯವಾಗಲಿ! ಓಹ್ ತನ್ನ ನಿಜ ಸ್ವರೂಪವನ್ನು ಬೋಧಿಸುವವನು ಕೇವಲ ನೀನೊಬ್ಬನು ಮಾತ್ರ! ॥2॥ ಒಂದು ಉಪ್ಪಿನಗೊಂಬೆ ಸಾಗರದಲ್ಲಿ ಸ್ನಾನಮಾಡಿ ಹಿಂದೆ ಬರಲು ಸಾಧ್ಯವೇ? ಇದು ಎಂದಿಗೂ ಸಾಧ್ಯವಿಲ್ಲ. ನಿನ್ನ ಬಗೆಯೂ ಅದೇ ರೀತಿ ಇದೆ! ॥3॥ವೇದ ಮತ್ತು ಶೃತಿಗಳು, ಹಗಲು-ರಾತ್ರಿಗಳು ಯಾವುದನ್ನು ನಿಖರವಾಗಿ ತೋರಿಸಲಾಗುವುದಿಲ್ಲವೋ ಅದರ ಬಗ್ಗೆ ವಾದವಿವಾದ ನಡೆಯುತ್ತಿವೆ. ಆದರೆ ನೀನು ನಿನ್ನ ಭಕ್ತರಿಗೆ ಅದನ್ನು ಸುಲಭವಾಗಿ ತೋರಿಸಬಲ್ಲೆ. ॥4॥ ಒಂದು ವೇಳೆ ಅದೃಷ್ಟವಶಾತ್ ಯಾರ ಮೇಲಾದರೂ ನಿನ್ನ ಕೃಪೆಯುಂಟಾದರೆ ಅವನು ಎಂದಿಗೂ ನನ್ನ ಮತ್ತು ನಿನ್ನ ಮಧ್ಯೆ ಅಂತರವಿದೆ ಎಂಬ ಸ್ವಾರ್ಥಪರ ಯೋಚನೆಗಳನ್ನು ಒಪ್ಪುವುದಿಲ್ಲ. ॥5॥ ಹಿಂದಿನ ಅಧ್ಯಾಯದಲ್ಲಿ ಬ್ರಹ್ಮನ ಅರ್ಥವನ್ನು ಆವಿಷ್ಕರಿಸುವ ಪಾವನ ಕಥೆಯನ್ನು ಮತ್ತು ಯಾವ ರೀತಿ ಬ್ರಹ್ಮಾರ್ಥಿಗೆ ಲೋಭವು ಆವರಣವಾಗಿ ಪ್ರತಿಬಂಧವಾಗುತ್ತದೆಂಬುದನ್ನು ವಿವರಿಸಲಾಯಿತು.

॥6॥ ಈಗ ನಾನು ಹೇಗೆ ಬಾಬಾರವರ ಅನುಗ್ರಹ ಪಡೆದೆ ಎಂಬ ಕಥೆ. ಓ ಶ್ರೋತೃಗಳೇ, ಆದರ ಪೂರ್ವಕವಾಗಿ ಕೇಳಿರಿ. ಏಕೆಂದರೆ ಅದು ಬಾಬಾರವರು ಮಾರ್ಗದರ್ಶನಮಾಡುವ ರೀತಿಯನ್ನು ನಿಮಗೆ ತೋರಿಸುತ್ತದೆ. ॥7॥ ಈ ಕತೆಯೂ ಬಹಳ ಕೌತುಕಪೂರ್ವವಾಗಿದೆ. ಅದನ್ನು ನಾನು ಯಾವ ರೀತಿ ನಡೆಯಿತೋ ಅದೇ ರೀತಿ ತಿಳಿಸುತ್ತೇನೆ. ಶ್ರೋತೃಗಳು ಅದನ್ನು ಸಮಾಧಾನಚಿತ್ತರಾಗಿ ಸ್ವಹಿತಕ್ಕಾ ಆಲಿಸಿರಿ. ॥8॥ ಒಂದು ವೇಳೆ ಶ್ರೋತೃವು ತೀವ್ರ ಇಚ್ಛಾಭರಿತನಾಗಿ ಆದರಪೂರ್ವಕವಾಗಿ ವಕ್ತಾರನೂ ಉಲ್ಲಾಸ ಉತ್ಸಾಹ ಭರಿತನಾಗಿ ಪ್ರೇಮವು ತುಂಬಿ ಉಕ್ಕುವ ಹೃದಯದಿಂದ ಹೇಳುವನು. ಇದು ಇಬ್ಬರೂ ಆನಂದಪಡುವಂತಹದು. ॥9॥ ಮನಸ್ಸು ಅಥವಾ ಭಾವದಲ್ಲಿ ಸ್ವಲ್ಪವೂ ಭೇದವಿಲ್ಲದೆ ಬಾಬಾರವರು ತಮ್ಮ ಭಕ್ತರಿಗೆ ಅವರವರ ಶಕ್ತ್ಯಾನುಸಾರ ನಿಜಪಥ ತೋರಿಸಿ ಅದರ ಪ್ರಕಾರ ಬೋಧಿಸುತ್ತಿದ್ದರು. ॥10॥ ಅನೇಕ ಜನರು ಈ ರೀತಿ ಅಭಿಪ್ರಾಯ ಪಡುತ್ತಾರೆ – "ಗುರುವು ಏನನ್ನು ಹೇಳಿರುವನೋ ಅದನ್ನು ಯಾರ ಹತ್ತಿರವೂ ಹೇಳಬಾರದು. ಹೇಳಿದರೆ ಗುರುವಿನ ಮಾತುಗಳು ವಿಫಲವಾಗುತ್ತವೆ." ॥11॥ ಆದರೆ ಇದು ಪೂರ್ಣವಾಗಿ ಊಹೆಯಷ್ಟೆ, ಅನವಶ್ಯಕವಾಗಿ ಮಾಡಿರುವ ಒಂದು ಗೊಂದಲವಷ್ಟೆ. ಕೇವಲ ವೈಯಕ್ತಿಕವಾಗಿ ಹೇಳಿರುವುದಷ್ಟೇ ಅಲ್ಲ, ಕನಸಿನ ಸದ್ಬೋಧಗಳನ್ನು ಸಹ ಅಕ್ಷರಶಃ ಎಲ್ಲರಿಗೂ ತಿಳಿಸಿರುವೆ. ॥12॥ ಇದನ್ನು ಅಸತ್ಯವೆಂದು ಭಾವಿಸಿದರೆ, ನಾನು ಅದನ್ನು ಬುಧಕೌಶಿಕ ಋಷಿಯ ಉದಾಹರಣೆಯಿಂದ ಪ್ರಮಾಣೀಕರಿಸುತ್ತೇನೆ. ಅವನಿಗೆ ಕನಸಿನಲ್ಲಿ ಆದ ರಾಮರಕ್ಷಾ ಸ್ತೋತ್ರದುಪದೇಶವನ್ನು ಎಲ್ಲರಿಗೂ ಹೇಳಿರುವನು. ॥13॥ ಗುರುವು ಮಳೆಗಾಲದ ತೇವ ತುಂಬಿದ ಘನ ಮೋಡದ ತರಹ, ಪ್ರೀತಿಯಿಂದ ಸಂತೃಪ್ತಿಯೆಂಬ ನೀರಿನ ಮಳೆ ಸುರಿಸುತ್ತಾನೆ. ಅದನ್ನು ಏಕೆ ಸಂಗ್ರಹಿಸಬೇಕು? ಅದಕ್ಕೆ ಬದಲಾಗಿ ಅದನ್ನು ತಮ್ಮ ಮನಃಪೂರ್ತಿಯಾಗಿ ಕುಡಿದು ಇತರರಿಗೂ ಹಂಚಬೇಕು. ॥14॥ ತಾಯಿಯು ತನ್ನ ಮಗುವಿನ ಗಲ್ಲವನ್ನು ಹಿಡಿದು ಪ್ರೀತಿಯಿಂದ ಔಷಧಿಯನ್ನು ಅದರ ಆರೋಗ್ಯಕ್ಕಾಗಿ ಕುಡಿಸುತ್ತಾಳೆ. ಬಾಬಾರವರ ಚಾತುರ್ಯವೂ ಇದೇ ರೀತಿಯದು. ॥15॥ ಅವರ ಮಾರ್ಗಗಳು ಯಾವುದೂ ಗುಪ್ತವಲ್ಲ. ಎಚ್ಚರಿಕೆಯಿಂದ ಕೇಳಿರಿ. ಅವರು ಅನಿರೀಕ್ಷಿತವಾಗಿ ತಮ್ಮ ಭಕ್ತರ ಇಚ್ಛೆಗಳನ್ನು ಪೂರೈಸುತ್ತಿದ್ದರು. ॥16॥ ಧನ್ಯ! ಸದ್ಗುರುವಿನ ಸಂಗವು ಎಷ್ಟು ಧನ್ಯ! ಅವನ ಮಹತ್ತನ್ನು ಯಾರು ವಿವರಿಸಲು ಸಾಧ್ಯ? ಅವರ ವಚನಗಳನ್ನು ಒಂದೊಂದಾಗಿ ನೆನಪಿಸಿಕೊಂಡರೆ ನನಗೆ ಬಹಳ ಸ್ಫೂರ್ತಿ ಉಕ್ಕಿಬರುತ್ತದೆ. ॥17॥ ಪ್ರೀತಿಯಿಂದ ಭಗವಂತನ ಅರ್ಚನೆಮಾಡಿದಾಗ ಗುರುಸೇವೆ, ಗುರುಪೂಜೆ ಮಾಡಿದಾಗ ಮಾತ್ರವೇ ಗುರುವಿನಲ್ಲಿರುವ ಜ್ಞಾನವನ್ನು ಸಂಪಾದಿಸಬಹುದು. ಇತರ ಸಾಧನೆಗಳೆಲ್ಲವೂ ನಿರರ್ಥಕ. ॥18॥ ಈ ಸಂಸಾರದ ಮಾರ್ಗಗಳೆಲ್ಲವೂ ಸಂದಿಗ್ಧವು ಮತ್ತು ಆವರಣದಿಂದಾಗಿ ಮಂದ ಬೆಳಕಿನದಾಗಿವೆ. ಗುರುವಾಕ್ಯಗಳು ಜ್ಯೋತಿಯ ಕಿರಣಗಳಂತೆ ನಿರ್ವಿಘ್ನವಾಗಿಸಿ ಮಾರ್ಗದರ್ಶಕವಾಗುತ್ತದೆ. ॥19॥ ಗುರುವು ಪ್ರತ್ಯಕ್ಷ ಈಶ್ವರನೇ. ಅವನೇ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ. ಗುರುವು ವಾಸ್ತವವಾಗಿ ಪರಮೇಶ್ವರನೇ. ಗುರುರಾಯನೇ ಪರಾತ್ಪರ ಬ್ರಹ್ಮ.

॥20॥ ಗುರುವೇ ತಾಯಿ ಮತ್ತು ಗುರುವೇ ತಂದೆ. ಗುರುವೇ ರಕ್ಷಕನು. ಭಗವಂತನ ಕೋಪದಿಂದ ರಕ್ಷಿಸುವವನು. ಆದರೆ ಗುರು ಕೋಪಿಸಿಕೊಂಡರೆ ಯಾರೂ ನಿನ್ನನ್ನು ರಕ್ಷಿಸಲಾರರು. ಇದನ್ನು ನಿರಂತರ ನೆನಪಿನಲ್ಲಿಡಿ. ॥21॥ ಗುರುವು ಪ್ರಾಪಂಚಿಕ ವ್ಯವಹಾರಕ್ಕೆಧಾರ್ಮಿಕ ವಿಧಿ ವಿಧಾನಗಳು ಮತ್ತು ತೀರ್ಥಯಾತ್ರೆಗಳಿಗೆ ಮಾರ್ಗದರ್ಶಕನು. ಧರ್ಮ ಮತ್ತು ಅಧರ್ಮಗಳಿಗೆ ಮತ್ತು ವಿರಕ್ತಿಯ ಆಚರಣೆಗಳಿಗೂ ಮಾರ್ಗದರ್ಶಕನು. ಅವನು ವೇದ ಮತ್ತು ಶೃತಿಗಳ ಪ್ರತಿಪಾದಕನು. ॥22॥ ಸಂತರು ಬುದ್ಧಿವಂತರ ಕಣ್ತೆರೆಯುತ್ತಾರೆ ಮತ್ತು ಅಂತರಾತ್ಮದ ವೈಭವವನ್ನು ನೀಡುತ್ತಾರೆ. ಅವರು ಭಕ್ತರ ಎಲ್ಲಾ ಇಚ್ಛೆಗಳನ್ನೂ ಪೂರೈಸುತ್ತಾರೆ. ಅವರು ಅತಿಕೋಮಲ ಹಾಗೂ ಕಾರುಣ್ಯಮೂರ್ತಿಯು. ॥23॥ ಅವರು ವಿಷಯವಾಸನೆಗಳನ್ನು ನಾಶಮಾಡುತ್ತಾರೆ. ನಿದ್ರೆಯಲ್ಲಿಯೂ ಆತ್ಮಜ್ಞಾನವು ಮಿಡಿಯುತ್ತದೆ. ಅವರ ಕೃಪಾಬಲದಿಂದಲೇ ವಿವೇಕ ಮತ್ತು ವೈರಾಗ್ಯ ಎಂಬ ಎರಡುಫಲಗಳು ದೊರಕುತ್ತವೆ. ॥24॥ ಯಾರಿಗಾದರೂ ಸಂತ ಸಮಾಗಮ ಫಲಿಸಿ, ಸಂತರ ಸೇವೆ, ಸಂತರನ್ನು ಪ್ರೀತಿಸುವ ಅವಕಾಶ ದೊರಕಿದಲ್ಲಿ ಕಲ್ಪತರುವಿನ ರೀತಿಯಲ್ಲಿ ಭಕ್ತರ ಎಲ್ಲ ಕಾಮನೆಗಳನ್ನೂ ಪೂರೈಸುತ್ತಾರೆ ಮತ್ತು ಎಲ್ಲ ಶ್ರಮವನ್ನೂ ನಿವಾರಿಸುತ್ತಾರೆ. ॥25॥ ಯಾವಾಗಲೂ ಸತ್ಪರಾಯಣರಾಗಿ ಸಂತರ ಕಥೆಗಳನ್ನು ಆಲಿಸಿರಿ. ಸಂತರ ಚರಣಗಳಿಗೆ ವಂದಿಸಿರಿ. ಪಾಪಗಳೆಲ್ಲವೂ ತೊಳೆದು ಹೋಗುತ್ತವೆ. ॥26॥ ಲಾರ್ಡ್‌ರೇ ರಾಜ್ಯದ ರಾಜ್ಯಪಾಲನಾಗಿದ್ದ ಅವನು ಕ್ರಾಫರ್ಡ್‌ನ ಆಡಳಿತವನ್ನು ಮೀರಿಸಿದನು. ಆ ಸಮಯದಲ್ಲಿ ಪ್ರಖ್ಯಾತಿ ಹೊಂದಿದ ಮಹಾಶಯನೊಬ್ಬನು ಬಾಬಾರವರ ಭಕ್ತನಾದನು. ॥27॥ ಈ ಜಗತ್ತು ತಾಪತ್ರಯಗಳಿಂದಾಗುವ ದುಃಖಗಳಿಂದ ಕೂಡಿದೆ ಮತ್ತು ಇದು ಸುಳ್ಳು, ಮಿಥ್ಯೆ. ಈ ಮಹಾಶಯನು ವ್ಯಾಪಾರದಲ್ಲಿ ಬಹಳ ನಷ್ಟ ಅನುಭವಿಸಿ ಧೈರ್ಯಗುಂದಿದವನಾಗಿದ್ದನು. ಅವನು ಎಲ್ಲವನ್ನೂ ತ್ಯಜಿಸಿ ಮನೆಬಿಟ್ಟು ಹೊರಟನು. ॥28॥ ಅವನು ಬಹಳ ಧೃತಿಗೆಟ್ಟನು. ಅವನು ದೂರದ ಊರಿಗೆ ಪ್ರಯಾಣ ಕೈಗೊಂಡು ಏಕಾಂತದಲ್ಲಿ ಸಂತೋಷವಾಗಿರಬಹುದೆಂದು ನಿರ್ಧರಿಸಿದನು. ॥29॥ ಒಬ್ಬ ವ್ಯಕ್ತಿಯು ಬಹುಕಷ್ಟದಲ್ಲಿರುವಾಗ, ಭಗವಂತನನ್ನು ಸ್ಮರಿಸಿಕೊಳ್ಳುತ್ತಾನೆ. ಅದೂ ಸಹ ಬಹಳ ಕಷ್ಟದಿಂದ. ಅನಂತರ ಅವನು ಭಗವಂತನ ನಾಮವನ್ನು ನಿರಂತರವಾಗಿ ಶ್ರದ್ಧೆಯಿಂದ ಜಪಿಸುತ್ತ ಭಕ್ತನಾಗುತ್ತಾನೆ. ॥30॥ ಆದರೆ ಪಾಪಗಳು ಕಳೆಯುವವರೆಗೆ, ಕೇವಲ ಭಗವನ್ನಾಮಸ್ಮರಣೆಯಿಂದ ಉಪಯೋಗವಿಲ್ಲ. ಅನಂತರ ಅವನ ಭಕ್ತಿಯನ್ನು ನೋಡಿ ಪ್ರೇಮಪೂರ್ವಕವಾಗಿ ಭಗವಂತನು ಅವನನ್ನು ಸಂತರ ಭೇಟಿ ಮಾಡಿಸುತ್ತಾನೆ. ॥31॥ ಇದೇ ರೀತಿ ಆ ಭಕ್ತನಿಗೂ ಆಯಿತು. ಪ್ರಪಂಚದ ಕಡೆ ತೀವ್ರವಾದ ತಿರಸ್ಕಾರ ಹೊಂದಿರುವುದನ್ನು ನೋಡಿ ಅವನ ಸ್ನೇಹಿತರು ಅವನಿಗೆ ಹಿತವಚನ ನೀಡಿದರು. ಅದನ್ನು ಕೇಳಿರಿ. ॥32॥ "ನೀನು ಶಿರಡಿಗೆ ಸಮರ್ಥ ಸಾಯಿನಾಥರ ದರ್ಶನ ಪಡೆಯಲು, ಅವರಲ್ಲಿ ಪ್ರಾರ್ಥಿಸಲು ಏಕೆ ಹೋಗಬಾರದು? ಆ ಸಂತನು ದಯಾಘನನು. ॥33॥ "ಕ್ಷಣಮಾತ್ರವಾದರೂ ಸಂತರ ಸಹವಾಸ ಲಭಿಸಲು ಸಾಧ್ಯವಾದರೆ ಈ ಚಂಚಲ ಮನಸ್ಸು ದೃಢವಾಗುತ್ತದೆ. ಕೂಡಲೇ

ಭಗವಂತನ ಚರಣಗಳಲ್ಲಿ ನೆಲೆಯಾಗುತ್ತದೆ ಮತ್ತು ಅದರಿಂದ ಹಿಂತಿರುಗಿ ಬರಲು ಬಹಳ ಕಷ್ಟ. ॥34॥ "ಜನರು ದೇಶವಿದೇಶಗಳಿಂದ ಅಲ್ಲಿಗೆ ಹೋಗುತ್ತಾರೆ. ಸಾಯಿಯ ಚರಣಧೂಲಿಯಲ್ಲಿ ಧ್ವಸ್ತರಾಗಿಬಿಡುತ್ತಾರೆ. ಮಹಾರಾಜರ ಆಜ್ಞೆಯ ಪ್ರಕಾರ ನಡೆಯುತ್ತಾರೆ ಮತ್ತು ಅವರನ್ನು ಸೇವಿಸಿ ತಮ್ಮ ಇಚ್ಛೆಗಳನ್ನು ನೆರವೇರಿಸಿಕೊಳ್ಳುತ್ತಾರೆ. ॥35॥ "ಆ ರೀತಿ ಅವರ ಕೀರ್ತಿ ಪ್ರಸಿದ್ಧವಾಗಿದೆ. ಆಬಾಲ ವೃದ್ಧರಾದಿಯಾಗಿ ಎಲ್ಲರಿಗೂ ಇದರ ಅರಿವಿದೆ. ಅವರು ನಿನ್ನ ಮೇಲೆ ಏನಾದರೂ ಕೃಪೆತೋರಿದಲ್ಲಿ ಸರ್ವದುಃಖಗಳೂ ನಿರ್ಮೂಲವಾಗುತ್ತವೆ. ॥36॥ ಶಿರಡಿಯು ಈಗ ಒಂದು ಪವಿತ್ರಸ್ಥಳ. ರಾತ್ರಿ ಹಗಲು ಜನರು ಗುಂಪು ಗುಂಪಾ ಬಂದು, ಹೋಗಿ ಮಾಡುತ್ತಿದ್ದಾರೆ. ನೀನೂ ಸಹ ಈ ಅನುಭವವನ್ನು ಪಡೆಯಬಹುದು. ಸಂತರ ದರ್ಶನವು ಹಿತಕಾರಿಯಾಗಿರುತ್ತದೆ. ॥37॥ ಬರಗಾಲ ಪೀಡಿತನಾಗಿ ಚಿಂತಿತನಾದ ವ್ಯಕ್ತಿಯು ದೀವಾಳಿಯಾಗಿದ್ದು, ಅವನಿಗೆ ಒಮ್ಮಲೇ ವಿಪುಲವಾದ ಸಂಪತ್ತು ವರ್ಷಿಸಿದಾಗ ಅಥವಾ ಭಯಂಕರ ಹಸಿವಿನಿಂದ ಪೀಡಿತನಾದವನಿಗೆ ವಿವಿಧ ಭಕ್ಷ್ಯ ಭೋಜ್ಯಗಳನ್ನು ಬಡಿಸಿದಾಗ ಆಗುವ ಆನಂದದ ಅನುಭವದಂತೆ, ॥38॥ ಅವನು ತನ್ನ ಸ್ನೇಹಿತನು ಶಿರಡಿಯ ಬಗ್ಗೆ ಹೇಳಿದಾಗ ಅನುಭವಿಸಿದನು ಆ ಭಕ್ತನು ಈ ಹಿತವಚನವನ್ನು ಅದೇ ಆನಂದದಿಂದ ಒಪ್ಪಿಕೊಂಡು ಸಂತರ ಅನುಗ್ರಹವನ್ನು ಪಡೆಯಲು ತೀರ್ಮಾನಿಸಿದನು. ಅವನು ಶಿರಡಿ ದಾರಿಯಲ್ಲಿ ಹೊರಟನು. ॥39॥ ಅವನು ಶಿರಡಿಗೆ ಬಂದು ದರ್ಶನ ಮಾಡಿದನು. ಸಾಯಿಯ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದನು. ಕೂಡಲೇ ಅವನು ಸಮಾಧಾನಹೊಂದಿ ತೃಪ್ತಿಹೊಂದಿದನು. ॥40॥ ಪೂರ್ಣ ಬ್ರಹ್ಮನು, ಸನಾತನನು, ಸ್ವಯಂಜ್ಯೋತಿರೂಪನು, ನಿರಂಜನನು ಅಂತಹ ಸ್ವರೂಪವನ್ನು ಸಾಯಿಯಲ್ಲಿ ದರ್ಶನ ಮಾಡಿ ಸುಪ್ರಸನ್ನ ಮನಸ್ಸಿನವನಾದನು. ॥41॥ ಅವನು ಯೋಚಿಸಿದನು – ಹಿಂದಿನ ಜನ್ಮದ ಪುಣ್ಯದ ಫಲದಿಂದಾಗಿ ಅವನು ಸಾಯಿಚರಣಗಳಲ್ಲಿ ಬಂದನು. ಮತ್ತು ಅವನ ಮನಸ್ಸು ಶಾಂತವಾಯಿತು. ಮನಸ್ಸಿನ ಆತಂಕ ದೂರವಾಯಿತು. ಇವೆಲ್ಲವೂ ದರ್ಶನದ ಫಲ. ॥42॥ ಈ ವ್ಯಕ್ತಿಯ ಅಡ್ಡ ಹೆಸರು ಸಾಠೆ. ಅವನು ಅಂತರಂಗದಲ್ಲಿ ನಿಶ್ಚಲಚಿತ್ತನಾಗಿದ್ದನು. ಅವನು 'ಗುರುಚರಿತ್ರೆ'ಯ ಪಾರಾಯಣ ಪ್ರಾರಂಭಿಸಿದನು. ಮತ್ತು ನೇಮ ನಿಷ್ಠೆಗಳಿಂದ ಕ್ರಮಬದ್ಧವಾಗಿ ಆರಂಭಿಸಿದನು. ॥43॥ ಏಳು ದಿನಗಳ ಪಾರಾಯಣ ಸಪ್ತಾಹವಾದ ಮೇಲೆ ಬಾಬಾರವರು ಆ ರಾತ್ರಿ ಅವನ ಕನಸಿನಲ್ಲಿ ಗ್ರಂಥವನ್ನು ಕೈಯಲ್ಲಿ ಹಿಡಿದುಕೊಂಡು ಅದರ ಅರ್ಥವನ್ನು ಸಾಠೆಗೆ ವಿವರಿಸುತ್ತಿದ್ದಂತಹ ದೃಶ್ಯವನ್ನುತೋರಿಸಿದರು. ॥44॥ ಬಾಬಾರವರು ತಮ್ಮ ಆಸನದಲ್ಲೇ ಕುಳಿತಿದ್ದು ಸಾಠೆಯನ್ನು ತಮ್ಮ ಮುಂದೆ ಕುಳ್ಳಿರಿಸಿದರು. 'ಗುರುಚರಿತ್ರೆ' ಗ್ರಂಥವನ್ನು ಕೈಯಲ್ಲಿ ಹಿಡಿದು ನಿಷ್ಣಾತರಾಗಿ ಅವನಿಗೆ ವಿವರಿಸಿದರು. ॥45॥ ಬಾಬಾರವರು ಗ್ರಂಥದಿಂದ ಉಲ್ಲೇಖಿಸುತ್ತ ಪುರಾಣಿಕರ ರೀತಿ ನಿರೂಪಣೆ ಮಾಡಿದರು. ಸಾಠೆಯು ಸಮಾಧಾನಚಿತ್ತದಿಂದ ಆದರಪೂರ್ವಕವಾಗಿ ಗುರುಕಥೆಯನ್ನು ಕೇಳಿದನು. ॥46॥ "ಇದೇನು ನನ್ನ ಜೀವನದಲ್ಲಿ ತಿರುವು ಮುರುವು?" – ಸಾಠೆಯು ಈ ರೀತಿ

ಯೋಚಿಸಿದನು. ಅವನು ಬಹಳ ಆಶ್ಚರ್ಯಗೊಂಡನು. ಮತ್ತು ಪ್ರೇಮದಿಂದ ಗಂಟಲು ತುಂಬಿ ಬಂದಿತು. ॥47॥ "ಓ ದಯಾಳುವೇ, ನೀನು ಯಾರು? ಅಜ್ಞಾನವೆಂಬ ಕತ್ತಲೆಯ ತಲೆದಿಂಬಿನ ಮೇಲೆ ತಮ್ಮ ತಲೆಯಿಟ್ಟು ವಿಶ್ರಮಿಸುವವರನ್ನು ಎಚ್ಚರಿಸುವೆ ಮತ್ತು ಯಾರು ವಿಷಯ ವಾಸನೆಗಳನ್ನು ಆಲಂಗಿಸಿ ಗೊರಕೆಹೊಡೆಯುತ್ತಿರುತ್ತಾರೋ ಅಂತಹವರನ್ನೂ ಎಚ್ಚರಿಸುವೆ." ॥48॥ "ಓ ಕೃಪಾಳುವೇ. ಈಗ ನೋಡಿಲ್ಲಿಅಂತಹ ಸಮಯದಲ್ಲಿಯೂ ಸಹ, ಜಾಗೃತಗೊಳಿಸಲು ಅಲ್ಲಾಡಿಸುತ್ತ ಇರುವಾಗಲೂ ನೀವು 'ಗುರುಚರಿತ್ರೆ' ಎಂಬ ಅಮೃತವನ್ನು ಕೊಡುತ್ತ ಇದ್ದೀರಿ." ॥49॥ ಅದು ಹಾಗಿರಲಿ. ಸಾಠೆಯು ಅಂತಹ ಕನಸನ್ನು ಕಂಡ ಮೇಲೆ ತಕ್ಷಣವೇ ಜಾಗೃತನಾದನು. ಅವನು ಅಲ್ಲಿ ನಡೆದ ಪೂರ್ಣಪ್ರಸಂಗವನ್ನು ಕಾಕಾಸಾಹೇಬ್ ದೀಕ್ಷಿತ್‌ನಿಗೆ ವಿವರಿಸಿದನು. ॥50॥ "ನನಗೆ ಅರ್ಥ ಮಾಡಿಕೊಳ್ಳಲು ಆಗಲಿಲ್ಲ. ಕೇವಲ ಬಾಬಾರವರು ಮಾತ್ರ ಅರಿಯಲು ಸಮರ್ಥರು. ಅವರ ಮನಸ್ಸಿನಲ್ಲಿ ಏನಿದೆಯೆಂಬುದು ನನಗೆ ತಿಳಿಯದು. ಕಾಕಾ, ದಯಮಾಡಿ ಅವರನ್ನು ವಿವರವಾಗಿ ಕೇಳಿ" ಎಂದು ಹೇಳಿದನು. ॥51॥ "ನಾನು ಮತ್ತೆ ಪಾಠವನ್ನು ಪ್ರಾರಂಭಿಸಲಾ? ಅಥವಾ ಇಲ್ಲಿಯವರೆಗೆ ಮಾಡಿರುವುದು ಸಾಕೆಂದು ಪರಿಗಣಿಸಲಾ? ಬಾಬಾರವರ ಉದ್ದೇಶಗಳೇನೇ ಇರಲಿ, ದಯಮಾಡಿ ಅವರನ್ನು ಕೇಳು. ಆಗ ಮಾತ್ರ ನನ್ನ ಮನಸ್ಸು ಸಮಾಧಾನಹೊಂದುತ್ತದೆ. ॥52॥ ಅನಂತರ ಕಾಕಾ ಒಂದು ಸೂಕ್ತ ಸಮಯವನ್ನು ನೋಡಿಕೊಂಡು ಬಾಬಾರವರಿಗೆ ತನ್ನ ಕನಸಿನ ಬಗ್ಗೆ ಹೇಳಿದನು. "ಓಹ್, ದೇವಾ, ಈ ಕನಸಿನ ಮೂಲಕವಾಗಿ ನೀನು ಸಾಠೆಗೆ ಏನು ಹೇಳಬಯಸುವೆ?" ॥53॥ "ಪಾರಾಯಣ ಸಪ್ತಾಹವನ್ನು ಪುನರಾವರ್ತಿಸಬೇಕೇ? ಅಥವಾ ಈಗ ಅದನ್ನು ಅಂತ್ಯಗೊಳಿಸಬೇಕೆ? ದಯಮಾಡಿ ನೀವೇಕನಸಿನ ಅಂತರಾರ್ಥವನ್ನು ವಿವರಿಸಿರಿ ಮತ್ತು ಸಾಠೆಗೆ ದಾರಿತೋರಿಸಿರಿ. ॥54॥ "ನಿನ್ನ ಚರಣಗಳಲ್ಲಿ ನಾನು ಮಾಡುತ್ತಿರುವ ವಿನಂತಿ ಇದೊಂದೇ. ಸಾಠೆ ನಿಮ್ಮ ಅನನ್ಯ ಭಕ್ತನು. ದಯಮಾಡಿ ಅವನ ಮೇಲೆ ಕೃಪೆದೋರಿ ಅವನ ಆಸೆಯನ್ನು ನೆರವೇರಿಸಿರಿ." ॥55॥ ಅನಂತರ ಬಾಬಾರವರು "ಇನ್ನೂ ಹೆಚ್ಚಿನ ಪಾರಾಯಣ ನಡೆಯಲಿ. 'ಗುರುಚರಿತ್ರೆ'ಯನ್ನು ಓದಿದರೆ ಭಕ್ತರು ನಿರ್ಮಲರಾಗುತ್ತಾರೆ" ಎಂದು ಆಜ್ಞಾಪಿಸಿದರು. ॥56॥ "ಈ ಗ್ರಂಥವನ್ನು ಮತ್ತೆ ಮತ್ತೆ ಪಾರಾಯಣ ಮಾಡಿದಲ್ಲಿ ಅವರ ಕಲ್ಯಾಣವಾಗುತ್ತದೆ. ಪರಮೇಶ್ವರನು ಪ್ರಸನ್ನನಾಗುತ್ತಾನೆ. ಭವಬಂಧನಗಳು ಕಳಚಿಹೋಗುತ್ತವೆ." ॥57॥ ಬಾಬಾರವರು ಈ ಮಾತುಗಳನ್ನು ಆಡುತ್ತಿರುವಾಗ ನಾನು ಬಾಬಾರವರ ಕಾಲುಗಳನ್ನು ಒತ್ತುತ್ತಲಿದ್ದೆನು. ಮನದಲ್ಲಿಯೇ ಆಶ್ಚರ್ಯಗೊಂಡೆನು. ಮತ್ತು ಯೋಚಿಸಲು ಪ್ರಚೋದಿತನಾದೆನು. ॥58॥ "ಇದನ್ನು ಬಾಬಾರವರು ಹೇಗೆ ಮಾಡಬಲ್ಲರು? ಸಾಠೆಯು ಅಲ್ಪ ಪ್ರಯತ್ನಕ್ಕೇನೇ ಫಲ ಪಡೆದನೆಂದು ಕಾಣುತ್ತದೆ. ನಾನು ವರುಷಗಳನ್ನೇ ಕಳೆದಿದ್ದೇನೆ! ಆದರೆ ಅವನು ಮಾತ್ರ ಕೇವಲ ಏಳುದಿನಗಳಲ್ಲಿಯೇ ಫಲವನ್ನು ಪಡೆದನು. ॥59॥ ಸಾಠೆಯು ಕೇವಲ ಒಂದೇ ಒಂದು ಬಾರಿ 'ಗುರುಚರಿತ್ರೆ' ಗ್ರಂಥವನ್ನು ಏಳುದಿನಗಳ ಒಳಗೆ ಪಾರಾಯಣ ಮಾಡಿ ಮುಗಿಸಿದ್ದಾನೆ. ಮತ್ತು ಇಲ್ಲಿ ನಾನು ಅದನ್ನು ನಲವತ್ತು

ವರ್ಷಗಳು ಮಾಡಿದ್ದೇನೆ. ಈ ಬಗ್ಗೆ ಯೋಚಿಸಲು ನಾನು ಅರ್ಹನಲ್ಲವೇ? ॥60॥ "ಒಬ್ಬನು ಏಳು ದಿನಗಳಲ್ಲಿ ಫಲ ಪಡೆಯುತ್ತಾನೆ. ಮತ್ತೊಬ್ಬನು ಏಳು ವರ್ಷಗಳು[4] ನಿಷ್ಫಲವಾಗಿ ಕಳೆದಿದ್ದಾನೆ. ನಾನು ಚಾತಕ ಪಕ್ಷಿಯಂತೆ ಮಳೆ ನೀರನ್ನು ಕುಡಿಯಲು ಕಾಯುತ್ತ, ದಯಾಳುವಾದ ಮೋಡವು ಎಂದಿಗೆ ನನ್ನ ಮೇಲೆ ಮಳೆ ಸುರಿಸುತ್ತದೆ ಎಂದು ಯೋಚಿಸುತ್ತಿರುವೆನು. ॥61॥ ಸಂತರಲ್ಲಿ ರತ್ನಪ್ರಾಯ ಸಾಯಿಯು ನನಗೆ ಆಶೀರ್ವಾದಮಾಡುವ ದಿನವು ಎಂದಾದರೂ ಬರುತ್ತದೆಯೇ? ಆ ದಿನ ಬಂದು ನನ್ನ ಹೃದಯದ ಬಯಕೆಯನ್ನು ಆ ಸದ್ಗುರು ನೆರವೇರಿಸಿ ನನಗೆ ಜ್ಞಾನವನ್ನು ನೀಡುವರೇ?" ॥62॥ ಶ್ರೀ ಗುರು ಸಾಯಿಯವರು ಭಕ್ತರನ್ನು ಪ್ರೀತಿಸುತ್ತಿದ್ದರು. ಅವರ ಅಚ್ಚರಿಯನ್ನು ನೋಡಿ. ಈ ಯೋಚನೆಗಳು ನನ್ನ ಮನಸ್ಸಿಗೆ ಬಂದ ಕೂಡಲೆ ಬಾಬಾರವರಿಗೆ ಅವುಗಳು ತಿಳಿಯುತ್ತಿದ್ದವು. ॥63॥ ಈ ರೀತಿಯ ಆಲೋಚನೆಗಳು, ಒಳ್ಳೆಯದಾಗಲಿ,ಕೆಟ್ಟದ್ದಾಗಲಿ, ಮಾಯೆಯಿಂದ ಹುಟ್ಟಿದವು. ಕೋಟ್ಯಾನುಕೋಟಿ ಸಂಖ್ಯೆಯಲ್ಲಿದ್ದರೂ ಒಂದೇ ಸಮನೆ ಹುಟ್ಟುತ್ತಲೂ ಸಾಯುತ್ತಲೂ ಇದ್ದರೂ ಎಲ್ಲವೂ ಅವರಿಗೆ ಅರಿವಿರುತ್ತದೆ. ॥64॥ "ವೈರಿಯು ಚಿಂತಿಸಲಾಗದ್ದನ್ನೂ ಸಹ ಮನಸ್ಸು ಚಿಂತಿಸುತ್ತದೆ." ಇದೊಂದು ಪ್ರಸಿದ್ಧ ನಾಣ್ಣುಡಿ. ಇತರರಿಗೆ ಯಾರಿಗೂ ಮನಸ್ಸಿನ ಯೋಚನೆಗಳು ತಿಳಿಯದಿದ್ದರೂ ಸಹ ಮಹಾರಾಜ್‌ರಿಗೆ ಕೂಡಲೇ ತಿಳಿದುಬಿಡುತ್ತಿತ್ತು. ॥65॥ ಆದರೆ ಬಹು ಕೃಪಾಮಯಿಯಾದ ಅವಳು ಕೆಟ್ಟದ್ದೆಲ್ಲವನ್ನೂ ಕ್ಷಮಿಸುತ್ತಾಳೆ. ಮತ್ತು ಪ್ರಾಪ್ತಕಾಲದಲ್ಲಿ ಒಳ್ಳೆಯದನ್ನು ಪ್ರೇರೇಪಿಸಿ ಉಪಯುಕ್ತ ವರ್ತನೆಯನ್ನು ಬೆಳೆಸುತ್ತಾಳೆ. ॥66॥ ನನ್ನಮನೋಗತವನ್ನು ಅರ್ಥ ಮಾಡಿಕೊಂಡು, ಬಾಬಾರವರು ನನಗೆ ಹೇಳಿದರು, "ಎದ್ದೇಳು. ಶ್ಯಾಮನಲ್ಲಿಗೆ ಹೋಗಿ ಹದಿನೈದು ರೂಪಾಯಿಗಳನ್ನು ಇಸಗೊಂಡು ಬಾ. ॥67॥ "ಹಾಗೆಯೇ ಕ್ಷಣಕಾಲ ಅವನ ಹತ್ತಿರ ಕುಳಿತುಕೋ. ಪರಸ್ಪರ ಮಾತನಾಡಿ ಅವನಿಂದ ದಕ್ಷಿಣೆಯನ್ನು ತೆಗೆದುಕೊಂಡು ಕೂಡಲೇ ಹಿಂತಿರುಗು." ॥68॥ ಸಾಯಿನಾಥರು ನನ್ನ ಮೇಲೆ ಕೃಪೆ ತೋರಿ, ದಕ್ಷಿಣೆಯ ನಿಮಿತ್ತದಲ್ಲಿ ಹೇಳಿದರು. "ಹೋಗು, ಮತ್ತು ನನಗಾಗಿ ಶಾಮಾನ ಹತ್ತಿರ ಕೂಡಲೇ ದಕ್ಷಿಣೆಯನ್ನು ಕೇಳು." ॥69॥ ಈ ರೀತಿ ಆಜ್ಞೆ ನೀಡಿದ ನಂತರ ಯಾರಿಗಾದರೂ ಕುಳಿತುಕೊಳ್ಳುವ ಧೈರ್ಯ ಬರುವುದೇ? ಹಾಗೂ ಯಾರಾದರೂ ಕುಳಿತುಕೊಂಡಲ್ಲಿ ಅದು ಅವಿಧೇಯತೆಯೇ ಆಗುವುದಿಲ್ಲವೇ? ನಾನು ಎದ್ದು ಅಲ್ಲಿಂದ ಹೊರಟೆನು. ॥70॥ ಶ್ಯಾಮರಾವ್‌ನು ಹೊರಗೆ ಸ್ವಾಗತಿಸಲು ಬಂದನು. ಅವನು ಸ್ನಾನ ಮಾಡಿ ಬಂದು ಧೋತಿಯನ್ನು ಧರಿಸಿ ನಿಂತಿದ್ದನು. ॥71॥ ಆಗ ತಾನೆ ಸ್ನಾನವನ್ನು ಮುಗಿಸಿದ್ದು ಒಗೆದಿದ್ದ ಬಟ್ಟೆ ಹಾಕಿಕೊಂಡು ಧೋತಿಯ ನೆರಿಗೆಗಳನ್ನು ಜೋಡಿಸುತ್ತಾ ಮುಖದಿಂದ ದೇವರ ನಾಮಗಳನ್ನು ಸ್ಮರಿಸುತ್ತಾ ಇದ್ದನು. ॥72॥ ಅವನು ಹೇಳಿದನು, "ನೀನು ಹೇಗೆ ಅನಿರೀಕ್ಷಿತವಾಗಿ ಇಲ್ಲಿಗೆ ಬಂದೆ? ಮಸೀದಿಯಿಂದ ಬರುತ್ತಿರುವೆಯಾ? ಏಕೆ ಚಂಚಲಗೊಂಡಿರುವೆ? ಮತ್ತು ನೀನು ಏಕೆ ಈ ದಿನ ಒಬ್ಬನೇ ಇರುವೆ? ॥73॥ "ಬಾ ಒಳಗೆ ಕುಳಿತುಕೋ. ನಾನು ಈಗ ತಾನೆ ಸ್ನಾನ ಮುಗಿಸಿ ಧೋತಿಯ ನೆರಿಗೆ ಹಿಡಿಯುತ್ತಿದ್ದೇನೆ. ದೇವತಾಮೂರ್ತಿಗಳ

ಮೇಲೆ ಅಭಿಷೇಕ ಮಾಡಿ ಹೀಗೆ ಹೋಗಿ ಹಾಗೆ ಬರುವೆ. ॥74॥ "ನೀನು ತಾಂಬೂಲವನ್ನು ಸೇವಿಸುವುದರೊಳಗೆ ನನ್ನ ಪೂಜಾ ವಿಧಿಗಳನ್ನು ಮುಗಿಸುತ್ತೇನೆ. ಅನಂತರ ಸಾವಧಾನವಾಗಿ ಕುಳಿತು ಮಾತನಾಡೋಣ." ॥75॥ ಮಾಧವರಾವ್ ಒಳಗೆ ಹೋದನು. ಅನಂತರ ನಾನು ಅಲ್ಲಿಯೇ ಕಿಡಕಿಯ ಕಟ್ಟೆಯ ಮೇಲಿದ್ದ 'ನಾಥ ಭಾಗವತ'[5] ಎಂಬ ಗ್ರಂಥವನ್ನು ಸಹಜವಾಗಿ ಕೈಗೆತ್ತಿಕೊಂಡೆನು. ॥76॥ ನಾನು ಪುಸ್ತಕವನ್ನು ಮನಬಂದಂತೆ ತೆರೆದೆನು ಮತ್ತು ಆಶ್ಚರ್ಯಕರವಾಗಿ ಆ ಬೆಳಗ್ಗೆ ಯಾವ ಪುಟದಿಂದ ಓದಲು ಪ್ರಾರಂಭಿಸಿ ಅಪೂರ್ಣವಾಗಿ ನಿಲ್ಲಿಸಿದ್ದೆನೋ ಅದೇ ಪುಟವಾಗಿತ್ತು ಅದು. ॥77॥ ನನಗೆ ಬಹಳ ಅಚ್ಚರಿ ಉಂಟಾಯಿತು. ಏಕೆಂದರೆ ಯಾವ ಭಾಗವನ್ನು ನಾನು ಬೆಳಗ್ಗೆ ಓದುತ್ತಿದ್ದು ಅದನ್ನು ಕೇವಲ ಆಲಸ್ಯದಿಂದ ಅರ್ಧಕ್ಕೆ ಬಿಟ್ಟಿದ್ದೆನೋ ಅದನ್ನು ಬಾಬಾರವರು ನನಗೆ ಪೂರ್ಣಗೊಳಿಸುವಂತೆ ನಿತ್ಯ ವಿಧಿಗೆ ಭಂಗ ಬರದಂತೆ ಮಾಡಿದ್ದರು. ॥78॥ "ವಿಧಿ ವಿಧಾನ" ಎಂದರೆ ಪ್ರತಿನಿತ್ಯವೂ ಸ್ವಲ್ಪ ಭಾಗವನ್ನು ಪಾರಾಯಣ ಮಾಡುವುದು ಅದನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಲಾಗದಿದ್ದರೆ ಅಥವಾ ಅರ್ಧದಲ್ಲಿಯೇ ನಿಲ್ಲಿಸಿ ಮಧ್ಯದಲ್ಲಿ ಏಳಬಾರದು. ಮತ್ತು ಮುಗಿಸದೆ ಬಿಡಬಾರದು. ಇಲ್ಲದಿದ್ದಲ್ಲಿ ಉಪಾಸನೆಯು ಅಪೂರ್ಣ. ॥79॥ ಈಗ ಈ ಸಣ್ಣ ಕಥೆಯ ನಿರೂಪಣೆ ಮಾಡುತ್ತಿರುವಾಗಲೇ ಇನ್ನೊಂದು ಸಂಗತಿ ನೆನಪಿಗೆ ಬಂದಿರುವುದನ್ನು ಬಿಡಲು ಇಷ್ಟ ಪಡುವುದಿಲ್ಲ. ಅದ್ದರಿಂದ, ಶ್ರೋತೃಗಳು ಆ ಕಥೆಯನ್ನು ಆಲಿಸಿರಿ. ಅದು 'ನಾಥ ಭಾಗವತ'ದ ಕಥೆ. ॥80॥ 'ನಾಥ ಭಾಗವತ' ಗುರುಭಕ್ತಿಯಿಂದ ತುಂಬಿರುವುದನ್ನು ಸಾಯಿಯೂ ಸಹ ಅಂಗೀಕರಿಸಿದ್ದಾರೆ ಮತ್ತು ಅದನ್ನು ದೀಕ್ಷಿತನು ಪ್ರತಿ ನಿತ್ಯವೂ ಓದುತ್ತಿದ್ದನು. ॥81॥ ಈ ಗ್ರಂಥವು ಭವಸಾಗರದಿಂದ ಮುಕ್ತಿ ಪಡೆಯಲು ಬ್ರಹ್ಮನಿಗೆ ನಾರಾಯಣನು ಹೇಳಿರುವುದು ಮತ್ತು ನಾರದರು ಅವನಿಂದ ಹೊಲದಲ್ಲಿ ಬೀಜ ಬಿತ್ತಿದುದರ ಫಲಾನುಭವಿಯಾದರು. ॥82॥ ಆ ಹೊಲವನ್ನು ಹತ್ತು ಪಟ್ಟು ಬಾದರಾಯಣನ್ ಉತ್ತು ಬಿತ್ತಿ ಬೆಳೆಸಿದನು. ಮತ್ತು ಶುಕನ್ ಕೆಲವು ಅತ್ಯುತ್ತಮವಾದ ಧಾನ್ಯ ರೂಪದ ಕಿವಿಗಳನ್ನು ಪರೀಕ್ಷಿತನಿಗೋಸ್ಕರ ಅವನು ಒಕ್ಕಣೆ ಮಾಡುವ ಜಾಗದಲ್ಲಿ(ಸೂಕ್ಷ್ಮ ಶರೀರದಲ್ಲಿ) ಬೆಳೆಸಲು ಅಂಕ್ಕಿ ಮಾಡಿದನು. ॥83॥ ಶ್ರೀಧರ ಸ್ವಾಮಿಯು[9] ಶುದ್ಧೀಕರಿಸಿದರು, ಜನಾರ್ದನ ಸ್ವಾಮಿಯು[10] ಅಳತೆ ಮಾಡಿದರು ಮತ್ತು ಏಕನಾಥರು ಅದರಿಂದ ತರಹೇವಾರು ಅತ್ಯಂತ ರುಚಿಕರ ಆಹಾರ ತಯಾರಿಸಿದರು. ॥84॥ ಭಕ್ತಿ, ಪ್ರೀತಿ ಮತ್ತು ಆನಂದ ಇವುಗಳ ಗಣಿಯಾದ 'ಬೃದಾವನ'ದ[11] ಹನ್ನೊಂದನೆಯ ಅಧ್ಯಾಯದಲ್ಲಿ ಮೂವತ್ತೆರಡು ಖಂಡಗಳಿದ್ದು ದೀಕ್ಷಿತನು ಪ್ರತಿನಿತ್ಯವೂ ಅದನ್ನು ಓದುತ್ತಿದ್ದನು. ॥85॥ ಹಗಲಿನಲ್ಲಿ ಅವನು ಓದುತ್ತಾ ಇತರ ಭಕ್ತರಿಗೆ ವಿವರಿಸುತ್ತಿದ್ದನು. ಮತ್ತು ರಾತ್ರಿಯಲ್ಲಿ 'ಭಾವಾರ್ಥ ರಾಮಾಯಣ'ವನ್ನು[12] ಓದುತ್ತಿದ್ದನು. ಈ ಗ್ರಂಥವನ್ನೂ ಸಹ ಗುರು ಅಪ್ಪಣೆ ಕೊಡಿಸಿದ್ದು ದೀಕ್ಷಿತನು ಆ ಪ್ರಮಾಣವನ್ನು ಅನುಸರಿಸುತ್ತಿದ್ದನು. ॥86॥ 'ನಾಥ ಭಾಗವತ'ವು ಭಗದ್ಭಕ್ತಿಯ ಹಾಗೂ ಪರಮಾನಂದದ ಸಾರ. 'ಜ್ಞಾನೇಶ್ವರಿ'ಯ ಎರಡನೆಯ ಆವೃತ್ತಿಯ ರೀತಿಯಲ್ಲಿತ್ತು. ಇದು ಮಹಾರಾಷ್ಟ್ರಕ್ಕೆ

ನಾಥ ಸಂಪ್ರದಾಯದ ಮಹಾನ್ ಕೊಡುಗೆ. ॥87॥ ಬೆಳಗಿನ ಜಾವದ ಸ್ನಾನ ಮುಗಿಸಿ ಸಾಯಿ ಮತ್ತು ಇತರ ದೇವತೆಗಳ ಪೂಜೆ ಮುಗಿಸಿ, ನೈವೇದ್ಯ ಸಮರ್ಪಿಸಿ, ಆರತಿಯನ್ನು ಬೆಳಗಿ, ॥88॥ ಅನಂತರ ಇತರ ಶ್ರೋತೃಗಳ ಜೊತೆಯಲ್ಲಿ ಹಾಲು ಹಣ್ಣುಗಳ ನೈವೇದ್ಯವನ್ನು ಸ್ವೀಕರಿಸಿ, ಅವನು 'ಪೋಥಿ'ಯನ್ನು ಸವಿಸ್ತಾರವಾಗಿ, ಆದರಪೂರ್ವಕವಾಗಿ ನಿತ್ಯಕ್ರಮಾನುಸಾರವಾಗಿ ವಾಚನ ಮಾಡುತಿದ್ದನು. ॥89॥ಏಕನಾಥನಂತಹ ಭಕ್ತಾಗ್ರೇಸರನು ಈ ಪೋಥಿಯನ್ನು ಬಾಂದ್ರಾದ ಏಕಾಂತದಲ್ಲಿ ಒಂದು ಸಾವಿರ ಸಲ ಪಾರಾಯಣ ಮಾಡಿ ಆನಂದದಲ್ಲಿ ಮುಳುಗಿದ್ದನು. ಅಂತಹ ಅದರ ಮಧುರತೆಯನ್ನು ಯಾರು ತಾನೇ ವಿವರಿಸಲು ಸಾಧ್ಯ? ॥90॥ ಸಾಯಿ ಸಮರ್ಥರು ದೀಕ್ಷಿತನಿಗೆ ಅಜ್ಞಾಪಿಸಿದ್ದರು. ಅವನಾದರೋ ನಿಷ್ಠಾವಂತ ಭಕ್ತ. ದಿವ್ಯ ಗ್ರಂಥದ ಪಾರಾಯಣದ ಬಗ್ಗೆ ಶ್ರದ್ಧೆಯಿತ್ತು. ಆ ಗ್ರಂಥವು ಎಲ್ಲಾ ಜೀವಿಗಳಿಗೂ ಮಹಾಪ್ರಸಾದವಾಗಿ ಮುಕ್ತಿಯನ್ನು ನೀಡುವಂತಹುದಾಗಿತ್ತು. ॥91॥ ಯಾರೂ ಕಾಡಿಗೆ ಹೋಗಿ ನೆಲೆಸುವ ಆವಶ್ಯಕತೆ ಇಲ್ಲ. ಏಕೆಂದರೆ ದೇವರು ತಾನೇ ಉದ್ಧವ ಗೀತೆಯಲ್ಲಿ (ಅಧ್ಯಾಯ–11) ಪ್ರತ್ಯಕ್ಷಗೊಳ್ಳುತ್ತಾನೆ. ಅದನ್ನು ಪೂರ್ಣ ಶ್ರದ್ಧೆಯಿಂದ ಪಾರಾಯಣ ಮಾಡುವವನು ಭಗವತ್ಪ್ರಾಪ್ತಿ ಹೊಂದುತ್ತಾನೆ. ॥92॥ ಮಹಾಭಾರತದಲ್ಲಿ ಕೃಷ್ಣಾರ್ಜುನರ ಮಧ್ಯೆ ಒಂದು ಸಂವಾದ ಇದೆ. ಆದರೆ ಈ ಕೃಷ್ಣ ಉದ್ಧವರ ಸಂವಾದವು ಅದಕ್ಕಿಂತ ಉತ್ತಮವಾಗಿದೆ. ಅದೇನೆಂದರೆ 'ಭಾಗವತ'ದಲ್ಲಿರುವ ಉಪದೇಶವನ್ನು ಏಕನಾಥನು ಪ್ರೇಮದಿಂದ ಅರ್ಥಮಾಡಿಕೊಂಡು ಹೊರಗೆಡವಿದನು. ॥93॥ ಅದು ಹಾಗಿರಲಿ. ಪ್ರಾಸಾದಿಕವಾದ ಈ ಗ್ರಂಥವನ್ನು ಜ್ಞಾನದೇವರ 'ಭಾವಾರ್ಥ ದೀಪಿಕೆ' ಗ್ರಂಥದ ಜೊತೆಯಲ್ಲಿ ಸಮರ್ಥ ಕೃಪಾಳು ಸಾಯಿನಾಥರು ಶಿರಡಿಯಲ್ಲಿ ಜನತೆಯು ಓದುವಂತೆ ಮಾಡಿದರು. ॥94॥ ಸಖಾರಾಮ ಹರಿಜೋಗನನ್ನು ಬಾಬಾರವರು ನಿಯೋಗಿಸಿ ಸಾಠೆಯ ವಾಡೆಯಲ್ಲಿ ಓದಿಸಿದರು. ಅದರಿಂದ ಭಕ್ತರಿಗೆ ಬಹಳ ಉಪಯೋಗವಾಯಿತು. ॥95॥ ಬಾಬಾರವರು ಆಗಾಗ ಭಕ್ತರನ್ನು ಕೇಳಲು ಪ್ರೇರೇಪಿಸುತ್ತಿದ್ದರು. ಮತ್ತು ತಮ್ಮ ಭಕ್ತರಕಲ್ಯಾಣಕ್ಕಾಗಿಯೇ ಅವರ ಮೇಲಿನ ಅನುಕಂಪದಿಂದ ಬೇಡುತ್ತಿದ್ದರು. ॥96॥ ಬಾಬಾರವರು ಅನುಗ್ರಹಿಸುವ ರೀತಿಯೇ ಅಗಾಧ. ಅವರು ಹೇಳುವ ರೀತಿ ನೀತಿಗಳು ಬೇರೆ ಬೇರೆ ಭಕ್ತರಿಗೆ ವಿವಿಧ ರೀತಿಯದ್ದಾಗಿತ್ತು. ಭಕ್ತರು ಹತ್ತಿರವಿರಲಿ ದೂರವಿರಲಿ, ಆದರೆ ಅವರು ಭಕ್ತರ ಹೃದಯದಲ್ಲಿ ಅತಿ ನಿಕಟವಾಗಿದ್ದರು॥97॥ ಅವರು ಮಸೀದಿಯಲ್ಲಿಯೇ ಕುಳಿತಿದ್ದರೂ, ಯಾವ ಕೆಲಸವನ್ನಾದರೂ ಯಾರಿಗಾದರೂ ಒಪ್ಪಿಸಿ, ಅವರಿಗೆ ತಮ್ಮ ಶಕ್ತಿಯನ್ನು ನೀಡಿ ಆ ಕೆಲಸ ಮುಗಿಯುವಂತೆ ಮಾಡುತ್ತಿದ್ದರು. ॥98॥ ಅವರು ಬಾಪು ಸಾಹೇಬ ಜೋಗ್‌ರವರಿಗೆ "ಪೋಥಿ"ಯನ್ನು ಓದಲು ಹೇಳುತ್ತಿದ್ದರು. ಅದನ್ನು ಅವನು ನಿತ್ಯವೂ ಓದುತ್ತಿದ್ದನು. ವಾಡೆಯಲ್ಲಿ ನಿತ್ಯ ನೈಮಿತ್ತಿಕವಾಗಿ ಓದುವಾಗ ಶ್ರೋತೃಗಳೂ ಸಹ ಆಲಿಸಲು ಬರುತ್ತಿದ್ದರು. ॥99॥ ಪ್ರತಿದಿನ ಮಧ್ಯಾಹ್ನ ಊಟವಾದ ಮೇಲೆ ಜೋಗನು ಬಾಬಾ ಹತ್ತಿರ ಹೋಗುತ್ತಿದ್ದನು. ಅವರ ಚರಣಗಳಲ್ಲಿ ನಮಿಸಿ, ವಿಭೂತಿಯನ್ನು ತೆಗೆದುಕೊಂಡು, 'ಪೋಥಿ'ಯನ್ನು ಪಾರಾಯಣ ಮಾಡಲು ಅನುಮತಿ

ಬೇಡುತ್ತಿದ್ದನು. ॥100॥ ಕೆಲವೊಮ್ಮೆ ಅವನು 'ಜ್ಞಾನೇಶ್ವರಿ'ಯನ್ನು, ಕೆಲವೊಮ್ಮೆ 'ನಾಥ ಭಾಗವತ'ವನ್ನೂ ಓದುತ್ತಿದ್ದನು. ಹೃದಯಭರಿತ ಆನಂದದಿಂದ ವಾಚನ ಮಾಡುತ್ತ ಅದರ ಅರ್ಥವನ್ನು ವಿವರಿಸುತ್ತಿದ್ದನು. ॥101॥ ಈ ರೀತಿಯ ಅನುಜ್ಞೆ ನೀಡಿದ್ದರಿಂದ ಬಾಬಾರವರನ್ನು ಭೇಟಿಮಾಡಿದ ಭಕ್ತರನ್ನು ಬಾಬಾರವರು ಹೋಗಿ 'ಪೋಥಿ'ಯನ್ನು ಆಲಿಸಲು ಅವರು ಬಂದ ಕೂಡಲೇ ಕಳುಹಿಸುತ್ತಿದ್ದರು. ॥102॥ ಕೆಲವೊಮ್ಮೆ ಅವನು ಕತೆಗಳನ್ನು ಸಂಕ್ಷಿಪ್ತವಾಗಿ ಹೇಳುತ್ತಿದ್ದು ಅದರಿಂದಾಗಿ ಶ್ರೋತೃಗಳು ಗಮನವಿಟ್ಟು ಕೇಳಿ ಆ ವಿಷಯವನ್ನು ಮನಸ್ಸಿನಲ್ಲಿ ಉಳಿಸಿಕೊಳ್ಳುತ್ತಿದ್ದರು. ಅದರಿಂದಾಗಿ ಸಾಯಿಯು ಅವರನ್ನು ಎದ್ದು ಹೋಗಿ 'ಪೋಥಿ'ಯನ್ನು ವಾಡೆಯಲ್ಲಿ ಆಲಿಸಲು ಕಳಿಸುತ್ತಿದ್ದರು. ॥103॥ ಶ್ರೋತೃಭಕ್ತಿಪೂರ್ವಕವಾಗಿ 'ಪೋಥಿ'ಯನ್ನು ಕೇಳಲು ಹೋದಲ್ಲಿ ಅವನಿಗೆ ಮುಂಚೆಯೇ ಕೇಳಿದ್ದ ಕತೆಯ ಅಂತರಾರ್ಥವನ್ನು ಬಾಬಾರವರು ತಿಳಿಸಿದ ಕತೆಯೊಂದು ನಿರೂಪಿತವಾಗುತ್ತಿತ್ತು. ॥104॥ ಜ್ಞಾನೇಶ್ವರರ 'ಜ್ಞಾನೇಶ್ವರಿ' ಅಥವಾ ಏಕನಾಥರ 'ವಚನಗಳು' ಬಾಬಾರವರ ಕತೆಗಳಲ್ಲಿ ಅಲ್ಲಿದ್ದಹಾಗೆಯೇ ಅಳವಡಿಸಿಕೊಂಡಿರುವ ಹಾಗೆ ಕಾಣುತ್ತಿದ್ದವು. ಇದರಿಂದ ಶ್ರೋತೃಗಳು ಆಶ್ಚರ್ಯಚಕಿತರಾಗುತ್ತಿದ್ದರು. ॥105॥ ಕೆಲವೊಮ್ಮೆ, 'ಪೋಥಿ'ಯ ಕೆಲವು ಪ್ರಕರಣಗಳನ್ನು ಓದುವ ಪರಿಪಾಠವಿಲ್ಲದಿದ್ದರೂ ಕಾಕತಾಳೀಯವೆಂಬಂತೆ ಉಲ್ಲೇಖ ನೀಡುತ್ತಿದ್ದನು. ॥106॥ 'ಭಗವದ್ಗೀತೆ' ಮತ್ತು 'ಭಾಗವತ' ಇವೆರಡೂ ಅತಿಮುಖ್ಯವಾದ ಗ್ರಂಥಗಳು. ಅವುಗಳಲ್ಲಿ ಭಾಗವತ ಧರ್ಮದ ಸಾರವೇ ಇದೆ. ಜೋಗನು ಪ್ರತಿನಿತ್ಯ ಅದನ್ನು ಪಠಿಸುತ್ತಿದ್ದನು. ॥107॥ ಜ್ಞಾನೇಶ್ವರಿಯು ಗೀತೆಯ ಮೇಲಿನ ಭಾಷ್ಯವು. ಅದಕ್ಕೆ 'ಭಾವಾರ್ಥ ದೀಪಿಕೆ' ಎಂಬ ಹೆಸರೂ ಇದೆ. ಆದರೆ ಏಕನಾಥರು ಭಾಗವತದ ಹನ್ನೊಂದನೆಯ ಅಧ್ಯಾಯದ ಪರಮಾರ್ಥ ಭೂಮಿಕೆಯನ್ನು ಪ್ರತಿಪಾದಿಸುತ್ತಾರೆ. ॥108॥ ಅದು ಹಾಗಿರಲಿ. ಈ ರೀತಿ ಭಾಗವತ ಧರ್ಮ ವಾಚನದ ಪ್ರಚಾರ ನಡೆಯಿತು. ಅದೇ ರೀತಿ ನಿತ್ಯಕ್ರಮಾನುಸಾರ ನಾನು ಅದನ್ನು ಪ್ರತಿನಿತ್ಯವೂ ಓದುತ್ತಿದ್ದೆ. ಆದರೆ ಆ ದಿನ ಅದು ತಪ್ಪಿಹೋಗಿತ್ತು. ॥109॥ ಒಂದು ಕತೆಯನ್ನು ಅರ್ಧ ಓದಿಯಾಗಿತ್ತು, ಅಷ್ಟರಲ್ಲಿ ಜನರು ಮಸೀದಿಯ ಕಡೆ ಹೊರಟಿದ್ದರಿಂದ ನಾನು 'ಪೋಥಿ'ಯನ್ನು ಓದುತ್ತಿದ್ದವನು ಅಲ್ಲಿಯೇ ಬಿಟ್ಟು ಅವರ ಜೊತೆ ಅವಸರದಲ್ಲಿ ಹೊರಟೆನು. ॥110॥ ಬಾಬಾರವರ ಕತೆಗಳನ್ನು ಕೇಳುವ ಒಂದೇ ಇಚ್ಛೆ ಇತ್ತು. ಆದರೆ ಬಾಬಾರವರು ಮನಸ್ಸಿನಲ್ಲಿ ಮತ್ತೇನನ್ನೋ ಇಟ್ಟುಕೊಂಡಿದ್ದರು. 'ಭಾಗವತ' ಓದುವುದನ್ನು ಅರ್ಧದಲ್ಲಿಯೇ ಬಿಟ್ಟು ಬೇರೆ ಏನನ್ನಾದರೂ ಮಾಡುವುದನ್ನು ಬಾಬಾ ಇಷ್ಟಪಡಲಿಲ್ಲ. ॥111॥ ಈ ಕಾರಣಕ್ಕಾಗಿಯೇ ಹೇಗಾದರೂ ಮಾಡಿ ಬಾಬಾರವರು ನನ್ನನ್ನು 'ಭಾಗವತ'ದ ಉಳಿದ ಭಾಗವನ್ನು ಓದುವಂತೆ ಮಾಡಿದರು. ಬಾಬಾರವರ ಕೌತುಕಪೂರ್ವಕ ರೀತಿ ಅದಾಗಿತ್ತು, ಅದನ್ನು ನೆನಪಿಸಿಕೊಂಡರೇನೇ ನನ್ನ ಪ್ರೀತಿ ಉಕ್ಕಿ ಹರಿಯುತ್ತದೆ. ॥112॥ 'ಭಾಗವತ'ದ ಪಾರಾಯಣ ಪೂರ್ಣವಾಯಿತು. ಮತ್ತು ನನ್ನ ಉಪಕತೆಯು ಇಲ್ಲಿಗೆ ಅಂತ್ಯವಾಗುತ್ತದೆ. ಅಷ್ಟರಲ್ಲಿ ಮಾಧವ ರಾವ್‌ನ ಪೂಜೆಯೂ ಪೂರ್ಣಗೊಂಡಿದ್ದು ಅವನು

ಹೊರಗೆ ಬಂದನು. ॥113॥ ಓಹ್! ಬಾಬಾರವರಿಂದ ಒಂದು ಸಂದೇಶವನ್ನು ನಿಮಗಾಗಿ ತಂದಿದ್ದೇನೆ. "ಶಾಮರವರಿಂದ ಹದಿನೈದು ರೂಪಾಯಿಗಳನ್ನು ದಕ್ಷಿಣೆಯಾಗಿ ತೆಗೆದುಕೊಂಡು ಬಾ" ಎಂದು. ॥114॥ ನಾನು ಕುಳಿತುಕೊಂಡು ಅವರ ಸೇವೆ ಮಾಡುತ್ತಿರುವಾಗ ತಕ್ಷಣವೇ ಅವರು ನಿನ್ನನ್ನು ನೆನಪಿಸಿಕೊಂಡು ಹೇಳಿದರು – "ಎದ್ದೇಳು. ಶಾಮಾ ಬಳಿಗೆ ಹೋಗು ಮತ್ತು ದಕ್ಷಿಣೆಯ ಸಹಿತ ಹಿಂದಕ್ಕೆ ಬಾ." ॥115॥ ಅವರು ಮತ್ತೂ ಹೇಳಿದರು – "ಅವನ ಮನೆಯಲ್ಲಿ ಸ್ವಲ್ಪ ಸಮಯ ಕುಳಿತುಕೋ. ಅವನ ಜೊತೆ ಸ್ವಲ್ಪ ಸಂಭಾಷಣೆ ನಡೆಸಿ ಅನಂತರ ವಾಪಸು ಬಾ." ॥116॥ ಮಾಧವ ರಾವ್ ಇದನ್ನು ಕೇಳಿದಾಗ ಅವನು ಬಹಳ ಅಚ್ಚರಿಗೊಂಡನು. ಮತ್ತು ಹೇಳಿದನು – "ಹಣದ ಬದಲಾಗಿ ನನ್ನ ಪ್ರಣಾಮಗಳನ್ನು ಅರ್ಪಿಸು. ಅದೇ ನನ್ನ ದಕ್ಷಿಣೆಯೆಂದು ಅವರಿಗೆ ಹೇಳು." ॥117॥ "ಸರಿ. ಒಂದು ಕೆಲಸವಾಯಿತು. ನಾನು ಹದಿನೈದು ನಮಸ್ಕಾರಗಳನ್ನು ನನ್ನ ಜೊತೆ ತೆಗೆದುಕೊಂಡು ಹೋಗುತ್ತೇನೆ. ಆದರೆ ಈಗ ಕುಳಿತುಕೋ. ಮತ್ತು ಸ್ವಲ್ಪ ಹೊತ್ತು ನನ್ನ ಜೊತೆ ಹರಟೆಹೊಡಿ" ಎಂದು ನಾನು ಹೇಳಿದೆನು. ॥118॥ "ನನಗೆ ಯಾವ ಕತೆಯನ್ನಾದರೂ ಆರಿಸಿ ಹೇಳು. ಅದನ್ನು ಕೇಳಬೇಕೆಂಬ ದಾಹವನ್ನು ತಣಿಸು. ನಿನ್ನಿಂದ ಬಾಬಾರವರ ಚರಿತ್ರೆಯ ಗಂಗೆಯು ಹರಿಯಲಿ. ನನ್ನ ಪಾಪಗಳನ್ನೆಲ್ಲ ತೊಳೆಯಲಿ." ॥119॥ ಆಗ ಮಾಧವ ರಾವ್ ಹೇಳಿದನು, "ಕುಳಿತುಕೋ, ಇದು ದೇವರ ಲೀಲೆ. ನಿನಗೂ ಗೊತ್ತು, ಸ್ವಲ್ಪ ಕಾಲ ವಿಶ್ರಮಿಸಿಕೊ. ಕುಳಿತುಕೊ. ॥120॥ "ಈ ತಾಂಬೂಲವನ್ನು (ಎಲೆ ಮತ್ತು ಅಡಿಕೆಯನ್ನು) ತೆಗೆದುಕೋ. ಸುಣ್ಣ ಮತ್ತು ಸುಪಾರಿ ಡಬ್ಬಿಯಲ್ಲಿದೆ. ಇನ್ನೊಂದು ಕ್ಷಣದಲ್ಲಿ ಹಿಂತಿರುಗುತ್ತೇನೆ. ತಲೆಯ ಮೇಲೆ ಟೋಪಿ ಹಾಕಿಕೊಂಡು ಬರುತ್ತೇನೆ॥121॥ "ಸಾಯಿಬಾಬಾರವರ ಲೀಲೆಗಳು ಅತ್ಯದ್ಭುತವಾದವುಗಳು. ಅವುಗಳಲ್ಲಿ ಎಷ್ಟನ್ನು ಹೇಳಲಿ? ನೀನು ಶಿರಡಿಗೆ ಬಂದಮೇಲೆ ಸಾಕಷ್ಟು ನೋಡಿಲ್ಲವೇ? ॥122॥ "ನಾನು ಕೇವಲ ಒಬ್ಬ ಹಳ್ಳಿಗ. ಆದರೆ ನೀವು ಎಲ್ಲರೂ ಪಟ್ಟಣಗಳಿಂದ ಬಂದಿರುವಿರಿ. ನಿನ್ನ ಮುಂದೆ ಅವನ ಅಚ್ಚರಿಗೊಳಿಸುವ ಲೀಲೆಗಳನ್ನು ಎಷ್ಟರಮಟ್ಟಿಗೆ ಹೇಳಲು ಸಾಧ್ಯ?" ॥123॥ ಅವನು ಮತ್ತೆ ಹಿಂದಕ್ಕೆ ಬರುತ್ತೇನೆಂದು ಹೇಳಿ ಒಳಗೆ ಹೋದನು. ಪುಷ್ಪಗಳು ಮತ್ತಿತರ ವಸ್ತುಗಳನ್ನು ದೇವತೆಗಳಿಗೆ ಸಮರ್ಪಿಸಿ, ಬೇಗನೆ ಟೋಪಿ ಧರಿಸಿಕೊಂಡು ಹಿಂದಕ್ಕೆ ಬಂದು ನನ್ನೊಡನೆ ಸಂಭಾಷಿಸಲು ಕುಳಿತನು. ॥124॥ ಇದೆಂತಹ ಭಗವಂತನ ಆಟ! ಅವನ ರೀತಿಗಳನ್ನು ಯಾರು ಅರ್ಥಮಾಡಿಕೊಳ್ಳಲು ಸಾಧ್ಯ? ಅವನ ಆಟಗಳಿಗೆ ಕೊನೆಯೇ ಇಲ್ಲ. ಆಟಗಳನ್ನು ಆಡಿದ ನಂತರ ಅವನು ಏಕಾಂತವಾಗಿ ಉಳಿಯುತ್ತಾನೆ. ॥125॥ "ಓಹ್! ನೀವೆಲ್ಲರೂ ಒಬ್ಬರಿಗಿಂತ ಮತ್ತೊಬ್ಬರು ಜ್ಞಾನ ಪಿಪಾಸುಗಳು. ನಾವು ಸಾಧಾರಣ ವ್ಯಕ್ತಿಗಳು. ಬಾಬಾರವರ ಅಗಮ್ಯ ವ್ಯಕ್ತಿತ್ವವನ್ನು ನಾವು ಹೇಗೆ ಅರ್ಥಮಾಡಿಕೊಳ್ಳಲು ಸಾಧ್ಯ? ॥126॥ "ಅವರು ಏನು ಹೇಳಬೇಕೆಂದಿರುವರೋ ಅದನ್ನು ನಿನ್ನೊಡನೆ ಸಂಭಾಷಣೆಯಲ್ಲಿ ತೊಡಗಿದ್ದಾಗಲೇ ಏಕೆ ನಿನಗೆ ವಿವರಿಸಲಿಲ್ಲ? ಅವರು ನಿನ್ನನ್ನು ನನ್ನ ಹತ್ತಿರ ಏಕೆ ಕಳುಹಿಸಿದರು? ಕೇವಲ ಅವರು ಮಾತ್ರ ಅವರ ಕಾರ್ಯಗಳ ಅರ್ಥ

ತಿಳಿದಿದ್ದಾರೆ. ಏಕೆಂದರೆ ಅವರು ಕೇವಲ ಮರ್ತ್ಯರಲ್ಲ. ॥127॥ " ಈಗ ತಾನೇ ಈ ಯೋಚನಾತರಂಗಗಳು ಹರಿಯುತ್ತಿರುವಾಗಲೇ ನನಗೆ ಒಂದು ಕತೆಯ ನೆನಪಾಯಿತು. ಆದ್ದರಿಂದ ಈಗ ಅದರ ಬಗ್ಗೆ ಮಾತನಾಡುತ್ತಾ ಈ ಸಮಯದ ಸದುಪಯೋಗ ಮಾಡೋಣ. ॥128॥ "ನನ್ನ ಕಣ್ಣ ಮುಂದೆ ನಡೆದ ಈ ಪ್ರಸಂಗದ ಬಗ್ಗೆ ನಿನಗೆ ತಿಳಿಸುವೆನು. ಯಾರ ಮನಸ್ಸಿನಲ್ಲಿ ಯಾವುದೇ ನಿರ್ಧಾರವಿದ್ದರೂ ಅದು ನೆರವೇರುವಂತೆ ಮಾಡುತ್ತಿದ್ದರು. ॥129॥ ಕೆಲವೊಮ್ಮೆ, ಬಾಬಾರವರು ಸಹ ಒಬ್ಬನ ಪ್ರೀತಿ ಮತ್ತು ಭಕ್ತಿಗಳನ್ನು ತೀವ್ರವಾದ ಪರೀಕ್ಷೆಗೆ ಒಡ್ಡುತ್ತಿದ್ದರು. ಅವರು ಯಾವುದೇ ವಿಧಾನವನ್ನೂ ಬಿಡುತ್ತಿರಲಿಲ್ಲ. ತದನಂತರವೇ ಉಪದೇಶ ನೀಡುತ್ತಿದ್ದರು." ॥130॥ 'ಉಪದೇಶ' ಎನ್ನುವ ಪದವನ್ನು ಕೇಳಿದ ಕೂಡಲೇ ನನಗೆ ಸಾಠೆಯ 'ಗುರುಚರಿತ್ರೆಯ ಬಗ್ಗೆ ನಡೆದ ಒಂದು ಘಟನೆಯ ನೆನಪಾಯಿತು. ನಿಜವಾಗಿಯೂ ನನ್ನ ಮನಸ್ಸಿಗೆ ಮಿಂಚು ಹೊಡೆದಂತಾಯಿತು. ॥131॥ ಬಹುಶಃ ಈ ಘಟನೆ ಮಸೀದಿಯಲ್ಲಿ ನನ್ನ ಚಂಚಲ ಮನಸ್ಸನ್ನು ಸಾಂತ್ವನಗೊಳಿಸಲು ಸಂಭವಿಸಿರಬಾರದೇಕೆ? ಇದು ನಿಜವಾಗಿಯೂ ಅಘಟಿತ ಘಟನೆಯೇ ಆಗಿದೆ. ॥132॥ ಅದು ಹಾಗಿರಲಿ. ಈ ಯೋಚನಾ ಎಳೆಯನ್ನು ನಾನು ಕೂಡಲೇ ತಡೆದೆನು. ನನಗೆ ಆ ಕತೆಯನ್ನೇಳುವ ಆತುರ ಇಮ್ಮಡಿಯಾಯಿತು. ಅದು ಹೇಗೆ ತೃಪ್ತಿಹೊಂದಿತು ಎಂಬುದನ್ನು ನೋಡೋಣ. ॥133॥ ಆದುದರಿಂದ, ಬಾಬಾರವರ ಬಗೆಗಿನ ಕತೆಗಳನ್ನು ಹೇಳಲು ಪ್ರಾರಂಭಿಸಿದಕೂಡಲೇ, ನಿಧಾನವಾಗಿ ಅವುಗಳನ್ನು ಅನಾವರಣ ಮಾಡಿದಾಗ, ಬಾಬಾರವರಿಗೆ ಭಕ್ತರ ಬಗ್ಗೆ ಇದ್ದ ವಾತ್ಸಲ್ಯದ ಅರಿವಾಗಿ ನಾನು ಸ್ವಲ್ಪವಾಗಿ ಆನಂದಪಟ್ಟೆನು.॥134॥ ಅನಂತರ, ಅವನು ಮತ್ತೊಂದು ಕತೆಯನ್ನು ಹೇಳಿದನು. ಅಲ್ಲಿ ದೇಶಮುಖನ ಪತ್ನಿ ಇದ್ದಳು. ಅವರೆಲ್ಲರೂ ಸಂತರ ಸತ್ಸಂಗದಲ್ಲಿ ಸ್ವಲ್ಪ ಸಮಯ ಕಳೆಯಲು ಇಚ್ಛಿಸುತ್ತಿದ್ದರು. ॥135॥ ಸಾಯಿಬಾಬಾರವರ ಕೀರ್ತಿಯನ್ನು ಕೇಳಿ, ಆ ಮಹಿಳೆಯು ಶಿರಡಿಗೆ ಒಂದು ಗುಂಪು ಜನರ ಜೊತೆ ಸಂಗಮನೇರ್‌ನಿಂದ ಬಾಬಾರವರ ದರ್ಶನಕ್ಕಾಗಿ ಬಂದಳು. ॥136॥ ಅವಳು ಖಶಾಬಾ ದೇಶಮುಖನ ಪತ್ನಿ, ಅವಳ ಹೆಸರು ರಾಧಾಬಾಯಿ. ಸಾಯಿಯಲ್ಲಿನ ನಿಷ್ಠೆಯಿಂದ ತುಂಬಿದವಳಾಗಿ ಅವರ ಚರಣಗಳಲ್ಲಿ ನಮಸ್ಕರಿಸಿ ದರ್ಶನ ಪಡೆದಳು. ॥137॥ ಅವಳು ಯಥಾಸಾಂಗವಾಗಿ ದರ್ಶನ ಪಡೆದಳು. ಅವಳ ದೀರ್ಘ ಪಯಣದ ಆಯಾಸ ಮಾಯವಾಗಿತ್ತು, ನಂತರ ಅವಳು ಸಾಯಿಯ ಶ್ರೀಚರಣಗಳ ಅನುತಗದಲ್ಲಿ ತನ್ನ ಉದ್ದೇಶವನ್ನು ನೆನಪಿಸಿಕೊಂಡಳು. ॥138॥ ಅವಳು ಸಾಯಿಸಮರ್ಥರನ್ನು ಗುರುವನ್ನಾಗಿ ಸ್ವೀಕರಿಸಲು ಭಾವೋದ್ದೀಪಿತಳಾಗಿ ಕಾತರಳಾಗಿದ್ದಳು. ಅದಕ್ಕಾಗಿ ಅವರು ಅವಳಿಗೆ ಉಪದೇಶ ನೀಡಿ ಅದರಿಂದ ಅವಳು ಜೀವನದ ಗುರಿಯನ್ನು ತಲುಪಬಹುದೆಂಬ ಉದ್ದೇಶವಿತ್ತು. ॥139॥ ಆ ಮಹಿಳೆ ವಯೋವೃದ್ಧಳಾಗಿದ್ದು, ಬಾಬಾರವರಲ್ಲಿ ನಿಷ್ಠಾವಂತಳಾಗಿದ್ದಳು. ಅವರಿಂದ ಏನಾದರೂ ಉಪದೇಶ ಪಡೆಯಬೇಕೆಂಬುದು ಅವಳ ದೃಢ ನಿರ್ಧಾರವಾಗಿತ್ತು. ॥140 ॥ "ಬಾಬಾರವರು ನನಗೆ ವೈಯಕ್ತಿಕವಾಗಿ ಅನುಗ್ರಹಿಸುವವರೆಗೆ ಮತ್ತು ನನ್ನ ಕಿವಿಯಲ್ಲಿ ಮಂತ್ರವನ್ನು ಉಪದೇಶಿಸುವವರೆಗೆ ನಾನು ಮತ್ತೆಲ್ಲಿಯೂ

ಹೋಗುವುದಿಲ್ಲ. ॥141॥ 'ಮಂತ್ರವು ಸಾಯಿಯ ಮುಖದಿಂದಲೇ ನೇರವಾಗಿ ಬರಬೇಕು. ಏಕೆಂದರೆ ಬೇರೆ ಯಾರಿಂದಲಾದರೂ ಪಡೆದರೆ ಅದು ಮಲಿನವಾಗಿರುತ್ತೆ, ಶ್ರೀ ಸಾಯಿ ಭಗವಾನರು ಪರಮಪಾವನರಾದ ಸಂತಶ್ರೇಷ್ಠರು. ಅವರು ನನ್ನನ್ನು ಅನುಗ್ರಹ ಪಾತ್ರಳನ್ನಾಗಿ ಮಾಡಲಿ." ॥142॥ ಅಂತಃಕರಣದಲ್ಲಿ ಈ ನಿರ್ಧಾರ ಮಾಡಿ, ಆ ಮಹಿಳೆಯು ಆಹಾರ ಪಾನೀಯಗಳನ್ನು ತ್ಯಜಿಸಿ ಅದರ ಬಗ್ಗೆ ದೃಢ ನಿಶ್ಚಯ ಹೊಂದಿದ್ದಳು. ॥143॥ ಅವಳು ವೃದ್ಧಳಾಗಿದ್ದೂ ಸಹ ಎಳ್ಳಷ್ಟೂ ಆಹಾರ ತಿಂದಿರಲಿಲ್ಲ. ಒಂದು ಗುಟುಕು ನೀರನ್ನೂ ಕುಡಿದಿರಲಿಲ್ಲ. ಆದರೂ ಅವಳುಉಪದೇಶಕ್ಕಾಗಿ ಅಷ್ಟು ನಿಷ್ಠೆಯಿಂದ ಇದ್ದಳು. ॥144॥ ಮೂರು ದಿನಗಳ ಕಾಲ ಆ ವೃದ್ಧಳು ಹಗಲು–ರಾತ್ರಿ ಉಪವಾಸವಿದ್ದಳು. ಮತ್ತು ಬಾಬಾರವರು ಉಪದೇಶ ನೀಡುವವರೆಗೆ ಉಪವಾಸವನ್ನು ಮುಂದುವರೆಸಲು ನಿಶ್ಚಯಿಸಿದ್ದಳು. ಪ್ರಾಯೋಪವೇಶ ಮಾಡಲು ಯೋಚಿಸಿದ್ದಳು. ॥145॥ ಮಂತ್ರೋಪದೇಶ ಪಡೆಯದೆ ಹಿಂತಿರುಗಿದರೆ ಶಿರಡಿಯ ಯಾತ್ರೆಯ ಅರ್ಥವೇನು? ಅವಳು ತಾನು ಇಳಿದುಕೊಂಡಿದ್ದ ಜಾಗದಿಂದ ಚಲಿಸದೆ ಅಲ್ಲಿಯೇ ಉಳಿದಳು ಮತ್ತು ಅಲ್ಲಿಯೇ ಸಾಯಲು ಸಿದ್ಧಳಾದಳು. ॥146॥ ಅವಳು ಅನ್ನಪಾನವನ್ನು ಮೂರುದಿನಗಳ ಕಾಲ ಬಿಟ್ಟಿದ್ದಳು. ಈ ರೀತಿ ತಪಸ್ಸು ಮಾಡಿದಳು, ಆ ಮಹಿಳೆಯು ಅತಿಯಾದ ನಿತ್ರಾಣ ಹೊಂದಿದಳು ಮತ್ತು ಬಹಳ ಖಿನ್ನಳಾದಳು. ॥147॥ ಮಾಧವರಾವ್‌ನು ಚಿಂತಿತಗೊಂಡನು. ಮತ್ತು ಈ ಪರಿಸ್ಥಿತಿಯು ಸರಿಯಿಲ್ಲವೆಂದು ವಿಚಾರ ಮಾಡಿದನು. ಮುಂದೇನು ಮಾಡಬೇಕು? ಈ ಮುದುಕಿಯಾದರೋ ಮೃತ್ಯುವಿಗೆ ಅಂಜಿದವಳಲ್ಲ. ॥148॥ ಅನಂತರ ಅವನು ಮಸೀದಿಗೆ ಹೋದನು ಮತ್ತು ಬಾಬಾರವರ ಬಳಿಯಲ್ಲಿ ಕುಳಿತನು. ಅವರು ಆದರಪೂರ್ವಕವಾಗಿ ನಿತ್ಯಕ್ರಮದ ಕುಶಲ ವೃತ್ತಾಂತವನ್ನು ಪ್ರಶ್ನಿಸಿದರು. ॥149॥ "ಶಾಮ, ಈ ದಿನ ಏನು ವಿಚಾರ ಮಾಡುತ್ತಿರುವೆ! ಎಲ್ಲ ಸಮಾಚಾರಗಳೂ ಸರಿಯಾಗಿವೆಯೇ? ಆ ನಾರಾಯಣ ತೇಲಿಯು[13] ಊರಿನಿಂದ ಹೊರಗೆ ಹೋಗಿ ನನಗೆ ಬಹಳ ತೊಂದರೆ ಕೊಡುತ್ತಿದ್ದಾನೆ." ॥150॥ ಆ ಮುದುಕಿಯ ಪರಿಸ್ಥಿತಿಯ ಬಗ್ಗೆ ಚಿಂತಿಸುತ್ತ, ಶಾಮನು ಈಗಾಗಲೇ ಖಿನ್ನನಾಗಿದ್ದನು. ಅವನು ನಿಜವಾಗಿ ಏನು ಮಾಡಬಲ್ಲನು? ಧೈರ್ಯವನ್ನು ಒಟ್ಟುಮಾಡಿಕೊಂಡು ಬಾಬಾರವರನ್ನು ಕೇಳಿದನು. ॥151॥ "ಹೇ ದೇವ! ಈ ತುಮುಲ ಮತ್ತು ದುಃಖಗಳು[14] ಏತಕ್ಕೆ? ನಿಮ್ಮ ಆಚರಣೆಗಳನ್ನು ಇತರರು ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ. ನೀವು ಜನರು ಈ ಹಳ್ಳಿಗೆ ಬರುವಂತೆ ಮಾಡುವಿರಿ ಮತ್ತು ಈಗ ನೀವು ನನ್ನ ವಿಚಾರಗಳ ಬಗ್ಗೆ ಕೇಳುತ್ತಿರುವಿರಿ. ॥152॥ "ದೇಶಮುಖಿನ ಹೆಂಗಸು ಈಗ ವೃದ್ಧಳಾಗಿದ್ದಾಳೆ ಮತ್ತು ಮೂರು ದಿನಗಳಿಂದ ಅನ್ನ–ಪಾನವಿಲ್ಲದೆಯೇ ಕಳೆದಿದ್ದಾಳೆ, ಮತ್ತು ಕೇವಲ ನಿಮ್ಮನ್ನೇ ಅವಲಂಬಿಸಿದ್ದಾಳೆ. ॥153॥ "ಆ ಮುದುಕಿಯು ಬಹಳ ಹಠವಾದಿ ಮತ್ತು ನಿಮ್ಮ ಮೇಲೆ ಅತ್ಯಂತ ನಿಷ್ಠೆ ಉಳ್ಳವಳಾಗಿದ್ದಾಳೆ. ನೀವು ಅವಳ ಕಡೆ ದೃಷ್ಟಿ ಹರಿಸಲೂ ಸಿದ್ಧರಿಲ್ಲ. ನೀವೇಕೆ ಅವಳಿಗೆ ಅಷ್ಟು ಕಷ್ಟ ಕೊಡುತ್ತಿರುವಿರಿ? ॥154॥ "ಅದೂ ಅಲ್ಲದೆ ಅವಳು ಒಣಕಟ್ಟೆಗೆಯ ಅರ್ಧದಷ್ಟಾಳೆ, ಅವಳು ದುರಾಗ್ರಹಿಯೂ

ಮಹಾಕಷ್ಟಗಳೂ ಆಗಿದ್ದಾಳೆ. ಖಂಡಿತವಾಗಿಯೂ ಆಹಾರವಿಲ್ಲದೆ ಅವಳು ಪ್ರಾಣ ಕಳೆದುಕೊಳ್ಳುತ್ತಾಳೆ. ॥155॥ "ಮುಂದೆ ಈ ರೀತಿ ಹೇಳುವರು – ಒಬ್ಬ ಮುದುಕಿ ದರ್ಶನ ಪಡೆಯಲು ಬಂದಳು ಮತ್ತು ಉಪದೇಶಕ್ಕಾಗಿ ಇಚ್ಛಿಸಿದಳು. ಆದರೆ ಸಾಯಿಬಾಬಾಗೆ ಅವಳ ಮೇಲೆ ಸ್ವಲ್ಪವೂ ಕರುಣೆ ಇರಲಿಲ್ಲ. ಮತ್ತು ಅವಳನ್ನು ಸಾಯಲು ಬಿಟ್ಟುಬಿಟ್ಟರು. ॥156॥ "ಬಾಬಾ, ಈ ರೀತಿಯ ಅಪವಾದ ಹರಡದೇ ಇರಲಿ. ಅವಳಿಗೆ ಯಾವುದು ಒಳ್ಳೆಯದೋ ಅದನ್ನು ಕೊಡಿ. ಅವಳ ಮೇಲೇಕೆ ಕೃಪೆ ತೋರಬಾರದು? ಮತ್ತು ಈ ಪ್ರಮಾದವನ್ನು ಏಕೆ ತಪ್ಪಿಸಬಾರದು? ॥157॥ "ಅವಳಲ್ಲಿ ಕಿಂಚಿತ್ತೂ ತ್ರಾಣವಿಲ್ಲ. ಅವಳ ಪ್ರಾಣ ಒಂದು ಎಳೆಯಿಂದ ನೇತಾಡುತ್ತಿದೆ. ಆ ಮುದುಕಿಯು ಸಾಯುತ್ತಾಳೆ ಮತ್ತು ನೀವುಅಪವಾದಕ್ಕೊಳಗಾಗುವಿರಿ. ॥ 58॥ "ಆ ಮುದುಕಿಯ ತಪಸ್ಸು ದುರ್ಧರವಾದದ್ದು. ನಮಗೆ ಬಹಳ ಚಿಂತೆ ಉಂಟಾಗಿದೆ. ದುರ್ದೈವವಶಾತ್, ಆ ಮುದುಕಿಯೇನಾದರೂ ಮರಣಹೊಂದಿದರೆ ಅದು ಅನುಚಿತವೇ ಸರಿ. ॥159॥ "ಆ ಮುದುಕಿಯು ಆವೇಶಕ್ಕೊಳಗಾಗಿ ತನಗೆ ತಾನೇ ಹಿಂಸಿಸಿಕೊಳ್ಳಲು ಉದ್ವಿಗ್ನಳಾಗಿದ್ದಾಳೆ. ನೀವು ಅವಳ ಮೇಲೆ ಕೃಪಾನುರಾಗವನ್ನು ತೋರಿಸದಿದ್ದಲ್ಲಿ ಅವಳು ಜೀವಿಸಿ ಉಳಿಯುವ ಯಾವುದೇ ಭರವಸೆ ಇಲ್ಲ. ನಿಮ್ಮ ಮುಖದಿಂದಲೇ ಏನನ್ನಾದರೂ ಹೇಳಿ." ॥160॥ ಈ ಅಧ್ಯಾಯವು ನಿಗದಿಪಡಿಸಿದ ಸೀಮೆಯನ್ನು ಮುಟ್ಟಿದೆ. ಶ್ರೋತೃಗಳ ಆಶೆಯನ್ನು ಮುಂದಿನ ಅಧ್ಯಾಯದಲ್ಲಿ ಬಹಳ ಪ್ರೀತಿಯಿಂದ ನೆರವೇರಿಸಲಾಗುವುದು. ॥161॥ ಅನಂತರ ಬಾಬಾರವರು ಆ ಮುದುಕಿಗೆ ಪ್ರೀತಿಯಿಂದ ಉಪದೇಶ ನೀಡಿದರು. ಅದನ್ನು ಆದರದಿಂದ ಕೇಳಿದಲ್ಲಿ ಅವಿದ್ಯೆಯು ನಾಶವಾಗುವುದು. ॥162॥ ಹೇಮಾಡನು ಸಾಯಿಗೆ ಶರಣಾಗಿದ್ದಾನೆ. ಶ್ರೋತೃಗಳಿಗೆ ನಮಸ್ಕರಿಸುತ್ತಾನೆ. ಈಗ ಭವಸಾಗರವನ್ನು ಕೇವಲ ಅಲ್ಪಾಯಾಸದಿಂದಲೇ ದಾಟಿಸುವ ವಿಷಯವನ್ನು ಕೇಳಲು ಸಿದ್ಧರಾಗಿ. ॥163॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ನನ್ನ ಮೇಲೆ ದಯಪಾಲಿಸಿದ ಕರುಣೆ" ಎಂಬ ಹದಿನೆಂಟನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ರಾಮನ ಗುಣಗಾನ, ಸುಲಭ ಮತ್ತು ಸರಳವಾದ ಈ ಸ್ತೋತ್ರವನ್ನು ಸಾಮಾನ್ಯರೂ ಉಪಯೋಗಿಸಬಲ್ಲರು.

2. ಇದು ನರಸಿಂಹಸರಸ್ವತಿಸ್ವಾಮೀಜಿಯವರ ಚರಿತ್ರೆ, ದತ್ತಾತ್ರೇಯರ ಅವತಾರವೆಂದು ಭಾವಿಸುತ್ತಾರೆ. ಇದನ್ನು ಪಾರಾಯಣಮಾಡಿದಲ್ಲಿ ಎಲ್ಲ ಕಷ್ಟಗಳನ್ನೂ ದೂರ ಮಾಡುತ್ತದೆ ಮತ್ತು ಮುಕ್ತಿಯು ದೊರಕುತ್ತದೆ ಎಂಬ ನಂಬಿಕೆ ಇದೆ.

3. 'ಪುರಾಣ'ಗಳಲ್ಲಿ ಪಾಂಡಿತ್ಯ ಹೊಂದಿದ ಬ್ರಾಹ್ಮಣ.

4. ಬಾಬಾರವರ ದರ್ಶನಾನಂತರ ಏಳು ವರ್ಷಗಳು.

5. ಏಕನಾಥ ಮಹಾರಾಜರು ರಚಿಸಿದ 'ಭಾಗವತ'ದ ಹನ್ನೊಂದನೆಯ ಸ್ಕಂದದ ಮೇಲಿನ ಭಾಷ್ಯ. ಇದರಲ್ಲಿ ಮೂವತ್ತೆರಡು ಅಧ್ಯಾಯಗಳಿವೆ.

6. ವ್ಯಾಸರು ಪ್ರಸಿದ್ಧರಾದ ಗ್ರಂಥ ಕರ್ತರು. ಕೆಲವೊಮ್ಮೆ ತಪ್ಪಾಗಿ ಕರ್ತೃತ್ವವನ್ನು ಕೊಟ್ಟಿದ್ದಾರೆ.

7. ವ್ಯಾಸರ ಪುತ್ರ

8. ಪಾಂಡವರ ಮೊಮ್ಮಗ

9. ಹದಿನಾಲ್ಕನೆಯ ಶತಮಾನದಲ್ಲಿದ್ದ, ಸಂಸ್ಕೃತ ಭಾಷೆಯಲ್ಲಿ 'ಭಾಗವತ' ಮತ್ತು 'ಗೀತೆ'ಯ ಟೀಕಾಕಾರ.


10. ದತ್ತರಿಂದ ಅನುಗ್ರಹೀತರಾದ ಸಂತರು ಮತ್ತು ಏಕನಾಥರ ಗುರು, ಹದಿನಾರನೆಯ ಶತಮಾನದವರು.

11. ತುಳಸಿ ಗಿಡ ಹೊಂದಿರುವವನು.

12. ಏಕನಾಥರಿಂದಲೂ ಬರೆಯಲ್ಪಟ್ಟಿರುವುದು.

13. ನಿಜವಾದ ವ್ಯಕ್ತಿಯಲ್ಲ. ಆದರೆ ಬಾಬಾರವರಿಗೆ ತೊಂದರೆ ಕೊಟ್ಟುದನ್ನು ವ್ಯಕ್ತಿತ್ವಕ್ಕೆ ರೂಪುಗೊಳಿಸಲಾಗಿರುವುದು.

14. ಮರಾಠಿಯ ಪದ ಗುಚ್ಛ 'ಗೌಡ ಬಂಗಾಲ'ವನ್ನು ಉಪಯೋಗಿಸಲಾಗುತ್ತದೆ. ಏಕೆಂದರೆ ಎರಡೂ ರಾಜ್ಯಗಳು ಮಾಯ ಮಂತ್ರಗಳಿಗೆ ಹೆಸರುವಾಸಿಯಾಗಿವೆ.



# ಅಧ್ಯಾಯ - 19

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ನನ್ನ ಮೇಲೆ ದಯಪಾಲಿಸಿದ ಕರುಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸಾಯಿಯು ಸೂಕ್ಷ್ಮಗಳಲ್ಲಿ ಅತಿ ಸೂಕ್ಷ್ಮ, ಮಹತ್ತಿನಲ್ಲಿ ಅತಿ ಮಹತ್ತು, ಇಡೀ ಬ್ರಹ್ಮಸ್ತಂಭ ಪರ್ಯಂತ ವ್ಯಾಪಿಸಿರುವವರು ಮತ್ತು ಇಡೀ ವಿಶ್ವವನ್ನೇ ವ್ಯಾಪಿಸಿರುವವರು. ॥1॥ ನನ್ನಲ್ಲಿ ಒಂದು ಇಚ್ಛೆ ಉದಯಿಸಿದೆ. ಅಂತಹ ಸದ್ವಸ್ತುವನ್ನು, ರಂಗು ರೂಪಗಳ ಸಹಿತ ಈ ಚರ್ಮಚಕ್ಷುಗಳಿಂದ ನೋಡುವ ಇಚ್ಛೆಯಾಗಿದೆ. ॥2॥ ಸೂರ್ಯೋಪಾಸಕರು ಅವರನ್ನು ಆರತಿಯ ಮೂಲಕ ಭಕ್ತಿಭಾವದಿಂದ ಪೂಜಿಸುವು. ಗಣಪತಿಯ ಆರಾಧಕರು ಬೆಲ್ಲದ ಉಂಡೆಯಿಂದ ಗಣಪತಿಯನ್ನು ಮಾಡಿ ಬೆಲ್ಲವನ್ನು ಗಣಪತಿಗೆ ನೈವೇದ್ಯ ಮಾಡುತ್ತಾರೆ. ॥3॥ ಇಲ್ಲದಿದ್ದಲ್ಲಿ ಮಹಾಸಾಗರದ ನೀರನ್ನು ಅಂಗೈಯಲ್ಲಿ ಹಿಡಿದು ಅದಕ್ಕೆ ಅರ್ಘ್ಯಕೊಟ್ಟಂತೆ ಇದೆಲ್ಲ ಅನುಚಿತವಾಗಿ ಕಾಣುತ್ತದೆ. ॥4॥ ಸೂರ್ಯ ಮತ್ತು ಸಮುದ್ರವೆರಡೂ ಮಹಾ ಪ್ರಭಾವಿಗಳು. ಆದರೆ ಅವೆರಡೂ ಭಕ್ತನ ಭಕ್ತಿಭಾವವನ್ನು ಅವಲಂಬಿಸಿವೆ ಮತ್ತು ಉಚಿತವೋ ಅನುಚಿತವೋ ನೋಡುವುದಿಲ್ಲ. ಅವು ಭಕ್ತರ ಮೇಲಿನ ಗೌರವಕ್ಕೆ ಪಾತ್ರವಾಗಿರುತ್ತವೆ. ॥5॥ 'ಸಮಾನಶೀಲರು ವ್ಯಸನದಲ್ಲಿ ಸಖ್ಯರು' ಎಂಬ ನಾಣ್ನುಡಿ ಇದೆ. ಇದು ಸಾಮಾನ್ಯ ನಿಯಮವಾಗಿದ್ದರೂ ದೇಹ ಮತ್ತು ಆತ್ಮದ ಸಂಗಮಕ್ಕೆ ಅಪವಾದ. ॥6॥ ಅವೆರಡೂ ಭಿನ್ನ ಸ್ವಭಾವದವು. ಆದರೆ ಅವೆರಡರ ನಡುವೆ ಒಂದು ವಿಲಕ್ಷಣ ಸ್ನೇಹವಿದೆ. ಒಂದು ಮತ್ತೊಂದನ್ನು

ಅಗಲಿ ಸಂತೋಷದಿಂದ ಒಂದು ಕ್ಷಣವೂ ಇರಲಾರವು. ॥7॥ ಆದರೂ, ಈ ದೇಹವು ನಶ್ವರ. ಆತ್ಮನಾದರೋ ನಿರ್ವಿಕಾರವೂ ಅಕ್ಷರವೂ ಆಗಿದೆ. ಆದರೆ ಇವೆರಡರ ಮಧ್ಯೆ ಇರುವ ಪ್ರೇಮವು ಅಮರ. ಅದರಿಂದಲೇ ಸಂಸಾರ ಚಕ್ರದ ಪರಿಭ್ರಮಣೆ ಉಂಟಾಗುತ್ತದೆ. ॥8॥ ಆತ್ಮವು ಮಹಾನ್ ಶಕ್ತಿಯುತವಾದದ್ದು. ಅದು ಸೂಕ್ಷ್ಮಕಿಂತಲೂ ಅತಿಸೂಕ್ಷ್ಮ, ಅವ್ಯಕ್ತ ಮತ್ತು ವಿಶ್ವವ್ಯಾಪಿ. ಅವ್ಯಕ್ತದಿಂದ ಸೃಷ್ಟಿಯಾದ ವ್ಯಕ್ತ ಸ್ವರೂಪವೇ ಪ್ರಕೃತಿ. ಅದನ್ನೇ ಮಾಯೆ ಎಂದು ಹೇಳುತ್ತಾರೆ. ॥9॥ ಮನುಷ್ಯನು ಎಲ್ಲಕ್ಕಿಂತ ಸೂಕ್ಷ್ಮ. ಎಲ್ಲ ಇಂದ್ರಿಯಗಳೂ ಅದರಲ್ಲಿ ಲೀನವಾಗಿರುತ್ತವೆ. ಅದು ಅಂತಿಮವಾದ ಪರಮಗತಿ ಮತ್ತು ಅದೇ ಶುದ್ಧವಾದ ಪರಬ್ರಹ್ಮ. ॥10॥ ಅಂತಹ ಆತ್ಮವು ಸಂಸಾರದಲ್ಲಿರುವಂತೆ ಕಾಣುತ್ತದೆ ಮತ್ತು ಕರ್ಮಫಲವನ್ನು ಅನುಭವಿಸಿ ಭ್ರಮಾಧೀನವಾಗಿರುತ್ತದೆ. ಅದು ಮಾತ್ರ ಯಾವುದೇ ವಿಕಾರವಿಲ್ಲದೆ ನಿರ್ಮಲವಾದ ಸ್ಫಟಿಕಮಣಿಯ ತರಹ ಇರುತ್ತದೆ. ॥11॥ ಸ್ಫಟಿಕಮಣಿಯು ಕೆಂಪು, ಕಪ್ಪು, ಹಳದಿ ಯಾವ ಬಣ್ಣವಾಗಿಯಾದರೂ ಕಾಣಿಸಬಹುದು. ಏಕೆಂದರೆ ಅದು ಎಲ್ಲ ಬಣ್ಣಗಳನ್ನೂ ಪ್ರತಿಬಿಂಬಿಸುತ್ತದೆ. ಆದರೆ ಅದು ಬಣ್ಣಗಳಿಂದ ವಿಭಿನ್ನವಾಗಿರುತ್ತದೆ. ಅದು ನಿರ್ವಿಕಾರ, ನಿರ್ಮಲ ಮತ್ತು ಬದಲಾಗಲು ಸಾಧ್ಯವಿಲ್ಲ. ॥12॥ ಮರುಭೂಮಿಯಲ್ಲಿರುವ ಮರೀಚಿಕೆಯು ಮೆರುಗು ಕೊಟ್ಟು ಮುತ್ತಿನ ಹೊಳಪು ಹೊಳೆಯುವಂತೆ, ಅಥವಾ ಹಗ್ಗದ ಸಿಂಬೆಯು ಸರ್ಪದಂತೆ ತೋರುತ್ತದೆ. ॥13॥ ಹಗ್ಗವನ್ನು ಹಾವೆಂದು ಆರೋಪಿಸುವುದು ಅಪ್ರಮಾಣವಾದುದು. ಹಾಗೆಯೇ 'ಈ ದೇಹವೇ ನಾನು' ಎಂದು ಆಲೋಚಿಸುತ್ತ ಅದರ ಅಭಿಮಾನದಲ್ಲಿರುವುದು ಕೂಡಾ ಸರಿಯಲ್ಲ. ಏಕೆಂದರೆ ಅದು ಮುಕ್ತವಾದ ಆತ್ಮವನ್ನೂ ಬಂಧಿಸುತ್ತದೆ. ॥14॥ ದೇಹ, ಇಂದ್ರಿಯ, ಮನಸ್ಸು ಮತ್ತು ಪ್ರಾಣಗಳಿಂದ ಬೇರೆಯಾದ ಆತ್ಮವು ವಿಲಕ್ಷಣವಾದದ್ದು. ಅದು ಸ್ವಯಂಜ್ಯೋತಿ, ಶುದ್ಧ ಚೈತನ್ಯ ಸ್ವರೂಪ, ಅದು ನಿರಾಕಾರವೂ ರೂಪವನ್ನು ಬದಲಿಸಲು ಸಾಧ್ಯವಿಲ್ಲದುದೂ ಆಗಿದೆ. ॥15॥ ದೇಹ, ಬುದ್ಧಿ, ಮನಸ್ಸು, ಪ್ರಾಣ ಇವುಗಳ ಅಭಿಮಾನ ಇರುವವರೆಗೆ ಜೀವವು ಕರ್ಮಫಲಗಳನ್ನು ಅನುಭವಿಸುತ್ತಿರಬೇಕು. ಕರ್ತವ್ಯ ಮಾಡುತ್ತಿರಬೇಕು ಮತ್ತು ಸುಖದುಃಖಗಳನ್ನೂ ಅನುಭವಿಸುತ್ತಿರಬೇಕು. ಅವು ಅನಿವಾರ್ಯ. ॥16॥ ಆಲದ ಮರದ ಬೀಜವು ಅತಿ ಸಣ್ಣದು. ಅದರಲ್ಲಿ ಆಲದ ಮರದ ಶಕ್ತಿಯೇ ಅಡಗಿರುತ್ತದೆ. ಒಂದು ಮರದಲ್ಲಿ ಅಸಂಖ್ಯಾತ ಬೀಜಗಳಿರುತ್ತವೆ. ಕೋಟಿಗಟ್ಟಲೆ ವೃಕ್ಷಗಳು ಅವುಗಳಲ್ಲಿರುತ್ತವೆ. ॥17॥ ಈ ರೀತಿ ಬೀಜಗಳಿರುವಷ್ಟು ವೃಕ್ಷಗಳು ಅಸ್ತಿತ್ವಕ್ಕೆ ಬರುತ್ತವೆ. ಈ ತತ್ತ್ವವು ಪ್ರಳಯದ ಅಂತ್ಯದವರೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ನಿಜವಾಗಿಯೂ ವಿಶ್ವದ ರೀತಿ ಇದು. ಅದನ್ನು ಲಕ್ಷ್ಯಗೊಟ್ಟು ಅವಲೋಕಿಸಿರಿ. ॥18॥ ಶಾಶ್ವತ, ನಿರ್ಭಯ, ಮುಕ್ತ, ಸ್ವತಂತ್ರ ಆಗಿರವ ಪರಮಾತ್ಮನನ್ನು ಹೊಂದುವುದೇ ಜೀವನದ ಸಫಲತೆ. ಜನ್ಮತಾಳಿದುದಕ್ಕಾಗಿರುವ ಅಂತಿಮ ಕರ್ತವ್ಯವೇ ಅದು. ॥19॥ ಜ್ಞಾನವಿಲ್ಲದೆ ಮೋಕ್ಷವಿಲ್ಲ. ಮತ್ತು ವೈರಾಗ್ಯವಿಲ್ಲದೆ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ವಿರಕ್ತಿಯ ಕಲ್ಪನೆಯು ಬೇರೂರುವವರೆಗೆ ಮನಸ್ಸು ಈ ಸಂಸಾರ ಅನಿತ್ಯವೆಂದು ಒಪ್ಪಿಕೊಳ್ಳುವುದಿಲ್ಲ. ॥20॥ ಈ ಅನಿತ್ಯವಾದ

ಸಂಸಾರದ ಮಾರ್ಗದಲ್ಲಿ ಈ ಜಗತ್ತೆಂಬ ಭ್ರಮೆಯಲ್ಲಿ ದೃಷ್ಟಿಯು ಮಂಕಾಗುತ್ತದೆ. ಮತ್ತು ಯಾತ್ರಿಕನು ಮಾರ್ಗಮಧ್ಯದಲ್ಲಿಯೇ ತಡವರಿಸಿ ಯಾವ ದಿಕ್ಕಿನಲ್ಲಿ ಪಯಣಿಸಬೇಕೆಂಬುದನ್ನೇ ಅರ್ಥಮಾಡಿಕೊಳ್ಳಲಾರನು. ॥21॥ ಇದೇ ಜಗತ್ತಿನ ಆಭಾಸ ರೀತಿ. ಇದು ಮಿಥ್ಯೆ(ಸುಳ್ಳು)ಯಾದ ಮಾಯೆಯ ವಿಲಾಸವನ್ನುಂಟುಮಾಡುತ್ತದೆ. ಒಂದು ಸುಂದರ ಸ್ವಪ್ನದ ವಿನ್ಯಾಸದಂತೆ ಪ್ರಪಂಚದಿಂದಲೇ ಹುಟ್ಟಿರುತ್ತದೆ. ಆದ್ದರಿಂದ ಅದಕ್ಕೆ ಅಂಟಿಕೊಂಡಿರುವ ಪ್ರಯತ್ನವನ್ನೇಕೆ ಮಾಡಬೇಕು? ॥22॥ ಕನಸಿನಿಂದ ಎದ್ದ ಕೂಡಲೇ ಕನಸು ಮಾಯವಾಗುತ್ತದೆ. ಆದ್ದರಿಂದ ಆತ್ಮದಲ್ಲಿ ನಂಬಿಕೆ ಇಟ್ಟವನು ಈ ಪ್ರಪಂಚವನ್ನು ನೆನಪಿಸಿಕೊಳ್ಳಲು ಇಚ್ಛಿಸುವುದಿಲ್ಲ. ॥23॥ ಆತ್ಮದ ಸ್ವರೂಪವನ್ನು ತಿಳಿಯುವ ಜ್ಞಾನ ಹಾಗೂ ಆತ್ಮಪರಮಾತ್ಮರ ಸಂಯೋಗವು ಶೋಕ, ಮೋಹ ಇತ್ಯಾದಿ ಬಂಧನಗಳಿಂದ ಬಿಡುಗಡೆಯಾಗದ ಹೊರತು ಆತ್ಮಜ್ಞಾನದ ಪ್ರಕಾಶ ಬೆಳಗುವುದಿಲ್ಲ. ಇಷ್ಟೇ ಜಾಗೃತಿ ಎನ್ನುವರು. ॥24॥ ಇದು ಸರ್ವಶ್ರೇಷ್ಠ ಜ್ಞಾನವಾಗಿದ್ದರೂ ಬಾಬಾರವರು ಹಗಲು ರಾತ್ರಿ ಇದನ್ನು ಉಪದೇಶಿಸುತ್ತಿದ್ದರೂ ಸಾಧಾರಣ ಭಕ್ತರಿಗೆ ಭಕ್ತಿಮಾರ್ಗವನ್ನು ಉಪದೇಶಿಸುತ್ತಿದ್ದರು. ॥25॥ ಈ ಜ್ಞಾನಮಾರ್ಗದ ಮಹತ್ವವನ್ನು ಅವರು ವಿವರಿಸುತ್ತಿದ್ದರು. ಅದು ರಾಮಫಲ ಹಣ್ಣಿನ ರೀತಿಯಲ್ಲಿತ್ತು, ಮತ್ತು ಭಕ್ತಿಮಾರ್ಗವು ಸೀತಾಫಲ ಹಣ್ಣಿನ ರೀತಿ ಸರಳ ಹಾಗೂ ಮಧುರ ರಸದಿಂದ ಕೂಡಿರುತ್ತಿತ್ತು. ॥26॥ ಭಕ್ತಿಮಾರ್ಗವು ರಸಭರಿತ ಸೀತಾಫಲ ಮತ್ತು ಜ್ಞಾನಮಾರ್ಗವು ಪರಿಪಕ್ವವಾದ ರಾಮಫಲದ ರೀತಿ ಇದೆ. ಒಂದು ಮತ್ತೊಂದಕ್ಕಿಂತ ರಸಭರಿತ ಮತ್ತು ಮಧುರ ಪರಿಮಳದಿಂದ ಕೂಡಿವೆ. ॥27॥ ರಾಮಫಲವನ್ನು ಮರದ ಮೇಲೆಯೇ ಪಕ್ವವಾಗಲು ಬಿಟ್ಟು ನಂತರ ತಿಂದರೆ ಅದು ಬಹಳ ಸಿಹಿಯಾಗಿರುತ್ತದೆ. ಆದರೆ ಆ ಹಣ್ಣಿನ ತಿರುಳನ್ನು ಮಾಗುವ ಮೊದಲೇ ಮರದಿಂದ ಕಿತ್ತಿಟ್ಟು ಮಾಗಿಸಿದಾಗ ಅದರ ಸಿಹಿ ಅತಿ ಮಧುರವಾಗಿರುತ್ತದೆ. ॥28॥ ರಾಮಫಲವು ಮರದ ಕೊಂಬೆಯಲ್ಲಿಯೇ ಮಾಗಲು ಬಿಟ್ಟಾಗ ಸಿಹಿಯಾಗಿರುತ್ತದೆ. ಆದರೆ ಅದು ನೆಲದಮೇಲೆ ಬಿದ್ದರೆ ಅದರ ರುಚಿ ಇನ್ನೂ ಅಧಿಕವಾಗಿರುತ್ತದೆ. ಮರದ ಮೇಲೆಯೇ ಅದು ಮಾಗಿದರೆ ಅದರ ಸಿಹಿ ಮತ್ತೂ ಹೆಚ್ಚಾಗಿರುವುದು. ॥29॥ ಯಾರಿಗೆ ಅದನ್ನು ಮರದ ಮೇಲೆಯೇ ಪಕ್ವಗೊಳಿಸಲು ತಿಳಿದಿದೆಯೋ ಅವರು ಮಾತ್ರ ಅದರ ಸಿಹಿ ರುಚಿಯನ್ನು ಸವಿಯಬಹುದು. ಆದರೆ ಸೀತಾಫಲಕ್ಕೆ ಇಂತಹ ಶ್ರಮಪಡಬೇಕಾಗಿಲ್ಲ. ಆದಾಗ್ಯೂ ಅದರ ಅಂಶಗಳು ಅತ್ಯಮೂಲ್ಯವಾದವು. ॥30॥ ರಾಮಫಲವು ಕೆಳಗೆ ಬೀಳುವ ಹೆದರಿಕೆ ಇದೆ. ಒಬ್ಬನು ಬಹಳ ಜ್ಞಾನಿಯಾಗಿದ್ದರೂ ಅನುಗ್ರಹವಂಚಿತನಾಗಿ ಕೆಳಗೆ ಬೀಳುವ ಭಯವಿದೆ. ಅವನು ಅಷ್ಟಸಿದ್ಧಿಗಳ ಮೇಲೆ ವಿಜಯಗಳಿಸಬೇಕು. ಸ್ವಲ್ಪಮಾತ್ರವೂ ಅಲಕ್ಷಿಸಬಾರದು. ॥31॥ ಆದುದರಿಂದ ದಯಾಘನರಾದ ಸಾಯಿ, ತಮ್ಮ ಭಕ್ತರಿಗೆ ಭಕ್ತಿಮಾರ್ಗದ ಮತ್ತು ಭಗವನ್ನಾಮಸ್ಮರಣೆಯ ಪ್ರಾಮುಖ್ಯತೆಯನ್ನು ವಿವರಿಸುತ್ತಿದ್ದರು. ॥32। ಶುದ್ಧಜ್ಞಾನಕ್ಕಿಂತಲೂ ಭಗವಂತನ ಧ್ಯಾನವು ಉತ್ತಮ. ಭಗವಾನ್ ಕೃಷ್ಣನೂ ಸಹ ಅರ್ಜುನನಿಗೆ ಇದನ್ನೇ ಹೇಳಿದ್ದಾನೆ. ಸಾಯಿಯೂ ಸಹ ಭವಬಂಧನವನ್ನು ಕಿತ್ತುಹಾಕಲು ಇದೇ ಸಾಧನವೆಂದು

ಹೇಳುತ್ತಿದ್ದರು. ॥33॥ ಇಷ್ಟು ಸಾಕು. ಈಗ ಶ್ರೋತೃಗಳಿಗೆ ಹಿಂದಿನ ಅಧ್ಯಾಯದಲ್ಲಿ ವಿವರಿಸುತ್ತಿದ್ದು ಅದನ್ನು ಮುಗಿಸದೆ ಬಿಟ್ಟ ಕತೆಯನ್ನು ಹೇಳುತ್ತೇನೆ. ದಯಮಾಡಿ ಆಲಿಸಿರಿ. ॥34॥ ವಯೋವೃದ್ಧೆ, ಶಕ್ತಿ ಕ್ಷೀಣಿಸಿದ ಮಹಿಳೆಯೊಬ್ಬಳು ಸಾಯಿಯಿಂದ ಮಂತ್ರವನ್ನು ಪಡೆಯಲು ಪಟ್ಟು ಹಿಡಿದು ಸಾಯಲು ನಿರ್ಧರಿಸಿದಳು ಮತ್ತು ಉಪವಾಸ ಆರಂಭಿಸಿದಳು. ॥35॥ ಅವಳ ಪರಿಸ್ಥಿತಿಯನ್ನು ನೋಡಿ ಮಾಧವರಾವ್ ಭಯಗೊಂಡು ಮಧ್ಯಸ್ಥಿಕೆ ಮಾಡಲು ಬಾಬಾರವರಲ್ಲಿಗೆ ಹೋದನು. ಈ ಮೊದಲು ಕತೆಯ ನಿರೂಪಣೆ ಇಲ್ಲಿಯವರೆಗೆ ಬಂದಿತ್ತು. ॥36॥ ಶ್ರೀ ಸಾಯಿಸಚ್ಚರಿತೆಯ ಜ್ಯೋತಿಯನ್ನು ಸಾಯಿಯ ಸಂಕಲ್ಪದಿಂದಾಗಿಯೇ ಬೆಳಗಿಸಲಾಗಿದೆ. ಅದರ ಪ್ರಕಾಶವು ಭಕ್ತರ ಮಾರ್ಗಕ್ಕೆ ನಿರ್ದೇಶನವಾಗಲಿ. ॥37॥ ಬಾಬಾರವರ ಆಜ್ಞಾನುಸಾರ, ಮಾಧವರಾವ್ ನನಗೆ ಹೇಳಲು ಪ್ರಾರಂಭಿಸಿದ ಮನಸೆಳೆಯುವಂತಹ ಈ ಕತೆಯನ್ನು ಮುಂದುವರಿಸೋಣ. ॥38॥ ಅವನು ಹೇಳಿದನು. ಆ ಮಹಿಳೆಯ ಆಗ್ರಹವನ್ನು ನೋಡಿ ಬಾಬಾರವರು ಅವಳಮೇಲೆ ಅನುಗ್ರಹ ತೋರಿಸಿದರು. ಅವರು ಅವಳ ಮನಸ್ಸು ಬದಲಾಗುವಂತೆ ಮಾಡಿದರು. ಇದು ನಿಜವಾಗಿಯೂ ಒಂದು ಹೊಸ ನಮೂನೆಯ ಕತೆಯೇ ಸರಿ. ॥39॥ ಅನಂತರ ಬಾಬಾರವರು ಅವಳನ್ನು ಪ್ರೇಮದಿಂದ ಕರೆದು ಹೇಳಿದರು, "ಓ ಅಮ್ಮ, ನೀನು ಏಕೆ ಈ ರೀತಿ ಧರಣಿ ಹೂಡಿರುವೆ? ನೀನು ಏಕೆ ಮರಣಕ್ಕೆ ಸಿದ್ಧಳಾಗಿರುವೆ?" ॥40॥ ಬಾಬಾರವರು ಎಲ್ಲ ಪ್ರೌಢ ಮಹಿಳೆಯರನ್ನು 'ಅಮ್ಮ, ತಾಯಿ' ಎಂದೂ, ಪುರುಷರನ್ನು 'ಬಾಪು, ಭಾಯಿ' ಎಂದೂ ಕರೆಯುತ್ತಿದ್ದರು. ಅದೊಂದು ಅವರ ಸಂತೋಷಕರವಾದ ವರ್ತನೆಯಾಗಿತ್ತು. ॥41॥ ಅವರ ಅಂತರಂಗವು ಪ್ರೇಮದಿಂದ ತುಂಬಿತ್ತು, ಅವರ ಮಾತು ಮಧುರವಾಗಿತ್ತು, ಅವರು ದೀನದುಃಖಿಗಳಿಗೆ ಶಾಂತಿಸ್ವರೂಪರಾಗಿದ್ದರು. ಓಹ್, ಎಂತಹ ದೀನದಯಾಳು ಸಾಯಿ! ॥42॥ ಅವರು ಆಕೆಯನ್ನು ಕರೆದು ತಮ್ಮ ಮುಂದೆ ಕುಳ್ಳಿರಿಸಿದರು. ಅನಂತರ, ಸ್ವಾಭಾವಿಕವಾಗಿಯೇ ಅವರು ತಮ್ಮದೇ ಬೋಧನೆಗಳ ಕೀಲಿಕೈಯನ್ನು ಪ್ರೀತಿಯಿಂದ ಅವಳಿಗೆ ಕೊಟ್ಟರು. ॥43॥ ಅವಳ ಭವಸಾಗರದತಾಪವನ್ನು ಉಪಶಮನಗೊಳಿಸಲು, ಬಾಬಾರವರು ಪರಮಚಿದ್ಘನರಾಗಿ ಚಾತಕಪಕ್ಷಿಯಂತಹ ಭಕ್ತರ ದಾಹವನ್ನು ತಣಿಸಲು ಮಳೆ ನೀರನ್ನು ಸಿಂಪಡಿಸಿದರು. ॥44॥ ಬಾಬಾ ಹೇಳಿದರು – "ಅಮ್ಮಾ, ನಿಜ ಹೇಳು, ನಿನ್ನನ್ನೇ ನೀನು ಹಿಂಸಿಸಿಕೊಳ್ಳುವುದು ಏತಕ್ಕೆ? ನಾನಾದರೋ ಕೇವಲ ಒಬ್ಬ ಫಕೀರನಷ್ಟೇ. ಭಿಕ್ಷೆ ಬೇಡಿ ಜೀವಿಸುತ್ತಿರುವೆನು. ನನ್ನ ಮೇಲೆ ಅನುರಾಗದಿಂದ ನೋಡು. ॥45॥ "ನಿಜವಾಗಿಯೂ ಹೇಳಬೇಕೆಂದರೆ ನಾನು ನಿನ್ನ ಮಗನ ಹಾಗೆ, ನೀನು ನನ್ನ ತಾಯಿ. ಈಗ ನನ್ನ ಕಡೆ ಗಮನವಿಡು. ನಾನು ಒಂದು ಅದ್ಭುತವಾದುದನ್ನು ಹೇಳುವೆನು. ಅದು ನಿನಗೆ ಬಹಳ ಸುಖವನ್ನುಂಟು ಮಾಡುತ್ತದೆ. ॥46॥ "ನನಗೆ ಒಬ್ಬ ಗುರುವಿದ್ದರು. ಅವರು ಒಬ್ಬ 'ಅವಲಿಯ' ಕೃಪಾಸಾಗರರು. ನಾನು ನನ್ನ ಕೈಲಾದಷ್ಟು ಅವರ ಸೇವೆಮಾಡಿದೆನು. ಆದರೆ ಅವರು ನನಗೆ ಯಾವುದೇ ಮಂತ್ರವನ್ನೂ ಪಿಸುಗುಟ್ಟಲಿಲ್ಲ. ॥47॥ "ನನಗೂ ಅವರ ಬಾಯಿಯಿಂದ ಮಂತ್ರವನ್ನು ಸ್ವೀಕರಿಸುವ ಪ್ರಬಲವಾದ ಆಸೆಯಿತ್ತು, ನಾನೆಷ್ಟೇ

ಪರಿಶ್ರಮವಹಿಸಿ ಕಷ್ಟಪಟ್ಟರೂ ಸಹ ಅವರನ್ನು ಮಾತ್ರ ಬಿಟ್ಟುಹೋಗಬಾರದೆಂದು ತೀರ್ಮಾನಿಸಿದೆ. ॥48॥ "ಆರಂಭದಲ್ಲಿ ಅವರು ನನ್ನ ಮುಂಡನ ಮಾಡಿಸಿದರು. ಮತ್ತು ಕೇವಲ ಎರಡು ನಾಣ್ಯಗಳನ್ನು ಕೇಳಿದರು. ಅದನ್ನು ನಾನು ಕೂಡಲೇ ಕೊಟ್ಟೆನು. ನಾನು ಮಂತ್ರಾಕ್ಷರಗಳನ್ನು ಕೊಡುವಂತೆ ತೀವ್ರವಾಗಿ ಪ್ರಾರ್ಥಿಸಿದೆನು. ॥49॥ "ನನ್ನ ಗುರುವು ನನ್ನ ಎಲ್ಲಾ ಇಚ್ಛೆಗಳನ್ನೂ ಪೂರೈಸಿದಂತಹ ವ್ಯಕ್ತಿ. ಅವರಿಗೆ ಎರಡು ನಾಣ್ಯಗಳ ಅವಶ್ಯಕತೆ ಏನಿತ್ತು? ಶಿಷ್ಯನಿಂದ ಹಣ ಕೇಳಿದ ಅವರನ್ನು ನಿಷ್ಕಾಮರೆಂದು ಹೇಗೆ ಕರೆಯಲಿ? ॥50॥ "ಅಂತಹ ಶಂಕೆಗಳನ್ನು ಎಂದಿಗೂ ಇಟ್ಟುಕೊಳ್ಳಬೇಡ. ಅವರಿಗೆ ವ್ಯಾವಹಾರಿಕ ನಾಣ್ಯಗಳ ಆಶೆ ಇರಲಿಲ್ಲ. ಅದು ಅವರ ಕಲ್ಪನೆಯೂ ಅಲ್ಲ. ಕಾಂಚನದಿಂದ ಅವರಿಗೆ ಏನು ಕೆಲಸ? ॥51॥ "ಶ್ರದ್ಧೆ ಮತ್ತು ಸಬೂರಿ (ತಾಳ್ಮೆ) ಇವೇ ಎರಡು ನಾಣ್ಯಗಳು. ಮತ್ತೆ ಬೇರೆ ಯಾವುದೂ ಅಲ್ಲ. ನಾನು ಕೂಡಲೇ ಅವುಗಳನ್ನು ಕೊಟ್ಟೆನು. ಅದರಿಂದ ನನ್ನ ಗುರು ಬಹಳ ಪ್ರಸನ್ನರಾದರು. ಅವರು ನನ್ನ ತಾಯಿಯ ರೀತಿ ಇದ್ದರು. ॥52॥ "ಧೈರ್ಯವೇ ಸಹನೆ. ಓ ಅಮ್ಮ! ಅದನ್ನು ಎಂದಿಗೂ ನಿನ್ನಿಂದ ಹೋಗಲು ಬಿಡಬೇಡ. ಕಷ್ಟದ ಸಮಯದಲ್ಲಿ ಅದು ನಿನ್ನನ್ನು ಒಳ್ಳೆಯ ಸ್ಥಾನದಲ್ಲಿ ನಿಲ್ಲಿಸುತ್ತದೆ. ॥53॥ "ಪುರುಷರಲ್ಲಿ ಪೌರುಷವೇ ಸಬೂರಿಯು. ಅದು ಪಾಪ, ತಾಪ, ದೈನ್ಯತೆಗಳನ್ನು ನಿವಾರಿಸುತ್ತದೆ. ಯುಕ್ತಿ ಪ್ರಯುಕ್ತಿಗಳಿಂದ ಆಪತ್ತನ್ನು ನಿವಾರಿಸುತ್ತದೆ. ಭಯಭೀತಿಗಳು ಹತ್ತಿರವೂ ಸುಳಿಯುವುದಿಲ್ಲ. ॥54॥ "ಸಹನೆಯು ಅಂತಿಮವಾಗಿ ಜಯಿಸುತ್ತದೆ. ಕಷ್ಟಗಳು ಚೆಲ್ಲಾಪಿಲ್ಲಿಯಾಗುತ್ತವೆ. ಕೆಟ್ಟಯೋಚನೆಗಳೆಂಬ ಮುಳ್ಳಿಗೆ ಜಾಗವೇ ಇಲ್ಲ. ॥55॥ "ಸಬೂರಿಯು ಸದ್ಗುಣಗಳ ಗಣಿಯು. ಸದ್ವಿಚಾರಗಳ ರಾಣಿಯು. ಶ್ರದ್ಧೆ ಮತ್ತು ಅವಳು ನಿಜವಾದ ಸೋದರಿಯರು ಮತ್ತು ಪರಸ್ಪರ ಬಹಳ ಪ್ರೀತಿಸುತ್ತಾರೆ. ॥56॥ "ಸಹನೆಯಿಲ್ಲದ ವ್ಯಕ್ತಿಯು ಪ್ರಾಣಿಯಾಗುವನು. ಅವನು ಪಂಡಿತನೋ ಅಥವಾ ಸದ್ಗುಣಿಯೋ ಆಗಿರಬಹುದು. ಆದರೆ ಅವನ ಜೀವನವು ವ್ಯರ್ಥ. ॥57॥ "ಗುರುವು ಅತ್ಯಂತ ಪ್ರಬಲನಾಗಿದ್ದರೂ ಅವನು ಶಿಷ್ಯನಿಂದ ಕೇವಲ ಪ್ರಜ್ಞೆ, ಗುರುಚರಣಗಳಲ್ಲಿ ನಿಷ್ಠೆ, ಧೈರ್ಯ, ಬಲ ಮತ್ತು ಸಹನೆ ಇವುಗಳನ್ನು ಅಪೇಕ್ಷಿಸುತ್ತಾನೆ. ॥58॥ "ಕಲ್ಲನ್ನಾಗಲೀ, ರತ್ನವನ್ನಾಗಲೀ, ಎರಡನ್ನೂ ಕಲ್ಲಿಗೆ ಉಜ್ಜಿದರೆ ಎರಡೂ ಹೊಳೆಯುತ್ತವೆ. ಆದರೆ ಕಲ್ಲು ಕೇವಲ ಹೊಳೆಯುವ ಕಲ್ಲು, ರತ್ನವಾದರೋ ಅಮೂಲ್ಯವಾದ ತೇಜಸ್ಸಿನ ಮಣಿ. ॥59॥ "ಇವೆರಡೂ ಒಂದೇ ಸಂಸ್ಕಾರಕ್ಕೊಳಪಡುತ್ತವೆ. ಆದರೆ ಕಲ್ಲು ರತ್ನದ ತರಹ ಹೊಳೆಯಬಲ್ಲುದೇ? ಒಂದು ರತ್ನವು ಹೊಳೆಯುವ ವಜ್ರವಾಗಬಹುದು. ಆದರೆ ಕಲ್ಲು ಕಲ್ಲಾಗಿಯೇ ಉಳಿಯುತ್ತದೆ. ಕೇವಲ ಸ್ವಲ್ಪಮಟ್ಟಿಗೆ ಹೊಳೆಯಬಹುದು. ॥60॥ "ನಾನು ಅವರ ಚರಣಗಳಲ್ಲಿ ಹನ್ನೆರಡು ವರ್ಷಗಳ ಕಾಲ ವಾಸವಾಗಿದ್ದೆನು. ಗುರುವು ನನ್ನನ್ನು ಬಾಲ್ಯದಿಂದಲೂ ಬೆಳೆಸಿದರು. ಎಂದಿಗೂ ಆಹಾರ ಅಥವಾ ಬಟ್ಟೆಯ ಕೊರತೆಯು ಇರಲಿಲ್ಲ. ಅವರು ನನ್ನನ್ನು ಅಪರಿಮಿತವಾಗಿ ಪ್ರೀತಿಸಿದರು. ॥61॥ "ಅವರು ಭಕ್ತಿ ಪ್ರೇಮಗಳ ಅವತಾರವೇ ಆಗಿದ್ದರು. ಮತ್ತು ಶಿಷ್ಯನ ಮೇಲೆ ನಿಜವಾದ ವಾತ್ಸಲ್ಯವನ್ನಿಟ್ಟಿದ್ದರು. ನನ್ನ ಗುರುವಿನ ಸಮನಾಗಿರುವ ಗುರು ಅತಿ ವಿರಳ.

ಅವರ ಆತ್ಮಾನಂದಪರವಶತೆಯನ್ನು ವಿವರಿಸಲು ಆಗುವುದಿಲ್ಲ. ॥62॥ "ಅವರ ಪ್ರೇಮವನ್ನು ಹೇಗೆ ವರ್ಣಿಸಲಿ? ನಾನು ಅವರ ಕಡೆ ನೋಡಿದಾಗ ಅವರ ನಯನಗಳು ಆಳವಾದ ಧ್ಯಾನದಲ್ಲಿರುವಂತೆ ಕಾಣುತ್ತಿದ್ದವು. ಮತ್ತು ನಾವಿಬ್ಬರೂ ಆನಂದಭರಿತರಾಗುತ್ತಿದ್ದೆವು. ನಾನು ಮತ್ತೆಂದಿಗೂ ಬೇರೆ ಯಾವ ಕಡೆಗೂ ನೋಡಲು ಆಗಲಿಲ್ಲ. ॥63॥ "ನಾನು ಗುರುವಿನ ಮುಖವನ್ನು ಪ್ರೀತಿಯಿಂದ ಹಗಲು ರಾತ್ರಿ ನೋಡುತ್ತಲಿದ್ದೆನು. ಹಸಿವೆ ಬಾಯಾರಿಕೆಗಳೇನೂ ಆಗುತ್ತಿರಲಿಲ್ಲ. ಗುರುವಿಲ್ಲದೆ ನನ್ನ ಮನಸ್ಸು ಅಸ್ವಸ್ಥವಾಗುತ್ತಿತ್ತು. ॥64॥ "ಕೇವಲ ಅವರೊಬ್ಬರೇ ನನ್ನ ಧ್ಯಾನದ ವಸ್ತುವಾಗಿದ್ದರು. ಅವರಲ್ಲದೆ ನನಗೆ ಯಾವ ಗುರಿಯೂ ಇರಲಿಲ್ಲ. ಕೇವಲ ಅವರು ಮಾತ್ರವೇ ನನ್ನ ನಿತ್ಯ ಅನುಸಂಧಾನವಾಗಿದ್ದರು. ಗುರುವಿನ ವಿಧಾನಗಳು ಅತ್ಯದ್ಭುತ. ॥65॥ "ನನ್ನ ಗುರುವಿನ ಅಪೇಕ್ಷೆ ಕೇವಲ ಇದೊಂದೇ ಆಗಿತ್ತು. ಇದಕ್ಕಿಂತ ಹೆಚ್ಚಿಗೆ ಮತ್ತೇನನ್ನೂ ಬಯಸಲಿಲ್ಲ. ಅವರು ನನ್ನನ್ನು ಎಂದಿಗೂ ಉಪೇಕ್ಷೆ ಮಾಡಲಿಲ್ಲ. ನನ್ನನ್ನು ಸದಾ ಸಂಕಟಗಳಿಂದ ರಕ್ಷಿಸುತ್ತಿದ್ದರು. ॥66॥ "ಕೆಲವೊಮ್ಮೆ ನಾನು ಅವರ ಚರಣಗಳ ಸಮೀಪದಲ್ಲಿರುತ್ತಿದ್ದೆನು. ಕೆಲವು ಸಲ ಅವರಿಂದ ದೂರವಿರುತ್ತಿದ್ದೆನು. ಆದರೆ ನಾನು ಎಂದಿಗೂ ಅವರ ಸಂಗದ ಸಾಮೀಪ್ಯವನ್ನು ತೊರೆದಿರಲಿಲ್ಲ. ಅವರು ನನ್ನನ್ನು ಕೃಪಾದೃಷ್ಟಿಯಿಂದ ನೋಡಿಕೊಳ್ಳುತ್ತಿದ್ದರು. ॥67॥ "ಒಂದು ಹೆಣ್ಣು ಆಮೆ ತನ್ನ ಮರಿಯನ್ನು ತನ್ನ ದೃಷ್ಟಿಯಿಂದಲೇ ಜೋಪಾನ ಮಾಡುವ ಹಾಗೆ, ನನ್ನ ಗುರು ನನ್ನ ಮೇಲೆ ತಮ್ಮ ದೃಷ್ಟಿಯಿಟ್ಟು ನೋಡಿಕೊಳ್ಳುತ್ತಿದ್ದರು. ॥68॥ "ಓ, ಅಮ್ಮ, ಈ ಮಸೀದಿಯಲ್ಲಿ ಕುಳಿತುಕೊಂಡು, ನಾನು ಹೇಳುವುದೆಲ್ಲಾ ಸತ್ಯವೆಂದು ದಯವಿಟ್ಟು ತಿಳಿ. ಗುರುವು ನನ್ನ ಕಿವಿಯಲ್ಲಿ ಯಾವುದೇ ಮಂತ್ರವನ್ನು ಹೇಳಲಿಲ್ಲ. ನಾನು ಹೇಗೆ ನಿನ್ನ ಕಿವಿಗಳಲ್ಲಿ ಹೇಳಲಿ? ॥69॥ "ತಾಯಿ ಆಮೆಯ ಪ್ರೀತಿಯ ನೋಟವೇ ಸಾಕು ಆ ಮರಿಗಳನ್ನು ಸಂತಸಗೊಳಿಸಲು. ಓ, ಅಮ್ಮ, ನೀನು ಏಕೆ ಅನವಶ್ಯಕವಾಗಿ ತೊಂದರೆ ತೆಗೆದುಕೊಳ್ಳುವೆ? ನನಗೆ ಉಪದೇಶದ ಬಗ್ಗೆ ಏನೂ ತಿಳಿದಿಲ್ಲ. ॥70॥ "ತಾಯಿ ಆಮೆಯು ನದಿಯ ಒಂದು ದಡದಲ್ಲಿ ಮತ್ತು ಮರಿಗಳು ಇನ್ನೊಂದು ದಡದಲ್ಲಿ. ಅವರ ಪಾಲನೆ ಪೋಷಣೆಗಳು ಕೇವಲ ದೃಷ್ಟಿ ವಿನಿಮಯದಿಂದಲೇ ನಡೆಯುತ್ತವೆ. ಹಾಗಿರುವಾಗ ಮಂತ್ರದ ತೊಂದರೆ ಏತಕ್ಕೆ? ॥71॥ "ಆದ್ದರಿಂದ, ಹೋಗು, ಸ್ವಲ್ಪ ಅನ್ನ ತಿನ್ನು. ಅನವಶ್ಯಕವಾಗಿ ನಿನ್ನ ದೇಹವನ್ನು ಘಾಸಿಗೊಳಿಸಬೇಡಕೇವಲ ನನ್ನಲ್ಲಿ ಲಕ್ಷ್ಯವಿಡು. ನೀನು ಪರಮಾರ್ಥವನ್ನು ಸಿದ್ಧಿಸಿಕೊಳ್ಳುತ್ತೀಯೆ. ॥72॥ "ನೀನು ನನ್ನನ್ನು ಅನನ್ಯವಾಗಿ ಮಾಡಿಕೋ. ನಾನೂ ಸಹ ನಿನ್ನನ್ನುಅದೇ ರೀತಿಯಲ್ಲಿ ಪರಿಗಣಿಸುತ್ತೇನೆ. ನನ್ನ ಗುರುವು ನನಗೆ ಬೇರೆ ಏನನ್ನೂ ಕಲಿಸಲಿಲ್ಲ. ॥73॥ "ಬೇರೆ ಯಾವುದೇ ರೀತಿಯ ಸಾಧನೆಯಾಗಲಿ ಅಥವಾ ಸಂಪತ್ತಾಗಲಿ ಅದರ ಅವಶ್ಯಕತೆಯಿಲ್ಲ. ಷಟ್‌ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆಯಬೇಕಾಗಿಲ್ಲ. ಕೇವಲ ವಿಶ್ವಾಸವೊಂದೇ ಸಾಕು. ಏಕೆಂದರೆ ಗುರುವು ದುಃಖಗಳನ್ನು ದೂರಮಾಡಿ ಸುಖಕೊಡುತ್ತಾನೆ. ॥74॥ "ಆದ್ದರಿಂದ ಗುರುವು ಮಹಾನ್ ಎಂದು ಪರಿಗಣಿಸುತ್ತಾರೆ. ಗುರುವು ಬ್ರಹ್ಮ ವಿಷ್ಣು, ಮಹೇಶ್ವರರ ಸ್ವರೂಪ.

ಯಾರು ಇದನ್ನು ಅರಿತಿರುವರೋ ಅವರು ಮೂರು ಜಗತ್ತುಗಳಲ್ಲೂ ಧನ್ಯರು." ॥75॥ ಯಾವಾಗ ಆ ವೃದ್ಧಹಳೆಗೆ ಈ ರೀತಿ ಬೋಧನೆಯಾಯಿತೋ
ಆಗ ಗುರುವಾಕ್ಯ ಆಕೆಯನ್ನು ಸಾಂತ್ವನಗೊಳಿಸಿತು. ಅವಳು ತನ್ನ ಉಪವಾಸವನ್ನು ಬಿಟ್ಟುಬಿಡಲು ಒಪ್ಪಿದಳು. ಈ ರೀತಿ ಮಹಾರಾಜರ ಇಚ್ಛೆಯನ್ನು
ಗೌರವಿಸಿ ತನ್ನ ತಲೆಯನ್ನು ಅವರ ಚರಣಗಳಲ್ಲಿಟ್ಟಳು. ॥76॥ ಈ ಪೂರ್ಣ ಚರಿತ್ರೆಯನ್ನು ಕೇಳಿ ಅವರ ಸಮರ್ಪಕತೆಯನ್ನು ಅರ್ಥಮಾಡಿಕೊಂಡಾಗ
ನನ್ನ ಮನಸ್ಸಿಗೆ ಆನಂದ, ವಿಸ್ಮಯಗಳೆರಡೂ ಆದುವು. ಕಥೆಯ ಸಾರ್ಥಕತೆಯನ್ನು ಅವಲೋಕಿಸಿ ವಿಸ್ಮಯವಾಯಿತು. ॥77॥ ಬಾಬಾರವರ
ಲೀಲೆಗಳನ್ನು ನೋಡಿ, ಪರಮಾನಂದದಿಂದ ನನ್ನ ಕಂಠವು ಗದ್ಗದಿತವಾಯಿತು. ನನ್ನ ಹೃದಯ ಪ್ರೇಮೋದ್ವೇಗದಿಂದ ಉಕ್ಕಿ ಬಂದಿತು. ಈಗ ನಾನು
ಅದರ ಅಂತರಾರ್ಥದ ಸದ್ಬೋಧೆಯನ್ನು ಅರಿತೆನು. ॥78॥ ನನ್ನ ಗದ್ಗದ ಭಾವೋನ್ಮತ್ತ ಸ್ಥಿತಿಯನ್ನು ನೋಡಿ ಮಾಧವರಾವ್ ಹೇಳಿದನು:
"ಅಣ್ಣಾಸಾಹೇಬ್! ನೀನು ಏಕೆ ಭಾವೋನ್ಮತ್ತನಾದೆ? ಏಕೆ ನೀನು ಸುಮ್ಮನಾದೆ? ॥79॥ "ಈ ರೀತಿಯ ಬಾಬಾರವರ ಅನೇಕ ಕಥೆಗಳು ಇವೆ.
ಅವುಗಳಲ್ಲಿ ಎಷ್ಟನ್ನು ಈಗ ನಾನು ಹೇಳಲಿ?" ಮಾಧವರಾವ್ ಹೀಗೆ ನನ್ನೊಡನೆ ಮಾತನಾಡುತ್ತಿರುವಾಗಲೇ ಮಸೀದಿಯ ಗಂಟೆ ಭಾರಿಸಿತು. ॥80॥
ಪ್ರತಿನಿತ್ಯ ಮಧ್ಯಾಹ್ನ ಊಟಕ್ಕೆ ಮೊದಲು ಭಕ್ತರು ಮಸೀದಿಗೆ ಹೋಗಿ ಕುಳಿತುಕೊಳ್ಳುತ್ತಿದ್ದರು. ಮತ್ತು ಗಂಧ, ಅಕ್ಷತೆ, ಅರ್ಘ್ಯ, ಪಾದ್ಯ ಇತ್ಯಾದಿಗಳಿಂದ
ವಿಧಿಪೂರ್ವಕವಾಗಿ ಬಾಬಾರವರ ಪೂಜೆಮಾಡುತ್ತಿದ್ದರು. ॥81॥ ತದನಂತರ ಬಾಪೂ ಸಾಹೇಬ ಜೋಗನು ತನ್ನ ಕೈಯಲ್ಲಿ ಪಂಚಾರತಿ ಹಿಡಿದು
ಭಕ್ತಿಪ್ರೇಮದಿಂದ ಆರತಿ ಮಾಡುತ್ತಿದ್ದನು. ಭಕ್ತಜನರು ಆರತಿಯ ಹಾಡನ್ನು ಹಾಡುತ್ತಿದ್ದರು. ॥82॥ ಆರತಿಯಪ್ರಾರಂಭವನ್ನು ಸೂಚಿಸುವ ಗಂಟೆಗಳು
ಘಣ ಘಣ ಮೊಳಗಲು ಪ್ರಾರಂಭಿಸಿದಾಗ ನಾವು ಮಸೀದಿಯ ಕಡೆ ಹೊರಟೆವು. ನನ್ನ ಮನದಿಚ್ಛೆಗಳು ಪೂರೈಸಿದವು. ॥83॥ ಮಧ್ಯಾಹ್ನದ
ಆರತಿಯಲ್ಲಿ ಸ್ತ್ರೀ ಪುರುಷರೆಲ್ಲರೂ ಭಾಗವಹಿಸುತ್ತಿದ್ದರು. ಸ್ತ್ರೀಯರು ಮಸೀದಿಯಲ್ಲೂ ಪುರುಷರು ಅಂಗಳದಲ್ಲಿಯೂ ನಿಂತುಕೊಂಡಿರುತ್ತಿದ್ದರು.
॥84॥ ಮಂಗಳ ವಾದ್ಯಗಳ ಸಂಗೀತದೊಡನೆ ಮಂದಿರದ ಗಂಟೆಗಳ ಝಣತ್ಕಾರದೊಂದಿಗೆ ಉಚ್ಚಸ್ವರದಲ್ಲಿ ಹರ್ಷೋದ್ಗಾರದೊಡನೆ ಆರತಿಹಾಡನ್ನು
ಹಾಡುತ್ತಿದ್ದರು. ॥85॥ ನಾವು ಮಂಟಪದ ದ್ವಾರದ ಹತ್ತಿರ ಬಂದಾಗ ಆರತಿಯು ಘನವಾಗಿ ಮಾರ್ದನಿಗೊಳ್ಳುತ್ತಿತ್ತು. ಆಕಾಶವನ್ನು ಮುಟ್ಟುತ್ತಿತ್ತು.
ಪುರುಷರು ಮೆಟ್ಟಿಲುಗಳ ಹತ್ತಿರ ತುಂಬಿದ್ದರು. ಒಳಗೆ ಪ್ರವೇಶಿಸಲು ಸಾಧ್ಯವಾಗಲಿಲ್ಲ. ॥86॥ ನಾನು ಮನಸ್ಸಿನಲ್ಲಿಯೇ ಯೋಚಿಸುತ್ತಿದ್ದೆ, ಆರತಿಯು
ಮುಗಿಯುವವರೆಗೆ ನಾವು ಕೆಳಗೆಯೇ ಇದ್ದು ಮತ್ತೆ ಅದು ಮುಗಿದೊಡನೆಯೇ ಬಾಬಾರವರ ಹತ್ತಿರ ಹೋಗಬಹುದೆಂದು ಯೋಚಿಸಿದೆ. ॥87॥
ನಾನು ಈ ರೀತಿ ಯೋಚಿಸುತ್ತಿರುವಾಗಲೇ ಮಾಧವರಾವ್ ಮೆಟ್ಟಿಲುಗಳನ್ನು ಹತ್ತುತ್ತ ನನ್ನನ್ನೂ ಮೇಲಕ್ಕೆ ಎಳೆದರು ನನ್ನ ಕೈಗಳನ್ನು ಹಿಡಿದುಕೊಂಡು
ಬಾಬಾರವರ ಹತ್ತಿರ ಕರೆದುಕೊಂಡು ಹೋದನು. ॥88॥ ಬಾಬಾರವರು ತಮ್ಮ ಆಸನದ ಮೇಲೆ ಕುಳಿತಿದ್ದರು. ಸಮಾಧಾನಚಿತ್ತದಿಂದ ಚಿಲುಮೆಯನ್ನು

ಸೇದುತ್ತಿದ್ದರು. ಅವರ ಮುಂದೆ ಜೋಗನು ಎಡಗೈಯಿಂದ ಗಂಟೆ ಬಾರಿಸುತ್ತ ಬಲಗೈಯಲ್ಲಿ ಪಂಚಾರತಿ ಹಿಡಿದು ಆರತಿ ಮಾಡುತ್ತಿದ್ದನು. ॥89॥ ಈ ರೀತಿಯ ಆರತಿಯ ವಾತಾವರಣದಲ್ಲಿ ಮಾಧವರಾವ್ ಬಾಬಾರವರ ಬಲಗಡೆ ಕುಳಿತುಕೊಂಡು ನನ್ನನ್ನೂ ಅವನ ಜೊತೆ ಕುಳ್ಳಿರಿಸಿ ಬಾಬಾರವರ ಸಮ್ಮುಖದಲ್ಲಿರುವಂತೆ ಮಾಡಿದನು. ॥90॥ ಅನಂತರ ಶಾಂತಮೂರ್ತಿಯಾದ, ಸಂತರತ್ನರಾದ ಬಾಬಾರವರು ಮಂಜುಳವಾಣಿಯಲ್ಲಿ ನುಡಿದರು – "ಶಾಮರಾವ್ ನನಗಾಗಿ ಕೊಟ್ಟಿರುವ ದಕ್ಷಿಣೆಯನ್ನು ಕೊಡು." ॥91॥ "ಬಾಬಾ. ಈ ಶಾಮರಾವ್ ಇಲ್ಲಿದ್ದಾನೆ. ಅವನು ದಕ್ಷಿಣೆಯ ಬದಲಾಗಿ ನಮಸ್ಕಾರಗಳನ್ನು ಕೊಟ್ಟಿದ್ದಾನೆ ಮತ್ತು ಅವುಗಳನ್ನು ಹದಿನೈದು ರೂಪಾಯಿಗಳ ಪ್ರತಿಯಾಗಿ ಬಾಬಾರವರಿಗೆ ಅರ್ಪಿಸು, ಎಂದು ಹೇಳುತ್ತಾನೆ." ॥92॥ "ಬಹಳ ಒಳ್ಳೆಯದು. ನೀನು ಅವನೊಡನೆ ಮಾತುಕತೆ ಆಡಿದೆಯಾ? ನೀವಿಬ್ಬರೂ ಪರಸ್ಪರ ಏನಾದರೂ ವಿಚಾರವಿನಿಮಯ ಮಾಡಿಕೊಂಡಿರುವಿರಾ? ಈಗ ಹೇಳು, ನೀವೇನು ಚರ್ಚಿಸಿದಿರಿ? ಪ್ರತಿಯೊಂದನ್ನೂ ಪೂರ್ತಿಯಾಗಿ ನನಗೆ ಹೇಳು" ಎಂದು ಬಾಬಾ ಹೇಳಿದರು. ॥93॥ "ನಮಸ್ಕಾರದ ಬಗೆಗಿನ ಕಥೆಯನ್ನು ಪಕ್ಕಕ್ಕೆ ಇಡು. ಅವನಿಗೆ ನೀನು ಏನು ಹೇಳಿದೆ? ಈಗ ಪ್ರತಿಯೊಂದು ವಿಷಯವನ್ನೂ ಪೂರ್ತಿಯಾಗಿ ಹೇಳು." ॥94॥ ನಾನೂ ಸಹ ಆ ಸಂಗತಿಯನ್ನು ತಿಳಿಸಲು ಉತ್ಕಂಠಿತನಾಗಿದ್ದೆನು. ಆರತಿಯ ಹಾಡು ಉಚ್ಚಸ್ವರದಲ್ಲಿ ನಡೆಯುತ್ತಿದ್ದರೂ ಸಹ, ನಾನು ಪರಮಾನಂದ ಭರಿತನಾಗಿ ಉಬ್ಬುತ್ತಿದ್ದೆ ಮತ್ತು ನನ್ನ ಅನಿರ್ಬಂಧಿತ ಆನಂದ ನನ್ನ ತುಟಿಗಳಿಂದ ಉಕ್ಕಿಹರಿಯಿತು. ॥95॥ ಬಾಬಾರವರುದಿಂಬಿಗೆ ಒರಗಿದ್ದವರು ಸ್ವಲ್ಪ ಮುಂದೆ ಬಾಗಿದರು. ನಾನೂ ಸಹ ಸ್ವಲ್ಪ ಮುಂದೆ ಬಾಗಿ ಆರಂಭದಿಂದ ನಿರೂಪಣೆ ಮಾಡಲು ಪ್ರಾರಂಭಿಸಿದೆನು. ॥96॥ "ಬಾಬಾ, ನಾವು ಏನು ಮಾತುಕತೆ ಆಡಿದೆವೋ ಅವು ಎಲ್ಲವೂ ಬಹಳ ಗಮನ ಸೆಳೆಯುವಂತಿದ್ದವು. ಆದರೆ ಅವುಗಳಲ್ಲಿ ವಿಶೇಷವಾಗಿ ಆ ಮುದುಕಿಯ ಬಗೆಗಿನ ಕಥೆಯು ಮಾತ್ರ ಅದ್ಭುತವಾಗಿತ್ತು. ॥97॥ ಶಾಮರಾವ್, ನನಗೆ ಆ ಕಥೆಯನ್ನು ಹೇಳಿದಕೂಡಲೇ, ನನಗೆ ನಿಮ್ಮ ಚತುರತೆಯ ಅರಿವಾಯಿತು. ಆ ಕಥೆಯ ನೆಪದಲ್ಲಿ ನಾನು ಅನುಗ್ರಹೀತನಾದೆ ಎಂಬುದು ನಿಶ್ಚಿತ". ॥98॥ ಅದಕ್ಕೆ ಬಾಬಾರವರು ಕೂಡಲೇ ಅತಿ ಉತ್ಸುಕರಾಗಿ ಹೇಳಿದರು – "ಪೂರ್ತಿ ಕಥೆಯನ್ನು ನನಗೆ ಹೇಳು. ಅದು ಎಷ್ಟರಮಟ್ಟಿಗೆ ಅದ್ಭುತವಾಗಿತ್ತು ನೋಡೋಣ. ನೀನು ಹೇಗೆ ಅನುಗ್ರಹೀತನಾದೆಯೆಂದು ಭಾವಿಸಿರುವೆ." ॥99॥ ಆ ಕಥೆಯನ್ನು ಆಗತಾನೇ ಕೇಳಿದ್ದರಿಂದ ಅದು ನನ್ನ ಮನಸ್ಸಿನಲ್ಲಿ ನವೀನವಾಗಿಯೇ ಇತ್ತು. ಅದೂ ಅಲ್ಲದೆ, ಅದು ನನ್ನ ಮೇಲೆ ಅತಿಯಾದ ಪ್ರಭಾವ ಬೀರಿತ್ತು, ಆದ್ದರಿಂದ ನಾನು ಅದನ್ನು ಅಸ್ಖಲಿತವಾಗಿ ನಿವೇದಿಸಿದೆನು. ಮತ್ತು ಬಾಬಾರವರು ಪ್ರಸನ್ನರಾದಂತೆ ಕಂಡರು. ॥100॥ ಈ ರೀತಿಯಲ್ಲಿ ಸಕಲ ವೃತ್ತಾಂತವನ್ನೂ ಅರಿಕೆಮಾಡಿಕೊಂಡೆನು. ಬಾಬಾರವರೂ ಅದನ್ನು ಗಮನವಿಟ್ಟು ಕೇಳಿದರು. ಅನಂತರ ನನಗೆ ಹೇಳಿದರು – "ಸದಾ ಇದನ್ನು ಮನದಲ್ಲಿಡು." ॥101॥ ಮತ್ತೂ ಉತ್ಸುಕರಾಗಿ ಹೇಳಿದರು– "ನಾನು ಈಗತಾನೇ ಕೇಳಿದ ಕಥೆಯು ಎಷ್ಟು ಮಧುರವಾಗಿದೆ. ಅದು

ನಿನ್ನ ಮೇಲೆ ಪರಿಣಾಮ ಬೀರಿತೇ? ನೀನು ಅದರ ಸಾರ್ಥಕತೆಯನ್ನು ಅರಿತೆಯಾ?" ॥102॥ "ಬಾಬಾ, ನಾನು ಈ ಕಥೆಯನ್ನು ಆಲಿಸಿದ್ದರಿಂದ, ಮನಃಶಾಂತಿಯನ್ನು ಪಡೆದಿರುವೆನು. ನನ್ನ ಮನದ ಚಂಚಲತೆಯು ಮಾಯವಾಗಿದೆ. ನಾನು ನಿಶ್ಚಿತವಾದ ಮಾರ್ಗವನ್ನು ಅರಿತಿರುವೆನು." ॥103॥ ಅದಕ್ಕೆ ಬಾಬಾರವರು ಹೇಳಿದರು– "ನನ್ನ ವಿಧಾನಗಳು ಬೇರೆ. ಈ ಒಂದು ಕಥೆಯ ಅರ್ಥವನ್ನು ಅರಗಿಸಿಕೊಂಡಿದ್ದರೆಹಳ ಉಪಕೃತನಾಗಿರುತ್ತೀಯೆ. ॥104॥ "ಆತ್ಮದ ಸಮ್ಯಗ್ ಜ್ಞಾನವನ್ನು ಆಶಿಪಡಬೇಕು. ಸಮ್ಯಗ್‌ಜ್ಞಾನಕ್ಕಾಗಿ ಧ್ಯಾನ ಅತ್ಯವಶ್ಯಕ. ಧ್ಯಾನದಲ್ಲಿಆತ್ಮಾನುಷ್ಠಾನಮಾಡಿ ಆತ್ಮದಲ್ಲಿ ಐಕ್ಯನಾಗಿ ಸಮಾಧಾನವೃತ್ತಿಯನ್ನು ಪಡೆಯಬಹುದು. ॥105॥ "ಇಂದ್ರಿಯ ವಿಷಯಗಳಿಂದ ನಿನ್ನ ಮನಸ್ಸನ್ನು ವಿಮುಖಮಾಡು ಮತ್ತು ಆ ಸರ್ವಭೂತಾತ್ಮನ ಶಕ್ತಿಯ ಮೇಲೆ ಏಕಾಗ್ರಚಿತ್ತನಾಗು. ನಿನ್ನ ಧ್ಯಾನವು ವ್ಯವಸ್ಥಿತವಾಗುತ್ತದೆ. ನಿನ್ನ ಗುರಿಯನ್ನು ಮುಟ್ಟುವೆ. ॥106॥ "ಸದಾ ನನ್ನ ನಿರಾಕಾರ ರೂಪದ ಮೇಲೆ ಧ್ಯಾನಮಾಡು. ಅದೇ ಚೈತನ್ಯ ಅಥವಾ ಆನಂದಘನ. ಅದೇ ಜ್ಞಾನಸ್ವರೂಪ. ಅದರ ಮೇಲೆ ನಿತ್ಯವೂ ಧ್ಯಾನಮಾಡು. ॥107॥ "ನೀನು ಅದನ್ನು ದೃಷ್ಟಿಗೆ ತಂದು ಧ್ಯಾನ ಮಾಡಲಾಗದಿದ್ದಲ್ಲಿ ನನ್ನ ಸಗುಣ ರೂಪದ ಅನುಸಂಧಾನ ಮಾಡು. ನನ್ನ ರೂಪವನ್ನು ತಲೆಯಿಂದ ಕಾಲಿನ ವರೆಗೆ ರಾತ್ರಿ ಹಗಲು ಮನಸ್ಸಿನ ಕಣ್ಣಿನ ಮುಂದೆ ತಂದುಕೋ. ॥108॥ "ನೀನು ಈ ರೀತಿ ನನ್ನನ್ನು ಧ್ಯಾನ ಮಾಡಿದಾಗ, ನಿನ್ನ ಮನಸ್ಸಿನ ವೃತ್ತಿಗಳು ಒಟ್ಟಾಗುತ್ತವೆ. ಧ್ಯಾನಿ, ಧ್ಯಾನ ಮತ್ತು ಧ್ಯೇಯ (ಧ್ಯಾನವಸ್ತು) ಅವುಗಳ ಮಧ್ಯೆ ಇರುವ ಭೇದಭಾವ ನಶಿಸುತ್ತದೆ. ॥109॥ "ಈ ರೀತಿ ಒಂದು ಸಾರಿ ಮೂರು ಭಾವಗಳ ಭೇದ ಅಳಿದುಹೋದಾಗ, ಧ್ಯಾನ ಮಾಡುವ ವ್ಯಕ್ತಿಯು ಧ್ಯಾನದ ಗುರಿಯಾದ ಬ್ರಹ್ಮನು ಸಮರಸವನ್ನು ಪಡೆಯುತ್ತಾನೆ. ॥110॥ "ಹೆಣ್ಣು ಆಮೆ ನದಿಯ ಒಂದು ತೀರದಲ್ಲಿರುತ್ತದೆ. ಅದರ ಮರಿಗಳು ಮತ್ತೊಂದು ತೀರದಲ್ಲಿರುತ್ತವೆ. ಅವುಗಳಿಗೆಹಾಲು ಅಥವಾ ಕಾವು (ಮೈಬಿಸಿ) ಸಿಗುವುದಿಲ್ಲ. ಕೇವಲ ಹೆಣ್ಣು ಆಮೆಯ ದೃಷ್ಟಿಯೇ ಅವುಗಳಿಗೆ ಪುಷ್ಟಿಯನ್ನು ಕೊಡುತ್ತದೆ. ॥111॥ "ಮರಿಗಳಿಗೆ ಯಾವಾಗಲೂ ತಾಯಿಯದೇ ಧ್ಯಾನ. ಅವು ಇನ್ನೇನೂ ಮಾಡಬೇಕಾಗಿಲ್ಲ. ಅವುಗಳಿಗೆ ಹಾಲು ಅಥವಾ ಮತ್ತೇನು ಆಹಾರವೂ ಬೇಕಾಗಿಲ್ಲ. ಕೇವಲ ತಾಯಿಯ ವೀಕ್ಷಣೆ ಮಾತ್ರ ಅವುಗಳಿಗೆ ಪೋಷಕವು. ॥112॥ "ತಾಯಿ ಆಮೆಯ ಈ ದೃಷ್ಟಿ, ಕೇವಲ ನೋಟದಿಂದಲೇ ಪುಷ್ಟೀಕರಿಸುವುದು, ನಿಜವಾಗಿಯೂ ಪ್ರತ್ಯಕ್ಷ ಅಮೃತವರ್ಷದಂತೆಯೇ ಇರುತ್ತದೆ. ಅವುಗಳಿಗೆ ಹಾಲು, ಅನ್ನ ಬೇಕಾಗುವುದಿಲ್ಲ. ಮರಿಗಳು ಆನಂದ ಪುಷ್ಟಿಯನ್ನು ಹೊಂದುತ್ತವೆ. ಗುರುಶಿಷ್ಯರ ನಡುವೆಯೂ ಇದೇ ಸಂಬಂಧ. ॥113॥ ಸಾಯಿಯ ಮುಖದಿಂದ ಈ ವಚನಗಳು ಹೊರಬರುತ್ತಿದ್ದ ಹಾಗೆಯೇ ಉಚ್ಚಸ್ವರದಲ್ಲಿ ಹಾಡುತ್ತಿದ್ದ ಆರತಿಯು ಮುಗಿಯಿತು. ಮತ್ತು ಎಲ್ಲರೂ ಶ್ರೀಸಚ್ಚಿದಾನಂದಸದ್ಗುರುವಿಗೆ ಜೈಕಾರವನ್ನು ಹಾಕಿದರು. ॥114॥ ಸರಳವಾದ ನೀರಾಂಜನ ಉಪಚಾರ ಆಯಿತು. ಸರಳವಾದ ಆರತಿ ಸವಿಸ್ತಾರವಾಗಿ ನೆರವೇರಿತು. ಜೋಗನು ಸಕ್ಕರೆಯ ಗಟ್ಟಿಯನ್ನು ಬಾಬಾರವರಿಗೆ ಸಮರ್ಪಿಸಿದನು. ಬಾಬಾರವರು

ಅದನ್ನು ಸ್ವೀಕರಿಸಲು ಅಂಗೈಯನ್ನು ತೆಗೆದರು. ॥115॥ ಜೋಗನು ಪ್ರೀತಿಯಿಂದ ಕೈಯ ಮುಷ್ಟಿಯ ತುಂಬ ಸಕ್ಕರೆಯನ್ನು ನಿತ್ಯ ಕ್ರಮಾನುಸಾರ ನಮಸ್ಕಾರ ಪೂರ್ವಕವಾಗಿ ಬಾಬಾರವರ ಕೈಯಲ್ಲಿಟ್ಟನು. ॥116॥ ಬಾಬಾರವರು ತಮ್ಮ ಕೈತುಂಬ ಇದ್ದ ಸಕ್ಕರೆಯ ಗಟ್ಟಿಯನ್ನು ನನ್ನ ಕೈಗಳಿಗೆ ಹಾಕಿದರು. ಮತ್ತು ಹೇಳಿದರು – "ನಿನ್ನ ಮನಃಸ್ಥಿತಿಯು ಈ ಕಥೆಯನ್ನು ನೆನಪಿನಲ್ಲಿಟ್ಟುಕೊಂಡಾಗ ಈ ಸಕ್ಕರೆಯ ರೀತಿಯಲ್ಲಿರುತ್ತದೆ." ॥117॥ "ಈ ಸಕ್ಕರೆಯ ಗಟ್ಟಿಯು ಸಿಹಿಯಾಗಿರುವ ಹಾಗೆ ನಿನ್ನ ಕಾತರತೆಯೂ ಸಫಲಗೊಳ್ಳುವುದು. ನೀನು ನಿಜವಾಗಿಯೂ ಪುಷ್ಟಿಹೊಂದಿ ನಿನ್ನ ಮನಸ್ಸಿನ ಇಚ್ಛೆಯು ಪೂರ್ಣಗೊಳ್ಳುವುದು." ॥118॥ ನಂತರ ನಾನು ಬಾಬಾರವರಿಗೆ ಅಭಿವಾದನ ಮಾಡುತ್ತ ಹೇಳಿದೆ, "ನಿಮ್ಮ ಆಶೀರ್ವಚನಗಳು ನನಗೆ ಸಾಕು. ನನಗೆ ಕೇವಲ ಈ ಕೃಪೆಯನ್ನು ತೋರಿ, ನನ್ನನ್ನು ಸಂಭಾಳಿಸಿ." ॥119॥ ಬಾಬಾ ಹೇಳಿದರು – "ಈ ಕಥೆಯನ್ನು ಕೇಳು, ಮತ್ತೆ ಮನನ ಮಾಡು. ನಿಧಿಧ್ಯಾಸನ ಮಾಡು, ನೆನಪಿಸಿಕೊಳ್ಳುತ್ತ ಏಕಾಗ್ರಚಿತ್ತನಾಗು. ಅದರಿಂದಾಗಿಯೇ ಧ್ಯಾನಉಂಟಾಗಿ ಆನಂದಘನ ಪ್ರಕಟವಾಗುತ್ತದೆ. ॥120॥ "ನೀನು ಆಲಿಸಿದ್ದನ್ನೆಲ್ಲಾ ಮನಸ್ಸಿನಲ್ಲಿ ಇಟ್ಟುಕೊಂಡಲ್ಲಿ ನಿನ್ನ ಕಲ್ಯಾಣಘನ ತೆರೆಯುತ್ತದೆ. ನಿನ್ನ ಪಾಪಗಳೆಲ್ಲವೂ ತೊಳೆದುಹೋಗುತ್ತವೆ. ॥121॥ "ಗಾಳಿಯು ಜೋರಾಗಿ ಬೀಸುತ್ತಿರುವಾಗ ಸಮುದ್ರದಲ್ಲಿ ನೀರು ಗುಳ್ಳೆಗಳು ಮತ್ತು ನೊರೆಗಳು ಮೇಲೇಳುತ್ತಿರುವಅಲೆಗಳ ತುದಿಗಳಲ್ಲಿ ಉಂಟಾಗುತ್ತವೆ ಮತ್ತು ಅವು ದಡಗಳಿಗೆ ಅಪ್ಪಳಿಸುತ್ತವೆ. ॥122॥ "ಅಲೆಗಳು, ಗುಳ್ಳೆಗಳು, ನೊರೆ ಮತ್ತು ಸುಳಿಗಳು ಒಂದೇ ನೀರಿನ ವಿವಿಧ ರೂಪಗಳು. ಅವೆಲ್ಲವೂ ಕೇವಲ ದೃಷ್ಟಿಭ್ರಮೆಯಷ್ಟೆ. ಅವು ಬಿರುಗಾಳಿ ಶಾಂತವಾಗುವವರೆಗೆ ಮಾತ್ರ ಇರುತ್ತವೆ. ॥123॥ "ಇವೆಲ್ಲವನ್ನೂ ನೀರಿನ ವಿವಿಧ ರೂಪಗಳೆಂದು ಕರೆಯಲಾಗುತ್ತದೆಯೇ? ಅಥವಾ ಅವು ಮಾಯವಾದುವೆಂದು ಪರಿಗಣಿಸಬೇಕೇ? ಇವುಗಳೆಲ್ಲವೂ ಭ್ರಮೆಯ ಸೃಷ್ಟಿಯೇ ಮತ್ತು ಅವುಗಳ ಇರುವಿಕೆಯೂ ಇಲ್ಲದಿರುವಿಕೆಯೂ ಒಂದೇ ಸಮವೆಂಬುದನ್ನು ಅರ್ಥಮಾಡಿಕೊಳ್ಳಬೇಕು. ॥124॥ "ಇವುಗಳೇ ಸೃಷ್ಟಿಯ ಆಗುಹೋಗುಗಳು. ವಿವೇಕಿಯು ಅದರ ಬಗ್ಗೆ ಅಚ್ಚರಿ ಪಡುವುದಿಲ್ಲ. ಅವನು ಈ ನಶ್ವರ ವಸ್ತುಗಳಲ್ಲಿ ಆಸಕ್ತಿ ವಹಿಸುವುದಿಲ್ಲ. ನಿತ್ಯ(ಪರಬ್ರಹ್ಮ)ದ ಜೊತೆಯಲ್ಲಿ ಸದಾ ಅಂಟಿಕೊಂಡಿರುತ್ತಾನೆ. ॥125॥ "ಧ್ಯಾನವು ಜ್ಞಾನಕ್ಕಿಂತ ಬಹಳ ಮಹತ್ವದ್ದು. ಆದರೆ ಧ್ಯಾನಕ್ಕೆ ಯಥಾರ್ಥ ಜ್ಞಾನದ ಆವಶ್ಯಕತೆ ಇದೆ. ಬ್ರಹ್ಮಜ್ಞಾನವನ್ನು ಅರ್ಥಮಾಡಿಕೊಳ್ಳುವವರೆಗೆ ಯಥಾರ್ಥ ಧ್ಯಾನ ಆಗುವುದಿಲ್ಲ. ॥126॥ "ಸಮ್ಯಕ್ ಜ್ಞಾನಕ್ಕೆ ಧ್ಯಾನವು ಮೂಲತಃಅವಶ್ಯವಾಗಿದೆ. ಈ ವಿಧಿವಿಧಾನವನ್ನು ಪ್ರತ್ಯಗ್ ಆತ್ಮಾನುಷ್ಠಾನವೆಂದು ತಿಳಿದಿರುತ್ತಾರೆ. ಅದೇ ಆತ್ಮಸಾಕ್ಷಾತ್ಕಾರ. ಆದರೆ ಅದರಲ್ಲಿ ಯಾವುದೇ ಕರ್ಮವಿರುವುದಿಲ್ಲ. ಆದ್ದರಿಂದ ಅದರ ಮೇಲೆ ಏಕಾಗ್ರಚಿತ್ತನಾಗುವುದು ಹೇಗೆ? ॥127॥ "ಪ್ರತ್ಯಗಾತ್ಮವೇ (ಜೀವಾತ್ಮವೇ) ಪರಮಾತ್ಮನು. ಪರಮಾತ್ಮನೇ ಗುರುವು. ಇವುಗಳ ಮಧ್ಯೆ ಅಣುಮಾತ್ರವೂ ಭೇದವಿಲ್ಲ. ಭೇದವೆಣಿಸುವವನು ಪೂರ್ತಿಯಾಗಿ ವಿಯೋಗ ಹೊಂದಿದವನಾಗುವನು. ॥128॥ "ಆಳವಾದ ಮತ್ತು ತೀವ್ರವಾದ

ನಿಧಿಧ್ಯಾಸನ ಮಾಡಿ ಪರಿಪಕ್ವತೆಯನ್ನು ಹೊಂದಿದಾಗ, ಧ್ಯಾನಿಗೂ ಮತ್ತು ಧ್ಯಾನವಸ್ತುವಿಗೂ ಇರುವ ಭೇದವೂ ನಶಿಸುತ್ತದೆ. ಮನಸ್ಸು ನಂದಾದೀಪವಾಗುತ್ತದೆ ಪ್ರಶಾಂತಿ ಉಂಟಾಗುತ್ತದೆ. ಅದೇ 'ಸಮಾಧಿ'ಯು. ॥129॥ "ಸಂಪೂರ್ಣವಾಗಿ ವಿರಕ್ತನಾಗಿ ಬ್ರಹ್ಮನು ಸರ್ವ ಭೂತಗಳಲ್ಲೂ ಇರುವನೆಂದು ನಂಬಿದಾಗ, ಭಗವಂತನಲ್ಲಿ ಒಂದಾಗುವ ಸ್ಥಿತಿಯನ್ನು ತಲುಪಿದಾಗ ಯಾವುದೇ ಭಯವಿಲ್ಲ ಮತ್ತು ಅವನ ಏಕಾಗ್ರಚಿತ್ತನಾಗಲು ಸಾಧ್ಯವಾಗುತ್ತದೆ. ಏಕೆಂದರೆ ಅವನು ಧ್ಯಾನದಲ್ಲಿ ಬರುವನು. ॥130॥ "ಅನಂತರ ಅವಿದ್ಯೆಯಿಂದ ಉಂಟಾದ ಕರ್ಮಬಂಧನವು ಮುರಿದುಬೀಳುತ್ತದೆ. ಭವಬಂಧನಗಳೂ ನಾಶವಾಗುತ್ತವೆ. ಅವನು ಮುಕ್ತಿಯ ಪರಮಾನಂದವನ್ನು ಅನುಭವಿಸುತ್ತಾನೆ. ॥131॥ "ಮೊದಲು, ಆತ್ಮಕ್ಕೆ ಅಸ್ತಿತ್ವವಿದೆಯೋ ಇಲ್ಲವೋ ಎಂಬುದನ್ನು ತಿಳಿಯಿರಿ. ಅದು ಎಲ್ಲ ಜೀವಿಗಳಲ್ಲೂ, ಎಲ್ಲರಲ್ಲೂ ನೆಲೆಸಿರುವ ತತ್ವ, ಅದು ಕರ್ತನೋ ಅಕರ್ತನೋ ಎಂಬುದನ್ನು ಷಟ್‌ಶಾಸ್ತ್ರಗಳನ್ನು ಪರಿಶೀಲಿಸಿ ಕಂಡುಹಿಡಿಯಿರಿ. ॥132॥ "ಆದರೆ ಆತ್ಮವು ಒಂದೇ ಎಂಬ ವಿಜ್ಞಾನವು ಜ್ಞಾನದ ಪರಾಕಾಷ್ಠೆಯಾಗಿರುತ್ತದೆ. ಅದೇ ಸ್ವತಃ ಮೋಕ್ಷ ಮತ್ತು ಪರಮಾನಂದವಾಗಿದ್ದು ಅದರಿಂದಲೇ ಹುಟ್ಟಿರುತ್ತದೆ. ॥133॥ "ಬೃಹಸ್ಪತಿಯಂತಹ ಪಾಂಡಿತ್ಯ ಪಡೆದಂತಹ ವಾಗ್ಮಿಯನ್ನು ಕುರುಡರ ಮುಂದೆ ಒಂದು ಆನೆಯನ್ನು ವಿವರಿಸಲು ಕರೆದುಕೊಂಡು ಬಂದಲ್ಲಿ, ಅವನ ಭಾಷಣವನ್ನು ಕೇಳಿದ ಅಂಧರು ಆನೆಯನ್ನು ಗ್ರಹಿಸಲಾರರು. ಅದೇ ರೀತಿ ವಚನಾತೀತವಾಗಿರುವುದನ್ನು ಪದಗಳಲ್ಲಿ ವರ್ಣಿಸುವುದು ಹೇಗೆ ಸಾಧ್ಯ? ॥134॥ "ವಚನಕಾರ ವಾಗ್ಮಿಯೂ ಶ್ರೋತೃಗಳ ಕಿವಿಗಳೂ ಅಂಧನಿಗೆ ದೃಷ್ಟಿ ಹಿಂತಿರುಗಿಸಲು ಸಾಧ್ಯವೇ? ನಿಜವಾಗಿಯೂ ಹೇಳಬೇಕೆಂದರೆ ಕೇವಲ ಕಣ್ಣುಗಳು ಮಾತ್ರ ಆನೆಯನ್ನು ಗ್ರಹಿಸಲು ಸಾಧ್ಯ. ॥135॥ "ಕಣ್ಣುಗಳು ಇಲ್ಲದಿದ್ದಲ್ಲಿ ಕುರುಡನು ಆನೆಯನ್ನು ಗ್ರಹಿಸಲು ಹೇಗೆ ಸಾಧ್ಯ? ಅದೇ ರೀತಿ ಗುರುವು ಶಿಷ್ಯನಿಗೆ ದಯಪಾಲಿಸುವ ದಿವ್ಯದೃಷ್ಟಿ ಮಾತ್ರ ಜ್ಞಾನ ಸಂಪತ್ತನ್ನು ಗ್ರಹಿಸಬಲ್ಲುದು." ॥136॥ ಸಾಯಿ ಸ್ವರೂಪವನ್ನರಿಯುವುದೇ ಯಥಾರ್ಥ ಜ್ಞಾನವಾಗಿದೆ. ಅವರೇ ಸ್ವಯಂ ಪರಿಪೂರ್ಣವಾದ ವಿಜ್ಞಾನ ಘನರು. ಧ್ಯಾನ, ಅನುಷ್ಠಾನ ಮತ್ತು ದರ್ಶನ ಇವೆಲ್ಲವೂ ಅವರ ವಿಚಾರದಲ್ಲಡಗಿದೆ. ॥137॥ ಅವಿದ್ಯೆ, ಕಾಮ, ಕರ್ಮಗಳ ಬಂಧನ ಇವುಗಳಿಂದ ಸಂಪೂರ್ಣ ಮುಕ್ತಿ ದೊರಕುವುದು ಕೇವಲ ಅವರ ಧ್ಯಾನದಿಂದ ಮಾತ್ರವೇ. ಮತ್ತೆ ಇನ್ನು ಬೇರೆ ಯಾವ ಸಾಧನವೂ ಇಲ್ಲ. ಇದನ್ನು ಮನದಲ್ಲಿ ಗಂಟುಹಾಕಿ ಬಂಧಿಸಿಟ್ಟುಕೊಳ್ಳಿ. ॥138॥ ಸಾಯಿಯು ನಿನ್ನವನೂ ಅಲ್ಲ ನನ್ನವನೂ ಅಲ್ಲ. ಅವರು ಎಲ್ಲ ಜೀವಿಗಳಲ್ಲೂ ನೆಲೆಸಿದ್ದಾರೆ. ಸೂರ್ಯನು ಸಕಲ ಜಗತ್ತಿಗೇ ಬೇಕಾದವನು. ಅದೇ ರೀತಿ ಅವರೂ ಸಹ ಎಲ್ಲರಿಗೂ ಬೇಕಾದವರು. ॥139॥ ಈಗ ಅವರ ಮಾತುಗಳನ್ನು ಕೇಳಿ, ಅವು ಸರ್ವಸಾಧಾರಣವೆನಿಸಿದರೂ ಬಹಳ ಅಮೂಲ್ಯವಾದುವು. ಅವುಗಳನ್ನು ಆಗಾಗ್ಗೆ ನೆನಪಿಸಿಕೊಂಡಲ್ಲಿ ನೀನು ಏನೇನು ಮಾಡಿದರೂ ಸದಾಕಾಲ ಸಫಲತೆಯನ್ನು ಪಡೆಯುವೆ. ॥140॥ "ಹಿಂದಿನ ಜನ್ಮದ ಯಾವುದೇ ಸಂಬಂಧವಿಲ್ಲದೆ ಯಾರೂ ಸಹ ಕೇವಲ ಮನುಷ್ಯರೇ ಅಲ್ಲ ಪಶುಪಕ್ಷಿಗಳೂ

ಒಂದನ್ನೊಂದು ಭೇಟಿಮಾಡಲಾಗುವುದಿಲ್ಲ. ಆದುದರಿಂದ ಯಾರನ್ನೂ ಧಿಕ್ಕರಿಸಬೇಡ. ||141|| "ನಿನ್ನ ಮನೆ ಬಾಗಿಲಿಗೆ ಬಂದ ಅತಿಥಿಗಳನ್ನು ಗೌರವಿಸಿ. ಬಾಯಾರಿದವರಿಗೆ ನೀರು ಕೊಡಿ. ಹಸಿದವರಿಗೆ ರೊಟ್ಟಿಯನ್ನು ಕೊಡಿ. ಬಟ್ಟೆ ಇಲ್ಲದವರಿಗೆ ವಸ್ತ್ರ ನೀಡಿ. ಆಯಾಸ ಇದ್ದವರಿಗೆ ವಿಶ್ರಮಿಸಲು ಸ್ಥಳ ನೀಡಿ. ಇದರಿಂದ ಶ್ರೀಹರಿಯು ತೃಪ್ತಿಹೊಂದುತ್ತಾನೆ. ||142|| "ಯಾರಿಗಾದರೂ ಹಣದ ಆವಶ್ಯಕತೆ ಇದ್ದಲ್ಲಿ ಮತ್ತು ನಿನಗೆ ಕೊಡಲು ಇಚ್ಛೆ ಇಲ್ಲದಿದ್ದರೆ ಕೊಡಬೇಡ. ಆದರೆ ಅವಮಾನ ಮಾಡುವ ರೀತಿಯಲ್ಲಿ ವರ್ತಿಸಬೇಡ. ನಾಯಿಯ ತರಹ ಅವನ ಕಡೆ ಬೊಗಳಬೇಡ. ||143|| "ಯಾರಾದರೂ, ನಿನ್ನನ್ನು ನೂರಾರು ರೀತಿಯಲ್ಲಿ ಕರೆಯಬಹುದು. ಎಂದಿಗೂ ಕಟುವಾಗಿ ಉತ್ತರಿಸಬೇಡ. ನಿರಂತರವಾಗಿತಾಳ್ಮೆಯಿಂದ ಸಹಿಸಿಕೊ. ನಿನಗೆ ಅಪಾರ ಸುಖ ದೊರಕುತ್ತದೆ. ||144|| "ಇಡೀ ಪ್ರಪಂಚವೇ ತಲೆಕೆಳಗಾದರೂ ನೀನು ಮಾತ್ರ ನಿಶ್ಚಲವಾಗಿ ನಿನ್ನ ಮಾರ್ಗದಲ್ಲಿ ಸಾಗಬೇಕು. ಅಚಲನಾಗಿ ಕೌತುಕವನ್ನು ನಿಷ್ಕ್ರಿಯನಾಗಿ ಅವಲೋಕಿಸು. ||145|| "ನಿನ್ನ ಮತ್ತು ನನ್ನ ಮಧ್ಯೆ ಇರುವ ಗೋಡೆಯನ್ನು ಒಡೆದುಹಾಕು. ಆಗ ಪರಸ್ಪರ ಭೇಟಿಯಾಗುವ ಮಾರ್ಗವು ನಿಚ್ಚಳವಾಗಿ ತಿಳಿಯುತ್ತದೆ. ಮಾರ್ಗವು ಪ್ರಶಸ್ತವಾಗುತ್ತದೆ. ಮತ್ತು ಎಂದಿಗೂ ಭಯವಿರುವುದಿಲ್ಲ. ||146|| "ನಿನ್ನ ಮತ್ತು ನನ್ನ ಮಧ್ಯೆ ಇರುವ ದ್ವೈತ ಭಾವವು ಗುರು ಮತ್ತು ಶಿಷ್ಯರ ಮಧ್ಯೆ ಇರುವ ಗೋಡೆ. ಈ ಗೋಡೆಯನ್ನು ಸಂಪೂರ್ಣವಾಗಿ ನಾಶಮಾಡುವವರೆಗೆ ಏಕತ್ವ (ಅದ್ವೈತ) ಭಾವವನ್ನು ಪಡೆಯಲಾಗದೆ ಮಾರ್ಗವು ದುರ್ಗಮವೆನಿಸುತ್ತದೆ. ||147|| "ಅಲ್ಲಾನೇ ಮಾಲೀಕನು. ಅವನಲ್ಲದೆ ರಕ್ಷಕನು ಬೇರೆ ಯಾರೂ ಇಲ್ಲ. ಅವನ ಕಾರ್ಯಗಳು ಅಲೌಕಿಕವಾದವು, ಅಮೂಲ್ಯ ಮತ್ತು ಅಗಮ್ಯವಾದುದು. ||148|| "ಎಲ್ಲವೂ ಅವನಿಚ್ಛೆಯಂತೆಯೇ ಆಗುತ್ತದೆ. ಕೇವಲ ಅವನು ಮಾತ್ರ ಮಾರ್ಗವನ್ನು ತೋರಿಸಬಲ್ಲನು. ಸಮಯ ಬಂದಾಗ ಒಂದು ಕ್ಷಣಮಾತ್ರದ ವಿಳಂಬವೂ ಇಲ್ಲದೆ ನಿನ್ನ ಇಚ್ಛೆಯು ಪೂರೈಸಲ್ಪಡುತ್ತದೆ. ||149|| "ಜನರು ವಿಧಿ ನಿಯಮದಂತೆ ಸಂಧಿಸುತ್ತಾರೆ. ನಾವು ಸೌಭಾಗ್ಯದಿಂದ ಹತ್ತಿರ ಬಂದಿದ್ದೇವೆ. ಆದುದರಿಂದ ನಾವು ಪರಸ್ಪರ ಪ್ರೇಮ ತೋರಿಸಿ ಬೆಳೆಸಿ, ಸುಖ ಸಂತುಷ್ಟಿಗಳನ್ನು ಅನುಭವಿಸೋಣ. ||150|| "ಇಲ್ಲಿ ಅಮರರು ಯಾರು? ಜೀವನದ ಗುರಿಯಾದ ಪರಮಾರ್ಥವನ್ನು ಪಡೆದವರು ಕೃತಾರ್ಥರು. ಇತರರು ಶ್ವಾಸೋಚ್ಛ್ವಾಸಗಳಿಂದ ಜೀವಿಸಿರುವುದರಲ್ಲೇ ಇರುತ್ತಾರೆ ||151|| ಈ ಕೃಪಾ ವಚನಗಳನ್ನು ಕೇಳಿದಕೂಡಲೇ ನನ್ನ ಆತಂಕಗೊಂಡ ಮನಸ್ಸು ಶಾಂತವಾಯಿತು. ನನ್ನ ದಾಹ ತೀರಿತು. ನನ್ನ ಜೀವನ ಆನಂದಸಂಪನ್ನವಾಯಿತು. ||152|| ಯಾರೊಬ್ಬರಿಗೆ ಅತುಲವಾದ ಪ್ರಜ್ಞೆ ಇರಬಹುದು ಮತ್ತು ಅಚಲ ಶ್ರದ್ಧೆಯೂ ಇರಬಹುದು. ಆದರೆ ಸಾಯಿಯಂತಹ ಗುರುವಿನ ಬಲಪಡೆಯಲು ಅವನಿಗೆ ಸಬಲವಾದ ದೈವಬಲದ ಅವಶ್ಯಕತೆಯಿದೆ. ||153|| ಈ ಮಾತುಗಳ ಸಾರವನ್ನು ಕೊಡಬೇಕಾದರೆ ಭಗವಾನ್ ಕೃಷ್ಣನು ಇದೇ ಸತ್ಯವನ್ನು ಹೇಳಿರುವನು. "ನಾನು ಅವರವರ ಕರ್ಮಗಳಿಗೆ ತಕ್ಕ ಫಲಗಳನ್ನು ಕೊಡುವೆನು. ಎಲ್ಲ ಭಾರವನ್ನು ಕರ್ಮಗಳ ಮೇಲೆ ಹಾಕು." ||154|| ಕರ್ಮಗಳು

ಯಾವ ರೀತಿಯೋ ಫಲಗಳೂ ಅದೇ ರೀತಿ. ಅಭ್ಯಾಸವು ಹೇಗೋ ಹಾಗೆಯೇ ಕುಶಲ. ಈ ಅಧ್ಯಾಯದ ಸಾರವೇ ಇದು. ಇದು ಮಾತ್ರ ಬೋಧಾಮೃತದ ಹಾಗೆ. ॥155॥ "ನನ್ನ ಮೇಲೆ ಏಕಾಗ್ರತೆಯಿಂದ ಧ್ಯಾನಿಸು" ಎಂಬುದು ಭಗವದ್ಗೀತೆಯ ಸಾರ. ಯಾರು ತಮ್ಮನ್ನೇ ಅವನಲ್ಲಿ ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವರೋ ಅಂತಹವರ ಯೋಗಕ್ಷೇಮವನ್ನು ಅವನೇ ವಹಿಸಿಕೊಳ್ಳುತ್ತಾನೆ. ॥156॥ ಇಂತಹ ಅಮೂಲ್ಯ ಉಪದೇಶವನ್ನು ಕೇಳಿ, ನನಗೆ ಸ್ಮೃತಿಯ ಒಂದು ವಚನದ ನೆನಪಾಯಿತು. "ಅನನ್ಯ ಭಾವದಿಂದ ದೇವರನ್ನು ಪೂಜಿಸು. ಅವನು ನಿನ್ನ ಮೇಲೆ ಕರುಣೆತೋರುವನು. ॥157॥ "ನೀನು ಶ್ರಮಪಡಬೇಕು. ಆದರೆ ಫಲದ ಬಗ್ಗೆ ಕಾಳಜಿಯೆಲ್ಲವನ್ನೂ ತ್ಯಾಗಮಾಡಬೇಕು. ನಾನು ನಿನ್ನ ಹಿಂದೆಯೇ ನಿಂತಿರುವೆನು ಮತ್ತು ಫಲ ನೀಡಲು ಮಡಕೆಯ ತುಂಬ ಹಾಲನ್ನು ತೆಗೆದುಕೊಂಡು ಬರುತ್ತಿರುವೆನು. ಈ ರೀತಿ ನಾನು ಯಾವಾಗಲೂ ನಿನ್ನ ಬೆನ್ನ ಹಿಂದೆಯೇ ಇರುವೆನು. ॥158॥ "ಆದರೆ, ಒಂದು ವೇಳೆ ನಾನು ಮಾತ್ರ ಶ್ರಮಪಡಬೇಕು ಮತ್ತು ನೀನು ಮಾತ್ರ ಹಾಲನ್ನು ಯಥೇಚ್ಛವಾಗಿ ಕುಡಿಯಬೇಕು ಎಂದು ಯೋಚಿಸಿದಲ್ಲಿ, ಇದಕ್ಕೆ ನಾನು ಸಮ್ಮತಿಸುವುದಿಲ್ಲ. ಅದಕ್ಕೆ ಬದಲು ನೀನು ಎಚ್ಚರದಿಂದಿರು ಕರ್ಮಗಳನ್ನು ಆಚರಿಸು. ಚುರುಕಾಗಿರು ಮತ್ತು ಅದಕ್ಕಾಗಿ ಶ್ರಮವಹಿಸು." ॥159॥ ಇವು ಬಾಬಾರವರ ಪ್ರತಿಜ್ಞಾವಾಣಿಗಳು. ಯಾರು ವಚನಗಳನ್ನು ಪ್ರಮಾಣವೆಂದು ಒಪ್ಪುವರೋ ಅವರು ಸುಖದ ಗಣಿಯನ್ನೇ ಅನುಭವಿಸುತ್ತಾರೆ. ಇಹದಲ್ಲಿಯೂ ಮತ್ತು ಪರದಲ್ಲಿಯೂ ಸಹ. ॥160॥ ನಾನು ಈಗ ಶ್ರೋತೃಗಳಲ್ಲಿ ಚಿತ್ತವನ್ನು ಸುಸ್ಥಿರಗೊಳಿಸುವಂತೆ ವಿನಂತಿಸಿಕೊಳ್ಳುತ್ತೇನೆ. ಈಗ ಮತ್ತೊಂದು ಸ್ವಾನುಭವದ ಕಥೆಯಲ್ಲಿ ಸಾಯಿಯ ನಿಶ್ಚಯವಾದ ಪೋಷಕ ಸ್ವಭಾವ ವ್ಯಕ್ತವಾಗುತ್ತದೆ. ॥161॥ ಸದ್ವೃತ್ತಿಯನ್ನು ಮಾಡುವ ನಿಯಮವನ್ನು ಮಾಡಿಕೊಂಡರೆ ಮಹಾರಾಜರು ಯಾವ ರೀತಿ ಉತ್ತೇಜನ ನೀಡುವರು ಎಂಬುದನ್ನು ಮರು ಪ್ರಶ್ನೆ ಮಾಡದೆ ಕೇಳು ಮತ್ತು ಸಾಯಿಯು ಅನುಗ್ರಹಿಸುವ ರೀತಿಯನ್ನು ಅವಲೋಕಿಸು. ॥162॥ ಭಕ್ತನಾದವನು ಅನನ್ಯವಾಗಿ ಶರಣಾಗಬೇಕು. ಭಕ್ತಿಯ (ಕೌತುಕಮಯ) ಫಲಗಳನ್ನು ಅವಲೋಕಿಸಬೇಕು. ಪ್ರತಿನಿತ್ಯ ಸಾಯಿಯ ಒಂದೊಂದು ಪವಾಡ ಸದೃಶ ಸಂಗತಿಗಳು ಅನುಭವಕ್ಕೆ ಬರುತ್ತವೆ. ॥163॥ ಬೆಳಗ್ಗೆ ಸುಷುಪ್ತಿಯಿಂದ ಎದ್ದ ಕೂಡಲೇ ಒಂದು ಸದ್ವೃತ್ತಿಯು ಮನಸ್ಸಿಗೆ ಬಂದಕೂಡಲೇ ಆ ನಿರ್ಧಾರವನ್ನು ಬೆಳೆಸಬೇಕು. ॥164॥ ಅಂತಹ ಸತ್‌ಚಿಂತನೆಯು ವೃದ್ಧಿಹೊಂದುತ್ತದೆ. ಅದು ಸಂತೃಪ್ತಿಯನ್ನು ತರುತ್ತದೆ.ಸಂತೋಷ ಉಂಟುಮಾಡುತ್ತದೆ. ಬುದ್ಧಿಯು ವಿಕಾಸಹೊಂದುತ್ತದೆ. ಮನಸ್ಸಿನಲ್ಲಿ ಪ್ರಸನ್ನತೆಯು ಮೂಡುತ್ತದೆ. ॥165॥ ಇದು ಒಂದು ಸಂತರ ಉಕ್ತಿಯು. ನಾನು ಅದನ್ನು ಅನುಭವಿಸಲು ಇಚ್ಛಿಸಿದೆ. ಅದನ್ನು ಅನುಭವಿಸಿದಾಗ ಮನಸ್ಸು ಶಾಂತಿಹೊಂದಿತು. ಆಶ್ಚರ್ಯಭರಿತವಾಯಿತು. ॥166॥ ಶಿರಡಿಯಂತಹ ಪವಿತ್ರ ಸ್ಥಾನದಲ್ಲಿ ಒಂದು ಗುರುವಾರದಂತಹ ಮಂಗಳ ದಿನದಂದು ನಾನು ದಿನಪೂರ್ತಿ ಅಖಂಡವಾಗಿ ರಾಮನಾಮವನ್ನು ಸ್ಮರಿಸಲು ನಿರ್ಧರಿಸಿದೆನು. ॥167॥ ಬುಧವಾರ

ರಾತ್ರಿಯಂದು ದೇಹವು ಹಾಸಿಗೆ ಮೇಲೆ ನಿದ್ರಾವಶವಾಯಿತು. ನನ್ನ ಮನಸ್ಸು ಒಳಗೆ ಅಂತರಂಗದಲ್ಲಿ ರಾಮನಾಮಸ್ಮರಣೆ ಮಾಡುತ್ತ ಲೀನವಾಗಿತ್ತು. ॥168॥ ನಾನು ಪ್ರಾತಃಕಾಲದಲ್ಲಿ ಎದ್ದಾಗ ನನ್ನ ಚಿತ್ತದಲ್ಲಿ ಮತ್ತೆ ರಾಮನಾಮಸ್ಮರಣೆ ಪ್ರಾರಂಭವಾಯಿತು. ಇದು ನಡೆದಾಗ ನಾನು ಯೋಚಿಸಿದೆನು. ನನ್ನ ನಾಲಿಗೆಯ ಅಸ್ತಿತ್ವಕ್ಕೆ ನಿಜವಾಗಿಯೂ ನ್ಯಾಯದೊರಕಿತು ಎಂದು. ॥169॥ ಆದುದರಿಂದ ನಾನು ಇದನ್ನು ಮುಂದುವರೆಸಲು ನಿರ್ಧರಿಸಿದೆನು. ನನ್ನ ಪ್ರಾತಃಕಾಲದ ನಿತ್ಯವಿಧಿಗಳನ್ನು ಮುಗಿಸಿ ಅಲ್ಲಿ ಸಿಕ್ಕಿದ ಕೆಲವು ಹೂಗಳನ್ನು ಎತ್ತಿಕೊಂಡು ಸಾಯಿಯ ಪ್ರಾತಃಕಾಲ ದರ್ಶನಕ್ಕಾಗಿ ಹೊರಟೆನು. ॥170॥ ದೀಕ್ಷಿತನ ಮನೆಯನ್ನು ಬಿಟ್ಟು ಮತ್ತೆ ಬುಟ್ಟಿಯ ವಾಡಾದ ಹೊರಗಡೆ ಔರಂಗಾಬಾದ್ಕರ್ ಮಧುರವಾಗಿ ಹಾಡುತ್ತಿದ್ದ ಒಂದು ಮಂಜುಳವಾದ ಹಾಡನ್ನು ಕೇಳಿದೆನು. ॥171॥ ಆ ಸಮಯೋಚಿತವಾದ ಹಾಡನ್ನು ಪೂರ್ಣವಾಗಿ 'ಓವಿ' ಛಂದಸ್ಸಿನಲ್ಲಿ ಹಾಕಿಹಾಡಿದರೆ ಅದರಮೂಲಸ್ವಾರಸ್ಯದಿಂದ ವಂಚಿತರಾಗಿ ಶ್ರೋತೃಗಳು ಅದರ ಸವಿಯನ್ನು ಅನುಭವಿಸಲಾರರು. ॥172॥ ಆದ್ದರಿಂದ, ನಾನು ನಿಮಗಾಗಿ ಆ ಹಾಡನ್ನು ಪೂರ್ಣವಾಗಿ (ಅಕ್ಷರಶಃ) ಹಾಡುವೆನು. ಅದರಿಂದಾಗಿ ಪ್ರೀತಿಯ ಶ್ರೋತೃಗಳು ಆನಂದಹೊಂದುತ್ತಾರೆ. ಆ ಮೂಲ ಪದವು ನಿರ್ಮಲವಾದ ಉಪದೇಶವನ್ನೊಳಗೊಂಡಿದೆ. ॥173॥

ಹಾಡು:-

"ಓ, ನನ್ನ ಸೋದರನೇ, ನಾನು ಗುರುಕೃಪೆಯ ಅಂಜನವನ್ನು ಪಡೆದಿರುವೆನು.
ನಾನು ರಾಮನಲ್ಲದೆ ಬೇರೆ ಇನ್ನಾರನ್ನೂ ನಂಬುವುದಿಲ್ಲ. (ಕೋರಸ್) ।ಪಲ್ಲವಿ।
ನನ್ನೊಳಗೆ ರಾಮ ಮತ್ತು ನನ್ನ ಹೊರಗೆ ರಾಮ
ಎಲ್ಲಿನೋಡಿದರಲ್ಲಿ ಇಚ್ಛಾಪೂರಣ ರಾಮ ॥1॥
ಎದ್ದಾಗ ರಾಮ ಮಲಗಿದಾಗ ರಾಮ
ಕನಸಿನಲ್ಲೂ ನೋಡುವೆ ಸೀತಾರಾಮ ॥2॥
ಇದೊಂದು ಜನಾರ್ದನಿಯ ಸುಂದರ ಅನುಭವ
ರಾಮನ ನೋಡು ಎಲ್ಲೆಲ್ಲಿ ನೋಟ ಹರಿಸಲು ಅಲ್ಲಲ್ಲಿ ॥ಗುರು॥ ॥3॥

ಈಗಾಗಲೇ ನಾನು ಮನಸ್ಸಿನಲ್ಲೇ ರಾಮನಾಮವನ್ನು ನಿಯಮಾನುಸಾರ ಸ್ಮರಿಸಬೇಕೆಂದು ನಿಶ್ಚಯಿಸಿದ್ದೆನು. ಆದರೆ ಅದನ್ನು ಪ್ರಾರಂಭಿಸುವ

ಮೊದಲೇ ನಾನು ಕೇಳಿಸಿಕೊಂಡ ಈ ಹಾಡು ದೃಢತೆಯನ್ನು ಹೆಚ್ಚಿಸಿತು. ॥174॥ ಹೀಗೆ ನಾನು ಮನಸ್ಸಿನಲ್ಲಿಯೇ ತೃಪ್ತಿಹೊಂದಿದೆನು. ಕರುಣಾಘನರಾದ ಸಾಯಿಸಮರ್ಥರು ನನ್ನ ಮನಸ್ಸಿನಲ್ಲಿ ನಿಶ್ಚಯವೆಂಬ ಬೀಜಕ್ಕೆ ಭಕ್ತಿಗೀತೆ ಎಂಬ ನೀರಿನ ಮಳೆಸುರಿಸಿದ್ದರು. ॥175॥ ತಂಬೂರಿಯನ್ನು[2] ಕೈಯಲ್ಲಿ ಹಿಡಿದು, ಔರಂಗಾಬಾದ್ಕರ್, ಸಾಯಿಯ ಸಮ್ಮುಖದಲ್ಲಿ ಅಂಗಳದ ಒಳಗೆ ಉಚ್ಚಸ್ವರದಲ್ಲಿ ಹಾಡುತ್ತಿರಲು ಅದರ ಧ್ವನಿ ತರಂಗಗಳು ಎಲ್ಲೆಡೆಯಲ್ಲಿಯೂ ಹರಡಿದವು. ॥176॥ ಔರಂಗಾಬಾದ್ಕರನು ಬಾಬಾರವರ ಪರಮ ಭಕ್ತನು. ನನ್ನಂತೆಯೇ ಅವನೂ ಅವರ ಚರಣಗಳಲ್ಲಿ ಅನುರಕ್ತನಾಗಿದ್ದನು. ಅವನಿಗೆ ಅನೇಕ ಪದಗಳು ಬಾಯಿಪಾಠವಾಗಿದ್ದರೂ, ಆ ಸಮಯದಲ್ಲಿ ಅದೇ ಹಾಡನ್ನು ಹಾಡಬೇಕೆಂಬ ಸ್ಫೂರ್ತಿ ಏಕೆ ಬಂದಿತು? ॥17॥ ನನ್ನ ಮನೋಗತವು ಬೇರೆ ಯಾರಿಗೂ ತಿಳಿದಿರಲಿಲ್ಲ. ಹಾಗಿರುವಾಗ ಆ ಹಾಡನ್ನೇ ಏಕೆ ಹಾಡಿದನು? ಅದು ಬಾಬಾರವರೇ ಸೂತ್ರವನ್ನು ಹಿಡಿದೆಳೆದು ಹಾಗೆಯೇ ಈ ಹಾಡನ್ನು ಹಾಡಲು ಸ್ಫೂರ್ತಿನೀಡಿದಂತಿತ್ತು. ॥178॥ ನಾವೆಲ್ಲರೂ ಕೇವಲ ಕೈಗೊಂಬೆಗಳು ಮತ್ತು ಸೂತ್ರಧಾರಿಣಿ ಸಾಯಿಮಾತೆ. ಅವರು ಸ್ವಯಂ ತಾವು ನೇರವಾಗಿ ಮಾತನಾಡದೆಯೇ ಉಪಾಸನಾ ವಿಧಿಯನ್ನು ಸರಿಯಾಗಿ ಸೂಚಿಸಿದರು. ॥179॥ ನನ್ನ ಅಂತರಂಗದಯೋಚನೆಗಳು ಬಾಬಾರವರ ಚಿತ್ತದಲ್ಲಿ ಪ್ರತಿಬಿಂಬಿಸಿದ್ದವು. ಈ ರೀತಿ ಅವರು ತಮ್ಮ ಮಾರ್ಗವನ್ನು ಪ್ರತ್ಯಕ್ಷವಾಗಿ ಸಾಧಿಸಿದ್ದರು. ನಾನು ನಿಶ್ಚಯವಾಗಿಯೂ ಈ ರೀತಿ ಭಾವಿಸುತ್ತೇನೆ. ॥180॥ ನಾಮದ ಮಹತ್ವವು ಅದೆಷ್ಟು ಉತ್ತಮ? ಸಂತ ಶ್ರೇಷ್ಠರು ಅದನ್ನು ಎಷ್ಟರ ಮಟ್ಟಿಗೆ ವಿವರಿಸಲು ಸಾಧ್ಯ? ಅದೂ ಸ್ವಸ್ವರೂಪ ಪ್ರಾಪ್ತಿಗಾಗಿ ಮಾರ್ಗದರ್ಶನ ಮಾಡುವುದನ್ನು ಹೇಗೆ ಹೇಳಲಿ? ॥181॥ ಒಬ್ಬ ಬೇಡರವನು ದೊಡ್ಡ ದರೋಡೆಕೋರನಾಗಿದ್ದನು. ಎರಡು ಅಕ್ಷರಗಳನ್ನು ತಿರುಗುಮುರುಗಾಗಿ ಉಚ್ಚರಿಸಲು, ಅವನು ಸಾಧಾರಣ ವಾಲ್ಯಾ (ಬೇಡ) ಜಾತಿಯವನು ವಾಲ್ಮೀಕಿ ಋಷಿಯಾದನು ಮತ್ತು ಅಸೀಮವಾದ ವಾಕ್ಸಿದ್ಧಿಯನ್ನು ಪಡೆದನು. ॥182॥ ಅವನು 'ಮರ, ಮರ' ಎಂದು ಉಚ್ಚರಿಸುತ್ತಿರಲು 'ರಾಮ' ಎಂಬ ಶಬ್ದವು ಸಹಜವಾಗಿಯೇ ಅವನ ನಾಲಿಗೆಯ ಉಚ್ಚಾರವಾಗಿ ರಾಮನ ಅವತಾರದ ಜೀವನ ಚರಿತ್ರೆ ಮತ್ತು ಕಾರ್ಯಗಳನ್ನು ಬರೆಯಲು ಸಾಧ್ಯವಾಯಿತು. ॥183॥ ರಾಮನಾಮವು ಅತ್ಯಂತ ಪವಿತ್ರ, ಪತಿತರನ್ನೂ ಸಹ ಪಾವನಗೊಳಿಸುವಂತಹುದು. ರಾಮನಾಮವು ಅತ್ಯಂತ ಲಾಭಕರ. ರಾಮನಾಮವು ಭಜನೆಗೆ ಸಮ ಮತ್ತು ರಾಮನಾಮಸ್ಮರಣೆಯು ಬ್ರಹ್ಮತ್ವದ ಕಡೆ ಕರೆದೊಯ್ಯುವುದು. ॥184॥ ಅತಿ ಸರಳವಾಗಿ ರಾಮನಾಮಸ್ಮರಣೆ ಮಾಡಿದಾಗ ಜನನ ಮರಣಗಳ ಬಂಧನವು ಕಳಚಿಕೊಳ್ಳುತ್ತದೆ. ಕೇವಲ ಒಂದು ರಾಮನಾಮ ಸ್ಮರಣೆಯಿಂದಲೇ ಕೋಟಿಗಟ್ಟಲೆ ಲಾಭವಿದೆ. ॥185॥ ಯಾವಾಗ ರಾಮನಾಮದ ಗರ್ಜನೆ ಉಂಟಾಗುವುದೋ ಆಗ ವಿಷ್ಣುವಿನ ಸುದರ್ಶನ ಚಕ್ರವು' ತಿರುಗಲು ಪ್ರಾರಂಭಿಸಿ ಲಕ್ಷಾಂತರ ವಿಘ್ನಗಳನ್ನು ನಾಶಪಡಿಸುತ್ತದೆ. ಈ ರೀತಿ ನಾಮವು ದೀನಸಂರಕ್ಷಕವಾದುದು. ॥186॥ ಸಾಯಿಗೆ ಉಪದೇಶ ನೀಡಲು ಯಾವುದೇ ನಿಗದಿತ ಸ್ಥಳ ಬೇಕಿಲ್ಲ. ಸರಿಯಾದ ಸಮಯವಾಗಲೀ,

ಸರಿಯಾದ ಏರ್ಪಾಡಾಗಲೀ ಬೇಕಿಲ್ಲ. ಮಾತನಾಡುವಾಗ, ನಡೆಯುವಾಗ, ಕುಳಿತಿರುವಾಗ ಸಹಜವಾಗಿ ಸಕಲ ಉಪದೇಶವನ್ನು ನೀಡಬಲ್ಲವರಾಗಿದ್ದರು. ॥187॥ ಶ್ರೋತೃಗಳೇ, ಈಗ ಈ ವಿಷಯದ ಬಗೆಗಿನ ಒಂದು ಗಮನ ಸೆಳೆಯುವಂತಹ ಕಥೆಯನ್ನು ಗೌರವದಿಂದ ಕೇಳಿರಿ. ಕಥೆಯು ಸಾಯಿಯ ದಯಾಮಯ ಸ್ವಭಾವವನ್ನೂ, ಅವರ ಸರ್ವಾಂತರ್ಯಾಮಿತ್ವವನ್ನೂ ತೋರಿಸುತ್ತದೆ. ॥188॥ ಒಮ್ಮೆ ಒಬ್ಬ ಭಕ್ತಶ್ರೇಷ್ಠನು, ಯಾರೋ ಒಬ್ಬನು ಮತ್ತೊಬ್ಬನ ಬಗ್ಗೆ ಮಾತನಾಡುತ್ತಿರುವಾಗ ಸ್ವಯಂ ಕುತರ್ಕದಲ್ಲಿ ಮಗ್ನನಾಗಿ ಬಹಳ ಕೆಟ್ಟದಾಗಿ ನಿಂದಿಸುವುದರಲ್ಲಿಮಗ್ನನಾದನು. ॥189॥ ಸದ್ಗುಣಗಳನ್ನು ಅಲಕ್ಷಿಸಿ ಕೇವಲ ಕುತರ್ಕದಲ್ಲಿ ಅನಿಷ್ಟ ನಿಂದೆಗಳಲ್ಲಿ ನಿಜವಾದ ಕಥೆಯು ಕಣ್ಮರೆಯಾಯಿತು. ಇದು ಒಂದು ನಿಂದನೆಗಳ ಸಭೆಯೇ ಆಯಿತು. ॥190॥ ಏನಾದರೂ ಒಂದು ಕಾರಣವಿದ್ದಲ್ಲಿ ಅಥವಾ ಬೇರೊಬ್ಬನು ಜಿಗುಪ್ಸೆ ತರುವಂತಹ ಆಚರಣೆ ಇದ್ದಲ್ಲಿ, ಆಗ ಮಾತ್ರ ನೇರವಾಗಿ, ಮಧುರವಾಗಿ ಮಾತನಾಡಿ ಅವನನ್ನು ಸರಿಪಡಿಸಲು ಪ್ರಯತ್ನಿಸಬೇಕು. ಅವನ ಬಗ್ಗೆ ಕನಿಕರ ತೋರಬೇಕು. ॥191॥ ಎಂದಿಗೂ ಮತ್ತೊಬ್ಬರನ್ನು ಕೀಳರಿಮೆಯಿಂದ ನೋಡಬಾರದು. ಇದು ಎಲ್ಲರಿಗೂ ತಿಳಿದ ವಿಷಯವೇ ಸರಿ. ಆದರೆ ಅಂತಹ ಸ್ವಭಾವವನ್ನು ನಿಗ್ರಹಿಸಲು ಸಾಧ್ಯವಿಲ್ಲ. ಅದನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ॥192॥ ಅದು ಒಳಗೆ ಹುಟ್ಟಿ ಕ್ರಮೇಣ ಕಂಠಕ್ಕೆ ಬರುತ್ತದೆ. ಕಂಠದಿಂದ ಮೇಲೆ ಬಂದು ಬಾಯಿಯಿಂದ ಹೊರಗೆ ತಳ್ಳಲ್ಪಡುತ್ತದೆ. ತುಟಿಗಳು ತೆರೆದಾಗ ಸುಖಸಂತೋಷಗಳು ಹೊರಗೆ ತಳ್ಳಲ್ಪಡುತ್ತವೆ. ॥193॥ ನಿಂದಕನಿಗಿಂತ ಉತ್ತಮರು ಬೇರೆ ಯಾರೂ ಇಲ್ಲ. ಅವನು ಒಬ್ಬರಿಗೆ ಸಹಾಯ ಮಾಡಬಹುದು. ನಿಂದನೆಯು ಒಬ್ಬರಿಗೆ ಉಪಕಾರಮಾಡಬಹುದು. ಈ ರೀತಿ ನಿಂದಕನು ಶುಭವನ್ನುಂಟುಮಾಡಿ ಪರೋಪಕಾರಿಯಾಗುತ್ತಾನೆ. ॥194॥ ಕೆಲವರು ಕೊಳೆಯನ್ನು ಸೀಗೆ ಬೀಜದಿಂದ ತೆಗೆಯುತ್ತಾರೆ. ಕೆಲವರು ಸಾಬೂನು ಮುಂತಾದವುಗಳನ್ನು ಉಪಯೋಗಿಸಿ ತೆಗೆಯುತ್ತಾರೆ. ಕೆಲವರು ಅದನ್ನು ಶುಚಿ ಮತ್ತು ನಿರ್ಮಲವಾದ ನೀರಿನಿಂದ ಮಾಡುತ್ತಾರೆ. ಆದರೆ ಒಬ್ಬ ನಿಂದಕನು ಅದೇ ಕೆಲಸವನ್ನು ನಾಲಿಗೆಯಿಂದ ಮಾಡುತ್ತಾನೆ. ॥195॥ ಒಂದು ವಿಧದಲ್ಲಿ ಅವರು ಬೇರೆಯವರಿಗಾಗಿ, ಅವರಿಗೆ ಒಳ್ಳೆಯದು ಮಾಡಲೋಸುಗ ತಾತಮ್ಮ ಮಾನಸಿಕ ಅಧೋಗತಿಯನ್ನು ತಂದುಕೊಳ್ಳುತ್ತಾರೆ. ಆದ್ದರಿಂದ ಅವರ ಕಾರ್ಯಗಳು ನಿಜವಾಗಿಯೂ ಹೇಳಬೇಕೆಂದರೆ ಮಹದುಪಕಾರಮಾಡಿ ಅವರ್ಣನೀಯವಾಗಿರುತ್ತವೆ. ನಿಶ್ಚಯವಾಗಿಯೂ ನಿಂದಕನು ಅತಿಯಾಗಿ ವಂದನೀಯನು. ॥196॥ ಪ್ರತಿಯೊಂದು ಹೆಜ್ಜೆಯಲ್ಲೂ ಅವನು ತೊಂದರೆಗಳನ್ನು ಬೆರಳೆತ್ತಿ ತೋರಿಸುತ್ತಾನೆ. ಅವನು ಪ್ರತಿಯೊಬ್ಬರಿಗೂ ತರ್ಕದ ನೆಪದಲ್ಲಿ ದೋಷಗಳನ್ನು ತೋರಿಸುತ್ತಾನೆ. ಈ ರೀತಿ ಅನರ್ಥಗಳನ್ನು ತಡೆಯಲು ಸಹಾಯಕನಾಗುತ್ತಾನೆ. ಅವನ ಉಪಕಾರವನ್ನೆಷ್ಟು ಹೊಗಳಲಿ? ॥197॥ ಅನೇಕ ಜನರು ಅವರನ್ನು ಹೊಗಳಿದ್ದಾರೆ. ಸಾಧುಸಂತರೂ ಸಹ ಅವರ ಮಹತ್ವದ ಬಗ್ಗೆ ಹೊಗಳಿದ್ದಾರೆ. ಆದರೂ ನಿಂದಕ ವೃಂದಕ್ಕೆ ಸಾಷ್ಟಾಂಗ ಪ್ರಣಾಮ ಮಾಡುತ್ತೇನೆ. ॥198॥ ಇದನ್ನು ಕೇಳುತ್ತಿರುವ ಶ್ರೋತೃಗಳು ಓಕರಿಕೆ ಪಟ್ಟುಕೊಂಡರು.

ನಿಂದಕರು ಆ ಜಾಗಬಿಟ್ಟು ಬಹಿರ್ದೆಶೆಗಾಗಿ ಹೋದರು. ಉಳಿದ ಗುಂಪು ಮಸೀದಿಯ ಕಡೆಗೆ ಬಾಬಾರವರ ದರ್ಶನಕ್ಕಾಗಿ ಹೊರಟಿತು. ॥199॥ ಬಾಬಾರವರು ಪೂರ್ಣ ಅಂತರ್ಜ್ಞಾನಿಯಾಗಿದ್ದರು. ಅವರು ಭಕ್ತರಿಗೆ ಸಮಯಕ್ಕೆ ಸರಿಯಾಗಿ ಸಲಹೆ ನೀಡುತ್ತಿದ್ದರು. ಕೇಳಿರಿ, ಈ ಪ್ರಸಂಗವನ್ನು ಮುಂದೆ ಯಾವ ರೀತಿ ಉಪಯೋಗಿಸಿಕೊಂಡರು ಎಂಬುದನ್ನು ಕೇಳಿ. ॥200॥ ಕೆಲವರೊಡನೆ ಲೇಂಡಿಗೆ ಹೋಗುತ್ತಿರುವಾಗ ಬಾಬಾರವರು ಆ ಭಕ್ತನ ಬಗ್ಗೆ ವಿಚಾರಿಸಿದರು. ಅವನು ಹಳ್ಳಿಯಲ್ಲಿದ್ದ ಕಾಲುವೆಯ ಹತ್ತಿರ ಬಹಿರ್ದೆಶೆಗಾಗಿ ಹೋಗಿದ್ದಾನೆಂದು ಇತರರು ಹೇಳಿದರು. ॥201॥ ಕಾರ್ಯಕ್ರಮವು ಮುಗಿದ ನಂತರ ಬಾಬಾರವರು ಲೇಂಡಿಯಿಂದ ಹಿಂತಿರುಗಿದರು. ಆ ಭಕ್ತನೂ ಸಹ ಹಳ್ಳಿ ಕಾಲುವೆಯಿಂದ ಮನೆಗೆ ಹಿಂತಿರುಗಲು ತಿರುಗಿದನು. ॥202॥ ಇಬ್ಬರೂ ಪರಸ್ಪರ ಭೇಟಿಯಾದರು. ಓಹ್, ಶ್ರೋತೃಗಳೇ! ಆ ಭೇಟಿಯಲ್ಲಿ ಏನು ನಡೆಯಿತೆಂಬುದನ್ನು ಎಚ್ಚರಿಕೆಯಿಂದ ಕೇಳಿ ಎಂದು ಬೇಡಿಕೊಳ್ಳುತ್ತೇನೆ. ॥203॥ ಹತ್ತಿರದಲ್ಲಿ ಪೊದೆಯ ಹತ್ತಿರ ಹಳ್ಳಿಯ ಒಂದು ಹೆಣ್ಣುಹಂದಿಯು ಮಲವನ್ನು ಬಹಳವಾಗಿ ಸವಿಯುತ್ತ ತಿನ್ನುತ್ತಲಿತ್ತು. ಬಾಬಾರವರು ಅದನ್ನು ಅವನಿಗೆ ಬೆರಳೆತ್ತಿ ತೋರಿಸಿದರು. ॥204॥ "ನೋಡು, ಅದರ ನಾಲಿಗೆಯು ಮಾನವನ ಮಲದ ರುಚಿಯನ್ನು ಎಷ್ಟು ಚೆನ್ನಾಗಿ ಸವಿಯುತ್ತಿದೆ? ಒಬ್ಬ ಮನುಷ್ಯನು ತನ್ನ ಸ್ವಂತ ಬಂಧುಗಳನ್ನೇ ಮನಸೋ ಇಚ್ಛೆ ನಿಂದಿಸುವವನು ಇದಕ್ಕೆ ಸಮನು. ॥205॥ "ಹಿಂದಿನ ಜನ್ಮದ ಸುಕೃತದ ಫಲವಾಗಿ ನರಜನ್ಮ ಪಡೆದಿದ್ದು, ಈ ರೀತಿ ನಿನ್ನ ಜೀವನವನ್ನು ವ್ಯರ್ಥಗೊಳಿಸಿದಲ್ಲಿ ಮತ್ತು ತಾನೇ ಹಾಳಾಗಲು ಸಜ್ಜಾಗಿರುವವನಿಗೆ ಶಿರಡಿಯಾದರೂ ಏನು ಮಾಡಲು ಸಾಧ್ಯ?" ॥206॥ ಈ ನುಡಿಗಳನ್ನು ಹೇಳಿ ಬಾಬಾರವರು ಹೊರಟುಹೋದರು. ಆ ಭಕ್ತನು ಅಂತರಂಗದಲ್ಲಿಯೇ ನೊಂದುಕೊಂಡನು. ಅವನು ಬೆಳಗ್ಗೆ ನಡೆದ ಘಟನೆಯನ್ನು ನೆನೆಸಿಕೊಂಡನು. ಆ ಮಾತುಗಳು ಅವನ ಹೃದಯವನ್ನೇ ಮಾರ್ಮಿಕವಾಗಿ ಚುಚ್ಚಿದವು. ॥207॥ ಬಾಬಾರವರು ಭಕ್ತರಿಗೆ ಪ್ರೀತಿಯಿಂದ ಪ್ರಸಂಗಾನುಸಾರವಾಗಿ ಬೋಧಿಸುತ್ತಾರೆ. ಅವರ ಬೋಧನೆಗಳ ಸಾರವನ್ನು ಅಂತರಂಗದಲ್ಲಿ ಉಳಿಸಿಕೊಂಡಲ್ಲಿ ಪಾರಮಾರ್ಥವು ದೂರವಾಗಲು ಹೇಗೆ ಸಾಧ್ಯ? ॥208॥ 'ಹರಿಯು ನನ್ನನ್ನು ಪ್ರೀತಿಸಿದಲ್ಲಿ, ಅವನು ನನಗೆ ಎಲ್ಲವನ್ನೂ, ನನ್ನ ಶ್ರಮವಿಲ್ಲದೆಯೇ ಕರುಣಿಸುವನು. ಇದು ಪ್ರಮಾಣವಚನ. ಇದು ಅನ್ನ ವಸ್ತ್ರಗಳ ವಿಷಯದಲ್ಲಿಯಂತೂ ಸತ್ಯವು.' ॥209॥ ಆದರೆ ಪಾರಮಾರ್ಥಿಕವನ್ನು ಸಾಧಕನಾದ ಯಾರಾದರೊಬ್ಬರು ಈ ಪ್ರಮಾಣವಚನವನ್ನು ತನಗೆ ಅನ್ವಯಿಸಿಕೊಂಡುಜಡನಾಗಿದ್ದರೆ ತನ್ನ ವಿನಾಶವನ್ನು ತಾನೇ ತಂದುಕೊಳ್ಳುತ್ತಾನೆ. ಬಾಬಾರವರ ವಚನ – "ಬಿತ್ತಿದಂತೆ ಬೆಳೆ" ಎಂಬ ನಾಣ್ಣುಡಿಯು ಇಂತಹ ಸಂದರ್ಭಕ್ಕೆ ಬಹು ಸೂಕ್ತವಾದದ್ದು. ॥210॥ ಬಾಬಾರವರ ಕೆಲವು ವಚನಗಳು ಅಪರಿಮಿತವಾದ ಸ್ವಾನಂದವನ್ನು ತರುತ್ತದೆ. ಕೇವಲ ಭಾವ ಭಕ್ತಿಗಳ ಶಾಖವಿದ್ದಲ್ಲಿ ಮಾತ್ರ ಅವು ಅಂತರಂಗದಲ್ಲಿ ಆಳವಾಗಿ ಬೇರೂರುತ್ತವೆ. ॥211॥ "ನಾನು ಒಂದು ಸ್ಥಳದಲ್ಲಿ ನೆಲಸಿರುವುದಿಲ್ಲ. ನಾನು ನೀರಿನಲ್ಲಿ, ಭೂಮಿಯ ಮೇಲೆ, ಕಾಡಿನಲ್ಲಿ, ಜನಗಳ ಮಧ್ಯೆ,

ಜನಗಳಿಂದ ದೂರವಾಗಿ, ಸ್ವದೇಶದಲ್ಲಿ ಹಾಗೂ ವಿದೇಶದಲ್ಲಿ, ಆಕಾಶದಲ್ಲಿ, ಸೂರ್ಯನ ಬೆಳಕಿನಲ್ಲಿ ಎಲ್ಲೆಡೆಯಲ್ಲೂ ಇರುವೆನು. ॥212॥ "ನಾನು ಈ ಮಾನವ ಶರೀರವನ್ನು ಹೊಂದಿರುವುದು ನನ್ನನ್ನು ಕೇವಲ ಈ ಮೂರೂವರೆ ಮೊಳ ಉದ್ದ ಇರುವ ಈ ದೇಹದಲ್ಲಿ ಮಾತ್ರ ಇರುವವನೆಂದು ನಂಬಿರುವವರ ತಪ್ಪು ಅಭಿಪ್ರಾಯವನ್ನು ದೂರಮಾಡುವುದಕ್ಕಾಗಿಯೇ. ॥213॥ "ಪ್ರತಿಫಲಾಪೇಕ್ಷೆಯಿಲ್ಲದೆ ನಿಷ್ಕಾಮಭಾವದಿಂದ ಯಾರು ರಾತ್ರಿ ಹಗಲು ಅನನ್ಯವಾಗಿ ನನ್ನ ಭಜನೆಯನ್ನು ಮಾಡುವರೋ ಅವರು ಪ್ರತ್ಯಕ್ಷವಾಗಿ ನನ್ನ ಅಂತರಾತ್ಮದ (ಯಾಭೇದವೂ ಇಲ್ಲದ) ಪ್ರತಿಬಿಂಬವಾಗಿದ್ದಾರೆ. ॥214॥ "ಒಂದು ವೇಳೆ ಬೆಲ್ಲದಿಂದ ಸಿಹಿಯನ್ನು ಬೇರ್ಪಡಿಸಬಹುದಾದರೆ, ಸಾಗರವನ್ನು ಅಲೆಗಳಿಂದ ಬೇರ್ಪಡಿಸಬಹುದಾದರೆ, ಕಣ್ಣುಗಳು ಬೆಳಕಿಲ್ಲದೆ ನೋಡಬಹುದಾದರೆ ಮಾತ್ರ ನನ್ನ ಮುಗ್ಧಭಕ್ತನನ್ನು ನನ್ನಿಂದ ಬೇರ್ಪಡಿಸಬಹುದು. ॥215॥ "ಯಾರು ಜನನ ಮರಣದ ಚಕ್ರವನ್ನು ನಿಶ್ಚಿತವಾಗಿ ಜಯಿಸಲು ಇಚ್ಛೆಪಡುವನೋ ಅವನು ಧರ್ಮವಂತನಾಗಿ ಆ ಮಾರ್ಗದಲ್ಲಿ ಪ್ರಯತ್ನಪೂರ್ವಕವಾಗಿ ಪಾಲಿಸುತ್ತ ಸದಾ ಕಾಲ ಸ್ವಸ್ಥಮನಸ್ಸಿನವನಾಗಿರಬೇಕು. ॥216॥ "ಅಂತಹ ವ್ಯಕ್ತಿಯು ಒರಟು ಮಾತುಗಳನ್ನು ತ್ಯಜಿಸಿ ಇತರರ ಸಣ್ಣತನವನ್ನು ಎಣಿಸದೆ ಇದ್ದು ಸದಾ ಕಾಲ ಶುದ್ಧವಾದ ಸತ್ಕರ್ಮಗಳಲ್ಲಿ ನಿರತನಾಗಿ ಚಿತ್ತವನ್ನು ಸ್ವಧರ್ಮದಲ್ಲಿ ಸ್ಥಾಪಿಸಿರಬೇಕು. ॥217॥ "ನಿಮ್ಮ ಮನಸ್ಸುಮತ್ತು ಬುದ್ಧಿಯನ್ನು ನನಗೆ ಸಮರ್ಪಿಸಿ ನನ್ನನ್ನು ಸದಾ ಸ್ಮರಿಸಿರಿ. ನಿಮ್ಮ ದೇಹದ ಬಗ್ಗೆ ಯೋಚಿಸಬೇಡಿ ಮತ್ತು ಎಲ್ಲವನ್ನೂ ನನಗೆ ಒಪ್ಪಿಸಿ. ಅಂತಹ ವ್ಯಕ್ತಿಯು ತ್ರಿಕರಣಶುದ್ಧಿಗಾಗಿ ಭಯಪಡಬೇಕಾಗಿಲ್ಲ ಮತ್ತು ಚಿಂತಿಸಬೇಕಾಗಿಲ್ಲ. ॥218॥ "ಯಾರು ನನ್ನ ಕಡೆ ಅನನ್ಯರಾಗಿ ನೋಡುವರೋ, ನನ್ನ ಸ್ಮರಣೆ ಮತ್ತು ಕಥೆಗಳನ್ನು ಆಲಿಸುತ್ತಾರೋ, ಅವರೇ ಧನ್ಯರು. ಯಾರು ನನ್ನನ್ನಲ್ಲದೆ ಇನ್ನಾರನ್ನೂ ಬಯಸುವುದಿಲ್ಲವೋ ಅವರು ಮಾತ್ರ ಶುದ್ಧ ಚೈತನ್ಯವನ್ನು ಪಡೆಯುತ್ತಾರೆ. ॥219॥ "ನನ್ನ ನಾಮವನ್ನು ಸ್ಮರಿಸು ಮತ್ತು ನನ್ನಲ್ಲಿ ಶರಣಾಗು" ಇದು ಅವರು ಎಲ್ಲರಿಗೂ ಹೇಳಿದ ಮಾತು. ಆದರೆ ಸಾಯಿಯನ್ನು ಅರಿಯಲು ಇಚ್ಛಿಸಿದವರಿಗೆ ಶ್ರವಣಮಾಡಲು ಮತ್ತು ಧ್ಯಾನಿಸಲು ಹೇಳುತ್ತಿದ್ದರು. ॥220॥ ಅವರು ವಿವಿಧ ಜನರಿಗೆ ಬೇರೆಬೇರೆ ನಿಯಮಗಳನ್ನು ಹೇಳುತ್ತಿದ್ದರು. ಒಬ್ಬರಿಗೆ ಭಗವನ್ನಾಮಸ್ಮರಣೆ, ಇನ್ನೊಬ್ಬರಿಗೆ ಭಗವಂತನ ಲೀಲೆಗಳ ಶ್ರವಣ, ಮತ್ತೊಬ್ಬರಿಗೆ ಭಗವಂತನ ಚರಣಗಳ ಪೂಜೆ ಮಾಡಲು ತಿಳಿಸುತ್ತಿದ್ದರು. ॥221॥ ಕೆಲವರಿಗೆ ಅಧ್ಯಾತ್ಮ ರಾಮಾಯಣ, ಕೆಲವರಿಗೆ ಜ್ಞಾನೇಶ್ವರಿಯ ಪುನಶ್ಚರಣೆ, ಕೆಲವರಿಗೆ 'ಹರಿವರದ'ಪಾರಾಯಣ, ಕೆಲವರಿಗೆ ಗುರುಚರಿತ್ರೆಯ ಪಠಣ. ॥222॥ ಕೆಲವರನ್ನು ತಮ್ಮ ಹತ್ತಿರ ಇರಿಸಿಕೊಳ್ಳುತ್ತಿದ್ದರು. ಕೆಲವರನ್ನು ಖಂಡೋಬಾ ಮಂದಿರಕ್ಕೆ ಕಳಿಸುತ್ತಿದ್ದರು. ಕೆಲವರಿಗೆ ವಿಷ್ಣು ಸಹಸ್ರನಾಮಾವಳಿಯನ್ನು ಪಾರಾಯಣ ಮಾಡಿ ಬಾಯಿಪಾಠ ಮಾಡಲು ನಿರ್ದೇಶನ ನೀಡುತ್ತಿದ್ದರು. ॥223॥ ಕೆಲವರಿಗೆ ರಾಮವಿಜಯವನ್ನು[1], ಕೆಲವರಿಗೆ ಧ್ಯಾನ, ಕೆಲವರಿಗೆ ನಾಮಸ್ಮರಣೆಯ ಶಕ್ತಿ, ಕೆಲವರಿಗೆ ಛಾಂದೋಗ್ಯ ಉಪನಿಷತ್ತು ಮತ್ತು ಗೀತಾರಹಸ್ಯವನ್ನು[2] ಓದಲು ಸೂಚಿಸುತ್ತಿದ್ದರು.

ಮತ್ತು ವಿಶ್ವಾಸದಿಂದ ಮಾತ್ರವೇ ಅದರ ಸ್ವಾರಸ್ಯವನ್ನು ಅನುಭವಿಸಬಹುದೆಂದು ಹೇಳುತ್ತಿದ್ದರು. ॥224॥ ಅವರುಪದೇಶ ಕ್ರಮಗಳು ಅಪೂರ್ವವಾದವು. ಕೆಲವರಿಗೆ ಒಂದು ನಿಗದಿತ ಮಾರ್ಗ, ಮತ್ತೆ ಕೆಲವರಿಗೆ ಇನ್ನೊಂದು ಬೇರೆ ವಿಧಾನ, ಕೆಲವರಿಗೆ ದೀಕ್ಷಾಮಾರ್ಗದಲ್ಲಿ, ಕೆಲವರಿಗೆ ಪ್ರತ್ಯಕ್ಷವಾಗಿ, ಮತ್ತೆ ಕೆಲವರಿಗೆ ದೃಷ್ಟಾಂತಗಳಿಂದ ಬೋಧಿಸುತ್ತಿದ್ದರು. ॥225॥ ಅನೇಕ ಭಕ್ತರು ವಿವಿಧ ಜಾತಿಗಳವರು ದರ್ಶನಕ್ಕಾಗಿ ಮತ್ತು ಸಹಾಯಕ್ಕಾಗಿ ಬರುತ್ತಿದ್ದರು. ಕೆಲವರು ಮದ್ಯ ವ್ಯಸನಿಗಳಿಗೆ ಸ್ವಪ್ನದಲ್ಲಿಯೂ ಅವರು (ಸಾಯಿ) ಬರುತ್ತಿದ್ದರು. ॥226॥ ಅದರಲ್ಲಿ (ಸ್ವಪ್ನ) ಅವರು ಎದೆಯ ಮೇಲೆ ಕುಳಿತು ಕೈಗಳನ್ನು ಮತ್ತು ಕಾಲುಗಳನ್ನು ಅದುಮಿ ಹಿಡಿದು ಹೊಡೆಯುತ್ತ ಅವರು ಇನ್ನೆಂದಿಗೂ ಮದ್ಯಪಾನ ಮಾಡುವುದಿಲ್ಲವೆಂದು ಪ್ರಮಾಣ ಮಾಡುವಂತೆ ಮಾಡುತ್ತಿದ್ದರು. ॥227॥ ಮದುವೆ ನಡೆಯುವ ಮನೆಗಳ ಮುಂದೆ ಜ್ಯೋತಿಷಿಗಳು ಹೇಳಿ ಬರೆಸುವ ಚಿತ್ರಗಳ ರೀತಿ "ಗುರುಬ್ರಹ್ಮ, ಗುರುರ್ವಿಷ್ಣು"[10] ಎಂಬ ಮಂತ್ರವನ್ನು ಮತ್ತೊಬ್ಬ ಭಕ್ತನ ಮನೆಯ ಮುಂದೆ ಕನಸಿನಲ್ಲಿ ಬರೆಯುತ್ತಿದ್ದರು. ॥228॥ ಯಾರಾದರೂ ಯೋಗಾಸನಗಳನ್ನು ಅಭ್ಯಾಸ ಮಾಡಲು ಪ್ರಯತ್ನಿಸಿದರೆ ಮತ್ತು ಬಾಬಾರವರ ಅರಿವಿಗೆ ಬಾರದೆಯೇ ಹಠಯೋಗವನ್ನು ಅಭ್ಯಾಸ ಮಾಡುತ್ತಿದ್ದರೆಬಾಬಾ ತಮ್ಮ ಅಂತರ್ಜ್ಞಾನದಿಂದ ಅರಿತು ಸರಿಯಾದ ಬಾಣಗಳಿಂದ ಚುಚ್ಚುತ್ತಿದ್ದರು. ॥229॥ ಅವರು ಯಾರನ್ನಾದರೂ ಅಪರಿಚಿತರನ್ನಾದರೂ ಹಿಡಿದು ಅವರಿಗೆ ಈ ಸಂದೇಶ ನೀಡುತ್ತಿದ್ದರು. "ನೀನು ಸುಮ್ಮನೆ ಕುಳಿತಿರಬಾರದೇಕೆ? ಮತ್ತು ಸಮಾಧಾನದಿಂದ ಊಟಮಾಡಬಾರದೇ?" ॥230॥ ಕೆಲವರಿಗೆ ಅವರು ಅಂತಿಮ ಎಚ್ಚರಿಕೆ ನೀಡುತ್ತ ಹೇಳುತ್ತಿದ್ದರು. "ನಾನು ಒಬ್ಬ ಬಹಳ ಗಡುಸಾದ ವ್ಯಕ್ತಿ[11] (ಸ್ವಭಾವದಲ್ಲಿ ಮಾತ್ರ) ನಾನು ಮೆದುವಾಗಿ ಒಮ್ಮೆ ಅಥವಾ ಎರಡು ಸಲ ಹೇಳುವೆ ಮತ್ತು ಆದಾಗ್ಯೂ ನೀನು ಕೇಳದೆ ಇದ್ದಲ್ಲಿ ಕೊನೆಯಲ್ಲಿ ಅದು ಬಹಳ ಕಠಿಣವಾಗಿರುತ್ತದೆ. ॥231॥ "ನಾನು ಒಮ್ಮೆ ಹೇಳಲು ಪ್ರಯತ್ನಿಸುತ್ತೇನೆ. ಮತ್ತೆ ಎರಡನೆಯ ಸಲ, ಆದರೆ ಆ ವ್ಯಕ್ತಿಯು ಅದಕ್ಕೆ ಗಮನಕೊಡದಿದ್ದರೆ, ನನ್ನ ಮಾತು ಕೇಳದಿದ್ದರೆ, ಅವನು ನನ್ನ ಬಂಧುಬಾಂಧವನೇ ಆಗಿದ್ದರೂ ನಾನು ಅವನನ್ನು ಕಿತ್ತೆಸೆಯಲು ಹಿಂಜರಿಯುವುದಿಲ್ಲ." ॥232॥ ಅವರು ಒಬ್ಬ ಮಹಾನುಭಾವರು ಮತ್ತು ಮಹಾ ಮತಿವಂತರು. ಪಾಮರನಾದ ನಾನು ಅವರ ಚಮತ್ಕಾರದ ಶಕ್ತಿಯನ್ನು ಹೇಗೆ ವಿವರಿಸಲಿ? ಅವರು ಕೆಲವರಿಗೆ ಜ್ಞಾನ ಪ್ರಾಪ್ತಿಯನ್ನು ಕೆಲವರಿಗೆ ಮುಕ್ತಿಯನ್ನು ಕೊಡುತ್ತಿದ್ದರು. ಕೆಲವರು ಅವರಿಂದ ಒಳ್ಳೆಯತನವನ್ನು ಕಲಿತರು ಮತ್ತೆ ಕೆಲವರು ನಿಜವಾದ ಭಕ್ತಿಯ ಬಗೆಗಿನ ಅರಿವನ್ನು ಅವರಿಂದ ಕಲಿತರು. ॥233॥ ಕೆಲವು ವಿಷಯಗಳಲ್ಲಿ ಅವರು ಪ್ರಶಸ್ತವಾದ ವ್ಯವಹಾರವನ್ನು ತಿಳಿಸುತ್ತಿದ್ದರು. ಒಂದು ಸಣ್ಣ ಘಟನೆಯನ್ನು ಉದಾಹರಣೆಯಾಗಿ ಶ್ರೋತೃವೃಂದಕ್ಕೆ ತಿಳಿಸುತ್ತೇನೆ. ॥234॥ ಒಂದು ದಿನ ಬಾಬಾರವರು ಮಧ್ಯಾಹ್ನದ ಕೊನೆಯಲ್ಲಿ ಯಾವುದೇ ಉದ್ದೇಶ ಅಥವಾ ಕಾರಣವಿಲ್ಲದೆಯೇ ಇದ್ದಕ್ಕಿದ್ದಂತೆ ರಾಧಾಕೃಷ್ಣಮಾಯಿಯ[12] ಮನೆಯ ಹತ್ತಿರ ಬಂದರು. ॥235॥ ಕೆಲವರು ಅವರ (ಸಾಯಿಯ) ಜೊತೆಯಲ್ಲಿದ್ದರು. ಅವರು ಕೂಡಲೇ

ಒಂದು ಏಣಿಯನ್ನು ತರುವಂತೆ ಹೇಳಿದರು. ಅಲ್ಲೊಬ್ಬರು ಕೂಡಲೇ ಅದನ್ನು ತಂದರು. ॥236॥ ಬಾಬಾರವರು ಅದನ್ನು ಕೂಡಲೇ ಮನೆಯ ಗೋಡೆಗೆ ಹಾಕಿ ಛಾವಣಿಯ ಮೇಲೆ ಹೋದರು. ಅವರ ಮನಸ್ಸಿನಲ್ಲಿ ಏನಿದೆಯೆಂದು ಯಾರಿಗೂ ತಿಳಿದಿರಲಿಲ್ಲ. ಅವರ ಯೋಜನೆಯೂ ತಿಳಿಯಲಿಲ್ಲ. ॥237॥ ನಿಜವಾಗಿಯೂ ಏಣಿಯನ್ನು ವಾಮನ ಗೋಂದಕರನ ಮನೆಗೆ ಅವಸರವಸರವಾಗಿ ಹಾಕಿದರು. ಶ್ರೀಸಾಯಿಯು ವೇಗವಾಗಿ ತಾವೇ ಛಾವಣಿಯ ಮೇಲೆ ಹತ್ತಿದರು. ॥238॥ ಇಬ್ಬರ ಮನೆಗಳೂ ಅಕ್ಕಪಕ್ಕದಲ್ಲಿದ್ದವು. ಮತ್ತು ಅವರು ಅತಿವೇಗವಾಗಿ ರಾಧಾಕೃಷ್ಣಮಾಯಿಯ ಛಾವಣಿಯ ಮೇಲೆ ದಾಟಿಹೋದರು. ಯಾರೂ ಈ ಚಮತ್ಕಾರವನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲ. ॥239॥ ಆ ಸಮಯದಲ್ಲಿ ರಾಧಾಕೃಷ್ಣಮಾಯಿಯು ಪ್ರಖರವಾದ ಶೀತಜ್ವರ (ಮಲೇರಿಯಾ)ದಿಂದ ನರಳುತ್ತಿದ್ದಳು. ಮತ್ತು ಅತಿಯಾಗಿ ತಳಮಳಿಸುತ್ತಿದ್ದಳು. ॥240॥ ಆ ಸಮಯದಲ್ಲಿ ಸ್ವತಃ ಬಾಬಾರವರೇ ಬಹಳ ನಿಶ್ಶಕ್ತರಗಿದ್ದರು. ಅವರನ್ನು ಎರಡು ಕಡೆ ಇಬ್ಬರು ಆಧಾರಕೊಡಬೇಕಾಗುತ್ತಿತ್ತು. ಆ ಕ್ಷಣದಲ್ಲಿ ಅವರಿಗೆ ಎಲ್ಲಿಂದ ಆ ಸಾಮರ್ಥ್ಯ ಬಂದಿತೋ? ॥241॥ ಕೂಡಲೇ ಅವರು ಛಾವಣಿಯ ಮತ್ತೊಂದು ಕಡೆಗೆ ಹೋದರು. ಮತ್ತು ಸೂರಿನ ಇಳಿಜಾರಿನಿಂದ ಇಳಿದು ಬಂದು ಆ ಗೋಡೆಗೆ ಆನಿಸಿದ್ದ ಏಣಿಯಿಂದ ಇಳಿದು ಬಂದರು. ॥242॥ ಅವರ ಪಾದಗಳು ನೆಲವನ್ನು ಸ್ಪರ್ಶಿಸಿದ ಕೂಡಲೇ, ಅವರು ಅತಿ ಜಾಗರೂಕತೆಯಿಂದ ಏಣಿಯನ್ನು ತಂದವನಿಗೆ ಎರಡು ರೂಪಾಯಿಗಳನ್ನು ಕೊಟ್ಟರು. ॥243॥ ಆ ಮನುಷ್ಯನು ಏಣಿಯನ್ನು ಕೇವಲ ಎರಡು ಕಡೆ ನಿಲ್ಲಿಸಿದ್ದನು. ಅವನು ಮಾಡಿದ ಕೆಲಸ ಅದೊಂದೇ ಮತ್ತು ಅದರ ಬಗ್ಗೆ ಅವನು ಹೆಮ್ಮೆಪಟ್ಟುಕೊಳ್ಳಬಹುದಿತ್ತು. ಬದಲಾಗಿ ಬಾಬಾರವರು ಅವನಿಗೆ ಅಷ್ಟೊಂದು ಹೆಚ್ಚಾಗಿ ಹಣ ಕೊಟ್ಟಿದ್ದರು. ॥244॥ ಜನರು ಸಹಜವಾಗಿ ಕುತೂಹಲಿಗಳಾಗಿದ್ದರು. ಮತ್ತು ಅವರಿಗಾಗಿ ಕೇವಲ ಒಂದು ಏಣಿ ತಂದವನಿಗೆ ಅಷ್ಟೊಂದು ಹಣವನ್ನು ಬಾಬಾರವರು ಹೇಗೆ ಕೊಟ್ಟರು ಎಂದು ಯೋಚಿಸುತ್ತಿದ್ದರು. ತಮ್ಮೊಳಗೆಯೇ ಈ ರೀತಿ ಮಾತನಾಡುತ್ತಿದ್ದರು. ॥245॥ ಆ ಸಮಯದಲ್ಲಿ ಅಲ್ಲೊಬ್ಬರು ಧೈರ್ಯಮಾಡಿ ಕೇಳಿದರು, ಬಾಬಾರವರು ಉತ್ತರಿಸಿದರು: "ಯಾರೂ ಮತ್ತೊಬ್ಬರ ಶ್ರಮವನ್ನು ಸ್ವೀಕರಿಸಬಾರದು. ಅದೂ ಸಹ ಉಚಿತವಾಗಿ." ॥246॥ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯಿಂದ ಕೆಲಸವನ್ನು ಸ್ವೀಕರಿಸಬಹುದು. ಆದರೆ ಅವನು ಸದಾ ಆ ವ್ಯಕ್ತಿಯ ಶ್ರಮವನ್ನು ಮೌಲ್ಯಮಾಪನ ಮಾಡಿ ಆ ಬೆಲೆಯನ್ನು ಪಾವತಿಸಬೇಕು. ಪ್ರತಿಯೊಬ್ಬನೂ ತನ್ನನ್ನು ತಾನೇ ಶಿಸ್ತುಗೊಳಿಸಿಕೊಂಡು ಬೇರೆಯವರಿಂದಉಚಿತಸೇವೆ ಸ್ವೀಕರಿಸಬಾರದು. ॥247॥ ಬಾಬಾರವರ ವರ್ತನೆಯ ಆಳವಾದ ಇಂಗಿತವನ್ನು ಅರ್ಥಮಾಡಿಕೊಳ್ಳಲು ಯಾರಿಗೆ ಸಾಧ್ಯ? ಕೇವಲ ಬಾಬಾರವರಿಗೆ ಮಾತ್ರ ತಿಳಿದಿದೆ! ಸಂತರ ಅಂತರಾಳವು ಅತಿ ನಿಗೂಢವಾಗಿದೆ. ॥248॥ ಅವರ ಬಾಯಿಯಿಂದ ಬಂದಂತಹ ನುಡಿಗಳು, ನಾವು ಕೇಳಿದಂತಹವುಗಳೇ. ನಮಗೆ ಆಧಾರ ಮತ್ತು ಮಾರ್ಗದರ್ಶಕ. ನಾವು ಅವುಗಳನ್ನು ದೃಢವಾಗಿ ನಂಬಿ ಅದೇ ರೀತಿ ವರ್ತಿಸಿದಲ್ಲಿ ನಮ್ಮ ನಿತ್ಯ ವ್ಯವಹಾರವು ಸರಳವಾಗಿರುತ್ತದೆ.

॥249॥ ಅದುಹಾಗಿರಲಿ. ಮುಂದಿನ ಅಧ್ಯಾಯವು ನಿಜವಾಗಿಯೂ ಇದಕ್ಕಿಂತ ರಂಜನೀಯವಾಗಿದೆ. ಅದು ಒಬ್ಬ ಮನೆಕೆಲಸದವಳ ಮಗಳು, ಮುಗ್ಧ ಸಣ್ಣ ಬಾಲಕಿಯದಾಗಿದ್ದು ಶೃತಿಗಳ ಮುಖ್ಯಾಂಶವನ್ನು ಅನಾವರಣಗೊಳಿಸುತ್ತದೆ. ॥250॥ ದಾಸಗಣುವು ಒಬ್ಬಅನುಗ್ರಹೀತನಾದ ಹರಿದಾಸನು. ಅವನು ಈಶಾವಾಸ್ಯ ಉಪನಿಷತ್ತನ್ನು ತನ್ನ ಮಾತೃಭಾಷೆಗೆ ಅನುವಾದ ಮಾಡಿ ಮರಾಠಿ ಮಾತನಾಡುವ ಜನರಿಗೆ ಉಪಕಾರಾಗುವ ಉದ್ದೇಶದಿಂದ ಅಂತರಾಳಕ್ಕೆ ತೆಗೆದುಕೊಂಡಿದ್ದನು. ॥251॥ ಸಾಯಿಕೃಪೆಯಿಂದ ಅವನು ಗ್ರಂಥರಚನೆ ಮಾಡಿದನು. ಆದರೆ ಕೆಲವು ಗೂಢಾರ್ಥಗಳು ಅವನಿಗೆ ಸರಿಯಾಗಿ ಅರ್ಥವಾಗಿರಲಿಲ್ಲ. ಮತ್ತು ಅವನ ಮನಸ್ಸಿನಲ್ಲಿ ಅನೇಕ ಸಂದೇಹಗಳು ಹುಟ್ಟಿದವು. ಬಾಬಾರವರು ಅವುಗಳನ್ನು ಹೇಗೆ ನಿವಾರಿಸಿದರು ನೋಡಿ! ॥252॥ ಶಿರಡಿಯಲ್ಲಿ ಕುಳಿತುಕೊಂಡು ಬಾಬಾರವರು ಅವನಿಗೆ ಹೇಳಿದರು, "ನೀನು ಪಾರ್ಲೆಗೆ[3] ಹಿಂತಿರುಗಿದಾಗ ಕಾಕಾರವರ[4] ಮನೆಯ ಕೆಲಸದವಳು, ಕಾಕಾರವರ ಮನೆಯಲ್ಲಿ ನಿನ್ನ ಶಂಕೆಯನ್ನು ಪರಿಹರಿಸುವಳು." ॥253॥ ವಾಗ್ದೇವಿಯು ಒಂದಮುಂಬಿಯ ರೀತಿಯಲ್ಲಿ ಈಶಾವಾಸ್ಯವೆಂಬ ಕಮಲದ ಸುತ್ತಲೂ ಝೇಂಕರಿಸುತ್ತಿರುತ್ತಾಳೆ. ಕೇವಲ ವಿದ್ವಾಂಸರು ಮಾತ್ರ ಅದರ ಪರಿಮಳವನ್ನು ಸವಿಯಬಹುದು. ಚತುರರಾದ ಶ್ರೋತೃಗಳು ಅದರಲ್ಲಿ ಸಹಭಾಗಿಗಳಾಗುವಂತೆ ಆಹ್ವಾನಿಸುತ್ತೇನೆ." ॥254॥ ಸಾಕಿಷ್ಟು, ಇದನ್ನು ಮುಂದಿನ ಅಧ್ಯಾಯದಲ್ಲಿ ನಿರೂಪಿಸುತ್ತೇನೆ. ಸಾಯಿಯೇ ಕರ್ತರು. ನಿರೂಪಣೆಗೆ ಕಾರಣರು. ದಯಾಘನರು. ಶ್ರೋತೃಗಳು ತಮ್ಮ ಯಥಾವಕಾಶ ಅದನ್ನು ಆಲಿಸಿದರೆ ಕಲ್ಯಾಣವುಂಟಾಗುತ್ತದೆ. ॥255॥ ಹೇಮಾಡಪಂತನು ಸಾಯಿಗೆ ಶರಣಾಗುತ್ತಾನೆ. ಮತ್ತು ಭಗವಂತನ ಮತ್ತು ಸರ್ವಜೀವಿಗಳಲ್ಲೂ ವಿನೀತನಾಗುತ್ತಾನೆ. ನಾನು ಅತಿ ಮಧುರವಾದ ಅತ್ಯಾಶ್ಚರ್ಯವಾದ ಸಾಯಿಯ ಕಥೆಯ ಕಡೆ ಎಲಾ ಶ್ರೋತೃಗಳು ಗಮನ ನೀಡುವಂತೆ ನಿವೇದಿಸುತ್ತೇನೆ. ॥256॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ನನ್ನ ಮೇಲೆ ದಯಪಾಲಿಸಿದ ಕರುಣೆ" ಎಂಬ ಹತ್ತೊಂಬತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ದೇವತೆಗಳ ಗುರು. ಅತಿ ಬುದ್ಧಿವಂತ.
2. ನಾಲ್ಕು ತಂತಿಗಳ ಒಂದು ಟರ್ಕಿಯ ಗಿಟಾರ್.
3. ಮಸೀದಿಯದು.
4. ವಿಷ್ಣುವಿನ ಚಕ್ರ
5. ಭಾಗವತದ ಹತ್ತನೆಯ ಸ್ಕಂದದ ಮೇಲೆ ಕೃಷ್ಣ ದಯಾರಾಣವನು ಮರಾಠಿ ಭಾಷೆಯಲ್ಲಿ ಬರೆದ ಭಾಷ್ಯ.
6. ಶ್ರೀಧರಸ್ವಾಮಿಗಳು ಬರೆದ 'ರಾಮಕಥೆ' ಮರಾಠಿಯಲ್ಲಿ ಕಾವ್ಯರೂಪದಲ್ಲಿ ಇರುವುದು.
7. ಅತಿ ಪ್ರಾಚೀನ ಮತ್ತು ದೊಡ್ಡದಾದ ಉಪನಿಷತ್ತುಗಳಲ್ಲಿ ಒಂದು. ಗೂಢವಾದ ಅಧ್ಯಾತ್ಮ ವಿಚಾರಗಳನ್ನು ಅಲ್ಲಿ ವಿವರಿಸಲಾಗಿದೆ.
8. 'ಗೀತೆಯ ಮೇಲೆ ತಿಲಕ್‌ರವರು ಬರೆದಿರುವ ಮರಾಠಿ ಭಾಷ್ಯ.
9. ತಲೆಗೆ ರುಮಾಲು ಕಟ್ಟುವ ರೀತಿಯಿಂದ ಗುರುತಿಸಿಕೊಳ್ಳುವವರು.
10. ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಮಹೇಶ್ವರ. ಗುರುವೇ ಪರಬ್ರಹ್ಮನನ್ನು ಸಾಕಾರವಾಗಿ ಮಾಡುವವನು. ಅಂತಹ ಶ್ರೀಗುರುವಿಗೆ ಪ್ರಣಾಮಗಳು.
11. ಒಬ್ಬ ರಾಜಪೂತನು ಒಂದು ವಚನ ನೀಡಿದ ಮೇಲೆ ಎಂದಿಗೂ ಮುರಿಯುವುದಿಲ್ಲ. ಅವನ ಜೀವನವನ್ನೇ ಬೆಲೆ ತೆತ್ತಾದರೂ ಸಹ ಅವರನ್ನು 'ಕಡವ್' (ಕಹಿ) ಎಂದು ಕರೆಯುತ್ತಾರೆ.
12. ಶ್ರೀ ಸಾಯಿ ಬಾಬಾರವರು ರಾಧಾಕೃಷ್ಣಬಾಯಿಯನ್ನು, ಈ ಹೆಸರಿನಿಂದ ಕರೆಯುತ್ತಿದ್ದರು.
13. ವಿಲೆ ಪಾರ್ಲೆ – ಮುಂಬಯಿಯ ಒಂದು ಉಪನಗರ.
14. ಹರಿ ಸೀತಾರಾಮ ದೀಕ್ಷಿತ್‌ನನ್ನು, ಬಾಬಾರವರು 'ಕಾಕಾ' ಎಂದು ಕರೆಯುತ್ತಿದ್ದರು.



# ಅಧ್ಯಾಯ - 20

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಈಶಾವಾಸ್ಯ ಸಾರದ ಪಾಠ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಓಂ. ಗುರುವಿಗೆ ನಮಸ್ಕಾರ. ಭಕ್ತರಿಗೆ ನೀನೇ ಮಾನಸ ಸರೋವರ. ನಾವು ಭಕ್ತರು, ಹಂಸಗಳು. ನಿಮ್ಮ ಪ್ರಸಾದರೂಪದ ಮಧುರ ವಚನಗಳು ಮುತ್ತುಗಳು. ನಿಮ್ಮ ಚರಣಗಳೇ ನಮ್ಮ ಏಕಮಾತ್ರ ಆಶ್ರಯ. ॥1॥ ನೀವು ನಮಗೆ ಸದಾ ಆಶ್ರಯದಾತರು, ಮಹಾ ಉದಾರಿಗಳು. ಮುಕ್ತಿಯೆಂಬ ಮುತ್ತುಗಳ ಪ್ರಸಾದವನ್ನು ತಿನ್ನಿಸುತ್ತಿರುವ ನೀವು ನಮಗೆ ಆಶ್ರಯ ಮತ್ತು ನಿಜ ವಿಶ್ರಾಂತಿ ನೀಡಿರುವಿರಿ. ನೀವು ನಮ್ಮನ್ನು ಜನನ ಮರಣಗಳ ಚಕ್ರದಿಂದ ಮುಕ್ತಗೊಳಿಸುವಿರಿ. ॥2॥ ಸಿದ್ಧರಾದ ಸಾಯಿಯ ನಿವಾಸ ಅದೆಷ್ಟು ದೊಡ್ಡದು? ಕೇವಲ ದರ್ಶನ ಮಾತ್ರದಿಂದ ಆಯಾಸ ದೂರವಾಗುವುದು. ಹತ್ತಿರ ಹೋದಾಗ ಜಗತ್ತಿನ ಭ್ರಮೆ ಮಾಯವಾಗುತ್ತದೆ. ಮತ್ತು ಅದರ ಸಹವಾಸದಲ್ಲಿ ಕರ್ಮಗಳ ಶ್ರಮ ದೂರವಾಗುತ್ತದೆ. ॥3॥ ಮೂಲತಃ ಸಾಯಿ ನಿರಾಕಾರರು. ಭಕ್ತರಿಗಾಗಿ ಸಾಕಾರ ತಾಳಿದರು. ನಟರಾಗಿ ನಾಟಕದಲ್ಲಿ ಮಾಯೆಯೆಂಬ ನಟಿಯ ಜೊತೆ ಪಾತ್ರವಹಿಸಿದರು. ॥4॥ ಅಂತಹ ಸಾಯಿಯನ್ನು ಧ್ಯಾನಿಸೋಣ. ಕ್ಷಣಕಾಲ ಶಿರಡಿಗೆ ಹೋಗೋಣ. ಎರಡನೆಯ ಪ್ರಹರದ (ಮಧ್ಯಾಹ್ನದ) ಆರತಿಯಾದನಂತರ ಏನು ನಡೆಯುವುದೆಂದು ಲಕ್ಷ್ಯವಿಟ್ಟು ಗಮನಿಸೋಣ. ॥5॥ ಮಧ್ಯಾಹ್ನದ ಆರತಿಯಾದ ಮೇಲೆ ಮಹಾರಾಜರು ಮಸೀದಿಯ ಹೊರಗಡೆ ಬರುತ್ತಿದ್ದರು. ಅಪಾರ ಕೃಪಾದೃಷ್ಟಿಯಿಂದ

ಭಕ್ತರಿಗೆ ಉದಿಯನ್ನು ಪ್ರಸಾದಿಸುತ್ತಿದ್ದರು. ॥6॥ ಭಕ್ತರೂ ಸಹ ಪ್ರೀತಿಯಿಂದ ಸಾಯಿಚರಣಗಳನ್ನು ಸ್ಪರ್ಶಿಸುತ್ತಿದ್ದರು. ನಂತರ ಎದ್ದು ನಿಂತು ಅವರ ಮುಖವನ್ನು ಪೂಜ್ಯ ಭಾವನೆಯಿಂದ ದೃಷ್ಟಿಸುತ್ತ ಉದಿಯ ವೃಷ್ಟಿಯನ್ನು ನೋಡಿ ಆನಂದಿಸುತ್ತಿದ್ದರು. ॥7॥ ಬಾಬಾರವರೂ ಸಹ ಮುಷ್ಟಿ ಮುಷ್ಟಿ ತುಂಬ ಉದಿಯನ್ನು ಭಕ್ತರ ಅಂಗೈಯಲ್ಲಿ ಹಾಕುತ್ತಿದ್ದರು. ತಮ್ಮ ಹೆಬ್ಬೆರಳಿನಿಂದ ಅವರ ಹಣೆಗಳಿಗೆ ಹಚ್ಚುತ್ತಿದ್ದರು. ಓಹ್, ಅದೆಷ್ಟು ಪ್ರೇಮದ ಮಹಾಸಾಗರವನ್ನೇ ತಮ್ಮ ಹೃದಯದಲ್ಲಿಟ್ಟುಕೊಂಡಿದ್ದರು. ॥8॥ "ಭಾವು ಹೋಗು, ಹೋಗಿ ಆಯಾಸ ನಿವಾರಿಸಿಕೊ. ಹೋಗು ಅಣ್ಣಾ, ಸುಗ್ರಾಸ ಭೋಜನ ಮಾಡು. ಹೋಗಿ, ಎಲ್ಲರೂ ಹೋಗಿ. ನಿಮ್ಮ ನಿಮ್ಮ ಮನೆಗಳಿಗೆ ಹೋಗಿರಿ" ಈ ರೀತಿ ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಸಂಭೋದಿಸುತ್ತಿದ್ದರು. ॥9॥ ಈ ದಿನ ಅದನ್ನು ನೋಡಲು ಸಾಧ್ಯವಿಲ್ಲವಾದರೂ ಆ ಹಿಂದಿನ ವೈಭವೋಪೇತ ಕ್ಷಣಗಳನ್ನು, ಶಿರಡಿಯ ಆ ನಿಗದಿತ ಸ್ಥಳಗಳಲ್ಲಿ ಆಯಾ ಸಮಯಗಳಲ್ಲಿ ದೃಢವಾದ ಏಕಾಗ್ರತೆಯಿಂದ ಚಿಂತಿಸಿದಾಗ ಮರು ಅನುಭವ ಪಡೆಯಬಹುದು. ॥10॥ ಈ ರೀತಿ ಧ್ಯಾನ ಮಾಡುತ್ತ ಉಂಗುಷ್ಠದಿಂದ ಮುಖದವರೆಗೆ ಅವರ ಮುಖವನ್ನು ಚಿತ್ರೀಕರಿಸಿ ಅವಲೋಕಿಸುತ್ತ ಅವರ ಚರಣಗಳಿಗೆ ಪ್ರೇಮದಿಂದ ಸಾಷ್ಟಾಂಗ ಪ್ರಣಾಮ ಮಾಡುತ್ತ ಕಥೆಯ ಅನುಸಂಧಾನವನ್ನು ಪ್ರಾರಂಭಿಸೋಣ. ॥11॥ ಹಿಂದಿನ ಅಧ್ಯಾಯದ ಕೊನೆಯಲ್ಲಿ ಬಾಬಾರವರು ಶ್ರುತಿಯ ಅರ್ಥದ ವಿಚಾರವಾಗಿ ಸಂದೇಹಗಳನ್ನು ಒಬ್ಬ ಮನೆ ಕೆಲಸದವಳು ನಿವಾರಿಸುವಂತೆ ಮಾಡಿದ್ದ ವಿಚಾರವನ್ನು ಮುಂದೆ ಹೇಳುವುದಾಗಿ ತಿಳಿಸಿದ್ದೆ. ॥12॥ ದಾಸಗಣುವು "ಈಶಾವಾಸ್ಯ ಭಾವಾರ್ಥ ಬೋಧಿನೀ" ಭಾಷ್ಯವನ್ನು ಬರೆಯಲು ಪ್ರಾರಂಭಿಸಿದ್ದನು. ಅದರಲ್ಲಿ ಅರ್ಥಗಳು ಗೂಢವಾಗಿದ್ದವು. ಆದ್ದರಿಂದ ಅವನು ಶಿರಡಿಗೆ ಬಂದು ತನ್ನ ಸಂದೇಹ ನಿವಾರಣೆಗಾಗಿ ಸದ್ಗುರುವಿನ ಬಳಿ ಅರಿಕೆಮಾಡಿಕೊಂಡನು. ॥13॥ ಆ ಸಮಯದಲ್ಲಿ ಬಾಬಾ ಹೇಳಿದರು- "ನೀನು ಹಿಂತಿರುಗಿ ಹೋದಾಗ ಕಾಕಾನ ಮನೆಯ ಕೆಲಸದವಳು ನಿನ್ನ ಸಂದೇಹವನ್ನು ನಿವಾರಣೆಮಾಡುತ್ತಾಳೆ." ॥14॥ ಅದು ನಿರೂಪಣೆಯಲ್ಲಿನ ಕೊನೆಯ ಭಾಗವಾಗಿತ್ತು. ಈಗ ಅಲ್ಲಿಂದ ಮುಂದಕ್ಕೆ ನಿರೂಪಣೆಯನ್ನು ಮುಂದುವರಿಸೋಣ. ಶ್ರೋತೃಗಳು ಎಚ್ಚರಿಕೆಯಿಂದ ಕೇಳಿರಿ. ಏಕೆಂದರೆ ಅವರ ಗಮನವು ವಿಚಲಿತವಾಗಬಾರದು. ॥15॥ ದಾಸಗಣು ಈಶಾವಾಸ್ಯ ಉಪನಿಷತ್ತಿನ ಪ್ರತಿಯೊಂದು ಶ್ಲೋಕವನ್ನೂ 'ಓವಿ' ಛಂದಸ್ಸಿನ ಪದ್ಯದ ರೂಪದಲ್ಲಿ ಸಂಸ್ಕೃತ ತಿಳಿಯದವರಿಗಾಗಿ ವಿವರಿಸಲು ಪ್ರಾರಂಭಿಸಿದ್ದನು. ॥16॥ ಈ ಉದ್ದೇಶದಿಂದ ದಾಸಗಣು 'ಈಶಾವಾಸ್ಯ ಭಾವಾರ್ಥ ಬೋಧಿನಿ'ಯನ್ನು ಸುಲಭ ಸರಳ, ಮರಾಠಿ ಭಾಷೆಯಲ್ಲಿ ತಿಳಿಸಿ ಶ್ರದ್ಧೆಯನ್ನು ಬೆಳೆಸಲು ಆರಂಭಿಸಿದ್ದನು. ॥17॥ಈ ಉಪನಿಷತ್ತು ಗೂಢಾರ್ಥಗಳಿಂದ ತುಂಬಿದೆ. ಪದಗಳ ಅನುವಾದವನ್ನು ಮಾಡಿದ್ದರೂ ಸಹ ಅದರಲ್ಲಿ ಅಂತರ್ಗತವಾದ ರಹಸ್ಯ ಬೋಧನೆಗಳನ್ನು ವಿಶದಿಸದ ಹೊರತು ಆನಂದವನ್ನು ಅನುಭವಿಸಲಾಗುವುದಿಲ್ಲ. ॥18॥ ನಾಲ್ಕು ವೇದಗಳ ಸಾರವೇ ನಿಜವಾಗಿಯೂ ಉಪನಿಷತ್ತುಗಳ ಭಂಡಾರ. ಆದರೆ ಹರಿ ಮತ್ತು ಗುರುವಿನ

ಕೃಪೆಯಿಲ್ಲದಿದ್ದಲ್ಲಿ ಅದು ಬಿಡಿಸಲಾಗದ ಗಂಟಾಗುತ್ತದೆ. ॥19॥ ಒಬ್ಬ ವ್ಯಕ್ತಿಯು ಹೇಳಬಹುದು, ತಾನು ಸುಜ್ಞಾನಿ, ಉಪನಿಷತ್ತಿನ ಅರ್ಥವನ್ನು ತನಗೆ ತಾನೇ ಮಾಡಿಕೊಳ್ಳುವುದಾಗಿ ಯೋಚಿಸಿ ಪ್ರತಿಪದಾರ್ಥವನ್ನು ಯಥಾರ್ಥವಾಗಿ ತಿಳಿಸಬಹುದು. ॥20॥ ಆದರೆ ಅದು ಎಂದಿಗೂ ಸಾಧ್ಯವಿಲ್ಲ. ಗುರುಕೃಪೆಯನ್ನು ಪಡೆಯುವವರೆಗೆ ಅದನ್ನು ಅನುಭವಕ್ಕೆ ತರಲು ಸಾಧ್ಯವಿಲ್ಲ. ಆ ಗುಪ್ತ ಪ್ರಮೇಯಗಳನ್ನು ಬಿಡಿಸಲು ಸಾಧ್ಯವಿಲ್ಲ. ಮತ್ತು ಹೆಜ್ಜೆ ಹೆಜ್ಜೆಗೂ ಅವಘಡಗಳು ಬರುತ್ತಲೇ ಇರುತ್ತವೆ. ॥21॥ ಆದರೆ ಯಾರು ಗುರುಚರಣಗಳನ್ನು ಆಶ್ರಯಿಸಿರುತ್ತಾರೋ ಅವರಿಗೆ ಅಣುಮಾತ್ರವೂ ಸಂಕಟವಿಲ್ಲ. ಅಂತಹ ವ್ಯಕ್ತಿಗೆ ಅದರ ಗೂಢಾರ್ಥವು ತನಗೆ ತಾನೆ ಅತಿ ಸಹಜವಾಗಿ ತೆರೆದುಕೊಳ್ಳುತ್ತದೆ. ॥22॥ ಆ ಶಾಸ್ತ್ರಗಳಲ್ಲಿರುವ ಆತ್ಮಜ್ಞಾನವು ಜನನ ಮರಣದ ಚಕ್ರವನ್ನು ಭೇದಿಸುವಂತಹ ಶಸ್ತ್ರ. ಅದನ್ನು ನಿರಭಿಮಾನದಿಂದ ಮತ್ತು ನಿಸ್ಸಂಗದಿಂದ ಮಾತ್ರವಿವೇಚನೆ ಮಾಡಲು ಶಕ್ತನಾಗುತ್ತಾನೆ. ॥23॥ ಯಾರಾದರೂ ಅಂತಹವರ ಚರಣಗಳಲ್ಲಿ ಆಶ್ರಯ ಪಡೆದಲ್ಲಿ ಕ್ಷಣ ಮಾತ್ರದಲ್ಲಿ ಅರ್ಥ ಬೋಧೆ ಉಂಟಾಗುತ್ತದೆ. ಆಗ ಪ್ರತಿಬಂಧಿಸಲ್ಪಟ್ಟ ಬುದ್ಧಿಯು ಮುಕ್ತವಾಗುತ್ತದೆ ಮತ್ತು ಅರ್ಥದ ನಿಗೂಢತೆ ಮಾಯವಾಗುತ್ತದೆ. ॥24॥ 'ಈಶಾವಾಸ್ಯ' ವನ್ನು ಮರಾಠಿ ಭಾಷೆಗೆ ಅನುವಾದ ಮಾಡುವಾಗ ದಾಸಗಣುವಿಗೆ ಅಂತಹುದೇ ಅವಸ್ಥೆ ಉಂಟಾಯಿತು. ಆದರೆ ಸಾಯಿನಾಥರು ಕೃಪೆ ಮಾಡಿದ ಕೂಡಲೇ ಅವನ ಕಷ್ಟಗಳೆಲ್ಲವೂ ನಿರಾಳವಾದವು. ॥25॥ ಅವನಿಗೆ ಗೀರ್ವಾಣ ಭಾಷೆಯಾದ ಸಂಸ್ಕೃತದ ಜ್ಞಾನ ಅಲ್ಪವಾಗಿತ್ತು. ಹಾಗಿದ್ದರೂ ಸಹ ಅವನುಆಚಾರ್ಯ ವಿದ್ಯಾರಣ್ಯರಿಗೆ ವಂದನೆ ಸಲ್ಲಿಸಿ ಮತ್ತು ಸಾಯಿಬಾಬಾರ ಚರಣಗಳಿಗೆ ನಮಸ್ಕರಿಸಿ ಓವಿ ಛಂದಸ್ಸಿನಲ್ಲಿ ಪದಗಳ ರಚನೆಯನ್ನು ಆದರದಿಂದ ಪ್ರಾರಂಭಿಸಿದನು. ॥26॥ ದಾಸಗಣುವಿನ ಭಾಷೆಯು ಹಾಲಿನ ಧಾರೆಯ ರೀತಿಯಲ್ಲಿದ್ದು ಅದಕ್ಕೆ ಸಾಯಿಪ್ರಸಾದವೆಂಬ ಸಕ್ಕರೆಯನ್ನು ಬೆರೆಸಿದರೀತಿಯಲ್ಲಿತ್ತು. ಓ ಶ್ರೋತೃಗಳೇ, ಅದರಿಂದ ಉಂಟಾಗುವ ಮಧುರತೆಯನ್ನು ಕ್ಷಣಕಾಲ ಆದರದಿಂದ ಕೇಳಿರಿ. ॥27॥ ಅದು ಹಾಗಿರಲಿ. ನಾನು ಈಗ ತಾನೇ ಹೇಳಿದ ಬೋಧಿನಿಯ[3] ಹೃದ್ಗತಾರ್ಥ ಮತ್ತು ದಿಗ್ದರ್ಶನವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ ನೀವು ಮೂಲವನ್ನೇ ಓದಬೇಕು. ಆದರೆ ನನ್ನ ನಿರೂಪಣೆಯ ಉದ್ದೇಶವೇ ಬೇರೆ. ಮನದಲ್ಲಿಟ್ಟುಕೊಳ್ಳಿ. ॥28॥ ತಮ್ಮ ಭಕ್ತರಿಗೆ ಯಾವುದಾದರೂ ಶ್ಲೋಕವು ಕಷ್ಟಕರವಾದ್ದೇ ಶ್ಲೋಕವು ಯಾವುದೇ ಪುಸ್ತಕದ್ದಾಗಿರಲಿ, ಮಹಾರಾಜರು ಒಂದು ಮಾತೂ ಆಡದೇ ಸಮಧಾನಗೊಳಿಸಬಲ್ಲರು. ಅವರು ಹೇಗೆ ಮಾಡುತ್ತಾರೆ ಎಂಬುದನ್ನು ನೋಡಿ. ॥29॥ ಈ ಕಥೆಯನ್ನು ಹೇಳುವ ಉದ್ದೇಶವೇ ಇದು. ಶ್ರೋತೃಗಳು ಇದರ ತಾತ್ಪರ್ಯವನ್ನು ತಿಳಿಯಬೇಕು. ನನ್ನ ಮನೋಗತವು ಇಷ್ಟೇ. ಆದ್ದರಿಂದ ಗಮನಕೊಟ್ಟು ಕೇಳಿರಿ. ॥30॥ ಭಾಷ್ಯವನ್ನು 'ಓವಿ' ಛಂದಸ್ಸಿನಲ್ಲಿ ಬರೆದು ಪೂರ್ಣಗೊಳಿಸಿದ್ದನು. ವಿದ್ವಜ್ಜನರು ಅದನ್ನು ಮಾನ್ಯಮಾಡಿದ್ದರು. ದಾಸಗಣುವಿನ ಮನದಿಚ್ಛೆ ಪೂರೈಸಿತ್ತು. ಆದರೆ, ಖಚಿತವಾಗಿ ಒಂದು ಶಂಕೆ ಉಳಿಯಿತು. ॥31॥ ಅವನು ಅದನ್ನು ಪಂಡಿತರ ಮುಂದೆ ಇಟ್ಟನು. ಅದನ್ನು

ಅವರೆಲ್ಲರೂ ದೀರ್ಘವಾಗಿ ಚರ್ಚಿಸಿದರು. ಆದರೆ ಅವನ ಮನಸ್ಸಿನಲ್ಲಿದ್ದ ಶಂಕೆಯು ಮಾತ್ರ ತಿಳಿಯಾಗಲಿಲ್ಲ. ॥32॥ ಅದೇ ಸಮಯದಲ್ಲಿ, ಬೇರೆ ಯಾವುದೋ ಕಾರಣಕ್ಕಾಗಿ ದಾಸಗಣು ಶಿರಡಿಗೆ ಹೋಗಬೇಕಾಯಿತು, ಮತ್ತು ಅಲ್ಲಿ ಅವನ ಶಂಕೆಯು ಸಹಜವಾಗಿ ಮನಸ್ಸಿಗೆ ತೃಪ್ತಿಯಾಗುವಂತೆ ನಿವಾರಣೆಯಾಯಿತು. ॥33॥ ಅವನು ಸಾಯಿ ದರ್ಶನಕ್ಕಾಗಿ ಹೊರಟನು. ಅವರ ಚರಣಗಳಲ್ಲಿ ತನ್ನ ಶಿರಸ್ಸನ್ನು ಇಟ್ಟನು. ಸಾಷ್ಟಾಂಗ ಪ್ರಣಾಮ ಮಾಡಿದನು. ಮತ್ತು ಬಹಳವಾಗಿ ಸಂತುಷ್ಟನಾದನು. ॥34॥ ಸಂತರ ಒಂದು ಕೃಪಾದೃಷ್ಟಿ, ಸಂತರ ಮುಖದಿಂದ ಬಂದ ಮಧುರ ವಚನ, ಸಂತರ ಮಂದಹಾಸಯುಕ್ತ ವದನ ಇವುಗಳು ಭಕ್ತಜನರಿಗೆ ಕಲ್ಯಾಣ ಉಂಟುಮಾಡುತ್ತವೆ. ॥35॥ ಕೇವಲ ಸಂತರ ದರ್ಶನವೂ ಎಲ್ಲ ಪಾಪಗಳನ್ನೂ ತೊಳೆದು ಹಾಕುತ್ತದೆ. ಅಂತಹವರ ನಿತ್ಯ ಸನ್ನಿಧಾನದಲ್ಲೇ ಇರುವವರ ಪುಣ್ಯವನ್ನು ವಿವರಿಸಲು ಹೇಗೆ ಸಾಧ್ಯ? ॥36॥ "ಓ, ಗಣೂ! ಎಲ್ಲಿಂದ ಬರುತ್ತಾ ಇರುವೆ?" ಬಾಬಾರವರು ಪ್ರಶ್ನಿಸಿದರು. "ಅಲ್ಲಿ ಎಲ್ಲವೂ ಕುಶಲವೇ? ಮನಸ್ಸಿನಲ್ಲಿ ಸಮಾಧಾನವಿದೆಯೇ? ಸದಾ ಪ್ರಸನ್ನನಾಗಿರುವೆಯಾ?" ॥37॥ ದಾಸಗಣುವು ಪ್ರತ್ಯುತ್ತರ ನೀಡಿದನು, "ನಿಮ್ಮ ಕೃಪಾಛತ್ರದ ರಕ್ಷಣೆಯಲ್ಲಿ ನನಗೆ ದುಃಖವೆಲ್ಲಿಯದು? ನಾನು ಆನಂದ ಭರಿತನಾಗಿದ್ದೇನೆ." ॥38॥ "ತಮಗೆ ಎಲ್ಲವೂ ತಿಳಿದಿದೆ, ಹಾಗಿರುವಾಗ ಲೋಕೋಪಚಾರದ ಪ್ರಶ್ನೆ ಏಕೆ? ನೀವು ನನ್ನ ಕುಶಲದ ಬಗ್ಗೆ ಏಕೆ ಕೇಳುತ್ತಿರುವಿರಿ ಎಂದು ನನಗೆ ಗೊತ್ತು. ॥39॥ "ನೀವೇ ನನ್ನನ್ನು ಹೊಸ ಸಾಹಸ ಪ್ರಾರಂಭಿಸಲು ಹೇಳಿದಿರಿ. ಅದು ಪೂರ್ಣ ಸ್ವರೂಪದಲ್ಲಿ ಇರುವಾಗ ನೀವು ಮಧ್ಯದಲ್ಲಿ ಈ ಪರಿಹಾರವಾಗದಂತಹ ಸಮಸ್ಯೆಯನ್ನು ಸೃಷ್ಟಿಸಿರುವಿರಿ. ಅದನ್ನು ಬೇರೆ ಯಾರೂ ಎಷ್ಟೇ ಪ್ರಯತ್ನ ಪಟ್ಟರೂ ಪರಿಹರಿಸಲು ಸಾಧ್ಯವಿಲ್ಲ. ॥40॥ ಈ ರೀತಿ ಅವರ ಪರಸ್ಪರ ಮಾತುಕತೆ ನಡೆಯಿತು. ಗಣುದಾಸನು ಅವರ ಚರಣಗಳನ್ನು ಒತ್ತುತ್ತಲೇ "ಈಶಾವಾಸ್ಯ ಭಾವಾರ್ಥ ಬೋಧಿನಿ"ಯನ್ನು ಉಲ್ಲೇಖಿಸುತ್ತ ಪ್ರಶ್ನಿಸಿದನು. ॥41॥ "ಈಶಾವಾಸ್ಯ ಭಾವಾರ್ಥ ಬೋಧಿನಿ"ಯನ್ನು ಬರೆಯುತ್ತಿರುವಾಗ ನನ್ನ ಲೇಖನಿಯು ನಿಂತು ಹೋಯಿತು. ಅನೇಕ ಶಂಕೆಗಳು, ಅಪಾರ್ಥಗಳು ನನ್ನ ಮನಸ್ಸಿನಲ್ಲಿ ಹುಟ್ಟಿದವು. ಬಾಬಾ, ದಯಮಾಡಿ ಪರಿಹರಿಸಿರಿ" ॥42॥ ಅವನು ಎಲ್ಲ ವಿಷಯವನ್ನು ಮೊದಲಿನಿಂದ ಕಡೆಯವರೆಗೆ ಬಾಬಾರವರ ಚರಣಗಳಲ್ಲಿ ಆದರದಿಂದ ಮಂಡಿಸಿದನು. ತನ್ನ ಶಂಕೆಯನ್ನು ನಿವಾರಿಸಲುಅತಿ ಕಷ್ಟಕರವಾಗಿರುವುದನ್ನೂ ತಿಳಿಸಿದನು. ॥43॥ ದಾಸಗಣುವು ಸಾಯಿನಾಥರಲ್ಲಿ ವಿನೀತನಾಗಿ ಅರಿಕೆ ಮಾಡಿಕೊಂಡನು, "ನನ್ನ ಈ ಗ್ರಂಥಕ್ಕಾಗಿ ಪಟ್ಟ ಶ್ರಮವೆಲ್ಲಾ ವ್ಯರ್ಥವಾಯಿತು. ನಿಮಗೆ ಈಶಾವಾಸ್ಯದ ಸಂಪೂರ್ಣ ಕಥೆಯು ತಿಳಿದಿದೆ. ॥44॥ "ನೀವು ಶಂಕೆಯನ್ನು ದೂರಮಾಡದೇ ಇದ್ದಲ್ಲಿ ಗ್ರಂಥಸಾರಾಂಶವು ಸ್ಪಷ್ಟವಾಗಿರುವುದಿಲ್ಲ." ಆಗ ಮಹಾರಾಜರು ಆಶೀರ್ವಚನ ನೀಡಿ ಹೇಳಿದರು, "ಅತ್ಯಂತ ಪ್ರಸನ್ನ ಮನಸ್ಸಿನವನಾಗು." ॥45॥ "ಓಹ್ ಇದರಲ್ಲಿ ಕಷ್ಟವೇನಿದೆ? ನಿನ್ನ ಸ್ಥಳಕ್ಕೆ ಹಿಂತಿರುಗಿ ಹೋದಾಗ ಕಾಕಾರವರ ಮನೆ ಕೆಲಸದವಳು ಈ ಶಂಕೆಯನ್ನು ಸುಲಭವಾಗಿ ನಿವಾರಿಸುವಳು." ॥46॥ ಆ ಕಾಕಾನು ಭಾವು ಸಾಹೇಬ

ದೀಕ್ಷಿತನು. ಬಾಬಾರವರ ಪ್ರೀತಿಯ ಭಕ್ತರಲ್ಲೊಬ್ಬನು. ಕಾಯಾ, ವಾಚಾ, ಮನಸಾ ಸರ್ವದಾ ಗುರುಸೇವೆಯಲ್ಲಿ ನಿರತನಾಗಿದ್ದವನು. ॥47॥ ಪ್ರಖ್ಯಾತವಾದ ಮುಂಬಯಿ ನಗರದ ಸ್ವಲ್ಪ ದೂರದ ಪಾರ್ಲೆ ಎಂಬ ಹಳ್ಳಿಯಲ್ಲಿ ಈ ಹರಿಭಕ್ತನು ವಾಸವಾಗಿದ್ದನು. ॥48॥ ಅವನ ನಿಜವಾದ ಹೆಸರು ಹರಿ. ಅದು ತಂದೆ–ತಾಯಿಗಳು ಇಟ್ಟ ಹೆಸರು. ಆದರೆ ಜನರು ಅವನನ್ನು ಭಾವು ಸಾಹೇಬ ಎಂದು ಕರೆಯುತ್ತಿದ್ದರು. ಬಾಬಾರವರು ಅವನಿಗೆ ಮೂರನೆಯ ಹೆಸರನ್ನು ಕೊಟ್ಟರು. ॥49॥ ಮಹಾಜನಿಯನ್ನು "ಬಡೇಕಾಕಾ"ಎಂದು, ನಿಮೋಣ್‌ಕರ್‌ನನ್ನು "ಮಾತಾರೇ ಕಾಕಾ" ಎಂದು, ಬಾವು ಸಾಹೇಬನನ್ನು "ಲಂಗಡೆ ಕಾಕಾ"[4] ಅಥವಾ "ಬಾಂಬ್ಯಾ ಕಾಕಾ"[5] ಎಂದು ಕರೆಯುತ್ತಿದ್ದರು. ॥50॥ ತಂದೆ ತಾಯಿಗಳು ಒಂದು ಹೆಸರಿಡುತ್ತಾರೆ. ರಾಶಿಯ ಪ್ರಕಾರ ಮತ್ತೊಂದು ಹೆಸರು ಮತ್ತು ಒಂದು ಅಡ್ಡ ಹೆಸರೂ ಇರುತ್ತದೆ. ಈ ರೀತಿ ಅನೇಕ ರೀತಿಯಲ್ಲಿ ಹೆಸರುಗಳನ್ನು ಇಡುತ್ತಾರೆ. ॥51॥ ಮಹಾರಾಜರು ಬೇರೆ ಬೇರೆ ಹೆಸರಿಟ್ಟರು ಮತ್ತು ಅವುಗಳನ್ನೇ ಸಾಮಾನ್ಯವಾಗಿ ಉಪಯೋಗಿಸುತ್ತಿದ್ದರು. ಆ ಹೆಸರೆಲ್ಲರುದಾವಳಿಯಾಗಿ ಪ್ರೀತಿಯಿಂದ ಕರೆಯಲ್ಪಟ್ಟಿತು. ॥52॥ ಕೆಲವು ಸಲ ಅವನನ್ನು 'ಭಿಕ್ಷು'[6] ಎಂದೂ ಕೆಲವು ಸಲ 'ಕಾಕಾ' ಎಂದೂ ಕರೆಯುತ್ತಿದ್ದರು. ಬಾಬಾ ಅವನಿಗೆ ಈ ಹೆಸರನ್ನು ಅಂಕಿತಗೊಳಿಸಿದ್ದರು. ಮತ್ತು ಕಾಕಾರವರು ಆ ಹೆಸರಿನಿಂದಲೇ ಶಿರಡಿಯಲ್ಲಿ ಪ್ರಸಿದ್ಧರಾದರು. ॥53॥ ದಾಸಗಣುವಿಗೆ ಆಶ್ಚರ್ಯವಾಯಿತು. ಮತ್ತೆಲ್ಲರೂ ಕೂಡ ಆಶ್ಚರ್ಯಚಕಿತರಾದರು. ಕಾಕಾರವರ ಮನೆಕೆಲಸದವಳು ಯಾವ ರೀತಿ ಶಂಕೆಯನ್ನು ನಿವಾರಿಸಬಲ್ಲಳು? ॥54॥ ಮನೆ ಕೆಲಸದವಳು ಎಷ್ಟಾದರೂ ಕೆಲಸದವಳೇ. ಅವಳ ವಿದ್ಯಾಭ್ಯಾಸ ಎಷ್ಟಿರಬಹುದು? ಅವಳು ಎಷ್ಟು ಬುದ್ಧಿವಂತಳಿರಬಹುದು? ಎಲ್ಲವೂ ಬಂದ ರೀತಿ ವಿಲಕ್ಷಣವಾಗಿ ಕಾಣುತ್ತದೆ. ॥55॥ ಶ್ರುತಿಯ ಅರ್ಥವ್ಯುತ್ಪತ್ತಿಯನ್ನು ಕಂಡುಹಿಡಿಯುವುದು ಮನೆಕೆಲಸದವಳ ಬುದ್ಧಿಗೂ ಮೀರಿದುದು. "ಮಹಾರಾಜರು ಕೇವಲ ಹಾಸ್ಯಮಾಡುತ್ತಿದ್ದಾರೆ" ಎಂದು ಜನರು ಮಾತನಾಡಿಕೊಳ್ಳುತ್ತಿದ್ದರು. ॥56॥ ಮಹಾರಾಜರು ಕೇವಲ ವಿನೋದಮಾಡುತ್ತಿರುವರೆಂದು ಸರ್ವರೂ ಭಾವಿಸಿದರು. ಆದರೆ ಬಾಬಾರವರ ಹಾಸ್ಯೋಕ್ತಿಗಳನ್ನು ಸಹ ದಾಸಗಣುವು ಸತ್ಯವೆಂದು ನಂಬಿದನು. ॥57॥ ಸಾಯಿಯ ಮಾತುಗಳನ್ನು ಕೇಳಿ, ಜನರು ಈ ಮಾತುಗಳನ್ನು ಸಾಯಿಯು ಸುಮ್ಮನೆ ಈ ರೀತಿ ಹೇಳಿದರೆಂದು ಯೋಚಿಸಿದರು. ಆದರೆ ದಾಸಗಣುವಿಗೆ ಅವುಸತ್ಯವಚನಗಳಾಗಿದ್ದವು. ॥58॥ ಸಾಯಿಯು ಸುಮ್ಮನೆ ಹಾಗೆ ಹೇಳಿದ್ದರೂ ಜನರೆಲ್ಲರೂ ಈ ಮಾತುಗಳಿಂದ ಹೊರಬರುವ ಫಲಿತಾಂಶದ ಬಗ್ಗೆ ಕಾತರರಾಗಿದ್ದರು. ॥59॥ ಹಾಸ್ಯಕ್ಕಾಗಿ ನುಡಿದಿರಲಿ, ಇಲ್ಲದಿರಲಿ, ಅವು ಎಂದಿಗೂ ನಿಷ್ಕಾರಣವಾಗುತ್ತಿರಲಿಲ್ಲ. ಏಕೆಂದರೆ ಬಾಬಾರವರ ಒಂದೊಂದು ನುಡಿಯೂ ಗಹನವಾದ ಅರ್ಥಗಳ ಗಣಿಯಾಗಿದ್ದವು. ॥60॥ ಬಾಬಾರವರ ವಚನಗಳು ಏನೇ ಆಗಿದ್ದರೂ ಅವು ಕೇವಲ ಮಾತುಗಳಲ್ಲದೆ ಬ್ರಹ್ಮಲಿಖಿತವಾಗಿರುತ್ತಿದ್ದವು. ಒಂದೇ ಒಂದು ಅಕ್ಷರವೂ ವ್ಯರ್ಥವಾಗುತ್ತಿರಲಿಲ್ಲ. ಜೊತೆಗೆ ತನ್ನ ಕಾರ್ಯವನ್ನು ಸರಿಯಾದ ಸಮಯದಲ್ಲಿ ಮಾಡುತ್ತಿದ್ದರು. ॥61॥ ಇದು

ದಾಸಗಣುವಿನ ದೃಢ ಭಾವನೆಯಾಗಿತ್ತು, ಇತರರ ಭಾವನೆಗಳು ಯಾವುದೇ ರೀತಿಯಲ್ಲಿರಬಹುದು. ನಿಷ್ಠೆಗೆ ತಕ್ಕ ಫಲ ಬಂದು ಹೊಂದುವುದು. ಅದೇ ರೀತಿಯ ಫಲ ದೊರೆಯುತ್ತದೆ. ॥62॥ ಯಾರ ಭಾವನೆಯ ತರಹವೇ ಅವುಗಳ ಫಲ. ಯಾರ ವಿಶ್ವಾಸದ ತರಹವೇ ಅವುಗಳ ಫಲ. ಪ್ರೇಮತುಂಬಿದ ಅಂತಃಕರಣವು ನಿರ್ಮಲವಾದ ಅನುಭವದ ಪರಿಮಿತಿಯನ್ನು ನಿರ್ಧರಿಸುತ್ತದೆ. ॥63॥ ಅವರು ಜ್ಞಾನಿಗಳ ಶಿರೋಮಣಿಯಾಗಿದ್ದರು. ಅವರ ವಾಣಿಯು ಎಂದಿಗೂ ಮಿಥ್ಯವಾಗುವುದಿಲ್ಲ. ಅವರು ತಮ್ಮ ಭಕ್ತರ ಇಚ್ಛೆಗಳನ್ನು ಪೂರೈಸಲು ಪಣ ತೊಟ್ಟಿದ್ದರು. ಅದೇ ಅವರ ಚರಣಗಳ ಬಂಧನದ ಅರ್ಥ. ॥64॥ ಗುರುವಚನಗಳು ಎಂದಿಗೂ ವ್ಯರ್ಥವಲ್ಲ. ಈ ಕಥೆಯನ್ನು ಗಮನವಿಟ್ಟು ಕೇಳಿರಿ. ಸಂಸಾರದ ಎಲ್ಲ ದುಃಖಗಳೂ ಮಾಯವಾಗುತ್ತವೆ. ಮತ್ತು ನಿಮ್ಮನ್ನು ಸಾಧನೆಯ ಮಾರ್ಗದಲ್ಲಿ ತೊಡಗಿಸುತ್ತದೆ. ॥65॥ ದಾಸಗಣುವು ಪಾರ್ಲೆಗೆ ಹಿಂತಿರುಗಿದನು. ಕಾಕಾ ಸಾಹೇಬ ದೀಕ್ಷಿತನ ಮನೆಗೆ ಹೋದನು. ಕಾಕಾನ ಮನೆಕೆಲಸದವಳು ಅವನಿಗೆ ಯಾವ ರೀತಿ ಸಹಾಯ ಮಾಡಲು ಸಾಧ್ಯ ಎಂಬುದರ ಬಗ್ಗೆ ಉತ್ಕಂಠಿತನಾಗಿದ್ದನು. ॥66॥ ಮಾರನೆಯ ದಿನ, ಬೆಳಗಿನ ಜಾವದಲ್ಲಿ ದಾಸಗಣು ಇನ್ನೂ ಮಲಗಿದ್ದುಕೊಂಡೇ ಸುಖನಿದ್ರೆಯ ನಂತರ ಪೂರ್ಣಸಂತೃಪ್ತಿಯ ಕ್ಷಣಗಳನ್ನು ಆನಂದಿಸುತ್ತಿರುವಾಗಲೇ ಒಂದು ವಿಚಿತ್ರ ಘಟನೆ ನಡೆಯಿತು. ॥67॥ ಒಬ್ಬ ಚಿಕ್ಕ ರೈತ ಹುಡುಗಿಯು ತನ್ನ ಮಂಜುಳವಾಣಿಯಲ್ಲಿ ಹಾಡುತ್ತಿದ್ದಳು. ಆ ರಾಗವು ದಾಸಗಣುವಿನ ಹೃದಯವನ್ನು ಮುಟ್ಟಿತು. ॥68॥ ಆ ಹಾಡು ದೀರ್ಘವಾದ ಆಲಾಪನೆಗಳ ಸಹಿತ ಕೂಡಿತ್ತು, ಆ ಮಂಜುಳವಾದ ಹಾಡಿನ ಪದಬಂಧವು ಮನಮುಟ್ಟುವಂತಿತ್ತು, ಅದನ್ನು ಕೇಳಿದಕೂಡಲೇ ಅವನು ಅದಕ್ಕೆ ಮನಸೋತು ಲಕ್ಷ್ಯವಿಟ್ಟು ಆಲಿಸಿದನು. ॥69॥ ತಕ್ಷಣವೇ ಅವನಿಗೆ ಪೂರ್ತಿಯಾಗಿ ಎಚ್ಚರವಾಯಿತು. ಅವನ ಗಮನ ಆ ಹಾಡಿನ ಅರ್ಥದ ಕಡೆ ಹೋಯಿತು. ಅವನು ಅದನ್ನು ಸಾವಧಾನ ಚಿತ್ತದಿಂದ ಆಲಿಸಿದನು ಮತ್ತು ಪೂರ್ಣ ಪ್ರಸನ್ನನಾದನು. ॥70॥ "ಈ ಹುಡುಗಿ ಯಾರು? ಅದೆಷ್ಟು ಗಂಭೀರವಾಗಿ ಮತ್ತು ಮಧುರಸ್ವರದಲ್ಲಿ ಹಾಡುತ್ತಾಳೆ? ಅವಳು 'ಈಶಾವಾಸ್ಯ'ದ ಪೂರ್ಣ ತಾತ್ಪರ್ಯವನ್ನು ವಿವರಿಸಿದ್ದಾಳೆ ಎಂದು ಅವನು ಬೆರಗಾದನು. ॥71॥ "ಅವಳು ಇದೇ ಮನೆಕೆಲಸದವಳಾಗಿರಬೇಕು. ಅವಳು ಯಾರೆಂದು ಹೋಗಿ ನೋಡೋಣ. ಅವಳು ಶ್ರುತಿಯ ಅರ್ಥವನ್ನು ಸರಳವಾದ ಭಾಷೆಯಿಂದ ಬಿಡಿಸಿದ್ದಾಳೆ." ॥72॥ ಅವನು ಹೊರಗೆ ನೋಡಿದಾಗ ಅವಳೊಬ್ಬಳು ನಿಜವಾಗಿಯೂ ರೈತನ ಮಗಳು. ಕಾಕಾರವರ ಮನೆಯ ಹಿಂಭಾಗದಲ್ಲಿ ಆ ಕೆಲಸಕ್ಕಾಗಿ ನಿಗದಿ ಪಡಿಸಿದ ಸ್ಥಳದಲ್ಲಿ ಪಾತ್ರೆಗಳನ್ನು ತೊಳೆಯುತ್ತಿದ್ದಳು. ॥73॥ ಅವನು ವಿಚಾರಿಸಿದಾಗ ಒಂದು ಆಶ್ಚರ್ಯಕರವಾದ ಸಂಗತಿಯು ಬೆಳಕಿಗೆ ಬಂದಿತು. ಆ ಹುಡುಗಿಯು ನಾಮ್ಯಾ ಎನ್ನುವ ಗಂಡಾಳಿನ ಸಹೋದರಿಯಾಗಿದ್ದಳು. ಅವನು ದೀಕ್ಷಿತನ ಮನೆಯಲ್ಲಿ ಸೇವೆ ಸಲ್ಲಿಸುತ್ತಿದ್ದನು. ॥74॥ ಅವಳು ಮನೆ ಕೆಲಸದವಳೆಂದು ಅವನಿಗೆ ಖಾತ್ರಿಯಾಗಿತ್ತು. ಅವಳ ಹಾಡು ಎಲ್ಲಾ ಶಂಕೆಗಳನ್ನೂ ನಿವಾರಿಸಿತ್ತು. ಸಂತರು ಏನು

ತಾನೇ ಮಾಡಲಾರರು? ಒಬ್ಬರ ಆಜ್ಞಾನುಸಾರ ಒಂದು ಎಮ್ಮೆಯೂ ವೇದಘೋಷವನ್ನು ಮಾಡಿತ್ತು. ॥75॥ ಈ ರೀತಿ ಆ ಹುಡುಗಿ ಹಾಡಿದ ಹಾಡು ದಾಸಗಣುವಿಗೆ ತೃಪ್ತಿ ನೀಡುವ ಕಾರಣವಾಯಿತು. ಜನರೆಲ್ಲರೂ ಬಾಬಾರವರ ಲೌಕಿಕ ಮಾತುಗಳ ಹಿಂದೆ ಇರುವ ಮಹಿಮೆಯನ್ನೂ, ತೊಡರುಗಳನ್ನೂ ಅರ್ಥಮಾಡಿಕೊಂಡರು. ॥76॥ ಕೆಲವರು ಹೇಳಿದರು, 'ದಾಸಗಣು, ಕಾಕಾರವರ ಮನೆಯ ದೇವರಕೋಣೆಯಲ್ಲಿಕುಳಿತು ದೇವಪೂಜೆ ಮಾಡುತ್ತಿದ್ದನು. ಆ ಸಮಯದಲ್ಲಿ ಅವನು ಈ ಹಾಡನ್ನು ಕೇಳಿದನು' ಎಂದು. ॥77॥ ಅದೇನೇ ಇರಲಿ. ಅಂತಿಮ ನಿರ್ಣಯವನ್ನು ಗಮನಿಸಬೇಕು. ಮಹಾರಾಜರು ಹೇಗೆ ತಮ್ಮ ಭಕ್ತರಿಗೆ ವಿವಿಧ ರೀತಿಯಲ್ಲಿ ಬೋಧಿಸಿದರೆಂಬುದು ಗಮನಾರ್ಹ. ॥78॥ "ನೀವು ಎಲ್ಲೇ ಕುಳಿತಿರಿ, ನನ್ನನ್ನು ಕೇಳಿರಿ. ಒಂದು ಜಾಗದಿಂದ ಮತ್ತೊಂದು ಕಡೆಗೆ ಏಕೆ ಅಲೆಯುವಿರಿ? ನಾನು ನಿಮ್ಮ ಕುತೂಹಲವನ್ನು ತೃಪ್ತಿಪಡಿಸುವೆನು. ಅಷ್ಟರಮಟ್ಟಿಗೆ ಶ್ರದ್ಧೆ ಇಟ್ಟುಕೊಳ್ಳಿ." ॥79॥ "ನಾನು ಎಲ್ಲ ಜಾಗದಲ್ಲಿಯೂ ತುಂಬಿರುವೆನು. ನಾನಿಲ್ಲದಿರುವ ರೇಣುಮಾತ್ರ ಜಾಗವೂ ಇಲ್ಲ. ಎಲ್ಲಿ ಭಕ್ತರ ಉಚ್ಚಮಟ್ಟದ ಭಕ್ತಿ ಇದೆಯೋ ಅಲ್ಲಿ ಎಲ್ಲಿದ್ದರೂ ಕಾಣಿಸಿಕೊಳ್ಳುವೆನು." ॥80॥ ಅದು ಹಾಗಿರಲಿ. ಆ ಹುಡುಗಿಗೆ ಎಂಟು ವರ್ಷ ವಯಸ್ಸು. ಹಳೆಯ ಹರಿದ ಬಟ್ಟೆಯನ್ನು ಧರಿಸಿದ್ದಳು. ಒಂದು ಸುಂದರವಾದ ಕಿತ್ತಲೆ ಬಣ್ಣದ ಸೀರೆಯನ್ನು ವರ್ಣಿಸುವ ಮಂಜುಳ ಗೀತೆಯನ್ನು ಹಾಡುತ್ತಿದ್ದಳು. ॥81॥ "ಜರಿ ಕೆಲಸದ ಆ ಸೀರೆಯು ಅದೆಷ್ಟು ಸುಂದರವಾಗಿದೆ. ಸೀರೆಯ ಅಂಚು ಅದೆಷ್ಟು ಅಂದವಾಗಿದೆ ಅದರ ಜರಿ ಸೆರಗು ಅದೆಷ್ಟು ಸೊಗಸು" ಈ ರೀತಿಯ ಹಾಡಿನ ಭಾವ ಅವಳನ್ನು ಮುಳುಗಿಸಿತ್ತು. ॥82॥ ಹೊಟ್ಟೆಗೆ ಸಾಕಾಗುವಷ್ಟು ಮಾತ್ರ ತಿಂದು, ದೇಹದಲ್ಲಿ ಹರಿದುಹೋದ ಉಡುಪು ಧರಿಸಿದ್ದ ಅವಳು ಬೇರೆಯವರ ಕಿತ್ತಲೆ ಬಣ್ಣದ ಸೀರೆಯನ್ನು ಹೊಗಳಿ ಹಾಡುತ್ತ ಸಂತೋಷಗೊಂಡಿರುವಂತೆ ಕಂಡಳು. ॥83॥ ಅವಳ ಬಡತನವನ್ನು ಮತ್ತು ಅವಳ ಪ್ರೀತಿಯ ಸ್ವಭಾವ ನೋಡಿ ದಾಸಗಣುವು ಅವಳ ಬಗ್ಗೆ ಕನಿಕರಿಸಿ ಮೋರೇಶ್ವರನಿಗೆ ಹೇಳಿದನು. ॥84॥ "ನೋಡು, ಅವಳ ದೇಹವು ಪೂರ್ತಿ ಮುಚ್ಚಿಲ್ಲ. ಅವಳಿಗೆ ನೀನು ಏಕೆ ಒಂದು ಸೀರೆ ತಂದುಕೊಡಬಾರದು? ಈಶ್ವರನು ಸುಪ್ರೀತನಾಗುವನು ಮತ್ತು ನೀನೂ ಸಹ ಪುಣ್ಯಕಾರ್ಯ ಮಾಡಿದಂತಾಗುತ್ತದೆ." ॥85॥ ಮೋರೇಶ್ವರನು ಸ್ವಭಾವತಃ ಕೃಪಾಮೂರ್ತಿಯೇ ಸರಿ. ದಾಸಗಣುವಿನ ವಿನಂತಿಯ ಮೇರೆಗೆ ಒಂದು ಸುಂದರವಾದ ಸೀರೆಯನ್ನು ತಂದು ಆ ಹುಡುಗಿಗೆ ಆನಂದದಿಂದ ಕೊಟ್ಟನು. ॥86॥ ಹುಡುಗಿಯು ಆ ಸೀರೆಯನ್ನು ನೋಡಿ ಸುಪ್ರಸನ್ನಳಾದಳು. ಅದು ಹೇಗಿತ್ತೆಂದರೆ ಒಬ್ಬ ವ್ಯಕ್ತಿಯು ಒರಟಾದ, ರುಚಿಕರವಲ್ಲದ್ದನ್ನು ತಿಂದು ಹೊಟ್ಟೆ ಹೊರೆದುಕೊಳ್ಳುತ್ತಿದ್ದವನು ಅದೃಷ್ಟವಶಾತ್ ಒಂದು ಹಬ್ಬದೂಟ ಪಡೆದಂತೆ ಇತ್ತು. ॥87॥ ಮಾರನೆಯ ದಿನವೇ ಅವಳು ಆ ಸೀರೆಯನ್ನುಟ್ಟು ಸುತ್ತಿಸುತ್ತಿ ನಾಟ್ಯಮಾಡಿದಳು. ಎಲ್ಲ ಹೆಣ್ಣುಮಕ್ಕಳನ್ನೂ ಮೀರಿಸಿದಳು. ಅವಳು ಸೀರೆಯಿಂದಾಗಿ ಬಹಳ ಸಂತಸಪಟ್ಟಳು. ॥88॥ ಅದರ ಮರು ದಿವಸ ಅವಳು ಆ ಹೊಸ ಸೀರೆಯನ್ನು ಪೆಟ್ಟಿಗೆಯಲ್ಲಿಟ್ಟು ತನ್ನ ಹಳೆಯ ಹರಕಲು ಸೀರೆಯನ್ನೇ ಧರಿಸಿ

ಬಂದಿದ್ದಳು. ಆದರೆ ಅವಳು ಸ್ವಲ್ಪವೂ ಬೇಸರದಿಂದಿರಲಿಲ್ಲ. ॥89॥ ಅವಳು ಹೊಸ ಸೀರೆಯನ್ನು ಉಡದೆ ಒಳಗೆ ಇಟ್ಟಿದ್ದರೂ, ದಾಸಗಣುವಿಗೆ ಅನಿಸಿತು, ಅವಳ ಹಿಂದಿನ ಹಂಬಲ ಮಾಯವಾಗಿತ್ತು. ಈಗ ಅವಳ ದೃಷ್ಟಿಕೋನ ಬದಲಾಗಿತ್ತು. ॥90॥ ಅವಳು ತನ್ನ ಹೊಸ ಸೀರೆಯನ್ನು ಮನೆಯಲ್ಲಿಟ್ಟಿದ್ದಳು. ಮತ್ತು ಬರುವಾಗ ಮತ್ತೆ ಹಳೆಯ ಹರಕಲು ಸೀರೆಯನ್ನುಟ್ಟಿದ್ದಳು. ಆದರೂ ಅವಳು ಸೀರೆಯ ಕೊರತೆಯಿಂದ ಖಿನ್ನಳಾದಂತೆ ಕಾಣಲಿಲ್ಲ. ॥91॥ ಹರಕಲು ವಸ್ತ್ರವನ್ನು ಧರಿಸುವುದು ಏಕೆಂದರೆ ಬೇರೆ ಯಾವುದನ್ನೂ ಧರಿಸುವ ಶಕ್ತಿ ಇಲ್ಲ ಅನ್ನುವುದು ಬೇರೆ ವಿಷಯ. ಒಂದು ಚೆನ್ನಾಗಿರುವುದನ್ನು ಹೊಂದಿಯೂ ಸಹ ಆ ರೀತಿ ಮಾಡುವುದು ಬೇರೆ ವಿಷಯ. ಎರಡನೆಯದನ್ನು ಸಂತೃಪ್ತಿಯೆನ್ನುತ್ತಾರೆ. ಈ ರೀತಿ ಸುಖದುಃಖಗಳೆರಡೂ ಮನಸ್ಸಿನ ಭಾವದ ಮೇಲೆ ಅವಲಂಬಿಸಿದೆ. ॥92॥ ಈ ರೀತಿ ದಾಸಗಣುವಿನ ಸಮಸ್ಯೆಯು ಪರಿಹಾರವಾಯಿತು. ಅವನು ಈಶಾವಾಸ್ಯದ ಸಾರಾಂಶವನ್ನು ಕಂಡುಕೊಂಡನು. ಅಲ್ಲಿಯೇ ಅದರ ಅರ್ಥವು ಮನದಟ್ಟಾಯಿತು. ॥93॥ ಪರಮಾತ್ಮನು ಪೂರ್ಣವಾಗಿ ಇಡೀ ಬ್ರಹ್ಮಾಂಡವನ್ನು ವ್ಯಾಪಿಸಿದ್ದಾನೆ. ಹಾಗಿರುವಾಗ ಯಾವುದು ತಾನೇ ಭಗವಂತನಿಲ್ಲದ ಜಾಗವಿರಬಹುದು? ॥94॥ ಅದು ಪೂರ್ಣ ಮತ್ತು ಇದೂ ಪೂರ್ಣ. ಈ ಪೂರ್ಣದಿಂದಲೇ ಪೂರ್ಣವು ಹುಟ್ಟುತ್ತದೆ. ಪೂರ್ಣದಿಂದಲೇ ಏನನ್ನಾದರೂ ತೆಗೆದಲ್ಲಿ ಉಳಿಯುವ ಅವಶೇಷ ಪೂರ್ಣವೇ. ॥95॥ ಬಾಲಕಿಯ ಬಡತನ ಭಗವಂತನ ಒಂದು ಆಟ ಮತ್ತು ಅವಳ ಹರಕಲು ಬಟ್ಟೆಯೂ ಅದರ ಒಂದು ಅಂಶ. ದಾನಿಯು, ದಾನ ಸ್ವೀಕರಿಸುವವನು, ದಾನ ಎಲ್ಲವೂ ವಿಧಿಬರಹ. ಪರಮಾತ್ಮನು ಸರ್ವವ್ಯಾಪಿ. ॥96॥ "ನಾನು ಮತ್ತು ನನ್ನದು" – ಎಂಬುದನ್ನು ಸಂಪೂರ್ಣವಾಗಿ ತ್ಯಜಿಸು. ನಿರಭಿಮಾನದಿಂದ ಸದಾಕಾಲ ವರ್ತಿಸಿ, ತ್ಯಾಗಪೂರ್ವಕವಾಗಿ ಭೋಗವನ್ನು ಅನುಭವಿಸು. ಯಾವುದರ ಮೇಲೆಯೂ ಅಭಿಲಾಷೆ ಇರಬಾರದು. ॥97॥ ಬಾಬಾರವರ ವಚನಗಳು ಈ ರೀತಿ ಅಮೋಘವಾಗಿದ್ದವು. ಅವು ಎಂದಿಗೂ ಇಚ್ಛಿತ ಫಲ ಕೊಡದೆ ಇರಲಿಲ್ಲ. ಅನೇಕ ಜನರ ಅನುಭವವಿದು. ಅವರು ಕೊನೆಯವರೆಗೆ ಎಂದಿಗೂ ಶಿರಡಿಯನ್ನು ಬಿಟ್ಟು ಹೋಗಲಿಲ್ಲ. ಆದರೆ ಅವರು ಬಹು ದೂರದ ಊರಿನಲ್ಲೂ ಜನರ ಮುಂದೆ ಪ್ರಕಟವಾಗಬಲ್ಲವರಾಗಿದ್ದರು. ॥98॥ ಅವರು ಮಛೇಂದರಗಡದಲ್ಲಿ ಒಬ್ಬರಿಗಾಗಿ ಅಥವಾ ಮತ್ತೊಬ್ಬರಿಗಾಗಿ ಕೊಲ್ಹಾಪುರ, ಶೋಲಾಪುರ, ರಾಮೇಶ್ವರ ಮತ್ತೆ ಯಾವುದಾದರೂ ಪಟ್ಟಣದಲ್ಲಿ ತಮ್ಮ ಇಚ್ಛಾಮಾತ್ರದಿಂದಲೇ ಪ್ರಕಟವಾಗುತ್ತಿದ್ದರು. ॥99॥ ಕೆಲವರಿಗೆ ತಮ್ಮ ಸಾಮಾನ್ಯ ವೇಷದಲ್ಲಿ ಮತ್ತು ರೂಪದಲ್ಲಿದರ್ಶನಕೊಟ್ಟರು. ಕೆಲವರಿಗೆ ಅವರು ಕನಸಿನಲ್ಲಿ ಅಥವಾ ಎಚ್ಚರದಲ್ಲಿ, ಹಗಲಾಗಲಿ ರಾತ್ರಿಯಾಗಲಿ, ದರ್ಶನ ನೀಡಿ ಭಕ್ತರ ಇಚ್ಛೆಗಳನ್ನೆಲ್ಲ ಪೂರೈಸುತ್ತಿದ್ದರು. ॥100॥ ಅಂತಹ ಘಟನೆಗಳು ಒಂದೆರಡಲ್ಲ. ಅವುಗಳಲ್ಲಿ ಎಷ್ಟನ್ನು ವಿವರಿಸಬಹುದು? ಅವರು ಶಿರಡಿಯಲ್ಲಿ ವಾಸಮಾಡಿದರೂ ಅವರು ತಲುಪದ ಜಾಗ ಯಾವುದೂ ಇರಲಿಲ್ಲ. ॥101॥ ಕೇವಲ ಈ ಹುಡುಗಿಯ ವಿಷಯವನ್ನೇ ತೆಗೆದುಕೊಳ್ಳಿ, ಒಬ್ಬ ಅಪರಿಚಿತ, ಸಾಮಾನ್ಯ, ಮನೆಕೆಲಸದವಳು ಸಹಜವಾಗಿಯೇ ಕಿತ್ತಳೆ ಬಣ್ಣದ

ಸೀರೆಯನ್ನು ವಿವರಿಸುವ ಹಾಡನ್ನು ಹಾಡಿದಳು. ॥102॥ ದಾಸಗಣುವಿನ ಮನಸಲ್ಲಿ ಒಂದು ಶಂಕೆ ಹುಟ್ಟುವುದು ಮತ್ತು ಅದನ್ನು ಬಾಬಾರವರಲ್ಲಿ ಅರಿಕೆಮಾಡಿಕೊಂಡುದು, ಕಾಕಾರವರಲ್ಲಿದ್ದ ಮನೆಕೆಲಸದವಳಿಂದ ಉತ್ತರ ದೊರಕುವುದು, ಇವೆಲ್ಲವೂ ಮಾಯೆಯ ಕೈಚಳಕವಲ್ಲವೇ? ॥103॥ ಅಂತಹ ಮನೆ ಕೆಲಸದವಳು ಅಲ್ಲಿ ಇರುವುದು ಮತ್ತು ಅವಳು ಆ ಸಮಯದಲ್ಲಿ ಅಂತಹ ಹಾಡನ್ನು ಹಾಡುತ್ತಾಳೆ ಮತ್ತು ಅದು ಶ್ರುತಿಯ ಅರ್ಥವನ್ನು ವಿವರಿಸುತ್ತದೆ ಎಂಬುದು ಬಾಬಾ ಅವರಿಗೆ ಹೇಗೆ ತಿಳಿಯಿತು? ॥104॥ ಆದರೆ ಅದು ನಡೆಯಿತು ಮತ್ತು ನಿಜವಾಗಿಯೂ ನಡೆಯಿತು! ದಾಸಗಣುವು ಆಶ್ಚರ್ಯ ಚಕಿತನಾದನು. ಅವನ ಶಂಕೆಗಳು ದೂರವಾದವು ಮತ್ತು ಅವನು 'ಈಶಾವಾಸ್ಯ'ದ ಅರ್ಥವನ್ನು ತಿಳಿದುಕೊಂಡನು. ॥105॥ ಶ್ರೋತೃಗಳು ಮನದಲ್ಲಿಯೇ ಶಂಕಿಸಬಹುದು– ಏಕೆ ಈ ಎಲ್ಲವನ್ನೂ ಹಮ್ಮಿಕೊಳ್ಳಲಾಯಿತು? ಬಾಬಾರವರು ತಾವೇ ಸಂದೇಹಗಳನ್ನು ಅಲ್ಲಿಯೇ ತಮ್ಮ ಮುಖದಿಂದಲೇ ಏಕೆ ನಿವಾರಿಸಲಿಲ್ಲ? ॥106॥ ಅದನ್ನು ಅವರು ಅಲ್ಲಿ ಮಾಡಬಹುದಿತ್ತಲ್ಲವೇ? ಆದರೆ ಅವರ ಮಹಿಮೆಯನ್ನೆಲ್ಲಾ ಅರ್ಥ ಮಾಡಿಕೊಳ್ಳಲು ಆಗುತ್ತಿರಲಿಲ್ಲ. ಬಾಬಾರವರು ಅಲ್ಲಿ ಆ ಹುಡುಗಿಯ ಪರಮಾತ್ಮನೆ ಸ್ವರೂಪವೆಂಬುದನ್ನು ತೋರಿಸಿದರು. ॥107॥ ಆತ್ಮದ ಸತ್ಯ ಸ್ವರೂಪದ ಅನಾವರಣವೇ ಎಲ್ಲ ಉಪನಿಷತ್ತುಗಳ ಸಾರ. ಇದೇ ಮೋಕ್ಷ ಧರ್ಮ. ಇದರಲ್ಲಿ ಸಂಶಯವಿಲ್ಲ. ಇದು ಗೀತಾರ್ಥದ ಪ್ರವಚನವೂ ಆಗಿದೆ. ॥108॥ ಜೀವಿಗಳು ಬೇರೆ ಬೇರೆ. ಆದರೆ ಆತ್ಮವು ಮಾತ್ರ ಒಂದೇ. ಆತ್ಮಕ್ಕೆ ಕರ್ತೃತ್ವವೂ ಇಲ್ಲ ಭೋಕ್ತೃತ್ವವೂ ಇಲ್ಲ. ಅದು ಅಶುದ್ಧವೂ ಅಲ್ಲ. ಪಾಪಪುಣ್ಯಗಳ ಅಧೀನದಲ್ಲೂ ಇಲ್ಲ, ಕರ್ಮಾಚರಣೆಯ ಬಂಧನವೂ ಇಲ್ಲ. ॥109॥ "ನಾನು ಜಾತಿಯಲ್ಲಿ ಉಚ್ಚ ಜಾತಿಬ್ರಾಹ್ಮಣ, ಉಳಿದವರೆಲ್ಲರೂ ನೀಚ ವರ್ಣದವರು" ಈ ರೀತಿಯ ಭೇದಭಾವ ಇರುವವರೆಗೆ ಕರ್ಮಾಚರಣೆಯು ಅವಶ್ಯಕ. ॥110॥ ನಾನು ನಿರಾಕಾರ ಮತ್ತು ಸರ್ವವ್ಯಾಪಿ. ಬೇರೆ ಯಾರೂ ನನ್ನ ಪಕ್ಕದಲ್ಲಿ ಇಲ್ಲ. ನಾನು ಎಲ್ಲ ಸೃಷ್ಟಿಯಲ್ಲೂ ಇರುವೆನು. ಇದು ಆತ್ಮಸಾಕ್ಷಾತ್ಕಾರ ಪಡೆದವರ ಅಭಿವ್ಯಕ್ತಾನುಭವ. ॥111॥ ಜೀವಾತ್ಮನು ಪೂರ್ಣಬ್ರಹ್ಮ ಸ್ವರೂಪದಿಂದ ಕೆಳಗೆ ಬಿದ್ದಿರುವನು. ಅವನ ಧ್ಯೇಯವು ಸ್ವಸ್ವರೂಪ ಪ್ರಾಪ್ತಿಯಿಂದ ಪೂರ್ಣ ಸ್ಥಿತಿಯನ್ನು ಹೇಗಾದರೂ, ಯಾವ ರೀತಿಯಿಂದಲಾದರೂ ಪಡೆಯಲೇಬೇಕು, ಎಂಬುದು. ॥112॥ ಶ್ರುತಿಗಳು, ಸ್ಮೃತಿಗಳು ಮತ್ತು ವೇದಾಂತ ತತ್ತ್ವವೂ ಸಹ ಇದನ್ನೇ ಸಿದ್ಧಾಂತಗೊಳಿಸುತ್ತವೆ. ಇದು ನಿಜವಾಗಿಯೂ ಅಂತಿಮ ಗುರಿಯಾಗಿದ್ದು ಪತನ ಹೊಂದಿದವರನ್ನು ಎಬ್ಬಿಸಿ ಉದ್ಧರಿಸುತ್ತದೆ. ॥113॥ "ನಾನು ಸರ್ವ ಭೂತ(ಜೀವ)ಗಳಲ್ಲೂ ಇದ್ದೇನೆ" ಈ ವಿಶೇಷ ಸ್ಥಿತಿಯನ್ನು ಪಡೆಯುವವರೆಗೆ ಪರಮಾತ್ಮ ಹೃಷಿಕೇಶನೂ[10] ಸಹ ತಾನಾಗಿಯೇ ಜ್ಞಾನೋದಯವನ್ನು ನೀಡಲು ಸಾಧ್ಯವಿಲ್ಲ. ॥114॥ ವಿಹಿತವಾದ ಕರ್ಮಗಳನ್ನು ಆಚರಿಸಿದಲ್ಲಿ ಚಿತ್ತವು ಶುದ್ಧಿಯಾಗುತ್ತದೆ, ಆತ್ಮದ ಏಕತ್ವದ ಅಭೇದ ಭಾವವು ತಿಳಿಯಾಗುತ್ತದೆ. ಮತ್ತು ಈ ಜ್ಞಾನವು ಪೂರ್ಣ ಮತ್ತು ಕವಟದ ಹಾಗೆ ಶೋಕ, ಮೋಹ ಇತ್ಯಾದಿ ಸಂಸ್ಕೃತಿಗಳಿಗೆ ವಿರುದ್ಧವಾಗಿ ಪ್ರಕಟ ಹೊಂದುತ್ತೆ. ॥115॥ ಆ ಪರಮೇಶ್ವರನು

ಅಖಿಲ ತ್ರಿಲೋಕ ಚರಾಚರಗಳಲ್ಲಿಯೂ ಆವರಿಸಿರುವವನು, ನಿಶ್ಚಿಂತನು, ನಿಷ್ಕಳಂಕನು, ಪರಾತ್ಪರನು, ಅಶರೀರಿಯು ಮತ್ತು ಸದಾತ್ಮಕನು. ॥116॥ ಈಶ್ವರನು ನಾಮರೂಪಾತ್ಮಕ ವಿಶ್ವವನ್ನು, ಒಳಗಿನಿಂದ ಮತ್ತು ಹೊರಗಿನಿಂದ ಆವರಿಸಿಕೊಂಡಿದ್ದಾನೆ. ನಾನು ಮಾತ್ರ ಸರ್ವವ್ಯಾಪಿಯಾದ ಪರಮಾತ್ಮ, ಯಾವುದೇ ವಿಶೇಷವಾದ ರೂಪವಿಲ್ಲದವನು. ॥117॥ ನಿಜವಾಗಿಯೂ ಅದು ವಸ್ತುತಃ ನಿರಾಕಾರವಾಗಿದ್ದರೂ ಮಾಯೆಯಿಂದಾಗಿ ಸಾಕಾರವಾಗಿ ಕಾಣುತ್ತವೆ. ಒಬ್ಬ ಕಾಮುಕನಿಗೆ ಈ ಸಂಸಾರವು ಅಸ್ತಿತ್ವದಲ್ಲಿರುತ್ತದೆ. ಆದರೆ ಇದೇ ಸಂಸಾರವು ನಿಷ್ಕಾಮ ವ್ಯಕ್ತಿಗೆ ನಿಸ್ಸಾರವಾಗಿ ಕಾಣುತ್ತದೆ. ॥118॥ ಈ ಯತ್ಕಿಂಚಿತ್ ಜಗತ್ತು ಜೀವಿಗಳಿಂದ, ಭೌತಿಕ ವಸ್ತುಗಳಿಂದ, ಚೇತನ ಮತ್ತು ಅಚೇತನಾತ್ಮಕ ವಸ್ತುಗಳನ್ನು ಹೊಂದಿರುವುದರಿಂದ ಅದನ್ನು ಗಣನೆಗೆ ತರಬಾರದು. ಅದ್ವಿತೀಯನಾದ ಈಶ್ವರನಲ್ಲಿ ನಿಶ್ಶಂಕೆಯಿಂದ ನಿರ್ಧಾರ ಮಾಡಬೇಕು. ॥119॥ ಈ ವ್ಯಾವಹಾರಿಕ ಬುದ್ಧಿಯನ್ನು ಅರಿಯುವ ವಿವೇಕ ಇಲ್ಲದಿದ್ದಲ್ಲಿ ಧನ ಮತ್ತು ಹಿರಣ್ಯವನ್ನು ಕೂಡಿಹಾಕುವ ಅಭಿಲಾಷೆಯನ್ನು ಬಿಡು ಇಲ್ಲವೇ ಬಿಡಲು ಪ್ರಯತ್ನಿಸು. ॥120॥ ಇದನ್ನು ಅಭ್ಯಾಸಮಾಡಲು ಅಸಾಧ್ಯವಾದಲ್ಲಿ, ನಂತರ ನೀನು ಕೇವಲ ಕರ್ಮಾಧಿಕಾರಿ ಎಂಬುದನ್ನು ನೆನಪಿಸಿಕೋ. ಶತಾಯುಷಿಯಾದರೂ ಆಮರಣಾಂತ ನಿನ್ನ ಕರ್ಮಗಳನ್ನು ಮಾಡುತ್ತಲೇ ಇರು. ॥121॥ ಅದನ್ನು ವರ್ಣಾಶ್ರಮೋಚಿತವಾಗಿ, ಶಾಸ್ತ್ರಗಳಲ್ಲಿ ಹೇಳಿರುವ ಅನುಷ್ಠಾನಕ್ಕೆ ಅನುಗುಣವಾಗಿ, ಅಗ್ನಿಹೋತ್ರ ಇತ್ಯಾದಿಗಳನ್ನು ನಿತ್ಯವಿಹಿತ ವಿಧಿಯಲ್ಲಿ ಚಿತ್ತವು ಅಕಲಂಕಿತ ಆಗುವವರೆಗೆ ಅಭ್ಯಾಸ ಮಾಡಬೇಕು. ॥122॥ ಇದು ಒಂದು ಚಿತ್ತಶುದ್ಧಿಯ ಮಾರ್ಗ. ಮತ್ತೊಂದು ಸರ್ವಸಂಗಪರಿತ್ಯಾಗದ ಮಾರ್ಗ. ಎರಡನ್ನೂ ಅಭ್ಯಾಸ ಮಾಡದೇ ಇದ್ದಲ್ಲಿ ಕೇವಲ ಲೌಕಿಕ ಜ್ಞಾನ ಒಟ್ಟಾಗಿ ವಿಧಿಲಿಖಿತದಂತೆ ಕಷ್ಟಗಳನ್ನು ಅನುಭವಿಸಿ ಎಂದೆಂದಿಗೂ ಜನನ, ಮರಣಗಳ ಚಕ್ರದಲ್ಲಿ ಬಂಧಿಸಲ್ಪಡುತ್ತಾರೆ. ॥123॥ ಈ ಬ್ರಹ್ಮವಿದ್ಯೆ ಮತ್ತು ಉಪನಿಷತ್ತುಗಳ ಜ್ಞಾನವನ್ನು ಅಜ್ಞಾನಕ್ಕೆ ಅಧಿಕಾರಿಯಾದವರನ್ನು ಬಿಟ್ಟು ಎಲ್ಲರಿಗೂ ಬೋಧಿಸಲಾಗುವುದಿಲ್ಲ. ಏಕತ್ವದ ಅಭೇದ ಜ್ಞಾನವನ್ನು ಅಂತರಂಗದಲ್ಲಿ ಅನುಭವಿಸುವವರೆಗೆ ಉಪನಿಷತ್‌ನ ಜ್ಞಾನ ಕೇವಲ ಶಾಬ್ದಿಕವಾಗಿಯೇ ಇರುತ್ತದೆ. ॥124॥ ಒಂದು ವೇಳೆ ಜಿಜ್ಞಾಸುವು ಒತ್ತಾಯಪೂರ್ವಕವಾಗಿ ಬೇಡಿದರೆ ಅದನ್ನು ನೀಡಬೇಕಾಗುತ್ತದೆ. ಆದ್ದರಿಂದ ಬಾಬಾರವರು ದಾಸಗಣುವನ್ನು, ಮನೆಕೆಲಸದವಳು ನಿವಾರಿಸುತ್ತಾಳೆಂದು ಹೇಳಿ ಹಿಂದಕ್ಕೆ ಕಳಿಸಿದರು. ॥125॥ ಬಾಬಾರವರೇ ಆ ಜ್ಞಾನವನ್ನು ನೀಡಿದ್ದರೆ, ಮುಂದಿನ ಘಟನೆ ನಡೆಯುತ್ತಲೇ ಇರಲಿಲ್ಲ. "ನಾನು ಸರ್ವಾಂತರ್ಯಾಮಿ, ನಾನಿಲ್ಲದೆ ಬೇರೇನೂ ಇಲ್ಲ. ನಾನೂ ಏಕಮೇವಾದ್ವಿತೀಯನು" ಬಾಬಾರವರ ಬಗೆಗಿನ ಈ ಜ್ಞಾನದ ಅರಿವು ಉಂಟಾಗುತ್ತಿರಲಿಲ್ಲ. ॥126॥ "ಆ ಕಾಕಾನ ಮನೆಕೆಲಸದವಳು ಸಹ ನಾನಲ್ಲದೆ ಬೇರೆ ಯಾರೂ ಅಲ್ಲ. ನಾನು ಈ ಸೂಕ್ಷ್ಮವನ್ನು ಸೂಚಿಸಿ, 'ಈಶಾವಾಸ್ಯ'ದ ಅರ್ಥವನ್ನು ವಿವರಿಸಿದ್ದೇನೆ." ॥127॥ ಪರಮೇಶ್ವರನ ಅನುಗ್ರಹವಿಲ್ಲದೆ ಮತ್ತು ಗುರುವಿನ ವಿಶೇಷ ಅನುಗ್ರಹವಿಲ್ಲದೆ ಆತ್ಮಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಈ ರೀತಿ ಸಿದ್ಧರ ಉಪದೇಶ ಅತ್ಯಾವಶ್ಯಕವಾಗಿದೆ. ॥128॥

ಆತ್ಮನನ್ನು ಪ್ರತಿಪಾದಿಸುವ ಯಾವುದೇ ಜ್ಞಾನವನ್ನು ಮಾತ್ರ ಕೇಳಿ ಕಲಿಯಬೇಕು. ನಿಜವಾಗಿಯೂ ಎಲ್ಲ ರೀತಿಯ ಜ್ಞಾನವೂ ನಾನೇ ಮತ್ತು ನಾನಲ್ಲದೆ ಬೇರೆಯಾವುದೂ ಅಸ್ತಿತ್ವದಲ್ಲಿಲ್ಲ. ॥129॥ ಆತ್ಮತತ್ವದ ವಿವರಣೆಯು ಪೂರ್ಣವಾಗಿ ಅರ್ಥವಾದಾಗ ಮತ್ತು ಆತ್ಮಾನುಸಂಧಾನ ಮಾರ್ಗದಲ್ಲಿರುವಾಗ, ದ್ವೈತವು, ಅದ್ವೈತಭಾವದಲ್ಲಿ ನಿಶ್ಚಲವಾಗಿ ನೆಲೆಸಿದಾಗ, ಅಂದರೆ ನಾನು ಪರಮಾತ್ಮನಲ್ಲಿ ಒಂದು ಎಂಬ ಅನುಭವ ಉಂಟಾದಾಗ ಪರಮಾತ್ಮನು ಸುಪ್ರೀತನಾಗುವನು. ॥130॥ ಈ ರೀತಿ ಆತ್ಮನಿರೂಪಣೆಯು ಅರ್ಥವಾದಾಗ ಆತ್ಮಾನುಸಂಧಾನಮಾರ್ಗದಲ್ಲಿ ನಿಶ್ಚಲವಾಗಿ ಮುಂದೆ ಸಾಗಿದಾಗ, ಪರಮಾತ್ಮನಲ್ಲಿ ನಿಶ್ಚಲ ಶ್ರದ್ಧೆ ಉಂಟಾದಾಗ ಪರಮಾತ್ಮನನ್ನು ಸೇರಬಹುದು. ॥131॥ ಮುಂದಿನ ಅಧ್ಯಾಯದಲ್ಲಿ ವಿನಾಯಕ ಠಾಕೂರ್ ಮುಂತಾದವರ ಕಥೆಯನ್ನು ಹೇಳುತ್ತೇನೆ. ಶ್ರೋತೃಗಳು ಆದರಪೂರ್ವಕವಾಗಿ ಆಲಿಸಿದಲ್ಲಿ ಪರಮಾರ್ಥದಮಾರ್ಗಕ್ಕೆ ಕರೆದೊಯ್ಯುತ್ತದೆ. ॥132॥ ಈ ಕಥೆಗಳು ಸಹ ಬಹಳ ಆಹ್ಲಾದಕರವಾಗಿದೆ. ಶ್ರೋತೃಗಳು ಅವುಗಳನ್ನು ಕೇಳಿದಲ್ಲಿ ಮಹಾಪುರುಷರ ಜೀವನದ ಒಂದು ನೋಟವನ್ನು ಪಡೆಯುವ ಅವರ ಆಸೆಯು ತೃಪ್ತಿಹೊಂದುವುದು ಮತ್ತು ಭಕ್ತರು ಅನುಗ್ರಹೀತರಾಗುತ್ತಾರೆ. ॥133॥ ಸೂರ್ಯನ ಉದಯವಾಗುತ್ತಲೇ ಅಂಧಕಾರವು ದೂರವಾಗುವಂತೇ, ಕಥೆಗಳ ರೂಪದ ಅಮೃತ ಪಾನ ಮಾಡಿದಲ್ಲಿ ಮಾಯೆಯು ನಾಶವಾಗುತ್ತದೆ. ॥134॥ ಸಾಯಿಯ ಚಾರಿತ್ರ್ಯವು ಗ್ರಹಿಸಲಸಾಧ್ಯವಾದುದು. ಅವರಲ್ಲದೆ ಬೇರೆ ಯಾರು ಕಥೆಗಳನ್ನು ಹೇಳಲು ಸಾಧ್ಯ? ನಾನು ಕೇವಲ ಒಂದು ನಿಮಿತ್ತಮಾತ್ರ, ಕೇವಲ ಅವರೇ ನನ್ನ ಬಾಯಿಯಿಂದ ಹೇಳುವಂತೆ ಮಾಡುತ್ತಾರೆ. ॥135॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಈಶಾವಾಸ್ಯ ಸಾರದ ಪಾಠ" ಎಂಬ ಇಪ್ಪತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಹನ್ನೊಂದು ಪ್ರಮುಖ ಉಪನಿಷತ್ತುಗಳಲ್ಲಿ ಪ್ರಖ್ಯಾತವಾದುದು ಈಶಾವಾಸ್ಯ ಉಪನಿಷತ್ತು, ಅದರಲ್ಲಿ ಹದಿನೆಂಟು ಮಂತ್ರಗಳಿವೆ. ಅವು ಬಹಳ ಮುಖ್ಯವಾದವು. ಚಿನ್ಮಯಾನಂದರು ಹೇಳುತ್ತಾರೆ: "ಮನುಷ್ಯನನ್ನು ಸುತ್ತುವರೆದಿರುವ ಭೌತಿಕ ಜಗತ್ತಿನಲ್ಲಿ ಅಧ್ಯಾತ್ಮದ ಇರುವು ತೋರುತ್ತದೆ. ಮತ್ತು

ಅದು ವಿದ್ಯಾರ್ಥಿಯ ಆತ್ಮೋದ್ಧಾರವನ್ನು ಉಂಟುಮಾಡುತ್ತದೆ. 'ಗೀತೆ'ಯ ತತ್ತ್ವದ ಮುಖ್ಯಸಾರವೇ 'ಈಶಾವಾಸ್ಯ' ಉಪನಿಷತ್‌ನ ಮೊದಲ ಮಂತ್ರದಲ್ಲಿ ಸೂಚಿಸಲ್ಪಟ್ಟಿದೆ. ಈ ಪ್ರಪಂಚದಲ್ಲಿ ಅನಂತ ಸತ್ವವು ಹಾಸುಹೊಕ್ಕಾಗಿದೆ. ಅನಂತತೆಯನ್ನು ಅನುಭವಿಸಿ ಮತ್ತು ಮತ್ತೊಬ್ಬರ ಸಂಪತ್ತನ್ನು ದೂರ ಸರಿಸು.

2. "ಪಂಚದಶಿ"ಯ ರಚನಕಾರರು. ವೇದಾಂತದ ಒಂದು ಪ್ರಸಿದ್ಧವಾದ ಸಂಸ್ಕೃತ ಗ್ರಂಥ.

3. "ಈಶಾವಾಸ್ಯ ಭಾವಾರ್ಥ ಬೋಧಿನಿ" – ದಾಸಗಣುವಿನ ಪುಸ್ತಕ.

4. ಅವನು ಲಂಡನ್‌ನಲ್ಲಿ ಬಿದ್ದು ಪೆಟ್ಟು ತಿಂದು ಕುಂಟುತ್ತಿದ್ದನು.

5. ಅವನು ಬಹಳದಪ್ಪಗಿದ್ದನು.

6. ದೀಕ್ಷಿತನು ಶ್ರೀಮಂತನು. ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಗಳಿಸಿದ್ದವನು. ಅವನಿಗೆ ವಿನೀತಭಾವ ಮತ್ತು ನಿರಹಂಕಾರ ಭಾವವನ್ನು ಕಲಿಸಲು ಬಾಬಾರವರು ಅವನನ್ನು ಭಿಕ್ಷೆ ಬೇಡಲು ಕಳಿಸಿದರು. ಮತ್ತು ಉದ್ದೇಶಪೂರ್ವಕವಾಗಿ ಅವನನ್ನು ಭಿಕ್ಷು ಎಂದು ಬೇರೆಯವರ ಎದುರಿನಲ್ಲಿ ಕರೆದರು. ಭಿಕ್ಷು ಎಂದರೆ ಭಿಕ್ಷೆ ಬೇಡುವವನು ಎಂದು.

7. ಜ್ಞಾನೇಶ್ವರನು ಒಂದು ಕೋಣದ ಬಾಯಿಂದ ವೇದಪಠಣ ಮಾಡಿಸಿದನು.

8. ಮೋರೇಶ್ವರ ವಿಶ್ವನಾಥ ಪ್ರಧಾನ ಒಬ್ಬ ಪ್ರಖ್ಯಾತ ನ್ಯಾಯವಾದಿ ಮತ್ತು ಬೊಂಬಾಯಿಯ ವಿಧಾನ ಪರಿಷತ್ತಿನ ಸದಸ್ಯ.

9. ಇದು ಈಶಾವಾಸ್ಯ ಉಪನಿಷತ್ತಿನ ಪ್ರಮುಖ ತತ್ತ್ವಕ್ಕೆ ನಿದರ್ಶನವಾಗಿದೆ. ಭಗವಂತ ಸರ್ವಾಂತರ್ಯಾಮಿ ಎಂಬ ತತ್ತ್ವ

10. ಭಗವಾನ್ ಶ್ರೀಕೃಷ್ಣ.



## ಅಧ್ಯಾಯ - 21

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



# "ಅನುಗ್ರಹ ವರ್ಷ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದ ಕೊನೆಯಲ್ಲಿ, ಠಾಕೂರ ಮತ್ತಿತರರು ಯಾವ ರೀತಿ ಮಹಾತ್ಮನ ದರ್ಶನ ಪಡೆದರು ಎಂಬುದರ ಬಗ್ಗೆ ವಿವರಿಸಿದೆವು. ಈಗ ಗಮನವಿಟ್ಟು ಆ ಕಥೆಯನ್ನು ಕೇಳಿರಿ. ॥1॥ ಶ್ರೋತೃಗಳು ಅದನ್ನು ಆಲಿಸಿ ಪರಿಣಾಮ ಅನುಭವಿಸದೇ ಇದ್ದಲ್ಲಿ ಮತ್ತು ಶ್ರೋತೃಗಳಿಗೆ ಅವುಗಳನ್ನು ಆಲಿಸಿ ಭಾವೋದ್ವೇಗದಿಂದ ಮೈನವಿರೇಳುವ ಚಿಹ್ನೆಯು ಉಂಟಾಗದಿದ್ದಲ್ಲಿ ವಚನಕಾರನ ಮಾತುಗಳು ವ್ಯರ್ಥವೇ ಸರಿ. ॥2॥ ಶ್ರೋತೃಗಳು ಗದ್ಗದ ಕಂಠದಿಂದ ತುಂಬಿ ಆನಂದೋತ್ಸಾಹವನ್ನು ಅನುಭವಿಸದಿದ್ದರೆ, ಪ್ರೇಮಾನಂದ ಭಾಷ್ಪಗಳಿಂದ ಅವರ ಕಣ್ಣುಗಳು ತುಂಬಿ ಬರದಿದ್ದರೆ, ಕಥನವು ನಿಷ್ಪ್ರಯೋಜಕ. ॥3॥ ಬಾಬಾರವರ ವಾಣಿಯು ಮನೋಹರವಾಗಿದ್ದಿತು. ಉಪದೇಶದಲ್ಲಿ ಅಲೌಕಿಕವಾದ ರೀತಿ ಇತ್ತು, ಅವರ ವಾದ ಸರಣಿಯು ವಿಶಿಷ್ಟವಾಗಿತ್ತು, ನಾನು ನನ್ನ ಮಸ್ತಕವನ್ನು ಅವರ ಚರಣಗಳಲ್ಲಿ ಇಡುತ್ತೇನೆ. ಅವರು ಪ್ರತಿ ಹೆಜ್ಜೆಯಲ್ಲೂ ಒಂದು ಹೊಸತನ್ನು ಪ್ರಕಟಿಸುತ್ತಾರೆ. ॥4॥ ಅದೃಷ್ಟವು ಒಲಿಯುವ ತನಕ ಸಾಧು ಸಂತರ ಭೇಟಿ ಮಾಡಲು ಸಾಧ್ಯವಿಲ್ಲ. ಅಂತಹ ವ್ಯಕ್ತಿಯು ಆತ್ಮೀಯನಾದಾಗ್ಯೂ, ಪಾಪಿಯು ಅವನನ್ನು ಗುರುತಿಸಲಾರನು. ॥5॥ ಈ ಸಿದ್ಧಾಂತವನ್ನು ಸಾಧಿಸುವ ಕಾರ್ಯಕ್ಕೆ ಸಾಕ್ಷಿಯನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಏಕೆಂದರೆ ನಾನು ಸ್ವತಃ ನನ್ನ

ಅನುಭವವನ್ನೇ ಹೇಳುತ್ತೇನೆ. ॥6॥ ಬಾಂದ್ರಾದಲ್ಲಿ ಪೀರ್ ಮೌಲಾನಾ ಎಂಬ ಒಬ್ಬ ಪ್ರಖ್ಯಾತ ಸಂತನಿದ್ದನು. ಹಿಂದುಗಳು, ಪಾರ್ಸಿಗಳು ಮತ್ತು ಇತರ ಧರ್ಮಗಳ ಪಂಡಿತರು ಆ ಮಹಾತ್ಮನ ದರ್ಶನ ಪಡೆಯಲು ಬರುತ್ತಿದ್ದರು. ॥7॥ ನಾನು ಆ ಪ್ರಾಂತದಲ್ಲಿ ನ್ಯಾಯಾಧೀಶನಾಗಿದ್ದೆ, ಇನುಸ್ ಎಂಬ ಹೆಸರಿನ ಅವನ ಮುಜಾವರ್ ದರ್ಶನಕ್ಕೆ ಬರಲು ಒಂದೇ ಸಮನೆ ಒತ್ತಾಯಿಸುತ್ತಿದ್ದನು. ॥8॥ 'ಸಾವಿರಾರು ಜನರು ಅಲ್ಲಿಗೆ ಬರುತ್ತಾರೆ. ಒತ್ತಾಯಕ್ಕೆ ಮಣಿದು ನಾನೇಕೆ ಅಲ್ಲಿಗೆ ಹೋಗಬೇಕು ಮತ್ತು ನನ್ನ ಹೆಸರು ಕೆಡಿಸಿಕೊಳ್ಳಬೇಕು.?' ॥9॥ ಈ ರೀತಿಯ ಯೋಚನೆಗಳು ನನಗೆ ಬಂದವು. ನಾನು ದರ್ಶನಕ್ಕೆ ಹೋಗಲಿಲ್ಲ. ನಾನು ನನ್ನದೇ ಆದ ನೆರಳಿಗೆ ಭಯಪಡುತ್ತಿರುವಂತಿತ್ತು. ಹೇಗೋ ದುರಾದೃಷ್ಟವು ಬೇರೆ ಅಡ್ಡಿ ಬಂದಿತು. ॥10॥ ಅನೇಕ ವರ್ಷಗಳು ಕಳೆದವು. ಆದುದರಿಂದ ಅಲ್ಲಿಂದ ನನ್ನನ್ನು ವರ್ಗ ಮಾಡಿದರು. ಅನಂತರ ಅದೃಷ್ಟದ ಘಳಿಗೆ ಬಂದಾಗ ನನ್ನ ಕಾರ್ಯವ್ಯಾಪ್ತಿಯಿದ್ದ ಶಿರಡಿಗೆ ಪದೇ ಪದೇ ಹೋಗಬೇಕಾಯಿತು. ಕೆಲವು ಸಲ ಅಲ್ಲಿಯೇ ಇರುವಂತೆಯೂ ಆಯಿತು. ॥11॥ ತಾತ್ಪರ್ಯ ಹೇಳಬೇಕೆಂದರೆ ಅಭಾಗ್ಯರಿಗೆ ಸಂತ ಸಮಾಗಮ ಸಾಧ್ಯವಿಲ್ಲ. ಅತಿ ದುರ್ಲಭವಾದ ಸಮಾಗಮಗಳು ಈಶ್ವರ ಕೃಪೆಯಿಂದ ಮಾತ್ರ ಆಗಲು ಸಾಧ್ಯ॥12॥ ಈಗ ಇದರ ಸಂತೋಷಕರ ಕಥೆಯನ್ನು ಆದರದಿಂದ ಕೇಳಿರಿ. ಅನಾದಿಕಾಲದಿಂದಲೂ ಈ ರೀತಿಯ ಸಂತರ ನಿಗೂಢವಾದ ವ್ಯವಸ್ಥೆಯು ಏರ್ಪಾಟಾಗುತ್ತದೆ. ಅವರು ತಮ್ಮ ಕಾರ್ಯಸಾಧನೆ ಮಾಡಿಕೊಳ್ಳುತ್ತಾರೆ. ಆದರೆ ಪ್ರಪಂಚಕ್ಕೆ ಅದೇನೂ ತಿಳಿಯುವುದಿಲ್ಲ. ॥13॥ ಕಾಲ ಕ್ರಮಿಸಿದಂತೆಲ್ಲ ಸಂತರು ತಮಗೆ ಇಷ್ಟವಾದ ಜಾಗವನ್ನು ಆರಿಸಿಕೊಳ್ಳುತ್ತಾರೆ. ಆದರೆ, ನಿಜವಾಗಿಯೂ ಅವರು ಒಬ್ಬರಿಗಿಂತ ಮತ್ತೊಬ್ಬರು ಬೇರೆಯಲ್ಲ. ॥14॥ ಆ ಜಾಗ, ಕಾಲ ಮತ್ತು ವಸ್ತುಗಳು ವಿಭಿನ್ನವಾಗಿದ್ದರೂ ಸಹ ಒಬ್ಬ ಸಂತರು ಇತರ ಸಂತರ ವ್ಯಕ್ತಿತ್ವದ ಸಾರವನ್ನು ಅರಿತಿರುತ್ತಾರೆ. ಅಂತರಂಗದಲ್ಲಿ ಅವೆಲ್ಲರೂ ಒಟ್ಟಾಗಿಯೇ ಇರುತ್ತಾರೆ. ಏಕೆಂದರೆ ಅವರೆಲ್ಲರೂ ಒಂದೇ. ॥15॥ ಯಾವ ರೀತಿ ಸಾರ್ವಭೌಮನ ರಾಜ್ಯದ ಸರಹದ್ದುಗಳು ಬೇರೆ ಬೇರೆ ಜಾಗಗಳಿದ್ದು ಅವುಗಳನ್ನು ನೋಡಿಕೊಳ್ಳಲು ಬೇರೆ ಬೇರೆ ಅಧಿಕಾರಿಗಳು ಅಂಥಾ ಜಾಗಗಳ ಜನಸಮುದಾಯದ ಸಂಪನ್ನತೆಯನ್ನು ನೋಡಿಕೊಳ್ಳಲು ನಿಯಮಿತರಾಗಿರುತ್ತಾರೋ, ॥17॥ ಅದೇ ರೀತಿ ಸ್ವಾನಂದದ ಸಾಮ್ರಾಟನಾಗಿರುವವನು ಬೇರೆ ಬೇರೆ ಜಾಗಗಳಲ್ಲಿ ಪ್ರಕಟಹೊಂದುತ್ತಾನೆ ಮತ್ತು ತನ್ನ ರಾಜ್ಯದ ಅಪ್ರಕಟಿತ ನಿಯಮಗಳಿಗೆ ಸೂತ್ರಧಾರನಾಗಿ ನಡೆಸುತ್ತಾನೆ. ॥17॥ ಒಮ್ಮೆ ಒಬ್ಬ ಆಂಗ್ಲ ವಿದ್ಯಾವಿಭೂಷಿತನು ಬಿ.ಎ. (ಬ್ಯಾಚುಲರ್ ಆಫ್ ಆರ್ಟ್ಸ್) ಪದವೀಧರನು, ಹಂತಹಂತವಾಗಿ ಮೇಲೇರಿ ಒಬ್ಬ ದೊಡ್ಡ ಅಧಿಕಾರಿಯಾದನು. ॥18॥ ಅನಂತರ, ಅವನು ಮಾಮಲೇದಾರನಾದನು ಮತ್ತು ಮುಂದಕ್ಕೆ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಗೆ ಏರಿದನು. ಅವನ ಸುದೈವದಿಂದ ಸಾಯಿಬಾಬಾರವರ ಸಂಗ ಪ್ರಾಪ್ತಿಯಾಯಿತು. ॥19॥ ಹೊರನೋಟಕ್ಕೆ ಈ ಹುದ್ದೆಗಳು ಬಹಳ ಆಕರ್ಷಣೀಯವಾಗಿರುತ್ತವೆ. 'ದೂರದ ಬೆಟ್ಟ ನುಣ್ಣಗೆ' ತರಹ. ಆದರೆ ನೀವು ಅದರ ಹತ್ತಿರ ಹೋದಲ್ಲಿ ಅವು ಮರಗಳಿಂದ ಆವೃತವಾಗಿ ನವೆ

ಉಂಟುಮಾಡುತ್ತವೆ. ಹಾಗೆಯೇ ಈ ಹುದ್ದೆಗಳು ಹೆಚ್ಚು ಅಧಿಕಾರವನ್ನೂ ಹೊಂದಿರುತ್ತವೆ. ॥20॥ ಹಿಂದಿನ ಆ ಸಂತೋಷಕರ ದಿನಗಳಲ್ಲಿ ಜನರು ಅಂತಹ ಅಧಿಕಾರಕ್ಕೆ ಬಹಳವಾಗಿ ಹಂಬಲಿಸುತ್ತಿದ್ದರು. ಸಾರ್ವಜನಿಕರೂ ಸಹ ಆ ಅಧಿಕಾರಿಗಳನ್ನು ಗೌರವಿಸುತ್ತಿದ್ದರು. ಹೀಗೆ ಅವರು ಪರಸ್ಪರ ಆನಂದತುಲಿತರಾಗಿದ್ದರು. ॥21॥ ಈಗ ನಾವು ವರ್ತಮಾನದ ಸ್ಥಿತಿಯ ಬಗ್ಗೆ ಮಾತನಾಡೋಣ. ಸರ್ಕಾರಿ ನೌಕರಿಯಲ್ಲಿರುವ ಸುಖದ ದಿನಗಳು ಹೋಗಿಬಿಟ್ಟಿವೆ. ಈಗ ಜವಾಬ್ದಾರಿಗಳು ಹೆಚ್ಚಾಗಿವೆ ಮತ್ತು ಸಂಭಾವನೆಯೂ ಸಾಕಾಗುವುದಿಲ್ಲ. ॥22॥ ಆ ಹಿಂದಿನ ಕಾಲದಲ್ಲಿ ಮಾಮಲೇದಾರನನ್ನು ಮತ್ತು ಕಲೆಕ್ಟರನನ್ನೂ ಗೌರವಿಸುತ್ತಿದ್ದರು. ಆದರೆ ಆ ವೈಭವವು ಈಗ ಕಾಣಸಿಗುವುದಿಲ್ಲ. ಆತನು ಕಷ್ಟಪಟ್ಟು ಕೆಲಸ ಮಾಡಿದರೂ ಸಹ ಬೆಲೆ ಇಲ್ಲ. ॥23॥ ಅದು ಹಾಗಿರಲಿ. ಅಷ್ಟೇಕೆ, ವಿದ್ಯಾಭ್ಯಾಸಕ್ಕಾಗಿ ಯಥೇಚ್ಛವಾಗಿ ಹಣ ಖರ್ಚುಮಾಡಿ, ಬಹಳ ಕಷ್ಟಪಟ್ಟು ಓದಿದ ನಂತರ ಅವನಿಗೆ ಈ ಉನ್ನತ ಹುದ್ದೆಯನ್ನು ಪಡೆಯಲು ಸಾಧ್ಯವಾಗಿತ್ತು. ॥24॥ ಮೊದಲಿಗೆ, ಬಿ.ಎ. ಪದವಿಯನ್ನು ಪಾಸು ಮಾಡಬೇಕು. ಅನಂತರ ಒಬ್ಬ ಕಾರಕೂನನಾಗಿ ಸರ್ಕಾರಿ ಕಛೇರಿಯಲ್ಲಿ ಕೆಲಸ ಮಾಡಿ, ತಿಂಗಳಿಗೆ ಮೂವತ್ತು ರೂಪಾಯಿಗಳ ಸಂಬಳ ಪಡೆಯಬೇಕು. ಈ ರೀತಿ ಸ್ವಲ್ಪ ಕಾಲದವರೆಗೆ ಕಳೆಯಬೇಕು. ॥25॥ ಆ ಕಾಲಗಳಲ್ಲಿ ಅವನು ಘಟ್ಟ ಪ್ರದೇಶಗಳಲ್ಲಿಗೆ ಹೋಗಿ ಜಮೀನು ಅಳತೆ ಮಾಡುವ ಕೆಲಸ ಕಲಿಯಬೇಕು ಮತ್ತು ಊರುಗಳ ಮಧ್ಯೆ ವಾಸಮಾಡುತ್ತ ಜಮೀನನ್ನು ಅಳತೆ ಮಾಡುತ್ತ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕು. ॥26॥ ಅನಂತರ ಯಾರಾದರೂ ಉನ್ನತ ಅಧಿಕಾರಿಯು ಸೇವೆಯಲ್ಲಿದ್ದಾಗಲೇ ಮರಣಹೊಂದಿ ಅವನ ಸ್ಥಳ ಖಾಲಿಯಾದರೆ ಮಾತ್ರ ಅವನಿಗೆ ಆ ಜಾಗ ಸಿಗುವ ಸಾಧ್ಯತೆ ಇತ್ತು27॥ ಈ ಒಂದು ಉದ್ದವಾದ ಗಮನ ಸೆಳೆಯದೇ ಇರುವ ನಿರೂಪಣೆ ಸಾಕು. ನಾನೇಕೆ ಅದನ್ನು ಅನವಶ್ಯಕವಾಗಿ ಉದ್ದವಾಗಿ ಎಳೆಯಲಿ? ಅಂತಹ ಮನುಷ್ಯನು ಸಾಯಿಯನ್ನು ಹೇಗೆ ಭೇಟಿಮಾಡಿದನು ಎಂಬುದನ್ನು ಕೇಳಿರಿ. ॥28॥ ಬೆಳಗಾಂನ ಹತ್ತಿರ ಒಂದು ಗ್ರಾಮ, ವಡಗಾವ್. ಆ ಹಳ್ಳಿಯಲ್ಲಿ ಭೂಮಾಪಣದಾರರ ಒಂದು ಗುಂಪು ಮೊಕ್ಕಾಂ ಹೂಡಿತ್ತು. ॥29॥ ಆ ಪಟ್ಟಣದಲ್ಲಿ ಒಬ್ಬ ಸತ್ಪುರುಷನಿದ್ದನು. ಅವರುಗಳು ಅವನ ದರ್ಶನ ತೆಗೆದುಕೊಳ್ಳಲು ಹೋದರು. ತಮ್ಮ ಶಿರಗಳನ್ನು ಅವನ ಚರಣಗಳಲ್ಲಿ ಬಾಗಿಸಿ ಅವರ ಆಶೀರ್ವಚನದ ಪ್ರಸಾದ ಪಡೆದರು. ॥30॥ ಆ ಸತ್ಪುರುಷನು ನಿಶ್ಚಲದಾಸನು ಬರೆದ 'ವಿಚಾರಸಾಗರ' ಎಂಬ ಗ್ರಂಥವನ್ನು ಹಿಡಿದುಕೊಂಡು ಅವರಿಗಾಗಿ ಓದುತ್ತಿದ್ದನು. ॥31॥ ಸ್ವಲ್ಪ ಸಮಯದ ನಂತರ ಆ ಜನರು ಹೊರಡುವ ವೇಳೆ ಬಂದಾಗ ಆ ಸಾಧುವು ವಿಶೇಷವಾಗಿ ಆ ಗೃಹಸ್ಥನ ಹತ್ತಿರ ಬಹಳ ಸಮಯದವರೆಗೆ ಸಂತೋಷದಿಂದ ಮಾತನಾಡಿದನು. ಅದನ್ನು ಕೇಳಿರಿ. ॥32॥ "ನೀನು ಈಗ ಹೋಗಬಹುದು. ಆದರೆ ಖಂಡಿತವಾಗಿಯೂ ಈ ಗ್ರಂಥವನ್ನು ಓದು, ನಿನ್ನ ಮನೋರಥಗಳೆಲ್ಲವೂ ಪೂರ್ಣವಾಗುತ್ತವೆ. ಇದನ್ನು ಲಕ್ಷ್ಯದಲ್ಲಿಡು. ॥33॥ "ಅನಂತರ, ನಿನ್ನ ಕೆಲಸದ ವ್ಯಾಪ್ತಿಯಲ್ಲಿ ಯಾವಾಗ ಉತ್ತರ ದಿಕ್ಕಿಗೆ ಹೋಗುವೆಯೋ ಆಗ ನಿನ್ನ ಮಹಾಭಾಗ್ಯದ ಫಲವಾಗಿ ಮಾರ್ಗದಲ್ಲಿ

ಒಬ್ಬ ಮಹಾಪುರುಷನ ದರ್ಶನವಾಗುತ್ತದೆ. ॥34॥ "ಅವನು ನಿನಗೆ ಮಾರ್ಗ ತೋರಿಸುತ್ತಾನೆ, ಮುಂದುವರೆದು ಅವನು ನಿನಗೆ ಮನಃಶಾಂತಿಯನ್ನು ದಯಪಾಲಿಸುತ್ತಾನೆ. ಅವನು ನಿನಗೆ ಉಪದೇಶ ನೀಡಿ ಆತ್ಮ ಬೋಧೆಯನ್ನು ದಯಪಾಲಿಸುತ್ತಾನೆ." ॥35॥ ಅಲ್ಲಿಯ ಕಾರ್ಯ ಮುಗಿಯಿತು. ಅವನನ್ನು ಜುನ್ನಾರಿಗೆ ವರ್ಗಾವಣೆ ಮಾಡಲಾಯಿತು. ಜುನ್ನಾರಿಗೆ ಹೋಗುವ ದಾರಿಯಲ್ಲಿ ಅವನು ನಾನೇಘಾಟ್‌ನ್ನು ದಾಟಬೇಕಾಗಿತ್ತು. ಅದೊಂದು ದೊಡ್ಡ ಸಂಕಟದ ಅಡೆತಡೆಯೇ ಆಗಿತ್ತು. ॥36॥ ಆ ಮಾರ್ಗವು ಅತಿ ವಿಕಟವಾಗಿತ್ತು ಮತ್ತು ಒಂದು ಕೋಣದ ಮೇಲೆ ಸವಾರಿ ಮಾಡಿಯೇ ದಾಟಬೇಕಾಗಿತ್ತು. ಅದೊಂದೇ ಸಾಗಣೆಯ ಮಾರ್ಗವಾಗಿತ್ತು. ಆದ್ದರಿಂದ ಅವನ ಸವಾರಿಗೆಂದು ಒಂದು ಕೋಣವನ್ನು ತರಿಸಲಾಯಿತು. ॥37॥ ಆ ನಂತರ ಆ ಅಧಿಕಾರಿಯು ಒಬ್ಬ ಹಿರಿಯ ಅಧಿಕಾರಿಯಾಗಬಹುದು, ಆಗ ಕುದುರೆ ಮತ್ತು ಗಾಡಿಗಳು ಸಿಗಬಹುದು. ಆದರೆ ವರ್ತಮಾನದಲ್ಲಿ ಅವನು ಕೋಣದಿಂದ ತೃಪ್ತಿ ಪಡೆಯಬೇಕಾಯಿತು. ಅದಲ್ಲದೆ ಬೇರೆ ವಿಧಿ ಇಲ್ಲ. ॥38॥ ಘಟ್ಟವನ್ನು ನಡೆದುಕೊಂಡು ಹತ್ತಲು ಅಶಕ್ಯವಾಗಿತ್ತು ಬೇರೆಯಾವುದೇ ಅನುಕೂಲಕರವಾದ ಸಾರಿಗೆ ವ್ಯವಸ್ಥೆ ಇರಲಿಲ್ಲ. ಅದೇ 'ನಾನೆ' ಘಟ್ಟದ ವಿಶೇಷತೆ. ಈ ರೀತಿ ವಾಹನವು ನಿಜವಾಗಿಯೂ ಅಪೂರ್ವವಾದುದು. ॥40॥ ಆದ್ದರಿಂದ ಅವನು ಒಂದು ವಿಚಾರ ಮಾಡಿದನು. ಒಂದು ಎಮ್ಮೆಯನ್ನು ಸಿದ್ಧಪಡಿಸಲಾಯಿತು. ಅದನ್ನು ಹತ್ತಲು ಜೀನನ್ನು ಸಿದ್ಧಪಡಿಸಲಾಯಿತು. ಬಹಳ ಕಷ್ಟದಿಂದ ಹತ್ತಿ ಸವಾರಿ ಹೊರಟನು. ॥41॥ ಅವನು ಅದರ ಮೇಲೆ ಹತ್ತಿದರೂ ಸಹ, ಅಲ್ಲಿ ಒಂದು ಕಡಿದಾದ ಮಾರ್ಗವಿತ್ತು, ವಾಹನವಾದರೋ ಎಲ್ಲಕ್ಕಿಂತ ಬಹು ಅಪೂರ್ವವಾದದ್ದು, ಒಂದು ಎಮ್ಮೆ. ಅವನು ಅತ್ತ ಇತ್ತ ಓಲಾಡುತ್ತ, ತೂಗಾಡುತ್ತ ಹಣ್ಣಾದನು, ಬೆನ್ನು ನೋವು ಶುರುವಾಯಿತು. ॥41॥ ಪ್ರಯಾಣ ಮುಗಿಯಿತು. ಜುನ್ನಾರಿನ ಕಾರ್ಯಕ್ರಮಗಳು ಮುಗಿದವು. ಅವನಿಗೆ ವರ್ಗಾವಣೆಯ ಆದೇಶ ದೊರಕಿತು. ಅವನು ಅಲ್ಲಿಂದ ಹೊರಟನು. ॥42॥ ಅವನಿಗೆ ಕಲ್ಯಾಣಕ್ಕೆ ವರ್ಗವಾಯಿತು. ಅಲ್ಲಿ ಅವನಿಗೆ ಚಂದೋರಕರ್‌ನ ಪರಿಚಯ ಉಂಟಾಯಿತು. ಅಲ್ಲಿ ಸಾಯಿನಾಥರ ಕೀರ್ತಿ ತಿಳಿಯಿತು. ಅವರ ದರ್ಶನದ ಇಚ್ಛೆ ಉಂಟಾಯಿತು. ॥43॥ ಆ ಅವಕಾಶ ಮಾರನೆಯ ದಿನವೇ ಬಂದಿತು. ಏಕೆಂದರೆ ಚಂದೋರಕರ್ ಶಿರಡಿಗೆ ಪ್ರಯಾಣ ಮಾಡಲು ತಯಾರಿ ನಡೆಸಿದ್ದನು. ಅವನು ಹೇಳಿದನು. 'ಶಿರಡಿ ಯಾತ್ರೆಗಾಗಿ ನನ್ನ ಜೊತೆಗೆ ಬಾ. ॥44॥ "ಬಾಬಾರವರ ದರ್ಶನ ತೆಗೆದುಕೊಳ್ಳೋಣ. ಇಬ್ಬರೂ ಅವರಿಗೆ ನಮಿಸೋಣ. ಅಲ್ಲಿಯೇ ಒಂದೆರಡು ದಿನಗಳು ಇದ್ದು ಕಲ್ಯಾಣಕ್ಕೆ ಹಿಂತಿರುಗಿಬರೋಣ." ॥45॥ ಆದರೆ ಅದೇ ದಿನದಂದು ಥಾಣೆಯಲ್ಲಿನ ಸಿವಿಲ್ ಕೋರ್ಟಿನಲ್ಲಿ ಒಂದು ಮೊಕದ್ದಮೆನ್ನು ನಿಗದಿಪಡಿಸಲಾಗಿತ್ತು. ಆದ್ದರಿಂದ ಅವನ ಸಂಗಡ ಹೋಗುವ ಯಾತ್ರೆಯನ್ನು ತ್ಯಜಿಸಬೇಕಾಯಿತು. ॥46॥ ನಾನಾ ಸಾಹೇಬನು ಆಗ್ರಹಪಡಿಸುತ್ತಾ ಹೇಳಿದನು: "ನಡೆ, ನನ್ನ ಜೊತೆ. ಬಾಬಾರವರು ಸಮರ್ಥರು. ಅವರು ದರ್ಶನದ ನಿನ್ನ ಆಸೆಯನ್ನು ಪೂರೈಸುವರು. ಈ ಮೊಕದ್ದಮೆಯು ಒಂದು ಕಿಂಚಿತ್ ಕೆಲಸವಷ್ಟೆ."

॥47॥ ಆದರೆ, ಅವನನ್ನು ಹೇಗೆ ಒಪ್ಪಿಸುವುದು? ಅವನಿಗೆ ವಿಚಾರಣೆಯ ತಾರೀಖು ತಪ್ಪಿಹೋದೀತೆಂಬ ಭಯವಿತ್ತು. ಅಪ್ರರ್ಥವಾದ ಭೇಟಿಗಳನ್ನು ಹೇಗೆ ತಪ್ಪಿಸುವುದು? ಅವುಗಳನ್ನು ಸ್ವರ್ಗವು ನಿಗದಿಪಡಿಸಿರುತ್ತವೆ. ॥48॥ ನಾನಾ ಸಾಹೇಬ ಚಂದೋರಕರ್‌ನು ಇತರ ಪೂರ್ವದ ಅನುಭವಗಳನ್ನು ತಿಳಿಸಿದನು. ಅವರಿಗಿದ್ದ ದರ್ಶನದ ಇಚ್ಛೆಗಳು ಯಾವಾಗಲೂ ಪೂರೈಸುತ್ತಿದ್ದವು ಮತ್ತು ಅದಕ್ಕಿದ್ದ ವಿಘ್ನಗಳೆಲ್ಲವೂ ದೂರವಾಗುತ್ತಿದ್ದವು. ॥49॥ ಆದರೆ, ಅವನು ತನ್ನನ್ನು ನಂಬಲು ಸಿದ್ಧನಿರಲಿಲ್ಲ. ಅವನಿಗೆ ತನ್ನ ಸ್ವಭಾವದಲ್ಲೇ ವಿಶ್ವಾಸವಿರಲಿಲ್ಲ. ಅವನು ಹೇಳಿದನು, "ಮೊದಲು ನನ್ನ ಮನಸ್ಸಿನ ಚಿಂತೆಯು ದೂರವಾಗಲಿ. ಮೊದಲು ಬೇಗನೇ ಮೊಕದ್ದಮೆಯು ಮುಗಿದುಹೋಗಲಿ." ॥50॥ ಅವನು ಅನಂತರ ಥಾಣೆಹೊರಟನು. ಚಂದೋರಕರನು ಶಿರಡಿಗೆ ಹೊರಟನು. ಅವನು ದರ್ಶನದಿಂದ ಹಿಂತಿರುಗುವ ವೇಳೆಗೆ ಒಂದು ವಿಚಿತ್ರ ಘಟನೆ ನಡೆದಿತ್ತು. ॥51॥ ಅವನು ನಿಗದಿತ ಸಮಯದಲ್ಲಿ ಅಲ್ಲಿ ಹಾಜರಿದ್ದರೂ ಸಹ ವಿಚಾರಣೆಯು ಮುಂದೂಡಲ್ಪಟ್ಟಿತು. ಅವನು ಚಂದೋರಕರ್ ಜೊತೆ ಹೋಗುವುದೂ ತಪ್ಪಿಹೋಗಿತ್ತು, ಮತ್ತು ಈ ರೀತಿ ಅವನು ಪಶ್ಚಾತ್ತಾಪದಿಂದ ಪರಿತಪಿಸಬೇಕಾಯಿತು. ॥52॥ ಅವನು ಅವರಲ್ಲಿ (ಸಾಯಿ) ವಿಶ್ವಾಸವಿಡಬೇಕಿತ್ತೆಂದು ಇಚ್ಛಿಸಿದನು. ಚಂದೋರಕರ್‌ನ ಜೊತೆಯಲ್ಲಿ ಹೋಗಿದ್ದರೆ ಶಿರಡಿಯಲ್ಲಿ ಶಾಂತ ಮನಸ್ಸಿನಿಂದ ದರ್ಶನವಾದರೂ ಆಗುತ್ತಿತ್ತು. ॥53॥ ಮೊಕದ್ದಮೆಯು ಎಲ್ಲಿಯವರೆಗೆ ನಿಂತಿತ್ತೋ ಅಲ್ಲೇ ನಿಂತು ಹೋಯಿತು. ಅವನಿಗೆ ಸಾಧು ಸಮಾಗಮದ ಅವಕಾಶವೂ ತಪ್ಪಿಹೋಯಿತು. ಆ ಒಂದು ಕ್ಷಣದಲ್ಲಿ ಎದ್ದು ಶಿರಡಿಗೆ ಹೋಗಲು ನಿರ್ಧರಿಸಿದನು. ॥54॥ ಅವನು ಯೋಚಿಸಿದನು. 'ಬಹುಶಃ ಅವನು ಶಿರಡಿಯನ್ನು ತಲಪಿದಾಗ, ಅದೃಷ್ಟವಿದ್ದರೆ ನಾನಾರನ್ನು ಭೇಟಿಮಾಡಲು ಸಾಧ್ಯವಾಗಬಹುದು ಮತ್ತು ಸಾಯಿನಾಥರ ಹತ್ತಿರ ವೈಯಕ್ತಿಕವಾಗಿ ಕರೆದುಕೊಂಡು ಹೋಗಬಹುದು. ಅನಂತರ ಆಗ ಬಹಳ ಆನಂದವಾಗುತ್ತದೆ.' ॥55॥ 'ನನಗೆ ಶಿರಡಿಯಲ್ಲಿ ಯಾರ ಪರಿಚಯವೂ ಇಲ್ಲ. ಅಲ್ಲಿ ನಾನು ಸರ್ವಥಾ ಅಪರಿಚಿತನು. ಅಲ್ಲಿ ನಾನಾರನ್ನು ಭೇಟಿಯಾದರೆ ಒಳ್ಳೆಯದು. ಅದೊಂದು ಅಪರೂಪದ ಸಾಧ್ಯತೆಯಷ್ಟೆ.' ॥56॥ ಈ ರೀತಿ ವಿಚಾರ ಮಾಡುತ್ತ ಅವನು ರೈಲುಗಾಡಿಯನ್ನು ಹತ್ತಿ ಮಾರನೆಯ ದಿನ ಬೆಳಗ್ಗೆ ಶಿರಡಿ ತಲಪಿದನು. ಆದರೆ ನಾನಾ ಅಲ್ಲಿರಲಿಲ್ಲ. ॥57॥ ಅವನು ಪ್ರಯಾಣಕ್ಕೆ ಹೊರಟ ದಿನವೇ ನಾನಾ ಶಿರಡಿಯನ್ನು ಬಿಟ್ಟಿದ್ದನು. ಅದರಿಂದಾಗಿ ಅವನು ಬಹಳ ನಿರಾಶನಾದನು. ॥58॥ ಅದು ಹಾಗಿರಲಿ. ಅವನು ಅಲ್ಲಿ ಮತ್ತೊಬ್ಬ ಸ್ನೇಹಿತನನ್ನು ಭೇಟಿಯಾದನು. ಅವನು ಒಳ್ಳೆಯ ವ್ಯಕ್ತಿ. ಸಾಯಿಯ ದರ್ಶನಕ್ಕಾಗಿ ಕರೆದುಕೊಂಡು ಹೋದನು ಮತ್ತು ಅವನ ಆಸೆಯನ್ನು ಪೂರೈಸಿದನು. ॥59॥ ಅವನು ಸಾಯಿಯ ಮೇಲೆ ದೃಷ್ಟಿ ಇಟ್ಟ ಕ್ಷಣವೇ ಅವನ ಚಿತ್ತವು ಭಕ್ತಿಯಿಂದ ಉಕ್ಕಿತು. ಅವನು ಸಾಷ್ಟಾಂಗ ಪ್ರಣಾಮ ಮಾಡಿದನು. ಅವನ ದೇಹವು ರೋಮಾಂಚನದಿಂದ ಪುಳಕಿತವಾಯಿತು. ಪ್ರೇಮಾಶ್ರುಗಳು ಸತತವಾಗಿ ಕಣ್ಣುಗಳಿಂದ ಹರಿದವು. ॥60॥ ಅವನು ಅಲ್ಲಿ ನಿಂತಿರುವಾಗ, ಬಾಬಾರವರು ಅವನಿಗೆ ಏನು ಹೇಳಿದರೆಂದು ಎಚ್ಚರಿಕೆಯಿಂದ ಕೇಳಿರಿ.

ಅರ್ಥವತ್ತಾದ ಮುಗುಳುನಗೆಯೊಡನೆ ಹೇಳಿದರು. ಏಕೆಂದರೆ ಅವರು ಸರ್ವಾಂತರ್ಯಾಮಿಯಾಗಿದ್ದರು. ॥61॥ "ಈ ಜಾಗಕ್ಕೆ ಇರುವ ರಸ್ತೆ ಕಾಣದಿ ಅಷ್ಟು ಹೇಳಿದಷ್ಟು ಅಥವಾ ಎಮ್ಮೆಯ ಮೇಲೆ ಮಾಡಿದ ಘಟ್ಟದ ಸವಾರಿಯಷ್ಟು ಸುಲಭವಾಗಿಲ್ಲ. ನೀನು ಕಠಿಣ ಶ್ರಮವಹಿಸದೆ ಬೇರೆ ಮಾರ್ಗವಿಲ್ಲ." ॥62॥ ಅವನು ಈ ಅರ್ಥಗರ್ಭಿತವಾದ ಮಾತುಗಳನ್ನು ಕೇಳಿ ಅಂತರಂಗದಲ್ಲಿ ಭಾವೋನ್ಮತ್ತನಾಗಿ, ಆ ಸತ್ಪುರುಷನ ಮಾತುಗಳು ಮತ್ತು ಈ ಮೊದಲು ಭೇಟಿ ಮಾಡಿದವರ ಮಾತುಗಳು ಸರಿಯಾದುವೆಂದು ಸ್ಪಷ್ಟಪಡಿಸಿಕೊಂಡನು. ॥63॥ ಅನಂತರ ಅವನು ತನ್ನ ಕೈಗಳನ್ನು ಒಟ್ಟಿಗೆ ಜೋಡಿಸಿ, ತನ್ನ ಮಸ್ತಕವನ್ನು ಸಾಯಿಯ ಚರಣಗಳಲ್ಲಿರಿಸಿ ಹೇಳಿದನು. – "ಹೇ ಸಾಯಿನಾಥ, ನನ್ನ ಮೇಲೆ ಕೃಪೆಮಾಡು. ನಾನು ಅನಾಥ. ನನ್ನನ್ನು ನಿನ್ನ ಚರಣಗಳಲ್ಲಿ ಸ್ವೀಕರಿಸು. ॥64॥ "ನೀನು ಮಾತ್ರ ನನಗೆ ಮಹಾಪುರುಷ ಮತ್ತು ರಕ್ಷಕ. ಈ ದಿನ ನಾನು ಪೂರ್ಣವಾಗಿ ನಿಶ್ಚಲದಾಸರು ರಚಿಸಿದ ಗ್ರಂಥದಲ್ಲಿನ ವಿಶೇಷತೆ ಮತ್ತು ದಿವ್ಯಸುಖಬೋಧೆಯ ಸಹಿತವಾದ ಉಪದೇಶವನ್ನು ಅರ್ಥಮಾಡಿಕೊಂಡಿದ್ದೇನೆ." ॥65॥ ವಡಗಾಂ ಎಲ್ಲಿ ಮತ್ತು ಶಿರಡಿಯು ಎಲ್ಲಿ? ಅದೆಂತಹ ಸತ್ಪುರುಷ – ಮಹಾಪುರುಷರ ಜೋಡಿ! ಅದೆಷ್ಟು ಸಂಕ್ಷಿಪ್ತವಾದರೂ ಅವರ ಮಾತು ಜ್ಯೋತಿಸ್ವರೂಪವಾಗಿವೆ? ಇದೆಂತಹ ಘನವಾದ ಸೂಚನೆ ನೀಡುವ ರೀತಿ? ॥66॥ ಅವರಲ್ಲಿ ಒಬ್ಬರು ಗ್ರಂಥವನ್ನು ಓದಲು ತಿಳಿಸಿದರು. ಮತ್ತೊಬ್ಬರು ಮಹಾಪುರುಷರೊಡನೆ ಭೇಟಿಯ ಮುನ್ಸೂಚನೆ ನೀಡಿದ್ದರು. ಮತ್ತು ಅವರಿಂದ ಉಪದೇಶ ಹಾಗೂ ಮುಂದಿನ ಉದ್ಧಾರಕ್ಕಾಗಿ ಸಲಹೆಗಳನ್ನು ನೀಡುವರೆಂದು ತಿಳಿಸಿದ್ದರು. ॥67॥ ದೈವ ಯೋಗದಿಂದಾಗಿ, ಅವರ ಭೇಟಿಯಾಗಿದ್ದು, ಅದರಿಂದಾಗಿ ತಾವು ತಿಳಿಸಿದ ಪುರುಷ ಅವರೇ ಎನ್ನುವ ಸೂಚನೆ ಕೊಟ್ಟರು. ಮತ್ತು ಅವರ ಮಾತು ಪ್ರಾಮುಖ್ಯತೆ ಪಡೆದಿತ್ತು, ಗ್ರಂಥಪಠನೆ ಆಗಿತ್ತು, ಈಗ ಅದನ್ನು ಕಾರ್ಯರೂಪಕ್ಕೆ ನಿಶ್ಚಯವಾಗಿ ತರಬೇಕಾಗಿತ್ತು. ॥68॥ ಅನಂತರ ಸಾಯಿನಾಥರು ಅವನಿಗೆ ಹೇಳಿದರು, "ಅವರು, ನಿನಗೆ ಏನನ್ನು ಹೇಳಿರುವರೋ ಅದೆಲ್ಲವೂ ಯಥಾರ್ಥವೇ. ಆದರೆ ಅದನ್ನು ನೀನು ಸಾಧನೆಗೆ ಅಳವಡಿಸಿದಾಗ ಮಾತ್ರ ನಿನ್ನ ಮನೋರಥಗಳೆಲ್ಲವೂ ಪೂರ್ಣಗೊಳ್ಳುವುದು." ॥69॥ "ನಿಶ್ಚಲದಾಸ – ವಿಚಾರಸಾಗರ" ಈ ಮಾತುಗಳನ್ನು ವಡಗಾಂವನಲ್ಲಿ ನಮೂದಿಸಲಾಗಿತ್ತು, ಕೆಲವು ಸಮಯದಲ್ಲಿ ಮತ್ತೆ ಮತ್ತೆ ಓದಿದ ನಂತರ, ಮತ್ತು ಕೊಂಚ ಸಮಯಾನಂತರ ಶಿರಡಿಯಲ್ಲಿ ಅವನಿಗೆ ಅವುಗಳನ್ನು ಯಾವ ರೀತಿ ಅಭ್ಯಾಸ ಮಾಡಬೇಕೆಂಬುದನ್ನು ಕಲಿಸಲಾಯಿತು. ॥70॥ ಮೊದಲು ನೀವು ಆ ಪುಸ್ತಕವನ್ನು ಎಚ್ಚರಿಕೆಯಿಂದ ಓದಬೇಕು. ಅನಂತರ ಮನನ ಮಾಡಬೇಕು. ಪದೇ ಪದೇ ಓದುವುದರಿಂದ ಆ ವಿಷಯದಲ್ಲಿ ಪೂರ್ಣವಾಗಿ ಮಗ್ನರಾಗಬಹುದು. ॥71॥ ಕೇವಲ ಓದುವುದಷ್ಟೇ ಸಾಲದು, ಅದನ್ನು ಆಚರಣೆಗೆ ತರಬೇಕು. ಇಲ್ಲದಿದ್ದರೆ ಅದು ಬಾತುಕೋಳಿಯ ಬೆನ್ನ ಮೇಲೆ ಸುರಿದನೀರಿನಂತೆ (ಗೋರ್ಕಲ್ಲಮೇಲೆ ಮಳೆ ಸುರಿದಂತೆ). ॥72॥ ಕೇವಲ ಗ್ರಂಥ ವಾಚನವು ವ್ಯರ್ಥ. ಅದರ ಅನುಭವ ಜ್ಞಾನವನ್ನು ಪಡೆಯಬೇಕು. ಅದಕ್ಕಾಗಿ ಬ್ರಹ್ಮಜ್ಞಾನ ಸಂಪನ್ನನಾದ

ಗುರುವಿನ ಕೃಪೆಯು ಅವಶ್ಯಕ. ಕೇವಲ ಪುಸ್ತಕ ಜ್ಞಾನವು ವ್ಯರ್ಥ. ॥73॥ ಈ ಅರ್ಥವನ್ನು ನಿದರ್ಶನವನ್ನಾಗಿಸುವ ಈ ಒಂದು ಸರಳ ಕಥೆಯು ಭಕ್ತಿಯ ಪ್ರಾಮುಖ್ಯತೆಯನ್ನು ಹೊರಗೆಡುಹುತ್ತದೆ. ಅದು ಜೀವನದ ಪುರುಷಾರ್ಥವನ್ನು ಪಡೆಯಲು ಅತ್ಯವಶ್ಯಕ. ಶ್ರೋತೃಗಳು ತಮ್ಮ ಲಾಭಕ್ಕಾಗಿ ಅದನ್ನು ಕೇಳಬೇಕು. ॥74॥ ಒಮ್ಮೆ ಪುಣೆಯ ನಿವಾಸಿ, ಅನಂತರಾವ್ ಪಾಟಣಕರ್ ಎಂಬ ಹೆಸರಿನವನು, ಸಾಯಿಯ ದರ್ಶನಕ್ಕಾಗಿ ತೀವ್ರವಾದ ಇಚ್ಛೆ ಉಂಟಾಗಲು, ಆದರ ಪೂರ್ವಕವಾಗಿ ಶಿರಡಿಗೆ ಬಂದನು. ॥75॥ ಅವನು ವೇದಾಂತವನ್ನು ಕೇಳಿದ್ದನು. ಸಕಲ ವೇದಗಳನ್ನೂ ಕೇಳಿದ್ದನು. ಉಪನಿಷತ್ತುಗಳನ್ನು ಮೂಲದ ಸಮೇತ ಟೀಕಾ ಸಹಿತ ಓದಿದ್ದನು. ಆದರೆ ಅವನ ಮನಸ್ಸು ಸದಾ ಚಂಚಲವಾಗಿದ್ದು ಮನಸ್ಸು ಅಶಾಂತಿಯಿಂದ ತಳಮಳಗೊಂಡಿರುತ್ತಿತ್ತು. ॥76॥ ಅವನು ಸಾಯಿಸಮರ್ಥರ ದರ್ಶನ ಪಡೆದಾಗ ಪಾಟಣಕರನ ಕಣ್ಣುಗಳಿಗೆ ಹಬ್ಬವಾಯಿತು. ಅವರ ಚರಣಗಳಿಗೆ ವಂದಿಸಿದ ನಂತರ ಅವರನ್ನು ವಿಧಿ ವಿಧಾನಗಳ ರೀತಿಯಲ್ಲಿ ಪೂಜಿಸಿದನು. ॥77॥ ಅನಂತರ ಅವನು ಕೈಗಳನ್ನು ಜೋಡಿಸಿಕೊಂಡು ಬಾಬಾರವರ ಮುಂದೆ ಬಹಳ ಹತ್ತಿರದಲ್ಲಿ ಕುಳಿತುಕೊಂಡನು. ಅನಂತರಾವ್‌ನು ಪ್ರೇಮಪೂರ್ವಕವಾಗಿ ಅತ್ಯಂತ ಆರ್ತನಾಗಿ ವಿನೀತನಾಗಿ ಅವರನ್ನು ಕೇಳಿದನು. ॥78॥ "ನಾನು ಅನೇಕ ಗ್ರಂಥಗಳನ್ನು ಓದಿದ್ದೇನೆ. ವೇದವೇದಾಂತಗಳು, ಉಪನಿಷತ್‌ಗಳ ಅಧ್ಯಯನ ನಡೆಸಿದ್ದೇನೆ. ಪವಿತ್ರ ಶಾಸ್ತ್ರಗಳನ್ನೂ, ಪುರಾಣಗಳನ್ನೂ ಕೇಳಿದ್ದೇನೆ. ಆದರೂ ನನ್ನ ಮನಸ್ಸು ಏಕೆ ನಿರ್ವಿಣ್ಣವಾಗಿದೆ? ॥79॥ "ನನಗೆ ಈಗ ಅನಿಸುತ್ತಿದೆ. ನಾನು ಇಷ್ಟರವರೆಗೆ ಓದಿದ್ದೆಲ್ಲವೂ ವ್ಯರ್ಥ. ಇದೆಲ್ಲವೂ ಕೇವಲ ಪುಸ್ತಕ ಜ್ಞಾನವಷ್ಟೆ. ಕೆಲವೊಮ್ಮೆ ಅಕ್ಷರ ಹೀನ ಅನನ್ಯ ಭಕ್ತರೂ ಎಷ್ಟೋ ಮೇಲು, ಎಂದು ನಾನು ಯೋಚಿಸುತ್ತೇನೆ. ॥80॥ "ನಾನು ಮಾಡಿದ ಗ್ರಂಥ ಪಠನ, ಶಾಸ್ತ್ರಗಳ ಅಧ್ಯಯನ ಎಲ್ಲವೂ ವ್ಯರ್ಥ. ನನ್ನ ಮನಸ್ಸು ಚಂಚಲತೆಯಿಂದ ಇರುವವರೆಗೆ ಈ ಪುಸ್ತಕ ಜ್ಞಾನವೆಲ್ಲವೂ ವ್ಯರ್ಥ. ॥81॥ "ಓಹ್, ಶಬ್ದ ಉತ್ಪತ್ತಿಯ ಬಗ್ಗೆ ಅಧ್ಯಯನ ಮಾಡಲು ತೆಗೆದುಕೊಂಡ ಶ್ರಮವು ಅದೆಷ್ಟು ಖಾಲಿಯಾಗಿತ್ತು! ಜಪ ಮತ್ತು ಮಂತ್ರ ಚಿತ್ತಕ್ಕೆ ಶಾಂತಿ ನೀಡದಿದ್ದರೆ ಅವುಗಳ ಉದ್ದೇಶ ಏನು? ನಾನು ಹೇಗೆ ಬ್ರಹ್ಮಜ್ಞಾನವನ್ನು ಪಡೆಯಲು ಸಾಧ್ಯ? ॥82॥ "ಕಿವಿಯಿಂದ ಕಿವಿಗೆ ಹರಡಿರುವ ಮಾತುಗಳನ್ನು ನಾನು ಕೇಳಿರುವೆನು. ಸಾಯಿಯ ದರ್ಶನ ಎಲ್ಲಾ ಚಿಂತೆಗಳನ್ನೂ ದೂರಮಾಡುತ್ತವೆ. ಮತ್ತು ನಿಮ್ಮ ಹಾಸ್ಯದ ಮಾತಿನಲ್ಲಿಯೂ ಸಹಜವಾಗಿಯೇ ಸನ್ಮಾರ್ಗವನ್ನೇ ತೋರಿಸುವಿರಿ. ॥83॥ "ಆದುದರಿಂದ ಮಹಾರಾಜ್. ತಪಸ್ಸಿನ ರಾಶಿಯನ್ನು ಶೇಖರಿಸಿ, ನಾನು ನಿಮ್ಮ ಚರಣಗಳಲ್ಲಿ ತಲಪಿದ್ದೇನೆ. ನಿಮ್ಮ ಆಶೀರ್ವಚನ ನೀಡಿ. ಅದರಿಂದಾಗಿ ನನಗೆ ಮನಃಸ್ಥೈರ್ಯ ಉಂಟಾಗಬಹುದು." ॥84॥ ಅದಕ್ಕಾಗಿ ಮಹಾರಾಜ್‌ರು ಒಂದು ವಿನೋದಕರ ಒಗಟನ್ನು ಹೇಳಿದರು. ಅದರಿಂದ ಅನಂತರಾವ್ ಸಮಾಧಾನಹೊಂದಿದನು. ಮತ್ತು ತನ್ನ ಜ್ಞಾನಾರ್ಜನೆಯ ಸಫಲತೆಯನ್ನು ಪಡೆದನು. ॥85॥ ಈ ಕೆಲವು ನುಡಿಗಳು ಪರಮಾರ್ಥ ಜ್ಞಾನದ ಸಾರವು. ಆ ಕಥೆಯನ್ನು ನಾನು ಹೇಳುತ್ತೇನೆ.

ಆಲಿಸಲು ಸಿದ್ಧರಾಗಿರಿ. ಅದು ವಿನೋದದಿಂದ ತುಂಬಿದ್ದರೂ ಬೋಧಪ್ರದವಾಗಿದೆ. ಅಂತಹ ಪದಗಳನ್ನು ಯಾರು ತಾನೇ ಅನಾದರ ಮಾಡಲು ಸಾಧ್ಯ? ॥86॥ ಬಾಬಾರವರು ಪ್ರತ್ಯುತ್ತರ ನೀಡಿದರು. "ಒಮ್ಮೆ ಒಬ್ಬ ವ್ಯಾಪಾರಿಯು ಬಂದನು. ಅದೇ ಸಮಯದಲ್ಲಿ ಒಂದು ಕುದುರೆಯು ಅವನ ಮುಂದೆ ಒಂಭತ್ತು ಮುದ್ದೆ ಲದ್ದಿಗಳನ್ನು ಹಾಕಿತು. ॥87॥ "ವ್ಯಾಪಾರಿಯು ತನ್ನ ಕಾರ್ಯತತ್ಪರತೆಯಲ್ಲಿ ನಿಪುಣನಾಗಿದ್ದನು. ಕೂಡಲೇ ಅವನು ತನ್ನ ಪಂಚೆಯನ್ನು ಹರಡಿ ಆ ಎಲ್ಲ ಉಂಡೆಗಳನ್ನೂ ಶೇಖರಿಸಿ ಗಂಟು ಕಟ್ಟಿದನು. ಮತ್ತು ಏಕಾಗ್ರ ಚಿತ್ತನಾದನು." ॥88॥ ಸಾಯಿಸಮರ್ಥರು ಏನು ಹೇಳಿದ್ದಾರೆ? ಅದರ ಅರ್ಥವೇನು? ಆ ವ್ಯಾಪಾರಿಯು ಲದ್ದಿಯನ್ನು ಶೇಖರಿಸಿದ್ದು ಏಕೆ? ಅವನಿಗೆ ಏನೂ ಅರ್ಥವಾಗಲಿಲ್ಲ. ॥89॥ ಈ ರೀತಿ ಯೋಚಿಸುತ್ತ ಅನಂತರಾವ್ ಹಿಂತಿರುಗಿದನು. ಮತ್ತು ಈ ಸಂಭಾಷಣೆಯನ್ನು ಮೊದಲಿನಿಂದ ಕೊನೆಯವರೆಗೆ ಕೇಲ್ಕರ್‌ಗೆ ಹೇಳಿದನು. ॥90॥ ಮತ್ತು ಕೇಳಿದನು, "ಆ ವ್ಯಾಪಾರಿಯು ಯಾರು? ಆ ಲದ್ದಿಗಳಿಂದ ಏನು ಉಪಯೋಗ? ಒಂಭತ್ತು ಸಂಖ್ಯೆಯನ್ನು ಏಕೆ ನಮೂದಿಸಿದರು? ದಯವಿಟ್ಟು ನನಗೆ ಅದರ ಅರ್ಥ ತಿಳಿಸಿ. ॥91॥ "ದಾದಾ, ಇದೆಂತಹ ಒಗಟು? ನಾನೋ ಅಲ್ಪಬುದ್ಧಿಯವ. ಇದನ್ನು ಬಿಡಿಸಲು ನನಗೆ ಸಾಧ್ಯವಿಲ್ಲ. ಬಾಬಾರವರ ಹೃದಯವನ್ನು ತೆರೆದಿಡುವ ವಿಷಯವನ್ನು ಸರಳವಾದ ನುಡಿಗಳಲ್ಲಿ ತಿಳಿಸು." ॥92॥ ದಾದಾ ಹೇಳಿದನು, "ನನಗೆ ಸಹ ಅದು ಅರ್ಥವಾಗಲಿಲ್ಲ. ಬಾಬಾರವರ ನುಡಿಗಳು ಸದಾ ಇದೇ ರೀತಿ ಇರುತ್ತವೆ. ಆದರೆ, ಅವರ ಪ್ರೇರಣೆಯಿಂದ ನಾನೆಷ್ಟು ಅರ್ಥ ಮಾಡಿಕೊಳ್ಳಬಲ್ಲೆನೋ ಅದನ್ನು ಹೇಳುತ್ತೇನೆ. ॥93॥ "ಕುದುರೆಯು ಈಶ್ವರ ಕೃಪೆಯು. ಇದು ನವವಿಧ ಭಕ್ತಿಯ ಬಗೆಗಿನ ಸಮಸ್ಯೆಯನ್ನು ಪರಿಹರಿಸಬಹುದು, ಒಗಟನ್ನು ಬಿಡಿಸಬಹುದು, ಭಕ್ತಿಯಿಲ್ಲದೆ ಪರಮಾತ್ಮನ ಜೊತೆ ಐಕ್ಯವಾಗಲು ಸಾಧ್ಯವಿಲ್ಲ. ಮತ್ತು ಜ್ಞಾನವನ್ನು ಪಡೆಯಲಾಗುವುದಿಲ್ಲ. ॥94॥ "1. ಕೇಳುವುದು, 2. ಭಜಿಸುವುದು, 3. ನಾಮ ಸ್ಮರಣೆ, 4. ಚರಣ ಸೇವೆ, 5. ಅರ್ಚನೆ, 6. ವಂದನೆ, 7. ದಾಸ್ಯ, 8. ಸಖ್ಯ, 9. ಆತ್ಮಸಮರ್ಪಣೆ. ಇವೇ ಒಂಭತ್ತು ವಿಧದ ಭಕ್ತಿಗಳು. ॥95॥ "ಅಂತರಂಗದಲ್ಲಿ ಪೂರ್ಣ ಶ್ರದ್ಧೆಯಿಟ್ಟು ಇವುಗಳಲ್ಲಿ ಯಾವುದಾದರೂ ಒಂದು ಭಕ್ತಿಯನ್ನು ಸಾಧನೆ ಮಾಡಿದರೂ ಸಹ ಭಕ್ತಿಗಾಗಿ ಕಾತರಿಸುವ ಶ್ರೀಹರಿಯು ಭಕ್ತನ ಮನೆಯಲ್ಲಿ ಪ್ರಕಟವಾಗುತ್ತಾನೆ. ॥96॥ "ಜಪ, ತಪಸ್ಸು, ವ್ರತ, ಯೋಗ, ಸಾಧನೆ, ವೇದ, ಮತ್ತು ಉಪನಿಷತ್ತುಗಳ ಅಧ್ಯಯನ, ಅಧ್ಯಾತ್ಮ ಜ್ಞಾನದ ಯಥೇಚ್ಛವಾದ ನಿರೂಪಣೆ ಇವೆಲ್ಲವೂ ಭಕ್ತಿಯಿಲ್ಲದಿದ್ದಲ್ಲಿ ವ್ಯರ್ಥ॥97॥ "ವೇದ ಶಾಸ್ತ್ರ ವ್ಯುತ್ಪತ್ತಿಗಳಲ್ಲಿ ಪಂಡಿತನಾಗಬೇಕಾಗಿಲ್ಲ, ನಾಲ್ಕು ದಿಕ್ಕುಗಳಲ್ಲೂ ಹರಡುವ ಕೀರ್ತಿ ಪಡೆದಿರಬೇಕಾಗಿಲ್ಲ, ಭಾವವಿಲ್ಲದ ಭಜನೆ ಹಾಡಬೇಕಾಗಿಲ್ಲಕೇವಲ ಪ್ರೇಮಪೂರಿತ ಭಕ್ತಿಯು ಅತ್ಯವಶ್ಯಕ. ॥98॥ "ಸ್ವಯಂ ನೀವೇ ವ್ಯಾಪಾರಿಯೆಂದು ಪರಿಗಣಿಸಿರಿ ಮತ್ತು ಈ ವ್ಯವಹಾರದ ಭಾವಾರ್ಥವನ್ನು ಹಿಡಿಯಿರಿ. ಯಾವಾಗ ನವವಿಧ ಭಕ್ತಿಯ ರೂಪದಲ್ಲಿ ಭಕ್ತಿಯ ಬಾವುಟವು ಎತ್ತರದಲ್ಲಿ ಹಾರುತ್ತದೋ ಆಗ ಜ್ಞಾನರಾಜನು ಉಲ್ಲಾಸ ಹೊಂದುತ್ತಾನೆ. ॥99॥ "ಕುದುರೆಯು

ಒಂಭತ್ತು ಲದ್ದಿ ಉಂಡೆಗಳನ್ನು ಹಾಕಿದಾಗ ಆ ವ್ಯಾಪಾರಿಯು ಕಾತರದಿಂದ ಅವುಗಳನ್ನು ಶೇಖರಿಸಲು ಮುಂದೆ ಹೋದನು ಅದೇ ರೀತಿ ನವವಿಧ ಭಕ್ತಿಯನ್ನು ಅಳವಡಿಸಿಕೊಂಡಲ್ಲಿ ಮನಸ್ಸಿಗೆ ಶಾಂತಿ ಸಿಗುತ್ತದೆ. ॥100॥ "ಕೇವಲ ಅದು ಮಾತ್ರ ಮನಃಸ್ಥೈರ್ಯವನ್ನೂ ನೀಡುತ್ತದೆ. ಅದಕ್ಕಾಗಿ ಸದ್ಭಾವ ಮತ್ತು ಗಾಂಭೀರ್ಯದ ಆವಶ್ಯಕತೆ ಇದೆ. ಇಲ್ಲದಿದ್ದಲ್ಲಿ ಚಂಚಲತೆಯು ಅನಿವಾರ್ಯ. ಇದನ್ನೇ ಗುರುರಾಯರು ಪ್ರೀತಿಯಿಂದ ಹೇಳಿದರು." ॥101॥ ಮಾರನೆಯ ದಿನ, ಅನಂತರಾವ್ ಸಾಯಿ ಚರಣಗಳಲ್ಲಿ ವಂದಿಸಲು ಹೋದನು. ಅವನನ್ನು "ನೀನು ಲದ್ದಿಗಳನ್ನು ಶೇಖರಿಸಿದೆಯಾ?" ಎಂದು ಕೇಳಿದರು. ॥102॥ ಅನಂತರ ಅನಂತರಾವ್ ಪ್ರಾರ್ಥಿಸಿದನು, "ದೀನನಾದ ಈ ಭಕ್ತನ ಮೇಲೆ ಕೃಪೆತೋರಿ, ಅನಂತರ ಅವುಗಳನ್ನು ಶ್ರಮವಿಲ್ಲದೆಯೇ ಬಾಚಿಕೊಳ್ಳಬಹುದು. ಇಲ್ಲದಿದ್ದರೆ ಯಾರಾದರೂ ಇಂತಹ ಅಮೂಲ್ಯ ವಸ್ತುಗಳನ್ನು ಬಾಚಿಕೊಳ್ಳಲು ಸಾಧ್ಯವೇ?" ॥103॥ ಅನಂತರ ಬಾಬಾ ಅವನನ್ನು ಆಶೀರ್ವದಿಸಿದರು ಮತ್ತು "ಕಲ್ಯಾಣವಾಗಲಿ" ಎಂದು ಆಶ್ವಾಸನೆಯಿತ್ತರು. ಅನಂತರಾವ್ ಸುಖ ಸಂತೋಷಗಳನ್ನು ಅನುಭವಿಸಿದನು. ॥104॥ ಈಗ ಮತ್ತೊಂದು ಸಣ್ಣ ಕಥೆ. ಗೌರವಪೂರ್ವಕವಾಗಿ ಕೇಳಿರಿ. ಬಾಬಾರವರ ಅಂತರ್ಜ್ಞಾನಶಕ್ತಿಯು ಸನ್ಮಾರ್ಗ ಪ್ರವರ್ತನೆಯ ಅರಿವು ಉಂಟಾಗುತ್ತದೆ. ॥105॥ ಒಮ್ಮೆ ಒಬ್ಬ ನ್ಯಾಯಾಧೀಶನು ಬಂದನು. ಮತ್ತು ಮಸೀದಿಗೆ ಹೋದನು. ಅವನು ಅಲ್ಲಿ ತಲಪಿದ ಕ್ಷಣವೇ ಸಾಯಿನಾಥರ ದರ್ಶನ ಪಡೆದು ಅವರ ಚರಣಗಳಲ್ಲಿ ವಂದಿಸಿದನು. ॥106॥ ಅನಂತರ ಅವನು ಬಾಬಾರವರು ಕೇಳದೆಯೇ ದಕ್ಷಿಣೆ ನೀಡಿ ಅವರ ಪಾದಗಳ ಬಳಿ ಕುಳಿತನು. ಅವನು ಆದರಪೂರ್ವಕಾಗಿ ಸಾಯಿ ಸಂಭಾಷಣೆಯನ್ನು ಆಲಿಸಲು ನಿಶ್ಚಯಿಸಿದನು. ॥107॥ ಅನಂತರ ಬಾಬಾರವರು ಮುಖ ತಿರುಗಿಸಿ ವಕೀಲರಿಗಾಗಿರುವಂತಹ ನುಡಿಗಳನ್ನು ನುಡಿದರು. ಆ ಮಾತುಗಳು ಅವನ ಹೃದಯವನ್ನು ಚುಚ್ಚಿದವು ಮತ್ತು ವಕೀಲನು ಬಹಳ ಅನುತಾಪ ಪಟ್ಟನು. ॥108॥ "ಜನರು ಇದೆಂತಹ ಮೋಸಗಾರರು! ಅವರು ನನ್ನ ಚರಣಗಳನ್ನು ಹಿಡಿಯುತ್ತಾರೆ, ದಕ್ಷಿಣೆಯನ್ನು ನೀಡುತ್ತಾರೆ ಮತ್ತು ಅಂತರಾಳದಲ್ಲಿ ನನ್ನನ್ನು ಬೈಯುತ್ತಾರೆ. ಅವರ ನೀತಿಗಳು ಅದೆಷ್ಟು ವಿಚಿತ್ರ!" ॥109॥ ಇದನ್ನು ಕೇಳಿದ ವಕೀಲನು ಸುಮ್ಮನಾದನು. ಆದರೆ ಅವನು ಅದರ ನಿಜಾಂತರಾರ್ಥವನ್ನು ಪೂರ್ತಿಯಾಗಿ ಅರ್ಥಮಾಡಿಕೊಂಡನು. ಅವನಿಗಾಗಿಯೇ ಅದು ಅನ್ವರ್ಥವಾಗಿದೆ ಎಂದು ಅವನು ತಿಳಿದನು. ಅದರ ತಾತ್ಪರ್ಯವು ಅವನ ಮನಸ್ಸಿನಲ್ಲಿ ಆಳವಾಗಿ ಹೊಕ್ಕವು. ॥110॥ ಅನಂತರ ಅವನು ವಾಡಾಗೆ ಹೋದ ಮೇಲೆ ದೀಕ್ಷಿತನಲ್ಲಿ 'ಬಾಬಾರವರ ಚುಚ್ಚು ಮಾತುಗಳು ಅವನನ್ನು ನೋಯಿಸಿದ್ದವು. ಆದರೂ ಅವೆಲ್ಲವೂ ಸತ್ಯ' ಎಂದು ತಿಳಿಸಿದನು. ॥111॥ "ನಾನು ಅಲ್ಲಿಗೆ ಬಂದಿಳಿದ ಕೂಡಲೇ ಬಾಬಾ ನನ್ನನ್ನು ಬೈದರು. ಆದರೆ ಅದು ಒಂದು ರೀತಿಯ ಎಚ್ಚರಿಕೆಯಾಗಿತ್ತು. ಏನೆಂದರೆ ನಾನು ಇನ್ನು ಮುಂದೆ ಎಂದಿಗೂ ಕಪಟ ವೇಷವನ್ನು ಧರಿಸುವುದಾಗಲೀ, ಯಾರಿಗಾದರೂ ಬೆನ್ನ ಹಿಂದೆ ಬೈಯುವುದಾಗಲೀ ಮಾಡಬಾರದು. ॥112॥ "ನಮ್ಮ ಮುನ್ಸಿಫನಿಗೆ ಶರೀರ ಪ್ರಕೃತಿ

ಅನಾರೋಗ್ಯವಾದುದರಿಂದ ಅವನು ತಳಮಳಿಸುತ್ತ ಇದ್ದುದರಿಂದ ಕಛೇರಿಯಲ್ಲಿ ರಜೆ ಪಡೆದು ಶಾಂತಿಯಿಂದ ಇಲ್ಲಿ ತನ್ನ ಆರೋಗ್ಯ ಚೇತರಿಕೆಗಾಗಿ ವಿಶ್ರಮಿಸಿದನು. ॥113॥ "ನಾವು ವಕೀಲರ ಕೋಣೆಯಲ್ಲಿದ್ದಾಗ ಚರ್ಚೆಯು ವಿಷಯಕ್ಕೆ ತಿರುಗಿತು, ನಾವು ನೇರವಾಗಿ ಅದಕ್ಕೆ ಸಂಬಂಧ ಪಡದಿದ್ದರೂ ಅವರ ಬಗ್ಗೆ ಊಹಾಪೋಹಗಳನ್ನು ಸೃಷ್ಟಿಸಿದೆವು. ॥114॥ "ಯಾವುದೇ ಔಷಧಿಗಳು ಇಲ್ಲದೆ ಕೇವಲ ಸಾಯಿಯನ್ನು ಭಕ್ತಿಯಿಂದ ಅನುಸರಿಸಿದರೆ, ಭೌತಿಕ ರೋಗವು ವಾಸಿಯಾಗುವುದೇ? ಮುನ್ಸಿಫನ ಹುದ್ದೆಗೆ ಏರಿರುವವನಿಗೆ ಈ ರೀತಿ ಮೂಢ ನಂಬಿಕೆಯ ದಾರಿಯಲ್ಲಿ ನಡೆಯುವುದು ಯೋಗ್ಯವೇ?" ॥115॥ ಅವನು ಈ ರೀತಿ ಬೈಸಿಕೊಂಡಮೇಲೆ ಸಾಯಿಯ ಬಗ್ಗೆಯೂ ಅಗೌರವದಿಂದ ಮಾತಾಡಿದಾಗ, ನಾನೂ ಸಹ ಸ್ವಲ್ಪ ಮಟ್ಟಿಗೆ ಇದರಲ್ಲಿ ಭಾಗಿಯಾಗಿದ್ದ ತಪ್ಪನ್ನು ಬಾಬಾರವರು ಬೆರಳೆತ್ತಿ ಸೂಚಿಸಿದರು. ॥116॥ ಅದು ಬೈಗಳಾಗಿರಲಿಲ್ಲ, ಆದರೆ ಈಗ ತಾನೇ ಅನುಗ್ರಹವಾಗಿತ್ತು. ಯಾರೂ ಅನಾವಶ್ಯಕವಾಗಿ ಉಪಯೋಗವಿಲ್ಲದ ಚರ್ಚೆಗಳಲ್ಲಿ ಭಾಗವಹಿಸಬಾರದು. ಯಾರನ್ನೂ ಕೀಳಾಗಿ ನೋಡುವುದೂ, ಕುತರ್ಕ ಮಾಡುವುದೂ ಸರಿಯಲ್ಲ. ಬೆನ್ನ ಹಿಂದೆ ನಿಂದೆ ಮಾಡಬಾರದು ಮತ್ತು ಈ ಕೆಟ್ಟ ಹವ್ಯಾಸಗಳಲ್ಲಿ ಮುಳುಗುವುದರಿಂದ ದೂರವಾಗಬೇಕು. ॥117॥ ಜೊತೆಗೆ ನೂರು ಕೋಸು ದೂರದಲ್ಲಿದ್ದರೂ ಸಹ ಸಾಯಿಯು ಸರ್ವಾಂತರ್ಯಾಮಿಯಾಗಿದ್ದು ಪ್ರತಿಯೊಬ್ಬನ ಅಂತರಂಗವನ್ನು ತಿಳಿದಿದ್ದಾರೆ ಎಂಬುದಕ್ಕೆ ಇದು ಒಂದು ಸಾಕ್ಷಿ. ॥118॥ ಅದೂ ಅಲ್ಲದೆ, ಮತ್ತೊಂದು ವಿಷಯವೂ ಸ್ಪಷ್ಟವಾಯಿತು. ಮಾರ್ಗದ ಮಧ್ಯದಲ್ಲಿರುವ ಬೆಟ್ಟಗಳು, ಪರ್ವತಗಳು ಯಾವುವೂ ಸಾಯಿಯಿಂದ ಏನನ್ನೂ ಮುಚ್ಚಿಡಲು ಸಾಧ್ಯವಿಲ್ಲ. ಗುಪ್ತವಾಗಿ ಬಚ್ಚಿಟ್ಟ ರಹಸ್ಯಗಳೆಲ್ಲವೂ ಅವರಿಗೆ ತಿಳಿದಿದ್ದವು. ॥119॥ ಅದು ಹಾಗಿರಲಿ. ಆ ದಿನದ ನಂತರ ವಕೀಲನು ನಿರ್ಧಾರ ತೆಗೆದುಕೊಂಡಿದ್ದನು. ಇನ್ನು ಮುಂದೆ ಭವಿಷ್ಯದಲ್ಲಿ ತಾನೆಂದಿಗೂ ಟೀಕಿಸುವುದಿಲ್ಲ ಅಥವಾ ಕೆಟ್ಟ ಪದಗಳನ್ನು ಉಪಯೋಗಿಸುವುದಿಲ್ಲವೆಂದು ಪ್ರಮಾಣ ಸ್ವೀಕರಿಸಿದನು. ॥120॥ 'ಎಲ್ಲಿಯಾದರೂ ಏನನ್ನಾದರೂ ಮಾಡಿದ್ದಲ್ಲಿ ಸಾಯಿತಿಳಿಯದೆ ಹೋಗುವುದಿಲ್ಲ' – ಎಂಬುದು ಅವನ ದೃಢವಾದ ನಂಬಿಕೆಯಾಗಿತ್ತು, ಕೆಟ್ಟ ಅಭ್ಯಾಸಗಳು ದೂರವಾದುವು. ॥121॥ ಅವನು ಸತ್ಕಾರ್ಯ ಮಾಡಲು ಜಾಗರೂಕನಾದನು. ಏಕೆಂದರೆ ಅವನಿಗೆ ಸಾಯಿಯು ತನ್ನನ್ನು ಎಲ್ಲಾ ನಿಟ್ಟಿನಿಂದಲೂ ನೋಡುತ್ತಿರುವನು ಮತ್ತು ಸಾಯಿಗೆ ಯಾರು ಮೋಸಮಾಡಲು ಸಾಧ್ಯ? ಎಂಬುದು ತಿಳಿದಿತ್ತು. ಅವನ ನಿರ್ಧಾರ ನಿಶ್ಚಲವಾಗಿತ್ತು. ॥122॥ ಈ ಕಥೆಯು ವಕೀಲನಿಗೆ ಅನ್ವಯಿಸಿದ್ದರೂ, ಅದು ಎಲ್ಲಾ ರೀತಿಯಲ್ಲಿಯೂ ಅರ್ಥಪೂರ್ಣವಾಗಿತ್ತು. ಅದು ಎಲ್ಲಾ ಸಮಯಗಳಲ್ಲೂ ಮತ್ತು ಎಲ್ಲರಿಗೂ ಅನ್ವಯಿಸುತ್ತದೆ. ॥123॥ ವಕೀಲರು, ಶ್ರೋತೃಗಳು, ವಚನಕಾರರು ಮತ್ತು ಎಲ್ಲಾ ಸಾಯಿ ಭಕ್ತರು ಸಹ ಇದೇ ನಿರ್ಧಾರವನ್ನು ತೆಗೆದುಕೊಳ್ಳಬೇಕು. ನಾನು ನಿಜವಾಗಿಯೂ ಇದನ್ನು ಪ್ರಾರ್ಥಿಸುತ್ತೇನೆ. ॥124॥ ಯಾವಾಗ ಸಾಯಿಕೃಪೆಯ ಮೇಘವು ನಮ್ಮೆಲ್ಲರ ಮೇಲೆ ವರ್ಷಿಸುವುದೋ ಆಗ ಎಲ್ಲರೂ ತೃಪ್ತಿ ಹೊಂದುತ್ತಾರೆ. ಇದರ ಬಗ್ಗೆ ಯಾವುದೇ ಸಂಶಯವಿಲ್ಲ.

ಬಾಯಾರಿದ್ದವರೆಲ್ಲರೂ ತಮ್ಮ ಬಾಯಾರಿಕೆಯನ್ನು ನಿವಾರಿಸಿಕೊಳ್ಳುತ್ತಾರೆ. ||125|| ಸಾಯಿನಾಥರ ಮಹಿಮೆಯು ಅಗಾಧ. ಸಾಯಿ ಕತೆಗಳ ಅರ್ಥಗಳು ನಿಗೂಢ. ಅವರ ಜೀವನಚರಿತ್ರೆಯು ಸೀಮಾರಹಿತವಾದುದು. ಅವರು ಪರಬ್ರಹ್ಮನ ಅವತಾರ ಮೂರ್ತಿ. ||126|| ಈಗ ಮುಂದಿನ ಅಧ್ಯಾಯದ ಕತೆಯನ್ನು ಹೇಳುವೆನು ಕೇಳಿ. ಓಹ್, ನೀವು ಶ್ರೋತೃಗಳು ಶ್ರದ್ಧಾಳುಗಳು, ಗೌರವದಿಂದ ಕೇಳಿರಿ. ಅದು ನಿಮ್ಮ ಮನೋರಥಗಳನ್ನು ಪೂರೈಸುತ್ತದೆ ಮತ್ತು ಚಿತ್ತಸ್ಥೈರ್ಯವನ್ನು ನೀಡುತ್ತದೆ. ||127|| ಸಾಯಿ ಸಮರ್ಥರಿಗೆ ತಮ್ಮ ಭಕ್ತರ ಜೀವನದ ಭವಿಷ್ಯದಲ್ಲಿ ಉಂಟಾಗುವ ಸಂಕಟಗಳು ತಿಳಿದಿವೆ. ಅವರು ಅವುಗಳನ್ನು ನವಿರಾದ ವಿನೋದಮಯವಾದ ಸಂಭಾಷಣೆಗಳಿಂದ ಸಹಜವಾಗಿಯೇ ನಗುತ್ತಾ, ಹಾಸ್ಯಮಾಡುತ್ತಲೇ ನಿವಾರಿಸುತ್ತಾರೆ. ||128|| ಭಕ್ತ ಹೇಮಾಡಪಂತನು ಸಾಯಿಗೆ ಶರಣಾಗುತ್ತಾನೆ. ಈಗ ಈ ಕಥಾನಕವು ಪೂರ್ಣವಾಯಿತು . ಮುಂದಿನ ಚರಿತ್ರೆಯು ಭಕ್ತರ ಸಂಕಟಗಳ ನಿವಾರಣೆ ಬಗ್ಗೆ ತಿಳಿಸುತ್ತವೆ. ||129|| ಹೇಗೆ ಸಾಯಿಯು ಕೃಪಾಸಾಗರನು. ಭಕ್ತರಿಗೆ ಭವಿಷ್ಯದಲ್ಲಿ ಒದಗಬಹುದಾದ್ಧರಿಸಲಾಗದಂತಹ ಸಂಕಟಗಳನ್ನು ಯಾವ ರೀತಿಯಲ್ಲಿ ಸಮಯೋಚಿತವಾದ ಎಚ್ಚರಿಕೆಯನ್ನು ಕೊಟ್ಟು ನಿವಾರಿಸುತ್ತಾರೆ ಎಂಬುದೆಲ್ಲವೂ ತಿಳಿದಿವೆ. ||130||

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಅನುಗ್ರಹ ವರ್ಷ" ಎಂಬ ಇಪ್ಪತ್ತೊಂದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.


|ಸನ್ಮಂಗಳವಾಗಲಿ|

ಟಿಪ್ಪಣಿ:

1. ಇದು ಪಂಚದಶಿಯ ಹಿಂದಿ ಅನುವಾದ. ಕ್ರಿ.ಶ. 1849ನೇ ಇಸವಿಯಲ್ಲಿ ಮಾಡಿದ್ದು. ಇದು ಇತರ ಭಾಷೆಗಳಿಗೂ ಅನುವಾದಿಸಲ್ಪಟ್ಟಿದೆ.
2. ಮರಾಠಿಯಲ್ಲಿ ಈ ಗಾದೆಯು ಹೇಳುತ್ತದೆ – "ಬಾಯಿ ಕೆಳಗಾದ (ಮಗುಚಿಹಾಕಿದ) ಮಡಕೆಯ ಮೇಲೆ ಸುರಿದ ನೀರಿನಂತೆ" ಎಂದು.
3. ಗಣೇಶ ದಾಮೋದರ ಕೇಳ್ಕರ್ ಅಲಿಯಾಸ್ ದಾದಾ ಕೇಳ್ಕರ್.
4. ಅಂಜನವೇಲ್‌ನ ಮಾಥುರ್‌ದಾಸ್ ಅನೇಕ ಬಾರಿ ಮಹಾರಾಜರ ದರ್ಶನಕ್ಕಾಗಿ ಬರುತ್ತಿದ್ದನು. ಶಿರಡಿಯಲ್ಲಿ ಅವನು ಸಗುಣ ಎನ್ನುವ ಅಡುಗೆಯವನ ಜತೆಯಲ್ಲಿ ಇದ್ದನು. ಒಮ್ಮೆ ಸಗುಣ ಮತ್ತು ಮಾಥುರ್‌ದಾಸ್ ಇಬ್ಬರೂ ಹರಟೆ ಹೊಡೆಯುತ್ತಿದ್ದಾಗ ಕೆಲವು ಜನರ ಬಗ್ಗೆ

ಟೀಕೆಗಳಾಗುತ್ತಿದ್ದವು.

ಅದರ ನಂತರ ಮಾಥುರ್‌ದಾಸನು ಮಹಾರಾಜರ ಹತ್ತಿರ ಹೋದನು. ಅವನು ಕುಳಿತ ನಂತರ ಮಹಾರಾಜರು ಕೂಡಲೇ ಅವನನ್ನು ಪ್ರಶ್ನಿಸಿದರು. "ಸಗುಣ ಏನು ಹೇಳಿದ?" ಮಾಥುರ್‌ದಾಸನಿಗೆ ನಾಚಿಕೆಯಾಯಿತು. ಅವನ ಮತ್ತು ಸಗುಣನ ನಡುವೆ ನಡೆದ ಸಂಭಾಷಣೆಯು ಮಹಾರಾಜರಿಗೆ ಸರಿ ಕಾಣಲಿಲ್ಲ ಎಂಬುದು ಸ್ಪಷ್ಟವಾಯಿತು. ಮಾಥುರ್‌ದಾಸನು ಇನ್ನು ಮುಂದೆ ಮತ್ತಾರನ್ನೂ ಟೀಕಿಸಬಾರದು ಮತ್ತು ಅಂಥಹ ಸಂಭಾಷಣೆಯನ್ನು ಕೇಳಬಾರದೆಂಬುದನ್ನು ಕಲಿತನು.



# ಅಧ್ಯಾಯ - 22

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಅಕಾಲ ಮೃತ್ಯು ನಿವಾರಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸದ್ಗುರುವಿಗೆ ಜೈ, ಆನಂದಘನ! ಜ್ಞಾನ ಸ್ವರೂಪನೇ, ಪರಮಪಾವನನೇ, ಭವಭಯವನ್ನು ನಿವಾರಿಸುವವನೇ ನಿನಗೆ ಜಯವಾಗಲಿ. ಕಲಿಯುಗದ ದೋಷವನ್ನು ನಾಶಮಾಡುವವನಿಗೆ ಪರಿಪೂರ್ಣ ಸ್ವರೂಪನಿಗೆ ಜಯವಾಗಲಿ. ॥1॥ ನೀವು ಆನಂದ ಸಾಗರರು. ಅದರಲ್ಲಿ ವಿವಿಧ ಭಾವನೆಗಳ ಅಲೆಗಳು ರೂಪುಗೊಳ್ಳುತ್ತವೆ. ನೀವು ಅವುಗಳ ಅಧೀನದಲ್ಲಿರುವಿರಿ. ನಿಮ್ಮ ಭಕ್ತರ ಮೇಲೆ ಕೃಪೆತೋರಿ. ॥2॥ ಅಲ್ಪ ಅಂಧಕಾರದಲ್ಲಿನ ಸರ್ಪವೆಂಬ ಭ್ರಮೆಯು ಹಗಲು ಪ್ರಕಾಶದಲ್ಲಿ ಹಗ್ಗವಾಗುತ್ತದೆ. ಅಲ್ಪಾಂಧಕಾರ ಹಾಗೂ ಹಗಲು ಪ್ರಕಾಶ ಎರಡೂ ನಿಮ್ಮ ಸೃಷ್ಟಿಯೇ. ॥3॥ ಕೇವಲ ನೀವು ಮಾತ್ರವೇ ಸರ್ಪದ ಅಸ್ತಿತ್ವದ ಭಾವನೆಗೆ ಹುಟ್ಟು ಕೊಟ್ಟಿರುವಿರಿ ಮತ್ತು ನೀವೇ ಆ ರೂಪಕ್ಕೆ ಹಗ್ಗದ ರೂಪವನ್ನಾಗಿ ಬದಲಿಸಿರುವಿರಿ. ನೀವೇ ಅದರ ಬಗೆಗಿನ ಭಯದ ಸೃಷ್ಟಿಕರ್ತ ಮತ್ತು ನೀವೇ ಆ ಭಯವನ್ನು ಹೋಗಲಾಡಿಸುವವರು. ॥4॥ ಕಾಲದ ಪ್ರಾರಂಭದಲ್ಲಿ, ಸಂಪೂರ್ಣ ಅಂಧಕಾರವಿದ್ದಾಗ ಅಲ್ಲಿ ಸರ್ಪವೂ ಇಲ್ಲ, ಹಗ್ಗವೂ ಇಲ್ಲ. ಆ ರೀತಿಯ ಯಾವುದೇ ಅಭಿಪ್ರಾಯಕ್ಕೆ ಅವಕಾಶವೂ ಇಲ್ಲ. ಆ ರೀತಿಯ ನಿರಾಕಾರದ ಸ್ಥಿತಿಯೂ ನೀವೇ ಆಗಿರುವಿರಿ. ॥5॥ ಅನಂತರ, ನಿರಾಕಾರವು ಸಾಕಾರ ಸ್ವರೂಪ ತಾಳಿದಾಗ ಅಲ್ಪ ಪ್ರಕಾಶದಲ್ಲಿ ಅದು ಹಾವೆಂಬ ಸುಳ್ಳು ಅಭಿಪ್ರಾಯ ನೀಡುತ್ತದೆ. ಈ

ಆಭಾಸಕ್ಕೆ ಕಾರಣವೂ ನೀವೇ. ॥6॥ ಈ ರೀತಿಯ ದೃಶ್ಯ–ಅದೃಶ್ಯದ ಭಾವವು ನಿಮ್ಮ ಮನಸ್ಸಿನ ಬದಲಾಗುತ್ತಿರುವ ಭಾವಗಳ ವೃತ್ತಿಯೇ ಸರಿ. ನಿಮ್ಮ ನಿಜಸ್ವಭಾವವು ಭಾವ ಮತ್ತು ಭಾವರಹಿತವಾದ ಸ್ಥಿತಿ ಎರಡರಿಂದಲೂ ನಿರ್ಬಂಧ ಹೊಂದಿರುವುದಿಲ್ಲ. ॥7॥ ಇದರ ಬಗ್ಗೆ ಶೃತಿಗಳು ಮೌನವಾಗಿವೆ. ಆದಿಶೇಷನಿಗೂ ಸಹ ತನ್ನ ನಾಲಿಗೆಗಳಿಂದ ಸ್ತುತಿಸಲು ಅಸಾಧ್ಯ. ನಿಮ್ಮ ಸ್ವರೂಪ ವಾಸ್ತವವಾಗಿ ಇನ್ನೂ ಉಳಿದೇ ಇರುತ್ತದೆ. ಹಾಗಿರಲು ನಾನು ಅವುಗಳನ್ನು ಹೇಗೆ ಅರ್ಥಮಾಡಿಕೊಳ್ಳಲು ಸಾಧ್ಯ? ॥8॥ ಬಾಬಾ, ನಿಮ್ಮ ಸ್ವರೂಪ ದರ್ಶನವಲ್ಲದೆ ಮತ್ತೇನೂ ರುಚಿಸುವುದಿಲ್ಲ. ನನಗೆ ನಿಮ್ಮ ಸ್ವರೂಪವನ್ನು ಸದಾ ನನ್ನ ಕಣ್ಣುಗಳ ಮುಂದೆಯೇ ಇಟ್ಟಿರಲು ಮನಸ್ಸಾಗುತ್ತಿದೆ. ಮತ್ತು ಧ್ಯಾನ ಮಾಡಬೇಕೆನ್ನಿಸುತ್ತಿದೆ. ॥9॥ ನೀವು ಕೇವಲ ಶುದ್ಧ ಜ್ಞಾನದ ಮೂರ್ತಿಸ್ವರೂಪ. ಸುಖದ ಗುರಿಯನ್ನು ಸಾಧಿಸಲು ನಿಮ್ಮ ಚರಣಗಳಲ್ಲಿ ಉಳಿಯುವ ಮಾರ್ಗ ಬಿಟ್ಟರೆ ಮತ್ತೆ ಬೇರೆ ಯಾವುದೇ ಮಾರ್ಗವಿಲ್ಲ. ॥10॥ ಓಹ್, ನೀವು ನಿತ್ಯವೂ ಕುಳಿತುಕೊಳ್ಳುವ ಸಾಮಾನ್ಯವಾದ ಭಂಗಿಯು ಅದೆಷ್ಟು ಆಹ್ಲಾದಕರವು. ಅನೇಕ ಭಕ್ತರು ನಿಮ್ಮ ಚರಣಗಳಲ್ಲಿ ತಮ್ಮ ಮಸ್ತಕವನ್ನು ಇಡುವರು, ನಿಮ್ಮ ದರ್ಶನಕ್ಕಾಗಿ ಬರುವರು. ಪ್ರೀತಿಯಿಂದ ಸ್ವಸಂತೋಷವನ್ನು ಪಡೆಯುವರು. ॥11॥ ನಿಮ್ಮ ಪಾದವು ಹೇಗೆ ಕಾಣುತ್ತದೆ? ನಿಮ್ಮ ಹೆಬ್ಬೆರಳು ಮರದ ಎರಡು ಕೊಂಬೆಗಳ ಮಧ್ಯದಲ್ಲಿ ಕಾಣುವ ಚಂದ್ರನ ರೀತಿ. ನಿಮ್ಮ ಬೆರಳುಗಳ ಮಧ್ಯದಲ್ಲಿ ಹಿಡಿದು ಕೊಂಡಾಗ ಅದು ದರ್ಶನದ ತೀವ್ರತೆಯನ್ನು ತೃಪ್ತಿಪಡಿಸುತ್ತದೆ. ॥12॥ ಕೃಷ್ಣಪಕ್ಷದ ಹದಿನೈದು ದಿನಗಳ ಕೊನೆಯ ದಿನವಾದ ಅಮಾವಾಸ್ಯೆಯ ರಾತ್ರಿ ಕಳೆದ ನಂತರ ಪ್ರತಿಯೊಬ್ಬರೂ ಸಹಜವಾಗಿಯೇ ಚಂದ್ರದರ್ಶನ ಮಾಡಲು ಬಹಳ ಉತ್ಸುಕರಾಗಿರುತ್ತಾರೆ. ॥13॥ ಶುಕ್ಲಪಕ್ಷದ ದಿನಗಳು ಶುರುವಾದ ಕೂಡಲೇ ಚಂದ್ರನನ್ನು ನೋಡುವ ತವಕವಿದ್ದು ಪ್ರತಿಯೊಬ್ಬರೂ ಆಕಾಶದ ಕಡೆ ಪಶ್ಚಿಮ ದಿಕ್ಕಿನಲ್ಲಿ ದೃಷ್ಟಿ ಇಟ್ಟಿರುತ್ತಾರೆ. ॥14॥ ನಿಮ್ಮ ನಿಜವಾದ ಭಕ್ತರ ಆಶೆಗಳನ್ನು ಪೂರೈಸುವಿರಿ. ನೀವು ನಿಮ್ಮ ಬಲಗಾಲನ್ನು ಎಡ ತೊಡೆಯ ಮೇಲೆ ಅಡ್ಡಲಾಗಿಟ್ಟು ಕುಳಿತುಕೊಂಡಾಗಲೇ ಅದು ನೆರವೇರುತ್ತದೆ. ॥15॥ ಎಡಗೈಯ ತೋರುಬೆರಳು ಮತ್ತು ಮಧ್ಯದ ಬೆರಳು 'V' ಆಕಾರದಲ್ಲಿ ಬಲಪಾದವನ್ನು ಮತ್ತು ಹೆಬ್ಬೆರಳಿನ ಉಗುರು ಹೆಬ್ಬೆರಳಿನ ಹತ್ತಿರ ಇಟ್ಟು ಕುಳಿತಿರುವಿರಿ. ಇದು ಎರಡನೆಯ ದಿನದ ಚಂದ್ರನ ತರಹ ಪ್ರಕಾಶಮಾನವಾಗಿದೆ. ॥16॥ ಜನರು ಚಂದ್ರದರ್ಶನ ಮಾಡಲು ಬಹಳ ಇಚ್ಛಿಸುತ್ತಾರೆ. ಆದರೆ ಆಕಾಶದಲ್ಲಿ ಚಂದ್ರನು ಅರ್ಧವೃತ್ತಾಕಾರದಲ್ಲಿ ಕಾಣದಿದ್ದಲ್ಲಿ ಅದರ ಜ್ಞಾನವಿದ್ದವರು ನಿಮ್ಮ ಬೆರಳುಗಳ ಮಧ್ಯದಲ್ಲಿಂದ ನೋಡಲು ಹೇಳುತ್ತಾರೆ. ॥17॥ ಮತ್ತು ಹೇಳುತ್ತಾರೆ: "ಈಗ ನೋಡು. ಈ ಸಂಧಿಯಲ್ಲಿ ನೋಡು. ನೀನು ಚಂದ್ರನನ್ನು ನಿನ್ನ ಮುಂದೆಯೇ ಕಾಣುವೆ. ಬದಿಗೆ ಚಂದ್ರನ ಆಕಾರ ಚಿಕ್ಕದಾಗಿದ್ದರೂ ನೀನು ಸರಿಯಾಗಿ ಈ ಜಾಗದಲ್ಲೇ ನೋಡಬಹುದು. ॥18॥ ಹೆಬ್ಬೆಟ್ಟಿನ ಮಹಿಮೆಯು ಧನ್ಯ! ನೀವೇ ಸ್ವತಃ ವೇಣುಮಾಧವನಾಗಿ[1] ನೀವು ಗಂಗಾ ಮತ್ತು ಯಮುನಾ ಹರಿಯುವಂತೆ ಮಾಡಿದಿರಿ ಮತ್ತು ದಾಸಗಣು[2]

ಅದರಿಂದ ತೃಪ್ತಿಯಾದನು. ॥19॥ ಅವನು ಪ್ರಯಾಗದಲ್ಲಿ ಸ್ನಾನಮಾಡಲು ಅನುಮತಿ ಬೇಡಿದಾಗ ಅವನಿಗೆ ಅಜ್ಞಾಪನೆ ಮಾಡಲಾಯಿತು. – "ನೋಡು. ನನ್ನ ಹೆಬ್ಬೆಟ್ಟು ಪ್ರಯಾಗವೆಂದು ತಿಳಿ. ಇದನ್ನು ನಂಬು ಮತ್ತು ಅದರಲ್ಲಿ ಒಂದು ಮುಳುಗು ಹಾಕು." ॥20॥ ಬಾಬಾರವರು ಈ ರೀತಿ ಹೇಳಿದ ಕೂಡಲೇ, ದಾಸಗಣು ತನ್ನ ತಲೆಯನ್ನು ಸಾಯಿಯ ಚರಣಗಳಲ್ಲಿಟ್ಟನು. ಅವರ ಎರಡು ಹೆಬ್ಬೆರಳುಗಳಿಂದ ಗಂಗಾ ಮತ್ತು ಯಮುನಾ ಆ ಜಾಗದಲ್ಲೇ ಉಕ್ಕಿಬಂದವು. ॥21॥ ದಾಸಗಣು ಈ ಪ್ರಸಂಗದ ಮೇಲೆ ಒಂದು ಸುಂದರ ಹಾಡನ್ನು ರಚಿಸಿದರು. "ನಿನ್ನ ಶಕ್ತಿ ಅಗಾಧ. ನಿನ್ನ ಲೀಲೆಗಳು ಅಘಟಿತ" ಇತ್ಯಾದಿ. ಶ್ರೋತೃಗಳು ಕೇಳಲು ಉತ್ಸುಕರಾಗಿದ್ದಾರೆ. ॥22॥ ಅದನ್ನು ಸಾಯಿಸಚ್ಚರಿತೆಯ ನಾಲ್ಕನೆಯ ಅಧ್ಯಾಯದಲ್ಲಿ ಕಾಣಬಹುದು. ದಾಸಗಣು ಇದನ್ನು ತಾನೇ ಸ್ವತಃ ಹಾಡಿದ್ದಾನೆ. ಶ್ರೋತೃಗಳು ಅದನ್ನು ಪುನಃ ಓದಿದಲ್ಲಿ ಮತ್ತೆ ಸಂತೋಷಪಡಬಹುದು. ॥23॥ ಆದುದರಿಂದ ಎರಡು ರೆಂಬೆಗಳ ಮಧ್ಯದಲ್ಲಿ ಬಿದಿಗೆ ಚಂದ್ರನನ್ನು ಗುರುತಿಸುವಂತೆ, ತೋರುಬೆರಳು ಮತ್ತು ಮಧ್ಯಮ ಬೆರಳುಗಳನ್ನು ತನ್ನ ಚರಣಗಳ ಮೇಲಿಟ್ಟು ನೋಡುತ್ತ ಸಾಯಿಮಾತೆಯು ತನ್ನ ಭಕ್ತರಿಗೆ ಒಂದು ಸರಳವಾದ ಧ್ಯಾನ ಮಾರ್ಗವನ್ನು ತೋರಿಸಿದ್ದಾಳೆ. ॥24॥ ಇದು ನಮಗೆ ಎಲ್ಲರ ಮುಂದೆಯೂ ನಿರಭಿಮಾನಿಯಾಗಿರಬೇಕು ಮತ್ತು ಉಂಗುಷ್ಠದ ಮೇಲೆ ಏಕಾಗ್ರತೆ ಇರಬೇಕೆಂದು ತಿಳಿಸುತ್ತದೆ. ಇದು ಒಂದು ಅತಿ ಸುಲಭವಾದ ಭಕ್ತಿಮಾರ್ಗದ ಸಾಧನ. ॥25॥ ಈಗ ನಾವು ಹಿಂದಿನ ಕಥೆಗೆ ಹೋಗೋಣ. ಅಲ್ಲಿ ಭಕ್ತನು ಯಾವ ರೀತಿ ಅನುಗ್ರಹೀತನಾದನು ಎಂಬ ಅಪೂರ್ವವಾದ ಚರಿತ್ರೆಯ ಶ್ರವಣವನ್ನು ಗಮನವಿಟ್ಟು ಮಾಡಿ. ॥26॥ ಶಿರಡಿಯು ಒಂದು ಪುಣ್ಯಕ್ಷೇತ್ರವಾಗಿದೆ. ಬಾಬಾರವರಿಂದಾಗಿ ಪವಿತ್ರದಲ್ಲಿ ಪವಿತ್ರವಾಗಿದೆ. ಹಗಲು ರಾತ್ರಿ ಭಕ್ತರ ಪ್ರವಾಹವೇ ಹರಿದು ಬರುತ್ತಿದೆ. ॥27॥ ಹತ್ತುದಿಕ್ಕುಗಳಲ್ಲಿಯೂ ಜನರು ಕಲ್ಪವೃಕ್ಷವು ಸಾಯಿಯ ಸ್ವರೂಪದಲ್ಲಿ ಶಿರಡಿಯಲ್ಲಿ ಅವತರಿಸಿದಂತೆ ಭಾವಿಸಿದರು. ಅವರು ಸ್ವತಃ ವೈಯಕ್ತಿಕ ಅನುಭವದಿಂದ ಅಥವಾ ಇತರ ಅನುಭವದಿಂದ ತಿಳಿದಿದ್ದರು. ॥28॥ ಅವರು ಶ್ರೀಮಂತ, ಬಡವ ಇಬ್ಬರನ್ನೂ ಸಮದೃಷ್ಟಿಯಿಂದ ಕಾಣುತ್ತಿದ್ದರು. ಅತರ್ಕ್ಯವಾದ ಜಾಣ್ಮೆಯು ಯೋಗಕ್ಷೇಮಕ್ಕೆ ಕಾರಣವಾಗುತ್ತದೆ. ॥29॥ ಓಹ್, ಅದೆಂತಹ ಪರಿಶುದ್ಧ ನಿಸ್ಸೀಮ ಪ್ರೇಮ! ಅವರ ಸಹಜವಾದ ಜ್ಞಾನಸಂಪನ್ನತೆ ಅತ್ಯುತ್ತಮವಾದ ಸರ್ವಾತ್ಮಭಾವ. ಅದನ್ನು ಅನುಭವಿಸಿದಂತಹ ಭಾಗ್ಯವಂತನೇ ಧನ್ಯ! ॥30॥ ಕೆಲವು ವೇಳೆ ಅವರು ದೃಢವಾದ ಮೌನವನ್ನು ಧಾರಣೆ ಮಾಡುವರು. ಕೇವಲ ಅದೇ ಬ್ರಹ್ಮನ ಮೇಲೆ ನಡೆಯುವ ದೊಡ್ಡ ವ್ಯಾಖ್ಯಾನ. ಕೆಲವು ವೇಳೆ ಅವರು ಭಕ್ತಗಣದಿಂದ ಸುತ್ತುವರೆಯಲ್ಪಟ್ಟಿದ್ದರೆ ಅವರು ಚೈತನ್ಯಸ್ವರೂಪರು ಮತ್ತು ಆನಂದಘನರು. ॥31॥ ಕೆಲವೊಮ್ಮೆ ಅವರ ಮಾತುಗಳಲ್ಲಿ ಗೂಢಾರ್ಥವಿರುತ್ತಿತ್ತು. ಕೆಲವೊಮ್ಮೆ ವಿನೋದವಾಗಿ ಮಾತನಾಡುತ್ತಿದ್ದರು. ಮತ್ತು ಕೆಲವು ಸಲ ಸಂದಿಗ್ಧತೆಯನ್ನು ತಂದಿಡುತ್ತಿದ್ದರು. ನೇರವಾಗಿ ಕೋಪಗೊಂಡು ಮಾತನಾಡುತ್ತಿದ್ದರು. ॥32॥ ಕೆಲವು ಸಲ ಭಾವಾರ್ಥವನ್ನು ತಿಳಿಸುವರು,

ಕೆಲವು ಸಲ ವಿವೇಕಪೂರಿತರಾಗಿದ್ದರು, ಕೆಲವು ಸಲ ನಿಶ್ಚಯಾತ್ಮಕವಾಗಿದ್ದರು. ಕೆಲವು ಸಲ ನೇರವಾಗಿ, ಹರಿತವಾಗಿ ಮಾತನಾಡುತ್ತಿದ್ದರು – ಈ ರೀತಿ ಅನೇಕ ವಿಷಯಗಳನ್ನು ಅನೇಕ ರೀತಿಯಲ್ಲಿ ಅನೇಕರಿಗೆ ಉಪದೇಶ ನೀಡುತ್ತಿದ್ದರು. ॥33॥ ಈ ರೀತಿ ಸಾಯಿಸಮರ್ಥರ ಚರಿತ್ರೆಯು, ಮನಸ್ಸು, ಬುದ್ಧಿ, ವಾಕ್ ಅವುಗಳಿಗೆ ಅತೀತವಾದದ್ದು. ಅವರ ಕಾರ್ಯಗಳನ್ನು ಕಲ್ಪಿಸಲೂ ಸಾಧ್ಯವಿಲ್ಲ. ಅವು ಅನಿರೀಕ್ಷಿತ ಮತ್ತು ಅಗ್ರಾಹ್ಯ. ॥34॥ ಅವರ ಮುಖವನ್ನು ಅವಲೋಕಿಸಲು ಕಾತರರಾಗಿ ಅವರೊಡನೆ ಸಂಭಾಷಿಸಲು ಮತ್ತು ಅವರ ಲೀಲೆಗಳನ್ನು ಕೇಳುವವರೆಷ್ಟು ಕಾತರ ತೃಪ್ತಿಯಾಗುತ್ತಿರಲಿಲ್ಲ. ಆದರೂ ನಾವು ಆನಂದೋತ್ಸಾಹದಲ್ಲಿದ್ದೆವು. ॥35॥ ಸುರಿಯುವ ಮಳೆಯ ಹನಿಗಳನ್ನಾದರೂ ಎಣಿಸಬಹುದು, ಗಾಳಿಯನ್ನು ಚರ್ಮದ ಚೀಲದಲ್ಲಿ ಕಟ್ಟಿಡಬಹುದು. ಆದರೆ ಸಾಯಿಯ ಚಮತ್ಕಾರದ ಶಕ್ತಿಯನ್ನು ಅಳೆಯಲು ಹೇಗೆ ಸಾಧ್ಯ? ॥36॥ ಈಗ ಸಮಾಧಾನವಾಗಿ ಈ ಕಥೆಯನ್ನು ಮುಂದೆ ಕೇಳಿರಿ. ಸಾಯಿಯು ಭಕ್ತಸಂರಕ್ಷಣೆಗಾಗಿ ಎಷ್ಟು ಚಿಂತೆಮಾಡುತ್ತಿದ್ದರು ಮತ್ತು ಅವರ ದುರ್ಭರವಾದ ಕಷ್ಟಗಳನ್ನು ನಿವಾರಿಸುತ್ತಿದ್ದರು ಮತ್ತು ಸ್ವಸ್ಥಚಿತ್ತರನ್ನಾಗಿ ಮಾಡುತ್ತಿದ್ದರು. ॥37॥ ಯಾವ ರೀತಿಯಲ್ಲಿ ಭಕ್ತರಿಗೆ ಮುಂದೆ ಬರುವಂತಹ ಗಂಡಾಂತರಗಳನ್ನು ಅರಿತು ಅವರಿಗೆ ಸಮಯೋಚಿತವಾದ ಎಚ್ಚರಿಕೆ ನೀಡಿ ಅವರನ್ನು ರಕ್ಷಿಸಿ ಅವರಿಗೆ ತಮ್ಮ ಚರಣಗಳಲ್ಲಿ ಆಶ್ರಯನೀಡುತ್ತಿದ್ದರು. ಈ ರೀತಿ ಅವರು ಸದಾ ಅವರುದ್ಧಾರಕ್ಕಾಗಿ ತತ್ಪರರಾಗಿರುತ್ತಿದ್ದರು. ॥38॥ ಮೇಲೆ ಹೇಳಿದ ವಿಷಯವನ್ನು ಉಲ್ಲೇಖಿಸುವ ಘಟನೆಯು ಈಗ ಬರುವುದು. ಅದು ಶ್ರವಣೋತ್ಸುಕರಾದ ನಿಮ್ಮನ್ನೆಲ್ಲ ಸಂತೋಷಗೊಳಿಸುತ್ತದೆ. ಅದು ಸಾಯಿಸಮಾಗಮದ ಸಂತೋಷವನ್ನು ನೀಡಿ ಭಕ್ತರ ನಂಬಿಕೆಯನ್ನು ಪುಷ್ಟಿಗೊಳಿಸುತ್ತದೆ. ॥39॥ ಇದಕ್ಕಾಗಿ ಯಾವ ರೀತಿ ಮನುಷ್ಯನು ದೀನನು, ಹೀನನು ಮತ್ತು ನೀಚನು ಎಂಬುದರ ಬಗ್ಗೆ ಯೋಚನೆ ಇಲ್ಲ. ಅವನು ಸಾಯಿಯ ಕಥೆಗಳನ್ನು ಕೇಳುವ ಪ್ರೀತಿಯನ್ನು ಬೆಳೆಸಿಕೊಂಡಲ್ಲಿ ಮತ್ತು ಸರ್ವದಾ ಸಾಯಿನಾಮ ಜಪಮಾಡುತ್ತಿದ್ದರೆ ಸಾಯಿಯು ಭವಸಾಗರವನ್ನು ದಾಟಿಸುವರು. ॥40॥ ಕಾಕಾ ಸಾಹೇಬ ಮಿರೀಕರ್ ಅಹಮದ್ ನಗರದ ನಿವಾಸಿ. ಸರ್ಕಾರದಿಂದ ಸರದಾರ ಎಂಬ ಬಿರುದನ್ನು ಪಡೆದಿದ್ದನು. ಸರ್ಕಾರವು ಅವನಲ್ಲಿ ಪ್ರಸನ್ನವಾಗಿತ್ತು. ॥41॥ ಅವನ ಮಗನು ಕೋಪರಗಾವನ ಅತ್ಯಂತ ಕರ್ತವ್ಯತತ್ಪರನಾದ ಮಾಮಲೇದಾರನಾಗಿದ್ದನು. ಅವನು ಒಮ್ಮೆ ಚಿಥಲಿಗೆ ಕರ್ತವ್ಯದ ಮೇಲೆ ಬಂದಿದ್ದಾಗ ಶಿರಡಿಗೆ ದರ್ಶನಕ್ಕಾಗಿ ಬಂದನು. ॥42॥ ಅವನು ಹೋಗಿ ಮಸೀದಿಯಲ್ಲಿ ಕುಳಿತುಕೊಂಡನು. ಬಾಬಾರವರ ಚರಣಗಳಲ್ಲಿ ಮಸ್ತಕವನ್ನಿಟ್ಟನು. ಅವರು ಕ್ಷೇಮ ಕುಶಲವನ್ನು ವಿಚಾರಿಸುತ್ತ ವಾರ್ತಾಲಾಪ ಮಾಡಿದರು. ॥43॥ ಇಲ್ಲಿ ಒಂದು ದೊಡ್ಡ ಗುಂಪು ಇತ್ತು. ಮಾಧವರಾವ್ ಸಹ ಇದ್ದನು. ಆಗ ಅವರು ಬಾಬಾರವರ ಆಶ್ಚರ್ಯಕರವಾದ ಕಥಾಮೃತವನ್ನು ಅತ್ಯಂತ ಗಮನವಿಟ್ಟು ಆಲಿಸುತ್ತಿದ್ದರು. ॥44॥ ಯಾವ ರೀತಿ ಭವಿಷ್ಯದ ಕಷ್ಟಗಳನ್ನು ಸೂಚಿಸಲಾಯಿತು. ಯಾವ ರೀತಿ ಅವುಗಳನ್ನು ತಡೆಯಲು ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಅವರು ಹೇಗೆ ತಮ್ಮ ಭಕ್ತರನ್ನು ರಕ್ಷಿಸಿದರು – ಬಾಬಾರವರ ಈ

ಕಾರ್ಯಗಳೆಲ್ಲವೂ ಅಘಟಿತ ಘಟನೆಗಳಾಗಿದ್ದವು. ॥45॥ ಆ ಸಮಯದಲ್ಲಿ ಬಾಬಾರವರು ಮಿರೀಕರ್‌ರನ್ನು ಒಂದು ಕುತೂಹಲಕಾರಿಯಾದ ಪ್ರಶ್ನೆ ಕೇಳಿದರು: "ಓಹ್! ಇದು ನಮ್ಮ ದ್ವಾರಕಾಮಾಯಿಯು. ನಿನಗೆ ಗೊತ್ತಾ?" ॥46॥ ಬಾಲಾ ಸಾಹೇಬನಿಗೆ ಪ್ರಶ್ನೆ ಅರ್ಥವಾಗಲಿಲ್ಲ. ಬಾಬಾ ಹೇಳಿದರು: "ಈಗ ನೋಡು! ಇದು ನಮ್ಮ ದ್ವಾರಕಾಮಾಯಿ. ॥47॥ "ಇದು ನಮ್ಮ ದ್ವಾರಕಾಮಾಯಿ! ಮಸೀದಿಯ ತೊಡೆಯಮೇಲೆ ಕುಳಿತುಕೊಂಡಾಗ ಆಕೆ ತನ್ನ ಮಕ್ಕಳನ್ನು ಕಾಪಾಡುತ್ತಾಳೆ. ಎಂದಿಗೂ ಚಿಂತೆಯ ಪ್ರಶ್ನೆಯೇ ಇರುವುದಿಲ್ಲ. ॥48॥ "ಈ ಮಸೀದಿ ಮಾಯಿಯು ಬಹಳ ದಯಾಳು. ಅವಳು ಎಲ್ಲ ಶ್ರದ್ಧಾವಂತ ಮತ್ತು ಮುಗ್ಧಭಕ್ತರಿಗೆ ತಾಯಿ. ಯಾರಿಗೆ ಏನೇ ಕಷ್ಟವಾದರೂ ಸರಿ, ಅವಳು ಕೂಡಲೇ ರಕ್ಷಿಸುತ್ತಾಳೆ. ॥49॥ "ಒಮ್ಮೆ ಒಬ್ಬ ವ್ಯಕ್ತಿಯು ಅವಳ ತೊಡೆಯಮೇಲೆ ನೆಲೆಗೊಂಡರೆ ಸಾಕು. ಅವನ ಕಷ್ಟಗಳೆಲ್ಲವೂ ಪರಿಹಾರವಾಗುವುವು. ಅವಳ ನೆರಳಿನಲ್ಲಿ ಶರಣಾದವನು ಸುಖಾಸನದಲ್ಲಿ ಆರೂಢನಾಗುತ್ತಾನೆ. ॥50॥ "ಇದು ಆ ದ್ವಾರಕೆ, ದ್ವಾರಾವತಿ!" ಎಂದು ಬಾಬಾ ಅವನಿಗೆ ವಿಭೂತಿಯನ್ನು ಕೊಟ್ಟರು. ಮತ್ತು ತಮ್ಮ ಅಭಯ ಹಸ್ತವನ್ನು ಅವನ ತಲೆಯಮೇಲಿಟ್ಟರು. ಅನಂತರ ಮಿರೀಕರನು ಹೊರಡಲು ಎದ್ದನು. ॥51॥ ಬಾಬಾರವರು ಮತ್ತೆ ಮಿರೀಕರ್‌ಗೆ ಒಂದು ಪ್ರಶ್ನೆ ಮಾಡಲು ಯೋಚಿಸಿದರು. "ನಿನಗೆ ಉದ್ದನೆಯ 'ಬೋವಾ' (ಸರ್ಪ) ಮತ್ತು ಅದರ ಗೂಢವಾದ ಶಕ್ತಿಯ ಅರಿವಿದೆಯಾ?" ॥52॥ ಅನಂತರ ಅವರು ತಮ್ಮ ಮುಷ್ಠಿಯನ್ನು ಹಿಡಿದು ಎಡಗೈಯನ್ನು ಬಲಗೈನ ಮೊಣಕೈ ಹತ್ತಿರ ಹಿಡಿದುಕೊಂಡು ಕೈಯನ್ನು ಆಡಿಸುತ್ತ ಹೇಳಿದರು, "ಅವನು ಇಷ್ಟು ಭಯಂಕರ! ॥53॥ "ಆದರೆ ಅವನು ನಮಗೆ ಏನೂ ಮಾಡಲು ಸಾಧ್ಯ? ನಾವೆಲ್ಲರೂ ದ್ವಾರಕಾಮಾಯಿಯ ಮಕ್ಕಳು. ಯಾರೂ ಅವಳ ಆಟಗಳನ್ನು ಗ್ರಹಿಸಲು ಸಾಧ್ಯವಿಲ್ಲ. ಸುಮ್ಮನೆ ಶಾಂತವಾಗಿ ಅವಳ ಕೌತುಕಗಳನ್ನು ಗಮನಿಸು. ॥53॥ "ದ್ವಾರಕಾಮಾಯಿಯು ಕಾಪಾಡಲು ಇರುವಾಗ ಆ ಉದ್ದನೆಯ 'ಬೋವಾ'ಗೆ ಮುತ್ತಿಗೆ ಹಾಕಲು ಧೈರ್ಯವೆಲ್ಲಿ? ಹೊಡೆಯುವವನ ಶಕ್ತಿಯು ರಕ್ಷಕನ ಶಕ್ತಿಯ ಜೊತೆ ಹೋಲಿಸಲು ಸಾಧ್ಯವಿಲ್ಲ. ಅದನ್ನು ಹೇಗೆ ತಾನೇ ವಿವರಿಸುವುದು?" ॥55॥ ಬಾಬಾರವರು ಇದನ್ನು ಈ ಸಮಯದಲ್ಲಿ ಏಕೆ ಹೇಳಿದರು? ಮತ್ತು ಮಿರೀಕರ್‌ಗೆ ಯಾವ ರೀತಿ ಇದರ ಜೊತೆ ಸಂಬಂಧ? ಪ್ರತಿಯೊಬ್ಬರೂ ಅದನ್ನು ತಿಳಿಯಲು ಕಾತರರಾಗಿದ್ದರು. ॥56॥ ಅವನಿಗೆ ಬಾಬಾರವರನ್ನು ಪ್ರಶ್ನಿಸುವ ಧೈರ್ಯವಿರಲಿಲ್ಲ. ಆದ್ದರಿಂದ ಅವರ ಚರಣಗಳಲ್ಲಿ ಶಿರಬಾಗಿ ನಮಿಸಿದನು. ಮತ್ತು ಚಿತಲಿಗೆ ಹೋಗಲು ತಡವಾಗುತ್ತದೆ ಎಂದು ಹೇಳುತ್ತ ಮೆಟ್ಟಿಲುಗಳನ್ನು ಇಳಿದನು. ॥57॥ ಮಾಧವರಾವನೂ ಅವನ ಜೊತೆ ಇದ್ದನು. ಇಬ್ಬರೂ ಅಂಗಳದ ದ್ವಾರವನ್ನು ತಲುಪಿದ ಕೂಡಲೇ ಬಾಬಾರವರು ಮಾಧವರಾವನನ್ನು ಹಿಂದಕ್ಕೆ ಕರೆದರು, "ಬಾ ಇಲ್ಲಿ, ಒಂದು ಕ್ಷಣ. ॥58॥ "ಶಾಮಾ, ನೀನೂ ತಯಾರಾಗಿ ಅವನ ಜೊತೆಯಲ್ಲಿ ಹೋಗು. ಚಿತಲಿ ಯಾತ್ರೆ ಮಾಡಿ ಬಾ. ನೀನು ಭಾರಿ ಸಂತಸ ಪಡುತ್ತೀಯೆ" ಎಂದರು. ॥59॥ ಕೂಡಲೇ ಶಾಮಾನು ಕೆಳಗಿಳಿದು ಮಿರೀಕರನ ಹತ್ತಿರ ಬಂದನು. ಅವನು ಹೇಳಿದನು,

"ನಾನೂ ಸಹ ನಿನ್ನ ಜೊತೆ ನಿನ್ನ ಟಾಂಗಾದಲ್ಲಿ ಚಿತಲಿಗೆ ಬರುತ್ತೇನೆ. ॥60॥ "ನಾನು ಮನೆಗೆ ಹೋಗಿ ತಯಾರಿ ನಡೆಸಿ ಒಂದು ನಿಮಿಷದಲ್ಲಿ ಹಿಂದೆ ಬರುತ್ತೇನೆ. ನಾನೂ ಸಹ ನಿನ್ನ ಜೊತೆ ಚಿತಲಿಗೆ ಹೋಗಬೇಕೆಂದು ಬಾಬಾ ಹೇಳಿದ್ದಾರೆ." ॥61॥ ಮಿರೀಕರ್ ಅವನಿಗೆ ಹೇಳಿದನು, "ನೀನು ಅಷ್ಟು ದೂರ ಚಿತಲಿಗೆ ಬಂದು ಏನು ಮಾಡುವೆ? ಇದು ನಿನಗೆ ಅನವಶ್ಯಕವಾದ ತೊಂದರೆಯಾಗಿದೆ." ॥62॥ ಮಾಧವರಾವ ಹಿಂದಕ್ಕೆ ಬಂದು ಬಾಬಾರವರಲ್ಲಿ ನಡೆದ ವಿಷಯ ಹೇಳಿದನು. ಬಾಬಾ ಹೇಳಿದರು: "ಸರಿ! ನಿನಗೆ ಕಳೆದು ಹೋಗುವುದಾದರೂ ಏನಿದೆ?" ॥63॥ ಮಂತ್ರ, ತೀರ್ಥ, ಬ್ರಾಹ್ಮಣ, ಭಗವಂತ, ಜ್ಯೋತಿಷಿ, ವೈದ್ಯ ಅಥವಾ ಗುರು – ಇವರ ವಿಷಯಗಳಲ್ಲೆಲ್ಲ ಲಾಭವು ನೀನು ಅವರಲ್ಲಿಟ್ಟಿರುವ ನಂಬಿಕೆಯ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ. ॥64॥ ನಾವು ಯಾವಾಗಲೂ ಒಳ್ಳೆಯದನ್ನೇ ಕೋರಬೇಕು ಮತ್ತು ತಕ್ಕದಾದ ಸಲಹೆ ನೀಡಬೇಕು. ಅಷ್ಟಾದರೂ ಸಹ ವಿಧಿಬರಹವಿದ್ದ ಹಾಗೆಯೇ ಆಗುತ್ತದೆ. ॥65॥ ಆದರೆ ಈಗ ಮಿರೀಕರನು ತನ್ನ ನಿರ್ಧಾರದ ಬಗ್ಗೆ ಶಂಕೆಪಟ್ಟನು. ಮತ್ತು ಬಾಬಾರವರ ಮಾತುಗಳನ್ನು ಪಾಲಿಸಬೇಕೆಂದು ಯೋಚಿಸಿದನು. ಆದ್ದರಿಂದ ಅವನು ಬೇಗನೇ ಮಾಧವರಾವ್‌ಗೆ ಸನ್ನೆಮಾಡಿ ತನ್ನ ಜೊತೆ ಚಿತಲಿಗೆ ಬರುವಂತೆ ತಿಳಿಸಿದನು. ॥66॥ ಆದರೆ ಮಾಧವರಾವ್ ಹೇಳಿದನು, "ನಿಲ್ಲು, ನಾನು ಬರುತ್ತೇನೆ. ನಾನು ಮತ್ತೆ ಬಾಬಾರವರ ಅನುಮತಿ ಪಡೆಯುತ್ತೇನೆ. ಅವರು ಹೋಗು ಎಂದರೆ ಕೂಡಲೇ ಹಿಂತಿರುಗಿ ಬರುತ್ತೇನೆ. ನಾನು ಬೇಗನೆ ಬರುತ್ತೇನೆ. ॥67॥ "ನಾನು ನಿನ್ನೊಡನೆ ಬರಲು ಹೊರಟಿದ್ದೆನು. ಆದರೆ ನೀನು ನನ್ನನ್ನು ಹಿಂದಕ್ಕೆ ಹೋಗುವಂತೆ ಮಾಡಿದೆ. ನಂತರ ಬಾಬಾ ಹೇಳಿದರು, "ಸರಿ! ನಿನಗೇನು ನಷ್ಟ?" ಎಂದು ಅವರು ನನ್ನನ್ನುಸುಮ್ಮನೆ ಕಳ್ಳಿರಿಸಿದರು. ॥68॥ "ಈಗ ನಾನು ಅವರನ್ನು ಮತ್ತೆ ವಿಚಾರಿಸಬೇಕು. ಅವರು ಹೌದೆಂದರೆ ನಾನು ಕೂಡಲೇ ಬರುತ್ತೇನೆ. ನಾನು ಅವರು ಹೇಳಿದ ಹಾಗೆಯೇ ಕೇಳುತ್ತೇನೆ. ನಾನು ಕೇವಲ ಅವರ ಆಜ್ಞಾಪಾಲಕನಾದ ದಾಸ. ॥69॥ ಅನಂತರ ಅವನು ಬಾಬಾರವರಲ್ಲಿಗೆ ಹೋಗಿ ಹೇಳಿದನು. "ಮಿರೀಕರನು ಅವನ ಜೊತೆ ಚಿತಲಿಗೆ ಬರಲು ಆಹ್ವಾನಿಸುತ್ತಿದ್ದಾನೆ. ಮತ್ತು ತಮ್ಮ ಅನುಮತಿಯನ್ನು ಬೇಡುತ್ತಿದ್ದಾನೆ." ॥70॥ ಸಾಯಿ ಮುಗುಳ್ನಗುತ್ತಾ ಹೇಳಿದರು, "ಅದು ಸರಿ, ಅವನು ನಿನ್ನನ್ನು ಕರೆದುಕೊಂಡು ಹೋಗುತ್ತಿದ್ದರೆ ಸರಿ. ನೀನು ಹೋಗಬಹುದು. ಅವಳ ಹೆಸರು ಮಸೀದಿಮಾಯಿ ಎಂದು. ಅವಳು ತನ್ನ ಗೌರವಕ್ಕೆಂದೂ ಚ್ಯುತಿ ತರಿಸುವುದಿಲ್ಲ." ॥71॥ "ಅಷ್ಟಕ್ಕೂ ಸಾಯಿಯು ತಾಯಿಯೇ. ತನ್ನ ಮಕ್ಕಳ ಮೇಲೆ ಅತಿ ಪ್ರೇಮಮಯಿ ಹಾಗೂ ಅತಿ ಕರುಣಾಮಯಿ. ಆದರೆ ಮಕ್ಕಳು ನಂಬಿಕೆಗೆ ಅನರ್ಹರಾದಲ್ಲಿ ಅವಳು ಯಾವ ರೀತಿ ಅವರನ್ನು ಸಂಭಾಳಿಸಲು ಸಾಧ್ಯ?" ॥72॥ ಅನಂತರ ಸಾಯಿಚರಣಗಳಲ್ಲಿ ವಂದಿಸಿ ಮಾಧವರಾವ್ ಹೊರಟನು. ಮತ್ತು ಮಿರೀಕರ್ ಕಾಯುತ್ತಿದ್ದ ಜಾಗಕ್ಕೆ ಹೋಗಿ ಟಾಂಗಾದಲ್ಲಿ ಕುಳಿತುಕೊಳ್ಳಲು ಹೋದನು. ॥73॥ ಇಬ್ಬರೂ ಚಿತಲಿಗೆ ಹೋದರು. ಅಲ್ಲಿ ವಿಚಾರಿಸಿದಾಗ ಅಲ್ಲಿಗೆ ಬರಬೇಕಾಗಿದ್ದ ಕೆಲವು ಉನ್ನತಾಧಿಕಾರಿಗಳು ಇನ್ನೂ ಬಂದಿರಲಿಲ್ಲ.

ಹಾಗಾಗಿ ಅವರು ಸಮಾಧಾನದಿಂದ ಕಾದು ಕುಳಿತರು. ॥74॥ ಅಲ್ಲಿ ಮಾರುತಿ ದೇವಾಲಯದಲ್ಲಿ ಉಳಿದುಕೊಳ್ಳಲು ಜಾಗವಿತ್ತು, ಅದುದರಿಂದ ಇಬ್ಬರೂ ಕೂಡಲೇ ಅಲ್ಲಿಗೆ ಪ್ರಯಾಣ ಬೆಳೆಸಿದರು. ॥75॥ ರಾತ್ರಿಯ ಒಂದು ಪ್ರಹರ ಕಳೆಯಿತು. ಸುಮಾರು ಹತ್ತು ಗಂಟೆಯ ಸಮಯ. ತಮ್ಮ ಹತ್ತಿರ ಜಮಖಾನಗಳು, ಹಾಸಿಗೆಗಳು ಮತ್ತು ತಲೆದಿಂಬುಗಳು  ಇವುಗಳನ್ನು ಹರಡಿ ಇಬ್ಬರೂ ದೀಪದ ಕೆಳಗೆ ಹರಟೆಹೊಡೆಯುತ್ತ ಕುಳಿತರು. ॥76॥ ಅಲ್ಲೊಂದು ವಾರ್ತಾಪತ್ರಿಕೆ ಬಿದ್ದಿತ್ತು. ಮಿರೀಕರ್ ಅದನ್ನು ತೆರೆದು ಓದಲು ಪ್ರಾರಂಭಿಸಿದನು. ಅವನು ಒಂದು ಸಮಾಚಾರದ ತುಣುಕಿನಲ್ಲಿ ತಲ್ಲೀನನಾದನು. ಅನಂತರ ಒಂದು ವಿಚಿತ್ರ ಜರಗಿತು. ॥77॥ ಆ ಒಂದು ಕೆಟ್ಟ ಸಮಯದಲ್ಲಿ ಒಂದು ಸರ್ಪವು ಬಂದು, (ಅದೆಲ್ಲಿಂದ ಬಂದಿತೋ ಯಾರಿಗೂ ತಿಳಿಯದು.) ಸುತ್ತಿಕೊಂಡು ಯಾರಿಗೂ ತಿಳಿಯದಂತೆ ಒಂದು ಕಡೆ ನೆಲಸಿತು. ॥78॥ ಅದು ಮಿರೀಕರನ ಮೃದುವಾದ ಮೇಲುವಸ್ತ್ರದ ತುದಿಯಲ್ಲಿ ಸುಮ್ಮನೇ ಶಾಂತವಾಗಿ ಕುಳಿತಿತ್ತು. ಆ ವಸ್ತ್ರವು ಅವನ ಸೊಂಟದ ಮೇಲಿತ್ತು. ॥79॥ ಅದು ಶಾಂತವಾಗಿ ಪ್ರವೇಶಿಸಿದಾಗ ಅದು ಸುರ್, ಸುರ್ ಎಂಬ ಶಬ್ದವನ್ನು ಮಾಡಿದ್ದಿರಬಹುದು. ಅದು ವಾರ್ತಾಪತ್ರಿಕೆಯ ಪರಪರ ಶಬ್ದದಲ್ಲಿ ಲೀನವಾಗಿದ್ದಿರಬೇಕು. ಆದ್ದರಿಂದ ಯಾರಿಗೂ ಸರ್ಪದ ಯಾವುದೇ ಅನುಮಾನವೂ ಇರಲಿಲ್ಲ. ॥80॥ ಪರಿಸ್ಥಿತಿಯು ಇಷ್ಟು ಭಯಂಕರವಾಗಿದ್ದರೂ ಮಿರೀಕರನು ಸುದ್ದಿಸಮಾಚಾರದಲ್ಲಿ ಮಗ್ನನಾಗಿದ್ದುದರಿಂದ ಇದರ ಬಗ್ಗೆ ಸಂಪೂರ್ಣವಾಗಿ ಮರೆಮಾಚಲ್ಪಟ್ಟಿದ್ದನು. ಆದರೆ ಅವನ ಜವಾನನ ಅಂತರಂಗವು ಕಲ್ಪನೆಯನ್ನೂ ಮೀರಿತ. ॥81॥ "ಎಲ್ಲಿಂದ ಈ ಶಬ್ದ ಬರುತ್ತೆ? ಇದು ಎಂತಹ ಶಬ್ದ? ಮತ್ತು ಅದು ಯಾವ ಕಾರಣದಿಂದ ಬರುತ್ತದೆ?" ಎಂದು ಯೋಚಿಸಿತ್ತ ಆ ಜವಾನನು ದೀಪವನ್ನು ಸ್ವಲ್ಪ ಮೇಲೆತ್ತಿದನು. ಲೋ! ಅಲ್ಲಿ ಅವನು ಲಂಬೂ ಮಹಾರಾಜ(ಸರ್ಪ)ನನ್ನು ನೋಡಿದನು! ॥82॥ ಅದನ್ನು ನೋಡಿದ ಕೂಡಲವನು ಭಯಭೀತನಾದನು. 'ಹಾವು! ಹಾವು!' ಎಂದು ಮೆದುವಾಗಿ ಕೂಗಿದನು. ಇದನ್ನು ಕೇಳಿದ ಮಿರೀಕರನಿಗೆ ಧೈರ್ಯ ಉಡುಗಿತು ಮತ್ತು ಮೈಯೆಲ್ಲ ನಡುಗಿಹೋದನು. ॥83॥ ಶಾಮಾರಾಯನೂ ಚಕಿತನಾದನು. ಅವನು ತನ್ನಲ್ಲೇ ಹೇಳಿಕೊಂಡನು, "ಬಾಬಾ, ನೀನು ಏನು ಮಾಡಿದೆ? ಈ ವಿಘ್ನವು ನಿನಗೆ ಹೇಗೆ ತಿಳಿಯಿತು? ಈಗ ನೀನೇ ಇದನ್ನು ನಿವಾರಿಸಬೇಕು." ॥84॥ ಅನಂತರ, ಇಂತಹ ಅವಸ್ಥೆಯಲ್ಲಿ ಎಲ್ಲರೂ ಅಲ್ಲಿ ಕೈಗೆ ಸಿಕ್ಕಿದ್ದನ್ನು ಹಿಡಿದುಕೊಂಡು ಕಳ್ಳತನದಿಂದ ಮೆಲ್ಲಗೆ ಮುಂದೆಮುಂದೆ ಹೆಜ್ಜೆಇಟ್ಟರು. ॥85॥ ಅಷ್ಟುಹೊತ್ತಿಗಾಗಲೇ, ಸರ್ಪವು ಮಿರೀಕರನ ಸೊಂಟದ ಕೆಳಗೆ ವಿರಮಿಸಿಕೊಳ್ಳುತ್ತಿದ್ದುದು ನಿಧಾನವಾಗಿ ಮೆಲ್ಲನೆ ಮುಂದಕ್ಕೆ ಚಲಿಸಿತು. ಓಹ್! ಅದು ಹಾವಲ್ಲ ಸಾಕ್ಷಾತ್ ಮೃತ್ಯುದೇವತೆಯೇ ಮೈಮೇಲೆ ಬರುತ್ತಿರುವಂತೆ ಕಾಣಿಸಿತು. ॥86॥ ಅನಂತರ ಕ್ಷಣಮಾತ್ರದಲ್ಲಿ ಅಚಾತುರ್ಯವು ತಪ್ಪಿಹೋಯಿತು. ದೊಣ್ಣೆ ಮುಂತಾದ ಆಯುಧಗಳು ಈಗಾಗಲೇ ಹೊಡೆಯಲು ಸಿದ್ಧವಾಗಿದ್ದವು. ಅವುಗಳೇನಾದರೂ ಹಾವಿನ ಮೇಲೆ ಜೋರಾಗಿ ಬಿದ್ದಿದ್ದರೆ ಅದು ಚೂರು ಚೂರಾಗಿ ಹೋಗುತ್ತಿತ್ತು. ॥87॥ ಈ ರೀತಿ ಅಪಾಯ ತಪ್ಪಿತು. ಅದನ್ನು

ನೋಡಿದ ಮಿರೀಕರನು ಭಾವೋದ್ವೇಗಗೊಂಡನು. ಸಾಯಿ ಸಮರ್ಥರ ಮೇಲಿನ ಅವನ ಪ್ರೇಮವು ದೃಢವಾಗಿ ಮತ್ತು ಹೆಚ್ಚಾಗಿ ಉಕ್ಕಿ ಹರಿಯಿತು. ॥88॥ ಹೆದರಿಕೆಯಿಂದ ಉಂಟಾದ ರೋಮಾಂಚನ ನಿಂತಿತು. ಪ್ರೇಮಭಾಷ್ಪಗಳು ಕಣ್ಣಿನಲ್ಲಿ ತುಂಬಿ ಬಂದವು. ಅವನಿಗೆಯಾವ ರೀತಿ ಈ ಅನಿಷ್ಟವು ದೂರವಾಯಿತು ಮತ್ತು ಬಾಬಾರವರಿಗೆ ಅದು ಹೇಗೆ ತಿಳಿದಿತ್ತು ಎಂದು ಅಚ್ಚರಿ ಉಂಟಾಯಿತು. ॥89॥ ಯಾವ ರೀತಿ ಈ ಗಡಾಂತರವು ತಪ್ಪಿತು? ಯಾವ ರೀತಿ ಬಾಬಾರವರು ನನಗೆ ಸಮಯೋಚಿತ ಎಚ್ಚರಿಕೆ ನೀಡಿದರು? ನಾನು ಅದನ್ನು ತಿರಸ್ಕರಿಸಿದ್ದರೂ ಸಹ ಶಾಮನನ್ನು ಜೊತೆ ಟಾಂಗಾದಲ್ಲಿ ಕುಳ್ಳಿರಿಸಿ ನನಗೆ ಸಹಾಯ ಮಾಡಲು ಕಳಿಸಿದರು. ॥90॥ ಅದೆಂತಹ ದಯಾ ಹೃದಯ ಅವರದು! ಅವರ ಅಂತರ್ದೃಷ್ಟಿ ಎಷ್ಟಿದೆ! ಅದೆಷ್ಟು ಸಿಹಿಯಾಗಿ ಮತ್ತು ದೊಡ್ಡದಾಗಿ ನನಗೆ ಈ ಅನಿಷ್ಟದ ಬಗ್ಗೆ ಎಚ್ಚರಿಸಿದ್ದಾರೆ! ॥91॥ ಅವರು ದರ್ಶನದ ಮಹತ್ವವನ್ನು ತಿಳಿಸಿದರು. ಮಸೀದಿಯ ಶಕ್ತಿಯನ್ನು ಸ್ಪಷ್ಟಪಡಿಸಿದರು. ತನ್ನ ಭಕ್ತರ ಮೇಲಿನ ಪ್ರೀತಿಯನ್ನು ಒಂದು ಸರಳವಾದ ಲೀಲೆಯಿಂದ ಪ್ರಕಟಿಸಿದರು. ॥92॥ಒಮ್ಮೆ ಒಬ್ಬ ಪ್ರಖ್ಯಾತ ಜ್ಯೋತಿಷಿಯು ನಾನಾ ಡೆಂಗ್ಲೆ ಎಂಬ ಹೆಸರಿನವನು ಶ್ರೀಮಂತನಾದ ಬೂಟಿಯ ಜೊತೆ ಇದ್ದನು. ಅವನು ಬೂಟಿಗೆ ಏನು ಹೇಳಿದನೆಂಬುದನ್ನು ಕೇಳಿ. ॥93॥ "ಈ ದಿನ ಬಹಳ ಅಶುಭಕರವಾದ ದಿನ. ಒಂದು ಗಂಡಾಂತರ ನಿನ್ನ ಮೇಲೆ ಒದಗಿ ಬರಲಿದೆ. ಧೈರ್ಯದಿಂದಿರು. ಆದರೆ ಎಚ್ಚರಿಕೆಯಿಂದಿರು." ॥94॥ ಡೆಂಗ್ಲೆಯು ಈ ರೀತಿ ಹೇಳಿದನಂತರ ಬಾಪು ಸಾಹೇಬನ ಮನಸ್ಸು ಚಿಂತಾಕುಲವಾಗಿತ್ತು, ಅವನು ಸದಾ ಚಿಂತಿತನಾಗಿರುತ್ತಿದ್ದನು. ಸಮಯವು ಭಾರವಾಗಿ ಎಳೆಯಲಾರಂಭಿಸಿತು. ॥95॥ ಅನಂತರ, ಇಡೀ ಗುಂಪು ಮಸೀದಿಗೆ ನಿತ್ಯದ ಸಮಯಕ್ಕೆ ಹೋಯಿತು. ಬಾಪು ಸಾಹೇಬ್, ನಾನಾ ಮತ್ತೆಲ್ಲರೂ ಒಟ್ಟಿಗೆ ಹೋದರು. ಬಾಬಾರವರ ಹತ್ತಿರ ಕುಳಿತುಕೊಂಡರು. ॥96॥ ತಕ್ಷಣವೇ ಬಾಬಾರವರು ಬೂಟಿಯನ್ನು ಕೇಳಿದರು, "ಒಳ್ಳೆಯದು, ಈ ನಾನಾ ಏನು ಹೇಳಿದನು? ಅವನು ನಿನ್ನ ಮರಣದ ಮುನ್ಸೂಚನೆ ನೀಡಿರುವನಾ? ಆದರೆ ನೀನು ಹೆದರಬೇಕಾಗಿಲ್ಲ. ॥97॥ "ಏನೂ ಅಳುಕಿಲ್ಲದೆ ಅವನಿಗೆ ಪ್ರತ್ಯುತ್ತರ ನೀಡು, 'ನಿನಗೆ ಧೈರ್ಯವಿದ್ದರೆ ನೀನು ನನ್ನನ್ನು ಸಾಯಿಸಬಹುದು'." ಅದರ ನಂತರ ಈಗ ಏನು ಪವಾಡ ನಡೆಯಿತು ಎಂಬುದನ್ನು ನೋಡು. ॥98॥ ಸಾಯಂಕಾಲ ಬಾಪು ಸಾಹೇಬನು ಶೌಚ ವಿಧಿಗಾಗಿ ಬಹಿರ್ದೆಸೆಗೆ ಹೋದನು. ಅಲ್ಲಿ ಶೌಚಕೂಪದಲ್ಲಿ ಆ ಸಮಯದಲ್ಲಿ ಒಂದು ಹಾವು ಬಂದಿತು. ॥99॥ ಆ ಭಯಂಕರ ಪ್ರಾಣಿಯನ್ನು ನೋಡಿ ಬಾಪು ಸಾಹೇಬನು ಹೊರಗೆ ಬಂದನು. ಆಗ ಲಹಾನು ಎಂಬ ಅವನ ಸೇವಕನು ಅದನ್ನು ಒಂದು ಕಲ್ಲಿನಿಂದ ಹೊಡೆದು ಸಾಯಿಸಬೇಕೆಂದುಕೊಂಡನು. ॥100॥ ಲಹಾನೂ ಒಂದು ಕಲ್ಲನ್ನು ಎತ್ತಲು ಪ್ರಯತ್ನಿಸಿದನು. ಬಾಪೂಸಾಹೇಬನು ಅವನನ್ನು ತಡೆದನು. ಅವನು ಹೇಳಿದನು, "ಹೋಗು, ಒಂದು ಕೋಲು ತೆಗೆದುಕೊಂಡು ಬಾ. ಈ ರೀತಿಯ ಕೆಲಸವನ್ನು ಆತುರದಲ್ಲಿ ಮಾಡಬಾರದು." ॥101॥ ಆ ಸೇವಕನು ಒಂದು ಕೋಲನ್ನು ತರಲು ಹೋದಾಗ, ಆ ಹಾವು ಗೋಡೆಯ ಮೇಲೆ ಹತ್ತಲು

ಪ್ರಾರಂಭಿಸಿತು. ತಕ್ಷಣವೇ ಸಮತೋಲನ ತಪ್ಪಿ ಕೆಳಗೆ ಬಿದ್ದಿತು. ಅನಂತರ ಅದು ಒಂದು ಬಿಲದ ಮೂಲಕ ಹರಿದು ಹೋಯಿತು. ॥102॥ ಅಲ್ಲಿಂದ ಅದು ತಪ್ಪಿಸಿಕೊಂಡಿತು ಮತ್ತು ಅಲ್ಲಿ ಅದನ್ನು ಕೊಲ್ಲುವ ಯಾವುದೇ ಕಾರಣ ಇರಲಿಲ್ಲ. ಈ ಪ್ರಸಂಗವು ಅವನಿಗೆ ಬಾಬಾರವರ ನುಡಿಗಳನ್ನು ನೆನಪಿಸಿತು. ಅದು ಇಬ್ಬರಿಗೂ (ಹಾವು ಮತ್ತು ಬಾಪು) ಸಂಕಟನಿವಾರಣೆ ಯಾಯಿತು. ॥103॥ ಅವನು ಭಾಗ್ಯವಶಾತ್ ಸಾಯಿಸಮಾಗಮದ ಆನಂದವನ್ನು ಅನುಭವಿಸಿದ್ದನು. ಅದು ಎಂದೆಂದಿಗೂ ಆನಂದದಾಯಕ ಮತ್ತು ಅವಿಸ್ಮರಣೀಯವಾಗಿದ್ದುದು. ॥104॥ ಭಕ್ತರಿಗೆ ಈ ರೀತಿಯ ಅನೇಕ ಅನುಭವಗಳನ್ನು ನೀಡಿ ಅವರ ಹೃದಯವನ್ನು ಆಕರ್ಷಿಸಿರುವರು. ಅವುಗಳನ್ನು ಮಾತುಗಳಲ್ಲಿ ವರ್ಣಿಸಲು ಎಂದಿಗೂ ಸಾಧ್ಯವಿಲ್ಲ.[5] ॥105॥ ಇಲ್ಲಿ ಮತ್ತೊಂದು ಇದೇ ರೀತಿಯ ಕತೆಯಿದೆ. ಸುಮಾರು ಮಧ್ಯರಾತ್ರಿಯ ವೇಳೆಗೆ ಚಾವಡಿಯಲ್ಲಿ ಇಂತಹ ಘಟನೆಯೊಂದು ಬಾಬಾರವರ ಸನ್ನಿಧಿಯಲ್ಲೇ ನಡೆಯಿತು. ದಯಮಾಡಿ ಅದನ್ನು ಕೇಳಿರಿ. ॥106॥ ಕೋಪರಗಾವ್ ತಾಲೂಕಿನ ಕೋರಾಲೆಯಲ್ಲಿ ಜಮೀನು ಹೊಂದಿರುವ ವತನವಾಡಿ ಎಂಬ ಮೂಲ ಹಳ್ಳಿಯಲ್ಲಿ ಒಬ್ಬ ಅಮೀರನು ಶಕ್ಕರ್ ಎಂಬುವನು ಸಾಯಿ ಚರಣಗಳಲ್ಲಿ ಅಸೀಮ ಭಕ್ತಿ ಹೊಂದಿದ್ದನು. ॥107॥ ಜಾತಿಯಲ್ಲಿ ಅವನು ಕಟುಕ. ವೃತ್ತಿಯಲ್ಲಿ ಅವನೊಬ್ಬ ದಳ್ಳಾಳಿ. ಅವನು ಬಾಂದ್ರಾದಲ್ಲಿ ಅತಿ ಪರಿಚಿತನಾಗಿದ್ದನು. ಅವನು ಒಂದು ರೋಗದಿಂದ ಅತಿಯಾಗಿ ನರಳುತ್ತಿದ್ದನು. ಅದರಿಂದಾಗಿ ಅವನ ಅಂಗಾಂಗಗಳು ವಿಕಲವಾಗಿದ್ದವು. ॥108॥ ಸಂಕಟಗಳು ದೇವರನ್ನು ನೆನಪಿಸುತ್ತವೆ. ಅವನು ವ್ಯವಹಾರದ ಕಷ್ಟ ನಷ್ಟಗಳನ್ನೆಲ್ಲವನ್ನೂ ಬಿಟ್ಟು ಎಲ್ಲವನ್ನೂ ಮುಚ್ಚಿಬಿಟ್ಟು ಶಿರಡಿಗೆ ಆತುರ ಭಾವದಿಂದ ಬಂದನು.॥109॥ ಪಂಚಪಾಂಡವರ ತಾಯಿಯಾದ ಕುಂತಿ ಎಲ್ಲ ರೀತಿಯ ಕಷ್ಟಗಳನ್ನೂ ಅನುಭವಿಸಬೇಕಾಗಿತ್ತು. ವನವಾಸದಲ್ಲಿ ಅಜ್ಞಾತವಾಗಿರಬೇಕಾಯಿತು. ಆದರೆ ಅವಳ ಅನಂತ ಕಷ್ಟಗಳಲ್ಲಿಯೂ ಸಹ ದೇವರನ್ನು ಕಷ್ಟಗಳ ವರವನ್ನೇ ಪ್ರಾರ್ಥಿಸಿದಳು. ॥110॥ ಅವಳು ಹೇಳಿದಳು, "ಓ ದೇವಾ, ಪರಮೇಶ್ವರ, ನೀನು ಕೇಳಿದವರಿಗೆ ಸುಖ ನೀಡುವೆ. ಆದರೆ ನನಗೆ ಮಾತ್ರ ನಿರಂತರ ದುಃಖ ಪರಂಪರೆಯನ್ನೇ ನೀಡು. ನಿನ್ನ ನಾಮವನ್ನು ಎಂದಿಗೂ ಮರೆಯದಂತೆ ಮಾಡು. ॥111॥ "ಓ ದೇವರೇ, ಇದು ನನ್ನ ಒಂದೇ ಪ್ರಾರ್ಥನೆ. ನೀನು ನನಗೆ ಏನಾದರೂ ಕೊಡಬೇಕೆಂದುಕೊಂಡಲ್ಲಿ, ನನಗೆ ಇದು ಮಾತ್ರ ಕೊಡು. ಅದರಿಂದ ನಾನು ನಿನ್ನ ನಾಮವನ್ನು ಎಂದಿಗೂ ಮರೆಯದಂತಾಗಲಿ. ಇದು ನನ್ನ ಕುತ್ತಿಗೆಯಲ್ಲಿ ಹಾರದ ರೀತಿ ಇರುತ್ತದೆ." ॥112॥ ಶ್ರೋತೃಗಳು ಮತ್ತು ಈ ಭಾಷಣಕಾರನು, ಇದೇ ವಿಷಯವನ್ನು ಸಾಯಿಯಲ್ಲಿ ಪ್ರಾರ್ಥಿಸೋಣ. "ಹಗಲು ರಾತ್ರಿ ನಾವು ನಿನ್ನ ನಾಮವನ್ನು ಮರೆಯದಂತಾಗಲಿ. ನಮ್ಮನ್ನು ನಿನ್ನ ಚರಣಗಳಲ್ಲಿಟ್ಟುಕೋ." ॥113॥ ಅಮೀರನು ವಿಧಿಯುಕ್ತವಾಗಿ ನಮಸ್ಕರಿಸಿ ಬಾಬಾರವರ ಹಸ್ತವನ್ನು ಚುಂಬಿಸಿದನು. ಅವನು ತನ್ನ ರೋಗದ ಬಗ್ಗೆ ಸವಿಸ್ತಾರವಾಗಿ ನಿವೇದಿಸಿದನು. ದುಃಖವಿಮೋಚನೆಗಾಗಿ ಪ್ರಾರ್ಥಿಸಿದನು. ॥114॥ ಅವನು ವಾತವಿಕಾರದಿಂದ ರಕ್ಷಿಸುವಂತೆ ಪ್ರಾರ್ಥಿಸಿದನು.

ಅದಕ್ಕೆ ಬಾಬಾರವರು ಉತ್ತರಿಸಿದರು. "ಹೋಗು, ಚಾವಡಿಯಲ್ಲಿ ಸಂತೋಷವಾಗಿ ಸುಸ್ಥಿರನಾಗಿರು." ॥115॥ ಬಾಬಾರವರು ಮಸೀದಿಯಿಂದ ಚಾವಡಿಗೆ ದಿನ ಬಿಟ್ಟು ದಿನ ನಿತ್ಯ ಕ್ರಮದಂತೆ ಹೋಗುತ್ತಿದ್ದರು. ಅಮೀರನು ಅಲ್ಲಿಯೇ ವಾಸಮಾಡಲು ಪ್ರಾರಂಭಿಸಿದನು. ॥116॥ ಅಮೀರನು ಸಂಧಿವಾತ (ಕೀಲುನೋವು)ದಿಂದ ನರಳುತ್ತಿದ್ದನು. ಆದ್ದರಿಂದ ಅವನು ಹಳ್ಳಿಯಲ್ಲಿ ಯಾವುದೇ ಜಾಗವಾದರೂ ಸಹ ಸುಖವಾಗಿ ಇರುತ್ತಿದ್ದನು. ಇಲ್ಲದಿದ್ದರೆ ಕೊರಾಲಾಗೆ ಹೋಗಬಹುದಿತ್ತು, ಅಲ್ಲಿ ಅದು ಹೆಚ್ಚು ಒಪ್ಪುವಂತೆ ಇತ್ತು. ॥117॥ ಆದರೆ ಚಾವಡಿಯಾದರೋ ಹಳೆಯ ಹಾಗೂ ಪಾಳುಬಿದ್ದ ಕಟ್ಟಡವಾಗಿತ್ತು, ನೆಲವು ಸಮತಟ್ಟಾಗಿಲ್ಲದೆ ಅಲ್ಲಿ ಓತಿಕೇತ, ಹಲ್ಲಿ, ಚೇಳು ಮತ್ತು ಹಾವುಗಳು ಸ್ವೇಚ್ಛೆಯಿಂದ ಓಡಾಡುತ್ತಿದ್ದವು. ॥118॥ ಅದೂ ಅಲ್ಲದೆ, ಕುಷ್ಠರೋಗಿಗಳೂ ಮತ್ತಿತರೆ ಅನೇಕ ರೋಗಿಗಳು ಅಲ್ಲಿ ವಾಸವಾಗಿದ್ದರು. ನಾಯಿಗಳು, ಉಳಿದ ಆಹಾರವನ್ನು ತಿನ್ನುತ್ತ ಅಲ್ಲಿ ಸುತ್ತುತ್ತಿದ್ದವು. ಅಮೀರನಿಗೆ ಬಹಳ ಕಷ್ಟವಾಯಿತು. ಆದರೆ ಬಾಬಾರವರ ಹತ್ತಿರ ಏನೂ ಹೇಳಲು ಸಾಧ್ಯವಾಗಲಿಲ್ಲ. ॥119॥ ಹಿಂಭಾಗದ ಹಿತ್ತಲಲ್ಲಿ ಒಂದು ಮೊಣಕಾಲು ಎತ್ತರದ ಕಸದ ಗುಡ್ಡೆ ಇತ್ತು, ಅಲ್ಲಿ ಅನೇಕ ಬಿಲಗಳು (ಹಾವು ಮತ್ತು ಚೇಳುಗಳಿಂದ ಉಂಟಾದವು) ಇದ್ದವು. ಅವನು ಒಂದು ಕಷ್ಟಕ್ಕೆ ಸಿಲುಕಿದ್ದನು. ಅದು ಜೀವನ ಯಾತ್ರೆಯಲ್ಲಿ ಒಂದು ಕಠಿಣ ಪರೀಕ್ಷೆಯಾಗಿತ್ತು. ॥120॥ ಮೇಲಿನಿಂದ ಮಳೆ ಬಂದಿತ್ತು, ಮತ್ತು ಕೆಳಗಿನಿಂದ ನೆಲವು ಒದ್ದೆಯಾಗಿತ್ತು, ಜಾಗವೋ ಹಳ್ಳ ದಿಣ್ಣೆಯಾಗಿತ್ತು, ಚಳಿಗಾಳಿ ಅದರ ಮೂಲಕ ಬೀಸುತ್ತಿತ್ತು, ಅಮೀರನು ಬಹಳ ಚಿಂತಿತನಾದನು. ॥121॥ ಅವನ ಶರೀರದ ಎಲ್ಲ ಕೀಲುಗಳೂ ಗಟ್ಟಿಯಾಗಿದ್ದವು. ಜಾಗವು ಒದ್ದೆಯಾಗಿ ಚಳಿಗಾಳಿ ಬೀಸುತ್ತಿತ್ತು, ಆದರೆಬಾಬಾರವರ ವಚನಗಳು ಮಾತ್ರ ಔಷಧಿಯಾಗಿದ್ದವು. ॥122॥ ಮಳೆ, ಗಾಳಿ ಅಥವಾ ಥಂಡಿ, ಒರಟು ನೆಲ, ಹಳ್ಳ-ಕೊಳ್ಳಗಳಿಂದ ಕೂಡಿದ್ದು ಅಸಮತೋಲವಾಗಿದ್ದುದು. ಈ ಯಾವುದನ್ನೂ ಗಣನೆಗೆ ತೆಗೆದುಕೊಳ್ಳಲಿಲ್ಲ. ಏಕೆಂದರೆ ಬಾಬಾರವರು ಅವನಿಗೆ ಅಲ್ಲಿ ವಾಸಮಾಡಲು ಹೇಳಿದ್ದ॥123॥ ಆ ಜಾಗವು ವಿಕಲ್ಪಾಸ್ಪದವಾಗಿದ್ದರೂ ಮತ್ತು ವಾಸಮಾಡಲು ಅಯೋಗ್ಯವಾಗಿದ್ದರೂ ಸಾಯಿ ಸಮಾಗಮವು ಮಹಾಪ್ರಸಾದವಾಗಿತ್ತು, ಬಾಬಾರವರ ವಚನಗಳನ್ನು ಔಷಧಿಯೆಂದು ಪರಿಗಣಿಸಿ ಅವನು ಸಂತೋಷವಾಗಿ ಅಲ್ಲಿ ವಾಸಮಾಡಿದನು. ॥124॥ ಅಮೀರ್ ಶಕ್ಕರ್‌ನು ಚಾವಡಿಯಲ್ಲಿ ಒಂಭತ್ತು ತಿಂಗಳು ವಾಸಮಾಡಿದನು. ಚಾವಡಿಯ ಮೆಟ್ಟಿಲುಗಳನ್ನು ಹತ್ತಿದ ಕೂಡಲೇ ಮುಂದುಗಡೆಯೇ ಅವನು ತನ್ನ ಹಾಸಿಗೆಯನ್ನು ಆ ಕೋಣೆಯ ಮಧ್ಯದಲ್ಲಿ ಹಾಸಿದನು. ॥125॥ ಸಂಧಿವಾತವು ಅವನ ಶರೀರವನ್ನು ಗಟ್ಟಿಯಾಗಿ ಹಿಡಿದಿತ್ತು, ನೋಡುತ್ತಲೇ ಅದರ ಅನುಪಾನವೂ ವಿಪರೀತವಾದದ್ದು, ಆದರೆ ಅಂತರಂಗದಲ್ಲಿ ಅವನಿಗೆ ನಿಶ್ಚಿತವಾದ ಭಕ್ತಿ ಇತ್ತು, ಆದುದರಿಂದಲೇ ಎಲ್ಲವೂ ಅವನಿಗೆ ಯಥಾ ಸ್ಥಿತಿಯಂತೆಯೇ ಇತ್ತು. ॥126॥ ಅಮೀರನು ಒಂಭತ್ತು ತಿಂಗಳ ಕಾಲ ಅಲ್ಲಿ ವಾಸಮಾಡಬೇಕೆಂದು ತಿಳಿಸಿದ್ದರು. ಮತ್ತು ದರ್ಶನಕ್ಕಾಗಿ ಮಸೀದಿಗೆ ಬರುವುದನ್ನು ನಿಷೇಧಿಸಲಾಗಿತ್ತು. ॥127॥ ಆದರೆ ಆ ಚಾವಡಿಯು,

ಅವನು ವಾಸಮಾಡಲು ತಿಳಿಸಿದ ಸ್ಥಳವು ಯಾವ ರೀತಿ ಇತ್ತೆಂದರೆ ಅಂತಹ ಜಾಗದಿಂದಲೇ ಯಾವುದೇ ಶ್ರಮವಿಲ್ಲದೆ ಬಾಬಾರವರ ದರ್ಶನ ಪಡೆಯಲು ಸಾಧ್ಯವಾಗುತ್ತಿತ್ತು. ॥128॥ ಅದೂ ಅಲ್ಲದೆ ಪ್ರತಿದಿನವೂ ಹಗಲು-ಸಂಜೆ ಎರಡು ವೇಳೆಯಲ್ಲೂ ಮತ್ತು ದಿನ ಬಿಟ್ಟು ದಿನ ಎರಡೂ ವೇಳೆಗಳಲ್ಲಿ ಚಾವಡಿಯಿಂದ ಮನಸ್ಸಿಗೆ ತೃಪ್ತಿಯಾಗುವಷ್ಟು ಆ ಸಮಾರಂಭವನ್ನು ವೀಕ್ಷಿಸುತ್ತಿದ್ದನು. ॥129॥ ಪ್ರತಿದಿನ ಬೆಳಗ್ಗೆ ಬಾಬಾರವರು ಭಿಕ್ಷಾಟನೆಗಾಗಿ ಹೋದಾಗ ಬಾಬಾರವರು ಚಾವಡಿಯನ್ನು ಹಾದುಹೋಗುತ್ತಿದ್ದರು. ಆ ದಾರಿಯಲ್ಲಿ ಅಮೀರನಿಗೆ ದರ್ಶನ ಮಾಡಲು ಸುಲಭಸಾಧ್ಯವಾಗಿತ್ತು, ಬಾಬಾರವರು ಹೋಗುವಾಗ ಮತ್ತು ಹಿಂತಿರುಗುವಾಗ ತನ್ನ ಜಾಗದಿಂದ ಕದಲದೆಯೇ ದರ್ಶನ ಮಾಡುತ್ತಿದ್ದನು. ॥130॥ ಸೂರ್ಯಾಸ್ತದ ವೇಳೆಯಲ್ಲಿ ಬಾಬಾರವರು ಚಾವಡಿಯ ಮುಂದೆ ಬಂದಾಗ ಎಲ್ಲ ದಿಕ್ಕುಗಳಿಗೂ ನಮಸ್ಕರಿಸುತ್ತ ತಮ್ಮತೋರುಬೆರಳನ್ನು ತೋರಿಸುತ್ತ ಗೌರವ ಸಲ್ಲಿಸುತ್ತಿದ್ದರು. ॥131॥ ಅಲ್ಲಿಂದ ಅವರು ಹಿಂತಿರುಗಿ ಸಮಾಧಿ ಕಟ್ಟಡದ ಮೂಲೆಯವರೆಗೆ ನಡೆದುಕೊಂಡು ಬರುತ್ತಿದ್ದರು. ಇಲ್ಲಿಂದ ಮಸೀದಿಗೆ ತಮ್ಮ ಭಕ್ತರ ಜೊತೆಯಲ್ಲಿ ಹಿಂತಿರುಗುತ್ತಿದ್ದರು. ॥132॥ ಅವರು ಚಾವಡಿಗೆ ದಿನ ಬಿಟ್ಟು ದಿನ ಬರುತ್ತಿದ್ದರು. ಅಲ್ಲಿ ಒಂದು ಪರದೆ ಮಾತ್ರ ಇಬ್ಬರ ಮಧ್ಯೆ ಇರುತ್ತಿತ್ತು, ಅದೂ ಸಹ ನಾಮಕಾವಾಸ್ತೆ – ನಿಜವಾಗಿಯೂ ಒಂದು ಮರದ ಪರದೆ. ಈ ರೀತಿ ಅವರು ಇಬ್ಬರೂ ಸಂಭಾಷಿಸುತ್ತಿದ್ದರು. ಇಬ್ಬರೂ ಮಾತನಾಡಲು ಇಷ್ಟಪಡುತ್ತಿದ್ದರು. ॥133॥ ಪೂಜೆ ಮತ್ತು ಆರತಿ ಎರಡೂ ಅಲ್ಲಿಯೇ ನಡೆಯುತ್ತಿದ್ದವು. ಅದರ ನಂತರ ಭಕ್ತರು ತಮ್ಮ ತಮ್ಮ ಮನೆಗೆ ಚದುರಿಹೋಗುತ್ತಿದ್ದರು. ಆಗ ಇಬ್ಬರಿಗೂ ಶಾಂತವಾಗಿ ಮಾತನಾಡಲು ಅವಕಾಶ ದೊರೆಯುತ್ತಿತ್ತು. ॥134॥ ನೋಡುವುದಕ್ಕೆ ಅದು ಸೆರೆಮನೆಯ ವಾಸದಂತಿತ್ತು, ಆದರೆ, ನಿಜವಾಗಿಯೂ ಅವನು ಸಾಯಿ ಸಹವಾಸವನ್ನು ಪೂರ್ಣವಾಗಿ ಆನಂದಿಸಿದನು. ಭಾಗ್ಯವಿಲ್ಲದೆ ಯಾರಿಗೂ ಇಂತಹ ಅಪರೂಪದ ಅವಕಾಶ ದೊರಕುವುದಿಲ್ಲ. ॥135॥ ಆದರೂ ಅಮೀರನಿಗೆ ಒಂದೇ ಜಾಗದಲ್ಲಿ ವಾಸಮಾಡಿದುದಕ್ಕೆ ಬೇಸರವಾಯಿತು. ಅವನು ಅದನ್ನು ಬಂಧೀವಾಸದ ಅನುಭವವೆಂದು ಭಾವಿಸಿದನು. ಬೇರೆ ಯಾವುದಾದರೂ ಸ್ಥಳಕ್ಕೆ ಹೋಗುವುದೆಂದು ಯೋಚಿಸಿದನು. ॥136॥ ಸ್ವಾತಂತ್ರ್ಯ ಇಚ್ಛಿಸುವವನು ಬಂಧನವನ್ನು ಇಚ್ಛೆಪಡುವನೇ? 'ಈ ಬಂಧೀಖಾನೆಯು ಸಾಕಪ್ಪ' ಎಂದು ಅಮೀರನು ಯೋಚಿಸಿದನು. ॥137॥ ಅವನಿಗೆ ನಿಯಮಿಸಿದ ಸ್ಥಾನವನ್ನು ತ್ಯಜಿಸಿ ಬಾಬಾರವರ ಅನುಜ್ಞೆಯನ್ನು ಪಡೆಯದೇನೇ ಕೋಪರಗಾವ್‌ಗೆ ಹೋದನು. ಅಲ್ಲಿ ಧರ್ಮಶಾಲೆಯಲ್ಲಿ ಉಳಿದುಕೊಂಡನು. ॥138॥ ನೋಡು! ಬಾಬಾರವರ ಚಮತ್ಕಾರ ಎಂತಹದು! ಒಬ್ಬ ಫಕೀರ ಸಾಯುವ ಸ್ಥಿತಿಯಲ್ಲಿ ಮಲಗಿದ್ದನು. ಬಾಯಾರಿಕೆಯಿಂದ ಅತಿ ವ್ಯಾಕುಲನಾಗಿದ್ದವನು ಹೇಳಿದನು, 'ಒಂದು ಗುಟುಕು ನೀರು ಕೊಡಿ.' ॥139॥ ಅಮೀರನಿಗೆ ದಯೆ ಉಂಟಾಯಿತು. ಅವನಿಗೆ ನೀರುಕುಡಿಯಲು ಕೊಟ್ಟನು. ಆದರೆ ನೀರು ಕುಡಿದ ತಕ್ಷಣವೇ ಆ ಫಕೀರನು ನಿಶ್ಚೇಷ್ಟಿತನಾಗಿ ಬಿದ್ದನು. ॥140॥ ಅವನು ಮರಣಹೊಂದಿದನು. ಹತ್ತಿರದಲ್ಲಿ ಯಾರೂ

ಇರಲಿಲ್ಲ. ಅದೂ ಅಲ್ಲದೆ ಸಮಯವೂ ರಾತ್ರಿಯಾಗಿತ್ತು. ಅಮೀರನು ಮನಸ್ಸಿನಲ್ಲಿಯೇ ಗಲಿಬಿಲಿ ಗೊಂಡನು. ॥141॥ ಅವನು ಯೋಚಿಸಿದದು – ಪ್ರಾತಃಕಾಲದಲ್ಲಿ ಈ ಆಕಸ್ಮಿಕ ಮರಣದ ಬಗ್ಗೆ ಒಂದು ಸರಕಾರಿ ವಿಚಾರಣೆ ನಡೆಯುತ್ತದೆ. ಅವರು ಜನರನ್ನು ಒಳಗೆ ಹಾಕಲು ಪ್ರಾರಂಭಿಸುತ್ತಾರೆ. ಸರ್ಕಾರವು ಅದರ ಬಗ್ಗೆ ವಿಚಾರಣೆ ನಡೆಸುತ್ತದೆ. ॥142॥ ಇಲ್ಲಿ ಏನು ನಡೆಯಿತೆಂಬುದನ್ನು ನಾನು ಹೇಳಿದರೆ ಯಾರು ನಂಬುತ್ತಾರೆ? ಅದರ ಫಲಿತಾಂಶವು ಸಾಕ್ಷಿ ಮತ್ತು ಘಟನಾವಳಿಗಳ ಮೇಲೆ ಅವಲಂಬಿಸಿದೆ. ಇದು ಕಾನೂನಿನ ಕ್ರಮ. ॥143॥ "ನಾನೇನಾದರೂ ನಿಜ ಹೇಳಿದರೆ, ನಾನು ಅವನಿಗೆ ಕುಡಿಯಲು ನೀರು ಕೊಟ್ಟ, ತಕ್ಷಣವೇ ಫಕೀರನು ಮರಣಹೊಂದಿದನು ಎಂದರೆ ನಾನು ಅವರ ಬಲೆಯಲ್ಲಿ ಬೀಳುತ್ತೇನೆ. ॥144॥ "ನಾನೇ ಈ ಸಂಬಂಧವಾಗಿ ಸಿಕ್ಕಿಹಾಕಿಕೊಳ್ಳುವ ಮೊದಲನೆಯ ವ್ಯಕ್ತಿಯಾಗುತ್ತೇನೆ. ಅನಂತರ ನಿಜವಾಗಿ ಮರಣಹೊಂದಿದ ಕಾರಣವನ್ನು ಕಂಡುಹಿಡಿದರೆ ನಾನು ನಿರಪರಾಧಿಯೆಂದು ಸ್ಪಷ್ಟವಾಗುತ್ತದೆ. ॥145॥ "ಆದರೆ ಅದು ತೀರ್ಮಾನವಾಗುವವರೆಗೆ ನನ್ನ ಸ್ಥಿತಿಯುಅಸಹನೀಯವಾಗುತ್ತದೆ. ಆದುದರಿಂದ ನಾನು ಬಂದ ದಾರಿಯಲ್ಲೇ ಕೂಡಲೇ ಓಡಿ ಹೋಗಬೇಕು" ಅವನು ಈ ರೀತಿ ನಿಶ್ಚಯಿಸಿನು. ॥146॥ ಆದ್ದರಿಂದ, ಅಮೀರನ ರಾತ್ರೋರಾತ್ರಿ ಬೇರೆ ಯಾರಾದರೂ ನೋಡುವ ಮೊದಲೇ ಆ ಜಾಗವನ್ನು ಖಾಲಿಮಾಡಿದನು. ಅವನು ಮಾರ್ಗದಲ್ಲಿ ನಡೆಯುತ್ತಿರುವಾಗ ತಿರುಗಿತಿರುಗಿ ನೋಡುತ್ತಾ ಬಂದನು. ಮಾರ್ಗ ಪೂರ್ತಿ ಅವನು ಅಸ್ವಸ್ಥಚಿತ್ತನಾಗಿದ್ದನು. ॥147॥ 'ನಾನು ಚಾವಡಿಯನ್ನು ಹೇಗೆ ತಲುಪಬಹುದು?' ಯೋಚಿಸುತ್ತಿದ್ದ ಅವನ ಮನಸ್ಸು ನಿಶ್ಚಿಂತವಾಗಿರಲಿಲ್ಲ, ಹಾಗೇ ಅವನು ಶಿರಡಿಯ ಕಡೆ ನಡೆದನು. ॥148॥ "ಓ ಬಾಬಾ, ನಾನು ಏನು ಮಾಡಿದೆ? ಯಾವ ರೀತಿ ಪಾಪವನ್ನು ನನ್ನ ಕಡೆಗೆ ಎಳೆದುಕೊಂಡೆ? ನನ್ನ ಕರ್ಮಗಳೇ ಈ ಫಲಗಳನ್ನು ತಂದಿದೆ. ಇದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿರುವೆ.॥149॥ "ನಾನು ಚಾವಡಿಯನ್ನು ಇನ್ನೂ ಉತ್ತಮವಾದ ಜಾಗ ದೊರಕುವುದೆಂದು ಬಿಟ್ಟೆನು. ಆದ್ದರಿಂದ ನೀನು ನನಗೆ ಪಾಠ ಕಲಿಸಿದೆ. ಅದು ಹಾಗಿರಲಿ, ಈಗ ನನ್ನನ್ನು ಈ ಸಂಕಟದಿಂದ ಪಾರು ಮಾಡು ಮತ್ತು ನಾನು ಶಿರಡಿ ತಲಪುವಂತೆ ಮಾಡು." ॥150॥ ಈ ರೀತಿ ಯೊಚಿಸುತ್ತ ಅಮೀರನು ತಾನೇ ಸಿದ್ಧನಾಗಿ, ಆ ಶವವನ್ನು ಧರ್ಮಶಾಲೆಯಲ್ಲೇ ಬಿಟ್ಟು ರಾತ್ರೋರಾತ್ರಿ ಅಲ್ಲಿಂದ ಹೊರಟನು. ॥151॥ "ಬಾಬಾ, ಬಾಬಾ" ಎಂದು ಬಾಯಲ್ಲಿ ಕರೆಯುತ್ತಿದ್ದನು. 'ದಯಮಾಡಿ ಕ್ಷಮಿಸು. ಕರುಣೆತೋರು.' ಅವನು ದಾರಿಯುದ್ದಕ್ಕೂ ಬೇಡುತ್ತಲೇ ಚಾವಡಿಯನ್ನು ತಲಪಿದನು. ಆಗಲೇ ಅವನ ಮನಸ್ಸು ಸಮಾಧಾನಹೊಂದಿತು. ॥152॥ ಈ ರೀತಿಯಲ್ಲಿ ಅಮೀರನು ಪಾಠ ಕಲಿತನು. ಸರಿಯಾಗಿ ವರ್ತಿಸುವೆನೆಂದು ಪ್ರಮಾಣ ಮಾಡಿದನು. ತಪ್ಪು ಮಾರ್ಗ ಮತ್ತು ದುರ್ಮಾರ್ಗವನ್ನು ಬಿಟ್ಟನು. ॥153॥ ಅದು ಹಾಗಿರಲಿ. ಅವನ ವಿಶ್ವಾಸವೇ ಫಲ ನೀಡಿತು. ಅವನು ವಾತರೋಗದಿಂದ ಮುಕ್ತನಾದನು. ಈಗ ಮುಂದಿನ ಪ್ರಸಂಗ ಏನು ನಡೆಯಿತೆಂಬುದನ್ನು ಕೇಳಿರಿ. ॥154॥ ಚಾವಡಿಯಲ್ಲಿ ಮೂರು ಭಾಗಗಳಿದ್ದವು. ಬಾಬಾರವರ

ಮೂಲೆಯು ಅಗ್ನಿ ಮೂಲೆ. ಅವರು ನಾಲ್ಕು ಕಡೆಗಳಲ್ಲೂ ಮರದ ಹಲಗೆಗಳನ್ನು ಜೋಡಿಸಿದ್ದ ಜಾಗದಲ್ಲಿ ಮಲಗುತ್ತಿದ್ದರು. ॥155॥ ಅಲ್ಲಿ ರಾತ್ರಿಯೆಲ್ಲಾ ದೀಪಗಳು ಉರಿಯುತ್ತಿದ್ದವು. ಅವರು ಬೆಳಕಿನಲ್ಲಿ ಮಲಗುತ್ತಿದ್ದರು. ರಾತ್ರಿಯೆಲ್ಲಾ ಬೆಳಕಿರುತ್ತಿತ್ತು.ಫಕೀರರು ಮತ್ತಿತರರು ಕತ್ತಲಾದಕೂಡಲೇ ಹೊರಗಡೆ ಕುಳಿತುಕೊಳ್ಳುತ್ತಿದ್ದರು. ॥156॥ ಅಮೀರನೂ ಅವರಲ್ಲೊಬ್ಬನು. ಅವನ ಸುತ್ತಲೂ ಇತರ ಜನರು ಸಹಅಲ್ಲಿ ಮಲಗುತ್ತಿದ್ದರು. ಅದೇ ರೀತಿ ಇಂತಹ ಜನರು ಅನೇಕರು ಇದ್ದರು. ॥157॥ ಅಲ್ಲಿ ಬಾಬಾರವರ ವಾಸದ ಕೋಣೆಯ ಹಿಂದುಗಡೆ ಒಂದು ಉಗ್ರಾಣವಿತ್ತು, ಅಲ್ಲಿ ಪರಮ ವಿರಾಗಿಯಾದ ಭಕ್ತ ಅಬ್ದುಲ್ಲಾನು ವಾಸಿಸುತ್ತಿದ್ದನು. ಅವನು ಸದಾಕಾಲ ಬಾಬಾರವರ ಸೇವೆಗಾಗಿ ಸಿದ್ಧನಾಗಿರುತ್ತಿದ್ದನು. ॥158॥ ಈ ರೀತಿ ಇರಲು, ಒಮ್ಮೆ ಅರ್ಧರಾತ್ರಿಯಲ್ಲಿ ಬಾಬಾರವರು ಅಬ್ದುಲ್ಲಾನನ್ನು ಕರೆದು ಹೇಳಿದರು, "ನಾನು ನನ್ನ ಹಾಸಿಗೆಯ ಹತ್ತಿರ ಒಂದು ದೆವ್ವದಂತಹ ಕ್ರಿಮಿಯನ್ನು ನೋಡಿದೆ." ॥159॥ ಅವರು ಅವನನ್ನು ಪದೇ ಪದೇ ಕರೆಯ ತೊಡಗಿದರು. ಅಬ್ದುಲ್ಲಾನು ಕೈಯಲ್ಲಿ ದೀಪ ಹಿಡಿದು ಓಡಿ ಬಂದನು. ಬಾಬಾ ಜೋರಾಗಿ ಅವನಿಗೆ ಹೇಳಿದರು, "ಅದು ಇಲ್ಲೇ ಈಗ ಇತ್ತಲ್ಲವೇ?" ॥160॥ ಅಬ್ದುಲ್ಲಾ ಹೇಳಿದನು, "ನಾನು ಎಲ್ಲಾ ಕಡೆ ನೋಡಿದೆನು. ಅಲ್ಲಿ ನನ್ನ ಕಣ್ಣಿಗೆ ಯಾವುದೂ ಕಾಣಲಿಲ್ಲ." ಬಾಬಾ ಹೇಳಿದರು, "ನಿನ್ನ ಕಣ್ಣುಗಳನ್ನು ತೆರೆದು ನೋಡು. ಎಲ್ಲ ಕಡೆಯೂ ಎಚ್ಚರದಿಂದ ನೋಡು." ॥161॥ ಅಬ್ದುಲ್ಲಾನು ಮತ್ತೆ ಮತ್ತೆ ಎಲ್ಲ ಕಡೆ ಹುಡುಕಿದನು. ಬಾಬಾರವರು ಸಟಕಾದಿಂದ ನೆಲಕ್ಕೆ ಕುಟ್ಟುತ್ತಿದ್ದರು. ಹೊರಗಡೆ ಇದ್ದ ಜನರು ನೋಡಲು ಪ್ರಾರಂಭಿಸಿದರು. ॥162॥ ಅಮೀರ್ ಶಕ್ಕರ್ ಕೂಡಾ ಎಚ್ಚರಗೊಂಡನು. ಅವನಿಗೆ ಆಶ್ಚರ್ಯವಾಯಿತು. ಇದೆಲ್ಲ ಏನು ಗಲಾಟೆ? ಈ ಅಪರಾತ್ರಿಯಲ್ಲಿ ಸಟಕಾದ ಇಷ್ಟೊಂದು ಶಬ್ದವೇಕೆ? ॥163॥ ಬಾಬಾರವರ ಲೀಲೆಗಳನ್ನು ನೋಡಿ ಅಮೀರನು ಕೂಡಲೇ, ಮನದಲ್ಲೇ ಗಾಬರಿಯಾದನು. ಮತ್ತು ಯೋಚಿಸಿದನು – ಎಲ್ಲೋ ಒಂದು ಹಾವು ಪ್ರವೇಶಿಸಿರಬೇಕು. ಮತ್ತು ಬಾಬಾರವರಿಗೆ ಅದು ತಿಳಿದಿತ್ತು. ॥164॥ ಅವನಿಗೆ ಬಾಬಾರವರ ಬಗ್ಗೆ ದೀರ್ಘ ಅನುಭವವಿತ್ತು, ಅವನಿಗೆ ಬಾಬಾರವರ ಸ್ವಭಾವ ಮತ್ತು ಅವರು ಮಾತಾಡುವ ರೀತಿ ತಿಳಿದಿತ್ತು, ಆದುದರಿಂದ ಅವನು ಅದನ್ನು ಪೂರ್ಣವಾಗಿ ಎಲ್ಲವನ್ನೂ ಅರ್ಥಮಾಡಿಕೊಂಡನು. ॥165॥ ತನ್ನ ಭಕ್ತನಿಗೆ ಏನಾದರೂ ಅಪಾಯ ಕಂಡುಬಂದಲ್ಲಿ ಬಾಬಾರವರು, ಅದು ತಮ್ಮ ಮೇಲೆಯೇ ಪ್ರಭಾವ ಬೀರಿದೆಯೆಂದು ಹೇಳುತ್ತಿದ್ದರು. ಅಮೀರನಿಗೆ ಇಂತಹ ಭಾಷೆಯ ಅರಿವಿತ್ತು, ಆದ್ದರಿಂದ ಅವನು ಈ ನಿರ್ಧಾರಕ್ಕೆ ಬಂದಿದ್ದನು. ॥166॥ ಆಗ ತಾನೇ, ಅವನು ತನ್ನದೇ ತಲೆದಿಂಬಿನ ಕೆಳಗೆ ಏನೋ ಹರಿದಾಡುತ್ತಿರುವುದನ್ನು ನೋಡಿದನು. "ಅಬ್ದುಲ್ಲಾ, ದೀಪವನ್ನು ಇಲ್ಲಿಗೆ ತೆಗೆದುಕೊಂಡು ಬಾ." ಅಮೀರನು ಜೋರಾಗಿಯೇ ಕೂಗಿದನು. ॥167॥ ದೀಪವನ್ನು ಹೊರಗಡೆ ತೆಗೆದುಕೊಂಡು ಬಂದಾಗ, ಒಂದು ದೊಡ್ಡ ಸರ್ಪವು ಸುತ್ತಿ ಮಲಗಿದ್ದುದನ್ನು ನೋಡಿದನು. ಅದು ದೀಪದ ಬೆಳಕಿನಲ್ಲಿ ಹೊಳೆಯುತ್ತಿತ್ತು ಮತ್ತು ತನ್ನ ಹೆಡೆಯನ್ನು ಮೇಲೆ ಕೆಳಗೆ

ಆಡಿಸಲು ಪ್ರಾರಂಭಿಸಿತು. ॥168॥ ತಕ್ಷಣವೇ ಅದನ್ನು ಸಾಯಿಸಲಾಯಿತು. ಅವನಿಗೆ ಬಾಬಾರವರಲ್ಲಿ ತುಂಬಾ ಕೃತಜ್ಞತೆ ತುಂಬಿತು. ಮತ್ತು ಯೋಚಿಸ ತೊಡಗಿದನು. "ಇದೆಂತಹ ವಿಲಕ್ಷಣವಾದ ಎಚ್ಚರಗೊಳಿಸುವ ರೀತಿ ಅವರದು! ॥169॥ "ದೆವ್ವ ಎಂದು ಹೇಳಿ ದೀಪವನ್ನುತ್ತರಿಸಿದ್ದು ಕೇವಲ ಅವರು ಭಕ್ತರಿಗೆ ಎಚ್ಚರಿಕೆ ಕೊಡಲು ಬಳಸಿದ ಒಂದು ಉಪಾಯ. ಅದರಿಂದಾಗಿ ಭಕ್ತರನ್ನು ಸಂಕಟದಿಂದ ವಿಮುಕ್ತಿಗೊಳಿಸುತ್ತಿದ್ದರು." ॥170॥ ಬಾಬಾರವರ ಜೀವನ ಚರಿತ್ರೆಯಲ್ಲಿ ಸರ್ಪಗಳ ಬಗೆಗಿನ ಅಸಂಖ್ಯಾತ ಕಥೆಗಳು ಇವೆ. ಅವುಗಳನ್ನೆಲ್ಲ ವಿವರಿಸಿದರೆ ಈ ಗ್ರಂಥವು ಬೃಹತ್ತಾಗುತ್ತದೆ. ಆದುದರಿಂದ ಅವುಗಳನ್ನು ಆದಷ್ಟು ಸಂಕ್ಷಿಪ್ತಗೊಳಿಸಿರುವೆನು. ॥171॥ ಹಾವು ಮತ್ತು ಚೇಳು ಅವು ನಾರಾಯಣನೇ. ಆದರೆ ಅವುಗಳನ್ನು ದೂರದಿಂದಲೇ ಪೂಜಿಸಬೇಕು. ಈ ರೀತಿ ತುಕಾರಾಮರು ವಚನ ನುಡಿದಿದ್ದಾರೆ. ॥172॥ ಅವರು ಅವುಗಳನ್ನು ಕ್ರೂರಿಯೆಂದೂ ಚಪ್ಪಲಿಯಿಂದ ಏಟು ತಿನ್ನಲು ಅರ್ಹವೆಂದೂ ಹೇಳುತ್ತಾರೆ. ಆದರೂ ಈ ಅಭಿಪ್ರಾಯವು ಸರ್ವಮತಾಭಿಪ್ರಾಯವಲ್ಲ. ಆದ್ದರಿಂದ ಅದರ ಬಗೆಗಿನ ವರ್ತನೆಯ ಬಗ್ಗೆ ಸಂಶಯದಲ್ಲಿ ಉಳಿಯುತ್ತಾನೆ. ॥173॥ ಪ್ರತಿಯೊಬ್ಬರೂ ಅವರವರ ಸ್ವಭಾವ ಧರ್ಮದ ಪ್ರಕಾರ ಈಶ್ವರೇಚ್ಛೆಯಂತೆ ವರ್ತಿಸುತ್ತಾರೆ. ಇದೇ ರೀತಿ ಇವುಗಳೆಲ್ಲದರ ಸಾರಾಂಶ. ॥174॥ ಈ ಶಂಕೆಗೆ ಕೇವಲ ಒಂದೇ ಒಂದು ಸಮಾಧಾನವಿದೆ. ಸರ್ವಜೀವಿಗಳೂ ಸಮಾನ. ಮತ್ತು ಅಹಿಂಸೆಯು ಸದಾ ಉತ್ತಮ. ಬಾಬಾರವರೂ ಇದೇ ಅಭಿಪ್ರಾಯಹೊಂದಿದ್ದರು. ॥175॥ ಅದು ಚೇಳಾಗಿರಲಿ ಅಥವಾ ಸರ್ಪವಾಗಿರಲಿ ಈಶ್ವರನು ಎಲ್ಲಾ ಜೀವಿಗಳಲ್ಲೂ ಇದ್ದಾನೆ. ಅವನು ಅದನ್ನು ಹಿಂಸಿಸಲು ಇಚ್ಛೆಪಡದಿದ್ದಲ್ಲಿ ಅವೂ ಸಹ ಅವನನ್ನು ಹಿಂಸಿಸುವುದಿಲ್ಲ. ॥176॥ ಇಡೀ ವಿಶ್ವವೇ ಈಶ್ವರನ ಅಧೀನವಾಗಿದೆ. ಇಲ್ಲಿ ಯಾವುದೂ ಸ್ವತಂತ್ರವಲ್ಲ. ಇದು ಬಾಬಾರವರ ಹತ್ತಿರದ ತಮ್ಮ ಅನುಭವ ಜ್ಞಾನ. ಆದರೆ ನಾವು ನಮ್ಮ ದುರಭಿಮಾನದಿಂದಾಗಿ ಒಪ್ಪುವುದಿಲ್ಲ. ॥177॥ ಒಮ್ಮೆ ಒಂದು ಚೇಳು ಒಂದು ಕೊಳದಲ್ಲಿ ಬಿತ್ತು. ಅದು ನೀರಿನ ಒಳಗೆ ಹೊರಗೆ ಮುಳುಗುತ್ತ ಏಳುತ್ತ ತಳಮಳಗೊಳ್ಳುತ್ತಿರುವಾಗ ಒಬ್ಬ ವ್ಯಕ್ತಿಯು ಅದನ್ನು ನೋಡಿ ಚಪ್ಪಾಳೆ ತಟ್ಟಿ ಸಂತೋಷದಿಂದ ಹೇಳಿದ, "ಓಹ್, ನೀನು ಇದೇ ರೀತಿ ನಮ್ಮನ್ನು ಹಿಂಸಿಸಿರುವೆ." ॥178॥ ಮತ್ತೊಬ್ಬನು ಚಪ್ಪಾಳೆಯ ಶಬ್ದವನ್ನು ಕೇಳಿ ಕೊಳದ ದಡಕ್ಕೆ ಓಡಿ ಬಂದನು. ಚೇಳು ಮೇಲೆ ಕೆಳಗೆ ಮುಳುಗೇಳುತ್ತ ಒದ್ದಾಡುತ್ತಿರುವುದನ್ನು ನೋಡಿ ಅವನ ಮನಸ್ಸು ಕರಗಿ ಅದರ ಮೇಲೆ ಕರುಣೆ ಉಂಟಾಯಿತು. ॥179॥ ಅವನು ಅದರ ಹತ್ತಿರ ಹೋದನು. ಚೇಳನ್ನು ತನ್ನ ಬೆರಳುಗಳ ಮಧ್ಯೆ ಹಿಡಿದು ಎತ್ತಿದನು. ಆದರೆ ಆ ಚೇಳು ತನ್ನ ಜಾತಿ ಸ್ವಭಾವದಿಂದ ಮೇಲೆ ಹಾರಿ ಅವನ ಬೆರಳನ್ನು ಕುಟುಕಿತು. ॥180॥ ಇಂತಹ ಸಂದರ್ಭದಲ್ಲಿ, ನಮ್ಮ ಜ್ಞಾನವು ಬಹಳ ಸೀಮಿತವಾದದು, ನಾವು ಪೂರ್ಣವಾಗಿ ವಿಧಿಯ ಅಧೀನ. ಅವನೇ ನಮಗೆ ಬುದ್ಧಿದಾತನು. ನಮ್ಮ ಜೀವಿತದಲ್ಲಿ ಪ್ರತಿಯೊಂದೂ ಅವನ ಇಚ್ಛೆಯಂತೆಯೇ ನಡೆಯುತ್ತದೆ. ॥181॥ ವಿವಿಧ ಜನರ ಅನುಭವಗಳು ವಿವಿಧ ರೀತಿಯವು. ನಾನೂ ನನ್ನ ಅನುಭವವನ್ನು ತಿಳಿಸುತ್ತೇನೆ.

ಸಾಯಿಯ ವಚನಗಳೇ ನನ್ನ ನಂಬಿಕೆಗೆ ಪ್ರಮಾಣ ಮತ್ತು ನನ್ನ ವಿಶ್ವಾಸವೇ ನನಗೆ ದೊಡ್ಡದು. ॥182॥ ಯಾವ ರೀತಿ ಕಾಕಾ ಸಾಹೇಬನು ಹಗಲಿನಲ್ಲಿ ಭಾಗವತವನ್ನು ಓದುತ್ತಿದ್ದನೋ ಅದೇ ರೀತಿ ಪ್ರತಿ ರಾತ್ರಿಯೂ ಏಕನಾಥರ ರಾಮಾಯಣ ಭಾವಾರ್ಥವನ್ನು ಓದುತ್ತಿದ್ದನು. ॥183॥ ಅದು ಎಷ್ಟರಮಟ್ಟಿಗೆ ನಿತ್ಯರೂಢಿಯಾಗಿತ್ತೆಂದರೆ, ದೇವರ ಮೇಲಿನ ಹೂವು ತಪ್ಪಿದರೂ, ಅಥವಾ ನೈಮಿತ್ತಿಕ ಕರ್ತವ್ಯಗಳು ತಪ್ಪಿದರೂ, ಸ್ನಾನ ತಪ್ಪಿದರೂ ಸಹ ಅವನು ಓದಲು ನಿಗದಿ ಪಡಿಸಿದ ವೇಳೆಯಲ್ಲಿ ಓದುವುದನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ॥184॥ ಈ ಎರಡು ಗ್ರಂಥಗಳೂ ಏಕನಾಥರ ರಚನೆಯಾಗಿದ್ದವು. ಅವು ಪರಮಾರ್ಥ ಸಾರಸರ್ವಸ್ವವೇ ಆಗಿದ್ದವು. ದೀಕ್ಷಿತನು ಅವುಗಳನ್ನು ಸಾಯಿಸಮರ್ಥರ ಅನುಗ್ರಹದ್ಯೋತಕವೆಂದೇ ಭಾವಿಸಿದ್ದನು. ॥185॥ ಈ ಎರಡು ಅದ್ವಿತೀಯ ಮತ್ತು ಮನಸೆಳೆಯುವ ಗ್ರಂಥಗಳಲ್ಲಿ ಆತ್ಮಜ್ಞಾನ, ವೈರಾಗ್ಯ, ನೀತಿಯ ಆಚರಣೆ – ಈ ಮೂರು ಗುಣಗಳು ಅಖಂಡ ಹಾಗೂ ತ್ರಿಗುಣಾತ್ಮಕವಾದ ಮೂರು ಬತ್ತಿಗಳ ಜ್ಯೋತಿಯ ರೀತಿಯಲ್ಲಿ ದಿವ್ಯಪ್ರಕಾಶವನ್ನು ಬೀರುತ್ತಿದ್ದವು. ॥186॥ ಯಾರು ಲೋಟದಿಂದ ಗುಟುಕು ಗುಟುಕಾಗಿ ಕುಡಿಯುವಂತೆ ಈ ಗ್ರಂಥಗಳಲ್ಲಿನ ಬೋಧನೆಯ ಅಮೃತ ಪಾನಮಾಡುವವರೋ ಅವರೇ ಭಾಗ್ಯವಂತರು. ಅವರ ಸಂಸಾರ ತಾಪತ್ರಯಗಳು ಒಮ್ಮೆಲೇ ನಾಶವಾಗಿ, ಅವರು ಮೋಕ್ಷವನ್ನು ಪಡೆಯುತ್ತಾರೆ. ॥187॥ ಸಾಯಿಯ ಕೃಪೆಯಿಂದ ದೀಕ್ಷಿತನಿಗೆ ಶ್ರೋತೃವು ಬೇಕಾಗಿತ್ತು, ಮತ್ತು ನನಗೆ ಭಾಗವತ ಶ್ರವಣದ ಸೌಭಾಗ್ಯ ದೊರಕಿತು. ನಾನು ಉಪಕೃತನಾದೆನು. ॥188॥ ಹಗಲು ರಾತ್ರಿ ಆ ಪವಿತ್ರ ಕಥೆಗಳನ್ನು ಆಲಿಸುವ ಸೌಭಾಗ್ಯ ನನ್ನದಾಯಿತು. ನನ್ನ ಕಿವಿಗಳು ಅದರಿಂದ ಪಾವನವಾದವು. ॥189॥ ಅದು ಹಾಗಿರಲಿ. ಒಂದು ರಾತ್ರಿ ಪರಮ ಪವಿತ್ರವಾದ ಕಥನ ನಡೆಯುತ್ತಿತ್ತು, ಆಗ ಒಂದು ವಿಚಿತ್ರ ಘಟನೆ ನಡೆಯಿತು. ಶ್ರೋತೃಗಳು ಖಂಡಿತವಾಗಿ ಆ ಚರಿತ್ರೆಯನ್ನು ಆಲಿಸಬೇಕು. ಅದು ಒಂದು ಉಪಕತೆಯಂತಿದೆ. ॥190॥ ಒಳ್ಳೆಯದು, ನಾನು ಹೇಗೆ ಸಹಾಯಮಾಡಲಿ? ಈಗ ನನಗೆ ಒಂದನ್ನು ವರ್ಣಿಸುವಾಗ ಮತ್ತೊಂದು ಕಥೆಯ ಭಾಗವು ನನ್ನನ್ನು ಪ್ರೇರೇಪಿಸುತ್ತಿದೆ. ಆದರೆ ನಾನು ಶ್ರವಣಾರ್ಹವಾದುದನ್ನು ಹೇಗೆ ಉಪೇಕ್ಷಿಸಲಿ? ॥191॥ ರಾಮಾಯಣದ ಒಂದು ರಸಭರಿತ ಕತೆಯು ನಡೆಯುತ್ತಿತ್ತು, ಅದು ಹನುಮಂತನ ಬಗ್ಗೆ. ಅವನು ತಾಯಿಯ ಅನುಜ್ಞೆಯಪ್ರಕಾರ ತನ್ನ ಸ್ವಾಮಿಯ ಸಾಮರ್ಥ್ಯವನ್ನು ಪರೀಕ್ಷಿಸಲು ಪ್ರಯತ್ನಿಸಿ ಕೊನೆಯಲ್ಲಿ ಅನರ್ಥವನ್ನು ಅನುಭವಿಸಬೇಕಾಯಿತು. ॥192॥ ಯಾವಾಗ ಹನುಮಂತನು ರಾಮಬಾಣಗಳ ಗರಿಗಳಿಂದ ಉಂಟಾದ ಬಿರುಗಾಳಿಯಲ್ಲಿ ಸಿಲುಕಿ ಗರಗರ ಸುತ್ತಲ್ಪಟ್ಟಾಗ, ಅವನಿಗೆ ಜೀವ ಭಯವುಂಟಾಗಿ ಗಾಬರಿಯಾಯಿತು. ಆ ಸಮಯದಲ್ಲವನ ತಂದೆ, ವಾಯುದೇವನು ಅವನ ರಕ್ಷಣೆಗೆ ಬಂದನು. ॥193॥ ತಂದೆಯ ಹಿತವಚನವನ್ನು ಆಲಿಸಿ, ಹನೂಮಂತನು ರಾಮನಿಗೆ ಶರಣಾದನು. ಈ ಕಥಾಭಾಗದ ನಿರೂಪಣೆಯಾಗುತ್ತಿರುವಾಗ ಒಂದು ವಿಲಕ್ಷಣ ಘಟನೆ ನಡೆಯಿತು. ಅದನ್ನು ಕೇಳಿರಿ. ॥194॥ ನಮ್ಮ ಮನಸ್ಸು ಕಥಾಶ್ರವಣದಲ್ಲಿ ಮಗ್ನವಾಗಿತ್ತು.

ಎಲ್ಲರೂ ಶ್ರವಣಾನಂದದಲ್ಲಿ ತಲ್ಲೀನರಾಗಿದ್ದರು. ಆಗ ಒಂದು ಚೇಳು, ಸಾಕ್ಷಾತ್ ಮೃತ್ಯುದೇವತೆಯಾಗಿ ಪ್ರತ್ಯಕ್ಷವಾಯಿತು. ದೇವರಿಗೇ ಗೊತ್ತು ಅದೆಲ್ಲಿಂದ ಬಂತು ಎಂದು. ॥195॥ ಅದು ಹೇಗೆ ಕಥನವನ್ನು ಇಷ್ಟಪಟ್ಟು ಬಂದಿತೋ ತಿಳಿಯದು. ನನ್ನ ಅರಿವಿಗೆ ಬರದೆ ಅದು ನನ್ನ ಹೆಗಲಮೇಲೆ ಧುಮುಕಿ ಅಲ್ಲೇ ಕಥೆಯ ರಸದ ಸುಖಾನುಭವವನ್ನು ಆಸ್ವಾದಿಸುತ್ತ ಕುಳಿತಿತು. ॥196॥ ನೋಡಿ! ಇಲ್ಲಿಯೂ ಬಾಬಾರವರು ಇದಕ್ಕೆ ಸಾಕ್ಷಿಯಾಗಿದ್ದರು. ನನಗೆ ಅದರ ಇರವಿನ ಅರಿವಿರಲಿಲ್ಲ. ಆದರೆ ದೇವರ ಕಥೆಗಳನ್ನು ಪ್ರೀತಿಸುವವನನ್ನು ಅವನು ಸ್ವಯಂ ಸಂರಕ್ಷಿಸುತ್ತಾನೆ. ॥197॥ ನಾನು ಆಕಸ್ಮಿಕವಾಗಿ ನೋಡಿದೆ. ಅಲ್ಲಿ ಭಯಂಕರವಾದ ಚೇಳೊಂದು ನನ್ನ ದೃಷ್ಟಿಗೆ ಬಿತ್ತು. ಅದು ಶಾಂತವಾಗಿ ನನ್ನ ಬಲಬುಜದ ಮೇಲಿನ ಅಂಗವಸ್ತ್ರದ ಮೇಲೆ ಸುಸ್ಥಿರವಾಗಿ ಕುಳಿತಿತ್ತು. ॥198॥ ಅದು ಸ್ವಲ್ಪವೂ ಅಲ್ಲಾಡಲಿಲ್ಲ. ಸ್ವಸ್ಥಚಿತ್ತದಿಂದ ಗಮನವಿಟ್ಟು, ಮತ್ತೊಬ್ಬ ಶ್ರವಣಪರಾಯಣನು ಕುಳಿತಿರುವಂತೆ ತನ್ನ ಆಸನದಲ್ಲಿ ಸ್ವಸ್ಥವಾಗಿ ವಿರಾಜಮಾನವಾಗಿತ್ತು. ॥199॥ ಒಂದು ವೇಳೆ, ಅದರ ನಿಜಸ್ವಭಾವದನುಸಾರವಾಗಿ ಅದರ ಕೊಂಡಿಯನ್ನು ಎಳ್ಳಷ್ಟು ಚಲಿಸಿದ್ದರೂ ಅದು ನನ್ನನ್ನು ಸ್ವತಂತ್ರವಾಗಿ ಆನಂದ ಮತ್ತು ವಿಶ್ರಾಂತಿಯನ್ನು ಅನುಭವಿಸಲು ಬಿಡುತ್ತಿರಲಿಲ್ಲ. ದುಃಖವಾದ ನೋವನ್ನು ನೀಡುತ್ತಿತ್ತು. ॥200॥ ರಾಮಾಯಣದ ಕಥೆಯ ಮಹಿಮೆಯು ಪೂರ್ಣಪ್ರಮಾಣದಲ್ಲಿ ವಿವರಿಸಲ್ಪಡುತ್ತಿತ್ತು. ಕಥಾಕಾರನೂ ಶ್ರೋತೃಗಳು ಇಬ್ಬರೂ ಕಥೆಯಲ್ಲಿ ಮಗ್ನರಾಗಿದ್ದರು. ಇವೆಲ್ಲವೂ ಕೆಟ್ಟುಹೋಗಬಹುದಿತ್ತು. ಅಂತಹ ದುರ್ಧರವಾದ ಪ್ರಸಂಗವಾಗಿತ್ತು ಅದು. ಅದನ್ನು ನಿಲ್ಲಿಸುವುದು ಒಂದು ಸಂದಿಗ್ಧ ಪರಿಸ್ಥಿತಿಯನ್ನುಂಟುಮಾಡಿತ್ತು. ॥201॥ ಇದೇ ರಾಮ ಕಥೆಯ ಮಹಿಮೆ. ಯಾವುದೇ ರೀತಿಯ ಇದಕ್ಕಿಂತ ಶಕ್ತಿಯುತವಾದ ವಿಘ್ನಗಳು ಉಂಟಾಗುವುದಿಲ್ಲ. ಅವು ಪಶ್ಚಾತ್ತಾಪಪಟ್ಟು ತಮ್ಮ ನಿಜಸ್ವಭಾವವನ್ನು ಮರೆಯಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ॥202॥ ರಾಮನ ಕೃಪೆಯಿಂದ ನನ್ನ ಬುದ್ಧಿಶಕ್ತಿ ತೀಕ್ಷ್ಣವಾಗಿತ್ತು. ನಾನು ಶಾಂತವಾಗಿ ಆ ಸಂಕಟವನ್ನು ದೂರಮಾಡಬಹುದಿತ್ತು. ಯಾರೂ ಸಹ ಕೊನೆಯ ಕ್ಷಣದವರೆಗೂ ಕಾಯಬಾರದು. ಅದೂ ಚಂಚಲವಾದ ಈ ಪ್ರಾಣಿಗೋಸ್ಕರವಾಗಿ. ॥203॥ ನಾನು ಹೊದ್ದುಕೊಂಡಿದ್ದ ಮೇಲಿನ ಅಂಗವಸ್ತ್ರವನ್ನು ಎರಡೂ ತುದಿಗಳಿಂದ ಮೆಲ್ಲಗೆ ಸುತ್ತಿ ಆ ಚೇಳನ್ನು ಗಟ್ಟಿಯಾಗಿ ಸುತ್ತಿ ಹಿಡಿದುಕೊಂಡು ಹೋಗಿ ಅಲ್ಲಿ ಅಗಲವಾಗಿ ಹರಡಿದೆನು. ॥204॥ ಚೇಳು ಜಾತಿಯಲ್ಲಿ ಭಯಂಕರ. ಅವಕಾಶ ಸಿಕ್ಕಿದಲ್ಲಿ ಅದು ತನ್ನ ಸ್ವಭಾವವನ್ನು ತೋರಿಸುತ್ತದೆ. ನನಗೆ ನಿಜವಾಗಿಯೂ ಭಯವಾಗಿತ್ತು. ಬಾಬಾರವರ ಆಜ್ಞೆಯೂ ನಿಖರವಾಗಿದ್ದು ಮೀರಲಾಗುತ್ತಿರಲಿಲ್ಲ. ಅದನ್ನು ಸಾಯಿಸಲು ನನಗೆ ಮನಸ್ಸಾಗಲಿಲ್ಲ. ॥205॥ ಇಲ್ಲಿ ಶ್ರೋತೃಗಳಿಗೆ ಸಹಜವಾಗಿಯೇ ಒಂದು ಶಂಕೆ ಉಂಟಾಗಬಹುದು. ಚೇಳು ಒಂದು ವಿಷಜಂತುವಲ್ಲವೇ? ಅದನ್ನು ಸಾಯಿಸಬಹುದಲ್ಲವೇ? ಅದು ಕುಟುಕಿದರೆ ಸಂತೋಷವಾಗುತ್ತದೆಯೇ? ಹಾಗಿದ್ದಲ್ಲಿ ಅದನ್ನೇಕೆ ಸಾಯಿಸಬಾರದು? ಆದರೆ ಯಾವುದನ್ನೂ ನಿಖರವಾಗಿ ಹೇಳಲು ಬರುವುದಿಲ್ಲ. ॥206॥ ಹಾವು, ಚೇಳು – ಮತ್ತಿತರ ವಿಷಜಂತುಗಳನ್ನಾದರೂ ಅಲಕ್ಷ್ಯಮಾಡುವರೇ?

ಬಾಬಾರವರೇನಾದರೂ ಅವುಗಳನ್ನು ಬಿಟ್ಟುಬಿಡಲು ಹೇಳುವರೇ? ॥207॥ ಶ್ರೋತೃಗಳ ಶಂಕೆಯು ಸತ್ಯ. ನನಗೂ ಅದೇ ರೀತಿಯ ಆತಂಕವಿತ್ತು. ಆದರೆ ಬಾಬಾರವರ ವಚನಗಳನ್ನು ಕೇಳಿರಿ. ಹಿಂದೆ ನಡೆದ ಒಂದು ಇದೇ ರೀತಿಯ ಪ್ರಸಂಗದಲ್ಲಿ ಏನು ಹೇಳಿದರೆಂಬುದನ್ನು ಕೇಳಿ. ॥208॥ ಆದರೆ ಪರಿಸ್ಥಿತಿ ಇದಕ್ಕಿಂತ ಬಹಳ ಗಂಭೀರವಾಗಿತ್ತು. ಶಿರಡಿಯಲ್ಲಿಯೇ ಕಾಕಾರವರ ವಾಡೆಯಲ್ಲಿ ಮಹಡಿಮೇಲಿನ ಒಂದು ಕೋಣೆಯಲ್ಲಿ ಕಿಟಕಿಯ ಹತ್ತಿರ ಒಂದು ವಿಷಪೂರಿತ ಸರ್ಪವು ಕಾಣಿಸಿಕೊಂಡಿತು. ॥209॥ ಅದು ಕಿಟಕಿಯ ಸಂದಿಯಿಂದ ಒಳಗೆ ಬಂದಿತ್ತು. ಅದು ದೀಪದ ಪ್ರಕಾಶದಲ್ಲಿ ಮಿಂಚಿನಂತೆ ಹೊಳೆಯುತ್ತಿತ್ತು. ಅದು ಅಲ್ಲಿ ಸುತ್ತಿಕೊಂಡು ಕುಳಿತಿತ್ತು. ॥210॥ ಅದು ದೀಪದ ಪ್ರಕಾಶದಲ್ಲಿ ಹೊಳೆಯುತ್ತಿದ್ದರೂ ಸಹ, ಸುತ್ತುಮುತ್ತ ಇದ್ದ ಜನರ ಚಲನವಲನಗಳಿಂದಾಗಿ ಅದು ಅಲ್ಲಿಂದ ಚಲಿಸಲು ಪ್ರಾರಂಭಿಸಿತು. ಅಲ್ಲಿಗೆ ಗದ್ದಲವುಂಟಾದಾಗ ಅದು ಕ್ಷಣಕಾಲ ನಿಶ್ಚಲವಾಗಿ ಅಲ್ಲಿಯೇ ಉಳಿಯಿತು. ॥211॥ ಅದು ಹಿಂತಿರುಗಿಯೂ ಹೋಗಲಿಲ್ಲ. ಅಥವಾ ಮುಂದೆಯೂ ಬರಲಿಲ್ಲ. ಆದರೆ ತನ್ನ ಹೆಡೆಯನ್ನು ಮೇಲೆ ಕೆಳಗೆ ಆಡಿಸುತ್ತಾ ಇತ್ತು. ಅದನ್ನು ಹೇಗೆ ಸಾಯಿಸಬಹುದೆಂಬ ತರಾತುರಿ ಯೋಚನೆ ಆ ಕ್ಷಣದಲ್ಲಿ ಉಂಟಾಯಿತು. ॥212॥ ಕೆಲವರು ದೊಣ್ಣೆಗಳನ್ನು ಹಿಡಿದುಕೊಂಡು, ಕೆಲವರು ಕೋಲುಗಳನ್ನು ಹಿಡಿದುಕೊಂಡು ತರಾತುರಿಯಿಂದ ಬಂದರು. ಆದರೆ ಆ ಜಾಗವು ಈ ಗಡಿಬಿಡಿಗೆ ಕಷ್ಟವಾಗಿತ್ತು. ಅವರೆಲ್ಲರೂ ಬಹಳ ಚಿಂತಿತರಾದರು. ॥213॥ ಅದೇನಾದರೂ ಸ್ವಲ್ಪ ಮುಂದೆ ಸರಿದಾಡಿದಲ್ಲಿ, ಮತ್ತು ಗೋಡೆಯ ಮೇಲಿನಿಂದ ಕೆಳಗೆ ಇಳಿದು ಬಂದು ನೆಲಕ್ಕೆ ಬಿದ್ದಲ್ಲಿ ಅದು ಮೊದಲು ನನ್ನ ಹಾಸಿಗೆಯನ್ನು ತಲುಪಿ ಅದರಿಂದಾಗಿ ಮಹಾಸಂಕಟ ಒದಗಿ ಬರಬಹುದಾಗಿತ್ತು.॥214॥ ಯಾವುದೇ ಮರ್ಮಸ್ಥಳಕ್ಕೆ ಏಟುಕೊಟ್ಟು ಅದನ್ನು ಕೊಲ್ಲಬಹುದು. ಆದರೆ ಮಾರಣಾಂತಿಕ ಏಟು ಗುರಿ ತಪ್ಪಿದರೆ, ಅದು ಸೇಡು ತೀರಿಸಿಕೊಳ್ಳುತ್ತಿತ್ತು, ಆಪತ್ತು ಉಂಟುಮಾಡುತ್ತಿತ್ತು. ಆದ್ದರಿಂದ ಒಂದು ದೀಪವನ್ನು ತೆಗೆದುಕೊಂಡು ಬಂದು ಅದಕ್ಕೆ ಗುರಿಇಡಲಾಯಿತು. ಆಗ ಅದು ತಪ್ಪಿಸಿಕೊಂಡು ಹೋಗುವ ದಾರಿಯನ್ನು ಗುರುತಿಸಿತು. ॥215॥ ಹೇಗಿದ್ದರೂ ಅದರ ಮರಣ ಕಾಲ ಬಂದಿರಲಿಲ್ಲ. ನಮ್ಮ ಅದೃಷ್ಟವೂ ಸಬಲವಾಗಿತ್ತು. ಅದೊಂದು ಅತಂತ್ರದ ಕ್ಷಣವಾಗಿತ್ತು. ಆದರೆ ಬಾಬಾರವರು ನಮ್ಮೆಲ್ಲರನ್ನೂ ರಕ್ಷಿಸಿದರು. ॥216॥ ಆ ಜಾಗದಿಂದ ಹಿಂದೆ ಸರಿದು ಅದು ಎಲ್ಲಿಂದ ಪ್ರವೇಶಿಸಿತ್ತೋ ಅಲ್ಲಿಗೇ ಹೋಯಿತು. ಅದು ನಿರ್ಭಯವಾಗಿತ್ತು. ಇನ್ನು ಯಾರೂ ಮತ್ತೆ ಭಯಪಡಬೇಕಾಗಿರಲಿಲ್ಲ. ಈ ರೀತಿ ಇಬ್ಬರೂ ಪರಸ್ಪರ ಸುಖಿಯಾದೆವು. ॥217॥ ಅನಂತರ ಮುಕ್ತಾರಾಮ ಎಂಬ ಭಕ್ತನು ಎದ್ದು ನಿಂತು ಹೇಳಿದನು, – "ಪಾಪ, ಆ ಬಡಪಾಯಿ ತಪ್ಪಿಸಿಕೊಂಡಿತು. ಒಳ್ಳೆಯದಾಯಿತು. ಅದೇನಾದರೂ ರಂಧ್ರದ ಮೂಲಕ ಜಾರಿಕೊಳ್ಳದೇ ಇದ್ದಲ್ಲಿ ಅದು ತನ್ನ ಪ್ರಾಣವನ್ನೇ ಕಳೆದುಕೊಳ್ಳುತ್ತಿತ್ತು." ॥218॥ ನಾನು ಯಾವಾಗ ಮುಕ್ತಾರಾಮನ ದಯಾದೃಷ್ಟಿಯನ್ನು ನೋಡಿದೆನೋ ಆಗ ನನಗೆ ಕಷ್ಟವಾಗಿ ಮನಸ್ಸಿನಲ್ಲೇ ಯೋಚಿಸಿದೆನು. "ಇಂತಹ ಅಪಾಯಕಾರಿ ಜಂತುಗಳಲ್ಲಿ ದಯೆ ತೋರಿ ಏನು ಪ್ರಯೋಜನ?

ಅದಿಲ್ಲದಿದ್ದರೆ ಪ್ರಪಂಚವು ಹೇಗೆ ನಡೆಯುತ್ತದೆ?" ॥219॥ ಮುಕ್ತಾರಾಮನು ಅಪರೂಪಕ್ಕೆ ಬಂದವನು. ನಾವಾದರೋ ಹಗಲು ರಾತ್ರಿ ಅಲ್ಲಿರುತ್ತಿದ್ದೆವು. ಜೊತೆಗೆ ನನ್ನ ಹಾಸಿಗೆಯು ಕಿಟಕಿಯ ಪಕ್ಕದಲ್ಲಿತ್ತು, ಆದ್ದರಿಂದ ನನಗೆ ಈ ಮಾತುಗಳು ರುಚಿಸಲಿಲ್ಲ. ॥220॥ ಅವನು ವಾದಕ್ಕೆ ಇಳಿದನು. ನಾನು ತದ್ವಿರುದ್ಧವಾದ ದೃಷ್ಟಿಯನ್ನು ಹೊಂದಿದ್ದೆನು. ಒಂದು ದೊಡ್ಡ ವಾಗ್ವಾದವೇ ನಡೆಯಿತು. ಆದರೆ ಯಾವ ನಿರ್ಣಯಕ್ಕೂ ತಲುಪಲಾಗಲಿಲ್ಲ. ॥221॥ ಒಬ್ಬನು ಹೇಳಿದನು, "ಸರ್ಪವನ್ನು ಕ್ಷಣಮಾತ್ರವೂ ತಡ ಮಾಡದೆ ಸಾಯಿಸಬೇಕು." ಮತ್ತೊಬ್ಬನು ಹೇಳಿದನು. "ನಾವು ಒಂದು ನಿರಪರಾಧಿಯಾದ ಜೀವಿಯನ್ನು ಅನವಶ್ಯಕವಾಗಿ ಏಕೆ ದ್ವೇಷಿಸಬೇಕು?" ॥223॥ ಕೆಲವರು ಮುಕ್ತಾರಾಮನನ್ನು ಧಿಕ್ಕರಿಸಿದರು. ಕೆಲವು ಅವನನ್ನು ಪುರಸ್ಕರಿಸಿದರು. ವಾದ ಪರಸ್ಪರ ಬಲವಾಗಿ ಕಾವೇರಿತು. ಅದಕ್ಕೆ ಕೊನೆಯಿರಲಿಲ್ಲ.

ಕೊನೆಯಲ್ಲಿ ಮುಕ್ತಾರಾಮನು ಮೆಟ್ಟಿಲುಗಳನ್ನು ಇಳಿದು ಹೋದನು. ನಾನು ನನ್ನ ಮಲಗುವ ಜಾಗವನ್ನು ಬದಲಿಸಿದೆನು. ನಾನು ಒಂದು ಮರದ ತುಂಡನ್ನು ಆ ರಂಧ್ರದಲ್ಲಿ ತೂರಿಸಿ ಅನಂತರ ನನ್ನ ಹಾಸಿಗೆಯನ್ನು ಮಲಗಲು ಹಾಸಿ ಕೊಂಡೆನು. ॥224॥ ಕಣ್ಣುಗಳು ಮಂಪರಾದವು. ಅಲ್ಲಿ ನೆರೆದಿದ್ದ ಜನರೆಲ್ಲರೂ ನಿದ್ರಿಸಿದರು. ನಾನು ಆಕಳಿಸಲು ಪ್ರಾರಂಭಿಸಿದೆ. ವಾದವು ಸಹಜವಾಗಿಯೇ ಮುಗಿಯಿತು. ॥225॥ ರಾತ್ರಿ ಕಳೆಯಿತು. ಬೆಳಗಾಯಿತು. ನಾನು ಬೆಳಗಿನ ನನ್ನ ಶೌಚ, ಮುಖಮಾರ್ಜನ ಕರ್ಮಗಳನ್ನು ಮುಗಿಸಿದೆನು. ಬಾಬಾರವರು ಲೇಂಡಿಯಿಂದ ಹಿಂತಿರುಗಿ ಬಂದರು. ಜನರು ಮಸೀದಿಯಲ್ಲಿ ಜಮಾಯಿಸಿದರು. ॥226॥ ನಿತ್ಯ ರೂಢಿಯ ಪ್ರಕಾರ ಬೆಳಗಿನ ಜಾವದಲ್ಲಿ ನಿತ್ಯವೇಳೆಗೆ ಮಸೀದಿಗೆ ಬಂದೆನು. ಮುಕ್ತಾರಾಮ ಮತ್ತಿತರರೂ ಸಹ ಬಂದು ತಮ್ಮ ಸ್ವಸ್ಥಾನವನ್ನು ಅಲಂಕರಿಸಿದರು. ॥227॥ ಕೆಲವರು ತಂಬಾಕನ್ನು ತಮ್ಮ ಅಂಗೈಯಲ್ಲಿ ಉಜ್ಜುತ್ತಿದ್ದರು. ಕೆಲವರು ಬಾಬಾರವರ ಚಿಲುಮೆಗೆ ತುಂಬಿಸುತ್ತಿದ್ದರು. ಕೆಲವರು ಬಾಬಾರವರ ಕಾಲು ಕೈಗಳನ್ನು ಒತ್ತುತ್ತಿದ್ದರು. ಈ ರೀತಿ ಎಲ್ಲರೂ ಅವರ ಸೇವೆಯಲ್ಲಿ ತತ್ಪರರಾಗಿದ್ದರು. ॥228॥ ಬಾಬಾರವರು ಎಲ್ಲರಂತರಾಳದ ಯೋಚನೆಗಳನ್ನು ಅರಿತವರು, ಮೃದುವಾಗಿ ಪ್ರಶ್ನಿಸಿದರು, "ವಾಡೆಯಲ್ಲಿ ನೆನ್ನೆ ರಾತ್ರಿ ಏನು ಚರ್ಚೆ ನಡೆಯಿತು?" ॥229॥ ಅನಂತರ ನಾನು ಬಾಬಾರವರಿಗೆ ಅಲ್ಲಿ ಏನೇನು ನಡೆಯಿತು ಎಂಬುದನ್ನು ವಿವರವಾಗಿ ಯಥಾವತ್ತಾಗಿ ತಿಳಿಸಿದೆನು. ಅಂತಹ ಸಂದರ್ಭಗಳಲ್ಲಿ ಒಂದು ಹಾವನ್ನುಕೊಲ್ಲಬಹುದೇ ಅಥವಾ ಬೇಡವೇ? ಎಂದು ಕೇಳಿದೆನು. ॥230॥ ಆದರೆ ಬಾಬಾರವರು ಕೇವಲ ಒಂದು ಸ್ಥಿತಿಯನ್ನೇ ತಳೆದರು– ಏನೆಂದರೆ ದೇವರು ಹಾವು ಮತ್ತು ಚೇಳು ಎಲ್ಲದರಲ್ಲಿಯೂ ಇದ್ದಾನೆ. ಮತ್ತು ಸರ್ವ ಜೀವಿಗಳಲ್ಲಿಯೂ ಇದ್ದಾನೆ. ಆದ್ದರಿಂದ ನಾವು ಎಲ್ಲವನ್ನೂ ಪ್ರೀತಿಸಬೇಕು. ॥231॥ ಪರಮಾತ್ಮನು ಜಗತ್ತಿನ ಸೂತ್ರಧಾರ. ಎಲ್ಲವೂ ಅವನ ಆಜ್ಞಾನುವರ್ತಿಯೇ. ಹಾವಾಗಿರಲಿ ಅಥವಾ ಚೇಳಾಗಿರಲಿ, ಅವನ ಆಜ್ಞೆಗೆ ವಿರುದ್ಧವಾಗಿ

ನಡೆಯಲು ಸಾಧ್ಯವಿಲ್ಲ. ॥232॥ ಆದುದರಿಂದ ನಾವು ಎಲ್ಲ ಜೀವಿಗಳಲ್ಲಿಯೂ ದಯೆ ತೋರಿಸಬೇಕು. ಮತ್ತು ಅವುಗಳನ್ನು ಪ್ರೀತಿಸಬೇಕು. ಹಿಂಸೆಯನ್ನು ಬಿಟ್ಟುಬಿಡಿ ಮತ್ತು ತಾಳ್ಮೆಯಿಂದ ಇರಿ. ದೇವರು ಎಲ್ಲರನ್ನೂ ರಕ್ಷಿಸುವನು. ॥233॥ ಸಾಯಿಬಾಬಾರ ಈ ತರಹದ ಕಥೆಗಳನ್ನು ಅದೆಷ್ಟು ನಿರೂಪಿಸಲಿ? ಆದುದರಿಂದ ಶ್ರೋತೃಗಳು ಅವುಗಳಲ್ಲಿನ ತತ್ತ್ವಗಳನ್ನು ಗ್ರಹಿಸಬೇಕು. ॥234॥ ಮುಂದಿನ ಅಧ್ಯಾಯ ಇದಕ್ಕಿಂತಲೂ ಹೆಚ್ಚು ಮಧುರವಾಗಿದೆ. ಅದರಲ್ಲಿ ಬರುವ ಒಂದು ಪ್ರಸಂಗದಲ್ಲಿ ಭಕ್ತಿ ಮತ್ತು ಶ್ರದ್ಧೆಗಳು ಜೊತೆಯಾಗಿ ಒಬ್ಬ ಭಕ್ತನಲ್ಲಿದ್ದು, ಭಕ್ತನಾದ ದೀಕ್ಷಿತನು ಅವುಗಳ ಬಲದ ಮೇಲೆ ಯಾವ ರೀತಿ ಒಂದು ಮೇಕೆಯನ್ನು ಕೊಲ್ಲಲು ಉದ್ಯುಕ್ತನಾದನು ಎಂದು ಹೇಳುತ್ತದೆ. ॥235॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಅಕಾಲ ಮೃತ್ಯು ನಿವಾರಣೆ" ಎಂಬ ಇಪ್ಪತ್ತೆರಡನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ವಿಷ್ಣು / ಕೃಷ್ಣ
2. ವಿವರವನ್ನು ಅಧ್ಯಾಯ 4 ರಲ್ಲಿ ಕೊಟ್ಟಿದೆ.
3. ಬಾವಿಯಿಂದ ನೀರನ್ನು ಎತ್ತಲು ಉಪಯೋಗಿಸುತ್ತಾರೆ. ಎತ್ತುಗಳ ಸಹಾಯದಿಂದ ಜಮೀನನ್ನು ಉಳಲು ಉಪಯೋಗಿಸುತ್ತಾರೆ.
4. ಇದು ರೈಲುಗಾಡಿಯಲ್ಲಿ 1.3 ಮೈಲಿಗಳ ದೂರದಲ್ಲಿದೆ.
5. ಒಮ್ಮೆ ಒಂದು ಹಾವು ಮಾಧವ ರಾವ್ ದೇಶಪಾಂಡೆಯ ಶಿರಡಿಯಲ್ಲಿದ್ದಾಗ ಕಚ್ಚಿತು. ಹತ್ತಿರದಲ್ಲಿ ವಿಠೋಬಾನ ಮಂದಿರವಿದೆ. ಅಲ್ಲಿಗೆ ಹಾವು ಕಚ್ಚಿದವರನ್ನು ಗುಣಪಡಿಸಲು ಕರೆದೊಯ್ಯುವರು ಎಂಬುದು ಜನರ ನಂಬಿಕೆ ಮತ್ತು ಅನುಭವವೂ ಸಹ. ಅದೇ ರೀತಿ ಅನೇಕ ಜನರು ಅವನನ್ನು ಅಲ್ಲಿಗೆ ಕರೆದೊಯ್ಯಬೇಕೆಂದರು. ಆದರೆ ಅವನು ಹೇಳಿದನು, "ನಾವು ಮಹಾರಾಜರು ಹೇಳಿದ ಹಾಗೆ ಕೇಳೋಣ" ಎಂದು ಹೇಳಿ ಮಹಾರಾಜ್ ಹತ್ತಿರ ಹೋದನು. ಮಾಧವರಾವ್‌ನು ಮೆಟ್ಟಿಲುಗಳ ಕೆಳಗಡೆ ಇದ್ದಾಗ ಮಹಾರಾಜರು ಜೋರಾಗಿ ನಿರ್ದೇಶಿಸಿದರು.

"ಮೇಲೆ ಹತ್ತಬೇಡ" ಇದನ್ನು ಅವರಿಂದ ಬಂದ ನಿರ್ದೇಶನವೆಂದು ನಂಬಿ ಮಾಧವರಾಮನು ಮೆಟ್ಟಿಲುಗಳನ್ನು ಹತ್ತಿ ಮೇಲೆ ಬರಲಿಲ್ಲ. ಆದರೆ ಈ ನಿರ್ದೇಶನವು ಅವನಿಗಿಲ್ಲ. ಆ ವಿಷಕ್ಕಾಗಿ ಇತ್ತು. ಏಕೆಂದರೆ ಆ ಕ್ಷಣದಿಂದ ವಿಷವು ಮೇಲೆ ಹರಡಲಿಲ್ಲ. ಅನಂತಹಾಧವರಾವನು ಮಹಾರಾಜ್‌ರ ಕೃಪೆಯಿಂದ ನಿಧಾನವಾಗಿ ಯಾವುದೇ ಚಿಕಿತ್ಸಾವಿಧಿಯಿಲ್ಲದೆ ಚೇತರಿಸಿಕೊಂಡನು. ಅವನಿಗೆ ಈ ಘಟನೆಯ ದೃಶ್ಯ ಒಂದು ವರುಷದ ಹಿಂದೆಯೇ ನಡೆಯುವ ಮುಂಚೆಯೇ ಕಾಣಿಸಿತ್ತು.

6. ರಾತ್ರಿ ಆರತಿಯು ಚಾವಡಿಯಲ್ಲಿಯೂ ಮತ್ತು ಮರುದಿನ ಬೆಳಗ್ಗೆ ಕಾಕಡಾರತಿಯು ಬಾಬಾರವರು ಅಲ್ಲಿ ದಿನಬಿಟ್ಟು ದಿನ ಮಲಗಲು ಹೋದಾಗ ನಡೆಯುತ್ತಿತ್ತು.



# ಅಧ್ಯಾಯ - 23

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಗುರು ಮತ್ತು ಶಿಷ್ಯರ ಲೀಲೆಯ ನೋಟ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ತಾತ್ಪರ್ಯ ಹೇಳಬೇಕೆಂದರೆ ಮನುಷ್ಯನು ಮೂರು ಗುಣಗಳಿಗೆ ಅತೀತನಾದವನು. ಆದರೆ 'ಮಾಯೆ'ಯಿಂದ ಭ್ರಮಿತನಾಗಿ ತನ್ನ ಸತ್ಯ - ಪರಿಶುದ್ಧ ಚೈತನ್ಯ - ಆನಂದದ ಸ್ಥಿತಿಯನ್ನು ಮರೆತು ತಾನು ದೇಹವೆಂದು ಭಾವಿಸಿದ್ದಾನೆ. ॥1॥ ಅನಂತರ ದೇಹಾಭಿಮಾನದಿಂದಾಗಿ ಅವನು ತನ್ನ ಕರ್ತೃತ್ವದಲ್ಲೂ, ಭೋಕ್ತೃತ್ವದಲ್ಲೂ ನಂಬಿಕೆ ಇರಿಸಿದ್ದಾನೆ. ಅವನು ದುಃಖಗಳಲ್ಲಿ ಬಂಧಿತನಾಗಿ ಒಂದಾದ ಮೇಲೆ ಮತ್ತೊಂದರಲ್ಲಿ ಸಿಲುಕಿ ತಪ್ಪಿಸಿಕೊಳ್ಳುವ ದಾರಿಯನ್ನು ಕಾಣದಾಗಿದ್ದಾನೆ. ॥2॥ ಗುರುಚರಣಗಳಲ್ಲಿ ಇಡುವ ಸಪ್ರೇಮ ಭಕ್ತಿಯೊಂದೇ ಸಕಲ ಅನರ್ಥಗಳನ್ನೂ ಉಪಶಮನವಾಡುವ ಉಪಾಯ. ಸಾಯಿ ಶ್ರೀರಂಗ ಮಹಾ ಚತುರನಾದ ನಟ. ಅವನು ತನ್ನ ಭಕ್ತರನ್ನು ತನ್ನದೇ ಆದ ಬಣ್ಣಗಳಿಂದ ರಂಗೇರಿಸುತ್ತಾನೆ. ॥3॥ ನಾವು ಸಾಯಿಬಾಬಾ ಅವರನ್ನು ಅವತಾರವೆಂದು ಭಾವಿಸುತ್ತೇವೆ. ಏಕೆಂದರೆ ಅವರಿಗೆ ಅದರ ಎಲ್ಲ ಲಕ್ಷಣಗಳೂ ಇವೆ. ಆದರೆ ಅವರು ತಾವೇ ಸದಾ ಹೇಳುತ್ತಾರೆ "ನಾನು ಒಬ್ಬ ಸೇವಕ; ಅಲ್ಲಾನ ಚರಣಗಳ ದಾಸ." ॥4॥ ಸ್ವಯಂ ತಾವೇ ಅವತಾರವಾಗಿದ್ದರೂ ಅವರು ಜಗತ್ತಿನ ಒಬ್ಬ ಸಾಧಾರಣ ವ್ಯಕ್ತಿಯಂತೆ ಜೀವಿಸಿದ್ದರು. ಈ ರೀತಿ ಇತರರಿಗೆ ಅವರವರ ಜಾತಿ ಧರ್ಮಗಳ ಆಚಾರಗಳನ್ನು ಪ್ರಚಾರ ಮಾಡಲು ಉದಾಹರಣೆಯಾಗಿದ್ದರು. ॥5॥

ಅವರು ಯಾರ ಜೊತೆಯಲ್ಲೂ ತಮ್ಮನ್ನು ಹೋಲಿಸಿಕೊಳ್ಳಲಿಲ್ಲ ಮತ್ತು ಅದನ್ನು ಮಾಡಲು ಇತರರಿಗೂ ಅವಕಾಶ ಮಾಡಿಕೊಡಲಿಲ್ಲ. ಇಡೀ ವಿಶ್ವದಲ್ಲೇ ಭಗವಂತನು ಸರ್ವವ್ಯಾಪಿ ಎಂದು ತಿಳಿದವನಿಗೆ ದೈನ್ಯತೆಯು ಒಂದು ಆಭೂಷಣವೇ ಸರಿ. ॥6॥ ಅವರು ಯಾರನ್ನೂ ಅವಗಣನೆ ಮಾಡಲಿಲ್ಲ ಹಾಗೂ ಯಾರನ್ನೂ ತುಚ್ಛವಾಗಿ ಕಾಣಲಿಲ್ಲ. ಅವರಿಗೆ ಪ್ರತಿಯೊಂದು ಜೀವವೂ ನಾರಾಯಣನೇ. ಅವರು ಎಲ್ಲದರಲ್ಲೂ ಚೈತನ್ಯಘನನನ್ನೇ ಕಂಡರು. ॥7॥ ಅವರು ಎಂದಿಗೂ "ನಾನು ದೇವರು" ಎಂದು ಹೇಳಲಿಲ್ಲ. ಆದರೆ, "ನಾನು ದೇವರ ದೀನನಾದ ದಾಸ, ನಾನು ಸದಾ ದೇವರನ್ನು ಸ್ಮರಿಸುತ್ತೇನೆ." ಎಂದು ಹೇಳುತ್ತಿದ್ದರು. ಅವರು ನಿತ್ಯವೂ "ಅಲ್ಲಾ ಮಾಲಿಕ್" ಎಂಬ ಜಪ ಮಾಡುತ್ತಿದ್ದರು. ॥8॥ ಯಾವುದೇ ಸಂತನ ಸ್ಥಿತಿಯನ್ನು ಅಥವಾ ಅವನ ಪರಂಪರೆಯನ್ನು ಅವನ ವರ್ತನೆ ಹಾಗೂ ಆಹಾರ ವಿಹಾರಗಳಿಂದ ಅರಿಯಲು ಸಾಧ್ಯವಿಲ್ಲ. ಅವನು ಇವುಗಳಿಗೆಲ್ಲ ಅತೀತನಾಗಿರುವನು. ॥9॥ ಸರ್ವೇಶ್ವರನ ಕೃಪೆಯಿಂದ, ಪರೋಪಕಾರಿ ಸಂತರು ಅವತಾರ ತಾಳುತ್ತಾರೆ. ಈ ಭೂಮಿಯ ಮೇಲೆ ಇರುವ ಸಕಲ ಜಡವಸ್ತು ಹಾಗೂ ಜೀವಿಗಳ ಉದ್ಧಾರ ಮಾಡುತ್ತಾರೆ. ॥10॥ ಕೇವಲ ಹಿಂದಿನ ಜನ್ಮದ ಪುಣ್ಯಫಲವೇ ಅಭಿಲಾಷೆ ಮತ್ತು ಪ್ರೀತಿಯಿಂದ ಸಂತರ ಚರಿತ್ರೆಗಳನ್ನು ಆಲಿಸುವಂತೆ ಮಾಡಿ ಸುಖ ಸಂತುಷ್ಟಿಗಳನ್ನು ನೀಡುತ್ತದೆ. ॥11॥ ಒಮ್ಮೆ ಒಬ್ಬ ಯೋಗಸಾಧಕನು ಚಂದೋರಕರ್‌ನ ಜೊತೆಯಲ್ಲಿ ಮಸೀದಿಗೆ ಬಾಬಾರವರ ದರ್ಶನಕ್ಕಾಗಿ ಬಂದನು. ॥12॥ ಅವನು ಪತಂಜಲಿಯ ಯೋಗಶಾಸ್ತ್ರ ಮತ್ತಿತರ ಗ್ರಂಥಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ್ದನು. ಆದರೆ ಅವನಿಗೆ ಸ್ವಲ್ಪ ಮಾತ್ರವೂ ಅನುಭವ ಜ್ಞಾನವಿಲ್ಲದ್ದರಿಂದ ಒಂದು ಕ್ಷಣ ಕಾಲ ಸಹ ಸಮಾಧಿ ಸ್ಥಿತಿಗೇರಲು ಆಗಿರಲಿಲ್ಲ. ॥13॥ 'ಸಾಯಿ ಮಹಾರಾಜ್‌ರು ಯೋಗೀಶ್ವರರು ನನ್ನ ಮೇಲೆ ಕೃಪೆಮಾಡಿದರೆ ನನ್ನ ಶಂಕೆಗಳೆಲ್ಲವೂ ದೂರವಾಗುತ್ತವೆ. ನಾನು ನಿಶ್ಚಯವಾಗಿಯೂ ಸಮಾಧಿ ಸ್ಥಿತಿಯನ್ನು ಪಡೆಯುತ್ತೇನೆ. ॥14॥ ಮನಸ್ಸಿನಲ್ಲಿ ಈ ಆಶೆಯನ್ನು ಇಟ್ಟುಕೊಂಡು ಅವನು ಸಾಯಿಯ ದರ್ಶನ ಪಡೆಯುತ್ತಿರುವಾಗ, ಸಾಯಿಯು ಕುಳಿತುಕೊಂಡು ರೊಟ್ಟಿಯನ್ನು ಈರುಳ್ಳಿ ಜೊತೆ ತಿನ್ನುತ್ತಿರುವುದನ್ನು ನೋಡಿದನು. ॥15॥ ಅವರು ಒಂದು ಒಣಗಿದ ರೊಟ್ಟಿ ಮತ್ತು ಈರುಳ್ಳಿಯನ್ನು ತಿನ್ನಲು ಬಾಯಿಗೆ ಇಟ್ಟುಕೊಳ್ಳುವುದನ್ನು ನೋಡಿದ ಅವನಿಗೆ ಒಂದು ಪ್ರಬಲವಾದಶಂಕೆ ಉದ್ಭವವಾಯಿತು. "ಇವರು ಹೇಗೆ ನನ್ನ ಶಂಕೆಗಳನ್ನು ನಿವಾರಿಸುತ್ತಾರೆ?" ಎಂದು. ॥16॥ ಯಾವಾಗ ಅವನ ಮನಸ್ಸಿನಲ್ಲಿ ಇಂತಹ ವಿಕಲ್ಪ ಹುಟ್ಟಿತೋ ಆಗ ಅಂತರ್ಜ್ಞಾನಿಯಾದ ಸಾಯಿ ಮಹಾರಾಜರು ಹೇಳಿದರು, "ನಾನಾ, ಯಾರು ಈರುಳ್ಳಿಯನ್ನು ಜೀರ್ಣಿಸಿಕೊಳ್ಳಬಲ್ಲರೋ ಅವರು ಮಾತ್ರ ತಿನ್ನಬಹುದು. ॥17॥ "ಯಾರಿಗೆ ಅದನ್ನು ಜೀರ್ಣಿಸುವ ಶಕ್ತಿ ಇದೆಯೋ ಅವರು ಈರುಳ್ಳಿಯನ್ನು ಕ್ಷೇಮವಾಗಿ ತಿನ್ನಬಹುದು" ಇದನ್ನು ಕೇಳಿದ ಯೋಗಿಯು ಗಲಿಬಿಲಿಗೊಂಡನು ಮತ್ತು ಪೂರ್ವಕವಾಗಿ ಸದ್ಭಾವನೆಯಿಂದ ಅವರಿಗೆ ಶರಣಾದನು. ॥18॥ ಅದು ಹಾಗಿರಲಿ. ಅನಂತರ ಆ ಯೋಗಸಾಧಕನು

ಬಾಬಾರವರ ಹತ್ತಿರ ಬಂದು ಕುಳಿತನು. ಮನದಲ್ಲಿ ಯಾವುದೇ ಶಂಕೆ ಇರಲಿಲ್ಲ. ಬಾಬಾರವರು ಬಂದು ತಮ್ಮ ಆಸನದಲ್ಲಿ ಕುಳಿತರು. ॥19॥ ಅವನು ನಿಖರವಾದ ಪ್ರಶ್ನೆಗಳನ್ನು ಕೇಳಿ ತನ್ನ ಶಂಕೆಗಳನ್ನು ನಿವಾರಿಸಿಕೊಂಡನು ಮತ್ತು ತೃಪ್ತಿ ಹೊಂದಿದನು. ಉದಿ ಮತ್ತು ಆಶೀರ್ವಚನಗಳನ್ನು ಪಡೆದು ಪ್ರಸನ್ನ ಚಿತ್ತನಾಗಿ ಹಿಂತಿರುಗಿದನು. ॥20॥ ಈ ರೀತಿಯ ಕಥೆಗಳು ಬಹಳ ಇವೆ. ಶ್ರದ್ಧಾಭಕ್ತಿಗಳಿಂದ ಆಲಿಸಿದರೆ ಅವು ಭಕ್ತರ ದುಃಖ, ಮೋಹ ಮುಂತಾದ ಅನರ್ಥಗಳನ್ನು ಕೂಡಲೇ ಉಪಶಮನ ಮಾಡುತ್ತವೆ. ॥21॥ ಒಂದು ಹಂದಿಯು ಸಣ್ಣ ಜಲಾಶಯದಲ್ಲಿ ಅತಿಶಯವಾದ ದುರ್ಗಂಧಯುಕ್ತವಾಗಿರುವುದರಲ್ಲಿ ನಿರತಿಶಯವಾದ ಸೌಖ್ಯವನ್ನು ಪಡೆಯುತ್ತದೆ, ಇದು ನಿಸ್ಸಂಶಯವಾಗಿಯೂ ಆಗುವುದು. ॥22॥ ಒಬ್ಬ ಮಾನವನ ಆತ್ಮವೂ ಗಿಣಿಯ ಆತ್ಮವೂ ಒಂದೇ ರೀತಿಯದ್ದಾಗಿವೆ. ಒಂದು ದೇಹದಲ್ಲಿ ಬಂಧಿಯಾಗಿದೆ ಮತ್ತೊಂದು ಪಂಜರದಲ್ಲಿ ಬಂಧಿಯಾಗಿದೆ. ಗಿಣಿಯು ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರೂ ಬಂಧನದಲ್ಲಿಯೇ ಸಂತೋಷಪಡುತ್ತದೆ. ॥23॥ ಗಿಣಿಯು ಕೂಪ ಮಂಡೂಕದ ತರಹ ಇದೆ. ಪಂಜರದಲ್ಲಿಯೇ ಅದರ ಸರ್ವಸುಖವೂ ಇದೆ. ಆಶೆಯ ಬಲೆಯಲ್ಲಿ ಸಿಕ್ಕಿಕೊಂಡ ಮನುಷ್ಯನು ಸ್ವಾತಂತ್ರ್ಯದ ಸುಖವನ್ನೇ ಮರೆತ ಗಿಣಿಯ ರೀತಿಯಲ್ಲಿ ಇರುತ್ತಾನೆ. ॥24॥ ನನ್ನ ಪಂಜರ ಅದೆಷ್ಟು ಸುಂದರವಾಗಿದೆ! ಚಿನ್ನದ ಸರಪಳಿಗಳಿಂದ ತೂಗಾಡುತ್ತಿವೆ.ಇಷ್ಟು ತಲೆಕೆಳಗಾಗಿ ನೇತಾಡಿದರೂ, ನನ್ನ ಕಾಲು ಸ್ವಲ್ಪವೂ ಜಾರದೆ ಚೆನ್ನಾಗಿದ್ದೇನೆ. ॥25॥ ಆದರೆ ಹೊರಗಡೆ ದಾಳಿಂಬೆ ಬೀಜಗಳನ್ನು ಅಥವಾ ಸ್ವಾದಿಷ್ಟವಾದ ಮೆಣಸಿನಕಾಯಿಗಳನ್ನು ತಿನ್ನುವ ಸಂತೋಷದಿಂದ ದೂರವಾಗಬೇಕಾಗುತ್ತದೆ. ಈ ಸ್ವಸುಖಗಳನ್ನು ಕಳೆದುಕೊಳ್ಳಲು ಸ್ವತಃ ನಾವೇ ಕಾರಣರು. ॥26॥ ಯೋಗ ಕೂಡಿ ಬಂದಾಗ ಗಿಣಿಗೆ ಅಘಟಿತ ಘಳಿಗೆಯು ಹೇಗೆ ಬರುತ್ತದೋ ಹಾಗೆ ಅಸಾಧ್ಯವಾದದ್ದು ನಡೆಯುತ್ತದೆ; ಅದು ಗಿಣಿಗೆ ಒಂದು ಪ್ರೀತಿಯ ಎಚ್ಚರಿಕೆಯನ್ನು (PÀÁ¼ÁªÀÄEKI ÄjPÉ Ö ÁUÉ ÀªÀÃPÀ ÀÉ ÀÕÀÀCAd £ÀÀÁ° ÀÀ Á ÁUÉ||27|| ±ÀÁª Àz À ಜ್ಞಾನೋದಯವಾಗಿ ಕಣ್ಣುಗಳನ್ನು ತೆರೆಸುತ್ತದೆ ಮತ್ತು ಅದು ಪಂಜರದಿಂದ ಹೊರಗೆ ಹೋಗುತ್ತದೆ. ಅದು ತನ್ನ ರೆಕ್ಕೆಗಳನ್ನು ಹಾರಲು ಉಪಯೋಗಿಸುತ್ತದೆ. ಅನಂತರ ಅದನ್ನು ತಡೆಯುವವರಾರು? ॥28॥ ವಿಶಾಲವಾದ ವಿಶ್ವವು ಅದರ ಮುಂದಿದೆ. ಅಲ್ಲಿ ದಾಳಿಂಬೆ ಮತ್ತು ಸೀಬೆ ಹಣ್ಣುಗಳ ತೋಟಗಳಿವೆ. ಆಕಾಶವು ಸ್ವಚ್ಛಂದವಾದ ವಿಹಾರಕ್ಕಾಗಿ ವಿಶಾಲವಾಗಿದೆ ಅದು ತನ್ನ ಸ್ವಾತಂತ್ರ್ಯವನ್ನು ಅನುಭವಿಸಲು ಅನುಕೂಲವಾಗಿದೆ. ॥29॥ ಆತ್ಮದ ಸ್ಥಿತಿಯೂ ಇದೇ ರೀತಿ. ಒಮ್ಮೆ ಈಶ್ವರನ ಅನುಗ್ರಹವಾದಲ್ಲಿ ಗುರುವೂ ಪ್ರಾಪ್ತನಾದಲ್ಲಿ, ಇವರಿಬ್ಬರ ಸಹಾಯದಿಂದ ಬಂಧನ ಮುಕ್ತಿಯಾಗಿ ಸ್ವಾತಂತ್ರ್ಯದ ಸುಖವನ್ನು ಅನುಭವಿಸುತ್ತಾನೆ. ॥30॥ ಈಗ ಶ್ರೋತೃ ಭಕ್ತರೇ ಸಕಲರೂ ಗಮನವಿಟ್ಟು ಕ್ಷಣಕಾಲ ಈ ಕೌತುಕಮಯವಾದ ಚರಿತ್ರೆಯನ್ನು ಪರಿಶುದ್ಧ ಪ್ರೀತಿಯಿಂದ ಆಲಿಸಿರಿ. ॥31॥ ಹಿಂದಿನ ಅಧ್ಯಾಯದಲ್ಲಿ ಬಾಬಾರವರು ಶಾಮಾನನ್ನು ಮಿರೀಕರ್‌ನ ಜೊತೆ ಅವನ ಚಿತಳಿ ಯಾತ್ರೆಗೆ ಕಳಿಸಿ ತೋರಿಸಿದ

ಚಮತ್ಕಾರವನ್ನು ಕೇಳಿದಿರಿ. ॥32॥ ಸಾಯಿಯು ಭವಿಷ್ಯದ ಜ್ಞಾನವನ್ನು ಅರಿತು ಒಂದು ಹಾವಿನಿಂದ ಉಂಟಾಗುವ ತೊಂದರೆಯನ್ನು ತಿಳಿದು ಮಿರೀಕರ್‌ನಿಗೆ ಸಂಕಟದ ಬಗ್ಗೆ ಸಮಯೋಚಿತವಾದ ಎಚ್ಚರಿಕೆಯನ್ನು ಕೊಟ್ಟರು. ॥33॥ ಅವರು ಕೇವಲ ಅವನನ್ನು ಎಚ್ಚರಿಸಿದ್ದೇ ಅಲ್ಲದೆ ನಿವಾರಣೋಪಾಯವನ್ನೂ ಸಹ ಒದಗಿಸಿ ಶಾಮಾನ ಜೊತೆಗಾಗಿ ಒತ್ತಾಯಿಸಿ ಅವನಿಗೆ ಇಚ್ಛೆಯಿಲ್ಲದಿದ್ದರೂ ನೀಡಿ ಮಿರೀಕರನನ್ನುಅಪಾಯದಿಂದ ರಕ್ಷಿಸಿದರು. ॥34॥ ಬಾಬಾರವರು ಸದಾ ಭಕ್ತಕಲ್ಯಾಣ ತತ್ಪರರು. ಬಾಳಾ ಸಾಹೇಬ ಮಿರೀಕರನನ್ನು ಗಂಡಾಂತರದಿಂದ ರಕ್ಷಿಸಿ ಅವನಿಗೆ ವಿಚಿತ್ರವಾದ ಅನುಭವವನ್ನು ಕೊಟ್ಟರು. ॥35॥ ಅದಕ್ಕೆ ಹೋಲಿಸಿದರೆ ಶಾಮಾನ ಸ್ಥಿತಿಯನ್ನು ನೋಡಿ, ಅವನು ಅನಿರೀಕ್ಷಿತವಾಗಿ ಸರ್ಪದಿಂದ ಕಚ್ಚಲ್ಪಟ್ಟನು ಮತ್ತು ಅವನ ಜೀವದ ಆಶೆಯೇ ಹೊರಟು ಹೋಗಿತ್ತು, ಬಾಬಾರವರು ಅವನನ್ನು ಅದರಿಂದ ರಕ್ಷಿಸಿದರು. ॥36॥ ಇದೂ ಸಹ ಬಾಬಾರವರ ಒಂದು ಲೀಲೆಯೇ! ನಾನು ಮೊದಲು ಇದನ್ನು ಶ್ರೋತೃಗಳಿಗೆ ತಿಳಿಸುತ್ತೇನೆ. ಒಂದು ಸರ್ಪವು ಕಚ್ಚಿದಾಗ ಯಾವ ಉಪಾಯವನ್ನು ಮಾಡಲಾಯಿತು, ನೋಡಿರಿ! ॥37॥ ಏಳು ಗಂಟೆಯ ಸುಮಾರಿನಲ್ಲಿ ಒಂದು ಸರ್ಪವು ಅಕಸ್ಮಿಕವಾಗಿ ಶಾಮಾನ ಕಿರುಬೆರಳನ್ನು ಕಚ್ಚಿತು. ಆ ಭಾಗವು ಕೂಡಲೇ ವಿಷದಗ್ಧವಾಯಿತು. ॥38॥ ಆ ವೇದನೆಯು ಅಸಹನೀಯವಾಗಿ ಅತ್ಯಂತ ತೀವ್ರತರವಾಗಿತ್ತು, ಪ್ರಾಣಾಂತಿಕ ಅನುಭವವಾಗಿತ್ತು, ಮಾಧವರಾವನು ಭಯಭೀತನಾಗಿ ಅಂತರಂಗದಲ್ಲಿಯೇ ಚಿಂತಾಯುಕ್ತನಾದನು. ॥39॥ ಅವನ ದೇಹವು ಕೆಂಪಾಯಿತು. ಬಂಧುಮಿತ್ರರು ಎಲ್ಲರೂ ಅಲ್ಲಿ ಸೇರಿದರು ಮತ್ತು ಹೇಳಿದರು. "ವಿಠೋಬಾ[4] ಹತ್ತಿರ ಹೋಗೋಣ". ಅವನು ಬದುಕುವ ಆಶೆ ಬಿಟ್ಟಿದ್ದರು. ॥40॥ ನಿಮೋಣಕರನು[5] ಮುಂದೆ ಬಂದು "ಅವನು ಉದಿಯನ್ನು ತೆಗೆದು ಕೊಂಡುಹೋಗಲಿ" ಎಂದು ಹೇಳಿದನು. ಆದರೆ ಮಾಧವರಾವನು ಮಸೀದಿಗೆ ಧಾವಿಸಿದನು. ಆಗ ಬಾಬಾ ಏನು ಮಾಡಿದರು ಎನ್ನುವುದನ್ನು ನೋಡಿ. ॥41॥ ಬಾಬಾರವರು ಅವನನ್ನು ನೋಡುತ್ತಲೇ ನಡೆಸಿದ ಲೀಲೆಯನ್ನು ಗಮನಿಸಿ! ಅವರು ಅವನನ್ನು ಒಂದೇ ಸಮನೆ ಬೈಯಲು ಪ್ರಾರಂಭಿಸಿದರು. ಅವನನ್ನು ಮೇಲೆ ಹತ್ತಿ ಬರಲು ಬಿಡಲಿಲ್ಲ. ॥42॥ "ದುಷ್ಟನೇ, ಮೇಲೆ ಹತ್ತಬೇಡ! ಇಳಿ. ಎಚ್ಚರ, ಏರಬೇಡ, ಕೆಳಗೆ ಇಳಿ, ಹೊರಗೆ ಹೋಗು!" ಏರು ಸ್ವರದಿಂದ ಕೂಗಿ ಒಂದೇ ಸಮನೆ ಹೇಳುತ್ತಿದ್ದರು. ॥43॥ ಬಾಬಾರವರು ಕಲ್ಪನೆಗೂ ಮೀರಿ ಕೋಪ ಮಾಡಿಕೊಂಡಿದ್ದರು, ಅನವಶ್ಯಕವಾಗಿ ಅನಿರೀಕ್ಷಿತವಾಗಿ ಸಿಟ್ಟಿನಿಂದ ಕುದಿಯುತ್ತಿದ್ದರು. ಮಾಧವರಾವನು ಚಕಿತನಾದನು. ಅವನನ್ನು ಏತಕ್ಕಾಗಿ ಇಂತಹ ಕಟುವಚನಗಳಿಂದ ಶಿಕ್ಷಿಸುತ್ತಿದ್ದಾರೆ? ॥44॥ ಇಂತಹ ಪರಿಸ್ಥಿತಿಯನ್ನು ನೋಡಿ ಮಾಧವರಾವನು ಬಹಳ ಗಾಬರಿಯಾದನು. ಅವನು ಯಾವ ವಿಚಾರವನ್ನೂ ಯೋಚಿಸಲು ಸಾಧ್ಯವಾಗಲಿಲ್ಲ. ಹತಾಶನಾಗಿ ಕುಳಿತು ಬಿಟ್ಟನು. ॥45॥ ಯಾವಾಗ ದೇವನೂ[6] ಸಹ ಕೋಪಿಸಿಕೊಂಡನೋ ಮಾಧವರಾವ್‌ನು ಅಂತರಂಗದಲ್ಲಿಯೇ ಭಯಭೀತನಾಗಿ ಇನ್ನು ಯಾವುದೇ ಭರವಸೆ ಇಲ್ಲವೆಂದು ಭಾವಿಸಿದನು.

ಏಕೆಂದರೆ ಬಾಬಾರವರೇ ಅವನಿಂದ ವಿಮುಖರಾಗಿದ್ದಾರೆಂದು ತಿಳಿದನು. ॥46॥ ಅಂತಹ ಕೋಪ ಮತ್ತು ಭಯಂಕರ ವರ್ತನೆಯನ್ನು ನೋಡಿದರೆ ಯಾರು ತಾನೇ ಗಾಬರಿಯಾಗುವುದಿಲ್ಲ? ಅಂತಹ ಬೈಗಳ ಹೊಡೆತವನ್ನು ಕೇಳಿ ಅವನು ಇದು ಬಹಳ ದುರ್ಧರವಾದ ಸಮಯವೆಂದು ಭಾವಿಸಿದನು. ॥47॥ ಈ ಮಸೀದಿಯು ನನ್ನ ಮನೆ, ನಾನು ಸಾಯಿಯ ಸ್ವಂತ ಮಗ, ಇದು ಹೀಗಿರುವಾಗ ಈ ದಿನ ತಾಯಿಯು ಏಕಿಷ್ಟು ಅತ್ಯುಗ್ರವಾಗಿದ್ದಾಳೆ? ॥48॥ ನಾನು ನನ್ನ ತಾಯಿಯ ಹತ್ತಿರವಲ್ಲದೆ ಮತ್ತೆ ಯಾರ ಕಡೆ ಹಾವು ಕಡಿಯಿತೆಂಬ ದುಃಖದಿಂದ ಹೋಗಲಿ? ಆದರೆ ಅವಳೇ ತಿರಸ್ಕರಿಸಿದ ಮೇಲೆ ನನ್ನ ಪರಿಸ್ಥಿತಿಯು ಅದೆಷ್ಟು ದಯನೀಯ? ॥49॥ ತಾಯಿಗೆ ಮಗುವಿನ ತರಹ ಬಾಬಾರವರಿಗೆ ಮಾಧವರಾವ್‌ನು ಇದ್ದನು. ಅಂತಹ ಸಂಬಂಧ ಅಹರ್ನಿಶಿ ಇದ್ದಾಗ ಈ ದಿನ ಈ ರೀತಿ ಏಕೆ ನಡೆಯಿತು? ॥50॥ ತಾಯಿಯು ಒದ್ದಾಗ ಮಗುವನ್ನು ನೋಡಿಕೊಳ್ಳುವವರು ಯಾರು? ಮಾಧವರಾವ್‌ನು ಆ ಸಮಯದಲ್ಲಿ ಬದುಕುಳಿಯುವ ಆಸೆಯನ್ನೆಲ್ಲವನ್ನೂ ಬಿಟ್ಟನು. ॥51॥ ಸ್ವಲ್ಪ ಸಮಯದ ನಂತರ ಬಾಬಾರವರು ಶಾಂತರಾದಾಗ ಮಾಧವರಾವ್‌ನು ಧೈರ್ಯ ತಂದುಕೊಂಡು ಮೇಲೆ ಹೋಗಿ ಕುಳಿತನು. ॥52॥ ಬಾಬಾ ಹೇಳಿದರು, "ಮನಸ್ಥೈರ್ಯವನ್ನು ಕಳೆದುಕೊಳ್ಳಬೇಡ, ಯಾವುದೇ ನಿರುತ್ಸಾಹಕ್ಕೂ ನಿನ್ನ ಮನಸ್ಸಿನಲ್ಲಿ ಎಡೆಗೊಡಬೇಡ. ನೀನು ಚೆನ್ನಾಗಿ ಆಗುವೆ. ಚಿಂತಿಸಬೇಡ. ಈ ದಯಾಮಯ ಫಕೀರನು ನಿನ್ನ ಯೋಗಕ್ಷೇಮವನ್ನು ನೋಡಿಕೊಳ್ಳುವನು. ॥53॥ "ಮನೆಗೆ ಹೋಗು ಮತ್ತು ಸಮಾಧಾನದಿಂದ ಕುಳಿತುಕೋ ಮನೆಯಿಂದ ಹೊರಗೆ ಹೋಗಬೇಡ, ನಿರ್ಭಯನಾಗಿರು ಮತ್ತು ನಿಶ್ಚಿಂತನಾಗು. ನನ್ನಲ್ಲಿ ನಂಬಿಕೆ ಇಡು." ॥54॥ ಅನಂತರ ಅವನು ಮನೆಯನ್ನು ಇನ್ನೂ ತಲಪುತ್ತಿರುವಾಗಲೇ ಬಾಬಾರವರು ತಾತ್ಯಾನನ್ನು ಸಮಾಚಾರ ವಿಚಾರಿಸಲು ಕಳಿಸಿದರು ಮತ್ತು ಒಂದು ಸಂದೇಶವನ್ನೂ ಕಳಿಸಿದರು. ॥55॥ "ಅವನಿಗೆ ಹೇಳು, ಮಲಗಬಾರದು ಮತ್ತು ನಿದ್ದೆ ಮಾಡಬಾರದು ಆದರೆ ಮನೆಯಲ್ಲಿಯೇ ಓಡಾಡುತ್ತಿರಲಿ. ಅವನಿಗೆ ಇಷ್ಟವಾದದ್ದನ್ನೆಲ್ಲ ತಿನ್ನಲಿ. ಕೇವಲ ಈ ನಿರ್ದೇಶನಗಳನ್ನು ಪಾಲಿಸಲಿ." ॥56॥ ಬಾಬಾರವರು ಕಾಕಾ ಸಾಹೇಬ ದೀಕ್ಷಿತ್‌ಗೂ ಸಹ ಆ ರಾತ್ರಿ ಹೇಳಿದರು, "ಅವನು ನಿದ್ರೆ ಮಾಡಿಬಿಡುತ್ತಾನೆ. ಅವನನ್ನು ನಿದ್ರಿಸಲು ಬಿಡಬೇಡ." ॥57॥ ಅದು ಹಾಗಿರಲಿ, ಇಷ್ಟೆಲ್ಲ ಎಚ್ಚರಿಕೆಗಳನ್ನು ತೆಗೆದುಕೊಂಡ ಮೇಲೆ ಅವನ ಕಷ್ಟ ಮಾಯವಾಯಿತು. ಆದರೆ ಬೆರಳಿನಲ್ಲಿ ಸ್ವಲ್ಪ ವಿಷವಿದ್ದುದರಿಂದ ಉರಿಯುವಿಕೆ ಉಳಿಯಿತು ॥58॥ ಅನಂತರ, ಅದೂ ಸಹ ಪೂರ್ತಿಯಾಗಿ ವಾಸಿಯಾಯಿತು. ಅಂತಹ ಭಯಂಕರ ಗಂಡಾಂತರ ದೂರವಾಯಿತು. ಸಾಯಿಮಾತೆಯು ಅದೆಷ್ಟು ಕರುಣಾಮಯಿ. ಸದಾ ಭಕ್ತರಿಗಾಗಿ ಮನಸ್ಸು ಕರಗಿ ಕೃಪೆ ತೋರುವಳು. ॥59॥ "ಮೇಲೆ ಹತ್ತಬೇಡ, ನೀಚ ಪೂಜಾರಿ!" ಅಂತಹ ಶಬ್ದ ಪ್ರಹಾರ ಬಾಬಾರವರಿಂದ ಬಂದಿತ್ತು. ಅವು ಅರ್ಥಪೂರಿತವಾಗಿದ್ದುವೇ ಇಲ್ಲಾ ಮಾಧವರಾವನನ್ನು ಉದ್ದೇಶಿಸಲ್ಪಟ್ಟಿದ್ದುವೆ? ॥60॥ ಇಲ್ಲ, ಅವು ಮಾಧವರಾವ್‌ಗಾಗಿ ಹೇಳಿದ್ದಲ್ಲ. ಆ ಮಾತುಗಳು

ಅವನನ್ನು ಕಚ್ಚಿದ ಹಾವಿನ ವಿಷಕ್ಕೆ ನೀಡಿದ ಕಟ್ಟಪ್ಪಣೆಯಾಗಿತ್ತು. ॥61॥ "ನೀನು ಹತ್ತುವ ಧೈರ್ಯ ಮಾಡಬೇಡ" ಇವು ಸಾಯಿ ಮುಖದಿಂದ ಬಂದಂತಹ ಪ್ರಖರವಾದ ಆಜ್ಞೆಯಾಗಿತ್ತು. ಅದು ವಿಷಸಂಚಾರವನ್ನು ನಿಲ್ಲಿಸಿ ಒಂದೇ ಕಡೆ ನಿಲ್ಲುವಂತೆ ಮಾಡಿತು. ॥62॥ ಅಷ್ಟು ಮಾತ್ರವೇ ಅಲ್ಲದೆ, "ನಡಿಕೆಳಗೆ, ಇಳಿಕೆಳಗೆ" ಎಂಬುದು ಸಾಯಿಯ ಪಂಚಾಕ್ಷರಿ ಮಂತ್ರವಾಗಿ ವಿಷವನ್ನು ಕೂಡಲೇ ಕೆಳಗಿಳಿಯುವಂತೆ ಮಾಡಿತು. ॥63॥ ಅಲ್ಲಿ ಬೇರೆ ಯಾವುದೇ ಸಾಧನವಿರಲಿಲ್ಲ. ಲೌಕಿಕ ಮಂತ್ರವಾದಿಯಾಗಲೀ ಪಂಚಾಕ್ಷರಿ ಮಂತ್ರ ಸಾಧಕನಾಗಲೀ ಇರಲಿಲ್ಲ. ಸಾಯಿಯು ಅಂತಹ ಭಕ್ತ ರಕ್ಷಕನಾಗಿದ್ದರು! ಅವರು ಎಲ್ಲ ಸಂಕಟಗಳನ್ನು ಕೂಡಲೇ ನಿವಾರಿಸುತ್ತಿದ್ದರು. ॥64॥ ಅವರು ಯಾವುದೇ ಮಂತ್ರವನ್ನು ಉಪಯೋಗಿಸಲಿಲ್ಲ ಅಥವಾ ಮಂತ್ರಾಕ್ಷತೆಯನ್ನಾಗಲೀ ಪವಿತ್ರ ತೀರ್ಥವನ್ನಾಗಲೀ ಉಪಯೋಗಿಸಲಿಲ್ಲ. ಹಾಗಿದ್ದಲ್ಲಿ ವಿಷವು ಹೇಗೆ ಇಳಿಯಿತು? ॥65॥ ಇದು ಒಂದು ಪವಾಡವಲ್ಲವೇ? ಸಂತರ ಮುಖದಿಂದ ಬಂದ ಉದ್ಗಾರವೇ ಸಾಕು. ಮಾಧವರಾವ್‌ಗೆ ಸರ್ಪ ಕಚ್ಚಿದುದನ್ನು ನಿವಾರಿಸಲು ಅವರ ಅನುಗ್ರಹಕ್ಕೆ ಸಮನಾದುದು ಮತ್ತೊಂದಿಲ್ಲ. ॥66॥ ಈಗ ಹಿಂದಿನ ಅಧ್ಯಾಯದಲ್ಲಿ ಸೂಚಿಸಿದ್ದ ಕಥೆಯು ಅತಿ ರಸಭರಿತವಾಗಿಯೂ ಅದ್ಭುತವಾಗಿಯೂ ಇದೆ. ಶ್ರೋತೃಗಳು ಇದನ್ನು ಮೊದಲಿನಿಂದ ಕೊನೆಯವರೆಗೆ ಪೂರ್ಣವಾಗಿ ಗಮನವಿಟ್ಟು ಕೇಳಲಿ. ॥67॥ ಈ ಚರಿತ್ರೆಯು ನಾನು ಹಿಂದಿನ ಅಧ್ಯಾಯದಲ್ಲಿ ಹೇಳಿದ್ದ ಕಥೆಗಿಂತಲೂ ಅತ್ಯದ್ಭುತವಾಗಿದೆ. ಶ್ರೋತೃಗಳಿಗೆ ಸಾಯಿಯು ಯಾವ ರೀತಿ ಚತುರತೆಯನ್ನು ಅಭ್ಯಾಸ ಮಾಡಿರುತ್ತಿದ್ದರು ಎಂಬುದನ್ನು ತಿಳಿಸಲಾಗುವುದು. ॥68॥ ಈ ಸ್ವಾರಸ್ಯವಾದ ಕಥೆಗಳನ್ನು ಕೇಳುತ್ತಾ ಇದ್ದರೆ ಗುರುವಿನ ಮಾತುಗಳು ಮನಸ್ಸಿನ ಮೇಲೆ ಅಚ್ಚೊತ್ತಿ ಪ್ರಭಾವವನ್ನು ಬೀರುತ್ತವೆ. ಸತ್‌ಕರ್ಮ, ದುಷ್ಕರ್ಮ ಮತ್ತು ಅಕರ್ಮಗಳ ಕರ್ತೃತ್ವ ಮಾಯವಾಗುತ್ತದೆ ಮತ್ತು ಗುರುಚರಣಗಳಲ್ಲಿ ಭಕ್ತಿ ನೆಲೆಸುವಂತೆ ಮಾಡುತ್ತದೆ. ॥69॥ ಮಾಯೆಯನ್ನು ನಾಶಪಡಿಸಲು ಅತಿ ಸುಲಭವಾದ ಉಪಾಯವೆಂದರೆ ಸಾಯಿಯ ಚರಣಗಳನ್ನು ಹೃದಯದಲ್ಲಿ ಸ್ಮರಿಸುವುದು. ಮುಕ್ತಿಗೆ ಇದು ಸಾಧನ. ಮಾಯೆಯು ಶಕ್ತಿಹೀನವಾಗಿ ಮಾಯವಾಗುತ್ತದೆ. ॥70॥ ಸಂಸಾರದ ಭಯವು ಅತಿ ಉದ್ದಂಡವಾಗಿರುತ್ತದೆ. ಅದು ಉದ್ಭವಿಸಲು ಮಾಯೆಯೇ ಕಾರಣ. ಈ ಚರಿತ್ರೆಗಳನ್ನು ಆಲಿಸುವುದರಿಂದ ಮಾಯೆ ನಾಶವಾಗಿ ಅಖಂಡವಾದ ಆನಂದವನ್ನುಂಟುಮಾಡುತ್ತದೆ. ॥71॥ ಒಮ್ಮೆ ಶಿರಡಿಯಲ್ಲಿ ಕಾಲರಾ ಮಹಾಮಾರಿಯು ಹರಡಿತು. ಹಳ್ಳಿಗರು ಅಂತರಂಗದಲ್ಲೇ ಭಯಭೀತರಾದರು. ಸಮಾಜದ ಒಮ್ಮತದಂತೆ ಶಿರಡಿಯ ಎಲ್ಲ ರಹಸ್ಯ ದಾರಿಗಳನ್ನು ಮುಚ್ಚಲಾಯಿತು. ॥72॥ ಕಾಲರಾ ಮಹಾಮಾರಿಯು ಅತಿ ಭಯಂಕರವಾಗಿತ್ತು. ಹಳ್ಳಿಯವರು ಬಹಳ ಭಯಭೀತರಾಗಿದ್ದರು. ಪರಸ್ಥಳದ ಜನರು ಒಳಗೆ ಪ್ರವೇಶಿಸದಂತಾಯಿತು. ಆದ್ದರಿಂದ ಎಲ್ಲಾ ವ್ಯವಸಾಯಗಳೂ ನಿಂತುಹೋದವು. ॥73॥ ಕಾಲರಾನಿಂದ ಸಾವುಗಳು ಮುಂದುವರೆಯುತ್ತಿರುವವರೆಗೆ ಯಾವುದೇ ಕುರಿಯನ್ನು ಕಡಿಯಬಾರದೆಂದೂ ಯಾವುದೇ ವಾಹನವನ್ನು ಹಳ್ಳಿಯೊಳಗೆ ಪ್ರವೇಶಿಸಲು ಅನುಮತಿಸಬಾರದೆಂದೂ ನಿರ್ಧರಿಸಿದರು.

ಪ್ರತಿಯೊಬ್ಬರೂ ಈ ನಿಯಮವನ್ನು ಪಾಲಿಸಬೇಕಾಗಿತ್ತು. ॥74॥ ಬಾಬಾರವರು ಹಳ್ಳಿಯವರ ಈ ಭೋಳೆ ಸ್ವಭಾವದವರ್ತನೆಯನ್ನು ಇಷ್ಟಪಡಲಿಲ್ಲ. ಅವರ ದೃಷ್ಟಿಯಲ್ಲಿ ಈ ಮೂರ್ಖ ಅಭಿಪ್ರಾಯ ಜನರ ಕುಕಲ್ಪನೆಯಿಂದ ಉಂಟಾಗಿದ್ದಿತು. ॥75॥ ಒಂದು ಕಡೆ ಹಳ್ಳಿಯವರು ಈ ನಿರ್ಧಾರ ತೆಗೆದುಕೊಂಡಿದ್ದರು ಮತ್ತೊಂದುಕಡೆ ಬಾಬಾರವರು ಅದರ ಉದ್ದೇಶವನ್ನೇ ಉಲ್ಲಂಘಿಸಿದ್ದರು. ಅವರು ಹೇಗೆ ಮತ್ತು ಯಾವ ರೀತಿ ಅದನ್ನು ಮಾಡಿದರು ಎಂಬುದನ್ನು ಗಮನವಿಟ್ಟು ಕೇಳಿ. ॥76॥ ಹಳ್ಳಿಗರು ಗ್ರಾಮ ಪಂಚಾಯತಿಯ ಈ ನಿರ್ಧಾರವನ್ನು ಸಾಚಾರಪೂರ್ವಕವಾಗಿ ಪಾಲಿಸಿದರು. ಯಾರಾದರೂ ಕಿಂಚಿತ್ತಾದರೂ ನಿಯಮ ಭಂಗಮಾಡಿದಲ್ಲಿ ಅದಕ್ಕೆ ಶಿಕ್ಷೆ ರೂಪ ದಂಡ ನೀಡಿಯೇ ಬಿಡುಗಡೆ ಹೊಂದಬೇಕಾಗಿತ್ತು. ॥77॥ ಬಾಬಾರವರಿಗೆ ಈ ದಂಡದ ಭಯವಿರಲಿಲ್ಲ. ಅವರು ಸದಾ ಸರ್ವದಾ ನಿರ್ಭಯರಾಗಿಯೇ ಇರುತ್ತಿದ್ದರು. ಅವರು ಹರಿಚರಣಗಳಲ್ಲಿ ಲೀನವಾಗಿ ಮೃತ್ಯುವನ್ನು ಜಯಿಸಿದವರಾಗಿದ್ದರು. ॥78॥ ಈ ದಿನಗಳಲ್ಲಿ ಕಟ್ಟಿಗೆಯನ್ನು ತುಂಬಿಸಿಕೊಂಡಿದ್ದ ಒಂದು ಗಾಡಿ ಬೇರೆ ಊರಿನಿಂದ ಈ ಊರಿನ ಸರಹದ್ದಿಗೆ ಬಂದಿತು. ಇದು ಗ್ರಾಮಸ್ಥರ ಚಿಂತೆಗೆ ಕಾರಣವಾಯಿತು. ಜನರು ಪರಸ್ಪರ ಜಗಳವಾಡಲು ಪ್ರಾರಂಭಿಸಿದರು॥79॥ ಗ್ರಾಮಸ್ಥರಿಗೆ ಕಟ್ಟಿಗೆಯ ಕೊರತೆ ಇದೆಯೆಂದು ತಿಳಿದಿತ್ತು. ಆದರೆ ನಿಯಮವನ್ನು ಉಲ್ಲಂಘಿಸುವುದು ಅನುಚಿತವಾದದ್ದು. ಆದ್ದರಿಂದ ಎಲ್ಲರೂ ತೀವ್ರ ಚಿಂತಿತರಾದರು. ॥80॥ ಅವರು ಗಾಡಿಯ ಚಾಲಕನ ಕಡೆ ತಿರುಗಿ ಗಾಡಿಯನ್ನು ಹಿಂದಕ್ಕೆ ಕಳಿಸಲು ಪ್ರಾರಂಭಿಸಿದರು. ಬಾಬಾರವರಿಗೆ ಈ ವಿಷಯ ತಿಳಿಯಿತು. ಕೂಡಲೇ ಆ ಸ್ಥಳಕ್ಕೆ ಧಾವಿಸಿದರು. ॥81॥ ಅವರು ಗಾಡಿಯ ಮುಂದೆ ಅಡ್ಡ ನಿಂತರು. ಇದು ಗಾಡಿಯ ಚಾಲಕನಿಗೂ ಧೈರ್ಯ ತುಂಬಿತು. ಗ್ರಾಮಸ್ಥರ ದುರಾಗ್ರಹವೂ ಮುರಿಯಿತು. ಗಾಡಿಯನ್ನು ಹಳ್ಳಿಯ ಸರಹದ್ದಿನ ಒಳಗಡೆ ಬಿಡಲಾಯಿತು. ॥82॥ ಅಲ್ಲಿಂದ ಮಸೀದಿಯ ಪ್ರಾಂಗಣದ ಗೇಟಿನವರೆಗೆ ತರಲಾಯಿತು. ಎಲ್ಲ ಕಟ್ಟಿಗೆಯನ್ನು ಅಂಗಳದಲ್ಲಿ ಜೋಡಿಸಲಾಯಿತು. ಯಾರ ಮುಖದಿಂದಲೂ ಚಕಾರವಾಗಲೀ ಏನೇ ಶಬ್ದವಾಗಲೀ ಹೊರಬರಲಿಲ್ಲ. ॥83॥ ಗ್ರೀಷ್ಮ, ಶರದ್, ಹೇಮಂತ, ವರ್ಷ, ವಸಂತ, ಬೇಸಿಗೆ ಕಾಲವಾಗಲಿ, ಮಳೆಗಾಲವಾಗಲಿ, ಅಥವಾ ವಸಂತಕಾಲವಾಗಲಿ, ದಿನದ ಇಪ್ಪತ್ತನಾಲ್ಕು ಗಂಟೆಗಳೂ ಮಸೀದಿಯಲ್ಲಿ ಬಾಬಾರವರು ಪವಿತ್ರ ಧುನಿಯನ್ನು ಪ್ರಜ್ವಲಿಸುತ್ತಿದ್ದರು. ॥84॥ ಬಾಬಾರವರ ನಿರ್ಧಾರ ಅದೆಷ್ಟು ವಿಚಿತ್ರ, ಅಗ್ನಿಹೋತ್ರಿಗಳು ಅಗ್ನಿಹೋತ್ರವನ್ನು ಆಚರಿಸುವಂತೆ ಬಾಬಾರವರ ಪವಿತ್ರ ಧುನಿಯು ಮಸೀದಿಯಲ್ಲಿ ಹಗಲು ರಾತ್ರಿ ಉರಿಯುತ್ತಲಿತ್ತು. ॥85॥ ಧುನಿಯನ್ನು ಉರಿಸುತ್ತ ಇಡಲು ಬಾಬಾರವರು ಕಟ್ಟಿಗೆಯನ್ನು ಕೊಂಡುಕೊಳ್ಳುತ್ತಿದ್ದರು. ಮತ್ತು ಅವುಗಳನ್ನು ಮಸೀದಿಯ ಅಂಗಳದ ಒಂದು ಗೋಡೆಗೆ ಒರಗಿಸಿ ಶೇಖರಿಸಿಡುತ್ತಿದ್ದರು. ॥86॥ ವಾರದ ಸಂತೆಯ ಸಮಯವನ್ನು ನೆನಪಿಸಿಕೊಂಡು ಬಾಬಾರವರುಕಟ್ಟಿಗೆಯನ್ನು ಸಂಗ್ರಹಿಸುತ್ತಿದ್ದರು. ನೆರೆಹೊರೆಯವರಿಗೂ ಅದರ ಮೇಲೆ ಕಣ್ಣಿತ್ತು. ಅದು ಅವರ ಸ್ವಾರ್ಥಕ್ಕಾಗಿತ್ತು. ಸಾಧು ಸ್ವಭಾವದವರು ಸಿಗುವುದು ದುರ್ಲಭ. ॥87॥ "ಬಾಬಾ, ಒಲೆ

ಉರಿಸಲು ಕಟ್ಟಿಗೆ ಇಲ್ಲ. ಮತ್ತು ಕಟ್ಟಿಗೆ ಇಲ್ಲದೆ ಒಲೆ ಹೊತ್ತಿಸಲು ಸಾಧ್ಯವಿಲ್ಲ.” ಈ ರೀತಿ ನುಡಿದಂತಹ ಸ್ವಾರ್ಥಿಗಳಿಗೂ ಬಾಬಾರವರು ಕಟ್ಟಿಗೆ ಹಂಚುತ್ತಿದ್ದರು. ॥88॥ ಆ ಅಂಗಳಕ್ಕೆ ಯಾವುದೇ ಬಾಗಿಲು ಇರಲಿಲ್ಲ. ಸ್ವಭಾವತಃ ಸ್ವಾರ್ಥಿಗಳು, ದುಷ್ಟರು ಆಗಿದ್ದರಿಗೆ ಸದವಕಾಶ ದೊರಕಿತು. ॥89॥ ಬಾಬಾರವರು ಅತ್ಯಂತ ಪರೋಪಕಾರಿಯಾಗಿದ್ದರು. ಅವರ ದೊಡ್ಡತನವನ್ನು ಹೇಗೆ ವಿವರಿಸುವುದು? ಹೊರನೋಟಕ್ಕೆಅವರು ಒರಟಾಗಿ ಕಂಡರೂ ಅಂತರಂಗದಲ್ಲಿ ಅತಿ ಸೌಮ್ಯರು. ॥90॥ ಅವರ ಮಹಿಮೆಯು ಅಗಾಧ ಮತ್ತು ವರ್ಣನಾತೀತ. ಮಾತುಗಳು ದೀನಭಾವದಿಂದ ಅವರ ಚರಣಗಳಲ್ಲಿ ನಮಿಸಿ ಲೀನವಾಗುತ್ತವೆ. ॥91॥ ಅವರು ಇಡೀ ವಿಶ್ವದಲ್ಲೆಲ್ಲಾ ಪರಮಾತ್ಮನೇ ವ್ಯಾಪಿಸಿರುವುದನ್ನು ನೋಡಿದರು. ಅವನನ್ನು ಸದಾ ಮನದಲ್ಲಿಯೇ ಧಾರಣಮಾಡಿ, ಯಾರನ್ನೂ ಶತ್ರು ಭಾವದಿಂದ ನೋಡಲಿಲ್ಲ. ॥92॥ ಅವರು ಸರ್ವಸೃಷ್ಟಿಯಲ್ಲೂ ವ್ಯಾಪಿಸಿರುವವರು.ದಶದಿಕ್ಕುಗಳಲ್ಲಿಯೂ, ಮುಂದೆ ಮತ್ತು ಹಿಂದೆ ಎಲ್ಲಾ ಕಡೆ ಇರುವವರು, ಅವರು ಯಾರ ಮೇಲೆಯೂ ವಕ್ರದೃಷ್ಟಿ ಬೀರಿ ಕಷ್ಟ ನೀಡಿದವರಲ್ಲ. ॥93ಸಂಪೂರ್ಣ ವೈರಾಗ್ಯಹೊಂದಿದ್ದರೂ, ಕೇವಲ ಒಬ್ಬ ಸಾಮಾನ್ಯ ಗೃಹಸ್ಥನ ರೀತಿಯಲ್ಲಿ ವರ್ತಿಸುತ್ತಿದ್ದರು ಮತ್ತು ಇತರ ಜನರಿಗೆ ಒಂದು ಉದಾಹರಣೆ ಹಾಕಿ ಕೊಟ್ಟಿದ್ದರು. ॥94॥ ಆತ್ಮದ ಮಹಾತ್ಮೆಯು ಅದೆಷ್ಟು ಅವರ್ಣನೀಯ! ಅದನ್ನು ಕೇಳಿದರೆ ಯಾರಾದರೂ ಆಶ್ಚರ್ಯಚಕಿತನಾಗುವನು ಮತ್ತು ಭಕ್ತರಲ್ಲಿ ಅನುರಾಗವನ್ನು ಬೆಳೆಸಿಕೊಳ್ಳುವನು. ಇದೇ ಅವತಾರದ ಸಾರ್ಥಕತೆಯು. ॥95॥ ಅವರು ದೀನರ ಬಗ್ಗೆ ಇಟ್ಟ ವಾತ್ಸಲ್ಯ ಅತುಲವಾದುದು. ಅವರಿಗೆ ಮಕ್ಕಳೆಂದರೆ ಪ್ರಾಣ. ಇದಕ್ಕೆ ಕೋಟ್ಯನುಕೋಟಿ ಉದಾಹರಣೆಗಳಿದ್ದು ಒಂದಾದ ಮೇಲೊಂದು ಎಣಿಸುತ್ತಾ ಹೋಗಬಹುದು. ॥96॥ ಅವರು ಎಂದಿಗೂ ಉಪವಾಸ ಮೊದಲಾದ ವಿಧಿವಿಧಾನಗಳನ್ನು ಆಚರಿಸುತ್ತಿರಲಿಲ್ಲ, ಅವರು ಹಠಯೋಗವನ್ನು ಅಭ್ಯಾಸ ಮಾಡಲು ಪ್ರಯತ್ನಿಸಲಿಲ್ಲ. ಅವರಿಗೆ ರುಚಿಕರವಾದ ಊಟದ ಮೇಲೆ ಆಶೆ ಇರಲಿಲ್ಲ. ಬಹಳ ಮಿತವಾಗಿ ತಿನ್ನುತ್ತಿದ್ದರು. ॥97॥ ಅವರು ನಿಯಮಿತ ಮನೆಗಳಿಗೆ ಮಾತ್ರ ಹೋಗಿ ಭಿಕ್ಷೆ ಬೇಡುತ್ತಿದ್ದರು ಒರಟಾದ ಒಣಗಿದ ರೊಟ್ಟಿ ಬೇಡುತ್ತಿದ್ದರು. ಈ ಭಿಕ್ಷೆ ಅವರ ನಿತ್ಯ ಆಹಾರ. ಅವರು ಯಾವುದೇ ನಿರ್ದಿಷ್ಟ ಆಹಾರವನ್ನು ಬೇಡುತ್ತಿರಲಿಲ್ಲ ॥98॥ ಅವರು ತಮ್ಮ ನಾಲಿಗೆಗೆ ದಾಸರಾಗಿರಲಿಲ್ಲ, ಸಿಹಿ ತಿಂಡಿಗಾಗಿ ಕಾತರರಾಗಿರುತ್ತಿರಲಿಲ್ಲ ಹಾಗೂ ಸಂಪೂರ್ಣ ಸಂತುಷ್ಟಿಯಿಂದ ಇರುತ್ತಿದ್ದರು. ಏನಾದರೂ ಭಿಕ್ಷೆ ಸಿಗಲಿ ಬಿಡಲಿ ತೃಪ್ತರಾಗಿರುತ್ತಿದ್ದರು. ॥99॥ ಈ ರೀತಿ ಪ್ರತಿಯೊಬ್ಬರೂ ಪ್ರಾಣಧಾರಣೆ ಮಾಡಬೇಕು. ಮುಕ್ತಿಗೆ ಮತ್ತು ಜ್ಞಾನೋದಯಕ್ಕೆ ಕಾರಣವಾದ ಈ ದೇಹವನ್ನು ರಕ್ಷಿಸುವುದಕ್ಕಾಗಿ ಮಾತ್ರ ಆಹಾರ ಸೇವಿಸಿ ಬದುಕಬೇಕು. ಅದಕ್ಕಾಗಿ ಸದಾ ನಿರಭಿಮಾನದಿಂದ ವರ್ತಿಸಿರಿ. ॥100॥ ಯಾರು ಈ ಪರಮಶಾಂತಿಯನ್ನು ಆಭೂಷಣವನ್ನಾಗಿ ಮಾಡಿಕೊಂಡಿರುವರೋ ಅವರಿಗೆ ನೆಕ್ಲೇಸುಗಳಾಗಲೀ, ಹಾರಗಳಾಗಲೀ ಏಕೆ ಬೇಕು? ಅವರಿಗೆ ಗಂಧದ ಅಥವಾ ಪವಿತ್ರ ವಿಭೂತಿಯ ಅವಶ್ಯಕತೆಯೂ ಇಲ್ಲ ಅಥವಾ ವಿಧಿಪೂರ್ವಕ ಅರ್ಚನೆಯೂ ಬೇಕಿಲ್ಲ. ಶ್ರೀಸಾಯಿಯು

ಪೂರ್ಣಬ್ರಹ್ಮ. ॥101॥ ಈ ವ್ಯಾಖ್ಯಾನವು ಬೋಧಕ ಹಾಗೂ ಅತಿ ಪಾವನ ಮತ್ತು ಭಕ್ತಿಪ್ರಧಾನವೂ ಆಗಿದೆ. ಸಾವಧಾನದಿಂದ ಆಲಿಸುವವರು ಜನನ ಮರಣಗಳೆಂಬ ಭವಬಂಧನದಿಂದ ಮುಕ್ತರಾಗುತ್ತಾರೆ. ॥102॥ ಹೆಚ್ಚು ಹೆಚ್ಚಾಗಿ ಭಾವಾರ್ಥದಲ್ಲಿ ಒಂದಾಗುವ ಭಕ್ತರಿಗೆ ಸಾಯಿಯ ಭಂಡಾರವೇ ತೆರೆಯುತ್ತದೆ. ಕುತರ್ಕಿಗಳು ಅದನ್ನು ಅರಿಯಲು ಸಾಧ್ಯವಿಲ್ಲ ಆದರೆ ನಿರಾಡಂಬರದ ಮತ್ತು ಮುಗ್ಧರಾದ ಭಕ್ತರು ಪ್ರೀತಿಯಿಂದ ಅನಂದಿಸಬಲ್ಲರು. ॥103॥ ಈಗ ಮತ್ತೊಂದು ಚರಿತ್ರೆಯೊಂದಿಗೆ ಮುಂದುವರೆಸೋಣ. ಶ್ರೋತೃಗಳು ಏಕಾಗ್ರಚಿತ್ತರಾಗಿ ಕೇಳಿದಲ್ಲಿ ಅದು ಪ್ರೇಮವನ್ನು ಸ್ಫುರಿಸುತ್ತದೆ ಮತ್ತು ಆನಂದಾಶ್ರುಗಳಿಂದ ನಯನಗಳು ತುಂಬಿ ಬರುತ್ತವೆ. ॥104॥ ಬಾಬಾರವರ ಚತುರತೆ ಅದೆಷ್ಟು ಅಪೂರ್ವ? ಅವರ ಯುಕ್ತಿ ಪ್ರಯುಕ್ತಿಗಳು ಎಂತಹ ಮಾರ್ಗಗಳು? ಸದ್ಭಕ್ತಿಯ ಬಗ್ಗೆ ಅರಿತವರು ಮಾತ್ರ ಅದರ ಅನುಭವ ಪಡೆಯಬಲ್ಲರು. ॥105॥ ಈ ಸಾಯಿ ಚರಿತ್ರೆಯು ಅಮೃತಪಾನದ ರೀತಿ. ಆದರದಿಂದ ಆಲಿಸಿರಿ. ಗುರುಚರಣಗಳಲ್ಲಿ ಮನವಿಟ್ಟು ಕಥೆಯ ಮುಂದಿನದನ್ನು ಲಕ್ಷ್ಯವಿಟ್ಟು ಕೇಳಿ. ॥106॥ ಈ ಕಥೆಯು ಅಪೂರ್ವವಾದ ರಸದೌತಣ, ಶ್ರೋತೃಗಳು ಅದನ್ನು ಸೇವಿಸಲು ಆತುರ ಪಡಬಾರದು. ಪದಾರ್ಥಗಳ ಅಪೂರ್ವತೆಯನ್ನು ಒಂದೊಂದಾಗಿ ಯಥೇಚ್ಛವಾಗಿ ಅನುಭವಿಸಿ ಹೊಸತನವನ್ನು ಪಡೆಯಬೇಕು. ॥107॥ ಗಾಡಿಯ ಕಥೆ ಸಾಕಿಷ್ಟು, ಮೇಕೆಯ ಕಥೆಯು ಇನ್ನೂ ವಿಶೇಷವಾಗಿದೆ. ಶ್ರೋತೃಗಳು ಆಶ್ಚರ್ಯ ಚಕಿತರಾಗುವರು ಮತ್ತು ಗುರುಭಕ್ತರು ಆನಂದ ತುಂದಿಲರಾಗುವರು. ॥108॥ ಒಮ್ಮೆ ಒಂದು ಕೌತುಕ ನಡೆಯಿತು. ಯಾರೋ ಒಬ್ಬರು ಒಂದು ಮೇಕೆಯನ್ನು ತೆಗೆದುಕೊಂಡು ಬಂದರು. ಅದಾದರೋ ನಿತ್ರಾಣವಾಗಿ, ಮರಣಾಸನ್ನವಾಗಿತ್ತು. ಜನರು ಅದನ್ನು ನೋಡಲು ಅಲ್ಲಿಗೆ ಬಂದರು. ॥109॥ ಸಾಯಿಮಾತೆಯು ರಕ್ಷಕರಿಲ್ಲದವರಿಗೆ ಮಾಲೀಕರಾಗಿದ್ದರು. ರೋಗಪೀಡಿತರು ಅಥವಾ [illegible] ಅಥವಾ ಪೀಡನೆಗೊಳಗಾದವರು ಮಸೀದಿಯಲ್ಲಿ ಆಶ್ರಯ ಪಡೆಯುತ್ತಿದ್ದರು. ॥110॥ ಆಗ ಆ ಸಮಯದಲ್ಲಿ ಬಡೇಬಾಬಾರವರು, ಬಾಬಾರವರ ಹತ್ತಿರ ಇದ್ದರು. ಬಾಬಾ ಹೇಳಿದರು, "ಅದನ್ನು ಬಲಿಕೊಡು. ಒಂದೇ ಏಟಿನಲ್ಲಿ ಸಾಯಿಸು." ॥111॥ ಬಡೇ ಬಾಬಾರವರು ಅದೆಷ್ಟು ಪ್ರಮುಖರು! ಅವರ ನಿತ್ಯ ಆಸನವೇ ಬಾಬಾರವರ ಬಲಗಡೆ ಇತ್ತು, ಬಾಬಾರವರು ಚಿಲುಮೆ ಸೇದುವಾಗಲೂ ಬಡೇ ಬಾಬಾ ಸೇದಿದ ನಂತರವೇ ತಾವು ಸೇದುತ್ತಿದ್ದರು. ॥112॥ ಬಡೇಬಾಬಾ ಅದೆಂತಹ ವ್ಯಕ್ತಿಯೆಂದರೆ, ಅವರಿಲ್ಲದೆ ಬಾಬಾರವರು ಒಂದು ಹೆಜ್ಜೆಯನ್ನೂ ಇಡುತ್ತಿರಲಿಲ್ಲ. ಅವರು ಊಟ ಮಾಡದಿದ್ದರೆ ಬಾಬಾರವರೂ ಏನೂ ಆಹಾರ ತೆಗೆದುಕೊಳ್ಳುತ್ತಿರಲಿಲ್ಲ. ॥113॥ ಒಮ್ಮೆ 'ದೀಪಾವಳಿ ಹಬ್ಬದಲ್ಲಿ ಎಲ್ಲ ಮೃಷ್ಟಾನ್ನಗಳನ್ನೂ ಬಡಿಸಿದ ಮೇಲೆ ಜನರು ಅವರವರ ಜಾಗಗಳಲ್ಲಿ ಕುಳಿತಿದ್ದರು. ಬಡೇ ಬಾಬಾರವರು ಯಾವುದೋ ವಿಷಯಕ್ಕೆ ಬೇಸರಗೊಂಡು ಅಲ್ಲಿಂದ ಎದ್ದು ಹೊರಟುಹೋದರು. ॥114॥ ಬಡೇಬಾಬಾರವರು ಪಂಕ್ತಿ ಬಿಟ್ಟಿದ್ದಕ್ಕೆ ಸಾಯಿಬಾಬಾರವರು ಊಟವನ್ನು ತಿರಸ್ಕರಿಸಿದರು ಮತ್ತು ಸಾಯಿಬಾಬಾರೇ ಒಂದು ತುತ್ತು ಆಹಾರವನ್ನು ತೆಗೆದುಕೊಳ್ಳದೇ

ಇರುವಾಗ ಇತರರು ತಾನೇ ಹೇಗೆ ಊಟಮಾಡುತ್ತಾರೆ? ॥115॥ ಪರಿಣಾಮವಾಗಿ ಪ್ರತಿಯೊಬ್ಬರೂ ಕಾಯಬೇಕಾಯಿತು. ಬಡೇಬಾಬಾರವರನ್ನು ಹುಡುಕಿ ಹಿಂದಕ್ಕೆ ಕರೆತಂದರು. ಅವರು ಪಂಕ್ತಿಯಲ್ಲಿ ಕುಳಿತ ನಂತರವೇ ಬಾಬಾರವರು ಊಟ ಮಾಡಿದರು. ॥116॥ ಈಗ ಅದನ್ನು ಪಕ್ಕಕ್ಕೆ ಇಟ್ಟು ವರ್ತಮಾನದ ಕಥೆಗೆ ಬನ್ನಿ. ಶ್ರೋತೃಗಳಿಗೆ ಬಡೇಬಾಬಾರವರ ಬಗ್ಗೆ ಇನ್ನೂ ಸ್ವಲ್ಪ ಹೇಳಬೇಕೆನ್ನಿಸಿದೆ. ಇದನ್ನು ಅಡ್ಡಕಥೆಯೆಂದು ಪರಿಗಣಿಸಬೇಡಿ. ॥117॥ ಬಡೇಬಾಬಾರವರು ಬಾಬಾರವರ ಅತಿಥಿಯಾಗಿದ್ದರು. ಊಟ ಬಡಿಸುತ್ತಿರುವ ಸಮಯದಲ್ಲಿ ಅವರು ಸಭಾ ಮಂಟಪದಲ್ಲಿ ತಮ್ಮನ್ನು ಕರೆಯುವರೆಂದು ಕಾಯುತ್ತಿರುತ್ತಿದ್ದರು. ॥118॥ ಜನರು ಎರಡು ಪಂಕ್ತಿಗಳಲ್ಲಿ ಎದುರು ಬದರು ಕುಳಿತುಕೊಂಡರು. ಬಾಬಾರವರು ಮಧ್ಯದಲ್ಲಿ ವಿರಾಜಮಾನರಾಗಿದ್ದರು. ಬಡೇಬಾಬಾರವರಿಗಾಗಿ ಬಾಬಾರವರ ಪಕ್ಕದಲ್ಲಿ ಎಡಗಡೆ ಸ್ಥಳ ನಿಗದಿಪಡಿಸಲಾಗಿತ್ತು. ॥119॥ ನೈವೇದ್ಯವಾಗಿ ಸಮರ್ಪಿಸಿದ ಆಹಾರವನ್ನು ಎಲ್ಲಾ ತಟ್ಟೆಗಳಿಗೂ ಬಡಿಸಲಾಯಿತು. ಅನಂತರ ತಟ್ಟೆಗಳನ್ನು ಸಾಲಾಗಿ ಇಡಲಾಯಿತು. ಭೋಜನ ಮಾಡುವವರು ಊಟದ ಸಮಯದಲ್ಲಿ ತಮ್ಮ ತಮ್ಮ ಜಾಗದಲ್ಲಿಯೇ ಕುಳಿತರು. ॥120॥ ಅನಂತರ ಬಾಬಾರವರು ಅತ್ಯಾದರದಿಂದ ತಾವೇ ಸ್ವತಃ ಉಚ್ಚಸ್ವರದಿಂದ "ಬಡೇ ಮಿಯಾ" ಎಂದು ಕರೆದರು. ಅನಂತರ ಅವರು ಅವಸರವಾಗಿ ನಮಸ್ಕರಿಸುತ್ತ ಬಂದರು. ॥121॥ ಅನ್ನದ ಮೋಹಕ್ಕಾರಣವಾಗಿ ಕೋಪಗೊಂಡಿರುವವರನ್ನು ಏಕೆ ಗೌರವಿಸಬೇಕು? ಅನ್ನಕ್ಕೆ ಅಪಮಾನ ಮಾಡಿದವರನ್ನು ಇಷ್ಟೊಂದು ಸನ್ಮಾನ ಏಕೆ ಮಾಡಬೇಕು? ॥122॥ ಆದೂ ಬಾಬಾರವರು ಲೋಕಸಂಗ್ರಹ ರೀತಿಯಲ್ಲಿ ಅಷ್ಟೊಂದು ಜನರು ಸೇರಿರುವಾಗ ಅತಿಥಿಯನ್ನು ಪಂಕ್ತಿಯಲ್ಲಿ ಸೇರಿಸದೆ ತಾವು ಮಾತ್ರ ಊಟಮಾಡುವುದು ಸರಿಯಲ್ಲ ಎಂಬುದನ್ನು ಸ್ವಯಂ ಆಚರಿಸಿ ತೋರಿಸಿದರು. ॥123॥ ಬಾಬಾರವರು ಎಂದಿಗೂ ಗೃಹಸ್ಥ ಧರ್ಮ ಕರ್ಮದ ಮರ್ಯಾದೆಯನ್ನು ಉಲ್ಲಂಘಿಸುತ್ತಿರಲಿಲ್ಲ. ಅದರಿಂದ ಭಕ್ತರ ಕಷ್ಟಗಳನ್ನು ತಡೆಯಬಹುದಾಗಿತ್ತು. ಅವರು ತಾವೇ ಅದನ್ನು ಪಾಲನೆ ಮಾಡುತ್ತಿದ್ದರು. ॥124॥ ಅತಿಥಿ ಸತ್ಕಾರದಿಂದ ಇಷ್ಟಾರ್ಥ ಸಿದ್ಧಿಯಾಗುವುದು. ಮತ್ತು ಅದರಿಂದ ಅನಿಷ್ಟ ನಿವೃತ್ತಿಯಾಗುವುದು. ಇದನ್ನು ತಿರಸ್ಕರಿಸಿದಲ್ಲಿ ಮಾರ್ಗವು ನಿಶ್ಚಯವಾಗಿಯೂ ವಿಘ್ನಗಳಿಂದ ಪೀಡಿತವಾಗುತ್ತದೆ. ಆದ್ದರಿಂದ ಸಜ್ಜನರು ಸದಾ ಈ ನಿಯಮಗಳನ್ನು ಪಾಲಿಸುತ್ತಾರೆ. ॥125॥ ಒಬ್ಬ ಅತಿಥಿಯು ಊಟಮಾಡದೆ ಹೊರಟುಹೋದರೆ ಅದು ಪುತ್ರ, ಪಶು, ಧನ, ಧಾನ್ಯಗಳು ವಿನಾಶವಾದಂತೆ. ಅತಿಥಿಯು ಹಸಿವಿನಿಂದ ಹೋದಲ್ಲಿ ಅದು ಅನರ್ಥಕ್ಕೆ ಆಮಂತ್ರಣ ಕೊಟ್ಟಂತೆಯೇ ಸರಿ. ॥126॥ ಸಾಯಿ ಸಮರ್ಥರು ಅವರಿಗೆ ಐವತ್ತು ರೂಪಾಯಿಗಳ ದಕ್ಷಿಣೆಯನ್ನೂ ಕೊಡುತ್ತಿದ್ದರು. ಅತಿಥಿ ಹೋಗುವಾಗ ಐದು ನೂರು ಹೆಜ್ಜೆ ಜೊತೆಗೆ ಹೋಗುತ್ತಿದ್ದರು. ॥127॥ ಮೊದಲು ಬಡೇಬಾಬಾರವರನ್ನು ಮೇಕೆಯನ್ನು ಸಾಯಿಸಲು ಕೇಳಿದಾಗ ಅವರ ಬಾಯಿಯಿಂದಬಂದ ಮೊದಲ ಮಾತು "ಇದನ್ನು ಅನವಶ್ಯಕವಾಗಿ ಏಕೆ ಕೊಲ್ಲಬೇಕು?" ॥128॥ ಮಾಧವ ರಾವ್ ಅಲ್ಲಿದ್ದನು. ಬಾಬಾರವರು ಅವನಿಗೆ ಆಜ್ಞಾಪಿಸಿದರು. "ಶಾಮಾ, ನೀನು

ಒಂದು ಕತ್ತಿಯನ್ನು ತೆಗೆದುಕೊಂಡು ಬಾ. ಈ ಮೇಕೆಯನ್ನು ಕೊಲ್ಲೋಣ. ಹೋಗು ಈಗ!" ॥129॥ ಮಾಧವರಾವ್ ಒಬ್ಬ ನಿಷ್ಠಾವಂತ ಭಕ್ತನಾಗಿದ್ದನು. ಅವನು ರಾಧಾಕೃಷ್ಣ ಬಾಯಿಯ ಹತ್ತಿರ ಹೋಗಿ ಒಂದು ದೊಡ್ಡ ಕತ್ತಿಯನ್ನು ತೆಗೆದುಕೊಂಡು ಬಂದು ಅದನ್ನು ಬಾಬಾರವರ ಮುಂದಿಟ್ಟನು. ॥130॥ ಮಾಧವ ರಾವ್ ಆ ದೊಡ್ಡ ಕತ್ತಿಯನ್ನು ಕಷ್ಟದಿಂದ ತಂದರೂ ಸಹ, ಕತ್ತಿ ಇಲ್ಲದ ಅವನನ್ನು ನೋಡಿದ್ದರೆ ಬಾಬಾರ ಮನಸ್ಸಿಗೆ ತೃಪ್ತಿಯಾಗುತ್ತಿರಲಿಲ್ಲ. ॥131॥ ಅದೇ ಸಮಯಕ್ಕೆ ರಾಧಾಕೃಷ್ಣಬಾಯಿಯು ಈ ವಿಷಯವನ್ನು ಅರಿತು ಆ ದೊಡ್ಡ ಕತ್ತಿಯನ್ನು ಹಿಂದಕ್ಕೆ ತರಿಸಿಕೊಂಡಳು. ಏಕೆಂದರೆ ಅವಳ ಅಂತರಂಗದಲ್ಲಿ ಕರುಣೆ ಉಂಟಾಯಿತು. ॥132॥ ಅನಂತರ ಮಾಧವ ರಾವ್‌ನು ಮತ್ತೊಂದು ಕತ್ತಿಯನ್ನು ತರಹೊರಟನು. ಅವನು ವಾಡಾದಲ್ಲಿಯೇ ಉಳಿದು ಹಿಂತಿರುಗಲು ನಿಧಾನಿಸಿದನು. ಅವನ ಕೈಯಾರೆ ಹತ್ಯೆ ನಡೆಯಬಾರದು ಎಂಬುದು ಅದರ ಉದ್ದೇಶ. ॥133॥ ಅನಂತರ ಕಾಕಾನ ಮನಸ್ಸನ್ನು ಪರೀಕ್ಷಿಸಲು ಬಾಬಾರವರು ಅವನಿಗೆ ಆಜ್ಞಾಪಿಸಿದರು. "ಹೋಗು, ಕತ್ತರಿಸಲು ಒಂದು ದೊಡ್ಡ ಕತ್ತಿಯನ್ನು ತೆಗೆದುಕೊಂಡು ಬಾ. ಮೇಕೆಯು ಈ ನರಳಾಟದಿಂದ ಮುಕ್ತವಾಗಲಿ." ॥134॥ ಕಾಕಾ ಆದರೋ ಅಪ್ಪಟ ಬಂಗಾರ, ಬಾಬಾರವರಿಗೆ ಇದು ಪೂರ್ಣವಾಗಿ ತಿಳಿದಿದ್ದರೂ ಸಹ ಸಾರ್ವಜನಿಕರ ಮುಂದೆ ಅದನ್ನು ನಿರೂಪಿಸದೇ ಹೋದಲ್ಲಿ ಅದನ್ನು ಯಾರೂ ನಂಬುತ್ತಿರಲಿಲ್ಲ. ॥135॥ ಚಿನ್ನವು ಪರಿಶುದ್ಧವೋ ಅಥವಾ ಕಳಪೆಗುಣಮಟ್ಟದ್ದೋ, ಚಾಣಾಕ್ಷ ಜನರು ಅದನ್ನು ಒರೆಗೆ ಹಚ್ಚಿ ನೋಡದೆ ನಂಬುತ್ತಿರಲಿಲ್ಲ.॥136॥ ವಜ್ರವು ತನ್ನ ಹೊಳಪನ್ನು ಪಡೆಯಬೇಕಾದರೆ ಅದನ್ನು ವಿಧವಿಧವಾಗಿ ಕಡೆದು ಕೆತ್ತಬೇಕು. ಒಂದು ಶಿಲೆಯು ತನ್ನ ದಿವ್ಯ ವೈಭವವನ್ನು ತಲುಪಬೇಕಾದರೆ ಪೆಟ್ಟಿಗೆಯಿಂದ ಉಂಟಾದ ಗಾಯಗಳನ್ನು ಸಹಿಸಿಕೊಳ್ಳಬೇಕು. ॥137॥ ಕಾಕಾರವರು ಕತ್ತಿನಲ್ಲಿರುವ ಯಂತ್ರ(ತಾಯಿತ)ದಂತೆ ಅಮೂಲ್ಯವಾಗಿದ್ದರೂ, ಇತರರಿಗೆ ಅದು ಹೇಗೆ ತಿಳಿಯುತ್ತದೆ? ಒಬ್ಬ ಮೌಲ್ಯಮಾಪಕನು ಒಂದು ವಜ್ರವನ್ನು ದಾರ ಹಾಕಿ ಅಗ್ನಿಯಲ್ಲಿ ಬಿಡುವುದರಿಂದ ಅಳೆಯುತ್ತಾನೆ. ॥138॥ ಯಾರಿಗಾದರೂ ಸಂತರ ವಚನಗಳಲ್ಲಿ ಶಂಕೆ ಇದ್ದರೆ ತಮ್ಮ ಜೀವನದ ಗುರಿ ಸಾಧಿಸಲು ಯಶಸ್ವಿಯಾಗಲಾರರು. ಅವನ ಮಾತುಗಳು ಅರ್ಥಹೀನವಾಗಿ, ಸತ್ವಹೀನ ಹಾಗೂ ನಿಷ್ಫಲವಾಗುತ್ತವೆ. ಅಲ್ಪಮಾತ್ರ ಪರಮಾರ್ಥ ಸಾಧನೆಯೂ ಅಸಾಧ್ಯ. ॥139॥ ಗುರುವಚನಗಳನ್ನು ಗೌರವಿಸುವನು ಸ್ವಾರ್ಥವನ್ನೂ ಪರಮಾರ್ಥವನ್ನೂ ಸಾಧಿಸುವಲ್ಲಿ ಸಫಲನಾಗುತ್ತಾನೆ. ಆದರೆ ಅವುಗಳಲ್ಲಿ ದೋಷವನ್ನು ಕಂಡುಹಿಡಿದು ಕುಟಿಲತೆಯನ್ನು ಕಾಣುವವನು ನಾಶಹೊಂದುತ್ತಾನೆ. ॥140॥ ಗುರುಸೇವಾ ತತ್ಪರನು ಗುರುವಿನ ಆಜ್ಞೆಯನ್ನು ಆದರದಿಂದ ಪಾಲಿಸುತ್ತಾನೆ. ತಪ್ಪು ಒಪ್ಪುಗಳ ಎಲ್ಲ ವಿಚಾರಗಳನ್ನೂ ಎಲ್ಲ ರೀತಿಯಿಂದಲೂ ಗುರುವಿನ ಜವಾಬ್ದಾರಿಗೆ ಬಿಡುತ್ತಾನೆ. ॥141॥ ಅವನು ಗುರುವಿನ ಆಜ್ಞೆಯ ಕಿಂಕರನು. ಅವನು ಯಾವುದನ್ನೂ ಸ್ವತಂತ್ರವಾಗಿ ಯೋಚಿಸುವುದಿಲ್ಲ. ಸದಾ ಗುರುವಚನಗಳನ್ನು ಪಾಲನೆ ಮಾಡುತ್ತ ಅವನು ಒಳ್ಳೆಯದು ಅಥವಾ ಕೆಟ್ಟದ್ದು ಯಾವುದು ಎಂಬುದನ್ನು ನೋಡುವುದಿಲ್ಲ. ॥142॥ ಮನಸ್ಸು

ಸಾಯಿನಾಮಸ್ಮರಣೆಯಲ್ಲಿ ಲೀನವಾಗಬೇಕು. ಕಣ್ಣುಗಳು ಸಾಯಿಚರಣಗಳಲ್ಲಿ ನೆಲೆಗೊಳ್ಳಬೇಕು. ಮನೋವೃತ್ತಿಯು ಸಾಯಿಧ್ಯಾನದಲ್ಲಿ ನಿರತವಾಗಬೇಕು. ಇಡೀ ದೇಹವು ಸಾಯಿಯ ಇಚ್ಛೆಗಾಗಿ ಸಮರ್ಪಿತವಾಗಬೇಕು. ॥143॥ ಆಜ್ಞಾಪನೆ ಮತ್ತು ಆಜ್ಞಾಪಾಲನೆಯ ನಡುವೆ ಕ್ಷಣಮಾತ್ರದ ಸಮಯ ಲೋಪವಾದರೂ, ಆ ಸಮಯವನ್ನು ಸಹಿಸಲಾಗುವುದಿಲ್ಲ. ಇದು ಒಂದು ವಿಚಿತ್ರವಾದ ಅರಿವಿನ ಸ್ಥಿತಿ. ॥144॥ ದೀಕ್ಷಿತನು ಪರಿಶುದ್ಧ ಮನವುಳ್ಳ ವ್ಯಕ್ತಿ, ಅವನು ಸತ್ಯವಂತ, ಧೈರ್ಯಶಾಲಿ, ಮತ್ತು ಮಹಾಮೇರುವಿನಂತೆ ನಿಶ್ಚಯವಾಗಿಯೂ ಅಚಲ. ಅವನು ಮೇಕೆಯನ್ನು ಕೊಲ್ಲುವುದರ ಬಗ್ಗೆ ಧರ್ಮವೇ ಎಂದು ಕೇಳಲೂ ಸಹ ವಿಚಾರ ಮಾಡಲಿಲ್ಲ. ॥145॥ ನಿರಪರಾಧಿ ಮೇಕೆಯು ಸಾಯುತ್ತದೆ. ಅದರ ಆತ್ಮವು ತಳಮಳಿಸುತ್ತದೆ. ಅವನ ಸ್ವಚ್ಛವಾದ ಹೆಸರಿಗೆ ಕಳಂಕ ತಗಲುತ್ತದೆ. ಮತ್ತು ಅವನು ಮಹಾ ಪಾಪ ಮಾಡಿದಂತಾಗುತ್ತದೆ. ॥146॥ ಈ ಬಗೆಯ ವಿಚಾರಗಳಿಗೆ ಅವನ ಮನಸ್ಸಿನಲ್ಲಿ ಸ್ಥಳವಿರಲಿಲ್ಲ. ಅಲ್ಲಿ ಆಜ್ಞಾಭಂಗವು ಪಾಪವಾಗುತ್ತಿತ್ತು, ಆಜ್ಞಾಪರಿಪಾಲನೆಗಿಂತ ಮಹಾ ಪುಣ್ಯಕಾರ್ಯ ಅಲ್ಲಿರಲಿಲ್ಲ. ॥147॥ ಗುರುವಾಜ್ಞೆಯನ್ನು ಪಾಲಿಸುವುದರಲ್ಲಿ ನಂಬಿದವನಿಗೆ ವಿಲಕ್ಷಣ ಶಕ್ತಿಯು ಸ್ಫುರಿಸಿ ಅವನ ಸಹಜ ಕೋಮಲ ಅಂತಃಕರಣವು ಪ್ರಾಣ ತೆಗೆಯಲು ಉದ್ಯುಕ್ತವಾಯಿತು. ॥148॥ ಅನಂತರ ಅವನು ಸಾಠೆವಾಡಾಗೆ ಹೋಗಿ ಆಜ್ಞೆಯ ಪ್ರಕಾರ ಕೊಲ್ಲಲು ಶಸ್ತ್ರವನ್ನು ತೆಗೆದುಕೊಂಡು ಬಂದನು. ಅವನು ಮೇಕೆಯನ್ನು ಸಾಯಿಸಲು ತಿಲಮಾತ್ರವೂ ಹಿಂಜರಿಯದೆ ಸಿದ್ಧನಾದನು. ॥149॥ ಅವನ ಧೈರ್ಯಕ್ಕೆ ಸ್ಫೂರ್ತಿ ಗುರುವಿನ ಆಜ್ಞೆಯನ್ನು ಪರಿಪಾಲಿಸುವುದರಿಂದ ಬಂದಿತ್ತು, ಅಂತಃಕರಣವನ್ನು ಗಟ್ಟಿಮಾಡಿಕೊಂಡು ಅವನು ಶಸ್ತ್ರವನ್ನು ಕೈಯಲ್ಲಿ ಹಿಡಿದುಕೊಂಡನು. ॥150॥ ಅವನು ನಿರ್ಮಲ ಬ್ರಾಹ್ಮಣ ವಂಶದಲ್ಲಿ ಹುಟ್ಟಿದವನು. ಅವನಿಗೆ ಅಹಿಂಸೆಯು ಜನ್ಮದಾರಭ್ಯದ ವ್ರತ. ಅವನು ಇಂತಹ ಪರಿಸ್ಥಿತಿಗೆ ಸಿಲುಕಿಕೊಂಡನು. ಈಗ ಅವನ ಕೈಯು ಹೇಗೆ ಮುಂದುವರೆಯುತ್ತದೆ? ॥151॥ ಅವನು ಗುರುವಾಜ್ಞೆಯ ಪಾಲನೆಮಾಡಲು ನಿರ್ಧರಿಸಿದ್ದನು. ಆದರೆ ಅವನ ಹೃದಯವು ಒಮ್ಮೆಲೇ ಬಡಿದುಕೊಳ್ಳಲು ಪ್ರಾರಂಭಿಸಿತು. ಮತ್ತು ಅವನ ದೇಹ ಬೆವರಿನಿಂದ ಒದ್ದೆಯಾಯಿತು. ॥152॥ ಯಾರು ಕಾಯಾವಾಚಾ, ಮನಸಾ ಶಬ್ದಗಳಿಂದಲೂ ನೋಯಿಸುತ್ತಿರಲಿಲ್ಲವೋ, ಅಂತಹವನು ಶಸ್ತ್ರಪ್ರಹಾರ ಮಾಡಲು ಹೇಗೆ ಸಾಧ್ಯ? ಇದೊಂದು ದುರ್ಘಟನೆಯ ಸನ್ನಿವೇಶವಾಗಿತ್ತು. ॥153॥ ಗುರುವಚನವನ್ನು ಅವಮಾನಿಸುವವನಿಗೆ ಯಾವುದೇ ಅನ್ಯ ಮಾರ್ಗವಿಲ್ಲ. ಪೂರ್ವಕರ್ಮಗಳ ಪುಣ್ಯಫಲವೂ ನಿಜವಾಗಿಯೂ ಶೂನ್ಯವಾಗುತ್ತದೆ. ॥154॥ ಗುರುವಿನ ಅನುಜ್ಞೆಯನ್ನು ಪೂರ್ಣವಾಗಿ ಪರಿಪಾಲಿಸುವವನಿಗೆ ಅದು ಆ ಭೂಷಣಗಳಲ್ಲಿ ಭೂಷಣವಾದುದು – ಅದು ನಿಜವಾದ ಭಕ್ತನ ಚಿಹ್ನೆಯಾಗಿದೆ. ಆಜ್ಞೋಲ್ಲಂಘನೆಯು ಮಹಾಪಾಪ. ॥155॥ ಗುರುವಿನ ಆಜ್ಞೆಯನ್ನು ಒಂದು ಕ್ಷಣದ ವಿಳಂಬವೂ ಇಲ್ಲಪರಿಪಾಲಿಸು, ವಿಚಾರಮಾಡುತ್ತ ಹಿಂಜರಿಯುವವನು ಒಂದು ದುರದೃಷ್ಟ, ಕೊಂಬಿಲ್ಲದ ಪಶುವಿಗಿಂತಲೂ ಹೀನ ಮನುಜ. ॥156॥ ಆಜ್ಞಾಪಾಲನೆಗೆ ಮುಹೂರ್ತ ನೋಡುವ

ಅವಶ್ಯಕತೆಯಿಲ್ಲ. ಆಜ್ಞೆಯು ಒಳ್ಳೆಯದೋ ಕೆಟ್ಟದ್ದೋ, ಆಜ್ಞೆಯನ್ನು ಕೂಡಲೇ ಪಾಲಿಸಬೇಕೋ ವಿಳಂಬವಾಗಿ ಮಾಡಬಹುದೋ ಎಂದು ವಾದ ಮಾಡುವ ಅವಶ್ಯಕತೆಯಿಲ್ಲ. ॥157॥ ಅನಂತರ ಅವನು ಧೋತಿಯನ್ನು ಒಂದು ಕೈಯಲ್ಲಿ ಹಿಡಿದುಕೊಂಡು, ಮತ್ತೊಂದು ಕೈಯಲ್ಲಿ ಕತ್ತಿಯನ್ನು ಹಿಡಿದು, ಕತ್ತಿಹಿಡಿದ ತೋಳಿನ ಶರಟನ್ನು ಮೇಲಕ್ಕೆ ಮಡಿಚಿ ಮೇಕೆ ಇದ್ದಲ್ಲಿಗೆ ಮುಂದೆ ಬಂದನು. ॥158॥ ಹಳ್ಳಿಯ ಜನರು ಆಶ್ಚರ್ಯಚಕಿತರಾದರು. ಅವರಿಗೆ ಕಾಕಾನ ದಯಾರ್ದ್ರ ಪ್ರೀತಿಯ ಸ್ವಭಾವ ತಿಳಿದಿತ್ತು. ಅವರು ಕಾಕಾನ ಕರುಣೆ ಎಲ್ಲಿ ಮಾಯವಾಯಿತು ಮತ್ತ ಈ ಘೋರ ಕೃತ್ಯವನ್ನು ಹೇಗೆ ಮಾಡುವನು ಎಂದು ಅಚ್ಚರಿಪಟ್ಟರು. ॥159॥ ಒಬ್ಬ ಮಾಂಸಾಹಾರಿ ಮುಸಲ್ಮಾನನೂ ಆದ ಫಕೀರ ಬಾಬಾನೂ ಸಹ ಆ ಮೇಕೆಯ ಮೇಲೆ ದಯೆ ಹೊಂದಿ ಶಸ್ತ್ರವನ್ನು ಎತ್ತಲಿಲ್ಲ. ಅಂತಹುದರಲ್ಲಿ ಕಾಕಾ ತಯಾರಾಗಿದ್ದಾನೆ! ॥160॥ ಒಬ್ಬ ಅಸಾಧಾರಣ ವ್ಯಕ್ತಿಯ ಹೃದಯವು 'ವಜ್ರಕ್ಕಿಂತಲೂ ಕಠಿಣ. ಕುಸುಮಕ್ಕಿಂತಲೂ ಕೋಮಲ' ಎಂಬ ಲೋಕೋತ್ತರ ನುಡಿಯೇ ಇದೆ. ॥161॥ ಅನಂತರ, ಅವನು ಆ ದೊಡ್ಡ ಕತ್ತಿಯನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಕೈಯನ್ನು ಎತ್ತಿ ಹೇಳಿದನು – "ಬಾಬಾ, ಇದನ್ನು ಕೊಲ್ಲಲೇ? ಕೇವಲ ಒಮ್ಮೆ ಹೇಳಿ." ॥162॥ ನಿಜವಾಗಿಯೂ ಹೇಳಬೇಕೆಂದರೆ ಶಸ್ತ್ರಧಾರಣೆಯು ಕೇವಲ ಆರ್ತರನ್ನು ರಕ್ಷಿಸಲು ಮಾತ್ರ, ಆದರೂ ಈಗ ಅದನ್ನು ಒಂದು ನಿರಪರಾಧಿ ಮೇಕೆಯ ಮೇಲೆ ಎತ್ತಲಾಗಿತ್ತು. ಆದರೆ ಅವನು ತನ್ನ ಜೀವನವನ್ನು ಗುರುಸೇವೆಗಾಗಿ ಮೀಸಲಿಟ್ಟಿದ್ದನು. ಆದ್ದರಿಂದ ಅವನಿಗೆ ಯಾವುದೇ ಅನುಮಾನವಿರಲಿಲ್ಲ. ॥163॥ ಅವನು ಅದನ್ನು ಬೇಗನೆ ಕೊಲ್ಲಬೇಕೆಂದಿದ್ದನು. ಆದರೆ ಅವನ ಹೃದಯದಲ್ಲಿ ಅನುಕಂಪ ಹುಟ್ಟಿತು ಮತ್ತು ದೊಡ್ಡ ಕತ್ತಿಯು ಅಲುಗಾಡಿತು. ಮೇಲೆತ್ತಿದ್ದ ಕೈಯು ಕೆಳಗೆ ಬರಲಾಗಲಿಲ್ಲ. ॥164॥ "ಹೂಂ. ಈಗ ಸಾಯಿಸು. ಏತಕ್ಕಾಗಿ ಕಾಯುತ್ತಿರುವೆ?" ಈ ಅಂತಿಮ ಆಜ್ಞೆಯನ್ನು ಕೇಳಿದಕೂಡಲೇ ಅವನು ಕತ್ತಿಯನ್ನು ಪರಿಣಾಮಕಾರಿಯಾದ ಏಟು ಬೀಳಲೆಂದು ಅರ್ಧ ವರ್ತುಲಾಕಾರದಲ್ಲಿ ತಿರುಗಿಸಿದನು. ॥165॥ ಅವನು ದೊಡ್ಡ ಕತ್ತಿಯಿದ್ದ ಕೈಯನ್ನು ಎತ್ತಿದನು. ಆ ಮೇಕೆಯ ಅಂತಿಮ ಕ್ಷಣಗಳು ಬಂದಂತೆ ಕಾಣಿಸಿತು. ಆದರೆ ಸರ್ವ ರಕ್ಷಕನು ಆ ಪರಮಾತ್ಮ, ಆ ಕ್ಷಣದಲ್ಲಿ ಅದು ಅವನ ಕರುಣೆಯನ್ನು ಪಡೆಯಿತು. ॥166॥ ಇನ್ನೇನು ಈಗ ಖಂಡಿತವಾಗಿಯೂ ಹೊಡೆಯುತ್ತಾನೆ! ಅದನ್ನು ನೋಡಿ ಸಾಯಿಮಾತೆಯು, ಇದೊಂದು ಅಪಾಯವಾಗುತ್ತದೆಂಬುದನ್ನು ಅರಿತು ಹೇಳಿದರು. "ರೇ, ಹೋಗಲಿ ಬಿಟ್ಟು ಬಿಡು. ॥167॥ "ಓಹ್ ಕಾಕಾ ನಿಲ್ಲಿಸು. ನೀನು ಅದೆಷ್ಟು ಕ್ರೂರಿ. ನೀನು ಬ್ರಾಹ್ಮಣನಾಗಿಯೂ ಹಿಂಸೆ ಮಾಡುವೆಯಾ? ಸ್ವಲ್ಪವಾದರೂ ವಿಚಾರ ಮಾಡುವುದಿಲ್ಲವೇ?" ॥168॥ ಅದನ್ನು ಕೇಳಿ ಅವನು ಆ ದೊಡ್ಡ ಕತ್ತಿಯನ್ನು ಪಕ್ಕಕ್ಕೆ ಬಿಸಾಡಿದನು. ಚಿಕ್ಕವರು ದೊಡ್ಡವರು ಎಲ್ಲರೂ ಆಶ್ಚರ್ಯಚಕಿತರಾದರು. ಮೇಕೆಯ ಜೀವ ಉಳಿಯಿತು. ಗುರುಭಕ್ತಿಯು ಶಿಖರವನ್ನು ಮುಟ್ಟಿತ್ತು. ॥169॥ ಅನಂತರ, ಕಾಕಾ ಆ ದೊಡ್ಡ ಕತ್ತಿಯನ್ನು ಬಿಸಾಡಿ ಏನು ಹೇಳಿದನೆಂಬುದನ್ನು ಗಮನವಿಟ್ಟು ಕೇಳಿ. "ಬಾಬಾ, ನಿಮ್ಮ ಅಮೃತ

ವಚನಗಳೇ ನಮ್ಮ ಜೀವನದಲ್ಲಿ ಧರ್ಮಶಾಸನಗಳು. ॥170॥ "ನಮಗೆ ಬೇರೆಯಾವುದೂ ಧರ್ಮವಿಲ್ಲ. ನಮಗೆ ಯಾವುದೇ ನಾಚಿಕೆಯಿಲ್ಲ. ಗುರುವಚನ ಪಾಲನೆಯೇ ನಮಗೆ ಧರ್ಮ. ಅದೇ ನಮಗೆ ವೇದ ಮತ್ತು ಶಾಸ್ತ್ರಗಳು. ॥171॥ "ಗುರುವಿನ ಆಜ್ಞೆಯನ್ನು ಪೂರ್ಣ ಪರಿಪಾಲನೆ ಮಾಡುವುದೇ ಶಿಷ್ಯನ ಶಿಷ್ಯತ್ವವು. ಅದು ನಮ್ಮ ನಿಜವಾದ ಆಭೂಷಣ. ಅವಿಧೇಯತೆಯು ಮಹಾಪಾಪ. ॥172॥ "ನಾವು ಎಂದಿಗೂ ಈ ಕರ್ಮಗಳ ಫಲವನ್ನು ಸುಖ ಅಥವಾ ಕಷ್ಟ ಕೊಡುತ್ತವೆಯೋ ಎಂಬುದರ ಮೇಲೆ ದೃಷ್ಟಿ ಇಡುವುದಿಲ್ಲ. ನಮ್ಮ ಅದೃಷ್ಟದಲ್ಲಿ ಏನಿದೆಯೋ ಅದು ಆಗುತ್ತದೆ. ದೇವರು ಮಾತ್ರ ಅದರ ಬಗ್ಗೆ ಕಾಳಜಿ ವಹಿಸುತ್ತಾನೆ. ॥173॥ "ನಮಗೆ ಒಂದೇ ಒಂದು ವಿಷಯ ಗೊತ್ತು, ನಾವು ನಿನ್ನ ನಾಮವನ್ನು ನಿತ್ಯ ಸ್ಮರಿಸುತ್ತೇವೆ. ನಿನ್ನ ಸ್ವರೂಪವನ್ನು ಮಾತ್ರವೇ ನಮ್ಮ ಕಣ್ಣುಗಳಲ್ಲಿ ತುಂಬಿಸಿರುತ್ತೇವೆ. ಮತ್ತು ಹಗಲಿರುಳೂ ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತೇವೆ. ॥174॥ "ಹಿಂಸೆ, ಅಹಿಂಸೆ, ಪುಣ್ಯ ಅವುಗಳು ನಮಗೆ ಅರ್ಥಹೀನ. ನಮ್ಮ ಮುಕ್ತಿ ಇರುವುದು ಸದ್ಗುರು ಚರಣಗಳಲ್ಲಿ. ಆಜ್ಞೆಯ ಹಿಂದಿರುವ ಕಾರಣವನ್ನು ನಾವೇಕೆ ಕೇಳಬೇಕು? ನಮ್ಮ ಕೆಲಸ ಕೇವಲ ಕರ್ತವ್ಯ ಪ್ರತಿಪಾಲನೆಯಷ್ಟೇ." ॥175॥ ಗುರುವಿನ ಆಜ್ಞೆಯು ಸ್ಪಷ್ಟವಾಗಿರುವಾಗ, ಶಿಷ್ಯನು ಅದರ ಯುಕ್ತಾಯುಕ್ತತೆ, ಹಾಗೂ ಇಷ್ಟಾನಿಷ್ಟಗಳನ್ನು ವಿಚಾರಮಾಡಿದಲ್ಲಿ ಅವನು ನಷ್ಟ ಹೊಂದುತ್ತಾನೆ. ಅಂತಹವನನ್ನು ನಾನು ಸೇವಾಭ್ರಷ್ಟನೆಂದು ಒಟ್ಟಿನಲ್ಲಿ ತಿಳಿಯುತ್ತೇನೆ. ॥176॥ ಗುರುವಿನ ಆಜ್ಞೆಯನ್ನು ಉಲ್ಲಂಘಿಸುವುದು ಜೀವಿಯ ಅಧಃಪತನ ಹೊಂದಿದಂತೆ. ಗುರುವಿನ ಆಜ್ಞೆಯ ಪರಿಪಾಲನೆಮಾಡುವುದು ಮುಖ್ಯವಾದ ಧರ್ಮಾಚರಣೆಯಂತೆ. ॥177॥ ಬದುಕಿರಲಿ, ಪ್ರಾಣಹೋಗಿರಲಿ, ಚಿತ್ತವು ಸದಾ ಗುರುವಿನ ಚರಣಗಳಲ್ಲಿ ನೆಲಸಬೇಕು. ನಾವು ಗುರುವಿನ ಆಜ್ಞೆಯನ್ನು ಪರಿಪಾಲಿಸೋಣ. ಕೇವಲ ಅವನು ಮಾತ್ರ ಅದರ ಪರಿಣಾಮವನ್ನು ಅರಿತಿರುವನು. ॥178॥ ನಮಗೆ ಅದರ ಅರ್ಥ ಅನರ್ಥಗಳು ಗೊತ್ತಿಲ್ಲ. ಸ್ವಾರ್ಥ ಪರಾರ್ಥಗಳ ಅರಿವಿಲ್ಲ. ಕೇವಲ ಅಕ್ಷರಶಃ ಗುರುವಾಕ್ಯ ಪರಿಪಾಲನೆ ಮಾತ್ರ ಗೊತ್ತು. ಅದೇ ನಮ್ಮ ಜೀವನದ ಗುರಿ. ॥179॥ ಗುರುವಚನಗಳಿಗೆ ಹೋಲಿಸಿದರೆ ವೃತ್ತಿಯೂ, ನಿಷೇಧವೂ ವ್ಯರ್ಥಪ್ರಯತ್ನವೆಂದು ಕಾಣುತ್ತದೆ. ಗುರು ಆದೇಶ ಪರಿಪಾಲನೆಯ ಕರ್ತವ್ಯ ಒಂದೇ ಶಿಷ್ಯನ ಲಕ್ಷ್ಯವಾದಲ್ಲಿ ಶಿಷ್ಯನ ಸಂಕಟಗಳೆಲ್ಲವೂ ಗುರುವಿನ ಹೊಣೆಗಾರಿಕೆಯಾಗುತ್ತದೆ. ॥180॥ನಾವೆಲ್ಲರೂ ನಿನ್ನ ಆಜ್ಞೆಗೆ ದಾಸರು. ಯೋಗ್ಯಾಯೋಗ್ಯಗಳನ್ನು ನಾವು ಯೋಚಿಸುವುದಿಲ್ಲ. ಬೇಕಾದರೆ ನಮ್ಮ ಜೀವನವನ್ನೇ ತ್ಯಾಗ ಮಾಡುತ್ತೇವೆ. ಆದರೆ ಗುರುವಚನವನ್ನು ಮಾತ್ರ ಪರಿಪಾಲಿಸುತ್ತೇವೆ. ॥181॥ ಸ್ವಭಾವತಃ ದಯಾಳುವಾದ ಮನುಷ್ಯ ಪಾಷಾಣ ಹೃದಯಿಯಾಗಲು ಹೇಗೆ ಸಾಧ್ಯ? ಯಾವುದನ್ನು ಮುಸಲ್ಮಾನನು ಮಾಡಲಾಗಲಿಲ್ಲವೋ ಅದನ್ನು ಒಬ್ಬ ಬ್ರಾಹ್ಮಣನು ಮಾಡಲು ತಯಾರಾದನು. ॥182॥ ಶ್ರೋತೃಗಳು ಇದನ್ನು ನೋಡಿ ಗಲಿಬಿಲಿ ಹೊಂದಬಹುದು. ಆದರೆ ಇದು ಸದ್ಗುರುವಿನ ಚೆಲ್ಲಾಟ. ನೀವೂ ಸಹ ಗುರುವಚನಾರೂಢರಾದರೆ ನಿಮಗೆ ಕೂಡಲೇ ಇದು ಅರ್ಥವಾಗುತ್ತದೆ. ॥183॥ ಒಮ್ಮೆ ನೀವು

ಅವನಲ್ಲಿ ಶರಣಾದರೆ ಮತ್ತು ಅವನ ಚರಣಗಳಲ್ಲಿ ವಿಶ್ವಾಸವಿಟ್ಟರೆ ಅನಂತರ ಗುರುವು ಶಿಷ್ಯನ ಬಗ್ಗೆ ಚಿಂತಿಸುತ್ತಾನೆ. ಮತ್ತೆ ಶಿಷ್ಯನು ಯಾವುದೇ ಪ್ರಯತ್ನವನ್ನು ಮಾಡಬೇಕಾಗಿಲ್ಲ. ॥184॥ ಅವನಲ್ಲಿ ಎಂದೂ ಭಯಕ್ಕೆ ಜಾಗವಿಲ್ಲ. ಒಮ್ಮೆ ಪೂರ್ಣವಾಗಿ ಶರಣಾದರೆ ಕೇವಲ ಆತ್ಮವಿಶ್ವಾಸವೇ ಅವನನ್ನು ಜೀವನದಲ್ಲಿ ದಾಟಿಸುತ್ತದೆ. ॥185॥ ಮೂರು ತರಹದ ಶಿಷ್ಯರು ಇರುತ್ತಾರೆ. ಉತ್ತಮ, ಮಧ್ಯಮ ಮತ್ತು ಅಧಮ ಎಂದು. ನಾನು ಅವುಗಳನ್ನು ಅತಿಯಾದ ವಿವರಗಳನ್ನು ನೀಡದೆ ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ॥186॥ ಯಾರು ಗುರುವಿನ ಅಭೀಷ್ಟಗಳನ್ನು ಮುಂಚಿತವಾಗಿಯೇ ಗ್ರಹಿಸುವರೋ ಅವನು ಉತ್ತಮ ಶಿಷ್ಯ. ಅದನ್ನು ಗ್ರಹಿಸಿ ನಿರ್ದಿಷ್ಟವಾದ ಆಜ್ಞೆಗೆ ಕಾಯದೆ ಅದನ್ನು ನಡೆಸಲು ಉದ್ಯುಕ್ತನಾಗುತ್ತಾನೆ. ಅವನು ಉತ್ತಮ ಶಿಷ್ಯ. ॥187॥ ಗುರುವಿನ ಆಜ್ಞೆಯನ್ನು ಅಕ್ಷರಶಃ ಯಾವುದೇ ವಿಳಂಬವಿಲ್ಲದೆ ಪರಿಪಾಲಿಸುವವನು ಮಧ್ಯಮ ಶಿಷ್ಯನೆಂದು ತಿಳಿ. ॥188॥ ಗುರುವಿನ ಆಜ್ಞೆಯನ್ನು ಪದೇ ಪದೇ ಹೇಳಿದರೂ ಸಹ ವಿಳಂಬ ಮಾಡಿ ಮುಂದೂಡುತ್ತಾ ಹೆಜ್ಜೆ ಹೆಜ್ಜೆಗೂ ತಪ್ಪುಗಳನ್ನು ಮಾಡುವವನು ಅಧಮ ಶಿಷ್ಯನೆಂದು ತಿಳಿ. ॥189॥ ಅಂತರಂಗದಲ್ಲಿ ಪರಮ ವೈರಾಗ್ಯ ಉದಯಿಸದೆ, ನಿತ್ಯಾನಿತ್ಯ ವಿವೇಕವನ್ನು ಅರಿಯದೆ ಇರುವಾಗ ಅವನ ಮೇಲೆ ಗುರುಕೃಪೆ ಹೇಗೆ ಉಂಟಾಗುತ್ತದೆ? ಅವನು ಜೀವನ ಪೂರ್ತಿ ಗುರುವಿನ ಜೊತೆಯಲ್ಲಿ ಕಳೆದಿದ್ದರೂ ಆಗುವುದಿಲ್ಲ. ॥190॥ ಆದರೆ ಗುರು ಪದಗಳಲ್ಲಿ ನಿರಂತರವಾಗಿ ವಿಶ್ವಾಸವಿಟ್ಟವನಿಗೆ ಈಶ್ವರನು ಅವನ ಇಚ್ಛೆಯೆಲ್ಲವನ್ನೂ ಪೂರೈಸುತ್ತಾನೆ. ಅವನನ್ನು ಶೀಘ್ರದಲ್ಲೇ ನಿಶ್ಚಲ ಹಾಗೂ ನಿಷ್ಕಾಮನನ್ನಾಗಿ ಮಾಡಿ ಅವನನ್ನು ಬಂಧುವಿನ ರೀತಿಯಲ್ಲಿ ನೋಡುತ್ತಾನೆ. ॥191॥ ನಿರ್ಮಲವಾದ ಶ್ರದ್ಧಾಬಲ ಮತ್ತು ಪ್ರಬಲವಾದ ಪ್ರಜ್ಞೆ ಮತ್ತು ಅಚಲವಾದ ಸಹನೆ ಇರುವವನಿಗೆ ಆಧ್ಯಾತ್ಮ ಗುರಿಯಾದ ಪರಮಾರ್ಥವು ಖಚಿತ. ॥192॥ ಅನಂತರ ಅವನಿಗೆ ಪ್ರಾಣಾಯಾಮದ ಅವಶ್ಯಕತೆಯಿಲ್ಲ. ಅಪಾನ ಉದಾನಗಳ ಶೋಧ ಬೇಕಿಲ್ಲ. ಹಠಯೋಗ, ಸಮಾಧಿ ಅಥವಾ ಉದ್ಬೋಧ ಬೇಕಿಲ್ಲ. ಇವೆಲ್ಲವೂ ನಮಗೆ ಬಹಳ ಕಠಿಣ ಸಾಧನೆಗಳು. ॥193॥ ಸದ್ಗುರುವು ಶಿಷ್ಯನಿಗೆ ಫಲಗಳನ್ನು ನೀಡಲು ಸದಾಸಿದ್ಧ. ಆದರೆ ಶಿಷ್ಯನು ಅವುಗಳನ್ನು ಸ್ವೀಕರಿಸಲು ಸರಿಯಾದ ಭೂಮಿಕೆಯ ತಯಾರಾಗಿರಬೇಕು. ನಿಜವಾಗಿಯೂ ಅವನು ತಾಳ್ಮೆಯಿಲ್ಲದೆ ಕಾತರನಾಗಿ ಅನುಗ್ರಹ ನೀಡಲು ಕಾಯುತ್ತಾನೆ. ॥194॥ ಶ್ರದ್ಧಾವಂತ ಭಕ್ತರು ಮಾತ್ರ ಸಾಕ್ಷಾತ್ಕಾರ ಪಡೆಯಲು ಸಾಧ್ಯ. ಅದು ಭಕ್ತರಲ್ಲಿ ಭಕ್ತಿಭಾವವನ್ನು ಹುಟ್ಟಿಸುತ್ತದೆ. ಇತರರು ಅದನ್ನು ಪಾಖಂಡಯುಕ್ತಿಯೆಂದು ಕರೆಯುತ್ತಾರೆ. ॥195॥ ಅನಂತರ ಬಾಬಾ ಕಾಕಾರಿಗೆ ಹೇಳಿದರು: "ಈ ಟಿನ್ನಿನ ನೀರಿನ ಡಬ್ಬಿಯನ್ನು ನಿನ್ನ ಕೈಯಲ್ಲಿ ತೆಗೆದುಕೋ. ಈಗ ನಾನೇ ಅದನ್ನು ಕಡಿಯುತ್ತೇನೆ.[10] ಮತ್ತು ಅದಕ್ಕೆ ಸದ್ಗತಿ ನೀಡುತ್ತೇನೆ." ॥196॥ ಈಗಾಗಲೇ ಮೇಕೆಯು ಮರಣೋನ್ಮುಖವಾಗಿತ್ತು. ಫಕೀರ ಬಾಬಾನಿಗೆ ಒಂದು ಸಮಯೋಚಿತವಾದ ಯೋಚನೆ ಬಂದಿತು. ತಾಕ್ಯಾವು[11] ಹತ್ತಿರದಲ್ಲೇ ಇದೆಯೆಂಬುದು. ॥197॥ ಅವನು ಬಾಬಾರವರನ್ನು ಮೇಕೆಯನ್ನು ತಾಕ್ಯಾಗೆ ತೆಗೆದುಕೊಂಡು ಹೋಗಿ ಅಲ್ಲಿ ಕೊಲ್ಲುವ

ಬಗ್ಗೆ ಅಭಿಪ್ರಾಯ ಕೇಳಿದನು. ಈ ಒಂದು ನೆಪದಲ್ಲಿ ಮೇಕೆಯನ್ನು ಅಲ್ಲಿಗೆ ತೆಗೆದುಕೊಂಡು ಹೋಗುತ್ತಿರುವಾಗ ಅದು ಮಾರ್ಗಮಧ್ಯದಲ್ಲಿಯೇ ಸಾವನ್ನಪ್ಪಿತು. ॥198॥ ಮೇಕೆಯ ಸಾವು ಅನಿವಾರ್ಯವೆಂದು ಅಲ್ಲಿ ಎಲ್ಲರಿಗೂ ತಿಳಿದಿತ್ತು, ಆದರೆ ಯೋಗ್ಯವಾದ ವೇಳೆಯಲ್ಲಿ ಬಾಬಾರವರು ಈ ನಾಟಕವನ್ನು ಆಡಿದರು. ॥199॥ ಸದ್ಗುರುವಿನಲ್ಲಿ ಶರಣಾದವರು ಸದ್ಗುರುವಿನ ರೂಪದಲ್ಲೇ ಒಂದಾಗುತ್ತಾರೆ. ಸ್ವತಃ ಲವಣವು ಸಮುದ್ರದಲ್ಲಿ ಸ್ನಾನ ಮಾಡಲು ಹೋದರೆ ಅದು ಎಂದಾದರೂ ಹಿಂತಿರುಗಿ ಬರುತ್ತದೆಯೇ? ॥200॥ ಒಬ್ಬ ಜೀವಿಯು ಜಗತ್ತಿನಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದು ಅನುಭವಿಸಿ ಆನಂದ ಪಡುತ್ತಾನೆ. ಈಶ್ವರನು ಅವನಿಗೆ ಅವುಗಳನ್ನು ನೀಡುತ್ತಾನೆ. ಆದರೆ ಕೇವಲ ಸದ್ಗುರು ಮಾತ್ರವೇ ಮುಕ್ತಿಯನ್ನು ನೀಡಲು ಸಾಧ್ಯ. ಅವನು ತನ್ನಲ್ಲಿ ಒಂದಾಗಿರುವ ಎಲ್ಲ ಆತ್ಮಗಳ ಸಂಗ್ರಹ. ॥201॥ ಸದ್ಗುರುವು ಕೃಪೆಮಾಡಿದಲ್ಲಿ ದಿವ್ಯದೃಷ್ಟಿಯನ್ನು ಪಡೆಯಬಹುದು. ಆದ್ದರಿಂದ ಸಕಲ ಸೃಷ್ಟಿಯೂ ಒಂದು ದಿವ್ಯದೃಷ್ಟಿಯಲ್ಲಿ ಕಾಣುತ್ತದೆ. ॥202॥ ಹೇಮಾಡಪಂತನು ಸಾಯಿಚರಣಗಳಲ್ಲಿ ಶರಣಾಗುತ್ತಾನೆ. ಮತ್ತು ತನ್ನ ದೇಹಾಭಿಮಾನವನ್ನು ಅಲ್ಲಿಯೇ ಸಮರ್ಪಿಸುತ್ತಾನೆ. ಅವನು ಸಾವಧಾನದಿಂದ ಯೋಚಿಸುತ್ತಾನೆ. "ಬಾಬಾ, ನನ್ನನ್ನು ನಿರಭಿಮಾನಿಯನ್ನಾಗಿ ಮಾಡು." ॥203॥ ಮುಂದಿನ ಎರಡು ಅಧ್ಯಾಯಗಳಲ್ಲಿ ವಿನೋದ ಮತ್ತು ಲೀಲೆಗಳ ಹಬ್ಬವೇ ಆಗುತ್ತದೆ. ಮತ್ತು ಸಾಯಿಮಹಾರಾಜರು ಅವುಗಳನ್ನು ಹೇಗೆ ಆಡಿದರು ಎಂಬ ಅದ್ಭುತವನ್ನು ಕೇಳಿರಿ. ॥204॥ ಅದು ವಿನೋದಕರವಾಗಿ ಕಂಡರೂ ಅತ್ಯಂತ ಬೋಧಕರವಾಗಿದೆ. ಅದು ಜ್ಞಾನದಾಯಕವಾಗಿದೆ. ಭಾವುಕ ಭಕ್ತನು ಅವುಗಳನ್ನು ಅಭ್ಯಾಸಮಾಡಿದಲ್ಲಿ ಪರಮ ಸುಖವನ್ನು ಪಡೆಯುವನು. ॥205॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಗುರು ಮತ್ತು ಶಿಷ್ಯರ ಲೀಲೆಯ ನೋಟ" ಎಂಬ ಇಪ್ಪತ್ತಮೂರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು. ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಕೃಷ್ಣ / ವಿಷ್ಣು.
2. ಈರುಳ್ಳಿಯನ್ನು ತಾಮಸಿಕ ಎನ್ನುತ್ತಾರೆ. ಆಲಸ್ಯವನ್ನೂ ಹೆಡ್ಡತನವನ್ನೂ ಹೆಚ್ಚಿಸುವುದು. ಆದ್ದರಿಂದ ಯೋಗಸಾಧನೆಗೆ ಅದನ್ನು ನಿಷೇಧಿಸಿದ್ದಾರೆ.
3. ಗುರುವು ಮಂತ್ರದ ಮೂಲಕ ಕೊಡುವ ಶಕ್ತಿ.

4. ವಿಠೋಬಾ ಶಂಕರನ ಮತ್ತೊಂದು ಸ್ವರೂಪ. ಯಾರಿಗಾದರೂ ಹಾವು ಕಚ್ಚಿದರೆ, ವಿಠೋಬಾನಲ್ಲಿ ತೆಗೆದುಕೊಂಡು ಹೋದರೆ. ಅವನು ಗುಣಪಡಿಸುತ್ತಾನೆಂಬ ನಂಬಿಕೆ.
5. ನಾನಾ ಸಾಹೇಬ್ ನಿಮೋಣಕರನು ಮಾಧವರಾವ್‌ನ ಚಿಕ್ಕಪ್ಪ ಮತ್ತು ಗೌರವಾನ್ವಿತ ಮ್ಯಾಜಿಸ್ಟ್ರೇಟ್.
6. ಮಾಧವರಾವ್ ಮತ್ತು ಗ್ರಾಮಸ್ಥರು ಬಾಬಾರವರನ್ನು 'ದೇವಾ' ಎಂದು ಕರೆಯುತ್ತಿದ್ದರು.
7. ತಾತ್ಯಾ ಗಣಪತ್ ಪಾಟೀಲ್ ಕೋತೆ.
8. ಮಾಲೇಗಾಂವನ ಫಕೀರ ಪೀರ್ ಮಹಮದ್.
9. ವಜ್ರಕ್ಕಿಂತ ಕಠಿಣ. ದಧೀಚಿಯ ತೊಡೆಯ ಮೂಳೆಯಿಂದ ಮಾಡಿದ ಇಂದ್ರನ ಆಯುಧ.
10. ಬಾಬಾರವರು "ಹಲಾಲ್" ಪದ ಉಪಯೋಗಿಸುತ್ತಿದ್ದರು. ಮುಸ್ಲಿಮರ ಧರ್ಮದ ರೀತಿ ಕುರಿಗಳನ್ನು ಸಾಯಿಸುವ ಜಾಗ.
11. ಫಕೀರರು ನೆರೆಯುವ ಜಾಗ.



# ಅಧ್ಯಾಯ - 24

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಹಾಸ್ಯ ರಸಾಯನ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಈ ಅಧ್ಯಾಯದಲ್ಲಿ ದಯಾಘನರಾದ ಶ್ರೀ ಸಾಯಿನಾಥರು ಯಾವ ರೀತಿ ವಿನೋದಕರವಾಗಿಯೂ ಜನರಿಗೆ ಬೋಧಿಸಿದರು ಎಂಬುದನ್ನು ನಿರೂಪಣೆ ಮಾಡುವೆನೆಂದು ಮಾತುಕೊಟ್ಟಿದ್ದೆ. ॥1॥ "ನಾನು ನಿರೂಪಣೆ ಮಾಡುವೆನು" ಎಂಬ ಪದಗಳು ಅಹಂಕಾರದ್ಯೋತಕ. ಪ್ರತಿಯೊಬ್ಬರೂ ಗುರುಚರಣಗಳಲ್ಲಿ ವಿನೀತರಾಗಿ ಶರಣಾಗಬೇಕು. ಕೇವಲ ಆಗ ಮಾತ್ರವೇ ಚರಿತ್ರೆಯ ವಾಹಿನಿಯು ಹರಿಯುತ್ತದೆ. ನೀವು ಅದನ್ನು ಗೌರವದಿಂದ ಸ್ವೀಕರಿಸಬಹುದು. ॥2॥ ನಿತ್ಯ, ನಿರ್ಮಲ, ನಿಷ್ಕಲ್ಮಷ, ಸಾಧು, ಸಜ್ಜನ, ಮಹಾಪುರುಷರು ಶುಭ್ರವಾದ ಆಕಾಶದರೀತಿ ಸ್ವಚ್ಛರೂ, ಯಾವ ದೋಷವೂ ಇಲ್ಲದೆ ಶುದ್ಧರೂ ಆಗಿರುತ್ತಾರೆ. ॥3॥ ಸಾಯಿ ಮಹಾರಾಜರನ್ನು ಪೂಜಿಸಿದರೆ ನಾವು ಲೌಕಿಕ ಮತ್ತು ಆಧ್ಯಾತ್ಮಿಕ ಎರಡನ್ನೂ ಪಡೆಯಬಹುದು. ಮತ್ತು ಸ್ವಸ್ವರೂಪದಲ್ಲಿ ಅನುಸಂಧಾನ ಹೊಂದಿ ಅಂತರಂಗದಲ್ಲಿ ಶಾಂತಿ ಸುಖ ಸಂತೋಷಗಳನ್ನು ಪಡೆಯಬಹುದು. ॥4॥ ಸ್ವಹಿತವನ್ನು ಸಾಧಿಸಲು ಇಚ್ಛಿಸುವವರು ಈ ಕಥೆಯನ್ನು ಆದರಪೂರ್ವಕವಾಗಿ ಆಲಿಸಬೇಕು. ಮತ್ತು ಸಹಜ ಪರಮಾನಂದವನ್ನು ಅನುಭವಿಸಿ ಜೀವನದ ಗುರಿಯನ್ನು ಸಾರ್ಥಕ ಮಾಡಿಕೊಳ್ಳಬೇಕು. ॥5॥ ಈ ಕಥೆಗಳನ್ನು ಕೇಳುವುದರಿಂದ ನೈಜ ವಿಶ್ರಾಂತಿಯು ದೊರಕುತ್ತದೆ. ಭವಬಂಧಗಳು ದೂರವಾಗುತ್ತವೆ. ಮತ್ತು

ಪರಮಾನಂದ ಪ್ರಾಪ್ತಿಯಾಗುತ್ತದೆ ಮತ್ತು ಶ್ರೋತೃಗಳು ನಿಜವಾಗಿಯೂ ಸದ್ಗತಿಯನ್ನು ಪಡೆಯುತ್ತಾರೆ. ॥6॥ ಸಾಯಿ ಸಮರ್ಥರಿಗೆ ಅಂತರಂಗದ ಆಶೆಗಳು ತಿಳಿದಿರುತ್ತವೆ. ಅವರಿಗೆ ಭಕ್ತರ ಉದ್ದೇಶಗಳು ಪೂರ್ಣವಾಗಿ ತಿಳಿದಿವೆ. ಅವರು ಕೈಗೆ ತೆಗೆದುಕೊಂಡ ಕರ್ತವ್ಯಗಳನ್ನು ತಮ್ಮ ಮೇಲೆ ತೆಗೆದುಕೊಂಡು ಪೂರೈಸುತ್ತಾರೆ ಮತ್ತು ಅವರನ್ನು ಹರಕೆಯಿಂದ ಮುಕ್ತಗೊಳಿಸುತ್ತಾರೆ. ॥7॥ ಸಾಯಿ ಸಮರ್ಥ ನನ್ನ ಬುದ್ಧಿಶಕ್ತಿಯನ್ನು ಪ್ರೇರೇಪಿಸುತ್ತಾರೆ. ಅವರೇ ತಮ್ಮ ವಚನಗಳ ಅರ್ಥವನ್ನು ಹೇಳಿಸುತ್ತಾರೆ. ನಾನು ನನ್ನ ಕೈಲಾದಷ್ಟು ಉತ್ತಮವಾಗಿ ನಿರೂಪಿಸುತ್ತೇನೆ. ಅದು ಸ್ವಾರ್ಥ ಮತ್ತು ಪರಮಾರ್ಥ ಎರಡನ್ನೂ ಸಾಧಿಸಲು ಸಹಾಯ ಮಾಡುತ್ತದೆ. ॥8॥ ಜನರು ಅಂಧರೂ ಅಲ್ಲ, ಅವರಿಗೆ ರಾತ್ರಿಯ ಕುರುಡುತನವೂ ಇಲ್ಲ. ಜನರಿಗೆ ಸಹಜ ದೃಷ್ಟಿಯಿದ್ದರೂ ಸಹ ಅವರಿಗೆ ದೇಹ ಮತ್ತು ಮನಸ್ಸಿನ ಶಕ್ತಿ ಮಾತ್ರದಿಂದ ಸ್ವಹಿತವನ್ನು ಪಡೆಯಲು ಸಾಧ್ಯವಿಲ್ಲ ಎಂಬ ವಿಷಯವನ್ನು ಗ್ರಹಿಸಲು ಅಸಮರ್ಥರಾಗಿದ್ದಾರೆ. ॥9॥ ದೇಹವೂ ಅದೇ ರೀತಿ ಇದೆ. ಕ್ಷಣಮಾತ್ರವೂ ಜೀವನದ ಭರವಸೆಯನ್ನು ಇಡಲಾಗುವುದಿಲ್ಲ. ಆದುದರಿಂದ ನಾನು ನಿಶ್ಚಿತವಾಗಿಯೂ ಈ ಮಧುರತೆಯನ್ನು ಕ್ಷಣಮಾತ್ರವಾದರೂ ಆಸ್ವಾದಿಸಲು ಪ್ರಾರ್ಥಿಸುತ್ತೇನೆ. ॥10॥ ವಿನೋದವನ್ನು ಎಲ್ಲರೂ ಇಷ್ಟಪಡುತ್ತಾರೆ. ಆದರೆ ಬಾಬಾರವರ ರೀತಿಯು ಅಲೌಕಿಕವಾದದ್ದು. ವಿನೋದಪೂರ್ವಕವಾಗಿ ಅವರು ಸಕಲರಿಗೂ ಹಿತಕಾರಕವಾಗಿ ಅತ್ಯಂತ ಬೋಧಪ್ರದ ವಿಷಯವನ್ನು ಅರ್ಥೈಸುತ್ತಿದ್ದರು. ॥11॥ ಜನರು ಹಾಸ್ಯವನ್ನು ಅಷ್ಟಾಗಿ ಬಯಸದಿರುವುದು ಸಹಜ. ಆದರೆ ಬಾಬಾರವರು ವಿನೋದಗಳನ್ನು ಮಾತ್ರ ಬಹಳ ಸವಿಯುತ್ತಿದ್ದರು. ಕಾತರಪೂರ್ವಕವಾಗಿ ಹಾಸ್ಯ ನುಡಿಗಳಿಗಾಗಿ ಕಾಯುತ್ತಿದ್ದರು. ॥12॥ ಸಾಮಾನ್ಯವಾಗಿ ಯಾರೂ ತಾವು ಹಾಸ್ಯಕ್ಕೆ ಗುರಿಯಾಗಲು ಇಚ್ಛಿಸುವುದಿಲ್ಲ. ಆದರೆ ಬಾಬಾರವರು ವಿನೋದವನ್ನು ಸರಿಯಾದ ದೃಷ್ಟಿಯಿಂದ ತೆಗೆದುಕೊಳ್ಳುತ್ತಿದ್ದರು. ಅದರಲ್ಲೂ ಬಾಬಾರವರು ಹಾವಭಾವ ಪೂರ್ವಕವಾಗಿ ಹೇಳುತ್ತಿದ್ದರು. ಅವು ಸುಲಭವಾಗಿ ನಿಗದಿತ ಉದ್ದೇಶವನ್ನು ಸಫಲಗೊಳಿಸುತ್ತಿದ್ದವು. ॥13॥ ಪ್ರಯಾಸ ಪಡೆದ ಸಹಜ ಅಭಿವ್ಯಕ್ತಿ, ಮಂದಸ್ಮಿತ ವದನ ಮತ್ತು ಚಂಚಲವಾದ ಕಣ್ಣು ಇವುಗಳು ರಂಜಿಸುವ ಹಾಸ್ಯ ಪೂರಕವಾಗಿದ್ದವು. ಮಧುರವಾದ ಹಾಸ್ಯರಸವು ಅವರ್ಣನೀಯ. ॥14॥ ಈಗ ಒಂದು ಸಂಗತಿಯನ್ನು ನಿರೂಪಿಸುವೆನು. ಇದು ಬೋಧಪ್ರದವಾಗಿಯೂ, ಹೊಸ ಬಗೆಯದ್ದೂ ಆಗಿದೆ. ಯಾವ ರೀತಿ ಹಾಸ್ಯದ ಮೂಲಕ ಪರಮಾರ್ಥಜ್ಞಾನವು ಹುಟ್ಟುತ್ತದೆ ಎಂಬುದನ್ನು ತೋರಿಸುತ್ತದೆ. ಈ ನಿರೂಪಣೆಯನ್ನು ಆದರ ಪೂರ್ವಕವಾಗಿ ಕೇಳಿರಿ. ॥15॥ ಪ್ರತಿ ಭಾನುವಾರ ಶಿರಡಿಯಲ್ಲಿ ಒಂದು ಸಂತೆಯು ನಡೆಯುತ್ತಿತ್ತು. ಬಯಲಿನಲ್ಲಿ ಬಿಡಾರಗಳನ್ನು ಹಾಕಿ ಸರಕುಗಳನ್ನಿಡುತ್ತಿದ್ದರು. ಬಹಳ ವ್ಯಾಪಾರ ನಡೆಯುತ್ತಿತ್ತು. ॥16॥ ಅಲ್ಲಿ ರಸ್ತೆಯ ಪಕ್ಕದಲ್ಲಿ ಹಸಿರು ತರಕಾರಿಯು ರಾಶಿಯಾಗಿ ಇದ್ದುವು. ದಿನಸಿ ಸಾಮಾನು ಮತ್ತು ವೀಳೆಯದೆಲೆ ಮಾರುವವರೂ ಬಯಲಿನಲ್ಲಿ ಕುಳಿತಿರುತ್ತಿದ್ದರು. ॥17॥ ಇಂತಹ ಒಂದು ಭಾನುವಾರ ಮಧ್ಯಾಹ್ನ ನಾನು ಬಾಬಾರವರ ಪಾದ ಒತ್ತುತ್ತಿರುವಾಗ ಅಚ್ಚರಿ ಸಂಗತಿಯೊಂದು

ನಡೆಯಿತು. ||18|| ಮಧ್ಯಾಹ್ನದ ಸಾಯಿ ದರ್ಬಾರು ಸಾಮಾನ್ಯವಾಗಿ ಬಹಳ ಗುಂಪಿನಿಂದ ಕೂಡಿರುತ್ತಿತ್ತು, ಜೊತೆಗೆ ಅದೊಂದು ಸಂತೆಯ ದಿನ ಮತ್ತು ಭಾನುವಾರ. ಅಸಂಖ್ಯಾತ ಜನರು ಅಲ್ಲಿಗೆ ಬಂದಿದ್ದರು. ||19|| ಬಾಬಾರವರ ಮುಂದುಗಡೆ ಬಲಭಾಗದಲ್ಲಿ ಕುಳಿತು, ನನ್ನ ತಲೆಯನ್ನು ತಗ್ಗಿಸಿಕೊಂಡು ಒಟ್ಟಿಗೆ ಅವರ ಪಾದಗಳನ್ನು ಒತ್ತುತ್ತ ದೇವರ ನಾಮಸ್ಮರಣೆಯನ್ನು ಮಾಡುತ್ತ ಇದ್ದೆ. ||20|| ಮಾಧವರಾವ್ ಎಡಗಡೆಯೂ ವಾಮನರಾವ್ ಬಲಗಡೆಯೂ ಕುಳಿತಿದ್ದರು. ಶ್ರೀಮಂತನಾದ ಬುಟಿಯು ಅವನ ಎಂದಿನ ಜಾಗದಲ್ಲಿ ಕುಳಿತಿದ್ದನು. ಬಾಬಾರವರಿಗೆ ಬಡಿಸಲು ತಯಾರಾಗಿದ್ದನು. ||21|| ಕಾಕಾನೂ ಸಹ ಅಲ್ಲಿದ್ದನು. ಆ ಕ್ಷಣದಲ್ಲಿ ಮಾಧವರಾವ್ ನಕ್ಕು ಈ ರೀತಿ ಟೀಕೆ ಮಾಡಿದನು. "ಏನು ಅಣ್ಣಾಸಾಹೇಬ! ನಿನ್ನ ಮೇಲೆ ಅಂಟಿಕೊಂಡಿರುವ ಈ ಕಾಳುಗಳು ಏನು?" ||22|| ಈ ರೀತಿ ಹೇಳುತ್ತ ಮಾಧವರಾವ್ ತನ್ನ ಬೆರಳುಗಳಿಂದ ಅವನ ಕೋಟಿನ ತೋಳುಗಳನ್ನು ಮುಟ್ಟಿ ತೋರಿಸಿದನು. ಆಗ ಆ ಕೋಟಿನ ಮಡಿಕೆಗಳಿಂದ ಕಾಳುಗಳು ಉದುರಿದವು. ||23|| ಅದು ಏನೆಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತ ನಾನು ನನ್ನ ಎಡ ಮೊಣಕೈಯನ್ನು ನೆಟ್ಟಗೆ ಮಾಡಿದೆನು. ಅಲ್ಲಿಂದ ಕಾಳುಗಳು ಕೆಳಗೆ ಪಟಪಟನೆ ಉರುಳಿದವು. ಜನರು ಅವುಗಳನ್ನು ಆಯ್ದುಕೊಳ್ಳಲು ಪ್ರಾರಂಭಿಸಿದರು. ||24|| ಅವುಗಳನ್ನು ಆಯ್ದುಕೊಳ್ಳುತ್ತ ಒಟ್ಟು ಮಾಡಿದರು. ಅವು ಒಂದು ಇಪ್ಪತ್ತೈದು ಕಾಳುಗಳಿದ್ದವು. ಅದು ಹಾಸ್ಯಕ್ಕೆ ಕಾರಣವಾಯಿತು. ಅವು ಅಲ್ಲಿಗೆ ಹೇಗೆ ಬಂದವು? ||25|| ಒಂದಾದಮೇಲೊಂದು ತರ್ಕ ಶುರುವಾಯಿತು. ಪ್ರತಿಯೊಬ್ಬರೂ ಯೋಚನಾಮಗ್ನರಾದರು. ಆ ಕಾಳುಗಳು ಕೋಟಿಗೆ ಹೇಗೆ ಅಂಟಿಕೊಂಡವು? ಪ್ರತಿಯೊಬ್ಬರೂ ಆಶ್ಚರ್ಯಚಕಿತರಾದರು. ||26|| ಈ ಪ್ರಯತ್ನದಲ್ಲಿ ಕೋಟಿನಲ್ಲಿ ಅದೆಷ್ಟು ಮಡಿಕೆಗಳು ಇದ್ದಾವು? ಕಾಳುಗಳು ಅಲ್ಲಿಗೆ ಅಂಟಿಕೊಳ್ಳಲು ಹೇಗೆ ಸಾಧ್ಯ? ಅವು ಎಲ್ಲಿಂದ ಬಂದವು? ಮತ್ತು ಯಾವ ರೀತಿ ಬಂದವು? ಯಾರೂ ಅರ್ಥಮಾಡಿಕೊಳ್ಳಲಾಗದಂತಹ ನಿಶ್ಚಿತವಾದ ಅದ್ಭುತವೇ ಸರಿ! ||27|| ನಾನು ಸಾಯಿಪಾದಗಳನ್ನು ಒತ್ತುತ್ತ, ದೇವರ ನಾಮವನ್ನು ಏಕಾಗ್ರಚಿತ್ತನಾಗಿ ಸ್ಮರಣೆ ಮಾಡುತ್ತಿದ್ದಾಗ, ಮಧ್ಯದಲ್ಲಿ ಈ ಕಾಳಿನ ಕಥೆ ಹೇಗೆ ಹುಟ್ಟಿಕೊಂಡಿತು? ||28|| ನಾನು ಕೆಲವು ಸಮಯದಿಂದ ಸೇವೆ ಮಾಡುತ್ತಿದ್ದೆನು. ನಿಜವಾಗಿಯೂ, ಅವುಗಳು ಮುಂಚೆಯೇ ಏಕೆ ಉದುರಲಿಲ್ಲ? ಇಷ್ಟು ಹೊತ್ತು ಅವು ಅಲ್ಲಿ ಹೇಗೆ ಇದ್ದವು ಎಂದು ಎಲ್ಲರೂ ಆಶ್ಚರ್ಯಚಕಿತರಾಗಿದ್ದರು. ||29|| ಆ ಕಾಳುಗಳು ಅಲ್ಲಿಗೆ ಎಲ್ಲಿಂದ ಬಂದವು? ಮಡಿಕೆಯೊಳಗೆ ಅವು ಅಲ್ಲಿ ಗಟ್ಟಿಯಾಗಿ ಹೇಗೆ ನಿಂತವು? ಪ್ರತಿಯೊಬ್ಬರೂ ಅಚ್ಚರಿಪಡುತ್ತಿದ್ದರು. ಆಗ ಬಾಬಾರವರು ಏನು ಹೇಳಿದರು ಕೇಳಿ. ||30|| ವಿವಿಧ ರೀತಿಯ ವಿಲಕ್ಷಣಪದ್ಧತಿಯ ಶಿಕ್ಷಣ ಪದ್ಧತಿಗಳಿರುತ್ತವೆ. ಅನೇಕರು ಅನೇಕ ರೀತಿಯಲ್ಲಿ ಕಲಿಸುತ್ತಾರೆ. ಆದರೆ ಬಾಬಾರವರು ಆಯಾ ವ್ಯಕ್ತಿಗೆ ಅರ್ಥವಾಗುವಂತೆ ಬೋಧನೆ ಮಾಡುತ್ತಿದ್ದರು. ||31|| ಮಹಾರಾಜ್‌ರ ಪದ್ಧತಿಯೋ ವಿಚಿತ್ರವಾಗಿತ್ತು, ಅವರು ಅದನ್ನು ಬಹು ಮನರಂಜನೀಯವಾಗಿ ಮಾಡಿ ಅವಿಸ್ಮರಣೀಯವಾಗುವಂತೆ ಮಾಡುತ್ತಿದ್ದರು. ಈ ತರಹದ್ದನ್ನು

ಮತ್ತೆಲ್ಲಿಯೂ ಕೇಳಿದ ಅಥವಾ ನೋಡಿದ ಅನುಭವ ನನಗಿಲ್ಲ. ॥32॥ ಅವರು ಹೇಳಿದರು. "ಅವನಿಗೆ ಒಂದು ಕೆಟ್ಟ ಅಭ್ಯಾಸವಿದೆ. ಅದು ತಾನೊಬ್ಬನೇ ತಿನ್ನಲು ಇಚ್ಛಿಸುತ್ತಾನೆ. ಈ ದಿನದ ಸಂತೆಯ ನೆಪವೊಡ್ಡಿ ಅವನು ತನ್ನ ಅಂಗೈಗಳಲ್ಲಿ ಕಾಳುಗಳನ್ನು ಜೋರಾಗಿ ಉಜ್ಜುತ್ತ ಅವುಗಳ ಸಿಪ್ಪೆಯನ್ನು ತೆಗೆದಿದ್ದಾನೆ. ॥33॥ "ಒಬ್ಬರೇ ತಿನ್ನುವುದು ಸರಿಯಲ್ಲ. ಆದರೆ ನನಗೆ ಅವನ ಅಭ್ಯಾಸ ಗೊತ್ತು. ಈ ಕಾಳುಗಳೇ ಅದಕ್ಕೆ ಸಾಕ್ಷಿ. ಅದರಲ್ಲಿ ಅಚ್ಚರಿ ಪಡುವಂತಹದು ಏನಿದೆ?" ॥34॥ ಅನಂತರ ನಾನು ಹೇಳಿದೆ. "ಹಂಚದೆಯೇ ತಿನ್ನುವ ಯೋಚನೆಯೂ ನನ್ನ ಮನಸ್ಸಿಗೆ ಬರುವುದಿಲ್ಲ. ಹಾಗಿರುವಾಗ, ಈ ಕೆಟ್ಟ ಅಭ್ಯಾಸದ ಪ್ರಶ್ನೆಯೇ ಇಲ್ಲ. ಈ ಅಪವಾದವನ್ನು ನನ್ನ ಮೇಲೆ ಹಾಕುವುದು ಸರಿಯಲ್ಲ. ॥35॥ "ಬಾಬಾ, ಇಲ್ಲಿಯವರೆಗೆ ನಾನು ಶಿರಡಿ ಮಾರುಕಟ್ಟೆಯನ್ನೇ ನೋಡಿಲ್ಲ. ನಾನು ಅಲ್ಲಿಗೆ ಹೋಗಿದ್ದರೆ ಕಾಳುಗಳನ್ನು ಕೊಂಡುಕೊಳ್ಳಬಹುದಿತ್ತು, ಮತ್ತೆ ಅವುಗಳನ್ನು ತಿನ್ನುವ ಪ್ರಶ್ನೆ ಹುಟ್ಟುವುದು ಅನಂತರವೇ. ॥36॥ "ನಾನು ಎಂದಿಗೂ ಮತ್ತೊಬ್ಬರಲ್ಲಿ ಹಂಚದೆ ಯಾವುದನ್ನೂ ತಿನ್ನುವುದಿಲ್ಲ. ಬೇರೆ ಯಾರಾದರೂ ಇದರಲ್ಲಿ ಆಸಕ್ತಿ ಇರುವವರು ಈ ರೀತಿ ಮಾಡಬಹುದು. ಆದರೆ ಇದು ನನ್ನ ಅಭ್ಯಾಸವಲ್ಲ." ॥37॥ ಈಗ ಬಾಬಾರವರ ಯುಕ್ತಿಯನ್ನು ನೋಡು. 'ಅವರು ಹೇಗೆ ಭಕ್ತಿಯನ್ನು ದೃಢಗೊಳಿಸಿದರು. ನನ್ನ ಸ್ಪಷ್ಟವಾದ ಉಕ್ತಿಯನ್ನು ಕೇಳಿ ಏನು ಹೇಳಿದರು' ಎಂಬುದನ್ನು ಲಕ್ಷ್ಯವಿಟ್ಟು ಕೇಳಿರಿ. ॥38॥ "ನೀನು ತಿನ್ನುವುದನ್ನು ಯಾರು ಹತ್ತಿರವಿರುತ್ತಾರೋ ಅವರ ಜೊತೆ ಹಂಚಿಕೊಂಡು ತಿನ್ನುವೆ. ಆದರೆ ಏಕಾಂಗಿಯಾಗಿದ್ದಾಗ ಏನು ಮಾಡುವೆ? ನಾನಾದರೋ ಏನು ಮಾಡಬಲ್ಲೆನು? ನೀನು ನನ್ನನ್ನು ನೆನಪಿಸಿಕೊಳ್ಳುವೆಯಾ? ॥39॥ "ನಾನು ನಿನ್ನ ಪಕ್ಕದಲ್ಲಿಯೇ ಇಲ್ಲವೇ? ನನಗೆ ಒಂದು ತುತ್ತನ್ನು ಕೊಡುವೆಯಾ?" ಈ ರೀತಿ ಅವರು ಕಾಳುಗಳನ್ನು ಒಂದು ನೆಪಮಾಡಿ ತತ್ತ್ವವು ನನ್ನ ಮನಸ್ಸಿನಲ್ಲಿ ನಿಶ್ಚಲವಾಗಿ ನೆಲಸುವಂತೆ ಮಾಡಿದರು. ॥40॥ ಇಂದ್ರಾದಿ ದೇವತೆಗಳಿಗೆ, ಪಂಚ ಪ್ರಾಣಗಳಿಗೆ, ಅಗ್ನಿಗೆ ವಂಚಿತವಾಗಿ, ವಿಶ್ವೇಶ್ವರನಿಗೆ ಮತ್ತು ಅತಿಥಿಗಳಿಗೆ ಅರ್ಪಿಸದೆ ಇದ್ದಲ್ಲಿ ಅದು ಅನ್ನವನ್ನು ಮಹದ್ದೋಷಪೂರಿತವನ್ನಾಗಿ ಮಾಡುತ್ತದೆ. ॥41॥ ತತ್ತ್ವತಃ ಇದು ಪ್ರಮುಖವಾಗಿ ಕಾಣುವುದಿಲ್ಲ. ಆದರೆ ಅವರ ನಿತ್ಯ ಜೀವನದಲ್ಲಿ ಅನುಷ್ಠಾನ ಮಾಡುವುದು ಬಹಳ ಮುಖ್ಯವಾದುದು. ಆಹಾರದ ಪರಿಮಳವನ್ನು ಆಘ್ರಾಣಿಸುವುದು ಮಾತ್ರ ಅದರ ಉಪಲಕ್ಷಣವಲ್ಲ. ಎಲ್ಲ ಪಂಚೇಂದ್ರಿಯಗಳು ಮತ್ತು ಅವುಗಳ ಸಂತೃಪ್ತಿಯೂ ಅದರಲ್ಲಿ ಸೇರಿದೆ. ॥42॥ ಯಾರು ತಮ್ಮ ಇಂದ್ರಿಯಗಳನ್ನು ಜಯಿಸದೆ ಹವ್ಯಾಸಗಳಲ್ಲಿ ಮುಳುಗಿರುತ್ತಾರೋ ಅವರು ಪರಮಾರ್ಥವನ್ನು ಸಾಧಿಸಲು ಸಾಧ್ಯವಿಲ್ಲ. ಯಾರು ಇಂದ್ರಿಯಗಳ ಮೇಲೆ ಸಂಪೂರ್ಣ ಹತೋಟಿಯುಳ್ಳವರೋ ಅವರು ಮಾತ್ರ ಪರಮಾರ್ಥವನ್ನು ಸಾಧಿಸಲು ಸಾಧ್ಯ. ॥43॥ ಶೃತಿಗಳು ಹೇಳುತ್ತವೆ. "ಯದಾ ಪಂಚಾವತಿಷ್ಠಂತೇ" ಅಂದರೆ ಪಂಚೇಂದ್ರಿಯಗಳಲ್ಲಿ,ಬುದ್ಧಿಶಕ್ತಿಯು ದೃಢವಾಗಿ ನಿಂತಾಗ ಯೋಗದ ಪರಮೋಚ್ಚಸ್ಥಿತಿಯೆಂದು ಕರೆಯುತ್ತಾರೆ. ವಿನೋದದ ಮೂಲಕ ಬಾಬಾರವರು ಆ ತತ್ತ್ವವನ್ನು ಒತ್ತುಕೊಟ್ಟು ಹೇಳಿದರು. ॥44॥ ಶಬ್ದ,

ಸ್ಪರ್ಶ, ರೂಪ, ಗಂಧ ಈ ನಾಲ್ಕು ವಿಷಯಗಳೂ ಈ ತತ್ತ್ವಕ್ಕೆ ಸಂಬಂಧಿಸಿವೆ. ಬಾಬಾರವರ ಬೋಧನೆಯು ಈ ಒಂದು ಪ್ರಸಂಗದಲ್ಲಿ ಅದೆಷ್ಟು ವಿಷಯಗಳನ್ನು ಅಳವಡಿಸಿಕೊಂಡಿದೆ! ॥45॥ ಮನಸ್ಸಿಗೆ ಮೊದಲೇ ಬುದ್ಧಿಶಕ್ತಿ ಮತ್ತು ಇಂದ್ರಿಯಗಳು ತಮ್ಮ ವಾಸನೆಗಳನ್ನು ಅನುಭವಿಸುವ ಮೊದಲು ನನ್ನನ್ನು ಮೊದಲು ನೆನೆಸಿಕೋ. ಅದರಿಂದ ನಿಧಾನವಾಗಿ ಅವುಗಳು ನನಗೆ ಸಮರ್ಪಿತವಾಗುತ್ತದೆ. ॥46॥ ಇಂದ್ರಿಯಗಳು ತಮ್ಮ ವಿಷಯಗಳಿಂದ ಹೊರತಾಗಿ ಇರಲಾಗುವುದಿಲ್ಲ. ಆದರೆ ಈ ವಿಷಯ ವಸ್ತುಗಳನ್ನು ಮೊದಲು ಗುರುವಿಗೆ ಸಮರ್ಪಿಸಿದಲ್ಲಿ ಅವುಗಳ ಮೇಲೆ ಆಸಕ್ತಿಯು ಸಹಜವಾಗಿಯೇ ಕಡಿಮೆಯಾಗುತ್ತದೆ. ॥47॥ ನೀವು ಏನನ್ನಾದರೂ ಬಯಸಿದಲ್ಲಿ ನನ್ನನ್ನೇ ಬಯಸಿರಿ. ನೀವು ಕೋಪಿಸಿಕೊಂಡಿರುವಾಗ ನಿಮ್ಮ ಕೋಪವನ್ನು ನನ್ನ ಮೇಲೆ ತೋರಿಸಿರಿ. ನಿಮ್ಮ ಅಭಿಮಾನ, ದುರಾಗ್ರಹಗಳನ್ನು ನನಗೆ ಸಮರ್ಪಿಸಿರಿ ನನ್ನ ಚರಣಗಳಲ್ಲಿ ಭಕ್ತಿ ಹರಿಸಿರಿ. ॥48॥ ಕಾಮ, ಕ್ರೋಧ, ಅಭಿಮಾನಗಳು ಬಲವಾಗಿ ಹುಟ್ಟಿದಲ್ಲಿ ನನ್ನನ್ನೇ ಲಕ್ಷ್ಯವನ್ನಾಗಿ ಮಾಡಿ ನನ್ನ ಕಡೆ ಅವುಗಳನ್ನು ತಿರುಗಿಸಿರಿ. ॥49॥ ಈ ರೀತಿಯಲ್ಲಿ ಒಂದೊಂದಾಗಿ ನಾಶಹೊಂದಲು ಭಗವಂತನು ಎಲ್ಲ ವೃತ್ತಿಗಳನ್ನೂ ನಾಶಗೊಳಿಸಲು ಸಹಾಯ ಮಾಡುತ್ತಾನೆ. ಶ್ರೀ ಗೋವಿಂದನು ನಿಜವಾಗಿಯೂ ಈ ಮೂರು ವಿಷಪೂರಿತ ಗುಣಗಳ ಪ್ರಬಲವಾದ ಅಲೆಗಳನ್ನು ಶಾಂತಗೊಳಿಸುತ್ತಾನೆ. ॥50॥ ಈ ವಿಕಾರಗೊಂಡ ಮನಸ್ಸಿನ ಸ್ಥಿತಿಯು ನನ್ನಲ್ಲಿ ಲೀನವಾಗುತ್ತದೆ. ಇಲ್ಲವೇ ನನ್ನಲ್ಲಿ ಒಂದಾಗುತ್ತದೆ. ನನ್ನ ಚರಣಗಳಲ್ಲಿ ನಿನ್ನ ಮನಃಸ್ಥಿತಿಯು ಶಾಂತವಾಗಿರುತ್ತದೆ. ॥51॥ ನೀವು ಇದನ್ನು ಅಭ್ಯಾಸ ಮಾಡಿದಲ್ಲಿ, ಮನೋವೃತ್ತಿಗಳು ತಮ್ಮಷ್ಟಕ್ಕೆ ತಾವೇ ಕ್ಷೀಣವಾಗುತ್ತವೆ. ಮತ್ತು ಕಾಲಾಂತರದಲ್ಲಿ ನಿರ್ಮೂಲವಾಗುತ್ತವೆ. ಮನಸ್ಸು ಅಂತಹ ಎಲ್ಲ ವೃತ್ತಿಗಳಿಂದಲೂ ಬಿಡುಗಡೆ ಹೊಂದುತ್ತದೆ. ॥52॥ ಗುರುವಿನ ಸನ್ನಿಧಿಯನ್ನು ನಿರಂತರ ಅನುಭವಿಸುವವನು ದೃಢಬುದ್ಧಿಯನ್ನು ಹೊಂದಿ ಇತರೆ ಯಾವುದೇ ವಿಷಯಗಳಿಂದ ಬಾಧಿಸಲ್ಪಡುವುದಿಲ್ಲ. ॥53॥ ಒಮ್ಮೆ ಇಂತಹ ಒಳ್ಳೆಯ ಹವ್ಯಾಸ ಬೇರೂರಿದಲ್ಲಿ ಭವಬಂಧನವು ಕಳಚಿ ಹೋಗುತ್ತದೆ. ಗುರುವಿನ ಸ್ವರೂಪವು ಪ್ರತಿಯೊಂದು ವಿಷಯ ವಸ್ತುವಿನಲ್ಲೂ ಪ್ರಕಟಗೊಳ್ಳುತ್ತದೆ. ಈ ರೀತಿ ವಿಷಯವಾಸನೆಯು ಗುರುವಿನ ರೂಪವನ್ನೇ ಪಡೆಯುತ್ತದೆ. ॥54॥ ವಿಷಯ ಸೇವನೆಯಲ್ಲಿ ಕಿಂಚಿತ್ ಆಶೆಯಿದ್ದರೂ ಮತ್ತು ಬಾಬಾರವರು ಹತ್ತಿರವೇ ಇದ್ದಾರೆಂದು ಭಾವಿಸಿದಲ್ಲಿ, ಆ ವಸ್ತುವು ಸೇವ್ಯವೋ ಅಸೇವ್ಯವೋ ಆ ವಿಚಾರವು ಕೂಡಲೇ ಮನಸ್ಸಿನಲ್ಲಿ ಹುಟ್ಟುತ್ತದೆ. ॥55॥ ಅಸೇವ್ಯವಾದ ವಿಷಯವಾಸನೆಯು ಸಹಜವಾಗಿಯೇ ನಾಶವಾಗುತ್ತದೆ. ಈ ರೀತಿಯಲ್ಲಿ ಭಕ್ತನಲ್ಲಿರುವ ವಿಷಪೂರಿತ ವ್ಯಸನಗಳು ಮಾಯವಾಗುತ್ತವೆ ಮತ್ತು ಅಸೇವ್ಯವಾದ ವಸ್ತುಗಳ ಕಡೆಗೆ ತಿರಸ್ಕಾರ ಬೆಳೆಯುತ್ತದೆ. ॥56॥ ಅವನು ವೇದಗಳಲ್ಲಿ ತಿಳಿಸಿರುವ ಇಂದ್ರಿಯನಿಗ್ರಹದ ನಿಯಮಗಳನ್ನು ಪಾಲಿಸಲು ಸಿದ್ಧನಾಗುತ್ತಾನೆ. ಅನಂತರ ವಿಷಯಗಳನ್ನು ನಿಯಮಾನುಸಾರ ಅನುಭವಿಸುತ್ತಾನೆ. ಅಲ್ಲಿ ಎಂದಿಗೂ ಸ್ವೇಚ್ಛಾಚಾರದ ವರ್ತನೆ ಇರುವುದಿಲ್ಲ. ॥57॥ ಅಂತಹ ಹವ್ಯಾಸ ಮನಸ್ಸಿನಲ್ಲಿ ಬೆಳೆದಾಗ,

ವಿಷಯವಾಸನೆಯ ಕಲ್ಪನೆಗಳು ಕ್ಷೀಣವಾಗುತ್ತವೆ. ಗುರುಭಜನೆಯ ಆಶೆಯು ಹುಟ್ಟುತ್ತದೆ ಮತ್ತು ಶುದ್ಧಜ್ಞಾನವು ಅಂಕುರಿಸುತ್ತದೆ. ॥58॥ ಯಾವಾಗ ಶುದ್ಧಜ್ಞಾನವು ಬೆಳೆಯುತ್ತದೆಯೋ ಆಗ ದೇಹ ಬುದ್ಧಿಗಳ ಬಂಧನವು ಕಳಚುತ್ತದೆ ಮತ್ತು ನಿನ್ನ ಬುದ್ಧಿಯು ಅಹಂಬ್ರಹ್ಮ (ತಾನೇ ಬ್ರಹ್ಮ) ಎಂಬ ತತ್ತ್ವದಲ್ಲಿ ಲೀನವಾಗಿ ಅನಂತ ಪರಬ್ರಹ್ಮನಲ್ಲಿ ಸೇರುತ್ತದೆ. ॥59॥ ದೇಹವು ಕ್ಷಣಭಂಗುರವೆಂದು ನೋಡಿದರೂ ಪರಮ ಪುರುಷಾರ್ಥ ಸಾಧಕವಾಗುತ್ತದೆ. ಅದು ಪ್ರತ್ಯಕ್ಷ ಮೋಕ್ಷಕ್ಕಿಂತಲೂ ಅಧಿಕವಾದುದು. ಏಕೆಂದರೆ ಅದು ಭಕ್ತಿಯೋಗಪ್ರದಾಯಕವಾಗಿರುತ್ತದೆ. ॥60॥ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವೆಂಬ ನಾಲ್ಕು ಪುರುಷಾರ್ಥಗಳಿಗಿಂತಲೂ ಜ್ಞಾನೋದಯವು ಐದನೆಯ ಪುರುಷಾರ್ಥ. ಅವುಗಳನ್ನು ಭಕ್ತಿಗೆ ಹೋಲಿಸಲು ಸಾಧ್ಯವಿಲ್ಲ. ಭಕ್ತಿಯ ಲಾಭಗಳು ಅಲೌಕಿಕವಾದವುಗಳು. ॥61॥ ಗುರುಸೇವೆಯಿಂದ ಕೃತಾರ್ಥನಾದವನು ಮಾತ್ರ ಈ ವಾಕ್ಯದ ಯಥಾರ್ಥವನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಬಲ್ಲನು. ಕೇವಲ ಅವನು ಮಾತ್ರವೇ ಭಕ್ತಿ, ಜ್ಞಾನ ಮತ್ತು ವೈರಾಗ್ಯಗಳ ನಿಜವಾದ ಅರ್ಥವನ್ನು ಅರಿತು ಪರಮಾರ್ಥವನ್ನು ಸಾಧಿಸಬಲ್ಲನು. ॥62॥ ಗುರುವನ್ನು ದೇವರಿಗಿಂತ ಭಿನ್ನವೆಂದು ತಿಳಿಯುವವನು, ಭಗವಂತನು ಯಾರೆಂಬುದನ್ನು ನೋಡದೆಯೇ ಸಂಪೂರ್ಣ ಭಾಗವತವನ್ನು ಓದುತ್ತಿರುವವನ ರೀತಿ ಇದ್ದಂತೆ. ॥63॥ ಒಬ್ಬನು ರಾಮಾಯಣವನ್ನು ಪೂರ್ಣವಾಗಿ ಓದಿದ್ದರೂ ಸಹ ರಾಮನಿಗೆ ಸೀತೆ ಏನಾಗಬೇಕೆಂಬುದನ್ನು ಅರ್ಥಮಾಡಿಕೊಳ್ಳದೆ ಇರುವವನಂತೆ ದ್ವೈತ ಭಾವವನ್ನು ದೂರಮಾಡಿ, ಗುರು ಮತ್ತು ಭಗವಂತ ಇಬ್ಬರೂ ಒಂದೇ ಎಂಬುದನ್ನು ದೃಢವಾಗಿ ಅರಿಯಿರಿ. ॥64॥ ನಿರ್ಮಲ ಮನಸ್ಸಿನಿಂದ ಗುರುಸೇವೆ ಮಾಡಿದಲ್ಲಿ ವಿಷಯ ವಾಸನೆಗಳು ನಿರ್ಮೂಲವಾಗುತ್ತವೆ. ಮನಸ್ಸು ಪರಿಶುದ್ಧವಾಗಿ ಉಜ್ವಲವಾಗಿ ನಿಜವಾದ ಸ್ವರೂಪ ಪ್ರಜ್ವಲಿಸುತ್ತ ಪ್ರಕಟವಾಗುತ್ತದೆ. ॥65॥ ಪ್ರಬಲವಾದ ಇಚ್ಛಾಶಕ್ತಿಯುಂಟಾಗುತ್ತದೆ. ಹುರಿಗಡಲೆಯನ್ನು ತೋರಿಸುವುದು ಬಾಬಾರವರಿಗೆ ಅತಿ ಸುಲಭವಾದ ಕೆಲಸ. ಅತ್ಯಂತ ವಿಲಕ್ಷಣ ಪವಾಡಗಳನ್ನು ಮಾಡಲು ಅವರಿಗೆ ಕಾಲದ ಮಿತಿಯೇ ಇರಲಿಲ್ಲ. ॥66॥ ಕೇವಲ ಹೊಟ್ಟೆಪಾಡಿಗಾಗಿ ಒಬ್ಬ ಐಂದ್ರಜಾಲಿಕನು ಲೌಕಿಕವಾದ ಗಾರುಡಿಯನ್ನು ತೋರಿಸುತ್ತಾನೆ. ಅವನು ನೀನು ಕೇಳಿದ್ದೆಲ್ಲವನ್ನು ತನ್ನ ಮಂತ್ರದಂಡವನ್ನು ಅಲ್ಲಾಡಿಸುತ್ತ ತರಿಸಬಲ್ಲನು. ॥67॥ ಆದರೆ ಸಾಯಿನಾಥರು ಅಲೌಕಿಕ ಗಾರುಡಿಗರು. ಅವರ ಆಟದ ಪ್ರೌಢಿಮೆಯ ಬಗ್ಗೆ ಏನು ಹೇಳಲು ಸಾಧ್ಯ? ಅವರು ಇಚ್ಛಾಮಾತ್ರದಿಂದ ಅಷ್ಟು ಕಾಳುಗಳನ್ನು ಆ ಕ್ಷಣದಲ್ಲಿಯೇ ಉಂಟುಮಾಡಿದರು. ॥68॥ ಆದರೆ, ಈ ಕಥೆಯ ನೀತಿ ಏನು? ಅದರ ಬಗ್ಗೆ ಗಮನ ಕೊಡೋಣ. "ನೀವು ಎಂದಿಗೂ ಐದು ಇಂದ್ರಿಯಗಳ ಸುಖಗಳನ್ನು ಬಾಬಾರವರ ಸ್ಮರಣೆಯಿಲ್ಲದೆ ಅನುಭವಿಸಬೇಡಿ." ॥69॥ ಮನಸ್ಸನ್ನು ಈ ರೀತಿ ತರಬೇತಿ ನೀಡಿದಮೇಲೆ ನಮಗೆ ಸದಾ ಅವನ ನೆನಪು ಬರುತ್ತಿರುತ್ತದೆ. ನಮ್ಮ ಗಮನವು ಎಲ್ಲ ಅನುಸಂಧಾನಗಳಲ್ಲೂ ಸಾಯಿಚರಣಗಳಲ್ಲಿಯೇ ಇರುತ್ತದೆ. ॥70॥ ಹೇ ಪರಿಶುದ್ಧ ಬ್ರಹ್ಮನ ಸಗುಣಮೂರ್ತಿಯೇ! ನೀವು ಸದಾ ನಮ್ಮ ಕಣ್ಣಮುಂದೆಯೇ ಇದ್ದಲ್ಲಿ ಭಕ್ತಿ,

ಮುಕ್ತಿ, ವಿರಕ್ತಿಗಳು ಹುಟ್ಟಿ ನಮಗೆ ಪರಮಪದ ಪ್ರಾಪ್ತಿಯಾಗುತ್ತದೆ. ॥71॥ ಯಾವಾಗ ಈ ನಯನಮನೋಹರ ಸ್ವರೂಪವು ಮನೋದೃಷ್ಟಿಯಲ್ಲಿ ನೆಲಸುತ್ತದೆಯೋ ಆಗ ಹಸಿವು, ಬಾಯಾರಿಕೆ, ಮತ್ತು ಸಂಸಾರದ ಅಸ್ತಿತ್ವವನ್ನು ಮರೆಯುತ್ತೇವೆ. ಐಹಿಕ ಸುಖಗಳ ಪ್ರಜ್ಞೆಯು ಮರೆಯಾಗಿ ಮನಸ್ಸು ಶಾಂತಗೊಳ್ಳುತ್ತದೆ. ॥72॥ ಯಾವುದಾದರೂ ಹಾಡನ್ನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿದರೆ ಅದು ಕೂಡಲೇ ನೆನಪಿಗೆ ಬರುವುದಿಲ್ಲ. ಆದರೆ ಬೀಸಲು ಕುಳಿತುಕೊಳ್ಳುತ್ತಲೇ ಹಾಡು ಮನಸ್ಸಿನಲ್ಲಿ ಉಕ್ಕಿ ಬರುತ್ತದೆ. ಅದೇ ರೀತಿ, ಕಾಳುಗಳ ಲೀಲೆಯನ್ನು ನಿರೂಪಿಸುತ್ತಿರುವಾಗಲೇ ನನಗೆ ಸುಧಾಮನ ಕಥೆಯು ನೆನಪಾಯಿತು. ॥73॥ ಒಮ್ಮೆ, ಬಲರಾಮ, ಕೃಷ್ಣ, ಮತ್ತು ಸುಧಾಮರು ಗುರು[1]ವಿನ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಕೃಷ್ಣ ಮತ್ತು ಬಲರಾಮರನ್ನು ಕಟ್ಟಿಗೆ ತರಲು ಕಳಿಸಲಾಗಿತ್ತು. ॥74॥ ಕೃಷ್ಣ ಮತ್ತು ಬಲರಾಮರು ಕಾಡಿಗೆ ಹೊರಟಕೂಡಲೇ ಗುರುಪತ್ನಿಯ ಆಜ್ಞಾಪನೆಯಂತೆ ಸುಧಾಮನನ್ನು ಅವರನ್ನು ಹಿಂಬಾಲಿಸಲು ಕಳುಹಿಸಲಾಯಿತು. ॥75॥ ಅವನಿಗೆ ಸ್ವಲ್ಪ ಕಾಳುಗಳನ್ನು ಕೊಟ್ಟಿದ್ದರು. ಗುರುಪತ್ನಿಯು ಅವನಿಗೆ ಆಜ್ಞಾಪಿಸಿದ್ದರು. ಕಾಡಿನಲ್ಲಿ ತಿರುಗಾಡುತ್ತಿರುವಾಗ ಹಸಿವೆಯೇನಾದರೂ ಆದಲ್ಲಿ ಮೂವರೂ ಒಟ್ಟಿಗೆ ತಿನ್ನಬೇಕೆಂದು. ॥76॥ ಅನಂತರ ಅವನು ಅರಣ್ಯದಲ್ಲಿ ಕೃಷ್ಣನನ್ನು ಭೇಟಿಯಾಗಿದ್ದನು. ಕೃಷ್ಣ ಹೇಳಿದನು, "ದಾದಾ, ನನಗೆ ಬಾಯಾರಿಕೆಯಾಗಿದೆ." ಆಗ ಕಾಳುಗಳ ಬಗ್ಗೆ ಯಾವುದೇ ಮಾಹಿತಿ ನೀಡದೆ ಅವನು ಏನು ಉತ್ತರಿಸಿದ ಎಂಬುದನ್ನು ಕೇಳಿರಿ. ॥77॥ ಸುಧಾಮನು ಹೇಳುತ್ತಾನೆ, "ಬರಿ ಹೊಟ್ಟೆಯಲ್ಲಿ ನೀರು ಕುಡಿಯಬೇಡ, ಸ್ವಲ್ಪಹೊತ್ತು ವಿಶ್ರಮಿಸಿಕೋ. ಆದರೆ ಅವನು ಕಾಳುಗಳನ್ನು ತಿನ್ನಬಹುದೆಂದು ಹೇಳಲಿಲ್ಲ. ಕೃಷ್ಣನು ಸುಧಾಮನ ತೊಡೆಯ ಮೇಲೆ ತಲೆಯಿಟ್ಟು ಮಲಗುತ್ತಾನೆ. ॥78॥ ಕೃಷ್ಣನು ನಿದ್ದೆಮಾಡಿದ್ದನ್ನು ನೋಡಿದ ಸುಧಾಮನು ಕಾಳುಗಳನ್ನು ತಿನ್ನತೊಡಗಿದನು. "ದಾದಾ ಏನು ತಿನ್ನುತ್ತಿರುವೆ? ಈ ಶಬ್ದ ಏನು?" ಎಂದು ಎಚ್ಚೆತ್ತ ಕೃಷ್ಣನು ಕೇಳಿದನು. ॥79॥ "ಅಯ್ಯೋ, ಇಲ್ಲಿ ತಿನ್ನಲು ಏನಿದೆ? ಚಳಿಯಿಂದಾಗಿ ನನ್ನ ಹಲ್ಲುಗಳು ಕಟಕಟಗೊಳ್ಳುತ್ತಿವೆ. ಅದರಿಂದಾಗಿ ವಿಷ್ಣುಸಹಸ್ರನಾಮ[2]ವನ್ನೂ ಸ್ಪಷ್ಟವಾಗಿ ಉಚ್ಚರಿಸಲು ಆಗುತ್ತಿಲ್ಲ." ॥80॥ ಸುಧಾಮನ ಈ ಉತ್ತರವನ್ನು ಕೇಳಿ, ಸರ್ವಸಾಕ್ಷಿಯಾದ ಪರಾತ್ಪರ ಕೃಷ್ಣನು ಕೇಳಿದನು. "ನಾನೂ ಸಹ ಇದೇ ರೀತಿಯ ಒಂದು ಕನಸನ್ನು ಕಂಡೆನು. ॥81॥ "ಯಾರೋ ಒಬ್ಬರು ಮತ್ತೊಬ್ಬ ವ್ಯಕ್ತಿಯ ಪಾಲಿನ ಆಹಾರವನ್ನು ತಿನ್ನುತ್ತಿದ್ದರು. ಅವನನ್ನು ಏನು ತಿನ್ನುತ್ತಿರುವೆಯೆಂದು ಪ್ರಶ್ನೆಮಾಡಿದಾಗ ಅವನು ಹೇಳುತ್ತಾನೆ, ನಾನು ಏನು ತಾನೇ ತಿನ್ನಲಿ? ಮಣ್ಣು! ಆಗ "ತಥಾಸ್ತು" ಎಂದು ಕೇಳಿಬಂತು. ॥82॥ "ಓಹ್! ದಾದಾ! ಇದೊಂದು ಕೇವಲ ಕನಸಷ್ಟೆ! ನೀನು ಎಂದಾದರೂ ನನ್ನೊಂದಿಗೆ ಹಂಚಿಕೊಳ್ಳದೆ ತಿಂದಿರುವೆಯಾ? ನಾನು ಈ ಪ್ರಶ್ನೆಯನ್ನು ನೀನು ಏನು ತಿನ್ನುತ್ತಿರುವೆಯೆಂದು ಏಕೆ ಕೇಳಿದೆನೆಂದರೆ ನಾನು ಇನ್ನೂ ಕನಸಿನಿಂದ ಪೂರ್ಣವಾಗಿ ಎಚ್ಚರವಾಗಿರಲಿಲ್ಲ." ॥83॥ ಒಂದು ವೇಳೆ ಸುದಾಮನು ಕೃಷ್ಣನ ಪೂರ್ವಾಶ್ರಮದ ಲೀಲೆಗಳನ್ನೇನಾದರೂ ಅರಿತಿದ್ದಲ್ಲಿ ಈ ರೀತಿಯ ತಪ್ಪನ್ನು

ಮಾಡುತ್ತಿರಲಿಲ್ಲ. ಮತ್ತು ಅದರ ಪರಿಣಾಮವನ್ನು ಅನುಭವಿಸುತ್ತಿರಲಿಲ್ಲ. ॥84॥ ಅದಲ್ಲದೆ ಅದೇನೂ ಸಾಧಾರಣವಾದ ಅನುಭವವಾಗಿರಲಿಲ್ಲ. ಏಕೆಂದರೆ ಅವನು ವಿಶ್ವದಲ್ಲೇ ದಟ್ಟ ದಾರಿದ್ರ್ಯವನ್ನು ಅನುಭವಿಸಬೇಕಾಯಿತು. ಆದುದರಿಂದ ಯಾರು ತಾವೊಬ್ಬರೇತಿನ್ನುತ್ತಾರೋ ಅವರು ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.! ॥85॥ ಸುಧಾಮನಂತಹ ಭಕ್ತನೂ ಕೃಷ್ಣ ಪರಮಾತ್ಮನ ಮಿತ್ರನಾಗಿಯೂ ಸಹ ಸತ್ಕರ್ಮಗಳ ಫಲ ನಿಯಮಾನುಸಾರ ವರ್ತಿಸದೇ ಇದ್ದಾಗ ಅದರ ಪರಿಣಾಮವನ್ನು ಅನುಭವಿಸಲೇಬೇಕಾಯಿತು. ॥86॥ ಅನಂತರ, ಅವನು ತನ್ನ ಪತ್ನಿಯು ಕಷ್ಟದಿಂದ ಸಂಪಾದಿಸಿದ ಒಂದು ಮುಷ್ಠಿ ಅವಲಕ್ಕಿಯನ್ನು ಪ್ರೇಮದಿಂದ ಅರ್ಪಿಸಿದಾಗ ಕೃಷ್ಣನು ಪ್ರಸನ್ನಚಿತ್ತನಾಗಿ ಸಕಲ ಐಶ್ವರ್ಯಗಳನ್ನು ದಯಪಾಲಿಸಿದನು. ॥87॥ ಅದು ಹಾಗಿರಲಿ. ಈಗ ಮತ್ತೊಂದು ಬೋಧಪ್ರದವಾದ ಕಥೆಯನ್ನು ತಿಳಿಸುವೆನು. ಮೊದಲು ಆನಂದದಾಯಕವಾಗಿ ವಿನೋದ ಸುಖವನ್ನಿತ್ತರೂ ಕೊನೆಯಲ್ಲಿ ಪ್ರಮುಖವಾದ ಬೋಧನೆಯಿಂದ ತುಂಬಿದೆ. ॥88॥ ಕೆಲವರು ಪರಮಾರ್ಥ ಬೋಧನೆಯನ್ನು ಆನಂದದಿಂದ ಅನುಭವಿಸುತ್ತಾರೆ. ಕೆಲವರು ತರ್ಕಯುಕ್ತವಾದ ವಾದವನ್ನು ಅಭಿನಂದಿಸುತ್ತಾರೆ. ಮತ್ತೆ ಕೆಲವರು ಅಲ್ಲಿಯ ವಿನೋದ ಮತ್ತು ಚತುರತೆಯನ್ನು ಮೆಚ್ಚುತ್ತಾರೆ. ಹಾಗೆ ಎಲ್ಲರೂ ಆನಂದಿತರಾಗುತ್ತಾರೆ. ॥89॥ ಇದರಲ್ಲಿಯೂ ಒಂದು ಹಾಸ್ಯವಿದೆ. ಒಬ್ಬ ಮಹಾಶಯನು ಮತ್ತು ಒಬ್ಬ ಮಹಿಳೆಯು ಬಾವೋದ್ರೇಕದಿಂದ ಸಾಯಿಯ ದರ್ಬಾರಿನಲ್ಲಿ ಜಗಳವಾಡಲು ಪ್ರಾರಂಭಿಸಿದರು. ಅದನ್ನು ಯಾರಿಗೂ ಅವಮಾನವಾಗದ ರೀತಿಯಲ್ಲಿ ಪರಿಹರಿಸಲಾಯಿತು. ॥90॥ ಇದೂ ಸಹ ಒಂದು ಪರಮ ರಸಭರಿತ ಕಥೆಯೇ. ಶ್ರೋತೃಗಳು ಅತ್ಯಂತ ಆನಂದ ಅನುಭವಿಸುತ್ತಾರೆ. ಯಾವಾಗ ಭಕ್ತರು ತಮ್ಮಲ್ಲೇ ಜಗಳವಾಡುತ್ತಾರೋ ಆಗ ನಗೆ ಉಕ್ಕುತ್ತದೆ. ॥91॥ ದಾಮೋದರ ಘನಶ್ಯಾಮ ಎಂಬ ಭಕ್ತನೊಬ್ಬನು ಬಾಬರೆ ಎಂಬ ಉಪನಾಮವುಳ್ಳವನು, ಅಣ್ಣಾ ಚಿಂಚಣೀಕರ ಎಂಬ ಅಡ್ಡ ಹೆಸರಿನವನು ಬಾಬಾರವರಲ್ಲಿ ನಿಸ್ಸೀಮ ಪ್ರೇಮ ಉಳ್ಳವನಾಗಿದ್ದನು. ॥92॥ ಸ್ವಭಾವದಲ್ಲಿ ಅವನು ಬಿಚ್ಚು ಮನಸ್ಸಿನವನು. ಎಂದಿಗೂ ಯಾರಿಗೂ ಲಕ್ಷ್ಯ ಕೊಡುತ್ತಿರಲಿಲ್ಲ. ಸರಿಯೇ ಆಗಲಿ ತಪ್ಪೇ ಆಗಲಿ ಖಂಡಿತವಾಗಿ ನೇರವಾಗಿ ಮಾತನಾಡುತ್ತಿದ್ದನು. ಅದರ ಪರಿಣಾಮಗಳ ಬಗ್ಗೆ ಎಂದಿಗೂ ಚಿಂತಿಸುತ್ತಿರಲಿಲ್ಲ. ॥93॥ ಅವನು ಅದೆಷ್ಟು ಸಾತ್ವಿಕನಾಗಿಯೂ, ದೈವಭೀತಿ ಉಳ್ಳವನೂ ಆಗಿದ್ದನೋ, ಅಷ್ಟೇ ಕಠಿಣವಾಗಿಯೂ ಗಡಸು ಪ್ರವೃತ್ತಿಯವನೂ ಆಗಿದ್ದನು. ಅವನ ತಲೆಯು ಬಂದೂಕಿನ ಮದ್ದಿನ ಪುಡಿಯಂತಿದ್ದು ಒಂದು ಸಣ್ಣದಾದ ಬೆಂಕಿಯ ಕಿಡಿ ಅದನ್ನು ಸುಡಬಹುದಿತ್ತು. ॥94॥ ಅವನ ಕಾರ್ಯಗಳು ಎಲ್ಲವೂ ಚುರುಕಾಗಿಯೂ ನಿರ್ಭೀತಿಯಿಂದ ಕೂಡಿರುತ್ತಿದ್ದವು. ಅವನ ವ್ಯವಹಾರಗಳೆಲ್ಲವೂ ಗಟ್ಟಿ ನಗದಾಗಿರುತ್ತಿತ್ತು. ಅವನು ಯಾವುದನ್ನೂ ಮುಂದೂಡುತ್ತಿರಲಿಲ್ಲ. ಅವನ ವ್ಯವಹಾರಗಳೆಲ್ಲವೂ ಮುಚ್ಚು ಮರೆಯಿಲ್ಲದವಾಗಿದ್ದವು. ॥95॥ ಉರಿಯುತ್ತಿರುವ ಕೆಂಡವನ್ನು ಅಂಗೈಯಲ್ಲಿ ಹಿಡಿದುಕೊಳ್ಳಬಹುದು. ಆದರೆ ಅಣ್ಣಾನ ಕ್ರೋಧವು ಅದಕ್ಕಿಂತ ವಿಪರೀತವಾಗಿತ್ತು. ಆದರೆ ಅವನು ಯಾವುದೇ ಕಪಟವಿಲ್ಲದೆ

ಇದ್ದುದರಿಂದ ಬಾಬಾರವರು ಅವನನ್ನು ಪ್ರೀತಿಸುತ್ತಿದ್ದರು. ॥96॥ ಈ ರೀತಿ, ಒಂದು ಅಪರಾಹ್ನ ಮಸೀದಿಯಲ್ಲಿ ದರ್ಬಾರವು ಜನರಿಂದ ತುಂಬಿತ್ತು. ಬಾಬಾರವರು ತಮ್ಮ ಎಡಗೈಯನ್ನು ಕಟಕಟೆಯ ಮೇಲಿಟ್ಟು ಕುಳಿತಿದ್ದರು. ॥97॥ ಬಾಬಾರವರು ಯಾವುದರಲ್ಲೂ ಭಾಗಿಯಾಗದೆ ತಟಸ್ಥರಾಗಿದ್ದರು. ಆದರೆ ನಮ್ಮ ಅರಿವಿಗೆ ಬರದಂತೆಯೇ ಅವರು ಭಕ್ತರಲ್ಲಿ ಜಗಳ ಉಂಟುಮಾಡುತ್ತಿದ್ದರು ಮತ್ತು ಅವರು ಕೋಪಗೊಂಡಾಗ ಅಥವಾ ಮನ ನೋಯಿಸಿಕೊಂಡಾಗ ಕೊನೆಯಲ್ಲಿ ಇಬ್ಬರನ್ನೂ ಸಮಾಧಾನ ಪಡಿಸುತ್ತಿದ್ದರು. ॥98॥ ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಅವರ ಸೇವೆ ಮಾಡುತ್ತಿದ್ದರು. ಕೆಲವರು ಅವರ ಸೊಂಟವನ್ನು ಒತ್ತುತ್ತಿದ್ದರು. ಕೆಲವರು ಪಾದಗಳನ್ನು ಒತ್ತುತ್ತಿದ್ದರು. ಕೆಲವು ಅವರ ಬೆನ್ನು ಮತ್ತು ಹೊಟ್ಟೆಯನ್ನು ಒತ್ತುತ್ತಿದ್ದರು. ॥99॥ ಬಾಬಾರವರು ಬಾಲಬ್ರಹ್ಮಚಾರಿಯಾಗಿದ್ದರು. ಅವರು ಪರಿಶುದ್ಧವಾದ ಮನಸ್ಸುಳ್ಳ ಹಾಗೂ ವರ್ತನೆಯುಳ್ಳವರೂ ಆಗಿದ್ದರು. ಹಾಗಾಗಿ ನರನಾರಿ ಸಮಸ್ತರಿಗೂ ಅವರ ಸೇವೆ ಮಾಡಲು ಅವಕಾಶ ನೀಡಿದ್ದರು. ॥100॥ ಅಣ್ಣಾನು ಕಟಕಟೆಯ ಹೊರಗಡೆ ನಿಂತಿದ್ದನು. ಮತ್ತು ಬಾಬಾರವರ ಎಡಗೈಯನ್ನು ಮೃದುವಾಗಿ ಒತ್ತುತ್ತಿದ್ದನು. ಸ್ವಲ್ಪ ಮುಂದಕ್ಕೆ ಬಾಗಿದ್ದನು. ಈಗ ಕೇಳಿರಿ, ಬಾಬಾರವರಬಲಭಾಗದಲ್ಲಿ ಏನು ನಡೆಯುತ್ತಿತ್ತು ಎಂಬುದನ್ನು ಸ್ವಸ್ಥ ಮನಸ್ಸಿನಿಂದ ಕೇಳಿರಿ. ॥101॥ ಅಲ್ಲಿ ಒಬ್ಬ ಮಹಿಳೆಯಿದ್ದಳು. ಆಕೆಯು ಬಾಬಾರವರ ಅನನ್ಯ ಭಕ್ತಳಾಗಿದ್ದಳು. ಬಾಬಾರವರು ಆಕೆಯನ್ನು ಆಯಿ (ಅಮ್ಮ) ಎಂದೂ ಇತರ ಜನರು ಆಕೆಯನ್ನು ಮೌಶಿ (ಚಿಕ್ಕಮ್ಮ) ಎಂದೂ ಕರೆಯುತ್ತಿದ್ದರು. ॥102॥ ಎಲ್ಲರೂ ಆಕೆಯನ್ನು 'ಮಾಂವ್‌ಶೀಬಾಯಿ' ಎಂದು ಕರೆಯುತ್ತಿದ್ದರು. ಆಕೆಯ ನಿಜವಾದ ಹೆಸರು ವೇಣೂಬಾಯಿ ಮತ್ತು ಆಕೆಯ ಅಡ್ಡ ಹೆಸರು ಕೌಜಲಗಿ ಎಂದಿತ್ತು. ಸಾಯಿಚರಣಗಳಲ್ಲಿ ಅವಳ ಭಕ್ತಿಭಾವ ಅನುಪಮವಾಗಿತ್ತು. ॥103॥ ಅಣ್ಣಾರವರು ಐವತ್ತು ದಾಟಿದ್ದರು. ಅವರಿಗೆ ಹಲ್ಲುಗಳು ಪೂರ್ಣವಾಗಿರಲಿಲ್ಲ. ಈ ಮಾಂವ್‌ಶೀಬಾಯಿಯು ಪ್ರೌಢಳೂ, ವಯಸ್ಕಳೂ ಆಗಿದ್ದಳು. ಆಗ ಅವರಿಬ್ಬರ ಮಧ್ಯೆ ಜಗಳ ಶುರುವಾಯಿತು. ॥104॥ ಅಣ್ಣಾ ಮತ್ತು ಅವನ ಪತ್ನಿ ಇಬ್ಬರೂ ಬಾಬಾರವರ ಸೇವೆ ಮಾಡುತ್ತಿದ್ದರು. ಆಯಿಯು ವಿಧವೆಯಾಗಿದ್ದಳು. ಬಾಬಾರವರ ಹೊಟ್ಟೆ ಮತ್ತುಪಕ್ಕೆಗಳನ್ನು ಒತ್ತುತ್ತಿರುವಾಗ ಆಕೆ ಉಸಿರಾಡಲು ಕಷ್ಟ ಪಡುತ್ತಿದ್ದಳು. ॥105॥ ಮಾಂವ್‌ಶೀಬಾಯಿಯು ನಿರ್ಮಲ ಮನಸ್ಸಿನವಳಾಗಿ ಶ್ರೀಸಾಯಿಯ ಸೇವೆಯನ್ನು ಬಲಹಾಕಿ ಮಾಡುತ್ತಿದ್ದಳು. ಅವಳು ತನ್ನ ಎರಡೂ ಕೈಗಳನ್ನು ಕೊಕ್ಕೆ ಹಾಕಿಟ್ಟುಕೊಂಡು ಬಾಬಾರವರ ಹೊಟ್ಟೆಯನ್ನು ಒತ್ತುತ್ತಿದ್ದಳು. ॥106॥ ಬಾಬಾರವರನ್ನು ತನ್ನ ಎರಡೂ ಕೈಗಳಲ್ಲಿ ಹಿಡಿದುಕೊಂಡು ಬೆನ್ನಿನಿಂದ ಹೊಟ್ಟೆಯ ಮುಂಭಾಗದವರೆಗೆ, ಧೋತಿ ಕಟ್ಟುವ ಜಾಗದವರೆಗೆ ಒತ್ತಿ ಮತ್ತು ಹಿಂದಕ್ಕೆಳೆದು ಮುಂದಕ್ಕೆ ತಳ್ಳುತ್ತಿದ್ದಳು. ಅದು ಅವಳು ಮಜ್ಜಿಗೆಯನ್ನು ಕಡೆಯುತ್ತಿರುವಂತೆ ಇತ್ತು. ॥107॥ ಸಾಯಿಯ ನಾಮ ಸ್ಮರಣೆ ಮಾಡುತ್ತಾ ಮಾಂವ್‌ಶೀಬಾಯಿಯು ನಿರ್ಭಯಳಾಗಿ ಬಾಬಾರವರಿಗೆ ಮಸಾಜ್ ಮಾಡುತ್ತಿದ್ದಳು. ಬಾಬಾರವರು ಒಂದು ಮಾತನ್ನೂ ಆಡುತ್ತಿರಲಿಲ್ಲ. ಮತ್ತು ಅವರು ಶಾಂತವಾಗಿ, ಮೈ

ಸಡಿಲಗೊಳಿಸಿ ಆರಾಮದಿಂದ ಇದ್ದರು. ॥108॥ ಅವಳು ತಿಕ್ಕುವ ರೀತಿ ವಿಲಕ್ಷಣವಾಗಿತ್ತು. ಅವಳು ಹೊಟ್ಟೆಯನ್ನು ಪಟಪಟನೆ ಒತ್ತಿ ಬೆನ್ನನ್ನು ಮುಟ್ಟುವಂತೆ ಮಾಡುತ್ತಿದ್ದಳು ಆದರೆ ಅವಳ ಪ್ರೀತಿಯು ಬಾಬಾರವರಲ್ಲಿ ಕರುಣೆಯನ್ನು ಹುಟ್ಟಿಸುತ್ತಿತ್ತು. ॥109॥ ಸಾಯಿಯಲ್ಲಿ ಇಟ್ಟಿದ್ದ ಅವಳ ನಿಷ್ಕಪಟ ಪ್ರೀತಿಯು ಪರಸ್ಪರ ಉತ್ತಮ ಸೇವೆಯಲ್ಲಿ ಪರಿಣಮಿಸಿತು. ಏಕೆಂದರೆ ಬಾಬಾರವರು ಅವಿರತ ಸ್ಮರಣೆ [illegible]ಂತಹ ಭಕ್ತರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ॥110॥ ಸಂತರ ಸಂಗ ಲಭಿಸುವುದು ನಾವು ಮಾಡಿರುವ ಅದೆಷ್ಟು ತಪಶ್ಚರ್ಯೆಯ ಫಲವೋ ಏನೋ. ಆದರೆ ಸಾಯಿಯು ನಿಶ್ಚಿತವಾಗಿಯೂ ದೀನವತ್ಸಲರಾಗಿದ್ದರು ಮತ್ತು ತಮ್ಮ ಭಕ್ತರನ್ನು ಎಂದಿಗೂ ಉಪೇಕ್ಷಿಸುತ್ತಿರಲಿಲ್ಲ. ॥111॥ ಈ ಹಸ್ತ ತಾಡನದಲ್ಲಿ ಅದೆಂತಹ ಕುಶಲ ಕಲೆ! ಅದಕ್ಕೆ ತಕ್ಕಂತೆ ಬಾಬಾರವರ ಹೊಟ್ಟೆ ಬೆನ್ನು ಮೇಲಕ್ಕೆ ಕೆಳಕ್ಕೆ ಚಲಿಸುತ್ತಿರುವಂತೆ ಇತ್ತು. ಆಕೆಯೂ ಅದೇ ರೀತಿ ನೀವುತ್ತಿದ್ದಳು. ಅದೊಂದು ವಿಶಿಷ್ಟ ಸೇವೆಯಾಗಿತ್ತು. ॥112॥ ಅಣ್ಣಾರವರು ಸ್ವಲ್ಪ ಮುಂದೆ ಬಾಗಿದ್ದರೂ ಸ್ಥಿರವಾಗಿದ್ದರು. ಆ ಮಹಿಳೆಯು ತನ್ನ ಸೇವೆಯಲ್ಲಿ ಮಗ್ನಳಾಗಿದ್ದಳೆಂದರೆ, ಅವಳ ಮುಖವೂ ಮೇಲೆ ಕೆಳಗೆ ಅವಳು ತಿಕ್ಕುವಿಕೆಯ ಜೊತೆ ಚಲಿಸುತ್ತಿತ್ತು. ಆಗ ಏನಾಯಿತೆಂದು ನೋಡಿರಿ. ॥113॥ ಸಾಯಿಯ ಸೇವೆಯ ಸುಖದಲ್ಲಿ, ಅವಳು ಹೊಟ್ಟೆಯನ್ನು ತಿಕ್ಕುತ್ತಾ ತಲೆಯನ್ನು ತೂಗುತ್ತಿರುವಾಗ ಅವಳ ಮುಖ ಅಣ್ಣಾನ ಮುಖದ ಹತ್ತಿರ ಬಂದಿತ್ತು. ॥114॥ ಈ ರೀತಿಯ ಅವಕಾಶವನ್ನು ನೋಡಿ ಮಾಂವ್‌ಶೀಬಾಯಿಯು ಒಬ್ಬ ರಸಿಕ ಪ್ರವೃತ್ತಿಯವಳಾಗಿದ್ದವಳು ಹಾಸ್ಯ ಮಾಡಿದಳು. "ಏನು ಅಣ್ಣಾ, ನೀನು ಅಯೋಗ್ಯ! ನೀನು ನನ್ನಿಂದ ಮುತ್ತು ಕೇಳುತ್ತಿರುವೆಯಾ? ॥115॥ "ನಿನ್ನ ಬಿಳಿಗೂದಲಿಗೆ ಏನೂ ಪರಿಗಣನೆ ಇಲ್ಲವೇ? ನೀನು ನನಗೆ ಅದು ಹೇಗೆ ಮುತ್ತಿಕ್ಕುವೆಯೋ, ನಾನು ನೋಡುವೆ!" ಮಾಂವ್‌ಶೀಬಾಯಿಯು ಹೀಗೆ ಹೇಳಿದ ಕೂಡಲೇ ಅಣ್ಣಾ ತನ್ನ ತೋಳುಗಳನ್ನು ಮಡಚಿಕೊಂಡನು. ॥116॥ ಅವನು ಹೇಳಿದನು. "ನಾನೇನು ಅಷ್ಟು ಗತಿಗೆಟ್ಟವನೇ? ನಾನೇನು ಅಷ್ಟು ಮೂರ್ಖನೋ ಅಥವಾ ಪೂರ್ಣ ಹುಚ್ಚನೋ! ನೀನೇ ನಿನ್ನ ಮುಖವನ್ನು ನನ್ನ ಮುಖದ ಹತ್ತಿರ ತಂದು ನನ್ನ ಜೊತೆ ಜಗಳ ತೆಗೆಯಲು ಸಿದ್ಧಳಾಗಿರುವೆ!" ॥117॥ ಜಗಳ ಪ್ರಾರಂಭವಾಗುತ್ತಿರುವುದನ್ನು ಗ್ರಹಿಸಿದ ಬಾಬಾರವರು, ಇಬ್ಬರ ಮೇಲೂ ಪ್ರೀತಿ ಇದ್ದವರು, ಇಬ್ಬರನ್ನೂ ಸಾಂತ್ವನ ಗೊಳಿಸಲು ಒಂದು ಚತುರೋಪಾಯವನ್ನು ಮಾಡಿದರು. ॥118॥ ಪ್ರೀತಿಯಿಂದ ಅವರು ಹೇಳಿದರು, "ಓಹ್ ಅಣ್ಣಾ, ನೀನೇಕೆ ಅನವಶ್ಯಕವಾಗಿ ಈ ರೀತಿ ಗುಲ್ಲೆಬ್ಬಿಸುತ್ತಿರುವೆ? ತಾಯಿಯನ್ನು ಮುತ್ತಿಟ್ಟಾಗ ಅದು ಹೇಗೆ ಅನುಚಿತವಾದ ವರ್ತನೆಯಾಗುತ್ತದೆಯೋ ನನಗಂತೂ ಗೊತ್ತಿಲ್ಲ!" ॥119॥ ಇದನ್ನು ಕೇಳಿ ಇಬ್ಬರೂ ನಾಚಿಕೊಂಡರು. ಅವರ ಪ್ರೇಮಪೂರಿತ ವಿನೋದವಾಣಿಯು ಆ ಸಂಧಿಗ್ಧ ಪರಿಸ್ಥಿತಿಯಲ್ಲಿ ನಿಂತವು. ಎಲ್ಲ ಕಡೆ ನಗೆ ಉಕ್ಕಿತು. ಪ್ರತಿಯೊಬ್ಬರೂ ಹಾಸ್ಯವನ್ನು ಇಷ್ಟಪಟ್ಟರು. ॥120॥ ಹೊರಗೆ ನೋಡಲು ಇದೊಂದು ಚಿಕ್ಕ ಕಥೆಯಾಗಿದೆ. ಆದರೆ ಗ್ರಹಿಸಬಲ್ಲ ಶ್ರೋತೃಗಳು ಇದರ ಸ್ವಾರಸ್ಯವನ್ನು ಅರಿಯುತ್ತಾರೆ. ಅವರು ಈ ಕಥೆಯಲ್ಲಿ

ಆಗಬಹುದಾದ ತೊಂದರೆಯನ್ನು ಯಾವ ರೀತಿ ತಡೆಯಬಹುದೆಂದು ಸ್ಪಷ್ಟವಾಗಿ ಕಾಣುತ್ತಾರೆ. ॥121॥ ತಾಯಿ ಮತ್ತು ಮಗನ ನಡುವೆ ಪ್ರೀತಿ ಇರುವ ರೀತಿಯಲ್ಲಿ, ಅದೇ ರೀತಿಯ ಪ್ರೀತಿಯೂ ಅವರಿಬ್ಬರ ಮಧ್ಯೆಯೂ ಇದ್ದಲ್ಲಿ, ಈ ರೀತಿಯ ಪರಿಸ್ಥಿತಿಯು ಉದ್ಭವಿಸುತ್ತಿರಲ್ಲಿಲ್ಲ ಮತ್ತು ಕೋಪದ ಪ್ರಶ್ನೆಯೇ ಇರುತ್ತಿರಲಿಲ್ಲ. ॥122॥ ಒಬ್ಬನನ್ನು ಚಾವಟಿಯಿಂದ ಹೊಡೆದಾಗ ನಗೆ ಉಕ್ಕಿ ಬರುತ್ತದೆ. ಹಾಗೊಬ್ಬನ ಮೇಲೆ ಹೂಮಳೆಗರೆದಾಗ ಅಳಬೇಕೆನಿಸುತ್ತದೆ. ಪ್ರತಿಕ್ರಿಯೆಯ ಅಲೆಗಳು ಕಲ್ಪನೆ ಮತ್ತು ಗ್ರಹಣಶಕ್ತಿಗಳ ಮೇಲೆ ಅವಲಂಬಿತವಾಗಿರುತ್ತವೆ. ಯಾರಿಗೆ ತಾನೇ ಇಂತಹ ಅನುಭವವಾಗಿಲ್ಲ? ॥123॥ ಬಾಬಾರವರ ಸಹಜ ಸ್ವಭಾವದಲ್ಲಿ ನವೀನತೆಯು ಇರುತ್ತದೆ. ಅವರು ಸಂದರ್ಭಕ್ಕೆ ಸರಿಯಾದ ನುಡಿಗಳನ್ನು ಆರಿಸಿಕೊಳ್ಳುತ್ತಿದ್ದರು. ಅವು ಶ್ರೋತೃಗಳನ್ನೂ ಕೂಡಲೇ ಸಂತೈಸುವಂತೆಯೂ ಬೋಧಪ್ರದವಾಗಿಯೂ ಇರುತ್ತಿದ್ದವು. ॥124॥ ಇದೇ ರೀತಿಯಲ್ಲಿ ಒಮ್ಮೆ ಮಾಂವ್‌ಶೀಬಾಯಿಯು ಬಾಬಾರವರ ಹೊಟ್ಟೆಯನ್ನು ಜೋರಾಗಿ ತಿಕ್ಕುತ್ತಿರುವಾಗ ಬಾಬಾರವರ ಪರಮ ಭಕ್ತನೊಬ್ಬನಿಗೆ ಅತ್ಯಂತ ಕಳಕಳಿಯೂ ಚಿಂತೆಯೂ ಉಂಟಾಯಿತು. ॥125॥ ಅವನು ಹೇಳಿದನು, "ಬಾಯಿ, ದಯೆತೋರು. ದೇಹವನ್ನು ಒತ್ತುವ ರೀತಿ ಇದೇ ಏನು? ಅಂತರಂಗದಲ್ಲಿ ಸ್ವಲ್ಪ ಕರುಣೆ ತುಂಬಿಕೋ. ಬಾಬಾರವರ ಮೂಳೆಗಳು ಮುರಿಯುತ್ತವೆ". ॥126॥ ಈ ಮಾತುಗಳು ಬಾಬಾರವರ ಕಿವಿಗೆ ಬೀಳುತ್ತಲೇ ಅವರು ತಮ್ಮ ಆಸನದಿಂದ ಎದ್ದು ನಿಂತರು. ತಮ್ಮ ಸಟಕಾವನ್ನು ಕೈಯಲ್ಲಿ ಹಿಡಿದು ಭೂಮಿಯ ಮೇಲೆ ಪ್ರಹಾರ ಮಾಡಿದರು. ॥127॥ ಅವರು ಅತ್ಯಂತ ಕುಪಿತರಾದರು. ಯಾರಿಗೂ ಅವರ ಮುಂದೆ ನಿಲ್ಲಲು ಧೈರ್ಯವಾಗಲಿಲ್ಲ. ಅವರ ಕಣ್ಣುಗಳು ಬೆಂಕಿಯ ಉಂಡೆಗಳಂತೆ ತಿರುಗುತ್ತಾ ಅತೀ ತೀಕ್ಷ್ಣವಾದ ಉಗ್ರ ದೃಷ್ಟಿ ಬೀರುತ್ತಿದ್ದವು. ॥128॥ ಕತ್ತಲೆಯಲ್ಲಿ ಬೆಕ್ಕಿನ ಕಣ್ಣುಗಳು ಹೊಳೆಯುವಂತೆ ಅವರ ಕಣ್ಣುಗಳು ಹಗಲಿನಲ್ಲಿಯೇ ಮಿನುಗುತ್ತಿದ್ದವು. ಕಣ್ಣುಗಳಿಂದ ಹೊರಬಂದ ಬೆಂಕಿಯ ಜ್ವಾಲೆ ಕೂಡಲೇ ವಿಶ್ವವನ್ನೇ ಸುಡುವಂತೆ ಕಾಣುತ್ತಿತ್ತು. ॥129॥ ಅವರು ಸಟಕಾದ ಒಂದು ತುದಿಯನ್ನು ತಮ್ಮ ಎರಡೂ ಕೈಗಳಿಂದ ಹಿಡಿದುಕೊಂಡು ತಮ್ಮ ಕಿಬ್ಬೊಟ್ಟೆಯಲ್ಲಿ ಜೋರಾಗಿ ಒತ್ತಿದ್ದರು. ಮತ್ತೊಂದು ತುದಿಯನ್ನು ಅವರು ಮುಂದೆ ಇದ್ದ ಕಂಬಕ್ಕೆ ಒತ್ತಿ ಹಿಡಿದು ಬಿಗಿಯಾಗಿ ಕಂಬವನ್ನು ಅಪ್ಪಿ ಹಿಡಿದರು. ॥130॥ ಎರಡು ಅಥವಾ ಮೂರು ಅಡಿ ಉದ್ದವಿದ್ದ ಸಟಕವೂ ಹೊಟ್ಟೆಯೊಳಗೆ ಪೂರ್ತಿಯಾಗಿ ಹೋಗಿರುವಂತೆ ಕಂಡಿತು. ಮತ್ತು ಯಾವುದೇ ಕ್ಷಣದಲ್ಲಿ ಹೊಟ್ಟೆಯು ಛಿದ್ರವಾಗಿ ಬಾಬಾರವರ ಜೀವವು ಅಂತ್ಯವಾಗಬಹುದೆಂದು ಎಲ್ಲರೂ ಹೆದರಿದರು. ॥131॥ ಬಾಬಾರವರು ಕಂಬದ ಹತ್ತಿರ ಹತ್ತಿರ ಹೋಗಲು ಪ್ರಾರಂಭಿಸಿದರು. ಕಂಬವೂ ಸ್ಥಿರವಾಗಿಯೂ ಅಚಲವಾಗಿಯೂ ಇತ್ತು, ಬಾಬಾರವರು ತಮ್ಮ ಹೊಟ್ಟೆಯನ್ನು ಅಲ್ಲಿಗೆ ಜೋರಾಗಿ ಒತ್ತಿದರು. ಎಲ್ಲ ಪ್ರೇಕ್ಷಕರು ಭಯದಿಂದ ತತ್ತರಿಸಿದರು. ॥132॥ ಇನ್ನೇನು ಹೊಟ್ಟೆಯು ಛಿದ್ರವಾಗುತ್ತದೆಂದು ಅವರು ಯೋಚಿಸುತ್ತ ತಮ್ಮ ಕೈಬೆರಳುಗಳನ್ನು ಕಚ್ಚುತ್ತಾ ನಿಂತರು. "ಓಹ್! ದೇವರೇ! ಇದೆಂತಹ ದುರ್ಧರವಾದ ಪ್ರಸಂಗ! ನಮ್ಮನ್ನು ಅತಿಯಾದ

ವಿನಾಶಕ್ಕೆ ಎಳೆದೊಯ್ಯುತ್ತದೆ!" ॥133॥ ಈ ರೀತಿ ಜನರು ಚಿಂತಿತರಾದರು. ಇಂತಹ ಸಂಕಟದಲ್ಲಿ ಏನು ಮಾಡಬಹುದು? ಈ ಮಾಂವ್‌ಶೀಬಾಯಿಗಾಗಿಯೇ ಈ ಎಲ್ಲಾ ವೇದನೆಗಳು! ಇದು ಒಬ್ಬ ಭಕ್ತಳಿಗಾಗಿ ಅನುಭವಿಸಿದ ಸತ್ವಪರೀಕ್ಷೆ. ॥134॥ ಎಂದಾದರೂ ಯಾರಾದರೂ ಬಾಬಾರವರ ಸೇವೆ ಮಾಡುತ್ತಿರುವಾಗ ಬೇರೆ ಯಾರಾದರೂ ಅಸಹ್ಯ ಭಾವವನ್ನು ತೋರಿಸಿದರೂ ಅಥವಾ ಮಧ್ಯದ್ಲಯಿನಾದರೂ ತಿದ್ದುಪಡಿಯನ್ನು ಪ್ರಕಟಿಸಿದರೂ ಅಥವಾ ಸೇವೆ ಮಾಡುತ್ತಿರುವ ವ್ಯಕ್ತಿಗೆ ಏನಾದರೂ ಅಭಿಪ್ರಾಯ ತಿಳಿಸಿದರೂ ಬಾಬಾರವರು ಅದನ್ನು ಇಷ್ಟಪಡುತ್ತಿರಲಿಲ್ಲ. ॥135॥ ಒಬ್ಬ ಪ್ರೀತಿಯ ಭಕ್ತನು ಮಾಂವ್‌ಶೀಬಾಯಿಗೆ ನೀಡಿದ ಕೇವಲ ಒಂದು ಸಲಹೆಯ ಉದ್ದೇಶ ಬಾಬಾರವರಿಗೆ ಕಷ್ಟವಾಗಬಾರದು ಎನ್ನುವುದಾಗಿತ್ತು. ಇದರ ಪರಿಣಾಮ ಹೀಗೇಕೆ? ॥136॥ ಅದು ಹಾಗಿರಲಿ. ದೇವನು ಕರುಣೆಯಿಂದ ತುಂಬಿದ್ದನು. ಸಾಯಿಯ ಮನಸ್ಸಿನಲ್ಲಿ ಶಾಂತಿಯು ಹುಟ್ಟಿತು. ಅವರು ತಮ್ಮ ಆಸನಕ್ಕೆ ಹಿಂತಿರುಗಿದರು. ಪ್ರತಿಯೊಬ್ಬರ ಭಯ ದೂರವಾಯಿತು. ॥137॥ ಬಾಬಾರವರ ಪ್ರೀತಿಯ ಭಕ್ತರು ನಿರ್ಭೀತನಾಗಿದ್ದರೂ ಬಾಬಾರವರ ಗಡಸು ಸ್ವಭಾವ ನೋಡಿ, ಇಂತಹ ತಪ್ಪನ್ನು ಭವಿಷ್ಯದಲ್ಲಿ ಮತ್ತೆಂದೂ ಮಾಡುವುದಿಲ್ಲವೆಂದು ಪ್ರಮಾಣಮಾಡಿದರು. ॥138॥ ಅಂದಿನಿಂದಾಚೆಗೆ, ಅವನು ಮತ್ತೊಬ್ಬರ ವಿಷಯದಲ್ಲಿ ತಲೆಹಾಕುವುದಿಲ್ಲವೆಂದು ನಿಶ್ಚಯಿಸಿದನು. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಮಾರ್ಗದಲ್ಲಿ ನಡೆಯಲು ಅವಕಾಶವಿರಲಿ ಎಂದು ಭಾವಿಸಿದನು. ॥139॥ ಸಾಯಿನಾಥರು ಸ್ವತಃ ತಾವೇ ಸಮರ್ಥರಾಗಿದ್ದು ಅವರಿಗೆ ಯಾವಾಗ ದುಷ್ಟಶಕ್ತಿಗಳನ್ನು ನಿಗ್ರಹಿಸಲು ಉಪಯೋಗಿಸಬೇಕು ಮತ್ತು ಯಾವಾಗ ಒಳ್ಳೆಯವರಿಗೆ ಅನುಗ್ರಹ ನೀಡಬೇಕು ಎಂಬುದು ತಿಳಿದಿತ್ತು, ಅವರಿಗೆ ತಮ್ಮ ಸೇವೆ ಮಾಡುವವರೆಲ್ಲರ ಒಳ್ಳೆಯ ಮತ್ತು ಕೆಟ್ಟ ಗುಣಗಳು ತಿಳಿದಿತ್ತು, ಹಾಗಿರುವಾಗ ನಾವೇಕೆ ಮಧ್ಯದಲ್ಲಿ ಅಡ್ಡಿ ಪಡಿಸಬೇಕು? ॥140॥ "ಸಾಯಿಗೆ ಒಬ್ಬರ ಸೇವೆ ಸುಖಕರವಾಗಿರುತ್ತಿತ್ತು, ಮತ್ತೊಬ್ಬರದು ಬಹಳ ಪ್ರಖರವಾಗಿರುತ್ತಿತ್ತು, ಇವುಗಳು ಮಾತ್ರ ನಮ್ಮ ಬುದ್ಧಿಗೆ ಅರ್ಥವಾಗುತ್ತಿದ್ದುದು. ಯಾರಿಗೂ ಸತ್ಯ ಗೊತ್ತಿರಲಿಲ್ಲ. ॥141॥ ಈ ಹಾಸ್ಯ ಮತ್ತು ವಿನೋದಗಳ ಬಗ್ಗೆ ಸಾಕಿಷ್ಟು, ಯಾರು ಬೇಕಾದರೂ ಇದರಿಂದ ಪಾಠ ಕಲಿಯಲು ಇಷ್ಟಪಟ್ಟಲ್ಲಿ ಹಾಗೆಯೇ ಮಾಡಲಿ. ಭಕ್ತರು ಸಾಯಿಕಥೆಗಳ ಮಧುರ ರಸದ ಸಿಹಿಯನ್ನು ಮತ್ತು ಪರಿಮಳವನ್ನು ಆಸ್ವಾದಿಸಲಿ. ॥142॥ ಹೇಮಾದಪಂತನು ಸಾಯಿಯ ಚರಣಗಳಲ್ಲಿ ಶರಣಾಗುತ್ತಾನೆ. ಮುಂದಿನ ಅಧ್ಯಾಯವು ಅತ್ಯಂತ ಗಹನವಾಗಿದೆ. ದಯಾಘನನಾದ ಸಾಯಿಯು ತನ್ನ ಭಕ್ತ ದಾಮೋದರನ ಆಶೆಯನ್ನು ಪೂರೈಸುತ್ತಾನೆ. ॥143॥ ಅದೂ ಸಹ ಒಂದು ದೊಡ್ಡ ಚಮತ್ಕಾರವೇ. ದಾಮೋದರನು ಸಂಸಾರದಲ್ಲಿ ಅತಿಯಾಗಿ ನರಳಿದ್ದನು. ಬಾಬಾರವರ ಮುಂದೆ ಅವನು ಕರೆಯಲ್ಪಟ್ಟನು. ಮತ್ತು ತನ್ನ ಸಂಕಟದಿಂದ ಪಾರಾದನು. ॥144॥

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಹಾಸ್ಯ ರಸಾಯನ" ಎಂಬ ಇಪ್ಪತ್ತನಾಲ್ಕನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಗುರು ಸಾಂದೀಪನಿ.
2. ವಿಷ್ಣುಸಹಸ್ರನಾಮ.
3. ಅವನು ಮತ್ತು ಅವನ ಪತ್ನಿ ಇಬ್ಬರೂ ಶಿರಡಿಯಲ್ಲಿ ಬಹಳ ಸಮಯ ಕಳೆದರು. ಅವನ ಪತ್ನಿಯು ಅವನಿಗೆ ಮೊದಲೇ ಅಗಲಿದಳು. ಅವನು ತನ್ನ ಭೂಮಿ ಆಸ್ತಿಯೆಲ್ಲವನ್ನೂ ಶಿರಡಿ ಸಂಸ್ಥಾನಕ್ಕೆ ನೀಡಿದನು.



# ಅಧ್ಯಾಯ - 25

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## " ಭಕ್ತಾಭೀಷ್ಟ ಸಂಪಾದನೆ "

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸಾಯಿ ಮಹಾರಾಜ, ಕೃಪಾಸಾಗರನೇ, ಸಾಕ್ಷಾತ್ ಈಶ್ವರನ ಅವತಾರ, ಪೂರ್ಣ ಬ್ರಹ್ಮ, ಮಹಾನ್‌ಯೋಗೇಶ್ವರ – ನಿಮಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ! ॥1॥ ಜಯ! ಜಯ! ನಿಮಗೆ ಜಯವಾಗಲಿ! ಸಂತರಲ್ಲಿ ಅತ್ಯಂತ ಮಹಾನ್ ಆಭೂಷಣ, ಮಂಗಳ ಧಾಮ, ಆತ್ಮಾರಾಮ, ಸಾಯಿಸಮರ್ಥ, ಭಕ್ತವಿಶ್ರಾಮ, ಪೂರ್ಣಕಾಮ, ನಿಮಗೆ ನಮಸ್ಕರಿಸುತ್ತೇನೆ. ॥2॥ ಹಿಂದಿನ ಅಧ್ಯಾಯದಲ್ಲಿ ಬಾಬಾರ ಹಾಸ್ಯ ಮತ್ತು ವಿನೋದದ ಪರಿಶೀಲನೆ ಹಾಗೂ ನಿರೂಪಣೆಯಿತ್ತು. ಆದರೆ ಈ ಸಾಯಿಯು ಶ್ರದ್ಧಾಳು, ಭಕ್ತರ ಇಚ್ಛೆಗಳನ್ನು ಪೂರೈಸಿ ಯಾವಾಗಲೂ ಭಕ್ತರನ್ನು ರಂಜಿಸುತ್ತಿದ್ದರು. ॥3॥ ಸಾಯಿಯು ಪರಮ ದಯಾಮೂರ್ತಿ. ಯಾವ ಒಂದು ಅವಶ್ಯಕತೆ ಇದೆ ಎಂದರೆ ಅದು ಅನನ್ಯ ಭಕ್ತಿ, ಯಾವ ಭಕ್ತನಲ್ಲಿ ಶ್ರದ್ಧೆ ಮತ್ತು ಭಕ್ತಿಗಳು ಇವೆಯೋ ಅವನಿಗೆ ಇಚ್ಛಿತಾರ್ಥಗಳ ಪೂರೈಕೆಯ ಕೊರತೆ ಇರುವುದಿಲ್ಲ. ॥4॥ ಕೃಷ್ಣನು ಉದ್ಧವನಿಗೆ ಹೇಳುತ್ತಾನೆ, "ಸದ್ಗುರುವಿನ ರೂಪವೇ ನಾನು." ಅಂತಹ ಸದ್ಗುರುವನ್ನು ಪ್ರೀತಿಯಿಂದ ಭಜಿಸಬೇಕು. ಇದನ್ನೇ ಅನನ್ಯ ಭಕ್ತಿಯೆನ್ನುತ್ತಾರೆ. ॥5॥ ನನ್ನ ಅಂತರಂಗದಲ್ಲಿ ಶ್ರೀ ಸಾಯಿಯ ಚರಿತ್ರೆಯನ್ನು ಬರೆಯುವ ಮನೋರಥ ಹುಟ್ಟಿತು. ಅವರು ಅತ್ಯದ್ಭುತವಾದ ಲೀಲೆಗಳನ್ನು, ಆಲಿಸಲು ಯೋಗ್ಯವಾದವುಗಳನ್ನು ಆರಿಸಿಕೊಂಡು

ಕೂಡಲೇ ನನ್ನಿಂದ ಬರೆಸಿದರು. ॥6॥ ನನಗೆ ಯಾವುದೇ ಶಾಸ್ತ್ರಗಳ ಜ್ಞಾನವಾಗಲೀ, ಅಧಿಕಾರವಾಗಲೀ ಇರಲಿಲ್ಲ. ಗುರು ನನಗೆ, ಪಾಮರನಾದವನಿಗೆ ಸ್ಫೂರ್ತಿ ನೀಡಿ ನನ್ನಿಂದ ಬರೆಸಿ ತಮ್ಮ ಭಕ್ತರಲ್ಲಿ ಜಾಗೃತಿಯನ್ನುಂಟುಮಾಡಲು ಗ್ರಂಥ ರಚನೆ ಮಾಡಿಸಿದರು. ॥7॥ ಯಾವಾಗ 'ಟಿಪ್ಪಣಿಗಳನ್ನು ಇಟ್ಟುಕೋ' ಎಂಬ ಅನುಜ್ಞೆಯಾಯಿತೋ ಆಗ ನನ್ನ ಅಲ್ಪಪ್ರಜ್ಞೆಯು ಧೈರ್ಯ ಮತ್ತು ವಿಜ್ಞಾನಗಳಿಂದ ಸಂಪನ್ನವಾಯಿತು. ॥8॥ ಕೂಡಲೇ ನಾನು ಅವರಿಗೆ ಮಾರುಹೋದೆ. ಈ ಸಾಯಿ ಗುಣಗಂಭೀರಮೂರ್ತಿ, ತಮ್ಮ ಭಕ್ತರ ಉದ್ಧಾರ ಕಾರ್ಯಕ್ಕಾಗಿ ತಮ್ಮ ಕಥೆಗಳನ್ನು ಕಲೆಹಾಕಿರುತ್ತಾರೆ. ॥9॥ ಇಲ್ಲದಿದ್ದರೆ, ನನಗೆ ಅವರ ವಾಗ್ವಿಲಾಸದ ವೃತ್ತದಲ್ಲಿ ಪ್ರವೇಶಿಸುವ ಧೈರ್ಯವೆಲ್ಲಿ! ಈ ಚರಿತ್ರೆಯ ಸುಧಾರಸವು ಸಂತ ಚರಣಗಳಿಗೆ ಅರ್ಪಿಸಿದ ಪ್ರಸಾದದ ಪಾಯಸದಂತಿದೆ.[1] ॥10॥ ಈ ಶ್ರೀಸಾಯಿ ಚರಿತ್ರೆಯು ಭಕ್ತರಿಗೆ, ಬಾಯಾರಿದವರಿಗೆ ನೀರಿಗೆ ಬದಲು ಅಮೃತ ನೀಡುವ ಅವಕಾಶವಾಗಿದೆ. ಯಥೇಚ್ಛವಾಗಿ ಸೇವಿಸಿರಿ. ಸಾಯಿಕೃಪೆಯಿಂದ ಸಂಸಾರತಾಪಗಳನ್ನು ನಿವಾರಿಸುತ್ತದೆ. ॥11॥ ಇದು ಕೇವಲ ಕಥೆಯಲ್ಲಆದರೆ ಸೋಮಕಾಂತವಾಗಿದೆ. ಅದರಿಂದ ಸಾಯಿಕಥೆಗಳು ಚಂದ್ರನಿಂದ ಉಕ್ಕಿಬರುವ ಅಮೃತದಂತೆ ಇವೆ. ಅವುಗಳನ್ನು ಬಾಯಾರಿದ ಭಕ್ತರು ಚಕೋರ ಪಕ್ಷಿಗಳಂತೆ ಮನಸೋಕ್ತವಾಗಿ ಕುಡಿದು ತೃಪ್ತರಾಗುತ್ತಾರೆ. ॥12॥ ಈಗ ಪ್ರೀತಿಯ ಶ್ರೋತೃ ಜನರೇ, ಸಂಕೋಚವಿಲ್ಲದೆ, ಏಕಾಗ್ರ ಚಿತ್ತದಿಂದ, ಕಲಿಮಲವನ್ನು ದಹಿಸುವಂತಹ ಪಾವನವಾದ ಸಾಯಿಯ ಕಥೆಗಳನ್ನು ಆಲಿಸಿರಿ. ॥13॥ ಒಮ್ಮೆ ಅನನ್ಯ ನಿಷ್ಠೆಯಿದ್ದಲ್ಲಿ, ಭಕ್ತರ ಸಕಲ ಅನಿಷ್ಟಗಳೂ ದೂರವಾಗುತ್ತವೆ. ಅವನ ಅಭೀಷ್ಟಗಳೆಲ್ಲವೂ ನೆರವೇರುತ್ತವೆ. ಎಲ್ಲ ಕಷ್ಟಗಳೂ ನಿವಾರಿಸಲ್ಪಡುತ್ತವೆ. ॥14॥ ಇಲ್ಲಿ ಅಷ್ಟರಮಟ್ಟಿಗೆ ಒಂದು ಕಥೆ ಇದೆ. ಅದು ಸಾಯಿಯ ಭಕ್ತವಾತ್ಸಲ್ಯವನ್ನು ತೋರಿಸುತ್ತದೆ. ಶ್ರೋತೃಗಳು ಅದನ್ನು ಆದರಪೂರ್ವಕವಾಗಿ ಆಲಿಸಿದರೆ ಅವರ ಚಿತ್ತವು ಆನಂದದಿಂದ ತುಂಬುತ್ತದೆ. ॥15॥ ಆದುದರಿಂದ, ಈ ಅದ್ಭುತ ಕಥೆಯನ್ನು ಪೂರ್ಣ ತತ್ಪರತೆಯಿಂದ ಆಲಿಸಿರಿ. ಆಗ ನೀವು ದಯಾಸಾಗರವನ್ನೇ ಅನುಭವಿಸಿರಿ. ಅದೇ ಗುರುಮಾಯೆಯು. ॥16॥ ಇದೊಂದು ಸಣ್ಣ ಕಥೆ. ಆದರೂ ಅದು ಬೋಧಿಸುವ ಬೋಧನೆಯಿಂದಾಗಿ ಅದಕ್ಕೆ ಸಮನಾದುದು ಮತ್ತೊಂದಿಲ್ಲ. ಕ್ಷಣಕಾಲ ಅದರ ಕಡೆ ಗಮನ ಕೊಡಿ, ಆಗ ನಿಮ್ಮ ಸಂಕಟಗಳೆಲ್ಲವೂ ದೂರವಾಗುತ್ತವೆ. ॥17॥ ಅಹಮದ್‌ನಗರದಲ್ಲಿ ಒಬ್ಬ ಧನವಂತ, ಸುಖವಂತ ದಾಮು ಅಣ್ಣಾ ಎಂಬ ಬಳೆಗಾರನಿದ್ದನು. ಅವನು ಸಾಯಿಯ ಮಹಾನ್ ಭಕ್ತನಾಗಿದ್ದನು. ॥18॥ ಅಂತಹ ಪರಮ ಭಕ್ತನ ಕಥೆಯನ್ನು ಕೇಳಲು ಬಹಳ ಆನಂದವಾಗುತ್ತದೆ. ಭಕ್ತರ ರಕ್ಷಣೆಯಲ್ಲಿ ತತ್ಪರರಾಗಿರುವ ಪ್ರತ್ಯಕ್ಷ ಸಾಯಿಯನ್ನು ಕಾಣಬಹುದು. ॥19॥ ರಾಮನವಮಿಯ ವಾರ್ಷಿಕ ಮಹೋತ್ಸವದ ದಿನ ಎರಡು ದೊಡ್ಡ ಬಾವುಟಗಳನ್ನು ಶಿರಡಿ ಗ್ರಾಮದಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗುತ್ತಾರೆ. ಇದು ಅಲ್ಲಿರುವ ಪ್ರತಿಯೊಬ್ಬರಿಗೂ ತಿಳಿದ ವಿಷಯ. ॥20॥ ಅವುಗಳಲ್ಲಿ ಒಂದು ನಿಮೋಣಕರ್, ಮತ್ತೊಂದು ದಾಮೂ ಅಣ್ಣಾ ಅವರುಗಳದ್ದು. ಇದು ಅನೇಕ ವರ್ಷಗಳಿಂದ ಬಂದಂತಹ ಸಂಪ್ರದಾಯ.

ಅದನ್ನು ಪ್ರೀತಿ, ಭಕ್ತಿಗಳಿಂದ, ನಿರ್ವಿಘ್ನವಾಗಿ ಆಚರಿಸಲಾಗುತ್ತಿತ್ತು. ॥21॥ ದಾಮೂ ಅಣ್ಣಾನಿಗೆ ಇಬ್ಬರು ಪತ್ನಿಯರಿದ್ದರುಆದರೆ ಪುತ್ರ ಸಂತಾನವಿರಲಿಲ್ಲ. ಸಾಯಿಯ ಆಶೀರ್ವಾದ ಪಡೆದನಂತರ ಒಬ್ಬ ಮಗನನ್ನು ಪಡೆದನು. ॥22॥ ಅದರ ನಂತರವೇ ಅವನು ರಾಮನವಮಿ ಹಬ್ಬದ ದಿನ ಒಂದು ಬಾವುಟವನ್ನು ಸಮರ್ಪಿಸಲು ಹರಕೆಹೊತ್ತನು. ಮತ್ತು ಆ ಬಾವುಟವನ್ನು ಮೆರವಣಿಗೆ ತೆಗೆದುಕೊಂಡು ಹೋಗಿ(ಪ್ರತಿವರ್ಷ) ಪ್ರಾರಂಭವಾಯಿತು. ॥23॥ ಕೊಂಡ್ಯಾ ಎಂಬ ಮರಗೆಲಸದವನ ಮನೆಯಲ್ಲಿ ಮೆರವಣಿಗೆಯ ತಯಾರಿಯನ್ನು ಮಾಡಿದರು. ಅಲ್ಲಿಂದಬಾವುಟಗಳನ್ನು ಮೆರವಣಿಗೆಯಲ್ಲಿ ವಾದ್ಯ ಸಂಗೀತಗಳ ಜೊತೆಗೆ ತೆಗೆದುಕೊಂಡು ಹೋಗುತ್ತಿದ್ದರು. ॥24॥ ಈ ಉದ್ದವಾದ ಬಾವುಟಗಳನ್ನು ಮಸೀದಿಯ ಎರಡು ಮೂಲೆಗಳಿಗೆ ಕಟ್ಟುತ್ತಿದ್ದರು. ಪ್ರತಿ ವರ್ಷ ಇದು ಒಂದು ಹಬ್ಬವನ್ನು ಪ್ರಾರಂಭಿಸುವ ಶುಭ ಚಿಹ್ನೆಯಾಗಿರುತ್ತದೆ. ॥25॥ ಅಲ್ಲಿಗೆ ಬಂದ ಫಕೀರರಿಗೆ ಪುಷ್ಕಳವಾದ ಭೋಜನ ನೀಡುತ್ತಿದ್ದರು. ಈ ವ್ಯಾಪಾರಿಯು ರಾಮನವಮಿಯನ್ನು ಈ ರೀತಿ ಪ್ರತಿ ವರ್ಷ ಆಚರಿಸುತ್ತಿದ್ದನು. ॥26॥ ಈಗ, ನಾನು ದಾಮೂ ಅಣ್ಣಾನ ಕಥೆಯನ್ನು ಶ್ರೋತೃಗಳ ಪ್ರಯೋಜನಕ್ಕಾಗಿ ತಿಳಿಸುತ್ತೇನೆ. ಅದನ್ನು ಎಚ್ಚರಿಕೆಯಿಂದ ಕೇಳಿದಾಗ, ನಿಮಗೆ ಸಾಯಿಯ ಶಕ್ತಿಯ ಅರಿವಾಗುತ್ತದೆ. ॥27॥ ಅವನ ಸ್ನೇಹಿತನೊಬ್ಬ ಬೊಂಬಾಯಿನಿಂದ ಕಾಗದ ಬರೆದನು. ಎರಡು ಲಕ್ಷ ರೂಪಾಯಿಗಳ ಲಾಭ ಪಡೆಯುವಂತಹ ವ್ಯವಹಾರವೊಂದನ್ನು ಮಾಡಬಹುದೇ? ಎಂದು ಪ್ರಶ್ನಿಸಿದ್ದನು. ॥28॥ "ನಾವಿಬ್ಬರೂ ಪಾಲುದಾರರು ಮತ್ತು ಇಬ್ಬರೂ ಒಂದೊಂದು ಲಕ್ಷ ರೂಪಾಯಿಗಳನ್ನು ಗಳಿಸಬಹುದು. ಕೂಡಲೇ ಉತ್ತರವನ್ನು ತಿಳಿಸು. ವ್ಯವಹಾರವು ಸ್ಪಷ್ಟವಾಗಿದೆ ಮತ್ತು ಯಾವುದೇ ಅಪಾಯವಿಲ್ಲ. ॥29॥ "ನಾವು ಈಗ ಕಚ್ಚಾ ಹತ್ತಿಯನ್ನು ಕೊಳ್ಳೋಣ. ಬೆಲೆಯು ತೀಕ್ಷ್ಣವಾಗಿ ಏರುತ್ತಿದೆ. ಸರಿಯಾದ ಸಮಯದಲ್ಲಿ ವಹಿವಾಟು ಮಾಡದಿದ್ದರೆ ಅನಂತರದಲ್ಲಿ ಪಶ್ಚಾತ್ತಾಪ ಪಡುವುದು ಖಂಡಿತ." ॥30॥ ಅಣ್ಣಾನ ಮನಸ್ಸು ಡೋಲಾಯಮಾನವಾಯಿತು. ಏಕೆಂದರೆ ಅವನು ಈ ಅವಕಾಶವನ್ನು ಕಳೆದುಕೊಳ್ಳಲು ಇಚ್ಛಿಸುತ್ತಿರಲಿಲ್ಲ. ಅವನಿಗೆ ಅವನ ಸ್ನೇಹಿತನ ಮೇಲೆ ಪೂರ್ಣ ಭರವಸೆಯಿತ್ತು, ಆದರೂ ದೃಢವಾದ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ॥31॥ ಅಣ್ಣಾ ಆಲೋಚಿಸಲು ಪ್ರಾರಂಭಿಸಿದನು. ಈ ವ್ಯಾಪಾರವನ್ನು ಮಾಡಲಾ, ಬೇಡವಾ ಎಂದು. "ಓಹ್! ದೇವರೇ! ಮುಂದೆ ಏನಾಗುತ್ತದೆ ಮತ್ತು ಹೇಗೆ?" ಅವನು ಸಂದಿಗ್ಧತೆಗೆ ಬಿದ್ದನು. ॥32॥ ದಾಮೂ ಅಣ್ಣಾನೂ ಸಹ ಗುರುಬಂಧುವಾದುದರಿಂದ ಬಾಬಾರವರಿಗೆ ಪತ್ರಬರೆದನು. "ನನಗೆ ಯಾವುದೂ ಸ್ವತಂತ್ರ ಬುದ್ಧಿಯಿಲ್ಲ. ನೀವೇ ನಮಗೆ ಆಶ್ರಯದಾತರು. ॥33॥ "ಮೇಲ್ನೋಟಕ್ಕೆ ನನಗೆ ಈ ವ್ಯಾಪಾರ ಮಾಡಬೇಕೆನಿಸುತ್ತದೆ. ಆದರೆ ಲಾಭಕರವಾಗುವುದೋ ಅಥವಾ ನಷ್ಟ ಉಂಟುಮಾಡುವುದೋ? ದಯಮಾಡಿ ತಿಳಿಸಿರಿ." ॥34॥ ಅವನು ಮಾಧವರಾವ್‌ನಿಗೆ ಈ ಪತ್ರ ಬರೆದು ತಿಳಿಸಿದನು. "ದಯವಿಟ್ಟು ಇದನ್ನು ಬಾಬಾರವರಿಗೆ ಓದು. ಅವರ ಆಜ್ಞೆಯನ್ನು ನನಗೆ ತಿಳಿಸು. ಈ ವ್ಯಾಪಾರ ಒಳ್ಳೆಯದಾಗಿ ಕಾಣುತ್ತದೆ." ॥35॥ ಮಾರನೆಯ ದಿನ,

ಮಧ್ಯಾಹ್ನದಲ್ಲಿ ಮಾಧವ ರಾವ್‌ನಿಗೆ ಪತ್ರ ದೊರಕಿತು. ಅವನು ಅದನ್ನು ಮಸೀದಿಗೆ ತೆಗೆದುಕೊಂಡು ಹೋಗಿ ಬಾಬಾರವರ ಚರಣಗಳಲ್ಲಿ ಇಟ್ಟನು. ॥36॥ "ಇದೇನು ಶಾಮಾ, ಈ ಪತ್ರವೇಕೆ? ನನ್ನ ಪಾದಗಳ ಮೇಲಿಟ್ಟ ಈ ಕಾಗದ ಏನು?" ಎಂದು ಬಾಬಾ ಕೇಳಿದರು. "ಬಾಬಾ, ಆ ದಾಮೂ ಶೇಟ್, ನಗರದವನು ನಿಮ್ಮನ್ನು ಏನೋ ಕೇಳಲು ಇಚ್ಛಿಸುತ್ತಾನೆ" ಶಾಮಾ ಹೇಳಿದನು. ॥37॥ "ಅವನೇನು ಬರೆದಿರುವನು? ಈಗಿನ ಅವನ ಯೋಜನೆ ಏನು? ಅವನೆಲ್ಲೋ ಆಕಾಶವನ್ನು ಮುಟ್ಟಲು ಪ್ರಯತ್ನಿಸುತ್ತಿರುವಂತೆ ಕಾಣುತ್ತಿದೆ. ಭಗವಂತನು ಕೊಟ್ಟಿರುವುದರಲ್ಲಿ ಅವನಿಗೆ ತೃಪ್ತಿಯಿಲ್ಲ. ॥38॥ "ಓದು, ಅವನ ಕಾಗದ ಓದು" ಎಂದರು ಬಾಬಾ. ಶಾಮಾ ಹೇಳಿದನು. "ನೀವು ಈಗ ಏನು ಹೇಳಿದಿರೋ ಅದೇ ದಾಮೂ ಅಣ್ಣಾನ ಪತ್ರದ ಅಕ್ಷರಶಃ ಅರ್ಥವಾಗಿದೆ. ॥39॥ "ದೇವಾ, ನೀವು ನಿಶ್ಚಲವಾಗಿ ಕುಳಿತುಕೊಂಡು ಭಕ್ತರನ್ನು ಸಂದಿಗ್ಧ ಪರಿಸ್ಥಿತಿಗೆ ತಳ್ಳುವಿರಿ. ಅನಂತರ ಅವರು ಮನಸ್ಸಿನಲ್ಲಿ ತಳಮಳಗೊಂಡಾಗ ಅವರನ್ನು ನಿಮ್ಮ ಚರಣಗಳಿಗೆ ಕರೆಸಿಕೊಳ್ಳುವಿರಿ. ॥40॥ "ಕೆಲವರನ್ನು ನೀವೇ ಎಳೆದುಕೊಳ್ಳುವಿರಿ. ಮತ್ತು ಇಲ್ಲಿಗೆ ಕರೆಸಿಕೊಳ್ಳುವಿರಿ. ಕೆಲವರಿಂದ ನೀವು ಪತ್ರ ಬರೆಸುವಿರಿ. ಅದರಲ್ಲಿನ ರಹಸ್ಯ ವಿಷಯಗಳನ್ನು ಮೊದಲೇ ಬಿಡಿಸಿ ತಿಳಿಸುವಾಗ ಈ ಪತ್ರವನ್ನು ಬರೆಸುವ ಉದ್ದೇಶವೇನಿತ್ತು?" ॥41॥ "ಓಹ್, ಶಾಮಾ! ಓದು; ಓದು! ನನ್ನನ್ನೇಕೆ ನಂಬುವೆ? ನಾನು ಕೇವಲ ಸುಮ್ಮನೆ ಈ ರೀತಿ ಮಾಡಿದೆ. ನನ್ನ ಮನಸ್ಸಿಗೆ ಬಂದದ್ದನ್ನು ಬಾಯಲ್ಲಿ ಹೇಳಿದೆ ಅಷ್ಟೇ!" ॥42॥ ಆಗ ಮಾಧವ ರಾವನು ಪತ್ರವನ್ನು ಓದಿದನು. ಬಾಬಾರವರು ಗಮನವಿಟ್ಟು ಕೇಳಿದರು. ಅನಂತರ ಬಾಬಾರವರು ಕಳಕಳಿಯಿಂದ ಹೇಳಿದರು, "ಈ ಶೇಠನ ಮತಿಯು ಕೆಟ್ಟಿದೆ. ॥43॥ "ಅವನಿಗೆ ಪ್ರತ್ಯುತ್ತರ ಬರೆ. ಈಗ ಮನೆಯಲ್ಲಿ ಏನು ಕೊರತೆ ಇದೆ? ಅವನು ತೃಪ್ತಿಯಿಂದ ಇರಲಿ, ಅರ್ಧ ಪೌಂಡು ಬ್ರೆಡ್‌ನಲ್ಲಿ ತೃಪ್ತಿಯಿರಲಿ. ಒಂದು ಲಕ್ಷದ ಬಗ್ಗೆ ಯೋಚಿಸದಿರಲಿ." ॥44॥ ದಾಮೂ ಅಣ್ಣಾ ಕಾತರದಿಂದ ಕ್ಷಣಕ್ಷಣವೂ ಪ್ರತ್ಯುತ್ತರಕ್ಕಾಗಿ ಕಾಯುತ್ತಿದ್ದನು. ಉತ್ತರವು ತಲುಪಿದಾಕ್ಷಣವೇ ದಾಮೂ ಅಣ್ಣಾ ಅದನ್ನು ಓದಿದನು. ॥45॥ ಆ ಉತ್ತರವನ್ನು ನೋಡಿ ದಾಮೂ ಶೇಠನಿಗೆ ನಿರಾಶೆಯಾಯಿತು. ಅವನ ಮನೋರಥದ ಕೋಟೆ ನೆಲಗಚ್ಚಿ ನಿರ್ಮೂಲವಾಯಿತು. ಅವನ ಆಶೆಯ ವೃಕ್ಷವು ಬುಡಮೇಲಾಯಿತು. ॥46॥ 'ಈಗ ನಾನು ಒಂದು ಲಕ್ಷ ಸಂಪಾದಿಸಿದರೆ, ನಾನು ಅದರಲ್ಲಿ ಅರ್ಧವನ್ನು ಬಡ್ಡಿಗೆ ನೀಡುತ್ತೇನೆ. ಮತ್ತು ಕೂಡಲೇ ಲಕ್ಷಾಧಿಕಾರಿಯಾಗುತ್ತೇನೆ ಮತ್ತು ನಗರದಲ್ಲಿ ಸಂತೋಷವಾಗಿ ಜೀವಿಸುತ್ತೇನೆ.' ॥47॥ ಅವನು ಗಾಳಿಯಲ್ಲಿ ಕಟ್ಟಿದ್ದ ಅರಮನೆಗಳು ಇದ್ದ ಜಾಗದಲ್ಲೇ ನಾಶವಾದವು. ದಾಮೂ ಅಣ್ಣಾ ಬಹಳವಾಗಿ ಇರುಸು ಮುರುಸುಗೊಂಡನು. ಬಾಬಾರವರು ಇದೇನು ಮಾಡಿದರು? ॥48॥ 'ನಾನು ಪತ್ರ ಬರೆದದ್ದೇ ತಪ್ಪಾಯಿತು! ನನ್ನ ನಾಶವನ್ನು ನಾನೇ ಮಾಡಿಕೊಂಡೆ. ನಾನು ಬಿಡಿಸಿದ ಎಲೆಯನ್ನು ನೋಡನೋಡುತ್ತಲೇ ಅದು ಬರುತ್ತಿದ್ದ ಹಾಗೆಯೇ ಕಳೆದುಕೊಂಡೆ.' ॥49॥ ದಾಮೂ ಅಣ್ಣಾನ ಆ ಕಾಗದದಲ್ಲಿ, ಒಂದು ಸೂಚನೆ ಇತ್ತು. 'ನೋಡುವುದರಲ್ಲಿ ಮತ್ತು ಕೇಳುವುದರಲ್ಲಿ

ವ್ಯತ್ಯಾಸವಿದೆ. ಇಲ್ಲಿಗೆ ಖುದ್ದಾಗಿ ಬಾ' ಎಂಬುವುದು. ॥50॥ ಅದು ಮಾಧವರಾವ್‌ನ ಸೂಚನೆಯಾಗಿತ್ತು. 'ನನಗೂ ಪ್ಲಶೆ ಸ್ವತಃ ಹೋಗಬೇಕೆನ್ನಿಸುತ್ತಿದೆ. ಅದು ಬಹುಶಃ ಉಚಿತವಾಗಬಹುದು. ಒಂದು ವೇಳೆ ಅವರು ತಮ್ಮ ಅನುಮತಿಯನ್ನು ನೀಡಬಹುದು.' ॥51॥ ಮನದಲ್ಲಿ ಈ ರೀತಿಯ ವಿಚಾರ ಮಾಡುತ್ತ ಅಣ್ಣಾನು ಶಿರಡಿಗೆ ಬಂದು ಬಾಬಾರವರ ಸನ್ನಿಧಾನದಲ್ಲಿ ಅವರಿಗೆ ಪ್ರಣಾಮ ಸಲ್ಲಿಸಿ ಕುಳಿತನು. ॥52॥ ಅಷ್ಟು ಮೃದುವಾಗಿ ಬಾಬಾರವರ ಚರಣಗಳನ್ನು ಒತ್ತುತ್ತಿದ್ದನು. ಆದರೆ ಕೇಳಲು ಧೈರ್ಯವಿರಲಿಲ್ಲ. ಅವನು ಅಂತರಂಗದಲ್ಲಿಯೇ ಯೋಚಿಸುತ್ತಿದ್ದನು. ಲಾಭ ಬಂದಿದ್ದರಲ್ಲಿ ಒಂದು ಭಾಗವನ್ನು ಬಾಬಾರವರಿಗೆ ಕೊಡುವುದೆಂದು ಯೋಚಿಸುತ್ತಿದ್ದನು. ॥53॥ "ಸಾಯಿನಾಥ, ನೀವು ಈ ವ್ಯವಹಾರದಲ್ಲಿ ಸಹಾಯ ಮಾಡಿದರೆ, ಅದರಲ್ಲಿ ಬಂದ ಲಾಭದಲ್ಲಿ ಒಂದು ಭಾಗವನ್ನು ಕೊಡುತ್ತೇನೆ ಮತ್ತು ಯಾವಾಗಲೂ ನಿಮಗೆ ಋಣಿಯಾಗಿರುತ್ತೇನೆ" ಎಂದು ಯೋಚಿಸಿದನು. ॥54॥ ಸಾಯಿಚರಣಗಳನ್ನು ತನ್ನ ಮಸ್ತಕಕ್ಕೆ ಒತ್ತಿ ದಾಮೂ ಅಣ್ಣಾನು ಸ್ವಲ್ಪ ಕಾಲ ಹಾಗೆಯೇ ಕುಳಿತನು. ಸಂಕಲ್ಪ ವಿಕಲ್ಪಗಳು ಮಾನವನ ಸಹಜ ಸ್ವಭಾವ. ವ್ಯಾಪಾರದ ಬಗೆಗಿನ ಅಂತಹ ಆಲೋಚನೆಗಳು ಅವನ ಮನಸ್ಸಿನಲ್ಲಿ ಸುತ್ತುತ್ತಿದ್ದವು. ॥55॥ ಭಕ್ತರು ತಮ್ಮ ನಿಜವಾದ ಹಿತವನ್ನು ಅರಿಯದೆಯೇ ಆಶೆಗಳನ್ನು ಹೊಂದಿರುತ್ತಾರೆ. ಕೇವಲ ಗುರು ಮಾತ್ರ ಭಕ್ತನ ಹಿತವನ್ನು ಅರಿತಿರುತ್ತಾನೆ. ಅವನ ಹಿಂದಿನದು, ಈಗಿನದು ಮತ್ತು ಮುಂದಿನದು ಮೂರೂ ಅವನಿಗೆ ತಿಳಿದಿರುತ್ತದೆ. ॥56॥ ಯಾರಾದರೂ ತಮ್ಮ ಆಲೋಚನೆಗಳನ್ನು ಎಷ್ಟು ಅಡಗಿಸಿಟ್ಟರೂ, ಸಾಯಿಸಮರ್ಥರು ಎಲ್ಲರ ಅಂತರಂಗದಲ್ಲಿಯೂ ಸಾಕ್ಷಿಯಾಗಿ ಇರುತ್ತಾರೆ ಮತ್ತು ಅವರಿಗೆ ಅಂತರಂಗದ ಯೋಚನೆಗಳೆಲ್ಲವೂ ತಿಳಿದಿರುತ್ತೆ. ॥57॥ ಯಾವಾಗಲಾದರೂ ಯಾರಾದರೂ ಪ್ರೀತಿಯಿಂದ ತಮ್ಮ ಮನದಿಚ್ಛೆಯನ್ನು ಸಾಯಿಚರಣಗಳಲ್ಲಿ ನಿವೇದಿಸಿ, ಪೂರ್ಣ ವಿಶ್ವಾಸದಿಂದ ಅನುಜ್ಞೆಯನ್ನು ಪ್ರಾರ್ಥಿಸಿದಲ್ಲಿ ಸಾಯಿಯು ಸರಿಯಾದ ಮಾರ್ಗವನ್ನು ತೋರಿಸುತ್ತಿದ್ದರು. ॥58॥ ಇದು ಅವರ ನಿಜವಾದ ವ್ರತವಾಗಿತ್ತು, ಸಮಸ್ತ ಭಕ್ತರೂ ಅದನ್ನು ಅರಿತಿದ್ದರು. ಅನನ್ಯರಾಗಿ ಶರಣಾದವರೆಲ್ಲರ ಆಪತ್ತುಗಳನ್ನೆಲ್ಲ ನಿವಾರಿಸುತ್ತಿದ್ದರು. ॥59॥ ಗುರುವೇ ನಿಜವಾದ ತಾಯಿ ಮತ್ತು ತಂದೆ. ಅನೇಕ ಜನ್ಮಗಳಿಂದ ಅವನೇ ಪೋಷಕನು ಹಾಗೂ ರಕ್ಷಕನು. ಅವನೇ ಹರಿ, ಹರ ಮತ್ತು ಬ್ರಹ್ಮನು. ಅವನೇ ಕರ್ತನು ಹಾಗೂ ಮಾಡಿಸುವವನೂ ಅವನೇ. ॥60॥ ಒಂದು ಮಗುವು ಸಿಹಿಯನ್ನು ಇಷ್ಟಪಡುತ್ತದೆ. ಆದರೆ ತಾಯಿಯು ಮಗು ಅತ್ತರೂ, ಹಠ ಮಾಡಿದರೂ ಕಹಿ ಔಷಧಿಯನ್ನು ಕೊಡುತ್ತಾಳೆ. ಇದು ಅವಳ ಪ್ರೇಮದ ನಿರ್ಧಾರ. ॥61॥ ಮಗುವಿಗೆ ಕಹಿ ಔಷಧಿಯ ಗುಣಗಳು ಹೇಗೆ ಗೊತ್ತಾಗುತ್ತದೆ? ಯೋಗ್ಯವಾದ ಕಾಳಜಿಯು ಹೇಗೆ ಉಪಯುಕ್ತವಾಗಿರುತ್ತದೆ? ಕೇವಲ ತಾಯಿ ಮಾತ್ರ ಅದರ ಸೂಚನೆಗಳನ್ನು ಬಲ್ಲಳು. ॥62॥ ಅಣ್ಣಾನು ಒಂದು ಪಾಲನ್ನು ಇಟ್ಟುಕೊಂಡರೂ ಬಾಬಾರವರು ತಮ್ಮನ್ನೇ ಮರೆಯಲು ಸಾಧ್ಯವೇ? ಅವರ ಪ್ರೀತಿಯು ಲಾಭಕ್ಕಾಗಿ ಪ್ರೇರೇಪಿಸಲ್ಪಡುವಂತಹುದಲ್ಲ. ಅವರು ತಮ್ಮ ಭಕ್ತರಹಿತಕ್ಕಾಗಿ ಸದಾ ತತ್ಪರರಾಗಿರುತ್ತಿದ್ದರು.

॥63॥ ಧನ ಕನಕಗಳು ಅವರಿಗೆ ಮಣ್ಣು ಧೂಳಿನ ತರಹ. ಹಾಗಿರಲು ಅವರಿಗೆ ಪಾಲಿನ ಬೆಲೆ ಏನು? ದೀನ ಜನರ ಉದ್ಧಾರ ಮಾಡಲೋಸುಗವೇ ಈ ಸಂತರು ಅವತರಿಸುತ್ತಾರೆ. ॥64॥ ಅವರು ಇಂದ್ರಿಯಗಳನ್ನು ಹಿಡಿತದಲ್ಲಿಟ್ಟಿರುವ ಸಂತರು. ಯಮ, ನಿಯಮ, ಶಮ, ದಮಗಳ ಸಂಪನ್ನತೆ ಹೊಂದಿದವರು. ಮತ್ತು ಮಾಯೆಯ ಹಾಗೂ ಮಾತ್ಸರ್ಯದ ದೋಷದಿಂದ ಮುಕ್ತರು. ಅವರು ಕೇವಲ ಇತರರಿಗೆಅನುಗ್ರಹ ಮಾಡಿ ಪ್ರಯೋಜನ ಉಂಟುಮಾಡುವವರು. ॥65॥ ದಾಮೂ ಅಣ್ಣನ ಪಾಲು ನೀಡುವ ಅಭಿಪ್ರಾಯ ಮನದಲ್ಲೇ ಗುಪ್ತವಾಗಿದ್ದರೂ, ಹೊರಗಡೆ ಹೇಳದಿದ್ದರೂ, ಬಾಬಾರವರು ಸ್ಪಷ್ಟ ಉತ್ತರ ನೀಡಿದರು. ಆದರ ಪೂರ್ವಕವಾಗಿ ಗಮನವಿಟ್ಟು ಕೇಳಿರಿ. ॥66॥ ಬಾಬಾರವರಿಗೆ ಎಲ್ಲ ಜೀವಿಗಳ ಆಶೆಗಳು, ವರ್ತಮಾನ, ಭವಿಷ್ಯ ಮತ್ತು ಭೂತ ಎಲ್ಲ ಕಾಲಗಳಲ್ಲಿ ಕರತಲಾಮಲಕವಾಗಿದ್ದವು. ॥67॥ ಬಾಬಾರವರಿಗೆ ತಮ್ಮ ಭಕ್ತರ ಭವಿಷ್ಯ ಸ್ಥಿತಿಯೆಲ್ಲವೂ ತಿಳಿದಿತ್ತು, ಅವರು ಸಮಯೋಚಿತವಾಗಿ ಎಚ್ಚರಿಕೆ ನೀಡುತ್ತಿದ್ದರು ಮತ್ತು ಸ್ವೋಕ್ತಿಗಳಿಂದ ತಿಳಿಸುತ್ತಿದ್ದರು. ॥68॥ "ಬಾಪು, ನಾನು ಯಾವುದರಲ್ಲೂ ಭಾಗಿಯಾಗುವುದಿಲ್ಲ" ಎಂದು ಬಾಬಾರವರು ಪ್ರೇಮದಿಂದ ಸೂಚನೆ ನೀಡಿದರು. 'ಸಾಯಿಯು ಈ ವ್ಯವಹಾರವು ಒಳ್ಳೆಯದೆಂದು ಭಾವಿಸುವುದಿಲ್ಲ' – ಬಾಬಾರವರ ಈ ಮಾತುಗಳನ್ನು ಕೇಳಿ ಅಣ್ಣಾ ಮನದಲ್ಲೇ ನಾಚಿದನು. ॥69॥ ಬಾಬಾರವರ ಈ ಮಾತನ್ನು ಕೇಳಿ ದಾಮೂ ಅಣ್ಣಾನಿಗೆ ಅರ್ಥವಾಯಿತು. ಅವನು ಮನದ ಆ ಸಂಕಲ್ಪವನ್ನು ತೆಗೆದುಹಾಕಿ ತನ್ನ ತಲೆ ತಗ್ಗಿಸಿ ಸುಮ್ಮನೆ ಕುಳಿತುಕೊಂಡನು.॥70॥ ಪುನಃ ಮತ್ತೊಂದು ವಿಚಾರ ಅವನ ಮನಸ್ಸಿನಲ್ಲಿ ಉಂಟಾಯಿತು. ಮತ್ತೆ ಬೇರೆ ಯಾವುದಾದರೂ, ಅಕ್ಕಿ, ಗೋಧಿ ಮತ್ತು ಇತರೆ ಧಾನ್ಯಗಳ ವ್ಯಾಪಾರ ಪ್ರಾರಂಭಿಸಲು ಯೋಚಿಸಿದನು. ಅದಕ್ಕೆ ಬಾಬಾರವರ ಉತ್ತರ ಕೇಳಿರಿ. ॥71॥ "ನೀನು ಐದು ಸೇರುಗಳನ್ನು ಒಂದು ಬೆಲೆಗೆ ಕೊಂಡುಕೊಳ್ಳುವೆ ಮತ್ತು ಅದನ್ನೇ ಅದೇ ಬೆಲೆಗೆ ಏಳುಸೇರುಗಳಂತೆ ಮಾರುವೆ" ಬಾಬಾರವರ ಈ ಮಾತುಗಳನ್ನು ಕೇಳುತ್ತಲೇ ಅಣ್ಣಾನು ಮನದಲ್ಲೇ ನಾಚಿಕೊಂಡನು. ॥72॥ ಈ ರೀತಿ ಸಾಯಿಯ ದೃಷ್ಟಿಯಿಂದ ಮರೆಯಾಗಿ ಯಾವುದೂ ನಡೆಯುತ್ತಿರಲಿಲ್ಲ. ಎಲ್ಲೆಲ್ಲಿಯೂ ಎಲ್ಲವೂ ಅವರಿಗೆ (ಸಾಯಿಗೆ) ತಿಳಿದಿತ್ತು. ॥73॥ ಮತ್ತೊಂದು ಕಡೆ, ಅವನ (ಅಣ್ಣಾನ) ಸ್ನೇಹಿತ ಗಹನವಾದ ಆಲೋಚನೆಗಳಲ್ಲಿ ಮುಳುಗಿದ್ದನು. ಅವನಿಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಅಣ್ಣಾನಿಂದ ಉತ್ತರವೂ ಬರಲಿಲ್ಲ. ॥74॥ ನಂತರ ಅವನು ಪತ್ರದಲ್ಲಿ ಏನೇನು ನಡೆಯಿತೆಂಬ ಸಕಲ ವೃತ್ತಾಂತವನ್ನು ಬರೆದು ತಿಳಿಸಿದನು. ಅವನ (ಅಣ್ಣಾನ) ಸ್ನೇಹಿತನು ಅದನ್ನು ಓದಿ, ಅಚ್ಚರಿಗೊಂಡನು, ಮತ್ತು 'ಕರ್ಮಗತಿಯು ವಿಚಿತ್ರ' ಎಂದು ಯೋಚಿಸಿದನು. ॥75॥ "ಅದೆಂತಹ ಅದ್ಭುತ ವ್ಯವಹಾರ ನಮ್ಮ ಮಾರ್ಗದಲ್ಲಿ ಬಂದಿತ್ತು. ಅವನು ಫಕೀರನ ಮಾತಿಗೆ ಕುಣಿಯುವ ಬದಲು ತಾನೇ ಏಕೆ ನಿರ್ಧಾರ ತೆಗೆದುಕೊಳ್ಳಲಿಲ್ಲ? ಅವನು ಅನವಶ್ಯಕವಾಗಿ ಲಾಭವನ್ನು ಬಿಟ್ಟುಬಿಟ್ಟನು." ॥76॥ ದೇವರು ಕೊಡುತ್ತಾನೆ. ಆದರೆ ನಾವು ನಮ್ಮದೇ ಕರ್ಮಗಳಿಂದ ಕಳೆದು ಕೊಳ್ಳುತ್ತೇವೆ. ಕೆಟ್ಟ ದಿನಗಳು ಬಂದಾಗ

ಮನಸ್ಸು ಕೆಲಸ ಮಾಡುವುದನ್ನು ನಿಲ್ಲಿಸುತ್ತದೆ. ಈ ಒಂದು ಸ್ಪಷ್ಟ ವ್ಯವಹಾರದ ಮಧ್ಯೆ ಈ ಫಕೀರನು ಏಕೆ ಬರಬೇಕು? ॥77॥ ಸಾಮಾನ್ಯ ಜೀವನದ ರೀತಿಯನ್ನು ತ್ಯಜಿಸಿದವನು ಏನು ಹೇಳಲು ಸಾಧ್ಯ? ಅವನಾದರೋ ಮನೆ ಬಾಗಿಲಿನಿಂದ ಬಾಗಿಲಿಗೆ ಒಬ್ಬ ಹುಚ್ಚನ ತರಹ, ತಾನೇ ಊಟ ಮಾಡಲು ಭಿಕ್ಷೆ ಬೇಡುತ್ತಾನೆ. ॥78॥ ಅವನಿಗೆ ಅದನ್ನು ಪಡೆಯುವ ಯೋಗವಿಲ್ಲ. ಆದ್ದರಿಂದ ಅವನ ಮನಸ್ಸು ಈ ರೀತಿ ಆಡಿತು. ನಾನು ಬೇರೊಬ್ಬ ಪಾಲುದಾರನನ್ನು ನೋಡಬೇಕು. ಯಾವುದು ಆಗಬೇಕೆಂದಿಲ್ಲವೋ ಅದೆಂದಿಗೂ ನಡೆಯುವುದಿಲ್ಲ. ॥79॥ ಅದೇನಾದರೂ ಆಗಲಿ! ಅಣ್ಣಾ ಮಾತ್ರ ಸಂತೃಪ್ತನಾಗಿದ್ದನು. ಬೇರೊಬ್ಬನು ಅವನ ಸ್ನೇಹಿತನ ಪಾಲುದಾರನಾದನು. ಅವನ ಕರ್ಮಫಲ ಅವನನ್ನು ಅಲ್ಲಿಗೆ ಎಳೆದುಕೊಂಡು ಬಂದಿತ್ತು, ಅವನು ತೊಂದರೆಗೆ ಸಿಲುಕಿಕೊಂಡನು. ॥80॥ ಅವರು ಹಣಮಾಡಲು ಭರವಸೆ ಹೊಂದಿದ್ದರು. ಆದರೆ ಎಲ್ಲವೂ ತಿರುಗು ಮುರುಗಾಯಿತು. ಅವರಿಗೆ ನಷ್ಟ ಉಂಟಾಯಿತು. ಫಕೀರನ ಸಟಕ ಅವರನ್ನು ಹೊಡೆದಂತೆ ಆಗಿತ್ತು. ॥81॥ ನನ್ನ ದಾಮೂ ಅಣ್ಣ ಅದೆಷ್ಟು ಅದೃಷ್ಟವಂತ! ಅದೆಷ್ಟು ಬುದ್ಧಿವಂತ! ಸಾಯಿಯು ಅವನಿಗೆ ಒಂದು ನಿಜವಾದ ಮುತ್ತಿನಂತೆ! ಅವನೆಷ್ಟು ಬುದ್ಧಿವಂತ ಮತ್ತು ಮೇಧಾವಿ. ಭಕ್ತರಿಗೆ ಅವರೆಷ್ಟು ಕರುಣಾಮಯಿ! ॥82॥ ಸ್ನೇಹಿತನು ಹೇಳಿದನು, "ಅವನೇನಾದರೂ ನನ್ನ ಸಲಹೆಯನ್ನು ಕೇಳಿದ್ದರೆ ಅವನಿಗೆ ಭಾರಿ ನಷ್ಟವಾಗುತ್ತಿತ್ತು, ಅವನು ಫಕೀರನ ಮಾತುಕೇಳಿ ಉಳಿದುಕೊಂಡನು. ಅವನ ದೃಢಬುದ್ಧಿಯು ಅದೆಷ್ಟು ಅದ್ಭುತ! ॥83॥ "ಅವನ ಹುಚ್ಚನ್ನು ಕಂಡು ನಾನು ನಕ್ಕೆನು ಮತ್ತು ನನ್ನದೇ ಬುದ್ಧಿವಂತಿಕೆಯ ಬಗ್ಗೆ ಹೆಮ್ಮೆ ಪಟ್ಟೆನು. ಇದು ನಿಜವಾಗಿಯೂ ವ್ಯರ್ಥ. ಇದು ನಾನು ಪಡೆದ ಅನುಭವ. ॥84॥ "ನಾನು ಅನವಶ್ಯಕವಾಗಿ ಫಕೀರನ ನಿಂದೆ ಮಾಡಿದೆ. ನಾನು ಅವರ ಬುದ್ಧಿವಾದ ಕೇಳಿದ್ದರೆ ಅವರು ನನಗೂ ಸಮಯೋಚಿತವಾದ ಎಚ್ಚರಿಕೆ ಕೊಡುತ್ತಿದ್ದರು. ಮತ್ತು ನಾಈ ನಷ್ಟವನ್ನು ಅನುಭವಿಸುತ್ತಿರಲಿಲ್ಲ." ॥85॥ ಈಗ, ನಾನು ಮತ್ತೊಂದು ಕಥೆಯನ್ನು ತಿಳಿಸಿ ಅಣ್ಣಾನ ವಿಚಾರದ ನಿರೂಪಣೆಯನ್ನು ಮುಗಿಸುತ್ತೇನೆ. ಶ್ರೋತೃಗಳು ಆನಂದಹೊಂದಿ ಬಾಬಾರವರ ಬಗ್ಗೆ ಆಶ್ಚರ್ಯಚಕಿತರಾಗುತ್ತಾರೆ. ॥86॥ ನೋಡಿ, ಒಮ್ಮೆ ಏನಾಯಿತು! ಗೋವಾದಿಂದ ಒಂದು ಪಾರ್ಸಲ್ ಬಂದಿತು. ರಾಲೇ ಎಂದು ಒಬ್ಬ ಮಾಮಲೇದಾರನು ಕೆಲವು ಪ್ರಸಿದ್ಧವಾದ ಮಾವಿನ ಹಣ್ಣುಗಳನ್ನು ಕಳಿಸಿದನು. ॥87॥ ಅದು ಮಾಧವರಾವ್‌ನ ಹೆಸರಿಗೆ ಬಂದಿತ್ತು, ಅವುಗಳನ್ನು ಬಾಬಾರವರ ಚರಣಗಳಲ್ಲಿ ಗೌರವಪೂರ್ವಕವಾಗಿ ಅರ್ಪಿಸುವ ಉದ್ದೇಶವಿತ್ತು, ಅವುಗಳನ್ನು ಕೋಪರಗಾಂವನಲ್ಲಿ ಪಡೆದು ಶಿರಡಿಗೆ ತೆಗೆದುಕೊಂಡು ಬರಲಾಗಿತ್ತು. ॥88॥ ಮಸೀದಿಯಲ್ಲಿ, ಬಾಬಾರವರ ಎದುರಿಗೆ ಅದನ್ನು ತೆಗೆದಾಗ ಮಾವಿನ ಹಣ್ಣುಗಳು ಬಹಳ ಆಕರ್ಷಣೀಯವಾಗಿದ್ದವು. ಅಲ್ಲಿ ಮುನ್ನೂರಕ್ಕಿಂತ ಹೆಚ್ಚು ಹಣ್ಣುಗಳಿದ್ದವು. ಮತ್ತು ಹಣ್ಣುಗಳು ಮಧುರ ರಸಭರಿತವಾಗಿದ್ದು ಘಮಘಮಿಸುತ್ತಿದ್ದವು. ॥89॥ ಬಾಬಾರವರು ಎಲ್ಲವನ್ನೂ ನೋಡಿದರು ಮತ್ತು ಮಾಧವರಾವ್‌ಗೆ ಆ ಪೆಟ್ಟಿಗೆಯನ್ನು ಕೊಟ್ಟರು. ಅವನು ನಾಲ್ಕು ಹಣ್ಣುಗಳನ್ನು ಕೊಳಗ (ಬಾಬಾರವರು ಎಲ್ಲಾ ಆಹಾರಗಳನ್ನೂ

ಹಾಕುತ್ತಿದ್ದ ಮಡಕೆ)ದಲ್ಲಿ ಹಾಕಿ ಉಳಿದವುಗಳನ್ನು ತೆಗೆದುಕೊಂಡು ಹೋದನು. ॥90॥ ಹಣ್ಣುಗಳನ್ನು ಕೊಳಗದೊಳಗೆ ಹಾಕಿದ ಕೂಡಲೇ ಬಾಬಾ ಹೇಳಿದರು, “ಆ ಹಣ್ಣುಗಳು ದಾಮೂ ಅಣ್ಣಾನಿಗಾಗಿ. ಅವು ಅಲ್ಲಿರಲಿ.” ॥91॥ ಎರಡು ಗಂಟೆಗಳ ನಂತರ ದಾಮೂ ಅಣ್ಣಾ ಮಸೀದಿಗೆ ಬಂದನು. ಪೂಜೆ ಮಾಡಲು ಹೂವು ಮುಂತಾದವುಗಳ ಸಹಿತ ಬಂದನು. ॥92॥ ಅವನಿಗೆ ಈ ಮೊದಲು ಏನು ನಡೆಯಿತೆಂಬುದರ ಬಗ್ಗೆ ಅರಿವಿರಲಿಲ್ಲ. ಬಾಬಾರವರು ಜೋರಾಗಿ ಹೇಳಲು ಪ್ರಾರಂಭಿಸಿದರು. “ಆ ಮಾವಿನ ಹಣ್ಣುಗಳು ದಾಮೂನವು. ನಮ್ಮದಲ್ಲ. ಆದರೂ ಜನರು ತಮ್ಮ ಕೆಟ್ಟ ದೃಷ್ಟಿಯನ್ನು ಅವುಗಳ ಮೇಲೆ ಹಾಕುತ್ತಾರೆ. ॥93॥ “ಮಾವಿನ ಹಣ್ಣುಗಳು ಯಾರಿಗಾಗಿ ಇವೆಯೋ ಅವನೇ ತೆಗೆದುಕೊಳ್ಳಬೇಕು. ಬೇರೆಯವರಿಗಾಗಿ ಇದ್ದುದನ್ನು ನಾವೇಕೆ ತೆಗೆದುಕೊಳ್ಳಬೇಕು? ಅವು ಯಾರಿಗಾಗಿ ಮೀಸಲಿವೆಯೋ ಅವನೇ ತಿನ್ನಬೇಕು ಮತ್ತು ಅವುಗಳನ್ನು ತಿಂದು ಸಾಯಬೇಕು.” ॥94॥ ಅಣ್ಣಾ ಸಹಜವಾಗಿಯೇ ಪ್ರಸಾದವೆಂದು ಸ್ವೀಕರಿಸಿದನು. ಅಣ್ಣಾಗೆ ಚೆನ್ನಾಗಿ ತಿಳಿದಿತ್ತು, ಈ ಪದಗಳನ್ನು ಅಮಂಗಳಕರ ಎಂದು ತಪ್ಪು ಅರ್ಥ ಮಾಡಬಾರದೆಂದು ತಿಳಿದಿತ್ತು. ॥95॥ ಅಣ್ಣಾ ಪೂಜೆ ಮುಗಿಸಿ ಹೊರಟನು. ಅವನು ಪುನಃ ಹಿಂತಿರುಗಿ ಬಂದು ಕೇಳಿದನು, “ನನಗೆ ತಿಳಿಯದು, ಯಾವ ಹೆಂಡತಿಗೆ ಈ ಹಣ್ಣುಗಳನ್ನು ಕೊಡಬೇಕು, ದೊಡ್ಡವಳಿಗೋ ಅಥವಾ ಚಿಕ್ಕವಳಿಗೋ?” ॥96॥ ಬಾಬಾ ಹೇಳಿದರು, “ಚಿಕ್ಕವಳಿಗೆ ಕೊಡು. ಅವಳಿಗೆ ಎಂಟು ಮಕ್ಕಳಾಗುತ್ತಾರೆ. ನಾಲ್ಕು ಗಂಡು ಮತ್ತು ನಾಲ್ಕು ಹೆಣ್ಣು. ಎಲ್ಲವೂ ಮಾವಿನ ಹಣ್ಣಿನ ಲೀಲೆಯಿಂದ ಆಗುತ್ತದೆ.” ॥97॥ ಅವನಿಗೆ ಮಕ್ಕಳಿಲ್ಲದಿದ್ದುದರಿಂದ, ಅವನು ಬಹು ಪ್ರಯತ್ನ ಮಾಡಬೇಕಾಯಿತು. ಅವನು ಅನೇಕ ಸಾಧು ಸಂತರ ಕೃಪಾಶೀರ್ವಚನ ಪಡೆಯಲು ಭಜನೆ ಮಾಡಿಸಿದ್ದನು. ॥98॥ ಅವನು ಈ ಉದ್ದೇಶಕ್ಕಾಗಿಯೇ ಸಾಧು ಸಂತರ ತಾಳಕ್ಕೆ ಕುಣಿದಿದ್ದನು. ಮತ್ತು ತನ್ನ ಗ್ರಹಗತಿಯನ್ನು ತೃಪ್ತಿಪಡಿಸಲು ಜ್ಯೋತಿಶಾಸ್ತ್ರವನ್ನೂ ಪ್ರಯತ್ನ ಪಟ್ಟಿದ್ದನು. ಅದು ಎಷ್ಟೆಂದರೆ ತಾನೇ ಒಬ್ಬ ಜ್ಯೋತಿಷಿಯಾಗಿಬಿಟ್ಟಿದ್ದನು. ॥99॥ ಜ್ಯೋತಿಷ್ಯಶಾಸ್ತ್ರದ ಪ್ರಕಾರ ಅವನ ಜಾತಕದ ನಕ್ಷತ್ರದಲ್ಲಿ ಸಂತಾನ ಭಾಗ್ಯವಿರಲಿಲ್ಲ. ಅಣ್ಣಾನಿಗೆ ಇದು ಚೆನ್ನಾಗಿ ತಿಳಿದಿತ್ತು. ಮತ್ತು ಎಲ್ಲ ಭರವಸೆಯನ್ನೂ ಬಿಟ್ಟು ನಿರಾಶನಾಗಿದ್ದನು. ॥100॥ ಆದರೂ, ಸಂತಸಾಯಿಯ ಮುಖದಿಂದ ಬಂದ ವಚನಗಳು ಆಶ್ವಾಸನಾಯುಕ್ತವಾಗಿದ್ದವು. ಸಮರ್ಥರು ಸಂತಸ ಹೊಂದಿದ್ದರಿಂದ ಆಸೆಯು ಪುನಃ ಚಿಗುರಿತು. ॥101॥ ಅದು ಹಾಗಿರಲಿ. ಸ್ವಲ್ಪ ಸಮಯದ ನಂತರ ಬಾಬಾರವರ ಮಾತುಗಳು ಸಫಲವಾದವು. ಸಂತಾನ ಪ್ರಸಾದವು ಮೊಳಕೆ ಬಿಟ್ಟು ಫಲ ನೀಡಿತು. ಅವರು ನೀಡಿದ ಆಶ್ವಾಸನೆಯಂತೆ ಮಕ್ಕಳು ಜನಿಸಿದರು. ॥102॥ ಹೇಳಿದ ರೀತಿ ನಡೆಯಿತು. ಅಣ್ಣಾನ ಸ್ವತಃ ಭವಿಷ್ಯವಾಣಿಯು ಸುಳ್ಳಾಯಿತು. ಸಾಯಿಯ ಮಾತುಗಳು ಅಮೋಘವಾಗಿ ಸಫಲವಾದವು. ಆಶ್ವಾಸನೆ ನೀಡಿದ ತರಹ ಪುತ್ರರು ಜನಿಸಿದರು ॥103॥ ಅದು ಏನಾದರೂ ಆಗಿರಲಿ. ಇದು ಬಾಬಾರವರು ದೇಹಧಾರಿಯಾಗಿದ್ದಾಗ ನುಡಿದ ಮಾತುಗಳು. ಅನಂತರ ಅವರು ದೇಹವನ್ನು ತ್ಯಜಿಸಿದ ನಂತರವೂ ತಮ್ಮ

ಮಹಿಮೆಯನ್ನು ತಾವೇ ನಿರ್ಧರಿಸಿದ್ದರು. ॥104॥ "ನಾನು ದೇಹತ್ಯಾಗ ಮಾಡಿದ ನಂತರವೂ ನನ್ನ ಮಾತುಗಳಲ್ಲಿ ನಂಬಿಕೆ ಇಡು. ನನ್ನ ಸಮಾಧಿಯಿಂದಲೂ ನನ್ನ ಮೂಳೆಗಳು ನಿಮಗೆ ಆಶ್ವಾಸನೆ ನೀಡುತ್ತವೆ. ॥105॥ "ಕೇವಲ ನಾನೊಬ್ಬನೇ ಅಲ್ಲ, ನನ್ನಸಮಾಧಿಯೂ ಮಾತನಾಡುವುದು, ಚಲಿಸುವುದು ಮತ್ತು ಸಂಪರ್ಕ ಇಟ್ಟುಕೊಳ್ಳುವುದು. ಇವುಗಳನ್ನು ನನ್ನಲ್ಲಿ ಅನನ್ಯರಾಗಿ ಶರಣಾಗಿರುವವರಲ್ಲಿ ತೋರಿಸುವೆನು. ॥106॥ "ನಾನು ನಿಮ್ಮ ಕಣ್ಣುಗಳಿಂದ ಮರೆಯಾಗಿರುವೆನೆಂಬ ಚಿಂತೆ ಬೇಡ. ನೀವು ನನ್ನ ಮೂಳೆಗಳು ಮಾತನಾಡುವುದನ್ನು ಕೇಳುವಿರಿ ಮತ್ತು ನಿಮ್ಮ ಯೋಗಕ್ಷೇಮದ ಬಗ್ಗೆ ಚರ್ಚಿಸುವಿರಿ. ॥107॥ "ಯಾವಾಗಲೂ ನನ್ನ ಸ್ಮರಣೆಯನ್ನು ಮಾಡಿರಿ. ಅಂತಃಕರಣದಲ್ಲಿ ವಿಶ್ವಾಸಯುಕ್ತರಾಗಿರಿ. ನಿಷ್ಕಾಮ ಭಜನೆಯನ್ನು ಮಾಡಿರಿ. ನೀವು ನಿಮ್ಮ ಕಲ್ಯಾಣವನ್ನು ಅನುಭವಿಸುವಿರಿ. ॥108॥ "ಓ! ಸಮರ್ಥ ಸಾಯಿ ಸದ್ಗುರು, ಹೇ ಭಕ್ತರ ಕಾಮನೆಗಳನ್ನು ಈಡೇರಿಸುವ ಕಲ್ಪತರುವೇ! ಹೇಮಾಡನು ನಿನ್ನ ಚರಣಗಳನ್ನು ಮರೆಯದಿರಲಿ ಮತ್ತು ನಿನ್ನ ಚರಣಗಳ ಮೇಲಿನ ದೃಷ್ಟಿ ಮರೆಯಾಗದಿರಲಿ! ॥109॥ "ಓ ಗುರುವರಾ! ಭಕ್ತಜನರಿಗೆ ಕರುಣಾಕರನೇ, ಬೇಗನೆ ಧಾವಿಸಿ ಹತ್ತಿರ ಬನ್ನಿ. ಈ ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿ ಇಲ್ಲ. ಜನನ ಮರಣದ ಚಕ್ರದಿಂದ ನಮ್ಮನ್ನು ಬಿಡುಗಡೆಮಾಡಿಸಿ. ॥110॥ "ನಮ್ಮ ಸ್ವಭಾವವು ನಮ್ಮ ಪ್ರವೃತ್ತಿಗಳನ್ನು ಅವಲಂಬಿಸಿರುತ್ತವೆ. ನಮ್ಮ ಇಂದ್ರಿಯಗಳು ಬಾಹ್ಯದ ವಿಷಯಗಳಲ್ಲಿ ತತ್ಪರವಾಗಿವೆ. ವಿಷಯ ಭೋಗಗಳಲ್ಲಿ ಮಗ್ನವಾಗಿರುವ ಇಂದ್ರಿಯಗಳನ್ನು ಅಂತರ್ಮುಖಿಗೊಳಿಸಿ. ॥111॥ "ಈ ಭವಸಾಗರದಲ್ಲಿ ನಾವು ಸುಳಿಯ ಅಲೆಗಳಂತೆ ತಿರುಗುತ್ತಿದ್ದೇವೆ. ನಿಮ್ಮ ಸಮಯೋಚಿತವಾದ ಸಹಾಯ ನೀಡಿ ಭವದಿಂದ ವಿಮುಕ್ತರನ್ನಾಗಿ ಮಾಡಿ. ॥112॥ "ಇಂದ್ರಿಯಗಳು ಉನ್ಮಾದದಿಂದ ಓಡುತ್ತಿವೆ. ದುರಾಚಾರವು ಪ್ರವೃತ್ತವಾಗಿವೆ. ಉಕ್ಕಿ ಹರಿಯುತ್ತಿರುವ ಈ ನದಿಗೆ ಅಣೆಕಟ್ಟೆ ಕಟ್ಟಿ. ಇಷ್ಟೇ ಆಧಾರವಾದ ಇಂದ್ರಿಯಗಳನ್ನು ಹಿಂದಕ್ಕೆ ತಿರುಗಿಸು. ॥113॥ "ಇಂದ್ರಿಯಗಳು ಅಂತರ್ಮುಖವಾಗದಿದ್ದಲ್ಲಿ, ಆತ್ಮಸಾಕ್ಷಾತ್ಕಾರದ ಮಾರ್ಗವಿಲ್ಲ. ಅದಿಲ್ಲದಿದ್ದರೆ, ಆತ್ಯಂತಿಕ ಪರಮಸುಖವೆಲ್ಲಿಯದು? ಜನ್ಮವು ನಿರರ್ಥಕ. ॥114॥ "ಅಂತ್ಯದಲ್ಲಿ ಹೆಂಡತಿ ಅಥವಾ ಮಗ ಅಥವಾ ಅಸಂಖ್ಯಾತ ಮಿತ್ರರು ಯಾವುದೇ ಕೆಲಸಕ್ಕೆ ಬರುವುದಿಲ್ಲ. ನೀವೊಬ್ಬರೇ ನನ್ನ ಅಂತಿಮ ಯಾತ್ರೆಯ ಸಮಯದಲ್ಲಿ ಕೊನೆಗುಳಿಯುವ ಮಿತ್ರ, ನೀವು ಮಾತ್ರವೇ ಸುಖ ಮತ್ತು ಮುಕ್ತಿಯನ್ನು ನೀಡುವವರು. ॥115॥ "ಕರ್ಮ ಮತ್ತು ಅಕರ್ಮಗಳ ಬಲೆಯಿಂದ ಬಿಡಿಸಿ ಅದರ ದುಃಖದಿಂದ ಬಿಡುಗಡೆ ಮಾಡಿ. ದೀನರನ್ನು, ದುರ್ಬಲರನ್ನು, ನಿಮ್ಮ ಕೃಪಾಬಲದಿಂದ ಉದ್ಧಾರ ಮಾಡಿರಿ, ಹೇ ಮಹಾರಾಜ! ॥116॥ "ವಾದ ವಿವಾದ ಮತ್ತಿತರ ಕೆಟ್ಟತನಗಳನ್ನು ಬೇರು ಸಹಿತ ನಿರ್ಮೂಲ ಮಾಡಿ. ನಮ್ಮ ನಾಲಿಗೆಗಳು ನಿಮ್ಮ ನಾಮಸ್ಮರಣೆ ಮಾಡಲು ಉತ್ಸಾಹಿತವಾಗಲಿ. ಓ, ಸುನಿರ್ಮಲ ಸಾಯಿರಾಮ! ॥117॥ "ನನಗೆ ನಿಮ್ಮನ್ನು ಅತಿಯಾಗಿ ಪ್ರೇಮಿಸುವ ಶಕ್ತಿಕೊಡಿರಿ. ಅದರಿಂದ ನನ್ನ ಸಂಕಲ್ಪ ವಿಕಲ್ಪಗಳೆಲ್ಲವೂ ನನ್ನ ದೇಹ ಮತ್ತು ಮನೆ ಇವುಗಳನ್ನು ಮರೆಯುವಂತಾಗಲಿ. ನನ್ನ

ಅಹಂಭಾವವನ್ನೂ ತೆಗೆದುಹಾಕಲಿ. ॥118॥ "ನನ್ನನ್ನು ಸದಾ ನಿಮ್ಮ ನಾಮಸ್ಮರಣೆ ಮಾಡುವಂತೆ ಮಾಡಿ ಮತ್ತೆಲ್ಲ ವಿಷಯಗಳನ್ನು ಮರೆಯುವಂತಾಗಲಿ. ಮನಸ್ಸಿನಲ್ಲಿ ಚಂಚಲತೆಯನ್ನು ತೆಗೆದುಹಾಕಿ ನಿಶ್ಚಲವಾಗಿಯೂ ಶಾಂತಿಯುತವಾಗಿಯೂ ಇರುವಂತೆ ಮಾಡಿ. ॥119॥ "ನೀವು ಕೇವಲ ನಮ್ಮನ್ನು ಹಿಡಿದರೆ, ನಮ್ಮ ಅಜ್ಞಾನವೆಂಬ ರಾತ್ರಿಯ ಕತ್ತಲೆಯು ಮಾಯವಾಗುತ್ತದೆ. ಮತ್ತು ನಿಮ್ಮ ಬೆಳಕಿನಲ್ಲಿ ಸಂತೋಷವಾಗಿ ಜೀವಿಸುತ್ತೇವೆ. ಇದಕ್ಕಿಂತ ಹೆಚ್ಚಾಗಿ ಇನ್ನೇನನ್ನು ನಾವು ಇಚ್ಛಿಸಬಹುದು? ॥120॥ "ನಿಮ್ಮ ಜೀವನ ಚರಿತ್ರೆಯ ಅಮೃತವನ್ನು ಪಾನಮಾಡುವಂತೆ ಮಾಡಿದಿರಿ. ಮತ್ತು ನಿಮ್ಮ ಕೃಪೆಯಿಂದ ನಮ್ಮ ಅಜ್ಞಾನದ ನಿದ್ರೆಯಿಂದ ಎಚ್ಚರಿಸಿದಿರಿ. ಇದೊಂದು ಅತಿ ವಿಶೇಷವೆನಿಸುವುದಿಲ್ಲವೇ? ॥121॥ ಮುಂದಿನ ಅಧ್ಯಾಯ ಇದಕ್ಕಿಂತ ಮಧುರವಾಗಿದೆ. ಶ್ರೋತೃಗಳ ಕಾತರವು ತೃಪ್ತಿ ಹೊಂದುವುದು. ಸಾಯಿಚರಣಗಳಲ್ಲಿ ಅವರ ಪ್ರೀತಿಯು ವೃದ್ಧಿಸುತ್ತದೆ, ಶ್ರದ್ಧೆಯೂ ಸುದೃಢವಾಗುತ್ತದೆ. ॥122॥ ಒಮ್ಮೆ, ಒಬ್ಬ ಭಕ್ತನು ತನ್ನ ಗುರುವಿನ ಅನುಮತಿಯನ್ನು ಪಡೆದು ದರ್ಶನಕ್ಕಾಗಿ ಬಂದನು. ಸಾಯಿಚರಣಗಳಲ್ಲಿ ಅಭಿವಂದಿಸಿದಾಗ ತನ್ನ ಸ್ವಂತ ಗುರುವಿನಲ್ಲಿದ್ದ ಶ್ರದ್ಧೆಯು ಪ್ರಬಲವಾಯಿತು. ॥123॥ ಅದೇ ರೀತಿ, ಮತ್ತೊಬ್ಬ ಗೃಹಸ್ಥನು, ಶ್ರೀಮಂತನು, ಆದರೆ ಅನೇಕ ವಿಪತ್ತುಗಳಿಂದ ಕೂಡಿದ್ದವನು. ತನ್ನ ಪುತ್ರ ಮತ್ತು ಪತ್ನಿಯ ಜೊತೆ ಸಾಯಿಯ ದರ್ಶನಕ್ಕಾಗಿ ಬಂದನು. ॥124॥ ಅವನ ಆಸೆಯು ಯಾವ ರೀತಿ ಪೂರೈಸಿತು ಮತ್ತು ಮೂರ್ಛೆರೋಗದಿಂದ ಅವನ ಮಗ ಕೇವಲ ದರ್ಶನ ಮಾತ್ರದಿಂದ ಗುಣಮುಖನಾದನು! ಅವನಿಗೆ ಹಿಂದಿನ ಮತ್ತೊಂದು ಅನುಭವವೂ ನೆನಪಿಗೆ ಬಂದಿತು. ॥125॥ ಆದುದರಿಂದ ಹೇಮಾಡಪಂತನು ಸಾಯಿಯಲ್ಲಿ ಶರಣಾಗುತ್ತಾನೆ ಮತ್ತು ಗೌರವ ಪೂರ್ವಕವಾಗಿ ಶ್ರೋತೃಗಳನ್ನು ಬೇಡುತ್ತಾನೆ. ಸಾಯಿ ಚರಿತ್ರೆಯ ಕಡೆ ಮನಸ್ಸು ತಿರುಗಲಿ ಮತ್ತು ಕೇಳುವುದನ್ನು ಮತ್ತಷ್ಟು ಅರ್ಥಗರ್ಭಿತವನ್ನಾಗಿ ಮಾಡಲಿ ಎಂದು ಬೇಡುತ್ತಾನೆ. ॥126॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಭಕ್ತಾಭೀಷ್ಟ ಸಂಪಾದನೆ" ಎಂಬ ಇಪ್ಪತ್ತೈದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಒಂದು ಅಡಿಗೆ. ಅನ್ನ, ಹಾಲು, ಸಕ್ಕರೆಗಳಿಂದ ತಯಾರಾದದ್ದು.
2. ಒಂದು ಒಡವೆ. ಅದರ ಮೇಲೆ ಚಂದ್ರನ ಕಿರಣಗಳು ಬಿದ್ದರೆ ನೀರು ಹೊರಹೊಮ್ಮುತ್ತದೆ.



# ಅಧ್ಯಾಯ - 26

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥

## "ಅಪಸ್ಮಾರ ಮತ್ತು ಆತ್ಮಹತ್ಯೆಯ ನಿವಾರಣೆ ಹಾಗೂ ತನ್ನ ಗುರುಪದಗಳಲ್ಲಿ ಸ್ಥಿರೀಕರಣ"



ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಎಲ್ಲ ಭೌತಿಕ ವಸ್ತುಗಳು ಸುಖ ನೀಡುವಂತಹುದು. ಮತ್ತು ಇಡೀ ವಿಶ್ವವೇ ಆತ್ಮನಲ್ಲಿ ಕನ್ನಡಿಯಲ್ಲಿ ಪ್ರತಿಬಿಂಬಿಸುವ ನಗರದಂತೆ ತೋರಿಸುತ್ತದೆ. ಸಂದಿಗ್ಧತೆ ಇರುವುದು ವ್ಯಕ್ತವಾಗಿರುವ ಮಾಯೆಯಿಂದಾಗಿದೆ. ॥1॥ ನಿಜವಾಗಿಯೂ ಅದು ವ್ಯಕ್ತವಾಗಿಲ್ಲ. ಅದು ಎಂದಿಗೂ ಪರಬ್ರಹ್ಮನಲ್ಲಿ ಇದೆ. ಆದರೆ ಅದೂ ಸಹ ವಿಶ್ವದಲ್ಲಿಯೇ ಇದ್ದು ಚರ ಮತ್ತು ಅಚರ ವಸ್ತುಗಳನ್ನು ಅಸ್ತಿತ್ವಕ್ಕೆ ತಂದಿದೆ. ॥2॥ ಕನ್ನಡಿಯಲ್ಲಿ ಕಾಣುವುದೆಲ್ಲವೂ ಅದರಲ್ಲಿ ಇಲ್ಲ. ಕನಸಿನಲ್ಲಿ ಕಾಣುವ ದೃಶ್ಯಗಳು ನಿಜವಾಗಿ ಇರುವಂತೆ ಕಂಡರೂ ಎಚ್ಚರವಾದ ಕೂಡಲೇ ಎಲ್ಲವೂ ಹೊರಟು ಹೋಗುತ್ತವೆ॥3॥ ಜಾಗೃತ ಅವಸ್ಥೆಯು ಪ್ರಾಪ್ತವಾದಾಗ ಕನಸಿನ ಲೋಕ ಮಾಯವಾಗುತ್ತದೆ. ಪ್ರಕಾಶದ ಜೊತೆ ಸಂಯೋಗದ ಆನಂದ ಸದ್ಗುರುವಿನ ಮಹಾವಾಕ್ಯಗಳ ಪ್ರಭಾವದಿಂದ ಉಂಟಾಗುತ್ತದೆ. ॥4॥ ವಿಶ್ವದ ಅಸ್ತಿತ್ವದ ಚೇತನಾ ತರಂಗಗಳು ನಿಜವಾಗಿಯೂ ಸತ್‌ನ ಅಧಿಷ್ಠಾನವಾಗಿದೆ. ಮತ್ತೆ ಯಾವುದನ್ನೂ ಅವಲಂಬಿಸಿಲ್ಲ. ಪರಮಾತ್ಮ (ಈಶ್ವರ)ನು ಪ್ರಸನ್ನನಾದಾಗ ಮಾತ್ರವೇ ಈ ಸಾಕ್ಷಾತ್ಕಾರವು ಸಾಧ್ಯ. ॥5॥ ಸದಾತ್ಮಕ ಗುಣದಿಂದ ಕೂಡಿದ ಸ್ವಪ್ರಕಾಶವೇ ಆತ್ಮದ ಸ್ವರೂಪವೆಂಬುದನ್ನು ಅರ್ಥಮಾಡಿಕೋ. ಆಗ ಈ ಭೂತಭೌತಿಕ ಪ್ರಪಂಚವು ಮಾಯೆಯ ಸ್ವರೂಪ ಮತ್ತು ಅದು ಕೇವಲ ಕೌತುಕಭರಿತ

ಆಟವಾಗಿದೆ. ॥6॥ ಇಡೀ ವಿಶ್ವವೇ ಭೂತ ಭೌತಿಕ ವಸ್ತುಗಳಿಂದ ಕೂಡಿರುವುದು, ಬ್ರಹ್ಮನಿಂದ ಪ್ರಾರಂಭವಾಗಿ ಒಂದು ಹುಲ್ಲು ಕಡ್ಡಿಯವರೆಗೆ ಎಲ್ಲವೂ ಕಲ್ಪಿತವೇ. ವಿಸ್ತಾರವಾದ ಈ ಜಗತ್ತೇ ಕೇವಲ ಮಾಯೆಯಿಂದ ವಿಜೃಂಭಿತವಾಗಿದೆ. ॥7॥ ಸರ್ಪ, ಹೂವಿನ ಮಾಲೆ, ದಂಡ, ಪ್ರಹಾರ ಇವುಗಳನ್ನು ಹಗ್ಗವೆಂದು ಪರಿಗಣಿಸುತ್ತಾರೆ. ಇವುಗಳ ನಿಜವಾದ ಅಸ್ತಿತ್ವವನ್ನು ಅವರು ಅರಿಯರು. ಅದೇ ರೀತಿ, ಇಡೀ ವಿಶ್ವದ ವಿಕಾಸವು ನಿಜಸ್ವರೂಪವೆನ್ನಲು ಯಾವುದೇ ಆಧಾರವಿಲ್ಲ. ॥8॥ ಈ ಜಗತ್ತೆಲ್ಲವೂ ಮಾಯಾಮಯವಾಗಿ ಕಾಣಿಸುತ್ತದೆ. ಇದು ತತ್ತ್ವಜ್ಞಾನದ ಅಂತ್ಯವಾಗುತ್ತದೆ. ಆಗಲೇ ಗುರುವಾಕ್ಯಗಳು ಪ್ರಬೋಧರೂಪವಾಗಿ ಸಾಕ್ಷಾತ್ಕಾರವನ್ನು ದಯಪಾಲಿಸುತ್ತವೆ. ॥9॥ 'ಗೃಣಾತ್'[1] ಎಂಬ ಕ್ರಿಯಾ ವಾಚಕ ಪದದ ಅರ್ಥವನ್ನು ಕುರಿತು ಚಿಂತನ ಮಾಡಿದರೆ ಮೂರನೆಯ ಪುರುಷ ಏಕವಚನ ಆಗಿದ್ದು ಕೇವಲ ಗುರು ಮಾತ್ರವೇ ತತ್ತ್ವೋಪದೇಶದ ಸಮಯದಲ್ಲಿ ಅದರ ಅರ್ಥವನ್ನು ವಿವರಿಸಲು ಸಮರ್ಥನು. ॥10॥ ಆದುದರಿಂದ, ಬಾಬಾರವರನ್ನು ಪ್ರಾರ್ಥಿಸೋಣ, "ದಯಮಾಡಿ ನನ್ನ ಇಂದ್ರಿಯಗಳನ್ನು ಅಂತರ್ಮುಖಿಗೊಳಿಸಿ ನಿತ್ಯ ಅನಿತ್ಯಗಳನ್ನು ವಿವೇಚಿಸುವ ವಿವೇಕವನ್ನು ದಯಪಾಲಿಸಿ, ನನಗೆ ವೈರಾಗ್ಯವೆಂಬ ಬಹುಮಾನವನ್ನು ಕೊಡಿ. ॥11॥ ನಾನಾದರೋ ಸದಾ ಅವಿವೇಕಿಯಾದ ಮೂಢ. ನಿಗೂಢವಾದ ಅವಿದ್ಯೆಯಿಂದ ನಿರ್ಬಂಧಿತ. ನನ್ನ ಬುದ್ಧಿಯು ಸದಾ ಕುತರ್ಕದಿಂದ ಕೂಡಿರುತ್ತದೆ. ಅದರಿಂದಾಗಿ ನನಗೆ ಸದಾ ಸಮಸ್ಯೆಗಳನ್ನುಂಟುಮಾಡುತ್ತದೆ. ॥12॥ ಗುರುವಿನ ವೇದಾಂತ ವಚನಗಳಲ್ಲಿ ಅಚಲವಾದ ಭರವಸೆ ಇಡುವಂತೆ ನೋಡಿಕೊಳ್ಳಿ, ಏಕೆಂದರೆ ಅವು ವೇದಗಳಷ್ಟೇ ಶ್ರೇಷ್ಠ. ನನ್ನ ಮನಸ್ಸನ್ನು ಕನ್ನಡಿಯಂತೆ ಮಾಡಿ. ಅದರಲ್ಲಿ ಆತ್ಮತತ್ತ್ವವು ಪ್ರಕಟವಾಗಲಿ. ॥13॥ ಅಷ್ಟೇ ಅಲ್ಲದೆ, ಸದ್ಗುರು ಸಾಯಿನಾಥ, ನನಗೆ ಈ ಜ್ಞಾನವು ಪೂರ್ಣವಾಗಿ ಅರ್ಥವಾಗುವಂತೆ ಮಾಡಿ. ಏಕೆಂದರೆ ಅನುಭವವೇ ಇಲ್ಲದೆ ಯಾರು ಅದಕ್ಕೆ ಮಾತನಾಡುವರೋ ಆಗ ಅದು ಕೇವಲ ಬಡಬಡಿಸಿದಂತಾಗುತ್ತದೆ. ಅದರಿಂದ ಪರಮಾರ್ಥ ಸಾಧಿಸಲು ಹೇಗೆ ಸಾಧ್ಯ? ॥14॥ ಆದುದರಿಂದ, ಬಾಬಾ, ನಿಮ್ಮ ಅಪೂರ್ವ ಶಕ್ತಿಯಿಂದ ಈ ಜ್ಞಾನವನ್ನು ನಾನೇ ಪಡೆಯುವಂತೆ ಮಾಡಿ. ಅದರಿಂದಾಗಿ ನಾನು ಸಹಜವಾಗಿಯೇ ಸಾಯುಜ್ಯ ಪದವನ್ನು ಪಡೆಯಬಹುದು. ಕೃಪೆಮಾಡಿ ಈ ಭಿಕ್ಷೆಯನ್ನು ನೀಡಿ ಎಂದು ಬೇಡುತ್ತೇನೆ. ॥15॥ ಮುಂದುವರೆದು, ಓ ದೇವಾ ಸದ್ಗುರು ಸಾಯಿ, ನನ್ನ ದೇಹದ ಅಹಂಭಾವವನ್ನು ನಿಮಗೆ ಅರ್ಪಿಸುತ್ತೇನೆ. ಇನ್ನು ಮುಂದೆ ನನ್ನನ್ನು ನೀವು ಜೋಪಾನ ಮಾಡಿ. ಏಕೆಂದರೆ ನನ್ನ ಹತ್ತಿರ ನಾನು ಎನ್ನುವುದು ಇಲ್ಲ. ॥16॥ ನನ್ನ ದೇಹಾಭಿಮಾನವನ್ನು ತೆಗೆದು ಹಾಕಿ. ಅದರಿಂದಾಗಿ ಸುಖ ಅಥವಾ ದುಃಖ ಯಾವುದನ್ನೂ ನಾನು ಅನುಭವಿಸುವುದಿಲ್ಲ. ನಿಮ್ಮ ಇಚ್ಛಾನುಸಾರ ಸೂತ್ರಧಾರನಾಗಿ ಚಾಲನೆ ನಡೆಸಿ. ಅದರಿಂದಾಗಿ ನಾನು ಕೇವಲ ನಿಮ್ಮ ಇಚ್ಛೆಯಂತೆ ನಡೆಯಬಲ್ಲೆನು. ॥17॥ ಅಥವಾ, ನೀವೇ ನನ್ನ ಅಹಂ ಆಗಿ ಮತ್ತು ನೀವೇ ಮಾಡುವವರಾಗಿ ಮತ್ತು ಅದರ ಫಲ ಸುಖ ದುಃಖಗಳೆರಡನ್ನೂ ಅನುಭವಿಸುವವರಾಗಿ. ಅದರ ಬಗ್ಗೆ ಯಾವುದೇ ವಿಮಂಚನೆ

ಇಟ್ಟುಕೊಳ್ಳುವುದು ಬೇಡ. ॥18॥ ಜಯವಾಗಲಿ, ಜಯವಾಗಲಿ, ಪೂರ್ಣಕಾಮನಿಗೆ. ನಮ್ಮ ಕಾಮನೆಗಳನ್ನು ಪೂರೈಸುವವನಿಗೆ. ನನ್ನ ಪ್ರೀತಿಯನ್ನು ನಿಮ್ಮ ಚರಣಗಳಲ್ಲಿ ಸೇರಿಸಿಕೊಳ್ಳಿ. ಹೇ ಮಂಗಳಧಾಮ! ಈ ಚಂಚಲ ಮನಸ್ಸು ನಿಮ್ಮ ಚರಣಗಳಲ್ಲಿ ಪೂರ್ಣ ಶಾಂತಿಯನ್ನು ಹೊಂದಲಿ. ॥19॥ ನೀವಲ್ಲದೆ ಮತ್ತೆ ಯಾರು ನಮ್ಮ ಕ್ಷೇಮಕ್ಕಾಗಿ ಹಿತವಚನ ನುಡಿಯಬಲ್ಲರು? ನಮ್ಮನ್ನು ದುಃಖಗಳಿಂದ ಪಾರುಮಾಡುವವರು ಮತ್ತು ನಮ್ಮ ಮನಸ್ಸಿಗೆ ಸಮಾಧಾನ ತರುವವರು ಮತ್ಯಾರು? ॥20॥ ಇದು ಶಿರಡಿಯ ಸೌಭಾಗ್ಯ, ಬಾಬಾ, ನೀವು ಇಲ್ಲಿಗೆ ಆಗಮಿಸಿದಿರಿ. ಅನಂತರ ನೀವು ಇಲ್ಲಿಯೇ ನೆಲೆಸಿದಿರಿ ಮತ್ತು ನಿಮ್ಮ ವಾಸ್ತವ್ಯದಿಂದಲೇ ಈ ಕ್ಷೇತ್ರಕ್ಕೆ ಯಾತ್ರಾಸ್ಥಳದ ಅಸ್ತಿತ್ವವನ್ನು ಕೊಟ್ಟಿರಿ. ॥21॥ ಶಿರಡಿಯ ಸುಕೃತವು ಧನ್ಯ. ಈ ಕೃಪಾವಂತ ಸಾಯಿಯು ಈ ಸ್ಥಳವನ್ನು ಭಾಗ್ಯವಂತವನ್ನಾಗಿ ಮಾಡಿ ತಮ್ಮ ವಾಸ್ತವ್ಯದಿಂದಲೇ ಅಲಂಕೃತವಾಗಿ ಮಾಡಿದರು. ॥22॥ ನೀವೇ ನನ್ನನ್ನು ಚೇತನಗೊಳಿಸಿದಿರಿ. ನೀವು ಮಾತ್ರವೇ ನನ್ನ ವಾಣಿಯನ್ನು ಉತ್ತೇಜಿಸಿದಿರಿ. ಹಾಗಿರಲು ನಿಮ್ಮ ಗುಣಗಾನ ಮಾಡಲು ನಾನು ಯಾರು? ನೀವೇ ಕರ್ತೃ ಮತ್ತು ಕರ್ತಾರನೂ ನೀವೇ. ॥23॥ ನಿತ್ಯವೂ ನಿಮ್ಮ ಸಮಾಗಮದಲ್ಲಿರುವುದೇ ನಮಗೆ ಆಗಮ ಶಾಸ್ತ್ರ ಅಧ್ಯಯನ. ನಿಮ್ಮ ಚರಿತ್ರೆಯನ್ನು ನಿತ್ಯ ಶ್ರವಣ ಮಾಡುವುದೇ ನಮಗೆ ಧರ್ಮಗ್ರಂಥಗಳ ಪಾರಾಯಣ. ॥24॥ ಒಂದು ಕ್ಷಣವೂ ವ್ಯರ್ಥಮಾಡದಂತೆ ನಿಮ್ಮನ್ನು ಸ್ಮರಿಸುವುದು, ಕಥನ ಮತ್ತು ಕೀರ್ತನೆಗೆ ಸಮ. ಇದೇ ನಮ್ಮ ನಿತ್ಯ ಧ್ಯಾನದ ಅನುಸಂಧಾನವು ಮತ್ತು ಅದೇ ನಮಗೆ ಸಮಾಧಾನಕರವಾದುದು. ॥25॥ ಭಜನೆಯಿಂದ ವಿಮುಖಿ ಮಾಡುವಂತಹ ಸುಖವನ್ನು ಅನುಭವಿಸಲು ಇಷ್ಟಪಡುವುದಿಲ್ಲ. ಏಕೆಂದರೆ ಪರಮಾರ್ಥವನ್ನು ಸಾಧಿಸಲು ಇದಕ್ಕಿಂತ ದೊಡ್ಡದಾದ ಅಧಃಪತನಕ್ಕೆ ಕಾರಣ ಮತ್ತೆ ಯಾವುದಿದೆ? ॥26॥ ನನ್ನ ಆನಂದಾಶ್ರುಗಳು ಬೆಚ್ಚಗಿನ ನೀರಾಗಿ ನಿಮ್ಮ ಚರಣಗಳನ್ನು ತೊಳೆಯಲಿ. ನಿಮ್ಮ ದೇಹವು ಶುದ್ಧ ಪ್ರೇಮವೆಂಬ ಚಂದನದಿಂದ ಲೇಪಿಸಲ್ಪಡಲಿ. ನಿಜ ಭಕ್ತಿಯೆಂಬ ವಸ್ತ್ರದಿಂದ ನಿಮ್ಮ ಶರೀರವು ಅಲಂಕರಿಸಲ್ಪಡಲಿ. ॥27॥ ಈ ಅಂತರಂಗ ಪೂಜಾ ವಿಧಾನವು ಬಾಹ್ಯೋಪಚಾರ ಪೂಜೆಗಿಂತಲೂ ಹೆಚ್ಚಾಗಿ ನಿಮ್ಮನ್ನು ಒಲಿಸಿಕೊಳ್ಳುವಂತಹುದಾಗಲಿ. ಅದು ನಿಮ್ಮನ್ನು ಸುಪ್ರಸನ್ನನಾಗಿಯೂ ಸುಖಸಂಪನ್ನನಾಗಿಯೂ ಮಾಡಲಿ. ॥28॥ ನಾವು ಪರಿಶುದ್ಧವಾದ ಅಷ್ಟ ಸಾತ್ವಿಕಭಾವಗಳೆಂಬ (ಕರುಣೆ, ಪ್ರೀತಿ, ಸಹನೆ, ಕ್ಷಮೆ, ತ್ಯಾಗ/ವೈರಾಗ್ಯ, ಅನುಕಂಪ, ವಿಶ್ವಾಸ ಮತ್ತು ತಾಳ್ಮೆ) ಕಮಲಗಳನ್ನು (ಎಂಟು ಪುಷ್ಪಗಳನ್ನು) ಅರ್ಪಿಸೋಣ. ಮತ್ತು ನಮ್ಮ ಏಕಾಗ್ರ ಚಿತ್ತವನ್ನು ಫಲವನ್ನಾಗಿ ಸಮರ್ಪಿಸೋಣ. ॥29॥ ನಾವು ಭಕ್ತಿಯೆಂಬ ಬುಕಾ[3] ತಿಲಕವನ್ನು ಹಣೆಗೆ ಹಚ್ಚೋಣ. ದೃಢವಾದ ಭಕ್ತಿಯೆಂಬ ಒಡ್ಯಾಣವನ್ನು ಕಟ್ಟೋಣ. ಮತ್ತು ನಮ್ಮ ಕುತ್ತಿಗೆಯನ್ನು ನಿಮ್ಮ ಪಾದಗಳ ಅಂಗುಷ್ಠಗಳ ಮೇಲೆ ಇಡೋಣ. ಅನಂತರ ನವಿರಾದ ಅಲೌಕಿಕ ಸುಖವನ್ನು ಅನುಭವಿಸೋಣ. ॥30॥ ಪ್ರೀತಿಯೆಂಬ ರತ್ನಗಳಿಂದ ಅಲಂಕಾರ ಮಾಡಿ, ಮನಃಪೂರ್ವಕವಾಗಿ ಎಲ್ಲಾ ಕೆಟ್ಟ ದೃಷ್ಟಿಯನ್ನು ತೆಗೆದು ಹಾಕೋಣ. ನಮ್ಮ ಪಂಚಪ್ರಾಣಗಳನ್ನು

ಚಾಮರವನ್ನಾಗಿ ಮಾಡಿ ಅವರ ತಾಪವನ್ನು ನಿವಾರಣೆ ಮಾಡೋಣ. ॥31॥ ಈ ರೀತಿಯ ಸ್ನಾನಂದಪೂಜೆಯನ್ನು ಮುಗಿಸಿ. ಅಷ್ಟಾಂಗ ಪೂಜೆ, ಗಂಧ ಸಮರ್ಪಣೆ ಮತ್ತು ಅಭಿಷೇಕ ಮಾಡೋಣ. ಈ ರೀತಿ ನಾವು ನಿಮ್ಮ ಪೂಜೆ ಮಾಡುತ್ತೇವೆ, ಸಾಯಿರಾಜ, ಇದು ನಮ್ಮ ಒಳಿತಿಗಾಗಿಯೇ. ॥32॥ ನಾವು ನಮ್ಮ ಇಷ್ಟಾರ್ಥ ಸಿದ್ಧಿಗಾಗಿ ಸದಾಕಾಲ 'ಸಾಯಿಸಮರ್ಥ' ಎಂದು ನಿತ್ಯವೂ ಸ್ಮರಿಸುತ್ತೇವೆ. ಇದೇ ಮಂತ್ರದಿಂದ ಪರಮಾರ್ಥ ಸಾಧನೆಯನ್ನೂ ಪಡೆಯಬಹುದು ಮತ್ತು ತಮ್ಮ ನಿಷ್ಠೆಯಲ್ಲಿ ಕೃತಾರ್ಥರಾಗುತ್ತೇವೆ. ॥33॥ ಹಿಂದಿನ ಅಧ್ಯಾಯದಲ್ಲಿ, ದಯಾಘನರಾದ ಸಾಯಿಸಮರ್ಥರು ಯಾವ ರೀತಿ ತಮ್ಮ ಭಕ್ತರ ಕಲ್ಯಾಣಕ್ಕಾಗಿ ಶಿಕ್ಷಣ ನೀಡುತ್ತಿದ್ದರು ಎಂಬುದನ್ನು ನಿರೂಪಿಸಲಾಗಿದೆ. ॥34॥ ಈಗ, ಈ ಅಧ್ಯಾಯದಲ್ಲಿ ಯಾವ ರೀತಿ ಭಕ್ತರ ಶ್ರದ್ಧೆಯು ತಮ್ಮದೇ ಗುರುವಿನಲ್ಲಿ ಸ್ಥಾಪಿತವಾಯಿತೋ ಆ ಕಥೆಯನ್ನು ಆಲಿಸಿರಿ. ॥35॥ ಹಿಂದಿನ ಅಧ್ಯಾಯದಲ್ಲಿ ಭಕ್ತನಾದ ಪಂತನ ಕಥಾಮೃತದ ನಿದರ್ಶನ ನೀಡಲಾಯಿತು. ಶ್ರೋತೃಗಳು ಅದನ್ನು ಏಕಾಗ್ರಚಿತ್ತರಾಗಿ ಕೇಳಿ, ನಿಶ್ಚಿತವಾದ ಸಂಗತಿಗಳನ್ನು ಅರ್ಥಮಾಡಿಕೊಳ್ಳಬೇಕು. ॥36॥ ಅದೆಷ್ಟು ರೀತಿಯ ಅನುಭವಗಳನ್ನು ಅವರು ಕೊಟ್ಟರು. ಮತ್ತು ಅವರು ಯಾವ ರೀತಿ ಭಕ್ತಿಯ ಅಂಜನವನ್ನು ಕಣ್ಣಿಗೆ ಹಾಕಿದರು, ಯಾವ ರೀತಿ ತಮ್ಮ ಗುರುಚರಣಗಳಲ್ಲಿ ಅಚಲವಾಗಿ ನೆಲಸಿದರು ಮತ್ತು ಯಾವ ರೀತಿ ಮನಸ್ಸು ಶಾಂತಿಯನ್ನು ಹೊಂದಿತು. ॥37॥ ಒಮ್ಮೆ ಪಂತ್ ಎಂಬ ಭಕ್ತನು ಶಿರಡಿಗೆ ಹೋದನು. ತನ್ನ ಮಿತ್ರರೊಡನೆ ಸಾಯಿ ಸಮರ್ಥರ ದರ್ಶನಕ್ಕಾಗಿ ಬಹಳ ಪ್ರಯತ್ನಮಾಡಿ ಹೋದನು. ॥38॥ ಅವನು ಈಗಾಗಲೇ ಅನುಗ್ರಹೀತನಾಗಿದ್ದು ತನ್ನ ಗುರುಚರಣಗಳಲ್ಲಿ ಸ್ಥಿತನಾಗಿದ್ದನು. ಅವನಿಗೆ ಶಿರಡಿಗೆ ಹೋಗುವ ಬಗ್ಗೆ ಹಿಂಜರಿಕೆ ಇತ್ತು॥39॥ ಆದರೂ, ಅದೃಷ್ಟವಶಾತ್ ಅನಿರೀಕ್ಷಿತವಾಗಿ ಯೋಗ ಕೂಡಿ ಬಂದು ಸಾಯಿದರ್ಶನದ ಅವಕಾಶ ಒದಗಿ ಬಂದಿತು ಮತ್ತು ಅತೀವ ಸಂತೋಷವನ್ನು ತಂದುಕೊಟ್ಟಿತು. ॥40॥ ಮಾನವನು ಒಂದು ಯೋಜನೆ ಮಾಡುತ್ತಾನೆ. ದೇವರು ಮತ್ತೊಂದನ್ನು ಮಾಡುತ್ತಾನೆ. ಅದೃಷ್ಟಕ್ಕೆ ವಿರುದ್ಧವಾಗಿಯಾದರೂ ಏನನ್ನೂ ಮಾಡಲಾಗುವುದಿಲ್ಲ. ಸ್ವಸ್ಥವಾದ ಮನಸ್ಸಿನಿಂದ ಅದನ್ನು ಕೇಳಿ. ॥41॥ ಅನೇಕ ಜನರು ಶಿರಡಿಗೆ ಹೋಗುವ ಉದ್ದೇಶದಿಂದ ತಮ್ಮ ಮನೆಗಳಿಂದ ಹೊರಟರು. ರೈಲಿನಲ್ಲಿ ಸಕಲರೂ ಒಟ್ಟಿಗೆ ಆನಂದದಿಂದ ಪ್ರಯಾಣ ಮಾಡಿದರು. ॥42॥ ಅವರೆಲ್ಲರೂ ರೈಲುಗಾಡಿಯನ್ನು ಹತ್ತಿದಾಗ, ಅಲ್ಲಿ ಅನಿರೀಕ್ಷಿತವಾಗಿ ಪಂತ್‌ನು ಭೇಟಿಯಾದನು. ಅವನಾಗಲೇ ಅದರಲ್ಲಿ ಕುಳಿತಿದ್ದನು. ಪಂತ್‌ನಿಗೆ ಅವರು ಶಿರಡಿಗೆ ಹೋಗುವ ಯೋಜನೆ ತಿಳಿಯಿತು. ॥43॥ ಆ ಗುಂಪಿನಲ್ಲಿ ಪಂತ್‌ನ ಕೆಲವು ಸ್ನೇಹಿತರಿದ್ದರು. ಮತ್ತು ಅವನ ಮಗುವಿನ ಅತ್ತೆಯವರು ಮತ್ತು ಮಾವನವರು ಸಹ ಇದ್ದರು. ಪಂತ್‌ನಿಗೆ ಶಿರಡಿಗೆ ಹೋಗುವ ಮನಸ್ಸು ಇಲ್ಲದಿದ್ದರೂ ಅವರು ತಮ್ಮ ಜೊತೆ ಬರುವಂತೆ ಆಗ್ರಹಪಡಿಸಿದರು. ॥44॥ ಆರಂಭದಲ್ಲಿ ಪಂತ್‌ನಿಗೂ ಸಹ ಅಲ್ಲಿಯವರೆಗೂ ಟಿಕೇಟು ಇದ್ದಿತು. ಮೊದಲು ಅಲ್ಲಿಗೆ ಹೋಗುವ ವಿಚಾರವೂ ಇತ್ತು. ಆದರೆ ಅನಂತರ ಅವನು ತನ್ನ ವಿಚಾರವನ್ನು ಬದಲಿಸಿದ್ದನು. ॥45॥ ಸ್ನೇಹಿತರೂ,

ಮಾವನವರೂ ಅವನನ್ನು ತಮ್ಮ ಜೊತೆ ಶಿರಡಿಗೆ ಬರಲು ಹೇಳಿದರು. ಪಂತ್‌ನು ತನಗೆ ಮನಸ್ಸಿಲ್ಲದಿದ್ದರೂ ಅವರ ಆಗ್ರಹಕ್ಕೆ ಮಣಿದನು. ॥46॥ ಪಂತ್‌ನು ವಿರಾರ್‌ನಲ್ಲಿ ಇಳಿದನು. ಗುಂಪಿನ ಇನ್ನುಳಿದವರು ಮುಂಬಯಿವರೆಗೆ ಪ್ರಯಾಣವನ್ನು ಮುಂದುವರೆಸಿದರು. ಪಂತ್‌ನು ಖರ್ಚಿಗಾಗಿ ಸ್ವಲ್ಪ ಹಣವನ್ನು ತೆಗೆದುಕೊಂಡು ಅನಂತರ ಅವನೂ ಮುಂಬಯಿಗೆ ಹೊರಟನು. ॥47॥ ಅವನು ತನ್ನ ಸ್ನೇಹಿತರ ಮನಸ್ಸನ್ನು ನೋಯಿಸಲು ಇಷ್ಟಪಡಲಿಲ್ಲ. ಅವನು ತನ್ನ ಸ್ವಂತ ಗುರುವಿನ ಅನುಮತಿ ಪಡೆದು ಅನಂತರ ಎಲ್ಲರ ಜೊತೆ ಸಂತೋಷವಾಗಿ ಶಿರಡಿಗೆ ಬಂದನು. ॥48॥ ಎಲ್ಲರೂ ಮಸೀದಿಗೆ ಬೆಳಿಗ್ಗೆ ಹನ್ನೊಂದಕ್ಕೆ ಹೋದರು. ಅಲ್ಲಿ ಭಕ್ತರ ಗುಂಪು ಪೂಜಿಸುತ್ತಿರುವುದನ್ನು ನೋಡಿ ಉಲ್ಲಾಸಹೊಂದಿದರು. ॥49॥ ಬಾಬಾರವರ ಧ್ಯಾನಾವಸ್ಥೆಯನ್ನು ನೋಡಿ ಎಲ್ಲರೂ ಆನಂದ ಸಂಪನ್ನರಾದರು. ತಕ್ಷಣವೇ, ಪಂತ್‌ನು ಅಪಸ್ಮಾರದ ಬಾಧೆಯಿಂದ ಜ್ಞಾನ ತಪ್ಪಿ ಬಿದ್ದುಬಿಟ್ಟನು. ॥50॥ ಅವನ ಅಂಗಾಂಗಗಳಲ್ಲಿ ಚಲನೆ ಇರಲಿಲ್ಲ. ಮತ್ತು ಅವನು ನಿಶ್ಚೇಷ್ಟನಾಗಿದ್ದನು. ಅವನ ಜೊತೆ ಬಂದವರಲ್ಲಿ ಚಿಂತೆ ಉದ್ಭವಿಸಿತು. ಮತ್ತು ಅತಿಯಾಗಿ ಗಾಬರಿಗೊಂಡರು. ॥51॥ ಸಾಯಿಬಾಬಾರವರ ಕೃಪಾದೃಷ್ಟಿಯಿಂದ ಮತ್ತು ತಂಡದ ಇತರರ ಸಹಾಯದಿಂದ ಹಣೆಯ ಮೇಲೆ ನೀರು ಚಿಮುಕಿಸಿದರು. ಅವನಿಗೆ ಪೂರ್ಣವಾಗಿ ಜ್ಞಾನ ಬಂದಿತು. ॥52॥ ಎಚ್ಚರವಾದೊಡನೆ ಅವನು ಗಡಿಬಿಡಿಗೊಂಡನು. ಅವನು ಆಗತಾನೇ ನಿದ್ದೆಯಿಂದ ಎಚ್ಚರಗೊಂಡ ರೀತಿಯಲ್ಲಿತ್ತು. ॥53॥ ಬಾಬಾರವರು ಪೂರ್ಣ ಅಂತರ್ಜ್ಞಾನಿಯಾಗಿದ್ದು ಅವನು ಮತ್ತೊಬ್ಬ ಗುರುವಿನಶಿಷ್ಯನೆಂಬುದನ್ನು ಅರಿತಿದ್ದರು. ಅವರು ಅಭಯವನ್ನೂ ಆಶ್ವಾಸನೆಯನ್ನೂ ನೀಡಿ ಅವನಿಗೆ ಅವನ ಗುರುವಿನಲ್ಲಿಯೇ ಶ್ರದ್ಧೆ ನೆಲೆಗೊಳ್ಳುವಂತೆ ಮಾಡಿದರು. ॥54॥ ಅವರು ಹೇಳಿದರು, "ಏನೇ ಪ್ರಸಂಗ ಬರಲಿ, ನಿನ್ನ ಆಧಾರಸ್ವರೂಪ ಗುರುವನ್ನು ಬಿಡಬೇಡ. ಸದಾ ಸರ್ವದಾ ನಿಶ್ಚಲನಾಗಿರು. ಸದಾ ಅನನ್ಯ ಏಕತ್ವದಲ್ಲಿ ಇರು." ॥55॥ ಪಂತ್ ಆ ಮಾತುಗಳ ಪ್ರಾಮುಖ್ಯತೆಯನ್ನು ಅರಿತನು. ಅವನಿಗೆ ತನ್ನ ಗುರುವಿನದೇ ನೆನಪಾಯಿತು. ಅವನು ಇನ್ನು ಉಳಿದ ಜೀವಿತಕಾಲದಲ್ಲಿ ಸಾಯಿ ಬಾಬಾರವರ ಕೃಪೆಯನ್ನು ಸ್ಮರಿಸುತ್ತಿದ್ದನು. ॥56॥ ಅದೇ ರೀತಿಯಲ್ಲಿ ಒಬ್ಬ ಮುಂಬಾಪುರವಾಸಿ (ಮುಂಬಯಿವಾಸಿ) ಹರಿಶ್ಚಂದ್ರ ಎಂಬ ಹೆಸರಿನ ಗೃಹಸ್ಥನಿದ್ದನು. ಅವನ ಮಗ ಅಪಸ್ಮಾರ ರೋಗದಿಂದ ನರಳುತ್ತಿದ್ದು ಅದರಿಂದಾಗಿ ಅವನ ಬಹಳ ದುಃಖಿಯಾಗಿದ್ದನು. ॥57॥ ಅವನು ಅನೇಕ ದೇಶೀ ಮತ್ತು ವಿದೇಶೀ ವೈದ್ಯರ ಸಲಹೆ ತೆಗೆದುಕೊಂಡಿದ್ದನು. ಆದರೆ ಯಾವ ಒಂದು ಉಪಾಯವೂ ಫಲಕಾರಿಯಾಗಲಿಲ್ಲ. ಸರ್ವ ಪ್ರಯತ್ನಗಳೂ ವ್ಯರ್ಥವಾಗಿದ್ದವು. ಉಳಿದ ಒಂದೇ ಒಂದು ಮಾರ್ಗವೆಂದರೆ ಸಾಧು, ಸಂತರನ್ನು ಕಾಣುವುದು. ॥58॥ ಸನ್ 1910ರಲ್ಲಿ, ದಾಸಗಣುನ ಕೀರ್ತನೆಗಳು ಪ್ರಾರಂಭವಾಗಿ ಶ್ರೀಸಾಯಿನಾಥರ ಕೀರ್ತಿಯು ಎಲ್ಲೆಡೆ ಹರಡಿತು. ಬಹಳ ಜನರು ಶಿರಡಿಯ ಯಾತ್ರೆ ಮಾಡಲು ಪ್ರಾರಂಭಿಸಿದರು. ॥59॥ ಅದೊಂದು ಸಣ್ಣ ಕುಗ್ರಾಮವಾದರೂ ಅದರ ಭಾಗ್ಯ ಅಪಾರವಾಗಿತ್ತು, ಶಿರಡಿಯು ಮತ್ತೊಂದು ಪಂಡರಪುರವಾಯಿತು.

ಅದರ ಮಹಿಮೆ ಅವರ್ಣನೀಯವಾಯಿತು. ಅಪಾರ ಸಂಖ್ಯೆಯಲ್ಲಿ ಯಾತ್ರಿಗಳು ಬರುತ್ತಿದ್ದರು. ॥60॥ ಅನೇಕ ಜನರು ಕೇವಲ ದರ್ಶನ ಮಾತ್ರದಿಂದಲೇ ರೋಗದಿಂದ ವಿಮುಕ್ತರಾದರು. ಕೆಲವರು ಕೇವಲ ಹಸ್ತ ಸ್ಪರ್ಶನ ಮಾತ್ರದಿಂದಲೇ, ಕೆಲವರು ಶುದ್ಧ ಕೃಪಾಕಟಾಕ್ಷ ಮಾತ್ರದಿಂದಲೇ ಗುಣಮುಖರಾದರು. ॥61॥ ಭಕ್ತರು ಅನನ್ಯ ಶರಣಾಗತರಾಗಿ ಕಲ್ಯಾಣವನ್ನು ಪಡೆದರು. ಬಾಬಾರವರು ಪ್ರತಿಯೊಬ್ಬರ ಮನೋಗತವನ್ನು ತಿಳಿದು ಈಡೇರಿಸುತ್ತಿದ್ದರು. ॥62॥ ಪಿಶಾಚಿಗಳು ಉದಿಯನ್ನು ಧರಿಸಿದವರ ಬಳಿ ಸುಳಿಯದೆ ಓಡಿಹೋದುವು. ಬಾಬಾರವರ ಆಶೀರ್ವಚನಗಳು ಕಾಯಿಲೆಗಳನ್ನು ಗುಣಪಡಿಸಿದವು. ಅವರ ಕಣ್ಣುಗಳಿಂದ ಕೃಪಾಪೂರ್ಣದೃಷ್ಟಿಯು ಎಲ್ಲ ಬಾಧೆಗಳನ್ನೂ ದೂರಮಾಡುತ್ತಿದ್ದವು. ಆದುದರಿಂದ ಜನರು ಅವರ ಹತ್ತಿರ ಧಾವಿಸುತ್ತಿದ್ದರು. ॥63॥ ಈ ರೀತಿಯ ಮಹಾತ್ಮೆಯನ್ನು ದಾಸಗಣುವಿನ ಕಥನ ಮತ್ತು ಕೀರ್ತನಗಳಿಂದ ಮತ್ತು ಗ್ರಂಥಗಳಿಂದ, ಒಬ್ಬರ ಬಾಯಿಂದ ಮತ್ತೊಬ್ಬರು ಕೇಳಿ ಜನರಿಗೆ ದರ್ಶನದ ಆಶೆಯು ಹುಟ್ಟುತ್ತಿತ್ತು. ಹೀಗೆ ಸೇಠ್ ಹರಿಶ್ಚಂದ್ರ ಪಿತಳೆಯೆಂಬುವನಿಗೂ ಸಾಯಿಬಾಬಾರವರ ದರ್ಶನ ಮಾಡಬೇಕೆಂಬ ಆಸೆ ಉತ್ಕಂಠಿತವಾಯಿತು. ॥64॥ ಪಿತಳೆಯು ಶಿರಡಿ ಗ್ರಾಮಕ್ಕೆ ತನ್ನ ಕುಟುಂಬ ಹಾಗೂ ಮಕ್ಕಳನ್ನು ಕರೆದುಕೊಂಡು, ಅನೇಕ ಉಪಾಯನ ಮತ್ತು ಹಣ್ಣುಗಳನ್ನು ತೆಗೆದುಕೊಂಡು ದರ್ಶನಕ್ಕಾಗಿ ಬಂದನು. ಅದು ಅವನ ಪೂರ್ವಜನ್ಮದ ಸುಕೃತದ ಫಲವಾಗಿತ್ತು. ॥65॥ ಮಗನನ್ನು ಬಾಬಾರವರ ಚರಣಗಳಲ್ಲಿ ಮಲಗಿಸಿ ತಾನು ಬಾಬಾರವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಆಗ ಒಂದು ಘಟನೆ ಜರಗಿತು. ಅದು ಪಿತಳೆಯಲ್ಲಿ ಬಹಳ ಗಲಿಬಿಲಿ ಉಂಟುಮಾಡಿತು. ॥66॥ ಮಗುವಿನ ದೃಷ್ಟಿಯು ಸಾಯಿಯ ದೃಷ್ಟಿಯೊಂದಿಗೆ ಒಂದಾದಕೂಡಲೇ ಆ ಹುಡುಗನು ಪ್ರಜ್ಞೆ ತಪ್ಪಿದನು. ಕಣ್ಣುಗುಡ್ಡೆಗಳು ಮೇಲೆ ತಿರುಗಿದವು. ಆ ಹುಡುಗನು ಇದ್ದಕ್ಕಿದ್ದ ಹಾಗೆಯೇ ಬಿದ್ದುಬಿಟ್ಟನು. ಆತನ ತಾಯಿತಂದೆಯರು ಗಾಬರಿಗೊಂಡರು. ॥67॥ ಆ ಹುಡುಗನು ನೆಲದ ಮೇಲೆ ಜ್ಞಾನತಪ್ಪಿ ಬಿದ್ದನು. ಬಾಯಿಯಿಂದ ಬಹಳ ನೊರೆ ಉಕ್ಕಿ ಬಂದಿತು. ತಾಯಿತಂದೆಯರು ಬಹಳ ಚಿಂತಿತರಾಗಿ ಇದೇನು ತಮ್ಮ ಅದೃಷ್ಟ ಎಂದು ಹಲುಬಿದರು. ॥68॥ ಉಸಿರಾಟ ಇಲ್ಲವೆಂದು ಕಾಣುತ್ತಿತ್ತು. ನೊರೆಯು ಬಾಯಿಯಿಂದ ಬರುತ್ತಲೇ ಇತ್ತು. ಇಡೀ ದೇಹವು ಬೆವರಿನಿಂದ ತೊಯ್ದುಹೋಗಿತ್ತು. ಮತ್ತು ಅವನ ಜೀವ ಇರುವ ಯಾವುದೇ ಭರವಸೆ ಇರಲಿಲ್ಲ. ॥69॥ ಈ ರೀತಿಯ ಮೂರ್ಛೆಯು ಅನೇಕ ಸಲ ಬಂದಿದ್ದವು. ಆದರೆ ಇಷ್ಟು ದೀರ್ಘ ಕಾಲ ಇಷ್ಟು ತೀವ್ರತೆಯಿಂದ ಒಮ್ಮೆಯೂ ಆದ ಪ್ರಸಂಗವಿರಲಿಲ್ಲ. ॥70॥ ಇದು "ನ ಭೂತೋ ನ ಭವಿಷ್ಯತಿ" ಹಿಂದೆ ಎಂದೂ ಆಗಿರಲಿಲ್ಲ. ಮುಂದೆ ಎಂದೂ ಆಗುವುದಿಲ್ಲ. ಅದು ಅಕ್ಷರಮಟ್ಟಿಗೆ ಪ್ರಾಣಾಂತಿಕವಾಗಿತ್ತು. ಮಗುವಿನ ಸ್ಥಿತಿಯನ್ನು ನೋಡಿ ತಾಯಿಯ ಕಣ್ಣೀರ ಧಾರೆಯನ್ನು ತಡೆಯಲು ಆಗುತ್ತಿರಲಿಲ್ಲ. ॥71॥ ಯಾವ ಉದ್ದೇಶದಿಂದ ನಾವು ಇಲ್ಲಿಗೆ ಬಂದೆವು ಮತ್ತು ಇದೇನಾಯಿತು! ಉಪಾಯವು ಅಪಾಯವನ್ನು ತೀವ್ರಗೊಳಿಸಿತ್ತು. ಸಾಯಿಯ ಈ ಚರಣಗಳು ಘಾತುಕವಾದವು. ನಾವು ಇಲ್ಲಿಗೆ ಬರಲು ಕೈಕೊಂಡ ಪ್ರಯತ್ನಗಳೆಲ್ಲವೂ

ವ್ಯರ್ಥವಾದವು. ॥72॥ "ಇಲ್ಲಿಗೆ ಬಂದಿರುವುದು, ಕಳ್ಳರಿಂದ ತಪ್ಪಿಸಿಕೊಂಡು ಒಂದು ಮನೆಯೊಳಗೆ ಓಡಿಹೋದಾಗ, ಮನೆಯೇ ನಮ್ಮ ತಲೆಯಮೇಲೆ ಕುಸಿದುಬಿದ್ದಂತೆ ಆಯಿತು" – ಎಂದು ಆ ಮಹಿಳೆ ಹೇಳಿದರು. ॥73॥ "ನಮ್ಮ ಸ್ಥಿತಿಯು ಯಾವ ರೀತಿ ಇದೆ ಅಂದರೆ, ಒಂದು ಹಸು ಹುಲಿಯ ಬಾಯಿಂದ ತನ್ನ ಜೀವ ಉಳಿಸಿಕೊಳ್ಳಲು ತಪ್ಪಿಸಿಕೊಂಡು ಬಂದು ಕಟುಕನ ಕೈಯಲ್ಲಿ ಸಿಕ್ಕಿಬಿದ್ದಂತೆ ಆಗಿದೆ. ॥74॥ "ಅಥವಾ ಒಬ್ಬ ಪ್ರಯಾಣಿಕ ಸೂರ್ಯನ ತಾಪದಿಂದ ಪೀಡಿತನಾಗಿ ಒಂದು ವೃಕ್ಷದ ನೆರಳಿನಲ್ಲಿ ಆಶ್ರಯ ತೆಗೆದುಕೊಂಡಾಗ ಆ ಮರವು ಬುಡಮೇಲಾಗಿ ತಲೆಯ ಮೇಲೆ ಬಿದ್ದಂತೆ ಆಗಿದೆ. ॥75॥ "ಅಥವಾ ದೇವರಲ್ಲಿ ಭಕ್ತಿ ಇಟ್ಟು ಒಬ್ಬನು ದೇವಸ್ಥಾನಕ್ಕೆ ಹೋದಾಗ, ಆ ಮಂದಿರವೇ ಅವನ ದೇಹದ ಮೇಲೆ ಕುಸಿದು ಬಿದ್ದಂತೆ ಆಗಿದೆ. ಈ ರೀತಿ ನಮ್ಮ ಪ್ರಸಂಗವಾಗಿದೆ." ॥76॥ ಅನಂತರ ಬಾಬಾರವರು ಅವರಿಗೆ ಆಶ್ವಾಸನೆ ನೀಡಿದರು. "ಮನಸ್ಸಿನಲ್ಲಿ ಸ್ವಲ್ಪ ಧೈರ್ಯ ಮತ್ತು ತಾಳ್ಮೆಯನ್ನು ತಂದುಕೊಳ್ಳಿ, ಮಗುವನ್ನು ಜೋಪಾನವಾಗಿ ಎತ್ತಿಕೊಳ್ಳಿ ಅವನಿಗೆ ಪ್ರಜ್ಞೆ ಬರುತ್ತದೆ. ॥77॥ "ಮಗುವನ್ನು ನಿಮ್ಮ ವಸತಿಗೃಹಕ್ಕೆ ಕರೆದುಕೊಂಡು ಹೋಗಿ. ಇನ್ನು ಅರ್ಧ ಗಂಟೆಯಲ್ಲಿ ಅವನು ಸಜೀವನಾಗುತ್ತಾನೆ. ಅನವಶ್ಯಕವಾಗಿ ಗಾಬರಿಯಾಗಬೇಡಿರಿ." ॥78॥ ಅನಂತರ ಅವರು ಅದೇ ರೀತಿ ನಡೆದುಕೊಂಡರು. ಬಾಬಾರವರ ಮಾತು ನಿಜವಾಯಿತು. ಪಿತಳೆ ಮತ್ತು ಅವರ ಕುಟುಂಬದವರು ಆನಂದಪಟ್ಟರು. ಅವರ ಕುತರ್ಕಗಳೆಲ್ಲವೂ ಮಾಯವಾದವು. ॥79॥ ವಾಡೆಗೆ ಕರೆದುಕೊಂಡು ಹೋಗುತ್ತಿದ್ದ ಹಾಗೆಯೇ ಆ ಬಾಲಕನು ಕೂಡಲೇ ಎಚ್ಚರಗೊಂಡನು. ತಂದೆ ತಾಯಿಗಳ ಚಿಂತೆಯು ದೂರವಾಯಿತು. ಅಲ್ಲಿ ಅತ್ಯಾನಂದ ತುಂಬಿತು. ॥80॥ ಅನಂತರ ಪಿತಳೆಯು ಪತ್ನಿಯ ಸಮೇತನಾಗಿ ಬಾಬಾರವರ ದರ್ಶನಕ್ಕಾಗಿ ಬಂದನು. ಮತ್ತು ಅತ್ಯಂತ ವಿನೀತನಾಗಿ ಸಾಷ್ಟಾಂಗ ಪ್ರಣಾಮ ಮಾಡಿದನು. ॥81॥ ಪಿತಳೆಯು ಮಗನು ಗುಣಮುಖನಾಗಿದ್ದನ್ನು ನೋಡಿ ಮನಸ್ಸಿನಲ್ಲೇ ಆನಂದ ತುಂದಿಲನಾಗಿ ಕೃತಜ್ಞತಾಭಾವದಿಂದ ಬಾಬಾರವರ ಚರಣಗಳನ್ನು ಒತ್ತುತ್ತ ಕುಳಿತುಕೊಂಡನು. ಬಾಬಾರವರು ಮಂದಸ್ಮಿತರಾಗಿ ಕೇಳಿದರು. ॥82॥ "ನಿನ್ನ ಸಂಕಲ್ಪ (ಆಸೆ) ಮತ್ತು ವಿಕಲ್ಪ (ಸಂಶಯ)ಗಳ ಅಲೆಗಳನ್ನು ಈಗಲೇ ಶಾಂತಮಾಡಿಕೋ! ಯಾರಲ್ಲಿ ಶ್ರದ್ಧೆ ಮತ್ತು ಸಹನೆಗಳು ಇವೆಯೋ ಅಂತಹವರನ್ನು ಶ್ರೀಹರಿಯು ರಕ್ಷಿಸುತ್ತಾನೆ." ॥83॥ ಪಿತಳೆಯು ಮೂಲತಃ ಶ್ರೀಮಂತನಾಗಿದ್ದನು. ಅವನು ಒಂದು ಒಳ್ಳೆಯ ಮತ್ತು ಪ್ರಸಿದ್ಧವಾದ ಕುಟುಂಬದಿಂದ ಬಂದವನಾಗಿದ್ದನು. ಅವನು ಯಥೇಚ್ಛವಾಗಿ ಮಿಠಾಯಿಯನ್ನು ಮತ್ತು ದ್ರಾಕ್ಷಿ ಖರ್ಜೂರ ಮುಂತಾದ ಒಣ ಹಣ್ಣುಗಳನ್ನು ಮತ್ತು ಎಲೆ ಅಡಿಕೆಗಳನ್ನು ಬಾಬಾರವರಿಗೆ ಸಮರ್ಪಿಸಿದನು. ॥84॥ ಅವನ ಪತ್ನಿಯು ಬಹಳ ಸಾತ್ವಿಕ ಸ್ವಭಾವದವಳು. ಪ್ರೇಮಮಯಿ, ಶ್ರದ್ಧಾಳು ಮತ್ತು ಭಾವುಕಳು. ಅವಳು ಕಂಬದ ಹತ್ತಿರ ಕುಳಿತು ಬಾಬಾರವರನ್ನೇ ದಿಟ್ಟಿಸಿ ನೋಡುತ್ತಿದ್ದಳು. ॥85॥ ಅವಳು ದೃಷ್ಟಿಸುತ್ತಲೇ ಅವಳ ಕಣ್ಣುಗಳು ತುಂಬಿ ಬರುತ್ತಿದ್ದವು. ಅವಳು ಅದನ್ನು ನಿತ್ಯವೂ ಮಾಡುತ್ತಿದ್ದಳು. ಪ್ರೇಮವನ್ನು ವ್ಯಕ್ತಪಡಿಸುವ ಅವಳ ಅಪೂರ್ವ

ರೀತಿಯಿಂದ ಬಾಬಾರವರನ್ನು ಗೆದ್ದಿದ್ದಳು. ॥86॥ ಸಂತರು ದೇವರ ತರಹ. ಅವರು ಸದಾ ಭಕ್ತಪರಾಧೀನರಾಗಿರುತ್ತಾರೆ. ಅವರು ತಮ್ಮನ್ನು ಅನನ್ಯವಾಗಿ ಭಜಿಸುವವರಿಗೆ ಅತ್ಯಂತ ಕೃಪಾವಂತರಾಗಿರುತ್ತಾರೆ. ॥87॥ ಅದು ಏನೇ ಆಗಿರಲಿ. ಅನಂತರ ಆ ಕುಟುಂಬವು ಹಿಂತಿರುಗಲು ನಿಶ್ಚಯಿಸಿ ಮಸೀದಿಗೆ ಸಾಯಿ ದರ್ಶನಕ್ಕಾಗಿ ಬಂದರು. ಮತ್ತು ಬಾಬಾರವರ ಅನುಮತಿಯನ್ನು ಮತ್ತು ಉದಿಯನ್ನು ತೆಗೆದುಕೊಂಡು ಹೊರಡಲು ತಯಾರಿ ನಡೆಸಿದರು. ॥88॥ ಆ ಸಮಯದಲ್ಲಿ ಬಾಬಾರವರು ಮೂರು ರೂಪಾಯಿಗಳನ್ನು ತಮ್ಮ ಜೇಬಿನಿಂದ ತೆಗೆದು ಪಿತಳೆಯನ್ನು ಹತ್ತಿರ ಬರುವಂತೆ ಕರೆದರು. ಅವರು ಏನು ಹೇಳಿದರೆಂಬುದನ್ನು ಕೇಳಿರಿ. ॥89॥ "ಬಾಪು, ಈ ಮೊದಲು ನಿನಗೆ ಎರಡು ರೂಪಾಯಿಗಳನ್ನು ಕೊಟ್ಟಿದ್ದೆನು. ಈ ಮೂರು ರೂಪಾಯಿಗಳನ್ನು ಅದಕ್ಕೆ ಸೇರಿಸಿ ಅವುಗಳನ್ನು ಪೂಜಿಸು. ನಿನಗೆ ಕಲ್ಯಾಣವಾಗುತ್ತದೆ." ॥90॥ ಪಿತಳೆಯು ಆ ರೂಪಾಯಿಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಅವುಗಳನ್ನು ಸಂತೋಷದಿಂದ ಪ್ರಸಾದವಾಗಿ ಸ್ವೀಕರಿಸಿದನು. ಅವನು ಬಾಬಾರವರ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿ ಹೇಳಿದನು, 'ಮಹಾರಾಜ್, ನನ್ನ ಮೇಲೆ ಕೃಪೆಮಾಡಿ.' ॥91॥ ಮನಸ್ಸಿನಲ್ಲಿ ವಿಚಾರ ಲಹರಿಗಳು ಎದ್ದವು. "ನನಗಾದರೋ ಇದು ಮೊದಲನೆಯ ಭೇಟಿ. ಆದರೆ ಬಾಬಾರವರು ಹೇಳುತ್ತಿರುವುದು ಏನು? ನನಗೆ ನಿಜವಾಗಿಯೂ ಅರ್ಥವಾಗುತ್ತಿಲ್ಲ!" ॥92॥ "ನಾನು ಬಾಬಾರವರನ್ನು ಹಿಂದೆ ಎಂದೂ ನೋಡಿಯೇ ಇಲ್ಲ. ಅವರು ಹೇಗೆ ಎರಡು ರೂಪಾಯಿಗಳನ್ನು ಕೊಟ್ಟಿರಬಹುದು?" ಹೀಗೆ ಅವನು ಅದರ ಅರ್ಥ ಅಥಾ ಬೋಧನೆಯನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲ. ಪಿತಳೆಯು ಮನಸ್ಸಿನಲ್ಲಿಯೇ ವಿಸ್ಮಿತನಾದನು. ॥93॥ ಯಾವ ರೀತಿ ಇದರ ಅರ್ಥ ವಿವರಣೆಯನ್ನು ಮಾಡಬಹುದು? ಅವನ ಮನಸ್ಸಿನಲ್ಲಿ ಕುತೂಹಲ ಹೆಚ್ಚಾಯಿತು. ಬಾಬಾರವರು ಯಾವುದೇ ಸೂಚನೆಯನ್ನೂ ಕೊಡಲಿಲ್ಲ. ಮತ್ತು ಮೌನ ವಹಿಸಿದರು. ॥94॥ ಸಂತರ ವಾಣಿಯು ಎಷ್ಟೇ ಸಹಜವಾದ ಉದ್ಗಾರವಾಗಲೀ, ಅವು ಸತ್ಯವಾಗಿಯೇ ಆಗುತ್ತದೆ. ಪಿತಳೆಯು ಇದನ್ನು ಪೂರ್ಣವಾಗಿ ಅರಿತಿದ್ದನು. ಆದ್ದರಿಂದ ಅವನು ವಿಚಾರದಲ್ಲಿ ಮುಳುಗಿದನು. ॥95॥ ಆದರೆ ಅವನು ನಂತರ ಮುಂಬಯಿಗೆ ತನ್ನ ಮನೆಗೆ ಹೋದಾಗ ಅಲ್ಲಿದ್ದ ಒಬ್ಬ ವೃದ್ಧ ಮಹಿಳೆಯು ಅವನ ಕುತೂಹಲವನ್ನು ಪೂರೈಸಿದಳು. ॥96॥ ಆ ವೃದ್ಧ ಮಹಿಳೆಯು ಪಿತಳೆಯ ತಾಯಿಯಾಗಿದ್ದಳು. ಅವಳು ಶಿರಡಿಯ ವೃತ್ತಾಂತದ ಬಗ್ಗೆ ಸಹಜವಾಗಿ ವಿಚಾರಿಸಿದಾಗ, ಮೂರು ರೂಪಾಯಿಗಳ ವಿಚಾರದ ಬಗ್ಗೆ ಮಾತು ಬಂದಿತು. ಅವಳೂ ಸಹ ಅದರ ಬಗೆಗಿನ ಸಂಬಂಧವನ್ನು ತಿಳಿಸಲು ಸಾಧ್ಯವಾಗಲಿಲ್ಲ. ॥97॥ ಬಹಳ ಯೋಚನೆ ಮಾಡಿದ ನಂತರ ಆಕೆ ಜ್ಞಾಪಿಸಿಕೊಂಡಳು ಮತ್ತು ಆ ವೃದ್ಧೆ ಪಿತಳೆಗೆ ಹೇಳಿದಳು, "ಈಗ ನನಗೆ ಯಥಾರ್ಥವು ನೆನಪಿಗೆ ಬರುತ್ತಿದೆ. ಬಾಬಾರವರು ಹೇಳಿದ್ದು ಸತ್ಯ." ॥98॥ "ನೀನು ನಿನ್ನ ಮಗನನ್ನು ಸಾಯಿಯ ದರ್ಶನಕ್ಕಾಗಿ ಶಿರಡಿಗೆ ಕರೆದೊಯ್ದ ರೀತಿಯಲ್ಲಿ ನಿನ್ನ ತಂದೆಯವರು ನಿನ್ನನ್ನು ಅಕ್ಕಲಕೋಟೆಗೆ ಕರೆದುಕೊಂಡು ಹೋಗಿದ್ದರು." ॥99॥ ಅಲ್ಲಿಯ ಮಹಾರಾಜ್ ಒಬ್ಬ ಸಿದ್ಧಪುರುಷರು.

ಪರೋಪಕಾರಿ, ಮಹಾಪ್ರಸಿದ್ಧ, ಅಂತರ್ಜ್ಞಾನಿ, ಯೋಗಿ, ಪ್ರಬುದ್ಧರಾಗಿದ್ದರು. ನಿನ್ನ ತಂದೆಯೂ ಸಹ ಶುದ್ಧ ಆಚರಣೆಯುಳ್ಳವರಾಗಿದ್ದರು. ॥100॥ "ಅವರು ನಿನ್ನ ತಂದೆಯ ಪೂಜೆಯನ್ನು ಸ್ವೀಕರಿಸಿದರು. ಮತ್ತು ಯೋಗಿರಾಜರು ಅತ್ಯಂತ ಪ್ರಸನ್ನರಾದರು. ಮತ್ತು ಪ್ರಸಾದವಾಗಿ ಎರಡು ರೂಪಾಯಿಗಳನ್ನು ಪೂಜೆಮಾಡಲು ನೀಡಿದರು. ॥101॥ ಪೂರ್ವದಲ್ಲಿ ಸ್ವಾಮಿಯು ಎರಡು ರೂಪಾಯಿಗಳನ್ನು ಪ್ರಸಾದವಾಗಿ ಕೊಟ್ಟಿದ್ದರು. ಅದನ್ನು ಪೂಜೆ ಮಾಡಲು ಹೇಳಿದ್ದರು. ॥102॥ "ಆ ಎರಡು ರೂಪಾಯಿಗಳನ್ನು ದೇವರ ಮನೆಯಲ್ಲಿಟ್ಟು ದೇವತಾರ್ಚನೆ ಮಾಡುವಾಗ ಅವುಗಳನ್ನು ನಿನ್ನ ತಂದೆಯವರು ಬಹಳ ಶ್ರದ್ಧೆಯಿಂದ ನಿತ್ಯವೂ ಪೂಜಿಸುತ್ತಿದ್ದರು. ॥103॥ 'ಅವನ ನಿಷ್ಠೆಯ ಬಗ್ಗೆ ನನಗೆ ಮಾತ್ರಗೊತ್ತು, ಅವನು ಅದಕ್ಕೆ ಪ್ರಮಾಣವಾಗಿ ನಡೆದುಕೊಳ್ಳುತ್ತಿದ್ದನು. ಅವನ ಮರಣಾನಂತರ ಪೂಜೆಯು ಮತ್ತು ಪೂಜಾ ಸಾಮಗ್ರಿಗಳು ಮಕ್ಕಳ ಆಟಿಕೆಗಳಾದವು. ॥104॥ "ಆ ನಂತರ ದೇವರಲ್ಲಿ ನಿಷ್ಠೆಯು ಹಾರಿ ಹೋಯಿತು. ಪೂಜೆ ಮಾಡಲು ನಾಚಿಕೆಯೂ ಶುರುವಾಯಿತು. ಮಕ್ಕಳನ್ನು ಸರದಿಯ ಪ್ರಕಾರ ಪೂಜೆ ಮಾಡಲು ನೇಮಿಸಲಾಯಿತು. ಹಾಗಿರುವಾಗ ರೂಪಾಯಿಯ ಬಗ್ಗೆ ಯಾರು ಎಚ್ಚರಿಕೆ ತೆಗೆದುಕೊಳ್ಳುತ್ತಾರೆ? ॥105॥ "ಈ ರೀತಿ ಅನೇಕ ವರ್ಷಗಳು ಕಳೆದವು. ಆ ರೂಪಾಯಿಗಳ ಪ್ರಾಮುಖ್ಯತೆಯೂ ಹೊರಟು ಹೋಯಿತು. ಅವುಗಳ ನೆನಪೂ ಮಾಸಿ ಹೋಯಿತು. ಆ ಎರಡು ರೂಪಾಯಿಯೂ ಮಾಯವಾದವು. ॥106॥ "ಅದು ಹಾಗಿರಲಿ. ನೀನು ನಿಜವಾಗಿಯೂ ಭಾಗ್ಯಶಾಲಿ. ಮಹಾರಾಜರನ್ನು ಸಾಯಿಯ ರೂಪದಲ್ಲಿ ಭೇಟಿಯಾದುದು. ಅಲ್ಲಿ ಮರೆತು ಹೋಗಿದ್ದ ನಿನ್ನ ಕರ್ತವ್ಯವನ್ನು ನೆನಪು ಮಾಡಿಕೊಡುವುದಕ್ಕಾಗಿಯೇ ಅಲ್ಲದೆ ಸಂಕಟಗಳನ್ನು ದೂರಮಾಡುವುದಕ್ಕಾಗಿಯೇ ಭೇಟಿಯಾಗಿರುವೆ. ॥107॥ "ಆದುದರಿಂದ, ಈ ದಿನದಿಂದ ಎಲ್ಲಾ ಶಂಕೆಗಳನ್ನೂ ಮತ್ತು ಕೆಟ್ಟ ಆಲೋಚನೆಗಳನ್ನೂ ಬಿಟ್ಟು ಬಿಡು. ನಿನ್ನ ಹಿರಿಯರ ಹೆಜ್ಜೆಯಲ್ಲಿ ನಡೆ. ಕೆಟ್ಟ ಅಭ್ಯಾಸಗಳಿಗೆ ಬಲಿಯಾಗಬೇಡ. ॥108॥ "ಹೋಗು, ರೂಪಾಯಿಗಳನ್ನು ಪೂಜೆ ಮಾಡುತ್ತ ಹೋಗು. ಸಂತರಪ್ರಸಾದವನ್ನು ಭೂಷಣವೆಂದು ಪರಿಗಣಿಸು. ಸಮರ್ಥ ಸಾಯಿಯು ಇದರ ಪ್ರಾಮುಖ್ಯತೆಯನ್ನು ಮನಗಾಣಿಸಿ ಭಕ್ತಿಯನ್ನು ಪುನರುಜ್ಜೀವನಗೊಳಿಸಿದ್ದಾರೆ." ॥109॥ ಈ ಕಥೆಯನ್ನು ತಾಯಿಯಿಂದ ಕೇಳಿ ಪಿತಳೆಯ ಮನಸ್ಸು ಪರಮಾನಂದದಲ್ಲಿ ಮುಳುಗಿತು. ಆತ ಸಾಯಿಯ ಸರ್ವವ್ಯಾಪಕತ್ವವನ್ನು ಅರ್ಥ ಮಾಡಿಕೊಂಡು ಸಾಯಿದರ್ಶನದ ಸಾರ್ಥಕತೆಯನ್ನು ಅನುಭವಿಸಿದನು. ॥110॥ ತಾಯಿಯ ಶಬ್ದಾಮೃತವು ಅವನಲ್ಲಿ ಮುದುಡಿಹೋಗಿದ್ದ ಭಾವನೆಗಳನ್ನು ಜಾಗೃತಗೊಳಿಸಿದವು. ಅವನು ಪಶ್ಚಾತ್ತಾಪಪಟ್ಟು ಪ್ರಾಯಶ್ಚಿತ್ತವಾಗಿ ಅವನ ಮುಂದಿನ ಹಿತಕ್ಕೆ ಅನುಕೂಲವಾಗಿ ದಾರಿಮಾಡಿಕೊಟ್ಟಿತು. ॥111॥ ಅದು ಹಾಗಿರಲಿ. ಅದೇನು ನಡೆಯಬೇಕಾಗಿತ್ತೋ ಅದೇ ನಡೆಯಿತು. ಸಂತರು ಅವನಲ್ಲಿ ಭವಿಷ್ಯದ ಕಾರ್ಯಾರ್ಥವನ್ನು ಜಾಗೃತಗೊಳಿಸಿದರು. ಆ ನಂತರ ಕೃತಜ್ಞತಾ ಪೂರ್ವಕವಾಗಿ ಮತ್ತು ಮನಃಪೂರ್ವಕವಾಗಿ ತನ್ನ ಕರ್ತವ್ಯಗಳನ್ನು ಮಾಡಿದನು. ॥112॥ ಅದೇ ರೀತಿ ನಾನು ಮತ್ತೊಂದು ಅನುಭವವನ್ನು

ತಿಳಿಸುತ್ತೇನೆ. ಸ್ವಸ್ಥಚಿತ್ತದಿಂದ ಕೇಳಿರಿ. ಇದು ಭಕ್ತನ ಅತಿಸ್ಥಿನ ಪ್ರವೃತ್ತಿಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲುಬಾಬಾರವರು ತೆಗೆದುಕೊಂಡ ಕ್ರಮವನ್ನು ತೋರಿಸುತ್ತದೆ. ॥113॥ ಗೋಪಾಲ ನಾರಾಯಣ ಅಂಬಡೇಕರ್ ಎಂಬ ಹೆಸರಿನ ಬಾಬಾರವರ ಭಕ್ತಶ್ರೇಷ್ಠನೊಬ್ಬ ಪುಣೆಯಲ್ಲಿದ್ದ. ಅವನ ಕಥೆಯನ್ನು ಆಲಿಸಿ. ॥114॥ ಅವನು ಬ್ರಿಟಿಷ್ ಆಳ್ವಿಕೆಯ ಸರಕಾರದಲ್ಲಿ ಅಬಕಾರಿ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದನು. ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ ಅದನ್ನು ಬಿಟ್ಟು ಮನೆಯಲ್ಲಿಯೇ ಉಳಿದುಕೊಂಡನು. ॥115॥ ಅವನ ಅದೃಷ್ಟ ಬದಲಾಯಿತು. ಮತ್ತು ಅವನಿಂದ ಮುಖ ತಿರುಗಿಸಿತು. ಯಾರೊಬ್ಬರ ಜೀವನದಲ್ಲಿಯೂ ಎಲ್ಲ ದಿನಗಳೂ ಒಂದೇ ಸಮನೆ ಇರುವುದಿಲ್ಲ. ನಕ್ಷತ್ರಗಳು ಸುತ್ತಿದವು. ಗ್ರಹಬಲವು ಕೆಟ್ಟ ಫಲವನ್ನು ತಂದಿತು. ಈ ಬದಲಾವಣೆಗಳನ್ನು ತಡೆಯುವವರು ಯಾರಿದ್ದಾರೆ? ॥116॥ ಆರಂಭದಲ್ಲಿ ಅವನು ಥಾನೆ ಜಿಲ್ಲೆಯಲ್ಲಿ ನೌಕರನಾಗಿದ್ದನು. ಅನಂತರ ಅದೃಷ್ಟವು ಜವಾಹರ್‌ಗೆ ಕರೆದು ತಂದಿತು. ಅಲ್ಲಿ ಅವನು ಒಬ್ಬ ಅಮಲ್‌ದಾರನಾಗಿದ್ದನು. ಅಲ್ಲಿಯೇ ಅವನು ನಿರುದ್ಯೋಗಿಯಾದನು. ॥117॥ ಒಂದು ನೌಕರಿಯನ್ನು ಪುನಃ ಪಡೆಯುವುದು ಸುಲಭವೇನಲ್ಲ. ಹೀಗಿರುವಾಗ ಅವನಿಗೆ ಎಲ್ಲಿ ಮತ್ತೆ ನೌಕರಿ ಸಿಕ್ಕೀತು? ಆ ಸಮಯದಲ್ಲಿ ಆತ ಕೆಲಸಕ್ಕಾಗಿ ಶಕ್ತಿ ಮೀರಿ ಪ್ರಯತ್ನಪಟ್ಟನು. ॥118॥ ಆದರೆ ಅವನು ಅದರಲ್ಲಿ ಯಶಸ್ವಿಯಾಗಲಿಲ್ಲ. ಆದ್ದರಿಂದ ಅವನು ಒಂದು ಸ್ವತಂತ್ರ ವಹಿವಾಟು ನಡೆಸಲು ನಿಶ್ಚಯಿಸಿದನು. ಆದರೆ ಅದರಲ್ಲಿ ಬಹಳವಾದ ಆಪತ್ತುಗಳೇ ಉಂಟಾದವು ಕೊನೆಯಲ್ಲಿ ಅವನು ಎಲ್ಲ ಕಡೆಯೂ ಸೋತ ಹತಾಶನಾದನು. ॥119॥ ವರ್ಷ ವರ್ಷಕ್ಕೆ ಅವನ ಆರ್ಥಿಕ ಪರಿಸ್ಥಿತಿಯು ಬಹಳವಾಗಿ ಬಿಗಡಾಯಿಸಿತು. ಕೊನೆಯಲ್ಲಿ ಮನೆಯ ಸ್ಥಿತಿಯು ದುಸ್ಸಹವಾಯಿತು. ॥120॥ ಇದೇ ರೀತಿ ಏಳು ವರುಷಗಳು ಕಳೆದವು. ಪ್ರತಿ ವರ್ಷವೂ ಅವನು ಶಿರಡಿಗೆ ಹೋಗಿ ತನ್ನ ಸಂಕಟವನ್ನು ಬಾಬಾರವರಲ್ಲಿ ಪದಿ ಮಾಡುತ್ತ ಹಗಲು ರಾತ್ರಿ ಬಾಬಾರವರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದನು. ॥121॥ ಸನ್ 1916ರಲ್ಲಿ ಅವನು ಅದೆಷ್ಟು ದುಃಖಪೀಡಿತನಾಗಿದ್ದನೆಂದರೆ ಶಿರಡಿ ಕ್ಷೇತ್ರಕ್ಕೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸಿದನು. ॥122॥ ಆದ್ದರಿಂದ ಈ ಸಲ ಅವನು ತನ್ನ ಪತ್ನಿಯೊಡನೆ ಶಿರಡಿಯಲ್ಲಿ ಎರಡು ತಿಂಗಳ ಕಾಲ ನೆಲೆಸಿದನು. ಒಂದು ರಾತ್ರಿ ಏನು ನಡೆಯಿತು ಎಂಬ ಕಥೆಯನ್ನು ಕೇಳಿ. ॥123॥ ದೀಕ್ಷಿತ್ ವಾಡಾದ ಎದುರಿಗೆ ಒಂದು ಎತ್ತಿನ ಗಾಡಿಯಲ್ಲಿ ಕುಳಿತುಕೊಂಡು ಅಂಬಡೇಕರನು ಆಳವಾದ ವಿಚಾರ ತರಂಗಗಳಲ್ಲಿ ಮುಳುಗಿದ್ದನು. ॥124॥ ಜೀವನದಲ್ಲಿ ಜಿಗುಪ್ಸೊಂದಿ ಅತ್ಯಂತ ಖಿನ್ನಮನಸ್ಕನಾಗಿ ಅವನು ಯೋಚಿಸಿದನು. 'ಇಲ್ಲಿಗೆ ಸಾಕು! ಇನ್ನು ಮುಂದೆ ಯಾವ ದುಃಖವೂ ಬೇಕಿಲ್ಲ.' ಅವನು ಬದುಕುವ ಆಸೆಯನ್ನೇ ಬಿಟ್ಟುಬಿಟ್ಟನು. ॥125॥ ಈ ರೀತಿಯ ವಿಚಾರ ಮಾಡುತ್ತ, ಜೀವಿತದಲ್ಲಿ ಆಸೆಯನ್ನು ಕಳೆದುಕೊಂಡು ಅಂಬಡೇಕರನು ಕೂಡಲೇ ಬಾವಿಯಲ್ಲಿ ಧುಮುಕಲು ತಯಾರಾದನು. ॥126॥ ಒಂದು ನಿರ್ಜನವಾದ ಸಮಯವನ್ನು ನೋಡಿ, ಅಲ್ಲಿ ಸುತ್ತಲೂ ಯಾರೂ ಇಲ್ಲದಿರುವಾಗ ನಾನು ನನ್ನ ಉದ್ದೇಶವನ್ನು ನೆರವೇರಿಸಿಕೊಳ್ಳುತ್ತೇನೆ

ಮತ್ತು ಎಲ್ಲ ದುಃಖಗಳಿಂದಲೂ ಬಿಡುಗಡೆ ಪಡೆಯುತ್ತೇನೆ. ॥127॥ ಆತ್ಮಹತ್ಯೆ ಮಹಾಪಾಪ ಎಂಬುದು ಅವನಿಗೆ ತಿಳಿದಿತ್ತು, ಆದರೂ ಅವನು ಯೋಚಿಸಿದ ರೀತಿ ನಡೆದುಕೊಳ್ಳಲು ನಿರ್ಧರಿಸಿದನು. ಆದರೆ ಬಾಬಾ ಸಾಯಿಯವರು ಸೂತ್ರಧಾರರಾಗಿದ್ದು ಈ ಗಂಡಾಂತರವನ್ನು ತಪ್ಪಿಸಿದರು. ॥128॥ ಒಂದು ನಾಲ್ಕು ಹೆಜ್ಜೆ ದೂರದಲ್ಲಿ ಒಬ್ಬ ಖಾನಾವಳಿ ಮಾಲೀಕನ ಮನೆಯಿತ್ತು, ಅವನಿಗೂ ಬಾಬಾರವರ ಆಶ್ರಯವಿತ್ತು, ಅವನೂ ಬಾಬಾರವರ ಸೇವೆ ಮಾಡಿದವರಲ್ಲಿ ಒಬ್ಬನು. ॥129॥ ಸಗುಣನ್ ತನ್ನ ಮನೆಯ ಹೊರಗಡೆ ಬಂದನು. ಆ ಸಮಯದಲ್ಲಿ ಅಂಬಡೇಕರನನ್ನು ಕೇಳಿದನು. "ನೀನು ಎಂದಾದರೂ ಅಕ್ಕಲಕೋಟೆ ಮಹಾರಾಜರ ಜೀವನದ ಬಗ್ಗೆ ಇರುವ ಈ ಪುಸ್ತಕವನ್ನು ಓದಿರುವೆಯಾ?" ॥130॥ "ಎಲ್ಲಿ ನೋಡೋಣ, ನೋಡೋಣ. ಅದು ಯಾವ ಪುಸ್ತಕ?" ಈ ರೀತಿ ಹೇಳುತ್ತ ಅಂಬಡೇಕರನು ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡನು. ಪುಟಗಳನ್ನು ಮಧ್ಯೆ ಮಧ್ಯೆ ತಿರುಗಿಸುತ್ತ ಅವನು ಅಲ್ಲಲ್ಲಿ ಓದಲು ಪ್ರಾರಂಭಿಸಿದನು. ॥131॥ ಕರ್ಮಧರ್ಮಸಂಯೋಗವಶಾತ್ ಅವನಿಗೆ ಕಾಣಿಸಿದ ವಿಷಯವು ಓದಲು ಅಮೂಲ್ಯವಾಗಿದ್ದು ಅವನ ಅಂತರ್ವೃತ್ತಿಗೆ ಸಂಬಂಧಿಸಿದುದಾಗಿತ್ತು, ಅವನು ಆ ಸಮಯದಲ್ಲಿಯೇ ಅದರಿಂದ ಅತ್ಯಂತ ಪ್ರಭಾವಿತನಾದನು. ॥132॥ ನಾನು ಎಲ್ಲ ಶ್ರೋತೃಗಳಿಗೆ, ಅವನಿಗೆ ಅನಿರೀಕ್ಷಿತವಾಗಿ ಸಿಕ್ಕ ಗುರುಕೃಪೆಯನ್ನು ನಿವೇದಿಸುತ್ತೇನೆ. ಗ್ರಂಥ ವಿಸ್ತಾರವಾಗುವ ಭಯದಿಂದ ಅದರ ತಾತ್ಪರ್ಯವನ್ನು ಸಂಕ್ಷೇಪವಾಗಿ ತಿಳಿಸುತ್ತೇನೆ. ॥133॥ ಅಕ್ಕಲಕೋಟೆಯಲ್ಲಿ ಒಬ್ಬ ಸಂತಶ್ರೇಷ್ಠರಿದ್ದರು. ಆ ಮಹಾರಾಜರು ಸದಾ ಅಂತರ್ಮುಖರಾಗಿ ಧ್ಯಾನದಲ್ಲಿರುತ್ತಿದ್ದರು. ಒಬ್ಬ ಭಕ್ತನು ಬಹು ವ್ಯಾಧಿಗ್ರಸ್ತನಾಗಿದ್ದವನು ಸಹಿಸಲಸಾಧ್ಯವಾದ ಕಷ್ಟವನ್ನು ಎದುರಿಸುತ್ತಿದ್ದನು. ॥134॥ ಅವನು ಬಹುಕಾಲದವರೆಗೆ ರೋಗ ವಿಮುಕ್ತನಾಗಲು ಗುರುಸೇವೆ ಮಾಡುತ್ತಿದ್ದನು. ಅವನು ಇನ್ನು ಹೆಚ್ಚು ಕಷ್ಟ ಸಹಿಸಲು ಅಸಾಧ್ಯವಾದ ಸ್ಥಿತಿಗೆ ಬಂದಿದ್ದನು. ಅವನು ಬಹಳ ಉದ್ವಿಗ್ನನಾದನು. ॥135॥ ಅವನು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದನು. ಮತ್ತು ರಾತ್ರಿ ವೇಳೆಯಲ್ಲಿ ಸಮಯ ನೋಡಿಕೊಂಡು ಒಂದು ಬಾವಿಯ ಹತ್ತಿರ ಹೋಗಿ ಅದರೊಳಗೆ ಬಿದ್ದುಬಿಟ್ಟನು. ॥136॥ ಅದೇ ಸಮಯಕ್ಕೆ ಮಹಾರಾಜರು ಅಲ್ಲಿಗೆ ಬಂದು ತಮ್ಮ ಕೈಗಳಿಂದಲೇ ಅವನನ್ನು ಬಾವಿಯಿಂದ ಹೊರಗೆ ತೆಗೆದರು. "ವಿಧಿಬರಹವೇನಿದೆಯೋ ಅದೆಲ್ಲವನ್ನು ಅನುಭವಿಸಲೇಬೇಕು" ಅವರು ಅವನಿಗೆ ಉಪದೇಶಿಸಿದರು. ॥137॥ "ಎಲ್ಲ ಭೌತಿಕ ಸಂಕಟಗಳು, ಕುಷ್ಠ, ಕ್ಲೇಶ ಅಥವಾ ರೋಗಗಳು ನಮ್ಮ ಪೂರ್ವಜನ್ಮದಕರ್ಮಗಳ ಫಲದಿಂದಾದವುಗಳು. ಅವುಗಳನ್ನು ಪೂರ್ಣವಾಗಿ ಅನುಭವಿಸದಿದ್ದಲ್ಲಿ ಅವುಗಳಿಂದ ಬಿಡುಗಡೆ ಇಲ್ಲ. ಆತ್ಮಹತ್ಯೆಯಿಂದಲೂ ಸಾಧ್ಯವಿಲ್ಲ. ॥138॥ "ಈ ಸಂಕಟವು ಮುಗಿಯದೆ ಇದ್ದಲ್ಲಿ ನೀನು ಮತ್ತೆ ಹುಟ್ಟಬೇಕಾಗುತ್ತದೆ. ಆದುದರಿಂದ ಈ ಕಷ್ಟವನ್ನು ಇನ್ನು ಸ್ವಲ್ಪ ಕಾಲ ಅನುಭವಿಸು, ಆತ್ಮಹತ್ಯೆ ಮಾಡಿಕೊಳ್ಳಬೇಡ." ॥139॥ ಸಮಯೋಚಿತವಾದ ಈ ಕಥೆಯನ್ನು ಓದಿ ಅಂಬಡೇಕರನು ಆಶ್ಚರ್ಯಹೊಂದಿದನು. ಮತ್ತು ಆ ಜಾಗದಲ್ಲೇ ನಾಚಿದನು. ಬಾಬಾರವರ

ಸರ್ವವ್ಯಾಪಕತ್ವವನ್ನು ಅರಿತನು. ॥140॥ ಅಂಬಡೇಕರನು ಮನಸ್ಸಿನಲ್ಲೇ ಅರ್ಥ ಮಾಡಿಕೊಂಡನು. ಪೂರ್ವದ ಕರ್ಮದ ಫಲವನ್ನು ಅನುಭವಿಸಲೇಬೇಕು. ಅವನಿಗೆ ಸರಿಯಾದ ಸಮಯದಲ್ಲಿ ಅರ್ಥಮಾಡಲಾಗಿತ್ತು. ಅವನು ಈ ಸಾಹಸಕ್ಕೆ ಕೈ ಹಾಕದಿದ್ದುದು ಒಳ್ಳೆಯದೇ ಆಯಿತು. ॥141॥ ಈ ದೃಷ್ಟಾಂತವು ಅಶರೀರವಾಣಿಯ ರೀತಿಯಲ್ಲಿತ್ತು. ಇದು ಸಾಯಿ ಚರಣಗಳಲ್ಲಿಟ್ಟಿದ್ದ ಅವನ ಭಕ್ತಿಯನ್ನು ಮತ್ತಷ್ಟು ದೃಢಗೊಳಿಸಿತು. ಸಾಯಿಯ ಕಾರ್ಯಗಳು ಊಹಾತೀತವಾದುದು. ॥142॥ ಸಾಯಿಯ ಎಚ್ಚರಿಕೆಯು ಸಗುಣನ ಮಾತುಗಳ ಮೂಲಕ ಮಾರ್ಗದರ್ಶನ ಮಾಡಿದವು. 'ಆ ಅಕಲ್ಪಿತ ಪುಸ್ತಕ ದೊರಕುವುದರಲ್ಲಿ ಸ್ವಲ್ಪ ವಿಳಂಬವೇನಾದರೂ ಆಗಿದ್ದರೆ ನನ್ನ ಜನ್ಮವೇ ನಾಶವಾಗುತ್ತಿತ್ತು. ॥143॥ 'ನಾನು ನನ್ನ ಜೀವನವನ್ನೇ ಕಳೆದುಕೊಳ್ಳುತ್ತಿದ್ದೆ. ಕುಟುಂಬವು ದುರ್ಧರವಾಗಿ ನಾಶವಾಗುತ್ತಿತ್ತು. ನನ್ನ ಪತ್ನಿಯು ಅದೆಷ್ಟು ಅನರ್ಥ ಅನುಭವಿಸಬೇಕಾಗುತ್ತಿತ್ತು. ನನಗೆ ಸ್ವಾರ್ಥವೂ ಪರಮಾರ್ಥವೂ ಎರಡೂ ದೊರಕುತ್ತಿರಲಿಲ್ಲ.' ॥144॥ ಬಾಬಾರವರು ಸಗುಣನಿಗೆ ಪ್ರೇರಣೆನೀಡಿ ಆ ಪುಸ್ತಕವನ್ನು ನಿಮಿತ್ತ ಮಾಡಿ ನನ್ನ ಮನಸ್ಸು ಆತ್ಮಘಾತಮಾಡಿಕೊಳ್ಳುವುದನ್ನು ತಪ್ಪಿಸಿ ಬೇರೆಕಡೆ ತಿರುಗಿಸಿದರು. ॥145॥ ಈ ರೀತಿಯ ಘಟನೆ ನಡೆಯದಿದ್ದರೆ, ಆಬಡಪಾಯಿಯು ಅನವಶ್ಯಕವಾಗಿ ತನ್ನ ಜೀವನವನ್ನು ಕಳೆದುಕೊಳ್ಳುತ್ತಿದ್ದನು. ಆದರೆ ಸಾಯಿಯಂತಹ ರಕ್ಷಕರು ಇರುವಾಗ ಯಾರು ತಾನೇ ಸಾಯಿಸಲು ಸಾಧ್ಯವಾಗುತ್ತದೆ? ॥146॥ ಈ ಭಕ್ತನ ತಂದೆಯು ಅಕ್ಕಲಕೋಟೆಸ್ವಾಮಿಯ ಭಕ್ತನಾಗಿದ್ದನು. ಬಾಬಾರವರು ಅವನಿಗೆ ತನ್ನ ತಂದೆಯ ಹೆಜ್ಜೆಗಳಲ್ಲಿ ನಡೆಯಬೇಕು ಎಂಬುದನ್ನು ಅರ್ಥಮಾಡಿಸಿದರು. ॥147॥ ಅನಂತರ ಎಲ್ಲವೂ ಒಳ್ಳೆಯದಾಯಿತು. ಆ ದಿನಗಳು ಮುಗಿದುಹೋದವು. ಅವನು ಜ್ಯೋತಿಷ್ಯವಿದ್ಯೆಯಲ್ಲಿ ಪ್ರಾವೀಣ್ಯತೆಯನ್ನು ಅತ್ಯಂತ ಶ್ರಮಪಟ್ಟು ಪಡೆದನು. ಅದು ನಿರೀಕ್ಷಿತ ಫಲವನ್ನೂ ಕೊಟ್ಟಿತು. ॥148॥ ಅವನು ಸಾಯಿಯ ಕೃಪಾಪ್ರಸಾದವನ್ನು ಪಡೆದನು. ಅದೃಷ್ಟವು ಅವನಲ್ಲಿ ಮುಗುಳ್ನಗು ತರಿಸಿತು. ಅವನು ಜ್ಯೋತಿರ್ವಿದ್ಯೆಯಲ್ಲಿ ಪ್ರಾವೀಣ್ಯ ಪಡೆದನು. ಅವನ ಹಿಂದಿನ ಸಂಕಟದ ಕಾಲ ದೂರವಾಯಿತು. ॥149॥ ಅವನಿಗೆ ಗುರುಚರಣಗಳಲ್ಲಿ ಪ್ರೇಮವು ಹೆಚ್ಚಿತು. ಅವನು ಸುಖ, ಕುಶಲ ಮತ್ತು ಕ್ಷೇಮವನ್ನು ಪಡೆದನು. ಅವನಿಗೆ ಮನೆಯಲ್ಲಿ ಸುಖ, ಶಾಂತಿಗಳು ಉಂಟಾದವು. ಅವನು ಪರಮಾನಂದವನ್ನು ಪಡೆದನು. ॥150॥ ಈ ರೀತಿಯ ಚಮತ್ಕಾರಗಳು ಅಗಣಿತವಾಗಿವೆ. ಒಂದಕ್ಕಿಂತ ಮತ್ತೊಂದು ಮಹತ್ತಾದದ್ದು. ಆದರೆ ಈ ಕಥೆಗಳು ಗ್ರಂಥವಿಸ್ತಾರವನ್ನು ಹೆಚ್ಚಿಸುತ್ತದೆ. ಆದ್ದರಿಂದಲೇ ಅದರ ಸಾರಕ್ಕೆ ಸೀಮಿತಗೊಳಿಸಿದ್ದೇನೆ. ॥151॥ ಹೇಮಾಡನು ಸಾಯಿಯ ಚರಣಗಳಲ್ಲಿ ಶರಣಾಗುತ್ತಾನೆ. ಮುಂದಿನ ಅಧ್ಯಾಯ ಅತ್ಯಂತ ಕುತೂಹಲಕಾರಿಯಾದ ಕಥೆ. ಯಾವ ರೀತಿ ಶಾಮಾನಿಗೆ ವಿಷ್ಣು ಸಹಸ್ರನಾಮದ ದಾನ ಸಿಕ್ಕಿತು ಎಂಬುದರ ಬಗ್ಗೆ ತಿಳಿಸುವೆನು. ॥152॥ 'ನನಗೆ ಬೇಡ, ನನಗೆ ಬೇಡ' ಎಂದು ಶಾಮಾ ಹೇಳಿದ. ಆದರೆ ಬಾಬಾರವರಿಗೆ ಅವನನ್ನು ಕಂಡರೆ ಅಸೀಮವಾದ ಪ್ರೀತಿ. ಅವರು ಅವನಿಗೆ ಒತ್ತಾಯಪೂರ್ವಕವಾಗಿ ಸಹಸ್ರನಾಮವನ್ನು ಅದರ ಸುಂದರ

ಮಹಾತ್ಮೆಯನ್ನು ವರ್ಣಿಸುತ್ತ ಕೊಟ್ಟರು. ॥153॥ ಈಗ ಆದರಪೂರ್ವಕವಾಗಿ ಗಮನವಿಟ್ಟು ಈ ಕಥೆಯನ್ನು ಕೇಳಿರಿ. ಬಾಬಾರವರು ಅನುಗ್ರಹ ವರ್ಷಿಸುವುದನ್ನು ಕಾಣಿರಿ. ಸಮಯವು ಕೂಡಿಬಂದಾಗ ಒಬ್ಬ ಭಕ್ತನಿಗೆ ಕಿಂಚಿತ್ತೂ ಆಶೆ ಇಲ್ಲದಿದ್ದರೂ ಅನುಗ್ರಹಿಸುತ್ತಿದ್ದರು. ॥154॥ ಈ ಅಧ್ಯಾಯದಲ್ಲಿ ಸದ್ಗುರುವಿನ ನಿವಾಸದಲ್ಲಿ ಅನುಗ್ರಹಿಸುವ ಅಲೌಕಿಕ ರೀತಿಯು ತಿಳಿಯುತ್ತದೆ. ಶ್ರೋತೃಗಳು ಇದನ್ನು ಗೌರವಪೂರ್ವಕವಾಗಿ ಆಲಿಸಿರಿ. ॥155॥ ಅತ್ಯಂತ ಶ್ರೇಷ್ಠರೂಪದ ಕಲ್ಯಾಣಸ್ವರೂಪರಾಗಿದ್ದಾರೆ ಸಾಯಿ. ಅವರು ಗುಣಗಳ ನಿಧಿಯಾಗಿದ್ದಾರೆ. ಅವರ ಬಗ್ಗೆ ಕೇಳುವವನು, ಅವರ ಕೀರ್ತಿಯ ಗುಣಗಾನ ಮಾಡುವವನು ಭಾಗ್ಯವಂತನು. ಅದು ಅವನ ಜೀವನವನ್ನು ಪಾವನಗೊಳಿಸುವ ಧಾರ್ಮಿಕಕಾರ್ಯ. ॥156॥

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಅಪಸ್ಮಾರ ಮತ್ತು ಆತ್ಮಹತ್ಯೆಯ ನಿವಾರಣೆ ಮತ್ತು ತನ್ನ ಗುರುಪದಗಳಲ್ಲಿ ಸ್ಥಿರೀಕರಣ" ಎಂಬ ಇಪ್ಪತ್ತಾರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಬೋಧಿಸುವವನು ಅಥವಾ ಉಪದೇಶ ನೀಡುವವನು ಅಂದರೆ 'ಗುರು'.
2. ಬೆವರುವುದು, ಸ್ಥಿರತೆ, ಭಾವೋದ್ವೇಗದಿಂದ, ಉಸಿರು ಸಿಕ್ಕಿಹಾಕಿಕೊಳ್ಳುವುದು, ಬಳಿಚಿಕೊಂಡಿರುವುದು, ಕಣ್ಣೀರು, ನಡುಗುವುದು ಮತ್ತು ಜ್ಞಾನ ತಪ್ಪುವುದು.
3. ಕಸ್ತೂರಿ ಪರಿಮಳದ ಕಪ್ಪು ಪುಡಿ.
4. ಕಹಿಯಾದ ಬೇವಿನ ಎಲೆಗಳು, ಉಪ್ಪು ಮತ್ತು ಸಾಸುವೆಗಳನ್ನು ದೇಹದ ಸುತ್ತ ನಿವಾಳಿಸುವುದು – ದೃಷ್ಟಿತೆಗೆಯುವುದು.
5. ಮರಾಠಿ ಭಾಷೆಯಲ್ಲಿ ಅದನ್ನು ತರಕಾರಿ ಎಲೆಯಮೇಲೆ ಸುಲಭವಾಗಿ ಹರಿಯುವ ನೀರಿಗೆ ಹೋಲಿಸುತ್ತಾರೆ.
6. ಸಗುಣ ಮೇರು ನಾಯಕ.
7. ಶಾಮ ಅಂದರೆ ಮಾಧವರಾವ್ ದೇಶಪಾಂಡೆ.



# ಅಧ್ಯಾಯ – 27

॥ ಅಥ ಶ್ರೀ ಸಾಯಿ ಸಚ್ಚರಿತೆ ॥



## "ದೀಕ್ಷೆ ಮತ್ತು ಅನುಗ್ರಹಗಳ ಕೃಪೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಒಬ್ಬ ವ್ಯಕ್ತಿಯು ಸದ್ಗುರುವಿನ ಚರಣಗಳಲ್ಲಿ ಆಶ್ರಯ ಪಡೆದಾಗ, ಅವನಿಗೆ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಗೆ ಪ್ರಣಾಮ ಮಾಡಿದ ಪುಣ್ಯ ಬರುತ್ತದೆ. ನಿಜವಾಗಿಯೂ ಅವನು ಪರಬ್ರಹ್ಮನಿಗೆ ನಮಸ್ಕರಿಸಿದ್ದಾನೆ. ಮತ್ತು ಪರಮ ಸ್ವರ್ಗೀಯ ಆನಂದಪ್ರಾಪ್ತವಾಗುತ್ತದೆ. ॥1॥ ಸಮುದ್ರದಲ್ಲಿ ಒಂದು ಮುಳುಗುಹಾಕಿದರೆ ಎಲ್ಲಾ ತೀರ್ಥಗಳಲ್ಲಿಯೂ ಸ್ನಾನಮಾಡಿದ ಪುಣ್ಯ ದೊರಕುತ್ತದೆ. ಮತ್ತು ಗುರುಚರಣದ ನೆರಳಿನಲ್ಲಿ ಕುಳಿತುಕೊಳ್ಳುವುದು ಎಲ್ಲಾ ದೇವರನ್ನೂ ಪಡೆದಂತೆ ಆಗುತ್ತದೆ. ॥2॥ ಹೇ, ಸಾಯಿಸದ್ಗುರು ನಿಮಗೆ ಜಯವಾಗಲಿ. ಜೈ, ನಿಮಗೆ ಜಯವಾಗಲಿ. ನೀವೇ ಕಲ್ಪತರು ಮತ್ತು ಬ್ರಹ್ಮನಲ್ಲಿ ಐಕ್ಯತೆಯನ್ನು ನೀಡುವಿರಿ. ಜೈ, ನಿಮಗೆ ಜಯವಾಗಲಿ! ಆತ್ಮಜ್ಞಾನದ ಸಾಗರನೇ, ಈ ಕಥೆಗಳಲ್ಲಿ ಗೌರವವನ್ನು ನಮ್ಮಲ್ಲಿ ಹುಟ್ಟಿಸಿ. ॥3॥ ಭಕ್ತರು ನಿಮ್ಮ ಕಥಾಮೃತವನ್ನು ಚಾತಕ ಪಕ್ಷಿಯು ಮೋಡಗಳಿಂದ ಬರುವ ಮಳೆಹನಿಗಳನ್ನು ಆಸ್ವಾದಿಸುವಂತೆ ಆನಂದಿಸಲಿ. ನಿಮ್ಮ ಭಕ್ತರೆಲ್ಲರೂ ಅದನ್ನು ಸವಿಯಲಿ ಮತ್ತು ಸದಾ ಸುಖವನ್ನು ಅನುಭವಿಸಲಿ. ॥4॥ ಭಕ್ತರೆಲ್ಲರೂ ನಿಮ್ಮ ಕಥೆಯನ್ನು ಕೇಳುತ್ತಲೇ, ತಮ್ಮ ದೇಹದ ತುಂಬೆಲ್ಲ ಬೆವರು ಹೊಡೆದು, ತಮ್ಮ ಕಣ್ಣುಗಳಲ್ಲಿ ಪ್ರೀತಿಯ ಅಶ್ರುಗಳನ್ನು ತುಂಬಿಕೊಂಡು ತಮ್ಮ ಗಂಟಲಿನಲ್ಲಿ ಉಸಿರು ಸಿಕ್ಕಿಹೋಗುವಷ್ಟು ತನ್ಮಯರಾಗಲಿ. ॥5॥

ಶ್ರೋತೃಗಳು ಮತ್ತು ಅವರ ಪರಿವಾರದವರು ಭಾವೋದ್ವೇಗದಿಂದ ರೋಮಾಂಚಿತರಾಗಲಿ. ಪದೇ ಪದೇ ಬಿಕ್ಕಳಿಸುತ್ತ ಅಳುತ್ತ ಭಾವದಿಂದ ತುಂಬಲಿ. ॥6॥ ಅವರ ಪರಸ್ಪರ ವಿರೋಧಭಾವಗಳು, ಚಿಕ್ಕವರು ದೊಡ್ಡವರು ಎಂಬ ಭೇದಾಭೇದಗಳು ಮಾಯವಾಗಲಿ. ಇದು ಗುರುಕೃಪೆಯು ಅವರ ಮೇಲೆ ಅವರ ಅಂತರಂಗದಲ್ಲಿ ಅನುಗ್ರಹಿಸುತ್ತದೆ ಎಂಬುದಕ್ಕೆ ಗುರುತು ಎಂಬುದನ್ನು ಅರಿಯಲಿ. ॥7॥ ಗುರುಕೃಪೆಯನ್ನು ಕಣ್ಣಿಂದ ನೋಡಲಾಗುವುದಿಲ್ಲ. ಅದು ಸರ್ವೇಂದ್ರಿಯಗಳಿಗೂ ಅಗೋಚರವಾದುದು. ಸದ್ಗುರುವಲ್ಲದೆ ಬೇರೆ ಯಾರೂ ಅದನ್ನುದಯಪಾಲಿಸಲು ಸಾಧ್ಯವಿಲ್ಲ. ಈ ಮೂರು ಲೋಕಗಳಲ್ಲಿಯೂ ಮತ್ತೆ ಯಾರೂ ಇದನ್ನು ಮಾಡಲು ಸಾಧ್ಯವಿಲ್ಲ. ॥8॥ ಗುರುಚರಣಗಳಲ್ಲಿ ಪರಮನಿಷ್ಠೆಯು ಹುಟ್ಟದೆ ಇದ್ದಲ್ಲಿ ಕಾಮಾದಿ ಅರಿಷಡ್ವರ್ಗಗಳು ಉಪಶಮನವಾಗುವುದಿಲ್ಲ. ನಮ್ಮಲ್ಲಿ ಭಕ್ತಿಭಾವ, ನಿಸ್ಸೀಮ ಭಕ್ತಿಯು ಇಲ್ಲದೆ ಸಾತ್ವಿಕಅಷ್ಟಭಾವಗಳು ಉದಯಿಸುವುದಿಲ್ಲ. ॥9॥ ಭಕ್ತನು ತನ್ನ ಆತ್ಮತತ್ತ್ವವನ್ನು ಅರಿತಾಗ ಗುರುವು ಪರಮಸಂತೋಷಪಡುತ್ತಾನೆ. ಭಕ್ತನು ಅದೆಷ್ಟು ಪರಮಾರ್ಥದ ಕಡೆ ತಿರುಗುತ್ತಾನೋ ಅಷ್ಟೇ ಗುರುವನ್ನು ಅಭಿನಂದಿಸಬೇಕಾಗುತ್ತದೆ. ॥10॥ ದೇಹ, ಮನೆ, ಮಗ, ಮತ್ತು ಹೆಂಡತಿ – ನಾನು ಮತ್ತು ನನ್ನದು ಇವೆಲ್ಲವೂ ಮಾನವ ಜೀವನದ ನಿಷ್ಫಲವಾದ ಪ್ರಯತ್ನಗಳು. ಇವೆಲ್ಲವೂ ಕ್ಷಣಿಕ ಮಾಯೆ, ಮಧ್ಯಾಹ್ನದ ನೆರಳಿನಂತಿವೆ. ॥11॥ "ಮಾಯೆಯ ಬಂಧನದ ಅಡಚಣೆಯುಂಟಾಗದಿರಲಿ." ಇದು ನಿನ್ನ ಮನಸ್ಸಿನ ಯೋಚನೆಯಾಗಿದ್ದರೆ ಸಾಯಿಯಲ್ಲಿ ಅನನ್ಯಶರಣಾಗತ ಭಾವಸಂಪನ್ನನಾಗು. ॥12॥ ವೇದಶಾಸ್ತ್ರಗಳ ಪಂಡಿತರೂ ಸಹ ಮಾಯೆಯ ಶಕ್ತಿಯನ್ನು ಅಂತ್ಯಗೊಳಿಸುವುದರಲ್ಲಿ ವಿಫಲರಾಗಿದ್ದಾರೆ. ಕೇವಲ ಭಗವಂತನನ್ನೇ ಎಲ್ಲದರಲ್ಲೂ ಕಾಣುವವನು ಮಾತ್ರವೇ ನಿಶ್ಚಿತವಾಗಿಯೂ ರಕ್ಷಿಸಲ್ಪಡುವನು. ॥13॥ ಚಾಂದಪಾಟೀಲನು ನಿಜಾಮನ ಆಡಳಿತವನ್ನು ತೊರೆದು ನೇವಾಸಾಕ್ಕೆ ಫಕೀರ ಸಾಯಿಯನ್ನು ತನ್ನ ಜೊತೆಯಲ್ಲೇ ಕರೆದುಕೊಂಡು ಬಂದನು. ನಿಜವಾಗಿಯೂ ಅವನೇ ಧನ್ಯ! ॥14॥ ಫಕೀರನು ಅಲ್ಲಿ ಆರುತಿಂಗಳಿಂದ ಒಂದು ವರ್ಷದವರೆಗೆ ವಾಸವಾಗಿದ್ದನು. ಅಲ್ಲಿ ಕಾನಡ ಎಂಬ ಹಳ್ಳಿಯ ಕವಾ ಎಂಬುವನನ್ನು ತನ್ನ ಜೊತೆಯಲ್ಲಿ ಇರಿಸಿಕೊಂಡನು. ॥15॥ ಅದು ಹಾಗಿರಲಿ, ಅನಂತರ ಅವನು ಪ್ರಸಿದ್ಧವಾದ ಟಾಕಳಿ ಎಂಬ ಹಳ್ಳಿಗೆ ಹೋದನು. ಮತ್ತು ದಗಡುತಂಬೋಳಿ, ಕವಾ ಮತ್ತು ಬಾಬಾ ಸಹಿತ ಆ ಗುಂಪು ಅಲ್ಲಿಂದ ಶಿರಡಿಗೆ ಬಂದಿತು. ॥16॥ ಅಲ್ಲಲ್ಲಿ ಅನೇಕ ಅಪರಿಮಿತ ಯಾತ್ರಾ ಸ್ಥಳಗಳು ಇವೆ. ಆದರೆ ಸಾಯಿಭಕ್ತರಿಗೆ ಶಿರಡಿಯು ಅತ್ಯಂತ ಪವಿತ್ರವಾಗಿದೆ. ॥17॥ ಅದೃಷ್ಟವಶಾತ್ ಅಂತಹ ಈ ಯೋಗ ನಡೆಯದೆ ಇದ್ದಿದ್ದರೆ, ಅವರ ಜೊತೆ ಇರುವ ಮಹಾಭಾಗ್ಯ ನಮಗೆಲ್ಲಿ ದೊರೆಯುತ್ತಿತ್ತು? ಇದು ಭಕ್ತರೆಲ್ಲರ ಮಹಾನ್ ಭಾಗ್ಯ. ॥18॥ ಯಾವ ಭಕ್ತರು ಅಲ್ಲಿಗೆ ಬಂದು ತಮ್ಮ ಕಾರ್ಯಕ್ಕಾಗಿ ಶರಣಾಗತರಾದರೋ ಅವರಿಗೆ ಸಾಯಿಯು ಯಥಾರ್ಥವನ್ನು ಅರ್ಥ ಮಾಡಿಸಿ ಅವರ ಹಿತಕ್ಕಾಗಿ ಸನ್ಮಾರ್ಗವನ್ನು ತೋರಿಸಿದರು. ॥19॥ ಆದುದರಿಂದ, ಶ್ರೋತೃಗಳು ಏಕಾಗ್ರಮನಸ್ಸಿನಿಂದ ಸಚ್ಚರಿತೆಯನ್ನು ಪ್ರೀತಿಸುತ್ತ ಓದಬೇಕು. ಇದು ಗುರುಕೃಪೆಯನ್ನು

ಸಾಧಿಸಲು ಶ್ರೇಷ್ಠವಾದ ಮಾರ್ಗ. ಸಾಯಿಯ ಚರಿತ್ರೆ ಪರಮ ಪಾವನವಾದುದು. ॥20॥ ಹಿಂದಿನ ಅಧ್ಯಾಯದಲ್ಲಿ ಈ ರೀತಿಯ ನಿರೂಪಣೆ ಇದೆ. ಒಬ್ಬನ ಭಕ್ತಿ ತನ್ನದೇ ಗುರುವಿನ ಚರಣಗಳಲ್ಲಿ ಸ್ಥಾಪಿತವಾಗಿರುತ್ತದೆ. ಅಕ್ಕಲಕೋಟ ಸ್ವಾಮಿಯವರನ್ನು ಸೂಚಿಸುವ ಮೂಲಕ ಒಬ್ಬನ ಗುರುವಿನ ಮೇಲಿನ ಭಕ್ತಿಯನ್ನು ಜಾಗೃತಗೊಳಿಸಲಾಯಿತು. ॥21॥ ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ತಪ್ಪಿಸಿದರು. ಮತ್ತು ಅಕಲ್ಪಿತವಾಗಿಯೇ ಜೀವದಾನ ಮಾಡುವ ಉಕ್ತಿಯನ್ನು ಯೋಜಿಸಿದ್ದರು. ಕ್ಷಣದಲ್ಲಿ ನಿರ್ಧಾರಕವಾಗಿ ಆ ಮರಣವನ್ನು ತಪ್ಪಿಸಿದರು. ॥22॥ ಈಗ, ಈ ಅಧ್ಯಾಯದಲ್ಲಿ ನಿರೂಪಣೆ ಮಾಡುವ ವಿಚಾರದಲ್ಲಿ ಯಾವ ರೀತಿ ಸಾಯಿಯು ಪ್ರಸನ್ನರಾದಾಗ ಭಕ್ತರ ಮೇಲೆ ಅನುಗ್ರಹ ಮಾಡಿ ಅವರನ್ನು ಸುಖಸಂಪನ್ನರಾಗಿ ಮಾಡುವರೆಂಬುದನ್ನು ತಿಳಿಸುವೆ. ॥23॥ ಅವರ ದೀಕ್ಷಾಪದ್ಧತಿಯು ಅದ್ಭುತವಾಗಿತ್ತು. ಅದು ಯಾರಿಗೆ ಯಾವ ರೀತಿ ಕೊಡುವರು ಎಂಬುದನ್ನು ಅವಲಂಬಿಸಿತ್ತು. ಅದು ಅತ್ಯಂತ ವಿನೋದಪೂರ್ಣವಾಗಿ ಅಂದರೆ ನಗುತ್ತ ಆಡುತ್ತ ಇರುತ್ತಿತ್ತು. ಶ್ರೋತೃಗಳು ಇದನ್ನು ಗಮನವಿಟ್ಟು ಕೇಳಬೇಕು. ॥24॥ ಉಪದೇಶ ಮಾಡುವುದರಲ್ಲಿ ಅನೇಕ ರೀತಿಗಳು ಇವೆ. ಅವುಗಳನ್ನು ಈ ಗ್ರಂಥದಲ್ಲಿ ವರ್ಣಿಸಲಾಗಿದೆ. ತಿಳಿದುಕೊಳ್ಳುವವನ ಸ್ಥಿತಿಯನ್ನು ನೋಡಿಕೊಂಡೇ ಮಾರ್ಗವನ್ನು ಉಪದೇಶಿಸಲಾಗುತ್ತಿತ್ತು. ॥25॥ ವೈದ್ಯನಿಗೆ ರೋಗವನ್ನು ಕಂಡುಹಿಡಿಯುವ ವಿಧಾನಮತ್ತು ಔಷಧಿಯ ಪರಿಣಾಮಗಳು ತಿಳಿದಿವೆ. ರೋಗಿಗೆ ಇದು ತಿಳಿದಿಲ್ಲ. ಅವನು ಮೊದಲು ಬೆಲ್ಲವನ್ನು ಕೇಳುತ್ತಾನೆ. ॥26॥ ಬೆಲ್ಲವು ಸಿಹಿಯಾಗಿದ್ದರೂ ಅಪಕಾರಿ. ಆದರೆ ರೋಗಿಯು ಹಠಮಾರಿಯಾಗುತ್ತಾನೆ. ಅವನ ಕೈಯಲ್ಲಿ ಮೊದಲು ಬೆಲ್ಲ ಹಾಕುವವರೆಗೆ ಆತ ಔಷಧಿಯ ಸಣ್ಣ ಬಟ್ಟಲನ್ನು ಹಿಡಿಯುವುದಿಲ್ಲ. ॥27॥ ಒಬ್ಬ ರೋಗಿಯ ಮೇಲೆ ಒತ್ತಡ ಹೇರುವುದರಿಂದ ಕೆಲಸವಾಗುವುದಿಲ್ಲ. ಆಗ ವೈದ್ಯನು ಒಂದು ಯುಕ್ತಿಯನ್ನು ಯೋಚಿಸುತ್ತಾನೆ. ಮೊದಲು ಬೆಲ್ಲವನ್ನು ಕೊಟ್ಟು ನಂತರ ಔಷಧಿಯನ್ನು ಕೊಡುತ್ತಾನೆ. ಅದರಿಂದ ಅವನ ಕಾರ್ಯವೂ ಕೈಗೂಡುತ್ತದೆ. ॥28॥ ಆದರೆ ಅವನು ಬೆಲ್ಲದ ದುಷ್ಪರಿಣಾಮಗಳನ್ನು ದೂರಮಾಡುವಂತಹ ದೋಷ ಪರಿಹರಿಸುವ ಔಷಧಿ ಕೊಡುತ್ತಾನೆ. ಕೊಟ್ಟ ಔಷಧಿಗಳು ತಮ್ಮ ಕೆಲಸ ಮಾಡುತ್ತವೆ. ಇದೇ ರೀತಿಯದಾಗಿತ್ತು ಬಾಬಾರವರ ಕಾರ್ಯವೈಖರಿಯೂ ಸಹ. ॥29॥ ಇದು ಮಾತ್ರ ಸರ್ವತ್ರ ನಿಯಮವಾಗಿರಲಿಲ್ಲ. ಅವರು ದಯಪಾಲಿಸುವ ಅನುಗ್ರಹವು ಭಕ್ತನ ಮನೋಧರ್ಮ, ಅರ್ಹತೆ, ಸೇವಾವೃತ್ತಿ ಮತ್ತು ಪ್ರೇಮ ಇವುಗಳ ಮೇಲೆ ಅವಲಂಬಿತವಾಗಿದ್ದವು. ॥30॥ ಬಾಬಾರವ ರೀತಿಗಳು ಅದ್ಭುತ. ಅವರು ಯಾರ ಮೇಲಾದರೂ ಪ್ರಸನ್ನರಾದರೆ ಅವರ ಮೇಲೆ ಅನುಗ್ರಹವನ್ನು ಸುರಿಸುತ್ತಿದ್ದರು. ಕೇಳಿರಿ, ಯಾವ ಸಂದರ್ಭಗಳಲ್ಲಿ ಈ ರೀತಿ ನಡೆಯುತ್ತಿತ್ತು ಎಂಬುದನ್ನು ತಿಳಿಸುವೆ. ॥31॥ ಅವರಿಗೇನಾದರೂ ಮನಸ್ಸಿಗೆ ಬಂದರೆ, ಭಕ್ತರ ಕಲ್ಯಾಣವನ್ನು ಸಹಜವಾದ ಹಾಸ್ಯ ಮತ್ತು ವಿನೋದಗಳಿಂದ ಬೇರೆ ಯಾರೂ ಮನಸ್ಸಿನಲ್ಲಿಯೂ ಯೋಚಿಸಲಾರದಂತೆ ಭಕ್ತರ ಕಲ್ಯಾಣವನ್ನು ಸಾಧಿಸಿ ಕೃತಾರ್ಥರನ್ನಾಗಿ ಮಾಡುತ್ತಿದ್ದರು. ॥32॥ ಯಾರಾದರೂ ಭಕ್ತರು

ಸಹಜವಾಗಿಯೇ ಯಾವುದಾದರೂ ಧಾರ್ಮಿಕ ಗ್ರಂಥವಾಚನ ಮಾಡಲು ಇಚ್ಛಿಸಿದಲ್ಲಿ ಆ ಭಕ್ತರು ಗ್ರಂಥವನ್ನು ಬಾಬಾರವರ ಕೈಗಳಿಗೆ ಕೊಟ್ಟು ಮತ್ತೆ ಪ್ರಸಾದವೆಂದು ಹಿಂದಕ್ಕೆ ಸ್ವೀಕರಿಸುತ್ತಿದ್ದರು. ॥33॥ ಅನಂತರ, ಆ ಗ್ರಂಥವನ್ನು ಓದಿದರೆ, ಅತ್ಯಂತ ಶ್ರೇಯ ಸಂಪಾದನೆಯಾಗುತ್ತಿತ್ತು. ಅದು ವಾಚಕರಿಗೆ ಪರಮಕಲ್ಯಾಣಕಾರಿಯಾಗಿರುತ್ತಿದ್ದವು. ಪೂರ್ಣರೂಪದ ಪ್ರಸಾದವಾಗಿರುತ್ತಿತ್ತು. ॥34॥ ಕೆಲವರು ದಶಾವತಾರದ ಚಿತ್ರಗಳನ್ನು ಅರ್ಪಿಸಿದರೆ ಕೆಲವರು ದಶಾವತಾರದ ಸ್ತೋತ್ರಗಳನ್ನು, ಕೆಲವರು ಪಂಚರತ್ನ ಗೀತೆ ಮತ್ತು ಬೇರೆ ಯಾವುದಾದರೂ ಪವಿತ್ರ ಗ್ರಂಥಗಳು ಮತ್ತು ಚಿತ್ರಗಳನ್ನು ಅರ್ಪಿಸುತ್ತಿದ್ದರು. ॥35॥ ದಾಸಗಣುವಿನ, 'ಸಂತಲೀಲಾಮೃತ' ಮತ್ತು 'ಭಕ್ತಲೀಲಾಮೃತ' ಮತ್ತು 'ವಿವೇಕಸಿಂಧು' ಇವುಗಳನ್ನು ಅರ್ಪಿಸಲಾಯಿತು. ಬಾಬಾರವರು ಅವುಗಳನ್ನು ಶಾಮಾನಿಗೆ ಕೊಟ್ಟರು. ॥36॥ "ಶಾಮಾ, ಈ ಪುಸ್ತಕಗಳು ನಿನಗಾಗಿಯೇ" ಎಂದು ಅವರು ಹೇಳುತ್ತಿದ್ದರು. "ಇವುಗಳನ್ನು ಮನೆಯಲ್ಲಿ ಇಟ್ಟುಕೋ. ಜೋಪಾನವಾಗಿ ಇರಲಿ." ಶಾಮಾ ನಮಸ್ಕಾರ ಮಾಡಿದನು. ಅವರ ಆಜ್ಞೆಯನ್ನು ಪಾಲಿಸಿ ಅವುಗಳನ್ನು ಸಣ್ಣ ಬಟ್ಟೆಯ ತುಂಡಿನಲ್ಲಿ ಕಟ್ಟಿದನು. ॥37॥ ಈ ಯೋಚನೆಯಿಂದಲೇ ಭಕ್ತರು ಅಂಗಡಿಯಿಂದ ಗ್ರಂಥಗಳನ್ನು ಖರೀದಿಸಿ ಬಾಬಾರವರ ಕೈಯಲ್ಲಿಟ್ಟು ಪ್ರಸಾದವಾಗಿ ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದರು. ॥38॥ ಬಾಬಾರವರ ಸ್ವಭಾವವು ಉದಾರವಾದುದು. ಇದನ್ನು ಮಾಡಲೂ ಸಹ ಧೈರ್ಯ ಬೇಕಾಗಿತ್ತು, ಆದ್ದರಿಂದ ಅವರು ಮಾಧವರಾವ್‌ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಆ ಪರಿಸ್ಥಿತಿಯನ್ನು ನಿಭಾಯಿಸಿದರು. ॥39॥ ಸರಿಯಾದ ಸಮಯ ನೋಡಿ ಅವನು ಆ ಗ್ರಂಥವನ್ನು ಬಾಬಾರವರ ಕೈಯಲ್ಲಿ ಇಟ್ಟನು. ಬಾಬಾರವರಿಗೆ ಗ್ರಂಥದ ಪ್ರಾಮುಖ್ಯತೆ ತಿಳಿದಿರುತ್ತಿತ್ತು, ಅವರಿಗೆ ಭಕ್ತರ ಸ್ಥಿತಿಯು ತಿಳಿದಿತ್ತು. ॥40॥ ಕೆಲವು ಸಲ ಭಕ್ತರು ಬಾಬಾರವರ ಕೈಯಲ್ಲಿ ಗ್ರಂಥವನ್ನು ಇಟ್ಟಾಗ ಬಾಬಾರವರು ಗ್ರಂಥದ ಹಾಳೆಗಳನ್ನು ತಿರುವಿ ಹಾಕುತ್ತಿದ್ದರು. ಭಕ್ತರು ಗ್ರಂಥವನ್ನು ಹಿಂದಕ್ಕೆ ಪಡೆಯಲು ತಮ್ಮ ಕೈಗಳನ್ನು ಮುಂದಕ್ಕೆ ಚಾಚುತ್ತಿದ್ದರು. ॥41॥ ಆದರೆ ಬಾಬಾರವರುಅದನ್ನು ಅವರಿಗೆ ಹಿಂದಕ್ಕೆ ಕೊಡುತ್ತಿರಲಿಲ್ಲ. ಅವರು ಅದನ್ನು ಮಾಧವರಾವ್‌ಗೆ ಕೊಟ್ಟು ಹೇಳುತ್ತಿದ್ದರು, "ಶಾಮಾ! ಇದನ್ನು ನಿನ್ನಲ್ಲಿ ಇಟ್ಟುಕೊ. ಸದ್ಯಕ್ಕೆ ಇದು ನಿನ್ನಲ್ಲಿರಲಿ." ॥42॥ ಶಾಮಾ ಸ್ಪಷ್ಟವಾಗಿ ಕೇಳುತ್ತಿದ್ದನು, "ಅವನು ಕಾತರನಾಗಿ ಇದಕ್ಕಾಗಿ ಕೈಗಳನ್ನು ಚಾಚಿದ್ದಾನೆ. ಇದು ಯಾರಿಗೆ ಸೇರಿದೆಯೋ ಅವನಿಗೆ ಈ ಗ್ರಂಥವನ್ನು ಹಿಂದಕ್ಕೆ ಕೊಡಲೇ?" ಆದರೂ ಅನಂತರ ಅವರು ಹೇಳುತ್ತಿದ್ದರು, "ನೀನು ಇದನ್ನು ಇಟ್ಟುಕೋ." ॥43॥ ಒಂದು ಸಲ ಕಾಕಾ ಮಹಾಜನಿ ಎನ್ನುವ ಭಕ್ತನು, ಭಾಗವತವನ್ನು ಓದಲು ಇಚ್ಛಿಸುತ್ತಿದ್ದವನು ತನ್ನ ಜೊತೆಯಲ್ಲಿ ಒಂದು ಪ್ರತಿಯನ್ನು ತೆಗೆದುಕೊಂಡು ಬಂದು ಶಿರಡಿಯನ್ನು ತಲುಪಿದನು. ॥44॥ ಮಾಧವರಾವ್ ಅವನನ್ನು ಭೇಟಿಮಾಡಲು ಬಂದನು ಅವನು ಗ್ರಂಥವನ್ನು ಓದಲು ಹಿಡಿದುಕೊಂಡು ಮಸೀದಿಗೆ ಅದರೊಡನೆಯೇ ಹೋದನು. ಬಾಬಾರವರು ಸಹಜ ರೀತಿಯಲ್ಲಿ ಅವನನ್ನು ಕೇಳಿದರು. ॥45॥ "ಶಾಮಾ! ನಿನ್ನ ಕೈಯಲ್ಲಿರುವ ಈ ಪುಸ್ತಕ ಯಾವುದು?" ಶಾಮಾನು

ಅದರ ಬಗ್ಗೆ ತಿಳಿಸಿದನು. ಬಾಬಾರವರು ಅದನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅದನ್ನು ನೋಡಿ ಹಿಂತಿರುಗಿಸಿದರು. ॥46॥ ಅದೇ ಗ್ರಂಥ, ಅದೇ ಪ್ರತಿ, ಅದೇ 'ನಾಥಭಾಗವತ' ಈ ಮೊದಲು ಮಹಾಜನಿಗೆ ಶ್ರೀಗಳ ಕೈಗಳಿಂದ ಪ್ರಸಾದವಾಗಿ ಕೊಟ್ಟದ್ದು ಅದು. ॥47॥ "ಈ ಗ್ರಂಥವು ನನ್ನದಲ್ಲ. ನಾನು ಅದರ ಒಡೆಯನಲ್ಲ. ಅದು ಕಾಕಾ ಮಹಾಜನಿಯದು. ನನಗೆ ಓದಬೇಕೆಂಬ ಇಚ್ಛೆಯಾದುದರಿಂದ ಅದನ್ನು ನಾನು ಪಡೆದೆ" ಎಂದು ಶಾಮಾ ತನ್ನ ಸ್ವಷ್ಟೋಕ್ತಿಗಳಿಂದ ತಿಳಿಸಿದನು. ॥48॥ ಆದರೂ ಬಾಬಾರವರು ಅವನಿಗೆ ಹೇಳಿದರು, "ನಾನು ಇದನ್ನು ನಿನಗೆ ಕೊಟ್ಟಿರುವುದು ನಿಜವಾದ ವಿಷಯ. ನೀನು ಇದನ್ನು ಒಂದು ಬಟ್ಟೆಯಲ್ಲಿ ಸುತ್ತಿ ನಿನ್ನ ಸಂಗ್ರಹದಲ್ಲಿಡು. ಇದು ನಿನ್ನ ಉಪಯೋಗಕ್ಕೆ ಬರುತ್ತದೆ." ॥49॥ ಅದು ಹಾಗಿರಲಿ. ಸ್ವಲ್ಪ ಸಮಯಾನಂತರ, ಕಾಕಾ ಮತ್ತೆ ಶಿರಡಿಗೆ ಬಂದನು ಮತ್ತು ಜೊತೆಯಲ್ಲಿ 'ಭಾಗವತದ ಮತ್ತೊಂದು ಪ್ರತಿಯನ್ನು ತಂದಿದ್ದನು. ಅವನು ಅದನ್ನು ಬಾಬಾರವರ ಕೈಗಳಲ್ಲಿ ಇಟ್ಟನು. ॥50॥ ಅದನ್ನು ಪ್ರಸಾದವಾಗಿ ಹಿಂದಕ್ಕೆ ಪಡೆದನು. "ಅದನ್ನು ಚೆನ್ನಾಗಿ ಜೋಪಾನ ಮಾಡು" ಎಂದು ಬಾಬಾರವರು ಆಜ್ಞಾಪಿಸಿದರು. "ಇದೇ ಒಳ್ಳೆಯ ಸ್ಥಾನದಲ್ಲಿ ನಿನಗಾಗಿಯೇ ಇರುತ್ತದೆ." ಕಾಕಾನಿಗೆ ಈ ಆಶ್ವಾಸನೆಯು ದೊರಕಿತು. ॥51॥ "ಕೇವಲ ಇದು ಮಾತ್ರವೇ ನಿನಗೆ ಅತ್ಯಂತ ಉಪಯುಕ್ತವಾಗಿರುವ ರುಜುವಾತಾಗಿರುತ್ತದೆ. ಇದನ್ನು ಬೇರೆ ಯಾರಿಗೂ ಕೊಡಬೇಡ" ಎಂದು ಅವರು ಅತ್ಯಂತ ಕಳಕಳಿಯಿಂದ ಹೇಳಿದರು. ಕಾಕಾನು ಸಪ್ರೇಮದಿಂದ ವಂದಿಸಿದನು. ॥52॥ ಬಾಬಾರವರು ತಾವೇ ಎಲ್ಲಾ ಇಚ್ಛೆಗಳನ್ನೂ ಪೂರೈಸಿದ್ದರು. ಅವರಿಗೆ ಯಾವುದೇ ಪದಾರ್ಥದ ಮೇಲೆ ಕಿಂಚಿತ್ತೂ ಮೋಹ ಇರಲಿಲ್ಲ. ಅವರಿಗೆ ಸಂಗ್ರಹಿಸುವ ಅವಶ್ಯಕತೆಯಾದರೂ ಎಲ್ಲಿತ್ತು? ಅವರೇ ಸ್ವತಃ ಭಾಗವತ ಧರ್ಮದ ಮೂರ್ತಸ್ವರೂಪವೇ ಆಗಿದ್ದರು. ॥53॥ ಬಾಬಾರವರ ಮನದಿಚ್ಛೆಯನ್ನು ಬಲ್ಲವರಾರು? ಆದರೆ ಅವರ ಭಕ್ತರಿಗೆ ಈ ಗ್ರಂಥಗಳ ಸಂಗ್ರಹವನ್ನು ಓದುವುದು ಮತ್ತು ಕೇಳುವುದು ವ್ಯವಹಾರ ದೃಷ್ಟಿಯಲ್ಲಿ ಅತಿ ಪಾವನವಾದುದು. ॥54॥ ಈಗ ಶಿರಡಿಯು ಒಂದು ಪವಿತ್ರ ಸ್ಥಳವಾಗಿದೆ. ದೇಶ ವಿದೇಶಗಳಿಂದ ಬರುವ ಬಾಬಾರವರ ಭಕ್ತರು ಆಗಾಗ ಸೇರಿ, ಸಭೆಗಳ ಸರಣಿಯನ್ನೇ ನಡೆಸಿ ಜ್ಞಾನವನ್ನು ಸಂಪಾದಿಸಿ ಭಗವಂತನನ್ನು ಸ್ತೋತ್ರ ಮಾಡುತ್ತಾರೆ. ॥55॥ ಆಗ ಈ ಗ್ರಂಥಗಳು ಉಪಯುಕ್ತವಾಗುತ್ತವೆ. ಶಾಮಾನು ಅವುಗಳ ಹೊದಿಕೆಯಿಂದ ಹೊರತೆಗೆದು ಅವುಗಳನ್ನು ತೋರಿಸುತ್ತಿದ್ದನು. ನಾವು ಇನ್ನು ಹೆಚ್ಚು ಕಾಲ ಇರುವುದಿಲ್ಲ. ಆದರೆ ಈ ಗ್ರಂಥಗಳು ಜ್ಞಾನದ ಮೂರ್ತಿಯಾಗಿರುತ್ತವೆ. ॥56॥ ಭಕ್ತರು ಈ ಪರಮ ಪಾವನ ಗ್ರಂಥಗಳನ್ನು ಶಿರಡಿಯಲ್ಲಾಗಲೀ, ಮತ್ತೆ ಯಾವುದೇ ಅನ್ಯ ಸ್ಥಾನದಲ್ಲಾಗಲೀ ಪಠಿಸಿದಾಗ ಅವರು ಬಾಬಾ ಮತ್ತು ಅವರ ಬೋಧನೆಗಳನ್ನು ಸ್ಮರಿಸಿಕೊಳ್ಳುತ್ತಿದ್ದರು. ಗ್ರಂಥ ಸಂಗ್ರಹಕ್ಕೆ ಇದೇ ಕಾರಣವೆಂದು ತೋರುತ್ತದೆ. ॥57॥ ಅದ ರಾಮಾಯಣವಾಗಲಿ, ಭಾಗವತವಾಗಲಿ ಅಥವಾ ಮತ್ತೆ ಯಾವುದಾದರೂ ಪರಮಾರ್ಥವನ್ನು ತಿಳಿಸುವ ಗ್ರಂಥವಾಗಲಿ ಅಥವಾ ರಾಮ, ಕೃಷ್ಣ ಮತ್ತಿತರರ ಜೀವನ ಚರಿತ್ರೆಯೇ ಆಗಿರಲಿ,

ಸಾಯಿ ಮಾತ್ರವೇ ಅಂತರಂಗದ ಕಣ್ಣಿನ ಮುಂದೆ ಬರುತ್ತಾರೆ. ॥58॥ ಈ ಗ್ರಂಥಗಳಲ್ಲೆಲ್ಲಾ ಸಾಯಿಯೇ ಸ್ವತಃ ಮಹಾಪಾತ್ರಗಳ ಸ್ವರೂಪದಲ್ಲಿ ನಟಿಸುತ್ತಿದ್ದಾರೆಂದೇ ಕಾಣುತ್ತದೆ. ಮತ್ತು ಶ್ರೋತೃಗಳೂ, ವಾಚಕರೂ ಇಬ್ಬರೂ ನಿತ್ಯವೂ ತಮ್ಮ ಮುಂದೆ ಸಾಯಿಯ ಸ್ವರೂಪವನ್ನೇ ಕಾಣುತ್ತಾರೆ. ॥59॥ ಶಾಸ್ತ್ರಗಳಲ್ಲಿ ಪ್ರಮಾಣಿಸಿರುವ ಪ್ರಕಾರ ಒಂದು ಗ್ರಂಥವನ್ನು ಗುರುವಿಗೆ ಅರ್ಪಿಸಿದರೆ ಅಥವಾ ಬ್ರಾಹ್ಮಣನಿಗೆ ದಾನಕೊಟ್ಟರೆ ಅದರಲ್ಲಿಯೇ ದಾನಿಯ ಕಲ್ಯಾಣವುಂಟಾಗುತ್ತದೆ. ॥60॥ ಈ ಒಂದು ಚಿಕ್ಕ ಪ್ರಯೋಜನದ ಕೆಲಸಕ್ಕಾಗಿಯೇ ಬಾಬಾರವರು ಶಾಮಾನನ್ನು ನಿಯೋಜಿಸಿದ್ದರೇ? ಈ ವಾಕ್ಯಗಳನ್ನು "ಈ ಗ್ರಂಥವನ್ನು ಮನೆಗೆ ತೆಗೆದುಕೊಂಡು ಹೋಗಿ, ಅದನ್ನು ಬಟ್ಟೆಯಲ್ಲಿ ಸುತ್ತಿ ರಕ್ಷಿಸು" ಎಂದು ಹೇಳುತ್ತಿದ್ದರೇ? ॥61॥ ಶಾಮಾನ ಭಕ್ತಿಯು ನಿಸ್ಸೀಮವಾಗಿದ್ದಂತೆಯೇ ಅವನ ಮೇಲೆ ಬಾಬಾರವರ ಪ್ರೀತಿಯೂ ಹಾಗೆಯೇ ಇತ್ತು. ಆದುದರಿಂದ ಅವನ ಅಧ್ಯಾತ್ಮ ಸಾಧನೆಗಾಗಿ ಅವನನ್ನು ಒಂದು ನಿಯಮ ಪೂರ್ವಕ ಸಾಧನೆಯಲ್ಲಿ ತೊಡಗಿಸಬೇಕೆಂಬ ಆಶೆಯು ಬಾಬಾರವರಲ್ಲಿ ಉದಯಿಸಿತು. ॥62॥ ಆದ್ದರಿಂದ ಅವರು ಏನು ಮಾಡಿದರು ನೋಡಿ! ಶಾಮಾನಿಗೆ ಅಷ್ಟು ಇಚ್ಛೆ ಇಲ್ಲದಿದ್ದರೂ ಸಹ ಅವನು ಗುರುವಿನ ಒಲವು ಮತ್ತು ಅನುಗ್ರಹ ಪಡೆದನು. ಯಾವ ಸ್ಥಿತಿಯಲ್ಲಿ ಅದು ಸಂಭವಿಸಿತು ಎಂಬುದನ್ನು ನೋಡೋಣ. ॥63॥ ಒಂದು ದಿನ ಮಸೀದಿಯಲ್ಲಿ ರಾಮದಾಸಿ ಬುವಾ ಎಂಬಾತ ಇದ್ದನು. ರಾಮಾಯಣವನ್ನು ಓದುವುದು ಅವನ ದಿನನಿತ್ಯದ ನಿಯಮವಾಗಿತ್ತು. ॥64॥ ಅವನು ಪ್ರಾತಃಕಾಲದಲ್ಲಿ, ಮುಖಮಾರ್ಜನ, ಸ್ನಾನ, ಸಂಧ್ಯಾವಂದನೆ ಇವುಗಳನ್ನು ಮಾಡಿ, ವಿಭೂತಿಯನ್ನು ಹಣೆಗೆ ಧರಿಸಿ, ಕಂದು ಬಣ್ಣದ ವಸ್ತ್ರಧರಿಸಿ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಓದಲು ಕುಳಿತುಕೊಳ್ಳುತ್ತಿದ್ದನು. ॥65॥ ಅವನು ವಿಷ್ಣು ಸಹಸ್ರನಾಮ ಮತ್ತು ಅಧ್ಯಾತ್ಮ ರಾಮಾಯಣ ಇವುಗಳನ್ನು ಆ ನಂತರ ಓದುತ್ತಿದ್ದನು. ಅವನು ಈ ಗ್ರಂಥಗಳನ್ನು ಆಗಾಗ್ಗೆ ಓದುತ್ತಿದ್ದನು. ಇದು ಹೀಗೆಯೇ ಪರಿಪೂರ್ಣ ಶ್ರದ್ಧೆಯಿಂದ ಮುಂದುವರಿಯಿತು. ॥66॥ ಈ ರೀತಿಯಲ್ಲಿ ಸಾಕಷ್ಟು ದೀರ್ಘ ಕಾಲದ ನಂತರ ಮಾಧವರಾವ್‌ಗೆ ಒಳ್ಳೆಯ ಕಾಲ ಬಂದಿತು. ಸಾಯಿ ಸಮರ್ಥರಿಗೆ ಮನಸ್ಸಿನಲ್ಲಿ ಏನೋ ಬಂದಿತು. ಆ ಕಥೆಯ ಬಗ್ಗೆ ಆಲಿಸಿ॥67॥ ಮಾಧವರಾವ್‌ನ ಸೇವೆಯ ಫಲ ನೀಡಿತ್ತು. 'ಈಗ ಅವನನ್ನು ಒಂದು ನಿತ್ಯ ನಿಯಮ ಮಾರ್ಗದಲ್ಲಿ ಹಾಕಿ ಭಕ್ತಿಮಾರ್ಗದ ಪ್ರಸಾದವನ್ನು ಕೊಡಬೇಕು. ಅದರಿಂದಾಗಿ ಅವನು ಸಂಸಾರ ಬಂಧನದಿಂದ ಬಿಡುಗಡೆ ಹೊಂದುತ್ತಾನೆ.' ॥68॥ ಈ ರೀತಿಯ ಯೋಚನೆ ಯಾವಾಗ ಬಾಬಾರವರ ಮನಸ್ಸಿನಲ್ಲಿ ಬಂದಿತೋ ಆಗ ಅವರು ರಾಮದಾಸಿಯನ್ನು ಹತ್ತಿರ ಕರೆದರು ಮತ್ತು ಹೇಳಿದರು: "ನನಗೆ ಹೊಟ್ಟೆಯಲ್ಲಿ ಚುಚ್ಚುವ ನೋವುಂಟಾಗಿದೆ. ಕರುಳುಗಳು ಹರಿದು ಹೋಗುತ್ತಿವೆಯೋ ಅನಿಸುತ್ತಿದೆ. ॥69॥ "ಹೋಗು, ಈ ಹೊಟ್ಟೆ ನೋವು ಕಡಿಮೆಯಾಗುತ್ತಿಲ್ಲ. ಬೇಗ ಸ್ವಲ್ಪ ಸೋನಾಮುಖಿಯನ್ನು ತೆಗೆದುಕೊಂಡು ಬಾ. ನಾನು ಅದನ್ನು ಸ್ವಲ್ಪ ಪ್ರಮಾಣ ತೆಗೆದುಕೊಂಡ ಹೊರತು ಪೀಡಿಸುತ್ತಿರುವ ನೋವು ನಿಲ್ಲುವುದಿಲ್ಲ. ॥70॥ ಸರಳಭಾವದ ರಾಮದಾಸಿಯು

ಪ್ರೀತಿಯ ಭಕ್ತನಾಗಿದ್ದನು. ಅವನು ಪುಸ್ತಕದಲ್ಲಿ ಒಂದು ಗುರುತು ಇಟ್ಟು ಅದನ್ನು ಪಕ್ಕದಲ್ಲಿಟ್ಟನು. ಅವನು ಬಾಬಾರವರ ಆಜ್ಞಾನುವರ್ತಿಯಾಗಿ ಮಾರುಕಟ್ಟೆಗೆ ಧಾವಿಸಿದನು. ॥71॥ ರಾಮದಾಸಿಯು ಮೆಟ್ಟಿಲುಗಳನ್ನು ಇಳಿದು ಬಂದಕೂಡಲೇ ಬಾಬಾ ಏನು ಮಾಡಿದರು ಎಂಬುದನ್ನು ನೋಡಿ. ಅವರು ಕೂಡಲೇ ತಮ್ಮ ಆಸನದಿಂದ ಎದ್ದು ಪುಸ್ತಕಗಳ ಹತ್ತಿರ ಹೋದರು. ॥72॥ ಅಲ್ಲಿ ಇತರ ಧಾರ್ಮಿಕ ಪುಸ್ತಕಗಳ ಜೊತೆಯಲ್ಲಿ ಒಂದು ವಿಷ್ಣುಸಹಸ್ರನಾಮ ಪುಸ್ತಕವೂ ಇತ್ತು. ಅವರು ಅದನ್ನು ಎತ್ತಿಕೊಂಡು, ತಮ್ಮ ಕೈಗಳಲ್ಲಿ ಹಿಡಿದುಕೊಂಡು ಮತ್ತೆ ತಮ್ಮ ಆಸನಕ್ಕೆ ಹಿಂತಿರುಗಿದರು. ॥73॥ ಮತ್ತು ಹೇಳಿದರು, "ಶಾಮಾ, ನಿನಗೆ ಈ ಪೋಥಿಯು ಗೊತ್ತು. ನೋಡು, ಇದು ಬಹಳ ಲಾಭಕರ. ಆದುದರಿಂದ ನಾನು ಇದನ್ನು ನಿನಗೆ ಕೊಡುತ್ತಿದ್ದೇನೆ. ನೀನು ಇದನ್ನು ಓದಬೇಕು. ॥74॥ "ಒಂದು ಸಲ ನಾನು ತೀವ್ರವಾಗಿ ನರಳಿದೆ. ನನ್ನ ಹೃದಯ ಢವಗುಟ್ಟಲು ಪ್ರಾರಂಭವಾಯಿತು. ನಾನು ತಳಮಳಗೊಂಡೆನು. ನನಗಾಗಿಯೇ ಯಾವ ಭರವಸೆಯೂ ಇರಲಿಲ್ಲ. ॥75॥ "ಶಾಮಾ, ಆ ಪ್ರಸಂಗದ ಬಗ್ಗೆ ನಾನು ಏನು ಹೇಳಬಲ್ಲೆನು? ಯಾವ ರೀತಿ ಆ ಪುಸ್ತಕ ಉಪಯೋಗವೆಂದು ಸಾಬೀತಾಯಿತು! ಈ ಜೀವನವು ರಕ್ಷಿಸಲ್ಪಟ್ಟಿತು! ॥76॥ "ಒಂದು ಕ್ಷಣಕಾಲ ಅದನ್ನು ನನ್ನ ಹೃದಯಕ್ಕೆ ಅಪ್ಪಿಕೊಂಡೆನು! ಕೂಡಲೇ ಜೀವವು ಹಗುರವಾಯಿತು. ಅಲ್ಲಾನು ತಾನೇ ಧರೆಗಿಳಿದು ಬಂದು ಈ ಜೀವವನ್ನು ರಕ್ಷಿಸಿದಂತೆ ಕಂಡಿತು. ॥77॥ "ಆದುದರಿಂದ, ಶಾಮಾ, ಇದನ್ನು ನೀನು ತೆಗೆದುಕೋ. ನಿಧಾನವಾಗಿ ಓದು. ಪ್ರತಿ ದಿನ ಒಂದು ಅಥವಾ ಎರಡು ಪದಗಳನ್ನು ತೆಗೆದುಕೋ. ಅದು ನಿನಗೆ ಬಹಳ ಆನಂದವನ್ನು ನೀಡುತ್ತದೆ." ॥78॥ ಶಾಮಾ ಹೇಳಿದನು, "ನನಗೆ ಅದು ಬೇಡ. ರಾಮದಾಸಿಯು ನನ್ನ ಬಗ್ಗೆ ಕುಪಿತನಾಗುವನು. ಮತ್ತು ಅವನು ಹೇಳುತ್ತಾನೆ, "ನಾನು ಅವನ ಬೆನ್ನಹಿಂದೆ ಈ ತಪ್ಪು ಕೆಲಸ ಮಾಡಿರುವೆ," ಎಂದು. ॥79॥ "ಅವನು ಮೊದಲೇ, ಅರೆಹುಚ್ಚ, ಮುಂಗೋಪಿ, ಸಿಡುಕು ಸ್ವಭಾವದವನು ಮತ್ತು ಸದಾ ದೂರುವವನು. ಅನವಶ್ಯಕವಾಗಿ ಅವನ ಜೊತೆ ಜಗಳ ಏಕೆ ತೆಗೆಯಬೇಕು? ನನಗೆ ಯಾವ ಕಿರುಕುಳವೂ ಬೇಡ! ॥80॥ "ಅದೂ ಅಲ್ಲದೆ, ಪೋಥಿಯು ಸಂಸ್ಕೃತದಲ್ಲಿದೆ. ನನ್ನ ವಾಣಿಯೂ ಒರಟಾಗಿಯೂ ಕುಶ್ಚಿತವಾಗಿಯೂ ಇದೆ. ನನ್ನ ನಾಲಿಗೆಯು ಸೇರಿಸಿದ ಪದಗಳನ್ನು ತಿರುಗಿಸಲಾರದು. ನಾನು ಅವುಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಸಾಧ್ಯವಾಗುವುದಿಲ್ಲ." ॥81॥ ಬಾಬಾರವರ ಕೃತ್ಯವನ್ನೆಲ್ಲ ನೋಡಿ, ಶಾಮಾ ಯೋಚಿಸಿದನು, 'ಬಾಬಾರವರು ಅವನನ್ನು ರಾಮದಾಸಿಯ ಎದುರಿಗೆ ಎತ್ತಿ ಕಟ್ಟಬೇಕೆಂದು ಇಚ್ಛಿಸಿದ್ದರು.' ಆದರೆ ಅವನ ಬಗ್ಗೆ ಇದ್ದ ಬಾಬಾರವರ ಮನಃಪೂರ್ವಕವಾದ ಕಳಕಳಿಯ ಬಗ್ಗೆ ಏನೂ ತಿಳಿದಿರಲಿಲ್ಲ. ॥82॥ "ನನ್ನ ಶಾಮಾ ಹುಚ್ಚನಿರಬಹುದು. ಆದರೆ ನನಗೆ ಅವನನ್ನು ಕಂಡರೆ ಬಹಳ ಇಷ್ಟ. ಅವನಿಗೆ ನನ್ನ ಮೇಲೆ ವಿಶೇಷವಾದ ಪ್ರೀತಿ ಇದೆ. ನನಗೆ ಅವನ ಬಗ್ಗೆ ಅತಿಯಾದ ಕಾಳಜಿ ಇದೆ. ॥83॥ "ನಾನು ಈ ವಿಷ್ಣು ಸಹಸ್ರನಾಮವೆಂಬ ಕಂಠೀಹಾರವನ್ನು ಅವರ ಕುತ್ತಿಗೆಗೆ ನನ್ನ ಕೈಯಿಂದಲೇ ತೊಡಿಸಿ ಅವನನ್ನು ಭವಬಂಧನಗಳ ದುಃಖಗಳಿಂದ

ಬಿಡುಗಡೆ ಮಾಡಲು ಅವನಿಗೆ ಅದನ್ನು ಪಠಿಸುವ ಇಚ್ಛೆಯನ್ನು ಕೊಡುತ್ತೇನೆ. ॥84॥ "ಭಗವನ್ನಾಮವು ಪಾಪಗಳ ಪರ್ವತವನ್ನೇ ಸಿಡಿಸಬಹುದು. ಭಗವನ್ನಾಮವು ದೇಹದ ಬಂಧನಗಳನ್ನು ಬಿಡಿಸಬಹುದು. ಭಗವನ್ನಾಮವು ಕೋಟ್ಯಂತರ ದುರ್ವಾಸನೆಗಳ ಬುಡಸಹಿತ ನಿರ್ಮೂಲ ಮಾಡುವುದು. ॥85॥ "ಭಗವನ್ನಾಮವು ಕಾಲನ ಅಹಂಕಾರವನ್ನು ಮೃದುವನ್ನಾಗಿ ಮಾಡುತ್ತದೆ, ಮತ್ತು ಜನನ ಮರಣಗಳ ಚಕ್ರವನ್ನು ಕೊನೆಗೊಳಿಸುತ್ತದೆ. ಶಾಮಾನು ಈ ಸಹಸ್ರನಾಮದ ನಿಧಿಯಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕೆಂಬುದೇ ನನ್ನ ಆಸೆ. ॥86॥ "ಭಗವನ್ನಾಮವನ್ನು ಪ್ರಯತ್ನಪೂರ್ವಕವಾಗಿ ಸ್ಮರಿಸಿದರೆ ಪೂರ್ಣರೀತಿಯ ಪ್ರಭಾವ ಇರುತ್ತದೆ. ಆದರೆ ಅದನ್ನು ಅಪ್ರಯತ್ನವಾಗಿಯೂ ಸ್ಮರಿಸಿದಲ್ಲಿ ಲಾಭಕರವಾಗುತ್ತದೆ. ಅದರ ಶಕ್ತಿಯನ್ನು ಅರಿಯದೆ ಉಚ್ಚರಿಸಿದರೂ ತನ್ನ ಪ್ರಭಾವವನ್ನು ಪ್ರಕಟಿಸುತ್ತದೆ. ॥87॥ "ಅಂತಃಶುದ್ಧಿಗಾಗಿ ಭಗವನ್ನಾಮಸ್ಮರಣೆಗಿಂತಲೂ ಮತ್ತೊಂದು ಸರಳವಾದ ಸಾಧನವು ಇಲ್ಲ. ಭಗವನ್ನಾಮವು ನಾಲಿಗೆಗೆ ಭೂಷಣವು. ಭಗವನ್ನಾಮವು ಪರಮಾರ್ಥವನ್ನು ಪೋಷಿಸುತ್ತದೆ. ॥88॥ "ಭಗವನ್ನಾಮವನ್ನು ಧ್ಯಾನಿಸಲು ಸ್ನಾನ ಮಾಡಬೇಕಾಗಿಲ್ಲ. ನಾಮಸ್ಮರಣೆಯು ವಿಧಿವಿಧಾನಗಳಿಗೆ ಒಳಪಟ್ಟಿರುವುದಿಲ್ಲ. ನಾಮ ಸ್ಮರಣೆಯು ಸಕಲ ಪಾಪಗಳನ್ನು ನಾಶಮಾಡುತ್ತದೆ. ಭಗವನ್ನಾಮವು ಸರ್ವದಾ ಪಾವನವು. ॥89॥ "ಅಖಂಡವಾದ ನನ್ನ ನಾಮಸ್ಮರಣೆಯು ನಿಮ್ಮನ್ನು ಸಂಸಾರ ಸಾಗರದಿಂದ ದಾಟಿಸುತ್ತದೆ. ಮೋಕ್ಷವನ್ನು ಪಡೆಯಲು ಇತರ ಯಾವ ಸಾಧನೆಯೂ ಬೇಕಿಲ್ಲ. ॥90॥ "ಯಾರು ಪದೇ ಪದೇ ನನ್ನ ನಾಮಸ್ಮರಣೆಯನ್ನುಮಾಡುವರೋ ಅವನ ಪಾಪಗಳೆಲ್ಲವೂ ಸುಟ್ಟುಹೋಗುತ್ತವೆ. ಯಾರು ನನ್ನ ನಾಮವನ್ನು ಸದಾ ಗುಣಗುಣಿಸುತ್ತಿರುತ್ತಾನೋ ಅವನು ಗುಣವಂತರಲ್ಲಿ ಮಹಾನ್ ಗುಣವಂತನು." ॥91॥ ಇದು ಬಾಬಾರವರ ಮನೋಗತವಾಗಿತ್ತು, ಮತ್ತು ಅವರು ಅದಕ್ಕೆ ಅನುಸಾರವಾಗಿ ವರ್ತಿಸುತ್ತಿದ್ದರು. ಶಾಮಾನು ಧಿಕ್ಕರಿಸಿದರೂ ಸಹ ಬಾಬಾರವರು ಅದನ್ನು ಅವನ ಜೇಬಿನಲ್ಲಿ ಇಳಿಬಿಟ್ಟರು. ॥92॥ ಶಾಮಾನ ಪಿತೃಗಳು ನಿಜವಾಗಿಯೂ ಪುಣ್ಯಕರ್ಮಗಳನ್ನು ಮಾಡಿದ್ದು ಅವುಗಳ ಫಲವನ್ನು ಅವನು ಸಾಯಿಕೃಪಾ ರೂಪದಲ್ಲಿ ಈಗ ಪಡೆದಿದ್ದನು. ಈ ರೀತಿ ನಿರ್ಮಲವಾದ ಸಹಸ್ರನಾಮವು ಖಂಡಿತವಾಗಿಯೂ ಪ್ರಪಂಚದ ತಳಮಳವನ್ನು ದೂರ ಮಾಡುತ್ತದೆ. ॥93॥ ಇತರ ಎಲ್ಲಾ ಧಾರ್ಮಿಕ ವಿಧಿಗಳನ್ನು ಶಾಸ್ತ್ರಗಳಲ್ಲಿನ ನಿಯಮಗಳಂತೆ ಆಚರಿಸಬೇಕಾಗುತ್ತದೆ. ಆದರೆ ಭಗವನ್ನಾಮವನ್ನು ಯಾವ ಸಮಯದಲ್ಲಾದರೂ ಒಂದೇ ಸಮನೆ ನುಡಿಯಬಹುದು. ಅನಧ್ಯಯನದ (ರಜೆಯ) ದಿನವೆಂದಾಗಲೀ, ಪ್ರದೋಷ (ಸಂಜೆ) ಸಮಯವೆಂದಾಗಲೀ, ಯಾವುದೇ ಅಡಚಣೆ ಇರುವುದಿಲ್ಲ. ಆಚರಿಸಲು ಇದಕ್ಕಿಂತ ಸರಳವಾದ ಮಾರ್ಗವು ಮತ್ತೆ ಯಾವುದೂ ಇಲ್ಲ. ॥94॥ ಅದೇ ರೀತಿ, ಏಕನಾಥನು ಈ ಸಹಸ್ರನಾಮವನ್ನು ತನ್ನ ನೆರೆಯವನಿಗೆ ಒತ್ತಾಯಮಾಡಿ ಅವನನ್ನು ಪರಮಾರ್ಥದ ಕಡೆಗೆ ತಳ್ಳಿದನು. ॥95॥ ನಾಥನ ಮನೆಯಲ್ಲಿ ನಿತ್ಯವೂ ಪುರಾಣ ಪಠಣವಾಗುತ್ತಿತ್ತು. ಆದರೆ ಅವನ ನೆರೆಮನೆಯವನು ಬ್ರಾಹ್ಮಣನಾಗಿದ್ದರೂ ಸಹ ಬಹಳ ಅಶುಚಿಯಾಗಿದ್ದನು.

ಮತ್ತು ಸ್ನಾನಸಂಧ್ಯಾವಂದನೆಗಳನ್ನು ಮಾಡುತ್ತಿರಲಿಲ್ಲ. ಅವನು ದುರಾಚಾರಮಗ್ನನಾಗಿದ್ದನು. ॥96॥ ಅವನುಯಾವತ್ತೂ ಪುರಾಣ ಶ್ರವಣ ಮಾಡಿರಲಿಲ್ಲ. ಅವನು ಎಂತಹ ದುರ್ಜನನಾಗಿದ್ದನೆಂದರೆ ಎಂದಿಗೂ ನಾಥನ ವಾಡೆಗೆ ಹೆಜ್ಜೆ ಇಟ್ಟಿರಲಿಲ್ಲ. ನಾಥನೇ ಅವನ ಮೇಲೆ ಕರುಣೆಯಿಂದ ತನ್ನ ಮನೆಗೆ ಆಹ್ವಾನಿಸಿದ್ದನು. ॥97॥ ಉಚ್ಚ ವರ್ಣದಲ್ಲಿ ಜನ್ಮ ತಾಳಿದ್ದರೂ ಅವನ ಜೀವನವು ವ್ಯರ್ಥವಾಗಿತ್ತು. ಈ ಒಂದು ಸೂಕ್ಷ್ಮತೆಯನ್ನು ಅರಿತ ನಾಥನು ಅವನ ಮೇಲೆ ಪರಮಕೃಪೆ ತೋರಿಸಿದನು. 'ಇದನ್ನು ಯಾವ ರೀತಿ ತಡೆಯಬಹುದು!' ಎಂದು ಯೋಚಿಸಿದನು. ॥98॥ ಆದುದರಿಂದ ಅವನು ತಿರಸ್ಕರಿಸಿದ್ದರೂ ಸಹ, ನಾಥನು ಅವನಿಗೆ ಒಂದು ಸಲಕ್ಕೆ ಸಹಸ್ರನಾಮದ ಒಂದು ಶ್ಲೋಕವನ್ನು ಸರಿಯಾದ ಸ್ವರಸಹಿತವಾಗಿ ಬಾಯಿಪಾಠ ಮಾಡಿ ನೆನಪಿನಿಂದ ಹೇಳುವಂತೆ ವಚನಬದ್ಧನನ್ನಾಗಿ ಮಾಡಿದನು. ಈ ರೀತಿ ಅವನನ್ನು ಉದ್ಧರಿಸಿದನು. ॥99॥ ಸಹಸ್ರನಾಮದಪಠನ ಮತ್ತು ಅಧ್ಯಯನವು ಚಿತ್ತ ಶುದ್ಧಿ ಮಾಡುವ ವಿಶಾಲವಾದ ತೆರೆದ ಮಾರ್ಗ ಮತ್ತು ಪರಂಪರಾಗತವಾಗಿ ಬಂದ ಪರಿಪಾಠ. ಬಾಬಾರವರು ಶಾಮಾನ ಮೇಲೆ ಒತ್ತಾಯ ಹೇರಿದುದಕ್ಕೆ ಇದೇ ಕಾರಣ. ॥100॥ ರಾಮದಾಸಿಯು ಸೋಣಾಮುಖಿ ಔಷಧಿಯನ್ನು ತೆಗೆದುಕೊಂಡು ಕೂಡಲೇ ಹಿಂತಿರುಗಿದನು. ಅಣ್ಣಾನು' ನಾರದನ ತರಹ ಕಲಹಪ್ರಿಯನಾದವನು, ಪಕ್ಕದಲ್ಲಿಯೇ ನಿಂತಿದ್ದವನು. ಎಲ್ಲ ವೃತ್ತಾಂತವನ್ನೂ ವಿವರವಾಗಿ ಸಾದ್ಯಂತವಾಗಿ ವಿವರಿಸಿದನು. ॥101॥ ರಾಮದಾಸಿಯು ಹಾಗೆಯೇ ಮುಂಗೋಪದವನು. ಜೊತೆಗೆ, ಅಲ್ಲಿ ನಾರದನ ಮಧ್ಯಪ್ರವೇಶವೂ ಆಗಿತ್ತು. ಹಾಗಿದ್ದಾಗ ಯಾರು ತಾನೇ ಈ ಅಪೂರ್ವ ಪ್ರಸಂಗವನ್ನು ಯಥಾರ್ಥವಾಗಿ ವರ್ಣಿಸಬಲ್ಲರು? ॥102॥ ರಾಮದಾಸಿಯು ಯಾವಾಗಲೂ ವಿಕಲ್ಪ ಮೂರ್ತಿಯಾಗಿದ್ದನು. ಅವನು ಮಾಧವರಾವ್ ಬಗ್ಗೆ ಸಂಶಯಚಿತ್ತನಾಗಿದ್ದನು. ಅವನು ಹೇಳಿದನು, "ಅವನು ನನ್ನ ಪುಸ್ತಕವನ್ನು ಕಸಿದುಕೊಳ್ಳಲು ಬಾಬಾರವರನ್ನು ಮಧ್ಯಸ್ಥರನ್ನಾಗಿ ಮಾಡಿರುವನು." ॥103॥ ಸೋಣಾಮುಖಿಯ ಬಗ್ಗೆ ಮರೆತೇ ಹೋಯಿತು. ಅವನು ಮಾಧವರಾವ್ ಮೇಲೆ ಭಯಂಕರ ವಾಕ್ ಪ್ರಹಾರವನ್ನೇ ಪ್ರಾರಂಭಿಸಿದನು. ಅವನ ಪ್ರಕೋಪವು ಅಂಕೆಯಲ್ಲಿಡಲಾರದಾದುದಾಗಿತ್ತು. ಅವನ ಮೇಲೆ ಅತ್ಯಂತ ಹೆಚ್ಚಾದ ಬೈಗಳ ಸುರಿಮಳೆ ಕರೆದನು. ॥104॥ "ಹೊಟ್ಟೆ ನೋವು ಕೇವಲ ಒಂದು ನೆಪವಷ್ಟೇ. ಆದರೆ ನೀನೇ ಬಾಬಾರವರನ್ನು ಪ್ರಚೋದಿಸಿರುವೆ. ನಿನಗೆ ನನ್ನ ಪುಸ್ತಕದ ಮೇಲೆ ಕಣ್ಣಿತ್ತು. ನಾನು ಇದನ್ನು ಸಹಿಸಲಾರೆ. ॥105॥ "ನಾನೊಬ್ಬ ನಿರ್ಭಯನಾದ ರಾಮದಾಸಿ. ನನ್ನ ಹೆಸರೇ ಅದನ್ನು ಹೇಳುತ್ತದೆ. ಯಾವುದೇ ಸಮಸ್ಯೆಯನ್ನು ಸೃಷ್ಟಿಸದೆಯೇ ನೀನು ಆ ಪುಸ್ತಕವನ್ನು ಹಿಂತಿರುಗಿಸದಿದ್ದರೆ ನನ್ನ ತಲೆಯನ್ನು ನಿನ್ನ ಮುಂದೆ ಒಡೆಯುತ್ತೇನೆ ಮತ್ತು ನನ್ನ ರಕ್ತವನ್ನು ಚೆಲ್ಲಾಡುತ್ತೇನೆ. ॥106॥ "ನೀನು ನನ್ನ ಪುಸ್ತಕವನ್ನು ಆಸೆ ಪಟ್ಟೆ. ಈ ನಾಟಕವನ್ನು ರಚಿಸಿದೆ. ಮತ್ತು ಬಾಬಾರವರ ಮೇಲೆ ಎಲ್ಲ ಅಪವಾದ ಹಾಕಿ ನೀನು ಮಾತ್ರ ನಿರಾಳವಾಗಿ ಇರುವೆ." ॥107॥ ಮಾಧವರಾವ್ ಅವನಿಗೆ ಅರ್ಥ ಮಾಡಿಸಲು ಶಕ್ತಿಮೀರಿ ಪ್ರಯತ್ನ ಪಟ್ಟನು. ಆದರೆ ರಜಾಸಿಯು ಶಾಂತನಾಗಲಿಲ್ಲ.

ಅನಂತರ ಮಾಧವರಾವ್‌ನು ಸೌಮ್ಯ ಸ್ವಭಾವದಿಂದ ಏನು ಹೇಳಿದನು ಎಂಬುದನ್ನು ಕೇಳಿರಿ. ॥108॥ "ನನ್ನ ಮೇಲೆ ಸುಮ್ಮನೆ ಮೋಸಗಾರನೆಂಬ ಅಪವಾದವನ್ನು ಹೊರಿಸಬೇಡ. ನೀನು ಯಾಕೆ ನಿನ್ನ ಪುಸ್ತಕದ ಬಗ್ಗೆ ಇಷ್ಟೊಂದು ಗುಲ್ಲು ಎಬ್ಬಿಸುತ್ತಿರುವೆ? ಅದು ಅಪರೂಪದ ಪುಸ್ತಕವೇನಲ್ಲ. ॥109॥ "ನಿನ್ನ ಪುಸ್ತಕವೇನಾದರೂ ಚಿನ್ನದಿಂದ ಮಾಡಿರುವುದೇ? ಮತ್ತು ಅದೇನು ರತ್ನಗಳಿಂದ ಅಲಂಕೃತವಾಗಿರುವುದೇ? ನಿನಗೆ ಬಾಬಾರವರಲ್ಲಿ ವಿಶ್ವಾಸವಿಲ್ಲದಿದ್ದರೆ ನಿನ್ನ ಅಸ್ತಿತ್ವಕ್ಕೆ ಧಿಕ್ಕಾರ!" ॥110॥ ರಾಮದಾಸಿಯ ಅಟ್ಟಹಾಸ ನೋಡಿ, ಬಾಬಾರವರು ತಮ್ಮ ಮಧುರ ವಚನಗಳಲ್ಲಿ ಅವನಿಗೆ ಹೇಳಿದರು, "ಓಹ್, ರಾಮದಾಸಿ, ನಿನಗೆ ಏನು ಸಮಸ್ಯೆ? ನೀನು ವ್ಯರ್ಥವಾಗಿ ಏಕೆ ಗೋಳಾಡುತ್ತಿರುವೆ? ॥111॥ "ಅರೇ, ಶಾಮಾ ನಮ್ಮ ಹುಡುಗನಲ್ಲವೇ? ಇಷ್ಟು ಜೋರಾಗಿ ಏಕೆ ಕಲಹ ಮಾಡುವೆ? ಮತ್ತು ಹಠ ಮಾಡುತ್ತಿರುವೆ? ಯಾವುದೇ ಕಾರಣವಿಲ್ಲದೆ ಇಷ್ಟು ಕಷ್ಟ ತೆಗೆದುಕೊಂಡು ತಮಾಷೆಯ ನೋಟವನ್ನು ಸೃಷ್ಟಿಸಿರುವೆ? ॥112॥ "ನೀನು ಏಕೆ ಯಾವಾಗಲೂ ಕಲಹ ಮಾಡಲು ಮುಂದಾಗಿರುವೆ? ನಿನಗೆ ಮಧುರವಾಗಿ ಮೃದುವಾಗಿ ಮಾತನಾಡಲು ಸಾಧ್ಯವಿಲ್ಲವೇ? ನೀನು ನಿರಂತರ ಈ ಪುಸ್ತಕಗಳನ್ನು ಓದುತ್ತಿರುವೆ. ಆದರೆ ಇನ್ನೂ ನಿನ್ನಅಂತರಂಗವು ಅಶುದ್ಧವಾಗಿದೆ! ॥113॥ "ಪ್ರತಿದಿನ ನೀನು ಅಧ್ಯಾತ್ಮ ರಾಮಾಯಣವನ್ನು ಓದುವೆ ಮತ್ತು ಸಹಸ್ರನಾಮವನ್ನು ವಾಚನ ಮಾಡುವೆ. ಆದರೂ ನಿನ್ನ ಉಚ್ಛೃಂಕಲ ವೃತ್ತಿಯನ್ನು ಇನ್ನೂ ತ್ಯಜಿಸಿಲ್ಲ ಮತ್ತು ನೀನು ನಿನ್ನನ್ನೇ ರಾಮದಾಸಿ ಎಂದು ಕರೆಸಿಕೊಳ್ಳುತ್ತೀಯೆ! ॥114॥ "ನೀನೆಂತಹ ರಾಮದಾಸಿ? ನೀನು ಸಂಪೂರ್ಣವಾಗಿ ವಿರಕ್ತನಾಗಿರಬೇಕು. ಆದರೆ ನೀನಾದರೋ ಈ ಪುಸ್ತಕವನ್ನು ನಿನ್ನ ಬಳಿಯೇ ಇಟ್ಟುಕೊಳ್ಳುವ ಉತ್ಕಟವಾದ ಆಸೆಯನ್ನು ನಿಗ್ರಹಿಸಲು ಆಗುತ್ತಿಲ್ಲ. ಆದರೆ ನಿನ್ನನ್ನೇ ನೀನು ರಾಮದಾಸಿ ಎಂದು ಕರೆಸಿಕೊಳ್ಳುತ್ತಿರುವೆ! ॥115॥ ನಿಜವಾದ ರಾಮದಾಸಿಯು ಯಾವುದೇ ಮಮತೆಯಿಂದ ಬಂಧಿಸಲ್ಪಟ್ಟಿರಬಾರದು. ಹಿರಿಯರು ಕಿರಿಯರು ಇಬ್ಬರನ್ನೂ ಸಮಭಾವದಿಂದ ನೋಡಬೇಕು. ನೀನು ಈ ಹುಡುಗನಿಗಾಗಿ ದ್ವೇಷಕ್ಕೆ ಆಶ್ರಯಕೊಟ್ಟು ಪುಸ್ತಕಕ್ಕಾಗಿ ಹೊಡೆದಾಡುತ್ತಿರುವೆ! ॥116॥ ಹೋಗು, ನಿನ್ನ ಜಾಗದಲ್ಲಿ ಕುಳಿತುಕೋ. ಹಣ ಕೊಟ್ಟರೆ ಬೇಕಾದಷ್ಟು ಪುಸ್ತಕಗಳು ಸಿಗುತ್ತವೆ. ಆದರೆ ಮನುಷ್ಯರು ಸಿಕ್ಕುವುದಿಲ್ಲ. ಕೊನೆಯವರೆಗೆ ಈ ವಿಚಾರವನ್ನು ಅಂತರಂಗದಲ್ಲಿಯೇ ಇಟ್ಟುಕೊ. ॥117॥ "ಶಾಮಾನಿಗೆ ನಿನ್ನ ಪುಸ್ತಕದ ಬೆಲೆಯು ಗೊತ್ತಿಲ್ಲ. ನಾನೋ ಸ್ವತಃ ಅದನ್ನು ಎತ್ತಿಕೊಂಡೆ ಮತ್ತು ನಾನೇ ಅವನಿಗೆ ಕೊಟ್ಟೆ. ॥118॥ "ನಿನಗಾದರೋ ಇಡೀ ಪುಸ್ತಕ ಬಾಯಿಪಾಠ ಆಗಿದೆ. ನಾನು ಅದನ್ನು ಶಾಮಾನಿಗೆ ಕೊಡಲು ಯೋಚಿಸಿದೆ. ಆದರಿಂದ ಅವನೂ ಅದನ್ನು ಪೂರ್ತಿಯಾಗಿ ಓದಿ ಮತ್ತೆಮತ್ತೆ ಅದರ ವಾಚನ ಮಾಡಿ ಅತ್ಯಂತ ಕಲ್ಯಾಣ ಹೊಂದುತ್ತಾನೆ." ॥119॥ ಅದೆಷ್ಟು ಮನಮೋಹಕವಾಗಿದ್ದವು ಅವರ ಮಾತುಗಳು. ಮಧುರವಾಗಿ ಹಾಗೂ ಕರುಣಾಭರಿತವಾಗಿದ್ದವು.ಮತ್ತು ಅಷ್ಟೇ ಶೀತಲವಾಗಿಯೂ ಸ್ವಾನಂದಕರವಾಗಿಯೂ ಇದ್ದವು. ಅವು ನಿಜವಾಗಿಯೂ ಅಪೂರ್ವವಾಗಿದ್ದವು! ॥120॥

ರಾಮದಾಸಿಗೆ ಪರಿಸ್ಥಿತಿಯ ಅರಿವಾಯಿತು. ಆದರೂ ಅವನು ಮಾಧವರಾವ್‌ಗೆ ಕೋಪದಿಂದ ಕೆಂಡವಾಗಿ ನುಡಿದನು – "ಈ ಪುಸ್ತಕದ ಬದಲಿಗೆ ನಾನು 'ಪಂಚರತ್ನಗೀತೆ' ಪುಸ್ತಕವನ್ನು ತೆಗೆದುಕೊಳ್ಳುತ್ತೇನೆ. ಈಗ ನಾನು ನಿನಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ." ॥121॥ ರಾಮದಾಸಿಯು ಈ ರೀತಿ ಶಾಂತಿಹೊಂದಿದುಕ್ಕೆ ಮಾಧವರಾವ್‌ನು ಸಂತಸಪಟ್ಟನು. "ಒಂದು ಏಕೆ! ಬದಲಿಗೆ ನಾನು ನಿನಗೆ ಹತ್ತು ಪುಸ್ತಕಗಳನ್ನು ಕೊಡುತ್ತೇನೆ" ಎಂದನು. ॥122॥ ಅದು ಹಾಗಿರಲಿ. ಈ ವಾಕ್ಕಲಹವೂ ಈ ರೀತಿ ಅಂತ್ಯಗೊಂಡಿತು. ಗೀತೆ ಗ್ರಂಥವನ್ನು ಜಾಮೀನೆಂದು ಒಪ್ಪಿಕೊಳ್ಳಲಾಯಿತು. ಆದರೆ ಗೀತೆಯಲ್ಲಿನ ದೈವದ ಬಗ್ಗೆ ಅರಿವು ಇಲ್ಲದವನು ಅದನ್ನು ಏಕೆ ಬಯಸಿದ್ದನು? ॥123॥ ಸಾಯಿ ಸಮ್ಮುಖದಲ್ಲಿ ಸದಾ ಆಧ್ಯಾತ್ಮ ರಾಮಾಯಣವನ್ನು ಪಠಿಸಿದ ಆ ರಾಮದಾಸಿಯು ಬಾಬಾರವರಲ್ಲಿ ಏಕೆ ಒರಟಾಗಿ ವರ್ತಿಸಿ ತಾನೇ ಸರಿ ಎಂದು ಅವರೆದುರಿಗೆ ಕಲಹವಾಡಬೇಕು? ॥124॥ ಅದನ್ನು ನಾನು ಹೇಗೆ ಹೇಳಲು ಸಾಧ್ಯ? ಅದಕ್ಕಾಗಿ ಯಾರನ್ನು ದೋಷಿಗಳಾಗಿ ಮಾಡಬೇಕು ಮತ್ತು ಏತಕ್ಕಾಗಿ? ಅಲ್ಲಿ ನಡೆದದ್ದು ನಡೆಯದೇ ಇದ್ದಿದ್ದರೆ, ಆ ವಿಷಯದ ಮಹತ್ವವು ಯಾವರೀತಿ ಮನೆಗೆ ಬರುತ್ತಿತ್ತು? ॥125॥ ಈ ದೊಡ್ಡ ಜಗಳಕ್ಕೆ ಕಾರಣವಾದ ಪುಸ್ತಕವು ಬಾಬಾರವರ ದುಃಖವನ್ನು ನಿವಾರಿಸುವ ಗ್ರಂಥವೂ ಆಗಿತ್ತು, ಅದು ನನ್ನ ಕಲ್ಯಾಣಕ್ಕೆ ಕಾರಣವಾದುದೂ ಆಗಿತ್ತು, ಇದು ಸಾಯಿಯು ನೀಡಿದ ಅಲೌಕಿಕ ಬಹುಮಾನವಷ್ಟೆ! ॥126॥ ಈ ಮಹಾ ಯತ್ನವನ್ನು ಮಾಡದಿದ್ದರೆ ಮಾಧವರಾವ್‌ನಿಗೆ ಅದರಲ್ಲಿ ವಿಶ್ವಾಸ ಉಂಟಾಗುತ್ತಿರಲಿಲ್ಲ. ನಿಜವಾಗಿಯೂ ಅವನಿಗೆ ಆ ಪದಗಳನ್ನು ಉಚ್ಚಾರ ಮಾಡಲೂ ಆಗುತ್ತಿರಲಿಲ್ಲ ಮತ್ತು ಅವುಗಳನ್ನು ಗಟ್ಟಿಯಾಗಿ ಪಠಿಸಲೂ ಆಗುತ್ತಿರಲಿಲ್ಲ. ॥127॥ ಈ ರೀತಿ ಇತ್ತು ಸಾಯಿನಾಥರ ಪ್ರೇಮ! ಅಪರೂಪದ ಪರಮಾರ್ಥವನ್ನು ಬೋಧಿಸುವ ಒಬ್ಬ ಗುರುವಿನ ಲೀಲೆ! ಅವರು ಈ ಕಲೆಯನ್ನು ಯಾವ ರೀತಿ ಎಲ್ಲಿ, ಅಭ್ಯಾಸ ಮಾಡುತ್ತಾರೆ ಎಂಬುದು ಯಾರಿಗೂ ಅರ್ಥವಾಗಿಲ್ಲ. ಅವರ ರೀತಿಯು ಅಗಮ್ಯವಾದುದು. ॥128॥ ಅನಂತರ ಶಾಮಾನ ನಿಷ್ಠೆಯು ವೃದ್ಧಿಯಾಯಿತು. ದೀಕ್ಷಿತ್ ಮತ್ತು ನರ್ಕೆಯು[5] ಅವನಿಗೆ ಪದಗಳ ಸರಿಯಾದ ಉಚ್ಚಾರವನ್ನು ಪದೇ ಪದೇ ಉಚ್ಚಾರ ಮಾಡಿಸುತ್ತ ಮತ್ತು ಅದರ ಅರ್ಥವನ್ನು ತಿಳಿಯಲು ಹೇಳಿಕೊಟ್ಟರು. ಅವನು ಆ ಪುಸ್ತಕವನ್ನು ಕಂಠಪಾಠ ಮಾಡಿದನು. ॥129॥ ಅದು ಹಾಗಿರಲಿ. ಸಾಯಿ ಮತ್ತು ಮಾಧವರಾವ್ ಮಧ್ಯೆ ನಡೆದ ಸಂಭಾಷಣೆಯು ಸಾಯಿಯ ಶುದ್ಧ ಬೋಧನೆಯನ್ನು ಸ್ಪಷ್ಟೀಕರಿಸುತ್ತದೆ. ಅದು ಪರಮಾನಂದ ಪೂರ್ಣವಾಗಿತ್ತು ವಿವಾದವಾಗಿಯೂ ಅದೊಂದು ಸುಖದಾಯಕ ವಿನೋದವಾಗಿತ್ತು. ॥130॥ ಅದೇ ರೀತಿ, ಬಾಬಾರವರು ಬ್ರಹ್ಮವಿದ್ಯೆಯನ್ನು ಅಭ್ಯಾಸ ಮಾಡುವವರನ್ನ ಬಹಳವಾಗಿ ಪ್ರೀತಿಸುತ್ತಿದ್ದರು. ಪ್ರಸಂಗ ಬಂದಾಗ ಅವರ ಪ್ರೀತಿ ಯಾವರೀತಿ ಅಭಿವ್ಯಕ್ತವಾಗುತ್ತಿತ್ತು ಎಂಬುದನ್ನು ನೋಡಿರಿ. ॥131॥ ಒಮ್ಮೆ, ಶಿರಡಿಯ ಅಂಚೆ ಕಛೇರಿಯಲ್ಲಿ ಜೋಗ್‌ಗಾಗಿ ಒಂದು ಕಂತೆ (ಪಾರ್ಸೆಲ್) ಬಂದಿತ್ತು. ಅವನು ಅದನ್ನು ಸ್ವೀಕರಿಸಲು ಅವಸರದಿಂದ ಅಲ್ಲಿಗೆ ಹೋದನು. ॥132॥ ಅದರಲ್ಲಿ

ಲೋಕಮಾನ್ಯ ತಿಲಕರ ಭಾಷ್ಯ 'ಗೀತಾ ರಹಸ್ಯ'ವೂ ಕೂಡ ಬಂದಿತು. ಅದನ್ನು ತನ್ನ ಕಂಕುಳಲ್ಲಿ ಹಿಡಿದು ಅವನು ದರ್ಶನಕ್ಕಾಗಿ ಮಸೀದಿಗೆ ಬಂದನು. ॥133॥ ಅವನು ನಮಸ್ಕಾರ ಮಾಡುವುದಕ್ಕೆಂದು ತನ್ನ ತಲೆಯನ್ನು ಬಗ್ಗಿಸಿದನು. ಆಗ ಕಂತೆಯು ಬಾಬಾರವರ ಪಾದಗಳಲ್ಲಿ ಬಿತ್ತು. ಆಗ ಬಾಬಾ ಕೇಳಿದರು, "ಬಾಪುಸಾಹೇಬ, ಇದೇನು, ಯಾರದ್ದು?" ॥134॥ ಅವನು ಅವರ ಸಮ್ಮುಖದಲ್ಲಿ ಕಂತೆಯನ್ನು ತೆಗೆದನು. ಮತ್ತು ಪುಸ್ತಕದ ಬಗ್ಗೆ ವಿವರಿಸಿದನು. ಅವನು ಕಂತೆಯನ್ನು ಬಾಬಾರವರ ಕೈಯಲ್ಲಿಟ್ಟನು. ಬಾಬಾರವರು ಅದನ್ನು ಅವಲೋಕಿಸಿದರು.॥135॥ ಬಾಬಾರವರು ಅದನ್ನು ಪಾರ್ಸೆಲ್‌ನಿಂದ ಹೊರತೆಗೆದು ಕೈಯಲ್ಲಿ ಹಿಡಿದುಕೊಂಡು ಕ್ಷಣಾರ್ಧದಲ್ಲಿ ಪುಟಗಳನ್ನು ತಿರುವಿ ಹಾಕಿದರು. ಅವರು ತಮ್ಮ ಜೇಬಿನಿಂದ ಒಂದು ರೂಪಾಯಿಯನ್ನು ಪುಸ್ತಕದ ಮೇಲೆ ಕೌತುಕದಿಂದ ಇಟ್ಟರು. ॥136॥ ಗ್ರಂಥವನ್ನು ಒಂದು ರೂಪಾಯಿಯ ಸಮೇತವಾಗಿ ಜೋಗ್‌ಗೆ ಕೊಟ್ಟರು. ಮತ್ತು ಹೇಳಿದರು, "ಈ ಗ್ರಂಥವನ್ನು ಮೊದಲಿನಿಂದ ಕೊನೆಯವರೆಗೆ ಓದು. ನಿನಗೆ ಕಲ್ಯಾಣವುಂಟಾಗುತ್ತದೆ." ॥137॥ ಬಾಬಾರವರು ಅನುಗ್ರಹ ಹಾಗೂ ಸಹಾಯ ಮಾಡುವ ಅಸಂಖ್ಯಾತ ಕಥೆಗಳು ಇವೆ. ಆದರೆ ಈ ಗ್ರಂಥವು ತುಂಬಾ ಉದ್ದವಾಗುತ್ತದೆ. ಆದುದರಿಂದ ನಾನು ಕೆಲವನ್ನು ಮಾತ್ರವೇ ಸಂಕ್ಷಿಪ್ತವಾಗಿ ಹೇಳುತ್ತೇನೆ. ॥138॥ ಒಮ್ಮೆ ಶಿರಡಿಯಲ್ಲಿ ಏನಾಯಿತೆಂದರೆ, ದಾದಾ ಸಾಹೇಬ ಖಪರ್ಡೆಯು ತನ್ನ ಪರಿವಾರ ಸಮೇತನಾಗಿ ಬಂದು ಅಲ್ಲಿ ನೆಲೆಸಿದನು. ಅವನು ಬಾಬಾರವರ ಪ್ರೇಮದಲ್ಲಿ ಮುಳುಗಿಹೋಗಿದ್ದನು. ॥139॥ ಖಪರ್ಡೆಯು ಸಾಮಾನ್ಯ ಗೃಹಸ್ಥನಾಗಿರಲಿಲ್ಲ. ಅವನು ಘನ ವಿದ್ವಾಂಸನಾಗಿದ್ದನು. ಮತ್ತು ಉಚ್ಚ ಸ್ಥಿತಿಯಲ್ಲಿರುವ ವ್ಯಕ್ತಿಯಾಗಿದ್ದನು. ಅವನು ಸಾಯಿಯ ಸನ್ನಿಧಿಯಲ್ಲಿರುವಾಗ ಕೈ ಜೋಡಿಸಿ ನಿಂತುಕೊಂಡು ತನ್ನ ತಲೆಯನ್ನು ಬಾಬಾರವರ ಚರಣಗಳಲ್ಲಿ ಪೂರ್ತಿ ಬಗ್ಗಿಸಿಕೊಂಡಿರುತ್ತಿದ್ದನು. ॥140॥ ಅವನು ಆಂಗ್ಲ ವಿದ್ಯಾ ಪಾರಂಗತನಾಗಿದ್ದನು ಮತ್ತು ರಾಜ್ಯಸಭೆಯಲ್ಲಿ ಬಹಳ ಕೀರ್ತಿವಂತನಾಗಿದ್ದನು. ಅವನೊಬ್ಬ ಮಹಾವಾಗ್ಮಿಯಾಗಿದ್ದನು. ಆದರೆ ಸಾಯಿಯ ಮುಂದೆ ಮಾತನಾಡುತ್ತಿರಲಿಲ್ಲ. ॥141॥ ಬಾಬಾರವರಿಗೆ ಅಸಂಖ್ಯಾತ ಭಕ್ತರಿದ್ದರು. ಅವರಲ್ಲಿ ಖಪರ್ಡೆ, ನೂಲ್ಕರ್ ಮತ್ತು ಬುಟಿ ಮಾತ್ರ ಮೂಕರಾಗಿರುತ್ತಿದ್ದರು. ಅವರಲ್ಲದೆ ಮತ್ಯಾರೂ ಹಾಗಿರಲಿಲ್ಲ. ॥142॥ ಇನ್ನುಳಿದವರು ಬಾಬಾರವರ ಹತ್ತಿರ ಮಾತನಾಡುತ್ತಿದ್ದರು. ಮತ್ತೆ ಕೆಲವರು ಅವರ ಹತ್ತಿರ ಯಾವುದೇ ಭಯವಿಲ್ಲದೆ ಮತ್ತು ಆತ್ಮಸ್ಥೈರ್ಯದಿಂದ ಕೂಡಿ ವಾದವನ್ನೂ ಮಾಡುತ್ತಿದ್ದರು. ಆದರೆ ಈ ಮೂವರು ಮಾತ್ರ ಮೌನವ್ರತವನ್ನು ಹಿಡಿದವರಂತೆ ಇರುತ್ತಿದ್ದರು. ॥143॥ ಅವರು ಮಾತನಾಡುವುದಿರಲಿ, ಬಾಬಾರವರ ಮುಂದೆ ತಲೆಯನ್ನೂ ಎತ್ತುತ್ತಿರಲಿಲ್ಲ. ಅವರ ನಮ್ರತೆ ಅವರ್ಣನೀಯವಾದುದು. ಅವರು ಬಾಬಾರವರ ಮಾತನ್ನು ಸುಮ್ಮನಿದ್ದು ಕೇಳುತ್ತಿದ್ದರು. ॥144॥ ವಿದ್ಯಾರಣ್ಯರ 'ಪಂಚದಶಿ'ಯನ್ನು ಇತರರಿಗೆ ವ್ಯಾಖ್ಯಾನಿಸುವ ಶಕ್ತಿ ಇದ್ದ ದಾದಾ ಸಾಹೇಬನೂ, ಮಸೀದಿಗೆ ಬಂದಾಗ ಒಂದು ಮಾತನ್ನೂ ಆಡದೆ ಮೂಕನಾಗಿರುತ್ತಿದ್ದನು. ॥145॥ ಶಬ್ದಬ್ರಹ್ಮದ ತೇಜಸ್ಸು ಎಷ್ಟೇ ಇದ್ದರೂ ಅದು ಶುದ್ಧ ಪರಬ್ರಹ್ಮದ

ಮುಂದೆ ತನ್ನ ಪ್ರಕಾಶವನ್ನು ಕಳೆದುಕೊಂಡು ನಿಸ್ತೇಜವಾಗುತ್ತದೆ. ಸಾಯಿಯು ತೇಜೋರೂಪದ ಪರಬ್ರಹ್ಮ ಸ್ವರೂಪರು ಮತ್ತು ವಿದ್ವತ್ತು ಸಹ ಅವರ ಎದುರು ನಾಚಿಕೊಂಡಿತ್ತು. ॥146॥ ಖಪರ್ಡೆಯು ನಾಲ್ಕು ತಿಂಗಳುಗಳ ಕಾಲ ಅಲ್ಲಿದ್ದನು. ಆದರೆ ಅವನ ಪತ್ನಿಯು ಏಳು ತಿಂಗಳುಗಳ ಕಾಲ ಅಲ್ಲಿ ಉಳಿದುಕೊಂಡಳು. ಅವರಿಬ್ಬರೂ ಪ್ರತಿದಿನವೂ ತುಂಬಾ ಉಲ್ಲಾಸವನ್ನು ಅನುಭವಿಸಿದರು. ॥147॥ ಅವನ ಪತ್ನಿಯು ಬಹಳ ನಿಷ್ಠಾವಂತಳಾಗಿದ್ದಳು. ಅವಳು ಸಾಯಿ ಚರಣಗಳಲ್ಲಿ ಅತ್ಯಂತ ಪ್ರೇಮದಿಂದಿದ್ದಳು. ಪ್ರತಿನಿತ್ಯವೂ ಅವಳು ತನ್ನ ಸ್ವಹಸ್ತದಿಂದ ನೈವೇದ್ಯವನ್ನು ತಯಾರಿಸಿ ಮಸೀದಿಗೆ ತರುತ್ತಿದ್ದಳು. ॥148॥ ಮಹಾರಾಜರು ನೈವೇದ್ಯವನ್ನು ಸ್ವೀಕರಿಸುವವರೆಗೆ ಆ ಮಹಿಳೆಯು ಉಪವಾಸ ಇರುತ್ತಿದ್ದಳು. ಅವರು ಸೇವಿಸಿದ ನಂತರವೇ ಅವಳು ಊಟ ಮಾಡುತ್ತಿದ್ದಳು. ॥149॥ ಅದೇನಾದರೂ ಆಗಿರಲಿ. ಬಾಬಾರವರಿಗೆ ಒಂದು ಸಂದರ್ಭ ಉಂಟಾಯಿತು. ಬಾಬಾರವರು ಪರಮ ಭಕ್ತವತ್ಸಲರಾಗಿದ್ದರು. ಆ ಮಹಿಳೆಯ ಅಚಲವಾದ ಶ್ರದ್ಧೆಯನ್ನು ನೋಡಿ ಒಂದು ಸುಲಭವಾದ ಮತ್ತು ಉಜ್ವಲವಾದಮಾರ್ಗವನ್ನು ತೋರಿಸಿದರು. ॥150॥ ಬೇರೆ ಬೇರೆ ಸಂತರು ಬೇರೆ ಬೇರೆ ಮಾರ್ಗಗಳನ್ನು ಹೇಳುತ್ತಾರೆ. ಬಾಬಾರವರದ್ದು ಅತ್ಯಂತ ಅಪೂರ್ವವಾದುದು. ಅವರು ಅನುಗ್ರಹವನ್ನು ನಗು ನಗುತ್ತ ವಿನೋದದಿಂದ ದಯಪಾಲಿಸುತ್ತಿದ್ದರು. ಅದು ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತಿತ್ತು. ॥151॥ ಒಮ್ಮೆ, ಆ ಹೆಂಗಸು ಒಂದು ಹರಿವಾಣದ ತುಂಬ ಸಂಜಿ, ಶೀರಾಪುರಿ, ಭಾತ್, ವಾರಣ್, ಖೀರು, ಸಂಡಿಗೆ, ಹಪ್ಪಳ, ಕೋಸಂಬರಿ, ಬಡಿಸಿ ತಂದಳು. ॥152॥ ಈ ತುಂಬಿದ ಹರಿವಾಣ ಬಂದ ಕೂಡಲೇ, ಬಾಬಾರವರು ಉತ್ಕಂಠಿತರಾಗಿ ತಮ್ಮ ಆಸನದಿಂದ ಎದ್ದು ತಮ್ಮ ಕಫನಿಯ ತೋಳುಗಳನ್ನು ಎತ್ತಿ ಮಡಿಚಿಕೊಂಡರು. ॥153॥ ಅವರು ಹೋಗಿ ತಮ್ಮ ನಿತ್ಯದ ಭೋಜನ ಸ್ಥಳದಲ್ಲಿ ಕುಳಿತುಕೊಂಡರು. ಹರಿವಾಣವನ್ನು ತಮ್ಮ ಮುಂದೆ ಎಳೆದುಕೊಂಡರುಅದಕ್ಕೆ ಮುಚ್ಚಿದ್ದ ಹೊದಿಕೆಯನ್ನು ತೆಗೆದು ಅನ್ನ ಸೇವನೆಗೆ ಉದ್ಯುಕ್ತರಾದರು. ॥154॥ ಇತರೆ ಅನೇಕ ನೈವೇದ್ಯಗಳು ಬಂದವು. ಒಂದಕ್ಕಿಂತ ಮತ್ತೊಂದು ಉತ್ತಮವಾಗಿತ್ತು. ಅನೇಕ ಬಾರಿ ಅವನ್ನು ಮುಟ್ಟುತ್ತಲೂ ಇರಲಿಲ್ಲ. ಕೇವಲ ಇದೊಂದನ್ನು ಮಾತ್ರ ತಿನ್ನಲು ಮುಖ್ಯಕಾರಣವೇನಿತ್ತು? ॥155॥ ಈ ರೀತಿಯ ಪ್ರಪಂಚದ ವಿಷಯವು ಒಬ್ಬ ಸಂತರ ಚಿತ್ತವನ್ನು ಆವರಿಸಲು ಕಾರಣವೇನು? ಮಾಧವರಾವ್‌ನು ಸಾಯಿ ಸಮರ್ಥರನ್ನು ಕೇಳಿದನು. “ಈ ರೀತಿಯ ಭೇದ ಭಾವ ಏಕಿರಬೇಕು? ॥156॥ “ನೀವು ಎಲ್ಲ ಹರಿವಾಣಗಳನ್ನು ಪಕ್ಕಕ್ಕೆ ಇಟ್ಟುಬಿಟ್ಟಿರಿ. ಬೆಳ್ಳಿಯ ಹರಿವಾಣಗಳನ್ನೂ ದೂರಕ್ಕೆ ಎಸೆದಿರಿ. ಆದರೆ ಈ ಹೆಂಗಸಿನ ಹರಿವಾಣ ಬಂದ ಕೂಡಲೇ ಎದ್ದು ಮುಂದಾಗಿ ತಿನ್ನಲು ಪ್ರಾರಂಭಿಸಿದಿರಿ. ಇದು ಆಶ್ಚರ್ಯಕರ. ॥157॥ “ಅವಳಅಡಿಗೆಯು ಮಾತ್ರ ಏಕೆ ಅಷ್ಟು ರುಚಿಯಾಗಿರುತ್ತದೆ? ದೇವಾ, ಇದು ನಮಗೆ ನಿಗೂಢವಾಗಿದೆ. ಇಲ್ಲಿ ನಿಮ್ಮದೇ ಏನೋ ತಂತ್ರ ಇದೆ. ನಿಮ್ಮಲ್ಲೇಕೆ ಈ ಇಷ್ಟಾನಿಷ್ಟಗಳು?” ॥158॥ ಬಾಬಾ ಹೇಳಿದರು, “ನಾನು ಈ ಆಹಾರದ ಅಪೂರ್ವ ಗುಣಗಳ ಬಗ್ಗೆ ಏನು ಹೇಳಲಿ? ಹಿಂದಿನ ಜನ್ಮದಲ್ಲಿ ಈ ಮಹಿಳೆಯು ಒಂದು

ದಷ್ಟಪುಷ್ಟವಾದ ಹಸುವಾಗಿ ಒಬ್ಬ ವ್ಯಾಪಾರಿಯ ಹತ್ತಿರವಿದ್ದು ಯಥೇಚ್ಛವಾಗಿ ಹಾಲನ್ನು ಕೊಡುತ್ತಿದ್ದಳು. ॥159॥ "ಅದಾದ ಮೇಲೆ ಇನ್ನೊಬ್ಬ ಮಾಲಿಯ ಕುಟುಂಬದಲ್ಲಿ ಜನ್ಮವೆತ್ತಿದಳು. ಅನಂತರ ಅವಳು ಕ್ಷತ್ರಿಯ ಕುಟುಂಬದಲ್ಲಿ ಮತ್ತೆ ಜನ್ಮವೆತ್ತಿದಳು. ನಂತರ ಒಬ್ಬ ವ್ಯಾಪಾರಿಯನ್ನು ಮದುವೆಯಾದಳು. ॥160॥ "ಆಮೇಲೆ ಅವಳು ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದಳು. ನಾನು ಅವಳನ್ನು ಬಹಳ ಕಾಲದ ನಂತರ ನೋಡಿದೆ. ಕೆಲವು ತುತ್ತುಗಳನ್ನು ತಿನ್ನೋಣ. ಅವಳು ಬಹಳ ಪ್ರೀತಿಯಿಂದ ಅರ್ಪಿಸಿದ್ದಾಳೆ. ಸುಖಸಂತೋಷಗಳನ್ನು ಅವು ನೀಡಿವೆ." ॥161॥ ಈ ರೀತಿ ಹೇಳಿದ ನಂತರ ಅವರು ಯಥೇಚ್ಛವಾಗಿ ಊಟ ಮಾಡಿ, ಕೈಗಳನ್ನು ಮತ್ತು ಬಾಯಿಯನ್ನು ತೊಳೆದುಕೊಂಡು ತೇಗುತ್ತ ಸಹಜವಾದ ತೃಪ್ತಿಯನ್ನು ಪ್ರಕಟಿಸುತ್ತ ತಮ್ಮ ಆಸನಕ್ಕೆ ಬಂದು ಕುಳಿತರು. ॥162॥ ಆ ಮಹಿಳೆಯು ನಮಸ್ಕಾರ ಮಾಡಿ ಮೃದುವಾಗಿ ಪಾದ ಒತ್ತಲು ಪ್ರಾರಂಭಿಸಿದಳು. ಬಾಬಾರವರು ಈ ಅವಕಾಶವನ್ನು ಕೆಲವು ಉಪಯುಕ್ತವಾದ ಮಾತುಗಳನ್ನು ಹೇಳಲು ಉಪಯೋಗಿಸಿದರು. ॥163॥ಆ ಮಹಿಳೆಯು ಬಾಬಾರವರ ಚರಣಗಳನ್ನು ಒತ್ತುತ್ತಿರಲು, ಅವರು ಸರದಿಯಪ್ರಕಾರ ತಮಗೆ ಊಟವಿತ್ತ ಕೈಗಳನ್ನು ಒತ್ತುತ್ತಿದ್ದರು. ಈ ಸೇವೆಯ ಆಟವನ್ನು, ದೇವಾ ಮತ್ತು ಭಕ್ತಳ ಮಧ್ಯೆ ಇದ್ದ ಅನ್ಯೋನ್ಯ ಬಾಂಧವ್ಯವನ್ನು ನೋಡಿ ಶಾಮಾನು ಅದರ ಬಗ್ಗೆ ಹಾಸ್ಯ ಮಾಡಿದನು. ॥164॥ "ಇದು ಬಹಳ ಚೆನ್ನಾಗಿದೆ. ದೇವಾ, ಈ ಪರಸ್ಪರ ಭಕ್ತಿಯನ್ನು ನೋಡುವುದು ಸಂತಸದ ದೃಶ್ಯವಾಗಿದೆ. ॥165॥ ಅವಳ ಸೇವೆಯನ್ನು ನೋಡಿ ಬಾಬಾರವರು ಅತಿ ಸಂತೋಷಪಟ್ಟು ಮೃದುವಾಗಿ, 'ರಾಜಾರಾಮ, ರಾಜಾರಾಮ' ಎಂದು ಜಪ ಮಾಡುವಂತೆ ಹೇಳಿದರು. ॥166॥ "ಇದನ್ನು ಸದಾ ಜಪಿಸುತ್ತಿರು. ಓ ಅಮ್ಮ! ನಿನ್ನ ಜೀವಿತವು ಸಫಲವಾಗುವುದು. ನಿನ್ನ ಚಿತ್ತವು ಶಾಂತವಾಗುವುದು ಮತ್ತು ನಿನಗೆ ಅಪರಿಮಿತವಾದ ಹಿತವಾಗುತ್ತದೆ." ॥167॥ ಆ ಮಾತುಗಳು ಅದೆಷ್ಟು ಶಕ್ತಿಯುತ! ಅವು ಅವಳ ಹೃದಯಾಂತರಾಳದಲ್ಲಿ ಸ್ಥಿತವಾದವು. ಈ ಮಾತುಗಳಿಂದ ಬಾಬಾರವರು ಕ್ಷಣಾರ್ಧದಲ್ಲಿ ಶಕ್ತಿ-ಪಾತ[40]ವನ್ನುಂಟುಮಾಡಿದ್ದರು. ॥168॥ ಶ್ರೀ ಸಮರ್ಥರು ಅಂತಹ ಕೃಪಾಳುವಾಗಿದ್ದರು. ಸಾಯಿನಾಥರು ಶರಣಾಗತರಕ್ಷಕರು. ಅವರು ಸದಾಕಾಲ ಭಕ್ತರ ಇಚ್ಛೆಗಳನ್ನು ಮತ್ತು ಕಾರ್ಯಗಳನ್ನು ಅವರ ಹಿತಕ್ಕಾಗಿಯೇ ನೆರವೇರಿಸುತ್ತಿದ್ದರು. ॥169॥ ಮುಂದಿನ್ನಾನೇನನ್ನು ಹೇಳುವೆನೋ, ಮನಸ್ಸಿನಲ್ಲಿಡಿ. ಏಕೆಂದರೆ ಇದನ್ನು ಅತಿ ಪ್ರೀತಿಯಿಂದ ಅತ್ಯಂತ ಹಿತವಾಗಿ, ಶ್ರೋತೃಗಳ ಕ್ಷೇಮಕ್ಕಾಗಿಯೇ ಹೇಳುತ್ತೇನೆ. ನಮ್ಮ ಆತ್ಮೀಯ ಬಾಂಧವ್ಯಕ್ಕಾಗಿಯೇ ಈ ವಿನಂತಿಯನ್ನು ಮಾಡುತ್ತಿದ್ದೇನೆ. ॥170॥ ಒಂದು ಇರುವೆಯು ತನ್ನ ತಲೆಯು ಮುರಿದುಹೋಗಿದ್ದರೂ ಬೆಲ್ಲದ ಸಿಹಿಗೆ ಕಚ್ಚಿಕೊಂಡಂತೆ ನೀನು ಸಾಯಿಚರಣಗಳಲ್ಲಿ ಸೇರಿರಬೇಕು. ಅವರು ಅತ್ಯಂತ ಜೋಪಾನವಾಗಿ ರಕ್ಷಿಸುತ್ತಾರೆ. ॥171॥ ಗುರು ಮತ್ತು ಭಕ್ತ ಇಬ್ಬರೂ ಬೇರೆಯಲ್ಲ. ಅವರು ಬೇರೆಯಾಗಿ, ಪ್ರತ್ಯೇಕವಾಗಿ ಕಾಣಬಹುದು. ಅವರನ್ನು ಬಲವಂತವಾಗಿ ಬೇರ್ಪಡಿಸಲು ಪ್ರಯತ್ನಪಡುವವನು ನಿಜವಾಗಿಯೂ ತನ್ನ ಅಭಿಮಾನ

ಭಂಗ ಮಾಡಿಕೊಳ್ಳುವನು. ॥172॥ ಇಬ್ಬರೂ ಒಂದೇ. ಒಬ್ಬರು ಮತ್ತೊಬ್ಬರನ್ನು ಬಿಟ್ಟು ಜೀವಿಸಲಾರರು. ಗುರುವು ಅಯೋಗ್ಯನಾಗಿದ್ದರೆ ಶಿಷ್ಯನೂ ಹಾಗೆಯೇ. ಆದರೆ ಒಬ್ಬ ಪಕ್ಕಾ ಗುರುವಿನ ಬಳಿ ಕಲಿತವನಿಗೆ ದ್ವೈತ ಭಾವನೆಯ ಯೋಚನೆಯೂ ಬರುವುದಿಲ್ಲ. ॥173॥ ಗುರುವು ಒಂದು ಜಾಗದಲ್ಲಿ ಇರುತ್ತಾನೆ. ಶಿಷ್ಯನು ಮತ್ತೊಂದು ಜಾಗದಲ್ಲಿ ಇರುತ್ತಾನೆ. ಈ ರೀತಿಯ ಮನೋಭಾವನೆಯನ್ನು ಇಚ್ಛಿಸಿದಲ್ಲಿ, ಅವರಬಾಂಧವ್ಯ ಕೇವಲ ತೋರಿಕೆಗಾಗಿ ಅಷ್ಟೇ. ॥174॥ ಅವರು ಅವಶ್ಯವಾಗಿಯೂ ಒಬ್ಬರಲ್ಲದಿದ್ದರೆ, ಬೇರೆ ಬೇರೆ ಇರಲು ಹೇಗೆ ಸಾಧ್ಯ? ಒಬ್ಬರು ಮತ್ತೊಬ್ಬನ್ನು ಬಿಟ್ಟು ಅಸ್ತಿತ್ವದಲ್ಲಿರುವುದಿಲ್ಲ. ಇಬ್ಬರೂ ಅಷ್ಟು ಅನನ್ಯಭಾವದಲ್ಲಿರುತ್ತಾರೆ. ॥175॥ ಗುರು ಮತ್ತು ಭಕ್ತನ ನಡುವೆ ಯಾವ ಅಂತರವೂ ಇಲ್ಲ.ಈ ರೀತಿ ಅವರು ಅವಿಚ್ಛಿನ್ನವಾಗಿ ಒಟ್ಟಿಗೆ ಇರುತ್ತಾರೆ. ಭಕ್ತನು ತನ್ನ ಗುರುವಿನ ಚರಣಗಳಲ್ಲಿ ತಲೆಯನ್ನಿಡುವುದು ಪೂಜೆಯ ದ್ಯೋತಕ ಹಾಗೂ ಹೊರದೃಷ್ಟಿಯ ಚಿಹ್ನೆ. ॥176॥ ಭಕ್ತನು ತನ್ನ ಏಕಾಗ್ರ ಚಿತ್ತದ ಪೂಜೆಯಲ್ಲಿ ಗುರುವಿನಲ್ಲಿ ಮತ್ತು ಗುರುವು ಭಕ್ತನಲ್ಲಿ ಒಂದಾಗಿರುತ್ತಾನೆ. ಈ ರೀತಿ ಅವರಿಬ್ಬರೂ ಒಂದಾಗಿಲ್ಲದಿದ್ದಲ್ಲಿ ಆ ಬಾಂಧವ್ಯ ಕೇವಲ ವ್ಯವಹಾರರೂಪದ್ದು. ॥177॥ ಅನ್ನ ಮತ್ತು ವಸ್ತ್ರಗಳನ್ನು ಒಬ್ಬನು ಯಾವ ರೀತಿ ಸಂಪಾದಿಸಲು ಸಾಧ್ಯ? ಅದರ ಬಗ್ಗೆ ಯೋಚಿಸುತ್ತ ಕ್ಷಣ ಮಾತ್ರವನ್ನೂ ವ್ಯರ್ಥ ಮಾಡಬೇಡಿರಿ. ಎಲ್ಲವೂ ಪ್ರಾರಬ್ಧಕ್ಕೆ ಅಧೀನ ಮತ್ತು ಅಪ್ರಯತ್ನವಾಗಿಯೇ ಅದನ್ನು ಪಡೆಯಬಹುದು. ॥178॥ ನೀನು ಅವುಗಳನ್ನು ಪಡೆಯಲು ಪ್ರಯತ್ನಿಸಿದರೆ ಅವು ವ್ಯರ್ಥವಾಗಬಹುದು. ಕೇವಲ ಪರಮಾತ್ಮ ಸಂಪನ್ನನಾಗಲು ಪ್ರಯತ್ನಿಸು. ಅದಕ್ಕಾಗಿ ಹಗಲು ರಾತ್ರಿ ಚಿಂತನೆಮಾಡು. ॥179॥ ಏಳು, ಎದ್ದೇಳು ಮತ್ತು ಜಾಗೃತನಾಗು. ಗಾಢನಿದ್ರೆಯಲ್ಲಿ ಗೊರಕೆ ಯಾಕೆ ಹೊಡೆಯುವೆ? ಅದು ಶ್ರುತಿ[11]ಯ ಪ್ರತಿಧ್ವನಿಸುತ್ತಿದ್ದ ತಾರಕ ಸ್ವರದ ಗರ್ಜನೆ. ಅದು ಪ್ರೇಮದಿಂದ ಭಕ್ತರನ್ನು ಜಾಗೃತಗೊಳಿಸುತ್ತದೆ. ॥180॥ ಸರ್ವ ಅನರ್ಥಗಳ ಬೀಜದ ಭೂತವೇ ಅವಿದ್ಯೆ. ಅವಿದ್ಯೆಯೆಂಬ ನಿದ್ರೆಯಲ್ಲಿ ಹೊರಳಾಡುತ್ತಿರುವವರು ತಡವಾಗುವುದಕ್ಕೆ ಮುಂಚೆಯೇ ಜಾಗೃತನಾಗಿ ಗುರುಜ್ಞಾನಾಮೃತಕ್ಕಾಗಿ ಗುರುವಿನ ಸೇವೆಯನ್ನು ಮಾಡು. ॥181॥ ಆದ್ದರಿಂದ ಅತ್ಯಂತ ವಿನೀತನಾಗಿ ಗುರುವಿನ ಚರಣಗಳಲ್ಲಿ ಶರಣಾಗು. ಕೇವಲ ಅವನಿಗೆ ಮಾತ್ರ ಸರಿ ಯಾವುದು, ತಪ್ಪು ಯಾವುದು ಎಂಬುದು ಗೊತ್ತು, ನಾವು ಏನೂ ಅರಿಯದ ಮಕ್ಕಳು. ॥182॥ ಜೀವವು ತನ್ನ ಕಿಂಚಿತ್ ಜ್ಞಾನದ ಬಗ್ಗೆಯೇ ಹೆಮ್ಮೆಪಡುತ್ತಿದೆ. ಶಿವ ಸರ್ವಜ್ಞನಾಗಿಯೂ ನಿರಹಂಕಾರಿ. ಕೇವಲ ಗುರು ಮಾತ್ರವೇ ಈ ಅಂತರವನ್ನು ಅರ್ಥಮಾಡಿಸಿ ಎರಡೂ ಒಂದೇ ಮತ್ತು ಅಭೇದ ಎಂದು ತೋರಿಸಬಲ್ಲನು. ॥183॥ ಅವಿದ್ಯೆಯ ಆವರಣ ಹೊಂದಿರುವ ಆತ್ಮ 'ಜೀವ'. ಆದರೆ ಶಿವನು ಮಾಯೆಯ ಉಪಾಧಿ ಇಲ್ಲದ ಪರಮ ಆತ್ಮ. ಕೇವಲ ಗುರು ಸಮರ್ಥರು ಮಾತ್ರವೇ ಇವೆರಡರ ಮಧ್ಯೆ ಇರುವ ಭೇದಭಾವವನ್ನು ಅಳಿಸಬಲ್ಲರು. ॥184॥ ಸಂಕಲ್ಪ ವಿಕಲ್ಪಗಳಿಗೆ ಅಧೀನವಾದ ಮನವನ್ನು ಸಾಯಿ ಚರಣಗಳಲ್ಲಿ ಸಮರ್ಪಿಸು. ಆಗ, ಅವರೇ ಎಲ್ಲಾ ಕರ್ಮಗಳನ್ನು ಮಾಡುವ ಸ್ಫೂರ್ತಿಯಾಗುತ್ತಾರೆ. 'ನಾನು' ಎಂಬ ಅಹಂನ್ನು ತ್ಯಜಿಸಬಹುದು. ॥185॥ ಇದೇ

ರೀತಿ ಸಕಲ ಕ್ರಿಯಾ ಶಕ್ತಿಯನ್ನು ಸಾಯಿಗೆ ಸಮರ್ಪಿಸು. ಅವರ ಆಜ್ಞೆಯ ರೀತಿಯಲ್ಲಿಯೇ ವರ್ತಿಸು. ॥186॥ ಸಾಯಿಯ ಶಕ್ತಿಯು ಎಲ್ಲ ಜಾಗಗಳಲ್ಲಿಯೂ ವ್ಯಾಪಿಸಿದೆ ಎಂದು ತಿಳಿ. ಆದುದರಿಂದ ಎಲ್ಲ ಭಾರವನ್ನು ಅವರ ಮೇಲೆ ಹಾಕು. ಎಲ್ಲ ಕಾರ್ಯಗಳನ್ನೂ ನಿರಭಿಮಾನದಿಂದ ಮಾಡು. ನೀನು ನಿಜವಾಗಿಯೂ ಸಿದ್ಧಿಯನ್ನು ಗಳಿಸುವೆ. ॥187॥ ನೀನೇನಾದರೂ ಅಲ್ಪವಾದ ಅಭಿಮಾನದಿಂದಲಾದರೂ "ನಾನು ಇದನ್ನು ಮಾಡುತ್ತೇನೆ" ಎಂದು ಯೋಚಿಸಿದಲ್ಲಿ ಅದರ ಫಲವು ಕೂಡಲೇ ವಿದಿತವಾಗುತ್ತದೆ. ಕ್ಷಣಮಾತ್ರದ ವಿಳಂಬವೂ ಇರುವುದಿಲ್ಲ. ॥188॥ ಹೇಮಾಡನು ಆಲಸ್ಯದಿಂದ ಮಾಯಾಮೋಹದ ನಿಶೆಯಿಂದ ನಿದ್ರೆಯಲ್ಲಿನ ಹಾಗೆ ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ತಿರುಗುತ್ತಿದ್ದಾಗ ಅವನಿಗೆ ಗುರುವಿನ ಹಾಗು ಹರಿಯ ಕೃಪೆಯುಂಟಾಯಿತು. ॥189॥ ಅದನ್ನು ಕೇವಲ ಅದೃಷ್ಟವೆಂದೇ ಹೇಳಬಹುದು. ಏಕೆಂದರೆ ಯಾವ ಅಧ್ಯಯನವನ್ನಾಗಲೀ, ಯಾವ ಅಭ್ಯಾಸವನ್ನಾಗಲೀ ಮಾಡಿರಲಿಲ್ಲ. ದೇವರು ಮತ್ತು ಗುರು ಇಬ್ಬರೂ ಈ ಗೌರವವನ್ನು ತಮ್ಮ ಸಂಕಲ್ಪದಿಂದಲೇ ಅನುಗ್ರಹಿಸಿದ್ದರು. ॥190॥ ಸಾಯಿಯು ತಮ್ಮ ಜೀವನ ಚರಿತ್ರೆಯನ್ನು ಭಕ್ತೋದ್ಧಾರಕ್ಕಾಗಿ ಬರೆಸಲು ನಿರ್ಧರಿಸಿದ್ದರು. ಒತ್ತಾಯ ಪೂರ್ವಕವಾಗಿನನ್ನ ಕೈಗಳನ್ನು ಹಿಡಿದುಕೊಂಡು ಈ ಗ್ರಂಥವನ್ನು ಸವಿಸ್ತಾರವಾಗಿ ಬರೆಸಿದ್ದಾರೆ. ॥191॥ ಅಖಂಡವಾದ ಧ್ಯಾನವೆಂಬ ದಾರದಿಂದ ಅನನ್ಯವೂ ವಿಚಿತ್ರವೂ ಆದ ಪ್ರೇಮ ಪುಷ್ಪಗಳಿಂದ ಮನೋಹರವಾದ ಹಾರವನ್ನು ಕಟ್ಟಿ ಆದರಪೂರ್ವಕವಾಗಿ ಸಾಯಿಗೆ ಸಮರ್ಪಿಸೋಣ. ॥192॥ ಆತ್ಮಸಾಕ್ಷಾತ್ಕಾರವೆಂಬ ಸ್ವಾಜ್ಯದ ಸಿಂಹಾಸನವನ್ನು ಗಳಿಸೋಣ ಮತ್ತು ಅದರ ಮೇಲೆ ವಿರಾಜಮಾನರಾಗೋಣ. ಸ್ವರ್ಗೀಯ ಆನಂದವನ್ನು ಅನುಭವಿಸೋಣ. ನಿರಭಿಮಾನದಿದ ನಿಜಾಂತರಂಗದಲ್ಲಿ ತೃಪ್ತಿ ಸುಖಗಳನ್ನು ಅನುಭವಿಸೋಣ. ॥193॥ ಈ ರೀತಿ ಸಾಯಿಚರಿತ್ರೆಯು ಅಗಾಧವಾದುದು. ಮುಂದಿನ ಕಥೆಯು ಇದಕ್ಕಿಂತಲೂ ಬಹು ಅದ್ಭುತವಾಗಿದೆ. ಕ್ಷಣ ಕಾಲ ಪೂರ್ಣ ಗಮನವಿಟ್ಟು ಪವಿತ್ರಗೊಳಿಸುವಂತಹ ಕಥೆಯನ್ನು ಆಲಿಸಿ. ॥194॥ ಮುಂದಿನ ಮೂರು ಅಧ್ಯಾಯಗಳಲ್ಲಿ ಬಾಬಾರವರು ದೃಶ್ಯಗಳ ಅನುಭವ ನೀಡಿ ಅದ್ಭುತಗಳನ್ನು ತೋರಿಸುತ್ತಿದ್ದ ದೃಷ್ಟಾಂತಗಳು ಇವೆ. ಆದರೆ ಅವರು ಮಾತ್ರ ಎಲ್ಲಿದ್ದರೋ ಅಲ್ಲಿಯೇ ಉಳಿದಿರುತ್ತಿದ್ದರು. ॥195॥ ಇವುಗಳಲ್ಲಿ ಮೊದಲನೆಯ ಅಧ್ಯಾಯವು ಲಾಲಾ ಲಕ್ಷ್ಮೀಚಂದನನ್ನು ಪ್ರೇಮಸೂತ್ರದಲ್ಲಿ ಎಳೆದು ಕರೆತಂದು ಅವನ ನಿರ್ದಿಷ್ಟ ಸ್ಥಳವನ್ನು ತೋರಿಸಿದ ಬಗ್ಗೆ ತಿಳಿಸುತ್ತದೆ. ॥196॥ ಬರಹಾಂಪುರದ ಮಹಿಳೆಯೊಬ್ಬಳ ಕಿಚಡಿಯನ್ನು[12] ಅವರು ತಿನ್ನಲು ಇಷ್ಟಪಟ್ಟು ಅವಳನ್ನು ದರ್ಶನೋತ್ಸುಕಳನ್ನಾಗಿ ಮಾಡಿ ತಮ್ಮ ಕೌತುಕಮಯವಾದ ಪ್ರೇಮವನ್ನು ತೋರಿಸಿದರು. ॥197॥ ಹಾನೆಯಲ್ಲಿ ಯಾವ ರೀತಿ ಮೇಘಾನಿಗೆ ಕನಸಿನಲ್ಲಿ ಬಂದು ತ್ರಿಶೂಲವನ್ನು ಬರೆಯಲು ಹೇಳಿ, ಅನಂತರ ಯಾವ ರೀತಿ ಅವನು ಅನಿರೀಕ್ಷಿತವಾಗಿ ಶಿವಲಿಂಗವನ್ನು ಪಡೆದನು ಎಂಬುದನ್ನು ಹೇಳಿದೆ. ॥198॥ ಈ ರೀತಿಯ ಅನೇಕ ಕಥೆಗಳು ಅದರ ನಂತರ ಬರುತ್ತವೆ. ಶ್ರೋತೃಗಳು ಭಕ್ತಿಯಿಂದ ಇವುಗಳನ್ನು ಕೇಳಿದಲ್ಲಿ ಅವರು ಸಾರ್ಥಕತೆಯನ್ನು

ಪಡೆಯುತ್ತಾರೆ. ॥199॥ ಸಮುದ್ರದಲ್ಲಿ ಉಪ್ಪು ಕರಗುವಂತೆ ಹೇಮಾಡನು ಸಾಯಿಯಲ್ಲಿ ಶರಣಾಗುತ್ತಾನೆ. [illegible] ಭಾವದಿಂದ ಹಾಗೂ ಏಕತ್ವಭಾವದಿಂದ ಒಂದಾಗುತ್ತಾನೆ. ಅವನು ಅನನ್ಯ ಭಾವದಿಂದ ನಮಸ್ಕರಿಸುತ್ತಾನೆ. ॥200॥ ಅದೂ ಅಲ್ಲದೆ, ಅವನು ಪ್ರೇಮದಿಂದ ಬೇಡಿಕೊಳ್ಳುತ್ತಾನೆ. ಅವನು ಹಗಲು ರಾತ್ರಿ ಸಾಯಿಯ ಧ್ಯಾನದಲ್ಲಿ ಮಗ್ನನಾಗಲಿ, ಮತ್ತೇನೂ ಅವನ ಮನಸ್ಸಿನಲ್ಲಿ ಪ್ರವೇಶಿಸದಿರಲಿ. ಮನಸ್ಸು ಸದಾ ಸಮಾಧಾನದಿಂದ ಇರಲಿ. ॥201॥ ಹಿಂದಿನ ಜನ್ಮದ ಕರ್ಮಗಳು ನಾಶವಾಗಲಿ ಮತ್ತು ಮುಂದಿನ ಜನ್ಮದ್ದು ನಿರ್ಮೂಲವಾಗಲಿ. ಈ ಜನ್ಮದಲ್ಲಿ ಅವನು ತನ್ನ ಗುರುಚರಣಗಳಲ್ಲಿ ನಿರಂತರವಾಗಿ ಜೀವನ ಕಳೆಯುವಂತಾಗಲಿ. ॥202॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ದೀಕ್ಷೆ ಮತ್ತು ಅನುಗ್ರಹಗಳ ಕೃಪೆ" ಎಂಬ ಇಪ್ಪತ್ತೇಳನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಇದು ಐದನೆಯ ಅಧ್ಯಾಯದಲ್ಲಿ ಹೇಳಿರುವ ಬಾಬಾರವರು ಮದುವೆ ದಿಬ್ಬಣದ ಜೊತೆ ಬಂದರು ಎಂಬ ವಿಷಯಕ್ಕೆ ವಿರುದ್ಧವಾಗಿದೆ.

2. ವಿಷ್ಣುವಿನ ಹತ್ತು ಅವತಾರಗಳು. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ (ಮುಂದೆ ಇನ್ನೂ ಆಗಬೇಕಾಗಿದೆ.)

3. ಮಹಾಭಾರತದಲ್ಲಿನ ಐದು ರತ್ನಗಳು: (1) ಭಗವದ್ಗೀತೆ; (2) ವಿಷ್ಣುಸಹಸ್ರನಾಮಸ್ತೋತ್ರ; (3) ಭೀಷ್ಮಸ್ತವರಾಜ; (4) ಅನುಸ್ಮೃತಿ; (5) ಗಜೇಂದ್ರಮೋಕ್ಷ.


4. ಮುಕುಂದರಾಜ್‌ನಿಂದ ಸನ್ 1188ರಲ್ಲಿ ಬರೆಯಲ್ಪಟ್ಟುದು. ಅಂದರೆ ಮರಾಠಿಯಲ್ಲಿ ಅದ್ವೈತದ ಬಗ್ಗೆ ಇರುವ ಜ್ಞಾನೇಶ್ವರಿಗಿಂತ ನೂರು ವರ್ಷಗಳ ಮೇಲ್ಪಟ್ಟು ಹಿಂದಿನದು.

5. ಧಾರ್ಮಿಕ ಧ್ಯಾನ ಮತ್ತು ಮಂತ್ರಜಪ ಬೆಳಗಿನ ಜಾವದಲ್ಲಿ ಮತ್ತು ಇತರ ನಿಗದಿತ ಸಮಯಗಳಲ್ಲಿ ಮಾಡುವುದು.

6. ರಾಮಕಥೆಯ ದೀಕ್ಷಾ ರಹಸ್ಯ ಸ್ವರೂಪ.
7. ಚಿಂಚಣೀಕರ.
8. ಪ್ರೊಫೆಸರ್ ಗಣೇಶ ಗೋವಿಂದ ನರ್ಕೆ, ಬುಟಿಯ ಅಳಿಯ, ಪುಣೆಯ ಇಂಜಿನಿಯರಿಂಗ್ ಕಾಲೇಜಿನವನು.
9. ಸಂಜಿ = ಗೋಧಿಯ ಗಂಜಿ.

    ಶೀರಾಪುರಿ: ಗೋಧಿ+ಬೆಲ್ಲ+ತುಪ್ಪಗಳ ಕ್ರೀಮ್ ಮತ್ತು ಎಣ್ಣೆಯಲ್ಲಿ ಕರಿದ ಗೋಧಿ ಹಿಟ್ಟಿನ ರೊಟ್ಟಿ.
    ಭಾತ್: ಅನ್ನ
    ವರಣ್: ಧಾನ್ಯಗಳ ರುಚಿಯಾದ ಅಡಿಗೆ.
    ಖೀರು: ಪಾಯಸ.
    ಸಂಡಿಗೆ: ಸೌತೆಕಾಯಿ, ಸಿಹಿಕುಂಬಳಕಾಯಿ ಮತ್ತಿತರ ಕೋಸಂಬರಿ. (ಒಗ್ಗರಣೆ ಹಾಕಿರುವುದು)
    ಪಾಪಡ್: ಹಪ್ಪಳ.
    ಕೋಸಂಬರಿ.

10. ಗುರುವಿನಿಂದ ಶಿಷ್ಯನಿಗೆ ನೇರವಾಗಿ ಬರುವ ಶಕ್ತಿ, ಸ್ಪರ್ಶ, ಮಾತು ಅಥವಾ ಕೇವಲ ನೋಟದಿಂದ.
11. ಕಠೋಪನಿಷತ್.
12. ಅಕ್ಕಿ+ಬೇಳೆಯ ಅಡಿಗೆ.



## ಅಧ್ಯಾಯ - 28

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



# "ದರ್ಶನಗಳ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸಾಯಿಯು ಒಂದು ಸ್ಥಳಕ್ಕೆ ಸೀಮಿತರಲ್ಲ. ಸಾಯಿಯು ಎಲ್ಲ ಸೃಷ್ಟಿಯಲ್ಲಿಯೂ ಬ್ರಾಹ್ಮಣನಿಂದ ಸಣ್ಣ ಕ್ರಿಮಿಗಳವರೆಗೆ ಎಲ್ಲ ಜೀವಿಗಳಲ್ಲಿ, ಇರುವೆ ಮತ್ತು ಸೊಳ್ಳೆಗಳಲ್ಲಿ ಸಹ ಇರುತ್ತಾರೆ. ಅವರು ಸರ್ವಾಂತರ್ಯಾಮಿ ಮತ್ತು ಸರ್ವವ್ಯಾಪಿ. ॥1॥ ಸಾಯಿಯು ವೇದಪಾರಂಗತರು. ಪರಬ್ರಹ್ಮನ ಎಲ್ಲಾ ಗುಣಗಳನ್ನೂ ಹೊಂದಿರುವವರು. ಅವರು ಎರಡರಲ್ಲೂ ಪ್ರಾವೀಣ್ಯತೆ ಹೊಂದಿರುವುದರಿಂದ ಸದ್ಗುರು ಎನ್ನುವುದಕ್ಕೆ ಪೂರ್ಣವಾಗಿ ಹೊಂದಿಕೊಳ್ಳುತ್ತಾರೆ. ॥2॥ ಒಬ್ಬನು ಮಹಾಜ್ಞಾನಿಯಾಗಿರಬಹುದು. ಆದರೆ ಶಿಷ್ಯರಿಗೆ ಪ್ರಬೋಧನೆಯನ್ನು ಕೊಡಲಾರದವನು ಅಥವಾ ಆತ್ಮಸಾಕ್ಷಾತ್ಕಾರವನ್ನು ನೀಡಲಾಗದವನು, ಸದ್ಗುರು ಎಂದು ಕರೆಸಿಕೊಳ್ಳಲು ಸಾಧ್ಯವಿಲ್ಲ. ॥3॥ ತಂದೆ-ತಾಯಿಯು ಈ ದೇಹಕ್ಕೆ ಜನ್ಮ ನೀಡಬಹುದು. ಸಾವು ಜೀವನವನ್ನು ಹಿಂಬಾಲಿಸುತ್ತದೆ. ಗುರುವು ನಿನ್ನನ್ನು ಜನನ ಮತ್ತು ಮರಣಗಳಿಂದ ಬಿಡುಗಡೆ ಮಾಡುತ್ತಾನೆ. ಆದುದರಿಂದ ಈ ಹೋಲಿಕೆಯು ಬೇರೆ ಯಾವುದಕ್ಕಿಂತಲೂ ಉತ್ತಮವಾದದ್ದು. ॥4॥ ಈಗ ಹಿಂದೆಯೇ ಉಲ್ಲೇಖಿಸಿದ ಕನಸುಗಳ ಬಗ್ಗೆ ತಿಳಿಸುವ ಅಧ್ಯಾಯವನ್ನು ಕೇಳಿರಿ. ಬಾಬಾರವರು ಯಾವ ರೀತಿ ತಮ್ಮ ಭಕ್ತರಿಗೆ ಅವರ ಕನಸಿನಲ್ಲಿ ಕಾಣಿಸಿಕೊಂಡು ದರ್ಶನ ನೀಡುತ್ತಿದ್ದರು ಎಂಬುದನ್ನು ಕೇಳಿರಿ. ॥5॥ ಅವರು ಒಬ್ಬನಿಗೆ ತ್ರಿಶೂಲವನ್ನು ಬರೆಯಲು

ತಿಳಿಸಿದರು. ಮತ್ತೊಬ್ಬನಿಗೆ ಖಿಚಡಿ ಕೇಳಿದರು, ಮತ್ತೊಬ್ಬನಿಗೆ ಅವನ ಶಿಕ್ಷಕನ ರೀತಿ ಕೈಯಲ್ಲಿ ಕೋಲು ಹಿಡಿದು ಬೆನ್ನಮೇಲೆ ಚೆನ್ನಾಗಿ ಹೊಡೆದರು. ||6|| ಅವರು ಒಬ್ಬರಿಗೆ ಅವನ ಕನಸಿನಲ್ಲಿ ಉಗ್ರರಾಗಿ ಬಂದು ಹೆದರಿಸಿ ಅವನು ಸುರಾಪಾನದ ಅಭ್ಯಾಸವನ್ನು ಬಿಡುವಂತೆ ಮಾಡಿದರು. ತಮ್ಮ ಭಕ್ತರ ಈ ರೀತಿಯ ಅನೇಕ ಸಂಕಟಗಳನ್ನು ಪರಿಹರಿಸಿ ತಮ್ಮ ಚರಣಗಳಲ್ಲಿ ಅವರ ಭಕ್ತಿಯನ್ನು ದೃಢಪಡಿಸಿದರು. ||7|| ಶ್ರೋತೃಗಳು ಈಗಾಗಲೇ ಕೇಳಿರುವಿರಿ. ಅವರು ಯಾವ ರೀತಿ ಒಬ್ಬನ ಬೆನ್ನಿನ ಚರ್ಮ ಸುಲಿದು ಬರುವಂತೆ ಚಾವಟಿಯಿಂದ ಹೊಡೆದರು ಮತ್ತು ತಮ್ಮ ಎದೆಯನ್ನು ಬೀಸುವ ಕಲ್ಲು ಮಾಡಿ ಮತ್ತೊಂದು ಕಲ್ಲನ್ನು ಅದರ ಮೇಲಿಟ್ಟು ಬೀಸಲು ತೆಗೆದುಕೊಂಡರು. ಇವೆಲ್ಲವನ್ನೂ ಹತ್ತನೆಯ ಅಧ್ಯಾಯದಲ್ಲಿ[1] ನಿರೂಪಣೆ ಮಾಡಿರುತ್ತೇನೆ. ||8|| ಈಗ ಮುಂದೆ ಹೇಳುವ ಕಥೆಗಳು ಅಪೂರ್ವ ಮತ್ತು ಅಪರೂಪವಾದವುಗಳು. ಶ್ರೋತೃಗಳು ಮತ್ತು ಕಥನಕಾರ ಇಬ್ಬರೂ ಧನ್ಯರು. ಏಕೆಂದರೆ ಅವರು ಸಮರಸವನ್ನು ಆಸ್ವಾದಿಸಿದವರು. ಅವರಿಗೆ ಎಂದಿಗೂ ಮುಗಿಯದ ಸೌಖ್ಯವು ದೊರಕುತ್ತದೆ. ||9|| ನಂತರ ಬಗೆಗಿನ ಈ ಕಥೆಗಳನ್ನು ನಿರೂಪಣೆ ಮಾಡೋಣ. ಅವು ಸದಾ, ಪಾವನವಾದವು. ಅವು ಅಸತ್ಯವನ್ನು, ನಿಂದೆಗಳನ್ನು, ಕೇಳಿದ ಪಾಪಗಳನ್ನು ದೂರಮಾಡುತ್ತವೆ. ಅವು ಸದಾ ಪರಮಪಾವನವಾದವು. ||10|| ಈಗ ಆ ಕಥೆಗಳ ಬಗ್ಗೆ ಕೇಳಿ. ಶ್ರೋತೃಗಳು ಆದರಪೂರ್ವಕವಾಗಿ ಕೇಳಬೇಕು. ಅವುಗಳು ಸಾಯಿಯ ಕೃಪಾಳು ಗುಣವನ್ನು ಹೆಚ್ಚೆಹೆಚ್ಚೆಗೂ ತೋರಿಸುತ್ತವೆ. ||11|| ರಾಲಿ ಸೋದರರು ಗ್ರೀಕ್ ವ್ಯಾಪಾರಿಗಳು. ಅವರು ಭಾರತದ ಎಲ್ಲಾ ಕಡೆಗಳಿಂದಲೂ ಸಾಮಾನುಗಳನ್ನು ಕೊಂಡುಕೊಂಡು ತಮ್ಮ ವಹಿವಾಟನ್ನು ಬೇರೆ ಬೇರೆ ಪಟ್ಟಣಗಳಲ್ಲಿ ಹೊಂದಿದ್ದರು. ಅವುಗಳಲ್ಲಿ ಮುಂಬಯಿ ಸಹ ಒಂದು. ||12|| ಆ ಸಮಯದಲ್ಲಿ ಲಖಮಿಚಂದನು ಅಲ್ಲಿ ಒಬ್ಬ ಅಧಿಕಾರಿಯ ಕೆಳಗೆ ಕೆಲಸಮಾಡುತ್ತಿದ್ದನು. ಅವನು ಬಹಳ ಪ್ರಾಮಾಣಿಕ ಹಾಗೂ ವಿಧೇಯ. ಅವನು ಮುನ್ಷಿಯ ಕೆಲಸ ಮಾಡುತ್ತಿದ್ದನು. ||13|| ಮೊದಲು ಅವನು ರೈಲ್ವೆಯಲ್ಲಿ ಕೆಲಸ ಮಾಡಿದನು. ಅನಂತರ ವೆಂಕಟೇಶ ಮುದ್ರಣಾಲಯದಲ್ಲಿ ಕೆಲಸ ಮಾಡಿದನು. ಆ ಸಮಯದಲ್ಲಿಯೇ ಸಾಯಿಯ ಸಮಾಗಮವಾಯಿತು. ಅದು ಹೇಗೆ ಆಯಿತೆಂಬುದನ್ನು ಕೇಳಿರಿ. ||14|| "ನನ್ನ ಮನುಷ್ಯ ಎಲ್ಲಿಯಾದರೂ ಇರಬಹುದು. ಇನ್ನೂ ಸಾವಿರಾರು ಮೈಲಿಗಳ ದೂರದಲ್ಲಿರಬಹುದು. ನಾನು ಅವನನ್ನು ಅವನ ಕಾಲಿಗೆ ದಾರ ಕಟ್ಟಿ ಗುಬ್ಬಚ್ಚಿಯನ್ನು ಎಳೆಯುವಂತೆ ನನ್ನ ಕಡೆ ಎಳೆದುಕೊಳ್ಳುತ್ತೇನೆ." ||15|| ಬಾಬಾರವರು ಈ ಮಾತನ್ನು ಆಗಾಗ ಆಡುತ್ತಿದ್ದರು. ಜನರು ಅನೇಕ ಸಲ ಇದನ್ನು ಕೇಳಿದ್ದರು. ಅಲ್ಲದೆ ಅದನ್ನು ಅನುಭವಿಸುತ್ತಿದ್ದರು. ನಾನು ಬಾಬಾರವರ ಈ ಲೀಲೆಯನ್ನು ಹೇಳುತ್ತೇನೆ. ||16|| ಅನೇಕ ಇಂತಹ 'ಮಕ್ಕಳು' ಅನೇಕ ಜಾಗಗಳಿಂದ ದೇಶವಿದೇಶಗಳಿಂದ ಶಿರಡಿಗೆ ಬಂದರು, ಅವರಲ್ಲಿ ಲಕಮಿಚಂದನೂ ಒಬ್ಬನು. ಅವನೊಬ್ಬ ಭಾವುಕ 'ಮಗು'. ||17|| ನಾವು ಯಾವಾಗಲೂ ಮೋಹದಿಂದುಂಟಾದ ತಮಸ್ಸನ್ನು ದೂರಮಾಡುವ ಸಂತನನ್ನು ಭೇಟಿ ಮಾಡುತ್ತೇವೆ. ನಮ್ಮ ಪೂರ್ವಜನ್ಮದ ಸುಕೃತಗಳ ಫಲವಾಗಿಯೇ

ಸಂತ ಸಮಾಗಮವಾಗುತ್ತದೆ. ॥18॥ ವಿವೇಚನಾಯುಕ್ತ ವಿವೇಕಾಗ್ನಿಯನ್ನು ಪ್ರಜ್ವಲಿಸಿದಾಗ ಅದೃಷ್ಟವು ಒಲಿದಾಗ ನಮಗೆ ವೈರಾಗ್ಯ ಸಿಗುತ್ತದೆ. ಪೂರ್ವ ಜನ್ಮಗಳ ಸಂಚಿತ ಕರ್ಮಗಳು ಕ್ಷಯವಾಗಿ ನಮ್ಮ ಜೀವಿತ ಸಾಫಲ್ಯ ಹೊಂದುತ್ತದೆ. ॥19॥ ಒಮ್ಮೆ ಸಾಯಿನಾಥರು ದೃಷ್ಟಿಯನ್ನು ತುಂಬಿದಾಗ ಅಲ್ಲಿ ಬೇರೆ ಯಾರಿಗೂ ಜಾಗವಿಲ್ಲ. ಕಣ್ಣುಗಳನ್ನು ಮುಚ್ಚಿದರೂ ಸಾಯಿನಾಥರು ಕಣ್ಣುಗಳಲ್ಲಿ ತುಂಬಿರುತ್ತಾರೆ. ॥20॥ ನಾನು ಲಾಲ್‌ಜೀ ಲಖಮಿಚಂದನನ್ನು ಭೇಟಿ ಮಾಡಿದೆ. ಅವನು ತನ್ನ ಅನುಭವಗಳನ್ನು ವಿವರಿಸಿದನು. ಅದನ್ನು ಪ್ರೇಮದಿಂದ ನನ್ನ ಹೃದಯ ಸಂಪುಟದಲ್ಲಿ ನಿಧಿಯಾಗಿ ಕಾಪಾಡಿಕೊಂಡಿದ್ದೇನೆ. ಅದನ್ನು ಉತ್ಕಂಠಿತನಾಗಿ ನಿಮಗೆ ನಿರೂಪಿಸುತ್ತೇನೆ. ॥21॥ ನೋಡಿ, ಅವನು ಹೇಗೆ ಹಿಡಿಯಲ್ಪಟ್ಟಿದ್ದಾನೆ. ಆ ಲೀಲೆಯು ಅಲೌಕಿಕವಾದುದು. ಭಾವುಕರಾದ ಶ್ರೋತೃಗಳು ಇದನ್ನು ಪೂರ್ಣ ಏಕಾಗ್ರತೆಯಿಂದ ಕೇಳಿರಿ. ॥22॥ ಸನ್ 1910ರ ಕ್ರಿಸ್‌ಮಸ್ ರಜೆಯಲ್ಲಿ ಲಾಲಾಜಿಗೆ ಶಿರಡಿಗೆ ಬರುವ ಅವಕಾಶ ದೊರಕಿತು. ॥23॥ ಅಂದು ಅವನು ಪ್ರಥಮ ಬಾರಿಗೆ ಪ್ರತ್ಯಕ್ಷ ದರ್ಶನ ಪಡೆದಿದ್ದನು. ಒಂದೆರಡು ತಿಂಗಳುಗಳ ಮುಂಚೆಯೇ ಇದರ ಪೂರ್ವ ಸೂಚನೆ ಕಂಡಿತ್ತು. ಏನು ನಡೆಯಿತೆಂಬುದನ್ನು ಕೇಳೋಣ. ॥24॥ ಅವನು ಸಾಂತಾಕ್ರೂಜ್‌ನಲ್ಲಿದ್ದಾಗ ಅವನಿಗೆ ಇದ್ದಕ್ಕಿದ್ದ ಹಾಗೆಯೇ ಒಂದು ವಿಚಿತ್ರವಾದ ಕನಸು ಬಿತ್ತು. ಅದರ ವಿಷಯವು ಅವನ ಮನಸ್ಸಿನಲ್ಲಿ ಎಂದಿಗೂ ಪ್ರವೇಶಿಸಲಿರಲಿಲ್ಲ. ॥25॥ ಗಡ್ಡಧಾರಿಯಾದ ವೃದ್ಧ ಸಾಧುವೊಬ್ಬನು ಭಕ್ತವೃಂದದಿಂದ ಸುತ್ತುವರೆಯಲ್ಪಟ್ಟಿದ್ದುದನ್ನು ಅವನು ಕಂಡನು. ಆ ಮಹಾತ್ಮ ನಿಂತಿರಲು ಲಾಲಾಜಿ ಪ್ರೇಮಪೂರ್ವಕವಾಗಿ ನಮಸ್ಕಾರ ಮಾಡಿದನು. ॥26॥ ಕೆಲವು ಸಮಯದ ನಂತರ, ಲಕಮಿಚಂದನು, ದತ್ತಾತ್ರೇಯ ಮಂಜುನಾಥ ಬಿಜೂರ್‌ನ ಮನೆಗೆ ದಾಸಗಣುವಿ ಸಾಯಿಕೀರ್ತನೆಯನ್ನು ಕೇಳಲು ಹೋದನು. ॥27॥ ದಾಸಗಣುವಿನ ನಿತ್ಯ ಪದ್ಧತಿ ಏನೆಂದರೆ ಯಾವಾಗಲೂ ಬಾಬಾರವರ ಚಿತ್ರಪಟವನ್ನು ತನ್ನ ಮುಂದೆ ಇಟ್ಟುಕೊಂಡಿರುವುದು. ಅದನ್ನು ನೋಡಿದ ಕೂಡಲೇ ಲಖಮಿಚಂದನಿಗೆ ಕನಸಿನಲ್ಲಿ ತಾನು ನೋಡಿದ ವೃದ್ಧಮೂರ್ತಿಯ ನೆನಪಾಯಿತು. ॥28॥ ಅದೇ ಗಡ್ಡ, ಅದೇ ವಯಸ್ಸು, ಅದೇ ಅಂಗಾಂಗಗಳು ಮತ್ತು ಅದೇ ರೂಪ. ಲಖಮಿಚಂದನು ಏಕಾಗ್ರ ದೃಷ್ಟಿಯಿಂದ ನೋಡಲು ಇವನು ಅದೇ ಮಹಾತ್ಮನಾಗಿದ್ದನು. ॥29॥ ಪ್ರಾರಂಭದಲ್ಲಿ ದಾಸಗಣುವಿನ ಕೀರ್ತನೆ. ಅದರಲ್ಲಿ ತುಕಾರಾಮನ ವ್ಯಾಖ್ಯಾನವೂ ಇತ್ತು ಮತ್ತು ಅದರ ನಂತರ ತನ್ನ ಕನಸಿನಲ್ಲಿ ಕಂಡ ಸಾಧುವಿನ ದರ್ಶನ. ಲಾಲಾಜಿಯು ಬಹು ಗಹನವಾಗಿ ತಲ್ಲೀನನಾದನು. ॥30॥ ಲಖಮಿಚಂದನು ಅತಿಕೋಮಲ ಹೃದಯದವನು. ತನ್ನ ಕಣ್ಣಿನಲ್ಲಿ ಪ್ರೇಮಜಲ ತುಂಬಿಕೊಂಡನು. ಅವನು ಚಿತ್ರದಲ್ಲಿನ ಮೂರ್ತಿಯನ್ನು ಭೇಟಿ ಮಾಡಿ ದರ್ಶನ ಪಡೆಯಲು ತವಕಗೊಂಡನು. ॥31॥ ಅವನಿಗೆ ಮನಸ್ಸಿನಲ್ಲಿ ಈ ಹಿಂದೆ ಸ್ವಪ್ನದಲ್ಲಿ ಕಂಡ ಮೂರ್ತಿಯನ್ನು ಬಿಟ್ಟರೆ ಬೇರೆ ಯಾವ ಯೋಚನೆಯೂ ಇರಲಿಲ್ಲ. ಅವನ ಚಿತ್ರವನ್ನೇ ಕೀರ್ತನೆಯಲ್ಲಿಯೂ ಭಾವಿಸಿದ್ದನು. ಅವನ ಅಂತರ್ವೃತ್ತಿಯು ಚಿತ್ತದ ಆ ಮೂರ್ತಿಯ ಮೇಲೆಯೇ ನೆಟ್ಟಿತು. ॥32॥ 'ಶಿರಡಿಗೆ

ನನ್ನ ಜೊತೆ ಬರುವಂತಹ ಸ್ನೇಹಿತರು ಯಾರಾದರೂ ಸಿಗುವರೇ? ನಾನು ಯಾವಾಗ ಪ್ರತ್ಯಕ್ಷವಾಗಿ ಆ ಸಂತರ ದರ್ಶನ ಮಾಡಿ ನನ್ನ ತಲೆಯನ್ನು ಆ ಸಂತರ ಚರಣಗಳಲ್ಲಿ ಇಡುವೆನು? ॥33॥ 'ಈ ಸಾಧುವಿನ ದರ್ಶನ ಪಡೆಯಲು ಸಾಧ್ಯವೇ? ಅವನ ಪ್ರೀತಿಯ ಆನಂದವನ್ನು ಎಂದಾದರೂ ಅನುಭವಿಸಲು ಸಾಧ್ಯವೇ?' ಇದು ಲಖಮಿಚಂದನ ನಿರಂತರ ವ್ಯಾಕುಲತೆಯಾಗಿತ್ತು. ॥34॥ ಖರ್ಚಿಗಾಗಿ ಹಣವನ್ನು ಸಹ ತಯಾರಿಡಬೇಕು. ಅನಂತರ ಮುಂದೇನು ಮಾಡಬೇಕು? ಬೇಗನೆ ದರ್ಶನ ಪಡೆಯುವುದು ಹೇಗೆ? ಏನಾದರೂ ಉಪಾಯವನ್ನು ಹುಡುಕಬೇಕು. ॥35॥ ದೇವರು ಸದಾ ಪ್ರೀತಿಗಾಗಿ ಕಾತರನಾಗಿರುತ್ತಾನೆ. ಎಂತಹ ಚಮತ್ಕಾರ ನಡೆಯಿತು ಎಂಬುದನ್ನು ನೋಡಿ! ಅದೇ ರಾತ್ರಿ, ಸುಮಾರು ಎಂಟುಗಂಟೆಯ ಸಮಯದಲ್ಲಿ ಒಬ್ಬ ಸ್ನೇಹಿತನು ಬಾಗಿಲನ್ನು ತಟ್ಟಿದನು. ॥36॥ ಅವನು ಬಾಗಿಲು ತೆರೆದು ನೋಡಿದಾಗ, ಅವನ ಸ್ನೇಹಿತ ಶಂಕರರಾವ್ ನಿಂತಿದ್ದನು. ಅವನು ಲಖಮಿಚಂದನನ್ನು, ಶಿರಡಿಗೆ ಹೋಗುವ ಇಚ್ಛೆಯಿದೆಯೇ ಎಂದು ಕೇಳಿದನು. ॥37॥ "ನಾನು ಕೇಡಗಾಂವಗೆ ನಾರಾಯಣ ಮಹಾರಾಜರ ದರ್ಶನಕ್ಕಾಗಿ ಹೋಗಲು ಯೋಚಿಸಿದ್ದೆನು. ಆದರೆ ಈಗ ನನಗೆ ಮೊದಲು ಶಿರಡಿಗೆ ಹೋಗುವ ಉತ್ಕಟವಾದ ಆಸೆ ಉಂಟಾಗಿದೆ." ॥38॥ ತಮ್ಮ ಆಸೆಗಳನ್ನು ಪೂರೈಸಲು ಪ್ರತಿಯೊಬ್ಬರೂ ಬಹಳ ಪ್ರಯತ್ನಪಡಬೇಕು. ಆದರೆ ಅವನು ಯಾವುದಕ್ಕೆ ಕಾಯುತ್ತಿದ್ದನೋ ಆ ಅವಕಾಶವು ತಾನೇ ಅವನ ಉಡಿಯಲ್ಲಿ ಬಂದು ಬಿತ್ತು! ಲಖಮಿಚಂದನಿಗೆ ತನ್ನ ಆನಂದವನ್ನು ತಡೆಯಲಾಗಲಿಲ್ಲ. ॥39॥ ಅವನು ತನ್ನ ದಾಯಾದಿಯಿಂದ ಹದಿನೈದು ರೂಪಾಯಿಗಳನ್ನು ಕೇಳಿ ತಂದನು. ಶಂಕರರಾವ್ ಸಹ ಅದನ್ನೇ ಮಾಡಿದನು. ಅವರು ಹೊರಡುವ ತಯಾರಿ ನಡೆಸಿದರು. ॥40॥ ಅವರು ಇಬ್ಬರೂ ತಮ್ಮ ತಮ್ಮ ಚೀಲಗಳನ್ನು ತೆಗೆದುಕೊಂಡು ಹೊರಡಲು ಸಿದ್ಧರಾದರು. ಅವರು ಇಬ್ಬರೂ ಸಮಯಕ್ಕೆ ಸರಿಯಾಗಿ ಟಿಕೇಟುಗಳನ್ನು ತೆಗೆದುಕೊಂಡು ರೈಲನ್ನು ಹತ್ತಿದರು. ॥41॥ ಶಂಕರರಾವ್‌ನು ಒಳ್ಳೆಯ ಭಜನೆಗಳ ಗಾಯಕನಾಗಿದ್ದನು. ಇಬ್ಬರೂ ರೈಲಿನಲ್ಲಿ ಭಜನೆಗಳನ್ನು ಹಾಡಿದರು. ಲಖಮಿಚಂದನು ಕುತೂಹಲಕ್ಕಾಗಿ ಮಾರ್ಗದಲ್ಲಿ ರಸ್ತೆಯ ಬಗ್ಗೆ ವಿಚಾರಿಸುತ್ತಿದ್ದನು. ॥42॥ ಅವನು ಯಾರಾದರೂ ಶಿರಡಿಗೆ ಹೋಗುವವರನ್ನು ಭೇಟಿಯಾದಾಗ ಸಂತೋಷವನ್ನು ವ್ಯಕ್ತಪಡಿಸಿ ನಮಸ್ಕಾರ ಮಾಡಿ ಹೇಳುತ್ತಿದ್ದನು. "ಸಾಯಿಬಾಬಾರವರ ಮಹಿಮೆಯನ್ನು ನಿಮ್ಮ ಅನುಭವದ ಪ್ರಮಾಣದಲ್ಲಿ ತಿಳಿಸಿರಿ. ॥43॥ "ಸಾಯಿಬಾಬಾ ಒಬ್ಬ ಮಹಾನ್ ಸಂತರು ಮತ್ತು ನಗರದಲ್ಲಿ ಅವರ ಹೆಸರು ವಿಖ್ಯಾತವಾಗಿದೆ. ನಿಮ್ಮ ಕೆಲವು ವೈಯಕ್ತಿಕ ಅನುಭವಗಳನ್ನು ಸ್ಪಷ್ಟವಾಗಿ ಹೇಳಿರಿ" ಎಂದು ಕೇಳುತ್ತಿದ್ದನು. ॥44॥ ರೈಲಿನ ಬೋಗಿಯಲ್ಲಿ ನಾಲ್ಕು ಜನ ಮುಸ್ಲಿಮರು ಇದ್ದರು. ಅವರು ಶಿರಡಿಯ ಹತ್ತಿರ ವಾಸವಿದ್ದರು. ಲಖಮಿಚಂದನು ಅವರೊಡನೆ ಪರಸ್ಪರ ವಾರ್ತಾಲಾಪ ಮಾಡಿ ಹರಟೆ ಹೊಡೆದು ಸಮಾಧಾನ ಹೊಂದಿದನು. ॥45॥ "ಸಾಯಿಬಾಬಾರವರ ಬಗ್ಗೆ ನಿಮಗೆ ಏನು ಮಾಹಿತಿ ಇದೆ ಅದನ್ನು ಹೇಳಿ" ಲಖಮಿಚಂದನು ಅವರನ್ನು ಬಹು ಭಕ್ತಿ ಮತ್ತು ಪ್ರೀತಿಯಿಂದ

ಭಾವುಕತೆಯಿಂದ ಕೇಳಿದನು. ॥46॥ "ಸಾಯಿಬಾಬಾರವರು ಒಬ್ಬ ಮಹಾನ್ ಸಂತ. ಅವರು ಶಿರಡಿಯಲ್ಲಿ ಬಹಳ ವರ್ಷಗಳಿಂದ ವಾಸವಿದ್ದಾರೆ. ಅವರು ಒಬ್ಬ ಮಹಾನ್ 'ಅವಲಿಯಾ' ಮತ್ತು 'ಸಂತರು' ಎಂದು ಅವರು ಪ್ರತ್ಯುತ್ತರ ನೀಡಿದರು. ॥47॥ ಈ ರೀತಿ, ಆನಂದದ ವಾರ್ತಾಲಾಪದಲ್ಲಿ ಮಾರ್ಗವನ್ನು ಕ್ರಮಿಸಿದ್ದರು. ಇಬ್ಬರೂ ಕೋಪರಗಾಂವನ್ನು ತಲುಪಿದರು. ಅಲ್ಲಿ ಶೇಠ್‌ಗೆ ಏನೋ ನೆನಪಾಯಿತು. ॥48॥ 'ಸಾಯಿಬಾಬಾರವರಿಗೆ ಸೀಬೆಹಣ್ಣು ಅಂದರೆ ಬಹಳ ಇಷ್ಟ. ಅವುಗಳನ್ನು ಕೋಪರಗಾಂವನಲ್ಲಿ ಬೆಳೆಯುತ್ತಾರೆ. ಅವುಗಳನ್ನು ಗೋದಾವರಿ ನದಿಯ ತೀರದಲ್ಲಿ ಮಾರುತ್ತಾರೆ ಎಂದು ಹೇಳುತ್ತಾರೆ. ಆದ್ದರಿಂದ ನಾವು ಅದನ್ನು ಬಾಬಾರವರಿಗೆ ಸಮರ್ಪಿಸಬಹುದು.' ॥49॥ ಆದರೆ ಗೋದಾವರಿಯ ದಡಕ್ಕೆ ಬಂದಾಗ, ಕುದುರೆ ಟಾಂಗಾವು ಮತ್ತೊಂದು ದಡ ತಲಪುವ ಹೊತ್ತಿಗೆ ಅವನು ಪ್ರಕೃತಿಯ ಸೌಂದರ್ಯದಲ್ಲಿ ಮೈಮರೆತು ಸೀಬೆಹಣ್ಣಿನ ಬಗ್ಗೆ ಎಲ್ಲವನ್ನೂ ಮರೆತುಬಿಟ್ಟನು. ॥50॥ ಅಲ್ಲಿಂದ ಶಿರಡಿಯು ಕೇವಲ ನಾಲ್ಕು ಹಳ್ಳಿಗಳ ದೂರದಲ್ಲಿತ್ತು. ಟಾಂಗಾವು ಪೂರ್ಣ ವೇಗದಲ್ಲಿ ಹೋಗುತ್ತಿತ್ತು. ಆಗ ಲಖಮೀಚಂದನು ಸೀಬೆಹಣ್ಣುಗಳನ್ನು ಜ್ಞಾಪಿಸಿಕೊಂಡನು. ಆದರೆ ಅವು ಎಲ್ಲಿಯೂ ಕಣ್ಣಿಗೆ ಬೀಳಲಿಲ್ಲ. ॥51॥ ಆ ಕ್ಷಣದಲ್ಲಿ, ಒಬ್ಬ ಮುದುಕಿಯು ತಲೆಯ ಮೇಲೆ ಒಂದು ಬುಕ್ಕೆಯನ್ನಿಟ್ಟುಕೊಂಡು ಟಾಂಗಾ ಕಡೆಗೆ ಧಾವಿಸಿ ಬರುವುದು ಕಂಡಿತು. ಅವಳಿಗಾಗಿ ಗಾಡಿಯನ್ನು ನಿಲ್ಲಿಸಲಾಯಿತು. ಸೀಬೆಹಣ್ಣುಗಳು ಅವನನ್ನು ಭೇಟಿಮಾಡಲು ಬಂದಂತೆ ಕಂಡವು. ॥52॥ ಲಖಮೀಚಂದನು ಆನಂದಭರಿತನಾದನು. ಅವನು ಎಚ್ಚರಿಕೆಯಿಂದ ಸೀಬೆಹಣ್ಣುಗಳನ್ನು ಆಯ್ದುಕೊಂಡನು. ಬುಟ್ಟಿಯಲ್ಲಿ ಉಳಿದುಹೋದವುಗಳನ್ನು, ಆ ಮುದುಕಿಯು ಅವಳ ಪರವಾಗಿ ಬಾಬಾರವರಿಗೆ ಅರ್ಪಿಸುವಂತೆ ಕೇಳಿಕೊಂಡಳು. ॥53॥ ಸೀಬೆಹಣ್ಣುಗಳನ್ನು ಜ್ಞಾಪಿಸಿಕೊಂಡು ಅನಂತರದಲ್ಲಿ ಅವುಗಳನ್ನು ಮರೆತದ್ದು ಆ ಮುದುಕಿಯನ್ನು ಅನಿರೀಕ್ಷಿತವಾಗಿ ಭೇಟಿಯಾಗಿದ್ದು ಮತ್ತು ಸಾಯಿಯಲ್ಲಿರುವ ಅವಳ ಭಕ್ತಿಯನ್ನು ನೋಡಿದ್ದು – ಇವೆಲ್ಲವೂ ಇಬ್ಬರಿಗೂ ಅಚ್ಚರಿ ಮೂಡಿಸಿತು. ॥54॥ ಆರಂಭದಲ್ಲಿ ನಾನು ಒಬ್ಬ ಮುದುಕನನ್ನು ಕನಸಿನಲ್ಲಿ ಕಂಡೆನು. ಅನಂತರ ಕೀರ್ತನೆಯ ಸಮಯದಲ್ಲಿ ಅವನ ಎದುರಾದೆ. ಈ ಮುದುಕಿಯು ಅವನ ಬಂಧುವಾಗಿರಬೇಕು– ಈ ರೀತಿ ಲಖಮೀಚಂದನು ಮನಸ್ಸಿನಲ್ಲಿಯೇ ಊಹಿಸಿದನು. ॥55॥ ಟಾಂಗಾವು ಪ್ರಯಾಣವನ್ನು ಮುಂದುವರಿಸಿತು. ಮಾತನಾಡುತ್ತಾ ಶಿರಡಿಯನ್ನು ತಲಪಿದರು. ಅವರು ಮಸೀದಿಯ ಮೇಲೆ ಹಾರುತ್ತಿರುವ ಬಾವುಟವನ್ನು ದೂರದಿಂದಲೇ ನೋಡಿದರು. ಮತ್ತು ಅವರಿಬ್ಬರೂ ಭಕ್ತಿಯಿಂದ ವಂದಿಸಿದರು. ॥56॥ ಅವರು ಪೂಜೆಗೆ ಬೇಕಾದ ಸಾಮಗ್ರಿಗಳನ್ನೆಲ್ಲ ತೆಗೆದುಕೊಂಡು ಮಸೀದಿಗೆ ಕೂಡಲೇ ಹೊರಟರು. ಸಾಯಿ ದರ್ಶನ ಮಾಡಿ ಆನಂದಚಿತ್ತರಾದರು. ॥57॥ ಅಂಗಳದ ಪ್ರವೇಶದ್ವಾರದಿಂದ ಪ್ರವೇಶಿಸಿ ಬಾಬಾರವರ ಸ್ವರೂಪವನ್ನು ದೂರದಿಂದ ನೋಡುತ್ತಲೇ ಅವರು ಆಳವಾದ ಗದ್ಗದ ಸ್ಥಿತಿಯಲ್ಲಿದ್ದರು. ॥58॥ ಇಚ್ಛಿತ ಮೂರ್ತಿಯ ದರ್ಶನ ಮಾಡಿ ಲಖಮೀಚಂದನು ಪೂರ್ಣವಾಗಿ ತಲ್ಲೀನನಾದನು. ಅವನು ಹಸಿವೆಯನ್ನು,

ಬಾಯಾರಿಕೆಯನ್ನೂ ಮರೆತನು ಮತ್ತು ಸ್ವಾನಂದದ ಸ್ಥಿತಿಯಲ್ಲಿದ್ದನು. ॥59॥ ತನ್ನ ಕೈಗಳಲ್ಲಿ ನಿರ್ಮಲವಾದ ಜಲವನ್ನು ತೆಗೆದುಕೊಂಡು ಅವನು ಬಾಬಾರವರ ಚರಣಕಮಲಗಳನ್ನು ತೊಳೆದನು. ಮತ್ತು ಅರ್ಘ್ಯಪಾದ್ಯಗಳಿಂದ ವಿಧಿಪೂರ್ವಕವಾಗಿ ಪೂಜೆ ಸಲ್ಲಿಸಿದನು. ಅನಂತರ ಅವನು ಬಾಳೆಹಣ್ಣು ಮತ್ತು ಶ್ರೀಫಲ (ತೆಂಗಿನಕಾಯಿ) ಇವುಗಳನ್ನು ಅರ್ಪಿಸಿದನು. ॥60॥ ನಂತರ ಧೂಪ, ದೀಪ, ತಾಂಬೂಲ, ದಕ್ಷಿಣೆಗಳನ್ನು ಅರ್ಪಿಸಿದನು. ಮಾನಸ ಪ್ರದಕ್ಷಿಣೆಯನ್ನು ಮಾಡಿದನು. ಪುಷ್ಪಹಾರವನ್ನು ಸಮರ್ಪಿಸಿ ಅವರ ಚರಣಗಳ ಹತ್ತಿರ ಕುಳಿತುಕೊಂಡನು. ॥61॥ ಲಖಮಿಚಂದನು ಪ್ರೀತಿಯ ಭಕ್ತನಾಗಿದ್ದು ಗುರುಕೃಪೆಯ ಆನಂದದಲ್ಲಿ ಮುಳುಗಿದ್ದನು. ಸಾಯಿಯ ಚರಣಕಮಲಗಳನ್ನು ಪಡೆದು ಅವನ ಮನಸ್ಸು ದುಂಬಿಯ ರೀತಿಯಲ್ಲಿ ಅವುಗಳ ಸುತ್ತ ಸುತ್ತಲಾರಂಭಿಸಿತು. ॥62॥ ಅನಂತರ ಬಾಬಾರವರು ಮಾತನಾಡಲು (ಹಿಂದಿಯಲ್ಲಿ) ಪ್ರಾರಂಭಿಸಿದರು. ಲಖಮಿಚಂದನನ್ನು ಕುರಿತು ಅವರು "ಈ ಫಟಿಂಗನು ಮಾರ್ಗದಲ್ಲಿ ಭಜನೆ ಮಾಡುತ್ತಿದ್ದನು. ಮತ್ತು ಇತರರನ್ನು ಏಕೆ ಕೇಳಬೇಕು?" ಎಂದು ಹೇಳಿ ನಂತರ ಅವನಿಗೇ ನೇರವಾಗಿ ಈ ಮಾತುಗಳನ್ನಾಡಿದರು. ॥63॥ "ಎಲ್ಲವನ್ನೂ ನಿನ್ನ ಕಣ್ಣುಗಳಿಂದ ನೋಡಬೇಕು. ಮತ್ತೊಬ್ಬರನ್ನು ಏಕೆ ಕೇಳಬೇಕು? ಕನಸು ಸತ್ಯವೋ ಇಲ್ಲವೋ? ನಿನ್ನ ವಿಚಾರಕ್ಕೆ ನೀನೇ ತೀರ್ಮಾನಕ್ಕೆ ಬರಬೇಕು. ॥64॥ "ಮಾರವಾಡಿಯ ಹತ್ತಿರ ಹಣವನ್ನು ಸಾಲ ಮಾಡಿ ದರ್ಶನಕ್ಕೆ ಬರುವ ಆವಶ್ಯಕತೆ ಏನಿತ್ತು? ನಿನ್ನ ಹೃದಯದ ಆಸೆ ಈಗ ತೃಪ್ತಿಯಾಯಿತೇ?" ಈ ಮಾತುಗಳನ್ನು ಕೇಳಿದವರೆಲ್ಲರೂ ಆಶ್ಚರ್ಯಚಕಿತರಾದರು. ॥65॥ ಲಖಮಿಚಂದನು ಮನಸ್ಸಿನಲ್ಲಿಯೇ ಪರಮಾಶ್ಚರ್ಯಹೊಂದಿದನು. ತಾನು ಮಾಡಿದ ವಿಚಾರಣೆಯ ಬಗ್ಗೆ, ಮಾರ್ಗದಲ್ಲಿ ನಡೆದಿರುವುದರ ಬಗ್ಗೆ, ಬಾಬಾರವರಿಗೆ ಹೇಗೆ ಗೊತ್ತಾಯಿತು ಎಂದು ಅಚ್ಚರಿಯಾಯಿತು. ॥66॥ 'ನಾನು ಮನೆಯಲ್ಲಿ ಕನಸು ಕಂಡೆ. ರೈಲಿನಲ್ಲಿ ಭಜನೆ ಮಾಡಿದೆ. ಇವುಗಳ ಬಗ್ಗೆ ಬಾಬಾರವರಿಗೆ ತಿಳಿದದ್ದು ಹೇಗೆ? ಅಂತರ್ಜ್ಞಾನವನ್ನು ಅರಿಯುವುದು ಅದೆಷ್ಟು ಆಶ್ಚರ್ಯಕರವಾದದ್ದು. ॥67॥ ಅವರಿಗೆ ಇದೂ ತಿಳಿದಿದೆ. ದರ್ಶನದ ಉತ್ಕಂಠತೆಯಲ್ಲಿ ನಾನು ಹಣವನ್ನು ಸಾಲಮಾಡಿ ತಂದೆ. ಹಣದ ಕೊರತೆ ಇದ್ದುದರಿಂದ ಪೂರ್ತಿ ಖರ್ಚಿಗೆ ಹಣ ಬೇಕಾಗಿದ್ದುದರಿಂದ ತರಬೇಕಾಯಿತು." ॥68॥ ಲಖಮಿಚಂದನು ಪರಮಾಶ್ಚರ್ಯಹೊಂದಿದನು. ಮತ್ತು ಸುತ್ತಲೂ ನೆರೆದಿದ್ದ ಭಕ್ತರೆಲ್ಲರೂ ಸಹ ಅಚ್ಚರಿಹೊಂದಿದರು. ಎಲ್ಲರ ಮನೋದುಂಬಿಗಳೂ ಬಾಬಾರವರ ಚರಣ ಕಮಲಗಳನ್ನು ಸುತ್ತುವರಿದಿದ್ದವು. ಬಾಬಾರವರ ಜ್ಞಾನವು ಊಹೆಮೀರಿದ್ದು ತರ್ಕಾತೀತವಾದದ್ದು ಎಂದು ಎಲ್ಲರೂ ಆಶ್ಚರ್ಯಚಕಿತರಾದರು. ॥69॥ ಇಲ್ಲಿ ಪ್ರಮುಖವಾದ ಪಾಠವೆಂದರೆ ಬಾಬಾರವರು ಒಂದು ಹಬ್ಬವನ್ನು ಆಚರಿಸುವುದಕ್ಕಾಗಲೀ, ರಜೆಯಲ್ಲಿ ಹೋಗುವುದಕ್ಕಾಗಲೀ, ತೀರ್ಥಯಾತ್ರೆ ಮಾಡುವುದಕ್ಕಾಗಲೀ ಸಾಲ ಮಾಡುವುದನ್ನು ಇಷ್ಟಪಡುತ್ತಿರಲಿಲ್ಲ. ॥70॥ ಅದು ಹಾಗಿರಲಿ. ಎಲ್ಲ ಭಕ್ತರ ಜೊತೆಯಲ್ಲಿ ಲಖಮಿಚಂದನು ಸಾಠೆವಾಡೆಗೆ ಹೋದನು. ಮಧ್ಯಾಹ್ನದ ಸಮಯದಲ್ಲಿ ಅವನು ಮನಸ್ಸಿನಲ್ಲಿ ಆನಂದಭರಿತನಾಗಿ ಊಟಕ್ಕೆ

ಹಳಿತನು. ॥71॥ ಆ ಸಮಯದಲ್ಲಿ ಕೆಲವು ಭಕ್ತರು ಸಂಜ(ಶಿರಾ)ವನ್ನು ಬಾಬಾರವರ ಪ್ರಸಾದವಾಗಿ ತೆಗೆದುಕೊಂಡು ಬಂದರು. ಅದನ್ನು ಎಲ್ಲರಿಗೂ ಸ್ವಲ್ಪ ಹಂಚಿದರು. ಊಟದೆಲೆಯ ಮೇಲೆ ಬಡಿಸಿದರು. ಅವನು ಇದನ್ನು ಸೇವಿಸಿ ಅತ್ಯಂತ ತೃಪ್ತನಾದನು. ॥72॥ ಮಾರನೆಯ ದಿನ, ಊಟದ ಸಮಯದಲ್ಲಿ ಲಾಲಾಜಿಯು ಸಂಜವನ್ನು ನೆನಪಿಸಿಕೊಂಡನು. ಆದರೆ ಅದು ಪ್ರತಿನಿತ್ಯ ಸಿಗುತ್ತಿರಲಿಲ್ಲ. ಆದ್ದರಿಂದ ಅವನು ಅದನ್ನು ಮತ್ತೆ ಪಡೆಯಲು ಉತ್ಸುಕನಾದನು. ॥73॥ ಆದರೆ ಮಾರನೆಯ ದಿನ, ಅಲ್ಲೊಂದು ಅಚ್ಚರಿಯು ಕಾದಿತ್ತು. ಸಾಯಿ ಮಹಾರಾಜ್‌ರು ಅವನ ಅತೃಪ್ತ ವಾಸನೆಯನ್ನು ಪೂರೈಸಿದ್ದರು. ನೋಡಿ, ಯಾವ ರೀತಿ ಅವರು ಅದನ್ನು ಏರ್ಪಡಿಸಿದ್ದರು! ॥74॥ ಜೋಗನು ಮಸೀದಿಗೆ ಗಂಧ, ಅಕ್ಷತೆ, ಪುಷ್ಪ, ಘಂಟೆ, ನೀರಾಂಜನ, ಪಂಚಾರತಿ, ಮತ್ತಿತರ ಪೂಜಾ ಸಾಮಾಗ್ರಿಗಳ ಜೊತೆ ಬಂದು ಬಾಬಾರವರನ್ನು ಪ್ರಶ್ನಿಸಿದನು. ॥75॥ "ನಾನು ಈ ದಿನ ನೈವೇದ್ಯಕ್ಕಾಗಿ ಏನನ್ನು ತರಲಿ?" ಮಹಾರಾಜರು ಆಜ್ಞೆ ಮಾಡಿದರು, "ನನಗಾಗಿ ಒಂದು ತಟ್ಟೆ ತುಂಬ ಸಂಜವನ್ನು ತೆಗೆದುಕೊಂಡು ಬಾ. ನೀನು ಆರತಿಯನ್ನು ಮತ್ತು ಪೂಜೆಯನ್ನು ಅನಂತರ ಮಾಡಬಹುದು." ॥76॥ ಪೂಜಾ ಸಾಮಾಗ್ರಿಗಳನ್ನು ಅಲ್ಲಿಯೇ ಬಿಟ್ಟು, ಜೋಗನು ಕೂಡಲೇ ಹಿಂದೆ ಹೋದನು ಮತ್ತು ಕೂಡಲೇ ತನ್ನ ಜೊತೆಯಲ್ಲಿ ಶಿರಾವನ್ನು ತೆಗೆದಕೊಂಡು ಬಂದನು. ಅದು ಎಲ್ಲರಿಗೂ ಸಾಕಾಗುವಷ್ಟು ಇತ್ತು. ॥77॥ ಅನಂತರ ಮಧ್ಯಾಹ್ನದ ಆರತಿಯು ನಡೆಯಿತು. ಭಕ್ತರು ತೆಗೆದುಕೊಂಡು ಬಂದಿದ್ದ ನೈವೇದ್ಯದ ತಟ್ಟೆಗಳನ್ನು ಮೇಲಕ್ಕೆ ಕಳಿಸಿದ್ದರು. ಅನಂತರ ಬಾಬಾರವರು ತಮ್ಮ ಭಕ್ತರಿಗೆ ಹೇಳಿದರು. ॥78॥ "ಈ ದಿನ ಬಹಳ ಒಳ್ಳೆಯ ದಿನ. ನಾನು ಯೋಚಿಸಿದೆ. ಸಂಜವು ಈ ದಿನ ಪ್ರಸಾದವಾಗಲಿ ಎಂದು ಇಚ್ಛಿಸಿದೆ. ಆದ್ದರಿಂದ ಬೇಗನೆ ತನ್ನಿ. ಪ್ರತಿಯೊಬ್ಬರೂ ಮನಃಪೂರ್ತಿಯಾಗಿ ಯಥೇಚ್ಛವಾಗಿ ತಿನ್ನಬಹುದು. ॥79॥ ಅನಂತರ ಭಕ್ತರು ಹೋಗಿ ಎರಡು ದೊಡ್ಡ ಬೋಗುಣಿಗಳ ತುಂಬ ಸಂಜವನ್ನು ತಂದರು. ಲಖಮಿಚಂದನಿಗೆ ಬಹಳ ಹಸಿವಾಗಿತ್ತು, ಅವನಿಗೆ ಬೆನ್ನುನೋವು ಸಹ ಇತ್ತು. ॥80॥ ಲಖಮಿಚಂದನು ಹಸಿವೆಯಿಂದ ಮತ್ತು ಬೆನ್ನುನೋವಿನಿಂದ ಬಹಳವಾಗಿ ಕಂಗೆಟ್ಟಿದ್ದನು. ಆಗ ಬಾಬಾರವರ ಮುಖದಿಂದ ಯಾವ ವಚನಗಳು ಬಂದುವೋ ಅವುಗಳನ್ನು ಎಚ್ಚರದಿಂದ ಕೇಳಿರಿ. ॥81॥ "ನಿನಗೆ ಹಸಿವಾಗಿರುವುದು ಒಳ್ಳೆಯದಾಯಿತು. ಆದರೆ ಬೆನ್ನು ನೋವಿಗೆ ಔಷಧಿ ಬೇಕಾಗಿದೆ. ಈಗ ಸಂಜ ಸಾಕಷ್ಟು ಬಂದಿದೆ. ಆರತಿಗಾಗಿ ಎದ್ದೇಳಿ." (ಹಿಂದಿಯಲ್ಲಿ) ॥82॥ ಬಾಬಾರವರ ಮಾತುಗಳು ಲಖಮಿಚಂದನ ಮನದಲ್ಲಿ ಏನೇನು ಯೋಚನೆಗಳು ಬಂದಿತೋ ಅವುಗಳೆಲ್ಲದರ ಪ್ರತಿಧ್ವನಿಯಾಗಿದ್ದವು. ಆದರೆ ಶಬ್ದ ಮಾತ್ರ ಇರಲಿಲ್ಲ. ಮಹಾರಾಜರು ಅಂತರಂಗದ ರಹಸ್ಯಗಳನ್ನೆಲ್ಲ ಅರಿತವರು. ॥83॥ ಅದು ಹಾಗೆಯೇ ಇರಲಿ. ಆರತಿಯಾದ ಮೇಲೆ ಊಟದ ಸಮಯದಲ್ಲಿ ಸಂಜವನ್ನು ಬಡಿಸಲಾಯಿತು. ಲಖಮಿಚಂದನ ಆಸೆಯು ತೃಪ್ತಿಯಾಯಿತು. ಅವನು ಬಹಳ ಆನಂದಪಟ್ಟನು. ॥84॥ ಅದರ ನಂತರದಿಂದ ಅವನು ಬಾಬಾರವರ ಭಕ್ತನಾದನು. ಅವನು ನಿಯಮಿತವಾಗಿ ಅಗರಬತ್ತಿ,

ತೆಂಗಿನಕಾಯಿ ಮತ್ತು ಪುಷ್ಪಹಾರಗಳನ್ನು ಅರ್ಪಿಸುತ್ತಿದ್ದನು. ಲಖಮಿಚಂದನೂ ಸಹ ಉದ್ಧಾರವಾದನು ಮತ್ತು ಪೂಜೆಯು ನಿಯಮಿತವಾಗಿಯೂ ವಿಧಿವತ್ತಾಗಿಯೂ ಇತ್ತು. ॥85॥ ಅವನು ಸಾಯಿಯಲ್ಲಿ ಅದೆಷ್ಟು ಭಕ್ತಿ ಬೆಳೆಸಿಕೊಂಡಿದ್ದನೆಂದರೆ, ಯಾವಾಗಲಾದರೂ ಯಾರಾದರೂ ಶಿರಡಿಗೆ ಹೋಗುವವರನ್ನು ಕಂಡರೆ, ಅವರ ಜೊತೆಯಲ್ಲಿ ಪುಷ್ಪಹಾರ, ದಕ್ಷಿಣೆ, ಕರ್ಪೂರ ಮತ್ತು ಅಗರಬತ್ತಿಗಳನ್ನು ಕಳಿಸುತ್ತಿದ್ದನು. ॥86॥ ಯಾರಾದರೂ ಶಿರಡಿಗೆ ಹೋಗುತ್ತಾರೆ ಎಂದು ತಿಳಿದರೆ ಸಾಕು, ಅವರೊಡನೆ ಈ ಮೂರು ಸಾಮಗ್ರಿಗಳನ್ನು ದಕ್ಷಿಣೆ ಸಹಿತವಾಗಿ ಬಾಬಾರಿಗೆ ತಪ್ಪದೆ ಕಳುಹಿಸುತ್ತಿದ್ದನು. ॥87॥ ಈ ಪ್ರವಾಸದಲ್ಲಿ ಲಖಮಿಚಂದನು ಚಾವಡಿ ಮೆರವಣಿಗೆ ನೋಡಲು ಹೋದಾಗ ಬಾಬಾರವರು ಕೆಮ್ಮಲು ಪ್ರಾರಂಭಿಸಿರು ಮತ್ತು ಕಷ್ಟದಿಂದ ಉಸಿರಾಡುತ್ತಿದ್ದರು. ॥88॥ ಲಖಮಿಚಂದನು ಯೋಚಿಸಿದನು, "ಈ ಕೆಮ್ಮು ಅವರನ್ನು ಅದೆಷ್ಟು ತೊಂದರೆ ಕೊಡುತ್ತಿದೆ! ಅವರ ಮೇಲೆ ಯಾರದ್ದಾದರೂ ಕೆಟ್ಟ ದೃಷ್ಟಿ ಬಿದ್ದಿರಬೇಕು! ಆದ್ದರಿಂದಲೇ ಅವರು ಕೆಮ್ಮುತ್ತಿರುವುದು." ॥89॥ ಲಖಮಿಚಂದನ ಮನಸ್ಸಿನಲ್ಲಿ ಇದೊಂದು ಕೇವಲ ಯೋಚನೆ ಹುಟ್ಟಿತು. ಮಾರನೆಯ ದಿನ ಬೆಳಗ್ಗೆ ಅವನು ಮಸೀದಿಗೆ ಬಂದಾಗ ಅದೆಷ್ಟು ಅಚ್ಚರಿಯ ಸಂಗತಿ ನಡೆಯಿತೆಂದರೆ ಬಾಬಾರವರು ಅದೇ ವಿಷಯವನ್ನು ಯೋಚನೆಯನ್ನು ವಾಣಿಯಾಗಿ ಪರಿವರ್ತಿಸಿ ಹೇಳಿದರು. ॥90॥ ಮಾಧವರಾವ್‌ನು ಬಂದಾಗ ಬಾಬಾ ಅವನಿಗೆ ತಾವೇ ಸ್ವತಃ ಹೇಳಿದರು: "ನೆನ್ನೆ ನನಗೆ ಬಹಳ ಕೆಮ್ಮು ಇತ್ತು. ಅದು ಯಾರದಾದರೂ ಕೆಟ್ಟ ದೃಷ್ಟಿಯಿಂದ ಆಗಿದ್ದೇ? ॥91॥ "ನನಗೆ ಅನಿಸುತ್ತಿದೆ, ಯಾರೋ ನನ್ನ ಮೇಲೆ ಕೆಟ್ಟ ದೃಷ್ಟಿ ಬೀರಿದ್ದಾರೆ. ಆದುದರಿಂದ ಈ ಕೆಮ್ಮು ಆಗಾಗ್ಗೆ ನನ್ನನ್ನು ಪೀಡಿಸುತ್ತಿದೆ ಮತ್ತು ತೊಂದರೆ ಕೊಡುತ್ತಿದೆ." ॥92॥ ಲಖಮೀಚಂದನು ತನ್ನ ಯೋಚನೆಗಳ ಪುನರುಚ್ಚಾರವನ್ನು ನೋಡಿ ಮನದಲ್ಲೇ ಅಚ್ಚರಿಗೊಂಡನು. "ಬಾಬಾರವರಿಗೆ ಇದು ಹೇಗೆ ತಿಳಿಯಿತು? ಅವರು ಸರ್ವಾಂತರ್ಯಾಮಿಯೇ?" ॥93॥ ಅನಂತರ ತನ್ನ ಕೈಗಳನ್ನು ಜೋಡಿಸಿಕೊಂಡು ಹೇಳಿದನು, "ತಮ್ಮ ದರ್ಶನದಿಂದ ಬಹಳ ಆನಂದವಾಯಿತು. ಆದ್ದರಿಂದ ನನ್ನ ಮೇಲೆ ಸದಾ ಕೃಪೆಮಾಡಿರಿ ಮತ್ತು ರಕ್ಷಿಸಿರಿ ಮಹಾರಾಜ್. ॥94॥ "ಈಗ ನಿಮ್ಮ ಚರಣಗಳನ್ನು ಬಿಟ್ಟು ಬೇರೆ ಯಾವ ದೇವರೂ ಇಲ್ಲ. ನನ್ನ ಮನಸ್ಸು ಸದಾ ನಿಮ್ಮ ಭಜನೆಯಲ್ಲಿ ರಮಿಸುತ್ತಿರಲಿ ಮತ್ತು ಸರ್ವದಾ ನಿಮ್ಮ ಚರಣಗಳಲ್ಲಿ ನೆಲಸಿರಲಿ." ॥95॥ ಅವನು ಮತ್ತೆ ಹೇಳಿದನು, "ನಾನು ಈಗ ನನ್ನ ತಲೆಯನ್ನು ನಿಮ್ಮ ಚರಣಗಳಲ್ಲಿಟ್ಟು ಇಲ್ಲಿಂದ ಹೊರಡಲು ಅನುಮತಿ ಬೇಡುತ್ತಿದ್ದೇನೆ. ಸಾಯಿ ಸಮರ್ಥ, ಈಗ ಅಪ್ಪಣೆ ನೀಡಿ ಮತ್ತುಸದಾ ಅದೇ ಕರುಣೆಯಿಂದ ನನ್ನನ್ನು ನೋಡಿಕೊಳ್ಳಿರಿ. ॥96॥ "ನಿಮ್ಮ ನಿತ್ಯ ಕೃಪಾದೃಷ್ಟಿಯು ನನ್ನನ್ನು ಸಂಸಾರದ ಎಲ್ಲ ಕಷ್ಟಗಳಿಂದ ಪಾರುಮಾಡಲಿ. ನಿಮ್ಮ ನಾಮಸಂಕೀರ್ತನೆಯು ನಮಗೆ ಪುಷ್ಟಿ, ಸುಖ, ಸಂತುಷ್ಟಿಗಳನ್ನು ಸದಾ ದಯಪಾಲಿಸಲಿ." ॥97॥ ಲಖಮೀಚಂದನು ಉದಿ ಮತ್ತು ಆಶೀರ್ವಾದಗಳನ್ನು ಪಡೆದು ತನ್ನ ಸ್ನೇಹಿತರ ಜೊತೆ ಆನಂದದಿಂದ ಸಾಯಿ ಗುಣಗಳನ್ನು ಹಾಡುತ್ತ ಮಾರ್ಗವನ್ನು ಕ್ರಮಿಸಿದನು. ॥98॥ ಅದೇ ರೀತಿ, ಮತ್ತೊಂದು ಗುಬ್ಬಚ್ಚಿಯು

ಬಂಧಿಸಲ್ಪಟ್ಟು ಬಾಬಾರವರಿಂದ ಶಿರಡಿಗೆ ಕರೆತರಲ್ಪಟ್ಟಿತು. ಆಗ ಸರಿಯಾಗಿ ಪ್ರತ್ಯಕ್ಷ ದರ್ಶನದ ಸಮಯವಾಗಿತ್ತು. ಆ ಅದ್ಭುತ ಕಥೆಯನ್ನು ಕೇಳಿರಿ. ॥99॥ ಈ ಗುಬ್ಬಚ್ಚಿಯು ಒಂದು ಪ್ರೇಮಸ್ವರೂಪಿ ಮಹಿಳೆ. ಅವಳ ಕಥೆಯು ಅತ್ಯದ್ಭುತವಾಗಿದೆ. ಅವಳು ಬರ್ಹಾನ್‌ಪುರದಲ್ಲಿ ವಾಸಿಸುತ್ತಿದ್ದಳು. ಈ ಪ್ರಸಂಗವು ನಡೆದಾಗ ಅವಳು ಸಾಯಿ ಮಹಾರಾಜರನ್ನು ಕನಸಿನಲ್ಲಿ ಕಂಡಳು. ॥100॥ ಅವಳು ಎಂದೂ ಬಾಬಾರವರನ್ನು ಪ್ರತ್ಯಕ್ಷವಾಗಿ ನೋಡಿರಲಿಲ್ಲ. ಆದರೂ ಅವಳಿಗೆ ಒಂದು ಕನಸು ಬಿದ್ದಿತ್ತು. ಅದರಲ್ಲಿ ಬಾಬಾರವರು ಅವಳ ಮನೆಯ ದ್ವಾರದಲ್ಲಿ ನಿಂತು ಖಿಚಡಿ ಭೋಜನವನ್ನು ಬೇಡಿದರು. ॥101॥ ಅವಳು ಕೂಡಲೇ ಎಚ್ಚರಗೊಂಡಳು. ಆದರೆ ಆ ಜಾಗದಲ್ಲಿ ಯಾರೂ ಇರಲಿಲ್ಲ. ಅವಳು ತನ್ನ ಕನಸಿನ ವಿಚಾರವನ್ನು ಸಮಸ್ತ ಜನರಿಗೂ ಪ್ರಾಮಾಣಿಕವಾಗಿ ಹೇಳಿದಳು. ॥102॥ ಅವಳ ಪತಿಯು ಅದೇ ಊರಿನ ಅಂಚೆ ಇಲಾಖೆಯಲ್ಲಿ ಒಬ್ಬ ಅಧಿಕಾರಿಯಾಗಿದ್ದನು. ಅನಂತರ ಅವನಿಗೆ ಅಕೋಲಾ ಊರಿಗೆ ವರ್ಗವಾಯಿತು. ಆಗ ಅವರು ಶಿರಡಿಗೆ ಹೋಗಲು ಎಲ್ಲ ಸಿದ್ಧತೆ ಮಾಡಿಕೊಂಡರು. ॥103॥ ದಂಪತಿಗಳುಹಳ ಭಾವುಕರಾಗಿದ್ದರು. ಸಾಯಿದರ್ಶನಕ್ಕಾಗಿ ಉತ್ಕಂಠಿತರಾಗಿದ್ದರು. ಅವರು ಕನಸಿನ ಬಗ್ಗೆ ಕೌತುಕದಿಂದಿದ್ದರು ಮತ್ತು ಸಾಯಿಯ ಲೀಲೆಗಳು ಅಲೌಕಿಕವೆಂಬುದನ್ನು ಅನುಭವಿಸಿದ್ದರು. ॥104॥ ಆದ್ದರಿಂದ, ಒಂದು ಅನುಕೂಲವಾದ ದಿನದಲ್ಲಿ ಶಿರಡಿಗೆ ಹೊರಟರು. ಮಾರ್ಗದಲ್ಲಿ ಗೋಮತಿ ತೀರ್ಥಕ್ಕೆ ವಂದಿಸಿ, ನಂತರ ಶಿರಡಿಯನ್ನು ತಲುಪಿದರು. ॥105॥ ಅವರು ಪ್ರೀತಿಯಿಂದ ಬಾಬಾರವರ ದರ್ಶನ ಪಡೆದರು ಮತ್ತು ಭಕ್ತಿಯಿಂದ ಪೂಜಿಸಿದರು. ನಿತ್ಯವೂ ಬಾಬಾರವರ ಚರಣಗಳಲ್ಲಿ ಸೇವೆ ಸಲ್ಲಿಸುತ್ತ ಸುಖಸಂಪನ್ನರಾದರು. ॥106॥ ಈ ರೀತಿ ಆ ದಂಪತಿಗಳು ಶಿರಡಿಯಲ್ಲಿ ಎರಡು ತಿಂಗಳ ಕಾಲ ಉಳಿದರು. ಬಾಬಾರವರೂ ಸಹ ಖಿಚಡಿ ಭೋಜನದಿಂದ ಮತ್ತು ಅವರ ಭಾವ ಭಕ್ತಿಗಳನ್ನು ನೋಡಿ ತೃಪ್ತಿ ಹೊಂದಿದರು. ॥107॥ ದಂಪತಿಗಳು ಶಿರಡಿಗೆ ಖಿಚಡಿಯನ್ನು ನೈವೇದ್ಯವಾಗಿ ಸಮರ್ಪಿಸಲು ಬಂದರು. ಆದರೆ ಹದಿನಾಲ್ಕು ದಿನಗಳು ಕಳೆದರೂ ಖಿಚಡಿಯನ್ನು ನೈವೇದ್ಯವಾಗಿ ಸಮರ್ಪಿಸಲು ಅವಕಾಶವಾಗಲಿಲ್ಲ. ॥108॥ ನಿರ್ಧರಿಸಿದ ಸಂಕಲ್ಪವನ್ನು ನೆರವೇರಿಸಲು ವಿಳಂಬವಾಗಿತ್ತು, ಆ ಮಹಿಳೆ ಅದನ್ನು ಇಷ್ಟಪಡಲಿಲ್ಲ. ಹದಿನೈದನೆಯ ದಿನ ಮಧ್ಯಾಹ್ನ ಅವಳು ಖಿಚಡಿಯ ಸಮೇತ ಬಂದಳು. ॥109॥ ಆಗಲೇ ಪರದೆಯನ್ನು ಹಾಕಲಾಗಿತ್ತು. ಬಾಬಾರವರು ತಮ್ಮ ಭಕ್ತರ ಜೊತೆಯಲ್ಲಿ ಊಟಕ್ಕೆ ಕುಳಿತಿದ್ದರು. ಆ ಮಹಿಳೆಗೆ ಇದು ಅರ್ಥವಾಯಿತು. ॥110॥ ಭೋಜನವು ಮುಂದುವರೆದಿದ್ದಾಗ, ಯಾರೂ ಪರದೆಯನ್ನು ದಾಟಿ ಒಳಗೆ ಹೋಗುತ್ತಿರಲಿಲ್ಲ. ಆದರೆ ಮಹಿಳೆಯು ಕಾತರಳಾಗಿದ್ದು ಹೊರಗೆ ಅಂಗಳದಲ್ಲಿ ಶಾಂತಳಾಗಿ ಇರಲು ಸಾಧ್ಯವಾಗಲಿಲ್ಲ. ॥111॥ ಅವಳು ಕೇವಲ ಖಿಚಡಿಯ ನೈವೇದ್ಯ ಮಾಡುವ ಉಲ್ಲಾಸದಿಂದ ಅಕೋಲಾದಿಂದ ಶಿರಡಿಗೆ ಬಂದಿದ್ದಳು. ಅವಳ ಪ್ರಾರ್ಥನೆಯು ಸ್ವೀಕಾರವಾಗದೆ ಹೇಗೆ ಇರಲು ಸಾಧ್ಯ! ಇದು ಅವಳ ಕಾತರ! ॥112॥ ಯಾರು ಹೇಳಿದರೂ ಕೇಳದೆಯೇ ಅವಳು ತನ್ನ ಕೈಗಳಿಂದಲೇ ಪರದೆಯನ್ನು

ಮೇಲೆತ್ತಿ ಮತ್ತು ಯಾರ ಅನುಮತಿಯೂ ಇಲ್ಲದೆ ಒಳಗೆ ಪ್ರವೇಶಿಸಿ ತನ್ನ ಆಸೆಯನ್ನು ಪೂರೈಸಿಕೊಂಡಳು. ॥113॥ ಅನಂತರ ಬಾಬಾರವರು ಮತ್ತೊಂದು ಅಚ್ಚರಿಮಾಡಿದರು. ಅವರು ಖಿಚಡಿಗಾಗಿ ಬಹಳ ಆಸೆಪಟ್ಟಿದ್ದು ಮೊದಲಿಗೇನೇ ಖಿಚಡಿಯನ್ನು ಬಡಿಸಲು ಹೇಳಿ ಊಟದೆಲೆಯನ್ನು ಎರಡೂ ಕೈಗಳಿಂದ ಎತ್ತಿ ಹಿಡಿದರು. ॥114॥ ಅವರು ಖಿಚಡಿಯನ್ನು ನೋಡಿ ಬಹಳ ಉಲ್ಲಾಸಪಟ್ಟರು. ॥115॥ ಬಾಬಾರವರ ಆತುರತೆಯನ್ನು ನೋಡಿ ಎಲ್ಲರೂ ವಿಸ್ಮಯಹೊಂದಿದರು. ಅನಂತರ ಅವರು ಖಿಚಡಿಯ ಕಥೆಯನ್ನು ಕೇಳಿದಾಗ ಸಾಯಿಯ ಅಲೌಕಿಕ ವರ್ತನೆಯನ್ನು ಅರ್ಥಮಾಡಿಕೊಂಡರು. ॥116॥ ಈಗ ಮುಂದಿನ ಕಥೆಯನ್ನು ಕೇಳಿದ ನಂತರ ನೀವು ಭಾವೋದ್ವೇಗಕ್ಕೆ ಒಳಗಾಗುವಿರಿ. ಒಬ್ಬ ಗುಜರಾತಿ ಬ್ರಾಹ್ಮಣನು ಅನಿರೀಕ್ಷಿತವಾಗಿ ಶಿರಡಿಗೆ ಸೇವೆಗಾಗಿ ಬಂದನು. ॥117॥ ಅವನು ಆರಂಭದಲ್ಲಿ ರಾವ್‌ಬಹಾದುರ್‌ಸಾಠೆಯ ಬಳಿಯಲ್ಲಿ ನೌಕರಿಗಿದ್ದನು. ಅವನ ಪ್ರಾಮಾಣಿಕ ಸೇವೆಯಿಂದಾಗಿ ಅವನು ಬಾಬಾರವರ ಚರಣಗಳನ್ನು ಸೇವಿಸಬಲ್ಲವನಾಗಿದ್ದನು. ॥118॥ ಈ ಕಥೆಯೂ ಬಹು ಕೌತುಕಮಯವಾಗಿದೆ. ಯಾರೊಬ್ಬರು ಪ್ರೀತಿಯ ಭಕ್ತಿಗೆ ಮನಸ್ಸು ಕೊಟ್ಟಿರುತ್ತಾರೆಯೋ ಅವರ ಆಸೆಗಳನ್ನು ಭಗವಂತನು ಪೂರೈಸುತ್ತಾನೆ. ಅದನ್ನು ಕೇಳಿರಿ. ॥119॥ ಅವನ ಹೆಸರು ಮೇಘಾ. ಅವನು ಹಿಂದಿನ ಜನ್ಮದಲ್ಲಿ ಸಾಯಿಯ ಜೊತೆ ಏನೋ ಬಾಂಧವ್ಯವಿದ್ದುದರಿಂದ ಶಿರಡಿಯಲ್ಲಿ ಒಂದು ಸ್ಥಾನ ಪಡೆದಿದ್ದನು. ಆ ಕಥೆಯನ್ನು ಕೇಳಲು ಸಿದ್ಧರಾಗಿ. ॥120॥ ಖೇಡಾ ಜಿಲ್ಲೆಯಲ್ಲಿ ಸಾಠೆಯು ಒಬ್ಬ ಅಧಿಕಾರಿಯಾಗಿದ್ದನು. ಅಲ್ಲಿ ಅವನು ಅನಿರೀಕ್ಷಿತವಾಗಿ ಮೇಘಾನನ್ನು ಭೇಟಿಯಾದನು ಮತ್ತು ಅವನನ್ನು ಶಿವಾಲಯದಲ್ಲಿ ನಿತ್ಯ ಶಿವಪೂಜೆ ಮಾಡುವ ಉದ್ಯೋಗಕ್ಕೆ ನಿಯಮಿಸಿದನು. ॥121॥ ಅನಂತರ ಸಾಠೆಯು ಶಿರಡಿಗೆ ಬಂದನು ಮತ್ತು ಇದೇ ಅವನ ಭಾಗ್ಯೋದಯಕ್ಕೆ ಕಾರಣವಾಯಿತು. ಅಲ್ಲಿ ಅವನಿಗೆ ಸಾಯಿಮಹಾರಾಜರ ಸಂಪರ್ಕ ದೊರಕಿ ಅವರಿಗೆ ಆತ್ಮೀಯನಾದನು ಮತ್ತು ಅವರ ಚರಣಗಳಲ್ಲಿ ಗಾಢವಾದ ಭಕ್ತಿ ಇಟ್ಟನು. ॥122॥ ಯಾತ್ರಿಕರ ದೊಡ್ಡ ಗುಂಪುಗಳು ಬರುವುದನ್ನು ನೋಡಿ ಅವನು ತನ್ನದೇ ಸ್ವಂತದ್ದಾದ ವಾಡಾ(ಛತ್ರ)ವನ್ನು ನಿರ್ಮಿಸಲು ನಿರ್ಧರಿಸಿದನು. ಯಾತ್ರಿಗಳು ತಮ್ಮ ಕುಟುಂಬ ಹಾಗೂ ಪರಿವಾರ, ಸ್ನೇಹಿತರ ಜೊತೆ ಬಂದಾಗ ವಸತಿಯ ಅವಶ್ಯಕತೆಯಿತ್ತು. ॥123॥ ಅನಂತರ ಅವನು ಹಳ್ಳಿಯ ಮುಖಂಡರನ್ನು ಭೇಟಿ ಮಾಡಿ, ಬಾಬಾರವರು ಆರಂಭದಲ್ಲಿ ಪ್ರಕಟಗೊಂಡ ಜಾಗವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ಅಲ್ಲಿ ಒಂದು ವಾಡಾವನ್ನು ಕಟ್ಟಲು ನಿರ್ಧರಿಸಿದನು. ॥124॥ ಈ ಒಂದು ಪವಿತ್ರ ಜಾಗದ ಮಹಿಮೆಯನ್ನು ನಾಲ್ಕನೆಯ ಅಧ್ಯಾಯದಲ್ಲಿ ವಿವರವಾಗಿ ವರ್ಣಿಸಲಾಗಿದೆ. ಆದ್ದರಿಂದ ಪುನರುಕ್ತಿಯ ಅವಶ್ಯಕತೆ ಇರುವುದಿಲ್ಲ. ನಿರೂಪಣೆ ಮುಂದುವರೆಸೋಣ. ॥125॥ ಮೇಘಾನ ಪೂರ್ವಜನ್ಮದ ಪುಣ್ಯವು ಅಪಾರವಾದುದು. ಆದರಿಂದಲೇ ಅವನು ರಾವ್ ಬಹಾದುರ್ ಸಾಠೆಯ ಸಂಪರ್ಕ ಹೊಂದಿದನು. ಆಗ ಮಾತ್ರವೇ ಅವನು ಪರಮಾರ್ಥ ಸಾಧನೆಯಲ್ಲಿ ಮುಂದುವರೆಯತೊಡಗಿದನು. ಸಾಠೆಯ ಪ್ರಯತ್ನಕ್ಕೆ ವಂದನೆಗಳು.

॥126॥ ಪರಿಸ್ಥಿತಿಯಿಂದಾಗಿ ಮೇಘಾನು ನಿಗದಿಪಡಿಸಿದ ವಿಧಿವಿಧಾನಗಳನ್ನು ಆಚರಿಸಲು ಸಾಧ್ಯವಾಗಿರಲಿಲ್ಲ. ಅವನಿಗೆ ಗಾಯತ್ರಿಮಂತ್ರವನ್ನು ಕಲಿಸಿ ಸಾಠೆಯು ಅವನು ಸನ್ಮಾರ್ಗವನ್ನು ಹಿಡಿಯುವಂತೆ ಮಾಡಿದನು. ॥127॥ ಮೇಘಾನು ಸಾಠೆಯ ಸೇವೆಮಾಡಲು ಪ್ರಾರಂಭಿಸಿದನು. ಇದರಿಂದಾಗಿ ಪರಸ್ಪರ ಗೌರವ ಬೆಳೆಯಲು ಕಾರಣವಾಯಿತು. ಮೇಘಾನು ಸಾಠೆಯನ್ನು ಗುರುವೆಂದು ಭಾವಿಸಿ ಅವನಲ್ಲಿ ಪ್ರೇಮವನ್ನು ಬೆಳೆಸಿಕೊಂಡನು. ॥128॥ ಅದು ಹಾಗಿರಲಿ. ಒಮ್ಮೆ ಸಾಠೆಯು ಸಹಜವಾಗಿ ಮಾತಾನಾಡುತ್ತ ತನ್ನ ಸ್ವಂತ ಗುರುವಿನ ಮಹಾತ್ಮೆಯನ್ನು ವರ್ಣಿಸುತ್ತಿದ್ದಾಗ ಸಾಠೆಯ ಚಿತ್ತವು ಭಾವೋದ್ವೇಗದಿಂದ ಉಸಿರುಕಟ್ಟಿ ಆದರಪೂರ್ವಕವಾಗಿ ಮೇಘಾನನ್ನು ಕೇಳಿದನು. ॥129॥ "ನನಗೆ ಬಾಬಾರವರ ಗೋದಾವರಿಯ ಗಂಗೋದಕದಿಂದ ಸ್ನಾನ ಮಾಡಿಸಬೇಕೆಂಬ ಉತ್ಕಟವಾದ ಇಚ್ಛೆಯುಂಟಾಗಿದೆ. ಆದ್ದರಿಂದ ನಾನು ನಿನ್ನನ್ನು ಶಿರಡಿಗೆ ಕಳುಹಿಸುತ್ತಿದ್ದೇನೆಮುಖ್ಯವಾಗಿ ಈ ಉದ್ದೇಶಕ್ಕಾಗಿಯೇ. ॥130॥ "ಜೊತೆಗೆ ಶಿವನ ಮೇಲಿನ ನಿನ್ನ ಮನಃ ಪೂರ್ವಕ ಭಕ್ತಿಯನ್ನು ನೋಡಿ, ನೀನು ಸದ್ಗುರುವಿನ ಸಂಗದಲ್ಲಿದ್ದು ಅವರ ಚರಣಗಳಲ್ಲಿ ಭಕ್ತಿಯನ್ನು ಬೆಳಗಿಸಿಕೊಳ್ಳಬೇಕು ಎಂದು ಅನ್ನಿಸುತ್ತಿದೆ. ॥131॥ "ನಿನ್ನ ಜೀವಿತದ ಉದ್ದೇಶ ಸಾರ್ಥಕವಾಗುತ್ತದೆ ಮತ್ತು ನೀನು ಈ ಜನ್ಮದಲ್ಲಿ ಪರಮ ಕಲ್ಯಾಣವನ್ನು ಅನುಭವಿಸುವೆ. ಹೋಗು, ಹೋಗು ನಿನ್ನ ಸರ್ವಸ್ವವನ್ನೂ ಅರ್ಪಿಸಿ ಕಾಯಾ–ವಾಚಾ–ಮನಸಾ, ಗುರುವಿಗೆ ಶರಣಾಗು." ॥132॥ ಮೇಘಾನು ಅವರನ್ನು ಬಾಬಾರವರ ಜಾತಿಯ ಬಗ್ಗೆ ಪ್ರಶ್ನಿಸಿದನು. ವಾಸ್ತವದಲ್ಲಿ ಸಾಠೆಗೂ ಅದು ಗೊತ್ತಿರಲಿಲ್ಲ. ಅವನು ಹೇಳಿದನು, "ಕೆಲವರು ಅವರನ್ನು ಮುಸಲ್ಮಾನರೆಂದು ಕರೆಯುತ್ತಾರೆ. ಏಕೆಂದರೆ ಅವರು ಮಸೀದಿಯಲ್ಲಿ ಕುಳಿತುಕೊಳ್ಳುತ್ತಾರೆ." ॥133॥ 'ಮುಸ್ಲಿಮ್' ಎಂಬ ಪದ ಕಿವಿಯ ಮೇಲೆ ಬೀಳುತ್ತಲೇ ಮೇಘಾನ ಮನಸ್ಸು ತಲ್ಲಣಿಸಿತು. ಬೇರೆ ಯಾರೂ ಮುಸ್ಲಿಮನಿಗಿಂತ ಕೀಳಲ್ಲ. ಅವನು ಅದೆಂತಹ ಗುರುವಾಗಿದ್ದಾನು! ॥134॥ ತಾವೇನಾದರೂ ತಿರಸ್ಕರಿಸಿದರೆ ಸಾಠೆಯು ಕ್ಷೋಭೆಹೊಂದುತ್ತಾನೆ ಎಂದು ಅವನಿಗೆ ತಿಳಿದಿತ್ತು. ಆದರೆ ಒಪ್ಪಿಕೊಂಡಲ್ಲಿ ದುರ್ಗತಿಯನ್ನು ಪಡೆಯುತ್ತೇನೆಂಬುದನ್ನೂ ತಿಳಿದಿದ್ದನು. ಅವನು ಸಂದಿಗ್ಧ ಮನಸ್ಸಿನವನಾಗಿದ್ದು ಚಿಂತಿತನಾದನು. ॥135॥ ಅವನು ಒಂದು ಕಡೆ ದೆವ್ವ ಮತ್ತೊಂದು ಕಡೆ ಆಳವಾದ ಸಮುದ್ರ ಎಂಬ ಸ್ಥಿತಿಯಲ್ಲಿ ಇದ್ದನು. ಅವನು ಡೋಲಾಯಮಾನ ಮನಃಸ್ಥಿತಿಯಲ್ಲಿದ್ದನು. ಆದರೆ ಸಾಠೆಯು ಬಹಳ ಆಗ್ರಹ ಮಾಡಿದನು. ಅನಂತರವೇ ಅವನು ದರ್ಶನ ತೆಗೆದುಕೊಳ್ಳಲು ನಿಶ್ಚಯಿಸಿದನು. ॥136॥ ಅನಂತರ ಮೇಘಾ ಶಿರಡಿಗೆಬಂದನು ಮತ್ತು ಮಸೀದಿಯ ಅಂಗಳಕ್ಕೆ ಬಂದನು. ಅವನು ಮೆಟ್ಟಿಲುಗಳನ್ನು ಹತ್ತುತ್ತಿರುವಾಗಲೇ ಬಾಬಾರವರು ತಮ್ಮ ಲೀಲೆಗಳನ್ನು ಆರಂಭಿಸಿದರು. ॥137॥ ಅವರು ಕೋಪದಿಂದ ಉಗ್ರಸ್ವರೂಪ ಧರಿಸಿ, ಕೈಯಲ್ಲಿ ಒಂದು ಕಲ್ಲನ್ನು ಎತ್ತಿ ಹಿಡಿದು ಹೇಳಿದರು, "ಎಚ್ಚರ, ನಿನ್ನ ಪಾದಗಳನ್ನೇನಾದರೂ ಮೆಟ್ಟಿಲುಗಳ ಮೇಲಿಟ್ಟರೆ ನೋಡು! ಈ ಜಾಗದಲ್ಲಿ ಒಬ್ಬ ಮುಸ್ಲಿಮನು ವಾಸವಾಗಿದ್ದಾನೆ! ॥138॥ "ನೀನಾದರೋ ಒಬ್ಬ ಉಚ್ಚವರ್ಣದ ಬ್ರಾಹ್ಮಣ. ನಾನಾದರೋ ನೀಚರಲ್ಲಿ

ನೀಚನಾದ ಒಬ್ಬ ಯವನ! ನೀನು ಮೈಲಿಗೆಯಾಗುವೆ. ಹಿಂದೆ ಹೋಗು!" ॥139॥ ಆ ಕ್ರೋಧಿತ ಸ್ವರೂಪವು ಮತ್ತೊಂದು ಪ್ರಳಯ ಸ್ವರೂಪವಾಗಿತ್ತು, ಅಲ್ಲಿದ್ದ ದರ್ಶಕರು ಹೆದರಿಕೆಯಿಂದ ನಡುಗುತ್ತಿದ್ದರು ಮತ್ತು ಮೇಘಾನು ಕಂಪಿಸುತ್ತಿದ್ದನು. ॥140॥ ಆದರೆ ಕ್ರೋಧವು ಬಹಳ ತೋರಿಕೆಯದಾಗಿತ್ತು, ಅವರ ಅಂತರಂಗ ಮಾತ್ರ ದಯೆಯಿಂದ ಉಕ್ಕಿ ಬರುತ್ತಿತ್ತು. ಮೇಘಾನು ವಿಸ್ಮಯನಿರ್ಭರನಾದನು. "ಅವರು ನನ್ನ ಅಂತರಂಗದ ಯೋಚನೆಗಳನ್ನು ಹೇಗೆ ತಿಳಿದುಕೊಂಡರು? ॥141॥ "ಖೇಡಗಾಂವ ಮತ್ತು ಅಹಮದ್‌ನಗರಗಳ ನಡುವಿನ ದೂರವು ಸಾಕಷ್ಟಿತ್ತು. ಇವರು ನನ್ನ ಮನಸ್ಸು ಸಂಶಯಗಳಿಂದ ಕೂಡಿರುವುದನ್ನು ತಿಳಿದುಕೊಂಡಂತೆ ಕಾಣುತ್ತದೆ." ॥142॥ ಬಾಬಾರವರು ಅವನನ್ನು ಹೊಡೆಯಲು ಧಾವಿಸುತ್ತಿರುವಂತೆಯೇ, ಮೇಘಾನ ಧೈರ್ಯವೂ ಉಡುಗಿ ಹೋಯಿತು. ಅವನು ಒಂದೊಂದೇ ಹೆಜ್ಜೆಯನ್ನು ಹಿಂದಕ್ಕೆ ಇಡುತ್ತ ಹಿಂದೆ ಚಲಿಸಿದನು. ಅವನಿಗೆ ಮುಂದೆ ಹೋಗುವ ಧೈರ್ಯ ಇರಲಿಲ್ಲ. ॥143॥ ಅವನು ಇದೇ ರೀತಿ ಕೆಲವು ದಿನಗಳನ್ನು ಕಳೆದನು. ಅವನು ಬಾಬಾರವರ ವಿವಿಧ ಮನೋವೃತ್ತಿಗಳನ್ನು ನೋಡುತ್ತಿದ್ದನು. ತನ್ನ ಕೈಲಾದಷ್ಟು ಸೇವೆ ಸಲ್ಲಿಸುತ್ತಿದ್ದನು. ಆದರೆ ದೃಢ ವಿಶ್ವಾಸವನ್ನು ಬೆಳೆಸಲಾಗಲಿಲ್ಲ. ॥144॥ ಅನಂತರ ಅವನು ಮನೆಗೆ ಹಿಂತಿರುಗಿದನು. ಅಲ್ಲಿ ಅವನು ಅಸ್ವಸ್ಥನಾಗಿದ್ದು ಹಾಸಿಗೆ ಹಿಡಿದನು. ಅಲ್ಲಿ ಅವನು ಬಾಬಾರವರ ಬಗ್ಗೆ ಧ್ಯಾನ ಮಾಡಲು ಪ್ರಾರಂಭಿಸಿದನು. ಮತ್ತು ಕೆಲವು ದಿನಗಳಲ್ಲೆ ಶಿರಡಿಗೆ ವಾಪಸಾದನು. ॥145॥ ಈ ಸಲ ಬಂದಾಗ ಅಲ್ಲೇ ಇರಲು ಇಷ್ಟಪಟ್ಟನು. ಸಾಯಿಯ ಅನನ್ಯ ಭಕ್ತನಾದನು. ಅವನಿಗೆ ಸಾಯಿಯನ್ನು ಬಿಟ್ಟು ಬೇರೆ ದೇವರಿರಲಿಲ್ಲ. ॥146॥ ಮೇಘಾನು ಈಗಾಗಲೇ ಶಂಕರನ ಭಕ್ತನಾಗಿದ್ದನು. ಅವನು ಸಾಯಿಚರಣಗಳಲ್ಲಿ ಅನುರಕ್ತನಾದಾಗ ಸಾಯಿನಾಥರನ್ನು ಶಂಕರನೆಂದೇ ಭಾವಿಸಿದನು. ಅವರೇ ಅವನ 'ಉಮಾನಾಥ'ರಾಗಿದ್ದರು. ॥147॥ ಮೇಘಾನು ಹಗಲು-ರಾತ್ರಿ ಒಂದೇ ಸಮನೆ 'ಸಾಯಿಶಂಕರ'ನೆಂದೇ ಜಪಿಸುತ್ತಿದ್ದನು. ಅವನ ಅಂತರಾತ್ಮವು ಈ ಸ್ವರೂಪದಲ್ಲಿ ಲೀನವಾಗಿತ್ತು. ಅವನ ಚಿತ್ತವು ನಿಷ್ಕಲ್ಮಷವಾಗಿಯೂ ಪಾಪರಹಿತವಾಗಿಯೂ ಇತ್ತು. ॥148॥ ಅವನು ಸಾಯಿಯ ಅನನ್ಯ ಭಕ್ತನಾದನು. ಅವನು ಸಾಯಿಯನ್ನೇ ಪ್ರತ್ಯಕ್ಷ ಶಂಕರನೆಂದು ಭಾವಿಸಿದ್ದನು. ಅವನ ಜಪ ಶಂಕರ-ಶಂಕರ ಎನ್ನುವುದು ಪ್ರತಿಧ್ವನಿಸುತ್ತಿತ್ತು. ಅವನು ಬೇರೆ ಇನ್ನು ಯಾವುದೇ ದೈವವನ್ನು ನಂಬಲಿಲ್ಲ. ॥149॥ ಅವನಿಗೆ ಸಾಯಿಯ ಪೂಜೆಯು ದೇವರ ಪೂಜೆಯಾಗಿತ್ತು. ಸಾಯಿಯು ಅವನಿಗೆ 'ಗಿರಿಜಾ ರಮಣ'.° ಈ ದೃಷ್ಟಿಕೋನವು ಅವನ ಮನಸ್ಸಿನಲ್ಲಿ ಬೇರೂರಿ ನಿಂತು ಮೇಘಾನು ಸದಾ ಪ್ರಸನ್ನ ಚಿತ್ತನಾಗಿರುತ್ತಿದ್ದನು. ॥150॥ ಶಂಕರನಿಗೆ ಬಿಲ್ವಪತ್ರೆಗಳೆಂದರೆ ಇಷ್ಟ. ಆದರೆ ಶಿರಡಿಯಲ್ಲಿ ಬಿಲ್ವ ಮರಗಳು ಇರಲಿಲ್ಲ. ಆದುದರಿಂದ, ಮೇಘಾನು ಒಂದರಿಂದ ಒಂದುವರೆ ಕೋಸ ದೂರ ಹೋಗಬೇಕಾಯಿತು. ಹಾಗೆ ಈ ಪತ್ರೆಗಳನ್ನು ಅರ್ಪಿಸುವ ಆಸೆಯನ್ನೂ ಪೂರೈಸಿದನು. ॥151॥ ಅವನಿಗೆ ಒಂದು ಅಥವಾ ಎರಡು ಕೋಸ ದೂರ ಏನೇನೂ ಅಲ್ಲ. ಅವನು ಬಿಲ್ವಪತ್ರೆಗಾಗಿ ಬೆಟ್ಟವನ್ನು ದಾಟಲು ಸಿದ್ಧನಾಗಿದ್ದನು. ಏಕೆಂದರೆ ಅವನು ಪೂಜೆ ಮಾಡುವುದಕ್ಕಾಗಿ ಈ

ಆಶೆಯನ್ನು ಪೂರೈಸಿದ್ದನು ಅವನು ಈ ರೀತಿ ಆಗಬೇಕೆಂದು ಆಸೆಪಟ್ಟಿದ್ದನು. ॥152॥ ಅವನು ಬಹಳ ದೂರದಿಂದ ಬಿಲ್ವವನ್ನು ತೆಗೆದುಕೊಂಡು ಬರುತ್ತಿದ್ದನು. ಎಲ್ಲ ಪೂಜಾ ಸಾಮಾಗ್ರಿಗಳನ್ನು ಒಟ್ಟು ಮಾಡುತ್ತಿದ್ದನು. ಅನಂತರ ಹಳ್ಳಿಯ ಎಲ್ಲ ದೇವತೆಗಳನ್ನು ಒಂದೊಂದಾಗಿ ಪೂಜಿಸುತ್ತಿದ್ದನು. ಅವನು ಎಲ್ಲದಕ್ಕೂ ಯಥಾವಿಧಿ ಮಾಡುತ್ತಿದ್ದನು. ॥153॥ ಅದರನಂತರ, ಅವನು ಕೂಡಲೇ ಮಸೀದಿಗೆ ಬರುತ್ತಿದ್ದನು. ಪ್ರೀತಿಯಿಂದ ಬಾಬಾರವರ ಆಸನಕ್ಕೆ ನಮಸ್ಕರಿಸಿ, ಪಾದ ಸ್ಪರ್ಶ ಮಾಡಿ ನಂತರ ಪಾದ ತೊಳೆದು ಪಾದ ತೀರ್ಥವನ್ನು ಸ್ವೀಕರಿಸುತ್ತಿದ್ದನು. ॥154॥ ಮೇಘಾನ ಮುಂದಿನ ಕಥೆಗಳು ಕೇಳಲು ಆನಂದವನ್ನುಂಟುಮಾಡುತ್ತವೆ. ಅವು ಸಾಯಿಯ ಸರ್ವವ್ಯಾಪಕತ್ವವನ್ನು ತೋರಿಸುತ್ತವೆ ಮತ್ತು ಗ್ರಾಮದೇವತೆಗಳ ಬಗೆಗಿನ ಗೌರವವನ್ನು ತೋರಿಸುತ್ತವೆ. ॥155॥ ಮೇಘಾನು ಶಿರಡಿಯಲ್ಲಿರುವವರೆಗೆ ಅವನು ಮಧ್ಯಾಹ್ನದ ಆರತಿಯನ್ನು ನಿತ್ಯವೂ ಬೆಳಗುತ್ತಿದ್ದನು. ಆದರೆ ಅದರ ಮುಂಚೆ ಹಳ್ಳಿಯ ಎಲ್ಲಾ ಗ್ರಾಮದೇವತೆಗಳನ್ನು ಪೂಜಿಸಿ ನಂತರ ಮಸೀದಿಗೆ ತೆರಳುತ್ತಿದ್ದನು. ॥156॥ ಇದು ಅವನ ನಿತ್ಯಕ್ರಮವಾಗಿತ್ತು, ಆದರೆ ಒಂದು ದಿನ ಈ ಅನುಕ್ರಮವು ಮುರಿದು ಹೋಯಿತು. ಅಂದು ಅವನು ಎಷ್ಟೇ ಪರಿಶ್ರಮ ಪಟ್ಟರೂ ಖಂಡೋಬಾನ ಪೂಜೆಯನ್ನು ಮಾಡಲಾಗಲಿಲ್ಲ. ॥157॥ ಅವನು ಪೂಜೆ ಮಾಡಲು ಪ್ರಯತ್ನಿಸಿದನು. ಆದರೆ ಎಷ್ಟು ಪ್ರಯತ್ನಪಟ್ಟರೂ ಮಂದಿರದ ಬಾಗಿಲು ತೆಗೆಯಲು ಆಗಲಿಲ್ಲ. ಆದುದರಿಂದ ಅವನು ಅದನ್ನು ಬಿಟ್ಟು ಮಸೀದಿಗೆ ಆರತಿ ಮಾಡಲು ಬಂದನು. ॥158॥ ಆ ಕ್ಷಣದಲ್ಲಿ ಬಾಬಾರವರು ಅವನಿಗೆ ಹೇಳಿದರು "ಈ ದಿನ ನಿನ್ನ ಪೂಜೆಯಲ್ಲಿ ಖಂಡವಾಗಿದೆ. ನೀನು ಎಲ್ಲ ದೇವತೆಗಳನ್ನು ಪೂಜೆಮಾಡಿರುವೆ. ಆದರೆ ಒಂದು ಮಾತ್ರ ಪೂಜೆಯಾಗದೆ ಉಳಿದುಕೊಂಡಿದೆ. ॥159॥ "ಹೋಗು ಮತ್ತು ಅದನ್ನು ಮಾಡು ಅನಂತರ ಇಲ್ಲಿಗೆ ಬಾ". ಮೇಘಾ ಉತ್ತರಿಸಿದನು. "ಬಾಗಿಲು ಬೀಗಹಾಕಿತ್ತು, ನಾನು ಎಷ್ಟೇ ಪ್ರಯತ್ನಿಸಿದರೂ ತೆಗೆಯಲು ಆಗಲಿಲ್ಲ. ಆದುದರಿಂದ ಆ ಪೂಜೆಯನ್ನು ಬಿಡಲೇಬೇಕಾಯಿತು". ॥160॥ ಬಾಬಾ ಹೇಳಿದರು, "ಹೋಗು ನೋಡು, ಬಾಗಿಲು ತೆರೆದಿದೆ." ಮೇಘಾ ಕೂಡಲೇ ಹೊರಟನು. ಒಂದು ಕ್ಷಣವನ್ನೂ ವ್ಯರ್ಥಮಾಡದೆ ಹೋದಾಗ ಆ ಮಾತುಗಳು ಸರಿಯಾಗಿದ್ದುದು ಕಂಡುಬಂದಿತು. ॥161॥ ಅವನು ಖಂಡೇರಾಯನನ್ನು ಪೂಜಿಸಿದನು. ಮೇಘಾನ ಕಸಿವಿಸಿಯೂ ದೂರವಾಯಿತು. ಅನಂತರ ಬಾಬಾರವರು ಮೇಘಾನಿಗೆ ತಮ್ಮ ಪೂಜೆ ಮಾಡಲು ಅನುವು ಮಾಡಿಕೊಟ್ಟರು. ॥162॥ ಅನಂತರ, ಅವನು ಅತ್ಯಂತ ಆದರ ಪೂರ್ವಕವಾಗಿ ಗಂಧ, ಹೂವು ಮತ್ತಿತರೆ ಅಷ್ಟೋಪಚಾರಗಳಿಂದ ಪೂಜೆ ಮಾಡಿದನು. ಅವನು ಯಥಾಶಕ್ತಿ ದಕ್ಷಿಣೆ, ಪುಷ್ಪಹಾರ, ಹಣ್ಣು ಇವುಗಳನ್ನು ಸಮರ್ಪಿಸಿದನು. ॥163॥ ಒಂದು ಮಕರಸಂಕ್ರಾತಿಯ ದಿವಸ, ಅವನು ಬಾಬಾರವರಿಗೆ ಚಂದನದ ಅಭ್ಯಂಗ ಮಾಡಿಸಿ ಅನಂತರ ಗೋದಾವರಿ ನೀರಿನಿಂದ ಸ್ನಾನಮಾಡಿಸಬೇಕೆಂದು ಮನದಲ್ಲಿಯೇ ಅಂದುಕೊಂಡನು. ॥164॥ ಅವನು ಬಾಬಾರವರನ್ನು ಅಪ್ಪಣೆಗಾಗಿ ಒತ್ತಾಯಪಡಿಸಿದನು. ಆಗ ಬಾಬಾ ಹೇಳಿದರು,"ಹೋಗು, ನಿನ್ನ ಇಚ್ಛೆಯಂತೆ ಮಾಡು". ಆದರಿಂದ

ಕೂಡಲೇ ಮೇಘಾನು ಒಂದು ಖಾಲಿ ತಾಮ್ರದ ಪಾತ್ರೆ ತೆಗೆದುಕೊಂಡು ನೀರಿಗಾಗಿ ಹೊರಗೆ ಹೋದನು. ॥165॥ ಬೆಳಗಿನಜಾವದಲ್ಲಿ ಸೂರ್ಯೋದಯಕ್ಕೆ ಮೊದಲೇ, ಮೇಘಾನು ಖಾಲಿ ತಾಮ್ರದ ಬಿಂದಿಗೆ ತೆಗೆದುಕೊಂಡು ಛತ್ರಿ ಹಾಗೂ ಚಪ್ಪಲಿಗಳಿಲ್ಲದೇನೆ ಗೋದಾವರಿಯಿಂದ ನೀರು ತರಲು ಹೊರಟನು. ॥166॥ ಪೂರ್ತಿ ಮಾರ್ಗವು, ಹೋಗಲು ಮತ್ತು ಬರಲು ಸುಮಾರು ಎಂಟು ಕೋಸಗಳಷ್ಟಿತ್ತು. ಈ ಮಾರ್ಗವನ್ನು ಕ್ರಮಿಸಲು ಆಗುವ ಕಷ್ಟ ಮತ್ತು ಅದರ ಆಯಾಸ ಅದೆಷ್ಟು ಎಂಬುದರ ಬಗೆಗಿನ ಆಲೋಚನೆಯು ಸುಳಿಯಲೂ ಇಲ್ಲ. ॥167॥ ಮೇಘಾನಿಗೆ ಇದರ ಬಗ್ಗೆ ಯಾವ ಚಿಂತೆಯೂ ಇರಲಿಲ್ಲ. ಅವನು ಬಾಬಾರವರ ಅನುಜ್ಞೆ ಪಡೆಯಲು ಹೊರಟಿದ್ದನು. ಯಾವಾಗ ದೃಢ ನಿಶ್ಚಯವಿರುವುದೋ ಆಗ ಯಾವುದೇ ಕಾರ್ಯ ಮಾಡಲು ತುಂಬಾ ಉಲ್ಲಾಸಕರವಾಗಿರುತ್ತದೆ. ॥168॥ ಅವನು ಗಂಗೋದಕದಿಂದ ಸಾಯಿಗೆ ಸ್ನಾನ ಮಾಡಿಸಲುಆಲೋಚನೆ ಮಾಡಿದಾಗ ಅವನಿಗೆ ಅದರ ಕಠಿಣ ಶ್ರಮ ಹಾಗೂ ಆಯಾಸದ ಕಲ್ಪನೆಯೇ ಇರಲಿಲ್ಲ. ಅವನ ದೃಢವಾದ ಶ್ರದ್ಧೆಯೇ ಒಂದು ಪ್ರಮಾಣವಾಗಿತ್ತು. ॥169॥ ಅದು ಹಾಗಿರಲಿ. ಅವನು ನೀರನ್ನು ತೆಗೆದುಕೊಂಡು ಬಂದು ದೊಡ್ಡದಾದ ತಾಮ್ರದ ಹಂಡೆಯಲ್ಲಿ ಸುರಿದನು. ಅವನು ಬಾಬಾರವರನ್ನು ಸ್ನಾನಕ್ಕಾಗಿ ಏಳಬೇಕೆಂದು ಆಗ್ರಹ ಮಾಡಲಾರಂಭಿಸಿದನು. ಆದರೆ ಅವರು ಒಪ್ಪಲಿಲ್ಲ. ॥170॥ ಮಧ್ಯಾಹ್ನದ ಆರತಿಯು ಮುಗಿಯಿತು. ಜನರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. "ಸ್ನಾನದ ಸಕಲ ಸಿದ್ಧತೆಗಳನ್ನೂ ಮಾಡಲಾಗಿದೆ ಮತ್ತು ಈಗಾಗಲೇ ಮಧ್ಯಾಹ್ನವಾಗಿದೆ"ಎಂದು ಮೇಘಾ ಹೇಳಿದನು. ॥171॥ ಮೇಘಾನ ಅತ್ಯಾಗ್ರಹವನ್ನು ನೋಡಿ ಲೀಲಾವಿಗ್ರಹಿಯಾದ ಸಾಯಿಯು ಸುಮ್ಮನೆ ಆಡುವ ಜಗಳದಂತೆ ಮೇಘಾನ ಕೈಗಳನ್ನು ತಮ್ಮ ಕೈಗಳಲ್ಲಿ ಹಿಡಿದು ಹೇಳಿದರು. ॥172॥ "ನನಗೆ ಗೋದಾವರೀ ನೀರಿನ ಸ್ನಾನ ಬೇಡವಪ್ಪಾ? ಅದೆಂಥಹ ಮುಗ್ಧ ನೀನು! ನನ್ನಂತಹ ಫಕೀರನಿಗೆ ಏಕೆ ಗಂಗಾಸ್ನಾನ? ಅದು ನನಗೇಕೆ ಬೇಕು?" ॥173॥ ಆದರೆ ಮೇಘಾನು ಏನನ್ನೂ ಕೇಳಲು ಸಿದ್ಧನಿರಲಿಲ್ಲ. ಏಕೆಂದರೆ ಅವನು ಬಾಬಾರವರನ್ನು ತನ್ನ ಶಂಕರನೆಂದೇ ಭಾವಿಸಿದ್ದನು ಅವನಿಗೆ ತಿಳಿದಿದ್ದು ಇಷ್ಟೇ. ಶಂಕರನು ಗಂಗಾಜಲದಿಂದ ಪ್ರೀತನಾಗುತ್ತಾನೆ ಎಂಬುದು. ॥174॥ ಅವನು ಹೇಳಿದನು, "ಬಾಬಾ, ಈದಿನ ಮಕರ ಸಂಕ್ರಾಂತಿಯ ದಿನ. ಶಂಕರನಿಗೆ ಗಂಗಾಜಲದಿಂದ ಸ್ನಾನ ಮಾಡಿಸಿದರೆ ಅವನು ಸುಪ್ರಸನ್ನನಾಗುತ್ತಾನೆ." ॥175॥ ಅನಂತರ, ಅವನ ಪ್ರೀತಿ ಮತ್ತು ಹಠಮಾರಿತ್ವದ ನಿರ್ಣಯವನ್ನು ಪರಿಗಣಿಸಿ, ಬಾಬಾ ಹೇಳಿದರು, "ನಿನ್ನ ಕೆಲಸವನ್ನು ಮುಗಿಸು." ಮೇಘಾನು ಶುದ್ಧವಾದ ಅಂತರಂಗವುಳ್ಳವನಾಗಿದ್ದರಿಂದ ಒಪ್ಪಿದರು. ॥176॥ ಈ ರೀತಿ ಹೇಳಿ ಅವರು ಎದ್ದು, ಸ್ನಾನಕ್ಕಾಗಿ ಇಟ್ಟಿದ್ದಕುಳ್ಳಗಿರುವ ಸ್ಟೂಲಿನ ಮೇಲೆ ಕುಳಿತುಕೊಂಡರು. ಅವರು ತಮ್ಮ ತಲೆಯನ್ನು ಮುಂದಕ್ಕೆ ಬಗ್ಗಿಸಿ ಹೇಳಿದರು, "ಒಂದು ಸ್ವಲ್ಪ ನೀರನ್ನು ಹಾಕು.॥177॥ "ಎಲ್ಲಾ ಅಂಗಗಳಿಗಿಂತಲೂ ಶಿರವು ಅತಿ ಪ್ರಧಾನವಾದುದು. ಅದರ ಮೇಲೆ ಸ್ವಲ್ಪ ನೀರನ್ನು ಸಿಂಪಡಿಸು. ಅದು ಪೂರ್ಣ ಸ್ನಾನ ಮಾಡಿದಂತೆಯೇ. ಅಷ್ಟಕ್ಕಾದರೂ ಒಪ್ಪಿಕೋ."

॥178॥ ಅದನ್ನು ಮಾಡಲು ಒಪ್ಪಿಕೊಂಡು ಮೇಘಾನು ಕಲಶವನ್ನು ಎತ್ತಿಕೊಂಡನು. ಅವನು ಪ್ರೇಮದಿಂದ ಭಾವೋನ್ಮತ್ತನಾಗಿ ಆ ನೀರನ್ನು ತಲೆಯ ಮೇಲೆ ಸುರಿಯುವಾಗ ಅವನು "ಹರಗಂಗೇ" ಎಂದು ಜೋರಾಗಿ ಕೂಗುತ್ತ ಪೂರ್ತಿಯಾಗಿ ಖಾಲಿ ಮಾಡಿದನು ಮತ್ತುಪೂರ್ಣ ದೇಹದ ಮೇಲೆ ಸುರಿದನು. ॥179॥ ಮೇಘಾನು ಅತ್ಯಂತ ಆನಂದದಲ್ಲಿದ್ದನು. "ನನ್ನ ಶಂಕರನು ಸಚೇಲ(ವಸ್ತ್ರಸಹಿತ) ಸ್ನಾನ ಮಾಡಿದನು" ಎಂದು ಹೇಳುತ್ತ ಖಾಲಿಯಾದ ಬಿಂದಿಗೆಯನ್ನು ಕೆಳಗಿಟ್ಟನು. ಆದರೆ ಅವನು ನೋಡಿದಾಗ ಬಹಳವಾಗಿ ಅಚ್ಚರಿಗೊಂಡನು. ॥180॥ ಅವನು ನೀರನ್ನು ಪೂರ್ತಿಯಾಗಿ ದೇಹದ ಮೇಲೆ ಸುರಿದಿದ್ದರೂ ಸಹ ಕೇವಲ ತಲೆ ಮಾತ್ರ ಒದ್ದೆಯಾಗಿತ್ತು. ಇತರ ಅಂಗಾಂಗಳೆಲ್ಲವೂ ಸ್ವಲ್ಪವೂ ತೇವವಾಗಿಲ್ಲದೆ ಒಣಗಿಯೇ ಇತ್ತು. ಅವರ ಬಟ್ಟೆಗಳ ಮೇಲೆ ಒಂದು ತೊಟ್ಟು ನೀರೂ ಇರಲಿಲ್ಲ. ॥181॥ ಮೇಘಾನ ಮಿಥ್ಯಾಭಿಮಾನವು ನುಚ್ಚುನೂರಾಯಿತು. ಹತ್ತಿರ ಇದ್ದವರೆಲ್ಲರೂ ಅತ್ಯಂತವಿಸ್ಮಿತರಾದರು. ಈ ರೀತಿ ಶ್ರೀ ಸಾಯಿಯು ತಮ್ಮ ಭಕ್ತರ ಅತಿ ಪ್ರೀತಿಯ ಅಭಿರುಚಿಗಳನ್ನು ಸಂಪೂರ್ಣಗೊಳಿಸುತ್ತಿದ್ದರು. ॥182॥ "ನಿನ್ನ ಮನದಲ್ಲಿ ನನಗೆ ಸ್ನಾನಮಾಡಿಸಬೇಕೆನ್ನಿಸಿತು. ಹೋಗು ನಿನ್ನ ಇಚ್ಛೆಯನ್ನು ಪೂರೈಸಿಕೋ. ಹಾಗೆಯೇ ನಿನಗೆ ಸುಲಭವಾಗಿ ನನ್ನ ಅಂತರಂಗದ ಶಕ್ತಿಗಳ ಅರಿವುಂಟಾಗುತ್ತದೆ. "ಬಾಬಾ ಇದನ್ನು ಲೀಲೆಯಿಂದ ತಿಳಿಸಿದರೆಂದು ತೋರುತ್ತದೆ. ॥183॥ ಇದು ಸಾಯಿಭಕ್ತಿಯ ತತ್ತ್ವ. ಕೇವಲ ಸುದೈವವಶಾತ್ ಅವರ ಸಮಾಗಮ ಉಂಟಾಗುತ್ತದೆ. ಅನಂತರ ಸಾಧಿಸಲಾಗದೇ ಇರುವುದು ಯಾವುದೂ ಇಲ್ಲ. ಕ್ರಮಕ್ರಮೇಣ ಎಲ್ಲವೂ ಅತಿ ಸುಲಭವಾಗುತ್ತದೆ. ॥184॥ ಸಹಜವಾಗಿಯೇ ಎದ್ದಾಗ, ಕುಳಿತಾಗ, ಮಾತನಾಡುವಾಗ, ಬೆಳಗ್ಗೆ ಮತ್ತು ಮಧ್ಯಾಹ್ನದ ವೇಳೆ ನಡೆಯಲು ಹೋದಾಗ, ಎಲ್ಲ ಸಮಯದಲ್ಲೂ ಭಕ್ತನಿಗೆ ಶ್ರದ್ಧೆ ಮತ್ತು ತಾಳ್ಮೆ ಇದ್ದಲ್ಲಿ ಅವನು ತಾನು ಇಚ್ಛಿಸಿದ್ದನ್ನು ಪಡೆಯುತ್ತಾನೆ. ॥185॥ ಯಾವುದಾದರೊಂದು ಶಕ್ತಿಯೋ ಅಥವಾ ಪವಾಡ ಸದೃಶ ಚಿಹ್ನೆಯೋ ನಿತ್ಯ ವ್ಯವಹಾರದಲ್ಲಿ ಗೋಚರವಾಗುತ್ತಿತ್ತು. ಕ್ರಮೇಣ ಬಾಬಾ ಅಂತರಾಳದ ಆಸಕ್ತಿಯನ್ನು ಹುಟ್ಟಿಸಿ ಪಾರಮಾರ್ಥಿಕ ವಿಚಾರಗಳನ್ನು ಅರ್ಥಮಾಡಿಕೊಳ್ಳುವಂತೆ ಮಾಡುತ್ತಿದ್ದರು. ॥186॥ ಮೇಘಾನ ಮತ್ತೊಂದು ಕಥೆಯೂ ಇದ್ದು ಶ್ರೋತೃಗಳನ್ನು ಅತ್ಯಂತ ಸಂತೋಷ ಪಡಿಸುತ್ತದೆ. ಸಾಯಿಯ ಭಕ್ತ ವಾತ್ಸಲ್ಯ ಇನ್ನೂ ಹೆಚ್ಚು ಸಂತೋಷವುಂಟುಮಾಡುತ್ತದೆ. ॥187॥ ನಾನಾ(ಚಂದೋರ್ಕರ್) ಹೊಸದಾಗಿ ಕೊಟ್ಟಿದ್ದ ಬಾಬಾರವರ ಒಂದು ದೊಡ್ಡ ಭಾವಚಿತ್ರವನ್ನು ಮೇಘಾನು ವಾಡಾದಲ್ಲಿಟ್ಟು ನಿತ್ಯವೂ ಭಕ್ತಿಯಿಂದ ಪೂಜಿಸುತ್ತಿದ್ದನು. ॥188॥ ಮಸೀದಿಯಲ್ಲಿರುವ ಜೀವಂತ ಮೂರ್ತಿಯನ್ನು, ವಾಡಾದಲ್ಲಿಟ್ಟಿದ್ದ ತದ್ರೂಪವೆಂಬಂತಹ ಭಾವಚಿತ್ರವನ್ನು, ಎರಡೂ ಕಡೆ ಹಗಲು ರಾತ್ರಿ ಪೂಜಿಸುತ್ತಿದ್ದನು ಆರತಿ ಬೆಳಗುತ್ತಿದ್ದನು. ॥189॥ ಈ ರೀತಿ ದೇವರ ಸೇವೆ ನಡೆಯುತ್ತ ಹನ್ನೆರಡು ತಿಂಗಳು ಕಳೆದ ಮೇಲೆ, ಒಂದು ದಿನ ಬೆಳಗಿನ ಜಾವದಲ್ಲಿ ಮೇಘಾನು ಎಚ್ಚರವಾಗಿರಲು ಒಂದು ದೃಶ್ಯವನ್ನು ಕಂಡನು. ॥190॥ ಮೇಘಾನು ಹಾಸಿಗೆಯ ಮೇಲೆ ಮಲಗಿದ್ದನು ಮತ್ತು ತನ್ನ ಕಣ್ಣುಗಳನ್ನು ಮುಚ್ಚಿಕೊಂಡಿದ್ದರೂ

ಸಹ ಅಂತರಂಗದಲ್ಲಿ ಪೂರ್ಣವಾಗಿ ಎಚ್ಚರಗೊಂಡಿದ್ದು ಬಾಬಾರವರ ಆಕೃತಿಯನ್ನು ಸ್ಪಷ್ಟವಾಗಿ ಕಂಡನು. ॥191॥ ಬಾಬಾರವರಿಗೂ ಅವನು ಎಚ್ಚರಗೊಂಡಿದ್ದನೆಂದು ತಿಳಿದಿತ್ತು. ಅನಂತರ ಅವರು ಹಾಸಿಗೆಯ ಮೇಲೆ ಅಕ್ಷತೆಯನ್ನು ಹರಡಿ ಹೇಳಿದರು, "ಮೇಘಾ, ಒಂದು ತ್ರಿಶೂಲವನ್ನು ಬರೆ". ಎಂದು ಹೇಳಿ ಕೂಡಲೇ ಮಾಯವಾದರು. ॥192॥ ಬಾಬಾರವರ ಈ ಮಾತುಗಳನ್ನು ಕೇಳಿ, ಮೇಘಾನು ಅತಿ ಉಲ್ಲಾಸದಿಂದ ಕಣ್ಣುಗಳನ್ನು ತೆರೆದನು. ಬಾಬಾರವರು ಅಂತರ್ಧಾನರಾದದ್ದನ್ನು ನೋಡಿ ವಿಸ್ಮಯಗೊಂಡನು. ॥193॥ ಅನಂತರ ಮೇಘಾನು ಸುತ್ತಮುತ್ತ ನೋಡಿದನು. ಅಲ್ಲಿ ಅಕ್ಷತೆಯು ಹಾಸಿಗೆಯ ಮೇಲೆ ಎಲ್ಲಾ ಕಡೆ ಚೆಲ್ಲಾಡಿತ್ತು. ವಾಡಾದ ಬಾಗಿಲುಗಳು ಮುನ್ನಿನಂತೆಯೇ ಮುಚ್ಚಿದ್ದವು. ಅದರಿಂದ ಅವನಿಗೆ ಗಲಿಬಿಲಿಯುಂಟಾಯಿತು. ॥194॥ ಅವನು ಕೂಡಲೇ ಮಸೀದಿಗೆ ಹೋದನು. ಬಾಬಾರವರ ದರ್ಶನ ತೆಗೆದುಕೊಳ್ಳುವಾಗ ಮೇಘಾನು ಅವರಿಗೆ ತ್ರಿಶೂಲದ ಕಥೆಯನ್ನು ತಿಳಿಸಿದನು ಮತ್ತು ಅದನ್ನು ಬರೆಯಲು ಅಪ್ಪಣೆ ಕೇಳಿದನು. ॥195॥ ಮೇಘಾನು ಆ ದೃಷ್ಟಾಂತವನ್ನು ವಿವರವಾಗಿ ತಿಳಿಸಿದನು. ಬಾಬಾ ಹೇಳಿದರು, "ಅದು ಕೇವಲ ದೃಷ್ಟಾಂತವೇಕೆ? ನಿನಗೆ ನನ್ನ ಮಾತುಗಳು ಕೇಳಿಸಲಿಲ್ಲವೇ? ನಾನು ನಿನಗೆ ಒಂದು ತ್ರಿಶೂಲವನ್ನು ಬರೆಯಲು ಹೇಳಿದೆ. ॥196॥ "ನೀನೇನು ನನ್ನ ಮಾತುಗಳನ್ನು ಕೇವಲ ದೃಷ್ಟಾಂತವೆಂದು ಕರೆಯಲು ಪ್ರಯತ್ನಿಸುತ್ತಿರುವೆಯಾ? ನನ್ನ ಮಾತುಗಳು ಯಾವಾಗಲೂ ಭಾರಿಯಾಗಿರುತ್ತವೆ. ಮತ್ತು ಒಂದು ಅಕ್ಷರವೂ ಖಾಲಿ ಇರುವುದಿಲ್ಲ." ॥197॥ ಮೇಘಾ ಉತ್ತರಿಸಿದನು, "ನಾನೂ ಸಹ ಮೊದಲು ನೀವು ನನ್ನನ್ನು ಎಚ್ಚರಿಸಿದಿರಿ ಎಂದೇ ತಿಳಿದಿದ್ದೆನು. ಆದರೆ ಒಂದೇ ಒಂದು ಬಾಗಿಲು ಸಹ ತೆರೆದಿಲ್ಲ. ಆದ್ದರಿಂದಲೇ ನನ್ನ ಅನುಭವ ಬೇರೆಯೇ ಆಗಿತ್ತು." ॥198॥ ಬಾಬಾರವರ ಈ ಉತ್ತರವನ್ನು ಕೇಳಿ, "ನಾನು ಪ್ರವೇಶಿಸಲು ಯಾವ ದ್ವಾರವೂ ಬೇಕಿಲ್ಲ. ನನಗೆ ಯಾವುದೇ ಆಕಾರವಾಗಲಿ, ವಿಸ್ತಾರವಾಗಲಿ ಇಲ್ಲ. ನಾನು ಸದಾ ಸರ್ವತ್ರ ಇರುತ್ತೇನೆ". ॥199॥ "ಯಾರು ತನ್ನ ಭಾರವನ್ನು ನನ್ನ ಮೇಲೆ ಹೊರಿಸುತ್ತಾನೋ ಮತ್ತು ನನ್ನಲ್ಲಿ ಒಂದಾಗಿರುವನೋ, ನಾನು ಅವನ ಎಲ್ಲ ವ್ಯಾಪಾರಗಳನ್ನು ಸೂತ್ರಧಾರನಂತೆ ನಡೆಸುತ್ತೇನೆ." ॥200॥ ಅದು ಹಾಗಿರಲಿ. ಮುಂದಿನ ಅತ್ಯದ್ಭುತ ನಿರೂಪಣೆಯು, ತ್ರಿಶೂಲದ ಉದ್ದೇಶವನ್ನು ತಿಳಿಸುವಂತಹುದನ್ನು ಅತ್ಯಂತ ಸಾವಧಾನದಿಂದ ಶ್ರೋತೃಗಳು ಆಲಿಸಬೇಕು. ಅದರ ಸಂಬಂಧವು ಸ್ಪಷ್ಟವಾಗುತ್ತದೆ. ॥201॥ ಒಂದು ಕಡೆ, ಮೇಘಾನು ಹಿಂತಿರುಗಿದನು ಮತ್ತು ಗೋಡೆಯ ಮೇಲೆ ತ್ರಿಶೂಲವನ್ನು ಬರೆಯಲು ಪ್ರಾರಂಭಿಸಿದನು. ವಾಡಾದಲ್ಲಿದ್ದ ಬಾಬಾ ಅವರ ಚಿತ್ರದ ಹತ್ತಿರ ಬರೆದನು. ಅವನು ಕೆಂಪು ಬಣ್ಣದಲ್ಲಿ ತ್ರಿಶೂಲದ ಹೊರ ನಕ್ಷೆಯನ್ನು ಬರೆದನು. ॥202॥ ಮಾರನೆಯ ದಿನ, ಪುಣೆಯ ರಾಮದಾಸಿ ಎಂಬ ಭಕ್ತನೊಬ್ಬನು ಮಸೀದಿಗೆ ಬಂದನು. ಅವನು ಬಾಬಾರವರಿಗೆ ಪ್ರೀತಿಯಿಂದ ನಮಸ್ಕಾರ ಮಾಡಿ ಅವರಿಗೆ ಒಂದು ಶಿವಲಿಂಗವನ್ನು ಅರ್ಪಿಸಿದನು. ॥203॥ ಆಗಲೇ ಮೇಘಾನೂ ಅಲ್ಲಿಗೆ ಬಂದನು. ಮತ್ತು ಬಾಬಾರವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು.

ಬಾಬಾ ಹೇಳಿದರು, "ಶಂಕರನು ಇಲ್ಲಿಗೆ ಬಂದಿದ್ದಾನೆ! ಈಗ ಅವನನ್ನು ನೀನು ನೋಡಿಕೋ!" ॥204॥ ತ್ರಿಶೂಲದ ದೃಷ್ಟಾಂತವಾದ ಮೇಲೆ ಈ ರೀತಿ ಲಿಂಗವನ್ನು ಸ್ವೀಕರಿಸಿದ ಮೇಘಾನು ತಟಸ್ಥನಾಗಿ ಲಿಂಗವನ್ನು ದೃಷ್ಟಿಸಿ ನೋಡ ತೊಡಗಿದನು. ಮತ್ತು ಪ್ರೇಮದಿಂದ ಗದ್ಗದಿತನಾದನು. ॥205॥ ಕಾಕಾ ಸಾಹೇಬ ದೀಕ್ಷಿತನೂ ಸಹ ಲಿಂಗದ ಮತ್ತೊಂದು ಅಪೂರ್ವವಾದ ಅನುಭವವನ್ನು ಪಡೆದನು. ಶ್ರೋತೃಗಳು ಆದರಪೂರ್ವಕವಾಗಿ ಎಲ್ಲವನ್ನೂ ಕೇಳಿರಿ. ಸಾಯಿ ಚರಣಗಳಲ್ಲಿ ತಮ್ಮ ಭಕ್ತಿಯು ಇನ್ನೂ ದೃಢವಾಗುತ್ತದೆ. ॥206॥ ಮೇಘಾನು ಲಿಂಗದ ಸಹಿತ ಮಸೀದಿಗೆ ಹೊರಟಾಗಲೇ ದೀಕ್ಷಿತನು ವಾಡೆಯಲ್ಲಿ ಸ್ನಾನಾನಂತರ ಭಗವಂತನ ನಾಮಸ್ಮರಣೆಯಲ್ಲಿ ಸಂಪೂರ್ಣವಾಗಿ ಮಗ್ನನಾಗಿದ್ದನು. ॥207॥ ತನ್ನ ದೇಹವನ್ನು ಶುದ್ಧವಾದ ಒಗೆದ ವಸ್ತ್ರದಿಂದ ಒರೆಸಿಕೊಳ್ಳುತ್ತ, ತಲೆಗೆ ಒಂದು ಟವಲನ್ನು ಸುತ್ತಿಕೊಂಡು ಅವನು ಒಂದು ಕಲ್ಲಿನ ಮೇಲೆ ಸಾಯಿಸ್ಮರಣೆ ಮಾಡುತ್ತ ನಿಂತುಕೊಂಡಿದ್ದನು. ॥208॥ ಅವನು ನಿತ್ಯ ನಿಯಮಾಭ್ಯಾಸದಂತೆ ತನ್ನ ತಲೆಯನ್ನು ವಸ್ತ್ರದಿಂದ ಆಚ್ಛಾದಿಸಿ, ಭಗವಂತನ ನಾಮಸ್ಮರಣೆ ಮಾಡುತ್ತಿದ್ದನು. ಅವನಿಗೆ ಆಗ ಲಿಂಗದರ್ಶನವಾಯಿತು. ॥209॥ ದೀಕ್ಷಿತನು ಯೋಚಿಸಿದನು, "ನನಗೆ ಈ ದಿನ ಲಿಂಗದ ದರ್ಶನ ಏಕೆ ಆಯಿತು? ಭಗವನ್ನಾಮ ಸ್ಮರಣೆ ಮಾಡುವಾಗ ಆಗಿದೆ!" ಎಂದು ಆಶ್ಚರ್ಯಪಟ್ಟನು. ಮೇಘಾ ಸುಪ್ರಸನ್ನನಾಗಿ ಸಮ್ಮುಖದಲ್ಲಿಯೇ ಇದ್ದನು. ॥210॥ ಮೇಘಾ ಹೇಳಿದನು, "ನೋಡು ಕಾಕಾ! ಬಾಬಾರವರು ಕೊಟ್ಟಿರುವ ಲಿಂಗದ ಕಡೆ ನೋಡು!" ಕಾಕಾನು ವಿಸ್ಮಯಗೊಂಡು ಈ ವಿಶೇಷವಾದ ಲಿಂಗವನ್ನು ನೋಡಿ ಸಂತಸ ಹೊಂದಿದನು. ॥211॥ ಕೆಲವೇ ಕ್ಷಣಗಳ ಹಿಂದೆ ತನ್ನ ಧ್ಯಾನದಲ್ಲಿ ದರ್ಶನವಾದ ಲಿಂಗದ ಅದೇ ರೂಪರೇಖೆ, ಆಕಾರ ಲಕ್ಷಣಗಳು ಇರುವಂತಹ ಲಿಂಗವಾಗಿತ್ತು, ದೀಕ್ಷಿತನು ಮನದಲ್ಲೇ ಸುಖಿಸಿದನು. ॥212॥ ಅದು ಹಾಗಿರಲಿ. ಅನಂತರ ತ್ರಿಶೂಲವನ್ನು ಬರೆದುದು ಪೂರ್ಣವಾದ ನಂತರ ಸಾಯಿಯು ಮೇಘಾನಿಂದ ಆ ಚಿತ್ರದ ಹತ್ತಿರ ಲಿಂಗವನ್ನು ಸ್ಥಾಪಿಸಿದರು. ॥213॥ ಮೇಘಾನು ಶಂಕರನನ್ನು ಪೂಜಿಸಲು ಇಷ್ಟಪಟ್ಟಿದ್ದರಿಂದ ಅವನಿಗೆ ಶಿವಲಿಂಗವನ್ನು ಪ್ರಧಾನ ಮಾಡಿದರು. ಸಾಯಿಯು ಅವನ ಭಕ್ತಿಯನ್ನು ದೃಢಗೊಳಿಸಿದರು. ಸಾಯಿಯ ವಿಧಾನಗಳು ಅಷ್ಟು ಅದ್ಭುತ ನಿರೂಪಣೆಗಳಾಗಿದ್ದವು[8]. ॥214॥ ಈ ತರಹದ ಕಥೆಗಳು ಕೇವಲ ಒಂದೇ ಒಂದು ಇದೆಯೇ! ಅಸಂಖ್ಯಾತ ಕಥೆಗಳನ್ನು ನಾನು ನಿರೂಪಿಸಬಹುದು. ಆದರೆ ಈ ಪುಸ್ತಕವು ಅತ್ಯಂತ ವಿಸ್ತಾರವಾಗುತ್ತದೆ. ಆದ್ದರಿಂದ ನಾನು ಶ್ರೋತೃಗಳ ಕ್ಷಮೆ ಬೇಡುತ್ತೇನೆ. ॥215॥ ಆದರೂ ನೀವು ಶ್ರೋತೃಗಳು ಬಹಳ ಉತ್ಸುಕರಾಗಿರುವಿರಿ. ಮುಂದಿನ ಅಧ್ಯಾಯದಲ್ಲಿ ನಾನು ಮತ್ತೊಂದು ಕಥೆಯನ್ನು ಹೇಳುತ್ತೇನೆ. ನೀವು ಸಾಯಿಯ ಅದ್ಭುತವನ್ನು ನೋಡುವಿರಿ. ಮತ್ತೆ ಅದು ಇನ್ನೂ ಹೆಚ್ಚಾಗಿ ಏಕೈಕವಾಗಿದೆ. ॥216॥ ಹೇಮಾಡಪಂತನು ಸಾಯಿಗೆ ಶರಣಾಗುತ್ತಾನೆ. ಮತ್ತು ಜನರು ಸಾಯಿ ಚರಿತ್ರೆಯನ್ನು ಆಲಿಸುವಂತೆ ಮಾಡುತ್ತಾನೆ. ಅದರಿಂದ ಭವಸಾಗರದ ಆಪತ್ತುಗಳು ನಾಶವಾಗುತ್ತವೆ. ಮತ್ತು ಎಲ್ಲರ ಸಂಕಟಗಳೂ ದೂರವಾಗುತ್ತವೆ.॥217॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ದರ್ಶನಗಳ ನಿರೂಪಣೆ" ಎಂಬ ಇಪ್ಪತ್ತೆಂಟನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

|ಸನ್ಮಂಗಳವಾಗಲಿ|

ಟಿಪ್ಪಣಿ:

1. ಈ ಕಥೆಯು ಭೀಮಾಜಿ ಪಾಟೀಲನದು 13ನೆಯ ಅಧ್ಯಾಯದಲ್ಲಿ ಬರುತ್ತದೆ. ಇದು ಒಂದು ತಪ್ಪಾಗಿದೆ.
2. ಮುಂಬಯಿಯ ಉಪನಗರ.
3. ಇದೇ ತರಹದ ಕಥೆಯೊಂದಿದೆ. ಒಬ್ಬ ಪಂಜಾಬಿ ಬ್ರಾಹ್ಮಣ ರಾಮಲಾಲ್ ಎನ್ನುವನು ಶಿರಡಿಯಲ್ಲಿ ವಾಸವಾಗಿದ್ದನು. ಅವನು ಮುಂಬಯಿನಲ್ಲಿದ್ದಾಗ ಮಹಾರಾಜರು ಕನಸಿನಲ್ಲಿ ಬಂದು ಹೇಳಿದರು, "ನನ್ನ ಹತ್ತಿರ ಬಾ". ಅವನಿಗೆ ಮಹಾರಾಜ್‌ರ ದರ್ಶನ ಯಾವಾಗಲೂ ಆಗಿರಲಿಲ್ಲ. ಅವನು ಚಿತ್ರಪಟವನ್ನೂ ನೋಡಿರಲಿಲ್ಲ. ಆದುದರಿಂದ ಕನಸಿನಲ್ಲಿ ಮಹಾರಾಜ್‌ರನ್ನು ಗುರುತಿಸಲಾಗಲಿಲ್ಲ. ಮಾರನೆಯ ದಿವಸ ರಸ್ತೆಯಲ್ಲಿ ಹೋಗುತ್ತಿರುವಾಗ ಒಂದು ಅಂಗಡಿಯಲ್ಲಿ ಮಹಾರಾಜ್‌ರ ಚಿತ್ರಪಟವನ್ನು ನೋಡಿದನು. ಅವನು ಅಂಗಡಿಯವನನ್ನು ಕೇಳಿದನು, "ಇದು ಯಾರ ಚಿತ್ರಪಟ? ಈ ಮಹಾರಾಜ್‌ರು ಎಲ್ಲಿ ವಾಸಮಾಡುತ್ತಾರೆ?" ಆ ಅಂಗಡಿಯವನು ಅವನಿಗೆ ಎಲ್ಲ ವಿವರಗಳನ್ನೂ ನೀಡಿದನು. ಅದರ ನಂತರ ರಾಮಲಾಲನು ಶಿರಡಿಗೆ ಹೋಗಿ ಅಲ್ಲಿ ಮಹಾರಾಜ್‌ರು ಮಹಾಸಮಾಧಿಹೊಂದುವವರೆಗೆ ಅಲ್ಲಿಯೇ ಇದ್ದನು.
4. ಗೋದಾವರಿಯನ್ನು ಗೋಮತಿ ಎಂದೂ ಕರೆಯುತ್ತಾರೆ.
5. ಮರಾಠಿಯಲ್ಲಿ, ಈ ನುಡಿಯ ಅರ್ಥ 'ಬಾವಿಗೂ ಹಳ್ಳಕ್ಕೂ ಮಧ್ಯೆ'
6. ಗಿರಿಜೆಯ ಪತಿ, ಶಿವ
7. ಶಿವನ ಚಿಹ್ನೆ.
8. ಅದೇ ರೀತಿ ಹರಿಸೀತಾರಾಮ ದೀಕ್ಷಿತನು ಒಂದು ಪ್ರಸಂಗವನ್ನು ಬರೆದಿಟ್ಟಿದ್ದಾನೆ. ಅದು ಗಣೇಶನ ಪ್ರತಿಷ್ಠಾಪನೆಗೆ ಸಂಬಂಧಿಸಿದ್ದು, ಅದೂ ಒಬ್ಬ

ಮಹಿಳೆಯ ಕನಸಿನಲ್ಲಿ ಬಂದಂತೆ ಇತ್ತು. "ಒಮ್ಮೆ ನಾನು ಶಿರಡಿಗೆ ಹೋಗುತ್ತಿರುವಾಗ ಮೋರೇಶ್ವರ ಪ್ರಧಾನನು ನನ್ನನ್ನು ಭೇಟಿಮಾಡಲು ಬೋರಿಬಂದರ್ (ಸ್ಟೇಷನ್)ಗೆ ಬಂದನು. ಸಾಂತಾಕ್ರೂಜ್‌ನಲ್ಲಿ ತನ್ನ ಮನೆಯಲ್ಲಿ ಗಣಪತಿಯ ಪ್ರತಿಷ್ಠಾಪನೆ ಮಾಡಬಹುದಾ ಎಂದು ಮಹಾರಾಜ್‌ರನ್ನು ಕೇಳಿ ಹೇಳಲು ತಿಳಿಸಿದನು.

ನಾನು ಶಿರಡಿಗೆ ಹೋದಾಗ ಮಹಾರಾಜ್‌ರನ್ನು ಇದರ ಬಗ್ಗೆ ಕೇಳಿದೆನು. ಮಹಾರಾಜ್ ಹೇಳಿದರು. ಆಗಲಿ ಎಂದು ತಮ್ಮ ಅನುಮತಿ ನೀಡಿದರು. ಇದನ್ನು ಮೋರೇಶ್ವರ್ ರಾವ್‌ರವರಿಗೆ ತಿಳಿಸಲು ನಾನು ಒಂದು ಪತ್ರ ಬರೆದೆ ಮತ್ತು ಮಹಾರಾಜರನ್ನು ಕೇಳಿ ಅದೇ ದಿನ ಅಂಚೆಗೆ ಹಾಕಿದನು. ಅದೇ ದಿನದ ರಾತ್ರಿಯಲ್ಲಿ ಸುಮಾರು ಬೆಳಗಿನ ಜಾವ ಮೋರೇಶ್ವರನ ನಾದಿನಿ ತಾತೀಬಾಯಿ ಒಂದು ಕನಸು ಕಂಡಳು. ಸಾಂತಾಕ್ರೂಜ್‌ನಲ್ಲಿ, ಒಂದು ಸುಂದರವಾದ ಗಣಪತಿಯ ಮೂರ್ತಿಯು ಒಂದು ಗೂಡಿನಲ್ಲಿತ್ತು, ಬೆಳಗ್ಗೆ ಅವಳು ಈ ಕನಸಿನ ಬಗ್ಗೆ ಮನೆಯವರಿಗೆಲ್ಲ ತಿಳಿಸಿದಳು. ಮಾರನೆಯದಿನ ಮಹಾರಾಜ್‌ರು ಅನುಮತಿ ನೀಡಿರುವ ಪತ್ರ ಬಂದು ತಲುಪಿತು. ಸ್ಥೂಲವಾಗಿ ಹೇಳಬೇಕೆಂದರೆ ಮಹಾರಾಜ್‌ರು ತಮ್ಮ ಸಲಹೆಯನ್ನು ಕನಸಿನಲ್ಲಿಯೇ ಪತ್ರ ತಲಪುವ ಮುಂಚೆಯೇ ಕೊಟ್ಟಿದ್ದರು.



# ಅಧ್ಯಾಯ - 29

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಸ್ವಪ್ನಕಥೆಗಳ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.

ಶ್ರೀ ಸರಸ್ವತಿಗೆ ಪ್ರಣಾಮಗಳು.

ಶ್ರೀ ಗುರುವಿಗೆ ಪ್ರಣಾಮಗಳು.

ಶ್ರೀ ಕುಲದೇವತೆಗೆ ಪ್ರಣಾಮಗಳು.

ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.

ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿದ್ದಕ್ಕಿಂತಲೂ ಹೆಚ್ಚು ಅದ್ಭುತವಾದ, ಊಹಿಸಲೂ ಅಸಾಧ್ಯವಾದ ಶ್ರೀಗಳ ಕುಶಲತೆಯನ್ನು ಈ ಅಧ್ಯಾಯದಲ್ಲಿ ತಾವು ಕೇಳುವಂತೆ ಮಾಡುತ್ತೇನೆ. ॥1॥ ಬಾಬಾರವರ ಅಗಾಧ ಲೀಲೆಗಳನ್ನು ಕೇಳಿದ್ದ ಒಂದು ಭಜನ ಮಂಡಲಿಯು ಸನ್1916ನೇ ಇಸವಿಯಲ್ಲಿ ಶಿರಡಿಗೆ ದರ್ಶನಕ್ಕಾಗಿ ಬಂದಿತು. ॥2॥ ಅದೊಂದು ಯಾತ್ರಾ ತಂಡವಾಗಿದ್ದು ಮದ್ರಾಸಿನಲ್ಲಿ ಬಾಬಾರವರ ಕೀರ್ತಿಯನ್ನು ಕೇಳಿದ್ದರು. ಕಾಶಿಗೆ ತೀರ್ಥಯಾತ್ರೆ ಹೋಗುತ್ತಾ ದಾರಿಯಲ್ಲಿ ಶಿರಡಿಗೆ ಬಂದಿಳಿದರು. ॥3॥ ಬಾಬಾರವರು ಮಹಾನ್ ಸಂತರೆಂದೂ ಮತ್ತು ಸಹನಶೀಲರು, ಕರುಣಾಮಯಿ ಮತ್ತು ವಾಸನೆಗಳನ್ನು ನಿಗ್ರಹಿಸಿದವರು ಎಂದೂ ಕೇಳಿದ್ದರು. ಬಾಬಾ ಯಾತ್ರಿಕರಿಗೆ ದಯೆ ತೋರಿಸುತ್ತಿದ್ದರು ಮತ್ತು ತುಂಬಾ ಹಣವನ್ನು ಹಂಚುತ್ತಿದ್ದರು. ॥4॥ ಅವರು ಸಣ್ಣ ಚಿಲ್ಲರೆ ಅರ್ಧ ಮತ್ತು ಕಾಲು ರೂಪಾಯಿಗಳ ಮಳೆಯನ್ನಂತೂ ಧಾರಾಳವಾಗಿ ಸುರಿಸುತ್ತಿದ್ದರು.ಕೆಲವರಿಗೆ ಹತ್ತು, ಇಪ್ಪತ್ತು ಮತ್ತು ಐವತ್ತು ರೂಪಾಯಿಗಳನ್ನು ಕೊಡುತ್ತಿದ್ದರು. ॥5॥ ಇದು ಕೇವಲ ಹಬ್ಬದ ಅಥವಾ ವಿಶೇಷ ದಿನಗಳಲ್ಲಿ ಮಾತ್ರವೇ ಅಲ್ಲ ಪ್ರತಿದಿನವೂ ಸಂತೋಷವಾಗಿ ಮೇಲೆ ಹೇಳಿದ ಪ್ರಮಾಣದಲ್ಲಿ ನೀಡುತ್ತಿದ್ದರು. ॥6॥ ಪ್ರದರ್ಶನಕಾರರು ಬಂದರು, 'ನೌಟಂಕಿ' ತಂಡದವರು ನೃತ್ಯ ಮಾಡಿದರು. ಮಹಾನ್

ಸಂಗೀತಗಾರರು ಕಾರ್ಯಕ್ರಮಗಳನ್ನು ನೀಡಿದರು, ಕವಿಗಳು ವಾಚನ ಮಾಡಿದರು. ತಮಾಷಾ ತಂಡದವರು ನಮಸ್ಕಾರ ಮಾಡಿದರು ಮತ್ತು ಕೀರ್ತನಕಾರರು ಮೈಮರೆಯುವಂತಹ ಭಜನೆಗಳನ್ನು ಹಾಡಿದರು. ॥7॥ ಮಹಾರಾಜ್‌ರು ಉದಾರ ಮನಸ್ಸಿನವರೆಂದೂ, ದಾನಧರ್ಮಗಳಲ್ಲಿ ಉದಾತ್ತ ಭಾವದವರೆಂಬ ಕೀರ್ತಿಯನ್ನು ಕಿವಿಯಿಂದ ಕಿವಿಗೆ ಕೇಳಿದ್ದ ಅವರು ದರ್ಶನ ಪಡೆಯಲು ಬಹಳ ಉತ್ಸುಕರಾದರು. ॥8॥ ಕೆಲವು ಸಲ, ಬಾಬಾರವರ ಮನಸ್ಸಿಗೆ ಬಂದಲ್ಲಿ ಅವರು ಹಣವನ್ನು ಯಾತ್ರಿಕರಿಗೂ ಹಂಚುತ್ತಿದ್ದರು. ದೀನ ದುರ್ಬಲರ ಕ್ಷೇಮವನ್ನೂವಿಚಾರಿಸುತ್ತಿದ್ದರು ಸಾಯಿನಾಥರು ಸಾಕ್ಷಾತ್ ಕೃಪಾಮೂರ್ತಿಯಾಗಿದ್ದರು. ॥9॥ ಆ ತಂಡದಲ್ಲಿ ನಾಲ್ಕು ಜನರಿದ್ದರು – ಒಬ್ಬ ಪುರುಷ ಮತ್ತು ಮೂವರು ಮಹಿಳೆಯರು. ಪ್ರಮುಖ ವ್ಯಕ್ತಿ, ಅವನ ಪತ್ನಿ, ನಾದಿನಿ ಮತ್ತು ಮಗಳು. ಅವರು ಸಂತರ ದರ್ಶನಾಭಿಲಾಷಿಗಳಾಗಿದ್ದರು. ॥10॥ ಸಾಯಿಯ ದರ್ಶನ ಮಾಡಿ ಮಂಡಲಿಯು ಅತ್ಯಂತ ಸಂತಸಗೊಂಡಿತು. ಇದ್ದಷ್ಟು ದಿನ ಅವರು ಪ್ರೇಮದಿಂದ ಸಾಯಿಯ ಸನ್ನಿಧಿಯಲ್ಲಿ ಭಜನೆಗಳನ್ನು ನಿತ್ಯವೂ ಹಾಡುತ್ತಿದ್ದರು. ॥11॥ ಅವರು ರಾಮದಾಸಿ ಭಕ್ತ ಸಂಪ್ರದಾಯಕ್ಕೆ ಸೇರಿದ್ದರು. ಭಜನೆಗಳನ್ನು ಅತಿ ಉಲ್ಲಾಸದಿಂದ ಹಾಡುತ್ತಿದ್ದರು. ಬಾಬಾರವರೂಸಹ ಮನಸಾರೆ ಅನುಭವಿಸಿದರು. ಮತ್ತು ಅವರಿಗೆ ಒಂದು ರೂಪಾಯಿ ಅಥವಾ ಅರ್ಧ ರೂಪಾಯಿಯನ್ನು ಕೊಡುತ್ತಿದ್ದರು. ॥12॥ ಕೆಲವೊಮ್ಮೆ, ಬಾಬಾರವರು ಅವರಿಗೆ ಬಕ್ಷೀಯನ್ನು ಕೊಡುತ್ತಿದ್ದರು ಮತ್ತು ಕೆಲವು ಸಲ ಖಾಲಿ ಕೈಯಲ್ಲಿಯೇ ಹಿಂದಕ್ಕೆ ಕಳುಹಿಸುತ್ತಿದ್ದರು. ಇದು ಅವರ ನಿತ್ಯದ ರೂಢಿಯಾಗಿತ್ತು, ಆದರೆ ಯಾವುದೂ ನಿಶ್ಚಿತವಾಗಿ ಊಹಿಸುವಂತೆ ಇರಲಿಲ್ಲ. ॥13॥ ಅವರು ಹಣವನ್ನು ಹಂಚುತ್ತಿದ್ದರು, ಅದು ಸತ್ಯ, ಅದರಲ್ಲಿ ಯಾವುದೇ ಅಸತ್ಯವಿಲ್ಲ, ಆದರೆ ಅವರು ಪ್ರತಿಯೊಬ್ಬರಿಗೂ ಕೊಡುತ್ತಿರಲಿಲ್ಲ. ಅವರ ಮನಸ್ಸಿನಲ್ಲಿ ಏನಿತ್ತು ಎಂಬುದು ಯಾರಿಗೂ ತಿಳಿಯುತ್ತಿರಲಿಲ್ಲ. ॥14॥ ಫಕೀರರು ಮತ್ತು ಭಿಕ್ಷುಕರು ಸದಾ ಬಾಬಾರವರ ಬಾಗಿಲಿಗೆ ಭಿಕ್ಷೆ ಬೇಡಲು ಬರುತ್ತಿದ್ದರು. ಬಾಬಾರವರು ಭಾರಿ ದಯಾಳುವಾಗಿದ್ದರೂ ಎಲ್ಲರಿಗೂ ದಾನ ಕೊಡುತ್ತಿರಲಿಲ್ಲ. ॥15॥ ಕೇವಲ ಯಾರ ಸಮಯವು ಲಾಭಕರವಾಗಿ ಬಂದಿರುವುದೋ ಅವರು ಮಾತ್ರ ಹಣದ ಸುಖವನ್ನು ಪಡೆಯುತ್ತಿದ್ದರು. ಸಂತರ ಹಸ್ತದ ಸ್ಪರ್ಶ ಹೊಂದಿದ ಒಂದು ಸಣ್ಣ ನಾಣ್ಯವು ದೊರಕುವುದೂ ಭಾಗ್ಯವೇ ಸರಿ. ॥16॥ ಶ್ರೋತೃಗಳನ್ನು ಸಂತುಷ್ಟಿಪಡಿಸಲು ಇದನ್ನು ಪುಷ್ಟೀಕರಿಸುವ ಒಂದು ಕಥೆಯನ್ನು ಹೇಳುತ್ತೇನೆ. ಇದನ್ನು ನಿರೂಪಿಸಿದ ನಂತರ, ನಾನು ಮುಖ್ಯವಾದ ಕಥೆಗೆ ಹೋಗುತ್ತೇನೆ. ॥17॥ ಪ್ರಾತಃಕಾಲದ ತಿಂಡಿಯ ನಂತರ ಬಾಬಾರವರು ಮಸೀದಿಯಲ್ಲಿ ಧುನಿಯ ಹತ್ತಿರ ಕಂಭಕ್ಕೆ ಒರಗಿಕೊಂಡು ಕುಳಿತುಕೊಂಡಿರುವಾಗ ಅಮನಿ[1] ಎಂಬ ಹುಡುಗಿ ಬರುತ್ತಿದ್ದಳು. ॥18॥ ಆ ಚಿಕ್ಕ ಹುಡುಗಿಯು ಮೂರು ವರ್ಷದವಳಾಗಿದ್ದಳು. ಧರಿಸಲು ಸರಿಯಾದ ಬಟ್ಟೆ ಇಲ್ಲದೆ, ನಿತ್ಯವೂ ಅದೇ ಸಮಯಕ್ಕೆ ಬರುತ್ತಿದ್ದಳು. ಅವಳ ತಾಯಿ ತನ್ನ ಕೈಯಲ್ಲಿ ಒಂದು ಸಣ್ಣ ತಗಡಿನ ಡಬ್ಬ[2] ಹಿಡಿದುಕೊಂಡು ಅವಳನ್ನು ಜೊತೆಯಲ್ಲಿ ಕರೆತರುತ್ತಿದ್ದಳು. ॥19॥ ಅಮನಿಯು ಅವರ ತೊಡೆಯ ಮೇಲೆ

ಕುಳಿತುಕೊಂಡು ಸಣ್ಣ ಡಬ್ಬಿಯನ್ನು ಬಾಬಾರವರ ಕೈಯಲ್ಲಿಡುತ್ತಿದ್ದಳು. ಬಾಬಾರವರ ಕೈಗಳನ್ನು ಹಿಡಿದುಕೊಂಡು, ಅವಳು ಹೇಳುತ್ತಿದ್ದಳು, "ಬಾಬಾ, ಒಂದು ರೂಪಾಯಿ, ಒಂದು ರೂಪಾಯಿ." ॥20॥ ಬಾಬಾರವರಿಗೆ ಮಕ್ಕಳೆಂದರೆ ಬಹಳ ಇಷ್ಟ. ಆ ಹುಡುಗಿಯು ಗುಂಡುಗುಂಡಾಗಿ ಮುದ್ದಾಗಿದ್ದಳು. ಅವರು ಅವಳನ್ನು ಮುದ್ದಾಡುತ್ತಿದ್ದರು ಮತ್ತು ತಬ್ಬಿಕೊಂಡಿರುತ್ತಿದ್ದರು. ॥21॥ ಆದರೆ ಅಮನಿಯ ಮನಸ್ಸು ಹಣದ ಮೇಲೆ ನೆಟ್ಟಿರುತ್ತಿತ್ತು. "ಬಾಬಾ ಕೊಡಿ, ನನಗೆ ಕೊಡಿ." ಎಂದು ಅವಳು ಹೇಳುತ್ತಿದ್ದಳು. ಆದರೆ ಅವಳ ಮನಸ್ಸು ಅವರ ಜೇಬಿನ ಮೇಲಿರುತ್ತಿತ್ತು. ॥22॥ ಅಮನಿಯು ಎಷ್ಟಾದರೂ ಒಂದು ಮಗುವಾಗಿದ್ದಳು. ಆದರೆ ದೊಡ್ಡವರು ಮತ್ತು ವೃದ್ಧರೂ ಸಹ ಅದೇ ಆಶೆ ಇಟ್ಟುಕೊಂಡಿರುತ್ತಿದ್ದರು. ಅದು ಕೇವಲ ಅವರ ಸ್ವಾರ್ಥಕ್ಕಾಗಿಯೇ. ಪರಮಾರ್ಥ ಭಾವವನ್ನಿಟ್ಟುಕೊಂಡಿದ್ದವರು ಬಹಳ ವಿರಳ. ॥23॥ ಆ ಚಿಕ್ಕ ಬಾಲೆಯು ಅವರ ತೊಡೆಯ ಮೇಲೆ ಕುಳಿತಿದ್ದರೆ ಅವಳ ತಾಯಿಯು ಸ್ವಲ್ಪ ದೂರದಲ್ಲಿ ಕಟಕಟಿಯ ಹೊರಗಡೆ ಇರುತ್ತಿದ್ದಳು. ಅವಳು ಮಗಳಿಗೆ ಬಾಬಾರವರು ಹಣ ಕೊಡುವವರೆಗೆ ಅಲ್ಲಾಡಬಾರದೆಂದು ಸಂಕೇತ ಮಾಡುತ್ತಿದ್ದಳು. ॥24॥ "ನಾನೇನಾದರೂ ನಿನ್ನ ತಂದೆಯ ಬಂಧುವೇ? ಅಥವಾ ನಾನೇನಾದರೂ ಅವನಿಂದ ಸಾಲ ಪಡೆದಿರುವೆನೇ? ನೀನಾದರೋ ಎಚ್ಚರವಾದಾಗಿನಿಂದ ನನ್ನನ್ನು ಒತ್ತಾಯಿಸುತ್ತಿರುವೆ. ಅಪ್ರಯೋಜಕರು! ಎಲ್ಲವೂ ಉಚಿತವಾಗಿಯೇ ಬೇಕು!" ಬಾಬಾ ಕೋಪದಿಂದ ಹೇಳುತ್ತಿದ್ದರು. ॥25॥ ಆದರೆ ಈ ಕೋಪವು ಕೇವಲ ಹೊರಗೆ ತೋರಿಕೆಗೆ ಅಷ್ಟೆ. ಏಕೆಂದರೆ ಅವರ ಅಂತರಂಗದಲ್ಲಿ ಪ್ರೇಮದ ಲಹರಿಗಳು ಏಳುತ್ತಿದ್ದವು. ತಮ್ಮ ಜೇಬಿನಲ್ಲಿ ಕೈಹಾಕಿ, ಒಂದು ರೂಪಾಯಿಯನ್ನು ಹೊರಕ್ಕೆ ತೆಗೆಯುತ್ತಿದ್ದರು. ॥26॥ ಅವರು ಅದನ್ನು ಡಬ್ಬಿಗೆ ಹಾಕಿದ ನಂತರ ಅದನ್ನು ಜೋರಾದ ಶಬ್ದದೊಡನೆ ಮುಚ್ಚುತ್ತಿದ್ದರು. ಆ ಸಣ್ಣ ಡಬ್ಬಿಯು ಅವಳ ಕೈಗೆ ಬಂದಕೂಡಲೇ ಆಕೆ ಮನೆಯ ಕಡೆ ಹೋಗುತ್ತಿದ್ದಳು. ॥27॥ ಇದು ತಿಂಡಿಯ ಸಮಯದಲ್ಲಿ ನಡೆಯುತ್ತಿತ್ತು. ಅದೇ ರೀತಿ ಅವರು ಲೇಂಡಿಬಾಗ್‌ಗೆ ಹೋಗುವಾಗ ಒಂದು ರೂಪಾಯಿ ಕೊಡುತ್ತಿದ್ದರು. ಅದೇ ರೀತಿಯಲ್ಲಿ ಕೋಪಿಸಿಕೊಂಡು ಕೊಡುತ್ತಿದ್ದರು. ॥28॥ ಈ ರೀತಿ ಪ್ರತಿ ದಿನವೂ ಅವರು ಎರಡು ರೂಪಾಯಿಗಳನ್ನು ಕೊಡುತ್ತಿದ್ದರು ಮತ್ತು ಆರು ರೂಪಾಯಿಗಳನ್ನು ಜಮಲಿಗೂ, ಐದು ರೂಪಾಯಿಗಳನ್ನು ದಾದಾ ಕೇಳ್ಕರ್‌ಗೂ, ಭಾಗ್ಯ ಮತ್ತು ಸುಂದರಿಗೆ ಎರಡೆರಡು ರೂಪಾಯಿಗಳನ್ನೂ ಕೊಡುತ್ತಿದ್ದರು. ॥29॥ ತಾತ್ಯಾಬಾಗೆ ಹತ್ತರಿಂದ ಹದಿನೈದು ರೂಪಾಯಿಗಳನ್ನು ಫಕೀರ ಬಾಬಾನಿಗೆ ಹದಿನೈದರಿಂದ ಐವತ್ತು ರೂಪಾಯಿಗಳನ್ನೂ, ಬಡವರಿಗೆ ಹಂಚಲು ಎಂಟು ರೂಪಾಯಿಗಳನ್ನೂ ಕೊಡುತ್ತಿದ್ದರು. ಈ ಹಂಚಿಕೆಯು ಪ್ರತಿನಿತ್ಯವೂ ನಡೆಯುತ್ತಿತ್ತು. ॥30॥ ಅದು ಹಾಗಿರಲಿ, ಮದ್ರಾಸಿಗಳು ಅವರ ದಾನಶೀಲತೆಯ ಕಥೆಗಳನ್ನು ಕೇಳಿದ್ದರು ಮತ್ತು ಹಣಕ್ಕಾಗಿ ಸ್ವಾರ್ಥದ ಆಶೆಯು ಹುಟ್ಟಿತ್ತು. ಅದಕ್ಕಾಗಿ ಮಂಡಲಿಯವರು ಭಜನೆಯ ಅಭ್ಯಾಸವನ್ನು ಪ್ರಾರಂಭಿಸಿದ್ದರು. ॥31॥ ಭಜನೆಗಳು ಹೊರಗೆ ಕೇಳಲು ಮಧುರವಾಗಿದ್ದವು. ಆದರೆ ಅಂತರಂಗದಲ್ಲಿ ಅವರಿಗೆ ದುರ್ಧರವಾದ

ಲೋಭವಿತ್ತು. ಅವರು ಹಣದ ಆಶೆಗಾಗಿಯೇ ಶಿರಡಿಯಲ್ಲಿ ಸಪರಿವಾರ ಸಮೇತರಾಗಿ ನೆಲಸಿದ್ದರು. ॥32॥ ಆ ಗುಂಪಿನಲ್ಲಿ ಮೂರು ಜನರು ಬಹಳ ದುರಾಶೆ ಉಳ್ಳವರು ಮತ್ತು ಬಾಬಾರವರು ಬಹಳ ದ್ರವ್ಯ ನೀಡುವರೆಂದು ಆಶೆಪಟ್ಟರು. ಆದರೆ ಆ ಪತ್ನಿಯು ಮಾತ್ರ ಬಾಬಾರವರನ್ನು ಸದ್ಭಾವ ಭಕ್ತಿಯಿಂದ ಪೂಜಿಸುತ್ತಿದ್ದಳು. ಹಾಡುತ್ತಿರುವಾಗ ಅವಳಿಗೆ ನಿಜವಾದ ಭಕ್ತಿಭಾವವು ಉಂಟಾಗುತ್ತಿತ್ತು. ॥33॥ ಅವಳ ಗೌರವ ಭಾವವು ಮಳೆ ತುಂಬಿದ ಮೋಡಗಳನ್ನು ನೋಡಿ ಕುಣಿಯುವ ನವಿಲಿನ ರೀತಿಯಲ್ಲಿ ಅಥವಾ ಚಂದ್ರಮನನ್ನು ನೋಡಿದ ಚಕೋರ ಪಕ್ಷಿಯ ನರ್ತನ ಮಾಡುವಂತೆ ಕಾಣುತ್ತಿತ್ತು. ॥34॥ ಒಂದು ದಿನ ಮಧ್ಯಾಹ್ನದ ಆರತಿಯು ನಡೆಯುತ್ತಿರುವಾಗ ಕೃಪಾಮೂರ್ತಿಯಾದ ಸಾಯಿಯು ಆ ಮಹಿಳೆಯ ಸದ್ಭಾವ ಸ್ಥಿತಿಯನ್ನು ನೋಡಿ ಅವಳಿಗೆ ರಾಮದರ್ಶನ ನೀಡಿದರು. ॥35॥ ಇತರರೆಲ್ಲರಿಗೂ ಅವರು ನಿತ್ಯದ ಸಾಯಿನಾಥರು. ಆ ಮಹಿಳೆಗೆ ಜಾನಕಿಕಾಂತನಾಗಿ ದರ್ಶನ ನೀಡಿದರು! ಕಣ್ಣುಗಳಿಂದ ದಳದಳನೆ ಕಣ್ಣೀರು ಹರಿಯಿತು. ಜನರು ಈ ದೃಶ್ಯವನ್ನು ನೋಡಿ ವಿಸ್ಮಿತರಾದರು. ॥36॥ ಅವಳು ಎರಡೂ ಕೈಗಳನ್ನು ಸೇರಿಸಿ ಚಪ್ಪಾಳೆ ಹಾಕುತ್ತಿದ್ದಳು. ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿತ್ತು. ಈ ಅಪೂರ್ವವಾದ ದೃಶ್ಯವನ್ನು ಆ ಸಮಯದಲ್ಲಿ ನೋಡಿ ಜನರು ವಿಸ್ಮಿತರಾದರು. ॥37॥ ಈ ದೃಶ್ಯವನ್ನು ನೋಡಿ ಸಕಲರೂ ಇಂತಹ ಪ್ರೇಮಾಶ್ರುಗಳಪ್ರವಾಹ ಮತ್ತು ಆನಂದೋತ್ಸಾಹ ಏಕೆ ಹರಿಯುತ್ತಿತ್ತು ಎಂದು ತಿಳಿಯಲು ಕುತೂಹಲಗೊಂಡರು. ॥38॥ ಅನಂತರ ಮಧ್ಯಾಹ್ನದಲ್ಲಿ ಆನಂದನಿರ್ಭರಳಾಗಿ ಆಕೆ ತನ್ನ ಪತಿಯ ಹತ್ತಿರ ಸಾಯಿಯು ನೀಡಿದ ರಾಮದರ್ಶನದ ಅದ್ಭುತವಾದ ಅನುಭವವನ್ನು ಹೇಳಿದಳು. ॥39॥ "ನಾನು ರಾಮ ದರ್ಶನಮಾಡಿದೆ. ನೀಲಿ ಕಮಲದಿಂದ ಉತ್ಪನ್ನವಾದ ಶ್ಯಾಮಲ ವರ್ಣ, ಭಕ್ತರ ಕಾಮನೆಗಳನ್ನು ತೃಪ್ತಿಪಡಿಸುವ ಕಲ್ಪವೃಕ್ಷ, ಭರತನ ಹಿರಿಯ ಸೋದರ ಮತ್ತು ಸೀತೆಯ ಪ್ರಿಯಕರ ಮತ್ತು ದಶರಥನ ಪುತ್ರ. ॥40॥ "ಕಿರೀಟ ಮತ್ತು ಕುಂಡಲಗಳನ್ನು ಧರಿಸಿರುವ, ವನಪುಷ್ಪಗಳ ಮಾಲೆಯಿಂದ ಅಲಂಕೃತನಾಗಿ, ಪೀತಾಂಬರ ಧರಿಸಿದ್ದ, ನಾಲ್ಕು ಕೈಗಳುಳ್ಳ ರಾಮನ ದರ್ಶನ ಮಾಡಿದೆನು. ॥41॥ "ಶಂಖ, ಚಕ್ರ, ಗದೆಗಳನ್ನು ಧರಿಸಿರುವ, ಎದೆಯ ಮೇಲೆ ಶ್ರೀವತ್ಸ ಲಾಂಛನವಿರುವ, ಕೌಸ್ತುಭಹಾರದಿಂದ ಅಲಂಕೃತನಾದ, ಪರಾತ್ಪರನಾದ, ಪುರುಷೋತ್ತಮನಾದ ಮನೋಹರ ರೂಪವುಳ್ಳ ರಾಮನನ್ನು ನೋಡಿದೆನು." ॥42॥ ಅವಳು ಹೇಳಿದಳು, "ನನಗೆ ಮಾನವ ರೂಪಧಾರಿಯಾದ ಅಸಾಮಾನ್ಯ ಲೀಲಾವತಾರಿಯಾದ, ಜಾನಕಿಯ ಜೀವನವೇ ಆದ, ಮನೋಹರನಾದ, ಧನುರ್ಧಾರಿಯಾದ ರಾಮನ ದರ್ಶನವಾಯಿತು. ॥43॥ "ಅವರು ಹೊರಗಿನ ಸ್ವರೂಪದಲ್ಲಿ ಫಕೀರನಾಗಿ ಕಾಣಬಹುದ, ಮನೆಯಿಂದ ಮನೆಗೆ ಭಿಕ್ಷೆ ಬೇಡುವಂತಹವನು, ಆದರೆ ನಾನು ಮಾತ್ರ ಜಾನಕಿಯ ಜೀವವೇ ಆದ, ಮನೋಹರ ಸ್ವರೂಪದ ಧನುರ್ಧಾರಿಯಾದ ರಾಮದರ್ಶನ ಮಾಡಿದೆ. ॥44॥ "ಅವರು ಅವಲಿಯಾ ಆಗಿ ಕಾಣಬಹುದು. ಅಥವಾ ಬೇರೆಯವರಿಗೆ ಅವರ ಹೃದಯದಲ್ಲಿ ಬೇರೆಯಾಗಿರಬಹುದು. ಆದರೆ ನನಗೆ ಮಾತ್ರ

ಜಾನಕಿಯ ಜೀವನವೇ ಆದ, ಮನೋಹರನಾದ, ಧನುರ್ಧಾರಿಯಾದ ರಾಮನ ದರ್ಶನವಾಯಿತು." ॥45॥ಆ ಮಹಿಳೆ ಪರಮ ಭಾವುಕಳಾಗಿದ್ದಳು. ಆದರೆ ಅವಳ ಪತಿಯು ಅತ್ಯಂತ ಸ್ವಾರ್ಥಿಯಾಗಿದ್ದನು. "ಹೆಂಗಸರು ನಿರ್ವಂಚಕರು ಮತ್ತು ಭೋಳೆ ಸ್ವಭಾವದವರು. ಈ ಜಾಗದಲ್ಲಿ ರಘುಪತಿಯು ಇರಲು ಹೇಗೆ ಸಾಧ್ಯ?" ॥46॥ ಅವಳು ಮುಗ್ಧ ಸ್ವಭಾವದವಳು ಮತ್ತು ಭಾವುಕಳು. ಅವಳು ತನ್ನ ಹೃದಯದಲ್ಲಿರುವುದನ್ನೇ ನೋಡುತ್ತಾಳೆ. ನಾವೆಲ್ಲರೂ ಸಾಯಿಯನ್ನು ಮಾತ್ರ ಕಾಣುತ್ತಿದ್ದೆವು. ಅವಳೊಬ್ಬಳು ಮಾತ್ರ ರಾಮನನ್ನು ನೋಡಲು ಹೇಗೆ ಸಾಧ್ಯ?"॥47॥ ಅವನು ತನ್ನ ಪತ್ನಿಯನ್ನು ಈ ರೀತಿಯ ಅನೇಕ ಕುತರ್ಕಗಳಿಂದ ಅವಹೇಳನ ಮಾಡಿದನು. ಆದರೆ ಆಕೆಯ ಮನಸ್ಸಿನಲ್ಲಿ ಯಾವುದೇ ವಿಷಾದ ಭಾವ ಉಂಟಾಗಲಿಲ್ಲ. ಏಕೆಂದರೆ ಅವಳು ಯಾವುದೇ ಅಸತ್ಯದ ಕಲ್ಪನೆ ಮಾಡಿರಲಿಲ್ಲ. ॥48॥ ಅವಳು ಪೂರ್ವದಲ್ಲಿಯೇ ಪರಮಾರ್ಥವನ್ನು ಸಾಧಿಸಿದ್ದಳು ಎಂದು ಜನಜನಿತವಾಗಿ ನಂಬಲಾಗಿತ್ತು. ಅವಳ ಮನಸ್ಸು ಶಾಂತವಾಗಿ ಸ್ತಬ್ಧವಾಗಿರುವಾಗಲೆಲ್ಲ ಆಕೆಗೆ ರಾಮನ ದರ್ಶನವಾಗುತ್ತಿತ್ತು. ॥49॥ ಕೊನೆಯಲ್ಲಿ ಅವಳು ಹಣಕ್ಕಾಗಿ ದುರಾಶೆ ಪಟ್ಟಳು. ದೇವರು ದ್ರವ್ಯದ ಜೊತೆಯಲ್ಲಿ ಎಂದೂ ಇರುವುದಿಲ್ಲ. ನಂತರ ಅವಳಿಗೆ ರಾಮನ ದರ್ಶನ ಆಗುತ್ತಿರಲಿಲ್ಲ. ಏಕೆಂದರೆ ಲೋಭದ ಸ್ವಭಾವವೇ ಹಾಗೆ. ॥50॥ ಸಾಯಿಗೆ ಸರ್ವವೂ ತಿಳಿದಿದೆ. ಅವಳ ಸರಳ ಸ್ವಭಾವವನ್ನು ಅರಿತಂತಹ ಬಾಬಾರವರು ಮತ್ತೆ ರಾಮದರ್ಶನ ನೀಡಿ ಆಕೆಯ ಆಸೆಯನ್ನು ಪೂರೈಸಿದರು. ॥51॥ ಅದು ಹಾಗಿರಲಿ. ಅನಂತರ ಅದೇ ರಾತ್ರಿಯಂದು ಒಂದು ವಿಚಿತ್ರ ನಡೆಯಿತು. ಆ ವ್ಯಕ್ತಿಯು ನಿದ್ರೆ ಮಾಡುತ್ತಿರುವಾಗ ಭಾರಿ ಭಯಂಕರವಾದ ಸ್ವಪ್ನವನ್ನು ಕಂಡನು. ॥52॥ ಅವನು ತಾನೇ ಒಂದು ಪಟ್ಟಣದಲ್ಲಿ ಪೋಲಿಸರ ವಶದಲ್ಲಿದ್ದ ಒಬ್ಬ ಖೈದಿಯಾಗಿದ್ದನು. ಅವನ ಕೈಗಳನ್ನು ಹಿಂದಕ್ಕೆ ಬಹಳ ಬಿಗಿಯಾಗಿ ಕಟ್ಟಿದ್ದು ಆ ಮೂಳೆಗಳು ಮುರಿದುಹೋಗಿದ್ದವು. ॥53॥ ಅಲ್ಲಿ ಒಂದು ಲಾಕಪ್ ಇತ್ತು. ಅದರ ಹತ್ತಿರ ಹೊರಗಡೆ ಸಾಯಿಯವರು ನಿಶ್ಚಲವಾಗಿ ಅಲ್ಲಿ ನಡೆಯುತ್ತಿದ್ದ ದೃಶ್ಯವನ್ನೆಲ್ಲ ನೋಡುತ್ತ ನಿಂತಿದ್ದರು. ॥54॥ ಮಹಾರಾಜ್‌ರು ಹತ್ತಿರ ಇರುವುದನ್ನು ನೋಡಿ, ಮನದಲ್ಲೆ ಎರಡೂ ಕೈಗಳನ್ನು ಜೋಡಿಸಿ, ಮುಖವನ್ನು ನೋಡುತ್ತ ದೈನ್ಯವಾದ ವಾಣಿಯಿಂದ ಹೇಳಿದನು. ॥55॥ "ಬಾಬಾ, ನಿಮ್ಮ ಕೀರ್ತಿಯನ್ನು ಕೇಳಿ ನಾನು ನಿಮ್ಮ ಚರಣಗಳಲ್ಲಿ ಬಂದಿದ್ದೇನೆ. ನೀವು ಇಲ್ಲಿ ಪ್ರತ್ಯಕ್ಷವಾಗಿ ಇರುವಾಗ ನನಗೇಕೆ ಈ ಗತಿ ಉಂಟಾಯಿತು?" ॥56॥ ಮಹಾರಾಜ್ ಪ್ರತ್ಯುತ್ತರ ಹೇಳಿದರು. "ನಾವು ಮಾಡಿದ ಕೆಲಸಗಳಿಗೆ ನಾವು ಫಲವನ್ನು ಅನುಭವಿಸಲೇ ಬೇಕು." ಆ ಗೃಹಸ್ಥನು ಅತಿ ವಿನೀತನಾಗಿ ಹೇಳಿದನು, "ನಾನು ಯಾವ ತಪ್ಪನ್ನೂ ಮಾಡಿಲ್ಲ. ॥57॥ "ಈ ಜನ್ಮದಲ್ಲಿ ಅಂತೂ ಏನೂ ಮಾಡಿಲ್ಲ. ಅದಕ್ಕಾಗಿ ಎಷ್ಟೊಂದು ಸಂಕಟ ಅನುಭವಿಸಬೇಕಾಗಿರುವಂತಹದು." ಅದಕ್ಕೆ ಮಹಾರಾಜರು ಹೇಳುತ್ತಾರೆ. "ಹಾಗಾದರೆ ಅದು ಮತ್ತೊಂದು ಜನ್ಮದ್ದು, ಜನ್ಮಾಂತರದ್ದು ಇರಬೇಕು." ॥58॥ ಅದಕ್ಕೆ ಅವನು ಪ್ರತ್ಯುತ್ತರ ನೀಡುತ್ತಾನೆ. "ಹಿಂದಿನ ಜನ್ಮದ ಬಗ್ಗೆ ನನಗೇನು ಗೊತ್ತು? ಮತ್ತು ಹಾಗೆ ಏನಾದರೂ

ಇದ್ದಲ್ಲಿ ಅವು ನಿನ್ನ ದರ್ಶನದಿಂದ ನಿಜವಾಗಿಯೂ ಸುಟ್ಟು ಬೂದಿಯಾಗಬೇಕು. ॥59॥ "ನಿಮ್ಮ ದರ್ಶನದಿಂದ ಅದು ಬೆಂಕಿಯಲ್ಲಿ ಉರಿಯುವ ಹುಲ್ಲಿನಂತೆ ಉರಿದು ಭಸ್ಮವಾಗಬೇಕು. ಹಾಗಿರುವಾಗ ನನ್ನನ್ನು ಬಂಧನದಿಂದ ಏಕೆ ಮುಕ್ತನನ್ನಾಗಿ ಮಾಡಿಲ್ಲ?" ॥60॥ ಆಗ ಮಹಾರಾಜರು ಅವನಿಗೆ ಹೇಳಿದರು, "ನಿನ್ನಲ್ಲಿ ಅಂತಹ ವಿಶ್ವಾಸವಿದೆಯೇ?" ಆಗ ಆ ಗೃಹಸ್ಥನು ಹೌದೆಂದು ತಿಳಿಸಿದಾಗ ಅವರು ಅವನನ್ನು ತಕ್ಷಣ ಕಣ್ಣುಗಳನ್ನು ಮುಚ್ಚಿಕೊಳ್ಳುವಂತೆ ತಿಳಿಸಿದರು. ॥61॥ ಅವರ ಆಜ್ಞೆಯ ಪ್ರಕಾರ ಅವನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು. ಆ ಕ್ಷಣದಲ್ಲೇ ಅವನಿಗೆ ಒಂದು ದೊಡ್ಡ ಶಬ್ದ 'ಧಪ್' ಎಂದು ಕೇಳಿಸಿತು. ಅದು ಯಾರೋ ಕೆಳಗೆ ಬಿದ್ದಂತಹ ಶಬ್ದವಾಗಿತ್ತು. ॥62॥ ಈ ಒಂದು ಆಕಸ್ಮಿಕ ಶಬ್ದದಿಂದ ನಡುಗಿಹೋದನು. ಅವನು ಕಣ್ತೆರೆದು ಸುತ್ತಲೂ ನೋಡತೊಡಗಿದನು. ಅವನು ತಾನು ಬಂಧಮುಕ್ತನಾಗಿದ್ದುದನ್ನು ಕಂಡನು ಮತ್ತು ಪೋಲಿಸನು ನೆಲದ ಮೇಲೆ ರಕ್ತದ ಮಡುವಿನಲ್ಲಿ ಬಿದ್ದಿದ್ದನು. ॥63॥ ಅವನಿಗೆ ಅತ್ಯಂತ ಗಾಬರಿಯಾಯಿತು. ಅವನು ಸಾಯಿನಾಥರ ಕಡೆ ನೋಡಲಾರಂಭಿಸಿದನು. ಅವರು ನಕ್ಕು ಅವನ ಕಡೆ ತಿರುಗಿ ಹೇಳಿದರು, "ಈಗ ನೀನು ಚೆನ್ನಾಗಿ ಸಿಕ್ಕಿಬಿದ್ದಿರುವೆ. ॥64॥ "ಈಗ ಒಬ್ಬ ಅಮಲದಾರರು ಬರುತ್ತಾರೆ ಮತ್ತು ಸರ್ವಪ್ರಕಾರದ ನಿಯಮಗಳನ್ನು ಅನುಸರಿಸಿದ ಮೇಲೆ ನಿನ್ನನ್ನು ಅನಿವಾರ್ಯವಾಗಿ ಅಪರಾಧಿಯೆಂದು ಘೋಷಿಸುತ್ತಾರೆ. ನಿನ್ನನ್ನು ಮತ್ತೆ ಬಂಧಿಸುತ್ತಾರೆ." ॥65॥ ಅನಂತರ ಆ ಗೃಹಸ್ಥನು ತತ್ಕ್ಷಣ ಹೇಳಿದನು, "ಬಾಬಾ, ನೀವು ಹೇಳಿದುದೆಲ್ಲವೂ ನಿಜ. ಈಗ ಏನಾದರೂ ಮಾಡಿ ನನ್ನನ್ನು ಮುಕ್ತನನ್ನಾಗಿ ಮಾಡಿ. ನಿಮ್ಮನ್ನು ಬಿಟ್ಟು ನನ್ನನ್ನು ರಕ್ಷಿಸುವವರು ಇನ್ನು ಯಾರೂ ಇಲ್ಲ." ॥66॥ ಅದನ್ನು ಕೇಳಿ ಸಾಯಿಯು ಹೇಳಿದರು, "ನಿನ್ನ ಕಣ್ಣುಗಳನ್ನು ಪುನಃ ಮುಚ್ಚಿಕೋ" ಹಾಗೆ ಮಾಡಿದ ನಂತರ ಅವನು ಪುನಃ ಕಣ್ಣುಗಳನ್ನು ತೆರೆದಾಗ ಮತ್ತೊಂದು ಆಶ್ಚರ್ಯ ದೃಶ್ಯವನ್ನು ನೋಡಿದನು. ॥67॥ ಅವನು ಲಾಕಪ್ ಹೊರಗಡೆ ಇದ್ದನು. ಮಹಾರಾಜ್ ಸಾಯಿಯು ಅವನ ಹತ್ತಿರವೇ ಇದ್ದರು. ಅವನು ಸಾಷ್ಟಾಂಗ ನಮಸ್ಕಾರ ಮಾಡಿದನು. ಅನಂತರ ಬಾಬಾ ಅವನನ್ನು ಕೇಳಿದರು. ॥68॥ "ಚೆನ್ನಾಗಿ ಯೋಚಿಸು ಮತ್ತು ನನಗೆ ಹೇಳು, ನೀನು ಈಗ ಮಾಡಿದ ನಮಸ್ಕಾರಕ್ಕೂ ಮತ್ತು ಹಿಂದೆ ಮಾಡುತ್ತಿದ್ದ ನಮಸ್ಕಾರಗಳಿಗೂ ಏನಾದರೂ ವ್ಯತ್ಯಾಸವಿದೆಯೇ?" ॥69॥ ಅನಂತರ ಆ ಗೃಹಸ್ಥನು ಉತ್ತರಿಸಿದನು. "ಅದು ಆಕಾಶ–ಭೂಮಿಗಳ ಮಧ್ಯೆ ಇರುವ ಅಂತರದಷ್ಟೇ ಇದೆ! ನನ್ನ ಹಿಂದಿನ ನಮಸ್ಕಾರಗಳು ಕೇವಲ ದ್ರವ್ಯಾರ್ಥವಾಗಿದ್ದವು. ಆದರೆ ಇಂದು ಮಾತ್ರ ನೀನು ಪರಮೇಶ್ವರ ಎಂಬ ಭಾವನೆಯಿಂದ ಮಾಡಿದ್ದು. ॥70॥ "ಈ ಮೊದಲು ನನಗೆ ನಿಮ್ಮಲ್ಲಿ ವಿಶ್ವಾಸವೇ ಇರಲಿಲ್ಲ. ಅದೇ ಅಲ್ಲದೆ ನಾನು ನಿಮ್ಮನ್ನು ಮುಸ್ಲಿಮನೆಂದು ಭಾವಿಸಿದ್ದೆ, ಮತ್ತು ಹಿಂದುಗಳನ್ನು ಅವಹೇಳನ ಮಾಡುತ್ತೀರೆಂದುಕೊಂಡಿದ್ದೆ. ಆದರಿಂದಾಗಿಯೇ ನಿಮ್ಮ ಮೇಲೆ ನನ್ನಲ್ಲಿ ರೋಷವಿತ್ತು."॥71॥ ಹಾಗಿದ್ದಲ್ಲಿ ಬಾಬಾರವರು ಪ್ರಶ್ನಿಸಿದರು, "ನೀನು ಯಾವುದೇ ಮುಸ್ಲಿಮ ದೇವರನ್ನು ನಂಬುವುದಿಲ್ಲವೇ?" ಅದಕ್ಕೆ ಆ ಗೃಹಸ್ಥನು ಇಲ್ಲವೆಂದನು. ॥72॥ ಬಾಬಾರವರು

ಮುಂದುವರೆದು ಕೇಳಿದರು, "ನಿನ್ನ ಮನೆಯಲ್ಲಿ ಪಂಜಾ[6] ಇಲ್ಲವೇ? ತಾಬೂತ್[7] ದಿನಗಳಲ್ಲಿ ಅದನ್ನು ಪೂಜೆಮಾಡುವುದಿಲ್ಲವೇ? ಮನಸ್ಸಿನಲ್ಲೇ ಎಚ್ಚರಿಕೆಯಿಂದ ವಿಚಾರಮಾಡು. ॥73॥ "ನೀನು ಮನೆಯಲ್ಲಿ ಕಾಡಾ ಬೀಬಿಯನ್ನೂ ಸಹ ಇಟ್ಟುಕೊಂಡಿರುವೆ? ಅದನ್ನು ನೀನು ಪೂಜಿಸುವೆ ಮತ್ತು ಮದುವೆ ಸಮಯಗಳಲ್ಲಿ ಅವಳನ್ನು ಆರಾಧಿಸುವೆ. ಅವಳೊಬ್ಬ ಮುಸಲ್ಮಾನ ದೇವತೆಯಲ್ಲವೇ?" ॥74॥ ಅವನು ಅವೆಲ್ಲವನ್ನೂ ಒಪ್ಪಿಕೊಂಡನು. ಅನಂತರ ಅವನಿಗೇನಾದರೂ ಆಶೆ ಇದೆಯೇ ಎಂದು ಕೇಳಲಾಯಿತು. ಆ ಗೃಹಸ್ಥನು ತನ್ನ ಸ್ವಂತ ಗುರು ರಾಮದಾಸರ ದರ್ಶನ ಮಾಡಲು ಇಚ್ಛಿಸಿದನು. ॥75॥ ಮಹಾರಾಜರು ಅವನನ್ನು ಸುತ್ತುಹೊಡೆದು ನೋಡಲು ಹೇಳಿದರು. ಅವನು ಆ ರೀತಿ ಮಾಡಿದಾಗ, ಸಮರ್ಥ ರಾಮದಾಸರು ಎದುರಿಗೆ ನಿಂತಿರುವುದನ್ನು ನೋಡಿದನು." ॥76॥ ಆದರೆ ಅವನು ಅವರ ಚರಣಗಳಿಗಾಗಿ ಕೆಳಗೆ ಬಗ್ಗಿದ ಕೂಡಲೇ ಸಮರ್ಥರು ಅದೃಶ್ಯಹೊಂದಿದರು. ಅನಂತರ, ಅವನು ಜಿಜ್ಞಾಸಪೂರ್ವಕವಾಗಿ ನೋಡುತ್ತಿರುವಾಗಲೇ ಒಂದು ವಿಚಿತ್ರ ವಿಚಾರ ಅವನ ಮನಸ್ಸಿಗೆ ಬಂದಿತು. ॥77॥ "ಬಾಬಾ, ನೀವು ವಯಸ್ಸಿನಲ್ಲಿ ತುಂಬ ಮುಂದೆ ಇರುವಿರಿ. ವೃದ್ಧರ ತರಹ ಕಾಣುವಿರಿ. ನಿಮ್ಮ ಜೀವಿತದ ದೀರ್ಘಾಯುಷ್ಯದ ಬಗ್ಗೆ ಏನಾದರೂ ಅಭಿಪ್ರಾಯ ಇದೆಯಾ?" ॥78॥ "ನಾನು ಮುದುಕನೆಂದು ಹೇಗೆ ಹೇಳುವೆ? ನನ್ನ ಜೊತೆ ಓಡಬಲ್ಲೆಯಾ?" ಈ ಮಾತುಗಳನ್ನು ಹೇಳುತ್ತ ಸಾಯಿಯವರು ಓಡಲು ಪ್ರಾರಂಭಿಸಿದರು. ಮತ್ತು ಆ ಗೃಹಸ್ಥನು ಅವರ ಹಿಂದೆ ಓಡಲು ಪ್ರಾರಂಭಿಸಿದನು. ॥79॥ ಮಹಾರಾಜರು ಪೂರ್ಣವೇಗದಿಂದ ಓಡುತ್ತಿರುವಾಗ ಧೂಳಿನ ಮೋಡವೇ ಎದ್ದಿತ್ತು, ಮತ್ತು ಆ ಕ್ಷಣದಲ್ಲೇ ಮಾಯವಾಯಿತು. ಅನಂತರ ಆ ಗೃಹಸ್ಥನು ಎಚ್ಚರಗೊಂಡನು. ॥80॥ ಅದು ಹಾಗಿರಲಿ. ಎಚ್ಚರವಾದ ನಂತರ ಅವನು ತನ್ನ ಕನಸಿನ ಬಗ್ಗೆ ಯೋಚಿಸಲು ಪ್ರಾರಂಭಿಸಿದನು. ಆಗ ತಿಳಿಯಿತು ಅವನು ಯೋಚಿಸುವ ವೈಖರಿಯೇ ಪೂರ್ಣವಾಗಿ ಬದಲಾಗಿತ್ತು, ಅವನು ಬಾಬಾರವರ ಮಹತ್ವವನ್ನು ಸ್ತುತಿಸಿದನು. ॥81॥ ಇಂತಹ ಚಮತ್ಕಾರಗಳನ್ನು ನೋಡಿ ಸಾಯಿ ಚರಣಗಳಲ್ಲಿ ಅವನ ಭಕ್ತಿಯು ದೃಢವಾಯಿತು. ಅವನ ಹಿಂದಿನ ಪರಿಸ್ಥಿತಿಯು ಬದಲಾಯಿತು ಮತ್ತು ಬಾಬಾರವರ ವಿಷಯದ ಬಗ್ಗೆ ಇದ್ದ ಸಂಶಯ ವೃತ್ತಿಯು ಮಾಯವಾಯಿತು. ॥82॥ ಇದೆಲ್ಲವೂ ಕನಸಾಗಿದ್ದರೂ ಸಹ, ಶ್ರೋತೃಗಳು ಯಾವಾಗ ಈ ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ಕೇಳುತ್ತಾರೋ ಆಗ ಅವರು ಅದರಲ್ಲಿರುವ ಅಗಾಧತೆಯನ್ನು ಅರಿಯಬಲ್ಲರು. ॥83॥ ಈ ಪ್ರಶ್ನೆಗಳು ಉತ್ತರಗಳನ್ನು ಪ್ರತಿಬಿಂಬಿಸಿದಾಗ ಮದರಾಸಿಯು ಒಂದು ಪರಮಬೋಧವನ್ನು ಕಲಿತನು. ಸಾಯಿಸಂಬಂಧದಲ್ಲಿರುವ ವಿರೋಧ ಭಾವವು ಮಾಯವಾಯಿತು. ಹಾಸ್ಯ ವಿನೋದರೂಪಗಳೇ ಅಲ್ಲಿ ತುಂಬಿದವು. ॥84॥ ಮಾರನೆಯ ದಿನ, ಬೆಳಗಿನ ಜಾವದಲ್ಲಿ ಮಂಡಳಿಯು ಮಸೀದಿಗೆ ದರ್ಶನಕ್ಕಾಗಿ ಬಂದಾಗ ಸಾಯಿನಾಥರು ಅವರಿಗೆ ಎರಡು ರೂಪಾಯಿಗಳ ಬಕ್ಷಿಣೆಯನ್ನು ಕೊಟ್ಟು ತಮ್ಮ ಅನುಗ್ರಹವನ್ನು ತೋರಿಸಿದರು. ॥85॥ ಜೊತೆಗೆ, ಬಾಬಾರವರು ಅವರೆಲ್ಲರಿಗೂ ಎರಡು ರೂಪಾಯಿಗಳನ್ನು ತಮ್ಮ

ಜೇಬಿನಿಂದ ತೆಗೆದುಕೊಟ್ಟು ಅವರು ಹೆಚ್ಚು ಕಾಲ ಉಳಿದುಕೊಳ್ಳುವಂತೆ ಮಾಡಿದರು. ಅವರು ತಮ್ಮ ಭಜನೆ ಮತ್ತುಪೂಜೆಗಳನ್ನು ಮುಂದುವರೆಸಿದರು. ॥86॥ ಸ್ವಲ್ಪ ಸಮಯದ ನಂತರ, ಆ ಮಂಡಳಿಯು ಅಲ್ಲಿಂದ ಹೊರಡಲು ನಿಶ್ಚಯಿಸಿದರು. ಅವರು ಅತಿ ಹೆಚ್ಚು ಹಣವನ್ನು ಪಡೆಯದಿದ್ದರೂ ಬಾಬಾರವರ ಆಶೀರ್ವಾದವನ್ನು ಯಥೇಚ್ಛವಾಗಿ ಪಡೆದಿದ್ದರು. ॥87॥ "ಅಲ್ಲಾಮಾಲಿಕನು ನಿಮಗೆ ಬಹಳ ಕೊಡುತ್ತಾನೆ! ಅಲ್ಲಾನು ನಿಮಗೆ ಒಳ್ಳೆಯದನ್ನು ಮಾಡುತ್ತಾನೆ!" ಅವರು ತಮ್ಮ ಪ್ರಯಾಣ ಮುಂದುವರಿಸಿದಾಗ, ಇದೊಂದು ಬಹಳ ಉಪಯುಕ್ತವಾದ ವಿಷಯವೆಂದು ಸಾಬೀತಾಯಿತು. ॥88॥ ಸಾಯಿಯವರ ಆಶೀರ್ವಚನಗಳಿಂದ ಮತ್ತು ಮನದಲ್ಲೇ ಸಾಯಿಯ ಸ್ಮರಣೆಯಿಂದ ಅವರು ಪ್ರಯಾಣದಲ್ಲಿ ಹಗಲು ರಾತ್ರಿ ಅದರಲ್ಲೇ ಮನಸ್ಸಿಟ್ಟಿದ್ದರಿಂದ ಅವರಿಗೆ ಯಾವ ರೀತಿಯ ಅನಾನುಕೂಲವೂ ಕನಸಿನಲ್ಲಿಯೂ ಉಂಟಾಗಲಿಲ್ಲ. ॥89॥ ಅವರು ಅನೇಕ ಯಾತ್ರಾಸ್ಥಳಗಳಿಗೆ ಇಚ್ಛೆಪಟ್ಟಂತೆ ಪ್ರಯಾಣ ಬೆಳೆಸಿದರು. ಅವರು ಪಡೆದ ಆಶೀರ್ವಚನಗಳಿಗೆ ಧನ್ಯವಾದಗಳು. ಅವರಿಗೆ ಮಾರ್ಗದಲ್ಲಿ ಯಾವುದೇ ತೊಂದರೆಗಳು ಉಂಟಾಗಲಿಲ್ಲ. ಅವರು ಸಂಪೂರ್ಣವಾಗಿ ಸುಖವಾಗಿ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. ॥90॥ ಅವರು ಮನಸ್ಸಿನಲ್ಲಿ ಯಾವ ಜಾಗಗಳಿಗೆ ಹೋಗಬೇಕೆಂದು ನಿರ್ಧರಿಸಿದರೋ ಅವುಗಳಲ್ಲದೆ ಇನ್ನೂ ಹೆಚ್ಚು ಇತರ ಯಾತ್ರಾಸ್ಥಳಗಳಿಗೆ ಭೇಟಿ ನೀಡಿದ್ದರು. ಅವರು ಸಾಯಿಯ ವಚನಗಳ ಕೌತುಕಗಳನ್ನು ಮೆಚ್ಚಿದರು. ಮತ್ತು ಅನುಪಮ ಆನಂದವನ್ನು ಪಡೆದರು. ॥91॥ ನಂತರ ಆಶೀರ್ವಚನಗಳ ಜೊತೆಯಲ್ಲಿ, "ಅಲ್ಲಾನು ನಿಮಗೆ ಒಳ್ಳೆಯದು ಮಾಡುತ್ತಾನೆ" ಎಂಬ ಮಾತುಗಳು ಎಲ್ಲ ರೀತಿಯಲ್ಲಿಯೂ ಅಕ್ಷರಶಃ ಸತ್ಯವಾಗಿದ್ದವು. ಅವರ ಮನೋರಥವು ಪೂರ್ಣವಾಗಿ ನೆರವೇರಿತ್ತು. ॥92॥ ಈ ರೀತಿ ಸಮಸ್ತ ತೀರ್ಥೋಪಾಸಕರೂ, ಭಗವದ್ ಭಕ್ತರೂ ಆದ ಮದರಾಸಿ ಮಂಡಳಿಯ ಜನರೆಲ್ಲರೂ ಸಾತ್ವಿಕರೂ, ಧಾರ್ಮಿಕ ಬುದ್ಧಿಯವರೂ ಆಗಿದ್ದರು. ಸಾಯಿಯು ಎಲ್ಲರನ್ನೂ ಜನ್ಮಮೃತ್ಯುಗಳ ಚಕ್ರದಿಂದ ಬಿಡುಗಡೆ ಮಾಡಿದರು. ॥93॥ ಇದೇ ರೀತಿಯ ಇಷ್ಟೇ ಮಧುರವಾಗಿಯೂ ಕುತೂಹಲಕಾರಿಯೂ ಆದ ಇನ್ನೊಂದು ಕಥೆಯನ್ನು ನಾನು ಹೇಳುತ್ತೇನೆ. ಶ್ರೋತೃಗಳು ಇಷ್ಟು ಗೌರವದಿಂದ ಭಕ್ತಿಪೂರ್ವಕವಾಗಿ ಕೇಳಿದಲ್ಲಿ ಆಶ್ಚರ್ಯಚಕಿತರಾಗುವಿರಿ. ॥94॥ ನಮ್ಮ ಸಾಯಿಯು ಅದೆಷ್ಟು ಪರಮದಯಾಳು! ಅವರು ಯಾವ ರೀತಿ ತಮ್ಮ ಭಕ್ತರ ಕಾಮನೆಗಳನ್ನು ಪ್ರೀತಿಯಿಂದ ಪೂರೈಸುತ್ತಿದ್ದರು! ಅದಕ್ಕಾಗಿ ಸರ್ವದಾ ಅವಿಶ್ರಾಂತ ಪ್ರಯತ್ನ ಮಾಡುತ್ತಿದ್ದರು! ಅವರು ಭಕ್ತರಿಗೆ ಕಲ್ಪತರುವಾಗಿದ್ದರು! ॥95॥ ಥಾನೆ ಜಿಲ್ಲೆಯಲ್ಲಿ ಬಾಂದ್ರಾದಲ್ಲಿ ರಘುನಾಥರಾವ ತೆಂಡುಲ್ಕರ್ ಎಂಬ ಭಕ್ತಶ್ರೇಷ್ಠನು ಇದ್ದನು. ಅವನು ಚತುರನು, ಧೀರನು ಮತ್ತು ಅತ್ಯಂತ ಜ್ಞಾನಿಯೂ ಆಗಿದ್ದನು. ॥96॥ ಅವನು ಸದಾ ಆನಂದವಾಗಿಯೂ ಪ್ರೇಮಸ್ವರೂಪಿಯೂ ಆಗಿದ್ದನು. ಅವನು ಸಾಯಿಯ ಚರಣಕಮಲಗಳಿಗೆ ಬಂಧಿತನಾಗಿದ್ದನು. ಅವರ ಬೋಧನೆಯ ಮಕರಂದವನ್ನು ಪಡೆಯುವ ಆಶೆ ಹೊಂದಿದ್ದನು. ಅವನು ಅಖಂಡವಾಗಿ ನಾಮಸ್ಮರಣೆಯನ್ನು ಗುಣಗುಣಿಸುತ್ತ ಇದ್ದನು.

॥97॥ ಅವನು ಸಾಯಿಯ ಲೀಲೆಗಳನ್ನು 'ಭಜನಮಾಲಾ' ಎಂಬ ಗ್ರಂಥದಲ್ಲಿ ವಿವರಿಸಿರುವನು. ಅದನ್ನು ಭಕ್ತಿ ಮತ್ತು ಪ್ರೀತಿಯಿಂದ ಓದುವವನು ಸಾಯಿಯಿಂದ ಹೆಚ್ಚೆಹೆಚ್ಚಿಗೂ ಅನುಗ್ರಹೀತನಾಗುವನು. ॥98॥ ಅವನ ಪತ್ನಿಯ ಹೆಸರು ಸಾವಿತ್ರಿ ಮತ್ತು ಅವನ ಜ್ಯೇಷ್ಠ ಪುತ್ರನು ಬಾಬು. ಅವನ ವಿಚಿತ್ರ ಅನುಭವವನ್ನು ನೋಡಿರಿ. ಸಾಯಿಯ ಈ ಚರಿತ್ರೆಯನ್ನು ಆಲಿಸಿರಿ. ॥99॥ ಒಮ್ಮೆ ಬಾಬು ಮನದಲ್ಲೇ ಶಂಕೆಯುಳ್ಳವನಾದನು. ಅವನು ಅಲೋಪತಿಯಲ್ಲಿ ವೈದ್ಯಕೀಯ ಶಿಕ್ಷಣ ಪಡೆದಿದ್ದನು. ಆದರೆ ಪರೀಕ್ಷೆಗೆ ಕುಳಿತುಕೊಳ್ಳಲಿಲ್ಲ. ॥100॥ ಅವನು ರಾತ್ರಿಹಗಲು ಬಹಳ ಕಷ್ಟಪಟ್ಟು ಕೆಲಸ ಮಾಡಿದನು. ಅವನು ಒಬ್ಬ ಜ್ಯೋತಿಷಿಯನ್ನು ನೋಡಿ ತಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗುವೆನೋ ಇಲ್ಲವೋ ಎಂದು ಪ್ರಶ್ನೆ ಕೇಳಿದ್ದನು. ॥101॥ ಪಂಚಾಂಗದ ಹಾಳೆಗಳನ್ನು ತೆಗೆದು ಸೂಕ್ಷ್ಮವಾಗಿ ಅವಲೋಕನ ಮಾಡಿದ ಜ್ಯೋತಿಷಿಯು ಗ್ರಹಗಳ ಗತಿಯನ್ನು ಅಧ್ಯಯನ ಮಾಡಿ ಮತ್ತು ರಾಶಿ[9] ಮತ್ತು ನಕ್ಷತ್ರಗಳನ್ನು[10] ತನ್ನ ಬೆರಳುಗಳಿಂದ ಲೆಕ್ಕಹಾಕಿ ಬಹಳ ಚಿಂತಿತನಾದನು. ॥102॥ ಅವನು ಹೇಳಿದನು, "ನೀನು ಬಹಳ ಪರಿಶ್ರಮವಹಿಸಿ ಕೆಲಸಮಾಡಿರುವೆ. ಆದರೆ ಈ ವರ್ಷ ನಕ್ಷತ್ರಗಳು ಶುಭಕಾರಿಯಾಗಿಲ್ಲ. ಮುಂದಿನ ವರುಷ ಬಹಳ ಶುಭಕರವಾಗಿದೆ. ನೀನು ಮುಂದಿನ ವರ್ಷ ಯಾವುದೇ ಚಿಂತೆಯಿಲ್ಲದೇ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಅದು ನಿನಗೆ ಶ್ರೇಯಸ್ಕರವು." ॥103॥ ಆದ್ದರಿಂದ ಪರೀಕ್ಷೆಗೆ ಕುಳಿತುಕೊಳ್ಳುವ ಅವಶ್ಯಕತೆ ಏಕೆ? ಪ್ರಯತ್ನಗಳು ವಿಫಲವಾಗುತ್ತವೆ. ಆ ವಿದ್ಯಾರ್ಥಿಯು ಭಯದಿಂದಲೂ ಮಾನಸಿಕ ಖಿನ್ನತೆಯಿಂದಲೂತುಂಬಿಹೋದನು. ॥104॥ ಅನಂತರ ಸ್ವಲ್ಪ ಸಮಯದ ನಂತರ ಆ ವಿದ್ಯಾರ್ಥಿಯ ತಾಯಿಯು ಶಿರಡಿಗೆ ಬಂದಳು. ಅವಳು ಸಾಯಿಯ ಚರಣಗಳಲ್ಲಿ ನಮಸ್ಕರಿಸಿ ಕುಶಲ ವಾರ್ತಾಲಾಪದಿಂದ ಮಾತುಕತೆ ಪ್ರಾರಂಭಿಸಿದಳು. ॥105॥ ಆಗ, ಈ ವಿಷಯವು ಮಾತಿಗೆ ಬಂದಿತು. ಆಕೆಯೂ ಬಾಬಾರವರನ್ನು ಕರುಣಾಪೂರಿತ ವಚನಗಳಿಂದ ಪ್ರಾರ್ಥಿಸಿದಳು. ಮತ್ತು ಹೇಳಿದಳು ಅವಳ ಮಗನು ಗ್ರಹಗತಿಗಳು ಅನುಕೂಲಕರವಾಗಿದ್ದಿದ್ದರೆ ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದನೆಂದು ತಿಳಿಸಿದಳು. ॥106॥ "ಜ್ಯೋತಿಷಿಯು ಜಾತಕವನ್ನು ನೋಡಿದ್ದನು ಮತ್ತು ಕಾಲದ ಗ್ರಹಗತಿ, ಯೋಗ ಸರಿಯಿಲ್ಲವೆಂದು ಹೇಳಿದ್ದನು. ಆದ್ದರಿಂದ ಚೆನ್ನಾಗಿ ಓದಿದ್ದರೂ ತನ್ನ ಮಗನು ಪರೀಕ್ಷೆಗೆ ಕುಳಿತುಕೊಳ್ಳಬಾರದೆಂದು ನಿರ್ಧರಿಸಿದ್ದಾನೆ. ॥107॥ "ಆದುದರಿಂದ ಬಾಬಾ, ಅವನ ಗ್ರಹದಶೆ ಅವನ ಮೇಲೆ ಅದೇನು ಪ್ರಭಾವ ಬೀರುತ್ತಿರುವುದು? ಈ ವರ್ಷ ಏಕಿಷ್ಟು ನಿರಾಶೆ? ಪ್ರತಿಯೊಬ್ಬರೂ ಅವನು ಈ ವರ್ಷವೇ ಪರೀಕ್ಷೆ ಮುಗಿಸಲೆಂದು ಕಾತರರಾಗಿದ್ದಾರೆ." ॥108॥ ಅವಳ ಮಾತುಗಳನ್ನು ಕೇಳಿ, ಬಾಬಾ ಹೇಳಿದರು, "ಅವನಿಗೆ ನನ್ನ ಮಾತನ್ನು ಕೇಳುವುದಕ್ಕೆ ತಿಳಿಸು. ಜಾತಕವನ್ನು ಸುತ್ತಿ ಇಡು ಮತ್ತು ಪರೀಕ್ಷೆಗೆ ಕುಳಿತುಕೊಳ್ಳಲಿ ಯಾವುದೇ ಚಿಂತೆಬೇಡ." ॥109॥ "ಬೇರೆ ಯಾರ ಸಲಹೆಯನ್ನೂ ಕೇಳುವುದು ಬೇಡ. ಜಾತಕದ ಕಡೆ ನೋಡಬೇಡ. ಜ್ಯೋತಿಶಾಸ್ತ್ರವನ್ನು ನಂಬಬೇಡ. ಏಕಾಗ್ರ ಚಿತ್ತನಾಗಿ ಓದಲಿ. ॥110॥ "ನಿನ್ನ ಮಗನಿಗೆ ಹೇಳು ಅವನು ಪಾಸಾಗುವನು. ಅವನು

ಯಾವುದೇ ಚಿಂತೆಯಿಲ್ಲದೆ ಪರೀಕ್ಷೆಗೆ ಕುಳಿತುಕೊಳ್ಳಲಿ. ಅವನು ಯಾವುದೇ ಭರವಸೆಯನ್ನು ಕಳೆದುಕೊಳ್ಳುವುದು ಬೇಡ. ನನ್ನಲ್ಲಿ ಪೂರ್ಣ ವಿಶ್ವಾಸ ಇರಲಿ." ॥111॥ ತಾಯಿಯು ಬಾಬಾರವರ ಅನುಮತಿಯಿಂದ ತನ್ನ ಮನೆಗೆ ಹಿಂತಿರುಗಿದಳು. ಮಗನಿಗೆ ಬಾಬಾರವರ ಸಂದೇಶವನ್ನು ತಿಳಿಸಿ ಅವನಿಗೆ ಪೂರ್ಣ ಭರವಸೆ ನೀಡಿದಳು. ॥112॥ ಅಂತಹುದಾಗಿತ್ತು ಸಾಯಿ ವಚನಗಳಲ್ಲಿದ್ದ ಶಕ್ತಿ. ಅವಳ ಮಗನು ಪರೀಕ್ಷೆಗೆ ಕುಳಿತುಕೊಂಡನು ಮತ್ತು ಎಲ್ಲ ಪ್ರಶ್ನೆಗಳಿಗೂ ಚೆನ್ನಾಗಿ ಉತ್ತರ ಬರೆದನು. ॥113॥ ಅವನ ಲಿಖಿತ ಪರೀಕ್ಷೆಗಳು ಮುಗಿದವು. ಅವನು ಪೂರ್ಣವಾಗಿ ಉತ್ತರಿಸಿದನು. ಆದರೂ ಆತ್ಮವಿಶ್ವಾಸದ ಕೊರತೆಯು ಅವನನ್ನು ಆವರಿಸಿತು. ಸಂದೇಹಗಳು ಅವನ ದೃಢ ಮನಸ್ಸನ್ನು ಚೂರು ಮಾಡಿದವು. ॥114॥ ಅವನು ಉತ್ತೀರ್ಣನಾಗಲು ಸಾಕಾಗುವಷ್ಟು ಉತ್ತರಗಳನ್ನು ಬರೆದಿದ್ದರೂ ಸಹ ಆ ವಿದ್ಯಾರ್ಥಿಯು ಅವು ಸಾಕಾಗುವುದಿಲ್ಲವೆಂದು ಭಾವಿಸಿ ಧೈರ್ಯಗೆಟ್ಟನು. ॥115॥ ನಿಜವಾಗಿಯೂ ಅವನು ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದನು. ಆದರೂ ಅವನು ತಾನು ಅನುತ್ತೀರ್ಣನಾಗಿರುವೆನೆಂದು ಭಾವಿಸಿದನು. ಆದುದರಿಂದ ಅವನು ಉದಾಸನಾಗಿ ನಿರುತ್ಸಾಹ ಹೊಂದಿ ಮೌಖಿಕ ಪರೀಕ್ಷೆಗೆ ಹೋಗಲಾರದೆ ಹೋದನು. ॥116॥ ಮೌಖಿಕ ಪರೀಕ್ಷೆಯು ಪ್ರಾರಂಭವಾಯಿತು. ಮೊದಲನೆಯ ದಿನ ಕಳೆಯಿತು. ಎರಡನೆಯ ದಿವಸ ಅವನ ಸ್ನೇಹಿತನೊಬ್ಬನು ಬಂದನು. ಈ ವಿದ್ಯಾರ್ಥಿಯು ಭೋಜನ ಮಾಡುತ್ತಿರುವುದನ್ನು ನೋಡಿದನು. ॥117॥ ಅವನು ಹೇಳಿದನು, "ಇದೆಂತಹ ಆಶ್ಚರ್ಯ! ಪರೀಕ್ಷಕರು ನಿನ್ನ ಬಗ್ಗೆ ಚಿಂತಿತರಾಗಿದ್ದಾರೆ. ಅವರು ನನ್ನನ್ನು ಬರಹೇಳಿ ತೆಂಡೂಲ್ಕರನು ನಿನ್ನೆ ಗೈರುಹಾಜರಾದುದಕ್ಕೆ ಕಾರಣ ತಿಳಿದುಕೊಂಡು ಬಾ". ಎಂದು ಹೇಳಿದರು." ॥118॥ "ನಾನು ಲಿಖಿತ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿರುವಾಗ ಮೌಖಿಕ ಪರೀಕ್ಷೆಗೆ ಕುಳಿತುಕೊಳ್ಳುವ ಪ್ರಯಾಸ ಏಕೆ ತೆಗೆದುಕೊಳ್ಳಬೇಕು? ಆದ್ದರಿಂದ ನಾನು ಉದಾಸನಾಗಿ ಮನೆಯಲ್ಲೇ ಕುಳಿತುಕೊಂಡೆ." ತೆಂಡೂಲ್ಕರನು ಸ್ಪಷ್ಟವಾಗಿ ಹೇಳಿದನು. ॥119॥ "ಪರೀಕ್ಷಕರು, ತದ್ವಿರುದ್ಧವಾಗಿ, ನನಗೆ ಬರಹೇಳಿದರು ಮತ್ತು ನಿನ್ನನ್ನು ಏನಾದರೂ ಮಾಡಿ ಕರೆದುಕೊಂಡು ಬಾ ಎಂದರು ಮತ್ತು ನೀನು ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವೆಯೆಂಬ ಆನಂದಕರ ಸುದ್ದಿಯನ್ನು ಕೊಡಲು ಹೇಳಿದರು." ॥120॥ ಅನಂತರ ಅವನ ಸಂತಸವನ್ನು ಹೇಗೆ ವರ್ಣಿಸಲು ಸಾಧ್ಯ? ಅವನು ಸಾಯಿ ಮಹಾರಾಜರನ್ನು ಧ್ಯಾನಿಸಿ, ಮತ್ತೊಂದು ಕ್ಷಣವನ್ನೂ ವ್ಯರ್ಥಮಾಡದೆ ಉಲ್ಲಾಸ ಭಾವದಿಂದ ಧಾವಿಸಿದನು. ॥121॥ ಅದು ಹಾಗಿರಲಿ. ಎಲ್ಲವೂ ಸುಖಮಯವಾಗಿ ಜರುಗಿತು. ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕೆಂಬ ಆಸೆಯು ಪೂರ್ತಿಯಾಯಿತು. ಸಾಯಿಯೂ ಸಹ ಅವನ ಇಚ್ಛೆಯನ್ನು ಪೂರೈಸಿ ತಮ್ಮ ಚರಣಗಳಲ್ಲಿನ ಭಕ್ತಿಯನ್ನು ದೃಢಪಡಿಸಿದರು. ॥122॥ ಬೀಸುವ ಕಲ್ಲಿನ ಹಿಡಿಯನ್ನು ಗಟ್ಟಿಯಾಗಿ ಸಿಕ್ಕಿಸಬೇಕು ಆಗಾಗ್ಗೆ ಜೋರಾಗಿ ಅಲ್ಲಾಡಿಸಬೇಕಾಗುತ್ತದೆ. ಅದೇ ರೀತಿ ಗುರುಚರಣಗಳಲ್ಲಿನ ನಿಷ್ಠೆಯನ್ನು ಬಲಪಡಿಸಲು ಸಾಯಿಯು ಪರೀಕ್ಷೆಗಳನ್ನು ನೀಡುತ್ತಾರೆ. ॥123॥ ಅವರು ಎಂದಿಗೂ ಯಾರಿಗೂ

ಏನನ್ನೂ ಹೇಳುತ್ತಿರಲಿಲ್ಲ. ಅದರಿಂದ ಅವರ ಚಿತ್ತವೃತ್ತಿಯು ಅಲುಗಾಡಬಹುದಿತ್ತು. ಇದೇ ಬಾಬಾರವರ ಸನ್ನಿಧಿಯಲ್ಲಿ ನಿತ್ಯ ಅನುಭವವಾಗಿತ್ತು. ಈ ರೀತಿ ಅವರು ನಿಷ್ಠೆಯನ್ನು ದೃಢಪಡಿಸುತ್ತಿದ್ದರು. ॥124॥ ಯಾವಾಗ ಒಬ್ಬನು ನಿರ್ದಿಷ್ಟ ಮಾರ್ಗದಲ್ಲಿಯೇ ಹೋಗುವನೋ, ಮೊದ ಮೊದಲು ಎಲ್ಲವೂ ಚೆನ್ನಾಗಿರುವಂತೆಯೇ ಕಾಣುತ್ತದೆ. ಅನಂತರ ಮುಳ್ಳಿನ ಪೊದೆಗಳು ಎಲ್ಲೆಡೆಯೂ ಹರಡಿ ಎಲ್ಲ ಕಡೆಯಿಂದಲೂ ಕೇವಲ ಮುಳ್ಳೇ ಎದುರಾಗುತ್ತವೆ. ॥125॥ ಆಗ ಅವನ ನಿಷ್ಠೆಯು ಅಲುಗಾಡಿ, ಸಂಶಯಗಳು ಸಹಜವಾಗಿಯೇ ಹುಟ್ಟುತ್ತವೆ. "ಏಕೆ ಸಾಯಿಯೂ ನನ್ನನ್ನು ಈ ಕಷ್ಟವಾದ ಮಾರ್ಗದಲ್ಲಿ ತಂದರು?" ಎಂದು ಕೇಳಬಹುದು. ॥126॥ ಯಾರಿಗಾದರೂ ಈ ರೀತಿಯ ಭಾವನೆ ಬಂದಲ್ಲಿ ನಿಮ್ಮ ನಿಷ್ಠೆಗೆ ಬಲವಾಗಿ ಅಂಟಿಕೊಳ್ಳಿ. ಈ ಕಷ್ಟಗಳು ನಿಮ್ಮನ್ನು ಪರೀಕ್ಷಿಸಲೋಸುಗವೇ ಬಂದಿರುತ್ತವೆ. ಆಗ ಮಾತ್ರವೇ ದೃಢವಾದ ಶ್ರದ್ಧೆಯು ನಿಮ್ಮದೇ ಒಂದು ಭಾಗವಾಗುತ್ತದೆ. ॥127॥ ಈ ಕಷ್ಟಗಳನ್ನು ಎದುರಿಸುತ್ತ ಮತ್ತು ಸಾಯಿನಾಮ ಸ್ಮರಣೆಯನ್ನು ಅಖಂಡವಾಗಿ ಮಾಡಿದಲ್ಲಿ ಎಲ್ಲಾ ಅಪಾಯಗಳೂ ನಾಶವಾಗುತ್ತವೆ. ಇದೇ ನಾಮದ ಪ್ರಚಂಡ ಶಕ್ತಿಯು. ॥128॥ ಇದೇ ಈ ಕಷ್ಟಗಳೆಲ್ಲದರ ಅಂತರಾಳದ ಪ್ರಯೋಜನ. ಅವುಗಳೂ ಸಾಯಿಯ ನಿರ್ಮಾಣವೇ. ಆಗ ಮಾತ್ರವೇ ಸಾಯಿಯನ್ನು ಸ್ಮರಿಸಿ ನಾಮ ಸ್ಮರಣೆಯನ್ನು ಮಾಡುವನು ಮತ್ತು ಅದು ಎಲ್ಲಾ ಸಂಕಟಗಳನ್ನೂ ಉಪಶಮನಗೊಳಿಸುತ್ತದೆ. ॥129॥ ಅದು ಹಾಗಿರಲಿ. ಈ ಯುವಕನ ತಂದೆಯು ಬಾಬಾರವರ ಅತಿಪ್ರೇಮದ ಭಕ್ತನಾಗಿದ್ದನು. ಅವನು ಸಹನಶೀಲನೂ, ಉದಾರಿಯೂ ಮತ್ತು ಸಾತ್ವಿಕ ಗುಣಸಂಪನ್ನನೂ ಆಗಿದ್ದನು. ಅವನ ದೇಹವು ಬಹಳ ಶಿಥಿಲವಾಗಿ ಹೋಗಿತ್ತು. ॥130॥ ಅವನು ಒಬ್ಬ ಪ್ರಸಿದ್ಧ ಪರದೇಶೀ ವ್ಯಾಪಾರಿಯ ಹತ್ತಿರ ಕೆಲಸ ಮಾಡುತ್ತಿದ್ದನು. ಆ ವ್ಯಾಪಾರಿಗೆ ಮುಂಬಯಿಯಲ್ಲಿ ಒಂದು ದೊಡ್ಡ ವಹಿವಾಟು ಇತ್ತು. ಅವನಲ್ಲಿ ಬಹಳ ನಿಸ್ಪೃಹತೆಯಿಂದಲೂ ಸತ್ಯಶೀಲನಾಗಿಯೂ ಕೆಲಸ ಮಾಡುತ್ತಿದ್ದನು. ॥131॥ ಅನಂತರ, ವೃದ್ಧಾಪ್ಯ ಕಾಲದಲ್ಲಿ, ಅವನ ದೃಷ್ಟಿಯು ಮಂಕಾಗುತ್ತಿರಲು ಅವನುದೈಹಿಕವಾಗಿ ನಿಶ್ಶಕ್ತನಾದನು. ಅವನಿಗೆ ಪೂರ್ಣ ವಿಶ್ರಾಂತಿಯು ಬೇಕೆನ್ನಿಸಿತು. ॥132॥ ಅವನಿಗೆ ಕೆಲಸ ಮಾಡಲು ಶಕ್ತಿ ಇಲ್ಲದ ಕಾರಣ ರಘುನಾಥರಾವನು ತನ್ನ ಪ್ರಕೃತಿಯನ್ನು ಸುಧಾರಿಸಲು ರಜೆ ಹಾಕಿದನು ಮತ್ತು ವಿಶ್ರಾಂತಿ ಪಡೆದನು. ॥133॥ ರಜೆಯು ಸಂಪೂರ್ಣವಾಗಿ ಮುಗಿದ ನಂತರವೂ, ಅವನು ಪೂರ್ಣ ವಿಶ್ರಾಂತಿ ತೆಗೆದುಕೊಳ್ಳದೆ ಇದ್ದುದರಿಂದ, ಅವನು ರಜೆಯ ಮುಂದುವರಿಕೆಗೆ ಮತ್ತೊಂದು ಅರ್ಜಿಯನ್ನು ಸಲ್ಲಿಸಿದನು. ॥134॥ ಯಾವಾಗ ಅವನ ಮೇಲಿನ ಅಧಿಕಾರಿಯು ಅರ್ಜಿಯನ್ನು ನೋಡಿದನೋ, ಅವನು ರಜೆಯನ್ನು ಶಿಫಾರಸ್ಸು ಮಾಡಿದನು. ಆದರೆ ಕಛೇರಿಯ ವರಿಷ್ಠಾಧಿಕಾರಿಯು ಬಹಳ ವಿಚಾರವಂತನೂ ದಯಾಳುವೂ ಆಗಿದ್ದನು. ॥135॥ ಕಛೇರಿಯ ಮುಖ್ಯಾಧಿಕಾರಿಯು ಬಹಳ ಉದಾರಿಯಾಗಿದ್ದನು. ಈ ಕೆಲಸಗಾರನ ಪ್ರಾಮಾಣಿಕ ಸೇವೆಯನ್ನು ಪರಿಗಣಿಸಿ, ಅವನು ತನ್ನ ಮನೆ ಸಂಭಾಳಿಸಲು ಅನುಕೂಲವಾಗುವಂತೆ ಅರ್ಧ ಸಂಬಳದ ರಜೆಯನ್ನು ಅನುಮೋದಿಸಿದನು. ॥136॥ ಇದು

ಸರಕಾರೀ ಪದ್ಧತಿಯಾಗಿತ್ತು. ಇದನ್ನೇ ಉತ್ತಮ ವ್ಯಾಪಾರಿಗಳು, ಸನ್ನಿವೇಶಗಳಿಗೆ ತಕ್ಕುದಾಗಿ ತಮ್ಮ ಪ್ರಾಮಾಣಿಕರಾದ ಸೇವಕರ ನಿಮಿತ್ತವಾಗಿ, ಅವರನ್ನು ಉತ್ತೇಜಿಸಲು ಇದೇ ಪದ್ಧತಿಯನ್ನು ಅವಲಂಬಿಸುತ್ತಿದ್ದರು. ॥137॥ "ನನ್ನ ಯಜಮಾನನು ಈ ಸಂಬಳವನ್ನು ಇನ್ನೂ ಕೊಡುವನೇ! ನಾನು ಕೆಲಸ ಮಾಡಲು ಆಗುತ್ತಿಲ್ಲ, ಆದರೂ ಸಹ" ಎಂದು ತೆಂಡೂಲ್ಕರನು ಚಿಂತಿತನಾದನು. ॥138॥ "ನನ್ನ ಪೂರ್ತಿ ಸಂಬಳವು 150 ರೂಪಾಯಿಗಳು. ನನಗೆ 75 ರೂಗಳು ಪಿಂಚಣಿ ಬಂದರೆ ಮನೆಯ ಖರ್ಚನ್ನು ಹೇಗೆ ತೂಗಿಸುವುದು?" ಈ ಯೋಚನೆಯ ಸುಳಿಯಲ್ಲಿ ಅವನು ಸಿಲುಕಿದನು. ॥139॥ ಆದರೆ ಅನಂತರ, ಮತ್ತೊಂದು ವಿಶೇಷ ಸಂಗತಿ ಜರುಗಿತು. ಬಾಬಾರವರ ಅಪೂರ್ವ ಚಮತ್ಕಾರವನ್ನು ನೋಡಿ! ಅವರು ರಘುನಾಥರಾವ್‌ರ ಪತ್ನಿಯನ್ನು ಅವರ ಕುಶಲದ ಬಗ್ಗೆ ವಿಚಾರಿಸಿದರು. ಈ ವಿಚಿತ್ರವನ್ನು ಕೇಳಿರಿ. ॥140॥ ಪಿಂಚಣಿಯ ಬಗೆಗಿನ ಅಂತಿಮ ಆದೇಶ ಬರುವ 15 ದಿನಗಳ ಮೊದಲೇ, ಬಾಬಾರವರು ಅವಳ ಕನಸಿನಲ್ಲಿ ಬಂದು ಅವಳ ಅಭಿಪ್ರಾಯವನ್ನು ವಿಚಾರಿಸಿದರು. ॥141॥ "ಅವನಿಗೆ ನೂರು ರೂಪಾಯಿಗಳನ್ನು ಕೊಡಬಹುದೆಂದು ನನ್ನ ಇಷ್ಟ. ಅದು ನಿನಗೆ ತೃಪ್ತಿಯೇ?" ಅವರು ಕೇಳಿದರು. ಅದಕ್ಕೆ ಆ ಮಹಿಳೆ ಉತ್ತರಿಸಿದಳು. "ನೀವು ನನ್ನನ್ನೇಕೆ ಕೇಳುವಿರಿ? ನಮಗೆ ನಿಮ್ಮಲ್ಲಿ ಪೂರ್ಣ ಭರವಸೆ ಇದೆ." ॥142॥ ಅಲ್ಲಿ, ಅವನ ಅರ್ಜಿಯ ಮೇಲೆ ಒಂದು ನಿರ್ಧಾರ ತೆಗೆದುಕೊಳ್ಳಲಾಯಿತು. ರಘುನಾಥನು ಒಬ್ಬ ಪ್ರಾಮಾಣಿಕ ನೌಕರನಾಗಿದ್ದನು. ಅವನು ಅನೇಕ ವರ್ಷಗಳ ಕಾಲ ಉತ್ತಮ ಸೇವೆ ಸಲ್ಲಿಸಿದ್ದನು. ಆದ್ದರಿಂದ ಅವನಿಗೆ ಒಳ್ಳೆಯ ಪಿಂಚಣಿಯನ್ನೇ ಕೊಡಬೇಕು. ॥143॥ ಬಾಬಾರವರು, ನೂರು ರೂಪಾಯಿಗಳೆಂದು ಹೇಳಿದರೂ, ಅದರ ಜೊತೆ ಇನ್ನೂ ಹತ್ತು ರೂಪಾಯಿಗಳನ್ನು ಸೇರಿಸಿ[11] ಕೊಡಲಾಯಿತು. ಈ ರೀತಿ ಸಮರ್ಥರು ಕರುಣಾಮಯಿಯಾಗಿದ್ದು ತಮ್ಮ ಭಕ್ತರಲ್ಲಿ ಅಗಾಧ ಪ್ರೇಮ ತೋರಿಸುತ್ತಿದ್ದರು. ॥144॥ ಈಗ ಮತ್ತೊಂದು ಸುಂದರವಾದ ಮನೋರಂಜಕವಾದ ಭಕ್ತರಲ್ಲಿ ಪ್ರೇಮ ಮತ್ತು ಉಲ್ಲಾಸವನ್ನು ಹುಟ್ಟಿಸುವ ಕಥೆಯನ್ನು ಹೇಳುತ್ತೇನೆ. ಶ್ರೋತೃಗಳಿಗೆ ಆನಂದದಾಯಕವಾಗಿದೆ. ॥145॥ ಈ ಮಧುರ ಕಥೆಯು ಒಬ್ಬ ವೈದ್ಯ, ಕ್ಯಾಪ್ಟನ್ ಹಾಟೆ ಎಂಬುವವನದ್ದು. ಅವನೊಬ್ಬ ಶ್ರದ್ಧಾಳು ಭಕ್ತನಾಗಿದ್ದನು. ಅವನಿಗೆ ಬಾಬಾರವರು ಒಂದು ಬೆಳಗಿನ ಜಾವದಲ್ಲಿ ಕನಸಿನಲ್ಲಿ ದರ್ಶನವಿತ್ತರು. ॥146॥ ಹಾಟೆಯು ಗ್ವಾಲಿಯರ್‌ನಲ್ಲಿ ವಾಸಿಸುತ್ತಿದ್ದನು. ಕನಸಿನಲ್ಲಿ ಬಾಬಾರವರನ್ನು ನೋಡಿದನು. ಬಾಬಾರವರು ಅದೆಂತಹ ಚಾಣಾಕ್ಷತನದಿಂದ ಪ್ರಶ್ನೆಮಾಡಿದರು ಮತ್ತು ಹಾಟೆಯು ಯಾವ ರೀತಿ ಉತ್ತರಗಳನ್ನು ಕೊಟ್ಟನು ಎಂಬುದನ್ನು ನೋಡಿರಿ. ॥147॥ ಬಾಬಾ ಹೇಳಿದರು, "ನನ್ನನ್ನು ನೀನು ಮರೆತೇಬಿಟ್ಟೆಯೋ?" ಹಾಟೆಯು ಕೂಡಲೇ ಬಾಬಾರವರ ಚರಣಗಳನ್ನು ಹಿಡಿದು ಹೇಳಿದನು, "ಮಗುವು ತಾಯಿಯನ್ನು ಮರೆತರೆ ಅದನ್ನು ರಕ್ಷಿಸುವವರು ಯಾರು?" ॥148॥ ಕನಸಿನಲ್ಲಿಯೇ, ಅವನು ಬೇಗನೆ ಎದ್ದು ತೋಟಕ್ಕೆ ಹೋಗಿ ತಾಜಾ ವಾಲಪಾಪಡಿ[12], ಶಿರಾ[13]ಗಳನ್ನು ದಕ್ಷಿಣೆಯ ಜೊತೆ ಬಾಬಾರವರಿಗೆ ಅರ್ಪಿಸಿ ತನ್ನ ಭಕ್ತಿಯನ್ನು

ತೋರಿಸಬೇಕೆಂದುಕೊಂಡನು. ॥149॥ ಈ ಪದಾರ್ಥಗಳೆಲ್ಲವನ್ನೂ ಸಿದ್ಧಪಡಿಸಿಕೊಂಡು ತನ್ನ ಭಕ್ತಿಯನ್ನು ಸಿದ್ಧಪಡಿಸಲು ಹಾಟೆಯು ಬುಟ್ಟಿಯ ಮುಚ್ಚಳವನ್ನು ತೆಗೆದು ಅವುಗಳನ್ನು ಸಮರ್ಪಿಸಲು ಮುಂದೆ ಬಂದನು. ತಕ್ಷಣವೇ ಅವನ ಕಣ್ಣುಗಳು ತೆರೆದೊಂಡು, ಅದೊಂದು ಸ್ವಪ್ನವೆಂಬುದನ್ನು ಅರಿತನು. ॥150॥ ಕೂಡಲೇ ಹಾಟೆಯು ಮನಸ್ಸಿನಲ್ಲಿಯೇ ಕನಸಿನಲ್ಲಿ ಕಂಡ ವಸ್ತುಗಳನ್ನೆಲ್ಲ ಒಟ್ಟುಮಾಡಿ, ಶಿರಡಿಗೆ ಹೋಗಿ ಬಾಬಾರವರಿಗೆ ಪ್ರತ್ಯಕ್ಷವಾಗಿ ಸಮರ್ಪಿಸಬೇಕು ಎಂದುಕೊಂಡನು. ॥151॥ ಆದರೆ ಅವನು ಗ್ವಾಲಿಯರ್‌ನಲ್ಲಿ ಇದ್ದುದರಿಂದ ಮುಂಬಯಿಯಲ್ಲಿದ್ದ ತನ್ನ ಸ್ನೇಹಿತನಿಗೆ[4] ಒಂದು ಪತ್ರವನ್ನು ಬರೆದನು. ಅವನಿಗೆ ಸಕಲ ವೃತ್ತಾಂತವನ್ನೂ ಸಾದ್ಯಂತವಾಗಿ ವಿವರಿಸಿ ಶಿರಡಿಗೆ ಖುದ್ದಾಗಿ ಹೋಗಲು ಪ್ರೇರೇಪಿಸಿದನು. ॥152॥ "ಹಣವನ್ನು ಟಪಾಲಿನ ಮೂಲಕ ಕಳಿಸುತ್ತೇನೆ. ಒಳ್ಳೆಯ ಗುಣಮಟ್ಟದ ಶಿರಾವನ್ನು ಕೊಂಡುಕೋ ಮತ್ತು ಹೇಗಾದರೂ ಮಾಡಿ ಒಳ್ಳೆಯ ಗುಣಮಟ್ಟದ ವಾಲಪಾಪಡಿಯನ್ನು ತಂದು ಸುಂದರವಾಗಿ ಜೋಡಿಸು. ॥153॥ "ಉಳಿದ ಹಣವನ್ನು ನಿನ್ನೊಡನೆ ತೆದುಕೊಂಡು ಹೋಗಿ ಬಾಬಾರವರಿಗೆ ಅರ್ಪಿಸು. ಶಿರಾ ಮತ್ತಿತರ ವಸ್ತುಗಳ ಜೊತೆ ಸಮರ್ಪಿಸು. ಅವರ ಚರಣಗಳಿಗೆ ನಮಸ್ಕರಿಸಿ ಪ್ರಸಾದವನ್ನು ಬೇಡಿ ನನಗೆ ಕಳಿಸು." ॥154॥ ಹಣ ತಲಪಿದ ಕೂಡಲೇ ಆ ಸ್ನೇಹಿತನು ಶಿರಡಿಗೆ ಹೊರಟನು. ಅವನು ಬರೆದ ಎಲ್ಲ ಪದಾರ್ಥಗಳನ್ನೂ ಖರೀದಿಸಿದನು. ಆದರೆ ಪಾಪಡಿ ಮಾತ್ರ ಎಷ್ಟು ಕಷ್ಟಪಟ್ಟರೂ ಸಿಗಲಿಲ್ಲ. ಆ ಕೂಡಲೇ ಒಂದು ಬುಟ್ಟಿಯು ಅಲ್ಲಿಗೆ ಬಂದಿತು. ॥155॥ ಅದನ್ನು ಒಬ್ಬ ಮಹಿಳೆಯು ಹೊತ್ತುಕೊಂಡು ಬಂದಿದ್ದಳು. ಅವನು ಆಕೆಯನ್ನು ಕರೆದು ನೋಡಿದಾಗ ಅಲ್ಲಿ ವಾಲಪಾಪಡಿಯು ಇರುವುದನ್ನು ನೋಡಿ ಸಕಲರೂ ಆಶ್ಚರ್ಯಪಟ್ಟರು. ॥156॥ ಅನಂತರ ಅವನು ಎಲ್ಲ ಪದಾರ್ಥಗಳನ್ನೂ ತೆಗೆದುಕೊಂಡು ಹೋಗಿ ಗೌರವಪೂರ್ವಕವಾಗಿ ಮಹಾರಾಜ್‌ರಿಗೆ ಅರ್ಪಿಸಿದನು. ಅವರು ಅವುಗಳನ್ನು ನಿಮೋಣಕರ್‌ನಿಗೆ ಮಾರನೆಯ ದಿನದ ನೈವೇದ್ಯಕ್ಕಾಗಿ ಕೊಟ್ಟರು. ॥157॥ ಮಾರನೆಯ ದಿನ ಬಾಬಾರವರು ಊಟಮಾಡಲು ಕುಳಿತಾಗ, ಅವರು ಬೇಳೆ (ತೊವ್ವೆ), ಅನ್ನ ಇವುಗಳನ್ನು ಮುಟ್ಟಲಿಲ್ಲ. ಆದರೆ ಅವರು ಕೇವಲ ವಾಲಪಾಪಡಿಯನ್ನು ಮಾತ್ರ ತೆಗೆದುಕೊಂಡರು. ಸಕಲರೂ ಆಶ್ಚರ್ಯಚಕಿತರಾದರು. ॥158॥ ಅವರು ಕೇವಲ ವಾಲಪಾಪಡಿಯನ್ನು ಮಾತ್ರ ತಿಂದರು. ಹಾಟೆಯು ಈ ವೃತ್ತಾಂತವನ್ನು ಕೇಳುತ್ತಲೇ ಅತ್ಯಂತ ಆನಂದಪಟ್ಟನು. ॥159॥ 'ಯಾರ ಮನದಲ್ಲಿ ಯಾವ ಭಾವವಿರುತ್ತದೆಯೋ ಅದೇ ರೀತಿಯ ಅನುಭವವನ್ನು 'ಪಡೆಯುತ್ತಾರೆ.' ಹಾಟೆಯ ಅನುಭವವೂ ಅದೇ ರೀತಿಯದಾಗಿತ್ತು. ಈಗ ಮುಂದಿನ ಕಥೆಯ ಅದ್ಭುತವನ್ನು ಕೇಳಿರಿ ಮತ್ತು ಸಾಯಿಯ ಮಧುರವಾದ ಸೌಜನ್ಯಭಾವವನ್ನು ತಿಳಿಯಿರಿ. ॥160॥ ಸಾಯಿಯವರ ಹಸ್ತಸ್ಪರ್ಶದಿಂದ ಪವಿತ್ರವಾದ ಒಂದು ರೂಪಾಯಿಯ ನಾಣ್ಯವನ್ನು ಮನೆಯಲ್ಲಿ ಇಟ್ಟುಕೊಳ್ಳಬೇಕೆಂಬ ಇಚ್ಛೆಯು ಹಾಟೆಯ ಮನದಲ್ಲಿ ಉದ್ಭವಿಸಿತು. ಸಾಯಿಯು ಅವನ ಇಚ್ಛೆಯನ್ನು ಪೂರೈಸಿದರು. ॥161॥ ಮನಸ್ಸಿನಲ್ಲಿ ಕೋಟ್ಯನುಕೋಟಿ ವೃತ್ತಿಗಳು ಏಳುತ್ತವೆ.

ತೊಂದರೆಕೊಡುವುದನ್ನೆಲ್ಲ ತ್ಯಜಿಸಿ ಕೇವಲ ಒಳ್ಳೆಯದನ್ನು ಮಾತ್ರ ಇಟ್ಟುಕೊಳ್ಳಬೇಕು. ಈಗ ಭಕ್ತರಿಗೆ ಸಹಾಯ ಮಾಡುವಲ್ಲಿ ಇರುವ ಸಾಯಿಯ ಕುಶಲತೆಯನ್ನು ಗಮನಿಸಿ. ॥162॥ ಹಾಟೆಯ ಮನದಲ್ಲಿ ಅಂತಹ ಸದಿಚ್ಛೆಯು ಹುಟ್ಟಿದಾಗ ಅದನ್ನು ಸಫಲಗೊಳಿಸಲು ಸಮಯವೇನೂ ಬೇಕಾಗಲಿಲ್ಲ. ಅವನ ಸ್ನೇಹಿತನೊಬ್ಬನು ಸಾಯಿ ದರ್ಶನಕ್ಕಾಗಿ ಶಿರಡಿಗೆ ಇನ್ನೇನು ಹೊರಡಬೇಕೆಂದಿದ್ದನು. ॥163॥ ಕೇವಲ ಉದ್ದೇಶಮಾತ್ರವೇ ಒಳ್ಳೆಯದಿರಬೇಕು. ಆಗ ಸಾಯಿಯು ಅತ್ಯಾಶ್ಚರ್ಯಕರವಾಗಿ ನೆರವೇರಿಸುತ್ತಾರೆ. ಯಾರಿಗೆ ಕೇವಲ ಸದ್‌ವೃತ್ತಿಗಳು ಇವೆಯೋ, ಅವರ ಯೋಗ ಕ್ಷೇಮವು ಸಾಯಿಯ ಕೈಯಲ್ಲಿರುತ್ತದೆ. ॥164॥ ಆಗ ಹಾಟೆಯು ತನ್ನ ಸ್ನೇಹಿತನಿಗೆ ಒಂದು ರೂಪಾಯಿಯನ್ನು ಕೊಟ್ಟು ಅತಿ ಪ್ರೀತಿಯಿಂದ 'ಅದನ್ನು ಬಾಬಾರವರ ಕೈಯಲ್ಲಿಡಲು ಮರೆಯಬಾರದು' ಎಂದು ಹೇಳಿದನು. ॥165॥ ಅವನ ಸ್ನೇಹಿತನು ಶಿರಡಿಗೆ ಹೋದಾಗ, ತಕ್ಷಣವೇ ದರ್ಶನಕ್ಕಾಗಿ ಹೋದನು. ಅವನು ಅವರ ಚರಣಗಳಲ್ಲಿ ಶಿರಬಾಗಿ ವಂದಿಸಿದನು. ಅನಂತರ ಬಾಬಾರವರ ಸಮ್ಮುಖದಲ್ಲಿ ಕುಳಿತನು. ॥166॥ ಬಾಬಾರವರು ದಕ್ಷಿಣೆಗಾಗಿ ಕೈಚಾಚಿದರು. ಆದ್ದರಿಂದ ಅವನು ಮೊದಲು ದಕ್ಷಿಣೆಯನ್ನು ಕೊಟ್ಟನು. ಬಾಬಾರವರು ಅದನ್ನು ತಮ್ಮ ಜೇಬಿನಲ್ಲಿ ತಕ್ಷಣ ಇಟ್ಟುಕೊಂಡರು. ಅನಂತರ ಅವನು ಹಾಟೆಯ ಹಣವನ್ನು ಹೊರತೆಗೆದನು. ॥167॥ ಕೈಗಳನ್ನು ಜೋಡಿಸಿಕೊಂಡು, ಆ ಹಣವನ್ನೂ ಸಹ ಬಾಬಾರವರ ಅಂಗೈಯಲ್ಲಿ ಹಾಕಿ ಹೇಳಿದನು, "ಈ ದಕ್ಷಿಣೆಯನ್ನು ಡಾ. ಹಾಟೆಯು ನನ್ನ ಜೊತೆ ಕಳಿಸಿದ್ದಾನೆ." ॥168॥ ಈ ಸಾಯಿಯು ಸರ್ವ ಹೃದಯವಾಸಿಯಾಗಿದ್ದು, ಹಾಟೆಯು ಗ್ವಾಲಿಯರ್‌ನಲ್ಲಿ ಇದ್ದರೂ ಸಹ ಅವನ ಮನಸ್ಸಿನಲ್ಲಿರುವ ಇಚ್ಛೆಯನ್ನು ಅರಿತು, ಅದರ ಕಡೆ ಸೂಕ್ಷ್ಮವಾಗಿ ನೋಡುತ್ತಾ ಕುಳಿತರು. ॥169॥ ಪ್ರೇಮೋನ್ಮುಖರಾಗಿ, ಬಾಬಾರವರು ಆ ರೂಪಾಯಿಯನ್ನು ತಮ್ಮ ಕಣ್ಣಮುಂದೆ ಹಿಡಿದರು. ಅವರು ಅದನ್ನು ಏಕಾಗ್ರದೃಷ್ಟಿಯಿಂದ ಅವಲೋಕಿಸಲು ಪ್ರಾರಂಭಿಸಿದರು. ಅಲ್ಲಿದ್ದ ಜನರೆಲ್ಲರೂ ಅವರನ್ನು ದೃಷ್ಟಿಸಿ ನೋಡಲಾರಂಭಿಸಿದರು. ॥170॥ ಅವರು ಆ ನಾಣ್ಯವನ್ನು ಬಲಗೈ ಹೆಬ್ಬೆಟ್ಟಿನಿಂದ ಮೇಲಕ್ಕೆ ಚಿಮ್ಮಿಸಿ ತಮ್ಮ ಎರಡೂ ಕೈಗಳಿಂದ ಹಿಡಿದುಕೊಂಡರು, ಈ ರೀತಿ ಅವರು ಕೆಲವು ಕಾಲ ಅದರೊಡನೆ ಆಟವಾಡಿದರು. ಅನಂತರ, ಆ ರೂಪಾಯಿಯನ್ನು ಹಿಂದಿರುಗಿಸಿದರು. ॥171॥ ಮತ್ತು ಹೇಳಿದರು, "ಅದು ಯಾರಿಗೆ ಸೇರಿದ್ದೋ ಅವರಿಗೆ ಹಿಂತಿರುಗಿಸು. ಅದರ ಜೊತೆಗೆ ಉದಿ ಪ್ರಸಾದವನ್ನೂ ತೆಗೆದುಕೊ. ಅವನಿಗೆ ಹೇಳು, ನಾನು ಅವನಿಂದ ಏನನ್ನೂ ಇಚ್ಛಿಸುವುದಿಲ್ಲವೆಂದು ಮತ್ತು ಚೆನ್ನಾಗಿರು ಎಂದು." ॥172॥ ಬಾಬಾರವರ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿ, ಉದಿ ಪ್ರಸಾದವನ್ನು ಅದನ್ನು ಧರಿಸುವ ಜಾಗದಲ್ಲಿಟ್ಟುಕೊಂಡು, ಆ ಸ್ನೇಹಿತನು ಬಾಬಾರವರ ಆಜ್ಞೆಯನ್ನು ಪಡೆದು ಗ್ವಾಲಿಯರ್‌ನ ತನ್ನ ಮನೆಗೆ ಹಿಂದಿರುಗಿದನು. ॥173॥ ಗ್ವಾಲಿಯರ್ ತಲುಪಿದ ಮೇಲೆ ರೂಪಾಯಿಯನ್ನು ಆ ಡಾಕ್ಟರರಿಗೆ ಕೊಟ್ಟ ನಂತರ ಸಕಲ ವೃತ್ತಾಂತವನ್ನೂ, ಏನು ನಡೆಯಿತೆಂಬುದನ್ನೂ ವಿವರಿಸಿದನು. ಹಾಟೆಯು ಭಾವೋದ್ರಿಕ್ತನಾಗಿ ಗದ್ಗದ ಕಂಠನಾದನು.

॥174॥ ಅವನು ಹೇಳಿದನು, "ನನ್ನ ಮನಸ್ಸಿನಲ್ಲಿದ್ದ ಉದ್ದೇಶ ಮತ್ತು ನಾನು ಆಶೆಪಟ್ಟಂತೆಯೇ ಬಾಬಾರವರು ನನ್ನ ಮನೋರಥವನ್ನು ತಿಳಿದು ಈಡೇರಿಸಿದ್ದಾರೆ." ॥175॥ ಇದು ಹಾಟೆಯ ಮನಸ್ಸಿನ ಭಾವನೆಯಾಗಿತ್ತು, ಆದರೆ, ಇದು ಅವನ ಕಲ್ಪನೆಯಷ್ಟೆ. ಸಧರ ಯೋಜನೆಗಳನ್ನೂ ಅವುಗಳ ಪ್ರಯೋಜನಗಳನ್ನೂ ಯಾರು ತಾನೇ ಅರ್ಥಮಾಡಿಕೊಳ್ಳಬಲ್ಲರು? ॥176॥ ಬಹುಶಃ ಇದು (ಹಾಟೆಯ ನಂಬಿಕೆ) ನಿಜವಾಗಿದ್ದರೂ ಸಹ ಮತ್ತೊಂದು ಘಟನೆಯನ್ನು ನೋಡಿರಿ. ಇದು ಅದಕ್ಕೆ ತದ್ವಿರುದ್ಧವಾಗಿದೆ. ಕೇವಲ ಸಂತರು ಮಾತ್ರವೇ ಅವುಗಳ ಇಂಗಿತವನ್ನು ಅರಿಯಬಲ್ಲರು. ॥177॥ ಅವರು ಒಬ್ಬ ವ್ಯಕ್ತಿಯ ರೂಪಾಯಿಯನ್ನೂ ಹಿಂತಿರುಗಿಸಿದರು ಮತ್ತು ಮತ್ತೊಬ್ಬನದನ್ನು ಜೇಬಿಗೆ ಇಳಿಸಿದರು! ನಿಶ್ಚಿತವಾದ ಕಾರಣವನ್ನು ಯಾರು ತಾನೇ ವಿವರಿಸಲು ಸಾಧ್ಯ? ಮತ್ತು ಬಾಬಾರವರ ಮನಸ್ಸಿನಲ್ಲಿ ಏನಿತ್ತು? ॥178॥ ಕೇವಲ ಅವರು ಮಾತ್ರವೇ ತಮ್ಮ ಕಾರಣಗಳನ್ನು ಬಲ್ಲರು. ನಾವು ಕೇವಲ ಏನು ನಡೆಯುತ್ತಿದೆ ಎಂಬುದನ್ನು ನೋಡಿ ಸಂತಸ ಪಡಬೇಕು ಮತ್ತು ಹಾಗೆ ಮಾಡುವಂತಹ ಇಂತಹ ಮಧುರ ಅವಕಾಶಗಳನ್ನು ತಪ್ಪಿಸಬಾರದು. ಈ ಉದ್ದೇಶಕ್ಕಾಗಿಯೇ ಈ ಕಥೆಯನ್ನು ಕೇಳಿರಿ. ॥179॥ ಒಮ್ಮೆ, ವಾಮನ ನಾರ್ವೇಕರನು, ಬಾಬಾರವರಲ್ಲಿ ಅಪಾರ ಪ್ರೇಮವಿಟ್ಟವನು, ಬಾಬಾರವರಿಗೆ ಭಕ್ತಿಪುರಸ್ಸರವಾಗಿ ಸಮರ್ಪಿಸಲು ಒಂದು ಸುಂದರವಾದ ರೂಪಾಯಿ ನಾಣ್ಯವನ್ನು ತೆಗೆದುಕೊಂಡು ಬಂದನು. ॥180॥ನಾಣ್ಯದ ಒಂದು ಮುಖದಲ್ಲಿ ರಾಮ, ಲಕ್ಷ್ಮಣ ಮತ್ತು ಸೀತೆಯ ಮೂರ್ತಿಗಳನ್ನು ಕೆತ್ತಲಾಗಿತ್ತು ಮತ್ತೊಂದು ಕಡೆ ಕೈಗಳನ್ನು ಜೋಡಿಸಿಕೊಂಡಿರುವ ಸುಂದರವಾದ ಮಾರುತಿಯ ಮೂರ್ತಿಯು ಇತ್ತು. ॥181॥ ಅದನ್ನು ಅರ್ಪಿಸುವ ಅವನ ಉದ್ದೇಶ, ಬಾಬಾರವರ ಹಸ್ತಸ್ಪರ್ಶವಾದ ನಂತರ ಅದನ್ನು ಹಿಂದಕ್ಕೆ ಪಡೆಯುವುದು, ಉದಿ ಮತ್ತು ಪ್ರಸಾದಗಳ ಜೊತೆ ತೆಗೆದುಕೊಳ್ಳುವುದಿತ್ತು. ॥182॥ ಬಾಬಾರವರಿಗೆ ಸದಾ ಕಾಲ ಇತರರ ಮನಸ್ಸಿನಲ್ಲಿರುವುದೆಲ್ಲವೂ ತಿಳಿದಿತ್ತು, ಆದರೂ ನಾಣ್ಯವನ್ನು ಅವರ ಹಸ್ತದಲ್ಲಿಟ್ಟಾಗ, ಕೂಡಲೇ ತಮ್ಮ ಜೇಬಿನಲ್ಲಿ ಹಾಕಿಕೊಂಡರು. ॥183॥ ಮಾಧವರಾವ್‌ನು ಬಾಬಾರವರಿಗೆ ವಾಮನರಾವನ ಮನಸ್ಸಿನ ಇಚ್ಛೆಯನ್ನು ವಿವರಿಸಿದನು ಮತ್ತು ನಾಣ್ಯವನ್ನು ಅವನಿಗೆ ಹಿಂತಿರುಗಿಸುವಂತೆ ಅತ್ಯಂತ ವಿನೀತನಾಗಿ ಬೇಡಿದನು. ॥184॥ "ಅವನಿಗೆ ಏಕೆ ಅದನ್ನು ಕೊಡಬೇಕು? ನಾವು ಅದನ್ನು ನಮಗಾಗಿಯೇ ಇಟ್ಟುಕೊಳ್ಳಬೇಕು" ಎಂದು ಬಾಬಾರವರು ವಾಮನರಾವ್‌ನ ಸಮಕ್ಷಮದಲ್ಲಿಯೇ ಸ್ಪಷ್ಟವಾಗಿ ನುಡಿದರು. ॥185॥ "ಆದರೂ ಸಹ ಅವನೇನಾದರೂ ಅದರ ಬದಲಿಗೆ ಇಪ್ಪತ್ತೈದು ರೂಪಾಯಿಗಳನ್ನು ಅದರ ಬೆಲೆಯಾಗಿ ಕೊಟ್ಟಲ್ಲಿ ಅದನ್ನು ಬದಲಿಗೆ ಅವನಿಗೆ ಕೊಡುತ್ತೇನೆ" ಎಂದು ಬಾಬಾರವರು ಅವನಿಗೆ ತಿಳಿಸಲು ಹೇಳಿದರು. ॥186॥ ಅನಂತರ, ಆ ನಾಣ್ಯವನ್ನು ಹಿಂದಕ್ಕೆ ಪಡೆಯಲು ವಾಮನ ರಾವ್ ಬೇಗನೇ ಅಲ್ಲಿಂದ ಇಲ್ಲಿಂದ ಅಷ್ಟು ಹಣವನ್ನು ಸೇರಿಸಿ ಅವುಗಳನ್ನು ಬಾಬಾರವರಿಗೆ ಕೊಟ್ಟನು.॥187॥ ಹಿಂದಿನಂತೆಯೇ ಹಣವನ್ನು ತಮ್ಮ ಜೇಬಿನಲ್ಲಿ ಹಾಕಿಕೊಂಡು ಹೇಳಿದರು, "ರೂಪಾಯಿಗಳ ರಾಶಿಯೇ ಆದರೂ ನಾಣ್ಯದ ಬೆಲೆಗೆ ಸಮಾನವಾಗಿ ತೂಗುವುದಿಲ್ಲ.

ಅವುಗಳ ಬೆಲೆಯು ಈ ನಾಣ್ಯಕ್ಕಿಂತ ಕಡಿಮೆ ಇದೆ." ॥188॥ ಮತ್ತೆ ಅವರು ಹೇಳಿದರು, "ಶ್ಯಾಮಾ, ಇದನ್ನು ನೀನು ತೆಗೆದುಕೋ. ಅದು ನಮ್ಮ ಸಂಗ್ರಹದಲ್ಲಿ ಇರಲಿ. ಇದನ್ನು ದೇವರ ಮನೆಯಲ್ಲಿ ಇಡು ಮತ್ತು ಪೂಜೆ ಮಾಡುತ್ತಾ ಹೋಗು." ॥189॥ ಈಗ, ಅವರೇಕೆ ಈ ರೀತಿ ವರ್ತಿಸಿದರು? ಅವರನ್ನು ಪ್ರಶ್ನಿಸುವ ಅಧಿಕಾರ ಯಾರಿಗಿದೆ? ಸಾಯಿಗೆ ಗೊತ್ತು ಯಾವುದು ಸರಿ ಮತ್ತು ಯಾವುದು ತಪ್ಪು ಎಂದು. ಅವರೇ ಸಮರ್ಥವಾದುದನ್ನು ಕೊಡುವವರೂ ಮತ್ತು ತೆಗೆದುಕೊಳ್ಳುವವರೂ ಅವರೇ. ॥190॥ ಅದು ಹಾಗಿರಲಿ, ಈಗ ಕಥೆಯು ಪೂರ್ಣಗೊಂಡಿದ್ದರಿಂದ ಶ್ರೋತೃಗಳ ಮನಸ್ಸಿಗೆ ವಿಶ್ರಾಂತಿ ಕೊಡೋಣ. ಅವರು ಇವುಗಳನ್ನು ಈಗಾಗಲೇ ಕೇಳಿದ ಕಥೆಗಳನ್ನು ಮನನ ಮಾಡಿ ಅವುಗಳ ಮೇಲೆ ನಿರಂತರ ನಿಧಿಧ್ಯಾಸನ ಮಾಡಲಿ. ॥191॥ ಯಾವುದನ್ನೇ ಮಾಡಿರಲಿ ಅಥವಾ ಕೇಳಿರಲಿ, ಮನನ ಮಾಡದೇ ಇದ್ದಲ್ಲಿ ಮತ್ತು ನಿರಂತರ ಧ್ಯಾನಿಸದೇ ಇದ್ದಲ್ಲಿ ಜೀರ್ಣಿಸಲು ಸಾಧ್ಯವಿಲ್ಲ. ಕೇವಲ ಶ್ರವಣ ಮಾತ್ರವಾದರೆ ನಿಷ್ಪ್ರಯೋಜನವಾಗುತ್ತದೆ. ॥192॥ ಆದುದರಿಂದ, ಹೇಮಾಡ ಸಾಯಿಗೆ ಶರಣಾಗುತ್ತಾನೆ. ಅವನು ಅವರ ಚರಣಗಳನ್ನು ತನ್ನ ತಲೆಯಮೇಲೆ ಇಟ್ಟುಕೊಳ್ಳುತ್ತಾನೆ. ಅದು ಸಕಲ ಸಾಧನೆಗಳಿಗಿಂತಲೂ ಉತ್ತಮವಾದ ಸಾಧನೆ. ಮುಂದಿನ ನಿರೂಪಣೆಯು ಮುಂದೆ ಬರುತ್ತದೆ. ॥193॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸ್ವಪ್ನಕಥೆಗಳ ನಿರೂಪಣೆ" ಎಂಬ ಇಪ್ಪತ್ತೊಂಬತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.


।ಸನ್ಮಂಗಳವಾಗಲಿ।

ಟಿಪ್ಪಣಿ:

1. ಬಾಬಾರವರ ಭಕ್ತ ಕೊಂಡಾಜಿಯ ಮಗಳು.
2. ಆ ಪೆಟ್ಟಿಗೆಯು ಮೂಲತಃ 'ಚಿಂತಾನ್' ಎಂಬ ಸಣ್ಣದಾದ ಸುಗಂಧಿತ ಗುಳಿಗೆಗಳು ವೀಳ್ಯದೆಲೆ ಅಥವಾ ಹಾಗೆಯೇ ಸೇವಿಸುವಂತಹುದು.
3. ಕೊಂಡಾಜಿಯ ಹೆಂಡತಿ ಮತ್ತು ಅಮನಿಯ ತಾಯಿ.
4. ಸೀತೆ, ಅಂದರೆ ಅವರು ಅವನನ್ನು ರಾಮನಂತೆ ನೋಡಿದಳು.

5. ಸಮುದ್ರ ಮಂಥನವಾದಾಗ ದೊರಕಿದಂತಹ ಹದಿನಾಲ್ಕು ಬೆಲೆಬಾಳುವ ವಸ್ತುಗಳಲ್ಲಿ ಒಂದು.
6. ಒಂದು ಹಸ್ತ, ಐದು ಜನ ಮುಸ್ಲಿಂ ಮಹಾ ಸಂತರ ಸಂಕೇತ.
7. ಬಂಯರ್, ಅಂದರೆ ಮೊಹರಂ ಹಬ್ಬದಲ್ಲಿ ಮೆರವಣಿಗೆಗೆ ತೆಗೆದುಕೊಂಡು ಹೋಗುವ ಹಸನ್ ಮತ್ತು ಹುಸೇನ್ ಅವರ ಗೋರಿಗಳನ್ನು ಸಾಂಕೇತಿಸುವುದು.
8. ಐದು ವಿಷಯಗಳನ್ನು ವಿವರಿಸುವ ಪಂಚಾಂಗ. ಚಂದ್ರನ ದಿನ, ವಾರದ ದಿನ, ಗ್ರಹಗಳ ಚಲನೆ ಮತ್ತು ಅರ್ಧ ಚಂದ್ರನ ದಿನ.
9. ರಾಶಿ ಚಕ್ರದ ಸಂಕೇತ.
10. ಚಂದ್ರನ ಮಾರ್ಗದಲ್ಲಿರುವ ನಕ್ಷತ್ರ ಪುಂಜ.
11. ತೆಂಡುಲ್ಕರನು ನೂರಹತ್ತು ರೂಪಾಯಿಗಳ ಪಿಂಚಣಿಯೊಂದಿಗೆ ಸೇವೆಯಿಂದ ನಿವೃತ್ತಿಹೊಂದಿದನು.
12. ಮೇಣದ ಬೀಜಗಳು.
13. ಅಕ್ಕಿ, ಬೇಳೆ, ಹಿಟ್ಟು ಮತ್ತು ತುಪ್ಪ.
14. ಕ್ಯಾಪ್ಟನ್ ಹಾಟೆಯು ಲಷ್ಕರ್ (ಗ್ವಾಲಿಯರ್)ನಿಂದ ಕ್ರಿಸ್ಮಸ್‌ರಂದು ಶ್ರೀ ಹೆಚ್. ಎಸ್. ದೀಕ್ಷಿತ್‌ರವರಿಗೆ ಬರೆದ ಪತ್ರದ ಭಾಗ –

"ನಾನು ಮೈಲುಗಳಷ್ಟು ದೂರವಿದ್ದರೂ ಸಹ ಸಾಯಿಬಾಬಾ ಸದ್ಗುರುವು ನನ್ನ ಮೇಲೆ ತೋರಿದಂತಹ ದಯೆ ಮತ್ತು ಮಾಡಿದ ಉಪಕಾರ ಅದ್ಭುತವಾದುದು. ಕರ್ತವ್ಯವು ನನ್ನನ್ನು ಇಲ್ಲಿಯೇ ಉಳಿಸಿದೆ, ಆದರೆ ನಾನು ಶಿರಡಿಗೆ ಬರುವ ಮೊದಲು ಅವಕಾಶವನ್ನು ತೆಗೆದುಕೊಳ್ಳುತ್ತೇನೆ. ಸಾಯಿಬಾಬಾರವರಲ್ಲಿ ನನ್ನ ವಿನಯಪೂರ್ವಕ ಗೌರವಗಳು. ನಾನು ಹನ್ನೆರಡು ರೂಪಾಯಿಗಳಿಗೆ ಮನಿ ಆರ್ಡರನ್ನು ಕಳಿಸಿದ್ದೇನೆ. ದಯಮಾಡಿ ಹತ್ತು ರೂಪಾಯಿಗಳನ್ನು ದಕ್ಷಿಣೆಯಾಗಿ ಕೊಡಿ. ಮತ್ತು ಎರಡು ರೂಪಾಯಿಗಳಿಂದ, ಗೋದಿಹಿಟ್ಟು, ಬೇಳೆ ಇತ್ಯಾದಿಗಳನ್ನು ಖರೀದಿಸಿ ಶಿರಾ ತಯಾರಿಸಲು ಉಪಯೋಗಿಸುವುದು. ದಯಮಾಡಿ ಅದರ ಮೇಲೆ ತರಕಾರಿಯಾದ ಒಂದು ವಾಲ್ಪಾಪಡಿ ಶೇಂಗವನ್ನೂ ಇಡುವುದು. ಇವೆಲ್ಲವೂ ಶಿಧಾ ಇತ್ಯಾದಿಗಳು ಒಂದು ವಿಶೇಷ ಅರ್ಥವನ್ನು ಹೊಂದಿವೆ ಮತ್ತು ನಿನ್ನ ಈ ಉಪಕಾರಕ್ಕೆ ನಾನು ಅತ್ಯಂತ ಋಣಿಯಾಗಿರುತ್ತೇನೆ.



# ಅಧ್ಯಾಯ – 30

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಹರಕೆ ಮತ್ತಿತರ ಕಥೆಗಳ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಓಂ. ನಾನು ಸಾಯಿಗೆ ನಮಸ್ಕರಿಸುತ್ತೇನೆ. 'ನೀವು ದಯಾಮಯರು, ಭಕ್ತವತ್ಸಲರು, ಕರುಣಾಲಯ! ನಿಮ್ಮ ದರ್ಶನವು ಭಕ್ತರ ಭವದ (ಸಂಸಾರ) ಭಯವನ್ನು ಹೋಗಲಾಡಿಸಿ ಅವರನ್ನು ಆಪತ್ತುಗಳಿಂದ ರಕ್ಷಿಸುತ್ತದೆ. ॥1॥ 'ಆರಂಭದಲ್ಲಿ ನೀವು ರೂಪ, ಗುಣಗಳಿಲ್ಲದೆ ನಿರ್ಗುಣರಾಗಿದ್ದೀರಿ. ಆದರೆ ಭಕ್ತರ ಭಕ್ತಿಯಿಂದಾಗಿ ಸಗುಣರಾಗಿ ಸಂತರಲ್ಲಿ ಚೂಡಾಮಣಿಯಂತೆ ಅವತರಿಸಿರುವಿರಿ ಓ, ಸಾಯಿನಾಥ! ॥2॥ 'ಸಂತರ ಜೀವನದ ಧ್ಯೇಯವೇ ಸದಾ ತಮ್ಮ ಭಕ್ತರ ಉದ್ಧಾರ ಮಾಡುವ ಕಾರ್ಯವಾಗಿದೆ. ಅದು ಅಪರಿಹಾರ್ಯವಾದುದು. ಆದರೆ ತಾವು ಎಲ್ಲಾ ಸಂತರಿಗೂ ಗುರುಗಳು. ಆದುದರಿಂದ ಈ ಜೀವನ ಧ್ಯೇಯವು ನಿಮಗೆ ಅನಿವಾರ್ಯವು. ॥3॥ 'ಯಾರು ನಿಮ್ಮ ಚರಣಗಳಲ್ಲಿ ಆಶ್ರಯ ಹೊಂದುತ್ತಾರೋ, ಅವರ ಪಾಪಗಳೆಲ್ಲವೂ ನಾಶವಾಗುತ್ತವೆ. ಒಳ್ಳೆಯ ಕರ್ಮಗಳು ಬಾಹ್ಯನೋಟಕ್ಕೆ ಬರುತ್ತವೆ ಮತ್ತು ಮಾರ್ಗವನ್ನು ಸ್ಪಷ್ಟವಾಗಿ ಭಯ ಮತ್ತು ಆಪತ್ತುಗಳಿಂದ ದೂರಮಾಡುತ್ತವೆ. ॥4॥ 'ನಿಮ್ಮ ಚರಣಗಳನ್ನು ಸ್ಮರಿಸುತ್ತ, ಪ್ರಸಿದ್ಧವಾದ ತೀರ್ಥಸ್ಥಳಗಳಿಂದ ಬ್ರಾಹ್ಮಣರು ಬಂದು ಗಾಯತ್ರಿ ಮಂತ್ರದ ಜಪ ಮಾಡುತ್ತಿದ್ದರು ಮತ್ತು ಧರ್ಮಗ್ರಂಥಗಳ ಪಾರಾಯಣ ಮಾಡುತ್ತಿದ್ದರು.' ॥5॥ ಅಲ್ಪಶಕ್ತಿಯುಳ್ಳವರೂ, ಸಂಸ್ಕಾರ ಹೀನರೂ ಆದ ನಮಗೆ ಭಕ್ತಿಯ

ಬಗ್ಗೆ ಏನು ತಿಳಿದಿದೆ? ಬೇರೆ ಎಲ್ಲರೂ ನಮ್ಮನ್ನು ಬಿಟ್ಟರೂ, ಸಾಯಿ ಮಾತ್ರ ನಮ್ಮನ್ನು ಬಿಡುವುದಿಲ್ಲ. ॥6॥ ಯಾರು ಸಾಯಿಯ ಕೃಪೆಯನ್ನು ಪಡೆಯುತ್ತಾರೋ ಅವರು ಯೋಚಿಸಲೂ ಅಸಾಧ್ಯವಾದ ಮಹಾಶಕ್ತಿಯನ್ನು ಪಡೆಯುತ್ತಾರೆ. ಏಕೆಂದರೆ, ಅವರು ಆತ್ಮ, ಅನಾತ್ಮದ ವಿವೇಕದ ಸಂಪತ್ತನ್ನೂ, ಜ್ಞಾನದ ಜೊತೆಯಲ್ಲಿಯೇ ಪಡೆಯುತ್ತಾರೆ. ॥7॥ ಸಾಯಿಯ ಮುಖದಿಂದ ವಚನಗಳನ್ನು ಕೇಳಲುತ್ಸುಕರಾದ ಭಕ್ತರು ಉನ್ಮತ್ತರಾಗುತ್ತಿದ್ದರು. ಪ್ರತಿಯೊಂದು ಪದವೂ ಅವರ ಮನಸ್ಸಿನಲ್ಲಿ ಮುದ್ರೆಯೊತ್ತುತ್ತಿತ್ತು. ಮತ್ತು ಅವರು ಅವುಗಳಲ್ಲಿ ಅಡಗಿರುವ ಸತ್ಯವನ್ನು ಗ್ರಹಿಸುತ್ತಿದ್ದರು. ॥8॥ ಸಾಯಿನಾಥರಿಗೆ ತಮ್ಮ ಭಕ್ತರ ಮನೋರಥಗಳೆಲ್ಲವೂ ಸಂಪೂರ್ಣವಾಗಿ ತಿಳಿದಿರುತ್ತಿತ್ತು. ಕೇವಲ ಅವರು ಮಾತ್ರ ಅವುಗಳನ್ನು ಈಡೇರಿಸಲು ಸಮರ್ಥರಾಗಿದ್ದರು. ಅವರಿಂದಾಗಿಯೇ ಅವರ ಭಕ್ತರು ಕೃತಾರ್ಥರಾಗಿರುತ್ತಿದ್ದರು. ॥9॥ "ಓ ಸಾಯಿನಾಥ! ನಿಮ್ಮನ್ನು ಸಹಾಯಕ್ಕಾಗಿ ಕರೆಯುತ್ತಿದ್ದೇನೆ. ನನ್ನ ಶಿರವನ್ನು ನಿಮ್ಮ ಚರಣಗಳಲ್ಲಿಡುತ್ತಿದ್ದೇನೆ. ನನ್ನ ಸಮಸ್ತ ಅಪರಾಧಗಳನ್ನು ಕ್ಷಮಿಸಿ, ಈ ನಿಮ್ಮ ದಾಸನ ಚಿಂತೆಗಳೆಲ್ಲವನ್ನೂ ದೂರಮಾಡಿರಿ." ॥10॥ ಯಾವ ಭಕ್ತರಿಗಾದರೂ ಸಂಕಟಗಳು ಬಂದೆರಗಿದಾಗ, ಈ ರೀತಿ ಸಾಯಿನಾಥನನ್ನು ಪ್ರಾರ್ಥಿಸಿದಲ್ಲಿ ಅವನ ಉದ್ವಿಗ್ನ ಮನಸ್ಸು ಶಾಂತವಾಗುತ್ತದೆ. ಏಕೆಂದರೆ ಕೇವಲ ಅವರು ಮಾತ್ರ ಶಾಂತಿದಾತರು. ॥11॥ ಇಂತಹ ಸಾಯಿ, ದಯಾಸಾಗರ, ನನ್ನ ಮೇಲೆ ಕೃಪೆಮಾಡಿದ್ದಾರೆ. ಅದರ ಪರಿಣಾಮವೇ ಈ ಮಂಗಳಕರವಾದ ಗ್ರಂಥವು ಆದರಪೂರ್ವಕವಾಗಿ ವಾಚಕರ ಮುಂದಿದೆ. ॥12॥ ಇಲ್ಲದಿದ್ದಲ್ಲಿ, ಇಂತಹ ಮಹತ್ಕಾರ್ಯವನ್ನು ಕೈಗೆತ್ತಿಕೊಳ್ಳುವ ಯೋಗ್ಯತೆ ನನಗೇನಿದೆ? ಅವರು ಎಲ್ಲ ಜವಾಬ್ದಾರಿಗಳನ್ನೂ ಹೊತ್ತಿರುವುದರಿಂದ, ನನಗೆ ಹೊರೆಯ ಅನುಭವವಾಗುತ್ತಿಲ್ಲ. ॥13॥ ಸಾಯಿ ಸಮರ್ಥರ ಜೊತೆಗೆ, ಜ್ಞಾನ ಜ್ಯೋತಿಯು ನನ್ನ ಪದಗಳನ್ನು ಪ್ರಕಾಶಗೊಳಿಸಿ ಅಜ್ಞಾನದ ಅಂಧಕಾರವನ್ನು ದೂರಮಾಡಲು ಇರುವಾಗ, ನನಗೆ ಯಾವುದೇ ಸಂಶಯ ಏಕೆ ಉಂಟಾಗುತ್ತದೆ? ॥14॥ ಆ ಪ್ರಭುವಿನಲ್ಲಿ ದಯಾಘನನಲ್ಲಿ ನನ್ನ ವಿಶ್ವಾಸವು ಅಣುಮಾತ್ರವಾದರೂ, ನಾನು ಶ್ರಮಪಡುತ್ತಿದ್ದೇನೆಂಬ ಭಾವನೆಯನ್ನು ಉಂಟುಮಾಡಿಲ್ಲ. ಅವರ ಕೃಪಾಪ್ರಸಾದದಿಂದ ನಾನು ಇಚ್ಛಿಸಿದ ಗುರಿಯನ್ನು ತಲುಪಲು ಸಾಧ್ಯವಾಗಿದೆ. ॥15॥ ಈ ರೀತಿಯ ಗ್ರಂಥದ ರೂಪದಲ್ಲಿನ ಸಂತರ ಸೇವೆಯು ನನ್ನ ಪೂರ್ವಜನ್ಮದ ಪುಣ್ಯಗಳಿಂದ ಉಂಟಾಗಿದೆಯಷ್ಟೆ. ಇದನ್ನು ನೀವು ಚೆನ್ನಾಗಿ ಸ್ವೀಕರಿಸಿದ್ದೀರಿ. ಓ ದೇವಾ! ಇದಕ್ಕಾಗಿ ನಾನು ದೈವಕ್ಕೆ ಕೃತಜ್ಞನಾಗಿದ್ದೇನೆ ಮತ್ತು ಧನ್ಯನಾದೆನೆಂದು ಭಾವಿಸುತ್ತೇನೆ. ॥16॥ ಹಿಂದಿನ ಅಧ್ಯಾಯದಲ್ಲಿ, ದಯಾಘನ ಸಾಯಿಯು ವಿವಿಧ ರೀತಿಯ ದೃಷ್ಟಾಂತಗಳನ್ನು ಯಾವ ರೀತಿ ಭಕ್ತರಿಗೆ ಬೋಧಪ್ರದವಾಗಿ ನೀಡಿದರು ಎಂಬುದನ್ನು ಕೇಳಿದಿರಿ. ॥17॥ ಈ ಪ್ರಸ್ತುತ ಅಧ್ಯಾಯದಲ್ಲಿ, ಸಪ್ತಶೃಂಗಿ ದೇವತೆಯ ಭಕ್ತನೊಬ್ಬನ ಆನಂದದಾಯಕ ಕಥಾನಕವೊಂದನ್ನು ಕೇಳಿರಿ. ॥18॥ ಯಾವ ರೀತಿ ದೇವತೆಗಳು ತಮ್ಮ ಭಕ್ತರನ್ನು ಸಂತರ ಕೈಗೆ ಒಪ್ಪಿಸುತ್ತಾರೆ ಎನ್ನುವುದೂ ಒಂದು ಚಮತ್ಕಾರವೇ ಸರಿ. ಇದನ್ನು ಆದರಪೂರ್ವಕ ಮನಸ್ಸಿನಿಂದ ಗ್ರಹಿಸಿರಿ. ॥19॥

ಮಹಾರಾಜ್‌ರ ವಿಷಯದಲ್ಲಿ ಅನೇಕ ಕಥೆಗಳು ಇವೆ. ಒಂದು ಮತ್ತೊಂದಕ್ಕಿಂತ ಅದ್ಭುತವಾದುದು. ಈ ಕಥೆಯೂ ಶ್ರವಣಯೋಗ್ಯವಾಗಿದೆ. ಸಾವಧಾನ ಚಿತ್ತದಿಂದ ಗಮನವಿಟ್ಟು ಕೇಳಿರಿ. ॥20॥ ಇದು ಕೇವಲ ಕಥೆಯಲ್ಲ, ಅಮೃತ ಪಾನವು. ಆದುದರಿಂದ ಮನಸ್ಸು ತಣಿಯುತ್ತದೆ. ನೀವು ಸಾಯಿಯ ಮಹಿಮೆಯನ್ನೂ, ಸಾಯಿಯ ಸರ್ವವ್ಯಾಪಕತೆಯನ್ನೂ ಗ್ರಹಿಸುವಿರಿ. ॥21॥ ಕುತರ್ಕಿಗಳೂ, ತಾರ್ಕಿಕರೂ ವಿವಾದವನ್ನು ಮುಂದುವರೆಸಬಾರದು. ಇಲ್ಲಿ ವಾದ ವಿವಾದಗಳಿಗೆ ಆಸ್ಪದವಿಲ್ಲ. ಅಪರಿಮಿತವಾದ ಪ್ರೇಮ ಮಾತ್ರವೇ ಅವಶ್ಯಕವಾಗಿರುವುದು. ॥22॥ ಒಬ್ಬ ವ್ಯಕ್ತಿಯು ಕೇವಲ ಜ್ಞಾನಿಯೇ ಆಗಿರಬೇಕಾಗಿಲ್ಲ. ಅವನು ಭಕ್ತನೂ, ಶ್ರದ್ಧಾವಂತನೂ, ವಿಶ್ವಾಸ ಹೊಂದಿರುವವನೂ ಅಥವಾ ಸಂತರ ಅನುಯಾಯಿಯಾದರೂ ಆಗಿರಬೇಕು. ಇತರರು ಇವುಗಳನ್ನು ಕೇವಲ ಕಟ್ಟುಕಥೆಯೆನ್ನುತ್ತಾರೆ. ॥23॥ ಸಾಯಿಯೆಂಬ ಕಲ್ಪವೃಕ್ಷವು ನಿಸ್ಸಂದೇಹವಾಗಿ ಹೂವು ಮತ್ತು ಹಣ್ಣುಗಳನ್ನು ನೀಡುತ್ತವೆ. ನಿಜವಾದ ಭಾಗ್ಯವಂತ ಭಕ್ತನು ಮಾತ್ರ ಅದನ್ನು ಹಿಡಿದು ಅವುಗಳನ್ನು ಕಿತ್ತುಕೊಳ್ಳಬಹುದು. ॥24॥ ಹಾಗಿದ್ದರೆ ಕೇಳಿರಿ, ಈ ಕಥೆಯು ಪರಮ ಪಾವನವಾಗಿಯೂ ಪರಮಾರ್ಥಿಗಳಿಗೆ ಮೋಕ್ಷದಾಯಿನಿಯೂ, ಸಕಲ ಸಾಧನಾ ಮಾರ್ಗಗಳಲ್ಲಿ ಅತ್ಯಂತ ಉತ್ತಮವಾದುದೂ, ಸಕಲರಿಗೆ ಕಲ್ಯಾಣಕಾರಿಯೂ ಆಗಿದೆ. ॥25॥ ಸಾಯಿಕಥೆಗಳ ಅಮೃತ ಪಾನವು ಅಂತಹದು. ಅವು ಸಹಜವಾಗಿಯೇ ಜಡ ಮತ್ತು ಜೀವಿಗಳನ್ನು ಉದ್ಧರಿಸುವುದೂ, ಪ್ರಾಪಂಚಿಕ ವ್ಯಕ್ತಿಗಳಿಗೆ ತೃಪ್ತಿಯನ್ನು ನೀಡುವುದೂ ಮತ್ತು ಮುಮುಕ್ಷುಗಳಿಗೆ ಮೋಕ್ಷಸಾಧನವೂ ಆಗಿದೆ. ॥26॥ ನಾನು ಒಂದು ಕಥೆಯನ್ನು ಆಲೋಚಿಸಿದರೆ, ಅನೇಕ ಕಥೆಗಳು ಮನಸ್ಸಿಗೆ ಬರುತ್ತವೆ. ಆದುದರಿಂದ ಹೇಮಾಡನು, ಶ್ರೋತೃಗಳು ಅವುಗಳನ್ನು ಆಲಿಸುವಂತೆ ವಿನೀತವಾಗಿ ಪ್ರಾರ್ಥಿಸುತ್ತಾನೆ. ॥27॥ ಈ ರೀತಿ ಒಂದಾದ ನಂತರ ಮತ್ತೊಂದು ಕಥೆಗಳನ್ನು ಹೇಳುತ್ತ ಹೋದಲ್ಲಿ ನಿಮ್ಮಲ್ಲಿ ಸಾಯಿಲೀಲೆಗಳ ರಸದ ಆಸ್ವಾದನೆಯು ಹೆಚ್ಚುತ್ತಾ ಹೋಗುತ್ತದೆ. ಪ್ರಾಪಂಚಿಕ ಸಂಕಟಗಳು ದೂರವಾಗುತ್ತವೆ. ಇಹಸಹ ಸಾಯಿಯ ಸಾಮರ್ಥ್ಯವಷ್ಟೆ. ॥28॥ ನಾಸಿಕ್ ಜಿಲ್ಲೆಯ ವಾಣಿ ಎಂಬ ಗ್ರಾಮದಲ್ಲಿ ಕಾಕಾಜಿ ಎಂಬ ವೈದ್ಯನೊಬ್ಬನು ವಾಸಿಸುತ್ತಿದ್ದನು. ಅವನು ಅಲ್ಲಿಯ ಗ್ರಾಮದೇವಿಯ ಮಂದಿರದಲ್ಲಿ ಪೂಜಾರಿಯೂ ಆಗಿದ್ದನು. ॥29॥ ಆ ದೇವಿಯ ಹೆಸರು 'ಸಪ್ತಶೃಂಗಿ' ಎಂದು. ಪೂಜಾರಿಯು ಅಂತರಾಳದಲ್ಲಿ ಚಂಚಲ ಮನದವನಾಗಿದ್ದನು. ಅವನಿಗೆ ಅನೇಕ ದುರ್ಧರವಾದ ಕಷ್ಟಗಳು ಎದುರಾಗಿದ್ದವು ಮತ್ತು ಸಂಸಾರದ ದುಃಖಗಳಿಂದ ಅವನು ಜರ್ಝರಿತನಾಗಿದ್ದನು. ॥30॥ ಇದೇ ರೀತಿ ಕಾಲಚಕ್ರ ಉರುಳಿತು. ಅದು ಕಷ್ಟಕ್ಕೆ ಬಂದಾಗ ಮನಸ್ಸು ತಿರುಗಣೆಯಂತೆ ತಿರುಗುತ್ತಿತ್ತು, ದೇಹವಾದರೋ ಅಲ್ಲಿ ಇಲ್ಲಿ ಓಡುತ್ತಿತ್ತು, ಕ್ಷಣಮಾತ್ರವೂ ಶಾಂತಿಯಿರಲಿಲ್ಲ. ॥31॥ ಈ ರೀತಿ ಕಾಕಾಜಿಯು ಅತಿ ದುಃಖಿತನಾಗಿದ್ದನು. ಆದ್ದರಿಂದ ಅವನು ದೇವಸ್ಥಾನಕ್ಕೆ ಹೋಗಿ ದೇವಿಯನ್ನು ತನ್ನ ದುಃಖಗಳಿಂದ ಬಿಡುಗಡೆ ಮಾಡಬೇಕೆಂದು, ತೀವ್ರ ವ್ಯಾಕುಲತೆಯಿಂದ ಪ್ರಾರ್ಥಿಸಿದನು. ॥32॥ ಅವನು ಹೃತ್ಪೂರ್ವಕವಾಗಿ ಪ್ರಾರ್ಥಿಸಿದನು.

ದೇವಿಯು ಅವನ ಭಕ್ತಿಭಾವದಿಂದ ತುಷ್ಟಿಹೊಂದಿದಳು. ಅದೇ ದಿನ ರಾತ್ರಿ ಅವನಿಗೆ ಒಂದು ಅನುಭವವಾಯಿತು. ಶ್ರೋತೃಗಳು ಇದರ ಚಮತ್ಕಾರವನ್ನು ಕೇಳಬೇಕು. ॥33॥ ದೇವಿ, 'ಸಪ್ತಶೃಂಗಿ' ಮಾತೆಯು. ಕಾಕಾಜಿಯ ಕನಸಿನಲ್ಲಿ ಬಂದು ಹೇಳಿದಳು, "ನೀನು ಬಾಬಾರ ಹತ್ತಿರ ಹೋಗು. ನಿನ್ನ ಮನಸ್ಸು ಶಾಂತವಾಗತ್ತದೆ." ॥34॥ 'ಈ ಬಾಬಾ ಯಾರು? ಮತ್ತು ಎಲ್ಲಿದ್ದಾರೆ? ಇದನ್ನು ದೇವಿಯೇ ಸ್ಪಷ್ಟೀಕರಣ ಮಾಡಬೇಕು ಎಂದು ಕಾಕಾ ಯೋಚಿಸಿದನು. ಈ ರೀತಿ ಕಾಕಾನು ಉತ್ಕಂಠಿತ ಮನಸ್ಸಿನಲ್ಲಿರುವಾಗಲೇ ಎಚ್ಚರಾಗಿ ಕಣ್ಣುಗಳನ್ನು ತೆರೆದನು. ॥35॥ ಅವನ ಮನಸ್ಸಿನಲ್ಲಿ ಎದ್ದ ಪ್ರಶ್ನೆಗಳು ಉತ್ತರವಿಲ್ಲದೆ ಹಾಗೆಯೇ ಉಳಿದು ಹೋದುವು. ಏಕೆಂದರೆ ಸ್ವಪ್ನವು ಅಲ್ಲಿಗೇ ಮುಗಿದಿತ್ತು. ಆಕೆಯು ತಿಳಿಸಿದ 'ಬಾಬಾ' ಯಾರು ಎಂದು ಊಹಿಸಲು ಕಾಕಾ ಬಹಳ ಪ್ರಯತ್ನಪಟ್ಟನು. ॥36॥ ಕಾಕಾಜಿಯು, ಅದು 'ಬಾಬಾ' ತ್ರ್ಯಂಬಕೇಶ್ವರನೇ ಇರಬೇಕೆಂದು, ಮನಸ್ಸಿನಲ್ಲಿಯೇ ನಿರ್ಧರಿಸಿದನು. ಆದ್ದರಿಂದ ಕೂಡಲೇ ಹೋಗಿ ತ್ರ್ಯಂಬಕೇಶ್ವರನ ದರ್ಶನ ಮಾಡಿದನು. ಆದರೂ ಅವನ ಮನಸ್ಸಿನ ಚಂಚಲತೆ ಹಾಗೆಯೇ ಇತ್ತು. ॥37॥ ಕಾಕಾಜಿಯು ತ್ರ್ಯಂಬಕೇಶ್ವರದಲ್ಲಿ ಹತ್ತು ದಿನಗಳು ಉಳಿದುಕೊಂಡನು. ಆದರೆ ಅಲ್ಲಿ ಕೊನೆಯ ದಿನದವರೆಗೆ ಉದಾಸ ಮನಸ್ಸಿನವನೂ ಆಗಿದ್ದು ಮನಸ್ಸು ಉಲ್ಲಾಸಗೊಳ್ಳಲಿಲ್ಲ. ॥38॥ ಅವನ ಮನಸ್ಸಿನ ಖಿನ್ನತೆಯು ಹೋಗಲಿಲ್ಲ. ಮನಸ್ಸು ಚಂಚಲವಾಗಿಯೇ ಉಳಿಯಿತು. ದಿನ ಕಳೆದ ಹಾಗೆ ಉದ್ವಿಗ್ನತೆಯು ಹೆಚ್ಚಾಯಿತು. ಆದ್ದರಿಂದ ಕಾಕಾಜಿಯು ಹಿಂತಿರುಗಿ ಹೊರಟನು. ॥39॥ ಅವನು ಅಲ್ಲಿದ್ದಾಗ ನಿತ್ಯವೂ ಪ್ರಾತಃಕಾಲದಲ್ಲಿ ಸ್ನಾನ ಮಾಡಿ, ರುದ್ರ ಪಠಣ ಮಾಡುತ್ತ ಶಿವಲಿಂಗಕ್ಕೆ ಸತತ ಧಾರೆಯಾಗಿ ಅಭಿಷೇಕ ಮಾಡುತ್ತಿದ್ದನು. ಆದರೆ ಅವನ ಅಂತರಂಗವು ಮಾತ್ರ ಮೊದಲಿನಂತೆಯೇ ಹೊಯ್ದಾಡುತ್ತಿತ್ತು. ॥40॥ ಮತ್ತೆ ಪುನಃ ದೇವಿಯ ಬಾಗಿಲಿಗೆ ಹೋಗಿ, ಅವನು ಹೇಳಿದನು, "ನನ್ನನ್ನು ತ್ರ್ಯಂಬಕೇಶ್ವರಕ್ಕೆ ಏಕೆ ಕಳುಹಿಸಿದೆ? ಈಗಲಾದರೂ ನನ್ನ ಮನಸ್ಸಿಗೆ ಶಾಂತಿ ನೀಡು. ಈ ರೀತಿಯ ನಿಷ್ಫಲವಾದ ಸುತ್ತಾಟ ಬೇಡ." ॥41॥ ಈ ರೀತಿ ಅವನು ದೇವಿಯನ್ನು ಅಂಗಲಾಚಿ ಬೇಡಿಕೊಂಡು ಪ್ರಾರ್ಥಿಸಿದನು. ದೇವಿಯು ಆ ರಾತ್ರಿ ಕನಸಿನಲ್ಲಿ ಅವನಿಗೆ ದರ್ಶನ ನೀಡಿ ಈ ರೀತಿ ಹೇಳಿದಳು. ॥42॥ "ನಾನು, 'ಬಾಬಾ' ಎಂದು ಹೇಳಿದ್ದು ಶಿರಡಿಯ ಸಾಯಿ ಸಮರ್ಥ. ನೀನು ನಿರರ್ಥಕವಾಗಿ ತ್ರ್ಯಂಬಕೇಶ್ವರಕ್ಕೆ ಏಕೆ ಹೋದೆಯೋ ನನಗೆ ಅರ್ಥವಾಗಲಿಲ್ಲ." ॥43॥ 'ಶಿರಡಿಯು ಎಲ್ಲಿದೆ? ಅಲ್ಲಿಗೆ ನಾನು ಹೇಗೆ ಹೋಗಲಿ? ನನಗೆ ಈ ಬಾಬಾ ಗೊತ್ತಿಲ್ಲ. ಈಗ ಈ ಯಾತ್ರೆಯನ್ನು ಹೇಗೆ ಮಾಡುವುದು? ಇದೆಲ್ಲ ಹೇಗೆ ನಡೆಯುತ್ತದೆ. ನನಗಂತೂ ಏನೂ ತಿಳಿಯದು' ಎಂದು ಅವನು ಯೋಚಿಸಿದನು. ॥44॥ ಆದರೆ ಅವನು ಸಂತ ಚರಣಗಳಲ್ಲಿ ಮನದಲ್ಲಿಯೇ ಅನುರಕ್ತನಾದವನು, ಮನದಲ್ಲಿ ದರ್ಶನದ ಕಾರಣವನ್ನು ತುಂಬಿಕೊಂಡವನು, ಅಂತಹವನಿಗೆ ಸಂತನೇ ಏಕೆ, ದೇವರೂ ಸಹ ಅವನ ಸದಿಚ್ಛೆಯನ್ನು ಪೂರೈಸುವನು. ॥45॥ ಸಂತನೂ, ಅನಂತನಾದ ದೇವರೂ ಒಂದೇನೇ. ಇಬ್ಬರ ಮಧ್ಯೆ ಲವಲೇಶವಾದರೂ ಅಂತರವಿಲ್ಲ. ಒಂದು ವೇಳೆ ಅವರಿಬ್ಬರೂ

ಬೇರೆ ಎಂದು ನಂಬಿದರೆ ಅದು ಅದ್ವೈತವಾಗುತ್ತದೆ. ಸಂತರೂ ಅನಂತದಲ್ಲಿ ಒಂದಾಗಿರುತ್ತಾರೆ. ॥46॥ ಯಾರಾದರೂ ತಾವು ಹೋಗಿ ಸಂತನ ದರ್ಶನ ಮಾಡಿ ತಮ್ಮ ಮನಸ್ಸಿನ ಇಚ್ಛೆಯನ್ನು ಪೂರೈಸಿಕೊಳ್ಳುತ್ತಾರೆಂದು ಹೇಳಿದರೆ ಅದು ಕೇವಲ ಅಭಿಮಾನದ ಹೆಗ್ಗಳಿಕೆಯಷ್ಟೆ. ಸಂತರ ರೀತಿಗಳು ಅಗಮ್ಯವಾದವುಗಳು. ॥47॥ ಸಂತರು ಮನದಲ್ಲಿ ಸಂಕಲ್ಪ ಮಾಡದಿದ್ದಲ್ಲಿ, ಯಾರು ತಾನೇ ಹೋಗಿ ದರ್ಶನ ಪಡೆಯಲು ಸಾಧ್ಯ? ಸಂತರ ರೀತಿ ಆಶ್ಚರ್ಯಕರವೆಂದರೆ, ಅವರ ಅಪ್ಪಣೆಯಿಲ್ಲದೆ ಮರದ ಒಂದು ಎಲೆಯೂ ಅಲುಗಾಡಲಾರದು. ॥48॥ ಒಬ್ಬ ಭಕ್ತನು ದರ್ಶನಕ್ಕಾಗಿ ಹೆಚ್ಚು ಉತ್ಕಂಠಿತನಾಗಿದ್ದಷ್ಟೂ, ಅವನು ಹೆಚ್ಚು ಭಕ್ತಿ ಮತ್ತು ನಿಷ್ಠೆಗಳನ್ನು ಹೊಂದಿದಷ್ಟೂ, ಸ್ವಾನಂದಾನುಭವದ ಪರಾಕಾಷ್ಠೆಯನ್ನು ಹೆಚ್ಚಾಗಿ ಅನುಭವಿಸುತ್ತಾನೆ. ॥49॥ ಇಲ್ಲಿ ಕಾಕಾಜಿಯು ಸಾಯಿದರ್ಶನಕ್ಕಾಗಿ ಯಾವ ರೀತಿ ಹೋಗುವುದೆಂದು ಚಿಂತಿಸುತ್ತಿರುವಾಗಲೇ, ಶಿರಡಿಯಿಂದ ಒಬ್ಬ ಅತಿಥಿಯು ಅವನ ವಿಳಾಸವನ್ನು ಹುಡುಕುತ್ತ ಅಲ್ಲಿಗೆ ಬಂದನು. ॥50॥ ಆ ಅತಿಥಿಯು ಕೇವಲ ಒಬ್ಬ ಸಾಮಾನ್ಯ ವ್ಯಕ್ತಿಯೇ? ಅವನು ಇತರರಿಗಿಂತ ಹೆಚ್ಚಾಗಿ ಬಾಬಾರವರಿಗೆ ಪ್ರಿಯನಾಗಿದ್ದನು. ಬಾಬಾರವರ ಪ್ರೀತಿ ಪಾತ್ರರಲ್ಲಿ ಮತ್ತೆ ಯಾರೂ ಅವನಿಗೆ ಸಮನಾಗಿರಲಿಲ್ಲ. ಮತ್ತು ಅವನು ಅದನ್ನು ಪಡೆಯಲು ಯೋಗ್ಯನಾಗಿದ್ದನು. ॥51॥ ಅವನನ್ನು ಮಾಧವ ರಾವ್ ಎಂದು ಕರೆಯುತ್ತಿದ್ದರು. ಅವನು ದೇಶಪಾಂಡೆಯವರ ಅನುವಂಶಿಕ ಉದ್ಯೋಗವನ್ನು ಹೊಂದಿದ್ದನು. ಬಾಬಾರವರು ಅವನನ್ನು ಅದೆಷ್ಟು ಮುದ್ದು ಮಾಡುವರೆಂದರೆ ಮತ್ಯಾರೂ ಬಾಬಾರವರ ಹತ್ತಿರ ಅಷ್ಟು ಸಲಿಗೆಯಿಂದ ಇರುತ್ತಿರಲಿಲ್ಲ. ॥52॥ ಅವರು ಯಾವಾಗಲೂ ಪ್ರೇಮ ಕಲಹದಲ್ಲಿ ನಿರತರಾಗಿರುತ್ತಿದ್ದರು. ಮತ್ತು ಪರಸ್ಪರ ಆತ್ಮೀಯವಾಗಿ ಸಂಬೋಧಿಸಿ ಮಾತನಾಡುತ್ತಿದ್ದರು. ಬಾಬಾರವರಿಗೆ ಅವನನ್ನು ಕಂಡರೆ ವಿಲಕ್ಷಣ ಪ್ರೇಮ. ತಮ್ಮ ಸ್ವಂತ ಮಗನೋಪಾದಿಯಲ್ಲಿ ಅವನು ಆ ಸಮಯದಲ್ಲಿ ವಾಣಿಗೆ ಬಂದನು. ॥53॥ ಒಂದು ಸಲ ಅವನು ಮಗುವಾಗಿದ್ದಾಗ, ರೋಗ ಪೀಡಿತನಾಗಲು, ಅವನ ತಾಯಿಯು ದೇವಿಯನ್ನು ಪ್ರಾರ್ಥಿಸಿದಳು. "ನಾನು ಈ ಮಗುವನ್ನು ನಿನ್ನ ದಯೆಗೆ ಒಪ್ಪಿಸಿದ್ದೇನೆ. ಉಳಿಸುವುದೂ, ಅಳಿಸುವುದೂ ನಿನ್ನ ಕೈಯಲ್ಲಿದೆ. ॥54॥ ಆದರೆ ಮಗುವೇನಾದರೂ ಉಳಿದರೆ ಅವನನ್ನು ನಿನ್ನ ದರ್ಶನಕ್ಕಾಗಿ ಕರೆತರುತ್ತೇನೆ." ಅನಂತರ ದೇವಿಯನ್ನು ಕರೆದಮೇಲೆ ಆಕೆಯ ಕೃಪೆಯಿಂದ ಮಗುವು ಗುಣಮುಖವಾಯಿತು. ॥55॥ ಅದು ವೈದ್ಯನಾಗಲಿ ಅಥವಾ ದೇವರಾಗಲಿ, ಹಲವರು ತಮ್ಮ ಸಂಕಟ ನಿವಾರಣೆಯಾದ ಮೇಲೆ ವೈದ್ಯರನ್ನು, ದೇವರನ್ನು ಮರೆತು ಹೋಗುತ್ತಾರೆ. ದೇವರಲ್ಲಿ ಏನಾದರೂ ಹರಕೆ ಮಾಡಿಕೊಂಡಿದ್ದು ಅದನ್ನು ನೆರವೇರಿಸದೇ ಇದ್ದಲ್ಲಿ ಅದು ಭಯಕ್ಕೆ ಕಾರಣವಾಗುತ್ತದೆ. ॥56॥ ಅನೇಕ ವರ್ಷಗಳು ಕಳೆದವು. ಈ ಹರಕೆಯು ಸಂಪೂರ್ಣವಾಗಿ ಮರೆತು ಹೋಯಿತು. ಆ ತಾಯಿಯು ತನ್ನ ಅಂತ್ಯಸಮಯದಲ್ಲಿ ಅದನ್ನು ನೆನಪಿಸಿಕೊಂಡು ಮಾಧವರಾವ್‌ನಲ್ಲಿ ವಿನಂತಿಸಿಕೊಂಡಳು. ॥57॥ "ಈ ಹರಕೆಯನ್ನು ಹೊತ್ತು ಬಹಳ ವರ್ಷಗಳಾದವು. ಇಲ್ಲಿಯವರೆಗೆ ಅದನ್ನು ತೀರಿಸಲಾಗಲಿಲ್ಲ.

ಇಷ್ಟು ದೊಡ್ಡ ವಿಳಂಬವಾದುದು ಒಳ್ಳೆಯದಲ್ಲ. ದೇವಿಯ ದರ್ಶನಕ್ಕಾಗಿ ಹೋಗಿ ಬಾ." ॥58॥ ಅದೂ ಅಲ್ಲದೆ ಈ ತಾಯಿಯೂ ತನ್ನ ಎದೆಯಲ್ಲಿ ಹುಳುಕಡ್ಡಿಯಾಗಿದ್ದಾಗ ಸಹಿಸಲಾರದಷ್ಟು ನೋವು ಉಂಟಾಗಿತ್ತು, ಆಗ ಆಕೆಯು ಮತ್ತೊಂದು ಹರಕೆಯನ್ನು ಹೊತ್ತಿದ್ದಳು. ॥59॥ "ಅಮ್ಮಾ, ದೇವೀ, ನಾನು ನಿನಗೆ ಉರುಳು ಸೇವೆ ಮಾಡುತ್ತೇನೆ. ನನ್ನನ್ನು ಈ ಯಾತನೆಯಿಂದ ಪಾರು ಮಾಡಿದರೆ ನಾನು ನಿನಗೆ ಎರಡು ಬೆಳ್ಳಿಯ ಸ್ತನಗಳನ್ನು ಮಾಡಿಸಿ ಅರ್ಪಿಸುತ್ತೇನೆ." ॥60॥ ಈ ಹರಕೆಯೂ ಸಹ ತೀರಿಸದೆ ಹಾಗೆಯೇ ಉಳಿದುಹೋಗಿತ್ತು. ಸಮಯ ಬಂದಾಗಲೆಲ್ಲ ಮುಂದೂಡಲ್ಪಡುತ್ತಿತ್ತು. ಆ ತಾಯಿಯು ಮೃತ್ಯುವು ಹತ್ತಿರ ಬಂದಾಗ ಎರಡನ್ನೂ ನೆನಪಿಸಿಕೊಂಡಳು. ॥61॥ ಅವಳು ಶ್ಯಾಮನನ್ನು[1] (ಮಾಧವರಾವ್‌ನನ್ನು) ಕರೆದು ಈ ವಿಷಯ ತಿಳಿಸಿದಳು. ಮತ್ತು ಅವನಿಂದ ಹರಕೆಗಳನ್ನು ತೀರಿಸುವ ಪ್ರಮಾಣವಚನವನ್ನು ಪಡೆದಳು. ಆ ತಾಯಿಯು ಎಲ್ಲ ಆಸೆಗಳನ್ನು ತೊರೆದವಳಾಗಿ ಹರಿಚರಣಗಳನ್ನು ಸೇರಿಕೊಂಡಳು. ॥62॥ ಅನಂತರ, ಮಾಧವರಾವ್‌ನು ಹೋಗುತ್ತೇನೆ, ಹೋಗುತ್ತೇನೆ ಎನ್ನುತ್ತಲೇ ದಿನಗಳು, ತಿಂಗಳುಗಳು, ವರ್ಷಗಳು ಕಳೆದುಹೋದವು. ಅದರ ಬಗ್ಗೆ ಅವನೂ ಎಲ್ಲವನ್ನೂ ಮರೆತುಹೋದನು ಮತ್ತು ಹರಕೆ ತೀರಿಸದೆ ಉಳಿದುಹೋದುವು. ॥63॥ ಈ ರೀತಿಯಲ್ಲಿಯೇ, ಮೂವತ್ತು ವರ್ಷಗಳ ನಂತರ ಶಿರಡಿಯಲ್ಲಿ ಏನಾಯಿತು ನೋಡಿ! ಒಬ್ಬ ಜ್ಯೋತಿಷಿಯು ಪ್ರವಾಸ ಮಾಡುತ್ತ ಅಲ್ಲಿಗೆ ಬಂದನು. ॥64॥ ಜ್ಯೋತಿಷ್ಯದಲ್ಲಿ ಅವನ ಜ್ಞಾನವು ಅತ್ಯಂತ ಗಹನವಾಗಿತ್ತು, ಅವನು ಭೂತ, ಭವಿಷ್ಯತ್, ವರ್ತಮಾನಗಳೆಲ್ಲವನ್ನೂ ಓದಲು ಸಮರ್ಥನಾಗಿದ್ದನು. ಅನೇಕ ಜಿಜ್ಞಾಸುಗಳನ್ನು ತೃಪ್ತಿಪಡಿಸಿದ್ದನು. ಮತ್ತು ಅತ್ಯಂತ ಪ್ರಶಂಸೆಗೊಳಗಾಗಿದ್ದನು. ಅಲ್ಲಿ ಸ್ವಲ್ಪ ಕಾಲದವರೆಗೆ ವಾಸ ಮಾಡಿದನು. ॥65॥ ಅವನು ಶ್ರೀಮಂತನಾದ ಕೇಶವರಾವ್ ಬುಟಿ ಮುಂತಾದ ಅನೇಕರನ್ನು ಭೇಟಿಮಾಡಿದ್ದನು. ತನ್ನ ಭವಿಷ್ಯವಾಣಿಯಿಂದ ಅತ್ಯಲ್ಪ ಸಮಯದಲ್ಲೇ ಎಲ್ಲರನ್ನೂ ಸಂತೋಷಪಡಿಸಿದ್ದನು. ॥66॥ ಮಾಧವರಾವ್‌ನ ತಮ್ಮನಾದ ಬಾಪಾಜಿಯು ತನ್ನ ಭವಿಷ್ಯತ್ ಬಗ್ಗೆ ವಿಚಾರಿಸಿದಾಗ ಆ ಜ್ಯೋತಿಷಿಯು ದೇವಿಯು ಅವನ ಮೇಲೆ ಅಪ್ರಸನ್ನಳಾಗಿದ್ದಾಳೆಂದು ತಿಳಿಸಿದನು. ॥67॥ ಅವನು ಹೇಳಿದನು, "ನಿಮ್ಮ ತಾಯಿಯು ಹರಕೆಯನ್ನು ಹೊತ್ತಿದ್ದಳು. ಅವುಗಳನ್ನು ತೀರಿಸಬೇಕೆಂದು ನಿನ್ನ ಅಣ್ಣನಿಗೆ ತಾನು ಸಾಯುವ ಕಾಲದಲ್ಲಿ ಆಜ್ಞಾಪಿಸಿದ್ದಳು. ॥68॥ "ನೀವು ಯಾರೂ ಅವುಗಳನ್ನು ಇಲ್ಲಿಯವರೆಗೂ ತೀರಿಸಿಲ್ಲದ ಕಾರಣ, ದೇವಿಯು ನಿನಗೆ ತೊಂದರೆಕೊಡುತ್ತಿದ್ದಾಳೆ" ಎಂದು. ಬಾಪಾಜಿಯು ಮನೆಗೆ ಬಂದಾಗ ಎಲ್ಲವನ್ನೂ ಮಾಧವರಾವ್‌ನಿಗೆ ತಿಳಿಸಿದನು. ॥69॥ ಮಾಧವರಾವ್‌ನು ತನ್ನ ತಪ್ಪನ್ನು ಅರಿತುಕೊಂಡನು. ಅವನು ಅಕ್ಕಸಾಲಿಗನೊಬ್ಬನನ್ನು ಕರೆಸಿ, ಎರಡು ಬೆಳ್ಳಿಯ ಸ್ತನ ಕವಚಗಳನ್ನು ಮಾಡಿಸಿಕೊಂಡು ಮಸೀದಿಗೆ ತೆಗೆದುಕೊಂಡು ಹೋದನು. ॥70॥ ಬಾಬಾರವರ ಚರಣಗಳಲ್ಲಿ ನಮಸ್ಕರಿಸಿದ ನಂತರ, ಆ ಸ್ತನ ಕವಚಗಳನ್ನು ಬಾಬಾರವರ ಮುಂದಿಟ್ಟು ಹೇಳಿದನು "ದಯಮಾಡಿ ಇವುಗಳನ್ನು ಒಪ್ಪಿಸಿಕೊಳ್ಳಿ ಮತ್ತು ನನ್ನನ್ನು ಆ ಹರಕೆಯಿಂದ

ಮುಕ್ತನನ್ನಾಗಿ ಮಾಡಿ. ॥71॥ "ನೀವೇ ನಮ್ಮ 'ಸಪ್ತಶೃಂಗಿ' ಮಾತೆ. ನೀವೇ ನಮ್ಮ ದೇವತೆ. ದಯವಿಟ್ಟು ಇದನ್ನು ನಾವು ಕೊಟ್ಟ ಹರಕೆಯೆಂದು ಸ್ವೀಕರಿಸಿರಿ. ತೃಪ್ತರಾಗಿರಿ." ॥72॥ ಬಾಬಾ ಉತ್ತರಿಸಿದರು, "ಸಪ್ತಶೃಂಗಿ ದೇವಸ್ಥಾನಕ್ಕೆ ಹೋಗು. ಅವಳಿಗೆ ಪ್ರಮಾಣವಚನ ನೀಡಿದಂತೆ ನಿನ್ನ ಸ್ವಂತ ಕೈಗಳಿಂದಲೇ ಇವುಗಳನ್ನು ಸಮರ್ಪಿಸು. ಈ ಸ್ತನದ ಕವಚಗಳನ್ನು ಅವಳ ಚರಣಗಳಲ್ಲಿ ಇಡು." ॥73॥ ಯಾವಾಗ ಬಾಬಾರವರು ಈ ರೀತಿ ಆಗ್ರಹಪೂರ್ವಕವಾಗಿ ಹೇಳಿದರೋ, ಮಾಧವರಾವ್‌ನೂ ಅದೇ ರೀತಿ ಮನದಲ್ಲಿ ಯೋಚಿಸಿದನು. ಅವನು ದೇವಿಯ ದರ್ಶನ ಮಾಡಿಕೊಳ್ಳುವ ನಿರ್ಧಾರ ಮಾಡಿ ಮನೆಯಿಂದ ಹೊರಟನು. ॥74॥ ಅವನು ಬಾಬಾರವರ ದರ್ಶನ ಪಡೆದು ಅವರ ಶುಭ ಆಶೀರ್ವಚನಕ್ಕಾಗಿ ಪ್ರಾರ್ಥಿಸಿದನು. ಉದಿ ಮತ್ತು ಪ್ರಸಾದವನ್ನು ತೆಗೆದುಕೊಂಡು ಬಾಬಾರವರ ಅನುಜ್ಞೆ ಪಡೆದು ಹೊರಟನು. ॥75॥ ಅವನು ಸಪ್ತಶೃಂಗಿಯ ಮಂದಿರಕ್ಕೆ ಬಂದು ಕುಲಪುರೋಹಿತರಿಗಾಗಿ ಹುಡುಕಾಡಿದನು. ಸುದೈವವಶಾತ್ ಕಾಕಾಜಿಯವರ ಮನೆಗೆ ಕರೆದೊಯ್ಯಲ್ಪಟ್ಟನು ಮತ್ತು ಅನಾಯಾಸವಾಗಿ ಅವರನ್ನು ಭೇಟಿಮಾಡಿದನು. ॥76॥ ಕಾಕಾಜಿಯು ಬಾಬಾರವರನ್ನು ಸಾಧ್ಯವಾದಷ್ಟು ಬೇಗನೆ ಭೇಟಿಮಾಡಬೇಕೆಂದಿದ್ದನು. ಈ ಸಮಯಕ್ಕೆ ಮಾಧವರಾವ್‌ನನ್ನು ಭೇಟಿಮಾಡಿದನು. ಇದೊಂದು ಕೇವಲ ಸಾಮಾನ್ಯವಾದ ಕಾಕತಾಳೀಯವೇ!? ॥77॥ ಮಾಧವರಾವ್‌ನ ಬಗ್ಗೆ ಪೂರ್ಣಾವಿಯಾದ ವಿಷಯವನ್ನು ವಿಚಾರಿಸಿದಾಗ ಅವನು ಶಿರಡಿಯಿಂದ ಬಂದಿರುವನೆಂದು ತಿಳಿದು ಎಣೆಯಿಲ್ಲದಷ್ಟು ಸಂತೋಷವಾಯಿತು. ಇಬ್ಬರೂ ಪರಸ್ಪರ ಆಲಿಂಗನ ಮಾಡಿದರು. ॥78॥ ಇಬ್ಬರೂ ಈ ಸನ್ನಿವೇಶದಿಂದ ಅತ್ಯಂತ ಪ್ರಸನ್ನಚಿತ್ತರಾದರು. ಸಾಯಿಯ ಲೀಲೆಗಳನ್ನು ಕೊಂಡಾಡಿದರು. ಹರಕೆಯ ಪೂಜಾ ವಿಧಾನಗಳು ಮುಗಿದ ನಂತರ, ಪೂಜಾರಿಯು ಶಿರ್ಡಿಗೆ ಹೊರಟನು. ॥79॥ ಮಾಧವರಾವ್ ಅಂತಹ ವ್ಯಕ್ತಿಯ ಸಹವಾಸ ಅನಿರೀಕ್ಷಿತವಾಗಿ ದೊರಕಿದುದಕ್ಕೆ ಆ ಪೂಜಾರಿಯು ಆನಂದ ಭರಿತನಾದನು. ಅವನ ಲಕ್ಷ್ಯವೆಲ್ಲವೂ ಶಿರಡಿಯ ಪ್ರವಾಸದ ಕಡೆಯೇ ಇತ್ತು. ॥80॥ ಹರಕೆಗಳನ್ನು ಪೂರೈಸಿದ ತಕ್ಷಣವೇ, ಅವರಿಬ್ಬರೂ ಬೇಗನೆ ಶಿರಡಿ ತಲುಪಿದರು. ಅವರು ಅಲ್ಲಿಗೆ ತಲುಪಿದ ಕೂಡಲೇ ಅವರು ಸಾಯಿಯ ದರ್ಶನಕ್ಕಾಗಿ ಪರಮಪ್ರೀತಿಯಿಂದ ಉತ್ಕಂಠಿತರಾಗಿ ಹೊರಟರು. ॥81॥ ಭಾವೋದ್ವೇಗವು ಪ್ರಯಾಣಿಕನ ಪ್ರಯಾಣದ ವೇಗವನ್ನು ತೀವ್ರಗೊಳಿಸುತ್ತದೆ. ಕಾಕಾಜಿಯು ಗೋದಾವರಿ ದಡಕ್ಕೆ ಬಂದಾಗ ಅಲ್ಲಿಂದ ಶಿರಡಿಯು ಬಹಳ ಹತ್ತಿರವಿತ್ತು. ॥82॥ ಪೂಜಾರಿಯು ಬಾಬಾರವರ ಚರಣಗಳಿಗೆ ನಮಸ್ಕರಿಸಿ ಅವುಗಳನ್ನು ತನ್ನ ಕಣ್ಣೀರಿನಿಂದ ತೊಳೆದನು. ದರ್ಶನದಿಂದಾಗಿ ಅವನು ಸುಖಸಂಪನ್ನನಾದನು. ಅವನ ಮನಸ್ಸು ಪ್ರಸನ್ನವಾಯಿತು. ॥83॥ ಇದೇ ಈ ದೃಷ್ಟಾಂತದ ಉದ್ದೇಶವಾಗಿತ್ತು. ಅವನು ಬಾಬಾ ಸಮರ್ಥರನ್ನು ತನ್ನ ಸ್ವಂತ ಕಣ್ಣುಗಳಿಂದ ನೋಡಿದ ಕೂಡಲೇ ಕಾಕಾಜಿಯು ಯಥಾರ್ಥವಾಗಿ ಸುಖ ಹೊಂದಿದನು. ಮತ್ತು ಅವನ ಮನೋರಥವು ಈಡೇರಿತು. ॥84॥ ಅದು ಹಾಗಿರಲಿ. ಕಾಕಾಜಿಯು ಸಂತಸದಿಂದ ತುಂಬಿ ಹೋದನು. ದರ್ಶನವಾದ ನಂತರ ಅವನ

ಮನಸ್ಸು ಪ್ರಸನ್ನವಾಯಿತು. ಅವನು ನಿಜವಾಗಿಯೂ ನಿಶ್ಚಿಂತನಾದನು. ಅವನ ಮೇಲೆ ಕೃಪೆಯ ಮಳೆ ಸುರಿದಿತ್ತು.॥85॥ ಪ್ರತಿಕ್ಷಣವೂ ಉಂಟಾಗುತ್ತಿದ್ದ ಚಂಚಲತೆಯು ದೂರವಾಯಿತು. ತಾನೇ ಸ್ವಯಂ ಆಶ್ಚರ್ಯಚಕಿತನಾಗಿದ್ದನು. ಇದೆಲ್ಲವೂ ಅದೆಷ್ಟು ವಿಲಕ್ಷಣವಾಗಿ ಆಗಿದೆಯೆಂದು ಅಚ್ಚರಿಪಟ್ಟನು. ॥86॥ ಬಾಬಾರವರು ಒಂದೇ ಒಂದು ಮಾತನ್ನೂ ಆಡಿರಲಿಲ್ಲ. ಅಥವಾ ಈ ಸಮಾಧಾನ ಉಂಟು ಮಾಡಲು ಯಾವುದೇ ಪ್ರಶ್ನೆಯನ್ನೂ ಕೇಳಿರಲಿಲ್ಲ. ಅಥವಾ ಯಾವುದೇ ಆಶೀರ್ವಚನ ನೀಡಿರಲಿಲ್ಲ. ಕೇವಲ ದರ್ಶನ ಮಾತ್ರವೇ ಅಷ್ಟು ಸುಖದಾಯಿಯಾಗಿತ್ತು. ॥87॥ "ನನ್ನ ಚಿತ್ತದ ಚಂಚಲ ವೃತ್ತಿಯು ಕೇವಲ ದರ್ಶನ ಮಾತ್ರದಿಂದಲೇ ದೂರವಾಗಿದೆ. ನಾನು ಅಲೌಕಿಕ ಸುಖ ಮತ್ತು ನಿಜವಾದ ಅರ್ಥವನ್ನು ಪಡೆದಿದ್ದೇನೆ. ಇದನ್ನೇ 'ದರ್ಶನದ ಮಹತ್ವ' ಎನ್ನುತ್ತಾರೆ."॥88॥ ಅವನ ಕಣ್ಣುಗಳು ಸಾಯಿ ಚರಣಗಳಲ್ಲಿ ನೆಟ್ಟಿದ್ದವು. ಅವನು ಒಂದು ಮಾತನ್ನೂ ಆಡಲಾರದೆ ಹೋದನು. ಬಾಬಾರವರ ಕಥೆಗಳನ್ನು ಕೇಳುತ್ತಾ ಅವನು ಆನಂದವನ್ನು ಎಲ್ಲೆ ಮೀರಿ ಅನುಭವಿಸುವಂತಾಯಿತು. ॥89॥ ಪೂಜಾರಿಯು ತನ್ನ ಪೂರ್ಣ ಶ್ರದ್ಧೆಯಿಂದ ಸಮರ್ಥರಿಗೆ ಶರಣಾದನು ಮತ್ತು ತನ್ನ ಸುಖವನ್ನು ಪಡೆದನು. ತನ್ನ ಹಿಂದಿನ ಸಮಸ್ಯೆಗಳನ್ನು ಮರೆತೇ ಬಿಟ್ಟನು. ॥90॥ ಕಾಕಾಜಿಯು ಶಿರಡಿಯಲ್ಲಿ ಹನ್ನೆರಡು ದಿನಗಳ ಕಾಲ ಉಳಿದುಕೊಂಡನು. ಅವನ ಮನಸ್ಸು ಸುಸ್ಥಿರವಾಯಿತು. ಮತ್ತು ಅನಂತರ ಅವನು 'ಸಪ್ತಶೃಂಗಿ'ಗೆ ಹಿಂತಿರುಗಿದನು. ॥91॥ ಯಾವ ಸಮಯದಲ್ಲಿ ಕನಸು ಬೀಳುತ್ತದೆಯೋ ಅದೂ ಮುಖ್ಯವಾಗಿದೆ. ಉಷಃಕಾಲ ಅಥವಾ ಪ್ರಾತಃಕಾಲ ಬೀಳುವ ಕನಸುಗಳು ಮಾತ್ರ ನಿಜವಾಗುತ್ತವೆ ಎಂಬ ನಂಬಿಕೆ ಇದೆ. ಇತರ ಸಮಯಗಳಲ್ಲಿ ಬರುವುದು ನಿಷ್ಫಲವಾಗಿರುತ್ತವೆ. ॥92॥ ಈ ರೀತಿ ಸಾರ್ವತ್ರಿಕವಾಗಿ ಪ್ರತೀತಿ ಇರುತ್ತದೆ. ಆದರೆ ಶಿರಡಿಯ ಬಗ್ಗೆ ಬೀಳುವ ಕನಸುಗಳು ಎಲ್ಲಿಯೇ ಇರಲಿ ಅಥವಾ ಯಾವ ಕಾಲದಲ್ಲೇ ಇರಲಿ ಅವು ಸತ್ಯವಾಗುತ್ತವೆ. ಇದು ಮಾತ್ರ ಭಕ್ತರೆಲ್ಲರ ಖಚಿತವಾದ ಅನುಭವ. ॥93॥ ಈ ವಾಕ್ಯವನ್ನು ನಿದರ್ಶಿಸುವ ಒಂದು ಸಣ್ಣ ಕಥೆಯನ್ನು ಈಗ ನಾನು ಶ್ರೋತೃಗಳಿಗೆ ಸಾದರಪಡಿಸುತ್ತೇನೆ. ಅದರಲ್ಲಿ ಪರಮ ಕೌತುಕವಿರುತ್ತದೆ. ಮತ್ತು ಕೇಳಲು ಅತಿ ಉಲ್ಲಾಸಕರವಾಹಿ. ॥94॥ ಒಂದು ದಿನ ಮಧ್ಯಾಹ್ನ ಬಾಬಾರವರು ದೀಕ್ಷಿತನಿಗೆ ಹೇಳಿದರು, "ಒಂದು ಟಾಂಗಾ ತೆಗೆದುಕೋ. ರಾಹತಾಗೆ ಹೋಗು. ಮತ್ತು ಕುಶಾಲಭಾವುವನ್ನ ನಿನ್ನ ಜೊತೆಯಲ್ಲಿಯೇ ಕರೆದುಕೊಂಡು ಬಾ. ॥95॥ "ಅವನಿಗೆ ಹೇಳು. ಅವನನ್ನು ಭೇಟಿಮಾಡಿ ಬಹಳ ದಿನಗಳಾದವು. ಆದ್ದರಿಂದ ನನಗೆ ಅವನನ್ನು ನೋಡಬೇಕೆಂಬ ಆಸೆಯಾಗಿದೆ. ಅವನಿಗೆ ಹೇಳು, "ಬಾಬಾರವರು ನಿನ್ನನ್ನು ಭೇಟಿ ಮಾಡಲು ಕರೆಯುತ್ತಿದ್ದಾರೆ" ಎಂದು. ॥96॥ ಗೌರವಪೂರ್ವಕವಾಗಿ ಆಜ್ಞೆಯನ್ನು ಪಾಲಿಸುತ್ತ ದೀಕ್ಷಿತನು ಟಾಂಗಾವನ್ನು ತೆಗೆದುಕೊಂಡು ಹೋದನು. ಕುಶಾಲಭಾವುವನ್ನು ಕೂಡಲೇ ಭೇಟಿಮಾಡಿದನು ಮತ್ತು ದೀಕ್ಷಿತನು ತನ್ನ ಆಗಮನದ ಉದ್ದೇಶವನ್ನು ನಿವೇದಿಸಿದನು. ॥97॥ ಬಾಬಾರವರ ಸಂದೇಶವನ್ನು ಕೇಳುತ್ತಲೇ ಕುಶಾಲಭಾವು ಅತ್ಯಂತ ಆಶ್ಚರ್ಯಚಕಿತನಾದನು.

ಅವನು ಹೇಳಿದನು, "ನಾನು ಈಗ ತಾನೇ ಜೋಂಪಿನಿಂದ ಎದ್ದೆನು. ನನ್ನ ನಿದ್ದೆಯಲ್ಲಿ ಇದೇ ಆಜ್ಞೆಯು ಆಗಿತ್ತು. ॥98॥ "ಈಗ ತಾನೇ ಮಧ್ಯಾಹ್ನದ ಊಟ ಮುಗಿಸಿ ಆರಾಮವಾಗಿ ಮಲಗಿದೆ. ನನ್ನ ಕಣ್ಣುಗಳನ್ನು ಮುಚ್ಚುತ್ತಿರುವಾಗಲೇ ನನ್ನ ನಿದ್ದೆಯಲ್ಲಿ ಬಾಬಾರವರು ಇದನ್ನೇ ಹೇಳಿದರು. ॥99॥ "ಅವರು ಹೇಳಿದರು. 'ಶಿರಡಿಗೆ ಈಗ ಕೂಡಲೇ ಬಾ' ನನಗೂ ಸಹ ಪ್ರಬಲವಾದ ಇಚ್ಛೆ ಇತ್ತು, ಆದರೆ ನಾನು ಏನು ಮಾಡಲು ಸಾಧ್ಯ? ಇಲ್ಲಿ ಕುದುರೆಗಳು ಇರಲಿಲ್ಲ. ನಾನು ಇದನ್ನು ಬಾಬಾರವರಿಗೆ ತಿಳಿಸಲು ನನ್ನ ಮಗನನ್ನು ಕಳುಹಿಸಿದೆ. ॥100॥ "ಹುಡುಗನು ಇನ್ನೂ ಹಳ್ಳಿಯ ಸರಹದ್ದನ್ನೂ ದಾಟಿರುವನೋ ಇಲ್ಲವೋ! ಈಗ ನಿನ್ನ ಟಾಂಗಾ ಇಲ್ಲಿದೆ!" ದೀಕ್ಷಿತನು ವಿನೋದವಾಗಿ ನುಡಿದನು, "ಅದಕ್ಕಾಗಿಯೇ ನಾನು ಬರಲು ಆಜ್ಞಾಪಿಸಿರುವಿರಿ. ॥101॥ "ಆದ್ದರಿಂದ ನೀನು ಬರಲು ಇಚ್ಛಿಸಿದರೆ, ಟಾಂಗಾ ಸಿದ್ಧವಾಗಿದೆ ಮತ್ತು ಕಾಯುತ್ತಾ ಇದೆ." ಅನಂತರ ಅವನು ದೀಕ್ಷಿತನ ಜೊತೆಯಲ್ಲಿ ಸಂತೋಷವಾಗಿ ಶಿರಡಿಗೆ ಹೊರಟನು. ॥102॥ ಪರಿಣಾಮವಾಗಿ ಕುಶಾಲಭಾವು ಬಾಬಾರವರನ್ನು ಭೇಟಿಮಾಡಿದನು ಮತ್ತು ಬಾಬಾರವರ ಮನೋರಥವು ಪೂರೈಸಿತು. ಕುಶಾಲಭಾವು ಸಹ ಬಾಬಾರವರ ಈ ಲೀಲೆಯಿಂದ ಬಹುವಾಗಿ ಭಾವಪರವಶನಾದನು. ॥103॥ ಒಮ್ಮೆ ಬಾಬಾರವರು ಒಬ್ಬ ಪಂಜಾಬಿ ಬ್ರಾಹ್ಮಣನ ಕನಸಿನಲ್ಲಿ ಬಂದರು. ಅವನ ಹೆಸರು ರಾಮಲಾಲ್ ಮತ್ತು ಅವನು ಮುಂಬಯಿ ವಾಸಿಯಾಗಿದ್ದನು. ॥104॥ ಆಕಾಶ, ವಾಯು, ಸೂರ್ಯ, ವರುಣ ಇತ್ಯಾದಿ ದೇವತೆಗಳು ಅವರ ಅನುಗ್ರಹದ ಶಕ್ತಿಯಿಂದ ಯಾರಿಗೆ ಹೊರಗಿನ ಮತ್ತು ಒಳಗಿನ ವಸ್ತುಗಳ ಗ್ರಾಹಕತೆಯು ಇರುತ್ತದೆಯೋ ಅದನ್ನು ಜಾಗೃತ ಅವಸ್ಥೆ ಅನ್ನುತ್ತಾರೆ. ॥105॥ ಯಾವಾಗ ಎಲ್ಲ ಇಂದ್ರಿಯಗಳೂ ವಿರಮಿಸುತ್ತವೆಯೋ ಆಗ ಜಾಗೃತ್ ಸಂಸ್ಕಾರದ ಪ್ರಬೋಧನೆಯು ಎಚ್ಚೆತ್ತು ಗ್ರಾಹ್ಯ ಮತ್ತು ಗ್ರಾಹಕ ರೂಪಗಳನ್ನು ತೆಗೆದುಕೊಳ್ಳುತ್ತವೆ. ಇದೇ ಸ್ವಪ್ನ ಅವಸ್ಥೆಯ ಲಕ್ಷಣಗಳು. ॥106॥ ಅವನ ಕನಸು ಅತಿ ವಿಲಕ್ಷಣವಾದದ್ದು. ಅವನಿಗೆ ಬಾಬಾರವರ ರೂಪ ಲಕ್ಷಣಗಳು ತಿಳಿದಿರಲಿಲ್ಲ. ಅವನು ಎಂದಿಗೂ ದರ್ಶನ ಮಾಡಿದವನಲ್ಲ. ಅಲ್ಲಿ ಬಾಬಾ ಹೇಳಿದ್ದು, "ನನ್ನಲ್ಲಿಗೆ ಬಾ" ॥107॥ 'ನೋಡಲು ಆಕೃತಿಯು ಮಹಾನ್ ಸಂತರ ತರಹ ಇತ್ತು, ಆದರೆ ಅವರು ಯಾರು? ಮತ್ತು ಎಲ್ಲಿಂದ ಬಂದರು?' ರಾಮಲಾಲನು ಎಚ್ಚರಗೊಂಡಾಗ ಆಳವಾದ ಯೋಚನೆಯಲ್ಲಿ ಮುಳುಗಿದನು. ॥108॥ ಮನದಲ್ಲಿ ಅವನಿಗೆ ಹೋಗುವ ಇಚ್ಛೆಯಾಯಿತು. ಆದರೆ ಅವರ ವಿಳಾಸವಾಗಲಿ ಇತರೆ ವಿವರಗಳಾಗಲೀ ಯಾವುದೂ ಇರಲಿಲ್ಲ. ಆದರೆ ಯಾರು ದರ್ಶನಕ್ಕಾಗಿ ಕರೆಯುವರೋ ಅವರೇ ಎಲ್ಲ ವ್ಯವಸ್ಥೆಯನ್ನೂ ಮಾಡುತ್ತಾರೆ. ॥109॥ ಅನಂತರ, ಅದೇ ದಿನ ಮಧ್ಯಾಹ್ನ, ಅವನು ರಸ್ತೆಯ ಪಕ್ಕದಲ್ಲಿ ಸಹಜವಾಗಿಯೇ ನಡೆದುಕೊಂಡು ಹೋಗುತ್ತಿದ್ದಾಗ ಪಕ್ಕದ ಒಂದು ಅಂಗಡಿಯಲ್ಲಿ ನೇತುಹಾಕಿದ್ದ ಒಂದು ಚಿತ್ರಪಟವನ್ನು ನೋಡಿ ಅವನ ಅಂತರಂಗ ಚಮಕಿಸಿತು. ॥110॥ ತನ್ನ ಕನಸಿನಲ್ಲಿ ಕಂಡ ರೂಪವು ಇದೇ ತರಹ ಇತ್ತು ಎಂದು ರಾಮಲಾಲನು ಮನಸ್ಸಿನಲ್ಲಿಯೇ ಭಾವಿಸಿದನು. ಅವನು ಕೂಡಲೇ ಅಂಗಡಿಯವನ ಹತ್ತಿರ

ವಿಚಾರಿಸಿದನು. ॥111॥ ಅವನು ಚಿತ್ರಪಟವನ್ನು ಹತ್ತಿರದಿಂದ ಲಕ್ಷ್ಯಕೊಟ್ಟು ನೋಡಿದನು. "ಅವರು ಯಾರು ಮತ್ತು ಎಲ್ಲಿಯವರು?" ಅದು ಶಿರಡಿಯ ಸಾಯಿಬಾಬಾ ಎಂಬುದನ್ನು ಅರಿತನು. ರಾಮಲಾಲನು ತೃಪ್ತಿಹೊಂದಿದನು. ॥112॥ ಅನಂತರ ಅವನು ಪೂರ್ಣ ವಿವರಗಳನ್ನು ತಿಳಿದುಕೊಂಡನು. ರಾಮಲಾಲನು ಶಿರಡಿಗೆ ಹೋದನು ಮತ್ತು ಅವರ ಮಹಾಸಮಾಧಿಯ ಕಾಲದವರೆಗೆ ಬಾಬಾರವರ ಹತ್ತಿರವೇ ಇದ್ದುಬಿಟ್ಟನು. ॥113॥ ಇದು ಬಾಬಾರವರ ಇಚ್ಛೆಯಾಗಿತ್ತು, ಭಕ್ತರ ಆಶೆಗಳನ್ನು ಪೂರೈಸುವುದು. ಅವರನ್ನು ದರ್ಶನಕ್ಕಾಗಿ ಕರೆಸಿ ಅವರ ಲೌಕಿಕ ಹಾಗೂ ಪಾರಮಾರ್ಥಿಕಗಳನ್ನು ಸಾಧಿಸಲು ಅನುವು ಮಾಡಿಕೊಡುವುದು. ॥114॥ ಹಾಗೆಯೇ ಅವರ ಭಕ್ತರೆಲ್ಲರೂ ಸಂತೃಪ್ತರಾಗಿದ್ದರು. ಬಾಬಾ ಮಾತ್ರ ಸರ್ವದಾ ನಿಷ್ಕಾಮ, ನಿಃಸ್ವಾರ್ಥ, ನಿರಹಂಕಾರ, ನಿರ್ಮಲರಾಗಿದ್ದರು. ಅವರ ಅವತಾರವು ಕೇವಲ ಭಕ್ತರ ಕಾಮನೆಗಳನ್ನು ಪೂರೈಸಲು ಮಾತ್ರವಾಗಿತ್ತು. ॥115॥ ಅವರನ್ನು ನಿಜವಾದ ಸಂತರೆಂದು ತಿಳಿಯಿರಿ. ಅವರು ಕ್ರೋಧದಿಂದ ದೂರವಾಗಿ, ದ್ವೇಷಕ್ಕೆ ಜಾಗವಿಲ್ಲದೆ, ಸ್ವಾರ್ಥದ ಗೆರೆಯೂ ಇಲ್ಲದೆ ಇದ್ದರು. ॥116॥ ಎಲ್ಲರಿಗೂ ತೋರಿಸುವ ಅವರ ನಿಸ್ವಾರ್ಥ ಪ್ರೇಮವೇ ಅವರ ಧ್ಯೇಯವಾಗಿತ್ತು, ಅವರ ಪರಮ ಪುರುಷಾರ್ಥವಾಗಿತ್ತು. ಧರ್ಮವಿಷಯವನ್ನು ಬಿಟ್ಟು ಬೇರೆ ಯಾವ ವಿಷಯದ ಬಗ್ಗೆಯೂ ಒಂದು ಮಾತನ್ನೂ ವ್ಯರ್ಥವಾಗಿ ಆಡುತ್ತಿರಲಿಲ್ಲ. ॥117॥ ಸಾರಾಂಶದಲ್ಲಿ ಹೇಳಬೇಕೆಂದರೆ, ಬಾಬಾರವರು ನನ್ನ ಕೈಹಿಡಿದು ತಮ್ಮ ಜೀವನ ಚರಿತ್ರೆಯನ್ನು ಬರೆಸಿದ್ದಾರೆ. ಅದರಿಂದಾಗಿ ಭಕ್ತರು ಸದಾ ಅವರ ಸ್ಮರಣೆಯಲ್ಲಿಯೇ ಮುಳುಗಿರಲಿ. ಇದೇ ಇದರ ಇಂಗಿತ. ॥118॥ ಆದುದರಿಂದ ಹೇಮಾಡಪಂತನು ಅತಿ ವಿನಯದಿಂದ ಸದಾ ಶ್ರೋತೃಗಳನ್ನು 'ಈ ಸಾಯಿ ಸಚ್ಚರಿತೆಯನ್ನು ಶ್ರದ್ಧಾಭಕ್ತಿಗಳಿಂದ ಕೇಳಲಿ' ಎಂದು ಬೇಡುತ್ತಾನೆ. ॥119॥ ಆದ್ದರಿಂದ ನಿಮ್ಮ ಮನಸ್ಸು ಶಾಂತಿಯನ್ನು ಹೊಂದುತ್ತದೆ. ಮತ್ತು ಅದು ದುರಭ್ಯಾಸಗಳನ್ನು ದೂರಮಾಡಲು ಸಹಾಯ ಮಾಡುತ್ತದೆ. ಸಾಯಿಚರಣಗಳಲ್ಲಿ ಭಕ್ತಿಯು ದೃಢವಾಗುತ್ತದೆ. ಮತ್ತು ಸಂಸಾರದಿಂದ ಮುಕ್ತಿಯನ್ನು ನೀಡುತ್ತದೆ. ॥120॥ ಅದು ಹಾಗಿರಲಿ. ಮುಂದಿನ ಅಧ್ಯಾಯದಲ್ಲಿ ಸನ್ಯಾಸಿ ವಿಜಯಾನಂದರ ಕಥೆಯ ನಿರೂಪಣೆ ಇರುತ್ತದೆ. ಅವರು ಮಾನಸ ಸರೋವರಕ್ಕೆ ಹೋಗುವ ಬದಲು ಸಾಯಿಯ ಚರಣಗಳಲ್ಲಿ ಮುಕ್ತಿಯನ್ನು ಪಡೆದರು. ॥121॥ ಮತ್ತೆ ಭಕ್ತನಾದ ಮಾನಕರ್ ಬಾಳಾರಾಮನು ಶಾಶ್ವತ ಶಾಂತಿ ಪಡೆದನು. ನೂಲ್ಕರ್ ಮತ್ತು ಮೇಘಾರ ಆಸೆಗಳೂ ಸಂಪೂರ್ಣವಾಗಿ ಸಾಯಿನಾಥರಿಂದ ಪೂರೈಸಲ್ಪಟ್ಟವು. ॥122॥ ಒಂದು ಜಂತುವೂ ಸಹ, ಹುಲಿಯಂತಹ ಕ್ರೂರ ಪ್ರಾಣಿಯೂ ಅವರ ಚರಣಗಳಲ್ಲಿ ಜಾಗ ಪಡೆಯಿತು. ಅಂತಹ ಅಗಾಧ ಕಾರ್ಯಗಳು ಸಾಯಿಯವು. ಅವುಗಳನ್ನು ಕೇಳಿದರೇನೇ ಒಂದು ಹಬ್ಬದ ಮಹೋತ್ಸವವನ್ನು ಆಚರಿಸಿದಂತೆ. ॥123॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಹರಕೆ ಮತ್ತಿತರ ಕಥೆಗಳ ನಿರೂಪಣೆ" ಎಂಬ ಮೂವತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1) ಮಾಧವರಾವ್‌ನನ್ನು ಬಾಬ್ಯಾ ಎಂದು ಅವನ ತಾಯಿ ಕರೆಯುತ್ತಿದ್ದರು.

2) ನಾಗಪುರದ ಬಾಪು ಸಾಹೇಬ್ ಬುಟಿಯ ಮಗ.

3) ಓವಿ 82 ಓವಿ 81ರ ಮುಂಚೆ ಬರಬೇಕಾಗಿತ್ತು.

4) ರಾಹತಾದ ಒಬ್ಬ ಶ್ರೀಮಂತ ವ್ಯಕ್ತಿ. ಅವನು ಬಾಬಾರವರ ಭಕ್ತನೂ ಆಗಿದ್ದನು.



## ಅಧ್ಯಾಯ – 31

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



# "ದರ್ಶನದ ಮಹತ್ವ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದಲ್ಲಿ ಸಪ್ತಶೃಂಗಿಯ ಭಕ್ತನ ಕಥೆ ಮತ್ತು ಮಾಧವರಾವ್‌ನ ಹರಕೆಯನ್ನು ಯಾವ ರೀತಿ ಸಾಯಿಯವರು ಪೂರೈಸಿದರು ಎಂಬುದನ್ನು ನಿರೂಪಿಸಲಾಯಿತು. ॥1॥ ಮತ್ತು ಯಾವ ರೀತಿ ಖುಶಾಲ ಶೇಠ್ ಮತ್ತು ರಾಮಲಾಲ ಅವರಿಗೆ ಕನಸಿನಲ್ಲಿ ದರ್ಶನ ನೀಡಲಾಯಿತು. ಮತ್ತು ಯಾವ ರೀತಿ ರಾಮಲಾಲನನ್ನು ಬಾಬಾರವರ ಮಹಾಸಮಾಧಿಯವರೆಗೆ ಶಿರಡಿಯಲ್ಲಿ ಇರಿಸಿಕೊಳ್ಳಲಾಯಿತು ಎಂಬುದನ್ನು ತಿಳಿಸಿದೆ. ॥2॥ ಈಗಿನ ಕಥೆಯು ಅವುಗಳಿಗಿಂತ ಇನ್ನೂ ಅಪೂರ್ವವಾಗಿದೆ. ಶ್ರೋತೃಗಳು ಇದನ್ನು ಅತ್ಯಾನಂದದಿಂದ ಕೇಳಬಹುದಾಗಿದೆ. ಯಾವ ರೀತಿ ಒಬ್ಬ ಸನ್ಯಾಸಿಯು ಮಾನಸ ಸರೋವರದ ಯಾತ್ರೆಗೆಂದು ಹೊರಟಿದ್ದವನು ಮುಕ್ತಿಯನ್ನು ಪಡೆದನೆಂಬುದು. ॥3॥ ಮತ್ತು ಯಾವ ರೀತಿ ಮಾನಕರ್, ನೂಲ್ಕರ್ ಮತ್ತು ಮೇಘಾರ ಉದ್ದೇಶಗಳು ಫಲಿಸಿದವು. ಇವರೆಲ್ಲರೂ ಮಾನವರು, ಆದರೆ ಕ್ರೂರಿಯಾದ ಹುಲಿಯೂ ಸಹ ಬಾಬಾರವರ ಚರಣಗಳಲ್ಲಿ ಜಾಗವನ್ನು ಪಡೆಯಿತು. ॥4॥ ಈ ಕಥೆಗಳು ಬಹಳ ವಿಸ್ತೃತವಾಗಿವೆ. ಆದರೆ ಗ್ರಂಥವು ಬಹಳ ದೊಡ್ಡದಾಗುತ್ತದೆ. ಆದುದರಿಂದ ನಾನು ಅವುಗಳ ಸಾರವನ್ನು ಸಾಧಕರ ನಿಜಹಿತಕ್ಕಾಗಿ ಸಂಕ್ಷಿಪ್ತವಾಗಿ ನಿವೇದಿಸುತ್ತೇನೆ. ॥5॥ ಮರಣಕಾಲದಲ್ಲಿಯೂ ಯಾವ ರೀತಿಯ ಯೋಚನೆಗಳು

ಇರುತ್ತವೆಯೋ ಅದಕ್ಕೆ ಅನುಗುಣವಾಗಿ ಅವನು ಪುನರ್ಜನ್ಮವನ್ನು ಪಡೆಯುತ್ತಾನೆ. ಕ್ರಿಮಿಗಳು ಭಯದಿಂದಾಗಿ ದುಂಬಿಗಳಾಗುತ್ತವೆ. ರಾಜ ಜಡಭರತನೂ ತಾನು ಸಾಕಿದ ಜಿಂಕೆಯ ಯೋಗಕ್ಷೇಮದ ಬಗ್ಗೆ ಅಂತ್ಯಕಾಲದಲ್ಲಿ ಚಿಂತಿಸಿದ್ದಕ್ಕಾಗಿ ಜಿಂಕೆಯಾಗಿ ಹುಟ್ಟಿದನು. ॥6॥ ಮಾನವನು ಮರಣ ಕಾಲದಲ್ಲಿ ಯಾವುದರ ಬಗ್ಗೆ ಧ್ಯಾನಿಸುತ್ತಾನೋ ಅದೇ ರೂಪದಲ್ಲಿ ಪುನರ್ಜನ್ಮ ಪಡೆಯುತ್ತಾನೆ. ಭಗವಂತ ಚರಣಗಳಲ್ಲಿ ತಲ್ಲೀನನಾದವನು ಮತ್ತೆ ಜನ್ಮ ತಾಳುವುದಿಲ್ಲ. ॥7॥ ನಿರಂತರ ಭಗವಂತನ ನಾಮಸ್ಮರಣೆಯನ್ನು ಅಭ್ಯಾಸ ಮಾಡುವಂತೆ ಪ್ರತಿಪಾದಿಸಲು ಕಾರಣವು ಇದೇಯೇ. ಅದರಿಂದಾಗಿ ಅಂತ್ಯಕಾಲದಲ್ಲಿ ಅವನು ಗಾಬರಿಯಾಗಬೇಕಾಗುವುದಿಲ್ಲ. ಮತ್ತು ಆ ಸಮಯದಲ್ಲೂ ಅದನ್ನು ಅಭ್ಯಾಸ ಮಾಡುತ್ತಾನೆ. ॥8॥ ಆ ಸಂದಿಗ್ಧ ಪರಿಸ್ಥಿತಿಯಲ್ಲಿ ಅವನು ಎಚ್ಚರವಿಲ್ಲದಿದ್ದಲ್ಲಿ ಇಡೀ ಜೀವಿತ ಸಮಯದ ಸಾಧನೆಯೆಲ್ಲವೂ ವ್ಯರ್ಥವಾಗುತ್ತದೆ. ಜೀವಿತ ಸಮಯದಲ್ಲಿ ಉಂಟಾಗಿದ್ದ ಸಂತರ ಸತ್ಸಂಗವೂ ವ್ಯರ್ಥವಾಗುತ್ತದೆ. ॥9॥ ಆದುದರಿಂದ ಭಕ್ತಿಭಾವದಿಂದ ತುಂಬಿರುವ ಭಕ್ತರು ತಮ್ಮ ಜೀವಿತವನ್ನೇ ಸಂತರ ಕೈಯಲ್ಲಿ ವಹಿಸುತ್ತಾರೆ. ಏಕೆಂದರೆ ಅವರಿಗೆ ಮಾತ್ರ ಪುನರ್ಜನ್ಮ ಇದೆಯೋ ಇಲ್ಲವೋ ತಿಳಿಯುತ್ತದೆ. ಕೊನೆಯಲ್ಲಿ ಕೇವಲ ಅವರು ಮಾತ್ರವೇ ಸಂಗಾತಿಗಳು. ॥10॥ ಈ ಒಂದು ಅರ್ಥವನ್ನು ನಿರೂಪಿಸುವಂತಹ ಒಂದು ಕಥೆಯು ಸಾಯಿಯ ಸನ್ನಿಧಿಯಲ್ಲಿ ನಡೆಯಿತು. ಭಕ್ತರಲ್ಲಿಟ್ಟಿರುವ ಸಾಯಿಯ ಪ್ರೇಮವನ್ನು ಶ್ರೋತೃಗಳು ಇದರಿಂದ ಅರಿಯುವರು. ॥11॥ ಶಿರಡಿಯು ಮದ್ರಾಸಿನಿಂದ ಅದೆಷ್ಟು ದೂರ ಮತ್ತು ಶಿರಡಿಯಿಂದ ಅತಿ ಎತ್ತರದ ಮಾನಸ ಸರೋವರ! ಆದರೆ ಕಾಲವು ಪಕ್ವವಾದಾಗ ಅವರು ತಮ್ಮ ಭಕ್ತರನ್ನು ತಮ್ಮ ಚರಣಗಳಿಗೆ ಎಳೆದು ತಂದರು. ॥12॥ ಒಮ್ಮೆ, ಒಬ್ಬ ಮದ್ರಾಸಿ ಸನ್ಯಾಸಿ ವಿಜಯಾನಂದ ಎಂಬುವನು ಮದ್ರಾಸಿನಿಂದ ಮಾನಸ ಸರೋವರದ ಕಡೆಗೆ ಬಹಳ ಉಲ್ಲಾಸದಿಂದ ಹೊರಟನು. ॥13॥ ಅವನು ಒಬ್ಬ ಜಪಾನಿ ಯಾತ್ರಿಕನಲ್ಲಿ ಮಾನಸ ಸರೋವರದ ನಕ್ಷೆಯನ್ನು ನೋಡಿ ಮನಸ್ಸಿನಲ್ಲಿಯೇ ಅದರ ದರ್ಶನ ಮಾಡುವ ಉತ್ಕಟವಾದ ಇಚ್ಛೆಯಿಂದ ಹೊರಡಲು ನಿಶ್ಚಯಿಸಿದನು. ॥14॥ ಮಾರ್ಗದ ಮಧ್ಯದಲ್ಲಿ ಶಿರಡಿ ಹಳ್ಳಿಯು ಇತ್ತು. ಅವನು ಬಾಬಾರವರ ಕೀರ್ತಿಯನ್ನು ಕೇಳಿದ್ದನು. ಅವರ ದರ್ಶನಕ್ಕಾಗಿ ಅವರನ್ನು ಹುಡುಕುತ್ತಾ ಬಂದನು. ॥15॥ ಸಾಯಿ ಮಹಾರಾಜ್‌ರು ಮಹಾನ್ ಸಂತರೆಂದೂ, ಕೀರ್ತಿವಂತರೆಂದೂ, ಜಗದ್ವಿಖ್ಯಾತರೆಂದೂ ತಿಳಿದು ಅವನು ಅವರ ದರ್ಶನಕ್ಕಾಗಿ ಮಾರ್ಗದ ಮಧ್ಯದಲ್ಲಿಯೇ ನಿಂತನು. ॥16॥ ಹರಿದ್ವಾರದ ಸ್ವಾಮಿ ಸೋಮದೇವಜೀಯೂ ಸಹ ಆ ಸಮಯದಲ್ಲೇ ಶಿರಡಿಯಲ್ಲಿದ್ದನು. ಭಕ್ತರ ಗುಂಪಿನಲ್ಲಿ ಸಹಜವಾಗಿಯೇ ಇಬ್ಬರೂ ಭೇಟಿಯಾದರು. ॥17॥ ಸನ್ಯಾಸಿಯು ಅವನನ್ನು ಮಾನಸ ಸರೋವರ ಮತ್ತೆಷ್ಟು ದೂರದಲ್ಲಿದೆಯೆಂದು ಕೇಳಿದನು. ಸ್ವಾಮಿಯು ಅದು ಐನೂರು ಮೈಲಿಗಳಷ್ಟು ದೂರದಲ್ಲಿದೆಯೆಂದು ಹೇಳಿದನು. ಮತ್ತು ಗಂಗೋತ್ರಿಯನ್ನೂ ದಾಟಿ ಮುಂದೆ ಹೋಗಬೇಕೆಂದನು. ॥18॥ "ಅಲ್ಲಿ ಬಹಳವಾಗಿ ಹಿಮ ಬೀಳುತ್ತಿದೆ. ಪ್ರತಿ ಐವತ್ತು ಕೋಸಗಳಿಗೂ ಆಡು ಭಾಷೆ

ಬದಲಾಗುತ್ತದೆ. ಭೂತಾನಿನ ನಿವಾಸಿಗಳು ಬಹಳ ಸಂಶಯಗ್ರಸ್ತರು. ಮತ್ತು ಪ್ರಯಾಣಿಕರನ್ನು ಅತಿಯಾಗಿ ಪೀಡಿಸುತ್ತಾರೆ." ॥19॥ ಸ್ವಾಮಿಯ
ಮುಖದಿಂದ ಈ ವರ್ತಮಾನವನ್ನು ಕೇಳಿದ ಸನ್ಯಾಸಿಯು ಅತ್ಯಂತ ಖಿನ್ನವದನನಾದನು. ಅವನಿಗೆ ಎರಡು ಮನಸ್ಸಾಯಿತು ಮತ್ತು ಬಹಳ
ಚಿಂತಾಮಗ್ನನಾದನು. ॥20॥ ಅವನು ಸಾಯಿಬಾಬಾರವರ ದರ್ಶನ ತೆಗೆದುಕೊಂಡನು. ಮತ್ತು ಅವರ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮಮಾಡಿದನು.
ಅವನ ಮನಸ್ಸು ಸುಪ್ರಸನ್ನವಾಯಿತು. ಬಾಬಾರವರ ಸನ್ನಿಧಿಯಲ್ಲಿ ಕಾಲು ಮಡಿಚಿ ಕುಳಿತುಕೊಂಡನು. ॥21॥ ಅನಂತರ ಬಾಬಾರವರು ಅತ್ಯಂತ
ಕ್ರೋಧಿತರಾಗಿ, ಅಲ್ಲಿ ಕುಳಿತಿದ್ದವರ ಹತ್ತಿರ ಹೇಳಿದರು, "ಈ ಸನ್ಯಾಸಿಯನ್ನು ಓಡಿಸಿಬಿಡಿ. ಅವನ ಸಹವಾಸ ಮಾಡುವಂತಹುದಲ್ಲ!" ॥22॥
ಮೊದಲೇ ಸನ್ಯಾಸಿಯು ಹೊಸಬನು. ಅವನಿಗೆ ಬಾಬಾರವರ ಸ್ವಭಾವ ತಿಳಿಯದು. ಅವನಿಗೆ ನಾಚಿಕೆಯಾಯಿತು. ಸೇವೆ ಮತ್ತೇನು ನಡೆಯುತ್ತದೆ
ಎಂಬುದನ್ನು ನೋಡಲು ಅಲ್ಲಿಯೇ ಕುಳಿತನು. ॥23॥ ಅದು ಪ್ರಾತಃಕಾಲದ ದರ್ಬಾರ್ ಆಗಿತ್ತು. ಮಸೀದಿಯಲ್ಲಿ ಬಹಳ ಜನರು ಸೇರಿದ್ದರು. ಭಕ್ತರು
ಮಾಡುತ್ತಿದ್ದ ಪೂಜೆ, ಉಪಚಾರಗಳು ನಿರ್ದಿಷ್ಟವಾದ ನಿಯಮಾನುಸಾರ ಮಾಡುತ್ತಿದ್ದುದನ್ನು ನೋಡಿ ದಂಗುಬಡಿದನು॥24॥ ಕೆಲವರು ಬಾಬಾರವರ
ಚರಣಗಳನ್ನು ತೊಳೆದು ಅವರ ಅಂಗುಷ್ಠದಿಂದ ಬಂದಂತಹ ತೀರ್ಥವನ್ನು ಸಣ್ಣ ಸೌಟಿನಲ್ಲಿ ತೆಗೆದುಕೊಳ್ಳುತ್ತಿದ್ದರು. ಪರಿಶುದ್ಧವಾದ ಸದ್ಭಾವದಿಂದ
ಅದನ್ನು ಕುಡಿಯುತ್ತಿದ್ದರು ಮತ್ತೆ ಕೆಲವರು ಗೌರವದಿಂದ ತಮ್ಮ ಕಣ್ಣುಗಳಿಗೆ ಮುಟ್ಟಿಸುತ್ತಿದ್ದರು. ॥25॥ ಕೆಲವರು ಅವರಿಗೆ ಗಂಧವನ್ನುಹಚ್ಚುತ್ತಿದ್ದರು.
ಕೆಲವರು ಅವರ ಶರೀರಕ್ಕೆ ಸುಗಂಧಿತ ಅತ್ತರನ್ನು ಹಚ್ಚುತ್ತಿದ್ದರು. ಅವರು ಬ್ರಾಹ್ಮಣರೋ, ಶೂದ್ರರೋ ಯಾವುದೇ ನಿರ್ಬಂಧವಿರಲಿಲ್ಲ. ॥26॥
ಬಾಬಾರವರು ಅವನ ಮೇಲೆ ಕೋಪಿಸಿಕೊಂಡರೂ ಸಹ ಆ ಸನ್ಯಾಸಿಯಲ್ಲಿ ಅನುರಾಗವು ಉಕ್ಕಿಬಂದಿತು. ಅವನಿಗೆ ಅಲ್ಲಿಂದ ಹೋಗಬೇಕೆಂದೆನಿಸಲಿಲ್ಲ.
ಮತ್ತು ಅವನು ಅಲ್ಲಿಂದ ಏಳಲಿಲ್ಲ. ಅವನು ಎಲ್ಲಿ ಕುಳಿತಿದ್ದನೋ ಅಲ್ಲಿಯೇ ಕುಳಿತಿದ್ದನು. ॥27॥ ಅವನು ಶಿರಡಿಯಲ್ಲಿ ಎರಡು ದಿನಗಳ ಕಾಲ
ಉಳಿದು ಕೊಂಡನು. ಆ ಸಮಯದಲ್ಲೇ ಅವನಿಗೊಂದು ಪತ್ರವು ಬಂದಿತು. ಅದರಲ್ಲಿ ಅವನ ತಾಯಿಯು ಮನೆಯಲ್ಲಿ ಅಸ್ವಸ್ಥಳಾಗಿರುವಳೆಂಬ
ಸುದ್ದಿ ಇತ್ತು. ಅದರಿಂದಾಗಿ ಅವನು ಉದಾಸನಾದನು. ॥28॥ ಅವನು ಮನೆಗೆ ಹಿಂತಿರುಗಿ ತನ್ನ ತಾಯಿಯ ಜೊತೆಯಲ್ಲಿ ಇರಬೇಕೆಂದುಕೊಂಡನು.
ಆದರೆ ಬಾಬಾರವರ ಅನುಮತಿಯಿಲ್ಲದೆಯೇ ಒಂದು ಹೆಜ್ಜೆಯನ್ನೂ ತೆಗೆದುಕೊಳ್ಳಲಾಗುತ್ತಿರಲಿಲ್ಲ. ॥29॥ ಅನಂತರ ಆ ಪತ್ರವನ್ನು ಕೈಲಿ ಹಿಡಿದು
ಸನ್ಯಾಸಿಯು ಮಸೀದಿಗೆ ಹೋದನು. ಅವನು ಬಾಬಾರವರ ಹತ್ತಿರ ತನ್ನ ತಾಯಿಯ ಸ್ಥಿತಿಯನ್ನು ನಿವೇದಿಸಿ ವಿನಂತಿಮಾಡಲು ಪ್ರಾರಂಭಿಸಿದನು.
॥30॥ "ಮಹಾರಾಜ್, ಸಾಯಿಸಮರ್ಥ! ನಾನು ನನ್ನ ತಾಯಿಯನ್ನು ಭೇಟಿಮಾಡಲು ಕಾತರನಾಗಿದ್ದೇನೆ. ನೀವು ಪ್ರಸನ್ನರಾಗಿ ಆಜ್ಞೆನೀಡಿ. ಮತ್ತು
ನನ್ನ ಪ್ರಯಾಣಕ್ಕೂ ಕೃಪೆತೋರಿ." ॥31॥ ಅವನು ಬಾಬಾರವರ ಚರಣಗಳಲ್ಲಿ ಬಿದ್ದು ಮುಂದುವರೆಸಿದನು. "ನಿಮ್ಮಆಜ್ಞೆಯನ್ನು ಕರುಣಿಸುವುದಿಲ್ಲವೇ?

ಕೃಪೆ ಮಾಡುವುದಿಲ್ಲವೇ? ನನ್ನ ತಾಯಿಯು ಜೀವಹಿಡಿದು ಕೊಂಡಿದ್ದಾಳೆ. ಅವಳು ಹಾಸಿಗೆ ಹಿಡಿದು ಇನ್ನೇನು ಮರಣಶಯ್ಯೆಯಲ್ಲಿದ್ದಾಳೆ! ॥32॥ "ಅವಳು ನನಗಾಗಿ ಕಾಯುತ್ತಿರಬೇಕು. ಆದ್ದರಿಂದ ಅವಳ ಕಡೆ ಕೊನೆಯ ದೃಷ್ಟಿ ಹರಿಸಲಾದರೂ ಅನುಮತಿ ನೀಡಿ. ಅದು ಅವಳಿಗೆ ತನ್ನ ಕಷ್ಟವನ್ನು ಸಹಿಸಿಕೊಂಡು ಶಾಂತಿಯುತವಾದ ಅಂತ್ಯವನ್ನು ಕಾಣಲು ಸಹಾಯ ಮಾಡುತ್ತದೆ." ॥33॥ ಸಾಯಿ ಸಮರ್ಥರು ಅಂತರ್ಜ್ಞಾನಿ. ಅವರಿಗೆ ಸನ್ಯಾಸಿಯ ಸ್ವಂತ ಅಂತ್ಯವೂ ಹತ್ತಿರವೆಂದು ತಿಳಿದಿತ್ತು. ಅವರು ಅವನಿಗೆ ಏನು ಹೇಳಿದರೆಂಬುದನ್ನು ಗಮನವಿಟ್ಟು ಕೇಳಿ. ॥34॥"ನಿನಗೆ ನಿನ್ನ ತಾಯಿಯ ಮೇಲೆ ಇಷ್ಟೊಂದು ಮಮಕಾರವಿದ್ದರೆ. ನೀನು ಈ ಸನ್ಯಾಸಿಯ ವೇಷ ಏಕೆ ಧರಿಸಿದೆ? ಈ ವೇಷಕ್ಕೆ ಮಮಕಾರ ತಕ್ಕುದಲ್ಲ. ನೀನು ಈ ಕಾಷಾಯ ವಸ್ತ್ರಕ್ಕೆ ಕಳಂಕ ಹಚ್ಚಿರುವೆ. ॥35॥ "ಹೋಗು, ಕುಳಿತುಕೋ. ಉದಾಸನಾಗಬೇಡ. ಕೆಲವು ದಿನಗಳು ಕಳೆಯಲಿ. ಅನಂತರ ಮುಂದಿನದನ್ನು ಯೋಚನೆ ಮಾಡೋಣ. ಮನಸ್ಸಿನಲ್ಲಿ ಧೈರ್ಯ ಮತ್ತು ತಾಳ್ಮೆಯನ್ನು ಕಳೆದುಕೊಳ್ಳಬೇಡ. ॥36॥ "ವಾಡಾದಲ್ಲಿ ಅನೇಕಕಳ್ಳರು ಇದ್ದಾರೆ. ಎಲ್ಲ ಬಾಗಿಲುಗಳನ್ನೂ ಹಾಕಿ ಹುಶಾರಾಗಿ ಇರು. ಅವರು ನಿನ್ನ ಸರ್ವಸ್ವವನ್ನೇ ಅಪಹರಿಸುತ್ತಾರೆ. ಮತ್ತು ಭಯಂಕರವಾಗಿ ನಿನ್ನ ಮೇಲೆ ಮುತ್ತಿಗೆ ಹಾಕುತ್ತಾರೆ. ॥37॥ "ಧನ ವೈಭವವು ಶಾಶ್ವತವಲ್ಲ. ಇನ್ನು ಶರೀರವಾದರೋ ಅದು ಸರ್ವದಾ ಅನಿತ್ಯವಾದುದು. ಯಾವಾಗಲೂ ಮೃತ್ಯುವು ಸನ್ನಿಹಿತವೆಂದು ತಿಳಿದು ಶಾಸ್ತ್ರದಲ್ಲಿರುವ ರೀತಿ ವರ್ತಿಸು ಮತ್ತು ಧರ್ಮದ ಬಗ್ಗೆ ಸದಾ ಎಚ್ಚರವಿರಲಿ. ॥38॥ "ಈ ಪ್ರಪಂಚದಲ್ಲಿ ದೇಹ, ಸ್ತ್ರೀ, ಪುತ್ರಾದಿಗಳ ಬಗ್ಗೆ ನಾನು ಮತ್ತು ನನ್ನದು ಎಂಬ ಅಭಿಮಾನವೇನಾದರೂ ಇದ್ದಲ್ಲಿ ಅದರಿಂದಾಗಿ ತಾಪತ್ರಯಗಳುಂಟಾಗುತ್ತವೆ. ಪ್ರಾಪಂಚಿಕ ಅಸ್ತಿತ್ವದಿಂದ ಉಂಟಾಗುವ ದುಃಖವು ಇದು. ॥39॥ "ಎರಡನೆಯ ಅನರ್ಥವೆಂದರೆ ಆಮುಷ್ಮಿಕ – ಪರಲೋಕದ, ಸ್ವರ್ಗಸುಖದ ಕಾಮನೆ. ಯಾರು ಪರಲೋಕವನ್ನು ಆಸೆಪಡುತ್ತಾರೋ ಅವರಿಗೂ ಆತ್ಮ ಸಾಕ್ಷಾತ್ಕಾರದ ಮಾರ್ಗದಲ್ಲಿ ಇದೂ ಸಹ ಪ್ರತಿಬಂಧಕವೇ. ಅವರು ಸದಾ ಕುಗ್ಗಿರುತ್ತಾರೆ. ॥40॥ "ಅಲ್ಲಿ (ಅಂದರೆ ಪರಲೋಕದಲ್ಲಿ) ಪುಣ್ಯಕಾರ್ಯಗಳ ಸಂಚಯವಿರುವುದಿಲ್ಲ. ಆದ್ದರಿಂದ ಅಲ್ಲಿ ನಿರ್ಭಯತ್ವವೂ ಇರುವುದಿಲ್ಲ. ಆದರೆ ಪುಣ್ಯಕ್ಷಯಿಸಿದಾಕೆಳಗೆ ಬೀಳುವ ಭಯವಿರುತ್ತದೆ. ॥41॥ "ಆದುದರಿಂದ ಐಹಿಕ–ಆಮುಷ್ಮಿಕ, ಇಹ–ಪರಗಳೆರಡರ ಭೋಗವೂ ಅನರ್ಥಕಾರಕ. ಆದ್ದರಿಂದ ಸತ್‌ಚಿತ್ ಆನಂದವನ್ನು ಪಡೆಯಬೇಕಾದರೆ ನಿಃಶ್ಶೇಷವಾಗಿ ಎರಡನ್ನೂ ತ್ಯಾಗ ಮಾಡಬೇಕು. ॥42॥ "ಯಾರು ಈ ಸಂಸಾರದ ಬಂಧನಗಳಿಂದ ಬೇಸತ್ತು ಹರಿಚರಣಗಳಲ್ಲಿ ಶರಣಾಗಿದ್ದಾರೋ, ಅವರ ಮೋಹಬಂಧನವು ಕಳಚಿಹೋಗಿ ಅವಿದ್ಯೆಯ ತೆರೆಯು ನಾಶವಾಗುತ್ತದೆ. ॥43॥ "ಯಾರು ಹರಿಯ ಭಜನೆ, ಸ್ಮರಣೆಗಳಲ್ಲಿ ಸದಾಕಾಲ ಮುಳುಗಿರುವನೋ, ಅವನ ಪಾಪಗಳು, ದುಃಖ, ಬಡತನ ಮಾಯವಾಗುತ್ತವೆ. ಭಗವಂತನ ಧ್ಯಾನ ಮಾಡುವವನಿಗೆ ಅವನು ಓಡಿಬಂದು ಸಹಾಯಮಾಡುತ್ತಾನೆ. ಪ್ರೀತಿಯಿಂದ ಸಂಕಟಗಳನ್ನು ಹರಿಸುತ್ತಾನೆ. ॥44॥ "ನಿನ್ನ ಪೂರ್ವಜನ್ಮದ ಪುಣ್ಯಗಳು ಅತಿಗಹನವಾಗಿವೆ. ಆದ್ದರಿಂದ

ನೀನಿಲ್ಲಿಗೆ ಬಂದಿರುವೆ. ಈಗ ನಾನು ಹೇಳಿದಂತೆ ಕೇಳು. ನಿನ್ನ ಜೀವನದ ಸಾರ್ಥಕತೆಯನ್ನು ಪಡೆದುಕೋ. ॥45॥ "ನಾಳೆಯಿಂದ ಭಾಗವತವನ್ನು ಓದಲು ಪ್ರಾರಂಭಿಸು. ಪರಿಶೀಲನೆಮಾಡು. ಮೂರು ಸಪ್ತಾಹಗಳಲ್ಲಿ ಮೂರು ಸಲ ಕಾಯಾ, ವಾಚಾ, ಮನಸಾ ಸತ್ಯವಾಗಿ ಪಾರಾಯಣ ಮಾಡು. ॥46॥ "ಯಾವುದೇ ಆಶೆಯಿಲ್ಲದೆ ವಾಸನಾರಹಿತನಾಗಿ, ಗ್ರಂಥವನ್ನು ಕೇಳು ಅಥವಾ ಓದು. ಏಕಾಗ್ರಚಿತ್ತನಾಗಿ ಮಾಡು ಮತ್ತು ಹಗಲು ರಾತ್ರಿ ಅದರ ಮೇಲೆ ನಿಧಿಧ್ಯಾಸನ ಮಾಡು. ॥47॥ "ಭಗವಂತನು ಪ್ರಸನ್ನಚಿತ್ತನಾಗಿ ಎಲ್ಲ ದುಃಖಿಗಳನ್ನು ಅಂತ್ಯಗೊಳಿಸುತ್ತಾನೆ. ಮಾಯೆ ಮತ್ತು ಮೋಹ ಶಾಂತವಾಗುತ್ತವೆ. ಅತ್ಯಂತ ಸುಖವನ್ನು ಗಳಿಸುತ್ತೀಯೆ. ॥48॥ "ನಿತ್ಯಕರ್ಮಗಳನ್ನು ಮುಗಿಸಿದ ನಂತರ, ಶುಚಿರ್ಭೂತನಾಗಿ ಹರಿಚರಣಗಳಲ್ಲಿ ಚಿತ್ತವನ್ನಿಟ್ಟು ನಾನು ಹೇಳಿದ ಈ ವ್ರತವನ್ನು ಸಾಂಗವಾಗಿ ಪೂರೈಸು. ನೀನು ಮೋಹ ನಿರ್ಮುಕ್ತನಾಗುವೆ" ಎಂದು ಹೇಳಿದರು. ॥49॥ ಸ್ವದೇಹದ ಅಪಾಯ (ಮೃತ್ಯು)ವೇ ಹತ್ತಿರವಾದಾಗ ಬಾಬಾರವರು 'ರಾಮವಿಜಯ'ವನ್ನು ಓದಿಸಲು ಯೋಜನೆ ಮಾಡಿದ್ದರು. ಅದರಿಂದ ಮೃತ್ಯುಂಜಯನು ಸಂತುಷ್ಟನಾಗುವನು. ॥50॥ ಅವನು ಮಾರನೆಯ ದಿನ ಪ್ರಾತಃಕಾಲದಲ್ಲಿ ಮುಖಮಾರ್ಜನ ಇತ್ಯಾದಿ ನಿತ್ಯಕರ್ಮಗಳನ್ನು ಮುಗಿಸಿದ ನಂತರ ಸ್ನಾನಮಾಡಿ ಬಂದು ಬಾಬಾರವರಿಗೆ ಬೊಗಸೆ ತುಂಬ ಪುಷ್ಪಗಳನ್ನು ಅರ್ಪಿಸಿ ಅವರ ಚರಣ ಧೂಲಿಯನ್ನು ತನ್ನ ಶಿರದಲ್ಲಿ ಧರಿಸಿದನು. ॥51॥ ತನ್ನ ಕಂಕುಳಲ್ಲಿ 'ಭಾಗವತ'ವನ್ನು ಹಿಡಿದುಕೊಂಡು ಒಂದು ಏಕಾಂತವಾದ ಸ್ಥಳಕ್ಕೆ ಹೋಗಿ ಓದಲು ನೋಡಿ ಲೇಂಡಿಬಾಗ್ ಜಾಗವು ಶಾಂತವಾಗಿ ಓದಲು ತಕ್ಕುದಾಗಿದೆಯೆಂದುಕೊಂಡನು. ॥52॥ ಅವನು ಕಾಲು ಮಡಿಚಿ ಕುಳಿತುಕೊಂಡು ಓದಲು ಪ್ರಾರಂಭಿಸಿದನು. ಸನ್ಯಾಸಿಯಾಗಿದ್ದರಿಂದ ಭಗವಂತನಲ್ಲಿ ಪ್ರೇಮವು ಅವನ ಸ್ವಭಾವವೇ ಆಗಿತ್ತು. ಮತ್ತು ಅವನು ಎರಡು ಸಪ್ತಾಹಗಳಲ್ಲಿ ಎರಡು ಬಾರಿ ಪಾರಾಯಣ ಮುಗಿಸಿದನು. ॥53॥ ಅವನು ಮೂರನೆಯ ಸಪ್ತಾಹ ಪಠನ ಪ್ರಾರಂಭಿಸಿದಾಗ ಏಕಾಏಕಿ ಅಸ್ವಸ್ಥನಾದನು. ಅವನ ಅಶಕ್ತತೆಯು ಹೆಚ್ಚಾಯಿತು. ಆದ್ದರಿಂದ ಅವನು ಅದನ್ನು ಪೂರ್ಣಗೊಳಿಸಲಾರದೆ ಹೋದನು. ॥54॥ ಅವನು ವಾಡಾಗೆ ಹಿಂತಿರುಗಿದನು. ಮತ್ತು ಇನ್ನೆರಡು ದಿನಗಳವರೆಗೆ ಬಹಳ ಕಷ್ಟಪಟ್ಟನು. ಮಾರನೆಯ ದಿನ ಬೆಳಕು ಹರಿದಾಗ ಬುವಾನು ತನ್ನ ಕಣ್ಣುಗಳನ್ನು ತೆರೆಯಲೇ ಇಲ್ಲ. ॥55॥ ತನ್ನ ತಲೆಯನ್ನು ಫಕೀರ್ ಬಾಬಾರವರ ತೊಡೆಯ ಮೇಲಿಟ್ಟು ಸನ್ಯಾಸಿಯು ಕೊನೆಯುಸಿರೆಳೆದನು. ಶರೀರದಿಂದ ಮುಕ್ತನಾಗಿ ವಿದೇಹಿಯಾದನು. ॥56॥ ಸನ್ಯಾಸಿಯ ದೇಹಾವಸಾನವನ್ನು ಬಾಬಾರವರಿಗೆ ನಿವೇದಿಸಿದಾಗ ಅವರು ದೇಹವನ್ನು ಒಂದು ದಿನ ಪೂರ್ತಿ ಹಾಗೆಯೇ ಇಡುವಂತೆ ಆದೇಶಿಸಿದರು. ॥57॥ ಬಾಬಾ ಹೇಳಿದರು, "ಕೂಡಲೇ ಅವನನ್ನು ಹೂಳಬೇಡಿ." ಆದ್ದರಿಂದ ಜನರು ಅವನು ಪುನರ್ಜೀವಿತಗೊಳ್ಳುತ್ತಾನೆಂದು ಬಹಳ ಆಶೆಯಿಟ್ಟರು. ಮತ್ತು ದೇಹವನ್ನು ರಕ್ಷಿಸಿದರು. ॥58॥ ಒಬ್ಬ ವ್ಯಕ್ತಿಯು ಒಂದು ಸಲ ಸತ್ತಮೇಲೆ ಮತ್ತೆ ಜೀವ ಬರುತ್ತದೆಯೇ? ಆದರೆ ಬಾಬಾರವರ ಮಾತುಗಳಿಗೆ ವಿಧೇಯರಾಗಿ ದೇಹವನ್ನು ಎಚ್ಚರಿಕೆಯಿಂದ

ಚೋಪಾನ ಮಾಡಿದರು. ॥59॥ ಕೊನೆಯಲ್ಲಿ ಮಾತುಗಳು ಸರಿಯೆನಿಸಿದವು. ವಾರಸುದಾರರಿಲ್ಲದ ದೇಹವನ್ನು ಪ್ಲಾಜೆಯಿಂದ ನೋಡಿಕೊಳ್ಳಲಾಯಿತು. ಪೋಲೀಸರ ಸಂದೇಹಗಳು ವಿಚಾರಣೆ ನಡೆಸಿದಾಗ ದೂರವಾದವು. ಆದರೆ ಅವನು ಪುನಃ ಜೀವತಳೆಯುವ ಪ್ರಶ್ನೆಯೇ ಇರಲಿಲ್ಲ. ॥60॥ ಮೃತದೇಹ ಮತ್ತೆ ಬದುಕುವುದಿಲ್ಲವೆಂದು ಬಾಬಾರವರಿಗೆ ತಿಳಿದಿರಲಿಲ್ಲವೇ? ಅದರ ಉದ್ದೇಶ ಒಂದೇ. ಏನೆಂದರೆ ದೇಹವನ್ನು ಹೂಳುವುದರ ಮುಂಚೆ ವಿಚಾರಣೆಯಾಗಬೇಕಾದ ಅಗತ್ಯವಿತ್ತು. ॥61॥ ವಾರಸುದಾರರಿಲ್ಲದ ದೇಹವನ್ನು ಅಂತಿಮ ಸಂಸ್ಕಾರ ಮಾಡಲು ಕೇವಲ ಸರ್ಕಾರವೇ ಹೊಣೆಯಾಗಿರುತ್ತದೆ.ಮತ್ತು ಆಕಸ್ಮಿಕ ಮರಣವನ್ನು ಯಾವಾಗಲೂ ವಿಚಾರಿಸಲೇ ಬೇಕು. ಆದ್ದರಿಂದ ಬಾಬಾರವರು ಆ ದೇಹವನ್ನು ಮೊದಲೇ ಹೂಳಬೇಡವೆಂದು ಹೇಳಿದ್ದರು. ॥62॥ ಅದು ಹಾಗಿರಲಿ. ಅನಂತರ ಎಲ್ಲವೂ ನಡೆಯಿತು. ಯಥಾವಿಧಿ ಅಂತ್ಯಸಂಸ್ಕಾರವು ನಡೆದು ದೇಹವನ್ನು ಯೋಗ್ಯಸ್ಥಳದಲ್ಲಿ ಸಮಾಧಿ ಮಾಡಲಾಯಿತು. ನಂತರ ಕರ್ತವ್ಯವೂ (ಸನ್ಯಾಸಿಗೆ ಮೋಕ್ಷಕೊಡುವುದು) ಮುಗಿಯಿತು. ॥63॥ ಇಲ್ಲಿ ಮತ್ತೊಂದು ಅದೇ ತರಹದ ಕಥೆ ಇದೆ. ಅದನ್ನು ನಾನು ಶ್ರೋತೃಗಳಿಗೆ ತಿಳಿಸುತ್ತೇನೆ. ಕ್ಷಣಕಾಲ ಆದರಪೂರ್ವಕವಾಗಿ ಮನಸಿಟ್ಟು ಕೇಳಿರಿ. ನೀವು ಸಾಯಿಯ ಸರ್ವವ್ಯಾಪಕತ್ವವನ್ನು ಅರಿಯುವಿರಿ. ॥64॥ ಬಾಳಾರಾಮ ಎಂಬ ಭಕ್ತನಿದ್ದನು. ಮಾನ್ಕರ್ ಅನ್ನುವುದು ಅವನ ಉಪನಾಮ. ಬಾಬಾರವರ ಪರಮಭಕ್ತ, ಗೃಹಸ್ಥಾಶ್ರಮದಲ್ಲಿದ್ದವನು. ॥65॥ ಆದರೆ, ಅನಂತರ ಅವನ ಪತ್ನಿಯು ಮರಣ ಹೊಂದಿದಳು. ಗೃಹಸ್ಥಾಶ್ರಮದ ಕರ್ತವ್ಯಗಳನ್ನು ಮಾಡುವುದರಲ್ಲಿ ಅಡೆತಡೆ ಉಂಟಾಯಿತು. ಅಂತರಂಗದ ಸ್ಥೈರ್ಯವು ಕುಸಿಯಿತು. ಆದರೆ ಪರಮಾನಂದದ ಕಡೆ ಮುಂದುವರೆದನು. ॥66॥ ಅವನ ಪೂರ್ವಾರ್ಜಿತ ಕರ್ಮಗಳ ಫಲಗಳಿಂದಾಗಿ ಸಾಯಿ ಚರಣಗಳ ಸಾಂಗತ್ಯ ದೊರಕಿತು. ಅಲ್ಲಿಯೇ ಅವನು ನಿಶ್ಚಲವಾದ ಭಕ್ತಿಯನ್ನು ಬೆಳೆಸಿಕೊಂಡನು. ಮತ್ತು ಸಂಸಾರದಿಂದ ಪೂರ್ಣವಾಗಿ ವಿರಕ್ತಿಯನ್ನು ಹೊಂದಿದನು. ॥67॥ ಆಶಾಪಾಶಗಳಿಂದ, ಮಕ್ಕಳು ಪರಿವಾರದವರಿಂದ ಎಲ್ಲ ಬಂಧನಗಳನ್ನೂ ಕಿತ್ತುಹಾಕಿ ಮಾನಕರನು ಅಸಾಮಾನ್ಯವಾದ ದೈವಬಲದಿಂದ ಸಂಸಾರ ಬಂಧವನ್ನು ತ್ಯಜಿಸಿದನು. ॥68॥ ಪಾರಮಾರ್ಥದ ದ್ವಾರವನ್ನು ಪ್ರವೇಶಿಸಲು ಇರುವ ಪ್ರಮುಖವಾದ ಅಡಚಣೆಯೆಂದರೆ, ಜೀವನ ನಡೆಸಲು ಸಂಪಾದನೆ ಮಾಡುವ ಆಶೆ ಮತ್ತು ಇತರರನ್ನು ಪೋಷಿಸುವ ಇಚ್ಛೆ. ಅವನು ಈ ಜವಾಬ್ದಾರಿಯನ್ನು ತನ್ನ ಪುತ್ರನ ಮೇಲಿಟ್ಟು ಐಹಿಕ ವಿಷಯಗಳಿಗೆ ಬೀಗ ಹಾಕಿ ಶಿರಡಿಗೆ ಹೊರಟುಹೋದನು. ॥69॥ ಇದೂ ಒಂದು ರೀತಿಯ ಸನ್ಯಾಸವೇ ಆಗಿದೆ. ಸನ್ಯಾಸದಲ್ಲಿ ಅನೇಕ ವಿಧಗಳಿವೆ. ಅದು ಜ್ಞಾನ ಗರ್ವದಿಂದ ಹುಟ್ಟೇ ಇದ್ದಲ್ಲಿ ಮನಸ್ಸಿನಲ್ಲಿ ಒತ್ತು ನೀಡಿ ಪದೇ ಪದೇ ಕಷ್ಟಗಳನ್ನು ತಂದೊಡ್ಡುತ್ತದೆ. ॥70॥ ಆದುದರಿಂದ, ಈ ಸಾಯಿಯು, ಉದಾರತೆಯ ಸಾಕಾರಮೂರ್ತಿ, ಮಾನಕರ್‌ನ ಅನನ್ಯ ಭಕ್ತಿಯನ್ನು ಪರಿಗಣಿಸಿ ಕೃಪೆತೋರುವ ಉದ್ದೇಶದಿಂದ ಅವನ ವಿರಕ್ತಿಭಾವವನ್ನು ದೃಢಪಡಿಸಿದರು. ॥71॥ ಲೆಕ್ಕವಿಲ್ಲದಷ್ಟು ಜನ್ಮಗಳ ಸಂಸ್ಕಾರಗಳ

ಪಟಲದಲ್ಲಿ ಚಂಚಲವಾದ ಮನಸ್ಸನ್ನು ಅಚಲವನ್ನಾಗಿಸುವುದೇ ಆಗಿದೆ. ಮನೋರಾಜ್ಯದ ತರಂಗಗಳು ಅತ್ಯಂತ ಪ್ರಬಲವಾಗಿ ವೈರಾಗ್ಯವನ್ನು ದೃಢವನ್ನಾಗಿ ಮಾಡದೇ ಹೋಗುತ್ತದೆ. ॥72॥ "ಕೇವಲ ಶಿರಡಿ ಮಾತ್ರವೇ ನನ್ನ ಸ್ಥಾನವಲ್ಲ. ನಾನು ದೇಶ ಮತ್ತು ಕಾಲಗಳಿಗೆ ಅತೀತನಾಗಿರುವವನು" ಇದನ್ನು ಪ್ರಮಾಣೀಕರಿಸಲು ಬಾಬಾರವರು ಮಾನಕರನಿಗೆ ಈ ರೀತಿ ಆಜ್ಞಾಪನೆಯಿತ್ತರು. ॥73॥ "ನೀನು ಶಿರಡಿಯಲ್ಲಿ ಸಾಕಷ್ಟು ಕಾಲ ನಿಂತಿರುವೆ. ಈ ಹನ್ನೆರಡು ರೂಪಾಯಿ ನಗದು ಹಣವನ್ನು ನಿನ್ನ ಖರ್ಚಿಗಾಗಿ ತೆಗೆದುಕೊಂಡು ಹೋಗು. ಮಚ್ಛಿಂದರಗಡಕ್ಕೆ ತಪಸ್ಸು ಮಾಡಲು ಹೋಗು. ಅಲ್ಲಿ ಸುಖ ಸಂತೋಷ ಪಡೆಯಲು ನಿರ್ಧರಿಸಿ ವಾಸಮಾಡು." ॥74॥ ಸಾಯಿಯ ಈ ವಚನಗಳನ್ನು ಕೇಳಿ, ಅವರ ಆಜ್ಞೆಯನ್ನು ಶಿರಸಾ ಪಾಲಿಸಲು ಅವನು ಸಾಷ್ಟಾಂಗ ನಮಸ್ಕಾರ ಮಾಡಿ ಅವರ ಚರಣಗಳಿಗೆ ಅಭಿವಂದನೆ ಸಲ್ಲಿಸಿದನು. ॥75॥ ಆದರೆ ಅತ್ಯಂತ ವಿನೀತನಾಗಿ ಬಾಳಾರಾಮನು ಸಾಯಿಗೆ ಹೇಳಿದನು. "ನಿನ್ನ ದರ್ಶನವನ್ನು ನಾನು ಪಡೆಯಲಾಗದೇ ಇರುವ ಜಾಗದಲ್ಲಿ ನಾನು ಏನು ಮಾಡಬೇಕು?" ॥76॥ "ಇಲ್ಲಿಯಾದರೋ ನಿತ್ಯವೂ ನಿನ್ನ ಚರಣಗಳ ದರ್ಶನವಾಗುತ್ತದೆ. ನಿನ್ನ ಚರಣತೀರ್ಥ ಸೇವನೆಗೆ ದೊರಕುತ್ತದೆ. ಹಗಲು ಸಹಜವಾಗಿಯೇ ನಿನ್ನ ಚಿಂತನವಾಗುತ್ತದೆ. ಅಲ್ಲಿ ನಾನೊಬ್ಬ ಅನಾಥನಾಗುತ್ತೇನೆ. ॥77॥ "ಆದುದರಿಂದ, ಬಾಬಾ ನೀವಿಲ್ಲದೆ ನಾನು ಸ್ವಹಿತವನ್ನು ಪಡೆಯಲು ಹೇಗೆ ಸಾಧ್ಯ? ನನ್ನನ್ನು ಆ ಜಾಗಕ್ಕೆ ಕಳಿಸುವ ನಿಮ್ಮ ಆಲೋಚನೆಯನ್ನು ನಾನು ಅರ್ಥಮಾಡಿಕೊಳ್ಳಲಾಗದವನಾಗಿದ್ದೇನೆ." ॥78॥ ಆದರೆ, ಒಬ್ಬ ಭಕ್ತನು ತನ್ನ ಗುರುವಿನ ವಚನಗಳನ್ನು ಕ್ಷಣಮಾತ್ರವೂ ಸಂಶಯ ಪಡಬಾರದೆಂಬುದನ್ನು ನೆನೆದು ಅವನು ಕೂಡಲೇ ಪಶ್ಚಾತ್ತಾಪಪಟ್ಟನು. ಮಾನಕರ್‌ನ ಸಂಶಯಗಳು ಮಾಯವಾಗಿ ನಿರ್ವಿಕಲ್ಪನಾದನು. ॥79॥ ಅವನು ಹೇಳಿದನು, "ಬಾಬಾ, ನನ್ನನ್ನು ಕ್ಷಮಿಸಿರಿ. ನನ್ನ ವಿಚಾರಗಳು ಕ್ಷುದ್ರಬುದ್ಧಿಯವು. ನಾನು ಶಂಕಿಸಿದ್ದಕ್ಕಾಗಿ ನಾಚಿಕೆ ಪಡುತ್ತೇನೆ. ಸಂದೇಹಗಳು ಉಂಟಾಗಬಾರದಿತ್ತು. ॥80॥ "ಎಂದಿಗೂ ನಿನ್ನ ಆಜ್ಞಾಧಾರಕನಾಗಿ, ನಾಮಸ್ಮರಣೆಯಲ್ಲಿ ತತ್ಪರನಾಗಿ, ನಿನ್ನ ಸಾಮರ್ಥ್ಯದ ರಕ್ಷಣೆಯಿಂದಲೇ ನಾನು ಕೇವಲ ಗಡದಲ್ಲೇ ಉಳಿಯುತ್ತೇನೆ. ॥81॥ "ಅಲ್ಲಿಯೂ ನಾನು ನಿನ್ನನ್ನೇ ಧ್ಯಾನಿಸುತ್ತೇನೆ. ನಿನ್ನ ಕೃಪಾಮೂರ್ತಿಯನ್ನೇ ನೆನೆಸಿಕೊಳ್ಳುತ್ತೇನೆ. ಕೇವಲ ನಿನ್ನ ಚರಣಗಳನ್ನೇ ಚಿಂತಿಸುತ್ತೇನೆ. ಇದೇ ನನ್ನ ನಿರಂತರ ತಪಸ್ಸು. ॥82॥ "ನಾನು ನಿನ್ನಲ್ಲಿ ಅನನ್ಯವಾಗಿ ಶರಣಾಗಿದ್ದೇನೆ. ನನ್ನ ಚಲನವಲನಸ್ಥಿತಿಯನ್ನೆಲ್ಲಾ ನಿನ್ನ ಕೈಯಲ್ಲಿ ಒಪ್ಪಿಸಿದ್ದೇನೆ. ಹಾಗಿರುವಾಗ ನನ್ನ ಮನಸ್ಸಿಗೆ ಈ ರೀತಿಯ ಯೋಚನೆ ಏಕೆ ಬರಬೇಕು? ॥83॥ "ನಿನ್ನ ಆಜ್ಞೆಯ ಶಕ್ತಿಯಿಂದಲೇ ನನ್ನ ಮನಸ್ಸು ಅಲ್ಲಿಯೂ ಶಾಂತಿಯನ್ನು ಹೊಂದುತ್ತದೆ. ನಿನ್ನ ಸಾಮರ್ಥ್ಯವು ನನಗೆ ತಿಳಿದಿರುವಾಗಲೂ, ನಾನು ವ್ಯರ್ಥವಾಗಿ ಏಕೆ ಚಿಂತಿಸಲಿ?" ॥84॥ ಸಾಯಿಸಮರ್ಥರು ಸನಾತನ ಬ್ರಹ್ಮಸ್ವರೂಪ. ಅವರ ವಚನಗಳು ಬ್ರಹ್ಮಲಿಖಿತ ವಚನಗಳೇ ಆಗಿವೆ. ಬದಲಾಯಿಸಲಾಗುವುದಿಲ್ಲ. ಯಾರು ಅವುಗಳಲ್ಲಿ ಪೂರ್ಣ ವಿಶ್ವಾಸವಿಟ್ಟಿರುವರೋ ಅವರು ಪೂರ್ಣ ಅನುಭವ ಪಡೆಯುತ್ತಾರೆ. ॥85॥ ಅನಂತರ

ಬಾಬಾ ಹೇಳಿದರು, "ಸಾವಧಾನವಾಗಿ ನನ್ನ ವಚನಗಳನ್ನು ಆಲಿಸು. ಯಾವುದೇ ಸಂಶಯಕ್ಕೆ ಒಳಗಾಗಿ ಪ್ರಯಾಸ ಪಡಬೇಡ. ||86|| "ಕೂಡಲೇ ಮಚ್ಛಿಂದರಗಡಕ್ಕೆ ಹೋಗು. ಪ್ರತಿನಿತ್ಯವೂ ಮೂರು ಸಲ ಧ್ಯಾನವನ್ನು ಮಾಡು. ಸ್ವಲ್ಪ ಕಾಲದ ನಂತರ ನೀನುಸ್ವಾನಂದಾನುಭವವನ್ನು ಅನುಭವಿಸುವೆ." ||87|| ಈ ಆಶ್ವಾಸನೆಯನ್ನು ಕೇಳಿದ ನಂತರ ಮಾನಕರನು ಮೌನವಾದನು. "ದೀನನಾದ ನಾನು ಏನು ಹೇಳಲು ಸಾಧ್ಯ?" ಎಂದುಕೊಳ್ಳುತ್ತಾ ಅವನು ಗಡದ ಕಡೆಗೆ ಹೊರಡಲು ಸಿದ್ಧನಾದನು. ||88|| ಮತ್ತೊಮ್ಮೆ ಸಾಯಿ ಚರಣಗಳಿಗೆ ವಂದಿಸಿ, ಉದಿಪ್ರಸಾದ ಮತ್ತು ಆಶೀರ್ವಾದಗಳನ್ನು ಸ್ವೀಕರಿಸಿ ಮಾನಕರನು ಶಾಂತಮನಸ್ಸಿನಿಂದ ಮಚ್ಛಿಂದರಗಡದ ಕಡೆಗೆ ಹೊರಟನು. ||89|| ಆ ರಮ್ಯ ಸ್ಥಳಕ್ಕೆ ಬಂದು ತಲುಪಿದ ಅವನು ಅಲ್ಲಿಯ ಶುದ್ಧ ನಿರ್ಮಲ ಜೀವನ ಮತ್ತು ಮಂದ ಮಂದವಾಗಿ ಬೀಸುವ ತಂಗಾಳಿ ಇವುಗಳಿಂದ ಸಮಾಧಾನ ಹೊಂದಿದನು. ||90|| ಹಾಗೆ, ಈ ಮಾನಕರನು ಸಾಯಿಯಿಂದ ನಿರ್ದೇಶಿಸಲ್ಪಟ್ಟು, ಸಾಯಿ ಸಾಮೀಪ್ಯವಿಲ್ಲದೆಯೇ ಗಡದಲ್ಲಿ ಉಳಿದನು. ಯಥೋಕ್ತವಾಗಿ ಧ್ಯಾನವನ್ನು ಅಭ್ಯಸಿಸುತ್ತ ಯಥಾನಿಯುಕ್ತ ಮಾರ್ಗದಲ್ಲಿ ನಡೆಯುತ್ತಿದ್ದನು. ||91|| ಅನಂತರ, ಬಾಬಾರವರ ಚಮತ್ಕಾರ ನೋಡಿರಿ! ಮಾನಕರನು ಆಳವಾದ ಧ್ಯಾನದಲ್ಲಿ ಮುಳುಗಿದ್ದಾಗ ಗಡದಲ್ಲಿಯೇ ಪ್ರತ್ಯಕ್ಷ ದರ್ಶನವಿತ್ತರು. ಮತ್ತು ಅವನಿಗೆ ಸಾಕ್ಷಾತ್ಕಾರವಾಯಿತು. ||92|| ಧ್ಯಾನದ ಸಮಾಧಿ ಸ್ಥಿತಿಯಲ್ಲಿ ದರ್ಶನ ಪಡೆಯುವುದು ಯಾವುದೇ ಆಶ್ಚರ್ಯಕರವಾದ ಸಂಗತಿಯಲ್ಲ. ಆದರೆ ನಡೆದದ್ದು ಅವನು ಇನ್ನೂ ಆಸನದ ಮೇಲೆಯೇ ಕುಳಿತಿದ್ದು ಧ್ಯಾನದಿಂದ ಇನ್ನೇನು ಏಳಬೇಕೆಂದಿರುವಾಗ ಅವನು ಶ್ರೀ ಸಮರ್ಥರನ್ನು ನೋಡಿದನು. ||93|| ಅವನು ಕೇವಲ ಅವರನ್ನು ನೋಡಿದುದಷ್ಟೆ ಅಲ್ಲ, ಆದರೆ ಬಾಳಾರಾಮನು ಪ್ರತ್ಯಕ್ಷವಾಗಿಯೇ ಕೇಳಿದನು. "ಬಾಬಾ, ನೀವು ನನ್ನನ್ನೇಕೆ ಇಲ್ಲಿಗೆ ಕಳುಹಿಸಿದಿರಿ?" ಅವರು ಏನು ಪ್ರತ್ಯುತ್ತರ ನೀಡಿದರೆಂಬುದನ್ನು ಕೇಳಿ. ||94|| "ನೀನು ಶಿರಡಿಯಲ್ಲಿದ್ದಾಗ ನಿನ್ನ ಮನಸ್ಸಿನಲ್ಲಿ ಅನೇಕ ಕಲ್ಪನೆಗಳು, ಅನೇಕ ಯೋಚನಾ ತರಂಗಗಳು ಹುಟ್ಟಿದ್ದವು. ಆದುದರಿಂದ ನಿನ್ನ ಚಂಚಲ ಮನಸ್ಸನ್ನು ಶಾಂತಗೊಳಿಸಲು ನಿನ್ನನ್ನು ಗಡಕ್ಕೆ ಕಳುಹಿಸಿದೆ. ||95|| "ನೀನು ಯೋಚಿಸಿದೆ, ನಾನು ಶಿರಡಿಯಲ್ಲಿಯೇ ಇದ್ದೇನೆ. ಪಂಚಭೂತಗಳಿಂದಾದ ದೇಹದಲ್ಲಿ ಮೂರುವರೆ ಮೊಳದ ಉದ್ದವಾಗಿದ್ದೇನೆ. ಮತ್ತೆಲ್ಲೂ ಹೊರಗೆ ಇಲ್ಲ. ||96|| "ಈಗ ನೋಡು. ನೀನೇ ನಿರ್ಧರಿಸು. ನೀನು ಇಲ್ಲಿ ನೋಡುತ್ತಿರುವ ವ್ಯಕ್ತಿಯೂ ಶಿರಡಿಯಲ್ಲಿರುವ ವ್ಯಕ್ತಿಯೂ ಒಂದೇನೇ ಅಲ್ಲವೇ ಎಂದು. ಈ ಕಾರಣಕ್ಕಾಗಿಯೇ ನಾನು ನಿನ್ನನ್ನು ಅಲ್ಲಿಗೆ ಕಳುಹಿಸಿದೆ." ||97|| ಅದು ಹಾಗಿರಲಿ. ಅನಂತರ ಮಾನಕರನು ನಿಗದಿತ ಕಾಲ ಮುಗಿದ ನಂತರ ಮಚ್ಛಿಂದರ ಗಡವನ್ನು ಬಿಟ್ಟು ತನ್ನ ಮನೆಯ ಕಡೆ ಹೊರಟನು. ||98|| ಅವನ ವಸತಿಸ್ಥಾನವಾಗಿದ್ದ ವಾಂದ್ರೆ ಗ್ರಾಮಕ್ಕೆ ಹೋಗಲು ಮನದಲ್ಲೇ ಇಚ್ಛಿಸಿದನು. ಆದ್ದರಿಂದ ಪುಣೆಯಿಂದ ದಾದರಿನವರೆಗೆ ರೈಲಿನಲ್ಲಿ ಪ್ರಯಾಣ ಮಾಡಲು ಯೋಚಿಸಿದನು. ||99|| ಅವನು ಪುಣೆ ನಿಲ್ದಾಣಕ್ಕೆ ಹೋದನು. ಟಿಕೇಟು ಕೊಂಡುಕೊಳ್ಳುವ ಸರತಿ ಬಂದಾಗ ಮತ್ತು ಅವನು

ಟಿಕೇಟು ಕೊಡುವ ಕಿಡಕಿಯ ಹತ್ತಿರವಿದ್ದಾಗ ಒಂದು ಚಮತ್ಕಾರ ನಡೆಯಿತು. ॥100॥ ಒಬ್ಬ ಅಪರಿಚಿತ ಪ್ರಯಾಣಿಕನು, ಸೊಂಟದಲ್ಲಿ ಕೇವಲ ಒಂದು ಲಂಗೋಟಿ ಧರಿಸಿದವನು, ಒಂದು ಮಾಸಲಾದ ಕಂಬಳಿಯನ್ನು ಹೆಗಲಮೇಲೆ ಹೊದ್ದಿದ್ದವನು, ಒಬ್ಬ ಒರಟಾದ ವ್ಯಕ್ತಿಯು ಟಿಕೇಟು ಕಿಡಕಿಯ ಹತ್ತಿರ ಕಾಣಿಸಿಕೊಂಡನು. ॥101॥ ಈ ಗ್ರಾಮೀಣ ವ್ಯಕ್ತಿಯು ಆಗ ತಾನೇ ದಾದರಿಗೆ ಒಂದು ಟಿಕೇಟನ್ನು ಕೊಂಡಿದ್ದನು. ಕಿಡಕಿಯಿಂದ ತಿರುಗಿದಾಗ ಅವನು ಬಾಳಾರಾಮನ ದೃಷ್ಟಿಗೆ ಬಿದ್ದನು. ಆದ್ದರಿಂದ ಅವನು ಹತ್ತಿರ ಬಂದನು. ॥102॥ ಅವನು ಕೇಳಿದನು, "ನೀನು ಎಲ್ಲಿಗೆ ಹೋಗುತ್ತಿರುವೆ?" 'ದಾದರಿಗೆ' ಎಂದು ಬಾಳಾರಾಮನು ಹೇಳಿದನು. ಅವನು ಕೂಡಲೇ ತನ್ನ ಟಿಕೇಟನ್ನು ಕೊಟ್ಟು ಹೇಳಿದನು, "ನೀನು ಇದನ್ನು ತೆಗೆದುಕೋ." ॥103॥ "ನಾನೂ ದಾದರಿಗೆ ಹೋಗುತ್ತಿದ್ದೆ, ಆದರೆ ಒಂದು ಮಹತ್ಕಾರ್ಯವನ್ನು ನೆನಪಿಸಿಕೊಂಡೆ. ಆ ಕರ್ತವ್ಯಕ್ಕಾಗಿ ನಾನು ಇಲ್ಲೇ ಉಳಿಯಬೇಕು. ಆದ್ದರಿಂದ ನಾನು ಹೊರಡಲಾರೆ." ॥104॥ ಬೆಲೆ ಕೊಟ್ಟರೂ ಸಹ ಟಿಕೇಟುಗಳು ಸಿಗುವುದು ಅತ್ಯಂತ ಕಠಿಣವಾದ ಕೆಲಸವಾಗಿತ್ತು. ಹಾಗಿರುವಾಗ ಯಾವುದೇ ಶ್ರಮವಿಲ್ಲದೆ ಟಿಕೇಟು ದೊರಕಿದ್ದುದರಿಂದ ಮಾನಕರನು ಪರಮಸಂತೋಷಪಟ್ಟನು. ॥105॥ ಅನಂತರ, ಅವನು ಜೇಬಿನಿಂದ ಹಣ ತೆಗೆದು ಟಿಕೇಟಿನ ಹಣವನ್ನು ಕೊಡಲು ಹೋದಾಗ, ಆ ಒರಟು ಮನುಷ್ಯ ಗುಂಪಿನಲ್ಲಿ ಮಾಯವಾಗಿದ್ದನು. ಅವನನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ. ॥106॥ ಬಾಳಾರಾಮನು ಅವನನ್ನು ಹುಡುಕಲು ಎಲ್ಲ ಪ್ರಯತ್ನವನ್ನೂ ಮಾಡಿದನು. ಆದರೆ ಎಲ್ಲವೂ ನಿಷ್ಫಲವಾದವು. ಅಷ್ಟರಲ್ಲಿ ರೈಲುಗಾಡಿಯು ಬಂದಿತು. ॥107॥ 'ಈ ಒರಟು ಮನುಷ್ಯ ಯಾರು? ಬರಿಯ ಕಾಲಲ್ಲಿ ಬರಿಯ ಮೈಯಲ್ಲಿದ್ದವನು! ಕೇವಲ ಒಂದು ಒರಟು ಕಂಬಳಿಯನ್ನು ಹೊದ್ದುಕೊಂಡು, ಒಂದು ಲಂಗೋಟಿ ಧರಿಸಿ, ಹರಕು ಬಟ್ಟೆಯನ್ನು ತಲೆಗೆ ಸುತ್ತಿದ್ದಂತಹ ವ್ಯಕ್ತಿ ಯಾರು? ॥108॥ 'ಟಿಕೇಟಿನ ಹಣ ಸ್ವಲ್ಪವೇನಲ್ಲ ಮತ್ತು ಅವನು ಅದನ್ನು ನಗದು ತನ್ನ ಜೇಬಿನಿಂದಲೇ ಕೊಟ್ಟಿದ್ದಾನೆ! ನನ್ನನ್ನೇಕೆ ಈರೀತಿ ಆಭಾರಿಯನ್ನಾಗಿ ಮಾಡಿದ? ನನಗೆ ಅರ್ಥವೇ ಆಗುತ್ತಿಲ್ಲ!. ॥109॥ 'ಅವನು ಉದಾರಿಯೂ ನಿರಪೇಕ್ಷಿಯೂ ನಿಸ್ವಾರ್ಥಿಯೂ ಆಗಿದ್ದನು. ಈ ರೀತಿ ಒರಟು ವ್ಯಕ್ತಿಯಾಗಿ ಕಂಡವನು ಯಾರಿರಬಹುದು?' ಈ ಪ್ರಸಂಗವು ಅನಿಶ್ಚಿತವಾಗಿಯೇ ಉಳಿಯಿತು. ಮಾನಕರನು ವಿಚಲಿತನಾದನು. ॥110॥ ಈ ರೀತಿ ಈ ಪ್ರಶ್ನೆಗಳೆಲ್ಲವೂ ಅವನ ಮನಸ್ಸಿನಲ್ಲಿ ಕೆಲಸ ಮಾಡುತ್ತಿರಲು ಅನಿಶ್ಚಿತವಾದ ಮನಸ್ಸಿನಿಂದ ಆ ಬೋಗಿಯ ಬಾಗಿಲಲ್ಲಿ ಆ ವ್ಯಕ್ತಿಯು ಕಾಣಸಿಗಬಹುದೆಂಬ ಆಸೆಯಿಂದ ರೈಲುಗಾಡಿ ಹೊರಡುವವರೆಗೆ ನಿಂತುಕೊಂಡೇ ಇದ್ದನು. ॥111॥ ಆದರೆ ರೈಲುಗಾಡಿಯು ಹೊರಟಕೂಡಲೇ ಅವನನ್ನು ಭೇಟಿಮಾಡುವ ಆಸೆಯೆಲ್ಲ ಮಾಯವಾಯಿತು. ಅವನು ಬಾಗಿಲಿನ ಹಿಡಿಯನ್ನು ಹಿಡಿದುಕೊಂಡು ರೈಲಿನೊಳಗೆ ಹಾರಿದನು. ॥112॥ ಗಡದಲ್ಲಿ ಬಾಬಾರವರನ್ನು ಪ್ರತ್ಯಕ್ಷವಾಗಿ ಭೇಟಿಮಾಡಿದನಂತರ ಇದೊಂದು ವಿಚಿತ್ರ ಪ್ರಸಂಗವಾಗಿತ್ತು! ಆ ಒರಟು ವ್ಯಕ್ತಿಯ ವಿಚಿತ್ರ ಸ್ವರೂಪವನ್ನು ನೆನಪಿಸಿಕೊಂಡ ಮಾನಕರನು

ಚಡಪಡಿಸಿದನು. ॥113॥ ಅದು ಹಾಗಿರಲಿ. ಅನಂತರ ಈ ಸದ್ಭಕ್ತನು ಶಿರಡಿಗೆ ಹಿಂತಿರುಗಿದನು. ಸಾಯಿಯ ಚರಣಗಳಲ್ಲಿ ಪೂರ್ಣಾನುರಕ್ತನಾಗಿ ದೃಢಶ್ರದ್ಧೆಯಿಂದ ಭಕ್ತಿಸಂಯುತವಾಗಿ ಕೃತಾರ್ಥನಾಗಿ ಶಿರಡಿಯಲ್ಲಿ ಉಳಿದನು. ॥114॥ ಭಕ್ತನಾದ ಬಾಳಾರಾಮನು ಸಾಯಿಚರಣಕಮಲಗಳ ಧೂಳಿಯ ಸುತ್ತ ನಿರಂತರವಾಗಿ ಸಾಯಿನಾಮವನ್ನು ಝೇಂಕರಿಸುವ ದುಂಬಿಯಹಾಗೆ ಸ್ಮರಿಸುತ್ತ ಶಿರಡಿಯಲ್ಲಿ ಉಳಿದನು. ॥115॥ ಬಾಬಾರವರ ಅನುಜ್ಞೆಯಮೇರೆಗೆ ಕೆಲವು ಸಲ ಶಿರಡಿಯನ್ನು ಬಿಟ್ಟು ಹೊರಗೆ ತಿರುಗಿ ಬರುತ್ತಿದ್ದನು. ॥116॥ ಆದರೆ ಶಿರಡಿಯು ಅವನಿಗೆ ಕೇಂದ್ರಸ್ಥಾನವಾಗಿದ್ದು ಆಗಾಗ್ಗೆ ಹಿಂತಿರುಗಿ ಬರುತ್ತಿದ್ದನು. ಕೊನೆಯಲ್ಲಿ ಪರಮ ಪಾವನವಾದ ಶಿರಡಿಯ ನೆಲದಲ್ಲಿ ದೇಹ ವಿಸರ್ಜನೆ ಮಾಡಿದನು. ॥117॥ ಅವನ ಪೂರ್ವಕೃತ ಪುಣ್ಯಗಳು ಅದೆಷ್ಟಿರಬೇಕು! ಒಬ್ಬ ವ್ಯಕ್ತಿಯು ಸಾಯಿಯ ಸನ್ನಿಧಿಯಲ್ಲಿ ತನ್ನ ಮನಸ್ಸನ್ನು ಅವರ ಚರಣಗಳಲ್ಲಿ ಏಕಾಗ್ರಚಿತ್ತನಾಗಿಟ್ಟು ಈ ದೇಹವನ್ನು ತ್ಯಜಿಸುವುದು ಅದೆಂತಹ ಭಾಗ್ಯ! ಅವನಿಗೆ ಮರಣವು ನಿರ್ಭಯವಾಗಿರುವುದು. ॥118॥ ತಾತ್ಯಾ ಸಾಹೇಬ ನೂಲ್ಕರ್‌ನು ಧನ್ಯ! ಭಕ್ತಶ್ರೇಷ್ಠನಾದ ಮೇಘಾನು ಧನ್ಯ! ಅವನು ಅಂತ್ಯ ಸಮಯದಲ್ಲಿ ಶಿರಡಿಯಲ್ಲಿಯೇ ಭಜನ ತತ್ಪರನಾಗಿ ತನ್ನ ಕಳೇಬರವನ್ನು ತ್ಯಜಿಸಿದನು. ॥119॥ ಮೇಘಾನು ಮೃತನಾದಾಗ ಬಾಬಾರವರು ಅವನ ಉತ್ತರಕ್ರಿಯೆಗೆ ಕೊಟ್ಟ ಮಹತ್ವವನ್ನು ಕೇಳಿ ಮತ್ತು ಭಕ್ತನ ಬಗೆಗಿದ್ದ ಬಾಬಾರವರ ಪ್ರೀತಿಯನ್ನು ನೋಡಿ. ಮೇಘಾನಾದರೋ ಆಗಲೇ ಕೃತಕೃತ್ಯನಾಗಿದ್ದನು. ॥120॥ ಸಮಸ್ತ ಭಕ್ತರ ಜೊತೆಯಲ್ಲಿ ಗ್ರಾಮಸ್ಥಶ್ಮಶಾನ ಯಾತ್ರೆಗೆ ತೆಗೆದುಕೊಂಡುಹೋದರು. ಬಾಬಾರವರೂ ಸಹ ಸ್ಮಶಾನಕ್ಕೆ ಹೋಗಿ ಮೇಘಾನ ಶವದ ಮೇಲೆ ಪುಷ್ಪಗಳನ್ನು ವರ್ಷಿಸಿದರು. ॥121॥ ಮೇಘಾನ ಉತ್ತರಕ್ರಿಯೆಗಳಾದ ನಂತರ ಬಾಬಾರವರ ಕಣ್ಣುಗಳೂ ಕಣ್ಣೀರಿನಿಂದ ತುಂಬಿದವು. ಮಾಯಾನುವರ್ತಿಯಾದ ಸಾಮಾನ್ಯ ಮಾನವರ ರೀತಿಯಲ್ಲಿ ಶೋಕದಿಂದ ತುಂಬಿದ್ದರು. ॥122॥ ಪ್ರೀತಿಯಿಂದ ಬಾಬಾರವರು ತಮ್ಮ ಕೈಗಳಿಂದಲೇ ಅವನ ದೇಹವನ್ನು ಪುಷ್ಪಗಳಿಂದ ಮುಚ್ಚಿದರು. ಕರುಣಾಪೂರಿತ ಸ್ವರದಿಂದ ದುಃಖವನ್ನು ವ್ಯಕ್ತಪಡಿಸಿ ಹಿಂತಿರುಗಿದರು. ॥123॥ ಅನೇಕ ಸಂತರು ಮಾನವರನ್ನು ಉದ್ಧಾರ ಮಾಡಿರುವುದನ್ನು ನೋಡಿದ್ದೇವೆ. ಆದರೆ ಸಾಯಿ ಬಾಬಾರವರ ಮಹತ್ವವನ್ನು ಈ ವಿಷಯದಲ್ಲಿ ತೋರಿಸಿದ್ದನ್ನು ಯಾವ ರೀತಿ ಸಾಕಷ್ಟು ವರ್ಣಿಸಲು ಸಾಧ್ಯ? ॥124॥ ಹುಲಿಯಂತಹ ಕ್ರೂರ ಪ್ರಾಣಿಯು ಮಾನವನರೀತಿ ಜ್ಞಾನಿಯಾಗಿರಲು ಸಾಧ್ಯವೇ? ಆದರೆ ಅದೂ ಸಹ ಬಾಬಾರವರ ಚರಣಗಳಲ್ಲಿ ವಿನೀತವಾಯಿತು. ಬಾಬಾರವರ ಕಾರ್ಯಗಳು ನಿಜಕ್ಕೂ ಅಘಟಿತವಾದವುಗಳೇ! ॥125॥ ಇದನ್ನು ನಿದರ್ಶಿಸುವ ಒಂದು ರಮ್ಯವಾದ ಕಥೆಯನ್ನು ಮನಸ್ಸಿಟ್ಟು ಎಚ್ಚರಿಕೆಯಿಂದ ಕೇಳಿರಿ. ಅದರಿಂದ ಬಾಬಾರವರ ಸರ್ವವ್ಯಾಪಕತೆ ಹಾಗೂ ಸಕಲ ಜೀವಿಗಳಲ್ಲಿಯೂ ಅವರಿಟ್ಟ ಸಮಚಿತ್ತತೆಯನ್ನು ತೋರಿಸುತ್ತದೆ. ॥126 ಒಮ್ಮೆ ಶಿರಡಿಯಲ್ಲಿ ಒಂದು ಪವಾಡ ನಡೆಯಿತು. ಬಾಬಾರವರ ಮಹಾನಿರ್ವಾಣಕ್ಕೆ ಏಳು ದಿನಗಳ ಮೊದಲು, ಅಂಗಳದ ಬಾಗಿಲಿಗೆ ಒಂದು ಎತ್ತಿನ ಗಾಡಿ ಬಂದು ಅಲ್ಲಿ

ನಿಂತಿತು. ॥127॥ ಅದರಲ್ಲಿ ಪ್ರಚಂಡವಾದ ಹುಲಿಯೊಂದನ್ನು, ಅದರ ಕತ್ತಿಗೆ ಸರಪಳಿ ಹಾಕಿ ಗಟ್ಟಿಯಾಗಿ ಕಟ್ಟಲಾಗಿತ್ತು. ಅದರ ಭೀಷಣವಾದ ಮುಖವು ಹಿಂದುಗಡೆ ತಿರುಗಿತ್ತು. ॥128॥ ಆ ಹುಲಿಯು ಏನೋ ರೋಗದಿಂದ ನರಳುತ್ತಿತ್ತು. ಅದರ ಮಾಲೀಕರು ದರವೇಶಿಗಳು. ಎಲ್ಲಾ ಉಪಾಯಗಳನ್ನೂ ಮಾಡಿ ಗುಣಪಡಿಸಲಾರದೆ ದಣಿದಿದ್ದರು. ಕೊನೆಯಲ್ಲಿ ಸಂತರ ದರ್ಶನೋಪಾಯವೇ ಉತ್ತಮವೆಂದು ಮನದಲ್ಲಿ ನಿಶ್ಚಯಿಸಿ ಇಲ್ಲಿಗೆ ತಂದರು. ॥129॥ ಅಲ್ಲಿ ಮೂವರು ದರವೇಶಿಗಳಿದ್ದರು. ಈ ಹುಲಿಯೊಂದೇ ಅವರ ಜೀವನೋಪಾಯವಾಗಿತ್ತು.ಅದರ ಆಟದ ಪ್ರದರ್ಶನ ನೀಡುತ್ತ, ಹಳ್ಳಿಹಳ್ಳಿಗೆ ಸುತ್ತುತ್ತ ಸಂಪಾದಿಸಿ ತಮ್ಮ ಜೀವನ ನಡೆಸುತ್ತಿದ್ದರು. ॥130॥ ಸುತ್ತಿ ಸುತ್ತಿ ಬರುತ್ತಿರುವಾಗ, ಹತ್ತಿರದಲ್ಲೇ ಎಲ್ಲೋ ಇದ್ದಾಗ ಬಾಬಾರವರ ಲೀಲೆಗಳನ್ನು ಕೇಳಿ ಅವರು ಹೇಳಿದರು, "ನಡೆಯಿರಿ, ಅವರ ದರ್ಶನ ಮಾಡೋಣ ಮತ್ತು ಹುಲಿಯನ್ನೂ ತೆಗೆದುಕೊಂಡು ಹೋಗೋಣ. ॥131॥ "ಅವರ ಚರಣಗಳು ಚಿಂತಾಮಣಿಯ ಹಾಗೆ. ಅಷ್ಟಸಿದ್ಧಿಗಳು ಅವರ ಚರಣಗಳಲ್ಲಿ ಹೊರಳಾಡುತ್ತವೆ. ನವನಿಧಿಗಳು ಉರುಳಾಡುತ್ತವೆ. ಪಾದಗಳನ್ನು ತೊಳೆದ ತೀರ್ಥವನ್ನು ತೆಗೆದುಕೊಳ್ಳೋಣ. ॥132॥ "ನಾವು ಅಲ್ಲಿಗೆ ಹೋಗಿ ನಮ್ಮ ಹಣೆಯನ್ನು ಅವರ ಚರಣಗಳಲ್ಲಿಟ್ಟು ಹುಲಿಗಾಗಿ ಪ್ರಾರ್ಥನೆ ಮಾಡೋಣ. ಸಂತರ ಆಶೀರ್ವಚನಗಳಿಂದ ನಮಗೆಲ್ಲರಿಗೂ ಮಂಗಳ ಉಂಟಾಗುತ್ತದೆ." ॥133॥ ಈ ಉದ್ದೇಶದಿಂದ ಆ ದರವೇಶಿಗಳು ಮಸೀದಿಯ ಬಾಗಿಲಿನ ಹತ್ತಿರ ಹುಲಿಯನ್ನು ಕೆಳಗೆ ಇಳಿಸಿದರು. ಅದರ ಸರಪಳಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಬಾಗಿಲಿನ ಹತ್ತಿರ ಕಾಯುತ್ತಾ ನಿಂತರು. ॥134॥ ಪ್ರಾರಂಭದಲ್ಲಿ ಹುಲಿಯು ಬಹಳ ಉಗ್ರವಾಗಿಯೂ ಭಯಾನಕವಾಗಿಯೂ ಇತ್ತು. ಅದೂ ಅಲ್ಲದೆ ಅದು ರೋಗಗ್ರಸ್ತವಾಗಿತ್ತು, ಅದರಿಂದಾಗಿ ಬಹಳ ಅಸ್ವಸ್ಥವಾಗಿತ್ತು. ಪ್ರತಿಯೊಬ್ಬರೂ ಕೌತುಕದಿಂದ ಅದನ್ನು ನೋಡುತ್ತಿದ್ದರು. ॥135॥ ದರವೇಶಿಗಳು ಬಾಬಾರವರಿಗೆ ಹುಲಿಯ ಸ್ಥಿತಿಯನ್ನು ಸಂಪೂರ್ಣವಾಗಿ ತಿಳಿಸಿದರು. ಬಾಬಾರವರ ಸಮ್ಮತಿ ಪಡೆದನಂತರ ಅದನ್ನು ತೆಗೆದುಕೊಂಡು ಹೋಗಲು ಬಾಗಿಲವರೆಗೆ ಬಂದರು. ॥136॥ ಸರಪಣಿಯನ್ನು ಗಟ್ಟಿಯಾಗಿ ಹಿಡಿದುಕೊಂಡು, ಸಡಿಲವಾದಲ್ಲಿ ಅದು ಕಳಚಿಕೊಳ್ಳಬಾರದೆಂದು ಸಂಭಾಳಿಸುತ್ತ ಅವರು ಅದನ್ನು ಬಾಬಾರವರ ಮುಂದೆ ಎಚ್ಚರಿಕೆಯಿಂದ ಹಿಡಿದುಕೊಂಡು ಬಂದರು. ॥137॥ ಆ ಹುಲಿಯು ಮೆಟ್ಟಿಲುಗಳ ಹತ್ತಿರ ಬರುತ್ತಿದ್ದಂತೆಯೇ ಸಾಯಿಯ ದಿವ್ಯ ತೇಜೋರಾಶಿಯನ್ನು ನೋಡುತ್ತಲೇ ವರ್ಣಿಸಲು ಅಸಾಧ್ಯವಾದ ರೀತಿಯಲ್ಲಿ ಹಿಮ್ಮೆಟ್ಟಿತು ಮತ್ತು ಅತ್ಯಾದರಪೂರ್ವಕವಾಗಿ ತಲೆಯನ್ನು ಕೆಳಗೆ ಹಾಕಿ ನಿಂತಿತು. ॥138॥ ಅನಂತರ, ಈ ಚಮತ್ಕಾರವನ್ನು ನೋಡಿ! ಹುಲಿಯು ಮೆಟ್ಟಿಲುಗಳನ್ನು ಹತ್ತಿ ಬಂದಕೂಡಲೇ ಇಬ್ಬರ (ಬಾಬಾ ಮತ್ತು ಹುಲಿ) ದೃಷ್ಟಿಯೂ ಪರಸ್ಪರ ಒಂದಾದುವು. ಹುಲಿಯು ಬಾಬಾರವರ ಕಡೆ ಪ್ರೇಮದಿಂದ ನೋಡಿತು.॥139॥ ಅದು ತನ್ನ ಬಾಲದ ಕೂದಲಿನ ಗೊಂಚಲನ್ನು ಮೃದುವಾಗಿ ಮಾಡಿ ಅದರಿಂದ ಮೂರು ಸಲ ನೆಲದ ಮೇಲೆ ಬಡಿಯಿತು. ಅನಂತರ ಸಾಯಿಚರಣಗಳಲ್ಲಿ ದೇಹವನ್ನು

ಇಟ್ಟು ಮರಣ ಹೊಂದಿತು. ॥140॥ ಸಾಯುವ ಮುನ್ನ ಅದು ಒಂದು ಬಾರಿ ಭಯಂಕರ ಘರ್ಜನೆ ಮಾಡಿತು. ಸಕಲರೂ ಹುಲಿ ಮರಣಹೊಂದಿತೆಂದು ಆಶ್ಚರ್ಯಚಕಿತರಾದರು. ॥141॥ ದರವೇಶಿಗಳು ಮೊದಮೊದಲು ಬಹಳ ಖಿನ್ನರಾದರು. ಆದರೆ, ಅನಂತರ ಈ ರೋಗಗ್ರಸ್ತ ಹುಲಿಯು ಮರಣಾಸನ್ನವಾಗಿದ್ದುದು, ಬಿಡುಗಡೆ ಪಡೆಯಿತೆಂದು ಪ್ರಸನ್ನಚಿತ್ತರಾದರು. ॥142॥ ಸಾಧು ಸಂತರ ಕಣ್ಣೆದುರಿನಲ್ಲಿ ಮರಣಹೊಂದುವುದು ಅತ್ಯಂತ ಪುಣ್ಯಕರವಾದುದು. ಅದು ಕ್ರಿಮಿಯೇ ಆಗಲಿ, ಕೀಟವೇ ಆಗಲಿ, ಹುಲಿಯೇ ಆಗಿರಲಿ. ಅವುಗಳ ಸಮಗ್ರ ಪಾಪಗಳೆಲ್ಲವೂ ಕ್ಷಮಿಸಲ್ಪಡುತ್ತವೆ. ॥143॥ "ಈ ಹುಲಿಯು ಅದರ ಹಿಂದಿನ ಜನ್ಮದಲ್ಲಿ ನಮಗೆಲ್ಲಿಯೋ ಋಣಿಯಾಗಿದ್ದಿರಬೇಕು. ಅದನ್ನು ಈಗ ತೀರಿಸಿದೆ ಮತ್ತು ಋಣಮುಕ್ತವಾಯಿತು. ಅದು ಬಂದು ಸಾಯಿ ಚರಣಗಳಲ್ಲಿ ದೇಹ ಬಿಟ್ಟಿದೆ. ವಿಧಿಯ ಕಾರ್ಯಗಳು ಅತಿ ವಿಚಿತ್ರ!" ॥144॥ ಯಾರಾದರೂ ಸಂತರ ಚರಣಗಳಲ್ಲಿ ತಲೆಯಿಟ್ಟು ಮರಣಹೊಂದಿದರೆ ಅವನು ತಾನೇ ಉದ್ಧಾರವಾಗುತ್ತಾನೆ ಮತ್ತು ಒಂದು ಜನ್ಮ ಫಲವನ್ನು ಅನುಭವಿಸುತ್ತಾನೆ. ॥145॥ ಸಂತರ ಕಣ್ಣೆದುರಿಗೆ ಯಾರಾದರೂ ಮರಣಹೊಂದಬೇಕಾದರೆ ಅತ್ಯಂತ ಭಾಗ್ಯಶಾಲಿಯಾಗಿರಬೇಕಲ್ಲವೇ? ಅವನು ಮುಕ್ತಿಯನ್ನು ಪಡೆಯುತ್ತಾನೆ. ॥146॥ ಸಂತರ ದೃಷ್ಟಿಯ ಎದುರಿಗೆ ಸನ್ನಿಧಿಯಲ್ಲಿ ದೇಹತ್ಯಾಗ ಮಾಡುವುದು ಪರಮ ಸುಖವೇ ಸರಿ. ವಿಷವೂ ಸಹ ಅಮೃತವಾಗುತ್ತದೆ. ಮೃತ್ಯುವು ಸುಖವೇ ಅಲ್ಲದೆ ದುಃಖವಾಗುವುದಿಲ್ಲ. ॥147॥ ಯಾರು ಸಂತರ ಚರಣಗಳಲ್ಲಿ, ಅವರ ಸಮ್ಮುಖದಲ್ಲಿ ಮರಣ ಹೊಂದುತ್ತಾನೋ ಅವನ ದೇಹವು ಕೃಷ್ಣಾರ್ಪಣವಾಗಿ ಧನ್ಯನಾಗುತ್ತಾನೆ. ಅವನಿಗೆ ಮತ್ತೆ ಪುನರ್ಜನ್ಮ ಇರುವುದಿಲ್ಲ. ॥148॥ ಸಂತರ ಸಮ್ಮುಖದಲ್ಲಿ ಉಂಟಾಗುವ ಮರಣವು ಸಾವಲ್ಲ, ಅದು ವೈಕುಂಠ ಸುಖ. ಅಂತಹವನು ಮೃತ್ಯುಲೋಕವನ್ನು ಜಯಿಸಿದ್ದಾನೆ ಮತ್ತು ಪುನರ್ಜನ್ಮದ ಶೋಕವುಂಟಾಗುವುದಿಲ್ಲ. ॥149॥ ಸಂತರ ದೃಷ್ಟಿಯ ಎದುರಿಗೇ ಮರಣ ಹೊಂದಿದವನು ಮತ್ತೆ ಈ ಪ್ರಪಂಚಕ್ಕೆ ಬರುವುದಿಲ್ಲ. ಅವನ ಎಲ್ಲಾ ಪಾಪಗಳೂ ಕ್ಷಯವಾಗುತ್ತವೆ. ಅದರಿಂದಾಗಿ ಅವನು ಉದ್ಧಾರವಾಗುತ್ತಾನೆ. ॥150॥ ಯಾರು ಸಂತರನ್ನು ನಖಶಿಖಾಂತ ದೃಷ್ಟಿಸುತ್ತಲೇ ದೇಹ ತ್ಯಜಿಸುವರೋ ಅದನ್ನು ಮರಣವೆಂದು ಕರೆಯಬಹುದೇ? ಅದೇ ನಿಜವಾದ ಆತ್ಮಸಾಕ್ಷಾತ್ಕಾರವಾಗುತ್ತದೆ. ॥151॥ ಹಿಂದಿನ ಜನ್ಮಗಳ ಸಾಧನೆಗಳನ್ನು ಪರಿಗಣಿಸಿದರೆ, ಈ ಹುಲಿಯು ಒಬ್ಬ ಪುಣ್ಯಾತ್ಮನಾಗಿದ್ದು, ತನ್ನ ವಿದ್ವತ್ತನ್ನು ಪ್ರದರ್ಶಿಸಲು ಯಾರಾದರೂ ಹರಿಭಕ್ತನನ್ನು ಅವಮಾನ ಮಾಡಿದ್ದಿರಬೇಕು. ॥152॥ ಆ ಹರಿಭಕ್ತನ ಶಾಪದಿಂದ ಅವನು ಈ ಕ್ರೂರ ಜನ್ಮವೆತ್ತಿದ್ದು ಆ ಶಾಪದ ಉಪಶಮನವಾದ ನಂತರ ಸಾಯಿಚರಣಗಳಲ್ಲಿ ಬಂದಿದ್ದನು. ಭಕ್ತ ಶ್ರೇಷ್ಠರ ರೀತಿನೀತಿಗಳು ಅತಿ ವಿಚಿತ್ರ! ॥153॥ ಆ ಶಾಪವು ಉಪಶಮನವಾದಂತೆ ಕಾಣುತ್ತದೆ. ಅವನ ಪಾಪಗಳು ಸಾಯಿಯ ದರ್ಶನಮಾತ್ರದಿಂದಲೇ ನಾಶವಾಗಿ ಹೋಗಿ ಅಷ್ಟ ಬಂಧನ ಕಳಚಿತು. ಅವನ ತಪಸ್ಸು ಅವನಿಗೆ ಶ್ರಮವಿಲ್ಲದೆಯೇ ಮುಕ್ತಿಯನ್ನು ತಂದುಕೊಟ್ಟು ಉದ್ಧಾರ ಮಾಡಿತು. ॥154॥ ಪೂರ್ಣ ಸೌಭಾಗ್ಯವಿಲ್ಲದಿದ್ದಲ್ಲಿ ಅವನು


ಸಾಯಿ ಸಂತರ ಸನ್ನಿಧಿಯಲ್ಲಿ ಮರಣ ಹೊಂದಲು ಹೇಗೆ ಸಾಧ್ಯ? ತಾಪತ್ರಯಗಳು, ತ್ರಿಪುಟಿ ಮತ್ತು ತ್ರಿಗುಣಗಳು ನಾಶವಾದಾಗ ಅವನು ನಿರ್ಗುಣ ನಿರಾಕಾರ ಪರಬ್ರಹ್ಮನಾಗುವನು. ||155|| ಈ ರೀತಿ, ಪೂರ್ವಕರ್ಮಾನುಬಂಧದಿಂದಲೇ, ಅವನು ಈ ಕ್ರೂರ ದೇಹದಿಂದ ಹಾಗೂ ಕಬ್ಬಿಣದ ಸಂಕೋಲೆಗಳಿಂದ ಬಿಡುಗಡೆ ಹೊಂದಿದನು. ಇದು ಈಶ್ವರನ ನಿಶ್ಚಯವಷ್ಟೆ! ||156|| ಸಾಧುಸಂತರ ಚರಣಗಳಿಲ್ಲದೆ ಬೇರೆ ಎಲ್ಲಿ ಮುಕ್ತಿಯಿರುತ್ತದೆ? ಇನ್ನೆಲ್ಲಿ ಉದ್ಧಾರದ ಗತಿ ಇರುತ್ತದೆ? ಈ ಹುಲಿಯು ಅದನ್ನು ಪಡೆದಾಗ ದರವೇಶಿಗಳು ಪ್ರಸನ್ನಚಿತ್ತರಾಗುತ್ತಾರೆ. ||157|| ಆ ಹುಲಿಯು ಅವರ ಜೀವಿತಾರ್ಥ ಸಾಧನೋಪಾಯವಾಗಿತ್ತು, ಮತ್ತು ಅದರಿಂದಲೇ ಅವರ ಕುಟುಂಬ ಪೋಷಣೆಯೂ ನಡೆಯಬೇಕಿತ್ತು. ಆದ್ದರಿಂದ ಹುಲಿಯು ಮೃತಪಟ್ಟಾಗ ದರವೇಶಿಗಳಿಗೆ ಸ್ವಲ್ಪ ಬೇಸರವುಂಟಾಯಿತು. ||158|| ದರವೇಶಿಗಳು ಮಹಾರಾಜರನ್ನು ಕೇಳಿದರು"ನಾವು ಈಗ ಏನು ಮಾಡಬೇಕು? ಯಾವ ರೀತಿ ಅದನ್ನು ಹೂಳಬೇಕು? ನಿಮ್ಮ ಸ್ವಹಸ್ತದಿಂದಲೇ ಅದಕ್ಕೆ ಸದ್ಗತಿಕೊಡಿ." ||159|| ಮಹಾರಾಜ್‌ರು ಹೇಳಿದರು, "ದುಃಖಪಡಬೇಡಿ. ಅದರ ಅಂತ್ಯವು ಇಲ್ಲಿಯೇ ಬರೆದಿತ್ತು, ಅವರು ಅತ್ಯಂತ ಪುಣ್ಯವಂತ. ಈಗ ಅತ್ಯಂತ ಸೌಖ್ಯವನ್ನು ಪಡೆದಿದ್ದಾನೆ. ||160|| "ತಕ್ಯಾದ ಆಚೆ ಶಂಕರನ ಮಂದಿರ ಇರುವ ಕಡೆ ತೆಗೆದುಕೊಂಡುಹೋಗಿ. ಅಲ್ಲಿ ನಂದಿಯ ಹತ್ತಿರ ಸಮಾಧಿ ಮಾಡಿರಿ. ||161|| "ಅವನನ್ನು ಸಮಾಧಿಯನ್ನು ಮಾಡಿದರೆ ಅವನಿಗೆ ಸದ್ಗತಿಯು ದೊರಕುತ್ತದೆ. ನಿಮ್ಮ ಕೈಗಳಿಂದಲೇ ಅವನಿಗೆ ಋಣಮುಕ್ತಿಯೂ, ಬಂಧನ ಮುಕ್ತಿಯೂ ಉಂಟಾಗುತ್ತದೆ. ||162|| "ಹಿಂದಿನ ಜನ್ಮದಲ್ಲಿ ನಿಮಗೆ ಋಣದಾರನಾಗಿ, ಆ ಋಣವನ್ನು ತೀರಿಸಲು ಈ ಜನ್ಮವೆತ್ತಬೇಕಾಯಿತು. ಆದ್ದರಿಂದ ಈ ದಿನದವರೆಗೆ ನಿಮ್ಮಸೆರೆಯಾಳಾಗಿದ್ದನು." ||163|| ಅನಂತರ, ಆ ದರವೇಶಿಗಳು, ಅದನ್ನು ಹೊತ್ತುಕೊಂಡು ದೇವಸ್ಥಾನದ ಕಡೆ ಹೋದರು. ಅಲ್ಲಿ ನಂದಿಯ ಹಿಂಭಾಗದಲ್ಲಿ ಅದರ ಸಮಾಧಿ ಮಾಡಿದರು. ||164|| ಇದೆಂತಹ ಚಮತ್ಕಾರ ನಡೆಯಿತು! ಹುಲಿಯು ಆಕಸ್ಮಿಕವಾಗಿ ಹೇಗೆ ಮರಣ ಹೊಂದಿತು? ಕೇವು ಇಷ್ಟೇ ನಡೆದಿದ್ದರೆ ಜನರು ಇದನ್ನು ಮರೆತುಬಿಡುತ್ತಿದ್ದರು. ||165|| ಆದರೆ, ಕೇವಲ ಏಳು ದಿನಗಳ ನಂತರ ಬಾಬಾರವರು ಸ್ವತಃ ತಮ್ಮ ಈ ಮೃಣ್ಮಯ ದೇಹವನ್ನು ತ್ಯಜಿಸಿದರು. ಅದರಿಂದಾಗಿಯೇ ಈ ಘಟನೆಯ ನೆನಪು ಆಗಾಗ್ಗೆ ಏಳುತ್ತದೆ. ||166|| ಮುಂದಿನ ಅಧ್ಯಾಯವು ಇದಕ್ಕಿಂತಲೂ ರೋಚಕವಾಗಿದೆ. ಬಾಬಾರವರು ಸ್ವತಃ ತಮ್ಮ ಗುರುವಿನ ಅದ್ಭುತಗಳನ್ನು ಗೋಖಲೆಬಾಯಿಯ ಆಶೆಗಳನ್ನು ಪೂರೈಸಿ ಆಕೆಯನ್ನುಅನುಗ್ರಹಿಸಲೆಂದೇ, ವಿವರಿಸಿದ್ದಾರೆ. ||167|| ಹೇಮಾಡನು ಸಾಯಿನಾಥನಿಗೆ ಶರಣಾಗುತ್ತಾನೆ. ಯಾವ ರೀತಿ ಬಾಬಾರವರು ಗುರುಕೃಪೆಯನ್ನು ಸಂಪಾದಿಸಿದರು, ಗುರುವು ಅವರನ್ನು ಒಂದು ಬಾವಿಯಲ್ಲಿ ತಲೆ ಕೆಳಗಾಗಿ ನೇತಾಡಿಸಿದ್ದರೂ ಸಹ, ಎಂಬುದನ್ನು ಕೇಳಿರಿ. ||168||

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ದರ್ಶನದ ಮಹತ್ವ" ಎಂಬ ಮೂವತ್ತೊಂದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।



# ಅಧ್ಯಾಯ - 32

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಗುರುವಿನ ಮಹತ್ವದ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದಲ್ಲಿ ವಿಜಯಾನಂದನಿಗೆ ಹೇಗೆ ಮುಕ್ತಿ ದೊರಕಿತು ಮತ್ತು ಬಾಳಾರಾಮನೂ ಸಹ ಸಂತೋಷವಾಗಿ ಸಾಯಿ ಚರಣಗಳಲ್ಲಿ ಐಕ್ಯನಾದನು ಎಂಬುದನ್ನು ನಿರೂಪಿಸಲಾಗಿತ್ತು.॥1॥ ಅದೇ ರೀತಿ ತಾತ್ಯಾ ಸಾಹೇಬ ನೂಲ್ಕರ್ ಮತ್ತು ಪರಮ ಭಕ್ತ ಮೇಘಾ ಇಬ್ಬರೂ ಸಾಯಿಯ ಸಮಕ್ಷಮದಲ್ಲಿ ತಮ್ಮ ದೇಹತ್ಯಾಗಮಾಡಿದರು. ॥2॥ ಅದಕ್ಕಿಂತ ದೊಡ್ಡದಾದ ಚಮತ್ಕಾರವೆಂದರೆ ಕ್ರೂರ ಪ್ರಾಣಿಯಾದ ಹುಲಿಯ ಮೃತ್ಯು. ಅದರ ಪ್ರಕರಣವನ್ನು ಶ್ರೋತೃಗಳು ಸವಿಸ್ತಾರವಾಗಿ ಕೇಳಿರುವಿರಿ. ॥3॥ ಈಗ ಈ ಅಧ್ಯಾಯದಲ್ಲಿ ಬಾಬಾರವರ ಮುಖದಿಂದಲೇ ವರ್ಣಿಸಲ್ಪಟ್ಟ ಒಂದು ಗಮನಾರ್ಹ ಕಥೆಯನ್ನು ಹೇಳುತ್ತೇನೆ. ಶ್ರೋತೃಗಳಿಗೆ ಇದು ಅತ್ಯಂತ ಹಿತಕಾರಿಯಾಗಿರುತ್ತದೆ. ॥4॥ ಬಾಬಾರವರು ಕಾಡಿನಲ್ಲಿದ್ದಾಗ ಅದೃಷ್ಟವಶಾತ್ ತಮ್ಮ ಗುರುವಿನ ದರ್ಶನ ಪಡೆದರು. ಗುರುವಿನ ಅದ್ಭುತ ವರ್ತನೆಯನ್ನು ಪೂರ್ತಿ ಮನಸ್ಸಿಟ್ಟು ಕೇಳಿರಿ. ॥5॥ ನಾನು ಒಬ್ಬ ಪಾಮರ ಮನುಷ್ಯನು ಈ ಕಥೆಯ ಪರಮ ಅದ್ಭುತವನ್ನು ವಿವರಿಸಲು ಹೇಗೆ ಸಾಧ್ಯ? ಸಾಯಿಯವರು ಸ್ವತಃ ತಮ್ಮ ಮುಖದಿಂದಲೇ ನುಡಿದಂತೆ ಅದು ಭಕ್ತಿ, ಶ್ರದ್ಧೆ ಮತ್ತು ಮುಕ್ತಿಗಳನ್ನು ನೀಡುವಂತಹುದಾಗಿರುತ್ತದೆ. ॥6॥ ಹಾಗೆಯೇ, ಯಾವ ರೀತಿ ಒಬ್ಬ ಮಹಿಳೆಯು ಬಾಬಾರವರ ದರ್ಶನಕ್ಕಾಗಿ ಧ್ಯಾನಿಸುತ್ತ ಶಿರಡಿಯಲ್ಲಿ

ಮೂರು ದಿನಗಳು ಉಳಿದುಕೊಂಡಳು. ಅವಳು ನೀರನ್ನೂ ಸೇವಿಸದೆ ನಿರಶನ ವ್ರತಸ್ಥಳಾಗಿದ್ದಳು. ॥7॥ ಯಾವ ರೀತಿ ಅವಳು ತನ್ನ ನಿರ್ಧಾರ ಭಂಗಮಾಡುವಂತಹ ಪ್ರಸಂಗ ಹುಟ್ಟಿತು ಮತ್ತು ಅವಳು ಯಾವ ರೀತಿ ರುಚಿಕರವಾದ, ಚೆನ್ನಾಗಿ ಬೇಯಿಸಿದ, ಚಿನ್ನದಂತೆ ಕೆಂಪಾದ ಪೂರಣ ಪೋಳಿಗಳನ್ನು (ಒಬ್ಬಟ್ಟು) ಮಾಡಬೇಕಾಯಿತು. ॥8॥ ಮತ್ತು ಅವಳು ಪೋಳಿಗಳನ್ನು ಕೇವಲ ಮಾಡಬೇಕಾಯಿತಷ್ಟೇ ಅಲ್ಲದೆ ಬೇರೆಯವರೂ ಮತ್ತು ತಾನೂ ಯಥೇಚ್ಛವಾಗಿ ತಿನ್ನುವಂತಾಗಿ, ತಮ್ಮ ದೇಹವನ್ನು ಇತರರ ಸೇವಾರ್ಥ ಉಪಯೋಗಿಸಿದ ಪುಣ್ಯದ ಬೆಲೆಯೇನು ಎಂಬುದನ್ನು ಬಾಬಾ ಬೋಧಿಸಿದರು. ॥9॥ ಅವರು ಅವಳಿಗೆ ಮನದಟ್ಟಾಗುವ ರೀತಿಯಲ್ಲಿ, ಇತರರಿಗೆ ಮಾಡಿದ ಸೇವೆಯು ಉಪವಾಸಮಾಡುವುದಕ್ಕಿಂತ ಹೆಚ್ಚು ಪರಮ ಕಲ್ಯಾಣಕರ ಎಂಬುದನ್ನು ಆಜೀವ ಪರ್ಯಂತ ಮರೆಯದೆಯೇ ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡಿದರು.॥10॥ ಮತ್ತೆ, ಪರಮಾರ್ಥವನ್ನು ಸಾಧಿಸಲು ಇಚ್ಛಿಸಿದವರಿಗೆ ಯಾವ ರೀತಿ ಸಾಧನೆಯನ್ನು ತಪ್ಪದೆ ಮಾಡಬೇಕು ಮತ್ತು ಯಾವ ರೀತಿ ತಮ್ಮ ಗುರಿ ಮುಟ್ಟಲು ಮಹತ್ತಾದ ನಿರಂತರ ಸಾಹಸವನ್ನು ಮಾಡಬೇಕು ಅನ್ನುವುದನ್ನು ತಿಳಿಸುತ್ತಿದ್ದರು. ॥11॥ ಈ ಅರ್ಥವನ್ನು ಒತ್ತಿ ಹೇಳುವ ಕಥೆಗಳು, ಅಮೃತಕ್ಕಿಂತಲೂ ಮಧುರ. ಶ್ರೋತೃಗಳಲ್ಲಿ ಭಕ್ತಿ ಪ್ರೇಮ ಇವುಗಳನ್ನು ಹುಟ್ಟಿಸಿ ದುಃಖವನ್ನು ದೂರಮಾಡುತ್ತವೆ. ॥12॥ ಈಗ, ಇಲ್ಲಿಂದ ಮುಂದಕ್ಕೆ ಮಧುರ ಕಥೆಗಳು ಶ್ರವಣಾರ್ಥಿಗಳಿಗೆ ತೃಪ್ತಿಕೊಡುವಂತಹ ಮತ್ತು ವಾಚನಕಾರರನ್ನೂ ಶ್ರೋತೃಗಳನ್ನೂ ಸ್ವಾನಂದದ ಬಂಧನದಲ್ಲಿರಿಸುವಂತಹ ಕಥೆಗಳಾಗಿವೆ. ॥13॥ ಸಾಯಿಯು ಈ ಪ್ರೇಮಭರಿತ ಮತ್ತು ಅಲೌಕಿಕವಾದ ಕಥೆಗಳನ್ನು ನನ್ನಿಂದ ಹೇಳಿಸುತ್ತಾರೆ. ನಾನಾದರೋ ಒಬ್ಬ ಪಾಮರ, ಮೂರ್ಖ. ಬರೆಯುತ್ತಿದ್ದ ಹಾಗೆಯೇ ಹೆಚ್ಚೆ ಹೆಚ್ಚಿಗೂ ಆ ಕೌತುಕವನ್ನು ಅನುಭವಿಸುತ್ತಿದ್ದೇನೆ. ॥14॥ ಕೇವಲ ಗಂಗೆಯ ದರ್ಶನ ಮಾತ್ರದಿಂದಲೇ ಪಾಪಗಳು ನಾಶವಾಗುವಂತೆ ಅಥವಾ ಚಂದಿರನ ದರ್ಶನ ಮಾತ್ರದಿಂದಲೇ ಸಂಸಾರದ ತಾಪವು ಕಳೆದು ಹೋಗುವಂತೆ, ಸಾಯಿಯ ಮುಖದಿಂದ ಬಂದುತಹ ಆಲಾಪಗಳು, ಸಂಸಾರದ ಪಾಪ ಮತ್ತು ಸಂತಾಪಗಳನ್ನು ನಾಶಮಾಡುತ್ತವೆ. ॥15॥ ಈಗ, ನೀವೆಲ್ಲ ಶ್ರೋತೃ ಜನರು ಸಾಯಿ ಮಹಾರಾಜ್‌ರ ನುಡಿಗಳಿಂದಲೇ ಅವರು ತಮ್ಮ ಗುರುವಿನ ದರ್ಶನ ಮಾಡಿದ ವಿಷಯವನ್ನು ಕೇಳಿಸಿಕೊಳ್ಳಲು ಗೌರವ ಪೂರ್ವಕವಾಗಿ ತಯಾರಾಗಿ. ॥16॥ ಕೇವಲ ವೇದ ವೇದಾಂತದ ಅಧ್ಯಯನ ಮಾಡಿದರೂ, ಶೃತಿ, ಶಾಸ್ತ್ರಗಳನ್ನು ಪಾರಾಯಣ ಮಾಡಿದರೂ ಗುರುಕೃಪೆಯಿಲ್ಲದಿದ್ದರೆ ಜ್ಞಾನವು ಸಿಗುವುದಿಲ್ಲ. ಉಳಿದುವೆಲ್ಲವೂ ಕೇವಲ ದೈಹಿಕ ಮತ್ತು ಮಾನಸಿಕ ಪರಿಶ್ರಮವಷ್ಟೆ. ॥17॥ ಅವ್ಯಕ್ತದಿಂದ ಪ್ರಾರಂಭಿಸಿ ಸ್ಥಾವರದವರೆಗೆ ಇರುವ ಈ ಸಂಸಾರವೆಂಬ ವೃಕ್ಷವು ಅತಿ ವಿಸ್ತಾರವಾಗಿದೆ. ಜನ್ಮ ಮೃತ್ಯುಗಳ ದುಃಖದಿಂದ ಪೀಡಿತವಾಗಿದೆ. ಇದು ಕೇವಲ ಮಾಯಾಕಲ್ಪಿತ ಮತ್ತು ನಾಶವಾಗುವಂತಹುದು. ॥18॥ ಈ ಸಂಸಾರ ವೃಕ್ಷವನ್ನು ಸಣ್ಣದಾಗಿ ಕಡಿಯಬಹುದಾಗಿರುವುದರಿಂದ ಇದನ್ನು ಮರವೆನ್ನುತ್ತಾರೆ. ಮತ್ತು ಇದು ನಾಶವಾಗುವಂತಹುದು. ಈ ಸೃಷ್ಟಿಯು

ಮೊದಮೊದಲು ಅವ್ಯಕ್ತವಾಗಿದ್ದು, ಮತ್ತೆ ಒಂದು ಸಮಯದಲ್ಲಿ ಸ್ಥಿರವಾಯಿತು. ಆದ್ದರಿಂದ ಮರಕ್ಕೆ ಹೋಲಿಸಲಾಗಿದೆ. ॥19॥ ಈ ಸಂಸಾರವೃಕ್ಷವು ಕಣ್ಣಿಗೆ ಕಂಡರೂ ಅದರ ಸ್ವರೂಪ ತಿಳಿದಿಲ್ಲ. ಅದಕ್ಕೆ ಬೇರುಗಳು ಮೇಲೆ ಇಲ್ಲ. ಅದರ ಕೊಂಬೆಗಳು ಅನಂತವಾದರೂ ಕೇವಲ ಅದರ ಅತ್ಯಲ್ಪ ಭಾಗ ಮಾತ್ರವೇ ಮಾನವನ ವ್ಯಾಪ್ತಿಗೆ ಬರುತ್ತದೆ. ॥20॥ ಕ್ಷಣದಿಂದ ಕ್ಷಣಕ್ಕೆ ಅನೇಕ ರೆಂಬೆಗಳು ಚಿಗುರಿ ಹರಡುತ್ತವೆ. ಕೆಲವೊಮ್ಮೆ ದೂರದಿಂದ ರಮಣೀಯವಾಗಿ ಕಂಡರೂ, ಅದನ್ನು ಯಾರಾದರೂ ಆಲಂಗಿಸಿಕೊಂಡರೆ ಮೈಯೆಲ್ಲಾ ಮುಳ್ಳಾಗಿ ಚುಚ್ಚುತ್ತದೆ. ॥21॥ ಬಾಳೆಗಿಡದ ದಿಂಡಿನ ತರಹ ಅದರಲ್ಲಿ ಯಾವುದೇ ಸಾರವಿಲ್ಲ. ಮರುಭೂಮಿಯ ಮರೀಚಿಕೆಯಂತೆ ಅಥವಾ ಗಂಧರ್ವನಗರಿಯಂತೆ ಈ ಮರವು ತನ್ನ ಸುತ್ತಲಿರುವ ಬೇರುಗಳು ನೀರಿನಿಂದಾಗಿ ಆಶೆಗಳ ರೂಪದಲ್ಲಿ ನೇತಾಡುತ್ತ ಅತಿ ಆಕರ್ಷಣೀಯವಾಗಿ ಕಾಣುತ್ತದೆ. ॥22॥ ಈ ವೃಕ್ಷವು ಅವ್ಯಕ್ತಸ್ವಭಾವವುಳ್ಳದ್ದಾಗಿದ್ದರೂ ಸಹ, ಅವಿದ್ಯೆಯಿಂದ ಉಂಟಾದ ಕಾಮ ಕರ್ಮಗಳಿಂದ ಹುಟ್ಟಿದ್ದು, ಪ್ರತಿ ಕ್ಷಣ ಬೇರೆ ಬೇರೆ ಸ್ವಭಾವವನ್ನು ತೋರಿಸುತ್ತದೆ. ಆದರೆ ಅದು ಸ್ವಯಂ ಅಸತ್ತಿನಿಂದ ಕೂಡಿ ಭಾವರಹಿತವಾಗಿಯೂ ಇದೆ. ॥23॥ ಈ ಮರವು ಅನರ್ಥಾತ್ಮಕವಾದದ್ದು, ಅದರ ಜನ್ಮ ಅವಿದ್ಯೆಯಿಂದ. ಈ ಮರದ ಸುತ್ತಲೂ ಇರುವ ನೀರಿನ ಸಂಗ್ರಹ ಆಶೆ ಮತ್ತು ಕಾಮ ಸ್ವರೂಪದಲ್ಲಿದೆ. ॥24॥ ಈ ಮರವು ತನ್ನ ಪರಿಗ್ರಹದಲ್ಲಿ ಅಥವಾ'ತನ್ನದೆನ್ನುವುದನ್ನು ಶೇಖರಿಸುವುದರಲ್ಲಿ ವಿಸ್ತೃತವಾಗುತ್ತದೆ. ಅಂದರೆ ಹಣ, ಧಾನ್ಯ, ಪುತ್ರ, ಪತ್ನಿ ಇತ್ಯಾದಿ. ಈ ಮರಕ್ಕೆ ಆಧಾರವು ತನ್ನ ದೇಹದೊಡನೆ ಇರುವ ತಾದಾತ್ಮ್ಯಭಾವನೆ. ಅಂದರೆ ಈ ಭಾವನೆ ಸದಾ ಈ ವೃಕ್ಷದ ಬೇರಾಗಿರುತ್ತದೆ. ॥25॥ ನಿಜವಾಗಿಯೂ ಈ ವೃಕ್ಷದ ಹೊಟ್ಟೆಯೆಂದರೆ ಲೆಕ್ಕವಿಲ್ಲದಷ್ಟು ಜೀವಜಂತುಗಳು ಮತ್ತು ಲಿಂಗಭೇದವು. ಕರ್ಮಗಳಿಂದ ಮತ್ತು ವಾಸನಾಭಾವಗಳು ಅನೇಕ ಉಪಶಾಖೆಗಳೂ, ಕೊಂಬೆಗಳೂ ಆಗಿವೆ. ಇದರಿಂದಾಗಿಯೇ ಈ ಮರವು ಬೆಳವಣಿಗೆಯನ್ನು ಮುಂದುವರೆಸುತ್ತದೆ. ॥26॥ ಈ ಮರವು ಶೃತಿ, ಸ್ಮೃತಿ ಇತ್ಯಾದಿ ರೂಪಗಳ ಎಲೆಗಳಿಂದ ತುಂಬಿಹೋಗಿದೆ. ಶಬ್ದ ಸ್ಪರ್ಶ ಇತ್ಯಾದಿ ಮೂಲಭಾವಗಳಿಂದ ಅದು ತರತರನೆ ಅಲ್ಲಾಡುತ್ತದೆ ಮತ್ತು ಚಿಗುರುತ್ತದೆ. ಯಜ್ಞ, ದಾನ ಇತ್ಯಾದಿ ಕ್ರಿಯೆಗಳುಕುಮಗಳಿಂದ ಅದು ವಿಜೃಂಭಿಸುತ್ತದೆ. ಅದು ವಿರುದ್ಧಾತ್ಮಕ ದ್ವಂದ್ವಗಳ ರಸಗಳಿಂದ ತುಂಬಿದೆ. ॥27॥ ಈ ಮರದ ಹಣ್ಣುಗಳಿಗೆ ಅಂತ್ಯವಿಲ್ಲ. ನಿಜವಾಗಿಯೂ ಸಕಲ ಜೀವಿಗಳೂ ಇತರ ಲೋಕಗಳಾದ 'ಭೂರ್ ಮತ್ತು ಭುವಃ' ಲೋಕಗಳೂ ತಮ್ಮ ಅಸ್ತಿತ್ವಕ್ಕಾಗಿ ಅವಲಂಬಿಸಿವೆ. ಏಕೆಂದರೆ ಅವುಗಳು ಮರದಿಂದ ಪ್ರತ್ಯೇಕವಾಗಿ ಇರಲಾರವು. ॥28॥ ಇದು ಸನಾತನವಾದ 'ಅಶ್ವತ್ಥ'ವೃಕ್ಷದ ರೀತಿಯಲ್ಲಿ ಸದಾ ಖಿನ್ನವದನವಾಗಿ ಇರುತ್ತದೆ. ಕೆಲವೊಮ್ಮೆ ನೃತ್ಯ, ಕೆಲವೊಮ್ಮೆ ಹಾಡು, ಕೆಲವೊಮ್ಮೆ ವಾದನ, ಕೆಲವೊಮ್ಮೆ ಆಟ, ಕೆಲವೊಮ್ಮೆ ಹಾಸ್ಯ, ಕೆಲವೊಮ್ಮೆ ರೋಧನ ಈ ರೀತಿಯಿಂದಾಗಿ ಸದಾ ಅಧೋವದನವಾಗಿರುತ್ತದೆ. ॥29॥ ಈ ವೃಕ್ಷವು ನಿಜವಾಗಿಯೂ ಬ್ರಹ್ಮನಲ್ಲಿಯೇ ಹುಟ್ಟಿರುತ್ತದೆ. ಇದನ್ನು ನಿರ್ಮೋಹವೆಂಬ ಕತ್ತಿಯಿಂದ ಕತ್ತರಿಸಬಹುದು.ಈ ಮರವು ತನ್ನ ಆಧಾರಕ್ಕಾಗಿ

ಸದ್ಭಾವವನ್ನು ಶುದ್ಧಬೇರನ್ನಾಗಿ ಮಾಡಿಕೊಂಡಿದೆ. ಇದು ಜ್ಯೋತಿಸ್ವರೂಪ ಎನ್ನುವುದನ್ನು ಅರ್ಥಮಾಡಿಕೋ. ॥30॥ ಆ ಬ್ರಹ್ಮನು ಸತ್ಯ ಮತ್ತು ಸರ್ವಾಧಾರ. ಆದರೆ ಈ ಜಗತ್ತು ಮಿಥ್ಯೆ ಮತ್ತು ಸ್ವಪ್ನದ ರೀತಿ. ನಿಜವಾಗಿಯೂ ಈ ಮರಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಹಾಗಿರುವಾಗ ಮಧ್ಯದಲ್ಲಿ ಮಾತ್ರ ಹೇಗಿರಲು ಸಾಧ್ಯ? ॥31॥ ಈ ಒಂದು ಉದ್ದೇಶಕ್ಕಾಗಿಯೇ ವಿರಕ್ತರು ಪರಿಶ್ರಮಪಡುತ್ತಾರೆ. ಸಂತರು ಎಂದೆಂದಿಗೂ ಅದರಲ್ಲಿ ಅನುರಕ್ತರಾಗಿರುತ್ತಾರೆ. ಇದು ಮುಮುಕ್ಷುಗಳಿಗೆಲ್ಲ ಅಪೇಕ್ಷಿತವಾದ ಗುರಿಯು. ಎಲ್ಲ ಸಾಧಕರ ಬಯಕೆಯ ಅಂತ್ಯವೂ ಇದೇ. ॥32॥ ನೀನು ಎಲ್ಲಿರಬೇಕೆಂದು ಇಚ್ಛಿಸುವೆಯೋ ಅಲ್ಲಿ ನೆಲೆಸು. ಸಂತರ ಚರಣಗಳಲ್ಲಿ ಶರಣಾಗಲು ಬಯಸು. ಅವರು ಹೇಳುವುದನ್ನೆಲ್ಲಾ ಗಮನವಿಟ್ಟು ಕೇಳು ಮತ್ತು ಶಂಕೆ, ಕುತರ್ಕಗಳನ್ನು ಬೇರು ಸಹಿತ ಕಿತ್ತೆಸೆಯಲು ಪ್ರಯತ್ನಿಸು. ॥33॥ ಮನಸ್ಸನ್ನು ಪೂರ್ಣವಾಗಿ ನಿಗ್ರಹಿಸು. ಬುದ್ಧಿಯನ್ನು ಬೇರು ಸಮೇತ ಕಿತ್ತೆಸೆ. ಪೂರ್ಣವಾಗಿ ನಿಃಸ್ಸಂಗವನ್ನು ಅಭ್ಯಸಿಸು. ಗುರುಚರಣಗಳಲ್ಲಿ ಸದಾ ಲಕ್ಷ್ಯವನ್ನಿಡು. ॥34॥ ಎಲ್ಲಾ ಕುತರ್ಕಗಳನ್ನೂ ಎತ್ತಿ ಬಿಸಾಡು. ಇಲ್ಲದಿದ್ದಲ್ಲಿ ಅವು ಮಾರ್ಗಮಧ್ಯದಲ್ಲಿ ಅಡಚಣೆಗಳನ್ನುಂಟುಮಾಡುತ್ತವೆ. ಅಭಿಮಾನವನ್ನು ಕಾಲುಗಳ ಕೆಳಗೆ ಉಜ್ಜಿಹಾಕು. ಆಗ ಮಾತ್ರವೇ ನೀನು ಮತ್ತೊಂದು ದಡವನ್ನು ಸೇರಲು ಸಾಧ್ಯ. ॥35॥ ಈ ಅರ್ಥವನ್ನು ಆಖ್ಯಾಯಿಸುವ ಒಂದು ಮಧುರವಾದ ಕಥೆಯನ್ನು ಕೇಳಿ. ಇದನ್ನು ಬಾಬಾರವರೇ ಸ್ವತಃ ಹೇಳಿರುವರು. ಗುರುವಚನಾಮೃತವನ್ನು ಆಸ್ವಾದಿಸುತ್ತ ನೀವು ಪರಮಾನಂದವನ್ನು ಹೊಂದುವಿರಿ. ॥36॥ ಒಮ್ಮೆ, ನಾವು ನಾಲ್ಕು ಜನರು ಶಾಸ್ತ್ರ ಮತ್ತು ಪುರಾಣಗಳನ್ನು ಓದಿದನಂತರ, ನಾವೇ ಜ್ಞಾನಸಂಪನ್ನರೆಂದು ಭಾವಿಸಿ, ಬ್ರಹ್ಮನನ್ನು ವಿವರಿಸಲು ಪ್ರಾರಂಭಿಸಿದೆವು. ॥37॥ ನಮ್ಮ ಗುಂಪಿನ ಒಬ್ಬನು ಭಗವದ್ಗೀತೆಯ ಒಂದು ವಚನವನ್ನು ತನ್ನ ಪ್ರವಚನದಲ್ಲಿ ಉಲ್ಲೇಖಿಸಿದನು. 'ಉದ್ಧರೇದಾತ್ಮನಾತ್ಮಾನ್' ಅಂದರೆ 'ಸ್ವಪ್ರಯತ್ನದಿಂದಲೇ ಆತ್ಮೋದ್ಧಾರ' ಎಂದು. ಸಾಮಾನ್ಯವಾಗಿ ಎಲ್ಲರೂ ತಮ್ಮ ಉದ್ಧಾರಕ್ಕಾಗಿ ಪರಾವಲಂಬಿಗಳಾಗುತ್ತಾರೆ. ॥38॥ ಅದಕ್ಕೆ ಎರಡನೆಯವನು ಉತ್ತರಿಸಿದನು. "ಯಾರು ತನ್ನ ಮನಸ್ಸನ್ನು ಅಧೀನದಲ್ಲಿಟ್ಟುಕೊಂಡಿರುತ್ತಾನೋ ಅವನೇ ಧನ್ಯ. ನಾವು ಸಂಕಲ್ಪ ಮತ್ತು ವಿಕಲ್ಪ ರಹಿತರಾಗಿರಬೇಕು. ಈ ಜಗತ್ತಿನಲ್ಲಿ ನಮ್ಮ ಆತ್ಮವನ್ನು ಬಿಟ್ಟರೆ ಮತ್ತೇನೂ ಇಲ್ಲ." ॥39॥ ಮೂರನೆಯವನು ಹೇಳಿದನು, "ಈ ಜಗತ್ತು ಎಲ್ಲವೂ ಸವಿಕಾರ ಮತ್ತು ಅನಿತ್ಯ. ಕೇವಲ ನಿತ್ಯವು ಮಾತ್ರ ನಿರಾಕಾರ. ಆದುದರಿಂದ ನಾವು ಸದಾ ನಿತ್ಯ ಮತ್ತು ಅನಿತ್ಯವನ್ನು ವಿವೇಚನೆಯಿಂದ ಅರಿಯಬೇಕು." ॥40॥ನಾಲ್ಕನೆಯವನು ಪುಸ್ತಕಜ್ಞಾನವನ್ನು ಒಪ್ಪಲಿಲ್ಲ. ಮತ್ತು ಈ ರೀತಿ ಸಲಹೆ ನೀಡಿದನು. ನಾವು ಆದರಪೂರ್ವಕವಾಗಿ ನಮಗೆ ನಿಗದಿತ ಕರ್ತವ್ಯಗಳನ್ನು ಆಚರಿಸಬೇಕು. ಮತ್ತು ನಮ್ಮ ಶರೀರ, ವಾಚಾ ಮತ್ತು ಪಂಚಪ್ರಾಣಗಳನ್ನು ಗುರುವಿನ ಚರಣಗಳಲ್ಲಿ ಸಮರ್ಪಿಸಬೇಕು. ॥41॥ 'ಗುರುವೇ ಪರಮಾತ್ಮ ಮತ್ತು ಚರಾಚರಗಳಲ್ಲಿಯೂ ವ್ಯಾಪಿ. ಇದನ್ನು ಅರಿಯಲು ಒಳಗೂ ಹೊರಗೂ ದೃಢವಾದ ನಿರ್ಧಾರ ಪಡೆಯಲು ಅಪಾರವಾದ ನಿಷ್ಠೆಯು ಅವಶ್ಯಕ.॥42॥ 'ಆಗಮ ಶಾಸ್ತ್ರಗಳನ್ನು

ಅರಿತವರು ಕೇವಲ ತಾರ್ಕಿಕರಾಗುವರು. ಸದಾ ವಾದೋನ್ಮುಖರಾಗಿ ಚರ್ಚೆಗೆ ಇಳಿಯುತ್ತಾರೆ. ಅನವಶ್ಯಕವಾದ ಸಂದೇಹ ಮತ್ತು ತರ್ಕಗಳನ್ನು ಎತ್ತುವವರು ಕನಸಿನಲ್ಲಿಯೂ ಸಂಪೂರ್ಣ ಜ್ಞಾನ ಪಡೆಯಲಾರರು. ಒಬ್ಬ ವ್ಯಕ್ತಿಯಲ್ಲಿ ಶುದ್ಧ ಭಕ್ತಿ-ಶ್ರದ್ಧೆಗಳು ಇರಬೇಕು.' ॥43॥ ಈ ರೀತಿ ನಾವು ನಾಲ್ಕು 'ಬುದ್ಧಿವಂತರು' ಬ್ರಹ್ಮನನ್ನು ಶೋಧಿಸಲು ಹೊರಟೆವು. ಪ್ರತಿಯೊಬ್ಬರೂ ಸ್ವತಂತ್ರವಾಗಿ ತಮ್ಮದೇ ಬುದ್ಧಿಶಕ್ತಿಯಿಂದ ಮತ್ತು ಮನಸ್ಸಿನಲ್ಲಿ ಯಾವುದೇ ಆತಂಕವಿಲ್ಲದೆ ಪಡೆಯಬಹುದೆಂದು ಕೊಂಡೆವು. ॥44॥ ಈ ರೀತಿಯ ಇಚ್ಛೆ ನಮ್ಮಲ್ಲಿನ ಮೂವರಲ್ಲಿ ಇತ್ತು.ಕಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ ಇರುವಾಗ ಒಬ್ಬ ಬನಜಾರಿಯನ್ನು ಮಾರ್ಗದಲ್ಲಿ ಭೇಟಿಯಾದೆವು. ಅವನು ನಮ್ಮನ್ನು ಪ್ರಶ್ನಿಸಿದನು. ॥45॥ "ಬಿಸಿಲು ಪ್ರಖರವಾಗಿ ಸುಡುತ್ತಿದೆ. ಎಲ್ಲಿಗೆ ಹೋಗುತ್ತಿದ್ದೀರಿ ಮತ್ತು ಏತಕ್ಕಾಗಿ?" ನಾವು ಅವನಿಗೆ ಉತ್ತರಿಸಿದೆವು. "ಕಾಡನ್ನು ಹುಡುಕಬೇಕು." ॥46॥ ಬನಜಾರಿಯು ಪುನಃ ನಮ್ಮನ್ನು "ಏನನ್ನು ಶೋಧಮಾಡುತ್ತಿರುವಿರಿ" ಎಂದು ಪ್ರಶ್ನಿಸಿದನು. ಅದಕ್ಕೆ ನಾವು ಅಸ್ಪಷ್ಟವಾದ ಹಾರಿಕೆಯ ಉತ್ತರ ನೀಡಿದೆವು. ॥47॥ ನಾವು ಗೊತ್ತು ಗುರಿಯಿಲ್ಲದೆ ಅಡ್ಡಾಡುತ್ತಿರುವುದನ್ನು ನೋಡಿ ಅವನು ಕಳವಳಗೊಂಡು ಹೇಳಿದನು, "ಈ ಅರಣ್ಯ ದುರ್ಗಮವಾಗಿದೆ ಮತ್ತು ದಟ್ಟವಾಗಿದೆ. ಕಾಡನ್ನು ಪೂರ್ತಿಯಾಗಿ ಅರಿಯದೆ ಅಲ್ಲಿ ಇಲ್ಲಿ ಸ್ವೇಚ್ಛೆಯಿಂದ ಅಡ್ಡಾಡಬಾರದು." ॥48॥ ನಾವೇನಾದರೂ ಕಾಡಿನಲ್ಲಿ ಓಡಾಡಬೇಕೆಂದರೆ, ನಾವು ಒಬ್ಬ ಮಾರ್ಗದರ್ಶಕನನ್ನು ಕರೆದೊಯ್ಯಬೇಕು. ನಾವುಗಳೇ ಅನವಶ್ಯಕವಾಗಿ ಈ ಪ್ರಖರವಾದ ಮಧ್ಯಾಹ್ನದ ಸಮಯದಲ್ಲಿ ಆಯಾಸ ಪಡಬಾರದು. ॥49॥ ನಾವು ನಮ್ಮ ಸಾಹಸದ ಗುಪ್ತಾರ್ಥವನ್ನು ತೆರೆದಿಡಬೇಕೆಂದಿಲ್ಲ. ಆದರೆ ನಾವು ಸ್ವಲ್ಪ ವಿಶ್ರಾಂತಿ ಪಡೆದು, ಸ್ವಲ್ಪ ರೊಟ್ಟಿ ತಿಂದು, ನೀರು ಕುಡಿದು ತದನಂತರ ಅಂತರಂಗದಲ್ಲಿ ಸ್ವಲ್ಪ ತಾಳ್ಮೆ ವಹಿಸಬಹುದು. ॥50॥ ಅವನು ಕನಿಕರಪೂರಿತ ವಿನಂತಿಯನ್ನು ಮಾಡಿದ್ದೂ ನಾವು ದುರಹಂಕಾರದಿಂದ ಆತನ ಪ್ರಾರ್ಥನೆಯನ್ನು ತಿರಸ್ಕರಿಸಿ ಮುಂದಕ್ಕೆ ಹೊರಟೆವು. ಮತ್ತೆ ಮಾರ್ಗದಲ್ಲಿ ಸುಸ್ತಾದೆವು. ॥51॥ ನಾವೆಲ್ಲಾ ಬುದ್ಧಿವಂತರೆಂಬ ದುರಹಂಕಾರವಿತ್ತು, ನಮಗೆ ನಾವೇ ಮಾರ್ಗವನ್ನು ಶೋಧಿಸಬಲ್ಲೆವು. ಮಾರ್ಗದರ್ಶಕನಿಂದ ಏನು ಪ್ರಯೋಜನ? ಈ ರೀತಿಯ ಅಭಿಮಾನದ ಮನೋವೃತ್ತಿ ನಮ್ಮದಾಗಿತ್ತು. ॥52॥ ಆದರೆ ಆ ಕಾಡು ಬಹು ವಿಸ್ತಾರವಾಗಿತ್ತು, ಮತ್ತು ದಟ್ಟವಾದ ಮರಗಳಿಂದ ಕೂಡಿದ್ದು, ಆ ಎಲೆಗಳ ಮಧ್ಯದಲ್ಲಿ ಸೂರ್ಯನ ಕಿರಣವೂ ಭೇದಿಸಲು ಅಸಾಧ್ಯವಾಗಿತ್ತು, ಹಾಗಿರುವಾಗ ನಾವು ಮಾರ್ಗವನ್ನು ಕ್ರಮಿಸುವುದು ಹೇಗೆ? ॥53॥ ನಾವು ದಾರಿ ತಪ್ಪಿದೆವು. ಅಲ್ಲಿ ಇಲ್ಲಿ ನಿಷ್ಫಲವಾಗಿ ಅಲೆದಾಡುತ್ತಿದ್ದೆವು. ಕೇವಲ ಅದೃಷ್ಟವೋ ಎಂಬಂತೆ ನಾವು ಎಲ್ಲಿಂದ ಹೊರಟಿದ್ದೆವೋ ಅದೇ ಸ್ಥಳಕ್ಕೆ ಬಂದು ಸೇರಿದೆವು. ॥54॥ ವಿಧಿಯೇ ನಮ್ಮನ್ನು ಪುನಃ ಅದೇ ದಾರಿಗೆ ಕರೆತಂದಿತ್ತು, ನಾವು ಮುಂಚಿನ ಬನಜಾರಿಯನ್ನು ಭೇಟಿಮಾಡಿದೆವು ಅವನು ಹೇಳಿದನು. "ನೀವು ಎಲ್ಲೋ ದಾರಿ ತಪ್ಪಿದ ಹಾಗೆ ಕಾಣುತ್ತದೆ. ಕೆಲವೊಮ್ಮೆ ಕೇವಲ ಬುದ್ಧಿಯೇ ಸಾಕಾಗುವುದಿಲ್ಲ. ॥55॥ "ಸಣ್ಣ ವಿಷಯವಾಗಲಿ ದೊಡ್ಡದಾಗಲಿ, ಒಬ್ಬ

ಮಾರ್ಗದರ್ಶಕನು ಸರಿಯಾದ ಮಾರ್ಗವನ್ನು ತೋರಿಸಲು, ಬೇಕಾಗುತ್ತಾನೆ. ಖಾಲಿ ಹೊಟ್ಟೆಯಲ್ಲಿ ಸಾಹಸವನ್ನು ಮಾಡಲು ಸಾಧ್ಯವಿಲ್ಲ. ಬುದ್ಧಿಶಕ್ತಿಯ ಲೋಪದೋಷಗಳು ಅತಿ ವಿಚಿತ್ರ. ॥56॥ "ಈಶ್ವರನ ಸಂಕಲ್ಪವಿಲ್ಲದಿದ್ದರೆ ಮಾರ್ಗದಲ್ಲಿ ಯಾರನ್ನೂ ಭೇಟಿಯಾಗುವುದಿಲ್ಲ. ಯಾರಾದರೂ ಅನ್ನವನ್ನು ನೀಡಿದರೆ ತಿರಸ್ಕರಿಸಬೇಡ ಅಥವಾ ಊಟದ ತಟ್ಟೆಯನ್ನು ತಳ್ಳಿಹಾಕಬೇಡ. ॥57॥ "ಯಾರಾದರೂ ಅನ್ನವನ್ನು ಕೊಟ್ಟು ಊಟಮಾಡಲು ಒತ್ತಾಯ ಮಾಡಿದರೆ ಅದನ್ನು ಶುಭ ಶಕುನವೆಂದು ತಿಳಿ. ಅದು ನಿನ್ನ ಕಾರ್ಯದಲ್ಲಿ ಬರುವ ವಿಘ್ನಗಳನ್ನು ಪರಿಹರಿಸುತ್ತದೆ." ॥58॥ ಅವನು ಮತ್ತೆ ಅಲ್ಪಾಹಾರವನ್ನು ನೀಡಿ ತಿನ್ನಲು ಹೇಳಿದನು. ಮತ್ತು ಶಾಂತವಾಗಿ ತಾಳ್ಮೆಯಿಂದ ಇರುವಂತೆ ಹೇಳಿದನು. ಆದರೆ ಮತ್ತೆ ಈ ಸುವಿಚಾರವು ರುಚಿಸಲಿಲ್ಲ. ನಾವು ಮತ್ತೆ ಯಾವುದೇ ಆಹಾರ ಸೇವಿಸದೆಯೇ ಅಲ್ಲಿಂದ ಹೊರಟೆವು. ॥59॥ 'ನಮ್ಮ ಶೋಧವನ್ನು ಪೂರೈಸುವವರೆಗೆ ಯಾವುದೇ ಆಹಾರವನ್ನು ತೆಗೆದುಕೊಳ್ಳುವುದಿಲ್ಲ.' ಅಂದು ಕೊಂಡೆವು ಅನಂತರ ನೋಡಿ, ಅದೆಂತಹ ವಿಘ್ನಗಳು ಎದುರಾದವು! ಈ ರೀತಿ ನಮ್ಮ ಹಠಮಾರಿತನಕ್ಕೆ ಧನ್ಯವಾದಗಳು ಸಲ್ಲಬೇಕು. ॥60॥ ಹಸಿವೆಯಾಯಿತು. ಬಾಯಾರಿಕೆಯಿಂದ ಗಂಟಲು ಒಣಗಿತು. ಆ ಬನಜಾರಿಯ ಪ್ರೀತಿಯು ಅಲೌಕಿಕವಾಗಿತ್ತು, ನಾವು ಅದರ ಅದ್ಭುತವನ್ನು ಅನುಭವಿಸಿದೆವು. ॥61॥ ನಾವು ವಿದ್ವಾಂಸರು, ಕಲಿತವರು. ಆದರೆ ನಮಗೆ ದಯೆ ಮತ್ತು ಕರುಣೆಯ ಅನುಭವವಿರಲಿಲ್ಲ. ಒಬ್ಬ ಧನಿಕನು, ಎಂಜಲು ಕೈಯಲ್ಲಿ ಕಾಗೆಯನ್ನೂ ಓಡಿಸುವುದಿಲ್ಲ, ಆದರೆ ಅನ್ನದ ಕಣಗಳು ಹಾರಿಹೋಗಿ ಅಷ್ಟರ ಮಟ್ಟಿಗೆ ನಷ್ಟ ಉಂಟಾಗುತ್ತವೆ. ॥62॥ ಆದರೂ ಈ ಬನಜಾರಿಯು, ಅನಕ್ಷರಸ್ಥನೂ, ಅನರ್ಹನೂ, ನೀಚವರ್ಣದವನೂ ಆಗಿದ್ದರೂ ಅಂತರಂಗದಲ್ಲಿ ಸ್ವಾಭಾವಿಕ ಪ್ರೇಮದಿಂದ ತುಂಬಿದ್ದವನು ತನ್ನ ಊಟದಲ್ಲಿ ಒಂದು ಭಾಗವನ್ನು ಕೊಟ್ಟು 'ಸ್ವಲ್ಪ ರೊಟ್ಟಿ ಮತ್ತು ಪಲ್ಯವನ್ನು ತಿನ್ನಿ' ಎಂದನು. 63॥ ಯಾರು ಇತರರಿಗೆ ಈ ರೀತಿ ನಿರ್ವ್ಯಾಜವಾದ ಪ್ರೀತಿ ತೋರಿಸುತ್ತಾರೋ ಅವರು ನಿಜವಾಗಿಯೂ ಪರಮ ಸುಬುದ್ಧಿಗಳಾಗಿರುತ್ತಾರೆ. ಅವರ ಆದರೋಪಚಾರವನ್ನು ಸ್ವೀಕರಿಸುವುದು ನಮ್ಮ ವಿದ್ಯಾರ್ಜನೆಗೆ ಅಪ್ರತಿಮವಾದ ಪ್ರಾರಂಭ ಎಂದು ನಾನು ಭಾವಿಸಿದೆ. ॥64॥ ಆದುದರಿಂದ ಆದರಪೂರ್ವಕವಾಗಿ ಬಜಾರಿಯು ನೀಡಿದಂತಹ ಸ್ವಲ್ಪ ಆಹಾರವನ್ನು ಊಟಮಾಡಿ ನೀರು ಕುಡಿದೆನು. ನೋಡಿ, ಆಗ ಏನು ಕೌತುಕ ಉಂಟಾಯಿತು ಎಂಬುದನ್ನು!" ॥65॥ ಗುರುರಾಜನು ಅನಿರೀಕ್ಷಿತವಾಗಿ ಅಲ್ಲಿಗೆ ಬಂದು ಕೇಳಿದನು, "ಈ ವಾದ ವಿವಾದ ಏತಕ್ಕೆ?" ಎಂದು. ನಾನು ಪೂರ್ತಿ ನಡೆದದ್ದೆಲ್ಲವನ್ನೂ ಮೊದಲಿನಿಂದ ಕೊನೆಯವರೆಗೆ ನಿವೇದಿಸಿದೆ. ॥66॥ "ನೀನು ನನ್ನ ಜೊತೆ ಬರಲು ಇಚ್ಛಿಸುವೆಯಾ? ನಾನು ನಿಮ್ಮ ಶೋಧವನ್ನು ಬೇಗನೆ ಪೂರೈಸಲು ಸಹಾಯ ಮಾಡುವೆನು. ಆದರೆ ಯಾರು ನನ್ನ ವಚನಗಳನ್ನು ಕಿಂಚಿತ್ತೂ ಪ್ರಶ್ನಿಸದೆ ವಿಧೇಯರಾಗಿ ಕೇಳುತ್ತಾರೋ ಅವರ ಸಫಲರಾಗುತ್ತಾರೆ." ॥67॥ ಇತರರು ಇದಕ್ಕೆ ಒಪ್ಪಿಗೆ ಕೊಡಲಿಲ್ಲ. ಆದರೆ ನಾನು ಅತ್ಯಂತ ಗೌರವದಿಂದ ಶಿರಸಾವಹಿಸಿ ಪಾಲಿಸಲು ಒಪ್ಪಿದೆ. ಇತರರು ನನ್ನನ್ನು ಬಿಟ್ಟುಹೊರಟು ಹೋದರು.

ಆಗ ಗುರುರಾಯರು ನನ್ನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋದರು. ॥68॥ ಅವರು ನನ್ನನ್ನು ಒಂದು ಬಾವಿಯ ಹತ್ತಿರ ಕರೆದುಕೊಂಡು ಹೋಗಿ ನನ್ನ ಎರಡು ಕಾಲುಗಳನ್ನೂ ಹಗ್ಗದಿಂದ ಕಟ್ಟಿಹಾಕಿ ಬಾವಿಯ ನೀರಿನ ಮೇಲೆ ತಲೆಕೆಳಗಾಗಿ ನೇತುಹಾಕಿದರು. ॥69॥ ಗುರುರಾಯರು ನನ್ನನ್ನು ಬಾವಿಯ ಮೇಲೆ ಯಾವ ರೀತಿ ನೇತುಹಾಕಿದರೆಂದರೆ ನನ್ನ ಕೈಗಳು ನೀರನ್ನು ಮುಟ್ಟುತ್ತಿರಲಿಲ್ಲ. ಮತ್ತು ನೀರೂ ಸಹ ನನ್ನ ಬಾಯೊಳಗೆ ಹೋಗಲು ಆಗುತ್ತಿರಲಿಲ್ಲ.[2] ॥70॥ ಗುರುರಾಯರು ಹಗ್ಗದ ಮತ್ತೊಂದು ತುದಿಯನ್ನು ಬಾವಿಯ ಪಕ್ಕದಲ್ಲಿದ್ದ ಮರಕ್ಕೆ ಕಟ್ಟಿಹಾಕಿದರು ಮತ್ತು ನಿಶ್ಚಿಂತರಾಗಿ ಹೊರಟುಹೋದರು. ಎಲ್ಲಿಗೆಂದು ಯಾರಿಗೂ ತಿಳಿಯದು ॥71॥ ಅವರು ನಾಲ್ಕು ಅಥವಾ ಐದು ಗಂಟೆಗಳ ನಂತರ ಬಂದರು. ನನ್ನನ್ನು ಬೇಗನೆ ಹೊರತೆಗೆದರು. ಅವರು ನಾನು ಚೆನ್ನಾಗಿದ್ದೇನೆಯೇ ಎಂದು ಕೇಳಿದರು. ॥72॥ ಆಗ ನಾನು ಉತ್ತರಿಸಿದೆ, "ನಾನು ಅತ್ಯಂತ ಆನಂದ ನಿರ್ಭರನಾಗಿದ್ದೆ. ನಾನು ಅನುಭವಿಸಿದ ಸೌಖ್ಯವು ಅಪಾರ. ಅದನ್ನು ವರ್ಣಿಸುವುದು ಈ ಪಾಮರ ಶರೀರದ ಶಕ್ತಿಗೆ ಮೀರಿದುದು. ॥73॥ ನನ್ನ ಈ ಮಾತುಗಳನ್ನು ಕೇಳಿ ಗುರುರಾಯರು ಬಹುವಾಗಿ ಮೆಚ್ಚಿಕೊಂಡರು. ತಮ್ಮ ಕೈಯಿಂದ ನನ್ನ ದೇಹಕ್ಕೆ ಪೆಟ್ಟುಕೊಡುತ್ತ ನನ್ನನ್ನು ತಮ್ಮ ಜೊತೆಯಲ್ಲಿಯೇ ಇರಿಸಿಕೊಂಡರು. ॥74॥ ಇದನ್ನು ಹೇಳುತ್ತಿರುವಾಗಲೂ ನನ್ನ ಹೃದಯವು ಪ್ರೇಮದಿಂದ ಉಕ್ಕುತ್ತಿದೆ. ಗುರುವು ನನ್ನನ್ನು ಶಾಲೆಗೆ ಕರೆದುಕೊಂಡು ಹೋದರು. ನನ್ನನ್ನು ತಾಯಿ ಪಕ್ಷಿಯು ತಮ್ಮ ಮರಿಗಳನ್ನು ರೆಕ್ಕೆಗಳ ಒಳಗೆ ರಕ್ಷಿಸುವಂತೆ, ಅಷ್ಟು ಮೃದುವಾಗಿ ರಕ್ಷಿಸಿದರು. ॥75॥ ಗುರುವಿನ ಶಾಲೆಯು ಅದೆಷ್ಟು ಅದ್ಭುತ! ನಾನು ನನ್ನ ತಂದೆ ತಾಯಿಯರ ಪ್ರೀತಿಯಿಂದ ವಿರಕ್ತನಾದೆ. ಮೋಹ ಮತ್ತು ಮಮತೆಯ ಬೇಡಿಗಳು ಕಳಚಿಹೋದವು. ನಾನು ಮುಕ್ತಿಯನ್ನು ಸುಲಭವಾಗಿ ಪಡೆದೆನು. ॥76॥ ಯಾವುದೂ ಅಸಾಧ್ಯವೆಂದು ಕಾಣಲಿಲ್ಲ. ನನ್ನ ಕೆಟ್ಟ ಪ್ರವೃತ್ತಿಗಳು ಮಾಯವಾದವು. ನನ್ನ ಹಿಂದಿನ ಕರ್ಮಗಳು ಅಳಿಸಿಹೋದವು. ನಾನು ಆಲೋಚಿಸುತ್ತಿದ್ದೆ, ಗುರುವಿನ ಕುತ್ತಿಗೆಯನ್ನು ತಬ್ಬಿಹಿಡಿದು ಯಾವಾಗಲೂ ಅವರನ್ನೇ ದೃಷ್ಟಿಸಿ ನೋಡಬೇಕೆನ್ನಿಸುತ್ತಿತ್ತು. ॥77॥ ಅವರ ಪ್ರತಿಬಿಂಬವು ಅವರ ಕಣ್ಣುಗಳಲ್ಲಿ ಪ್ರತಿಫಲಿಸದಿದ್ದರೆ, ಅವುಗಳು ಕೇವಲ ಮಾಂಸದ ಉಂಡೆಗಳಷ್ಟೆ! ಅಥವಾ ಅದಕ್ಕಿಂತಲೂ ಉತ್ತಮವಾದದ್ದು, ನಾನು ಕುರುಡನಾಗಬಹುದಿತ್ತು. ಈ ರೀತಿ ಶಾಲೆಯ ಸುಖದ ಪರಿಣಾಮ ನನ್ನ ಮೇಲಿತ್ತು. ॥78॥ ಒಮ್ಮೆ ಆ ಶಾಲೆಯನ್ನು ಪ್ರವೇಶಿಸಿದ ನಂತರ ಯಾವ ನತದೃಷ್ಟನು ಆ ಪರಿಸರವನ್ನು ತ್ಯಜಿಸಿ ಹೊರಬರಲು ಇಚ್ಛಿಸುತ್ತಾನೆ? ನನ್ನ ಗುರುರಾಯರೇ ನನಗೆ ತಾಯಿ, ತಂದೆ, ಆಸ್ತಿ, ಎಲ್ಲವೂ ಅವರೇ ಆಗಿದ್ದರು. ॥79॥ ಎಲ್ಲ ಇಂದ್ರಿಯಗಳೂ ಮನಸ್ಸಿನ ಜೊತೆಗೂಡಿ, ನನ್ನ ಕಣ್ಣುಗಳಲ್ಲಿ ಏಕಾಗ್ರವಾಗಿ ನಿಂತು ಅವನ ಮೇಲೆ ಧ್ಯಾನ ಮಾಡಲು ಕಾರಣವಾಗಿತ್ತು. ॥80॥ ಗುರುವೇ ನನ್ನ ಏಕಮಾತ್ರ ಧ್ಯಾನದ ವಸ್ತುವಾಗಿದ್ದರು. ಇತರೆ ಎಲ್ಲವೂ, ಇಡೀ ವಿಶ್ವವೇ ಅವರ ರೂಪವನ್ನು ಧರಿಸಿತು. ನನಗೆ ಬೇರೆ ಯಾವುದರ ಮೇಲೆಯೂ ಪ್ರಜ್ಞೆ ಇರಲಿಲ್ಲ. ಇದನ್ನೇ 'ಅನನ್ಯ ಅವಧಾನ' ಎನ್ನುತ್ತಾರೆ. ॥81॥ ಗುರುವಿನ

ಸ್ವರೂಪದ ಮೇಲೆ ಧ್ಯಾನಿಸಿದರೆ ಮನಸ್ಸು ಮತ್ತು ಬುದ್ಧಿ ಎರಡೂ ತತ್ತರಿಸುತ್ತವೆ. ಆದ್ದರಿಂದ ಕೊನೆಯಲ್ಲಿ ಶಬ್ಧಗಳೇ ಇಲ್ಲದೆ ಅವರಿಗೆ ನಮಿಸಿದೆ. ॥82॥ ಯಾರಿಗಾದರೂ ಈ ಸ್ಥಿತಿಯನ್ನು ತಲುಪಲು ಸಾಧ್ಯವಿಲ್ಲದಿದ್ದರೆ ಒಬ್ಬ ಗುರುವನ್ನು ಜ್ಞಾನ ಪಡೆಯಲು ಸ್ವೀಕರಿಸಬಹುದು. ಆದರೆ ಅವನ ಸದುಪದೇಶವು ಒಂದು ದೊಡ್ಡ ಸೊನ್ನೆಯಾಗಿರುತ್ತದೆ. ಅದಕ್ಕಾಗಿ ಬಹಳ ಹಣವನ್ನು ದಕ್ಷಿಣೆಯಾಗಿ ಕೊಡಬಹುದು ಮತ್ತು ಕೊನೆಯಲ್ಲಿ ಅದರ ಪರಿಣಾಮವಾಗಿ ಅನುತಾಪ ಪಡುವಂತಾಗುತ್ತದೆ. ॥83॥ ಅಂತಹ ಗುರುವು ತನ್ನ ಗುಹ್ಯವಾದ ಜ್ಞಾನದ ಬಗ್ಗೆ ಖಾಲಿ ಹರಟೆ ಹೊಡೆಯಬಹುದು. ಆದರೆ ಅವನ ಶುದ್ಧತೆಯನ್ನು, ನೇರ ಸ್ವಭಾವವನ್ನೂ, ತೋರಿಕೆ ಮಾಡಬಹುದು. ಯಾರು ಈ ರೀತಿಯ ಡಂಬಾಚಾರವನ್ನು ಬಾಲ್ಯದಿಂದಲೇ ಕಲಿತಿರುವರೋ ಅಂತಹವರು ಕೊನೆಯಲ್ಲಿ ಮತ್ತೊಬ್ಬನಿಗೆ ಏನನ್ನು ಕೊಡಲು ಸಾಧ್ಯ? ॥84॥ ಅಲ್ಲಿ ಪವಿತ್ರತೆಯ ಸ್ವರ ಮತ್ತು ಆಡಂಬರಗಳು ಇವೆ. ಆದರೆ ನಿಜವಾದ ಅಂತರಂಗದ ಕೋಮಲವಾದ ಪ್ರೀತಿ ಇಲ್ಲ. ಅಲ್ಲಿ ಯಾವುದೇ ವೆಚ್ಚವಿರುವುದಿಲ್ಲ. ಅವನ ಶಾಲೆಯು ನಿಷ್ಪ್ರಯೋಜಕ. ॥85॥ ಎಲ್ಲಿ ಶಬ್ದಜ್ಞಾನವು ಸಮೃದ್ಧಿಯಾಗಿರುವುದೋ ಬ್ರಹ್ಮಜ್ಞಾನವನ್ನು ಅನುಭವಿಸಲು ಎಂದಿಗೂ ಸಾಧ್ಯವಿಲ್ಲ. ಎಲ್ಲಿ ಗುರುವು ತನ್ನ ಸ್ವಂತ ವೈಭೋಗವನ್ನು ಹಾಡುವುದರಲ್ಲಿಯೇ ನಿರತನಾಗಿರುವನೋ, ಅಲ್ಲಿ ಶಿಷ್ಯನು ತನ್ನ ಹಿತವನ್ನು ಅನುಭವಿಸಲು ಹೇಗೆ ಸಾಧ್ಯ? ॥86॥ಯಾರ ಮಾತುಗಳು ಹೃದಯವನ್ನು ಮುಟ್ಟುವುದಿಲ್ಲವೋ, ಮತ್ತು ಶಿಷ್ಯರು ಅಂತರಂಗದಲ್ಲಿ ಒಪ್ಪಿಲ್ಲವೋ, ಅವನ ಗುರುತ್ವಕ್ಕೆ ಬೆಲೆ ಏನು? ಅವನ ಮಾತುಗಳು ಉಪಯುಕ್ತವಿಲ್ಲದೆ ಕೇವಲ ಚಟಪಟವಾಗುತ್ತವೆ. ॥87॥ ಅದು ಹಾಗಿರಲಿ. ಸಾಕಿಷ್ಟು! ಆದರೆ ನನ್ನ ವಿಷಯದಲ್ಲಿ ನಾನು ನನ್ನ ಗುರುವನ್ನು ಯಾವ ರೀತಿ ಸೇವಿಸಿದೆನು ಎಂದರೆ ಅವರು ನನಗೆ ಜ್ಞಾನದ ನಿಧಿಯನ್ನೇ ಬಹುಮಾನವಾಗಿ ಕೊಟ್ಟರು. ನಾನು ಯಾವುದನ್ನೂ ಹುಡುಕಬೇಕಾಗಿರಲಿಲ್ಲ. ಮತ್ತು ಅದರ ಗೂಢಾರ್ಥಕ್ಕಾಗಿ ಕಿಂಚಿತ್ತೂ ಅರಿಯಬೇಕಾಗಿರಲಿಲ್ಲ. ॥88॥ ಗುರುವಿನ ಕೃಪೆಯಿಂದಲೇ ಸಾಕ್ಷಾತ್ಕಾರವು ತಾನಾಗಿಯೇ ಕೋಲ್ಮಿಂಚಿನಂತೆ ಪ್ರಕಟವಾಯಿತು. ಯಾವುದೇ ಪ್ರಯಾಸವಾಗಲೀ, ಅಧ್ಯಯನವಾಗಲಿ ಮಾಡಬೇಕಾಗಲಿಲ್ಲ. ನಾನು ಯಾವುದನ್ನೂ ಶೋಧಿಸಬೇಕಾಗಲಿಲ್ಲ., ಎಲ್ಲವೂ ಹಗಲಿನ ಬೆಳಕಿನಂತೆ ಸ್ಪಷ್ಟವಾಗಿ ಮೂಡಿಬಂದಿತು. ॥89॥ ಕೇವಲ ಸಮರ್ಥ ಗುರುರಾಯರು ಮಾತ್ರ ತಲೆಕೆಳಗಾಗಿ ನೇತಾಡುತ್ತಿದ್ದಾಗಿನ ಸಂತೋಷವನ್ನು ಅರಿತಿರುವರು. ನನ್ನನ್ನು ತಲೆಕೆಳಗಾಗಿ ಕಾಲು ಮೇಲೆ ಮಾಡಿ ಗುರುರಾಯರೇ ನೇತಾಡಿಸಿದ್ದರು. ॥90॥ ಸಂತರ ರೀತಿ ನೀತಿಗಳು ಬೇರೆಯೇ ರೀತಿಯವು. ಕೇವಲ ಅನುಭವದಿಂದಲೇ ಜನಿಸಿದ್ದು ಜ್ಞಾನ. ಇಲ್ಲಿ ನಿಷ್ಠೆಯೇ ಒಂದು ಪ್ರಮಾಣ. ಗುರುಕೃಪೆಯನ್ನು ಪಡೆಯಲು ಇದೊಂದೇ ಸಾಧನ. ॥91॥ ಒಬ್ಬ ಕರ್ಮಠನು ಮಾತ್ರವೇ ವಿಧಿವಿಧಾನಗಳ ನಿಷೇಧಗಳನ್ನು ಅರಿಯಬಲ್ಲನು. ಜ್ಞಾನಿಯು ಜ್ಞಾನದ ಅಭಿಮಾನದಿಂದ ತುಂಬಿರುತ್ತಾನೆ. ಯೋಗಿಯು ಒಬ್ಬ ದಂಭಾಚಾರಿಯು. ನಿಜವಾಗಿಯೂ ವಿಶ್ವಾಸವಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ॥92॥ ಪಂಡಿತಗರ್ವದಿಂದ ಕುರುಡಾಗಿದ್ದಾರೆ

ಮತ್ತು ಅಭಿಮಾನದ ಪ್ರತ್ಯಕ್ಷ ರೂಪಾಂತರವೇ ಸರಿ. ಜ್ಞಾನಿಗಳು ಅವರಿಂದ ದೂರ ಓಡುತ್ತಾರೆ ಮತ್ತು ಅವರು ಮತ್ತೊಬ್ಬರ ಸಹವಾಸವನ್ನು ಇಷ್ಟಪಡುವುದಿಲ್ಲ. ॥93॥ ಜ್ಞಾನಿಯು ಹೇಳುತ್ತಾನೆ, "ನಾನಲ್ಲದೆ ಬೇರೆ ದೇವರಿಲ್ಲ. ಏಕೆಂದರೆ ಸ್ವಯಂ ನಾನೇ ಜ್ಞಾನ ಸಂಪನ್ನನಾಗಿದ್ದೇನೆ. ಮತ್ತು ನಾನೇ ಪರಿಪೂರ್ಣವಾದ ಚಿದ್ಘನನಾಗಿದ್ದೇನೆ." ॥94॥ ಒಬ್ಬ ಭಕ್ತನು, ತನ್ನಲ್ಲಿರುವ ಭಕ್ತಿ ವಿಶ್ವಾಸಗಳಿಂದಾಗಿ ತನ್ನ ಜ್ಞಾನವನ್ನು ತೋರಿಸುವುದಿಲ್ಲ. ಅವನು ತನ್ನ ತನು, ಮನ ಮತ್ತು ಧನ ಎಲ್ಲದರಿಂದಲೂ ತನ್ನ ಗುರುವಿನ ಸೇವೆಮಾಡುತ್ತಾನೆ. ಸಂಪೂರ್ಣವಾಗಿ ಗುರುವಿಗೆ ಶರಣಾಗಿರುತ್ತಾನೆ. ॥95॥ ಅವನು ತನ್ನ ಸಾಧನೆಯ ಬಗ್ಗೆಯಾಗಲೀ, ತನ್ನ ಸಾಮರ್ಥ್ಯದ ಮಹತ್ವಕ್ಕಾಗಲೀ, ತನ್ನ ಜ್ಞಾನದ ಪ್ರತಿಭೆಗೋಸುಗವಾಗಲೀ ಅಹಂಕಾರ ಪಡುವುದಿಲ್ಲ. ॥96॥ ಏನು ಆಗುವುದೋ ಅದು ದೇವರಿಂದಾಗಿಯೇ ಆಗುತ್ತದೆ. ಅವನು ಎಬ್ಬಿಸುತ್ತಾನೆ, ಇಳಿಸುತ್ತಾನೆ. ಅವನು ಜಗಳವಾಡುತ್ತಾನೆ, ಜಗಳ ಮಾಡಿಸುತ್ತಾನೆ. ಕೇವಲ ಅವನೊಬ್ಬನೇ ಮಾಡುವವನು, ಕರ್ತಾರ. ॥97॥ ಎಲ್ಲ ಕರ್ತೃತ್ವವನ್ನೂ, ಗುರುವಿಗೇ ಬಿಟ್ಟು, ಅವನು ಸ್ವಯಂ ನಮ್ರತೆಯನ್ನು ಸ್ವೀಕರಿಸುತ್ತಾನೆ. ಒಬ್ಬ ಭಕ್ತನು ಸದಾಕಾಲ ದೇವರ ಮೇಲೆ ಅವಲಂಬಿತನಾಗಿರುತ್ತಾನೆ. ಮತ್ತು ಅವನು ಸ್ವತಂತ್ರನಲ್ಲ. ॥98॥ ಸಾಕು! ಈ ನಾಲ್ಕು ಬುದ್ಧಿವಂತರು ಏನನ್ನು ಹುಡುಕುತ್ತಿದ್ದರು? ಇಲ್ಲಿಯವರೆಗೆ ಅದನ್ನು ಹೇಳಲಿಲ್ಲ, ಈಗ ಅದರ ವಿವರಣೆಯನ್ನು ಕೇಳಿರಿ. ॥99॥ ಇವರೆಲ್ಲರೂ ಕರ್ಮಠರು, ಘನಪಾಠಿಗಳು (ವೇದಗಳನ್ನು ಸ್ವರಸಹಿತ ಹೇಳುವವರು) ತಮ್ಮಲ್ಲಿರುವ ವಿದ್ವತ್ತಿನಿಂದಾಗಿ ಗರ್ವಿಷ್ಠರಾಗಿದ್ದು, ಶಬ್ದಜ್ಞಾನದ ಹರಟೆಯಲ್ಲಿ ದೇವರ ಬಗ್ಗೆ ಚರ್ಚಿಸಲು ಪ್ರಾರಂಭಿಸುತ್ತಾರೆ. ॥100॥ ಅವರ ಉದ್ದೇಶವಿದ್ದುದು ಭಗವಂತನನ್ನು ಗುರುತಿಸಿ, ಅವನ ಅಸ್ತಿತ್ವದ ಜಾಗವನ್ನು ಅರಿತು, ಅವನನ್ನು ಸೇರಲು ಇರುವ ಮಾರ್ಗಗಳನ್ನು ಹುಡುಕಿ, ಜ್ಞಾನ ಮತ್ತು ಯುಕ್ತಿಗಳಿಂದ ಮುಂದುವರೆಯುವುದು. ॥101॥ ಶ್ರೀಸಾಯಿಯು ಆ ನಾಲ್ವರು ಪ್ರಬುದ್ಧರಲ್ಲಿ ಒಬ್ಬರು. ಅವರು ವೈರಾಗ್ಯ ಮತ್ತು ವಿವೇಕಗಳ ಮೂರ್ತಿವಂತರೇ ಆಗಿದ್ದರು. ಅವರೇ ಸ್ವಯಂ ಪರಬ್ರಹ್ಮವಾಗಿದ್ದರು. ಹಾಗಿರುವಾಗ ಅವರೇಕೆ ಈ ಅವಿವೇಕದ ಮಾತುಕತೆಯಲ್ಲಿ ನಿರತರಾಗಿದ್ದರು? ॥102॥ ಶ್ರೋತೃಗಳು ಸ್ವಾಭಾವಿಕವಾಗಿಯೇ ಈ ಶಂಕೆಯನ್ನು ಹೊಂದಬಹುದು. ಇದು ಲೋಕದ ಒಳಿತಿಗಾಗಿ ಅಷ್ಟೆ. ಭಕ್ತೋದ್ಧಾರಕರಾದ ಸಾಯಿ ಸಮರ್ಥರು ಈ ಘಟನೆಯಿಂದ ಕೀಳರಿಮೆಯನ್ನು ಅನುಭವಿಸಿದರೇ? ॥103॥ ಅವರು ಸ್ವತಃ ಅವತಾರಸ್ವರೂಪವೇ ಆಗಿದ್ದರೂ, ಅವರು 'ಅನ್ನವೇ ಬ್ರಹ್ಮ' ಎಂಬ ದೃಢನಿರ್ಧಾರದಿಂದಾಗಿ ಬನಜಾರಿಯಿಂದ ಅನ್ನವನ್ನು ಸ್ವೀಕರಿಸಿ ಅದರ ಬಗ್ಗೆ ಬಹಳವಾಗಿ ಮಾತನಾಡಿ ಅವನನ್ನು ವಂದ್ಯನನ್ನಾಗಿ ಮಾಡಿದರು. ॥104॥ ಮತ್ತೆಯೂ ಅವರು ಅನ್ನವನ್ನು ಸ್ವೀಕರಿಸದೆ ಅವಮಾನ ಮಾಡಿದವರು ಯಾವ ರೀತಿ ಹಾನಿಗೆ ಒಳಗಾದರು ಮತ್ತು ಗುರುವಿಲ್ಲದೆ ಯಾರೂ ಜ್ಞಾನಿಯಾಗಲು ಸಾಧ್ಯವೇ ಇಲ್ಲ ಎಂಬುದನ್ನು ಈ ಪ್ರಬುದ್ಧರ ಕಥೆಯನ್ನು ಹೇಳಿ ನಿರೂಪಿಸಿದರು. ॥105॥ ತಾಯಿ, ತಂದೆ ಮತ್ತು ಗುರುಗಳ ನಿರ್ದೇಶನವಿಲ್ಲದೆ ಧರ್ಮಜ್ಞಾನವನ್ನು

ಪಡೆಯುವುದು ಅಶಕ್ಯ. ಇವೆಲ್ಲವೂ ಅಧ್ಯಯನದ ಮೇಲೂ ಅವಲಂಬಿತವಾಗಿದೆ. ಅದರ ಅನುಷ್ಠಾನವಿಲ್ಲದಿದ್ದರೆ ಇವೆಲ್ಲವೂ ವ್ಯರ್ಥ. ॥106॥ ಶ್ರುತಿಯೂ ಸ್ಪಷ್ಟ ಪಡಿಸುತ್ತದೆ. – ತಾಯಿ, ತಂದೆ ಮತ್ತು ಆಚಾರ್ಯರನ್ನು ಪೂಜಿಸಿ ಅವರ ಆಶೀರ್ವಚನಗಳನ್ನು ಸಂಪಾದಿಸಬೇಕು. ॥107॥ ಈ ಮೂವರ ಆಶೀರ್ವಚನಗಳು ಯಜ್ಞಗಳ ಜೊತೆಯಲ್ಲಿ, ಶಾಸ್ತ್ರಗಳ ಅಧ್ಯಯನ ಹಾಗೂ ದಾನ ಇವುಗಳೆಲ್ಲವೂ ಜನನ ಮರಣಗಳೆಂಬ ಚಕ್ರದಿಂದ ಪಾರಾಗಲು ಏಕಮಾತ್ರ ಪರಮಸಾಧನವಾಗಿದೆ. ॥108॥ ಇವೆಲ್ಲವೂ ಚಿತ್ತಶುದ್ಧಿಯ ಸಾಧನಗಳು. ಇದಾಗದೆ ಆತ್ಮವನ್ನು ಅರಿಯಲು ಸಾಧ್ಯವಿಲ್ಲ ಮತ್ತು ಅಂತಹ ಜನ್ಮವು ವ್ಯರ್ಥವೇ ಸರಿ. ॥109॥ ಈ ಶರೀರ, ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ ಇವುಗಳು ಗಹನವಾದ ಆತ್ಮಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಕೇವಲ ಗುರು ಕೃಪೆಯು ಮಾತ್ರ ಆತ್ಮದರ್ಶನ ಮಾಡಿಸಲು ಸಾಧ್ಯ. ॥110॥ ಎಲ್ಲಿ ಪ್ರತ್ಯಕ್ಷ ಹಾಗೂ ಅನುಮಾನ ಈ ಎರಡು ಪ್ರಮಾಣಗಳನ್ನು ಪ್ರಮಾಣಿಸಲು ಸಾಧ್ಯವಿಲ್ಲವೋ ಆಗ ಕೇವಲ ಗುರುಮಾತ್ರ ಕರತಲಾಮಲಕ (ಅಂಗೈಯಲ್ಲಿಟ್ಟುಕೊಂಡಂತಹ ನೆಲ್ಲಿಕಾಯಿ) ರೀತಿಯಲ್ಲಿ ಅತಿ ಸುಲಭವಾಗಿ ತೋರಿಸಬಲ್ಲನು. ॥111॥ ನಮ್ಮ ಜೀವನದ ಪುರುಷಾರ್ಥಗಳಾದ ಧರ್ಮ, ಅರ್ಥ ಮತ್ತು ಕಾಮ ಇವುಗಳನ್ನು ಶ್ರಮವಹಿಸಿ ಪಡೆಯಲು ಸಾಧ್ಯ. ಆದರೆ ನಾಲ್ಕನೆಯ ಪುರುಷಾರ್ಥ(ಮೋಕ್ಷ)ವನ್ನು ಗುರುವಿನ ಸಹಾಯದಿಂದ ಪಡೆಯಬಹುದು. ಅರಿವಿಲ್ಲದೆ ಶ್ರಮವೆಲ್ಲವೂ ವ್ಯರ್ಥ. ॥112॥ ಶಿರಡಿಯ ಈ ಸಂತನ ದರಬಾರಿನಲ್ಲಿ, ಜ್ಯೋತಿಶ್ಶಾಸ್ತ್ರ ಪ್ರವೀಣರು ಬಂದು ತಮ್ಮ ಗೌರವ ಸಲ್ಲಿಸುತ್ತಿದ್ದರು. ಅವರು ಈ ನರದೇಹದ ಚಿಕ್ಕವರ ಮತ್ತು ದೊಡ್ಡವರ ಭವಿಷ್ಯವನ್ನು ಹೇಳುತ್ತಿದ್ದರು. ॥113॥ ಧನಿಕರು, ವೈಭವಭೋಗಿಗಳು, ರಾಜರು ಮತ್ತು ಚಿಕ್ಕ ಒಡೆಯರು, ಭಿಕ್ಷೆ ಬೇಡುತ್ತಿದ್ದ ಜೋಗಿಗಳು, ರಾಗ ಮತ್ತು ಮೋಹಗಳಿಂದ ದೂರವಾದ ವಿರಾಗಿಗಳು ದರ್ಶನಮಾಡಲು ಉತ್ಕಂಠಿತರಾಗಿ ಬರುತ್ತಿದ್ದರು. ॥114॥ ಜಪ, ತಪಸ್ಸು, ವ್ರತ ಇವುಗಳಲ್ಲಿ ನಿರತರಾಗಿದ್ದ ಸನ್ಯಾಸಿಗಳು, ತೀರ್ಥಕ್ಷೇತ್ರವಾಸಿಗಳು ಯಾತ್ರಿಕರಾಗಿ ಬಂದವರು, ಗಾಯಕರು, ನರ್ತಕರು, ಎಲ್ಲರೂ ತಮ್ಮ ಪರಿವಾರಸಮೇತವಾಗಿ ಶಿರಡಿಗೆ ದರ್ಶನಕ್ಕಾಗಿ ಬರುತ್ತಿದ್ದರು. ॥115॥ ಹರಿಜನರೂ ಸಹ್ತ್ರೀ ಸಾಯಿ ದರ್ಬಾರಿಗೆ ವಂದನೆ ಸಲ್ಲಿಸಲು ಬರುತ್ತಿದ್ದರು. ಕೇವಲ ಅವರೊಬ್ಬರೇ ತಂದೆ ಮತ್ತು ತಾಯಿ ತಮ್ಮನ್ನು ಜನನ ಮರಣಗಳ ಚಕ್ರದಿಂದಮುಕ್ತಮಾಡಲು ಸಹಾಯಮಾಡುವರೆಂಬ ನಂಬಿಕೆಯಿಂದ ಬರುತ್ತಿದ್ದರು. ॥116॥ ಲಿಂಗವನ್ನು ತಮ್ಮ ಕತ್ತಿನಲ್ಲಿ ಧರಿಸಿ ಹಣೆಗೆ ವಿಭೂತಿ ಧಾರಣೆ ಮಾಡಿ, ಕೇವಲ ಹಸಿಯಧಾನ್ಯ ಮತು ಭಿಕ್ಷೆ ಮಾತ್ರ ಸ್ವೀಕರಿಸುತ್ತಿದ್ದಂತಹ ಜಂಗಮರು ಈ ಹಬ್ಬದ ಸಡಗರವನ್ನು ನೋಡಲು ಬರುತ್ತಿದ್ದರು. ॥117॥ ಕುಶಲರಾದ ಐಂದ್ರಜಾಲಿಕರು ಬಂದರು. ಗೋಂಧಳಿಗಳು ಪ್ರೇಮದಿಂದ ಗೊಂದಲವನ್ನು ಸೃಷ್ಟಿಮಾಡುತ್ತಿದ್ದರು. ಮತ್ತು ದೇವಿ ಭವಾನಿಯ ಹೆಸರಲ್ಲಿ ಭಿಕ್ಷೆ ಬೇಡುತ್ತಿದ್ದರು. ಪ್ರೀತಿಯಿಂದ ಬಾಬಾರವರ ಹತ್ತಿರವೂ ಬೇಡುತ್ತಿದ್ದರು. ॥118॥ ಕುರುಡರು, ಕುಂಟರು, ಕಿವುಡರು, ಜೋಗಿಗಳು, ಗುರುನಾನಕರ ಹಿಂಬಾಲಕರು, ಭಟ್ಟರು, ಪಂಜು

ಹಿಡಿಯುವವರು ಎಲ್ಲರೂ ಸಮರ್ಥ ಸಾಯಿಯ ಮೇಲೆ ಭಕ್ತಿಯಿಂದ ಪ್ರೇಮದಿಂದ ಧಾವಿಸಿ ಬರುತ್ತಿದ್ದರು. ॥119॥ ಜಾದುಗೆಗಳ್[3], ಸರೋಡೆಗಳ್[4], ಕುಂಟರು ಮತ್ತು ಕೊಲ್ಹಾಟಿಣಿಗಳು[5] ಎಲ್ಲರೂ ಬಂದು ಆಟವನ್ನು ತೋರಿಸುತ್ತಿದ್ದರು. ಆಗ ಆ ಬನಜಾರಿಗಳು ಪ್ರೇಮದಿಂದ ಅದೇ ಒಳ್ಳೆಯ ಸಮಯಕ್ಕೆ ಬಂದರು. ॥120॥ ಸಾಯಿಯ ಸ್ವರೂಪವು ಧನ್ಯ ಧನ್ಯ! ವೈರಾಗ್ಯದಿಂದ ಅದು ಅಜ್ಯೋತ್ತಿರುವುದು. ಅವರು ನಿರ್ವಿಷಯ, ನಿಸ್ಸಂಗ, ನಿಃಸ್ವಾರ್ಥರು ಮತ್ತು ಭಕ್ತರ ಮೇಲೆ ಅನುಪಮ ಪ್ರೀತಿಯುಳ್ಳವರು ಆಗಿದ್ದರು. ॥121॥ ಸಾಕಿಷ್ಟು! ಈಗ ಮುಖ್ಯ ಕಥೆಯ ದಾರದ ಎಳೆಯನ್ನು ತೆಗೆದುಕೊಳ್ಳೋಣ. ಆಖ್ಯಾನವನ್ನು ಶುರುಮಾಡುತ್ತೇನೆ. ಶ್ರೋತೃಗಳು ಗಮನ ನೀಡಬೇಕು. ॥122॥ ಬಾಬಾರು ಎಂದಿಗೂ ಉಪವಾಸ ಮಾಡುತ್ತಿರಲಿಲ್ಲ. ಇತರರನ್ನೂ ಹಸಿವೆಯಿಂದ ಇರಲು ಬಿಡುತ್ತಿರಲಿಲ್ಲ. ಉಪವಾಸ ಮಾಡುತ್ತಿರುವ ವ್ಯಕ್ತಿಯ ಮನಸ್ಸು ಎಂದಿಗೂ ಸ್ವಸ್ಥವಾಗಿರುವುದಿಲ್ಲ. ಆಗ ಅವನು ಪರಮಾರ್ಥವನ್ನು ಸಾಧಿಸಲು ಹೇಗೆ ಸಾಧ್ಯ? ॥123॥ "ಬರಿಯ ಹೊಟ್ಟೆಯಲ್ಲಿ ದೇವರನ್ನು ಪಡೆಯಲು ಸಾಧ್ಯವಿಲ್ಲ. ಮೊದಲು ಆತ್ಮವು ಸಂತುಷ್ಟವಾಗಬೇಕು. ಈ ಉಪದೇಶಕ್ಕೆ ಪುಷ್ಟಿಕೊಡುವಂತಹ ಮತ್ತೊಂದು ಕಥೆಯನ್ನು ಶ್ರೋತೃಗಳ ಲಾಭಕ್ಕಾಗಿ ತಿಳಿಸುವೆನು. ॥124॥ ಮಧ್ಯಾಹ್ನದಲ್ಲಿ ಹಸಿವೆಯಿಂದ ಹೊಟ್ಟೆಯು ತಿರುಚುತ್ತಿರುವಾಗ, 'ಅನ್ನವೇ ಬ್ರಹ್ಮ' ಎಂಬ ನುಡಿಯ ಸತ್ಯ ಮತ್ತು ಪ್ರಾಮಾಣಿಕತೆಯು ಅಭಿವ್ಯಕ್ತವಾಗಿತ್ತು. ॥125॥ ಅದೊಂದು ನಿಜವಾಗಿಯೂ ದುರ್ಧರವಾದ ಪರಿಸ್ಥಿತಿ, ಒಂದು ಚೂರು ಅನ್ನವನ್ನೂ ಬಾಯೊಳಗೆ ಹಾಕದೇ ಇರುವುದು. ಎಲ್ಲ ಇಂದ್ರಿಯಗಳೂ ಬಲಹೀನವಾಗಿ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡದೇ ಹೋಗುತ್ತವೆ. ॥126॥ ಹೊಟ್ಟೆಯಲ್ಲಿ ಅನ್ನದ ತೇವವು ಇಲ್ಲದಿದ್ದಲ್ಲಿ, ಯಾವ ಕಣ್ಣುಗಳಿಂದ ನಾವು ದೇವರನ್ನು ನೋಡಬಲ್ಲೆವು? ಯಾವ ನಾಲಿಗೆಯಿಂದ ದೇವರ ಮಹಿಮೆಯನ್ನು ಹೊಗಳಬಲ್ಲೆವು? ಮತ್ತ ಯಾವ ಕಿವಿಗಳಿಂದ ನಾವು ಕೇಳಬಲ್ಲೆವು? ॥127॥ ಸಾರಾಂಶವೇನೆಂದರೆ, ಯಾವಾಗ ಸಕಲ ಇಂದ್ರಿಯಗಳೂ ಸಶಕ್ತವಾಗಿಯೂ ಆರೋಗ್ಯವಾಗಿಯೂ ಇರುತ್ತವೆಯೋ ಆಗ ಮಾತ್ರ ದೇವರಲ್ಲಿ ಭಕ್ತಿ ಮಾಡಲು ಸಾಧ್ಯ! ಯಾರು ಉಪವಾಸ ಮಾಡಿ ಶಕ್ತಿಹೀನರಾಗಿರುತ್ತಾರೋ ಅವರು ಪರಮಾರ್ಥ ಸಾಧನೆಯಲ್ಲಿ ಮುಂದುವರೆಯಲು ಆಗುವುದಿಲ್ಲ. ॥128॥ ಅತಿಯಾದ ಭೋಜನವೂ ಹಿತಕರವಲ್ಲ. ಮಿತವಾದ ಭೋಜನ ಮಾತ್ರವೇ ಅತ್ಯಂತ ಸುಖಕರ. ಉಪವಾಸದ ಅತಿರೇಕವೂ ಭಯಂಕರ. ಅದು ನಿರಂತರವಾಗಿ ಕ್ಲೇಶವನ್ನುಂಟುಮಾಡುತ್ತದೆ. ॥129॥ ಒಮ್ಮೆ, ಒಬ್ಬ ಮಹಿಳೆಯು ಸಾಯಿಯ ದರ್ಶನಕ್ಕೆಂದು ಶಿರಡಿಗೆ ಬಂದಳು. ಕೇಳ್ಕರ್‌ನಿಗೆ ಒಂದು ಪತ್ರವನ್ನೂ ತಂದಿದ್ದಳು. ಅತಿ ಉಲ್ಲಾಸದಿಂದ ಬಂದಿದ್ದಳು. ॥130॥ ಆ ಮಹಿಳೆಯು ಮಹಾರಾಜ್‌ರ ಚರಣಗಳಲ್ಲಿ ಕುಳಿತು ಮೂರು ದಿನಗಳು ಉಪವಾಸ ಮಾಡಬೇಕೆಂದಿದ್ದಳು. ಆದರೆ ಅವಳ ನಿರ್ಧಾರ ವಿಫಲವಾಯಿತು. ॥131॥ ಬಾಬಾರವರುತಮ್ಮ ನಿತ್ಯಕ್ರಮಾನುಸಾರ, ಪರಮಾರ್ಥದ ವಿಚಾರ ಮಾಡುವ ಸಂದರ್ಭದಲ್ಲಿ, ಜೊತೆಯಲ್ಲಿಯೇ ಸ್ವಲ್ಪ ಆಹಾರವನ್ನು ಇಟ್ಟುಕೊಳ್ಳಬೇಕೆಂದು ನಿರ್ಧರಿಸಿದ್ದರು. ಆ ಮಹಿಳೆಯ

ನಿರ್ಧಾರ ವ್ಯರ್ಥವಾಯಿತು. ॥132॥ ಯಾರು ಭಗವಂತನನ್ನು ಸಾಕ್ಷಾತ್ಕರಿಸಲು ಇಚ್ಛಿಸುವರೋ ಅವರು ಪ್ರಾರಂಭದಲ್ಲಿ ಸ್ವಲ್ಪ ಆಹಾರ ಸ್ವೀಕರಿಸಬೇಕು. ಜೀವವು ಸಮಾಧಾನದಿಂದ ಇಲ್ಲದಿದ್ದರೆ, ದೇವರನ್ನು ಪ್ರತ್ಯಕ್ಷೀಕರಿಸಲು ಹೇಗೆ ಸಾಧ್ಯ? ॥133॥ ಖಾಲಿಹೊಟ್ಟೆಯಲ್ಲಿ ದೇವರನ್ನು ಸಾಧಿಸುವುದು ಅಸಾಧ್ಯ, ಕಲ್ಪಾಂತ್ಯದವರೆಗೂ ಆಗುವುದಿಲ್ಲ. ಉಪಾಸನೆ, ತಪಸ್ಸು ಇತ್ಯಾದಿಗಳು ಒಟ್ಟಿಗೆ ಹೊರೆಯಾಗುವುದನ್ನು ಸಾಯಿಯು ಎಂದಿಗೂ ಅನುಮೋದಿಸುತ್ತಿರಲಿಲ್ಲ. ॥134॥ ಮಹಾರಾಜ್‌ರವರು ಅಂತಸಾಕ್ಷಿಯಿಂದ ಅರಿತಿದ್ದವರು, ಹಿಂದಿನ ದಿವಸವೇ ದಾದಾ ಕೇಳ್ಕರ್‌ನಿಗೆ ಮುಂಚೆಯೇ ಈ ವಿಷಯವನ್ನು ತಿಳಿಸಿದ್ದರು. ॥135॥ "ಈಗ, ಈ ಹೋಳಿಯ ರಜೆಯ ದಿನಗಳಲ್ಲಿ, ನನ್ನ ಮಕ್ಕಳೇನಾದರೂ ಉಪವಾಸವಿರಬೇಕಾಗುತ್ತದೆಯೇ? ಅದನ್ನು ನಾನು ಹೇಗೆ ಅನುಮೋದಿಸಲಿ? ಮತ್ತು ನಾನು ಇಲ್ಲೇಕೆ ಇರಬೇಕು?" ॥136॥ ಸಾಯಿಯ ಮುಖದಿಂದ ಈ ಮಾತುಗಳು ಉದ್ಗಾರವಾಗಿ ಹೊರಬಿದ್ದ ಎರಡನೆಯ ದಿನವೇ ಆ ಮಹಿಳೆ ಶಿರಡಿಗೆ ಬಂದಳು. ॥137॥ ಆ ಮಹಿಳೆಯ ಅಡ್ಡ ಹೆಸರು ಗೋಖಲೆ ಎಂದು. ಅವಳು ಮುಂಚೆಯೇ ನಿರ್ಧರಿಸಿದ್ದ ಹಾಗೆ ದಾದಾನ ಹತ್ತಿರ ತನ್ನ ಸಾಮಾನುಗಳನ್ನು ಇಟ್ಟು ಅವನಿಗೆ ಆ ಪತ್ರವನ್ನು ಕೊಟ್ಟಳು. ॥138॥ ಕಾಶೀಬಾಯಿ ಕಾನೀಟಕರ್‌ಳು ಆಪ್ತ ಸಂಬಂಧಿಯಾಗಿದ್ದು ದಾದಾನಿಗೆ ಒಂದು ಪತ್ರ ಬರೆದು ಆ ಮಹಿಳೆಗೆ ಸಾಯಿಬಾಬಾರವರ ದರ್ಶನ ಮಾಡಲು ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸಿದ್ದನು. ॥139॥ ಅವಳು ಶಿರಡಿ ತಲುಪಿದ ಕೂಡಲೇ ಬಾಬಾರವರ ದರ್ಶನಕ್ಕಾಗಿ ಹೋದಳು. ಅನಂತರ ಅವಳು ಸ್ವಲ್ಪಕಾಲ ಅವರ ಹತ್ತಿರ ಕುಳಿತಳು. ಆಗ ಬಾಬಾರವರು ಅವಳಿಗೆ ಉಪದೇಶ ಮಾಡಿದರು. ॥140॥ ಸಾಯಿನಾಥರು ಎಲ್ಲರ ಅಂತರಂಗವನ್ನು ತಿಳಿದಿದ್ದರು. ಏಕೆಂದರೆ ಇಡೀ ಭೂಮಂಡಲದಲ್ಲಿಯೇ ಅವರಿಂದ ರಹಸ್ಯವಾದುದು ಯಾವುದೂ ಇರಲಿಲ್ಲ. ॥141॥ ಅನ್ನವೂ, ಅದನ್ನು ತಿನ್ನುವವನೂ ಎರಡೂ ವಿಷ್ಣು ಸ್ವರೂಪವೇ. ಉಪವಾಸ, ತಪಸ್ಸು, ಕೆಡದ ಆಹಾರ, ಯಾವುದೇ ಆಹಾರ, ನೀರು, ಏನೂ ತೆಗೆದುಕೊಳ್ಳದಿರುವುದು, ಈ ಯೋಚನೆಗಳಲ್ಲಿ ಮುಳುಗುವುದೇಕೆ? ॥142॥ "ಈ ಉಪವಾಸ, ತಪಸ್ಸು ಇವುಗಳ ಅವಶ್ಯಕತೆಯಾದರೂ ಏನಿದೆ?" ಎಂದು ಬಾಬಾರವರು ತಮ್ಮ ತಮ್ಮಲ್ಲೇ ಹೇಳಿಕೊಂಡಂತೆ ಅವಳಿಗೆ ಹೇಳಿದರು. ॥143॥ "ಹೋಗು, ದಾದಾ ಭಟ್‌ನ್ ಮನೆಗೆ ಹೋಗು. ಪೂರಣ ಪೋಳಿಗಳನ್ನು ಸಂತೋಷವಾಗಿ ಮಾಡು. ಅವನ ಮಕ್ಕಳಿಗೆಲ್ಲಾ ತಿನ್ನಿಸು ಮತ್ತು ನೀನೂ ಸಹ ಹೊಟ್ಟೆಯ ತುಂಬಾ ತಿನ್ನು." ॥144॥ ಅದು ಒಂದು ಸಂತೋಷವಾದ ಯೋಗಾಯೋಗದ ಘಟನೆಯಾಗಿತ್ತು. ಆ ಮಹಿಳೆ ಹೋಳಿಹಬ್ಬದ ದಿನ ಬಂದಿದ್ದಳು. ದಾದಾ ಹೆಂಡತಿ ಆಗ ಮೈಲಿಗೆಯಲ್ಲಿದ್ದಳು. ಆದ್ದರಿಂದ ಆಕೆ ತಾನೇ ಅಡಿಗೆ ಮಾಡುವ ಹಾಗಿರಲಿಲ್ಲ. ॥145॥ ಉಪವಾಸ ಮಾಡಬೇಕೆಂದಿದ್ದ ತೀವ್ರವಾದ ಆಸೆಯು ಮಾಯವಾಯಿತು. ಏಕೆಂದರೆ ಅವಳೇ ಅಡಿಗೆ ಮಾಡಬೇಕಾಗಿತ್ತು! ಆಗ ಅವಳು ಪರಮ ಪ್ರೇಮದಿಂದ ಬಾಬಾರವರ ಆಜ್ಞೆಯನ್ನು ಪಾಲಿಸಿದಳು. ॥146॥ ಬಾಬಾರವರ ಚರಣಗಳಿಗೆ ಪ್ರಣಾಮಗಳನ್ನು ಸಲ್ಲಿಸಿ, ದಾದಾನ ಮನೆಗೆ

ಹೋದಳು. ಪೂರಣ ಪೋಳಿಗಳನ್ನು ತಯಾರಿಸಿ ಎಲ್ಲರಿಗೂ ಬಡಿಸಿ ತಾನೂ ತಿಂದಳು. ॥147॥ ಇದೊಂದು ಬಹು ಸುಂದರವಾದ ಕಥೆ. ಅದರ ಅಂತರ್ಗತವಾದ ಅರ್ಥವೂ ಅಷ್ಟೇ ಅಗಾಧ ಪ್ರಾಜ್ಞೆಯುಳ್ಳದ್ದು. ಈ ರೀತಿ ಗುರುವಿನ ವಚನಗಳಲ್ಲಿ ಸ್ಥಿರವಾದ ಶ್ರದ್ಧೆ ಇಟ್ಟರೆ ಉದ್ಧಾರವಾಗುವುದರಲ್ಲಿ ಯಾವುದೇ ವಿಳಂಬ ಇರುವುದಿಲ್ಲ. ॥148॥ ಮತ್ತೆ ಇನ್ನೊಂದು ಕಥೆ – ಸಾಯಿ ಸಮರ್ಥರೇ ತಮ್ಮ ಭಕ್ತರಿಗೆ ಪ್ರೇಮದಿಂದ ಹೇಳಿದುದು ಈಗ ನೆನಪಿಗೆ ಬಂದಿತು. ಶ್ರೋತೃಗಳು ಆದರ ಪೂರ್ವಕವಾಗಿ ಕೇಳಿರಿ. ॥149॥ ಪರಮಾರ್ಥಸಾಧನೆಯಲ್ಲಿ ಮುಂದುವರಿಯಲು ಇಚ್ಛಿಸುವವನು ಕಷ್ಟಪಟ್ಟು ಕೆಲಸ ಮಾಡಬೇಕು. ನಿತ್ಯವೂ ದೃಢವಾದ ಅಭ್ಯಾಸ ಮಾಡಬೇಕು. ಸಾಹಸಿಯು ಧೈರ್ಯಶಾಲಿಯೂ ಆಗಿರಬೇಕು. ॥150॥ ಹಾಗೆ ಸತ್ ಕಥಾಮೃತವನ್ನು ಚರಣತೀರ್ಥದ ಹಾಗೆ ನಿತ್ಯ ಕಲ್ಯಾಣಾರ್ಥವಾಗಿ ಸೇವಿಸಬೇಕು. ಸಂತರ ಚರಣಗಳಲ್ಲಿ ವಿನೀತನಾಗಿರುವುದು ಅಂತರಂಗದ ಪರಿಶುದ್ಧತೆಯನ್ನು ಕೊಡುತ್ತದೆ. ॥151॥ "ಒಮ್ಮೆ ನಾನು ಚಿಕ್ಕವನಾಗಿದ್ದಾಗ, ನನ್ನ ಜೀವಿತಕ್ಕಾಗಿ ಒಂದು ಕೆಲಸ ಪಡೆಯಲು ಇಚ್ಛಿಸಿದೆ. ನಾನು ನನ್ನ ಸ್ವಂತ ಅವಶ್ಯಕತೆಗಳನ್ನು ಮಿತಿಗೊಳಿಸಿಕೊಂಡು ಇಲ್ಲಿಂದ ಹೊರಟೆನು. ॥152॥ "ನಾನು ನಡೆಯುತ್ತ ನಡೆಯುತ್ತ ಬೀಡಗಾಂವ ಹತ್ತಿರ ಬಂದೆನು. ಅಲ್ಲಿ ನಾನು ವಿಶ್ರಮಿಸಿದೆ. ಫಕೀರ(ದೇವರು)ನು ನನಗಾಗಿ ಬೇರೆ ಯೋಜನೆಗಳನ್ನೇ ಯೋಜಿಸಿದ್ದಾನೆ. ಈ ಜೀವಕ್ಕೆ ಆನಂದವಾಯಿತು. ॥153॥ "ಅಲ್ಲಿ ನಾನು ಒಂದು ಜರಿಯ ಕೆಲಸವನ್ನು ನೋಡಿದೆ. ನಾನೂ ಸಹ ಅವಿಶ್ರಾಂತವಾಗಿ ಕೆಲಸ ಮಾಡಿದೆ ಮತ್ತು ನನ್ನ ಪರಿಶ್ರಮವು ಫಲ ನೀಡಿತು. ಫಕೀರನ ಪರಾಕ್ರಮವನ್ನು ನೋಡಿ! ॥154॥ "ನನಗಿಂತ ಮುಂಚೆ ಉದ್ಯೋಗಕ್ಕೆ ಸೇರಿದವರು ಬಹಳ ಹುಷಾರಾಗಿದ್ದರು ಮತ್ತು ಕುಶಲಿಗಳೂ ಆಗಿದ್ದರು. ನಾವು ನಾಲ್ಕು ಜನರೂ ಅಲ್ಲಿ ಕೆಲಸಮಾಡಿದೆವು. ಮಾಡುವ ಕೆಲಸಕ್ಕೆ ಅನುಗುಣವಾಗಿ ನಮ್ಮ ಕೂಲಿಯನ್ನು ನಿಗದಿ ಪಡಿಸುತ್ತಿದ್ದರು. ॥155॥ "ಒಬ್ಬನು ಐವತ್ತು ರೂಪಾಯಿಗಳ ಬೆಲೆಯಷ್ಟು ಕೆಲಸ ಮಾಡಿದ್ದನು. ಎರಡನೆಯವನು ನೂರು ರೂಪಾಯಿಗಳಬೆಲೆಯ ಕೆಲಸ, ಮೂರನೆಯವನು ನೂರೈವತ್ತು ರೂಪಾಯಿಗಳ ಬೆಲೆಯ ಕೆಲಸ, ಮತ್ತು ನನ್ನದು ಈ ಮೂವರದ್ದನ್ನೂ ಸೇರಿಸಿದಲ್ಲಿ ಅದರ ಎರಡರಷ್ಟು ಕೆಲಸ ಮಾಡಿದ್ದೆನು. ॥156॥ "ಮಾಲೀಕನು ಬಹಳ ಸಂತಸಪಟ್ಟನು. ನನ್ನ ಕೆಲಸ ಮತ್ತು ಕುಶಲತೆಯನ್ನು ಮೆಚ್ಚಿದ್ದನು. ಅವನು ನನ್ನನ್ನು ಬಹಳ ಗೌರವಿಸಿದನು ಮತ್ತು ಬಹಳ ಪ್ರೇಮದಿಂದ ನೋಡಿಕೊಂಡನು. ॥157॥ "ಅವನು ನನಗೆ ಒಂದು ಪೂರ್ಣ ಪೋಷಾಕನ್ನು ಅಂದರೆ ತಲೆಗೆ ಒಂದು ರುಮಾಲು ಮತ್ತು ದೇಹಕ್ಕೆ ಒಂದು ಭವ್ಯವಾದ ಅಂಗಿಯನ್ನು ಕೊಟ್ಟನು. ಆದರೆ ನಾನು ಅದನ್ನು ಉಪಯೋಗಿಸದೆಯೇ ಕಟ್ಟಿಟ್ಟುಬಿಟ್ಟೆ. ॥58॥ "ಯಾರು ತಾನೇ ಮತ್ತೊಬ್ಬರಿಗೆ ಸಾಕಾಗುವಷ್ಟು ಕೊಡಬಲ್ಲರು? ಎಷ್ಟೇ ಕೊಟ್ಟರೂ ಅದು ಯಾವಾಗಲೂ ಸಾಕಾಗುವುದಿಲ್ಲ. ಆದರೆ ಯಾವಾಗ ನನ್ನ ಸರ್ಕಾರ್ (ದೇವರು) ಕೊಡಲು ಪ್ರಾರಂಭಿಸಿದರೆ ಅದು ಕಲ್ಪದ (ಸಮಯ) ಅಂತ್ಯದವರೆಗೂ ಬರುತ್ತದೆ. ॥159॥ "ನಿಜವಾಗಿಯೂ ಕೊಡುವವನು ಅವನೊಬ್ಬನೇ ಒಡೆಯನು

ದೇವರು. ಇತರರು ಯಾರನ್ನಾದರೂ ಅವನ ಜೊತೆ ಹೋಲಿಸಲು ಸಾಧ್ಯವೇ? ಯಾವ ರೀತಿ ಅಂತವು ಅನಂತದ ಭೂಷಣವಾಗಲು ಸಾಧ್ಯ? ॥160॥ "ನನ್ನ ಸರ್ಕಾರ್ ಹೇಳುತ್ತಾರೆ, "ತೆಗೆದುಕೋ, ತೆಗೆದುಕೋ" ಎಂದು. ಆದರೆ ಎಲ್ಲರೂ ನನ್ನ ಹತ್ತಿರ ಬಂದ ಕೇಳುತ್ತಾರೆ, "ಕೊಡು, ಕೊಡು" ಎಂದು. ನಾನು ಹೇಳುವುದನ್ನು ಯಾರೂ ಎಚ್ಚರಿಕೆಯಿಂದ ಅರ್ಥಮಾಡಿಕೊಳ್ಳುವುದಿಲ್ಲ. ಯಾರೂ ಅದಕ್ಕೆ ಪ್ರಾಮುಖ್ಯತೆ ಕೊಡುವುದಿಲ್ಲ. ॥161॥ "ನನ್ನ ಸರ್ಕಾರ್‌ನ ಖಜಾನೆಯೂ ಉಕ್ಕುತ್ತಿದೆ. ಗಾಡಿ ತುಂಬಿಸಿಕೊಂಡು ಹೋಗಲು ಯಾರೂ ಬರುವುದಿಲ್ಲ. ನಾನು 'ಅಗೆ' ಎಂದು ಹೇಳಿದರೆ ಯಾರೂ ಆ ರೀತಿ ಮಾಡುವುದಿಲ್ಲ. ಯಾರೂ ಪ್ರಯತ್ನಪಡಲು ಇಷ್ಟಪಡುವುದಿಲ್ಲ. ॥162॥ "ನಾನು ಹೇಳುತ್ತೇನೆ, ಈ ಆಸ್ತಿಯನ್ನು ಅಗೆ ಮತ್ತು ಗಾಡಿ ತುಂಬ ಅದನ್ನು ಅಪಹರಿಸು. ನಿಜವಾದ ತಾಯಿಯಿಂದ ಅನುಗ್ರಹೀತನಾದ ಮಗನು ತನ್ನ ಉಗ್ರಾಣವನ್ನು ಈ ಆಸ್ತಿಯಿಂದತುಂಬಿಸಿಕೊಳ್ಳಬೇಕು. ॥163॥ "ಒಬ್ಬ ಜೀವಿಯ ಗತಿಯೇನು? ಧೂಳಿಯು (ದೇಹ) ಧೂಳಿಗೆ ಸೇರಿಕೊಳ್ಳುತ್ತದೆ. ಮತ್ತು ಗಾಳಿ (ಉಸಿರು) ಗಾಳಿಯಲ್ಲಿ ಸೇರಿಕೊಳ್ಳುತ್ತದೆ. ಈ ಸಮಯ ಮತ್ತೆ ಎಂದಿಗೂ ಪುನಃ ಬರುವುದಿಲ್ಲ. ॥164॥ "ಸಾಕು, ನನ್ನ ಫಕೀರನ ಕುಶಲತೆಯು, ನನ್ನ ಭಗವಂತನ ಲೀಲೆಯು, ನನ್ನ ಸರ್ಕಾರ್‌ನ ಯೋಗ್ಯತೆ, ಇವೆಲ್ಲವೂ ಅತಿ ವಿಶೇಷವಾಗಿವೆ. ॥165॥ "ನಾನು ಎಲ್ಲಾದರೂ ಹೋಗುತ್ತೇನೆ. ಮತ್ತು ಎಲ್ಲಾದರೂ ಕುಳಿತುಕೊಳ್ಳುತ್ತೇನೆ. ಆದರೆ ಈ ಜೀವವು ಗಲಿಬಿಲಿಗೊಂಡಿದೆ. ಮತ್ತು 'ಮಾಯೆ'ಯಿಂದಾಗಿ ದಿಗ್ಭ್ರಮೆಹೊಂದಿದೆ. ಇದು 'ಮಾಯೆ'ಯ ಪಾಶದಿಂದಾಗಿ ಕಷ್ಟಅನುಭವಿಸುತ್ತಿದೆ. ॥166॥ "ಮಾಯೆಯು ಅತಿ ಕಠೋರವಾದುದು. ಅದು ನನ್ನನ್ನು ಹತಾಶಭಾವನೆಗೆ ನೂಕಿದೆ. ನಾನು ನನ್ನ ಜನರಿಗಾಗಿ ಹಗಲು ರಾತ್ರಿ ಚಿಂತಿಸುತ್ತಿದ್ದೇನೆ. ॥167॥ "ಯಾರು ಏನೇನು ಮಾಡುತ್ತಾರೋ ಅದನ್ನೇ ಅನುಭವಿಸುತ್ತಾರೆ." ಯಾರು ನನ್ನ ಈ ಮಾತುಗಳನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುತ್ತಾನೋ ಅವನು ಅಮೂಲ್ಯವಾದ ಸಂತಸವನ್ನು ಪಡೆಯುತ್ತಾನೆ. ॥168॥ ಹೇಮಾಡನು ಸಾಯಿಗೆ ಶರಣಾಗುತ್ತಾನೆ. ಈ ಕಥೆಯ ನಿರೂಪಣೆಯು ಅಪೂರ್ವ. ಯಾವಾಗ ಸಾಯಿಯು ತಾವೇ ಕೆಲಸ ಮಾಡುತ್ತಾರೋ ಆಗ ನನ್ನ ಅಹಂಕಾರವು ನಾಶವಾಗುತ್ತದೆ. ॥169॥ ಸಾಯಿಯು ತಾವೇ ಈ ಕಥೆಯನ್ನು ನಿರೂಪಿಸುತ್ತಾರೆ. ಅವರೇ ವಾಚಕರು ಅವರೇ ಕೇಳುವವರು. ಅವರೇ ಲೇಖಕರು ಮತ್ತು ಅವರೇ ಬರೆಸುವವರು. ಅವರೇ ಅದನ್ನು ಸರಳವಾಗಿ ತಿಳಿಯಬಹುದಾಗಿ ಮಾಡುವವರು. ॥170॥ ಈ ಕಥೆಯಲ್ಲಿ ಸಾಯಿಯೇ ಸ್ವಯಂ ನಟರು. ಅವರೇ ಆ ಕಥೆಯಲ್ಲಿರುವ ಸಿಹಿಯು. ಅವರೇ ಅದನ್ನು ಕೇಳುವವರು ಮತ್ತು ನಿರೂಪಕರೂ ಹೌದು. ಮತ್ತು ಅದರ ಸ್ವಾನಂದವನ್ನು ಅನುಭವಿಸುವವರೂ ಅವರೇ ಆಗಿದ್ದಾರೆ. ॥171॥ ಹಾಗಿರುವಾಗ, ಈ ಕಥೆಯನ್ನು ಕೇಳುವ ಸಂತೋಷ ಹಾಗೂ ವಿಶೇಷ ಭಾಗ್ಯವು ಪರಮಾರ್ಥವನ್ನು ಪಡೆಯಲು ಸಹಾಯಮಾಡುವುದಿಲ್ಲವೇ? ಇದನ್ನು ಶ್ಲಾಘಿಸುವವರು ಮತ್ತು ಆನಂದವನ್ನು ಅನುಭವಿಸುವ ಭಕ್ತರು ಭಾಗ್ಯವಂತರು. ॥172॥ ಈಗ ಸಾರಾಂಶದಲ್ಲಿ, ಮುಂದಿನ ಅಧ್ಯಾಯವು ಸಾಯಿಯ ಉದಿ(ವಿಭೂತಿ)ಯ

ಅಪಾರವಾದ ಮಹಿಮೆಯನ್ನು ತಿಳಿಸುತ್ತದೆ. ಪುಣ್ಯವಂತರಾದ ಶ್ರೋತೃಗಳೇ, ನಾನು ಮನಃಪೂರ್ವಕವಾಗಿ ನಿಮ್ಮಲ್ಲಿ ಬೇಡಿಕೊಳ್ಳುತ್ತೇನೆ. ನೀವು ಇದನ್ನು ಆದರಪೂರ್ವಕವಾಗಿ ಕೇಳಿರಿ. ||173|| ಹೇಮಾಡ ಅತ್ಯಂತ ವಿನೀತನಾಗಿ ಹೇಳುತ್ತಾನೆ, ಸಾಯಿ ಸಮರ್ಥರು ನನ್ನಮೇಲೆ ಕೃಪೆತೋರಿದ್ದಾರೆ ಮತ್ತು ಅವರ ಸತ್ ಚರಿತ್ರೆಯನ್ನು ನಾನು ನಿರೂಪಿಸುವಂತೆ ಮಾಡಿದ್ದಾರೆ. ಇದರ ಕಥೆಗಳು ಅತ್ಯಂತ ರಸಭರಿತವಾಗಿಯೂ ಅಪೂರ್ವವಾಗಿಯೂ ಇವೆ. ||174||

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಗುರುವಿನ ಮಹತ್ವದ ನಿರೂಪಣೆ" ಎಂಬ ಮೂವತ್ತೆರಡನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

|ಸನ್ಮಂಗಳವಾಗಲಿ|

ಟಿಪ್ಪಣಿ:

1. ಉಪ್ಪು ಮತ್ತು ಧಾನ್ಯಗಳು ಇತ್ಯಾದಿಗಳನ್ನು ಒಂದು ಎತ್ತಿನ ಬೆನ್ನಿನ ಮೇಲೆ ಹೊತ್ತುಕೊಂಡು ಹೋಗುವ ವ್ಯಾಪಾರಿ. ಅವನಿಗೆ ಕಾಡಿನ ದಾರಿಗಳು ತಿಳಿದಿರುತ್ತವೆ. ಮತ್ತು ಲಮಣಿ ಜಾತಿಗೆ ಸೇರಿದವರು.
2. ಈ ಚರಿತ್ರೆಯನ್ನು ಅಕ್ಷರಶಃ ತೆಗೆದುಕೊಳ್ಳಬಾರದು. ಇದು ಕೇವಲ ಗೂಢಾರ್ಥವುಳ್ಳದ್ದು.
3. ಅಲ್ಲಾಡುತ್ತಿರುವ ವಸ್ತುವಿನ ಶಬ್ದವನ್ನು ಅಣಕಿಸುವವರು.
4. ಯಾರು ಏಳು ತಂತಿಗಳ ವಾದ್ಯವನ್ನು ನುಡಿಸುತ್ತ ಮತ್ತು ನಿರಂತರ ನೀಚಜಾತಿಗೆ ಅದೃಷ್ಟದ ಭವಿಷ್ಯ ನುಡಿಯುವವರು.
5. ಹಗ್ಗದ ಮೇಲೆ ನೃತ್ಯ ಮಾಡುವವರು.
6. ದಾದಾ ಕೇಳ್ಕರ.
7. ಈ ರೀತಿಯ ಪೋಷಾಕನ್ನು ಅವರ ನಡತೆ ಮೆಚ್ಚಿಕೊಡುತ್ತಿದ್ದರು. ಅದೂ ಒಂದು ಗೌರವವೇ.



# ಅಧ್ಯಾಯ - 33

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಉದಿಯ ಶಕ್ತಿ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸಂತರಿಗೂ ಸಜ್ಜನರಿಗೂ ನಮಸ್ಕಾರ ಮಾಡುತ್ತೇನೆ. ಅವರ ಕರುಣಾಪೂರಿತ ದೃಷ್ಟಿಯು ಕೂಡಲೇ ಪಾಪಗಳ ಪರ್ವತವನ್ನೇ ಸುಡುತ್ತದೆ ಮತ್ತು ಕಲಿಯುಗದ ಕಲ್ಮಶಗಳನ್ನೆಲ್ಲ ತೊಳೆದುಹಾಕುತ್ತದೆ. ॥1॥ ಅವರ ಉಪಕಾರಗಳ ರಾಶಿಯನ್ನು ಈ ಜನ್ಮದಲ್ಲಾಗಲೀ ಜನ್ಮಾಂತರಗಳಲ್ಲಾಗಲಿ ಹಿಂತಿರುಗಿಸಲು ಸಾಧ್ಯವಾಗುವುದಿಲ್ಲ. ಅವರ ಸಹಜವಾದ ಮಾತುಗಳೂ ಹಿತೋಪದೇಶವಾಗಿರುತ್ತವೆ. ಅವುಗಳು ಪರಮ ಶ್ರೇಷ್ಠವಾದ ಅವಿನಾಶಿಯಾದ ಸುಖವನ್ನು ಕೊಡುತ್ತವೆ. ॥2॥ ಅವರ ಮನಸ್ಸು 'ಇದು ನಮ್ಮದು, ಇದು ನಿಮ್ಮದು' ಎಂಬ ಯಾವುದೇ ಭೇದಭಾವವನ್ನು ಇಟ್ಟುಕೊಂಡಿರಲಿಲ್ಲ. ಅಂತಹ ಭೇದಭಾವ ತುಂಬಿದ ಸಂಸ್ಕೃತಿಯು ಅವರ ಮನಸ್ಸಿನಲ್ಲಿ ಎಂದಿಗೂ ಹುಟ್ಟುತ್ತಿರಲಿಲ್ಲ. ॥3॥ ಹಿಂದಿನ ಅಧ್ಯಾಯದಲ್ಲಿ, ಗುರುವಿನ ಮಹತ್ವವನ್ನು ಸ್ವಲ್ಪಮಟ್ಟಿಗೆ ವಿವರಿಸಲಾಯಿತು. ಈಗ ಈ ಅಧ್ಯಾಯದಲ್ಲಿ ಶ್ರೋತೃಗಳು 'ಉದಿ'ಯ ಮಹಿಮೆಯನ್ನು ಕೇಳಿರಿ. ॥4॥ ಬಾಬಾರವರು ಮತ್ತೆ ಮತ್ತೆ ದಕ್ಷಿಣೆಯನ್ನು ಕೇಳಿ ಪಡೆಯುತ್ತಿದ್ದರು. ಅದರಿಂದ ಅವರು ದೀನರಿಗೆ ದುರ್ಬಲರಿಗೆ ದಾನ ಮಾಡುತ್ತಿದ್ದರು. ಉಳಿದ ಹಣದಿಂದ ತುಂಬಾ ಕಟ್ಟಿಗೆಗಳನ್ನು ಖರೀದಿಸಿ ರಾಶಿಹಾಕಿ ಇಡುತ್ತಿದ್ದರು. ॥5॥ ಅವರು ಒಣಗಿದ ಕಟ್ಟಿಗೆಯನ್ನು ತಾವು ಹೊತ್ತಿಸಿದ್ದ ಧುನಿಗೆ ಆಹುತಿಯಾಗಿ ನೀಡುತ್ತಿದ್ದರು.

ಉರಿದ ಕಟ್ಟಿಗೆಯಿಂದ ಸಾಕಷ್ಟು ಬೂದಿಯು ಬರುತ್ತಿತ್ತು. ಅದೇ ಪವಿತ್ರವಾದ 'ಉದಿ'. ಅದನ್ನು ಅವರು ಭಕ್ತರಿಗೆ ಹಂಚುತ್ತಿದ್ದರು. ॥6॥ ಶಿರಡಿ ಗ್ರಾಮದಿಂದ ಹೊರಡುವಾಗ, ಬಾಬಾರವರಿಂದ ರಜೆಯನ್ನು ಪಡೆಯುವಾಗ ಉದಿಯನ್ನು ಕೊಡುವುದು ಪರಿಪಾಠವಾಗಿತ್ತು. ಇದು ಎಲ್ಲ ಭಕ್ತರಿಗೂ ತಿಳಿದ ವಿಷಯವೇ ಆಗಿತ್ತು. ॥7॥ ಅಂದಹಾಗೆ, ಬಾಬಾರವರು ಉದಿಯನ್ನು ತೆಗೆದುಕೊಂಡು ಬರಲು ಹೇಳಿದಾಗ, ನಿಜವಾಗಿಯೂ ಹೋಗಲು ಅನುಮತಿಯನ್ನು ನೀಡಿದಂತಾಗುತ್ತಿತ್ತು ಮತ್ತು ಅವರು ತಮ್ಮ ಮನೆಗೆ ಹಿಂತಿರುಗಲು ಸಂತಸಪಡುತ್ತಿದ್ದರು. ॥8॥ ಮತ್ತೆಯೂ, ಯಾರಾದರೂ ಶಿರಡಿಯಲ್ಲಿ ವಾಸ್ತವ್ಯ ಹೂಡಿದ್ದರೆ, ಬಾಬಾರವರು ಬೆಳಗ್ಗೆ ಮಧ್ಯಾಹ್ನ ಅಥವಾ ಸಂಜೆಯ ವೇಳೆಯಲ್ಲಿ ಯಾರಿಗೂ ಉದಿಯನ್ನು ಕೊಡುತ್ತಿರಲಿಲ್ಲ. ಅವರನ್ನು ಖಾಲಿ ಹಸ್ತದಲ್ಲಿ ಕಳುಹಿಸುತ್ತಿದ್ದರು. ॥9॥ ಇದು ನಿತ್ಯದ ಕ್ರಮವಾಗಿತ್ತು. ಆದರೆ ಉದಿಗೋಸ್ಕರ ಧುನಿಯನ್ನು ಮಸೀದಿಯಲ್ಲಿ ಅವಿಶ್ರಾಂತವಾಗಿ ಉರಿಸುತ್ತಿದ್ದುದರ ಪ್ರಾಮುಖ್ಯತೆ ಏನು? ಇದನ್ನು ನಿತ್ಯವೂ ಏತಕ್ಕಾಗಿ ಮಾಡಲಾಗುತ್ತಿತ್ತು? ॥10॥ ವಿಭೂತಿಯನ್ನು ಕೊಡುವಾಗ ಬಾಬಾರವರ ಮನೋಗತವು ಏನಿರುತ್ತಿತ್ತು? "ಈ ವಿಶ್ವದಲ್ಲಿ ಕಣ್ಣಿಗೆ ಕಾಣಿಸುವ ಎಲ್ಲ ದೃಶ್ಯಗಳೂ ಬೂದಿಯಷ್ಟೇ ಅಶಾಶ್ವತ. ಇದನ್ನು ನಿಶ್ಚಿತವಾಗಿಯೂ ಮನಸ್ಸಿನಲ್ಲಿ ಇಟ್ಟುಕೊಳ್ಳಿ. ॥11॥ "ಈ ದೇಹವು, ಒಣ ಕಟ್ಟಿಗೆಯಂತೆ ಪಂಚ ಭೂತಗಳಿಂದಾಗಿದೆ ಮತ್ತು ಜೀವಿತವನ್ನು ಅನುಭೋಗಿಸುತ್ತದೆ. ಜೀವಿತದ ಕಾಲವು ಮುಗಿದುಹೋದ ಮೇಲೆ, ಅದು ಸತ್ತು ಬೀಳುತ್ತದೆ ಮತ್ತು ನಿಜವಾಗಿಯೂ ಭಸ್ಮವಾಗುತ್ತದೆ. ॥12॥ "ನೀನು ಮತ್ತು ನಾನು ಒಂದೇ ಸ್ಥಿತಿಯನ್ನು ಅನುಭವಿಸುತ್ತೇವೆ. ಇದನ್ನು ನೀನು ನೆನಪಿನಲ್ಲಿಟ್ಟುಕೊಂಡಿರಬೇಕು ಮತ್ತು ಹಗಲು ರಾತ್ರಿ ಇದರ ಬಗ್ಗೆ ಜಾಗೃತವಾಗಿರಬೇಕು. ಅದಕ್ಕಾಗಿಯೇ ನಾನು ವಿಭೂತಿಯನ್ನು ಕೊಡುತ್ತೇನೆ. ॥13॥ "ಅಖಿಲ ವಿಶ್ವವೂ ಮಾಯೆಯಿಂದ ವಿಜೃಂಭಿಸಿದೆ. ಕೇವಲ ಬ್ರಹ್ಮ ಮಾತ್ರ ಸತ್ಯ ಈ ಬ್ರಹ್ಮಾಂಡವೆಲ್ಲವೂ ಅಸತ್ಯ. ಇದನ್ನೇ ಉದಿಯು ಬೋಧಿಸುತ್ತದೆ ಎಂಬುದನ್ನು ಮನಸ್ಸಿನಲ್ಲಿಯೇ ನಿಶ್ಚಯಿಸಿಕೊಂಡಿರಿ. ॥14॥ "ಈ ಪ್ರಪಂಚದಲ್ಲಿ ಯಾರು ಯಾರಿಗೂ ಸೇರಿದವರಲ್ಲ. ಅವರು ಪತ್ನಿ, ಪುತ್ರ, ಚಿಕ್ಕಪ್ಪ ಅಥವಾ ಸೋದರಳಿಯ ಆಗಿರಬಹುದು. ಬೆತ್ತಲಾಗಿ ಇಲ್ಲಿಗೆ ಬಂದೆ, ಬೆತ್ತಲಾಗಿಯೇ ಹಿಂತಿರುಗುವೆ. ಉದಿಯು ಇದರ ಸ್ಮಾರಕವು. ॥15॥ "ಈ ಉದಿಯನ್ನು ದೇಹಕ್ಕೆಲ್ಲ ಹಚ್ಚಿಕೊಂಡರೆ, ಆಗ ಭೌತಿಕ ಮತ್ತು ಮಾನಸಿಕ ದುಃಖಗಳು ದೂರವಾಗುತ್ತವೆ." ಆದರೆ ಉದಿಯ ನಿಜವಾದ ತತ್ತ್ವಾರ್ಥವು ಗಹನವಾಗಿಯೂ, ವಿವೇಕಪೂರ್ಣ ವೈರಾಗ್ಯದ ಸಂಕೇತವೂ ಆಗಿದೆ. ॥16॥ ಎಷ್ಟು ಸಾಧ್ಯವಾಗುವುದೋ ಅಷ್ಟು ದಕ್ಷಿಣೆ ನೀಡುವುದು. ವೈರಾಗ್ಯದ ಲಕ್ಷಣ ಪ್ರವೃತ್ತಿಯನ್ನು ಉಂಟುಮಾಡುತ್ತದೆ. ಆದರೆ ಅನಂತರ ವೈರಾಗ್ಯಲಕ್ಷಣವೇನೆಂಬುದನ್ನು ಕ್ರಮೇಣ ಅರಿಯಲು ಸಹಾಯ ಮಾಡುತ್ತದೆ. ॥17॥ ಒಬ್ಬನಿಗೆ ವೈರಾಗ್ಯ ಬಂದರೂ ಸಹ, ಸ್ವಲ್ಪವೂ ವಿವೇಕವಿರುವುದಿಲ್ಲ. ಅದು ವ್ಯರ್ಥ. ಆದ್ದರಿಂದ ವಿಭೂತಿಯನ್ನು ಗೌರವಿಸಿ. (ಉದಿಯು ವಿವೇಕಪೂರ್ಣ ವೈರಾಗ್ಯದ ಸಂಕೇತ. ಶ್ಲೋಕ –16) ॥18॥ ವಿವೇಕ ಮತ್ತು ವೈರಾಗ್ಯಗಳೆರಡನ್ನೂ ಒಟ್ಟಿಗೆ ತರಲು ಉದಿ

ಮತ್ತು ದಕ್ಷಿಣೆ ಇವುಗಳನ್ನು ಪರಸ್ಪರ ಜೋಡಿಸಲಾಗಿದೆ. ಇವೆರಡೂ ಇಲ್ಲದಿದ್ದರೆ, ಒಂದೇ ಸಮಯದಲ್ಲಿ, ನಮ್ಮ ಅಸ್ತಿತ್ವದ ನದಿಯನ್ನು ದಾಟಲು ಬಹಳ ಕಷ್ಟ. ॥19॥ ಚಿಕ್ಕವರು, ದೊಡ್ಡವರು ಎಲ್ಲರೂ ದರ್ಶನಕ್ಕಾಗಿ ಬಂದರು. ಮತ್ತು ಬಾಬಾರವರ ಚರಣಗಳಲ್ಲಿ ವಿನೀತರಾಗಿ ನಿಂತರು. ಅವರು ಯಾವಾಗ ಹಿಂತಿರುಗುತ್ತಿದ್ದರೋ ಆಗ ಬಾಬಾರವರು ಅವರಿಗೆ ವಿಭೂತಿ ಕೊಡುತ್ತಿದ್ದರು. ॥20॥ ಮಸೀದಿಯಲ್ಲಿ ನಿತ್ಯಧುನಿಯನ್ನು ಉರಿಸಲಾಗುತ್ತಿತ್ತು. ಅದು ಹಗಲು ರಾತ್ರಿ, ವರ್ಷಪೂರ್ತಿ ಪ್ರದೀಪ್ತವಾಗಿರುತ್ತಿತ್ತು. ಬಾಬಾರವರು ಭಕ್ತರು ತಮ್ಮ ಊರಿಗೆ ಹಿಂತಿರುಗುವಾಗ ಕೈತುಂಬ ಉದಿಯನ್ನು ಕೊಟ್ಟು ಕಳುಹಿಸುತ್ತಿದ್ದರು. ॥21॥ ಅವರು ಭಸ್ಮವನ್ನು ಪ್ರಸಾದವಾಗಿ ಕೊಡುತ್ತಿದ್ದರು. ತಮ್ಮ ಹೆಬ್ಬೆಟ್ಟಿನಿಂದ ಅವರ ಹಣೆಯ ಮೇಲೆ ಇಟ್ಟು, ಜೊತೆಗೆ ತಮ್ಮ ಕೈಯನ್ನು ತಲೆಯ ಮೇಲಿಟ್ಟು ತಮ್ಮ ಭಕ್ತರ ಕಲ್ಯಾಣವನ್ನು ಇಚ್ಛಿಸುತ್ತಿದ್ದರು. ॥22॥ ಭಸ್ಮ, ವಿಭೂತಿ, ಮತ್ತು ಉದಿ ಈ ಮೂರು ಪದಗಳೂ, ಒಂದೇ ಅರ್ಥವನ್ನು ನೀಡುತ್ತವೆ. ಬಾಬಾರವರು ಈ ಪ್ರಸಾದವನ್ನೇ ಯಥೇಚ್ಛವಾಗಿ ಹಂಚುತ್ತಿದ್ದರು. ॥23॥ ಈ ಸಂಸಾರವೇ ಉದಿಯ ಸಮಾನವಾಗಿದೆ. ಇದೇ ಉದಿಯ ನಿಜವಾದ ಮಹಿಮೆ. ಇದನ್ನು ಒಂದು ದಿನ ನೀನು ಅರ್ಥಮಾಡಿಕೊಳ್ಳುವೆ. ಇದನ್ನು ಮನಸ್ಸಿನಲ್ಲೇ ಇಟ್ಟುಕೋ. ॥24॥ ಕಮಲದ ದಳಗಳ ಮೇಲಿನ ನೀರಿನ ಕಣಗಳಂತೆ ನಶ್ವರವಾದ ಈ ದೇಹವು ಪತನವಾಗುತ್ತದೆ. ಆದ್ದರಿಂದ ಎಲ್ಲ ಅಭಿಮಾನವನ್ನೂ ತ್ಯಜಿಸು. ಉದಿಯ ಪ್ರದಾನವು ಇದನ್ನೇ ತೋರಿಸಿತು. ॥25॥ ಸಕಲ ವಿಶ್ವದ ಪ್ರಸಾರವೇ ಭಸ್ಮದಿಂದ ಬರೆದ ಒಂದು ರಂಗೋಲಿ. ಜಗತ್ತು ಮಿಥ್ಯ ಎಂಬ ತತ್ವದ ವಿಚಾರ ಮತ್ತು ಉದಿಯಲ್ಲಿಯೇ ನಿಜವಾದ ಸತ್ಯತ್ವದ ಪ್ರತೀತಿಯು ಇದೆ ಎಂಬುದನ್ನು ಯೋಚಿಸು. ॥26॥ ಉದಿಯು ಕೇವಲ ಧೂಳಿಯು. ನಾಮ ಮತ್ತು ರೂಪಗಳ ಅಂತಿಮ ಗತಿಯು. ಈ ಜಗತ್ತಿನಲ್ಲಿ ಕಾಣಬರುವ ಬದಲಾವಣೆಗಳೆಲ್ಲವೂ ಕೇವಲ ಹೆಸರಿಗಷ್ಟೆ. ಇದನ್ನೇ ಬದಲಾಗದ ಗುಣಗಳ ಉದಿಯಿಂದ ಅರಿಯಬಹುದು. ॥27॥ ಬಾಬಾರವರೇ ಸ್ವತಃ ಪ್ರೇಮಭಾವದಲ್ಲಿದ್ದಾಗ ಹಾಡುತ್ತಿದ್ದರು. ಶ್ರೋತೃಗಳು ಅವರ ಒಂದು ಹಾಡಿನ ಗಮನ ಸೆಳೆಯುವಂತಹ ತುಣುಕನ್ನು ಕೇಳಬೇಕು. ॥28॥ "ಓ, ಎಲ್ಲರನ್ನೂ ರಮಿಸುವಂತಹ ರಾಮ ಬಂದಿದ್ದಾನೆ. ಗೋಣಿಚೀಲದ ತುಂಬ ಉದಿಯನ್ನು ತಂದಿದ್ದಾನೆ" – ಈ ಎರಡು ಸಾಲುಗಳನ್ನು ಅವರು ಹಾಡುತ್ತಿದ್ದರು. ಅವರು ಯಾವಾಗಲಾದರೂ ಮನಸ್ಸಿನಲ್ಲಿ ಆನಂದಲಹರಿಗಳು ಏಳುತ್ತಿರುವಾಗ ಮತ್ತು ಅತ್ಯಂತ ಹರ್ಷಿತರಾಗಿದ್ದಾಗ ಈ ಎರಡು ಸಾಲುಗಳನ್ನು ಸುಸ್ವರದಲ್ಲಿ ಮತ್ತೆ ಮತ್ತೆ ಹಾಡುತ್ತಿದ್ದರು. ॥29॥ ಸಾರಾಂಶದಲ್ಲಿ, ಈ ಧುನಿಯು ಅದೆಷ್ಟು ಚೀಲಗಳ ಉದಿಯನ್ನು ಉತ್ಪತ್ತಿ ಮಾಡಿದೆ? ಯಾರೂ ಅವುಗಳನ್ನು ಎಣಿಸಲು ಸಾಧ್ಯವಿಲ್ಲ. ಈ ಉದಿಯು ಪರಮಕಲ್ಯಾಣಕರವಾದುದು. ॥30॥ ಈ ಉದಿಯನ್ನು ಅನುಗ್ರಹಿಸುವುದರ ಗಹನವಾದ ಅರ್ಥವನ್ನು ಕೇಳಿದ ಮೇಲೆ ಮತ್ತು ಅದರ ಪರಮಾರ್ಥ ಮತ್ತು ಭಾವಾರ್ಥವನ್ನು ತಿಳಿದನಂತರ ಶ್ರೋತೃಗಳು ಸಂಸಾರದ ಯೋಗಕ್ಷೇಮದ ಮೇಲೆ ಉಂಟಾಗುವ ಅದರ ಪರಿಣಾಮವನ್ನು ತಿಳಿಯಲು ಇಚ್ಛಿಸುತ್ತಾರೆ. ॥31॥ ಉದಿಗೆ

ಈ ಗುಣವೂ ಇದೆ. ಇಲ್ಲದಿದ್ದಲ್ಲಿ ಅದರ ಪ್ರಾಮುಖ್ಯತೆ ಹೇಗೆ ಹೆಚ್ಚುತ್ತದೆ! ಸಾಯಿಯು ಪರಮಾರ್ಥದ ಮಾರ್ಗವನ್ನು ತೋರಿಸುವ ಧುರೀಣರು. ತಮ್ಮ ಸ್ವಾರ್ಥ ಸಾಧನೆಗಾಗಿ ಬರುವ ಭಕ್ತರಿಗೆ ಸಹಾಯ ಮಾಡುತ್ತಲೇ ಅವರನ್ನು ಪರಮಾರ್ಥ ಸಾಧನೆಯ ಮಾರ್ಗದಲ್ಲಿ ಕರೆದೊಯ್ಯುತ್ತಾರೆ. ॥32॥ ಉದಿಯು ಯಾವರೀತಿ ಜನರ ಯೋಗಕ್ಷೇಮಕ್ಕಾಗಿ ಉಪಯುಕ್ತವಾಗುತ್ತದೆ ಎಂಬುದನ್ನು ತಿಳಿಸುವ ಅಸಂಖ್ಯ ಕಥೆಗಳು ಇವೆ. ಆದರೆ ಈ ಗ್ರಂಥದ ಅತಿಯಾದ ಸಂಕಲತೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅವುಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ॥33॥ ಒಮ್ಮೆ ನಾಸಿಕದಲ್ಲಿ ಒಬ್ಬ ಬ್ರಾಹ್ಮಣ, ನಾರಾಯಣ ಮೋತಿರಾಮ ಎಂಬ ಅಡಿಗೆಯವನು ಇದ್ದನು. ಅವನ ಉಪನಾಮವು ಜಾನಿ ಅಂತ. ॥34॥ ಅದೇ ರೀತಿ, ಅಲ್ಲಿ ಬಾಬಾರವರ ಮತ್ತೊಬ್ಬ ಭಕ್ತನು ರಾಮಚಂದ್ರ ವಾಮನ ಮೋಡಕ ಎಂಬುವನಿದ್ದನು. ಈ ನಾರಾಯಣರಾವ್‌ನು ಅವರ ಸೇವೆ ಮಾಡುತ್ತಿದ್ದವನು ಬಾಬಾರವರ ಭಕ್ತನೂ ಆಗಿದ್ದನು. ॥35॥ ಬಾಬಾರವರು ದೇಹದಲ್ಲಿದ್ದಾಗ, ನಾರಾಯಣರಾವ್‌ನು ಶಿರಡಿಗೆ ತಾಯಿಯ ಜೊತೆಯಲ್ಲಿ ಬಾಬಾರವರ ದರ್ಶನಕ್ಕಾಗಿ ಹೋದನು. ॥36॥ ಆ ಸಮಯದಲ್ಲಿ ಬಾಬಾರವರು ಆಕೆಗೆ ಸಲಹೆ ನೀಡಿದರು. ಆಕೆಯ ಮಗನು ಇತರರ ಸೇವೆ ಮಾಡುವುದನ್ನು ನಿಲ್ಲಿಸುವ ಸಮಯ ಬಂದಿತು. “ಈಗ ಅವನ ಸಂಬಂಧ ಕೇವಲ ನನ್ನ ಜೊತೆ ಮಾತ್ರ, ॥37॥ “ಈ ತಾಬೇದಾರಿಯು ಇಷ್ಟು ಸಾಕು. ಸ್ವತಂತ್ರವಾಗಿ ಧಂದೆ ಮಾಡುವುದು ಒಳ್ಳೆಯದು.” ಅನಂತರ ಅಲ್ಪ ಸಮಯದ ನಂತರ ಭಗವಂತನು ಅವನ ಮೇಲೆ ದಯೆತೋರಿದನು. ॥38॥ ನೌಕರಿಯ ಮೇಲಿದ್ದ ಅವನ ಪರಾಧೀನತೆಯು ಅಂತ್ಯಗೊಂಡಿತು. ಮತ್ತು ಅವನ ತನ್ನ ಸ್ವಾತಂತ್ರ್ಯವನ್ನು ಸಂತೋಷವಾಗಿ ಅನುಭವಿಸಲು ಪ್ರಾರಂಭಿಸಿದನು. ಅವನು ಒಂದು ವಸತಿಗೃಹದ ವ್ಯವಸ್ಥೆಯನ್ನು ಸ್ವತಃ ಸ್ಥಾಪಿಸಿದನು. ॥39॥ ಅವನು ಅದನ್ನು ‘ಆನಂದಾಶ್ರಮ’ವೆಂದು ಕೆದನು. ಅದಕ್ಕಾಗಿ ಬಹಳ ಕಷ್ಟಪಟ್ಟನು. ಅದು ರಾತೋರಾತ್ರಿ ಒಳ್ಳೆಯ ಹೆಸರನ್ನು ಪಡೆಯಿತು. ಅದರಿಂದಾಗಿ ಅವನಿಗೆ ತೃಪ್ತಿಯೂ ಉಂಟಾಯಿತು. ॥40॥ ವಿಷಯಗಳು ಯಾವ ರೀತಿ ಬದಲಾದವು ಮತ್ತು ಸಾಯಿಯಲ್ಲಿ ಅವನ ಶ್ರದ್ಧೆಯು ಹೆಚ್ಚಾಯಿತು ಮತ್ತು ಅನಂತರ ದೃಢ ಭಕ್ತಿಗೆ ಬೆಳೆಯಿತುಅದು ಅನುಭವದಿಂದ ನಿರ್ಧರಿಸಲ್ಪಟ್ಟಿತು. ॥41॥ ಸಾಯಿಯ ವಾಣಿಯ ಸತ್ಯತೆಯ ಅನುಭವುಂಟಾಯಿತು. ಶ್ರೋತೃಗಳು ಕೇಳಿಸಿಕೊಳ್ಳಲು ಮತ್ತೊಂದು ಕಥೆ ಇದೆ. ಅವರಿಗೆ ಸಾಯಿ ಮೇಲಿನ ಪ್ರೀತಿ ಹೆಚ್ಚುವುದು. ಸಾಯಿಯ ಪ್ರಸಂಗಗಳು ವರ್ಣಿಸಲಾಸಾಧ್ಯವಾದವುಗಳು. ॥42॥ ಸಾಯಿಯು ಯಾವಾಗಲೂ ಪ್ರಥಮ ಪುರುಷದಲ್ಲಿ ಮಾತಾಡುತ್ತಿದ್ದರು. ಇದು ಯಾವಾಗಲೂ ಬೇರೆಯವರಿಗಾಗಿಯೇ ಇರುತ್ತಿತ್ತು. ಯಾರು ಅವರನ್ನು ಲಕ್ಷ್ಯಗೊಟ್ಟುಗಮನಿಸುವರೋ, ಇದು ಅವರಿಗೆ ದಿನನಿತ್ಯದ ಅನುಭವವಾಗಿರುತ್ತಿತ್ತು. ॥43॥ ಅನಂತರ, ಅವನು ಅನೇಕ ಅನುಭವಗಳನ್ನು ಪಡೆದುದರಿಂದ ನಾರಾಯಣರಾವ್‌ನ ಭಕ್ತಿ ಮತ್ತು ಪ್ರೇಮಗಳು ಹೆಚ್ಚಾದವು. ಮತ್ತೊಂದು ಅದ್ಭುತವಾದ ಅನುಭವವನ್ನು ಭಕ್ತಿಯಿಂದ ಕೇಳಿರಿ. ॥44॥ ಸಾಕಿಷ್ಟು, ಒಂದು ದಿನ, ನಾರಾಯಣರಾವ್‌ನ

ಸ್ನೇಹಿತನನ್ನು ಒಂದು ಚೇಳು ಕಚ್ಚಿತು. ಇದ್ದಕ್ಕಿದ್ದಂತೆ ಸಹಿಸಲಸಾಧ್ಯವಾದ ತೀವ್ರವಾದ ನೋವಿನಿಂದ ವಿವಶನಾದನು॥45॥ ಬಾಬಾರವರ ಉದಿಯನ್ನು ನೋವಿದ್ದ ಜಾಗದಲ್ಲಿ ಹಚ್ಚಿದ್ದರೆ ಅತ್ಯಂತ ಪರಿಣಾಮಕಾರಿಯಾಗಿರುತ್ತಿತ್ತು, ಆದರೆ ನಾರಾಯಣರಾವ್‌ನು ಎಷ್ಟು ಹುಡುಕಿದರೂ ಸ್ವಲ್ಪವೂ ಸಿಗಲಿಲ್ಲ. ॥46॥ ಅವನ ಸ್ನೇಹಿತನಿಗೆ ಆ ವೇದನೆಯನ್ನು ಸಹಿಸಲಾಗುತ್ತಿರಲಿಲ್ಲ ಮತ್ತು ಉದಿಯು ಎಲ್ಲಿಯೂ ಸಿಗಲಿಲ್ಲ. ಆದ್ದರಿಂದ ಅವನು ಬಾಬಾರವರ ಚಿತ್ರಪಟದ ದರ್ಶನ ಪಡೆದು ಬಾಬಾರವರನ್ನು ಕರುಣಾಪೂರ್ವಕವಾಗಿ ಬೇಡಿದನು. ॥47॥ ಅನಂತರ, ಆ ಚಿತ್ರಪಟದ ಹತ್ತಿರ ಇದಕ್ಕೆ ಮುಂಚೆ ಉರಿಸಿದ್ದ ಅಗರಬತ್ತಿಯ ಬೂದಿಯು ಅಲ್ಲಿ ಉದುರಿದ್ದು, ಅವನು ಅದನ್ನು ಉದಿಯೆಂದೇ ಪರಿಗಣಿಸಿದನು. ॥48॥ ಅದರಿಂದಲೇ ಒಂದು ಚಿಟಿಕೆಯಷ್ಟು ತೆಗೆದುಕೊಂಡು ಸಾಯಿಯ ನಾಮ ಮಂತ್ರವನ್ನು ಜಪಿಸುತ್ತ ಅದನ್ನು ಅವನ ಸ್ನೇಹಿತನಿಗೆ ಚೇಳು ಕಚ್ಚಿದ ಜಾಗಕ್ಕೆ ಹಚ್ಚಿದನು. ಅದು ಅವನ ಭಾವನೆಯ ಹಾಗೆಯೇ ಅನುಭವವನ್ನೂ ಕೊಟ್ಟಿತು. ॥49॥ ಇದನ್ನು ಕೇಳಲು ಮಹದಾಶ್ಚರ್ಯವಾಗುತ್ತದೆ. ಬೆರಳಿನಿಂದ ಬೂದಿಯನ್ನು ಸವರುತ್ತಿದ್ದ ಹಾಗೆಯೇ ನೋವು ಅದೆಷ್ಟು ಬೇಗ ಬಂದಿತ್ತೋ ಅಷ್ಟೇ ವೇಗವಾಗಿ ಮಾಯವಾಯಿತು. ಮತ್ತೆ ಇಬ್ಬರಿಗೂಪ್ರೀತಿಯಿಂದ ಉಸಿರುಕಟ್ಟಿತು. ॥50॥ ಕೊನೆಯ ಪಕ್ಷ ಈ ಸಂದರ್ಭದಲ್ಲಿ ನೋವುಂಟಾದವನಿಗೆ ಊದುಬತ್ತಿಯ ಬೂದಿಯನ್ನು ಹಚ್ಚಲಾಗಿತ್ತು, ಆದರೆ ರಸ್ತೆಯ ಧೂಳನ್ನು ಹಚ್ಚಿದರೂ, ಉದಿಯೆಂಬ ಭಾವನೆಯಿಂದ ಚಿಕಿತ್ಸೆ ನೀಡಿದರೂ ಅದೇ ಅನುಭವವನ್ನು ಕೊಡುತ್ತದೆ. ॥51॥ ಈ ಬೂದಿ ಧೂಳನ್ನು ಹಚ್ಚುವುದು, ಕೇವಲ ಒಬ್ಬ ನರಳುತ್ತಿರುವ ವ್ಯಕ್ತಿಗೇ ಅಲ್ಲ ಅಥವಾ ಯಾರಾದರೂ ರೋಗಿಗೇ ಅಲ್ಲದೆ ಮತ್ತೆ ಯಾರಿಗಾದರೂ ಹಚ್ಚಿದರೂ ಅದು ಉಪಯೋಗವಾಗುತ್ತಿತ್ತು. ॥52॥ ಒಮ್ಮೆ, ಒಬ್ಬ ಭಕ್ತನ ಮಗಳು ಗ್ರಂಥಿಜ್ವರ(ಪ್ಲೇಗ್)ದಿಂದ ನರಳುತ್ತಿದ್ದಳು. ಈ ಸುದ್ದಿಯು ಮತ್ತೊಂದು ಹಳ್ಳಿಯಲ್ಲಿದ್ದ ಅವಳ ತಂದೆಯ ಕಿವಿಗೆ ತಲುಪಿದ ಕೂಡಲೇ ಅವನು ಬಹಳ ಚಿಂತಿತನಾದನು. ॥53॥ ತಂದೆಯು ಬಾಂದ್ರಾದಲ್ಲಿ ವಾಸಿಸುತ್ತಿದ್ದನು. ಮತ್ತು ಅವನ ಮಗಳು ಮತ್ತೊಂದು ಹಳ್ಳಿಯಲ್ಲಿ ವಾಸಮಾಡುತ್ತಿದ್ದಳು. ಅವನ ಹತ್ತಿರ ಉದಿಯ ಸಂಗ್ರಹವಿರಲಿಲ್ಲ. ಆದ್ದರಿಂದ ಅವನು ನಾನಾಗೆ ಒಂದು ಸಂದೇಶವನ್ನು ಕಳುಹಿಸಿದನು.[2] ॥54॥ "ದಯವಿಟ್ಟು ಬಾಬಾರವರಲ್ಲಿ ನನ್ನ ವಿಮಂಚನೆಯನ್ನು ದೂರಮಾಡಲು ಪ್ರಾರ್ಥಿಸು." ಈರೀತಿ ಚಂದೋರ್‌ಕರ್‌ನ್ನು ಪ್ರಾರ್ಥಿಸಿ ಉದಿಯನ್ನು ಪ್ರಸಾದವಾಗಿ ಕಳುಹಿಸಲು ತಿಳಿಸಿದನು. ॥55॥ ಆ ಸಂದೇಶವಾಹಕನು ನಾನಾನನ್ನು ಮಾರ್ಗದಲ್ಲೇ ಭೇಟಿಯಾದನು. ಆಗ ಅವನು ತನ್ನ ಪತ್ನಿಯ ಜೊತೆಯಲ್ಲಿ ಕಲ್ಯಾಣಕ್ಕೆ ಹೋಗುತ್ತಿದ್ದನು. ॥56॥ ನಾನಾನು ಥಾಣೆಯ ರೈಲ್ವೇ ನಿಲ್ದಾಣದಲ್ಲಿ ಈ ಸಂದೇಶವನ್ನು ಸ್ವೀಕರಿಸಿದನು. ಅವನ ಹತ್ತಿರ ಉದಿಯು ಇಲ್ಲದೇ ಇದ್ದುದರಿಂದ, ಅವನು ನೆಲದ ಮೇಲಿನಿಂದ ಸ್ವಲ್ಪ ಮಣ್ಣಿನ ಹುಡಿಯನ್ನು ತೆಗೆದುಕೊಂಡನು. ॥57॥ ರಸ್ತೆಯಲ್ಲಿಯೇ ನಿಂತುಕೊಂಡು ಸಾಯಿ ಸಮರ್ಥರನ್ನು ಆವಾಹನೆ ಮಾಡಿ ಮತ್ತೆ ತಿರುಗಿ[3] ಒಂದು ಚಿಟಿಕೆಯನ್ನು ತನ್ನ ಪತ್ನಿಯ ಹಣೆಗೆ ಹಚ್ಚಿದನು. ॥58॥

ಮತ್ತೊಂದು ಕಡೆ, ಆ ಭಕ್ತನು ತನ್ನ ಮಗಳು ವಾಸಮಾಡುತ್ತಿದ್ದ ಹಳ್ಳಿಯ ಕಡೆ ಹೊರಟನು. ಅಲ್ಲಿ ಅವನು ಸಂತೋಷದ ಸಮಾಚಾರ ಕೇಳಿ ಬಹಳ ಆನಂದಪಟ್ಟನು. ||59|| ಆ ಹುಡುಗಿಯು ಮೂರು ದಿನಗಳಿಂದ ಅತ್ಯಂತ ಪ್ರಖರವಾದ ಜ್ವರದ ತಾಪದಿಂದ ನರಳುತ್ತಿದ್ದಳು. ವೇದನೆಯಿಂದ ಜರ್ಝರಿತಳಾಗಿದ್ದಳು. ಆದರೆ ಹಿಂದಿನ ದಿನದಿಂದ ಸ್ವಲ್ಪ ಆರಾಮವಾಗಿದ್ದಳು. ||60|| ವಿಚಾರಣೆ ಮಾಡಿದಾಗ ತಿಳಿದ ವಿಷಯವೆಂದರೆ ನಾನಾನು ಸಾಯಿಯನ್ನು ಅಂಗಲಾಚಿ ಬೇಡಿ, ಆ ಮಣ್ಣನ್ನು ಉದಿಯ ರೀತಿ ತನ್ನ ಹೆಂಡತಿಯ ಹಣೆಗೆ ಹಚ್ಚಿದ ಕ್ಷಣದಿಂದಲೇ ಅವಳು ಗುಣಮುಖಳಾಗಲು ಪ್ರಾರಂಭಿಸಿದ್ದಳು. ||61|| ರೋಗದ ಬಗೆಗಿನ ಕಥೆಯು ಸಾಕಿಷ್ಟು, ಸರಿಯಾದ ಸಮಯದಲ್ಲಿ ಈ ವೃತ್ತಾಂತವನ್ನು ವಿವರವಾಗಿ ತಿಳಿಸಲಾಗುವುದು. ಇದು ಉದಿಯ ಬಗೆಗಿನ ಒಂದು ತುಣುಕು ಅಷ್ಟೆ. ||62|| ಸಾಯಿಯು ಸದಾ ತಮ್ಮ ಭಕ್ತರ ಕಲ್ಯಾಣಕ್ಕಾಗಿ ಕೆಲಸ ಮಾಡಲು ತತ್ಪರರಾಗಿರುವವರು, ಒಂದು ಚಮತ್ಕಾರ ಮಾಡಿದರು. ಆಗ ಪ್ರೀತಿಯ ಚಂದೋರಕರನು ಜಾಮನೇರಿನ ಮಾಮಲೇದಾರನಾಗಿದ್ದನು. ಅದನ್ನು ಕೇಳಿರಿ. ||63|| ಉದಿಯ ಮಹಿಮೆಯು ಅಪಾರ. ಶ್ರೋತೃಗಳು ಕೇಳಲು ಇಚ್ಛಿಸಿದರೆ ನಾನು ಮತ್ತೊಂದು ಚಮತ್ಕಾರವನ್ನು ಹೇಳುತ್ತೇನೆ. ಅದನ್ನು ಕೇಳಿ ಮತ್ತೂ ಆಶ್ಚರ್ಯ ಚಕಿತರಾಗುವಿರಿ. ||64|| ನಾನಾನ ಮಗಳು ತೀವ್ರವಾದ ಪ್ರಸವದ ನೋವಿನಲ್ಲಿದ್ದಳು. ಜಾಮನೇರಿನಿಂದ ಸಾಯಿ ಸಮರ್ಥರನ್ನು ಒಂದೇ ಸಮನೆ ಆವಾಹಿಸುತ್ತಿದ್ದರು. ||65|| ಜಾಮನೇರಿನಲ್ಲಿದ್ದ ಪರಿಸ್ಥಿತಿಯು ಶಿರಡಿಯಲ್ಲಿ ಯಾರಿಗೂ ತಿಳಿದಿರಲಿಲ್ಲ. ಆದರೆ ಬಾಬಾ ಸರ್ವಜ್ಞರೂ, ಸರ್ವವ್ಯಾಪಿಯೂ ಆಗಿದ್ದರು. ಈ ವಿಶ್ವದಲ್ಲೇ ಅವರಿಗೆ ತಿಳಿಯದೇ ಇದ್ದುದು ಏನೂ ಇರಲಿಲ್ಲ. ||66|| ಬಾಬಾರವರು ಭಕ್ತರಲ್ಲಿ ಏಕಾತ್ಮವಾಗಿದ್ದರು. ನಾನಾನ ಮನೆಯ ಪರಿಸ್ಥಿತಿಯನ್ನು ಅರಿತ ಸಾಯಿ ಸಮರ್ಥರ ಹೃದಯವು ಕರುಣೆಯಿಂದ ಉಕ್ಕಿ ಹರಿಯಿತು. ಕೂಡಲೇ ಅವರು ಏನು ಮಾಡಿದರು, ಅದನ್ನು ಕೇಳಿ! ||67|| ಅವರು ಉದಿಯನ್ನು ಕಳುಹಿಸುವ ಯೋಚನೆ ಮಾಡಿದ್ದರು. ಅದೇ ಸಮಯದಲ್ಲಿ ಗೋಸಾವಿ ರಾಮಗೀರ್‌ಬುವಾನು ತನ್ನ ಹಳ್ಳಿಯ ಕಡೆ ಹೋಗಲೇ ಬೇಕಾದಂತಹ ಸ್ಥಿತಿಯು ಬಂದಿತು. ||68|| ಅವನ ಹಳ್ಳಿಯು ಖಾನ್‌ದೇಶದಲ್ಲಿತ್ತು, ಅವನು ಹೊರಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ಬಾಬಾರವರ ದರ್ಶನ ತೆಗೆದುಕೊಂಡು ಬಾಬಾರವರ ಚರಣಗಳಲ್ಲಿ ನಿಲ್ಲಲು ಮಸೀದಿಗೆ ಬಂದನು. ||69|| ಏಕೆಂದರೆ ಶಿರಡಿಯಲ್ಲಿ ಬಾಬಾರವರು ಈ ದೇಹದಲ್ಲಿರುವವರೆಗೆ ಬಾಬಾರವರ ಚರಣಗಳನ್ನು ಸ್ಪರ್ಶಿಸದೆ ಮತ್ತು ಅವರ ಅನುಜ್ಞೆಯನ್ನು ಪಡೆಯದೆ ಶಿರಡಿಯಿಂದ ಹೊರಗೆ ಹೋಗುತ್ತಿರಲಿಲ್ಲ. ||70|| ಅದು ಮದುವೆ, ಮುಂಜಿ ಅಥವಾ ಯಾವುದಾದರೂ ವಿಧಿವಿಧಾನ ಪೂರ್ವಕವಾದ ಮಂಗಳಕಾರ್ಯವಾಗಲಿ, ಏನಾದರೂ ಕಾರ್ಯವಿರಲಿ, ಏನಾದರೂ ಕಾರ್ಯ ಮಾಡುವ ಉದ್ದೇಶವಿರಲಿ, ಬಾಬಾರವರ ಅನುಜ್ಞೆಯು ಅತ್ಯವಶ್ಯಕವಾಗಿತ್ತು. ||71|| ಪ್ರತಿಯೊಬ್ಬರೂ ಖಡಾಖಂಡಿತವಾಗಿ ತಿಳಿದಿದ್ದರು; ಅವರ ಹೃದಯಪೂರ್ವಕ ಅನುಜ್ಞೆ, ಉದಿಯ ಪ್ರಸಾದ ಮತ್ತು ಆಶೀರ್ವಚನವಿಲ್ಲದಿದ್ದರೆ ಯಾವುದೇ ಕಾರ್ಯವೂ

ನಿರ್ವಿಘ್ನವಾಗಿ ನೆರವೇರುತ್ತಿರಲಿಲ್ಲ ಎಂಬುದು. ॥72॥ ಆ ಹಳ್ಳಿಯ ರೀತಿ ನೀತಿಯು ಈ ರೀತಿ ಇದ್ದು, ಅದಕ್ಕನುಗುಣವಾಗಿ ರಾಮಗೀರನು ಬಾಬಾರವರ ಚರಣಗಳಲ್ಲಿ ನಮಿಸಿ ಹೊರಡಲು ಅನುಜ್ಞೆಯನ್ನು ಬೇಡಿದನು. ॥73॥ ಅವನು ಹೇಳಿದನು, "ಬಾಬಾ, ನನ್ನ ಖಾನ್‌ದೇಶಿಯಲ್ಲಿರುವ ನನ್ನ ಹಳ್ಳಿಗೆ ಹೋಗುತ್ತಿದ್ದೇನೆ. ನನಗೆ ಉದಿ ಮತ್ತು ಆಶೀರ್ವಚನ ಮತ್ತು ಈ ದಾಸನಿಗೆ ಹೊರಡಲು ಅನುಜ್ಞೆಯನ್ನು ದಯಪಾಲಿಸಿ." ॥74॥ ಬಾಬಾರವರು ಅವನನ್ನು ಪ್ರೇಮದಿಂದ 'ಬಾಪುಗೀರ್' ಎಂದು ಕರೆಯುತ್ತಿದ್ದರು. ಅವರು ಹೇಳಿದರು, "ಹೋಗು, ಸಂತೋಷವಾಗಿ ನಿನ್ನ ಹಳ್ಳಿಗೆ ಹೋಗು. ಆದರೆ ಮಾರ್ಗದಲ್ಲಿ ಸ್ವಲ್ಪಕಾಲ ವಿಶ್ರಮಿಸು. ॥75॥ "ಮೊದಲು ಜಾಮನೇರಿಗೆ ಹೋಗು ಮತ್ತು ನಾನಾನ ಮನೆಯಲ್ಲಿ ಇಳಿದುಕೋ. ಅವರ ಸಮಾಚಾರವನ್ನು ವಿಚಾರಿಸಿ, ಅನಂತರ ಮುಂದೆ ಹೊರಡು." ॥76॥ ಅನಂತರ ಅವರು ಮಾಧವರಾವ್‌ದೇಶಪಾಂಡೆಗೆ ಹೇಳಿದರು, "ಶಾಮಾ, ಒಂದು ಚೂರು ಕಾಗದದಲ್ಲಿ ಆಡ್ಕರ್‌ನ ಆರತಿ ಹಾಡಿನ ಪ್ರತಿ ಮಾಡು ಮತ್ತು ನಾನಾಗೆ ಗೋಸಾವಿಯ ಜೊತೆ ಕಳಿಸು." ॥77॥ ಅನಂತರ ಅವರು ಗೋಸಾವಿಗೆ ಉದಿ ಕೊಟ್ಟು ಅದನ್ನು ಒಂದು ಸಣ್ಣ ಪೊಟ್ಟಣ ಮಾಡಿ, ಅವನ ಕೈಯಲ್ಲಿಟ್ಟು ನಾನಾಗೆ ಕೊಡಲು ಹೇಳಿದರು. ॥78॥ "ಉದಿ ಮತ್ತು ಆರತಿ ಹಾಡಿನ ಪ್ರತಿ, ಎರಡನ್ನೂ ನಾನಾಗೆ ಕೊಡು. ಅವನ ಕ್ಷೇಮಸಮಾಚಾರವನ್ನು ವಿಚಾರಿಸಿ ಅನಂತರ ಮುಂದಕ್ಕೆ ನಿನ್ನ ಹಳ್ಳಿಗೆ ಹೋಗು" ಎಂದು ಹೇಳಿದರು. ॥79॥ ಈ "ಆರತಿ ಸಾಯಿಬಾಬಾ" ಎನ್ನುವುದು ರಾಮಜನಾರ್ದನನು ರಚಿಸಿರುವ ಜ್ಞಾನೇಶ್ವರನ ಆರತಿಯ ರೀತಿಯಲ್ಲಿ ಇದೆ. ॥80॥ ರಾಮಜನಾರ್ದನನು ಸ್ವಾಮಿ ಜನಾರ್ದನರ ಭಕ್ತ, ಮಾಧವ ಅಡ್ಕರನು ಸಾಯಿ ಚರಣಗಳಲ್ಲಿ ಅಂಕಿತನಾಗಿದ್ದನು. ಇದು ಅತ್ಯಂತ ಪ್ರಸಾದಪೂರ್ಣವಾದ ರಚನೆಯಾಗಿತ್ತು, ಅದಿಲ್ಲದೆ ಸಾಯಿಯ ಪೂಜೆಯು ಅಪೂರ್ಣವಾಗಿರುತ್ತಿತ್ತು. ॥81॥ ಬಾಬಾರವರಿಗೂ ಆರತಿಯು ಬಹಳ ಇಷ್ಟವಾದುದರಿಂದ ಶ್ರೋತೃಗಳು ಈ ಆರತಿಯನ್ನು ಮೊದಲಿನಿಂದ ಕೊನೆಯವರೆಗೆ ಕೇಳಬೇಕು. ಅದರ ಪ್ರತಿಯನ್ನು ಬಾಬಾರವರು ಉದಿಯ ಜೊತೆ ಕಳಿಸಿದ್ದರು. ಆಮೇಲೆ ನೀವು ಅದರ ಫಲವನ್ನು ಪಡೆಯುವಿರಿ. ॥82॥

ಆರತಿ ಹಾಡಿನ ಅರ್ಥ:

1) ಸಕಲ ಜೀವರಾಶಿಗಳಿಗೂ ಸುಖವನ್ನುಂಟುಮಾಡುವ ಸಾಯಿಬಾಬಾಗೆ ಆರತಿ ಬೆಳಗೋಣ. ಹೇ ಬಾಬಾ, ಈ ದಾಸರು ಮತ್ತುಭಕ್ತರಿಗೆ ನಿನ್ನ ಚರಣಧೂಳಿಯಲ್ಲಿ ಆಶ್ರಯ ನೀಡು. ನಾವು ಸಾಯಿ ಬಾಬಾಗೆ ಆರತಿ ಬೆಳಗೋಣ.

2) ಕಾಮ ಮತ್ತು ಕ್ರೋಧಗಳನ್ನು ಸುಟ್ಟು ಆತ್ಮ ಸ್ವರೂಪದಲ್ಲಿ ಲೀನವಾಗಿದ್ದೀಯೆ. ಹೇ ಸಾಯಿ, ಮುಕ್ತಿಯನ್ನು ಅಪೇಕ್ಷಿಸುವ ಮುಮುಕ್ಷು ಜನರು ತಮ್ಮ ಕಣ್ಣುಗಳಿಂದ ನಿನ್ನ ಶ್ರೀರಂಗ್ ಸ್ವರೂಪ ದರ್ಶನಮಾಡಿ ಆತ್ಮಸಾಕ್ಷಾತ್ಕಾರ ಪಡೆಯಲಿ. ಆರತಿ ಬೆಳಗೋಣ.

3) ಯಾರ ಮನಸ್ಸಿನಲ್ಲಿ ಯಾವ ಭಾವ ಇರುವುದೋ ಅದೇ ರೀತಿಯ ಅನುಭವವನ್ನು ಕೊಡುತ್ತೀಯೆ. ಹೇ ದಯಾಘನ ಸಾಯಿ, ಇದೂ ನಿನ್ನದೇ ಒಂದು ರೀತಿಯ ಮಾಯೆ. ಆರತಿ ಬೆಳಗೋಣ.

4) ನಿನ್ನ ನಾಮಸ್ಮರಣೆಯ ಮಾತ್ರದಿಂದಲೇ ಸಾಂಸಾರಿಕ ದುಃಖಗಳು ಕೊನೆಗೊಳ್ಳುತ್ತವೆ. ನಿನ್ನ ಅನುಗ್ರಹವೋ ಅಗಾಧ ಮತ್ತು ಅಪರಂಪಾರ. ಹೇ ಸಾಯಿ, ಈ ಅನಾಥರಿಗೆ ಮಾರ್ಗದರ್ಶನ ನೀಡು. ನಿನಗೆ ಆರತಿ.

5) ನೀನೇ ಪರಬ್ರಹ್ಮ. ನೀನು ಸಗುಣರೂಪದಲ್ಲಿ ಈ ಕಲಿಯುಗದಲ್ಲಿ ಅವತರಿಸಿರುವೆ. ಹೇ ಸ್ವಾಮಿ, ನೀನೇ ದತ್ತ ದಿಗಂಬರನಾಗಿ ಅವತರಿಸಿದೆ.

6) ಪ್ರತಿ ಎಂಟನೆಯ ದಿನ, ವಾರದಲ್ಲಿಯ ಗುರುವಾರ ನಿನ್ನ ಶಿರಡಿಯ ಯಾತ್ರೆ ಮಾಡುತ್ತಾರೆ. ಮತ್ತು ಈ ಸಂಸಾರದ ಭಯ ನಿವಾರಣೆಗಾಗಿ ನಿನ್ನ ಚರಣಗಳ ದರ್ಶನ ಮಾಡುತ್ತಾರೆ.

7) ನಿನ್ನ ಚರಣಧೂಳಿಯ ಸೇವೆಯೇ ನಮಗೆ ಸಿಕ್ಕಿರುವ ಮಹಾನಿಧಿಯಾಗಿದೆ. ಹೇ ದೇವರ ದೇವ, ಈಗ ಇದೇ ನಮ್ಮ ಆಸೆಯಾಗಿದೆ, ನಿಮಗೆ ಆರತಿ.

8) ಯಾವರೀತಿ ಚಾತಕ ಪಕ್ಷಿಯು ಸ್ವಾತಿ ನಕ್ಷತ್ರದ ನಿರ್ಮಲ ಜಲದ್ ಆನಂದಕ್ಕಾಗಿ ಇಚ್ಛಿಸುವುದೋ ಅದೇ ರೀತಿ ಆರತಿ ಗೀತ ರಚಿಸಿದ ಈ ಮಾಧವನಿಗೂ ನಿರ್ಮಲ ಜ್ಞಾನದ ಭಿಕ್ಷೆ ನೀಡಿ ನಿನ್ನ ಮಹಿಮೆಯಿಂದ ನಮ್ಮನ್ನು ಅನುಗ್ರಹಿಸು, ನಿನಗೆ ಆರತಿ.

ಗೋಸಾವಿಯು ಬಾಬಾರವರಿಗೆ ಹೇಳಿದನು, "ನನ್ನ ಹತ್ತಿರ ಒಟ್ಟು ಎರಡು ರೂಪಾಯಿಗಳು ಇವೆ. ಬಾಬಾ ಕೇವಲ ಇಷ್ಟು ಮಾತ್ರ ಹಣದಲ್ಲಿ ಯಾವರೀತಿ ನಾನು ಜಾಮನೇರ ತಲುಪಲು ಸಾಧ್ಯ?" ॥83॥ ಬಾಬಾ ಹೇಳಿದರು, "ಹೋಗು. ನೀನು ನಿಶ್ಚಿಂತೆಯಿಂದ ಹೋಗು. ನಿನಗಾಗಿ ಎಲ್ಲ ಏರ್ಪಾಡನ್ನೂ ಮಾಡಲಾಗುವುದು." ಸಾಯಿಚರಣಗಳಲ್ಲಿ ವಿಶ್ವಾಸವಿಟ್ಟು ಗೋಸಾವಿಯು ಅಲ್ಲಿಂದ ಹೊರಟನು. ॥84॥ ಬಾಬಾರವರಿಂದ ಈ ಅನುಜ್ಞೆಯನ್ನು ಪಡೆದು, ಅವರ ಆಜ್ಞೆಯನ್ನು ಪರಿಪಾಲಿಸುತ್ತ, ಬಾಪು ರಾಮಗೀರನು ತನಗೆ ವಹಿಸಿದ ಕಾರ್ಯದಲ್ಲಿ ತತ್ಪರನಾಗಿ, ಉದಿಯ ಪ್ರಸಾದವನ್ನು ಸ್ವೀಕರಿಸಿ ಕೂಡಲೇ ಅಲ್ಲಿಂದ ಹೊರಟನು. ॥85॥ ಆ ದಿನಗಳಲ್ಲಿ, ಜಾಮನೇರಿಗೆ ಈಗಿನ ರೀತಿಯಲ್ಲಿರುವಂತೆ ರೈಲುಮಾರ್ಗವಿರಲಿಲ್ಲ. ಮತ್ತು ಪ್ರಯಾಣ ಮಾಡುವುದು ಅಷ್ಟು ಸುಲಭವಾಗಿರಲಿಲ್ಲ. ಆದ್ದರಿಂದ ಗೋಸಾವಿಯು ಚಿಂತಿತನಾದನು. ॥86॥ ರೈಲುಗಾಡಿಯಲ್ಲಿ ಹೊರಟು ಪ್ರಯಾಣಿಕರು ಜಲಗಾಂವನಲ್ಲಿ ಇಳಿಯಬೇಕಾಗುತ್ತಿತ್ತು, ಅಲ್ಲಿಂದ ಉಳಿದ ಮಾರ್ಗವನ್ನು ಪಾದಚಾರಿಯಾಗಿ ಕ್ರಮಿಸಬೇಕಾಗುತ್ತಿತ್ತು. ॥87॥ ರೈಲು ಗಾಡಿಯ ಪ್ರಯಾಣದ ಟಿಕೇಟಿಗಾಗಿ ಒಂದು ರೂಪಾಯಿ ಹದಿನಾಲ್ಕು ಆಣೆಗಳನ್ನು ಕೊಟ್ಟನಂತರ ಅವನ ಹತ್ತಿರ ಕೇವಲ ಎರಡು ಆಣೆಗಳು

ಉಳಿದಿದ್ದವು. ಅಲ್ಲಿಂದ ಮುಂದಕ್ಕೆ ಯಾವರೀತಿ ಹೋಗಬೇಕಾಗಿತ್ತು! ॥88॥ ಜಲಗಾಂವನ ರೈಲ್ವೇ ನಿಲ್ದಾಣದಲ್ಲಿ ಗೋಸಾವಿಯು ಈ ರೀತಿ ಚಿಂತೆಯಲ್ಲಿ ಮುಳುಗಿದನು. ಅವನು ಟಿಕೇಟನ್ನು ಕೊಟ್ಟು ಹೊರಗೆ ಬಂದಾಗ ದೂರದಲ್ಲಿದ್ದ ಒಬ್ಬ ಸಿಪಾಯಿಯನ್ನು ನೋಡಿದನು. ॥89॥ ಸಿಪಾಯಿಯು ಯಾರನ್ನೋ ಹುಡುಕುತ್ತಿರುವಂತೆ ಕಂಡಿತು. ಅವನು ಅಲ್ಲಿ ರೈಲಿನಿಂದ ಇಳಿದ ಪ್ರಯಾಣಿಕರ ಹತ್ತಿರಹೋಗಿ, "ಶಿರಡಿಯಿಂದ ಬಂದ ಬಾಪೂಗೀರ ಯಾರು ಎಂಬುದನ್ನು ಹೇಳಿ" ಎಂದು ಕೇಳುತ್ತಿದ್ದನು. ॥90॥ ಆ ಸಿಪಾಯಿಯು ವಿಚಾರಿಸುತ್ತಿದ್ದುದು ತನ್ನನ್ನೇ ಎಂದು ತಿಳಿದು, ಗೋಸಾವಿಯು ಮುಂದೆ ಬಂದು ಹೇಳಿದನು, "ಹೌದು. ನಾನೇ ಆ ಮನುಷ್ಯ. ನಿನಗೆ ಏನು ಬೇಕು ಹೇಳು." ॥91॥ ಅವನು ಹೇಳಿದನು, "ನನ್ನನ್ನು ಚಾಂದೋರಕರರು ನಿಮಗಾಗಿ ಕಳುಹಿಸಿದ್ದಾರೆ. ಬೇಗ ಬನ್ನಿ ಮತ್ತು ಟಾಂಗಾದಲ್ಲಿ ಕುಳಿತುಕೊಳ್ಳಿ. ಅವರು ನಿಮಗಾಗಿ ಕಾಯುತ್ತಿದ್ದಾರೆ." ॥92॥ ಬುವಾನಿಗೆ ಅತ್ಯಂತ ಸಂತೋಷವಾಯಿತು. ಅವನು ಯೋಚಿಸಿದನು. 'ಶಿರಡಿಯಿಂದ ಸಮಯಕ್ಕೆ ಸರಿಯಾಗಿ ಟಾಂಗಾವನ್ನು ಕಳಿಸಿ ಈ ಕಷ್ಟವನ್ನು ಪರಿಹರಿಸುವಂತೆ ಅವನಿಗೆ ಒಂದು ಸಂದೇಶ ರವಾನೆಯಾಗಿರಬೇಕು.' ॥93॥ ಆ ಸಿಪಾಯಿಯು ಬಹಳ ಜಬರದಸ್ತಿನಿಂದ ಕಂಡನು. ಅವನಿಗೆ ಗಡ್ಡ, ಹುರಿಮಾಡಿದ ಮೀಸೆಯಿದ್ದುವು. ಮತ್ತು ನೀಟಾದ ಸಮವಸ್ತ್ರ ಧರಿಸಿದ್ದನು. ಅವನ ಟಾಂಗಾವೂ ಸಹ ಸುಂದರವಾಗಿತ್ತು. ॥94॥ ಕುದುರೆಗಳು ಟಾಂಗಾದಷ್ಟೇ ಸುಂದರವಾಗಿದ್ದವು. ಅವುಗಳು ನಿಜವಾಗಿಯೂ ಬಾಡಿಗೆಯವು ಅಲ್ಲ. ಇತರ ಟಾಂಗಾಗಳನ್ನು ಹಿಂದೆ ಹಾಕಿ ಅತಿ ಉತ್ಸಾಹದಿಂದ ಮುಂದೆ ಹೋದವು. ॥95॥ ಟಾಂಗಾವು ಬೆಳಗಿನಜಾವ ಸುಮಾರು ಎರಡು ಗಂಟೆ ನಲವತ್ತೆಂಟು ನಿಮಿಷಗಳಲ್ಲಿ ಹೊರಟಿತು. ಉಷಃಕಾಲದಲ್ಲಿ ಮಾರ್ಗದಲ್ಲಿ ಒಂದು ಕಾಲುವೆಯ ಹತ್ತಿರ ನಿಂತಿತು. ॥96॥ ಅನಂತರ, ಟಾಂಗಾವಾಲಾನು ಕುದುರೆಗಳ ಜೀನು ತೆಗೆದು ನೀರು ಕುಡಿಯಲು ಬಿಟ್ಟು ಹೇಳಿದನು. "ನಾನು ಈಗ ಬರುತ್ತೇನೆ. ಅನಂತರ ಆರಾಮವಾಗಿ ಉಪಹಾರ ಮಾಡೋಣ. ॥97॥ ನಾನು ಸ್ವಲ್ಪ ನೀರು ತರುತ್ತೇನೆ. ಅನಂತರ ನಾವು ಮಾವಿನ ಹಣ್ಣುಗಳು, ಪೇಡೆ ಮತ್ತು ಗುಲ್‌ಪಾಪಡಿಗಳನ್ನು ಆರಾಮವಾಗಿ ತಿನ್ನೋಣ. ಮತ್ತೆ ಜೀನನ್ನು ಕುದುರೆಗಳಿಗೆ ಕಟ್ಟಿ ಇಲ್ಲಿಂದ ಹೊರಡೋಣ." ॥98॥ ಅವನ ಗಡ್ಡ ಮತ್ತು ವೇಷಭೂಷಣ ನೋಡಿದರೆ ಮುಸ್ಲಿಮನಂತೆ ಕಂಡನು. ಅವನು ಆಡಿದ ಮಾತುಗಳನ್ನು ಕೇಳಿ ರಾಮಗೀರನು ಅವನಿಂದ ಫಲಾಹಾರವನ್ನು ಸ್ವೀಕರಿಸುವ ಬಗ್ಗೆ ಚಿಂತಿತನಾದನು. ॥99॥ ಆದ್ದರಿಂದ ಅವನ ಜಾತಿಯ ಬಗ್ಗೆ ಪ್ರಶ್ನಿಸಿದನು. ಅವನು ಹೇಳಿದನು, "ನನ್ನ ಬಗ್ಗೆ ನಿನಗೆ ಏನು ಶಂಕೆ? ನಾನು ಗಡವಾಲದ ಒಬ್ಬ ಕ್ಷತ್ರಿಯ. ನಾನು ಜಾತಿಯಲ್ಲಿ ರಜಪೂತ. ॥100॥ "ಫಲಾಹಾರವನ್ನು ನಾನಾನು ನನ್ನ ಜೊತೆಯಲ್ಲಿ ನಿನಗಾಗಿ ಕಳಿಸಿದ್ದಾನೆ. ನಿಜವಾಗಿಯೂ ಕಿಂಚಿತ್ತು ಸಂಶಯ ಪಡಬೇಡ. ಏನೂ ಚಿಂತೆಮಾಡದೆ ತಿನ್ನೋಣ." ॥101॥ ಈ ರೀತಿ ಅವನ ಸಂಶಯ ನಿವಾರಣೆಯಾಗಲು ಇಬ್ಬರೂ ಒಟ್ಟಿಗೆ ಫಲಾಹಾರ ಮಾಡಿದರು. ಟಾಂಗಾವಾಲಾನು ಕುದುರೆಗಳಿಗೆ ಜೀನು ಕಟ್ಟಿ ಹೊರಟನು. ಸೂರ್ಯೋದಯದ

ವೇಳೆಗೆ ಪ್ರಯಾಣ ಮುಗಿಯಿತು. ॥102॥ ಅವರು ಹಳ್ಳಿಯನ್ನು ಪ್ರವೇಶಿಸುತ್ತಲೇ ನಾನಾನ ಕಛೇರಿಯು ಕಣ್ಣಿಗೆ ಬಿದ್ದಿತು. ಕುದುರೆಗಳೂ ಕ್ಷಣಕಾಲ ನಿಂತವು. ರಾಮಗೀರನು ಅಂತರಂಗದಲ್ಲೇ ಸಂತೋಷಿಸಿದನು. ॥103॥ ಬುವಾನು ತನ್ನ ದೇಹಬಾಧೆ ನಿವಾರಿಸಿಕೊಳ್ಳಲು ಪಕ್ಕದ ಒಂದು ಏಕಾಂತ ಜಾಗವನ್ನು ನೋಡಿದನು. ಅವನು ಹಿಂತಿರುಗಿದಾಗ ಕಂಡ ದೃಶ್ಯದಿಂದ ಆಶ್ಚರ್ಯಚಕಿತನಾದನು. ॥104॥ ಅಲ್ಲಿ ಟಾಂಗಾನೂ ಇಲ್ಲ, ಕುದುರೆಗಳೂ ಇಲ್ಲ. ಟಾಂಗಾವಾಲನೂ ಇರಲಿಲ್ಲ. ಆ ಕ್ಷಣದಲ್ಲಿ ಯಾವ ಮೂಲೆಯಲ್ಲೂ ಏನೂ ಕಾಣಲಿಲ್ಲ. ಎಲ್ಲವೂ ಬರಿದಾಗಿತ್ತು. ॥ 105॥ ರಾಮಗೀರನು ಆಶ್ಚರ್ಯಪಟ್ಟನು, "ಇದೆಂತಹ ಚಮತ್ಕಾರ? ನನ್ನನ್ನು ಇಲ್ಲಿಯವರೆಗೆ ಇಷ್ಟು ದೂರ ಕರೆದುಕೊಂಡು ಬಂದ ಮೇಲೆ ಇಷ್ಟರಲ್ಲಿ ಎಲ್ಲಿ ಹೋದ? ॥106॥ ಬುವಾನು ನಾನಾನನ್ನು ಭೇಟಿಯಾಗಲು ಕಾತರನಾಗಿದ್ದುದರಿಂದ, ಕಛೇರಿಯ ಒಳಗೆ ಹೋದನು. ನಾನಾ ಮನೆಯಲ್ಲಿದ್ದಾನೆಂದು ತಿಳಿದು ಅಲ್ಲಿಗೇ ಹೋಗಲು ಉದ್ಯುಕ್ತನಾದನು. ॥107॥ ಬುವಾನು ದಾರಿಯನ್ನು ಕೇಳುತ್ತಾ, ರಸ್ತೆಯ ಪಕ್ಕದಲ್ಲಿಯೇ ಹೋಗುತ್ತ ನಾನಾನ ಮನೆಯನ್ನು ಸುಲಭವಾಗಿ ಸೇರಿದನು. ಅವನು ಅಲ್ಲಿ ಹೋಗಿ ಹಜಾರದಲ್ಲಿ ಕುಳಿತುಕೊಂಡನು. ನಾನಾನು ಅವನನ್ನು ಒಳಗಡೆ ಕರೆದನು. ॥108॥ ಅವರು ಪರಸ್ಪರ ಭೇಟಿಯಾದರು. ಅವನು ಉದಿ ಮತ್ತು ಆರತಿ ಹಾಡಿನ ಪ್ರತಿಯನ್ನು ತೆಗೆದು ನಾನಾನ ಮುಂದಿಟ್ಟು ಸಂಪೂರ್ಣವಾಗಿ ಎಲ್ಲವನ್ನೂ ವಿವರಿಸಿದನು. ॥109॥ ಆಶ್ಚರ್ಯಕರ ಸಂಗತಿಯೆಂದರೆ, ಈ ಉದಿಯು ಬಂದಾಗ ನಾನಾನ ಮಗಳು, ಪ್ರಸವದಲ್ಲಿ ತಡೆಯುಂಟಾದುದರಿಂದ ತೀವ್ರವಾದ ವೇದನೆಯನ್ನು ಅನುಭವಿಸುತ್ತಿದ್ದಳು. ॥110॥ ಈ ಸಂಕಟವನ್ನು ನಿವಾರಿಸಲು ನವಚಂಡೀ ಹವನ್ ಮತ್ತು ಸಪ್ತಶತೀಯ ಪಾರಾಯಣ ನಡೆಯುತ್ತಿತ್ತು. ಗೋಸಾವಿಯು ಅತಿ ವಿಸ್ಮಿತನಾದನು. ॥111॥ ನಾನಾನ ಅನುಭವವು ಒಬ್ಬ ಹಸಿದ ವ್ಯಕ್ತಿಗೆ ತಟ್ಟೆಯ ತುಂಬ ಪಕ್ವಾನ್ನವನ್ನು ಮುಂದಿಟ್ಟಹಾಗೆ ಅಥವಾ ಬಾಯಾರಿಕೆಯಿಂದ ಬಳಲಿದ ಚಕೋರಪಕ್ಷಿಯ ಬಾಯಲ್ಲಿ ಅಮೃತವನ್ನಿಟ್ಟಹಾಗೆ ಆಗಿತ್ತು. ॥112॥ ನಾನಾನು ಹೆಂಡತಿಯನ್ನು ಕರೆದು ಅವಳಿಗೆ ಉದಿಯನ್ನು ಕೊಟ್ಟು ಮಗಳಿಗೆ ನೀರಿನೊಡನೆ ಕೊಡಲು ಹೇಳಿ ತಾನೇ ಸ್ವಯಂ ಆರತಿಯನ್ನು ಹಾಡಲು ಪ್ರಾರಂಭಿಸಿದನು. ॥113॥ ಕ್ಷಣಮಾತ್ರದಲ್ಲಿ ಮನೆಯ ಒಳಗಿನಿಂದ ಸಂದೇಶ ಬಂದಿತು. ಮಗಳು ಉದಿಯ ಬಟ್ಟಲನ್ನು ತುಟಿಗೆ ಇಡುತ್ತಲೇ ಅವಳ ಪರಿಸ್ಥಿತಿಯು ಉತ್ತಮಗೊಂಡಿತ್ತು. ॥114॥ ಅವಳ ನೋವು ಕೂಡಲೇ ಮಾಯವಾಗಿ ಸುಖಪ್ರಸವ ಉಂಟಾಯಿತು. ಆ ವಿಷಮ ಸ್ಥಿತಿಯು ಸುಖವಾಗಿ ಪರಿಣಮಿಸಿತು. ಎಲ್ಲರ ಚಿಂತೆಗಳೂ ಮುಗಿದುವು. ॥115॥ ಅನಂತರ ರಾಮಗೀರನು ನಾನಾನನ್ನು ಪ್ರಶ್ನಿಸಿದನು. "ಟಾಂಗಾವಾಲನು ಎಲ್ಲಿಗೆ ಹೋದ? ಅವನು ಇಲ್ಲಿಯೂ ಕಾಣುತ್ತಿಲ್ಲ. ನೀನು ಕಳುಹಿಸಿದ ಟಾಂಗಾ ಎಲ್ಲಿ ಹೋಯಿತು?" ॥116॥ ನಾನಾ ಉತ್ತರಿಸಿದನು, "ನಾನು ಯಾವ ಟಾಂಗಾವನ್ನೂ ಕಳುಹಿಸಲಿಲ್ಲ. ನೀನು ಯಾವ ಟಾಂಗಾದ ಬಗ್ಗೆ ಮಾತನಾಡುತ್ತಿರುವೆ ಎಂದು ಗೊತ್ತಾಗುತ್ತಿಲ್ಲ. ನೀನು ಬರುವ ವಿಷಯ ಯಾರಿಗೆ ಗೊತ್ತು? ನಾನೇಕೆ ಟಾಂಗಾವನ್ನು ಕಳುಹಿಸಲಿ?"

॥117॥ ಅನಂತರ ಬುವಾನು ಟಾಂಗಾಕತೆಯನ್ನು ಮೊದಲಿನಿಂದ ಕೊನೆಯವರೆಗೆ ಸಂಪೂರ್ಣವಾಗಿ ಹೇಳಿದನು. ನಾನಾನು, ಬಾಬಾರವರು ತಮ್ಮ ಭಕ್ತರಲ್ಲಿಟ್ಟಿರುವ ಪುತ್ರ ಪ್ರೇಮದ ಬಗ್ಗೆ ಯೋಚಿಸುತ್ತಾ ವಿಸ್ಮಯಗೊಂಡನು. ॥118॥ ಯಾವ ಟಾಂಗಾ! ಯಾವ ಸಿಪಾಯಿ! ಈ ಸಾಯಿಮಾತೆಯು ಈ ರೀತಿಯ ನಾಟಕಗಳನ್ನು ಆಡುತ್ತಿರುವ ವಿಶ್ವಮಾತೆ! ಸಂಕಟಗಳ ಸಮಯದಲ್ಲಿ, ಭಕ್ತರ ಭಕ್ತಿಯ ತೀವ್ರತೆಯಿಂದಾಗಿ ಓಡಿ ಬರುತ್ತಾರೆ. ॥119॥ ಅದು ಹಾಗಿರಲಿ. ಹಿಂದೆಯೇ ಸೂಚಿಸಿದಂತೆ ಈಗ ಕಥೆಯನ್ನು ಮುಂದುವರೆಸೋಣ. ಸ್ವಲ್ಪ ಸಮಯಾನಂತರ ಬಾಬಾರವರುಮಹಾಸಮಾಧಿ ಹೊಂದಿದರು. ॥120॥ ಸನ್ 1918ನೇ ಇಸವಿಯ ದಸರಾ ಹಬ್ಬದಲ್ಲಿ ವಿಜಯದಶಮಿಯ ದಿವಸವನ್ನು ಮಂಗಳಕರವೆಂದು ಬಾಬಾರವರು ಪರಿಗಣಿಸಿದರು ಮತ್ತು ಆ ದಿನ ತಮ್ಮ ದೇಹವನ್ನು ತ್ಯಜಿಸಲು ನಿರ್ಧರಿಸಿದರು. ॥121॥ ಅನಂತರ ಸಮಾಧಿಯನ್ನು ಕಟ್ಟಲಾಯಿತು. ಅದಕ್ಕೆ ಮುಂಚೆ ಬಾಬಾರವರು ದೇಹದಲ್ಲಿದ್ದಾಗಲೇ, ನಾರಾಯಣರಾವ್‌ನು ಎರಡು ಬಾರಿ ದರ್ಶನ ಪಡೆದನು. ॥122॥ ಈಗ ಸಮಾಧಿಯಾಗಿ ಮೂರು ವರ್ಷಗಳು ಕಳೆದಿವೆ. ಅವನಿಗೆ ದರ್ಶನ ತೆಗೆದುಕೊಳ್ಳಬೇಕೆಂಬ ಬಲವತ್ತರವಾದ ಆಸೆಯು ಇತ್ತು, ಆದರೆ ಯೋಗ್ಯ ಅವಕಾಶ ದೊರೆಯಲಿಲ್ಲ. ಅದರಿಂದಾಗಿ ಅವನು ಬಹಳವಾಗಿ ಖಿನ್ನನಾಗಿದ್ದನು. ॥123॥ ಸಮಾಧಿಯ ಒಂದು ವರ್ಷದ ನಂತರ, ನಾರಾಯಣರಾವ್‌ನು ರೋಗಗ್ರಸ್ತನಾದನು. ಎಲ್ಲ ಲೌಕಿಕ ಔಷಧೋಪಚಾರಗಳು ನಡೆದರೂ ಉಪಯೋಗವಾಗಲಿಲ್ಲ. ॥124॥ ಅವನು ರೋಗದಿಂದ ಪೀಡಿತನಾಗಿದ್ದರೂ, ಹಗಲು ರಾತ್ರಿ ಬಾಬಾರವರನ್ನೇ ಧ್ಯಾನಿಸುತ್ತಿದ್ದನು. ಗುರುರಾಯರಿಗೆ ಮರಣವೆಲ್ಲಿದೆ? ಅವರು ನಾರಾಯಣ ರಾವ್‌ನಿಗೆ ದರ್ಶನ ನೀಡಿದರು. ॥125॥ ಒಂದು ರಾತ್ರಿ ಅವನಿಗೆ ಒಂದು ಕನಸಾಯಿತು. ಸಾಯಿಯು ಒಂದು ನೆಲಮನೆಯಿಂದ ಬರುತ್ತಿದ್ದರು. ಅವರು ನಾರಾಯಣರಾವ್ ಹತ್ತಿರ ಬಂದು ಆಶ್ವಾಸನೆ ನೀಡಿದರು. ॥126॥ "ಏನೂ ಚಿಂತಿಸಬೇಡ. ನೀನು ನಾಳೆಯಿಂದ ಗುಣಮುಖನಾಗುತ್ತೀಯೆ. ಒಂದು ಎಂಟು ದಿನಗಳಲ್ಲಿ ನೀನು ಸ್ವಯಂ ಎದ್ದು ಕುಳಿತುಕೊಳ್ಳುತ್ತೀಯೆ." ॥127॥ ಅದು ಹಾಗಿರಲಿ. ಎಂಟು ದಿನಗಳು ಕಳೆದವು, ಅಕ್ಷರಕ್ಷರವೂ ಸತ್ಯವಾಯಿತು. ನಾರಾಯಣರಾವ್‌ನು ಎದ್ದು ಕುಳಿತುಕೊಳ್ಳಬಲ್ಲವನಾದನು. ಅವನ ಅಂತರಂಗವು ಭಾವೋನ್ನತ್ತವಾಯಿತು. ॥128॥ ಸ್ವಲ್ಪ ಸಮಯದ ನಂತರ, ನಾರಾಯಣರಾವ್‌ನು ಶಿರಡಿಗೆ ಸಮಾಧಿಯ ದರ್ಶನಕ್ಕೆಂದು ಬಂದಾಗ ತನ್ನ ಸಂಪೂರ್ಣ ಅನುಭವವನ್ನು ತಿಳಿಸಿದನು. ॥129॥ ಅವರು ದೇಹಧಾರಿಯಾಗಿದ್ದಾಗ ಮಾತ್ರ ಬದುಕಿದ್ದರೆಂದು ಹೇಳಬಹುದೇ? ಅವರು ಸಮಾಧಿ ಹೊಂದಿರುವಾಗ ಮೃತರಾದರೆಂದು ಹೇಗೆ ಹೇಳುವುದು? ಸಾಯಿಯು ಜನನ ಮರಣಗಳಿಗೆ ಅತೀತರಾದವರು. ಮತ್ತು ಸ್ಥಿರ, ಚರಗಳಲ್ಲೆಲ್ಲಾ ವ್ಯಾಪಿಸಿದವರು. ॥130॥ ಯಾವ ರೀತಿ ಒಣಕಟ್ಟಿಗೆಯಲ್ಲಿ ಬೆಂಕಿಯು ಗುಪ್ತವಾಗಿ ಇರುತ್ತದೆಯೋ ಮತ್ತು ಎರಡು ಕಟ್ಟಿಗೆಗಳನ್ನು ಘರ್ಷಿಸಿದಾಗ ಪ್ರದೀಪ್ತವಾಗಿರುವುದೋ ಅದೇ ರೀತಿ ಈ ಸಾಯಿಯು ತಮ್ಮ ಭಕ್ತರಿಗಾಗಿ ಇದ್ದಾರೆ. ॥131॥ ಒಮ್ಮೆ ಅವರನ್ನು ಪ್ರೀತಿಯಿಂದ

ದೃಷ್ಟಿಸಿದಲ್ಲಿ, ಮತ್ತೆ ಅವರು ಆಜನ್ಮಪರ್ಯಂತ ಅವನ ದಾಸರಾಗಿರುತ್ತಾರೆ. ಅವರು ಕೇವಲ ಅನನ್ಯವಾದ ಪ್ರೇಮಕ್ಕಾಗಿ ಹಸಿದಿರುತ್ತಾರೆ ಮತ್ತು ಅಂತಹ ವ್ಯಕ್ತಿಯ ಕರೆಗೆ ಓಗೊಡುತ್ತಾರೆ. ॥132॥ ಅವರು ಪ್ರಕಟವಾಗಲು ಯಾವುದೇ ಕಾಲ ಅಥವಾ ದೇಶವಾಗಲಿ ಬೇಕಿಲ್ಲ. ಅವರು ನಿರಂತರ ಎಲ್ಲ ಜಾಗದಲ್ಲಿಯೂ ಇರುತ್ತಾರೆ. ಅವರು ಯಾವ ರೀತಿಗಳನ್ನು ಹೇಗೆ ಉಪಯೋಗಿಸುತ್ತಾರೆಂಬುದು ಯಾರ ಊಹೆಗೂ ಮೀರಿದುದು. ॥133॥ ಕೆಲವು ವೇಳೆ, ಅವರು ಕುತರ್ಕಗಳನ್ನು ಹುಟ್ಟಿಸುವಂತಹ ಸನ್ನಿವೇಶಗಳನ್ನು ಒದಗಿಸುತ್ತಾರೆ. ಅಂತಹ ಸಮಯಗಳಲ್ಲಿಅವರ ಚರಣಗಳಲ್ಲಿ ಏಕಾಗ್ರದೃಷ್ಟಿಯಿಟ್ಟು ಧ್ಯಾನ ಧಾರಣಗಳನ್ನು ಮಾಡುವ ಶಕ್ತಿಯು ಹೆಚ್ಚಾಗುತ್ತದೆ. ॥134॥ ಈ ರೀತಿ ಮನಸ್ಸು ಏಕಾಗ್ರವಾದಲ್ಲಿ ಅತ್ಯಂತ ಆಳವಾದ ಸಾಯಿ ಚಿಂತನದಲ್ಲಿ ಮುಳುಗಬಹುದು. ಸಾಯಿಯೇ ಇದನ್ನು ಮಾಡಿಸುತ್ತಾರೆ. ಮತ್ತು ಇದು ಯಾವುದೇ ವಿಘ್ನಗಳಿಲ್ಲದೆಯೇ ನಡೆದುಹೋಗುತ್ತದೆ. ॥135॥ ನಿತ್ಯವ್ಯವಹಾರಗಳಿಂದ ದೂರವಾಗುವ ಅವಶ್ಯಕತೆಯೇನಿಲ್ಲ. ಎಲ್ಲ ಆಶೆಗಳೂ ತಮಗೆ ತಾನೇ ಮಾಯವಾಗುತ್ತವೆಈ ರೀತಿ ಮನಸ್ಸನ್ನು ಪಳಗಿಸಿದರೆ ಯಾವುದೇ ಪ್ರಯಾಸವಿಲ್ಲದೆಯೇ ಎಲ್ಲ ಕೆಲಸಗಳೂ ನಡೆದುಹೋಗುತ್ತವೆ. ॥136॥ ಈ ದೇಹವು ಕರ್ಮಭೂಮಿಯಾದ ಈ ಭೂಮಿಗೆ ಬಂದಿರುವುದರಿಂದ, ನಿಸ್ಸಂದೇಹವಾಗಿ ಕರ್ಮಗಳಲ್ಲಿ ತೊಡಗಿರಲೇಬೇಕು. ಹಾಗಿರುವಾಗ ಸಾಕಷ್ಟು ಆಸ್ತಿ, ಧನಗಳನ್ನುಸಂಪಾದಿಸಿ, ಹೆಂಡತಿ ಮಕ್ಕಳ ಜೊತೆ ಏಕೆ ಇರಬಾರದು? ॥137॥ ಏನೇನು ನಡೆಯುವುದೋ ಅವೆಲ್ಲವೂ ಯಥೇಚ್ಛವಾಗಿ ನಡೆಯಲಿ. ನಾವು ಕೇವಲ ಸದ್ಗುರು ಚಿಂತನವನ್ನೇ ಅಪೇಕ್ಷಿಸೋಣ. ಸಂಕಲ್ಪ, ವಿಕಲ್ಪಗಳು ನಷ್ಟಹೊಂದಿ ಸಂಚಿತವಾದ ಅನಿಷ್ಟಗಳೆಲ್ಲವೂ ಮಾಯವಾಗುತ್ತವೆ. ॥138॥ ಭಕ್ತನ ಭಕ್ತಿಯ ಆಳವನ್ನು ಗ್ರಹಿಸಿ ವಿವಿಧ ರೀತಿಯಲ್ಲಿ ಸಾಯಿ ಮಹಾನುಭಾವರು ಭಕ್ತರಿಗೆ ವಿವಿಧ ಅನುಭವಗಳನ್ನು ನೀಡಿ ಭಕ್ತಿಭಾವದ ವೈಭವವನ್ನು ಹೆಚ್ಚಿಸುತ್ತಾರೆ. ॥139॥ ಅವರು ಯಾವುದೇ ವೇಷವನ್ನು ಧರಿಸಬಲ್ಲರು ಮತ್ತು ಸಂಕಲ್ಪಮಾತ್ರದಿಂದ ಎಲ್ಲಾದರೂ ಪ್ರಕಟಗೊಳ್ಳಬಲ್ಲರು. ಅವರು ಭಕ್ತರ ಕಲ್ಯಾಣಕ್ಕಾಗಿ ಎಲ್ಲಾದರೂ ತಿರುಗಬಲ್ಲರು. ಕೇವಲ ಶಿಷ್ಯನ ಭಕ್ತಿ ಮಾತ್ರವೇ ಬೇಕಾಗಿರುವುದು. ॥140॥ ದಯವಿಟ್ಟು ಗೌರವದಿಂದ ಇದೇ ಅರ್ಥ ನೀಡುವ ಮತ್ತೊಂದು ಕಥೆಯನ್ನು ಕೇಳಿರಿ. ಯಾವ ರೀತಿ ಸಂತರು ಹಗಲು ರಾತ್ರಿ ತಮ್ಮ ಭಕ್ತರಿಗಾಗಿ ಪರಿಶ್ರಮ ಪಡುತ್ತಾರೆ ಎಂಬುದನ್ನು ಕೇಳಿರಿ. ॥141॥ ನಿಮ್ಮ ಕಿವಿಗಳ ದ್ವಾರಗಳನ್ನು ತೆರೆಯಿರಿ. ಹೃದಯ ಮಂದಿರದ ಬೀಗ ತೆಗೆಯಿರಿ. ಈ ಕಥೆಯು ನಿಮ್ಮ ಕಣಕಣಗಳನ್ನೂ ಮುಟ್ಟಲಿ. ಅದು ಸಂಸಾರದ ಭಯವನ್ನು ದೂರಮಾಡುತ್ತದೆ. ॥142॥ ಹಿಂದಿನ ವರ್ಷದಲ್ಲಿ ಜರ್ಮನರ ಜೊತೆ ನಡೆದ ಪ್ರಸಿದ್ಧ ಸಂಗ್ರಾಮದಲ್ಲಿ, ಶತ್ರುಗಳ ವಿರುದ್ಧ ಯುದ್ಧ ಮಾಡಲು ಒಂದು ದೊಡ್ಡ ಸೈನ್ಯವನ್ನು ಕಲೆ ಹಾಕುವ ಅವಶ್ಯಕತೆ ಇತ್ತು. ॥143॥ ಭರತ ಭೂಮಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆಂಗ್ಲದೇಶದ ಅಧಿಕಾರಿಗಳು, ಎಲ್ಲ ಪಟ್ಟಣಗಳಿಂದಲೂ ಎಲ್ಲ ಮೂಲೆಗಳಿಂದಲೂ ನೌಕರಿಗಾಗಿ ಜನರನ್ನು ನೇಮಕ ಮಾಡುತ್ತಿದ್ದರು. ॥144॥ ಸನ್ 1917ರಲ್ಲಿ ಥಾಣೆ ಜಿಲ್ಲೆಯಿಂದ

ನೇಮಕಾತಿಗಾಗಿ ಒಬ್ಬ ಭಕ್ತನ ಸರತಿಯು ಬಂದಿತು. ಆದರೆ ಕಥೆಯು ಮತ್ತೊಂದು ತಿರುವನ್ನು ಪಡೆಯಿತು. ||145|| ಅವನ ಹೆಸರು ಅಪ್ಪಾರಾವ್ ಕುಲಕರ್ಣಿ. ಅವನು ಸಾಯಿಚರಣಗಳಲ್ಲಿ ಭಕ್ತಿಯಿಂದ ಇದ್ದನು. ಅದೂ ಸಹ ಸಾಯಿಯ ಅನುಗ್ರಹವೇ. ಅವರ ಲೀಲೆಗಳು ಅಗಾಧವಾದವು. ||146|| ಬಹಳ ವರ್ಷಗಳ ಹಿಂದೆ ಅವನು ಬಾಳಾ ಸಾಹೇಬ ಭಾಟೆರವರಿಂದ ಬಾಬಾರವರ ಒಂದು ಚಿತ್ರಪಟವನ್ನು ಪಡೆದಿದ್ದನು. ಅದನ್ನು ನಿತ್ಯವೂ ಪೂಜಿಸುತ್ತಿದ್ದನು. ||147|| ಅವನು ನಿತ್ಯವೂ ಕಾಯಾ, ವಾಚಾ, ಮನಸಾ ಬಾಬಾರವರ ಚಿತ್ರಪಟವನ್ನು ತನಗೆ ದೊರೆತ ಗಂಧ, ಅಕ್ಷತೆ, ಪುಷ್ಪಗಳಿಂದ ಪೂಜಿಸಿ, ನೈವೇದ್ಯವನ್ನು ಸಮರ್ಪಿಸುತ್ತಿದ್ದನು. ||148|| ಅಪ್ಪಾನ ಹೃದಯವು ಸಾಯಿಯ ಪ್ರತ್ಯಕ್ಷ ದರ್ಶನ ಯೋಗಕ್ಕಾಗಿ ಮಿಡಿಯುತ್ತಿತ್ತು, 'ನಾನು ಯಾವಾಗ ಈ ಕರ್ಮಗಳ ಬಂಧನದಿಂದ ಬಿಡುಗಡೆ ಹೊಂದುತ್ತೇನೆ? ನನ್ನ ಮನದಾಸೆಯು ಎಂದಿಗೆ ನೆರವೇರುತ್ತದೆ? ಎಂದು ಹಲಬುತ್ತಿದ್ದನು. ||149|| ಸಾಯಿಬಾಬಾರವರ ಚಿತ್ರದ ದರ್ಶನವೇ ಸಾಯಿಯ ಪ್ರತ್ಯಕ್ಷ ದರ್ಶನಕ್ಕೆ ಸಮಾನ. ಆದರೆ ಕೇವಲ ಸಂಪೂರ್ಣ ಭಕ್ತಿ ಭಾವವು ಇರಬೇಕಷ್ಟೆ. ಸರಿಯಾದ ಸಮಯದಲ್ಲಿ ಇದಕ್ಕೆ ಸಾಕ್ಷಿ ದೊರಕುತ್ತದೆ. ||150|| ಚಿತ್ರಪಟದ ದರ್ಶನವು ಪ್ರತ್ಯಕ್ಷ ದರ್ಶನಕ್ಕೆ ಸಮನಾದುದು. ಈ ವಿಷಯದ ಅನ್ವರ್ಥತೆಯ ವಿವರಣೆಯನ್ನು ಶ್ರೋತೃಗಳು ಗೌರವಪೂರ್ವಕವಾಗಿ ಆಲಿಸಬೇಕು. ||151|| ಒಮ್ಮೆ ಮುಂಬಯಿಯ ನಿವಾಸಿ, ಭಜನಕಾರ ಬಾಳಾ ಬುವಾ ಸುತಾರನು ಆಧುನಿಕ ತುಕಾರಾಮನೆಂದೇ ಹೆಸರುವಾಸಿಯಾದವನು, ಶಿರಡಿಗೆ ದರ್ಶನಕ್ಕಾಗಿ ಹೋದನು. ||152|| ಇದು ಅವನ ಪ್ರಥಮ ಭೇಟಿಯಾಗಿತ್ತು, ಅವರು ಹಿಂದೆ ಎಂದೂ ಭೇಟಿಯಾಗಿರಲಿಲ್ಲ, ಆದರೆ ಅವರು ಪರಸ್ಪರ ಒಬ್ಬರನ್ನೊಬ್ಬರು ನೋಡಿದ ಕೂಡಲೇ, ಸಾಯಿಯು ಅವನಿಗೆ ಸ್ಪಷ್ಟವಾಗಿ ಹೇಳಿದರು. ||153|| "ನಾನು ನಿನ್ನನ್ನು ಈ ನಾಲ್ಕು ವರ್ಷಗಳಿಂದ ನೋಡುತ್ತಲೇ ಇದ್ದೇನೆ." ಬಾಳಾಬುವಾಗೆ ಆಶ್ಚರ್ಯವಾಯಿತು. "ಅವರು ಏಕೆ ಈ ರೀತಿ ಹೇಳಿದರು?" ||154|| ಬಾಬಾರವರು ಎಂದಿಗೂ ಶಿರಡಿ ಬಿಟ್ಟು ಹೊರಗೆ ಹೋದವರಲ್ಲ. ನಾನಾದರೋ ಈ ಜಾಗವನ್ನು ನೋಡುತ್ತಿರುವುದು ಇದೇ ಮೊದಲು. ಹಾಗಿರಲು ಅದು ಹೇಗೆ ಇವರು ನನ್ನನ್ನು ಈ ನಾಲ್ಕು ವರ್ಷಗಳಿಂದ ಅರಿತಿದ್ದಾರೆ? ||155|| ಈ ರೀತಿ ಪದೇ ಪದೇ ವಿಚಾರ ಮಾಡುತ್ತಾ ನಾಲ್ಕು ವರ್ಷಗಳ ಹಿಂದೆ ನಡೆದ ಘಟನೆಯನ್ನು ನೆನಪಿಸಿಕೊಂಡನು. ಬಾಬಾರವರ ಚಿತ್ರಪಟಕ್ಕೆ ಒಮ್ಮೆ ನಮಸ್ಕರಿಸಿದ್ದನ್ನು ನೆನಪಿಸಿಕೊಂಡನು. ||156|| ಅನಂತರ ಬಾಳಾಬುವಾನು ಕೂಡಲೇ ಆ ಮಾತಿನ ಅನ್ವರ್ಥತೆಯನ್ನು ಅರ್ಥಮಾಡಿಕೊಂಡು ಹೇಳಿದನು, "ನೋಡಿ, ಸಂತರ ಸರ್ವವ್ಯಾಪಕತೆಯನ್ನು ಮತ್ತು ಅವರ ಭಕ್ತವಾತ್ಸಲ್ಯವನ್ನು ನೋಡಿ. ||157|| "ನಾನು ಕೇವಲ ಒಂದು ಚಿತ್ರಕ್ಕೆ ನಮಸ್ಕರಿಸಿದ್ದೆನು. ಅವರನ್ನು ಈ ದಿನ ಪ್ರತ್ಯಕ್ಷವಾಗಿ ನೋಡಿದೆನು. ನಾನು ಅದನ್ನು ಬಹಳ ಹಿಂದೆಯೇ ಮರೆತು ಹೋದೆನು. ಆದರೆ ಬಾಬಾರವರು ಅದನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದರು. ||58|| "ನಾನು ಮರೆತೇಹೋಗಿದ್ದೆ ಎಂದು ಹೇಳುವುದು ಸರಿಯಲ್ಲ. ಆದರೆ ಅವರ ಮಾತಿನ ಅರ್ಥವನ್ನು ಕೂಡಲೇ ಗ್ರಹಿಸಲು

ಸಾಧ್ಯವಾಗಲಿಲ್ಲ. ನಾನು ಚಿತ್ರಪಟಕ್ಕೆ ನಮಸ್ಕರಿಸಿದ ಫಲವೇ ಇದು ಎಂದು ಅರ್ಥಮಾಡಿಕೊಳ್ಳಲು ಸಮರ್ಥನಾಗಲಿಲ್ಲ. ॥159॥ "ಬಾಬಾರವರಿಗೆ ನನ್ನ ಅರಿವಿತ್ತು. ಆದರೆ ಅವರು ನನ್ನನ್ನು ನೆನಪಿನಲ್ಲಿಟ್ಟುಕೊಂಡಿರುವ ಬಗ್ಗೆ ನನಗೆ ಯಾವುದೇ ಊಹೆ ಇರಲಿಲ್ಲ." ಸಂತರು ನೆನಪಿಸಿದಾಗ ಮಾತ್ರವೇ ಅದನ್ನು ಅರಿಯಬಹುದು. ॥160॥ ನಿರ್ಮಲವಾದ ಕನ್ನಡಿಯಲ್ಲಾಗಲೀ, ನಿರ್ಮಲವಾದ ಜಲದಲ್ಲಾಗಲಿ ಸೂರ್ಯನ ಅಥವಾ ಚಂದ್ರನ ಬಿಂಬವನ್ನು ನೋಡಬಹುದು. ಚಿತ್ರಪಟವೂ ಸಹ ಪರಿಶುದ್ಧ ಪ್ರತಿಬಿಂಬವೇ ಮತ್ತು ಅದರಿಂದ ತಮ್ಮ ಕೈಕೆಳಗೆ ಕರ್ತವ್ಯ ನಿರ್ವಹಿಸುತ್ತಿರುವವರ ಮೇಲೆ ತನ್ನ ಪ್ರಕಾಶವನ್ನು ಬೀರಲು ಸಾಧ್ಯ. ॥161॥ ಆದ್ದರಿಂದ, ಸಂತರ ಚಿತ್ರಪಟದ ದರ್ಶನವು ಸಂತರ ಪ್ರತ್ಯಕ್ಷ ದರ್ಶನಕ್ಕೆ ಸಮ. ಸಂತರ ಸರ್ವದರ್ಶಿತ್ವವು ಇವೆಲ್ಲದರಿಂದ ಕಲಿಯುವ ಪಾಠ. ॥162॥ ಸಾಕಿಷ್ಟು, ಶ್ರೋತೃಗಳು ಈ ಹಿಂದಿನ ಕಥೆಯನ್ನು ಈಗ ಗಮನವಿಟ್ಟು ಕೇಳಿರಿ. ಹಿಂದಿನ ಅನುಭವವನ್ನು ಮನಸ್ಸಿನಲ್ಲಿ ಅನುಸಂಧಾನಮಾಡಿ. ॥163॥ ಅಪ್ಪಾನು ಥಾಣೆಯೆಂಬ ಪಟ್ಟಣದಲ್ಲಿದ್ದನು. ಅವನಿಗೆ ಭಿವಾಂಡಿಯಲ್ಲಿ ಸ್ವಲ್ಪ ಕೆಲಸವಿತ್ತು, ಎಂಟು ದಿನಗಳ ನಂತರ ಹಿಂತಿರುಗುವೆನೆಂದು ತಿಳಿಸಿ ಮನೆಯಿಂದ ಹೊರಟನು. ॥164॥ ಕೇವಲ ಎರಡು ದಿನಗಳು ಕಳೆದಿದ್ದವು. ಆಗ ಅವನ ಮನೆಯಲ್ಲಿ ಅಪೂರ್ವವಾದ ಸಂಗತಿಯೊಂದು ನಡೆಯಿತು. ಥಾಣೆಯಲ್ಲಿದ್ದ ಮನೆಯಲ್ಲಿ ಒಬ್ಬ ಫಕೀರನು ಬಾಗಿಲಿಗೆ ಬಂದನು. ॥165॥ ಅವನನ್ನು ನೋಡಿದವರೆಲ್ಲರೂ ಅವನು ಸ್ವತಃ ಸಾಯಿಯೇ ಎಂದು ಭಾವಿಸಿದರು. ಸ್ಪಷ್ಟವಾಗಿ ಚಿತ್ರದಲ್ಲಿರುವಂತೆಯೇ ನಖಶಿಖಾಂತವಾಗಿ ಅವನ ರೂಪರೇಖೆಯು ಅದಕ್ಕೆ ಹೋಲುತ್ತಿತ್ತು. ॥166॥ ಅವನ ಪತ್ನಿ ಮತ್ತು ಮಕ್ಕಳು ಫಕೀರನನ್ನು ದೃಷ್ಟಿಸಿ ನೋಡಿದರು. ಮತ್ತು ಎಲ್ಲರೂ ವಿಸ್ಮಯಹೊಂದಿದರು. ಅವರು ಬಾಬಾರವರೇ ಸ್ವತಃ ಬಂದಿದ್ದಾರೆಂದು ಭಾವಿಸಿದರು. ॥167॥ ಈ ಹಿಂದೆ ಯಾರು ಅವರ ಪ್ರತ್ಯಕ್ಷ ದರ್ಶನ ಹೊಂದಿಲ್ಲದಿದ್ದರೂ, ಆ ಚಿತ್ರಪಟದ ಜೊತೆಯಿದ್ದ ಹೋಲಿಕೆಯಿಂದ ಅವರೇ ಆ ಬಾಬಾ ಎಂದು ಅರಿತರು. ಅವರ ಜಿಜ್ಞಾಸೆಯು ಹೆಚ್ಚಾಯಿತು. ॥168॥ ಎಲ್ಲರೂ ಆ ಫಕೀರನನ್ನು ಪ್ರಶ್ನಿಸಿದರು, "ನೀವು ಶಿರಡಿಯ ಸಾಯಿಯೇನಾ?" ಅದಕ್ಕೆ ಏನು ಉತ್ತರಿಸಿದರೆಂಬುದನ್ನು ಶ್ರೋತೃಗಳು ಗಮನವಿಟ್ಟು ಕೇಳಿ. ॥169॥ "ನಿಜವಾಗಿಯೂ ನಾನೇ ಸ್ವತಃ ಸಾಯಿಯಲ್ಲ. ಆದರೆ ನಾನು ಅವರ ವಿಧೇಯನಾದ ದಾಸ. ನಾನು ಅವರ ಆಜ್ಞೆಯ ಮೇರೆಗೆ ಮಕ್ಕಳ ಆರೋಗ್ಯದ ಬಗ್ಗೆ ವಿಚಾರಿಸಲು ಇಲ್ಲಿಗೆ ಬಂದಿರುವೆನು." ॥170॥ ಅನಂತರ ದಕ್ಷಿಣೆಯನ್ನು ಬೇಡಲು, ಆ ಮಕ್ಕಳ ತಾಯಿಯು ಅವನ ಮಾತುಗಳನ್ನು ಗೌರವಿಸಿ ಕೂಡಲೇ ಅವನಿಗೆ ಒಂದು ರೂಪಾಯಿ ಕೊಟ್ಟಳು. ಅವನೂ ಸಹ ಅವಳಿಗೆ ಉದಿ ಪ್ರಸಾದ ಕೊಟ್ಟನು. ॥171॥ ಅವನು ಸಾಯಿಬಾಬಾರವರ ಉದಿಯ ಪೊಟ್ಟಣವನ್ನು ಆ ಮಹಿಳೆಗೆ ಕೊಟ್ಟು ಹೇಳಿದನು, "ಇದನ್ನು ಚಿತ್ರ ಪಟದ ಹತ್ತಿರ ಇಡು. ಅದು ನಿನಗೆ ಸುಖಪ್ರದವಾಗಿರುತ್ತದೆ." ॥172॥ ತನ್ನ ಕಾರ್ಯವನ್ನು ಈ ರೀತಿ ಮುಗಿಸಿ, ಫಕೀರನು "ಸಾಯಿಯು ನನಗಾಗಿ ಕಾಯುತ್ತಿರಬೇಕು." ಎಂದು ಹೇಳಿ ತನ್ನ ದಾರಿ ಹಿಡಿದನು. ॥173॥ ಅನಂತರ ಅವನು ಬಂದ

ದಾರಿಯಲ್ಲೇ ಹಿಂತಿರುಗಿದನು. ಅನಂತರ ಅಲ್ಲಿ ಏನಾಯಿತು ಎಂಬುದನ್ನು ಗಮನಿಸಿರಿ. ಸಾಯಿಯ ಲೀಲೆಗಳು ಅಷ್ಟು ಅಪೂರ್ವ. ||174|| ಅಪ್ಪಾ ಸಾಹೇಬನು ಬೀವಾಂಡಿಗೆ ಹೊರಟವನು, ಟಾಂಗಾದ ಕುದುರೆಗಳು ಅಸ್ವಸ್ಥವಾದುದರಿಂದ ಮುಂದಕ್ಕೆ ಹೋಗುವ ಬದಲು ಹಿಂದಿರುಗಿದನು. ಅವನ ಮುಂದಿನ ಪ್ರಯಾಣವನ್ನು ರದ್ದು ಮಾಡಬೇಕಾಯಿತು. ||175|| ಅವನು ಮಧ್ಯಾಹ್ನ ಥಾನೆಗೆ ಹಿಂದಿರುಗಿದನು ಮತ್ತು ಅಲ್ಲಿ ನಡೆದುದೆಲ್ಲವನ್ನೂ ಅರಿತನು. ಅಪ್ಪಾ ಸಾಹೇಬನಿಗೆ ದರ್ಶನ ತಪ್ಪಿ ಹೋದುದಕ್ಕೆ ಖೇದವೆನಿಸಿತು. ||176|| ಕೇವಲ ಒಂದೇ ಒಂದು ರೂಪಾಯಿಯ ದಕ್ಷಿಣೆ ಕೊಡಲಾಯಿತೆಂದು ಕೇಳಿ ಅವನಿಗೆ ನಾಚಿಕೆಯಾಯಿತು. "ನಾನೇನಾದರೂ ಅಲ್ಲಿ ಇದ್ದಿದ್ದರೆ ಅವನನ್ನು ಹಿಂದಕ್ಕೆ ಕಳುಹಿಸುವ ಮೊದಲು ಹತ್ತು ರೂಪಾಯಿಗಳಿಗಿಂತ ಕಡಿಮೆ ಕೊಡುತ್ತಿರಲಿಲ್ಲ." ||177|| ಎಂದು ಅಪ್ಪಾಸಾಹೇಬನು ಹೇಳಿದನು. ಅವನು ಬೇಸರದಿಂದ ಖಿನ್ನನಾದನು. ಅವನು ಮಸೀದಿಯಲ್ಲಿ ಫಕೀರನನ್ನು ಕಂಡುಹಿಡಿಯಬಹುದೆಂದು ಭಾವಿಸಿದನು. ಆದ್ದರಿಂದ ಏನೂ ತಿನ್ನದೆಯೇ ಅವನನ್ನು ಹುಡುಕಿಕೊಂಡು ಹೊರಟನು. ||178|| ಅಪ್ಪಾನು, ಮಸೀದಿ, ತಕಿಯಾ ಮುಂತಾದ ಎಲ್ಲ ಜಾಗಗಳಲ್ಲೂ ಹುಡುಕಿದನು. ಮತ್ತು ಫಕೀರರಿಗಾಗಿ ಪ್ರಯಾಣಿಕರು ತಂಗುವ ತಾಣಗಳನ್ನೆಲ್ಲ ಹುಡುಕಿದನು. ||179|| ಅವನು ಹುಡುಕುತ್ತಾ ದಣಿದು ಹೋದರೂ ಫಕೀರನನ್ನು ಮಾತ್ರ ಎಲ್ಲಿಯೂ ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ಅವನು ನಿರಾಶನಾಗಿ ಹಸಿವಿನಿಂದ ದಣಿದು ಮನೆಗೆ ಹೋಗಿ ಊಟಮಾಡಿದನು. ||180|| ಆದರೆ ಅವನಿಗೆ ಖಾಲಿ ಹೊಟ್ಟೆಯಲ್ಲಿ ಹುಡುಕ ಹೋಗಬಾರದೆಂದು ತಿಳಿದಿರಲಿಲ್ಲ. ತಮ್ಮ ಆತ್ಮವನ್ನು ಸಂತುಷ್ಟಿ ಪಡಿಸಿಯೇ ಹುಡುಕುವುದನ್ನು ಮಾಡುವುದು ಅವಶ್ಯಕ. ||181|| ಬಾಬಾರವರ ಕಥೆಯ ಅರ್ಥವು ಈ ನಿಜ ತತ್ವದ ಯಥಾರ್ಥತೆಯನ್ನು ತೋರಿಸುತ್ತದೆ. ಅದನ್ನು ಇಲ್ಲಿ ಏಕೆ ಮತ್ತೆ ಉಚ್ಚರಿಸಬೇಕು? ಶ್ರೋತೃಗಳು ಆ ಅಧ್ಯಾಯವನ್ನು ಚೆನ್ನಾಗಿ ಬಲ್ಲರು. ||182|| 'ಗುರುವಿನ ಮಹಿಮೆ' ಎಂಬ ಹಿಂದಿನ ಒಂದು ಅಧ್ಯಾಯದಲ್ಲಿ ಶ್ರೀ ಸಾಯಿಯವರು ಕರುಣಾ ಪೂರಿತರಾಗಿ ಸ್ವತಃ ತಮ್ಮಗುರುವಿನ ಮುಖದಿಂದಲೇ ಬಂದಂತಹ ವಚನಗಳೆಂದು ಒಂದು ಅದ್ಭುತವಾದ ಕಥೆಯನ್ನು ಹೇಳಿರುತ್ತಾರೆ. ||183|| ಅಪ್ಪಾನಿಗೂ ಸಹ ಇಂತಹುದೇ ಸತ್ಯ ಅನುಭವಕ್ಕೆ ಬಂದಿತ್ತು. ಊಟವಾದ ನಂತರ ತನ್ನ ಸ್ನೇಹಿತ ಚಿತ್ರೆಯ ಜೊತೆಯಲ್ಲಿ ಸಹಜವಾಗಿಯೇ ನಡೆದುಕೊಂಡು ಹೋದನು. ||184|| ಇಷ್ಟು ಸಾಕು. ಸ್ವಲ್ಪ ದೂರ ನಡೆದ ನಂತರ ಒಬ್ಬ ಗೃಹಸ್ಥನು ಅತಿ ಅವಸರದಿಂದ ತನ್ನನ್ನೇ ನೋಡಲು ಇಚ್ಛಿಸಿ ಆ ಜಾಗದ ಕಡೆಗೆ ಬರುತ್ತಿರುವುದನ್ನು ಕಂಡನು. ||185|| ಅವನು ಯಾವಾಗ ಬಂದು ಅಪ್ಪಾ ಸಾಹೇಬನ ಹತ್ತಿರ ನಿಂತುಕೊಂಡನೋ, ಆಗ ಅವನು ಮುಂದೆ ನುಗ್ಗದೆ ಎಚ್ಚರಿಕೆಯಿಂದ ಅವನ ಕಡೆ ನೋಡಿ, ಬೆಳಗ್ಗೆ ಬಂದ ವ್ಯಕ್ತಿಯು ಇವನೇ ಆಗಿರಬೇಕೆಂದು ಯೋಚಿಸುತ್ತಾ ನಿಂತನು. ||186|| 'ನಾನು ಆಗಲೇ ಹುಡುಕುತ್ತಿದ್ದ ಫಕೀರನು ಇವನೇ ಇರಬೇಕೆಂದು ನನಗೆ ಅನ್ನಿಸುತ್ತದೆ. ಅವನು ನಖಶಿಖಾಂತ ಆ ಚಿತ್ರವನ್ನೇ ಹೋಲುತ್ತಾನೆ. ನನಗೆ ವಿಸ್ಮಯ ಉಂಟಾಯಿತು.' ||187|| ಈ ರೀತಿ ಅಪ್ಪಾನು ತನ್ನ

ಅಂತರಂಗದಲ್ಲೇ ತರ್ಕಿಸುತ್ತಿರಲು ಆ ಫಕೀರನು ಕೈ ಚಾಚಿದನು ಮತ್ತು ಅಪ್ಪಾನು ಆ ಸಮಯದಲ್ಲಿ ಅವನ ಕೈಯಲ್ಲಿ ಒಂದು ರೂಪಾಯಿಯನ್ನು ಇಟ್ಟನು. ॥188॥ ಅವನು ಮತ್ತೆ ಹೆಚ್ಚು ಕೇಳಿದನು ಮತ್ತು ಅವನು ಮತ್ತೊಂದು ರೂಪಾಯಿ ಕೊಟ್ಟನು. ಈ ರೀತಿ ಒಟ್ಟು ಮೂರು ರೂಪಾಯಿ ಕೊಟ್ಟನು. ಆದರೂ ಆ ಫಕೀರನು ಇನ್ನೂ ಹೆಚ್ಚಿಗೆ ಕೇಳಿದನು. ನಿಜವಾದ ಕೌತುಕ ಇನ್ನು ಮುಂದೆ ಇದೆ. ॥189॥ ಚಿತ್ರೆಯ ಹತ್ತಿರ ಮೂರು ರೂಪಾಯಿಗಳು, ಮಾತ್ರ ಉಳಿದಿದ್ದುವು. ಅವುಗಳನ್ನೂ ಅಪ್ಪಾನು ಅವರಿಂದ ತೆಗೆದುಕೊಂಡು ಫಕೀರನಿಗೆ ಕೊಟ್ಟರು. ಆದರೂ ಅವನು ಇನ್ನೂ ಹೆಚ್ಚಿಗೆ ಕೇಳಿದನು. ॥190॥ ಅಪ್ಪಾ ಸಾಹೇಬನು ಅವನಿಗೆ ಹೇಳಿದನು. "ನೀನು ಮನೆಗೆ ಬಂದರೆ ಇನ್ನೂ ಹೆಚ್ಚು ಕೊಡುತ್ತೇನೆ." ಫಕೀರನು ಒಪ್ಪಿಕೊಂಡನು ಮತ್ತು ಆ ಮೂವರೂ ಮನೆಗೆ ಹಿಂತಿರುಗಿದರು. ॥191॥ ಮನೆ ತಲುಪಿದ ಕೂಡಲೇ, ಅವನು ಹೊರತೆಗೆದು ಮತ್ತೆ ಮೂರು ರೂಪಾಯಿಗಳನ್ನು ಅವನ ಕೈಯಲ್ಲಿಟ್ಟನು. ಒಟ್ಟಾರೆ ಒಂಭತ್ತು ರೂಪಾಯಿಗಳಾದವು. ಆದರೂ ಫಕೀರನಿಗೆ ತೃಪ್ತಿಯಾಗಲಿಲ್ಲ. ॥192॥ ಮತ್ತೆ ದಕ್ಷಿಣೆಯನ್ನು ಕೇಳುವಾಗ ಅಪ್ಪಾ ಸಾಹೇಬನು ಸತ್ಯವಾಗಿ ಹೇಳಿದನು, ಏನೆಂದರೆ ಅವನ ಹತ್ತಿರ ಕೇವಲ ಒಂದೇ ಒಂದು ಹತ್ತು ರೂಪಾಯಿಯ ನೋಟು ಇದೆ ಎಂದು ಹೇಳಿದನು. ॥193॥ ಚಿಲ್ಲರೆಗಳೆಲ್ಲವೂ ಮುಗಿದು ಹೋಗಿದ್ದವು. ಅಲ್ಲಿ ಮತ್ತೇನೂ ಉಳಿದಿರಲಿಲ್ಲ. ಫಕೀರನು ಹೇಳಿದನು, "ನೋಟನ್ನೇ ಕೊಡಬಾರದೇಕೆ?" ಅಪ್ಪಾನು ಅದನ್ನೂ ಮಾಡಿದನು. ॥194॥ ಆ ನೋಟು ಅವನ ಕೈಗೆ ಬರುತ್ತಲೇ, ಒಂಭತ್ತು ರೂಪಾಯಿಗಳ ಚಿಲ್ಲರೆಯನ್ನು ಹಿಂತಿರುಗಿಸಿದ ಆ ಫಕೀರನು ಬಂದಿದ್ದ ರೀತಿಯಲ್ಲೇ ಹಿಂತಿರುಗಿ ಅತಿ ವೇಗದಿಂದ ಹೆಜ್ಜೆ ಹಾಕುತ್ತಾ ಹೊರಟು ಹೋದನು. ॥195॥ ಈ ಕಥೆಯ ಸಾರವನ್ನು ಯಾರಾದರೂ ಪರಿಗಣಿಸಿದಲ್ಲಿ ಸಾಯಿಯು ಭಕ್ತರ ಆಶೆಯನ್ನು ಅವರಿಗೆ ಬೇಕಾದ ರೀತಿಯಲ್ಲಿ ಪೂರೈಸುತ್ತಾರೆ ಎಂಬುದು ಅರ್ಥವಾಗುತ್ತದೆ. ಇದು ಅವರ ಧರ್ಮವಾಗಿತ್ತು. ॥196॥ ಶ್ರೋತೃಗಳ ಶ್ರವಣೋತ್ಸಾಹವನ್ನು ಗಮನಿಸಿದರೆ ಮತ್ತೊಂದು ಕಥೆಯ ನೆನಪಾಗುತ್ತದೆ. ಆ ಕಥೆಯು ಅದೇ ಅರ್ಥ ಉಳ್ಳದ್ದು, ಈ ಸಮಯಕ್ಕೆ ಉಚಿತವಾಗಿದೆ. ಅತಿ ಗೌರವದಿಂದ ಕೇಳಿ. ॥197॥ ಒಬ್ಬ ತುಂಬಾ ಪ್ರೀತಿ ತುಂಬಿದ್ದ ಭಕ್ತನಿದ್ದ, ಅವನ ಹೆಸರು ಹರಿಭಾವು ಕಾರ್ಣಿಕ್. ದಹನು ಎಂಬ ಹಳ್ಳಿಯವನು. ಅವನು ಸಾಯಿಯ ಅನನ್ಯ ಭಕ್ತನಾಗಿದ್ದನು. ॥198॥ ಸನ್ 1917ನೇ ಇಸವಿಯಲ್ಲಿ, ಅಂದು ಪವಿತ್ರವಾದ ಗುರುಪೂರ್ಣಿಮೆಯ ದಿನ. ಅವನು ಶಿರಡಿಗೆ ಯಾತ್ರೆ ಬಂದನು. ಅವನ ಬಗ್ಗೆ ಚಿಕ್ಕ ಕಥೆಯಿದೆ. ಅದನ್ನು ಹೇಳುತ್ತೇನೆ. ॥199॥ ಅವನು ಯಥಾವಿಧಿಪೂರ್ವಕವಾಗಿ ಪೂಜೆ ಮಾಡುತ್ತಿದ್ದನು ಮತ್ತು ವಸ್ತ್ರ, ದಕ್ಷಿಣೆಗಳನ್ನು ಅರ್ಪಿಸುತ್ತಿದ್ದನು. ಅವನು ಹೊರಡಲು ಆಜ್ಞೆ ಪಡೆದುಕೊಂಡು ಮೆಟ್ಟಿಲುಗಳನ್ನು ಇಳಿದು ಬಂದಾಗ ಮನಸ್ಸಿನಲ್ಲಿ ಒಂದು ಯೋಚನೆ ಬಂದಿತ್ತು. ॥200॥ ಅವನಿಗೆ ಮೇಲೆ ಹೋಗಿ ಬಾಬಾರವರಿಗೆ ಮತ್ತೆ ಒಂದು ರೂಪಾಯಿಯನ್ನು ಕೊಡಬೇಕೆನ್ನಿಸಿತು. ಆದರೆ ಈ ವಿಚಾರವನ್ನು ಬಿಟ್ಟು ರೂಪಾಯಿಯನ್ನು ಅರ್ಪಿಸದೆಯೇ

ಇಟ್ಟುಕೊಳ್ಳಬೇಕಾಯಿತು. ॥201॥ ಅವನಿಗೆ ಹಿಂತಿರುಗಲು ಅಪ್ಪಣೆಯನ್ನು ಕೊಡಿಸಿದಂತಹ ಗೃಹಸ್ಥನು[11] ತಾನಾಗಿಯೇ ಮೇಲಿನಿಂದ ಸನ್ನೆ ಮಾಡಿ ಒಮ್ಮೆ ಅಪ್ಪಣೆಯನ್ನು ಪಡೆದ ಮೇಲೆ ಕೂಡಲೇ ಅಲ್ಲಿಂದ ಹೊರಟು ಬಿಡಬೇಕೆಂದು ಸೂಚಿಸಿದನು. ॥202॥ ಆ ಸಂಜ್ಞೆಯಲ್ಲಿ ವಿಶ್ವಾಸವಿಟ್ಟು ಕಾರ್ಣಿಕ್‌ನು ತನ್ನ ದಾರಿ ಹಿಡಿದು ಹೊರಟನು. ಮಾರ್ಗದಲ್ಲಿಯೇ ನಾಸಿಕ್‌ನಲ್ಲಿ ಮಿತ್ರನ ಜೊತೆಯಲ್ಲಿ ಇಳಿದನು. ॥203॥ ಕಾರ್ಣಿಕ್‌ನು ಕಾಳಾರಾಮನ ಮಂದಿರಕ್ಕೆ ದರ್ಶನಕ್ಕಾಗಿ ಹೋದಾಗ ಅಲ್ಲಿ ಅನಿರೀಕ್ಷಿತವಾಗಿ ಸಂತ ನರಸಿಂಗಮಹಾರಾಜರ ದರ್ಶನವಾಯಿತು. ॥204॥ ಮಹಾರಾಜರು ಭಕ್ತರ ಪರಿವಾರದೊಡನೆ ಕುಳಿತಿದ್ದರು. ಆದರೆ ಅವರು ಅಕಸ್ಮಾತ್ತಾಗಿ ಎದ್ದು ನಿಂತು ಕಾರ್ಣಿಕ್‌ನ ಕೈಯನ್ನು ಮಣಿ ಬಂಧದಲ್ಲಿ ಹಿಡಿದು ಹೇಳಿದರು. "ನನ್ನ ರೂಪಾಯಿಯನ್ನು ನನಗೆ ಕೊಡು." ॥205॥ ಕಾರ್ಣಿಕ್‌ನು ಮನದಲ್ಲಿಯೇ ಅಚ್ಚರಿಗೊಂಡನು ಮತ್ತು ಆನಂದದಿಂದ ಕೊಟ್ಟನು ಅವನಿಗೆ ಸಾಯಿಯೇ ಸ್ವತಃ ಅವನ ಮನದಿಚ್ಛೆಯನ್ನು ಅರಿತು ರೂಪಾಯಿಯನ್ನು ಸ್ವೀಕರಿಸಿದರೆನ್ನಿಸಿತು. ॥206॥ ಸಾಯಿಯೇ ಸ್ವೀಕರಿಸಿದ್ದಾರೆ ಎಂದು ಹೇಳುವುದು ಸತ್ಯವಲ್ಲ. ಕಾರ್ಣಿಕ್‌ನು ಮರೆತು ಹೋಗಿದ್ದರೂ, ಅವರು ತಾವೇ ಕೈ ಚಾಚಿ ಒತ್ತಾಯದಿಂದ ತೆಗೆದುಕೊಂಡಿದ್ದರು. ಇದು ನಿಜವಾದ ಸತ್ಯವಾಗಿತ್ತು. ॥207॥ ಮನಸ್ಸಿನ ಗುಣವು ಸಂಕಲ್ಪ ವಿಕಲ್ಪವಾದುದು. ತರಂಗಗಳಮೇಲೆ ತರಂಗಗಳು ಏಳುವುವು. ಆರಂಭದಲ್ಲಿ ಏನನ್ನಾದರೂ ಯೋಚಿಸುತ್ತಾನೆ ಆದರೆ ಅನಂತರ ಬೇರೆಯೇ ಯೋಚನೆ ಬರುತ್ತದೆ. ॥208॥ ಆರಂಭದಲ್ಲಿ ಏಳುವ ಯೋಚನಾ ಲಹರಿಯು ಒಳ್ಳೆಯದಾಗಿದ್ದು, ಸದ್ವೃತ್ತಿಯದ್ದಾಗಿದ್ದರೆ ಅದನ್ನು ಪರಿಪೋಷಿಸಬೇಕು. ಅದು ಅವನಿಗೆ ಕಲ್ಯಾಣಕಾರಿಯಾಗಿರುತ್ತದೆ. ॥209॥ ಇದನ್ನು ಮನಸ್ಸಿನಲ್ಲಿಯೇ ಅನುಸಂಧಾನ ಮಾಡಿ ಎಚ್ಚರಿಕೆಯಿಂದ ಅಧ್ಯಯನ ಮಾಡಿ ಮತ್ತು ನಿಧಿದ್ಯಾಸನ ಮಾಡಿರಿ. ಅದನ್ನು ಮರೆಯಬೇಡಿರಿ ಮತ್ತು ಪ್ರತಿಯೊಂದು ಮಾತನ್ನೂ ಉಳಿಸಿಕೊಳ್ಳಲು ಸಕಲ ಪ್ರಯತ್ನ ಮಾಡಿರಿ. ॥210॥ ಅಪ್ಪಾಸಾಹೇಬನು ಅವರ ಬಗ್ಗೆ ಹೇಳಿದ್ದನು. ಆದರೆ ಅನಂತರ ಅದನ್ನು ಮರೆತಿರಬಹುದು. ಆದರೆ ಆತನು ಹೇಳಿದ್ದ ರೀತಿಯಲ್ಲೇ ಬಾಬಾರವರು ಅವನ ಇಚ್ಛೆಯನ್ನು ಪೂರೈಸಿದ್ದರು ಮತ್ತು ಭಕ್ತಿಯ ಅದ್ಭುತ ದೃಷ್ಟಾಂತವನ್ನು ತೋರಿಸಿದರು. ॥211॥ ಇಲ್ಲದಿದ್ದರೆ, ಫಕೀರನು ತನ್ನ ಹತ್ತಿರ ಹತ್ತೊಂಭತ್ತು ರೂಪಾಯಿಗಳು ಇದ್ದರೂ, ಹತ್ತು ರೂಪಾಯಿಗಳ ನೋಟಿನ ಸಹಿತವಾಗಿದ್ದು ಅಪ್ಪಾನಿಗೆ ಒಂಭತ್ತುರೂಪಾಯಿಗಳನ್ನು ಮಾತ್ರ ಏಕೆ ಕೊಟ್ಟನು? ಅದು ಅಪ್ಪಾನ ತೀವ್ರವಾದ ಆಶೆಇದ್ದುದು. ಹತ್ತು ರೂಪಾಯಿಗಳನ್ನು ಮಾತ್ರ ಕೊಡಲು ಇಚ್ಛಿಸಿದ್ದು. ॥212॥ ಇದು ಒಂಭತ್ತು ನಾಣ್ಯಗಳ ಕಂಠೀಹಾರವಾಗಿತ್ತು ಮತ್ತು ಬಾಬಾರವರ ಹಸ್ತಸ್ಪರ್ಶವಾಗಿದ್ದು ನವ ವಿಧ ಭಕ್ತಿಗಳ ಸಂಕೇತವಾಗಿತ್ತು, ಅವನಿಗೆ ಅದನ್ನು ನೆನಪಿಗೆ ತರುವ ರೀತಿ ಸಾಯಿಯದಾಗಿತ್ತು. ॥213॥ ಬಾಬಾರವರು ತಮ್ಮ ದೇಹವನ್ನು ತ್ಯಜಿಸುವ ಕಥೆಯನ್ನು ಕೇಳಿದರೆ ನೀವು ದಾನ ಮಾಡುವ ಆದರ್ಶ ರೀತಿಯನ್ನು ಅರಿಯುವಿರಿ. ಅವರು ಆ ಸಮಯದಲ್ಲಿ ಒಂಬತ್ತು ರೂಪಾಯಿಗಳನ್ನು ಕೊಟ್ಟಿದ್ದರು.[12] ॥214॥ ಅವನ ಪತ್ನಿಯು ಕೇವಲ ಒಂದು

ರೂಪಾಯಿಯನ್ನು ಮನಃಪೂರ್ವಕವಾಗಿ ಕೊಟ್ಟಿದ್ದಳು. ಅದನ್ನು ಅತ್ಯಂತ ತೃಪ್ತಿಯಿಂದ ಸ್ವೀಕರಿಸಿದ್ದ ಫಕೀರನು (ಬಾಬಾ) ಮತ್ತೆ ಹೆಚ್ಚಾಗಿ ಕೇಳಲಿಲ್ಲ. ॥215॥ ಆದರೆ ಅಪ್ಪಾನು ಭಾವಿಸಿದನು, ತನ್ನ ಹೆಂಡತಿಯು ಕೊಟ್ಟ ಒಂದು ರೂಪಾಯಿಯು ಬಹಳ ಸ್ವಲ್ಪವಾಗಿತ್ತು ಮತ್ತು ತಾನೇನಾದರೂ ಅಲ್ಲಿದ್ದಿದ್ದರೆ ಅದಕ್ಕಿಂತ ಹತ್ತುಪಟ್ಟು ಹೆಚ್ಚು ಹಣವನ್ನು ಕೊಡುತ್ತಿದ್ದೆನೆಂದು ವಿಚಾರಮಾಡಿದನು. ॥216॥ ಈ ರೀತಿ ಅಪ್ಪಾನು ತನ್ನ ಸ್ವತಃ ಮಾತುಗಳಿಗೇ ಕಟ್ಟುಬಿದ್ದು ತಾನು ಹತ್ತು ರೂಪಾಯಿಗಳನ್ನು ಕೊಡುತ್ತಿದ್ದೆನೆಂದು ಹೇಳಿದ್ದರಿಂದ, ಅವನು ತನ್ನ ಋಣದಿಂದ ಹೇಗೆ ಮುಕ್ತನಾಗುತ್ತಾನೆ? ತನ್ನ ಮಾತಿನಂತೆ ಪೂರ್ತಿ ಹಣವನ್ನು ಕೊಡಲೇ ಬೇಕಲ್ಲವೇ? ॥217॥ ಈ ಫಕೀರನು ಇತರರಂತಲ್ಲ. ಅವನು ಕೈಯಲ್ಲಿಟ್ಟಿದ್ದನ್ನು ಸ್ವೀಕರಿಸಿ ಹಿಂದಕ್ಕೆ ಹೊರಟು ಹೋಗಲು ಅವನೇನು ಭಿಕ್ಷುಕನೇ? ॥218॥ ಆ ದಿನವು ಇನ್ನೂ ಮುಗಿದಿರಲಿಲ್ಲ. ಮತ್ತು ಅಪ್ಪಾನು ಹೇಳಿದ ಅದೇ ದಿನವೇ ಫಕೀರನು ಹಿಂದಕ್ಕೆ ಬಂದಿದ್ದನು. ಅಪ್ಪಾನಿಗೆ ಅವನು ಮತ್ತೊಬ್ಬ ಅಪರಿಚಿತ ಫಕೀರನಿರಬೇಕೆಂಬ ಶಂಕೆಯಿತ್ತು. ॥219॥ ಆರಂಭದಲ್ಲಿ, ಅವನನ್ನು ಹಣಕೇಳಿದಾಗ ಅವನಲ್ಲಿ ಆರು ರೂಪಾಯಿಗಳು ಇದ್ದುವು. ಆದರೆ ಅವನು ಸಂಶಯಗ್ರಸ್ತನಾಗಿದ್ದುದರಿಂದ ಆ ಹಣವನ್ನು ತ್ಯಾಗಮಾಡಿರಲಿಲ್ಲ. ॥220॥ ಸಾಕಿಷ್ಟು, ಬಾಬಾರವರಿಗೆ ಅಪ್ಪಾನ ಮೇಲೆ ಪ್ರೀತಿ ಇಲ್ಲದಿದ್ದರೆ ಫಕೀರನ ವೇಷದಲ್ಲಿ ಬರುತ್ತಿದ್ದರೇ? ಅವರು ದಕ್ಷಿಣೆಯ ನೆಪವೊಡ್ಡದಿದ್ದರೆ ಈ ಕಥೆಯು ಕೌತುಕಮಯವಾಗುತ್ತಿತ್ತೇ? ॥221॥ ಅಪ್ಪಾ ಸಾಹೇಬನು ಕೇವಲ ಒಂದು ನಿಮಿತ್ತ ಮಾತ್ರ ನಮಗೆ ಪಾಠಕಲಿಸಲು, ಏಕೆಂದರೆ ನಾವೆಲ್ಲರೂ ಒಂದೇ. ನಾವು ಒಂದು ಒಳ್ಳೆಯ ತೀರ್ಮಾನಗಳಿಂದ ಪ್ರಾರಂಭಿಸುತ್ತೇವೆ. ಆದರೆ ಪ್ರಸಂಗಕ್ಕೆ ಅನುಸಾರವಾಗಿ ಬದಲಾಗುತ್ತೇವೆ. ॥222॥ ನಾವು ಮಾತಿನಲ್ಲಿ ಬಹಳ ಧಾರಾಳಿಗಳು. ಆದರೆ ದಾನ ಕಾಲದಲ್ಲಿ ಅನೇಕ ಶಂಕೆಗಳು ಹುಟ್ಟುತ್ತವೆ. ನಾವು ಚಂಚಲತೆಯಿಂದ ಜರ್ಝರಿತರಾಗುತ್ತೇವೆ. ನಿಶ್ಚಿತ ಮನಸ್ಸಿನಿಂದ ಇರುವುದು ಬಹಳ ವಿರಳ. ॥223॥ ಆದರೆ ಹಿತವಾಗಿಯೂ ಮಿತವಾಗಿಯೂ ಮಾತನಾಡುವಂತಹ ದೇವರ ಪುತ್ರನು ಅತ್ಯಂತ ವಿರಳ. ಅವನು ತನ್ನ ಮಾತಿನಂತೆಯೇ ನಡೆಯುತ್ತಾನೆ ಮತ್ತು ಏನನ್ನು ವಾಗ್ದಾನ ಮಾಡುತ್ತಾನೋ ಅದನ್ನೇ ಮಾಡುತ್ತಾನೆ. ॥224॥ ಒಂದು ವೇಳೆ ಯಾರಾದರೂ ಅನನ್ಯ ಭಕ್ತರು ಇದ್ದರೆ ಅವರು ಐಹಿಕ ಅಥವಾ ಆಮುಷ್ಮಿಕ ಏನನ್ನು ಬಯಸುವನೋ ಅವುಗಳನ್ನು ಪೂರೈಸಲು ಸಾಯಿಯು ಸಮರ್ಥರಾಗಿದ್ದಾರೆ. ॥225॥ ಅಪ್ಪಾಸಾಹೇಬನು ಬುದ್ಧಿವಂತನೂ, ಆಂಗ್ಲವಿದ್ಯಾವಿಭೂಷಿತನೂ ಆಗಿದ್ದರೂ ಆರಂಭದಲ್ಲಿ ಸರ್ಕಾರವು ಕೇವಲ ನಲವತ್ತು ರೂಪಾಯಿಗಳನ್ನು ಸಂಬಳವನ್ನಾಗಿ ಕೊಡುತ್ತಿತ್ತು. ॥226॥ ಆದರೆ ಈ ಚಿತ್ರವನ್ನು ಸ್ವೀಕರಿಸಿದನಂತರ, ಅವನ ಸಂಬಳವು ನಿಧಾನವಾಗಿ ಹೆಚ್ಚಿತು ಮತ್ತು ನಲವತ್ತಕ್ಕಿಂತ ಅನೇಕ ಪಟ್ಟು ಹೆಚ್ಚಾಯಿತು. ॥227॥ ಎಲ್ಲರ ತಕ್ಷಣದ ಅನುಭವವೂ ಒಂದೇ ಆಗಿತ್ತು. ಬಾಬಾರವರು ತಾವು ಏನನ್ನು ಸ್ವೀಕರಿಸಿದರೂ ಅದರ ಹತ್ತರಷ್ಟು ಕೊಡುತ್ತಿದ್ದರು. ಅದು ಅಧಿಕಾರವಾದರೂ ಸರಿ ಸಂಪತ್ತಾದರೂ ಸರಿ. ॥228॥ ಅೂ ಅಲ್ಲದೆ, ಭಕ್ತಿ ವಿಶ್ವಾಸಗಳಿಂದಾಗಿ

ದೇವರ ಕಡೆಗೆ ಪರಮಾರ್ಥದ ಕಡೆಗೆ ಆಧ್ಯಾತ್ಮಿಕದೃಷ್ಟಿಯು ಹೆಚ್ಚುತ್ತದೆ. ಇದೊಂದು ಅತಿ ವಿಶೇಷವಲ್ಲವೇ? ಬಾಬಾರವರ ಕುಶಲತೆಯು ಅದ್ಭುತ. ॥229॥ ಅನಂತರ ಅಪ್ಪಾಸಾಹೇಬನು ಫಕೀರನು ಕೊಟ್ಟಿದ್ದ ವಿಭೂತಿಯನ್ನು ಕೇಳಿದನು. ಅವನು ನೋಡಿದಾಗ ಅದು ಒಂದು ಸಣ್ಣಪೊಟ್ಟಣವಾಗಿತ್ತು. ಅದನ್ನು ಪ್ರೀತಿಯಿಂದ ತೆರೆದನು. ॥230॥ ಉದಿಯ ಸಹಿತ ಅಲ್ಲಿ ಪುಷ್ಪಗಳು, ಅಕ್ಷತೆಗಳನ್ನು ಪೊಟ್ಟಣದಲ್ಲಿ ನೋಡಿದನು. ಅವನು ಒಂದು ತಾಯಿತವನ್ನು ಮಾಡಿಸಿ ಅದನ್ನು ಬಹಳ ಶ್ರದ್ಧೆಯಿಂದ ತೋಳಿಗೆ ಕಟ್ಟಿಕೊಂಡನು. ॥231॥ ಅನಂತರ ಅವನು ಬಾಬಾರ ದರ್ಶನ ತೆಗೆದುಕೊಂಡನು. ಬಾಬಾರವರು ಸ್ವತಃ ಕೊಟ್ಟಂತಹ ಕೂದಲನ್ನೂ ಸಹ ತಾಯಿತದಲ್ಲಿ ಹಾಕಿ ಪ್ರೀತಿಯಿಂದ ಧರಿಸಿದನು. ॥232॥ ಬಾಬಾರವರ ಉದಿಯು[13] ಅದೆಷ್ಟು ಮಹಿಮೆಯುಳ್ಳದ್ದು! ವಿಭೂತಿಯು ಶಂಕರನ ಭೂಷಣವೇ. ಅದನ್ನು ಹಣೆಯಲ್ಲಿ ಭಕ್ತಿಯಿಂದ ಧರಿಸುವುದರಿಂದ ಎಲ್ಲ ವಿಘ್ನಗಳು ಕೂಡಲೇ ನಾಶವಾಗುವುವು. ॥233॥ ಯಾರು ತಮ್ಮ ಮುಖಮಾರ್ಜನಾದಿ ನಿತ್ಯಕರ್ಮಗಳನ್ನು ಮತ್ತು ಸ್ನಾನ ಮುಗಿಸಿ ಉದಿಯನ್ನು ನಿತ್ಯವೂ ಧರಿಸುತ್ತಾನೋ, ಬಾಬಾರವರ ಚರಣಗಳನ್ನು ತೊಳೆದ ತೀರ್ಥವನ್ನು ಕುಡಿಯುತ್ತಾರೋ ಅವರು ಪುಣ್ಯವಂತರೂ ಪಾವನ ವ್ಯಕ್ತಿಗಳೂ ಆಗುತ್ತಾರೆ. ॥234॥ ಅದೂ ಅಲ್ಲದೆ, ಈ ಉದಿಯ ನಿಜವಾದ ವಿಶೇಷವೆಂದರೆ, ಅದನ್ನು ಧರಿಸಿದವನು ಪೂರ್ಣಾಯುಷ್ಯವನ್ನು ಹೊಂದುತ್ತಾನೆ. ಅವನ ಪಾಪಗಳೆಲ್ಲವೂ ನಿಶ್ಶೇಷವಾಗಿ ನಾಶವಾಗುವುವು. ಅವನು ಸರ್ವದಾ ಸುಖಸಂತೋಷಗಳಿಂದ ಇರುತ್ತಾನೆ. ॥235॥ ಅಂತಹ ಮಧುರ ಕಥಾಮೃತದ ಹಬ್ಬವನ್ನು ಸಾಯಿಯು ಅಪ್ಪಾನಿಂದಾಗಿ ನಮಗೆ ತಯಾರಿಸಿಟ್ಟಿದ್ದಾರೆ. ಅಲ್ಲಿ ನಾವು ಆಹ್ವಾನರಹಿತರಾದರೂ ನಾವು ಅವನೊಡನೆ ಯಥೇಷ್ಟವಾಗಿ ಸಂತುಷ್ಟರಾಗೋಣ. ॥236॥ ಅತಿಥೇಯ ಮತ್ತು ಅತಿಥಿಗಳು ಇಬ್ಬರಿಗೂ ಒಂದೇ ಭೋಜನವು. ಅದರ ರುಚಿ ಮತ್ತು ಮಧುರತೆಯ ರಸಾಸ್ವಾದನೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಇಂತಹ ಸ್ವಾನಂದಕರವಾದ ಭೋಜನದಿಂದ ಸಂತೃಪ್ತರಾಗಿರಿ. ॥237॥ ಹೇಮಾದನು ಸಾಯಿಗೆ ಶರಣಾಗುತ್ತಾನೆ. ಈಗ ಇಷ್ಟು ಕೇಳಿದುದು ಸಾಕು. ಮುಂದಿನ ಅಧ್ಯಾಯದಲ್ಲಿ ಉದಿಯ ಇನ್ನೂ ಹೆಚ್ಚಿನ ಮಹಿಮೆಯ ನಿರೂಪಣೆಯು ಇದೆ. ॥238॥ ಯಾವ ರೀತಿ ಉದಿಯ ಧಾರಣೆ ಮತ್ತು ಸಾಯಿಯ ದರ್ಶನವು ಮೂಳೆಯ ಕ್ಷಯರೋಗ, ಹೊಟ್ಟೆಯ ಹುಣ್ಣುಗಳು, ನಾರು ಹುಳು ಮತ್ತು ಬ್ಯುಬೋನಿಕ್ ಪ್ಲೇಗ್–ಗ್ರಂಥಿಜ್ವರ ಇವುಗಳನ್ನು ಗುಣಪಡಿಸಿದವು ಎಂಬುದನ್ನು ಪೂರ್ಣ ತತ್ಪರತೆಯಿಂದ ಕೇಳಿರಿ. ॥239॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಉದಿಯ ಶಕ್ತಿ" ಎಂಬ ಮೂವತ್ತಮೂರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಇದೇ ರೀತಿಯ ಬಾಬಾರವರ ಅನುಭವವನ್ನು ಹರಿ ಸೀತಾರಾಮ ದೀಕ್ಷಿತರು ದಾಖಲಿಸಿದ್ದಾರೆ. ಅದು ಈ ರೀತಿ ಇದೆ. – ಒಮ್ಮೆ ಬಾಪೂ ಸಾಹೇಬ ಜೋಗನಿಗೆ ಒಂದು ಚೇಳು ಕಚ್ಚಿತು. ಆಗ ರಾತ್ರಿ ಸುಮಾರು ಎಂಟು ಗಂಟೆಯಾಗಿತ್ತು, ಅವನು ಕೂಡಲೇ ಮಹಾರಾಜ್‌ರ ಹತ್ತಿರ ಹೋದನು. ಅವನು ಮೆಟ್ಟಿಲುಗಳನ್ನು ಹತ್ತುತ್ತಿರುವಾಗಲೇ ಮಹಾರಾಜ್ ಹೇಳಿದರು, "ಬಾಪೂ ಸಾಹೇಬ್ ಏನು ವಿಷಯ?" ಬಾಪೂಸಾಹೇಬ ಉತ್ತರಿಸಿದ, "ಬಾಬಾ, ನನಗೆ ಒಂದು ಚೇಳು ಕಚ್ಚಿದೆ." ಮಹಾರಾಜ್ ಹೇಳಿದರು, "ಅದು ಸರಿಯಾಗುತ್ತದೆ. ಹೋಗು."ಬಾಪೂ ಸಾಹೇಬನು ಮೆಟ್ಟಿಲುಗಳಿಂದಲೇ ಹಿಂದಕ್ಕೆ ಬಂದನು. ಅವನು ಆ ಕಾಂಪೌಡನ್ನು ದಾಟುವ ಮೊದಲೇ ನೋವು ಪೂರ್ತಿಯಾಗಿ ನಿಂತಿತು.

ಒಮ್ಮೆ ಒಬ್ಬ ಜ್ಯೋತಿಷಿಯು ಶಿರಡಿಗೆ ಬಂದಿದ್ದನು. ಅವನಿಗೆ ಒಂದು ಪಿಶಾಚಿ ಜನರ ವಿಷಯಗಳನ್ನು ಕಿವಿಯಲ್ಲಿ ಪಿಸುಗುಟ್ಟುತ್ತಿತ್ತು. ಅವನು ಮಹಾರಾಜ್‌ರ ದರ್ಶನಕ್ಕಾಗಿ ಹೋದನು. ಆದರೆ ಅವನ ಮನಸ್ಸಿನ ತುಂಬಾ ಹಣಮಾಡುವುದೇ ತುಂಬಿತ್ತು, ಅಲ್ಲಿ ಹಣ ಮಾಡುವ ಯಾವುದೇ ಅವಕಾಶ ದೊರಕಲಿಲ್ಲ. ಆದ್ದರಿಂದ ದರ್ಶನ ತೆಗೆದುಕೊಂಡ ಕೂಡಲೇ ರಾಹತಾಗೆ ಹೊರಟುಹೋದನು. ಅಲ್ಲಿ ರಾತ್ರಿ ಒಂದು ಚೇಳು ಕಚ್ಚಿತು. ಅವನಿಗೆ ಅಸಹನೀಯವಾದ ನೋವುಂಟಾಯಿತು. ಅನಂತರ ಅವನು ಮಹಾರಾಜ್‌ರು ಕೊಟ್ಟಿದ್ದ ಉದಿಯನ್ನು ಹಚ್ಚಿ ಮಹಾರಾಜರ ನಾಮವನ್ನು ಅವಿರತವಾಗಿ ಜಪಿಸಲು ಪ್ರಾರಂಭಿಸಿದನು. ಅನಂತರ ಆ ನೋವು ನಿಂತು ಹೋಯಿತು. ಅವನಿಗೆ ಮಹಾರಾಜ್‌ರಲ್ಲಿ ಶ್ರದ್ಧೆಯು ಬೆಳೆಯಿತು. ಮಾರನೆ ದಿನ ಆ ಜ್ಯೋತಿಷಿಯು ಮತ್ತೆ ಶಿರಡಿಗೆ ಹೋದನು. ಅಲ್ಲಿ 15–20 ದಿನಗಳು ಇದ್ದು ಮಹಾರಾಜ್‌ರ ಕೃಪೆಯಿಂದ ಸುಮಾರು ಮುನ್ನೂರು ರೂಪಾಯಿಗಳನ್ನು ಸಂಪಾದಿಸಿದನು.

2. ನಾನಾ ಚಂದೋರಕರ್.

3. ಹಿಂದೂ ಸಂಪ್ರದಾಯದ ರೀತಿಯಲ್ಲಿ ಹೆಂಡತಿ ಹಿಂದೆ ನಡೆಯುತ್ತಾಳೆ.

5. ಮೂರು ಮುಖಗಳಿರುವ ದೇವರು. ಬ್ರಹ್ಮ, ವಿಷ್ಣು, ಮಹೇಶ್ವರ. ಮೂವರ ಅವತಾರ – ದತ್ತಾತ್ರೇಯ.

6. ಮೋಡದಿಂದ ಬರುವ ಮಳೆಹನಿ.

7. ಸಿಹಿತಿಂಡಿ.
8. ದುರ್ಗಾಮಾತೆಯ ಪೂಜಾ ವಿಧಾನದಲ್ಲಿ ಸ್ತೋತ್ರವನ್ನು ಒಂಬತ್ತು ಸಲ ಪಠಿಸುವುದು.
9. ದೇವತೆಗಾಗಿ ಅಗ್ನಿಯಲ್ಲಿ ಕೊಡುವ ಆಹುತಿ.
10. ಮಾರ್ಕಂಡೇಯ ಪುರಾಣದಲ್ಲಿನ 700 ಶ್ಲೋಕಗಳು ದುರ್ಗೆಯ ಸ್ತುತಿಯ ಸಂಗ್ರಹ.
11. ಮಾಧವರಾವ್ ದೇಶಪಾಂಡೆ.
12. ಲಕ್ಷ್ಮೀಭಾಯಿ(ಶಿಂಧೆ).
13. ಹರಿ ಸೀತಾರಾಮ ದೀಕ್ಷಿತನು ದಾಖಲಿಸಿರುವ ಮತ್ತೊಂದು ಉದಾಹರಣೆ ಉದಿಯ ಪ್ರಾಮುಖ್ಯತೆ ತಿಳಿಸುವಂತಹುದು. ಅದರ ಸಾರಾಂಶ ಹೀಗಿದೆ: – ಒಬ್ಬ ಗೃಹಸ್ಥ ಖಿಮ್‌ಜಿ ಲಾಲಾಜಿ ಜೋಷಿ ಎಂಬುವವನು ಪಾರ್ಲೆಯಲ್ಲಿ ಪಂಜಾಬಿ ಚಾಳ್‌ನಲ್ಲಿ ವಾಸಿಸುತ್ತಿದ್ದನು. ಅವನ ಮಗಳು ದೀರ್ಘ ಕಾಯಿಲೆಯಿಂದ ನರಳುತ್ತಿದ್ದಳು. ಒಮ್ಮೆ ಅವಳು ವಿಷಮಸ್ಥಿತಿ ತಲುಪಿದಳು. ಆ ಸಮಯದಲ್ಲಿ ಅವಳ ತಾಯಿಯು ನಮ್ಮ ಮನೆಗೆ ಬಂದು ಮಹಾರಾಜ್‌ರ ಉದಿಯನ್ನು ತೆಗೆದುಕೊಂಡು ಹೋದಳು. ಅವಳು ಕೂಡಲೇ ಆ ಉದಿಯಿಂದಾಗಿ ಸ್ವಲ್ಪ ಚೇತರಿಸಿಕೊಂಡಳು. ಅನಂತರ ಖಿಮಜಿಯು ತನ್ನ ಪತ್ನಿ ಮತ್ತು ಪುತ್ರಿಯೊಡನೆ ಶಿರಡಿಗೆ ಹೋದನು. ಆ ಹುಡುಗಿಯು ಬಹಳ ನಿಶ್ಶಕ್ತಳಾಗಿ ನಡೆಯಲಾರದವಳಾಗಿದ್ದಳು. ಅವಳ ಕೈ ಮತ್ತು ಕಾಲುಗಳು ಕಡ್ಡಿಯ ರೀತಿ ಸಣ್ಣದಾಗಿದ್ದವು. ಯಾರೋ ಒಬ್ಬರು ಅವಳನ್ನು ಎತ್ತಿಕೊಂಡು ಹೋಗಿ ಮಹಾರಾಜ್‌ರ ಹತ್ತಿರ ಕುಳ್ಳಿರಿಸಿದರು.

ಮಹಾರಾಜ್‌ರು ಅವಳಿಗೆ ಉದಿಯನ್ನು ಹಚ್ಚಿ ಆಶೀರ್ವದಿಸಿದರು. ಮತ್ತೆರಡು ದಿನಗಳಲ್ಲಿ ಅವಳು ತಾನೇ ನಡೆಯುವಂತಾದಳು. ಅವಳಿಗೆ ಕುಳಿತುಕೊಳ್ಳುವುದು ಮತ್ತು ಏಳುವುದು ಮಾತ್ರ ಕಷ್ಟವಾಗಿತ್ತು. ಆದ್ದರಿಂದ ಅವರು ಅವಳ ಬಗ್ಗೆ ಮಹಾರಾಜ್‌ರಿಗೆ ಮನವಿ ಸಲ್ಲಿಸಿದರು. ಮಹಾರಾಜ್‌ರು ಅವಳಿಗೆ ತಿನ್ನಲು ಒಂದು ಹಣ್ಣನ್ನು ಕೊಟ್ಟರು. ಅಲ್ಲಿಂದಾಚೆಗೆ ಅವಳ ಕಷ್ಟಗಳೆಲ್ಲ ತೀರಿದವು.

ಒಂದು ದಿನ ಒಬ್ಬ ಸ್ನೇಹಿತ ನನ್ನ ಕಛೇರಿಗೆ ಬಂದು ಹೇಳಿದನು. "ಈ ಎರಡು ದಿನಗಳಿಂದ ನಾನು ನಿದ್ರೆ ಮಾಡಲಾಗುತ್ತಿಲ್ಲ. ನಾನು ವೈದ್ಯರ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದರೂ ಸಹ ಏನೂ ಪ್ರಯೋಜನವಿಲ್ಲ." ನಾನು ಮಹಾರಾಜ್‌ರ ಉದಿಯನ್ನು ಅವನಿಗೆ ಕೊಟ್ಟು ಮೂರು ದಿನಗಳು ತೆಗೆದುಕೊಳ್ಳಲು ಹೇಳಿದೆನು. ಮಾರನೆಯ ದಿನವೇ ಅವನು ಕಛೇರಿಗೆ ಬಂದು ಹೇಳಿದನು. "ನಾನು ನೆನ್ನೆ ರಾತ್ರಿ ಉದಿ ತೆಗೆದುಕೊಂಡೆ

ಮತ್ತು ರಾತ್ರಿಯೆಲ್ಲಾ ಚೆನ್ನಾಗಿ ನಿದ್ರೆಮಾಡಿದೆ.”

ಅದೇ ರೀತಿ ಸ್ನೇಹಿತನ ಮಗ ಬಾಂದ್ರಾದಲ್ಲಿ ವಾಸಮಾಡುತ್ತಿದ್ದವನು ಎರಡು ತಿಂಗಳಿನಿಂದ ನಿದ್ರಾಹೀನತೆಯಿಂದ ಬಳಲುತ್ತಿದ್ದನು. ಅವನ ತಂದೆ ಅವನನ್ನು ಶಿರಡಿಗೆ ದರ್ಶನಕ್ಕಾಗಿ ಕರೆದುಕೊಂಡು ಬಂದನು. ಅದೇ ರಾತ್ರಿ ಅವನು ಮಲಗಿ ಅಲ್ಲಿಂದಾಚೆಗೆ ಪ್ರತಿರಾತ್ರಿಯೂಚೆನ್ನಾಗಿ ನಿದ್ರಿಸಿದನು.



# ಅಧ್ಯಾಯ - 34

॥ ಅಥ ಶ್ರೀ ಸಾಯಿ ಸಚ್ಚರಿತೆ ॥



## "ಉದಿಯ ಮಹತ್ವ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದಲ್ಲಿ ನಾನು ನನಗೆ ತಿಳಿದಷ್ಟು ಸತ್ಯವನ್ನೇ ನುಡಿದೆ. ಉದಿಯ ಮಹತ್ವವನ್ನು ಹೇಳಿದೆ. ಈ ಅಧ್ಯಾಯದಲ್ಲಿ ನಾನು ಅದರ ಗುಣವಿಶೇಷಗಳನ್ನು ವಿವರಿಸುತ್ತ ಅದೇ ನಿರೂಪಣೆಯನ್ನು ಮುಂದುವರಿಸುತ್ತೇನೆ. ॥1॥ ಉದಿಯ ಶಕ್ತಿಯ ಬಗ್ಗೆ ಹಿಂದಿನ ಅಧ್ಯಾಯದ ಮತ್ತು ಈಗಿನ ಕಥೆಗಳ ಮಧ್ಯೆ ಸಂಬಂಧ ಇದೆ. ಶ್ರೋತೃಗಳು ಸಾವಧಾನಚಿತ್ತರಾಗಿ ತಮ್ಮ ಸ್ವಾನಂದಾನುಭವಕ್ಕಾಗಿ ಮತ್ತು ಅದರ ಅರ್ಥ ತಿಳಿಯಲು ಕೇಳಬೇಕು. ॥2॥ ಅತ್ಯಂತ ದುರ್ಧರ ರೋಗವಾದ ಮೂಳೆಕ್ಷಯದ ಹುಣ್ಣುಗಳು, ಬೇರೆ ಯಾವುದೇ ಉಪಾಯದಿಂದ ಉಪಶಮನವಾಗದೇ ಇದ್ದು ಸಾಯಿಯ ಸ್ವಹಸ್ತದಿಂದ ಉದಿಯನ್ನು ಹಚ್ಚಲಾಗಿ ಕ್ಷಯವು ಸಂಪೂರ್ಣವಾಗಿ ನಿರ್ಮೂಲವಾಯಿತು. ॥3॥ ಉದಿಯ ವಿಚಾರದ ಬಗ್ಗೆ ಈ ರೀತಿಯ ಕಥೆಗಳು ಅನೇಕ. ಆದರೆ ವಿಶೇಷ ನಿದರ್ಶನಕ್ಕಾಗಿ ಒಂದು ಕಥೆಯನ್ನು ಹೇಳುತ್ತೇನೆ. ಅದನ್ನು ಕೇಳಿ ನೀವು ಆಶ್ಚರ್ಯ ಪಡುತ್ತೀರಿ. ಅದೊಂದು ಅನುಭವ ಪೂರ್ವಕವಾದ ಕಥೆ. ॥4॥ ನಾಸಿಕ ಜಿಲ್ಲೆಯ ಮಾಳೆಗಾಂವನಲ್ಲಿ ಒಬ್ಬ ಪದವೀಧರ, ನುರಿತ ವೈದ್ಯನಿದ್ದನು. ಅವನಿಗೆ ತನ್ನ ಸೋದರಳಿಯನ ರೋಗವನ್ನು ಯಾವುದೇ ಔಷಧಿಯಿಂದಲೂ ಗುಣಪಡಿಸಲಾಗಲಿಲ್ಲ. ॥5॥ ಅವನು ಸ್ವಯಂ ವೈದ್ಯ ಮತ್ತು ಅವನ ಸ್ನೇಹಿತರೂ

ವೈದ್ಯರಿದ್ದರು. ಅವರು ಎಲ್ಲ ರೀತಿಯ ಚಿಕಿತ್ಸೆಯನ್ನೂ ಮಾಡಿದರು. ಕುಶಲ ಶಸ್ತ್ರಕ್ರಿಯಾ ತಜ್ಞರೂ ಸಹ ಸುಸ್ತಾಗಿ ಗೊಂದಲಗೊಂಡರು. ॥6॥ ಆ ರೋಗವು ಮೂಳೆಯ ಕ್ಷಯದ ವ್ರಣ. ಅದನ್ನು ಹತೋಟಿಗೆ ತರುವುದು ಅತ್ಯಂತ ಕಠಿಣವಾದದ್ದು. ಅದು ಎಲ್ಲ ಔಷಧಿಗಳಿಗೂ ಪ್ರತಿಭಟನೆ ಒಡ್ಡುತ್ತಿತ್ತು. ॥7॥ ಎಲ್ಲ ರೀತಿಯ ಉಪಚಾರಗಳು ದೇಶೀಯ ಮತ್ತು ವಿದೇಶೀಯ ಕ್ರಮಗಳನ್ನು ಪ್ರಯತ್ನಿಸಲಾಯಿತು. ಎಲ್ಲ ಪ್ರಯತ್ನಗಳನ್ನೂ ಮಾಡಲಾಯಿತು. ಶಸ್ತ್ರಚಿಕಿತ್ಸೆಯನ್ನೂ ಮಾಡಲಾಯಿತು. ಯಾವುದೂ ಯಶಸ್ವಿಯಾಗಲಿಲ್ಲ. ॥8॥ ಅವರ ಸೋದರಳಿಯನು ಚಿಕ್ಕವನು. ಅವನಿಗೆ ನೋವು ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಅತಿ ನೋವಿನಿಂದಾಗಿ ಅವನ ಪ್ರಾಣವು ಕಷ್ಟಪಡುತ್ತಿತ್ತು. ಅವನ ಆಪ್ತೇಷ್ಟರೆಲ್ಲರೂ ಬಹಳ ಉದ್ವಿಗ್ನ ಮನಸ್ಸಿನವರಾದರು. ॥9॥ ಎಲ್ಲ ಚಿಕಿತ್ಸಾ ಪದ್ಧತಿಗಳೂ ಪರಮಾವಧಿಯನ್ನು ಮೀರಿ ವಿಫಲವಾಗಿ ಸ್ವಲ್ಪಮಾತ್ರವೂ ಗುಣವಾಗದಿರಲು ಕೆಲವು ಬಂಧುಮಿತ್ರರು ದೈವದ ಸಹಾಯವನ್ನು ಬೇಡಲು ಸಲಹೆ ನೀಡಿದರು. ॥10॥ ಆದ್ದರಿಂದ ಅವರ ಕುಲದೇವತೆ ಮತ್ತಿತರೆ ದೇವ ದೇವತೆಯರನ್ನು ಪ್ರಾರ್ಥಿಸಿದರು. ಆದರೆ ಯಾರಿಂದಲೂ ಸಹಾಯ ದೊರೆಯಲಿಲ್ಲ. ಅನಂತರ ಅವರಿಗೆ ಶಿರಡಿ ಗ್ರಾಮದಲ್ಲಿ ಒಬ್ಬ ಹೆಸರುವಾಸಿಯಾದ ಅವಲಿಯ ಇದ್ದಾರೆಂದು ತಿಳಿಯಿತು. ॥11॥ ಅವರು ಶಿರಡಿಯಲ್ಲೇ ಸಂತಶ್ರೇಷ್ಠನಾಗಿದ್ದರು. ಸಾಯಿಮಹಾರಾಜ್‌ರು ಯೋಗೀಶ್ವರರಾಗಿದ್ದರು. ಕೇವಲ ದರ್ಶನ ಮಾತ್ರದಿಂದಲೇ ವ್ಯಾಧಿಗಳು ಪರಿಹಾರವಾಗುತ್ತಿದ್ದವು. ಈ ವಿಷಯ ಅವರಿಗೆ ತಿಳಿಯಿತು. ॥12॥ ಸಾಯಿದರ್ಶನದ ಆಶೆ ಹುಟ್ಟಿತು. ಅವನ ತಾಯಿ ಮತ್ತು ತಂದೆಯವರು ಯೋಚಿಸಿದರು – 'ದೇವರಲ್ಲಿ ನಂಬಿಕೆಯಿಟ್ಟು ಈ ಪರಿಹಾರೋಪಾಯವನ್ನೂ ಪ್ರಯತ್ನಿಸೋಣ. ॥13॥ 'ಅವನೊಬ್ಬ ಮಹಾನ್ ಅವಲಿಯನಾಗಿದ್ದಾನೆಂದು ಹೇಳುತ್ತಾರೆ. ಅವನು ತನ್ನ ಕೈಯಿಂದಲೇ ಉದಿಯನ್ನು ಹಚ್ಚಿದರೆ ದುರ್ಧರವಾದ ರೋಗಗಳೂ ಮಾಯವಾಗುವುವು. ಈ ಅನುಭವವನ್ನು ಪಡೆದುಕೊಂಡರೆ ನಾವೇನನ್ನು ಕಳೆದುಕೊಳ್ಳುತ್ತೇವೆ? ॥14॥ 'ನಾವು ಹೋಗಿ ಅವರ ಚರಣಗಳಲ್ಲಿ ನಮಸ್ಕರಿಸೋಣ. ಕೊನೆಯದಾಗಿ ಈ ಉಪಾಯವನ್ನು ಪ್ರಯತ್ನಿಸೋಣ. ಬಹುಶಃ ಈ ಸಂಕಟವನ್ನು ದೂರಮಾಡಬಹುದು. ಇದು ನಮ್ಮ ಕೊನೆಯ ಪ್ರಯತ್ನವಾಗಿದೆ.' ॥15॥ ಸಾಕಿಷ್ಟು, ಅನಂತರ ತಂದೆ ತಾಯಿಯರು ಸಾಯಿದರ್ಶನಕ್ಕೆ ಕಾತರರಾಗಿ ಆತುರಾತುರದ ಸಿದ್ಧತೆಯನ್ನು ಮಾಡಿಕೊಂಡರು. ಅವರು ಬೇಗನೆ ಶಿರಡಿ ತಲುಪಿದರು. ॥16॥ ಅವರು ಅಲ್ಲಿ ತಲಪಿದಕೂಡಲೇ ಬಾಬಾರವರ ದರ್ಶನ ಪಡೆದರು. ಅವರು ಬಾಬಾರವರ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮಮಾಡಿದರು. ಬಾಬಾರವರ ಮುಂದೆ ಆ ಬಾಲಕನ ನರಳಾಟವನ್ನು ನಿವೇದಿಸಿ ನಿಂತರು. ॥17॥ ದುಃಖದಿಂದ ಪೀಡಿತರಾಗಿ ಆರ್ತವಾಣಿಯುಳ್ಳವರಾಗಿ ಎರಡೂ ಕೈಗಳನ್ನು ಜೋಡಿಸಿ ಅವರು ಶ್ರೀ ಸಾಯಿಚರಣಗಳಲ್ಲಿ ಶರಣಾದರು. ಸಂಕಟಪೀಡಿತ ಮುಖದಿಂದ ಸಾಯಿಯಲ್ಲಿ ವಿನಂತಿಸಿಕೊಂಡರು. ॥18॥ ಅವರು ಹೇಳಿದರು, "ಈ ಬಾಲಕನು ದುಃಖಿತನಾಗಿದ್ದಾನೆ. ನಾವು ಅವನ ಕಷ್ಟವನ್ನು

ನೋಡಲು ಆಗುವುದಿಲ್ಲ. ಆದರೆ ಮತ್ತಿನ್ನೇನು ಚಿಕಿತ್ಸೆ ಮಾಡಬೇಕೆಂದು ನಮಗೆ ಗೊತ್ತಿಲ್ಲ. ನಮಗೆ ಯಾವುದೇ ಭರವಸೆಯು ಇಲ್ಲ. ॥19॥ "ನಮ್ಮ ಮಗನು ಕ್ಷೀಣಿಸುತ್ತಿರುವುದನ್ನು ನೋಡಿ ನಾವು ಬಹಳ ನೊಂದಿದ್ದೇವೆ ಮತ್ತು ದಣಿದಿದ್ದೇವೆ. ಸಾಯಿ ಸಮರ್ಥ! ನಿಮ್ಮ ಅಭಯಹಸ್ತವನ್ನು ಅವನ ತಲೆಯ ಮೇಲಿಟ್ಟು ಅವನ ದುಃಖವನ್ನು ನಿವಾರಿಸಿರಿ. ॥20॥ "ನಿಮ್ಮ ಮಹಿಮೆಯನ್ನು ಕೇಳಿ ನಾವು ಇಲ್ಲಿಗೆ ಬಂದಿದ್ದೇವೆ. ಅನನ್ಯ ಭಾವದಿಂದ ನಿಮ್ಮಲ್ಲಿ ಶರಣಾಗಿದ್ದೇವೆ. ಅವನಿಗೆ ಜೀವದಾನ ಮಾಡಿರಿ." ॥21॥ ಅನಂತರ, ಆ ಸಾಯಿ ಕರುಣಾಮೂರ್ತಿಯು ಅವರಿಗೆ ಆಶ್ವಾಸನೆ ನೀಡಿದರು. "ಯಾರು ಈ ಮಸೀದಿಯಲ್ಲಿ ಆಶ್ರಯ ಪಡೆಯುತ್ತಾರೋ ಅವರು ಈ ಜೀವನದಲ್ಲಿ ಕಲ್ಪಾಂತ್ಯದವರೆಗೂ ದುರ್ಗತಿಯನ್ನು ಹೊಂದುವುದಿಲ್ಲ. ॥22॥ "ಈಗ ನೀನು ನಿಶ್ಚಿಂತೆಯಿಂದ ಇರು. ಉದಿಯನ್ನು ತೆಗೆದುಕೊಂಡು ಆ ವ್ರಣದ ಮೇಲೆಲ್ಲ ಹಚ್ಚು. ನಾಲ್ಕರಿಂದ ಎಂಟು ದಿನಗಳಲ್ಲಿ ಅವನಿಗೆ ಪೂರ್ಣವಾಗಿ ಗುಣವಾಗುತ್ತದೆ. ದೇವರಲ್ಲಿ ಭರವಸೆ ಇಡು. ॥23॥ "ಇದು ಮಸೀದಿಯಲ್ಲ. ಆದರೆ ದ್ವಾರಾವತಿ!! ಇಲ್ಲಿ ಯಾರು ಹೆಜ್ಜೆ ಇಡುತ್ತಾರೋ ಅವರು ಆರೋಗ್ಯ ಭಾಗ್ಯವನ್ನು ಕೂಡಲೇ ಪಡೆಯುತ್ತಾರೆ. ನೀವೂ ಸಹ ಈ ಅನುಭವವನ್ನು ಹೊಂದಬಲ್ಲಿರಿ. ॥24॥ "ಇಲ್ಲಿಗೆ ಬಂದವರು ಯಾರೂ ಆರಾಮ ಪಡೆಯುವುದಿಲ್ಲ ಎನ್ನುವುದು ಮೂರು ಕಾಲಗಳಲ್ಲೂ ಅಸಂಭವ. ಈ ಮಸೀದಿಯ ಮೆಟ್ಟಿಲುಗಳನ್ನು ಹತ್ತುವವರು ತಮ್ಮ ಆಶೆಯನ್ನು ಪೂರೈಸಿಕೊಳ್ಳುತ್ತಾರೆ. ಅದನ್ನು ತಿಳಿಯಿರಿ." ॥25॥ ಅನಂತರ, ಬಾಬಾರವರ ಆಜ್ಞಾನುಸಾರ, ಆ ರೋಗಿಯನ್ನು ಅವರ ಮುಂದೆ ಕುಳ್ಳಿರಿಸಲಾಯಿತು. ಬಾಬಾರವರು ತಮ್ಮ ಕೈಯಿಂದ ರೋಗಿಯ ಕಾಲನ್ನು ಸವರಿ ಅವನ ಮೇಲೆ ಕೃಪಾದೃಷ್ಟಿಯನ್ನು ಬೀರಿದರು. ॥26॥ ಇದೊಂದು ಕೇವಲ ದೈಹಿಕ ವ್ಯಥೆಯಾಗಿತ್ತು, ಆದರೆ ವಿಧಿ ಲಿಖಿತವಾದ ಹಾಗೂ ಮನಸ್ಸಿನಲ್ಲಿ ಹುಟ್ಟಿದ ದುರ್ಧರವಾದ ಸ್ಥಿತಿಯೂ ಸಹ ಅವರ ದರ್ಶನ ಮಾತ್ರದಿಂದ ಆಮೂಲಾಗ್ರವಾಗಿ ನಾಶವಾಗುತ್ತದೆ. ॥27॥ ಕೇವಲ ಶ್ರೀಸಾಯಿಯ ಮುಖವನ್ನು ದರ್ಶಿಸುತ್ತಲೇ ಎಲ್ಲ ದುಃಖವೂ ಆ ಕ್ಷಣದಲ್ಲಿ ಅಲ್ಲಿಯೇ ನಾಶವಾಗುತ್ತದೆ. ಅವರ ವಚನಾಮೃತವನ್ನು ಪಾನಮಾಡಿದಲ್ಲಿ ರೋಗಿಯು ಪರಮಸುಖವನ್ನು ಹೊಂದುತ್ತಾನೆ. ॥28॥ ಅದು ಹಾಗಿರಲಿ. ಅವರು ಅಲ್ಲಿ ನಾಲ್ಕು ದಿನಗಳ ಕಾಲ ವಾಸಮಾಡಿದರು. ರೋಗಿಯಲ್ಲಿ ಸುಧಾರಣೆಯು ಕಂಡುಬಂದಿತು. ಅವರಿಗೆ ಸಾಯಿ ಚರಣಗಳಲ್ಲಿ ವಿಶ್ವಾಸ ಹುಟ್ಟಿತು. ॥29॥ ತದನಂತರ, ಆ ಮೂವರು ಬಾಬಾರವರ ಪೂರ್ಣ ಅನುಮತಿಯೊಂದಿಗೆ ಮನಸ್ಸಿನಲ್ಲಿ ಆನಂದ ತುಂಬಿಕೊಂಡು, ಸಂತುಷ್ಟಿಯಿಂದ ಮನೆಗೆ ಹಿಂತಿರುಗಿದರು. ॥30॥ ಇದೇನು ಒಂದು ಸಣ್ಣ ಚಮತ್ಕಾರವೇ? ಆ ಮೂಳೆಯ ಕ್ಷಯದ ವ್ರಣವು ಕೇವಲ ಉದಿ ಮತ್ತು ಕೃಪಾದೃಷ್ಟಿಯಿಂದಲೇ ಗುಣವಾಯಿತು! ಇದೊಂದು ಅಪೂರ್ವವಾದ ಉಪಚಾರ ವಿಧಿ. ॥31॥ ಈ ರೀತಿ ಸೌಭಾಗ್ಯವಶಾತ್ ಅವರಿಗೆ ಮಹಾಪುರುಷರ ದರ್ಶನವಾಯಿತು. ಅವರ ಕಲ್ಯಾಣಕಾರಕ ಆಶೀರ್ವಚನ ಹಾಗೂ ಆಶ್ವಾಸನೆಯು ಲಭಿಸಿತು. ಇವುಗಳಿಂದಲೇ ವ್ಯಾಧಿಯು ನಿರ್ಮೂಲವಾಯಿತು. ॥32॥ ಅದು

ಹಾಗಿರಲಿ. ಸ್ವಲ್ಪ ಕಾಲದ ವರೆಗೆ ಉದಿಯನ್ನು ವ್ರಣದ ಮೇಲೆ ಹಚ್ಚುತ್ತ ಮತ್ತು ಸ್ವಲ್ಪವನ್ನು ಸೇವಿಸುತ್ತ ಬರಲು, ವ್ರಣವು ಒಣಗಿಹೋಯಿತು. ಗಾಯವು ತುಂಬಿಕೊಂಡು ಬಂದಿತು. ಮತ್ತು ಆ ಹುಡುಗನು ಪೂರ್ಣವಾಗಿ ಆರೋಗ್ಯ[2] ಹೊಂದಿದನು. ॥33॥ ಮಾಲೆಗಾಂವನಲ್ಲಿದ್ದ ಚಿಕ್ಕಪ್ಪನು ಇವೆಲ್ಲವನ್ನೂ ಕೇಳಿಸಿಕೊಂಡಾಗ ಅವನಲ್ಲಿ ಸಾಯಿದರ್ಶನ ಮಾಡುವ ಹಂಬಲ ಉಂಟಾಯಿತು. ಅವನು ಮುಂಬಯಿಗೆ ಹಿಂತಿರುಗುವ ಮಾರ್ಗದಲ್ಲಿ ತನ್ನ ಆಸೆಯನ್ನು ಪೂರೈಸಿಕೊಳ್ಳಲು ಯೋಚಿಸಿದನು. ॥34॥ ಆದರೆ ಅವನು ಮುಂಬಯಿಯ ಕಡೆಗೆ ಹೊರಟಾಗ ಮಾಲೆಗಾಂವ್ ಮತ್ತು ಮನಮಾಡ್‌ಗಳಲ್ಲಿ ಯಾರೋ ಅವನ ಮನಸ್ಸಿನಲ್ಲಿ ಅನೇಕ ಶಂಕೆಗಳನ್ನು ಉಂಟುಮಾಡಿದರು. ಹಾಗಾಗಿ ಶಿರಡಿಗೆ ಹೋಗುವ ನಿಶ್ಚಯವನ್ನು ಬದಲಿಸಿದನು. ॥35॥ ಅನೇಕ ಸತ್ಕಾರ್ಯಗಳ ರೀತಿಯೇ ಹೀಗೆ. ಆರಂಭದಲ್ಲೇ ಕುತ್ಸಿತ ಜನರು ಚಕ್ರದಲ್ಲಿ ಕಡ್ಡಿಹಾಕುತ್ತಾರೆ. ಯಾರು ಲೋಕಾಭಿಪ್ರಾಯಕ್ಕೆ ಬೆಲೆ ಕೊಡುವುದಿಲ್ಲವೋ ಅವರು ಮಾತ್ರ ಕೊನೆಯಲ್ಲಿ ಸದ್ಗತಿಯನ್ನು ಪಡೆಯುತ್ತಾರೆ. ॥36॥ ಅನಂತರ, ಸಂತ ದರ್ಶನದ ಕಾರ್ಯಕ್ರಮವನ್ನು ಪಕ್ಕಕ್ಕೆ ಸರಿಸಿ, ಅವನು ನೇರವಾಗಿ ಮುಂಬಯಿಗೆ ಹೋದನು. ಉಳಿದ ರಜೆಯ ಸಮಯವನ್ನು ಆಲೀಬಾಗ್‌ನಲ್ಲಿ ಕಳೆಯಲು ಮನದಲ್ಲೇ ನಿಶ್ಚಯಿಸಿದನು. ॥37॥ ಅವನು ಈ ರೀತಿ ನಿಶ್ಚಯಿಸಿದ ನಂತರ ಮೂರು ರಾತ್ರಿಗಳು ಒಂದೇ ಸಮನೆ, ನಿದ್ದೆಯಲ್ಲಿ ಒಂದು ಧ್ವನಿಯನ್ನು ಕೇಳಿದನು. "ನಿನಗೆ ನನ್ನ ಮೇಲೆ ಅವಿಶ್ವಾಸವೇನು?" ॥38॥ ಪದೇ ಪದೇ ಈ ಅಶರೀರವಾಣಿಯನ್ನು ಕೇಳಿದ ಆ ವೈದ್ಯನು ಮನಸ್ಸಲ್ಲೇ ವಿಸ್ಮಿತನಾದನು. ಅವನಿಗೆ ಆ ಧ್ವನಿಯು ಅರ್ಥಪೂರ್ಣವೆಂದು ಅನಿಸಿತು. ಶಿರಡಿಗೆ ಪ್ರಯಾಣ ಮಾಡಲು ನಿಶ್ಚಯಿಸಿದನು. ॥39॥ ಆದರೆ ಆ ವೈದ್ಯನೊಬ್ಬ ವಿಷಮಜ್ವರ ಪೀಡಿತ ರೋಗಿಯ ಚಿಕಿತ್ಸೆ ಮಾಡುತ್ತಿದ್ದನು. ಆದ್ದರಿಂದ ಅವನು ರೋಗಿಯು ಗುಣಮುಖನಾಗುತ್ತಿದ್ದಹಾಗೆಯೇ ಕೂಡಲೇ ಹೋಗಬೇಕೆಂದು ನಿರ್ಧರಿಸಿದನು. ॥40॥ ಆದರೆ ರೋಗಿಯ ಜ್ವರವು ಪ್ರಖರವಾಗಿತ್ತು, ಯಾವುದೇ ಔಷಧಿಯು ಉಪಯೋಗವಾಗಲಿಲ್ಲ. ಲವಲೇಶವೂ ಕಡಿಮೆಯಾಗಲಿಲ್ಲ. ಅದರಿಂದಾಗಿ ಅವನು ಕೂಡಲೇ ಹೊರಡಲು ಆಗಲಿಲ್ಲ. ॥41॥ ಆದ್ದರಿಂದ ಅವನು ಕೊನೆಯದಾಗಿ ಮನದಲ್ಲಿಯೇ ನಿಶ್ಚಯಿಸಿದನು. ಆರೋಗಿಯು ಆ ದಿನ ಗುಣ ಮುಖನಾದಲ್ಲಿ ಮಾರನೆಯ ದಿನವೇ ಒಂದು ಕ್ಷಣವನ್ನೂ ಕಳೆಯದೆ ಶಿರಡಿಗೆ ಪ್ರಯಾಣ ಮಾಡುವೆನೆಂದು ನಿಶ್ಚಯಿಸಿದನು. ॥42॥ ಈ ರೀತಿ ದೃಢವಾದ ಸಂಕಲ್ಪ ಮಾಡಿಕೊಳ್ಳುತ್ತಲೇ ಒಂದೆರಡು ಪ್ರಹರಗಳಲ್ಲಿಯೇ ಜ್ವರವು ಇಳಿಯಿತು. ವೈದ್ಯನ ಉದ್ದೇಶ ಸಫಲವಾಯಿತು ಮತ್ತು ಅವನು ಶಿರಡಿಯ ಕಡೆಗೆ ಹೊರಟನು. ॥43॥ ಅವನು ಸಂಕಲ್ಪಿಸಿದ ಹಾಗೆಯೇ ಶಿರಡಿಗೆ ಹೋದನು. ಬಾಬಾರವರ ಚರಣಗಳಲ್ಲಿ ಪೂರ್ಣ ಶ್ರದ್ಧೆಯಿಂದ ವಂದಿಸಿದನು. ಬಾಬಾರವರು ಅವನ ಅಂತರಂಗದ ಅನುಭವವನ್ನು ದೃಢೀಕರಿಸಿ ಅವನನ್ನು ನಿಜಭಕ್ತನನ್ನಾಗಿ ಮಾಡಿದರು. ॥44॥ ಬಾಬಾರವರು ತಮ್ಮ ಆಶೀರ್ವಾದಪೂರ್ವಕ ಹಸ್ತವನ್ನು ಅವನ ತಲೆಯ ಮೇಲಿಟ್ಟರು. ಅವನಿಗೆ ಉದಿ ಪ್ರಸಾದವನ್ನೂ ಕೊಟ್ಟರು. ಸಾಯಿಯ ಅಗಾಧ ಮಹಿಮೆಯನ್ನು,

ಅನುಭವಿಸಿ ಅವನು ವಿಸ್ಮಯ ಭರಿತನಾದನು. ॥45॥ ಅವನು ಅಲ್ಲಿ ನಾಲ್ಕು ದಿನಗಳ ಕಾಲ ಉಳಿದುಕೊಂಡನು. ಆ ವೈದ್ಯನು ನಂತರ ಸಂತಸ ತುಂಬಿದ ಮನಸ್ಸಿನಿಂದ ಹಿಂತಿರುಗಿದನು. ಕೇವಲ ಹದಿನೈದು ದಿನಗಳು ಕಳೆದುವಷ್ಟೇ, ನಂತರ ಬಿಜಾಪುರಕ್ಕೆ ಬಡ್ತಿಯ ಮೇಲೆ ಹೋದನು. ॥46॥ ಆ ಒಂದು ಮೂಳೆಯ ಕ್ಷಯರೋಗದ ವ್ರಣವಿದ್ದ ರೋಗಿಯಿಂದಾಗಿ ಆವನಿಗೆ ಸಾಯಿದರ್ಶನ ಭಾಗ್ಯವುಂಟಾಯಿತು. ಅವನಿಗೆಸಂತ ಚರಣಗಳಲ್ಲಿ ಪ್ರೀತಿಯು ಹುಟ್ಟಿ ಶಾಶ್ವತವಾದ ಅಕ್ಷಯ ಆನಂದವನ್ನು ಅನುಭವಿಸಿದನು. ॥47॥ ಅದೇ ರೀತಿ ಒಮ್ಮೆ ಡಾ॥ ಪಿಳ್ಳೆಯ ನಾರುಹುಳದಿಂದಾಗಿ ಅತ್ಯಂತ ಸಹಿಸಲಾಗದ ನೋವಿನಿಂದ ನರಳುತ್ತಿದ್ದನು. ಹುಳುಗಳು ಒಂದರಿಂದ ಏಳರವರೆಗೆ ಹೆಚ್ಚಾಗಿದ್ದುವು. ಜೀವಕ್ಕೆ ಬಹಳ ಕಷ್ಟವೆನಿಸುತ್ತಿತ್ತು. ॥48॥ ಸಾಯಿಬಾಬಾರವರಿಗೆ ಅವನ ಮೇಲೆ ಬಹಳ ಪ್ರೇಮವಿತ್ತು. ಪ್ರೀತಿಯಿಂದ 'ಭಾವು' ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ನಿತ್ಯವೂ ಭಾವುವಿನ ಕ್ಷೇಮವನ್ನು ಪರಮ ಪ್ರೀತಿಯಿಂದ ವಿಚಾರಿಸುತ್ತಿದ್ದರು. ॥49॥ ಮಸೀದಿಯಲ್ಲಿ ಭಾವುವಿನ ಜಾಗವು ಬೆಳಗ್ಗೆ ಮತ್ತು ಸಂಜೆ ಕಟಕಟೆಯ ಹತ್ತಿರ ಇರುತ್ತಿತ್ತು. ಅವರು ಭಾವುವಿನ ಜೊತೆಯಲ್ಲಿ ಬಹಳ ಕಾಲವನ್ನು ಕಳೆಯುತ್ತಿದ್ದರು ಮತ್ತು ಪರಸ್ಪರ ಬಹಳ ಮಾತುಕತೆಯಾಡುತ್ತಿದ್ದರು. ॥50॥ ಚಿಲುಮೆಯನ್ನು ಉರುಬಲು ಭಾವು ಬೇಕಾಗಿತ್ತು. ಬೀಡಿ[3] ಸೇದುವಾಗ ಭಾವು ಬೇಕಾಗಿತ್ತು. ಕೆಲವು ವಿಷಯಗಳ ಮೇಲೆ ತೀರ್ಮಾನ ತಿಳಿಸುವಾಗ ಭಾವು ಬೇಕಾಗಿತ್ತು. ಅವನು ಹತ್ತಿರ ಇಲ್ಲದೇ ಇದ್ದಲ್ಲಿ ಅವನ ಅಗಲಿಕೆಯಿಂದ ವ್ಯಥೆಪಡುತ್ತಿದ್ದರು. ॥51॥ ಸಾಕಿಷ್ಟು, ಇದು ಅವನ ಹಿನ್ನೆಲೆ. ನಾರು ಹುಣ್ಣಿನ ನೋವು ದುಃಸ್ಸಹವಾಗಿದ್ದುದರಿಂದ ಭಾವು ಹಾಸಿಗೆ ಹಿಡಿದಿದ್ದನು. ಅವನ ದುಃಖೋದ್ವೇಗವು ದುರ್ಧರವಾಗಿತ್ತು. ॥52॥ ಇಂತಹ ದಾರುಣ ಪ್ರಸಂಗದಲ್ಲಿಯೂ ಭಾವು ಸಾಯಿನಾಮಸ್ಮರಣೆಯನ್ನು ಮಾಡುತ್ತಲೇ ಇದ್ದನು. 'ಈ ಯಾತನೆಗಿಂತ ಮರಣವೇ ಲೇಸು' ಎಂದು ಅಳುತ್ತ ಸಾಯಿಗೆ ಶರಣಾದನು. ॥53॥ ಅವನು ಬಾಬಾರವರಿಗೆ ಒಂದು ಸಂದೇಶ ಕಳುಹಿಸಿದನು. "ನಾನು ಈ ಯಾತನೆಯಿಂದ ದಣಿದಿದ್ದೇನೆ. ನನ್ನ ದೇಹದ ಮೇಲೆ ಅವೆಷ್ಟು ವ್ರಣಗಳು ಇವೆ! ನನಗೆ ಅದನ್ನು ತಡೆದು ಕೊಳ್ಳುವ ತ್ರಾಣವಿಲ್ಲ. ॥54॥ "ನನ್ನ ಜೀವನಪರ್ಯಂತ ನಾಶ ಶುದ್ಧಾಚರಣೆಯಲ್ಲಿ ನಿರತನಾಗಿದ್ದೇನೆ. ನನಗೇಕೆ ಈ ದುಃಖಾವಸ್ಥೆ? ದುಷ್ಕರ್ಮದ ಕಡೆ ಎಂದಿಗೂ ವಾಲಿಕೊಂಡಿಲ್ಲ! ನನಗೇಕೆ ಈ ಶಿಕ್ಷೆ ಮತ್ತು ಯಾವ ಪಾಪಕ್ಕೆ? ॥55॥ "ಬಾಬಾ, ಈ ನಾರುಹುಣ್ಣಿನ ವೇದನೆಯು ಮರಣವೇದನೆಗೆ ಸಮವಾಗಿದೆ. ಅದರ ಬದಲು ಈಗ ನನ್ನನ್ನು ಸಾಯಲು ಬಿಡಿ. ಈ ಯಾತನೆಯನ್ನು ನನ್ನ ಮುಂದಿನ ಜನ್ಮದಲ್ಲಿ ಅನುಭವಿಸುತ್ತೇನೆ. ॥56॥ "ಈ ಯಾತನೆಯನ್ನು ಅನುಭವಿಸದೆ ಬೇರೆ ಗತಿ ಇಲ್ಲ. ಅದನ್ನು ಪೂರೈಸಲು ಇನ್ನೂ ಅನೇಕ ಜನ್ಮಗಳು ಬೇಕಾಗುತ್ತವೆ. ಆದರೆ ಪ್ರಾರಬ್ಧವನ್ನು ತಪ್ಪಿಸಲು ಸಾಧ್ಯವಿಲ್ಲ. ನಾನು ಮಂದಮತಿಯಾಗಿದ್ದರೂ ಇದನ್ನು ಅರ್ಥಮಾಡಿಕೊಂಡಿದ್ದೇನೆ. ॥57॥ "ನಾನು ಸಂತೋಷವಾಗಿ ಇನ್ನೂ ಹತ್ತು ಜನ್ಮಗಳನ್ನಾದರೂ ಎತ್ತುವೆನು. ಆ ಜನ್ಮಗಳಲ್ಲೂ ನನ್ನ ಕರ್ಮಗಳ ಫಲಗಳನ್ನು ಅನುಭವಿಸಲೇಬೇಕು.

ಆದರೆ ಈ ಜನ್ಮವನ್ನು ಅಂತ್ಯಗೊಳಿಸುವ ವರ ನೀಡು. ॥58॥ "ಈ ಜೀವನ ಸಾಕಿಷ್ಟು, ನನ್ನನ್ನು ಈ ಜನ್ಮದಿಂದ ಬಿಡುಗಡೆ ಮಾಡು. ಈ ನೋವನ್ನು ಇನ್ನು ಸಹಿಸಲು ಬಯಸುವುದಿಲ್ಲ. ಇದನ್ನೇ ನಾನು ನಿಮ್ಮಲ್ಲಿ ಬೇಡುತ್ತಿದ್ದೇನೆ." ॥59॥ ಈ ಪ್ರಾರ್ಥನೆಯನ್ನು ಕೇಳಿದ ಸಿದ್ಧರಾಣಾ'ನಿಗೆ ದಯೆ ಉಕ್ಕಿಬಂದಿತು. ಡಾ॥ ಪಿಳ್ಳೆಯ ತೃಪ್ತಿಗಾಗಿ ಕರುಣಾಮೃತವನ್ನು ಸುರಿಸಿದರು. ಅದು ವಿಶೇಷವಾಗಿತ್ತು. ॥60॥ ಡಾ॥ ಪಿಳ್ಳೆಯ ಪರಮ ದುಃಖಾವಸ್ಥೆಯನ್ನು ನೋಡಿದ ಭಕ್ತರ ಕಾಮನೆಗಳ ಕಲ್ಪದ್ರುಮನು ಅದರ ಉಪಶಮನಕ್ಕಾಗಿ ಏನು ಮಾಡಿದರೆಂಬುದನ್ನು ಗಮನಿಸಿ. ॥61॥ ಡಾ॥ ಪಿಳ್ಳೆಯ ಈ ನಿರೋಪವನ್ನು ದೀಕ್ಷಿತನು ತೆಗೆದುಕೊಂಡು ಬಂದನು. ಬಾಬಾರವರು ಈ ವೃತ್ತಾಂತವನ್ನೆಲ್ಲವನ್ನೂ ಕೇಳಿ ಹೇಳಿದರು. "ಹೋಗು ಅವನಿಗೆ ಹೇಳು, ನಿರ್ಭಯನಾಗಿ ಇರಬೇಕೆಂದು." ॥62॥ ಮತ್ತು ಮುಂದಿನ ಸಂದೇಶವನ್ನು ಅವರು ಈ ರೀತಿ ಕಳುಹಿಸಿದರು. "ಹತ್ತು ಜನ್ಮಗಳ ಕಾಲ ಏಕೆ ಕುಂಠಿತನಾಬೇಕು? ಕೇವಲ ಇನ್ನು ಹತ್ತು ದಿನಗಳು ಮಾತ್ರ ಅನುಭವಿಸಿದರೆ ಸಾಕಷ್ಟೆ. ಮತ್ತು ನಾವಿಬ್ಬರೂ ಪರಸ್ಪರ ಅದರಲ್ಲಿ ಭಾಗವಹಿಸೋಣ. ॥63॥ "ನಾನು ಮೋಕ್ಷವನ್ನು, ಲೌಕಿಕ ವಸ್ತುಗಳನ್ನು ಅಥವಾ ಪರಮಾರ್ಥವನ್ನು ದಯಪಾಲಿಸಲು ಸಮರ್ಥನಾಗಿರುವಾಗ, ನೀನು ಅರ್ಥವಿಲ್ಲದಂತಹ ಮರಣವನ್ನು ಕೇಳುವ ಶೌರ್ಯದಲ್ಲಿ ಯಾವ ಪುರುಷಾರ್ಥವಿದೆ? ॥64॥ "ಅವನನ್ನು ಎತ್ತಿಕೊಂಡು ಇಲ್ಲಿಗೆ ಕರೆತನ್ನಿ. ಯಾವುದೇ ಆದರೂ ವಿಧಿಬರಹದಂತೆಯೇ ಆಗಬೇಕು. ಯಾರೂ ಈ ರೀತಿ ದಿಗ್ಭ್ರಮೆಹೊಂದಿರಬಾರದು. ಅವನನ್ನು ಯಾರ ಬೆನ್ನಮೇಲಾದರೂ ಎತ್ತಿಕೊಂಡುಬನ್ನಿ." ॥65॥ ಆದ್ದರಿಂದ, ಆ ವೈದ್ಯನನ್ನು ಕೂಡಲೇ ಅಂತಹ ಸ್ಥಿತಿಯಲ್ಲಿಯೇ ಮಸೀದಿಗೆ ಕರೆತರಲಾಯಿತು. ಬೆನ್ನಿನಿಂದ ಅವನನ್ನು ಇಳಿಸುತ್ತಿದ್ದಹಾಗೆಯೇ ಬಾಬಾರವರು ಅವನಿಗೆ ಒರಗಲು ತಮ್ಮನ್ನೇ ಕೊಟ್ಟರು. ॥66॥ ವೈದ್ಯನನ್ನು ತಮ್ಮ ಬಲಭಾಗದಲ್ಲಿ, ಫಕೀರ ಬಾಬಾ ಕುಳಿತುಕೊಳ್ಳುತ್ತಿದ್ದ ಜಾಗದಲ್ಲಿ ಕುಳ್ಳಿರಿಸಿ ಹೇಳಿದರು. "ಅದರ ಮೇಲೆ ಒರಗಿ ಕುಳಿತುಕೋ ಮತ್ತು ಶಾಂತನಾಗಿರು ಅನವಶ್ಯಕವಾಗಿ ಚಿಂತಿಸಬೇಡ. ॥67॥ "ನಿನ್ನ ಕಾಲುಗಳನ್ನು ಆರಾಮಾಗಿ ಉದ್ದಮಾಡಿಟ್ಟುಕೋ. ಸಂಚಿತ ಕರ್ಮಗಳನ್ನು ಅನುಭವಿಸಲೇಬೇಕು. ಕೇವಲ ಅದೊಂದೇ ಉಪಶಮನದ ಉಪಾಯ. ॥68॥ "ಒಳ್ಳೆಯದು ಅಥವಾ ಕೆಟ್ಟದ್ದು, ಸುಖ ಅಥವಾ ದುಃಖ, ವಿಧಿಲಿಖಿತದಂತೆಯೇ ಅಮೃತ ಅಥವಾ ವಿಷವಾಗಿ ಬರುತ್ತದೆ. ಪ್ರತ್ಯೊಬ್ಬರ ಜೀವನದಲ್ಲಿಯೂ ಈ ದ್ವಂದ್ವವು ಸಹಜವಾಗಿಯೇ ಬರುತ್ತದೆ ಎಂಬುದನ್ನು ಮನದಲ್ಲಿ ನೆನಪಿಟ್ಟುಕೋ. ಯಾವಾಗಲೂ ಸಂತೋಷವಾಗಿ ಅಥವಾ ದುಃಖಿಯಾಗಿ ಇರಬೇಡ. ॥69॥ "ಏನೇ ಬಂದರೂ ಸಹಿಸಿಕೋ. ಅಲ್ಲಾನೇ ಒಡೆಯನು ಮತ್ತು ರಕ್ಷಕನೂ ಹೌದು. ಸದಾ ಅವನನ್ನು ಧ್ಯಾನಿಸು. ಅವನು ಪ್ರತಿಯೊಂದರಲ್ಲೂ ಕಾಳಜಿವಹಿಸುತ್ತಾನೆ. ॥70॥ ಅವನ ಚರಣಗಳಲ್ಲಿ ಕಾಯಾ, ವಾಚಾ, ಮನಸಾ ಮತ್ತು ಸಂಪತ್ತಿಸಹಿತ ಶರಣಾಗು." ಯಾರಾದರೂ ನಿರಂತರ ಬಾಬಾರವರ ಸ್ಮರಣೆ ಮಾಡಿದರೆ, ಅವರ ಕೃಪಾನುಭವವಾಗುತ್ತದೆ. ॥71॥ ಅನಂತರ ಡಾಕ್ಟರ್ ಪಿಳ್ಳೆಯು ಹೇಳಿದನು. "ನಾನಾ ಸಾಹೇಬ

ಚಂದೋರಕರನು ನಾರು ಹುಳದ ಹುಣ್ಣುಗಳ ಮೇಲೆ ಪಟ್ಟಿಯನ್ನು ಕಟ್ಟಿದ್ದಾನೆ. ಆದರೆ ಸ್ವಲ್ಪವೂ ಗುಣವಾಗಲಿಲ್ಲ." ॥72॥ ಬಾಬಾ ಹೇಳಿದರು, "ನಾನಾ ಒಬ್ಬ ಹುಚ್ಚ. ಪಟ್ಟಿಯನ್ನು ತೆಗೆದುಬಿಡು. ಇಲ್ಲದಿದ್ದರೆ ನೀನು ಸಾಯುವೆ. ಈಗ ಒಂದು ಕಾಗೆಯು ಬಂದು ಕುಕ್ಕುತ್ತದೆ. ಅನಂತರ ನೀನು ಗುಣಮುಖನಾಗುವೆ." ॥73॥ ಸಾಕಿಷ್ಟು. ಈ ಸಂಭಾಷಣೆಯು ಹೀಗೆ ನಡೆಯುತ್ತಿರುವಾಗಲೇ ಅಬ್ದುಲ್ಲಾನ್ ಮೇಲೆ ಹತ್ತಿಬಂದನು. ದೀಪಗಳಿಗೆ ಎಣ್ಣೆ ಹಾಕಲು ಬಂದನು. ತಕ್ಷಣವೇ ಏನಾಯಿತು ಎಂಬುದನ್ನು ನೋಡಿರಿ. ॥74॥ ಮಸೀದಿಯು ಯಾವ ರೀತಿ ಇತ್ತೋ ಅದೇ ರೀತಿ ಚಿಕ್ಕದಾಗಿ ಇತ್ತು. ಆದರೆ ಭಕ್ತರ ದೊಡ್ಡ ಗುಂಪು ಅಲ್ಲಿತ್ತು. ಇವೆಲ್ಲದರ ಮಧ್ಯೆ ಪಿಳ್ಳೆಯ ಬಗ್ಗೆ ಬಹಳ ಗಡಿಬಿಡಿಯು ಇತ್ತು. ಅಬ್ದುಲ್ಲಾನಿಗೆ ತನ್ನ ಕಾಲು ಇಡಲೂ ಜಾಗವಿರಲಿಲ್ಲ. ॥75॥ ಅಬ್ದುಲ್ಲಾನು ತನ್ನ ಕಾರ್ಯದ ಮೇಲೆ ತಲ್ಲೀನನಾಗಿದ್ದನು. ಮತ್ತು ಅವನ ದೃಷ್ಟಿಯೆಲ್ಲವೂ ದೀಪದ ಮೇಲಿತ್ತು. ಅದರಿಂದಾಗಿ ಅವನು ಪಿಳ್ಳೆಯನ್ನು ಗಮನಿಸಲೇ ಇಲ್ಲ. ಅಲ್ಲಿ ಒಂದು ವಿಲಕ್ಷಣ ಸಂಗತಿ ನಡೆಯಿತು. ॥76॥ ಅಬ್ದುಲ್ಲನಾದರೂ ಏನು ಮಾಡಬೇಕು? ಯಾವುದು ನಡೆಯಬೇಕೆಂದಿದೆಯೋ ಅದು ನಡೆದೇ ನಡೆಯುತ್ತದೆ. ಗೊತ್ತಿಲ್ಲದೆಯೇ ಪಿಳ್ಳೆಯು ನೀಡಿಕೊಂಡಿದ್ದ ಕಾಲಿನ ಮೇಲೆ ತನ್ನ ಕಾಲನ್ನು ಇಟ್ಟುಬಿಟ್ಟನು. ॥77॥ ವೈದ್ಯನ ಕಾಲು ಈ ಮೊದಲೇ ಊದಿಕೊಂಡಿತ್ತು. ಅಬ್ದುಲ್ಲಾನು ಅದೇ ಜಾಗದಲ್ಲಿ ಕಾಲಿಟ್ಟಿದ್ದನು. ಪಿಳ್ಳೆಯು ಜೋರಾಗಿ ಕಿರುಚಿಕೊಂಡನು. ಅವನಿಗೆ ತೀವ್ರವಾದ ಯಾತನೆ ಉಂಟಾಗಿತ್ತು. ॥78॥ ಯಾರ ಮನಸ್ಸನ್ನಾದರೂ ಚುಚ್ಚುವ ಹಾಗಿತ್ತು ಅವನ ಕಿರುಚಾಟ. ಅನಂತರ, ಎರಡೂ ಕೈಗಳನ್ನು ಜೋಡಿಸಿಕೊಂಡು ಬಾಬಾರವರನ್ನು ಕರುಣೆಗಾಗಿ ಪ್ರಾರ್ಥಿಸಿದನು. ಅದನ್ನು ಕೇಳಿರಿ. ॥79॥ ನಾರು ಹುಣ್ಣು ಒಡೆದು ಹೋಗಿ ಅದರಿಂದ ಹುಳುಗಳು ಹೊರಗೆ ಬರಲು ಪ್ರಾರಂಭವಾಯಿತು. ಪಿಳ್ಳೆಯ ಮನಸ್ಸು ತಳಮಳಗೊಂಡಿತು. ಅವನು ಜೋರಾಗಿ ಅಳತೊಡಗಿದನು. ಮರುಕ್ಷಣ ಹಾಡತೊಡಗಿದನು. ॥80॥

> "ಹೇ ಕರೀಮ! ನನ್ನ ದೀನಾವಸ್ಥೆಯ ಮೇಲೆ ಕರುಣೆ ತೋರು. ನೀನು ರಹೀಮ ಮತ್ತು ನೀನು ಕರುಣಾಮಯಿ. ನೀನು ಎರಡೂ ಲೋಕಗಳ ಒಡೆಯನಾಗಿರುವೆ. ಈ ವಿಶ್ವವು ನಿನ್ನ ವೈಭವವಾಗಿದೆ. ಈ ಜಗತ್ತು ನಾಶವಾಗುವುದರಲ್ಲಿದೆ. ಆದರೆ ನಿನ್ನ ವೈಭವವು ಮಾತ್ರ ಶಾಶ್ವತ. ನೀನು ಸದಾ ಭಕ್ತರ ಕಾಮನೆಗಳನ್ನು ಪೂರೈಸುವೆ."

ನೋವು ಬಿಟ್ಟು ಬಿಟ್ಟು ಬರುತ್ತಿತ್ತು. ಅವನ ಜೀವ ಕಳವಳದಲ್ಲಿತ್ತು. ಅಸಹಾಯಕನಾಗಿ ಅಲ್ಲಿ ಮಲಗಿದ್ದನು. ಪ್ರತಿಯೊಬ್ಬರೂ ಇದು ಸಾಯಿಬಾಬಾರವರ ಆಟವೆಂದು ಭಾವಿಸಿದರು. ॥81॥ ಬಾಬಾ ಹೇಳಿದರು, "ಭಾವೂನ ನೋಡು. ಅವನು ಗುಣಮುಖನಾದಂತೆ ಕಾಣುತ್ತದೆ. ಅವನು ಈಗ ಹಾಡುತ್ತಿದ್ದಾನೆ." ನಂತರ ಪಿಳ್ಳೆಯು ಅವರನ್ನು ಕೇಳಿದನು, "ಕಾಗೆಯು ನನ್ನನ್ನು ಕೊಕ್ಕಿನಿಂದ ಕುಕ್ಕುತ್ತದೆಯೇ?" ॥82॥ ಅನಂತರ ಬಾಬಾ

ಹೇಳಿದರು, "ಹೋಗು. ಈಗ ವಾಡಾದಲ್ಲಿ ವಿಶ್ರಾಂತಿ ತೆಗೆದುಕೋ. ಈಗ ಕಾಗೆಯು ಮತ್ತೆ ಕುಕ್ಕಲು ಬರುವುದಿಲ್ಲ. ॥83॥ "ಅವನು ಆಗಲೇ ಬರಲಿಲ್ಲವೇ? ನಿನ್ನ ಕಾಲನ್ನು ತುಳಿದವನು ಅವನೇ. ಅವನೇ ಕಾಗೆಯ ಹಾಗೆ ಕುಕ್ಕಿ ಓಡಿಹೋದನು. ಅವನು ಹುಳುಗಳನ್ನು ಹಿಂಡಿ ತೆಗೆದಿದ್ದಾನೆ." ॥84॥ ಏನು ಕಾಗೆ! ಅದು ಕೇವಲ ಅನ್ವರ್ಥನಾಮವಾಗಿತ್ತು, ಅದೇನು ನಡೆಯಬೇಕಾಗಿತ್ತೋ ಅದು ಎಲ್ಲರೆದುರು ನಡೆದೇ ಹೋಗಿತ್ತು. ಕಾಗೆಯು ಅಬ್ದುಲ್ಲಾನ ರೂಪದಲ್ಲಿ ಪ್ರಕಟವಾಗಿತ್ತು. ಬಾಬಾರ ಭವಿಷ್ಯವಾಣಿಯು ನಿಜವಾಗಿತ್ತು. ॥85॥ ಇವೆಲ್ಲವೂ ಕೇವಲ ಸಾಮಾನ್ಯ ಪದಗಳಲ್ಲ, ಆದರೆ ಬ್ರಹ್ಮಲಿಖಿತ ಆಗಿತ್ತು. ಪೂರ್ವಜನ್ಮದ ಕರ್ಮಗಳು ಯಾವುದೇ ಪರಿಣಾಮ ಬೀರುವುದಿಲ್ಲ. ಅಲ್ಪಕಾಲದಲ್ಲೇ ಭಾವು ಗುಣಮುಖನಾಗಲು ಪ್ರಾರಂಭಿಸಿದನು. ॥86॥ ಹತ್ತನೆಯ ದಿನ ಬೆಳಕಾಯಿತು. ಉದಿಸೇವನೆ ಮತ್ತು ಉದಿಯ ಲೇಪನ ಮಾತ್ರದಿಂದಲೇ ರೋಗವು ಸಂಪೂರ್ಣವಾಗಿ ಗುಣವಾಗಿತ್ತು. ಕೇವಲ ಅದೊಂದೇ ಔಷಧ ಕೆಲಸ ಮಾಡಿದುದು. ॥87॥ ಹುಣ್ಣಿನಿಂದ ಎಲ್ಲ ಏಳು ಹುಳುಗಳೂ ಜೀವಂತವಾಗಿ ಹೊರಗೆ ಬಂದವು. ಅವು ಸಣ್ಣಗೆ ಮತ್ತು ಉದ್ದವಾಗಿದ್ದವು. ತೀವ್ರವಾದ ಯಾತನೆಯು ನಿಂತಿತು. ದುಃಖವು ಅಂತ್ಯವಾಗಿತ್ತು. ॥88॥ ಈ ಚಮತ್ಕಾರವನ್ನು ಅನುಭವಿಸಿದ ಪಿಳ್ಳೆಯು ಅಂತರಂಗದಲ್ಲಿಯೇ ಆಶ್ಚರ್ಯ ಚಕಿತನಾದನು. ಅವನ ಕಣ್ಣುಗಳಿಂದ ಪ್ರೇಮಧಾರೆಯು ಹರಿಯತೊಡಗಿತು. ಬಾಬಾರವರದು ಅದೊಂದು ಉದಾರ ಚರಿತ್ರೆಯಾಗಿತ್ತು. ॥89॥ ಪಿಳ್ಳೆಯು ಬಾಬಾರವರ ಚರಣಗಳನ್ನು ಅಪ್ಪಿ ಹಿಡಿದನು. ಅವನ ಗಂಟಲು ಭಾವೋದ್ವೇಗದಿಂದ ಕಟ್ಟಿ, ಕಂಠವು ಗದ್ಗದವಾಯಿತು. ಅದರಿಂದಾಗಿ ಬಾಯಿಂದ ಒಂದು ಶಬ್ದವೂ ಹೊರಬರಲಿಲ್ಲ. ॥90॥ ಮತ್ತೊಂದು ಅನುಭವವನ್ನು ನಿರೂಪಿಸಿ ಉದಿಯ ಮಹತ್ವದ ವಿವರಣೆಯನ್ನು ಮುಗಿಸೋಣ. ಅವರವರ ಅನುಭವವು ಅವರವರ ಭಕ್ತಿಯ ಆಳಕ್ಕೆ ತಕ್ಕಹಾಗೆ ಇರುತ್ತಿತ್ತು. ಹಾಗಾಗಿ ಅದೇ ಈ ಗ್ರಂಥದ ಒಟ್ಟು ವಾಸ್ತವಾಂಶ ಮತ್ತು ಗೌರವವಾಗಿತ್ತು. ॥91॥ ಈ ಕಥೆಯು ಮಾಧವರಾವನ ತಮ್ಮನಾದ ಬಾಪಾಜಿಯ ಬಗ್ಗೆ ಆಗಿದ್ದು ಅವನು ಕಷ್ಟದಲ್ಲಿದ್ದಾಗ ಯಾವ ರೀತಿ ಉದಿಯ ಸಹಾಯದಿಂದ ತನ್ನ ಕ್ಷೇಮವನ್ನು ಸಾಧಿಸಿದನು ಎಂಬುದನ್ನು ತಿಳಿಸುತ್ತದೆ. ॥92॥ ಈ ಉದಿಯ ಶಕ್ತಿಯನ್ನು ಮತ್ತು ಅದರಿಂದಾದ ಅದ್ಭುತಗಳನ್ನೂ ಎಷ್ಟೆಂದು ನಾನು ವರ್ಣಿಸಲಿ? ಉದಿಯು ಗ್ರಂಥಿಜ್ವರ ಮತ್ತಿತರ ರೋಗಗಳಿಗೆ ಪರಮೌಷಧವಾಗಿದೆ. ॥93॥ ಅವನು ಶಿರಡಿಯ ಹತ್ತಿರದ ಸಾವುಲ್ ವಿಹಿರ್ ಎಂಬ ಸ್ಥಳದಲ್ಲಿ ವಾಸಿಸುತ್ತಿದ್ದಾಗ, ಬಾಪಾಜಿಯ ಪತ್ನಿಗೆ ಜ್ವರವೂ, ತೊಡೆ ಸಂದಿಯಲ್ಲಿ ಗ್ರಂಥಿಗಳೂ ಕಾಣಿಸಿಕೊಂಡವು. ಅವನು ಬಹಳ ಗಾಬರಿಯಾದನು. ॥94॥ ಅವನ ಪತ್ನಿಯು ಅತಿ ನೋವಿನಿಂದಿದ್ದುದನ್ನು ನೋಡಿ ಆ ಭಯಾನಕ ರಾತ್ರಿಸಮಯದಲ್ಲಿ ಬಾಪಾಜಿಯು ಭ್ರಾಂತಿ ಹೊಂದಿದ ಮನಸ್ಸಿನಿಂದ ಸಂಪೂರ್ಣವಾಗಿ ಧೈರ್ಯ ಕಳೆದುಕೊಂಡನು. ॥95॥ ರಾತ್ರೋರಾತ್ರಿಯಲ್ಲಿ ಅವನು ಶಿರಡಿಗೆ ಓಡಿಹೋಗಿ ಭಯಭೀತನಾಗಿ ನಡುಗುತ್ತ ನಿಂತನು. ಅವನು ಎಲ್ಲ ವಿವರವನ್ನೂ ತನ್ನ ಅಣ್ಣನಿಗೆ ತಿಳಿಸಿದನು. ॥96॥ ಅವನು ಹೇಳಿದನು, "ಅವಳಿಗೆ ಎರಡು

ಗ್ರಂಥಿಗಳು ಉಂಟಾಗಿ ಅತಿಯಾದ ಜ್ವರದಿಂದ ಕಷ್ಟಪಡುತ್ತಿದ್ದಾಳೆ. ನೀನೇ ಬಂದು ನೋಡು. ಅದೆಲ್ಲವೂ ಸರಿಯಿಲ್ಲ ಎಂದು ನನ್ನ ಅನಿಸಿಕೆ." ॥97॥ ಬಾಪಾಜಿಯು ತನ್ನ ದೈನ್ಯ ಸ್ಥಿತಿಯನ್ನು ವಿವರಿಸಿದ್ದಕ್ಕೆ ಮಾಧವರಾವ್‌ನು ದಿಗ್ಭ್ರಾಂತನಾಗಿ ಭಯಗೊಂಡನು. ಅವನ ಮನಸ್ಸು ಸ್ತಂಭಿತವಾಯಿತು. ॥98॥ ಮಾಧವರಾವ್‌ನು, ಸಾಮಾನ್ಯವಾಗಿ ವಿವೇಕಿಯಾಗಿದ್ದು ಗ್ರಂಥಿಗಳ ಬಗ್ಗೆ ಕೇಳಿ ದಿಗ್ಭ್ರಾಂತನಾದನು. ಅದು ಈಗಲೇ ಚೆನ್ನಾಗಿ ತಿಳಿದಂತೆ ಗ್ರಂಥಿಜ್ವರವಾಗಿದ್ದು ಬೇಗನೆ ಮರಣಾಂತಿಕವಾಗುತ್ತಿತ್ತು. ॥99॥ ಯಾವುದೇ ರೀತಿಯ ಪ್ರಸಂಗವಾಗಲಿ, ಒಳ್ಳೆಯದೋ, ಕೆಟ್ಟದೋ, ಇಷ್ಟವೋ, ಅನಿಷ್ಟವೋ, ಮಂಗಳಕರವೋ, ಅಮಂಗಳಕರವೋ, ಶಿರಡಿಯಲ್ಲಿ ಸಾಯಿಯ ಸಲಹೆ ಕೇಳುವುದು ಒಂದು ಪರಿಪಾಟವಾಗಿತ್ತು. ॥100॥ ಅನಂತರ, ಬಾಬಾ ಏನು ಹೇಳುತ್ತಿದ್ದರೋ ಅದೇ ರೀತಿ ಅದನ್ನು ಎಚ್ಚರಿಕೆಯಿಂದ ಪಾಲಿಸುತ್ತಿದ್ದರು. ಕೇವಲ ಅವರು ಮಾತ್ರ ಭಕ್ತಸಂಕಟಗಳನ್ನು ನಿವಾರಿಸುತ್ತಿದ್ದರು. ಅಂತಹ ಅದೆಷ್ಟು ಅನುಭವಗಳನ್ನು ವಿವರಿಸಲಿ? ॥101॥ ಆದುದರಿಂದ, ನಿತ್ಯ ಪಾಠದ ಅನುಸಾರವಾಗಿ ಮಾಧವರಾವನೂ ಸಹ ಇದೇ ರೀತಿ ನಡೆದುಕೊಳ್ಳುವ ವಿಚಾರಮಾಡಿದನು. ಅವನು ಬಾಬಾರವರ ಹತ್ತಿರ ಹೋಗಿ ಆದರಪೂರ್ವಕವಾಗಿ ಸಾಷ್ಟಾಂಗ ಪ್ರಣಾಮ ಮಾಡಿದನು. ॥102॥ ಅವನು ಹೇಳಿದನು, "ಜಯ ಜಯ ಸಾಯಿನಾಥ! ಅನಾಥರಾದ ನಮ್ಮ ಮೇಲೆ ದಯೆತೋರಿಸು. ಅನವಶ್ಯಕವಾದ ಚಿಂತೆಯನ್ನುಂಟುಮಾಡುವಂತಹ ಯಾವ ಸಂಕಟ ಈಗ ಉದ್ಭವಿಸಲಿದೆ? ॥103॥ "ನಿಮ್ಮನ್ನಲ್ಲದೆ ಬೇರೆ ಯಾರನ್ನು ನಾವು ಬೇಡಿಕೊಳ್ಳಲು ಸಾಧ್ಯ? ಈ ಬಾಲಕಿಯ ಯಾತನೆಯನ್ನು ದೂರಮಾಡಿ ನಿಮ್ಮ ಆಶೀರ್ವಚನಗಳನ್ನು ನೀಡಿ. ॥104॥ "ಈ ಸಂಕಟವನ್ನು ನಿವಾರಣೆಮಾಡಿ. ಮತ್ತೆ ಇನ್ಯಾರು ನಮ್ಮ ಕಡೆ ಲಕ್ಷ್ಯ ಕೊಡುವವರು ಇದ್ದಾರೆ? ಈ ಭಯಂಕರ ಜ್ವರವನ್ನು ಉಪಶಮನ ಮಾಡಿ. ನೀವು ರಕ್ಷಕರೆಂಬ ನಂಬಿಗೆಯನ್ನು ಸತ್ಯಮಾಡಿರಿ." ॥105॥ ಅವನು ಹೊರಡಲು ಅನುಮತಿಯನ್ನೂ ಬೇಡಿದನು. ಆಗ ಬಾಬಾ ಹೇಳಿದರು, "ಈ ಅಪರಾತ್ರಿಯಲ್ಲಿ ಇಷ್ಟು ತಡವಾಗಿ ಹೋಗಬೇಡ. ಅವಳಿಗೆ ಉದಿಯನ್ನು ಕಳುಹಿಸಿಕೊಡು. ॥106॥ "ಜ್ವರಕ್ಕೆ ಮತ್ತು ಗ್ರಂಥಿಗಳಿಗೆ ಏಕಿಷ್ಟು ಗಮನ ಕೊಡುತ್ತೀಯೆ? ದೇವರು ನಮ್ಮಡೆಯವಳು ಸುಲಭವಾಗಿ ಗುಣಮುಖಳಾಗುತ್ತಾಳೆ. ಎಲ್ಲವೂ ಕ್ಷೇಮವಾಗಿರುತ್ತದೆ. ಮತ್ತು ಯಾವುದೇ ತೊಂದರೆಯಿಲ್ಲದೆ ಗುಣ ಆಗುತ್ತದೆ. ॥107॥ "ಬೆಳಗಿನ ಜಾವದಲ್ಲೇ ನೀನು ಸಾವುಲ್ ವಿಹಿರಕ್ಕೆ ಹೋಗಿ ಹಿಂತಿರುಗಿ ಬಾ. ಈಗ ಹೋಗುವ ತರಾತುರಿ ಬೇಡ. ಇಲ್ಲಿಯೇ ಶಾಂತವಾಗಿ ಇರು. ॥108॥ "ನೀನು ನಾಳೆಯೇ ಹೋಗು. ಈಗ ಕಳವಳಪಡುವ ಅವಶ್ಯಕತೆ ಇಲ್ಲ, ಉದಿಯನ್ನು ಸವರಿ ಶ್ರದ್ಧೆ, ಭಕ್ತಿಯಿಂದ ಸೇವನೆ ಮಾಡಿದಲ್ಲಿ ಮತ್ತೇಕೆ ಭಯ?" ॥109॥ ಇದನ್ನು ಕೇಳಿ ಬಾಪಾಜಿಯು ಗಾಬರಿಗೊಂಡನು. ಅವನಿಗೆ ಬಹಳ ನಿರಾಶೆಯಾಯಿತು. ಮಾಧವರಾವ್‌ನಿಗೆ ರೋಗದ ಉಪಶಮನಕ್ಕೆ ಬೇಕಾದ ಔಷಧಿಯಗಿಡ ಮೂಲಿಕೆಗಳು ತಿಳಿದಿದ್ದವು. ಆದರೆ ಅವನ ಜ್ಞಾನವು ಈ ಸಮಯಕ್ಕೆ ಉಪಯೋಗವಾಗಲಿಲ್ಲ. ॥110॥ ಮಾಧವರಾವ್‌ನಿಗೆ ಸಾಯಿಯ ಕೃಪೆಯಿಲ್ಲದೆ

ಯಾವ ಔಷಧಿಯೂ ಕೆಲಸ ಮಾಡುವುದಿಲ್ಲ ಎಂಬುದು ಚೆನ್ನಾಗಿ ತಿಳಿದಿತ್ತು. ಇದೊಂದು ರಹಸ್ಯಸಂಕೇತವಾಗಿತ್ತು. ॥111॥ ಆದ್ದರಿಂದ ಬಾಬಾರವರ ಆಜ್ಞೆಗೆ ವಂದಿಸಿ, ಮಾಧವರಾವ್‌ನು ಉದಿಯನ್ನು ಕಳಿಸಿಕೊಟ್ಟು ತಾನು ಶಾಂತನಾಗಿ ಸ್ವಸ್ಥ ಮನದಿಂದ ಉಳಿದನು. ಬಾಪಾಜಿಯು ನಿರಾಶೆಯಿಂದ ಹಿಂತಿರುಗಿದನು. ॥112॥ ಉದಿಯನ್ನು ನೀರಿನಲ್ಲಿ ಕಲಸಿ ಕುಡಿಯಲು ಕೊಟ್ಟಾಗ ಮತ್ತು ದೇಹಕ್ಕೆ ಸವರಿದಾಗ, ಅವಳುಚೆನ್ನಾಗಿ ಬೆವತು ನಿದ್ರೆಮಾಡಿದಳು. ॥113॥ ಸೂರ್ಯೋದಯ ಸಮಯಕ್ಕೆ ಸರಿಯಾಗಿ ಪತ್ನಿಯು ಗುಣಮುಖವಾದಳು. ಜ್ವರವು ಹೊರಟು ಹೋಗಿತ್ತುಮತ್ತು ವಿಷಪೂರಿತ ಗ್ರಂಥಿಗಳೂ ಸಹ ಮಾಯವಾಗಿದ್ದವು. ಬಾಪಾಜಿಯು ಅಚ್ಚರಿಹೊಂದಿದನು. ॥114॥ ಶಿರಡಿಯಲ್ಲಿ, ಮಾಧವರಾವ್‌ನು ಬೆಳಗೆದ್ದು ಶೌಚಮುಖಮಾರ್ಜನವೆಲ್ಲ ಮುಗಿಸಿದ ಮೇಲೆ ಸಾವುಲ್ ವಿಹಿರಕ್ಕೆ ಹೊರಡುವ ಮುಂಚೆ ಮಸೀದಿಗೆ ದರ್ಶನಕ್ಕಾಗಿ ಬಂದನು. ॥115॥ ಅವನು ಬಾಬಾರವರ ದರ್ಶನ ತೆಗೆದುಕೊಂಡು ಅವರ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು. ಉದಿಯ ಸಹಿತ ಆಶೀರ್ವಚನ ದೊರಕಿದ ಕೂಡಲೇ ಅವನು ಅಲ್ಲಿಂದ ಹೊರಟನು. ॥116॥ ಮಸೀದಿಯ ಮೆಟ್ಟಿಲುಗಳನ್ನು ಇಳಿಯುತ್ತಿದ್ದ ಹಾಗೆಯೇ ಅವನಿಗೆ ಬಾಬಾರವರ ಆಜ್ಞಾಪನೆ ಕೇಳಿಸಿತು, “ಶಾಮಾ, ಕೂಡಲೇ ಹಿಂತಿರುಗು. ವಿಳಂಬ ಮಾಡುವ ಪ್ರಮೇಯವೇ ಇರುವುದಿಲ್ಲ!” ॥117॥ ಮಾರ್ಗದಲ್ಲಿ ಅವನು ಚಿಂತಿತನಾದನು. “ನನ್ನ ಭಾವನು ಬಹಳ ವಿಹ್ವಲಗೊಂಡಿರಬೇಕು! ಅವಳು ಎರಡು ಗ್ರಂಥಿಗಳ ಯಾತನೆಯನ್ನು ಹೇಗೆ ಅನುಭವಿಸುತ್ತಾಳೆ? ಅವಳು ತೀವ್ರಯಾತನೆಯಿಂದ ನರಳುತ್ತಿರಬೇಕು.” ॥118॥ ಬಾಬಾರವರ ಮಾತುಗಳು “ಕೂಡಲೇ ಹಿಂತಿರುಗು” ಎಂಬುದರ ಅರ್ಥವನ್ನರಿಯದೆ ಅದರ ಇಂಗಿತವನ್ನು ಅರಿಯಲಾರದೆ ಮತ್ತೂ ಹೆಚ್ಚು ಚಿಂತಿತನಾಗಿ ಮಾರ್ಗದಲ್ಲಿ ಅತಿವೇಗದಿಂದ ನಡೆಯತೊಡಗಿದನು. ॥119॥ ಅವನು ‘ಸಾವುಲ್ ವಿಹಿರ್’ವನ್ನು ತಲುಪುವವರೆಗೆ ತಾಳ್ಮೆಯಿರಲಿಲ್ಲ. ಆದರೆ ಅಲ್ಲಿ ಅವನು ಸರಹದ್ದನ್ನು ದಾಟಿ ಹೆಜ್ಜೆ ಇಟ್ಟಕೂಡಲೇ ಒಂದು ಚಮತ್ಕಾರವನ್ನು ಕಂಡನು. ॥120॥ ಹಿಂದಿನ ರಾತ್ರಿ ಗ್ರಂಥಿಜ್ವರದಿಂದ ನರಳುತ್ತಿದ್ದವಳು ಅಡಿಗೆ ಒಲೆಯ ಮುಂದೆ ಕುಳಿತು ಚಹಾ ತಯಾರಿಸುತ್ತಿದ್ದಳು. ಅವಳ ಪರಿಸ್ಥಿತಿಯ ಬದಲಾವಣೆಯನ್ನು ಕಂಡು ಮಾಧವರಾವ್ ಅಚ್ಚರಿಗೊಂಡನು. ॥121॥ ಅನಂತರ ಅವನು ಬಾಪಾಜಿಯನ್ನು ಕೇಳಿದನು. “ಅದು ಹೇಗೆ ಅವಳು ನಿತ್ಯಕರ್ಮಗಳಲ್ಲಿರತಳಾಗಿದ್ದಾಳೆ?” ಬಾಪಾಜಿಯು ಉತ್ತರಿಸಿದನು, “ಇದು ಮಾತ್ರ ನಿಜವಾಗಿಯೂ ಬಾಬಾರವರ ಉದಿಯ ಚಮತ್ಕಾರವೇ!” ॥122॥ ಮತ್ತೆ ಹೇಳಿದನು, “ನಾನು ಇಲ್ಲಿಗೆ ಬಂದಕೂಡಲೇ ಅವಳಿಗೆ ಉದಿಯನ್ನು ಕುಡಿಯಲು ಕೊಟ್ಟೆ, ಅದನ್ನು ಇಡೀ ದೇಹಕ್ಕೆ ಸವರಲು ಕೊಟ್ಟೆ, ಅವಳು ಕೂಡಲೇ ಬೆವರು ಸುರಿಸಿ ನೆಮ್ಮದಿಯಿಂದ ನಿದ್ದೆ ಹೋದಳು. ॥123॥ ಅನಂತರ, ಈ ಬೆಳಗ್ಗೆ ಸೂರ್ಯೋದಯದ ಸಮಯದಲ್ಲಿ ಅವಳು ಪೂರ್ಣ ಆರೋಗ್ಯದಿಂದ ಎದ್ದಳು. ಗ್ರಂಥಿಗಳು ಮತ್ತು ಜ್ವರ ಎರಡೂ ಮಾಯವಾಗಿದ್ದವು. ಇದೆಲ್ಲವೂ ಸಾಯಿಯು ಮಾಡಿದುದೇ. ॥124॥ ಶಾಮಾನು ಈ ಪರಿಸ್ಥಿತಿಯನ್ನು ನೋಡಿದ ಕೂಡಲೇ

ಸಾಯಿಯ ಮಾತುಗಳು, "ಕೂಡಲೇ ಹಿಂತಿರುಗು" ಎಂಬುದರ ಅರ್ಥವನ್ನು ಅರಿತನು. ಅದರ ಬಗ್ಗೆ ಚಿಂತಿಸುತ್ತಲೇ ಅವು ಆಶ್ಚರ್ಯಚಕಿತನಾದನು. ||125|| ಅವನ ಆಗಮನಕ್ಕೆ ಮುಂಚೆಯೇ ಸಂಕಟವು ನಿವಾರಣೆಯಾಗಿತ್ತು, ಮಾಧವರಾವ್‌ನು ಒಂದು ಕಪ್ಪು ಚಹ ಕುಡಿದು ಹಿಂತಿರುಗಿದನು. ಅವನು ನೇರವಾಗಿ ಮಸೀದಿಗೆ ಹೋಗಿ ಬಾಬಾರವರ ಚರಣಗಳಲ್ಲಿ ವಂದಿಸಿದನು. ||126|| ಅವನು ಹೇಳಿದನು, "ಓ ದೇವಾ ಇದೆಂತ ಆಟ? ಇಲ್ಲಿ ಕುಳಿತುಕೊಂಡು, ನೀನು ನಮ್ಮ ಮನಸ್ಸಿನಲ್ಲೆಲ್ಲ ಇಷ್ಟೊಂದು ತುಮುಲವನ್ನುಂಟುಮಾಡಿದೆ. ಒಂದು ಬಿರುಗಾಳಿಯನ್ನು ಎಬ್ಬಿಸಿ ನೀನೇ ಅದನ್ನು ಶಾಂತಗೊಳಿಸಿರುವೆ." ||127|| ಬಾಬಾ ಅವನಿಗೆ ಉತ್ತರಿಸಿದರು. "ವಿಧಿಯ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ ಎಂಬುದನ್ನೇ ನೋಡು. ನಾನು ಏನನ್ನೂ ಮಾಡುವುದಿಲ್ಲ. ಅಥವಾ ಇತರರು ಮಾಡುವಂತೆಯೂ ಮಾಡುವುದಿಲ್ಲ. ಆದರೂ ನಡೆಯುವುದೆಲ್ಲಕ್ಕೂ ನನ್ನನ್ನೇ ಹೊಣೆಗಾರನಾಗಿ ಮಾಡುತ್ತಾರೆ." ||128|| "ವಿಧಿಲಿಖಿತದಂತೆ ಸಂಭವಿಸುವ ಕಾರ್ಯಗಳಿಗೆಲ್ಲ ನಾನು ಕೇವಲ ಸಾಕ್ಷೀಭೂತನು. ಅನಂತನಾದ ಭಗವಂತನೇ ಕರ್ತಾರ ಮತ್ತು ಮಾಡಿಸುವವನೂ ಹೌದು. ಕೇವಲ ಅವನೊಬ್ಬನೇ ಕೃಪಾವಂತನು." ||129|| "ನಾನು ದೇವರೂ ಅಲ್ಲ, ಈಶ್ವರನೂ ಅಲ್ಲ. ನಾನು 'ಅನಲಹಕ್ಕ'ನೂ ಅಲ್ಲ. ಪರಮೇಶ್ವರನೂ ಅಲ್ಲ. ನಾನು ಕೇವಲ ದೇವರನ್ನು ಸ್ಮರಿಸುತ್ತೇನೆ. ಜನರಿಗೆ ಭಗವಂತನ ಅಸ್ತಿತ್ವವನ್ನು ನೆನಪಿಸುತ್ತೇನೆ. ನಾನು ಅಲ್ಲಾನ ಬಡ ಸೇವಕ. ||130|| "ಯಾರು ತಮ್ಮ ಅಹಂಕಾರವೆಲ್ಲವನ್ನೂ ತ್ಯಜಿಸುತ್ತಾರೋ, ಭಗವಂತನಿಗೆ ಎಂದಿಗೂ ಆಭಾರಿಯಾಗಿರುತ್ತಾರೆ. ಮತ್ತು ತಮ್ಮ ಭಾರವನ್ನೆಲ್ಲ ಅವನ ಮೇಲೆ ಹಾಕುತ್ತಾರೆಯೋ ಅವರು ಸಂಸಾರವನ್ನು ದಾಟಿ ತಮ್ಮ ಲಕ್ಷ್ಯ ಮುಟ್ಟುತ್ತಾರೆ. ||131|| ಒಬ್ಬ ಇರಾನಿ ವ್ಯಕ್ತಿಯ ಮತ್ತೊಂದು ಇದೇ ರೀತಿಯ ಮಹತ್ವದ ಅನುಭವವನ್ನು ಕೇಳಿರಿ. ಅವನ ಚಿಕ್ಕ ಮಗಳು ಗಂಟೆ ಗಂಟೆಗೂ ಪ್ರಜ್ಞೆಹುವ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಳು. ||132|| ಪ್ರತಿ ಗಂಟೆಗೊಮ್ಮೆ ಅವಳಿಗೆ ಅಪಸ್ಮಾರದ ಸೆಳೆತ ಬರುತ್ತಲೇ ಇತ್ತು, ಅವಳದೇಹವು ಬಿಲ್ಲಿನ ತರಹ ಬಗ್ಗಿಹೋಗಿ ನಿಂತ ಜಾಗದಲ್ಲೇ ಬಿದ್ದುಹೋಗುತ್ತಿದ್ದಳು. ಅವಳು ಜ್ಞಾನ ತಪ್ಪಿ ಬಿದ್ದು ಸಾಯುವಳೇನೋ ಎಂದೆನಿಸುತ್ತಿತ್ತು, ಯಾವುದೇ ಉಪಾಯವೂ ಪರಿಣಾಮಕಾರಿಯಾಗಲಿಲ್ಲ. ||133|| ಅನಂತರ, ಅವನ ಸ್ನೇಹಿತನೊಬ್ಬನು ಅವನಿಗೆ ಉದಿಯ ಮಹತ್ವದ ಬಗ್ಗೆ ವಿವರಿಸಿದನು. ಮತ್ತು ಇದಕ್ಕಿಂತೇಯೂ ಯಾವುದೂ ನಂಬಲಾರದಂತಹ ರಾಮಬಾಣದಂತಹ ಔಷಧಿಯು ಇಲ್ಲ ಎಂದು ಹೇಳಿದನು. ||134|| "ಏನೂ ವಿಳಂಬ ಮಾಡದೆ ಪಾರ್ಲೆಗೆ ಹೋಗು ಮತ್ತುದೀಕ್ಷಿತರಲ್ಲಿ ಉದಿಯನ್ನು ಕೇಳು. ಅವನ ಹತ್ತಿರ ಸ್ವಲ್ಪ ಸಂಗ್ರಹ ಇದ್ದೇ ಇರುತ್ತದೆ. ಅವನು ಅದನ್ನು ಅತಿ ಉಲ್ಲಾಸದಿಂದ ಕೊಡುತ್ತಾನೆ. ||135|| "ಈ ಉದಿಯನ್ನು ದಿನವೂ ಸ್ವಲ್ಪಕೊಡು. ಸಾಯಿಯನ್ನು ಪೂರ್ಣಶ್ರದ್ಧೆಯಿಂದ ನೆನಸಿಕೊಂಡು ಕೊಡು. ಈ ಸನ್ನಿ ರೋಗವು ಪೂರ್ಣವಾಗಿ ಗುಣಹೊಂದಿಸುಖಿವಾಗಿರುತ್ತಾಳೆ." ||136|| ಇದನ್ನು ಕೇಳಿದ ಆ ಇರಾನಿ ಮಹಾಶಯನು ದೀಕ್ಷಿತನಿಂದ ಉದಿಯನ್ನು ತೆಗೆದುಕೊಂಡು ಬಂದನು ಮತ್ತು ನಿತ್ಯವೂ ತನ್ನ ಮಗಳಿಗೆ

ಕುಡಿಯಲು ಕೊಟ್ಟನು. ಮತ್ತು ಅವಳು ಪೂರ್ಣ ಆರೋಗ್ಯವಂತಳಾದಳು. ॥137॥ಅವಳಿಗೆ ಈ ರೋಗವು ಗಂಟೆ ಗಂಟೆಗೂ ಪೀಡಿಸುತ್ತಿತ್ತು, ಅವಳು ಉದಿಯನ್ನು ಸ್ವೀಕರಿಸಿದ ಕೂಡಲೇ ಅಪಸ್ಮಾರದ ಬಾಧೆಯ ಮಧ್ಯಾಂತರವೂ ಒಂದು ಗಂಟೆಯಿಂದ ಏಳುಗಂಟೆಗಳಾದವು. ॥138॥ ಮೊದಲು ಈ ಪುನರಾವರ್ತನೆಯು ಒಂದು ಗಂಟೆಯಿಂದ ಏಳುಗಂಟೆಗಳವರೆಗೆ ಇಳಿಯಿತು. ಮತ್ತು ಸ್ವಲ್ಪ ಕಾಲಾನಂತರ ಅಪಸ್ಮಾರವು ಸಂಪೂರ್ಣವಾಗಿ ಪರಿಹಾರವಾಯಿತು. ॥139॥ ಹಾರ್ದಾ ಹತ್ತಿರ ಒಂದು ಹಳ್ಳಿಯಲ್ಲಿ ವೃದ್ಧಗೃಹಸ್ಥನೊಬ್ಬನಿದ್ದನು. ಅವನು ಮೂತ್ರಕೋಶದಲ್ಲಿ ಕಲ್ಲಿನ ರೋಗದಿಂದ ಪೀಡಿತನಾಗಿ ಅತಿಯಾಗಿ ನರಳುತ್ತಿದ್ದನು. ॥140॥ ಶಸ್ತ್ರಚಿಕಿತ್ಸೆಯಿಲ್ಲದೆ ಬೇರೆಯಾವುದೇ ಉಪಾಯವಿರಲಿಲ್ಲ. ಆದುದರಿಂದ ಅವನಿಗೆ ಒಬ್ಬ ಶಸ್ತ್ರಕ್ರಿಯಾ ಪ್ರವೀಣನನ್ನು ಸಂಪರ್ಕಿಸಲು ಸೂಚಿಸಲಾಯಿತು. ॥141॥ ರೋಗಿಯು ಪರಮ ಚಿಂತೆಯಲ್ಲಿ ಮುಳುಗಿದ್ದನು. ಏನು ಮಾಡಬೇಕೆಂದು ವಿಚಾರಮಾಡಲಾಗಲಿಲ್ಲ. ಅವನ ದೇಹವು ಅತ್ಯಂತ ಕೃಶವಾಗಿ ಮರಣೋನ್ಮುಖನಾಗಿರುವಂತೆ ಕಾಣುತ್ತಿತ್ತು, ಅವನು ಆ ತೀವ್ರವಾದ ದುಃಖವನ್ನು ಸಹಿಸಲಸಾಧ್ಯವಾಗಿ ನರಳುತ್ತಿದ್ದನು. ॥142॥ ಶಸ್ತ್ರಪ್ರಯೋಗಕ್ಕೆ ಒಳಗಾಗಲು ಬಹಳ ಧೈರ್ಯಬೇಕಾಗುತ್ತದೆ ಅದು ಅವನಲ್ಲಿರಲಿಲ್ಲ. ಆದರೆ, ಸುದೈವವಶಾತ್ ಅವನ ದುಃಖವು ದೂರವಾಯಿತು. ಅದನ್ನು ಕೇಳಿದರೆ ನೀವು ಅಚ್ಚರಿಗೊಳ್ಳುವಿರಿ. ॥143॥ ಪರಿಸ್ಥಿತಿಯು ಈ ರೀತಿ ಇರುವಾಗ, ಆ ಗ್ರಾಮದ ಇನಾಮದಾರನು ಸಾಯಿಬಾಬಾರವರ ಭಕ್ತನಾಗಿದ್ದನು. ಆ ಸಮಯದಲ್ಲಿ ಆ ಗ್ರಾಮಕ್ಕೆ ಬಂದಿರುವನೆಂದು ತಿಳಿಯಿತು. ॥144॥ ಅವನ ಹತ್ತಿರ ಯಾವಾಗಲೂ ಬಾಬಾರವರ ಉದಿಯು ಇರುತ್ತದೆಂದು ಎಲ್ಲರಿಗೂ ತಿಳಿದಿತ್ತು, ರೋಗಿಯ ಆಪ್ತೇಷ್ಟರು ಅವನ ಬಳಿಗೆ ಹೋಗಿ ಸ್ವಲ್ಪ ಉದಿಯನ್ನು ಕೇಳಿದರು. ॥145॥ ಇನಾಮದಾರನು ಉದಿಯನ್ನು ಕೊಟ್ಟನು. ಮಗನು ಅದನ್ನು ನೀರಿನಲ್ಲಿ ಕಲಸಿ ತಂದೆಗೆ ಕೊಟ್ಟನು. ಕೇವಲ ಐದು ನಿಮಿಷಗಳೂ ಕಳೆದಿಲ್ಲ. ಅಲ್ಲೊಂದು ಪವಾಡ ಜರುಗಿತು. ॥146॥ ಯಾವಾಗ ಉದಿ ಪ್ರಸಾದವು ದೇಹದ ಅಂಗಾಂಗಗಳನ್ನು ತಲಪಿದವೋ, ಮೂತ್ರಕೋಶದಲ್ಲಿದ್ದ ಕಲ್ಲು ಮೂತ್ರದ್ವಾರದಿಂದ ಹೊರಗೆ ನೂಕಲ್ಪಟ್ಟಿತು. ಮತ್ತು ಅದು ಮೂತ್ರದ ಜೊತೆಯಲ್ಲಿ ನುಗ್ಗಿ ಹೊರದೂಡಲ್ಪಟ್ಟಿತು. ಅವನಿಗೆ ಕೂಡಲೇ ಆರಾಮವಾಯಿತು. ॥147॥ ಮುಂಬಯಿಯ ಒಬ್ಬ ಗೃಹಸ್ಥನ ಪತ್ನಿ, ಕಾಯಸ್ಥ ಪ್ರಭುವಿನ ಜಾತಿಗೆ ಸೇರಿದವಳು, ಪ್ರತಿ ಪ್ರಸವದ ಸಮಯದಲ್ಲಿಯೂ ಅತಿಯಾದ ವೇದನೆಯಿಂದ ನರಳುತ್ತಿದ್ದಳು. ॥148॥ ಅನಂತರ ಯಾವುದೇ ಉಪಾಯ ಮಾಡಲಿ, ಯಾವ ಉಪಚಾರದಿಂದಲೂ ಗುಣವಾಗುತ್ತಿರಲಿಲ್ಲ. ಆ ಮಹಿಳೆಯು ತಾನು ಸಾಯುವೆನೆಂದು ಭಾವಿಸಿದಳು. ಆ ಗೃಹಸ್ಥನು ತುಂಬಾ ವ್ಯಾಕುಲನಾದನು. ॥149॥ 'ಶ್ರೀ ರಾಮಮಾರುತಿ' ಎಂಬ ಹೆಸರಿನ ವಿಖ್ಯಾತ ವ್ಯಕ್ತಿಯು ಸಾಯಿಯ ಭಕ್ತನಾಗಿದ್ದನು. ಅವನ ಸಲಹೆ ಕೇಳಿದನಂತರ ಈ ಗೃಹಸ್ಥನು ಶಿರಡಿಗೆ ಹೋಗಲು ನಿಶ್ಚಯಿಸಿದನು. ॥150॥ ಪ್ರಸವದ ಸಮಯ ಹತ್ತಿರವಾಗಲು ಅವರಿಬ್ಬರೂ ಅತ್ಯಂತ ಸಂಕಟಪಡುತ್ತಿದ್ದರು. ಆದರೆ ಆಮೇಲೆ ಶಿರಡಿಗೆ ಹೋಗಲು ನಿಶ್ಚಯಿಸಿದಮೇಲೆ, ಏನೂ

ಭಯವಿರುವುದಿಲ್ಲವೆಂದು ಮನದಲ್ಲೇ ನಿಶ್ಚಯಿಸಿದರು. ॥151॥ 'ಅದೇನು ಆಗಬೇಕೆಂದಿದೆಯೋ ಅದು ಕೊನೆಯಪಕ್ಷ ಬಾಬಾರವರ ಹತ್ತಿರದಲ್ಲಿಯೇ ಆಗಲಿ.' ಈ ರೀತಿ ದೃಢಸಂಕಲ್ಪಮಾಡಿ ಶಿರಡಿಗೆ ಬಂದು ಅಲ್ಲಿಯೇ ನೆಲೆಸಿದರು. ॥152॥ ಈ ರೀತಿ ಅವರಿಬ್ಬರೂ ಶಿರಡಿಯಲ್ಲಿಯೇ ಅನೇಕ ತಿಂಗಳುಗಳ ಕಾಲ ವಾಸವಾಗಿದ್ದರು. ಇಬ್ಬರೂ ಪೂಜೆ ಮಾಡುತ್ತ ಆನಂದದಿಂದ ಸಾಯಿಯ ಸಹವಾಸದಲ್ಲಿಯೇ ಇದ್ದುಬಿಟ್ಟರು. ॥153॥ ಸ್ವಲ್ಪ ಸಮಯ ಇದೇ ರೀತಿ ಕಳೆಯಿತು. ಹೆರಿಗೆಯ ಸಮಯ ಹತ್ತಿರವಾಯಿತು. ಈ ಸಂಕಟವು ಹೇಗೆ ಪಾರಾಗುತ್ತದೆಂದು ಇಬ್ಬರಿಗೂ ಬಹಳವಾಗಿ ಚಿಂತೆ ಉದ್ಭವವಾಯಿತು. ॥154॥ ಕೊನೆಯಲ್ಲಿ, ಈ ರೀತಿ ಹೇಳುತ್ತಲೇ ಪ್ರಸವದ ದಿನ ಬಂದಿತು. ಗರ್ಭದ್ವಾರದಲ್ಲಿ ಮಾರ್ಗ ತಡೆಯುಂಟಾಯಿತು. ಪ್ರತಿಯೊಬ್ಬರೂ ಚಿಂತಿತರಾದನು. ॥155॥ ಆ ಮಹಿಳೆಯು ತೀವ್ರವಾದ ನೋವಿನಲ್ಲಿದ್ದಳು. ಮತ್ತು ಏನು ಮಾಡಬೇಕೆಂಬುದನ್ನು ವಿಚಾರಮಾಡಲಾರದಾದಳು. ಅವಳು ಬಾಬಾರವರ ನಾಮಸ್ಮರಣೆ ಮಾಡುತ್ತ ಪ್ರಾರ್ಥಿಸುತ್ತಿದ್ದಳು. ಏಕೆಂದರೆ ಮತ್ತೆ ಇನ್ನು ಯಾರು ಕರುಣೆ ತೋರಿಸಲು ಸಾಧ್ಯ? ॥156॥ ಪಕ್ಕದಲ್ಲಿದ್ದ ಮಹಿಳೆಯರು ಅವಸರವಸರವಾಗಿ ಬಂದರು. ಬಾಬಾರವರನ್ನು ಭಾವೋನ್ಮತ್ತರಾಗಿ ಪ್ರಾರ್ಥಿಸುತ್ತ ಅವರಲ್ಲಿ ಒಬ್ಬಳು ಲೋಟದಲ್ಲಿ ನೀರು ಹಾಕಿ ಉದಿಯನ್ನು ಬೆರೆಸಿ ಆಕೆಗೆ ಕುಡಿಯಲು ಕೊಟ್ಟಳು. ॥57॥ ಒಂದೈದು ನಿಮಿಷಗಳು ಕಳೆದಿರಬಹುದಷ್ಟೆ. ಆ ಮಹಿಳೆಯು ಹಡೆದಳು. ಮಗುವು ಹುಟ್ಟುವಾಗಲೇ ಮರಣಹೊಂದಿತ್ತು, ಅದು ಗರ್ಭದಲ್ಲಿಯೇ ಮರಣಹೊಂದಿತ್ತು. ॥158॥ ಅದು ಮಗುವಿನ ವಿಧಿಬರಹವಾಗಿತ್ತು, ಅವಳು ಮತ್ತೆ ಗರ್ಭಧರಿಸಬಹುದಾಗಿತ್ತು, ಅನಂತರ ಆ ಮಹಿಳೆಯು ಭಯದಿಂದ ಬಿಡುಗಡೆಯ ಅನುಭವಹೊಂದಿದಳು ಮತ್ತು ಸುಖವಾದ ಸ್ಥಿತಿಯಲ್ಲಿದ್ದಳು. ॥159॥ ಯಾತನೆಯಿಲ್ಲದೆ ಅವಳಿಗೆ ಹೆರಿಗೆಯಾಗಿತ್ತು, ಅವಳ ಜೀವಕ್ಕೆ ಉಂಟಾಗಬಹುದಾದ ಯಾವುದೇ ಅಪಾಯದಿಂದ ಪಾರಾಗಿದ್ದಳು. ಮಹತ್ ಚಿಂತೆಯು ದೂರವಾಗಿತ್ತು, ಅವಳು ಆಜೀವಪರ್ಯಂತ ಬಾಬಾರವರಿಗೆ ಋಣಿಯಾಗಿದ್ದಳು. ॥160॥ ಮುಂದಿನ ಅಧ್ಯಾಯವು ಮತ್ತಷ್ಟು ಕೌತುಕಮಯವಾಗಿದ್ದು ಶ್ರೋತೃಗಳ ಉತ್ಸುಕತೆಯನ್ನು ತೃಪ್ತಿಪಡಿಸುತ್ತದೆ. ಭಕ್ತಿಭಾವ ಬೆಳೆದಂತೆ ಕುತರ್ಕದ ಅಭ್ಯಾಸ ಮಾಯವಾಗುತ್ತದೆ. ॥161॥ "'ನಾವು ನಿರಾಕಾರನನ್ನು ಪೂಜಿಸುತ್ತೇವೆ. ನಾವು ದಕ್ಷಿಣೆ ಏನೂ ಕೊಡುವುದಿಲ್ಲ. ನಾವು ಶಿರಬಾಗಿ ನಮಸ್ಕರಿಸುವುದಿಲ್ಲ.' ಈ ನಿಬಂಧನೆಗೊಳಪಟ್ಟು ಮಾತ್ರವೇ ನಾವು ದರ್ಶನಕ್ಕೆ ಬರುತ್ತೇವೆ." ॥162॥ ಈ ರೀತಿಯ ದೃಢ ನಿರ್ಧಾರ ಮಾಡಿದವರೂ ಸಹ ಸಾಯಿಯ ಚರಣಗಳನ್ನು ನೋಡಿದ ಕೂಡಲೇ ತಾವಾಗಿಯೇ ಸಾಷ್ಟಾಂಗ ಪ್ರಣಾಮ ಮಾಡಿ ದಕ್ಷಿಣೆಯನ್ನು ಸಲ್ಲಿಸಿದ್ದಾರೆ. ಇದೆಂತಹ ಚಮತ್ಕಾರ! ॥163॥ ಉದಿಯ ಅಪಾರ ಮಹಿಮೆ, ನೇವಾಸಕರ್‌ನ ಭಕ್ತಿ ಪ್ರೇಮ ಮತ್ತು ಯಾವ ರೀತಿ ಅವನು ಒಂದು ವಿಷಸರ್ಪಕ್ಕೆ ಹಾಲನ್ನು ಅರ್ಪಿಸಿ ಗೃಹಸ್ಥಧರ್ಮವನ್ನು ಸಂರಕ್ಷಿಸಿದನು – ಈ ಎಲ್ಲ ವಿಷಯಗಳನ್ನೂ ನಿರೂಪಿಸುತ್ತೇನೆ. ॥164॥ ಈ ರೀತಿಯ ಅತ್ಯುತ್ತಮ ಕಥೆಗಳನ್ನು

ಕೇಳಿದಲ್ಲಿ ಭಕ್ತಿಪ್ರೇಮವನ್ನು ಹುಟ್ಟಿಸುತ್ತವೆ. ಈ ಸಂಸಾರದ ದುಃಖಗಳು ಉಪಶಮನವಾಗುತ್ತವೆ. ಇದಕ್ಕಿಂತ ಮಿಗಿಲಾದ ಪರಮಸುಖ ಇನ್ನೆಲ್ಲಿದೆ? ॥165॥ ಆದ್ದರಿಂದ ಹೇಮಾಡ ಪಂತನು ಶ್ರೋತೃಗಳಲ್ಲಿ ಪ್ರೀತಿಯನ್ನು ಹುಟ್ಟಿಸಿ ಸಾಯಿಯ ಕಥೆಗಳಲ್ಲಿ ಸಮಾವೇಶಗೊಳ್ಳುವಂತೆ ಮಾಡಲಿ ಎಂದು ಸಾಯಿ ಚರಣಗಳಲ್ಲಿ ಪ್ರಾರ್ಥಿಸುತ್ತಾನೆ. ॥166॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಉದಿಯ ಮಹತ್ವ" ಎಂಬ ಮೂವತ್ತನಾಲ್ಕನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಕೃಷ್ಣನ ದ್ವಾರಕೆ.
2. ಥಾನೆ ಜಿಲ್ಲೆಯ ಬೆಲ್ಲಾಪುರ ಹತ್ತಿರದ ತುರಂಭೆ ಎಂಬ ಗ್ರಾಮದಲ್ಲಿ ಶಾಂತಾಬಾಯಿ ಎಂಬ ಮಹಿಳೆಯ ಎಡಗೈ ಹೆಬ್ಬೆಟ್ಟಿನ ಮೂಳೆಗೆ ಕ್ಷಯರೋಗದ ವ್ರಣವು ಉಂಟಾಗಿತ್ತು. ಒಂದು ರಾತ್ರಿ, ಮಹಾರಾಜ್‌ರು ಅವಳ ಕನಸಿನಲ್ಲಿ ಹೇಳಿದರು, "ನೀನು 'ದಿಕೆಮಲಿ' (ಔಷಧಿಯ ಗಿಡದಲ್ಲಿ ಬಹಳ ಅಂಟಿನ ದ್ರವ ಇರುತ್ತದೆ.)ಯನ್ನು ಹಚ್ಚು." ಆ ಮಹಿಳೆಯು ಎಚ್ಚರಗೊಂಡಾಗ ಬಹಳ ಸಂತೋಷಪಟ್ಟಳು. ಮತ್ತು ಅದು ಗುಣವಾಯಿತು. ಅನಂತರ ಅವಳು ಈ ಎಲ್ಲ ವರ್ತಮಾನವನ್ನು ತಿಳಿಸುತ್ತ ಮಹಾರಾಜ್‌ರಿಗೆ ಕಾಗದ ಬರೆದಳು. ಆ ಪತ್ರದಲ್ಲಿ 1 ಸೆಪ್ಟೆಂಬರ್ 1918 ಎಂದು ನಮೂದಿಸಿತ್ತು..
3. ತಂಬಾಕು ಎಲೆಯನ್ನು ಸುತ್ತಿ ಮಾಡಿದ ನಾಟೀ ಸಿಗರೇಟು.
4. ಅಷ್ಟಸಿದ್ಧಿಗಳನ್ನೂ ಕೈವಶಮಾಡಿಕೊಂಡವನು.
5. ಬಾಬಾರವರ ಭಕ್ತನು. ಪ್ರತಿದಿನವೂ ದೀಪಗಳನ್ನು ಸ್ವಚ್ಛಮಾಡಿ ಮಸೀದಿಯಲ್ಲಿ ಹತ್ತಿಸಿ ಇಡುತ್ತಿದ್ದನು.
6. ಅಬ್ದುಲ್ಲಾ ಭಾಯಿಯು ಮೂಲತಃ ನಾಂದೇಡಿನ ನಿವಾಸಿ. ಆದರೆ ಮಹಾರಾಜ್‌ರವರ ಸಮಾಧಿಗೆ 9-10 ವರ್ಷಗಳ ಮೊದಲೇ ಅವನು

ಬಾಬಾರವರ ಸೇವೆ ಮಾಡಲು ಶಿರಡಿಗೆ ಬಂದು ಅಲ್ಲಿಯೇ ನೆಲಸಿದನು. ಸಮಾಧಿಯ ನಂತರವೂ, ಅವನು ಯಾವುದೇ ಸಂಭಾವನೆಯನ್ನು ಸ್ವೀಕರಿಸಲಿಲ್ಲ ಮತ್ತು ಕೇವಲ ವಸ್ತ್ರ ಮತ್ತು ಅನ್ನವನ್ನು ಪ್ರತಿಫಲವಾಗಿ ಸ್ವೀಕರಿಸಿ ಸೇವೆಯನ್ನು ಮುಂದುವರಿಸಿದನು.

ಮಹಾರಾಜ್‌ರು ದೇಹದಲ್ಲಿದ್ದಾಗ ಅವನಿಗೆ ಕೆಲಸದ ಹೊರೆಯೇ ಇರುತ್ತಿತ್ತು, ಮತ್ತು ಅವನು ಅದನ್ನು ಬಹಳ ಪ್ರೀತಿಯಿಂದ ಮಾಡುತ್ತಿದ್ದನು. ಮೊದಲು ಅವನು ಚಾವಡಿಯಲ್ಲಿರುತ್ತಿದ್ದನು. ಅನಂತರ ದ್ವಾರಕಾಮಾಯಿಯ ಹತ್ತಿರ ಇರುತ್ತಿದ್ದನು. ರಾತ್ರಿ ವೇಳೆಯಲ್ಲೂ ವಿಶ್ರಮಿಸುವ ಬದಲು ಅವನು ಬಹಳ ವೇಳೆಯನ್ನು ಖುರಾನು ಓದುವುದರಲ್ಲಿ ಕಳೆಯುತ್ತಿದ್ದನು. ಮನೆಯಲ್ಲಿ ಅವನ ತಾಯಿ, ಹೆಂಡತಿ ಮತ್ತು ಮಗ ಇದ್ದರು. ಆದರೆ ಅವರನ್ನೆಲ್ಲ ಬಿಟ್ಟು ಅವನು ಶಿರಡಿಯಲ್ಲಿ ಇರುತ್ತಿದ್ದನು. ಕೆಲವು ಸಲ ಅವನ ತಾಯಿ ಮತ್ತು ಮಗ ಶಿರಡಿಗೆ ಬರುತ್ತಿದ್ದರು. ಅವನ ಪತ್ನಿಯೂ ಒಮ್ಮೆ ಬಂದಿದ್ದಳು. ಆದರೆ ಅವನಿಗೆ ಮಾತ್ರ ಅವರ ಬಗ್ಗೆ ಯಾವ ಮೋಹವೂ ಇರಲಿಲ್ಲ. ಅವನ ತಾಯಿಯು ಅವನ ಮಗನ ಮದುವೆಯ ಬಗ್ಗೆ ಚಿಂತಿಸಿ ಒಂದು ಮನೆಯ ಸಂಬಂಧವನ್ನೂ ನೋಡಿದ್ದಳು. ಆದರೆ ಮನೆಯವರು ಅಬ್ದುಲ್ಲಾ ಬಾಬಾನು ಫಕೀರನಾಗಿದ್ದರಿಂದ ತಮ್ಮ ಮಗಳನ್ನು ಈ ಕುಟುಂಬಕ್ಕೆ ಕೊಡುವುದಿಲ್ಲವೆಂದು ಹೇಳಿದರು. ಅದರ ಪರಿಣಾಮವಾಗಿ ತಾಯಿಯು ಶಿರಡಿಗೆ ಬಂದು ಮಹಾರಾಜ್‌ರಿಗೆ ದೂರು ನೀಡಿದಳು.

ಮಹಾರಾಜ್‌ರು ಹೇಳಿದರು. "ತಾಳ್ಮೆಯಿಂದಿರು. ಚಿಂತಿಸಬೇಡ. ಆ ಹುಡುಗನಿಗೆ ಒಳ್ಳೆಯ ಹೆಂಡತಿ ಸಿಗುತ್ತಾಳೆ ಮತ್ತು ಮದುವೆಯು ತಾನಾಗಿಯೇ ಆಗುತ್ತದೆ." ಮತ್ತೆ ಪ್ರತಿಯೊಂದೂ ಮಹಾರಾಜ್‌ರು ಹೇಳಿದಂತೆಯೇ ನಡೆದಿತ್ತು. ಒಮ್ಮೆ ಅಬ್ದುಲ್ಲಾ ಭಾಯಿಯ ತಾಯಿ ಮತ್ತು ಮಗ ಮತ್ತೊಂದು ಹಳ್ಳಿಗೆ ಹೋಗಿದ್ದರು. ಅಲ್ಲಿ ಒಬ್ಬ ಗೃಹಸ್ಥನು ಭೇಟಿಯಾದನು. ಆ ಗೃಹಸ್ಥನು ತನ್ನ ಮಗಳನ್ನು ಅವರಿಗೆ ಕೊಡಲು ಬಹಳ ಒತ್ತಾಯ ಮಾಡಿದನು. ಕೆಲವು ಜನರು ಅವನಿಗೆ ಹುಡುಗನ ತಂದೆಯು ಫಕೀರನಾಗಿದ್ದಾನೆಂದು ಹೇಳಿದರು. ಅದಕ್ಕೆ ಅವನ ಉತ್ತರ, "ಒಂದುವೇಳೆ ನಾನು ಫಕೀರನಾದರೂ, ಏನೂ ತೊಂದರೆಯಿಲ್ಲ. ನನ್ನ ಮಗಳನ್ನು ಮಾತ್ರ ಅದೇ ಹುಡುಗನಿಗೆ ಕೊಟ್ಟುಮದುವೆ ಮಾಡುತ್ತೇನೆ." ಹಾಗೆಯೇ ತಡವಿಲ್ಲದೆಯೇ ಮದುವೆ ನಡೆಯಿತು. ಈ ಗೃಹಸ್ಥನಿಗೆ ಮದುವೆ ವಯಸ್ಸಿಗೆ ಬಂದಿದ್ದ ದೊಡ್ಡ ಮಗಳೊಬ್ಬಳಿದ್ದಳು. ಅವಳ ಮದುವೆ ಈಗಾಗಲೇ ನಿಶ್ಚಯವಾಗಿತ್ತು, ಆದರೆ ಆ ಮದುವೆ ನಡೆಯಲು ಇನ್ನೂ ಸ್ವಲ್ಪ ಸಮಯವಿತ್ತು. ಆದರೂ, ಸ್ವಲ್ಪವೂ ವಿಳಂಬ ಮಾಡದೆ ಅವನು ತನ್ನ ಚಿಕ್ಕ ಮಗಳನ್ನು ಅಬ್ದುಲ್ಲಾನ ಮಗನಿಗೆ ಕೊಟ್ಟು ಮೊದಲ ಮದುವೆ ಮಾಡಿಸಿದನು.

ಈ ರೀತಿಯ ಉದಿಯ ಅನೇಕ ಮಹಿಮೆಗಳು ಇವೆ. ನಾರಾಯಣ ಗೋಪಿನಾಥ ಡಿಘೆ ಎಂಬ ಗೃಹಸ್ಥನೊಬ್ಬ ಮುಂಬಯಿಯಲ್ಲಿ

ವಾಸಿಸುತ್ತಿದ್ದನು. ಅವನಿಗೆ ಹೊಟ್ಟೆಯಲ್ಲಿ ಒಂದು ಗೆಡ್ಡೆಯು ಉಂಟಾಯಿತು. ಅದರಿಂದಾಗಿ ಬಹಳ ಯಾತನೆ ಅನುಭವಿಸುತ್ತಿದ್ದನು. ಅವನು ಮುಂಬಯಿಯ ಇಬ್ಬರು ಪ್ರಖ್ಯಾತ ವೈದ್ಯರ ಸಲಹೆ ಪಡೆದಿದ್ದನು. ಅದರಿಂದಾಗಿ ಏನೂ ಪ್ರಯೋಜನವಾಗಿರಲಿಲ್ಲ. ಅನಂತರ ಬೇರೆ ಒಬ್ಬರು ಅವನಿಗೆ ಮಹಾರಾಜ್ ಹತ್ತಿರ ಹೋಗಲು ಹೇಳಿದರು. ಆದರೆ ಅವನ ಈ ಪರಿಸ್ಥಿತಿಯಲ್ಲಿ ಅವನಿಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಅವನು ಹೇಳಿದನು "ಮಹಾರಾಜ್‌ರ ಆಶೀರ್ವಾದದಿಂದ ಆ ಗಡ್ಡೆಯು ಒಡೆದು ಹೋಗಿ ದೇಹದಿಂದ ಹೊರಗೆ ಹೋದಲ್ಲಿ ನಾನು ಮಹಾರಾಜ್‌ರಲ್ಲಿಗೆ ಹೋಗಲು ಸಾಧ್ಯವಾಗುತ್ತದೆ." ಆದ್ದರಿಂದ ಆ ವ್ಯಕ್ತಿಯು ಮಹಾರಾಜ್‌ರ ಉದಿಯನ್ನು ಕೊಟ್ಟನು. ಆ ರೋಗಿಯು ಉದಿಯನ್ನು ಸೇವಿಸಲು ಪ್ರಾರಂಭಿಸಿದನು. ಮಾರನೆಯ ದಿನವೇ ಆ ಗಡ್ಡೆಯು ಒಡೆದು ಹೋಗಿ ಒಳಗಿನಿಂದ ಕೀವು ಹೊರಬರಲು ಪ್ರಾರಂಭವಾಯಿತು. ಮತ್ತು ಕೆಲವು ದಿನಗಳ ನಂತರ ಅವನು ಗುಣಮುಖನಾದನು. ಅನಂತರ ಸಾಧ್ಯವಾದಷ್ಟು ಬೇಗನೆ ಮಹಾರಾಜ್‌ರ ದರ್ಶನಕ್ಕೆ ಹೋದನು.



# ಅಧ್ಯಾಯ - 35

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥

## "ಸಂಶಯ ಮತ್ತು ತಪ್ಪು ಗ್ರಹಿಕೆಗಳ ನಿವಾರಣೆ" ಹಾಗೂ "ವಿಭೂತಿ ವೈಭವ"



ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಪೂರ್ವದಲ್ಲಿ ಹಿಂದಿನ ಅಧ್ಯಾಯದಲ್ಲಿ ನಾನು ಕೆಲವು ಕಥೆಗಳನ್ನು ನಿರೂಪಿಸುವೆನೆಂದು ಸೂಚನೆ ನೀಡಿದ್ದೆನು. ಈಗ ನಾನು ಅವುಗಳನ್ನು ವಿಸ್ತಾರವಾಗಿ ತಿಳಿಸುತ್ತೇನೆ. ತಾಳ್ಮೆಯಿಂದ ಅವುಗಳನ್ನು ಕೇಳಿರಿ. ॥1॥ ಪರಮಾರ್ಥ ಸಾಧನೆಯಲ್ಲಿ ಜಾತೀಯತೆಯಹಂಕಾರವು ದೊಡ್ಡ ಅಡಚಣೆಯಾಗಿದೆ. ಅಹಂಕಾರಕ್ಕಿಂತ ಭಯಂಕರವಾದ, ದುರ್ಧರವಾದ ವಿಘ್ನವು ಮತ್ತೊಂದಿಲ್ಲ. ॥2॥ 'ನಾವು ನಿರಾಕಾರದ ಆರಾಧಕರು. ದೈವದ ಸಾಕಾರರೂಪವಾದ ಮನುಷ್ಯನಲ್ಲಿ ಭ್ರಮೆಯನ್ನು ಹುಟ್ಟಿಸುತ್ತದೆ. ಸಾಧು ಸಂತರೂ ಮಾನವರೇ. ನಾವು ಏಕೆ ಅವರಿಗೆ ನಮಸ್ಕರಿಸಬೇಕು? ॥3॥ 'ನಾವು ಅವರಿಗೆ ಶಿರಬಾಗಿ ನಮಸ್ಕರಿಸಬಾರದು. ನಾವು ಅವರಿಗೆ ದಕ್ಷಿಣೆಯನ್ನೂ, ಭಿಕ್ಷೆಯನ್ನೂ, ದಾನ ಮಾಡಬಾರದು. ಇದು ಕಿಂಚಿತ್ ಮಾನವನ್ನೂ, ದೂರಮಾಡಿದೆ, ವಿಡಂಬನೆಯ ರೀತಿ ಇರುತ್ತದೆ. ॥4॥ 'ಅನೇಕ ಜನರು ಶಿರಡಿಯ ಸಂಬಂಧವಾಗಿ ಅನೇಕಾನೇಕ ಕಥೆಗಳನ್ನು ವಿವಿಧ ದೃಷ್ಟಿಕೋನಗಳನ್ನು ಬೀರುತ್ತ ಹರಡುತ್ತಾರೆ. ನಾವು ಅವುಗಳೆಲ್ಲವನ್ನೂ ನಂಬಲು ಸಾಧ್ಯವಿಲ್ಲ. ॥5॥ 'ಕೆಲವರು ತಾವು ದರ್ಶನಕ್ಕೆ ಹೋದಾಗ ಸಾಯಿಬಾಬಾರವರು ದಕ್ಷಿಣೆಯನ್ನು ಬೇಡಿದರೆಂದು ಹೇಳಿದರು. ಒಬ್ಬ ಸಾಧುವು ದ್ರವ್ಯ ಸಂಪಾದನೆಯಲ್ಲಿ ಮಗ್ನನಾದರೆ ಅವನ ಸಾಧುತ್ವವು ತನ್ನ ಗುಣಮಟ್ಟವನ್ನು ಕಳೆದುಕೊಂಡು

ಹೀನಾಯವೆನಿಸುತ್ತದೆ. ॥6॥ 'ಕೆಲವರು ಅಂಧಶ್ರದ್ಧೆಯು ಒಳ್ಳೆಯದಲ್ಲವೆಂದು ಹೇಳುತ್ತಾರೆ. ಯಾವುದನ್ನೂ ಪ್ರತ್ಯಕ್ಷ ಅನುಭವದಿಂದ ನಿಶ್ಚಯಿಸಬೇಕು. ಯಾವ ರೀತಿ ವರ್ತಿಸಬೇಕೆಂದು ಮನದಲ್ಲಿಯೇ ನಿಶ್ಚಯಿಸಿಕೊಳ್ಳಬೇಕು. ॥7॥ 'ನಾವು ದಕ್ಷಿಣೆಯನ್ನು ನೀಡುವುದಿಲ್ಲ. ಯಾರು ಹಣಕ್ಕಾಗಿ ಆಸೆ ಪಡುತ್ತಾರೋ ಅವರನ್ನು ಸಾಧುವೆಂದು ಪರಿಗಣಿಸಲಾಗುವುದಿಲ್ಲ. ಮತ್ತು ಅವರು ಯಾವ ರೌರವ ನರಕಕ್ಕೂ ಅರ್ಹರಲ್ಲ. ॥8॥ 'ಆದರೆ ನಾವು ಶಿರಡಿಗೆ ಹೋಗೋಣ ಮತ್ತು ಅವರನ್ನು ಭೇಟಿಮಾಡಿ ಬರೋಣ. ನಾವು ಮಾತ್ರ ಅವರ ಚರಣಗಳಿಗೆ ವಂದಿಸುವುದು ಬಿಡ ಮತ್ತು ದಕ್ಷಿಣೆಯನ್ನೂ ಕೊಡುವುದು ಬೇಡ.' ॥9॥ ಈ ರೀತಿಯ ಕುತರ್ಕಬುದ್ಧಿಯಿಂದ ಯಾರೆಲ್ಲರು ಮನೆಯಿಂದ ಹೊರಟರೋ ಮತ್ತು ತಮ್ಮ ದೃಢನಿರ್ಧಾರಗಳನ್ನು ಕಾಪಾಡಲು ನಿರ್ಧರಿಸಿದರೋ ಅವರೆಲ್ಲರೂ ಕೊನೆಯಲ್ಲಿ ಸಾಯಿಯ ದರ್ಶನಕ್ಕೆ ಬಂದು ಸಂಪೂರ್ಣವಾಗಿ ಶರಣಾದರು. ॥10॥ ಯಾರ್‍ಯಾರು ಸಾಯಿದರ್ಶನಕ್ಕಾಗಿ ಬಂದರೋ ಅವರೆಲ್ಲರೂ ಸಾಯಿ ಸನ್ನಿಧಿಯಲ್ಲಿಯೇ ನೆಲಸಿದರು. ಸಾಯಿ ಚರಣಗಳಲ್ಲಿ ಮನವಿಟ್ಟು ಎಂದಿಗೂ ಹಿಂತಿರುಗಲಿಲ್ಲ. ॥11॥ ಅಂತಹ ವ್ಯಕ್ತಿಗಳೂ ಸಾಯಿಗೆ ಶರಣಾಗಿದ್ದವರು ಶರಣಾಗಿದ್ದ ರೀತಿಯಲ್ಲೇ ಅವರ ಚರಣಗಳಲ್ಲಿ ವಂದಿಸಿದರು. ಪೂರ್ಣ ಶ್ರದ್ಧೆ ಮತ್ತು ವಿನೀತ ಭಾವದಿಂದ ತಮ್ಮ ಹಿಂದಿನ ನಿಶ್ಚಯಗಳನ್ನೆಲ್ಲ ಮರೆತು ಶರಣಾದರು. ॥12॥ ಪಂಥಾಭಿಮಾನದ ಅಹಂಕಾರವನ್ನು ತ್ಯಜಿಸಿದಾಗ ಅಲ್ಲಿ ಅತ್ಯಂತ ಸೌಖ್ಯವುಂಟಾಗುತ್ತದೆ. ಇದನ್ನು ಮೂವತ್ತೈದನೆಯ ಅಧ್ಯಾಯ ತಿಳಿಸುತ್ತದೆ. ಶ್ರೋತೃಗಳು ಗೌರವದಿಂದ ಅದನ್ನು ಆಲಿಸಬೇಕು. ॥13॥ ಅದೇ ರೀತಿ ಉದಿಯ ಖ್ಯಾತಿಯ ಬಗ್ಗೆಯೂ ಒಂದು ಸೂಚನೆ ಇದೆ. ಬಾಳಾ ನೇವಾಸ್ಕರನ ಹಾವಿನ ಜೊತೆಯ ಅನುಭವ ಮತ್ತು ಅವನು ಅದಕ್ಕೆ ಯಾವ ರೀತಿ ಪ್ರೀತಿಯಿಂದ ಚಿಕಿತ್ಸೆ ನೀಡಿದನು ಮತ್ತು ಅದನ್ನು ಸಾಯಿಯ ಪ್ರತಿರೂಪವೆಂದೇ ಭಾವಿಸಿದ್ದನು ಎಂಬುದರ ಬಗ್ಗೆ ವಿವರಿಸಿದೆ. ॥14॥ ಶ್ರೋತೃಗಳೇ, ನನ್ನ ಮೇಲೆ ಕೃಪೆತೋರಿರಿ. ನಾನೊಬ್ಬ ಕೇವಲ ಆಜ್ಞಾಪಾಲನೆ ಮಾಡುವ ಕಿಂಕರ. ಗೌರವದಿಂದ ಆಜ್ಞೆಯನ್ನು ಪಾಲಿಸುವುದೊಂದೇ ನನಗೆ ಗೊತ್ತು. ಈ ದಿಶೆಯಲ್ಲಿ ಸಚ್ಚರಿತೆಯು ಅಕ್ಷರಶಃ ರೂಪುಗೊಂಡಿದೆ. ॥15॥ ನಾನು ಅವರ ಚರಣಗಳನ್ನು ದೃಷ್ಟಿಸುತ್ತಲೆದ್ದ ಲಹರಿಗಳು ಪುಂಖಾನುಪುಂಖವಾಗಿ ನನ್ನ ಮನದಲ್ಲಿ ಬಂದು ಈ ಪವಿತ್ರವಾದ ಚರಿತ್ರೆಯೆಂಬ ಕುಂಭವನ್ನು ಆಗಾಗ ತುಂಬಿಕೊಂಡಿದೆ. ॥16॥ ನಾವು ಕೇವಲ ತಾಯಿ ಆಮೆಯ ಮಕ್ಕಳು. ದೃಷ್ಟಿಮಾತ್ರದಿಂದಲೇ ಪೋಷಿಸಲ್ಪಟ್ಟು ಹಸಿವೆ ಬಾಯಾರಿಕೆಗಳಿಂದ ಎಂದೂ ನರಳದೆ ಸದಾ ಸಂತೃಪ್ತರಾಗಿದ್ದೇವೆ. ॥17॥ ದೃಷ್ಟಿಯ ಸುಖದಿಂದಲೇ ಸಂತೃಪ್ತರಾದಾಗ ಅನ್ನ ನೀರು ಯಾವುದರ ಅವಶ್ಯಕತೆಯೂ ಉಂಟಾಗುವುದಿಲ್ಲ. ದೃಷ್ಟಿಯು ಹಸಿವು ಬಾಯಾರಿಕೆಗಳನ್ನು ತೃಪ್ತಿಪಡಿಸುತ್ತದೆ. ಈ ಅದ್ಭುತವನ್ನು ಹೇಗೆ ವರ್ಣಿಸಲಿ? ॥18॥ ಸಾಯಿರಾಯನು ಕೃಪಾಸಿಂಧು. ನಮ್ಮ ಸಕಲ ದೃಷ್ಟಿಯ ಏಕಮಾತ್ರ ವಸ್ತು ಅವರೇ ಆದಾಗ ಯಾವುದು ನೋಡಲ್ಪಡುವುದೋ ಯಾವುದು ನೋಡುವುದೋ ಮತ್ತು ನೋಡುವ ಕಾರ್ಯ ಈ ಮೂರೂ (ತ್ರಿಪುಟಿ) ಸಂಪೂರ್ಣವಾಗಿ ವರ್ಜಿಸಲ್ಪಡುತ್ತವೆ.

॥19॥ ಅದೇ ರೀತಿ, ಕೇವಲ ಸಾಯಿ ಪ್ರಕಾಶದಿಂದ ಮಾತ್ರ ನಮ್ಮ ಚರ್ಮವು ಸ್ಪರ್ಶವನ್ನು ಅನುಭವಿಸುತ್ತದೆ. ಮತ್ತು ನಮ್ಮ ಘ್ರಾಣ ಶಕ್ತಿಯಲ್ಲಿಯೇ ಸಾಯಿಯ ನಿವಾಸವಿದೆ. ॥20॥ ಅಥವಾ, ಯಾವುದಾದರೂ ಶಬ್ದವನ್ನು ಕೇಳಿದ ಕೂಡಲೇ ಸಾಯಿಯ ಸ್ವರೂಪವು ಪ್ರಕಟಗೊಳ್ಳುತ್ತದೆ. ಆಗ ಕೇಳಿದ್ದು, ಕೇಳುವವನು ಮತ್ತು ಕೇಳುವ ಚಲನೆ – ಈ ಮೂರೂ ಪೂರ್ಣವಾಗಿ ಲಯಗೊಳ್ಳುತ್ತವೆ. ॥21॥ ಅಥವಾ, ಯಾವಾಗ ನಾಲಿಗೆಯು ಯಾವುದಾದರೂ ರಸವನ್ನು ಆಸ್ವಾದಿಸುವುದೋ, ಅದು ಸಾಯಿಯ ಸ್ಮರಣೆಯ ಜೊತೆಯಲ್ಲಿ ಮಿಳಿತವಾದಲ್ಲಿ ನಾಲಿಗೆಯು ಎಲ್ಲಿ? ರಸವೆಲ್ಲಿ? ಅಥವಾ ಅದರ ಅನುಭವವೆಲ್ಲಿ? ಇದೇ ತ್ರಿಪುಟಿಯ ದಯನೀಯವಾದ ಸ್ಥಿತಿ. ॥22॥ ಎಲ್ಲ ಕರ್ಮೇಂದ್ರಿಯಗಳ ಗತಿಯೂ ಇದೇ ಆಗಿರುವಾಗ ಮತ್ತು ಅವುಗಳು ಸಾಯಿಸೇವೆಯಲ್ಲಿ ನಿರತರಾದಾಗ, ಎಲ್ಲ ಕರ್ಮಗಳೂ ನಾಶವಾಗುತ್ತವೆ ಮತ್ತು ಕರ್ಮಫಲಗಳಿಂದ ವಿಮುಕ್ತವಾಗುತ್ತವೆ. ॥23॥ ಸಾಕಿಷ್ಟು, ಈಗ ಈ ಗ್ರಂಥವು ದೀರ್ಘವಾಗುತ್ತಿದೆ. ಸಾಯಿಪ್ರೇಮದಿಂದ ತುಂಬಿ ತುಳುಕುತ್ತಿದೆ. ಅದರಿಂದಾಗಿ ಹಿಂದೆ ಬಿದ್ದಿದ್ದೇವೆ. ಈಗ ಹಿಂದಿನ ನಿರೂಪಣೆಯನ್ನು ನೆನಪಿಸಿಕೊಂಡು ನಮ್ಮ ಕಥಾಭಾಗವನ್ನು ಮುಂದುವರೆಸೋಣ. ॥24॥ ಒಬ್ಬ ವ್ಯಕ್ತಿ ಮೂರ್ತಿಪೂಜೆಯನ್ನು ನಂಬದೆ ಇರುವಂತಹವನು ಮತ್ತು ನಿರಾಕಾರದ ಪರಮ ನಿಷ್ಠನು ಕೇವಲ ವಿಕಿತ್ಸಕ ಬುದ್ಧಿಯಿಂದ ಶಿರಡಿಯ ಕಡೆಗೆ ಹೊರಟನು. ॥25॥ ಅವನು ಹೇಳಿದನು, "ಶಿರಡಿಗೆ ಹೋದಮೇಲೆ ನಾನು ಕೇವಲ ಸಾಧುವಿನ ದರ್ಶನಮಾಡುತ್ತೇನೆ ಅಷ್ಟೆ. ಎಂದಿಗೂ ಅವನಿಗೆ ನಮಸ್ಕರಿಸುವುದಿಲ್ಲ ಅಥವಾ ದಕ್ಷಿಣೆಯನ್ನೂ ನೀಡುವುದಿಲ್ಲ. ॥26॥ "ಈ ಎರಡು ಶರತ್ತುಗಳನ್ನೂ ಒಪ್ಪಿಕೊಂಡರೆ ಮಾತ್ರ ನಾನು ನಿನ್ನ ಜೊತೆ ಶಿರಡಿಗೆ ಬರುತ್ತೇನೆ." ಅವನ ಸ್ನೇಹಿತನು ಅದಕ್ಕೆ ಒಪ್ಪಿಗೆ ನೀಡಲು, ಸಂತೋಷವಾಗಿ ಆತನ ಜೊತೆಯಲ್ಲಿ ಹೊರಟನು. ॥27॥ ಅವನ ಸ್ನೇಹಿತನಾದ ಕಾಕಾ ಮಹಾಜನಿಯು ಸಂತರಲ್ಲಿ ಅತ್ಯಂತ ಪವಿತ್ರವಾದ ಭಕ್ತಿಯನ್ನಿಟ್ಟಿದ್ದನು. ಆದರೂ ಅವನ ಸ್ನೇಹಿತನಿಗೆ ಮಾತ್ರ ಅನೇಕ ಶಂಕೆಗಳು, ಕುತರ್ಕ ಭಾವಗಳು ಇದ್ದವು. ॥28॥ ಇಬ್ಬರೂ ಮುಂಬಯಿಯಿಂದ ಶನಿವಾರ ರಾತ್ರಿ ಹೊರಟು ಭಾನುವಾರ ಬೆಳಿಗ್ಗೆ ಶಿರಡಿಯನ್ನು ತಲುಪಿದರು. ॥29॥ ಇಬ್ಬರೂ ಸಾಯಿ ದರ್ಶನಕ್ಕೆಂದು ಮಸೀದಿಗೆ ಬಂದರು. ಆ ಸಮಯದಲ್ಲಿ ಅಲ್ಲಿ ಏನು ನಡೆಯಿತೆಂಬುದನ್ನು ಸಾವಧಾನ ಚಿತ್ತದಿಂದ ಕೇಳಿರಿ. ॥30॥ ಅವನ ಸ್ನೇಹಿತನನ್ನು ದೂರದಿಂದಲೇ ನೋಡಿ, ಅವರು ಇನ್ನೂ ಮೆಟ್ಟಿಲು ಹತ್ತಿ ಬರುತ್ತಿರುವಾಗಲೇ, ಬಾಬಾರವರು ಮಧುರವಾದ ಸ್ವರದಿಂದ ನುಡಿದರು, "ಓಹ್, ನೀನು ಬಂದೆಯಾ! ಸ್ವಾಗತ!" ॥31॥ ಈ ಪ್ರೀತಿಯ ಮಾತುಗಳನ್ನು ಕೇಳುತ್ತಲೇ, ಆ ಸ್ನೇಹಿತನಿಗೆ ಈ ಮಾತುಗಳು ತನ್ನ ತಂದೆಯು ಮಾತನಾಡಿದ ಸ್ವರದಲ್ಲಿಯೇ ಇದ್ದು ಅವರ ನೆನಪುಂಟಾಗಿದ್ದುದನ್ನು ಗ್ರಹಿಸಿದನು. ॥32॥ "ಓಹ್, ನೀನು ಬಂದಿರುವೆ! ಸ್ವಾಗತ!" ಎಂಬ ಮಾತುಗಳನ್ನು ಕಾಕಾನ ಸ್ನೇಹಿತನು ಕೇಳುತ್ತಲೇ, ಬಾಬಾರವರು ಯಾವ ಧ್ವನಿಯಲ್ಲಿ ಹೇಳಿದರೋ ಅದನ್ನು ಕೇಳಿ ಅವನು ಅಂತರಂಗದಲ್ಲಿಯೇ ವಿಸ್ಮಿತನಾದನು. ॥33॥ ಆ ಮೋಹಕ ಸ್ವರದಿಂದ

ಮಾತಿನ ಉಚ್ಚಾರದ ಗತಿಯಿಂದ ಅವನಿಗೆ ಗತಿಸಿದ ತಂದೆಯವರ ನೆನಪಾಯಿತು. ಇದು ಪೂರ್ಣವಾಗಿ ಅವರ ಮಾತಿನ ಧಾಟಿಯಾಗಿತ್ತು! ಅವನು ಅದರ ಯಥಾರ್ಥವಾದ ಅನುಕರಣೆಯನ್ನು ಕಂಡನು. ॥34॥ ಈ ವಾಣಿಯಲ್ಲಿ ಅದೆಂತಹ ಮೋಹಕ ಶಕ್ತಿಯು ಅಡಗಿತ್ತು! ಕಾಕಾನ ಸ್ನೇಹಿತನು ವಿಸ್ಮಿತನಾದನು. ತನ್ನಲ್ಲೇ ಹೇಳಿಕೊಂಡನು, 'ಇವು ನಿಶ್ಚಯವಾಗಿಯೂ ನನ್ನ ತಂದೆಯವರ ಸ್ವರವೇ. ಆ ಧ್ವನಿಯನ್ನು ನಿಶ್ಚಿತವಾಗಿಯೂ ಗುರುತಿಸಬಲ್ಲೆ. ॥35॥ ಈ ಮಾತುಗಳನ್ನು ಕೇಳುತ್ತಲೇ, ತನ್ನ ತಂದೆಯವರೇ ಮಾತನಾಡಿದಂತಾಗಿ, ಆ ಸ್ನೇಹಿತನು ಅಂತರಂಗದಲ್ಲಿಯೇ ಕರಗಿ ಹೋದನು. ಬಾಬಾರವರ ಚರಣಗಳಲ್ಲಿ ಶಿರಬಾಗಿ ವಂದಿಸಿದನು. ಹಿಂದಿನ ನಿರ್ಧಾರವನ್ನು ಸಂಪೂರ್ಣವಾಗಿ ಮರೆತೇಬಿಟ್ಟನು. ॥36॥ ಅನಂತರ, ಬಾಬಾರವರು ಕೇವಲ ಕಾಕಾನಿಂದ ಮಾತ್ರ ದಕ್ಷಿಣೆಯನ್ನು ಬೇಡಿದರು. ಕಾಕಾನು ಅದನ್ನು ಕೊಟ್ಟನು. ಅವರು ತಮ್ಮ ನಿವಾಸಕ್ಕೆ ಹಿಂತಿರುಗಿ ಪುನಃ ಮಧ್ಯಾಹ್ನ ಮಸೀದಿಗೆ ಹೋದರು. ॥37॥ ಇಬ್ಬರೂ ಮುಂಬಯಿಗೆ ಹಿಂತಿರುಗಬೇಕಾಗಿದ್ದುದರಿಂದ ಕಾಕಾನು ಬಾಬಾರವರ ಅಪ್ಪಣೆಯನ್ನ ಬೇಡಿದನು. ಆಗ ಮತ್ತೆ ಬಾಬಾರವರು ದಕ್ಷಿಣೆ ಬೇಡಿದರು. ॥38॥ ಅದೂ ಸಹ ಕೇವಲ ಕಾಕಾನಿಂದ ಮಾತ್ರ, ಅವರು ಹೇಳಿದರು, "ನನಗೆ ಹದಿನೇಳು ರೂಪಾಯಿಗಳನ್ನು ಕೊಡು." ಅವನ ಸ್ನೇಹಿತನಿಂದ ಏನನ್ನೂ ಕೇಳಲಿಲ್ಲ. ಅದರಿಂದಾಗಿ ಅವನು ಅಂತರಂಗದಲ್ಲಿಯೇ ಚಡಪಡಿಸಿದನು. ॥39॥ ಅನಂತರ ಅವನು ಕಾಕಾನನ್ನು ಮೃದುವಾಗಿ ಕೇಳಿದನು. "ಅವರು ಕೇವಲ ನಿನ್ನಿಂದ ಮಾತ್ರ ದಕ್ಷಿಣೆಯನ್ನು ಏಕೆ ಬೇಡಿದರು? ಬೆಳಗ್ಗೆಯೂ ಅವರು ನಿನ್ನನ್ನೇ ಕೇಳಿದ್ದರು. ಈಗಲೂ ನಿನ್ನನ್ನು ಮಾತ್ರ ಕೇಳಿದರು! ॥40॥ "ನಾನು ನಿನ್ನ ಜೊತೆಯಲ್ಲಿಯೇ ಇದ್ದರೂ, ದಕ್ಷಿಣೆಯ ವಿಚಾರದಲ್ಲಿ ನನ್ನನ್ನು ಏಕೆ ಕೇಳದೇ ಬಿಟ್ಟರು?" ಕಾಕಾ ಮೆಲ್ಲಗೆ ಉತ್ತರವಾಗಿ ಪಿಸುಗುಟ್ಟಿದನು, "ನೀನು ಇದನ್ನು ಬಾಬಾರವರಲ್ಲೇ ಕೇಳು." ॥41॥ ಆ ಕ್ಷಣದಲ್ಲಿ ಬಾಬಾರವರು ಕಾಕಾನಿಗೆ ಹೇಳಿದರು, "ಅವನು ನಿನಗೆ ಏನು ಹೇಳುತ್ತಿದ್ದಾನೆ?" ಕೂಡಲೇ ಸ್ನೇಹಿತನು ಬಾಬಾರವರನ್ನು ತಾನೇ ಕೇಳಿದನು, "ನಾನೂ ನಿಮಗೆ ದಕ್ಷಿಣೆಯನ್ನು ನೀಡಲೇ?" ॥42॥ ಬಾಬಾ ಉತ್ತರಿಸಿದರು, "ನಿನಗೆ ಕೊಡುವ ಮನಸ್ಸು ಇರಲಿಲ್ಲ, ಆದ್ದರಿಂದ ನಾನು ನಿನ್ನನ್ನು ಕೇಳಲಿಲ್ಲ. ನಿನಗೆ ಕೊಡುವ ಇಚ್ಛೆಯಿದ್ದರೆ ಕೊಡು." ॥43॥ ಆ ಸ್ನೇಹಿತನು, ಬಾಬಾರವರು ಬೇಡಿದಾಗ ದಕ್ಷಿಣೆ ನೀಡುತ್ತಿದ್ದ ಭಕ್ತರನ್ನು ಗೇಲಿ ಮಾಡುತ್ತಿದ್ದನು. ಆದ್ದರಿಂದ ಈಗ ಅದೇ ಮಿತ್ರನು ಕೇಳದೆಯೇ ನೀಡಲು ತಯಾರಿದ್ದುದನ್ನು ನೋಡಿ ಕಾಕಾನು ಆಶ್ಚರ್ಯ ಭರಿತನಾದನು. ॥44॥ "ನೀನು ಇಚ್ಛೆಪಟ್ಟರೆ ಕೊಡು" ಎಂದು ಬಾಬಾರವರು ನುಡಿಯುತ್ತಿದ್ದ ಹಾಗೆಯೇ ಅವನ ಸ್ನೇಹಿತನು ಅವಸರದಿಂದ ಹದಿನೇಳು ರೂಪಾಯಿಗಳನ್ನು ಬಾಬಾರವರು ಕೇಳದೆಯೇ ಅವರ ಚರಣಗಳಲ್ಲಿಟ್ಟನು. ॥45॥ ಅನಂತರ ಬಾಬಾರವರು ಅವನಿಗೆ ಹೇಳಿದರು, "ಏನು ಅವಸರ? ಒಂದು ಕ್ಷಣ ಕುಳಿತುಕೋ." ನಂತರ ಅವನಿಗೆ 'ನೀನು ಮತ್ತು ನಾನು' ಎಂಬ ಭೇದವನ್ನು ಅಳಿಸುವಂತಹ ಅತ್ಯಮೂಲ್ಯವಾದ ಉಪದೇಶವನ್ನು ನೀಡಿದರು. ॥46॥ "ನಿನ್ನ ಮತ್ತು ನನ್ನ ಮಧ್ಯೆ

ಇರುವ ಎಣ್ಣೆ ಮಾರುವ ವ್ಯಾಪಾರಿಯ ಗೋಡೌನ್‌ಯನ್ನು ಪೂರ್ಣವಾಗಿ ಕೆಳಗೆ ಇಳಿಸು. ಅದರಿಂದಾಗಿ ಮಾರ್ಗವು ಪ್ರಶಸ್ತವಾಗಿ ನಾವು ಪರಸ್ಪರ ಭೇಟಿಯಾಗಲು ಸಾಧ್ಯ" ॥47॥ ಅವರಿಗೆ ಹಿಂತಿರುಗಲು ಆಜ್ಞೆ ನೀಡಲಾಯಿತು. ಮೋಡ ತುಂಬಿದ ಆಕಾಶವನ್ನು ನೋಡಿ, ಮಾಧವರಾವ್‌ನು "ಮಳೆ ಬಂದು ನಾವು ಒದ್ದೆಯಾಗುತ್ತೇವೆ" ಎಂದು ಭಯಪಟ್ಟನು. ॥48॥ ಬಾಬಾರವರು ಪ್ರತ್ಯುತ್ತರ ನೀಡಿದರು. "ಏನೂ ಚಿಂತೆ ಮಾಡದೆ ಹೋಗಲಿ. ಅವರು ಮಾರ್ಗದಲ್ಲಿ ಮಳೆಗೆ ಭಯಪಡಬೇಕಾಗಿಲ್ಲ." ॥49॥ ಸಾಯಿ ಚರಣಗಳಲ್ಲಿ ಇಬ್ಬರೂ ಅಭಿವಂದನೆ ಸಲ್ಲಿಸಿ ಗಾಡಿಯಲ್ಲಿ ಹೊರಟರು. ಅಲ್ಲಿ ದಟ್ಟವಾದ ಮಂಜು ಕವಿದಿತ್ತು ಮತ್ತು ಮಿಂಚುತ್ತಿತ್ತು, ಗೋದಾವರಿಯು ಪೂರ್ಣಪ್ರವಾಹದಲ್ಲಿದ್ದಳು.॥50॥ ಆಕಾಶವು ಗಡಗಡನೆ ಗರ್ಜಿಸುತ್ತಿತ್ತು, ಅವರು ಒಂದು ಗಾಡಿಯನ್ನು ಹಿಡಿಯಬೇಕಾಯಿತು. ಕಾಕಾಗೆ ಮನದಲ್ಲಿಯೇ ಪೂರ್ಣ ವಿಶ್ವಾಸವಿತ್ತು ಬಾಬಾರವರ ಆಶ್ವಾಸನೆಯಲ್ಲಿ ಪೂರ್ಣ ನಂಬಿಕೆಯಿತ್ತು. ॥51॥ ಆದರೆ ಅವನ ಸ್ನೇಹಿತನು  ಪ್ರಯಾಣವು ಎಷ್ಟರ ಮಟ್ಟಿಗೆ ಕ್ಷೇಮವಾಗಿರುತ್ತದೆ ಎಂದು ಚಿಂತಿತನಾಗಿದ್ದನು. ಅವರು ಹೊರಟಿದ್ದಕ್ಕಾಗಿ  ಪಶ್ಚಾತ್ತಾಪಪಟ್ಟನು. ಮಾರ್ಗದಲ್ಲಿ ಏನಾದರೂ ತೊಂದರೆ ಉಂಟಾಗಬಹುದೆಂಬ ಚಿಂತೆ ಇತ್ತು. ॥52॥ ಸಾಕಿಷ್ಟು, ಅವರು ಸುಖವಾಗಿ ಹೊರಟರು. ರೈಲು ಗಾಡಿಯ ಒಳಗೆ ಪ್ರವೇಶಿಸಿದ ಮೇಲೆ ಜೋರಾಗಿ ಮಳೆ ಸುರಿಯಲು ಪ್ರಾರಂಭವಾಯಿತು. ಅವರು ನಿರ್ಭಯವಾಗಿ ಮುಂಬಯಿಯನ್ನು ತಲಪಿದರು. ॥53॥ ಅವನು ಮನೆಗೆ ಹೋಗಿ ಬಾಗಿಲುಗಳನ್ನು ಮತ್ತು ಕಿಟಕಿಗಳನ್ನು ತೆಗೆದನಕೂಡಲೇ ಒಳಗೆ ಸಿಕ್ಕಿಹಾಕಿಕೊಂಡಿದ್ದ ಒಂದು ಪಾರಿವಾಳವು ಹೊರಗೆ ಹಾರಿಹೋಯಿತು. ಆದಾಗ್ಯೂ ಎರಡು ಪಾರಿವಾಳಗಳು ಸತ್ತು ಹೋಗಿದ್ದವು. ॥54॥ ಈ ದೃಶ್ಯವನ್ನು ನೋಡಿ ಅವನು ಬಹಳ ದುಃಖಿತನಾದನು. "ಓ ದೇವರೇ, ಅವು ಹಸಿವು ಬಾಯಾರಿಕೆಗಳಿಂದಾಗಿ ತಮ್ಮ ಜೀವ ಕಳೆದುಕೊಂಡಿವೆ! ॥55॥ "ನಾನು ಶಿರಡಿಗೆ ಹೊರಡುವ ಮೊದಲು, ಕಿಟಕಿಗಳನ್ನೇನಾದರೂ ತೆಗೆದು ಇಟ್ಟಿದ್ದಲ್ಲಿ, ಅವು ಸಾಯುತ್ತ ಇರಲಿಲ್ಲ. ಆ ಬಡಪ್ರಾಣಿಗಳು ನನ್ನಿಂದಾಗಿ ಮರಣಹೊಂದಿವೆ. ॥56॥ "ಅದು ಈಗ ಹೊರಗೆ ಹೋದ ಪಾರಿವಾಳದ ಬಗ್ಗೆ ಬಾಬಾರವರು ಕಾಳಜಿ ವಹಿಸಿದರೇನೋ ಅನ್ನಿಸುತ್ತಿದೆ. ಆದುದರಿಂದಲೇ ಅವರು ಸಂತೋಷವಾಗಿ ಈ ದಿನವೇ ಹೊರಡಲು ಅನುಜ್ಞೆ ನೀಡಿದರು. ॥57॥ "ಇಲ್ಲದಿದ್ದಲ್ಲಿ, ಅದೂ ಸಹ ಮರಣ ಹೊಂದುತ್ತಿತ್ತುಅನ್ನವಿಲ್ಲದೆ ಅದು ಹೇಗೆ ಬದುಕಿರಲು ಸಾಧ್ಯವಾಗುತ್ತಿತ್ತು? ಇದು ಮಾತ್ರ ಸುರಕ್ಷಿತವಾಗಿದ್ದು ಉಳಿದೆರಡು ತಮ್ಮ ವಿಧಿಬರಹದಂತೆ ಆಯಸ್ಸು ಮುಗಿಸಿದ್ದವು. ॥58॥ ಅವನ ಮತ್ತೊಂದು ಅನುಭವವೂ ಸಹ ಶ್ರವಣಾರ್ಹವಾಗಿದೆ. ಅವನು ಕೆಲವು ತಿಂಗಳುಗಳಿಂದ ತನ್ನ ಒಂದು ಕಾಲಿನ ಹಿಮ್ಮಡಿಯ ನೋವಿನಿಂದ ನರಳುತ್ತಿದ್ದನು. ॥59॥ ಶಿರಡಿಗೆ ಹೋಗುವ ಮೊದಲು, ಅವನು ಅನೇಕ ತಿಂಗಳುಗಳ ಕಾಲ ಈ ತೊಂದರೆಯನ್ನು ಅನುಭವಿಸಿದ್ದನು. ಅಲ್ಲಿಂದ ಹಿಂತಿರುಗಿದ ಮೇಲೆ ಆ ನೋವು ದೂರವಾಗಿತ್ತು, ಅತ್ಯಲ್ಪ ಸಮಯದಲ್ಲೇ ಅದು ಮಾಯವಾಯಿತು. ॥60॥ ಅದೇ ರೀತಿ ಮತ್ತೊಂದು ಕಥೆ ಇದೆ.

ಒಬ್ಬ ವ್ಯಕ್ತಿಯು ಒಬ್ಬ ಸಂತನನ್ನು ಹುಡುಕಿಕೊಂಡು ಹೋಗಿ ಅಲ್ಲಿ ತನಗೆ ಆ ಉದ್ದೇಶವಿಲ್ಲದಿದ್ದರೂ ಸಹ, ಸಂತರ ಚರಣಗಳಲ್ಲಿ ತಲೆಯಿಟ್ಟು ನಮಸ್ಕರಿಸುತ್ತಾನೆ. ಅದನ್ನು ಕೇಳಿ. ॥61॥ ಮತ್ತೆಯೂ, ಒಬ್ಬ ವ್ಯಕ್ತಿಯು ಈ ಸಂಸಾರದ ಮೋಹಪಾಶದಲ್ಲಿ ಸಿಲುಕಿಕ್ಷಿಣೆ ಕೊಡಲು ಇಚ್ಛೆಯಿಲ್ಲದಿದ್ದರೂ ಸಹ, ಅವನು ದೃಢವಾದ ನಿಶ್ಚಯಹೊಂದಿದ್ದರೂ ಸಹ ದಕ್ಷಿಣೆಯನ್ನು ನೀಡುತ್ತಾನೆ. ॥62॥ ಧರಮ್‌ಸಿ ಜೇಠಾಬಾಯಿ ಠಕ್ಕರನು, ಮುಂಬಯಿ ನಿವಾಸಿಯಾಗಿದ್ದು ಸೊಲಿಸಿಟರ್ (ವಕೀಲ) ಆಗಿದ್ದನು. ತನ್ನ ಪೂರ್ವ ಪುಣ್ಯ ಫಲದಿಂದಾಗಿ ಸಾಯಿಯನ್ನು ಭೇಟಿಮಾಡಲು ಮನದಲ್ಲಿ ಇಚ್ಛಿಸಿದನು. ॥63॥ ಅವನು ಮಹಾಜನಿಗೆ ಉದ್ಯೋಗ ನೀಡಿದವನಾಗಿದ್ದನು. ಇಬ್ಬರೂ ಬಹಳ ಪರಿಚಿತರಾಗಿದ್ದರು. ಅವನು ಶಿರಡಿಗೆ ಹೋಗಿ ಪ್ರತ್ಯಕ್ಷವಾಗಿ ಅವರನ್ನು ಭೇಟಿಮಾಡಲು ಇಚ್ಛಿಸಿದನು. ॥64॥ ಕಾಕಾ (ಮಹಾಜನಿ) ಠಕ್ಕರಜೀಯ ಕಂಪೆನಿಯಲ್ಲಿ ಮುಖ್ಯ ಕಾರಭಾರಿಯಾಗಿದ್ದನು. ಅಗಾಗ್ಗೆ ಸಿಗುವ ರಜೆಗಳ ಲಾಭವನ್ನು ಪಡೆಯುತ್ತ ಕಾಕಾ ಶಿರಡಿಗೆ ಹೋಗಲು ತಯಾರಾಗುತ್ತಿದ್ದನು. ॥65॥ ಕಾಕಾನು ನಿರ್ದಿಷ್ಟ ಸಮಯಕ್ಕೆ ಹಿಂತಿರುಗುತ್ತಿದ್ದನೇನು? ಕೆಲವು ಸಲ ಅವನು ಶಿರಡಿಯಲ್ಲಿ ಒಟ್ಟಿಗೆ ಎಂಟು ದಿನಗಳ ಕಾಲ ಉಳಿದುಕೊಳ್ಳುತ್ತಿದ್ದನು. ಹಿಂತಿರುಗಲು ಸಾಯಿಯ ಅಜ್ಞೆಯು ಸಿಗಲಿಲ್ಲ ಎಂಬ ವಿವರಣೆ ನೀಡುತ್ತಿದ್ದನು. ಇದೊಂದು ಕೆಲಸ ಮಾಡುವ ರೀತಿಯೇ? ॥66॥ 'ಅವನೆಂತಹ ಸಂತ? ಈ ರೀತಿಯ ಸಂತನ ಕೆಲಸವನ್ನು ನಾನು ಒಪ್ಪುವುದಿಲ್ಲ!' ಎಂದು ಅಂದುಕೊಂಡ ಶೇಠನು ಹೋಳಿಹಬ್ಬದ ರಜೆಯಲ್ಲಿ ಈ ಸಾಯಿಯು ಯಾರೆಂದು ತಿಳಿದುಕೊಳ್ಳಲು ಹೊರಟನು. ॥67॥ ಅವನ ಅಹಂಕಾರ, ದುರ್ಧರವಾದ ದೇಹಾಭಿಮಾನ ಮತ್ತು ತನ್ನ ಐಶ್ವರ್ಯದಲ್ಲಿದ್ದ ಗರ್ವವು ಅತಿಯಾಗಿತ್ತು. ॥68॥ ಶಾಸ್ತ್ರವೇತ್ತರು ಮತ್ತು ಪಂಡಿತರು ದಣಿದು ಸಾಯಿಯ ಅಧಿಕಾರ ಸ್ಥಿತಿಯ ಮುಂದೆ ಸೋಲನ್ನೊಪ್ಪಿಕೊಂಡಿದ್ದರು. ಹಾಗಿರುವಾಗ ಈ ಬಡಪಾಯಿ ಧರಮ್‌ಸಿಯು ಏನು ಮಾಡಬಲ್ಲನು? ಅವನು ಎಷ್ಟರಮಟ್ಟಿಗೆ ತನ್ನ ನಿರ್ಧಾರಕ್ಕೆ ಅಂಟಿಕೊಂಡಿರಬಲ್ಲನು? ॥69॥ ಆದರೆ ಅಂಧಶ್ರದ್ಧೆಯು ಸರಿಯಲ್ಲ. ನಾನೇ ಅಲ್ಲಿಗೆ ಹೋದರೆ ಖಂಡಿತವಾಗಿ ವಸ್ತುಸ್ಥಿತಿಯನ್ನು ಅರಿಯಬಹುದು. ಈ ತರಹದ ನಿಶ್ಚಯದಿಂದ, ಶಿರಡಿಗೆ ಹೋಗಲು ತಯಾರಿ ನಡೆಸಿದನು. ॥70॥ ಧರಮ್‌ಸಿಯು ಸಹ ಮುಂದಿನ ಪದಗಳಲ್ಲಿ ವಿವರಿಸಿರುವಂತಹ, ಮತ್ತೊಬ್ಬ ಸ್ನೇಹಿತ ಕಾಕಾನ ರೀತಿಯಲ್ಲಿ ಶರತ್ತುಗಳನ್ನು ಹಾಕಿಕೊಂಡನು. ಅವನು ಕಾಕಾ ಜೊತೆಯಲ್ಲಿ ಹೊರಟು ಅವನಿಗೆ ಹೇಳಿದನು. ॥71॥ "ಈ ಪ್ರವಾಸದಲ್ಲಿ ನೀನು ಶಿರಡಿಗೆ ಹೋಗಿ ಅಲ್ಲಿಯೇ ನೆಲೆಸುವಂತಿಲ್ಲ. ನೀನು ನನ್ನ ಜೊತೆಯಲ್ಲಿ ಹಿಂತಿರುಗಬೇಕು. ಅದು ಮಾತ್ರ ಖಂಡಿತ." ॥72॥ ಆಗ ಕಾಕಾ ಉತ್ತರಿಸಿದನು, "ಅದು ನಮ್ಮ ಕೈಯಲ್ಲಿಲ್ಲ." ಆದ್ದರಿಂದ ಧರಮ್‌ಸಿಯು, ಮಾರ್ಗದಲ್ಲಿ ಹೋಗುವಾಗ ಮತ್ತೊಬ್ಬ ವ್ಯಕ್ತಿಯನ್ನು ಜೊತೆಯಲ್ಲಿ ಕರೆದುಕೊಂಡನು. ॥73॥ ಒಂದು ವೇಳೆ ಕಾಕಾ ಹಿಂತಿರುಗದಿದ್ದರೆ, ಜೊತೆಯಿಲ್ಲದೆ ಅವನಿಗೆ ಕಷ್ಟವಾಗುತ್ತದೆ ಎಂದು ಯೋಚಿಸಿ ಒಬ್ಬ ಮೂರನೆಯ ವ್ಯಕ್ತಿಯನ್ನು ಕರೆದುಕೊಂಡನು. ಮೂರು ಜನರೂ ಶಿರಡಿಗೆ ಹೊರಟರು. ॥74॥ ಈ

ಜಗತ್ತಿನಲ್ಲಿ ಅನೇಕ ರೀತಿಯ ಜನರು ಇರುತ್ತಾರೆ. ಭಕ್ತರಿಗೆ ಉಪಕಾರ ಮಾಡುವಂತಹವರೂ ಇರುತ್ತಾರೆ. ಬಾಬಾರವರು ಅವರ ಸಂಶಯಗಳನ್ನು ನಿವೃತ್ತಿಮಾಡಲು ಅವರನ್ನು ಶಿರಡಿಗೆ ಎಳೆಯುತ್ತಾರೆ. ॥75॥ ಅವರು ಹಿಂತಿರುಗಿದಾಗ ತಮ್ಮ ಅನುಭವವನ್ನು ಇತರರಿಗೆ ಹಂಚಿಕೊಳ್ಳುತ್ತಿದ್ದರು. ಅವರು ಇತರರಿಂದ ಅದನ್ನು ಬರೆಸುತ್ತಿದ್ದರು. ಅದರಿಂದಾಗಿ ಜನರು ಸನ್ಮಾರ್ಗವನ್ನು ಹಿಡಿಯಬಲ್ಲವರಾಗಿದ್ದರು. ॥76॥ ತಾತ್ಪರ್ಯವೇನೆಂದರೆ, ಶಿರಡಿಗೆ ಹೋದವರೆಲ್ಲರೂ ದರ್ಶನದ ಸುಖದಿಂದ ತೃಪ್ತರಾಗುತ್ತಿದ್ದರು. ಆರಂಭದಲ್ಲಿ ಅವರ ಮನೋವೃತ್ತಿ ಏನೇ ಇದ್ದರೂ ಕೊನೆಯಲ್ಲಿ ಮಾತ್ರ ಪರಮಾನಂದಪ್ರಾಪ್ತಿಯನ್ನು ಹೊಂದುತ್ತಿದ್ದರು. ॥77॥ ಕೇವಲ ತೋರಿಕೆಗೆ ಮಾತ್ರ ಪ್ರೀತಿ ಇದೆ ಎನ್ನುತ್ತಿದ್ದರು. ಆದ್ದರಿಂದ ತಾವಾಗಿಯೇ ಅಲ್ಲಿಗೆ ಹೋಗುತ್ತಿದ್ದರು. ಆದರೆ ವಸ್ತುಸ್ಥಿತಿಯು ಬೇರೆಯೇ ಇರುತ್ತಿತ್ತು. ಅವರು ಬಾಬಾರವರ ಕಾರ್ಯವನ್ನು ಸಾಧಿಸುತ್ತಿದ್ದರು. ॥78॥ ಬಾಬಾರವರು ಸ್ವತಃ ಅವರಿಗೆ ಹೊರಗೆ ಹೋಗಲು ಸ್ಫೂರ್ತಿ ನೀಡುತ್ತಿದ್ದರು. ಅವರ ಸ್ವಾಭಾವಿಕ ವೃತ್ತಿ (ವಾಸನೆ)ಗಳು ಅರಿವಿಗೆ ಬರುವಂತೆ ಮಾಡಿ ಅವರನ್ನು ಪರಮಾರ್ಥ ಮಾರ್ಗದಲ್ಲಿ ಕರೆದೊಯ್ಯುತ್ತಿದ್ದರು. ॥79॥ ಅವರ ರೀತಿನೀತಿಗಳು ಯಾರಿಗೆ ಗೊತ್ತು? ತಾನಾಗಿಯೇ ಪ್ರಯತ್ನಿಸಿದ್ದಲ್ಲಿ ಒಬ್ಬ ವ್ಯಕ್ತಿಯು ದುರಾದೃಷ್ಟವನ್ನು ಆಹ್ವಾನಿಸುತ್ತಾನೆ. ಆದ್ದರಿಂದ ನಿರಭಿಮಾನಿಯಾಗಿ ಅವರ ಚರಣಗಳಲ್ಲಿ ಶರಣಾದರೆ ಸುಖದ ಹಬ್ಬವನ್ನು ಅನುಭವಿಸಬಹುದು. ॥80॥ ದೇವಸ್ಥಾನ, ಬ್ರಾಹ್ಮಣ ಅಥವಾ ಗುರು ಇವರಲ್ಲಿಗೆ ಖಾಲಿ ಕೈಯಲ್ಲಿ ಹೋಗಬಾರದು ಎಂಬುದು ಪ್ರತೀತಿ. ಆದ್ದರಿಂದ ಕಾಕಾನು ಮಾರ್ಗದಲ್ಲಿ ಎರಡು ಸೇರು ದ್ರಾಕ್ಷಿಯನ್ನು ಖರೀದಿಸಿನು. ॥81॥ ಅವನು ಬೀಜವಿಲ್ಲದ ದ್ರಾಕ್ಷಿಯನ್ನು ಕೊಳ್ಳಬೇಕೆಂದಿದ್ದನು. ಆದರೆ ಆ ಸಮಯದಲ್ಲಿ ಕೇವಲ ಬೀಜವುಳ್ಳ ದ್ರಾಕ್ಷಿ ಮಾತ್ರ ದೊರಕಿತು. ಆದ್ದರಿಂದ ಕಾಕಾನು ಅದನ್ನೇ ಖರೀದಿಸಿದನು. ॥82॥ ಅದು ಹಾಗಿರಲಿ. ಆ ಮೂವರೂ ಸಂತೋಷವಾಗಿ ಹರಟೆಹೊಡೆಯುತ್ತ ಶಿರಡಿಯನ್ನು ತಲಪಿದರು. ಮೂವರೂ ಬಾಬಾರವರ ದರ್ಶನಕ್ಕಾಗಿ ಮಸೀದಿಗೆ ಹೋದರು. ॥83॥ ಬಾಬಾ ಸಾಹೇಬ ತರ್ಖಡ ಎಂಬ ಭಕ್ತನೂ ಅಲ್ಲಿದ್ದನು. ಸೇಠ ಧರಮ್‌ಸಿಯು ಅವನನ್ನು ಕೌತುಕದಿಂದ ಏನು ಕೇಳಿದನೆಂಬುದನ್ನು ಕೇಳಿರಿ. ॥84॥ "ಇಲ್ಲಿ ಏನಿದೆ? ನೀವು ಏಕೆ ಬಂದಿರುವಿರಿ?" ತರ್ಖಡನು ಹೇಳಿದನು, "ದರ್ಶನಕ್ಕಾಗಿ!" ಸೇಠನು ಹೇಳಿದನು, "ಇಲ್ಲಿ ಚಮತ್ಕಾರಗಳು ನಡೆಯುತ್ತವೆಯೆಂದು ಕೇಳಿದ್ದೇನೆ." ॥85॥ ಆಗ ತರ್ಖಡನು ಅವನಿಗೆ ಉತ್ತರಿಸಿದನು, "ಒಳ್ಳೆಯದು. ಅದು ನನ್ನ ಭಾವನೆಯಲ್ಲ. ಆದರೆ ಭಕ್ತರ ಉತ್ಕಟ ಮನಸ್ಸಿನ ಉದ್ದೇಶಗಳು ಸಿದ್ಧಿ ಹೊಂದುತ್ತವೆ." ॥86॥ ಕಾಕಾನು ತನ್ನ ತಲೆಯನ್ನು ಬಾಬಾರವರ ಚರಣಗಳ ಮೇಲಿಟ್ಟು, ದ್ರಾಕ್ಷಿಯನ್ನು ಬಾಬಾರವರಿಗೆ ಅರ್ಪಿಸಿದನು. ಅಲ್ಲಿ ಬಹಳ ದೊಡ್ಡ ಗುಂಪು ನೆರೆದಿದ್ದರಿಂದ ಹಂಚುವಿಕೆಯು ಪ್ರಾರಂಭವಾಯಿತು. ॥87॥ ಅನಂತರ, ಬಾಬಾರವರು ಇತರರ ಜೊತೆಯಲ್ಲಿಯೇ ಧರಮ್‌ಸಿಗೂ ಸಹ ಸ್ವಲ್ಪ (ದ್ರಾಕ್ಷಿಯನ್ನು) ಕೊಟ್ಟರು. ಆದರೆ, ಅವನಿಗೆ ಈ ಜಾತಿಯ ದ್ರಾಕ್ಷಿ ಇಷ್ಟವಿರಲಿಲ್ಲ. ಅವನು ಬೀಜವಿಲ್ಲದ ದ್ರಾಕ್ಷಿಯನ್ನು ಇಷ್ಟಪಡುತ್ತಿದ್ದನು. ॥88॥

ಅವನಿಗೆ ಈ ರೀತಿಯ ದ್ರಾಕ್ಷಿಯ ಮೇಲೆ ಹೇವರಿಕೆ ಇತ್ತು. ಈ ರೀತಿ, ಆರಂಭದಲ್ಲೇ ಒಂದು ವಿಘ್ನ ಹುಟ್ಟಿತು. ಸೇವೆಯ ಮೊದಲಲ್ಲೇ ಈ ಆಘಾತ. ಅವನಿಗೆ ತಿನ್ನಲೂ ಆಗಲಿಲ್ಲ, ತಿರಸ್ಕರಿಸುವುದೂ ಕಷ್ಟವಾಗಿತ್ತು. ॥89॥ ಅದೂ ಅಲ್ಲದೆ, ವೈದ್ಯರು ಅವನಿಗೆ ಅವುಗಳನ್ನುತೊಳೆಯದೇ ತಿನ್ನಬಾರದೆಂದು ಹೇಳಿದ್ದರು. ಅವನೊಬ್ಬನೇ ತೊಳೆಯುವುದು ಸರಿಯಲ್ಲವೆಂದು ಅನ್ನಿಸಿತು. ನಾನಾ ವಿಧವಾದ ಕಲ್ಪನೆಗಳು ಉದ್ಭವಿಸಿದವು. ॥90॥ ಕೊನೆಯಲ್ಲಿ ಅವನು ಅವುಗಳನ್ನು ಇದ್ದ ಹಾಗೆಯೇ ಬಾಯಲ್ಲಿ ಹಾಕಿಕೊಂಡನು. ಮತ್ತು ನಿಧಾನವಾಗಿ ಜಗಿಯುತ್ತಾ ಬೀಜಗಳನ್ನು ಬೇರ್ಪಡಿಸಿ ತನ್ನ ಜೇಬಿನಲ್ಲಿ ಹಾಕಿಕೊಂಡನು. ಇದು ಒಬ್ಬ ಸಾಧುವಿನ ಪವಿತ್ರ ಸ್ಥಾನವಾಗಿತ್ತು. ಮತ್ತು ತನ್ನ ಎಂಜಲಿನಿಂದ ಮೈಲಿಗೆ ಮಾಡಲಿಚ್ಛಿಸಲಿಲ್ಲ. ॥91॥ ಅನಂತರ ಸೇಠನು ಯೋಚಿಸಿದನು, "ಸಂತರಾದ ಅವರಿಗೆ, ನನಗೆ ಈ ದ್ರಾಕ್ಷಿಗಳು ಇಷ್ಟವಿಲ್ಲವೆಂದು ಏಕೆ ಗೊತ್ತಾಗಲಿಲ್ಲ? ಅವರು ನನಗೆ ಬಲವಂತವಾಗಿ ಏಕೆ ಕೊಟ್ಟರು?" ॥92॥ ಈ ಯೋಚನೆಗಳು ಹುಟ್ಟುತ್ತಲೇ, ಬಾಬಾರವರು ಮತ್ತಷ್ಟು ದ್ರಾಕ್ಷಿಗಳನ್ನು ಕೊಟ್ಟರು. ಅವುಅದೇ ಬೀಜವುಳ್ಳ ದ್ರಾಕ್ಷಿಗಳೆಂಬುದನ್ನು ತಿಳಿದು ಅವನು ಅವುಗಳನ್ನು ಬಾಯಿಯಲ್ಲಿ ಹಾಕಿಕೊಳ್ಳದೆ ಕೈಯಲ್ಲಿಯೇ ಹಿಡಿದುಕೊಂಡಿದ್ದನು. ॥93॥ ಅವನು ಬೀಜವುಳ್ಳ ದ್ರಾಕ್ಷಿಗಳನ್ನು ಇಷ್ಟಪಡುತ್ತಿಲ್ಲವೆಂಬುದು ಸತ್ಯವಷ್ಟೆ. ಆದರೆ ಬಾಬಾರವರು ಅವುಗಳನ್ನು ಅವನ ಕೈಯಲ್ಲಿ ಕೊಟ್ಟಿದ್ದರು. ಧರಮ್‌ಸಿ ಸೇಠನು ಅಂತರಂಗದಲ್ಲಿ ವಿಚಲಿತನಾಗಿ ಏನು ಮಾಡುವುದೆಂದು ತಿಳಿಯದೆ ಹೋದನು. ॥94॥ ಅವನಿಗೆ ಅವುಗಳನ್ನು ತನ್ನ ಬಾಯಿಯಲ್ಲಿ ಇಟ್ಟುಕೊಳ್ಳಲಾಗಲಿಲ್ಲ. ಎಚ್ಚರಿಕೆಯಿಂದ ತನ್ನ ಮುಷ್ಟಿಯೊಳಗೆ ಜೋಪಾನವಾಗಿ ಹಿಡಿದುಕೊಂಡಿದ್ದನು. ಆಗ ಬಾಬಾ ಹೇಳಿದರು, "ಅರೇ, ಅವುಗಳನ್ನು ತಿನ್ನು." ಸೇಠನು ಅವರ ಆಜ್ಞೆಯನ್ನು ಮಾನ್ಯ ಮಾಡಲೇ ಬೇಕಾಯಿತು. ॥95॥ "ಅವುಗಳನ್ನು ತಿನ್ನು" ಎಂದು ಬಾಬಾರವರು ಹೇಳಿದ ಕೂಡಲೇ ಧರಮ್‌ಸಿಯು ಅವುಗಳನ್ನು ಬಾಯಿಯಲ್ಲಿ ಹಾಕಿಕೊಂಡನು. ಆದರೆ ಅವೆಲ್ಲವೂ ಬೀಜವಿಲ್ಲದ ದ್ರಾಕ್ಷಿಗಳಾಗಿದ್ದವು. ಆತ ಅತ್ಯಂತ ಆಶ್ಚರ್ಯ ಚಕಿತನಾದನು. ॥96॥ ಈ ರೀತಿ ಆ ದ್ರಾಕ್ಷಿಗಳಲ್ಲಿ ಬೀಜವಿಲ್ಲದುದನ್ನು ನೋಡಿ ಧರಮ್‌ಸಿಯು ವಿಸ್ಮಯಚಿತ್ತನಾಗಿ ಮನದಲ್ಲೇ ಯೋಚಿಸಿದನು, "ಇದು ಅಪೂರ್ವ ಶಕ್ತಿ! ಈ ಸಂತರಿಗೆ ಯಾವುದೂ ಅಶಕ್ಯವಲ್ಲ. ॥97॥ "ನನ್ನ ಮನಸ್ಸಿನ ಹಿತವನ್ನು ಅರಿತು ಬೀಜವುಳ್ಳ ದ್ರಾಕ್ಷಿಯು, ತೊಳೆಯದೇ ಇದ್ದರೂ ಸಾಯಿಯು ನನಗೆ ಕೊಟ್ಟದ್ದು ಬೀಜವಿಲ್ಲದೆ ಚೆನ್ನಾಗಿ ಇದ್ದು ಹಿತಕರವಾಗಿದ್ದವು." ॥98॥ ಅವನು ಆಶ್ಚರ್ಯ ಚಕಿತನಾದನು. ತನ್ನ ಶಂಕೆಗಳನ್ನು ಮರೆತನು. ಅವನ ಅಹಂಕಾರವು ಕರಗಿ ಹೋಯಿತು. ಸಂತನ ಬಗ್ಗೆ ಪ್ರೀತಿ ಉಕ್ಕಿ ಬಂತು. ॥99॥ ಅವನ ಹಿಂದಿನ ಸಂಕಲ್ಪಗಳು ಮಾಯವಾದವು. ಅವನಹೃದಯದಲ್ಲಿ ಸಾಯಿ ಪ್ರೇಮ ಹುಟ್ಟಿತ್ತು. ಅವನು ಯಾವ ಆತಂಕದಿಂದ ಶಿರಡಿಗೆ ಬಂದನೋ ಅದು ಯಾವುದೇ ಶಂಕೆ ಇಲ್ಲದೆ ನಿಶ್ಚಯವಾಗಿಯೂ ಮಾಯವಾಯಿತು. ॥100॥ ತರ್ಖಡನೂ ಸಹ ಅಲ್ಲಿಯೇ ಬಾಬಾರವರ ಹತ್ತಿರ ಕುಳಿತುಕೊಂಡಿದ್ದನು. ಸಾಯಿಬಾಬಾರವರು ಅವನಿಗೆ ಅದೇ ಭಾಗದಿಂದೇ ಕೆಲವು ದ್ರಾಕ್ಷಿಗಳನ್ನು

ತೆಗೆದುಕೊಟ್ಟಿದ್ದರು. ॥101॥ ಆಗ ಧರಮ್‌ಸಿಯು ಅವನನ್ನು ಕೇಳಿದನು, "ನೀನು ಯಾವ ರೀತಿಯ ದ್ರಾಕ್ಷಿಯನ್ನು ಪಡೆದೆ?" ಆಗ ತರ್ಕಡನು ಅವು ಬೀಜವಿದ್ದ ಹಣ್ಣುಗಳೆಂದು ಹೇಳಿದ್ದನ್ನು ಕೇಳಿ ಅವನು ಮತ್ತಷ್ಟು ಅಚ್ಚರಿಗೊಂಡನು. ॥102॥ ಇದರಿಂದ, ಅವರು ಶರೆಂದು ಅವನಿಗೆ ನಂಬಿಕೆಯಾಯಿತು. ಆದರೆ ದೃಢೀಕರಣ ಪಡೆಯುವ ಯೋಚನೆ ಹುಟ್ಟಿತು. ಅವನು ಯೋಚಿಸಿದನು, 'ನೀನು ನಿಜವಾದ ಸಂತನಾಗಿದ್ದರೆ ಈ ಸಲ ಹಂಚುವಿಕೆಯು ಕಾಕಾನಿಂದ ಪ್ರಾರಂಭವಾಗಲಿ.' ॥103॥ ಬಾಬಾರವರು ಅನೇಕರಿಗೆ ಹಂಚುತ್ತಿದ್ದರು. ಆದರೆ ಸೇಠಜಿಗೆ ಈ ಆಲೋಚನೆಯು ಬಂದಾಗ ಬಾಬಾರವರು ಕಾಕಾನಿಂದ ಹಂಚಲು ಪ್ರಾರಂಭಿಸಿದರು. ಸೇಠನು ಅತಿಯಾದ ಅಚ್ಚರಿ ಹೊಂದಿದನು. ॥104॥ ಸಾಧುತ್ವದ ಈ ರೀತಿಯ ಕುರುಹುಗಳು, ಈ ರೀತಿಯ ಮನಸ್ಸನ್ನು ಅರಿಯುವ ಶಕ್ತಿಯು ಧರಮ್‌ಸಿಯ ಮನಸ್ಸಿಗೆ ಸಾಯಿಯನ್ನು ಮನಸಾರೆ ಸಂತನೆಂದು ಒಪ್ಪಿಕೊಳ್ಳಲು ಸಾಕಾಯಿತು. ॥105॥ ಮಾಧವರಾವ್‌ನು ಅಲ್ಲಿಯೇ ಇದ್ದವನು ಬಾಬಾರವರಿಗೆ ಹೇಳಿದನು, "ಇವನು ಕಾಕಾನ ಒಡೆಯ, ಸೇಠನು" ಎಂದು ವಿವರವಾಗಿ ಪರಿಚಯಿಸಿದನು. ॥106॥ "ಅವನು ಕಾಕಾನ ಮಾಲೀಕ ಹೇಗಾಗುತ್ತಾನೆ? ಅವನಿಗೆ ಮತ್ತೊಬ್ಬ ಮಾಲೀಕನಿದ್ದಾನೆ." ಎಂಬುದು ಬಾಬಾರವರಸ್ಪಷ್ಟವಾದ ಉತ್ತರವಾಗಿತ್ತು. ಕಾಕಾನು ಈ ಉತ್ತರವನ್ನು ಮೆಚ್ಚಿದನು. ॥107॥ ಮತ್ತು ಇನ್ನೊಂದು ಅಚ್ಚರಿ! ಅಲ್ಲಿ ಅಪ್ಪಾ ಎಂಬ ಹೆಸರಿನ ಅಡಿಗೆಯವನು, ಧುನಿಯ ಹತ್ತಿರ ನಿಂತಿದ್ದನು. ಬಾಬಾ ಅವನನ್ನು ಬಹುವಾಗಿ ಮೆಚ್ಚಿದ್ದರು. ॥108॥ ಅವರು ಹೇಳಿದರು, "ಈ ಸೇಠನು ನನಗೋಸ್ಕರ ಇಲ್ಲಿಗೆ ಬರುವ ತೊಂದರೆ ತೆಗೆದುಕೊಂಡಿಲ್ಲ! ಅಪ್ಪಾ ಮೇಲಿನ ಅವನ ಪ್ರೀತಿ ಉಕ್ಕಿ ಹರಿಯಿತು.[1] ಆದ್ದರಿಂದಲೇ ಅವನು ಶಿರಡಿಗೆ ಬಂದಿದ್ದಾನೆ!" ॥109॥ ಈ ರೀತಿ ಅವರ ಸಂಭಾಷಣೆಯು ಮುಗಿಯಿತು. ಧರಮ್‌ಸಿಯು ತನ್ನ ನಿರ್ಧಾರವನ್ನು ಮರೆತೇ ಹೋದನು. ತಾನಾಗಿಯೇ ಬಾಬಾರವರ ಚರಣಗಳಲ್ಲಿ ವಂದಿಸಿದನು. ನಂತರ ವಾಡಾಗೆ ಹಿಂತಿರುಗಿದನು. ॥110॥ ಅದು ಹಾಗಿರಲಿ. ಮಧ್ಯಾಹ್ನದ ಆರತಿಯು ಮುಗಿಯಿತು. ಅವರು ಮನೆಗೆ ಹೋಗುವ ತಯಾರಿ ನಡೆಸಿದರು. ಬಾಬಾರವರ ಅನುಜ್ಞೆ ಪಡೆಯುವ ವೇಳೆ ಬಂದಿತು. ಆದ್ದರಿಂದ ಆ ಗುಂಪು ಮತ್ತೆ ಮಸೀದಿಗೆ ಹೋಯಿತು. ॥111॥ ಅನಂತರ ಧರಮ್‌ಸಿಯು ಕಾಕಾನಿಗೆ ಹೇಳಿದನು, "ನಾನು ಆಜ್ಞೆ ಬೇಡುವುದಿಲ್ಲ. ನಿನಗೆ ಬೇಕಾಗಿರುವುದರಿಂದ ನೀನೇ ಕೇಳಿಕೋ." ಆಗ ಮಾಧವರಾವ್‌ನು ಟೀಕಿಸಿದನು. ॥112॥ "ಕಾಕಾನು ತಾನು ಹೊರಡುವ ಬಗ್ಗೆ ಖಚಿತವಾಗಿಲ್ಲ. ಒಂದು ವಾರದವರೆಗೆ ಅವನಿಗೆ ಅನುಮತಿ ದೊರಕುವುದಿಲ್ಲ. ಆದ್ದರಿಂದ ನೀನೇ ಕೇಳಬಾರದೇಕೆ?" ॥113॥ ಅನಂತರ, ಮೂವರೂ ಅಲ್ಲಿ ಹೋಗಿ ಕುಳಿತುಕೊಂಡರು. ಅವರೆಲ್ಲರ ಪರವಾಗಿ ಮಾಧವರಾವ್‌ನು ಅನುಮತಿ ಬೇಡಿದನು. ಬಾಬಾರವರು ಒಂದು ಕಥೆ ಹೇಳಲು ಪ್ರಾರಂಭಿಸಿದರು. ಅದನ್ನು ಸಾವಧಾನ ಮನಸ್ಸಿನಿಂದ ಕೇಳಿರಿ. ॥114॥ "ಒಬ್ಬ ಚಂಚಲ ಬುದ್ಧಿಯ ವ್ಯಕ್ತಿಯಿದ್ದನು. ಅವನು ಗೃಹ, ಧನ, ಧಾನ್ಯಗಳಿಂದ ಸಂವೃದ್ಧನಾಗಿದ್ದನು. ಅವನಿಗೆ ಶಾರೀರಿಕ ಅಥವಾ ಮಾನಸಿಕವಾದ ಯಾವುದೇ ವ್ಯಾಧಿ ಇರಲಿಲ್ಲ.

ಆದರೆ ಅವನು ಅನವಶ್ಯಕವಾದ ಚಿಂತೆಗಳನ್ನು ತನ್ನ ಮೇಲೆ ಹಾಕಿಕೊಂಡಿದ್ದನು. ॥115॥ "ಅವನು ತನ್ನ ಮೇಲೆ ಅನವಶ್ಯಕವಾದ ಹೊರೆಯನ್ನೇ ಹೊತ್ತಿದ್ದನು. ಅವನು ಅಲ್ಲಿ ಇಲ್ಲಿ ಅಶಾಂತಿಯಿಂದ ಅಡ್ಡಾಡುತ್ತಿದ್ದನು. ಕೆಲವು ವೇಳೆ ಅವನು ಭಾರವನ್ನು ಕೆಳಗೆ ಹಾಕುತ್ತಿದ್ದನು. ಕೆಲವು ವೇಳೆ ಮತ್ತೆ ಹೊರುತ್ತಿದ್ದನು. ಅವನ ಮನಸ್ಸು ನಿಶ್ಚಲವಾಗಿರಲಿಲ್ಲ. ॥116॥ ಅವನ ಅವಸ್ಥೆಯನ್ನು ನೋಡಿ ಅವನ ಮೇಲೆ ಕರುಣೆ ತೋರಿ ಹೇಳಿದೆನು. "ನಿನ್ನ ಶ್ರದ್ಧೆಯನ್ನು ಯಾವುದಾದರೂ ಒಂದು ಜಾಗದಲ್ಲಿಡು. ॥117॥ "ಈ ರೀತಿ ಅನವಶ್ಯಕವಾಗಿ ಏಕೆ ಸುತ್ತುತ್ತಿರುವೆ? ಒಂದು ಜಾಗದಲ್ಲಿ ಶಾಂತವಾಗಿ ಕುಳಿತುಕೋ." ಈ ಕಥೆಯು ಧರಮ್‌ಸೀಯ ಮನಸ್ಸಿಗೆ ನಾಟಿತು. ಅದು ಅವನಿಗಾಗಿಯೇ ಕೊಟ್ಟ ಸೂಚನೆಯಾಗಿತ್ತು. ॥118॥ ಸಾಕಷ್ಟು ಆಸ್ತಿ ಮತ್ತು ವೈಭವವಿದ್ದರೂ, ಕಿಂಚಿತ್ತು ಕಾರಣವಿಲ್ಲದಿದ್ದರೂ, ಧರಮ್‌ಸೀಯು ಯಾವಾಗಲೂ ಚಿಂತಿತನಾಗುತ್ತಿದ್ದನು. ಮತ್ತು ಅನವಶ್ಯಕವಾಗಿ ಚಿಂತಾಕ್ರಾಂತನಾಗಿರುತ್ತಿದ್ದನು. ॥119॥ ಅವನಿಗೆ ಸಾಕಷ್ಟು ಸಂಪತ್ತು ಹಾಗೂ ಗೌರವವಿತ್ತು, ಆದರೆ ಅವನ ಮನಸ್ಸಿಗೆ ಸಮಾಧಾನವಿರಲಿಲ್ಲ. ಅವನು ಸದಾ ಆಳವಾದ, ಕಾಲ್ಪನಿಕ ದುಃಖದಲ್ಲೇ ಮಗ್ನನಾಗಿರುತ್ತಿದ್ದನು. ॥120॥ ಸಾಯಿಯ ಮುಖದಿಂದ ಈ ಕಥೆಯನ್ನು ಕೇಳಿ, ಸೇಠನು ಪರಮ ವಿಸ್ಮಿತನಾದನು. "ಇದೇ ನನ್ನ ಮನಸ್ಸಿನ ಅವಸ್ಥೆ" ಎಂದು ಯೋಚಿಸಿ ಅವನು ಅತಿ ಗೌರವದಿಂದ ಆಲಿಸಿದನು. ॥121॥ ಕಾಕಾನಿಗೆ ಬೇಗನೆ ಹಿಂತಿರುಗಲು ಅನುಮತಿ ದೊರಕುವುದು ಲಕ್ಷದಲ್ಲಿ ಒಂದು ಬಾರಿಯಷ್ಟು ಅಶಕ್ಯವಾಗಿತ್ತು. ಆದರೆ ಅವನು ಅದನ್ನು ಪಡೆದಾಗ ಧರಮ್‌ಸೀಯು ಅತಿ ಸಂತುಷ್ಟನಾದನು. ॥122॥ ಧರಮ್‌ಸೀಯ ಆಳವಾದ ಬಯಕೆಯೆಂದರೆ ಕಾಕಾನೂ ಸಹ ಅವನ ಜೊತೆಯಲ್ಲಿಯೇ ಹಿಂತಿರುಗಬೇಕೆಂಬುದು. ಬಾಬಾರವರು ಅವನು ಹಿಂತಿರುಗಲು ಅನುಮತಿ ನೀಡಿ ಈ ಇಚ್ಛೆಯನ್ನೂ ಪೂರೈಸಿದ್ದರು. ॥123॥ ಇದೂ ಸಹ ಸೇಠಜೀಯ ಒಂದು ಶರತ್ತೆಂದು ಬಾಬಾರವರಿಗೆ ಹೇಗೆ ತಿಳಿಯಿತು? ಧರಮ್‌ಸೀಯು ಆಶ್ಚರ್ಯಕರವಾದ ರೀತಿಯಲ್ಲಿ ಇದೂ ಸಹ ಸಂತತ್ವದ ಒಂದು ಲಕ್ಷಣವೆಂದು ಒಪ್ಪಿಕೊಂಡಿದ್ದನು. ॥124॥ ಎಲ್ಲ ಸಂಶಯಗಳೂ ನಿವೃತ್ತಿಹೊಂದಿದವು. ಸಾಯಿಯೂ ಸಂತನೆಂಬ ಅಭಿವ್ಯಕ್ತಿಯು ಸ್ಪಷ್ಟವಾಗಿತ್ತು. ಬಾಬಾರವರು ಅವರವರ ಭಾವಕ್ಕೆ ಅನುಗುಣವಾದ ಅನುಭೂತಿಗಳನ್ನು ನೀಡುತ್ತಾರೆ. ॥125॥ ಯಾವುದೇ ಮಾರ್ಗವನ್ನು ಅನುಸರಿಸಲು ಇಚ್ಛಿಸಿದರೂ ಅದೇ ಮಾರ್ಗದಲ್ಲಿ ಸಹಾಯ ದೊರಕುತ್ತದೆ. ಸಾಯಿಗೆ ಪ್ರತಿಯೊಬ್ಬರ ಅಧಿಕಾರ ಸಂಪತ್ತಿಯು ತಿಳಿದಿದೆ. ಅದೇ ಮಾರ್ಗದಲ್ಲಿ ಸಾಧಕರು ಪರಮಾರ್ಥಪ್ರಾಪ್ತಿ ಹೊಂದುತ್ತಾರೆ. ॥126॥ ಒಬ್ಬ ಭಕ್ತನು ಭಾವಾರ್ಥಿಯಾಗಿರಲಿ ಅಥವಾ ನಾಟಕೀಯವಾಗಿರಲಿ, ಸಾಯಿಯು ಇಬ್ಬರ ಮೇಲೂ ಸಮತ್ವದಿಂದ ಕೃಪೆತೋರುತ್ತಾರೆ. ಈ ಪ್ರೀತಿಯ ತಾಯಿಯು ಇಬ್ಬರ ಮಧ್ಯೆ ಭೇದಭಾವ ತೋರಿಸುವುದಿಲ್ಲ. ॥127॥ ಅನಂತರ, ಇಬ್ಬರೂ ಇನ್ನೇನು ಹೊರಡಬೇಕೆಂದಿರುವಾಗ, ಬಾಬಾರವರು ಕಾಕಾನಿಂದ ಹದಿನೈದು ರೂಪಾಯಿಗಳನ್ನು ದಕ್ಷಿಣೆಯಾಗಿ ಬೇಡಿದರು ಮತ್ತು ತಾವಾಗಿಯೇ ಕಾಕಾನಿಗೆ ಹೇಳಿದರು. ॥128॥ "ಯಾರಾದರೂ ನನಗೆ

ಒಂದು ರೂಪಾಯಿ ದಕ್ಷಿಣೆ ನೀಡಿದರೆ, ನಾನು ಅವರಿಗೆ ಹಿಂದಕ್ಕೆ ಸರಿಯಾಗಿ ಹತ್ತು ರೂಪಾಯಿಗಳನ್ನು ಕೊಡಬೇಕಾಗುತ್ತದೆ. ॥129॥ "ನಾನು ಯಾರಿಂದಲೂ ಏನನ್ನೂ ಪುಕ್ಕಟೆಯಾಗಿ ಸ್ವೀಕರಿಸುವುದಿಲ್ಲ. ನಾನು ಎಲ್ಲರನ್ನೂ, ಸಿಕ್ಕ ಸಿಕ್ಕವರನ್ನೂ ಬೇಡುವುದಿಲ್ಲ. ನಾನು ಕೇವಲ ಫಕೀರನು ತೋರಿಸಿದವರಲ್ಲಿ ಮಾತ್ರ ದಕ್ಷಿಣೆಯನ್ನು ತೆಗೆದುಕೊಳ್ಳುತ್ತೇನೆ. ॥130॥ "ಫಕೀರನು ಕೇವಲ ಋಣಿಗಳಾಗಿರುವವರನ್ನು ಮಾತ್ರ ಕೇಳುತ್ತಾನೆ. ಕೊಡುವವನು ಕೊಟ್ಟು ಬೀಜಗಳನ್ನು ಬಿತ್ತುತ್ತಾನೆ ಮತ್ತು ಅನಂತರ ಅದರ ಫಲವನ್ನು ಅನುಭವಿಸುತ್ತಾನೆ. ॥131॥ "ಆಸ್ತಿಯನ್ನು ಕೇವಲ ಧರ್ಮಕಾರ್ಯಗಳಿಗೆ ಮಾತ್ರ ಉಪಯೋಗಿಸಬೇಕು. ಹಾಗಿದ್ದಲ್ಲಿ ಮಾತ್ರ ಅದು ಉಪಕಾರವಾಗುತ್ತದೆ. ಧರ್ಮದಿಂದ ಮಾತ್ರವೇ ನಿಜವಾದ ಜ್ಞಾನವು ದೊರಕುತ್ತದೆ. ॥132॥ "ಬಹಳ ಕಷ್ಟಪಟ್ಟು ಕೂಡಿಟ್ಟ ಈ ಸಂಪತ್ತು, ಕೆಲವು ವೇಳೆ ತಮ್ಮದೇ ಸುಖಕ್ಕಾಗಿ ಉಪಯೋಗಿಸಲ್ಪಡುವುದೆಂದು ಕೆಲವೊಮ್ಮೆ ನಂಬಲಾಗುವುದು. ಅದನ್ನು ಧರ್ಮಕಾರ್ಯಕ್ಕೆ ಉಪಯೋಗಿಸದೆ ಅದನ್ನು ವ್ಯರ್ಥಗೊಳಿಸುತ್ತಾರೆ. ॥133॥ "ಯಾರು ಪೈಸೆ ಪೈಸೆ ಹಣ ಉಳಿಸುತ್ತ ಕೋಟ್ಯಂತರ ರೂಪಾಯಿಗಳನ್ನು ಅರ್ಬುದದ ರೀತಿಯಲ್ಲಿ ಜೋಡಿಸುತ್ತಾರೋ ಮತ್ತು ಎಂದಿಗೂ ಆ ಹಣವನ್ನು ವಿಷಯ ವಾಸನೆಗಳ ತೃಪ್ತಿಗಾಗಿ ಉಪಯೋಗಿಸುವುದಿಲ್ಲವೋ ಅವರು ಸುಖಿಯಾಗಿರುತ್ತಾರೆ." ॥134॥ ಎಲ್ಲರಿಗೂ ಶೃತಿಯ ಈ ನುಡಿಯು ಪೂರ್ಣವಾಗಿ ತಿಳಿದಿದೆ. 'ಯಾರು ಕೊಡುವುದಿಲ್ಲವೋ ಅವರು ಸ್ವೀಕರಿಸಲಾರರು.' ಈ ಮೊದಲು ನೀನು ಕೊಡದಿದ್ದರೆ, ಈಗ ನೀನು ಪಡೆಯುವುದಿಲ್ಲ. ಆದಿದರಿಂದಲೇ ಬಾಬಾರವರು ದಕ್ಷಿಣೆ ಬೇಡಿದರು. ॥135॥ ರಾಮಾವತಾರದಲ್ಲಿ ರಘುನಂದನನು ಅಪಾರವಾದ ಸುವರ್ಣ ಸ್ತ್ರೀ ಪ್ರತಿಮೆಗಳನ್ನು ದಾನ ಮಾಡಿ ಕೃಷ್ಣಾವತಾರದಲ್ಲಿ ಹದಿನಾರು ಸಹಸ್ರ ಮಹಿಳೆಯರನ್ನು ಪಡೆದನು. ॥136॥ ಭಕ್ತಿ, ಜ್ಞಾನ ಮತ್ತು ವೈರಾಗ್ಯ ಹೀನರಾದ ಭಕ್ತರೂಪವಾಗಿಯೂ ಅತ್ಯಂತ ದೀನರಾಗಿರುವರು. ಅಂತಹವರಿಗೆ ಮೊದಲು ವೈರಾಗ್ಯ ಬೋಧಿಸಿ ಅವರಲ್ಲಿಯೇ ಸ್ಥಾಪಿಸಿ ನಂತರ ಭಕ್ತಿಜ್ಞಾನಗಳನ್ನು ನೀಡಲಾಗುವುದು. ॥137॥ ಬಾಬಾರವರು ದಕ್ಷಿಣೆಯನ್ನು ಬೇಡಿದಾಗ ಅದು ವೈರಾಗ್ಯದ ಗುರುತು. ಅನಂತರ ಭಕ್ತರನ್ನು ಭಕ್ತಿಮಾರ್ಗದಲ್ಲಿ ಕರೆತಂದು ಜ್ಞಾನ ಪ್ರವೀಣನನ್ನಾಗಿ ಮಾಡುತ್ತಾರೆ. ॥138॥ "ನಾನಾದರೋ ಏನು ಮಾಡುತ್ತೇನೆ? ಒಂದನ್ನು ತೆಗೆದುಕೊಂಡು ಹತ್ತುಪಟ್ಟು ಕೊಡುತ್ತೇನೆ. ಹಂತಹಂತವಾಗಿ ಅವರನ್ನು ಜ್ಞಾನ ಮಾರ್ಗದಲ್ಲಿ ಕರೆತರುತ್ತೇನೆ" ಎಂದು ಬಾಬಾ ಹೇಳಿದರು. ಇದರಿಂದ ಧರಮ್‌ಸಿಯಲ್ಲಿ ಒಂದು ಮಹದಾಸೆ ಹುಟ್ಟಿತು. ॥139॥ ತಾನಾಗಿಯೇ ಅವನು ಬಾಬಾರವರ ಕೈಯಲ್ಲಿ ಹದಿನೈದು ರೂಪಾಯಿಗಳನ್ನಿಟ್ಟನು. ತನ್ನ ಹಿಂದಿನ ನಿರ್ಧಾರವನ್ನು ಪೂರ್ಣವಾಗಿ ಮರೆತು ಹೋದನು. ಈ ರೀತಿ ಇದೇ ಪ್ರಸಂಗವೇ ಅಪೂರ್ವವಾದುದಾಯಿತು. ॥140॥ ಈ ಹಿಂದೆ ಅನವಶ್ಯಕವಾಗಿ ಬಡಾಯಿಕೊಚ್ಚಿಕೊಳ್ಳುತ್ತಿದ್ದೆನೆಂದು ಅವನಿಗೆ ಅನಿಸಿತು. ಅವನು ಖುದ್ದಾಗಿ ಅಲ್ಲಿಗೆ ಬಂದುದಕ್ಕೆ ಸಂತಸ ಹೊಂದಿದನು. ಸಂತರು ಯಾವ ರೀತಿ ಇರುತ್ತಾರೆಂಬುದನ್ನು ಅರಿತು ಅನುಭವದಿಂದಾಗಿ ಅವರಸ್ನೇಹದಿಂದ ಬಂಧಿಸಲ್ಪಟ್ಟನು.

॥141॥ ನಾನು ಈ ನಿರ್ಧಾರವನ್ನು ಮಾಡದೇ ಇದ್ದಲ್ಲಿ ಇಲ್ಲಿಗೆ ನಮಸ್ಕರಿಸಲು ಬರುತ್ತಿರಲಿಲ್ಲ. ಅದೂ ಅಲ್ಲದೆ ನಾನು ನಾನಾಗಿಯೇ ಬಂದೆ! ಸಂತರ ರೀತಿಗಳು ಅಗಮ್ಯ! ॥142॥ ಯಾರ ನಾಲಿಗೆಯ ಮೇಲೆ ಸದಾ 'ಅಲ್ಲಾ-ಮಾಲಿಕ್' ಎಂಬ ಶಬ್ದಗಳು ನಿರಂತರವಾಗಿ ಇರುವುದೋ, ಅವರಿಗೆ ಯಾವುದು ತಾನೇ ಅಸಾಧ್ಯ? ನಾನು ಒಬ್ಬ ಸಂತನ ಚಮತ್ಕಾರವನ್ನು ವೀಕ್ಷಿಸಲು ಕಾತರನಾಗಿದ್ದೆನು. ॥143॥ ನನ್ನ ನಿರ್ಧಾರಗಳು ವ್ಯರ್ಥವಾಗಿದ್ದವು. ನಾನು ಒಬ್ಬ ಮಾನವನಿಗೆ ಸಾಷ್ಟಾಂಗ ಪ್ರಣಾಮಮಾಡಿದೆನು. ಮತ್ತು ನಾನಾಗಿಯೇ ಅವನು ಕೇಳದೆಯೇ ದಕ್ಷಿಣೆಯನ್ನು ನೀಡಿದ್ದೆನು. ॥144॥ 'ನನ್ನ ಬಡಾಯಿಯೆಲ್ಲವೂ ವ್ಯರ್ಥ. ನಾನಾಗಿಯೇ ನನ್ನ ಶಿರವನ್ನು ಸಾಯಿ ಚರಣಗಳಲ್ಲಿ ಪೂಜ್ಯಭಾವದಿಂದ ಇಟ್ಟೆನು. ಇದಕ್ಕಿಂತ ಹೆಚ್ಚಾದ ಅಪೂರ್ವ ಸಂಗತಿಯು ಇನ್ನೇನಿರಲು ಸಾಧ್ಯ? ॥145॥ ನಾನು ಸಾಯಿಯ ಕುಶಲತೆಯನ್ನು ಹೇಗೆ ವಿವರಿಸಲಿ? ಇದೆಲ್ಲವನ್ನೂ ಮಾಡುವುದರಲ್ಲಿ ಅವರು ಕೇವಲ ನಿಮಿತ್ತ ಮಾತ್ರವಾಗಿದ್ದರೂ ಸಹ ಹೊರನೋಟಕ್ಕೆ ಅವರು ಯಾವುದಕ್ಕೂ ಅಂಟದಂತೆಯೆ ಇದ್ದರು. ಇದಕ್ಕಿಂತ ಅಚ್ಚರಿ ಮತ್ತೇನು ತಾನೇ ಇರಲು ಸಾಧ್ಯ? ॥146॥ ಯಾರಾದರೂ ವಂದಿಸಲಿ ಅಥವಾ ವಂದಿಸದೇ ಇರಲಿ ಅಥವಾ ಯಾರಾದರೂ ದಕ್ಷಿಣೆ ಕೊಡಲಿ, ಬಿಡಲಿ, ದಯಾಘನ ಮತ್ತು ಆನಂದಕಂದನಾದ ಸಾಯಿಯು ಯಾರನ್ನೂ ಅವಗಣನೆಮಾಡುತ್ತಿರಲಿಲ್ಲ. ॥147॥ ಅವನನ್ನು ಪೂಜಿಸಿದುದರಿಂದ ಆನಂದ ಪಡಲಿಲ್ಲ. ಮತ್ತು ಅವಮಾನಿಸಿದಾಗ ಖೇದಪಡಲಿಲ್ಲ. ಎಲ್ಲಿ ಹರ್ಷವಿಲ್ಲವೋ ಅಲ್ಲಿ ವಿಷಾದವೂ ಇಲ್ಲ. ಅವರು ಇರುವುದು ಪೂರ್ಣವಾದ ದ್ವಂದ್ವರಹಿತವಾದ ಸ್ಥಿತಿ. ॥148॥ ಯಾರ ಉದ್ದೇಶ ಏನೇ ಇದ್ದರೂ ಒಮ್ಮೆ ದರ್ಶನ ನೀಡಿದಲ್ಲಿ ಆ ವ್ಯಕ್ತಿಗೆ ಅವರ ಚರಣಗಳಲ್ಲಿ ಭಕ್ತಿಯು ಹುಟ್ಟುತ್ತಿತ್ತು. ಸಾಯಿಯ ಶಕ್ತಿಯು ಅಷ್ಟು ಅದ್ಭುತವಾಗಿತ್ತು. ॥149॥ ಸಾಕಷ್ಟು ಅನಂತರ ಉದಿಪ್ರಸಾದವನ್ನು ಮತ್ತು ಆಶೀರ್ವಾದವನ್ನು ಪಡೆದು ನಿರ್ವಿಘ್ನವಾಗಿ ಹಿಂತಿರುಗಿದರು. ಈ ರೀತಿ ಸಾಯಿಯ ಖ್ಯಾತಿ ಅಗಾಧವಾಗಿತ್ತು. ॥150॥ ಶಿರಡಿಯಿಂದ ನಿರ್ಗಮಿಸಲು ಬಾಬಾರವರ ಅನುಮತಿಯ ಅವಶ್ಯಕತೆಯಿತ್ತು. ಅದನ್ನು ಉಲ್ಲಂಘಿಸಿದರೆ ವಿಘ್ನಗಳಿಗೆ ನಿಮಂತ್ರಣಕೊಟ್ಟಂತೆಯೇ. ॥151॥ ತಮ್ಮದೇ ಇಚ್ಛೆಯಿಂದ ಯಾರಾದರೂ ಹೊರಟಿದ್ದಲ್ಲಿ ಅದರ ಬಗ್ಗೆ ಪಶ್ಚಾತ್ತಾಪ ಪಡುವಂತಿತ್ತು. ಮತ್ತು ಖಿನ್ನರಾಗುತ್ತಿದ್ದರು. ಮಾರ್ಗಮಧ್ಯದಲ್ಲಿ ದಾರುಣವಾದ ವಿಘ್ನಗಳು ಎದುರಾಗುತ್ತಿದ್ದವು. ಅವುಗಳನ್ನು ನಿವಾರಿಸುವುದು ದುಸ್ತರವಾಗಿತ್ತು. ॥152॥ ಈ ರೀತಿ ಶಿರಡಿಯಿಂದ ನಿರ್ಗಮಿಸುವ ಬಗ್ಗೆ ವರ್ಣಿಸುತ್ತಾರೆ. ನನ್ನ ಪರಿಸ್ಥಿತಿಯೂ ಅದೇ ರೀತಿ ಆಗಿತ್ತು. "ನಾನು ಕರೆಸಿಕೊಂಡ ಹೊರತು ಯಾರೂ ಇಲ್ಲಿಗೆ ಬರಲು ಸಾಧ್ಯವಿಲ್ಲ" ಎಂದು ಬಾಬಾ ಹೇಳುತ್ತಿದ್ದರು. ॥153॥ "ನನ್ನ ಇಚ್ಛೆಯಿಲ್ಲದೆ ಯಾರು ತಾನೇ ತನ್ನ ಸರಹದ್ದನ್ನು ದಾಟಲು ಸಾಧ್ಯ? ತಮ್ಮದೇ ಇಚ್ಛೆಯಿಂದ ಯಾರು ತಾನೇ ಶಿರಡಿಗೆ ಬರಬಲ್ಲರು? ಬಂದು ನನ್ನ ದರ್ಶನ ಪಡೆಯ ಬಲ್ಲರು?" ॥154॥ ಕೃಪಾ ಮೂರ್ತಿಯಾದ ಸಾಯಿ ಸಮರ್ಥರ ಹೃದಯದಲ್ಲಿ ಕೃಪೆ ಉದಿಸಿದಾಗ ಮಾತ್ರ ನಾವು ದರ್ಶನಕ್ಕೆ ಬರಬಹುದು. ನಮ್ಮ ಜೀವನ ಅವರ ಅಧೀನದಲ್ಲಿದೆ. ॥155॥ ಯಾರ

ಬರುವಿಕೆಯ ಅಥವಾ ಹೋಗುವಿಕೆಯ ಬಗ್ಗೆ ಸಾಯಿಯ ಪ್ರಸನ್ನ ಚಿತ್ತವಿಲ್ಲದಿದ್ದರೆ ಅವರು ಹಿಂತಿರುಗಲು ಆಜ್ಞೆಯನ್ನಾಗಲಿ ಉದಿಯ ಪ್ರಸಾದವನ್ನಾಗಲಿ ಕೊಡುತ್ತಿರಲಿಲ್ಲ. ॥156॥ ಯಾರಾದರೂ ಅಲ್ಲಿ ಹೋಗಿ, ಅಭಿವಾದನ ಮಾಡಿ, ಆಜ್ಞಾಪನೆ ಬೇಡಿದಾಗ ಅವರಿಗೆ ಆಶೀರ್ವಚನ ಹಾಗೂ ಉದಿಯ ಪ್ರಸಾದ ನೀಡಿದಲ್ಲಿ ಅದು ಅವರಿಗೆ ಹಿಂತಿರುಗಲು ಅನುಮತಿ ನೀಡಿದಂತಾಗುತ್ತಿತ್ತು. ॥157॥ ಈಗ ನಾನು ಶ್ರೋತೃಗಳಿಗೆ ಉದಿಯ ವಿಚಾರವಾಗಿ ಒಂದು ಅದ್ಭುತ ಅನುಭವವನ್ನು ತಿಳಿಸುತ್ತೇನೆ. ಅನಂತರ ನೇವಾಸಕರನ ಭಕ್ತಿಯ ಶಕ್ತಿಯನ್ನು ಹೇಳುತ್ತೇನೆ. ಏಕೆಂದರೆ ಅವನು ಸಾಯಿಕೃಪೆ ಪಡೆದ ಮಹಾನುಭಾವ. ॥58॥ ಬಾಂದ್ರಾ ಪಟ್ಟಣದ ಒಬ್ಬ ಗೃಹಸ್ಥ, ಜಾತಿಯಲ್ಲಿ ಪ್ರಭುಕಾಯಸ್ಥದವನು, ಎಷ್ಟೇ ಪ್ರಯತ್ನಪಟ್ಟರೂ ಗುಣವಾಗದ ನಿದ್ರಾಹೀನತೆಯಿಂದ ಬಳಲುತ್ತಿದ್ದನು. ॥159॥ ಅವನಿಗೆ ನಿದ್ರೆ ಬರುವ ಆ ಕ್ಷಣದಲ್ಲಿಯೇ ಅವನ ಸ್ವಪ್ನದಲ್ಲಿ ಮೃತನಾದ ತಂದೆಯು ಬಂದು ಪ್ರತಿಸಲವೂ ಅವನನ್ನು ಎಚ್ಚರಿಸುತ್ತಿದ್ದನು. ॥160॥ ಅವನ ಹಿಂದಿನ ಜೀವನದಲ್ಲಿ ಅವನು ಮಾಡಿದ್ದ ಒಳ್ಳೆಯ ಅಥವಾ ಕೆಟ್ಟ ಕೆಲಸಗಳ ಬಗ್ಗೆ ಉಲ್ಲೇಖಿಸುತ್ತ, ಗುಪ್ತವಾದ ದುಷ್ಟ ಮತ್ತು ಕ್ಲಿಷ್ಟ ವಿಚಾರಗಳನ್ನು ತಿಳಿಸುತ್ತ ಅವನ ಮೇಲೆ ಹೀನಾಯ ಶಬ್ದಗಳಿಂದ ವಾಕ್ಪ್ರಹಾರ ಮಾಡುತ್ತಿದ್ದನು. ॥161॥ ಪ್ರತಿದಿನವೂ ಇದೇ ರೀತಿಯ ಪ್ರಸಂಗ ನಡೆಯುತ್ತಿತ್ತು. ಪ್ರತಿರಾತ್ರಿಯೂ ನಿದ್ರೆಯು ಬಾರದಾಯಿತು. ಅವನು ಅತ್ಯಂತ ಖಿನ್ನನಾದನು. ಅವನ ಬೆನ್ನು ಹತ್ತಿದ ಈ ಸಂಕಟವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಾಗಿರಲಿಲ್ಲ. ॥162॥ ಆ ಗೃಹಸ್ಥನು ಬೆಂದು ಬಸವಳಿದಿದ್ದನು. ಅವನಿಗೆ ಬೇರೆ ಯಾವ ಉಪಾಯವೂ ತೋರಲಿಲ್ಲ. ಅವನು ಒಬ್ಬ ಸಾಯಿಯ ಭಕ್ತನ ಸಲಹೆ ಕೇಳಿದನು. ಮತ್ತೇನಾದರೂ ಚಿಕಿತ್ಸೆ ಮಾಡಿಸಬಹುದೆಂಬ ಆಸೆಯೂ ಇತ್ತು. ॥163॥ "ನಮಗೆ ಬೇರೆ ಯಾವುದೂ ಉಪಾಯ ತಿಳಿದಿಲ್ಲ. ಸಾಯಿ ಮಹಾರಾಜರು ಮಹಾನುಭಾವರು ಎಂದಷ್ಟೆ ಗೊತ್ತು. ನಿಮಗೂ ಅಷ್ಟೆ ಶ್ರದ್ಧೆ ಇದ್ದಲ್ಲಿ ಉದಿಯು ತನ್ನ ಪ್ರಭಾವವನ್ನು ಪ್ರಕಟಿಸುತ್ತದೆ" ಎಂದು ಆ ಸಾಯಿಭಕ್ತನು ಹೇಳಿದನು. ॥164॥ ಆ ಸಾಯಿಭಕ್ತನು ಯಾವ ಯಾವ ರೀತಿಯಲ್ಲಿ ಹೇಳಿದನೋ ಅದೇ ರೀತಿಯಲ್ಲಿ ನೇವಾಸಕರ್ ಶ್ರದ್ಧೆ ತಾಳಿದನು. ಅದೇ ರೀತಿ ಉದಿಯ ಮಹಿಮೆಯ ಅನುಭವವೂ ಆಯಿತು. ಮತ್ತೆಂದೂ ಅವನನ್ನು ದುಃಸ್ವಪ್ನವು ಬಾಧಿಸಲಿಲ್ಲ. ॥165॥ ಆ ಭಕ್ತ ಸ್ನೇಹಿತನು ತನ್ನ ಪುಣ್ಯಕರ್ಮ ಫಲವಾಗಿ ಸಾಯಿ ಸಮರ್ಥರಲ್ಲಿ ಶರಣಾಗಿದ್ದನು. ಉದಿಯ ವಿಶೇಷ ಮಹಿಮೆಗಳನ್ನು ತಿಳಿದನಂತರ ನೇವಾಸಕರ್‌ನಿಗೆ ಸ್ವಲ್ಪ ಉದಿಯನ್ನು ಕೊಟ್ಟನು. ॥166॥ ಅವನು ಹೇಳಿದನು. "ನೀನು ನಿದ್ರೆ ಮಾಡಲು ಹೋಗುವಾಗ ಸ್ವಲ್ಪ ಉದಿಯನ್ನು ಹಣೆಯ ಮೇಲೆ ಹಚ್ಚಿಕೊಂಡು ಸಣ್ಣ ಪೊಟ್ಟಣವನ್ನು ತಲೆದಿಂಬಿನ ಕೆಳಗೆ ಇಟ್ಟುಕೋ. ಶ್ರೀಸಾಯಿಯನ್ನು ಮನದಲ್ಲಿಯೇ ಸ್ಮರಿಸು. ॥167॥ "ಭಕ್ತಿಭಾವವನ್ನಿಟ್ಟುಕೋ. ನಂತರ ಉದಿಯ ಮಹಿಮೆ ಅನುಭವಕ್ಕೆ ಬರುತ್ತದೆ. ಕೂಡಲೇ ನಿನ್ನ ಸಂಕಟವನ್ನು ದೂರಮಾಡುತ್ತದೆ. ಇದು ಉದಿಯ ಸಹಜಶಕ್ತಿ." ॥168॥ ನೇವಾಸಕರ್ ಆ ನಿರ್ದೇಶನದ ಪ್ರಕಾರ ನಡೆದುಕೊಂಡ ನಂತರ, ಆ ರಾತ್ರಿಯಿಂದ ಅವನಿಗೆ ಗಾಢವಾದ ನಿದ್ರೆ

ಬಂದಿತು. ದುಃಸ್ವಪ್ನದ ಲವಲೇಶವೂ ಇರಲಿಲ್ಲ. ಅಂದಿನಿಂದ ಅವನ ಮನಸ್ಸು ಆನಂದದಿಂದ ತುಂಬಿಹೋಯಿತು. ॥169॥ ಅನಂತರ, ಅವನ ಈ ಆನಂದವನ್ನು ಯಾವ ರೀತಿ ವರ್ಣಿಸುವುದು! ಅವನು ಒಂದು ಉದಿಯ ಪೊಟ್ಟಣವನ್ನು ತನ್ನ ದಿಂಬಿನ ಕೆಳಗೆ ಸದಾಕಾಲಇಟ್ಟುಕೊಂಡಿದ್ದನು. ಮತ್ತು ಸಾಯಿಯನ್ನು ನಿತ್ಯವೂ ಸ್ಮರಿಸುತ್ತಿದ್ದನು. ॥170॥ ಅನಂತರ ಅವನು ಬಾಬಾರವರ ಒಂದು ಚಿತ್ರಪಟವನ್ನು ತೆಗೆದುಕೊಂಡುಬಂದು ಹಾಸಿಗೆಯ ತಲೆಯ ಹತ್ತಿರದ ಗೋಡೆಯ ಮೇಲೆ ಹಾಕಿದನು. ಪ್ರತಿ ಗುರುವಾರ ಅದಕ್ಕೆ ಪುಷ್ಪಮಾಲೆ ಹಾಕುತ್ತಿದ್ದನು. ಆಪ ಭಕ್ತಿಯಿಂದ ಅದನ್ನು ಪೂಜಿಸುತ್ತಿದ್ದನು. ॥171॥ ಅವನು ಚಿತ್ರದ ದರ್ಶನ ಪಡೆಯಲು ಪ್ರಾರಂಭಿಸಿದನು. ಗುರುವಾರ ಹಾರ ಸಮರ್ಪಿಸುತ್ತಿದ್ದನು. ಸಾಯಿಯನ್ನು ನಿತ್ಯವೂ ಸ್ಮರಿಸುತ್ತಿದ್ದನು. ಅವನ ಪೀಡೆಗಳೆಲ್ಲವೂ ನಿವಾರಣೆಯಾದವು. ॥172॥ ಅವನ ನಿಷ್ಠೆಯು ಮುಂದುವರೆಯಿತು. ತನ್ನ ನೇಮನಿಷ್ಠೆಗಳನ್ನು ಪಾಲಿಸುತ್ತಿದ್ದನು. ಅವನ ಆರೋಗ್ಯ ಸುಧಾರಿಸಿತು. ನಿದ್ರಾಭಂಗ ದುಸ್ಸ್ವಪ್ನ ಇತ್ಯಾದಿಗಳು ನಿಂತುಹೋದುವು. ಹಿಂದಿನ ಕಷ್ಟಗಳನ್ನು ಪೂರ್ಣವಾಗಿ ಮರೆತೇಬಿಟ್ಟನು. ॥173॥ ಇದು ಉದಿಯ ಮಹಿಮೆಗೆ ಒಂದು ಉದಾಹರಣೆ. ಮತ್ತೊಂದು ಅದ್ಭುತ ಸಂಗತಿಯನ್ನು ತಿಳಿಸುತ್ತೇನೆ. ಉದಿಯನ್ನು ಬೇರೆ ಯಾವುದೇ ಸಂಕಟಕ್ಕೆ ಪ್ರಯೋಗ ಮಾಡಿದಲ್ಲಿ ಅದು ಅಭೀಪ್ಸಿತ ಭೋಗವನ್ನು ತಂದುಕೊಡುತ್ತದೆ. ॥174॥ ಬಾಲಾಜಿ ಪಾಟೀಲ ನೇವಾಸಕರಯೆಂಬ ಮಹಾನ್ ಭಕ್ತನಿದ್ದನು. ಅವನು ಅತ್ಯುತ್ತಮವಾದ ಮತ್ತು ನಿಷ್ಕಾಮ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡು ತನ್ನ ದೇಹವನ್ನು ಬಾಬಾರವರಿಗಾಗಿ ಸವೆಸಿದನು. ॥175॥ ನೇವಾಸಕರನ ನಿತ್ಯ ಕಾರ್ಯವೆಂದರೆ ಶಿರಡಿಯಲ್ಲಿ ಬಾಬಾರವರು ನಿತ್ಯ ಓಡಾಡುವ ಮತ್ತು ಲೇಂಡಿಗೆ ಹೋಗಿ ಬರುವ ರಸ್ತೆಗಳೆಲ್ಲವನ್ನೂ ಮತ್ತು ಸಂದಿಗೊಂದಿಗಳನ್ನು ಗುಡಿಸುವುದಾಗಿತ್ತು. ॥176॥ ಈ ಸೇವೆಯ ಪರಿಪಾಠವು ಅವನ ನಂತರ ರಾಧಾಕೃಷ್ಣಬಾಯಿಯಿಂದ[3] ಮುಂದುವರಿಯಿತು. ಅವಳು ಈ ಕೆಲಸದಲ್ಲಿ ಬಹಳ ನಿಷ್ಠಾವಂತಳಾಗಿದ್ದಳು. ॥177॥ ಜಾತಿಯಲ್ಲಿ ಬ್ರಾಹ್ಮಣಳಾಗಿ, ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದಅವಳು ತನ್ನ ಮುಗ್ಧ ಮನಸ್ಸಿನಲ್ಲಿ ಇದೊಂದು ಹೀನಾಯವಾದ ಸೇವೆ ಎಂಬ ಕೆಟ್ಟ ಯೋಚನೆಯನ್ನು ಎಂದಿಗೂ ಇಟ್ಟುಕೊಂಡಿರಲಿಲ್ಲ. ॥178॥ ಬೆಳಗ್ಗೆ ಬೇಗನೇ ಎದ್ದು, ತನ್ನ ಕೈಯಲ್ಲಿ ಪೊರಕೆಯನ್ನು ಹಿಡಿದುಕೊಂಡು ಬಾಬಾರವರು ಉಪಯೋಗಿಸುತ್ತಿದ್ದ ರಸ್ತೆಗಳೆಲ್ಲವನ್ನೂ ಗುಡಿಸುತ್ತಿದ್ದಳು. ಅವಳ ಸೇವೆಯು ನಿಜವಾಗಿಯೂ ಸ್ತುತ್ಯರ್ಹ. ॥179॥ ಅವಳ ಕೆಲಸವು ನಿರ್ಮಲವಾಗಿಯೂ ತ್ವರಿತಗತಿಯಲ್ಲೂ ನಡೆಯುತ್ತಿತ್ತು. ಬೇರೆ ಯಾರು ಅವಳ ಜೊತೆ ಸ್ಪರ್ಧಿಸಲು ಸಾಧ್ಯ? ಸ್ವಲ್ಪ ಸಮಯದ ನಂತರ ಅಬ್ದುಲ್ಲಾನು[4] ಮುಂದೆ ಬಂದನು. ॥180॥ ಆ ಪಾಟೀಲನು (ನೇವಾಸಕರ) ಬಹಳ ಭಾಗ್ಯಶಾಲಿ. ಸಂಸಾರದಲ್ಲಿದ್ದುಕೊಂಡೇ ಅವನು ಸಂಸಾರದಲ್ಲಿ ವೈರಾಗ್ಯ ಹೊಂದಿದ್ದನು. ಅದೆಂತಹ ಸ್ವಾರ್ಥತ್ಯಾಗ ಅವನದು! ಆ ಕಥಾಭಾಗವನ್ನು ಆಲಿಸಿರಿ. ॥181॥ ಭೂಮಿಯ ಕೃಷಿಯಾದ ನಂತರ ಆ ಧಾನ್ಯವೆಲ್ಲವನ್ನೂ ಅವನು ಮಸೀದಿಗೆ ತೆಗೆದುಕೊಂಡು ಬಂದು ಅಲ್ಲಿಯ ಬಯಲು ಜಾಗದಲ್ಲಿ

ರಾಶಿಮಾಡಿ ಅದನ್ನು ಬಾಬಾರವರ ಚರಣಗಳಲ್ಲಿ ಸಮರ್ಪಿಸುತ್ತಿದ್ದನು. ॥182॥ ಬಾಬಾರವರೇ ಸರ್ವಸ್ವಕ್ಕೂ ಧಣಿಗಳು ಎಂಬುದನ್ನು ದೃಢವಾಗಿ ನಂಬಿಕೊಂಡು ಅವನು ಬಾಬಾರವರು ಅದರಿಂದ ಎಷ್ಟು ತೆಗೆದುಕೊಡುತ್ತಾರೋ ಅಷ್ಟನ್ನು ಮಾತ್ರವೇ ಮನೆಗೆ ತೆಗೆದುಕೊಂಡು ಹೋಗಿ ಅದರಲ್ಲೇ ಜೀವನ ನಡೆಸುತ್ತಿದ್ದನು. ॥183॥ ಬಾಳಾನು ಮಹಾರಾಜರು ಸ್ನಾನಮಾಡಿ ಬಂದ ನೀರು ಅಥವಾ ಕೈಕಾಲು ತೊಳೆದು ಕೊಂಡು ಬರುತ್ತಿದ್ದ ಕಾಲುವೆಯ ನೀರನ್ನು ಮಾತ್ರವೇ ಕುಡಿಯುತ್ತಿದ್ದನು. ॥184॥ ನೇವಾಸಕರನು ಈ ನಿಯಮಗಳನ್ನು ಅವ್ಯಾಹತವಾಗಿ ತನ್ನ ಸಾವಿನ ಸಮಯದವರೆಗೆ ಮುಂದುವರೆಸಿಕೊಂಡು ಬಂದನು. ಇಂದಿಗೂ ಅವನ ಪ್ರಿಯಪುತ್ರ ಇದನ್ನು ಸ್ವಲ್ಪ ಮಟ್ಟಿಗೆ ನಡೆಸಿಕೊಂಡು ಬರುತ್ತಿದ್ದಾನೆ. ॥185॥ ಬಾಬಾರವರೂ ಸಹ ಧಾನ್ಯವನ್ನು ಸತತವಾಗಿ ನಿತ್ಯವೂ ಕಳುಹಿಸುತ್ತಿದ್ದರು. ಅದರಿಂದ ಮಹಾರಾಜ್‌ರು ಜೋಳದ ರೊಟ್ಟಿಯನ್ನು ತಮ್ಮ ಮಹಾನಿರ್ವಾಣದವರೆಗೆ (ದಿನದ ನಾಲ್ಕುವೇಳೆ) ತಿನ್ನುತ್ತಿದ್ದರು. ॥186॥ ಸಾಕಿಷ್ಟು, ಒಮ್ಮೆ ಏನಾಯಿತೆಂದು ನೋಡಿ. ಅದು ಬಾಳಾನ ವಾರ್ಷಿಕ ಶ್ರಾದ್ಧ. ಅನ್ನವನ್ನು ಬೇಯಿಸಿ ತಯಾರಾಗಿಟ್ಟಿದ್ದರು. ಸೇವಕರು ಅದನ್ನು ಬಡಿಸಲು ಪ್ರಾರಂಭಿಸಿದರು. ॥187॥ ಅನ್ನವನ್ನು ಮನೆಯಲ್ಲಿಯೇ ಅತಿಥಿಗಳ ಅಂದಾಜು ಸಂಖ್ಯೆಗೆ ಸರಿಯಾಗಿ ಬೇಯಿಸಲಾಗಿತ್ತು, ಆದರೆ ಅನ್ನವನ್ನು ಬಡಿಸುತ್ತಿರುವಾಗ ನಿರೀಕ್ಷಿಸಿದ್ದಕ್ಕಿಂತ ಮೂರು ಪಟ್ಟು ಹೆಚ್ಚು ಜನರು ಬಂದಿದ್ದರು. ॥188॥ ಶ್ರೀಮತಿ ನೇವಾಸಕರ್‌ ಗಾಬರಿಯಾದಳು. ಅವಳು ತನ್ನ ಅತ್ತೆಯ ಹತ್ತಿರ ಪಿಸುಗುಟ್ಟಿದಳು. "ನಮಗೆ ಈ ದಿನ ಅವಮಾನವಾಗುತ್ತದೆ. ಅದನ್ನು ಯಾವರೀತಿ ನಿವಾರಿಸುವುದು?" ॥189॥ ಆ ಅತ್ತೆಗೆ ಬಹಳ ನಿಷ್ಠೆಯಿತ್ತು. ಅವಳು ಹೇಳಿದಳು. "ನಮಗೆ ಸಾಯಿ ಸಮರ್ಥರ ಆಧಾರ ಇರುವಾಗ ನಾವೇಕೆ ಚಿಂತಿಸಬೇಕು? ನೀನು ಶಾಂತವಾಗಿರು." ॥190॥ ಈ ರೀತಿ ಅವಳ ಅತ್ತೆಯು ಆಶ್ವಾಸನೆ ನೀಡಲು, ಅವಳು ಒಂದು ಮುಷ್ಟಿಯ ತುಂಬ ಉದಿಯನ್ನು ತೆಗೆದುಕೊಂಡು ಅಡಿಗೆ ಪಾತ್ರೆಗಳಲ್ಲೆಲ್ಲ ಒಂದು ಚೂರು ಉದಿಯನ್ನು ಹಾಕಿ ಎಲ್ಲಾ ಪಾತ್ರೆಗಳನ್ನು ಬಟ್ಟೆಯಿಂದ ಮುಚ್ಚಿದಳು. ॥191॥ ಅವಳು ಹೇಳಿದಳು, "ನೀನು ಹೋಗು. ಯೋಚನೆ ಇಲ್ಲದೆ ಎಲ್ಲರಿಗೂ ಬಡಿಸು. ಬಟ್ಟೆಯನ್ನು ಸ್ವಲ್ಪಮಾತ್ರ ಸರಿಸಿ ಬಡಿಸಲು ಸಾಧ್ಯವಾಗುವಷ್ಟು ಮಾತ್ರ ತೆಗೆದು ಬಡಿಸು ಮತ್ತೆ ಮುಂಚಿನಂತೆಯೇ ಬಟ್ಟೆಯನ್ನು ಸರಿಸಿ ಮುಚ್ಚಿಬಿಡು. ಇದನ್ನು ಮಾತ್ರ ಮರೆಯದೆ ಮಾಡು. ॥192॥ "ಇದು ಸಾಯಿಯ ಮನೆಯ ಊಟ. ಒಂದೇ ಒಂದು ಧಾನ್ಯದ ಕಾಳೂ ನಮ್ಮದಲ್ಲ. ಕೇವಲ ಅವರು ಮಾತ್ರ ನಮ್ಮ ಮರ್ಯಾದೆಯನ್ನು ರಕ್ಷಣೆಮಾಡಬಲ್ಲರು. ಯಾವುದಾದರೂ ಕಡಿಮೆ ಬಂದಲ್ಲಿ, ಅದು ಅವರ ಜವಾಬ್ದಾರಿಯಾಗಿರುತ್ತದೆ." ॥193॥ ಅತ್ತೆಯ ನಿಶ್ಚಯದಂತೆಯೇ ಅನುಭವವು ಉಂಟಾಯಿತು. ಯಾವುದೇ ಕಷ್ಟವಿಲ್ಲದೆ ಎಲ್ಲಾ ಅತಿಥಿಗಳೂ ಊಟಮಾಡಿದರು. ॥194॥ ಅಲ್ಲಿ ಬಂದಿದ್ದವರೆಲ್ಲರೂ ಊಟಮಾಡಿದರು. ಎಲ್ಲವೂ ಯಥಾಸಾಂಗವಾಗಿಯೇ ನಡೆಯಿತು. ಆದರೂ ಎಲ್ಲ ಪಾತ್ರೆಗಳೂ ಪ್ರಾರಂಭದಲ್ಲಿದ್ದ ಹಾಗೆಯೇ ತುಂಬಿದ್ದವು. ॥195॥ ಇದು ಉದಿಯ ಪ್ರಭಾವ. ಸಹಾಯ ಮಾಡುವುದು

ನಂತರ ಸಹಜ ಸ್ವಭಾವದಂತೆಯೇ ಅವರವರ ಅನುಭವವೂ ಇರುತ್ತದೆ. ॥196॥ ಸಾಕಿಷ್ಟು. ಉದಿಯ ಮಹಿಮೆಯನ್ನು ವಿವರಿಸುತ್ತಲೇ ನನಗೆ ನೇವಾಸಕರನ ಮತ್ತೊಂದು ಕಥೆಯು ನೆನಪಾಗುತ್ತಿದೆ. ಅದು ಅವನ ಆಳವಾದ ಶ್ರದ್ಧೆಯದ್ದಾಗಿದೆ. ಅದನ್ನು ಕೇಳಿರಿ. ॥197॥ ಒಂದು ಕಾಲಕ್ಕೆ ಇದು ವಿಷಯಾಂತರವಾಗುವುದೇನೋ ಎಂಬ ಸಂದೇಹವಿತ್ತು. ಅದೇನೇ ಇರಲಿ, ಪ್ರಸಂಗಾನುಸಾರವಾಗಿ ಅದನ್ನು ಹೇಳಬೇಕೆಂದು ನನಗೆ ಅನಿಸಿತು. ॥198॥ ಮನದಲ್ಲಿಯೇ ಈ ರೀತಿಯ ನಿಶ್ಚಯಮಾಡಿಕೊಂಡು ಈ ಸ್ಥಾನದಲ್ಲಿ ನಾನು ಕಥೆಯನ್ನು ಹೇಳುತ್ತಿದ್ದೇನೆ. ಒಂದು ವೇಳೆ ಶ್ರೋತೃಗಳು ಇದನ್ನು ಅಸಮಂಜಸವೆಂದು ಭಾವಿಸಿದರೆ ನನ್ನನ್ನು ಕ್ಷಮಿಸಬೇಕು. ॥199॥ ಒಮ್ಮೆ ಶಿರಡಿಯ ನಿವಾಸಿಯಾದ ರಘು ಪಾಟೀಲನು ನೇವಾಸಾಗೆ ಅತಿಥಿಯಾಗಿ ಹೋದನು. ಮತ್ತು ನೇವಾಸಕರನ ಮನೆಯಲ್ಲಿ ಉಳಿದುಕೊಂಡನು. ॥200॥ ಒಂದು ರಾತ್ರಿ ಹಸುಗಳನ್ನು ನೆಲದಮೇಲೆ ಹೊಡೆದಿದ್ದ ಕಬ್ಬಿಣದ ಗೂಟಕ್ಕೆ ಗಟ್ಟಿಯಾದ ಹಗ್ಗದಿಂದ ಕಟ್ಟಲಾಗಿತ್ತು. ಆಗ ಅಕಸ್ಮಾತ್ತಾಗಿ ಆ ಕೊಟ್ಟಿಗೆಗೆ ಒಂದು ವಿಷಪೂರಿತವಾದ ಸರ್ಪವು ಬುಸುಗುಟ್ಟುತ್ತ ಪ್ರವೇಶಿಸಿತು. ॥201॥ ಅಂತಹ ಪ್ರಸಂಗವನ್ನು ನೋಡಿದ ಪ್ರತಿಯೊಬ್ಬರೂ ವಿಸ್ಮಯದಿಂದ ಮೂಕರಾದರು. ಆ ಹಾವು ತನ್ನ ಹೆಡೆಯನ್ನು ಬಿಚ್ಚಿ ಊರ್ಧ್ವವಾಗಿ ಕುಳಿತಿತು. ॥202॥ ಹಸುಗಳು ಗಡಿಬಿಡಿಯಿಂದ ಗುರ್ ಎನ್ನತೊಡಗಿ ಹೊರಗೆ ಹೋಗಲು ಚಡಪಡಿಸಿದವು. ನೆವಾಸಕರನು ಸುದೃಢವಾಗಿ ಸಾಯಿಯವರೇ ಅಲ್ಲಿ ಪ್ರಕಟಗೊಂಡಿದ್ದಾರೆಂದು ನಂಬಿದ್ದನು. ॥203॥ ಈಗ ಹಸುಗಳನ್ನು ಬಿಚ್ಚಿ ಬಿಡುವುದಲ್ಲದೆ ಅನ್ಯಉಪಾಯವೇ ಇರಲಿಲ್ಲ. ಅವು ಏನಾದರೂ ಹಾವಿನ ಮೇಲೆ ಹೆಜ್ಜೆ ಇಟ್ಟಲ್ಲಿ ದೊಡ್ಡ ಅನಾಹುತವೇ ನಡೆದುಹೋಗುತ್ತಿತ್ತು. ॥204॥ ನೇವಾಸಕರನು ಹಾವನ್ನು ದೂರದಿಂದ ನೋಡುತ್ತಲೇ ಅತ್ಯಂತ ಹರ್ಷಿತನಾದನು. ಅವನ ಸರ್ವಾಂಗಗಳೂ ಪುಲಕಿತವಾದವು. ಅವನು ಸಾಷ್ಟಾಂಗ ಪ್ರಣಾಮಮಾಡಿದನು. ॥205॥ ಅವನು ಹೇಳಿದನು, "ಇದು ಸಾಯಿಯ ಕೃಪಾದೃಷ್ಟಿ. ಸರ್ಪದ ರೂಪದಲ್ಲಿ ನಮ್ಮನ್ನು ಭೇಟಿಯಾಗಲು ಬಂದಿದ್ದಾರೆ." ಅವನು ಹಾವಿಗಾಗಿ ಒಂದು ಬಟ್ಟಲಿನ ತುಂಬ ಹಾಲನ್ನು ತೆಗೆದುಕೊಂಡು ಬಂದನು. ॥206॥ ಬಾಳಾಜಿಯ ಮನೋವೃತ್ತಿಯು ಅದೆಷ್ಟು ವಿಚಿತ್ರ! ಅವನಿಗೆ ಅಣುಮಾತ್ರವೂ ಭೀತಿಯಿರಲಿಲ್ಲ. ಅವನು ಹಾವಿಗೆ ಏನು ಹೇಳಿದನೆಂದು ಶ್ರೋತೃಗಳು ಸಾವಧಾನದಿಂದ ಕೇಳಬೇಕು. ॥207॥ "ಏಕೆ, ಬಾಬಾ. ಅದೇಕೆಫುಸುಗುಟ್ಟುತ್ತ ಶಬ್ದಮಾಡುತ್ತಿರುವೆ? ನೀನು ನಮ್ಮನ್ನೇಕೆ ಹೆದರಿಸುತ್ತಿರುವೆ? ಈಗ ಈ ಹಾಲಿನ ಬಟ್ಟಲಿನಿಂದ ಹಾಲನ್ನು ಶಾಂತಿಯಿಂದ ಕುಡಿ." ॥208॥ ಒಂದು ಬಟ್ಟಲು ಹೇಗೆ ಸಾಕಾಗುತ್ತದೆ! ಈ ರೀತಿ ಆಲೋಚಿಸಿ, ಒಂದು ದೊಡ್ಡ ಪಾತ್ರೆಯ ತುಂಬ ಹಾಲನ್ನು ತಂದು ಹಾವಿನ ಮುಂದೆ ನಿರ್ಭಯನಾಗಿ ಇಟ್ಟನು. ಭಯವು ಕೇವಲ ಮನಸ್ಸಿನಲ್ಲಿದೆ. ॥209॥ ಹಾಲನ್ನು ಹಾವಿನ ಹತ್ತಿರ ಇಟ್ಟಮೇಲೆ ಅವನು ತನ್ನ ಹಿಂದಿನ ಜಾಗದಲ್ಲಿ ಕುಳಿತನು. ಅದು ದೂರವೂ ಇಲ್ಲದೆ ಹತ್ತಿರವೂ ಇಲ್ಲದೆ ಇತ್ತು. ಅವನ ಮುಖದಲ್ಲಿ ಹಾವಿನ ಬಗ್ಗೆ ಅಚ್ಚರಿ ಇತ್ತು. ॥210॥ ಸರ್ಪದ ಆಗಮನವೇ ಭೀತಿಪ್ರದವಾದುದು. ಎಲ್ಲರೂ ಒಂದೇ

ರೀತಿ ಯೋಚಿಸುವುದಿಲ್ಲ. ಬೇರೆ ಎಲ್ಲರೂ ಭಯಭೀತರಾಗಿದ್ದು ಯಾವರೀತಿ ಅಪಾಯವನ್ನು ತಪ್ಪಿಸಬಹುದೆಂದು ಯೋಚಿಸುತ್ತಿದ್ದರು. ॥211॥ ಅವರು ಹೊರಗೆ ಹೋದರೂ ಅಪಾಯವಿತ್ತು, ಆ ಹಾವು ಮನೆಯ ಒಳಭಾಗಕ್ಕೆ ನುಗ್ಗಿದರೆ ಅದನ್ನು ಹೊರತೆಗೆಯುವುದು ಇನ್ನೂ ಕಷ್ಟವಾಗುತ್ತಿತ್ತು. ಅವರೆಲ್ಲರೂ ನೋಡುತ್ತ ಕುಳಿತರು. ॥212॥ ಇಲ್ಲಿ, ಆ ಸರ್ಪವು ತೃಪ್ತಿಯಾಗುವಷ್ಟು ಹಾಲನ್ನು ಸ್ವೀಕರಿಸಿತು. ಯಾರ ಗಮನಕ್ಕೂ ಬಾರದಂತೆ ಅದು ಹಾಗೆಯೇ ಮಾಯವಾಯಿತು. ಸಕಲರೂ ಆಶ್ಚರ್ಯಚಕಿತರಾದರು. ॥213॥ ಅನಂತರ ಇಡೀ ಕೊಟ್ಟಿಗೆಯನ್ನು ಹುಡುಕಿದರು. ಆದರೆ ಅದರ ಕುರುಹೂ ಇರಲಿಲ್ಲ. ಬಹುತೇಕ ಜನರು ಶಾಂತಚಿತ್ತರಾದರು. ಆದರೆ ನೇವಾಸಕರನು ಮಾತ್ರ ಚಡಪಡಿಸುತ್ತಿದ್ದನು. ॥214॥ ಅದು ಕೊಟ್ಟಿಗೆಯನ್ನು ಪ್ರವೇಶಿಸಿದ ರೀತಿಯನ್ನು ನೋಡಿದ ಹಾಗೆಯೇ ಅದು ಹೊರಗೆ ಹೋದುದನ್ನು ನೋಡಿದ್ದರೆ, ಅವನಿಗೆ ತೃಪ್ತಿಯಾಗುತ್ತಿತ್ತು, ಅದರಿಂದಾಗಿಯೇ ಮನಸ್ಸು ಉದ್ವಿಗ್ನಗೊಂಡಿತು. ॥215॥ ಬಾಳಾನಿಗೆ ಇಬ್ಬರು ಪತ್ನಿಯರು ಮತ್ತು ಚಿಕ್ಕಮಕ್ಕಳಿದ್ದರು. ಕೆಲವು ಸಲ ಅವರು ಸಾಯಿದರ್ಶನಕ್ಕೆಂದು ನೇವಾಸಾದಿಂದ ಬರುತ್ತಿದ್ದರು. ॥216॥ ಬಾಬಾರವರು ಅವರಿಬ್ಬರಿಗೂ ಸೀರೆ ಮತ್ತು ರವಿಕೆ ಕಣಗಳನ್ನು ಕೊಂಡುಕೊಂಡುಆಶೀರ್ವಾದಪೂರ್ವಕವಾಗಿ ಕೊಡುತ್ತಿದ್ದರು. ಹೀಗಿದ್ದ ಭಕ್ತ ಬಾಳಾಜಿಯು. ॥217॥ ಸಚ್ಚರಿತೆಯ ಮಾರ್ಗವು ಬಹಳ ಸರಳ. ಎಲ್ಲಿ ಓದಿದರೂ ಅದು ದ್ವಾರಕಾಮಾಯಿಯಾಗುತ್ತದೆ. ಮತ್ತು ಅಲ್ಲಿ ಖಂಡಿತವಾಗಿಯೂ ಸಾಯಿಯು ಪ್ರಕಟಗೊಳ್ಳುತ್ತಾರೆ. ॥218॥ ಅಲ್ಲಿಯೇ ಗೋದಾವರಿ ನದಿಯ ತೀರಗಳಿಹತ್ತಿರದಲ್ಲೇ ಯಾತ್ರಾಸ್ಥಳವಾದ ಶಿರಡಿಯು ಇದೆ. ಅಲ್ಲಿಯೇ ಸಾಯಿಯನ್ನು ಧುನಿಯ ಸಹಿತ ನೆನೆದೊಡನೆ ಕಷ್ಟಗಳನ್ನೆಲ್ಲ ದೂರಮಾಡುತ್ತಾರೆ. ॥219॥ ಎಲ್ಲಿ ಸಾಯಿಚರಿತ್ರೆಯ ನಿತ್ಯ ಪಾರಾಯಣ ನಡೆಯುವುದೋ, ಅಲ್ಲಿ ಸಾಯಿಯು ಸದಾ ನೆಲಸುತ್ತಾರೆ. ಚರಿತೆಯನ್ನು ಪೂರ್ಣ ಶ್ರದ್ಧೆಯಿಂದ ಮತ್ತೆ ಮತ್ತೆ ಓದಿದಲ್ಲಿ, ಅದು ಅವನನ್ನು ಎಲ್ಲ ರೀತಿಯಲ್ಲಿಯೂ ಪ್ರಸನ್ನಗೊಳಿಸುತ್ತದೆ. ॥220॥ ಸ್ವಾನಂದಘನನಾದ ಸಾಯಿಯನ್ನು ಸ್ಮರಿಸಿದರೆ,ಅವನ ನಾಮವನ್ನು ಅನುದಿನವೂ ಜಪಿಸಿದರೆ, ಇತರೆ ಜಪ, ತಪ ಸಾಧನಗಳಾಗಲಿ, ಧ್ಯಾನ, ಧಾರಣ ಮತ್ತಿತರ ಧ್ಯಾನ ಮಾರ್ಗವಾಗಲೀ ಬೇಕಾಗುವುದಿಲ್ಲ॥221॥ ಸಾಯಿಚರಣಗಳಲ್ಲಿ ಪ್ರೀತಿಯಿಟ್ಟು, ಯಾರು ಸಾಯಿಯ ವಿಭೂತಿಯನ್ನು ನಿತ್ಯವೂ ಸೇವಿಸುತ್ತಾರೋ, ಅವರು ತಾವು ಇಚ್ಛೆಪಟ್ಟಿದ್ದೆಲ್ಲವನ್ನೂ ಪಡೆಯುತ್ತಾರೆ. ॥222॥ ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷವೆಂಬ ನಾಲ್ಕು ಪುರುಷಾರ್ಥಗಳನ್ನೂ ಪಡೆದು ಕೃತಾರ್ಥರಾಗುತ್ತಾರೆ, ಅಷ್ಟೆ ಇವೆಲ್ಲದರ ಗೂಢಾರ್ಥಗಳೂ ಪ್ರಕಟವಾಗುತ್ತದೆ. ಮತ್ತು ಸ್ವಾರ್ಥ ಹಾಗೂ ಪರಮಾರ್ಥ ಇವೆರಡನ್ನೂ ಪಡೆಯುತ್ತಾರೆ. ॥223॥ ಉದಿಯನ್ನು ಧರಿಸುವುದರಿಂದ, ಮಹಾಪಾಪಾದಿ ಪ್ರಬಲ ಪಾಪಗಳೂ, ಸಕಲ ಉಪಪಾತಕಗಳೆಲ್ಲವೂ ಪೂರ್ಣವಾಗಿ ನಿರ್ಮೂಲವಾಗುತ್ತವೆ. ಮತ್ತು ಅವನು ಒಳಗೂ ಹೊರಗೂ ನಿರ್ಮಲನಾಗುತ್ತಾನೆ. ॥224॥ ವಿಭೂತಿಧಾರಣೆಯ ಈ ಮಹಿಮೆಯನ್ನು ಭಕ್ತರು ಬಲ್ಲರು. ಆದರೆ ನಾನು ಶ್ರೋತೃಗಳ ಹಿತಕ್ಕಾಗಿ ಎಲ್ಲವನ್ನೂ ದೀರ್ಘವಾಗಿ ನಿರೂಪಿಸಿದ್ದೇನೆ.

॥225॥ ನಾನು ಈ ವಿವರಣೆಯನ್ನು ದೀರ್ಘವನ್ನಾಗಿ ಮಾಡಿದ್ದೇನೆ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಆ ಮಹಿಮೆಯ ಯಥಾರ್ಥ ನನಗೇನೇ ಗೊತ್ತಿಲ್ಲ. ಆದರೂ ಶ್ರೋತೃಗಳ ಹಿತಕ್ಕಾಗಿ ನಾನು ಎಲ್ಲವನ್ನೂ ಸಂಕಲನೆ ಮಾಡಿ ನಿರೂಪಿಸಿರುತ್ತೇನೆ. ॥226॥ ಆದ್ದರಿಂದ, ಶ್ರೋತೃಗಳಲ್ಲಿ ನನ್ನ ಒಂದೇ ಒಂದು ಪ್ರಾರ್ಥನೆ. ಸಾಯಿ ಚರಣಗಳಲ್ಲಿ ವಂದಿಸಿ ಉದಿಯ ಮಹತ್ವವನ್ನು ನೀವೇ ಅನುಭವಿಸಿ. ಕೊನೆಯಪಕ್ಷ ಇಷ್ಟರಮಟ್ಟಿಗಾದರೂ ನನ್ನ ಮಾತುಗಳನ್ನು ಕೇಳಿರಿ. ॥227॥ ಇಲ್ಲಿ ಯಾವುದೇ ಸಂಶಯಕ್ಕಾಗಲಿ, ತರ್ಕಕ್ಕಾಗಲಿ ಅವಕಾಶವಿಲ್ಲ. ಪೂಜ್ಯವಾದ ಭಾವನೆ ಇರಬೇಕಷ್ಟೆ. ಚಂಚಲ ಮನಸ್ಸಿನ ಅವಶ್ಯಕತೆಯಿಲ್ಲ. ಕೇವಲ ಪರಮ ಶ್ರದ್ಧಾಳುವಾಗಿರಬೇಕಷ್ಟೆ. ॥228॥ ತಾರ್ಕಿಕರು, ವಾದೋನ್ಮುಖರಾದವರು ಮತ್ತು ಶಂಕೆಯುಳ್ಳವರು ಶ್ರದ್ಧಾವಿಹೀನರಾಗಿದ್ದು ಸಂತರ ಸಮ್ಯಕ್ ಜ್ಞಾನವನ್ನು ಸಂಪಾದಿಸಲಾರದವರಾಗಿದ್ದಾರೆ. ಕೇವಲ ಶುದ್ಧಭಕ್ತರು ಮಾತ್ರ ಸಾಯಿಮಹಾತ್ಮೆಯ ಅನುಭವವನ್ನು ಪಡೆಯಬಲ್ಲರು. ॥229॥ ಕಥೆಯಲ್ಲಿ ಏನಾದರೂ ಬಿಟ್ಟುಹೋಗಿದ್ದರೂ ಎಲ್ಲ ಸೇರಿಕೊಂಡಿದ್ದರೂ, ಅದೆಲ್ಲವೂ ಸಾಯಿ ಇಚ್ಛೆಯಿಂದಾದುದು ಎಂದು ವಿಶ್ವಾಸವಿಡಿ ಮತ್ತು ಸಾಯಿ ಸಚ್ಚರಿತೆಯನ್ನು ದೋಷವೆಣಿಸದೆ ಪಠಿಸಿರಿ. ॥230॥ ಈ ರೀತಿಯಲ್ಲಿ ಸಾಯಿ ಪರಮಕರುಣಾ ಮತ್ತು ಪ್ರೇಮಮೂರ್ತಿಯು. ಅವರ ಸಚ್ಚರಿತೆಯನ್ನು ಆಸಕ್ತಿಯಿಂದ ಓದುವವರ ಮನದಲ್ಲಿ ಮೂಡುತ್ತಾರೆ. ಹಾಗಾಗಿ ಅವರ ಸ್ಮರಣೆ ನಿರಂತರವಾಗಿರುವುದು. ॥231॥ ಗೋವಾ ಇರುವುದೆಲ್ಲಿ? ಶಿರಡಿ ಎಲ್ಲಿ? ಅಲ್ಲಿ ಒಂದು ಕಳ್ಳತನ ಯಾವ ರೀತಿ ನಡೆಯಿತೆಂಬುದನ್ನು ಸಾಯಿಯು ಬಾಯಿಬಿಟ್ಟು ಹೇಳಿದರು. ಅದನ್ನು ಕೇಳಿದ ಶ್ರೋತೃಗಳು ಸಂತಸಪಡುತ್ತಾರೆ. ಅದನ್ನು ಮುಂದಿನ ಅಧ್ಯಾಯದಲ್ಲಿ ಹೇಳಿದೆ. ॥232॥ ಆದುದರಿಂದ ಹೇಮಾಡನು ತನ್ನ ಶಿರವನ್ನು ಸಾಯಿಯ ಚರಣಗಳಲ್ಲಿ ಇಟ್ಟು ಮನಃಪೂರ್ವಕವಾಗಿ ಶರಣಾಗಿದ್ದಾನೆ. ಅವನು ಹೇಳುವುದನ್ನು ಶ್ರೋತೃಗಳು ಆದರಪೂರ್ವಕವಾಗಿ ಕೇಳಲು ಸಿದ್ಧರಾಗಿರುವಂತೆ ಅತ್ಯಂತ ವಿನಯದಿಂದ ಪ್ರಾರ್ಥಿಸುತ್ತಾನೆ. ॥233॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಂತಯ ಮತ್ತು ತಪ್ಪುಗ್ರಹಿಕೆಗಳ ನಿವಾರಣೆ ಹಾಗೂ ವಿಭೂತಿ ವೈಭವ" ಎಂಬ ಮೂವತ್ತೈದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಬಾಬಾರವರು ಆಗಾಗ್ಗೆ ಒಬ್ಬ ಎಣ್ಣೆ ವ್ಯಾಪಾರಿಯ (ಕೆಟ್ಟ ಯೋಚನೆಗಳಿಂದ ಕೂಡಿದ ದುಷ್ಟ ವ್ಯಕ್ತಿಯ) ಬಗ್ಗೆ ಹೇಳುತ್ತಿದ್ದರು.
2. ಧರಮ್‌ಸಿಯು ಒಳ್ಳೆಯ ಭೋಜನವನ್ನು ಇಷ್ಟಪಡುತ್ತಿದ್ದನು ಮತ್ತು ಬಾಬಾರವರು ಅವನ ಈ ದೌರ್ಬಲ್ಯದ ಬಗ್ಗೆ ಸೂಚ್ಯವಾಗಿ ಹೇಳುತ್ತಿದ್ದರು.
3. ಈ ಮಹಿಳೆಯು ಜಾತಿಯಲ್ಲಿ ದೇಶಸ್ಥ ಬ್ರಾಹ್ಮಣಳು. ಅವಳ ನಿಜವಾದ ಹೆಸರು ಸುಂದರಬಾಯಿ ಕ್ಷೀರಸಾಗರ. ಆದರೆ ಅವಳು ಯಾವಾಗಲಾದರೂ ಯಾರನ್ನಾದರೂ ಕರೆಯಬೇಕಾದರೆ 'ರಾಧಾಕೃಷ್ಣ' ಎಂದು ಕರೆಯುತ್ತಿದ್ದಳು. ಆದ್ದರಿಂದ ಅವಳಿಗೆ ರಾಧಾಕೃಷ್ಣಬಾಯಿ ಎಂದು ಕರೆಯುತ್ತಿದ್ದರು. ಅವಳು ಸದಾ ತನ್ನ ಹತ್ತಿರ ಒಂದು ಬಾಲಕೃಷ್ಣನ ಮೂರ್ತಿಯನ್ನು (ಹಿತ್ತಾಳೆಯದು) ಇಟ್ಟುಕೊಂಡಿರುತ್ತಿದ್ದಳು. ಅವಳು ಸ್ನಾನ ಮಾಡುವಾಗ ಊಟಮಾಡುವಾಗ, ನಿದ್ರೆ ಮಾಡುವಾಗ ಮತ್ತು ಯಾವಾಗಲೂ ಅದನ್ನು ತನ್ನ ಹತ್ತಿರ ಇಟ್ಟುಕೊಂಡಿರುತ್ತಿದ್ದಳು. ಸಾಯಿಬಾಬಾ ಅವಳನ್ನು 'ರಾಮಕೃಷ್ಣಿ' ಎಂದು ಕರೆಯುತ್ತಿದ್ದರು. ಪ್ರತಿದಿನವೂ ಊಟಕ್ಕೆ ಕಳಿತುಕೊಳ್ಳುವ ಮೊದಲು ಎರಡು ರೊಟ್ಟಿಗಳನ್ನು ಸ್ವಲ್ಪ ಪಲ್ಯ ಮತ್ತಿತರೆ ಪದಾರ್ಥಗಳನ್ನು ಮಧ್ಯಾಹ್ನದ ವೇಳೆ ಅವಳಿಗೆ ಕಳಿಸುತ್ತಿದ್ದರು. ಅವಳು ಎಂದಿಗೂ ಮಸೀದಿಯೊಳಗೆ ಕಾಲಿಡಲಿಲ್ಲ. ಅವಳು ಶಿರಡಿಗೆ ಬಂದಾಗ ಬಾಲ ವಿಧವೆಯಾಗಿದ್ದಳು ಮತ್ತು ಅಲ್ಲಿ ಈ ಸಂತರ ಸೇವೆ ಮಾಡಲು ಉಳಿದುಕೊಂಡಳು. ಅದನ್ನವಳು ಹೃದಯಪೂರ್ವಕವಾಗಿ ಮಾಡಿದಳು. ಅವಳು ಸದಾ ಭಜನೆಗಳನ್ನು ಹಾಡುತ್ತಿದ್ದಳು.
4. ಅವನು ಬಾಬಾರವರ ಅನನ್ಯ ಭಕ್ತ. ಹೆಂಡತಿ, ಮಕ್ಕಳು ಮತ್ತು ಮನೆಯನ್ನು ಬಿಟ್ಟು ಶಿರಡಿಯಲ್ಲಿ ಸಾಯಿ ಸೇವೆಗಾಗಿ ನಿಂತನು.
5. ಸೋರ್ಘಮ್.
6. ಈ ಮಹಿಳೆಯು ಬಹುಶಃ ಮಗನ ಹೆಂಡತಿ ಆಗಿರಬೇಕು. ಏಕೆಂದರೆ ಸಾಮಾನ್ಯವಾಗಿ ಮಗ ಮತ್ತು ಸೊಸೆ ಈ ವಾರ್ಷಿಕವನ್ನು ಆಚರಿಸುತ್ತಾರೆ.
7. ಬ್ರಾಹ್ಮಣನನ್ನು ಕೊಲ್ಲುವುದು, ಮದ್ಯಪಾನ, ಕಳ್ಳತನ ಇತ್ಯಾದಿ.



# ಅಧ್ಯಾಯ – 36

॥ ಅಥ ಶ್ರೀ ಸಾಯಿ ಸಚ್ಚರಿತೆ ॥

## "ಸಾಯಿಯ ಸರ್ವವ್ಯಾಪಕತೆ ಹಾಗೂ ಆಶೀರ್ವಚನ ಸಾಫಲ್ಯತೆ"



ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಈಗ ಹಿಂದಿನ ಅಧ್ಯಾಯವನ್ನು ಉಲ್ಲೇಖಿಸೋಣ. ಅದರಲ್ಲಿ ಒಂದು ಗಮನ ಸೆಳೆಯುವ ಕಳ್ಳತನದ ಕಥೆಯನ್ನು ತಿಳಿಸುವ ಆಶ್ವಾಸನೆ ನೀಡಲಾಗಿತ್ತು. ಪೂರ್ಣ ಗಮನವಿಟ್ಟು ಕೇಳಿರಿ. ॥1॥ ಇದು ಕೇವಲ ಕಥೆಯಲ್ಲ, ಆದರೆ ಸ್ವಾನಂದಜೀವನವೆಂಬ ಪಾನೀಯ. ಅದನ್ನು ಪಾನ ಮಾಡಿದಷ್ಟೂ ತೃಷ್ಣೆಯು ದಾರುಣವಾಗುತ್ತದೆ. ಅದನ್ನು ಉಪಶಮನ ಮಾಡಲು ಮತ್ತೊಂದು ಕಥೆಯು ಇರುತ್ತದೆ. ॥2॥ ಅದನ್ನು ಕೇಳುವುದರಿಂದ ಶ್ರೋತೃಗಳಿಗೆ ಸುಖ ಉಂಟಾಗುತ್ತದೆ. ಅದು ಈ ಸಂಸಾರದ ವ್ಯಥೆಗಳನ್ನು ನಾಶಮಾಡಿ ಸುಖಾವಸ್ಥೆಯನ್ನುಂಟು ಮಾಡುತ್ತದೆ. ॥3॥ ಯಾರು ತಮ್ಮ ಹಿತವನ್ನು ಸಾಧಿಸಲು ಇಚ್ಛಿಸುವರೋ ಅವರು ಸಾಯಿ ಕಥೆಗಳ ನಿರೂಪಣೆಯನ್ನು ಗೌರವದಿಂದ ಕೇಳಲು ಸಿದ್ಧರಾಗಿರಬೇಕು. ॥4॥ ಸಂತರ ಮಹಿಮೆಯು ಅಪಾರ. ಅದನ್ನು ಯಾರೂ ಪೂರ್ಣವಾಗಿ ವರ್ಣಿಸಲು ಸಾಧ್ಯವಿಲ್ಲ. ಆ ಅಧಿಕಾರ ನನಗೂ ಇಲ್ಲ ಎಂಬುದು ನನಗೂ ತಿಳಿದಿದೆ. ॥5॥ ನಿರೂಪಣೆಕಾರನ ಅಹಂಕಾರ ಸಾಕಿಷ್ಟು! ಸಾಯಿಯು ಮಹಾ ಚತುರರು. ಅವರು ತಮ್ಮ ಗುಣಕಥನಕ್ಕಾಗಿ ಬೇರೆ ಯಾರನ್ನಾದರೂ ಕಂಡು ಹಿಡಿಯಬಹುದು. ಅದರಿಂದಾಗಿ ತಮ್ಮ ಭಕ್ತರು ಅದನ್ನು ಕೇಳಬಹುದು. ॥6॥ ಅವರು ನಿಜವಾಗಿಯೂ ಪರಾತ್ಪರ ಸರೋವರದ ಹಂಸ. ಅವರು ಸದಾ ಹಂಸಃ –

ಸೋಹಂ (ತಾನೇ ಬ್ರಹ್ಮ – ಬ್ರಹ್ಮನೇ ತಾನು) ವೃತ್ತಿಯುಳ್ಳವರು. ಆದರೂ ನಿಜವಾಗಿ ಭವದ ಕಡೆ ಉದಾಸರಾಗಿದ್ದವರು. ವಿರಕ್ತರು ಮತ್ತು ಬ್ರಹ್ಮನ, ಮುಕ್ತಿಕೋಪಾಸನೆಯಲ್ಲಿ ಉಲ್ಲಸಿತರಾಗಿ ಅತಿಯಾದ ಸಾಹಸಗಳಲ್ಲಿ ಮನಸ್ಸಿಟ್ಟವರು. ॥7॥ ಯಾರಿಗೆ ಯಾವುದೇ ಹೆಸರಾಗಲೀ, ಜಾಗವಾಗಲೀ ಇಲ್ಲವೋ ಆದರೆ ಅಪರಂಪಾರ ವೈಭವವನ್ನು ಹೊಂದಿರುವರೋ ಅವರು ಕ್ಷಣಮಾತ್ರದಲ್ಲಿ ಕೇವಲ ಕಣ್‌ಸನ್ನೆಯಿಂದ ದರಿದ್ರನನ್ನು ಶ್ರೀಮಂತನನ್ನಾಗಿ ಮಾಡಬಲ್ಲರು. ॥8॥ ಯಾರು ತತ್ವಜ್ಞಾನದ ಅವತಾರವೋ, ಸಾಕ್ಷಿತ್ವದ ಸಾಕ್ಷಾತ್ಕಾರವೇ ಆಗಿರುವರೋ, ಯಾವುದರಲ್ಲೂ ಸಮಾವೇಶಗೊಳ್ಳದೆ ಕೇವಲ ಸಾಕ್ಷಿಯಾಗಿರುವರೋ, ಅವರು ನಾನಾ ವಿಧವಾದ ಪ್ರಸಂಗಗಳನ್ನು ಸೃಷ್ಟಿಸಿ ದೂರದಲ್ಲೇ ಇರುತ್ತಾರೆ. ॥9॥ ಅವರು ಯಾರ ಮೇಲೆ ಕೃಪೆತೋರಿಸುತ್ತಾರೋ ಅವರಿಗೆ ವಿವಿಧ ರೂಪದಲ್ಲಿ ದರ್ಶನ ಕೊಡಲು ಅಘಟಿತ ಘಟನೆಗಳನ್ನು ಸೃಷ್ಟಿಸುತ್ತಾರೆ. ಅಂತಹ ಮಹಾನ್ ಆತ್ಮದ ವೈಭವವನ್ನು ಆಲಿಸಿರಿ. ॥10॥ ಯಾರು ಅವರನ್ನು ಏಕಾಗ್ರತೆಯಿಂದ ಧ್ಯಾನಿಸುವರೋ, ಅಥವಾ ಪ್ರೇಮದಿಂದ ಭಜನೆಗಳನ್ನು ಹಾಡುವರೋ ಅವರಿಗೆ ಎಂದಿಗೂ ಏನೂ ಕೊರತೆಯಾಗುವುದಿಲ್ಲ. ಏಕೆಂದರೆ ಅವರು ಅವನ ಜವಾಬ್ದಾರಿಯನ್ನು ಪೂರ್ಣವಾಗಿ ಹೊರುತ್ತಾರೆ. ॥11॥ ಅವನು ಅವರ ಕಥೆಗಳನ್ನು ಕೇಳಿ ಆನಂದಿಸುತ್ತಾನೆ. ಮತ್ತು ಅನವರತ ನನಗೆ ನೆನಪಿಸುತ್ತಾನೆ. ಏಕೆಂದರೆ ಅವನು ವಾಹಾತ್ತು ಶ್ರೋತೃಗಳನ್ನು ಉಂಟುಮಾಡಲು ನಿಮಿತ್ತ ಮಾತ್ರನಾಗಿ ಭಕ್ತರ ಇಚ್ಛೆಗಳು ಪೂರೈಸಲು ಕಾರಣನಾಗುತ್ತಾನೆ. ॥12॥ ಪರಮಾರ್ಥದ ಪೂರ್ಣ ಅಭಿಮಾನಿಯಾಗಿ, ಪ್ರಪಂಚದ ಎಲ್ಲ ಬಂಧನಗಳನ್ನೂ ತ್ಯಜಿಸಿ, ಸದಾ ಚಕ್ರಪಾಣಿಯಾದ ವಿಷ್ಣುವಿನಲ್ಲಿ ಜೋಡಿಸಲ್ಪಟ್ಟವನು ಅನಂತ ಜೀವಿಗಳನ್ನು ಉದ್ಧರಿಸುತ್ತಾನೆ. ॥13॥ ಯಾರು ಈ ದೇಶ ವಿದೇಶಗಳಲ್ಲಿ ಪೂಜಿಸಲ್ಪಡುತ್ತಾರೋ, ಯಾರಿಗೆ ಭಕ್ತಿಯ ಬಾವುಟವು ವಿಜಯದಿಂದ ಎತ್ತರದಲ್ಲಿ ಹಾರಾಡುತ್ತದೆಯೋ ಅವರು ದೀನ–ದುರ್ಬಲರನ್ನು ಪಾಲಿಸಿ ಅವರೆಲ್ಲರ ಆಶೆಗಳನ್ನೂ ಪೂರೈಸುತ್ತಾರೆ. ॥14॥ ಅದು ಏನೇ ಆಗಿರಲಿ. ಪರಮ ಪವಿತ್ರವಾದ ಸಾಯಿ ಚರಿತ್ರೆಯನ್ನು ಆದರಪೂರ್ವಕವಾಗಿ ಕೇಳಿರಿ. ಕೇಳುವವರ ಕಿವಿಗಳು ಮತ್ತು ವಾಚಕರ ನಾಲಿಗೆ ಎಲ್ಲವೂ ಪಾವನವಾಗುತ್ತವೆ. ॥15॥ ಗೋವಾದಿಂದ ಇಬ್ಬರು ಗೃಹಸ್ಥರು ಸಾಯಿಯ ದರ್ಶನಕ್ಕಾಗಿ ಬಂದರು. ಇಬ್ಬರೂ ಸಾಯಿಚರಣಗಳಲ್ಲಿ ವಿನೀತರಾಗಿ ನಮಿಸಿ ದರ್ಶನದಿಂದ ಆನಂದಿತರಾದರು. ॥16॥ ಇಬ್ಬರೂ ಒಟ್ಟಿಗೆ ಬಂದಿದ್ದರೂ, ಸಾಯಿಯು ಒಬ್ಬರಿಂದ ಮಾತ್ರ ದಕ್ಷಿಣೆಯನ್ನು ಬೇಡಿದರು. "ನನಗೆ ಹದಿನೈದು ರೂಪಾಯಿಗಳನ್ನು ಕೊಡು" ಎಂದರು. ಅದಕ್ಕೆ ಆ ಗೃಹಸ್ಥನು ಆನಂದದಿಂದ ನೀಡಿದನು. ॥17॥ ಅವರು ಮತ್ತೊಬ್ಬ ವ್ಯಕ್ತಿಯಿಂದ ಏನನ್ನೂ ಬೇಡಲಿಲ್ಲ. ಆದರೆ ಅವನು ತಾನಾಗಿಯೇ ಮೂವತ್ತೈದು ರೂಪಾಯಿಗಳನ್ನು ನೀಡಿದನು. ಸಾಯಿಯು ಕೂಡಲೇ ಅದನ್ನು ತೆಗೆದುಕೊಳ್ಳಲು ನಿರಾಕರಿಸಿದರು. ಅವನಿಗೆ ಬಹಳ ಅಚ್ಚರಿಯಾಯಿತು. ॥18॥ ಆ ಸಮಯದಲ್ಲಿ ಮಾಧವರಾವ್‌ನು ಅಲ್ಲೇ ಇದ್ದನು. ಈ ಭೇದಭಾವವನ್ನು ನೋಡಿ ಅವನು ಸಾಯಿಯನ್ನು ಅದರ ಬಗ್ಗೆ

ಕೇಳಿದನು. ಅದನ್ನು ಕೇಳಿರಿ. ॥19॥ "ಬಾಬಾ, ಏಕೆ ಈ ರೀತಿ ಮಾಡಿದಿರಿ? ಇಬ್ಬರು ಸ್ನೇಹಿತರೂ ಒಟ್ಟಿಗೆ ಬಂದಿದ್ದಾರೆ. ನೀವು ಒಬ್ಬನಿಂದ ಮಾತ್ರ ದಕ್ಷಿಣೆ ಬೇಡಿದಿರಿ. ಮತ್ತೊಬ್ಬನು ತಾನಾಗಿಯೇ ಸ್ವಯಂಕೊಟ್ಟುದನ್ನು ಹಿಂತಿರುಗಿಸಿದಿರಿ. ॥20॥ "ಒಬ್ಬ ಸಂತರಿಂದ ಈ ರೀತಿಯ ಭೇದ ಭಾವವು ಏಕೆ? ನೀವಾಗಿಯೇ ಒಬ್ಬನಿಂದ ಬೇಡಿದಿರಿ ಮತ್ತು ಮತ್ತೊಬ್ಬನಿಂದ ತಾನಾಗಿಯೇ ಕೊಟ್ಟುದನ್ನು ಹಿಂತಿರುಗಿಸಿದಿರಿ. ನೀವು ಎರಡನೆಯವನನ್ನು ನಿರಾಶೆಗೊಳಿಸಿದಿರಿ. ॥21॥ "ನೀವು ಸ್ವಲ್ಪ ಹಣದಿಂದ ಸಂತೋಷಪಟ್ಟಿರಿ ಮತ್ತು ಅಧಿಕ ಮೊತ್ತವನ್ನು ತಿರಸ್ಕರಿಸಿದಿರಿ. ನಾನೇನಾದರೂ ನಿಮ್ಮ ಸ್ಥಿತಿಯಲ್ಲಿ ಇದ್ದಿದ್ದರೆ, ಈ ರೀತಿ ವರ್ತಿಸುತ್ತಿರಲಿಲ್ಲ." ॥22॥ "ಶ್ಯಾಮಾ, ನಿನಗೆ ಏನೂ ಗೊತ್ತಾಗುವುದಿಲ್ಲ. ನಾನು ಯಾರಿಂದಲೂ ಏನನ್ನೂ ತೆಗೆದುಕೊಳ್ಳುವುದಿಲ್ಲ. ಈ ಮಸೀದಿ ಮಾಯಿಯು ಅವಳಿಗೆ ಋಣ ಪಟ್ಟಿರುವುದನ್ನು ಕೇಳುತ್ತಾಳೆ. ಕೊಡುವವನು ಋಣಮುಕ್ತನಾಗುತ್ತಾನೆ. ॥23॥ "ನನಗೇನು ಮನೆ ಇದೆಯೇ? ಅಥವಾ ಸಂಸಾರವಿದೆಯೇ? ನನಗೆ ಹಣದ ಆವಶ್ಯಕತೆಯಾದರೂ ಏಕೆ? ನಾನಾದರೋ ಎಲ್ಲ ರೀತಿಯಿಂದಲೂ ಮುಕ್ತನು. ॥24॥ "ಆದರೆ, ಋಣ, ವೈರ ಮತ್ತು ಹತ್ಯೆ ಇವುಗಳನ್ನು ಕಲ್ಪಾಂತ್ಯದವರೆಗೂ ಅನುಭವಿಸಲೇಬೇಕು. ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಜನರು ಸಹಾಯ ಬೇಕೆಂದಾಗ ಹರಕೆ ಹೊತ್ತುಕೊಳ್ಳುತ್ತಾರೆ. ಅವರನ್ನು ಉದ್ಧರಿಸಲು ಪ್ರಯತ್ನಿಸುತ್ತಿರುವ ನನಗೆ ಅದು ತೊಂದರೆಯಾಗುತ್ತದೆ. ॥25॥ "ನೀನು ಅದರ ಬಗ್ಗೆ ಕಾಳಜಿಮಾಡಬೇಡ. ಆ ಕ್ಷಣದಲ್ಲಿ ಮಾತ್ರ ಬೇಡಿಕೋ. ಋಣ ಮುಕ್ತರಾದ ನನ್ನ ಭಕ್ತರನ್ನು ಕಂಡರೆ ನನಗೆ ಯಾವಾಗಲೂ ಇಷ್ಟ. ॥26॥ "ಆರಂಭದಲ್ಲಿ ಅವನು ಬಡವನು. ಅವನು ತನ್ನ ಮೊದಲ ಸಂಬಳವನ್ನು ದೇವರಿಗೆ ಅರ್ಪಿಸುವೆನೆಂದು ಹರಕೆಹೊತ್ತನು. ಅದು ಹದಿನೈದು ರೂಪಾಯಿಗಳು. ಅನಂತರ ಅವನು ಅದನ್ನು ಮರೆತೇಹೋದನು. ॥27॥ "ಅನಂತರ ಹದಿನೈದು ರೂಪಾಯಿಗಳಿಂದ ಮೂವತ್ತು ರೂಪಾಯಿಗಳು. ಅನಂತರ ಮೂವತ್ತು ರೂಪಾಯಿಗಳಿಂದ ಅರವತ್ತು ರೂಪಾಯಿಗಳು ಮತ್ತೆ ನೂರು ರೂಪಾಯಿಗಳು ಆದುವು. ಅವನ ಸಂಬಳವು ಎರಡು ಪಟ್ಟು ಮತ್ತು ನಾಲ್ಕು ಪಟ್ಟು ಹೆಚ್ಚಾದರೂ ಅವನು ತನ್ನ ಹರಕೆಯನ್ನು ಮರೆತೇಬಿಟ್ಟನು. ॥28॥ "ಈ ರೀತಿ ಅವನ ಸಂಬಳ ಏಳುನೂರು ರೂಪಾಯಿಗಳಾದವು. ಅದೃಷ್ಟವಶಾತ್ ಅವನು ಇಲ್ಲಿಗೆ ಬಂದನು. ಆಗ ನಾನು ನನ್ನ ಆ ಹದಿನೈದು ರೂಪಾಯಿಗಳನ್ನು ದಕ್ಷಿಣೆಯ ನೆಪದಲ್ಲಿ ಕೇಳಿದೆನು. ॥29॥ "ಈಗ ಮತ್ತೊಂದು ಕಥೆಯನ್ನು ಕೇಳಿರಿ. ಒಮ್ಮೆ ನಾನು ಸಮುದ್ರದ ದಡದಲ್ಲಿ ತಿರುಗಾಡುತ್ತಿದ್ದೆನು. ಆಗ ಒಂದು ದೊಡ್ಡ ಬಂಗಲೆ ನೋಡಿದೆನು ಮತ್ತು ಅದರ ವರಾಂಡದಲ್ಲಿ ಕುಳಿತುಕೊಂಡೆನು. ॥30॥ ಆ ಬಂಗಲೆಯ ಮಾಲೀಕ ಒಬ್ಬ ಬ್ರಾಹ್ಮಣ. ಅವನು ಕುಲೀನನೂ ಧನಿಕನೂ ಆಗಿದ್ದನು. ಅವನು ನನ್ನನ್ನು ಪ್ರೀತಿಯಿಂದ ಸ್ವಾಗತಿಸಿದನು. ಮತ್ತು ಯಥೇಚ್ಛವಾಗಿ ಅನ್ನ ಮತ್ತು ನೀರನ್ನು ಕೊಟ್ಟನು. ॥31॥ "ಅಲ್ಲಿ ಒಂದು ಸುಂದರವಾದ ಸ್ವಚ್ಛ, ನಿಗದಿಪಡಿಸಿದ ಜಾಗದಲ್ಲಿ ಒಂದು ಸರಿಸುವ ಬಾಗಿಲಿದ್ದು, ಅವನು ನನಗೆ ಮಲಗಲು ಜಾಗ ಕೊಟ್ಟನು. ನಾನು ನಿದ್ರೆಗೆ ಜಾರಿದೆನು. ॥32॥ "ನಾನು

ಗಾಢವಾದ ನಿದ್ದೆಯಲ್ಲಿದ್ದುದನ್ನು ನೋಡಿ, ಯಾರೋ ಒಬ್ಬನು ಕಲ್ಲನ್ನು ತೆಗೆದು, ಗೋಡೆಯನ್ನು ಒಡೆದು, ನನ್ನ ಅರಿವಿಗೆ ಬರದಂತೆ ನನ್ನ ಜೇಬನ್ನು ಕತ್ತರಿಸಿದನು. ನನ್ನಲ್ಲಿದ್ದ ಸಮಸ್ತವನ್ನೂ ಅಪಹರಿಸಿ ಬಿಟ್ಟಿದ್ದನು. ॥33॥ "ನಾನು ಬೆಳಗ್ಗೆ ಎಚ್ಚರಗೊಂಡಾಗ, ಏನು ನಡೆಯಿತೆಂಬುದನ್ನು ಸ್ಪಷ್ಟವಾಗಿ ಗ್ರಹಿಸಿದೆನು. ಮೂವತ್ತುಸಾವಿರ ರೂಪಾಯಿಗಳು ಕಳ್ಳತನವಾಗಿದ್ದುದಕ್ಕೆ ಅಳು ಬಂದಿತು. ಮನಸ್ಸು ಅತ್ಯಂತ ಕಳವಳಗೊಂಡಿತು. ॥34॥ "ಹಣವು ಬ್ಯಾಂಕ್‌ನ ನೋಟುಗಳಾಗಿದ್ದವು. ನನಗೆ ಯಾವಾಗ ಈ ನಷ್ಟವುಂಟಾಯಿತೋ ಆಗ ನನ್ನ ಹೃದಯವು ಧಸಕ್ಕೆಂದಿತು. ಆ ಬ್ರಾಹ್ಮಣನು ನನ್ನನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದನು. ॥35॥ "ನಾನು ಅತ್ಯಂತ ದುಃಖಿತನಾಗಿದ್ದು, ಅನ್ನ ನೀರು ಕೂಡಾ ಸೇವಿಸಲಾರದೆ ಹೋದೆನು. ಹದಿನೈದು ದಿನಗಳ ಕಾಲ ನಾನು ವರಾಂಡದಲ್ಲಿ ಒಂದೇ ಜಾಗದಲ್ಲಿ ಕುಳಿತಿದ್ದೆನು. ॥36॥ "ಹದಿನೈದು ದಿನಗಳಾದ ಮೇಲೆ, ಒಬ್ಬ ಅಲೆಮಾರಿ ಫಕೀರನು ವೇದಾಂತ ವಿಷಯದ ಮೇಲೆ ಉರ್ದು ದೋಹೆ (ದ್ವಿಪದಿ)ಗಳನ್ನು ಹಾಡುತ್ತ ಆಕಸ್ಮಾತ್ತಾಗಿ ಅಲ್ಲಿ ಕಾಣಿಸಿಕೊಂಡನು. ಮತ್ತು ನಾನು ಅಳುತ್ತಿದ್ದುದನ್ನು ನೋಡಿದನು. ॥37॥ "ಅವನು ನನ್ನ ದುಃಖಕ್ಕೆ ಕಾರಣವನ್ನು ಕೇಳಿದಮೇಲೆ, ನಾನು ಇಡೀ ಕಥೆಯನ್ನು ಹೇಳಿದೆ. ಅವನು ನನಗೆ ಹೇಳಿದನು, ನನ್ನ ಕಷ್ಟವು ಪರಿಹಾರವಾಗಬೇಕಾದರೆ ನಾನು ಅವನು ಹೇಳಿದ ರೀತಿ ನಡೆಯಬೇಕು ಎಂದು. ॥38॥ "ಅವನು ನನಗೆ ಫಕೀರನೊಬ್ಬನ ಹೆಸರು ಮತ್ತು ವಿಳಾಸವನ್ನು ಕೊಡುವೆನೆಂದು ಹೇಳಿದನು. ನಾನಾದರೋ ಅವನಿಗೆ ಶರಣಾಗತನಾದರೆ, ಅವನು ನನ್ನ ಹಣವನ್ನು ಹಿಂದಕ್ಕೆ ತೆಗೆಸಿಕೊಡುವುದಾಗಿ ಹೇಳಿದನು. ॥39॥ "ಆದರೆ ಅವನು ನನಗೆ ಒಂದು ವ್ರತವನ್ನು ಮಾಡಲು ಹೇಳಿದನು. ನಾಣುಕಳೆದುಹೋಗಿದ್ದು ಪ್ರಾಪ್ತಿಯಾಗುವವರೆಗೆ, ನನಗೆ ಅತ್ಯಂತ ಇಷ್ಟವಾದ ಆಹಾರವನ್ನು ತಿನ್ನಬಾರದು, ಅದರಿಂದಾಗಿ ನನ್ನ ಗುರಿಯು ಸಾಧಿಸುತ್ತದೆ." ॥40॥ "ನಾನು ಫಕೀರನ ಸಲಹೆಯ ಪ್ರಕಾರ ನಡೆದುಕೊಂಡೆ. ನನ್ನ ಹಣ ಹಿಂದಕ್ಕೆ ಸಿಕ್ಕಿತು. ಅನಂತರ ನಾನು ವಾಡಾ ಬಿಟ್ಟು ಮತ್ತೆ ಸಮುದ್ರದ ತೀರದ ಹತ್ತಿರ ಹೋದೆ. ॥41॥ "ಈ ರೀತಿ ನಡೆಯುತ್ತ, ನಾನು ಒಂದು ನಾವೆಯನ್ನು ನೋಡಿದೆ. ಆದರೆ ಅದರೊಳಗೆ ಬಹಳ ಗುಂಪು ಇದ್ದುದರಿಂದ ಒಳಗೆ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಆಗ ಆ ಒಳ್ಳೆಯ ಸ್ವಭಾವದ ಶಿಪಾಯಿಯು ನನಗೋಸ್ಕರ ನಾವೆಯಲ್ಲಿ ಜಾಗ ಹಿಡಿದುಕೊಟ್ಟನು. ॥42॥ "ಸುದೈವವಶಾತ್ ನಾವೆಯು ಮತ್ತೊಂದು ತೀರವನ್ನು ತಲುಪಿತು. ಯಾವಾಗ ನಾನು ರೈಲುಗಾಡಿ ಹಿಡಿದು ಮನೆಗೆ ಬಂದೆನೋ, ಆಗ ನಾನು ಮಸೀದಿಮಾಯಿಯನ್ನು ನೋಡಿದೆನು." ॥43॥ ಇಲ್ಲಿಗೆ ಬಾಬಾರವರ ಕಥೆ ಮುಗಿಯಿತು. ಅನಂತರ ಶಾಮಾನಿಗೆ ಅತಿಥಿಗಳನ್ನು ಮನೆಗೆ ಕರೆದುಕೊಂಡು ಹೋಗಿ ಊಟಮಾಡಿಸಲು ನಿರ್ದೇಶನ ನೀಡಲಾಯಿತು. ॥44॥ ಅದು ಏನೇ ಆಗಿರಲಿ. ಅನಂತರ ಊಟದೆಲೆಯಮೇಲೆ ಊಟ ಬಡಿಸಲಾಯಿತು. ಮಾಧವರಾವ್‌ನು ಬಹಳಾತುರನಾಗಿದ್ದನು. ಅತಿಥಿಗಳನ್ನು ಆ ಕಥೆಯ ಅರ್ಥದ ಬಗ್ಗೆ ಕೇಳಿದನು. ॥45॥ "ನಿಜವಾಗಿಯೂ, ಸಾಯಿಬಾಬಾರವರು ಇಲ್ಲಿಯೇ ಅಖಂಡವಾಗಿ ಇದ್ದರು. ಅಲ್ಲಿ

ಸಮುದ್ರವಿಲ್ಲ, ನಾವೆಯೂ ಇಲ್ಲ, ನಾವಿಕನೂ ಇಲ್ಲ. ಅದು ಅವರಿಗೆ ಚೆನ್ನಾಗಿ ತಿಳಿದಿತ್ತು. ॥46॥ "ಆ ಬ್ರಾಹ್ಮಣನು ಯಾರು? ಆ ಭವ್ಯ ಬಂಗಲೆಯು ಯಾವುದು? ಅವನು ತನ್ನ ಇಡೀ ಜೀವಿತವನ್ನು ಮರದ ಕೆಳಗೆ ಕಳೆದಿದ್ದಾನೆ. ಅಷ್ಟು ದೊಡ್ಡ ಮೊತ್ತದ ಹಣವು ಅವನಿಗೆ ಹೇಗೆ ಸಿಕ್ಕಿತು? ಅನಂತರ ಕಳ್ಳನು ಕದ್ದುಕೊಂಡು ಹೋಗಿದ್ದು ಹೇಗೆ? ॥47॥ "ಅವರು ಈ ಕಥೆಯನ್ನು ನೀನು ಬಂದ ಮೇಲೆ ಮಾತ್ರವೇ ಹೇಳತೊಡಗಿದ್ದುದು. ಅವರು ನಿನಗೆ ಈ ರೀತಿ ನಿನ್ನ ಪೂರ್ವಕಥೆಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಹೇಳಿದರು." ॥48॥ ಅನಂತರ ಅತಿಥಿಗಳು ಕಣ್ಣೀರಿನಿಂದ ಗದ್ಗದಿತರಾಗಿ ಉತ್ತರ ನೀಡಿದರು. "ಸಾಯಿಯು ಪರಬ್ರಹ್ಮನ ಅವತಾರ, ಮತ್ತು ದ್ವಂದ್ವ ರಹಿತರು. ಅವರು ಅನಂತ ಮತ್ತು ಸರ್ವವ್ಯಾಪಿ. ॥49॥ "ಅವರು ಈಗ ಏನು ಹೇಳಿದರೋ, ಅದು ಅಕ್ಷರಶಃ ನಮ್ಮ ಕಥೆಯೇ. ಈ ರುಚಿಕರವಾದ ಭೋಜನವಾದ ಕೂಡಲೇ ನಾವು ಎಲ್ಲವನ್ನೂ ವಿವರವಾಗಿ ಹೇಳುತ್ತೇವೆ." ॥50॥ ಬಾಬಾರವರು ಏನೇನು ಹೇಳಿದರೋ ಅದೆಲ್ಲವೂ ನಿಜವಾಗಿಯೂ ವಿವರವಾಗಿಯೇ ನಡೆದಿದೆ. ನಮ್ಮ ಪರಿಚಯವೇ ಇಲ್ಲದೆ ಅವರಿಗೆ ಅದು ಹೇಗೆ ತಿಳಿಯಿತು? ಆದ್ದರಿಂದ ಇದು ನಮ್ಮ ಊಹೆಗೂ ಮೀರಿದೆ." ॥51॥ ಅದು ಹಾಗಿರಲಿ, ಅವರೆಲ್ಲರೂ ಅಲ್ಲಿ ಊಟವಾದ ಮೇಲೆ ತಾಂಬೂಲವನ್ನು ಸವಿಯುತ್ತ ಅಲ್ಲಿಯೇ ಇದ್ದ ಮಾಧವರಾವ್‌ನ ಜೊತೆ ಕಥೆಯನ್ನು ನಿರೂಪಿಸಲು ಪ್ರಾರಂಭಿಸಿದರು. ॥52॥ ಅವರಿಬ್ಬರಲ್ಲಿ ಒಬ್ಬನು ಹೇಳಿದನು. "ನನ್ನ ಮೂಲ ಸ್ಥಳವೇ ಘಟ್ಟದ ಜಾಗ. ಆದರೆ, ನಾನು ಸಮುದ್ರ ತೀರದ ಊರಿನಲ್ಲಿ ಅನ್ನೋದಕಕ್ಕಾಗಿ ಜೀವಿಸಬೇಕಾಗಿ ಬಂದಿತು. ॥53॥ "ಆದ್ದರಿಂದ ನಾನು ಗೋವಾಗೆ ಹೋದೆನು. ಅಲ್ಲಿ ಒಂದು ನೌಕರಿ ಹಿಡಿಯಲು ಆಲೋಚಿಸಿದೆನು. ಆ ಉದ್ದೇಶಕ್ಕಾಗಿ ನಾನು ದತ್ತ ಭಗವಾನರನ್ನು ಪ್ರಾರ್ಥಿಸುತ್ತ ಪೂಜಿಸಲು ಪ್ರಾರಂಭಿಸಿದೆನು. ಅತ್ಯಂತ ಆದರದಿಂದ ಅದಕ್ಕಾಗಿ ಒಂದು ಹರಕೆಯನ್ನು ಹೊತ್ತೆನು. ॥54॥ "ನಾನು ಹೇಳಿದೆನು. ಓ ದೇವರೇ, ಕುಟುಂಬ ರಕ್ಷಣೆಗಾಗಿ ನನಗೆ ಒಂದು ನೌಕರಿಯು ಬೇಕಾಗಿದೆ. ಆದ್ದರಿಂದ ಕೃಪೆದೋರಿ ನನಗೆ ಒಂದು ನೌಕರಿ ಕೊಡಿಸು. ನಾನು ನಿನ್ನ ಚರಣಗಳಲ್ಲಿ ನಮಸ್ಕರಿಸುತ್ತೇನೆ. ॥55॥ "ಅಲ್ಪ ಸಮಯದಲ್ಲೇನಾದರೂ ನಿನ್ನ ಮಾತನ್ನು ಉಳಿಸಿಕೊಂಡರೆ, ನಾನು ನನ್ನ ಮೊದಲ ತಿಂಗಳ ಸಂಪಾದನೆ ಎಲ್ಲವನ್ನೂ ನಿನಗೆ ಅರ್ಪಿಸುತ್ತೇನೆ. ॥56॥ "ಅದೃಷ್ಟವಶಾತ್ ದತ್ತ ಭಗವಾನನು ನನ್ನ ಮೇಲೆ ಪ್ರಸನ್ನಚಿತ್ತನಾದನು. ಮತ್ತು ಅಲ್ಪ ಸಮಯದಲ್ಲೇ ನನ್ನ ಪ್ರಾರ್ಥನೆಯು ನೆರವೇರಿತು. ನನಗೆ ಆರಂಭದಲ್ಲಿ ತಿಂಗಳಿಗೆ ಹದಿನೈದು ರೂಪಾಯಿ ಸಂಬಳ ದೊರೆಯಿತು. ॥57॥ ಅನಂತರ, ಸಾಯಿಬಾಬಾರವರು ವರ್ಣಿಸಿದ ಹಾಗೆ ನನಗೆ ಪದೋನ್ನತಿಗಳು ದೊರೆತವು. ಆದರೆ ನಾನು ಹರಕೆಯ ವಿಚಾರವನ್ನು ಪೂರ್ಣವಾಗಿ ಮರೆತೇಹೋದೆನು. ಬಾಬಾರವರು ನನಗೆ ಈ ರೀತಿ ಅದನ್ನು ನೆನಪಿಸಿಕೊಟ್ಟರು. ॥58॥ "ದಕ್ಷಿಣೆಯನ್ನು ತೆಗೆದುಕೊಂಡರೆಂದು ಕೆಲವರು ಅಂದುಕೊಳ್ಳಬಹುದು. ಆದರೆ ಅದು ದಕ್ಷಿಣೆಯಲ್ಲ, ಆದರೆ ಋಣದ ಪಾವತಿಯಾಗಿತ್ತು. ಈ ನೆಪದಲ್ಲಿ ಅವರು ನನಗೆ ಬಹಳ ಹಳೆಯ ಹರಕೆಯೊಂದನ್ನು ನೆನಪಿಸಿಕೊಟ್ಟರು. ॥59॥

ಇದರ ತಾತ್ಪರ್ಯವೆಂದರೆ ಸಾಯಿಯವರು ದ್ರವ್ಯವನ್ನು ಯಾಚಿಸಲಿಲ್ಲ, ಮತ್ತು ತಮ್ಮ ಭಕ್ತರನ್ನೂ ಯಾಚಿಸಲು ಬಿಡಲಿಲ್ಲ. ಅವರು ಇಂದಿಗೂ ಅರ್ಥ (ಹಣ)ವನ್ನು ಅನರ್ಥವೆಂದೇ ಭಾವಿಸುತ್ತಿದ್ದರು ಮತ್ತು ಎಂದಿಗೂ ಅವರ ಭಕ್ತರು ಅದರ ದುರಾಶೆಪಡಲು ಬಿಡುತ್ತಿರಲಿಲ್ಲ. ॥60॥ ಮ್ಹಾಳಸಾಪತಿಯಂತಹ ಭಕ್ತರು, ಸದಾ ಸಾಯಿಚರಣಗಳಲ್ಲಿ ಅನುರಕ್ತರಾಗಿದ್ದವರು, ಬಹಳ ಕಷ್ಟದಿಂದ ಸಂಸಾರ ನಡೆಸುತ್ತಿದ್ದವರು, ಅವರಿಗೂ ಲವಲೇಶವಾದರೂ ಹಣವನ್ನು ಬಯಸಲು ಬಿಡಲಿಲ್ಲ. ॥61॥ ಸ್ವಯಂ ಸಾಯಿಯವರೇ ಅನೇಕ ಸಲ ದಕ್ಷಿಣೆಯ ರೂಪದಲ್ಲಿ ಬಂದ ಹಣವನ್ನು ಅನೇಕರಿಗೆ ಹಂಚುತ್ತಿದ್ದರು. ಆದರೆ ಅವರು ಸದಾ ಕಷ್ಟದಲ್ಲಿರುವವರಿಗೆ ಒಂದು ನಾಣ್ಯವನ್ನೂ ಕೊಡುತ್ತಿರಲಿಲ್ಲ. ॥62॥ ಮ್ಹಾಳಸಾಪತಿಯೂ ಒಬ್ಬ ಆತ್ಮಗೌರವವುಳ್ಳ ವ್ಯಕ್ತಿಯಾಗಿದ್ದನು. ಸಾಯಿಯು ಅಷ್ಟು ಉದಾರವಾಗಿದ್ದರೂ, ಅವನು ಎಂದಿಗೂ ತನ್ನ ಕರವೊಡ್ಡಿ ಕೇಳುತ್ತಿರಲಿಲ್ಲ. ॥63॥ ಅವನ ಆರ್ಥಿಕ ಸ್ಥಿತಿಯು ಅಷ್ಟು ಬಿಗಡಾಯಿಸಿದ್ದರೂ ಸಹ ಅವನು ಅತ್ಯಂತ ವಿರಕ್ತನಾಗಿದ್ದನು. ಅವನು ಸದಾ ಬಡತನದ ಕಷ್ಟಗಳನ್ನು ಸಹಿಸುತ್ತ ಅಲ್ಪದರಲ್ಲೇ ಅತ್ಯಧಿಕ ಸಂತುಷ್ಟನಾಗಿದ್ದನು. ॥64॥ ಒಮ್ಮೆ, ಒಬ್ಬ ದಯಾಳು ವ್ಯಾಪಾರಿ, ಹಂಸರಾಜ್ ಎಂಬುವನು ಮ್ಹಾಳಸಾಪತಿಗೆ ಏನಾದರೂ ಕೊಡಬೇಕೆಂದು ಮನದಲ್ಲಿಯೇ ವಿಚಾರಮಾಡಿದನು. ॥65॥ ಅವನ ಬಡತನದ ಸ್ಥಿತಿಯನ್ನು ನೋಡಿ, ಅವನಿಗೆ ಸ್ವಾಭಾವಿಕವಾಗಿಯೇ ತನ್ನ ಕೈಲಾದಷ್ಟು ಉಪಕಾರ ಮಾಡಬೇಕೆಂಬ ಸುವಿಚಾರವು ಮನಸ್ಸಿನಲ್ಲಿ ಹುಟ್ಟಿತು. ॥66॥ ಅವನ ಅವಸ್ಥೆಯು ಈ ರೀತಿ ಇದ್ದರೂ, ಯಾರಾದರೂ ಏನಾದರೂ ಕೊಡಲು ಯತ್ನಿಸಿದರೂ ಸಾಯಿನಾಥರು ಒಪ್ಪಿಗೆ ನೀಡುತ್ತಿರಲಿಲ್ಲ. ಏಕೆಂದರೆ ದ್ರವ್ಯದ ಬಗ್ಗೆ ಅವರಿಗೆ ಉದಾಸ ಭಾವನೆಯಿತ್ತು. ॥67॥ ಆದ್ದರಿಂದ, ಆ ವ್ಯಾಪಾರಿಯು ಏನು ಮಾಡಿದ ಎಂಬುದನ್ನು ನೋಡಿ! ಆ ಭಕ್ತನ ಬಗ್ಗೆ ಮನಸ್ಸು ಕರಗಿ, ಅವರಿಬ್ಬರೂ (ಸಾಯಿ) ದರ್ಬಾರಿನಲ್ಲಿದ್ದಾಗ ಅವನು ಸ್ವಲ್ಪ ಹಣವನ್ನು ಅವನ (ಮ್ಹಾಳಸಾಪತಿ) ಕೈಗಳಲ್ಲಿ ತುರುಕಿದನು. ॥68॥ ಅತ್ಯಂತ ವಿನೀತನಾಗಿ, ಮ್ಹಾಳಸಾಪತಿಯು ಅದನ್ನು ಹಿಂತಿರುಗಿಸಿ, ಈ ರೀತಿ ಹೇಳಿದನು, "ಸಾಯಿಯ ಅನುಮತಿಯಿಲ್ಲದೆ ನಾನು ಏನನ್ನೂ ಸ್ವೀಕರಿಸುವುದಿಲ್ಲ." ॥69॥ ಅವನು ಹಣದ ಪೂಜಾರಿಯಾಗಿರಲಿಲ್ಲ. ಅವನು ಕೇವಲ ಪಾರಮಾರ್ಥವನ್ನು ಬಯಸಿದ್ದವನು. ಕಾಯಾ, ವಾಚಾ ಸಾಯಿಯ ಚರಣಗಳಲ್ಲಿ ಶರಣಾಗಿದ್ದನು. ಅವನ ಮನಸ್ಸು ನಿಸ್ವಾರ್ಥತೆ ಮತ್ತು ಪ್ರೇಮದಿಂದ ತುಂಬಿತ್ತು. ॥70॥ ಹಂಸರಾಜನು ಸಾಯಿಯಲ್ಲಿ ವಿನಂತಿಸಿಕೊಂಡನು. ಆದರೆ ಸಾಯಿಯು ಒಂದು ನಾಣ್ಯವನ್ನೂ ಮುಟ್ಟಲಿಲ್ಲ. ಮತ್ತು ಹೇಳಿದರು, "ನನ್ನ ಭಕ್ತರೂ ಸಹ ದ್ರವ್ಯಕ್ಕೆ ಆಸೆಪಡುವವರಲ್ಲ. ಅವರು ಹಣದ ಆಡಂಬರಕ್ಕಾಗಲೀ, ವೈಭವಕ್ಕಾಗಲೀ, ಬಲಿಯಾಗುವಂತಹವರಲ್ಲ." ॥71॥ ಈಗ ಎರಡನೆಯ ಅತಿಥಿಯು ಹೇಳಿದನು, "ಈಗ ನಾನೂ ಸಹ ಎಲ್ಲ ವಿಷಯವನ್ನೂ ಅರ್ಥಮಾಡಿಕೊಂಡೆ. ಕೇಳಿ, ನಾನು ಸಮಗ್ರ ಕಥೆಯನ್ನು ಹೇಳುತ್ತೇನೆ. ನೀವದನ್ನು ಕೇಳಿದರೆ ಉಲ್ಲಾಸಹೊಂದುವಿರಿ. ॥72॥ "ನನ್ನ ಅಡಿಗೆಯವನು, ಮೂವತ್ತೈದು ವರ್ಷಕಾಲ ಅತ್ಯಂತ ಪ್ರಾಮಾಣಿಕನಾಗಿ, ನಿಷ್ಠಾವಂತನಾಗಿ ಸೇವೆ ಸಲ್ಲಿಸಿದವನು, ದುರ್ದೈವವಶಾತ್

ಬುದ್ಧಿಭ್ರಂಶನಾಗಿ ನನ್ನ ಉಳಿಕೆ ಹಣವನ್ನು ಕದ್ದನು. ॥73॥ "ನನ್ನ ಮನೆಯಲ್ಲಿ ಒಂದು ಗೋಡೆಯಲ್ಲಿ ಒಂದು ಮರದ ಕಪಾಟು ಇತ್ತು, ಕಳ್ಳತನದಿಂದ ಒಂದು ಕಲ್ಲನ್ನು ಪಕ್ಕಕ್ಕೆ ಸರಿಸಿ ಅದರಲ್ಲಿ ಒಂದು ಕಿಂಡಿಯನ್ನು ಉಂಟುಮಾಡಿದನು. ಅದು ಯಾರಿಗೂ ತಿಳಿಯಲಿಲ್ಲ. ॥74॥ "ಈ ಹಿಂದೆ ಬಾಬಾರವರು ಉಲ್ಲೇಖಿಸಿದ ಕಪಾಟಿಗೆ ಒಂದು ಕಿಂಡಿಯನ್ನು ಮಾಡಿದ್ದನು. ಅದಕ್ಕಾಗಿ ಗೋಡೆಯಿಂದ ಕಲ್ಲುಗಳನ್ನು ತೆಗೆದಿದ್ದನು. ಆಗ ಎಲ್ಲರೂ ಗಾಢ ನಿದ್ರೆಯಲ್ಲಿದ್ದರು. ॥75॥ "ಮತ್ತು ಬಾಬಾರವರು ಮುಂದೆ ಹೇಳಿದಂತೆ, ಅವನು ಬ್ಯಾಂಕಿನ ನೋಟಿನ ರೂಪದಲ್ಲಿದ್ದ ನನ್ನ ಹಣವೆಲ್ಲವನ್ನೂ ತೆಗೆದುಕೊಂಡು ಹೋದನು. ಇದೆಲ್ಲವೂ ಸತ್ಯವೇ ಆಗಿತ್ತು. ॥76॥ "ಅದು ಸರಿಯಾಗಿ ಮೂವತ್ತು ಸಾವಿರ ರೂಪಾಯಿಗಳಾಗಿದ್ದವು. ಬಾಬಾರವರು ಅದು ಹೇಗೆ ಅಷ್ಟು ಸರಿಯಾಗಿ ಹೇಳಿದರೆಂಬುದು ಗೊತ್ತಿಲ್ಲ. ಅದೆಲ್ಲವೂ ನಾನು ಶ್ರಮವಹಿಸಿ ಮಾಡಿದ ಸಂಪಾದನೆಯಾಗಿತ್ತು. ಅದಕ್ಕಾಗಿ ನಾನು ಹಗಲು ರಾತ್ರಿ ಅಳುತ್ತಿದ್ದೆನು. ॥77॥ "ನನ್ನ ಶೋಧನೆಯು ನಿಷ್ಫಲವಾಯಿತು. ನನಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಒಂದು ಹದಿನೈದು ದಿನಗಳು ನಾನು ಚಿಂತೆಯ ಸುಳಿಯಲ್ಲಿ ಸಿಲುಕಿದ್ದೆನು. ನಾನು ನಿರ್ಗತಿಕನಾಗಿಬಿಟ್ಟಿದ್ದೆನು. ॥78॥ "ಒಂದು ದಿವಸ, ನಾನು ವರಾಂಡದಲ್ಲಿ ಅತ್ಯಂತ ಖಿನ್ನನಾಗಿ ಬೇಸರದಿಂದ ಕುಳಿತಿರುವಾಗ ಒಬ್ಬ ಫಕೀರನು ಆಧ್ಯಾತ್ಮಿಕ ದೋಹೆ (ದ್ವಿಪದಿ)ಗಳನ್ನು ಹಾಡುತ್ತ ಹೋಗುತ್ತಿದ್ದನು. ॥79॥ "ನಾನು ಖಿನ್ನವದನನಾಗಿ, ದುಃಖಿತನಾಗಿದ್ದುದನ್ನು ನೋಡಿ ಆ ಫಕೀರನು ನನ್ನ ದುಃಖಕ್ಕೆ ಕಾರಣ ಕೇಳಿದನು. ನಾನು ಅವನಿಗೆ ನಡೆದ ಕಥೆಯನ್ನೆಲ್ಲ ವಿವರವಾಗಿ ಹೇಳಿದೆನು. ಅವನು ಅದರ ನಿವಾರಣೋಪಾಯವನ್ನು ನನಗೆ ಹೇಳಿದನು. ॥80॥ "ಕೋಪರಗಾಂವ ತಾಲೂಕಿನಲ್ಲಿ (ಹಿಂದೆ ರಾಹತಾದಲ್ಲಿ) ಶಿರಡಿಯೆಂಬ ಹಳ್ಳಿಯಿದೆ. ಅಲ್ಲಿ ಸಾಯಿ ಎಂಬ ಒಬ್ಬ ಅವಲಿಯ ವಾಸವಾಗಿದ್ದಾನೆ. ಅವನಿಗೆ ಒಂದು ಹರಕೆಹೊತ್ತುಕೋ. ॥81॥ "ನಿನಗೆ ಬಹಳವಾಗಿ ರುಚಿಸುವ ಒಂದು ವಸ್ತುವನ್ನು ತ್ಯಜಿಸು. ಅವನಿಗೆ ಮನಸಿನಲ್ಲಿಯೇ ಸತ್ಯವಾಗಿ ಹೇಳು. "ನಾನು ನಿನ್ನ ದರ್ಶನವಾಗುವವರೆಗೆ ಆಹಾರವನ್ನು ವರ್ಜಿಸುತ್ತೇನೆ." ॥82॥ "ಫಕೀರನು ಇದನ್ನು ನನಗೆ ಹೇಳಿದಕೂಡಲೇ ನಾನು ಆ ಕ್ಷಣದಿಂದಲೇ ಅನ್ನವನ್ನು ವರ್ಜಿಸಿದೆ ಮತ್ತು ಹೇಳಿದೆನು, "ಬಾಬಾ, ನನ್ನ ದ್ರವ್ಯವು ಸಿಗುವವರೆಗೆ ಮತ್ತು ನಿನ್ನ ದರ್ಶನವಾಗುವವರೆಗೆ ನಾನು ಅನ್ನವನ್ನು ಸೇವಿಸುವುದಿಲ್ಲ." ॥83॥ "ಒಂದು ಹದಿನೈದು ದಿನಗಳು ಕಳೆಯಿತಷ್ಟೆ. ಆ ಅಡಿಗೆಯವನ ಮನಸ್ಸಿಗೆ ಏನು ಬಂದಿತೋ ತಿಳಿಯದು ಅವನು ತಾನಾಗಿಯೇ ಬಂದು ನನ್ನ ಹಣವನ್ನೆಲ್ಲ ಹಿಂತಿರುಗಿಸಿದನು. ॥84॥ ಅವನು ಹೇಳಿದನು, "ನನಗೆ ನನ್ನ ಬುದ್ಧಿ ಹೊರಟು ಹೋಗಿತ್ತು, ಹಾಗಾಗಿ ಈ ರೀತಿಯ ಕೃತ್ಯವನ್ನು ಮಾಡಿದೆನು. ಈಗ ನಾನು ನನ್ನ ತಲೆಯನ್ನು ನಿಮ್ಮ ಪಾದಗಳಲ್ಲಿಟ್ಟಿರುವೆನು. ದಯಮಾಡಿ, 'ನಾನು ಕ್ಷಮಿಸಿದ್ದೇನೆ' ಎಂದು ಹೇಳಿ." ॥85॥ "ಅದು ಏನಾದರೂ ಆಗಲಿ. ಅನಂತರ ಎಲ್ಲವೂ ಒಳ್ಳೆಯದಾಯಿತು. ನನಗೆ 'ಸಾಯಿ ದರ್ಶನ' ಮಾಡುವ ಉತ್ಕಟವಾದ ಇಚ್ಛೆಯುಂಟಾಯಿತು. ಅದು ಈ ದಿನ ನೆರವೇರಿತು.

ಈ ಭಾಗ್ಯದಿಂದ ನಾನು ಧನ್ಯನಾದೆನು. ॥86॥ "ನಾನು ಖಿನ್ನವದನನಾಗಿ ದುಃಖಿತನಾಗಿ ಸಂಕಟದಿಂದ ವರಾಂಡದಲ್ಲಿ ಕುಳಿತಿದ್ದಾಗ ಸಾಂತ್ವನ ನೀಡಲು ಬಂದವನನ್ನು, ನಾನು ಮತ್ತೆ ಭೇಟಿಯಾಗಲೇ ಇಲ್ಲ. ॥87॥ "ನನ್ನ ಬಗ್ಗೆ ಅಷ್ಟೊಂದು ಕಳಕಳಿ ಮತ್ತು ಪ್ರೀತಿಯನ್ನು ತೋರಿಸಿ, ನನಗೆ ಸಾಯಿಯ ಬಗ್ಗೆ ತಿಳಿಸಿ ಶಿರಡಿಗೆ ಮಾರ್ಗದರ್ಶನ ಮಾಡಿದ ವ್ಯಕ್ತಿಯನ್ನು ಮತ್ತೆ ಭೇಟಿಯಾಗಲೇ ಇಲ್ಲ. ॥88॥ "ನಾನು ಯಾರನ್ನು ಆಕಸ್ಮಿಕವಾಗಿ ಭೇಟಿಯಾದೆನೋ, ಯಾರು ಅಧ್ಯಾತ್ಮದ ದೋಹೆ (ದ್ವಿಪದಿ)ಗಳನ್ನು ಹಾಡುತ್ತಿದ್ದನೋ, ಮತ್ತು ಈ ಹರಕೆಯನ್ನು ಹೊರಲು ಕಾರಣನಾದನೋ ಅವನನ್ನು ಮತ್ತೆ ಭೇಟಿಯಾಗಲೇ ಇಲ್ಲ. ॥89॥ "ಆ ಫಕೀರನೇ ನಿಜವಾಗಿಯೂ ನಿಮ್ಮ ಈ ಸಾಯಿ ಅವಲಿಯ ಎಂದೆನ್ನಿಸುತ್ತದೆ. ತಮ್ಮ ದರ್ಶನ ಲಾಭವನ್ನು ನಮಗೆ ನೀಡಲು ಸ್ವಯಂ ಅವರೇ ಕಾತರರಾಗಿದ್ದಾರೆ. ॥90॥ "ಯಾರು ಏನಾದರೂ ಪ್ರಲೋಭನೆ ಒಡ್ಡಲಿ, ನನಗೆ ಈ ದರ್ಶನದ ಅಭಿಲಾಷೆಯು ಇರಲಿಲ್ಲ, ಆ ಫಕೀರನು ಇದನ್ನು ನನ್ನಲ್ಲಿ ಹುಟ್ಟಿಸಿದನು. ಅದೂ ಸಹ ನನ್ನ ದ್ರವ್ಯವನ್ನು ಹಿಂದಕ್ಕೆ ಪಡೆಯುವ ಸಲುವಾಗಿ. ॥91॥ "ನನ್ನಿಂದ ಅವರು ಮೂವತ್ತೈದು ರೂಪಾಯಿಗಳನ್ನು ಬಯಸುವ ಸಾಧ್ಯತೆಯೇ ಇಲ್ಲ. ಏಕೆಂದರೆ ಅವರು ನಾನು ಕೇವಲ ಹರಕೆ ಹೊರುವಂತೆ ಮಾಡಿ ಬೇರೆ ಯಾವುದೇ ಶ್ರಮವಿಲ್ಲದೆ, ನನ್ನ ಇಡೀ ಆಸ್ತಿಯನ್ನೇ ನನಗೆ ಹಿಂದಕ್ಕೆ ಕೊಡಿಸಿದ್ದಾರೆ. ॥92॥ "ಅದಕ್ಕೆ ಬದಲಾಗಿ, ನಾವು ಅಜ್ಞಾನಿ ಮಾನವರು, ನಮ್ಮನ್ನು ಪಾರಮಾರ್ಥದ ಮಾರ್ಗಕ್ಕೆ ತರಲು ಮತ್ತು ನಮಗೆ ಕಲ್ಯಾಣ ಉಂಟಾಗಲೆಂದು ಅವರು ನಿರಂತರ ಪ್ರಯತ್ನಿಸುತ್ತಾರೆ. ಈ ನೆಪಗಳಿಂದ ನಮ್ಮನ್ನು ಈ ಮಾರ್ಗಕ್ಕೆ ತರುತ್ತಾರೆ. ॥93॥ "ಇದೇ ಅವತಾರದ ಉದ್ದೇಶ. ಇಲ್ಲದಿದ್ದರೆ ಭಕ್ತಿಯಿಲ್ಲದ ಪಾಮರರಾದ ನಾವು ಭವಸಾಗರವನ್ನು ದಾಟಲು ಹೇಗೆ ಸಾಧ್ಯವಾಗುತ್ತದೆ? ಅದರ ಬಗ್ಗೆ ಸಾವಧಾನವಾಗಿ ವಿಚಾರಮಾಡಿರಿ. ॥94॥ "ಅದು ಹಾಗಿರಲಿ. ಕಳೆದು ಹೋದ ಆಸ್ತಿಯು ದೊರಕಿದ ಕೂಡಲೇ ಅತ್ಯಂತ ಹರ್ಷಿತನಾದೆನು. ಅದರ ಪರಿಣಾಮವಾಗಿ ಹರಕೆಯ ವಿಚಾರವನ್ನು ಸಂಪೂರ್ಣವಾಗಿ ಮರೆತೇ ಹೋದೆನು. ಹಣದ ಮೇಲಿನ ಮೋಹವು ದುರ್ಧರವಾದುದು. ॥95॥ "ಅನಂತರ, ನೋಡಿ, ಒಂದು ದಿನ ನಾನು ಕುಲಾಬಾ[1], ಹತ್ತಿರ ಇದ್ದಾಗ, ಸಾಯಿಯನ್ನು ಕನಸಿನಲ್ಲಿ ಕಂಡೆನು. ಕೂಡಲೇ ಶಿರಡಿಗೆ ಹೊರಟೆನು. ॥96॥ "ಸಾಯಿ ಸಮರ್ಥರು ನನ್ನ ಪ್ರವಾಸದ ಕಥೆಯನ್ನೇ ವಿವರಿಸಿದ್ದಾರೆ. ನಾವೆಯಲ್ಲಿ ನನಗೆ ಜಾಗ ಸಿಗದಾಯಿತು. ಆದರೆ ನಿಜವಾಗಿಯೂ ಒಬ್ಬ ಶಿಪಾಯಿಯು ನನಗಾಗಿ ಪ್ರಯಾಸಪಟ್ಟು ಈ ಸಂಕಟದಿಂದ ಹೊರಬರುವಂತೆ ಮಾಡಿದನು. ॥97॥ "ನಾನು ನಾವೆಯ ಹತ್ತಿರ ಬಂದಾಗ ಈ ಎಲ್ಲ ಅಡಚಣೆಗಳು ಉಂಟಾದುವು. ನಿಜವಾಗಿಯೂ ಒಬ್ಬ ಶಿಪಾಯಿಯು ಅದೂ ಅಪರಿಚಿತನು ನನಗಾಗಿ ಮಧ್ಯಸ್ಥಿಕೆ ವಹಿಸಿ ಪ್ರಾರ್ಥಿಸಿದನು. ॥98॥ "ಅನಂತರವೇ ಆ ನಾವೆಯ ಕ್ಯಾಪ್ಟನ್ ಆರಂಭದಲ್ಲಿ ಉದ್ಧಟನಾಗಿದ್ದವನು ನಾವೆಯಲ್ಲಿ ಜಾಗ ಕೊಟ್ಟು ನನ್ನನ್ನು ಆಭಾರಿಯನ್ನಾಗಿ ಮಾಡಿದನು. ॥99॥ "ಆ ಶಿಪಾಯಿಯೂ ಪೂರ್ಣ ಅಪರಿಚಿತನಾದರೂ, ನಾನು ಅವನಿಗೆ ತಿಳಿದವನೆಂದು ಹೇಳಿದನು.

ಹಾಗಾಗಿ ನನ್ನನ್ನು ಯಾರೂ ತಡೆಯಲಿಲ್ಲ ಮತ್ತು ಕುಳಿತುಕೊಳ್ಳಲು ಸುಖವಾದ ಆಸನ ದೊರಕಿತು. ॥100॥ "ಈ ನಾವೆಯ ಕಥೆಯ ರೀತಿಯಲ್ಲೇ ಆ ಶಿಪಾಯಿಯ ಬಗೆಗಿನ ಕಥೆಯೂ ನನ್ನ ವಿಷಯದಲ್ಲಿ ಉಂಟಾದವು. ಸಾಯಿಯು ಅವರಿಗೇ ನಡೆದ ರೀತಿಯಲ್ಲಿ ಅದನ್ನು ಹೇಳಿದರು. ॥101॥ "ಇಂತಹ ಅದ್ಭುತವಾದ ಅನುಭವವನ್ನು ಪಡೆದು ನನ್ನ ಬುದ್ಧಿಯು ಕುಂಠಿತವಾಯಿತು. ಸಾಯಿಯು ಸರ್ವವ್ಯಾಪಿಯೆಂದು ಅನುಭವಕ್ಕೆ ಬಂದಿತು. ॥102॥ "ಅವರು ವ್ಯಾಪಿಸದೇ ಇರುವ ಅಣುರೇಣುವೂ ಕಾಣಸಿಗುವುದಿಲ್ಲ. ನನಗೆ ನೀಡಿದಂತಹ ಅನುಭವಗಳನ್ನೇ ಇತರರಿಗೂ ಕೊಡುವನು. ॥103॥ "ನಾನು ಯಾರು? ನಾನು ಎಲ್ಲಿಂದ ಬಂದಿರುವೆ? ನಾನು ಅದೆಷ್ಟು ಭಾಗ್ಯಶಾಲಿ! ಅವರು ಇಷ್ಟೆಲ್ಲ ಪ್ರಯತ್ನಗಳಿಂದ ನನ್ನನ್ನು ಎಳೆದು ಹೊರತಂದು ಪಾರಮಾರ್ಥದ ಮಾರ್ಗದಲ್ಲಿ ಹಾಕಿರುವರು! ॥104॥ "ನಾನು ಆ ಹರಕೆಯನ್ನು ಏಕೆ ಮಾಡಿಕೊಳ್ಳುವಂತಾಯಿತು? ನನ್ನ ಆಸ್ತಿಯು ಏಕೆ ಕಳುವಾಯಿತು? ಹರಕೆಯನ್ನು ಸಲ್ಲಿಸಿದನಂತರ ನನ್ನ ಉಳಿತಾಯವೆಲ್ಲವೂ ಅಪ್ರಯಾಸವಾಗಿ ಹಿಂತಿರುಗಿ ಬಂದಂತಹ ಅದ್ಭುತವೆಂತಹುದು? ॥105॥ "ನನ್ನ ಭಾಗ್ಯವದೆಷ್ಟು ವಿಶೇಷವಾದುದು? ನಾನು ಈ ಹಿಂದೆ ಯಾರ ದರ್ಶನವನ್ನು ಮಾಡಿರಲಿಲ್ಲವೋ, ಯಾರ ಬಗ್ಗೆ ಚಿಂತನೆಯನ್ನಾಗಲೀ, ಕೇಳುವುದಾಗಲೀ, ಯಾರ ಸ್ಮರಣೆಯನ್ನಾಗಲೀ ಮಾಡಿರಲಿಲ್ಲವೋ ಅವರೇ ಈಗ ನನ್ನನ್ನು ಕಾಯುತ್ತಿದ್ದಾರೆ. ॥106॥ "ಹಾಗಿರಲು, ಅವರ ಜೊತೆಯಲ್ಲಿ ಅನೇಕ ವರ್ಷಗಳ ಕಾಲ ಬದುಕಿ, ವಿನೀತನಾಗಿ ಅವರ ಚರಣ ಸೇವೆಮಾಡಿ, ಹಗಲು, ರಾತ್ರಿ ಅವರನ್ನು ಸೇವಿಸುತ್ತಿರುವ ಭಕ್ತರು ಅದೆಷ್ಟು ಭಾಗ್ಯಶಾಲಿಗಳು! ॥107॥ "ಯಾರ ಜೊತೆಯಲ್ಲಿ ಸಾಯಿಯು ಆಟವಾಡುತ್ತಿದ್ದರೋ ನಗುತ್ತಿದ್ದರೋ, ಕೂರುತ್ತಿದ್ದರೋ, ಮಾತಾಡುತ್ತಿದ್ದರೋ, ನಡೆಯುತ್ತಿದ್ದರೋ ಮಲಗುತ್ತಿದ್ದರೋ ಮತ್ತು ಕೋಪವನ್ನೂ ಮಾಡಿಕೊಳ್ಳುತ್ತಿದ್ದರೋ ಅಂತಹವರೆಲ್ಲರೂ ಮಹಾಭಾಗ್ಯಶಾಲಿಗಳು. ॥108॥ "ಅವರು ನನಗೆ ಅಂತಹ ಕಳಕಳಿಯ ಪ್ರೀತಿಯನ್ನು ತೋರಿಸಿದ್ದಾರೆ. ನಾನಾದರೋ ಅವರಿಗೆ ಏನನ್ನೂ ಮಾಡಿಲ್ಲ. ನೀವು ಅವರ ಜೊತೆಯಲ್ಲಿಯೇ ನಿತ್ಯವೂ ಇರುವ ಈ ಸ್ಥಿತಿಯು ಭಾಗ್ಯಸ್ಥಿತಿಯೇ ಹೌದು ಮತ್ತು ನೀವೆಲ್ಲರೂ ಧನ್ಯರು! ॥109॥ "ನಿಮ್ಮೆಲ್ಲರ ಪೂರ್ವಸುಕೃತಿಗಳ ಪುಣ್ಯದಿಂದಲೇ ಈ ಮಾನವ ಸ್ವರೂಪವನ್ನು ಧರಿಸಲು ಕಾರಣವಾಗಿದೆ. ಮತ್ತು ಈ ಮೂರ್ತಿಯನ್ನು ಶಿರಡಿಗೆ ಕರೆತಂದಿದೆ. ನೀವೆಲ್ಲರೂ ಪರಮ ಭಾಗ್ಯಶಾಲಿಗಳು. ॥110॥ "ನನ್ನ ಅನಂತ ಪುಣ್ಯಫಲವೇ ನನ್ನನ್ನು ಶಿರಡಿಗೆ ಕರೆ ತಂದಿದೆ. ಶ್ರೀಸಾಯಿಯ ದರ್ಶನ ಯಾತ್ರೆಗಾಗಿ ನಾನು ನನ್ನ ಸರ್ವಸ್ವವನ್ನೂ ತ್ಯಾಗಮಾಡಬೇಕೆಂದು ಅನಿಸುತ್ತಿದೆ. ॥111॥ "ಸಾಯಿ ಸಜ್ಜನ, ಮತ್ತು ಪರಮ ಅವತಾರ. ಆಚಾರದಲ್ಲಿ ಮಹಾವೈಷ್ಣವ. ಅವರು ನಿಜವಾಗಿಯೂಜ್ಞಾನವೆಂಬ ವೃಕ್ಷದ ಚಿಗುರು. ಅವರು ಚಿದಾಕಾಶದಲ್ಲಿ ಭಾಸ್ಕರನ ಹಾಗೆ ಪ್ರಕಾಶಿಸುತ್ತಾರೆ. ॥112॥ "ಅದು ಹಾಗಿರಲಿ. ನಾನು ಕೂಡ ಈ ಮಸೀದಿಮಾಯಿಯನ್ನು ಭೇಟಿಮಾಡಲು ಅದೆಷ್ಟು ಪುಣ್ಯಮಾಡಿದ್ದೆನು! ಅವರು ನನ್ನ ಹರಕೆಯನ್ನು ತೃಪ್ತಿಪಡಿಸಿ ನನಗೆ ತನ್ನ ದರ್ಶನ ನೀಡಿದ್ದಾರೆ. ॥113॥ "ಅವರೇ ನನ್ನ ದತ್ತ ಭಗವಾನರು.

ಅವರು ನನಗೆ ಈ ಹರಕೆಯನ್ನು ಹೊರಲು ಆಜ್ಞಾಪಿಸಿದವರು. ಅವರೇ ನನಗೆ ನಾವೆಯಲ್ಲಿ ಕುಳಿತುಕೊಳ್ಳಲು ಸ್ಥಳಾವಕಾಶ ನೀಡಿದವರು. ಮತ್ತು ದರ್ಶನಕ್ಕಾಗಿ ಶಿರಡಿಗೆ ಕರೆತಂದವರು. ॥114॥ "ಈ ರೀತಿಯಲ್ಲಿ, ಸಾಯಿಯು ತಮ್ಮ ಸರ್ವವ್ಯಾಪಕತ್ವವನ್ನು ಮತ್ತಾವು ಹೇಗೆ ಎಲ್ಲರ ಹೃದಯಗಳಲ್ಲೂ ವಾಸವಾಗಿದ್ದಾರೆಂದು, ಸರ್ವತ್ರ ಏನು ನಡೆಯುವುದೋ ಅದೆಲ್ಲವನ್ನೂ ಅರಿತು ಅದಕ್ಕೆ ಸಾಕ್ಷಿಯಾಗಿರುವರು. ॥115॥"ಸಾಯಿಯ ಮಂದಹಾಸಯುಕ್ತ ಮುಖವನ್ನು ನೋಡಿ ನನ್ನ ಮನಸ್ಸಿಗೆ ಪರಮ ಸುಖವೆನ್ನಿಸಿತು. ಈ ಪ್ರಪಂಚದಲ್ಲೇ ಇದ್ದರೂ ಸಂಸಾರದ ದುಃಖಗಳನ್ನೆಲ್ಲವನ್ನೂ ಮರೆತೆನು ಮತ್ತು ನನ್ನ ಪರಮಾರ್ಥದ ಸುಖವನ್ನು ತಡೆಯಲಾಗಲಿಲ್ಲ. ॥116॥ "ಏನಾಗವುದೋ ಅದೆಲ್ಲವೂ ಪ್ರಾರಬ್ಧ ಗತಿಯಂತೆಯೇ ಆಗಲಿ! ನನ್ನ ಮನಸ್ಸು ನಿಶ್ಚಿತವಾಗಿಯೂ ಆ ಸ್ಥಿತಿಯನ್ನು ತಲುಪುತ್ತದೆ. ಸಾಯಿ ಚರಣಗಳಲ್ಲಿ ನನ್ನ ಪ್ರೀತಿ ಅಖಂಡವಾಗಿರಲಿ. ಮತ್ತು ಸಾಯಿಯ ಮೂರ್ತಿ ನನ್ನ ಹೃದಯದಲ್ಲಿ ಮತ್ತು ಕಣ್ಣುಗಳಲ್ಲಿ ನಿತ್ಯವೂ ನೆಲಸಲಿ! ॥117॥ "ಸಾಯಿ ಲೀಲೆಗಳು ಅಗಾಧ ಹಾಗೂ ಅಗಮ್ಯ! ಅವರ ಉಪಕಾರಗಳಿಗೆ ಸೀಮೆಯೇ ಇಲ್ಲ. ಓ ದಯಾಳುವೇ! ನಾನು ನನ್ನ ದೇಹ ಮತ್ತು ಮನಸ್ಸು ಇವುಗಳನ್ನು ನಿಮ್ಮ ಸೇವೆಯಲ್ಲಿ ಸವೆಸಬೇಕೆಂದಿದ್ದೇನೆ" ॥118॥ ಅದು ಹಾಗಿರಲಿ. ಈಗ ಒಂದು ವಿಷಯಾಂತರದ ಕಥೆ ಕ್ಷಣ ಕಾಲ ಸಾವಧಾನದಿಂದ ಸಾಯಿಯ ಮುಖದಿಂದ ಬಂದಂತಹ ಶಬ್ದಗಳನ್ನು ಕೇಳಿರಿ. ಅವು ಬ್ರಹ್ಮಲಿಪಿಯೆಂದೇ ನಿರ್ಧರಿಸಬಹುದು. ॥119॥ ಸುಖಾರಾಮ ಔರಂಗಾಬಾದಕರ್‌ನ ಪತ್ನಿಯು, ಸೊಲ್ಲಾಪುರ ನಗರದಲ್ಲಿ ವಾಸಿಸುತ್ತಿದ್ದಳು, ಪುತ್ರ ಸಂತಾನಕ್ಕಾಗಿ ಕಾತರಳಾಗಿದ್ದಳು. ಮತ್ತು ಅದಕ್ಕಾಗಿ ಶಿರಡಿಗೆ ಬಂದಳು. ॥120॥ ಸಾಯಿಬಾಬಾ – ಸಂತರ ಅನೇಕ ಪವಿತ್ರ ಕಥೆಗಳನ್ನು ಕೇಳಿ ಅವಳು ಅವರ ಪಾವನ ದರ್ಶನಕ್ಕೆಂದು ತನ್ನ ಮಲಮಗನನ್ನು ಕರೆದುಕೊಂಡು ಬಂದಳು. ॥121॥ ಅವಳಿಗೆ ಮದುವೆಯಾಗಿ ಇಪ್ಪತ್ತೇಳು ವರ್ಷಗಳು ಕಳೆದಿದ್ದರೂ, ಅವಳು ಗರ್ಭಧರಿಸಿರಲಿಲ್ಲ. ಅವಳು ದೇವದೇವಿಯರಿಗೆ ಹರಕೆ ಹೊತ್ತು ದಣಿದಿದ್ದಳು. ಅವಳು ಮನಸ್ಸಿನಲ್ಲಿಯೇ ನಿರಾಶಳಾಗಿದ್ದಳು. ॥122॥ ಅದು ಹಾಗಿರಲಿ. ಈ ರೀತಿ ಈ ಸುವಾಸಿನಿಯು ಬಾಬಾರವರ ದರ್ಶನಕ್ಕೆಂದು ಒಂದು ಉದ್ದೇಶದಿಂದ ಬಂದಳು. ಈ ವಿಚಾರ ಉದ್ಭವಿಸುತ್ತಲೇ ಅವಳು ಈ ರೀತಿ ಶಿರಡಿಗೆ ಬಂದಳು. ॥123॥ ಬಾಬಾ ಸದಾ ಕಾಲ ಭಕ್ತಜನರಿಂದ ಸುತ್ತುವರೆಯಲ್ಪಟ್ಟಿರುತ್ತಾರೆ. ಅವರು ಒಬ್ಬರೇ ಹೇಗೆ ಸಿಗುತ್ತಾರೆ? ನನ್ನ ಮನದಲ್ಲಿನ ಅಳಲನ್ನು ಅವರಲ್ಲಿ ಹೇಗೆ ತೋಡಿಕೊಳ್ಳಲು ಸಾಧ್ಯ? ಎಂದು ಅವಳು ತೀವ್ರವಾಗಿ ಚಿಂತಿತಳಾದಳು. ॥124॥ ಮಸೀದಿಯು ತೆರೆದೇ ಇರುತ್ತಿತ್ತು, ಹಾಗೆಯೇ ಅಂಗಳವೂ ಬಯಲಾಗಿತ್ತು. ಬಾಬಾರವರ ಸುತ್ತಲೂ ಯಾವಾಗಲೂ ಭಕ್ತರು ಇರುತ್ತಿದ್ದರು. ಅವಳಿಗೆ ತನ್ನ ಆರ್ತತೆಯನ್ನು ನಿವೇದಿಸಲು ಶಾಂತವಾದ ಕ್ಷಣ ಹೇಗೆ ದೊರಕುವುದು? ॥125॥ ಅವಳು ಮತ್ತು ಅವಳ ಮಲಮಗ ವಿಶ್ವನಾಥನು ಎರಡು ತಿಂಗಳುಗಳ ಕಾಲ ಬಾಬಾರವರ ಸೇವೆ ಮಾಡುತ್ತ ಅಲ್ಲಿಯೇ ನೆಲಸಿದರು. ॥126॥ ಈಗ ಆಶೆ ಹೊತ್ತ ಈ ಮಹಿಳೆಯು ಒಂದು ದಿನ ಬಾಬಾವರ ಹತ್ತಿರ ವಿಶ್ವನಾಥನಾಗಲಿ,

ಮತ್ತಾರೇ ಆಗಲಿ ಇಲ್ಲದಿರುವಾಗ ಮಾಧವರಾವ್‌ನಿಗೆ ವಿನಂತಿಸಿಕೊಂಡಳು. ॥127॥ "ನೀನಾದರೂ ಸಮಯ ನೋಡಿ ಅವಕಾಶ ಸಿಕ್ಕಾಗ ಬಾಬಾರವರು ಶಾಂತಸ್ಥಿತಿಯಲ್ಲಿದ್ದಾಗ ನನ್ನ ಮನದಾಳದ ಆಸೆಯನ್ನು ಅವರಿಗೆ ಹೇಳು. ॥128॥ "ಅದೂ ಸಹ ಅವರೊಬ್ಬರೇ ಇದ್ದಾಗ ಮತ್ತು ಭಕ್ತಪರಿವಾರವು ಸುತ್ತಲೂ ಇಲ್ಲದೇ ಇರುವಾಗ, ಅವರಿಗೆ ಇದನ್ನು ಹೇಳು. ಆದಷ್ಟು ಬೇಗನೆ ಅವಕಾಶ ನೋಡಿ ಯಾರಿಗೂ ಕೇಳಿಸದಂತೆ ಹೇಳು." ॥129॥ ಮಾಧವರಾವ್‌ನು ಪ್ರತ್ಯುತ್ತರ ನೀಡಿದನು. "ಈ ಮಸೀದಿಯು ಎಂದಿಗೂ ಜನರಿಲ್ಲದೆ ಇರುವುದಿಲ್ಲ. ಯಾರಾದರೂ ಒಬ್ಬರು ದರ್ಶನಕ್ಕೆಂದು ನಿರಂತರ ಬರುತ್ತಲೇ ಇರುತ್ತಾರೆ. ॥130॥ "ಸಾಯಿಯ ಈ ದರ್ಬಾರು ಸದಾ ತೆರೆದೇ ಇರುತ್ತದೆ. ಯಾರನ್ನೂ ಇದರೊಳಗೆ ಪ್ರವೇಶದಿಂದ ತಡೆಯುವುದಿಲ್ಲ. ಆದರೆ ನಿನಗೆ ನಾನೊಂದು ಸಲಹೆ ನೀಡುತ್ತೇನೆ. ಅದನ್ನು ನಿನ್ನ ಮನಸ್ಸಿನಲ್ಲೇ ಧ್ಯಾನದಿಂದ ಇಟ್ಟುಕೋ. ॥131॥ "ಪ್ರಯತ್ನ ನಡೆಸುವುದು ನನ್ನ ಕೆಲಸ, ಅವನೇ ಯಶಸ್ಸನ್ನೂ ಮಂಗಳಕರ ನಿವಾಸವನ್ನೂ ಕೊಡುವವನು. ಕೊನೆಯಲ್ಲಿ ಅವನು ನಿನಗೆ ಶಾಂತಿಯನ್ನು ನೀಡುತ್ತಾನೆ. ಮತ್ತು ನಿನ್ನ ಚಿಂತೆಗಳನ್ನು ಉಪಶಮನಗೊಳಿಸುತ್ತಾನೆ. ॥132॥ "ನೀನು ಮಾತ್ರ ಕೇವಲ ಒಂದು ತೆಂಗಿನಕಾಯಿ ಹಿಡಿದುಕೊಂಡು, ಕಾಯುತ್ತಿರಬೇಕು ಮತ್ತು ಅಂಗಳದಲ್ಲಿ ಕಲ್ಲಿನ ಮೇಲೆ ಊದುಬತ್ತಿಯನ್ನು ಹಚ್ಚಿಡು. ಅದನ್ನು ಬಾಬಾರವರು ತಮ್ಮ ಊಟಕ್ಕೆ ಕುಳಿತಾಗ ಇಡು. ॥133॥ "ಅನಂತರ ಊಟವಾದ ಮೇಲೆ, ಅವರೇನಾದರೂ ಆನಂದವಾಗಿದ್ದಾರೆಂದು ಕಂಡು ಬಂದರೆ, ನಾನು ಕಣ್ಣಿನಿಂದ ಅಥವಾ ಕೈಯಿಂದ ಸನ್ನೆ ಮಾಡುತ್ತೇನೆ. ಆಗ ಮಾತ್ರವೇ ನೀನು ಮೇಲೆ ಬರಬೇಕು." ॥134॥ ಅದು ಹಾಗಿರಲಿ. ಇದೇ ರೀತಿ ಮಾಡುತ್ತಲೇ ಸ್ವಲ್ಪ ಸಮಯ ಕಳೆಯಲು, ಆ ಯೋಗದ ಘಳಿಗೆ ಪ್ರಾಪ್ತವಾಯಿತು. ಒಂದು ದಿನ ಸಾಯಿಯ ಊಟವಾದ ಮೇಲೆ, ಅವನಿಗೆ ಅನಿರೀಕ್ಷಿತವಾಗಿ ಅವಕಾಶದೊರಕಿ ಬಂತು. ॥135॥ ಸಾಯಿಯು ಕೈಗಳನ್ನು ತೊಳೆದುಕೊಂಡ ನಂತರ, ಮಾಧವರಾವನು ಒಂದು ವಸ್ತ್ರದಿಂದ ಒರೆಸುತ್ತಿದ್ದನು. ಸಾಯಿಯು ಆ ಸಂತೋಷದ ಸಮಯದಲ್ಲಿ ಏನು ಮಾಡಿದರೆಂಬುದನ್ನು ನೋಡಿ. ॥136॥ ಪ್ರೇಮೋಲ್ಲಾಸದಿಂದ ಬಾಬಾರವರು ಮಾಧವರಾವ್‌ನ ಕೆನ್ನೆಯನ್ನು ಚಿವುಟಿದರು. ಇಂತಹ ಒದಗಿ ಬಂದ ಸಮಯದಲ್ಲಿ ದೇವರ ಮತ್ತು ಭಕ್ತನ ನಡುವೆ ನಡೆದ ಪ್ರೇಮ ಸಂಭಾಷಣೆಯನ್ನು ಕೇಳಿರಿ. ॥137॥ ಮಾಧವರಾವ್‌ನು ತುಂಬಾ ವಿನಯ ಸಂಪನ್ನನಾಗಿದ್ದರೂ, ತೋರಿಕೆಗೆ ಕೋಪವನ್ನು ಪ್ರಕಟಿಸುತ್ತ ಹಾಸ್ಯಮಯವಾಗಿ ಬಾಬಾರವರಿಗೆ ಹೇಳಿದನು, "ಈ ವರ್ತನೆಯು ನಿಮಗೆ ಒಳ್ಳೆಯ ಭೂಷಣವೇ? ॥138॥ "ನಮಗೆ ಇಂತಹ ತುಂಟ ದೇವರು, ಇಷ್ಟು ಜೋರಾಗಿ ಕೆನ್ನೆ ಹಿಂಡುವವರು ಬೇಕಿಲ್ಲ! ನಾವೇನು ನಿಮಗೆ ಇಷ್ಟು ಭಯಾನಕವಾಗಿ ಕಾಣುತ್ತೇವೆಯೇನು? ಇದೇ ಏನು ಆತ್ಮೀಯತೆಯ ಫಲ?" ॥139॥ ಅದಕ್ಕೆ ಬಾಬಾರವರು ಪ್ರತ್ಯುತ್ತರ ನೀಡಿದರು, "ನಾನೇನಾದರೂ ನಿನ್ನ ಎಪ್ಪತ್ತೆರಡು ಜನ್ಮಗಳಲ್ಲಿ ನಿನ್ನನ್ನು ಮುಟ್ಟಿದ್ದೇನೆಯೇ? ಅಂತಹ ಯಾವುದಾದರೂ ಸಂದರ್ಭ ನಿನಗೆ ನೆನಪಿದೆಯೇನು?" ॥140॥ ಅದಕ್ಕೆ

ಮಾಧವರಾವ್ ಹೇಳಿದನು, "ನಮಗೆ ಎಂತಹ ದೇವರು ಬೇಕೆಂದರೆ ಸರ್ವದಾ ಹಸಿದಾಗ ಹೊಸದಾದ ಅದ್ಭುತವಾದುದನ್ನು ಕೊಡುವಂತಹವನು ಬೇಕು. ॥141॥ "ನಮಗೆ ನಿನ್ನ ಗೌರವ ಅಥವಾ ಸ್ವರ್ಗಲೋಕಕ್ಕೆ ಕರೆದೊಯ್ಯುವ ವಿಮಾನವು ಬೇಕಿಲ್ಲ. ಕೇವಲ ನಿನ್ನ ಚರಣಗಳಲ್ಲಿ ಭಕ್ತಿ ಇಡುವ ವರವನ್ನು ಮಾತ್ರ ಕೊಡು." ॥142॥ ಅದಕ್ಕೆ ಬಾಬಾರವರು ಮಾತನಾಡಲು ಪ್ರಾರಂಭಿಸಿದರು. "ಹೌದು, ನಿಜವಾಗಿಯೂ. ಅದಕ್ಕೋಸುಗವೇ ನಾನು ಬಂದಿದ್ದೇನೆ. ಮತ್ತು ಅದಕ್ಕಾಗಿಯೇ ನಾನು ನಿಮಗೆ ಊಟಕೊಡಲು ಪ್ರಾರಂಭಿಸಿದೆ. ಮತ್ತು ನಿಮ್ಮೊಡನೆ ಗಟ್ಟಿಯಾಗಿ ಬಂಧಿಸಲ್ಪಟ್ಟಿದ್ದೇನೆ." ॥143॥ ಅಷ್ಟರಲ್ಲಿ ಅವರು ಅಟ್ಟದ ಪಾವಟಿಗೆಗಳ ಕಂಭದ ಹತ್ತಿರ ಬಂದಿದ್ದರು. ಬಾಬಾರವರು ತಮ್ಮ ಆಸನದ ಮೇಲೆ ಕುಳಿತೊಡನೆಯೇ ಮಾಧವರಾವ್‌ನು ಆ ಮಹಿಳೆಗೆ ಸನ್ನೆ ಮಾಡಿದನು. ಆಕೆ ಅದಕ್ಕಾಗಿಯೇ ಎಚ್ಚರದಿಂದ ಕಾಯುತ್ತಿದ್ದಳು. ॥144॥ ಅವನು ಸನ್ನೆ ಮಾಡಿದಕೂಡಲೇ ಆಕೆ ಎದ್ದು ಅವಸರವಸರವಾಗಿ ಮಸೀದಿಯ ಮೆಟ್ಟಿಲುಗಳನ್ನು ಹತ್ತಿ ಬಂದಳು. ಅವಳು ಬಾಬಾರವರ ಮುಂದೆ ನಿಂತು ವಿನಯಪೂರ್ವಕವಾಗಿ ವಂದಿಸಿದಳು. ॥145॥ ಅವಳು ಕೂಡಲೇ ತೆಂಗಿನ ಕಾಯಿಯನ್ನು ಅವರ ಚರಣಗಳಲ್ಲಿ ಸಮರ್ಪಿಸಿ ಅವರ ಚರಣಕಮಲಗಳಿಗೆ ವಂದಿಸಿದಳು. ಬಾಬಾರವರು ತಮ್ಮ ಕೈಯಿಂದಲೇ ತೆಂಗಿನ ಕಾಯಿಯನ್ನು ಕಂಬಕ್ಕೆ ಬಲವಾಗಿ ಒಡೆದರು. ॥146॥ ಅವರು ಹೇಳಿದರು, "ಶಾಮಾ, ಇದು ಏನ್ಹೇಳುತ್ತದೆ? ತೆಂಗಿನಕಾಯಿಯು ಬಹಳವಾಗಿ ಗುಡುಗುಡಿಸುತ್ತಿದೆ." ಶಾಮಾನು ಈ ಅವಕಾಶವನ್ನು ಉಪಯೋಗಿಸಿಕೊಂಡನು. ಅವನು ಬಾಬಾರವರಿಗೆ ಏನು ಹೇಳಿದನೆಂಬುದನ್ನು ಕೇಳಿರಿ. ॥147॥ "ಆ ಮಹಿಳೆಯು ಆಸೆ ಪಡುತ್ತಿದ್ದಾಳೆ. ಇದೇ ರೀತಿ ಅವಳ ಹೊಟ್ಟೆಯಲ್ಲಿಯೂ ಒಂದು ಮಗುವು ಗುಡಗುಡಿಸಲೆಂಬುದು. ಅವಳಿಗೆ ಅದನ್ನು ದಯಪಾಲಿಸಿ. ಅವಳು ತಮ್ಮ ಚರಣಗಳಲ್ಲಿ ತನ್ನ ಮನಸ್ಸನ್ನು ಅಖಂಡವಾಗಿ ಇಡಲಿ. ಅವಳ ಸಂಕಟ ನಿವಾರಣೆಯಾಗಲಿ. ॥148॥ "ಅವಳ ಕಡೆ ನಿಮ್ಮ ಕೃಪಾದೃಷ್ಟಿಯನ್ನು ಹರಿಸಿರಿ. ಅವಳ ಮಡಿಲಿನಲ್ಲಿ ತೆಂಗಿನಕಾಯಿಯನ್ನು ಹಾಕಿ ತಮ್ಮ ಆಶೀರ್ವಾದದಿಂದ ಅವಳಿಗೆ ಪುತ್ರರು ಮತ್ತು ಪುತ್ರಿಯರು ಜನಿಸಲಿ." ॥149॥ ಅನಂತರ ಬಾಬಾರವರು ಅವನಿಗೆ ಹೇಳಿದರು, "ಎಲ್ಲಿಯಾದರೂ ತೆಂಗಿನಕಾಯಿಯು ಮಕ್ಕಳನ್ನು ಕೊಡುವುದೇ? ಅಂತಹ ಮೂರ್ಖನಂಬಿಕೆ ಹೇಗಿರಲು ಸಾಧ್ಯ? ಜನರು ತಮ್ಮ ಮನಃಸ್ಥಿತಿಯನ್ನೇ ಕಳೆದುಕೊಂಡಿದ್ದಾರೆಂದೆನ್ನಿಸುತ್ತದೆ." ॥150॥ ಶಾಮಾ ಹೇಳಿದನು, "ನನಗೆ ನಿಮ್ಮ ಮಾತುಗಳ ಚತುರತೆ ಗೊತ್ತು. ನಿಮ್ಮ ಮಾತುಗಳು ಅದೆಷ್ಟು ಅಮೂಲ್ಯವೆಂದರೆ ಅವಳು ಸ್ವಯಂಪ್ರೇರಿತವಾಗಿ ಮಕ್ಕಳ ಸರಣಿಯನ್ನೇ ಪಡೆಯಬಲ್ಲಳು. ॥151॥ "ಆದರೆ ಈ ದಿನಗಳಲ್ಲಿ ನೀವು ಭೇದಭಾವ ಮಾಡುತ್ತಿರುವಿರಿ. ನೀವು ಅವಳಿಗೆ ನಿಜವಾದ ಆಶೀರ್ವಾದ ಮಾಡುತ್ತಿಲ್ಲ. ನೀವು ಬಹಳ ಜಗ್ಗಾಡುತ್ತಿರುವಿರಿ ಅಷ್ಟೆ. ನೀವು ಆಕೆಗೆ ತೆಂಗಿನಕಾಯಿಯನ್ನು ಪ್ರಸಾದವಾಗಿ ನೀಡಿರಿ." ॥152॥ ಬಾಬಾ ಹೇಳಿದು, "ತೆಂಗಿನಕಾಯಿಯನ್ನು ಒಡಿ." ಶಾಮಾ ಹೇಳಿದನು, "ಅದನ್ನು ಅವಳ ಮಡಿಲಿಗೆ ಹಾಕಿ" ಈ ರೀತಿ ಜಗ್ಗಾಟವು ಕೆಲಕಾಲ ನಡೆಯಿತು. ಕೊನೆಯಲ್ಲಿ ಬಾಬಾರವರೇ

ಸೋತುಹೋದರು. ॥153॥ ಅವರು ಹೇಳಿದರು, "ಹೋಗು, ಅವಳಿಗೆ ಮಗುವಾಗುತ್ತದೆ." ಶಾಮಾ ಕೇಳಿದರು, "ಯಾವಾಗ? ಉತ್ತರ ಕೊಡಿ" ಬಾಬಾ ಹೇಳಿದರು, "ಹನ್ನೆರಡು ತಿಂಗಳ ನಂತರ." ತೆಂಗಿನ ಕಾಯಿಯನ್ನು ಬಲವಾಗಿ ಒಡೆಯಲಾಯಿತು. ॥154॥ ಅರ್ಧ ಭಾಗವನ್ನು ಇಬ್ಬರೂ (ಬಾಬಾ ಮತ್ತು ಮಾಧವರಾವ್) ಸೇವಿಸಿದರು. ಉಳಿದ ಅರ್ಧ ಭಾಗವನ್ನು ಆ ಮಹಿಳೆಗೆ ಕೊಟ್ಟರು. ಮಾಧವರಾವ್‌ನು ಆ ಮಹಿಳೆಗೆ ಹೇಳಿದನು, "ನನ್ನ ಮಾತುಗಳಿಗೆ ನೀನೇ ಸಾಕ್ಷಿಯಾಗಿರುವೆ. ॥155॥ "ಬಾಯಿ (ಅಮ್ಮಾ), ಒಂದು ವೇಳೆ ಇಂದಿನಿಂದ ಹನ್ನೆರಡು ತಿಂಗಳುಗಳು ಮುಗಿಯುವ ಮೊದಲು ನಿನಗೆ ಮಗುವಾಗದಿದ್ದರೆ, ನಾನು ಏನು ಮಾಡುತ್ತೇನೆಂದು ಕೇಳು. ॥156॥ "ಈ ರೀತಿಯ ತೆಂಗಿನ ಕಾಯಿಯನ್ನು ಈ ದೇವನ ತಲೆಗೆ ಒಡೆಯುತ್ತೇನೆ. ಮತ್ತು ಅವನನ್ನು ಮಸೀದಿಯಿಂದ ಹೊರಗೆ ಓಡಿಸುತ್ತೇನೆ. ನಾನು ಇದನ್ನು ಮಾಡಲಾಗದಿದ್ದರೆ ಮಾಧವನೆಂದೇ ಕರೆಸಿಕೊಳ್ಳುವುದಿಲ್ಲ ॥157॥ "ಅಂತಹ ದೇವರನ್ನು ನಾನು ಮಸೀದಿಯಲ್ಲಿರಲು ಬಿಡುವುದಿಲ್ಲ. ನಾನು ಈ ಮಾತುಗಳನ್ನು ಖಚಿತವಾಗಿ ಹೇಳುತ್ತಿದ್ದೇನೆ. ಸಮಯ ಬಂದಾಗ ಈ ಮಾತುಗಳ ಸತ್ಯತೆಯನ್ನು ಅರಿಯುತ್ತೀಯೆ. ಇದನ್ನು ನಿಶ್ಚಿತವಾಗಿಯೂ ಗಟ್ಟಿಯಾಗಿ ನಂಬು." ॥158॥ ಈ ರೀತಿಯ ಆಶ್ವಾಸನೆ ಪಡೆದ ಆ ಮಹಿಳೆಯು ಮನದಲ್ಲಿಯೇ ಸಂತೋಷದಿಂದ ಹಿಗ್ಗಿದಳು. ಬಾಬಾರವರ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮ ಸಲ್ಲಿಸಿ,ಸಮಾಧಾನ ಮನಸ್ಸಿನಿಂದ ತನ್ನ ಗ್ರಾಮಕ್ಕೆ ಹಿಂತಿರುಗಿದಳು. ॥159॥ ಶಾಮಾನು ಅತ್ಯಂತ ವಿಧೇಯನು ಎಂಬುದನ್ನು ತಿಳಿದಿದ್ದ ಸಾಯಿಯು ಭಕ್ತರ ಮನೋಗತವನ್ನು ಈಡೇರಿಸುತ್ತಿದ್ದರು. ಸಾಯಿಯು ಪ್ರೇಮಪಾಶದಿಂದ ಬಂಧಿಸಲ್ಪಡುತ್ತಿದ್ದರು. ಆದ್ದರಿಂದ ಅವನ ಕಿಂಚಿತ್ ಕೋಪದ ಮಾತಿಗಳಿಗೆ ಬೇಸರಿಸುತ್ತಿರಲಿಲ್ಲ. ॥160॥ ಸಾಯಿ ದಯಾಳು, ಕರುಣಾಘನರು, ಅವರಲ್ಲಿ ಶರಣಾದವರನ್ನು ರಕ್ಷಿಸುವವರು, ಭಕ್ತರ ವಚನಗಳನ್ನು ಸತ್ಯಗೊಳಿಸುವವರು, ಅವರ ಆಶ್ವಾಸನೆಗಳನ್ನು ಪೂರೈಸುತ್ತಿದ್ದರು. ॥161॥ ಶಾಮಾನು ಅವರ ಅತ್ಯಂತ ಪ್ರೀತಿಪಾತ್ರ ಭಕ್ತನು. ಸಂತನು ಭಕ್ತರ ಸಂಕಲ್ಪವನ್ನು ನೆರವೇರಿಸಿದನು. ಅದು ಯುಕ್ತಾಯುಕ್ತತೆಯಿಂದ ಕೂಡಿರಲಿ, ಬಿಡಲಿ. ಅದನ್ನು ಅಜ್ಞಾನದಿಂದಾಗಲಿ, ಆಶೆಯಿಂದಾಗಲಿ ಕೇಳಿರಲಿ. ಅದು ಪೂರೈಸಲ್ಪಡುತ್ತಿತ್ತು. ಇದು ಅವರ ವ್ರತವಾಗಿತ್ತು. ॥162॥ ಅದು ಹಾಗಿರಲಿ. ಹನ್ನೆರಡು ತಿಂಗಳುಗಳು ಮುಗಿಯುವುದರೊಳಗೆ ಬಾಬಾರವರು ತಮ್ಮ ಮಾತು ಉಳಿಸಿಕೊಂಡರು. ಈ ಸಂಭಾಷಣೆ ನಡೆದ ಮೂರು ತಿಂಗಳೊಳಗೆ, ಆ ಮಹಿಳೆಯು ಗರ್ಭ ಧರಿಸಿದಳು. ॥163॥ ಭಾಗ್ಯವಶಾತ್ ಅವರು ಪುತ್ರವತಿಯಾದಳು. ಅವಳು ತನ್ನ ಪತಿಯ ಜೊತೆಯಲ್ಲಿ ಐದು ತಿಂಗಳ ಮಗನನ್ನು ಕರೆದುಕೊಂಡು ಶಿರಡಿಗೆ ದರ್ಶನಕ್ಕೆಂದು ಬಂದಳು. ॥164॥ ಪತಿಯು ಅತಿ ಆನಂದದಿಂದ ಸಾಯಿ ಚರಣಗಳಲ್ಲಿ ವಂದಿಸಿದನು. ಮತ್ತು ಐನೂರು ರೂಪಾಯಿಗಳನ್ನು ಅರ್ಪಿಸಿ ತನ್ನ ಮನಸ್ಸಿನ ಕೃತಜ್ಞತೆಯನ್ನು ಪ್ರಕಟಿಸಿದನು. ॥165॥ ಆ ರೂಪಾಯಿಗಳನ್ನು ಅನಂತರ ಬಾಬಾರವರ ಕುದುರೆ 'ಶ್ಯಾಮಕರ್ಣ'ನಿಗಾಗಿ ವಸತಿ ಸ್ಥಾನದ ಗೋಡೆಗಳನ್ನು ಸುದೃಢವಾಗಿ ಕಟ್ಟಲು ಉಪಯೋಗಿಸಲಾಯಿತು. ಅದನ್ನು

ಮುಂಚೆಕಟ್ಟಿಹಾಕುತ್ತಿದ್ದ ಜಾಗದಲ್ಲೇ ಆ ನಿವಾಸವನ್ನು ಕಟ್ಟಲಾಯಿತು. ॥166॥ ಆದುದರಿಂದ, ಅಂತಹ ಸಾಯಿಯನ್ನು ಚಿಂತಿಸಿ, ಸಾಯಿಯನ್ನು ಸ್ಮರಿಸಿ ಮತ್ತು ಸಾಯಿಯನ್ನು ಧ್ಯಾನಿಸಿ. ಇದು ಹೇಮಾದನ ಸ್ವತಃ ಆಶ್ರಯವಾಗಿದೆ. ಅವನು ಎಂದಿಗೂ ಅಲ್ಲಿ ಇಲ್ಲಿ ಮತ್ತೆಲ್ಲಿಯೂ ಓಡಾಡಲಿಲ್ಲ. ॥167॥ ಕಸ್ತೂರಿಯ್ ತನ್ನ ನಾಭಿಯಲ್ಲೇ ಇರುವಾಗ ಅಲ್ಲಿ ಇಲ್ಲಿ ಹುಡುಕುತ್ತ ಏಕೆ ಅಡ್ಡಾಡಬೇಕು? ಸಾಯಿ ಚರಣಗಳಲ್ಲಿ ಅಖಂಡವಾಗಿ ವಿನೀತನಾಗಿದ್ದು ಹೇಮಾದನು ಅತುಲವಾದ ಸುಖವನ್ನು ಅನುಭವಿಸುತ್ತಿದ್ದಾನೆ. ॥168॥ ಮುಂದಿನ ಅಧ್ಯಾಯವು ಇನ್ನೂ ಹೆಚ್ಚು ರಸವತ್ತಾಗಿದೆ. ಅದು ಭಕ್ತರು ಪ್ರೇಮದಿಂದ ಬಾಬಾರವರನ್ನು ಯಾವ ರೀತಿ ಮಸೀದಿಯಿಂದ ಚಾವಡಿಗೆ ಸಕಲರೂ ಸಂತಸ ಸಂಭ್ರಮಗಳಿಂದ ಮೆರವಣಿಗೆಯಲ್ಲಿ ಕರೆದೊಯ್ಯುತ್ತಿದ್ದರೆಂಬುದನ್ನು ತಿಳಿಸುತ್ತದೆ. ॥169॥ ಜೊತೆಗೆ ಬಾಬಾರವರ ಅಡಿಗೆ ಪಾತ್ರೆ ಮತ್ತು ಪ್ರಸಾದವನ್ನುವಿನೋದವಾಗಿ ಕೊಡುತ್ತಿದ್ದ ಬಗೆಗಿನ ಕಥೆಯನ್ನು ತಿಳಿಸುತ್ತದೆ. ಅದನ್ನು ಮುಂದಿನ ಅಧ್ಯಾಯದಲ್ಲಿ ಕೇಳಿದರೆ ಅವರ ಉತ್ಸಾಹವು ಹೆಚ್ಚಾಗುತ್ತದೆ. ॥170॥

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿಯ ಸರ್ವವ್ಯಾಪಕತೆ ಹಾಗೂ ಆಶೀರ್ವಚನ ಸಾಫಲ್ಯತೆ" ಎಂಬ ಮೂವತ್ತಾರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಮಹಾರಾಷ್ಟ್ರದ ಈಗಿನ ರಾಯಗಡ ಜಿಲ್ಲೆಯ ಪಶ್ಚಿಮ ಕರಾವಳಿಯಲ್ಲಿ.
2. ಅವಳು ಕ್ರಮಬದ್ಧವಾಗಿ ರಜಸ್ವಲೆಯಾಗುತ್ತಿದ್ದರೂ ಸಹ.
3. ಅವಳ ಸೀರೆಯ ಸೆರಗನ್ನು ತೊಡೆಯಮೇಲೆ ಹಾಸಿದಾಗ (ಮಡಿಲು).
4. ಕಸ್ತೂರಿ. (ಗಂಡು) ಕಸ್ತೂರಿ ಮೃಗ.



# ಅಧ್ಯಾಯ - 37

॥ ಅಥ ಶ್ರೀ ಸಾಯಿ ಸಚ್ಚರಿತೆ ॥



## "ಚಾವಡಿಯ ವಿವರಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸಾಯಿಯ ಜೀವನವು ಧನ್ಯ, ಧನ್ಯ. ಅವರ ನಿತ್ಯ ಚರಿತ್ರೆಯೂ ಧನ್ಯ. ಅವರ ರೀತಿಗಳು ಮತ್ತು ಕಾರ್ಯಗಳು ಅತ್ಯದ್ಭುತ ಮತ್ತು ಅವುಗಳನ್ನು ಪೂರ್ಣವಾಗಿ ವಿವರಿಸಲು ಅಸಾಧ್ಯ. ॥1॥ ಅವರ ಸಚ್ಚರಿತೆಗಳು, ನಿಜ ಕರ್ತವ್ಯಗಳು ಧನ್ಯ, ಧನ್ಯ. ಅವರ ಜೀವನ ವೃತ್ತಿಯೂ ಧನ್ಯ. ಅವರ ಅನಿಶ್ಚಿತವಾದ, ಕಠೋರ ಹಾಗೂ ದೃಢ ತೀರ್ಮಾನಗಳನ್ನೊಳಗೊಂಡ ಜೀವನವೂ ಧನ್ಯ, ಧನ್ಯ. ಅದು ಅಸಿಧಾರಾವ್ರತದಂತೆ (ಕತ್ತಿಯ ಅಲಗಿನ ಮೇಲೆ) ನಡೆದಂತೆ ಇತ್ತು. ॥2॥ ಕೆಲವು ಸಲ ಬ್ರಹ್ಮಾನಂದದಿಂದ ಉನ್ಮತ್ತರಾಗುತ್ತಿದ್ದರು. ಕೆಲವೊಮ್ಮೆ ಆತ್ಮಜ್ಞಾನದಲ್ಲಿ ತೃಪ್ತಿಹೊಂದಿರುತ್ತಿದ್ದರು. ಕೆಲವು ಸಲ ತಮ್ಮ ಎಲ್ಲ ಕೆಲಸಗಳಲ್ಲೂ ನಿರ್ಲಿಪ್ತರಾಗಿರುತ್ತಿದ್ದರು. ಇಂಥಹದೇ ನಿಶ್ಚಿತ ಸ್ಥಿತಿ ಎಂದು ಬಣ್ಣಿಸಲಾಗದುದು. ॥3॥ಕೆಲವು ಸಲ ಅವರು ಯಾವುದೇ ಚಟುವಟಿಕೆಯಿಲ್ಲದೆ ಆದರೂ ನಿದ್ರೆ ಮಾಡದಂತೇ ಇರುತ್ತಿದ್ದರು. ಅವರ ಸ್ವಂತ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಸದಾ ತಮ್ಮ ಸ್ವಸ್ವರೂಪದಲ್ಲಿಯೇ ಸಮಾಧಾನದಿಂದ ಇರುತ್ತಿದ್ದರು. ॥4॥ ಕೆಲವೊಮ್ಮೆ ಸಾಗರದ ರೀತಿಯಲ್ಲಿ ಪ್ರಸನ್ನರಾಗಿರುತ್ತಿದ್ದು ಅಂತ್ಯವಿಲ್ಲದೆ, ಅಗ್ರಾಹ್ಯವಾಗಿಯೂ, ಆಳವಾಗಿಯೂ ಇರುತ್ತಿದ್ದರು. ಅವರ ಅಗಾಧವಾದ ಸ್ವರೂಪವನ್ನು ಯಥಾರ್ಥವಾಗಿ ವಿವರಿಸಲು ಯಾರಿಗೆ ತಾನೇ ಸಾಧ್ಯ? ॥5॥ ಅವರು ಪುರುಷರನ್ನು ತಮ್ಮ

ಸೋದರರೆಂದೂ, ಮಹಿಳೆಯರನ್ನು ಸೋದರಿ ಮತ್ತು ಮಾತೆಯಂತೆ ಪರಿಗಣಿಸುತ್ತಿದ್ದರು. ಸಮಸ್ತ ಜನರೂ ಸರ್ವದಾ ತಿಳಿದಂತೆ ಅವರು ನಿಷ್ಠಾ ಬ್ರಹ್ಮಚಾರಿಯಾಗಿದ್ದರು. ॥6॥ ಅವರ ಪವಿತ್ರ ಸತ್ಸಂಗದಲ್ಲಿ ಪ್ರಾಪ್ತವಾದ ಜ್ಞಾನವು, ನಿಶ್ಚಲವಾಗಿ ನಮ್ಮ ಮರಣ ಪ್ರಾಪ್ತಿಯ ಪರ್ಯಂತವೂ ನಮ್ಮಲ್ಲಿ ಇರಲಿ. ॥7॥ ಅವರನ್ನು ಸೇವಿಸುವ ನಮ್ಮ ವೃತ್ತಿಯು ಅಗಾಧವಾಗಿರಲಿ. ಅವರ ಚರಣಗಳಲ್ಲಿ ಅನನ್ಯ ಭಕ್ತಿಯಿರಲಿ. ಸರ್ವಭೂತಗಳಲ್ಲಿಯೂ ಭಗವದ್ಭಾವವನ್ನು ನೋಡುವಂತಾಗಲಿ. ಅವರ ನಾಮದಲ್ಲಿ ಅಖಂಡ ಪ್ರೀತಿ ಇರಲಿ. ॥8॥ ಅವರ ಒಂದೊಂದು ಕೃತಿಯನ್ನೂ ಯಾರು ಯಾರು ಶೋಧಿಸಲು ಹೊರಟರೋ ಅವರೆಲ್ಲರೂ ಆತಂಕಗೊಂಡು ಅಂತ್ಯದಲ್ಲಿ ತಟಸ್ಥರಾಗಿ ಕುಳಿತುಬಿಟ್ಟರು. ॥9॥ ಅನೇಕರ್ಥಾಸ ಸುಖಕ್ಕಾಗಿ ಜಗಳವಾಡುತ್ತಾರೆ. ಅವರು ಸ್ವರ್ಗದ ಮಹತ್ವವನ್ನು ಶ್ಲಾಘಿಸುತ್ತಾರೆ. ಅವರು ಭೂಲೋಕದ ಜೀವನವನ್ನು ತುಚ್ಛವಾಗಿ ಕಾಣುತ್ತಾರೆ. ಏಕೆಂದರೆ ಅಲ್ಲಿ ಮರಣ ಭಯ ಇರುತ್ತದೆ. ॥10॥ ಒಂದು ರೀತಿಯಲ್ಲಿ ಅವರು ಅವ್ಯಕ್ತದಿಂದ ಸಾಕಾರವನ್ನು ಊಹಿಸಿಕೊಳ್ಳುತ್ತಾರೆ. ಅದನ್ನೇ ವ್ಯಕ್ತಸ್ಥಿತಿ ಎನ್ನುತ್ತಾರೆ. ಪುನಃ ಅವರು ಅವ್ಯಕ್ತಸ್ಥಿತಿಯನ್ನು ಪ್ರವೇಶಿಸುತ್ತಾರೆ. ಇದನ್ನೇ ಅವರು 'ಮೃತ್ಯು' ಎನ್ನುತ್ತಾರೆ. ॥11॥ ಅಧರ್ಮ, ಅಜ್ಞಾನ, ರಾಗ(ಆಶೆ), ದ್ವೇಷ ಇತ್ಯಾದಿಗಳೆಲ್ಲವೂ ಮೃತ್ಯುಪಾಶಗಳೇ. ಯಾರು ಇವುಗಳನ್ನು ನಿಶ್ಶೇಷವಾಗಿ ದಾಟುತ್ತಾರೋ ಅವರು ಮಾತ್ರವೇ ಸ್ವರ್ಗಲೋಕವನ್ನುಪ್ರವೇಶಿಸುತ್ತಾರೆ. ॥12॥ ಸ್ವರ್ಗವೇ? ಮತ್ತೆ ಯಾವುದು ಸ್ವರ್ಗ? ವೈರಾಗ್ಯವೇ ಸ್ವರ್ಗಲೋಕ! ಮನಸ್ಸಿನ ದುಃಖಗಳಿಂದ ವಿವರ್ಜಿತವಾದ ವಿರಾಟ್ ಸ್ವರೂಪದ ಆತ್ಮವನ್ನು ನೋಡು! ॥13॥ ಆ ಸ್ಥಿತಿಯಲ್ಲಿ ರೋಗಾದಿಗಳು ಉಂಟಾಗುವ ಯಾವುದೇ ಕಾರಣಗಳಿರುವುದಿಲ್ಲ. ಅಥವಾ ಚಿಂತೆ, ವ್ಯಾಧಿ, ದುಃಖಗಳೂ ಇರುವುದಿಲ್ಲ. ಅವರು ಹಸಿವು ಬಾಯಾರಿಕೆಗಳಿಂದ ವ್ಯಾಕುಲರಾಗುವುದಿಲ್ಲ. ಮತ್ತು ಯಾರಿಗೂ ವೃದ್ಧಾಪ್ಯದ ಭಯವಿರುವುದಿಲ್ಲ. ॥14॥ಎಲ್ಲಿ ಮೃತ್ಯು ಭಯವಿರುವುದಿಲ್ಲವೋ ಅಲ್ಲಿ ವಿಧಿ ನಿಷೇಧಗಳು ಇರುವುದಿಲ್ಲ. ಜೀವನವು ಅತ್ಯಂತ ನಿರ್ಭಯವಾಗಿ ನಡೆದುಕೊಂಡು ಹೋಗುತ್ತದೆ. ಅದೇ ಧ್ರುವಾದ ಸ್ವರ್ಗ ಸ್ಥಿತಿಯಾಗಿರುತ್ತದೆ. ॥15॥ ಅದೇ ತತ್ತ್ವವು, ಬ್ರಹ್ಮನಿಂದ ಸ್ಥಾವರ(ಜಡ)ದವರೆಗೆ ಚರ–ಅಚರಗಳೆಲ್ಲವನ್ನೂ ಪೂರ್ಣವಾಗಿ ವ್ಯಾಪಿಸಿರುತ್ತದೆ. ಅದೇ ತತ್ತ್ವವು ಇಲ್ಲಿಯೂ ಪರದಲ್ಲಿಯೂ ವ್ಯಾಪಿಸಿದೆ. ಅದು ಅನೇಕತ್ವದಿಂದ ಹೊರತಾಗಿದೆ. ॥16॥ ಈ ತತ್ತ್ವವು ಸಂಸಾರಧರ್ಮದಿಂದ ವರ್ಜಿತವಾಗಿದ್ದರೂ ಸಹ ಅದು ಬ್ರಹ್ಮತ್ವವಲ್ಲ ಎಂಬುವಂತೆ ತೋರುತ್ತದೆ. ಅವಿದ್ಯೆಯಿಂದ ಮೋಹಿತನಾದ ಜೀವಕ್ಕೆ ಪ್ರತ್ಯೇಕವಾಗಿ ಕಾಣುತ್ತದೆ. ॥17॥ "ಪರಬ್ರಹ್ಮವು ನನಗಿಂತ ಭಿನ್ನ, ನಾನು ಬೇರೆಯೇ ಆಗಿದ್ದೇನೆ." ಯಾರು ಈ ರೀತಿಯ ಭೇದಜ್ಞಾನದಲ್ಲಿ ನಂಬಿಕೆ ಇಟ್ಟಿರುವರೋ ಅವರು ಸರ್ವದಾ ಮರಣಾಧೀನರಾಗಿರುತ್ತಾರೆ. ॥18॥ ಜನನದ ನಂತರ ಮರಣವು ಬರುತ್ತದೆ. ಮರಣದ ನಂತರ ಪುನರ್ಜನ್ಮ. ಈ ಸಂಸ್ಕೃತಿಯ ಪರಿವರ್ತನೆ ಚಕ್ರಕ್ಕೆ ಈ ರೀತಿ ಯೋಚಿಸುವವರು ಬಲಿಯಾಗುತ್ತಾರೆ. ॥19॥ ಬಹು ಕಷ್ಟ ಸಾಧ್ಯವಾದ ಯಜ್ಞ, ತಪಸ್ಸು, ದಾನಗಳಿಂದ ಸಾಧಿಸಿದ ನಾರಾಯಣನ ಚರಣ ಸ್ಮರಣೆಯಿಲ್ಲದೆ ಪಡೆದ

ಸ್ವರ್ಗದಿಂದ ಏನು ಉಪಯೋಗ? ॥20॥ ಕೇವಲ ವಿಷಯ ಭೋಗಗಳಿಗಾಗಿಯೇ ಮೀಸಲಾದ ಸ್ವರ್ಗದಲ್ಲಿ ನಮಗೆ ಯಾವ ಜಾಗವೂ ಬೇಡ. ಅವುಗಳಿಂದಾಗಿ ಗೋವಿಂದ ನಾಮಸ್ಮರಣೆಯು ಮರೆತು ಹೋದಲ್ಲಿ ಅದರಿಂದ ನಮಗೆ ಏನು ಉಪಯೋಗ? ॥21॥ ಅದು ಸ್ವರ್ಗದಲ್ಲಾಗಲಿ, ನರಕದಲ್ಲಾಗಲಿ, ವಿಷಯ ಸುಖಗಳು ಒಂದೇ. ಯಾವುದೇ ಭೇದವಿಲ್ಲ. ಇಂದ್ರನ ಅಥವಾ ಕತ್ತೆಯ ಸುಖಗಳು ಒಂದೇ ರೀತಿಯದ್ದಾಗಿರುತ್ತವೆ. ॥22॥ ಇಂದ್ರನು ತನ್ನ ನಂದನವನದಲ್ಲಿ ತಿರುಗಾಡುವ ರೀತಿಯಲ್ಲಿಯೇ ಕತ್ತೆಯು ಕಸದ ರಾಶಿಯ ಮೇಲೆ ಹೊರಳಾಡುತ್ತದೆ. ಇವೆರಡರ ಸುಖಗಳನ್ನೂ ಹೋಲಿಸಬಹುದು. ಲವಲೇಶದಷ್ಟೂ ವ್ಯತ್ಯಾಸ ಇರುವುದಿಲ್ಲ. ॥23॥ ಕೂಡಿಟ್ಟ ಪುಣ್ಯದ ರಾಶಿಯು ಕರಗುತ್ತಲೇ ಕೆಳ ಬೀಳುವಂತಹ ಬ್ರಹ್ಮಲೋಕಕ್ಕಾಗಿ ಏಕೆ ಪ್ರಯತ್ನಿಸಬೇಕು? ಅದರ ಬದಲು ಈ ಭೂಮಿಯ ಮೇಲೆ ಹುಟ್ಟುವುದು ಒಳ್ಳೆಯದು. ಈ ಭೂಲೋಕದ ಮಹತ್ವವು ಅಗಾಧ. ॥24॥ ಸ್ವರ್ಗಲೋಕದಲ್ಲಿ ಒಬ್ಬರ ಆಯುಷ್ಯವು ಕಲ್ಪದ ಅಂತ್ಯದವರೆಗೂ ಇರುವುದರಿಂದ ಅದು ಮುಖ್ಯವೇ? ಭೂಲೋಕದಲ್ಲಿರುವ ಕ್ಷಣಮಾತ್ರದ ಅಲ್ಪಾಯುಷ್ಯವು ಅದಕ್ಕಿಂತ ಮುಖ್ಯವಾದುದು. ॥25॥ ಕ್ಷಣಭಂಗುರವಾದ ಆಯುಸ್ಸಿನಲ್ಲಿ, ಏನೇ ಕರ್ಮ ಮಾಡಿದರೂ, ಅದೆಲ್ಲವನ್ನೂ ಭಗವಂತನಲ್ಲಿ ಅರ್ಪಿಸಿದರೆ, ಆ ಮನುಷ್ಯನು ಭಯವಿಲ್ಲದ ಸ್ಥಾನವನ್ನು ಪಡೆಯುತ್ತಾನೆ. ॥26॥ ಯಾವ ಸ್ಥಾನದಲ್ಲಿ ಭಗವದ್ಭಕ್ತರು ಹರಿ ಮತ್ತು ಗುರುವಿನ ಕಥೆಯ ವರ್ಣನೆಯನ್ನು, ಸಂಗೀತ ಮತ್ತು ನೃತ್ಯಗಳಿಂದ ಭಗವಂತನ ಪೂಜೆಯನ್ನು ಮಾಡುವುದಿಲ್ಲವೋ, ಅಂತಹ ಜಾಗದ ಉಪಯೋಗವೇನು? ॥27॥ ಬ್ರಹ್ಮ ಮತ್ತು ಆತ್ಮದ ಸಂಯೋಗದ ಜ್ಞಾನವನ್ನು ಪಡೆಯುವುದು, ಅದೇ ಶಾಶ್ವತವಾದುದು ಮತ್ತು ಶ್ರೇಯಸ್ಸಿಗೆ ಸಾಧನವಾದುದು ಮತ್ತು ಅಂತಹುದನ್ನು ಪಡೆಯಲು ಭೂಲೋಕವೇ ಉತ್ತಮ ಸ್ಥಾನವೇ ಹೊರತು ಸ್ವರ್ಗವಲ್ಲ. ॥28॥ ಕಾಯಾ, ವಾಚಾ, ಮನಸಾ ಮತ್ತು ಪಂಚಪ್ರಾಣಗಳನ್ನೂ ಗುರುವಿಗೆ ಸಮರ್ಪಿಸು. ನಿಶ್ಚಯಾತ್ಮಕ ಬುದ್ಧಿಯೂ ಗುರುವಿನಲ್ಲಿ ಲೀನವಾಗಬೇಕು. ಈ ರೀತಿ ಸರ್ವಸ್ವವೂ ಗುರುವಿನ ಅಧೀನವಾಗಬೇಕು. ॥29॥ ಈ ರೀತಿ ಸದ್ಗುರುವಿನಲ್ಲಿ ಸಂಪೂರ್ಣ ಶರಣಾದವನಿಗೆ ಅದೆಂತಹ ಭವದ ಭಯವಿರುತ್ತದೆ? ಮತ್ತು ಅನವಶ್ಯಕವಾಗಿ ಪ್ರಪಂಚಕ್ಕಾಗಿ ಏಕೆ ಚಿಂತಿಸಬೇಕು? ಎಲ್ಲ ತೊಂದರೆಗಳನ್ನೂ ನಿವಾರಿಸಲು ಅವನಿರುತ್ತಾನೆ. ॥30॥ ಎಲ್ಲಿ ಅವಿದ್ಯೆಯು ವಾಸವಾಗಿರುತ್ತದೋ ಅಲ್ಲಿ ಪುತ್ರ, ಪಶು ಇತ್ಯಾದಿಗಳಿಗೆ ಪಾಶಬದ್ಧನಾಗಿರುತ್ತಾನೆ. ಹಗಲು ರಾತ್ರಿ ಸಂಸಾರದ ಚಿಂತೆಯು ಆವರಿಸಿದ್ದು, ಲವಲೇಶ ಮಾತ್ರವೂ ಸುವಿಚಾರಗಳು ಸುಳಿಯುವುದಿಲ್ಲ. ॥31॥ ಅನೇಕತ್ವದ ಸ್ಥಿತಿಯನ್ನು ಉಂಟುಮಾಡಲು ಅವಿದ್ಯೆಯೇ ಮೂಲಕಾರಣ. ಆದುದರಿಂದಲೇ ಆಚಾರ್ಯರ ಮೂಲಕ ಸಂಸ್ಕೃತ ಜ್ಞಾನ ಪಡೆದು ಆಗಮಶಾಸ್ತ್ರಗಳನ್ನು ಅಭ್ಯಸಿಸಿ ಅದರ ಅರ್ಥ (ಜ್ಞಾನ) ಸಂಪಾದನೆ ಮಾಡಬೇಕು. ॥32॥ ಒಮ್ಮೆ ಈ ಅವಿದ್ಯೆಯು ನಿವಾರಣೆಯಾದರೆ, ಅಣುಮಾತ್ರವೂ ಅನೇಕತ್ವದ ಜ್ಞಾನ ಉಳಿಯುವುದಿಲ್ಲ. ಅದು ಮಾನವನನ್ನು ಜನನ–ಮರಣದ ಚಕ್ರದಿಂದ ಬಿಡುಗಡೆ ಮಾಡುತ್ತದೆ. ಇದಕ್ಕೆ ಮೂಲಕಾರಣವು ಏಕತ್ವ ಜ್ಞಾನವು. ॥33॥

ಯಾರಿಗೆ ಅತ್ಯಲ್ಪವಾದರೂ ಭೇದದೃಷ್ಟಿ ಇದೆಯೋ, ಅವರು ಜನ್ಮ ಮರಣದ ಚಕ್ರದಲ್ಲಿ ಸಿಕ್ಕಿ ನರಳುತ್ತಾರೆ. ಏಕೆಂದರೆ ವಿನಾಶ ಹಾಗೂ ಸೃಷ್ಟಿ ಎರಡೂ ಆ ಭಾವವನ್ನು ಪ್ರಚೋದಿಸುತ್ತವೆ. ॥34॥ 'ಒಳ್ಳೆಯದು' ಅಥವಾ 'ಶ್ರೇಯಸ್ಸು', ನಿಸ್ಸಂಶಯವಾಗಿಯೂ ವಿದ್ಯೆಯ ವಿಷಯವೇ. ಮತ್ತು ಎಲ್ಲಿ ಕೇವಲ ವಿಷಯಸುಖವಾದ ಪ್ರೇಯಸ್ಸು ಇರುವುದೋ ಅದು ನಿಜವಾಗಿಯೂ ಅವಿದ್ಯೆಯೇ. ॥35॥ ಈ ಪ್ರಪಂಚದಲ್ಲಿ ಅತ್ಯಂತ ದೊಡ್ಡ ಭಯ ಮೃತ್ಯು ಭಯ. ಅದರಿಂದ ನಿರ್ಭಯವಾಗಿ ಇದ್ದು ಪಾರಾಗಬೇಕಾದರೆ ಗುರುಚರಣಗಳೆರಡನ್ನೂ ಗಟ್ಟಿಯಾಗಿ ಹಿಡಿಯಬೇಕು. ಏಕೆಂದರೆ ಅವನು ಮಾತ್ರ ಅದ್ವಯ ಬುದ್ಧಿಯನ್ನು ಕೊಡಬಲ್ಲನು. ॥36॥ ಎಲ್ಲಿ ದ್ವೈತ ಮತ್ತು ಅನೇಕತ್ವವು ಇದೆಯೋ, ಅಲ್ಲಿ ಮಾತ್ರ ಭಯವು ಪ್ರವೇಶಿಸಲು ಸಾಧ್ಯ. ಆದುದರಿಂದ ಲವಲೇಶ ಮಾತ್ರವೂ ಭಯವು ಇಲ್ಲವೋ ಅಂತಹ ಗುರುವಿನ ಚರಣಗಳನ್ನು ಸೇವಿಸು. ॥37॥ ಅಂತಹ ಗುರುವಿನ ಹಣೆಯನ್ನು ಶುದ್ಧ ಪ್ರೇಮವೆಂಬ ಗ್ರಂಥದಿಂದ ಅಲಂಕರಿಸು. ನಿನ್ನ ಭಕ್ತಿಯೆಂಬ ಪೀತಾಂಬರ ವಸ್ತ್ರವನ್ನು ಸಮರ್ಪಿಸು. ಅವನನ್ನು ಭಕ್ತರಿಗೆ ತನ್ನ ವಿಶ್ವವ್ಯಾಪಕತ್ವವನ್ನು ತೋರಿಸುತ್ತಾನೆ. ॥38॥ ದೃಢವಾದ ಶ್ರದ್ಧೆಯೆಂಬ ಸಿಂಹಾಸನವನ್ನು ಅರ್ಪಿಸು. ಅಷ್ಟಭಾವಗಳಿಂದ, ಸಾತ್ವಿಕಭಾವದಿಂದಲಂಕರಿಸು. ಆನಂದಾಶ್ರುಜಲದಿಂದ ಸ್ನಾನಮಾಡಿಸು. ಆಗ ಅವನು ಪ್ರಸನ್ನನಾಗಿ ಪ್ರಕಟವಾಗುತ್ತಾನೆ. ॥39॥ ಅವನ ಸೊಂಟಕ್ಕೆ ಭಕ್ತಿಯೆಂಬ ಡಾಬನ್ನು ಹಾಕು. ಉಪ್ಪು ಮತ್ತು ನಿಂಬೆ ಹಣ್ಣುಗಳಿಂದ ಕೆಟ್ಟದೃಷ್ಟಿಯನ್ನು ತೆಗೆದುಹಾಕು. ಅವನಲ್ಲಿ ಪೂರ್ಣವಾಗಿ ಶರಣಾಗು. ಅನಂತರ ಆರತಿಯನ್ನು ಬೆಳಗು. ॥40॥ ಯಾವುದೇ ವಸ್ತುವನ್ನಾದರೂ, ಯಾವುದೇ ಕೆಲಸವನ್ನಾದರೂ ನಾಶಮಾಡುವುದಾಗಲೀ ಮಾಯಮಾಡುವುದಾಗಲೀ ಅದರ ಅಸ್ತಿತ್ವದ ಮೇಲೆ ಅವಲಂಬಿತವಾಗಿರುತ್ತದೆ. ಒಂದು ಮಣ್ಣಿನ ಮಡಕೆಯನ್ನು ಕಲ್ಲಿನಿಂದ ಜಜ್ಜಿದರೆ ಅದು ತನ್ನ ರೂಪವನ್ನು ಕಳೆದುಕೊಳ್ಳುತ್ತದೆ. ॥41॥ ಹಾಗೆಂದ ಮಾತ್ರಕ್ಕೆ ಮಡಕೆಯ ಅಸ್ತಿತ್ವವು ಲವಲೇಶವಾದರೂ ಇಲ್ಲವೆಂದಲ್ಲ. ಆ ಒಡೆದ ಚೂರುಗಳನ್ನು ಮತ್ತೆ ಸೇರಿಸಿದರೆ ಅದು ತನ್ನ ಮೂಲಸ್ವರೂಪವನ್ನು ಪಡೆಯಬಹುದು. ॥42॥ ಆದುದರಿಂದ ಯಾವುದೇ ಪರಿಣಾಮದ ನಾಶವೆಂದರೆ ಅದು ನಿಜವಾಗಿಯೂ ಕಾರಣದ ಅಸ್ತಿತ್ವವನ್ನು ಅವಲಂಬಿಸಿದೆ. ಆದುದರಿಂದ ಯಾರದೇ ದೇಹದ ಅಂತ್ಯವು ಶೂನ್ಯದಲ್ಲಿ ಪರ್ಯವಸಾನವಾಗುವುದಿಲ್ಲ. ॥43॥ ಯಾವುದೇ ಕಾರ್ಯವು ಕಾರಣಕ್ಕೆ ವ್ಯತಿರಿಕ್ತವಾಗಿರುವುದಿಲ್ಲ. ಯಾವುದು ಅವ್ಯಕ್ತವೋ ಅದು ವ್ಯಕ್ತವಾಗುತ್ತದೆ. ಏಕೆಂದರೆ ಅದು ಸದಾ ಸತ್ಯಕ್ಕೆ ಅನುಗುಣವಾಗಿರುತ್ತದೆ. ಇದು ಸರ್ವತ್ರ ಅನುಭವವೇದ್ಯ ಸಂಗತಿ. ॥44॥ ಕಾರ್ಯ ಮತ್ತು ಕಾರಣಗಳ ಸರಪಳಿಯು ಕೇವಲ ನ್ಯೂನತೆಯನ್ನೂ ಇಲ್ಲವೇ ಅಧಿಕತೆಯನ್ನೂ ಸೂಕ್ಷ್ಮವಾಗಿ ಪ್ರಕಟಿಸುತ್ತದೆ. ಅಂತಹ ಸ್ಥಿತಿಯಲ್ಲಿ ಸ್ಥೂಲಕಾಯವು ನಾಶವಾಗುತ್ತದೆ. ಕೇವಲ ಸೂಕ್ಷ್ಮ ಮತ್ತು ಕಾರಣ ಮಾತ್ರವೇ ಉಳಿಯುತ್ತದೆ, ಇಲ್ಲವೇ ಅಸ್ತಿತ್ವದಲ್ಲಿರುತ್ತದೆ. ॥45॥ ಅದರ ಸ್ಥೂಲಕಾಯ ಲಯವಾದ ಮೇಲೂ ಅದರ ಮತ್ತಷ್ಟು ಸೂಕ್ಷ್ಮವು ಅವಶೇಷವಾಗಿ ಉಳಿಯುತ್ತದೆ. ಆಗ ಸಕಲೇಂದ್ರಿಯಗಳೂ, ಮನಸ್ಸು, ಬುದ್ಧಿ ಇವುಗಳಿಗೂ ಅಗ್ರಾಹ್ಯವಾದ

ಸ್ಥಿತಿಯನ್ನು ಗ್ರಹಣಾರ್ಥಿಯು ತಲಪುತ್ತಾನೆ. ॥46॥ ತಾತ್ಪರ್ಯವೇನೆಂದರೆ ಯಾವಾಗ ಬುದ್ಧಿಯು ಅಂತ್ಯವಾಗುತ್ತದೋ ಆಗ ಮಾತ್ರವೇ ಮೂರ್ತಿಯು ಅಮೂರ್ತಿಯ ಕಡೆಗೆ ಬೆನ್ನು ಮಾಡುತ್ತದೆ. ಇಲ್ಲದಿದ್ದರೆ ಕಾರಣದ ಅಸ್ತಿತ್ವವು ಅಮೂರ್ತಿಯಾಗಿರುವುದರಿಂದ ಅದನ್ನು ಮಸುಕಾಗಿಸಲು ಸಾಧ್ಯವಿಲ್ಲ. ಏಕೆಂದರೆ ಅಸ್ತಿತ್ವವು ಸರ್ವತ್ರ ಬೆಳಗುತ್ತಿರುತ್ತದೆ. ॥47॥ ಬುದ್ಧಿಯು ಆಶೆಗೆ ಆಶ್ರಯ ನೀಡುತ್ತದೆ. ಆದುದರಿಂದ ಅದರ ಸ್ಥೂಲ-ಸೂಕ್ಷ್ಮಕಾಯ ನಾಶವಾದ ಕೂಡಲೇ ಆತ್ಮದ ಉದಯವಾಗುತ್ತದೆ. ಮತ್ತು ಚರಣಗಳಲ್ಲಿ ನಾಶವಿಲ್ಲದ ಅಕ್ಷಯ ಸ್ಥಿತಿಯನ್ನು ಪಡೆಯುತ್ತದೆ. ॥48॥ ಅವಿದ್ಯೆ, ಮಾಯೆ, ಆಶೆ ಮತ್ತು ಕರ್ಮ ಇವುಗಳು ಮೃತ್ಯುವಿನ ಪ್ರಮುಖವಾದ ಧರ್ಮಗಳು. ಇವುಗಳೆಲ್ಲದರ ನಾಶದಿಂದ ಬಂಧನವು ಉಪಶಮನಹೊಂದುತ್ತದೆ. ॥49॥ ಈ ಎಲ್ಲ ಬಂಧನಗಳೂ ನಾಶವಾದ ಕೂಡಲೇ ಆತ್ಮವು ಅಪ್ರಯಾಸವಾಗಿ ಪ್ರಕಟಗೊಳ್ಳುತ್ತದೆ. ಯಾವ ರೀತಿ ಮೇಘಗಳೆಲ್ಲವೂ ಚದುರಿದ ನಂತರ ಅವಕಾಶ ಪಡೆದು ಸ್ವಯಂಪ್ರಕಾಶನಾದ ಸೂರ್ಯನು ಮಿಂಚುತ್ತಾನೋ ಹಾಗೆ. ॥50॥ "ನಾನು ದೇಹ. ಈ ಧನವು ನನ್ನದು" ಇದು ದೇಹಾಭಿಮಾನದ ಅತಿರೇಕ. ಇವು ಮಾಯೆಯು ನಮ್ಮ ಹೃದಯಕ್ಕೆ ಕಟ್ಟುವ ಬಂಧನಗಳು. ಅವೆಲ್ಲವೂ ನಮ್ಮ ದುಃಖಗಳಿಗೆ ಕಾರಣವು. ॥51॥ ಒಂದು ಸಲ ಈ ದೇಹವು ಮರಣ ಹೊಂದಿದರೆ, ಕರ್ಮಗಳಿಗನುಸಾರವಾಗಿ. ಆ ಕರ್ಮಗಳ ಬೀಜವನ್ನು ಸುಡುವುದಕ್ಕಾಗಿ ಮತ್ತೊಂದು ದೇಹವು ದೊರಕುತ್ತದೆ. ಆ ಕರ್ಮಗಳನ್ನು ನಾಶಮಾಡದೇ ಇದ್ದಲ್ಲಿ ಮತ್ತೊಂದು ಜನ್ಮ ನಿಶ್ಚಿತ. ॥52॥ ಮತ್ತೆ ಪುನಃ ಬೀಜಗಳು ಮರಗಳಾಗಿ ಬೆಳೆಯುತ್ತವೆ. ವಾಸನೆಗಳ ಬೀಜಗಳಿಂದಾಗಿ ದೇಹವು ಪ್ರಾಪ್ತಿಯಾಗುತ್ತದೆ. ಈ ರೀತಿ ಎಲ್ಲ ವಾಸನೆಗಳು ಕ್ಷಯಿಸುವವರೆಗೆ ಈ ಚಕ್ರಅವ್ಯಾಹತವಾಗಿ ತಿರುಗುತ್ತಿರುತ್ತದೆ. ॥53॥ ಆಶೆಗಳನ್ನು ಬೇರು ಸಹಿತ ನಿರ್ಮೂಲನ ಮಾಡಿದಲ್ಲಿ ಹೃದಯದ ಗಂಟುಗಳು ಬಿಟ್ಟು ಹೋಗುತ್ತವೆ. ಅಂತಹಮನುಷ್ಯನು ಅಮರನಾಗುತ್ತಾನೆ. ಇದೇ ವೇದಾಂತದ ಉಪದೇಶವಾಗಿರುತ್ತದೆ. ॥54॥ ಧರ್ಮ ಮತ್ತು ಅಧರ್ಮ ರಹಿತವಾದ ಸ್ಥಿತಿಯನ್ನು ಶಾಸ್ತ್ರದಲ್ಲಿ 'ವಿರಜ' (ಪರಿಶುದ್ಧ) ಎಂದು ಕರೆಯುತ್ತಾರೆ. ಆ ಸ್ಥಿತಿಯು ಅವಿದ್ಯೆಯಿಂದುಂಟಾದ ಕಾಮಗಳೆಲ್ಲವನ್ನೂ ನಿರ್ಮೂಲಗೊಳಿಸುತ್ತದೆ. ಅಲ್ಲಿ ಮೃತ್ಯುವಿನ ಗತಿಯೇ ಇರುವುದಿಲ್ಲ. ॥55॥ ವಾಸನೆಗಳ ಪರಿತ್ಯಾಗವು ಬ್ರಹ್ಮಾನಂದದ ಜೊತೆ ಸಂಯೋಗವನ್ನುಂಟುಮಾಡುತ್ತದೆ. ಅದನ್ನು ಶಬ್ದಗಳಿಂದ ವಿವರಿಸಲು ಅಸಾಧ್ಯ. ಮಾತುಗಳಿಂದಲೂ ವರ್ಣಿಸಲು ಆಗುವುದಿಲ್ಲ. ॥56॥ ಪರಿಪೂರ್ಣ ಪರಬ್ರಹ್ಮಜ್ಞಾನವೇ ಸಕಲ ಅನಿಷ್ಟಗಳಿಂದ ನಿವೃತ್ತಿಹೊಂದಿರುವುದು. ಅದೇ ಶೃತಿ ಮತ್ತು ಸ್ಮೃತಿಗಳಲ್ಲಿ ಪ್ರಮಾಣೀಕರಿಸಿರುವ ಪರಮೋಚ್ಚವಾದ ಇಷ್ಟಪ್ರಾಪ್ತಿ. ॥57॥ 'ಬ್ರಹ್ಮಜ್ಞಾನ ಮತ್ತು ಬ್ರಹ್ಮಾನುಭವವೇ ಕಟ್ಟಕಡೆಯದು' ಇದೇ ಬ್ರಹ್ಮಾನಂದದ ಚರಮ ಸ್ಥಿತಿ! ಇದಕ್ಕಿಂತ ಪರಮಶ್ರೇಷ್ಠವಾದುದು ಮತ್ತೇನಿದೆ? "ಆತ್ಮದ ಎಲ್ಲ ಲೋಕಗಳನ್ನೂ ದಾಟಿಬಂದಿರುತ್ತದೆ." ॥58॥ ಸಂಸಾರಸಾಗರವನ್ನು ಸಂಪೂರ್ಣವಾಗಿ ದಾಟಿಹೋಗಲು ಮತ್ತು ಪರದ ದಡವನ್ನು ತಲುಪಲು ಬ್ರಹ್ಮಜ್ಞಾನವೇ ಶ್ರೇಷ್ಠವಾದ ಉಪಾಯ ಮತ್ತು ಸಕಲವನ್ನೂ ಪಡೆಯಲು ಏಕಮಾತ್ರ

ಸಾಧನ. ॥59॥ ಪೂರ್ಣಶ್ರದ್ಧೆ ಮತ್ತು ಪರಿಪೂರ್ಣ ತಾಳ್ಮೆ ವಹಿಸಿರಿ. ಅವು ಉಮಾ ಮತ್ತು ಮಹೇಶ್ವರರ ಮೂರ್ತ ಸ್ವರೂಪ. ವಿಶ್ವಂಭರನಾದ ಭಗವಂತನು ತನ್ನ ಕೃಪಾಹಸ್ತವನ್ನು ನಿಮ್ಮ ತಲೆಯಮೇಲೆ ಇಡದೇ ಇದ್ದರೆ, ನಿಮ್ಮ ಹೃದಯದಲ್ಲಿ ಪ್ರಕಟವಾಗುವುದಿಲ್ಲ. ॥60॥ ಯಾರ ಮಾತುಗಳು ಅಮೋಘವಾದ ಶಕ್ತಿಯುಳ್ಳದ್ದಾಗಿವೆಯೋ ಅಂತಹ ಸಾಯಿನಾಥ ಗುರುವರ್ಯರು ಹೇಳಿದರು – "ಅದಕ್ಕೆ ಬೇಕಾಗಿರುವುದು ಶ್ರದ್ಧೆ ಹಾಗೂ ಅಲ್ಪ ಧೈರ್ಯವಷ್ಟೆ. ಅದರಿಂದ ಮಹದೈಶ್ವರ್ಯವನ್ನು ಪಡೆಯಬಹುದು." ॥61॥ ಕಣ್ಣುಗಳಿಗೆ ಗೋಚರಿಸುವ ಪ್ರಪಂಚವೆಲ್ಲವೂ ಮಿಥ್ಯೆಯು (ಸತ್ಯವಲ್ಲ). ಇದನ್ನು ಒಪ್ಪುವುದು ಅವಶ್ಯ. ಉದಾಹರಣೆಗೆ ಕನಸಿನಲ್ಲಿ ಕಾಣುವುದೆಲ್ಲವೂ ಪ್ರತ್ಯಕ್ಷವೆಂದು ಕಂಡರೂ ಎಚ್ಚರದಲ್ಲಿ ಅದೃಶ್ಯವಾಗುತ್ತವೆ. ॥62॥ ಇಲ್ಲಿಯವರೆಗೆ ಮಾತ್ರ ಬುದ್ಧಿಯ ಪರಿಧಿ. ಇಲ್ಲಿಯವರೆಗೆ ಮಾತ್ರ ಆತ್ಮದ ಅಸ್ತಿತ್ವದ ಪಾತ್ರ, ಆದರೆ ಯಾವ ಸ್ಥಿತಿಯಲ್ಲಿ ಅಸ್ತಿತ್ವಕ್ಕಾಗಲೀ ಅನಸ್ತಿತ್ವಕ್ಕಾಗಲೀ ಆಸ್ಪದವಿಲ್ಲವೋ ಅದೇ ನಿಜಕ್ಕೂ ಸತ್ಯದ ಹಂತ. ಅಂದರೆ ಪರಮ ಆತ್ಮ. ॥63॥ ಯಾವುದು ಸತ್, ಅಸತ್ ಇತ್ಯಾದಿ ಮತ್ತು ಲಿಂಗಭಾವ ವರ್ಜಿತವಾಗಿರುವುದೋ, ಎಲ್ಲಿ ಗುಣರಹಿತವಾಗಿರುವುದೋ ಅದು ನಿಜಕ್ಕೂ ಎಲ್ಲವನ್ನೂ ಒಳಗೊಂಡ ವಿವಿಧ ಶಬ್ದಗಳ ರೂಪದಿಂದ ಅಭಿವ್ಯಕ್ತವಾದ ಗುರುಸ್ವರೂಪ. ॥64॥ ಆತ್ಮವು ಯಾವುದೇ ಗುಣವಿಲ್ಲದಿರುವಂತಹದು. ವೃದ್ಧಾಪ್ಯ, ಹುಟ್ಟು ಅಥವಾ ಸಾವು ಇವುಗಳನ್ನು ಮೀರಿದುದು. ಅದು ಸನಾತನ ಹಾಗೂ ಶಾಶ್ವತ ಮತ್ತು ಯಾವತ್ತೂ ಅವಿನಾಶಿ –ಕ್ಷಯರಹಿತ. ॥65॥ ಅದು ನಿತ್ಯವಾದುದು, ಅಜೀತವಾದುದು ಮತ್ತು ಸನಾತನವಾದುದು. ಆಕಾಶದಂತೆ ಸರ್ವವ್ಯಾಪಿ, ಅನಂತ ಮತ್ತು ಅವಿಚ್ಛಿನ್ನ. ಅದು ಬೆಳೆಯುವುದೂ ಇಲ್ಲ, ಬದಲಾಗುವುದೂ ಇಲ್ಲ. ॥66ಶಬ್ದಗಳಿಗೆ ಅತೀತವಾದುದನ್ನು, ರೂಪವಿಲ್ಲದುದನ್ನು, ಆದಿ ಮತ್ತು ಅಂತ್ಯವಿಲ್ಲದೆ ಇರುವುದನ್ನು, ಅತಿ ಗಹನವಾದುದನ್ನು, ಕ್ಷಯಿಸದೇ ಇರುವುದನ್ನು, ಗಂಧ, ರಸ ಮತ್ತು ಲೇಪಗಳಿಲ್ಲದೆ ಇರುವುದನ್ನು ಯಾರು ತಾನೇ ವರ್ಣಿಸಲು ಸಾಧ್ಯ? ॥67॥ ಈ ರೀತಿ ಆತ್ಮವು ನಿರ್ಗುಣವೂ, ಅಗೋಚರವೂ ಆಗಿರುವುದು. ಅಜ್ಞಾನದ ಕಾರಣವಾಗಿ ತಿಳಿಯದಾಗಿದೆ. ಆದ್ದರಿಂದ ಜ್ಞಾನದಿಂದ ಈ ಅಜ್ಞಾನವನ್ನು ತೆಗೆದು ಹಾಕು. ಆದರೆ ಎಂದಿಗೂ ಆತ್ಮವೇ ಇಲ್ಲವೆಂದು ಮಾತ್ರ ಹೇಳಬೇಡ. ॥68॥ ಶ್ರೀ ಸಾಯಿಯ ಪರಮಹಂಸ ಸ್ಥಿತಿಯು ಅದೆಷ್ಟು ಅದ್ಭುತ? ಅದು ಅವರ ನಿಜ ಸಂಪತ್ತು! ಕಾಲವೆಂಬ ಕಳ್ಳನು ಅದನ್ನು ಕದ್ದುಕೊಂಡು ಹೋಗಿದ್ದಾನೆ. ಅದು ಮತ್ತೆಂದಾದರೂ ಕಾಣಸಿಗುತ್ತದೆಯೇ? ॥69॥ ನಾವು ಈಗ ಧನ, ಸುತ, ಹೆಣ್ಣು ಇವುಗಳಲ್ಲಿ ಆಸಕ್ತರಾದ ಭಕ್ತರ ಬಗ್ಗೆ ಯೋಚಿಸುವುದು ಬೇಡ. ಅತ್ಯಂತ ವಿರಕ್ತನಾದ ಯೋಗಿಯ ದರ್ಶನಕ್ಕಾಗಿ ಬಂದವನು ಅವರ ಚರಣ ಕಮಳಕ್ಕೆ ಬಹುವಾಗಿ ಆಸಕ್ತನಾಗಿರುವನು. ॥70॥ ಈ ಜಗತ್ತಿನಲ್ಲಿ ಎಲ್ಲಾ ಆಶೆಗಳ ಮತ್ತು ಕರ್ಮಗಳ ಬಂಧನದಿಂದ ವಿಮುಕ್ತನಾದವನು ಮತ್ತು ದೇಹ ಮತ್ತು ಮನೆಯಿಂದ ವಿರಕ್ತನಾದ ಭಕ್ತನು ಈ ಜಗತ್ತಿನಲ್ಲಿದ್ದೂ ಜೀವನ್ಮುಕ್ತ. ಅಂತಹವರು ನಿಜವಾಗಿಯೂ ಧನ್ಯರು. ॥71॥ ಯಾರು ಕೇವಲ ಸಾಯಿಯನ್ನು ಮಾತ್ರ ತಮ್ಮ ದೃಷ್ಟಿಯ

ವಿಷಯವನ್ನಾಗಿಸಿರುವವರೋ, ಅವರು ಬೇರೆ ಏನನ್ನಾದರೂ ನೋಡಲು ಸಾಧ್ಯವೇ? ಅವರು ಎಲ್ಲಿ ನೋಡಿದರೂ ಸಾಯಿ ಇಲ್ಲದ ಜಾಗವೇ ಇರುವುದಿಲ್ಲ. ॥72॥ ಯಾರು ಶ್ರೀ ಸಾಯಿ ನಾಮವನ್ನು ಸ್ಮರಿಸುತ್ತಿರುತ್ತಾರೋ, ಹೃದಯದಲ್ಲಿ ಸಾಯಿ ಪ್ರೇಮವನ್ನು ತುಂಬಿಕೊಂಡಿರುತ್ತಾರೋ, ಅವರಿಗೆ ನಿತ್ಯವೂ ಕ್ಷೇಮ ನಿಶ್ಚಿತ, ಸ್ವಯಂ ಸಾಯಿಯೇ ಅವರನ್ನು ರಕ್ಷಿಸುತ್ತಾರೆ. ॥73॥ ಯಾರು ಕೇವಲ ಸಾಯಿವಿಚಾರವನ್ನು ಮಾತ್ರ ಕೇಳುವರೋ, ಸಾಯಿ ಶಬ್ದವನ್ನು ಬಿಟ್ಟು ಬೇರೇನೂ ಮಾತನಾಡುವುದಿಲ್ಲವೋ, ಸಾಯಿ ಪರಿಮಳವನ್ನು ಆಘ್ರಾಣಿಸುತ್ತಿರುವರೋ, ಸಾಯಿನಾಮವನ್ನು ನಾಲಿಗೆಯ ಮೇಲೆ ಆಸ್ವಾದಿಸುತ್ತಿರುವರೋ, ಅವರ ಸ್ಥಿತಿಯೂ ಸಾಯಿಯದೇ ಆಗಿರುತ್ತದೆ. ॥74॥ ಪರಮ ಸುಖವನ್ನು ನೀಡುವಸಾಯಿಯ ಮಂದಸ್ಮಿತವದನವು ಅದೆಷ್ಟು ಅದ್ಭುತ! ಅಂತಹುದನ್ನು ದರ್ಶನ ಮಾಡಿದ ಮತ್ತು ಅವರ ಮಾತುಗಳ ರಸವನ್ನು ಆಸ್ವಾದಿಸಿದ ಭಾಗ್ಯವಂತರು ನಿಜವಾಗಿಯೂ ಧನ್ಯರು. ॥75॥ ನಮ್ಮ ಕಲ್ಯಾಣದ ನಿಧಿಯೂ, ನಮ್ಮ ಸುಖ ಶಾಂತಿಗಳ ಜನ್ಮಸ್ಥಾನವೂ ಆಗಿರುವ ಅವರು ಸತ್ ಮತ್ತು ಅಸತ್ ಇವುಗಳ ವಿವೇಚನೆಯಿಂದ ಕೂಡಿ, ವೈರಾಗ್ಯವಂತನೂ ಆಗಿ ಅಂತರಂಗದಲ್ಲಿ ಸದಾ ಸಾವಧಾನದಿಂದ ಕೂಡಿರುತ್ತಾರೆ. ॥76॥ ಯಾವ ರೀತಿ ಕರುವೃತನಗೆ ಬೇಕಾದಷ್ಟು ಹಾಲನ್ನು ಕುಡಿದ ನಂತರವೂ ತಾಯಿಯ ಪಕ್ಕವನ್ನು ಬಿಟ್ಟು ಹೋಗುವುದಿಲ್ಲವೋ ಅದೇ ರೀತಿ ಮನಸ್ಸನ್ನು ಗುರುಚರಣಗಳಿಗೆ ಭಕ್ತಿಯ ಹಗ್ಗದಿಂದ ಬಂಧಿಸಬೇಕು. ॥77॥ ಗುರುವಿನ ಕೃಪೆಯನ್ನೂ ಅನುರಾಗವನ್ನೂ ಪಡೆಯಲು ಅವನ ಚರಣ ಕಮಲಗಳ ಧೂಳಿಯಲ್ಲಿ ವಂದಿಸು, ಆದರೆ ಮನಸ್ಸಿನಲ್ಲಿ ಅವನ ಹಿತಬೋಧನೆಯನ್ನು ಸ್ಥಿರಪಡಿಸಿಕೊಂಡು ಹೆಚ್ಚೆಹೆಚ್ಚಿಗೂ ಅದರ ಅನುಭವವನ್ನು ಪಡೆ. ॥78॥ ಯಥೇಚ್ಛವಾಗಿ ಇಂದ್ರಿಯ ಸುಖಗಳಲ್ಲಿ ರಮಿಸುತ್ತಿದ್ದರೂ ಅಂತರಂಗದಲ್ಲಿ ಸಾಯಿ ಪ್ರೀತಿಯನ್ನು ನೆಲೆಗೊಳಿಸು. ಏಕೆಂದರೆ ಅದು ಅಂತಿಮವಾಗಿ ಸ್ವಾರ್ಥ ಹಾಗೂ ಪರಮಾರ್ಥ ಎರಡನ್ನೂ ಸಾಧಿಸಲು ಸಹಕಾರಿಯಾಗುತ್ತದೆ. ॥79॥ ಮಂತ್ರಸಿದ್ಧಿ ಪಡೆದ ಮಾಂತ್ರಿಕನು ಅಂಜನ ಹಾಕಿ ನೋಡಿ ಭೂಮಿಯಲ್ಲಿ ಹುದುಗಿರುವ ನಿಧಿಯನ್ನು ಪಾಂಯಾಳುವಿಗೆ (ಕಾಲುಗಳನ್ನು ಮುಂದಿಟ್ಟು ಹುಟ್ಟಿರುವವನಿಗೆ) ಹೇಳುತ್ತಾನೆ. ಅದೇ ರೀತಿ ಗುರುವಿನ ಚರಣ ಧೂಳಿಯು ಕಣ್ಣುಗಳಿಗೆ ಜ್ಞಾನ ಮತ್ತು ವಿಜ್ಞಾನ ಎರಡನ್ನೂ ಕೊಡುತ್ತದೆ. ॥80॥ ಸಿದ್ಧಪುರುಷನ ಯಾವುದೇ ಗುಣಲಕ್ಷಣಗಳಿರಲಿ, ಅವು ಸಾಧಕನಿಗೆ ಸಾಧ್ಯವಾಗಿಸಿಕೊಳ್ಳಲು ದೀರ್ಘ ಪ್ರಯತ್ನ ಹಾಗೂ ಅಭ್ಯಾಸ ಮಾಡಬೇಕಾಗುತ್ತದೆ. ॥81॥ ಹಾಲಿನಿಂದ ತುಪ್ಪವನ್ನು ಮಾಡಬಹುದು. ಆದರೆಹಾಲನ್ನು ಹುಳಿ ಮಾಡದಿದ್ದರೆ, ಮಜ್ಜಿಗೆಯೂ ಇಲ್ಲ, ಬೆಣ್ಣೆಯೂ ಇಲ್ಲ, ತುಪ್ಪವೂ ಇಲ್ಲ. ಏಕೆಂದರೆ ಇವೆಲ್ಲಕ್ಕೂ ಕೆಲವು ಸಂಸ್ಕಾರಗಳನ್ನು ಮಾಡಬೇಕಾಗುತ್ತದೆ. ॥82॥ ಮೊಸರನ್ನು ಕಡೆಯದೆ ಬೆಣ್ಣೆ ಬರುವುದಿಲ್ಲ. ಬೆಣ್ಣೆಯನ್ನು ಬೆಂಕಿಯ ಮೇಲಿಟ್ಟು ಕಾಯಿಸದ ಹೊರತು ರುಚಿಕರವಾದ ಸ್ವಾದಿಷ್ಟವಾದ ತುಪ್ಪವು ಲಭಿಸುವುದಿಲ್ಲ. ॥83॥ ಆದ್ದರಿಂದ ಮುಖ್ಯವಾಗಿ ಬೇಕಾಗಿರುವುದು ಸಂಸ್ಕಾರಗಳ ಶಕ್ತಿ ಮತ್ತು ಹಿಂದಿನ ಅಭ್ಯಾಸಗಳಿಂದ ಉಂಟಾದ ಬುದ್ಧಿಶಕ್ತಿ. ಅಭ್ಯಾಸವಿಲ್ಲದೆ

ಚಿತ್ತಶುದ್ಧಿಯಿಲ್ಲ. ಅದಿಲ್ಲದೆ ಜ್ಞಾನವನ್ನು ಸಂಪಾದಿಸುವುದೂ ದುರ್ಗಮವಾಗುತ್ತದೆ. ॥84॥ ಮನಸ್ಸು ನಿರ್ಮಲ ವೃತ್ತಿಯದಾಗಬೇಕು. ಆಗ ಮಾತ್ರವೇ ಆತ್ಮಜ್ಞಾನ ಪ್ರಾಪ್ತಿಯು ಸಾಧ್ಯ. ಆ ಸ್ವರೂಪಸ್ಥಿತಿಯನ್ನು ಪಡೆಯುವವರೆಗೆ ಭಗವದ್ಭಕ್ತಿಯನ್ನು ಬಿಡಬೇಡಿ. ॥85॥ ಆತ್ಮಜ್ಞಾನವೆಂಬ ಮಂದಿರವನ್ನು ಕಟ್ಟಲು ಭಗವದ್ಭಕ್ತಿಯೆಂಬ ಅಡಿಪಾಯವನ್ನು ಹಾಕಬೇಕು. ಮುಕ್ತಿಯ ನಾಲ್ಕು ಗೋಪುರಗಳು ಬೆಳಗಬೇಕು. ಮತ್ತು ವಿರಕ್ತಿಯೆಂಬ ಧ್ವಜವು ಹಾರಾಡಬೇಕು. ॥86॥ ರಾತ್ರಿ–ಹಗಲು ನಾಯಿಗಳು ಮತ್ತು ಹಂದಿಗಳು ಕೆಸರಿನಲ್ಲಿ ಹೊರಳಾಡುತ್ತವೆ. ಮಲವನ್ನು ತಿನ್ನುತ್ತವೆ. ಈ ರೀತಿ ಅವು ವಿಷಯ ಭೋಗವನ್ನು ಅನುಭವಿಸುತ್ತಿರುತ್ತವೆ. ಮಾನವನೂ ಅದೇ ರೀತಿ ಆಗಬೇಕೇನು? ॥87॥ ಮನುಷ್ಯನು ತಪಸ್ಸಿನಿಂದ ಚಿತ್ತಶುದ್ಧಿಯನ್ನು ಪಡೆಯಬೇಕು. ಅದರಿಂದಾಗಿ ಅಖಂಡವಾದ ಬ್ರಹ್ಮನನ್ನು ಸಿದ್ಧಿಸಿಕೊಳ್ಳಬಹುದು. ಅದಕ್ಕಾಗಿ ಸ್ವಧರ್ಮದ ಆಚರಣೆಯಲ್ಲಿ ನಿರತನಾಗಬೇಕು. ॥88॥ ಸಾಧುಗಳ ಸೇವೆಯೇ ಮುಕ್ತಿಯ ನಿವಾಸ. ಅಲ್ಲದೆ ಕಾಮಲೋಲುಪತೆ ನರಕದ ಬಾಗಿಲನ್ನು ತೆರೆಯುತ್ತದೆ. ಇವು ಪೂಜ್ಯರಾದ ವೃದ್ಧ ಜನರ ಉದ್ಗಾರವು. ಇದನ್ನು ಸರ್ವಥಾ ಮನಸ್ಸಿನಲ್ಲಿಟ್ಟು ವಿಚಾರ ಮಾಡುತ್ತಿರಬೇಕು. ॥89॥ ಯಾರು ಸದಾಕಾಲ ಸದಾಚಾರಸಂಪನ್ನರಾಗಿರುತ್ತಾರೋ, ಕೇವಲ ದೇಹ ನಿರ್ವಹಣೆಗೆ ಬೇಕಾದಷ್ಟು ಮಾತ್ರ ಆಹಾರ ತೆಗೆದುಕೊಳ್ಳುತ್ತಾರೋ, ಮನೆ, ಮಡದಿ, ಮಕ್ಕಳಲ್ಲಿ ಮೋಹಿತರಾಗಿಲ್ಲವೋ, ಅಂತಹವರು ನಿಜವಾಗಿಯೂ ಧನ್ಯರು. ಅಂತಹವರು ಸಾಧುವೇ ಆಗಿರುತ್ತಾರೆ. ॥90॥ ಯಾರು ಒಂದು ನಿಮಿಷವೂ ಕಣ್ಣುಮುಚ್ಚದೆ ಸದಾ ಕಾಲ ಸಾಯಿಯ ಚಿಂತನೆ ಮಾಡುತ್ತಾರೋ, ಸಾಯಿಯು ಅವರ ಬಗ್ಗೆ ಸ್ವಯಂ ಚಿಂತಿಸುತ್ತಾರೆ. ಅವರಿಗೆ ಋಣಿಯಾಗಿರುತ್ತಾರೆ. ಈ ಅನುಭವದ ಅಚ್ಚರಿಯನ್ನು ನೋಡಿರಿ. ॥91॥ ನಾಮಸ್ಮರಣೆಯ ಮಹತ್ವವು ಧನ್ಯ! ಗುರುವೇ ಭಕ್ತನನ್ನು ಸ್ಮರಿಸುತ್ತಾನೆ. ಧ್ಯಾನ ಮಾಡುತ್ತಿರುವವನು ಧ್ಯಾನ ಮಾಡಲ್ಪಡುವುದರ ಜೊತೆಯಲ್ಲಿ ಐಕ್ಯವಾಗಿ ಪರಸ್ಪರ ಪೂರ್ಣ ವಿಸ್ಮೃತಿಯನ್ನು ಹೊಂದುತ್ತಾರೆ. ॥92॥ “ನಿನ್ನ ಕಾರ್ಯಗಳಿಗೆ ನೀನೇ ಕಾರಣ! ನಾನು ಮಾತ್ರ ಹಗಲು–ರಾತ್ರಿ ನಿನ್ನನ್ನೇ ಧ್ಯಾನಿಸುತ್ತೇನೆ” ಇವು ಬಾಬಾರವರ ವಚನಗಳಾಗಿದ್ದವು. ಅನೇಕರು ಇಂತಹ ಪ್ರೀತಿಯ ಮಾತುಗಳನ್ನು ಸ್ಮರಿಸುತ್ತಾರೆ. ॥93॥ ನಮಗೆ ಬೇರೆ ಯಾವ ಶಾಸ್ತ್ರ ಪಠಣವೂ ಬೇಕಾಗಿಲ್ಲ. ಈ ಒಂದು ಸಾಯಿಯ ಅಧ್ಯಾತ್ಮ ಕಥನವೇ ಸಾಕು. ನಾವು ಎಷ್ಟೇ ಅಸಂಖ್ಯಾತ ಪಾಪಗಳನ್ನೇ ಮಾಡಿರಲಿ ಅವರು ನಮ್ಮನ್ನು ಎಲ್ಲ ಸಂಕಟಗಳಿಂದಲೂ ರಕ್ಷಿಸುತ್ತಾರೆ. ॥94॥ ಈ ಗ್ರಂಥವನ್ನು ಪೂರ್ಣವಾಗಿ ಒಂದೇ ಸಲ್ಲೆ ಓದಲು ಸಾಧ್ಯವಾಗದಿದ್ದರೂ, ಗುರು ಭಕ್ತಿಯ ಪ್ರಕರಣಗಳನ್ನು ಹೃದಯದಲ್ಲಿ ತುಂಬಿಸಿಕೊಂಡು ಏಕಾಗ್ರತೆಯಿಂದ ಓದಿ, ಅವುಗಳನ್ನು ಪ್ರತಿನಿತ್ಯವೂ ವಿಧಿವತ್ತಾಗಿ ಪಠಿಸಿರಿ. ॥95॥ ದಿನದ ಯಾವುದೇ ಸಮಯದಲ್ಲಾಗಲೀ, ಈ ಚರಿತ್ರೆಯನ್ನು ನಿತ್ಯವೂ ಓದಿರಿ. ಶ್ರೀಹರಿಯು ನಿಮ್ಮ ಗುರುರಾಜರ ಸಹಿತವಾಗಿ ನಿಶ್ಚಯವಾಗಿ ತಮ್ಮ ಭಕ್ತರನ್ನು ಭೇಟಿಮಾಡುತ್ತಾರೆ. ॥96॥ ಯಾರ ಮನೆಯಲ್ಲಿ ನಿತ್ಯವೂ ಪಾರಾಯಣವಾಗುತ್ತದೋ ಆ ಮನೆಯಲ್ಲಿ ಲಕ್ಷ್ಮಿಯು ಅಖಂಡವಾಗಿ

ನೆಲೆಸುತ್ತಾಳೆ. ಒಂದು ಸಪ್ತಾಹದಲ್ಲಿ ಇಡೀ ಗ್ರಂಥವನ್ನು ಓದಿ ಮುಗಿಸಿದರೆ ದರಿದ್ರವು ಓಡಿ ಹೋಗುತ್ತದೆ. ॥97॥ ಇಷ್ಟು ನಾನು ಹೇಳುತ್ತಿರುವೆನೆಂದು ಭಾವಿಸಬೇಡಿ. ಏಕೆಂದರೆ ಅದು ಮನಸ್ಸಿನಲ್ಲಿ ಸಂಶಯಗಳನ್ನು ಹುಟ್ಟಿಸುತ್ತದೆ. ಸಾಯಿಯವರೇ ನನ್ನ ವಾಣಿಯಿಂದ ನುಡಿಸುತ್ತಿದ್ದಾರೆ. ಕ್ಲಿಷ್ಟಕರವಾದ ಊಹೆಯನ್ನು ಪಕ್ಕಕ್ಕೆ ಸರಿಸಿಡಿರಿ. ॥98॥ ಸಾಯಿಯು ಸಕಲ ಸದ್ಗುಣಗಳ ಗಣಿ. ತಮ್ಮ ಭಕ್ತರಿಗೆ ಕೈವಲ್ಯವನ್ನುಪ್ರತಿಪಾದಿಸುವವರು. ಅವರ ಚರಿತ್ರೆಗಳು ಕಲಿಯುಗದ ಎಲ್ಲ ಪಾಪಗಳನ್ನೂ ನಾಶಮಾಡುತ್ತವೆ. ಶ್ರೋತೃಗಳು ಅವುಗಳನ್ನು ಕೇಳಬೇಕು. ॥99॥ ಅಂತಹ ಸಂತರ ಚರಿತ್ರೆಗೆ ಹೋಲಿಸಿದರೆ ಸ್ವರ್ಗಸುಖವು ಕೇವಲ ಕ್ಷುಲ್ಲಕವಾದುದು. ಈ ಸತ್ಕಥನದ ಮಹಾಲಾಭವನ್ನು ತ್ಯಜಿಸಿ ಯಾರು ತಾನೇ ತಮ್ಮ ತಲೆಯನ್ನು ಎತ್ತಿ ಅಲ್ಲಿ ನೋಡಬಲ್ಲರು? ॥100॥ ಸುಖ ಮತ್ತು ದುಃಖ ಎರಡೂ ಮನಸ್ಸಿನ ವಿಕಾರ ಸ್ಥಿತಿಗಳು. ಸತ್ಸಂಗವು ಸದಾ ನಿರ್ವಿಕಾರವಾದುದು. ಅದು ಮನಸ್ಸನ್ನು ಚೈತನ್ಯಕಾರಿಯನ್ನಾಗಿ ಮಾಡುತ್ತದೆ. ಅಲ್ಲಿ ಸುಖ-ದುಃಖಗಳೆರಡಕ್ಕೂ ಜಾಗವೇ ಇರುವುದಿಲ್ಲ. ॥101॥ ಒಬ್ಬ ವಿರಕ್ತನು ಏಕಾಂತದಲ್ಲಿ ಅನುಭವಿಸುವ ಸುಖವನ್ನು ಅಥವಾ ಒಬ್ಬ ಭಕ್ತನು ಭಕ್ತಿಯಲ್ಲಿ ಅನುಭವಿಸುವ ಸುಖವನ್ನು ಇಂದ್ರನು ಚಕ್ರವರ್ತಿಯಾದಾಗ್ಯೂ ಕಲ್ಪಾಂತ್ಯದವರೆಗೂ ಅನುಭವಿಸಲು ಸಾಧ್ಯವಿಲ್ಲ. ॥102॥ ಪ್ರಾರಬ್ಧವನ್ನು ಅನುಭವಿಸುವುದು ಅತಿ ಬಲವತ್ತರವಾದುದು. ಬುದ್ಧಿಯು ಪೂರ್ವಜನ್ಮದ ಕರ್ಮಾನುಸಾರ ಉಂಟಾಗುತ್ತದೆ. ಆದರೆ ವಿಧಿಬರಹದ ಕರ್ಮಗಳನ್ನು ಭಕ್ತನು ಒಬ್ಬ ಸಂತನ ಆಟದ ರೀತಿಯಲ್ಲಿ ದೂರ ಮಾಡಿಕೊಳ್ಳಬಹುದು. ॥103॥ ಭಗೀರಥ ಪ್ರಯತ್ನ ಮಾಡಿದರೂ ಪ್ರಾರಬ್ಧಕರ್ಮಗಳ ಫಲವನ್ನು ತಪ್ಪಿಸಲು ಸಾಧ್ಯವಿಲ್ಲ. ಕರ್ಮಗಳು ತಡೆಯಲಾಗದಂತಹ ಸ್ಥಿತಿಯಲ್ಲಿ ಫಲ ನೀಡಲು ಪ್ರಾರಂಭಿಸುತ್ತವೆ. ಆಗ ಅವುಗಳಿಂದ ಬಿಡುಗಡೆಹೊಂದುವುದು ನಿಜವಾಗಿಯೂ ಅಶಕ್ಯವಾಗಿಬಿಡುತ್ತದೆ. ॥104॥ ಸಂತರು ಅವುಗಳನ್ನು ಅರಿಯಬಲ್ಲರು. ಅವುಗಳು ಅವಾಂಛಿತ ದುಃಖವಾಗಿರಬಹುದು ಅಥವಾ ಅಕಲ್ಪಿತ ಸುಖವಾಗಿರಬಹುದು. ದೇಹ ಪ್ರಾರಬ್ಧದ ರೀತಿ ಕರ್ಮಫಲಗಳನ್ನು ಅವರು ತಿಳಿದಿರುತ್ತಾರೆ. ॥105॥ ನಿಮ್ಮ ನಾಮವನ್ನು ಅಖಂಡವಾಗಿ ಸ್ಮರಿಸುವುದು ನಮ್ಮ ವ್ರತ, ತಪಸ್ಸು ಮತ್ತು ದಾನವಾಗಿದೆ. ಮತ್ತು ಶಿರಡಿಗೆ ಆಗಾಗ ಪ್ರಯಾಣ ಮಾಡುವುದು ನಮ್ಮ ಏಕೈಕ ತೀರ್ಥಯಾತ್ರೆಯಾಗಿದೆ. ॥106॥ "ಸಾಯಿ ಸಾಯಿ" ಎಂಬ ನಾಮವನ್ನು ಮಾತ್ರ ಸ್ಮರಿಸುತ್ತೇವೆ. ಅದು ಎಲ್ಲ ದೇವರ ಅನುಷ್ಠಾನಕ್ಕೆ ಬೇಕಾದ ಮಂತ್ರವಾಗಿದೆ. ಇದೇ ನಮ್ಮ ಧ್ಯಾನ. ಇದೇ ನಮ್ಮ ಜಪ. ನಾವು ಅನನ್ಯರಾಗಿ ನಿಮ್ಮಲ್ಲಿ ಶರಣಾಗುತ್ತೇವೆ. ॥107॥ನಿಷ್ಕಪಟಭಾವದಿಂದ, ಪ್ರೇಮಾನುಸಂಧಾನ ಮಾಡುವುದೇ ಅವನಿಗೆ ನಿಜವಾದ ಪೂಜೆಯಾಗಿದೆ. ಅನಂತರ ಅಂತರಂಗದಲ್ಲಿಯೇ ತರ್ಕಕ್ಕೆ ನಿಲುಕದ ಅವನ ಸಾಧನೆಗಳನ್ನು ಅನುಭವಿಸು. ॥108॥ ಈ ದೀರ್ಘ ವಿವರಣೆಯು ಸಾಕಿನ್ನು. ನಮಗೆ ತಕ್ಷಣವೇ ಒಂದು ಸಿಹಿಯಾದುದು ಬೇಕು. ಈ ಹಿಂದೆ ಸೂಚಿಸಿದ ರಸಭರಿತ ಚರಿತ್ರೆಯನ್ನು ಕೇಳಲು ಸಕಲರೂ ಉತ್ಸುಕರಾಗಿರಿ. ॥109॥ ನನ್ನ ಶ್ರೋತೃವೃಂದದ ಕುತೂಹಲವನ್ನು ಅರಿತು, ಕಥೆಯ ಅದ್ಭುತವನ್ನು ಸಂಕ್ಷಿಪ್ತವನ್ನಾಗಿ ಮಾಡಿ

ಹಿಂದೆ ತಿಳಿಸಿದಂತೆ ನಿಮ್ಮ ಪರಿಪೂರ್ಣ ಗಮನವನ್ನು ಅದರ ಮೇಲೆ ಇರಿಸಬಹುದಾಗಿದೆ. ॥110॥ ನಾನಾದರೋ ಪಾಮರ, ಮಂದಮತಿ ಮತ್ತು ಕಾವ್ಯದ ಪದಬಂಧ ವ್ಯುತ್ಪತ್ತಿ ವ್ಯಾಕರಣವನ್ನು ಸ್ವಲ್ಪವೂ ಅರಿಯದವನು. ಸಾಯಿಯು ನನ್ನ ಮೂಲಕ ಏನನ್ನು ಬಯಸಬೇಕೆಂದಿರುವರೋ ಅದನ್ನು ನನ್ನ ಕೈಹಿಡಿದು ಬರೆಯಿಸುತ್ತಿರುವರು. ॥111॥ ಸಾಯಿಯು ನನಗೆ ಬುದ್ಧಿ ಶಕ್ತಿಯನ್ನು ಕೊಡದಿದ್ದರೆ ಈ ಚರಿತ್ರೆಯನ್ನು ಬರೆಯಲು ನಾನು ಯಾರು? ಅವರು ತಮ್ಮ ಕಥೆಯನ್ನು ತಾವೇ ಹೇಳುತ್ತಾರೆ. ಮತ್ತು ಅದನ್ನು ತಾವೇ ಬರೆಯುತ್ತಾರೆ. ॥112॥ ಈ ರೀತಿ, ಹಿಂದೆ ಚಾವಡಿಯ ಕಥೆಯನ್ನು ಹೇಳಿದಾಗ ಹಂಡೆ ಮತ್ತು ಪ್ರಸಾದದ ಕಥೆಯ ಬಗ್ಗೆ ಹೇಳುವೆನೆಂದು ಪ್ರಮಾಣ ಮಾಡಿದ್ದೆನು. ಆ ಕಥಾ ನಿರೂಪಣೆಯನ್ನು ಕೇಳಿರಿ. ॥113॥ ನಾನು ಇದೇ ರೀತಿಯ ಕಥೆಗಳನ್ನು ಅಥವಾ ಮತ್ತೆ ಯಾವುದಾದರೂ ನೆನಪಿಗೆ ಬಂದಂತಹ ಕಥೆಗಳನ್ನು ಶ್ರೋತೃಗಳಿಗೆ ತಿಳಿಸುತ್ತೇನೆ. ಗಮನವಿಟ್ಟು ಆಲಿಸಿರಿ. ॥114॥ ಸಾಯಿಯ ಕಥೆಗಳ ಅದ್ಭುತವು ನಿಜವಾಗಿಯೂ ಧನ್ಯ! ಅವುಗಳ ಶ್ರವಣ ಪ್ರಭಾವವು ಧನ್ಯ ಧನ್ಯ! ಅವುಗಳ ಮೇಲೆ ಧ್ಯಾನಿಸಿದಲ್ಲಿ ಸ್ವಸ್ವರೂಪವು ಪ್ರಕಟವಾಗುತ್ತದೆ. ಮತ್ತು ಅದರಿಂದ ಸಾಯಿ ಚರಣಗಳಲ್ಲಿ ಸದ್ಭಾವ ಭಕ್ತಿಯು ಹೆಚ್ಚಾಗುತ್ತದೆ. ॥115॥ ಈಗ, ಮೊದಲು ಚಾವಡಿಯ ವಿವರಣೆ ಮತ್ತು ಅನಂತರ ಆ ಸಮಾರಂಭದ ರೂಪುರೇಶೆಯನ್ನು ನೀಡುತ್ತೇನೆ. ಬಾಬಾರವರು ದಿನ ಬಿಟ್ಟು ದಿನ ನಿಯಮಿತವಾಗಿ ಚಾವಡಿಯಲ್ಲಿ ಮಲಗುತ್ತಿದ್ದರು. ॥116॥ ಬಾಬಾರವರ ಈ ನಿತ್ಯದ ಪರಿಪಾಠ, ಒಂದು ದಿನ ಮಸೀದಿಯಲ್ಲಿ ಮಲಗುವುದು ಮತ್ತೊಂದು ದಿನ ಚಾವಡಿಯಲ್ಲಿ ಮಲಗುವುದು ಇದು ಸಮಾಧಿಯ ದಿನದವರೆಗೆ ಕ್ರಮಬದ್ಧವಾಗಿ ನಡೆಯಿತು. ॥117॥ ಅನಂತರ, ಡಿಸೆಂಬರ್ 1909ನೆಯ ಇಸವಿ 10ನೆಯ ತಾರೀಖು ಚಾವಡಿಯಲ್ಲಿ ಸಾಯಿಯ ಭಜನೆ, ಅರ್ಚನೆ, ಪೂಜೆಗಳು ಪ್ರಾರಂಭವಾದವು. ॥118॥ ಮೊದಲು ಚಾವಡಿ ಸಮಾರಂಭದ ವಿವರಣೆಯನ್ನು ನನ್ನ ಕೈಲಾದ ಮಟ್ಟಿಗೆ ಉತ್ತಮವಾಗಿ ಆರಂಭಿಸುತ್ತೇನೆ. ಸಾಯಿಯು ನನ್ನಲ್ಲಿ ಉತ್ಸಾಹವನ್ನು ಕೃಪೆಮಾಡಲಿ ಮತ್ತು ಪರಮೇಶ್ವರನು ಅದನ್ನು ಪೂರ್ಣಮಾಡಲು ಸಹಾಯಮಾಡಲಿ. ॥119॥ ಬಾಬಾರವರು ಚಾವಡಿಗೆ ಹೋಗುವ ರಾತ್ರಿಯಂದು ಭಜನ ಮಂಡಲಿಯು ಮಸೀದಿಗೆ ಬಂದು ಎರಡು ಪ್ರಹರ ಕಾಲ ಮಸೀದಿಯ ಅಂಗಳದಲ್ಲಿ ಭಜನೆ ಮಾಡುತ್ತಿದ್ದರು. ॥120॥ ಹಿಂದೆ ಶೋಭಾಯಮಾನವಾದ ರಥ, ಬಲಗಡೆ ತುಳಸಿಗಿಡ ಇರುವ ಒಂದು ಬೃಂದಾವನ, ಅವುಗಳ ಎದುರಿಗೆ ಬಾಬಾರವರು ಸ್ವತಃ ಕುಳಿತಿರುತ್ತಿದ್ದರು. ಮಧ್ಯದಲ್ಲಿ ಭಕ್ತ ಜನ ಭಜನೆ ಹಾಡುತ್ತ ಕುಳಿತಿರುತ್ತಿದ್ದರು. ॥121॥ ಎಲ್ಲ ಭಕ್ತರು, ಪುರುಷರು ಮತ್ತು ಮಹಿಳೆಯರು ಯಾರಿಗೆ ಹರಿ ಭಜನೆಗಳ ಮೇಲೆ ಅತ್ಯಾದರವಿರುತ್ತಿತ್ತೋ ಅಂತಹವರು ಭಜನೆಯಲ್ಲಿ ತನ್ಮಯರಾಗಲು ಸಭಾಮಂಟಪಕ್ಕೆ ಬೇಗನೆ ಬಂದಿರುತ್ತಿದ್ದರು. ॥122॥ ಭಜನೆಯ ನಾದವು ವಿವಿಧ ವಾದ್ಯಗಳ ನಾದಲಹರಿಯ ಜೊತೆಯಲ್ಲಿ ಉಕ್ಕುತ್ತಿದ್ದವು. ತಾಳ್[1], ಚಿಪ್ಳಿ[2], ಮೃದಂಗ್[3], ಖಂಜರಿ[4] ಮತ್ತು ಘೋಲ್[5] ಅವುಗಳ ನಾದಗಳ ಜೊತೆಯಲ್ಲಿ ಕೆಲವರು ಕೈಯಲ್ಲಿ ತಾಳ ಹಾಕುತ್ತಿದ್ದರು.

॥123॥ ಸಾಯಿ ಸಮರ್ಥರು ಚುಂಬಕಮಣಿಯ ರೀತಿ ತಮ್ಮದೇ ಆದ ಆಕರ್ಷಣಾ ಶಕ್ತಿಯಿಂದ ಭಕ್ತರನ್ನು, ಲೋಹದ ಚೂರುಗಳನ್ನು, ತಮ್ಮ ಚರಣಗಳಿಗೆ ಅವರಿಗೆ ತಿಳಿಯದಂತೆ ಆಕರ್ಷಿಸುತ್ತಿದ್ದರು. ॥124॥ ದೀಪಧಾರಿಗಳು ತಮ್ಮಲ್ಲಿದ್ದ ದೀಪಗಳನ್ನು, ಹೊತ್ತಿಸಿ ಅಂಗಳದಲ್ಲಿ ನಿಲ್ಲುತ್ತಿದ್ದರು. ಪಲ್ಲಕ್ಕಿಯನ್ನು, ಕೆಲವರು ಶೃಂಗರಿಸುತ್ತಿದ್ದರು. ದ್ವಾರದ ಹತ್ತಿರ ಮತ್ತೆ ಮತ್ತೆ ಜಯಕಾರ ಹಾಕಲು ಕೆಲವು ಭಟ್ಟಂಗಿಗಳು ನಿಲ್ಲುತ್ತಿದ್ದರು. ॥125॥ ರಸ್ತೆಯ ಚೌಕದಲ್ಲಿ ಕೆಲವು ಕಮಾನುಗಳು, ಹಾರಗಳು, ತೋರಣಗಳು ಮತ್ತು ಅಲಂಕಾರದ ಬಾವುಟಗಳು ಆಕಾಶದಲ್ಲಿ ಎತ್ತರಕ್ಕೆ ಹಾರುತ್ತಿದ್ದವು. ಮಕ್ಕಳು ಹೊಸ ಉಡುಗೆ ತೊಡುಗೆಗಳನ್ನು, ಧರಿಸಿರುತ್ತಿದ್ದರು. ॥126॥ ಅನೇಕ ಸಾಲುಗಳ ಮಣ್ಣಿನ ಹಣತೆಯ ದೀಪಗಳಸಾಲಿನಿಂದ ಸುತ್ತಲೂ ಬೆಳಗುತ್ತಿದ್ದವು. ಅಂಗಳದ ದ್ವಾರದಲ್ಲಿ ಶ್ಯಾಮಕರ್ಣ ಕುದುರೆಯು ಪೂರ್ಣ ಶೃಂಗಾರದಿಂದ ವಿರಾಜಮಾನವಾಗಿರುತ್ತಿತ್ತು. ॥127॥ ಆ ಸಮಯದಲ್ಲಿ ತಾತ್ಯಾ ಪಾಟೀಲನು ಜನರ ಗುಂಪಿನ ಜೊತೆಗೆ ಬರುತ್ತಿದ್ದನು. ಅವನು ಬಾಬಾರವರ ಸಮೀಪದಲ್ಲಿ ಕುಳಿತುಕೊಂಡು ಬಾಬಾರವರಜೊತೆಯಲ್ಲಿ ಹೊರಡಲು ಉದ್ಯುಕ್ತನಾಗಿರುತ್ತಿದ್ದನು. ॥128॥ ಬಾಬಾರವರು ತಯಾರಾಗಿದ್ದರೂ, ತಾತ್ಯಾನು ಬರುವವರೆಗೆ ತಮ್ಮ ಜಾಗದಲ್ಲಿಯೇ ಕುಳಿತಿರುತ್ತಿದ್ದರು ಮತ್ತು ತಾತ್ಯಾನ ಆಗಮನಕ್ಕಾಗಿ ಕಾಯುತ್ತಿದ್ದರು. ॥129॥ ಬಾಬಾರವರ ಕಂಕುಳಲ್ಲಿ ಕೈಯಿಟ್ಟು ತಾತ್ಯಾ ಪಾಟೀಲನು ಬಾಬಾರವರನ್ನು, ಎಬ್ಬಿಸುವವರೆಗೆ ಕಾದಿದ್ದು ಬಾಬಾರವರು ಅಲ್ಲಿಂದ ಚಾವಡಿಗೆ ಹೊರಡಲು ಸಿದ್ಧರಾಗುತ್ತಿದ್ದರು. ॥130॥ ತಾತ್ಯಾನು ಬಾಬಾರವರನ್ನು, ಮಾಮಾ (ತಾಯಿಯ ಸೋದರ) ಎಂದು ಕರೆಯುತ್ತಿದ್ದನು. ಅವರ ಪರಸ್ಪರ ಪ್ರೀತಿಯು ಅಪ್ಪರಮಟ್ಟಿಗೆ ಇತ್ತು. ಅವರ ಪರಸ್ಪರ ಆತ್ಮೀಯತೆಯನ್ನು, ಯಾವುದಕ್ಕೂ ಹೋಲಿಸಲು ಆಗುವುದಿಲ್ಲ. ॥131॥ ಅವರು ನಿತ್ಯದಂತೆ ಕಫನಿ ಧರಿಸುತ್ತಿದ್ದರು. ತಮ್ಮ ಸಟಕಾವನ್ನು, ಕಂಕುಳಲ್ಲಿ ಇಟ್ಟುಕೊಳ್ಳುತ್ತಿದ್ದರು. ಅವರು ಚಿಲುಮೆಯನ್ನೂ, ತಂಬಾಕನ್ನೂ, ಹಿಡಿದಿರುತ್ತಿದ್ದರು. ಒಂದು ವಸ್ತ್ರವನ್ನು, ಹೆಗಲಮೇಲೆ ಹಾಕಿಕೊಂಡಿರುತ್ತಿದ್ದರು. ॥132॥ ಈ ರೀತಿ ಬಾಬಾರವರು ತಯಾರಾಗಿದ್ದಾಗ, ತಾತ್ಯಾನು ಒಂದು ಸುಂದರವಾದ ಜರಿ ಕುಸುರಿ ಕೆಲಸವಿರುವ ವಸ್ತ್ರದಿಂದ ಅವರ ದೇಹ ಮತ್ತು ತಲೆಯನ್ನು, ಪೂರ್ಣವಾಗಿ ಸುತ್ತುತ್ತಿದ್ದನು. ॥133॥ ಅದರ ನಂತರ, ಬಾಬಾರವರು ಹಿಂದಿನ ಗೋಡೆಯ ಹತ್ತಿರ ಕೆಳಗೆ ಇದ್ದ ಕಟ್ಟಿಗೆಯ ಹೊರೆಯನ್ನು, ತಮ್ಮ ಬಲಗಾಲಿನ ಉಂಗುಷ್ಠದಿಂದ ಮುಂದಕ್ಕೆ ಕ್ಷಣಕಾಲ ಅದರ ಜಾಗದಲ್ಲಿಯೇ ತಳ್ಳುತ್ತಿದ್ದರು. ॥134॥ ಅನಂತರ ಸಾಯಿಯು ಉರಿಯುತ್ತಿದ್ದ ದೀಪವನ್ನು, ತಮ್ಮ ಬಲಗೈನಿಂದ ಆರಿಸುತ್ತಿದ್ದರು. ಅನಂತರ ಅವರು ಚಾವಡಿಗೆ ಹೊರಡುತ್ತಿದ್ದರು. ॥135॥ ಸಾಯಿಯು ಹೊರಟಾಗ ಸಂಗೀತದ ವಾದ್ಯಗಳೆಲ್ಲವೂ ಮೊಳಗತೊಡಗುತ್ತಿದ್ದವು. ಪಟಾಕಿಗಳು ಸಿಡಿಯುತ್ತಿದ್ದವು. ಜೊತೆಗೆ ಅತ್ಯಂತ ಪ್ರಕಾಶಮಾನವಾದ ದೀಪಗಳು ದೇವತೆಗಳಿಗೆ ಅರ್ಪಿತವಾಗುತ್ತಿದ್ದವು. ಮಣ್ಣಿನ ದೀಪಗಳು ಆ ಜಾಗವನ್ನೆಲ್ಲಾ ಪ್ರಕಾಶಿಸುತ್ತಿದ್ದವು. ॥136॥ ಕೆಲವರು ಧನುಸ್ಸಿನ ಆಕಾರವಾಗಿ ಸುತ್ತುವರೆಯುತ್ತಿದ್ದರು. ಕೆಲವರು ಕೊಂಬು, ಕೆಲವರು ಕಹಳೆ, ಕೆಲವರು ತಾಳ–

ಮದ್ದಳೆಗಳನ್ನು ಬಾರಿಸುತ್ತಿದ್ದರು. ಅಲ್ಲಿ ಹಾಡಿನ ರಾಗಕ್ಕೆ ಸರಿಯಾಗಿ ಚಪ್ಪಾಳೆ ಹೊಡೆಯುವವರಿಗೇನೂ ಕೊರತೆಯಿರಲಿಲ್ಲ. ॥137॥ ಸಾಯಿನಾಮದ ಗರ್ಜನೆಯ ಮಧ್ಯೆ ಮೃದಂಗ ಮತ್ತು ವೀಣೆಗಳು ಝೇಂಕರಿಸುತ್ತಿದ್ದವು. ಭಜನೆ ಹಾಡುತ್ತಲೇ ಅತ್ಯಂತ ಪ್ರೇಮದಿಂದ ನರ-ನಾರಿಯರು ಸಾಲುಸಾಲಾಗಿ ನಡೆಯುತ್ತಿದ್ದರು. ॥138॥ ಬಾವುಟಗಳನ್ನೂ, ದಂಡಿಯನ್ನೂ, ಅವುಗಳಲ್ಲಿ ಕೆಲವದರ ಮೇಲೆ ಗರುಡಲಾಂಛನವಿರುತ್ತಿತ್ತು. ಇವುಗಳನ್ನು ಹಿಡಿದು ಸಮಸ್ತ ಜನರೂ ಹಾಡುತ್ತ, ನೃತ್ಯ ಮಾಡುತ್ತ, ಹಾರುತ್ತ, ನಡೆದು ಹೋಗುತ್ತಿದ್ದರು. ॥139॥ ಸಕಲ ಜನರೂಅತಿ ಆನಂದದಿಂದ ಇರುತ್ತಿದ್ದರು. ಅವರು ಬಾವುಟ ಮತ್ತು ದಂಡಗಳನ್ನು ಹಿಡಿದು ಮೆರವಣಿಗೆಯಲ್ಲಿ ಹೋಗುತ್ತಿದ್ದರು. ಕಹಳೆ, ತುತ್ತೂರಿಗಳು ಜೋರಾಗಿ ಶಬ್ದ ಮಾಡುತ್ತಿದ್ದವು. ಕೈಗಳನ್ನು ಕಿವಿಯವರೆಗೆ ಎತ್ತಿ ಜಯಕಾರ ಹಾಕುತ್ತಿದ್ದರು. ॥140॥ ಈ ರೀತಿ, ವಾದ್ಯಗಳು ಮೊಳಗುತ್ತಿರಲು, ಮೆರವಣಿಗೆಯು ಮಸೀದಿಯನ್ನು ಬಿಡುತ್ತಿತ್ತು. ಬಾಬಾರವರು ಮೆಟ್ಟಿಲವರೆಗೆ ಬಂದಾಗ ಭಟ್ಟಂಗಿಗಳು ಬಾಬಾರವರ ಜಯಕಾರ ಮಾಡುತ್ತಿದ್ದರು. ॥141॥ ಆಸ್ಥಾನದಲ್ಲಿ ಭಕ್ತಮಂಡಳಿಯು ತಾಳ, ಮೃದಂಗ, ವೀಣೆ, ಚಿಪ್ಪಿ, ಚಕ್ರತಾಳ (ಝಲ್ಲರಿ) ಇವುಗಳನ್ನು ಬಾರಿಸುತ್ತ ಆನಂದದಿಂದ ಭಜನೆ ಮಾಡುತ್ತಿದ್ದರು. ॥142॥ ಭಕ್ತರು ಬಾವುಟಗಳನ್ನು ತೋರಣಗಳನ್ನು ಹಿಡಿದು ನಲಿಯುತ್ತ ನಡೆಯುತ್ತಿದ್ದರು. ಬಾಬಾರವರ ಇಕ್ಕೆಲಗಳಲ್ಲಿಯೂ ಜನರು ಚಾಮರಗಳನ್ನುಹಿಡಿದು ಬೀಸುತ್ತ ನಡೆಯುತ್ತಿದ್ದರು. ॥143॥ ಜನರು ತಮ್ಮ ಶಾಲುಗಳನ್ನು ಮತ್ತು ಬಟ್ಟೆಗಳನ್ನು ದಾರಿಯಲ್ಲಿ ರತ್ನಗಂಬಳಿಯ ರೀತಿಯಲ್ಲಿ ಹರಡುತ್ತಿದ್ದರು. ಅದರ ಮೇಲೆ ಬಾಬಾರವರು ನಡೆಯುವಂತೆ ಮಾಡುತ್ತಿದ್ದರು. ಭಕ್ತರ ಕೈಗಳನ್ನು ಆಧಾರವಾಗಿ ಹಿಡಿದುಕೊಂಡು ನಡೆಯುವಾಗ ಕೆಲವರು ಚಾಮರವನ್ನು ಬೀಸುತ್ತಿದ್ದರು. ॥144॥ ತಾತ್ಯಾಬಾನು ಅವರ ಎಡಗೈಯನ್ನು ಹಿಡಿದುಕೊಂಡು, ಮ್ಹಾಳಸಾಪತಿಯು ಅವರ ಬಲಗೈಯನ್ನು ಹಿಡಿದು ನಡೆಯುತ್ತಿದ್ದರು. ಬಾಪುಸಾಹೇಬ(ಜೋಗ)ನು ಛತ್ರಿಯನ್ನು ಅವರ ತಲೆಯಮೇಲೆ ಹಿಡಿಯುತ್ತಿದ್ದನು. ಈ ರೀತಿ ಇಡೀ ಪರಿವಾರವು ಚಾವಡಿಗೆ ಹೊರಡುತ್ತಿತ್ತು. ॥145॥ ಎಲ್ಲದರ ಮುಂದೆ ತಾಮ್ರವರ್ಣದ ಕುದುರೆ, ಶ್ಯಾಮಕರ್ಣವು ಇರುತ್ತಿತ್ತು. ಅದು ಸರ್ವಾಭರಣಗಳಿಂದ ಅಲಂಕೃತವಾಗಿ ಪಾದಗಳಲ್ಲಿ ಗೆಜ್ಜೆಗಳ ಝಣತ್ಕಾರದಿಂದ ಶೋಭಿತವಾಗಿರುತ್ತಿತ್ತು. ॥146॥ ದಂಡವನ್ನು ಹಿಡಿದವರು ಸಾಯಿನಾಮವನ್ನು ಜಯಕಾರ ಮಾಡುತ್ತ ಮುಂದೆ ನಡೆಯುತ್ತಿದ್ದರು. ಛತ್ರಿಗಳನ್ನು ಹಿಡಿದವರು ಅವರ ಮೇಲೆ ಛತ್ರಿ ಹಿಡಿದಿರುತ್ತಿದ್ದರು. ಚಾಮರ ಹಿಡಿದವರು ಒಂದೇ ಸಮನೆ ಚಾಮರ ಬೀಸುತ್ತಿದ್ದರು. ॥147॥ ಸಂಗೀತ ವಾದ್ಯಗಳು ಮತ್ತು ಬಾಜಾಭಜಂತ್ರಿಗಳು ಶಬ್ದಮಾಡುತ್ತಿದ್ದವು. ಭಕ್ತರ ಜಯಕಾರಗಳು ಪ್ರತಿಧ್ವನಿಸುತ್ತಿದ್ದವು. ಈ ರೀತಿ ಭಕ್ತರ ಸಮೂಹವು ಪ್ರೀತಿಯಿಂದ ಘೋಷಣೆ ಮಾಡುತ್ತ ಹೊರಡುತ್ತಿತ್ತು. ॥148॥ ಹರಿನಾಮದ ಘರ್ಜನೆಯು ಜೋರಾಗಿ ನಡೆಯುತ್ತಿತ್ತು. ತಾಳ, ಝಾಂಜ, ಮೃದಂಗಗಳು ಸುಸ್ವರ ಮೂಡಿಸುತ್ತಿದ್ದವು. ಭಕ್ತರ ಸಮೂಹವು ಜೋರಾಗಿ ಘರ್ಜಿಸುತ್ತ ಕೂಗುತ್ತ, ಜಯಕಾರ ಹಾಕುತ್ತ ಚಲಿಸುತ್ತಿತ್ತು. ॥149॥ ಈ ರೀತಿ ಭಕ್ತರು ಮತ್ತು ಭಜನೆ ಹಾಡುವವರು,

ಆನಂದ ನಿರ್ಭರರಾಗಿ ಉತ್ಸಾಹದಿಂದ ಸಾಯಿಯ ಜಯಜಯಕಾರ ಮಾಡುತ್ತ ಮಾರ್ಗದಲ್ಲಿದ್ದ ಚೌಕದಲ್ಲಿಗೆ ಬರುತ್ತಿದ್ದರು. ॥150॥ ಅನೇಕ ವಾದ್ಯಗಳು, ತಾಳ, ಝಾಂಜ, ಢೋಲಕು ಮತ್ತು ಘೋಲ ಇವುಗಳು ಜೋರಾಗಿ ನಾದವನ್ನು ಮಾಡುತ್ತಿದ್ದವು. ಸಾಯಿ ನಾಮವು ಗಟ್ಟಿಯಾಗಿ ಅಲೆಅಲೆಯಾಗಿ ಬರುತ್ತಿತ್ತು, ಭಜನೆಗಳನ್ನು ಪ್ರೀತಿಯಿಂದ ಹಾಡುತ್ತ ಕುಣಿಯುತ್ತಿದ್ದರು. ॥151॥ ಎಲ್ಲ ಸ್ತ್ರೀ ಪುರುಷರೂ ಅವರ ಜೊತೆಯಲ್ಲಿ ಹೆಜ್ಜೆಯಿಡುತ್ತ ಎಲ್ಲರೂ ಭಜನಾನಂದದಿಂದ ನಿರ್ಭರರಾಗಿ ಸಾಯಿ ನಾಮವನ್ನು ಜೋರಾಗಿ ಹೇಳುತ್ತಿದ್ದರು. ಅದರ ನಾದವುನಭೋಮಂಡಲದವರೆಗೆ ವ್ಯಾಪಿಸುತ್ತಿತ್ತು. ॥152॥ ಆಕಾಶವು ವಾದ್ಯಸಂಗೀತದ ಅಲೆಗಳಿಂದ ಪ್ರತಿಧ್ವನಿಸುತ್ತಿತ್ತು, ಪ್ರೇಕ್ಷಕರು ಅಂತರಂಗದಲ್ಲಿಯೇ ಪ್ರಸನ್ನರಾದರು. ಚಾವಡಿಯ ಮೆರವಣಿಗೆಯು ಈ ರೀತಿ ಪ್ರೇಕ್ಷಣೀಯವಾಗಿತ್ತು, ಆ ವೈಭವ ಮತ್ತು ಅಲಂಕಾರ ಶೋಭೆಯು ಅನುಪಮವಾಗಿದ್ದವು. ॥153॥ ಅವರು (ಬಾಬಾ) ಚಾವಡಿಯ ಎದುರಿಗೆ ನಿಂತಕೂಡಲೇ ಅರುಣೋದಯ ಕಾಲದ ಸೂರ್ಯ ಅಥವಾ ಸಂಧ್ಯಾಕಾಲದ ಆಕಾಶವು ತಪ್ತ ಕಾಂಚನ ಪ್ರಭೆಯಿಂದ ಬೆಳಗುವಂತೆ ಶ್ರೀಮುಖದ ಶೋಭೆಯು ಬೆಳಗುತ್ತಿತ್ತು. ॥154॥ ಆ ಸಮಯದಲ್ಲಿ ಅವರ ಮುಖದ ಶೋಭೆಯು ಅರುಣೋದಯದ ಬಾಲ ಸೂರ್ಯನಂತೆ ಪ್ರಕಾಶಿಸುತ್ತಿತ್ತು, ಅದು ಕೇವಲ ಚೈತನ್ಯವೇ ಮೂರ್ತಿವೆತ್ತಂತಿತ್ತು. ಅದರ ಉಪಯೋಗವನ್ನು ಯಾರು ತಾನೇ ಪಡೆಯುವುದಿಲ್ಲ? ॥155॥ ಅಂತಹ ಸಮಯದ ದರ್ಶನವೇ ಧನ್ಯ! ಅವರ ಮುಖಪ್ರಭೆಯು ರಕ್ತವರ್ಣದ್ದಾಗಿತ್ತು, ಅವರು ಉತ್ತರಾಭಿಮುಖವಾಗಿ ಏಕಾಗ್ರಚಿತ್ತರಾಗಿ ನಿಂತುಕೊಂಡು ಯಾರನ್ನೋ ಕರೆಯುವಂತೆ ಕಾಣಿಸುತ್ತಿತ್ತು. ॥156॥ ಸಂಗೀತದ ವಾದ್ಯಗಳು ಮೊಳಗಿದವು. ಮಹಾರಾಜರು ಆನಂದ ನಿರ್ಭರರಾಗಿ ನಿಂತಿರುತ್ತಿದ್ದರು. ತಮ್ಮ ಬಲಗೈಯನ್ನು ಮೇಲೆ ಕೆಳಗೆ ಮಾಡುತ್ತ ಆಗಾಗ್ಗೆ ಆ ಸಮಯದಲ್ಲಿ ವರನೀಡುತ್ತಿರುವಂತೆ ಕಾಣಿಸುತ್ತಿದ್ದರು. ॥157॥ ಆ ಸಮಯದಲ್ಲಿ ದೀಕ್ಷಿತ್ ಎಂಬ ಭಕ್ತಶ್ರೇಷ್ಠನು ಒಂದು ಬೆಳ್ಳಿಯ ತಟ್ಟೆಯ ತುಂಬ ಹೂಗಳನ್ನು ತೆಗೆದುಕೊಂಡುಬಂದು ಬಾಬಾರವರ ದೇಹದ ಮೇಲೆ ಆಗಾಗ್ಗೆ ಪುಷ್ಪವೃಷ್ಟಿಗರೆಯುತ್ತಿದ್ದನು. ॥158॥ ಕಾಕಾ ಸಾಹೇಬನು ಗುಲಾಬಿಯ ದಳಗಳಿಗೆ ಗುಲಾಲನ್ನು ಸೇರಿಸಿ, ಸಾಯಿಯ ತಲೆಯ ಮೇಲೆ ಪ್ರೇಮ ಮತ್ತು ಭಕ್ತಿ ಭಾವದಿಂದ ತುಂಬಿದವನಾಗಿ ಮಳೆಗರೆಯುತ್ತಿದ್ದನು. ॥159॥ ಈ ರೀತಿ ಕಾಕಾನು ಗುಲಾಲಿನಿಂದ ಕೂಡಿದ ಗುಲಾಬಿಗಳ ದಳಗಳ ಮಳೆಗರೆದಾಗ ಚಾಗಟೆ, ಝಾಂಜ ಮತ್ತು ತಾಳ ಇವುಗಳು ಒಂದೇ ಸ್ವರದಲ್ಲಿ ನಾದ ಮಾಡುತ್ತಿದ್ದವು. ಸಂಗೀತವಾದ್ಯಗಳೆಲ್ಲವೂ ಅತ್ಯುತ್ತಮವಾಗಿ ಬಾರಿಸಲ್ಪಡುತ್ತಿದ್ದವು. ॥160॥ ಹಳ್ಳಿಯ ಜನರಲ್ಲಿ ಬಾಬಾರವರ ಭಕ್ತರು ಪ್ರೀತಿಯಿಂದ ದರ್ಶನಕ್ಕಾಗಿ ಬರುತ್ತಿದ್ದರು. ಆ ಸಮಯದಲ್ಲಿ ಬಾಬಾರವರ ಮುಖಚರ್ಯೆಯು ಅರುಣರಾಗವರ್ಣದಿಂದ ಕೂಡಿ ಅತ್ಯಂತ ಅದ್ಭುತವಾಗಿ ಪ್ರಕಾಶಮಾನವಾಗಿರುವುದು ಸ್ಪಷ್ಟವಾಗಿರುತ್ತಿತ್ತು. ॥161॥ ಅವರ ಮುಖದ ಮೇಲಿನ ತೇಜೋವಿಲಾಸವನ್ನು ನೋಡಿದ ಪ್ರೇಕ್ಷಕರ ನೇತ್ರಗಳು ಆಶ್ಚರ್ಯದಿಂದ ಅರಳುತ್ತಿದ್ದುವು. ಅವರ ಪ್ರೇಮಮಯವಾದ ಮನಸ್ಸು

ಉಲ್ಲಸಿತವಾಗುತ್ತಿತ್ತು, ಮತ್ತು ಅವರು ಈ ಸಂಸಾರದ ಸಂಕಟದಿಂದ ಸುಲಭವಾಗಿ ಪಾರಾಗುತ್ತಿದ್ದರು. ॥162॥ ಓಹ್! ಅದೆಂತಹ ಅದ್ಭುತವಾದ ದಿವ್ಯ ತೇಜಸ್ಸು! ಅದರ ಶೋಭೆಯು ಬಾಲ ಭಾಸ್ಕರನಂತಿತ್ತು! ಅವರ ಮುಂದೆ ಜಾಗಟೆ ಮುಂತಾದ ವಾದ್ಯಗಳು ಬಹುಸಮಯದವರೆಗೆ ಮೊಳಗುತ್ತಿದ್ದುವು. ॥163॥ ಒಂದೂವರೆ ಗಂಟೆಗಿಂತ ಹೆಚ್ಚು ಸಮಯ ಬಾಬಾರವರು ಅದೊಂದೇ ಸ್ಥಳದಲ್ಲಿ ನಿಂತಿರುತ್ತಿದ್ದರು. ಉತ್ತರಕ್ಕೆ ಮುಖಮಾಡಿ ತಮ್ಮ ಬಲಗೈಯನ್ನು ಸತತವಾಗಿ ಮೇಲೆ ಕೆಳಗೆ ಆಡಿಸುತ್ತ ವರ ನೀಡುವವರಂತೆ ನಿಲ್ಲುತ್ತಿದ್ದರು. ॥164॥ ಅವರ ಮೈಬಣ್ಣವು ಕೇತಕೀ ಪುಷ್ಪದ ಪೀತಾಂಬರ ವರ್ಣದಂತಿದ್ದು, ಮುಖದ ಮೇಲೆ ತಿಳಿಗೆಂಪು ವರ್ಣವು ಪ್ರಕಾಶಿಸುತ್ತಿದ್ದು ಆ ಶೋಭೆಯನ್ನು ವರ್ಣಿಸಲು ಈ ನಾಲಿಗೆಗೆ ಸಾಧ್ಯವಿಲ್ಲ. ಅವುಗಳನ್ನು ಕೇವಲ ನೇತ್ರಗಳು ಮಾತ್ರ ಸವಿಯಬಲ್ಲವು. ॥165॥ ಕೆಲವು ಸಲ ಮ್ಹಾಳಸಾಪತಿಯು ಯಾವುದೋ ದೇವತೆಯು ಮೈಮೇಲೆ ಆವಾಹನೆಯಾಗಿದ್ದಂತೆ ಕುಣಿಯುತ್ತಿದ್ದನು. ಏನೇ ನಡೆದರೂ ಬಾಬಾರವರ ಏಕಾಗ್ರಚಿತ್ತ ಸ್ಥಿತಿಯನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾಗುತ್ತಿದ್ದರು. ॥166॥ ಬಾಬಾರವರು ಬಲಗೈಯಿಂದ ತಮ್ಮ ಕಫನಿಯ ತುದಿಯನ್ನು ಬಹಳ ಹಗುರವಾಗಿ ಹಿಡಿದುಕೊಂಡಿರುತ್ತಿದ್ದರು. ಮತ್ತು ಎಡಗಡೆ ತಾತ್ಯಾಕೋತೆಯು ಕೈಯಲ್ಲಿ ಒಂದು ಕಂದೀಲನ್ನು ಹಿಡಿದುಕೊಂಡು ನಡೆಯುತ್ತಿದ್ದನು. ॥167॥ ಆ ಉತ್ಸವವು ಅದೆಷ್ಟು ಖುಷಿಕೊಡುವಂತಹದಾಗಿತ್ತು! ಅದೊಂದು ಕೇವಲ ಪ್ರೀತಿ ಮತ್ತು ಭಕ್ತಿಗಳ ವೈಭವೋಪೇತ ಪ್ರದರ್ಶನವಾಗಿತ್ತು, ಅನೇಕ ಶ್ರೀಮಂತರೂ, ಮಹಾನ್ ವ್ಯಕ್ತಿಗಳೂ, ಅದರ ಅದ್ಭುತವನ್ನು ನೋಡಲು ಅಲ್ಲಿ ಸೇರುತ್ತಿದ್ದರು. ॥168॥ ಸ್ವಯಂ ತೇಜಸ್ಸಿನಿಂದ ಪ್ರಕಾಶಮಾನವಾಗಿ ಅವರ ಶ್ವೇತವರ್ಣವು. ಅವರ ಮುಖಚಂದ್ರವು ಅಲ್ಪರಕ್ತವರ್ಣದಿಂದ ಉಜ್ವಲವಾಗಿ ಕಂಗೊಳಿಸುತ್ತಿತ್ತು, ಅಂತಹ ಅವರ್ಣನೀಯ ಶೋಭೆಯನ್ನು ಜನರು ತಮ್ಮ ಕಣ್ಣುಗಳಲ್ಲಿ ತುಂಬಿಕೊಳ್ಳುತ್ತಿದ್ದರು. ॥169॥ ಬಾಬಾರವರು ಮೆಲ್ಲ ಮೆಲ್ಲನೆ ನಡೆಯುತ್ತಿದ್ದರು. ಭಕ್ತ ಸಮುದಾಯವು ಅಪ್ರತಿಮ ಭಕ್ತಿ ಮತ್ತು ಪ್ರೀತಿಗಳಿಂದ ಅವರ ಅಕ್ಕಪಕ್ಕದಲ್ಲಿ ನಡೆಯುತ್ತಿದ್ದರು. ಅದು ಪ್ರತಿಯೊಬ್ಬರೂ ಸಂಮೃದ್ಧಿಯಾದ ಆನಂದದಿಂದ ಉಸಿರುಕಟ್ಟಿಸುವಂತೆ ಮಾಡುತ್ತಿತ್ತು. ॥170॥ ಅಂತಹ ಸಮಾರಂಭವು ಇನ್ನೆಂದಿಗೂ ಯಾರಿಗೂ ನೋಡಲು ಸಿಗುವುದಿಲ್ಲ. ಆ ದಿನಗಳು ಮತ್ತು ಆ ಕಾಲಗಳು ಮುಗಿದುವು. ನೆನಪುಗಳಿಂದಲೇ ನಮ್ಮ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳೋಣ. ॥171॥ ಎಲ್ಲ ಸಂಗೀತ ವಾದ್ಯಗಳು ಬಾಜಾ ಭಜಂತ್ರಿಗಳು ಮೊಳಗುತ್ತಿರಲು ಮಾರ್ಗದಲ್ಲಿ ಜೋರಾಗಿ ಜಯ ಜಯಕಾರ ಮಾಡುತ್ತಿದ್ದರು. ಬಾಬಾರವರನ್ನು ಚಾವಡಿಯಲ್ಲಿನ ಅವರ ಆಸನಕ್ಕೆ ಕರೆತಂದು ದಿವ್ಯೋಪಚಾರ ಮಾಡುತ್ತಿದ್ದರು. ॥172॥ ಚಾವಡಿಯ ಮೇಲ್ಛಾವಣಿಯನ್ನು ಬಿಳಿಯ ಕ್ಯಾನ್‌ವಾಸ್ ಬಟ್ಟೆಯನ್ನು ಕಟ್ಟಿ ಅದರಿಂದ ದೀಪಗಳನ್ನು, ಗೊಂಚಲು ದೀಪಗಳನ್ನು ನೇತುಹಾಕಿ ಅವುಗಳ ಬೆಳಕು ಕನ್ನಡಿಗಳಲ್ಲಿ ಪ್ರತಿಬಿಂಬಿತವಾಗಿರುತ್ತಿದ್ದವು. ಆ ಜಾಗವೆಲ್ಲವೂ ದೇದೀಪ್ಯಮಾನವಾಗಿ ಕಂಗೊಳಿಸುತ್ತಿತ್ತು. ॥173॥ ಅಲ್ಲಿ ನೆರೆದಿದ್ದ ಭಕ್ತರೆಲ್ಲರೂ ಚಾವಡಿಯಲ್ಲಿ ಒಟ್ಟಿಗೊಂದು ಸೇರುತ್ತಿದ್ದರು. ಅನಂತರ

ತಾತ್ಯಾ ಒಂದು ಆಸನವನ್ನು ಹರಡಿ, ಬಾಬಾರವರು ಅದರ ಮೇಲೆ ಕುಳಿತುಕೊಳ್ಳುವಂತೆ ಸಹಾಯ ಮಾಡುತ್ತಿದ್ದನು ॥174॥ ಈ ರೀತಿ ತಯಾರಾದ ಅತ್ಯುತ್ತಮವಾದ ಆಸನದ ಮೇಲೆ, ಒಂದು ಮೆತ್ತನೆಯ ತಲೆದಿಂಬನ್ನು ಅವರು ಒರಗಿಕೊಳ್ಳಲು ಆಗುವಂತೆ ಬೆನ್ನಹಿಂದೆ ಇಡಲಾಗುತ್ತಿತ್ತು. ಬಾಬಾರವರು ತಮ್ಮ ಆಸನದಮೇಲೆ ಕುಳಿತುಕೊಂಡ ಮೇಲೆ ಅವರು ಒಂದು ದೊಗಲೆಯಾದ ಮೇಲಂಗಿ ಧರಿಸಲು ಕೇಳಿಕೊಳ್ಳಲಾಗುತ್ತಿತ್ತು. ॥175॥ ಅವರ ದೇಹದ ಮೇಲೆ ಸುಂದರವಾದ ಪೋಷಾಕುಗಳನ್ನು ಹಾಕಿದಮೇಲೆ ಅವರನ್ನು ಅತ್ಯಂತ ಹರ್ಷದಿಂದ ಪೂಜಿಸುತ್ತಿದ್ದರ ತಮ್ಮ ಎತ್ತರದ ಧ್ವನಿಯಿಂದ ಆರತಿ ಹಾಡನ್ನು ಹಾಡುತ್ತಿದ್ದರು. ಮತ್ತು ಹಾರತುರಾಯಿಗಳನ್ನು ಅರ್ಪಿಸುತ್ತಿದ್ದರು. ॥176॥ ಅವರ ಕೈಗಳಿಗೆ ಸುಗಂಧಯುಕ್ತ ಚಂದನ ಲೇಪನದಿಂದ ಕೈಗಳನ್ನು ಒತ್ತುತ್ತಿದ್ದರು. ಬಹಳ ಬೆಲೆಬಾಳುವಂತಹ ಉಡುಗೆಗಳಿಂದ ಅಲಂಕರಿಸಿದ ಮೇಲೆ ಒಡವೆಗಳನ್ನು ಹಾಕುತ್ತಿದ್ದರು. ಅವರ ಶಿರದಮೇಲೆ ಒಂದು ಕಿರೀಟವನ್ನೂ ಇಟ್ಟು ಎಲ್ಲರೂ ಅವರೆಡೆಗೆ ನೆಟ್ಟ ದೃಷ್ಟಿಯಿಂದ ದೃಷ್ಟಿಸುತ್ತಿದ್ದರು. ॥177॥ ಕೆಲವು ಸಲ ಅದು ಸುಂದರವಾದ ಸುವರ್ಣ ಕಿರೀಟ, ಕೆಲವು ಸಲ ಒಂದು ಮನೋಹರವಾದ ರುಮಾಲು, ಅದನ್ನು ಸುವರ್ಣದಿಂದ ಕಸೂತಿ ಮಾಡಿದ್ದು ಅದಕ್ಕೆ ರತ್ನ ಖಚಿತವಾದ ಕುಚ್ಚು. ಅದರಲ್ಲಿ ಗರಿಗಳ ಪುಕ್ಕದಿಂದ ಕೂಡಿತ್ತು. ಅವರ ಕುತ್ತಿಗೆಯಲ್ಲಿ ವಜ್ರ, ಮಾಣಿಕ್ಯಗಳಿಂದ ಕೂಡಿದ ಕಂಠೀಹಾರವಿತ್ತು. ॥178॥ ಅನಂತರ ಒಂದು ಬಿಳಿಯ ಮುತ್ತಿನ ಕಂಠೀಹಾರವನ್ನು ಅವರ ಕುತ್ತಿಗೆಗೆ ಹಾಕಿದ್ದರು. ಈ ಎಲ್ಲ ಒಡವೆಗಳು ಮತ್ತು ಅವರ ಉಡುಪುಗಳು ದೀಪದ ಪ್ರಕಾಶದಲ್ಲಿ ಝಗಮಗಿಸುತ್ತಿದ್ದವು. ॥179॥ ಹಣೆಯ ಮೇಲೆ ಸುಗಂಧ ಪೂರಿತ ಕಸ್ತೂರಿಯ ತಿಲಕವನ್ನು ಇಡುತ್ತಿದ್ದರು. ಮತ್ತು ವೈಷ್ಣವರ ಸಂಪ್ರದಾಯದಂತೆ ಒಂದು ಗುಂಡಾದ ಕಪ್ಪು ತಿಲಕವನ್ನು ಹಣೆಯ ಮೇಲೆ ಇಡುತ್ತಿದ್ದರು. ॥180॥ ಆ ಒಂದು ನೇರಳೆ ಬಣ್ಣದ ಮಖಮಲ್ ಬಟ್ಟೆಯ ಉಡುಪು, ಪೂರ್ಣವಾಗಿ ಜರಿಯಿಂದ ಕಸೂತಿ ಹಾಕಲ್ಪಟ್ಟಿದನ್ನು ಹೆಗಲ ಮೇಲೆ ಹಾಕುತ್ತಿದ್ದರು. ಅದೇನಾದರೂ ಜಾರಿಬಿದ್ದಲ್ಲಿ ಕೂಡಲೇ ಅದನ್ನು ಎರಡೂ ಕೈಯಿಂದ ಹಿಡಿದುಕೊಳ್ಳುತ್ತಿದ್ದರು. ॥181॥ ಅದೇ ರೀತಿಯಲ್ಲಿ ಕಿರೀಟವನ್ನಾಗಲಿ, ರುಮಾಲನ್ನಾಗಲೀ ತಲೆಯ ಮೇಲೆ ಮೆಲ್ಲನೆ ಇಡುತ್ತಿದ್ದರು. ಅದು ಬಾಬಾರವರ ಗಮನಕ್ಕೆ ಬರದಂತೆ ಇಡುತ್ತಿದ್ದರು. ॥182॥ ಅದು ಕಿರೀಟವಾಗಲಿ, ರುಮಾಲೇ ಆಗಲಿ, ತಲೆಯನ್ನೇನಾದರೂ ಸ್ಪರ್ಶಿಸಿದಲ್ಲಿ ಕೂಡಲೇ ಬಾಬಾರವರು ಅದನ್ನು ತೆಗೆದು ಎಸೆದುಬಿಡುತ್ತಿದ್ದರು. ಇದೊಂದು ಪ್ರಬಲವಾದ ಆತಂಕದ ವಿಷಯವಾಗಿದ್ದರೂ, ಅವರ ಪ್ರೀತಿಯ ಹಂಬಲ ನಿಸ್ಸೀಮ ಶಕ್ತಿಯುತವಾಗಿದ್ದಿತು. ॥183॥ ಸರ್ವರ ಅಂತರಂಗವನ್ನೂ ತಿಳಿದಿದ್ದ ಸಾಯಿಯು, ಭಕ್ತರ ಕಣ್ಣುಮುಚ್ಚಾಲೆಯನ್ನು ಅರಿಯದವರೇ? ಆದರೆ ಅವರ ಪ್ರೀತಿ ಮತ್ತು ಕೌತುಕವನ್ನು ಅರಿತಿದ್ದರೂ, ಉದ್ದೇಶಪೂರ್ವಕವಾಗಿ ಮೌನ ಧರಿಸಿರುತ್ತಿದ್ದರು. ॥184॥ ಬ್ರಹ್ಮಾನುಭವದಲ್ಲೇ ವಿರಾಜಮಾನನಾಗಿರುವವನಿಗೆ ಜರಿಯಿಂದ ಪೂರ್ಣವಾಗಿ ಭರ್ಜರಿಯಾಗಿ ಅಲಂಕೃತವಾದ ವೇಷ ಮತ್ತು ಭೂಷಣಗಳಿಂದ ಆಗಬೇಕಾಗಿರುವುದಾದರೂ ಏನು? ಅಥವಾ ನಿಜಶಾಂತಿಯಿಂದ

ಶೋಭಾಯಮಾನವಾಗಿರುವವರಿಗೆ ಕಿರೀಟದ ಅಲಂಕಾರದಿಂದ ಏನಾಗಬೇಕಾಗಿದೆ? ॥185॥ ಈ ರೀತಿ ಭಕ್ತರು ಬಾಬಾರವರನ್ನು ಅನೇಕ ವಿವಿಧ ಆಭೂಷಣಗಳಿಂದ ಅಲಂಕರಿಸಿದ್ದರೂ ಸಹ, ಅವರ ಹಣೆಯಮೇಲೆ ಕೇಸರಿ ಮಿಶ್ರಿತ ಮನೋಹರವಾದ ತಿಲಕವನ್ನು ಹಚ್ಚಿದರೂ ಸಹ, ॥186॥ ಕೆಲವರು ವಜ್ರದ ಮತ್ತು ಮುತ್ತಿನ ಮಾಲೆಗಳನ್ನು ಅವರ ಕುತ್ತಿಗೆಗೆ ಹಾಕುತ್ತಿದ್ದರು ಮತ್ತು ಕೆಲವರು ಅವರ ಹಣೆಯ ಮೇಲೆ ತಿಲಕ ಹಚ್ಚುತ್ತಿದ್ದರು. ಈ ರೀತಿ ಭಕ್ತರ ಲೀಲೆಗಳು ನಡೆಯುತ್ತಿದ್ದುವು. ॥187॥ ಯಾವಾಗ ಭಕ್ತರು ಬಾಬಾರವರಿಗೆ ಶೃಂಗಾರ ಮಾಡಿ ಮುಗಿಸುತ್ತಿದ್ದರೋ, ಅವರ ಶಿರದ ಮೇಲೆ ಕಿರೀಟವನ್ನು ವಿರಾಜಿಸಿದರೋ, ಅವರ ಕೊರಳಲ್ಲಿ ಮುತ್ತಿನ ಹಾರವನ್ನು ಅಲಂಕರಿಸಿದರೋ ಆಗ ಅದು ಅತ್ಯದ್ಭುತ ಶೋಭೆಯಿಂದ ಕೂಡಿರುತ್ತಿತ್ತು. ॥188॥ ನಾನಾಸಾಹೇಬ ನಿಮೋಣಕರನು ಬಿಳಿಯ ಛತ್ರಿಯನ್ನು ಬಾಬಾರವರ ಮೇಲೆ ಹಿಡಿದಿರುತ್ತಿದ್ದನು. ಅದು ತನ್ನ ಪದಕಗಳು ಮತ್ತು ಕುಚ್ಚುಗಳು ಇವುಗಳಿಂದ ಮಧ್ಯದಲ್ಲಿದ್ದ ಆಧಾರದ ಒಂದು ಕಡ್ಡಿಯ ಸುತ್ತಲೂ ಸುತ್ತುತ್ತಿತ್ತು. ॥189॥ ಬಾಪು ಸಾಹೇಬನು ಗುರುಗಳ ಚರಣಗಳನ್ನು ಬಹಳ ಪ್ರೀತಿಯಿಂದ ತೊಳೆಯುತ್ತಿದ್ದನು. ಭಕ್ತಿಯಿಂದ ಅರ್ಘ್ಯ, ಪಾದ್ಯಗಳನ್ನು ಅರ್ಪಿಸುತ್ತಿದ್ದನು. ಮತ್ತು ಯಥೋಚಿತವಾಗಿ ವಿಧಿವತ್ತಾಗಿ ಪೂಜಿಸುತ್ತಿದ್ದನು. ॥190॥ ಅನಂತರ ಅವನು ಒಂದು ಬೆಳ್ಳಿಯ ಹರಿವಾಣವನ್ನು ತಂದು ಬಾಬಾರವರ ಚರಣಗಳನ್ನು ಅದರಲ್ಲಿಟ್ಟು ಅತ್ಯಾದರದಿಂದ ಪಾದಗಳನ್ನು ತೊಳೆಯುತ್ತಿದ್ದನು. ಅದಾದನಂತರ ಕೈಗಳನ್ನು ಅತ್ತರಿನಿಂದ ತೊಳೆಯುತ್ತಿದ್ದನು. ॥191॥ ಒಂದು ಚಿಕ್ಕ ಬಟ್ಟಲಿನಲ್ಲಿ ಕೇಸರಿಯನ್ನು ತೆಗೆದುಕೊಂಡು ಶ್ರೀಗಂಧವನ್ನು ಕೈಗಳಿಗೆ ಹಚ್ಚುತ್ತಿದ್ದನು. ಅವನು ಬಾಬಾರವರ ಕೈಗಳಲ್ಲಿ ತಾಂಬೂಲವನ್ನು ಅರ್ಪಿಸುತ್ತಿದ್ದನು. ಸಾಯಿಯು ಪ್ರಸನ್ನತೆಯಿಂದ ದೃಷ್ಟಿಸುತ್ತಿದ್ದರು. ॥192॥ ಬಾಬಾರವರು ತಮ್ಮ ಆಸನದಲ್ಲಿ ಕುಳಿತಾಗ, ತಾತ್ಯಾಬಾ ಮತ್ತಿತರರು ನಿಂತುಕೊಂಡಿರುತ್ತಿದ್ದರು. ಬಾಬಾರವರ ಕೈಗಳನ್ನು ಹಿಡಿದು ಅವರನ್ನು ಕುಳ್ಳಿರಿಸುತ್ತಿದ್ದರು. ಮತ್ತು ಅವರ ಚರಣಗಳಲ್ಲಿ ಗೌರವಪೂರ್ವಕವಾಗಿ ನಮಿಸುತ್ತಿದ್ದರು. ॥193॥ ಚಾವಡಿಯು ಒಂದು ನಿರ್ಮಲವಾದ ಶುದ್ಧವಾದ ಪವಿತ್ರ ಸ್ಥಳವಾಗಿತ್ತು. ಸ್ಫಟಿಕದಂತೆ ಮಿರುಗುತ್ತಿದ್ದು ಹಿರಿಯರಿಗೆ ಮತ್ತು ಕಿರಿಯರೆಲ್ಲರಿಗೂ ಒಟ್ಟಿಗೆ ಸೇರುವ ಸ್ಥಳವಾಗಿದ್ದು ಶ್ರೀಚರಣಗಳಲ್ಲಿ ಪ್ರೇಮದಿಂದ ಬಂಧಿತರಾಗಿರುತ್ತಿದ್ದರು. ॥194॥ ಬಾಬಾರವರ ತೇಜೋಮಯ ಸ್ವರೂಪವು ಆಸನದ ಮೇಲೆ ಒರಗುದಿಂಬಿಗೆ ಒರಗಿ ವಿರಾಜಮಾನರಾದಾಗ ಎರಡೂ ಕಡೆಗಳಲ್ಲಿ ಚಾಮರಗಳನ್ನು ಮಂದಗತಿಯಲ್ಲಿ ಬೀಸುತ್ತಿದ್ದರು. ॥195॥ ಮಾಧವರಾವ್‌ನು ತಂಬಾಕನ್ನು ಪುಡಿಮಾಡಿ, ತತ್‌ಕ್ಷಣವೇ ಚಿಲುಮೆಯನ್ನು ಸಿದ್ಧಪಡಿಸಿ ತಾತ್ಯಾಬಾನ ಕೈಯಲ್ಲಿ ಕೊಡುತ್ತಿದ್ದನು. ಅವನು ಮೊದಲನೆಯ ದಮ್ಮನ್ನು ಎಳೆಯುತ್ತಿದ್ದನು. ॥196॥ ಹೊಗೆಸೊಪ್ಪಿಗೆ ಬೆಂಕಿ ಹಚ್ಚಿದಾಗ ಜ್ವಾಲೆಯು ಹುಟ್ಟುತ್ತಿತ್ತು. ತಾತ್ಯಾಬಾನು ಅದನ್ನು ಬಾಬಾರವರ ಕೈಯಲ್ಲಿ ಇಡುತ್ತಿದ್ದನು. ಬಾಬಾರವರು ಮೊದಲು ಅದರಿಂದ ದೀರ್ಘಶ್ವಾಸವನ್ನು ಎಳೆದು ನಂತರ ಅದನ್ನು ಭಗತ್‌ಗೆ ಕೊಡುತ್ತಿದ್ದರು. ॥197॥ಅನಂತರ ಒಂದು ವರ್ತುಲಾಕಾರದಲ್ಲಿ

ಭಗತ್‌ನಿಗೆ ಬಂದಾಗ, ನಂತರ ಶಾಮಾ ಮತ್ತು ತಾತ್ಯಾಬಾ ಇವರಿಗೆ ಸರದಿಯ ಪ್ರಕಾರ ಬರುತ್ತಿತ್ತು. ಅದು ಪೂರ್ತಿಯಾಗಿ ಉರಿದು ಹೋಗುವವರೆಗೆ ಸುಡಲಾಗುತ್ತಿತ್ತು. ॥198॥ ನಿರ್ಜೀವವಸ್ತುವಾಗಿದ್ದರೂ ಅದೆಷ್ಟು ಧನ್ಯ! ನಾವು ಸಜೀವವಾಗಿದ್ದರೂ ಅದು ನೀಡುತ್ತಿರುವ ಸೇವೆಯನ್ನು ಯಾವುದಕ್ಕೂ ಹೋಲಿಸಲು ಸಾಧ್ಯವಿಲ್ಲ. ॥199॥ ಅದರ ತಪಸ್ಸು ಮಹಾಕಠಿಣವಾದುದು! ಅದರ ಬಾಲ್ಯದಲ್ಲಿ ಕುಂಬಾರನು ಅದನ್ನು ತಿದಿ ಒತ್ತಿದ್ದನು. ಅನಂತರ ಅದು ಶೀತ ಮತ್ತು ಉಷ್ಣವನ್ನು ಸಹಿಸಬೇಕಾಯಿತು. ಮತ್ತು ಕೊನೆಯಲ್ಲಿ ಬೆಂಕಿಯಲ್ಲಿ ಬೇಯಿಸಲ್ಪಟ್ಟಿತ್ತು. ॥200॥ ಅದರ ಭಾಗ್ಯವಶಾತ್ ಬಾಬಾರವರ ಕರಸ್ಪರ್ಶನ ಪಡೆದಿತ್ತು. ನಂತರ ಅದಕ್ಕೆ ಕಾಫಿಬಣ್ಣದ ಪುಡಿಯನ್ನು ಸುಗಂಧದ ಸಹಿತ ಹಾಕಲಾಗುತ್ತಿತ್ತು. ಅನಂತರ ಅದು ಬಾಬಾರವರ ಮುಖಚುಂಬನ ಪಡೆಯುತ್ತಿತ್ತು. ॥201॥ ಸಾಕಿಷ್ಟು! ಕರ್ಪೂರ, ಕೇಸರಿ ಮತ್ತು ಶ್ರೀಗಂಧ ಇವುಗಳನ್ನು ಬಾಬಾರವರ ಎರಡು ಕೈಗಳಿಗೂ ಹಚ್ಚುತ್ತಿದ್ದರು. ಅನಂತರ ಅವರ ಕೊರಳಿಗೆ ಪುಷ್ಪಮಾಲೆಗಳನ್ನು ತೊಡಿಸಿ, ಭಕ್ತರು ಸಣ್ಣ ಸಣ್ಣ ಹೂಗುಚ್ಛಗಳನ್ನು ಅರ್ಪಿಸುತ್ತಿದ್ದರು. ॥202॥ ಯಾರ ವದನವು ಸದಾ ಹಸನ್ಮುಖಿಯಾಗಿರುವುದೋ, ಮತ್ತು ಯಾರು ಪ್ರೇಮಪೂರಿತವಾಗಿ ದಯಾರ್ದ್ರ ದೃಷ್ಟಿಯಿಂದ ಅವಲೋಕಿಸುತ್ತಿದ್ದರೋ ಅವರ ದೇಹವು ಈ ರೀತಿ ಅಲಂಕರಿಸಿದಾಗಲೂ ಅವರಿಗೆ ಶೃಂಗಾರದ ಅಭಿಮಾನವೆಲ್ಲಿ? ಅವರು ಇವೆಲ್ಲವನ್ನೂ ಕೇವಲ ಭಕ್ತರ ಮನಸ್ಸಿನ ಭಾವನೆಗಳನ್ನು ಗೌರವಿಸಲು ಮಾತ್ರ ಮಾಡಿಸಿಕೊಳ್ಳುತ್ತಿದ್ದರು. ॥203॥ ಯಾರ ದೇಹವು ಭಕ್ತಿಯಿಂದ ಅಲಂಕೃತವಾಗಿರುವುದೋ ಯಾರು ಶಾಂತಿಯ ಭೂಷಣಗಳಿಂದ ಶೃಂಗರಿಸಲ್ಪಡುವರೋ ಅವರಿಗೆ ಲೌಕಿಕವಾದ ಹಾರ ಮತ್ತು ಆಭೂಷಣಗಳಿಂದೇನಾಗಬೇಕಾಗಿದೆ? ॥204॥ ವೈರಾಗ್ಯದ ಮೂರ್ತಿಯೇ ಆಗಿರುವವರಿಗೆ ಈ ವಜ್ರದ ಕಂಠೀಹಾರದಿಂದೇನು ಉಪಯೋಗ? ಆದರೆ ಸಮರ್ಪಿಸಿದಾಗ ಭಕ್ತರ ಆಸೆಯನ್ನು ತೃಪ್ತಿಪಡಿಸಲೋಸುಗ ಅವರು ತಮ್ಮ ಕತ್ತನ್ನು ವಾಲಿಸುತ್ತಿದ್ದರು. ॥205॥ ಹೊಳೆಯುತ್ತಿರುವ ಸುವರ್ಣ, ರತ್ನ, ಪಚ್ಚೆ, ಮುತ್ತುಗಳ ಹಾರವು ಅವರ ಕೊರಳಿನಲ್ಲಿ ವಿರಾಜಮಾನವಾಗಿರುತ್ತಿದ್ದವು. ಅವುಗಳು ಎಂಟು ಅಥವಾ ಹದಿನಾರು ಎಳೆಗಳನ್ನು ಹೊಂದಿದ್ದು ಪುಷ್ಕರದ ಜೊತೆ ಮಿಶ್ರಿತವಾಗಿರುತ್ತಿದ್ದವು. ॥206॥ ಮಲ್ಲಿಗೆ ಮತ್ತು ತುಳಸಿ ಮಾಲೆಗಳು ಅವರ ಪಾದಗಳವರೆಗೆ ಬರುವಷ್ಟು ಉದ್ದವಾಗಿದ್ದು ಅವರ ಕೊರಳಿಗೆ ಹಾಕುತ್ತಿದ್ದರು. ಅವರ ಕೊರಳು ಅಪೂರ್ವವಾದ ಮುಕ್ತಾಹಾರಗಳಿಂದ ಅಪೂರ್ವವಾದ ಪ್ರಕಾಶದಿಂದ ಮಿರಮಿರನೆ ಬೆಳಗುತ್ತಿತ್ತು. ॥207॥ ಚಿನ್ನದಲ್ಲಿ ಪಚ್ಚೆಗಳನ್ನು ಅಳವಡಿಸಿ ತಯಾರಿಸಿದ ಚಿನ್ನದ ಪದಕವು ಬಾಬಾರವರ ಹೃದಯಭಾಗದ ಮೇಲೆ ನೇತಾಡುತ್ತಿರುತ್ತಿತ್ತು. ಹಣೆಯ ಮೇಲೆ ಕಪ್ಪು ತಿಲಕವು ಅತ್ಯಂತ ಸುಂದರವಾಗಿ ಶೋಭೆಯನ್ನು ನೀಡುತ್ತಲಿತ್ತು. ॥208॥ ಅವರು ವಿಷ್ಣುವಿನ ತೇಜೋಸ್ವರೂಪವೇ ಧರೆಗಿಳಿದು ಬಂದಹಾಗೆ ಕಾಣುತ್ತಿರುವಾಗ ಅವರನ್ನು ಫಕೀರನೆಂದು ಹೇಗೆ ಕರೆಯುವುದು? ಅವರ ಮೇಲೆ ಒಂದು ಛತ್ರಿ ಮತ್ತು ಎಡಬಲಭಾಗಗಳಲ್ಲಿ ಚಾಮರಗಳು ಮತ್ತು ಅವರ ತಲೆಯಮೇಲೆ ಜರೀಪೇಟಾವು ಅತ್ಯಂತ ಶೋಭೆ ನೀಡುತ್ತಿದ್ದವು. ॥209॥ ಬಹುವಾಗಿ,

ಜೋಗನು ತನ್ನ ಕೈಯಲ್ಲಿ ಪಂಚಾರತಿಯನ್ನು ಹಿಡಿದು, ಮಂಗಳ ವಾದ್ಯಗಳ ಜೊತೆಯಲ್ಲಿ ಬಹು ಪ್ರೇಮಪೂರ್ವಕವಾಗಿ ಬಾಬಾರವರಿಗೆ ಆರತಿ ಬೆಳಗುತ್ತಿದ್ದನು. ॥210॥ ಪಂಚೋಪಚಾರದ ಸಹಿತವಾದ ಪೂಜೆಯೊಡನೆ ಧಗಧಗನೆ ಉರಿಯುತ್ತಿದ್ದ ಐದು ದೀಪಗಳಿಂದ ನೀರಾಂಜನ ಮತ್ತು ಕರ್ಪೂರಗಳಿಂದ ಬಾಬಾರವರಿಗೆ ಆರತಿ ಬೆಳಗುತ್ತಿದ್ದನು. ॥211॥ ಅನಂತರ, ಆರತಿಯು ಮುಗಿದ ನಂತರ, ಎಲ್ಲರೂ ಒಬ್ಬೊಬ್ಬರಾಗಿ ಬಾಬಾರವರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು. ಬಾಬಾರವರಲ್ಲಿ ಶರಣಾಗತರಾಗಿ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುತ್ತಿದ್ದರು. ॥212॥ ತಾತ್ಯಾಬಾನು ಚಿಲುಮೆಯನ್ನು, ಅತ್ತರು ಮತ್ತು ಪನ್ನೀರುಗಳನ್ನು ಬಾಬಾರವರಿಗೆ ಸಮರ್ಪಿಸಿ, ನಂತರ ತನ್ನ ಮನೆಗೆ ಹಿಂತಿರುಗಲು ಬಾಬಾರವರ ಅನುಮತಿಯನ್ನು ಬೇಡುತ್ತಿದ್ದನು. ಬಾಬಾರವರು ಹೇಳುತ್ತಿದ್ದರು, "ನನ್ನನ್ನು ಸಂಭಾಳಿಸು" ಎಂದು. ॥213॥ "ಹೋಗು. ನೀನು ಹೋಗಬೇಕಾದರೆ ಹೋಗು. ಆದರೆ ರಾತ್ರಿಯಲ್ಲಿ ಆಗಾಗ್ಗೆ ನನ್ನ ಬಗ್ಗೆ ವಿಚಾರಿಸುತ್ತ ಇರು." "ಬಹಳ ಒಳ್ಳೆಯದು" ಎಂದು ಹೇಳಿದಮೇಲೆ ತಾತ್ಯಾಜಿಯು ಚಾವಡಿ ಬಿಟ್ಟು ತನ್ನ ಮನೆಗೆ ಹಿಂತಿರುಗುತ್ತಿದ್ದನು. ॥214॥ ಅನಂತರ, ಅಲ್ಲಿದ್ದ ಸಮಸ್ತ ಜನರು ಹೋದಮೇಲೆ ಬಾಬಾರವರು ತಾವೇ ಸ್ವಹಸ್ತದಿಂದ ಗಂಟನ್ನು ಬಿಚ್ಚಿ ಧೋತಿಗಳ ಮಡಿಕೆಗಳನ್ನು ತೆಗೆದು ಹರಡಿ, ತಮ್ಮ ಹಾಸಿಗೆಯನ್ನು ತಾವೇ ಸಿದ್ಧಮಾಡಿಕೊಳ್ಳುತ್ತಿದ್ದರು. ॥215॥ ಅನಂತರ, ಅವರು ಸ್ವಯಂ ತಾವೇ ಅರವತ್ತು, ಅರವತ್ತೈದು ಬಿಳಿ ದುಪಟ್ಟುಗಳನ್ನು ಒಂದರ ಮೇಲೊಂದು ಹರಡಿ ಅನಂತರ ಅವುಗಳ ಮೇಲೆ ನಿದ್ರೆಮಾಡುತ್ತಿದ್ದರು. ॥216॥ ಇಲ್ಲಿಗೆ ಚಾವಡಿಯ ಕಥೆಯು, ಅಲ್ಲಿ ಹೇಗೆ ನಡೆಯುತ್ತಿತ್ತೋ ಅದೇ ರೀತಿಯಲ್ಲಿ ನಿರೂಪಿತವಾಯಿತು. ಈಗ ಇನ್ನುಳಿದ ಕಥೆಯನ್ನು ಮುಂದಿನ ಅಧ್ಯಾಯದಲ್ಲಿ ತಿಳಿಸುತ್ತೇನೆ. ॥217॥ ನಾನು ಶ್ರೋತೃಗಳ ಕ್ಷಮೆ ಬೇಡುತ್ತೇನೆ. ಸಾಯಿಯ ಮಹಿಮೆಯು ಅಗಾಧ. ನಾನು ಸಂಕ್ಷಿಪ್ತವಾಗಿ ಹೇಳಬೇಕೆಂದರೂ ಅದನ್ನು ಸೀಮಿತಗೊಳಿಸಲಾಗಲಿಲ್ಲ. ಏಕೆಂದರೆ ಅದೆಲ್ಲವೂ ಗುರುತ್ವ ಧರ್ಮವನ್ನು ಪ್ರತಿಪಾದಿಸುತ್ತದೆ. ॥218॥ ಈಗ ಸಾಯಿಯು ಅಡಿಗೆ ಮಾಡುತ್ತಿದ್ದ ಹಂಡೆಯ ಕಥೆ ಮತ್ತು ಬೇರೆ ಯಾವ ಕಥೆಗಳು ಬಿಟ್ಟುಹೋಗಿವೆಯೋ ಅವೆಲ್ಲವನ್ನೂ ಮುಂದಿನ ಅಧ್ಯಾಯದಲ್ಲಿ ವಿವರಿಸುತ್ತೇನೆ. ದಯಮಾಡಿ ಆದರ ಚಿತ್ತದಿಂದ ಕೇಳಿರಿ. ॥219॥ ಅಖಂಡ ಗುರುಸ್ಮರಣೆ ಮಾಡುವುದು ಹೇಮಾಡನ ಸ್ವಾರ್ಥ ಹಾಗೂ ಪರಮಾರ್ಥದ ಉದ್ದೇಶ. ಅವನು ಗುರುಚರಣಗಳಿಗೆ ಅಭಿವಂದನೆ ಮಾಡಿ ಕೃತಾರ್ಥನಾಗಿ ಅಲ್ಲಿರುವ ನಾಲ್ಕು ಪುರುಷಾರ್ಥಗಳನ್ನೂ (ಧರ್ಮ, ಅರ್ಥ, ಕಾಮ ಮೋಕ್ಷ) ಗಳಿಸಬಹುದು. ॥220॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಚಾವಡಿಯ ವಿವರಣೆ" ಎಂಬ

ಮೂವತ್ತೇಳನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.
ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಒಂದು ಜೊತೆ ತಾಳ.
2. ಮರದ ಕೋಲುಗಳು ತಾಳಹಾಕಲು ಉಪಯೋಗಿಸುವ ಸಾಧನಗಳು.
3. ಮೃದಂಗ.
4. ಸಣ್ಣ ತಂಬೂರಿ.
5. ಕೋಲಿನ ಮೇಲೆ ಸಡಿಲವಾಗಿ ಸಿಕ್ಕಿಸಿದ ಲೋಹದ ಉಂಗುರಗಳು.
6. ಕೇದಿಗೆ ಹೂವು.



# ಅಧ್ಯಾಯ - 38

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಹಂಡೆಯ ನಿರ್ವಹಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಸಕಲ ಜಗಕ್ಕೆ ಆನಂದ ನೀಡುವ, ಭಕ್ತರ ಇಚ್ಛೆಗಳನ್ನು ನೆರವೇರಿಸುವುದರಲ್ಲಿ ಸದಾ ನಿರತರಾಗಿರುವ, ಗುರುವರಾ, ನಿಮ್ಮ ಚರಣಗಳಲ್ಲಿ ಆಶ್ರಯ ಹೊಂದಿರುವವರ ಮೂರು ಬಗೆಯ ತಾಪಗಳನ್ನು (ಆದಿಭೌತಿಕ, ಆದಿದೈವಿಕ ಮತ್ತು ಆಧ್ಯಾತ್ಮಿಕ) ನಿವಾರಿಸುವಂತಹ ನಿಮ್ಮ ಚರಣಗಳಿಗೆ ವಂದಿಸುತ್ತೇನೆ. ॥1॥ ದೀನರನ್ನೂ, ವಿನೀತರನ್ನೂ ರಕ್ಷಿಸುವವರು, ಪರಮ ಉದಾರಿಯು, ಶರಣಾಗತರಾದ ಭಕ್ತರನ್ನು ಉದ್ಧರಿಸುವವರು, ನೀವು ಲೋಕೋಪಕಾರಕ್ಕಾಗಿ ಈ ಅವತಾರವನ್ನು ಧರಿಸಿರುವಿರಿ. ॥2॥ ಜಯವಾಗಲಿ, ಜಯವಾಗಲಿ, ನೀವು ದ್ವೈತವನ್ನು ನಾಶಮಾಡುವಿರಿ. ನಿಮಗೆ ಜಯವಾಗಲಿ. ನೀವು ಭಕ್ತರ ಮನವನ್ನು ರಂಜಿಸುವಿರಿ. ಜಯವಾಗಲಿ, ನೀವು ಭವದ ಭಯವನ್ನು ನಾಶಮಾಡುವಿರಿ. ಹೇ ಕರುಣಾನಿಧಿಯಾದ ಗುರುರಾಯ, ನಿಮಗೆ ಜಯವಾಗಲಿ. ॥3॥ ನನ್ನ ಪುಣ್ಯಫಲ ಅದೆಷ್ಟು! ಅದರಿಂದಾಗಿ ನನಗೆ ಆ ದಿವ್ಯ ಚರಣಗಳನ್ನು ನನ್ನ ಸ್ವಂತ ಕಣ್ಣುಗಳಿಂದಲೇ ನೋಡುವ ಭಾಗ್ಯ ಸಿಕ್ಕಿತು! ಮತ್ತು ಅವರ ಸಮಾಗಮದ ಸುಖವನ್ನು ಅನುಭವಿಸಿದ್ದೇನೆ! ಆ ದಿನಗಳು ಮತ್ತೆ ಎಂದಿಗೂ ಬಾರದಾಗಿ ಹೋಗಿವೆ. ॥4॥ ಕೇವಲ ಪರಿಶುದ್ಧ ಆತ್ಮದ ಸ್ವರೂಪ ರಸವನ್ನು ಬ್ರಹ್ಮನ ಮೂಸೆಯೊಳಗೆ ಹಾಕಿದಾಗ ಸುರಸವಾದ ಮೂರ್ತಿಯು ಆಕಾರಗೊಂಡು ಸಂತಶ್ರೇಷ್ಠರಾದ ಸಾಯಿಯಾಗಿದ್ದಾರೆ. ॥5॥

ಸಾಯಿಯೇ ಸ್ವತಃ ಆತ್ಮಾರಾಮರು. ಅವರು ಪರಿಪೂರ್ಣಾನಂದಧಾಮವೇ ಆಗಿದ್ದರು. ಸ್ವಯಂ ತಾವೇ ಸಕಲ ಕಾಮನೆಗಳಿಂದ ದೂರವಾಗಿದ್ದು, ತಮ್ಮ ಭಕ್ತರೆಲ್ಲರನ್ನೂ ನಿಷ್ಕಾಮ ಜೀವಿಗಳನ್ನಾಗಿ ಮಾಡುತ್ತಿದ್ದರು. ॥6॥ ಯಾರು ಎಲ್ಲ ಧರ್ಮಗಳ ವಿಧಾಯಕರಾಗಿರುವರೋ ಯಾರು ಬ್ರಹ್ಮತೇಜಸ್ಸು ಮತ್ತು ಕ್ಷಾತ್ರತೇಜಸ್ಸು ಹೊಂದಿರುವರೋ, ಮೃತ್ಯುಂಜಯರಾಗಿ ಪ್ರಕಾಶಿಸುತ್ತಾರೋ ಅವರ ಲಕ್ಷಣಗಳು ಸಂಕ್ಷಿಪ್ತವಾಗಿ ಈ ರೀತಿ ಇವೆ. ॥7॥ ಯಾರು ಹಿಂದಿನ ಜನ್ಮ ಮತ್ತು ಮರಣಗಳ ಬಂಧನವನ್ನು ಕೋಪಾವಿಷ್ಟರಾಗಿ ಕಿತ್ತುಹಾಕುವರೋ ಅಂತಹವರಿಗೆ ಮಂದಮತಿಯೂ ಅಜ್ಞಾನಿಯೂ ಆದ ನಾನು ಸಾಷ್ಟಾಂಗ ಪ್ರಣಾಮ ಮಾಡುತ್ತೇನೆ. ॥8॥ ಹಿಂದಿನ ಅಧ್ಯಾಯದಲ್ಲಿ ಅತಿ ಉತ್ಸಾಹದಿಂದ ನಾನು ಸಾಯಿನಾಥರ ಚಾವಡಿಯನ್ನು ವರ್ಣಿಸಿದ್ದೇನೆ. ಈಗ ಈ ಅಧ್ಯಾಯದಲ್ಲಿ ಅಡಿಗೆ ಮಾಡುವ ಹಂಡೆಯ ವಿವರಣೆಯನ್ನು ಆಲಿಸಿರಿ. ಅದು ಅಖಂಡ ಸುಖವನ್ನು ನೀಡುತ್ತದೆ. ॥9॥ ಹಾಲು ಕುಡಿಯುವ ಮಗುವು ಕೇವಲ ಕುಡಿಯುವುದರಲ್ಲಿ ಮಗ್ನವಾಗಿರುತ್ತದೆ. ಅದಕ್ಕೆ ಏನು ತೆಗೆದುಕೊಳ್ಳಬೇಕೆಂದು ತಿಳಿದಿರುವುದಿಲ್ಲ. ಅದಕ್ಕೆ ಹಾಲನ್ನು ಕೊಡಬೇಕೇ? ಅಥವಾ ಮೆತ್ತನೆಯ ಅನ್ನವನ್ನು ಕೊಡಬೇಕೇ – ಎಂಬುದರ ಬಗ್ಗೆ ತಾಯಿಯು ಕಾಳಜಿ ವಹಿಸಬೇಕಾಗುತ್ತದೆ. ॥10॥ ನನ್ನ ಸಾಯಿಮಾತೆಯೂ ಅದೇ ರೀತಿ. ಅವರು ನನ್ನ ಕೈಯಲ್ಲಿ ಲೇಖನಿಯನ್ನಿಟ್ಟು, ನನ್ನ ಕಡೆಯಿಂದ ಯಾವುದೇ ಪ್ರಯತ್ನವಿಲ್ಲದೆಯೇ ತನ್ನ ಭಕ್ತರ ಅಂತಃಕರಣದ ಸಂತಸಕ್ಕಾಗಿ ಈ ಗ್ರಂಥವನ್ನು ಬರೆಸುತ್ತಿದ್ದಾರೆ. ॥11॥ ಮಾನವ ಧರ್ಮಶಾಸ್ತ್ರಗಳಲ್ಲಿ ಬೇರೆ ಬೇರೆ ಯುಗಗಳಲ್ಲಿ ನಿರ್ವಾಣ ಸಾಧನೆಗಾಗಿ ಬೇರೆ ಬೇರೆ ಸಾಧನೆಗಳನ್ನು ಹೇಳಿದ್ದಾರೆ. ಕೃತಯುಗದಲ್ಲಿ ತಪಸ್ಸು, ತ್ರೇತಾಯುಗದಲ್ಲಿ ಜ್ಞಾನ, ದ್ವಾಪರಯುಗದಲ್ಲಿ ಯಜ್ಞ ಮತ್ತು ಕಲಿಯುಗದಲ್ಲಿ ದಾನ – ಇವುಗಳನ್ನು ತಿಳಿಸಿದೆ. ॥12॥ ಯಾವಾಗಲೂ ದಾನ ಧರ್ಮಗಳು ಬಹಳ ಮುಖ್ಯ. ಅದರಲ್ಲಿ ಅನ್ನದಾನ ಪರಮಶ್ರೇಷ್ಠವಾದುದು. ಆದುದರಿಂದ ನಿತ್ಯವೂ ಅನ್ನದಾನ ಮಾಡಬೇಕು. ಅದು ಎಲ್ಲ ಕರ್ಮಗಳಿಗಿಂತಲೂ ಆದ್ಯ ಕರ್ಮವಾಗಿದೆ. ॥13॥ ಮಧ್ಯಾಹ್ನವಾಗುತ್ತಿದ್ದ ಹಾಗೆಯೇ ನಾವು ಹಸಿವೆಯಿಂದ ಕಂಗಾಲಾಗುತ್ತೇವೆ. ನಮಗೆ ಹೇಗೆ ಸಂಕಟವೋ ಅದೇ ರೀತಿ ಇತರರಿಗೂ ಆಗುತ್ತದೆ. ಯಾರು ಇದರ ಅಂತರಂಗವನ್ನು ಅರಿಯುತ್ತಾರೋ ಅವರೇ ಪುಣ್ಯಾತ್ಮರು. ॥14॥ ನಮಗೆ ವಿಧಿಸಿರುವ ಪ್ರಧಾನವಾದ ಆಚಾರಧರ್ಮಗಳಲ್ಲಿ ಅನ್ನದಾನಕ್ಕೆ ಅಗ್ರಗಣ್ಯವಾದ ಸ್ಥಾನವಿದೆ. ಅದನ್ನು ಪರಿಶೀಲಿಸಿದಾಗ ಅದಕ್ಕಿಂತ ಶ್ರೇಷ್ಠವಾದುದು ಮತ್ತೊಂದಿಲ್ಲ. ॥15॥ ಅನ್ನವು ಪರಬ್ರಹ್ಮ ಸ್ವರೂಪ. ಅನ್ನದಿಂದಲೇ ಎಲ್ಲ ಜೀವಿಗಳೂ ಹುಟ್ಟುತ್ತವೆ. ಅನ್ನದಿಂದಲೇ ಜೀವಿಗಳು ಜೀವಿಸಲು ಸಾಧ್ಯವಾಗಿರುತ್ತದೆ ಮತ್ತು ಮರಣವಾದ ನಂತರ ಅನ್ನದಲ್ಲಿಯೇ ಲೀನವಾಗುತ್ತದೆ. ॥16॥ ಯಾವಾಗ, ಅವೇಳೆಯಲ್ಲಾದರೂ, ಅತಿಥಿಗಳು ಬಂದಲ್ಲಿ ಗೃಹಸ್ಥರಾದವರು ಅವರಿಗೆ ಅನ್ನ ನೀಡಿ ಸುಖಪಡಿಸಬೇಕು. ಯಾರಾದರೂ ಅವರನ್ನು ಹಸಿವೆಯಿಂದ ಹಿಂದಕ್ಕೆ ಕಳಿಸಿದರೆ ತಮಗೆ ತಾವೇ ದುರ್ಗತಿಯನ್ನು ಆಮಂತ್ರಿಸಿಕೊಳ್ಳುತ್ತಾರೆ. ॥17॥ ಹಣ, ಆಸ್ತಿ, ಬಟ್ಟೆತ್ಯಾದಿಗಳನ್ನು ದಾನಮಾಡುವಾಗ

ಸ್ವಲ್ಪ ವಿಚಾರಮಾಡಬೇಕಾಗುತ್ತದೆ. ಆದರೆ ಅನ್ನದ ವಿಚಾರದಲ್ಲಿ ಈ ರೀತಿಯ ಯಾವುದೇ ಆಲೋಚನೆಯ ಆವಶ್ಯಕತೆಯಿಲ್ಲ. ಯಾರಾದರೂ ಯಾವ ಸಮಯದಲ್ಲಾದರೂ ಮನೆ ಬಾಗಿಲಿಗೆ ಬಂದಲ್ಲಿ ಅವರನ್ನು ಅನಾದರ ಮಾಡುವುದು ಸರಿಯಲ್ಲ. ॥18॥ ಅನ್ನದಾನದ ಮಹತ್ವ ಈ ರೀತಿ ಇದೆ. ಅದಕ್ಕೆ ಶೃತಿಗಳೂ ಪ್ರಮಾಣವೇ. ಆದುದರಿಂದ, ಬಾಬಾರವರೂ ಸಹ ಲೌಕಿಕ ರೀತಿಯ ಆಚಾರದ ರೀತಿ ಅನ್ನ ಸಂತರ್ಪಣೆ ಮಾಡುತ್ತಿದ್ದರು. ॥19॥ ಹಣವನ್ನು ನೀಡುವುದು ಅಥವಾ ಇನ್ನೇನಾದರೂ ದಾನ ನೀಡುವುದು ಅನ್ನದಾನವಿಲ್ಲದೆ ಅಪೂರ್ಣವಾಗಿರುತ್ತದೆ. ಅದು ಚಂದ್ರನಿಲ್ಲದ ತಾರೆಗಳ ಸಮೂಹದಂತೆ ಅಥವಾ ಪದಕವಿಲ್ಲದ ಕಂಠೀಹಾರದ ರೀತಿ ಇರುತ್ತದೆ. ಅಂತಹ ಹಾರ ಸುಂದರವಾಗಿ ಕಾಣುತ್ತದೆಯೇ? ॥20॥ ಯಾವ ರೀತಿ 'ವರಣ'ವು ಷಡ್ರಸಗಳಲ್ಲಿ ಅತ್ಯಂತ ಸ್ವಾದವೋ, ಅದೇ ರೀತಿ ಅನ್ನದಾನವು ದಾನಗಳಲ್ಲಿ ಅತ್ಯಂತ ಶ್ರೇಷ್ಠವಾದುದು. ಕಳಸವಿಲ್ಲದೆ ಗೋಪುರವು ಶೋಭಿಸುವುದಿಲ್ಲ. ಅದೇ ರೀತಿ ತಾವರೆ ಹೂಗಳಿಲ್ಲದೆ ಕೊಳವೂ ಶೋಭಿಸುವುದಿಲ್ಲ. ॥21॥ ಪ್ರೇಮ ಭಕ್ತಿ ಇಲ್ಲದ ಭಜನೆಗಳು, ಹಣೆಯಲ್ಲಿ ಕುಂಕುಮವಿಲ್ಲದ ಸುಮಂಗಲೆ ಸುಸ್ವರವಾದ ಧ್ವನಿಯಿಲ್ಲದೆ ಹಾಡುವುದು, ಶೋಭಿಸುವುದಿಲ್ಲ. ಉಪ್ಪಿಲ್ಲದ ಮಜ್ಜಿಗೆಯು ರುಚಿಹೀನವಾಗಿರುವುದು. ॥22॥ ಅನ್ನದಾನ ಮಾಡುವಾಗ ರೋಗಗ್ರಸ್ಥರಿಗೆ, ಅಶಕ್ತರಿಗೆ, ಅಂಧರಿಗೆ, ಅಂಗವಿಕಲರಿಗೆ ಮತ್ತು ಬಡವರಿಗೆ ಮೊದಲು ನೀಡಬೇಕು. ಆಪ್ತೇಷ್ಟರಿಗೆ ತರುವಾಯ ನೀಡಬೇಕು. ॥23॥ ಈಗ ಬಾಬಾರವರು ಅಡಿಗೆ ಮಾಡುತ್ತಿದ್ದ ಹಂಡೆಯ ಬಗ್ಗೆ ಶ್ರೋತೃಗಳು, ಸಾಧಾರಣ ಕಲ್ಪನೆ ಮಾಡಿಕೊಳ್ಳಲು ಅನುವಾಗುವಂತೆ ಜಿಜ್ಞಾಸುಗಳ ಪ್ರೀತ್ಯರ್ಥವಾಗಿ ಒಂದು ಪ್ರಯತ್ನ ಮಾಡುತ್ತೇನೆ. ॥24॥ ಮಸೀದಿಯ ಅಂಗಳದಲ್ಲಿ ಅವರು ಒಂದು ದೊಡ್ಡ ಒಲೆಯನ್ನಿಟ್ಟು ಅದರ ಮೇಲೆ ಒಂದು ದೊಡ್ಡ ಪಾತ್ರೆಯನ್ನಿಟ್ಟು ಅದರಲ್ಲಿ ಸಾಕಷ್ಟು ನೀರನ್ನು ಹಾಕುತ್ತಿದ್ದರು. ॥25॥ ಕೆಲವು ವೇಳೆ ಅವರು ಸಿಹಿ ಪೊಂಗಲನ್ನು ಮತ್ತು ಕೆಲವು ಸಲ ಮಾಂಸ ಮಿಶ್ರಿತ ಪಲಾವನ್ನು ಬೇಯಿಸುತ್ತಿದ್ದರು. ಕೆಲವು ವೇಳೆ ಅವರು ಗೋಧಿಹಿಟ್ಟಿನ ಪಕೋಡಗಳನ್ನು ಮಾಡಿ ಅವುಗಳನ್ನು ಕೆಂಡದ ಒಲೆಯ ಮೇಲಿಟ್ಟ ಪಾತ್ರೆಯಲ್ಲಿ ಬೇಯಿಸುತ್ತಿದ್ದರು. ॥26॥ ಕೆಲವು ಸಲ ಅವರು ಗೋಧಿಯ ರೋಗ್ಗಾ[3] (ಮುದ್ದೆ) ಅಥವಾ ಗೋಧಿಯ ಪಂಗ್[4] (ತಟ್ಟಿ ಸುರುಳಿಮಾಡಿದುದು)ವನ್ನು ಮಾಡಿ ಅದನ್ನು ವರಣ್‌ನಲ್ಲಿ ಹಾಕಿ ಮುದ್ದೆಯ ಜೊತೆ ಹದವಾಗಿ ಬೇಯಿಸುತ್ತಿದ್ದರು. ॥27॥ ಕಲ್ಲು ಚಪ್ಪಡಿಯ ಮೇಲೆ ಮಸಾಲೆಯನ್ನು ಅರೆದು ಎಲ್ಲವನ್ನೂ ಬೇಯಿಸಲು ಸಿದ್ಧಪಡಿಸುತ್ತಿದ್ದರು. ಮುಗಾವಡಿಯನ್ನು[5] ತಮ್ಮ ಕೈಯಾರೆ ಮಾಡಿ ಅವುಗಳನ್ನು ನಿಧಾನವಾಗಿ ಹಂಡೆಯೊಳಗೆ ಹಾಕುತ್ತಿದ್ದರು. ॥28॥ ಸ್ವರ್ಗದಲ್ಲಿ ಜಾಗ ಸಿಗುವುದೆಂಬ ಆಶೆಯಿಂದ ಯಜ್ಞಕ್ಕಾಗಿ ಪಶುಬಲಿಕೊಟ್ಟು ಹಿಂಸೆಯನ್ನು ಮಾಡುತ್ತಾರೆ. ಬ್ರಾಹ್ಮಣರೂ ಸಹ ಯಜ್ಞಕ್ಕೆ ಅರ್ಪಿಸಿದ ಪ್ರಸಾದವಾಗಿ[6] ಮಾಂಸ ತಿನ್ನುತ್ತಾರೆ, ಏಕೆಂದರೆ ಶಾಸ್ತ್ರಗಳು ಈ ಹಿಂಸೆಯನ್ನು ಒಪ್ಪುತ್ತವೆ. ॥29॥ ಅದೇ ರೀತಿ, ಬಾಬಾರವರು ಮುಲ್ಲಾನನ್ನು[7] ಕರೆದು ಅವರಿಂದ ಕುರಿಯನ್ನು ಬಲಿ ಕೊಡುವ ಮೊದಲು ಶಾಸ್ತ್ರೋಕ್ತವಾಗಿ

ಮಂತ್ರೋಚ್ಚಾರಣ ಮಾಡಿಸುತ್ತಿದ್ದರು. ಬಾಬಾರವರು ಇದನ್ನು ಮತದ ವಿಧಿ ವಿಧಾನಗಳನ್ನು ಗಮನದಲ್ಲಿರಿಸಿಕೊಂಡು ಮಾಡುತ್ತಿದ್ದರು. ॥30॥ ಅಲ್ಲಿ ಎರಡು ರೀತಿಯ ಹಂಡೆಗಳು ಇದ್ದುವು. ಒಂದು ದೊಡ್ಡದು, ಮತ್ತೊಂದು ಚಿಕ್ಕದು. ಅವುಗಳಲ್ಲಿ ಒಂದನ್ನು ಯಾರಿಗೆ ಯಾವ ರೀತಿಯ ಅನ್ನ ಬೇಕಾಗಿರುತ್ತಿತ್ತೋ ಹಾಗೆ ಉಪಯೋಗಿಸುತ್ತಿದ್ದರು. ॥31॥ ಚಿಕ್ಕ ಪಾತ್ರೆಯಲ್ಲಿ ಐವತ್ತು ಜನರಿಗೆ ಸಾಕಾಗುವಷ್ಟು ಅಡಿಗೆಯಾಗುತ್ತಿತ್ತು, ದೊಡ್ಡದು ಒಂದು ನೂರು ಜನರಿಗೆ ಸಾಕಾಗುತ್ತಿತ್ತು ಮತ್ತು ಅದರಲ್ಲಿ ಸ್ವಲ್ಪ ಉಳಿದು ಹೋಗುತ್ತಿತ್ತು. ॥32॥ ಈ ಎಲ್ಲ ಅವಶ್ಯಕ ವಸ್ತುಗಳಿಗಾಗಿ ಬಾಬಾರವರು ಸ್ವತಃ ತಾವೇ ದಿನಸಿ ಅಂಗಡಿಗೆ ಹೋಗಿ ಲೆಕ್ಕ ಬರೆಸುತ್ತಿದ್ದರು. ಮತ್ತು ಕೂಡಲೇ ನಗದು ಹಣ ಪಾವತಿಸುತ್ತಿದ್ದರು. ಅಲ್ಲಿ ಯಾವುದೇ ಸಾಲದ ಮಾತು ಇರಲಿಲ್ಲ. ॥33॥ ಉಪ್ಪು, ಮೆಣಸಿನಕಾಯಿ, ಜೀರಿಗೆ, ಮೆಣಸು, ತರಕಾರಿ, ತೆಂಗಿನಕಾಯಿ, ಕೊಬ್ಬರಿ – ಇವೆಲ್ಲವನ್ನೂ ಬಾಬಾರವರು ಬಹಳ ಎಚ್ಚರಿಕೆಯಿಂದ ತಿನಿಸುಗಳನ್ನು ನಿಶ್ಚಯಿಸಿದ ನಂತರ ತಾವೇ ಖುದ್ದಾಗಿ ಖರೀದಿಸುತ್ತಿದ್ದರು. ॥34॥ ಮಸೀದಿಯಲ್ಲಿ ಕುಳಿತುಕೊಂಡು, ತಮ್ಮ ಕೈಯಿಂದಲೇ ಬೀಸುವ ಕಲ್ಲನ್ನು ಸಿದ್ಧಪಡಿಸಿ ಬಾಬಾರವರು ಅದರಲ್ಲಿ ಗೋಧಿ, ಧಾನ್ಯಗಳು ಮತ್ತು ಕಾಳುಗಳನ್ನು ಬೀಸುತ್ತಿದ್ದರು. ॥35॥ ಬಾಬಾರವರು ಅಡಿಗೆ ಮಾಡಲು ತಾವೇ ಮುಖ್ಯವಾಗಿ ಶ್ರಮವಹಿಸಿ ಅವಿರತವಾಗಿ ಮಾಡುತ್ತಿದ್ದರು. ಮಸಾಲೆ ಅರೆಯುವುದನ್ನೂ ಸಹ ಪರಮ ಪ್ರೀತಿಯ ಭಾವದಿಂದಲೇ ಅವರು ಮಾಡುತ್ತಿದ್ದರು. ॥36॥ ಬಾಬಾರವರು ತಾವೇ ಕಟ್ಟಿಗೆಗಳನ್ನು ಇಟ್ಟು ಒಲೆ ಹತ್ತಿಸಿ ವೈಶ್ವಾನರನೆಂಬ ಅಗ್ನಿಯನ್ನು ಸಣ್ಣದಾಗಿ ಇಲ್ಲವೆ ಪ್ರಖರವಾಗಿಯೂ ಮಾಡಲು ಸರಿಯಾಗಿ ಬಾಚುತ್ತಿದ್ದರು. ॥37॥ ಬೇಳೆಯನ್ನು ನೆನೆಸಿದ ಮೇಲೆ ತಾವೇ ಅದನ್ನು ಮಸೆಗಲ್ಲಿನ ಮೇಲೆ ಹಾಕಿ ನಯವಮಾಡುತ್ತಿದ್ದರು. ಅನಂತರ ಅದಕ್ಕೆ ಇಂಗು, ಜೀರಿಗೆ, ಧನಿಯ ಇವುಗಳನ್ನು ಮಿಶ್ರಮಾಡಿ ಅತಿ ರುಚಿಯಾದ ಮಸಾಲೆಯಿಂದ ತುಂಬಿದ ಖಾದ್ಯವನ್ನು ತಯಾರಿಸುತ್ತಿದ್ದರು. ॥38॥ ಗೋಧಿಯ ಹಿಟ್ಟಿನ ಕಣಕವನ್ನು ಚೆನ್ನಾಗಿ ನಾದಿದ ಮೇಲೆ ಸಾಕಷ್ಟು ಉದ್ದವಾದ ಸುರುಳಿಯನ್ನು ಮಾಡಿ ಚಿಕ್ಕಚಿಕ್ಕ ಉಂಡೆಗಳನ್ನಾಗಿ ಮಾಡಿ ಅನಂತರ ಅವುಗಳನ್ನು ಲಟ್ಟಿಸಿ ಅಗಲವಾದ ರೊಟ್ಟಿಗಳನ್ನು ಮಾಡುತ್ತಿದ್ದರು. ॥39॥ ಅವರು ಹಂಡೆಯಲ್ಲಿ ಅಂಬಲಿಯನ್ನೂ ಮಾಡುತ್ತಿದ್ದರು. ಕಾಳುಗಳ ಹಿಟ್ಟಿಗೆ ಸಾಕಷ್ಟು ಪ್ರಮಾಣದ ನೀರನ್ನು ಬೆರೆಸಿ ಅದಕ್ಕೆ ಮಜ್ಜಿಗೆ ಬೆರೆಸಿ ಅನಂತರ ಅದನ್ನು ಬೇಯಿಸಿ ಅಂಬಲಿ ತಯಾರಿಸುತ್ತಿದ್ದರು. ॥40॥ ಆ ಅಂಬಲಿಯನ್ನು ಸಹ ಬಾಬಾರವರು ತಮ್ಮ ಕೈಗಳಿಂದಲೇ ಪರಮ ಪ್ರೇಮದಿಂದ ಅತ್ಯಾದರದಿಂದ ಅನ್ನ ಬಡಿಸಿ ನಂತರ ಜೊತೆಯಲ್ಲಿ ಬಡಿಸುತ್ತಿದ್ದರು. ॥41॥ ಅಡಿಗೆಯು ಸರಿಯಾಗಿ ಬೆಂದಿದೆಯೆಂಬ ತೃಪ್ತಿಯುಂಟಾದ ಮೇಲೆಯೇ, ಹಂಡೆಯನ್ನು ಒಲೆಯಿಂದ ಕೆಳಗೆ ಇಳಿಸಿ ಮಸೀದಿಗೆ ತೆಗೆದುಕೊಂಡು ಬಂದು ಅಲ್ಲಿಡುತ್ತಿದ್ದರು. ॥42॥ ಮೌಲ್ವಿಯನ್ನು ಕರೆಸಿ ವಿಧಿಪೂರ್ವಕವಾಗಿ ಅನ್ನದ ಅರ್ಪಣೆಯನ್ನು (ಫತೇಹಾವನ್ನು) ಹೇಳಿಸಿದ ಮೇಲೆ ಪ್ರಸಾದವನ್ನು ಮ್ಹಾಳಸಾಪತಿಗೆ ಕಳಿಸುತ್ತಿದ್ದರು. ಮತ್ತು ತಾತ್ಯಾನಿಂದ ಆರಂಭಿಸುತ್ತಿದ್ದರು. ॥43॥ ಅನಂತರ ಉಳಿದ ಎಲ್ಲ

ಆಹಾರವನ್ನು ಬಾಬಾರವರು ತಮ್ಮ ಸ್ವಹಸ್ತದಿಂದಲೇ ಬಡವರಿಗೆ ದುರ್ಬಲರಿಗೆ ತೃಪ್ತಿಯಾಗುವಷ್ಟು ನೀಡುತ್ತಿದ್ದರುಅದರಿಂದ ಸುಖಸಮಾಧಾನವನ್ನು ಹೊಂದುತ್ತಿದ್ದರು. ॥44॥ ಯಾರಿಗೆ ಅನ್ನದ ಅವಶ್ಯಕತೆಯಿತ್ತೋ ಅವರೆಲ್ಲರೂ ಆತುರದಿಂದ ತೃಪ್ತಿಯಾಗುವಷ್ಟು ತಿನ್ನುತ್ತಿದ್ದರು. ಊಟಮಾಡಿ ಉಲ್ಲಸಿತರಾಗಿರುತ್ತಿದ್ದರು. ಅದೂ ಅಲ್ಲದೆ ಬಾಬಾರವರು ಅವರಿಗೆ ಇನ್ನೂ ಹೆಚ್ಚುಹೆಚ್ಚು ತಿನ್ನಲು ಆಗ್ರಹಿಸುತ್ತಿದ್ದರು. ಪ್ರೀತಿಯಿಂದ 'ತಿನ್ನು' 'ತಿನ್ನು' ಎಂದು ಬಲವಂತಪಡಿಸುತ್ತಿದ್ದರು. ॥45॥ ಬಾಬಾರವರೇ ಸ್ವತಃ ಕೈಯಿಂದ ಬಡಿಸಿ, ಹೊಟ್ಟೆತುಂಬುವಷ್ಟು ಊಟಮಾಡಿ ತೃಪ್ತಿಹೊಂದಿದವರ ಪುಣ್ಯವು ಅದೆಷ್ಟು ಗಹನವಾದುದು! ಅವರು ಅದೆಷ್ಟು ಭಾಗ್ಯವಂತರು! ಅದೆಂಥಾ ಧನ್ಯತೆ! ॥46॥ ಇಲ್ಲಿ ಸಹಜವಾಗಿಯೇ ಒಂದು ಶಂಕೆ ಉಂಟಾಗಬಹುದು. ಬಾಬಾರವರು ಸಮಸ್ತ ಭಕ್ತರಿಗೂ ಮಾಂಸಸಹಿತವಾದ ಅನ್ನವನ್ನೇ ಹಂಚುತ್ತಿದ್ದರೇನು? ಅವರಿಗೆ ಮನಸ್ಸಿನಲ್ಲಿ ಯಾವುದೇ ಸಂಶಯವಿರುತ್ತಿರಲಿಲ್ಲವೇ? ॥47॥ ಈ ಶಂಕೆಯನ್ನು ನಿವಾರಿಸಲು ಸ್ವಲ್ಪವೂ ಸಮಯ ಬೇಕಿಲ್ಲ. ಅವರು ಈ ಅನ್ನವನ್ನು ಯಾರು ನಿತ್ಯವೂ ಮಾಂಸಾಹಾರಿಗಳಾಗಿದ್ದರೋ ಅವರಿಗೆ ಮಾತ್ರ ಹಂಚುತ್ತಿದ್ದರು. ॥48॥ ಯಾರು ಹುಟ್ಟಿನಿಂದಲೂ ಇದರ ಸಹವಾಸ ಮಾಡಿಲ್ಲವೋ ಅವರಿಗೆ ಮಾಂಸಾನ್ನವನ್ನುಮುಟ್ಟಲೂ ಸಹ ಬಿಡುತ್ತಿರಲಿಲ್ಲ. ಅವರು ಅದನ್ನು ಎಂದಿಗೂ ಸಾಹಸಪಟ್ಟಿರಲಿಲ್ಲ. ಅವರು ಯಾರಿಗೆ ಮಾಂಸದನ್ನ ಪ್ರಸಾದದ ಆಶೆಯಿದೆಯೋ ಅವರಿಗೆ ಮಾತ್ರ ಕೊಡುತ್ತಿದ್ದರು. ॥49॥ ಗುರುವು ಏನನ್ನಾದರೂ ಪ್ರಸಾದ ಎಂದು ನೀಡಿದಲ್ಲಿ ಶಿಷ್ಯನು ಅದರ ಬಗ್ಗೆ ಯೋಚಿಸಿ ಮತ್ತು ಅದನ್ನು ಸ್ವೀಕರಿಸಬಹುದೇ ಬೇಡವೇ ಎಂದು ಸಂಶಯಪಡುತ್ತಾನೋ ಅವನು ನಿಜವಾಗಿಯೂ ಅಧಃಪತನ ಹೊಂದುತ್ತಾನೆ. ॥50॥ ತಮ್ಮ ಶಿಷ್ಯನು ಎಷ್ಟರಮಟ್ಟಿಗೆ ಈ ತತ್ತ್ವವನ್ನು ಅಳವಡಿಸಿಕೊಂಡಿದ್ದಾನೆಂಬುದನ್ನು ನೋಡಲು ಬಾಬಾರವರು ವಿನೋದದಿಂದ ಕೆಲವು ಪರೀಕ್ಷೆಗಳನ್ನು ಒಡ್ಡುತ್ತಿದ್ದರು. ॥51॥ ಈ ಸಂದರ್ಭದಲ್ಲಿ, ನಾನು ಇದನ್ನು ಬರೆಯುತ್ತಿರುವಾಗ, ನನಗೆ ಒಂದು ಘಟನೆ ನೆನಪಾಗುತ್ತಿದೆ. ಅದನ್ನು ಶ್ರೋತೃಗಳು ಗಮನವಿಟ್ಟು ಆಲಿಸಬೇಕು. ಇದು ಅವರಿಗೆ ಲಾಭಕಾರಿಯಾಗಿರುತ್ತದೆ. ॥52॥ ಒಂದು ಏಕಾದಶಿಯ ದಿನ. ಬಾಬಾರವರು ದಾದಾ ಕೇಳ್ಕರನಿಗೆ ಹೇಳಿದರು, "ಕೊರ್ಹಾಲಾದಿಂದ ನನಗಾಗಿ ಸ್ವಲ್ಪ ಮಾಂಸವನ್ನು ತರುವೆಯಾ?" ॥53॥ ಅದಕ್ಕೆ ಸಾಯಿಯವರು ಸ್ವಲ್ಪ ಹಣ ತೆಗೆದು, ದಾದಾಗೆ ಕೊಟ್ಟರು. ಅದನ್ನು ಎಣಿಸುತ್ತ ಕೊಟ್ಟರು. "ನೀನೇ ಹೋಗು" ಮತ್ತು "ನೀನೇ ಇದನ್ನು ಮಾಡಬೇಕು" ಎಂದು ಆಜ್ಞಾಪಿಸಿದರು. ॥54॥ ಅವನ ಹೆಸರು ಗಣೇಶ ದಾಮೋದರ್ ಮತ್ತು ಅವನ ಮನೆತನದ ಹೆಸರು ಕೇಳ್ಕರ್ ಎಂದು. ಜನರು ಅವನನ್ನು ವಯಸ್ಕನೆಂದು ತಿಳಿದು ಎಲ್ಲರೂ ಅವನನ್ನು 'ದಾದಾ' ಎಂದು ಕರೆಯುತ್ತಿದ್ದರು. ॥55॥ ಅವನು ಹರಿವಿನಾಯಕ ಸಾಠೆಯವರ ಮಾವ. ಅವನಿಗೆ ಸಾಯಿಯ ಮೇಲೆ ಅಗಾಧವಾದ ಪ್ರೇಮ. ಬ್ರಾಹ್ಮಣನಾಗಿ ಅವನು ಬ್ರಾಹ್ಮಣರ ಕರ್ಮಗಳನ್ನು ಅತಿಗೌರವದಿಂದ ಮಾಡುತ್ತಿದ್ದನು. ಮತ್ತು ಯಾವಾಗಲೂ ಒಳ್ಳೆಯ ವಿಚಾರವಂತನೂ ಸದಾಚಾರಸಂಪನ್ನನೂ ಆಗಿದ್ದನು. ॥56॥ ಅವನು ಹಗಲು

ರಾತ್ರಿ ತನ್ನ ಗುರುಸೇವೆ ಮಾಡುತ್ತಿದ್ದರೂ ಅವನಿಗೆ ತೃಪ್ತಿ ಇರಲಿಲ್ಲ. ಅವನು ಈ ಆಜ್ಞೆಯ ವೈಚಿತ್ರ್ಯವನ್ನು ಏಕೆ ಅನುಭವಿಸಲಿಲ್ಲ? ॥57॥ ಯಾರ ದೇಹವು ಆರೋಗ್ಯಕರವಾಗಿರುವುದೋ ಮತ್ತು ಪೂರ್ವಾಭ್ಯಾಸಗಳ ಬಲ ಹೊಂದಿರುವುದೋ, ಅಂತಹ ಮನುಷ್ಯನು ಎಂದಿಗೂ ಚಂಚಲ ಮನದವನಲ್ಲ ಮತ್ತು ಅವನ ಬುದ್ಧಿಯು ಗುರುಚರಣಗಳಲ್ಲಿ ಅಚಲವಾಗಿ ಇರುತ್ತದೆ. ॥58॥ ಅವನಿಗೆ ತಿಳಿದ ವಿಷಯವೇನೆಂದರೆ, ಧನ, ಧಾನ್ಯ ಮತ್ತು ವಸ್ತ್ರಗಳ ಅರ್ಪಣೆಯು ಮಾತ್ರವೇ ದಕ್ಷಿಣೆಯಾಗಿರಲಿಲ್ಲ. ಆದರೆ ಗುರುವಿನ ಆಜ್ಞೆಯ ಅನುಷ್ಠಾನವೇ ನಿಜವಾದ ದಕ್ಷಿಣೆಯು ಮತ್ತು ಅದು ಗುರುವಿಗೆ ಸಂತೋಷ ನೀಡುವಂತಹುದು. ॥59॥ ಕಾಯಾ ವಾಚಾ ಮನಸಾ ಸರ್ವವನ್ನೂ ಗುರುವಿಗೆ ಸಮರ್ಪಣೆಮಾಡಿದವನು ಗುರುಕೃಪೆಯನ್ನು ಸಾಧಿಸಿ ನಿಜಶ್ರದ್ಧೆಯನ್ನು ಪ್ರಾಪ್ತಿಹೊಂದುತ್ತಾನೆ. ॥60॥ ಆಜ್ಞೆಯನ್ನು ಪರಿಪಾಲಿಸಿ, ಅವನು ಕೂಡಲೇ ತನ್ನ ಉಡುಪು ಬದಲಿಸಿ, ಹಳ್ಳಿಗೆ ಹೊರಡಲು ಸಿದ್ಧನಾದನು. ಆಗ ಅವನನ್ನು ಬಾಬಾ ಹಿಂದಕ್ಕೆ ಕರೆದರು. ॥61॥ "ಓಹ್! ನೀನು ಮತ್ಯಾರನ್ನಾದರೂ ಈ ಖರೀದಿ ಮಾಡಲು ಕಳುಹಿಸಬಹುದು" ಎಂದು ಬಾಬಾ ಹೇಳಿದರು. ಅನವಶ್ಯಕವಾಗಿ ನೀನೇ ಬಂದು ಹೋಗುವ ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ." ॥62॥ ಆದ್ದರಿಂದ ದಾದಾನು, ಸೇವಕ ಪಾಂಡುವನ್ನು ಮಾಂಸ ತರಲು ಹೇಳಿದನು. ಆ ಸಮಯದಲ್ಲಿ ಬಾಬಾರವರು ದಾದಾನಿಗೆ ಏನು ಹೇಳಿದರೆಂಬುದನ್ನು ಕೇಳಿ. ॥63॥ ಪಾಂಡುವು ಇನ್ನೇನು ಹೊರಡಬೇಕೆಂದಿರುವಾಗ, ಮತ್ತು ರಸ್ತೆಯಲ್ಲಿ ಹೊರಟಿದ್ದಾಗ ಬಾಬಾರವರು ಹೇಳಿದರು, "ಅದು ಈ ದಿನಕ್ಕಿರಲಿ. ಅವನನ್ನು ಹಿಂದಕ್ಕೆ ಬರಲು ಹೇಳು." ॥64॥ ಅದು ಹಾಗಿರಲಿ. ಮತ್ತೊಂದು ಸಂದರ್ಭದಲ್ಲಿ ಬಾಬಾರವರಿಗೆ ಅಡಿಗೆ ಮಾಡುವ ತೀವ್ರವಾದ ಇಚ್ಛೆಯುಂಟಾಯಿತು. ಆದ್ದರಿಂದ ಅವರು ದೊಡ್ಡ ಹಂಡೆಯನ್ನು ಒಲೆಯ ಮೇಲಿಟ್ಟು ಮಾಂಸದಿಂದ ತುಂಬಿದರು. ॥65॥ ಅವರು ಅಕ್ಕಿಯನ್ನು ತೊಳೆದುಹಾಕಿ ಅದಕ್ಕೆ ಅಳತೆಗೆ ತಕ್ಕಂತೆ ನೀರು ಸೇರಿಸಿದರು. ಒಲೆಗೆ ಕಟ್ಟಿಗೆ ಹಾಕಿದ ನಂತರ ಬಾಬಾರವರು ಅಲ್ಲಿ ಕುಳಿತು ಒಲೆಯನ್ನು ಊದುತ್ತ ಜೋರಾಗಿ ಉರಿಯುವಂತೆ ಮಾಡಿದರು. ॥66॥ ಇಡೀ ಹಳ್ಳಿಯು ಅವರಿಗೆ ವಿಧೇಯವಾಗಿತ್ತು, ಮತ್ತು ಬೇರೆ ಯಾರಾದರೂ ಬೆಂಕಿಯನ್ನು ಊದಲು ಇಷ್ಟಪಡುತ್ತಿರಲಿಲ್ಲ. ಆದರೆ ಬಾಬಾರವರ ಆಜ್ಞೆಯಿಲ್ಲದೆ ಯಾರೊಬ್ಬರಿಗೂ ಅದನ್ನು ಮಾಡುವ ಧೈರ್ಯವಿರಲಿಲ್ಲ. ॥67॥ ಆ ವಿಷಯಕ್ಕಾಗಿ, ಕೇವಲ ಆಜ್ಞೆ ನೀಡುವುದು ಮಾತ್ರ ಅವಶ್ಯವಾಗಿತ್ತು. ಅಡಿಗೆಯನ್ನು ಮಾಡಿ ತಂದುಕೊಡಲಾಗುತ್ತಿತ್ತು. ಪ್ರತಿಯೊಬ್ಬರೂ ಸಾಯಿಯ ಸೇವೆ ಮಾಡಲು ಕಾತರಾಗಿದ್ದರು. ಆದರೆ ಸಾಯಿಯು ಮಾತ್ರ ಅದರ ಬಗ್ಗೆ ಉದಾಸವಾಗಿದ್ದರು. ॥68॥ 'ಅವರು ಉದಾಸವಾಗಿದ್ದಾರೆ' ಎಂದು ಹೇಳುವುದು ಸರಿಯಲ್ಲ. ಸ್ವಯಂಪಾಕಮಾಡಲು ಇಚ್ಛಿಸುವವರು ಇತರರಿಗೆ, ಅಪರಿಚಿತರಿಗೆ ಅನ್ನದಾನ ನೀಡಲು ಏಕೆ ಕಷ್ಟಕೊಡುತ್ತಾರೆ? ॥69॥ ತನ್ನ ಸ್ವಂತ ನಿರ್ವಹಣೆಗಾಗಿ ಅವರು ಭಿಕ್ಷೆ ಬೇಡುತ್ತಿದ್ದರು. ಮತ್ತು ಮನೆ ಮನೆಗೆ ಅದಕ್ಕಾಗಿ ಅಲೆದಾಡುತ್ತಿದ್ದರು. ಮತ್ತು ಕೇವಲ ಒಂದು ಕಾಲುಭಾಗವಾದರೂ ರೊಟ್ಟಿಯನ್ನು ಬೇಡುತ್ತಿದ್ದರು. ॥70॥ ಆದರೆ ಅವರೇ ಸ್ವತಃ

ಅನ್ನದಾನ ಮಾಡಲು ಇಚ್ಛಿಸಿದ್ದರಿಂದ, ಅವರು ತಾವೇ ತೊಂದರೆ ತೆಗೆದುಕೊಳ್ಳದೆ ಇದ್ದರೆ ತೃಪ್ತಿ ಪಡುತ್ತಿರಲಿಲ್ಲ. ಮತ್ತೆ ಅದಕ್ಕಾಗಿ ಬೇರೆ ಯಾರನ್ನೂ ಅವಲಂಬಿಸುತ್ತಿರಲಿಲ್ಲ. ॥71॥ ಬಾಬಾರವರು ನಗದುಕೊಟ್ಟು ತಾವೇ ಸ್ವಯಂ ಒಂದು ನೂರು ಜನರಿಗೆ ಉಣಲು ಬಡಿಸುವುದಕ್ಕೆ ಸಾಕಾಗುವಷ್ಟು ಪಾಕಕ್ಕೆ ಹಿಟ್ಟು, ಗೋಧಿ, ಅಕ್ಕಿ ಮತ್ತು ಬೇಳೆಗಳನ್ನು ತಾವೇ ಖರೀದಿಸುತ್ತಿದ್ದರು. ॥72॥ ಅವರು ತಮ್ಮ ಕೈಯಲ್ಲಿ ಮುಚ್ಚಳ ಇರುವ ಪಾತ್ರೆಯನ್ನು ಹಿಡಿದು ದಿನಸಿ ಅಂಗಡಿಗೆ ಹೋಗುತ್ತಿದ್ದರು. ಪ್ರಾಮಾಣಿಕವಾದ ವ್ಯಾಪಾರವನ್ನು ಯಾವರೀತಿ ಮಾಡಬೇಕೆಂಬುದನ್ನು ಜನ ಅವರಿಂದ ಕಲಿತಿದ್ದರು. ॥73॥ ಅವರು ತಮಗೆ ಬೇಕಾದ ವಸ್ತುಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅನಂತರ ಚೌಕಾಸಿ ಮಾಡಿ ಅದರ ದರವನ್ನು ನಿಗದಿಪಡಿಸುತ್ತಿದ್ದರು. ಯಾರೂ ಅವರನ್ನು ಮೋಸಪಡಿಸಲು ಸಾಧ್ಯವಾಗುತ್ತಿರಲಿಲ್ಲ. ಹಾಗೂ ತಾವು ಮಾಡಿದ್ದೇವೆಂದು ಗರ್ವಪಡಲೂ ಸಾಧ್ಯವಾಗುತ್ತಿರಲಿಲ್ಲ. ॥74॥ ಹಾಗಾಗಿ ಅವರು ಕೇಳಿದ್ದಕ್ಕಿಂತ ಎರಡು ಪಟ್ಟು ಹೆಚ್ಚು ಹಣವನ್ನು ನಗದು ರೂಪದಲ್ಲಿ ಕೊಡುತ್ತಿದ್ದರು. ಆದರೆ ಅದಕ್ಕಿಂತ ಒಂದು ಪೈಸೆಯಷ್ಟೂ ಹೆಚ್ಚಿಗೆ ಕೊಡುತ್ತಿರಲಿಲ್ಲ. ॥75॥ ಅವರಿಗೆ ಸ್ವಯಂ ಕೆಲಸ ಮಾಡಲು ಬಹಳ ಇಚ್ಛೆ ಇತ್ತು. ಅವರು ಬೇರೆ ಯಾರಾದರೂ ಮಾಡುವುದನ್ನು ಇಷ್ಟಪಡುತ್ತಿರಲಿಲ್ಲ. ಅವರು ಬೇರೆ ಯಾರ ಸಹಾಯವನ್ನೂ ಅಪೇಕ್ಷಿಸುತ್ತಿರಲಿಲ್ಲ. ಹಾಗೂ ಇತರರಿಗೆ ತೊಂದರೆ ಕೊಡಲು ಇಚ್ಛಿಸುತ್ತಿರಲಿಲ್ಲ. ॥76॥ ಈ ಒಂದು ತತ್ತ್ವವನ್ನು ಬಾಬಾರವರು ಹಗಲು ರಾತ್ರಿಯಾವಾಗಲೂ ಎಚ್ಚರಿಕೆಯಿಂದ ಪಾಲಿಸುತ್ತಿದ್ದರು. ಆದುದರಿಂದ ಅಡಿಗೆ ಕೆಲಸಕ್ಕಾಗಿ ಅವರು ಯಾರ ಸಹಾಯವನ್ನೂ ಕೇಳುತ್ತಿರಲಿಲ್ಲ. ॥77॥ ಇದು ಕೇವಲ ಅಡಿಗೆಯ ವಿಷಯಕ್ಕಾಗಿ ಅಲ್ಲ. ಧುನಿಯ ಪಕ್ಕದ ಕೋಣೆಯಲ್ಲಿ ಕಟ್ಟಿಗೆಯನ್ನು ಶೇಖರಿಸುವ ಜಾಗಕ್ಕೆ ಪೂರ್ವಭಾಗದಲ್ಲಿದ್ದ ಗೋಡೆಯ ಮುಕ್ಕಾಲು ಭಾಗವನ್ನು ಬಾಬಾರವರು ಸ್ವತಃ ತಮ್ಮ ಕೈಗಳಿಂದಲೇ ಕಟ್ಟಿದ್ದರು. ॥78॥ ಅವರು ಮಣ್ಣನ್ನು ನೀರಿನಲ್ಲಿ ಕಲಸಿ, ಅನಂತರ ಕರಣೆಯನ್ನು ಕೈಯಲ್ಲಿ ಹಿಡಿದು ಇಟ್ಟಿಗೆಗಳನ್ನು ಒಂದರ ಮೇಲೊಂದನ್ನುಇಟ್ಟು ಗೋಡೆಯನ್ನು ಕಟ್ಟುತ್ತಿದ್ದರು. ॥79॥ ಬಾಬಾರವರು ಮಾಡದೇ ಇದ್ದುದು ಮತ್ತೇನಿದೆ!? ಮಸೀದಿಯಲ್ಲಿ ನೆಲಕ್ಕೆ ಅವರೇ ಸಗಣಿಯನ್ನು ಬಳಿಯುತ್ತಿದ್ದರು. ಅವರು ತಮ್ಮ ಕಫನಿಯನ್ನೂ ಲಂಗೋಟಿಯನ್ನೂ ತಾವೇ ಹೊಲಿಯುತ್ತಿದ್ದರು. ಅವರು ಬೇರೆ ಯಾರಿಂದಲೂ ಏನನ್ನೂ ಅಪೇಕ್ಷಿಸುತ್ತಿರಲಿಲ್ಲ. **॥80॥** ಅಡಿಗೆಯ ಹಂಡೆಯಿಂದ ಆವಿಯು ಹೊರಬರುವಾಗ, ಅದರಲ್ಲಿರುವ ಪದಾರ್ಥವೆಲ್ಲವೂ ಚೆನ್ನಾಗಿ ಕುದಿಯುತ್ತಿರುವಾಗ, ಬಾಬಾರವರು ತಮ್ಮ ಗೌನಿನ ತೋಳುಗಳನ್ನು ಮೇಲಕ್ಕೆ ಮಡಚಿ ತಮ್ಮ ಕೈಯನ್ನು ಅದರೊಳಗೆ ಹಾಕಿ ಅದರಲ್ಲಿರುವ ಪದಾರ್ಥವನ್ನು ಮೇಲೆ ಕೆಳಗೆ ಅಕ್ಕಪಕ್ಕಕ್ಕೆ ಕಲಸುತ್ತಿದ್ದರು. ॥81॥ ಪಾತ್ರೆಯಲ್ಲಿ ಕೊತಕೊತನೆ ಕುದಿಯುತ್ತಿರುವಾಗ ಕಲಸುವ ಅವಶ್ಯಕತೆ ಉಂಟಾದಾಗ ಬಾಬಾರವರು ಅಂತಹ ಸಮಯದಲ್ಲಿ ಇಂತಹಅಗಾಧವಾದ ಲೀಲೆಯನ್ನು ತೋರಿಸುತ್ತಿದ್ದರು. ॥82॥ ರಕ್ತ, ಮಾಂಸಗಳಿಂದ ಕೂಡಿದ ಕೈ ಮತ್ತು ಕುದಿಯುತ್ತಿರುವ ಬಿಸಿ ಪಾತ್ರೆಯನ್ನು ಊಹಿಸಿಕೊಳ್ಳಿ, ಆದರೆ ಅಲ್ಲಿ ಒಂದೇ

ಒಂದು ಸುಟ್ಟ ಗುರುತಾಗಲೀ, ಅಥವಾ ಯಾವುದೇ ಭಯದ ಮುಖಚರ್ಯೆಯಾಗಲೀ ಇರುತ್ತಿರಲಿಲ್ಲ. ॥83॥ ಭಕ್ತರ ಹಣೆಯನ್ನು ಮುಟ್ಟಿ ಅವರ ತಾಪತ್ರಯಗಳನ್ನು ದೂರಮಾಡುವಂತಹ ಅವರ ಹಸ್ತವು ಅಗ್ನಿಯಿಂದ ಯಾವ ರೀತಿ ಬಾಧಿಸಲ್ಪಟ್ಟೀತು? ಅಗ್ನಿಗೂ ಅವರ ಮಹತ್ವವು ಗೊತ್ತಿಲ್ಲವೇ? ॥84॥ ಅವರು ನೆನಸಿದ ಹೆಸರುಬೇಳೆಯನ್ನು ರುಬ್ಬುವ ಕಲ್ಲಿನ ಮೇಲೆ ಹರಡಿ, ಅದನ್ನು ತಾವೇ ಕುಟಿಗೊಳಿಸಿ, ರುಬ್ಬುವ ಗುಂಡನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ರುಬ್ಬುತ್ತಿದ್ದರು. ಮತ್ತು ಅನಂತರ ಅದರಿಂದ ತಾವೇ ಹೆಸರು ಬೇಳೆಯ ವಡೆ ಮಾಡುತ್ತಿದ್ದರು॥85॥ ಅನಂತರ ಅವರು ನಿಧಾನವಾಗಿ ಅವುಗಳನ್ನು ಪಾತ್ರೆಗೆ ಹಾಕಿ, ಅದು ಮಡಕೆಯ ತಳಕ್ಕೆ ಅಂಟಿಕೊಳ್ಳದ ರೀತಿಯಲ್ಲಿ ಕಲಸುತ್ತಿದ್ದರು. ಬೆಂದ ನಂತರ ಅದನ್ನು ಬೆಂಕಿಯ ಮೇಲಿನಿಂದ ತೆಗೆದು ಪ್ರಸಾದವಾಗಿ ಎಲ್ಲರಿಗೂ ಹಂಚುತ್ತಿದ್ದರು. ॥86॥ ಶ್ರೋತೃಗಳು ಪ್ರಶ್ನಿಸಬಹುದು. ಸಾಯಿಬಾಬಾರವರು ಮುಸಲ್ಮಾನರಾದುದರಿಂದ ಎಲ್ಲರಿಗೂ ಪ್ರಸಾದವನ್ನು ಯಾವ ರೀತಿ ಹಂಚುತ್ತಿದ್ದರು? ಅವರು ಮಾಡಿದ ಅಡಿಗೆಯನ್ನು ಜನರು ಹೇಗೆ ಊಟಮಾಡುತ್ತಿದ್ದರು? ಈ ರೀತಿ ಮಾಡುವುದು ಹಿಂದೂಗಳಿಗೆ ಅಧರ್ಮಾಚರಣೆಯಾಗುತ್ತಿರಲಿಲ್ಲವೇ? ॥87॥ ಈ ಪ್ರಶ್ನೆಗೆ ಕೇವಲ ಒಂದೇ ಒಂದು ಉತ್ತರವಿದೆ. ಸಾಯಿಯವರು ಯಾವಾಗಲೂ ಧರ್ಮ ಮತ್ತು ಅಧರ್ಮಗಳ ಆಚರಣೆಯ ವಿಚಾರಗಳಲ್ಲಿ ಬಹಳ ಗಮನವಿಡುತ್ತಿದ್ದರು. ॥88॥ ಸಾಯಿಯವರು ಎಂದಿಗೂ ಆ ಅಡಿಗೆಯ ಪಾತ್ರೆಯಲ್ಲಿ ತಯಾರಿಸಲ್ಪಡುವ ಖಾದ್ಯಗಳೆಲ್ಲವನ್ನೂ ಎಲ್ಲರೂ ತಿನ್ನಬೇಕೆಂದು ಕಿಂಚಿತ್ತೂ ದುರಾಗ್ರಹ ಪಡಿಸುತ್ತಿರಲಿಲ್ಲ. ॥89॥ ಆದರೆ ಯಾರು ತಾವಾಗಿಯೇ ಪ್ರಸಾದವನ್ನು ಸ್ವೀಕರಿಸುವ ಸದಿಚ್ಛೆಯಿಂದ ಪ್ರೇರಿತರಾಗಿರುತ್ತಿದ್ದರೋ ಅವರ ಇಚ್ಛೆಗಳನ್ನು ಪೂರೈಸುತ್ತಿದ್ದರು. ಅವರು ಎಂದಿಗೂ ಮೋಸಮಾಡುತ್ತಿರಲಿಲ್ಲ. ॥90॥ ಅದೂ ಅಲ್ಲದೆ, ಅವರ ಜಾತಿಯು ಯಾರಿಗೆ ತಿಳಿದಿತ್ತು? ಅವರು ಮಸೀದಿಯಲ್ಲಿ ಇರುತ್ತಿದ್ದುದರಿಂದ ಅವರನ್ನು ಮುಸ್ಲಿಮರೆಂದು ಹೇಳುತ್ತಿದ್ದರು. ಆದರೆ ಅವರ ವರ್ತನೆಯನ್ನು ವಿಚಾರಮಾಡಲು ಅವರು ಯಾವ ಜಾತಿಗೆ ಸೇರಿದವರೆಂಬುದು ಯಾರಿಗೂ ತಿಳಿದಿರಲಿಲ್ಲ. ॥91॥ ಭಕ್ತರು ಯಾರನ್ನು ತಮ್ಮ ದೇವರೆಂದು ನಂಬುತ್ತಾರೋ, ಯಾರ ಚರಣಧೂಳಿಯಲ್ಲಿ ಆಶ್ರಯ ಹೊಂದಿರುವರೋ ಅಂತಹವರ ಜಾತಿಯನ್ನು ಅವಲೋಕಿಸುವ ಪ್ರಶ್ನೆ ಎಲ್ಲಿಬಂತು? ಪರಮಾರ್ಥವನ್ನು ಸಾಧಿಸುವ ಅಂತಹವರ ಪ್ರಯತ್ನಕ್ಕೆ ಧಿಕ್ಕಾರ! ॥92॥ ಯಾರು ಈ ಜಗತ್ತಿನಲ್ಲಿ ವಿರಕ್ತರೋ ಮತ್ತು ಸ್ವರ್ಗದ ವಿಚಾರದಲ್ಲೂ ವಿರಕ್ತರೋ, ಯಾರ ಸಂಪತ್ತು ಕೇವಲ ವಿವೇಕ ಮತ್ತು ವೈರಾಗ್ಯಗಳೋ ಅಂತಹವರ ಜಾತಿಯನ್ನು ತಿಳಿಯುವ ಪ್ರಶ್ನೆ ಎಲ್ಲಿಬಂತು? ಯಾರು ಅಂತಹುದಕ್ಕೆ ಪ್ರಯತ್ನಪಡುವರೋ ಅವರ ಪರಮಾರ್ಥ ಸಾಧನೆಗೆ ಧಿಕ್ಕಾರ! ॥93॥ ಯಾರು ಧರ್ಮ, ಅಧರ್ಮ ಈ ದ್ವೈತ ಸ್ಥಿತಿಯನ್ನು ಮೀರಿರುವರೋ ಮತ್ತು ಯಾರ ಸ್ಥಿತಿಯು ಪರಿಶುದ್ಧವಾದ ಆನಂದಸ್ಥಿತಿಯೋ, ಅಂತಹವರ ಜಾತಿಯನ್ನು ತಿಳಿಯುವ ಪ್ರಶ್ನೆ ಎಲ್ಲಿಬಂತು? ಅದಕ್ಕೆ ಪ್ರಯತ್ನಿಸಿದವರ ಪರಮಾರ್ಥ ಸಾಧನೆಗೆ ಧಿಕ್ಕಾರ! ॥94॥ ಈ ರೀತಿ ಬಾಬಾರವರ ಜೀವನ ಚರಿತ್ರೆಗಳನ್ನು ನನ್ನ

ಸ್ವಂತ ಸುಖ ಸಂತೋಷಕ್ಕಾಗಿಯೇ ನಾನು ಹಾಡುತ್ತೇನೆ. ಯಾರು ಇವುಗಳನ್ನು ಆಲಿಸಲು ಉತ್ಸುಕರಾಗಿರುವರೋ ಅವರು ತಮ್ಮ ಭಕ್ತಿಯ ಸಾರ್ಥಕತೆಯನ್ನು ಪಡೆಯುತ್ತಾರೆ. ॥95॥ ಅದು ಹಾಗಿರಲಿ. ಈ ಕಥೆಯ ಅನುಸಂಧಾನ ಅಪೂರ್ಣವಾಗಿದೆ. ನಾವು ಹಿಂದಕ್ಕೆ ಹೋಗೋಣ ಮತ್ತು ಬಾಬಾರವರು ದಾದಾಗೆ ಏನು ಹೇಳಿದರೆಂಬುದನ್ನು ಎಚ್ಚರಿಕೆಯಿಂದ ಕೇಳೋಣ. ॥96॥ "ನಾನು ಖಾರದ ಪಲಾವ್ (ಮಾಂಸದ ಪಲಾವ್) ಮಾಡಿದ್ದೇನೆ. ಅದು ಹೇಗೆ ಆಗಿದೆಯೆಂದು ನೋಡುವೆಯಾ?" ದಾದಾನು ಉಪಚಾರಾರ್ಥವಾಗಿ ಹೇಳಿದನು, "ಹೌದು, ಹೌದು. ಅದು ನಿಜವಾಗಿಯೂ ಚೆನ್ನಾಗಿದೆ." ॥97॥ ದಾದಾನು ಒಬ್ಬ ಹಳೆಯ ಭಕ್ತಶ್ರೇಷ್ಠನಾಗಿದ್ದನು. ಸ್ನಾನ, ಸಂಧ್ಯಾವಂದನೆಗಳನ್ನು ನೇಮ–ನಿಷ್ಠೆಗಳಿಂದ ನಡೆಸುತ್ತಿದ್ದನು. ಮತ್ತು ಸದಾ ಶಿಷ್ಟಾಚಾರದ ರೀತ್ಯ ನಡೆದುಕೊಂಡನು. ಅವನಿಗೆ ಈ ಪ್ರಶ್ನೆಯು ಸರಿಯಾದ ಕ್ರಮವಾಗಿ ಕಂಡುಬರಲಿಲ್ಲ. ॥98॥ ಬಾಬಾರವರು ಅನಂತರ ದಾದಾನಿಗೆ ಹೇಳಿದರು, "ನೀನು ಎಂದಿಗೂ ಅದನ್ನು ನಿನ್ನ ಕಣ್ಣಿಂದಲೂ ನೋಡಿಲ್ಲ ಅಥವಾ ಅದರ ರುಚಿಯನ್ನೂ ಅರಿತಿಲ್ಲ! ಅದು ಚೆನ್ನಾಗಿದೆಯೆಂದು ಅದು ಹೇಗೆ ಹೇಳಬಲ್ಲೆ?" ॥99॥ "ಓಹ್! ಅಡಿಗೆ ಪಾತ್ರೆಯ ಮುಚ್ಚಳವನ್ನೂ ತೆಗೆದು ಹಾಕು. ಮತ್ತು ನಿನ್ನ ಸ್ವಂತ ಕೈಯಿಂದಲೇ ಅನುಭವಿಸು." ಅನಂತರ, ತಮ್ಮ ಕೈಯನ್ನೇ ತೆಗೆದು ಅವರು ಮಡಕೆಯೊಳಗೆ ಹಾಕಿದರು. ॥100॥ ಅದೂ ಅಲ್ಲದೆ, ಅವರು ಹೇಳಿದರು, "ನಿನ್ನ ಕೈಯನ್ನು ಹೊರಗೆ ತೆಗೆ. ಒಂದು ಸೌಟನ್ನು ತೆಗೆದುಕೊಂಡು ಎಲೆಯ ಮೇಲೆ ಬಡಿಸು. ನಿನ್ನ ಶಿಷ್ಟಾಚಾರಕ್ಕೆ ಗಮನ ಕೊಡಬೇಡ. ಅನವಶ್ಯಕವಾಗಿ ಬಡಾಯಿಕೊಚ್ಚಬೇಡ." ॥101॥ ಒಬ್ಬ ಸಂತನು ತನ್ನ ಶಿಷ್ಯನನ್ನು ಅಪವಿತ್ರಗೊಳಿಸುವನು ಎಂಬ ಕಲ್ಪನೆಯೂ ವಿಲಕ್ಷಣವೇ. ಒಟ್ಟಿನಲ್ಲಿ, ಸಂತರು ಸದಾಕಾಲ ಕೃಪೆಯಿಂದ ಉಕ್ಕಿಬಂದಂತಿರುತ್ತಾರೆ. ಯಾವ ರೀತಿ ವರ್ತಿಸಬೇಕೆಂಬುದು ಅವರಿಗೆ ಗೊತ್ತು. ॥102॥ ನಿಜವಾದ ಪ್ರೇಮದ ಲಹರಿಯು ಹುಟ್ಟಿದಾಗ ಒಬ್ಬ ತಾಯಿಯೂ ತನ್ನ ಮಗುವನ್ನು ತನ್ನ ಕೈಯಿಂದಲೇ ಚಿವುಟುತ್ತಾಳೆ. ಅನಂತರ ಮಗುವು ಅಳಲು ಪ್ರಾರಂಭಿಸಿದಾಗ, ಅವಳು ಮಗುವನ್ನು ತನ್ನ ಎದೆಗೆ ಅಪ್ಪಿ ಹಿಡಿಯುತ್ತಾಳೆ. ॥103॥ ತಿನ್ನಬಾರದಂತಹ ಭಕ್ಷ್ಯವನ್ನು ತಿನ್ನಲು ಇಚ್ಛಿಸಿದಲ್ಲಿ, ಅವನ ಆಸೆಯನ್ನು ಪೂರೈಸುತ್ತಿದ್ದರು. ಆದರೆ ಮನಸ್ಸನ್ನು ದಮನ ಮಾಡಲು ಇಚ್ಛಿಸಿದಲ್ಲಿ ಅದಕ್ಕೆ ಸಾಯಿಯ ಅನುಮೋದನೆಯಿದ್ದು ಅವನು ಅಂತಹ ಆಹಾರದಿಂದ ದೂರ ಇರಬಲ್ಲವನಾಗಿದ್ದನು. ॥104॥ ಗುರುವಿನ ಆಜ್ಞೆಯನ್ನು ಪಾಲಿಸುವ ಆಶೆಯು ಕೆಲವೊಮ್ಮೆ ಎಂತಹ ಎತ್ತರಕ್ಕೆ ಏರುತ್ತಿತ್ತೆಂದರೆ, ಯಾರು ತಮ್ಮ ಜೀವಿತದ ಅವಧಿಯಲ್ಲಿಯೇ ಮಾಂಸವನ್ನು ಎಂದಿಗೂ ಮುಟ್ಟದವರೂ ಸಹ ತಳಮಳಗೊಳ್ಳುತ್ತಿದ್ದರು. ॥105॥ ವಸ್ತುಸ್ಥಿತಿ ಏನೆಂದರೆ, ಬಾಬಾರವರು ಎಂದಿಗೂ ಯಾವ ಭಕ್ತರನ್ನೂ ತಾವಾಗಿಯೇ ತಪ್ಪು ಮಾರ್ಗವನ್ನು ಹಿಡಿಯಲು ಬಿಡುತ್ತಿರಲಿಲ್ಲ. ॥106॥ ಅದು ಹಾಗಿರಲಿ. ಸನ್ 1910ರವರೆಗೆ ಈ ಅಡಿಗೆ ಮಾಡುವ ಕೆಲಸ ನಡೆಯುತ್ತಲೇ ಇತ್ತು. ಆಗಾಗ್ಗೆ ಬಹಳ ಉತ್ಸಾಹದಿಂದ ನಡೆಯುತ್ತಿತ್ತು. ॥107॥ ಅದರ ನಂತರ, ದಾಸಗಣು ಮುಂಬಯಿ ಪಟ್ಟಣಕ್ಕೆ ಬಂದನು.

ಅವನು ತನ್ನ ಕೀರ್ತನೆಗಳಿಂದ ಸಾಯಿ ಮಹಿಮೆಯನ್ನು ಎಲ್ಲರ ಅಂತರಂಗದಲ್ಲಿ ಅಚ್ಚೊಳಿಸಿದನು. ॥108॥ ಅಲ್ಲಿಂದ ಮುಂದಕ್ಕೆ ಬಾಬಾರವರ ಮಹಿಮೆಗಳು ಆಬಾಲ ವೃದ್ಧರಾದಿಯಾಗಿ ಎಲ್ಲರಿಗೂ ತಿಳಿಯುವಂತಾಯಿತು. ಮತ್ತು ಅಸಂಖ್ಯಾತ ಜನರು ಶಿರಡಿಗೆ ಹೋಗಲು ಪ್ರಾರಂಭಿಸಿದರು. ॥109॥ ಅನಂತರ ಬಾಬಾರವರ ಪಂಚೋಪಚಾರ್ ಪೂಜೆ ಮತ್ತು ವಿವಿಧ ರೀತಿಯ ನೈವೇದ್ಯಗಳು, ಆಹಾರ ಮತ್ತು ಉಪಚಾರ (ಮಧ್ಯಾಹ್ನದಲ್ಲಿ ಮತ್ತು ನಂತರ) ಇವೆಲ್ಲವೂ ಪ್ರಾರಂಭವಾಯಿತು. ॥110॥ ವರಣ್, ಅನ್ನ, ಶಿರಾ, ಪೂರಿ, ಚಪಾತಿಗಳು, ಚಟ್ನಿಗಳು, ಕೋಸಂಬರಿಗಳು, ವಿವಿಧ ಬಗೆಯ ಪಂಚಾಮೃತಗಳು, ಖೀರುಗಳು, – ನಾನಾ ವಿಧ ಅನ್ನ ಸಾಮಗ್ರಿಗಳು ಇಳಿದು ಬಂದವು. ॥111॥ ಯಾತ್ರಿಗಳು ಅಪರಿಮಿತ ಸಂಖ್ಯೆಯಲ್ಲಿ ಬಂದರು. ಪ್ರತಿಯೊಬ್ಬರೂ ಅವರ ದರ್ಶನಕ್ಕಾಗಿ ಧಾವಿಸಿ ಬಂದರು. ಅವರು ಸಾಯಿಯ ಚರಣಗಳಲ್ಲಿ ನೈವೇದ್ಯವನ್ನು ಅರ್ಪಿಸುತ್ತಿದ್ದರು. ಮತ್ತು ಹಸಿದವರು ಸಹಜವಾಗಿಯೇ ಸಂತೃಪ್ತರಾಗುತ್ತಿದ್ದರು. ॥112॥ ಬಾಬಾರವರಿಗೆ ರಾಜೋಪಚಾರ ನೀಡಲಾಗುತ್ತಿತ್ತು, ಅವರಿಗೆ ಛತ್ರ, ಚಾಮರಗಳು, ತಾಳವಾದ್ಯಗಳ ಗರ್ಜಿಸುವಿಕೆ ಇವುಗಳೊಂದಿಗೆ ಭಜನ ಮಂಡಲಿಯೂ ಹೆಚ್ಚಾಯಿತು. ॥113॥ ಅವರ ಮಹಿಮೆಯು ಸರ್ವತ್ರ ಹರಡಿತು. ಜನರು ಅವರನ್ನು ಸ್ತೋತ್ರಮಾಡುತ್ತಿದ್ದರು. ಶಿರಡಿಯು ಪವಿತ್ರ ಯಾತ್ರಾಸ್ಥಳವಾಯಿತು. ಅನಂತರ ಯಾತ್ರಾರ್ಥಿಗಳಿಗೆ ಪರಮ ಪವಿತ್ರವಾಯಿತು. ॥114॥ ಇದರಿಂದಾಗಿ ಅಡಿಗೆಯ ಮುಖ್ಯಕಾರಣ ಯಾತ್ರಾರ್ಥಿಗಳ ಆತಿಥ್ಯ, ಅಷ್ಟು ಹೆಚ್ಚು ಪ್ರಮಾಣದ ನೈವೇದ್ಯ ಬರುತ್ತಿತ್ತು, ಫಕೀರರು ಮತ್ತು ದರಿದ್ರರು ತಮ್ಮ ಮನಸ್ಸಿಗೆ ತೃಪ್ತಿಯಾಗುವಷ್ಟು ಸ್ವೀಕರಿಸಿ ಮತ್ತೆ ಇನ್ನೂ ಅಷ್ಟೊಂದು ಆಹಾರ ಉಳಿದುಹೋಗುತ್ತಿತ್ತು. ॥115॥ ಈಗ ನಾನು ಮತ್ತೊಂದು ಕಥೆಯನ್ನು ಹೇಳುತ್ತೇನೆ. ಕೇಳಿದರೆ ನಿಮಗೆ ಸಂತೋಷವಾಗುತ್ತದೆ. ಯಾವ ರೀತಿ ಬಾಬಾರವರು, ಆರಾಧ್ಯವಸ್ತುವಿಗೆ ಅಥವಾ ಯಾವುದೇ ದೇವಸ್ಥಾನಕ್ಕೆ ಅಗೌರವ ತೋರಿಸಿದವರ ಬಗ್ಗೆ ಅಪ್ರಸನ್ನರಾಗುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ॥116॥ ಕೆಲವರು ಬೇರೆ ಬೇರೆ ಅನುಮಾನ ಪಡುತ್ತ ಕೆಲವರು ಅವರನ್ನು ಬ್ರಾಹ್ಮಣರೆಂದು, ಕೆಲವರು ಮುಸಲ್ಮಾನರೆಂದೂ ಹೇಳುತ್ತಿದ್ದರು. ಆದರೆ ಅವರು ಎಲ್ಲ ಜಾತಿಮತಗಳಿಗೂ ಮೀರಿದವರಾಗಿದ್ದರು. ॥117॥ ಅವರು ಎಲ್ಲಿ, ಯಾವ ಜಾತಿ ಮತದಲ್ಲಿ ಜನಿಸಿದರೆಂಬುದಾಗಲೀ, ಅಥವಾ ಅವರ ತಂದೆ ತಾಯಿಯರು ಯಾರು ಎಂಬುದರ ಬಗ್ಗೆಯಾಗಲಿ ಯಾರಿಗೂ ನಿರ್ದಿಷ್ಟವಾದ ಮಾಹಿತಿ ಇರಲಿಲ್ಲ. ಹಾಗಿರಲು ಅವರು ಮುಸಲ್ಮಾನ ಅಥವಾ ಬ್ರಾಹ್ಮಣ ಹೇಗಾಗುತ್ತಾರೆ? ॥118॥ ಅವರು ಮುಸ್ಲಿಮರಾಗಿದ್ದರೆ, ಮಸೀದಿಯಲ್ಲಿ ಅಗ್ನಿಯ ಆರಾಧನೆ ಹೇಗೆ ಮಾಡುತ್ತಿದ್ದರು? ಅಥವಾ ಅಲ್ಲೊಂದು ತುಳಸೀವೃಂದಾವನ ಏಕಿರುತ್ತಿತ್ತು? ಅಥವಾ ಅವರು ಘಂಟಾವಾದನವನ್ನು ಹೇಗೆ ಮಾಡುತ್ತಿದ್ದರು? ॥119॥ ಶಂಖಧ್ವನಿ ಮೊಳಗಲು ಯಾವರೀತಿ ಅನುಮತಿ ನೀಡುತ್ತಿದ್ದರು? ಕಥಾಪಾರಾಯಣ,ವಾದ್ಯಗಳ ಸಮೇತ ಕೀರ್ತನೆ, ತಾಳ, ಢೋಲ ಮತ್ತು ಮೃದಂಗಗಳ ವಾದನ ಮತ್ತು ಹರಿನಾಮ ಗರ್ಜನೆಯನ್ನು ಮಸೀದಿಯಲ್ಲಿ ಮಾಡಲು ಹೇಗೆ ಅನುಮತಿಸುತ್ತಿದ್ದರು.? ॥120॥

ಅವರು  ಮುಸ್ಲಿಮರಾಗಿದ್ದರೆ, ಶ್ರೀಗಂಧ ಲೇಪನ ಮತ್ತು ಇತರ ವಿಧಿಪೂರ್ವಕ ಅರ್ಚನೆಯನ್ನು ಮಾಡಲು ಹೇಗೆತಾನೇ ಬಿಡುತ್ತಿದ್ದರು. ಮತ್ತು ಅಲ್ಲಿ ಇತರರೊಡನೆ ಯಾವ ರೀತಿ ಸಹ ಭೋಜನ ಮಾಡುತ್ತಿದ್ದರು? ॥121॥ ಅವರು ಮುಸ್ಲಿಮರಾಗಿದ್ದರೆ, ಅವರ ಕಿವಿಗಳನ್ನು ಚುಚ್ಚುತ್ತಿದ್ದರೇ? ಅವರು ಸ್ವಂತ ಹಣದಿಂದಲೇ ಮಂದಿರಗಳನ್ನು  ಜೀರ್ಣೋದ್ಧಾರ ಮಾಡಿಸುತ್ತಿದ್ದರೇ? ॥122॥ ಅವರು ಸ್ನಾನ ಮಾಡಿದ ನಂತರ ಬೆಲೆಬಾಳುವಂತಹ ಮಹಾವಸ್ತ್ರ ಪೀತಾಂಬರವನ್ನು ಧರಿಸುತ್ತಿದ್ದರೇ? ಅವರು ಯಾವುದೇ ಆರಾಧ್ಯದೇವತೆಗಳ ಕಿಂಚಿತ್ತು ಅನಾದರವನ್ನೂ ಸಹಿಸುತ್ತಿರಲಿಲ್ಲ! ॥123॥ ಇದನ್ನು ಬರೆಯುತ್ತಿರುವಾಗ, ಇದೇ ಅರ್ಥವನ್ನು ಬೋಧಿಸುವ ಒಂದು ಕಥೆಯು ನೆನಪಿಗೆ ಬರುತ್ತಿದೆ. ಅದನ್ನು ಬಹು ವಿನೀತನಾಗಿ ಸಾದರ ಪಡಿಸುತ್ತೇನೆ. ಸ್ವಸ್ಥಚಿತ್ತದಿಂದ ಅದನ್ನು ಆಲಿಸಿರಿ. ॥124॥ ಒಮ್ಮೆ ಏನು ಘಟನೆ ನಡೆಯಿತೆಂದು ನೋಡಿ! ಬಾಬಾರವರು ಲೇಂಡಿಯಿಂದ ಹಿಂತಿರುಗಿ ಬಂದು ಮಸೀದಿಯಲ್ಲಿ ಕುಳಿತುಕೊಂಡರು. ಭಕ್ತರು ದರ್ಶನಕ್ಕಾಗಿ ಬರಲು ಪ್ರಾರಂಭಿಸಿದರು. ॥125॥ ಅವರಲ್ಲಿ ಒಬ್ಬ ಬಾಬಾರವರ ಅತ್ಯಂತ ಪ್ರೀತಿಯ ಭಕ್ತಶ್ರೇಷ್ಠ ಚಾಂದೋರಕರನು ಇದ್ದನು. ಅವನು ತನ್ನ ಭಾವನ ಜೊತೆ ದರ್ಶನಕ್ಕಾಗಿ ಕಾತರದಿಂದ ಬಂದನು.॥126॥ ಸಾಯಿನಾಥರಿಗೆ ನಮಸ್ಕರಿಸಿದ ಮೇಲೆ ಇಬ್ಬರೂ ಸಾಯಿಯ ಮುಂದೆ ಕುಳಿತುಕೊಂಡರು. ಅವರು ಪರಸ್ಪರ ಕುಶಲವಾರ್ತಾಲಾಪ ಮಾಡಿದ ನಂತರ ಬಾರವರು ಇದ್ದಕ್ಕಿದ್ದಹಾಗೆಯೇ ಕೋಪಗೊಂಡರು. ॥127॥ ಬಾಬಾ ಹೇಳಿದರು, "ನಾನಾ, ನೀನು ಅದು ಹೇಗೆ ಮರೆತುಹೋದೆ? ನನ್ನ ಸಹವಾಸದಲ್ಲಿ ಇಷ್ಟೊಂದು ಸಮಯ ಕಳೆದಮೇಲೆ ಇದೊಂದು ಏನು ನೀನು ಕಲಿತಿರುವುದು? ॥128॥ "ನನ್ನ ಸಂಗದಲ್ಲಿ ಇಷ್ಟು ಸಮಯ ಕಳೆದುದರ ಪರಿಣಾಮ ಇದೇ ಏನು? ನಿನ್ನ ತೀರ್ಮಾನವು ಹೀಗೇಕೆ ಭ್ರಮಿತವಾಯಿತು? ಯಥಾವತ್ತಾಗಿ ನನಗೆ ವಿವರಿಸು!" ॥129॥ ಇದನ್ನು ಕೇಳಿ ನಾನಾನು ಅಧೋವದನನಾಗಿ ಮನದಲ್ಲೇ ಈ ಕೋಪದ ಕಾರಣಕ್ಕಾಗಿ ಅಚ್ಚರಿಗೊಂಡನು. ಆದರೆ ಯಾವುದೂ ಅವನ ನೆನಪಿಗೆ ಬರಲಿಲ್ಲ. ಅವನ ಮನಸ್ಸು ಉದ್ವಿಗ್ನವಾಯಿತು. ॥130॥ ಅವನು ಏನು ತಪ್ಪು ಮಾಡಿದನೆಂದು ನೆನಪಿಸಿಕೊಳ್ಳಲು ಆಗಲಿಲ್ಲ. ಅವನಿಗೆ ಕೋಪದ ಯಾವ ಕಾರಣವೂ ಕಾಣಿಸಲಿಲ್ಲ. ಆದರೆ ಏನಾದರೂ ಆಗದ ಹೊರತು ಬಾಬಾರವರು ಎಂದಿಗೂ ಯಾರನ್ನೂ ನೋಯಿಸುತ್ತಿರಲಿಲ್ಲ. ॥131॥ ಆದುದರಿಂದ, ಅವನು ಬಾಬಾರವರ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, ಬಹು ವಿಧವಾಗಿ ವಿನಂತಿಸಿಕೊಂಡನು. ಕೊನೆಯಲ್ಲಿ ನಾನಾನು ಮನಃಪೂರ್ವಕವಾಗಿ ಬಿನ್ನವಿಸಿಕೊಂಡನು ಮತ್ತು ಕೇಳಿದನು, "ನೀವು ಏಕೆ ಕೋಪಗೊಂಡಿರುವಿರಿ?" ॥132॥ "ನೀನು ನನ್ನ ಜೊತೆಯಲ್ಲಿ ವರ್ಷಾನುಗಟ್ಟಲೆ  ಇದ್ದರೂ ಸಹ, ನೀನು ಈರೀತಿ ನಡೆದುಕೊಂಡಿದ್ದೇಕೆ? ನಿನ್ನ ಬುದ್ಧಿಗೆ ಏನಾಯಿತು?" ಎಂದು ಬಾಬಾರವರು ನಾನಾನನ್ನು ಕೇಳಿದರು. ॥133॥ "ನೀನು ಕೋಪರಗಾಂವ್‌ಗೆ ಯಾವಾಗ ಬಂದೆ? ಮಾರ್ಗಮಧ್ಯದಲ್ಲಿ ಏನು ನಡೆಯಿತು? ದಾರಿಯಲ್ಲಿಯೇ ಎಲ್ಲಿ ಇಳಿದೆ? ಅಥವಾ ನೀನು ಇಲ್ಲಿಗೆ ನೇರವಾಗಿ ಬಂದೆಯಾ? ॥134॥ "ಮಾರ್ಗಮಧ್ಯದಲ್ಲಿ ಒಂದು ವಿಚಿತ್ರ

ನಡೆಯಿತು! ಅದನ್ನು ವಿವರವಾಗಿ ಕೇಳಬೇಕೆನ್ನಿಸುತ್ತಿದೆ. ಅಲ್ಲಿ ಏನು ನಡೆಯಿತೆಂಬುದನ್ನು ನನಗೆ ಹೇಳು ಮತ್ತು ಎಲ್ಲಿ ಆಯಿತು, ಅದು ಸಣ್ಣದಾ ಅಥವಾ ದೊಡ್ಡ ಘಟನೆಯಾ ಅದನ್ನು ಹೇಳು." ॥135॥ ಇದನ್ನು ಕೇಳಿದ ನಾನಾಗೆ ತಪ್ಪಿನ ಅರಿವಾಯಿತು. ಕೂಡಲೇ ತಲೆತಗ್ಗಿಸಿದನು. ಅದರ ಬಗ್ಗೆ ಮಾತನಾಡಲು ಮನಸ್ಸಿನಲ್ಲೇ ನಾಚಿಕೆಯಾದರೂ ಸಹ, ಅವನು ಅದನ್ನು ಹೇಳಿದನು. ॥136॥ ಇಲ್ಲಿ ಯಾವುದನ್ನೂ ರಹಸ್ಯವಾಗಿಡಲು ಆಗುತ್ತಿರಲಿಲ್ಲ. ಇದನ್ನು ನಿಶ್ಚಯಮಾಡಿಕೊಂಡು ನಾನಾನು ಬಾಬಾರವರಿಗೆ ಅದೇನು ನಡೆಯಿತೋ ಅದನ್ನೆಲ್ಲ ವಿವರವಾಗಿ ತಿಳಿಸಿದನು. ॥137॥ ಸಾಯಿಯ ಎದುರಿಗೆ ಸುಳ್ಳು ಹೇಳುವುದು ಅಸಾಧ್ಯ. ಅಸತ್ಯವು ಸಾಯಿಯನ್ನು ಗಳಿಸಿಕೊಡುವುದಿಲ್ಲ. ಅಸತ್ಯವು ಅಧೋಗತಿಗೆ ತಳ್ಳುತ್ತದೆ. ಹಾಗೂ ಕೊನೆಯಲ್ಲಿ ದುರ್ಗತಿ ಉಂಟಾಗುತ್ತದೆ. ॥138॥ ಗುರುವಂಚನೆಯು ಮಹಾ ದುಷ್ಕೃತಿಯು. ಅದಕ್ಕೆ ಪ್ರಾಯಶ್ಚಿತ್ತವಿಲ್ಲ. ಇದನ್ನು ಅರಿತುಕೊಂಡ ನಾನಾನು ಬಾಬಾರವರಿಗೆ ನಡೆದುದೆಲ್ಲವನ್ನೂ ವಿವರವಾಗಿ ತಿಳಿಸಿದನು. ॥139॥ ನಾನಾ ಹೇಳಿದನು, "ಮೊದಲು ನಾವು ಶಿರಡಿಗೆ ನೇರವಾಗಿ ಬರಲು ಒಂದು ಟಾಂಗಾವನ್ನು ಬಾಡಿಗೆಗೆ ತೆಗೆದುಕೊಂಡೆವು. ಅದರ ಫಲವಾಗಿ ಬಿನಿವಾಲೆಯು ಗೋದಾವರಿ ತೀರದಲ್ಲಿರುವ ದತ್ತ ಭಗವಾನರ ದರ್ಶನವನ್ನು ತಪ್ಪಿಸಿಕೊಂಡನು. ॥140॥ ಬಿನಿವಾಲೆಯು ದತ್ತ ಭಕ್ತನು. ಮಾರ್ಗದಲ್ಲಿ ದತ್ತ ಮಂದಿರದ ಹತ್ತಿರ ಬಂದಾಗ ಅವನು ದತ್ತ ಭಗವಾನರ ದರ್ಶನ ಮಾಡಬೇಕೆಂಬ ಇಚ್ಛೆಯಿಂದ ಅಲ್ಲಿ ಇಳಿಯಬೇಕೆಂದುಕೊಂಡನು. ॥141॥ ಆದರೆ ನಾನು ಅವಸರದಲ್ಲಿದ್ದುದರಿಂದ, ಅವನನ್ನು ತಡೆದೆನು ಮತ್ತು ಅವನಿಗೆ ನಾವು ಶಿರಡಿಯಿಂದ ಹಿಂತಿರುಗುವಾಗ ದರ್ಶನ ತೆಗೆದುಕೊಳ್ಳಬಹುದೆಂದು ಹೇಳಿದೆನು. ॥142॥ ಈ ರೀತಿ ಆತುರಗಾರನಾಗಿ, ಶಿರಡಿಗೆ ಬರಲು ತಡವಾಗುತ್ತದೆಂದು ಯೋಚಿಸಿ, ನಾನು ಆ ವಿಷಯವನ್ನು ತಪ್ಪಿಸಿದೆನು. ಮತ್ತು ದತ್ತ ದರ್ಶನವನ್ನು ಅಲಕ್ಷ್ಯ ಮಾಡಿದೆನು. ॥143॥ ಅನಂತರ, ಗೋದಾವರಿಯಲ್ಲಿ ಸ್ನಾನಮಾಡುವಾಗ ಒಂದು ದೊಡ್ಡ ಮುಳ್ಳು ನನ್ನ ಪಾದವನ್ನು ಚುಚ್ಚಿತು. ಮತ್ತುಮಾರ್ಗದಲ್ಲಿ ಬಹಳ ತೊಂದರೆಕೊಟ್ಟಿತು. ಅದನ್ನು ಬಹಳ ಶ್ರಮಪಟ್ಟು ಕಿತ್ತುಹಾಕಬೇಕಾಯಿತು." ॥144॥ ಅನಂತರ ಬಾಬಾರವರು ಸೂಚಿಸಿದರು, ಅಷ್ಟು ಆತುರದಲ್ಲಿರುವುದು ಸರಿಯಲ್ಲ. ನಿನ್ನ ಗ್ರಹಗತಿಗೆ ಧನ್ಯವಾದ ಅರ್ಪಿಸು. ನೀನು ದರ್ಶನವನ್ನು ಅನಾದರ ಮಾಡಿದ್ದಕ್ಕೆ ನಿನಗೆ ಕೇವಲ ಮುಳ್ಳೊಂದು ಚುಚ್ಚಿತು ಅಷ್ಟೇ." ॥145॥ ಯಾವಾಗ ದತ್ತರಂತಹ ಅತಿಪೂಜ್ಯದೇವತೆಯು ಮಾರ್ಗದಲ್ಲಿ ದರ್ಶನ ನೀಡಲು ಕಾಯುತ್ತಿದ್ದಾಗ ನೀನು ದರ್ಶನ ಮಾಡದೇ ಇರುವುದು ದುರದೃಷ್ಟವೇ ಸರಿ! ನಾನು ಹೇಗೆ ಅವನಿಗೆ ಸಹಾಯಮಾಡಲಿ?" ॥146॥ ಈಗ ಅಡಿಗೆಯ ಹಂಡೆಯ ವಾರ್ತೆಯನ್ನು ಮುಗಿಸೋಣ. ಅದೆಷ್ಟು ಪರಿಶುದ್ಧ ಮತ್ತು ಪಾವನ! ಮಸೀದಿ ಮಾಯಿ ಸಾಯಿಯ ಸಂಗದಲ್ಲಿ ಮಧ್ಯಾಹ್ನದ ಭೋಜನ! ಭಕ್ತರಲ್ಲಿಟ್ಟ ಸಾಯಿಪ್ರೇಮ ಅದೆಷ್ಟು ಆಶ್ಚರ್ಯಕರ! ॥147॥ ಮಧ್ಯಾಹ್ನದ ಪೂಜೆಯ ನಂತರ ಮತ್ತು ಬಾಬಾರವರ ನಿತ್ಯದ ಆರತಿಯ ನಂತರ ಭಕ್ತರು ಇನ್ನೇನು ಹಿಂತಿರುಗಬೇಕೆಂದಿದ್ದಾಗ ಬಾಬಾರವರು ಸಮಸ್ತ ಜನರಿಗೂ

ಉದಿಯನ್ನು ಕೊಡುತ್ತಿದ್ದರು. ॥148॥ ಬಾಬಾರವರು ಬಂದು ಮಸೀದಿಯ ಗೋಡೆಯ ತುದಿಗೆ ನಿಲ್ಲುತ್ತಿದ್ದರು. ಭಕ್ತರೆಲ್ಲರೂ ಅಂಗಳದಲ್ಲಿ ಕಾಯುತ್ತ ನಿಲ್ಲುತ್ತಿದ್ದರು. ಮತ್ತು ಪ್ರತಿಯೊಬ್ಬರೂ ಒಬ್ಬೊಬ್ಬರಾಗಿ ಹೋಗಿ ಅವರ ಚರಣಗಳಿಗೆ ವಂದಿಸುತ್ತಿದ್ದರು. ॥149॥ ಭಕ್ತರೆಲ್ಲರೂ ಬಾಬಾರವರ ಸಮ್ಮುಖದಲ್ಲಿ ಅವರ ಚರಣಗಳಲ್ಲಿ ತಮ್ಮ ಶಿರವನ್ನಿಟ್ಟು ನಿಲ್ಲುತ್ತಿದ್ದರು. ಸಾಯಿಯು ಉದಿಯನ್ನು ಒಬ್ಬೊಬ್ಬರ ಹಣೆಯ ಮೇಲೆಯೂ ಹಚ್ಚುತ್ತಿದ್ದರು. ॥150॥ "ಈಗ ನೀವೆಲ್ಲರೂ, ಚಿಕ್ಕವರು, ದೊಡ್ಡವರು, ಎಲ್ಲರೂ ನಿಮ್ಮ ಮನೆಗಳಿಗೆ ಊಟಮಾಡಲು ಹೋಗಿ." ಬಾಬಾರವರಿಗೆ ವಂದಿಸಿ **ಆಜ್ಞೆಯನ್ನು** ಮನಃಪೂರ್ವಕವಾಗಿ ಪರಿಪಾಲಿಸುತ್ತ ಜನರೆಲ್ಲರೂ ಹಿಂತಿರುಗುತ್ತಿದ್ದರು. ॥151॥ ಬಾಬಾರವರು ಬೆನ್ನು ತಿರುಗಿಸಿದ ನಂತರ ಮಸೀದಿಯ ಪರದೆಯನ್ನು ನಿತ್ಯ ಪರಿಪಾಠದಂತೆ ಎಳೆಯುತ್ತಿದ್ದರು. ತಟ್ಟೆಗಳ ಮತ್ತು ಚಿಕ್ಕ ಬಟ್ಟಲುಗಳ ಖಣ ಖಣ ಶಬ್ದವು ಕೇಳಿಬರುತ್ತಿತ್ತು, ಅನಂತರ ಪ್ರಸಾದದ ವೈಭವ ಶುರುವಾಯಿತು. ॥152॥ ಅನೇಕರು ಬಯಲು ಮಂಟಪದಲ್ಲಿ ಸಾಯಿ ಕರಸ್ಪರ್ಶದಿಂದ ಪವಿತ್ರವಾದ ಉಳಿದ ನೈವೇದ್ಯದ ಶೇಷಭಾಗ ಸಿಗುವುದೇನೋ ಎಂದು ಕಾಯುತ್ತ ಕುಳಿತಿರುತ್ತಿದ್ದರು. ॥153॥ ಈ ಕಡೆ ಬಾಬಾರವರು ನಿಂಬರದ ಹತ್ತಿರ ಅದಕ್ಕೆ ಬೆನ್ನು ಮಾಡಿ ಎರಡು ಸಾಲುಗಳ ಭಕ್ತರೊಡನೆ ಕುಳಿತುಕೊಂಡಿರುತ್ತಿದ್ದರು ಸಕಲರೂ ಆನಂದದಿಂದ ಉನ್ಮತ್ತರಾಗಿರುತ್ತಿದ್ದರು. ॥154॥ ಪ್ರತಿಯೊಬ್ಬರೂ ತಮ್ಮ ತಮ್ಮ ನೈವೇದ್ಯವನ್ನೆಲ್ಲ ಸಾಯಿಸಮರ್ಥರ ಮುಂದೆ ತಳ್ಳುತ್ತಿದ್ದರು. ಅನಂತರ ಸಾಯಿಯು ಎಲ್ಲವನ್ನೂ ಒಂದು ತಟ್ಟೆಯಲ್ಲಿ ತಮ್ಮ ಕೈಯಿಂದಲೇ ಹಾಕಿ ಎಲ್ಲವನ್ನೂ ಒಟ್ಟು ಮಾಡುತ್ತಿದ್ದರು. ॥155॥ ಬಾಬಾರವರ ಕರಸ್ಪರ್ಶಹೊಂದಿದ ಆ ಅನ್ನದ ಒಂದು ಅಗುಳನ್ನು ಪಡೆಯಲೂ ಸಹ ಅಮಿತ ಭಾಗ್ಯಶಾಲಿಯಾಗಿರಬೇಕು. ಅದನ್ನು ತಿಂದವನು ಒಳಗೂ ಹೊರಗೂ ಪುನೀತನಾಗುತ್ತಿದ್ದನು. ಅವನ ಜೀವಿತವು ನಿಜವಾಗಿಯೂ ಸಫಲ. ॥156॥ ವಡೆಗಳು,[11] ಸಂಜೋರಿಯ,[12] ಪೂರಿಗಳು, ಕೆಲವು ಸಲ ಶೀಕರಣೆ,[13] ಗಾರಿಗೆ,[14] ಫೇಣಿ,[15] ವಿವಿಧ ತರಕಾರಿಗಳು, ಖೀರು, ಕೋಸಂಬರಿ ಇವೆಲ್ಲವನ್ನೂ ಬಾಬಾರವರು ಚೆನ್ನಾಗಿ ಕಲಸುತ್ತಿದ್ದರು. ॥157॥ ಈ ರೀತಿ, ಈ ಮಿಶ್ರಿತ ಆಹಾರವನ್ನು ಬಾಬಾರವರು ಈಶ್ವರಾರ್ಪಣ ಮಾಡುತ್ತಿದ್ದರು. ಅನಂತರ ಅವರು ಎಲೆಯ ತುಂಬ ಬಡಿಸುತ್ತ ಶಾಮಾನಿಗೆ ಮತ್ತು ನಾನಾ (ನಿಮೋಣಕರ್)ನಿಗೆ ಹಂಚಲು ಕೊಡುತ್ತಿದ್ದರು. ॥158॥ ಅನಂತರ ಒಬ್ಬೊಬ್ಬರನ್ನಾಗಿ ಕರೆಯುತ್ತ ತಮ್ಮ ಹತ್ತಿರ ಕುಳ್ಳಿರಿಸಿಕೊಂಡು ಪರಮಾನಂದದಿಂದ ಪ್ರೀತಿಮಾಡುತ್ತ ಕಂಠಪೂರ್ತಿ ಭೋಜನ ಮಾಡಿಸುತ್ತಿದ್ದರು. ॥159॥ ಈ ಆಹಾರವೆಲ್ಲವೂ ಅತಿ ಸ್ವಾದಿಷ್ಟವಾಗಿರುತ್ತಿತ್ತು. ಶುದ್ಧವಾದ ತುಪ್ಪದ ಘಮ ಘಮ ವಾಸನೆ ಇರುತ್ತಿತ್ತು, ಚಪಾತಿಗಳು, ಧಾನ್ಯಗಳು, ಎಲ್ಲವೂ ಮಿಶ್ರಿತವಾಗಿರುತ್ತಿದ್ದವು. ಬಾಬಾರವರು ಈ ರೀತಿ ಮಿಶ್ರಣಮಾಡಿ ಎಲ್ಲರಿಗೂ ಹಂಚುತ್ತಿದ್ದರು. ॥160॥ ಇಂತಹ ಆಹಾರವನ್ನು ಸೇವಿಸಿ, ಅಷ್ಟು ಪ್ರೇಮದಿಂದ ತಯಾರಿಸಿದ್ದು ಅದು ಬ್ರಹ್ಮಾನಂದಕ್ಕೆ ಸಮನಾಗಿತ್ತು, ಅದನ್ನು ತಿಂದವರು ತಮ್ಮ ಬೆರಳುಗಳಿಂದ ನೆಕ್ಕುತ್ತ ಸಂಪೂರ್ಣವಾಗಿ ತೃಪ್ತರಾಗುತ್ತಿದ್ದರು. ॥161॥ ಕೆಲವು ಸಲ ಅಲ್ಲಿ ಮಂಡೇಸ್,[16]

ಪೂರನ್‌ಪೋಳಿ (ಒಬ್ಬಟ್ಟು) ಸಕ್ಕರೆಯ ಪೂರಿಗಳು, ಕೆಲವು ಸಲ ಬಾಸುಂದಿ,[17] ಶಿರಾ, ಸಂಜೋರಿಯ ಮತ್ತು ಗುಲ್ವಾರಿ[18] ಇವೆಲ್ಲವನ್ನೂ ಅವರು ಹಂಚುತ್ತಿದ್ದರು. ॥162॥ ಕೆಲವು ಸಲ ಬಿಳಿಯ ಭತ್ತದ ಅರಳು (ಅಂಬೆ ಮೋಹರ್ ಎಂಬ ತಳಿ) ವರನ್ ಜೊತೆಯಲ್ಲಿ ತಾಜಾ ತುಪ್ಪದಿಂ ಕೂಡಿ ಬಹಳ ರುಚಿಕರವಾಗಿಯೂ ಸ್ವಾದಿಷ್ಟವಾಗಿಯೂ ಇದ್ದು ಅದರ ಜೊತೆಯಲ್ಲಿ ವಿವಿಧ ತರಕಾರಿಗಳಿಂದ ಆವೃತವಾಗಿ ಇರುತ್ತಿತ್ತು. ॥163॥ ಅದರ ಜೊತೆಯಲ್ಲಿ, ಅಲ್ಲಿ ಉಪ್ಪಿನಕಾಯಿಗಳು, ಹಪ್ಪಳ, ಮತ್ತು ರಾಯತ (ಮೊಸರುಬಜ್ಜಿ), ವಿವಿಧ ರೀತಿಯ ಬಜ್ಜಿಗಳು,[19] ಮತ್ತು ಭರಿತ[20] ಇವುಗಳು – ಕೆಲವು ಸಲ ಪಂಚಾಮೃತಕ್ಕೆ ಮೊಸರು ಅಥವಾ ಮಜ್ಜಿಗೆ ಹಾಕಿದ್ದುದು ಇರುತ್ತಿತ್ತು. ಅಂತಹ ದಿವ್ಯಾನ್ನವನ್ನು ಸೇವಿಸಿದವರೇ ಧನ್ಯರು. ॥164॥ ಸಾಯಿನಾಥರು ತಾವೇ ನೀಡುತ್ತಿದ್ದ ಭೋಜನದ ಬಗ್ಗೆ ಯಾರು ತಾನೇ ವಿವರಿಸಲು ಸಾಧ್ಯ? ಭಕ್ತರು ತಮ್ಮ ಕಂಠಪೂರ್ತಿ ಸೇವಿಸುತ್ತಿದ್ದರು ಮತ್ತು ತೃಪ್ತಿಯನ್ನು ತೋರಿಸುತ್ತ ಢಕಾರವನ್ನೂ ಮಾಡುತ್ತಿದ್ದರು. (ತೇಗುತ್ತಿದ್ದರು) ॥165॥ ಪ್ರತಿಯೊಂದು ತುತ್ತೂ ಸಮಾಧಾನಕರವಾಗಿದ್ದು ತುಷ್ಟಿ ಮತ್ತು ಪುಷ್ಟಿಗಳನ್ನು ನೀಡಿ ಹಸಿವೆಯನ್ನು ನಾಶ ಮಾಡುತ್ತಿದ್ದುವು. ಅತ್ಯಂತ ರುಚಿಕರವಾದ ಸ್ವಾದಿಷ್ಟವಾದ ಭೋಜ್ಯವದಾಗಿತ್ತು. ಅದು ಪರಮಪಾವನವೂ ಪ್ರೀತಿಯಿಂದ ಕೊಟ್ಟುದೂ ಆಗಿತ್ತು. ॥166॥ ಪ್ರತಿಯೊಂದು ಗ್ರಾಸವೂ ಭಗವನ್ನಾಮದ ಜೊತೆಯಲ್ಲಿ ತೆಗೆದುಕೊಂಡುದಾಗಿರುತ್ತಿತ್ತು. ಮತ್ತು ಈ ದಿವ್ಯಾನ್ನದ ಆಹುತಿಗಳಂತೆ[21] ತಟ್ಟೆಗಳನ್ನು ಎಂದಿಗೂ ಖಾಲಿಬಿಡುತ್ತಿರಲಿಲ್ಲ. ಏಕೆಂದರೆ ಊಟವನ್ನು ಮತ್ತೆ ಮತ್ತೆ ಬಡಿಸುತ್ತಲೇ ಇದ್ದರು. ॥167॥ ಯಾರು ಏನಾದರೊಂದು ಸಿಹಿಖಾದ್ಯವನ್ನು ಇಷ್ಟಪಟ್ಟರೆ ಅದನ್ನು ಪ್ರೀತಿಯಿಂದ ಇನ್ನಷ್ಟು ಬಡಿಸುತ್ತಿದ್ದರು. ಮತ್ತು ಅನೇಕರು ಮಾವಿನರಸವನ್ನು ಇಷ್ಟಪಡುತ್ತಿದ್ದರು. ಅವರಿಗೆ ಅದನ್ನು ಪ್ರೀತಿಯಿಂದ ಬಡಿಸುತ್ತಿದ್ದರು. ॥168॥ ಬಾಬಾರವರು ನಾನಾ ಸಾಹೇಬ್ ನಿಮೋಣಕರ್ ಅಥವಾ ಮಾಧವರಾವ್ ದೇಶಪಾಂಡೆಯವರಿಗೆ ಪ್ರತಿದಿನವೂ ಈ ರೀತಿ ಊಟ ಬಡಿಸಲು ನಿರ್ದೇಶಿಸಿದ್ದರು. ॥169॥ ಅವರು ನೈವೇದ್ಯ ಹಂಚುವುದನ್ನು ಅವರ ನಿತ್ಯ ನಿಯಮಿತ ಕರ್ಮವೆಂದು ಪರಿಗಣಿಸಿದ್ದರು ಮತ್ತು ಅವರು ಆ ಕರ್ಮವನ್ನು ಅತಿ ಪರಿಶ್ರಮದಿಂದ ಪರಮಪ್ರೇಮ ಭರಿತವಾಗಿ ನಡೆಸುತ್ತಿದ್ದರು. ॥170॥ ಅಕ್ಕಿಯು ಅತ್ಯಂತ ರುಚಿಕರವಾದ ಜೀರೇಸಾಳಿ[22] ಎನ್ನುವ ತಳಿ. ಅದು ಮಲ್ಲಿಗೆಯ ಮೊಗ್ಗಿನಂತೆ ತೋರುತ್ತಿದ್ದು ಅದರ ಮೇಲೆ ಹಳದಿ ಬಣ್ಣದ ತೊಗರಿಬೇಳೆಯ ತೊವ್ವೆಯನ್ನು ಮತ್ತು ಅದರ ಮೇಲೆ ಒಂದು ಸೌಟಿನ ತುಂಬ ತುಪ್ಪವನ್ನು ಎಲ್ಲರಿಗೆ ಬಡಿಸುತ್ತಿದ್ದರು. ॥171॥ ಊಟವನ್ನು ಬಡಿಸುತ್ತಿದ್ದ ಹಾಗೆಯೇ ಆ ವಾತಾವರಣವೆಲ್ಲವೂ ಸುಂದರವಾದ ಪರಿಮಳದಿಂದ ಘಮಘಮಿಸುತ್ತಿತ್ತು. ವಿವಿಧ ಚಟ್ನಿಗಳು ಭೋಜನಕ್ಕೆ ವಿಶೇಷ ಸ್ವಾದಕೊಟ್ಟಿದ್ದವು. ಯಾವುದೂ ಅಪಕ್ವವಾಗಿಯೂ ಅರುಚಿಕರವಾಗಿಯೂ ಇರುತ್ತಿರಲಿಲ್ಲ ಪ್ರತಿಯೊಬ್ಬರೂ ನಿಶ್ಚಿತವಾಗಿ ಯಥೇಚ್ಛವಾಗಿ ತಿನ್ನುತ್ತಿದ್ದರು. ॥172॥ ತಟ್ಟೆಯಲ್ಲಿದ್ದ ಶಾವಿಗೆಯು ಸ್ವಾನಂದದಿಂದ ಮಾಡಲ್ಪಟ್ಟಿದ್ದವು. ಕುರಡಿಯಗಳು[23] ಪ್ರೇಮ ಮತ್ತು ಭಕ್ತಿಗಳಿಂದ ಮಾಡಲ್ಪಟ್ಟಿದ್ದವು. ಎಲ್ಲರೂ

ಶಾಂತಿ ಸುಖ ಮತ್ತು ಸಂತೋಷವನ್ನು ಅನುಭವಿಸಿದವರಲ್ಲದೆ ಮತ್ತೆ ಯಾರೂ ಊಟಮಾಡಲು ಬರಲು ಸಾಧ್ಯ? ॥173॥ ಎಲ್ಲಿ ಹರಿಯೇ ಅನ್ನ, ಮತ್ತು ಹರಿಯೇ ಭೋಕ್ತ ಮತ್ತು ಹರಿಯೇ ರಸವನ್ನು ಆಸ್ವಾದಿಸುವವನು, ಅಲ್ಲಿ ಊಟಬಡಿಸುವವರೇ ಧನ್ಯರು! ಮತ್ತು ಅದನ್ನು ಸೇವಿಸುವವರೂ ಧನ್ಯರು! ॥174॥ ಈ ಎಲ್ಲ ಸಂತಸಕ್ಕೆ ಮೂಲಕಾರಣವೆಂದರೆ ಗುರುಚರಣಗಳಲ್ಲಿರುವ ಪ್ರಬಲನಿಷ್ಠೆಯು. ಕಾರಣ ಸಕ್ಕರೆಯ ಸಿಹಿಯಲ್ಲ, ಬೆಲ್ಲದ ಸಿಹಿಯಲ್ಲ ಆದರೆ ಶ್ರೀಸಾಯಿಯ ಚರಣಗಳಲ್ಲಿನ ಪೂರ್ಣಶ್ರದ್ಧೆಯೇ ಅದನ್ನು ದಿವ್ಯಾನಂದಕರವನ್ನಾಗಿ ಮಾಡಿತ್ತು. ॥175॥ ಈ ರೀತಿ ನಿತ್ಯತೃಪ್ತಿ ಮತ್ತು ನಿತ್ಯ ಮಂಗಳವಾಗಿತ್ತು ಖೀರು, ಶಿರಾ ಮತ್ತು ಕಾಲ್ಯಾ ಇವುಗಳಾಗಿತ್ತು. ಒಮ್ಮೆ ಒಬ್ಬರು ತಿನ್ನಲು ಕುಳಿತರೆಂದರೆ ಅಲ್ಲಿ ಯಾವುದೂ ಸ್ವಲ್ಪಮಾತ್ರಕ್ಕೂ ಹಿಂಜರಿಕೆ ಇರುತ್ತಿರಲಿಲ್ಲ. ॥176॥ ಅನೇಕ ರೀತಿಯ ಖಾದ್ಯಗಳನ್ನು ಬೇಯಿಸಿದ್ದರೂ ಮತ್ತು ಪ್ರತಿಯೊಬ್ಬರೂ ಕಂಠಪೂರ್ತಿಯಾಗಿ ತಿಂದ ಮೇಲೂ ಅನ್ನ, ಮೊಸರು ಇಲ್ಲದಿದ್ದರೆ ಮಜ್ಜಿಗೆಯನ್ನಾದರೂ ಕೇಳಬೇಕು. ॥177॥ ಒಂದು ಸಲ, ಒಂದು ಲೋಟದ ತುಂಬ ಮಜ್ಜಿಗೆಯನ್ನು ಗುರುರಾಯರೇ ತಮ್ಮ ಸ್ವಹಸ್ತದಿಂದ ತುಂಬಿಸಿ ನನಗೆ ಕುಡಿಯಲು ಪ್ರೀತಿಯಿಂದ ಕೊಟ್ಟರು. ನಾನು ಅದನ್ನು ನನ್ನ ತುಟಿಗಳಿಗೆ ತಂದಾಗ, ॥178॥ ಶುಭ್ರವಾದ ಸ್ವಚ್ಛವಾದ ಮಜ್ಜಿಗೆಯನ್ನು ನೋಡಿದಾಗ ನನಗೆ ಬಹಳ ಸುಖ ಸಂತುಷ್ಟಿಗಳು ಉಂಟಾದವು. ಆ ಬಟ್ಟಲನ್ನು ತುಟಿಗಳಿಗೆ ಇಟ್ಟುಕೊಡಲೇ ನನಗೆ ಸ್ವಾನಂದ ಪುಷ್ಟಿಯು ಉಂಟಾಯಿತು. ॥179॥ ಆಗಲೇ ನನ್ನ ಹೊಟ್ಟೆಯು ಮೃಷ್ಟಾನ್ನದಿಂದ ತುಂಬಿಹೋಗಿತ್ತು, ಮತ್ತದನ್ನು ಹೇಗೆ ಕುಡಿಯುವುದೆಂದು ಅಚ್ಚರಿಪಟ್ಟೆ, ಇಂತಹ ಕ್ಲಿಷ್ಟವಾದ ಆಶಂಕೆಯು ಉಂಟಾದಾಗ, ಮೊದಲನೆಯ ಗುಟುಕು ಬಹಳ ಸ್ವಾದಿಷ್ಟವಾಗಿತ್ತು. ॥180॥ ಈ ರೀತಿ ಸಂಕೋಚಪಡುತ್ತಿರುವುದನ್ನು ನೋಡಿ ಬಾಬಾರವರು ಅತಿ ಕಕ್ಕುಲತೆಯಿಂದ ನುಡಿದರು, "ಓಹ್! ಇದನ್ನು ಪೂರ್ತಿಯಾಗಿ ಕುಡಿ, ಇಂತಹ ಯೋಗ ಮತ್ತೊಮ್ಮೆ ನಿನಗೆ ದೊರಕುವುದಿಲ್ಲ!" ॥181॥ ಅದು ಹಾಗಿರಲಿ. ಇದರ ಸತ್ಯಾಂಶವನ್ನು ಅರ್ಥಮಾಡಿಕೊಂಡೆ. ಏಕೆಂದರೆ ಎರಡು ತಿಂಗಳುಗಳ ನಂತರ ಬಾಬಾರವರ ಅವತಾರ ಇನ್ನು ಇರಲಿಲ್ಲ. ಏಕೆಂದರೆ ಅವರು ನಿಜವಾಗಿ ನಿರ್ವಾಣಹೊಂದಿದರು. ॥182॥ ಈಗ ಬಾಯಾರಿಕೆಯನ್ನು ತಣಿಸಲು ಮಜ್ಜಿಗೆಯೆಂದರೆ ಸಾಯಿ ಕಥಾಮೃತಪಾನ ಮಾಡುವುದನ್ನು ಬಿಟ್ಟರೆ ಬೇರೆ ಯಾವ ದಾರಿಯೂ ಇಲ್ಲ. ಕೇವಲ ಅದೊಂದರ ಮೇಲೆಯೇ ನಾವು ಅವಲಂಬಿತವಾಗಬೇಕಾಗುತ್ತದೆ. ॥183॥ ಹೇಮಾಡನು ಸಾಯಿಗೆ ಶರಣಾಗುತ್ತಾನೆ. ಇನ್ನು ಮುಂದೆ ಸಾಯಿಯು ನನ್ನಲ್ಲಿ ಏನನ್ನು ನೆನಪಿಸಿಕೊಡುವನೋ ಅದನ್ನು ನಿರೂಪಿಸುತ್ತೇನೆ. ಶ್ರೋತೃಗಳು ಸಾವಧಾನವಾಗಿರಿ. ॥184॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಹಂಡೆಯ ನಿರ್ವಹಣೆ" ಎಂಬ

ಮೂವತ್ತೆಂಟನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.


ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಕಾಳುಗಳಿಂದ ಮಾಡಿದ ಬಹಳ ರುಚಿಕರವಾದ ಖಾದ್ಯ.
2. ಸಿಹಿ, ಹುಳಿ, ಉಪ್ಪು, ಖಾರ, ಒಗರು ಮತ್ತು ಕಹಿ.
3. ಕೆಂಡದ ಮೇಲೆ ಬೇಯಿಸುವ ಹಿಟ್ಟಿನ ಉಂಡೆ.
4. ಕಣಕವನ್ನು ಎಲೆಯ ಮೇಲೆ ಹಾಕಿ ಸುತ್ತಿ, ಬೆಂಕಿಯ ಮೇಲೆ ಬೇಯಿಸುವುದು.
5. ಚಿಕ್ಕದು, ಚಪ್ಪಟೆಯ ಹಾಳೆಯ ತರಹದ್ದು, ಮಾವಿನ ಹಣ್ಣಿನ ತಿರುಳಿನಿಂದ ಮಾಡಿದ್ದು.
6. ಪುರೋಡಾಶ ಎಂದು ಕರೆಯುತ್ತಾರೆ.
7. ಮುಸ್ಲಿಮ್ ಮತ ಧರ್ಮ ಶಾಸ್ತ್ರ.
8. ಹಾಲು, ಮೊಸರು, ಜೇನುತುಪ್ಪ, ಸಕ್ಕರೆ ಮತ್ತು ತುಪ್ಪ.
9. ಹಳದಿ ಬಣ್ಣದ ರೇಶ್ಮೆಯ ಪಂಚೆ.
10. ಮಸೀದಿಯ ಪಶ್ಚಿಮಕ್ಕಿರುವ ಗೋಡೆಯಲ್ಲಿ ಒಂದು ಸಣ್ಣ ಗುಳಿ. ಅದಕ್ಕೆ ಶ್ರೀಗಂಧವೆಲ್ಲವನ್ನೂ ಹಚ್ಚುತ್ತಾರೆ.
11. ಬೇಳೆಯನ್ನು ಮಸಾಲೆಯೊಡನೆ ರುಬ್ಬಿ, ಎಣ್ಣೆಯಲ್ಲಿ ಕರಿಯುವುದು.
12. ಶಿರಾ ಇಂದ ಮಾಡಲ್ಪಟ್ಟು ತುಂಬಿಸಿರುವ ಚೂರು.
13. ಸಿಹಿ ಖಾದ್ಯ, ಮಾಗಿದ ಬಾಳೆ ಹಣ್ಣು, ಹಾಲಿನ ಜೊತೆ ಮಾಡಿದ ತಿಂಡಿ.
14. ಗೋಧಿ ಅಥವಾ ಅಕ್ಕಿ ಹಿಟ್ಟಿನ ಸಿಹಿ ಪೂರಿ.
15. ಗೋಧಿ ಅಥವಾ ಅಕ್ಕಿಯ ಹಪ್ಪಳ.

16. ಗೋಧಿ ಹಿಟ್ಟಿನ ತೆಳುವಾದ ಸಿಹಿ ಚಪಾತಿ.
17. ಹಾಲಿಗೆ ಸಕ್ಕರೆ ಮತ್ತು ಬೇಕಾದ ಮಸಾಲೆ ಹಾಕಿ ಹಲ್ವಾ ತರಹ ದಪ್ಪವಾಗುವವರೆಗೆ ಕುದಿಸುವುದು.
18. ಚಪಾತಿ ಮತ್ತು ಬೆಲ್ಲ.
19. ಹೆಸರು ಕಾಳುಹಿಟ್ಟು, ಎಣ್ಣೆಯಲ್ಲಿ ಕರೆದಿದ್ದು.
20. ಹುರಿದ ಬದನೆಕಾಯಿ.
21. ಅಗ್ನಿಗೆ ಹಾಕುವ ಹವಿಸ್ಸುಗಳು. ಸಾಮಾನ್ಯವಾಗಿ ತುಪ್ಪದ್ದು. (ಸಕ್ಕರೆ ಸಹಿತ ಅಥವಾ ಇಲ್ಲದೆ.)
22. ಅತ್ಯುತ್ತಮವಾದ ಬಗೆ.
23. ಅಕ್ಕಿಹಿಟ್ಟು ಸುರಳಿಯಾಗಿ ಬೇಯಿಸುವುದು (ಕೋಡುಬಳೆ).



# ಅಧ್ಯಾಯ - 39

॥ ಅಥ ಶ್ರೀ ಸಾಯಿ ಸಚ್ಚರಿತೆ ॥

## "ಗೀತೆಯ ಶ್ಲೋಕಾರ್ಥದ ವಿಶಿಷ್ಟ ವ್ಯಾಖ್ಯಾನ ಮತ್ತು ಸಮಾಧಿ ಮಂದಿರ ನಿರ್ಮಾಣ"



ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಶಿರಡಿ ಸ್ಥಳವು ಧನ್ಯ ಧನ್ಯ. ದ್ವಾರಕಾಮಾಯಿ ಭುವನವು ಧನ್ಯ. ಅಲ್ಲಿ ಪುಣ್ಯಪಾವನ ಮೂರ್ತಿ ಶ್ರೀ ಸಾಯಿಯವರು ನಿರ್ವಾಣದವರೆಗೆ ಜೀವಿಸಿದ್ದರು. ॥1॥ ಶಿರಡಿಯ ಜನರು ಧನ್ಯ ಧನ್ಯ! ಅವರಿಗಾಗಿಯೇ ಸಾಯಿಯವರು ಅಷ್ಟು ದೂರದಿಂದ ಬಂದಿದ್ದಾರೆ. ಯಾವುದೇ ಕಾರಣಕ್ಕಾಗಿರಲಿ, ಬಂದು ಅವರನ್ನು ಋಣಿಗಳನ್ನಾಗಿ ಮಾಡಿದ್ದಾರೆ. ॥2॥ ಶಿರಡಿಯು ಮೂಲತಃ ಒಂದು ಸಣ್ಣ ಹಳ್ಳಿಯಾಗಿದ್ದು, ಸಾಯಿಯ ಸಹವಾಸದಿಂದ ಅದು ಮಹಾನ್ ನಗರವಾಗಿದೆ. ಅದು ಅವರಿಂದಾಗಿ ಪಾವನವಾಗಿದ್ದು ಒಂದು ತೀರ್ಥಯಾತ್ರಾಸ್ಥಳವಾಗಿದೆ. ॥3॥ ಆ ಶಿರಡಿಯ ಮಹಿಳೆಯರು ಧನ್ಯರು. ಮತ್ತು ಅವರ ಅನನ್ಯ ಶ್ರದ್ಧೆಯೂ ಧನ್ಯ. ಅವರು ಸ್ನಾನ ಮಾಡುವಾಗ, ಬೀಸುವಾಗ ಮತ್ತು ಕಾಳಿನ ಹೊಟ್ಟನ್ನು ತೆಗೆಯುವಾಗ ಸಾಯಿಯ ಅಸಾಧಾರಣ ವೈಭವಗಳನ್ನು ಹಾಡುತ್ತಿದ್ದರು. ॥4॥ ಅವರ ಪ್ರೇಮವು ಧನ್ಯ ಧನ್ಯ. ಅವರು ಅತ್ಯುತ್ತಮ ಹಾಡುಗಳನ್ನು ಹಾಡುತ್ತಿದ್ದರು. ಅವುಗಳಲ್ಲಿ ಕೆಲವು ಉತ್ತಮವಾದವುಗಳನ್ನು ಕೇಳಿದರೆ ಮನಸ್ಸು ಶಾಂತವಾಗುತ್ತದೆ. ಮತ್ತು ತೃಪ್ತಿಹೊಂದುತ್ತದೆ. ॥5॥ ಆದುದರಿಂದ ಶ್ರೋತೃಗಳ ಉಪಯೋಗಕ್ಕಾಗಿ. ನಿರೂಪಣೆಯ ಸಮಯದಲ್ಲಿ ಯಥಾಕಾಲದಲ್ಲಿ ಜಿಜ್ಞಾಸುಗಳ ಕುತೂಹಲ ತೃಪ್ತಿಗಾಗಿ ನಾನು ಅದನ್ನು ಹೇಳುತ್ತೇನೆಅದರಿಂದ ಅವರು ತೃಪ್ತಿಹೊಂದಿ

ಸಂತೋಷಪಡಲಿ. ॥6॥ ಸಾಯಿಯವರು ಮೊದಲು ನಿಜಾಮನ ಆಡಳಿತ ವ್ಯಾಪ್ತಿಯಲ್ಲಿ ಪ್ರಕಟರಾದರು. ರಸ್ತೆಯ ಹತ್ತಿರ ಮಾವಿನ ಮರದ ಕೆಳಗಡೆ ಕುಳಿತಿದ್ದರು. ಮತ್ತು ಅನಿರೀಕ್ಷಿತವಾಗಿ ಧೂಪಖೇಡದಿಂದ ಒಂದು ಮದುವೆ ದಿಬ್ಬಣದ ಜೊತೆಯಲ್ಲಿ ಶಿರಡಿಗೆ ಬಂದರು. ॥7॥ ಈ ಹಳ್ಳಿಯ ಒಬ್ಬ ಪುಣ್ಯವಂತ ಚಾಂದ್ ಪಾಟೀಲನೆಂಬ ಹೆಸರಿನವನು ಈ ನಿಧಿಯನ್ನು ಪ್ರಪ್ರಥಮವಾಗಿ ಕಂಡವನು. ಇತರರು ಕೇವಲ ದರ್ಶನ ಮಾಡಿದರು. ॥8॥ ಈ ಹಿಂದೆಯೇ ತಿಳಿಸಿರುವಂತೆ ಅವನು ತನ್ನ ಕುದುರೆಯನ್ನು ಕಳೆದುಕೊಂಡು ಯಾವ ರೀತಿ ಸಾಯಿಯವರನ್ನು ಭೇಟಿ ಮಾಡಿದನು ಮತ್ತು ಯಾವ ರೀತಿ ಅವರು ಚಿಲುಮೆಯನ್ನು ಸೇದುವಂತೆ ಮಾಡಿ ಅವನಿಗೆ ಕುದುರೆ ದೊರೆಯಲು ಸಹಾಯ ಮಾಡಿದರು ಎಂಬುದನ್ನು ಈಗಾಗಲೇ ಹೇಳಿದೆ. ॥9॥ ಚಾಂದ್ ಭಾಯಿಯ ಹೆಂಡತಿಯ ಸೋದರಳಿಯನ ಮದುವೆಯಿತ್ತು ಮತ್ತು ಅವನಿಗೆ ಹೆಣ್ಣು ಶಿರಡಿಯವಳೆಂದು ವಿಧಿಬರಹವಿತ್ತು, ಆದ್ದರಿಂದ ಮದುವೆಯ ದಿಬ್ಬಣವು ಹುಡುಗಿಯ ಹಳ್ಳಿಗೆ ಬಂದಿತು. ॥10॥ ಈ ವಿಷಯದ ವಿವರವಾದ ಕಥೆಯನ್ನು ಪೂರ್ವದಲ್ಲೇ ಹೇಳಿರುವೆನು. ಆದರೂ ಪ್ರಸಂಗವಶಾತ್ ಅದನ್ನು ಸ್ಮರಿಸಿಕೊಂಡಿದ್ದೇನೆ. ಅದನ್ನು ಪುನರುಚ್ಚರಿಸುವ ಅವಶ್ಯಕತೆ ಈಗ ಇಲ್ಲ. ॥11॥ ಚಾಂದ್‌ಪಾಟೀಲನು ಕೇವಲ ನಿಮಿತ್ತಮಾತ್ರ, ಸಾಯಿಗೆ ತಮ್ಮ ಭಕ್ತರ ಉದ್ಧಾರದ ಚಿಂತೆಯು ಬಹುಮುಖ್ಯವಾಗಿತ್ತು. ಆದ್ದರಿಂದ ಅವರು ಈ ಅವತಾರವೆತ್ತಿದ್ದರು. ಮತ್ತು ತಾವಾಗಿಯೇ ಶಿರಡಿಗೆ ಬಂದಿದ್ದರು. ॥12॥ ಜಡರನ್ನು, ಮೂಢರನ್ನು, ಹೀನರನ್ನು, ದೀನರನ್ನು ವ್ರತ ಮತ್ತು ತಪಗಳ ಸಂಸ್ಕಾರವಿಹೀನರನ್ನು, ಸಾಧುಸ್ವಭಾವದವರನ್ನು ಮತ್ತು ಭಕ್ತಿಭಾವದಿಂದ ಕೂಡಿದವರನ್ನು ಸಾಯಿಯಲ್ಲದೆ ಮತ್ತಾರು ಉದ್ಧರಿಸಬಲ್ಲರು॥13॥ ಹದಿನೆಂಟನೆಯ ವಯಸ್ಸಿನಿಂದ ಸ್ವಯಂ ಏಕಾಂತದ ಜೀವನಕ್ಕೆ ರೂಢಿಮಾಡಿಕೊಂಡಿದ್ದರು. ರಾತ್ರಿಯಲ್ಲಿ ಅವರು ಎಲ್ಲಿಯಾದರೂ ನಿರ್ಭಯವಾಗಿ ಮಲಗುತ್ತಿದ್ದರು. ಅವರು ಸರ್ವತ್ರ ಈಶ್ವರಮಯ ಎಂಬುದನ್ನು ಅನುಭವಿಸುತ್ತಿದ್ದರು. ॥14॥ ಹಗಲಿನಲ್ಲಿ ಅವರು ಎಲ್ಲ ಕಡೆ ತಿರುಗಾಡುತ್ತಿದ್ದರು. ರಾತ್ರಿಯ ಹೊತ್ತಲ್ಲಿ ಅಲ್ಲೊಂದು ಹಳ್ಳವಿದ್ದ ಜಾಗ, ಈಗ ಹಳ್ಳಿಯವರ ಕಸದ ಗುಡ್ಡೆಯಾಗಿರುವ ಆ ಜಾಗದಲ್ಲಿ ಮಲಗುತ್ತಿದ್ದರು. ॥15॥ ಈ ರೀತಿ ಅನೇಕ ವರ್ಷಗಳು ಕಳೆದವು. ಹಳ್ಳದ ವಿಧಿಬರಹವು ಬದಲಾಗುವ ಕಾಲ ಬಂದಿತು. ಅದರ ಮೇಲೆ ಒಂದು ಭವ್ಯವಾದ ವಿಶಾಲವಾದ ಬಂಗಲೆಯು ಎದ್ದು ನಿಂತಿತು ದೀನದಯಾಳುವಾದ ಸಾಯಿಯದು. ॥16॥ ಕೊನೆಯಲ್ಲಿ ಆ ಹಳ್ಳವೇ ಪವಿತ್ರ ಸ್ಥಳವಾಯಿತು. ಅಲ್ಲಿ ಸಾಯಿಯವರ ಶರೀರಕ್ಕೆ ಚಿರಶಾಂತಿ ನೀಡಲಾಯಿತು. ಮತ್ತು ಅವರ ಸಮಾಧಿಯನ್ನು ಕಟ್ಟಲಾಯಿತು. ॥17॥ ಆ ಸಾಯಿಸಮರ್ಥರು, ದೀನ ವತ್ಸಲರು ದುಸ್ತರವಾದ ಈ ಭವಸಾಗರವನ್ನು ದಾಟಿಸುವ ಸಲುವಾಗಿಯೇ ತಮ್ಮ ಚರಿತ್ರೆಯೆಂಬ ನೌಕೆಯನ್ನು ಯಥಾರ್ಥವಾಗಿ ಭಕ್ತಜನರ ಹಿತಕ್ಕಾಗಿಯೇ ನಿರ್ಮಿಸಿದ್ದಾರೆ. ॥18॥ ಈ ಸಂಸಾರವೆಂಬ ನದಿಯು ದಾಟಲು ಮಹಾ ದುಸ್ತರವಾಗಿದೆ. ಮತ್ತು ಭಕ್ತ ಪರಿವಾರದವರು ಕುರುಡರು ಮತ್ತು ಕುಂಟರಾಗಿರುವ ತಮ್ಮ ಭಕ್ತಪರಿವಾರದವರು ಇದನ್ನು ದಾಟಿ ಮತ್ತೊಂದು

ತೀರವನ್ನು ಹೇಗೆ ತಲಪುತ್ತಾರೆಂದು ತೀವ್ರ ಕಳಕಳಿಯಿಂದ ಚಿಂತಿಸುತ್ತಾರೆ. ॥19॥ ನಾವೆಲ್ಲರೂ ಭವಸಾಗರವನ್ನು ದಾಟುವುದು ಅವಶ್ಯಕ. ಅದಕ್ಕಾಗಿ ಅಂತಃಕರಣವಿರಬೇಕು. ಚಿತ್ತಶುದ್ಧಿಗಾಗಿ ಭಗವದ್ಭಜನೆಯೇ ತಳಹದಿ ಹಾಗೂ ಮುಖ್ಯ ಸಾಧನ. ॥20॥ ಅವರ ಕಥೆಗಳನ್ನು ಕೇಳುವುದಕ್ಕಿಂತ ಮಿಗಿಲಾದ ಭಕ್ತಿ ಮತ್ತೊಂದಿಲ್ಲ. ಆಲಿಸುತ್ತಲೇ ಸಹಜವಾಗಿಯೇ ಗುರುಚರಣಗಳಲ್ಲಿ ಆಸಕ್ತಿಯು ಉಂಟಾಗುತ್ತದೆ. ಅದರಿಂದ ನಿರ್ಮಲವಾದ ಶುದ್ಧವಾದ ಮತಿಯು ಉಂಟಾಗಿ ಪರಮಾರ್ಥವು ಉತ್ಪತ್ತಿಯಾಗುತ್ತದೆ. ॥21॥ ಸಾಯಿಯವರ ಅಸಂಖ್ಯಾತ ಚರಿತ್ರೆಗಳನ್ನು ಹೇಳುತ್ತ ಹೋದಲ್ಲಿ ಅದು ಒಂದು ದೊಡ್ಡ ಗ್ರಂಥವಾಗುತ್ತದೆ. ಅವುಗಳನ್ನು ಸಂಕ್ಷಿಪ್ತವಾಗಿ ವಿವರಿಸಲು ನಿಶ್ಚಯಿಸಿದರೂ ಸಹ ಅದನ್ನು ಸಂಕಲಿತವನ್ನಾಗಿ ಮಾಡಲು ಅಸಾಧ್ಯ. ॥22॥ ಶ್ರೋತೃಗಳ ಇಚ್ಛೆಯು ಅವುಗಳನ್ನು ಕೇಳಲು ಹೆಚ್ಚುತ್ತಿರುವ ಹಾಗೆಯೇ ಅವುಗಳನ್ನು ನಿರೂಪಣೆಮಾಡಲು ನನ್ನ ಆಶೆಯೂ ಹೆಚ್ಚುತ್ತಿದೆ. ನಾವು ಪರಸ್ಪರ ನಮ್ಮ ಇಚ್ಛೆಗಳನ್ನು ಪೂರೈಸಿಕೊಂಡು ನಮ್ಮ ಸ್ವಹಿತವನ್ನು ಸಾಧಿಸೋಣ. ॥23॥ ಸಾಯಿ ಮಾತ್ರವೇ ನಾವಿಕರು. ಮನದ ಏಕಾಗ್ರತೆಯೇ ನೌಕೆಯು. ಶ್ರದ್ಧೆ ಮತ್ತು ಗೌರವಗಳಿಂದ ಈ ಕಥೆಗಳನ್ನು ಕೇಳುವುದರಿಂದ ಅವರನ್ನು ಮತ್ತೊಂದು ದಡಕ್ಕೆ ಸ್ವಲ್ಪವೂ ತಡಮಾಡದೆ ಕರೆದುಕೊಂಡು ಹೋಗುತ್ತದೆ. ॥24॥ ಹಿಂದಿನ ಅಧ್ಯಾಯದಲ್ಲಿ ಹಂಡೆಯ ವರ್ಣನೆಯನ್ನು ಸಂಕ್ಷಿಪ್ತವಾಗಿ ಮಾಡಿದ್ದೆ. ಜೊತೆಗೆ ಚಾಂದೋರಕರನ ದತ್ತ ಭಕ್ತಿ ದೃಢವಾದ ಬಗೆ ಮತ್ತು ನೈವೇದ್ಯವನ್ನು ಹಂಚಿ ಭಕ್ತರ ಇಷ್ಟಾರ್ಥಗಳನ್ನು ಪೂರೈಸಿದುದು ಸಹ ಇದೆ. ॥25॥ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಅದರ ಮುಂದಿನ ಅಧ್ಯಾಯದ ವಿಷಯದ ಬಗ್ಗೆ ಸುಳಿವು ಕೊಡುತ್ತಿದ್ದೆ. ಓದುತ್ತಿರುವ ತಮಗೆಲ್ಲರಿಗೂ ಇದು ತಿಳಿದ ವಿಚಾರ. ॥26॥ ಆದರೆ, ನಂತರ ನನಗೆ ಹಿಂದಿನ ಅಧ್ಯಾಯವನ್ನು ಮುಗಿಸಿದಾಗ ಮುಂದಿನ ಅಧ್ಯಾಯದ ವಿಷಯದ ಬಗ್ಗೆ ಯಾವುದೇ ಕಲ್ಪನೆಯೂ ಇರುತ್ತಿರಲಿಲ್ಲ. ಸಾಯಿಯವರು ಮುಂದೆ ಯಾವುದನ್ನು ನೆನಪಿಸಿಕೊಡುವರೋ ಅದನ್ನೇ ಹೇಳುತ್ತೇನೆ, ಎಂದು ತಿಳಿಸಿದೆ. ॥27॥ ನಾನು ಸ್ಪಷ್ಟವಾಗಿ ತಿಳಿಸಿದ ರೀತಿಯಲ್ಲಿ, ಈಗ ಸಾಯಿಯ ಕೃಪೆಯಿಂದ ಯಾವುದು ನೆನಪಿಗೆ ಬರುವುದೋ ಅದನ್ನು ಶ್ರೋತೃಗಳಿಗೆ ತಿಳಿಸುತ್ತೇನೆ ಅದನ್ನು ಆದರ ಪೂರ್ವಕವಾಗಿ ನಿಮ್ಮ ಮುಂದಿಡುತ್ತೇನೆ. ॥28॥ ಆದುದರಿಂದ, ಶ್ರೋತೃಗಳು ತಮ್ಮೆಲ್ಲ ಕಷ್ಟಗಳನ್ನು ದೂರಸರಿಸಿ ಶಾಂತ ಮನಸ್ಸಿನಿಂದ ಗಮನ ನೀಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಅದರಿಂದ ಅವರಿಗೇ ಆನಂದ ಉಂಟಾಗುತ್ತದೆ. ॥29॥ ಒಮ್ಮೆ ಸದ್ಭಕ್ತನಾದ ಚಾಂದೋರಕರನು ಮಸೀದಿಯಲ್ಲಿ ಕುಳಿತಿದ್ದನು. ಬಾಬಾರವರ ಪಾದಗಳನ್ನು ಒತ್ತುತ್ತ ಬಾಯಲ್ಲಿ ಭಗವದ್ಗೀತೆಯನ್ನು ಗುನಗುನಿಸುತ್ತಿದ್ದನು. ॥30॥ ಅವನಿಗೆ ಭಗವದ್ಗೀತೆಯ ನಾಲ್ಕನೆಯ ಅಧ್ಯಾಯವು ಬಾಯಿಪಾಠವಾಗಿತ್ತು. ಅದನ್ನು ಅಭ್ಯಾಸಬಲದಿಂದ ಆಗಾಗ್ಗೆ ಪುನರುಚ್ಚರಿಸುತ್ತಿದ್ದನು. ಅವನ ಕೈಗಳು ಸಾಯಿಯ ಚರಣಗಳನ್ನು ಒತ್ತುತ್ತಿದ್ದವು. ಆಗ ಅದೆಂತಹ ವಿಚಿತ್ರ ನಡೆಯಿತು ಎಂಬುದನ್ನು ನೋಡಿ. ॥31॥ ಸಾಯಿಸಮರ್ಥರಿಗೆ ಎಲ್ಲದರ ಜ್ಞಾನವಿತ್ತು. ಭೂತ, ಭವಿಷ್ಯತ್ ಮತ್ತು

ವರ್ತಮಾನ ಇವೆಲ್ಲದರ ಅರಿವಿತ್ತು. ಗೀತೆಯ ಅರ್ಥವನ್ನು ನಾನಾನಿಗೆ ವಿವರಿಸುವ ಇಚ್ಛೆ ಅವರಿಗೆ ಆಯಿತು. ॥32॥ ಅದು ಜ್ಞಾನ ಮತ್ತು ಕರ್ಮ ಸನ್ಯಾಸದಲ್ಲಿ ಬ್ರಹ್ಮಾರ್ಪಣ ಯೋಗವೆಂಬ ಅಧ್ಯಾಯವಾಗಿತ್ತು. ನಾನಾನು ಅಸ್ಪಷ್ಟವಾಗಿ ಗುನಗುನಿಸುತ್ತಿದ್ದುದು ಈ ಪ್ರಶ್ನೆಗೆ ಕಾರಣವಾಯಿತು. ॥33॥ "ಇವೆಲ್ಲವೂ ಜ್ಞಾನದಲ್ಲಿ ಅಂತ್ಯವಾಗುತ್ತದೆ. ಪಾರ್ಥ!" ಯಾವಾಗ ಮೂವತ್ತು ಮೂರನೆಯ ಶ್ಲೋಕವು ಪರಿಸಮಾಪ್ತಿಯಾಯಿತೋ ಅಲ್ಲಿಂದ ಮುಂದಿನ ಶ್ಲೋಕವು ಪ್ರಾರಂಭವಾಗುತ್ತದೆ. "ದೀರ್ಘವಾದ ನಮಸ್ಕಾರದಿಂದ . . . .." ॥34॥ ಯಾವಾಗ ಮೂವತ್ತನಾಲ್ಕನೆಯ ಶ್ಲೋಕ ಪ್ರಾರಂಭವಾಯಿತೋ ಆಗ ನಾನಾನ ಪುನರುಚ್ಚರಣೆಯು ನಿಂತಿತು. ಬಾಬಾರವರು ಒಂದು ಪ್ರಶ್ನೆ ಕೇಳಿ ನಾನಾಗೆ ನಿಜಬೋಧೆಯನ್ನು ತಿಳಿಸಲು ನಿಶ್ಚಯಿಸಿದರು. ॥35॥ ಅವರು ಹೇಳಿದರು, "ನಾನಾ, ನೀನು ಏನನ್ನು ಗುನಗುನಿಸುತ್ತಿರುವೆ? ನಿಧಾನವಾಗಿ ಮತ್ತು ಸ್ಪಷ್ಟವಾಗಿ ಅದನ್ನು ಹೇಳು. ಅದರಿಂದ ನೀನು ಗುನಗುನಿಸುತ್ತಿರುವುದನ್ನು ನಾನು ಸ್ಪಷ್ಟವಾಗಿ ಕೇಳಬಹುದು." ॥36॥ ಅವನಿಗೆ ಪಠನ ಮಾಡಲು ಹೇಳಿದಾಗ, ಆ ಆಜ್ಞೆಯನ್ನು ಪರಿಪಾಲಿಸಲು ಅವನು ಶ್ಲೋಕದ ಎಲ್ಲ ನಾಲ್ಕು ಪಾದಗಳನ್ನೂ ಉಚ್ಚರಿಸಿದನು. ಅನಂತರ ಬಾಬಾರವರು ಅವನಿಗೆ ಎಲ್ಲ ಅರ್ಥವನ್ನು ಸ್ಪಷ್ಟವಾಗಿ ವಿವರಿಸಲು ಹೇಳಿದರು. ॥37॥ ಅನಂತರ, ನಾನಾ ಅತ್ಯಂತ ವಿನೀತನಾಗಿ ಬದ್ಧಾಂಜಲಿ ಪೂರ್ವಕವಾಗಿ ಸಂತೋಷದಿಂದ ಮಧುರವಾದ ಸ್ವರದಿಂದ ಪ್ರತ್ಯುತ್ತರ ನೀಡಿದನು. ಭಗವಂತನು (ಕೃಷ್ಣ) ಯಾವುದನ್ನು ಹೇಳಬೇಕೆಂದಿದ್ದನೋ ಅದನ್ನು ವಿವರಿಸಿದನು. ॥38॥ ಈಗ, ಪ್ರತಿಯೊಬ್ಬರೂ ಸಾಯಿ ಮತ್ತು ನಾನಾ ಇಬ್ಬರ ಮಧ್ಯೆ ನಡೆದ ಸಂವಾದವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಉದ್ದೇಶದಿಂದ, ಗೀತೆಯಲ್ಲಿರುವ ಮೂಲ ಶ್ಲೋಕವನ್ನು ಅಕ್ಷರಶಃ ತೆಗೆದುಕೊಳ್ಳೋಣ. ॥39॥ ಈ ಪ್ರಶ್ನೆಗೆ ಸರಿಯಾದ ಅರ್ಥವನ್ನು ತಿಳಿದುಕೊಳ್ಳಲು ಹಾಗೂ ಸಂತರ ಮನಸ್ಸನ್ನು ಅರಿಯಲು ಈ ಪರಿಪಾಠವನ್ನು ಅನುಸರಿಸಬೇಕು. ಅದರಿಂದಾಗಿ ಅರ್ಥವು ಸ್ಪಷ್ಟವಾಗಿ ಸಂದೇಹಗಳು ದೂರವಾಗುತ್ತವೆ. ॥40॥ ಅದೂ ಅಲ್ಲದೆ, ಸಂಸ್ಕೃತ ಭಾಷೆಯು ಅತ್ಯಂತ ದುರ್ಗಮವಾದುದು. ಈ ರೀತಿಯ ಗಹನವಾದ ಪ್ರಶ್ನೆಗಳನ್ನು ಕೇಳಲು ಸಾಯಿಗೆ ಅದು ಹೇಗೆ ಸುಲಭವಾಗಿ ಗೋಚರವಾಯಿತು? ಸಂತರ ಜ್ಞಾನವು ಅಗಮ್ಯವಾದುದು. ॥41॥ ಅವರು ಸಂಸ್ಕೃತವನ್ನು ಯಾವಾಗ ಅಧ್ಯಯನ ಮಾಡಿದರು? ಅವರು ಗೀತೆಯನ್ನು ಯಾವಾಗ ಓದಿದರು? ಯಾರಿಗೂ ಗೊತ್ತಿಲ್ಲ! ಆದರೂ ಅವರು ಗೀತೆಯ ಅಂತರಾರ್ಥವನ್ನು, ಒಬ್ಬ ಜ್ಞಾನಿಯು ಪ್ರಶ್ನಿಸುವ ರೀತಿಯಲ್ಲಿ ಪ್ರಶ್ನಿಸಿದರು. ॥42॥ ಶ್ರೋತೃಗಳ ತೃಪ್ತಿಗಾಗಿ ಮತ್ತು ಅವರಿಗೆ ಮೂಲ ಶ್ಲೋಕದ ಬಗೆಗಿನ ಕಲ್ಪನೆಗಾಗಿ ನಾನು ಶ್ರೀಕೃಷ್ಣನ ಪದಗಳನ್ನೇ ಹೇಳುತ್ತೇನೆ. ಅದರಿಂದಾಗಿ ಚರ್ಚೆಗೆ ಬಹಳ ಅನುಕೂಲವಾಗುತ್ತದೆ. ॥43॥ 'ತದ್ವಿದ್ಧಿ ಪ್ರಣಿಪಾತೇನ, ಪರಿಪ್ರಶ್ನೇನ ಸೇವಯಾ ಉಪದೇಕ್ಷ್ಯಂತಿ ತೇ ಜ್ಞಾನಂ, ಜ್ಞಾನಿನಸ್ತತ್ತ್ವದರ್ಶಿನಃ" ॥44॥ ಇದು ಗೀತೆಯ ಮೂಲ ಶ್ಲೋಕ. ಭಾಷೆಗನುಗುಣವಾಗಿ ಅರ್ಥವನ್ನು ನೋಡಿ. ಅದರ ಮೇಲೆ ಅಸಂಖ್ಯಾತ ಟೀಕೆಗಳು ಇವೆ ಮತ್ತು ಅವುಗಳು ಅದರ

ಅರ್ಥಕ್ಕೆ ಅನುಗುಣವಾಗಿರುತ್ತವೆ. ॥45॥ ನಾನಾನು ಅತ್ಯಂತ ಪರಿಣತಿ ಪಡೆದಿದ್ದನು. ಅವನು ಆ ಶ್ಲೋಕದ ಅರ್ಥವನ್ನು ಪ್ರತಿಪದಾರ್ಥದೊಡನೆ ಯಥಾವತ್ತಾಗಿ ವಿವರಿಸಲು ಪ್ರಾರಂಭಿಸಿದನು. ॥46॥ ನಾನಾನು ಮಧುರವಾದ ಮಂಜುಳ ವಾಣಿಯಿಂದ ವಿನಯಪೂರ್ವಕವಾಗಿ ಪದಗಳ ಅನ್ವಯಾರ್ಥ, ಶ್ಲೋಕಾರ್ಥಗಳನ್ನು ನಿವೇದಿಸಲು ಪ್ರಾರಂಭಿಸಿದನು. ॥47॥ ಅವನು ಹೇಳಿದನು, "ಗುರುವಿನ ಚರಣಗಳಲ್ಲಿ ನಮಸ್ಕರಿಸುವವನು, ಗುರುಸೇವೆಯಲ್ಲಿ ಜೀವಿತವನ್ನು ಸವೆಸುವವನು, ಮತ್ತು ಆದರಪೂರ್ವಕವಾಗಿ ಗುರುವನ್ನು ಪ್ರಶ್ನಿಸುವವನಿಗೆ ಜ್ಞಾನಿಯು ಜ್ಞಾನದ ಉಪದೇಶವನ್ನು ಮಾಡುವನು. ॥48॥ ಸಾರಾಂಶದಲ್ಲಿ, ಕೃಪಾಮೂರ್ತಿಯಾದ ಶ್ರೀಕೃಷ್ಣನು ಅರ್ಜುನನಿಗೆ ಪ್ರೇಮದಿಂದ ಹೇಳಿದುದೇನೆಂದರೆ, ಗುರುಸೇವೆ ಮತ್ತು ಗುರುವಿನ ಪ್ರಣಾಮ ಇವೆರಡೂ ನಿಜವಾದ ಜ್ಞಾನವನ್ನು ಪಡೆಯಲು ಅತ್ಯವಶ್ಯಕವಾಗಿರುತ್ತವೆ. ॥49॥ "ಅರ್ಜುನ, ನೀನು ಈ ಮಾರ್ಗವನ್ನು ಅನುಸರಿಸಿದಲ್ಲಿ ತತ್ತ್ವದರ್ಶಿಗಳಾದ ಜ್ಞಾನಿಗಳು ಜ್ಞಾನದ ಮಾರ್ಗವನ್ನು ತೋರಿಸುತ್ತಾರೆ. ಬಾಬಾ. ನನಗೆ ಗೊತ್ತಿರುವ ಅರ್ಥ ಇಷ್ಟೇ." ॥50॥ ಶಂಕರಭಾಷ್ಯದ ಮೇಲಿನ ಆನಂದಗಿರಿ[1]ಯವರ ವ್ಯಾಖ್ಯಾನ, ಶಂಕರಾನಂದ ಮತ್ತು ಶ್ರೀಧರವರ ವ್ಯಾಖ್ಯಾನ ಹಾಗೂ ನೀಲಕಂಠ ಆಧಾರಿತ ಮಧುಸೂದನರ ವ್ಯಾಖ್ಯಾನ – ಇವೆಲ್ಲವೂ ಭಗವಂತನು ದಯಪಾಲಿಸಿದ ಉಪದೇಶವಾಕ್ಯಗಳೇ. ॥51॥ ಸಾಯಿಸಮರ್ಥರು ಮೊದಲ ಎರಡು ಚರಣಗಳ ಅರ್ಥವನ್ನು ಒಪ್ಪಿಕೊಂಡರು. ಆದರೆ ಮುಂದಿನ ಅರ್ಧಶ್ಲೋಕದ ಅರ್ಥದ ಬಗ್ಗೆ ಸಾಯಿಯು ಏನು ಹೇಳಿದರೆಂಬುದನ್ನು ಕೇಳಿರಿ. ॥52॥ ಇತರ ಭಕ್ತರು ಚಕೋರಪಕ್ಷಿಗಳ ಗಣದಂತೆ ಕಾತರರಾಗಿ ಸಾಯಿಯ ಮುಖಕಮಲವನ್ನು ನೋಡುತ್ತ ಅಮೃತ ಜೋಗಳನ್ನು ಸೇವಿಸಲು ಬಾಯಿಬಿಟ್ಟು ವಿಸ್ಮಯಾಕುಲರಾಗಿ ನಿಂತರು. ॥53॥ ಅವರು ಹೇಳಿದರು, "ನಾನಾ, ಮೂರನೆಯ ಚರಣವನ್ನು ಮತ್ತೆ ತೆಗೆದುಕೋ. 'ಜ್ಞಾನ' ಶಬ್ದಕ್ಕೆ ಮೊದಲು ಅನಿಶ್ಚಿತತೆಯ ಕುರುಹು ಇದೆ. ಅದರ ಅರ್ಥವನ್ನು ವಿವರಿಸು. ॥54॥ "ನಾನೇನಾದರೂ ಅದರ ವಿರುದ್ಧವಾದುದನ್ನುಹೇಳಿದೆನೇ? ಅದರ ನಿಜವಾದ ಅರ್ಥವನ್ನು ಅನರ್ಥವನ್ನಾಗಿ ಮಾಡಿದೆನೇನು? ಈ ಹಿಂದಿನ ಭಾಷ್ಯಗಳು ಅಸತ್ಯವೇನು? ಅನವಶ್ಯಕವಾಗಿ ಅವುಗಳನ್ನುನಂಬಬೇಡ. ॥55॥ "ನೀವು ಜ್ಞಾನಿ ಮತ್ತು ತತ್ತ್ವದರ್ಶಿಗಳು. ಜ್ಞಾನದ ಉಪದೇಶ ನೀಡುತ್ತಾರೆ ಎಂಬ ಜಾಗದಲ್ಲಿ ಅಜ್ಞಾನ ಎಂಬ ಪದವನ್ನು ಉಪಯೋಗಿಸಿದಲ್ಲಿ ನಿಮಗೆ ಅದರ ಯಥಾರ್ಥವು ದೊರಕುತ್ತದೆ. ॥56॥ "ಜ್ಞಾನ ಎನ್ನುವುದು ಪದಗಳ ವಿಷಯವಲ್ಲ. ಅದನ್ನು ಬೋಧಿಸಲು ಹೇಗೆ ಸಾಧ್ಯ? ಆದುದರಿಂದ 'ಜ್ಞಾನ' ಪದದ ವಿರುದ್ಧ ಪದವನ್ನು ಬಳಸಿದಲ್ಲಿ ಅದನ್ನು ಪ್ರತಿ ಹೆಜ್ಜೆಯಲ್ಲಿಯೂ ಅನುಭವಿಸಬಹುದು. ॥57॥ "'ಜ್ಞಾನ' ಎಂಬ ಪದವನ್ನು ಉಪಯೋಗಿಸಿ ನೀನು ನೀಡಿರುವ ಅರ್ಥವನ್ನು ಕೇಳಿದ್ದೇನೆ. ಅದನ್ನು 'ಅಜ್ಞಾನ' ಎಂದು ತೆಗೆದುಕೊಂಡರೆ ಆಗುವ ನಷ್ಟವೇನು? 'ಅಜ್ಞಾನ' ಎಂಬ ಶಬ್ದವು ಚರ್ಚಿಸಬಹುದಾದಂತಹ ಶಬ್ದವು. ಆದರೆ ಜ್ಞಾನ ಎನ್ನುವುದು ಶಬ್ದಾತೀತವಾದುದು. ॥58॥ "ಗರ್ಭದಲ್ಲಿ ಭ್ರೂಣವನ್ನು ಪೊರೆ ಸುತ್ತಿರುವಂತೆ

ಅಥವಾ ಕನ್ನಡಿಯನ್ನು ಧೂಳು ಮುಚ್ಚಿರುವಂತೆ ಅಥವಾ ಕೆಂಡವನ್ನು ಬೂದಿಯು ಮುಚ್ಚಿರುವಂತೆ, ಅಜ್ಞಾನವು ಜ್ಞಾನವನ್ನು ಆವರಿಸಿರುತ್ತದೆ. ॥59॥ "ಗೀತೆಯಲ್ಲಿ[2] ಭಗವಂತನು ಹೇಳಿದ್ದಾನೆ, 'ಜ್ಞಾನವನ್ನು ಅಜ್ಞಾನವು ಆವರಿಸಿದೆ. ಆದ್ದರಿಂದ ಅಜ್ಞಾನವನ್ನು ತೆಗೆದಲ್ಲಿ ಜ್ಞಾನವು ಸ್ವಭಾವತಃ ತಾನೇ ಪ್ರಕಾಶಿಸುತ್ತದೆ. ॥60॥ "ಜ್ಞಾನವು ಸ್ವತಃ ಸಿದ್ಧವಾಗಿ ಪರಿಶುದ್ಧ ಹೊಳಪಿನಿಂದ ತನಗೆ ತಾನೇ ಪ್ರಕಾಶಿಸುತ್ತದೆ. ಅತಿ ಪರಿಶುದ್ಧವಾದ ನೀರು ಪಾಚಿಯಿಂದ ಆವೃತವಾದಂತಿರುತ್ತದೆ. ಬುದ್ಧಿವಂತನು ಈ ಪಾಚಿಯನ್ನು ದೂರ ಸರಿಸಿ ಪರಿಶುದ್ಧವಾದ ನೀರನ್ನು ತೆಗೆದುಕೊಳ್ಳುತ್ತಾನೆ. ॥61॥ "ಚಂದ್ರ–ಸೂರ್ಯರು ಗ್ರಹಣದಿಂದಾಗಿ ಮರೆಯಾಗಿದ್ದರೂ ಸರ್ವದಾ ಪ್ರಕಾಶಮಾನವಾಗಿರುತ್ತಾರೆ. ಕೇವಲ ರಾಹು–ಕೇತು ಗ್ರಹಗಳು ನಮ್ಮ ದೃಷ್ಟಿಗೆ ಅಡ್ಡ ಬಂದು, ಸೂರ್ಯ–ಚಂದ್ರರು ನೋಟಕ್ಕೆ ಮರೆಯಾಗುತ್ತಾರೆ. ॥62॥ "ಚಂದ್ರ–ಸೂರ್ಯರಿಗೆ ಯಾವುದೂ ಅಡೆತಡೆಗಳಿಲ್ಲ. ಕೇವಲ ನಮ್ಮ ದೃಷ್ಟಿಯು ಮಾತ್ರ ಪ್ರಭಾವಿತವಾಗಿರುತ್ತದೆ. ಅದೇ ರೀತಿ ಜ್ಞಾನಕ್ಕೆ ಯಾವ ನಿರ್ಬಂಧವೂ ಇಲ್ಲ. ಅದು ಸ್ವಸ್ಥಾನದಲ್ಲಿಯೇ ಸ್ವಯಂಸಿದ್ಧವಾಗಿದೆ. ॥63॥ "ಕಣ್ಣುಗಳ ಅಂತರ್ದೃಷ್ಟಿಯ ಶಕ್ತಿಯೇ ಜ್ಞಾನ. ಅದರ ಮೇಲಿರುವ ತೆಳುವಾದ ಲೇಪ ಅಥವಾ ಪರದೆಯು ಯಾವುದು ಹೆಚ್ಚಾಗುತ್ತದೆಯೋ ಅದೇ ಅಜ್ಞಾನ. ಅದನ್ನು ಸರಿಸುವ ಅವಶ್ಯಕತೆಯಿದೆ. ॥64॥ "ಆ ಪರದೆ ಅಥವಾ ತೆಳುವಾದ ಪರೆಯನ್ನು ಹಸ್ತಕೌಶಲದಿಂದ ದೂಡಬೇಕು. ಮತ್ತು ಅಂತರ್ದೃಷ್ಟಿಯ ಶಕ್ತಿಯು ಪ್ರಕಟಗೊಳ್ಳಲು ಅಜ್ಞಾನವೆಂಬ ಕತ್ತಲೆಯನ್ನು ಹೊಡೆದೋಡಿಸಬೇಕು. ॥65॥ "ನೋಡಿ, ಕಣ್ಣಿಗೆ ಗೋಚರಿಸುವ ಇಡೀ ವಿಶ್ವವೇ ಮಾಯೆಯಿಂದ ವಿಜೃಂಭಿತವಾಗಿ ಅನಿರ್ವಚನೀಯವಾಗಿ ಕಾಣುತ್ತದೆ. ಇದೇ ಮಾಯೆಯು ಅನಾದಿ, ಅವಿದ್ಯಾ, ಅವ್ಯಕ್ತ ಮತ್ತು ಅಜ್ಞಾನದಿಂದ ಕೂಡಿರುವುದು. ಈ ಅಜ್ಞಾನದಿಂದಲೇ ಇದು ರೂಪುಗೊಂಡಿದೆ. ॥66॥ "ಜ್ಞಾನ ಎನ್ನುವುದನ್ನು ಅರಿಯಬೇಕು. ಮತ್ತು ಅದು ಉಪದೇಶ ಮಾಡುವ ವಿಷಯದಲ್ಲಿ ಗುರುವಿಗೆ ಪ್ರಣಾಮ ಮಾಡುವುದು, ಗೌರವಪೂರ್ವಕವಾಗಿ ಪ್ರಶ್ನಿಸುವುದು, ಮತ್ತು ಗುರುಸೇವೆ ಇವುಗಳು ಮಾತ್ರ ಗುರುಕೃಪೆಗೆ ಸಾಧನೆಗಳು. ॥67॥ "ಜಗತ್ತು ಸತ್ಯ ಎನ್ನುವುದೊಂದು ಮಹಾಭ್ರಮೆ. ಇದು ಜ್ಞಾನವನ್ನು ಆವರಿಸಿರುವ ಅಂಧಕಾರದ ಪರದೆ. ಇದನ್ನು ಮೊದಲು ಸರಿಸಬೇಕು. ಅದರ ನಂತರವೇ ಪ್ರಜ್ಞಾನ ಸ್ವರೂಪನಾದ ಪರಬ್ರಹ್ಮನು ಪ್ರಕಟಗೊಳ್ಳುತ್ತಾನೆ. ॥68॥ "ಸಂಸಾರಕ್ಕೆ ಮೂಲಕಾರಣವು ಅಜ್ಞಾನ. ಗುರುವಿನ ಕೃಪೆಯೆಂಬ ಅಂಜನವನ್ನು ಕಣ್ಣಿನಲ್ಲಿ ಹಾಕಿದಾಗ ಮಾಯೆಯ ಪರದೆಯು ದೂರವಾಗುತ್ತದೆ. ಮತ್ತು ಸ್ವಾಭಾವಿಕ ಜ್ಞಾನವು ಅಲ್ಲೇ ಇರುತ್ತದೆ. ॥69॥ "ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಹೊರನೋಟಕ್ಕೆ ಸ್ವಯಂ ಸಿದ್ಧವೆಂದು ತೋರುತ್ತದೆ. ಇದು ಆಗಮ, ನಿಗಮ ಇತ್ಯಾದಿ ವೇದಶಾಸ್ತ್ರಗಳಿಂದ ಪ್ರಸಿದ್ಧವಾಗಿರುತ್ತದೆ. ಜ್ಞಾನವನ್ನು ಪಡೆಯಲು ನಿಜವಾದ ಅಡ್ಡಿಯು ಅಜ್ಞಾನವೇ. ॥70॥ "ದೇವರಿಗೂ ಭಕ್ತರಿಗೂ ಮಧ್ಯೆ ಇರುವ ದ್ವೈತವೇ ನಿಜವಾಗಿಯೂ ಅತಿ ವಿಲಕ್ಷಣವಾದ ಅಜ್ಞಾನ. ಅಜ್ಞಾನವನ್ನು ದೂರಮಾಡಿದಾಗ ಉಳಿಯುವುದು ಪೂರ್ಣಜ್ಞಾನ. ॥71॥ "ಶುದ್ಧ ಸ್ವರೂಪದ ಜ್ಞಾನವೆಂಬ ಹಗ್ಗವನ್ನು,

ಅಜ್ಞಾನವು ಹಾವೆಂದು ತಪ್ಪು ಕಲ್ಪನೆಯನ್ನು ನೀಡುತ್ತದೆ. ಶುದ್ಧ ಸ್ವರೂಪದ ಬೋಧನೆಯಿಂದ ಅಜ್ಞಾನವನ್ನು ದೂರ ಸರಿಸಬಹುದು. ಆಗ ಜ್ಞಾನವೆಂಬ ಹಗ್ಗ ಮಾತ್ರ ಉಳಿಯುತ್ತದೆ. ॥72॥ "ಸುವರ್ಣವು ಕಸದೊಳಗೆ ಸೇರಿಕೊಂಡಿರುವಾಗ, ಆ ಕಸವನ್ನು ತೆಗೆದು ಹಾಕಿದಾಗ ಮಾತ್ರವೇ ಅದು ಲಕಲಕನೆ ಪ್ರಕಾಶಿಸುತ್ತದೆ. ಆದರೆ ಅದು ಈ ರೀತಿ ಪ್ರಕಾಶಿಸುವಂತಾಗಬೇಕಾದರೆ ಅದನ್ನು ಅಗ್ನಿಯ ಸಹಾಯದಿಂದ ಶುದ್ಧೀಕರಣ ಮಾಡುವ ಅವಶ್ಯಕತೆ ಇದೆ. ॥73॥ "ಈ ದೇಹದ ಜನನಕ್ಕೆ ಮಾಯೆಯೇ ಮೂಲಕಾರಣ. ಈ ದೇಹದ ಚಲನ ವಿಧಿಯ ಅಧೀನ. ದ್ವಂದ್ವ ಭಾವದ ಎಲ್ಲ ವಿಷಯವೂ ವಿಧಿಯಾಧೀನ. ದೇಹಾಭಿಮಾನವು ಅಜ್ಞಾನ. ॥74॥ ಆದುದರಿಂದ ಯಾರು ಸ್ವಯಂ ನಿರಭಿಮಾನಿಗಳಾಗಿರುವರೋ ಅವರನ್ನು ಸುಖ ದುಃಖಗಳೆಂದಿಗೂ ಬಾಧಿಸುವುದಿಲ್ಲ. ಯಾರು ಅಹಂಕಾರದ ಹಿಡಿತದಿಂದ ವಿರಕ್ತರಾಗಿದ್ದಾರೋ ಅವರು ಅಜ್ಞಾನವನ್ನು ದೂರಮಾಡಿರುತ್ತಾರೆ. ॥75॥ "ಎಲ್ಲಿ ಸ್ವಸ್ವರೂಪ ಕುರಿತ ಅಜ್ಞಾನವಿರುವುದೋ ಅದೇ ಮಾಯೆಯ ಜನ್ಮಸ್ಥಾನ. ಗುರುಕೃಪೆಯುಂಟಾದಾಗ ಮಾಯೆಯು ದೂರವಾಗುತ್ತದೆ. ಆಗ ಸ್ವರೂಪ ಜ್ಞಾನದ ಸ್ವಭಾವ ಪ್ರಕಟಗೊಳ್ಳುತ್ತದೆ. ॥76॥ "ಪ್ರತಿಯೊಬ್ಬರೂ ಭಗವದ್ಭಕ್ತಿಗಾಗಿ ಅಲ್ಲದೆ ಇತರ ದುರ್ಬಲಗೊಳಿಸುವ ಸಾಧನೆಗಳನ್ನು ಏಕೆ ಬಳಸಬೇಕು? ಸಾಕ್ಷಾತ್ ಬ್ರಹ್ಮದೇವನೂ ಸಹ ಮಾಯೆಯ ಅಧೀನ, ಮತ್ತು ಕೇವಲ ಭಕ್ತಿ ಮಾತ್ರವೇ ಅವನನ್ನು ಬಿಡುಗಡೆ ಮಾಡುತ್ತದೆ. ॥77॥ "ಬ್ರಹ್ಮಲೋಕವನ್ನು ಪಡೆದಿದ್ದರೂ ಸಹ ಭಕ್ತಿಯಿಲ್ಲದೆ ಅವನಿಗೆ ಮುಕ್ತಿಯಿಲ್ಲ. ಒಂದು ವೇಳೆ ಅಲ್ಲಿಯೂ ಭಗವದ್ಭಕ್ತಿಯನ್ನು ಮರೆತಲ್ಲಿ ಅವನು ಜನನ ಮರಣವೆಂಬ ಚಕ್ರವ್ಯೂಹದಲ್ಲಿ ಸಿಲುಕುತ್ತಾನೆ. ॥78॥ "ಆದುದರಿಂದ, ಮಾಯೆಯನ್ನು ದೂರಮಾಡಬೇಕಾದರೆ ಭಗವಂತನ ಭಜನೆಯೊಂದೇ ಉಪಾಯ. ಭಗವದ್ಭಕ್ತನಿಗೆ ಎಂದಿಗೂ ನಾಶವಿಲ್ಲ. ಮತ್ತು ಅವನು ಭವಬಂಧನಕ್ಕೆ ಎಂದಿಗೂ ಸಿಲುಕುವುದಿಲ್ಲ. ॥79॥"ಮಾಯೆಯು ಮಿಥ್ಯೆಯೆಂದು ಜನರು ಹೇಳುತ್ತಾರೆ. ಆದರೆ ಮಾಯೆಯು ಒಬ್ಬ ಮಾಟಗಾತಿ. ಜ್ಞಾನವನ್ನು ಸಹ ಸದಾ ತನ್ನ ಬಲೆಯಲ್ಲಿ ಸಿಕ್ಕಿಸಿರುತ್ತಾಳೆ. ಆದರೆ ಒಬ್ಬ ಭಕ್ತನು ಮಾತ್ರ ಮಾಯೆಯನ್ನು ತನ್ನ ಬೆರಳ ತುದಿಯಿಂದ ಕುಣಿಸಬಲ್ಲನು. ॥80॥ "ಎಲ್ಲಿ ಜ್ಞಾನಸಂಪನ್ನರೂ ಸಹ ಮೋಸ ಹೋಗುತ್ತಾರೋ, ಅಲ್ಲಿ ಭಕ್ತರು ಮಾಯೆಯನ್ನು ಸಹಿಸಬಲ್ಲರು. ಏಕೆಂದರೆ ಅವರು ಸದಾ ಕಾಲ ಹರಿಚರಣಗಳಲ್ಲಿ ಶರಣಾಗಿರುತ್ತಾರೆ. ಆದರೆ ಜ್ಞಾನಿಗಳು ತಮ್ಮ ಜ್ಞಾನದ ಅಭಿಮಾನಿಗಳಾಗಿರುತ್ತಾರೆ. ॥81॥ "ಆದುದರಿಂದ ಮಾಯೆಯನ್ನು ಸೋಲಿಸಲು, ಸದ್ಗುರುವಿನ ಚರಣಗಳನ್ನು ಆಶ್ರಯಿಸು. ಅವನಿಗೆ ಅನನ್ಯನಾಗಿ ಶರಣಾಗು. ಆ ಕೂಡಲೇ ಭವದ ಭಯವು ದೂರವಾಗುತ್ತದೆ. ॥82॥ "ಅವಶ್ಯವಾದ ಮರಣವು ಬೇಕಾದರೆ ಬರಲಿ. ಆದರೆ ಹರಿಯನ್ನು ಮಾತ್ರ ಮರೆಯಬೇಡ. ಇಂದ್ರಿಯಗಳು ತಮ್ಮ ಸ್ವಭಾವಕ್ಕನುಗುಣವಾಗಿ ವರ್ತಿಸಬಹುದು. ಆದರೆ ಚಿತ್ತವು ಮಾತ್ರ ಸದಾ ಹರಿಚರಣಗಳನ್ನು ಧ್ಯಾನಿಸುತ್ತಿರಲಿ. ॥83॥ "ಕುದುರೆಗಳನ್ನು ರಥಕ್ಕೆ ಕಟ್ಟುವ ಹಾಗೆ ಇಂದ್ರಿಯಗಳು ಶರೀರಕ್ಕೆ ಬಂಧಿಸಲ್ಪಟ್ಟು ಚಲಿಸುತ್ತವೆ. ಆದರೆ ನಿಮ್ಮ ಬುದ್ಧಿಶಕ್ತಿಯೆಂಬ ಕೈಗಳಿಂದ

ಮನಸ್ಸಿನ ಲಗಾಮನ್ನು ಬಿಗಿಯಾಗಿ ಹಿಡಿದುಕೊಂಡಿರಿ. ॥84॥ "ಸಂಕಲ್ಪ-ವಿಕಲ್ಪಗಳಿಂದ ತುಂಬಿರುವ ಮನಸ್ಸು, ಅಲ್ಲಿ ಇಲ್ಲಿ ಸ್ವೇಚ್ಛೆಯಾಗಿ ಓಡಾಡುತ್ತದೆ. ಕೇವಲ ಬುದ್ಧಿ ಮಾತ್ರ ತನ್ನದೇ ನಿಶ್ಚಯದಿಂದ ಮನಸ್ಸನ್ನು ನಿಗ್ರಹಿಸಬಲ್ಲದು. ಮತ್ತು ತನ್ನ ಸ್ವಂತ ಶಕ್ತಿಯಿಂದಲಗಾಮು ಹಿಡಿದು ನಡೆಸಬಲ್ಲದು. ॥85॥ "ಯಾವಾಗ ಒಬ್ಬ ಕುಶಲ ಒಡೆಯನಂತಹ ಬುದ್ಧಿಶಕ್ತಿಯು ಸಾರಥಿಯಾಗಿರುವಾಗ, ಅಂತಹ ರಥದ ಮಾಲಿಕನು ಏಕೆ ಚಿಂತಿಸಬೇಕು? ಅವನು ಎಲ್ಲ ವ್ಯವಹಾರವನ್ನು ಸ್ವಸ್ಥಚಿತ್ತನಾಗಿ ನಿರ್ವಹಿಸಬಹುದು. ॥86॥ "ಒಮ್ಮೆ ಮನಸ್ಸು ತನ್ನ ಎಲ್ಲ ಕಾರ್ಯಗಳನ್ನೂ ಬುದ್ಧಿಯ ಅಧೀನಕ್ಕೆ ಕೊಡುವ ರೂಢಿಯಾದಲ್ಲಿ, ಎಲ್ಲ ವ್ಯವಹಾರಗಳೂ ಹಿತಮಯವಾಗಿಯೇ ನಡೆಯುತ್ತವೆ. ॥87॥ "ಶಬ್ದ, ಸ್ಪರ್ಶ, ರೂಪ ಇತ್ಯಾದಿ ವಿಷಯಗಳನ್ನು ಇಂದ್ರಿಯಗಳು ಆನಂದಿಸಲು ಪ್ರಾರಂಭಿಸಿದರೆ ಶಕ್ತಿಯು ವ್ಯರ್ಥವಾಗಿ ಕ್ಷಯವಾಗುತ್ತದೆ ಮತ್ತು ಪ್ರತಿಹೆಜ್ಜೆಯಲ್ಲೂ ಪತನದ ಭಯವಿರುತ್ತದೆ. ॥88॥ "ಶಬ್ದ, ಸ್ಪರ್ಶ, ರೂಪ ಇತ್ಯಾದಿ ಪಂಚ ವಿಷಯಗಳಿಂದ ಯಾವ ಯಾವ ಸುಖಗಳು ದೊರೆಯುತ್ತವೆಯೋ ಅವೆಲ್ಲವೂ ಅಂತ್ಯದಲ್ಲಿ ಅಂತಹುದೇ ದುಃಖಗಳನ್ನು ಉಂಟುಮಾಡುತ್ತವೆ. ಅದರಲ್ಲೂ ಪರಮ ದುಃಖವೇ ಅಜ್ಞಾನ. ॥89॥ "ಶಬ್ದವೆಂಬ ವಿಷಯದಿಂದಾಗಿ ಜಿಂಕೆಯು ಮರಣ ಹೊಂದುತ್ತದೆ. ಆನೆಯು ತನ್ನ ಸ್ಪರ್ಶ ಸುಖದ ಆಸೆಯಿಂದಾಗಿ ಅದರಲ್ಲಿ ಬಂಧಿಸಲ್ಪಟ್ಟು ಅದಕ್ಕಾಗಿ ಅಂಕುಶದ ನೋವನ್ನು ಸಹಿಸಬೇಕಾಗುತ್ತದೆ.॥90॥ ಪ್ರಕಾಶದ ಸೌಂದರ್ಯಕ್ಕೆ ಮರುಳಾಗಿ, ಪತಂಗವು ತನ್ನ ದೇಹವನ್ನೇ ಸುಟ್ಟು ಜೀವವನ್ನು ಕಳೆದುಕೊಳ್ಳುತ್ತದೆ. ಮೀನು ತನ್ನ ಆಹಾರದ ರಸವನ್ನು ಆಸ್ವಾದಿಸುತ್ತ ತನ್ನ ಗಾಳದಲ್ಲಿ ಕೂಡಲೇ ಸಿಕ್ಕಿಕೊಂಡು ಪ್ರಾಣ ಕಳೆದುಕೊಳ್ಳುತ್ತದೆ. ॥91॥ "ದುಂಬಿಯು ಸುಗಂಧವನ್ನು ಆಘ್ರಾಣಿಸುತ್ತ ಕಮಲಕೋಶದಲ್ಲಿ ತಾನೇ ಬಂಧಿಯಾಗುತ್ತದೆ. ಕೇವಲ ಒಂದು ಇಂದ್ರಿಯದ ವಾಸನೆಯು ಇಷ್ಟು ಹಾನಿಯನ್ನು ಉಂಟುಮಾಡುವುದಾದರೆ ಐದು ಇಂದ್ರಿಯಗಳಲ್ಲಿ ಬಂಧಿಸಲ್ಪಡುವವನು ಅದೆಷ್ಟು ಭಯಂಕರವಾದ ಯುದ್ಧವನ್ನು ಎದುರಿಸಬೇಕು? ॥92॥ "ಇದು ಭೂಮಿಯ ಮೇಲಿರುವ ಪ್ರಾಣಿಗಳು, ಜಲಚರಗಳು ಮತ್ತು ಪಕ್ಷಿಗಳ ವಸ್ತುಸ್ಥಿತಿ. ಅವುಗಳ ದುಃಸ್ಥಿತಿಯನ್ನು ನೋಡಿಯೂ, ಜ್ಞಾನಿಯೂ ಸಹ ವಿಷಯ ಸುಖಗಳ ಹಿಂದೆ ಓಡುತ್ತಾನೆ. ಇದು ಅಜ್ಞಾನವಲ್ಲದೆ ಮತ್ತೇನು? ॥93॥ "ಅಜ್ಞಾನವನ್ನು ಹೋಗಲಾಡಿಸಿದಾಗ ವಿಷಯ (ಇಂದ್ರಿಯ ಸುಖ) ಗಳಿಂದ ವಿಮುಖನಾಗುತ್ತಾನೆ. ಅನಂತರ ಹರಿಯ ಧ್ಯಾನದಲ್ಲಿ ಉನ್ನತನಾಗುತ್ತಾನೆ. ಅವನು ಆತ್ಮಸಾಕ್ಷಾತ್ಕಾರದ ಸಾಧನೆಯಲ್ಲಿ ತನ್ನನ್ನೇ ತೊಡಗಿಸಿಕೊಂಡು ಅದರಲ್ಲೇ ಲೀನವಾಗಿ ಪರಮಾನಂದವನ್ನುಅನುಭವಿಸುತ್ತಾನೆ. ॥94॥ "ನಿನ್ನ ಬುದ್ಧಿಯು ಪರಬ್ರಹ್ಮಸ್ವರೂಪಿ ಗುರುಗಳನ್ನು ನೆನೆಯುತ್ತಾ ಧ್ಯಾನ ಮಾಡಲಿ. ನಿನ್ನ ಕಿವಿಗಳು ಅವರ ಚರಿತ್ರೆಗಳನ್ನು ಕೇಳಲಿ. ನಿನ್ನ ಮನಸ್ಸು ಅವರ ಮೇಲೆ ಧ್ಯಾನಾನುಸಂಧಾನಮಾಡಲಿ. ನಿನ್ನ ನಾಲಿಗೆಯು ನಾಮಸ್ಮರಣೆಯಲ್ಲಿ ತಲ್ಲೀನವಾಗಲಿ. ॥95॥ "ನಿನ್ನ ಚರಣಗಳು, ಗುರುವಿನ ನಿವಾಸದ ಕಡೆ ಚಲಿಸಲಿ, ನಿನ್ನ ಮೂಗು ಅವನಿಗೆ ಅರ್ಪಿಸಿದ ಹೂಗಳ ಸುಗಂಧವನ್ನು ಆಘ್ರಾಣಿಸಲಿ. ನಿನ್ನ ಕೈಗಳು ಅವನ ಚರಣಗಳಿಗೆವಂದಿಸಲಿ. ನಿನ್ನ ಕಣ್ಣುಗಳು

ಅವನ ದರ್ಶನ ಮಾಡಲಿ. ॥96॥ "ಈ ರೀತಿ ಎಲ್ಲ ಇಂದ್ರಿಯಗಳನ್ನೂ ಭಗವಂತನಿಗಾಗಿ ಪ್ರೀತಿಯಿಂದ ನಿಯಮಿಸಿದಲ್ಲಿ ಅಂತಹ ಭಕ್ತರ ಸ್ಥಿತಿಯು ಧನ್ಯ ಧನ್ಯ! ಭಗವದ್ಭಕ್ತಿಯು ಅದಲ್ಲದೆ ಮತ್ತೇನು? ॥97॥ "ಸಾರಾಂಶದಲ್ಲಿ, ಆ ಅಜ್ಞಾನವನ್ನು ಬೇರು ಸಮೇತ ತೆಗೆದು ಹಾಕಲಿ. ಮತ್ತೆ ಅಲ್ಲಿ ಉಳಿಯುವುದೇ ಸಿದ್ಧ ಜ್ಞಾನವೆಂದು ತಿಳಿ. ಈ ರೀತಿ ಈ ಶ್ಲೋಕಗಳಲ್ಲಿ ಈ ಉದ್ದೇಶವನ್ನು ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ವಿವರಿಸಿದ್ದಾನೆ." ॥98॥ ನಾನಾನು ಸಹಜವಾಗಿಯೇ ಅತಿ ವಿನಯಸಂಪನ್ನನಾಗಿದ್ದನು. ಇಂತಹ ಮಧುರವಾದ ನಿರೂಪಣೆಯನ್ನು ಕೇಳಿ ಅವನು ಬಾಬಾರವರ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿದನು. ಮತ್ತು ಅವುಗಳನ್ನು ತನ್ನ ಎರಡೂ ಕೈಗಳಿಂದ ಗಟ್ಟಿಯಾಗಿ ಅಪ್ಪಿ ಹಿಡಿದುಕೊಂಡನು. ॥99॥ ಅನಂತರ ಅವನು ಅತ್ಯಂತ ಶ್ರದ್ಧಾನಿಷ್ಠೆಯಿಂದ ಪ್ರಾರ್ಥಿಸಿದನು, "ನನ್ನ ಅಜ್ಞಾನವನ್ನು ದೂರಮಾಡಿ. ನನ್ನ ದುರಭಿಮಾನಕ್ಕಾಗಿ ಯಥಾರ್ಥವಾದ ಶಾಸನ ಮಾಡಿ ನನ್ನನ್ನು ದಂಡಿಸಿ. ॥100॥ "ನನ್ನ ಸಾತ್ವಿಕತೆಯು ಅತಿ ತೋರಿಕೆಯದು. ಆದರೆ ಪ್ರಶ್ನೆಗಳು ಮತ್ತು ಸಂದೇಹಗಳು ಅಂತರಂಗದಲ್ಲಿಯೇ ನನ್ನನ್ನು ಪೀಡಿಸುತ್ತಿವೆ. ನಾನು ಅಪಮಾನವನ್ನು ಕ್ಷಣಮಾತ್ರವೂ ತಡೆಯಲು ಸಾಧ್ಯವಿಲ್ಲ. ಇದು ಅಜ್ಞಾನವಲ್ಲದೆ ಮತ್ತೇನು? ॥101॥ "ಅಂತರಾಳದಲ್ಲಿ ನನಗೆ ಪ್ರತಿಷ್ಠೆಯ ಆಶೆ ತೀವ್ರವಾಗಿದೆ. ಆದರೆ ಹೊರನೋಟಕ್ಕೆ ಧ್ಯಾನ ಮತ್ತು ಅಧ್ಯಾತ್ಮದ ಕಡೆಗೆ ಒಲವು ತೋರಿಸುತ್ತಿದ್ದೇನೆ. ಕಾಮ ಮತ್ತು ಕ್ರೋಧಗಳು ಒಳಗೆಯೇ ಹೊಗೆಯಿಲ್ಲದೆ ಉರಿಯುತ್ತಿವೆ. ಇದು ಅಜ್ಞಾನವಲ್ಲದೆ ಮತ್ತೇನು? ॥102॥ "ಅಂತರಂಗದಲ್ಲಿ ನಾನು ಎಲ್ಲ ಪಾಪಕರ್ಮಗಳನ್ನೂ ಮಾಡುತ್ತಿರುವೆನು. ಆದರೆ ತೋರಿಕೆಗೆ ಬ್ರಹ್ಮನಿಷ್ಠೆಯನ್ನು ತೋರ್ಪಡಿಸುತ್ತಿರುವೆನು. ನಾನು ಅತ್ಯಂತ ಆಚಾರಹೀನ ಮತ್ತು ವಿಚಾರ ಭ್ರಷ್ಟ. ಇದಕ್ಕಿಂತ ಸ್ಪಷ್ಟವಾದ ಅಜ್ಞಾನ ಬೇರೆ ಯಾವುದಿದೆ? ॥103॥ "ಬಾಬಾ ಕೃಪಾಘನರು. ನನ್ನ ಮೇಲೆ ಕೃಪಾಜಲವನ್ನು ಸಿಂಪಡಿಸಿ,ಅಜ್ಞಾನವೆಂಬ ದಾವಾನಲವನ್ನು ಉಪಶಮನ ಮಾಡುತ್ತಾರೆ. ಅಷ್ಟರಮಟ್ಟಿಗೆ ನಾನು ಧನ್ಯನಾಗಿದ್ದೇನೆ. ॥104॥ "ಹೇ ಬಾಬಾ! ನನಗೆ ಜ್ಞಾನದ ಬಗ್ಗೆ ಯಾವ ಪ್ರವಚನವೂ ಬೇಡ. ನನ್ನ ಈ ಅಪರಿಮಿತವಾದ ಅಜ್ಞಾನವನ್ನು ತೆಗೆದುಹಾಕಿ. ನನ್ನ ಮೇಲೆ ನಿಮ್ಮ ಕೃಪಾದೃಷ್ಟಿಯನ್ನು ಸ್ಥಿರವಾಗಿ ಇಡಿ. ಅಷ್ಟರಿಂದ ನನಗೆ ಸುಖ ಶಾಂತಿಗಳು ದೊರಕುತ್ತವೆ." ॥105॥ ಸಪ್ರೇಮ ಮೂರ್ತಿ, ಕರುಣಾಘನನಾದ ಸಾಯಿಯು, ಈ ರೀತಿ ನಾನಾನನ್ನು ನಿಮಿತ್ತ ಮಾತ್ರನನ್ನಾಗಿ ಮಾಡಿ ಗೀತೆಯ ಮೇಲೆ ಪ್ರವಚನವನ್ನು ನನಗಾಗಿ ಮತ್ತು ನಿಮಗಾಗಿ ಮತ್ತು ಎಲ್ಲರಿಗಾಗಿ ಅನುಗ್ರಹಿಸಿದರು. ॥106॥ ಗೀತೆಯು ಭಗವಂತನ ವಚನಗಳು. ಆದುದರಿಂದ ಅದನ್ನು ಪ್ರತ್ಯಕ್ಷ ಶಾಸ್ತ್ರವೆಂದು ಪರಿಗಣಿಸಿರಿ. ಅದು ಕಾಲತ್ರಯಗಳಲ್ಲೂ ಪ್ರಮಾಣ ಮತ್ತು ಶಾಶ್ವತ. ಅದನ್ನು ಎಂದಿಗೂ ಅವಗಣನೆ ಮಾಡಬಾರದು. ॥107॥ ಆದರೆ ಅತ್ಯಂತ ವಿಷಯಾಸಕ್ತನಾದವನಿಗೆ ಅಥವಾ ನಿಜವಾಗಿಯೂ ಜೀವನ್ಮುಕ್ತನಾದವನಿಗೆ ಇಬ್ಬರಿಗೂ ಶಾಸ್ತ್ರಗಳಅರ್ಥಗಳೇನೂ ಬೇಕಾಗಿಲ್ಲ. ಅವು ಕೇವಲ ಮುಮುಕ್ಷುಗಳಿಗೆ ಅಂದರೆ ಮೋಕ್ಷ ಬಯಸುವವರಿಗೆ ಮಾತ್ರ ಉಪಯುಕ್ತವಾಗುತ್ತವೆ. ॥108॥ ಪೂರ್ಣವಾಗಿ ಇಂದ್ರಿಯಗಳ ಪಾಶಗಳಲ್ಲಿ

ದೃಢವಾಗಿ ಬಂಧಿತನಾಗಿರುವ ನಾನು ಯಾವಾಗ ಮುಕ್ತಿಯನ್ನು ಪಡೆದೇನು? ಈ ರೀತಿ ಹೇಳುತ್ತಿರುವ ಮುಮುಕ್ಷುಗಳನ್ನು ಶಾಸ್ತ್ರಗಳು ಭವಸಾಗರದಿಂದ ದಾಟಿಸುತ್ತವೆ. ॥109॥ ತನ್ನ ಭಕ್ತನನ್ನು ಈ ರೀತಿಯ ಸ್ಥಿತಿಯಲ್ಲಿ ನೋಡಿ ಯಾವಾಗ ಸಂತನು ಅವನ ಮೇಲೆ ಕಳಕಳಿ ತೋರಿಸಬಯಸುತ್ತಾನೋ ಆಗ ಯಾವುದಾದರೂ ನಿಮಿತ್ತವನ್ನು ಹುಡುಕಿ ಅದರಿಂದ ಉಪದೇಶವನ್ನು ಲೀಲಾಜಾಲವಾಗಿ ನೀಡುತ್ತಿದ್ದನು. ॥110॥ ನೋಡು, ದೇವರು ಅಥವಾ ಗುರು ಸದಾ ಭಕ್ತರ ಯೋಗಕ್ಷೇಮದ ಬಗ್ಗೇನೆ ಕಳಕಳಿ ತೋರಿಸುತ್ತಾರೆ. ಸದಾ ಭಕ್ತರ ಕಲ್ಯಾಣದ ಚಿಂತೆ ಮಾಡುತ್ತಿರುತ್ತಾರೆ. ಅವರು ಭಕ್ತರ ಎಲ್ಲ ಕಷ್ಟಗಳನ್ನೂ ತಮ್ಮ ಮೇಲೆಯೇ ತಂದುಕೊಳ್ಳುತ್ತಾರೆ. ॥111॥ ಈಗ ಮತ್ತೊಂದು ಸಣ್ಣ ನಿರೂಪಣೆ. ಅದು ಸಾಯಿಯ ಕೃಪೆ ಹರಿಸುವ ಬಗ್ಗೆ. ಯಾವ ರೀತಿ ಯಾವುದಾದರೂ ಒಂದು ಕೆಲಸವನ್ನು ಯಾವುದೇ ಗೊಂದಲವನ್ನುಂಟುಮಾಡದೆ ಮಾಡಿ ಪೂರೈಸುತ್ತಿದ್ದರು ಎಂಬುದರ ಬಗೆಗಿನ ವಿಷಯ. ॥112॥ ಯಾವುದೇ ಕೆಲಸ ಸಣ್ಣದಾಗಲಿ, ದೊಡ್ಡದಾಗಲಿ, ನಿಜವಾದ ಕಾರಣವನ್ನು ಮಾತ್ರ ಎಂದಿಗೂ ಪ್ರಕಟಿಸುತ್ತಿರಲಿಲ್ಲ. ಕೆಲಸವನ್ನು ಮಾತ್ರ ನಿಧಾನವಾಗಿ ಪೂರ್ಣಗೊಳಿಸುತ್ತಿದ್ದರು. ಅದರ ಬಗ್ಗೆ ಎಲ್ಲಿಯೂ ಚಕಾರವೆತ್ತುತ್ತಿರಲಿಲ್ಲ. ॥113॥ ಯಾವಾಗ ಒಂದು ಕಾರ್ಯ ಸಾಂದರ್ಭಿಕವಾಗಿ ಬಂದೊದಗುವುದೋ ಅದರ ಮೂಲಕಾರಣವನ್ನಾಗಲಿ ಸೂಚನೆಯನ್ನಾಗಲಿ ಕುರಿತು ಆಲೋಚಿಸದೆ ಅದನ್ನು ಕೈಗೆತ್ತಿಕೊಳ್ಳಬೇಕು. ಹಾಗಾಗದಿದ್ದಾಗ ಅದರ ಬದಲಾಗಿ ಅಲ್ಲಿ ಗೊಂದಲ ಉಂಟಾಗುತ್ತದೆ. ॥114॥ "ಕೇವಲ ಮಾತನ್ನೇ ಆಡುವವನು ಏನು ಮಾಡಬಲ್ಲನು? ಗರ್ಜಿಸುವ ಮೋಡಗಳು ಮಳೆ ಸುರಿಸುತ್ತವೆಯೇನು?" ಈ ಗಾದೆಮಾತಿಗೆ ನಿಜವಾದ ಪ್ರಾಮುಖ್ಯತೆಯನ್ನು ಸಾಯಿಯವರು ಅನುಭವದ ಮೂಲಕ ತೋರಿಸುತ್ತಿದ್ದರು. ॥115॥ ಬಾಬಾರವರಂತಹ ಅವತಾರ ಮೂರ್ತಿಗಳು ಈ ಜಗತ್ತಿನಲ್ಲಿ ಪರೋಪಕಾರಕ್ಕಾಗಿಯೇ ಅವತರಿಸುತ್ತಾರೆ. ಅವರ ಇಚ್ಛಿತಕಾರ್ಯವು ಸಮಾಪ್ತಿಯಾದನಂತರ ಅಂತ್ಯದಲ್ಲಿ ಅವರು ಅವ್ಯಕ್ತದಲ್ಲಿ ಸಮಾಹಿತರಾಗುತ್ತಾರೆ. ॥116॥ ನಮಗೆ ನಮ್ಮ ಅಸ್ತಿತ್ವದ ಮೂಲಕಾರಣ ತಿಳಿದಿಲ್ಲ.ನಾವು ಎಲ್ಲಿಂದ ಬಂದೆವು ಮತ್ತು ಎಲ್ಲಿಗೆ ಹೋಗುವೆವು, ನಾವು ಏಕೆ ಸೃಷ್ಟಿಯಾಗಿದ್ದೇವೆ ಮತ್ತು ನಮ್ಮ ಜನ್ಮದಿಂದ ಏನು ಪ್ರಯೋಜನ ಎಂಬುದು ಯಾವುದೂ ತಿಳಿದಿಲ್ಲ. ॥117॥ ನಾವು ಸ್ವಚ್ಛಂದವಾಗಿ ನಮ್ಮ ಜೀವನವನ್ನು ನಡೆಸುತ್ತೇವೆ. ಅನಂತರ ಮೃತ್ಯುವಿನ ಸಮಯ ಬರುತ್ತದೆ. ॥118॥ ನಾವು ನಮ್ಮ ಸ್ವಂತ ಕಣ್ಣುಗಳಿಂದಲೇ ಪತ್ನಿ, ಪುತ್ರ, ಸೋದರ, ತಾಯಿ ಮತ್ತಿತರ ಪ್ರೀತಿಯ ಬಂಧುಮಿತ್ರರು ದೇಹತ್ಯಾಗ ಮಾಡುವುದನ್ನು ನೋಡಿಯೂ ಸಹ ಮನಸ್ಸಿನಲ್ಲಿ ಸುವಿಚಾರಗಳು ಹುಟ್ಟುವುದಿಲ್ಲ. ॥119॥ ಸಂತ ಜನರು ಈ ರೀತಿ ಇರುವುದಿಲ್ಲ. ಅವರು ಅತ್ಯಂತ ಸಾವಧಾನಚಿತ್ತವುಳ್ಳವರಾಗಿರುತ್ತಾರೆ ತಮ್ಮ ಅಂತ್ಯಕಾಲದ ಪೂರ್ಣ ಜ್ಞಾನವಿರುತ್ತದೆ. ಮತ್ತು ಮರಣ ಸಮಯವನ್ನು ಅವರು ಅರಿತಿರುತ್ತಾರೆ. ॥120॥ ಅವರು ದೇಹದಲ್ಲಿ ಇರುವವರೆಗೆ, ತಮ್ಮ ದೇಹವನ್ನು ತಮ್ಮ ಭಕ್ತರಿಗಾಗಿ ಅತಿ ಪ್ರೀತಿಯಿಂದ ಸವೆಸುತ್ತಾರೆ. ಅವರ ದೇಹಾವಸಾನದ ನಂತರವೂ ಕೊನೆಯಲ್ಲಿ ಅವರಿದ್ದ ಸ್ಥಳ ಭಕ್ತರಿಗಾಗಿ ಉಪಯೋಗಿಸಲ್ಪಡುತ್ತದೆ.

॥121॥ ಕೆಲವರು ದೇಹವನ್ನು ತ್ಯಜಿಸುವ ಮೊದಲೇ ಸಮಾಧಿಯನ್ನು ಕಟ್ಟಿಸುತ್ತಾರೆ. ಅದರಿಂದ ಆ ನಿಶ್ಚಿತ ಸ್ಥಾನದಲ್ಲಿ ಅವರ ದೇಹವು ವಿಶ್ರಾಂತಿ ಪಡೆಯಬಹುದು. ॥122॥ ಬಾಬಾರವರೂ ಅದೇ ರೀತಿ ನಡೆದುಕೊಂಡರು. ಆದರೆ ಯಾರೂ ಅದನ್ನು ಮೊದಲು ಅರ್ಥಮಾಡಿಕೊಳ್ಳಲಿಲ್ಲ. ಅವರು ಸಮಾಧಿಮಂದಿರವನ್ನು ಒಂದು ವಿಶಿಷ್ಟವಾದ ಅಘಟಿತ ರೀತಿಯಲ್ಲಿ ಕಟ್ಟಿಸಿಕೊಂಡಿದ್ದರು. ॥123॥ ನಾಗಪುರದಲ್ಲಿ ಒಬ್ಬ ಮಹಾ ಧನಿಕನಿದ್ದ, ಅವನ ಹೆಸರು ಬಾಪುಸಾಹೇಬ ಬುಟಿ. ಬಾಬಾರವರು ಅವನ ಕೈಗಳಿಂದಲೇ ತಮ್ಮ ಸ್ಮಾರಕವನ್ನು ಕಟ್ಟಿಸಿಕೊಂಡರು. ॥124॥ ಬಾಪು ಸಾಹೇಬನು ಪರಮ ಭಕ್ತ, ಅವನು ಸಾಯಿಚರಣಗಳಲ್ಲಿ ನಿತ್ಯಾನುರಕ್ತನಾಗಿದ್ದನು. ಅವನು ತನ್ನ ಪರಿವಾರದ ಸಮೇತ ಅನೇಕ ಸಲ ಶಿರಡಿಗೆ ಬಂದು ಅಲ್ಲಿ ಬಾಬಾರವರ ಸೇವೆ ಮಾಡುತ್ತಿದ್ದನು. ॥125॥ ಸಾಯಿ ಚರಣಗಳಲ್ಲಿ ಭಕ್ತಿ ಇಟ್ಟು ಅವನು ಆಗಾಗ್ಗೆ ಬಂದು ಅಲ್ಲಿ ಉಳಿಯುತ್ತಿದ್ದನು. ಮತ್ತು ಸದಾ ಅವರಿಗೆ ವಿಧೇಯತೆಯಿಂದ ಇದ್ದು ಅವನು ಶಿರಡಿಯಲ್ಲಿ ಸದಾಕಾಲ ನೆಲೆಸಬೇಕೆಂದು ಆಶಿಸುತ್ತಿದ್ದನು. ॥126॥ ಅವನು ಅಲ್ಲಿ ಒಂದು ಸಣ್ಣ ನಿವೇಶನವನ್ನು ಖರೀದಿಸಬೇಕೆಂದು ಮತ್ತು ಒಂದು ಸಣ್ಣ ಕಟ್ಟಡವನ್ನು ಕಟ್ಟಿ ಅಲ್ಲಿ ಸ್ವತಂತ್ರವಾಗಿ ವಾಸಮಾಡಬೇಕೆಂದು ಮನಸ್ಸಿನಲ್ಲಿಯೇ ವಿಚಾರಮಾಡಿದನು. ॥127॥ ಈ ರೀತಿ ಮೂಲವಾಗಿ ಬೀಜರೂಪದಲ್ಲಿ ಅದನ್ನು ನೆಟ್ಟು ಅದು ಈ ದಿನ ದೊಡ್ಡ ಮರವಾಗಿ ಬೆಳೆದು ದೇವಾಲಯದ ರೂಪದಲ್ಲಿ ನಿಂತಿದೆ. ಇದು ಸಾಯಿ ಮಹಾರಾಜರು ತಮ್ಮ ಭಕ್ತರ ಮೇಲಿನ ಪ್ರೀತಿಯ ಸ್ಮಾರಕವಾಗಿ ನಮ್ಮ ಕಣ್ಣಮುಂದೆ ನಿಂತಿದೆ. ॥128॥ ಈ ಕಟ್ಟಡ ನಿರ್ಮಾಣ ಯಾವ ರೀತಿ ಬಂದಿತು, ಅದರ ಪ್ರಾರಂಭ ಯಾವ ರೀತಿ ಆಯಿತು, ಮತ್ತು ಅದು ಯಾವ ರೀತಿ ಈ ಸ್ವರೂಪ ಪಡೆಯಿತು – ಈ ವಿಷಯದ ಬಗ್ಗೆ ಪೂರ್ಣ ನಿರೂಪಣೆಯನ್ನು ಕೇಳಿರಿ. ॥129॥ ಒಂದು ಸಲ ಬಾಪು ಸಾಹೇಬನು ದೀಕ್ಷಿತವಾಡಾದ ಮೊದಲನೆಯ ಮಹಡಿಯಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಅವನಿಗೆ ಒಂದು ದರ್ಶನದ ಅನುಭವವಾದಾಗ ಅವನಿಗೆ ಈ ವಿಚಾರ ಬಂದಿತು. ॥130॥ ಅಲ್ಲಿದ್ದಾಗಲೇ, ಮಾಧವರಾವ್ ಅಲ್ಲಿದ್ದ ಮತ್ತೊಂದು ಹಾಸಿಗೆಯ ಮೇಲೆ ಮಲಗಿರಲು ಅವನಿಗೂ ಇಂತಹದೇ ದರ್ಶನ ಆಯಿತು. ಇಬ್ಬರೂ ಪರಮ ವಿಸ್ಮಿತರಾದರು. ॥131॥ ಬಾಪೂ ಸಾಹೇಬನ ಸ್ವಪ್ನದಲ್ಲಿ ಬಾಬಾರವರು ಅವನಿಗೆ ಆಜ್ಞಾಪಿಸಿದ್ದರು. "ನೀನು ನಿನ್ನದೇ ಆದ ವಾಡಾವನ್ನು ನಿಶ್ಚಯವಾಗಿಯೂ ಕಟ್ಟಲೇಬೇಕು. ಅದರಲ್ಲಿ ಮಂದಿರವೂ ಇರಬೇಕು." ॥132॥ ಸ್ವಪ್ನವು ಮುಗಿಯುತ್ತಿದ್ದಹಾಗೆಯೇ ಬಾಪೂ ಸಾಹೇಬನು ಎಚ್ಚರಗೊಂಡನು. ಹಾಸಿಗೆಯ ಮೇಲೆ ಕುಳಿತುಕೊಂಡು ಅವನು ತನಗೆ ಬಿದ್ದ ಕನಸನ್ನು ಮೊದಲಿನಿಂದಲೂ ನೆನಪಿಸಿಕೊಳ್ಳಲು ಪ್ರಾರಂಭಿಸಿದನು. ॥133॥ ಈ ರೀತಿ ಅವನು ಅದರಲ್ಲಿ ನಿರತಾಗಿರಲು, ಮಾಧವರಾವ್ ಅಳುತ್ತಿರುವುದು ಕೇಳಿಬಂತು. ಬುಟಿಯು ಜೋರಾಗಿ ಅವನನ್ನು "ಎದ್ದೇಳು" ಎಂದು ಎಬ್ಬಿಸಿದನು. ಇದು ಅವನನ್ನು ಪೂರ್ಣವಾಗಿ ಎಚ್ಚರಗೊಳಿಸಿತು. ॥134॥ "ಓಹ್, ನೀನು ಏಕೆ ಅಳುತ್ತಿರುವೆ?" ಈ ರೀತಿ ಮಾಧವರಾವ್‌ನು ಪ್ರಶ್ನಿಸಲ್ಪಟ್ಟಾಗ ಅವನು ಉತ್ತರಿಸಿದನು. "ಶ್ರೀಗಳ ಪ್ರೇಮೋದ್ಧಾರದ

ಮಾತುಗಳನ್ನು ಕೇಳಿ ನನ್ನ ಪ್ರೇಮೋದ್ವೇಗವನ್ನು ತಡೆಯಲು ಸಾಧ್ಯವಾಗಲಿಲ್ಲ. ॥135॥ "ನನ್ನ ಗಂಟಲು ಭಾವೋದ್ವೇಗದಿಂದ ಗದ್ಗದಿತವಾಯಿತು. ಮತ್ತು ನನ್ನ ಕಣ್ಣುಗಳು ಆನಂದ ಭಾಷ್ಪಗಳಿಂದ ತುಂಬಿ ಉಕ್ಕಿ ಹರಿಯಲಾರಂಭಿಸಿದವು. ನಾನು ನನ್ನ ಉತ್ಕಟವಾದ ಪ್ರೇಮವನ್ನು ತಡೆಯಲಾರದೆ ಹೋದೆ ಮತ್ತು ಈ ರೀತಿ ರೋದನದಲ್ಲಿ ಮುಕ್ತಾಯವಾಯಿತು. ॥136॥ "ಬಾಬಾರವರು ನನ್ನ ಹತ್ತಿರ ಬಂದರು. ಮತ್ತು ಸ್ಪಷ್ಟವಾಗಿ ಆಜ್ಞೆ ಮಾಡಿದರು. 'ಅಲ್ಲಿ ಒಂದು ವಾಡಾ ಬರಲಿ. ಮತ್ತು ಅಲ್ಲಿ ಒಂದು ಮಂದಿರವಿರಲಿ. ಅದು ಎಲ್ಲರ ಅಭೀಷ್ಟವನ್ನೂ ಪೂರೈಸುತ್ತದೆ." ॥137॥ ಬಾಪೂ ಸಾಹೇಬನು ಅಂತರಂಗದಲ್ಲೇ ವಿಸ್ಮಿತನಾದನು. ಇಬ್ಬರಿಗೂ ಒಂದೇ ರೀತಿಯ ಸ್ವಪ್ನವು ಏಕೆ ಬಂದಿತು? ಅವನಿಗೆ ಮತ್ತೇನೂ ಸಂಶಯ ಉಳಿಯಲಿಲ್ಲ. ಅವನು ನಿಶ್ಚಿತವಾಗಿಯೂ ಕಾರ್ಯೋನ್ಮುಖನಾಗಲು ನಿಶ್ಚಯಿಸಿದನು. ॥138॥ ಬುಟಿಯು ಸ್ವಯಂ ಅಗರ್ಭಶ್ರೀಮಂತ. ಆತನಿಗೆ ಮಂದಿರ ಸಹಿತವಾದ ವಾಡಾವನ್ನು ಕಟ್ಟುವಷ್ಟು ಶಕ್ತಿ ಇತ್ತು. ಮಾಧವರಾವ್‌ನಾದರೋ ಕೇವಲ ತಾನು ಸುಖವಾಗಿರುವಷ್ಟು ಇದ್ದನು. ಆದರೂ ಇಬ್ಬರಿಗೂ ಒಂದೇ ತರಹದ ಕನಸು ಬಿದ್ದಿತ್ತು. ॥139॥ ಇಬ್ಬರ ಸ್ವಪ್ನಗಳೂ ಪರಸ್ಪರ ತಾಳೆಯಾದವು. ಅವರು ಪರಮಾನಂದದಿಂದ ಉಬ್ಬಿಹೋಗಿದ್ದರು. ಅವರು ಒಂದು ನಿಶ್ಚಿತವಾದ ರೂಪ ರೇಖೆಯನ್ನು ರಚಿಸಿದರು. ಮತ್ತು ಕಾಕಾ(ದೀಕ್ಷಿತ್)ನೂ ಸಹ ಈ ಯೋಜನೆಯನ್ನು ಅನುಮೋದಿಸಿದನು. ॥140॥ ಅದು ಹಾಗಿರಲಿ. ಮಾರನೆಯ ದಿನ ಪ್ರಾತಃ ಕಾಲದಲ್ಲಿ ಮೂರು ಜನರೂ ಬಾಬಾರವರ ಹತ್ತಿರ ಇದ್ದಾಗ, ಬಾಬಾರವರು ನಿತ್ಯದ ರೂಢಿಯಂತೆ ಶಾಮಾನ ಮುಖವನ್ನು ಪ್ರೇಮದಿಂದ ಸೂಕ್ಷ್ಮವಾಗಿ ಗಮನಿಸಿದರು. ॥141॥ ಶಾಮಾ ಹೇಳಿದನು, "ಓ, ದೇವಾ! ಆಳವನ್ನು ಅಳೆಯಲಾರದಂತಹ ನಿಮ್ಮ ಆಟ ಇದೆಂತಹುದು! ನೀವು ನಮ್ಮನ್ನು ನಿಶ್ಚಿಂತೆಯಿಂದ ನಿದ್ರೆ ಮಾಡಲೂ ಸಹ ಬಿಡುವುದಿಲ್ಲ! ನೀವು ನಮ್ಮನ್ನು ನಂತರವೂ ಬಡಬಡಿಸುವಂತೆ ಮಾಡುತ್ತಿರುವಿರಿ!" ॥142॥ ಇದನ್ನು ಕೇಳಿ ಬಾಬಾರವರು ತಮ್ಮ ಕಿವಿಗಳೆರಡನ್ನೂ ತಮ್ಮ ಕೈಗಳಿಂದ ಮುಚ್ಚಿಕೊಂಡು ಹೇಳಿದರು, "ನಾನು ಇಲ್ಲಿಯೇ ಯಾವಾಗಲೂ ಇದ್ದೇನೆ. ಬೇರೆಯವರು ಏನು ಹೇಳಿದರೂ ಸರಿ ಪರವಾಗಿಲ್ಲ!" ॥143॥ ಅದು ಹಾಗಿರಲಿ. ಅನಂತರ ಈ ಹಿಂದೆಯೇ ತಯಾರಿಸಿದ ಯೋಜನೆಯ ರೂಪುರೇಖೆಯನ್ನು ಬಾಬಾರವರ ಮುಂದೆ ಅವರ ಅನುಮೋದನೆಗಾಗಿ ಮಂಡಿಸಲಾಯಿತು. ಬಾಬಾರವರ ಮಂದಿರ ಸಹಿತವಾದ ಸದನವನ್ನು ಕಟ್ಟಲು ಕೂಡಲೇ ಅನುಮತಿ ನೀಡಿದರು. ॥144॥ ಮಾಧವರಾವ್ ಆ ಕೆಲಸದ ಉಸ್ತುವಾರಿ ವಹಿಸಲು ಸಿದ್ಧನಾದನು, ತಳಮನೆ ಮತ್ತು ನೆಲಮನೆಯು ಅವರ ನಿರ್ದೇಶದಂತೆ ಸಿದ್ಧವಾದವು. ಬಾವಿಯೂ ಸಹ ಅವರ ಸೂಚನೆಯಂತೆ ತಯಾರಾಯಿತು. ಕಟ್ಟಡದ ನಿರ್ಮಾಣದ ಕೆಲಸ ಈ ಹಂತವನ್ನು ತಲುಪಿತು. ॥145॥ ಲೇಂಡಿಗೆ ಹೋಗುವಾಗ ಮತ್ತು ಬರುವಾಗ, ಬಾಗಿಲುಗಳನ್ನು ಮತ್ತು ಕಿಟಕಿಗಳನ್ನು ನಿಲ್ಲಿಸುವಾಗ ಬಾಬಾರವರು ಬಹಳ ಉತ್ಸುಕತೆಯಿಂದ ಮತ್ತು ಕಾತರತೆಯಿಂದ ಅವಲೋಕಿಸಿದರು. ॥146॥ ಬಾಬಾರವರು ತಮ್ಮ ತೋರುಬೆರಳಿನಿಂದ ನಿರ್ದೇಶಿಸುತ್ತಿದ್ದರು.

"ಒಂದು ಬಾಗಿಲು ಇಲ್ಲಿ ಇರಬೇಕು. ಒಂದು ಕಿಟಕಿಯು ಅಲ್ಲಿರಬೇಕು. ಇಲ್ಲಿ ಪೂರ್ವಕ್ಕೆ ಒಂದು ಉಪ್ಪರಿಗೆ ಇರಲಿ. ಅದು ಚೆನ್ನಾಗಿ ಕಾಣುತ್ತದೆ." ॥147॥ ಅನಂತರ ಕಾರ್ಯಕಾರಣ ನಿಮಿತ್ತದಿಂದಾಗಿ, ಮುಂದಿನ ಕೆಲಸವು ಬಾಪೂ ಸಾಹೇಬ ಜೋಗನ ಕೈಯಲ್ಲಿ ನಿರ್ಮಿತವಾಗಬೇಕಾಗಿಬಂದಿತು. ಆದುದರಿಂದ ಅದನ್ನು ಅವನಿಗೆ ಒಪ್ಪಿಸಲಾಯಿತು. ॥148॥ ಈ ರೀತಿ ಕೆಲಸವು ಮುಂದುವರೆಯುತ್ತಿದ್ದಂತೆ ಬುಟಿಯ ಚಿತ್ತದಲ್ಲಿ ಒಂದು ಸ್ಫುರಣೆಯುಂಟಾಯಿತು. ಅದು ಕಟ್ಟಡದ ಒಳಭಾಗದಲ್ಲಿ ಒಂದು ಮುರಳೀಧರನ (ಕೃಷ್ಣ) ವಿಗ್ರಹವನ್ನು ಸ್ಥಾಪಿಸುವ ವಿಚಾರ. ॥149॥ ಅವನಿಗೆ ಈ ಕಲ್ಪನೆಯು ಉದಿಸಿದರೂ ಸಹ ಬಾಬಾರವರ ಮನದಿಚ್ಛೆಯನ್ನು ತಿಳಿದುಕೊಳ್ಳದೆ ಅವರ ಆಜ್ಞಾಪನೆಯಿಲ್ಲದೆ ಬುಟಿಯು ಯಾವುದೇ ಕೆಲಸವನ್ನು ಆರಂಭಿಸುತ್ತಿರಲಿಲ್ಲ. ॥150॥ ಅದು ಅವನ ನಿತ್ಯದ ನಿಯಮವಾಗಿತ್ತು. ಬಾಬಾರವರ ಅನುಜ್ಞೆಯು ಅವನ ನಂಬುಗೆಯಾಗಿತ್ತು. ಅದಿಲ್ಲದೆ ಅವನು ಯಾವುದೇ ಒಂದು ಕೆಲಸವನ್ನೂ ಪ್ರಾರಂಭಿಸಿದವನಲ್ಲ. ॥151॥ ಮಧ್ಯದಲ್ಲಿ ಏಕೆ ಅದು ಭಂಗವಾಗಬೇಕು? ಅದರ ಪ್ರಯೋಜನವಾದರೂ ಏನು? ಎರಡೂ ಕಡೆಗಳ ಗೋಡೆಗಳನ್ನು ಒಡೆದು ಮುರಳೀಧರನ ವಿಗ್ರಹವನ್ನು ಸ್ಥಾಪಿಸಬಹುದಾಗಿತ್ತು. ॥152॥ ಬಾಪೂಸಾಹೇಬನು ಮಧ್ಯೆ ದೇವಾಲಯವನ್ನು ಮಾಡಬೇಕೆಂದಿದ್ದನು. ಆದರೆ ಅವನು ಅದರ ಬಗ್ಗೆ ಬಾಬಾರವರ ಆಶಯವು ಏನೆಂದೆಂದು ತಿಳಿದುಕೊಳ್ಳಲು ಬಾಬಾಹರನ್ನು ಕೇಳಬೇಕೆಂದಿದ್ದನು. ಅವರು ಇಚ್ಛೆಪಟ್ಟಲ್ಲಿ ಅದನ್ನು ನಿಸ್ಸಂಶಯವಾಗಿ ಮಾಡಿಸುತ್ತಿದ್ದನು. ॥153॥ ಆದ್ದರಿಂದ, ಅವನು ಮಾಧವರಾವ್‌ನಿಗೆ ಹೇಳಿದನು, "ನೀನು ಬಾಬಾರವರ ವಿಚಾರವನ್ನು ತಿಳಿದುಕೋ. ಅನಂತರ ಮುಂದಿನ ಕ್ರಮವನ್ನು ಯೋಚಿಸೋಣ. ದೇವರು (ಬಾಬಾ) ಒಪ್ಪಿದ ರೀತಿಯಲ್ಲಿ ಆಗಲಿ." ॥154॥ ಬಾಬಾರವರು ತಮ್ಮ ನಿತ್ಯದ ಸುತ್ತಿನಲ್ಲಿದ್ದಾಗ ಮತ್ತು ವಾಡಾದ ಬಾಗಿಲಿನ ಹತ್ತಿರ ಬಂದಾಗ, ಶಾಮರಾವ್‌ನು ಏನು ಕೇಳಿದನೆಂಬುದನ್ನು ಕೇಳಿರಿ. ॥155॥ "ದೇವಾ, ಬಾಪೂ ಸಾಹೇಬನು ಮಧ್ಯದ ಸಭಾಂಗಣದ ಎರಡು ಗೋಡೆಗಳನ್ನು ಒಡೆದು ಹಾಕಿ (ಶ್ರೀಕೃಷ್ಣ) ಮುರಳೀಧರನ ವಿಗ್ರಹವನ್ನು ಅತ್ಯಂತ ಪ್ರೀತಿಯಿಂದ ಪ್ರತಿಷ್ಠಾಪಿಸೋಣ ಎಂದು ಹೇಳುತ್ತಾನೆ. ॥156॥ "ಮಧ್ಯಭಾಗದಲ್ಲಿ ಒಂದು ಚೌಕಾಕಾರದ ಜಾಗ ಅಥವಾ ಒಂದು ವೇದಿಕೆಯನ್ನು ಮಾಡಿ ಅಲ್ಲೊಂದು ಸಿಂಹಾಸನವನ್ನು ಮಾಡಿ ಅಲ್ಲಿ ಮುರಳೀಧರನನ್ನು ವಿರಾಜಮಾನ ಮಾಡಬಹುದು. ಅದು ಶೋಭಾಯಮಾನವಾಗಿ ಕಾಣುತ್ತದೆ. ॥157॥ "ಇದನ್ನೇ ಬಾಪೂ ಸಾಹೇಬನು ಯೋಚಿಸಿದ್ದಾನೆ. ಆದರೆ ಅದಕ್ಕೆ ತಮ್ಮ ಅನುಮತಿಯು ಬೇಕಾಗಿದೆ. ಈ ರೀತಿ ಮಂದಿರ ಮತ್ತು ವಾಡಾ ಎರಡೂ ಬೇಗನೆ ಮುಗಿದು ಹೋಗುತ್ತವೆ." ॥158॥ ಶಾಮಾನ ಈ ಮಾತುಗಳನ್ನು ಕೇಳಿ ಬಾಬಾರವರು ಆನಂದದಿಂದ ತಮ್ಮ ಅನುಮತಿ ನೀಡಿದರು. ಮತ್ತು ಹೇಳಿದರು, "ದೇವಾಲಯವು ಪೂರ್ಣವಾದ ನಂತರ ನಾವೇ ಅಲ್ಲಿ ಬಂದು ನೆಲಸುತ್ತೇವೆ." ॥159॥ ವಾಡಾವನ್ನು ದೃಷ್ಟಿಸಿ ನೋಡುತ್ತ ಬಾಬಾರವರು ಅತಿ ಮಧುರವಾಗಿ ಹೇಳಿದರು, "ವಾಡಾವು ಪೂರ್ಣವಾದ ಮೇಲೆ ನಾವು ಅದನ್ನು

ನಮಗಾಗಿಯೇ ಉಪಯೋಗಿಸುತ್ತೇವೆ. ॥160॥ "ನಾವೆಲ್ಲರೂ ಅಲ್ಲಿ ಒಟ್ಟಾಗಿ ಇರೋಣ. ಅಲ್ಲಿಯೇ ಇರೋಣ. ನಾವೆಲ್ಲರೂ ಅಲ್ಲಿ ಆಟವಾಡೋಣ ಮತ್ತು ಪರಸ್ಪರ ಪ್ರೀತಿಯಿಂದ ಆಲಂಗಿಸೋಣ ಮತ್ತು ತುಂಬ ಆನಂದದಿಂದ ಸಮಯವನ್ನು ಅನುಭವಿಸೋಣ." ॥161॥ ಅದು ಹಾಗಿರಲಿ. ಅನಂತರ ಮಾಧವರಾವ್ ಬಾಬಾರವರನ್ನು ಕೇಳಿದನು, "ಇದು ಏನಾದರೂ ನಿಶ್ಚಿತವಾದ ಅನುಜ್ಞೆಯಿಂದಾದರೆ ಅನಂತರ ಆ ಯೋಜನೆಯ ಅಡಿಪಾಯದ ಕೆಲಸವನ್ನು ಪ್ರಾರಂಭಿಸಲು ಇದು ಶುಭಮುಹೂರ್ತವಾಗುವುದೇ! ॥162॥ "ದೇವಾ, ಇದು ಶುಭವೇಳೆ ಅಲ್ಲವೇ? ಒಂದು ತೆಂಗಿನಕಾಯಿಯನ್ನು ಒಡೆಯಲು ತೆಗೆದುಕೊಂಡು ಬರಲೇ?" ಬಾಬಾ "ಒಡಿ, ಒಡಿ" ಎಂದು ಹೇಳಿದರು. ಕೂಡಲೇ ಅವನು ತೆಂಗಿನಕಾಯಿಯನ್ನು ತೆಗೆದುಕೊಂಡು ಬಂದು ಒಡೆದನು. ॥163॥ ಅದು ಹಾಗಿರಲಿ. ಆಮೇಲೆ ಮಧ್ಯದಲ್ಲಿ ಇರುವ ಸಭಾಂಗಣ ಹಾಗೂ ಚೌಕಾಕಾರದ ವೇದಿಕೆ ಮುರಳೀಧರನಿಗಾಗಿ ಸಿದ್ಧವಾಯಿತು. ಮೂರ್ತಿಯನ್ನು ಕಡೆಯುವ ಕೆಲಸವನ್ನು ಒಬ್ಬ ಶಿಲ್ಪಿಗೆ ಒಪ್ಪಿಸಿದರು. ॥164॥ ಅನಂತರ, ಒಂದು ಸಮಯ ಬಂದಿತು. ಬಾಬಾರವರು ಪ್ರಬಲವಾದ ರೋಗದಿಂದ ನರಳುತ್ತಿದ್ದರು. ಮತ್ತು ಅಂತ್ಯಕಾಲ ಹತ್ತಿರಬಂತು. ಭಕ್ತರು ಅಂತರಂಗದಲ್ಲಿಯೇ ಬಹಳವಾಗಿ ತಳಮಳಗೊಂಡರು. ॥165॥ ಬಾಪೂ ಸಾಹೇಬನು ಬಹಳ ಅಸ್ವಸ್ಥ ಮನಸ್ಸಿನವನಾದನು. ಮತ್ತು ಈ ವಾಡಾದ ಭವಿಷ್ಯದ ಬಗ್ಗೆ ಚಿಂತಿತನಾದನು. ಅವನಿಗೆ ಇನ್ನು ಏನು ಆಗುತ್ತದೆಂಬುದು ತಿಳಿದಿರಲಿಲ್ಲ. ಆದ್ದರಿಂದ ಬಹಳ ವಿಚಲಿತನಾಗಿದ್ದನು. ॥166॥ 'ಅಲ್ಲಿಂದಾಚೆಗೆ ಬಾಬಾರವರ ಪಾದಗಳು ಈ ಮಂದಿರವನ್ನು ಸ್ಪರ್ಶಿಸಿ ಪಾವನಗೊಳಿಸುವುದೇ? ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿರುವುದು ವ್ಯರ್ಥವಾಗುವುದೇ? ಈಗ ಕೊನೆಯಲ್ಲಿ ಈ ಸಂಕಟ ಉದ್ಭವಿಸಿದೆ! ॥167॥ 'ಬಾಬಾರವರು ದೇಹ ತ್ಯಜಿಸಿದ ಮೇಲೆ ಇಲ್ಲಿ ಮುರಳೀಧರ ಯಾಕೆ ಬೇಕು? ಅಥವಾ ಒಂದು ಮನೆ, ಒಂದು ವಾಡಾ ಅಥವಾ ಒಂದು ದೇವಾಲಯ ಏಕಿರಬೇಕು?' ಬುಟಿಯು ಅಂತರಂಗದಲ್ಲಿ ಬಹಳ ದುಃಖಿತನಾದನು. ॥168॥ ಅನಂತರ, ಕರ್ಮಧರ್ಮ ಸಂಯೋಗವಶಾತ್, ಅಂತ್ಯ ಸಮಯ ಬಂದಾಗ, ಸಾಯಿಯ ನಿಯೋಗಾನುಸಾರ ವಾಡಾವು ಮಹದ್ ಭಾಗ್ಯವುಳ್ಳದ್ದಾಯಿತು. ಮತ್ತು ವಾಡಾ ಬಗ್ಗೆ ಸಕಲಜನರೂ ಮನಸ್ಸಿನಲ್ಲೇ ಆನಂದಪಟ್ಟರು. ॥169॥ "ನನ್ನನ್ನು ವಾಡಾದಲ್ಲಿ ಇಡಿ." ಇವು ಬಾಬಾರವರ ಅಂತ್ಯಕಾಲದ ವಚನಗಳು. ಅವು ಬಾಬಾರವರ ಮುಖದಿಂದ ಬಂದ ವಚನಗಳಾದುದರಿಂದ ಎಲ್ಲರೂ ನಿಶ್ಚಿಂತರಾದರು. ॥170॥ ಅನಂತರ ಸಾಯಿಯವರ ಪವಿತ್ರ ದೇಹಾವಶೇಷಗಳನ್ನು ಮಧ್ಯದಲ್ಲಿರುವ ಸಭಾಂಗಣದಲ್ಲಿಟ್ಟು ಸಮಾಧಿ ಕಟ್ಟಿದರು. ಆ ವಾಡೆ ಸಮಾಧಿಮಂದಿರವಾಯಿತು. ಸಾಯಿಯ ಜೀವನಚರಿತ್ರೆಯು ಅಗಾಧವಾದುದು. ॥171॥ ಬುಟಿಯು ಅದೃಷ್ಟ ಮತ್ತು ಭಾಗ್ಯವಂತ. ಅವನ ಸ್ವಂತ ಮನೆಯೇ ಶ್ರೀ ಸಾಯಿಯವರ ದೇಹವು ವಿಶ್ರಮಿಸುವ ಪವಿತ್ರ ಸಮಾಧಿಮಂದಿರವಾಯಿತು ಮತ್ತು ಸಾಯಿ ನಾಮವೇ ಅತಿಪಾವನವಾದದ್ದಾಯಿತು. ॥172॥ ಅದು ಹಾಗಿರಲಿ. ಇಂತಹ ಪಾವನ ಕಥೆಯನ್ನು ಆಲಿಸಿದ ಶ್ರೋತೃಗಳು ಸುಖ

ಸಂಪನ್ನರಾದರೆಂದು ಭಾವಿಸುವೆನು. ಹೇಮಾಡನು ಸಾಯಿನಾಥರಿಗೆ ಶರಣಾಗಿದ್ದಾನೆ. ಮತ್ತೆಂದಿಗೂ ಅವನು ಕ್ಷಣಕಾಲಮಾತ್ರವೂ ಅವರ ಚರಣಗಳಿಂದ ದೂರವಾಗದಿರಲಿ. ॥173॥ ಒಳ್ಳೆಯದೋ ಕೆಟ್ಟದ್ದೋ ಅದೇನೇ ನಡೆಯಲಿ, ಸಾಯಿಯು ನಾನು ಧರ್ಮಮಾರ್ಗದಲ್ಲಿ ನಡೆಯುತ್ತಿರುವುದನ್ನು ನೋಡಿ ಸಂತುಷ್ಟರಾದರೆ ನಿಸ್ಸಂದೇಹವಾಗಿ ನನ್ನ ಅಭೀಷ್ಟ ನೆರವೇರಿದಂತೆಯೇ ಸರಿ. ॥174॥ ಈ ಕಥೆ, ಕಥನ, ಕಥನಕಾರ ಎಲ್ಲವೂ ಸಾಯಿ ಸಮರ್ಥರೇ ಆಗಿದ್ದಾರೆ. ಹೇಮಾಡಪಂತನು ಯಾರು ಮತ್ತು ಎಲ್ಲಿಯವನು? ಅವನು ಕೇವಲ ನಾಮಮಾತ್ರ! ॥175॥ ನೀವು ಕೇಳುವ ಮುಂದಿನ ನಿರೂಪಣೆಯು ನನ್ನ ಮುಂದಿನ ಪ್ರೇರಣೆಗೆ ಅನುಗುಣವಾಗಿದೆ. ಮುಂದೆ ಅದೇನೇ ನಡೆಯಲಿ ಅದಕ್ಕಾಗಿ ನಾನು ಈಗ ಏಕೆ ಚಿಂತಿಸಬೇಕು? ॥176॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಗೀತೆಯ ಶ್ಲೋಕಾರ್ಥದ ವಿಶಿಷ್ಟ ವ್ಯಾಖ್ಯಾನ ಮತ್ತು ಸಮಾಧಿ ಮಂದಿರ ನಿರ್ಮಾಣ" ಎಂಬ ಮೂವತ್ತೊಂಭತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.


ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಇವರೆಲ್ಲರೂ ವೇದಾಂತ ಶಾಸ್ತ್ರದ ಪಂಡಿತರು. ಅವರ ಭಾಷ್ಯಗಳು 'ಶಂಕರಭಾಷ್ಯ'ದ ಮೇಲೆ ಆಧಾರಿತವಾಗಿವೆ.ಶಂಕರ ಭಾಷ್ಯವು ಬಾದರಾಯಣನ 'ವೇದಾಂತ ಸೂತ್ರದ ಮೇಲಿನ ಭಾಷ್ಯ. ಅದು ಭಾರತೀಯ ವೇದಾಂತದ ಮೂರು ಮೈಲುಗಲ್ಲುಗಳಲ್ಲಿ ಒಂದು.

2. ಅಧ್ಯಾಯ –5, ಶ್ಲೋಕ – 15.



## ಅಧ್ಯಾಯ - 40

॥ ಅಥ ಶ್ರೀ ಸಾಯಿ ಸಚ್ಚರಿತೆ ॥



# "ಉದ್ಯಾಪನ ಕಥೆಯ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಶ್ರೀ ಸಾಯಿ ಸಮರ್ಥರು ಧನ್ಯ ಧನ್ಯ! ಅವರು ಈ ಗ್ರಂಥದ ರೂಪದಲ್ಲಿ ಸ್ವಾರ್ಥ ಹಾಗೂ ಪರಾರ್ಥ ಎರಡಕ್ಕೂ ಅವಶ್ಯಕವಾದ ಬೋಧನೆಗಳನ್ನು ನೀಡಿ ಭಕ್ತರನ್ನು ಕೃತಾರ್ಥರನ್ನಾಗಿ ಮಾಡಿ ಅವರ ಇಚ್ಛೆಗಳನ್ನು ಪೂರೈಸಿದ್ದಾರೆ. ತಮ್ಮ ಉದ್ದೇಶವನ್ನೂ ಸಫಲಗೊಳಿಸಿದ್ದಾರೆ. ॥1॥ ಅವರು ತಮ್ಮ ಕೈಯನ್ನು ಭಕ್ತರ ತಲೆಯ ಮೇಲಿಟ್ಟ ಕೂಡಲೇ ಶಕ್ತಿಪಾತದಿಂದಾಗಿ ಭಕ್ತರಿಗೆ ಪಡೆಯಲಸಾಧ್ಯವಾದುದೂ ಸಹಪ್ರಾಪ್ತವಾಗಿದೆ. ಮತ್ತು ದ್ವೈತಭಾವವನ್ನು ದೂರಮಾಡಿರುತ್ತಾರೆ. ॥2॥ ಯಾರು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡುವರೋ, ಯಾರಲ್ಲಿ ನಾನು-ನೀನು ಬೇರೆ ಬೇರೆ ಎಂಬ ಭಿನ್ನಭಾವವು ಇಲ್ಲವೋ, ಯಾರು ಅನನ್ಯ ಶರಣಾಗತಿ ಭಾವ ಹೊಂದಿರುವರೋ ಅವರನ್ನು ಆಲಂಗಿಸಿ ತಮ್ಮ ಹೃದಯಕ್ಕೆ ಹತ್ತಿರವಾಗಿ ಇಟ್ಟುಕೊಳ್ಳುತ್ತಾರೆ. ॥3॥ ಸಾಗರ ಮತ್ತು ನದಿ – ಇವೆರಡೂ ಬೇರೆ ಬೇರೆ ಹೆಸರುಳ್ಳವುಗಳಾಗಿರುತ್ತವೆ. ಆದರೆ ಅವೆರಡೂ ಒಂದೇ ರೂಪವುಳ್ಳದ್ದಾಗಿ ವರ್ಷಾಕಾಲದಲ್ಲಿ ಎರಡೂ ಸೇರಿ ಒಂದಾದ ಮೇಲೆ ಅಲ್ಲಿ ಭಿನ್ನತೆಯು ಕಾಣುವುದಿಲ್ಲ. ॥4॥ ಅದೇ ರೀತಿ, ಭಕ್ತನು ಹೃದಯ ಪೂರ್ವಕವಾಗಿ ಭಕ್ತಿಯಿಂದ ಸದ್ಗುರುನಾಥರಿಗೆ ಶರಣಾದಾಗ, ಅವರು ಭಕ್ತನಿಗೆ ನಿಜಗುರುವಿನ ಶಕ್ತಿಯನ್ನು ನೀಡುತ್ತಾರೆ. ಅದು ಸದ್ಭಕ್ತನ ಭಕ್ತಿಯ ತೀವ್ರತೆಗನುಗುಣವಾಗಿರುತ್ತದೆ. ॥5॥ ಏಂಟ,

ಜಯವಾಗಲಿ ದೀನದಯಾಳಾ! ಭಕ್ತೋದ್ಧಾರಾ, ಪರಮ ಪ್ರೇಮಸ್ವರೂಪಿ! ಅಖಿಲ ಬ್ರಹ್ಮಾಂಡವನ್ನೇ ವ್ಯಾಪಿಸಿರುವವರೇ!ನೀವು ಈಗ ಸ್ವಇಚ್ಛೆಯಂತೆ ಶಿರಡಿಯಲ್ಲಿ ನೆಲೆಸಿರುವಿರಿ! ॥6॥ ನಿಮ್ಮನ್ನು ನೋಡಿದಾಗ ನನಗೆ ಅಚ್ಚರಿಯುಂಟಾಯಿತು. ನೀವು ಸಂತರಾಗಿದ್ದೂ ಬೀಸುವ ಕಲ್ಲನ್ನು ಉದ್ದಕ್ಕೆ ಚಾಚಿದ್ದ ನಿಮ್ಮ ಎರಡು ಕಾಲುಗಳ ಮಧ್ಯೆ ಹಿಡಿದು, ಗೋಧಿಯನ್ನು ಬೀಸುತ್ತ, ಹಿಡಿಯನ್ನು ಗಟ್ಟಿಯಾಗಿ ನಾಟಿ ಹೊಡೆದು, ಅದಷ್ಟು ಹೆಚ್ಚಿಗೆ ಧಾನ್ಯವನ್ನು ಹಾಕಿ ಬೀಸುತ್ತಿರುವುದನ್ನು ನೋಡಿದೆ. ॥7॥ ಈ ಪ್ರಸಂಗವೇ ಈ ಗ್ರಂಥ ರಚನೆಗೆ ಮೂಲಕಾರಣ. ಆಗ ನನ್ನ ಮನದಲ್ಲಿ ಪ್ರಬಲವಾದ ಇಚ್ಛೆಯು ಹುಟ್ಟಲು ಬಂದುವೇಳೆ ಈ ಕಾರ್ಯಗಳನ್ನೆಲ್ಲಾ ವಿವರಿಸಿದಲ್ಲಿ ಎಲ್ಲ ಕಶ್ಮಲವೂ ತೊಳೆದು ಹೋಗುತ್ತದೆ ಎಂದು ಅನ್ನಿಸಿತು. ॥8॥ ಹರಿಯೇ ಸ್ವಯಂ ಪ್ರಸನ್ನನಾಗುವನು. ಏಕೆಂದರೆ ಅವನು ತನ್ನ ಸ್ವಂತ ಭಕ್ತರ ಚರಿತ್ರೆಗಳ ಕೀರ್ತನೆ ಮಾಡುವುದನ್ನು ಅಥವಾಭಕ್ತರ ಗುಣವರ್ಣನೆಯನ್ನು ಇಚ್ಛಿಸುತ್ತಾನೆ. ॥9॥ ಸಜ್ಜನ ಶ್ರೋತೃಗಳಲ್ಲಿ ಈ ವಾಕ್ಯವನ್ನು ಯಾವುದೇ ಆಧಾರವಿಲ್ಲದೆ ಅಥವಾ ವಿಧಾನವಿಲ್ಲದೆ ಮಾಡಲಾಗಿದೆ ಎಂಬ ಶಂಕೆ ಇರಬಹುದು. ಹಾಗಿದ್ದಲ್ಲಿ ಅವರು ತ್ರಿಪುರಾರಿಯಿಂದ ನಿರೂಪಿತವಾದ ಭವಿಷ್ಯೋತ್ತರ ಪುರಾಣವನ್ನು ನೋಡಬಹುದು. ॥10॥ ಇದೆಲ್ಲವೂ ಸಾಯಿಯ ಸ್ಫೂರ್ತಿಯಿಂದಲೇ ಆಗಿರುವುದು. ಲೋಕರೂಢಿಯಂತೆ ಅವರು ಬರೆಯಲು ಅನುಮತಿ ನೀಡಿದರು. ಈ ಕಥನ ಭಕ್ತರ ಕಲ್ಯಾಣಾರ್ಥವಾಗಿ ಬರೆದುದಾಗಿದೆ. ॥11॥ ಅದರನಂತರ, ಪ್ರತಿತಿಂಗಳು ಸಾಯಿಸಮರ್ಥರ ಕಥೆಗಳನ್ನು ಭಕ್ತರು ಅತ್ಯಂತ ಪ್ರೀತಿಯಿಂದ 'ಶ್ರೀ ಸಾಯಿಲೀಲ' ಎಂಬುರವಣಿಯಲ್ಲಿ ಪ್ರಕಟವಾದುದನ್ನು ಓದುತ್ತಿದ್ದರು. ॥12॥ ಅದಕ್ಕಾಗಿ ಕೇವಲ ಸಾಯಿ ಮಾತ್ರ ತಮ್ಮ ಅನುಮತಿ ನೀಡುತ್ತಾರೆ. ಅವರು ನನಗೆ ಬುದ್ಧಿಯನ್ನು ನೀಡುವವರು. ಅವರೇ ನನಗೆ ಸ್ಫೂರ್ತಿಯನ್ನು ಉದ್ದೀಪಿಸಿದವರು. ಅವರು ತಮ್ಮ ಕಥೆಗಳನ್ನು ತಾವೇ ಹೇಳುತ್ತಾರೆ. ॥13॥ ಹೇಮಾಡನು ತನ್ನ ಸ್ವಂತ ಬುದ್ಧಿಯಿಂದ ಇದನ್ನು ಬರೆಯುತ್ತಿದ್ದಾನೆ ಎಂಬ ಭ್ರಮೆ ಇಟ್ಟುಕೊಳ್ಳಬೇಡಿ. ಆದುದರಿಂದ ನಾನು ಮನಃಪೂರ್ವಕವಾಗಿ ಶ್ರೋತೃಗಳನ್ನು ಪ್ರಾರ್ಥಿಸುವುದೇನೆಂದರೆ, ಇದರ ಶ್ರೇಷ್ಠತೆಯನ್ನು ಅಥವಾ ದೋಷಗಳನ್ನು ನನ್ನ ಮೇಲೆ ಹಾಕಬೇಡಿ. ॥14॥ ಅದರಲ್ಲೇನಾದರೂ ಗುಣವಿದ್ದಲ್ಲಿ ಅದು ಸಾಯಿಯವರದು. ನಿಮಗೇನಾದರೂ ದೋಷಗಳು ಕಂಡುಬಂದಲ್ಲಿ ಅವೂ ಸಾಯಿಯವೇ. ನಾನು ಕೇವಲ ಸಾಯಿಯ ಕೈಗೊಂಬೆ. ಅವರು ಎಳೆದ ಸೂತ್ರಕ್ಕೆ ಅನುಗುಣವಾಗಿ ನಾಟ್ಯವಾಡುವವನು. ॥15॥ ಸೂತ್ರಧಾರನು ಸೂತ್ರಗಳನ್ನು ಹಿಡಿದು ಎಳೆಯುತ್ತ ಅವನಿಗೆ ಇಷ್ಟಬಂದಂತೆ ನಾಟಕವನ್ನು ಪ್ರೇಕ್ಷಕರ ಮುಂದಿಡುತ್ತಾನೆ. ಅದು ವರ್ಣರಂಜಿತವಾಗಿ ಅಥವಾ ವಿಚಿತ್ರವಾಗಿ ಇರುತ್ತದೆ. ಅವನು ಕಥೆಗೆ ಅನುಗುಣವಾಗಿ ಬೊಂಬೆಗಳನ್ನು ಆಟವಾಡಿಸುತ್ತಾನೆ. ॥16॥ ಈಗ ಈ ಪ್ರಸ್ತಾವನೆಯು ಸಾಕಿಷ್ಟು, ಶ್ರೋತೃಗಳು ತಮ್ಮ ಸಹಜ ಸ್ವಭಾವದ ರೀತಿ ಉತ್ಕಂಠಿತರಾಗಿದ್ದಾರೆ. ಈಗ ಮುಂದಿನ ಕಥೆಗಾಗಿ ಗುರುವಿನ ಮತ್ತು ಭಕ್ತರ ಗೌರವವನ್ನು ಕೀರ್ತನೆಮಾಡೋಣ. ॥17॥ ಹಿಂದಿನ ಅಧ್ಯಾಯವನ್ನು ಪೂರ್ಣಗೊಳಿಸುವ ಸಮಯದಲ್ಲಿ ನಾನು ಮುಂದಿನ ಅಧ್ಯಾಯದ ಸೂತ್ರದ

ಬಗ್ಗೆ ಸೂಚನೆ ನೀಡಿದ್ದೆನು. ಮತ್ತು ಅದನ್ನು ಮನದಲ್ಲಿ ಇಟ್ಟುಕೊಳ್ಳಬೇಕೆಂದಿದ್ದೆನು. ನನಗೆ ನೆನಪಿರುವಹಾಗೆ ಅದರ ಬಗ್ಗೆ ಕೇಳಿರಿ. ॥18॥ ಈಗ ಈ ಮಧುರವಾದ ನಿರೂಪಣೆಯನ್ನು, ಯಾವ ರೀತಿ ಒಬ್ಬ ಭಕ್ತನು ಪ್ರೀತಿಯಿಂದ ಆಹಾರವನ್ನು ನೀಡುತ್ತಾನೆ ಮತ್ತು ಯಾವ ರೀತಿ ಸಾಯಿಯು ಪರಮ ಸಮಾಧಾನ ಹೊಂದುವರು ಎಂಬುದನ್ನು ಸಾವಧಾನದಿಂದ ಆಲಿಸಿರಿ. ॥19॥ ಸಾಯಿಯು ಪ್ರತ್ಯಕ್ಷವಾಗಿ ತಮ್ಮ ಭಕ್ತರನ್ನು ತಾಯಿಯು ತನ್ನ ಹಾಲುಣಿಸುವ ಮಗುವನ್ನು ಜೋಪಾನ ಮಾಡುವ ರೀತಿಯಲ್ಲೇ ನೋಡಿಕೊಳ್ಳುತ್ತಾರೆ. ನೀವು ಎಲ್ಲೇ ಇದ್ದರೂ ಓಡೋಡಿ ಬರುತ್ತಾರೆ. ಯಾವ ರೀತಿ ಅವನ ಋಣವನ್ನು ತೀರಿಸಲು ಸಾಧ್ಯ? ॥20॥ ಶಿರಡಿಯಲ್ಲಿ ದೇಹಧಾರಿಯಾಗಿ ವಾಸವಾಗಿದ್ದರೂ ಸಹ ಮೂರು ಲೋಕಗಳಲ್ಲಿಯೂ ಏಕಕಾಲದಲ್ಲಿ ಸಂಚರಿಸುತ್ತಿರುವ ಇವರ ವೃತ್ತಾಂತವನ್ನು ಶಾಂತಮನಸ್ಸಿನಿಂದ ಆಲಿಸಿರಿ. ॥21॥ ಒಮ್ಮೆ, ಸಾಯಿಪದಗಳಲ್ಲಿ ನಿಷ್ಠಳಾದಭಕ್ತಶ್ರೇಷ್ಠಳಾದ ಬಾಳಾಸಾಹೇಬನ ತಾಯಿಯು, ಲೋಕ ಕಲ್ಯಾಣಕ್ಕಾಗಿ ಮಾಡಿದ ಧಾರ್ಮಿಕ ವಿಧಿಗಳಲ್ಲಿ ಉಂಟಾದ ಲೋಪದೋಷಗಳ ನಿವಾರಣೆಗಾಗಿ ನಿಶ್ಚಯಿಸಿದಳು. ॥22॥ ಅವಳು ಆಗಾಗ ಅನೇಕ ವ್ರತಗಳನ್ನು ಆಚರಿಸಿದ್ದಳು. ಎಲ್ಲ ವ್ರತಗಳ ಸಂಖ್ಯೆಗಳು ಪೂರ್ಣವಾಗಲು, ಉದ್ಯಾಪನೆ ಮಾಡಬೇಕಾದುದು ಉಳಿಯಿತು. ॥23॥ ಒಂದೊಂದು ವ್ರತ ಮಾಡಿದಾಗಲೂ ಉದ್ಯಾಪನೆ ಮಾಡುವುದು ಅವಶ್ಯವಾಗಿದೆ. ಅದನ್ನು ಮಾಡದಿದ್ದಲ್ಲಿ ಆ ವ್ರತವು ಅಪೂರ್ಣವಾಗುವುದು ಮತ್ತು ಮಾಡಿದ ವ್ರತಕ್ಕೆ ಪುಣ್ಯವೂ ದೊರೆಯುವುದಿಲ್ಲ. ॥24॥ ವ್ರತಗಳ ಸಂಖ್ಯೆಯು 25 ರಿಂದ 30 ಆಗಿದ್ದು ಅವುಗಳ ಉದ್ಯಾಪನೆಗಾಗಿ ದೇವಾನು ನೂರು–ಇನ್ನೂರು ಬ್ರಾಹ್ಮಣರನ್ನು ಊಟಕ್ಕಾಗಿ ಆಮಂತ್ರಿಸಿದ್ದನು. ॥25॥ ಆದ್ದರಿಂದ, ಹಿಂದೂ ಪಂಚಾಂಗದ ರೀತ್ಯ ಉದ್ಯಾಪನೆ ಮಾಡಲು ಒಂದು ದಿನವನ್ನು ನಿಗದಿಪಡಿಸಲಾಯಿತು. ದೇವಾನು ಜೋಗ್‌ನಿಗೆ ಪತ್ರ ಬರೆದು ಬಾಬಾರವರಲ್ಲಿ ವಿನಂತಿಸಿಕೊಳ್ಳಬೇಕೆಂದು ತಿಳಿಸಿದ್ದನು. ॥26॥ "ನೋಡಿ, ನಿಮ್ಮ ಹಾಜರಿಯಿಲ್ಲದೆ ಉದ್ಯಾಪನೆಯೂ ಅಪೂರ್ಣ. ಆದುದರಿಂದ ನನ್ನ ಪ್ರಾರ್ಥನೆಯನ್ನು ಮಾನ್ಯ ಮಾಡಿ ಈ ದೀನನನ್ನು ಆಭಾರಿಯನ್ನಾಗಿ ಮಾಡಿ. ॥27॥ "ನಾನೊಬ್ಬ ಸರ್ಕಾರಿ ನೌಕರ ಮತ್ತು ನನ್ನ ಕುಟುಂಬವನ್ನು ಪೋಷಿಸಲು ಕೆಲಸ ಮಾಡಬೇಕು. ಈ ರೀತಿಯ ಪರಿಮಿತವಾದ ವಿಧಾನಗಳಿಂದ, ನಾನು ಎಷ್ಟು ಸಾಧ್ಯವೋ ಅಷ್ಟು ಪುಣ್ಯ ಕೆಲಸಗಳನ್ನು ಮಾಡುತ್ತೇನೆ. ಅದು ನಿಮಗೂ ಗೊತ್ತಿದೆ. ॥28॥ "ಡಹಾಣವು ಬಹಳ ದೂರದಲ್ಲಿದೆ. ನಾನೇ ಅಲ್ಲಿಗೆ ಬರಲು ಸಾಧ್ಯವಾಗುತ್ತಿಲ್ಲ. ಆದರೆ ನೀವು ಈ ಆಹ್ವಾನವನ್ನು ಸ್ವೀಕರಿಸುವಿರೆಂದು ನನಗೆ ಬಹಳ ಭರವಸೆಯಿದೆ." ॥29॥ ಈ ರೀತಿ ಬಾಪುಸಾಹೇಬ ಜೋಗನು ಬಾಬಾರವರಿಗೆ ಆ ಪತ್ರವನ್ನು ಪೂರ್ತಿಯಾಗಿ ಓದಿದನು. ಮತ್ತು ಅದೇ ರೀತಿ ದೇವಾನ ಇಚ್ಛೆಯನ್ನು ಪೂರೈಸುವಂತೆ ಬಾಬಾರವರನ್ನು ಕೇಳಿಕೊಂಡನು. ॥30॥ ಬಾಬಾರವರು ಈ ಶುದ್ಧಭಾವದ ಆಮಂತ್ರಣವನ್ನು ಸಂಪೂರ್ಣ ಗಮನವಿಟ್ಟು ಆಲಿಸಿದರು. ಮತ್ತು ಹೇಳಿದರು, "ಯಾರು ನನ್ನನ್ನು ನೆನಪಿಸಿಕೊಳ್ಳುವರೋ ಅವರು ಸದಾ ನನ್ನ ಮನಸ್ಸಿನಲ್ಲಿರುತ್ತಾರೆ. ॥31॥ "ನನಗೆ ಯಾವ ಕುದುರೆ ಗಾಡಿಯೂ

ಬೇಕಾಗಿಲ್ಲ. ವಿಮಾನವಾಗಲಿ ಅಥವಾ ರೈಲುಗಾಡಿಯಾಗಲಿ ಬೇಕಿಲ್ಲ. ನನ್ನನ್ನು ಪ್ರೀತಿಯಿಂದ ಕರೆದಾಗ ಕ್ಷಣಮಾತ್ರವೂ ವಿಳಂಬವಿಲ್ಲದೆ ಕೂಡಲೇ ಪ್ರಕಟವಾಗುತ್ತೇನೆ. ॥32॥ "ಅವನಿಗೆ ಬರೆ. ನಾನು, ನೀನು ಮತ್ತು ಇನ್ನೊಬ್ಬ – ಈ ಎಲ್ಲ ಮೂವರೂ ಒಟ್ಟಿಗೆ ಹೋಗುತ್ತೇವೆ. ಬರೆದವನು ಬಹಳ ಸಂತೋಷಪಡುತ್ತಾನೆ." ॥33॥ ಅದು ಹಾಗಿರಲಿ. ಜೋಗನು ದೇವಾನಿಗೆ ಬಾಬಾರವರು ಅವನಿಗೆ ಹೇಳಿದ್ದನ್ನು ತಿಳಿಸಿದನು. ದೇವಾನು ಬಹಳ ಸಂತೋಷಪಟ್ಟನು. ಬಾಬಾರವರ ಮಾತುಗಳು ಅಮೋಘವಾದವು. ॥34॥ ದೇವಾನು, ಬಾಬಾರವರು ಖಂಡಿತವಾಗಿ ಬರುವರೆಂದು ಪೂರ್ಣ ವಿಶ್ವಾಸ ಹೊಂದಿದ್ದನು. ಆದರೆ ಅವನು ಯಾವ ದಿನ ಅದರ ಅನುಭವ ಪಡೆಯುತ್ತಾನೋ, ಆ ದಿನವು ಸುವರ್ಣ ದಿನವಾಗಿರುತ್ತದೆ. ॥35॥ ಆದರೆ ದೇವಾನಿಗೂ ಪೂರ್ತಿಯಾಗಿ ತಿಳಿದಿತ್ತು, ಶಿರಡಿಯಲ್ಲದೆ, ಕೇವಲ ಮೂರು ಹಳ್ಳಿಗಳಿಗೆ ಬಾಬಾರವರು ಅಪರೂಪವಾಗಿ ಹೋಗುತ್ತಿದ್ದರು. ಉಳಿದಂತೆ ಅವರು ಶಿರಡಿಯಲ್ಲಿ ನಿರಂತರ ವಾಸಮಾಡುತ್ತಿದ್ದರು. ॥36॥ ಈ ರೀತಿ ಅವನು ಮನಸ್ಸಿನಲ್ಲಿ ಭಾವಿಸಿದ್ದರೆ, ಬಾಬಾರವರು ಸುಮಾರು ಆರು ತಿಂಗಳಿಗೊಮ್ಮೆ ರಾಹತಾ ಅಥವಾ ರೂಈ ಅಥವಾ ನಿಮಗಾಂವಗೆ ಹೋಗುತ್ತಿದ್ದರು. ಇಲ್ಲದಿದ್ದರೆ ಅವರು ಶಿರಡಿಯಲ್ಲಿಯೇ ಇರುತ್ತಿದ್ದರು. ॥37॥ ಅವರು ಈ ಹಳ್ಳಿಗಳ ಹೊರತು ಬೇರೆ ಎಲ್ಲಿಗೂ ಹೋಗದೇ ಇದ್ದುದರಿಂದ, ಅವರು ಅಷ್ಟು ದೂರದಲ್ಲಿರುವ ಡಹಾಣುವಿಗೆ ನನ್ನಲ್ಲಿಗೆ ಹೇಗೆ ಬರುತ್ತಾರೆ? ॥38॥ ಆದರೆ ಅವರು ಪೂರ್ಣ ಲೀಲಾವತಾರಿಯಾಗಿದ್ದವರು. ಇಚ್ಛಾಮಾತ್ರದಿಂದ ಸ್ವಚ್ಛಂದವಾಗಿ ಓಡಾಡಬಲ್ಲವರು. ಈ ಪ್ರಯಾಣ ಕೇವಲ ಲೋಕ ರೂಢಿಯಾಗಿತ್ತಷ್ಟೆ. ಅವರು ಅಂತರಂಗ, ಬಹಿರಂಗಗಳಲ್ಲಿ ಪರಿಪೂರ್ಣರಾಗಿದ್ದರು. ॥39॥ ಅಲ್ಲಿಂದ ಇಲ್ಲಿಗೆ ಬರುವುದು ಅಥವಾ ಇಲ್ಲಿಂದ ಅಲ್ಲಿಗೆ ಹೋಗುವುದು – ಎರಡನ್ನೂ ಆಕಾಶವೂ ಸಹ ಅರಿಯದು. ಏಕೆಂದರೆ ಅವರು ಅಂತರಂಗದಲ್ಲಿ ಮತ್ತು ಬಹಿರಂಗದಲ್ಲಿ ಪರಿಪೂರ್ಣರಾಗಿದ್ದರು. ॥40॥ ಅದೇ ರೀತಿ, ಬಾಬಾರವರ ಚಲನವಲನಗಳನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯವಾಗಿತ್ತು, ಚರಾಚರಗಳಲ್ಲಿ ಅವರು ವ್ಯಾಪಿಸಿದ್ದಾರೆ. ಹಾಗಿರುವಾಗ ಅವರು ಬರುವ ಅಥವಾ ಹೋಗುವ ಪ್ರಶ್ನೆ ಎಲ್ಲಿ? ಅವರು ಇಚ್ಛೈಸಿದಲ್ಲಿ ಪ್ರಕಟವಾಗುತ್ತಾರೆ. ॥41॥ ಅದು ಹಾಗಿರಲಿ. ಇದಕ್ಕಿಂತ ಸುಮಾರು ಒಂದು ತಿಂಗಳ ಮುಂಚೆ, ಒಬ್ಬ ಸನ್ಯಾಸಿಯು ಡಹಾಣು ರೈಲು ನಿಲ್ದಾಣದಲ್ಲಿ ಠಾಣೆಯ ಅಧಿಕಾರಿಯ ಹತ್ತಿರ ತನ್ನ ಸ್ವಂತ ಕೆಲಸಕ್ಕಾಗಿ ಬಂದನು. ॥42॥ ಅವನೊಬ್ಬ ಗೋ ಸಂರಕ್ಷಣೆಯ ಪ್ರಚಾರಕನಾಗಿದ್ದನು. ಮತ್ತು ಗೋ ಸಂಸ್ಥೆಯ ಸ್ವಯಂಸೇವಕನಾಗಿದ್ದನು. ಅವನು ಸಂಸ್ಥೆಯ ಆರ್ಥಿಕ ಸುಧಾರಣೆಗಾಗಿ ದೇಣಿಗೆ ಬೇಡಲು ಅಲ್ಲಿಗೆ ಬಂದಿದ್ದನು. ॥43॥ ಅವನ ವೇಷಭೂಷಣಗಳು ಅವನೊಬ್ಬ ಬಂಗಾಲಿಯಂತೆ ಕಾಣುತ್ತಿದ್ದನು. ಆ ನಿಲ್ದಾಣಾಧಿಕಾರಿಯು ಅವನಿಗೆ ಒಂದು ಉಪಾಯವನ್ನು ಹೇಳಿಕೊಟ್ಟನು. ಅವನು ಹಳ್ಳಿಯೊಳಗೆ ಹೋದರೆ ಎಲ್ಲ ವ್ಯವಸ್ಥೆಯಾಗುವುದೆಂದು ಸಲಹೆ ನೀಡಿದನು. ॥44॥ "ಅಲ್ಲೊಬ್ಬ ಮಾಮಲೇದಾರನಿದ್ದಾನೆ. ಅವನಿಗೆ ಈ ವಿಚಾರವನ್ನು ತಿಳಿಸು, ಆಗ ಶ್ರೀಮಂತ

ಶೇಠ್‌ರನ್ನು, ಸಾಹುಕಾರರನ್ನು ಭೇಟಿ ಮಾಡಿ ನಿನ್ನ ಕೈತುಂಬಿಸಿಕೊಂಡು ಬರಬಹುದು. ॥45॥ "ಒಮ್ಮೆ ಮಾಮಲೇದಾರನು ಮನದಟ್ಟು ಮಾಡಿಕೊಂಡರೆ ಎಲ್ಲರೂ ಹೂಂ ಎನ್ನುತ್ತಾರೆ ಮತ್ತು ಧಾರ್ಮಿಕ ಕಾರ್ಯಕ್ಕಾಗಿ ಹಣವನ್ನು ಸಂಗ್ರಹಿಸಬಹುದು. ಯಾವುದೇ ಸಂಕೋಚವಿಲ್ಲದೆ ಅಲ್ಲಿಗೆ ಹೋಗು." ॥46॥ ಈ ರೀತಿ ಆ ಠಾಣೆಯ ಅಧಿಕಾರಿಯು ಒಳಗಡೆ ಮಾತನಾಡುತ್ತಿರುವಾಗಲೇ, ಕುದುರೆಯು ಕೆನೆಯುವ ಶಬ್ದವು ಹೊರಗಡೆ ಕೇಳಿಬಂತು. ಅಲ್ಲಿಗೆ ಸ್ವತಃ ಮಾಮಲೇದಾರನೇ ಬಂದಿದ್ದನು. ಅವನು ಕುದುರೆಯಿಂದ ಇಳಿದು ನಿಲ್ದಾಣದ ಒಳಗಡೆ ಹೋದನು. ॥47॥ ಅವನು ಠಾಣೆಯ ಅಧಿಕಾರಿಯನ್ನು ಭೇಟಿಮಾಡಲು ಅವನ ಕಛೇರಿಯೊಳಗೆ ಹೋದನು. ಆಗ ಠಾಣಾಧಿಕಾರಿಯು ಸನ್ಯಾಸಿಗೆ ಹೇಳಿದನು,"ಮಾಮಲೇದಾರನು ಸ್ವತಃ ಇಲ್ಲಿಗೆ ಬಂದಿದ್ದಾನೆ. ॥48॥ "ಈಗ ನೀನು ಏನು ಹೇಳಲು ಇಚ್ಛಿಸುವೆಯೋ ಅದನ್ನು ಹೇಳು. ಸುದೈವವಶಾತ್ ನೀನು ಅವನನ್ನು ಸುಲಭವಾಗಿ ಭೇಟಿಯಾದೆ." ಆಗ ಸನ್ಯಾಸಿಯು ತನ್ನ ಮನಸ್ಸಿನಲ್ಲಿ ಏನಿದೆಯೆಂಬುದನ್ನು ಹೇಳಲು ಪ್ರಾರಂಭಿಸಿದನು. ॥49॥ ಅನಂತರ ಇಬ್ಬರೂ ಹೊರಗೆ ಬಂದರು. ಒಂದು ಮರದ ಪೆಟ್ಟಿಗೆಯ ಮೇಲೆ ಕುಳಿತುಕೊಂಡರು. ಸನ್ಯಾಸಿಯು ದೇವಾನಲ್ಲಿ ವಿನಂತಿಸಿಕೊಂಡನು, "ಈ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸು. ॥50॥ "ಗೋರಕ್ಷಣೆಯಂತಹ ಧರ್ಮಕಾರ್ಯವನ್ನು ತಾವು ತಮ್ಮ ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದರೆ ಇದ್ದಲ್ಲಿ, ನನ್ನಂತಹ ಅಪರಿಚಿತನ ಕೈಯಲ್ಲಿ ಸ್ವಲ್ಪವನ್ನಾದರೂ ಮಾಡಲು ಸಾಧ್ಯವೇ? ॥51॥ "ನೀನು ಈ ತಾಲೂಕಿನಲ್ಲಿ ಒಬ್ಬ ಅಧಿಕಾರಿಯಾಗಿರುವೆ. ಆದರೆ ನಾನಾದರೋ ಒಬ್ಬ ಭಿಕಾರಿಯಾಗಿದ್ದು ಮನೆಯಿಂದ ಮನೆಗೆ ಹೋಗುತ್ತ ಗೋವುಗಳ ಹಸಿವೆಯನ್ನು ತೀರಿಸಲು ಪ್ರಯತ್ನಪಡುತ್ತಿರುವೆ. ॥52॥ "ನೀನೇನಾದರೂ ಒಂದು ಮಾತು ಹೇಳಿದಲ್ಲಿ, ನನ್ನ ಕೆಲಸವು ಬೇಗನೆ ಮುಗಿಯುತ್ತದೆ. ನಿನಗೆ ಗೋಮಾತೆಯ ಆಶೀರ್ವಾದ ದೊರಕುತ್ತದೆ. ನಿನಗೆ ಹೆಸರು, ಕೀರ್ತಿ ದೊರಕುವುದು ಖಂಡಿತ." ॥53॥ ಸನ್ಯಾಸಿಯ ವಿನಂತಿಯನ್ನು ಆಲಿಸಿದ ಮೇಲೆ ದೇವಾನು ಅವನಿಗೆ ಉತ್ತರಿಸಿದನು. "ಹಳ್ಳಿಯಲ್ಲಿ ಈಗತಾನೇ ಮತ್ತೊಂದು ಕಾರಣಕ್ಕಾಗಿ ಧನ ಸಂಗ್ರಹವು ಪ್ರಾರಂಭವಾಗಿದೆ. ॥54॥ "ರಾವ ಸಾಹೇಬ ನರೋತ್ತಮ ಶೇಠನು ಒಬ್ಬ ವೇದಾಂತಿಯು ಮತ್ತು ದೀನರಿಗಾಗಿ ದಯಾವಂತನಾಗಿ ಹಣ ಸಂಗ್ರಹಿಸಲು ಪ್ರಾರಂಭಿಸಿದ್ದಾನೆ. ॥55॥ "ಆದುದರಿಂದ, ಈಗ ನನಗೆ ಹೇಳು, ನಿನಗೆ ಯಾವ ರೀತಿ ಸಂಗ್ರಹ ಮಾಡಲು ಸಾಧ್ಯವಾಗುತ್ತದೆ? ಇದು ನಿನಗೆ ಉಪಯುಕ್ತವಾದ ಸಮಯವಲ್ಲ. ಅದರ ಬಗ್ಗೆ ಅನಂತರ ಆಲೋಚನೆ ಮಾಡೋಣ. ॥56॥ "ಆದುದರಿಂದ, ಎರಡು ಅಥವಾ ನಾಲ್ಕು ತಿಂಗಳುಗಳ ನಂತರ ಈ ನಗರಕ್ಕೆ ಮತ್ತೆ ಬಾ. ಆ ಸಮಯದಲ್ಲಿ ನಾವು ಏನು ಮಾಡಬಹುದೋ ನೋಡೋಣ. ಇದು ಅನುಕೂಲಕರವಾದ ಸಮಯವಲ್ಲ." ॥57॥ ಅದು ಹಾಗಿರಲಿ. ಅವನು ಅಲ್ಲಿಂದ ಹೊರಟು ಹೋದನು. ಅಲ್ಲಿಂದಾಚೆಗೆ ಸುಮಾರು ಒಂದು ತಿಂಗಳು ಕಳೆದಿರಬಹುದು. ಅವನು ಟಾಂಗಾದಲ್ಲಿ ಕುಳಿತು ಡಹಾಣುವಿಗೆ ಹಿಂತಿರುಗಿಬಂದನು. ॥58॥ ದೇವಾನ ಮನೆಯ ಮುಂದೋ ವಕೀಲ ಪರಾಂಜಪೆಯ

ಮನೆಯಿತ್ತು, ಟಾಂಗಾ ಅಲ್ಲಿ ನಿಂತಮೇಲೆ ಸನ್ಯಾಸಿಯು ಅದರಿಂದ ಕೆಳಗೆ ಇಳಿಯುತ್ತಿರುವುದನ್ನು ಅವನು ನೋಡಿದನು. ॥59॥ "ಇವನು ಅದೇ ವ್ಯಕ್ತಿಯಲ್ಲವೆ? ಇವನು ನಿಜವಾಗಿಯೂ ಈ ಮೊದಲು ಸಂಗ್ರಹಕ್ಕಾಗಿ ಇಲ್ಲಿಗೆ ಬಂದಿದ್ದನು." ಎಂದು ದೇವಾನು ಅಂತರಂಗದಲ್ಲಿಯೇ ಶಂಕಿಸುತ್ತ ತನ್ನ ಮಗನಿಗೆ ಹೇಳಿದನು. ॥60॥ "ಇನ್ನೂ ಒಂದು ತಿಂಗಳು ಪೂರ್ತಿಯಾಗಿಲ್ಲ. ಅವನೇಕೆ ಇಲ್ಲಿಗೆ ಬಂದಿದ್ದಾನೆ? ಅವನೇನಾದರೂ ನಮ್ಮ ಹಿಂದಿನ ಮಾತುಕತೆಯನ್ನೇನಾದರೂ ಮರೆತು ಹೋಗಿರುವನೇ?" ಈ ರೀತಿ ಅವನು ಸಂಶಯಗೊಂಡನು. ॥61॥ ಅವನು ಟಾಂಗಾವನ್ನು ಅಲ್ಲಿಯೇ ಬಿಟ್ಟು ಸ್ವಲ್ಪ ಸಮಯವನ್ನು ಅಲ್ಲಿಯೇ ಕಳೆದನು. ಅನಂತರ ಅವನು ದೇವಾನ ಮನೆಗೆ ಬಂದು ಹೇಳಲು ಪ್ರಾರಂಭಿಸಿದನು. ॥62॥ "ನನಗೆ ಹಣ ಸ್ವೀಕರಿಸಲು ಅವಸರವೇನಿಲ್ಲ." ಅವನು ಸಮಯವನ್ನು ನೋಡಿದಾಗ ಆಗ ಸುಮಾರು 10 ಗಂಟೆಯಾಗಿತ್ತು, ಅದುಬ್ರಾಹ್ಮಣರು ಊಟ ಪ್ರಾರಂಭಿಸುವ ವೇಳೆಯಾಗಿತ್ತು ಮತ್ತು ದೇವಾನು ಬಹಳ ಗೊಂದಲದಲ್ಲಿ ಬಿದ್ದನು. ॥63॥ "ನಾನು ಹಣಕ್ಕಾಗಿ ಬರಲಿಲ್ಲ. ಈ ದಿನ ನನಗೆ ಊಟ ಬೇಕು." ದೇವಾನು ಹೇಳಿದನು, "ಬನ್ನಿ, ಬಹಳ ಸಂತೋಷ! ಇದನ್ನು ನಿಮ್ಮ ಮನೆಯೆಂದೇ ಭಾವಿಸಿರಿ." ॥64॥ ಅದಕ್ಕೆ ಸನ್ಯಾಸಿ ಹೇಳಿದನು, "ಇಬ್ಬರು ಮಕ್ಕಳು ನನ್ನ ಜೊತೆಯಿದ್ದಾರೆ." "ಅದು ಬಹಳ ಒಳ್ಳೆಯದು" ಎಂದು ದೇವಾನು ಅವನಿಗೆ ಹೇಳಿದನು. ॥65॥ ಆಗ ಊಟ ಬಡಿಸಲು ಇನ್ನೂಸ್ವಲ್ಪ ಸಮಯವಿದ್ದುದರಿಂದ, ದೇವಾನು ಅವನನ್ನು ಪ್ರಶ್ನಿಸಿದನು. "ನೀನು ಎಲ್ಲಿ ಉಳಿದುಕೊಂಡಿರುವೆ? ಅಲ್ಲಿಗೇ ನಿಮಗಾಗಿ ಹೇಳಿಕಳುಹಿಸುತ್ತೇನೆ!" 66 "ಅದರ ಅವಶ್ಯಕತೆಯೇನು? ನಾನು ಯಾವಾಗ, ಎಷ್ಟುಹೊತ್ತಿಗೆ ಬರಬೇಕೆಂದು ಹೇಳುವೆಯೋ ಆ ಸಮಯಕ್ಕೆ ಬರುತ್ತೇನೆ" ಎಂದು ಸನ್ಯಾಸಿಯುಹೇಳಿದನು. ॥67॥ "ಒಳ್ಳೆಯದು, ಮಕ್ಕಳನ್ನೂ ಜೊತೆಗೆ ಕರೆದುಕೊಂಡು 12 ಗಂಟೆಗೆ ಬಂದು ಭೋಜನ ಸ್ವೀಕರಿಸು ಸಂತನೇ!" ಎಂದು ದೇವಾನು ಅವನಿಗೆ ಹೇಳಿದನು. ॥68॥ ಅದುಹಾಗಿರಲಿ. ಅನಂತರ ಸನ್ಯಾಸಿಯು ಹೊರಟು ಹೋದನು. ಮತ್ತೆ ಸರಿಯಾಗಿ 12 ಗಂಟೆಗೆ ಬಂದನು. ಮೂವರೂ ಊಟಕ್ಕೆ ಕುಳಿತುಕೊಂಡರು ಮತ್ತು ಯಥೇಚ್ಛವಾಗಿ ಊಟಮಾಡಿದರು. ॥69॥ ಅಡಿಗೆಯು ಸಿದ್ಧವಾದ ಮೇಲೆ, ಬ್ರಾಹ್ಮಣರು ಊಟಕ್ಕಾಗಿ ಪಂಕ್ತಿಗಳಲ್ಲಿ ಕುಳಿತುಕೊಂಡರು. ಯಜಮಾನನು ಸನ್ಯಾಸಿ ಮತ್ತು ಅವನ ಪರಿವಾರದವರನ್ನು ತೃಪ್ತಿಪಡಿಸಿದನು. ॥70॥ ಸನ್ಯಾಸಿಯು ತನಗೆ ತಾನೇ ಇಬ್ಬರು ವ್ಯಕ್ತಿಗಳ ಜೊತೆ ಬಂದಿದ್ದನು. ಆದರೆ ಅವನ ಪೂರ್ವದ ಉದ್ದೇಶದಿಂದಾಗಿ ಭ್ರಮೆಯ ತೆರೆಯು ಅವನ ಮುಂದೆ ಹರಡಿತ್ತು. ॥71॥ ಆದ್ದರಿಂದಲೇ ದೇವಾನು ಯಾರೋ ಅತಿಥಿಗಳು ಊಟಕ್ಕೆ ಬಂದಿರುವರೆಂದು ಭಾವಿಸಿದನು. ಮತ್ತು ಅವನು ಹಣಕ್ಕಾಗಿ ಬಂದಿರುವನೆಂಬ ವಿಚಾರ ಮನದಲ್ಲಿಯೇ ಇದ್ದು ಆ ಭಾವನೆಯು ಇನ್ನೂ ದೃಢವಾಯಿತು. ॥72॥ ಈ ರೀತಿಯಲ್ಲಿ ಭೋಜನವು ಮುಗಿಯಿತು. ಬ್ರಾಹ್ಮಣರು ಉತ್ತರಾಪೋಶನಕ್ಕಾಗಿ ಆಚಮನ ಮಾಡಲು ಸುಗಂಧ ಪೂರಿತ ಶೀತಲ ಜಲವನ್ನು ಸ್ವೀಕರಿಸಿದರು. ಅವರು ಮುಖಶುದ್ಧಿಗಾಗಿ ತಾಂಬೂಲವನ್ನು ಸ್ವೀಕರಿಸಿದರು. ॥73॥ ಶಿಷ್ಟಾಚಾರದ

ರೀತಿಯಲ್ಲಿ ದೇವಾನು ಅತಿ ಗೌರವದಿಂದ ಮತ್ತು ಆನಂದದಿಂದ ಸುಗಂಧಭರಿತ ಪುಷ್ಪಗಳನ್ನು, ತಾಂಬೂಲವನ್ನು, ಅತ್ತರನ್ನು, ಗುಲಾಬಿಯ ನೀರನ್ನು, ಮತ್ತು ಪ್ರತಿಯೊಬ್ಬರಿಗೂ ಬಹುಮಾನವನ್ನು ನೀಡಿದನು. ॥74॥ ಅದು ಹಾಗಿರಲಿ. ಇದೆಲ್ಲವೂ ಮುಗಿದ ಮೇಲೆ, ಅಲ್ಲಿಗೆ ಬಂದಿದ್ದ ಮಂಡಲಿಯವರು ತಮ್ಮ ತಮ್ಮ ಮನೆಗೆ ಹೊರಟು ಹೋದರು. ಸನ್ಯಾಸಿಯೂ ಸಹ ತನ್ನ ಪರಿವಾರದ ಜೊತೆಯಲ್ಲಿ ತನ್ನ ಸ್ವಂತ ಸ್ಥಳಕ್ಕೆ ಹಿಂತಿರುಗಿದನು. ॥75॥ ಅವರು ನಿಮಂತ್ರಣವಿಲ್ಲದೆ ಹಾಗೂ ಅನಿರೀಕ್ಷಿತವಾಗಿ ಬಂದಿದ್ದರೂ ಸಹ ಸಮಯಕ್ಕೆ ಸರಿಯಾಗಿ ಬಂದು ಭೋಜನ ಸ್ವೀಕರಿಸಿದ್ದರು. ಆದರೆ ದೇವಾನು ಅವರು ಬಾಬಾ ಇರಬಹುದೆಂದು ಯೋಚಿಸಲಿಲ್ಲ. ಆದರೆ ಅವನು ಮನದಲ್ಲಿಯೇ ಅನುಮಾನಿಸಿದ್ದನು. ॥76॥ ಅದು ಅಯಾಚಿತವಾಗಿ ಅವನ ಸಮಕ್ಷಮದಲ್ಲೇ ನಡೆದಿತ್ತು. ಅವರು ಅನಿರೀಕ್ಷಿತವಾಗಿ ಪ್ರತ್ಯಕ್ಷರಾಗಿ ಅವನಿಂದಲೇ ಭೋಜನ ಸ್ವೀಕರಿಸಿದ್ದರು. ಆದರೂ ದೇವಾನು ಮನಸ್ಸಿನಲ್ಲಿಯೇ ಸಂದೇಹ ಭರಿತನಾಗಿದ್ದನು. ಆದ್ದರಿಂದ ಅವನು ಜೋಗನನ್ನು ಸಾಕ್ಷಿಗಾಗಿ ಕೇಳಿದನು. ॥77॥ ಆದ್ದರಿಂದ ಉದ್ಯಾಪನೆಯಾದನಂತರ, ದೇವಾನು ಜೋಗನಿಗೆ ಒಂದು ಪತ್ರ ಬರೆದನು. "ಬಾಬಾರವರು ಈ ರೀತಿ ಏಕೆ ಮೋಸಮಾಡಿದರು? ಅವರು ಆ ರೀತಿ ನುಡಿದಿದ್ದು ಸರಿಯೇ? ॥78॥ "ನೀನೂ ಸಹ ಅವರ ಜೊತೆಯಲ್ಲಿ ಬರಬೇಕಾಗಿತ್ತು. ಅವರ ಮಾತುಗಳು ಎಂದಿಗೂ ಸಳ್ಳಾಗುವುದಿಲ್ಲ. ನೀನು ಅಲ್ಲಿಗೆ ಬಂದಿದ್ದರೆ ಏನಾದರೂ ಸ್ವಲ್ಪ ಸಾಕ್ಷಿಯು ಇರುತ್ತಿತ್ತು. ಈಗ ನಾನು ಇದನ್ನು ಹೇಗೆ ನಂಬಲಿ? ॥79॥ "ಹಾಗಿದ್ದರೆ ಈ ರೀತಿ ಏಕೆ ನಡೆಯಿತು? ನನಗೆ ಏಕೆ ಇಷ್ಟು ನಿರಾಶೆ ಉಂಟಾಯಿತು? ನಾನು ಬಹಳ ಅಪೇಕ್ಷೆಯಿಂದ ಕಾದಿದ್ದೆನು. ಆದರೆ ನನಗೆ ಯಾವ ಅನುಭವವೂ ಆಗಲಿಲ್ಲ! ॥80॥ "ನಾನು ತುಂಬ ಪ್ರೇಮದಿಂದ ಬಾಬಾರವರಿಗೆ ನಿಮಂತ್ರಣ ನೀಡಿದೆ. ಮತ್ತು ಅವರು ಶರಣಾಗತನಾದ ನನ್ನಲ್ಲಿಗೆ ಬರುವೆನೆಂದು ಹೇಳಿದ್ದರು. ಆದರೆ ಅಲ್ಲಿ ಸರ್ವವೂ ಅನ್ಯಥಾ ನಡೆಯಿತು. ಇದೆಲ್ಲವೂ ಹೇಗೆ ನಡೆಯಿತೆಂದು ನನಗೆ ಸ್ವಲ್ಪವೂ ಅರ್ಥವಾಗುತ್ತಿಲ್ಲ! ॥81॥ "ನನ್ನ ಪಂಚತಂತ್ರ ಸ್ಥಿತಿಯನ್ನು ಪರಿಗಣಿಸಿ, ನಾನು ಒಂದು ಪತ್ರವನ್ನು ಬಹಳ ಕಕ್ಕುಲತೆಯಿಂದ ಬರೆದಿರುತ್ತೇನೆ. ನಂತರ ಬಾಬಾರವರು ಬರುವರೆಂದು ತಿಳಿದು ನಾನು ಬಹಳ ಧನ್ಯನೆಂದು ಭಾವಿಸಿದೆನು. ॥82॥ "ನನಗೆ ಗೊತ್ತಿತ್ತು, ಅವರು ಯಾವ ರೂಪದಲ್ಲಾದರೂ ಯಾವುದೇ ನಿಮಿತ್ತವನ್ನು ಹಿಡಿದು ಬಂದೇ ಬರುತ್ತಾರೆಂದು ಭಾವಿಸಿದ್ದೆ. ಆದರೆ ಆ ರೀತಿಯಂತಹುದು ಏನೂ ನಡೆಯಲಿಲ್ಲವೇಕೆ? ನಾನು ಬಹಳ ಆಶ್ಚರ್ಯಚಕಿತನಾದೆ." ॥83॥ ಜೋಗನು, ದೇವಾನು ತಿಳಿಸಿದ ಸಕಲ ವೃತ್ತಾಂತವನ್ನೂ ಸಾಯಿ ಚರಣಗಳಲ್ಲಿ ನಿವೇದಿಸಿದನು. ಬಾಬಾರವರು ಆಶ್ಚರ್ಯಚಕಿತರಾಗಿ ಅವನಿಗೆ ಹೇಳಿದರು. ॥84॥ "ನೀನು ನಿನ್ನ ಪತ್ರವನ್ನು ತೆರೆಯುವ ಮೊದಲೇ ಅಲ್ಲಿ ವಿವರಿಸಿರುವುದೆಲ್ಲವೂ ನನಗೆ ತಿಳಿದಿದೆ. ನೀನು ಓದುವ ಮೊದಲೇ ಗೊತ್ತು, ಅಲ್ಲಿ ಬರೆದಿರುವುದೆಲ್ಲವೂ ನನ್ನ ಕಣ್ಣ ಮುಂದೆ ಮೂರ್ತಿವತ್ತಾಗಿ ಸ್ಪಷ್ಟವಾಗಿ ನಿಲ್ಲುತ್ತದೆ. ॥85॥ "ಅವನು ಹೇಳುತ್ತಾನೆ, ನಾನು ಅವನಿಗೆ ಬರುವುದಾಗಿ ವಚನ ನೀಡಿದೆ, ಆದರೆ

ನನ್ನ ಮಾತುಗಳಿಂದ ಅವನಿಗೆ ಮೋಸ ಮಾಡಿದೆ ಎಂದು. ಅವನು ನನ್ನನ್ನು ಗುರುತಿಸಲಿಲ್ಲವೆಂದು ಅವನಿಗೆ ಹೇಳು. ಹಾಗಿರಲು ಅವನು ನನ್ನನ್ನು ಏಕೆ ಆಮಂತ್ರಿಸಿದ? ॥86॥ "ಲೌಕಿಕವಾಗಿ ನಾನು ಇಲ್ಲಿಂದ ಚಲಿಸಲಿಲ್ಲ! ಆದರೆ ನಾನು ಉದ್ಯಾಪನೆ ಊಟಮಾಡಿದೆನು. ನಾನು ಮತ್ತಿಬ್ಬರ ಜೊತೆಯಲ್ಲಿ ಬರುವೆನೆಂದು ಹೇಳಿದ್ದೆ. ಅದೇ ರೀತಿ ಇನ್ನಿಬ್ಬರ ಜೊತೆಯಲ್ಲಿ ನಾನು ಹೋಗಿದ್ದೆ. ॥87॥ "ಅಲ್ಲಿ ಊಟಕ್ಕೆ ಸ್ವಲ್ಪ ಸಮಯ ಇತ್ತು, ಆಗ ನಾನೊಬ್ಬನೇ ಅಲ್ಲಿಗೆ ಹೋಗಿದ್ದೆ, ಸ್ವಲ್ಪ ಸಮಯದ ಅವಕಾಶವಿತ್ತು, ನಾನು ಮೊದಲು ಅಲ್ಲಿ ಪ್ರವೇಶಿಸಿದಾಗ ಧರಿಸಿದ್ದ ಸನ್ಯಾಸಿಯ ವೇಷಭೂಷಣ ನಿನಗೆ ನೆನಪಿಲ್ಲವೇ? ॥88॥ "ನಾನು ಅನಿರೀಕ್ಷಿತವಾಗಿ ಬಂದಿದ್ದನ್ನು ನೋಡಿ, ನಾನು ಹಣ ಕೇಳುತ್ತೇನೆಂಬ ಭಯ ನಿನಗೆ ಉಂಟಾಯಿತಲ್ಲವೇ? ಮತ್ತು ಆ ನಿನ್ನ ಸಂದೇಹವನ್ನು ನಾನು ದೂರಮಾಡಲಿಲ್ಲವೇ? ॥89॥ "ನಾನು ಕೇವಲ ಊಟಮಾಡಲು ಮತ್ತಿಬ್ಬರ ಜೊತೆಯಲ್ಲಿ ಬರುತ್ತೇನೆ ಎಂದು ಹೇಳಿದ್ದೆ, ಮತ್ತು ನಾನು ಸರಿಯಾದ ವೇಳೆಯಲ್ಲಿ, ಮತ್ತಿಬ್ಬರ ಜೊತೆಯಲ್ಲಿ ಊಟ ಮಾಡಲಿಲ್ಲವೇ? ॥90॥ "ನನ್ನ ವಚನಗಳನ್ನು ಕಾಪಾಡಿಕೊಳ್ಳಲು ನಾನು ನನ್ನ ಜೀವವನ್ನಾದರೂ ಕೊಟ್ಟೇನು ಎಂಬುದನ್ನು ಮನಸ್ಸಿನಲ್ಲಿಟ್ಟುಕೋ. ಆದರೆ ನಾನು ಆಡಿದ ಮಾತುಗಳು ಎಂದಿಗೂ ಸುಳ್ಳಾಗುವುದಿಲ್ಲ." ॥91॥ ಈ ರೀತಿ ಸಾಯಿನಾಥರು ಹೇಳಿದಾಗ ಜೋಗನು ಮನಸ್ಸಿನಲ್ಲಿ ಉಕ್ಕಿ ಬಂದ ಆನಂದವನ್ನು ತಡೆಯಲಾಗಿಲ್ಲ. ಅವರು ನೀಡಿದ ವಚನಗಳು ಎಂದಿಗೂ ಸುಳ್ಳಾಗುವುದಿಲ್ಲ. ಇದು ಸರ್ವಥಾ ಸರ್ವರ ಅನುಭವವೂ ಆಗಿತ್ತು. ॥92॥ ಅನಂತರ, ಈ ವೃತ್ತಾಂತವನ್ನು ಜೋಗನು ದೇವನಿಗೆ ತಿಳಿಸಿದನು. ಅದಕ್ಕೆ ಅವನು ಅತ್ಯಾನಂದತುಂಬಿದ ಮನಸ್ಸಿನಿಂದ ಒಂದು ಸವಿಸ್ತಾರವಾದ ಪತ್ರವನ್ನು ಬರೆದು ಕಳಿಸಿದನು॥93॥ ಆ ಪತ್ರವನ್ನು ಓದಿದ ದೇವನ ಕಣ್ಣುಗಳಲ್ಲಿ ಪ್ರೇಮಾಶ್ರುಗಳು ಉಕ್ಕಿಬಂದವು. ವ್ಯರ್ಥವಾಗಿ ಸಾಯಿಯನ್ನು ದೂಷಿಸಿದ್ದಕ್ಕೆ ಮನಸ್ಸಿನಲ್ಲಿಯೇ ತನ್ನನ್ನು ತಾನೇ ನಿಂದಿಸಿಕೊಂಡನು ಮತ್ತು ಕುಗ್ಗಿದ ಮನಸ್ಸಿನವನಾದನು. ॥94॥ "ಬಾಬಾರವರ ಮಹಿಮೆಯು ಧನ್ಯ! ನನ್ನ ಅಭಿಮಾನಪೂರಿತ ಗ್ರಹಣಶಕ್ತಿಗೆ ಧಿಕ್ಕಾರ! ಆದರೆ ನಾನು ಬಾಬಾರವರು ಸನ್ಯಾಸಿಯೆಂದು ಹೇಗೆ ನಿರ್ಧರಿಸಬೇಕಿತ್ತು ಎಂಬುದು ಅರ್ಥವಾಗುತ್ತಿಲ್ಲ! ॥95॥ "ಕಾರಣವೇನೆಂದರೆ, ನಾನು ಬಾಬಾರವರಿಗೆ ನಿಮಂತ್ರಣ ನೀಡುವ ಮೊದಲೇ ಆ ಸನ್ಯಾಸಿ ಮೊದಲು ಒಂದು ಬಾರಿ ನನ್ನಲ್ಲಿಗೆ ಬಂದಿದ್ದನು. ಅದೂ ತನ್ನದೇ ಕೆಲಸಕ್ಕಾಗಿ ಚಂದಾವಸೂಲಿ ಮಾಡಲು ಬಂದಾಗ ನನ್ನನ್ನು ಭೇಟಿಯಾಗಿದ್ದನು. ॥96॥ "ನಾನು ಅವನಿಗೆ ಎರಡು ಅಥವಾ ನಾಲ್ಕು ತಿಂಗಳುಗಳ ನಂತರ ಹಿಂತಿರುಗಿ ಬರಲು ಹೇಳಿದ್ದೆ. ಅನಂತರ ಅವನು ಊಟ ಕೇಳಿಕೊಂಡು ಬಂದರೆ, ಅವನು ಬಾಬಾರವರೆಂದು ಊಹಿಸಲು ಹೇಗೆ ಸಾಧ್ಯವಾಗುತ್ತದೆ? ॥97॥ "ಬೇರೆ ಇಬ್ಬರ ಜೊತೆ ಊಟಕ್ಕೆ ಬರುತ್ತೇನೆಂದು ಹೇಳಿದ ಬಾಬಾರವರ ವಚನಗಳು ನನಗೆ ಮರೆತು ಹೋಗಿದ್ದವು. ॥98॥ "ಬಾಬಾರವರನ್ನು ಆಮಂತ್ರಿಸಿದ ನಂತರ ಅವನನ್ನು ಮೊದಲ ಬಾರಿಗೆ ನೋಡಿದ್ದರೆ ಮತ್ತು ಅವರು ಕೇವಲ ಊಟಕ್ಕಾಗಿ ಮಾತ್ರ ಬಂದಿದ್ದರೆ, ನನ್ನ ದೃಷ್ಟಿಯು ಮೋಸಹೋಗುತ್ತಿರಲಿಲ್ಲ.

॥99॥ "ಆದರೆ ಅವನು ಗೋರಕ್ಷಣೆಯ ನಿಮಿತ್ತವಾಗಿ ಮತ್ತು ಅವುಗಳ ಆಹಾರಕ್ಕಾಗಿ ಹಣ ಸಂಗ್ರಹ ಮಾಡಲು ಬಂದಿದ್ದನು. ತದನಂತರ, ಸಾಯಿಗೆ ಉದ್ಯಾಪನೆಗಾಗಿ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದ್ದೆ. ॥100॥ "ಆದುದರಿಂದ ಇಂತಹ ಮೋಹ ಉಂಟಾಯಿತು. ಅದರಿಂದಾಗಿ ಈ ಪ್ರಕಾರ ನಡೆಯಿತು. ಅವರು ಇನ್ನು ಬೇರೆ ಇಬ್ಬರ ಜೊತೆ ಬಂದು ಊಟಮಾಡಿದ್ದರೂ, ನಾನು ಅವರನ್ನು ಕೇವಲ ಅನ್ನಾರ್ಥಿಗಳಾಗಿ ಬಂದವರೆಂದು ಭಾವಿಸಿದೆನು. ॥101॥ "ಅವರು ನನಗೆ ಪೂರ್ವ ಪರಿಚಿತರಲ್ಲದಿದ್ದರೆ ಮತ್ತು ಭೋಜನ ಸಮಯಕ್ಕೆ ಸರಿಯಾಗಿ ಬೇರೆ ಇಬ್ಬರ ಜೊತೆಯಲ್ಲಿ ಅನಿರೀಕ್ಷಿತವಾಗಿ ಬಂದಿದ್ದರೆ, ಅವರು ನಿಶ್ಚಯವಾಗಿಯೂ ಸಾಯಿ ಎಂದು ತಿಳಿಯುತ್ತಿದ್ದೆ." ॥102॥ ಆದರೆ ಸಂತರ ವಿಧಾನಗಳೇ ಈ ತರಹದ್ದು! ಅವರ ಲೀಲೆಗಳು ಅಘಟಿತವಾದವುಗಳು. ಮತ್ತು ಅವರ ಕಾರ್ಯಗಳು ಅದ್ಭುತ! ಅವರೇ ಸ್ವತಃ ಭಕ್ತರ ಮನೆಗಳಲ್ಲಿ, ಭಕ್ತರು ಅದನ್ನು ಅರಿಯುವ ಮುಂಚೆಯೇ, ಕಾರ್ಯಸ್ಥಿತಿಗಳನ್ನು ಯೋಜಿಸುತ್ತಾರೆ. ॥103॥ ಭಕ್ತನು ವಿನೀತನಾಗಿ ತಮ್ಮ ಚರಣಗಳಲ್ಲಿ ಶರಣಾದಾಗ, ಶುಭಕಾರ್ಯಗಳನ್ನು ಅವನಿಗೆ ಅರಿವಿಲ್ಲದಂತೆಯೇ ಸಂಭವಿಸುವಂತೆ ಮಾಡುತ್ತಾರೆ. ಸಂತರ ಕಾರ್ಯಗಳು ತರ್ಕಕ್ಕೆ ಮೀರಿದವು. ॥104॥ ಚಿಂತಾಮಣಿಯು ನಾವು ಚಿಂತಿಸಿದುದನ್ನು ನೀಡುತ್ತದೆ. ಕಲ್ಪವೃಕ್ಷವು ಮನದಲ್ಲಿ ಕಲ್ಪಿಸಿದುದನ್ನು ದಯಪಾಲಿಸುತ್ತದೆ. ಕಾಮಧೇನುವು ಆಶೆಗಳನ್ನು ಈಡೇರಿಸುತ್ತದೆ. ಆದರೆ ಗುರುಮಾಯಿಯು ಅನಿರೀಕ್ಷಿತವಾದುದನ್ನೂ ನೀಡುತ್ತಾರೆ. ॥105॥ ಅದು ಹಾಗಿರಲಿ. ಈ ಪ್ರಸಂಗದಲ್ಲಿ ಬಾಬಾರವರು ಆಮಂತ್ರಿಸಲ್ಪಟ್ಟಾಗ ಸನ್ಯಾಸಿಯ ರೂಪದಲ್ಲಿ ಪ್ರಕಟವಾದರು. ಆದರೆ ಅವರ ಲೀಲೆಗಳು ಅಘಟಿತವಾದವುಗಳು. ಕೆಲವೊಮ್ಮೆ ಅವರು ಅಯಾಚಿತವಾಗಿ ಪ್ರಕಟಗೊಳ್ಳುತ್ತಾರೆ. ॥106॥ ಕೆಲವು ಸಲ ಅವರು ಚಿತ್ರಪಟದ ರೂಪದಲ್ಲಿ ಕಾಣಿಸಿಕೊಂಡರು. ಕೆಲವೊಮ್ಮೆ ಅವರು ವಿಗ್ರಹ ಸ್ವರೂಪದಲ್ಲಿ ಪ್ರಕಟಗೊಂಡರು. ಅವರ ಕೃಪೆಗೆ ಯಾವುದೇ ಮಿತಿಯಿಲ್ಲ. ಅವರು ತಮಗೆ ತಾವೇ ಇಚ್ಛೆಪಟ್ಟು ಪ್ರಕಟಗೊಂಡರು. ॥107॥ ಈ ಅರ್ಥದಲ್ಲಿ ನನ್ನದೇ ಆದ ಒಂದು ಅನುಭವವನ್ನು ಶ್ರೋತೃಗಳು ಕೇಳಿದರೆ ಆಶ್ಚರ್ಯಚಕಿತರಾಗುವರು. ಅವರೆಲ್ಲರೂ ಸಾಯಿಲೀಲೆಯ ಪ್ರಭಾವವನ್ನು ಅರ್ಥಮಾಡಿಕೊಳ್ಳುತ್ತಾರೆ. ಈ ಚರಿತ್ರೆಯು ಅಭಿನವವೂ ಮತ್ತು ಅಪೂರ್ವವೂ ಆಗಿದೆ. ॥108॥ ಕೆಲವರು ಅದನ್ನು ಧಾರ್ಮಿಕ ಅನುಭವವೆಂದೂ, ಕೆಲವರು ಅದನ್ನು ಒಂದು ಕಥೆಯೆಂದೂ ಕರೆಯಬಹುದು. ನಿಮಗೆ ಇಚ್ಛೆಬಂದಂತೆ ಕರೆಯಿರಿ. ಆದರೆ ಅದನ್ನು ಆದರದಿಂದ ಕೇಳಿರಿ. ॥109॥ ಆಯಾಸ ಮತ್ತು ನಿದ್ರೆಯನ್ನು ಪಕ್ಕಕ್ಕೆ ಸರಿಸಿ, ಸಾವಧಾನ ಮನಸ್ಸಿನಿಂದ ಈ ಕಥೆಯನ್ನು ಕೇಳಿರಿ. ನನಗೆ ಈ ಕೋರಿಕೆಯನ್ನು ದಯಪಾಲಿಸಿ. ನನಗೆ ತೃಪ್ತಿಯಿಂದ ಸಮಾಧಾನವಾಗುತ್ತದೆ. ॥110॥ ವ್ಯಗ್ರತೆಯನ್ನು ಸ್ವಲ್ಪಕಾಲ ದೂರ ಸರಿಸಿ, ಸ್ವಸ್ಥಚಿತ್ತದಿಂದ ಶಾಂತಚಿತ್ತರಾಗಿ ಕೇಳಿರಿ. ಇದನ್ನು ಶ್ರವಣ ಮಾಡಿದಲ್ಲಿ ಉಪಯುಕ್ತವಾಗಿರುತ್ತದೆ. ಅನಂತರ ನೀವು ಇದರ ಮೇಲೆ ಮನನ ಮತ್ತು ನಿಧಿಧ್ಯಾಸನ ಮಾಡಬಹುದು. ॥111॥ ಅನಂತರ, ಮುಂದೆ ಅದೇ ಆತ್ಮಸಾಕ್ಷಾತ್ಕಾರಕ್ಕೆ ದಾರಿಯಾಗುತ್ತದೆ.

ಆದರೆ ಇದೆಲ್ಲವೂ ನೀವು ಯಾವ ರೀತಿ ಆಲಿಸುತ್ತೀರಿ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಇದೇ ಎಲ್ಲದರ ಸಾರವು. ನೀವು ಅನಂತರ ಭವಸಾಗರವನ್ನು ದಾಟುವುದು ನಿಶ್ಚಿತ. ॥112॥ ಸನ್ 1917ನೆಯ ಇಸವಿ ಫಾಲ್ಗುಣ ಮಾಸದ ಶುದ್ಧ ಪೌರ್ಣಿಮೆಯ ದಿನ, ನಾನು ನನ್ನ ಹಾಸಿಗೆಯ ಮೇಲೆ ಮಲಗಿ ನಿದ್ರಿಸುತ್ತಿದ್ದಾಗ, ಬೆಳಗಿನ ಜಾವದಲ್ಲಿ ನನಗೆ ಒಂದು ಸ್ವಪ್ನ ಬಿತ್ತು. ॥113॥ ಸಾಯಿಯ ಸುಚೇಷ್ಟೆಗಳನ್ನು ನೋಡಿ! ಸುಂದರವಾದ ವೇಷಭೂಷಣಗಳನ್ನು ಧರಿಸಿದ ಸನ್ಯಾಸಿಯ ರೂಪದಲ್ಲಿ ದರ್ಶನ ನೀಡಿದರು ಮತ್ತು ಎಚ್ಚರಿಸಿ ಹೇಳಿದರು, "ನಾನಈ ದಿನ ಊಟಕ್ಕೆ ಬರುತ್ತಿದ್ದೇನೆ." ॥114॥ ಅವರು ನನ್ನನ್ನು ಎಚ್ಚರಿಸಿದುದೂ ಕನಸಿನ ಒಂದು ಭಾಗವಾಗಿತ್ತು. ಏಕೆಂದರೆ ನಾನು ನಿಜವಾಗಿಯೂ ಎಚ್ಚರಗೊಂಡಾಗ ನಾನು ಕನಸನ್ನು ನೆನಪಿಸಿಕೊಳ್ಳಲು ಪ್ರಾರಂಭಿಸಿದೆ. ॥115॥ ನಾನು ಯಾವಾಗ ಕಣ್ಣುಗಳನ್ನು ತೆರೆದೆನೋ ಮತ್ತು ನೋಡಲು ಪ್ರಾರಭಿಸಿದೆನೋ ಅಲ್ಲಿ ಸಾಯಿಯಾಗಲಿ ಅಥವಾ ಮತ್ತಾರೇ ಆಗಲಿ ಇರಲಿಲ್ಲ. ಅದು ಕೇವಲ ಸ್ವಲ್ಪ ಸಮಯಕ್ಕೆ ಮುಂಚೆ ಕಂಡ ಒಂದು ಕನಸಾಗಿತ್ತು, ಮತ್ತು ನಾನು ಯತ್ಕಿಂಚಿತ್ತೂ ಎಚ್ಚರವಾಗಿರಲಿಲ್ಲ. ॥116॥ ಅದು ನನ್ನ ಮನಸ್ಸಿಗೆ ನಿಶ್ಚಯವಾದಾಗ ನನ್ನ ಸ್ವಪ್ನಸ್ಥಿತಿಯನ್ನು ನೆನಪಿಸಿಕೊಳ್ಳಲು ಪ್ರಾರಂಭಿಸಿದೆ. ನಾನು ಅಕ್ಷರಶಃ ಅದನ್ನು ನೆನಪಿಗೆ ತಂದುಕೊಂಡೆ. ಲವಮಾತ್ರವನ್ನಾದರೂ ಮರೆಯಲಿಲ್ಲ. ॥117॥ "ನಾನು ಈ ದಿನ ಊಟಕ್ಕೆ ಬರುತ್ತೇನೆ" ಸಾಯಿಯ ಈ ಸ್ಪಷ್ಟವಾದ ಉಕ್ತಿಗಳನ್ನು ಕೇಳಿ ನಾನು ಆನಂದದಿಂದ ತುಂಬಿಹೋದೆ. ನಾನು ಈ ವಿಷಯವನ್ನೆಲ್ಲ ನನ್ನ ಪತ್ನಿಗೆ ತಿಳಿಸಿದೆನು. ॥118॥ಸಾಯಿಯನ್ನು ಮನಸ್ಸಿನಲ್ಲೇ ಚಿಂತಿಸಿ ಧ್ಯಾನಿಸುವುದು ನನ್ನ ನಿರಂತರ ಅಭ್ಯಾಸವಾಗಿತ್ತು. ಅವರ ಸಹವಾಸದಲ್ಲಿ ಕಳೆದ ಏಳು ವರ್ಷಗಳನ್ನು ಕಳೆದಿದ್ದರೂ, ನಾನು ಎಂದಿಗೂ ಅವರು ಭೋಜನಕ್ಕೆ ಬರುವುದನ್ನು ನಿರೀಕ್ಷಿಸಿರಲಿಲ್ಲ. ॥119॥ ಅದು ಹಾಗಿರಲಿ. ನಾನು ಅವಳಿಗೆ (ಪತ್ನಿ) ಹೇಳಿದೆನು, "ಈದಿನ ಹೋಲಿ ಹಬ್ಬ, ಮತ್ತು ಒಂದು ಪಾವು ಹೆಚ್ಚು ಅಕ್ಕಿಯನ್ನು ಬೇಯಿಸಲು ಹಾಕು. ಮರೆಯಬೇಡ." ॥120॥ ನಾನು ಅವಳಿಗೆ ಇದನ್ನು ತಿಳಿಸಿದಾಗ ಅವಳು ನನ್ನ ನಿರ್ದೇಶನದ ಹಿಂದಿರುವ ಕಾರಣವನ್ನು ಕೇಳಲು ಪ್ರಾರಂಭಿಸಿದಳು. ನಾನು ಅವಳಿಗೆ ಹೇಳಿದೆನು, "ಈ ದಿನ ಹಬ್ಬವಾದುದರಿಂದ ಊಟಕ್ಕೆ ಒಬ್ಬ ಅತಿಥಿಯೂ ಬರುತ್ತಾರೆ." ॥121॥ ಅದಕ್ಕೆ ಅವಳು ಪ್ರಶ್ನಿಸಿದಳು, "ಯಾರು ಬರುತ್ತಿರುವುದು?" ಅವಳು ತನ್ನ ಕುತೂಹಲವನ್ನು ತಡೆಯಲಾರದೆ ಕೇಳಿದಳು. ಆದರೆ ನಾನು ನಿಜವಾದ ಕಾರಣವನ್ನು ಅವಳಿಗೆ ಬಹಿರಂಗ ಪಡಿಸಿದರೆ, ಅದಕ್ಕೆ ಅವಳು ನಗಬಹುದೆಂಬ ಹೆದರಿಕೆ ಉಂಟಾಯಿತು. ॥122॥ ಇದು ನನಗೆ ಚೆನ್ನಾಗಿ ತಿಳಿದಿದ್ದರೂ, ನಾನು ಅವಳನ್ನು ಮೋಸಪಡಿಸಲು ಇಷ್ಟಪಡಲಿಲ್ಲ. ಆದ್ದರಿಂದ ಶ್ರದ್ಧಾಪೂರ್ವಕವಾಗಿ ಅವಳಿಗೆ ಸತ್ಯವನ್ನು ತಿಳಿಸಿದೆನು. ॥123॥ ಆದರೆ ಇವೆಲ್ಲವೂ ಶ್ರದ್ಧೆಯ ಮೇಲೆ ಅವಲಂಬಿತವಾಗಿರುತ್ತದೆ. ಅಂತರಂಗದಲ್ಲಿ ಏನು ಭಾವಿಸಿದ್ದರೂ, ಸತ್ಯವಾಗಲಿ, ಇಲ್ಲದಿರಲಿ, ಅವರವರ ಮನೋವೃತ್ತಿಗೆ ಅನುಸಾರವಾಗಿ ಸರ್ವದಾ ಇರುತ್ತದೆ. ॥124॥ ನಾನು ಅವಳನ್ನು ಅದೆಷ್ಟು ಖಾತ್ರಿಪಡಿಸಲು ಪ್ರಯತ್ನಪಟ್ಟರೂ

ಸಹ ಅವಳು ಅಂತರಂಗದಲ್ಲಿ ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ. ಅವಳು ಹೇಳಿದಳು, "ಬಾಬಾರವರು ಅಷ್ಟುದೂರದ ಶಿರಡಿಯಿಂದ ಏಕೆ ಬರುತ್ತಾರೆ? ||125|| "ಇಲ್ಲಿರುವ ಭೋಜನವಾದರೂ ಏನು? ಮತ್ತು ನಾವು 'ಹೋಲಿ'ಗಾಗಿ ಯಾವ ಆಚರಣೆಯನ್ನು ಇಟ್ಟುಕೊಂಡಿದ್ದೇವೆ? ಶಿರಡಿಯ ಮೃಷ್ಟಾನ್ನವನ್ನು ಬಿಟ್ಟು, ಇಲ್ಲಿಯ ಈ ಒರಟು ಊಟವನ್ನು ಮಾಡಲು ಇಲ್ಲಿಗೆ ಬರುತ್ತಾರೇನು?" ||126|| ಅವಳ ಈ ವಾದವನ್ನು ಕೇಳಿ ನಾನು ಹೇಳಿದೆ, "ಇನ್ನು ಸ್ವಲ್ಪ ಹೆಚ್ಚು ಅನ್ನ ಮಾಡಲು ನಿನಗೆ ಏನು ಕಷ್ಟ? ಅದರಿಂದ ನೀನು ಕಳೆದುಕೊಳ್ಳುವುದು ಏನೂ ಇಲ್ಲ. ||127|| "ಸಾಯಿಯೇ ಪ್ರತ್ಯಕ್ಷವಾಗಿ ಅತಿಥಿಯಾಗಿ ಬರುತ್ತಾರೆಂದು ನಾನು ಹೇಳುತ್ತಿಲ್ಲ. ಅದನ್ನು ನಾನಾಗಿ ನಿನಗೆ ಹೇಳುವುದಿಲ್ಲ. ಆದರೆ ಬೇರೆ ಯಾರಾದರೂ ಒಬ್ಬರು ಬಂದೇ ಬರುತ್ತಾರೆ. ನನಗೆ ಅದರ ಬಗ್ಗೆ ಸ್ವಲ್ಪವೂ ಶಂಕೆಯಿಲ್ಲ. ||128|| "ನೀನು ಇದನ್ನು ಯಾವ ರೀತಿಯಲ್ಲಾದರೂ ಪರಿಗಣಿಸು. ಆದರೆ ನಾನು ಮಾತ್ರ ಪ್ರತ್ಯಕ್ಷ ಸಾಯಿ ಸಮಾನರೆಂದೇ ಭಾವಿಸಿ ಸತ್ಕರಿಸುತ್ತೇನೆ. ಇಲ್ಲದಿದ್ದರೆ ನನ್ನ ಸ್ವಪ್ನವು ಅರ್ಥಹೀನವಾಗುತ್ತದೆ." ||129|| ಅದು ಹಾಗಿರಲಿ. ಈ ರೀತಿ ಚರ್ಚೆಯ ನಂತರ ಮಧ್ಯಾಹ್ನದ ಸಮಯದಲ್ಲಿ ಮತ್ತು ವಿಧಿವತ್ತಾಗಿ ಹೋಲಿ ಪೂಜೆಯು ನಡೆಯಿತು. ಅನಂತರ ಭೋಜನಕ್ಕೆ ಎಲೆಗಳನ್ನು ಹಾಕಿದರು. ||130|| ಕುಟುಂಬದ ಎಲ್ಲ ಸದಸ್ಯರು– ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಪ್ರೀತಿಯ ಸ್ನೇಹಿತರು ಮತ್ತು ಬಂಧುಗಳು ಬಂದು ಪಂಕ್ತಿಯಲ್ಲಿ ಒಬ್ಬರ ಬೆನ್ನಿಗೆ ಮತ್ತೊಬ್ಬರು ಈ ರೀತಿ ಊಟಕ್ಕೆ ಕುಳಿತಿದ್ದರು. ಆ ಜಾಗವೆಲ್ಲವನ್ನೂ ಬಗೆಬಗೆಯ ರಂಗೋಲಿಗಳಿಂದ ಶೃಂಗರಿಸಿದ್ದರು. ||131|| ಮುಖ್ಯವಾದ ಪಂಕ್ತಿಯಲ್ಲಿ, ಮಧ್ಯಭಾಗದಲ್ಲಿ ಗೌರವ ಪೂರ್ವಕವಾದ ಒಂದು ಆಸನವನ್ನು ಸಾಯಿಗಾಗಿ ಮೀಸಲಿಟ್ಟು ಇತರರೊಡನೆ ಊಟಬಡಿಸಲು ಇಟ್ಟಿದ್ದರು. ||132|| ಊಟದ ಎಲೆಗಳ ಸುತ್ತಲೂ ನೀಲಿ ಮತ್ತಿತರ ಬಣ್ಣದ ರಂಗೋಲಿಗಳಿಂದ ಅಲಂಕಾರವಾಗಿತ್ತು.ಪ್ರತಿಯೊಬ್ಬರಿಗೂ ಪ್ರತ್ಯೇಕವಾದ ಒಂದು ತಾಮ್ರದ ಪಂಚಪಾತ್ರೆಯನ್ನು ಮತ್ತು ಒಂದು ನೀರಿನ ಪಾತ್ರೆ, ಲೋಟ ಮತ್ತು ಚಮಚ ಎಲ್ಲರಿಗೂ ಸಮನಾಗಿ ಇಡಲಾಗಿತ್ತು. ||133|| ಹಪ್ಪಳ, ಸಂಡಿಗೆ, ಕೋಸಂಬರಿ, ಉಪ್ಪಿನಕಾಯಿ, ರಾಯಿತ ವಿವಿಧ ರೀತಿಯ ತರಕಾರಿಗಳ ಪಲ್ಯಗಳು. ಖೀರು ಮತ್ತಿತರೆ ಅನೇಕ ತರಹದ ಭಕ್ಷ್ಯ ಭೋಜ್ಯಗಳನ್ನು ತಯಾರಿಸಲಾಗಿತ್ತು. ||134|| ಮಧ್ಯಾಹ್ನ 12 ಗಂಟೆಯಾಗುತ್ತಿದ್ದಂತೆ ಅತಿಥಿಗಳು ಸೋವಲ (ಅಂಹಸ್ತ್ರ) ಧರಿಸಿ ಒಬ್ಬೊಬ್ಬರಾಗಿ ತಮ್ಮ ಆಸನಗಳನ್ನು ಸ್ವೀಕರಿಸಿ ಕುಳಿತುಕೊಂಡರು. ಆದರೆ ಮತ್ತೆ ಬೇರೆಯಾರೂ ಬರಲಿಲ್ಲ. ||135|| ಎಲ್ಲ ಊಟದೆಲೆಗಳ ತುಂಬ ಅನ್ನ, ಪೋಳಿ (ಒಬ್ಬಟ್ಟು), ವರಾನ್ನ ಇವುಗಳನ್ನು ಬಡಿಸಲಾಯಿತು. ಮಧ್ಯಭಾಗದಲ್ಲಿದ್ದ ಊಟದೆಲೆಯು ಗೌರವ ಪೂರಿತ ಸ್ಥಾನದ್ದಾಗಿದ್ದು ಅದನ್ನು ಮಾತ್ರ ಖಾಲಿಬಿಡಲಾಗಿತ್ತು. ಇಲ್ಲದಿದ್ದಲ್ಲಿ ಆ ಜಾಗದಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ. ||136|| ಯಾರಾದರೂ ಅತಿಥಿಯೋ ಅಥವಾ ಅನಿರೀಕ್ಷಿತವಾಗಿ ಭೇಟಿಯಾಗುವ ವ್ಯಕ್ತಿಯೋ ಬರುತ್ತಾರೆಂದು ನನಗೆ ತಿಳಿದಿತ್ತು, ಅದಕ್ಕಾಗಿ ಅವರ ಬರವಿಗಾಗಿ ನಾನು ಕಾದೆನು. ಆದರೆ ಎಷ್ಟು ಸಮಯದವರೆಗೆ ಕಾಯುವುದು ಎಂದು

ಮನದಲ್ಲೇ ಚಿಂತಿಸತೊಡಗಿದೆ. ॥137॥ ಆದ್ದರಿಂದ, ಬಾಗಿಲು ಮುಚ್ಚಿ ಸರಪಳಿ ಹಾಕಲಾಯಿತು. ತುಪ್ಪವನ್ನು ಅನ್ನಶುದ್ಧಿಗಾಗಿ ಕೂಡಲೇ ಬಡಿಸಲಾಯಿತು. ವೈಶ್ವಾನರ ದೇವನಿಗೆ ನೈವೇದ್ಯ ಇಡಲಾಯಿತು ಮತ್ತು ಬ್ರಹ್ಮಾರ್ಪಣ ಮಾಡುವ ಸಮಯ ಬಂದಿತು. ॥138॥ ಪ್ರಾಣಾಹುತಿಯ ಸಮಯದಲ್ಲಿ ಮೆಟ್ಟಿಲುಗಳ ಮೇಲೆ ಹೆಜ್ಜೆಗಳ ಸಪ್ಪಳ ಕೇಳಿಸಿತು. ಯಾರೋ ಒಬ್ಬರು ಕೂಗಿದರು, "ರಾವ್ ಸಾಹೇಬ ಎಲ್ಲಿದ್ದಾರೆ?" ಎಲ್ಲಾ ಅಭ್ಯಾಗತರೂ ಸುಮ್ಮನೆ ಕುಳಿತರು. ॥139॥ ಅನಂತರ ನಾನು ಕೂಡಲೇ ಬಾಗಿಲ ಬಳಿ ಹೋದೆನು. ಅಲ್ಲಿ ಯಾರೋ ಒಬ್ಬರು ಬಂದಿದ್ದನ್ನು ನೋಡಿದನು. ನಾನು ನಿಧಾನವಾಗಿ ಬಾಗಿಲು ತೆರೆಯುತ್ತಿದ್ದಂತೆ, ಅಲ್ಲಿ ಇಬ್ಬರು ವ್ಯಕ್ತಿಗಳನ್ನು ನೋಡಿದೆನು. ॥140॥ ಅವರಲ್ಲೊಬ್ಬನು ಅಲಿ ಮಹಮದ್ ಮತ್ತು ಇನ್ನೊಬ್ಬನು ಸಂತ ಮೌಲಾನಾನ ಶಿಷ್ಯ. ಅವನ ಹೆಸರು ಇಸ್ಮು ಮುಜಾವರ. ಅವರಿಬ್ಬರೂ ಬಹಳ ಆನಂದದಿಂದ ಇದ್ದಂತೆ ಕಂಡರು. ॥141॥ ಎಲ್ಲ ಜನರೂ ಊಟಕ್ಕೆ ಕುಳಿತಿದ್ದನ್ನು ನೋಡಿ ಮತ್ತು ಭೋಜನದ ತಯಾರಿ ನೋಡಿ ಅಲಿಯು ವಿನಂತಿಸಿಕೊಂಡನು. "ನಿಮಗೆ ತೊಂದರೆಕೊಟ್ಟಿದ್ದಕ್ಕೆ ಕ್ಷಮಿಸಿರಿ. ॥142॥ "ನೀನು ಊಟಕ್ಕೆ ಕುಳಿತಿದ್ದು ಮಧ್ಯೆ ಎದ್ದು ಬಂದಂತೆ ಕಾಣುತ್ತದೆ ಮತ್ತು ನನಗೋಸ್ಕರ ಬೇಗ ಬಂದಿರುವೆ. ನಿನಗಾಗಿ ಮತ್ತೆಲ್ಲರೂ ಊಟ ನಿಲ್ಲಿಸಿ ಕಾಯುತ್ತಿದ್ದಾರೆ. ॥143॥ "ಆದರೂ ಸಹ, ದಯವಿಟ್ಟು ಈ ವಸ್ತುವನ್ನು ತೆಗೆದುಕೊಳ್ಳಿ. ಆಮೇಲೆ ನಾನು ಪುರಸತ್ತಿನಲ್ಲಿ ನಿಮ್ಮನ್ನು ಭೇಟಿಯಾಗಿ ಇದರ ಅದ್ಭುತವನ್ನು ವಿವರಿಸುತ್ತೇನೆ. ಅದೊಂದು ಅತ್ಯದ್ಭುತವಾದ ಕಥೆ." ॥144॥ ಈ ರೀತಿ ಹೇಳಿ ಅಲಿ ತನ್ನ ಕಂಕುಳಿನಿಂದ ಒಂದು ಪೊಟ್ಟಣವನ್ನು ತೆಗೆದು ಮೇಜಿನ ಮೇಲಿಡುತ್ತ ಅದನ್ನು ಬಿಚ್ಚಲು ಪ್ರಾರಂಭಿಸಿದನು. ॥145॥ ಸುತ್ತಿದ್ದ ವೃತ್ತ ಪತ್ರಿಕೆಯನ್ನು ತೆಗೆದಕೂಡಲೇ ಅಲ್ಲಿ ಒಂದು ಸಾಯಿಯ ಚಿತ್ರಪಟವು ಕಂಡಿತು. ಅವನು ಹೇಳಿದನು, "ಇದನ್ನು ನಿನ್ನಲ್ಲೇ ಇಟ್ಟುಕೋ. ದಯಮಾಡಿ ನನ್ನ ಕೋರಿಕೆಯನ್ನು ಮನ್ನಿಸು." ॥146॥ ಸಾಯಿಯ ಚಿತ್ರಪಟವನ್ನು ನೋಡಿ ಕೂಡಲೇ ನನ್ನ ಶರೀರವು ರೋಮಾಂಚನಗೊಂಡಿತು. ಅವರ ಚರಣಗಳಲ್ಲಿ ನನ್ನ ಶಿರವನ್ನಿಟ್ಟು ಭಾವೋದ್ರೇಕದಿಂದ ಗದ್ಗದಿತನಾದೆ. ॥147॥ ಇದೊಂದು ಬಹುದೊಡ್ಡ ಚಮತ್ಕಾರವೆನ್ನಿಸಿತು. ಇದೊಂದು ಸಾಯಿಯ ವಿಚಿತ್ರ ಲೀಲೆಯು. ಅವರ ಈ ಕಾರ್ಯದಿಂದ ನಾನು ಅತ್ಯಂತ ಪವಿತ್ರನಾದೆನೆಂದು ಭಾವಿಸಿದೆ. ॥148॥ ನಾನು ಪ್ರಬಲವಾಗಿ ಉತ್ಕಂಠಿತ ಮನದವನಾಗಿದ್ದೆ. "ಈ ಚಿತ್ರಪಟವು ನಿನಗೆ ಎಲ್ಲಿಂದ ದೊರಕಿತು? ಅವನು ಉತ್ತರಿಸಿದನು, "ನಾನು ಒಂದು ಅಂಗಡಿಯಿಂದ ಅದನ್ನು ಖರೀದಿಸಿ ತಂದೆನು." ॥149॥ ಅನಂತರ ಅವರಿಬ್ಬರೂ ಒಂದು ಕ್ಷಣಮಾತ್ರವೂ ಅಲ್ಲಿ ಕಾಯಲಿಲ್ಲ. ಅವರು ಹೇಳಿದರು, "ನಾವು ಈಗ ಹೊರಡುತ್ತಿದ್ದೇವೆ. ನೀವು ದಯಮಾಡಿ ಯಾವುದೇ ರೀತಿಯ ಶಾಂತಿ ಭಂಗವಾಗದೆ ಊಟ ಮಾಡಿ. ॥150॥ "ಒಂದು ವೇಳೆ ಈ ಕ್ಷಣದಲ್ಲಿ ನಾನು ಇದರ ಹಿಂದೆ ಇರುವ ಕಾರಣವನ್ನು ಹೇಳುತ್ತ ಹೋದರೆ ನಿಷ್ಕಾರಣವಾಗಿ ಇಲ್ಲಿ ನಿಮ್ಮೆಲ್ಲರ ಊಟವೂ ವಿಳಂಬವಾಗುತ್ತದೆ. ನಾನು ಅದನ್ನು ಅನಂತರ ಹೇಳುತ್ತೇನೆ." ॥151॥ ನಾನೂ ಸಹ ಅವರ ಮಾತಿಗೆ

ಸಮ್ಮತಿಸಿದೆ. ಆ ಸಮಯಕ್ಕೆ ಸರಿಯಾಗಿ ಚಿತ್ರಪಟವು ಬಂದುದಕ್ಕೆ ನಾನು ಬಹಳ ಆನಂದಪಟ್ಟೆ ಮತ್ತು ನಾನು ಅದರ ಕೆಲಸದಲ್ಲಿದ್ದುಬಿಟ್ಟೆ. ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿದೆ. ॥152॥ "ಸರಿ, ಶುಭವಾಗಲಿ." ನಾನು ಅನಂತರ ನಿಮಗೆ ಹೇಳುತ್ತೇನೆ, ಆ ಚಿತ್ರಪಟ ಇಲ್ಲಿಗೆ ಏಕೆ ಬಂತು ಎಂದು. ಅದನ್ನು ಈಗಲೇ ಹೇಳುವ ಅವಶ್ಯಕತೆಯಿಲ್ಲ." ॥153॥ ಅದು ಹಾಗಿರಲಿ, ಅವರು ಅಲ್ಲಿಂದ ಹೊರಟು ಹೋದಮೇಲೆ, ಆ ಚಿತ್ರಪಟವನ್ನು ಮಧ್ಯದಲ್ಲಿದ್ದ ಸಾಯಿಗೆಂದು ಯಥಾನಿಶ್ಚಿತವಾದ ಆಸನದ ಮೇಲೆ ಇಡಲಾಯಿತು. ॥154॥ ಪ್ರತಿಯೊಬ್ಬರೂ ಮನಸ್ಸಿನಲ್ಲೇ ಸಂತೋಷಪಟ್ಟರು. ಸಾಯಿಯ ರೀತಿಗಳು ಅತರ್ಕ್ಯವಾಗಿದ್ದವು. ಅವರು ಕನಸಿನಲ್ಲಿ ನುಡಿದ ಮಾತುಗಳು ನಿಜವಾಗಿದ್ದು ಈ ಚಿತ್ರಪಟದ ರೂಪದಲ್ಲಿ ಅಲ್ಲಿಗೆ ಆಗಮಿಸಿದ್ದರು. ॥155॥ ಎಲ್ಲ ಜನರೂ, ಯಾರೊಬ್ಬ ಅತಿಥಿಯು ಊಟಕ್ಕೆ ಬಂದು ಸೇರುವನೆಂದು ನಿರೀಕ್ಷಿಸುತ್ತಿದ್ದವರೂ ಸಹ ಬಹು ಅಚ್ಚರಿಪಟ್ಟರು. ॥156॥ ಚಿತ್ರಪಟದಲ್ಲಿದ್ದ ಸುಂದರವಾದ ಮೂರ್ತಿಯ ರೂಪವನ್ನು ನೋಡಿ ಪ್ರತಿಯೊಬ್ಬರೂ ಪರಮ ಆಹ್ಲಾದಪಟ್ಟರು. ಸರ್ವಜನರೂ ಊಹಿಸಲಸಾಧ್ಯವಾದ ರೀತಿಯಲ್ಲಿ ನಡೆದಂತಹ ಘಟನೆಯಿಂದ ಆಶ್ಚರ್ಯಚಕಿತರಾದರು. ॥157॥ ಆ ಚಿತ್ರಪಟವನ್ನು ಮಧ್ಯದ ಆಸನದಲ್ಲಿಟ್ಟನಂತರ ಮತ್ತು ಪೂರ್ಣರೀತಿಯಲ್ಲಿ ಪ್ರತಿಷ್ಠಾಪನೆ, ಅರ್ಘ್ಯ, ಪಾದ್ಯಾದಿಗಳಿಂದ ಪೂಜೆ, ಭಕ್ತಿಪ್ರೇಮಗಳಿಂದ ನೈವೇದ್ಯ ಸಮರ್ಪಣೆ ಮಾಡಿದರು. ಅನಂತರ ಎಲ್ಲರೂ ಭೋಜನವನ್ನು ಆರಂಭಿಸಿದರು. ॥158॥ ಅಲ್ಲಿಂದಾಚೆಗೆ, ಈ ದಿನದವರೆಗೆ, ಪ್ರತಿಯೊಂದು ಹೋಲಿಯದಿನ, ಪ್ರತ್ಯೇಕವಾಗಿ ಒಂದು ಚಿತ್ರಪಟವನ್ನಿಟ್ಟು ಅಷ್ಟೋಪಚಾರ ಪೂಜೆಯ ಸಹಿತ ಆಚರಿಸುವುದು ಶಿಷ್ಟಾಚಾರವಾಗಿ ಬಂದಿದೆ. ॥159॥ ಈ ಚಿತ್ರಪಟವನ್ನೂ ಪೂಜಿಸಿ, ಮನೆಯಲ್ಲಿದ್ದ ಪೂಜಾಮಂದಿರದಲ್ಲಿ ಇತರ ದೇವರುಗಳ ಚಿತ್ರಪಟಗಳ ಜೊತೆಯಲ್ಲಿಟ್ಟು ಪೂಜಿಸುತ್ತಿದ್ದರು. ಈ ರೀತಿ ಸಾಯಿಯ ಚರಿತ್ರೆಯು ಅಪೂರ್ವವಾಗಿದೆ. ಬಾಬಾ ತಮ್ಮ ಕಾರ್ಯಗಳನ್ನು ತಮ್ಮ ಭಕ್ತರಿಗೆ ಪ್ರತಿಹೆಜ್ಜೆ ಹೆಜ್ಜೆಗೂ ತೋರಿಸಿದ್ದಾರೆ. ॥160॥ ಅದು ಹಾಗಿರಲಿ. ಅನಂತರ ಅವರಿಬ್ಬರೂ ನನ್ನನ್ನು ಭೇಟಿಮಾಡುವುದನ್ನು ಇಂದು ನಾಳೆ ಎನ್ನುತ್ತ ಮುಂದೂಡಲಾಯಿತು. ಈ ರೀತಿ ಒಂಭತ್ತು ವರ್ಷಗಳು ಕಳೆದವು. ಅದರೂ ನಾನು ಅವರನ್ನು ಭೇಟಿಯಾಗಲಿಲ್ಲ. ॥161॥ ಕೊನೆಯಲ್ಲಿ, ಕರ್ಮ–ಧರ್ಮಸಂಯೋಗವಶಾತ್ ನಾನು ಅಲ್ಲಿ ಮಹಮದ್‌ನನ್ನು ಭೇಟಿಯಾದೆ. ಅದೂ ಸಹ ನಾನು ಸಹಜವಾಗಿಯೇ ನಡೆದುಕೊಂಡು ಹೋಗುತ್ತಿರುವಾಗ ಅವನನ್ನು ಭೇಟಿಯಾದೆನು. ॥162॥ ನಾನು ಅವನನ್ನು ಭೇಟಿಯಾದ ಕೂಡಲೆ ಬಹಳ ಉತ್ಸುಕನಾಗಿ ಆ ಚಿತ್ರಪಟದ ಕೌತುಕದ ಬಗ್ಗೆ ಪ್ರಶ್ನಿಸಿದೆ. "ನೀನೇಕೆ ಇಷ್ಟು ವರ್ಷ ಮೌನವಾಗಿದ್ದೆ ಮತ್ತು ಏನನ್ನೂ ಹೇಳಲಿಲ್ಲವೇಕೆ? ನೀನೇನು ಸೇವಕನಾಗಿ ಬಿಟ್ಟಿರುವೆಯಾ? ॥163॥ "ಹಿಂದಿನ ದಿನದ ರೀತಿಯಲ್ಲಿಯೇ ಈ ದಿನವೂ ಅನಿರೀಕ್ಷಿತವಾಗಿ ನಾವು ಭೇಟಿಯಾಗುತ್ತಿದ್ದೇವೆ. ಆ ಯೋಗವು ಈ ದಿನ ಸಹಜವಾಗಿಯೇ ಬಂದಿದೆ. ಆ ಅಚ್ಚರಿಯ ಕಥೆಯನ್ನು ಸಮಗ್ರವಾಗಿ ಹೇಳು. ॥164॥ "ನೀನೂ ಸಹ ಶ್ರೀ ಸಾಯಿಯ ಭಕ್ತನೇ. ಅದು ನನಗೆ ಚೆನ್ನಾಗಿ ಗೊತ್ತು. ಆದರೆ

ಆ ದಿನ ನೀನು ಅನಿರೀಕ್ಷಿತವಾಗಿ ಬರಲು ಉಚಿತವೆಂದು ಹೇಗೆ ಭಾವಿಸಿದೆ?" ॥165॥ ಅನಂತರ ಆಲಿ ಆ ವೃತ್ತಾಂತವನ್ನು ವಿವರಿಸಿದನು. ಅವನು ಹೇಳಿದನು, "ಕೇಳು, ನಾನು ಆ ಕಥೆಯನ್ನು ಆಮೂಲಾಗ್ರವಾಗಿ ಹೇಳುತ್ತೇನೆ. ಸಾಯಿಯವರ ಲೀಲೆಯು ಅತ್ಯದ್ಭುತವಾದದ್ದು ಅದೆಲ್ಲವೂ ಆಶ್ಚರ್ಯಭರಿತವಾಗಿಯೇ ಇದೆ." ॥166॥ "ಈ ಲೀಲೆಯ ಅರ್ಥವೇನು? ಈ ಕಾರ್ಯದ ಅವನ ಉದ್ದೇಶವೇನು? ಮತ್ತು ಭಕ್ತರಿಗಾಗಿ ಯಾವ ಉದ್ದೇಶ ಇಂಗಿತವಿತ್ತು? ಕೇವಲ ಸಾಯಿಗೆ ಮಾತ್ರವೇ ಇದು ಚೆನ್ನಾಗಿ ಗೊತ್ತು." ॥167॥ "ನಾವು ಕೇವಲ ಪ್ರೀತಿಯೊಂದು ಲೀಲೆಯನ್ನೂ ಕಿವಿಯಿಂದ ಕೇಳಬಹುದು ಅಥವಾ ಅವುಗಳನ್ನು ನಮ್ಮ ಮುಖದಿಂದ ಹಾಡಬಹುದು. ಅವು ನಿಜವಾಗಿಯೂ ಶ್ರೇಯಸ್ಸನ್ನುಂಟುಮಾಡುತ್ತವೆ. ॥168॥ ಅದು ಹಾಗಿರಲಿ. ಮುಂದಿನ ನಿರೂಪಣೆಯನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುತ್ತದೆ. ಶ್ರೋತೃಸಮುದಾಯವು ಸಾಯಿಯ ಅಮೋಘವಾದ ಈ ಚರಿತ್ರೆಯನ್ನು ಕೇಳಿ ಖಂಡಿತವಾಗಿಯೂ ಆನಂದಪಡುತ್ತದೆ. ॥169॥ ಆನಂದಘನರಾದ ಮತ್ತು ಯಾರನ್ನೂ ದ್ವೇಷಿಸದೇ ಇರುವ ಸಾಯಿಯನ್ನು ಅವಿರತವಾಗಿ ಪೂಜೆ ಮಾಡಿ. ನೀವು ನಿಜವಾದ ಸುಖ, ಸಮಾಧಾನಗಳನ್ನು ಪಡೆಯುವಿರಿ. ನಿಮ್ಮ ಮನಸ್ಸು ಆಶಾರಹಿತವಾಗುತ್ತದೆ. ॥170॥ ಚಾತಕಪಕ್ಷಿಯು ತನ್ನ ಸ್ವಾರ್ಥಕ್ಕಾಗಿ ವಿನಂತಿಸಿಕೊಳ್ಳುತ್ತದೆ. ಆದರೆ ಮೋಡಗಳು ಸಕಲ ಸೃಷ್ಟಿಯ ಉಪಯೋಗಕ್ಕಾಗಿ ಮಳೆಗರೆಯುತ್ತವೆ. ಅದೇ ರೀತಿ ಬಾಳಾಸಾಹೇಬನು ಬಾಬಾರವರನ್ನು ಆಹ್ವಾನಿಸಿದನು. ಆದರೆ ಬಾಬಾರವರು ಎಲ್ಲ ಭಕ್ತರನ್ನೂ ಕರೆದರು. ॥171॥ ಶ್ರೋತೃಗಳೂ ಸಹಭಕ್ತರ ಪಂಕ್ತಿಯಲ್ಲೇ ಕುಳಿತುಕೊಂಡು ಉದ್ಯಾಪನೆಯ ಕಥೆಯನ್ನು ಪ್ರೇಮದಿಂದ ಕೇಳಿರಿ. ಅವರು ಸಾಯಿ ಸಮಾಗಮದ ಆನಂದವನ್ನು ಅನುಭವಿಸಿ ತೃಪ್ತಿಯಿಂದ ತೇಗುತ್ತಾರೆ. ॥172॥ ಅವರು ಯಾವರೀತಿ ಕರೆಯದೆಯೇ ಬರುತ್ತಾರೆ ಮತ್ತು ಅವರು ಯಾವ ರೀತಿ ಪಾರ್ಥಿವ ಸ್ವರೂಪದಲ್ಲಿ ಪ್ರಕಟಹೊಂದುತ್ತಾರೆ. (ಶರಣಾದ ದಾಸರನ್ನು) ಆಭಾರಿಯಾಗಿ ಮಾಡುತ್ತಾರೆ ಮತ್ತು ಅವರು ಯಾವ ರೀತಿ ಹೆಜ್ಜೆ ಹೆಜ್ಜೆಗೂ ಎಚ್ಚರಿಸುತ್ತಾರೆ ಎಂಬುದನ್ನು ತಿಳಿಯಿರಿ. ॥173॥ ಅದು ಹಾಗಿರಲಿ. ಹೇಮಾಡನು ಸಾಯಿಯ ಚರಣಗಳಲ್ಲಿ ಶರಣಾಗುತ್ತಾನೆ. ಮುಂದಿನ ಅಧ್ಯಾಯದಲ್ಲಿ ಇದೇ ಕಥೆಯು ಮುಂದುವರೆಯುತ್ತದೆ. ಸಾಯಿಯು ತಾವೇ ಸಂಪೂರ್ಣ ನಿರೂಪಣೆಗೆ ವ್ಯವಸ್ಥೆಮಾಡುತ್ತಾರೆ. ॥174॥ ಇದು ಏಕೆಂದರೆ ಸಾಯಿಯ ಪವಿತ್ರವಾದ ಧ್ಯೇಯವು ಶರಣಾಗತರನ್ನು ರಕ್ಷಿಸುವುದಾಗಿರುವುದರಿಂದ ಹೇಮಾಡನು ಅವರ ಚರಣಗಳನ್ನು ಭದ್ರವಾಗಿ ಹಿಡಿಯುತ್ತಾನೆ ಮತ್ತು ಅವರು ಅವನನ್ನು ಬಿಡಿಸುವುದಿಲ್ಲ. ॥175॥

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಉದ್ಯಾಪನ ಕಥೆಯ ನಿರೂಪಣೆ" ಎಂಬ ನಲವತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ತ್ರಿಪುರ ಎಂಬವನು ಒಬ್ಬ ರಾಕ್ಷಸ. ಶಂಕರನಿಂದ ಹತನಾದವನು. ಆದ್ದರಿಂದಲೇ ಶಿವನನ್ನು ತ್ರಿಪುರಾರಿ ಎಂದು ಕರೆಯುತ್ತಾರೆ.
2. ಭವಿಷ್ಯದ ಸಂಗತಿಗಳನ್ನು ತಿಳಿಸುವುದು.
3. ಬಾಳಾಸಾಹೇಬ ದೇವ. ಡಹಾಣುವಿನ ಮಾಮಲೇದಾರ.
4. ಧಾರ್ಮಿಕ ಕಾರ್ಯಗಳ ಮುಕ್ತಾಯ ಸಮಾರಂಭ.
5. ಸಖಾರಾಮ ಹರಿ ಜೋಗ.
6. ಈ ಮೂರು ಹಳ್ಳಿಗಳು ಶಿರಡಿಯಿಂದ 2–3 ಮೈಲಿಗಳ ದೂರದಲ್ಲಿವೆ.
7. ಊಟದ ಮೊದಲು ಕೊಡುವ ಪಂಚಪ್ರಾಣಗಳ ಆಹುತಿಗಳು.



# ಅಧ್ಯಾಯ - 41

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಸಾಯಿಯ ಕೃಪೆ ಮತ್ತು ಅನುಗ್ರಹ ಪ್ರದಾನ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಇದು ಸಾಯಿ ಚರಿತ್ರೆಯ ಮಹಿಮೆ. ಅವುಗಳನ್ನು ಎಷ್ಟೇ ಕೇಳುತ್ತಿರಲಿ, ಪ್ರೋತ್ಸಾಹದ ಅವಶ್ಯಕತೆಯೇ ಇರುವುದಿಲ್ಲ. ಶ್ರೋತೃಗಳು ಹಿಂದಿನ ಅಧ್ಯಾಯವು ಯಾವರೀತಿ ಮುಗಿಯಿತು ಎಂಬುದನ್ನು ತಾವೇ ನೆನಪಿನಲ್ಲಿಟ್ಟುಕೊಂಡಿರುತ್ತಾರೆ ಮತ್ತು ಕೇಳಲು ಬಹು ಸಾವಧಾನದಿಂದ ಇರುತ್ತಾರೆ. ॥1॥ ಶ್ರೋತೃಗಳಿಗೆ ಗಮನವಿಟ್ಟು ಕೇಳಿರೆಂದು ಹೇಳುವ ಅವಶ್ಯಕತೆಯೆಲ್ಲಿದೆ? ಅವರು ಈಗಾಗಲೇ ಏಕಾಗ್ರತೆಯಿಂದ ಕೇಳಲು ಕಾತರರಾಗಿದ್ದಾರೆ. ॥2॥ ತಮ್ಮ ಗುರುವಿನ ಮಹತ್ವವನ್ನು ಹಾಡುತ್ತಿರುವಾಗ ಮತ್ತು ಅದನ್ನು ಆಲಿಸುತ್ತಿರುವಾಗ ಮನಸ್ಸು ನಿರ್ಮಲವಾಗುತ್ತದೆ. ಏಕಾಗ್ರಚಿತ್ತದಿಂದ ಧ್ಯಾನ ಮತ್ತು ನಾಮಸ್ಮರಣೆಯ ಫಲವಾಗಿ ದಿವ್ಯಾನಂದ ಸ್ವರೂಪವು ಪ್ರಕಟವಾಗುತ್ತದೆ. ॥3॥ ಹಿಂದಿನ ಅಧ್ಯಾಯದಲ್ಲಿ ಯಾವ ರೀತಿ ವ್ರತದ ಉದ್ಯಾಪನೆಯು ಪೂರ್ಣಗೊಂಡಿತೆಂಬುದನ್ನು, ಶಾಸ್ತ್ರಗಳ ಅನುಸಾರವಾಗಿ ನಡೆದಿದ್ದು ಕನಸಿನ (ಹೇಮಾದನ) ಸತ್ಯತೆಯಂತೆ ನಡೆಯಿತೆಂಬುದನ್ನು ನಿರೂಪಿಸಲಾಯಿತು. ॥4॥ ಅದೇ ರೀತಿ, ಸಾಯಿಯ ಚಿತ್ರಪಟವು ಅನಿರೀಕ್ಷಿತವಾಗಿ ಬೇರೊಬ್ಬರ ಮೂಲಕ ಬಂದಿತು ಮತ್ತು ನನ್ನ ಇಚ್ಛೆಯನ್ನು ಸರಿಯಾದ ಸಮಯದಲ್ಲಿ ಪೂರೈಸಿತು. ಆ ಕಥೆಯನ್ನು ಈಗ ಕೇಳಿರಿ. ॥5॥ ಒಂದು ಹೋಳಿ ಹಬ್ಬದ ಸಮಯದಲ್ಲಿ ಸಾಯಿಯು ನನಗೆ ಒಂದು ಸ್ವಪ್ನದಲ್ಲಿ ಬಂದು ಊಟಕ್ಕೆ

ಬರುವೆನೆಂದು ಹೇಳಿದರು ಮತ್ತು ಯಾವರೀತಿ ಆ ನನ್ನ ಆಸೆಯನ್ನು ಪೂರೈಸಿದರು. ॥6॥ ನಾನು ಈಗಾಗಲೇ ಆ ಕಥೆಯನ್ನು ಸವಿಸ್ತಾರವಾಗಿ ಹೇಳಿದೆನು. ಆದರೆ ಯಾವ ರೀತಿ ಆ ಚಿತ್ರಪಟವು ಸಮಯಕ್ಕೆ ಸರಿಯಾಗಿ ಬಂದು ಚಮತ್ಕಾರವೇ ಆಯಿತು. ಅದರ ಬಗ್ಗೆ ಆದರಪೂರ್ವಕವಾಗಿ ಈಗ ಕೇಳಿರಿ. ॥7॥ ಆ ಕಥೆಯನ್ನು ಅಲಿ ಮಹಮದ್‌ನು ಹೇಳಿದನು. ಅದು ನನಗೆ ಪರಮಾಶ್ಚರ್ಯಕರವಾಗಿ ಭಾಸವಾಯಿತು. ಇದೂ ಸಹ ಒಂದು ಸ್ಪಷ್ಟವಾದ ಲೀಲೆಯೇ ಸರಿ. ಅದು ಅತಿ ವಿನೋದವಾಗಿಯೂ ಇತ್ತು. ॥8॥ ಅದೇ, ಆ ಹೋಲಿಯ ದಿನ, ನಾವು ಮಧ್ಯಾಹ್ನದ ಊಟಕ್ಕೆ ಇನ್ನೇನು ಕುಳಿತುಕೊಳ್ಳುತ್ತಿರುವಾಗ, ಅವನು ಅದನ್ನು ತೆಗೆದುಕೊಂಡು ಬಂದು ನನ್ನನ್ನು ಉಲ್ಲಸಿತನನ್ನಾಗಿ ಮಾಡಿದ್ದನು. ॥9॥ ಇದು ಹಿಂದಿನ ಕಥೆಗೆ ಅನ್ವಯಿಸುತ್ತದೆ. ಈಗ ಶ್ರೋತೃಗಳು ದಯಮಾಡಿ ಸಾಯಿಯ ಪಾವನ ಚರಿತ್ರೆಯ ಮುಂದಿನ ನಿರೂಪಣೆಯನ್ನು ಸಾವಧಾನದಿಂದ ಆಲಿಸಿರಿ. ॥10॥ ಈ ಕಥೆಯು ಪೂರ್ಣವಾಗಿ ರಸಭರಿತವಾಗಿದೆ. ಶ್ರೋತೃಗಳು ಈಗಾಗಲೇ ಗಮನವಿಟ್ಟಿದ್ದಾರೆ. ಈ ಚರಿತ್ರೆಯನ್ನು ಹೇಳುವವನು ಸಾಯಿ ಚರಣಗಳಲ್ಲಿ ಲೀನವಾಗಿದ್ದಾನೆ. ಸಾಯಿಯ ಚರಿತ್ರೆಯು ಅತಿ ಗಹನವಾದುದು. ॥11॥ ಅವರಾದರೋ ಪರೋಪಕಾರದ ಮೂರ್ತಿಯೇ ಆಗಿದ್ದಾರೆ. ಪರೋಪಕಾರಾರ್ಥಕ್ಕಾಗಿ ತಮ್ಮ ದೇಹವನ್ನು ಸವೆಸಿದ್ದಾರೆ. ಅವರ ಸ್ವಭಾವ ಯಾವ ರೀತಿ ಇತ್ತೆಂದರೆ ಅವರಿಗೆ ಯಾರಬಗ್ಗೆಯೂ ದ್ವೇಷಭಾವನೆಯಿರಲಿಲ್ಲ ಮತ್ತು ಅಖಂಡವಾಗಿ ಸತ್ಕರ್ಮಗಳಲ್ಲಿ ನಿರತರಾಗಿದ್ದರು. ॥12॥ ಯಾವುದೇ ಸ್ಥಿತಿಯಿರಲಿ. ಒಳ್ಳೆಯದೋ ಅಥವಾ ಕೆಟ್ಟದ್ದೋ, ದೇಹಮಾತ್ರ ವಿಧಿವತ್ತಾಗಿ ಪ್ರಕೃತಿಸಹಜವಾಗಿ ಕೆಲಸಮಾಡುತ್ತದೆ. ಆದರೆ ಗುರುಚರಣಗಳಲ್ಲಿ ಭಕ್ತಿಯಿರಿಸಿ ನಿಮ್ಮ ಇಂದ್ರಿಯಗಳ ಪ್ರವೃತ್ತಿಯನ್ನು ಪ್ರಜ್ಞಾಪೂರ್ವಕವಾಗಿ ಅಂತರ್ಮುಖವಾಗಿ ತಿರುಗಿಸಿರಿ. ॥13॥ ಅನಂತರ, ಅತ್ಯುತ್ತಮ ಅನುಭವದಿಂದ, ಇದನ್ನು ಅರಿಯಬಹುದು. ಯಾವ ರೀತಿ ಗುರುವು ತನ್ನ ಭಕ್ತರ ಯೋಗಕ್ಷೇಮವನ್ನು ನಿರಂತರ ನೋಡಿಕೊಳ್ಳುತ್ತಾನೆ ಎಂಬುದನ್ನು ಗುರುಚರಣಗಳಲ್ಲಿ ನಿಮ್ಮ ಪ್ರೀತಿಯನ್ನಿಟ್ಟು ಗಮನಿಸಿರಿ. ॥14॥ ಈ ಸ್ಥಿತಿಯು ಬೇಡಿದರೆ ಸಿಗುವಂತಹುದಲ್ಲ. ಆದರೆ ಯಾವುದನ್ನು ಮಹತ್ ಪ್ರಯತ್ನದಿಂದಲೂ ಪಡೆಯಲಾಗುವುದಿಲ್ಲವೋ ಅದು ತಾನಾಗಿಯೇ ಗುರುವಿನ ಆರಾಧನೆಯಿಂದ ಮತ್ತು ಗುರುವಿನ ಕೃಪೆಯಿಂದ ಸುಲಭವಾಗಿ ದೊರೆಯುತ್ತದೆ. ॥15॥ ಸೂಕ್ಷ್ಮವಾಗಿ ಹತ್ತಿರದಿಂದ ಗಮನಿಸಲು ಬಂದವರು ಮತ್ತು ದುರಭಿಮಾನದಿಂದ ಬಂದವರು ಅವರೆಲ್ಲರೂ ತಮ್ಮ ಅಭಿಮಾನವನ್ನು ತ್ಯಜಿಸಿ ದರ್ಶನ ಸುಖದಿಂದ ಪ್ರಸನ್ನರಾಗುತ್ತಿದ್ದರು. ॥16॥ ಯಶಸ್ಸು, ಆಸ್ತಿ, ಔದಾರ್ಯ, ಜ್ಞಾನ, ಶಾಂತಿ, ವೈರಾಗ್ಯ ಇವುಗಳು ಷಡ್ಗುಣಗಳು (ಆರು ಗುಣಗಳು). ಇವು ಶ್ರೀಹರಿಯ ಆರು ಗುಣಗಳು. ಶ್ರೀಸಾಯಿಯವರೂ ಈ ಆರು ಗುಣಗಳಿಂದ ಸಂಪನ್ನರಾಗಿದ್ದು ಪೂರ್ಣಭಗವಂತನಾಗಿದ್ದರು. ॥17॥ ನಮ್ಮ ಭಾಗ್ಯವು ಅದೆಷ್ಟು ಗಹನವಾದುದು! ಚೈತನ್ಯ ನಿಧಿಯಾದ ಸಾಯಿಯು ಅರ್ಚನೆ, ಪೂಜೆ, ಭಜನೆ ಯಾವುದೂ ಇಲ್ಲದೆಯೇ ನಮಗೆ ದರ್ಶನ ನೀಡುತ್ತಾರೆ. ॥18॥ "ಭಕ್ತಿ ಇದ್ದಲ್ಲಿ ಭಗವಂತ ನೆಲೆಸಿರುತ್ತಾನೆ"

ಎಂದು ಹೇಳುತ್ತಾರೆ. ಆದರೆ ನಮ್ಮಲ್ಲಿ ಭಕ್ತಿಯ ಅಭಾವವಿದೆ. ಆದರೆ ಈ ಸಾಯಿ ಮಹಾನುಭಾವರು ದೀನರ ಮೇಲೆ ಕರುಣೆ ತೋರುತ್ತಾರೆ. ॥19॥ ಆದ್ದರಿಂದ, ಈಗ ಅಲ್ಲಿ ಹೇಳಿದ ಕಥೆಯನ್ನು ಶ್ರೋತೃಗಳು ಲಕ್ಷ್ಯಗೊಟ್ಟು ಕೇಳಿರಿ. ಆಗ ಸಾಯಿಲೀಲೆಯ ಗಹನತೆಯನ್ನೂ, ಮತ್ತು ಅವರ ಶಕ್ತಿಯನ್ನೂ ನೀವು ಅರ್ಥಮಾಡಿಕೊಳ್ಳುವಿರಿ. ॥20॥ ಒಂದು ದಿನ ಮುಂಬಯಿಯಲ್ಲಿ ನಾನು ನಡೆದುಕೊಂಡು ಹೋಗುತ್ತಿದ್ದಾಗ ಒಬ್ಬ ಅಂಗಡಿಯ ವ್ಯಾಪಾರಿಯು ಅನೇಕ ಮನೋಹರ ಚಿತ್ರಪಟಗಳನ್ನೂ, ಮನೋಜ್ಞವಾದ ಚಿತ್ರಗಳನ್ನೂ, ಹೊಂದಿರುವುದನ್ನು ನೋಡಿದೆನು. ॥21॥ ಅಲ್ಲಿ ಎಲ್ಲ ರೀತಿಯ ವಿಧವಿಧವಾದ ಸುಂದರ ಚಿತ್ರಗಳಿದ್ದವು. ಸಂತರದ್ದು, ಮಹಂತರದ್ದು ಮತ್ತು ಅವಲಿಯಾರವರದ್ದು, ಅವುಗಳನ್ನು ನೋಡಿ ಯಾವುದನ್ನು ನೋಡಬೇಕೆಂಬ ಗಲಿಬಿಲಿ ಉಂಟಾಯಿತು. ॥22॥ ಒಂದೊಂದನ್ನೇ ನೋಡುತ್ತಾ ಬಂದಾಗ, ನಾನು ಈ ಚಿತ್ರವನ್ನು ಇಷ್ಟಪಟ್ಟೆನು. ಇದು ಬೇರೆ ಎಲ್ಲದಕ್ಕಿಂತಲೂ ಬಹಳ ಮೋಹಕವಾಗಿತ್ತು, ಅದೂ ಅಲ್ಲದೆ ಅದು ನನ್ನ ಆರಾಧ್ಯ ದೇವತೆಯದಾಗಿತ್ತು. ॥23॥ ಆದಾಗಲೇ ನಾನು ಮನದಲ್ಲೇ ಸಾಯಿಯನ್ನು ಇಷ್ಟಪಟ್ಟಿದ್ದೆ. ಅವರ ಚಿತ್ರವನ್ನು ನನ್ನ ಸಮ್ಮುಖದಲ್ಲಿ ನೋಡಿ ಅದನ್ನು ಕೂಡಲೇ ಖರೀದಿಸುವ ಬಯಕೆಯಾಯಿತು. ಆದ್ದರಿಂದ ನಾನು ಅದರ ಬೆಲೆ ಕೊಟ್ಟು ಖರೀದಿಸಿದೆ. ॥24॥ ಅನಂತರ ಆ ಚಿತ್ರವನ್ನು ಮನೆಗೆ ತೆಗೆದುಕೊಂಡು ಬಂದು ಗೋಡೆಯ ಮೇಲೆ ತೂಗು ಹಾಕಿದೆ. ನಾನು ದಿನವೂ ಆನಂದದಿಂದ ಅದರ ದರ್ಶನ ಮಾಡಿದೆ. ಏಕೆಂದರೆ ನಾನು ಬಾಬಾರವರನ್ನು ತುಂಬಾ ಪ್ರೀತಿಸುತ್ತಿದ್ದೆ. ॥25॥ ಅದನ್ನು ನಿನಗೆ ಕೊಡುವ ಮೂರು ತಿಂಗಳ ಮೊದಲು ನನ್ನ ದೇಹಕ್ಕೆ ಸೌಖ್ಯವಿರಲಿಲ್ಲ ಮತ್ತು ನನ್ನ ಸೋದರಿಯ ಪತಿಯ ಜೊತೆ ವಾಸಮಾಡಲು ಹೋಗಿದ್ದೆ. ॥26॥ ನೂರ್‌ಮಹಮದ್ ಪೀರಭಾಯ್ ನನ್ನ ಬಾವನು. ನನ್ನ ಕಾಲು ಬಹಳ ಊದಿಕೊಂಡಿದ್ದು, ನನಗೆ ಶಸ್ತ್ರಕ್ರಿಯೆಯನ್ನು ಮಾಡಿದ್ದರು. ॥27॥ ನಾನು ಅದರಿಂದಾಗಿ ನರಳುತ್ತಿದ್ದುದರಿಂದ ಮೂರು ತಿಂಗಳುಗಳ ಕಾಲ ಅವರಲ್ಲಿಯೇ ಇದ್ದೆನು. ನನ್ನ ಮನೆಯಲ್ಲಿ ಯಾರೂ ಇರಲಿಲ್ಲ. ॥28॥ ಆದರೆ, ಪ್ರಸಿದ್ಧರಾದ ಬಾಬಾ ಅಬ್ದುಲ್ ರಹಿಮಾನ್, ಮೌಲಾನಾಸಾಬ ಮಹಮದ್ ಹುಸೇನ, ಬಾಬಾ  ಸಾಯಿ, ಬಾಬಾ ತಾಜುದ್ದೀನ – ಇವರೆಲ್ಲರೂ ಆ ಮನೆಯಲ್ಲಿದ್ದರು. ॥29॥ ಇವರೆಲ್ಲರ ಚಿತ್ರಪಟಗಳು ಮತ್ತು ಇನ್ನೂ ಇತರೆ ಚಿತ್ರಗಳು ಗೋಡೆಯ ಮೇಲೆ ನೇತಾಡುತ್ತಿದ್ದವು. ನನ್ನ ಮನೆಯನ್ನು ಮನೋಹರವಾಗಿ ಮಾಡಿದ್ದವು. ಆದರೆ ಕಾಲಚಕ್ರವು ಅವರು ಯಾರನ್ನೂ ಬಿಡಲಿಲ್ಲ. ॥30॥ ಇಲ್ಲಿ ನಾನು ಈ ಗತಿಯಲ್ಲಿದ್ದೆ ಮತ್ತು ಚಿತ್ರ ಪಟಗಳೂ ಏಳೂವರೆ ಶನಿಕಾಟದಲ್ಲಿ ಸಿಲುಕಿದ್ದವು. ಯಾವುದು ಸೃಷ್ಟಿಯಾಗುವುದೋ ಅದು ಪ್ರಳಯ ಸ್ಥಿತಿಯ (ನಾಶ) ಅನುಭವವನ್ನು ಅನುಭವಿಸುವುದು ಅನಿವಾರ್ಯವೆಂದೇ ನನಗನಿಸುತ್ತದೆ.  ॥31॥ ಪರಿಸ್ಥಿತಿಯು ಹೀಗಿರುವಾಗ, ಕೇವಲ ಸಾಯಿಯು ಮಾತ್ರ ಅದಕ್ಕೆ ಅಪವಾದವಾಗಿದ್ದು ಅದನ್ನು ಇಲ್ಲಿಯವರೆಗೆ ಯಾರೂ ವಿವರಿಸಲು ಸಾಧ್ಯವಾಗುತ್ತಿಲ್ಲ. ॥32॥ ನೀನು ಇದರ ಕಥೆಯನ್ನು ಆಮೂಲಾಗ್ರವಾಗಿ ಕೇಳಿದನಿನಗೆ ವಿಸ್ಮಯವುಂಟಾಗುವುದು.

ನೀನು ಸಾಯಿಯ ಸ್ಥಿರ ಹಾಗೂ ಚರ ವಸ್ತುಗಳೊಡನಿರುವ ಐಕ್ಯತೆಯನ್ನು ಅರ್ಥಮಾಡಿಕೊಳ್ಳುವೆ. ಅವರ ಶಕ್ತಿಗಳ ತರ್ಕಾತೀತವಾದವುಗಳು. ॥33॥ ಸಂತ ಬಾಬಾ ಅಬ್ದುಲ್ ರಹಿಮಾನ್‌ರ ಒಂದು ಸಣ್ಣ ಚಿತ್ರ ಮಹಮದ್ ಹುಸೇನನ ಹತ್ತಿರ ಇತ್ತು, ಅವನನ್ನು ಥಾರಿಯಾ ಎಂದು ಕರೆಯುತ್ತಿದ್ದರು. ॥34॥ ಅನೇಕ ವರ್ಷಗಳ ಹಿಂದೆ ಅವನು ಅದರ ಒಂದು ಪ್ರತಿಯನ್ನು ನನಗೆ ಕೊಟ್ಟಿದ್ದನು. ಅದನ್ನು ನಾನು ನನ್ನ ಭಾವನಿಗೆ ಕೊಟ್ಟಿದ್ದೆ. ಏಕೆಂದರೆ ಅವನು ಅವರ ಭಕ್ತನಾಗಿದ್ದನು. ॥35॥ ಅದು ಸುಮಾರು ಎಂಟು ವರ್ಷಗಳ ಕಾಲ ಅವನ ಮೇಜಿನ ತಳಖಾನೆ (ಡ್ರಾಯರ್)ಯಲ್ಲಿ ಇತ್ತು. ಒಮ್ಮೆ ಅನಿರೀಕ್ಷಿತವಾಗಿ ಅದನ್ನು ನೋಡಿದಾಗ, ಅವನು ಅದನ್ನು ಮುಂಬಯಿಯಲ್ಲಿದ್ದ ಒಂದು ಛಾಯಾಚಿತ್ರಗಾರನ ಅಂಗಡಿಗೆ ತೆಕೊಂಡು ಹೋದನು. ॥36॥ ಅವನು ಆ ಛಾಯಾ ಚಿತ್ರವನ್ನು ಬಾಬಾ ಅಬ್ದುಲ್ಲಾನ ಜೀವಂತ ಅಳತೆಯಷ್ಟು ದೊಡ್ಡದು ಮಾಡಿಸಿದನು. ಅದನ್ನ ಅವನು ಉಡುಗೊರೆಯಾಗಿ ತೆಗೆದುಕೊಂಡು ಹೋಗಬಹುದು ಮತ್ತು ಅಂತರಂಗದಲ್ಲಿ ಪ್ರೇಮಭರಿತನಾಗಬಹುದೆಂಬ ಆಲೋಚನೆಯಿತ್ತು. ॥37॥ ಅವನು ಅದರ ಮತ್ತಷ್ಟು ಪ್ರತಿಗಳನ್ನು ಮಾಡಿ ತನ್ನ ಆಪ್ತೇಷ್ಟರಿಗೂ ಮಿತ್ರರಿಗೂ ಕೊಟ್ಟನು. ಅದರಲ್ಲಿ ನನಗೂ ಸಹ ಒಂದನ್ನು ಕೊಟ್ಟನು. ನಾನು ಅದನ್ನು ಗೋಡೆಯ ಮೇಲೆ ನೇತುಹಾಕಿದೆ. ॥38॥ ಅನಂತರ, ಪರಮ ಸುಂದರವಾದ ಈ ಚಿತ್ರವನ್ನು ನೂರಮಹಮದ್‌ನು ಅಬ್ದುಲ್ಲ ರಹಿಮಾನನಿಗೆ ಅವರ ದರಬಾರಿನಲ್ಲಿ ಅನೇಕ ಜನರು ಸೇರಿದ್ದಾಗ ಗೌರವಪೂರ್ವಕವಾಗಿ ಉಡುಗೊರೆಯಾಗಿ ನೀಡಲು ಕಾತರನಾಗಿದ್ದನು. ॥39॥ ಅಬ್ದುಲ್‌ರಹಿಮಾನನು, ಆ ಚಿತ್ರವನ್ನು ನೋಡಿ ಅವನ ಉದ್ದೇಶವನ್ನು ಅರಿತು ಅತ್ಯಂತ ಕೋಪಗೊಂಡು ಅವನನ್ನು ಹೊಡೆಯಲು ಎದ್ದು ನಿಂತನು. ॥40॥ ಅವನನ್ನು ಬೈಯುತ್ತ ಮತ್ತು ಧಿಕ್ಕರಿಸುತ್ತ ಕಳುಹಿಸಿದನು. ಅದರಿಂದಾಗಿ ಅವನು ಅತ್ಯಂತ ಖಿನ್ನವದನನಾದನು. ಮತ್ತು ಇದು ಗಹನವಾದ ಚಿಂತೆ ಹುಟ್ಟಲು ಕಾರಣವಾಯಿತು. ॥41॥ ಅವನು ಹೀನಭಾವ, ದೀನ ಭಾವ, ಬೇಸರ ಮತ್ತು ಉದ್ವಿಗ್ನ ಮನಸ್ಸಿನವನಾದನು. ಅಷ್ಟೊಂದು ಹಣವನ್ನು ಕಳೆದುಕೊಂಡಿದ್ದೇ ಅಲ್ಲದೆ ಗುರುಕೃಪೆಗೂ ವಿಘ್ನವುಂಟಾಗಿತ್ತು. ॥42॥ "ಈ ದಿನದವರೆಗೆ ನಾನು ಗುರುಕೃಪೆಯಿಂದ ಸಂಪನ್ನನಾಗಿದ್ದೆನು. ಆದರೆ ಈಗ ಅದೇ ನಾನು ಗುರುವಿನ ರೋಷಕ್ಕೆ ಕಾರಣನಾಗಿರುವೆನು." ಈ ರೀತಿ ಯೋಚಿಸುತ್ತ ಸಂದೇಹ ಭರಿತನಾಗಿ ಅವನು ಚಿತ್ರಗಳ ವಿಸರ್ಜನೆಯನ್ನು ಆರಂಭಿಸಿದನು. ॥43॥ ಅವನು ಹೇಳಿದನು, "ಇಂದಿನಿಂದ ನಾನು ಯಾವುದೇ ಸಂತರ ಚಿತ್ರವನ್ನು ನನ್ನ ಮನೆಯಲ್ಲಿ ಇಡುವುದಿಲ್ಲ. ಅವುಗಳಿಂದಾಗಿ ನಾನು ನನ್ನ ಗುರುವಿನ ಪ್ರೇಮವನ್ನು ಕಳೆದುಕೊಂಡಿದ್ದೇನೆ. ಯಾವುದೇ ಸಾರ್ಥಕತೆಯಿಲ್ಲದೆ ನಾನೇಕೆ ಈ ಕೆಲಸ ಮಾಡಬೇಕು?" ॥44॥ ಮುಂದುವರೆದು ಅವನು ಹೇಳಿದನು, "ನನ್ನ ಗುರುವು ಈ ಚಿತ್ರದಿಂದಾಗಿ ನನ್ನ ಮೇಲೆ ಕೋಪಗೊಂಡಿರುವನು. ಅದು ನನಗೆ ಇಂದೋ ನಾಳೆಯೋ ಕಷ್ಟಗಳನ್ನುಂಟುಮಾಡುತ್ತದೆ, ಅದರಿಂದ ನನಗೆ ಯಾವ ಪ್ರಯೋಜನವೂ ಇಲ್ಲ. ॥45॥ "ಇದು ಕೂಡ ಒಂದು ರೀತಿಯ ಸ್ವರೂಪಾರಾಧನೆಯೇ. ಅದನ್ನು ನನ್ನ ಗುರುವು

ಒಪ್ಪುವುದಿಲ್ಲ. ಹಾಗಿರುವಾಗ ನಾನೇಕೆ ಅವರನ್ನು ಕೋಪಗೊಳಿಸಬೇಕು? ಈ ಚಿತ್ರದಿಂದ ನನಗೇನು ಪ್ರಯೋಜನ? ॥46॥ "ಈ ಚಿತ್ರಗಳನ್ನು ಸಂಗ್ರಹ ಮಾಡಲು ಬಹಳ ದ್ರವ್ಯ ಖರ್ಚಾಗಿದೆ. ಅವುಗಳನ್ನು ವಿಸರ್ಜಿಸದೆ ನನಗೆ ಬೇರೆ ಉಪಾಯವೇ ಇಲ್ಲ." ॥47॥ ಆದುದರಿಂದ ನನ್ನ ಭಾವನು, ಆ ಚಿತ್ರವನ್ನು ತಾನೇ ತೆಗೆದುಕೊಂಡು ಅದನ್ನು ಮುಳುಗಿಸಲು ಹಡಗುಕಟ್ಟೆಗೆ ಹೋದನು. ಬೇರೆ ಯಾರು ಕೇಳಿದರೂ ಅದನ್ನು ಕೊಡಲು ತಿರಸ್ಕರಿಸಿದನು. ॥48॥ ಅವನು ಅಪಾಲೋ ಬಂದರುವರೆಗೆ ಹೋದನು. ಒಂದು ನಾವೆಯನ್ನು ಬಾಡಿಗೆಗೆ ತೆಗೆದುಕೊಂಡನು. ಸಮುದ್ರದಲ್ಲಿ ತಾನು ಹೋಗಬಹುದಾದಷ್ಟು ದೂರ ಹೋದನು. ಮತ್ತು ಅಂತಿಮವಾಗಿ ಅದನ್ನು ವಿಸರ್ಜಿಸಿದನು. ॥49॥ ಅದು ಹಾಗಿರಲಿ. ಅವನು ಅಲ್ಲಿಗೇ ನಿಲ್ಲಿಸಲಿಲ್ಲ. ಬಾಂದ್ರಾದಲ್ಲಿಯೂ ಅದನ್ನೇ ಮಾಡಿದನು. ಅವನು ತನ್ನ ಆಪ್ತೇಷ್ಟರನ್ನೂ ಮಿತ್ರರನ್ನೂ, ಆ ಚಿತ್ರದ ಪ್ರತಿಗಳನ್ನು ಅವನಿಗೆ ಹಿಂತಿರುಗಿಸುವಂತೆ ಮನವೊಲಿಸಿದನು. ॥50॥ ಅವನು ಹೇಳಿದನು, "ಬಾಬಾ ಅಬ್ದುಲ್ಲರು ಕೋಪಗೊಂಡಿದ್ದಾರೆ. ಯಾರ ಯಾರ ಹತ್ತಿರ ಆ ಛಾಯಾ ಚಿತ್ರಗಳಿವೆಯೋ ಎಲ್ಲವನ್ನೂ ಹಿಂತಿರುಗಿಸಿ. ಅವುಗಳನ್ನು ವಿಸರ್ಜಿಸಬೇಕು," ಈ ರೀತಿ ಅವನು ಎಲ್ಲರಲ್ಲೂ ವಿನಂತಿಸಿಕೊಂಡನು. ॥51॥ ನನಗೆ ಕೊಟ್ಟಿದ್ದ ಪ್ರತಿಯನ್ನೂ ಹಿಂದಕ್ಕೆ ತೆಗೆದುಕೊಂಡನು. ಅದೇ ರೀತಿ ನನ್ನ ಸಹೋದರನದು ಮತ್ತು ನನ್ನ ಸೋದರಿಯದನ್ನೂ ಕಸಿದುಕೊಳ್ಳಲಾಯಿತು. ಒಟ್ಟಾರೆ ಅವನು ಆರು ಪ್ರತಿಗಳನ್ನು ಹಿಂದಕ್ಕೆ ಪಡೆದನು. ॥52॥ ನಂತರ ಆರುಪ್ರತಿಗಳನ್ನೂ ತೆಗೆದುಕೊಂಡ ಮೇಲೆ ಬಾಂದ್ರಾದಲ್ಲಿನ ಸಮುದ್ರ ತೀರಕ್ಕೆ ಹೋದನು. ಕಡಲ ತಡಿಯ ತುದಿಯಲ್ಲಿ ರೋಷಯುಕ್ತನಾಗಿ ಬಂದನು. ॥53॥ ಒಬ್ಬ ಮೀನುಗಾರನನ್ನು ಕರೆದು ಅವನಿಗೆ ಎಲ್ಲಾ ಚಿತ್ರಗಳನ್ನೂ ಕೊಟ್ಟು ಅವುಗಳನ್ನು ಸಮುದ್ರದಲ್ಲಿ ಮುಳುಗಿಸಲು ಒಪ್ಪಿಸಿದನು. ॥54॥ ಆ ಸಮಯದಲ್ಲಿ ನಾನು ಅನಾರೋಗ್ಯದಿಂದ ನರಳುತ್ತಿದ್ದೆ ಮತ್ತು ಅವನ ಮನೆಯಲ್ಲಿದ್ದೆ. ಅವನು ನನಗೂ ಅದೇ ಉಪದೇಶ ನೀಡಿದನು ಮತ್ತು ಹೇಳಿದನು. "ಈ ಚಿತ್ರಗಳು ಸಂಕಟಗಳನ್ನೇ ತರುತ್ತವೆ. ॥55॥ "ಆದುದರಿಂದ ನೀನು ಎಲ್ಲವನ್ನೂ ಸಂಗ್ರಹಿಸಿ ಸಮುದ್ರದಲ್ಲಿ ವಿಸರ್ಜಿಸು. ಆಗ ಮಾತ್ರ ನಿನ್ನ ದುಃಖಗಳು ದೂರವಾಗುತ್ತವೆ. ಇದನ್ನು ನಿರ್ಧಾರವೆಂದು ತಿಳಿ." ॥56॥ ಅನಂತರ ನಾನೂ ನನ್ನ ಮುನೀಮ (ಮ್ಯಾನೇಜರ್)ನನ್ನು ಕರೆದು ಮನೆಯ ಬೀಗದ ಕೈಯನ್ನು ಕೊಟ್ಟು ಅಲ್ಲಿದ್ದ ಎಲ್ಲಾ ಸಂತರ ಚಿತ್ರಪಟಗಳನ್ನೂ ತೆಗೆಸಿ ನನ್ನ ಭಾವನ ಕೈಗೆ ಅದರ ಮುಂದಿನ ವ್ಯವಸ್ಥೆಗಾಗಿ ತಲುಪಿಸುವಂತೆ ಒಪ್ಪಿಸಿದೆ. ॥57॥ ಅವನು ತನ್ನ ಮಾಲಿ(ತೋಟದ ಕೆಲಸದವ)ಯನ್ನು ಕರೆದು ಅವುಗಳನ್ನು ಕೂಡಲೇ ಚೆಂಬಯಿಯ ದೇವಸ್ಥಾನದ ಹತ್ತಿರದ ಸಮುದ್ರದಲ್ಲಿ ಮುಳುಗಿಸಲು ಹೇಳಿದನು. ॥58॥ ಇದಾದ ಎರಡು ತಿಂಗಳ ನಂತರ, ನಾನು ಗುಣಮುಖನಾದಾಗ ನನ್ನ ಮನೆಗೆ ಹಿಂತಿರುಗಿದೆನು. ಅಲ್ಲಿ ಅತಿ ಅಚ್ಚರಿಗೊಂಡೆನು. ॥59॥ ಬಾಗಿಲಿನ ಎದುರಿಗೆ ಇರುವ ಗೋಡೆಯ ಮೇಲೆ ಅದೇ ಜಾಗದಲ್ಲಿ ಸಾಯಿಯ ಚಿತ್ರಪಟ ತೂಗುತ್ತಿತ್ತು. ಅದನ್ನೇ ನಾನು ನಿನಗೆ ಕೊಟ್ಟದ್ದು. ಅದನ್ನು ನೋಡಿ ಅತಿ ವಿಸ್ಮಯಭರಿತನಾದೆನು. ॥60॥ಅದು ಹೇಗೆ ಮುನೀಮನು ಎಲ್ಲಾ

ಚಿತ್ರ ಪಟಗಳನ್ನೂ ತೆಗೆದುಕೊಂಡುಬಂದಾಗ ಈ ಚಿತ್ರವನ್ನು ಮಾತ್ರ ಅದೇಕೆ ಅಲ್ಲಿಯೇ ಬಿಟ್ಟಿದ್ದನು? ಆದ್ದರಿಂದ ನಾನು ಕೂಡಲೇ ಇದನ್ನು ತೆಗೆದು ಕಪಾಟಿನಲ್ಲಿ ಮುಚ್ಚಿಟ್ಟಿದ್ದೆನು. ॥61॥ ನನ್ನ ಭಾವನೇನಾದರೂ ನೋಡಿದನೇನೋ ಎಂದು ನನಗೆ ಹೆದರಿಕೆಯಾಗಿತ್ತು, ಹಾಗಿದ್ದಲ್ಲಿ ಅವನು ಕೂಡಲೇ ಅದನ್ನು ಸಮುದ್ರದಲ್ಲಿ ಮುಳುಗಿಸಲು ತೆಗೆದುಕೊಂಡು ಹೋಗುತ್ತಿದ್ದನು. ॥62॥ ಅದನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದು. ನನ್ನ ಭಾವನು ಅದನ್ನು ನೋಡಿದ ಕೂಡಲೇ ಅದನ್ನು ತನ್ನ ಕೈಗಳಿಂದಲೇ ಮುಳುಗಿಸುತ್ತಾನೆ. ಇಲ್ಲದಿದ್ದರೆ ನಾನು ಅದನ್ನು ಕೊಡಬಹುದುಆಗ ನನ್ನ ಮನಸ್ಸು ನಿಶ್ಶಂಕೆಯಿಂದ ಇರುತ್ತದೆ ಅಥವಾ ಇನ್ನಾರಿಗಾದರೂ ಏನಾದರೂ ಅನುಮಾನ ಬರಬಹುದು. ಅವರು ಭಕ್ತರಲ್ಲದಿರಬಹುದು. ॥63॥ ಒಂದು ವೇಳೆ ಅದನ್ನು ನಾನು ಯಾರಿಗಾದರೂ ಸರಿಯಾದ ಯೋಚನೆ ಮಾಡದೆ ಕೊಟ್ಟಲ್ಲಿ ಮತ್ತು ಅದನ್ನು ಸರಿಯಾದ ರೀತಿಯಲ್ಲಿ ಜೋಪಾನ ಮಾಡದೇ ಇದ್ದಲ್ಲಿ ನನಗೆ ಯಾವಾಗಲೂ ಪಶ್ಚಾತ್ತಾಪವುಂಟಾಗುತ್ತದೆ ಮತ್ತು ಸರ್ವದಾ ನನಗೆ ವ್ಯಾಕುಲತೆಯನ್ನುಂಟುಮಾಡುತ್ತದೆ. ॥64॥ ಆದುದರಿಂದ, ನಾನು ಅದು ಸುರಕ್ಷಿತವಾಗಿರುವಂತಹ ಉಚಿತ ಸ್ಥಳವನ್ನು ಕಂಡುಹಿಡಿಯಬೇಕಾಗಿತ್ತು, ಯಾರಾದರೂ ಇದನ್ನು ಮನೆಯಲ್ಲಿ ವ್ಯವಸ್ಥಿತವಾಗಿ ಇಟ್ಟುಕೊಳ್ಳುವವರು ಬೇಕಾಗಿತ್ತು. ಅದನ್ನು ಅಂತಹ ವ್ಯಕ್ತಿಗೆ ಹಸ್ತಗತ ಮಾಡಬೇಕಾಗಿತ್ತು. ॥65॥ ಯಾವಾಗ ನಾನು ಈ ಸಂದಿಗ್ಧತೆಯಲ್ಲಿ ಸಿಲುಕಿದ್ದೆನೋ ಆಗ ಸಾಯಿಯು ತಾನೇ ಈ ಒಳ್ಳೆಯ ವಿಚಾರವನ್ನು ಕೊಟ್ಟು ಮೌಲಾನಾನ ದರ್ಬಾರ್‌ಗೆ ಹೋಗುವಂತೆ ಮಾಡಿದರು ಮತ್ತು ನಾನು ಈ ಎಲ್ಲ ವೃತ್ತಾಂತವನ್ನು ಇಸಮೂಸಾನಿಗೆ ಹೇಳಿದೆನು. ॥66॥ ಆದ್ದರಿಂದ ನಾನು ಕೂಡಲೇ ಪೀರ್ ಮೌಲಾನಾನ ದರ್ಬಾರ್‌ಗೆ ಹೋದೆನು ಮತ್ತು ಸಕಲ ವೃತ್ತಾಂತವನ್ನೂ ಮುಜಾವರ್ ಇಸಮುಸಾನಿಗೆ ಏಕಾಂತದಲ್ಲಿ ಅತ್ಯಾದರದಿಂದ ತಿಳಿಸಿದೆನು. ॥67॥ ನಾವಿಬ್ಬರೂ ಒಂದು ತೀರ್ಮಾನಕ್ಕೆ ಬಂದೆವು. ಅದು ನಿನ್ನಲ್ಲಿ ಸುರಕ್ಷಿತವಾಗಿರುತ್ತದೆ ಎಂದು. ಆದುದರಿಂದ ಅದೇ ದಿನವೇ ನಾವಿಬ್ಬರೂ ಅದರ ಮೇಲೆ ನಿಶ್ಚಯ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದೆವು. ॥68॥ 'ಸಮರ್ಥ ಸಾಯಿಯ ಚಿತ್ರಪಟವನ್ನು ನಿನ್ನ ಹತ್ತಿರವೇ ಇಡಬೇಕು. ನಾವಾಗಿಯೇ ಅದನ್ನು ನಿನ್ನ ಹತ್ತಿರ ಕೊಡಬೇಕು. ಆಗ ಮಾತ್ರ ಅದು ಕ್ಷೇಮವಾಗಿರುತ್ತದೆ.' ॥69॥ ಆದುದರಿಂದ, ನಮ್ಮ ದೃಢನಿಶ್ಚಯಕ್ಕನುಗುಣವಾಗಿ ನಾವು ಆ ಚಿತ್ರವನ್ನು ನಿನಗೆಆದರಪೂರ್ವಕವಾಗಿ ಕೊಟ್ಟೆವು. ಆದರೆ ಆಗ ತಾನೇ ಊಟ ಪ್ರಾರಂಭವಾಗುವ ತಯಾರಿಯಲ್ಲಿದ್ದುದರಿಂದ ನಾನು ಅವಸರವಾಗಿ ಹಿಂತಿರುಗಿದೆನು. ॥70॥ ಆಗ ನಿನಗೆ ಈ ಉದ್ದವಾದ ಕಥೆಯನ್ನು ಕೇಳುವಷ್ಟು ಸಮಯವಿರಲಿಲ್ಲ. ಆದ್ದರಿಂದ ನಾನು ಇದನ್ನು ಸಾವಕಾಶವಾಗಿ ನಿನಗೆ ನಿರೂಪಿಸಲು ನಿಶ್ಚಯಿಸಿದೆನು. ಆ ಒಂದು ಉದ್ದೇಶದಿಂದ ನಾನು ಅಲ್ಲಿಂದ ಹೊರಟೆನು. ॥71॥ ಅದು ದಿನೇ ದಿನೇ ಮುಂದೂಡಲ್ಪಡುತ್ತ ಹೋಯಿತು. ಮತ್ತು ಹಾಗೆ ಒಂಭತ್ತು ವರ್ಷಗಳು ಕಳೆದವು. ಈ ದಿನ ನಾವಿಬ್ಬರೂ ಮತ್ತೆ ಅನಿರೀಕ್ಷಿತವಾಗಿ ಭೇಟಿಯಾಗಿದ್ದೇವೆ. ॥72॥ ಈ ನಿರೂಪಣೆಯಿಂದ ನನಗೆ ಪೂರ್ವಪೀಠಿಕೆಯು ನೆನಪಿಗೆ

ಬಂದಿತು. ನಾನು ನನ್ನ ಸ್ವಪ್ನದ ಕೌತುಕವನ್ನು ಅವನಿಗೆ ತಿಳಿಸಿದೆ ಹಾಗೂ ಇವೆರಡರ ಸಂಬಂಧವು ಅಪೂರ್ವ ಕಥಾನಕವಾಗಿತ್ತು. ಈ ಲೀಲೆಯು ಅದ್ಭುತವಾಗಿರುವುದಲ್ಲವೇ? ॥73॥ ಈಗ ಮತ್ತೊಂದು ಕಥೆ. ಶ್ರೋತೃಗಳು ಸಾವಧಾನ ಮನಸ್ಸಿನಿಂದ ಕೇಳಿರಿ. ಅದು ಸಾಯಿಯು ಯಾವ ರೀತಿ ತನ್ನ ಪ್ರೀತಿಯ ಭಕ್ತರನ್ನು ಅತಿಯಾದ ಪ್ರೇಮದಿಂದ ನೋಡಿಕೊಳ್ಳುತ್ತಿದ್ದರೆಂಬುದನ್ನು ವಿವರಿಸುತ್ತದೆ. ॥74॥ ಯಾರು ಪರಮಾರ್ಥವನ್ನು ನಿಜವಾಗಿಯೂ ಪ್ರೀತಿಸುತ್ತಾರೋ ಅವರನ್ನು ಕಂಡರೆ ಸಾಯಿಗೆ ಅತಿಯಾದ ಪ್ರೀತಿ. ಅವರ ಎಲ್ಲ ಕಷ್ಟಗಳನ್ನೂ ಪರಿಹರಿಸಿ ಅವರನ್ನು ಸಾಧದೊಡನೆ ಜೋಡಿಸುತ್ತಾರೆ. ॥75॥ ಬಾಳಾಸಾಹೇಬ ದೇವಾನಿಗೆ ಈ ರೀತಿಯ ಒಂದು ವಿಶಿಷ್ಟವಾದ ಅನುಭವವು ತನ್ನ ವ್ರತಾಚರಣೆಯನ್ನು ಸಫಲಗೊಳಿಸುವಂತಹ ಅನುಭವ ಉಂಟಾಯಿತು. ಅವನ ಆಸೆಯು ನೆರವೇರಿ ಅವನು ಭಕ್ತಿಯ ಜೊತೆಯಲ್ಲಿ ಬಂಧಿಸಲ್ಪಟ್ಟನು. ॥76॥ ಅವನ ಯೋಗಕ್ಷೇಮಕ್ಕಾಗಿ ಅವನಿಗೆ ದಿನದ ವೇಳೆಯಲ್ಲಿ ನೌಕರಿ ಮಾಡದೆ ಬೇರೆ ಯಾವ ಉಪಾಯವೂ ಇರಲಿಲ್ಲ. ಆದರೆ ರಾತ್ರಿ ವೇಳೆಯಲ್ಲಿ ಪರಮಾರ್ಥದ ಸಾಧನೆಗೆ ಅಡಚಣೆ ಏಕಿರಬೇಕು? ॥77॥ ಅವನಿಗೆ ಜ್ಞಾನೇಶ್ವರಿಯನ್ನು ನಿತ್ಯವೂ ಪಾರಾಯಣಮಾಡಲು ಬಹಳ ಕಾಲದಿಂದ ಆಶೆಯಿತ್ತು. ಆದರೆ ಅವನಿಗೆ ಒಂದಲ್ಲ ಒಂದು ವಿಘ್ನದಿಂದಾಗಿ ಮಾಡಲು ಸಾಧ್ಯವಾಗಲಿಲ್ಲ. ॥78॥ ಪ್ರತಿದಿನವೂ ಭಗವದ್ಗೀತೆಯ ಒಂದು ಅಧ್ಯಾಯವನ್ನು ಓದುತ್ತಿದ್ದಂತೆ ಜ್ಞಾನೇಶ್ವರಿಯ ಒಂದು ಅಧ್ಯಾಯವನ್ನೂ ಓದಬೇಕೆಂದುಕೊಂಡಿದ್ದನು. ಆದರೆ ಅವನಿಗೆ ಯಾವುದೇ ಅಡ್ಡಿಯಿಲ್ಲದೆ ಮಾಡಲು ಸಾಧ್ಯವಾಗಲಿಲ್ಲ. ॥79॥ ಅವನು ಬೇರೆ ಯಾವುದೇ ಗ್ರಂಥವನ್ನು ಓದಲು ಕೈಗೆತ್ತಿಕೊಂಡಲ್ಲಿ ಅದನ್ನು ನಿತ್ಯವೂ ನಿಯಮಿತವಾಗಿ ಮಾಡಲು ಸಾಧ್ಯವಾಗುತ್ತಿತ್ತು. ಆದರೆ ಜ್ಞಾನೇಶ್ವರಿಯನ್ನು ಕೈಗೆ ಎತ್ತಿಕೊಂಡರೆ ಮಾತ್ರ ಅದು ತಪ್ಪಿಹೋಗುತ್ತಿತ್ತು. ॥80॥ ಒಮ್ಮೆ ದೇವಾನು ಮೂರು ತಿಂಗಳು ರಜೆಯನ್ನು ತೆಗೆದುಕೊಂಡು ಮೊದಲು ಶಿರಡಿಗೆ ಹೋಗಿ ಅನಂತರ ಪೌಂಡಾದಲ್ಲಿರುವ ಮನೆಗೆ ವಿಶ್ರಾಂತಿಗಾಗಿ ಹೋಗಬೇಕೆಂದಿದ್ದನು. ॥81॥ ಅಲ್ಲಿ ಏನು ನಡೆಯಿತು? ಅಲ್ಲಿಯೂ ಅವನು ಇತರೆ ಧಾರ್ಮಿಕ ಗ್ರಂಥಗಳನ್ನು ನಿತ್ಯವೂ ಓದುತ್ತಿದ್ದನು. ಆದರೆ ಜ್ಞಾನೇಶ್ವರಿಯ ಬಗೆಗಿನ ಅವನ ಇಚ್ಛೆಯು ನೆರವೇರಲಾರದೆ ಹೋಯಿತು. ಅದಕ್ಕಿನ್ನೂ ಸರಿಯಾದ ವೇಳೆ ಬಂದಿರಲಿಲ್ಲ. ॥82॥ ಅವನು ಜ್ಞಾನೇಶ್ವರಿಯನ್ನು ಕೈಗೆತ್ತಿಕೊಂಡಾಗಲೆಲ್ಲಾ ಕೆಲವು ಸಂದೇಹಗಳು ಅವನ ಮನದಲ್ಲಿ ಹುಟ್ಟುತ್ತಿದ್ದವು. ಆದ್ದರಿಂದ ಅವನ ಪಾರಾಯಣವು ಕೇವಲ ತೋರಿಕೆಗಾಗಿ ಉಂಟಾಯಿತು ಮತ್ತು ಅವನು ಅದರ ಮೇಲೆ ಪ್ರೀತಿಯನ್ನು ಬೆಳೆಸಿಕೊಳ್ಳಲು ಆಗಲಿಲ್ಲ. ॥83॥ ತನ್ನ ನಿರ್ಧಾರದಲ್ಲಿ ಸಫಲನಾಗದಿದ್ದಮೇಲೆ ಅವನು ಖಿನ್ನನಾಗುವುದರಲ್ಲಿ ಏನು ಅರ್ಥವಿದೆ? ಪ್ರತಿದಿನವೂ ಅವನು ಕೇವಲ ಐದು ಶ್ಲೋಕಗಳನ್ನು ಸಹ ಓದಲು ಸಾಧ್ಯವಾಗಲಿಲ್ಲ. ॥84॥ ಅವನು ಪ್ರತಿದಿನವೂ ಐದು ಶ್ಲೋಕಗಳನ್ನು ಓದುವ ನಿರ್ಧಾರ ಮಾಡಿಕೊಂಡನು. ಆದರೆ, "ನಾನು ಅಷ್ಟು ಮಾತ್ರವನ್ನಾದರೂ ಓದುವಾಗ ಉಲ್ಲಾಸವನ್ನು ಅನುಭವಿಸಿ ನಿತ್ಯವೂ ನಿಯಮ ಬದ್ಧವಾಗಿಯೂ ಓದುವುದಕ್ಕಾಗಲಿಲ್ಲ.॥85॥ "ಆದುದರಿಂದ ನಾನು

ಒಂದು ನಿರ್ಧಾರಕ್ಕೆ ಬಂದೆನು. ಯಾವಾಗ ಸಾಯಿಯು ನನ್ನಲ್ಲಿ ಅದರ ಬಗ್ಗೆ ಪ್ರೀತಿಯನ್ನು ಹುಟ್ಟಿಸಿ 'ಓದು' ಎಂದಾಗ ಮಾತ್ರ ಯಾವುದೇ ಉದ್ವೇಗವಿಲ್ಲದೆ ಓದಲು ಉಪಕ್ರಮಿಸುತ್ತೇನೆ. ॥86॥ "ನನಗೆ ಸಾಯಿಯಲ್ಲಿ ನಿಷ್ಠೆಯಿದೆ. ಸಾಯಿಯು ಆಜ್ಞೆ ಮಾಡಿದಾಗ ಮಾತ್ರ ನಾನು ಜ್ಞಾನೇಶ್ವರಿಯನ್ನು ಓದುತ್ತೇನೆ. ಆದ್ದರಿಂದ ನಾನು ಅದಕ್ಕಾಗಿ ಈ ದೃಢನಿರ್ಧಾರದಿಂದ ಕಾಯುತ್ತೇನೆ." ॥87॥ ಅದು ಹಾಗಿರಲಿ. ಅನಂತರ ಸನ್ 1914ನೆಯ ಇಸವಿ ಫೆಬ್ರವರಿ ತಿಂಗಳಲ್ಲಿ ದೇವಾನು ತನ್ನ ತಾಯಿ ಮತ್ತು ಪತ್ನಿ ಜೊತೆ ಮಹೋದಯ ಪರ್ವದ[1] ಗುರುಪೂಜೆಯ ವೈಭವವನ್ನು ನೋಡಲು ಶಿರಡಿಗೆ ಬಂದನು. ॥88॥ ಜೋಗನು ದೇವಾನನ್ನು ಪ್ರಶ್ನಿಸಿದನು, "ನೀನು ಜ್ಞಾನೇಶ್ವರಿಯನ್ನು ನಿತ್ಯವೂ ಏಕೆ ಓದುತ್ತಿಲ್ಲ?" ಅವನ ಪ್ರತ್ಯುತ್ತರವನ್ನೂ ಕೇಳಿರಿ. ॥89॥ "ಜ್ಞಾನೇಶ್ವರಿಯೆಂದರೆ ನನಗೆ ಬಹಳ ಇಷ್ಟ, ಆದರೆ ಅದನ್ನು ಓದುವುದರಲ್ಲಿ ಸಫಲನಾಗಿಲ್ಲ. ಈಗ ಬಾಬಾರವರು ಓದಲು ಹೇಳಿದ ನಂತರ ಮಾತ್ರ ಅದನ್ನು ಓದುತ್ತೇನೆ." ॥90॥ ಅನಂತರ ಜೋಗನು ಅವನಿಗೆ ಒಂದು ಉಪಾಯ ಹೇಳಿಕೊಟ್ಟನು. "ಜ್ಞಾನೇಶ್ವರಿ ಗ್ರಂಥವನ್ನು ತೆಗೆದುಕೊಂಡು ಅದನ್ನು ಸಾಯಿಬಾಬಾರವರ ಕೈಯಲ್ಲಿ ಕೊಡು. ಅವರು ಅದನ್ನು ನಿನಗೆ ಓದಲು ಕೊಡುತ್ತಾರೆ." ॥91॥ "ನನಗೆ ಯಾವ ಶಕ್ತಿಯೂ ಬೇಕಿಲ್ಲ. ಬಾಬಾರವರಿಗೆ ನನ್ನ ಅಂತರಂಗ ತಿಳಿದಿದೆ. ಅವರು ನನ್ನ ಆಶೆಯನ್ನು ಏಕೆ ಪೂರೈಸಬಾರದು ಮತ್ತು 'ಓದು' ಎಂಬ ಸ್ಪಷ್ಟವಾದ ಉಕ್ತಿಯನ್ನು ಏಕೆ ಹೇಳಬಾರದು?" ॥92॥ ಅವನು ಸಮರ್ಥರ ದರ್ಶನಕ್ಕೆ ಹೋದಾಗ ಅವರಿಗೆ ಒಂದು ರೂಪಾಯಿಯನ್ನು ಸಮರ್ಪಿಸಿದನು. "ಏಕೆ ಒಂದು? ಇಪ್ಪತ್ತು ತೆಗೆದುಕೊಂಡು ಬಾ" ಎಂದು ಬಾಬಾರವರು ಆಗ ಹೇಳಿದರು. ॥93॥ ಅವನು ಇಪ್ಪತ್ತು ರೂಪಾಯಿಗಳನ್ನು ತೆಗೆದುಕೊಂಡು ಬಂದು ಅವರಿಗೆ ಕೊಟ್ಟನು. ರಾತ್ರಿಯಲ್ಲಿ ಅವನು ಬಾಲರಾಮನನ್ನು ಭೇಟಿಯಾದನು. ಸಾಯಿಕೃಪೆಯನ್ನು ಅವನು ಹೇಗೆ ಪಡೆದನೆಂದು ಅವನನ್ನು ಪ್ರಶ್ನಿಸಿದನು. ॥94॥ "ನಾಳೆ, ಆರತಿಯಾದ ಮೇಲೆ ನಾನು ಎಲ್ಲ ಕಥೆಯನ್ನು ಹೇಳುತ್ತೇನೆ." ಬಾಲರಾಮನು ಆಶ್ವಾಸನೆಯಿತ್ತನು. "ಆಗಲಿ." ಎಂದು ದೇವಾನು ಹೇಳಿದನು. ॥95॥ ಅನಂತರ ಮಾರನೆಯ ದಿವಸ ದೇವಾನು ಮಸೀದಿಗೆ ದರ್ಶನಕ್ಕಾಗಿ ಹೋದನು. ಆಗಲೂ ಅವನನ್ನು 20 ರೂಪಾಯಿಗಳನ್ನು ಬೇಡಲು ದೇವಾ ಅತ್ಯಂತ ಸಂತೋಷದಿಂದ ನೀಡಿದನು. ॥96॥ ಅಲ್ಲಿ ಅತ್ಯಂತ ಜನಸಂದಣಿ ಇರಲು, ದೇವಾನು ಪಕ್ಕಕ್ಕೆ ಹೋದನು. ಬಾಬಾ ಪ್ರಶ್ನಿಸಿದರು, "ಅವನು ಆ ಕಿರಿದಾದ ಕಷ್ಟಕರವಾದ ಜಾಗದಲ್ಲಿ ಎಲ್ಲಿ ಬಚ್ಚಿಟ್ಟುಕೊಂಡಿದ್ದಾನೆ?" ॥97॥ ದೇವಾ ಪ್ರತ್ಯುತ್ತರ ನೀಡಿದನು. "ಬಾಬಾ, ನಾನು ಇಲ್ಲಿದ್ದೇನೆ!" ಬಾಬಾ ಅವನನ್ನು ಕೇಳಿದರು, "ನೀನು ಏಕೆ ಕೇವಲ ಏಳುರೂಪಾಯಿಗಳನ್ನು ಮಾತ್ರ ನನಗೆ ಕೊಟ್ಟಿರುವೆ?" ॥98॥ ದೇವಾ ಉತ್ತರಿಸಿದನು, "ನಾನು ಇಪ್ಪತ್ತನ್ನು ಕೊಟ್ಟೆ." ಬಾಬಾ ಕೇಳಿದರು. "ಅದು ಯಾರ ಹಣ?" ಅವನು ಉತ್ತರಿಸಿದನು, "ಬಾಬಾ ಅದು ನಿಮ್ಮದು." ಬಾಬಾ ಹೇಳಿದರು, "ಹಾಗಿದ್ದರೆ ನೀನು ಯಾಕೆ ಓಡಿ ಹೋಗುತ್ತಿರುವೆ? ॥99॥ "ಬಾ ಇಲ್ಲಿ, ಹತ್ತಿರ ಬಾ. ಸ್ವಸ್ಥ

ಮನಸ್ಸಿನಿಂದ ಹತ್ತಿರ ಕುಳಿತುಕೋ” ದೇವಾನು ಆಜ್ಞೆಯನ್ನು ಪಾಲಿಸಿದನು. ಮತ್ತು ಭಕ್ತಿತುಂಬಿದ ಹೃದಯದಿಂದ ಅಲ್ಲಿ ಕುಳಿತನು. ॥100॥ ನಿತ್ಯ ನಿಯಮದಂತೆ ಆರತಿ ಮಾಡಲಾಯಿತು. ಅಲ್ಲಿ ನೆರೆದಿದ್ದ ಜನರು ತಮ್ಮ ಮನೆಗಳಿಗೆ ಹಿಂತಿರುಗಿದರು. ಬಾಲರಾಮ ಮತ್ತು ದೇವಾ ಪುನಃ ಭೇಟಿಯಾದರು. ಮತ್ತು ಹಿಂದಿನ ಪ್ರಶ್ನೆಯನ್ನೇ ಮತ್ತೆ ಕೇಳಲಾಯಿತು. ॥101॥ ದೇವಾನು ಅವನನ್ನು ಅವನ ಹಿಂದಿನ ವೃತ್ತಾಂತವನ್ನು ಕೇಳಲು ಬಾಲರಾಮನು ಪ್ರಾರಂಭದಿಂದ ಎಲ್ಲವನ್ನೂ ಹೇಳಿದನು. ಮತ್ತು ಅವನು ಯಾವ ರೀತಿ ಆಧ್ಯಾತ್ಮಿಕತೆಯಲ್ಲಿ ನಿರ್ದೇಶನ ಪಡೆದನು ಎಂಬುದನ್ನೂ ಹೇಳಿದನು. ॥102॥ “ನಿನಗೆ ಯಾವ ರೀತಿ ಧ್ಯಾನಮಾಡಬೇಕು, ಬ್ರಹ್ಮಚಿಂತನೆ ಹೇಗೆ ಮಾಡಬೇಕು ಎಂದು ತಿಳಿಸಿದ್ದಾರೆಯೇ? ದಯಮಾಡಿ ನನ್ನ ಆಶೆಯನ್ನು ಪೂರೈಸು.” ಈ ರೀತಿ ದೇವಾನು ಪ್ರಾರ್ಥಿಸಿದನು. ॥103॥ ಬಾಲರಾಮನು ದೇವಾನ ಪ್ರಶ್ನೆಗೆ ಇನ್ನೇನು ಉತ್ತರಿಸಬೇಕು, ಅವನ ಜಿಜ್ಞಾಸೆಯನ್ನು ಪೂರೈಸಬೇಕೆನ್ನುವಷ್ಟರಲ್ಲಿ ಬಾಬಾರವರು ದೇವಾನಿಗೆ ಹೇಳಿಕಳುಹಿಸಿದರು. ॥104॥ ಸಾಯಿಯು ಅಷ್ಟು ವಿಪರೀತ ಉಪಾಯಗಾರರು. ಅವರು ದೇವಾನನ್ನು ಕರೆಯಲು ಚಂದ್ರುವನ್ನು[1] ಕಳಿಸಿದರು. ಒಂದು ಕ್ಷಣವನ್ನೂ ವಿಳಂಬಮಾಡದೆ ದೇವಾನು ಶ್ರೀಸಾಯಿಯವರನ್ನು ಭೇಟಿ ಮಾಡಲು ಬಂದನು. ॥105॥ ಅದು ಮಧ್ಯಾಹ್ನವಾಗಿತ್ತು, ಶ್ರೀಸಾಯಿಯವರು ಎರಡು ಕೈಗಳನ್ನೂ ಮಸೀದಿಯ ಗೋಡೆಗೆ ಒರಗಿಸಿ ನಿಂತಿರುವುದು ಕಂಡುಬಂದಿತು. ॥106॥ ದೇವಾನು ಹೋದಕೂಡಲೇ ಅವರಿಗೆ ವಂದಿಸಿದನು. ಅನಂತರ ಬಾಬಾರವರು ಪ್ರಶ್ನಿಸಿದರು, “ನೀನು ಎಲ್ಲಿ, ಯಾರ ಹತ್ತಿರ ಮತ್ತು ಏನು ಮಾತನಾಡುತ್ತಿದ್ದೆ?” ॥107॥ ಅದಕ್ಕೆ ದೇವಾನು ಉತ್ತರಿಸಿದನು, “ಕಾಕಾರವರ ಮನೆಯ ಮಹಡಿಯ ಮೇಲೆ, ನಾನು ಬಾಲರಾಮನಿಂದ ನಿಮ್ಮ ಕೀರ್ತಿಯನ್ನು ಕೇಳುತ್ತಲಿದ್ದೆ ಮತ್ತು ಅದರ ಬಗ್ಗೆ ಮಾತನಾಡುತ್ತಿದ್ದೆ.” ॥108॥ ಬಾಬಾರವರು ದೇವಾನಿಗೆ ಆಜ್ಞಾಪಿಸಿದರು, “ಇಪ್ಪತ್ತೈದು ರೂಪಾಯಿಗಳನ್ನು ತೆಗೆದುಕೊಂಡು ಬಾ.” ಹಣವನ್ನು ತಂದು ಕೂಡಲೇ ಅವನು ಬಾಬಾರವರಿಗೆ ಸಮರ್ಪಿಸಿದನು. ॥109॥ ಬಾಬಾ ಕೇಳಿದರು, “ಎಷ್ಟು ತೆಗೆದುಕೊಂಡು ಬಂದೆ?” ದೇವಾನು ಹೇಳಿದನು, “ಇಪ್ಪತ್ತೈದು.” ಬಾಬಾ ಹೇಳಿದರು, “ಬಾ, ಕುಳಿತುಕೋ.” ದೇವಾನು ಬಾಬಾರವರ ಜೊತೆ ಮಸೀದಿಗೆ ಹೋದನು. ॥110॥ ಬಾಬಾರವರು ಕಂಬದ ಹತ್ತಿರ ಕುಳಿತುಕೊಂಡರು. ಮಸೀದಿಯಲ್ಲಿ ಇನ್ನು ಯಾರೂ ಇರಲಿಲ್ಲ. ಅವರು ಹೇಳಿದರು, “ನೀನು ನನ್ನ ಚಿಂದಿಗಳನ್ನು ನನಗೆ ತಿಳಿಯದಂತೆಯೇ ಕದ್ದಿರುವೆ.” ॥111॥ “ನನಗೆ ಚಿಂದಿಯ ಬಗ್ಗೆ ಏನೂ ಗೊತ್ತಿಲ್ಲ” ದೇವಾನು ಸಾಕ್ಷಿ ಹೇಳುತ್ತ ವಿವರಿಸಿದನು. ಬಾಬಾರವರು ಅವನಿಗೆ ಹೇಳಿದರು, “ಹಾಗಾದರೆ ಇಲ್ಲೇ ಎಲ್ಲಾದರೂ ಅವುಗಳನ್ನು ನೋಡು.” ॥112॥ “ಇಲ್ಲಿ ಎಲ್ಲಿ ಚಿಂದಿಗಳು ಇರುತ್ತವೆ?” ದೇವಾನು ಆ ಕ್ಷಣದಲ್ಲಿ ಕೇಳಿದನು. ಬಾಬಾ ಹೇಳುತ್ತ ಇದ್ದರು, “ನೀನು ಅವುಗಳನ್ನು ಹುಡುಕು. ಕಳ್ಳತನ ಮಾಡುವುದು ಕೆಟ್ಟ ಅಭ್ಯಾಸ. ॥113॥ “ಕೆಲವು ಚೋರರು ಅವುಗಳನ್ನು ತೆಗೆದುಕೊಂಡಿದ್ದಾರೆ! ನೋಡು! ನೋಡು! ಅವು ಇಲ್ಲಿಯೇ ಇರಬೇಕು!”

ಅದನ್ನು ಕೇಳಿ ದೇವಾನು ಮತ್ತೆ ನೋಡಿದನು. ಆದರೆ ಅವನಿಗೆ ಏನೂ ಕಾಣಿಸಲಿಲ್ಲ. ॥114॥ ಅನಂತರ ತಮ್ಮ ಹುಬ್ಬುಗಳನ್ನು ಏರಿಸುತ್ತ ಬಾಬಾರವರು ಅಲ್ಲಿ ಇಲ್ಲಿ ನೋಡಿದರು. ತಮ್ಮ ದೃಷ್ಟಿಯನ್ನು ದೇವಾನ ಮೇಲಿಟ್ಟು ಸಾಯಿಯವರು ದೇವಾನ ಮೇಲೆ ಕೂಗಾಡಿದರು. ॥115॥ "ನೀನು ಒಬ್ಬ ಸುಳ್ಳುಗಾರ! ನೀನಲ್ಲದೆ ಈ ಸಮಯದಲ್ಲಿ ಚಿಂದಿಗಳನ್ನು ಕದಿಯಲು ಇನ್ನು ಯಾರಿದ್ದಾರೆ? ನೀನೊಬ್ಬ ಕಳ್ಳನೆಂದೇ ತಿಳಿಯುತ್ತೇನೆ! ॥116॥ "ನೀನು ಈ ರೀತಿ ಇಲ್ಲಿ ಕದಿಯಲು ಬಂದಿರುವೆಯಾ? ನಿನ್ನ ಕೂದಲು ಕಪ್ಪುಬಣ್ಣದಿಂದ ಬಿಳಿಬಣ್ಣಕ್ಕೆ ತಿರುಗಿದೆ. ಆದರೆ ನಿನ್ನ ಕೆಟ್ಟ ನಡತೆಗಳು ಲವಲೇಶವಾದರೂ ಹೋಗಿಲ್ಲ! ॥117॥ "ನಾನು ಕೊಡಲಿಯಿಂದ ನಿನ್ನನ್ನು ಹೊಡೆಯುತ್ತೇನೆ. ನಿನ್ನನ್ನು ತುಂಡು ತುಂಡಾಗಿ ಕತ್ತರಿಸುತ್ತೇನೆ ಮತ್ತು ಸಾಯಿಸುತ್ತೇನೆ. ನನ್ನಿಂದ ನೀನು ಹೇಗೆ ತಪ್ಪಿಸಿಕೊಳ್ಳುವೆ? ನೀನು ಎಲ್ಲೇ ಇರು, ಅಲ್ಲಿಗೇ ಬಂದು ನಿನ್ನನ್ನು ಕೊಲ್ಲುತ್ತೇನೆ. ॥118॥ "ಮನೆಯಿಂದ ಶಿರಡಿಗೆ ನೀನು ಬರುವುದು ಕದಿಯುವುದಕ್ಕೇನು? ನಿನ್ನದನ್ನು ಹಿಂದಕ್ಕೆ ತೆಗೆದುಕೋ. ನನ್ನ ಚಿಂದಿಗಳನ್ನು ನನಗೆ ಹಿಂದಕ್ಕೆ ತಂದುಕೊಡು." ॥119॥ ಸಾಯಿಯವರು ಕೋಪದಿಂದ ಕೆಂಡವಾದರು. ಅವರು ಅವನನ್ನು ಮಾತಿನ ಸರಪಳಿಯಿಂದಲೇ ಬೈದರು. ಅವನ ತಾಯಿ ಮತ್ತು ಅಜ್ಜಿಯವರನ್ನೂ ಸೇರಿಸಿ ಬೈಯ್ದರು. ॥120॥ ಸಾಯಿನಾಥರು ಕೋಪಿಸಿಕೊಂಡಿದ್ದನ್ನು ನೋಡಿ ದೇವಾನು ಅವರನ್ನು ಕೌತುಕದಿಂದ ನೋಡುತ್ತ ನಿಂತನು. ಮನಸ್ಸಿನಲ್ಲಿಯೇ ಆಶ್ಚರ್ಯ ಭರಿತನಾದನು. ॥121॥ ದೇವಾನು ಅವರ ಹತ್ತಿರ ಒಬ್ಬನೇ ಇದ್ದನು. ಮತ್ತು ಏಟು ತಿನ್ನಲು ತನ್ನ ಸರತಿಯು ಬಂತೆಂದೇ ಭಾವಿಸಿದನು. ಅಥವಾ ಇದೊಂದು ಭಗವಂತನ ವಿಶ್ವರೂಪ ದರ್ಶನವೇನು! ಅದನ್ನು ನಂಬಿ ಅವನು ಆನಂದದಿಂದ ಉಸಿರುಕಟ್ಟಿದಂತಾದ॥122॥ "ಅವರೇನಾದರೂ ಸಟಕಾವನ್ನು ತಮ್ಮ ಕೈಗೆತ್ತಿಕೊಂಡು ಈಗ ನನ್ನನ್ನು ಕೋಪದಿಂದ ಹೊಡೆಯುತ್ತಾರೇನು? ನಾನು ಒಬ್ಬನೇ ಇದ್ದೇನೆ ಮತ್ತು ಈಗ ಅವರ ಕೈಯಲ್ಲಿ ಸಿಕ್ಕಿದ್ದೇನೆ. ಅವರ ಚಿತ್ತದಂತೆ ಮಾಡಲಿ." ॥123॥ ಆದರೆ ಚಿಂದಿಯ ಈ ರಹಸ್ಯವೇನು? ದೇವಾನಿಗೆ ಏನೂ ಅರ್ಥವಾಗಲಿಲ್ಲ. "ಹೋಗು, ಒಂದು ಜಾಗಕ್ಕೆ ಹೊರಟು ಹೋಗು!" ಸಾಯಿನಾಥರು ಹೀಗೆ ಹೇಳಿದಾಗ ಅವನು ಮೆಟ್ಟಿಲುಗಳ ಕಡೆ ಹೊರಟನು. ॥124॥ ಚಿಂದಿಯ ಗೂಢಾರ್ಥವೇನು? ನಾನು ಅರ್ಥ ಮಾಡಿಕೊಳ್ಳಲು ಸಮರ್ಥನಲ್ಲ. ಸಾಯಿಕೃಪೆಯನ್ನು ಪಡೆದರೆ ಅದರ ಬಗ್ಗೆ ತಿಳಿದುಕೊಳ್ಳಬಹುದು. ಆಗನಾನು ಅದನ್ನು ಶ್ರೋತೃಗಳಿಗೆ ನಿವೇದಿಸುತ್ತೇನೆ. ॥125॥ ಕಾಲು ಗಂಟೆಯೊಳಗೆ ದೇವಾನು ಮತ್ತೆ ಬಾಬಾರವರ ಮುಂದೆ ನಿಂತನು. ಬೈಗಳು ಇನ್ನೂ ಮುಂದುವರೆಯುತ್ತಲೇ ಇತ್ತು. ಸಾಯಿ ಹೇಳಿದರು, "ನೀನು ಮತ್ತೆ ಮೇಲೆ ಬಂದೆಯಾ?" ॥126॥ "ಹೋಗು, ಮತ್ತೆ ವಾಡಾಗೆ ಹೋಗು!" ಬಾಬಾರವರು ಈ ರೀತಿ ಹೇಳುತ್ತಲೇ ದೇವಾನು ಆಜ್ಞೆಯನ್ನು ಪಾಲಿಸುತ್ತ ಸಾಯಿ ಚರಣಗಳಿಗೆ ನಮಿಸುತ್ತ ವಾಡಾಗೆ ಹಿಂತಿರುಗಿದನು. ॥127॥ ಏನೆಲ್ಲ ನಡೆಯಿತು ಮತ್ತು ಯಾವ ರೀತಿ ಇದೆಲ್ಲವೂ ನಡೆಯಿತು ಎಂಬುದನ್ನು ಯಥಾರ್ಥವಾಗಿ ಮೊದಲಿನಿಂದ ಕೊನೆಯವರೆಗೆ ದೇವಾನು ಜೋಗ ಮತ್ತು ಬಾಲರಾಮ ಇವರಿಗೆ

ವಿವರಿಸಿದನು. ॥128॥ ಬಾಬಾರವರ ಬೈಗಳ ಸುರಿಮಳೆ ಅರ್ಧ ಗಂಟೆಯ ಕಾಲದವರೆಗೆ ಮುಂದುವರಿಯಿತು. ಸ್ವಲ್ಪಸಮಯದ ನಂತರ ಬಾಬಾರವರು ತಾವೇ ಜನರನ್ನು ಬರಹೇಳಿದರು. ॥129॥ ದೇವಾ ಸಹ ನಂತರ ಬಂದು ಇತರರ ಮಧ್ಯೆ ಕುಳಿತುಕೊಂಡರು. "ಹುಡುಗನು ಬಹಳ ಬೇಸರಪಟ್ಟಿರಬೇಕು." ಶ್ರೀಸಾಯಿಯು ಅನಂತರ ಹೇಳಿದರು. ॥130॥ "ಆ ಚಿಂದಿಗಳ ಬೆಲೆ ಏನು? ಆದರೂ ನಾನು ಬೈಗಳ ಭಾಷೆಯಿಂದ ಅವನನ್ನು ನೋಯಿಸಿದ್ದೇನೆ. ಆದರೆ ಅವನು ಕಳ್ಳತನವಮಾಡಿದ್ದಾನೆ. ಆದ್ದರಿಂದ ಬೈದು ಹೇಳುವುದನ್ನು ಬಿಟ್ಟು ಬೇರೆ ಉಪಾಯವಾದರೂ ಏನಿದೆ? ॥131॥ "ಅದು ಹಾಗಿರಲಿ. ಅಲ್ಲಾನು ಎಲ್ಲವನ್ನೂ ನೋಡುತ್ತಾನೆ ಮತ್ತು ಅದರಿಂದ ಅವನಿಗೆ ಲಾಭವಾಗುತ್ತದೆ. ಆದ್ದರಿಂದ ಭಾವು, ನೀನು ಸ್ವಲ್ಪ ದಕ್ಷಿಣೆ ಕೊಡುವೆಯಾ?" ಎಂದು ಕ್ಷಮಾಶೀಲ ಶ್ರೀ ಸಾಯಿಯು ಪ್ರಶ್ನಿಸಿದರು. ॥132॥ ದೇವಾ ಕೇಳಿದನು, "ಎಷ್ಟು ತೆಗೆದುಕೊಂಡು ಬರಲಿ?" "ಹನ್ನೆರಡು ರೂಪಾಯಿಗಳನ್ನು ಕೂಡಲೇ ತೆಗೆದುಕೊಂಡು ಬಾ." ದೇವಾನು ನೋಡಿಕೊಂಡಾಗ ಅವನಲ್ಲಿ ಒಂದೇ ಒಂದು ಕರೆನ್ಸಿ ನೋಟು ಇತ್ತೇ ವಿನಹಃ ಚಿಲ್ಲರೆ ಇರಲಿಲ್ಲ. ॥133॥ ದೇವಾ ಇದನ್ನು ಬಾಬಾರವರಿಗೆ ತಿಳಿಸಿದನು. ಬಾಬಾ ಹೇಳಿದರು, "ಪರವಾಗಿಲ್ಲ, ನನಗೆ ಅದು ಬೇಡ. ಬೆಳಗ್ಗೆ ನೀನು ಇದರ ಎರಡರಷ್ಟು ಕೊಟ್ಟಿರುವೆ ಮತ್ತು ಅದನ್ನು ಮರೆತುಬಿಟ್ಟಿರುವೆ." ॥134॥ ಆದರೂ ಸಹ, ದೇವಾ ಹಣವನ್ನು ಸಂಪಾದಿಸಿ ಬಾಬಾರವರಿಗೆ ನೀಡಿದನು ಮತ್ತು ಬಾಬಾರವರ ಚರಣಗಳಲ್ಲಿ ವಂದಿಸಿದನು. ತರುವಾಯ ಬಂದಂತಹ ಮಾತುಗಳನ್ನು ಕೇಳಿರಿ. ॥135॥ "ನೀನು ಏನು ಮಾಡುತ್ತಿರುವೆ?" ಬಾಬಾ ಪ್ರಶ್ನಿಸಿದರು. "ಏನೂ ಇಲ್ಲ" ಎಂಬ ಉತ್ತರ ಬಂದಾಗ ಅವರು ಹೇಳಿದರು, "ಪೋಥಿಯನ್ನು ನಿತ್ಯವೂ ನಿಯಮ ಬದ್ಧವಾಗಿ ಓದು" ಇದೇ ಬಾಬಾರವರು ದೇವಾನಿಗೆ ನೀಡಿದ ಆಜ್ಞೆಯಾಗಿತ್ತು. ॥136॥ "ಹೋಗು, ವಾಡಾದಲ್ಲಿ ಕುಳಿತುಕೋ. ಅದನ್ನು ನಿತ್ಯವೂ ಪಾರಾಯಣ ಮಾಡು. ಓದುವಾಗ ಓದಿದ ಭಾಗದ ಅರ್ಥವನ್ನು ಎಲ್ಲರಿಗೂ ಹೇಳು. ಪ್ರೀತಿ ಮತ್ತು ಭಕ್ತಿಗಳಿಂದ ವಿವರಿಸು. ॥137॥ "ನಿನಗೆ ಒಂದು ಜರಿಯ ಕಸೂತಿ ಇರುವ ಸುಂದರವಾದ ಮೇಲಂಗಿಯನ್ನು ಕೊಡಲು ಸಿದ್ಧನಾಗಿ ಕುಳಿತಿದ್ದೇನೆ. ಹಾಗಿರುವಾಗ ನೀನು ಚಿಂದಿಗಳನ್ನು ಏಕೆ ಕದಿಯಬೇಕು? ನಿನಗೇನಾದರೂ ಕಳ್ಳತನ ಮಾಡುವ ಹವ್ಯಾಸ ಇದೆಯಾ?" ॥138॥ ಅದು ಹಾಗಿರಲಿ. "ಪೋಥಿಯನ್ನು ಓದು" ಎಂಬ ಸಾಯಿ ಮುಖದಿಂದ ಬಂದ ವಚನಗಳು ನನ್ನ ಅಂತರಾಳದ ಬಯಕೆಯನ್ನು ತೃಪ್ತಿಪಡಿಸಿತು ಮತ್ತು ನಾನು ಬಹು ಸುಖಸಂಪನ್ನನಾದೆನು. ॥139॥ ಆಜ್ಞೆಯನ್ನು ಮನ್ನಿಸುತ್ತ, ನಾನು ಅನಂತರ ಆ ದಿನದಿಂದಲೇ ಜ್ಞಾನೇಶ್ವರಿಯನ್ನು ಓದಲು ಪ್ರಾರಂಭಿಸಿದೆ. ಮತ್ತು ಹಾಗೆಯೇ ಅದನ್ನು ವಿವರಿಸಲು ಪ್ರಾರಂಭಿಸಿದೆ. ॥140॥ ಈಗ ನಾನು ಇಚ್ಛೆಪಟ್ಟ ಆಜ್ಞೆಯು ದೊರಕಿತು. ವ್ರತವನ್ನು ನೆರವೇರಿಸುವ ಮುನ್ನ ಮನಸ್ಸಿನ ಚಿಂತೆಯು ದೂರವಾಯಿತು. ಆಗಿನಿಂದಾಚೆಗೆ ಜ್ಞಾನೇಶ್ವರಿಯನ್ನು ಓದುವಾಗ ನಿಯಮಿತವಾಗಿರುತ್ತದೆ. ॥141॥ ಈಗ ನನ್ನ ಗುರುವಿನ ಆಜ್ಞೆಯ ಆಧಾರದಿಂದ ಜ್ಞಾನೇಶ್ವರಿಯೂ ಸಹ ಮಂಗಳಕರವಾಯಿತು. ಈ ಹಿಂದೆ

ಅದೇನಾದರೂ ನಡೆದಿರಲಿ, ಅದರ ವಿಷಯ ಬಿಟ್ಟುಬಿಡಿ. ಈಗ ನಾನು ಕ್ರಮಬದ್ಧನಾಗಿರುತ್ತೇನೆ. ॥142॥ ಸಾಯಿಯ ಆಜ್ಞೆಯ ಪ್ರಮಾಣದಿಂದ ಮತ್ತು ಅವರ ಆಜ್ಞೆಯ ಬಲದಿಂದ ನಾನು ಪೋಥಿಯ ಪಾರಾಯಣವನ್ನು ನಿರ್ವಿಘ್ನವಾಗಿ ಮಾಡುತ್ತೇನೆ ಎಂಬ ಆತ್ಮವಿಶ್ವಾಸ ನನಗಿದೆ. ॥143॥ "ಬಾಬಾ! ನಾನು ನಿಮಗೆ ಸಾಷ್ಟಾಂಗ ಪ್ರಣಾಮ ಮಾಡಲು ಬಂದಿದ್ದೇನೆ. ನಾನು ಅನನ್ಯ ಭಾವದಿಂದ ನಿಮ್ಮಲ್ಲಿ ಶರಣಾಗಿದ್ದೇನೆ. ಈ ಮಗುವಿಗೆ ನಿಮ್ಮ ರೆಕ್ಕೆಗಳಲ್ಲಿ ಆಶ್ರಯಕೊಡಿ, ನನ್ನಿಂದ ಪೋಥಿಯ ವಾಚನ ಮಾಡಿಸಿರಿ. ॥144॥ "ಚಿಂದಿ ಎಂಬುದರ ಅರ್ಥ ಈಗ ನನಗೆ ತಿಳಿಯಿತು. ಬಾಲರಾಮನನ್ನು ನಾನು ಕೇಳಿದ್ದುದು ಚಿಂದಿಯಾಗಿತ್ತು, ಮತ್ತು ಸಾಯಿಯು ಅದನ್ನು ಒಪ್ಪಿರಲಿಲ್ಲ. ಆದ್ದರಿಂದ ಅವರು ಕೋಪಗೊಂಡಿದ್ದರು.॥145॥ "ನಾನು ಬಾಲರಾಮನನ್ನು ಯಾವ ರೀತಿ ಉಪಾಸನೆ ಮಾಡುವೆ? ಯಾವ ರೀತಿ ಪರಬ್ರಹ್ಮ ಚಿಂತನೆ ಮಾಡುವೆ? ಎಂದು ಪ್ರಶ್ನಿಸಿದೆ. ಅದನ್ನು ಬಾಬಾರವರು ಇಷ್ಟಪಡಲಿಲ್ಲ. ॥146॥ "ಬಾಬಾರವರು ಯಾವುದೇ ಪ್ರಶ್ನೆಯನ್ನು ತಾವಾಗಿಯೇ ಉತ್ತರಿಸಲು ಸಿದ್ಧರಾಗಿದ್ದರು. ಹಾಗಿರಲು ನಾವು ಪರಸ್ಪರ ಏಕೆ ಪ್ರಶ್ನಿಸಬೇಕು? ಆದುದರಿಂದ ನನ್ನನ್ನು ದುರ್ಧರವಾಗಿ ಕಾಡಿಸಿದರು." ॥147॥ 'ಕಾಡಿಸಿದರು' ಎನ್ನುವ ಪದವೇ ಬಹಳ ಒರಟು ಮತ್ತುಉದ್ಧಟವಾದ ಪದ. ಯಾರಿಗೆ ತಮ್ಮ ಭಕ್ತರ ಮೇಲೆ ಉಕ್ಕಿಬರುವ ಪ್ರೀತಿಯಿದೆಯೋ ಅಂತಹವರು ತಮ್ಮ ಭಕ್ತರನ್ನು ಕಾಡಿಸಲು ಕನಸಿನಲ್ಲಿಯೂ ಸಾಧ್ಯವಿಲ್ಲ. ಹಾಗಿರುವಾಗ ಆ ಪದ ಮತ್ತು ಅದರ ಪ್ರಯೋಗ ತಪ್ಪು. ॥148॥ ಅವರು ಕಾಡಿಸಲಿಲ್ಲ. ಆದರೆ ನನಗೆ ಕಲಿಸಿದರು. 'ನಿನ್ನ ಮನಸ್ಸಿನಲ್ಲಿ ಏನಿದೆಯೋ ಅವೆಲ್ಲವೂ ನನ್ನಿಂದ ತೃಪ್ತಿಯಾಗಬೇಕು. ಮತ್ತು ಕದ್ದಿರುವುದು ಎಂದಿಗೂ ಪ್ರಯೋಜನವಿಲ್ಲ. ॥149॥ ಸಾಯಿಯು ಹೊರನೋಟಕ್ಕೆ ಕ್ರೋಧಿತರಾಗಿ ಕಂಡರೂ ಸಹ, ಅವರು ಅಂತರಂಗದಲ್ಲಿ ನಿತ್ಯವೂ ಪ್ರಸನ್ನರಾಗಿದ್ದರು. ಬಾಹ್ಯದಲ್ಲಿ ಸಂತಾಪದಿಂದ ಸಂತಪ್ತರಾಗಿದ್ದರೂ ಅಂತರಂಗದಲ್ಲಿ ಆನಂದದಿಂದ ತೃಪ್ತರಾಗಿದ್ದರು. ॥150॥ ಬಾಹ್ಯದಲ್ಲಿ ತೋರಿಸಿರುವ ಕೋಪವು ಲೌಕಿಕ ಪ್ರೀತಿಯಿಂದಾಗಿತ್ತು, ಅಂತರಂಗದಲ್ಲಿ ಅವರು ಪರಮಾನಂದ ಮತ್ತು ಗೌರವಯುಕ್ತರಾಗಿದ್ದರು. ಈ ರೀತಿಯ ಸಾಯಿಯ ಲೀಲೆಯ ವೈಭವವನ್ನು ಹಾಡಲು ಅದೃಷ್ಟವಂತರಾಗಿರಬೇಕು. ॥151॥ ಯಾರಿಗೆ ತಮ್ಮ ಗುರುವನ್ನು ಸಾಧಿಸುವ ಉತ್ಕಟವಾದ ಇಚ್ಛೆಯಿರುವುದೋ ಅವರು ತಮ್ಮ ಸ್ವಹಿತದ ಮೇಲೆ ಚಿತ್ತವನ್ನಿಟ್ಟು, ಬೈಗಳ ಸುರಿಮಳೆಯನ್ನು ಪುಷ್ಪವೃಷ್ಟಿಯೆಂದೂ ಆಶೀರ್ವಚನಗಳ ಮಳೆಯೆಂದೂ ನಂಬುತ್ತಾರೆ. ॥152॥ ಕರ್ಣಕಠೋರವಾದ ಅಶ್ಲೀಲ ವಚನಗಳನ್ನು ಕೇಳಿ ದೇವಾನ ಮನಸ್ಸು ತಳಮಳಗೊಳ್ಳಲಿಲ್ಲ. ಅವನಿಗೆ ಬಾಬಾರವರ ಮೇಲೆ ಆಳವಾದ ಪ್ರೇಮವಿತ್ತು. ಆದ್ದರಿಂದ ಅದೊಂದು ಕೇವಲ ಪುಷ್ಪವೃಷ್ಟಿಯೆಂದೇ ಭಾವಿಸಿದನು. ॥153॥ "ಕೇವಲ ಭಾಗ್ಯವಂತರು ಮಾತ್ರ ಹಸುವಿನ ಕೆಚ್ಚಲಿನಲ್ಲಿ ತುಂಬಿಕೊಂಡಿರುವ ಹಾಲಿನ ರುಚಿಯನ್ನು ಆಸ್ವಾದಿಸಬಹುದು. ಹಸುವಿನಲ್ಲಿರುವ ಹಾಲು ತುಂಬಿದ ಕೆಚ್ಚಲಿನ ತೊಟ್ಟಿನ ಹತ್ತಿರವಿದ್ದರೂ ಉಣ್ಣೆ ತನ್ನ ಕರ್ಮಫಲವಾಗಿ ರಕ್ತವನ್ನು ಹೆಚ್ಚು ಇಷ್ಟಪಡುತ್ತದೆ. ॥154॥ "ಕಪ್ಪೆಯು ಕಮಲದ ಹೂಗಳ ಹತ್ತಿರವೇ ಇರುತ್ತದೆ.

ದುಂಬಿಯು ಕಮಲದ ಹೂವಿನಿಂದ ರಸವನ್ನು ಲೂಟಿಮಾಡುತ್ತದೆ. ಆದರೆ ದುರ್ದೈವವಶಾತ್ ಕಪ್ಪೆಯು ಕೇವಲ ಕೆಸರನ್ನು ಆಹಾರವಾಗಿ ತಿನ್ನುತ್ತದೆ, ಆದರೆ ಭ್ರಮರದ ಅದೃಷ್ಟಕ್ಕೆ ಪಾರವೇ ಇಲ್ಲ. ||155|| "ಅದೇ ರೀತಿ ನೀನು ಭಾಗ್ಯವಂತನು. ನೀನು ನನ್ನ ಸನ್ನಿಧಾನದಲ್ಲೇ ಇರುವೆ. ನಿನಗೆ ಏನು ಬೇಕಾದರೂ ಕೇಳು. ನಿನ್ನ ಶಂಕೆಗಳಿಗೆ ಸಮಾಧಾನ ಪಡೆಯಬಹುದು" ಎಂದು ಸಾಯಿ ಹೇಳಿದರು. ||156|| "ಪೋಥಿಯ ಬಗೆಗಿನ ನನ್ನ ಹಠವನ್ನು ಗಮನಿಸು. ಜ್ಞಾನೇಶ್ವರಿಯನ್ನು ಅವರು 'ಓದು' ಎಂದು ಹೇಳುವವರೆಗೂ ನಾನು ಓದಲು ತೆಗೆಯಲಿಲ್ಲ ಬಾಬಾರವರು ನನ್ನ ಇಚ್ಛೆಯನ್ನು ಪೂರ್ಣವಾಗಿ ತೃಪ್ತಿಪಡಿಸಿದರು. ||157|| ಯಾವ ರೀತಿ ಮುದ್ದಿನ ತಾಯಿಯು ತನ್ನ ಮಗುವಿನ ಆಸೆಯೆಲ್ಲವನ್ನೂ ಪೂರೈಸುತ್ತ ಮಗುವನ್ನು ಅತಿಮುದ್ದಿನಿಂದ ಕೆಡಿಸುತ್ತಾಳೆ! ಇದು ಇಂತಹ ಮಧುರ ಅನುಭವದ ಕಥೆ! ಇದು ಭಕ್ತಿಯನ್ನು ದೃಢಪಡಿಸುತ್ತದೆ. ||158|| ದೇವಾ ಹೇಳಿದನು. "ಅವರು ನನಗೆ ಓದಲು ನಿರ್ದೇಶನ ನೀಡಿ ಕೇವಲ ಅಲ್ಲಿಗೇ ನಿಲ್ಲಿಸಲಿಲ್ಲ. ಒಂದು ವರ್ಷ ಕಳೆಯುವ ಮೊದಲು ಅವರು ನನಗೊಂದು ಸ್ವಪ್ನ ದರ್ಶನವನ್ನು ನೀಡಿದರು. ಅವರು ನನ್ನನ್ನು ಕೇಳಿದ ಅಚ್ಚರಿಯ ಪ್ರಶ್ನೆಯನ್ನು ಆಲಿಸಿರಿ. ||159|| ಸನ್ 1914ನೆಯ[3] ಇಸವಿ ಏಪ್ರಿಲ್ ಎರಡನೆಯ ತಾರೀಖು ಗುರುವಾರ ಬೆಳಗ್ಗೆ ನನಗೆ ಕನಸಿನ ಪ್ರಸಾದ ಸಿಕ್ಕಿತು. ||160|| ಸಾಯಿ ಸಮರ್ಥರು ಸ್ವಪ್ನದಲ್ಲಿ ಬಂದರು ಮತ್ತು ಮೊದಲನೆಯ ಮಹಡಿಯಲ್ಲಿ ಕುಳಿತುಕೊಂಡರು. ಅವರು ನನ್ನನ್ನು ಕೇಳಿದರು, "ಪೋಥಿಯು ಅರ್ಥವಾಯಿತೇ?" ಅದಕ್ಕೆ ಉತ್ತರವಾಗಿ ನಕಾರಾತ್ಮಕವಾಗಿ ತಿಳಿಸಿದೆ. ||161|| ಮತ್ತೊಂದು ಪ್ರಶ್ನೆಯು ನಂತರ ಬಂದಿತು. "ಅದನ್ನು ಮತ್ತೆ ಯಾವಾಗ ಅರ್ಥಮಾಡಿಕೊಳ್ಳುವೆ?" ನನ್ನ ಕಣ್ಣುಗಳು ಕಣ್ಣೀರಿನಿಂದ ತುಂಬಿದವು. ನಾನು ಏನು ಪ್ರತ್ಯುತ್ತರ ಹೇಳಿದೆ ಎಂಬುದನ್ನು ಕೇಳಿ. ||162|| "ಪೋಥಿಯನ್ನು ಓದುವುದು ಕೇವಲ ಒಂದು ಚಿಂತೆ. ನೀವು ನಿಮ್ಮ ಕೃಪೆ ಹರಿಸದ ಹೊರತು ಅದನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರ. ಬಾಬಾ, ನಾನು ಇದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಿದ್ದೇನೆ." ||163|| ಬಾಬಾ ಹೇಳಿದರು, "ಪೋಥಿಯನ್ನು ಓದುವಾಗ, ನೀನು ತುಂಬ ಅವಸರ ಮಾಡುತ್ತೀಯೆ. ಅದನ್ನು ಓದುವಾಗ ನಾನು ಗಮನಿಸುತ್ತೇನೆ. ನನ್ನ ಸಮೀಪ ಕುಳಿತುಕೊಂಡು ಅದನ್ನು ಓದು." ||164|| "ಏನನ್ನು ಓದಲಿ?" ಎಂದು ದೇವಾನು ಪ್ರಶ್ನಿಸಿದಾಗ, ಅಧ್ಯಾತ್ಮ ಭಾಗವನ್ನು ಓದಲು ತಿಳಿಸಲಾಯಿತು. ದೇವಾನು ಪುಸ್ತಕ ತರಲು ಹೋದಾಗ, ಆ ಸಮಯದಲ್ಲಿ ಅವನ ಕಣ್ಣು ತೆರೆಯಿತು. ||165|| ದೇವಾ ಆಗ ಜಾಗೃತನಾದನು. ಅವನು ಸ್ವಪ್ನಸ್ಥಿತಿಯನ್ನು ಯೋಚಿಸಿದಾಗ ಅವನ ಮನಸ್ಥಿತಿಯು ಏನಾಗಿರಬಹುದೆಂಬುದನ್ನು ಶ್ರೋತೃಗಳು ಊಹಿಸಬಹುದು. ||166|| ಯಾರಾದರೂ ಒಂದು ವರ್ಷದ[4] ವರೆಗೆ ಕಾಯಲು ಸಿದ್ಧರಾಗಿ ಅನಂತರ ಮಗುವು ತಮ್ಮ ಆಜ್ಞೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆಯಾ ಮತ್ತು ಪೋಥಿಯನ್ನು ನಿತ್ಯವೂ ಓದುತ್ತಿದೆಯಾ ಎಂದು ಕಂಡುಹಿಡಿಯುತ್ತಾರೆಯೇ? ಮತ್ಯಾರು ಇಷ್ಟೊಂದು ಕಾಳಜಿ ವಹಿಸುತ್ತಾರೆ?" ||167|| ಶಿಸ್ತನ್ನು ಪಾಲಿಸಲಾಗಿದೆಯೇ? ಪಾಠವನ್ನು ನಿತ್ಯವೂ

ಅನುಸರಿಸಲಾಗುತ್ತದೆಂಬೇ? ಎಲ್ಲಿ ಮತ್ತು ಏಕೆ ಏನಾದರೂ ವಿಫಲವಾಯಿತು? ಹೀಗೆ ಮತ್ಯಾರು ಇಷ್ಟು ಕಾಳಜಿ ತೋರಿಸಲು ಸಾಧ್ಯ? ॥168॥ ಓದುಗರು ಯಾವುದಕ್ಕೆ ಗಮನ ಕೊಡಬೇಕು? ಮತ್ತೆ ಯಾವುದಕ್ಕೆ ವಿಶೇಷ ಲಕ್ಷ್ಯನೀಡಬೇಕು? ನಮ್ಮ ಪ್ರೀತಿಯ ತಾಯಿ ಸಾಯಿ ಮಾತ್ರ ಪ್ರತ್ಯಕ್ಷವಾಗಿ ಇದನ್ನು ಒತ್ತಿ ಹೇಳಬಹುದು. ॥169॥ ಈ ರೀತಿಯ ಸಾಯಿ ಸಮರ್ಥರ ಲೀಲೆಗಳನ್ನು ಭಕ್ತರು ಅನೇಕ ಸಂದರ್ಭಗಳಲ್ಲಿ ಅನುಭವಿಸಿದ್ದಾರೆ ಮತ್ತು ಸ್ವಾನಂದವನ್ನು ಆನಂದಿಸಿದ್ದಾರೆ. ಅದನ್ನು ನಾನು ಸ್ವಂತ ಕಣ್ಣುಗಳಿಂದಲೇ ಪ್ರತ್ಯಕ್ಷವಾಗಿ ನೋಡಿದ್ದೇನೆ. ॥170॥ ಈಗ, ಇಲ್ಲಿ ನೆರೆದಿರುವ ಎಲ್ಲ ಶ್ರೋತೃ ಮಂಡಲಿಯವರೇ, ಗುರುಚರಣಗಳಲ್ಲಿ ವಿನೀತರಾಗಿ ಮುಂದಿನ ಅದ್ಭುತವಾದ ಕಥೆಯನ್ನು ಸರಿಯಾದಸಮಯದಲ್ಲಿ ಕೇಳಿರಿ. ॥171॥ ಶ್ರೀ ಸಮರ್ಥರ ಚರಣಗಳನ್ನು ನೆನೆಸುತ್ತ ನಾನು ಒಂದು ಪೂರ್ಣ ಸದ್ಭಾವದಿಂದ ನಿಮಗೆ ನಮಿಸುತ್ತೇನೆ. ಕೇವಲ ಅದುಮಾತ್ರ ಎಲ್ಲ ಭವದುಃಖಗಳನ್ನು ದೂರಮಾಡುತ್ತದೆ. ಹೇಮಾದನು ಭಕ್ತಿಯಿಂದ ಶರಣಾಗುತ್ತಾನೆ. ॥172॥ ಸಾಯಿಯೊಬ್ಬರೇ ನನ್ನ ಸ್ಫೂರ್ತಿ, ಸಾಯಿ ಮಾತ್ರವೇ ನಿರತಿಶಯವಾದ ಪರಮಾರ್ಥದ ಸುಖ. ಕೇವಲ ಸಾಯಿ ಮಾತ್ರ ನನ್ನನ್ನು ಕೃತಾರ್ಥನನ್ನಾಗಿ ಮಾಡುವವರು. ಇದು ನನ್ನ ದೃಢವಿಶ್ವಾಸ. ॥173॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿಯ ಕೃಪೆ ಮತ್ತು ಅನುಗ್ರಹ ಪ್ರದಾನ" ಎಂಬ ನಲವತ್ತೊಂದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಸಂತೋಷದ ಹಬ್ಬ. ಚೆನ್ನಾಗಿ ಆಚರಿಸಿದವರಿಗೆ ವಿಶೇಷ ಪುಣ್ಯ.
2. ಒಬ್ಬ ಕುಷ್ಠರೋಗಿ ಭಕ್ತ, ಬಾಬಾರವರ ಹತ್ತಿರ ಆಗ ಇದ್ದವನು.
3. ದೇವಾ ಶಿರಡಿಗೆ ಹೋಗಿ ಬಂದ 2 ತಿಂಗಳ ಒಳಗೆ ಆ ಸ್ವಪ್ನ ಕಂಡನು.



## ಅಧ್ಯಾಯ - 42

॥ ಅಥ ಶ್ರೀ ಸಾಯಿ ಸಚ್ಚರಿತೆ ॥



# "ಸಾಯಿನಾಥರ ನಿರ್ಯಾಣ (ದೇಹತ್ಯಾಗ)"

ಶ್ರೀ ಗಣೇಶನಿಗೆ ಪ್ರಣಾಮಗಳು.

ಶ್ರೀ ಸರಸ್ವತಿಗೆ ಪ್ರಣಾಮಗಳು.

ಶ್ರೀ ಗುರುವಿಗೆ ಪ್ರಣಾಮಗಳು.

ಶ್ರೀ ಕುಲದೇವತೆಗೆ ಪ್ರಣಾಮಗಳು.

ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.

ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಓಂ. ಸದ್ಗುರುವಿಗೆ ನನ್ನ ಆಳವಾದ ಪ್ರಣಾಮಗಳು. ನೀವು ಎಲ್ಲವನ್ನೂ ನೀಡುವವರು. ಶ್ರೀಮದ್ ಗೋದಾವರಿಯ ದಡದಲ್ಲಿ ವಿಹರಿಸುವವರೇ! ಬ್ರಹ್ಮಮೂರ್ತಿಯೇ, ಕೌಪೀನಧಾರಿಯೇ, ಸಂತಶ್ರೇಷ್ಠನೇ, ನಿಮಗೆ ನಮಸ್ಕರಿಸುತ್ತೇನೆ. ॥1॥ ಯಾರು ಈ ಸಂಸಾರವೆಂಬ ನದಿಯನ್ನು ದಾಟಲು ಮಾರ್ಗದರ್ಶನಮಾಡುತ್ತಾರೋ, ಮತ್ತು ಯಾರು ಅವರ ಚರಣಗಳಲ್ಲಿ ದೀನರಿಗೆ ಆಶ್ರಯನೀಡುತ್ತಾರೋ, ಅವರು ಭಕ್ತರಿಗೆ ಕಲ್ಪತರುವಾಗಿದ್ದಾರೆ. ಅಂತಹವರೇ ಸಂತರಾಗಿ ಅವತರಿಸಿದ ಸಾಯಿಯು. ॥2॥ ಹಿಂದಿನ ಅಧ್ಯಾಯದಲ್ಲಿ ಯಾವ ರೀತಿ ಸಾಯಿಯ ಚಿತ್ರವು ನೀರಿನಲ್ಲಿ ಮುಳುಗಿಸುವುದರಿಂದ ರಕ್ಷಿಸಲ್ಪಟ್ಟಿತು ಎಂಬ ಅದ್ಭುತವನ್ನು ವಿವರಿಸುವ ಸ್ವಾರಸ್ಯಕರವಾದ ಕಥೆಯ ನಿರೂಪಣೆಯು ಇತ್ತು. ॥3॥ ಮತ್ತೆಯೂ, ಅವರು ಯಾವ ರೀತಿ ಒಬ್ಬ ಭಕ್ತನ ಇಚ್ಛೆಯನ್ನು ಅವನ ಕನಸಿನಲ್ಲಿ ಬಂದು ಪೂರೈಸಿದರು ಮತ್ತು ಅವನು ಜ್ಞಾನೇಶ್ವರಿಯನ್ನು ಓದಲು ಸಹಜವಾಗಿಯೇ ತಮ್ಮ ಒಪ್ಪಿಗೆ ನೀಡಿದರು ಎಂಬುದು ಇತ್ತು. ॥4॥ ಸಾರಾಂಶದಲ್ಲಿ, ಗುರುಕೃಪೆಯು ನಿಮ್ಮದಾದಾಗ, ಭವಬಂಧಗಳು ಮಾಯವಾಗಿ ಶ್ರೇಯಸ್ಸಿನ ಮಾರ್ಗ ಯಾವುದೇ ಶ್ರಮವಿಲ್ಲದೆ ತೆರೆಯಲ್ಪಡುತ್ತವೆ ಮತ್ತು ದುಃಖವು ಸುಖವಾಗಿ ಪರಿವರ್ತಿತವಾಗುತ್ತದೆ. ॥5॥ ನಿತ್ಯವೂ ಸದ್ಗುರುಚರಣಗಳನ್ನು ಸ್ಮರಿಸುತ್ತ ಇದ್ದರೆ, ಎಲ್ಲ

ವಿಘ್ನಗಳೂ ನಿವಾರಣೆಯಾಗುತ್ತವೆ. ಮೃತ್ಯುವು ತನ್ನ ಕುಟುಕುವಿಕೆಯನ್ನು ಬಿಡುತ್ತದೆ. ಮತ್ತು ಭವದ ದುಃಖಗಳು ಮರೆತುಹೋಗುತ್ತವೆ. ॥6॥ ಆದುದರಿಂದ ಶ್ರೋತೃಗಳು ಸಮರ್ಥರ ಕಥೆಯನ್ನು ತಮ್ಮ ಹಿತಕ್ಕಾಗಿಯೇ ಕೇಳಬೇಕು. ಆ ತತ್ತ್ವಗಳನ್ನು ಕೇಳುವುದರಿಂದ ಅತಿ ಪಾವನರಾಗುತ್ತಾರೆ. ॥7॥ ಈಗ ಈ ಅಧ್ಯಾಯದಲ್ಲಿ ಸಾಯಿಯ ಸ್ವಭಾವದ ನಿರೂಪಣೆ ಮಾಡುವೆನು. ಅವರು ಅದೆಷ್ಟು ಉದ್ವಿಗ್ನರಾಗುತ್ತಿದ್ದ, ಅದೆಷ್ಟು ಮೃದುವಾಗಿರುತ್ತಿದ್ದರು, ಎಂಬುದನ್ನು ಅರಿಯೋಣ. ॥8॥ ಈ ಸಮಯದವರೆಗೆ ನೀವು ಪೂರ್ಣ ಏಕಾಗ್ರತೆಯಿಂದ ಬಾಬಾರವರ ಜೀವನದ ರೀತಿ, ನೀತಿ ಮತ್ತು ಅವರ ವರ್ತನೆಯನ್ನು ಕೇಳಿರುವಿರಿ. ಅದೇ ರೀತಿ ಬಾಬಾರವರು ಯಾವ ರೀತಿ ದೇಹವನ್ನು ತ್ಯಜಿಸಿದರು ಆ ಚರಿತ್ರೆಯನ್ನು ಅತ್ಯಂತ ಗಮನವಿಟ್ಟು ಕೇಳಿರಿ. ॥9॥ ಶಿರಡಿಯ ಜನರು ಧನ್ಯ, ಧನ್ಯ! 50 ವರ್ಷಗಳಿಗೂ ಹೆಚ್ಚು ಕಾಲದವರೆಗೆ ಬಾಬಾರವರ ಸಹವಾಸ ಸುಖವನ್ನು ಅನುಭವಿಸಿದರು. ಅವೆಲ್ಲವೂ ನಿಜವಾಗಿಯೂ ಅತ್ಯಂತ ಸುಖಕರ ದಿನಗಳಾಗಿದ್ದವು. ॥10॥ ಶಕೆ 1840 (ಸನ್ 1918ನೆಯ ಇಸವಿ)ರಲ್ಲಿ ದಕ್ಷಿಣಾಯನದ[1] ಮೊದಲನೆಯ ತಿಂಗಳಲ್ಲಿ, ಶುಕ್ಲಪಕ್ಷದ ವಿಜಯದಶಮಿಯ ದಿನದಂದು ಬಾಬಾರವರ ದೇಹಾಂತವಾಯಿತು. ॥11॥ ಅದು ಮುಸ್ಲಿಮರ ಮೊಹರಂ ತಿಂಗಳಿನ ಒಂಭತ್ತನೆಯ ದಿನ ಮತ್ತು ದೊಡ್ಡಕತ್ತಿಗಳ ರಾತ್ರಿ (ಇಮಾಮ್ ಹುಸೇನರನ್ನು ಕೊಂದ ದಿನ)ಯಾಗಿತ್ತು. ಮಧ್ಯಾಹ್ನದ ಸಮಯದಲ್ಲಿ ಸಾಯಿನಾಥರು ತಮ್ಮ ನಿರ್ಯಾಣಕ್ಕೆ ಸಿದ್ಧತೆ ಮಾಡಿಕೊಂಡರು. ॥12॥ ಬುದ್ಧ ಜಯಂತಿಯ ರೀತಿಯಲ್ಲಿ ಸಾಯಿಯ ಪುಣ್ಯತಿಥಿಯು ಆಚರಿಸಲ್ಪಡುತ್ತದೆ. ದೇವರುಗಳ ಅವತಾರದ ದಿನಗಳ ರೀತಿಯಲ್ಲೇ ನಂತರ ವಾರ್ಷಿಕ ಪುಣ್ಯತಿಥಿಗಳೂ ಆಚರಿಸಲ್ಪಡುತ್ತವೆ. ॥13॥ ಗಂಟೆ ಮಧ್ಯಾಹ್ನ12–30 ಆಯಿತು. ದಶಮಿಯು ಮುಗಿದಿತ್ತು, ಏಕಾದಶಿಯು ಪ್ರಾರಂಭವಾಯಿತು. ಆದ್ದರಿಂದ ಈ ನಿರ್ಯಾಣವು ಏಕಾದಶಿಯಂದು ನಡೆಯಿತು. ॥14॥ ಅದು ದಸರಾ ದಿನಗಳಾಗಿದ್ದು ಸೂರ್ಯೋದಯದ ಉದಯ ತಿಥಿಯು ದಶಮಿಯಾಗಿದ್ದು ಆ ದಿನವನ್ನು ವಿಜಯದಶಮಿಯೆಂದು ಪರಿಗಣಿಸುತ್ತಾರೆ. ಆದ್ದರಿಂದ ಉತ್ಸವವನ್ನು ಆ ದಿನ ಆಚರಿಸುತ್ತಾರೆ. ॥15॥ ಮಂಗಳವಾರ ರಾತ್ರಿಯು ದೊಡ್ಡ ಕತ್ತಿಗಳ ರಾತ್ರಿ (ಇಮ್ರಾನ್ ಹುಸೇನರ ಕೊಲೆ)ಆದ್ದರಿಂದ ಆ ದಿನವು ಮುಸ್ಲಿಮರಿಗೆ ಬಹಳ ಪ್ರಮುಖವಾದುದು. ಆ ದಿನದಂದು ಸಾಯಿ ಮಹಂತನ ಜ್ಯೋತಿಯು, ದಿವ್ಯಜ್ಯೋತಿ ಬ್ರಹ್ಮನಲ್ಲಿ ಲೀನವಾಯಿತು. ॥16॥ ಆ ದಿನ ಬಂಗಾಳದ ಪ್ರಸಿದ್ಧವಾದ ದುರ್ಗಾಪೂಜೆಯ ಸಮಾಪ್ತಿಯ ದಿನ. ಮತ್ತು ಉತ್ತರ ಭಾರತದಲ್ಲಿಯೂ ಮುಖ್ಯವಾದ ಆಚರಣೆಯ ದಿನ. ಸಕಲರಿಗೂ ಉತ್ಸವದ ದಿನ. ॥17॥ ಶಕೆ 1838 (ಸನ್ 1916ನೆಯ ಇಸವಿ) ಯಲ್ಲಿ ವಿಜಯದಶಮಿಯ ಸಂಧ್ಯಾ ಕಾಲದಲ್ಲಿ ಪ್ರದೋಷ ಸಮಯದಲ್ಲಿ ಭವಿಷ್ಯದ ಸೂಚನೆ ನೀಡಲಾಗಿತ್ತು. ॥18॥ ಅಂತಹ ಅಪೂರ್ವವಾದ ಲೀಲೆಯನ್ನು (ಅದು ಯಾವ ರೀತಿ ನಡೆಯಿತು ಎಂಬುದನ್ನು) ವಿವರಿಸುತ್ತೇನೆ. ಶ್ರೋತೃಗಳು ನಿಜವಾಗಿಯೂ ವಿಸ್ಮಿತರಾಗುತ್ತಾರೆ. ಅದರಿಂದಾಗಿ ಸಮರ್ಥ ಸಾಯಿಯ ಅಗಮ್ಯರೀತಿಗಳನ್ನು ತಿಳಿಯುವಂತಾಗುತ್ತದೆ. ॥19॥ಸನ್

1916ನೆಯ ಇಸವಿಯಲ್ಲಿ ದಸರಾ ಉತ್ಸವದ ಸೀಮೋಲ್ಲಂಘನ್ ಸಮಯದಲ್ಲಿ ಸಂಧ್ಯಾಕಾಲದಲ್ಲಿ ಮೆರವಣಿಗೆಯು ಹಿಂತಿರುಗಿದಾಗ ಒಂದು
ಅದ್ಭುತ ಲೀಲೆಯು ಜರುಗಿತು. ॥20॥ ಆಕಾಶದಲ್ಲಿ ಮೋಡಗಳು ಘರ್ಜಿಸಿದವು, ಮತ್ತು ಆಗಾಗ ವಿದ್ಯುಲ್ಲತೆಯು ಮಿಂಚುತ್ತಿತ್ತು. ಈ ರೀತಿಯಲ್ಲಿ
ಬಾಬಾರವರು ಜಮದಗ್ನಿ[4] ಸ್ವರೂಪದಲ್ಲಿ ಪ್ರಕಟಗೊಂಡರು. ॥21॥ ತಮ್ಮ ತಲೆಯ ವಸ್ತ್ರವನ್ನು ತಲೆಯಿಂದ ತೆಗೆದು ಕಫನಿಯನ್ನು ತೆಗೆದು ಹಾಕಿ
ಕೂಡಲೇ ಕೌಪೀನ – ಲಂಗೋಟಿಯನ್ನೂ ತೆಗೆದು ಹಾಕಿ ಎಲ್ಲವನ್ನೂ ಧುನಿಯಲ್ಲಿ ಹಾಕಲು ಅಲ್ಲಿ ಅಗ್ನಿಯು ಜೋರಾಗಿ ಉರಿಯಿತು. ॥22॥
ಅಗ್ನಿಯು ಆಗಲೇ ಉಜ್ವಲವಾಗಿತ್ತು. ಈಗ ಇವುಗಳನ್ನೆಲ್ಲ ಆಹುತಿಕೊಟ್ಟ ಮೇಲೆ ಅದು ಪ್ರಬಲವಾಗಿ ಪ್ರಜ್ವಲಿಸತೊಡಗಿತು. ಜ್ವಾಲೆಯು ಅತ್ಯಂತ
ಎತ್ತರವಾಗಿಯೂ ಭಯಂಕರವಾಗಿಯೂ ಧಗಧಗಿಸುತ್ತಿದ್ದವು. ಭಕ್ತರು ತಳಮಳಗೊಂಡರು. ॥23॥ ಇವೆಲ್ಲಾ ಅನಿರೀಕ್ಷಿತವಾಗಿ ನಡೆದವು. ಬಾಬಾರವರ
ಮನದಲ್ಲಿ ಏನಿತ್ತೆಂಬುದನ್ನು ಅರಿಯಲು ಕಷ್ಟವಾಯಿತು. ಸೀಮೋಲ್ಲಂಘನ ಸಮಯದಲ್ಲಿ ಅವರ ವರ್ತನೆಯು ಮಹಾ ಭಯಂಕರವಾಗಿತ್ತು. ॥24॥
ಅಗ್ನಿಯ ನಿಜ ತೇಜಸ್ಸು ಹೆಚ್ಚಾಯಿತು. ಆದರೆ ಬಾಬಾರವರು ಅಗ್ನಿಗಿಂತ ಹೆಚ್ಚು ತೇಜಸ್ವಿಗಳಾಗಿ ಕಾಣುತ್ತಿದ್ದರು. ಜನರ ಕಣ್ಣುಗಳು ಬೆಳಕಿನಿಂದ
ಕೋರೈಸಲ್ಪಟ್ಟು ಅವರು ತಮ್ಮ ಮುಖಗಳನ್ನು ತಿರುಗಿಸಿಕೊಂಡರು. ॥25॥ ಅಗ್ನಿಯ ದೇವ – ಅಗ್ನಿನಾರಾಯಣನು ಸಂತರ ಹಸ್ತಗಳಿಂದ ಬಂದ
ಆಹುತಿಗಳಿಂದ ಪ್ರಸನ್ನನಾದನು. ಆ ದಿಗಂಬರ ಜಮದಗ್ನಿಯ ದರ್ಶನಪಡೆದ ಕಣ್ಣುಗಳೇ ಧನ್ಯ! ಧನ್ಯ!! ॥26॥ ಅವರು ಕ್ರೋಧದಿಂದ ಕೆಂಪಾದ
ತಮ್ಮ ಕಣ್ಣುಗಳಿಂದ ದೃಷ್ಟಿಸಿದರು. ಅವರು ಹೇಳಿದರು, "ಈಗ ನೀವೇ ನಿರ್ಧರಿಸಿ, ನಾನು ಮುಸಲ್ಮಾನನೋ ಅಥವಾ ಹಿಂದುವೋ?" ॥27॥
ಜೋರಾದ ಸ್ವರದಲ್ಲಿ ಬಾಬಾ ಘರ್ಜಿಸಿದರು, "ನೋಡಿ! ನಾನು ಹಿಂದೂವೋ ಅಥವಾ ಮುಸ್ಲಿಮನೋ. ಈ ದಿನ ನಿಶ್ಚಯಿಸಿ. ಯಥೇಚ್ಛವಾಗಿ
ಮನಸ್ಸಿಗೆ ಬಂದಂತೆ ನಿರ್ಧರಿಸಿ, ನಿಮ್ಮ ಶಂಕೆಗಳೆಲ್ಲವನ್ನೂ ದೂರ ಸರಿಸಿ." ॥28॥ ಈ ದೃಶ್ಯಕ್ಕೆ ಪ್ರೇಕ್ಷಕರಾಗಿ ಅಲ್ಲಿದ್ದಜನರು ಭಯದಿಂದ ಕಂಪಿಸಿದರು.
ಎಲ್ಲರಿಗೂ ಒಂದೇ ಪ್ರಶ್ನೆಯಿತ್ತು – ಈಗ ಅವರನ್ನು ಯಾವ ರೀತಿ ಶಾಂತಗೊಳಿಸುವುದೆಂದು. ॥29॥ ಕುಷ್ಠರೋಗಿಯಾದ ಭಾಗೋಜಿ ಶಿಂಧೆಯು,
ಬಾಬಾರವರ ಪರಮ ಭಕ್ತ, ಧೈರ್ಯ ತುಂಬಿಕೊಂಡು ಬಾಬಾರವರ ಹತ್ತಿರ ಬಂದು ಅವರಿಗೆ ಲಂಗೋಟಿಯನ್ನು ಕಟ್ಟಿದನು. ॥30॥ ಅವನು
ಹೇಳಿದನು, "ಬಾಬಾ, ಇದೇನಿದು ನಿಮ್ಮ ವರ್ತನೆ? ಈ ದಿನ ಸೀಮೋಲ್ಲಂಘನ ಮತ್ತು ದಸರೆಯ ಉತ್ಸವ" ಬಾಬಾ ಉತ್ತರಿಸಿದರು, "ಇದು ನನ್ನ
ಸೀಮೋಲ್ಲಂಘನವೂ ಆಗಿದೆ." ಮತ್ತು ಸಟಕಾದಿಂದ ಜೋರಾಗಿ ನೆಲಕ್ಕೆ ಬಡಿಯಲು ಪ್ರಾರಂಭಿಸಿದರು. ॥31॥ ಈ ರೀತಿಯಲ್ಲಿ ಬಾಬಾರವರು
ಧುನಿಯ ಹತ್ತಿರ ದಿಗಂಬರರಾಗಿ ನಿಂತರು. ಅದು ಚಾವಡಿಗೆ ಮೆರವಣಿಗೆಗಾಗಿ ಹೋಗುವ ದಿನ. ಅದನ್ನು ಹೇಗೆ ನಡೆಸುವುದು ಎಂಬ ಯೋಚನೆ
ಶುರುವಾಯಿತು. ॥32॥ ಚಾವಡಿ ಮೆರವಣಿಗೆಗಾಗಿ ನಿತ್ಯದ ಸಮಯ ರಾತ್ರಿ 9 ಗಂಟೆ. ಆದರೆ ಈಗಾಗಲೇ 10 ಗಂಟೆ ಆಗಿತ್ತು, ಬಾಬಾ ಇನ್ನೂ

ಶಾಂತರಾಗಿರಲಿಲ್ಲ. ಜನರು ತಾವಿದ್ದ ಜಾಗಗಳಲ್ಲಿಯೇ ತಟಸ್ಥರಾಗಿ ನಿಂತರು. ಅಸಹಾಯಕತೆಯಿಂದ ಶೂನ್ಯದ ಕಡೆ ದೃಷ್ಟಿಸುತ್ತ ನಿಂತರು. ॥33॥ ಹೋಗುತ್ತ ಹೋಗುತ್ತ ರಾತ್ರಿ 11 ಗಂಟೆಯಾಗಿತ್ತು. ಬಾಬಾರವರು ಸ್ವಲ್ಪ ಮಟ್ಟಿಗೆ ಶಾಂತರಾದರು. ಹೊಸ ಲಂಗೋಟಿಯನ್ನು ಧರಿಸಿ, ಅನಂತರ ಕಫನಿಯನ್ನೂ ಧರಿಸಿಕೊಂಡರು. ॥34॥ ಚಾವಡಿಯ ಘಂಟೆ ಬಾರಿಸಿತು. ಅಲ್ಲಿ ನೆರೆದಿದ್ದ ಜನರು ತಟಸ್ಥರಾಗಿ ಕುಳಿತಿದ್ದರು. ಪಾಲಕಿಯನ್ನು ಹೂವಿನಿಂದ ಶೃಂಗರಿಸಲಾಗಿತ್ತು. ಮತ್ತು ಅದನ್ನು ಅವರ ಅನುಮತಿಯಿಂದ ಅಂಗಳಕ್ಕೆ ತೆಗೆದುಕೊಂಡು ಬರಲಾಗಿತ್ತು. ॥35॥ ಬೆಳ್ಳಿಯ ದಂಡ, ಪತಾಕೆ, ಕಾಗದದ ತೋರಣಗಳು, ಛತ್ರಿ, ಧ್ವಜ, ಇತರ ರಾಜೋಪಚಾರಗಳಿಂದ ಶೃಂಗರಿಸಲ್ಪಟ್ಟಿತ್ತು. ಅದರಿಂದಪ್ರತಿ ದಿನಬಿಟ್ಟು ದಿನ ಮೆರವಣಿಗೆಯನ್ನು ನಡೆಸಲಾಗುತ್ತಿದ್ದು ಅಲ್ಲಿಂದ ಹೊರಡುತ್ತಿತ್ತು. ॥36॥ ಎಲ್ಲರೂ ಒಟ್ಟಾಗಿ ಜೋರಾಗಿ ಹೇಳುವ ಸಾಯಿನಾಥರ ಜಯಜಯಕಾರವು ಪ್ರತಿಧ್ವನಿಸುತ್ತಿತ್ತು. ಆ ಗರ್ಜನೆಯನ್ನು ಹೇಗೆ ತಾನೇ ವರ್ಣಿಸಲಿ? ಅಲ್ಲಿ ಆನಂದದ ಪ್ರವಾಹವೇ ಹರಿಯುತ್ತಿತ್ತು. ॥37॥ ಅನಂತರ ಒಂದು ಶುಭ್ರವಾದ ಬಿಳಿಯ ವಸ್ತ್ರವನ್ನು ಹುಡುಕಿ ಅದನ್ನು ಬಾಬಾರವರು ತಮ್ಮ ತಲೆಗೆ ಸುತ್ತಿಕೊಳ್ಳುತ್ತಿದ್ದರು. ಅವರು ತಮ್ಮ ಚಿಲುಮೆಯನ್ನು, ತಂಬಾಕು ಮತ್ತು ಸಟಕಾವನ್ನು ತೆಗೆದುಕೊಂಡು, ಅದು ಒಂದು ಸುಮುಹೂರ್ತವೇನೋ ಅನ್ನುವ ರೀತಿ ಆ ಘಳಿಗೆಯಲ್ಲಿ ಹೊರಡುತ್ತಿದ್ದರು. ॥38॥ ಯಾರೋ ಒಬ್ಬರು ಛತ್ರಿಯನ್ನು, ಮತ್ತೊಬ್ಬರು ಚಾಮರವನ್ನು, ಮತ್ತೊಬ್ಬರು ನವಿಲುಗರಿಯ ಚಾಮರವನ್ನು, ಮತ್ತೊಬ್ಬರು ಗರುಡ ಚಿಹ್ನೆಯಿರುವ ಬಾವುಟ ಮತ್ತು ಜರಿಯ ಕಸೂತಿ ಇರುವ ಗುಡಾರಗಳನ್ನು ಹಿಡಿದುಕೊಂಡಿರುತ್ತಿದ್ದರು. ದಂಡ ಹಿಡಿಯುವವರು ಕೈಯಲ್ಲಿ ದಂಡಹಿಡಿದು ನಿಲ್ಲುತ್ತಿದ್ದ॥39॥ ಈ ಒಂದು ನಿಮಿತ್ತಮಾತ್ರದಿಂದ ಬಾಬಾರವರು ಎಲ್ಲರಿಗೂ ಕೇವಲ ದಸರಾ ಮಾತ್ರವೇ ಭವಸಾಗರವನ್ನು ದಾಟಿ ಸೀಮೋಲ್ಲಂಘನ ಮಾಡಲು ಒಂದು ಸುಮುಹೂರ್ತ ಎನ್ನುವುದನ್ನು ಸೂಚಿಸಿದ್ದರು. ॥40॥ ಅಲ್ಲಿಂದಾಚೆಗೆ, ಬಾಬಾರವರು ಶಿರಡಿ ನಿವಾಸಿಗಳ ಜೊತೆಯಲ್ಲಿ ಕೇವಲ ಮತ್ತೊಂದು ದಸರಾವನ್ನು ಆಚರಿಸಿದರು. ಮುಂದಿನ ದಸರೆಯು ಮಂಗಳಕರ ಮುಹೂರ್ತವೆಂದು ನಿಶ್ಚಯಿಸಿ ಅವರು ತಮ್ಮ ದೇಹವನ್ನು ಧರೆಗೆ ಅರ್ಪಣೆಮಾಡಿದರು. ॥41॥ ಅವರು ಕೇವಲ ಸೂಚನೆಯನ್ನು ಕೊಟ್ಟಿದ್ದೇ ಅಲ್ಲದೆ, ಜನರು ಅದನ್ನು ಸ್ವತಃ ಅನುಭವಿಸುವಂತೆ ಮಾಡಿದರು. ಅವರು ತಮ್ಮ ಸ್ವಂತ ದೇಹವನ್ನು ಒಂದು ಶುಭ್ರ ವಸ್ತ್ರದಂತೆ, ಅದೇ ದಿನವೇ ಯೋಗಾಗ್ನಿಗೆ ಆಹುತಿಯಾಗಿ ಅರ್ಪಿಸಿದರು. ॥42॥ ಸನ್ 1918ನೆಯ ಇಸವಿಯಲ್ಲಿ, ಆ ವರ್ಷದ ದಸರಾ ಹಬ್ಬದ ಸಮಯದಲ್ಲಿ ತಮ್ಮ ಮಾತಿನ ಸತ್ಯದಂತೆ ಆ ಸಮಯವನ್ನು ಪರಾತ್ಪರ ಬ್ರಹ್ಮನಲ್ಲಿ ಲೀನವಾಗುವ ಸುಮುಹೂರ್ತವನ್ನಾಗಿ ಮಾಡಿದರು. ॥43॥ ಇದನ್ನು ಬರೆಯುತ್ತ ಇರುವಾಗ ನನಗೆ ಬಾಬಾರವರ ಮತ್ತೊಂದು ಪ್ರಸಂಗ ನೆನಪಿಗೆ ಬರುತ್ತಿದೆ. ಈ ವಿಜಯ ದಶಮಿಯ ತಿಥಿಯು ಹಿಂದೆಯೇ ನಿಶ್ಚಿತವಾಗಿತ್ತು. ॥44॥ ಶಿರಡಿಯ ಪಾಟೀಲನಾದ ರಾಮಚಂದ್ರ ದಾದಾನು ಒಮ್ಮೆ ತೀವ್ರ ಅನಾರೋಗ್ಯಪೀಡಿತನಾದನು. ಅವನಿಜೀವವು ನೋವನ್ನು

ತಡೆದುಕೊಳ್ಳಲಾಗಲಿಲ್ಲ. ನೋವು ಸಹಿಸಲಸಾಧ್ಯವಾಗಿತ್ತು. ॥45॥ ಯಾವುದೇ ಉಪಾಯವೂ ಬಾಕಿ ಉಳಿಯಲಿಲ್ಲ ಮತ್ತು ನೋವು ಮಾತ್ರ ಕಡಿಮೆಯಾಗಲಿಲ್ಲ. ಅವನ ಜೀವವು ಸೋತು ಸಾಕಾಯಿತು. ಪಾಟೀಲನು ಬಹಳ ಚಿಂತಿತನಾದನು. ॥46॥ ಅವನು ಇಂತಹಮನಃಸ್ಥಿತಿಯಲ್ಲಿದ್ದಾಗ, ಒಂದು ದಿವಸ ಮಧ್ಯರಾತ್ರಿಯ ಸಮಯದಲ್ಲಿ ಏಕಾಏಕಿ ಬಾಬಾರವರ ಮೂರ್ತಿಯು ಅವನ ಹಾಸಿಗೆಯ ತಲೆಯ ಭಾಗದಲ್ಲಿ ಪ್ರಕಟವಾಯಿತು. ॥47॥ ಆಗ ಪಾಟೀಲನು ಅವರ ಪಾದಗಳನ್ನು ಗಟ್ಟಿಯಾಗಿ ಹಿಡಿದು ನಿರಾಶಾಯುಕ್ತನಾಗಿ ಬಾಬಾರವರಿಗೆ ಹೇಳಿದನು, "ನನಗೆ ಮೃತ್ಯುವು ಯಾವಾಗ ಬರುತ್ತದೆ? ದಯವಿಟ್ಟು ಅದನ್ನು ಮಾತ್ರ ನನಗೆ ಹೇಳಿರಿ. ॥48॥ "ಈಗ ನಾನು ಜೀವನದಿಂದ ಬೇಸತ್ತು ಹೋಗಿದ್ದೇನೆ. ನನಗೆ ಮರಣವೆಂದರೆ ಸಂಕಟವಾಗುವುದಿಲ್ಲ. ನಾನು ಕೇವಲ ಮೃತ್ಯುವು ಬರಲೆಂದು ಕಾಯುತ್ತಿದ್ದೇನೆ." ॥49॥ ಆಗ ಬಾಬಾರವರು, ಕರುಣಾ ಮೂರ್ತಿಯಾದವರು, ಹೇಳಿದರು, "ಚಿಂತಿಸಬೇಡ. ನಿನ್ನ ಗಂಡಾಂತರ ಭೀತಿಯನ್ನು ನಿವಾರಿಸಿದೆ. ಅನವಶ್ಯಕವಾಗಿ ಏಕೆ ಚಿಂತಿಸುವೆ? ॥50॥ "ನಿನಗೆ ಭೀತಿಪಡಲು ಏನೂ ಇಲ್ಲ. ನಿನ್ನ ಸಾವಿನ ಆಜ್ಞಾಪತ್ರವನ್ನು ಹಿಂದಕ್ಕೆ ಕಳುಹಿಸಲಾಗಿದೆ. ಆದರೆ ರಾಮಚಂದ್ರ, ತಾತ್ಯಾನ ಕ್ಷೇಮದ ಸಂಭವತೆ ನನಗೆ ಕಾಣುತ್ತಿಲ್ಲ." ॥51॥ ಶಕೆ **1840**ರಲ್ಲಿ ದಕ್ಷಿಣಾಯನದ ಅಶ್ವಿನಿ ಮಾಸದಲ್ಲಿ ವಿಜಯದಶಮಿಯ ದಿನ ಶುಕ್ಲಪಕ್ಷದಲ್ಲಿ ತಾತ್ಯಾನು ಅಕ್ಷಯಪದ (ಮೃತ್ಯು)ವನ್ನು ಪಡೆಯುತ್ತಾನೆ. ॥52॥ ಆದರೆ ಅವನಿಗೆ ಇದನ್ನು ಹೇಳಬೇಡ. ಇಲ್ಲದಿದ್ದರೆ, ಅವನು ಭೀತಿಯಿಂದ ಹಗಲು–ರಾತ್ರಿ ಕೊರಗುತ್ತಾನೆ. ಯಾರೂ ಸಾವನ್ನು ಇಚ್ಛಿಸುವುದಿಲ್ಲ. ॥53॥ ಕೇವಲ ಎರಡು ವರ್ಷಗಳು ಉಳಿದವು. ತಾತ್ಯಾನ ಸಮಯ ಹತ್ತಿರ ಬರುತ್ತಿತ್ತು. ರಾಮಚಂದ್ರನಿಗೆ ಕಾಳಜಿ ಉದ್ಭವವಾಯಿತು. ಏಕೆಂದರೆ ಬಾಬಾರವರ ವಚನಗಳು ಯಾವಾಗಲೂ ಸತ್ಯ ಮತ್ತು ವಜ್ರಾಯುಧದತರಹ. ॥54॥ ಈ ಭವಿಷ್ಯ ವಾಣಿಯನ್ನು ತಾತ್ಯಾನಿಂದ ಗುಪ್ತವಾಗಿಯೇ ಇಡಲಾಯಿತು. ಆದರೆ ಬಾಳಾಶಿಂಪಿಗೆ ಮಾತ್ರ ತಿಳಿಸಿ ಅದನ್ನು ಮತ್ತೆ ಯಾರಿಗೂ ತಿಳಿಸದಂತೆ ಪ್ರಾರ್ಥಿಸಿದನು. ಈಗ ಅವರಿಬ್ಬರೂ ಅದರ ಬಗ್ಗೆ ಚಿಂತಿಸಲಾರಂಭಿಸಿದರು. ॥55॥ ಅಲ್ಲಿಂದಾಚೆಗೆ ನಿಜವಾಗಿಯೂ ರಾಮಚಂದ್ರ ಪಾಟೀಲನು ಗುಣಮುಖನಾದನು ಮತ್ತು ಹಾಸಿಗೆ ಬಿಟ್ಟೆದ್ದನು. ದಿನಗಳು ಒಂದರ ಮೇಲೊಂದು ಉರುಳಿದವು. ಈ ರೀತಿ ಕಾಲವು ಗಮನಕ್ಕೆ ಬಾರದಂತೆಯೇ ಕಳೆದು ಹೋಯಿತು. ॥56॥ ಬಾಬಾರವರ ಮಾತುಗಳ ಸತ್ಯತೆಯು ವಿಸ್ಮಯ ಪಡಿಸುವಂತಹುದು! ಶಕೆ **1840**ರ ಭಾದ್ರಪದ ಮಾಸವು ಮುಗಿದು ಅಶ್ವಿನಿ ಮಾಸವು ಬಂದಿತು. ತಾತ್ಯಾನು ಅನಾರೋಗ್ಯಪೀಡಿತನಾಗಿ ಹಾಸಿಗೆ ಹಿಡಿದನು. ॥57॥ ಒಂದು ಕಡೆ ತಾತ್ಯಾನು ಜ್ವರದಿಂದ ನರಳುತ್ತಿದ್ದನು (ಮನೆಯಲ್ಲಿ) ಮತ್ತೊಂದು ಕಡೆ ಬಾಬಾರವರು ನರಳುತ್ತಿದ್ದರು. ತಾತ್ಯಾನಿಗೆ ಬಾಬಾರವರಲ್ಲಿ ಪೂರ್ಣ ಶ್ರದ್ಧೆಯಿತ್ತು ಮತ್ತು ಬಾಬಾರವರಿಗೆ ಶ್ರೀಹರಿಯೇ ರಕ್ಷಕನಾಗಿದ್ದನು. ॥58॥ ತಾತ್ಯಾನು ಹಾಸಿಗೆ ಬಿಟ್ಟೇಳಲು ಸಾಧ್ಯವಾಗುತ್ತಿರಲಿಲ್ಲ. ಮತ್ತು ಬಾಬಾರವರ ದರ್ಶನಕ್ಕೆ ಬರಲಾಗಲಿಲ್ಲ. ಅವನ ದೇಹದ ಯಾತನೆಯು ಸಹಿಸಲಸಾಧ್ಯವಾಗಿತ್ತು. ॥59॥ ಅವನು ತನ್ನ

ಯಾತನೆಯಿಂದ ನರಳುತ್ತಿದ್ದರೂ ಸಹ ಅವನ ಮನಸ್ಸು ಮಾತ್ರ ಬಾಬಾರವರಿಗೆ ಮೀಸಲಾಗಿತ್ತು, ಅವನು ಚಲಿಸಲು ಅಥವಾ ಅಲುಗಾಡಲು ಸಹ ಆಗುತ್ತಿರಲಿಲ್ಲ. ಅವನ ಯಾತನೆಯು ತೀವ್ರವಾಯಿತು. ॥60॥ ಮತ್ತೊಂದು ಕಡೆ, ಬಾಬಾರವರ ನರಳಾಟ ಅತಿರೇಕಕ್ಕೆ ಹೋಯಿತು. ಎರಡು ಪಟ್ಟು ದಿನೇ ದಿನೇ ಹೆಚ್ಚಾಯಿತು. ರೋಗವು ನಿಯಂತ್ರಣ ಮೀರಿತು. ಸ್ವಲ್ಪವೂ ಕಡಿಮೆಯಾಗಲಿಲ್ಲ. ॥61॥ ಬಾಬಾರವರು ನುಡಿದಿದ್ದ ಭವಿಷ್ಯವಾಣಿಯ ದಿನ ಹತ್ತಿರ ಬಂದಿತು. ಬಾಳಾ ಶಿಂಪಿಯು ಭಯದಿಂದ ನಡುಗುತ್ತಿದ್ದನು ಮತ್ತು ಅದೇ ರೀತಿ ಪಾಟೀಲ ರಾಮಚಂದ್ರನೂ ಸಹ ನಡುಗಿದನು. ॥62॥ ಅವರು ಹೇಳಿದರು, "ಬಾಬಾರವರ ನುಡಿ ನಿಜವಾಗಿಯೂ ಸರಿಯಾಗಿದ್ದರು. ಈಗ ಅದು ನಿಶ್ಚಿತ. ಅವನ ರೋಗದ ಚಿಹ್ನೆಗಳು ಉಲ್ಬಣಿಸುತ್ತ ಯಾತನೆಯು ಹೆಚ್ಚುತ್ತಲೇ ಇದೆ." ॥63॥ ಶುಕ್ಲಪಕ್ಷದ ದಶಮಿಯು ಬಂದಿತು. ತಾತ್ಯಾನ ನಾಡಿ ಬಡಿತವು ನಿಧಾನವಾಯಿತು. ಅವನು ಸಾಯುವ ಸಮಯದಲ್ಲಿ ಮರಣ ಸಂಭ್ರಮದಲ್ಲಿ ಪ್ರಜ್ಞಾಹೀನನಾಗಿ ಇದ್ದನು. ಸುತ್ತ ನೆರೆದಿದ್ದ ಆಪ್ತೇಷ್ಟರು ದಣಿದರು64॥ ಆದರೆ ಆಗ ಒಂದು ಪವಾಡವಾಯಿತು! ತಾತ್ಯಾನ ಜೀವಕ್ಕೆ ಬಂದಿದ್ದ ಗಂಡಾಂತರ ತಪ್ಪಿತು, ತಾತ್ಯಾನು ಬದುಕಿದನು ಮತ್ತು ಬಾಬಾರವರು ಹೊರಟುಹೋದರು.ಅವರು ಅವನ ಜಾಗವನ್ನು ಅದಲು ಬದಲು ಮಾಡಿದಂತಿತ್ತು. ॥65॥ ಈಗ ಬಾಬಾರವರ ಮಾತುಗಳನ್ನು ಸ್ಮರಿಸಿಕೊಳ್ಳಿ. ಬಾಬಾರವರು ತಾತ್ಯಾನ ಹೆಸರು ಹೇಳಿದ್ದರೂ ಸಹ, ಅವರು ತಮ್ಮದೇ ಪ್ರಯಾಣಕ್ಕಾಗಿ ಕೊನೆಯ ನಿಮಿಷದವರೆಗೂ ತಯಾರಿ ಮಾಡಿಕೊಂಡಿದ್ದರು. ॥66॥ ಅವರು ಸೂಚನೆ ಕೊಟ್ಟಿರುವಾಗ, ಭವಿಷ್ಯದ ಮೇಲೆ ಬೆಳಕು ಚೆಲ್ಲಿದ್ದಾಗ, ಅದನ್ನು ಅಲ್ಲಗಳೆಯುವುದರಿಂದ ಪ್ರಯೋಜನವಿಲ್ಲ. ಆದರೆ ಆ ಘಟನೆ ನಡೆಯುವವರೆಗೆ ಯಾರೂ ಅದರ ತೊಡಕನ್ನು ಅರ್ಥಮಾಡಿಕೊಂಡಿರಲಿಲ್ಲ. ॥67॥ ಜನರು ಹೇಳುತ್ತಾರೆ, – ಬಾಬಾರವರು ತಮ್ಮ ದೇಹವನ್ನು ಬದಲಿಸಿಕೊಟ್ಟು ತಾತ್ಯಾನ ಸಾವನ್ನು ತಪ್ಪಿಸಿದ್ದರು. ಸತ್ಯವು ಅವರಿಗೆ ಮಾತ್ರ ಗೊತ್ತು. ॥68॥ ಬಾಬಾರವರು ತಮ್ಮ ಭೌತಿಕ ದೇಹವನ್ನು ತ್ಯಜಿಸಿದ ರಾತ್ರಿಯಂದು, ಬೆಳಗಿನ ಜಾವದ ಅರುಣೋದಯ ಸಮಯದಲ್ಲಿ ಬಾಬಾರವರು ಪಂಡರಾಪುರದಲ್ಲಿದ್ದ ದಾಸಗಣುವಿಗೆ ಒಂದು ದೃಷ್ಟಾಂತ (ಕನಸಿನಲ್ಲಿ ದರ್ಶನ)ವನ್ನೀಡಿದರು. ॥69॥ "ಮಸೀದಿಯು ಕುಸಿದಿದೆ. ಶಿರಡಿಯ ಎಲ್ಲ ದಿನಸಿ ವ್ಯಾಪಾರಿಗಳೂ, ಎಣ್ಣೆ ವ್ಯಾಪಾರಿಗಳೂ, ನನಗೆ ಬಹಳ ತೊಂದರೆ ಕೊಟ್ಟರು. ಆದ್ದರಿಂದ ನಾನು ಆ ಜಾಗವನ್ನು ಬಿಟ್ಟುಹೋಗುತ್ತಿದ್ದೇನೆ. ॥70॥ "ಆದ್ದರಿಂದ ನಾನು ಇಲ್ಲಿಗೆ ಬಂದಿರುವೆನು. ನನ್ನ ದೇಹವನ್ನು ಹೂವಿನಿಂದ ಮುಚ್ಚು. ನನ್ನ ಈ ಆಸೆಯನ್ನು ಪೂರೈಸು, ಬೇಗನೆ ಶಿರಡಿಗೆ ಬಾ." ॥71॥ ಆಗತಾನೇ, ಶಿರಡಿಯಿಂದ ಬಂದಿದ್ದ ಒಂದು ಪತ್ರದಿಂದ ಬಾಬಾರವರ ಮಹಾಸಮಾಧಿಯ ವಿಷಯ ತಿಳಿಯಿತು. ಈ ವಾರ್ತೆಯನ್ನು ತಿಳಿಯುತ್ತಲೇ ದಾಸಗಣುವು, ಒಂದು ಕ್ಷಣಮಾತ್ರವನ್ನೂ ವ್ಯರ್ಥಗೊಳಿಸದೆ ಕೂಡಲೇ ಶಿರಡಿಗೆ ಹೊರಟನು. ॥72॥ ತನ್ನ ಶಿಷ್ಯ ಪರಿವಾರವೆಲ್ಲವನ್ನೂ ಜೊತೆಗೆ ಕರೆದುಕೊಂಡು ಬಂದು, ಸಮಾಧಿಯ ಮುಂದೆ ಕುಳ್ಳಿರಿಸಿ ಜೋರಾಗಿ ಭಗವಂತನ ನಾಮ ಸಂಕೀರ್ತನೆ,

ಭಜನೆಗಳನ್ನು ಮಾಡುತ್ತ ದಿನಪೂರ್ತಿ ಮುಂದುವರೆಸಿದನು. ॥73॥ ಹರಿನಾಮವೆಂಬ ಸುಂದರವಾದ ಕುಸುಮ ಹಾರವನ್ನು ತನ್ನ ಸ್ವಂತ ಕೈಗಳಿಂದಲೇ
ರಚಿಸಿ, ಅವನು ಅದನ್ನು ಸಮಾಧಿಗೆ ಪ್ರೀತಿಯಿಂದ ಅನ್ನ ಸಂತರ್ಪಣೆಯ ಸಹಿತವಾಗಿ ಸಮರ್ಪಿಸಿದನು. ॥74॥ ಅಖಂಡವಾದ ಭಗವನ್ನಾಮ
ಭಜನೆಯ ತರಂಗಗಳನ್ನು ಅಲಿಸಿ ಶಿರಡಿಯು ಭೂವೈಕುಂಠವೆನ್ನಿಸಿತು. ಆ ವಾತಾವರಣವೆಲ್ಲವೂ ನಾಮ ಘೋಷದಿಂದ ತುಂಬಿತು. ದಾಸಗಣುವು
ಎಲ್ಲರಿಗೂ ಭಾಗವಹಿಸಲು ಅನುವಾಗುವಂತಹ ಯಥೇಚ್ಛವಾದ ಹಬ್ಬವನ್ನೂ ನೀಡಿದನು. ॥75॥ ಬಾಬಾರವರು ದಸರಾವನ್ನೇ ಏಕೆ ಇಷ್ಟಪಟ್ಟರು?
ಏಕೆಂದರೆ, ಅದು ಒಂದು ವರ್ಷದಲ್ಲಿ ಮೂರೂವರೆ ಮಂಗಳಕರವಾದ ದಿನಗಳಲ್ಲಿ ಒಂದಾಗಿದೆ. ಯಾವಾಗಲೂ ಪ್ರಯಾಣ ಕಾಲಕ್ಕೆ ವಿಶೇಷವಾಗಿ
ಶುಭಕಾಲವೆಂದು ಆರಿಸಿಕೊಳ್ಳುತ್ತಾರೆ ಎಂಬುದು ಎಲ್ಲರಿಗೂ ಚೆನ್ನಾಗಿ ತಿಳಿದ ವಿಷಯ. ॥76॥ ಈ ರೀತಿ ಹೇಳುವುದೂ ಸರಿಯಾಗಿರುವುದಿಲ್ಲ. ಜನನ
ಅಥವಾ ಮರಣಗಳನ್ನು ಮೀರಿರುವವರಿಗೆ ನಿರ್ಗಮನ ಎಂಬುದು ಇರಲು ಹೇಗೆ ಸಾಧ್ಯ? ಅಥವಾ ಅದಕ್ಕಾಗಿ ಮಂಗಳಕರವಾದ ಸಮಯದ
ಅವಶ್ಯಕತೆ ಎಲ್ಲಿದೆ? ॥77॥ ಧರ್ಮಾಧರ್ಮಗಳಿಂದ ಬಂಧಿಸಲ್ಪಡದೇ ಇರುವವನು, ಸಕಲ ಬಂಧನಗಳಿಗೂ ಉಪಶಮನ ಮಾಡಿರುವವನು,
ಪ್ರಾಣದ ಉತ್ಕ್ರಮಣ ಮಾಡದೇ ಇರುವವನು, ಅವನಿಗೆ ನಿರ್ಯಾಣವು ಎಲ್ಲಿಯದು? ॥78॥ "ಬ್ರಹ್ಮೈವ ಸನ್‌ಬ್ರಹ್ಮಾಪ್ಯೇತಿ"[5] ಸಾಯಿ ಮಹಾರಾಜರಿಗೆ
ಈ ವಿವರಣೆಯು ಒಪ್ಪುತ್ತದೆ. ಅವರಿಗೆ ಆದಿಯೂ ಇಲ್ಲ ಅಂತ್ಯವೂ ಇಲ್ಲ. ಅವರಿಗೆ ನಿರ್ಯಾಣ ಸ್ಥಿತಿಯೆಂದರೇನು? ॥79॥ ಉತ್ತರಾಯಣವಾಗಲಿ
ಅಥವಾ ದಕ್ಷಿಣಾಯನವಾಗಲಿ ಯಾರು ಯಾವುದೇ ಪ್ರಯಾಣವನ್ನು ಕೈಗೊಳ್ಳುತ್ತಿಲ್ಲವೇ ಮತ್ತು ಯಾರ ಪ್ರಾಣವು ಬ್ರಹ್ಮದಲ್ಲಿ ಐಕ್ಯವಾಗಿರುವುದೋ
ಅವನು ಎಲ್ಲಿದ್ದರೂ ಒಂದು ಜ್ಯೋತಿಯ ಬೆಳಕಿನ ರೀತಿಯಲ್ಲಿ ದೀಪವು ಆರಿಹೋದಾಗ ಅಂಧಕಾರವು ತುಂಬಿರುತ್ತದೆ. ॥80॥ ಈ ದೇಹವು
ಪಂಚಭೂತಗಳಿಂದ (ಪೃಥ್ವಿ, ಜಲ, ಅಗ್ನಿ, ವಾಯು ಮತ್ತು ಆಕಾಶ) ತೆಗೆದುಕೊಂಡ ಸಾಲ. ಒಮ್ಮೆ ಇದರ ಕೆಲಸ ಮುಗಿದ ಮೇಲೆ, ಅದು ತನ್ನ
ತತ್ತ್ವಗಳಿಗೆ ಹಿಂತಿರುಗುತ್ತದೆ. ॥81॥ ಈ ಮೊದಲೇ ಬಾಬಾರವರು ಯಾವುದು ಕೌತುಕದ ರೀತಿ ನಡೆಯುತ್ತದೆ ಎಂಬುದರ ಸೂಚನೆ ನೀಡಿದ್ದರು.
ಅಮೂಲ್ಯವಾದ ವೇಳೆಯು ಕಳೆದು ಹೋಯಿತು. ಆದರೆ ಕೀರ್ತಿಯು ಮಾತ್ರ ಉಳಿಯಿತು. ॥82॥ ಅವರಿಗೆ ಜ್ವರ ಬರುವುದೂ ಒಂದು ನಿಮಿತ್ತ
ಮಾತ್ರ, ಲೌಕಿಕ ರೀತಿಯನ್ನು ಅನುಕರಣೆ ಮಾಡುತ್ತ ಅವರು ಕೆಲವು ಸಲ ನರಳುತ್ತ ಕೆಲವು ಸಲ ಗೋಳಾಡುತ್ತಇರುತ್ತಿದ್ದರು. ಆದರೆ ಅಂತರಂಗದಲ್ಲಿ
ಸದಾ ಜಾಗೃತರಾಗಿ ಸಾವಧಾನ ಚಿತ್ತರಾಗಿರುತ್ತಿದ್ದರು. ॥83॥ ಬೆಳಗ್ಗೆ 9–30 ಅಥವಾ 10 ಗಂಟೆಗೆ, ನಿರ್ಯಾಣದ ಸಮಯ ಹತ್ತಿರ ಬಂದಾಗ, ಅವರು
ತಾವಾಗಿಯೇ ಎದ್ದು ಕುಳಿತರು. ಮತ್ತು ಅವರ ಚಿತ್ತವು ಅವಿಕಲವಾಗಿತ್ತು, ॥84॥ ಬಾಬಾರವರನ್ನು ಈ ಸ್ಥಿತಿಯಲ್ಲಿ ನೋಡಿ, ಜನರ ಹೃದಯದಲ್ಲಿ
ಆಶೆಯ ಸಾಗರ ತುಂಬಿ ಬಂದಿತು. ಭಯಂಕರವಾದ ಮತ್ತು ಅಭದ್ರವಾದ ಸಮಯ ಕಳೆದುಹೋಯಿತು ಎಂದು ಎಲ್ಲರೂ ಭಾವಿಸಿದರು. ॥85॥

ಆದ್ದರಿಂದ ಎಲ್ಲರೂ ಈ ರೀತಿ ಖಿನ್ನರಾಗಿ ಚಿಂತಿತರಾಗಿ ಕುಳಿತಾಗ ಬಾಬಾರವರ ನಿರ್ಯಾಣವು ಹತ್ತಿರ ಬಂದಿತು. ಆಗ ಏನು ನಡೆಯಿತೆಂಬುದನ್ನು ಕೇಳಿರಿ. ॥86॥ ಪ್ರಾಣದ ಉತ್ಕ್ರಮಣಕ್ಕೆ ಕೇವಲ ಒಂದು ಕ್ಷಣ ಅವಕಾಶ ಉಳಿದುಕೊಂಡಿದ್ದಾಗ, ಅವರ ಮನಸ್ಸಿನಲ್ಲಿ ಏನಿತ್ತೆಂಬುದು ಯಾರಿಗೂ ಗೊತ್ತಿರಲಿಲ್ಲ. ಅವರು ತಮ್ಮ ಕಫನಿಯ ಜೇಬಿನಲ್ಲಿ ಕೈಹಾಕಿದರು. ದಾನಕ್ಕೆ ಅದೇ ಸರಿಯಾದ ಕಾಲವೆಂದು ಭಾವಿಸಿದರು. ॥87॥ ಒಬ್ಬ ಮಹಾನ್ ಧರ್ಮಿಷ್ಠಳಾದ, ಸುಲಕ್ಷಣೆಯಾದ ಲಕ್ಷ್ಮಿ ಎಂಬ ಮಹಿಳೆಯು, ಅವಳ ಕಾರ್ಯಗಳು ಅವಳ ಹೆಸರಿಗೆ ಸಮನಾದವು, ಸದಾ ಮಸೀದಿಯಲ್ಲಿ ಬಾಬಾರವರ ಚರಣಗಳಲ್ಲಿ ಶರಣಾಗಿದ್ದವಳು, ಆ ಸಮಯದಲ್ಲಿ ಅವರ ಸನ್ನಿಧಿಯಲ್ಲಿ ಇದ್ದಳು. ॥88॥ ಬಾಬಾರವರು, ಅತಿ ಸಾವಧಾನದಿಂದ ಅವಳಿಗೆ ಸ್ವಲ್ಪ ದ್ರವ್ಯ ದಾನ ಮಾಡಿದರು. ಏಕೆಂದರೆ, ಬಾಬಾರವರಿಗೆ ತಮ್ಮ ನಿರ್ಯಾಣವು ಸನ್ನಿಹಿತವಾಗಿರುವುದು ನಿಶ್ಚಿತವಾಗಿ ತಿಳಿದಿತ್ತು. ॥89॥ ಅವಳು ಅದೇ ಲಕ್ಷ್ಮೀಬಾಯಿ ಶಿಂಧೆ. ಅವಳು ಅಲ್ಲಿ ಮಸೀದಿಗೆ ಯಾವುದೋ ಕೆಲಸಕ್ಕಾಗಿ ಅಥವಾ ಸೇವೆ ಮಾಡಲೆಂದು ಬಂದಿದ್ದಳು. ॥90॥ ದಿನದ ಸಮಯದಲ್ಲಿ ಬಾಬಾರವರ ದರ್ಬಾರವು ಎಲ್ಲರಿಗೂ ತೆರೆದಿರುವುದು ನಿತ್ಯದ ಪರಿಪಾಠವಾಗಿತ್ತು, ಸಾಮಾನ್ಯವಾಗಿ ಯಾರಿಗೂ ಅನುಮತಿಯನ್ನು ತಿರಸ್ಕರಿಸುತ್ತಿರಲಿಲ್ಲ. ಆದರೆ ರಾತ್ರಿ ವೇಳೆಯಲ್ಲಿ ಮಾತ್ರ ಬಹಳ ಕಟ್ಟುನಿಟ್ಟಾದ ಮರ್ಯಾದಾ ನಿಯಮಗಳು ಇರುತ್ತಿದ್ದವು. ॥91॥ ಸಾಯಂಕಾಲದ ಸುತ್ತು ಮುಗಿದನಂತರ, ಅಲ್ಲಿ ನೆರೆದಿದ್ದ ಜನರು ಮಸೀದಿಯಿಂದ ಹೊರಟು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುತ್ತಿದ್ದರು. ಮತ್ತು ಅವರು ಮಸೀದಿಗೆ ಮಾರನೆಯ ದಿನ ಬೆಳಗ್ಗೆ ಬರುತ್ತಿದ್ದರು. ॥92॥ ಆದರೆ ಭಗತ ಮಾಳ್ಸಾಪತಿ, ದಾದಾ (ಕೇಳ್ಕರ್) ಮತ್ತು ಲಕ್ಷ್ಮಿಯವರ ಭಕ್ತಿಯನ್ನು ಪರಿಗಣಿಸಿ ರಾತ್ರಿಯ ವೇಳೆಯಲ್ಲಿ ಅವರಿಗೆ ಅನುಮತಿಯನ್ನು ನಿರಾಕರಿಸುತ್ತಿರಲಿಲ್ಲ. ॥93॥ ಅದೇ ಲಕ್ಷ್ಮಿಯು, ಬಹಳ ಪ್ರೀತಿಯಿಂದ, ಪ್ರತಿದಿನವೂ ತರಕಾರಿಯ ಪಲ್ಯ ಮತ್ತು ಭಾಕರಿಗಳನ್ನು ಬಾಬಾರವರಿಗೆ ಸಮಯಕ್ಕೆ ಸರಿಯಾಗಿ ಕಳುಹಿಸುತ್ತಿದ್ದಳು. ಇಂತಹ ಸೇವೆಯನ್ನು ಅದೆಷ್ಟು ತಾನೇ ಹೊಗಳಬಹುದು? ॥94॥ ಭಾಕರಿ (ರೊಟ್ಟಿ)ಯ ಇತಿಹಾಸ ಕೇಳಿದರೆ, ನಿಮಗೆ ಬಾಬಾರವರ ದಯಾರ್ದ್ರ ಹೃದಯ ಮತ್ತು ಅವರು ನಾಯಿ, ಹಂದಿಗಳಲ್ಲಿ ಇಟ್ಟಿಂತಹ ಏಕತಾಭಾವವನ್ನು ಅರ್ಥಮಾಡಿಕೊಳ್ಳುವಿರಿ ಮತ್ತು ನೀವು ಆಶ್ಚರ್ಯಚಕಿತರಾಗುವಿರಿ. ॥95॥ ಒಂದು ದಿನ ಸಾಯಂಕಾಲ ಬಾಬಾರವರು ಗೋಡೆಗೊರಗಿ ಕುಳಿತಿದ್ದರು. ಅವರ ಎದೆಯು ಕಟಕಟೆಗೆ ಆನಿಸಿಕೊಂಡಿತ್ತು. ಪ್ರೇಮವಾರ್ತೆಯಲ್ಲಿ ನಿರತರಾಗಿದ್ದಾಗ ಅಲ್ಲಿಗೆ ಲಕ್ಷ್ಮಿಯು ಬಂದಳು. ॥96॥ ತಾತ್ಯಾ ಪಾಟೀಲನು ಹತ್ತಿರವೇ ಇದ್ದನು. ಅಲ್ಲಿ ಇನ್ನೂ ಇತರರು ಸಹ ಇದ್ದರು. ಲಕ್ಷ್ಮಿಯು ಬಾಬಾರವರಿಗೆ ಅಭಿವಂದನೆ ಮಾಡಿದಳು. ಆಗ ಬಾಬಾರವರು ಅವಳಿಗೆ ಹೇಳಿದರು, ॥97॥ “ಲಕ್ಷ್ಮಿ, ನನಗೆ ಹಸಿವಾಗಿದೆ.” “ಬಾಬಾ, ನಾನು ಹೋಗಿ ಭಾಕರಿಯನ್ನು ತರುತ್ತೇನೆ. ನಾನು ಹೋಗುತ್ತಿದ್ದ ಹಾಗೆಯೇ ಅದನ್ನು ತೆಗೆದುಕೊಂಡು ಹಿಂತಿರುಗಿ ಬರುತ್ತೇನೆ.” ॥98॥ ಹೀಗೆ ಹೇಳುತ್ತ ಅವಳು ಕೂಡಲೇ ಅಲ್ಲಿಂದ

ಹೊರಟಳು. ಅವಳು ಕೆಲವು ರೊಟ್ಟಿಗಳನ್ನು ಬೇಯಿಸಿಕೊಂಡು ಯಾವುದೇ ಸಮಯವನ್ನೂ ಕಳೆಯದೆ ಸ್ವಲ್ಪ ಪಲ್ಯ ಮತ್ತು ಚಟ್ನಿಗಳೊಡನೆ ಹಿಂತಿರುಗಿದಳು. ಮತ್ತು ಈ ಉಪಾಹಾರವನ್ನು ಬಾಬಾರವರ ಮುಂದೆ ಇಟ್ಟಳು. ॥99॥ ಬಾಬಾರವರು ಊಟದೆಲೆಯನ್ನು ತೆಗೆದುಕೊಂಡು ಅದು ಇದ್ದ ಹಾಗೆಯೇ ನಾಯಿಯ ಮುಂದೆ ಇಟ್ಟರು. ಕೂಡಲೇ ಲಕ್ಷ್ಮಿಯು ಕೇಳಿದಳು, "ಬಾಬಾ, ಇದೇನು ಮಾಡಿದಿರಿ? ॥100॥ "ನಾನು ಅಷ್ಟು ವೇಗವಾಗಿ ಹೋಗಿ ಭಾಕರಿಯನ್ನು ಬೇಗನೆ ಬೇಯಿಸಿ ತಂದಿದ್ದೆ. ಆದರೆ ನೀವು ಅವುಗಳನ್ನು ನಾಯಿಗೆ ಕೊಟ್ಟಿರಿ! ನಿಮ್ಮ ರೀತಿ ಇದೆಂತಹ ವಿಚಿತ್ರವಾದುದು! ॥101॥ "ನೀವು ಹಸಿದಿರುವಿರೆಂದು ಹೇಳಿದಿರಿ. ಇದೆಂತಹ ವಿಚಿತ್ರವಾದ ಹಸಿವೆ ಇದು! ನೀವು ಒಂದು ಸಣ್ಣತುಂಡನ್ನೂ ತಿನ್ನಲಿಲ್ಲ! ನೀವು ಅನವಶ್ಯಕವಾಗಿ ನನಗೆ ತೊಂದರೆಕೊಟ್ಟಿರಿ!" ॥102॥ ಆಗ ಬಾಬಾ ಹೇಳಿದರು, "ನೀನು ಏಕೆ ವ್ಯರ್ಥವಾಗಿ ರೇಗುವೆ? ಈ ನಾಯಿಯ ಹಸಿವೆಯನ್ನು ತೃಪ್ತಿಪಡಿಸುವುದು ನನಗೆ ತೃಪ್ತಿ ಉಂಟುಮಾಡಿದುದಕ್ಕೆ ಸಮ. ಅದನ್ನು ಮನಸ್ಸಿನಲ್ಲಿಟ್ಟುಕೋ.॥103॥ "ಈ ನಾಯಿಯಲ್ಲಿ ಜೀವವಿಲ್ಲವೇ? ಎಲ್ಲ ಜೀವಿಗಳಿಗೂ ಹಸಿವೆ ಒಂದೇ ತರಹ ಇರುತ್ತದೆ. ಅದೊಂದು ಮೂಕ ಜೀವಿಯಾಗಿದ್ದರೂ ಮತ್ತು ನಾನು ಮಾತನಾಡಬಲ್ಲವನಾದರೂ, ನಾವಿಬ್ಬರೂ ಅನುಭವಿಸುವ ಹಸಿವೆಗೆ ಏನಾದರೂ ವ್ಯತ್ಯಾಸವಿದೆಯೇ? ॥104॥ "ಅನ್ನದಾನ ಮಾಡುವವರು ನಿಜವಾಗಿಯೂ ನನಗೆ ಆಹಾರ ನೀಡಿ ಸೇವಿಸುತ್ತಾರೆ. ಇದನ್ನು ತಿಳಿದು ಇದು ಸ್ವತಃ ಪ್ರಮಾಣಿತ ಸತ್ಯವೆಂದು ಅರಿಯಿರಿ." ॥105॥ ಈ ಪ್ರಸಂಗವು ಬಹಳ ಸರಳವಾದದ್ದು ಮತ್ತು ನಿತ್ಯ ಜೀವಿತಕ್ಕೆ ಸಂಬಂಧಪಟ್ಟದ್ದು. ಆದರೆ ಅದರ ಬೋಧನೆ ಪರಮಾರ್ಥಜ್ಞಾನ. ಸಾಯಿಯವರ ಈ ರೀತಿಯ ಉಪದೇಶವಚನಗಳು ಪ್ರೇಮರಸದಿಂದ ಪರಿಪಕ್ವವಾಗಿರುತ್ತವೆ. ॥106॥ ಪ್ರಪಂಚದ ಭಾಷೆಯಲ್ಲಿ ಹೇಳಬೇಕೆಂದರೆ, ಅವರು ಪರಮಾರ್ಥದ ರೂಪರೇಷೆಯನ್ನು ಬೋಧಿಸಿದರು. ಯಾರ ದೋಷವನ್ನೂ ಮತ್ತು ಅವಿವೇಕವನ್ನೂ ಎತ್ತಿಹಿಡಿಯದೇ ಅವರು ತಮ್ಮ ಭಕ್ತರನ್ನು ಸಂತೋಷ ಪಡಿಸುತ್ತಿದ್ದರು.॥107॥ ಆ ಸಮಯದಿಂದ ಆಚೆಗೆ ಅವರ ಉಪದೇಶಾನುಸಾರ, ಲಕ್ಷ್ಮಿಯ ಭಾಕರಿಯನ್ನು ಚೂರು ಚೂರು ಮಾಡಿ ಹಾಲಿನಲ್ಲಿ ಹಾಕಿ, ಕಲಸಿ ಪ್ರೇಮ ಪುರಸ್ಸರವಾಗಿ ಅರ್ಪಿಸುವುದು ಪ್ರಾರಂಭವಾಯಿತು. ॥108॥ ಅನಂತರ ಬಾಬಾರವರು ಭಕ್ತಿ–ಪ್ರೇಮಗಳಿಂದ ಸಮರ್ಪಿಸಿದ ಭಾಕರಿಯನ್ನು ನಿತ್ಯವೂ ತಿನ್ನಲು ಪ್ರಾರಂಭಿಸಿದರು. ಸ್ವಲ್ಪ ವಿಳಂಬವಾದರೂ ಸಹ ಅವರು ಚಡಪಡಿಸುತ್ತಿದ್ದರು ಮತ್ತು ತಿನ್ನಬೇಕೆನಿಸುತ್ತಿರಲಿಲ್ಲ. ॥109॥ ಲಕ್ಷ್ಮಿಯು ಭಾಕರಿ ತರುವುದು ಏನಾದರೂ ವಿಳಂಬವಾದರೆ ಊಟದ ವೇಳೆ ಆಗಿದ್ದರೂ ಸಹ ಒಂದು ತುತ್ತನ್ನೂ ಬಾಯಿಗೆ ಹಾಕುತ್ತಿರಲಿಲ್ಲ. ॥110॥ ತಟ್ಟೆಗಳಲ್ಲಿ ಬಡಿಸಿದ್ದ ಊಟ ತಣ್ಣಗಾಗುತ್ತಿತ್ತು, ಅವರು ಹಸಿದುಕೊಂಡಿದ್ದರೂ ಸಹ, ಲಕ್ಷ್ಮಿಯ ಭಾಕರಿಯು ಬರುವವರೆಗೆ ಯಾವ ಆಹಾರವನ್ನೂ ಸ್ವೀಕರಿಸುತ್ತಿರಲಿಲ್ಲ. ॥11॥ ಸ್ವಲ್ಪ ಸಮಯ ಕಳೆದ ನಂತರ, ಬಾಬಾರವರು ನಿತ್ಯವೂ ಮಧ್ಯಾಹ್ನದ ವೇಳೆ ಲಕ್ಷ್ಮಿಯು ಮಾಡುವ ಸೇವಿಗೆಯನ್ನು ಕೇಳುತ್ತಿದ್ದರು ಮತ್ತು ಅದನ್ನು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು

ತಿನ್ನುತ್ತಿದ್ದರು. ॥112॥ ಬಾಬಾರವರು ತಿನ್ನುತ್ತಿದ್ದುದು ಅತಿ ಸ್ವಲ್ಪ. ಉಳಿದದ್ದನ್ನು ಹಿಂದಕ್ಕೆ ಕಳಿಸುತ್ತಿದ್ದರು. ಅದನ್ನು ಲಕ್ಷ್ಮಿಯ ಕೈಯಲ್ಲಿ ರಾಧಾಕೃಷ್ಣಾಯಿಗೆ ಕಳಿಸುತ್ತಿದ್ದರು. ಏಕೆಂದರೆ ಅವಳು ಉಚ್ಛಿಷ್ಟವನ್ನು ಅತಿ ಪ್ರೀತಿಯಿಂದ ತಿನ್ನುತ್ತಿದ್ದಳು. ॥113॥ ಈಗ ನಿರೂಪಣೆಯು ದೇಹವಿಸರ್ಜನೆಯ ಬಗ್ಗೆ ಆಗಿರುವುದರಿಂದ, ಈ ಸಂಬಂಧವಾದ ಭಾಕರಿಯ ಕಥೆಯನ್ನೇಕೆ ಹೇಳಬೇಕು? ಶ್ರೋತೃಗಳು ಈ ರೀತಿ ಕೇಳದಿರಲಿ ಇದು ಸಾಯಿಯ ಸರ್ವವ್ಯಾಪಕತ್ವಕ್ಕೆ ನಿದರ್ಶನವಾಗಿದೆ. ॥114॥ ಸಾಯಿಯು ಸಕಲ ದೃಶ್ಯಚರಾಚರಗಳಲ್ಲಿ ಮತ್ತು ಅದರಿಂದಾಚೆಗಿರುವ ಪರಾತ್ಪರ ತತ್ವದಲ್ಲಿಯೂ ನಿರಂತರ ವ್ಯಾಪಿಸಿದ್ದಾರೆ. ಸಾಯಿಯು ಅಜ ಹಾಗೂ ಅಮರ. ॥115॥ ಇದು ಈ ಕಥೆಯ ತತ್ತ್ವ. ಅದರಿಂದಾಗಿಯೇ ಲಕ್ಷ್ಮಿಯ ಈ ಮಧುರವಾದ ಸಹಜ ಕಥೆಯು ಸ್ಮರಣೆಗೆ ಬಂದಿತು. ಅದು ಶ್ರೋತೃಗಳಿಗಾಗಿಯೇ ಎಂದು ನಾನು ಭಾವಿಸಿದ್ದೇನೆ. ॥116॥ ಆದ್ದರಿಂದ ಸಾಯಿಯು ಲಕ್ಷ್ಮಿಯ ಅಷ್ಟು ಭಕ್ತಿಯುಳ್ಳ ಸೇವೆಯನ್ನು ಹೇಗೆ ಮರೆಯಬಲ್ಲರು? ಅವರು ಅದೆಂತಹ ವಿಚಿತ್ರ ರೀತಿಯಲ್ಲಿ ಅದನ್ನು ಸ್ಮರಿಸಿಕೊಳ್ಳುತ್ತಿದ್ದರು ಎಂಬುದರ ನಿರೂಪಣೆಯನ್ನು ಆದರಪೂರ್ವಕವಾಗಿ ಕೇಳಿರಿ. ॥117॥ ಅವರು ಕೊನೆಯುಸಿರೆಳೆಯುವ ಸಮಯದಲ್ಲಿದ್ದರೂ ಮತ್ತು ದೇಹವು ಕ್ಷೀಣವಾಗಿ ನಿತ್ರಾಣವಾಗಿದ್ದರೂ, ತಮ್ಮ ದೇಹಾವಸಾನದ ಸಮಯದಲ್ಲಿ ಬಾಬಾ ತಮ್ಮ ಸ್ವಹಸ್ತದಿಂದಲೇ ಅವಳಿಗೆ ದಾನ ಕೊಟ್ಟರು. ॥118॥ ತಮ್ಮ ಜೇಬಿನಿಂದ ಒಂದು ಸಲ ಐದು, ಮತ್ತು ಅನಂತರ ನಾಲ್ಕು ರೂಪಾಯಿಗಳನ್ನು ತೆಗೆದು ಅವಳ ಕೈಗಳಲ್ಲಿ ಇಟ್ಟರು. ಇದೇ ಬಾಬಾರವರ ಅಂತಿಮ ಕಾರ್ಯವಾಗಿತ್ತು. ॥119॥ ಅದು ನವವಿಧ ಭಕ್ತಿಯ ಸೂಚನೆಯೇ? ಅಥವಾ ಇದು ನವರಾತ್ರಿಯಲ್ಲಿ ಮಾಡಿದ ಅಂಬಿಕೆಯ ಪೂಜೆಯ ಫಲವೇ? ಮತ್ತು ಇದು ಸೀಮೋಲ್ಲಂಘನವೇ? ಅದು ಸೀಮೋಲ್ಲಂಘನೆಯ ದಕ್ಷಿಣೆಯೇ? ॥120॥ ಅಥವಾ ಬಾಬಾರವರು, ಭಾಗವತದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ತಿಳಿಸಿದ ಶಿಷ್ಯನ ಒಂಬತ್ತು ಲಕ್ಷಣಗಳನ್ನು ನೆನಪಿಸಿಕೊಡುತ್ತಿದ್ದಾರೇನು? ॥121॥ ಹನ್ನೊಂದನೆಯ ಸ್ಕಂದದ, ಹತ್ತನೆಯ ಅಧ್ಯಾಯ ಮತ್ತು ಆರನೆಯ ಶ್ಲೋಕದಲ್ಲಿ, ಒಬ್ಬ ಶಿಷ್ಯನು ಅಧ್ಯಾತ್ಮದ ಉನ್ನತಿ ಪಡೆಯಲೋಸುಗ ಯಾವ ರೀತಿ ವರ್ತಿಸಬೇಕು ಎಂಬುದರ ಬಗ್ಗೆ ಅಸಾಧಾರಣವಾದ ವಿವರಣೆ ಇದೆ. ॥122॥ ಹಿಂದೆ, ಮೊದಲರ್ಧದಲ್ಲಿ ಐದು ಗುಣಗಳನ್ನು ವಿವರಿಸಿದೆ. ಮತ್ತು ಉತ್ತರಾರ್ಧದಲ್ಲಿ ಕೇವಲ ನಾಲ್ಕು. ಬಾಬಾರವರು ಸಹ ಇದೇ ಕ್ರಮವನ್ನು ಅನುಸರಿಸಿದ್ದರಿಂದ ಅವರಿಗೂ ಅದೇ ಉದ್ದೇಶವಿತ್ತು ಎಂದು ನನ್ನ ಅನಿಸಿಕೆ. ॥123॥ ಶಿಷ್ಯನು ಯಾವಾಗಲೂ ಗಂಭೀರನಾಗಿ, ದಕ್ಷ ಹಾಗೂ ಮತ್ಸರರಹಿತನಾಗಿ, ನಿಸ್ವಾರ್ಥ, ಮಮಕಾರರಹಿತನಾಗಿ ಗುರುಸೇವಾತತ್ಪರನೂ ಮತ್ತು ಪರಮಾರ್ಥ ಜ್ಞಾನ ಪಡೆಯಲು ಇಚ್ಛಿಸುವವನೂ ಮತ್ತು ಅಂತರಂಗದಲ್ಲಿ ನಿಶ್ಚಲನೂ ಆಗಿರಬೇಕು. ॥124॥ ಅವನಿಗೆ ಯಾವ ದ್ವೇಷಭಾವವೂ ಇಲ್ಲದೆ, ಮಾತು ಕಡಿಮೆಯಾಗಿರಬೇಕು. ಈ ಲಕ್ಷಣಗಳುಳ್ಳವರನ್ನು ಸಂತೋಷಗೊಳಿಸಲು ಅತ್ಯವಶ್ಯಕ. ॥125॥ ಇದೊಂದೇ ಶ್ರೀಸಾಯಿನಾಥರ ಉದ್ದೇಶವಾಗಿತ್ತು. ಅದನ್ನು ಈ ರೂಪದಲ್ಲಿ ವ್ಯಕ್ತಪಡಿಸಿದ್ದರು. ಕೇವಲ ಕರುಣಾಮಯರಾದ

ಸಂತರು ಮಾತ್ರ ತಮ್ಮ ಭಕ್ತರ ಹಿತಕ್ಕಾಗಿಯೇ ಈ ರೀತಿ ಮಾಡುತ್ತಾರೆ. ॥126॥ ಲಕ್ಷ್ಮಿಯು ಸಹ ಸಾಕಷ್ಟು ಶ್ರೀಮಂತಳಾಗಿದ್ದಳು. ಅವಳು ಒಂಭತ್ತು ರೂಪಾಯಿಗಳಿಗೆ ಏಕೆ ಆಸಕ್ತಳಾಗಿರುತ್ತಾಳೆ? ಅವಳು ಈ ಹಣದ ಅನೇಕ ಪಟ್ಟು ದಾನಕೊಡಬಲ್ಲವಳಾಗಿದ್ದಳು. ಆದರೂ ಈ ದಾನವು ಅಪೂರ್ವವಾದುದಾಗಿತ್ತು. ॥127॥ ಅವಳು ಅಂತಹ ಕೃಪೆ ಪಡೆದುದಕ್ಕೆ ಬಹಳ ಭಾಗ್ಯಶಾಲಿಯಾಗಿದ್ದಳು. ಆದುದರಿಂದ ಅವಳು ಸಾಯಿಯ ಸ್ವಂತ ಕರಕಮಲಗಳಿಂದ ನವರತ್ನಗಳನ್ನು ಪಡೆದಳು. ॥128॥ ಒಂಭತ್ತೇ ಅಲ್ಲದೆ, ಅದರ ಅನೇಕ ಪಟ್ಟು ಒಂಭತ್ತುಅವಳ ಕೈಯಿಂದ ದಾಟಿ ಹೋಗುತ್ತಿದ್ದವು. ಆದರೆ ಈ ಅಭಿನವ ಬಹುಮಾನವು ಅವಳಿಗೆ ಆಜೀವ ಪರ್ಯಂತ ಸಾಯಿಯನ್ನು ನೆನಪಿಗೆ ತರುತ್ತಿದ್ದವು. ॥129॥ ಅವರ ದೇಹಾವಸಾನವು ಸನ್ನಿಹಿತವಾದಾಗಲೂ, ಯೋಗ್ಯವಾದ ರೀತಿಯಲ್ಲಿ ಅನಸಂದಾನ ಮಾಡಿ ಮೊದಲು ಐದು ಮತ್ತು ಅನಂತರ ನಾಲ್ಕು ನಾಣ್ಯಗಳನ್ನು ಕೊಟ್ಟು ಅವರು ಅವಳಲ್ಲಿ ಆಮರಣಾಂತ ಸುಖ ತರುವಂತಹ ಸ್ಮರಣೆಯನ್ನು ಬಿಟ್ಟುಹೋದರು. ॥130॥ ಅಷ್ಟು ಎಚ್ಚರಿಕೆಯನ್ನೊಳಗೊಂಡು ಅವರು ತಮ್ಮ ನಿಕಟವರ್ತಿಗಳನ್ನು ಮಿತ್ರರನ್ನು ಊಟಕ್ಕೆ ಕಳಿಹಿಸಿದ್ದರು. ಆದರೆ ಒಬ್ಬಿಬ್ಬರು ಹಳ್ಳಿಯವರನ್ನು ನಿಲ್ಲುವಂತೆ ಮಾಡಿದ್ದುದು ಕಂಡು ಬಂದಿತು. ॥131॥ ಆದರೆ ಅವರ ಪ್ರಿಯ ಭಕ್ತರಲ್ಲಿ ಕೆಲವರು ಬಾಬಾರವರ ಪಕ್ಕ ಬಿಟ್ಟುಹೋಗಬಾರದೆಂದು ಒತ್ತಾಯ ಪಡಿಸಿದ್ದರು. ಅವರಿಗೆ ಅದು ಕಠಿಣ ಸಮಯವೆಂಬುದರ ಅರಿವಿತ್ತು. ॥132॥ ಆದರೆ ಅಂತ್ಯ ಸಮಯದಲ್ಲಿ, ಸರಿಯಾದ ಪ್ರಸಂಗದಲ್ಲಿ ಅವರು ಬೇಗನೆ ಬೇರೆ ಎಲ್ಲರನ್ನೂ ಕಳುಹಿಸಿಬಿಟ್ಟರು. ಅವರ ಪ್ರೀತಿ ಮತ್ತು ವಾತ್ಸಲ್ಯದ ಬಲೆಯಲ್ಲಿ ಸಿಕ್ಕಿ ಬೀಳಬಾರದೆಂಬ ಉದ್ದೇಶವಿತ್ತು. ॥133॥ ನಿರ್ಯಾಣ ಸಮಯವು ನಿಕಟವಾಯಿತೆಂಬುದನ್ನು ಗ್ರಹಿಸಿ ಬಾಬಾರವರು ಬೂಟಿ, ಕಾಕಾ ಮತ್ತಿತರರಿಗೆ ಹೇಳಿದರು, "ಹೋಗಿ, ವಾಡಾಗೆ ಹೋಗಿ ಊಟದ ನಂತರ ಹಿಂತಿರುಗಿ ಬನ್ನಿ." ॥134॥ ಇತರರ ವ್ಯಗ್ರತೆ ಮತ್ತು ಹಂಬಲವನ್ನು ನೋಡಿ ಬಾಬಾರವರು ತಾವೇ ಚಿಂತಿತರಾದರು. "ಹೋಗಿ, ಹೋಗಿ, ಊಟಮಾಡಿ ಹಿಂತಿರುಗಿ ಬನ್ನಿರಿ, ಈಗ ಹೋಗಿ." ಎಂದು ಎಲ್ಲರಿಗೂ ಆಜ್ಞಾಪಿಸಿದರು. ॥135॥ ಇವರುಗಳು ಅವರ ನಿತ್ಯದ ಸಂಗಾತಿಗಳಾಗಿದ್ದರು. ಮತ್ತು ಕೆಲವರು ಹಗಲು ರಾತ್ರಿ ಅವರ ನಿಕಟವರ್ತಿಗಳಾದಮಿತ್ರರಾಗಿದ್ದರು. ಅವರೆಲ್ಲರೂ ಚಿಂತಿತರಾಗಿದ್ದರೂ ಸಹ ಬಾಬಾರವರ ಅಜ್ಞೆಯಂತೆ ಹೊರಡಲು ಎದ್ದರು. ॥136॥ ಆ ಸಮಯದಲ್ಲಿ ಅವರ ಸನ್ನಿಧಿಯನ್ನು ತ್ಯಜಿಸಲು ಆಗುತ್ತಿರಲಿಲ್ಲ, ಅಥವಾ ಅವರ ಆಜ್ಞೆಯನ್ನು ಉಲ್ಲಂಘಿಸಲೂ ಆಗುತ್ತಿರಲಿಲ್ಲ, ಅವರು ಬಾಬಾರವರ ಇಚ್ಛೆಗೆ ವಿರುದ್ಧವಾಗಿ ಹೋಗಲು ಆಗಲಿಲ್ಲಆದ್ದರಿಂದ ಅವರು ಊಟಕ್ಕಾಗಿ ವಾಡಾಗೆ ಹೋದರು. ॥137॥ ಅವರ ದುಃಖವು ಭಯಂಕರವಾಗಿ ಸಹಿಸಲಸಾಧ್ಯವಾಗಿತ್ತು. ಅವರಿಗೆ ಊಟವನ್ನಾಗಲೀ, ಮತ್ತೇನನ್ನಾಗಲೀ ತಿನ್ನಲು ಆಗುತ್ತಿರಲಿಲ್ಲ. ಅವರ ಪ್ರಾಣವು ಬಾಬಾರವರ ಹತ್ತಿರ ಇತ್ತು. ಮತ್ತು ಅವರನ್ನು ಕ್ಷಣಮಾತ್ರವೂ ಮರೆಯಲು ಸಾಧ್ಯವಿರಲಿಲ್ಲ. ॥138॥ ಆದರೂ ಅವರು ಅಲ್ಲಿಂದ ಹೊರಟು ಊಟಕ್ಕೆ ಕುಳಿತರು. ಆದರೆ ಆ ಕೂಡಲೇ ಅವರನ್ನು ಹಿಂತಿರುಗಲು ಹೇಳಲಾಯಿತು. ಅವರು ಊಟವನ್ನು

ಅರ್ಧಕ್ಕೇ ಬಿಟ್ಟು ಹಿಂದಕ್ಕೆ ಓಡಿಬಂದರು. ಆದರೆ ಅವರು ಬಾಬಾರವರನ್ನು ಭೇಟಿ ಮಾಡಲು ಆಗಲಿಲ್ಲ. ॥139॥ ಯಾವಾಗ ಜೀವಿತದ, (ಆಯುಸ್ಸಿನ) ಎಣ್ಣೆಯು ಮುಗಿಯಿತೋ ಆಗ ಪ್ರಾಣ ಜ್ಯೋತಿಯು ಮಂದವಾಯಿತು. ದೇಹವು ಬಾಯಾಜಿ (ಅಪ್ಪಾಕೋಟೆ)ಯ ತೊಡೆಯಮೇಲೆ ವಿಶ್ರಮಿಸಿತು. ॥140॥ ಅವರು ನೆಲದ ಮೇಲೆ ಬೀಳಲಿಲ್ಲ. ಅಥವಾ ಹಾಸಿಗೆಯ ಮೇಲೆ ಮಲಗಿರಲಿಲ್ಲ. ಆದರೆ ಅವರು ಶಾಂತವಾಗಿ ತಮ್ಮ ಗಾದಿಯ ಮೇಲೆ ಕುಳಿತು, ಸ್ವಹಸ್ತದಿಂದಲೇ ದಾನ ಮಾಡುತ್ತ ಈ ಭೌತಿಕ ಶರೀರವನ್ನು ವಿಸರ್ಜಿಸಿದರು. ॥141॥ ಸಮರ್ಥರ ಮನೋಗತವು ಅಥವಾ ಅವರ ಹೃದಯದ ರಹಸ್ಯವು ಯಾರಿಗೂ ತಿಳಿದಿರಲಿಲ್ಲ. ಅವರು ದೇಹವನ್ನು ನೋಡನೋಡುತ್ತಿದ್ದ ಹಾಗೆಯೇ ವಿಸರ್ಜಿಸಿದರುಮತ್ತು ಬ್ರಹ್ಮೀಭೂತರಾದರು. ॥142॥ ಮಾಯೆಯಿಂದ, ದೇಹವೆಂಬ ವೇಷವನ್ನು ಧರಿಸಿ, ಸಂತರು ಈ ಪ್ರಪಂಚದಲ್ಲಿ ಅವತಾರ ತಾಳುತ್ತಾರೆ. ಅವರ ಉದ್ಧಾರ ಕಾರ್ಯ ಪೂರ್ತಿಯಾಗುತ್ತಲೇ, ಆ ಕೂಡಲೇ ಅವ್ಯಕ್ತದಲ್ಲಿ ಲೀನವಾಗುತ್ತಾರೆ. ॥143॥ ಒಬ್ಬ ನಟನು ನಾನಾ ವೇಷಗಳನ್ನು ಧರಿಸುತ್ತಾನೆ. ಆದರೂ ತನ್ನ ಅಂತರಂಗದಲ್ಲಿ ತನ್ನ ವ್ಯಕ್ತಿತ್ವವನ್ನು ಪೂರ್ಣವಾಗಿ ಅರಿತಿರುತ್ತಾನೆ. ಅದೇ ರೀತಿ ಪೂರ್ಣಾವತಾರಿಗಳೂ ತಮ್ಮ ಕಾರ್ಯ ಪರಿಪೂರ್ಣವಾದ ಮೇಲೆ ತಮ್ಮ ಪರಿಪೂರ್ಣತ್ವಕ್ಕೆ ಹಿಂದಿರುಗುತ್ತಾರೆ. ಅವರಿಗೆ ಮರಣದಿಂದೇನು? ॥144॥ ಯಾರು ಲೋಕಸಂಗ್ರಹಾರ್ಥವಾಗಿ ಅವತರಿಸಿದರೋ ಅವರು ಕಾರ್ಯ ಮುಗಿದ ಮೇಲೆ ಅವತಾರವನ್ನು ಸಮಾಪ್ತಿಗೊಳಿಸಿದರು. ಅವರ ಶರೀರವು ದೈವಿಕ ಆಟಕ್ಕಾಗಿ ಬಂದಿದ್ದಾಗ ಜನ್ಮ ಮರಣಗಳಿಗೆ ಅಂಕಿತವಾಗುತ್ತದೆಯೇನು? ॥145॥ ಯಾರ ವೈಭವವು ಪರಬ್ರಹ್ಮವೋ, ಅವರಿಗೆ ಮೃತ್ಯುವಿನ ಸಾಧ್ಯತೆ ಹೇಗಿರುತ್ತದೆ? ಯಾರು ನಿರ್ಮಮತ್ವ – ವೈರಾಗ್ಯದ ಸ್ವರೂಪವೋ ಅವರಿಗೆ ಭವ ಮತ್ತು ಅಭವಗಳು ಎಂತು ಬಾಧಿಸುವುವು? ॥146॥ ಅವರು ತೋರಿಕೆಗಾಗಿ ಕರ್ಮಗಳಲ್ಲಿ ಪ್ರವೃತ್ತರಾಗಿದ್ದರೂ, ಅವರು ಯಾವುದನ್ನೂ ಯಾವಾಗಲೂ ಯತ್ಕಿಂಚಿತ್ತೂ ಮಾಡುವುದಿಲ್ಲ. ಅಹಂಕಾರರಹಿತರಾಗಿ ಸದಾ ಕರ್ಮದಲ್ಲಿ ಅಕರ್ಮವನ್ನು ನೋಡುತ್ತಾರೆ. (ಕರ್ಮಮಾಡುತ್ತಿರುವಾಗ ಅವರು ಮಾಡುತ್ತಿಲ್ಲವೆಂದು ಭಾವಿಸುತ್ತಾರೆ.) ॥147॥ ಕರ್ಮಗಳು ಅವುಗಳ ಫಲವನ್ನು ಅನುಭವಿಸದೆ ಕ್ಷೀಣಿಸುವುದಿಲ್ಲ. ಇದು ಸ್ಮೃತಿಗಳಲ್ಲಿ ತಿಳಿಸಿರುವ ಕರ್ಮಗಳ ಸಾರ. ಬ್ರಹ್ಮಜ್ಞಾನಿಯಲ್ಲಿ ಯಾವುದೇ ಭ್ರಮೆಯಿಲ್ಲ. ಏಕೆಂದರೆ ಅವರು ಪ್ರತಿಯೊಂದು ವಸ್ತುವಿನಲ್ಲೂ ಬ್ರಹ್ಮನನ್ನು ಕಾಣುತ್ತಾರೆ. ॥148॥ ಕ್ರಿಯಾಕಾರಕಗಳಿಂದ ದೊರಕುವ ಫಲವು ಇದೇ. ಅಂತಹ ದ್ವೈತವೇ ಪ್ರಸಿದ್ಧವಾದುದು. ಆದರೆ ಇಲ್ಲಿಯೂ ಬ್ರಹ್ಮಜ್ಞಾನಿಯು ಅದನ್ನು ಬ್ರಹ್ಮವೆಂದೇ ನಂಬುತ್ತಾನೆ. ಅದು ಕಪ್ಪೆಚಿಪ್ಪಿನಲ್ಲಿರುವ ಬೆಳ್ಳಿಯಂತೆ. ॥149॥ ಬಾಬಾರವರು, ಪ್ರೀತಿಯ ತಾಯಿಯಂತೆ ಯಾವ ರೀತಿ ಮೃತ್ಯುವಿಗೆ ಬಲಿಯಾಗುತ್ತಾರೆ? ಅದು ಒಂದು ಹಗಲು, ಒಂದು ಕತ್ತಲಿನ ರಾತ್ರಿ ಗ್ರಹಣ ಹಿಡಿದಂತೆ ತೋರುತ್ತದೆ. ॥150॥ ಈಗ ಈ ಅಧ್ಯಾಯವನ್ನು ಇಲ್ಲಿಗೆ ಮುಗಿಸೋಣ. ನಿತ್ಯದ ತಿಂಗಳಿನ ಮಾಸಿಕ ಮರ್ಯಾದೆಯನ್ನು ಮನಸ್ಸಿನಲ್ಲಿಟ್ಟು ಅದನ್ನು ಮೀರಿದಲ್ಲಿ ಶ್ರೋತೃಗಳು ಅತ್ಯಂತ

ಆಯಾಸಗೊಳ್ಳುತ್ತಾರೆ ಹಾಗೂ ದುಶ್ಚಿತ್ತರಾಗುತ್ತಾರೆ. ||151|| ಅವರ ನಿರ್ಯಾಣ ಕಥೆಯ ಉಳಿದ ಭಾಗವನ್ನು, ಶ್ರೋತೃಗಳು ಇನ್ನು ಮುಂದೆ ಕೇಳಬಹುದು. ಹೇಮಾಡನು ಸಾಯಿ ಸಮರ್ಥರಿಗೆ ಶರಣಾಗುತ್ತಾನೆ. ಅವರ ಕೃಪೆಯಿಂದ ಅವನು ಕೃತಾರ್ಥನಾಗಿದ್ದಾನೆ. ||152||

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿನಾಥರ ನಿರ್ಯಾಣ (ದೇಹತ್ಯಾಗ)" ಎಂಬ ನಲವತ್ತೆರಡನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಸೂರ್ಯನು ಉತ್ತರದಿಂದ ದಕ್ಷಿಣಕ್ಕೆ ಹೋಗುವ ಅರ್ಧ ವರ್ಷ.
2. ತಿಥಿ, ಹಗಲಿನಲ್ಲಿ ಸೂರ್ಯನು ಉದಯಿಸುವ ಎರಡು ಸಮಯಗಳ ಮಧ್ಯೆ ಇರುವ ಕಾಲ ಭಾರತದ ಪಂಚಾಗದ ರೀತಿಯಲ್ಲಿ.
3. ದಸರಾ ಹಬ್ಬದಲ್ಲಿ ವೈಭವಯುತ ಮೆರವಣಿಗೆಯಿಂದ ಸರಹದ್ದನ್ನು ದಾಟುವುದು.
4. ಭೃಗುವಿನ ವಂಶದವನು. ಪರಶುರಾಮನ ಅನುಯಾಯಿ. ಅಧ್ಯಯನದಲ್ಲಿ ಮುಳುಗಿದ್ದೂ ಧಾರ್ಮಿಕ ಸ್ವಭಾವದ ಋಷಿ, ಕ್ರೋಧದ ಅಪರಾವತಾರ.
5. ಯಾವುದೇ ಆಶೆಯಿಲ್ಲದವನು, ಅದರಿಂದ ಫಲವೂ ಇಲ್ಲ. ಆದ್ದರಿಂದ ಪುನರ್ಜನ್ಮ ಇಲ್ಲದವನು. ಆದ್ದರಿಂದ ಅವನ ಆತ್ಮಕ್ಕೆ ಬಿಡುಗಡೆ ಇಲ್ಲ. ಈ ಜಗತ್ತಿನಲ್ಲಿ ಅಂತಹ ವ್ಯಕ್ತಿಯು ಬ್ರಹ್ಮ ಮತ್ತು ಬ್ರಹ್ಮತತ್ವವನ್ನು ಪಡೆದವನು.
6. ದೇವಿ ದುರ್ಗೆ (ಅಂಬಿಕಾ ಮತ್ತೊಂದು ಹೆಸರು.) ಅಶ್ವೀಜ ಮಾಸದಲ್ಲಿ ಒಂಬತ್ತು ದಿನಗಳ ಕಾಲ ಪೂಜಿಸಲ್ಪಡುತ್ತಾಳೆ.



# ಅಧ್ಯಾಯ - 43

|| ಅಥ ಶ್ರೀ ಸಾಯಿ ಸಚ್ಚರಿತೆ ||



## "ಸಾಯಿನಾಥರ ನಿರ್ಯಾಣ (ದೇಹತ್ಯಾಗ)"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಹಿಂದಿನ ಅಧ್ಯಾಯದಲ್ಲಿ ಸಂತ ಸಾಯಿ ಸಮರ್ಥರ ದೇಹತ್ಯಾಗದ ನಿರ್ವಹಣೆಯನ್ನು ನೀಡಲಾಗಿತ್ತು. ಈಗ ಅಪೂರ್ಣವಾಗಿ ಉಳಿದುದನ್ನು ಸಂಪೂರ್ಣವಾಗಿ ಇದರಲ್ಲಿ ತಿಳಿಸುತ್ತೇನೆ. ||1|| ಸಾಯಿಯ ಬಗೆಗಿನ ನನ್ನ ಅದ್ಭುತವಾದ ಪ್ರೇಮವನ್ನು ಆ ಸಮರ್ಥರು ಉಜ್ವಲಗೊಳಿಸಿದ್ದಾರೆ. ಹೇಮಾಡನು ಅವರ ಚರಣಗಳಲ್ಲಿ ಶರಣಾಗಿದ್ದಾನೆ ಮತ್ತು ಕಥೆಯ ಮುಖ್ಯಾಂಶಗಳನ್ನು ಹೇಳುವನು. ||2|| ಅವರೇ ಭಕ್ತಿಯ ಪ್ರೇಮವನ್ನು ಕೊಡುವವರು. ಅವರೇ ಚರಿತ್ರೆಯನ್ನು ಹೆಚ್ಚಿಸುವವರು. ಅವರಿಂದಾಗಿಯೇ ಭಜನೆಯ ಮೂಲಕ ಮಾಡುವ ಪೂಜೆಯು ಗೌರವಿಸಲ್ಪಟ್ಟಿದೆ. ಮತ್ತು ಈ ಸಂಸಾರದ ಬಗ್ಗೆ ತಿರಸ್ಕಾರವು ಉಂಟಾಗುತ್ತದೆ. ||3|| ಆದ್ದರಿಂದ, ನನ್ನ ಕಾಯಾ ವಾಚಾ ಮನಸ್ಸಿನಿಂದ ಅವರಿಗೆ ಸಹಸ್ರಾರು ಪ್ರಣಾಮಗಳನ್ನು ಮಾಡುತ್ತೇನೆ. ಅವರ ಮಹತ್ವವನ್ನು ಪೂರ್ಣವಾಗಿ ನನ್ನ ಧ್ಯಾನದಲ್ಲಿ ಚಿಂತಿಸಲು ಆಗುತ್ತಿಲ್ಲ. ಆದರೆ ಅದು ಕೇವಲ ಆತ್ಮ ಶರಣಾಗತಿಯಿಂದ ಮಾತ್ರ ಸಾಧ್ಯವಾಗುತ್ತದೆ. ||4|| ಪಾಪಗಳ ಮಲವು ಶೇಖರಣೆಯಾಗಿದ್ದು ಅದನ್ನು ಪೂರ್ಣವಾಗಿ ತೊಳೆದುಹಾಕಲು ಮತ್ತುಅಂತರಂಗವನ್ನು ನಿರ್ಮಲವಾಗಿ ಮಾಡಲು ಇತರ ಸಾಧನಗಳೆಲ್ಲವೂ ನಿಷ್ಫಲ. ||5|| ಹರಿಭಕ್ತರ ಯಶಸ್ಸನ್ನು ಸ್ಮರಿಸುವುದು ಮತ್ತು ಭಜನೆ ಅಥವಾ ನಾಮಸಂಕೀರ್ತನೆಗಳನ್ನು

ಹಾಡುವುದು ಚಿತ್ತಶುದ್ಧಿಗೆ ಸಾಧನ. ಆತ್ಮಶುದ್ಧಿಗಾಗಿ ಅದಕ್ಕಿಂತ ಬೇರೆ ಉಪಾಯವು ಮತ್ತೊಂದಿಲ್ಲ. ॥6॥ ಅದು ಹಾಗಿರಲಿ. ಹಿಂದಿನ ಅಧ್ಯಾಯದಲ್ಲಿ ಈಗಾಗಲೇ ವಿವರಿಸಿದ ಕಥೆಯನ್ನು ಪರ್ಯಾಲೋಚನೆ ಮಾಡೋಣ. ಅನಂತರ ಸಾಯಿಯ ನಿಜಾನಂದದ ಅವಸ್ಥೆಯನ್ನು ವ್ಯಾಖ್ಯಾನ ಮಾಡಲು ಮುಂದುವರೆಯೋಣ. ॥7॥ ಈ ಹಿಂದೆ ವಿವರವಾಗಿ ಇದನ್ನು ನಿರೂಪಿಸಲಾಗಿದೆ. ವಿಜಯದಶಮಿಯಂದು ಯಾವ ರೀತಿ ಈ ಪ್ರಯಾಣವು ಜರುಗಿತು ಮತ್ತು ಯಾವ ರೀತಿ ತಾತ್ಯಾಬಾನ ಹೆಸರನ್ನು ನಿಮಿತ್ತವಾಗಿ ಉಪಯೋಗಿಸಿ ಭವಿಷ್ಯವನ್ನು ನಿವೇದಿಸಲಾಗಿತ್ತೆಂಬುದನ್ನೂ ಹೇಳಿದೆ. ॥8॥ ಅನಂತರ, ದೇಹಾವಸಾನಕ್ಕೆ ಸ್ವಲ್ಪ ಮುಂಚೆ ಧರ್ಮದ ರೀತಿ–ನೀತಿಗಳನ್ನು ಗಮನದಲ್ಲಿಟ್ಟುಕೊಂಡು ಯಾವ ರೀತಿ ಲಕ್ಷ್ಮಿಗೆ ದಾನ ನೀಡಿದರು – ಇವೆಲ್ಲವನ್ನೂ ಸಮಗ್ರವಾಗಿ ನಿರೂಪಿಸಲಾಗಿದೆ. ॥9॥ ಈಗ ಈ ಅಧ್ಯಾಯದಲ್ಲಿ ಯಾವ ರೀತಿ ಸಾಯಿಯು ತಮ್ಮ ಹಿತಾರ್ಥಕ್ಕಾಗಿ ನಿಧನಕಾಲದಲ್ಲಿ ರಾಮಾಯಣವನ್ನು ಬ್ರಾಹ್ಮಣನ ಮುಖದಿಂದ ಆಲಿಸಿದರು. ॥10॥ ಮತ್ತು, ಸಮಾಧಿಸ್ಥಾನವು ಯಾವ ರೀತಿ ನಿಯೋಜಿಸಲ್ಪಟ್ಟಿತು ಮತ್ತು ಅನಿರೀಕ್ಷಿತವಾಗಿ ಇಟ್ಟಿಗೆಯು ಹೇಗೆ ಒಡೆಯಿತು ಅವುಗಳನ್ನು ಗಮನವಿಟ್ಟು ಕೇಳಿರಿ. ॥11॥ ಯಾವ ರೀತಿ ಅವರು ಒಮ್ಮೆ ತಮ್ಮ ಪ್ರಾಣವನ್ನು ಬ್ರಹ್ಮಾಂಡಕ್ಕೆ ಏರಿಸಿ (ಮೂರು ದಿನಗಳ ಕಾಲ) ಸಮಾಧಿಸ್ಥರಾಗಿದ್ದರು 'ಅದು ಹೇಗೆ ಸಮಾಧಿಯಾಗುತ್ತದೆ? ಅದು ನಿಜವಾಗಿಯೂ ದೇಹಾವಸಾನ'ವೆಂದು ಜನರೆಲ್ಲರೂ ನಿಶ್ಚಿತ ಮನದವರಾಗಿದ್ದರು! ॥12॥ ಉತ್ತರಕ್ರಿಯೆಗಳಿಗೂ ತಯಾರಿ ಮಾಡಲಾಗಿತ್ತು, ಆದರೆ ಅನಿರೀಕ್ಷಿತವಾಗಿ (ಮೂರುದಿನಗಳ ನಂತರ) ಬಾಬಾರವರು ಜ್ಞಾನ ಪಡೆದರು ಮತ್ತು ಜನರೆಲ್ಲರೂ ಮನಸ್ಸಿನಲ್ಲಿಯೇ ನಿಬ್ಬೆರಗಾದರು! ಅದೆಲ್ಲವೂ ಹೇಗೆ ನಡೆಯಿತೆಂಬುದನ್ನು ಕೇಳಿರಿ. ॥13॥ ಅದು ಹಾಗಿರಲಿ. ನಿರ್ಯಾಣದ ಕಥೆಯನ್ನು ಕೇಳಿ ಶ್ರೋತೃಗಳು ಬೇಸರಪಟ್ಟುಕೊಳ್ಳಬಹುದು. ಇಂತಹ ಕಥೆಯು ಯಾರಿಗೂ ರುಚಿಸುವುದಿಲ್ಲ. ॥14॥ ಆದರೆ ಸಾಧು ಸಂತರ ನಿರ್ಯಾಣದ ಈ ಚರಿತ್ರೆಯು ಶ್ರೋತೃಗಳನ್ನೂ ವಕ್ತಾರರನ್ನೂ ಪಾವನಗೊಳಿಸುತ್ತದೆ. ಅದರ ವಿಸ್ತಾರದ ಭಯದಿಂದ ಅದನ್ನು ಭಾಗಶಃ ನೀವು ಕೇಳಿ ತೃಪ್ತಿಪಡೆಯಿರಿ. ॥15॥ ದೇಹತ್ಯಾಗದಿಂದ ಅವರು ಅಗಮ್ಯ ಸ್ಥಿತಿಯನ್ನು ಪಡೆದರು. ಆದರೆ ಅವರಿಗೆ ಅದು ನಿಜಸುಖದ ಸ್ಥಿತಿ. ಬಾಬಾರವರು ಪುನರಾವೃತ್ತಿ ಇಲ್ಲದ ಅಕ್ಷಯ ಸ್ಥಿತಿಯನ್ನು ಪಡೆದರು. ॥16॥ ಅವರು ದೇಹಧಾರಣೆ ಮಾಡಿದ್ದಾಗ ವ್ಯಕ್ತ ಸ್ಥಿತಿಯಲ್ಲಿದ್ದರು. ದೇಹತ್ಯಾಗವಾದ ಮೇಲೆ ಅವ್ಯಕ್ತ ಸ್ಥಿತಿಯನ್ನು ಪಡೆದರು. ಅವರ ಅವತಾರವು ಒಂದು ಜಾಗದಲ್ಲಿದ್ದು ಅವರ ಜೀವಿತೋದ್ದೇಶ ಮುಗಿತು. ಆದರೆ ಸರ್ವವ್ಯಾಪಿಯಾಗಿದ್ದು ಸರ್ವಜ್ಞರಾಗಿಯೂ ಎಲ್ಲ ಜಾಗಗಳಲ್ಲಿಯೂ ವ್ಯಕ್ತರಾಗಿದ್ದರು. ॥17॥ ಅವರು ಒಂದೇ ಜಾಗಕ್ಕೆ ಬಂಧಿತರಾಗಿದ್ದ ಸ್ಥಿತಿಯಿಂದ ಬಿಡುಗಡೆ ಹೊಂದಿದ್ದರು. ಮತ್ತು ಸಾಯಿಯು ಸಕಲ ಜೀವಿಗಳಲ್ಲೂ, ಸರ್ವವ್ಯಾಪಿಯಾಗಿದ್ದರು. ಅವರು ಪೂರ್ಣ ರೂಪದಲ್ಲೇ ಸನಾತನವಾಗಿದ್ದರು ಮತ್ತು ಸ್ವಸ್ವರೂಪದಲ್ಲಿ ಲೀನವಾಗಿರುತ್ತಿದ್ದರು. ॥18॥ ಸಾಯಿಯು ಸಕಲರ ಜೀವನಕ್ಕೆ ಕಾರಣರಾಗಿದ್ದರು. ಸಾಯಿಯಾಗಿ ಸಕಲ ಜೀವಿಗಳ ಪ್ರಾಣವಾಗಿದ್ದರು. ಸಾಯಿಯೇ

ಇಲ್ಲದಿದ್ದಲ್ಲಿ ಎಲ್ಲಾ ಗ್ರಾಮವಾಸಿ ಜನರು ಹೀನರಾಗಿ ದೀನರಾಗಿ ಇರುತ್ತಿದ್ದರು. ॥19॥ ಅವರ ದೇಹವು ನಿಶ್ಚೇಷ್ಟಿತವಾಗಿ ಬಿದ್ದಾಗ ಅಲ್ಲಿ ಒಂದು ದುಃಖದ ಪ್ರಲಾಪವೇ ಹುಟ್ಟಿತು. ಆಬಾಲವೃದ್ಧರಾದಿಯಾಗಿ ಎಲ್ಲರೂ ಚಿಂತಾಕ್ರಾಂತರಾಗಿ ತಾವೇ ಜೀವ ಕಳೆದುಕೊಂಡಂತವರಾಗಿದ್ದರು॥20॥ ಜ್ವರ ಮೊದಲಾದ ಲೌಕಿಕ ಬಾಧೆಗಳು ಪ್ರಪಂಚಕ್ಕೆ ಬದ್ಧನಾದ ಸಾಮಾನ್ಯ ಮಾನವನನ್ನು ಬಾಧಿಸುತ್ತವೆ. ಆದರೆ ಅವು ಎಂದಿಗೂ ಯೋಗಿಗಳನ್ನು ಅನವಶ್ಯಕವಾಗಿ ಅವಮರ್ಯಾದೆ ಮಾಡುವುದಿಲ್ಲ. ॥21॥ ತಮ್ಮ ತೇಜಸ್ಸನ್ನು ತಾವೇ ಪ್ರಜ್ವಲಿಸಿ ಸಂತರು ದೇಹವನ್ನು ದಹಿಸುತ್ತಾರೆ. ಅದನ್ನು ಬಾಬಾರವರು ತಮ್ಮ ಸ್ವಂತ ಕೈಗಳಿಂದಲೇ ತಮ್ಮ ಹಿತಕ್ಕಾಗಿಯೇ ಮಾಡುತ್ತಾರೆ. ॥22॥ ಯಾವುದು ಎಂದಿಗೂ ಸಂಭವಿಸಬಾರದೋ ಅದೇ ನಡೆದಿತ್ತು! ಮಹಾರಾಜ್‌ರು ಸಮರಸದಲ್ಲಿ ಸಾಯುಜ್ಯ ಹೊಂದಿದರು. ಜನರು ಅತ್ಯಂತವಾಗಿ ಜೀವ ಕಳೆದುಕೊಂಡಂತೆ, ಬಿಕ್ಕುತ್ತ, ಗದ್ಗದಿಸುತ್ತಿದ್ದರು. ॥23॥ "ನಾನು ಹೋಗದಿದ್ದರೆ ಚೆನ್ನಾಗಿರುತ್ತಿತ್ತು, ನಾನು ಅವರನ್ನು ಅವರ ಅಂತ್ಯಸಮಯದಲ್ಲಿ ಭೇಟಿಯಾಗುವುದು ತಪ್ಪಿ ಹೋಯಿತು. ಯಾವುದಾದರೂ ರೀತಿಯಲ್ಲಿ ಉಪಯುಕ್ತನೆಂದು ತೋರಿಸಿಕೊಡಬಹುದಿತ್ತು. ಸರಿಯಾದ ಸಮಯದಲ್ಲಿ ನನ್ನ ಬುದ್ಧಿಯು ಕೈಕೊಟ್ಟಿತು." ॥24॥ ಈ ರೀತಿಯಲ್ಲಿ, ನಾನಾ ರೀತಿಯ ವಿಚಾರಗಳಿಂದ ಎಲ್ಲರೂ ಮನಸ್ಸಿನಲ್ಲಿ ಬೇಸರದಿಂದ ಖಿನ್ನರಾದರು. ಬಾಬಾರವರ ಅಂತಃಕರಣದಲ್ಲಿ ಏನಿತ್ತೆಂಬುದು ಯಾರಿಗೆ ಗೊತ್ತು? ॥25॥ ಅಲ್ಲಿ ಸ್ವಲ್ಪವೂ ಮರಣಯಾತನೆಯಿರಲಿಲ್ಲ. ಶ್ವಾಸದ ತೊಂದರೆ ಇರಲಿಲ್ಲ. ಕೆಮ್ಮು ಇರಲಿಲ್ಲ. ಅಥವಾ ಮೈನಡುಗುವುದಾಗಲೀ, ಯಾವುದೇ ರೀತಿಯ ಒದ್ದಾಟವಾಗಲಿ ಇರಲಿಲ್ಲ. ಅವರು ಸುಲಭವಾಗಿ ಶಾಂತಿಯಿಂದ, ಉಲ್ಲಾಸದಿಂದ ಪ್ರಯಾಣ ಬೆಳೆಸಿದ್ದರು. ॥26॥ ಈಗ ಸಾಯಿಯ ದರ್ಶನ ಹೇಗೆ ಆಗುತ್ತದೆ? ಅಥವಾ ಸಾಯಿಯ ಚರಣಗಳನ್ನು ಒತ್ತುವುದು ಅಥವಾ ತೀರ್ಥಸೇವನೆ ಹೇಗಾಗುತ್ತದೆ? ॥27॥ ಅಂತ್ಯದ ಸಮಯ ಬಂದಿತೆಂದು ತಿಳಿದು, ಆ ಪ್ರೀತಿಯ ಭಕ್ತರನ್ನು ಅವರು ಅಷ್ಟು ಹತ್ತಿರವಾಗಿದ್ದರೂ ಅವರನ್ನು ಏಕೆ ಕಳುಹಿಸಿಬಿಟ್ಟರು? ಅವರು ಈ ರೀತಿಯ ತಳಮಳವನ್ನು ಅನುಭವಿಸುವಂತೆ ಏಕೆ ಮಾಡಿದರು? ॥28॥ ಹತ್ತಿರವಿದ್ದ ಎಲ್ಲ ಹತ್ತಿರದ ಮತ್ತು ಪ್ರೀತಿಯ ಭಕ್ತರ ಮಂಡಲಿಯನ್ನೇ ನೋಡಿ, ಅಂತ್ಯಕಾಲದಲ್ಲಿ ಬಾಬಾರವರ ಪ್ರೀತಿಯು ಅವರ ಮೇಲೆ ಉಕ್ಕಿಬರಲಿಲ್ಲವೇ? ॥29॥ ಪ್ರೇಮ ಬಂಧನವು ಸಾಯುಜ್ಯ ಪಡೆಯಲು ಅಡ್ಡಿಯುಂಟುಮಾಡುತ್ತದೆ. ಅದನ್ನು ಸರಿಯಾದ ಸಮಯದಲ್ಲಿ ಛೇದಿಸದಿದ್ದರೆ ಮನಸ್ಸು ವಾಸನಾರಹಿತವಾಗಿ ಹೇಗೆ ಆಗುತ್ತದೆ? ॥30॥ ಇದು ಆಗದೇ ಇದ್ದಾಗ ಮೃತ್ಯುವು ಬಂದಲ್ಲಿ ಜೀವವು ಈ ಆಶೆಗಳ ಮತ್ತು ಬಂಧನಗಳ ಸಮೇತವಾಗಿ ಹೊರಡುತ್ತದೆ ಮತ್ತು ಆ ಕೂಡಲೇ ಮತ್ತೊಂದು ಸಂಸಾರ ಪ್ರಾರಂಭವಾಗುತ್ತದೆ. ಆಗ ಅಲ್ಲಿ ಈ ವಾಸನೆಗಳ ಕಟ್ಟೆಯೇ ಇರುತ್ತದೆ. ॥31॥ ಇದನ್ನು ತಪ್ಪಿಸಲು ಸಾಧು ಸಂತರು ಯಾವಾಗಲೂ ಎಚ್ಚರದಿಂದಿರುತ್ತಾರೆ. ಬಾಬಾರವರ ಮನಸ್ಸಿನ ನಿರ್ಧಾರವೂ ಸಹ ಲೋಕವ್ಯವಹಾರವನ್ನು ರಕ್ಷಿಸುವುದೇ ಆಗಿತ್ತು. ॥32॥ ಅಂತ್ಯಕಾಲದಲ್ಲಿ ಪ್ರತಿಯೊಬ್ಬರೂ ಇದರ ಬಗ್ಗೆ ಎಚ್ಚರದಿಂದಿರಬೇಕು. ಅಲ್ಲಿ ಶಾಂತಿ ಮತ್ತು

ಏಕಾಂತತೆಯು ಇರಬೇಕು. ಧ್ಯೇಯಮೂರ್ತಿಯ ಸ್ವರೂಪ ಚಿತ್ತದಲ್ಲಿ ಯಾವುದೇ ವಿಕ್ಷೇಪವಿಲ್ಲದೆ ಸ್ಥಿರವಾಗಿರಬೇಕು. ॥33॥ "ಅಂತ್ಯಕಾಲದಲ್ಲಿ ಯಾವ ಯೋಚನೆಗಳು ಇರುತ್ತವೆಯೋ ಅದೇ ರೀತಿ ಜನ್ಮತಾಳುತ್ತಾನೆ" – ಇದು ಎಲ್ಲರಿಗೂ ತಿಳಿದಿರುವ ಪ್ರಸಿದ್ಧ ನುಡಿಯು. ಭಗವದ್ಭಕ್ತರಾದ ಸಂತರು ಲೋಕಸಂಗ್ರಹ ರೀತಿಯಂತೆ ಇದನ್ನು ತಾವೇ ಆಚರಿಸುತ್ತಾರೆ. ॥34॥ ಬಾಬಾರವರ ದೇಹತ್ಯಾಗಕ್ಕೆ ಕೇವಲ ಹದಿನಾಲ್ಕು ದಿನಗಳು ಇದ್ದಾಗ, ಬಾಬಾರವರು ರಾಮ ವಿಜಯವನ್ನು ಓದಲು, ವಝೆ (ಬಾಬಾರವರ ಭಕ್ತ)ಯನ್ನು ನಿಯೋಜಿಸಿದ್ದರು. ॥35॥ ವಝೆಯು ಮಸೀದಿಯಲ್ಲಿ ಕುಳಿತು ಆ ಪವಿತ್ರ ಗ್ರಂಥದ ಪಾರಾಯಣ ಮಾಡಲು ಪ್ರಾರಂಭಿಸಿದನು. ಬಾಬಾರವರು ಶ್ರವಣ ಮಾಡಲು ಪ್ರಾರಂಭಿಸಿದರು. ಈ ರೀತಿ ಎಂಟು ದಿನಗಳು ಕಳೆದವು. ॥36॥ ಅನಂತರ ಬಾಬಾರವರು ಆ ಗ್ರಂಥದ ಪಾರಾಯಣವು ನಿಲ್ಲದೆ ತಡೆಯಿಲ್ಲದೆ ನಡೆಯಬೇಕೆಂದು ಆಜ್ಞಾಪಿಸಿದರು. ಆದ್ದರಿಂದ ವಝೆಯು ಅದೇ ರೀತಿ ಮೂರು ದಿನ ಹಗಲು ಮತ್ತು ರಾತ್ರಿಯಲ್ಲಿ ಓದಿದನು. ॥37॥ ಅವನು ಪೂರ್ತಿಯಾಗಿ ಹನ್ನೊಂದು ದಿನಗಳು ಕುಳಿತುಕೊಂಡಿದ್ದನು. ಅನಂತರ ಅವನು ಆಯಾಸಗೊಂಡು ಶಕ್ತಿಹೀನನಾದನು. ಅವನು ಓದಿ ಓದಿ ದಣಿದು ಹೋದನು. ಈ ರೀತಿ ಇನ್ನೂ ಮೂರು ದಿನಗಳು ಕಳೆದು ಹೋದವು. ॥38॥ ಅದಕ್ಕೆ ಬಾಬಾರವರು ಅನಂತರ ಏನು ಮಾಡಿದರು? ಅವರು ಓದುವುದನ್ನು ನಿಲ್ಲಿಸಿದರು. ಅವರು ವಝೆಯನ್ನು ಅಲ್ಲಿಂದ ಕಳುಹಿಸಿಬಿಟ್ಟು ತಾವು ಸುಮ್ಮನೆ ಇದ್ದುಬಿಟ್ಟರು. ॥39॥ ಶ್ರೋತೃಗಳು ವಝೆಯನ್ನು ಕಳುಹಿಸಿಬಿಡಲು ಕಾರಣ ಕೇಳಬಹುದು. ಆದ್ದರಿಂದ ಕೇಳಿ. ನನ್ನ ಯಥಾಶಕ್ತಿ ಏನನ್ನು ವಿವರಿಸುವೆನೋ ಅದನ್ನು ಕೇಳಿರಿ. ಅದನ್ನು ಏಕಾಗ್ರತೆಯಿಂದ ಆಲಿಸಿರಿ. ॥40॥ ದೇಹಾವಸಾನದ ಸಮಯ ಹತ್ತಿರವಾದಾಗ, ಸಾಧು ಸಂತ ಮತ್ತು ಸಜ್ಜನರ ರೂಢಿ ಏನೆಂದರೆ ಪುರಾಣ ಗ್ರಂಥಗಳನ್ನು ಸಾವಧಾನದಿಂದ ಆಲಿಸುವುದು. ॥41॥ ಶುಕಾಚಾರ್ಯರು[1] ರಾಜಾ ಪರೀಕ್ಷಿತ[2]ನಿಗೆ ಏಳು ದಿವಸಗಳಲ್ಲಿ ಮಹಾಭಾಗವತವನ್ನು ಕಥನ ಮಾಡಲು ರಾಜನು ಅದನ್ನು ಆಲಿಸಿ ಸುಖವಾಗಿ ದೇಹಾಂತವನ್ನು ಹೊಂದಿದನು. ॥42॥ ಈ ರೀತಿ ಭಗವಂತನ ಲೀಲೆಗಳನ್ನು ಶ್ರವಣ ಮಾಡುತ್ತ ಕಣ್ಣುಗಳ ಮುಂದೆ ಭಗವಂತನ ಮೂರ್ತಿಯನ್ನು ಇರಿಸಿಕೊಂಡು ಅಂತ್ಯಕಾಲದಲ್ಲಿ ಜೀವ ತ್ಯಜಿಸುವವನು ತನ್ನ ಗುರಿಯಾದ ಸ್ವಸ್ವರೂಪಾನಂದ ಸ್ಥಿತಿಯನ್ನು ತಲುಪುತ್ತಾನೆ. ॥43॥ ಇದು ಸಾಮಾನ್ಯ ಲೋಕ ಪ್ರವೃತ್ತಿಯ ಸ್ಥಿತಿ. ಸಂತರು ನಿರಂತರವೂ ತಾವೇ ಇದನ್ನು ಆಚರಿಸುತ್ತಾರೆ. ಲೋಕಸಂಗ್ರಹ ಮಾರ್ಗವನ್ನು ಎಂದಿಗೂ ಬಿಡುವುದಿಲ್ಲ. ಏಕೆಂದರೆ ಅವುಗಳ ರಕ್ಷಣೆಗೆಂದೇ ಅವರು ಅವತರಿಸುತ್ತಾರೆ. ॥44॥ ಯಾರು ಈ ಪಂಚಭೂತಗಳಿಂದ ಉಂಟಾದ ಭೌತಿಕ ಶರೀರವನ್ನು ಅನಾಸಕ್ತಿಯಿಂದ ನೋಡುತ್ತಾರೋ ಅವರಿಗೆ ದೇಹಾವಸಾನದ ಸಮಯದಲ್ಲಿ ದುಃಖವಾಗಲಿ, ಆವೇಗವಾಗಲಿ ಇರುವುದಿಲ್ಲ. ಇದು ಬಹಳ ಸ್ವಾಭಾವಿಕವಾದುದು. ॥45॥ ಅದು ಹಾಗಿರಲಿ ಶ್ರೋತೃಗಳು ಶಂಕಿಸಬಹುದು. ಬ್ರಹ್ಮಸುಖದಲ್ಲಿಯೇ ಲೀನವಾಗಿರುವವರನ್ನು ಮಾಯಾಮೋಹಗಳಿಂದ ಪೀಡಿತರಾಗಿರುವವರು ಅವರ ಬಗ್ಗೆ ಹೇಗೆ ಯೋಚಿಸಬಲ್ಲರು? ॥46॥

ಯಾರು ಆತ್ಮಸ್ವರೂಪದಲ್ಲಿಯೇ ಸ್ಥಿರವಾಗಿದ್ದು, ನಿರಂತರ "ಅಲ್ಲಾ ಮಾಲಿಕ್" ಎಂದು ಅನುಸಂಧಾನ ಮಾಡಿಕೊಂಡಿದ್ದರೋ, ಅವರು ಭಕ್ತರ ಸಾನ್ನಿಧ್ಯದಿಂದ ಹೇಗೆ ಪ್ರತಿಬಂಧಿತರಾಗಿರುತ್ತಾರೆ? ॥47॥ ಅವರು ಪ್ರಪಂಚವನ್ನು ದಾಟಿಹೋಗಿದ್ದಾರೆ. ಅವರ ಪರತತ್ವವು ಉಳಿಯಿತು. ದ್ವೈತಭಾವವು ಅವರಿಗೆ ಕಿಂಚಿತ್ತೂ ಇರಲಿಲ್ಲ. ಅವರು ಸ್ವಯಂ ಸ್ವಸ್ವರೂಪಾನುಭಾವದಲ್ಲಿ ನೆಲೆಯಾಗಿದ್ದರು. ॥48॥ ನಾನು ಹೇಳುತ್ತಿರುವುದು ಅಕ್ಷರಶಃ ಸತ್ಯ. ಅದರಲ್ಲಿ ಅಣು ಮಾತ್ರವೂ ಅಸತ್ಯವಿಲ್ಲ. ಆದರೆ ಲೋಕಸಂಗ್ರಹಾರ್ಥವಾಗಿ ಅವತಾರವೆತ್ತಿದ ಸಂತ ಜನರು ತಾವು ತಮ್ಮ ಉದ್ದೇಶಿತ ಕಾರ್ಯವನ್ನು ಮುಗಿಸಿ ಕೃತಕೃತ್ಯರಾಗುತ್ತಾರೆ. ॥49॥ ಸಂತರು ಆರು ಭಾವ ವಿಕಾರಗಳಿಂದಲೂ ಮುಕ್ತರಾಗಿರುತ್ತಾರೆ. ಅವರು ನಿರಂತರ ಚರ್ಮಚಕ್ಷುಗಳಿಗೆ ಅಪ್ರಕಟಿತ ಸ್ಥಿತಿಯಲ್ಲಿರುತ್ತಾರೆ. ಮತ್ತು ಭಕ್ತರ ಉದ್ಧಾರಕ್ಕಾಗಿ ಮಾತ್ರ ಅವತರಿಸುತ್ತಾರೆ. ಅಂತಹವರಿಗೆ ಮರಣವೆಲ್ಲಿ? ॥50॥ ಇಂದ್ರಿಯಗಳೊಡನೆ ಆಗುವ ದೇಹದ ಸಂಯೋಗವೇ ಜನನ. ಅವುಗಳ ವಿಯೋಗವೇ ಮರಣ. ಈ ಪಾಶದ ಬಂಧನ ಮತ್ತು ಬಿಡುಗಡೆಯನ್ನೇ ಜನನ ಮತ್ತು ಮರಣಗಳೆಂದು ಕರೆಯುತ್ತಾರೆ. ॥51॥ ಜನನವು ಮರಣದ ಜೊತೆ ಜಿಗುಟುತನದಿಂದ ಹಿಡಿದುಕೊಂಡಿರುತ್ತದೆ. ಅವೆರಡೂ ಅಭಿನ್ನವಾಗಿರುತ್ತವೆ. ಮರಣವು ಜೀವನದ ಸಹಜ ಲಕ್ಷಣ ಮತ್ತು ಜೀವಿಸುವುದು ಜೀವನದ ವಿಕೃತಿರೂಪ. ॥52॥ ಯಾರು ಮೃತ್ಯುವನ್ನೂ ಮೀರಿ ಉಳಿದಿದ್ದಾರೋ ಮತ್ತು ಮೃತ್ಯುವನ್ನು ಹಿಡಿತದಲ್ಲಿಟ್ಟುಕೊಂಡಿರುವರೋ, ಅವರು ತಮ್ಮ ಜೀವನದ ಬಗ್ಗೆ ಏಕೆ ಚಿಂತಿಸುತ್ತಾರೆ? ಅದೂ ಸಹ ಅವರು ತಮ್ಮ ಇಚ್ಛೆಯಿಂದಲೇ ಜನ್ಮತಾಳಿರುತ್ತಾರೆ! ॥53॥ ಕೇವಲ ಭಕ್ತರ ಕಲ್ಯಾಣವೆಂಬ ಒಂದೇ ಒಂದು ಉದ್ದೇಶದಿಂದ ನಾನಾ ಪ್ರಕಾರದ ಅವತಾರಗಳನ್ನು ಧರಿಸುವವರು ಜನ್ಮ ಮತ್ತು ಮರಣಗಳಿಂದ ಸ್ಪರ್ಶಿಸಲ್ಪಡುವುದಿಲ್ಲ. ಅವೆರಡೂ ಮಿಥ್ಯಾಕಲ್ಪನೆಗಳು. ॥54॥ ಯಾರು ದೇಹವನ್ನು ಪಡೆಯುವ ಮೊದಲೇ ಭಸ್ಮೀಭೂತವನ್ನಾಗಿ ಮಾಡಿರುವರೋ, ಅವರಿಗೆ ಮರಣಭಯವೆಲ್ಲಿಯದು? ಮರಣವೇ ಅವರ ಮುಂದೆ ಭಸ್ಮವಾಗಿರುತ್ತದೆ. ॥55॥ ಮರಣವು ದೇಹದಸಹಜ ಪ್ರಕೃತಿ. ಮರಣವೇ ದೇಹದ ಸುಖಸ್ಥಿತಿಯು. ಜೀವನವು ದೇಹದ ವಿಕೃತಿಯು. ವಿಚಾರವಂತರನ್ನು ವಿಚಾರಿಸಬಹುದು. ॥56॥ ಸಾಯಿಸಮರ್ಥರು ಆನಂದಘನರು. ಅವರ ದೇಹದ ಜನನದ ಬಗ್ಗೆಯೇ ಅವರಿಗೆ ತಿಳಿದಿಲ್ಲದಿರುವಾಗ ಅವರ ದೇಹ ಮರಣವನ್ನಾದರೂ ಹೇಗೆ ತಾನೇ ಅನುಭವಿಸುತ್ತದೆ? ॥57॥ ಸಾಯಿಯು ಪೂರ್ಣ ಪರಬ್ರಹ್ಮಸ್ವರೂಪರಾಗಿರುವಾಗ ಅವರಿಗೆ ಜನ್ಮ ಮತ್ತು ಮರಣಗಳು ಹೇಗೆ ಉಂಟಾಗುತ್ತವೆ? ಬ್ರಹ್ಮವು ಸತ್ಯ ಮತ್ತು ಜಗತ್ತು ಮಿಥ್ಯ ಎಂದು ತಿಳಿದಿರುವವರಿಗೆ ದೇಹದ ಭಾವ ಎಲ್ಲಿರುತ್ತದೆ? ॥58॥ ಪ್ರಾಣಧಾರಣೆ ಅಥವಾ ಪ್ರಾಣ ವಿಸರ್ಜನೆ, ಅದೃಶ್ಯ ರೂಪದಲ್ಲಿ ಪರಿಭ್ರಮಣಗಳನ್ನು ಯೋಗ ಶಕ್ತಿಯಿಂದ ಸ್ವಚ್ಛಂದವಾಗಿ ಭಕ್ತರ ಉದ್ಧಾರದ ನಿಮಿತ್ತವಾಗಿ ಅವರು ಮಾಡಬಲ್ಲರು. ॥59॥ "ಸೂರ್ಯನು ಗ್ರಹಣದಿಂದಾಗಿ ಸಂಪೂರ್ಣವಾಗಿ ಮರೆಯಾಗುತ್ತಾನೆ ಎಂದು ಜನರು ಹೇಳುತ್ತಾರೆ. ಆದರೆ ಅದು ಕೇವಲ ಇಂದ್ರಿಯಗಳ ಗ್ರಹಣ ಶಕ್ತಿಯ ದೋಷವಾಗಿದೆ. ಸಂತರ ಮರಣವೂ ಅದೇ

ರೀತಿ ಇರುತ್ತದೆ. ॥60॥ ದೇಹವು ಕೇವಲ ಒಂದು ಉಪಾಧಿಯು. ಅದು ನೋವು ಅಥವಾ ದುಃಖವನ್ನು ಅನುಭವಿಸಲು ಹೇಗೆ ಸಾಧ್ಯ? ಅದೇನಾದರೂ ಇದ್ದರೆ, ಅವು ಕೇವಲ ಪ್ರಾರಬ್ಧದಿಂದಾಗಿಯೇ ಇರುತ್ತದೆ. ಆದರೆ ಅವರು ಅವುಗಳ ಬಗ್ಗೆ ಚಿಂತಿಸುವುದಿಲ್ಲ. ॥61॥ ಯಾರು ಭಕ್ತರ ಪೂರ್ವಾರ್ಜಿತ ಕಾರ್ಯದಿಂದಾಗಿ ಅವತರಿಸಿದ್ದಾರೋ ಮತ್ತು ಅವ್ಯಕ್ತವಾಗಿ ಭಕ್ತಿಯನ್ನು ಧರಿಸಿಕೊಂಡಿದ್ದಾರೋ ಅವರು ಭಕ್ತರ ಯೋಗಕ್ಷೇಮಕ್ಕಾಗಿ ಪ್ರಕಟಹೊಂದಿದ್ದಾರೆ. ಅಂತಹ ಸಮಯದಲ್ಲಿ ಅವರು ಶಿರಡಿಯಲ್ಲಿ ಕಾಣಿಸಿಕೊಂಡರು. ॥62॥ ಈಗ ಭಕ್ತರ ಕ್ಷೇಮವೇ ಉದ್ದೇಶವಾಗಿದ್ದ ಕಾರ್ಯವು ಮುಗಿಯಿತೆಂದು ಹೇಳಿದರು ಮತ್ತು ಅದರಿಂದಾಗಿ ಅವರು ದೇಹವನ್ನು ತ್ಯಜಿಸಿದರು. ಈ ಮಾತುಗಳಲ್ಲಿ ಯಾರು ವಿಶ್ವಾಸವಿಡುತ್ತಾರೆ? ಒಬ್ಬ ಯೋಗಿಗೆ ಜೀವಿತ ಮತ್ತು ಮೃತ್ಯುವಿನ ಅವಸ್ಥೆ ಎಲ್ಲಿಯದು? ॥63॥ ಸಾಯಿ ಸಮರ್ಥರು ತಮ್ಮ ದೇಹವನ್ನು, ಇಚ್ಛಾಮರಣಿಯಾಗಿ ದೇಹವನ್ನು ಯೋಗಾಗ್ನಿಯಲ್ಲಿ ಸುಟ್ಟು ಹಾಕಿದ್ದಾರೆ! ಅವರು ಅವ್ಯಕ್ತದಲ್ಲಿ ಲೀನವಾಗಿ ಭಕ್ತರ ಹೃದಯಗಳಲ್ಲಿ ಶಾಶ್ವತವಾಗಿ ನೆಲಸಿದ್ದಾರೆ. ॥64॥ ಯಾರ ನಾಮವನ್ನು ಸ್ಮರಿಸಿದ ಮಾತ್ರಕ್ಕೆ ಜನನ ಮರಣದ ಚಕ್ರವು ಮುರಿಯುತ್ತದೆಯೋ, ಅಂತಹವರು ಮರಣ ಹೊಂದಲು ಹೇಗೆ ಸಾಧ್ಯ? ಅವರು ತಮ್ಮ ಪೂರ್ವದ ಅವ್ಯಕ್ತಸ್ಥಿತಿಯನ್ನು ಪಡೆದಿದ್ದಾರೆ ಅಷ್ಟೆ! ॥65॥ ಜಡಸ್ಥಿತಿಯನ್ನು ಉಲ್ಲಂಘಿಸಿ ಬಾಬಾರವರು ಅವ್ಯಕ್ತದಲ್ಲಿ ಒಂದಾಗಿದ್ದಾರೆಲ್ಲಿ ಅವರು ಸ್ವಸ್ವರೂಪಸ್ಥಿತಿಯ ಬ್ರಹ್ಮದ ಆನಂದವನ್ನು ಅನುಭವಿಸುತ್ತಿದ್ದಾರೆ. ಆದರೆ ಅವರು ಭಕ್ತರನ್ನು ಸದಾ ಜಾಗ್ರತಾವಸ್ಥೆಯಲ್ಲಿಟ್ಟಿರುತ್ತಾರೆ॥66॥ ಅವರು ಚೈತನ್ಯ ಸ್ವರೂಪದೊಡನೆ ಡವಗೊಟ್ಟುತ್ತಿರುವಾಗ ಮತ್ತು ಭಕ್ತರ ಹೃದಯದಲ್ಲಿ ಶಾಶ್ವತವಾಗಿ ಅಚ್ಚೊತ್ತಿರುವಾಗ, ಅವರ ದೇಹಾಂತವಾಯಿತೆಂದು ಹೇಗೆ ಹೇಳುವುದು. ಇಂತಹ ಮಾತುಗಳು ಒಪ್ಪುವಂತಹುದಲ್ಲ. ॥67॥ ಆದ್ದರಿಂದ ಈ ಸಾಯಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅವರು ವಿಶ್ವ ಪ್ರಳಯದವರೆಗೂ ಇರುತ್ತಾರೆ. ಅವರಿಗೆ ಜನನ ಮರಣಗಳಾಗಲಿ ಅಪಾಯವಾಗಲಿ ಎಂದಿಗೂ ಆಗುವುದಿಲ್ಲ. ॥68॥ ಜ್ಞಾನೋಬಾ ಮಹಾರಾಜರು ಹೊರಟು ಹೋಗಿರುವರೇನು? ಅವರು ಏಕನಾಥ ಮಹಾರಾಜರಿಗೆ ಮುನ್ನೂರು ವರ್ಷಗಳ ನಂತರ ದರ್ಶನ ನೀಡಿ ಜಗತ್ತಿಗೇ ಉಪಕಾರಮಾಡಿದ್ದಾರೆ. ॥69॥ ಯಾವ ರೀತಿ ಕೃಪಾವಂತ ಏಕನಾಥರು ಪೈಠಣದ ಬೆಳಕಾದರೋ, ಅದೇ ರೀತಿ ತುಕಾರಾಮ ಮಹಾರಾಜರು ದೇಹೂನಲ್ಲಿ, ಆಳಂದಿಯಲ್ಲಿ ನರಸಿಂಹಸರಸ್ವತಿಯವರು, ॥70॥ ಸಮರ್ಥ ರಾಮದಾಸರು ಪರಳಿಯಲ್ಲಿ, ಅಕ್ಕಲಕೋಟ್ಕರ್ ಮಹಾರಾಜ್‌ರವರು ಅಕ್ಕಲಕೋಟೆಯಲ್ಲಿ, ಪ್ರಭುಮಾಣಿಕರವರು ಹುಮನಾಬಾದ್‌ನಲ್ಲಿ ಮತ್ತು ಅದೇ ರೀತಿಯಲ್ಲಿ ಸಾಯಿಯವರು ಶಿರಡಿಯಲ್ಲಿ ಬೆಳಕಾದರು. ॥71॥ ಇಂದಿಗೂ "ಮನಸ್ಸಿನಲ್ಲಿ ಯಾವ ಭಾವ ಇರುವುದೋ, ಅದೇ ರೀತಿಯ ಅನುಭವವನ್ನು ಪಡೆಯುತ್ತಾರೆ." ಈ ನಾಣ್ಣುಡಿಯ ಶಕ್ತಿಯು ಅವರಿಗೆ ಅನ್ವಯಿಸುವಾಗ, ಅಂತಹವರಿಗೆ ಮರಣಭಾವ ಹೇಗಿರುತ್ತದೆ? ॥72॥ ಯಾರು ಭಕ್ತರ ಕಾರಣಗಳನ್ನು ಗ್ರಹಿಸುತ್ತಾರೋ, ಅವರು ತಮ್ಮ ದೇಹವನ್ನು ಶಿರಡಿಯಲ್ಲಿ ತ್ಯಜಿಸಿದ್ದಾರೆ. ಅವರು ಚರಾಚರ ವಸ್ತುಗಳಲ್ಲಿಯೂ

ಸರ್ವವ್ಯಾಪಿಯಾಗಿದ್ದಾರೆ. ಅವರು ಮತ್ತೆ ಲೀಲಾವತಾರವನ್ನು ಪಡೆಯಲು ಸಮರ್ಥರಾಗಿದ್ದಾರೆ. ॥73॥ "ಈಗ ಶಿರಡಿಯಲ್ಲಿ ಸಮರ್ಥರು ಬ್ರಹ್ಮೀಭೂತರಾಗಿರುವಾಗ ಮತ್ತೆ ಏನು ಉಳಿದಿದೆ?" ಈ ರೀತಿಯ ಯಾವುದೇ ಶಂಕೆಯನ್ನಿಟ್ಟುಕೊಳ್ಳಬೇಡಿ. ಏಕೆಂದರೆ ಶ್ರೀಸಾಯಿಯು ಮರಣಾತೀತರಾಗಿದ್ದಾರೆ. ॥74॥ ಸಂತರು ಗರ್ಭದಿಂದ ಹುಟ್ಟುವವರಲ್ಲ. ಅವರು ಪರೋಪಕಾರಾರ್ಥವಾಗಿ ಪ್ರಕಟವಾಗುತ್ತಾರೆ. ಅವರು ಬ್ರಹ್ಮಸ್ವರೂಪದ ಮೂರ್ತಿವಂತರು. ಕೇವಲ ಭಾಗ್ಯವಂತರು ಮಾತ್ರ ಈ ರೀತಿ ಅವತರಿಸುತ್ತಾರೆ. ॥75॥ ಯಾರು ಅವತಾರಿಗಳೋ ಅವರು ಎಂದಿಗೂ ಜನ್ಮತಾಳಿದವರಲ್ಲ ಮತ್ತು ಅವರೆಂದಿಗೂ ಮರಣ ಹೊಂದುವುದಿಲ್ಲ. ಅವರು ತಮ್ಮ ಕಾರ್ಯವು ಮುಗಿದ ಕೂಡಲೇ ಬ್ರಹ್ಮಸ್ವರೂಪದಲ್ಲಿ ಐಕ್ಯವಾಗುತ್ತಾರೆ. ಮತ್ತು ಅವ್ಯಕ್ತದೊಡನೆ ಒಂದಾಗುತ್ತಾರೆ. ॥76॥ ಒಂದು ದೇಹವು ಮೂರುವರೆ ಗೇಣುದ್ದದಷ್ಟು, ಬಾಬಾರವರು ಅದರಲ್ಲಿ ಸಮೂಹಿತರಾಗಿದ್ದರೆಂದು ಹೇಳಬಹುದೇನು? ಅವರೊಂದು ವಿಶಿಷ್ಟವಾದ ವರ್ಣ, ಸ್ವರೂಪಗಳಿಂದ ಯುಕ್ತರಾದವರೆಂದು ಹೇಳುವುದು ಯುಕ್ತವಲ್ಲ. ॥77॥ ಅಂತಹ ವ್ಯಕ್ತಿಗಳಿಗೆ ಜನರು ಹೋಗುವುದು ಮತ್ತು ಬರುವುದು ಇವುಗಳಿಂದಾಗಿ ಅಣಿಮ, ಗರಿಮ ಇತ್ಯಾದಿ ಅಷ್ಟಸಿದ್ಧಿಗಳು ಹೆಚ್ಚುವುದೂ ಇಲ್ಲ, ಕಡಿಮೆಯೂ ಆಗುವುದಿಲ್ಲ. ಇವೆಲ್ಲವೂ ಅವರದೇ ಆದ ಸ್ವಯಂ ಅಖಂಡ ಐಶ್ವರ್ಯ. ಅವರು ಅದಕ್ಕಾಗಿ ಪ್ರಸಿದ್ಧರು. ॥78॥ ಈ ರೀತಿ ಮಹಾನುಭಾವರ ಉದಯವಾಗುತ್ತದೆ. ಅವರ ಆಶಯವು ಲೋಕಕಲ್ಯಾಣವಾಗಿರುತ್ತದೆ. ಅವರು ಕಾಣಿಸಿಕೊಳ್ಳುವುದು, ಅವರ ಅಸ್ತಿತ್ವಮತ್ತು ಅವರ ಮಾಯವಾಗುವಿಕೆ ಇವುಗಳು ಸಹಜ ಸಂಗತಿಗಳಂತೆ ಸಂಭವಿಸುತ್ತವೆ. ಸಂತರು ಲೋಕಸಂಗ್ರಹಕ್ಕಾಗಿ ಸದಾ ಸಿದ್ಧರಾಗಿರುತ್ತಾರೆ. ॥79॥ ಜನ್ಮವು ಭ್ರಾಂತಿ, ಮೃತ್ಯುವೂ ಭ್ರಾಂತಿಯೇ, ಕೇವಲ ಆತ್ಮ ಮಾತ್ರವೇ ಅವಿನಾಶದ ಸ್ಥಿತಿಯಲ್ಲಿರುತ್ತದೆ. ಸುಖಸಂಪತ್ತಿಯು ಸ್ವಪ್ನದ ರೀತಿಯಲ್ಲಿರುತ್ತದೆ. ಸಂತರ ಪರಿಸ್ಥಿತಿಯೂ ಅದೇ ತರಹ. ॥80॥ ಅದಲ್ಲದಿದ್ದರೂ, ಅವರಿಗೆ ಯಾರು ಜ್ಞಾನನಿಧಿಯಾಗಿರುವವರೋ ಸದಾ ಆತ್ಮಾನುಸಂಧಾನದಲ್ಲಿರುವವರೋ, ಅವರಿಗೆ ತಮ್ಮ ದೇಹದ ರಕ್ಷಣೆಯಾಗಲೀ, ದೇಹವನ್ನು ತ್ಯಜಿಸುವುದಾಗಲೀ ಎರಡೂ ಒಂದೇ. ॥81॥ ಇಷ್ಟು ಸಾಕು. ಬಾಬಾರವರು ಶರೀರವನ್ನು ತ್ಯಜಿಸಿದ ಕೂಡಲೇ, ನಮ್ಮ ತಲೆಯ ಮೇಲೆ ದುಃಖದ ಪರ್ವತವೇ ಎರಗಿತು. ಶಿರಡಿಯ ತುಂಬ ಹಾಹಾಕಾರ ತುಂಬಿತು. ಗೋಳಾಟ ಮುಗಿಲೇರಿತು. ॥82॥ ಬಾಬಾರವರ ನಿರ್ಯಾಣದ ವಿಷಯವು ಪ್ರತಿಯೊಬ್ಬರ ಹೃದಯವನ್ನೂ ಬಾಣದಂತೆ ಚುಚ್ಚಿದವು ಎಲ್ಲ ನಿತ್ಯಕಾರ್ಯಗಳೂ ನಿಂತು ಹೋದವು. ಮತ್ತು ಜನರು ಅಸ್ತವ್ಯಸ್ತವಾಗಿ ಓಡಿದರು. ॥83॥ ಈ ಅಮಂಗಳಕರ ಸುದ್ದಿಯು ಹರಡುತ್ತಿದ್ದಂತೆಯೇ, ಪ್ರತಿಯೊಬ್ಬರೂ ಇದನ್ನುವಜ್ರಾಘಾತದಂತೆ ಅನುಭವಿಸಿದರು. ಕೆಲವು ವಿಚಾರವಂತರು ಮೌನವಾಗಿದ್ದರು. ಇತರರು ಗೋಳಾಡುತ್ತಿದ್ದರು. ॥84॥ ಅವರ ಅತಿಯಾದ ಪ್ರೀತಿಯಿಂದಾಗಿಅವರು ಭಾವೋದ್ವೇಗದಿಂದ ಗದ್ಗದಿತರಾದರು. ದುಃಖದ ಕಣ್ಣೀರು ಕಣ್ಣುಗಳಲ್ಲಿ ಉಕ್ಕಿ ಬಂದಿತು. ಅವರು ಜೋರಾಗಿ ಉದ್ಗರಿಸಿದರು, 'ಶಿವ, ಶಿವ, ಹರೇ!' ॥85॥ ಪ್ರತಿಯೊಂದು

ಮನೆಯಲ್ಲಿಯೂ ಗಲಿಬಿಲಿಯೂ ಮತ್ತು ಗದ್ದಲವೂ ಶುರುವಾಯಿತು. ಎಲ್ಲ ಕಡೆಯಲ್ಲಿಯೂ ಒಂದೇ ರೀತಿಯ ಗಡಿಬಿಡಿ ಶುರುವಾಯಿತು. ಎಲ್ಲರ ಹೃದಯವೂ ಥವಥವಗುಟ್ಟಿತು. ಲೋಕವೆಲ್ಲವೂ ದಢದಢನೆ ಓಡಾಡಲು ಪ್ರಾರಂಭಿಸಿತು. ||86|| ಮಹಾರಾಜರ ದೇಹಾವಸಾನದಿಂದ ಇಡೀ ಹಳ್ಳಿಯೇ ಪೂರ್ಣವಾಗಿ ಸತ್ತುಹೋದಂತೆ ಕಾಣುತ್ತಿತ್ತು. ಅವರು ಹೇಳಿದರು, "ದೇವಾ, ಈ ಪ್ರಸಂಗವು ದಾರುಣವಾಗಿದೆ. ನಮ್ಮ ಹೃದಯಗಳನ್ನು ಚುಚ್ಚುತ್ತಿದೆ." ||87|| ಪ್ರತಿಯೊಬ್ಬರೂ ಎದ್ದು ಓಡಿದರು. ಎಲ್ಲರೂ ಮಸೀದಿಯಲ್ಲಿ ಮತ್ತು ಅದರ ಅಂಗಳದಲ್ಲಿ ಗುಂಪು ಸೇರಿದರು. ಆ ಪರಿಸ್ಥಿತಿಯು ಎದೆ ಒಡೆಯುವಂತಿತ್ತು. ಮತ್ತು ಕಂಠವು ದುಃಖದಿಂದ ಗದ್ಗದವಾಯಿತು. ||88|| ಶಿರಡಿಯ ವೈಭವವು ಮಾಯವಾಯಿತು. ಅದರ ಸುಖ ಸೌಭಾಗ್ಯಗಳೆಲ್ಲವೂ ಮುಗಿದವು. ಎಲ್ಲವೂ ಕಳೆದುಹೋಯಿತು. ಪ್ರತಿಯೊಬ್ಬರ ಕಣ್ಣುಗಳೂ ಕಣ್ಣೀರಿನಿಂದ ತುಂಬಿ ಅವರ ಧೈರ್ಯವೆಲ್ಲವೂ ಚೂರುಚೂರಾಗಿತ್ತು. ||89|| ಏಳು ಪುಣ್ಯಕ್ಷೇತ್ರಗಳಲ್ಲಿ ಒಂದೆಂದು ಪರಿಗಣಿಸಲಾಗಿದ್ದು ಮತ್ತು ಬಾಬಾರವರು ಯಾವಾಗಲೂ 'ದ್ವಾರಕಾಮಾಯಿ' ಎಂದು ಕರೆಯುತ್ತಿದ್ದುದು ನಿಶ್ಚಯವಾಗಿಯೂ ಮಸೀದಿಯ ಮಹತ್ವವಾಗಿತ್ತು. ||90|| ಅದು ನಿರ್ಯಾಣವೋ, ನಿರ್ವಾಣವೋ ಅಥವಾ ನಿಧನವೋ, ದ್ವಾರಕೆಯ ಸಾಯುಜ್ಯ ಮುಕ್ತಿಗೆ ಸ್ಥಾನ. ಯಾರು ಈಶ್ವರನನ್ನು ನಿತ್ಯಾನುಸಂಧಾನ ಮಾಡುವನೋ ಅವನಿಗೆ ಅಲ್ಲಿ ಒಂದು ಜಾಗವಿದೆ. ||91|| ಆ ಗುರುರಾಜ ಸಾಯಿರಾಯರು, ಭಕ್ತರ ತಂದೆ ಮತ್ತು ತಾಯಿ. ಭಕ್ತರ ವಿಶ್ರಾಂತಿ ಸ್ಥಾನ ಇವುಗಳನ್ನು ಸದಾ ನೆನಪಿಸಿಕೊಳ್ಳುತ್ತಿದ್ದರು. ||92|| ಶಿರಡಿಯು ಬಾಬಾರವರಿಲ್ಲದೆ ನಿರ್ಜನ. ಇಡೀ ವಾತಾವರಣವೆಲ್ಲವೂ ಶೂನ್ಯವಾಗಿ, ಬೇಸರದಿಂದ, ಖಿನ್ನತೆಯಿಂದ ತುಂಬಿದ ಶಿರಡಿಯು ಪ್ರಾಣವಿಲ್ಲದ ಶರೀರದಂತೆ ಕಾಣುತ್ತಿತ್ತು. ||93|| ಒಣಗಿಹೋದ ಕೆರೆಯಲ್ಲಿಯ ಮೀನು ವಿಲವಿಲನೆ ಒದ್ದಾಡುವಂತೆ ಶಿರಡಿಯಲ್ಲಿ ಜನರುದುಃಖದಿಂದ ಕಳಾಹೀನರಾಗಿ ಉದ್ವಿಗ್ನರಾಗಿ ಮನಸ್ಸಿನಲ್ಲೇ ತಳಮಳಗೊಳ್ಳುತ್ತಿದ್ದರು. ||94|| ಕಮಲವಿಲ್ಲದ ಸರೋವರದಂತೆ, ಪುತ್ರನಿಲ್ಲದ ತಾಯಿಯಂತೆ, ದೀಪವಿಲ್ಲದ ಮಂದಿರದಂತೆ, ಮಸೀದಿಯ ಪರಿಸರವು ಶೂನ್ಯತೆಯಿಂದ ತುಂಬಿತ್ತು. ||95|| ಬಾಬಾರವರಿಲ್ಲದ ಶಿರಡಿಯು, ಒಡೆಯನಿಲ್ಲದ ಮನೆಯಂತೆ, ರಾಜನಿಲ್ಲದ ರಾಜ್ಯದಂತೆ, ದ್ರವ್ಯವಿಲ್ಲದ ಖಜಾನೆಯಂತೆ – ಒಂದು ಅಭೇದ್ಯವಾದ ಅರಣ್ಯದಂತೆ ಇತ್ತು. ||96|| ಶಿರಡಿಯ ಎಲ್ಲ ಜನರ ಪ್ರೀತಿಯುಮತ್ತು ಎಲ್ಲ ಭಕ್ತರ ಪ್ರೀತಿಯು ಬಾಬಾರವರಲ್ಲಿ ತಾಯಿಗೆ ಮಗುವಿನಲ್ಲಿರುವಹಾಗೆ ಅಥವಾ ಚಾತಕ ಪಕ್ಷಿಯು ಮೋಡಗಳಿಂದ ಬರುವ ನೀರಿಗೆ ಕಾತರಿಸುವ ಹಾಗೆ ಇತ್ತು. ||97|| ಶಿರಡಿಯು ಕಳಾಹೀನವಾಗಿ, ಮೃತಪ್ರಾಯವಾಗಿ, ಹೀನ–ದೀನವಾಗಿ ಕಂಡುಬರುತ್ತಿತ್ತು. ನೀರಿನಿಂದ ಹೊರಗೆ ತೆಗೆದ ಮೀನಿನ ರೀತಿಯಲ್ಲಿ ಜನರು ತಳಮಳಗೊಳ್ಳುತ್ತಿದ್ದರು. ||98|| ಹಿರಿಯರು, ಕಿರಿಯರು ಎಲ್ಲರೂ ಗಂಡನಿಂದ ತ್ಯಜಿಸಲ್ಪಟ್ಟ ಪತ್ನಿಯಂತೆ ಅಥವಾ ಮಗುವಿಗೆ ಹಾಲೂಡಿಸಲು ತ್ಯಜಿಸಿದ ತಾಯಿಯಂತೆ ಅಥವಾ ತಾಯಿಯಿಂದ ದೂರವಾದ ಕರುವಿನಂತೆ ಇದ್ದರು. ||99|| ಈ ದುಃಖಾವಸ್ಥೆಯು ಸಹಿಸಲಸಾಧ್ಯವಾಗಿತ್ತು.

ಶಿರಡಿಯ ಸಮಸ್ತ ಜನರೂ ಅಲ್ಲಿ ಇಲ್ಲಿ ಅಸ್ತವ್ಯಸ್ತವಾಗಿ ಎಲ್ಲ ದಿಕ್ಕುಗಳಲ್ಲೂ ಓಡಿದರು. ॥100॥ ಶಿರಡಿಯು ಕೇವಲ ಸಾಯಿಯಿಂದಾಗಿ ಮಾತ್ರ ಪವಿತ್ರವಾಗಿತ್ತು. ಶಿರಡಿಯು ಸಾಯಿಯಿಂದಾಗಿಯೇ ಚಾರಿತ್ರಿಕ ಪ್ರಾಮುಖ್ಯತೆ ಪಡೆದಿತ್ತು. ಶಿರಡಿಯು ಸಾಯಿಯಿಂದಾಗಿಯೇ ಯಾತ್ರಾ ಸ್ಥಳವಾಯಿತು. ಸಾಯಿ ಮಾತ್ರ ಎಲ್ಲರ ರಕ್ಷಕ. ॥101॥ ಕೆಲವರು ಜೋರಾಗಿ ಆಕ್ರಂದನ ಮಾಡುತ್ತಿದ್ದರು. ಕೆಲವರು ಧೂಳಿನಲ್ಲಿ ಬಿದ್ದು ಒದ್ದಾಡುತ್ತಿದ್ದರು, ಕೆಲವರು ಜ್ಞಾನ ತಪ್ಪಿ ಬಿದ್ದರು, ಜನರು ಪೂರ್ಣವಾಗಿ ದುಃಖಿತರಾಗಿದ್ದರು. ॥102॥ ದುಃಖಾಶ್ರುಗಳು ಕಣ್ಣುಗಳಿಂದ ಸುರಿಯಲಾರಂಭಿಸಿದವು. ನರನಾರಿಯರು ಬಹಳ ಉದ್ವಿಗ್ನರಾಗಿದ್ದರು. ಜನರು ಅನ್ನಪಾನಾದಿಗಳನ್ನು ಬಿಟ್ಟು ದೀನ ವದನರಾದರು. ॥103॥ ಬಾಬಾರವರ ಜಡಸ್ವರೂಪವನ್ನು ನೋಡಿ ಗ್ರಾಮಸ್ಥರು ಪರಮ ದುಃಖಿತರಾದರು. ಆಬಾಲವೃದ್ಧರಾದಿಯಾಗಿ ಎಲ್ಲ ಭಕ್ತರೂ ಚಡಪಡಿಸುತ್ತಿದ್ದರು. ॥104॥ ಎಲ್ಲಿ ಮಧುರವಾದ ಮತ್ತು ಗಮನ ಸೆಳೆಯುವ ಕಥೆಗಳನ್ನು ಕೇಳಬಹುದಾಗಿತ್ತೋ, ಎಲ್ಲಿ ದಿನವೂ ಆನಂದವು ತಾಂಡವವಾಡುತ್ತಿತ್ತೋ, ಎಲ್ಲಿ ಪ್ರವೇಶಕ್ಕೆ ಸಣ್ಣ ಜಾಗವೂ ಇರುತ್ತಿರಲಿಲ್ಲವೋ ಅಂತಹ ಮಸೀದಿಯು ಈಗ ನಿರ್ಜನವಾಗಿ ಬಿಟ್ಟಿತ್ತು. ॥105॥ಮುಂಚೆಯೇ ಆ ಶಿರಡಿಯು ಯಾವಾಗಲೂ ಎಲ್ಲರಿಗೂ ನಿತ್ಯಶ್ರೀ ಮತ್ತು ನಿತ್ಯಮಂಗಳವಾಗಿ ಇತ್ತು. ಅದು ಬಾಬಾರವರಿಂದಾಗಿಯೇ ಮತ್ತು ಅವರಿಲ್ಲದೆ ಎಲ್ಲ ಗ್ರಾಮಸ್ಥರು ತಳಮಳಿಸುತ್ತಿದ್ದರು. ॥106॥ “ಅವರು ಆನಂದಕಂದನೂ, ಆನಂದ ವಿಗ್ರಹನೂ, ಆಗಿದ್ದು ಭಕ್ತರ ಕಾರ್ಯಾರ್ಥವಾಗಿ ದೇಹವನ್ನು ಧರಿಸಿದ್ದರು. ಮತ್ತು ಆ ಕಾರ್ಯವು ಸಮಾಪ್ತಿಯಾದಾಗ ಅದೆಷ್ಟು ಆಶ್ಚರ್ಯಕರವಾಗಿ ಈ ದೇಹವನ್ನು ಹಳ್ಳಿಯಲ್ಲಿ ತ್ಯಜಿಸಿಬಿಟ್ಟರು. ॥107॥ “ಎಲ್ಲ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ನೀವು ಮನಃಪೂರ್ವಕವಾಗಿ ಕ್ರಿಯಾಶೀಲರಾಗಿ ಕಳಕಳಿಯಿಂದ ಹಿತೋಪದೇಶಮಾಡಿದಿರಿ. ಏಕೆಂದರೆ ನಾವು ಸದಾಕಾಲ ಬುದ್ಧಿ ಭ್ರಂಶರಾಗಿಯೇ ಇದ್ದೆವು. ॥108॥ “ನಿಮ್ಮ ಉಪದೇಶಗಳು ನಮ್ಮ ಮೇಲೆ ಬೋರಲು ಹಾಕಿದ ಬಿಂದಿಗೆಯ ಮೇಲೆ ಸುರಿದ ನೀರಿನಂತೆ ಹರಿದುಹೋದವು ಮತ್ತು ನಾವು ಒಂದು ಹನಿಯನ್ನೂ ಉಳಿಸಿಕೊಳ್ಳಲಿಲ್ಲ. ॥109॥ “ನೀನು ಯಾರ ಬಗ್ಗೆಯಾದರೂ ಕೆಟ್ಟದಾಗಿ ಮಾತನಾಡಿದರೆ ನನಗೆ ದುಃಖ ಉಂಟಾಗುತ್ತದೆ” ಎಂದು ಆಗಾಗ್ಗೆ ಹೇಳುತ್ತಿದ್ದರೂ ನಾವು ನಿಮ್ಮ ಮಾತು ಕೇಳಲಿಲ್ಲ.” ॥110॥“ಅವರ ಈ ಹಿತೋಪದೇಶವನ್ನು ವಿಧೇಯರಾಗಿ ಪಾಲಿಸದೆ ನಾವೆಷ್ಟು ಅಪರಾಧ ಮಾಡಿವೆ? ನಮ್ಮ ಅವಿಧೇಯತೆಗಾಗಿ ನೀವು ಪ್ರಾಯಶ್ಚಿತ್ತಕ್ಕೆ ಅವಕಾಶ ಮಾಡದೆ ಈ ರೀತಿ ಪ್ರತಿಫಲವನ್ನು ನೀಡಿರುವಿರಾ?” ॥111॥ ಬಾಬಾರವರು ಆ ಪಾಪಗಳನ್ನೆಲ್ಲ ಮರಳಿಸಲು ಈ ರೀತಿ ಮಾಡಿದರೇ? ಈಗ ಪಶ್ಚಾತ್ತಾಪಪಟ್ಟು ಪ್ರಯೋಜನವೇನು? ಪ್ರತಿಯೊಬ್ಬರೂ ಅವರವರ ಕರ್ಮಗಳ ಫಲವನ್ನು ಅನುಭವಿಸಲೇಬೇಕು. ॥112॥ “ಆದರಿಂದಾಗಿಯೇ ನೀವು ನಮ್ಮಿಂದ ಬೇಸತ್ತು ಹೋದಿರೇನು? ಮತ್ತು ನಿಮ್ಮನ್ನು ತೆರೆಯಿಂದಾಚೆಗೆ ಮರೆಯಾಗಿಸಿಕೊಂಡಿರಿ! ನಮ್ಮ ಮೇಲೆ ಮೃತ್ಯುವು ಅನಿರೀಕ್ಷಿತವಾಗಿ ಯಾವ ರೀತಿ ಈ ದುಃಖವನ್ನು ತಂದಿತು? ॥113॥ “ನಿಮ್ಮ ಉಪದೇಶಗಳನ್ನು ಗಂಟಲು ಕಿತ್ತು ಹೋಗುವವರೆಗೂ

ಹೇಳುತ್ತ, ನಮ್ಮ ವಿಮುಖತೆಯನ್ನು ನೋಡುತ್ತ ನೀವು ಜಿಗುಪ್ಸೆಪಟ್ಟಿರುವಂತೆ ಕಾಣುತ್ತದೆ. ॥114॥ "ನೀವು ನಮ್ಮಿಂದ ಬೇಸರಪಟ್ಟುಕೊಂಡಿರುವಿರಿ. ನಿಮ್ಮ ಹಿಂದಿನ ಆ ಪ್ರೀತಿಯನ್ನೆಲ್ಲಾ ಮರೆತಿರುವಿರೇನು? ಅಥವಾ ನಮ್ಮ ಹಿಂದಿನ ಜನ್ಮಗಳ ಬಂಧನವು ಈ ದಿನ ಮುಗಿಯಿತೇನು? ಅಥವಾ ನಿಮ್ಮ ಪ್ರೀತಿಯ ಹೊಳೆಯು ಬತ್ತಿಹೋಯಿತೇನು? ॥115॥ "ನೀವು ಈ ರೀತಿ ಇಷ್ಟು ಜಾಗ್ರತೆ ನಮ್ಮನ್ನು ಅಗಲುವಿರೆಂದು ನಮಗೇನಾದರೂ ಮೊದಲೇ ತಿಳಿದಿದ್ದರೆ ಇನ್ನೂ ಬಹಳ ಉತ್ತಮವಾಗುತ್ತಿತ್ತು. ಕೊನೆಯ ಪಕ್ಷ ಜನರಾದರೂ ಜಾಗೃತರಾಗುತ್ತಿದ್ದರು. ॥116॥ನಾವೆಲ್ಲರೂ ಆಲಸಿಗಳಾಗಿ ನಿದ್ರಿಸುತ್ತಿದ್ದೆವು. ಮತ್ತು ಸ್ವಸ್ಥವಾಗಿ ಕುಳಿತುಬಿಟ್ಟಿದ್ದೆವು. ಕೊನೆಯಲ್ಲಿ ನಾವು ಈ ರೀತಿ ಬಲೆಗೆ ಸಿಕ್ಕಿಬಿದ್ದೆವು. ಮತ್ತು ನಿಷ್ಪ್ರಯೋಜಕರಾಗಿಬಿಟ್ಟೆವು. ॥117॥ "ನಾವು ಗುರುದ್ರೋಹಿಗಳಾದೆವು. ಏಕೆಂದರೆ ಸಮಯಕ್ಕೆ ಸರಿಯಾಗಿ ಏನನ್ನೂ ಮಾಡಲಿಲ್ಲ. ನಾವು ಶಾಂತವಾಗಿ ಕುಳಿತುಕೊಳ್ಳಲೂ ಆಗಲಿಲ್ಲ. ॥118॥ "ನಾವು ಶಿರಡಿಗೆ ದೂರದ ಊರುಗಳಿಂದ ಬಂದೆವು. ಮತ್ತು ಅಲ್ಲಿಯೂ ಹರಟೆಹೊಡೆಯುತ್ತ ಕುಳಿತುಕೊಂಡೆವು. ನಾವು ಒಂದು ಪವಿತ್ರ ತೀರ್ಥಕ್ಷೇತ್ರಕ್ಕೆ ಬಂದಿರುವೆವೆಂದು ಮರೆತೇಬಿಟ್ಟಿದ್ದೆವು ಮತ್ತು ಅಲ್ಲಿಯೂ ನಮ್ಮ ಮನೋ ಇಚ್ಛೆ ವರ್ತಿಸುತ್ತಿದ್ದೆವು." ॥119॥ ಅನೇಕ ರೀತಿಯ ವಿಭಿನ್ನ ಸ್ವಭಾವದವ ಭಕ್ತರು ಅಲ್ಲಿಗೆ ಬಂದರು. ಅಲ್ಲಿ ಜ್ಞಾನಿಗಳು, ಅಭಿಮಾನಿಗಳು, ಸ್ವಾರ್ಥಿಗಳು, ತಾರ್ಕಿಕರು ಎಲ್ಲರೂ ಬರುತ್ತಿದ್ದರು. ಆದರೆ ಜ್ಞಾನಿಗಳಿಗೆ ಅವರು ಚಿದ್ರೂಪದಲ್ಲಿ ಒಂದೇ ಆಗಿದ್ದರು. ಅವರಲ್ಲಿ ಹೆಚ್ಚು ಕಡಿಮೆ ಎಂಬ ಭೇದ ಯಾವುದೂ ಇರಲಿಲ್ಲ. ॥120॥ ಯಾರು ಚಿತ್ತದಲ್ಲಿ ಸೃಷ್ಟಿಯ ಪದಾರ್ಥಗಳಲ್ಲೆಲ್ಲ ಭಗವಂತನಲ್ಲದೆ ಬೇರೆ ಏನನ್ನೂ ನೋಡುವುದಿಲ್ಲವೋ ಇದೇ ಅವರ ವೈಭವ ಮತ್ತು ಅವರಿಗೆ ಎರಡನೆಯವರಿಲ್ಲ॥121॥ ಭಕ್ತನು ತಾನೇ ದೇವರು, ಗುರುವೂ ಮತ್ತೆ ಬೇರೆ ಅಲ್ಲ. ಆದರೆ ಅವರು ಇಬ್ಬರೂ ಸ್ವಸ್ವರೂಪವನ್ನು ಮರೆತಾಗ ಅದರಿಂದಾಗಿ ಪರಸ್ಪರ ಭೇದವು ಹುಟ್ಟುತ್ತದೆ. ॥122॥ ವಸ್ತುತಃ ನಾವು ಸ್ವತಃ ಈಶ್ವರ ಸ್ವರೂಪರೇ. ಆದರೆ ನಾವು ನಮ್ಮಲ್ಲಿರುವ ಪರಮಾತ್ಮ ಸ್ವರೂಪವನ್ನು ಮರೆತಿದ್ದೇವೊ ಇದೇ ಭೇದಭಾವದ ಮುಖ್ಯ ಕಾರಣ ಮತ್ತು ಅಲ್ಲಿಂದಲೇ ಅಧಃಪತನ ಪ್ರಾರಂಭವಾಗುತ್ತದೆ. ॥123॥ ಒಬ್ಬ ಸಾರ್ವಭೌಮನು ಕನಸಿನಲ್ಲಿ ಭಿಕ್ಷಾರ್ಥಿಯಾಗಿ ಮನೆ ಮನೆಗೆ ಅಲೆಯಬಹುದು. ಎಚ್ಚರವಾದಾಗ ಅವನು ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ ಮತ್ತು ಅವರ ಸ್ಥಿತಿಯು ಬದಲಾಗಿಲ್ಲ ಎನ್ನುವುದನ್ನು ತಿಳಿಯುತ್ತಾನೆ. ॥124॥ ನಾವು ಜಾಗೃತರಾಗಿದ್ದಾಗ ಇರುವ ಪ್ರವೃತ್ತಿಯು ಸ್ವಪ್ನಸ್ಥಿತಿಯಲ್ಲಿ ನಿವೃತ್ತಿಯಾಗುತ್ತದೆ. ನಿಜವಾದ ಜಾಗೃತಿಯು ನಿಜಾನುಭೂತಿಯು ಮತ್ತು ಪೂರ್ಣವಾದಿ ಅದ್ವೈತದಲ್ಲಿ ಸಮರಸಹೊಂದಿರುತ್ತಾನೆ. ॥125॥ ಅವರಿಗೆ ಜ್ಞಾನಿಗಳು, ಅಜ್ಞಾನಿಗಳು, ಮತ್ತು ಇತರೆ ಆಶ್ರಿತರು ಎಲ್ಲರ ಮೇಲೆ ಅಪಾರವಾದ ಪ್ರೇಮವಿತ್ತು. ಅವರು ಎಲ್ಲರನ್ನೂ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಯತ್‌ಕಿಂಚಿತ್ತೂ ಸಹ ಭೇದವೆಣಿಸುತ್ತಿರಲಿಲ್ಲ. ॥126॥ ಪ್ರತ್ಯಕ್ಷ ಅನುಭವವು ಅವರು ಮಾನವ ಶರೀರ ಧರಿಸಿರುವ ಭಗವಂತನೆಂದು ತೋರಿಸಿದ್ದರೂ ಭಕ್ತರು ಯಾರು ಏನು ಮಾಡಿದರೂ ಸಹಿಸಿಕೊಳ್ಳುತ್ತ

ಅವರನ್ನು ಬಹಳವಾಗಿ ಮುದ್ದು ಮಾಡುತ್ತಿದ್ದುದು ಈಗ ಅವರನ್ನೆಲ್ಲ ವಿವಶರನ್ನಾಗಿ ಮಾಡಿತ್ತು. ॥127॥ ಕೆಲವರಿಗೆ ಧನಸಂಪತ್ತು, ಮತ್ತು ಕೆಲವರಿಗೆ ಸಂಸಾರ ಸುಖ ಮತ್ತು ಸಂತಾನಗಳನ್ನು ಅನುಗ್ರಹಿಸುತ್ತಿದ್ದು ಅದರಿಂದಾಗಿ ಅಲ್ಲಿ ಒಂದು ಮಹಾನ್ ಭ್ರಾಂತಿಯು ಹುಟ್ಟಿತ್ತು. ಮತ್ತು ಜ್ಞಾನ ಪ್ರಾಪ್ತಿಯ ಆಕಾಂಕ್ಷೆಯು ದೂರವಾಗಿತ್ತು. ॥128॥ ಕೆಲವು ಸಲ ಅವರು ನಗುತ್ತಿದ್ದರು. ಮತ್ತು ಕೆಲವರ ಜೊತೆ ಹಾಸ್ಯಮಾಡುತ್ತಿದ್ದರು. ಆಗ ಆ ವ್ಯಕ್ತಿಯು ಅಭಿಮಾನದಿಂದ ಉಬ್ಬಿಹೋಗಿ, ತಾನೊಬ್ಬನೇ ಅವರ ಪ್ರೀತಿಪಾತ್ರ ವ್ಯಕ್ತಿಯೆಂದೂ ಮತ್ತು ಇತರರನ್ನು ಅವರು ಪ್ರೀತಿಸುವುದಿಲ್ಲವೆಂದೂ ಯೋಚಿಸುತ್ತಿದ್ದನು. ॥129॥ ಅದೇ ರೀತಿ ಅವರು ಯಾರ ಹತ್ತಿರವಾದರೂ ಕೋಪದಿಂದ ಮಾತನಾಡಿದರೆ, ಬಾಬಾರವರು ಅವರನ್ನು ಪ್ರೀತಿಸುತ್ತಿಲ್ಲವೆಂದು ಹೇಳುತ್ತಿದ್ದರು. ಮತ್ತು ಬಾಬಾರವರು ಅವರಿಗೆ ಮಾತ್ರವೇ ಎಲ್ಲ ಗೌರವವನ್ನೂ ಸಲ್ಲಿಸುತ್ತಾರೆ. ಮತ್ತಿತರರ ಬಗ್ಗೆ ಇಲ್ಲವೆಂದು ಹೇಳಿಕೊಳ್ಳುತ್ತಿದ್ದರು. ॥130॥ ಈ ರೀತಿಯ ಹೋಲಿಕೆಗಳನ್ನು ಮಾಡುವುದರಲ್ಲಿ ಮಗ್ನರಾಗಿದ್ದಾಗ, ವಾಸ್ತವವಾಗಿ ಬಾಬಾರವರು ಸ್ವಪ್ನದಲ್ಲಿಯೂ ಭೇದ ಎಣಿಸುತ್ತಿರಲಿಲ್ಲ. ನಮ್ಮ ಒಳಿತನ್ನು ಕುರಿತು ಯೋಚಿಸಿದಲ್ಲಿ ನಾವೇ ನಷ್ಟ ಹೊಂದಿದವರು ಮತ್ತು ನಾವು ನಮ್ಮ ಅಂತಿಮ ಗುರಿಯನ್ನು ಮರೆತೇ ಬಿಟ್ಟೆವು ಎಂಬುದು ತಿಳಿಯುವುದು. ॥131॥ ಅದೃಷ್ಟವಶಾತ್ ಪರಬ್ರಹ್ಮ ಮತ್ತು ಸಗುಣಮೂರ್ತಿಯಾದ ಬಾಬಾರವರು ನಮಗೆ ಹತ್ತಿರವಾಗಿದ್ದರು. ಆದರೆ ನಾವು ಮುಖ್ಯ ಉದ್ದೇಶವನ್ನೇ ಮರೆತುಬಿಟ್ಟಿದ್ದೆವು. ಮತ್ತು ವಿನೋದ, ತಮಾಷೆಗಳಲ್ಲಿ ಅವಕಾಶವನ್ನು ಕಳೆದುಕೊಂಡೆವು. ॥132॥ ಅಲ್ಲಿಗೆ ಬಂದಕೂಡಲೇ ಜನರು ಬಾಬಾರವರ ದರ್ಶನ ತೆಗೆದುಕೊಂಡು ಅವರಿಗೆ ಹಣ್ಣುಗಳನ್ನು ಪುಷ್ಪ ಮತ್ತಿತರ ವಸ್ತುಗಳನ್ನು ಸಮರ್ಪಿಸುತ್ತಿದ್ದರು. ಆದರೆ ಬಾಬಾ ದಕ್ಷಿಣೆ ಕೇಳಿದಾಗ, ಅಲ್ಲಿಂದ ಜಾರಿಕೊಂಡು ಅಲ್ಲಿ ಉಳಿಯುತ್ತಲೇ ಇರಲಿಲ್ಲ. ॥133॥ ನಮ್ಮ ಕ್ಷುಲ್ಲಕವಾದ ತಪ್ಪುಗಳನ್ನು ಬೀಳುಗಳನ್ನೂ ನೋಡಿ ಅವರು ನಮ್ಮ ಹಿತಕ್ಕಾಗಿ ಕಥೆಗಳನ್ನು ಹೇಳುತ್ತಿದ್ದರು. ಆದರೂ ಸಹ ಅವರು ಅತ್ಯಂತ ಕಷ್ಟವನ್ನು ಅನುಭವಿಸುತ್ತ ಏಕಾಏಕಿ ತಮ್ಮ ನಿಜಧಾಮಕ್ಕೆ ಎದ್ದು ಹೊರಟುಬಿಟ್ಟರು ಎಂದು ಕಾಣುತ್ತದೆ. ॥134॥ "ಈ ಕಣ್ಣುಗಳು ನಿಮ್ಮ ಸ್ವಾನಂದ ಸ್ಥಿತಿಯನ್ನು ಮತ್ತೆ ಎಂದಾದರೂ ಕಾಣುವುದೇ? ಆ ಆನಂದ ಮೂರ್ತಿಯು ಹೊರಟು ಹೋಯಿತು. ಮತ್ತು ಜನ್ಮಜನ್ಮಾಂತರಕ್ಕೂ ಅದೃಶ್ಯವಾಯಿತು." ॥135॥ ಓಹ್ ಈ ದಾರುಣ ಕರ್ಮವನ್ನು ನೋಡು! ಸಾಯಿಯು ನಮ್ಮ ಸಖ. ಎಂದೆಂದಿಗೂ ದೂರವಾಗಿಬಿಟ್ಟರು! ಅವರು ನಿಸ್ವಾರ್ಥ, ದಯಾಮಯಿ, ಅಂತಹವರು ಈ ದಿನ ನಮಗೆ ಪೂರ್ಣ ಅಪರಿಚಿತರಾಗಿಬಿಟ್ಟರು. ॥136॥ "ಇನ್ನೊಬ್ಬರನ್ನು ಕಾಡಿಸುವುದು ಒಳ್ಳೆಯದಲ್ಲ. ಅದು ನನಗೆ ದುಃಖವನ್ನುಂಟುಮಾಡುತ್ತದೆ" ಎಂದು ಅವರು ಹೇಳಿದರು. ಆದರೆ ನಾವು ಅದಕ್ಕೆ ಯಾವ ಗಮನವನ್ನೂ ಕೊಡಲಿಲ್ಲ. ಮತ್ತು ಯಥೇಚ್ಛವಾಗಿ ಜಗಳವಾಡುತ್ತಲೇ ಇದ್ದೆವು. ॥137॥ ನಾವು ನಿಮ್ಮನ್ನು ಕಳೆದುಕೊಂಡೆವು, ಸಾಯಿನಾಥ! ಭಕ್ತರು ಮತ್ತಿತರರು ಪರಸ್ಪರ ಪೀಡಿಸುತ್ತಿದ್ದರು. ಈಗ ನಾವು ಅನುತಾಪಪಡುತ್ತಿದ್ದೇವೆ. ನಾವು ಈಗ ನಿಮ್ಮ

ಮಾತುಗಳನ್ನು ನೆನಪಿಸಿಕೊಳ್ಳುತ್ತಿದ್ದೇವೆ. ॥138॥ "ಎಂಟುವರ್ಷಗಳ ಬಾಲಕನಾಗಿ ಮತ್ತೆ ಪ್ರಕಟಗೊಳ್ಳುತ್ತೇನೆ" ಎಂದು ಮಹಾರಾಜರು ತಮ್ಮ ಭಕ್ತರಲ್ಲಿ ಹೇಳುತ್ತಿದ್ದರೆಂದು ತಿಳಿದುಬಂದಿದೆ. ॥139॥ ಇವು ಒಬ್ಬ ಸಂತರ ವಾಣಿಯು ಮತ್ತು ಯಾರೂ ಅದನ್ನು ಶಂಕಿಸಬಾರದು. ಕೃಷ್ಣಾವತಾರದಲ್ಲಿ ಚಕ್ರಪಾಣಿಯು ಇದನ್ನೇ ಮಾಡಿದುದು. ॥140॥ ಕೃಷ್ಣನು ದೇವಕಿಯ ಮುಂದೆ ಜೈಲಿನಲ್ಲಿ ಒಬ್ಬ ಎಂಟು ವರ್ಷದ ಬಾಲಕನಾಗಿ, ಸುಂದರನಾಗಿ, ಕಾಂತಿಯುತವಾಗಿ, ಚತುರ್ಭುಜನಾಗಿ, ಅವುಗಳಲ್ಲಿ ಆಯುಧಗಳನ್ನು ಹಿಡಿದು ಪ್ರಕಟಗೊಂಡನು. ॥141॥ ಆ ಅವತಾರದಲ್ಲಿ, ಭೂಮಿಯ ಭಾರವನ್ನು ಹಗುರಗೊಳಿಸುವುದು ಉದ್ದೇಶವಾಗಿತ್ತು, ಇದರಲ್ಲಿ ತನ್ನ ದೀನ ಭಕ್ತರ ಉದ್ಧಾರ ಮಾಡುವುದು ಇರುವಾಗ ಸಂದೇಹಕ್ಕೆ ಕಾರಣವೆಲ್ಲಿದೆ? ಸಂತರು ನಿಜವಾಗಿಯೂ ತರ್ಕಕ್ಕೆ ಮೀರಿದವರು. ॥142॥ ಈ ನಿರ್ಬಂಧವು ಕೇವಲ ಒಂದು ಜನ್ಮದ್ದಲ್ಲ. ಆದರೆ ಅದು ಎಪ್ಪತ್ತೆರಡು ಜನ್ಮಗಳ ಋಣಾನುಬಂಧವಾಗಿರುತ್ತದೆ. ಅದನ್ನು ಬಾಬಾರವರೇ ತಮ್ಮ ಭಕ್ತರಿಗೆ ಹೇಳಿದ್ದಾರೆ. ಅದನ್ನು ಈ ಹಿಂದೆಯೂ ಹೇಳಿದೆ. ॥143॥ ಅಂತಹ ಪ್ರೇಮ ಬಂಧನಗಳಲ್ಲಿ ಬಂಧಿಸಲ್ಪಟ್ಟು ಮಹಾರಾಜರು ಪ್ರವಾಸ ಹೊರಟಿರುವಂತೆ ಕಾಣುತ್ತಿತ್ತು, ಮತ್ತು ಭಕ್ತರು ಅವರು ಹಿಂತಿರುಗುವರೆಂಬ ಭರವಸೆಯನ್ನು ಮನದಲ್ಲಿಯೇ ಹೊಂದಿದ್ದರು. ॥144॥ ಅವರು ಅನೇಕರಿಗೆ ಸಾಕ್ಷಾತ್ಕಾರ ನೀಡುತ್ತಾರೆ. ಅನೇಕರಿಗೆ ದೃಷ್ಟಾಂತದ ಅನುಭವಗಳನ್ನು ಕೊಡುತ್ತಾರೆ. ಅನೇಕರಿಗೆ ಚಮತ್ಕಾರಗಳನ್ನು ತೋರಿಸುತ್ತಾರೆ. ಈ ರೀತಿ ಅನೇಕ ರೀತಿಯ ಅನುಭವಗಳನ್ನು ರಹಸ್ಯವಾಗಿ ನೀಡುತ್ತಿದ್ದರು. ॥145॥ ಭಕ್ತಿ ಇಲ್ಲದವರಿಗೆ ಅವರು ಎಂದಿಗೂ ಕಾಣಿಸುತ್ತಿರಲಿಲ್ಲ. ಆದರೆ ಭಕ್ತರು ಮತ್ತು ಶ್ರದ್ಧಾಳುಗಳಿಗೆ ಅವರ ಹತ್ತಿರವೇ ಕಾಣಿಸಿಕೊಳ್ಳುತ್ತಿದ್ದು. ಯಾರ ಚಿತ್ತವೃತ್ತಿಯು ಯಾವ ರೀತಿ ಇರುವುದೋ ಅದೇ ರೀತಿ ಅನುಭೂತಿಯನ್ನು ನೀಡುತ್ತಿದ್ದರು. ॥146॥ ಚಾವಡಿಯಲ್ಲಿ ಅವರು ಗುಪ್ತ ರೂಪದಲ್ಲಿದ್ದಾರೆ. ಮಸೀದಿಯಲ್ಲಿ ಅವರು ಬ್ರಹ್ಮರೂಪವಾಗಿ, ಸಮಾಧಿ ಮಂದಿರಲ್ಲಿ ಸಮಾಧಿಸ್ಥರಾಗಿ ಇದ್ದಾರೆ. ಈ ರೀತಿ ಅವರು ಎಲ್ಲೆಡೆಯಲ್ಲಿಯೂ ಆನಂದಸ್ವರೂಪರಾಗಿದ್ದಾರೆ. ॥147॥ ಆದ್ದರಿಂದ, ಈಗ ಈ ನಂಬಿಕೆಯನ್ನೇ ಭಕ್ತರು ತಮ್ಮ ಜೀವಿತದಲ್ಲಿ ಇಟ್ಟುಕೊಂಡಿರಬೇಕು. ಸಾಯಿ ಸಮರ್ಥರ ಶಾಶ್ವತವಾಗಿ, ಅಖಂಡವಾಗಿ, ಅಕ್ಷಯವಾಗಿ ಅಲ್ಲಿ ನೆಲೆಸಿದ್ದಾರೆ. ॥148॥ ದೇವತೆಗಳು ತಮ್ಮ ನಿವಾಸಗಳಿಗೆ ಹೋಗುತ್ತಾರೆ. ಸಂತರು ಬ್ರಹ್ಮಸ್ಥಿತಿಯಲ್ಲೇ ಇರುತ್ತಾರೆ. ಅವರಿಗೆ ಹೋಗುವುದು ಬರುವುದು ಯಾವುದೂ ಇಲ್ಲ. ಅವರು ಆನಂದವಾಗಿ ಸಮರಸದಲ್ಲಿ ಒಂದಾಗಿರುತ್ತಾರೆ. ॥149॥ ಆದಕಾರಣ, ಇದೊಂದೇ ನನ್ನ ವಿನಂತಿ. ನಾನು ನಮ್ರಪೂರ್ವಕವಾಗಿ ಎಲ್ಲರಿಗೂ ಚಿಕ್ಕವರಿಗೂ ದೊಡ್ಡವರಿಗೂ ನಮಸ್ಕರಿಸುತ್ತೇನೆ. ಆದರ ಪೂರ್ವಕವಾಗಿ ನಾನು ಹೇಳುವುದನ್ನು ಕೇಳಿರಿ. ॥150॥ ಉತ್ತಮರ, ದೈವಿಕರ, ಮತ್ತು ಪುಣ್ಯವಂತರ ಸಹವಾಸವನ್ನು ಬೆಳೆಸಿಕೊಳ್ಳಿ, ಗುರುಚರಣಗಳಲ್ಲಿ ನಿಷ್ಕಾಮ ಪ್ರೀತಿಯಿಡಿ. ಗುರುವಿನ ಗುಣಗಳನ್ನು ತಿಳಿಸುವ ಕಥೆಗಳಲ್ಲಿ ಆಸಕ್ತಿ ಇಡಿ. ಇವುಗಳಿಂದ ನಿರ್ಮಲವಾದ ಭಕ್ತಿಯು ಪ್ರಕಟವಾಗುತ್ತದೆ. ॥151॥ ಗುರುವಿನಲ್ಲಿ ಅವಿಚ್ಛಿನ್ನವಾದ

ಪ್ರೀತಿಯನ್ನು ಬೆಳೆಸಿಕೊಳ್ಳಿ, ಎಂದಿಗೂ ಸ್ನೇಹಪಾಶವು ಭಿನ್ನವಾಗದಿರಲಿ. ಭಕ್ತರು ಸದಾ ಹಗಲು ರಾತ್ರಿ ಗುರುಚರಣಗಳಲ್ಲಿ ಸುಖಸಂಪನ್ನರಾಗಿರಲಿ. ॥152॥ ಆದ್ದರಿಂದ, ನಂತರ ಭಕ್ತರು ಮತ್ತು ಗ್ರಾಮಸ್ಥರು ಎಲ್ಲರೂ ದೇಹದ ನಿಶ್ಚಿತವಾದ ಅಂತಿಮ ಸಂಸ್ಕಾರವನ್ನು ಯೋಗ್ಯವಾದ ರೀತಿಯಲ್ಲಿ ಮಾಡುವ ಬಗ್ಗೆ ಚರ್ಚಿಸಲು ಪ್ರಾರಂಭಿಸಿದರು. ॥153॥ ಶ್ರೀಮಂತ ಬುಟಿಯು, ಒಬ್ಬ ಮಹಾನ್ ಭಕ್ತನು. ಈಗಾಗಲೇ ಒಂದು ಭವ್ಯವಾದ ದೊಡ್ಡ ವಾಡಾವನ್ನು ಭವಿಷ್ಯದಲ್ಲಿ ಒಂದು ಸ್ಮಾರಕವಾಗುವಂತಹುದನ್ನು ಕಟ್ಟಿಸಿದ್ದನು. ॥154॥ ಅನಂತರ, ಕೊನೆಯಲ್ಲಿ ದೇಹವನ್ನು ಎಲ್ಲಿಡಬೇಕೆಂಬ ವಿಷಯದ ಬಗ್ಗೆ ಮೂವತ್ತಾರು ಗಂಟೆಗಳ ಕಾಲ ಚರ್ಚೆ ನಡೆಯಿತು. ಆದರೆ ಅದು ಏನು ಸಂಭವಿಸಬೇಕಾಗಿತ್ತೋ ಅದೇ ನಡೆಯಿತು. ॥155॥ ಒಬ್ಬನು ಹೇಳಿದನು, ಹಿಂದೂಗಳು ಕಳೇಬರವನ್ನು ಮುಟ್ಟಬಾರದೆಂದನು. ಅದನ್ನು ಮೆರವಣಿಗೆಯ ಸಂಭ್ರಮದಿಂದ ಮುಸಲ್ಮಾನರ ಖಬರಸ್ಥಾನಕ್ಕೆ ತೆಗೆದುಕೊಂಡು ಹೋಗಬೇಕೆಂದನು. ॥156॥ ಮತ್ತೊಬ್ಬನು ಹೇಳಿದನು, ಆ ಕಳೇಬರವನ್ನು ಬಯಲಿನಲ್ಲಿ ದಫನ್ ಮಾಡಿ ಅದರ ಮೇಲೆ ಸುಂದರವಾದ ದೊಡ್ಡ ಸಮಾಧಿ ಭವನ(ಬೃಂದಾವನ)ವನ್ನು ಕಟ್ಟಿ ಅದನ್ನು ನಿರಂತರವಾದ ನೆಲೆಯಾಗುವಂತೆ ಮಾಡಬೇಕೆಂದನು. ॥157॥ ಕುಶಾಲಚಂದ ಮತ್ತು ಅಮೀರ್ ಶಕ್ಕರ್ ಇದೇ ಅಭಿಮತ ಹೊಂದಿದ್ದರು. ಆದರೆ, "ವಾಡಾದಲ್ಲಿ ದೇಹವನ್ನು ಇಡು" ಎಂಬುದು ಬಾಬಾರವರ ವಚನಗಳಾಗಿದ್ದವು. ॥158॥ ರಾಮಚಂದ್ರಪಾಟೀಲನು ಬಹಳ ಕರಾರುವಾಕ್ಕಾದ ವ್ಯಕ್ತಿಯಾಗಿದ್ದನು. ಅವನು ಗ್ರಾಮಾಧಿಕಾರಿಯಾಗಿದ್ದನು. ಮತ್ತು ಬಾಬಾರವರ ಪ್ರೀತಿಯ ನಿಷ್ಠಾವಂತ ಅನುಚರನಾಗಿದ್ದನು. ಅವನು ಗ್ರಾಮಸ್ಥರೊಂದಿಗೆ ಹೇಳಿದನು. ॥159॥ "ನಿಮ್ಮ ವಿಚಾರವೇನಾದರೂ ಆಗಿರಬಹುದು. ಇದು ನಮಗೆ ಸ್ವಲ್ಪವೂ ಮಾನ್ಯವಲ್ಲ. ಸಾಯಿಯವರ ದೇಹವನ್ನು ವಾಡಾದ ಹೊರಗಡೆ ಮತ್ತೆಲ್ಲಿಯೂ ಕ್ಷಣಮಾತ್ರಕ್ಕಾದರೂ ಇಡಬಾರದು." ॥160॥ ಹಿಂದೂಗಳು ತಮ್ಮ ಧರ್ಮಾನುಸಾರ, ಮುಸ್ಲಿಮರು ತಮ್ಮ ಧರ್ಮಾನುಸಾರ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು. ಯಾವುದು ಸರಿ, ಯಾವುದು ತಪ್ಪು ಎಂಬುದರ ಬಗ್ಗೆ ಇಡೀ ರಾತ್ರಿಯೆಲ್ಲಾ ಚರ್ಚಿಸಲಾಯಿತು. ॥161॥ ಈಗ ಲಕ್ಷ್ಮಣಮಾಮಾ, ತನ್ನ ಮನೆಯಲ್ಲಿ ಗಾಢನಿದ್ರೆಯಲ್ಲಿದ್ದವನು, ಬೆಳಗಿನ ಜಾವದಲ್ಲಿ ಒಂದು ಕನಸು ಕಂಡನು. ಅಲ್ಲಿ ಬಾಬಾರವರು ಅವನ ಕೈಹಿಡಿದು ಹೇಳಿದರು "ಬೇಗ ಏಳು ಮತ್ತು ಬಾ. ॥162॥ "ಬಾಪೂ ಸಾಹೇಬನು ಈ ದಿನ ಬರುವುದಿಲ್ಲ. ನಾನು ಸತ್ತು ಹೋಗಿರುವೆನೆಂದು ತಿಳಿದಿದ್ದಾನೆ. ಕೊನೆಯ ಪಕ್ಷ ನೀನಾದರೂ ನನಗೆ ಕಾಕಡ ಆರತಿ ಮತ್ತು ಪೂಜೆಗಳನ್ನು ಮಾಡು." ॥163॥ ಕೂಡಲೇ ನಿತ್ಯಕ್ರಮಾನುಸಾರ, ತನ್ನ ಎಲ್ಲ ಪೂಜಾಸಾಮಾಗ್ರಿಗಳ ಜೊತೆ ಲಕ್ಷ್ಮಣಮಾಮಾನು ಸಮಯಕ್ಕೆ ಸರಿಯಾಗಿ ಬಂದು ಪೂಜೆ ಮಾಡಲು ಸಿದ್ಧನಾದನು. ॥164॥ ಅವನು ಶಿರಡಿಗ್ರಾಮದ ಜ್ಯೋತಿಷಿಯಾಗಿದ್ದನು. ಮತ್ತು ಮಾಧವರಾವನ ಸೋದರನಾಗಿದ್ದನು. ಅವನು ನಿತ್ಯವೂ ಪ್ರಾತಃಕಾಲದ ಸಮಯದಲ್ಲಿ ಬಾಬಾರವರ ಪೂಜೆ ಮಾಡುತ್ತಿದ್ದನು. ॥165॥ ಲಕ್ಷ್ಮಣಮಾಮಾನು ಅತಿ ನಿಷ್ಠಾವಂತ ಬ್ರಾಹ್ಮಣನಾಗಿದ್ದನು

ಮತ್ತು ಮಾಧವರಾವ್‌ನ ಮಾವನಾಗಿದ್ದನು. ಪ್ರಾತಃಕಾಲದಲ್ಲಿ ಸ್ನಾನಮಾಡಿ, ಮಡಿಯಾದ ವಸ್ತ್ರಗಳನ್ನು ಧರಿಸಿ ಅಲ್ಲಿಗೆ ಬಂದು ಮೊದಲು ಬಾಬಾರವರ ದರ್ಶನ ಮಾಡುತ್ತಿದ್ದನು. ॥166॥ ಅವನು ಬಾಬಾರವರ ಪಾದಪ್ರಕ್ಷಾಲನ ಮಾಡಿ, ಗಂಧಾಕ್ಷತೆಗಳಿಂದ ಅರ್ಚನೆಮಾಡಿ, ಪುಷ್ಪ, ಪತ್ರ, ತುಳಸಿಗಳನ್ನು ಸಮರ್ಪಿಸಿ ಧೂಪ, ದೀಪ, ನೈವೇದ್ಯ, ನೀರಾಂಜನ, ದಕ್ಷಿಣಾ ಪ್ರದಾನ ಎಲ್ಲವನ್ನೂ ಅರ್ಪಿಸುತ್ತಿದ್ದನು. ॥167॥ ಪ್ರಾರ್ಥನಾಪೂರ್ವಕ ಸಾಷ್ಟಾಂಗ ನಮಸ್ಕಾರ ಮಾಡಿ ಬಾಬಾರವರ ಆಶೀರ್ವಚನ ಸ್ವೀಕರಿಸಿ, ಎಲ್ಲರಿಗೂ ಗಂಧದ ತಿಲಕವನ್ನಿಟ್ಟು ಪ್ರಸಾದ ಹಂಚುತ್ತಿದ್ದನು.ಅನಂತರ ಅವನು ಅಲ್ಲಿಂದ ಹೊರಡುತ್ತಿದ್ದನು. ॥168॥ ಅನಂತರ ಅವನು ಗ್ರಾಮದೇವತೆಗಳಾದ ಗಜಾನನ, ಶನಿದೇವ, ಉಮಾರಮಣ, ಅಂಜನೀಪುತ್ರನಾದ ಮಾರುತಿರಾಯ ಇವರೆಲ್ಲರ ಪೂಜೆಮಾಡುತ್ತಿದ್ದನು. ॥169॥ ಈ ರೀತಿಯಲ್ಲಿ ಜ್ಯೋತಿಷಿ ಬುವಾನು ಸಕಲ ಗ್ರಾಮದೇವತೆಗಳನ್ನು ನಿತ್ಯವೂ ಪೂಜಿಸುತ್ತಿದ್ದನು. ಆದುದರಿಂದ ಅವನು ಬಾಬಾರವರ ದೇಹಕ್ಕೆ ಪೂಜೆಮಾಡಲು, ಸಕಲ ಪೂಜಾಸಾಮಗ್ರಿಗಳನ್ನೂ ಬಹು ಪ್ರೇಮಭಾವದಿಂದ ತೆಗೆದುಕೊಂಡು ಬಂದನು. ॥170॥ ಅದಿರುವ ಹಾಗೆಯೇ, ಮಾಮಾನು ಬಹಳ ನಿಷ್ಠಾವಂತನಾಗಿದ್ದನು. ಮತ್ತು ಅದೂ ಅಲ್ಲದೆ, ಅವನು ಈ ದೃಷ್ಟಾಂತವನ್ನು ಕಂಡನು. ಆದ್ದರಿಂದ ಅವನು ಕಾಕಡಾರತಿಗೆ ಬೇಕಾದ ಎಲ್ಲ ಸಾಮಾಗ್ರಿಗಳ ಜೊತೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿದನು. ॥171॥ ಮುಖಕ್ಕೆ ಮುಚ್ಚಿದ ವಸ್ತ್ರವನ್ನು ಸರಿಸಿ, ಅದರ ಕಡೆ ಪ್ರೀತಿಯಿಂದ ನೋಡುತ್ತ, ಅವನು ಕೈಗಳನ್ನು ಮತ್ತು ಪಾದಗಳನ್ನು ತೊಳೆದು ಶುದ್ಧ ಆಚಮನ ಮಾಡಿ, ಯಥಾವಿಧಿ ಪೂಜೆ ಮಾಡಿದನು. ॥172॥ ಮೌಲ್ವಿಗಳು ಮತ್ತು ಇತರ ಮುಸ್ಲಿಮರು ಅವನು ದೇಹವನ್ನು ಸ್ಪರ್ಶಿಸಿದ್ದಕ್ಕೆ ಪ್ರತಿಬಂಧವನ್ನು ಒಡ್ಡಿದರು. ಆದರೆ ಮಾಮಾನು ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಗಂಧವನ್ನು ಹಚ್ಚಿ ಪೂಜೆಯನ್ನು ಪೂರ್ಣಗೊಳಿಸಿದನು. ॥173॥ ಸಮರ್ಥರ ದೇಹವನ್ನು ಪೂಜಿಸಿದ ನಂತರ, ಎಲ್ಲ ದೇವತೆಗಳನ್ನೂ ಪೂಜಿಸಿದನು. ಅವನು ಅದು ಹಿಂದುವ್ಗೋ ಅಥವಾ ಮುಸ್ಲಿಮನದೋ ಎಂಬುದನ್ನು ಸ್ವಪ್ನದಲ್ಲಿಯೂ ಯೋಚಿಸಲಿಲ್ಲ. ॥174॥ ಬಾಬಾರವರು ಪವಿತ್ರವಾದ ಶರೀರದಲ್ಲಿ ಸಜೀವರಾಗಿದ್ದಾಗ, ಪೂಜೆಯನ್ನು ಮಾಡುವುದು ಅದೆಂತಹ ಉತ್ಸವ! ಈಗ ಜೀವವಿಲ್ಲದಿರುವಾಗ ಆ ಪೂಜಾ ವೈಭವವೂ ಇಲ್ಲ, ಆದರೂ ಅದು ಕೇವಲ ಔಪಚಾರಿಕವಾದುದೂ ಆಗಿರಲಿಲ್ಲ॥175॥ ಬಾಬಾರವರ ಈ ಸ್ಥಿತಿಯನ್ನು ನೋಡಿ ಮಾಮಾನು ಅತೀವ ದುಃಖದಿಂದ ಖಿನ್ನನಾದನು. ಅವನು ಅಂತಿಮ ಪೂಜೆಯನ್ನು ಮಾಡಲು ಬಂದಿದ್ದನು. ಇನ್ನು ಬಾಬಾರವರ ಪುನರ್ದರ್ಶನವು ದುರ್ಲಭ. ॥176॥ ಮಾಮಾನು ಬಾಬಾರವರನ್ನು ಈ ಸ್ಥಿತಿಯಲ್ಲಿ ನೋಡುವುದು ಸಹಿಸಲಸಾಧ್ಯವಾಗಿತ್ತು, ಅವನ ಕಣ್ಣುಗಳು ಅಶ್ರುಗಳಿಂದ ತುಂಬಿದವು. ಅವನ ಕೈಗಳು ಮತ್ತು ಕಾಲುಗಳು ಕಂಪಿಸಿದವು. ಮಾಮಾನ ಮನಸ್ಸು ದುಃಖಿತವಾಯಿತು. ॥177॥ ಮುಚ್ಚಿದ್ದ ಮುಷ್ಟಿಯನ್ನು ತೆರೆದು ಅದರಲ್ಲಿ ಪಾನ್‌ಬೀಡಾ ಮತ್ತು ದಕ್ಷಿಣೆಗಳನ್ನು ಇತ್ತು ದೇಹವನ್ನು ಎಂದಿನಂತೆಯೇ ಮುಚ್ಚಿ ಮಾಮಾನು ಅಲ್ಲಿಂದ

ಹೊರಟನು. ॥178॥ ಅನಂತರ ಬಾಪುಸಾಹೇಬ ಜೋಗನು ನಿತ್ಯಕ್ರಮದಂತೆ ಮಸೀದಿಯಲ್ಲಿ ಇತರರೊಡನೆ ಸಾಯಿಗೆ ಮಧ್ಯಾಹ್ನದ ಆರತಿಯನ್ನು ಮಾಡಿದನು. ॥179॥ ಅದು ಹಾಗಿರಲಿ. ಅನಂತರ ಏನು ನಡೆಯಿತೆಂಬುದನ್ನು ಮುಂದಿನ ಅಧ್ಯಾಯದಲ್ಲಿ ನಿರೂಪಿಸಲಾಗುವುದು. ಯಾವ ರೀತಿ ಬಾಬಾರವರ ದೇಹ ಸಂಸ್ಕಾರವು ಎಲ್ಲ ಹಿಂದೂ ಧರ್ಮದ ವಿಧಿಯಂತೆ ಅತಿ ಪ್ರಶಸ್ತವಾಗಿ ನಡೆಯಿತೆಂಬುದನ್ನು ಹೇಳಿದೆ. ॥180॥ ಹಾಗೆಯೇ, ಒಂದು ಇಟ್ಟಿಗೆಯು ಬಾಬಾರವರು ಅತಿಯಾಗಿ ಪ್ರೀತಿಸುತ್ತಿದ್ದುದು ಮತ್ತು ಅವರ ಸಂಗಾತಿಯಾಗಿ ಅನೇಕ ವರ್ಷಗಳ ಕಾಲ ಇದ್ದುದು ಒಡೆದು ಹೋಗಿ ಒಂದು ಅಪಶಕುನ ಮತ್ತು ದೇಹಾಂತದ ಸೂಚನೆಯಾಗಿತ್ತು ಎಂಬುದನ್ನೂ ಹೇಳಿದೆ. ॥181॥ ಮತ್ತೆಯೂ, ಇದು ಮೂವತ್ತೆರಡು ವರ್ಷಗಳ ಹಿಂದೆ ನಡೆದಿದ್ದರೆ ಈ ಪ್ರಸಂಗ ಹೇಗಿರುತ್ತಿತ್ತು? ಆಗ ಬಾಬಾರವರು ಪ್ರಾಣವನ್ನು ಬ್ರಹ್ಮಾಂಡಕ್ಕೆ ಏರಿಸಿ, ಸಮಾಧಿಸ್ಥರಾಗಿದ್ದರು. ಅದು ದೇಹದ ಕಠಿಣ ಅವಸ್ಥೆಯಾಗಿತ್ತು. ॥182॥ ಯಾವ ರೀತಿ ಭಕ್ತ ಮ್ಹಾಳಸಾಪತಿಯು ಅಹೋರಾತ್ರಿ ಬಾಬಾರವರನ್ನು ನೋಡಿಕೊಂಡನು ಮತ್ತು ಎಲ್ಲರೂ ಭರವಸೆಯನ್ನು ಬಿಟ್ಟಾಗ ಬಾಬಾರವರು ಇದ್ದಕ್ಕಿದ್ದಂತೆ ಎದ್ದು ಕುಳಿತರು. ॥183॥ ಅಂತಹ ಯೋಗಾಚಾರ್ಯರ ವೈಭವವನ್ನು ಹೇಗೆ ವಿವರಿಸಲು ಸಾಧ್ಯ? ಅವರು ಆಮರಣಾಂತ ಬ್ರಹ್ಮಚರ್ಯೆಯನ್ನು ಪಾಲಿಸಿದವರು! ಜ್ಞಾನಿಗಳಲ್ಲಿ ಜ್ಞಾನಿವರ್ಯರಾಗಿದ್ದವರು! ॥184॥ ಆದ್ದರಿಂದ ಅಂತಹ ಮಹಾನ್ ವ್ಯಕ್ತಿಗೆ ಸದ್ಭಾವದಿಂದ ನಮಸ್ಕರಿಸೋಣ. ದೀನನಾದ ಹೇಮಾಡನು ಅನನ್ಯನಾಗಿ ಅವರಲ್ಲಿ ಶರಣಾಗುತ್ತಾನೆ. ॥185॥


ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿನಾಥರ ನಿರ್ಯಾಣ (ದೇಹತ್ಯಾಗ)" ಎಂಬ ನಲವತ್ತಮೂರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು. ಶ್ರೀ ಸಮರ್ಥ ಸದ್ಗುರುಸಾಯಿನಾಥಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಶುಕನು ಹುಟ್ಟು ವೇದಾಂತಿ.
2. ಅವನು ಒಬ್ಬ ಬ್ರಾಹ್ಮಣನಿಂದ ಏಳು ದಿನಗಳೊಳಗೆ ಸಾಯುವನೆಂಬ ಶಾಪಕ್ಕೆ ಒಳಗಾಗಿದ್ದನು. ಆದ್ದರಿಂದ ಶುಕನು ಶಾಂತವನ್ನು ಬೋಧಿಸಿದನು. ಈ ರಾಜನ ರಾಜ್ಯಭಾರದಿಂದ ಕಲಿಯುಗವು ಆರಂಭವಾಯಿತೆಂದು ಹೇಳುತ್ತಾರೆ.



# ಅಧ್ಯಾಯ - 44

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಸಾಯಿನಾಥರ ನಿರ್ಯಾಣ (ದೇಹತ್ಯಾಗ)"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಓಂ. ನಾನು ಶ್ರೀಸಾಯಿಗೆ ನಮಿಸುತ್ತೇನೆ. ಅವರು ಚಿದ್‌ಘನರು, ಸಕಲ ಸೌಖ್ಯಗಳಿಗೆ ಆಗರ, ಸಕಲ ಸಂಪತ್ತುಗಳ ಉಗ್ರಾಣ, ಅವರ ಕೃಪೆಯಿಂದ ಎಲ್ಲ ದುಃಖವೂ ಪರಿಹಾರವಾಗುತ್ತದೆ. ॥1॥ ಕೇವಲ ನಿಮ್ಮ ಚರಣಗಳನ್ನು ವಂದಿಸುವುದರಿಂದ ಎಲ್ಲ ಪಾಪಗಳೂ ತೊಳೆದು ಹೋಗುತ್ತವೆ. ಯಾರು ಭಕ್ತಿಯಿಂದ ನಿಮ್ಮ ಭಜನೆ ಪೂಜೆಗಳನ್ನು ಮಾಡುವರೋ ಅವರು ಧನ್ಯರು! ॥2॥ ನಿಮ್ಮ ಮಂದಸ್ಮಿತ ಮುಖದ ಕಡೆ ಒಮ್ಮೆ ದೃಷ್ಟಿಸಿದರೆ ಸಾಕು. ಸಮಸ್ತ ಸಂಸಾರದ ದುಃಖಗಳೂ ಮರೆತು ಹೋಗುತ್ತವೆ. ಮತ್ತು ಹಸಿವೆ ಬಾಯಾರಿಕೆಗಳು ಕೂಡಲೇ ತೃಪ್ತಿಯಾಗುತ್ತವೆ. ಇದು ದರ್ಶನದ ಅಲೌಕಿಕತೆ. ॥3॥ ಯಾರು ಸದಾ 'ಅಲ್ಲಾ ಮಾಲಿಕ್' ಎಂದು ಧ್ಯಾನಿಸುತ್ತಿರುವರೋ ಯಾರು ನಿಷ್ಕಾಮಿಯಾಗಿ, ನಿರಭಿಮಾನಿಯಾಗಿ, ಯಾರ ಮನವು ನಿರ್ಲೋಭ ಮತ್ತು ನಿರ್ವಾಸನವಾಗಿರುವುದೋ ಅಂತಹವರ ಮಹಿಮೆಯನ್ನು ಯಾವ ರೀತಿ ವರ್ಣಿಸಲಿ? ॥4॥ ಯಾತಮಗೆ ತೊಂದರೆಕೊಟ್ಟವರಿಗೂ ಉಪಕಾರಿಯಾಗಿರುವರೋ ಮತ್ತು ಅಂತಹ ಮನಃಶಾಂತಿಯನ್ನು ಹೊಂದಿರುವರೋ ಅವರನ್ನು ಕ್ಷಣಮಾತ್ರವೂ ಮರೆಯಲು ಸಾಧ್ಯವಿಲ್ಲ. ಅವರಿಗೆ ನಿಮ್ಮ ಹೃದಯದಲ್ಲಿ ಸ್ಥಾನ ನೀಡಿರಿ. ॥5॥ ರಾಮ ಮತ್ತು ಕೃಷ್ಣರು ಕಮಲದಂತಹ ಕಣ್ಣುಳ್ಳವರು. ಸಂತರು ಒಂದು ಕಣ್ಣಿನವರಾದರೂ

ಅಥವಾ ಕುರುಡರಾಗಿಯೂ ಇರಬಹುದು. ದೇವರುಗಳು ಸುಂದರ ಸ್ವರೂಪರು. ಸಂತರು ಸದಾ ಆನಂದ ಸ್ವರೂಪರು. ||6|| ದೇವರುಗಳು ತಮ್ಮನ್ನು
ಕರೆಯುವವರನ್ನು ನೋಡಿಕೊಳ್ಳುತ್ತಾರೆ. ಆದರೆ ಸಂತರ ಅನುಗ್ರಹಕ್ಕೆ ಅಂತ್ಯವೇ ಇಲ್ಲ. ದೇವರು ಹೇಳುತ್ತಾರೆ "ಅಷ್ಟು ದೂರ ಮತ್ತು ಮುಂದೆ ಇಲ್ಲ."
ಆದರೆ ಸಂತರು ನಿಂದಕರ ಮೇಲೆಯೂ ಕರುಣೆ ತೋರುತ್ತಾರೆ. ||7|| ರಾಮ, ಕೃಷ್ಣ ಮತ್ತು ಸಾಯಿ ಇವರುಗಳ ಮಧ್ಯೆ ಯಾವುದೇ ಅಂತರವಿಲ್ಲ.
ಅವರು ಮೂವರಾಗಿ ಕಾಣಿಸುತ್ತಾರೆ. ಆದರೆ ಸಾರದಲ್ಲಿ ಏಕಸ್ವರೂಪರೇ. ||8|| ಈ ಮೂವರೂ ಮರಣಾವಸ್ಥೆಯನ್ನು ಅನುಭವಿಸಿದರು ಎಂದು
ಹೇಳುವುದು ಸಂಪೂರ್ಣವಾಗಿ ಮಿಥ್ಯೆಯು. ಯಾರಿಗೆ ಮೃತ್ಯುವಿನ ಮೇಲೆ ಅಧಿಕಾರವಿದೆಯೋ ಅವರು ಅದರಿಂದಾಗಿ ಹೇಗೆ ವ್ಯಥಿತರಾಗುತ್ತಾರೆ?
||9|| ನಮಗೆ ಸಂಚಿತ ಪ್ರಾರಬ್ಧದ ಪಾಪ ಪುಣ್ಯಗಳು ಗೊತ್ತಿಲ್ಲ. ಅದರಿಂದಾಗಿ ಇಂದಿನ ಈ ಜನ್ಮವನ್ನು ಪಡೆದಿದ್ದೇವೆ. ಅಥವಾ ನಮಗೆ ಈ ಜನ್ಮದಲ್ಲಿ
ಮಾಡಿದ ಒಳ್ಳೆಯದು ಕೆಟ್ಟದ್ದು ತಿಳಿದಿಲ್ಲ. ಸಾಯಿ ಗುರುರಾಯನು ಕರುಣಾಕರನು. ಅದನ್ನು ತಿಳಿದು ಅವರಲ್ಲಿ ಕರುಣೆಯನ್ನು ಬೇಡುತ್ತೇನೆ. ||10||
ಆಶೆಯ ಅನೇಕ ಅಲೆಗಳು ಹುಟ್ಟುತ್ತವೆ. ಅದರಿಂದ ಮನಃಶಾಂತಿ ಇಲ್ಲ. ನಿಮ್ಮ ಕೃಪೆಯಿಲ್ಲದೆ ಜೀವವು ಮನಃಸ್ಥೈರ್ಯವನ್ನು ಹೊಂದುವುದಿಲ್ಲ. ||11||
ಹಿಂದಿನ ಅಧ್ಯಾಯದ ಪ್ರಾರಂಭದಲ್ಲಿ ನಾನು ಕೆಲವು ವಿಷಯಗಳನ್ನು ಇಟ್ಟುಕೊಳ್ಳಲಾರದೆ, ನಿರೂಪಿಸುವೆನೆಂದು ಪ್ರಮಾಣಮಾಡಿದ್ದೆನು. ಅವುಗಳನ್ನು
ಪೂರ್ತಿಯಾಗಿ ನಿರೂಪಿಸಲಾಗಿರಲಿಲ್ಲ. ಅದನ್ನು ಮೊದಲಿನಿಂದ ಕೊನೆಯವರೆಗೆ ಪೂರ್ಣವಾಗಿ ಕೇಳಿರಿ. ||12|| ಅಂತ್ಯಕಾಲ ಸಮೀಪಿಸುತ್ತಿದೆ
ಎಂಬುದನ್ನು ಅರಿತು ಬಾಬಾರವರು ಬ್ರಾಹ್ಮಣನ ಮುಖದಿಂದ ರಾಮಾಯಣವನ್ನು ಹದಿನಾಲ್ಕು ದಿನಗಳು ಹಗಲು ರಾತ್ರಿ ಅನುಸಂಧಾನಪೂರ್ವಕವಾಗಿ
ಕೇಳಿದರು. ||13|| ಈ ರೀತಿ ರಾಮಾಯಣವನ್ನು ಶ್ರವಣ ಮಾಡುತ್ತ ಎರಡು ವಾರಗಳು ಕಳೆದವು. ಯಾವಾಗ ವಿಜಯ ದಶಮಿಯು ಬಂದಿತೋ
ಬಾಬಾರವರು ದೇಹವನ್ನು ತ್ಯಜಿಸಿದರು. ||14|| ಕೊನೆಯ ಅಧ್ಯಾಯದಲ್ಲಿ ಬಾಬಾರವರ ಪ್ರಾಣ ಹೋದಮೇಲೆ ಲಕ್ಷ್ಮಣಮಾಮಾನು ಯಾವ ರೀತಿ
ಪೂಜೆ ಮಾಡಿದನು, ಮತ್ತು ಯಾವ ರೀತಿ ಜೋಗನು ಆರತಿ ಮಾಡಿದನು ಎಂಬುದನ್ನು ಹೇಳಿದೆ. ||15|| ಅದರ ನಂತರ ಹಿಂದೂಗಳು ಮತ್ತು
ಮುಸ್ಲಿಮರು ಆ ಕಳೇಬರದ ಸದ್ಗತಿಗಾಗಿ ಕರ್ಮಗಳನ್ನು ಆಚರಿಸುವ ಬಗ್ಗೆ ನಿರ್ಧರಿಸಲು ಮೂವತ್ತಾರು ಗಂಟೆಗಳ ಕಾಲ ತೆಗೆದುಕೊಂಡರು. ||16||
ಯಾವ ರೀತಿ ಸಮಾಧಿಯ ಸ್ಥಾನವನ್ನು ನಿಯೋಜಿಸಲಾಯಿತು? ಯಾವ ರೀತಿ ಇಟ್ಟಿಗೆಯು ಅನಿರೀಕ್ಷಿತವಾಗಿ ಒಡೆದು ಹೋಯಿತು ಮತ್ತು ಯಾವ
ರೀತಿ ಈ ಹಿಂದೆ ಬಾಬಾರವರು ತಮ್ಮ ಪ್ರಾಣವನ್ನು ಬ್ರಹ್ಮಾಂಡಕ್ಕೆ ಏರಿಸಿ ಮೂರು ದಿನಗಳ ಕಾಲ ನಿಲ್ಲಿಸಿದ್ದರು. ||17|| ಅದು ಸಮಾಧಿಯೋ ಅಥವಾ
ದೇಹಾವಸಾನವೋ ಎಂದು ಎಲ್ಲರೂ ಸಂಶಯಗ್ರಸ್ತರಾಗಿದ್ದರು! ಅವರ ಶ್ವಾಸೋಚ್ಛ್ವಾಸಗಳ ಅವರೋಧನವನ್ನು ಗಮನಿಸಿದಾಗ ಅವರು ಸಾಮಾನ್ಯ
ಸ್ಥಿತಿಯನ್ನು ಪಡೆಯುವುದರ ಬಗ್ಗೆ ಸಂಶಯ ಉಂಟಾಗಿತ್ತು. ||18|| ಈ ರೀತಿ ಮೂರು ದಿನಗಳು ಕಳೆದ ನಂತರ, ಅವರ ದೇಹಾವಸಾನವು

ನಿಶ್ಚಿತವಾಯಿತು. ಅನಂತರ ಸಹಜವಾಗಿಯೇ ಅವರ ಉತ್ತರ ವಿಧಿಗಳ ಬಗ್ಗೆ ಎಲ್ಲರೂ ಧ್ವನಿ ಎತ್ತಿದರು. ॥19॥ ಆಗ ಆ ಸಮಯದಲ್ಲಿ ಅದುವರೆಗೆ ಅಂತಃಪ್ರಜ್ಞೆಯಲ್ಲಿಯೇ ಇದ್ದ ಬಾಬಾ ತಮ್ಮ ಶರೀರಕ್ಕೆ ಹಿಂತಿರುಗಿ ಬಂದರು. ಭಕ್ತರ ಚಿಂತೆಗಳನ್ನು ದೂರಮಾಡಿದರು. ॥20॥ ಅಂತಹ ಎಲ್ಲ ಕಥೆಗಳನ್ನು ಪ್ರೇಮಭಾವದಿಂದ ಕೇಳಿರಿ. ಕೇಳಿ ಚಿತ್ತದಲ್ಲಿ ಆನಂದ ಪಡೆಯಿರಿ ಮತ್ತು ಆಗ ಭಾವೋದ್ವೇಗದಿಂದ ಗದ್ಗದಿತರಾಗುವಿರಿ. ॥21॥ ಇದೊಂದು ಕಥೆಯಲ್ಲ, ಆದರೆ ಅಮೂಲ್ಯವಾದ ಸಾಯಿರತ್ನಗಳ ನಿಧಿಯೇ ಆಗಿದೆ. ಆ ಪೆಟ್ಟಿಗೆಯನ್ನು ಪ್ರೇಮಪೂರ್ವಕವಾಗಿ ತೆರೆಯಿರಿ ಮತ್ತು ಸುಖದರ್ಶನದ ಆನಂದವನ್ನು ಅನುಭವಿಸಿರಿ. ॥22॥ ಈ ಅಧ್ಯಾಯದಲ್ಲಿ ಪೂರ್ಣವಾಗಿ ಸಾಯಿನಾಥರು ತುಂಬಿಹೋಗಿರುವುದನ್ನೇ ನೀವು ಕಾಣುವಿರಿ. ಅದನ್ನು ಕೇಳಿ ನಿಮ್ಮ ಮನೋರಥವನ್ನು ಪೂರೈಸಿಕೊಳ್ಳುವಿರಿ. ಅವುಗಳನ್ನು ಸ್ಮರಿಸಿ ನೀವು ಸನಾಥರಾಗುವಿರಿ. ॥23॥ ಇದು ಪರಮ ಉದಾರಿಯಾದ ಸಾಯಿಯ ಚರಿತ್ರೆಯು. ಅದನ್ನು ಅವ್ಯಗ್ರಚಿತ್ತದಿಂದ, ಪ್ರೇಮಪೂರ್ವಕವಾಗಿ ಕೇಳಲು ಸಿದ್ಧರಾಗಿ. ॥24॥ ಅಂತಹ ಪಾವನ ಕಥೆಯನ್ನು ಕೇಳಿದರೆ ಭಕ್ತರ ಹಂಬಲವನ್ನು ಎಂದಿಗೂ ತೃಪ್ತಿಪಡಿಸುವುದಿಲ್ಲ. ಆದರೆ ಅವರು ಪರಮಾನಂದದಿಂದ ಪೂರ್ಣತೃಪ್ತಿಹೊಂದುತ್ತಾರೆ. ಮತ್ತು ಸಂಸಾರ ದುಃಖಗಳಲ್ಲಿ ನರಳುತ್ತಿರುವವರು ವಿಶ್ರಾಮವನ್ನು ಅನುಭವಿಸುತ್ತಾರೆ. ॥25॥ ಸಾಯಿಯ ಕಥೆಗಳು ಈ ರೀತಿ ತೃಪ್ತಿಹೊಂದಿದ ಮನಸ್ಸಿಗೆ ಆನಂದ ನೀಡುತ್ತವೆ. ಸ್ವಸ್ವರೂಪಾನಂದವು ನಮ್ಮ ಮುಂದೆಯೇ ಇರುವಂತೆ ಕಾಣುತ್ತದೆ. ಮತ್ತು ಎಲ್ಲ ಸುಖಗಳಲ್ಲಿಯೂ ಪರಿಶುದ್ಧ ಸುಖವನ್ನು ನೀಡುತ್ತದೆ. ॥26॥ ನೀವು ಅದೆಷ್ಟು ಬಾರಿ ಅದನ್ನು ಕೇಳಿದರೂ ಅದು ರಮಣೀಯವಾಗಿ, ನಿತ್ಯ ನೂತನವಾಗಿ ಕೇಳಿಸುತ್ತದೆ. ಆದ್ದರಿಂದ ಅಂತಹ ಪಾವನವಾದ ಸಂತರ ಕಥೆಯನ್ನು ಅನನ್ಯವಾದ ಪರಿಶುದ್ಧ ಮನಸ್ಸಿನಿಂದ ಕೇಳಿರಿ. ॥27॥ ಅದು ಹಾಗಿರಲಿ. ಅನಂತರ ಕಳೇಬರಕ್ಕೆ ಸದ್ಗತಿ ನೀಡುವಂತಹ, ಉತ್ತರಕ್ರಿಯೆಗಳನ್ನು 'ಮಾಡುವುದೋ ಬೇಡವೋ' ಎಂಬ ವಿಚಾರವಾಗಿ ಚರ್ಚೆಯು ನಡೆಯುತ್ತ ಎಲ್ಲರೂ ದಣಿದುಹೋದರು. ಅದರ ಕೊನೆಯ ತೀರ್ಮಾನವೇನಾಯಿತೆಂಬುದನ್ನು ಕೇಳಿರಿ. ॥28॥ ಕೊನೆಯಲ್ಲಿ ತೀರ್ಮಾನ ನಡೆಯಿತೆಂದರೆ ಬಾಬಾರವರ ದೇಹವನ್ನು ಬೂಟಿಯ ವಾಡಾದಲ್ಲಿನ ಸಭಾಂಗಣದಲ್ಲಿ ಮುರಳೀಧರನ ಪ್ರತಿಮೆಯನ್ನು ಸ್ಥಾಪಿಸಲು ನಿಗದಿಪಡಿಸಿದ್ದ ಜಾಗದಲ್ಲಿ ಇಡಬೇಕೆಂದು ತೀರ್ಮಾನವಾಯಿತು. ॥29॥ ಆರಂಭದಲ್ಲಿ, ಪಾಯವನ್ನು ಅಗೆಯುತ್ತಿದ್ದಾಗ ಲೇಂಡಿಗೆ ಹೋಗುವ ಮಾರ್ಗದಲ್ಲಿ ಬಾಬಾ ಅದರ ಹತ್ತಿರ ಹೋಗುತ್ತಿದ್ದರು. ಬಾಬಾರವರು ಮಾಧವರಾವನ ವಿನಂತಿಗೆ ಒಪ್ಪಿಗೆ ನೀಡಿದ್ದರು. ॥30॥ ಮಾಧವರಾವ್ ಬಾಬಾರವರ ಕೈಯಲ್ಲಿ ಒಂದು ತೆಂಗಿನ ಕಾಯಿಯನ್ನು ಕೊಟ್ಟು ವಿನಂತಿಸಿಕೊಂಡನು. "ಈ ಸ್ಥಳವನ್ನು ನಿಮ್ಮ ಕೃಪಾದೃಷ್ಟಿಯಿಂದ ಅನುಗ್ರಹಿಸಿ. ಏಕೆಂದರೆ ನಾನು ಇದನ್ನು ಮುರಳೀಧರನ ಗರ್ಭಗುಡಿಗಾಗಿ ಅಗೆಯುತ್ತಿದ್ದೇನೆ." ॥31॥ ಅದನ್ನು ಒಂದು ಶುಭ ಮುಹೂರ್ತವೆಂದು ಪರಿಗಣಿಸಿ ಬಾಬಾ ಹೇಳಿದರು, "ಈ ತೆಂಗಿನಕಾಯಿಯನ್ನು ಒಡೆಯಿರಿ. ನಾವೆಲ್ಲರೂ, ಬಾಲಗೋಪಾಲರು, ಇಲ್ಲಿ

ಸಮಯವನ್ನು ಕಳೆಯುತ್ತೇವೆ. ॥32॥ "ಇಲ್ಲಿಯೇ ನಾವು ನಮ್ಮ ತೊಂದರೆಗಳನ್ನು ಸುಖ-ದುಃಖಗಳನ್ನು ಮಾತನಾಡೋಣ. ನಾವು ನಮ್ಮ ಹೆಂಡತಿ ಮಕ್ಕಳ ಜೊತೆ ಚಿತ್ತಸ್ವಾಸ್ಥ್ಯವನ್ನು ಪಡೆಯುತ್ತೇವೆ." ॥33॥ ಆರಂಭದಲ್ಲಿ ಪ್ರತಿಯೊಬ್ಬರೂ ಯೋಚಿಸಿದ್ದುದು ಬಾಬಾರವರು ಏನೋ ವಿಷಯವನ್ನು ಸಾಮಾನ್ಯವಾಗಿ ಹೇಳಿದ್ದಾರೆಂದು. ಆದರೆ ಯಾವಾಗ ಮುಂದಿನ ಘಟನೆಗಳು ನಡೆದವೋ, ಆಗ ತಾವು ಬಾಬಾರವರ ಮಾತುಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂಬುದನ್ನು ಅರಿತರು. ॥34॥ ಬಾಬಾರವರ ದೇಹಾವಸಾನವಾದ ನಂತರ ಈ ಜಾಗವೇ ಬಾಬಾರವರ ಅಮೂಲ್ಯವಾದ ದೇಹವನ್ನು ರಕ್ಷಿಸಲು ಉತ್ತಮವಾದ ಸ್ಥಾನವೆಂದು ನಿಶ್ಚಿತವಾಯಿತು. ಮುರಳೀಧರನ ಪ್ರತಿಮೆಯನ್ನು ಸ್ಥಾಪಿಸುವ ವಿಚಾರವನ್ನು ಕೈಬಿಡಲಾಯಿತು. ॥35॥ ಬಾಬಾರವರ ಕೊನೆಯ ಉದ್ಗಾರ, "ಈ ದೇಹವನ್ನು ವಾಡಾದಲ್ಲಿ ಇಡಿ." ಎಂಬುದು ಕೊನೆಯಲ್ಲಿ ಪ್ರತಿಯೊಬ್ಬರ ವಿಚಾರವಾಯಿತು. ಬಾಬಾರವರು ತಾವೇ ಸ್ವತಃ ಮುರಳೀಧರರಾದರು. ॥36॥ ಶ್ರೀಮಂತ ಬೂಟಿ ಮತ್ತಿತರರೆಲ್ಲರೂ, ಹಿಂದೂ ಮುಸಲ್ಮಾನರೆಲ್ಲರೂ ಈ ನಿರ್ಧಾರದಿಂದ ಸಂತಸಗೊಂಡರು. ವಾಡಾವನ್ನು ಸತ್ಕಾರ್ಯಕ್ಕಾಗಿ ಉಪಯೋಗಿಸಲಾಯಿತು. ॥37॥ ಬಾಬಾರವರ ದೇಹವನ್ನು ಮತ್ತೆಲ್ಲಿಯಾದರೂ ಇಟ್ಟಿದ್ದರೆ, ಈ ಬಹು ಅಮೂಲ್ಯವಾದ ವಾಡೆಯು ಶೂನ್ಯವಾಗಿ, ನಿರ್ಜನವಾಗಿ, ಅತ್ಯಂತ ಭಯಾನಕವಾಗಿ ಕಾಣುತ್ತಿತ್ತು. ॥38॥ ಶ್ರೀ ಸಾಯಿಯಿಂದಾಗಿ, ಈ ದಿನ ಅಲ್ಲಿ ಪೂಜೆ, ಭಜನೆ, ಕಥನ, ಕೀರ್ತನ, ಪುರಾಣ ಶ್ರವಣ ಮತ್ತು ಅತಿಥಿ ಅಭ್ಯಾಗತರಿಗೆ ಅನ್ನದಾನ – ಇವುಗಳು ನಡೆಯುತ್ತಿವೆ. ॥39॥ ಸಾಯಿಯ ಕಾರಣದಿಂದಾಗಿಯೇ ಅಲ್ಲಿ ಅನ್ನ ಸಂತರ್ಪಣೆ ನಡೆಯುತ್ತಿದೆ. ರುದ್ರ, ಮಹಾರುದ್ರರ ಆವರ್ತನ ಪೂಜೆ ಆಗುತ್ತಿದೆ. ದೇಶ-ವಿದೇಶಗಳಿಂದ, ಹತ್ತಿರ-ದೂರದ ಊರುಗಳಿಂದ ಜನರು ಇಲ್ಲಿಗೆ ಬರುತ್ತಿದ್ದಾರೆ. ॥40॥ ಆದ್ದರಿಂದ, ಸಂತರ ವಾಣಿಗಳನ್ನು ಮನಸ್ಸಿನಲ್ಲಿಯೇ ಇಟ್ಟುಕೊಳ್ಳಿರಿ. ಕೇಳಿಸಿಕೊಳ್ಳುವ ಪ್ರತಿಯೊಂದು ಪದವನ್ನೂ ಅಧ್ಯಯನ ಮಾಡಿ. ಅವುಗಳನ್ನು ಅಪನಂಬಿಕೆಯಿಂದ ಪಕ್ಕಕ್ಕೆ ಸರಿಸಬೇಡಿ. ಅದನ್ನು ಕೇವಲ ಸಾಮಾನ್ಯವೆಂಧು ತ್ಯಜಿಸಬೇಡಿ. ॥41॥ ಪ್ರಾರಂಭದಲ್ಲಿ ಅವು ಎಷ್ಟೇ ಮುಗ್ಧವೆಂದು ಕಂಡುಬಂದರೂ ಅಥವಾ ಸಂದೇಹಭರಿತವಾಗಿ ಕಂಡರೂ, ಕಾಲವು ಮುಂದೆ ಹೋಗುತ್ತಿದ್ದ ಹಾಗೆ ಅರ್ಥವು ಸ್ಪಷ್ಟವಾಗುತ್ತದೆ. ಮೊದಲು ಅರ್ಥವಾಗುವುದು ಕಷ್ಟವಾದರೂ ಅನಂತರ ಸುಲಭವಾಗುತ್ತದೆ. ॥42॥ ದೇಹಾವಸಾನಕ್ಕೆ ಇನ್ನೂ ಸಮಯವಿರುವಾಗ, ಅನೇಕ ಅಪಶಕುನಗಳು ಮುಂದಿನ ಘಟನೆಗಳ ಮುನ್ಸೂಚನೆಯಾಗಿ, ಶಿರಡಿಯಲ್ಲಿ, ಮಸೀದಿಯಲ್ಲಿ ಮುಂಚೆಯೇ ಉಂಟಾದವು. ॥43॥ ಅವುಗಳಲ್ಲಿ ನಾನು ಶ್ರೋತೃಗಳ ಉಪಯೋಗಕ್ಕಾಗಿ ಕೇವಲ ಒಂದೇ ಒಂದನ್ನು ನಿರೂಪಿಸುತ್ತೇನೆ. ಇಲ್ಲದಿದ್ದಲ್ಲಿ, ನಾನು ಅವುಗಳೆಲ್ಲವನ್ನೂ ನಿರೂಪಿಸಿದಲ್ಲಿ ಈ ಗ್ರಂಥವು ಉದ್ದವಾಗುತ್ತದೆ. ॥44॥ ಅನೇಕ ವರ್ಷಗಳಿಂದ ಬಾಬಾರವರು ಒಂದು ಹಳೆಯ ಇಟ್ಟಿಗೆಯನ್ನು ಇಟ್ಟುಕೊಂಡಿದ್ದರು. ಅದರ ಮೇಲೆ ಅವರು ತಮ್ಮ ಕೈಗಳನ್ನು ಒರಗಿಸಿಟ್ಟು ಒಂದು ಯೋಗಿಯ ಆಸನದಲ್ಲಿ ಕುಳಿತಿರುತ್ತಿದ್ದರು. ॥45॥ ರಾತ್ರಿಯಲ್ಲಿ,

ಏಕಾಂತದಲ್ಲಿ ನಿತ್ಯವೂ ಅವರು ಇಟ್ಟಿಗೆಯ ಆಧಾರವನ್ನು ತೆಗೆದುಕೊಳ್ಳುತ್ತಿದ್ದರು. ಬಾಬಾರವರು ಸ್ವಸ್ಥಮನಸ್ಸಿನಿಂದ ಮಸೀದಿಯಲ್ಲಿ ಯೋಗಾಸನದಲ್ಲಿ ಕುಳಿತಿರುತ್ತಿದ್ದರು. ॥46॥ ಈ ಒಂದು ಕ್ರಮವು ಕೆಲವು ವರ್ಷಗಳವರೆಗೆ ಯಾವುದೇ ತಡೆಯಿಲ್ಲದೆ ನಡೆದುಕೊಂಡು ಬಂದಿತು. ಆದರೆ ವಿಧಿಯು ಯಾವುದೇ ನಿಯಮಗಳಿಂದ ಬದ್ಧವಾಗಿಲ್ಲ ಮತ್ತು ಇದ್ದರೂ ಅನಿರೀಕ್ಷಿತವಾಗಿ ಅವುಗಳನ್ನು ಮುರಿಯಬೇಕಾಗುತ್ತದೆ. ॥47॥ ಬಾಬಾರವರು ಮಸೀದಿಯಲ್ಲಿ ಇಲ್ಲದೇ ಇದ್ದಾಗ ಒಬ್ಬ ಚಿಕ್ಕ ಹುಡುಗನು ಕಸಗುಡಿಸುತ್ತಿದ್ದನು. ಅದರ ಕೆಳಗಿದ್ದ ಕಸವನ್ನು ಶುಭ್ರಮಾಡಲು ಅವನು ಆ ಇಟ್ಟಿಗೆಯನ್ನು ಸ್ವಲ್ಪ ಎತ್ತಿದನು. ॥48॥ ಅದಕ್ಕೆ ಒಡೆದು ಹೋಗುವ ವೇಳೆ ಬಂದಿತ್ತು. ಆ ಇಟ್ಟಿಗೆಯು ಆ ಹುಡುಗನ ಕೈಯಿಂದ ಜಾರಿಕೆಳಗೆ ಬಿತ್ತು. ಅದು ಜೋರಾಗಿ ಬಿದ್ದು ಎರಡು ಚೂರುಗಳಾಗಿ ಒಡೆದು ಹೋಯಿತು. ॥49॥ ಅದನ್ನು ಕೇಳಿ, ಬಾಬಾ ಹೇಳಿದರು, "ಇದು ಇಟ್ಟಿಗೆಯಲ್ಲ, ಆದರೆ ನನ್ನ ವಿಧಿಯು ಚೂರು ಚೂರಾಗಿ ಒಡೆದು ಹೋಗಿದೆ" ಅದನ್ನು ಹೇಳುತ್ತಾ ಅತಿಯಾಗಿ ತಳಮಳಿಸಿದರು ಮತ್ತು ದುಃಖಾಶ್ರುಗಳು ಅವರ ಕಣ್ಣುಗಳಿಂದ ಚಿಮ್ಮಿದವು. ॥50॥ ಇಟ್ಟಿಗೆಯು ಒಡೆದು ಹೋದಾಗ, ಯಾವುದರಿಂದ ಬಾಬಾರವರು ನಿತ್ಯವೂ ಯೋಗಾಸನದಲ್ಲಿ ಕುಳಿತುಕೊಳ್ಳುತ್ತಿದ್ದರೋ ಹಾಗೆಯೇ ಬಾಬಾರವರ ಹೃದಯವೂ ಒಡೆದು ಹೋಗಿ ಭಾವೋದ್ವೇಗಕ್ಕೆ ಒಳಗಾದರು. ॥51॥ ಬಹುಕಾಲದಿಂದ ಅವರ ಜೊತೆಯಲ್ಲಿಯೇ ಇದ್ದ ಇಟ್ಟಿಗೆಯು ಅವರ ಯೋಗಾಸನಕ್ಕೆ ಮುಖ್ಯವಾದ ಆಧಾರವಾಗಿತ್ತು, ಅದು ಇದ್ದಕ್ಕಿದ್ದ ಹಾಗೆಯೇ ಒಡೆದುಹೋದಾಗ ಅದು ಅವರಿಗೆ ಮಸೀದಿಯನ್ನೇ ಶೂನ್ಯವಾಗಿ ಮಾಡಿದಂತೆ ಕಾಣುತ್ತಿತ್ತು. ॥52॥ ಅದು ಇಟ್ಟಿಗೆಯಾಗಿದ್ದರೂ ಸಹ ಬಾಬಾರವರು ಅದನ್ನು ಬಹಳ ಇಷ್ಟಪಟ್ಟಿದ್ದರು ಮತ್ತು ತಮ್ಮ ಪ್ರಾಣದಷ್ಟೇ ಪ್ರೀತಿಸುತ್ತಿದ್ದರು. ಅದರ ಸ್ಥಿತಿಯನ್ನು ನೋಡಿ ಬಾಬಾರವರು ಮನಸ್ಸಿನಲ್ಲಿಯೇ ತಳಮಳಗೊಂಡರು. ॥53॥ ಬಾಬಾರವರು ಗಂಟೆಗಟ್ಟಲೆ ಇದೇ ಇಟ್ಟಿಗೆಯ ಮೇಲೆ ತಮ್ಮ ಮೊಣಕೈಯನ್ನು ಆಧರಿಸಿ ಯೋಗತತ್ಪರರಾಗಿ ಆಸನದ ಮೇಲೆ ಕುಳಿತಿರುತ್ತಿದ್ದರು. ಆದ್ದರಿಂದ ಅವರು ಅದನ್ನು ತುಂಬ ಪ್ರೀತಿಸುತ್ತಿದ್ದರು. ॥54॥ "ನಾನು ಯಾರ ಸಂಗದಲ್ಲಿ ಆತ್ಮಚಿಂತನೆ ಮಾಡುತ್ತಿದ್ದೆನೋ ಮತ್ತು ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದೆನೋ ಆ ನನ್ನ ಸಂಗಾತಿಯು ಈ ದಿನ ಒಡೆದು ಹೋಗಿದೆ. ಅದಿಲ್ಲದೆ ನಾನು ಕೂಡ ಉಳಿಯುವುದಿಲ್ಲ. ॥55॥ "ಆ ಇಟ್ಟಿಗೆಯು ನನ್ನ ಆಜನ್ಮ ಸಂಗಾತಿಯಾಗಿತ್ತು ಮತ್ತು ಅದು ನನ್ನನ್ನು ಬಿಟ್ಟು ಈ ದಿನ ಹೊರಟು ಹೋಗಿದೆ." ಈ ರೀತಿ ಅದರ ಗುಣಗಳನ್ನು ಸ್ಮರಿಸುತ್ತ ಬಾಬಾರವರು ದುಃಖಿಸಲು ಪ್ರಾರಂಭಿಸಿದರು. ॥56॥ ಇಲ್ಲಿ ಒಂದು ಸಹಜವಾದ ಶಂಕೆಯು ಉದ್ಭವಿಸಬಹುದು. ಈ ಇಟ್ಟಿಗೆಯು ಒಂದು ಕ್ಷಣಭಂಗುರವಾದ ನಾಶಹೋಗುವ ವಸ್ತುವಲ್ಲವೇ? ಅದಕ್ಕಾಗಿ ದುಃಖಿಸುವುದೇಕೆ? ಜನರು ಏನು ಹೇಳುತ್ತಾರೆ? ॥57॥ ಯಾರಿಗಾದರೂ ಮೊದಲನೋಟಕ್ಕೆ ಇಂತಹ ಶಂಕೆಯುಂಟಾದಲ್ಲಿ ಅದಕ್ಕೆ ಸಮಾಧಾನವನ್ನು ಸಾಯಿಯ ಚರಣಗಳಿಗೆ ವಂದಿಸುತ್ತ ವಿವರಿಸಲು ಪ್ರಯತ್ನಿಸುತ್ತೇನೆ. ॥58॥ ಸಂತರ ಅವತಾರವು ಜಗದೋದ್ಧಾರಕ್ಕಾಗಿ ಆಗುತ್ತದೆ.

ಮತ್ತು ದೀನರನ್ನೂ, ಪಾಮರರನ್ನೂ ಭವಸಾಗರದಿಂದ ದಾಟಿಸಲು ಆಗುತ್ತದೆ. ಅವರಿಗೆ ಬೇರೆ ಯಾವುದೇ ಕರ್ತವ್ಯವಾಗಲಿ ಗುರಿಯಾಗಲಿ ಇರುವುದಿಲ್ಲ. ॥59॥ ಅವರು ನಗುತ್ತಾರೆ, ಅಳುತ್ತಾರೆ, ಸಾಮಾನ್ಯ ಜನರ ರೀತಿ ಆಟವಾಡುತ್ತಾರೆ. ಆದರೆ ಅದೆಲ್ಲವೂ ನಾಟಕವೇ. ಜಗತ್ತಿನಲ್ಲಿ ಶ್ರೇಷ್ಠವ್ಯಕ್ತಿಗಳ ವ್ಯವಹಾರದ ರಹಸ್ಯವೇ ಇದು. ಲೋಕದ ವ್ಯವಹಾರದ ರೀತಿಯೇ ಇದು. ॥60॥ ಸಂತರು ಪೂರ್ಣಜ್ಞಾನಿಗಳಾಗಿದ್ದರೂ ಸಹ, ಯಾವುದೇ ಆಶೆ ಮತ್ತು ಸಂಕಲ್ಪಗಳಿಂದ ದೂರವಾಗಿದ್ದರೂ ಸಹ, ಲೋಕದ ಜನರನ್ನು ಭವಸಾಗರದಿಂದ ದಾಟಿಸುವುದಕ್ಕಾಗಿ ಅವರು ಕಾರ್ಯ ಪ್ರವೃತ್ತರಾಗುತ್ತಾರೆ. ॥61॥ ಅದು ಹಾಗಿರಲಿ. ಅವರು ದೇಹಾವಸಾನದ ಮೂವತ್ತೆರಡು ವರ್ಷಗಳ ಮೊದಲೇ ಸಮಾಧಿಯು ಆಗಬೇಕಾಗಿತ್ತು. ಆದರೆ ಮಾಳಸಾಪತಿಯ ಬುದ್ಧಿಯು ನಿಶ್ಚಯವಾಗಿಯೂ, ನಿಖರವಾಗಿಯೂ ಈ ಅಮಂಗಳಕರವಾದ ಘಟನೆಯನ್ನು ತಡೆಯದಿದ್ದಲ್ಲಿ ಅದು ನಡೆದು ಹೋಗುತ್ತಿತ್ತು. ಇದು ಸತ್ಯ. ॥62॥ ಈಗ ಹೇಳಿದ ಘಟನೆಯನ್ನು ತಡೆಯದೇ ಇದ್ದಲ್ಲಿ ಬೇರೆ ಎಲ್ಲರೂ ಸಾಯಿ ಸಂಗದ ಸುಯೋಗವನ್ನು ಪಡೆಯಲು ಹೇಗೆ ಸಾಧ್ಯವಾಗುತ್ತಿತ್ತು? ಈ ಘಟನೆಯನ್ನು ಬರೆಯುವ ನಲವತ್ತಮೂರು ವರ್ಷಗಳ ಮುಂಚೆಯೇ ಈ ಕುಯೋಗವು ಉಂಟಾಗುತ್ತಿತ್ತು. ॥63॥ ಮಾರ್ಗಶೀರ್ಷ ಮಾಸದ ಪೂರ್ಣಿಮೆಯ ದಿನ (ಸಮಾಧಿಯ ಮೂವತ್ತೆರಡು ವರ್ಷಗಳ ಹಿಂದೆ) ಬಾಬಾರವರು ಉಬ್ಬಸದ ಬಾಧೆಯಿಂದ ಬಹಳ ಅಸ್ವಸ್ಥರಾದರು. ದೇಹಧರ್ಮದ ಯಾತನೆಯನ್ನು ಸಹಿಸಲು ಬಾಬಾರವರು ತಮ್ಮ ಪ್ರಾಣವನ್ನು ಬ್ರಹ್ಮಾಂಡಕ್ಕೆ ಏರಿಸಿ ಸಮಾಧಿಸ್ಥರಾದರು. ॥64॥ "ಇಲ್ಲಿಂದ ಮೂರು ದಿನಗಳ ಕಾಲ ನಾನು ನನ್ನ ಪ್ರಾಣವನ್ನು ಎತ್ತರಕ್ಕೆ ಏರಿಸುತ್ತೇನೆ ಮತ್ತು ಸಮಾಧಿಗೆ ಹೋಗುತ್ತೇನೆ. ನನ್ನನ್ನು ಎಚ್ಚರಿಸಬೇಡಿ" ಎಂದು ಬಾಬಾರವರು ಅವರಿಗೆ ಹೇಳಿದ್ದರು. ॥65॥ "ಸಭಾ ಮಂಟಪದ ಅಂಗಳದ ಆ ಮೂಲೆಯನ್ನು ನೋಡಿ" ಬಾಬಾರವರು ತಮ್ಮ ಕೈಬೆರಳಿನಿಂದ ತೋರಿಸುತ್ತ ಹೇಳಿದರು. "ಅಲ್ಲಿ ನನ್ನ ಸಮಾಧಿಯನ್ನು ಅಗೆಯಿರಿ ಮತ್ತು ನನ್ನನ್ನು ಅಲ್ಲಿ ಇಡಿ." ॥66॥ ಅನಂತರ ಮ್ಹಾಳಸಾಪತಿಯತ್ತ ಸ್ವಯಂ ನೋಡುತ್ತ ನಿಷ್ಠುರವಾಗಿ ಹೇಳಿದರು, "ನನ್ನನ್ನು ಮೂರು ದಿನಗಳ ಪರ್ಯಂತ ಉಪೇಕ್ಷಿಸಬೇಡ." ॥67॥ "ಆ ಜಾಗದಲ್ಲಿ ಎರಡು ಧ್ವಜಗಳನ್ನು ನಿಶಾನೆಯಾಗಿ ಇಡು." ಈ ರೀತಿ ಹೇಳುತ್ತ ಅವರು ತಮ್ಮ ಪ್ರಾಣವನ್ನು ಬ್ರಹ್ಮಸ್ಥಿತಿಗೆ ಏರಿಸಿದರು. ॥68॥ ಏಕಾಏಕಿ ಅವರು ಗಿರಗಿರನೆ ಸುತ್ತಿ ಜ್ಞಾನತಪ್ಪಿ ಬಿದ್ದರು. ಮ್ಹಾಳಸಾಪತಿಯು ಅವರನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡನು. ಇತರರು ಆಶೆಬಿಟ್ಟರು. ॥69॥ ಈ ಘಟನೆ ನಡೆದಾಗ, ಅದು ರಾತ್ರಿಯ ಸುಮಾರು ಹತ್ತು ಗಂಟೆಯ ಸಮಯ. ಓಹ್! ಎಲ್ಲ ಜನರೂ ಸ್ತಬ್ಧರಾದರು. ಏಕಾಏಕಿ ಈ ಪ್ರಸಂಗದ ತಿರುವಿನ ಬಗ್ಗೆ ಚಿಂತಿಸಲು ಪ್ರಾರಂಭಿಸಿದರು. ॥70॥ ಅಲ್ಲಿ ಉಸಿರಾಟವಾಗಲಿ ನಾಡಿ ಬಡಿತವಾಗಲಿ ಇರಲಿಲ್ಲ. ದೇಹದಲ್ಲಿ ಜೀವ ಇಲ್ಲವೆಂದೇ ಕಾಣಿಸುತ್ತಿತ್ತು. ಜನರು ಒಂದು ಭಯಂಕರ ಅವಸ್ಥೆಯಲ್ಲಿದ್ದರು. ಆದರೆ ಸಾಯಿಯವರು ಸುಖ-ಶಾಂತಿಯಲ್ಲಿದ್ದರು. ॥71॥ ಅನಂತರ ಮಾಳಸಾಪತಿಯು ಹಗಲು ರಾತ್ರಿ ಎಚ್ಚರಿಕೆಯಿಂದ

ನೋಡಿಕೊಂಡನು. ಸಾಯಿಬಾಬಾರವರ ಜಪವಮಾಡುತ್ತಲೇ ಅವರ ಹತ್ತಿರ ಎಚ್ಚರವಾಗಿ ಕುಳಿತಿದ್ದನು. ॥72॥ ಸಾಯಿಯು ತಾವೇ ಸಮಾಧಿಯನ್ನು ಅಗೆಯುವಂತೆ ಆಜ್ಞಾಪಿಸಿದ್ದರೂ ಯಾರಿಗೂ ಅದನ್ನು ಮಾಡಲು ಧೈರ್ಯವಿರಲಿಲ್ಲ. ॥73॥ ಬಾಬಾರವರನ್ನು ಸಮಾಧಿಯ ಸ್ಥಿತಿಯಲ್ಲಿ ನೋಡಿ ಇಡೀ ಹಳ್ಳಿಯೇ ಅಲ್ಲಿ ನೆರೆಯಿತು. ಜನರು ವಿಸ್ಮಿತರಾಗಿ ತಟಸ್ಥರಾಗಿ ನಿಂತರು. ಭಗತ್ ಮ್ಹಾಳಸಾಪತಿಯು ಮಾತ್ರ ದೇಹವನ್ನು ತನ್ನ ತೊಡೆಯ ಮೇಲಿನಿಂದ ತೆಗೆಯಲಿಲ್ಲ. ॥74॥ ದೇಹದಲ್ಲಿ ಪ್ರಾಣವಿಲ್ಲದೆ ಇರುವುದನ್ನು ನೋಡಿದರೆ ಜನರು ಏಕಾಏಕಿ ಆಘಾತಗೊಳ್ಳುವರು. ಅದರಿಂದಾಗಿ ಸಾಯಿಯವರು ದೇಹವನ್ನು ಮೂರು ದಿನಗಳವರೆಗೆ ಇಡಬೇಕೆಂದು ಹೇಳಿ ಜನರನ್ನು ದಾರಿತಪ್ಪಿಸಿದರು. ॥75॥ ಶ್ವಾಸ, ಉಚ್ಛ್ವಾಸಗಳು ನಿಂತು ಹೋಗಿದ್ದವು. ಇಂದ್ರಿಯಗಳೆಲ್ಲವೂ ತಟಸ್ಥವಾಗಿದ್ದವು. ಚಲನವಲನದ ಗಂಧವೂ ಇರಲಿಲ್ಲ. ಅವರ ಮುಖದ ಮೇಲಿದ್ದ ತೇಜಸ್ಸು ಮಂದವಾಗಿತ್ತು. ॥76॥ ಅವರು ಬಾಹ್ಯವ್ಯವಹಾರದ ಬಗ್ಗೆ ಪರಿವೆಯನ್ನು ಕಳೆದುಕೊಂಡಿದ್ದರು. ಅವರು ದೃಢವಾದ ಮೌನದಲ್ಲಿ ಮುಳುಗಿದ್ದರು. ಅವರು ಹೇಗೆ ಮತ್ತೆ ಪ್ರಜ್ಞೆಯನ್ನು ಮರಳಿ ಪಡೆಯುವರು? ಇದು ಎಲ್ಲರಿಗೂ ಗಹನವಾದ ಚಿಂತೆಯಾಗಿತ್ತು. ॥77॥ ಎರಡು ದಿನಗಳು ಕಳೆದವು. ಆದರೆ ಅವರಿಗೆ ಪ್ರಜ್ಞೆ ಬರಲಿಲ್ಲ. ಮೌಲ್ವಿಗಳು, ಮೌಲಾನಾಗಳು ಮತ್ತು ಫಕೀರರು ಬಂದರು ಮತ್ತು ಮುಂದಿನ ಕ್ರಮದ ಬಗ್ಗೆ ವಿಚಾರಗಳನ್ನು ಮಂಡಿಸಿದರು. ॥78॥ ಅಪ್ಪಾ ಕುಲಕರ್ಣಿ ಮತ್ತು ಕಾಶೀರಾಮ ಸಹ ಬಂದರು. ಅವರು ದೃಢನಿಶ್ಚಯ ತೆಗೆದುಕೊಂಡರು. ಬಾಬಾರವರು ತಮ್ಮ ಚಿರಶಾಂತಿ ಧಾಮವನ್ನು ಪಡೆದಿದ್ದಾರೆ. ಮತ್ತು ದೇಹಕ್ಕೆ ವಿಶ್ರಾಮ ಕೊಡಬೇಕಾಗುತ್ತದೆ. ॥79॥ ಕೆಲವರು ಹೇಳಿದರು, "ಇನ್ನು ಸ್ವಲ್ಪ ಕಾಲಕಾಯಿರಿ. ಇಷ್ಟು ಆತುರ ಒಳ್ಳೆಯದಲ್ಲ. ಬಾಬಾರವರು ಸಾಮಾನ್ಯ ಜನರಂತಲ್ಲ. ಬಾಬಾರವರ ಮಾತುಗಳು ನಿಜವಾಗುತ್ತವೆ." ॥80॥ ಉಳಿದವರು ತಕ್ಷಣವೇ ಪ್ರತ್ಯುತ್ತರ ನೀಡಿದರು. "ಅದು ಯಾವ ರೀತಿ ಜೀವದ ಚೈತನ್ಯವು ಈಗಾಗಲೇ ಮಂಜುಗಡ್ಡೆಯಂತೆ ತಣ್ಣಗಾಗಿರುವ ದೇಹದಲ್ಲಿ ಬಂದು ಸೇರುತ್ತದೆ? ಇವರೆಲ್ಲರೂ ಅದೆಷ್ಟು ಅವಿಚಾರಿಗಳು. ॥81॥ "ಅವರು ತೋರಿಸಿರುವ ಜಾಗದಲ್ಲಿ ಸಮಾಧಿಯನ್ನು ಅಗೆಯಿರಿ. ಜನರೆಲ್ಲರನ್ನೂ ಉತ್ತರಕ್ರಿಯೆಗಳನ್ನು ಮಾಡಲು ಕರೆಯಿರಿ. ಎಲ್ಲ ತಯಾರಿಗಳನ್ನೂ ಮಾಡಿಕೊಳ್ಳಿ." ॥82॥ ಈ ರೀತಿ. ಮಾಡಬೇಕೋ ಬೇಡವೋ ಎಂಬ ಬಗ್ಗೆ ಚರ್ಚೆ ನಡೆಯುತ್ತಲೇ ಮೂರು ದಿನಗಳು ಕಳೆದುಹೋದವು. ಅನಂತರ ಬೆಳಗಿನ ಜಾವ ಮೂರು ಘಂಟೆಗೆ ಚೇತನವು ಹಿಂತಿರುಗುತ್ತಿರುವುದು ಕಂಡು ಬಂದಿತು. ॥83॥ ಬಹಳ ನಿಧಾನವಾಗಿ ಕಣ್ಣುಗಳು ತೆರೆದುಕೊಂಡವು. ದೇಹವು ಅಲುಗಾಡಿತು ಮತ್ತು ಕೈಕಾಲುಗಳೂ ನೆಟ್ಟಗಾದವು. ಶ್ವಾಸೋಚ್ಛ್ವಾಸಗಳ ಮತ್ತೆ ಪ್ರಾರಂಭವಾದುವು. ಮತ್ತು ಹೊಟ್ಟೆಯು ಅಲುಗಾಡಲು ಪ್ರಾರಂಭವಾಯಿತು. ॥84॥ ಅವರ ಮುಖವು ಪ್ರಸನ್ನವಾಯಿತು. ಅವರ ಕಣ್ಣುಗಳು ಮಿಟುಕಿಸಲು ಪ್ರಾರಂಭವಾದುವು. ಪ್ರಜ್ಞಾಹೀನ ಸ್ಥಿತಿಯು ಮಾಯವಾಯಿತು. ಎಚ್ಚರದ ಲಕ್ಷಣಗಳು ಕಾಣಿಸಿಕೊಂಡವು. ॥85॥ ಅವರು ಮರೆತು ಹೋಗಿದ್ದ ಸ್ಥಿತಿಯನ್ನು ಮತ್ತೆ ನೆನಪಿಗೆ

ತಂದಂತೆ ಕಾಣಿಸುತ್ತಿತ್ತು. ಕಳೆದು ಹೋಗಿದ್ದ ಭಂಡಾರವು ಮತ್ತೆ ದೊರಕಿತ್ತು. ಮತ್ತು ಎಲ್ಲರಿಗೂ ಸುಲಭವಾಗಿ ದೊರಕುವಂತಾಯಿತು. ॥86॥ ಸಾಯಿಯವರು ಪೂರ್ಣಪ್ರಜ್ಞೆಯಿಂದ ಚೇತರಿಸಿಕೊಂಡಿದ್ದನ್ನು ನೋಡಿ ಸಕಲರೂ ಪ್ರಸನ್ನವದನರಾದರು. ದೇವರ ದಯೆಯಿಂದ ಒಂದು ದೊಡ್ಡ ವಿಘ್ನವು ಪರಿಹಾರವಾಯಿತು. ಭಕ್ತ ಜನರು ಆಶ್ಚರ್ಯಚಕಿತರಾದರು. ॥87॥ ಭಗತ್‌ನು (ಮ್ಹಾಳಸಾಪತಿ) ಸಾಯಿಯವರು ತಮ್ಮ ಕುತ್ತಿಗೆಯನ್ನು ಅಲುಗಾಡಿಸಿದುದನ್ನು ಕೌತುಕದಿಂದ ನೋಡಿದನು. ಮೌಲ್ವಿಗಳು ಮತ್ತು ಫಕೀರರು ತಲೆ ಎತ್ತದಾದರು. ಈ ರೀತಿಯಲ್ಲಿ ಆ ಭಯಂಕರ ಪ್ರಸಂಗ ಮುಕ್ತಾಯವಾಯಿತು. ॥88॥ ಭಗತ್‌ನು ಏನಾದರೂ ಬಾಬಾರವರ ನಿರ್ದೇಶನವನ್ನು ಪಾಲಿಸದೇ ಇದ್ದಿದ್ದರೆ, ಮೌಲ್ವಿಯ ದುರಾಗ್ರಹದ ಮಾತುಗಳನ್ನು ಕೇಳಿ ತನ್ನ ನಿರ್ಧಾರವನ್ನು ಅಲ್ಪಮಾತ್ರವಾದರೂ ಬದಲಿಸಿದ್ದಲ್ಲಿ ಅದೆಂತಹ ಕಠಿಣ ವೇಳೆ ಉಂಟಾಗುತ್ತಿತ್ತು! ॥89॥ ಇದನ್ನು ಬರೆಯುವ ನಲವತ್ತಮೂರು ವರ್ಷಗಳ ಮುಂಚೆಯೇ ಗೋರಿಯನ್ನು ಕಟ್ಟಿಬಿಡುತ್ತಿದ್ದರು. ಅನಂತರ ಸಾಯಿಯ ಮನೋಹರವಾದ ದರ್ಶನವನ್ನು ಮಾಡಿ ಸುಖಪಡಲು ಯಾರಿಗೆ ಸಾಧ್ಯವಾಗುತ್ತಿತ್ತು? ॥90॥ ಸಾಯಿಯವರು ಲೋಕೋಪಕಾರಕ್ಕಾಗಿ ಸಮಾಧಿ ಸ್ಥಿತಿಯನ್ನು ವಿಸರ್ಜಿಸಿ ಭಕ್ತರಿಗೆ ಸಮಾಧಾನ ನೀಡಲು ಮತ್ತೆ ಎದ್ದು ಬಂದರು. ॥91॥ ಭಕ್ತರಿಗಾಗಿ ಮೈಮುರಿದು ಶ್ರಮಿಸುತ್ತ, ಜೊತೆಗೆ ತಮ್ಮಷ್ಟಕ್ಕೆ ತಾವು ಪರಮಾನಂದದಲ್ಲಿ ಮುಳುಗಿದ್ದವರನ್ನು ತಮ್ಮ ನಿರ್ಯಾಣಕ್ಕೆ ಮುಂಚೆಯೇ ಎಚ್ಚರಿಸಲು ಹೇಗೆ ಸಾಧ್ಯ? ಅವರ ಲೀಲೆಯನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ! ॥92॥ ಬಾಬಾರವರಿಗೆ ಮತ್ತೆ ಪ್ರಜ್ಞೆ ಬಂದುದನ್ನು ನೋಡಿ ಭಕ್ತ ಜನರೆಲ್ಲರೂ ಸಂತಸಪಟ್ಟರು. ದರ್ಶನ ಪಡೆಯಲು ಪ್ರತಿಯೊಬ್ಬರೂ ಓಡಿದರು. ಅವರ ಪುನರುಜ್ಜೀವ ಎಲ್ಲರಿಗೂ ಆನಂದಕರವಾಗಿತ್ತು. ॥93॥ ಅದು ಹಾಗಿರಲಿ. ಅಂತಿಮ ಮಹಾಸಮಾಧಿಯ ಪೂರ್ವಕಥೆಯನ್ನು ಮುಂದುವರೆಸಲು, ಅದರ ಸಂಪೂರ್ಣ ವಿವರಗಳನ್ನು ಈ ಹಿಂದೆಯೇ ನಿರೂಪಿಸಿರುವೆನು. ಅದೆಲ್ಲವೂ ನನಗೆ ನೆನಪಿರುವಂತೆಯೇ ನಡೆದಿದೆ. ॥94॥ ಆದುದರಿಂದ, ನೀವು ಶ್ರೋತೃಗಳೆಲ್ಲರೂ, ನಿಮಗೆ ನೀವೇ ಒಂದು ಕ್ಷಣ ಪ್ರಶ್ನಿಸಿಕೊಳ್ಳಿರಿ– ಬಾಬಾರವರು ಈ ಹಿಂದೆ ಮತ್ತೆ ಪ್ರಜ್ಞೆಗೆ ಮರಳಿದರೆಂದು ಸಂತೋಷ ಪಡಬೇಕೇ ಅಥವಾ ಬಾಬಾರವರು ಮಹಾ ಸಮಾಧಿ ತೆಗೆದುಕೊಂಡರೆಂದು ದುಃಖಿಸಬೇಕೇ? ಈ ಎರಡೂ ಭಾವಗಳಿಗೆ ಅವಿವೇಕವೇ ಮೂಲ. ॥95॥ ಸಾಯಿಯ ಎಂಟು ಮೊಳದ ಈ ಭೌತಿಕ ದೇಹ ಮತ್ತು ಇಂದ್ರಿಯಗಳು ನಮ್ಮ ಸಾಯಿಯಿಂದ ನಿರ್ಧಾರಿತವಾಗಿದೆಯೇ? ಈ ಸಂಶಯವನ್ನು ಎಂದೆಂದಿಗೂ ತೆಗೆದು ಹಾಕಿ. ॥96॥ ಯಾರಾದರೂ ಆ ದೇಹವನ್ನು ಸಾಯಿಯೆಂದು ಕರೆಯಬೇಕೆಂದರೆ, ದೇಹದ ಮತ್ತು ಭೌತಿಕ ಎಲ್ಲ ಸಂತೋಷಗಳು ಮತ್ತು ವಿಷಯಭೋಗಗಳನ್ನು ಮೀರಿರುವವರಿಗೆ ಹೆಸರಿಲ್ಲ. ಅದಕ್ಕೆ ಒಂದು ರೂಪವಿಲ್ಲ. ಶ್ರೀ ಸಾಯಿಯು ರೂಪಾತೀತರು. ॥97॥ ದೇಹವು ನಾಶವಾಗುವಂತಹುದು, ಕೇವಲ ಬ್ರಹ್ಮ ಮಾತ್ರನೇ ನಾಶರಹಿತ. ದೇಹವು ಪಂಚಭೂತಗಳಲ್ಲಿ ಸೇರಿಹೋಗುತ್ತದೆ. ಆದರೆ ಬ್ರಹ್ಮನಿಗೆ ಆದಿ ಮತ್ತು ಅಂತ್ಯ ಯಾವುದೂ ಇಲ್ಲ. ॥98॥ ಶುದ್ಧ, ಸತ್ವಾತ್ಮಕ,

ಬ್ರಹ್ಮರೂಪ, ಚೈತನ್ಯ ಸ್ವರೂಪವನ್ನು ಗಮನಿಸಿ. ಅದು ಜಡ ಇಂದ್ರಿಯಗಳನ್ನು ಚಾಲನೆಗೊಳಿಸುತ್ತದೆ. ಆ ವಸ್ತುವಿನ ಹೆಸರೇ ಸಾಯಿ. ॥99॥ ಅವರು ಇದ್ರಿಯಾತೀತರು. ಇದ್ರಿಯಗಳು ಜಡವಸ್ತುಗಳು ಮತ್ತು ಅವು ಬ್ರಹ್ಮವನ್ನು ಅರಿಯವು. ಆದರೆ ಆ ಚೇತನವಿಂದ್ರಿಯಗಳನ್ನು ಪ್ರವರ್ತನಗೊಳಿಸುತ್ತದೆ ಮತ್ತು ಪ್ರಾಣದ ಜೊತೆಯಲ್ಲಿ ಅವುಗಳಿಗೆ ಚಾಲನೆ ನೀಡುತ್ತದೆ. ॥100॥ ಆ ಶಕ್ತಿಯ ಹೆಸರು ಸಾಯಿ. ಅದಿಲ್ಲದ ಜಾಗವ್ಯಾವುದೂ ಇಲ್ಲ. ಅದಿಲ್ಲದೆ ದಶದಿಕ್ಕುಗಳೂ ಶೂನ್ಯ. ಅದು ಚರಾಚರಗಳನ್ನೆಲ್ಲವನ್ನೂ ತುಂಬಿರುತ್ತದೆ. ॥101॥ ಆ ವಸ್ತುವೇ ಅವತಾರಸ್ಥಿತಿಯನ್ನು ಪಡೆದಿದೆ. ಇದಕ್ಕೆ ಮುಂಚೆ ಅದು ಅವ್ಯಕ್ತ ಸ್ಥಿತಿಯಲ್ಲಿತ್ತು, ಒಂದು ನಾಮ-ರೂಪವನ್ನು ತೆಗೆದುಕೊಂಡು ಪ್ರತ್ಯೇಕತ್ವವನ್ನು ಪಡೆದು ವ್ಯಕ್ತವಾಯಿತು. ಅದರ ಕಾರ್ಯ ಮುಗಿದನಂತರ ಮತ್ತೆ ಅವ್ಯಕ್ತದಲ್ಲಿ ಲೀನವಾಯಿತು. ॥102॥ ಅವತಾರದ ಕಾರ್ಯವನ್ನು ಸಂಪೂರ್ಣವಾಗಿ ನಡೆಸಿದ ಮೇಲೆ ಅವತಾರಕ್ಕಾಗಿ ತೆಗೆದುಕೊಂಡ ದೇಹವನ್ನು ತ್ಯಜಿಸಿ ನಿರ್ವಿಕಲ್ಪ ಭುವನವನ್ನು ಪ್ರವೇಶಿಸುವ ರೀತಿಯಲ್ಲಿಯೇ ಸಾಯಿಯು ಈ ರೀತಿ ವರ್ತಿಸಿದರು. ॥103॥ ಅವರು ಈ ಮುಖವಾಡದ ಆಚೆ ಹೋಗಲು ಮನದಲ್ಲೇ ನಿಶ್ಚಯಿಸಿದಾಗ, ಗಾಣಗಾಪುರದ ಸ್ವಾಮಿ ಶ್ರೀ ನರಸಿಂಹಸ್ವಾಮಿಯವರು, "ನಾನು ಪರ್ವತಯಾತ್ರೆಗೆ ಹೋಗುತ್ತೇನೆ" ಎಂದು ಹೇಳಿದ ರೀತಿಯಲ್ಲಿಯೇ, ಏಕಾಏಕಿ ಹೊರಟುಬಿಟ್ಟರು. ॥104॥ ಭಕ್ತರು ಅವರನ್ನು ತಡೆದಾಗ ಅವರನ್ನು ಸಮಾಧಾನ ಪಡಿಸುತ್ತ ಹೇಳಿದರು. "ನನ್ನ ನಿರ್ಗಮನವು ಲೋಕಾಚಾರಕ್ಕೆ ಅನುಗುಣವಾಗಿದೆ. ನಾನು ಗಾಣಗಾಭವನವನ್ನು ಬಿಟ್ಟು ಹೋಗುತ್ತಿಲ್ಲ. ॥105॥ "ಕೃಷ್ಣಾ ನದಿಯ ತೀರದಲ್ಲಿ ಪ್ರಾತಃಕಾಲದ ಸ್ನಾನವನ್ನು ಮುಗಿಸಿ, ಒಂದು ಕ್ಷೇತ್ರ ಪೂಜೆಯನ್ನು ಮಾಡಿ ಮಠದಲ್ಲಿ ಪಾದುಕೆಗಳನ್ನು ಪೂಜಿಸಿ. ನಾನು ಅಲ್ಲಿ ನಿರಂತರ ವಾಸಿಸುತ್ತೇನೆ." ॥106॥ ಸಾಯಿಬಾಬಾರವರ ಕಥೆಯೂ ಇದೇ. ನಿಧನವು ಕೇವಲ ಲೋಕಾಚಾರವಾಗಿದೆ. ಶ್ರೀ ಸಾಯಿಯುಎಲ್ಲರ ಸ್ಥಿರ, ಚರಗಳಲ್ಲೂ ಎಲ್ಲರ ಅಂತರಂಗಗಳಲ್ಲೂ ವ್ಯಾಪಿಸಿದ್ದಾರೆ. ॥107॥ ಶ್ರೀ ಸಾಯಿಯು ಮರಣಾತೀತರು. ಎಂದಿಗೂ ಮನದಲ್ಲಿ ಸಂದೇಹಪಡಬೇಡಿ. ಪ್ರತಿಯೊಬ್ಬರೂ ತಮ್ಮ ಭಾವಸ್ಥಿತಿಗೆ ಅನುಗುಣವಾಗಿ ಅನುಭವ[1] ಪಡೆಯಬಹುದು. ॥108॥ ಸಾಯಿಯು ಚರಾಚರಗಳಲ್ಲೆಲ್ಲಾ ತುಂಬಿದ್ದಾರೆ. ಸಾಯಿಯು ನಮ್ಮ ಒಳಗೂ ಹೊರಗೂ ಇದ್ದಾರೆ. ಸಾಯಿಯು ನನ್ನ ಮತ್ತು ನಿಮ್ಮ ಹೃದಯಗಳಲ್ಲೆಲ್ಲ ತುಂಬಿದ್ದಾರೆ. ಅವರು ಅಲ್ಲಿ ನಿರಂತರ ಶಾಶ್ವತವಾಗಿ ನೆಲೆಸಿದ್ದಾರೆ. ॥109॥ ಸಾಯಿ ಸಮರ್ಥರು ದೀನದಯಾಳು, ಮುಗ್ಧಭಕ್ತರ ರಕ್ಷಕರು. ಅವರು ಪರಮ ಪ್ರೇಮವನ್ನು ಬಯಸುವವರು ಮತ್ತು ಸಕಲರನ್ನು ಅತೀವ ಪ್ರೇಮದಿಂದ ನೋಡುವವರೂ ಆಗಿದ್ದಾರೆ. ॥110॥ ನಾವು ನಮ್ಮ ಚರ್ಮ ಚಕ್ಷುಗಳಿಂದ ಅವರನ್ನು ನೋಡಲು ಸಾಧ್ಯವಾಗದಿದ್ದರೂ ಅವರು ಸರ್ವವ್ಯಾಪಿಯಾಗಿದ್ದಾರೆ. ಅವರು ಸೂಕ್ಷ್ಮರೂಪದಲ್ಲಿ ಅಡಗಿದ್ದರೂ ನಾವು ಅವರಲ್ಲಿ ಲೀನವಾಗಿರುವಂತೆ ಮಾಡುತ್ತಾರೆ॥111॥ ಅವರ ದೇಹತ್ಯಾಗವು ಕೇವಲ ಒಂದು ಠಕ್ಕು ಅಷ್ಟೆ. ಅದು ನಮ್ಮನ್ನು ಮೋಸಪಡಿಸುವ ಸೋಗು ಅಷ್ಟೆ. ಅವರು ಅತ್ಯುತ್ತಮ ನಟರು, ಶಾಶ್ವತವಾಗಿದ್ದರೂ ಅವ್ಯಕ್ತರಂತೆ

ಕಾಣುತ್ತಾರೆ. ॥112॥ ನಮಗೆ ಅವರ ಮೇಲಿರುವ ಪ್ರೀತಿ ಮತ್ತು ಅನುರಾಗದಿಂದ ಅವರನ್ನು ಹಿಂಬಾಲಿಸೋಣ. ಮತ್ತು ಕೊನೆಯಲ್ಲಿ ಅವರನ್ನು ಪಡೆಯೋಣ. ನಮ್ಮ ಧ್ಯೇಯವನ್ನು ಸಫಲಗೊಳಿಸೋಣ. ॥113॥ ಅವರನ್ನು ಹೃದಯ ಮತ್ತು ಮನಃ ಪೂರ್ವಕವಾಗಿ ಪೂಜಿಸಿದಲ್ಲಿ ಮತ್ತು ಭಕ್ತಿಭಾವದಿಂದ ಸ್ಮರಿಸಿದಲ್ಲಿ ಸಕಲ ಭಕ್ತರು ಅವರ ಸರ್ವವ್ಯಾಪಕತ್ವವನ್ನು ಅನುಭವಿಸಬಹುದು. ॥114॥ ಸದಾ ಚಿನ್ಮಯಸ್ವರೂಪರಾಗಿರುವವರಿಗೆ ಹುಟ್ಟು ಸ್ಥಿತಿ ಮತ್ತು ಸಾವುಗಳ ಭಯವಿಲ್ಲ. ಅವರು ಸದಾ ಸರ್ವದಾ ಚಿನ್ಮಯ ಸ್ವರೂಪರು. ಭಾವೋದ್ವೇಗಗಳ ವಿಕಾರಕ್ಕೆ ಅಲ್ಲಿ ಜಾಗವಿಲ್ಲ. ॥115॥ ಸುವರ್ಣವು ಆಭರಣಗಳಾಗುವ ಮುಂಚೆ ಸುವರ್ಣವೇ. ನಾನಾ ರೀತಿಯ ಆಭರಣಗಳನ್ನಾಗಿ ಮಾಡಿದ ಮೇಲೆಯೂ ಅದ ಸುವರ್ಣವೇ. ॥116॥ ನಾನಾ ವಿಧವಾದ ಅಲಂಕಾರದ ಆಭರಣಗಳೆಲ್ಲವನ್ನೂ ಬದಲಾಯಿಸಬಹುದು. ಅವೆಲ್ಲವೂ ವಿಕಾರ ಮತ್ತು ವಿನಾಶಕ್ಕೆ ಒಳಪಟ್ಟಿವೆ. ಕರಗಿಸಿದಾಗ ಅಲ್ಲಿ ಅವಿಕಾರವಾದ ಸುವರ್ಣ ಉಳಿಯುತ್ತದೆ. ಮತ್ತು ಕೇವಲ ರೂಪನಾಮಗಳು ಮಾಯವಾಗುತ್ತವೆ. ॥117॥ ಆದುದರಿಂದ, ಈ ಹೇಮಾಡ ಪಂತನು, ಈ ಹೇಮದಲ್ಲಿ ಅಂದರೆ ಸಾಯಿಯಲ್ಲಿ ಲೀನವಾಗಲು ಇಚ್ಛಿಸುತ್ತಾನೆ. ಮತ್ತು ಕಾಲದ ಅಂತ್ಯದವರೆಗೆ ಸಾಯಿ ಚರಣಗಳಲ್ಲಿ ಯಾರು ಈ ಸುವರ್ಣದ ಎಲ್ಲಾ ಗುಣಗಳನ್ನೂ ಹೊಂದಿರುವರೋ, ಅಲ್ಲಿ ಇರಲು ಇಚ್ಛಿಸುತ್ತಾನೆ. ॥118॥ ಅನಂತರ, ಹದಿಮೂರನೆಯ ದಿನದ ಉತ್ತರ ಕ್ರಿಯೆಗಳನ್ನು ಬಾಳಾ ಸಾಹೇಬನು ಮಾಡಿದನು. ಭಕ್ತರಲ್ಲಿ ರತ್ನವಾದ ಅವನು ಗ್ರಾಮಸ್ಥ ಬ್ರಾಹ್ಮಣರ ಜೊತೆಯಲ್ಲಿ ಉತ್ತರ ಕ್ರಿಯೆಗಳನ್ನು ಆರಂಭಿಸಿದನು. ॥119॥ ಬಾಳಾ ಸಾಹೇಬನು ಸಚೇಲ ಸ್ನಾನ ಮಾಡಿ, ಪೂಜೆ ಮಾಡಿ, ತಿಲಾಂಜಲಿ, ತಿಲ ತರ್ಪಣ, ಪಿಂಡ ಪ್ರದಾನ ಇತ್ಯಾದಿ ಕ್ರಿಯೆಗಳನ್ನು ವಿಧಿಪೂರ್ವಕವಾಗಿ ಮಾಡಿದನು. ॥120॥ ಸಪಿಂಡೀಕರಣ ಇತ್ಯಾದಿ ಉತ್ತರಕ್ರಿಯೆಗಳನ್ನು ಯಾವ ಯಾವ ಸಮಯದಲ್ಲಿ ಮಾಡಬೇಕೋ ಅದೇ ರೀತಿ ಮಾಸಿಕ ಇತ್ಯಾದಿ ಕ್ರಿಯೆಗಳನ್ನು ವರ್ಷ ಪೂರ್ತಿ ಧರ್ಮ ಪ್ರಮಾಣವಾಗಿ ಆಚರಿಸಿದನು. ॥121॥ ಭಕ್ತಶ್ರೇಷ್ಠನಾದ ಉಪಾಸನಿಯು ಜೋಗನ ಜೊತೆಯಲ್ಲಿ ಭಾಗೀರಥಿ ನದಿಯ ಪವಿತ್ರ ದಡಗಳಿಗೆ ಹೋಗಿ ಹೋಮ ಹವನ ಇತ್ಯಾದಿಗಳನ್ನು ಮಾಡಿದನು. ॥122॥ ಬ್ರಾಹ್ಮಣ ಭೋಜನ, ಅನ್ನಸಂತರ್ಪಣೆ, ಯಥಾಶಕ್ತಿ ದಕ್ಷಿಣೆ ಪ್ರದಾನ ಇವುಗಳನ್ನೆಲ್ಲ ಶಾಸ್ತ್ರವಿಧಿವಿಧಾನಗಳಿಗನುಸಾರವಾಗಿ ಮಾಡಿ ತಮ್ಮ ಮನೆಗಳಿಗೆ ಹಿಂತಿರುಗಿದರು. ॥123॥ ಈಗ ಬಾಬಾರವರ ಮತ್ತು ಚರ್ಚೆಗಳ ಅನುಪಸ್ಥಿತಿಯಲ್ಲಿ ವಸ್ತುಸ್ಥಿತಿಯು ಬೇರೆ. ಆದರೂ ಮಸೀದಿಯನ್ನು ನೋಡಿದವರು ಆ ಹಳೆಯ ಸುದಿನಗಳನ್ನು, ಸುಖಾನುಭವಗಳನ್ನು ನೆನಪಿಸಿಕೊಳ್ಳುತ್ತಾರೆ. ॥124॥ ಬಾಬಾರವರು ನಿತ್ಯ ಕುಳಿತುಕೊಳ್ಳುತ್ತಿದ್ದಂತಹ ಉತ್ತಮೋತ್ತಮವಾದ ವರ್ಣನಿರ್ಮಿತ ಚಿತ್ರವನ್ನು ಮಸೀದಿಯಲ್ಲಿ ಬಹಳ ಪ್ರೀತಿಯಿಂದ ಇಡಲಾಗಿದೆ. ಅದನ್ನು ನೋಡಿದರೆ ಬಾಬಾರವರು ಯಾವ ರೀತಿ ಕುಳಿತುಕೊಳ್ಳುತ್ತಿದ್ದರೋ ಅದೇ ಸುಖಾನುಭವವುಂಟಾಗುತ್ತದೆ. ॥125॥ ಸಾಯಿಯು ದೇಹದಿಂದ ನಿವೃತ್ತಿಹೊಂದಿದ್ದರೂ, ಆ ವರ್ಣಚಿತ್ರದ ದರ್ಶನದಿಂದ, ಅವರು ತಮ್ಮ ಪ್ರೀತಿಯ

ಭಕ್ತರಿಗೆ ಪುನಃ ಬದುಕಿ ಬಂದಂತೆ ಕಾಣುತ್ತಾರೆ. ॥126॥ ಶಾಮರಾವ್ ಜಯಕರನು ಈ ಸುಂದರ ರೇಖಾಚಿತ್ರವನ್ನು ಚಿತ್ರಿಸಿದ್ದು, ಅದು ಮನೋಹರ ಮೂರ್ತಿಯಾಗಿ ನಿರಂತರವಾಗಿ ಬಾಬಾರವರನ್ನು ಸ್ಮರಣೆಗೆ ತರುತ್ತದೆ. ॥127॥ ಜಯಕರನು ಪ್ರಸಿದ್ಧ ಚಿತ್ರಕಾರನಾಗಿದ್ದು, ಬಾಬಾರವರ ಮಹಾನ್ ಭಕ್ತನಾಗಿದ್ದನು. ಅವನು ಯಾವಾಗಲೂ ಬಾಬಾರವರ ಆಜ್ಞೆಯ ಪ್ರಕಾರ ವಿಚಾರ ಪೂರ್ವಕವಾಗಿ ವರ್ತಿಸುತ್ತಿದ್ದನು. ॥128॥ ಬಾಬಾರವರ ಸುಂದರ ಛಾಯಾ ಚಿತ್ರಗಳನ್ನು ಅವನ ಕೈಗಳಿಂದಲೇ ಮಾಡಿಸಲೆಂದು ಅವನನ್ನು ಕರೆಸಲಾಗಿತ್ತು. ಆ ಚಿತ್ರಗಳನ್ನೇ ಉಪಾಸ್ಯಧ್ಯಾನ ಮಾಡಲು ಅನುಕೂಲವಾಗುವಂತೆ ಭಕ್ತಭವನದಲ್ಲಿ ಸ್ಥಾಪಿಸುವ ಉದ್ದೇಶವಿತ್ತು. ॥129॥ ಸಂತರಿಗೆ ಎಂದಿಗೂ ಮರಣವಿಲ್ಲ ಎಂದು ಹಿಂದೆಯೇ ಅನೇಕ ಬಾರಿ ವಿವರಿಸಲಾಗಿದೆ. ಮತ್ತು ನೀವು ಅದನ್ನು ಇಲ್ಲಿ ಸ್ಮರಿಸಬಹುದು. ಅದನ್ನು ಮತ್ತೆ ಸ್ಪಷ್ಟೀಕರಣ ಮಾಡುವ ಅವಶ್ಯಕತೆ ಇಲ್ಲ. ॥130॥ ಬಾಬಾರವರು ಈ ದಿನ ದೇಹದಲ್ಲಿಲ್ಲ. ಆದರೂ ಅವರನ್ನು ಸ್ಮರಿಸಿದವರಿಗೆ ಈ ದಿನವೂ ಸಹಾಯ ಮಾಡುತ್ತಾರೆ. ಪೂರ್ವದಲ್ಲಿದ್ದಂತೆಯೇ ದೇಹಧಾರಿಯಾಗಿ ಸಹಾಯ ಮಾಡುತ್ತಾರೆ. ॥131॥ ಬಾಬಾರವರು ಹೇಳಿದ್ದ ರೀತಿಯಲ್ಲಿ ಯಾರಿಗಾದರೂ ಏನಾದರೂ ಅನುಭವವಾಗದೇ ಇದ್ದಲ್ಲಿ, ಬಾಬಾರವರು ದೇಹದಲ್ಲಿ ಇಲ್ಲದ್ದರಿಂದಲೇ ಈ ರೀತಿ ಆಯಿತು ಎಂದು ನಂಬಬಾರದು. ॥132॥ ಬಾಬಾರವರ ವಾಕ್ಯಗಳು ಬ್ರಹ್ಮಲಿಖಿತ. ಅದರಲ್ಲಿ ವಿಶ್ವಾಸವಿಟ್ಟು ಅದನ್ನು ಅನುಭವಿಸಬೇಕು. ಅವುಗಳು ಕೂಡಲೇ ಅನುಭವಕ್ಕೆ ಬರದೇ ಇದ್ದಲ್ಲಿ ನಿಶ್ಚಿತವಾಗಿಯೂ ಕಾಲಾಂತರದಲ್ಲಿ ಬಂದೇ ಬರುತ್ತವೆ. ॥133॥ ಅದು ಹಾಗಿರಲಿ. ನಾನು ಜೋಗನ ಹೆಸರನ್ನು ಉಲ್ಲೇಖಿಸಿದ್ದರಿಂದ ಈಗ ನನಗೆ ಒಂದು ಅಸಂಗತವಾದ ಕಥೆಯು ನೆನಪಿಗೆ ಬರುತ್ತಿದೆ. ಈ ಅಪೂರ್ವವಾದ ಕಥೆಯನ್ನು ಕೇಳಿರಿ. ಅದರಿಂದ ನಿಮಗೆ ಸಾಯಿಯ ಪ್ರೇಮಸ್ವಭಾವದ ಅರಿವುಂಟಾಗುತ್ತದೆ. ॥134॥ ಅವರಿಬ್ಬರ ಸಂಭಾಷಣೆಯು ಸಂಕ್ಷಿಪ್ತವಾಗಿದ್ದರೂ ಸಹ ಗುರುಭಕ್ತರಿಗೆ ಅದು ಬೋಧಪ್ರದವಾಗಿದೆ. ಅದರಿಂದ ವೈರಾಗ್ಯ ಕಲಿತವನು ಭಾಗ್ಯವಂತನು ಮತ್ತು ಸಂಸಾರಕ್ಕೆ ಬದ್ಧನಾದವನು ನಿರ್ಭಾಗ್ಯನೂ ಆಗುತ್ತಾನೆ. ॥135॥ ಒಂದು ಸಲ ಜೋಗನು ಬಾಬಾರವರನ್ನು ಪ್ರಶ್ನಿಸಿದನು, "ನಾನು ಏಕೆ ಈಗಲೂ ಈ ಅವಸ್ಥೆಯಲ್ಲಿದ್ದೇನೆ? ನನ್ನ ಕರ್ಮಗತಿ (ವಿಧಿ)ಯು ಏಕೆ ಇಷ್ಟು ವಿಚಿತ್ರ? ನಾನು ಯಾವಾಗ ಸುಸ್ಥಿತಿಯನ್ನು ಪಡೆಯುತ್ತೇನೆ? ॥136॥ "ದೇವಾ! ನಾನು ಅನೇಕ ವರ್ಷಗಳಿಂದ ಅನನ್ಯವಾಗಿ ನಿಮ್ಮ ಸೇವೆ ಮಾಡುತ್ತ ಬಂದಿರುವೆನು? ಆದರೂ ಈ ಚಂಚಲಚಿತ್ತವು ಶಾಂತಿಯನ್ನು ಪಡೆದಿಲ್ಲ! ಇದು ಏತಕ್ಕೆ ಹೀಗೆ ಆಗಿದೆ? ॥137॥ "ನಾನು ಏಕೆ ಇಷ್ಟು ದೌರ್ಭಾಗ್ಯವಂತ? ಸಂತರ ಸಂಗದಿಂದ ನನಗೆ ಪ್ರಾಪ್ತಿಯಾಗಿರುವುದು ಇದೇ ಏನು? ಸತ್ಸಂಗದ ಪರಿಣಾಮವಾಗಿ ಸುಖವನ್ನು ಯಾವಾಗ ಅನುಭವಿಸುತ್ತೇನೆ?" ॥138॥ ಸಾಯಿ ಸಮರ್ಥರು, ಒಬ್ಬ ಭಕ್ತನ ವಿನಂತಿಯನ್ನು ಕೇಳಿ ಪರಮ ಪ್ರೀತಿಯಿಂದ ಜೋಗನಿಗೆ ಪ್ರತ್ಯುತ್ತರ ನೀಡಿದರು. ಅವರು ಏನು ಹೇಳಿದರೆಂಬುದನ್ನು ಸ್ವಸ್ಥಚಿತ್ತದಿಂದ ಕೇಳಿರಿ. ॥139॥ "ನಿನ್ನ ದುಷ್ಕರ್ಮಗಳು ನಾಶವಾಗುತ್ತವೆ. ನಿನ್ನ ಪುಣ್ಯ-ಪಾಪಗಳೆಲ್ಲವೂ ಸುಟ್ಟು

ಬೂದಿಯಾಗುತ್ತವೆ. ನಿನ್ನ ಕಂಕುಳಲ್ಲಿ ಭಿಕ್ಷೆಗಾಗಿ ಜೋಳಿಗೆಯನ್ನು ನೋಡಿದಾಗ ಮಾತ್ರ ನಾನು ನಿನ್ನನ್ನು ಭಾಗ್ಯಶಾಲಿಯೆಂದು ಪರಿಗಣಿಸುತ್ತೇನೆ. ॥140॥ "ನೀನು ನಿನ್ನ ಉಪಾಧಿಗಳನ್ನೆಲ್ಲ ತ್ಯಜಿಸಿದಾಗ, ನಿತ್ಯವೂ ಭಗವದ್ಭಕ್ತಿಯಲ್ಲಿ ಮುಳುಗಿದಾಗ, ನಿನ್ನ ಆಶಾಪಾಶಗಳನ್ನೂ, ಬಂಧನಗಳನ್ನೂ, ಪೂರ್ಣವಾಗಿ ಕತ್ತರಿಸಿದಾಗ ಮಾತ್ರ ನಿನ್ನನ್ನು ಭಾಗ್ಯವಂತನೆಂದು ಪರಿಗಣಿಸುತ್ತೇನೆ. ॥141॥ "ಎಲ್ಲ ಲೌಕಿಕ ವಿಷಯಾಸಕ್ತಿಗಳನ್ನು ತ್ಯಜಿಸಿದಾಗ, ನಾನು–ನೀನು ಎಂಬ ಭೇದಭಾವವು ಅನುಚಿತ. ಜಿಹ್ವಾಚಾಪಲ್ಯ ಮತ್ತು ಗುಹ್ಯಾ ಚಾಪಲ್ಯ ಇವುಗಳನ್ನು ನಿಗ್ರಹಿಸಿದಾಗ ಮಾತ್ರ ನಿನ್ನನ್ನು ಭಾಗ್ಯವಂತನೆಂದು ಪರಿಗಣಿಸುತ್ತೇನೆ." ॥142॥ ಅದು ಹಾಗಿರಲಿ. ಸುಮಾರು ಸಮಯದ ನಂತರ ಬಾಬಾರವರ ಮಾತುಗಳು ಸತ್ಯವೆಂದು ಕಂಡು ಬಂದವು. ಸದ್ಗುರುವಿನ ಕೃಪೆಯಿಂದ ಜೋಗನಿಗೆ ಬಾಬಾರವರು ನುಡಿದಂತೆಯೇ ವೈರಾಗ್ಯವುಂಟಾಯಿತು. ॥143॥ ಅವನಿಗೆ ಪುತ್ರ ಸಂತತಿ ಇಲ್ಲದ್ದರಿಂದ ಅದರ ಬಗ್ಗೆ ವೈರಾಗ್ಯ ಉಂಟಾಯಿತು. ಅವನ ಪತ್ನಿಯು ದೇಹತ್ಯಾಗ ಮಾಡಿದಳು. ಜೋಗನಿಗೆ ಸಹಜವಾಗಿಯೇ ವೈರಾಗ್ಯವುಂಟಾಗಿ ಮರಣಕ್ಕೆ ಮೊದಲೇ ಸನ್ಯಾಸ ಸ್ವೀಕರಿಸಿದನು. ॥144॥ ಅದು ಹಾಗಿರಲಿ. ಜೋಗನೂ ಭಾಗ್ಯವಂತನಾಗಿದ್ದನು. ಸಾಯಿಯ ವಚನಗಳು ಸತ್ಯವಾದವು. ಅಂತ್ಯದಲ್ಲಿ ವೈರಾಗ್ಯಸಂಪನ್ನನಾಗಿ ಬ್ರಹ್ಮದಲ್ಲಿ ವಿಲೀನವಾದನು. ॥145॥ ಸಾಯಿಯವರು ಹೇಳಿದ್ದೆಲ್ಲವೂ ಕೊನೆಯಲ್ಲಿ ಅದೇ ರೀತಿ ನಡೆಯಿತು. ಅದರ ಪರಿಣಾಮವಾಗಿ ಆ ಸ್ಥಿತಿಯನ್ನು ಪಡೆದನು. ಸಾಯಿಯ ವಚನಗಳು ಅರ್ಥಪೂರ್ವಕವೆಂದು ಸಿದ್ಧವಾದವು. ನಿಜವಾಗಿಯೂ ಜೋಗನು ಭಾಗ್ಯಶಾಲಿಯಾಗಿದ್ದನು. ॥146॥ ತಾತ್ಪರ್ಯವೇನೆಂದರೆ, ಬಾಬಾರವರು ದೀನರಿಗೆ ದಯಾಳುವಾಗಿದ್ದರು. ಭಕ್ತರ ಕಲ್ಯಾಣಕ್ಕಾಗಿ ಹಂಬಲಿಸುತ್ತಿದ್ದರು. ಶಿರಡಿಯಲ್ಲಿ ತ್ರಿಕಾಲವೂ ಬೋಧಾಮೃತವನ್ನು ಯಥೇಚ್ಛವಾಗಿ ಅರ್ಪಿಸುತ್ತಿದ್ದರು. ಅದನ್ನು ಕೇಳಿರಿ. ॥147॥ "ಯಾರು ನನ್ನನ್ನು ತುಂಬ ಪ್ರೀತಿಸುತ್ತಾರೋ, ಅವರು ಸದಾಕಾಲ ನನ್ನನ್ನು ತಮ್ಮ ಮುಂದೆಯೇ ನೋಡುತ್ತಾರೆ. ನಾನಿಲ್ಲದೆ ಅವರಿಗೆ ಇಡೀ ವಿಶ್ವವೇ ಶೂನ್ಯ. ಅವರ ತುಟಿಗಳಲ್ಲಿ ಯಾವಾಗಲೂ ನನ್ನ ಕಥೆಗಳೇ ಇರುತ್ತವೆ. ॥148॥ "ಅವರು ಅಖಂಡವಾಗಿ ನನ್ನ ಧ್ಯಾನ ಮಾಡುತ್ತಿರುತ್ತಾರೆ. ಅವರ ನಾಲಿಗೆಯಮೇಲೆ ನನ್ನ ನಾಮವಿರುತ್ತದೆ. ಸದಾ ಭಜಿಸುತ್ತಿರುತ್ತಾರೆ. ಅವರು ಎಲ್ಲಿಗೇ ಬರಲಿ ಅಥವಾ ಹೋಗಲಿ ನನ್ನ ಚರಿತ್ರೆಯನ್ನು ಗಾಯನಮಾಡುತ್ತಿರುತ್ತಾರೆ॥149॥ "ಅವರು ಯಾವಾಗ ನನ್ನಲ್ಲಿ ಅಕ್ಷರಮಟ್ಟಿಗೆ ಲೀನವಾಗಿರುತ್ತಾರೋ ಮತ್ತು ತಮ್ಮ ಕರ್ಮ ಮತ್ತು ಅಕರ್ಮಗಳನ್ನು ಮರೆತು ಇರುತ್ತಾರೋ ಮತ್ತು ಎಲ್ಲಿ ಸೇವೆಯನ್ನು ಆದರದಿಂದ ಸಲ್ಲಿಸುವರೋ ಅಲ್ಲಿ ನಿರಂತರವಾಗಿ ನಾನು ನೆಲೆಸುತ್ತೇನೆ. ॥150॥ "ಯಾರು ನನ್ನಲ್ಲಿ ಅನನ್ಯ ಶರಣಾಗಿ ನನ್ನನ್ನು ಅಖಂಡವಾಗಿ ಸ್ಮರಿಸುತ್ತಾರೋ, ಅವರಿಗೆ ನಾನು ಋಣಿಯಾಗಿ ಅವರನ್ನು ಉದ್ಧರಿಸಿ ಅವರ ಋಣ ತೀರಿಸುತ್ತೇನೆ. ॥151॥ "ಯಾರು ನನಗೆ ಮೊದಲು ಅರ್ಪಿಸದೆ ಏನನ್ನೂ ತಿನ್ನುವುದಿಲ್ಲವೋ ಅಥವಾ ಕುಡಿಯುವುದಿಲ್ಲವೋ ಮತ್ತು ನನ್ನನ್ನು ಧ್ಯಾನಿಸುತ್ತಾರೋ ಅವರಿಗೆ ನಾನು ಬಂಧಿತನಾಗಿದ್ದೇನೆ. ನಾನು ಅವರ

ಅಧೀನನಾಗಿ ಅವರ ಇಚ್ಛೆಯಂತೆಯೇ ವರ್ತಿಸುತ್ತೇನೆ. ॥152॥ "ಯಾರು ನನಗಾಗಿ ಹಂಬಲಿಸುತ್ತಾರೋ ಮತ್ತು ಯಾರಿಗೆ ನಾನು ಬೇರಾರಿಗೂ ಸಮನಲ್ಲವೋ ಅಂತಹವರನ್ನು, ಸದಾ ಕಾಲವೂ ಲಕ್ಷ್ಯಗೊಟ್ಟು ಕಾಪಾಡುತ್ತೇನೆ. ನಾನು ಅವರ ಅಧೀನನಾಗಿ ಅವರ ಇಷ್ಟದಂತೆಯೇ ನಡೆಯುತ್ತೇನೆ. ॥153॥ "ಯಾರು ಅವರ ತಂದೆ, ತಾಯಿ, ಆಪ್ತೇಷ್ಟರು, ಬಂಧುಮಿತ್ರರು, ಪತ್ನಿ, ಪುತ್ರ ಇವರೆಲ್ಲರಿಂದ ವಿಮುಖರಾಗಿರುವರೋ ಅವರು ಮಾತ್ರ ನನ್ನ ಚರಣಗಳಲ್ಲಿ ಅನುರಕ್ತರಾಗಿರುತ್ತಾರೆ. ॥154॥ "ಮಳೆಗಾಲದಲ್ಲಿ ಅನೇಕ ನದಿಗಳು ಸಾಗರದ ಮಹಾಪೂರವನ್ನು ಸೇರಿ ತಾವು ನದಿಗಳೆಂಬುದನ್ನು ಮರೆತುಹೋಗುತ್ತವೆ. ಅವರು ದ್ವೈತಭಾವವನ್ನು ಮರೆತು ಸಾಗರದಲ್ಲಿ ಏಕತ್ವವನ್ನು ಹೊಂದುತ್ತಾರೆ. ॥155॥ ರೂಪ, ನಾಮಗಳೆರಡೂ ಮಾಯವಾಗಿರುತ್ತವೆ ನೀರು ಸಾಗರದಲ್ಲಿ ಮಿಳಿತವಾಗಿದೆ. ನದಿ ಮತ್ತು ಸಾಗರ ಇವೆರಡೂ ಒಂದಾಗಿವೆ. ದ್ವೈತವು ಏಕತ್ವದಲ್ಲಿ ಕಳೆದುಹೋಗಿದೆ. ॥156॥ "ಈ ರೀತಿಯ ಸಮರಸತ್ವವನ್ನು ಪಡೆದಾಗ ಚಿತ್ತವು ನಾಮ ಮತ್ತು ರೂಪಗಳನ್ನು ಮರೆತು ಹೋಗುತ್ತದೆ. ಅದು ತನ್ನ ನಿಜಸ್ವಭಾವದಲ್ಲಿ ನನ್ನನ್ನು ನೋಡಲು ಪ್ರಾರಂಭಿಸುತ್ತದೆ. ಏಕೆಂದರೆ ಅದಕ್ಕೆ ನನ್ನ ಜೊತೆಯನ್ನು ಬಿಟ್ಟು ಬೇರೆ ಯಾವುದೇ ಜಾಗ ಇರುವುದಿಲ್ಲ. ॥157॥ "ನಾನು ಪರುಶಮಣಿಯಲ್ಲ, ಕೇವಲ ಒಂದು ಕಲ್ಲು ಮಾತ್ರ ಎಂಬುದನ್ನು ಪ್ರದರ್ಶಿಸಲು, ಪುಸ್ತಕಪಂಡಿತರು ತಮ್ಮ ಬಡಬಡ ಹೇಳಿಕೆಗಳಿಂದ ಕೆಲವು ಕಬ್ಬಿಣದ ಚೂರುಗಳನ್ನು ತಂದಿದ್ದಾರೆ. ॥158॥ ಯಾವಾಗ ಕಬ್ಬಿಣವು ನನ್ನ ಜೊತೆ ಘರ್ಷಣೆಗೆ ಬಂದಿತೋ ಆಗ ಅದು ಸುವರ್ಣವಾಗಿಬಿಟ್ಟಿತು. ಮತ್ತ ನನ್ನ ಅಸ್ತಿತ್ವವು ಕೇವಲ ಒಂದು ಕಲ್ಲು ಎಂಬುದು ಸುಳ್ಳಾಯಿತು. ಇದೊಂದು ಅದ್ಭುತವಾದ ಅನುಭವ. ॥159॥ ಅಣುಮಾತ್ರದಷ್ಟೂ ಅಭಿಮಾನವಿಲ್ಲದೆ ಹೃದಯದಲ್ಲಿ ನೆಲಸಿರುವ ನನಗೆ ಶರಣಾಗುವವರ ಅವಿದ್ಯೆಯು ತತ್‌ಕ್ಷಣವೇ ನಾಶವಾಗುವುದು. ಅಲ್ಲಿ ಜ್ಞಾನದ ಬಗ್ಗೆ ಯಾವುದೇ ನಿರ್ದೇಶನ ಪಡೆಯುವ ಅವಶ್ಯಕತೆಯೇ ಇರುವುದಿಲ್ಲ. ॥160॥ ಅವಿದ್ಯೆಯಿಂದ ದೇಹಬುದ್ಧಿಯು ಹುಟ್ಟುತ್ತದೆ. ದೇಹಬುದ್ಧಿಯಿಂದ ಆಧಿ-ವ್ಯಾಧಿ (ರೋಗ-ದುಃಖ)ಗಳು ಉಂಟಾಗುತ್ತವೆ. ಇವುಗಳೇ ವಿಧಿನಿಷೇಧಗಳನ್ನುಂಟುಮಾಡಿ ಆತ್ಮಸಿದ್ಧಿಗೆ ವಿಘಾತಕವಾಗಿಬಿಡುತ್ತವೆ. ॥161॥ ನಾನು ಎಲ್ಲಿರುವೆನೆಂದು ನೀವು ಕೇಳಬಹುದು! ಮತ್ತು ನಾನು ಹೇಗೆ ನಿಮ್ಮನ್ನು ಈಗ ಭೇಟಿಯಾಗಲಿ. ಆದರೆ ನಾನು ನಿಮ್ಮ ಹೃದಯದಲ್ಲೇ ನೆಲೆಸಿದ್ದೇನೆ. ಏನು ಕಷ್ಟಪಡದೆಯೇ ನನ್ನನ್ನು ಭೇಟಿಮಾಡಬಹುದು! ॥162॥ ನೀವು ಕೇಳಬಹುದು – ಹೃದಯದಲ್ಲಿ ಯಾರು ಇದ್ದಾರೆ? ಮತ್ತು ಹೇಗೆ ಇದ್ದಾರೆ? ಅವರ ಲಕ್ಷಣಗಳೇನು? ಅವರನ್ನು ಅರಿಯುವಂತಹ ಕುರುಹುಗಳು ಏನು? ॥163॥ ಹಾಗಿದ್ದಲ್ಲಿ ಸಂಪೂರ್ಣವಾಗಿ ಗಮನಿಸುವವರಾಗಿ. ಯಾರು ಹೃದಯದಲ್ಲಿ ನೆಲೆಸಿದ್ದಾರೋ, ಯಾರಿಗೆ ನೀವು ಸಂಪೂರ್ಣ ಶರಣಾಗಬೇಕೋ ಅವರ ಸ್ಪಷ್ಟ ವ್ಯಾಖ್ಯಾನವನ್ನು ಕೇಳಿರಿ. ॥164॥ ಸೃಷ್ಟಿಯು ನಾನಾ ರೂಪಗಳ ನಾನಾ ನಾಮಗಳನ್ನು ಹೊಂದಿರುವ ವಸ್ತುಗಳಿಂದ ತುಂಬಿದೆ. ಅದನ್ನು ಲೆಕ್ಕ ಮಾಡಲು ಯಾರಿಗೂ ಸಾಧ್ಯವಿಲ್ಲ. ಅವೆಲ್ಲವೂ ಮಾಯೆಯ ಸ್ವರೂಪಗಳು. ॥165॥ ಅದೇ

ರೀತಿಯಲ್ಲಿ, ನಿಜವಾಗಿಯೂ ಸತ್ವ, ರಜಸ್ಸು ಮತ್ತು ತಮಸ್ಸು ಈ ಗುಣಗಳಿಂದಾಚೆಗೆ ಹೋಗುವಂತಹ, ಸತ್ವದಿಂದ ಹುಟ್ಟಿದ ಸ್ಫುರಣೆಯೇ ಹೃದಯದಲ್ಲಿ ನೆಲಸಿರುವ ನಿಜವಾದ ಸ್ವರೂಪ. ॥166॥ ನಾಮ,ರೂಪ ರಹಿತವಾದ, ನಿನ್ನದೇ ಆದ ಸಾರವಾಗಿ ಉಳಿಯುವುದೇ ನಿಜವಾಗಿಯೂ ನಿನ್ನ ಹೃದಯದಲ್ಲಿ ನೆಲೆಸಿರುವ ಸ್ವರೂಪದ ಲಕ್ಷಣವಾಗಿದೆ. ಅದನ್ನು ಅರಿತು ಅವನಲ್ಲಿ ಶರಣಾಗು. ॥167॥ ಕೇವಲ ನಾನು ಮಾತ್ರವೇ 'ಅವನು' ಮತ್ತು 'ನೀನು' ಎಂಬುದನ್ನು ಗೌರವಿಸಬೇಕು. ಈ ಒಂದು ದೃಷ್ಟಿಯನ್ನು ಈ ವಿಶ್ವದ ಜೀವಿಗಳಿಗೆ ವಿಸ್ತರಿಸಿದಲ್ಲಿ ಅಲ್ಲಿಯೇ ಭೂತದ ಆತ್ಮ ತತ್ವವು ಅರಿವಿಗೆ ಬರುತ್ತದೆ. ನನಗಲ್ಲದೆ ಅಲ್ಲಿ ಬೇರೆ ಯಾವುದಕ್ಕೂ ಬೇರೆಯಾರಿಗೂ ಸ್ಥಳವಿಲ್ಲ. ॥168॥ ಈ ರೀತಿ ಅಭ್ಯಾಸ ಮಾಡುತ್ತ, ಮಾಡುತ್ತ, ನೀವು ನನ್ನ ಸರ್ವವ್ಯಾಪಕತ್ವವನ್ನು ಅನುಭವಿಸುವಿರಿ. ಆಗ ನೀವು ನನ್ನಲ್ಲಿ ಒಂದಾಗುವಿರಿ ಮತ್ತು ಅನನ್ಯತೆಯನ್ನು ಅನುಭವಿಸುವಿರಿ. ॥169॥ ನಿಮ್ಮ ಚಿತ್ತವು ಪರಮಾತ್ಮನಲ್ಲಿ ಒಂದಾಗುತ್ತದೆ ಮತ್ತು ನಿಮ್ಮ ಅಂತಃಕರಣವು ಶುದ್ಧವಾಗುತ್ತದೆ. ಗಂಗೆಯ ನೀರಿಲ್ಲದೆಯೇ ಗಂಗಾಸ್ನಾನ ಮಾಡಿದಂತಾಗುವಿರಿ. ಅಷ್ಟು ಪರಿಶುದ್ಧವಾಗುವಿರಿ. ॥170॥ ಬುದ್ಧಿವಂತರು ಯಾವಾಗಲೂ ಲೌಕಿಕ ಸಾಧನೆಗಳ ಬಗ್ಗೆ ಅಭಿಮಾನದ ಬಂಧನದ ಬಗ್ಗೆ ಬಹಳ ಜಾಗರೂಕರಾಗಿರುತ್ತಾರೆ. ಅವರು ಎಂದಿಗೂ ಅದನ್ನು ಅವರ ಮೇಲೆ ಪರಿಣಾಮ ಬೀರಲು ಬಿಡುವುದಿಲ್ಲ ಮತ್ತು ಅಂತರಂಗದಲ್ಲಿ ಸಾವಧಾನದಿಂದ ಇರುತ್ತಾರೆ. ॥171॥ ಯಾರು ಸ್ವಸ್ವರೂಪವನ್ನು ಕುರಿತು ಏಕಾಗ್ರತೆಯಿಂದ ಧ್ಯಾನಿಸುತ್ತಾರೋ ಮತ್ತು ಅಣು ಮಾತ್ರವೂ ಅತ್ತಿತ್ತ ಚಲಿಸುವುದಿಲ್ಲವೋ, ಅವರಿಗೆ ಸಮಾಧಿಗೆಹೋಗುವುದು, ಸಮಾಧಿಯಿಂದ ಹೊರಗೆ ಬರುವುದು. ಅವೆರಡರ ಅವಶ್ಯಕತೆಯೂ ಇರುವುದಿಲ್ಲ. ॥172॥ ಆದುದರಿಂದ ನನ್ನ ತಲೆಯನ್ನು ಶ್ರೋತೃಗಳ ಚರಣಗಳಲ್ಲಿಟ್ಟು, ನಾನು ವಿನಯದಿಂದ, ಅಪಾರ ಪ್ರೇಮದಿಂದ ಬೇಡುತ್ತೇನೆ. ಅವರು ಎಲ್ಲ ದೇವರುಗಳು, ಸಂತರು, ಭಕ್ತರು ಮತ್ತಿತರರೆಲ್ಲರ ಮೇಲೆ ಪ್ರೀತಿ ತೋರಿಸಲಿ. ॥173॥ ಬಾಬಾರವರು ಪದೇಪದೇ ಹೇಳುತ್ತಿದ್ದರು, "ಯಾರಾದರೂ ಮತ್ತೊಬ್ಬರನ್ನು ಅವಮಾನಿಸುವಂತೆ ಮಾತನಾಡಿದರೆ, ಆಗ ಅದು ನನ್ನನ್ನು ಘಾಸಿಗೊಳಿಸುತ್ತದೆ ಮತ್ತು ಅವರ ನಾಲಿಗೆಯಿಂದ ನನ್ನ ಹೃದಯವನ್ನು ಚುಚ್ಚಿದಂತಾಗುತ್ತದೆ. ॥174॥ ಯಾರಾದರೂ ಮತ್ತೊಬ್ಬರಿಗೆ ಕರ್ಕಶ ಮಾತುಗಳ ಮಳೆಗರೆದರೆ ತತ್‌ಕ್ಷಣವೇ ನನಗೆ ನೋವುಂಟು ಮಾಡುತ್ತಾರೆ. ಹಾಗೆಯೇ ಯಾರಾದರೂ ಅವಮಾನವನ್ನು ತಾಳ್ಮೆಯಿಂದ ಸಹಿಸಿದ್ದೇ ಆದಲ್ಲಿ ನಾನು ಬಹುಕಾಲ ಸಂತಸದಿಂದ ಇರುತ್ತೇನೆ." ॥175॥ ಸಾಯಿಯು ಇಡೀ ಸೃಷ್ಟಿಯಲ್ಲಿ ಎಲ್ಲದರಲ್ಲಿ ವ್ಯಾಪಿಸಿದ್ದಾರೆ. ಅಂತರ್ ಬಹಿ ಎಲ್ಲೆಡೆ ವ್ಯಾಪಿಸಿದ್ದಾರೆ. ಕೇವಲ ಪ್ರೇಮವಚನಗಳನ್ನಲ್ಲದೆ ಬೇರೆ ಯಾವ ಅವಾಚ್ಯವನ್ನೂ ಇಷ್ಟಪಡುವುದಿಲ್ಲ. ॥176॥ ಪರಮ ಮಂಗಳಕರವಾದ ಈ ಪರಮಾಮೃತವಾದ ಬೋಧನೆಯು ಸರ್ವದಾ ಸರ್ವತ್ರ ಸಾಯಿಮುಖದಿಂದ ಹರಿಯುತ್ತಿತ್ತು, ಅದು ಭಕ್ತರ ಮೇಲಿದ್ದ ಅವರ ಪ್ರೇಮದಿಂದಾಗಿಯೇ ಇತ್ತು, ಅದು ಭಾಗ್ಯವಂತರಿಗೆ ತಿಳಿದಿಲ್ಲ! ॥177॥ ಅವರ ಜೊತೆಯಲ್ಲಿ ಪಂಕ್ತಿಯಲ್ಲಿ ಊಟಮಾಡಿದವರು, ಅವರ ಜೊತೆ ನಗುತ್ತಿದ್ದವರು ಮತ್ತು

ಆಟವಾಡುತ್ತಿದ್ದವರು ಮತ್ತು ಸಂತೋಷ ಪಡುತ್ತಿದ್ದವರು, ವಿಯೋಗ ದುಃಖವು ಅವರನ್ನು ಕುಟುಕಿದ ಮೇಲೆ ಅದೇನು ಅನುಭವಿಸುತ್ತಿರಬಹುದು? ॥178॥ ನನಗೆ ಕೇವಲ ಆ ಭಾಗ್ಯವಂತರಿಂದ ಈ ಅಮೃತದ ಉಚ್ಛಿಷ್ಟವಷ್ಟೇ ದೊರಕಿದ್ದುದು. ಆದರೆ ನಾನು ಪ್ರತಿಯೊಂದು ಹನಿಹನಿಯನ್ನೂ ಸೇರಿಸಿ ಆನಂದವಾಗಿ ಅದನ್ನು ಹಂಚಿರುವೆನು. ॥179॥ ಇಲ್ಲಿಯವರೆಗೆ ನಿರೂಪಿಸಲಾದ ಕಥೆಗಳೆಲ್ಲವನ್ನೂ ಹೇಮಾಡಪಂತ ನಿರೂಪಿಸಿದನೆನ್ನುವುದು ಸರಿಯೇ? ಸಮರ್ಥ ಸಾಯಿಯೇ ಅವುಗಳ ನಿರೂಪಕರು, ಲೇಖಕರು ಮತ್ತು ಬರೆಸುತ್ತಿರುವವರೂ ಸಹ. ॥180॥ ಸಾಯಿ ಸಮರ್ಥರ ಈ ಕಥೆಯನ್ನು ನಿರೂಪಿಸುವುದರಲ್ಲಿ ನನಗೆ ತೃಪ್ತಿಯಿಲ್ಲ. ನಾನು ಸದಾ ಅದರಲ್ಲೇ ಲೀನವಾಗಿದ್ದೇನೆ. ಶ್ರೋತೃಗಳು ಅದನ್ನು ಕೇಳಿದರೆ ಅಪಾರವಾದ ಆನಂದವನ್ನು ಪಡೆಯುತ್ತಾರೆ. ॥181॥ ಅದೂ ಅಲ್ಲದೆ ಸಾಯಿಯ ಕೀರ್ತನೆಯನ್ನು ಶ್ರದ್ಧೆಯಿಂದ ಹಾಡುವವರು, ಸದ್ಭಾವದಿಂದ ಕೇಳುವವರು ಇಬ್ಬರೂ ಸಾಯಿ ಸ್ವರೂಪವೇ ಆಗುತ್ತಾರೆ. ಅದನ್ನು ದೃಢ ಚಿತ್ತದಿಂದ ತಿಳಿಯಿರಿ. ॥182॥ ಈ ಹೇಮಾಡನು ಈ ಅಧ್ಯಾಯವನ್ನು ಮುಗಿಸುತ್ತಾ ಸಾಯಿ ಚರಣಗಳನ್ನು ಪ್ರೀತಿಯಿಂದ ಹಿಡಿದು ಸಾಯಿಗೆ ಸಮರ್ಪಿಸುತ್ತಾನೆ. ಮುಂದಿನ ನಿರೂಪಣೆಯು ಅನಂತರ. ॥183॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಾಯಿನಾಥರ ನಿರ್ಯಾಣ (ದೇಹತ್ಯಾಗ)" ಎಂಬ ನಲವತ್ತನಾಲ್ಕನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಒಮ್ಮೆ ಶ್ರೀ ಮೋರೇಶ್ವರ ಸ ಸಾವೆ ಎಂಬ ಶ್ರೀ ಸಾಯಿಬಾಬಾರವರ ಭಕ್ತನು ಬಾಬಾರವರ ಪೂಜೆಗೆ ಶಿರಡಿಗೆ ಹೋಗಲು ಕಾತರನಾದನು. ಆದರೆ ಪ್ರವಾಸದ ಎರಡು ದಿನಗಳ ಮೊದಲು ಅನಾರೋಗ್ಯ ಪೀಡಿತನಾಗಿ ಅಲ್ಲಿಂದ ಹೊರಡಲು ಆಗಲಿಲ್ಲ. ಆದ್ದರಿಂದ ಅವನಿಗೆ ಬಹಳೇಸರವಾಯಿತು. ಅವನು ಬಹಳ ಚಿಂತಾಕ್ರಾಂತನಾಗಿ ರಾತ್ರಿಯಲ್ಲಿ ನಿದ್ರೆ ಮಾಡಲೂ ಆಗಲಿಲ್ಲ. ಆದರೆ ಪೂಜೆಯ ದಿನ ಅವನು ಬೆಳಗಿನ ಜಾವ ಗಾಢನಿದ್ರೆಯಲ್ಲಿ ಮುಳುಗಿದನು. ಮಹಾರಾಜರು ಅವನಿಗೆ ಧೈರ್ಯ ನೀಡಿ ದಕ್ಷಿಣೆಯನ್ನು ಬೇಡಿದರು. ಅವನು ಎಚ್ಚರಗೊಂಡ ಕೂಡಲೆಅವನಿಗೆ ಸುಖವೆನಿಸಿತು. ಮತ್ತೆ ಮನಸ್ಸು ಕ್ಷೋಭೆಗೊಂಡಿರಲಿಲ್ಲ.

ಮಹಾರಾಜರು ದೇಹವನ್ನು ತ್ಯಜಿಸಿದರೂ ಸಹ ಭಕ್ತರ ಮನಸ್ಸಿಗೆ ಯಾವುದಾದರೂ ರೀತಿಯಲ್ಲಿ ಶಾಂತಿನೀಡುತ್ತಾರೆ.

2. ಬಾಳಾಸಾಹೇಬ ಭಾಟೆಯು ಬಾಬಾರವರನ್ನು ಹುಚ್ಚು ಫಕೀರನೆಂದು ಅಣಕಿಸುತ್ತಿದ್ದನು. ಕೊನೆಗೆ ಅವರ ಭಕ್ತನಾಗಿ ನೌಕರಿಯಿಂದ ನಿವೃತ್ತನಾದ ಮೇಲೆ ಶಿರಡಿಯಲ್ಲಿಯೇ ನಿರಂತರವಾಗಿ ನೆಲೆಸಿದನು.

3. ಪರಶುಮಣಿ – ಕಲ್ಲನ್ನು ಸುವರ್ಣವನ್ನಾಗಿ ಬದಲಿಸುವ ಕಲ್ಲು.



# ಅಧ್ಯಾಯ - 45

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಶ್ರೀ ಗುರುಚರಣಗಳ ಮಹಿಮೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಒಂದು ಬೀಸುವ ಕಲ್ಲನ್ನು ಬೀಸುವ ಸಲುವಾಗಿ ಜೋಡಿಸುವ ಸಹಜವಾದ ಕಾರ್ಯದಿಂದ ತಮ್ಮದೇ ಸಚ್ಚರಿತ್ರೆಯನ್ನು ಬರೆಯಲು ಪ್ರವರ್ತಿಸುವವರ ಬುದ್ಧಿವಂತಿಕೆಯು ಅದೆಷ್ಟು ಆಶ್ಚರ್ಯಕರ! ಅವರು ಈ ರೀತಿ ಭಕ್ತರನ್ನು ಸನ್ಮಾರ್ಗಕ್ಕೆ ತಂದರು. ॥1॥ ಗುರುಚರಣಗಳನ್ನು ಸಿದ್ಧಿಸಿಕೊಳ್ಳುವುದು ಜೀವನದ ಪರಮ ಪುರುಷಾರ್ಥವಾದ ಮೋಕ್ಷವನ್ನು ಪಡೆಯುವುದಕ್ಕಿಂತ ಮಹತ್ತಾದುದು. ಅಂತಹ ಗುರುವಿನ ತೀರ್ಥ ಸೇವನೆಯು ಮೋಕ್ಷವನ್ನು ಅಗೋಚರವಾಗಿಯೇ ತಂದುಕೊಡುತ್ತದೆ. ॥2॥ ಗುರುವು ಕರುಣಾಕರನಾದಲ್ಲಿ ಸಂಸಾರವು ಸುಖಮಯವಾಗುತ್ತದೆ. ಅಸಾಧ್ಯವು ಸಾಧ್ಯವಾಗುತ್ತದೆ. ಕ್ಷಣಾರ್ಧದಲ್ಲಿ ಅವನು ನಿಮ್ಮನ್ನು ಭವಸಾಗರದಾಚೆ ಕರೆದೊಯ್ಯಬಲ್ಲನು. ॥3॥ ಈ ಗ್ರಂಥವು ಬಹಳ ದೀರ್ಘವಾಗಿದ್ದರೂ, ನಾನು ಕಥೆಗಳನ್ನು ಸಂಕ್ಷಿಪ್ತವಾಗಿ ನಿರೂಪಣೆ ಮಾಡಿದ್ದೇನೆ. ಸಾಯಿಯ ಕೀರ್ತಿಯು ಅಗಾಧ. ಅವುಗಳನ್ನು ನಾನು ಹೇಗೆ ಸಾಕಾಗುವಷ್ಟು ವರ್ಣಿಸಲಿ? ॥4॥ ಯಾರ ದರ್ಶನದಿಂದ ನಿತ್ಯತೃಪ್ತಿಯು ಉಂಟಾಗುತ್ತಿತ್ತೋ, ಯಾರ ಸಹವಾಸದಿಂದ ಆನಂದ ಭುಕ್ತಿಯುಂಟಾಗುತ್ತಿತ್ತೋ, ಮತ್ತು ಯಾರು ಭವಬಂಧವನ್ನು ದೂರಮಾಡುತ್ತಿದ್ದರೋ, ಅಂತಹ ಸಾಯಿಯ ಪರಿಮಿತ ಮೂರ್ತಿಯು ಹೊರಟುಹೋಗಿದೆ. ॥5॥ ಅಂತಹ ಪರಿಮಿತ ಸಾಯಿಮೂರ್ತಿಯು

ಭಕ್ತರನ್ನು ಪರಮಾರ್ಥಮಾರ್ಗಕ್ಕೆ ಪ್ರೇರಕವಾಗಿದ್ದು, ಮಾಯೆ ಮತ್ತು ಮೋಹಗಳನ್ನು ದೂರಮಾಡುತ್ತಿದ್ದು, ಅದರಿಂದಾಗಿ ಅತ್ಯಂತ ಕ್ಷೇಮ ಪ್ರಾಪ್ತಿಯಾಗುತ್ತಿದ್ದುದು ಈಗ ಹೊರಟುಹೋಗಿದೆ. ||6|| ಅಂತಹ ಪರಿಮಿತ ಸಾಯಿ ಮೂರ್ತಿಯು ಭವಭಯವನ್ನು ದೂರಮಾಡುತ್ತಿದ್ದು, ನ್ಯಾಯ ನೀತಿ ಮಾರ್ಗಗಳನ್ನು ಜಾಗೃತಮಾಡುತ್ತಿದ್ದು, ಸಂಕಟದಲ್ಲಿಯೂ ನಮ್ಮ ಮನಸ್ಸು ಧೃತಿಗೆಡದೆ ಇರಲು ನೆರವಾಗುತ್ತಿದ್ದುದು ಈಗ ಹೊರಟು ಹೋಗಿದೆ. ||7|| ತಮ್ಮ ಮೂರ್ತಿಯನ್ನು ನಮ್ಮ ಮನಗಳಲ್ಲಿ ಸ್ಥಾಪಿಸಿ ಸಾಯಿಯು ತಮ್ಮ ಸ್ವಂತ ಧಾಮಕ್ಕೆ ಹೊರಟು ಹೋಗಿದ್ದಾರೆ. ಮತ್ತು ತಮ್ಮ ಅವತಾರವನ್ನು ಸಮಾಪ್ತಿಗೊಳಿಸಿದ್ದಾರೆ. ಅವರ ಇಂತಹ ಯೋಗಸ್ಥಿತಿಯು ತರ್ಕಾತೀತವಾದುದು. ||8|| ತಮ್ಮ ಅವತಾರ ಕಾರ್ಯಸಮಾಪ್ತಿಯ ನಂತರ ಅವರ ಪಾರ್ಥಿವ ಶರೀರವು ಹೊರಟುಹೋಯಿತು. ಆದರೂ ಈ ಗ್ರಂಥವೇ ವಾಙ್ಮಯ ಮೂರ್ತಿಯಾಗಿ ಅವರನ್ನುಪದೇ ಪದೇ ಸ್ಮರಣೆಗೆ ತರುತ್ತದೆ. ||9|| ಅದೂ ಅಲ್ಲದೆ, ಅವರ ಚರಿತ್ರೆಯನ್ನು ಕೇಳಿದರೆ ಉಂಟಾಗುವ ಅಪೂರ್ವ ಮನಃಶಾಂತಿಯೂ, ಮನದಲ್ಲಿ ಹುಟ್ಟುವ ಏಕಾಗ್ರತೆಯೂ ಅವರ್ಣನೀಯವಾಗಿವೆ. ||10|| ನೀವು ಶ್ರೋತೃಗಳೆಲ್ಲರೂ ಸುಜ್ಞಾನಿಗಳು, ಹೋಲಿಸಿನೋಡಿದರೆ ನಾನಾದರೋ ಅಲ್ಪಜ್ಞನು.ಆದರೂ ಸಹ ಸಾಯಿಯ ಈ ವಾಕ್ಯಯಜ್ಞವನ್ನು ಆದರಪೂರ್ವಕವಾಗಿ ಕೃತಜ್ಞತಾಭಾವದಿಂದ ಕೇಳಿರಿ. ||11|| ಈ ವಾಕ್ಯಯಜ್ಞವು ಅತಿ ಕಲ್ಯಾಣಕಾರಿಯಾದುದು. ಅದು ನನ್ನಂತಹ ಅಜ್ಞಾನಿಯನ್ನೂ ತನ್ನ ಕೈಯ ಉಪಕರಣವನ್ನಾಗಿ ಮಾಡಿ ತನ್ನ ಸ್ವಂತ ಕೆಲಸವನ್ನು ಪೂರ್ಣಗೊಳಿಸುತ್ತದೆ. ಶ್ರೋತೃಗಳಿಗೆ ಇದೆಲ್ಲವೂ ತಿಳಿದಿದೆ. ||12|| ಸಾಯಿ ಚರಣಗಳಿಗೆ ಅಭಿವಂದಿಸಿ ಏಕಾಗ್ರಮನಸ್ಸಿನಿಂದ ಈ ಕಥೆಯನ್ನು ಕೇಳುವವರು ಇದನ್ನು ಮಹಾಮಂಗಳಕರವಾದ ಹಾಗೂ ಪರಮಪಾವನಕರ ಸ್ಥಿತಿಯನ್ನು ಅನುಭವಿಸುವರು. ||13|| ನಿಜವಾದ ಭಕ್ತಿಯಿಂದ ಸಮನ್ವಿತನಾದ ಭಕ್ತನು ಮತ್ತು ಹೃದಯದಲ್ಲಿ ತನ್ನ ಉದ್ಧಾರ ಬಯಸುವವನು ಏಕಾಗ್ರಚಿತ್ತನಾಗಿ ಈ ಕಥಾಮೃತವನ್ನು ಪಾನಮಾಡುತ್ತಾನೆ. ||14|| ಸೇವೆಯು ಎಂದಿಗೂ ವ್ಯರ್ಥವಾಗಿ ಹೋಗುವುದಿಲ್ಲ. ಸಾಯಿಯು ಅವರ ಗುರಿಯನ್ನು ಲೌಕಿಕವಾಗಲಿ, ಪರಮಾರ್ಥಿಕವಾಗಲಿ, ತೃಪ್ತಿಪಡಿಸುತ್ತಾರೆ ಮತ್ತು ಕೊನೆಯಲ್ಲಿ ಕೃತಾರ್ಥರನ್ನಾಗಿ ಮಾಡುತ್ತಾರೆ. ||15|| ಈ ಗ್ರಂಥದ ನಲವತ್ತನಾಲ್ಕನೆಯ ಅಧ್ಯಾಯದಲ್ಲಿ ಸಾಯಿಯವರ ನಿರ್ಯಾಣದ ಬಗ್ಗೆ ಕೇಳಿರುವಿರಿ. ಆದರೂ ಈ ಗ್ರಂಥ ಮುಂದುವರೆಯುತ್ತಿದೆ. ಈ ಚಮತ್ಕಾರವು ನನಗೆ ಅರ್ಥವಾಗುತ್ತಿಲ್ಲ. ||16|| ಹಿಂದಿನ ಅಧ್ಯಾಯದಲ್ಲಿ, ಸಾಯಿ ನಿರ್ಯಾಣವು ಯಥಾನುಕ್ರಮವಾಗಿ ಪೂರ್ಣವಾಗಿ ಹೇಳಲ್ಪಟ್ಟಿತು. ಆದರೂ ಸಾಯಿ ಲೀಲೆಗಳ ಬಲೆಯು ಕ್ಷಣಮಾತ್ರವೂ ವಿಳಂಬಮಾಡದೆ ನೇಯುತ್ತ ಹೋಗುತ್ತಿದೆ. ||17|| ನಿಜವಾಗಿಯೂ ಅಚ್ಚರಿ ಪಡುವಂತಹುದೇನೂ ಇಲ್ಲ. ಈ ಸಾಯಿಯು ಜನನ-ಮರಣಗಳಿಗೆ ಅತೀತರಾಗಿದ್ದಾರೆ. ಕೇವಲ ದೇಹ ಮಾತ್ರ ತ್ಯಜಿಸಿದ್ದಾರೆ. ಅವರು ಹಿಂದಿನಂತೆಯೇ ಅವ್ಯಕ್ತರಾಗಿಯೇ ಇದ್ದಾರೆ. ||18|| ದೇಹವು ಹೋಯಿತು, ಆಕಾರವು ಹೋಯಿತು, ಅವ್ಯಕ್ತವಾದ ಆತ್ಮವು ಹಿಂದಿನಂತೆಯೇ ಕಾರ್ಯಶೀಲವಾಗಿದೆ. ಲೀಲೆಗಳು

ಅವರು ದೇಹತ್ಯಾಗಮಾಡಿದ ಮೇಲೂ ನಡೆಯುತ್ತಲೇ ಇವೆ. ಇದು ಎಲ್ಲರಿಗೂ ತಿಳಿದಿದೆ. ॥19॥ ಅಂತಹ ಲೀಲೆಗಳೂ ಅಪಾಆದರೆ ಅವುಗಳೆಲ್ಲವನ್ನೂ ಹೇಳುತ್ತಾ ಹೋದಲ್ಲಿ ಈ ಗ್ರಂಥವು ಇನ್ನೂ ವಿಸ್ತಾರವಾಗುತ್ತದೆ. ಆದ್ದರಿಂದ ಅದನ್ನು ತಪ್ಪಿಸಲು ನಾವು ಕೇವಲ ಅದರಸಾರವನ್ನು ತೆಗೆದುಕೊಂಡು ಶ್ರೋತೃಗಳಿಗೆ ಗೌರವ ಪೂರ್ವಕವಾಗಿ ಕೊಡೋಣ. ॥20॥ ಸಾಯಿಯು ಅವತಾರವನ್ನೆತ್ತಿದ ಆ ಸಮಯದಲ್ಲಿ ನಾವೆಲ್ಲರೂ ಅವರ ಸತ್ಸಂಗವನ್ನು ತೀರಾ ಸಹಜವಾಗಿ ಬಹು ಸುಲಭವಾಗಿ ಪಡೆದೆವು. ನಾವೆಷ್ಟು ಭಾಗ್ಯವಂತರು! ॥21॥ ನಾವು ವಿರಕ್ತಿಯನ್ನು ಪಡೆಯದಿದ್ದರೆ, ಸಂಸಾರದಿಂದ ನಿವೃತ್ತಿಯನ್ನು ಹೊಂದದಿದ್ದರೆ, ಭಗವಂತನಲ್ಲಿ ಪ್ರೀತಿಯನ್ನು ಪಡೆಯದಿದ್ದರೆ ಈ ದೇಹವು ಅದೆಂತಹ ದುರ್ಗತಿ ಪಡೆಯುತ್ತಿತ್ತು! ॥22॥ ಸರ್ವೇಂದ್ರಿಯಗಳಿಂದಲೂ ಸಾಯಿಯನ್ನು ಭಕ್ತಿ ಭಾವದಿಂದ ಕಾಣುವುದೇ ನಿಜವಾದ ಪೂಜೆ. ಕಣ್ಣುಗಳಿಂದ ಅವರ ಮೂರ್ತಿಯನ್ನು ನೋಡುತ್ತಿದ್ದರೆ ಬಾಯಿಂದ ಮಾತುಗಳು ಹೊರಬರುವುದಿಲ್ಲ! ॥23॥ ಕಿವಿಗಳು ಸಾಯಿ ಕೀರ್ತನೆಯನ್ನು ಕೇಳಿದಾಗ, ನಾಲಗೆಯು ಮಾವಿನ ಹಣ್ಣಿನ ರಸದ ಮಧುರತೆಯನ್ನು ಆಸ್ವಾದಿಸುತ್ತಿದೆಯೇನೋ ಎಂಬ ಹಾಗಿರುತ್ತದೆ. ಸಾಯಿಯ ಚರಣಗಳನ್ನು ಸ್ಪರ್ಶಿಸಿದಾಗ, ಮೃದುವಾದ ಹಾಸಿಗೆ ಸ್ಪರ್ಶವನ್ನು ಬಿಡಲು ಇಚ್ಛೆಪಡದೆ ಇರುವ ರೀತಿಯಲ್ಲಿರುತ್ತಿತ್ತು. ॥24॥ ಸಾಯಿಯಿಂದ ಒಂದು ಕ್ಷಣ ಮಾತ್ರವಾದರೂ ವಿಯೋಗವನ್ನು ಸಹಿಸಿಕೊಳ್ಳುವವನು ನಿಜವಾದ ಸಾಯಿಭಕ್ತನಾಗುವನೇನು? ಸಂಸಾರದಲ್ಲಿ ವಿರಕ್ತಿಯನ್ನು ಹೊಂದದೇ ಇರುವವನು ಸಾಯಿಚರಣಗಳಲ್ಲಿ [illegible] ಹೇಗೆ ಹೇಳಲಾಗುವುದು? ॥25॥ ಒಬ್ಬ ಪತಿವ್ರತೆಯು ತನ್ನ ಪತಿಯಲ್ಲದೆ ಮತ್ತೆ ಯಾರಾದರೂ ತನ್ನ ಮಾರ್ಗದಲ್ಲಿ ಎದುರಾದಲ್ಲಿ ಅವರನ್ನು ತನ್ನ ಮಾವ, ಭಾವ ಅಥವಾ ಸೋದರನೆಂದು ಪರಿಗಣಿಸಿ ಗೌರವದಿಂದ ವಂದಿಸುತ್ತಾಳೆ. ॥26॥ ಒಬ್ಬ ಪತಿವ್ರತೆಯ ಅಂತರಂಗವು ನಿಶ್ಚಲವಾಗಿರುತ್ತದೆ. ಅವಳು ತನ್ನ ಮನೆಯನ್ನು ಎಂದಿಗೂ ಬಿಟ್ಟುಹೋಗುವುದಿಲ್ಲ. ಮತ್ತು ತನ್ನ ಪತಿಯ ಮೇಲೆ ಅಪಾರ ಪ್ರೇಮವಿಟ್ಟಿರುತ್ತಾಳೆ. ಕೇವಲ ಅವನು ಮಾತ್ರವೇ ಅವಳ ಆಜನ್ಮ ಆಧಾರ. ॥27॥ ಒಬ್ಬ ಪತಿವ್ರತೆ ಸಾಧ್ವಿ ಅಥವಾ ಸತಿಯು ಯಾವತ್ತೂ ತನ್ನ ಪತಿಯನ್ನು ನೋಡುವ ರೀತಿಯಲ್ಲಿ ಇತರ ಗಂಡಸರನ್ನು ನೋಡುವುದಕ್ಕಾಗಲಿ ಭೇಟಿಯಾಗುವುದಕ್ಕಾಗಲಿ, ಆಶಪಡುವುದಿಲ್ಲ. ॥28॥ ಅವಳಿಗೆ ಮುಖ್ಯನಾದವನು ಕೇವಲ ಅವಳ ಪತಿಯು ಮಾತ್ರವೇ ಅವಳು ತನ್ನ ಪತಿಯೊಂದಿಗೆ ಬೇರೆಯಾರನ್ನೂ ಹೋಲಿಸುವುದಿಲ್ಲ. ಅವಳ ಪತಿಪ್ರೇಮ ಅನನ್ಯ ಪ್ರೀತಿಯಾಗಿರುತ್ತದೆ. ಒಬ್ಬ ಶಿಷ್ಯನೂ ಸಹ ಇದೇ ರೀತಿಯ ಪ್ರೀತಿಯನ್ನು ತನ್ನ ಗುರುವಿಗೆ ತೋರಿಸಬೇಕು. ॥29॥ ಈಗ ನಾನು ಪತಿವ್ರತೆಯ ಪ್ರೇಮವನ್ನು ಗುರುಪ್ರೇಮಕ್ಕೆ ಉಪಮೆಯಾಗಿಕೊಟ್ಟಿದ್ದರೂ ನಿಜವಾಗಿಯೂ ಗುರುಪ್ರೇಮವು ಸೀಮಾತೀತವಾದುದು. ಒಳ್ಳೆಯ ಶಿಷ್ಯನು ಅದರ ಮಹತ್ವವನ್ನು ಅರಿತಿರುತ್ತಾನೆ. ॥30॥ ಹಾಗಿರುವಾಗ, ಒಬ್ಬನ ಸಂಸಾರದಲ್ಲಿ ನಿತ್ಯ ಸಹಾಯ ಮಾಡದಿರುವ ವ್ಯಕ್ತಿ ಪಾರಮಾರ್ಥದಲ್ಲಿ ತಾನೇ ಯಾವ ರೀತಿಯ ಸಹಾಯ ಮಾಡಬಲ್ಲನು? ಅವನು ಮಕ್ಕಳ ಮಾವನೇ ಆಗಿರಬಹುದು, ಅಥವಾ

ಅಳಿಯನಾಗಿರಬಹುದು. ಹೆಂಡತಿಯೇ ಆಗಿರಬಹುದು, ಯಾರನ್ನೂ ನಂಬಲು ಸಾಧ್ಯವಿಲ್ಲ. ॥31॥ ಮಾತಾಪಿತೃಗಳು ಮಮತೆಯ ಮೂರ್ತಿಗಳಾಗಿರುತ್ತಾರೆ. ಸ್ವಂತ ಗಂಡು ಮಕ್ಕಳು ಕೇವಲ ಆಸ್ತಿ ಮತ್ತು ವಂಶ ಪಾರಂಪರ್ಯವಾಗಿ ಬರುವುದನ್ನು ನೋಡುತ್ತಾರೆ. ಪತ್ನಿಯು ತನ್ನ ಕುಟುಂಬದ ರಕ್ಷಣೆಗಾಗಿ ಮಾತ್ರವೇ ಯೋಚಿಸುತ್ತಾಳೆ. ಯಾರೂ ಪರಮಾರ್ಥಕ್ಕೆ ಸಹಕಾರಿಯಾಗುವುದಿಲ್ಲ. ॥32॥ ಅನಂತರ, ಪರಮಾರ್ಥ ಸಾಧನೆಗೆ ಸಹಾಯಮಾಡುವವರು ಮತ್ತೆ ಯಾರು ಉಳಿಯುತ್ತಾರೆ? ವಿಚಾರ ಮಾಡುತ್ತಾ ಹೋದಲ್ಲಿ ಕೊನೆಯದಾಗಿ ಉಳಿಯುವುದು ಕೇವಲ ನಮ್ಮ ಅಂತರಂಗವಷ್ಟೇ ಎಂದೆನಿಸಬಹುದು. ॥33॥ ನಿತ್ಯ ಮತ್ತು ಅನಿತ್ಯವನ್ನು ವಿವೇಕದಿಂದ ವಿಶ್ಲೇಷಿಸಿ, ಐಹಿಕ ಅಥವಾ ಆಮುಷ್ಮಿಕ ಕರ್ಮಗಳ ಫಲವನ್ನು ತ್ಯಾಗಮಾಡಿ, ಶಮ, ದಮಾದಿ ಷಟ್ಕಗಳನ್ನು (ಶಮ, ದಮ, ತಿತೀಕ್ಷೆ, ಉಪರತಿ, ಸಮಾಧಾನ) ಸಾಧಿಸಿ ಮನಸ್ಸನ್ನು ನಿಗ್ರಹಿಸಿ ಮೋಕ್ಷವನ್ನು ಸಾಧಿಸುವವನೇ ಧನ್ಯ! ॥34॥ ಈ ರೀತಿ, ಬೇರೆ ಯಾರ ಮೇಲೂ ಅವಲಂಬಿತವಾಗದೆ ಅತೀವ ಆತ್ಮವಿಶ್ವಾಸವನ್ನು ಹೊಂದಿ ತನ್ನ ಟೊಂಕಕಟ್ಟಿ ಸಿದ್ಧನಾದವನು ಮಾತ್ರ ಪರಮಾರ್ಥವನ್ನು ಸಾಧಿಸುತ್ತಾನೆ. ॥35॥ ಬ್ರಹ್ಮನು ನಿತ್ಯ; ಜಗತ್ತು ಅನಿತ್ಯ. ಗುರುವೊಬ್ಬನೇ ಸತ್ಯವಾದ ಬ್ರಹ್ಮ. ಅನಿತ್ಯವನ್ನು ತ್ಯಜಿಸಿ ಗುರುವನ್ನು ಕುರಿತು ಮಾತ್ರವೇ ಚಿಂತಿಸು. ಇಂತಹ ನಿರಂತರ ಭಾವನೆಯೇ ಸತ್ಯವನ್ನು ಪಡೆಯುವ ಸಾಧನ. ॥36॥ ಅನಿತ್ಯವನ್ನು ತ್ಯಜಿಸಿದರೆ ವೈರಾಗ್ಯವು ಹುಟ್ಟುತ್ತದೆ. ಸದ್ಗುರುವೇ ಚೈತನ್ಯಘನನು. ಭಗವಂತನು ಎಲ್ಲೆಡೆಯಲ್ಲೂ ಇದ್ದಾನೆ ಎಂಬ ಭಾವ ಹುಟ್ಟುತ್ತದೆ. ಇದನ್ನೇ ಅಭೇದದ ಪೂಜೆ ಎನ್ನುತ್ತಾರೆ. ॥37॥ ಭಯದಿಂದಾಗಲಿ, ಪ್ರೇಮದಿಂದಾಗಲಿ ಯಾರು ಯಾವುದರ ಮೇಲೆ ನಿತ್ಯವೂ ಧ್ಯಾನಿಸುತ್ತಾರೋ ಆಗ ಧ್ಯಾನಿಸುವವನೇ ಧ್ಯಾನದ ವಸ್ತುವಾಗುತ್ತಾನೆ. ಅವನು ಕಂಸನಾಗಲಿ, ರಾವಣ[2]ನಾಗಲಿ ಅಥವಾ ಒಂದು ತುಚ್ಛವಾದ ಕ್ರಿಮಿಯೇ[3] ಆಗಿರಲಿ. ॥38॥ ಧ್ಯಾನಿಸುವಾಗ ಅನನ್ಯತೆ ಇರಬೇಕು. ಧ್ಯಾನದ ಸಮ ಬೇರೊಂದಿಲ್ಲ. ಯಾರು ಇದನ್ನು ತಮಗೆ ತಾವೇ ಅಭ್ಯಾಸ ಮಾಡುತ್ತಾರೋ ಅವರು ನಿಸ್ಸಂದೇಹವಾಗಿಯೂ ತಮ್ಮನ್ನು ಉದ್ಧರಿಸಿಕೊಳ್ಳುತ್ತಾರೆ. ॥39॥ ಜೀವಭಾವವನ್ನು ಪೂರ್ಣವಾಗಿ ವಿಸ್ಮರಗೊಂಡು ಪ್ರಪಂಚದ ಆಶೆಗಳನ್ನು ತ್ಯಜಿಸಿದವನಿಗೆ ಜನನ ಮರಣಗಳು ಎಲ್ಲಿರುತ್ತವೆ? ಅವನು ಆತ್ಮಾನುಸಂಧಾನದಲ್ಲಿ ಮಗ್ನನಾಗಿ ಪರಮಸುಖವನ್ನು ಅನುಭವಿಸುತ್ತಾನೆ. ॥40॥ ಆದುದರಿಂದ ತನ್ನ ಗುರುವಿನ ನಾಮಸ್ಮರಣೆಯೂ ಪರಮಾನಂದವನ್ನು ಉಂಟುಮಾಡುತ್ತದೆ ಮತ್ತು ಸಕಲ ಭೂತಗಳಲ್ಲಿಯೂ ಭಗವಂತನನ್ನು ತೋರಿಸುತ್ತದೆ. ನಾಮದ ಮಹಿಮೆಯು ಇದಕ್ಕಿಂತ ಇನ್ನೇನು? ॥41॥ ಯಾರ ಹೆಸರು ಇಷ್ಟು ಮಹತ್ವಪೂರ್ಣವಾಗಿದೆಯೋ ಅವರಿಗೆ ಸದ್ಭಾವದಿಂದ ನಮಸ್ಕರಿಸುತ್ತೇನೆ. ಅವರಲ್ಲಿ ನಾನು ಕಾಯಾ ವಾಚಾ ಮನಸಾ ಅನನ್ಯನಾಗಿ ಶರಣಾಗುತ್ತೇನೆ. ॥42॥ ನಾನು ಈಗ ಶ್ರೋತೃಗಳಿಗೆ ಇದನ್ನು ನಿರೂಪಿಸುವ ಒಂದು ಚರಿತ್ರೆಯನ್ನು ಹೇಳುತ್ತೇನೆ. ಆದ್ದರಿಂದ ಅದನ್ನು ನಿಮ್ಮ ಹಿತಾರ್ಥಕ್ಕಾಗಿ ಏಕಾಗ್ರಚಿತ್ತದಿಂದ ಆಲಿಸಿರಿ. ॥43॥ ಕೈಲಾಸವಾಸಿಯಾಗಿರುವ ಕಾಕಾದೀಕ್ಷಿತನು ಸಾಯಿ ಸಮರ್ಥರಿಂದ ಅಂಗೀಕಿತನಾಗಿ ಪ್ರತಿನಿತ್ಯವೂ ಭಾಗವತವನ್ನು

ಓದುತ್ತಿದ್ದನು. ಅದು ಎಲ್ಲರಿಗೂ ತಿಳಿದಿತ್ತು. ॥44॥ ಒಂದು ದಿನ, ದೀಕ್ಷಿತನು, ತನ್ನ ನಿತ್ಯರೂಢಿಯ ಪ್ರಕಾರ ಮುಂಬಯಿಯ ಚೌಪಾಟಿಯಲ್ಲಿನ ಕಾಕಾಮಹಾಜನಿಯ ಮನೆಯಲ್ಲಿ ಭೋಜನವಾದ ನಂತರ, ಗ್ರಂಥವನ್ನು ಓದುತ್ತಿದ್ದನು. ॥45॥ ಶ್ರೋತೃಗಳು ಈ ಅಧ್ಯಾಯವು ಸರಿಯಾದ ಅನುಕ್ರಮದಲ್ಲಿರುವುದನ್ನು ಕೇಳಿ. ಅದು ಹನ್ನೊಂದನೆಯ ಸ್ಕಂದದ ಎರಡನೆಯ ಅಧ್ಯಾಯವಾಗಿದ್ದು ಅತ್ಯುತ್ತಮವಾಗಿಯೂ, ಅದ್ವಿತೀಯವಾಗಿಯೂ ಇತ್ತು. ॥46॥ ಮಾಧವರಾವನು ಬಾಬಾರವರ ಭಕ್ತನು ಮತ್ತು ಅವನ ಜೊತೆ ಕಾಕಾ ಮಹಾಜನಿಯು ಭಾಗವತವನ್ನು ಏಕಾಗ್ರಚಿತ್ತದಿಂದ ಕೇಳಿಸಿಕೊಳ್ಳಲು ಕುಳಿತುಕೊಂಡನು. ॥47॥ ಅದೃಷ್ಟವಶಾತ್, ಕಥೆಯು ಬಹಳ ಹೃದಯಂಗಮವಾಗಿದ್ದು ಶ್ರೋತೃಗಳ ಹಂಬಲವನ್ನು ತೃಪ್ತಿಪಡಿಸಿತು. ಅದು ಭಗವದ್ಭಕ್ತಿಯನ್ನು ವರ್ಧಿಸುವಂತಹುದು ಮತ್ತು ಉತ್ಕೃಷ್ಟವಾದುದು. ॥48॥ ಈ ಮನೋಹರವಾದ ಕಥೆಯು ಋಷಭವಂಶದ[4] ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಅವಿರ್ಹೋತ್ರ, ದ್ರುಮಿಲ, ಚಮಸ, ಕರಭಾಜನ,[4] ಎಂಬ ಒಂಬತ್ತು ದೀಪಗಳಿಗೆ ಸಂಬಂಧಪಟ್ಟಿದ್ದು, ಆನಂದದಾಯಕವೂ, ಬೋಧಪ್ರದವೂ ಆಗಿದೆ. ॥49॥ ಎಲ್ಲ ಒಂಭತ್ತು ಜನರೂ ಭಗವತ್‌ಸ್ವರೂಪರೇ. ಅವರು ಕ್ಷಮೆ ಮತ್ತು ಶಾಂತಿಯ ಸ್ವರೂಪರು. ಅವರು ಭಾಗವತ ಧರ್ಮದ ಪ್ರತಾಪವನ್ನು ಜನಕನಿಗೆ ವರ್ಣಿಸಿದಾಗ ಅವನು ತಟಸ್ಥನಾಗಿಯೂ ಮಂತ್ರಮುಗ್ಧನಾಗಿಯೂ ನಿಂತನು. ॥50॥ ಪರಮಾನಂದವು ಯಾವುದು? ಹರಿಯಲ್ಲಿ ಪರಮಭಕ್ತಿ ಯಾವುದು? ಗುರುಚರಣಗಳ ಉತ್ತಮ ಶ್ರೇಯಸ್ಸಿನ ಸಹಾಯವಿಲ್ಲದೆ ಹರಿಯ ಮಾಯೆಯಿಂದ ಸುಲಭವಾಗಿ ಪಾರಾಗಲು ಹೇಗೆ ಸಾಧ್ಯ? ॥51॥ ಕರ್ಮಗಳು, ಅಕರ್ಮಗಳು ಮತ್ತು ವಿಕರ್ಮಗಳು– ಇವುಗಳೆಲ್ಲದರ ಮರ್ಮವೂ ಒಂದೇ. ಗುರುವು ಪರಮಾತ್ಮ ಸ್ವರೂಪ. ಗುರುಭಕ್ತಿಯೇ ಭಾಗವತ ಧರ್ಮ. ॥52॥ ದ್ರುಮಿಲನಾಥನು ಹರಿಚರಿತ್ರೆಯನ್ನೂ, ಅವತಾರದ ಗುಣಗಳನ್ನೂ ನಿರೂಪಿಸಿದ್ದಾನೆ. ಅವನು ನಾರಾಯಣನ ರೂಪ ಮತ್ತು ಸೌಂದರ್ಯವನ್ನು ಮಾನವ ಅವತಾರದ ಲಕ್ಷಣಗಳಿಂದ ವರ್ಣಿಸಿದ್ದಾನೆ. ॥53॥ ಮತ್ತೆಯೂ, ಚಮಸನಾಥನು ರಾಜಾ ಜನಕನಿಗೆ ಈ ಬಗ್ಗೆ ವಿವರಣೆ ನೀಡಿದ್ದಾನೆ. ಭಕ್ತಿಯನ್ನು ಇಚ್ಛಿಸದೇ ಇರುವವರ ಸ್ಥಿತಿಯು ಯಾವ ರೀತಿ ವೇದವಿಹಿತ ಕರ್ಮಗಳನ್ನು ಅನುಸರಿಸದೇ ಇರುವವರಿಗೆ ಉಂಟಾಗುವ ಸರ್ವನಾಶದ ಸ್ಥಿತಿಯಂತೆ ಎಂಬುದನ್ನು ಹೇಳಿದ್ದಾನೆ. ॥54॥ ಹರಿಯು ಎಲ್ಲರಲ್ಲಿಯೂ ವಾಸವಾಗಿದ್ದಾನೆ. ಆದ್ದರಿಂದ ಯಾರನ್ನೂ ದ್ವೇಷಿಸಬೇಡ. ದೇವರನ್ನು ಪ್ರತಿಯೊಂದು ರೂಪದಲ್ಲಿಯೂ ನೋಡು. ಅವನಿಲ್ಲದ ಜಾಗವು ಒಂದು ಕಣದಲ್ಲೂ ಇಲ್ಲ. ॥55॥ ಕೊನೆಯಲ್ಲಿ ಒಂಭತ್ತನೆಯನಾಥ, ಕರಭಜನನು ಕೃತ ಮತ್ತು ತ್ರೇತಾಯುಗಗಳಲ್ಲಿ ಯಾವ ಯಾವ ದೇವತೆಗಳನ್ನು ಪೂಜಿಸಬೇಕು ಮತ್ತು ಧ್ಯಾನಿಸಬೇಕು ಎಂಬುದರ ನಿಖರವಾದ ವಿವರಣೆಯನ್ನು ಕೊಟ್ಟಿದ್ದಾನೆ. ॥56॥ ಕಲಿಯುಗದಲ್ಲಿ ಹರಿ ಮತ್ತು ಗುರುಚರಣಗಳ ಸ್ಮರಣೆಯೊಂದೇ ಮೋಕ್ಷಕ್ಕೆ ಸಾಧನ. ಅದರಿಂದ ಭವಭಯ ನಾಶವಾಗುತ್ತದೆ. ನಿಜವಾಗಿ ಶರಣಾಗತರಾದವರಿಗೆ ಇದೊಂದೇ ರಕ್ಷಕ ಸಾಧನ. ॥57॥ ಆ ಗ್ರಂಥದಿಂದ

ಇದನ್ನು ಓದಿದ ನಂತರ ಕಾಕಾಸಾಹೇಬನು ಕೇಳಿದನು, "ನವನಾಥರ ಕೃತಿಗಳು ಅದೆಷ್ಟು ಅದ್ಭುತ ಮತ್ತು ಅಪೂರ್ವ! ಅವರ ವೃತ್ತಿಯು ನಿಜವಾಗಿಯೂ ಅತರ್ಕ್ಯವಾದುದು. ॥58॥ ಪ್ರೀತಿಯಿಂದ ಅವನು ಮಾಧವರಾವ್‌ಗೆ ಹೇಳಿದನು, "ಈ ಭಕ್ತಿಯನ್ನು ಆಚರಣೆಯಲ್ಲಿ ತರುವುದು ಅದೆಷ್ಟು ಕಷ್ಟ! ನಮ್ಮಂತಹ ಮೂರ್ಖರಿಗೆ ಭಕ್ತಿಯು ಸಾಧ್ಯವೇ? ಜನ್ಮಜನ್ಮಾಂತರಗಳಲ್ಲೂ ಅದನ್ನು ಪಡೆಯಲು ಅಸಾಧ್ಯ? ॥59॥ "ಮಹಾ ಪ್ರತಾಪರಾದ ಈ ನಾಥರನ್ನು ಹುಟ್ಟು ಪಾಪಿಗಳಾದ ನಮಗೆ ಹೋಲಿಸುವುದು ಹೇಗೆ ಸಾಧ್ಯ? ಈ ಭಕ್ತಿಯು ಸುಲಭವೇ? ಸಚ್ಚಿದ್ರೂಪಿಗಳಾದ ಅವರೇ ಧನ್ಯರು! ॥60॥ "ಅಂತಹ ಭಕ್ತಿಯನ್ನು ಎಂದಾದರೂ ನಾನು ಪಡೆಯಲು ಸಾಧ್ಯವೇ? ಭವಸಾಗರವನ್ನು ದಾಟುವ ಉಪಾಯವನ್ನು ಹೇಗೆ ಪಡೆಯಬಲ್ಲೆನು? ನಾನು ಹತಾಶನಾಗಿರುವೆ ಮತ್ತು ಧೈರ್ಯಗುಂದಿರುವೆನು. ಈ ಜೀವನ ಹಾಗೂ ಜನ್ಮ ವ್ಯರ್ಥವಾಗಿ ಹೋಗಿದೆ!" ॥61॥ ಕಾಕಾಸಾಹೇಬನು ಒಬ್ಬ ಪ್ರೀತಿಯ ಭಕ್ತ. ಅವನು ಸುಸ್ಥಿರ ವೃತ್ತಿಯನ್ನು ಕಳೆದುಕೊಂಡು ಚಂಚಲ ವೃತ್ತಿಯವನಾಗಿ ತಳಮಳಿಸುತ್ತಿರುವುದನ್ನು ಕಂಡು ಶಾಮಾನು ಕ್ಷೋಭೆಗೊಂಡನು. ॥62॥ ಮಾಧವರಾವ್ ಹೆಸರಿನ ಶಾಮಾನೂ ಕಾಕಾ ಬಗ್ಗೆ ಸದ್ಭಾವಹೊಂದಿದ್ದವನು. ಕಾಕಾನು ದೈನ್ಯ ಹಾಗೂ ನಿರಾಶಾಭಾವದಿಂದ ತಲ್ಲಣಿಸಿದುದು ಶಾಮಾನಿಗೆ ಇಷ್ಟವಾಗಲಿಲ್ಲ. ॥63॥ ಅವನು ಹೇಳಿದನು, "ಯಾರಿಗಾದರೂ ಬಾಬಾರವರಂತಹ ಅಮೂಲ್ಯ ರತ್ನವನ್ನು ಪಡೆಯುವ ಭಾಗ್ಯವಿದ್ದಾಗ ಈ ರೀತಿ ಗೋಳಿಟ್ಟರೆ ಅಂತಹವನ ಜೀವನವು ವ್ಯರ್ಥ. ॥64॥ "ಸಾಯಿಚರಣಗಳಲ್ಲಿ ಅಚಲವಾದ ಶ್ರದ್ಧೆಯಿದ್ದಲ್ಲಿ ಅವನ ಮನಸ್ಸಿನಲ್ಲಿ ಈ ರೀತಿಯ ತಳಮಳವೇಕೆ? ಬಹುಶಃ ನವನಾಥರ ಭಕ್ತಿಯು ಬಹಳ ಪ್ರಬಲವಾಗಿತ್ತು ಮತ್ತು ಶಕ್ತಿಯುತವಾಗಿತ್ತು. ಅದಮ್ಯಪ್ರೀತಿ, ಶ್ರದ್ಧೆಗಳು ಅಷ್ಟಿರಲಿಲ್ಲದಿರಬಹುದು. ॥65॥ "ಏಕನಾಥರ ಟೀಕಾಸಹಿತವಾದ ಭಾಗವತದ ಹನ್ನೊಂದನೆಯ ಸ್ಕಂದ ಹಾಗೂ ಭಾವಾರ್ಥ ರಾಮಾಯಣವನ್ನು ನಿತ್ಯವೂ ಪಾರಾಯಣ ಮಾಡಬೇಕೆಂದು ನಿನಗೆ ನಿಶ್ಚಿತವಾದ ಆಜ್ಞೆಯಾಗಿದೆ. ॥66॥ "ಜೊತೆಗೆ ಹರಿ ಮತ್ತು ಗುರು ನಾಮಸ್ಮರಣೆ ಮಾಡಬೇಕೆಂದು ಬಾಬಾರವರ ಆಜ್ಞೆ ಪ್ರಮಾಣವಾಗಿದೆ. ಇದೇ ಭವಭಯವನ್ನು ದಾಟಿಸುವ ಸಾಧನ. ಹಾಗಿರುವಾಗ ನೀನು ಮತ್ತೇಕೆ ಚಿಂತಿಸುವೆ?" ॥67॥ ಆದರೆ, ಕಾಕಾನು ನವನಾಥರ ಚರಿತ್ರೆಯ ಬಗ್ಗೆ ಒಂದೇ ಸಮನೆ ಚಿಂತಿಸುತ್ತಿದ್ದನು. ಅವರಂತೆ ಯತ್ಕಿಂಚಿತ್ತಾದರೂ ಸಾಧಿಸಲು ಸಾಧ್ಯವೇ? ಅವರ ಜೀವನದ ಶೈಲಿಯು ಕತ್ತಿಯ ಅಲಗಿನ ಮೇಲೆ ನಡೆದಂತೆ ಇರುತ್ತಿತ್ತು. ಅಂತಹ ತಪಸ್ಸಿನ ಜೀವನ ಸಾಧ್ಯವೇ? ॥68॥ ಅವನು ಈ ನವ ಯೋಗಿಗಳ ಭಕ್ತಿಯು ಅತ್ಯಂತ ಉತ್ಕಟವಾಗಿತ್ತೆಂದು ಮತ್ತು ಯಾವ ರೀತಿ ಅದನ್ನು ಸಾಧಿಸಲು ಸಾಧ್ಯ ಮತ್ತು ಅದರಿಂದಾಗಿ ನಿಜವಾಗಿಯೂ ದೇವರನ್ನು ಪಡೆಯಬಹುದೆಂದು ಚಡಪಡಿಸುತ್ತಿದ್ದನು. ॥69॥ ಸಾಕಿಷ್ಟು, ಅವನು ಈ ರೀತಿ ಕುಳಿತಾಗ, ಮಲಗಿದಾಗ, ಸದಾಕಾಲ ಹಂಬಲಿಸುತ್ತ ಅದೇ ವಿಚಾರ ಮಾಡುತ್ತಿರಲು, ಮಾರನೆಯ ದಿನ ಒಂದು ಚಮತ್ಕಾರ ನಡೆಯಿತು. ಶ್ರೋತೃಗಳು ಇದನ್ನು ಸವಿಸ್ತಾರವಾಗಿ ಆಲಿಸಿರಿ. ॥70॥ ಅವನ ಅದ್ಭುತ ಅನುಭವವನ್ನು,

ಗಮನಿಸಿರಿ! ಪ್ರಾತಃಕಾಲದಲ್ಲಿ ಆನಂದರಾವ್ ಪಾಖಡೆಯು ಮಾಧವರಾವ್‌ನನ್ನು ಹುಡುಕಿಕೊಂಡು ಬಂದನು. ॥71॥ ಮಾಧವರಾವ್‌ನೂ ಸಹ ಭಾಗವತ ಪ್ರವಚನಕ್ಕಾಗಿ ಬೇಗನೆ ಬಂದನು. ಆನಂದರಾವ್ ಮಾಧವರಾವ್‌ನ ಹತ್ತಿರ ಕುಳಿತುಕೊಂಡು ತನಗೆ ಬಿದ್ದ ಒಂದು ಅಚ್ಚರಿಯ ಕನಸಿನ ಬಗ್ಗೆ ಹೇಳಲು ಪ್ರಾರಂಭಿಸಿದನು. ॥72॥ ಒಂದು ಕಡೆಯಲ್ಲಿ ಪ್ರವಚನ ಮುಂದುವರೆದಿತ್ತು, ಮತ್ತೊಂದು ಕಡೆ ಇವರಿಬ್ಬರೂ ಪರಸ್ಪರ ಪಿಸುಗುಟ್ಟುತ್ತಿದ್ದರು. ಪ್ರವಚನಕಾರ ಹಾಗೂ ಶ್ರೋತೃಗಳು ಇಬ್ಬರಿಗೂ ಅದರಿಂದ ಬಹಳ ಅಶಾಂತಿ ಉಂಟಾಯಿತು. ॥73॥ ಚಂಚಲಚಿತ್ತದ ಆನಂದರಾವ್ ಮಾಧವರಾವ್‌ನಿಗೆ ತನ್ನ ಕನಸನ್ನು ಉತ್ಸಾಹದಿಂದ ಅಭಿನಯ ಸಹಿತವಾಗಿ ಚಿತ್ರಿಸಿ ಹೇಳುತ್ತಿದ್ದನು. ಇಬ್ಬರೂ ಪಿಸುಗುಟ್ಟುತ್ತಿದ್ದರು. ಒಬ್ಬರು ಹೇಳುತ್ತಿದ್ದರು, ಮತ್ತೊಬ್ಬರು ಕೇಳುತ್ತಿದ್ದರು. ಪ್ರವಚನವು ಕ್ಷಣಕಾಲ ತಡೆಹಿಡಿಯಲ್ಪಟ್ಟಿತು. ॥74॥ ಆಗ ಕಾಕಾ ಸಾಹೇಬನು ಇಬ್ಬರನ್ನೂ ಪ್ರಶ್ನಿಸಿದನು, "ಅದೇನು ಅದ್ಭುತ ಸಂಗತಿ, ಇಬ್ಬರೂ ಇಷ್ಟು ಆನಂದದಿಂದ ಇದ್ದೀರಿ! ಅದರ ಬಗ್ಗೆ ನಮಗೂ ತಿಳಿಸಿರಿ!" ॥75॥ ಆಗ ಮಾಧವರಾವ್ ಉತ್ತರಿಸಿದನು, "ನೆನ್ನೆ ತಾನೇ ನನಗೊಂದು ಸಂಶಯ ಹುಟ್ಟಿತು. ಈಗ ಅದಕ್ಕೆ ಸಮಾಧಾನ ಇಲ್ಲಿದೆ. ಭವಸಾಗರವನ್ನು ದಾಟಿಸುವ ಭಕ್ತಿಯ ಲಕ್ಷಣಗಳ ಬಗ್ಗೆಉತ್ತರ ಇಲ್ಲಿದೆ. ॥76॥ "ಪಾಖಡೆಯ ಸ್ವಪ್ನದ ಬಗ್ಗೆ ಕೇಳಿರಿ. ಯಾವ ರೀತಿ ಬಾಬಾರವರು ಅವನಿಗೆ ದರ್ಶನ ನೀಡಿದರು ಎಂಬುದನ್ನು ಕೇಳಿದಲ್ಲಿ ನಿಮ್ಮ ಶಂಕೆಗಳು ದೂರವಾಗುವುವು. ಗುರುಚರಣಗಳಲ್ಲಿ ಭಕ್ತಿ ಸ್ಥಿರವಾಗುವುದಕ್ಕೆ ಇಷ್ಟುಸಾಕು." ॥77॥ ಆದ್ದರಿಂದ, ಎಲ್ಲರೂ ಕನಸಿನ ಬಗ್ಗೆ ಕೇಳಲು ಪ್ರಬಲ ಉತ್ಸುಕರಾದರು. ಅದರಲ್ಲೂ ವಿಶೇಷವಾಗಿ ಕಾಕಾ ಸಾಹೇಬನು. ಏಕೆಂದರೆ ಅವನಿಂದಲೇ ಶಂಕೆಯು ಆರಂಭವಾಗಿದ್ದುದು. ॥78॥ ಪ್ರತಿಯೊಬ್ಬರ ಭಾವವನ್ನೂ ಗಮನಿಸಿ ಆನಂದರಾವ್‌ನು ತನಗೆ ಬಿದ್ದಂತಹ ಸ್ವಪ್ನ ವೃತ್ತಾಂತವನ್ನು ಸಾಂಗವಾಗಿ ಸದ್ಭಾವದಿಂದ ಕೂಡಿದವನಾಗಿ ವಿವರಿಸಿದನು. ಶ್ರೋತೃಗಳೆಲ್ಲರೂ ಅಚ್ಚರಿಗೊಂಡರು. ॥79॥ "ನಾನು ಒಂದು ಸಮುದ್ರದಲ್ಲಿ ಸೊಂಟದಾಳದ ನೀರಿನ ಮಧ್ಯದಲ್ಲಿ ನಿಂತಿದ್ದೆನು. ಅಲ್ಲಿ ಇದ್ದಕ್ಕಿದ್ದ ಹಾಗೆಯೇ ಶ್ರೀ ಸಮರ್ಥರು ನನ್ನ ಮುಂದೆ ಕಾಣಿಸಿಕೊಂಡರು. ॥80॥ "ಒಂದು ರತ್ನ ಖಚಿತವಾದ ಸಿಂಹಾಸನದ ಮೇಲೆ ಶ್ರೀ ಸಾಯಿಯವರು ವಿರಾಜಮಾನರಾಗಿದ್ದರು. ಅವರ ಚರಣಗಳು ನೀರಿನಲ್ಲಿ ಮುಳುಗಿದ್ದುವು. ಅಂತಹ ಸುಂದರ ಮೂರ್ತಿಯನ್ನು ದರ್ಶಿಸಿದೆನು. ॥81॥ ಅಂತಹ ಮನೋಹರ ರೂಪವನ್ನು ನೋಡಿ ನನ್ನ ಸಂತೋಷ ಉಕ್ಕಿ ಬಂದಿತು. ಆ ದೃಶ್ಯವು ಅದೆಷ್ಟು ಸಹಜವಾಗಿತ್ತೆಂದರೆ ಅದು ಸ್ವಪ್ನವೆಂದು ನನಗೆ ಸ್ವಲ್ಪವೂ ಅನಿಸಲಿಲ್ಲ. ನನ್ನ ಮನಸ್ಸು ದರ್ಶನದಿಂದಾಗಿ ಸುಖಸಂಪನ್ನವಾಗಿತ್ತು. ॥82॥ ಒಂದು ವಿಚಿತ್ರ ಕಾಕತಾಳೀಯವೆಂಬಂತೆ ಮಾಧವರಾವ್‌ನೂ ಅಲ್ಲಿಯೇ ನಿಂತಿದ್ದನು. ಅವನು ಭಾವಭರಿತನಾಗಿ ನನಗೆ ಹೇಳಿದನು, "ಆನಂದರಾವ್, ಅವರ ಚರಣಗಳಿಗೆ ವಂದಿಸು!" ॥83॥ ಆಗ ನಾನು ಉತ್ತರಿಸಿದೆ, "ಹಾಗೆ ಮಾಡಲು ನನಗೂ ಬಹಳ ಆಸೆಯಿದೆ. ಆದರೆ ಪಾದಗಳು ನೀರಿನಲ್ಲಿ ಮುಳುಗಿವೆ. ಅವುಗಳನ್ನು ಮುಟ್ಟುವುದು ಹೇಗೆ? ॥84॥ "ಅವರ ಚರಣಗಳು ನೀರಿನಲ್ಲಿರುವಾಗ ನನ್ನ

ತಲೆಯನ್ನು ಹೇಗೆ ಚರಣಗಳ ಮೇಲೆ ಇಡಲಿ? ನಾನು ಈಗ ಏನು ಮಾಡಲಿ? ಸರಿಯಾದ ಮಾರ್ಗವು ನನಗೆ ತಿಳಿಯುತ್ತಿಲ್ಲ!" ॥85॥ ಅದನ್ನು ಕೇಳಿ, ಮಾಧವರಾವ್ ಬಾಬಾರವರಿಗೆ ಏನು ಹೇಳಿದನೆಂಬುದನ್ನು ಕೇಳಿ, "ದೇವಾ, ನಿಮ್ಮ ಪಾದಗಳನ್ನು ಹೊರಗೆ ತೆಗೆಯಿರಿ. ಅವು ನೀರಿನೊಳಗೆ ಮುಳುಗಿಹೋಗಿವೆ." ॥86॥ "ಈ ರೀತಿ ಅವನು ಮಾತನಾಡಿದ ತಕ್ಷಣವೇ ಬಾಬಾರವರು ತಮ್ಮ ಚರಣಗಳನ್ನು ನೀರಿನಿಂದ ಹೊರ ತೆಗೆದಿಟ್ಟರು. ಕೂಡಲೇ ನಾನು ಅವುಗಳನ್ನು ಆನಂದದಿಂದ ಗಟ್ಟಿಯಾಗಿ ಹಿಡಿದು ತಡಮಾಡದೆ ಪಾದಗಳಿಗೆ ನಮಸ್ಕರಿಸಿದೆ." ॥87॥"ನಾನು ಅವರ ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿರಲು ಬಾಬಾರವರು ನನ್ನನ್ನು ಆಶೀರ್ವದಿಸಿದರು. "ಹೋಗು, ನಿನ್ನ ಕಲ್ಯಾಣವಾಗುತ್ತದೆ. ಯಾವುದೇ ಭೀತಿಗೆ ಕಾರಣವಿಲ್ಲ." ॥88॥ ಬಾಬಾರವರು ಮತ್ತೆಯೂ ನುಡಿದರು, "ಒಂದು ರೇಶಿಮೆ ಅಂಚಿನ ಧೋತಿಯನ್ನು ನನ್ನ ಶಾಮಾನಿಗೆ ಕೊಡು. ಅದರಿಂದ ನಿನಗೆ ಮಂಗಳವಾಗುತ್ತದೆ." ॥89॥ ಅನಂತರ, ಅಪಾರ ಗೌರವದಿಂದ, ವಿನಯದಿಂದ ಸಾಯಿ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಲು ನಾನು ಒಂದು ರೇಶಿಮೆಯ ಅಂಚಿನ ಪಂಚೆಯನ್ನು ತೆಗೆದುಕೊಂಡು ಬಂದೆ. "ಕಾಕಾಸಾಹೇಬ್, ಅದನ್ನು ಮಾಧವರಾವ್‌ನು ನಿನ್ನ ಕೈಯಿಂದ ಸ್ವೀಕರಿಸಲಿ" ಎಂದೆ. ॥90॥ ದಯಮಾಡಿ ನನ್ನ ವಿನಂತಿಯನ್ನು ಮಾನ್ಯ ಮಾಡಿರಿ. ಮಾಧವರಾವ್‌ನು ಅದನ್ನು ಧರಿಸುವಂತೆ ಮಾಡಿರಿ. ಅದು ನನಗೆ ಬಹಳ ಸಂತೋಷವೆನಿಸುತ್ತದೆ. ನಾನು ಅತ್ಯಂತ ಉಪಕೃತನಾಗುತ್ತೇನೆ." ॥91॥ ಮಾಧವರಾವ್‌ನು ತಾನೇ ಆನಂದರಾವ್‌ನ ಕುಶಲತೆಯನ್ನು ಆಲಿಸುತ್ತಿದ್ದನು. ಕಾಕಾ ಸಾಹೇಬನು ಅದನ್ನು ಅವನಿಗೆ ಕೊಟ್ಟಾಗ ಅವನು ಆ ವಸ್ತ್ರವನ್ನು ಸ್ವೀಕರಿಸಲಿಲ್ಲ. ॥92॥ ಅದು ಒಂದು ಕೇವಲ ಸ್ವಪ್ನವೆಂದು ಅವನು ಭಾವಿಸಿದನು. ಅವನಿಗೆ ಅದರ ಬಗ್ಗೆ ಏನಾದರೂ ಸುಳಿವು ಅಥವಾ ಏನಾದರೂ ದೃಷ್ಟಾಂತ ದೊರಕುವವರೆಗೆ ಆ ವಸ್ತ್ರವನ್ನು ಸ್ವೀಕರಿಸುವುದಿಲ್ಲವೆಂದು ನಿರ್ಧಾರ ಮಾಡಿದನು. ॥93॥ ಆಗ ಕಾಕಾಸಾಹೇಬನು ಹೇಳಿದನು, "ನಾವು ಈಗ ಬಾಬಾರವರ ವಚನಗಳ (ಸ್ವಪ್ನದ) ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳೋಣ. ಅದನ್ನು ಸ್ವೀಕರಿಸುವುದು ಉಚಿತವೋ ಅಥವಾ ಅನುಚಿತವೋ ಅದನ್ನು ಚೀಟಿಯಲ್ಲಿ ಬರೆದು ನಿರ್ಧರಿಸೋಣ. ॥94॥ "ಯಾವ ಚೀಟಿಯನ್ನು ಎತ್ತಲಾಗುವುದೋ ಅದನ್ನು ಬಾಬಾರವರ ಆಜ್ಞೆಯೆಂದು ಪರಿಗಣಿಸೋಣ." ಬಾಬಾರವರ ಚರಣಗಳಲ್ಲಿ ಚೀಟಿಗಳನ್ನು ಇಟ್ಟು ಅದರಿಂದ ಬಂದ ಸಂಕಲ್ಪದಂತೆ ನಡೆಯಲು ನಿರ್ಧರಿಸೋಣ" ಎಂದುಕೊಂಡನು. ॥95॥ ಕಾಕಾ ಸಾಹೇಬನು ಎಲ್ಲ ವಿಷಯಗಳಲ್ಲೂ ತನ್ನ ಭಾರವನ್ನು ಸಾಯಿಯ ಮೇಲೆ ಹಾಕಿದ್ದನು. ಅವನು ಯಾವುದೇ ವ್ಯವಹಾರ ಮಾಡಬೇಕೆಂದಾಗಲೂ ಸಾಯಿಯನ್ನು ವಿಚಾರಿಸುವುದರಲ್ಲಿ ನಂಬಿಕೆ ಇಟ್ಟಿದ್ದನು. ॥96॥ ಬಾಬಾರವರ ಜೀವಿತ ಸಮಯದಲ್ಲೂ ಇದು ಅವನ ಅಭ್ಯಾಸವಾಗಿತ್ತು. ಅದನ್ನು ಅವನು ಅವರ ನಂತರವೂ ಮುಂದುವರೆಸಿದನು. ಅವನು ಚೀಟಿಯನ್ನು ಹಾಕಿ ಅವರ ಆಜ್ಞೆಯನ್ನು ಪಡೆದು ಅದೇ ರೀತಿ ನಿಶ್ಚಯವಾಗಿಯೂ ಕ್ರಮ ಕೈಗೊಳ್ಳುತ್ತಿದ್ದನು॥97॥ ಕಾರ್ಯವು ದೊಡ್ಡದಾಗಿರಲಿ

ಅಥವಾ ಸಣ್ಣದಾಗಿರಲಿ, ಚೀಟಿ ಹಾಕದೆ ಅವನು ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಅದು ಅವನ ಪ್ರಾಣ ಕಳೆದುಕೊಳ್ಳುವ ಪರಿಸ್ಥಿತಿಯಾಗಿದ್ದರೂ ಸಹ ಬಾಬಾರವರ ಅನುಜ್ಞೆಯೇ ಅವನಿಗೆ ಸರ್ವಥಾ ಪ್ರಮಾಣವಾಗಿರುತ್ತಿತ್ತು. ॥98॥ ಒಮ್ಮೆ ಬಾಬಾರವರ ಚರಣಗಳಲ್ಲಿ ಶರಣಾದರೆ, ಈ ದೇಹವೂ ನಮ್ಮದಲ್ಲ. ಹಾಗಿರುವಾಗ ಅದರ ಚಲನವಲನಗಳ ಮೇಲೆ ನಮಗೆ ಯಾವ ಅಧಿಕಾರವಿದೆ? ॥99॥ ಈ ದೃಢ ನಿಶ್ಚಯದ ಆಧಾರದ ಮೇಲೆ ಅವನು ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುವ ಅವಕಾಶವನ್ನೂ ದೂರಮಾಡಿದ್ದನು. ಆದರೆ ಅವನು ಈ ನಿಶ್ಚಯವನ್ನು ಆಮರಣಾಂತ ದೃಢವಾಗಿ ಇಟ್ಟುಕೊಂಡಿದ್ದನು. ॥100॥ "ನಿನ್ನ ವಿಶ್ವಾಸವು ನಿನಗೆ ಫಲವನ್ನು ಕೊಡುತ್ತದೆ. ನಾನು ನಿನಗೆ ವಿಮಾನವನ್ನು ಕಳಿಸುತ್ತೇನೆ ಮತ್ತು ನಿನ್ನನ್ನು ಅದರಲ್ಲಿ ಕರೆಸಿಕೊಳ್ಳುತ್ತೇನೆ. ನಿಶ್ಚಿಂತನಾಗಿರು." ॥101॥ ಬಾಬಾರವರ ಈ ಪ್ರಸಾದೋಕ್ತಿಗಳು ಅಕ್ಷರಶಃ ಸತ್ಯವಾದವು. "ಸಾಯಿಲೀಲ" ಪತ್ರಿಕೆಯ ವಾಚಕರು ಕಾಕಾರವರ ನಿರ್ಗಮನದ ರೀತಿಯನ್ನು ಅರಿತಿರುವರು. ॥102॥ ಆ ಸ್ಥಿತಿಯು ಯಾವ ರೀತಿ ಬಂದಿತೆಂಬುದನ್ನು ಸ್ಮರಿಸಿದರೆ, ಅದು ನಿಜವಾಗಿಯೂ ಒಂದು ವಿಮಾನದಲ್ಲಿ ಪ್ರಯಾಣ ಮಾಡಿ ಹಾರಿಹೋದಂತಿತ್ತು. ಆ ಮರಣವು ಅದೆಂತಹ ಆನಂದ ದಾಯಕ! ಅದು ಗುರುನಾಮದ ಸ್ಮರಣೆಯ ಸಹಿತವಾಗಿತ್ತು. ॥103॥ ದೀಕ್ಷಿತನ ದೃಢನಿರ್ಧಾರ ಈ ರೀತಿ ಇತ್ತು. ಅವನ ಚಿತ್ತವು ನಿರಂತರ ಸಾಯಿ ಚರಣಗಳಲ್ಲಿ ನೆಲೆಸಿತ್ತು. ಅವನು ತನ್ನ ಬಂಧುಮಿತ್ರರಿಗೂ ಅದೇ ರೀತಿ ನಡೆಯಲು ಹೇಳಿಕೊಟ್ಟಿದ್ದನು. ಮತ್ತು ಅಂತಿಮವಾಗಿ ಗುರುಚರಣಗಳಲ್ಲಿ ಲೀನವಾದನು. ॥104॥ ಈಗ ಹಿಂದಿನ ನಿರೂಪಣೆಯನ್ನು ಮುಂದುವರೆಸೋಣ. ಆನಂದರಾವ್ ಮತ್ತು ಮಾಧವರಾವ್ ಇಬ್ಬರೂ ಚೀಟಿ ಎತ್ತುವ ಅಭಿಪ್ರಾಯವನ್ನು ಒಪ್ಪಿದರು. ಏಕೆಂದರೆ ಇಬ್ಬರೂ ಕಾಕಾನನ್ನು ಪ್ರೀತಿಸುತ್ತಿದ್ದರು. ಅನಂತರ ಸ್ವಲ್ಪವೂ ವಿಳಂಬಮಾಡದೆ ಚೀಟಿಗಳನ್ನು ಬರೆದರು. ॥105॥ ಒಂದು ಚೀಟಿಯಲ್ಲಿ "ಧೋತಿಯನ್ನು ಸ್ವೀಕರಿಸು" ಮತ್ತು ಇನ್ನೊಂದರಲ್ಲಿ "ಅದನ್ನು ತಿರಸ್ಕರಿಸು" ಎಂದು ಬರೆಯಲಾಯಿತು. ಈ ರೀತಿ ಬರೆದ ನಂತರ ಅವುಗಳನ್ನು ಸಾಯಿ ಚರಣಗಳಲ್ಲಿ (ಆ ಛಾಯಾಚಿತ್ರದ ಕೆಳಗೆ) ಇಡಲಾಯಿತು. ॥106॥ ಅಲ್ಲಿ ಇದ್ದ ಒಂದು ಮಗುವನ್ನು ಕರೆದು ಒಂದು ಚೀಟಿಯನ್ನು ಎತ್ತಲು ಹೇಳಲಾಯಿತು. ಮಾಧವರಾವನಿಗೆ ಧೋತಿಯನ್ನು ಸ್ವೀಕರಿಸಲು ಆಜ್ಞೆಯು ದೊರಕಿತು. ॥107॥ ಆ ಚೀಟಿಯು ಸ್ವಪ್ನದ ಘಟನೆಯನ್ನು ದೃಢೀಕರಿಸಿತು. ಎಲ್ಲರೂ ಆನಂದಪಟ್ಟರು. ಅನಂತರ ರೇಶಿಮೆ ಅಂಚಿನ ಧೋತಿಯನ್ನು ಶಾಮಾನ ಕೈಗಳಲ್ಲಿ ಇಡಲಾಯಿತು. ॥108॥ ಯಾವಾಗ ಚೀಟಿಯು ಸ್ವಪ್ನದಲ್ಲಿ ಹೇಳಿದ್ದನ್ನು ಊರ್ಜಿತಗೊಳಿಸಿತೋ ಆಗ ಅವರ ಪರಮಾನಂದವನ್ನು ತಡೆಯಲಾಗಲಿಲ್ಲ. ಅವರಿಬ್ಬರೂ ಸುಖ ಸಂತುಷ್ಟಿಹೊಂದಿದರು. ॥109॥ ಮಾಧವರಾವ್‌ನು ತನ್ನೊಳಗೆ ತಾನೇ ಖುಷಿಪಟ್ಟನು. ಆನಂದರಾವ್‌ನೂ ಸಂತೋಷಪಟ್ಟನು. ಸಾಯಿಭಕ್ತಿಯು ಊರ್ಜಿತವಾಯಿತು. ಕಾಕಾನ ಶಂಕೆಗಳು ದೂರವಾದವು. ॥110॥ ಸಾಕಿಷ್ಟು, ಪ್ರತಿಯೊಬ್ಬರೂ ಈಗ ಈ ಕಥೆಯ ಸಾರವನ್ನು ವಿಚಾರಮಾಡಬೇಕು. ಒಮ್ಮೆ ಗುರುವಿನ ಚರಣಗಳಲ್ಲಿ

ಶರಣಾದಲ್ಲಿ ಗುರುವದನದಿಂದ ಬರುವ ವಚನಗಳನ್ನು ಲಕ್ಷ್ಯಗೊಟ್ಟು ಪಾಲಿಸಬೇಕು. ॥111॥ ನಮ್ಮ ನಖ–ಶಿಖಾಂತಬೆಳವಣಿಗೆಯ ಸ್ಥಿತಿ, ಜೀವನದಲ್ಲಿ ನಮ್ಮ ಪಾತ್ರ ಮತ್ತು ನಮ್ಮ ಚಿತ್ತವೃತ್ತಿ ಎಲ್ಲವೂ ಗುರುವಿಗೆ ಚೆನ್ನಾಗಿ ತಿಳಿದಿದೆ. ಅವನೇ ನಮ್ಮ ಉದ್ಧಾರದ ಗತಿಯೂ ಸಹ. ॥112॥ ರೋಗ ನಿರ್ಣಯವು ರೋಗದ ಲಕ್ಷಣಗಳನ್ನು ಅವಲಂಬಿಸಿರುತ್ತದೆ. ಅದರ ಆಧಾರದ ಮೇಲೆ ಔಷಧಿ ಮತ್ತು ಅನುಪಾನ (ಆಹಾರ, ಪಾನೀಯಗಳು)ಗಳನ್ನು ಕೊಡಲಾಗುತ್ತದೆ. ಸದ್ಗುರುವು ಸರ್ವದಾ ಶಿಷ್ಯನ ಭವರೋಗದ ನಿವಾರಣೆಗಾಗಿ ಬೇಕಾಗುವ ನೇಮನಿಯಮಗಳನ್ನು ವಿಧಿಸುತ್ತಾನೆ. ॥113॥ ಗುರುವಿನ ವರ್ತನೆಯನ್ನು ಅನುಕರಣೆ ಮಾಡಬೇಡ. ಕೇವಲ ಗುರುವನ್ನು ಗೌರವಿಸು ಮತ್ತು ಅವನು ಕೊಡುವ ನಿರ್ದೇಶನಗಳನ್ನು ವಿಧೇಯತೆಯಿಂದ ಪಾಲಿಸು. ॥114॥ ಅವನ ವಚನಗಳ ಮೇಲೆ ಮನಸ್ಸನ್ನು ಏಕಾಗ್ರವಾಗಿ ಇಡು. ಅವುಗಳ ಮೇಲೆ ನಿತ್ಯವೂ ಚಿಂತನೆಮಾಡು. ಅವುಗಳೇ ನಿನ್ನ ಉದ್ಧಾರಕ್ಕೆ ಕಾರಣ ಎಂಬುದನ್ನು ಸದಾ ನಿನ್ನ ಮನಸ್ಸಿನಲ್ಲಿ ಸ್ಮರಿಸಿಕೋ. ॥115॥ ಗುರುವು ಏನನ್ನು ಹೇಳುತ್ತಾನೋ ಅದು ಪವಿತ್ರ ಗ್ರಂಥ ಹಾಗೂ 'ಪುರಾಣ'. ನಿಜವಾಗಿಯೂ ಅವನ ವಚನಗಳನ್ನೂ ಹಾಗೂ ಸ್ಪಷ್ಟೀಕರಣವನ್ನೂ ಹೊಂದಿರುತ್ತದೆ. ಆದ್ದರಿಂದ ಗುರುವಿನ ಮುಖ್ಯ ಉದ್ದೇಶಕ್ಕೆ ಗಮನಕೊಡು. ಅವುಗಳೇ ನಮಗೆ 'ವೇದ' ಮಂತ್ರಗಳು. ॥116॥ ಯಾವ ಸಂತರ ವಚನಗಳನ್ನೂ ಅವಮಾನಿಸಬೇಡ. ನಮ್ಮ ತಾಯಿಯಲ್ಲದೆ ಮತ್ತೆ ಯಾರೂ ಇನ್ನೂ ಉತ್ತಮವಾಗಿ ನಮ್ಮನ್ನು ಜತನ ಮಾಡಲಾರರು. ॥117॥ ನಿಜವಾದ ಹೃದಯಪೂರ್ವಕ ವಾತ್ಸಲ್ಯ ಮತ್ತು ಮೃದುತ್ವ ತಾಯಿಯು ಹೊಂದಿರುವುದು ಮಗುವಿಗೆ ಗೊತ್ತಿಲ್ಲ. ಮತ್ತು ತಾಯಿಯು ಅದರಿಂದ ಪಡೆಯುವ ತೃಪ್ತಿಯ ಅರಿವೂ ಮಗುವಿಗಿಲ್ಲ.ಮಗುವು ಕೇವಲ ತಾಯಿಯ ತೃಪ್ತಿಯನ್ನು ಅನುಭವಿಸುತ್ತದೆ. ॥118॥ ಈ ಸೃಷ್ಟಿಯಲ್ಲಿ ಅಸಂಖ್ಯಾತ ಸಂತರಿದ್ದಾರೆ. ಆದರೆ ಪರಬ್ರಹ್ಮನೇ ನಿಜವಾಗಿಯೂ ಎಲ್ಲರ ತಂದೆ." ಸಾಯಿಯ ಈ ಕರುಣಾಲಾಪವನ್ನು ನಿಮ್ಮ ಹೃದಯದ ಮೇಲೆ ಕೆತ್ತಿಕೊಳ್ಳಿರಿ. ॥119॥ ಆದುದರಿಂದ, ಸಾಯಿಯ ಮುಖದಿಂದ ಬಂದ ವಚನಗಳಿಗೆ ಗಮನ ನೀಡಿ ಅನುಸಂಧಾನ ಮಾಡಿರಿ. ಅಂತ್ಯದಲ್ಲಿ ಅವನು ಕೃಪಾನಿಧಿಯು ಮತ್ತು ಅವನೇ ತಾಪತ್ರಯಗಳನ್ನು (ಆದಿ ಭೌತಿಕ, ಆದಿ ದೈವಿಕ ಮತ್ತು ಆಧ್ಯಾತ್ಮಿಕ) ನಾಶ ಮಾಡುವವನು. ॥120॥ ಕೇವಲ ಅವನು ಮಾತ್ರ ತನ್ನ ಜಾಣ್ಮೆಯನ್ನು ಅರಿತಿರುವವನು. ನಮಗೆ ಮಾತ್ರ ಅದನ್ನು ಗಮನಿಸಿ ಕೌತುಕ ಅನುಭವಿಸುವುದು ಇರುತ್ತದೆ. ಅವನು ನಮಗಾಗಿ ಅಷ್ಟು ಸುಲಭವಾಗಿ ನಡೆಸುವ ಲೀಲೆಗಳು ಅದೆಷ್ಟು ಅದ್ಭುತ! ॥121॥ ಬೇರೆಯವರು ಏನು ಹೇಳುತ್ತಾರೋ ಅದನ್ನು ಕೇಳು ಆದರೆ ಅದು ನಿನ್ನ ಅನುಸಂಧಾನವನ್ನು ಕೆಡಿಸದಿರಲಿ. ನಿನ್ನ ಗುರುಗಳ ವಚನವನ್ನು ಎಂದಿಗೂ ಮರೆಯಬೇಡ. ॥122॥ ಇದರಲ್ಲಿಯೇ ನಿನ್ನ ಪರಮಕಲ್ಯಾಣ ಅಡಗಿದೆ. ಅದು ನಿನ್ನ ಸಂಸಾರ ಭಯವನ್ನು ತೆಗೆದುಹಾಕಿ ಭವಸಾಗರವನ್ನು ದಾಟಲು ಸಹಾಯ ಮಾಡುತ್ತದೆ. ಎಲ್ಲ ಪುರಾಣ ಗ್ರಂಥಗಳು ಅವುಗಳಲ್ಲಿ ಸಮ್ಮಿಳಿತವಾಗಿವೆ. ನಿನ್ನ ಜಪ, ತಪ, ಅನುಷ್ಠಾನವೆಲ್ಲವೂ ಅದೇ. ॥123॥ ಸಾರಾಂಶ ಎಂದರೆ

ನಿನ್ನ ಗುರುವನ್ನು ಪ್ರೀತಿಸು. ಗುರುವಿಗೆ ಅನನ್ಯ ಭಾವದಿಂದ ಶರಣಾಗು. ನಮಸ್ಕರಿಸು. ಸೂರ್ಯನ ಮುಂದೆ ಅಂಧಕಾರವಿಲ್ಲದ ರೀತಿಯಲ್ಲಿ ನೀನು ದಾಟಲು ನಿನ್ನ ಮುಂದೆ ಭವಸಾಗರವೇ ಇರುವುದಿಲ್ಲ. ॥124॥ ಈ ಸೃಷ್ಟಿಯಲ್ಲಿ ನೀನೆಲ್ಲೇ ಇರಲಿ, ಹತ್ತಿರವೋ ಅಥವಾ ಎಷ್ಟು ದೂರವೋ, ಸಪ್ತಸಾಗರಗಳಾಚೆಯಾದರೂ ಸರಿ, ಎಲ್ಲೇ ಇರಲಿ, ಗುರುವು ತನ್ನ ಭಕ್ತನಲ್ಲಿ ಅನಿವಾರಕವಾದ ಪ್ರೇಮ ಹೊಂದಿರುತ್ತಾನೆ. ॥125॥ ಸಾಕಿಷ್ಟು, ಇದನ್ನು ಬರೆಯುತ್ತಿರುವಾಗ ನನಗೆ ಒಂದು ಕಥೆಯು ನೆನಪಿಗೆ ಬರುತ್ತಿದೆ. ಯಾವ ರೀತಿ ಒಬ್ಬನು ಮತ್ತೊಬ್ಬನನ್ನು ಅಣಕಿಸಿ ತನ್ನ ಮೇಲೆಯೇ ಆಪತ್ತುಗಳನ್ನು ತಂದುಕೊಳ್ಳುತ್ತಾನೆಂಬುದನ್ನು ತೋರಿಸುತ್ತದೆ. ॥126॥ ಒಮ್ಮೆ ಬಾಬಾರವರು ಮಸೀದಿಯಲ್ಲಿ ಮ್ಹಾಳಸಾಪತಿಯೊಡನೆ ಇದ್ದಾಗ, ಅವರಿಗೆ ತಮ್ಮ ಹಿಂದಿನ ಮರದ ಹಲಗೆಯ ಹಾಸಿಗೆಯ ನೆನಪು ಏಕಾಏಕಿ ಆಯಿತು. ॥127॥ ಅದರ ಅಗಲ ಒಂದು ಅಡಿಗಿಂತ ಹೆಚ್ಚಾಗಿರಲಿಲ್ಲ. ಅವರು ಎರಡು ತುದಿಗಳನ್ನೂ ಚಿಂದಿಗಳಿಂದ ಕಟ್ಟಿ ಅದನ್ನು ಮಸೀದಿಯ ತೊಲೆಯಿಂದ ನೇತುಹಾಕಿ ಅದರ ಮೇಲೆ ಮಲಗುತ್ತಿದ್ದರು. ॥128॥ ಅವರು ಕತ್ತಲೆಯಲ್ಲಿ ಮಲಗುತ್ತಿರಲಿಲ್ಲವಾದ್ದರಿಂದ ಎರಡು ಮಣ್ಣಿನ ಹಣತೆಗಳನ್ನು ತಲೆಯ ಮತ್ತು ಪಾದಗಳ ಹತ್ತಿರ ಇಡುತ್ತಿದ್ದರುಅವು ರಾತ್ರಿಯೆಲ್ಲಾ ಉರಿಯುತ್ತಿದ್ದವು. ಅನಂತರ ಬಾಬಾರವರು ಹಲಗೆಯ ಮೇಲೆ ಮಲಗುತ್ತಿದ್ದರು. ॥129॥ ಈ ಹಲಗೆಯ ಬಗೆಗಿನ ಸಂಪೂರ್ಣ ವೃತ್ತಾಂತವನ್ನು ಹಿಂದಿನ ಒಂದು ಅಧ್ಯಾಯ(ಅ–10)ದಲ್ಲಿ ಕೊಟ್ಟಿದೆ. ಅದರ ಮಹತ್ವವನ್ನು ಈಗ ಕೇಳಿರಿ. ॥130॥ ಒಮ್ಮೆ ಬಾಬಾರವರು ಈ ಹಲಗೆಯ ಮಹತ್ವವನ್ನು ವರ್ಣಿಸುತ್ತಿದ್ದಾಗ ಕಾಕಾ ಸಾಹೇಬ ದೀಕ್ಷಿತನ ಮನಸ್ಸಿನಲ್ಲಿ ಒಂದು ಕಲ್ಪನೆ ಹುಟ್ಟಿತು. ಅದನ್ನು ಕೇಳಿರಿ. ॥131॥ ಅವನು ಬಾಬಾರವರಿಗೆ ಹೇಳಿದನು, "ನೀವು ಹಲಗೆಯ ಮೇಲೆ ಮಲಗಲು ಇಚ್ಛಿಸಿದರೆ, ನಾನು ಮತ್ತೊಂದನ್ನು ಪ್ರೀತಿಯಿಂದ ನೇತುಹಾಕುತ್ತೇನೆ. ಅನಂತರ ಅದರ ಮೇಲೆ ತಾವು ಸ್ವಸ್ಥಮನಸ್ಸಿನಿಂದ ಮಲಗಿಕೊಳ್ಳಬಹುದು." ॥132॥ ಬಾಬಾರವರು ಉತ್ತರಿಸಿದರು, "ನಾನು ಮ್ಹಾಳಸಾಪತಿಯನ್ನು ನೆಲದ ಮೇಲೆ ಬಿಟ್ಟು,ಹೇಗೆ ಎತ್ತರದಲ್ಲಿ ಹಲಗೆಯ ಮೇಲೆ ಮಲಗಲಿ? ನನಗೆ ನೆಲದ ಮೇಲೆಯೇ ಸರಿಯಾಗಿದೆ." ॥133॥ ಅದಕ್ಕೆ ಕಾಕಾನು ಬಹುಪ್ರೀತಿಯಿಂದ ಹೇಳಿದನು, "ನಾನು ಮತ್ತೊಂದು ಹಲಗೆಯನ್ನು ನೇತುಹಾಕುತ್ತೇನೆ. ನೀವು ಒಂದು ಹಲಗೆಯ ಮೇಲೆ ನಿದ್ರಿಸಬಹುದು ಮತ್ತು ಮ್ಹಾಳಸಾಪತಿಯು ಮತ್ತೊಂದರ ಮೇಲೆ. ॥134॥ ಅದಕ್ಕೆ ಬಾಬಾರವರು ಉತ್ತರಿಸಿದರು, "ಅವನು ಹೇಗೆ ಹಲಗೆಯ ಮೇಲೆ ಮಲಗಲು ಸಾಧ್ಯ? ಯಾರು ಅನೇಕ ಗುಣಸಮೂಹವನ್ನೇ ಹೊಂದಿರುತ್ತಾರೋ ಅವರು ಮಾತ್ರ ಹಲಗೆಯ ಮೇಲೆ ಮಲಗಲು ಸಾಧ್ಯ! ॥135॥ "ಹಲಗೆಯ ಮೇಲೆ ಮಲಗುವುದೇನೂ ಸುಲಭ ಸಾಧ್ಯವಲ್ಲ. ನಾನಲ್ಲದೆ ಬೇರೆ ಯಾರು ಅದರ ಮೇಲೆ ಮಲಗಲು ಸಾಧ್ಯ? ಯಾರು ಕಣ್ಣುಗಳನ್ನು ತೆರೆದುಕೊಂಡೇ ನಿದ್ರಿಸುವರೋ ಅವರು ಮಾತ್ರ ಅದರ ಮೇಲೆ ಮಲಗಬಲ್ಲರು! ॥136॥ "ನಾನು ನಿದ್ರೆಮಾಡಿದಾಗ, ಅವನಿಗೆ (ಮ್ಹಾಳಸಾಪತಿಗೆ) ಆಜ್ಞಾಪಿಸುತ್ತೇನೆ, 'ನಿನ್ನ ಕೈಯನ್ನು ನನ್ನ ಹೃದಯದ ಮೇಲೆ ಹಾಕು ಮತ್ತು ನನ್ನ

ಹತ್ತಿರವೇ ಕುಳಿತುಕೊಂಡಿರು. ॥137॥ "ಅವನಿಗೆ ಈ ಕೆಲಸವನ್ನೂ ಮಾಡಲು ಆಗುತ್ತಿಲ್ಲ. ಕುಳಿತುಕೊಂಡಿರುವಾಗ ಅವಲೋಕಿಸಲು ಪ್ರಾರಂಭಿಸುತ್ತಾನೆ. ಮತ್ತು ನಿದ್ರೆಯಿಂದಾಗಿ ತಲೆದೂಗುತ್ತಾ ಇರುತ್ತಾನೆ. ಈ ಹಲಗೆಯು ಅವನಿಗೆ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಅದು ಕೇವಲ ನನಗೆ ಹಾಸಿಗೆಯಾಗಬಹುದಷ್ಟೆ! ॥138॥ "ನನ್ನ ಹೃದಯದಲ್ಲಿ ನಡೆಯುತ್ತಿರುವ ಭಗವಂತನ ನಾಮಸ್ಮರಣೆಯನ್ನು ಅದರ ಮೇಲೊಂದು ಕೈಯನ್ನಿಟ್ಟು ಗಮನಿಸಿರಿ. ನಾನೇನಾದರೂ ನಿದ್ರಿಸುವುದನ್ನು ಕಂಡರೆ ನನ್ನನ್ನು ಎಚ್ಚರಿಸಿರಿ." ಇದು ಅವನಿಗೆ ಕೊಟ್ಟ ಆಜ್ಞೆ. ॥139॥ "ಇದಿಲ್ಲದಿದ್ದರೂ, ಅವನೇ ಗಾಢ ನಿದ್ರೆಯಲ್ಲಿ ಮುಳುಗುತ್ತಾನೆ. ಅವನ ಕೈಯು ಭಾರವಾದ ಕಲ್ಲಿನಂತಾಗುತ್ತದೆ. ನಾನೇನಾದರೂ 'ಭಗತ್' ಎಂದು ಕರೆದೊಡನೆ ಅವನು ತನ್ನ ಕಣ್ಣುಗಳನ್ನು ಮಿಟುಕಿಸಿ ನಿದ್ರೆಯಿಂದ ಗಡಬಡಿಸುತ್ತ ಏಳುತ್ತಾನೆ. ॥140॥ "ಯಾರು ನೆಲದ ಮೇಲೆಯೂ ಸ್ಥಿರವಾಗಿ ಕುಳಿತುಕೊಳ್ಳಲಾರರೋ ಮತ್ತು ಯಾರು ನಿದ್ರೆಗೆ ಗುಲಾಮರೋ, ಅಂತಹವರು ಎತ್ತರದಲ್ಲಿ ನಿದ್ರಿಸಲು ಹೇಗೆ ಸಾಧ್ಯ?" ॥141॥ ಆದ್ದರಿಂದ, ಬಾಬಾರವರು ಅನೇಕ ಸಂದರ್ಭಗಳಲ್ಲಿ ಹೇಳುತ್ತಿದ್ದರು, "ನಮ್ಮದು ಯಾವುದೋ ಅದು ನಮ್ಮ ಹತ್ತಿರ ಇರುತ್ತದೆ. ಮತ್ತು ಮತ್ತೊಬ್ಬರದು ಯಾವುದೋ ಅದು ಅವರ ಹತ್ತಿರ ಇರುತ್ತದೆ." ॥142॥ ಸಾಯಿನಾಥರ ಕಾರ್ಯಗಳು ಅಗಾಧ! ಆದ್ದರಿಂದ ಹೇಮಾಡನು ಅವರ ಚರಣಗಳಲ್ಲಿ ಆಶ್ರಯ ಪಡೆದಿದ್ದಾನೆ. ಅವರೇ ನನ್ನನ್ನು ತಮ್ಮ ಕೃಪಾಶೀರ್ವಾದಗಳಿಂದ ಅವರ ನಿರಂತರ ಸ್ಮರಣೆ ಮಾಡುವಂತೆ ಮಾಡಿದ್ದಾರೆ. ॥143॥

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಶ್ರೀ ಗುರುಚರಣಗಳ ಮಹಿಮೆ" ಎಂಬ ನಲವತ್ತೈದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಕಂಸ – ಕೃಷ್ಣನ ಸೋದರ ಮಾವ. ಕೃಷ್ಣನನ್ನು ಸಾಯಿಸಲು ಪ್ರಯತ್ನಪಟ್ಟನು.
2. ರಾವಣ – ಲಂಕೆಯ ರಾಜ, ಸೀತೆಯನ್ನು ಕದ್ದು ರಾಮನಿಗೆ ಶತ್ರುವಾದ.        3. ಕ್ರಿಮಿಕೀಟಗಳು.
4. ನವನಾಥರು – ಋಷಭ ವಂಶಜರು. ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಅವಿಹೋತ್ರ, ದ್ರುಮಿಲ, ಚಮಸ ಮತ್ತು ಕರಭಜನ.



# ಅಧ್ಯಾಯ - 46

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಕಾಶಿ ಮತ್ತು ಗಯಾ ಯಾತ್ರೆ; ಮೇಕೆಗಳ ಜನ್ಮ ಕಥನ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ನಿಮ್ಮ ಚರಣಗಳು ಪಾವನ ಶ್ರೀಸಾಯಿ! ನಿಮ್ಮ ಸ್ಮರಣೆಯು ಪವಿತ್ರ ಶ್ರೀಸಾಯಿ! ನಿಮ್ಮ ದರ್ಶನವು ಆನಂದದಾಯಿ, ಶ್ರೀಸಾಯಿ! ಇವು ನಮ್ಮನ್ನು ಕರ್ಮಬಂಧನಗಳಿಂದ ಮುಕ್ತಗೊಳಿಸುತ್ತವೆ. ॥1॥ ನಿಮ್ಮ ಭೌತಿಕ ದೇಹವು ಈಗ ಅದೃಶ್ಯವಾಗಿದ್ದರೂ ಸಹ ಶ್ರದ್ಧೆ ಮತ್ತು ಭಕ್ತಿಗಳು ಇದ್ದಲ್ಲಿ ಭಕ್ತರು ಪ್ರತ್ಯಕ್ಷ ಅನುಭವಗಳನ್ನು ಪಡೆಯುತ್ತಾರೆ. ಸಮಾಧಿಯಲ್ಲಿನ ಜ್ಯೋತಿಯು ಜಾಗೃತಗೊಳಿಸಲ್ಪಟ್ಟು ಭಕ್ತರಿಗಾಗಿಯೇ ಪ್ರಕಟಗೊಳ್ಳುತ್ತದೆಂಬುದು ಪ್ರತೀತಿ. ॥2॥ ಒಂದು ಸೂಕ್ಷ್ಮವಾದ ಅಗೋಚರವಾದ ಹಗ್ಗದಿಂದ ನಿಮ್ಮ ಭಕ್ತರನ್ನು ಎಲ್ಲ ದಿಕ್ಕುಗಳಿಂದಲೂ ಎಲ್ಲ ದೇಶ ವಿದೇಶಗಳಿಂದಲೂ ದೂರ ಮತ್ತು ಹತ್ತಿರದಿಂದಲೂ ನೀವು ಎಳೆಯುತ್ತಿರುವಿರಿ. ॥3॥ ನೀವು ಅವರನ್ನು ಎಳೆದುತಂದು ನಿಮ್ಮ ಚರಣಗಳಿಗೆ ಬಂಧಿಸಿ, ಪ್ರೇಮದಿಂದ ನಿಮ್ಮ ಎದೆಗಪ್ಪಿ ತಾಯಿ ತನ್ನ ಮಗುವನ್ನು ಪೋಷಿಸುವ ಹಾಗೆ ಪೋಷಿಸುತ್ತಿರುವಿರಿ. ॥4॥ ನೀವು ಎಲ್ಲಿರುವಿರೆಂದು ಯಾರಿಗೂ ಗೊತ್ತಿಲ್ಲಆದರೆ ನೀವು ಯಾವ ರೀತಿ ಜಾಣ್ಮೆಯಿಂದ ಸೂತ್ರವನ್ನು ಎಳೆಯುತ್ತೀರೆಂದರೆ, ಕೊನೆಯಲ್ಲಿ ಭಕ್ತರ ಸಹಾಯಕ್ಕೆ ಮತ್ತು ಆಧಾರವಾಗಿ ನೀವು ಅವರ ಹಿಂದೆ ಇರುವಿರೆಂಬುದನ್ನು ಅರಿತುಕೊಳ್ಳುತ್ತಾರೆ. ॥5॥ ಜ್ಞಾನಿಗಳು, ಪಂಡಿತರು, ಮತ್ತು ವಿದ್ಯಾವಂತರು ತಮ್ಮ ಅಹಂಭಾವದಿಂದಾಗಿ ಸಂಸಾರವೆಂಬ ಬಲೆಯಲ್ಲಿ ಸಿಕ್ಕಿಕೊಳ್ಳುತ್ತಾರೆ.

ಆದರೆ ಬಡವರು, ಸರಳಜೀವಿಗಳು ಮತ್ತು ಅಜ್ಞಾನಿಗಳನ್ನು ಹೇಗೆ ಇದ್ದರೂ ಸಹಿಸಿಕೊಂಡು ಪೊರೆಯುತ್ತೀರಿ. ॥6॥ ಒಳಗೊಳಗೆ ಅದೃಶ್ಯ ರೂಪದಲ್ಲಿದ್ದು ನೀವು ಎಲ್ಲ ಆಟವನ್ನೂ ಆಡುವಿರಿ. ಆದರೆ ನಿರ್ಲಿಪ್ತತೆಯ ನಿಶಾನೆಯನ್ನು ತೋರಿಸುವಿರಿ. ನೀವೇ ಸ್ವಯಂ ಕೆಲಸಗಳನ್ನು ಮಾಡಿ, ಮಾಡಿಲ್ಲವೆಂಬ ಹಾಗೆ ತೋರಿಸಿಕೊಳ್ಳುವಿರಿ. ನಿಮ್ಮ ಚರಿತ್ರೆಗಳು ಯಾರಿಗೂ ತಿಳಿಯುವುದಿಲ್ಲ! ॥7॥ ಆದುದರಿಂದ ಕಾಯಾ, ವಾಚಾ, ಮನಸಾ ನಿಮ್ಮ ಚರಣಗಳಲ್ಲಿ ಶರಣಾಗುವೆವು. ಮತ್ತು ನಮ್ಮ ಪಾಪನಾಶನಕ್ಕಾಗಿ ನಮ್ಮ ಮುಖದಿಂದ ನಿರಂತರ ನಿಮ್ಮ ನಾಮ ಸ್ಮರಣೆ ಆಗುತ್ತಿರಲಿ. ॥8॥ ನೀವು ಕೋರಿಕೊಳ್ಳುವವರ ಕೋರಿಕೆಗಳನ್ನು ಪೂರೈಸುವಿರಿ ಮತ್ತು ನಿಷ್ಕಾಮರಿಗೆ ನಿಮ್ಮ ನಿಜಸುಖಧಾಮವನ್ನೇ ದಯಪಾಲಿಸುವಿರಿ. ನಿಮ್ಮ ಮಧುರವಾದ ನಾಮಸ್ಮರಣೆಯೇ ನಿಮ್ಮ ಸದ್ಭಕ್ತರಿಗೆ ಸುಗಮೋಪಾಯ. ॥9॥ ಅದರಿಂದಾಗಿ ಪಾಪಕ್ಷಯವಾಗುತ್ತದೆ. ರಜೋಗುಣ ಮತ್ತು ತಮೋಗುಣಗಳು ನಿಸ್ಸಂಶಯವಾಗಿ ತೊಡೆದು ಹೋಗುತ್ತವೆ. ಸತ್ವಗುಣವು ಕ್ರಮೇಣ ವೃದ್ಧಿಸುತ್ತದೆ. ಮತ್ತು ಅದರ ನಂತರ ಪುಣ್ಯ ಸಂಚಯವು ಹೆಚ್ಚಾಗುತ್ತದೆ. ॥10॥ ಧರ್ಮವೃತ್ತಿಯು ಜಾಗೃತವಾಗುತ್ತಿದ್ದಂತೆಯೇ ವೈರಾಗ್ಯವು ಧಾವಿಸಿ ಬರುತ್ತದೆ. ಇಂದ್ರಿಯ ಸುಖಗಳು ನಾಮಶೇಷವಿಲ್ಲದೆ ಅಳಿಸಿಹೋಗುತ್ತವೆ. ಮತ್ತು ಕೂಡಲೇ ಆತ್ಮಜ್ಞಾನವು ಪ್ರಕಟವಾಗುತ್ತದೆ. ॥11॥ ವಿವೇಕದಿಂದಾಗಿ ಜ್ಞಾನವನ್ನು ಪಡೆಯುತ್ತೇವೆ. ಅನಂತರ ಸ್ವಸ್ವರೂಪದ ಅನುಸಂಧಾನದಿಂದಾಗಿ ಗುರುಚರಣಗಳಲ್ಲಿ ವಿನೀತರಾಗುತ್ತೇವೆ. ಇದನ್ನೇ 'ಗುರುವಿನಲ್ಲಿ ಪೂರ್ಣ ಶರಣಾಗತಿ' ಎನ್ನುತ್ತಾರೆ. ॥12॥ ಮನಸ್ಸು ಸಾಯಿಚರಣಗಳಲ್ಲಿ ಪೂರ್ಣವಾಗಿ ಶರಣಾಗಿರುವುದಕ್ಕೆ ಒಂದೇ ಒಂದು ಖಚಿತವಾದ ಚಿಹ್ನೆಯೆಂದರೆ ಸಾಧಕನು ಶಾಂತಸ್ವರೂಪನಾಗಿ ತನ್ನ ನಿಜ ಭಕ್ತಿಯನ್ನು ಉಲ್ಲಾಸದಿಂದ ಮತ್ತು ಆನಂದದಿಂದ ಸಂಪೂರ್ಣಗೊಳಿಸುತ್ತಾನೆ. ॥13॥ ಸಪ್ರೇಮ ಗುರು ಭಕ್ತಿಯು, ಪವಿತ್ರ ಧರ್ಮ, 'ನಾನೇ ಅವನು (ಆ ಬ್ರಹ್ಮ)' ಎನ್ನುವುದು ಜ್ಞಾನದ ಮರ್ಮ. ವಿಷಯಗಳಲ್ಲಿ ಅನಾಸಕ್ತಿಯು ಪರಮ ವೈರಾಗ್ಯ, ಸಂಸಾರದಿಂದ ವಿಮುಖತೆಯು ಆ ಹಂತದಲ್ಲಿ ಉಂಟಾಗುತ್ತದೆ. ॥14॥ ಅಂತಹ ಭಕ್ತಿಯ ಮಹಿಮೆ ಮಹತ್ತರವಾದುದು. ಅದನ್ನು ಕೇವಲ ಅನನ್ಯ ಭಾವದಿಂದ ಮಾಡಲಾಗುತ್ತದೆ. ಶಾಂತಿ, ವಿರಕ್ತಿ ಮತ್ತು ಕೀರ್ತಿ ಈ ಮೂರೂ ಅದನ್ನು ಅನುಸರಿಸುತ್ತವೆ. ಏಕೆಂದರೆ ಅವು ಯಾವಾಗಲೂ ಆ ಶಕ್ತಿಯಲ್ಲಿಯೇ ಅಂತರ್ಗತವಾಗಿರುತ್ತವೆ. ॥15॥ ಅಂತಹ ಗುರು ಭಕ್ತಿಯುಳ್ಳವನಿಗೆ ಏನು ಕಡಿಮೆಯಾಗುವುದಕ್ಕೆ ಸಾಧ್ಯ? ಅವನು ಮನದಲ್ಲಿ ಇಚ್ಛಿಸಿಕೊಂಡುದನ್ನು ಅನಾಯಾಸವಾಗಿ ಪಡೆಯುತ್ತಾನೆ. ॥16॥ ಬ್ರಹ್ಮಸ್ಥಿತಿಯು ಅಂತಹ ಭಕ್ತಿಯಿಂದ ಬರುತ್ತದೆ. ಮದುವೆಯ ಉಡುಗೊರೆಯಾಗಿ ದಾಸಿಯನ್ನು ಕೊಡುವ ರೀತಿ ಬರುತ್ತದೆ. ಮೋಕ್ಷವು ಸಿಗುವುದರಲ್ಲಿ ಹಾಗೂ ಯಾತ್ರಾಸ್ಥಳಗಳು ಅವನ ಚರಣಗಳ ಸ್ಪರ್ಶ ಪಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ. ॥17॥ ಹಿಂದಿನ ಅಧ್ಯಾಯದಲ್ಲಿ, ದೀಕ್ಷಿತನ ಭಾಗವತ ವಾಚನ ಹಾಗೂ ನವಯೋಗಿಗಳ ಭಕ್ತಿಯ ವರ್ಣನೆ ಮಾಡಲಾಗಿತ್ತು, ಮತ್ತು ಸಾಯಿ ಚರಣಗಳ ದರ್ಶನ ಹೇಗಾಯಿತು ಎಂಬುದನ್ನು ನಿರೂಪಿಸಲಾಗಿತ್ತು. ॥18॥ ಸಾಯಿಭಕ್ತ

ಆನಂದರಾವ್ ಪಾಖಾಡೆ ಅವನು ಕಂಡ ಅದ್ಭುತವಾದ ಸ್ವಪ್ನವನ್ನು ಮತ್ತು ಸಾಯಿ ಭಕ್ತಿಯ ವೈಭವವನ್ನು ವಿವರಿಸಿದನು. ॥19॥ ಸಾಯಿಯು
ಯಾರನ್ನು ತಮ್ಮ ಆಶ್ರಯಕ್ಕೆ ತೆಗೆದುಕೊಳ್ಳುತ್ತಾರೋ, ಅವರ ಜೊತೆಯಲ್ಲಿಯೇ ಶ್ರೀಸಾಯಿಯು ಹಗಲು ರಾತ್ರಿ ಇರುತ್ತಾರೆ. ಅವನು ಮನೆಯಲ್ಲಿಯೇ
ಇರಲಿ ಅಥವಾ ದ್ವೀಪಾಂತರ (ದೂರದ ದೇಶ)ಗಳಲ್ಲಿ ಇರಲಿ ಅವರು ಮಾತ್ರ ಅವನ ಜೊತೆಯಲ್ಲೇ ಇರುತ್ತಾರೆ. ॥20॥ ಆ ಭಕ್ತನು ಎಲ್ಲಿಗೇ
ಹೋಗಲಿ, ಪ್ರತಿಯೊಂದು ಜಾಗದಲ್ಲೂ ಅವನು ಸಾಯಿಯು ತನ್ನ ಹಿಂದೆಯೇ ಇರುವುದನ್ನು ಕಾಣುತ್ತಾನೆ ಮತ್ತು ಅವನಿಗೆ ಸಾಯಿಯು
ಅನಿರೀಕ್ಷಿತವಾಗಿಯೇ ದರ್ಶನಕೊಡುತ್ತಾರೆ. ॥21॥ ನಾನು ಈಗ ಒಂದು ಅದ್ಭುತವಾದ ಕಥೆಯನ್ನು ನಿರೂಪಿಸುತ್ತಿದ್ದೇನೆ. ಅದನ್ನು ಆಲಿಸಿದ ನೀವು
ಶ್ರೋತೃಗಳು ವಿಸ್ಮಯಪಡುವಿರಿ. ಮತ್ತು ಮನದಲ್ಲಿ ಆನಂದ ಪಡೆಯುವಿರಿ. ॥22॥ ಸಾಯಿಯ ಮುಖದಿಂದ ಬಂದ ಮಾತುಗಳನ್ನು ಶ್ರವಣಮಾಡಿದಲ್ಲಿ
ಧ್ಯಾನ ಸಮಾಧಿಯ ಸುಖವು ಕ್ಷುಲ್ಲಕವಾಗಿ, ಬಿಳಿಚಿಕೊಳ್ಳುತ್ತದೆ. ಸದ್ಭಕ್ತರು ಸ್ವಾನಂದದಲ್ಲಿ ಮುಳುಗಿಹೋಗುತ್ತಾರೆ. ॥23॥ ಈ ಮಧುರವಾದ
ಕಥೆಯನ್ನು ಕೇಳಿರಿ, ಹೆಜ್ಜೆ ಹೆಜ್ಜೆಗೂ ಇರುವ ಚಮತ್ಕಾರಗಳು ಶ್ರೋತೃಗಳನ್ನು ಮೈಮರೆಯುವಂತೆ ಮಾಡುತ್ತವೆ. ಮತ್ತು ಅವರು ಭಾವೋದ್ವೇಗದಿಂದ
ಉಬ್ಬುವಂತೆ ಮಾಡುತ್ತವೆ. ॥24॥ ಕಾಕಾ ಸಾಹೇಬ ದೀಕ್ಷಿತರ ಜ್ಯೇಷ್ಠ ಪುತ್ರ ಬಾಬುವಿನ ಯಜ್ಞೋಪವೀತ ಧಾರಣೆ ಸಮಾರಂಭವನ್ನು ನಾಗಪುರದಲ್ಲಿ
ಆಚರಿಸಲು ನಿಶ್ಚಯ ಮಾಡಲಾಯಿತು. ॥25॥ ನಾನಾ ಸಾಹೇಬ ಚಂದೋರ್ಕರ್‌ನ ಜ್ಯೇಷ್ಠ ಪುತ್ರನ ಮಗನ ಮದುವೆಯೂ ನಿಶ್ಚಯವಾಗಿತ್ತು,
ಅದಕ್ಕಾಗಿ ಗ್ವಾಲಿಯರ್ ಪಟ್ಟಣಕ್ಕೆ ಹೋಗಬೇಕಾಗಿ ಬಂದಿತು. ॥26॥ ನಾನಾನು ವಿಚಾರ ಮಾಡಿದನು, ಕಾಕಾನಿಂದಾಗಿ ಸ್ವಲ್ಪವೂ ವಿಳಂಬವಾಗಬಾರದು.
ಉಪನಯನವನ್ನು ಮುಗಿಸಿಕೊಂಡು ಗ್ವಾಲಿಯರ್‌ಗೆ ಮದುವೆಗೆ ಹೋಗಬಹುದು. ॥27॥ ಅವನು ಕಾಕಾನು ನಾಗಪುರದಿಂದ ಗ್ವಾಲಿಯರ್‌ಗೆ
ಯಾವುದೇ ಮಾನಸಿಕ ಒತ್ತಡವಿಲ್ಲದೆ ಬರಲೆಂದು ಇಚ್ಛಿಸಿದನು. ಆದ್ದರಿಂದಲೇ ಅವನು ಇಬ್ಬರಿಗೂ ಸೂಕ್ತವಾದ ಸುಮುಹೂರ್ತವನ್ನು ನಿಶ್ಚಯಿಸಿದನು.
॥28॥ ಅನಂತರ ಭಕ್ತಶ್ರೇಷ್ಠನಾದ ನಾನಾ ಸಾಹೇಬನು ಸಾಯಿ ದರ್ಶನಕ್ಕಾಗಿ ಮತ್ತು ಅವರನ್ನು ಲಗ್ನಕ್ಕೆ ಆಮಂತ್ರಿಸಲೆಂದು ಬಹಳ ಉತ್ಸಾಹದಿಂದ
ಶಿರಡಿಗೆ ಬಂದನು. ॥29॥ ಕಾಕಾ ಸಾಹೇಬನು ಆದಾಗಲೇ ಅಲ್ಲಿದ್ದನು. ನಾನಾ ಮಸೀದಿಗೆ ಹೋಗಿ ಎರಡೂ ಕೈಗಳನ್ನು ಜೋಡಿಸಿ ಬಾಬಾರವರನ್ನು
ಮದುವೆಗೆ ಆಮಂತ್ರಿಸಿದನು. ॥30॥ ಅನಂತರ ಬಾಬಾ ಹೇಳಿದರು, "ಒಳ್ಳೆಯದು, ಶ್ಯಾಮಾನನ್ನು ನಿನ್ನ ಜೊತೆ ಕರೆದುಕೊಂಡು ಹೋಗು." ಎರಡು
ದಿನಗಳ ನಂತರ ಕಾಕಾನು ಬಾಬಾರವರನ್ನು ಉಪನಯನಕ್ಕೆ ಬರಲು ಆಮಂತ್ರಿಸಿದನು. ॥31॥ ಬಾಬಾ ಅವನಿಗೂ ಅದನ್ನೇ ಹೇಳಿದರು, "ಶ್ಯಾಮಾನನ್ನು
ನಿನ್ನ ಜೊತೆ ಕರೆದುಕೊಂಡು ಹೋಗು." ಆದರೆ ಕಾಕಾ ಸಾಹೇಬನು ಸ್ವಯಂ ತಾವೇ ಬರಬೇಕೆಂದು ಬಾಬಾರವರನ್ನು ಆಗ್ರಹಪೂರ್ವಕವಾಗಿ
ಪ್ರಾರ್ಥಿಸಿದನು. ॥32॥ ಅದಕ್ಕೆ ಅವರು ಕೂಡಲೇ ಉತ್ತರಿಸಿದರು, "ಕಾಶೀ ಮತ್ತು ಪ್ರಯಾಗ ಮುಗಿಸಿ ಶ್ಯಾಮಾನಿಗಿಂತಲೂ ಮೊದಲೇ ಅಲ್ಲಿರುತ್ತೇನೆ.

ಅಲ್ಲಿಗೆ ಹೋಗಲು ನನಗೆ ಅದೆಷ್ಟು ಸಮಯ ಬೇಕು?" ||33|| ಈಗ ಶ್ರೋತೃಗಳು ಬಾಬಾರವರ ಈ ಮಾತುಗಳನ್ನು ಅದರ ನಿಜವಾದ ಅರ್ಥವನ್ನು ತಿಳಿಯಲು ಮನಸ್ಸಿನಲ್ಲಿಯೇ ಗುರುತಿಟ್ಟುಕೊಳ್ಳಿ, ಏಕೆಂದರೆ ಅವು ಬಾಬಾರವರ ಸರ್ವವ್ಯಾಪಕತ್ವವನ್ನು ತೋರಿಸುತ್ತವೆ. ||34|| ಅದು ಹಾಗೆಯೇ ಇರಲಿ. ಊಟವಾದ ಮೇಲೆ ಮಾಧವರಾವನು ಈ ರೀತಿ ಯೋಚಿಸಲು ಪ್ರಾರಂಭಿಸಿದನು. 'ಒಮ್ಮೆ ಗ್ವಾಲಿಯರ್ ನಗರವನ್ನು ತಲುಪಿದರೆ ಅಲ್ಲಿಂದ ಕಾಶಿಯು ಬಹಳ ದೂರವಿಲ್ಲ.' ||35|| ಅವನು ನಂದರಾಮ ಎನ್ನುವ ಮಾರವಾಡಿಯಿಂದ ಒಂದು ನೂರು ರೂಪಾಯಿಗಳನ್ನು ತನ್ನ ಪ್ರಯಾಣದ ಖರ್ಚಿಗಾಗಿ ಸಾಲವಾಗಿ ತೆಗೆದುಕೊಂಡನು. ಅನಂತರ ಅಲ್ಲಿಂದ ಹೊರಡಲು ಬಾಬಾರವರ ಅನುಮತಿ ಬೇಡಲು ಹೋಗಿದ್ದು, ಅವರನ್ನು ಗೌರವಭಾವದಿಂದ ಬೇಡಿದನು. ||36|| "ನಾನು ಲಗ್ನ-ಮುಂಜಿ ಇವುಗಳ ನಿಮಿತ್ತವಾಗಿ ಗ್ವಾಲಿಯರ್‌ಗೆ ಹೋಗುತ್ತಿರುವುದರಿಂದ ಇದೇ ಅವಕಾಶ ಉಪಯೋಗಿಸಿಕೊಂಡು ಕಾಶಿ ಮತ್ತು ಗಯೆಗಳಿಗೂ ಹೋಗಿ ಬರುವುದು ಯುಕ್ತವೆನಿಸುತ್ತದೆ. ||37|| "ಆದ್ದರಿಂದ ದೇವಾ, ನಾನು ನಿಮ್ಮ ಚರಣಗಳಲ್ಲಿ ಬೀಳುತ್ತೇನೆ. ನಾನು ಕಾಶಿ ಮತ್ತು ಗಯೆಗಳಿಗೆ ಹೋಗಿಬರಲೇ?" ಮಾಧವರಾವನಿಗೆ ಬಾಬಾರವರು ಆನಂದದಿಂದ ಅನುಮತಿ ನೀಡಿದರು. ||38|| ಅದೂ ಅಲ್ಲದೆ, ಅವರು ಅವನಿಗೆ ಹೇಳಿದರು, 'ನೀನು ಏಕೆ ಅವಶ್ಯಕತೆಗಿಂತ ಹೆಚ್ಚಾದ ಪ್ರಶ್ನೆ ಕೇಳುತ್ತೀಯೆ? ಸಹಜವಾಗಿ ಅನಾಯಾಸವಾಗಿ ನಡೆಯುವುದೆಲ್ಲವನ್ನೂ ತಪ್ಪಿಸಬಾರದು.' ||39|| ಅದು ಹಾಗಿರಲಿ. ಅಂತಹ ಅನುಮತಿಯು ದೊರೆತ ಮೇಲೆ ಮಾಧವರಾವನು ಒಂದು ಗಾಡಿಯನ್ನು ಹಿಡಿದು ಕೋಪರಗಾಂವಕ್ಕೆ ಹೊರಟನು. ಅನಂತರ ಅವನು ಅಪ್ಪಾ(ಕೋತೆ)ನನ್ನು ಭೇಟಿಯಾದನು. ||40|| ಅಪ್ಪಾನು ಚಾಂದವಾಡಾಗೆ ತನ್ನ ಮೊಮ್ಮಗಳನ್ನು ಕರೆದುಕೊಂಡು ಬರಲು ಹೋಗುತ್ತಿದ್ದನು. ಅವನು ಕಾಶಿಗೆ ಹೋಗುವ ಯೋಜನೆಯ ಬಗ್ಗೆ ಕೇಳಿದ ಕೂಡಲೇ ಟಾಂಗಾದಿಂದ ಹೊರಗೆ ಹಾರಿದನು. ||41|| ಅವನಿಗೆ ಕಾಶಿ ಪ್ರವಾಸ ಮಾಡಲು ಸಾಕಷ್ಟು ಹಣವಿಲ್ಲದಿದ್ದರೂ ಸಹ ಅವನು ಮಾಧವರಾವ್‌ನಂತಹ ವ್ಯಕ್ತಿಯ ಸಹವಾಸವನ್ನು ಬಿಟ್ಟುಕೊಡಲು ಇಷ್ಟಪಡಲಿಲ್ಲ. ||42|| ಮಾಧವರಾವ್‌ನು ಅವನನ್ನು ಪ್ರೋತ್ಸಾಹಿಸಿದನು. ಆದ್ದರಿಂದ ಅಪ್ಪಾಕೋತೆಯನ್ನು ತಡೆಯಲು ಯಾರೂ ಇರಲಿಲ್ಲ. ಅವನು ಆನಂದದಿಂದ ಬೇಗ ಬೇಗನೆ ಸಮಯದ ಲಾಭ ಪಡೆಯುತ್ತ ಗಾಡಿಯಲ್ಲಿ ಕುಳಿತುಕೊಂಡನು. ||43|| ಅಪ್ಪಾಕೋತೆ ಪಾಟೀಲನು ಧನವಂತನಾಗಿದ್ದನು ಆದರೆ ಅವನಲ್ಲಿ ಪ್ರಯಾಣ ಮಾಡಲು ಹಣವಿರಲಿಲ್ಲ. ಆದ್ದರಿಂದ ಅವನು ಕಾಶೀ ಪ್ರವಾಸ ಎಲ್ಲಿ ತಪ್ಪಿಹೋಗುವುದೋ ಎಂದು ದಾರುಣವಾಗಿ ಚಿಂತಿಸಹತ್ತಿದನು. ||44|| ಕಾಲವು ಶುಭಕರವಾಗಿರುವಾಗ ಅವಕಾಶವನ್ನು ಗ್ರಹಿಸಿಕೊಳ್ಳಬೇಕು. ಅಪ್ಪಾನು ಮಾಧವರಾವ್‌ನ ಸಂಗವನ್ನು ಖಚಿತವಾಗಿ ಉಳಿಸಿಕೊಳ್ಳಬೇಕೆಂದು ಯೋಚಿಸಿದನು. ||45|| ಅದು ಹಾಗಿರಲಿ. ಅವನ ಸಂದಿಗ್ಧ ಪರಿಸ್ಥಿತಿಯನ್ನು ಅರಿತ ಮಾಧವರಾವನು ಅವನಿಗೆ ಸಮಯೋಚಿತವಾದ ಪ್ರೋತ್ಸಾಹ ನೀಡಿದನು. ಅವನನ್ನು ಕಾಶಿಗೆ ಕರೆದುಕೊಂಡು ಹೋದನು ಮತ್ತು ಅವನ ಆಶೆಯನ್ನು ಪೂರೈಸಿದನು.

॥46॥ ಅವರು ಮುಂದೆ ನಾಗಪುರಕ್ಕೆ ಮುಂಜಿಯಲ್ಲಿ ಭಾಗವಹಿಸಲು ಹೋದರು. ಅಲ್ಲಿ ಕಾಕಾ ಸಾಹೇಬನು ಮಾಧವರಾವ್‌ನಿಗೆ ಖರ್ಚಿಗಾಗಿ 200 ರೂಪಾಯಿಗಳನ್ನು ಕೊಟ್ಟನು. ॥47॥ ಅಲ್ಲಿಂದ ಅವರು ಗ್ವಾಲಿಯರ್‌ಗೆ ಮದುವೆಗೆಂದು ಹೋದರು. ಆ ಸಮಯದಲ್ಲಿ ನಾನಾ ಸಾಹೇಬನು ಮಾಧವರಾವ್‌ಗೆ ಒಂದು ನೂರು ರೂಪಾಯಿಗಳನ್ನು ಕೊಟ್ಟನು. ॥48॥ ಶ್ರೀಮಂತನಾದ ಜಠಾರನು (ಹುಡುಗಿಯ ಮಾವ) ಸಹ ಒಂದು ನೂರು ರೂಪಾಯಿಗಳನ್ನು ಕೊಟ್ಟನು. ಈ ರೀತಿ ನಾನಾನು ತನ್ನ ಗುರುಬಂಧುವಿನ ಮೇಲೆ ಪ್ರೀತಿಯ ಮಳೆ ಸುರಿಸಿದನು. ॥49॥ ಜಠಾರನು ಕಾಶಿಯ ಮಂಗಳ ಘಾಟಿನ ಹತ್ತಿರ ಸುಂದರವಾದ ರತ್ನಖಚಿತವಾದ ಲಕ್ಷ್ಮೀನಾರಾಯಣ ದೇವಸ್ಥಾನದ ಮಾಲಿಕನಾಗಿದ್ದನು. ॥50॥ ಅಯೋಧ್ಯೆಯಲ್ಲಿಯೂ ಅವನ ಒಂದು ಸುಂದರವಾದ ಶ್ರೀರಾಮನ ಮಂದಿರವಿತ್ತು. ಅವನು ಈ ಎರಡು ಕ್ಷೇತ್ರಗಳಲ್ಲಿಯೂ ಈ ಅತಿಥಿಗಳನ್ನು ಆದರ ಸತ್ಕಾರಗಳೊಂದಿಗೆ ಸ್ವಾಗತಿಸಲು ತನ್ನ ಮುನೀಮನಿಗೆ ನಿರ್ದೇಶಿಸಿದ್ದನು. ॥51॥ ಗ್ವಾಲಿಯರ್‌ನಿಂದ ಅವರು ಮಥುರಾಗೆ ಹೋದರು. ಜೊತೆಯಲ್ಲಿ 'ಪಳಸಾ'ದ ಇನಾಮದಾರನಾದ ಓಝೆ, ಬಿನೀವಾಲೆ (ನಾನಾನ ಭಾವ), ಮತ್ತು ಪೆಂಡಾರಕರ್ (ಅಳಿಯ) ಇವರುಗಳೂ ಇದ್ದರು. ಅನಂತರ ಅವರಿಬ್ಬರೂ ಗಯಾಗೆ ಹೊರಟರು. ॥52॥ ಮಾಧವರಾವ್ ಮತ್ತು ಕೋತೆ ಇಬ್ಬರೂ ಅಲ್ಲಿಂದ ಪ್ರಯಾಗಕ್ಕೆ ಹೋದರು. ಅಲ್ಲಿಂದ ರಾಮನವಮಿಯ ಉತ್ಸವದ ಸಮಯಕ್ಕೆ ಸರಿಯಾಗಿ ಅವರು ಅಯೋಧ್ಯೆಯನ್ನು ಪ್ರವೇಶಿಸಿದರು. ॥53॥ ಅವರು ಅಲ್ಲಿ ಇಪ್ಪತ್ತೊಂದು ದಿನಗಳು ಇದ್ದರು. ಮತ್ತು ಕಾಶಿಯಲ್ಲಿ ಎರಡು ತಿಂಗಳ ಕಾಲ ಇದ್ದರು. ಆ ಸಮಯದಲ್ಲಿಯೇ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣಗಳು ಉಟಾದವು. ಅನಂತರ ಇಬ್ಬರೂ ಗಯೆಗೆ ಹೊರಟರು. ॥54॥ ಅವರಿಬ್ಬರೂ ರೈಲುಗಾಡಿಯಲ್ಲಿದ್ದಾಗ, ಗಯೆಯಲ್ಲಿ ಪ್ಲೇಗ್ ಹರಡಿದೆಯೆಂಬ ಸುದ್ದಿಯು ಕಿವಿಗೆ ಬಿದ್ದಿತು. ಮತ್ತು ಅಲ್ಲಿ ಮೂಲೆ ಮೂಲೆಗಳಲ್ಲಿ ಜನರು ಆತಂಕಗೊಂಡಿದ್ದರು. ॥55॥ ರೈಲುಗಾಡಿಯು ರೈಲು ನಿಲ್ದಾಣಕ್ಕೆ ತಲುಪಿದಾಗಲೇ ರಾತ್ರಿಯಾಗಿತ್ತು. ಆದ್ದರಿಂದ ಇಬ್ಬರೂ ಧರ್ಮಶಾಲೆಯಲ್ಲಿ ಸ್ವಸ್ಥವಾಗಿ ವಿಶ್ರಾಂತಿ ತೆಗೆದುಕೊಂಡರು. ॥56॥ ಅದು ಹಾಗಿರಲಿ. ಪ್ರಾತಃಕಾಲದಲ್ಲಿ ಗಯಾವಾಲಾನು (ಯಾತ್ರಿಗಳಿಗೆ ಪೂಜೆ, ವಸತಿ, ಭೋಜನಗಳನ್ನು ಅಣಿಮಾಡುವವನು) ಅವರನ್ನು ಭೇಟಿಯಾಗಲು ಬಂದನು. ಅವನು ಹೇಳಿದನು, "ಬೇಗ ಎದ್ದೇಳಿ. ಯಾತ್ರೆಯು ಈಗಾಗಲೇ ಶುರುವಾಗಿದೆ." ॥57॥ ಮಾಧವರಾವ್‌ನು ಮನದಲ್ಲೇ ಉದ್ವಿಗ್ನನಾಗಿದ್ದನು.ಅವನನ್ನು ಕೆಳದನಿಯಲ್ಲಿ ಕೇಳಿದನು, "ನಾವು ಬರುತ್ತಿದ್ದೇವೆ. ಆದರೆ ಪ್ಲೇಗ್ ಏನಾದರೂ ನಿಮ್ಮ ಬಡಾವಣೆಯಲ್ಲಿ ಹರಡಿದೆಯೇ?" ॥58॥ ಅದಕ್ಕೆ ಅವನು ಉತ್ತರಿಸಿದನು, "ಬನ್ನಿ, ನೀವೇ ನೋಡಿ. ಅಂತಹುದು ಏನೂ ಇಲ್ಲ. ನನ್ನ ಜೊತೆಯಲ್ಲಿ ಬನ್ನಿ. ಯಾವುದೇ ಭಯ ಅಥವಾ ಶಂಕೆ ಬೇಡ." ॥59॥ ಸಾಕಿಷ್ಟು! ಅನಂತರ ಇಬ್ಬರೂ ಗಯಾವಾಲಾನ ಮನೆಗೆ ಹೋದರು. ಅವನ ಬೃಹತ್ ಅರಮನೆಯಂತಹ ಮನೆಯನ್ನು ನೋಡಿ ಇಬ್ಬರೂ ಬಹಳ ಪ್ರಸನ್ನರಾದರು. ॥60॥ ಅವರು ಪ್ರಸನ್ನ ಚಿತ್ತರಾಗಲು

ಮತ್ತೊಂದು ಕಾರಣವೂ ಇದೆ. ಅದೇನೆಂದರೆ, ಅವರು ಕೆಳಗೆ ಕುಳಿತ ಜಾಗದ ಎದುರಿಗೇ ಬಾಬಾರವರ ಛಾಯಾಚಿತ್ರವಿತ್ತು. ಮಾಧವರಾವ್‌ನಿಗೆ ಭಾವೋದ್ವೇಗದಿಂದ ಗಂಟಲು ಕಟ್ಟಿ ಬಂದಿತು. ॥61॥ ಗಯೆಯಂತಹ ದೂರದ ಊರಿನಲ್ಲಿಯೂ ಬಾಬಾರವರ ಛಾಯಾಚಿತ್ರವು ಕಂಡುಬಂದುದು ಅವರಿಬ್ಬರಿಗೂ ನಿರೀಕ್ಷೆಯನ್ನು ಮೀರಿದ ದೃಶ್ಯವಾಗಿ ಅಚ್ಚರಿಯನ್ನುಂಟುಮಾಡಿತು. ॥62॥ ಮಾಧವರಾವ್‌ನು ಅತಿಯಾಗಿ ಭಾವುಕನಾದನು. ಅವನ ಕಣ್ಣುಗಳಲ್ಲಿ ಆನಂದಾಶ್ರುಗಳು ತುಂಬಿಬಂದವು. ಅವನು ಏಕೆ ಅಳುತ್ತಿದ್ದಾನೆಂದು ಗಯಾವಾಲಾನು ಪ್ರಶ್ನಿಸಿದನು. ॥63॥ ಮಾಧವರಾವ್‌ನು ಯಾವುದೇ ಸಹಜವಾದ ಕಾರಣವಿಲ್ಲದೆಯೇ ಅಳುತ್ತಿದ್ದನು. ಗಯಾವಾಲಾನು ಸಂದೇಹಗಳಿಂದ ತುಂಬಿದವನಾಗಿ ಉದ್ವಿಗ್ನನಾದನು. ॥64॥ ಗಯಾವಾಲಾನು ಚಿಂತಾಕ್ರಾಂತನಾಗಿ "ಮಾಧವರಾವ್‌ನು ಗಯೆಯಲ್ಲಿದ್ದ ಗ್ರಂಥಿಜ್ವರದ ಬಗ್ಗೆ ಚಿಂತಿಸುತ್ತ ತೀರ್ಥಯಾತ್ರೆಯು ಯಾವ ರೀತಿ ಪೂರೈಸುತ್ತೆ ಎಂಬುದನ್ನು ವಿಚಾರಮಾಡುತ್ತಿರುವನು" ಎಂದು ಭಾವಿಸಿದನು. ॥65॥ "ನಾನು ಈಗಾಗಲೇ ಹೇಳಿದ್ದೇನೆ, ಇಲ್ಲಿ ಪ್ಲೇಗು ಇಲ್ಲವೆಂದು. ಆದರೂ ನೀವು ಚಿಂತಿತರಾಗಿರುವಿರಿ. ನನಗೆ ನಿಜವಾಗಿಯೂ ಆಶ್ಚರ್ಯವಾಗಿದೆ!" ॥66॥ "ನೀನು ನನ್ನ ಮೇಲೆ ವಿಶ್ವಾಸವಿಡದಿದ್ದರೆ, ಇವರೆಲ್ಲರನ್ನೂ ಕೇಳಬಾರದೇಕೆ? ನಿನ್ನ ತಲೆಯ ಮೇಲಿರುವ ಒಂದು ಕೂದಲೂ ಕೊಂಕುವುದಿಲ್ಲ! ನೀನೇಕೆ ಅಳುತ್ತಿರುವೆ?" ॥67॥ "ಅಳುತ್ತಿರುವ ಈ ಯಾತ್ರಿಕನನ್ನು ನೋಡಿರಿ. ಅವನು ಇಲ್ಲಿ ಪ್ಲೇಗ್ ಹರಡಿದೆಯೆಂದು ತಿಳಿದು ದಿಗ್ಭ್ರಮೆಹೊಂದಿ ಧೈರ್ಯಗೆಟ್ಟಿದ್ದಾನೆ." ॥68॥ ಆದುದರಿಂದ, ಮಾಧವರಾವ್‌ನು ಗಯಾವಾಲಾನಿಗೆ ತನ್ನ ಮನದಲ್ಲಿರುವುದನ್ನು ವಿವರಿಸಲು ಪ್ರಯತ್ನಿಸಿದನು. "ಅದು ಹೇಗೆ ನನ್ನ ಮಾವುಲಿ(ಸಾಯಿ)ಯು ನನಗಿಂತ ಮುಂಚೆಯೇ ಇಲ್ಲಿಗೆ ಬಂದಿದ್ದಾನೆ?" ॥69॥ "ಕಾಶೀ ಮತ್ತು ಪ್ರಯಾಗವನ್ನು ಬೇಗನೆ ಮುಗಿಸಿರಿ. ನಾನು ಶ್ಯಾಮಾನಿಗಿಂತ ಮುಂಚೆಯೇ ಇರುತ್ತೇನೆ" ಎಂಬುದು ಬಾಬಾರವರ ಮುಂಚಿನ ಮಾತುಗಳಾಗಿದ್ದವು. ಇಲ್ಲಿ ಈ ಛಾಯಾಚಿತ್ರವು ಅದಕ್ಕೆ ಸಾಕ್ಷಿಯಾಗಿತ್ತು. ॥70॥ ಅವನು ಮನೆಯೊಳಗೆ ಪ್ರವೇಶಿಸುತ್ತಲೇ ಬಾಬಾರವರ ಚಿತ್ರಪಟವನ್ನು ನೋಡಿ ಅನಿರೀಕ್ಷಿತವಾದ ಅತ್ಯಂತ ದೊಡ್ಡ ಚಮತ್ಕಾರವೆಂದು ಭಾವಿಸಿದನು. ॥71॥ ಭಾವೋದ್ವೇಗದಿಂದ ಮತ್ತು ಪ್ರೀತಿಯಿಂದ ಗದ್ಗದ ಕಂಠ ತುಂಬಿಬಂತು. ಕಣ್ಣುಗಳು ಆನಂದಾಶ್ರುಗಳಿಂದ ತುಂಬಿ ಬಂದವು. ದೇಹವಿಡೀ ರೋಮಾಂಚನಗೊಂಡಿತು. ಮತ್ತು ಅವನು ಯತೇಚ್ಛವಾಗಿ ಬೆವರುತ್ತಿದ್ದನು. ॥72॥ ಮಾಧವರಾವ್‌ನ ಈ ಸ್ಥಿತಿಯು ಗಯಾವಾಲಾನ ಮನಸ್ಸಿನ ಮೇಲೆ ಪ್ರತಿಕೂಲವಾದ ಪರಿಣಾಮ ಬೀರಿತು. ಅವನು ನಿಜವಾಗಿಯೂ ಪ್ಲೇಗ್‌ನ ಹೆದರಿಕೆಯಿಂದಾಗಿ ಅಳುತ್ತಿದ್ದಾನೆಂದು ಭಾವಿಸಿದನು. ॥73॥ ಶಾಮಾನು ಕುತೂಹಲಕ್ಕಾಗಿ, ಗಯಾವಾಲಾನನ್ನು ಪ್ರಶ್ನಿಸಿದನು, "ನಿನಗೆ ಈ ಚಿತ್ರಪಟವು ಹೇಗೆ ದೊರಕಿತು ಎಂಬುದನ್ನು ವಿವರವಾಗಿ ಹೇಳು." ॥74॥ ಅನಂತರ, ಗಯಾವಾಲಾನು ಮಾಧವರಾವ್‌ನಿಗೆ ಹನ್ನೆರಡು ವರ್ಷಗಳ ಹಿಂದೆ ನಡೆದುದರ ಬಗ್ಗೆ ವಿವರವಾಗಿ ವರ್ಣಿಸಿದನು. ಅದೊಂದು ಪವಾಡವಾಗಿತ್ತು. ಅದನ್ನು ಕೇಳಿರಿ. ॥75॥ ಗಯಾವಾಲಾನು

ಒಂದು ನೂರಲ್ಲ ಎರಡರಿಂದ ಮೂರುನೂರು ಜನ ನೌಕರರನ್ನು ಮನಮಾಡ ಮತ್ತು ಪುಣತಾಂಬೆಯಲ್ಲಿ ಗಯಾಯಾತ್ರೆಯ ವಿವರಗಳನ್ನು ಗುರುತು ಹಾಕಿಕೊಳ್ಳಲು ನೇಮಿಸಿದ್ದನು. ॥76॥ ಯಾತ್ರಿಕರಿಗೆ ಸೌಲಭ್ಯಗಳನ್ನು ಒದಗಿಸುವುದು ಗಯಾವಾಲಾನ ನಿತ್ಯ ಕರ್ತವ್ಯವಾಗಿತ್ತು. ಅವನು ಅಂತಹ ಕೆಲಸದಲ್ಲಿ ನಿರತನಾಗಿದ್ದಾಗ ಗಯಾವಾಲಾನು ಒಮ್ಮೆ ಶಿರಡಿಗೆ ಹೋದನು. ॥77॥ ಸಾಯಿ ಸಮರ್ಥರು ಒಬ್ಬ ಮಹಾನ್ ಸಂತರೆಂದು ಕೇಳಿದ್ದನು. ಅವನು ಅವರ ದರ್ಶನಮಾಡಿ ಪುನೀತನಾಗಲು ನಿರ್ಧರಿಸಿದನು. ॥78॥ ಅವನು ಸಾಯಿಬಾಬಾರವರ ದರ್ಶನ ಮಾಡಿ ಅವರ ಚರಣಗಳಿಗೆ ನಮಿಸಿದನು. ಅಲ್ಲಿ ಅವನಿಗೆ ಬಾಬಾರವರ ಚಿತ್ರಪಟವನ್ನು ಸಂಪಾದಿಸುವ ಆಸೆಯಾಯಿತು. ॥79॥ ಮಾಧವರಾವ್‌ನು ತನ್ನ ಗೋಡೆಯ ಮೇಲೆ ಒಂದು ಚಿತ್ರವನ್ನು ನೇತು ಹಾಕಿದ್ದನು. ಅದನ್ನು ಗಯಾವಾಲಾನು ಕೇಳಿದನು. ಅದನ್ನು ಬಾಬಾರವರ ಅನುಮತಿ ತೆಗೆದುಕೊಂಡು ಅವನಿಗೆ ಕೊಟ್ಟನು. ॥80॥ ಅದು ತಾನು ಕೊಟ್ಟ ಚಿತ್ರಪಟವೆಂಬುದು ನೆನಪಿಗೆ ಬಂದಿತು. ಮತ್ತು ಗಯಾವಾಲಾನೇ ಅದನ್ನು ಕೇಳಿ ತೆಗೆದುಕೊಂಡಿದ್ದು. "ಅದು ಹೇಗೆ ಬಾಬಾರವರು ನನ್ನನ್ನು ಇಲ್ಲಿಗೆ ಕಳುಹಿಸಿದರು? ಮತ್ತು ನನ್ನನ್ನು ಇಷ್ಟೊಂದು ಸಮಯದ ನಂತರ ಭೇಟಿಮಾಡಿಸಿದರು" ಎಂದು ಯೋಚಿಸಹತ್ತಿದನು. ॥81॥ ಇದು ಹನ್ನೆರಡು ವರ್ಷಗಳ ಹಿಂದೆ ನಡೆದಿದ್ದರೂ ಅದನ್ನು ಈಗ ಹೇಗೆ ಮತ್ತು ಏಕೆ ನೆನಪಿಸಿಕೊಳ್ಳಬೇಕು? ಅವನು ಅದರ ಬಗ್ಗೆ ಮತ್ತೆ ಯೋಚನೆ ಮಾಡಿಯೇ ಇರಲಿಲ್ಲ! ॥82॥ ಆದರೆ, ಬಾಬಾರವರ ಲೀಲೆಯು ಅದ್ಭುತ! ಅವರು ಶಾಮಾನನ್ನು ಅಲ್ಲಿಗೇ ಕಳುಹಿಸಿದ್ದರು ಮತ್ತು ಅಲ್ಲಿಯೇ ಅವನಿಗೆ ತಮ್ಮ ದರ್ಶನ ನೀಡಿದ್ದರು. ಗಯಾವಾಲಾನೂ ಸಹ ಅತ್ಯಂತ ಸಂತಸಗೊಂಡನು. ॥83॥ ಶಾಮಾ ಮತ್ತೆ ನೆನಪಿಸಿಕೊಂಡನು. ಇದೇ ಚಿತ್ರವನ್ನು ಇದೇ ಗಯಾವಾಲಾನಿಗೆ ಸಾಯಿಬಾಬಾರವರ ಅನುಮತಿ ತೆಗೆದುಕೊಂಡು ನೀಡಿದ್ದನು. ॥84॥ ಗಯಾವಾಲಾನೂ ಸಹ ನೆನಪಿಸಿಕೊಂಡನು. ಅವನು ಈ ಹಿಂದೆ ಶಿರಡಿಗೆ ಹೋದಾಗ ಶಾಮಾನಲ್ಲಿಯೇ ತಂಗಿದ್ದನು ಮತ್ತು ಅವನೇ ಬಾಬಾರವರ ದರ್ಶನಕ್ಕಾಗಿ ಸಹಾಯಮಾಡಿದ್ದನು. ॥85॥ ಆಗ ಪರಸ್ಪರ ಮಾಡಿದ ಉಪಕಾರವನ್ನು ಸ್ಮರಿಸುತ್ತ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಅವರು ಶಾಮಾನಿಗೆ ಗಯೆಯಲ್ಲಿ ಎಲ್ಲ ವ್ಯವಸ್ಥೆಗಳನ್ನು ಉತ್ತಮ ರೀತಿಯಲ್ಲಿ ಮಾಡಿಕೊಟ್ಟು ಬಹಳ ಮುತುವರ್ಜಿ ವಹಿಸಿದನು. ॥86॥ ಅವನ ಮನೆಯು ಅದೆಷ್ಟು ಭವ್ಯವಾಗಿದೆ! ಬಾಗಿಲ ಮೇಲೆ ಆನೆಗಳು ತೂಗಾಡುತ್ತಿದ್ದವು. ಅವನು ಒಂದು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಶಾಮಾನನ್ನು ಆನೆಯಮೇಲೆ ಕುಳ್ಳಿರಿಸಿದನು. ॥87॥ ಈ ಎಲ್ಲ ಪೂಜಾಸಾಮಾಗ್ರಿಗಳನ್ನು ತೆಗೆದುಕೊಂಡು ಅವರು ಆನಂದದಿಂದ ವಿಷ್ಣುಪಾದಕ್ಕೆ[1] ಹೋದರು. ಅವರು ದೇವರಿಗೆ ಅಭಿಷೇಕ ಸ್ನಾನ ಮಾಡಿಸಿ ಯಥಾವಧಿ ಪಿಂಡ[2]ಪ್ರದಾನ ಮಾಡಿದರು. ॥88॥ ಅನಂತರ ನೈವೇದ್ಯವನ್ನು ಸಮರ್ಪಣೆ ಮಾಡಿ ಅನ್ನ ಸಂತರ್ಪಣೆ ಮಾಡಿಸಿದರು. ಬಾಬಾರವರ ಕೃಪೆಯಿಂದಾಗಿ ಯಾತ್ರೆಯು ಆನಂದವಾಗಿ ಸಂಪೂರ್ಣವಾಯಿತು. ॥89॥ ಈ ಇಡೀ ಕಥೆಯ ಸಾರವೇನೆಂದರೆ ಬಾಬಾರವರ ಮುಖದಿಂದ ಬಂದ ಮಾತುಗಳು

ಅರ್ಥಪೂರ್ಣವಾಗಿದ್ದವು. ಅವುಗಳನ್ನು ಅಕ್ಷರಶಃ ಅನುಭವಿಸಬಹುದು. ಅವರ ಭಕ್ತರ ಮೇಲಿನ ಪ್ರೇಮವು ಅಪಾರ. ॥90॥ ಅದು ಕೇವಲ ಭಕ್ತರ ಮೇಲಿನ ಪ್ರೀತಿ ಮಾತ್ರವಷ್ಟೇ ಅಲ್ಲ. ಅವರು ಎಲ್ಲ ಜೀವಿಗಳನ್ನೂ ಸಮಭಾವದಿಂದ ನೋಡುತ್ತಾರೆ. ಅವರು ಎಲ್ಲದರಲ್ಲೂ ಪರಮ ತಾದಾತ್ಮ್ಯಭಾವವನ್ನು ಹೊಂದಿದ್ದರು. ಎಲ್ಲರ ಮೇಲೆ ನಿಸ್ಸೀಮ ಪ್ರೇಮಭಾವವನ್ನಿಟ್ಟಿದ್ದರು. ॥91॥ ಕೆಲವು ಸಲ ಲೇಂಡಿಯಿಂದ ಮಸೀದಿಗೆ ಹಿಂತಿರುಗುವಾಗ, ಅವರು ಸಹಜವಾಗಿಯೇ ನಡೆದುಕೊಂಡು ಬರುತ್ತಿರುವಾಗ ಒಂದು ಮೇಕೆಯ ಹಿಂಡು ಎದುರಿಗೆ ಬಂತು. ಬಾಬಾರವರು ಪರಮಾನಂದಪಟ್ಟರು. ॥92॥ ಆ ಹಿಂಡಿನ ಕಡೆ ಒಂದು ಅಮೃತ ಕರುಣಾ ಪೂರಿತ ದೃಷ್ಟಿಯನ್ನು ಬೀರಿ, ಕೆಲವು ವೇಳೆ ಒಂದೆರಡು ಮೇಕೆಗಳನ್ನು ಆಯ್ದು ತೆಗೆದುಕೊಂಡು ಅವುಗಳನ್ನು ಪಕ್ಕಕ್ಕೆ ಇಡುತ್ತಿದ್ದರು. ॥93॥ ಬಾಬಾರವರು ಕೂಡಲೇ ಆ ಮಾಲೀಕನು ಕೇಳಿದಷ್ಟು ಬೆಲೆಯನ್ನು ಕೊಡುತ್ತಿದ್ದರು. ಅನಂತರ ಅವುಗಳನ್ನು ಕೊಂಡಾಜಿಯ ಹತ್ತಿರ ಇಡುತ್ತಿದ್ದರು. ಅದು ಬಾಬಾರವರ ಪದ್ಧತಿಯಾಗಿತ್ತು. ॥94॥ ಒಂದು ದಿವಸ ಬಾಬಾರವರು ಎರಡು ಮೇಕೆಗಳನ್ನು ಮೂವತ್ತೆರಡು ರೂಪಾಯಿಗಳನ್ನು ಕೊಟ್ಟು ಖರೀದಿಸಿದರು. ಸಕಲರೂ ಅಚ್ಚರಿಗೊಂಡರು. ॥95॥ ಈ ಎರಡು ಮೇಕೆಗಳನ್ನು ನೋಡಿದ ಕೂಡಲೇ ಅವುಗಳಿಗಾಗಿ ವಿಶೇಷ ಪ್ರೇಮ ಹುಟ್ಟಿತು. ಅವುಗಳ ಹತ್ತಿರ ಹೋಗಿ ಅವರು ಅವುಗಳ ಬೆನ್ನಮೇಲೆ ತಟ್ಟಿದರು. ॥96॥ ಇಬ್ಬರೂ ಪಶುಜನ್ಮ ಪಡೆದಿರುವುದನ್ನು ನೋಡಿ ಸಾಯಿಸಮರ್ಥರು ಅವುಗಳ ಮೇಲೆ ಕೃಪೆ ತೋರಿದರು. ಅವರನ್ನು ಈ ಸ್ಥಿತಿಯಲ್ಲಿ ನೋಡಿದ ಅವರಿಗೆ ಕರುಣೆ ತುಂಬಿಬಂದು ಪ್ರೇಮ ಉಕ್ಕಿತು. ॥97॥ ಅವುಗಳನ್ನು ಹತ್ತಿರ ತೆಗೆದುಕೊಂಡು ಸಾಯಿಯವರು ಪ್ರೀತಿಯಿಂದ ಮುದ್ದು ಮಾಡಿದರು. ಭಕ್ತರೆಲ್ಲರೂ ಆಶ್ಚರ್ಯಚಕಿತರಾಗಿ ಬಾಬಾರವರ ವಾತ್ಸಲ್ಯವನ್ನು ನೋಡುತ್ತಿದ್ದರು. ॥98॥ ಸಾಯಿಯವರು ಅವರ ಪೂರ್ವಜನ್ಮದಲ್ಲಿನ ಪರಮಲೋಭತ್ವವನ್ನು ನೆನಪಿಸಿಕೊಂಡರು. ಈಗಿನ ಪಶುಜನ್ಮವನ್ನು ನೋಡಿ ಸಾಯಿಯು ಅತಿ ಪ್ರೇಮವನ್ನು ತೋರಿಸಿದರು. ಅವರಿಗಾಗಿ ಎಣೆಯಿಲ್ಲದ ಕನಿಕರ ಉಂಟಾಯಿತು. ॥99॥ ಅದರ ಬೆಲೆ ಕೇವಲ ಎರಡು ರೂಪಾಯಿಗಳು, ಇಲ್ಲವೇ ಮೂರು ಅಥವಾ ನಾಲ್ಕು ರೂಪಾಯಿಗಳು ಇರಬಹುದು. ಬಾಬಾರವರು ಒಂದೊಂದಕ್ಕೂ ಹದಿನಾರು ರೂಪಾಯಿಗಳನ್ನು ಕೊಟ್ಟಿದ್ದರು. ॥100॥ ಕೇಳಿದಷ್ಟು ಬೆಲೆಯನ್ನು ಕೊಟ್ಟು ಪ್ರಾಣಿಗಳನ್ನು ಕೊಳ್ಳಲಾಗಿತ್ತು. ಇದನ್ನು ಪ್ರತ್ಯಕ್ಷವಾಗಿ ತಮ್ಮ ಕಣ್ಣುಗಳಿಂದಲೇ ನೋಡಿದ ಮಾಧವರಾವ್ ಮತ್ತು ತಾತ್ಯಾ ಇಬ್ಬರೂ ಬಾಬಾರವರ ವರ್ತನೆಯನ್ನು ಅಪಹಾಸ್ಯಮಾಡಿದರು. ॥101॥ ಅವರು ಎರಡು ರೂಪಾಯಿಗಳ ಮಾಲಿಗೆ ಹದಿನಾರು ರೂಪಾಯಿಗಳನ್ನು ಏಕೆ ಕೊಟ್ಟರು? ಬಾಬಾರವರಿಗೆ ಹಣದ ಮೌಲ್ಯ ತಿಳಿದಿಲ್ಲವೇ? ಅಥವಾ ಅವರ ಮನಸೋ ಇಚ್ಛೆ ವರ್ತಿಸಿದರೇ? ಈ ವಾಗ್ವಾದವೂ ಸರಿಯಿಲ್ಲ. ॥102॥ ಇಬ್ಬರೂ ಮನದಲ್ಲಿಯೇ ಚಡಪಡಿಸುತ್ತಿದ್ದರು. 'ಬಾಬಾರವರು ಈ ರೀತಿ ವ್ಯಾಪಾರವನ್ನು ಏಕೆ ಮಾಡಿದರು? ಇಬ್ಬರೂ ಬಾಬಾರವರನ್ನು ಗೇಲಿಮಾಡಿದರು. ಇದೆಂತಹ ಚೌಕಾಶಿಯಾಗಿತ್ತು?'॥103॥ "ಅದು ಹೇಗೆ

ಬಾಬಾರವರು ಮೋಸಹೋದರು?' ಇದನ್ನು ನೋಡಲು ಎಲ್ಲರೂ ಅಲ್ಲಿ ಜಮಾಯಿಸಿದರು. ಬಾಬಾರವರು ಏನೂ ಆಗೇ ಇಲ್ಲವೇನೋ ಎಂಬ ರೀತಿಯಲ್ಲಿ ಶಾಂತರಾಗಿದ್ದರು. ॥104॥ ಈ ರೀತಿ ಇಬ್ಬರೂ ಕೋಪಗೊಂಡಿದ್ದರೂ, ಬಾಬಾರವರನ್ನು ದೂಷಿಸುತ್ತಿದ್ದರೂ ಸಹ ಅವರು ಮಾತ್ರ ಅಚಲಿತರಾಗಿ ಶಾಂತರಾಗಿ ಸಮಾಧಾನದಿಂದ ಇದ್ದರು. ॥105॥ ಅನಂತರ ಆದರದಿಂದ ವಿನಯಪೂರ್ವಕವಾಗಿ ಅವರಿಬ್ಬರೂ ಬಾಬಾರವರನ್ನು ಪ್ರಶ್ನಿಸಿದರು, "ಇದೆಂತಹ ಉದಾರತೆ? ಮೂವತ್ತೆರಡು ರೂಪಾಯಿಗಳು ದಂಡವಾದುವು!" ॥106॥ ಇದು ಕೇವಲ ಹಣದ ಪ್ರಶ್ನೆ! ಸಾಯಿಯವರು ಅದನ್ನು ಕೇಳಿ ಹಾಸ್ಯವದನರಾಗಿ ಯೋಚಿಸಿದರು, "ಈ ಹುಚ್ಚು ಜನರನ್ನು ಹೇಗೆ ಸಮಾಧಾನ ಮಾಡಲಿ?" ॥107॥ ಆದರೆ ಬಾಬಾರವರ ಶಾಂತಿಯು ವಿಲಕ್ಷಣವಾಗಿತ್ತು, ಅವರ ಸ್ಥೈರ್ಯವು ಅಣುಮಾತ್ರವೂ ಅಲುಗಾಡಲಿಲ್ಲ. ಅದು ಪರಮ ಶಾಂತಿಯ ಲಕ್ಷಣ. ಅಲ್ಲಿದ್ದ ಜನರೆಲ್ಲರೂ ಆಶ್ಚರ್ಯ ಚಕಿತರಾದರು. ॥108॥ ಯಾರಿಗೆ ಕ್ರೋಧದ ಲವಲೇಶವೂ ಇಲ್ಲವೋ, ಪರಮಶಾಂತಿಯನ್ನು ಅನುಭವಿಸುತ್ತಿರುವರೋ ಮತ್ತು ಸಕಲ ಜೀವಿಗಳಲ್ಲಿಯೂ ಭಗವಂತನನ್ನೇ ಕಾಣುತ್ತಿರುವರೋ ಅವರನ್ನು ಅವಿವೇಕ ಎಲ್ಲಾದರೂ ಮುಟ್ಟುವುದುಂಟೆ? ॥109॥ ಯಾರು ವಿವೇಕ ದೃಷ್ಟಿಯಲ್ಲಿ ಪರಿಣತರೋ ಅವರು ಕ್ರೋಧವನ್ನು ಹತ್ತಿರ ಬರಲೂ ಬಿಡುತ್ತಿರಲಿಲ್ಲ. ಒಂದು ವೇಳೆ ಅಕಲ್ಪಿತವಾಗಿ ಏನಾದರೂ ನಡೆದುಹೋದರೆ ಶಾಂತಿಯ ಭಂಡಾರವು ಬಾಯಿತೆಗೆದುಕೊಳ್ಳುತ್ತದೆ. ॥110॥ಯಾರು ನಿರಂತರವಾಗಿ 'ಅಲ್ಲಾ ಮಾಲಿಕ್' ಎಂದು ಧ್ಯಾನಿಸುತ್ತಿರುತ್ತಾರೋ, ಅವರ ಮಹಿಮೆಯನ್ನು ಯಾವ ರೀತಿ ವಿವರಿಸಲಿ? ಯಾವ ರೀತಿ ಅವರ ಜೀವನವು ಗಹನವಾಗಿ, ಅಗಾಧವಾಗಿ, ಅತಿಪಾವನವಾಗಿ, ಹಿತಕರವಾಗಿಯೂ ಇತ್ತು! ॥111॥ ಅವರು ಜ್ಞಾನ ಭಂಡಾರಿಗಳಾಗಿ ವೈರಾಗ್ಯ ನಿಧಿಯಾಗಿ ಆತ್ಮಶಾಂತಿಯ ಸಾಗರವಾಗಿ, ಅವರ ಬುದ್ಧಿಯು ಕರುಣಾಪೂರ್ಣವಾಗಿತ್ರಿಕರಣಶುದ್ಧಿಯಿಂದ ಕೂಡಿದವರಾಗಿ ಇದ್ದುದರಿಂದ ಈ ರೀತಿ ಹೇಳಿದರು. ಅದನ್ನು ಕೇಳಿರಿ. ॥112॥ ಅವರಿಬ್ಬರ ಆಗ್ರಹವನ್ನು ನೋಡಿ, ಬಾಬಾರವರು ವಿವರಣೆ ನೀಡಲು ನಿಶ್ಚಯಿಸಿದರು. "ನನಗೆ ಕುಳಿತುಕೊಳ್ಳುವ ಒಂದು ಜಾಗವಾಗಲಿ, ಮನೆಮಾರಾಗಲಿ ಇಲ್ಲದೇ ಇರುವಾಗ ನಾನು ಹಣವನ್ನು ಏಕೆ ಸಂಗ್ರಹಿಸಲಿ?" ॥113॥ ಮುಂದುವರಿಸಿ ಅವರು ಹೇಳಿದರು, "ಮೊದಲು ಅಂಗಡಿಗೆ ಹೋಗು, ಸ್ವಲ್ಪ ಕಾಳನ್ನು ಖರೀದಿಸಿ ತೆಗೆದುಕೊಂಡು ಬಾ. ಒಂದು ಸೇರಿನಷ್ಟು ಅವುಗಳಿಗೆ ಕೊಡು. ಮನಸೋ ಇಚ್ಛೆ ತಿನ್ನಲಿ. ಅನಂತರ ಅವುಗಳನ್ನು ಆ ಮೇಕೆ ಕಾಯುವವನಿಗೆ ಹಿಂದಕ್ಕೆ ಕೊಡು." ॥114॥ ಅವರ ಆಜ್ಞಾನುಸಾರ ಕೂಡಲೇ ಅವರು ಮೇಕೆಗಳಿಗೆ ತಿನ್ನಲು ಕಾಳುಗಳನ್ನು ಕೊಟ್ಟರು. ಅನಂತರ ಸ್ವಲ್ಪವೂ ಸಮಯವನ್ನು ವ್ಯರ್ಥಮಾಡದೆ ಅವುಗಳನ್ನು ಮೇಕೆಕಾಯುವವನಿಗೆ ಹಿಂತಿರುಗಿಸಿದರು. ॥115॥ ಈ ಸಾಯಿಯ ಅವತಾರವು ಪರೋಪಕಾರದ ಮೂರ್ತಸ್ವರೂಪ. ತಾತ್ಯಾ ಅಥವಾ ಇನ್ನು ಯಾರಾದರೂ ಏನನ್ನಾದರೂ ಸುವಿಚಾರವೆಂದು ಸಲಹೆ ನೀಡಲು ಹೇಗೆ ಸಾಧ್ಯ? ॥116॥ ಪರಮ ಪ್ರೀತಿಯಿಂದ ಅವುಗಳಿಗೆ ಕಾಳುಗಳನ್ನು ತಿನ್ನಿಸಿದ ನಂತರ ಅವು ತೃಪ್ತಿಹೊಂದಿದವು

ಎಂಬುದನ್ನು ಅರಿತು ಅವರು ಅವುಗಳನ್ನು ಮಾಲೀಕನಿಗೆ ಹಿಂತಿರುಗಿಸಿ ಅವುಗಳು ತಮ್ಮ ಹಿಂಡಿನೊಡನೆಯೇ ಇರುವಂತೆ ಮಾಡಿದರು. ॥117॥ ಈ ರೀತಿ ಹಣವನ್ನು ವ್ಯಯಮಾಡಲಾಯಿತು. ಮತ್ತು ಮೇಕೆಗಳನ್ನು ಹಿಂತಿರುಗಿಸಲಾಯಿತು. ಇದೊಂದು ನಷ್ಟಕರವಾದ ವಹಿವಾಟು. ಅನಂತರ ಸಾಯಿಬಾಬಾರವರು ಅವರ ಪೂರ್ವಜನ್ಮದ ಅಸಾಮಾನ್ಯವಾದ ಚರಿತ್ರೆಯನ್ನು ಹೇಳಿದರು. ॥118॥ ಬಾಬಾರವರು ತಾತ್ಯಾ ಮತ್ತು ಶಾಮಾ ಇಬ್ಬರನ್ನೂ ಒಂದೇ ರೀತಿ ಪ್ರೀತಿಸುತ್ತಿದ್ದರು. ಅವರ ಕೋಪವನ್ನು ತಣ್ಣಗಾಗಿಸಲು ಮನಸ್ಸನ್ನು ರಂಜಿಸುವ ಪೂರ್ವ ಕಥೆ ಹೇಳಿದರು. ॥119॥ ಅಂದರೆ ಸಾಯಿಯು ಸ್ವಯಂ ತಾವೇ ಆ ಮೇಕೆಗಳ ಪೂರ್ವ ಜನ್ಮದ ಚರಿತ್ರೆಯನ್ನು ನಿರೂಪಿಸಿದರು. ಶ್ರೋತೃಗಳೇ ಅದನ್ನೂ ಕೇಳಿರಿ. ॥120॥ "ಅವರು ಪೂರ್ವಜನ್ಮದಲ್ಲಿ ಭಾಗ್ಯವಂತರಾಗಿದ್ದರು. ಅವರು ಮಾನವರಾಗಿದ್ದರು. ಮತ್ತು ನನ್ನ ಹತ್ತಿರವೇ ಇದ್ದರು. ಅವರು ತಮ್ಮ ಕರ್ಮಗಳ ಫಲಗಳನ್ನು ಅನುಭವಿಸಲೇ ಬೇಕಾಯಿತು. ॥121॥ ಇವುಗಳು, ಮೇಕೆಯ ರೂಪದಲ್ಲಿ ಕಾಣಿಸುತ್ತಿರುವವರು, ತಮ್ಮ ಪೂರ್ವಜನ್ಮದಲ್ಲಿ ಸಹೋದರರಾಗಿದ್ದರು. ಪರಸ್ಪರ ಅಂತರ್ಜಗಳದಿಂದಾಗಿ ಅವರ ಅಂತ್ಯವಾಯಿತು. ಇದು ಇಂತಹ ಪರಿಣಾಮವನ್ನು ಉಂಟುಮಾಡಿತು. ॥122॥ ಆರಂಭದಲ್ಲಿ ಸೋದರರ ನಡುವೆ ಪ್ರೀತಿಯಿತ್ತು. ಅವರು ಸಾಮಾನ್ಯವಾಗಿ ಊಟ ಮತ್ತು ನಿದ್ರೆ ಒಟ್ಟಿಗೆ ಮಾಡುತ್ತಿದ್ದರು. ಅವರು ನಿತ್ಯವೂ ಪರಸ್ಪರ ಕುಶಲ-ಕ್ಷೇಮದ ಬಗ್ಗೆ ಚಿಂತಿತರಾಗಿದ್ದರು. ಇಬ್ಬರಲ್ಲೂ ಪರಮ ಏಕಾತ್ಮತೆಯು ಇತ್ತು. ॥123॥ ಅವರಿಬ್ಬರೂ ಸ್ವಂತ ಸಹೋದರರಾಗಿದ್ದರೂಕರ್ಮಧರ್ಮ ಸಂಯೋಗದಿಂದ ಜೊತೆಯಿದ್ದರೂ ಅತಿ ಭಯಂಕರವಾದ ದ್ರವ್ಯ ಲೋಭವಿತ್ತು. ಮತ್ತು ಅದು ಪರಸ್ಪರ ವೈರವನ್ನುಂಟು ಮಾಡಿತ್ತ. ॥124॥ ಅವರಲ್ಲಿ ಹಿರಿಯನು ಅತಿ ಆಲಸಿಯಾಗಿದ್ದನು. ಚಿಕ್ಕವನು ಹಗಲು ರಾತ್ರಿ ದುಡಿಯುತ್ತಿದ್ದು ಹಣದ ಸಂಗ್ರಹ ಮಾಡಲು ಸಹಾಯವಾಯಿತು. ಹಿರಿಯನು ಅದಕ್ಕಾಗಿ ಮತ್ಸರ ಪಡುತ್ತಿದ್ದನು. ॥125॥ ಹಿರಿಯನು, ತನ್ನ ಧನಲೋಭದಿಂದಾಗಿ, ತನ್ನ ಮಾರ್ಗದಿಂದ ಮುಳ್ಳನ್ನು ಕಿತ್ತು ಹಾಕು ತಪ್ಪು ವಿಚಾರಗಳನ್ನು ಬೆಳೆಸಿಕೊಂಡು ತನಗೆ ಹಣದ ಕೊರತೆಯಾಗಬಾರದೆಂದು ಯೋಚಿಸಿದನು. ॥126॥ ಧನಲೋಭವು ಒಂದು ಅಡಚಣೆಯಾಗಿ ಅದುಆ ಕಣ್ಣುಗಳಿದ್ದೂ ಅಂಧನಾದನು. ಅವನು ಪ್ರೇಮಸಂಬಂಧವನ್ನು ಸಂಪೂರ್ಣವಾಗಿ ಮರೆತು ಅವನನ್ನು ಕೊಲ್ಲಲು ಸನ್ನದ್ಧನಾದನು. ॥127॥ ಪ್ರಾರಬ್ಧವನ್ನು ಅನುಭವಿಸಲು ಅತಿ ಕಠಿಣವಾಯಿತು. ನಿಷ್ಕಾರಣವಾಗಿ ವೈರತ್ವವುಂಟಾಯಿತು. ಅವರಿಗೆ ಪರಸ್ಪರ ಗುಪ್ತವಾದ ಕಪಟ ಪ್ರಯೋಗದ ಅರಿವಾಯಿತು. ಅದನ್ನು ತಡೆಯಲು ಸಾಧ್ಯವಾಗಲಿಲ್ಲ. ॥128॥ ಅವರ ಆಯುಷ್ಯವು ಮುಗಿಯಿತು. ಅವರು ಪೂರ್ತಿಯಾಗಿ ಪರಸ್ಪರ ಬಂಧುತ್ವದ ಪ್ರೀತಿಯನ್ನು ಮರೆತರು. ಅವರು ದುರಭಿಮಾನದಿಂದ ಅತ್ಯಂತ ಉತ್ಕಂಠಿತರಾಗಿದ್ದರು. ಅವರು ಪರಸ್ಪರ ವೈರಿಗಳಂತೆ ಕಾದಾಡಿದರು. ॥129॥ ಒಬ್ಬನುಮತ್ತೊಬ್ಬನ ತಲೆಯನ್ನು ಒಂದು ದೊಡ್ಡ ದೊಣ್ಣೆಯಿಂದ ಹೊಡೆದನು ಮತ್ತು ಅವನು ಕೆಳಗೆ ಬಿದ್ದನು. ಮತ್ತೊಬ್ಬನು ತನ್ನ ಸೋದರನನ್ನು ಅದೇ ರೀತಿ ಒಂದು ಕೊಡಲಿಯಿಂದ

ಹೊಡೆದನು. ॥130॥ ಅನಂತರ ಇಬ್ಬರೂ ಮೂರ್ಛಿತರಾಗಿ ಕೆಳಗೆ ಬಿದ್ದರು. ರಕ್ತದ ಮಡುವಿನಲ್ಲಿ ಚೂರುಚೂರಾಗಿ ಬಿದ್ದರು. ಅಲ್ಪ ಸಮಯದಲ್ಲೇ ಉಸಿರಿಲ್ಲದೇ ಇಬ್ಬರೂ ಮರಣಹೊಂದಿದರು. ॥131॥ ಈ ರೀತಿ ಅವರ ಅಂತ್ಯವು ಬಂದಿತು. ಅವರಿಬ್ಬರೂ ಈಗ ಮೇಕೆಗಳಾಗಿ ಜನ್ಮತಾಳಿದ್ದಾರೆ. ಇದೇ ಅವರ ವೃತ್ತಾಂತ. ಅವರನ್ನು ನೋಡಿದ ಕೂಡಲೇ ಅದು ಪೂರ್ತಿಯಾಗಿ ಸ್ಮರಣೆಗೆ ಬಂದಿತು. ॥132॥ ಅವರವರ ಹಿಂದಿನ ಕೃತಕರ್ಮ ಫಲಗಳನ್ನು ಅನುಭವಿಸಲು ಅವರು ಮೇಕೆಗಳಾಗಿ ಪುನರ್ಜನ್ಮ ತಾಳಿದರು. ಅನಿರೀಕ್ಷಿತವಾಗಿ ಅವರನ್ನು ಈ ಹಿಂಡಿನಲ್ಲಿ ನೋಡಿ ನನಗೆ ಅವರ ಮೇಲೆ ಪ್ರೇಮ ಉಕ್ಕಿಬಂದಿತು. ॥133॥ ಆದುದರಿಂದ, ನನ್ನ ಜೇಬಿನಿಂದಲೇ ಹಣವನ್ನು ಖರ್ಚುಮಾಡಿ ಅವರಿಗೆ ಸ್ವಲ್ಪವಿಶ್ರಾಂತಿ ನೀಡಲು ಯೋಚಿಸಿದೆ. ನೀವು ನಿಮಿತ್ತ ಮಾತ್ರರಾಗಿ ಅವರ ಪೂರ್ವ ಕರ್ಮಗಳಿಗೆ ತಡೆಯುಂಟಾಯಿತು. ॥134॥ "ನನಗೆ ಮೇಕೆಗಳ ಮೇಲೆ ದಯೆ ಉಂಟಾಯಿತು. ಆದರೆ ನಿಮ್ಮ ಆಗ್ರಹದಿಂದಾಗಿ ನಾನೂ ಸಹ ಕೊನೆಯಲ್ಲಿ ಅವುಗಳನ್ನು ಮೇಕೆ ಕಾಯುವವನಿಗೆ ಹಿಂತಿರುಗಿಸಲು ಒಪ್ಪಿಕೊಂಡೆನು." ॥135॥ ಅದು ಹಾಗಿರಲಿ. ಕಥೆಯು ಇಲ್ಲಿಗೆ ಮುಗಿಯುತ್ತದೆ. ಶ್ರೋತೃಗಳು ನನ್ನನ್ನು ಕ್ಷಮಿಸಿರಿ. ಅನಂತರ ಮುಂದಿನ ಅಧ್ಯಾಯವನ್ನು ಕೇಳಿರಿ. ನೀವು ಆನಂದಭರಿತರಾಗುವಿರಿ. ॥136॥ ಅದೂ ಸಹ ಪರಮ ಪ್ರೇಮಭರಿತವಾಗಿದೆ. ಅದೂ ಸಹ ಸಾಯಿಯ ಮುಖದಿಂದ ಬಂದ ಅಮೃತ. ಹೇಮಾಡನು ಸಾಯಿ ಚರಣಗಳಲ್ಲಿ ವಿನೀತನಾಗುತ್ತಾನೆ ಮತ್ತು ಶ್ರೋತೃಗಳನ್ನು ಪ್ರಾರ್ಥಿಸುತ್ತಾನೆ. ॥137॥

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಕಾಶಿ ಮತ್ತು ಗಯಾ ಯಾತ್ರೆ, ಮೇಕೆಗಳ ಜನ್ಮ ಕಥನ" ಎಂಬ ನಲವತ್ತಾರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

॥ಸನ್ಮಂಗಳವಾಗಲಿ॥

ಟಿಪ್ಪಣಿ:

1. ಗಯೆಯಲ್ಲಿರುವ ವಿಷ್ಣುಪಾದ.
2. ಪಿತೃಗಳಿಗೆ ಸಮರ್ಪಿಸುವ ಅನ್ನದ ಉಂಡೆ (ಪಿಂಡ).



# ಅಧ್ಯಾಯ - 47

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಶ್ರೀ ಸಾಯಿಮುಖದಿಂದ ಬಂದ ಕಥೆಗಳ ನಿರೂಪಣೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಶ್ರೀ ಸಾಯಿಯ ವದನವು ಭಾಗ್ಯಪ್ರದ. ಕ್ಷಣ ಮಾತ್ರದ ಒಂದು ನೋಟವು ಅನಂತ ಜನ್ಮಗಳ ದುಃಖಗಳನ್ನು ಉಪಶಮನ ಮಾಡುತ್ತದೆ. ಇದು ಪರಮಾನಂದದ ಉಗಮಸ್ಥಾನ. ॥1॥ ಒಂದು ಕೃಪಾದೃಷ್ಟಿಯು ತತ್ಕ್ಷಣ ಎಲ್ಲ ಕರ್ಮಬಂಧನಗಳ ವಿಮೋಚನೆಯುಂಟುಮಾಡುತ್ತದೆ. ಅವರ ಭಕ್ತಜನರು ಕ್ಷಣಮಾತ್ರದಲ್ಲೇ ಸ್ವಾನಂದವನ್ನು ಅನುಭವಿಸುತ್ತಾರೆ. ॥2॥ ಅವರ ಒಂದು ಕೃಪಾದೃಷ್ಟಿಯಿಂದ ಪೂರ್ವಕರ್ಮಗಳ ಕಳವಳವು ದೂರವಾಗತ್ತದೆ. ಅವರ ಅನುಗ್ರಹವು ಸೂರ್ಯನ ತೇಜಸ್ಸಿನಂತೆ. ಅದರ ಮುಂದೆ ಬೆಂಕಿ ಸಹ ನಿಸ್ತೇಜವಾಗಿ ಕಾಣುವುದು. ॥3॥ ಭಾಗೀರಥಿ ನದಿಯು ಜಗತ್ತಿನ ಪಾಪಗಳನ್ನು ತೊಳೆದು ತಾನು ಸ್ವಯಂ ಮಲಿನಳಾಗುತ್ತಾಳೆ. ಅವಳು ತನ್ನ ಮಲಿನತೆಯನ್ನೂ ದೂರಮಾಡಿಕೊಳ್ಳಲು ಸಂತರ ಚರಣಧೂಳಿಗಾಗಿ ಹಂಬಲಿಸುತ್ತಿರುತ್ತಾಳೆ. ॥4॥ ಸಂತರ ಚರಣಗಳು ಯಾವಾಗ ನನ್ನನ್ನು ಸ್ಪರ್ಶಿಸುತ್ತವೆ? ಸಂತರು ಯಾವಾಗ ನನ್ನಲ್ಲಿ ಮೀಯಲು ಬರುತ್ತಾರೆ. ಅವರಿಂದಲ್ಲದೆ ನನ್ನ ಪಾಪಮಾಲಿನ್ಯ ಸಂಪೂರ್ಣವಾಗಿ ಹೋಗದು" ಎಂದು ಕಾತರಿಸುವ ಗಂಗೆಗೆ ನಿಶ್ಚಯವಾಗಿ ಇದೆಲ್ಲ ಗೊತ್ತು. ॥5॥ ಸಮರ್ಥ ಸಾಯಿಯು ಅಂತಹ ಸಂತರ ಮುಕುಟಮಣಿ. ಇವು ಅವರ ವಾಣಿಗಳು ಎಂಬುದನ್ನು ಅರಿತ ಭಕ್ತರು, ಸಜ್ಜನರು ಈ ಪಾವನ ಚರಿತ್ರೆಯನ್ನು

ಆತ್ಮಾನಂದದಿಂದ ಕೇಳುತ್ತಾರೆ. ॥6॥ ಕಥೆಯ ಮಹಿಮೆಯು ಅದ್ಭುತ. ಸುಜ್ಞಾನಿಗಳಾಗಲಿ, ಅಜ್ಞಾನಿಗಳಾಗಲಿ ಹೇಗಿದ್ದರೂ ಶ್ರೋತೃಗಳ ಕರ್ಮ ಬಂಧನಗಳು ಕಳಚಿಹೋಗುತ್ತವೆ. ಇದೊಂದು ಪರಮ ಪಾವನ ಚರಿತ್ರೆ. ॥7॥ ಎಲ್ಲ ಕಣ್ಣುಗಳ ದೃಷ್ಟಿ ಸಾಮರ್ಥ್ಯವು ಸಾಯಿ ಮತ್ತು ಎಲ್ಲ ಕಿವಿಗಳ ಶ್ರವಣ ಸಾಮರ್ಥ್ಯವು ಸಾಯಿ. ಅವರು ಸ್ವತಃ ತಾವೇ ನನ್ನ ಹೃದಯವನ್ನು ಪ್ರವೇಶಿಸಿದ್ದಾರೆ. ಮತ್ತು ಈ ಕಥೆಯನ್ನು ವಿವರಿಸಿದ್ದಾರೆ. ॥8॥ ಸಾಯಿಯು ಸ್ವಯಂ ಮಹಾನುಭಾವರು. ಈ ಕಥೆಯ ರೋಚಕತೆಯನ್ನು ಕೇಳಿ ಶ್ರೋತೃಗಳು ತಮ್ಮ ದೇಹಭಾವವನ್ನು ಮರೆತು ಎಂಟು ಸಾತ್ವಿಕ ಗುಣಗಳನ್ನು ಅನುಭವಿಸುತ್ತಾರೆ. ॥9॥ ಸಾಯಿಯ ಮುಖದಿಂದ ಬಂದಂತಹ ಈ ಕಥೆಯ ಅಂತರಾರ್ಥದ ಕಡೆಗೆ ಲಕ್ಷ್ಯವಿಟ್ಟು, ಅದರ ತಾತ್ಪರ್ಯದ ಮೇಲೆ ದೃಷ್ಟಿಇಟ್ಟು, ಶ್ರೋತೃಗಳು ತಮ್ಮ ಕರ್ತವ್ಯಗಳಲ್ಲಿ ಕೃತಾರ್ಥರಾಗುತ್ತಾರೆ. ॥10॥ ಆದರೆ ಶ್ರೋತೃಗಳು ನನ್ನವಿನಂತಿಯನ್ನು ಮನ್ನಿಸಿ. ನಾನು ಈ ಕಥೆಯ ನಿರೂಪಣಾಕಾರನಾಗಿದ್ದರೂ, ನಿಮ್ಮಷ್ಟೇ ನಿರ್ವಿಕಾರನಾಗಿರುವೆ. ನಾನು ಏಕಾಗ್ರತೆಯಿಂದ ಗಮನ ಕೊಡದೇ ಇದ್ದಲ್ಲಿ, ಅದರ ಸಾರವನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ. ॥11॥ ಅವರ ಭಕ್ತ ಪ್ರೇಮವನ್ನು ಸ್ಮರಿಸಿಕೊಂಡರೆ ನನ್ನ ಮನಸ್ಸು ತನ್ನ ಸ್ವಭಾವವನ್ನು ಮರೆಯುತ್ತದೆ ಮತ್ತು ಸಂಸಾರದ ತಾಪಗಳನ್ನು ಉಪಶಮನಗೊಳಿಸಿಕೊಂಡು ನಾನು ಶಾಂತನಾಗಿದ್ದೇನೆ. ಇದಕ್ಕಿಂತ ಹೆಚ್ಚಿನ ಲಾಭ ಮತ್ತೇನಿದೆ? ॥12॥ ಹಿಂದಿನ ಕಥೆಗೆ ಸಂಬಂಧಪಟ್ಟ ಈ ಕಥೆಯನ್ನು ಶ್ರೋತೃಗಳು ಸಾವಧಾನದಿಂದ ಕೇಳಿರಿ. ಅದನ್ನು ಯಾವುದೇ ಅಡೆತಡೆಯಿಲ್ಲದೆ ಕೇಳಿದರೆ ಜೀವವು ಸಮಾಧಾನಹೊಂದುತ್ತದೆ. ॥13॥ ಹಿಂದಿನ ಅಧ್ಯಾಯದ ಕೊನೆಯಲ್ಲಿ ಶ್ರೋತೃಗಳು ಮೇಕೆಯ ಕಥೆಯನ್ನು ಕೇಳಿದಿರಿ ಮತ್ತು ಬಾಬಾರವರಿಗೆ ಅವುಗಳ ಮೇಲೆ ಇದ್ದ ಪ್ರೀತಿ, ಅವುಗಳ ಗತಜನ್ಮಗಳ ಸ್ಮರಣೆ ಈ ವಿಚಾರಗಳನ್ನು ಕೇಳಿರುವಿರಿ. ॥14॥ ಈ ಕಥೆಯು ಅದೇ ರೀತಿ ಇದೆ. ಯಾವ ರೀತಿ ದ್ರವ್ಯಲೋಭದ ಪರಮಾವಸ್ಥೆಯು ಅಧಃಪತನಕ್ಕೆ ಕಾರಣವಾಗುತ್ತದೆ ಎಂಬುದನ್ನು ನಿರೂಪಿಸುತ್ತದೆ. ಅದನ್ನುಗಮನವಿಟ್ಟು ಕೇಳಿರಿ. ॥15॥ ಸಾಯಿಯ ಪೂರ್ಣ ಕೃಪಾದೃಷ್ಟಿಯು ಮೇಲೆ ಬಿದ್ದು ಒಂದೊಂದಾಗಿ ಕಥೆಗಳನ್ನು ನಿರೂಪಿಸುತ್ತಿದ್ದರು. ಆದರಿಂದ ಶ್ರೋತೃಗಳು ಯಾವುದೇ ಅಡೆತಡೆ ಇಲ್ಲದೆ ಸುಖಸಂತುಷ್ಟಿಗಳನ್ನು ಅನುಭವಿಸುತ್ತಾರೆ. ॥16॥ ಸಾಯಿ ಸಮರ್ಥರು ತಾವೇ ಕಥೆಗಾರರು ಮತ್ತು ಕಥನವೂ ಹೌದು. ಹಾಗಿರುವಾಗ ಅಲ್ಲಿ ಹೇಮಾಡಪಂತನು ಏಕೆ ಇರುತ್ತಾನೆ? ಹೇಮಾಡ ಎಂಬುದು ಕೇವಲ ಕಲ್ಪನೆಯ ಹೆಸರು. ॥17॥ ನಾನು ಸಾಯಿಕಥಾಸಾಗರದ ದಡದಲ್ಲಿ ಕುಳಿತಿರುವಾಗ ಅವುಗಳ ಕೊರತೆ ಹೇಗೆ ಉಂಟಾಗುತ್ತದೆ? ಕಲ್ಪವೃಕ್ಷದ ಕೆಳಗೆ ಕುಳಿತಾಗ ಆಸೆಗಳು ಹುಟ್ಟಿದ ಕ್ಷಣವೇ ಪೂರೈಸಲ್ಪಡುತ್ತವೆ. ॥18॥ ಸೂರ್ಯನ ನಿವಾಸ ಸ್ಥಾನದಲ್ಲಿ ದೀಪಕ್ಕಾಗಿ ಯಾರು ಚಿಂತಿಸುತ್ತಾರೆ? ನಿರಂತರ ಅಮೃತಪಾನ ಮಾಡುವವರು ವಿಷಪಾನ ಮಾಡುವರೇನು? ॥19॥ ಸಾಯಿಯಂತಹ ರಕ್ಷಕರು ಇರುವಾಗ ನಮಗೆ ಕಥಾಮೃತಗಳ ಕೊರತೆಯೆಲ್ಲಿ? ಯಥೇಚ್ಛವಾಗಿ ಸಂತೋಷದಿಂದ ಮನಸೋ ಇಚ್ಛೆಪಾನಮಾಡಿರಿ. ॥20॥ ಕರ್ಮಸೂತ್ರಗಳು

ಅರ್ಥವಾಗುವುದು ಸಾಧ್ಯವಿಲ್ಲ. ಅದನ್ನು ಪೂರ್ಣವಾಗಿ ಯಾರೂ ಅರ್ಥಮಾಡಿಕೊಂಡಿಲ್ಲ. ಮಹಾಬುದ್ಧಿವಂತರೂ ಸಹ ತಬ್ಬಿಬ್ಬಾಗುತ್ತಾರೆ. ಆದರೆ ಭಕ್ತರಾದವರು ಅಜ್ಞಾನದಲ್ಲಿದ್ದರೂ ಸುರಕ್ಷಿತವಾಗಿದ್ದಾರೆ. ||21|| ಅದೇ ರೀತಿ, ಈಶ್ವರನ ನಿಯಮಗಳು ದುರ್ಗಮವಾದವುಗಳು. ಅವುಗಳಿಂದ ಯಾರು ತಾನೇ ಪಾರಾಗಬಲ್ಲರು? ನಾವು ಮಾಡಬೇಕಾದುದಿಷ್ಟೆ, ನಿತ್ಯವೂ ಲೌಕಿಕ ಧರ್ಮದ ಆಚಾರಗಳನ್ನು ಅನುಸರಿಸಿ ನಮ್ಮ ಕರ್ತವ್ಯಗಳನ್ನು ಮಾಡಬೇಕು ಅಷ್ಟೆ. ||22|| ಇಲ್ಲದಿದ್ದಲ್ಲಿ ಅದು ಧರ್ಮಚ್ಯುತಿ ಆಗುತ್ತದೆ. ಮತ್ತು ಮರಣದ ನಂತರ ತಮ್ಮ ತಮ್ಮ ಕರ್ಮಗಳ ಅನುಸಾರವಾಗಿ ಅಂತಹ ಜನ್ಮ ಪಡೆಯುತ್ತಾರೆ. ||23|| ಶೃತಿಗಳಲ್ಲಿ ಹೇಳಿರುವ ರೀತಿಯಲ್ಲಿ ಕರ್ಮಗಳಿಗನುಸಾರವಾಗಿ ಶುಕ್ಲಶೋಣಿತ ಸಮನ್ವಿತವಾಗಿ ಕೆಲವರು ನಾನಾ ಯೋನಿಗಳನ್ನು ಪ್ರವೇಶಿಸುತ್ತಾರೆ. ಮತ್ತೆ ಕೆಲವರು ಸ್ಥಾವರ ಅಸ್ತಿತ್ವಗಳನ್ನು ಪ್ರವೇಶಿಸುತ್ತಾರೆ. ||24|| ಅವರವರ ಪ್ರಜ್ಞೆಗೆ ಅನುಸಾರವಾಗಿ ಅವರವರ ಜನ್ಮ ಉಂಟಾಗುತ್ತದೆ. ಶೃತಿಯ ನಿಜವಾದ ಅರ್ಥ ಯಾರಿಗೂ ಗೊತ್ತಿಲ್ಲ. ಮತ್ತೆ ಜನ್ಮವೆತ್ತುವಾಗ ಆತ್ಮವು ತನಗೆ ಬೇಕಾದುದನ್ನು ಪಡೆಯಬಹುದು. ||25|| ಮತ್ತೆ ಒಂದು ದೇಹದಲ್ಲಿ ಹುಟ್ಟಬೇಕಾದರೆ, ಮೂರ್ಖರು ಮತ್ತು ಅವಿದ್ಯಾವಂತರು ಮನದಲ್ಲಿಟ್ಟುಕೊಳ್ಳಬೇಕಾದ ವಿಷಯವೆಂದರೆ ಅದು ಕೇವಲ ತಾನು ಸಂಪಾದಿಸಿದ ಪುಣ್ಯಕಾರ್ಯಗಳನ್ನು ಅವಲಂಬಿಸಿರುತ್ತದೆ. ಮತ್ತು ಅವರು ಅದಕ್ಕೆ ಅನುಗುಣವಾಗಿ ಶರೀರ ಪಡೆಯುತ್ತಾರೆ. ||26|| ಯಾರು ಶರೀರವನ್ನು ತ್ಯಜಿಸುವ ಮೊದಲೇ ನರಜನ್ಮವನ್ನು ಆತ್ಮಸಾಕ್ಷಾತ್ಕಾರ ಪಡೆಯಲು ಪೂರ್ಣವಾಗಿ ಉಪಯೋಗಮಾಡಿಕೊಳ್ಳುತ್ತಾನೋ ಅವನನ್ನು ಬುದ್ಧಿವಂತನೆಂದು ಪರಿಗಣಿಸುತ್ತಾರೆ. ||27|| ಕೇವಲ ಅವನು ಮಾತ್ರ ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ. ಇತರರು ಸಂಸಾರಚಕ್ರದಲ್ಲಿ ಸಿಲುಕಿಕೊಂಡು ಎಂದಿಗೂ ಶರೀರತ್ವದಿಂದಾಗಲಿ, ಜನ್ಮದ ದುಃಖಗಳಿಂದಾಗಲೀ ಮುಕ್ತರಾಗುವುದಿಲ್ಲ. ||28|| ಈಗ ಈ ಕಥೆಯ ಚಮತ್ಕಾರವೆಂದರೆ, ನಾನೇ ದೇಹ ಎನ್ನುವ ದುಷ್ಟ ಪ್ರವೃತ್ತಿಯು ಅಳಿಸಲ್ಪಟ್ಟು ಎಂಟು ಸಾತ್ವಿಕಭಾವಗಳು ಹುಟ್ಟುತ್ತವೆ. ||29|| ಯಾರ ಅಪಾರ ಧನ ಸಂಪತ್ತಿದ್ದರೂ ಅತ್ಯಂತ ಜಿಪುಣ ಸ್ವಭಾವದವನಾಗಿರುವನೋ ಅವನ ಜೀವನಕ್ಕೆ ಧಿಃಕ್ಕಾರ! ಆಮರಣಾಂತ ವ್ಯರ್ಥ ಜೀವನವನ್ನು ಕಳೆಯುತ್ತಾನೆ. ||30|| ಅದರ ಜೊತೆಗೆ, ವೈರತ್ವವು ಎಂದಿಗೂ ಒಳ್ಳೆಯದಲ್ಲ. ಆದ್ದರಿಂದ ನಿಗ್ರಹಿಸು ಮತ್ತು ಅದರಿಂದ ವಿಮುಖನಾಗು. ಇಲ್ಲದಿದ್ದಲ್ಲಿ ಅದು ಪೂರ್ಣವಾಗಿ ನಿನ್ನ ಜೀವನವನ್ನು ನಾಶಪಡಿಸುತ್ತದೆ. ||31|| ಪರಸ್ಪರ ವೈರತ್ವವು ಒಬ್ಬನನ್ನು ಜನ್ಮದ ಉತ್ತಮ ಸ್ಥಿತಿಯಿಂದ ಅಧಮ ಸ್ಥಿತಿಗೆ ತಳ್ಳುತ್ತದೆ. ಜನ್ಮಪರಂಪರೆಯ ಧರ್ಮವು ಋಣ, ವೈರ, ಹತ್ಯೆ ಇವುಗಳಿಂದಾಗಿ ನಾಶವಾಗುತ್ತದೆ. ||32|| ಆದ್ದರಿಂದ ನಾನು ಶ್ರೋತೃಗಳಿಗಾಗಿ, ಈ ತತ್ತ್ವವನ್ನು ಪ್ರತಿಪಾದಿಸುವಂತಹ ಅಮೃತವಾಣಿಯನ್ನು ಸಾಯಿಯ ಮುಖದಿಂದಲೇ ಬಂದಂತಹ ಪರಮ ಪಾವನವಾದ ಕಥೆಯನ್ನು ನಿರೂಪಿಸುತ್ತೇನೆ. ಸಾವಧಾನ ಮನಸ್ಸಿನಿಂದ ಕೇಳಿರಿ. ||33|| ನಾನು ಆ ಕಥೆಯನ್ನು ಸಾಯಿಮಾತೆಯು ಹೇಳಿದ ರೀತಿಯಲ್ಲಿಯೇ ಪುನರುಚ್ಚರಿಸುತ್ತೇನೆ. ಅದನ್ನು ನಾನು ಕೇಳಿದ ರೀತಿಯಲ್ಲಿಯೇ

ಸ್ಮರಿಸಿಕೊಂಡು ಹೇಳುತ್ತೇನೆ. ||34|| ಸಾಯಿಯು ಸ್ವಯಂ ಚರಿತ್ರಕಾರರು. ಅವರೇ ಕಥೆಯನ್ನು ವಿಸ್ತಾರವಾಗಿ ಬರೆಸುತ್ತಾರೆ. ಹೇಮಾಡನು ಕೇವಲ ಒಂದು ನಿಮಿತ್ತ ಮಾತ್ರ ಮತ್ತು ಸಾಯಿಯೇ ಅದರ ಸೂತ್ರಧಾರ. ||35|| 'ಒಂದು ದಿನ ಪ್ರಾತಃಕಾಲ ಸುಮಾರು ಎಂಟು ಘಂಟೆಯ ವೇಳೆಗೆ ನಿತ್ಯದಂತೆ ಬೆಳಗಿನ ಉಪಾಹಾರವನ್ನು ಸ್ವೀಕರಿಸಿ ನಾನು ವಾಯುವಿಹಾರಕ್ಕೆ ಹೊರಟೆನು. ||36|| ನಡೆದು ದಣಿವಾಗಿ, ನಾನು ಒಂದು ನದಿಯ ದಡವನ್ನು ತಲುಪಿದೆ. ನಾನು ನದಿಯಲ್ಲಿ ಸ್ನಾನಮಾಡಿ ಅಂತರಂಗದಲ್ಲೇ ಉಲ್ಲಾಸಗೊಂಡೆನು. ||37|| ಆ ನದಿಯು ಅದೆಷ್ಟು ದೊಡ್ಡದಿತ್ತು? ಅದು ರಾಹತಾದಲ್ಲಿರುವ ನದಿಯಷ್ಟು ಇತ್ತು, ನೀರು ನದಿಯಿಂದ ಉಕ್ಕಿಬರುವಂತಿತ್ತು, ಮತ್ತು ಅದರ ದಡದಲ್ಲಿ ಜೊಂಡು ಯಥೇಚ್ಛವಾಗಿ ಬೆಳೆದಿತ್ತು. ||38|| ಅಲ್ಲೊಂದು ಕಾಲುದಾರಿಯಿತ್ತು ಮತ್ತು ಗಾಡಿಗಳಿಗಾಗಿ ಒಂದು ರಸ್ತೆಯೂ ಇತ್ತು. ಅದರ ದಡದಲ್ಲಿ ಮರಗಳ ತೋಪಿತ್ತು, ಅದು ಉತ್ಕೃಷ್ಟವಾದ ನೆರಳು ನೀಡುತ್ತಿತ್ತು. ||39|| ಅಲ್ಲಿ ಮಂದಮಂದವಾಗಿ ಬೀಸುತ್ತಿದ್ದ ತಂಗಾಳಿಯು ನನ್ನ ಮನಸ್ಸಿಗೆ ಆನಂದ ತಂದಿತು. ಆ ಮರಗಳ ತೋಪಿನ ನೆರಳಿನಲ್ಲಿ ಪ್ರಕೃತಿಯನ್ನು ನೋಡುತ್ತ ಆರಾಮವಾಗಿ ಕುಳಿತುಕೊಂಡೆ. ||40|| 'ನಾನು ಒಂದು ದಮ್ಮು ಎಳೆಯಲು ಚಿಲುಮೆಯನ್ನು ಇನ್ನೇನು ತುಂಬಿಸಬೇಕು. ನಂತರ ಅದಕ್ಕಾಗಿ ಒದ್ದೆ ಬಟ್ಟೆ ಹೊಂದಿಸುವ ಯೋಚನೆಯಲ್ಲಿದ್ದೆ. ಒಂದು ಕಪ್ಪೆಯು ವಟಗುಟ್ಟುವುದು ಕೇಳಿಸಿತು. ||41|| ನೀರಿನ ಹತ್ತಿರ ಕಪ್ಪೆಗಳು ಸದಾ ಇರುವುದು ಆಶ್ಚರ್ಯವೇನಲ್ಲ. ಆದ್ದರಿಂದ ನಾನು ಒಂದು ಬಟ್ಟೆಯನ್ನು ಒದ್ದೆಮಾಡಿ ಹಿಂತಿರುಗಿದೆನು ಮತ್ತು ಬೆಂಕಿಹೊತ್ತಿಸಲು ಚಕಮಕಿ ಕಲ್ಲನ್ನು ಕೈಯಲ್ಲಿ ತೆಗೆದುಕೊಂಡೆನು. ||42|| ಆ ಚಕಮಕಿ ಕಲ್ಲನ್ನು ಉಜ್ಜಿದಾಗ ಒಂದು ಕಿಡಿ ಹೊರಟಿತು. ಅದರಿಂದಚಿಲುಮೆಯನ್ನು ಹೊತ್ತಿಸಿಕೊಂಡೆ. ಎಲ್ಲ ಸಿದ್ಧವಾಯಿತು. ಆಗ ಒಬ್ಬ ದಾರಿಹೋಕನು ಬಂದು ನನಗೆ ನಮಸ್ಕರಿಸಿ ನನ್ನ ಹತ್ತಿರ ಕುಳಿತುಕೊಂಡನು. ||43|| ನಮ್ರ ಭಾವದಿಂದ ಆ ಚಿಲುಮೆಯನ್ನು ನನ್ನಿಂದ ತನ್ನ ಕೈಗಳಿಗೆ ತೆಗೆದುಕೊಂಡು ಹೇಳಿದನು, "ನೀನು ಬಹಳ ದೂರದಿಂದ ಪ್ರಯಾಣ ಮಾಡಿ ಬಂದಂತೆ ಕಾಣುತ್ತದೆ." ||44|| "ಮಸೀದಿಯು ಇಲ್ಲಿಂದ ದೂರ ಇದೆ. ನೀನು ಅಲ್ಲಿಗೆ ಹೋಗುವ ವೇಳೆಗೆ ಬಿಸಿಲೇರುತ್ತದೆ. ನನ್ನ ಮನೆಯು ನದಿಯ ಆ ಕಡೆ ಇದೆ. ಚಿಲುಮೆ ಸೇದಿದ ನಂತರ ಅಲ್ಲಿಗೆ ಹೋಗೋಣ. ||45|| "ನೀನು ಅಲ್ಲಿ ಸ್ವಲ್ಪ ಊಟಮಾಡಿ ಸ್ವಲ್ಪ ವಿಶ್ರಾಂತಿ ಪಡೆಯಬಹುದು. ಅನಂತರ ಸೂರ್ಯನು ಸ್ವಲ್ಪ ಕೆಳಗೆ ಬಂದ ಮೇಲೆ ನೀನು ಆರಾಮವಾಗಿ ಹಿಂತಿರುಗಬಹುದು. ||46|| "ನಾನೂ ಸಹ ನಿನ್ನ ಜೊತೆ ಬರುತ್ತೇನೆ." ಈ ರೀತಿದಾರಿಹೋಕನು ಹೇಳಿದ ನಂತರ ಚಿಲುಮೆಯನ್ನು ಸೇದಲು ಗೌರವಪೂರ್ವಕವಾಗಿ ನನಗೆ ಕೊಟ್ಟನು. ||47|| ಆ ಸಮಯದಲ್ಲಿ, ಆ ಕಪ್ಪೆಯು ಜೋರಾಗಿ ದೈನ್ಯತೆಯಿಂದ ವಟಗುಟ್ಟಲು ಪ್ರಾರಂಭಿಸಿತು. ಅದಕ್ಕೆ ದಾರಿಹೋಕನು ಅಳುತ್ತಿರುವವರು ಯಾರೆಂದು ಕೇಳಿದನು. ||48|| ಅದಕ್ಕೆ ನಾನು ಹೇಳಿದೆ, "ನದಿಯ ದಡದಲ್ಲಿ ಒಂದು ಕಪ್ಪೆಯು ತನ್ನ ಪೂರ್ವಕರ್ಮಗಳ ಫಲವಾಗಿ ಅತಿಯಾದ ಸಂಕಟಕ್ಕೆ ಸಿಲುಕಿತ್ತು. ಕೇಳು, ನಾನು ಆ ಕಥೆಯನ್ನು ಹೇಳುತ್ತೇನೆ.

॥49॥ ನಾವು ಪೂರ್ವಜನ್ಮದಲ್ಲಿ ಬಿತ್ತಿದುದನ್ನು ಈ ಜನ್ಮದಲ್ಲಿ ಅನುಭವಿಸಬೇಕು. ಎಲ್ಲರೂ ತಮ್ಮ ತಮ್ಮ ಕರ್ಮಗಳಫಲವನ್ನು ಆದರಪೂರ್ವಕವಾಗಿ ಅನುಭವಿಸಲೇಬೇಕು. ಅದರ ಬಗ್ಗೆ ರೋಧಿಸುವುದರಿಂದ ಏನೂ ಉಪಯೋಗವಿಲ್ಲ. ॥50॥ ಅದನ್ನು ಕೇಳಿ, ಆ ದಾರಿಹೋಕನು ಚಿಲುಮೆಯನ್ನು ನನ್ನ ಕೈಗಳಿಗೆ ಕೊಟ್ಟು, ಅಲ್ಲಿಂದ ಹೊರಟನು. ಹೋಗುವ ಮೊದಲು "ನಾನು ಹೋಗಿ, ನೋಡಿ ಹಿಂದಕ್ಕೆ ಬರುತ್ತೇನೆ" ಎಂದು ಹೇಳಿದನು. ॥51॥ "ಅದು ನಿಜವಾಗಿಯೂ ಕಪ್ಪೆಯೋ ಅಥವಾ ಬೇರೆ ಏನಾದರೂ ಪ್ರಾಣಿಯೋ? ಅದಕ್ಕೆ ಏನು ದುಃಖವಿದೆ? ನಾನೇ ಸ್ವತಃ ನೋಡಿ ಶಂಕೆಯನ್ನು ಪರಿಹರಿಸಿಕೊಳ್ಳುತ್ತೇನೆ." ॥52॥ ಇದನ್ನು ನೋಡಿ, ಇದು ತನ್ನ ಆಶೆಯೆಂದು ತಿಳಿದು ನಾನು ಹೇಳಿದನು. "ಹೋಗು, ನೋಡಿ ಹಿಂತಿರುಗಿ ಬಾ. ಒಂದು ಕಪ್ಪೆಯು ಒಂದು ದೊಡ್ಡ ಹಾವಿನ ಬಾಯಲ್ಲಿ ಸಿಲುಕಿಕೊಂಡಿತ್ತು, ಅದಕ್ಕಾಗಿ ಅದು ಅಳುತ್ತಾ ಇದೆ." ॥53॥ ಅವು ಎರಡೂ ಮಹಾ ದುಷ್ಟರಾಗಿದ್ದರು. ಅವರ ಪೂರ್ವಜನ್ಮದ ಪಾಪಗಳು ಭಯಂಕರವಾಗಿದ್ದವು. ತಮ್ಮ ಕರ್ಮಗಳ ಫಲವನ್ನು ಅನುಭವಿಸಲು ಮತ್ತೊಂದು ದೇಹವನ್ನು ಪಡೆದು ಬಂದಿದ್ದವು. ॥54॥ ನಾನು ಈ ಅಭಿಪ್ರಾಯವನ್ನು ತಿಳಿಸಿದ ಮೇಲೆ, ದಾರಿ ಹೋಕನು ಆ ಜಾಗಕ್ಕೆ ಹೋಗಿ ಅಲ್ಲಿ ನಡೆಯುತ್ತಿದ್ದುದನ್ನು ಪ್ರತ್ಯಕ್ಷವಾಗಿ ನೋಡಿ ಹಿಂತಿರುಗಿದನು. ಅವನು ನಿಜ ಸಂಗತಿಯನ್ನು ದೃಢೀಕರಿಸಿದನು. ॥55॥ ಹಾವು ಕಾಳಸರ್ಪದಂತೆ ದೊಡ್ಡ ಬಾಯುಳ್ಳದ್ದಾಗಿತ್ತು. ಕಪ್ಪೆಯೂ ಬಹಳ ಭಯಭೀತಿಗೊಂಡು ಹಾವಿನಿಂದ ತಿನ್ನಲ್ಪಡುವುದೆಂದು ಹೆದರಿತ್ತು. ॥56॥ "ಅವನಿಗೆ ಒಂದು ಘಂಟೆ, ಅರ್ಧಘಂಟೆ ಆಯುಸ್ಸು ಇದೆಯಷ್ಟೆ, ಇನ್ನು ಸರ್ಪದ ಬಾಯಿಗೆ ಆಹುತಿಯಾಗುತ್ತದೆ. ಇದೆಂತಹ ವಿಚಿತ್ರ ಕರ್ಮಗತಿ! ಇನ್ನೊಂದು ಕ್ಷಣದಲ್ಲಿ ಅದು ನಿಶ್ಚಿತವಾಗಿಯೂ ಅಲ್ಲಿರುವುದಿಲ್ಲ! ॥57॥ ಅನಂತರ ನಾನು ಅವನಿಗೆ ಹೇಳಿದೆ. "ಅವನು ಹೇಗೆ ಅವನನ್ನು ಕೊಲ್ಲಲು ಸಾಧ್ಯ? ಮತ್ತೇನು! ನಾನು ಅದರ ತಂದೆ ಇಲ್ಲಿರುವೆನು! ಹಾಗಿದ್ದಲ್ಲಿ ನಾನೇಕೆ ಇಲ್ಲಿರಬೇಕು? ॥58॥ "ನಾನು ನನ್ನ ನಿವಾಸ ಸ್ಥಾನವನ್ನು ಬಿಟ್ಟು ಇಲ್ಲಿಗೆ ಬಂದಿರುವಾಗ ಕಪ್ಪೆಯನ್ನು ಆಹಾರವಾಗಲು ಬಿಡುವೆನೇನು! ನಾನು ಅದನ್ನು ಹೇಗೆ ಬಿಡಿಸುವೆ! ॥59॥ "ಈ ಹೋರಾಟವು ಮುಗಿದ ಮೇಲೆ ನಾವು ನಮ್ಮ ನಮ್ಮ ಮನೆಗಳಿಗೆ ಹಿಂತಿರುಗೋಣ! ಹೋಗು, ಹೋಗು ಚಿಲುಮೆಯನ್ನು ಮತ್ತೊಮ್ಮೆ ತುಂಬಿಸು. ಅನಂತರ ಹಾವು ಏನು ಮಾಡುತ್ತದೋ ನೋಡೋಣ!" ॥60॥ ಚಿಲುಮೆಯನ್ನು ಕೂಡಲೇ ಸಿದ್ಧಪಡಿಸಲಾಯಿತು. ದಾರಿಹೋಕನು ತಾನೇ ಅದನ್ನು ಹೊತ್ತಿಸಿ ಜೋರಾಗಿ ದಮ್ಮು ಎಳೆದನು. ನಂತರ ನನಗೆ ನೀಡಿದನು. ನಾನು ಅದನ್ನು ಸೇದಲು ನನ್ನ ಕೈಗಳಲ್ಲಿ ತೆಗೆದುಕೊಂಡೆನು. ॥61॥ ನಾನು ಒಂದೆರಡು ದಮ್ಮು ಎಳೆದು, ಆ ದಾರಿಹೋಕನನ್ನು ಜೊತೆಗೆ ಕರೆದುಕೊಂಡು, ಆ ಹಸಿರು ಹುಲ್ಲಿನ ಪೊದೆಯ ಹತ್ತಿರ ಹೋಗಿ ಆ ನಿರ್ದಿಷ್ಟ ಸ್ಥಾನವನ್ನು ತಲಪಿದೆನು. ॥62॥ ಆ ಸರ್ಪವನ್ನು ಮತ್ತೆ ನೋಡಿ, ದಾರಿಹೋಕನು ಗಾಬರಿಯಾದನು. "ಅದೆಷ್ಟು ಭಾರಿಯಾಗಿದೆ!" ಅವನು ಹೇಳಿದನು ಮತ್ತು ಭೀತಿಯಿಂದ ನನ್ನನ್ನು ಹಿಡಿದುಕೊಂಡನು. ॥63॥ ಅವನು ಹೇಳಿದನು,

“ಇನ್ನು ಮುಂದಕ್ಕೆ ಹೋಗಬೇಡ. ಸರ್ಪವು ನಮ್ಮ ಕಡೆ ಬರುತ್ತದೆ. ನಾವು ಓಡಿಹೋಗಲು ನಿಶ್ಚಯಿಸಿದರೆ ಈ ಸ್ಥಳವು ಬಹಳ ಕಿರಿದಾಗಿದೆ. ಬೇಡ, ಅಲ್ಲಿಗೆ ಹೋಗಬೇಡ.” ॥64॥ ಈ ದೃಶ್ಯವನ್ನು ನೋಡಿ, ದಾರಿಹೋಕನಿಗೆ ಜೀವಭಯ ಉಂಟಾಯಿತು. ಅನಂತರ ಅವರಿಬ್ಬರ ಶತ್ರುತ್ವದ ಬಗೆಗಿನ ಈ ಉಪದೇಶವನ್ನು ಕೇಳು. ॥65॥ “ಅರೇ, ಬಾ ವೀರಭದ್ರಪ್ಪ! ನಿನ್ನ ಶತ್ರು ಬಸಪ್ಪನು ಇನ್ನೂ ಸಹ ಅನುತಾಪ ಪಟ್ಟಿಲ್ಲವೇ? ಅವನು ಕಪ್ಪೆಯಾಗಿ ಹುಟ್ಟಿದ್ದರೂ ಸಹ! ॥66॥ “ನೀನೂ ಸಹ ಸರ್ಪಯೋನಿಯಲ್ಲಿ ಹುಟ್ಟಿದ್ದರೂ ಕಹಿಭಾವ ಮತ್ತು ವೈರತ್ವವನ್ನು ಇನ್ನೂ ಇಟ್ಟುಕೊಂಡಿರುವೆ? ಈಗಲಾದರೂ ನಾಚಿಕೆಪಟ್ಟುಕೋ. ನಿನ್ನ ಶತ್ರುತ್ವವನ್ನು ತ್ಯಜಿಸಿ ಸಮಾಧಾನದಿಂದ ಇರು.” ॥67॥ ನನ್ನ ಮುಖದಿಂದ ಈ ಮಾತುಗಳು ಬರುತ್ತಿದ್ದ ಹಾಗೆಯೇ ಹಾವು ಕಪ್ಪೆಯನ್ನು ಬಿಟ್ಟು ಬೇಗನೆ ಆಳವಾದ ನೀರಿನೊಳಗೆ ಹೊರಟುಹೋಯಿತು. ಅದು ಅಲ್ಲಿಂದ ಅದೃಶ್ಯವಾಯಿತು. ॥68॥ ಸಾವಿನ ದವಡೆಯಿಂದ ತಪ್ಪಿಸಿಕೊಂಡು, ಕಪ್ಪೆಯು ಹಾರಿ ಕುಪ್ಪಳಿಸಿಕೊಂಡು ಗಿಡಗಂಟಿಗಳ ಪೊದೆಯಲ್ಲಿ ಅವಿತುಕೊಂಡಿತು. ದಾರಿಹೋಕನು ಆಶ್ಚರ್ಯಚಕಿತನಾದನು. ॥69॥ ಅವನು ಹೇಳಿದನು, “ನನಗೆ ಏನೂ ಅರ್ಥವಾಗಲಿಲ್ಲ ನೀನು ಮಾತನಾಡಿದ ಕೂಡಲೇ ಅದು ಹೇಗೆ ಸರ್ಪವು ಕಪ್ಪೆಯನ್ನು ಬಿಟ್ಟು ಹೊರಟುಹೋಯಿತು. ಅದು ಹೇಗೆ ಹಾವು ಸಹ ತಾನೇ ಅಡಗಿಕೊಂಡಿತು? ॥70॥ “ಅವುಗಳಲ್ಲಿ ವೀರಭದ್ರಪ್ಪ ಯಾರು ಮತ್ತು ಬಸಪ್ಪ ಯಾರು? ದಾರಿಹೋಕನು ಅವರ ವೈರತ್ವಕ್ಕೆ ಕಾರಣ ಕೇಳಿದನು. “ದಯವಿಟ್ಟು ಅದರ ಬಗ್ಗೆ ಹೇಳು’ ಎಂದ ಕೇಳಿಕೊಂಡನು. ॥71॥ “ಬಹಳ ಒಳ್ಳೆಯದು! ನಾವು ಹೋಗಿ ಮರದ ಕೆಳಗಡೆ ನೆರಳಲ್ಲಿ ಕುಳಿತುಕೊಳ್ಳೋಣ. ಮತ್ತು ಚಿಲುಮೆಯನ್ನು ಮತ್ತೆ ಸೇದೋಣ.” ಅವನು ಹೇಳಿದನು, “ಅನಂತರ ನಾನು ನಿನ್ನ ಕುತೂಹಲವನ್ನು ತೃಪ್ತಿಪಡಿಸುತ್ತೇನೆ ಮತ್ತು ನಂತರ ನನ್ನ ಸ್ವಸ್ಥಳಕ್ಕೆ ಹೋಗುತ್ತೇನೆ.” ॥72॥ ನಾವಿಬ್ಬರೂ ಮರಗಳ ಹತ್ತಿರ ಹೋದೆವು ಮತ್ತು ದಟ್ಟವಾದ ನೆರಳಿನಲ್ಲಿ ಕುಳಿತೆವು. ಮೃದುವಾದ ತಂಗಾಳಿಯು ಬೀಸುತ್ತಿತ್ತು. ನಾವು ಮತ್ತೆ ಚಿಲುಮೆಯನ್ನು ಹಚ್ಚಿದೆವು. ॥73॥ ದಾರಿಹೋಕನು ಅದನ್ನು ಮೊದಲು ಸೇದಿ ನಂತರ ನನಗೆ ಕೊಟ್ಟನು. ಅದನ್ನು ಸೇದುತ್ತ ಸೇದುತ್ತ ನಾನು ಆ ದಾರಿಹೋಕನಿಗೆ ಈ ಸುಂದರವಾದ ಕಥೆಯನ್ನು ಹೇಳಿದನು. ॥74॥ ‘ಅಲ್ಲೊಂದು ಪವಿತ್ರಸ್ಥಾನವು ನನ್ನ ವಾಸಸ್ಥಾನದಿಂದ ಎರಡು ಅಥವಾ ಮೂರು ಕೋಸು ದೂರದಲ್ಲಿದ್ದು ಅದು ಸನಾತನವೂ ಮಹಿಮಾ ಸಂಪನ್ನವೂ ಆಗಿತ್ತು. ॥75॥ ಅಲ್ಲೊಂದು ಹಳೆಯ ಶಿಥಿಲವಾದ ಮಹಾದೇವನ ಮಂದಿರವಿತ್ತು. ಅದನ್ನು ಜೀರ್ಣೋದ್ಧಾರ ಮಾಡಬೇಕೆಂದು ಪ್ರತಿಯೊಬ್ಬರೂ ಅಭಿಪ್ರಾಯ ಪಟ್ಟಿದ್ದರು. ॥76॥ ಆ ಉದ್ದೇಶಕ್ಕಾಗಿ, ಬಹಳ ಚಂದಾ ಹಣವನ್ನು ವಸೂಲಿ ಮಾಡಲಾಯಿತು. ಸಾಕಷ್ಟು ಹಣವನ್ನು ಸಂಗ್ರಹಿಸಲಾಗಿತ್ತು. ಪೂಜೆ ಮತ್ತಿತರ ವಿಧಿ–ವಿಧಾನಗಳಿಗೆ ಸಿದ್ಧತೆ ಮಾಡಲಾಯಿತು. ಮತ್ತು ವಿವರವಾದ ರೂಪುರೇಷೆಯನ್ನು ಹಾಕಲಾಗಿತ್ತು. ॥77॥ ಒಬ್ಬ ಶ್ರೀಮಂತ, ಸ್ಥಳೀಯನನ್ನು ವ್ಯವಸ್ಥಾಪಕನನ್ನಾಗಿ ನೇಮಿಸಲಾಗಿತ್ತು. ಹಣವನ್ನು ಅವನ ಸುಪರ್ದಿಗೆ ಕೊಟ್ಟಿದ್ದರು ಮತ್ತು

ಅವನಿಗೆ ಪೂರ್ಣ ಜವಾಬ್ದಾರಿಯನ್ನು ವಹಿಸಿದ್ದರು. ॥78॥ ಅವನು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಲೆಕ್ಕಾಚಾರ ಇಡಬೇಕಾಗಿತ್ತು. ಮತ್ತು ಅಲ್ಲಿ ಸಂಗ್ರಹಿಸಲಾದ ನಗದು ವಹಿವಾಟನ್ನು ದಾಖಲಿಸಬೇಕಾಗಿತ್ತು. ಅವನು ಕೆಲಸವನ್ನು ಪ್ರಾಮಾಣಿಕವಾಗಿ ಚ್ಯುತಿಬಾರದಂತೆ ನಡೆಸಬೇಕಾಗಿತ್ತು. ॥79॥ ಆದರೆ ಅವನು ಸ್ವಭಾವತಃ ಕೃಪಣನಾಗಿದ್ದನು. ಅವನು ಯಾವುದೇ ನಷ್ಟವನ್ನು ಭರಿಸಲಾಗದಂತೆ ತನ್ನ ಕರ್ತವ್ಯವನ್ನು ಮಾಡುತ್ತಿದ್ದನು. ಆದುದರಿಂದ ಆ ಕೆಲಸಮಾಡಿ ಮುಗಿಸಲು ಸಾಧ್ಯವಾಗಲಿಲ್ಲ. ॥80॥ ಪೂರ್ತಿ ಹಣವನ್ನು ಖರ್ಚುಮಾಡಿದ್ದರೂ ಸಹ ಕೆಲಸ ಕೇವಲ ಅರ್ಧ ಮಾತ್ರ ಪೂರೈಸಿತ್ತು. ಅವನು ತನ್ನ ಸ್ವಂತ ಹಣವನ್ನು ಮಾತ್ರ ಸ್ವಲ್ಪವೂ ಖರ್ಚುಮಾಡಿರಲಿಲ್ಲ, ಒಂದು ಸಣ್ಣ ನಾಣ್ಯವನ್ನೂ ಸಹ. ॥81॥ಒಬ್ಬ ದೊಡ್ಡ ಸಾಹುಕಾರನಾಗಿದ್ದರೂ ಜಿಪುಣತನದ ಸಾಕಾರ ಸ್ವರೂಪವೇ ಆಗಿದ್ದನು. ಅವನು ಮಧುರವಾದ ಮಾತುಗಳಲ್ಲಿ ಸುಳ್ಳು ಹೇಳುತ್ತಿದ್ದನು. ಆದರೆ ಕಾರ್ಯತಃ ಏನೂ ಮಾಡುತ್ತಿರಲಿಲ್ಲ. ॥82॥ ಆ ಧನಕ್ಕೆ ಚಂದಾ ನೀಡಿದವರು, ಅವನ ಮನೆಯಲ್ಲಿ ಸಭೆ ಸೇರಿ ಕೇಳಿದರು, "ನೀನ್ನು ಶ್ರೀಮಂತನಾದುದರ ಪ್ರಯೋಜನವೇನು? ॥83॥ "ನೀನು ಗಟ್ಟಿಯಾಗಿ ಹಣದ ಆಧಾರದಿಂದ ಶಿವದೇವಾಲಯದ ಜೀರ್ಣೋದ್ಧಾರವನ್ನು ಮಾಡದೇ ಇದ್ದರೆ, ಆ ಕೆಲಸವು ಹೇಗೆ ತಾನೇ ಪೂರ್ಣಗೊಳ್ಳುತ್ತದೆ? ಅದನ್ನು ಯೋಚಿಸು. ॥84॥ "ನಾವು ಮತ್ತೊಮ್ಮೆ ಜನರಲ್ಲಿ ವಿನಂತಿಸಿಕೊಳ್ಳುತ್ತೇವೆ. ಮತ್ತು ಇನ್ನೂ ಹೆಚ್ಚು ಚಂದಾ ಹಣ ವಸೂಲಿ ಮಾಡುತ್ತೇವೆ. ನಾವು ಎಲ್ಲ ಹಣವನ್ನು ನಿಮಗೆ ಕಳಿಸುತ್ತೇವೆ. ಈ ಕೆಲಸವು ಪೂರ್ಣಗೊಳ್ಳುವಂತೆ ನೋಡಿಕೋ." ॥85॥ ಇನ್ನೂ ಮತ್ತೆ ಹಣ ಸಂಗ್ರಹ ಮಾಡಲಾಯಿತು. ಉತ್ತಮ ರೀತಿಯಲ್ಲಿ ಹಣವನ್ನು ಪಡೆದರು. ಆದರೆ ಅದನ್ನು ಸ್ವಲ್ಪವೂ ಉಪಯೋಗಿಸಲಿಲ್ಲ. ಧನಿಕನು ಸುಮ್ಮನೆ ಕುಳಿತನು. ॥86॥ ಅದು ಹಾಗಿರಲಿ. ಸ್ವಲ್ಪ ಸಮಯಾನಂತರ ದೇವರು ಈ ವಿಷಯವನ್ನು ತನ್ನ ಕೈಗೆ ತೆಗೆದುಕೊಳ್ಳಲು ನಿರ್ಧರಿಸಿದನು. ಆ ಧನಿಕನ ಪತ್ನಿಗೆ ಅದೇ ಸಮಯದಲ್ಲಿ ಒಂದು ಸ್ವಪ್ನವಾಯಿತು. ॥87॥ ಕನಸಿನಲ್ಲಿ ದೇವರು, "ನೀನಾದರೂ ಜಾಗೃತಳಾಗು ಮತ್ತು ಕೆಲಸಮಾಡು! ಹೋಗು, ಮತ್ತು ಆ ದೇವಾಲಯಕ್ಕೆ ಗೋಪುರವನ್ನು ಕಟ್ಟು, ನೀಲಕಂಠನು ನೀನು ಖರ್ಚುಮಾಡಿದ ಹಣದ ನೂರರಷ್ಟು ಕೊಡುತ್ತಾನೆ" ಎಂದು ಹೇಳಿದನು. ॥88॥ ಮಾರನೆಯ ದಿನ, ಅವಳು ತನ್ನ ಪತಿಗೆ ಆ ಸ್ವಪ್ನವನ್ನು ವಿವರವಾಗಿ ತಿಳಿಸುತ್ತಾಳೆ. ಒಂದು ನಾಣ್ಯವನ್ನು ಖರ್ಚುಮಾಡುವುದು ಎಂದರೆ ಜೀವಿತದ ಅಂತ್ಯವೆಂದು ಭಾವಿಸಿದವನಿಗೆ ಇದು ಬಹಳ ಉದ್ವೇಗಕಾರಿಯಾಗಿತ್ತು. ॥89॥ ಹಗಲು-ರಾತ್ರಿ ಧನ ಸಂಗ್ರಹದ ಬಗ್ಗೆಯೇ ಯೋಚಿಸುವವನಿಗೆ, ಬೇರೆ ಯಾವ ಜೀವಿತೋದ್ದೇಶವೂ ಇಲ್ಲದವನಿಗೆ, ಈ ಕನಸು ಅನವಶ್ಯಕವಾಗಿ ಹಣ ವ್ಯಯಮಾಡುವ ಬಗ್ಗೆ ಹೇಳುತ್ತಿದ್ದುದರಿಂದ ಕನಸು ಹೇಗೆ ನಂಬಿಕೆ ಉಂಟುಮಾಡುತ್ತದೆ. ॥90॥ ಅವನು ತನ್ನ ಪತ್ನಿಗೆ "ನಾನು ಈ ಕನಸನ್ನು ನಂಬುವುದಿಲ್ಲ ಎಂದು ಹೇಳುತ್ತ ಅವಳನ್ನು ಪರಿಹಾಸ್ಯ ಮಾಡಲು ಪ್ರಾರಂಭಿಸಿದನು. ॥91॥ ಯಾರ ಮನಸ್ಸಿನಲ್ಲಿ ಯಾವ ರೀತಿಯ ಚಿತ್ತವೃತ್ತಿಯಿರುವುದೋ ಅದೇ ರೀತಿಯಲ್ಲಿ ಅವನು ಜಗತ್ತಿನ ಸ್ಥಿತಿಯನ್ನು

ಅರಿಯುತ್ತಾನೆ. ಅವನು ತಾನೇ ಧೂರ್ತನಾಗಿದ್ದು, ಇತರರನ್ನು ಅದೇ ದೃಷ್ಟಿಯಲ್ಲಿ ನೋಡುತ್ತಾನೆ. ॥92॥ "ಒಂದು ವೇಳೆ ದೇವರಿಗೆ ನನ್ನ ಹಣವನ್ನು ಖರ್ಚುಮಾಡಲು ಉದ್ದೇಶವಿದ್ದರೆ ನಾನೇನು ನಿನ್ನಿಂದ ದೂರದಲ್ಲಿದ್ದೇನೇನು? ಅವನು ನಿನ್ನ ಸ್ವಪ್ನದಲ್ಲಿ ಏಕೆ ಬಂದನು? ॥93॥ ಕೇವಲ ನೀನು ಮಾತ್ರ ಏಕೆ ಈ ಕನಸು ಕಂಡೆ? ದೇವರು ನನ್ನ ಕನಸಿನಲ್ಲಿ ಏಕೆ ಬರಲಿಲ್ಲ? ಆದುದರಿಂದ ನನಗೆ ಅದರಲ್ಲಿ ಭರವಸೆಯಿಲ್ಲ! ನನಗೆ ಅದರ ಭಾವವನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ. ॥94॥ "ಅದೊಂದು ಕೆಟ್ಟ ಸ್ವಪ್ನವಾಗಿರಬೇಕು. ಅಥವಾ ಅದು ಗಂಡ ಮತ್ತು ಹೆಂಡತಿಯ ಮಧ್ಯೆ ಬಿರುಕು ಉಂಟುಮಾಡುವ ದೇವರ ಯತ್ನವಿರಬೇಕು! ಇವು ಎರಡೇ ವಿಚಾರಗಳು ನನಗೆ ಕಂಡು ಬರುವಂತಹುದು. ॥95॥ "ನಾನೇನು ಜೀರ್ಣೋದ್ಧಾರ ಕೆಲಸಕ್ಕೆ ಸಾಕಷ್ಟು ಕಾಣಿಕೆ ಕೊಡುತ್ತಿಲ್ಲವೇನು? ಪ್ರತಿತಿಂಗಳೂ ತುಂಬಿದ ಚೀಲವು ಖಾಲಿಯಾಗುತ್ತಲೇ ಇವೆ. ॥96॥ "ಜನರು ಎಲ್ಲ ಹಣವನ್ನು ತೆಗೆದುಕೊಂಡು ಬರುತ್ತಾರೆ. ಹೊರನೋಟಕ್ಕೆ ಇದು ಸತ್ಯವೆಂದೇ ಕಾಣುತ್ತದೆ. ಆದರೆ ಜಮಾ-ಖರ್ಚುಗಳ ಲೆಕ್ಕಾಚಾರ ಇಡುವುದು ಒಂದು ವ್ಯಾಪಾರಿ ಪದ್ಧತಿಯಾಗಿದೆ. ಅದೊಂದು ನನಗೆ ಬಹು ನಷ್ಟಕರವಾದ ಪ್ರಸ್ತಾಪವಾಗಿದೆ. ॥97॥ ಜನರು ಇದನ್ನು ಅರಿಯರು. ಅದನ್ನು ನಿನಗೆ ಹೇಗೆ ವಿವರಿಸಲಿ? ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ನಿನ್ನ ಕನಸು ಯಥಾರ್ಥವೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ॥98॥ ಅದನ್ನು ನಿಜವೆಂದು ನಂಬಿದಲ್ಲಿ ನಾವು ಮೋಸಹೋಗುತ್ತೇವೆ. ನಿದ್ರಾಭಂಗದಲ್ಲಿ ಉಂಟಾಗುವ ಸ್ವಪ್ನವನ್ನು ಯಥಾರ್ಥವೆಂದು ನಂಬಲು ಸಾಧ್ಯವೇ? ಧನಿಕನು ಈ ರೀತಿ ಸಿದ್ಧಾಂತವನ್ನು ಮುಂದಿಟ್ಟನು. ॥99॥ ಇದನ್ನು ಕೇಳಿ, ಅವನ ಪತ್ನಿಯು ಸುಮ್ಮನಾದಳು. ಮತ್ತು ಪತಿಗೆ ಪ್ರತ್ಯುತ್ತರ ಕೊಡದಾದಳು. ಜನರು ಧನ ಸಂಗ್ರಹ ಮಾಡಿದರೂ ಸಹ ಅವರು ಸಂತೋಷವಾಗಿ ಧರ್ಮಕಾರ್ಯಕ್ಕೆ ಕೊಡುವುದಿಲ್ಲ. ॥100॥ ದೇವರು, ಪ್ರೇಮವಿಲ್ಲದೆ ಕೊಟ್ಟ ಚಂದಾಹಣವನ್ನು ಇಷ್ಟಪಡುವುದಿಲ್ಲ. ಬೇರೊಬ್ಬರ ಒತ್ತಾಯಕ್ಕೆ ಮಣಿದು ಆಗ್ರಹದಿಂದಾಗಿ ಅಥವಾ ನಿರ್ಬಂಧಕ್ಕೆ ಒಳಪಟ್ಟು ನೀಡಿದುದನ್ನು ಇಷ್ಟಪಡುವುದಿಲ್ಲ. ಒಂದು ಸಣ್ಣ ಕೊಡುಗೆಯನ್ನು ಪ್ರೀತಿಯಿಂದ ಕೊಟ್ಟಲ್ಲಿ ಅದು ಅಮೂಲ್ಯವಾಗುತ್ತದೆ. ॥101॥ ಹಣವು ಎಷ್ಟೆಷ್ಟು ಸಂಗ್ರಹವಾಗುತ್ತಿತ್ತೋ ಹಾಗೆಯೇ ಕೆಲಸ ಮುಂದುವರಿಯುತ್ತಿತ್ತು. ಹಣದ ಕೊರತೆಯುಂಟಾದಾಗ ಕೆಲಸವೂ ನಿಂತಿತು. ಈ ರೀತಿ ಕೆಲಸವು ವಿಳಂಬವಾಯಿತು. ॥102॥ ಆ ಧನಿಕನು, ಕೃಪಣನಾಗಿದ್ದು ತನ್ನ ಜೇಬಿನಿಂದ ಒಂದೇ ಒಂದು ನಾಣ್ಯವನ್ನೂ ಖರ್ಚು ಮಾಡಲಿಲ್ಲ. ಅವನ ಪತ್ನಿಯು ಕಂಡ ಮತ್ತೊಂದು ಕನಸಿನ ವಿಚಾರವನ್ನು ಕೇಳಿರಿ. ॥103॥ "ನಿನ್ನ ಪತಿಗೆ ದೇವಾಲಯಕ್ಕಾಗಿ ಹಣ ಕೊಡು ಎಂದು ಆಗ್ರಹಪಡಿಸಬೇಡ. ದೇವರಿಗೆ ನಿನ್ನ ಭಕ್ತಿಯು ಸಾಕು. ನಿನಗೆ ಏನು ಇಚ್ಛೆಯಾಗುತ್ತೋ ಅದನ್ನು ನೀನು ಕೊಡು. ॥104॥ "ನಿನ್ನ ಸ್ವಂತ ಹಣದಿಂದ ಕೇವಲ ಒಂದು ಪೈಸೆಯನ್ನು ಭಕ್ತಿಭಾವದಿಂದ ಕೊಟ್ಟರೂ ಅದು ಲಕ್ಷಕ್ಕೆ ಸಮ. ಅದನ್ನು ದೇವರಿಗೆ ನಿನ್ನ ಪತಿಯ ಅನುಮತಿ ಪಡೆದು ಸಮರ್ಪಿಸು. ॥105॥ ವ್ಯರ್ಥವಾಗಿ ಚಿಂತಿಸಬೇಡ. ನಿನಗೆ ಇಚ್ಛೆಬಂದದ್ದನ್ನು,

ಸಮರ್ಪಿಸು. ನಿನ್ನ ಸ್ವಂತ ಹಣದಿಂದ ಅಲ್ಪಪ್ರಮಾಣವಾದರೂ ಸರಿ ಅದನ್ನು ಅರ್ಪಿಸು." ||106|| ಇಲ್ಲಿ ಕೇವಲ ಭಕ್ತಿಯೇ ಮುಖ್ಯ, ನಿನ್ನಲ್ಲಿ ಅದು ಇದೆ ಎಂದು ತಿಳಿದು ದೇವರು ನಿನ್ನನ್ನು ಏನೋ ಒಂದಕ್ಕೆ ಆಗ್ರಹ ಪಡಿಸುತ್ತಲೇ ಇರುತ್ತಾನೆ. ||107|| ಆದುದರಿಂದ, ನಿನ್ನಲ್ಲಿ ಅಲ್ಪಮಾತ್ರ ಸಂಪತ್ತು ಇದ್ದಲ್ಲಿ, ಅದನ್ನು ದಾನಮಾಡಿ ನಿಶ್ಚಿಂತಳಾಗಿರು. ಭಕ್ತಿಯಿಲ್ಲದೆ ಕೊಡುವುದು ಅನುಚಿತವಾದುದು. ದೇವರು ಅದನ್ನು ಕಿಂಚಿತ್ತೂ ಇಷ್ಟಪಡುವುದಿಲ್ಲ. ||108|| ಯಾವುದನ್ನೇ ಆಗಲಿ, ಭಕ್ತಿಯಿಲ್ಲದೆ ನೀಡಿದಲ್ಲಿ ಅದು ಧೂಳಿನ ತರಹ ಬೆಲೆ ಇಲ್ಲದ್ದು, ಮತ್ತು ಅಂತ್ಯದಲ್ಲಿ ವ್ಯರ್ಥವಾಗುತ್ತದೆ. ವಿಳಂಬವಿಲ್ಲದೆಯೇ ಈ ಅನುಭವವನ್ನು ಪಡೆಯಬಹುದು. ||109|| ಅದು ಹಾಗಿರಲಿ. ಹೀಗೇ ಸ್ವಪ್ನವುಂಟಾದಮೇಲೆ ಅವಳು ತನ್ನ ತಂದೆಯು ಕೊಟ್ಟಿದ್ದ ಒಡವೆಗಳನ್ನೆಲ್ಲ ಮಾರಲು ನಿಶ್ಚಯಿಸಿ ದೇವರ ಇಚ್ಛೆಯನ್ನು ಪರಿಪೂರ್ಣಮಾಡಲು ನಿಶ್ಚಯಿಸಿದಳು. ||110|| ಅನಂತರ ಅವಳು ತನ್ನ ನಿರ್ಧಾರವನ್ನು ತನ್ನ ಪತಿಗೆ ತಿಳಿಸಿದಳು. ಅವನು ಅದನ್ನು ಕೇಳಿ ಅಂತರಂಗದಲ್ಲೇ ಉದ್ವಿಗ್ನನಾದನು. ||111|| ಎಲ್ಲಿ ದುರಾಸೆಯು ಇರುವುದೋ ಅಲ್ಲಿ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ? ಅಲ್ಲಿ ದೈವ ಚಿಂತನೆ ಧರ್ಮ ಮತ್ತು ನೀತಿಯ ವಿಚಾರಗಳಿಲ್ಲ. ಅವನು ಯೋಚಿಸಿದನು, "ಇದೆಂತಹ ಮೂರ್ಖತನ! ಅವಳು ನಿಜವಾಗಿಯೂ ಭ್ರಾಂತಿಯ ವಶಳಾಗಿದ್ದಾಳೆ! ||112|| "ಅವಳ ಒಡವೆಗಳನ್ನು ಬೆಲೆಕಟ್ಟಿಸಿ, ಅದರ ಬೆಲೆಯನ್ನು ಒಂದು ಸಾವಿರ ರೂಪಾಯಿಗಳನ್ನು ನಿಗದಿಪಡಿಸಿ ಭೂಮಿಯನ್ನು ಅವಳ ಹೆಸರಿಗೆ ವರ್ಗಾಯಿಸಬೇಕು." ||113|| ಅವನು ಆ ಒಡವೆಗಳನ್ನು ತಾನೇ ಖರೀದಿಸಿದನು ಅದರ ಹಣಕ್ಕೆ ಬದಲಾಗಿ ತನ್ನ ಪತ್ನಿಗೆ ಒಂದು ಬಂಜರು ಭೂಮಿಯ ತುಂಡನ್ನು ಕೊಟ್ಟನು. ಅದನ್ನು ಅವನಿಗೆ ಭೋಗ್ಯ ಹಾಕಲಾಗಿತ್ತು ||114|| ಅದೂ ಬೀಳುಬಿದ್ದ ಜಮೀನಾಗಿದ್ದು, ಮಳೆಗಾಲದಲ್ಲೂ ಯಾವುದೇ ಬೆಳೆಯೂ ಆಗುತ್ತಿರಲಿಲ್ಲ. ಅವನು ತನ್ನ ಪತ್ನಿಗೆ ಹೇಳಿದನು, "ಇದನ್ನು ಪಿನಾಕಪಾಣಿ(ಶಿವ)ನಿಗೆ ಅರ್ಪಿಸು. ||115|| "ಒಂದು ಸಾವಿರ ರೂಪಾಯಿ ಬೆಲೆಬಾಳುವ ಈ ಜಮೀನನ್ನು ದೇವರಿಗಾಗಿ ದಾನಕೊಟ್ಟರೆ. ಕನಸಿನಲ್ಲಿ ಬಂದು ನಿನಗೆ ಹೇಳಿದ ಅವನು ಪ್ರಸನ್ನನಾಗಿ ನೀನು ನಿನ್ನ ಋಣದಿಂದ ಮುಕ್ತಳಾಗುವೆ." ||116|| ಅದು ಹಾಗಿರಲಿ. ತನ್ನ ಪತಿಯ ವಚನಗಳನ್ನು ಒಪ್ಪಿಕೊಂಡು ಆ ಕೃಪಣನ ಪತ್ನಿಯು ಆ ಜಮೀನನ್ನು ಪ್ರೇಮಭಾವದಿಂದ ಶಂಕರನನ್ನು ಸಂತೋಷಪಡಿಸಲು ದಾನಮಾಡಿದಳು. ||117|| ನಿಜವಾಗಿಯೂ, ದುಬಕಿ ಎಂಬ ಮಹಿಳೆಯು ಅದರ ಸ್ವಂತ ಹಕ್ಕುಗಳನ್ನು ಹೊಂದಿದ್ದಳು. ಆಕೆಯು ಅದನ್ನು ಆ ಧನಿಕನಿಗೆ ಇನ್ನೂರು ರೂಪಾಯಿಗಳ ಸಾಲವನ್ನು ಪಡೆದು ಆ ಭೂಮಿಯನ್ನು ಭೋಗ್ಯಕ್ಕೆ ಕೊಟ್ಟಿದ್ದಳು. ||118|| ದುಬಕಿಯು ಒಬ್ಬ ಅನಾಥ ಹೆಂಗಸು. ಈ ಜಮೀನಿನ ಒಡತಿಯಾಗಿದ್ದಳು. ಅವಳು ಆರ್ಥಿಕ ಸಂಕಟದಲ್ಲಿ ಸಿಲುಕಿ ಈ ಜಮೀನನ್ನು ಭೋಗ್ಯಕ್ಕೆ ಇಟ್ಟಿದ್ದಳು. ||119|| ಆದರೆ ಧನಿಕನು ಮಹಾ ಲೋಭಿಯಾಗಿದ್ದನು. ಅವನು ಶಂಕರನಿಗೆ ಮೋಸಮಾಡಿದ್ದೇ ಅಲ್ಲದೆ ತನ್ನ ಪತ್ನಿಯ ಧನವನ್ನು ದುರುಪಯೋಗ ಮಾಡಿದ್ದನು. ಈ ಕಪಟ ಲಾಭದಿಂದ ಸುಖವನ್ನನುಭವಿಸಿದ್ದನು. ||120||

ವಿಷಯ ಲಾಲಸೆಯು ಅತಿದುಷ್ಟವಾದುದು. ಅದು ವಿಷಯಾಸಕ್ತರನ್ನು ನಾಶಮಾಡುತ್ತದೆ. ಆದ್ದರಿಂದ ಜೀವಿತದ ಆಸೆಯುಳ್ಳವನು ಈ ವಿಷಯಪಾಶಗಳಿಂದ ಬಂಧಿತನಾಗಬಾರದು. ॥121॥ ಶ್ರವಣ ಲಾಲಸೆಯಿಂದ ಜಿಂಕೆಯು ಮರಣಹೊಂದುತ್ತದೆ. ಸರ್ಪವು ತನ್ನ ತಲೆಯ ಮೇಲಿರುವ ಸುಂದರವಾದ ಮಣಿಯಿಂದಾಗಿ ಸಾಯುತ್ತದೆ. ಈ ರೀತಿಯ ಆಶೆಗಳ ಕುಸಂಗವು ಪರಿಣಾಮವುಂಟುಮಾಡುತ್ತದೆ. ॥122॥ ವಿಷಯಭೋಗಗಳನ್ನು ಅನುಭವಿಸಲು ಧನದ ಅವಶ್ಯಕತೆಯಿದೆ. ಆದ್ದರಿಂದ ಅವುಗಳನ್ನು ಪಡೆಯಲು ಅಪಾರ ಪರಿಶ್ರಮ ಪಡಬೇಕು. ಮತ್ತು ಆಶೆಗಳನ್ನು ಈ ತೃಷ್ಣೆಯು ದಾರುಣವಾಗಿ ಹೆಚ್ಚಿಸುತ್ತದೆ. ಅವುಗಳನ್ನು ನಾಶಮಾಡುವುದು ಅಸಾಧ್ಯ. ॥123॥ ನಿಸ್ಸಂಶಯವಾಗಿಯೂ ಅದೊಂದು ಬಂಜರು ಭೂಮಿ. ಮತ್ತು ಯಾವುದೇ ಪ್ರಯತ್ನದಿಂದಲೂ ಅಲ್ಲಿ ಏನನ್ನೂ ಬೆಳೆಸಲು ಸಾಧ್ಯವಿರಲಿಲ್ಲ. ಅಂತಹ ಜಮೀನನ್ನು ದೇವರಿಗೆ ಅರ್ಪಿಸಲಾಗಿತ್ತು. ಅಂತಹ ದಾನದಿಂದ ಏನು ಪುಣ್ಯ? ॥124॥ ಕಿಂಚಿತ್ತೂ ಸಂಕಲ್ಪವಿಲ್ಲದ ಕೃಷ್ಣಾರ್ಪಣೆಯು ನಿರ್ವಿಕಲ್ಪವಾಗುತ್ತದೆ. ಹಾಗಿಲ್ಲದಿದ್ದಲ್ಲಿ ಅದು ಪಾಪದ ಜೊತೆ ಜೋಡಿಸಿಕೊಂಡು ಅಂತ್ಯದಲ್ಲಿ ಸಂತಾಪ ಕಾರಕವಾಗುತ್ತದೆ. ॥125॥ ದೇವರ ಪೂಜೆ ಮಾಡುತ್ತಿದ್ದ ಅರ್ಚಕನಾದ ಬಡ ಬ್ರಾಹ್ಮಣನು ದೇವಾಲಯಕ್ಕೆ ಬಂದ ಜಮೀನಿನ ವಿಚಾರದಿಂದಾಗಿ ಅತ್ಯಂತ ಸಮಾಧಾನ ಹೊಂದಿದನು. ॥126॥ ಅದು ಹಾಗಿರಲಿ. ಸ್ವಲ್ಪ ಸಮಯದ ನಂತರ ಒಂದು ವಿಪರೀತ ಘಟನೆ ಸಂಭವಿಸಿತು. ಕೃತ್ತಿಕಾ ನಕ್ಷತ್ರದ (ಮೂರನೆಯ ಚಾಂದ್ರಮಾನಮಾಸ) ಸಮಯದಲ್ಲಿ ಅಪಾರ ಮಳೆಯುಂಟಾಯಿತು. ಮತ್ತು ಅಲ್ಲೊಂದು ಭಯಂಕರ ತೂಫಾನು ಬಂದಿತು. ॥127॥ ಏಕಾ ಏಕಿ ಮಿಂಚು ಬಡಿಯಿತು. ಆ ಧನಿಕನ ಮನೆಯು ಭೂಮಿಗೆ ಕುಸಿಯಿತು. ಮತ್ತು ಜಮೀನಿಗೆ ಯಾವುದೇ ಹಕ್ಕುದಾರರಿಲ್ಲದೆ ಹೋಯಿತು. ಉಳಿದೆಲ್ಲವೂ ಸುಟ್ಟು ಬೂದಿಯಾಯಿತು. ॥128॥ ಧನಿಕನನ್ನು ಮುತ್ತಿಗೆ ಹಾಕಲಾಯಿತು. ಮತ್ತು ಅವನಪತ್ನಿಯ ಜೊತೆ ಸತ್ತುಹೋದನು. ಡುಬಕಿಯೂ ಮರಣಹೊಂದಿದಳು. ಈ ರೀತಿ ಮೂವರ ಅಂತ್ಯವಾಯಿತು. ॥129॥ ಅನಂತರ ಆ ಧನಿಕನು ಮಥುರಾ ನಗರದಲ್ಲಿ ಜನಿಸಿ ಒಂದು ಬಡ ಬ್ರಾಹ್ಮಣನ ಕುಟುಂಬದಲ್ಲಿ ಮತ್ತು ಅವನ ಭಾವುಕ ಪತ್ನಿಯು ಒಬ್ಬ ಪೂಜಾರಿಯ ಮನೆಯಲ್ಲಿ ಜನಿಸಿದರು. ॥130॥ ಅವಳಿಗೆ ಗೌರಿ ಎಂಬ ಹೆಸರಿಟ್ಟರು. ಡುಬಕಿಯ ಬಗ್ಗೆ ಬೇರೆಯೇ ಕಥೆ ಇದೆ. ಅವಳು 'ಗುರವ' ಜಾತಿಯಲ್ಲಿ ಶಂಕರನನ್ನು ಪೂಜಿಸುವವರಲ್ಲಿ ಹುಟ್ಟಿದಳು. ಆದರೆ ಅವಳು ತನ್ನ ಹೆಣ್ಣು ಜನ್ಮವನ್ನು ಕಳೆದುಕೊಂಡು ಗಂಡಾಗಿ ಹುಟ್ಟಿದಳು. ॥131॥ ಆ ಹುಡುಗನ ನಾಮಕರಣವಾಯಿತು. ಚನ್ನಬಸಪ್ಪ ಎಂಬ ಹೆಸರಿಟ್ಟರು. ಈ ರೀತಿ ಈ ಮೂವರ ಸ್ಥಿತಿಯೂ ಬದಲಾಯಿತು. ಮತ್ತು ಹಿಂದಿನ ಕರ್ಮಗಳು ಫಲನೀಡಿದವು. ॥132॥ ಧನಿಕನಿಗೆ ಹೊಸಜನ್ಮದಲ್ಲಿ ವೀರಭದ್ರ ಎಂಬ ಹೆಸರಿಟ್ಟರು. ಇದು ಪ್ರಾರಬ್ಧಕರ್ಮದ ಮರ್ಮ. ಅದನ್ನು ಕೊನೆಯವರೆಗೆ ಭೋಗಿಸಲೇಬೇಕು. ॥133॥ ಶಂಕರ ದೇವಾಲಯದ ಪೂಜಾರಿಯು ನನಗೆ ಬಹಳ ಇಷ್ಟವಾದನು. ಅವನು ನಿತ್ಯವೂ ನನ್ನ ಮನೆಗೆ ಬಂದು ನನ್ನ ಜೊತೆ ಚಿಲುಮೆಯನ್ನು ಸೇದುತ್ತಿದ್ದನು. ॥134॥ ಅನಂತರ ನಾವು

ಆನಂದದಿಂದ ರಾತ್ರಿಯೆಲ್ಲಾ ಹರಟೆಹೊಡೆಯುತ್ತಿದ್ದೆವು. ಗೌರಿಯು ದೊಡ್ಡವಳಾದಳು. ಮತ್ತು ಮದುವೆ ವಯಸ್ಸಿನವಳಾದಳು. ಅವನು ಅವಳನ್ನೂ ನನ್ನ ಮನೆಗೆ ಕರೆದುಕೊಂಡು ಬರುತ್ತಿದ್ದನು. ॥135॥ ಅವಳೂ ಸಹ, ನನ್ನಲ್ಲಿ ಭಕ್ತಿ ಇಟ್ಟಿದ್ದಳು. ಒಂದು ದಿನ ಪೂಜಾರಿಯು ನನ್ನನ್ನು ಕೇಳಿದನು, "ನಾನು ಎಲ್ಲ ಜಾಗಗಳಲ್ಲೂ ಹುಡುಕಿದ್ದೇನೆ. ಆದರೆ ಎಲ್ಲಿಯೂ ಮದುವೆ ನಿಶ್ಚಯಿಸಲು ಆಗಲಿಲ್ಲ. ॥136॥ "ಬಾಬಾ, ಅವಳಿಗಾಗಿ ಒಂದು ಒಳ್ಳೆಯ ಮನೆಯನ್ನು ಹುಡುಕಿ ದಣಿದಿದ್ದೇನೆ. ನನ್ನ ಎಲ್ಲ ಪ್ರಯತ್ನಗಳೂ ಸೋತುಹೋಗಿವೆ." "ನೀನೇಕೆ ಇಷ್ಟು ಚಿಂತಿಸುವೆ" ನಾನು ಹೇಳಿದೆನು, "ಮದುವೆ ವರನು ಮಾರ್ಗದಲ್ಲಿದ್ದಾನೆ." ॥137॥ "ನಿನ್ನ ಮಗಳು ಬಹು ಭಾಗ್ಯಶಾಲಿಯು. ಅವಳು ಬಹಳ ಶ್ರೀಮಂತಳಾಗುತ್ತಾಳೆ. ಹುಡುಗನು ತಾನಾಗಿಯೇ ಅವಳನ್ನು ಹುಡುಕಿಕೊಂಡು ಬರುತ್ತಾನೆ. ॥138॥ "ಇನ್ನು ಸ್ವಲ್ಪ ಸಮಯದಲ್ಲೇ ಅವನು ನಿನ್ನ ಮನೆಗೆ ಬರುತ್ತಾನೆ ಮತ್ತು ನಿನ್ನ ಇಚ್ಛೆಯನ್ನು ಪೂರೈಸುತ್ತಾನೆ. ನಿನ್ನ ಇಚ್ಛೆಯಂತೆಯೇ ಅವನು ಗೌರಿಯನ್ನು ಮದುವೆಯಾಗುತ್ತಾನೆ. ॥139॥ ಮತ್ತೊಂದು ಕಡೆ ವೀರಭದ್ರನ ಕುಟುಂಬವು ಬಹಳ ಬಡತನದಲ್ಲಿತ್ತು. ಅವನು ತನ್ನ ಮಾತಾಪಿತೃಗಳನ್ನು ಧೈರ್ಯದಿಂದ ಇರಲು ಹೇಳಿ ಮನೆಯಿಂದ ಹೊರಟನು. ॥140॥ ಅವನು ಹಳ್ಳಿಯಿಂದ ಹಳ್ಳಿಗೆ ಅಲೆದಾಡುತ್ತಿದ್ದನು. ಭಿಕ್ಷೆಬೇಡುತ್ತಿದ್ದನು. ಮತ್ತು ಕೆಲವು ಸಲ ಕೂಲಿ ಕೆಲಸ ಮಾಡುತ್ತಿದ್ದನು. ಅವನು ಕೆಲವೊಮ್ಮೆ ಸಿಕ್ಕಿದ್ದನ್ನು ಮಾತ್ರವೇ ತಿನ್ನುತ್ತಿದ್ದನು. ಮತ್ತು ಅದರಲ್ಲೇ ಸಂತುಷ್ಟನಾಗಿರುತ್ತಿದ್ದನು. ॥141॥ ಈ ರೀತಿ ಅಲೆದಾಡುತ್ತಿರುವಾಗ, ಸುದೈವವಶಾತ್ ಅವನು ಪೂಜಾರಿಯ ಮನೆಗೆ ಬಂದನು. ಅದೊಂದು ಅಲ್ಲಾಮಿಯಾನ ವಿಚಿತ್ರಲೀಲೆಯಾಗಿತ್ತು. ಅವನನ್ನು ಎಲ್ಲರೂ ಇಷ್ಟಪಟ್ಟರು. ॥142॥ ಕ್ರಮಕ್ರಮೇಣ ಪೂಜಾರಿಯು ಅವನನ್ನು ಬಹಳ ಇಷ್ಟಪಟ್ಟನು. ಮತ್ತು ಅವನಿಗೆ ಗೌರಿಯನ್ನು ಮದುವೆ ಮಾಡಿಕೊಡಲು ಯೋಚಿಸಿದನು. ಜಾತಕಗಳು ಹೊಂದಿಕೊಂಡವು ಮತ್ತು ಪೂಜಾರಿಯು ಆನಂದಪಟ್ಟನು. ॥143॥ ಪೂಜಾರಿಯು ವೀರಭದ್ರನನ್ನು ಕರೆದುಕೊಂಡು ನನ್ನ ಹತ್ತಿರ ಬಂದನು. ಇಬ್ಬರನ್ನೂ ಜೊತೆಯಾಗಿ ಆ ಸಮಯದಲ್ಲಿ ನೋಡಿ, ಏಕಾಏಕಿ ಒಂದು ವಿಚಾರ ಹುಟ್ಟಿತು. ॥144॥ ವಿಚಾರ ಮನಸ್ಸಿಗೆ ಬಂದಕೂಡಲೇ ನಾನು ಅದನ್ನು ಉಚ್ಚರಿಸಿದೆ, "ಒಂದು ವೇಳೆ ಮುಹೂರ್ತವು ಲಗ್ನಕ್ಕೆ ಮಂಗಳಕರವಾದರೆ ಗೌರಿಯನ್ನು ಅವನಿಗೆ ಕೊಟ್ಟು ನೀನು ನಿರಾಳನಾಗು." ॥145॥ ತನ್ನ ಪತ್ನಿಯ ಅನುಮತಿಯನ್ನು ಪಡೆದು, ವೀರಭದ್ರನನ್ನು ವರನಾಗಿ ನಿಶ್ಚಯಿಸಿದನು. ಒಂದು ಶುಭ ಮುಹೂರ್ತವನ್ನು ಆರಿಸಿ ಯಥೋಚಿತವಾಗಿ ಮದುವೆಯನ್ನು ನೆರವೇರಿಸಿದನು. ॥146॥ ಮದುವೆ ಸಮಾರಂಭಗಳೆಲ್ಲವೂ ಮುಗಿದ ನಂತರ ಆ ಕುಟುಂಬದವರು ದರ್ಶನಕ್ಕಾಗಿ ನನ್ನಲ್ಲಿಗೆ ಬಂದು, ಪ್ರಪಂಚದಲ್ಲಿ ಕೃತಾರ್ಥವಾದ ವಿವಾಹ ಜೀವನಕ್ಕಾಗಿ ನನ್ನ ಆಶೀರ್ವಾದ ಪಡೆದರು. ॥147॥ ನಾನು ಉಲ್ಲಾಸದಿಂದ ನನ್ನ ಆಶೀರ್ವಚನ ನೀಡಿದೆನು. ವೀರಭದ್ರನಿಗೆ ಈಗ ಸುಖಜೀವನ ದೊರಕಿತು ಮತ್ತು ಪ್ರಸನ್ನನಾದನು. ಏಕೆಂದರೆ ಅವನು ಸುಖಸಂಪನ್ನನಾಗಿ ಅಭಿವೃದ್ಧಿಹೊಂದಿದವನಾದನು. ॥148॥ ಅವನೂ ಸಹ

ನನ್ನ ಭಕ್ತನಾದನು. ಅವನ ಅಭಿವೃದ್ಧಿಯು ಸಮಯದ ಜೊತೆಯಲ್ಲಿ ಹೆಚ್ಚಿತು. ಆದರೆ ನೀನು ಯಾರಾದರೂ ಒಬ್ಬ ವ್ಯಕ್ತಿ ಹಣಕ್ಕಾಗಿ ದುರಾಶೆಪಡದೆ ಸಂತೃಪ್ತಿಹೊಂದಿರುವ ಭಾಗ್ಯಶಾಲಿಯನ್ನು ನೋಡಿರುವೆಯಾ? ॥149॥ ಹಣವು ಒಂದು ದೊಡ್ಡ ಪಾಶ! ಅತಿ ಐಶ್ವರ್ಯವಂತರೂ ಅದರಿಂದ ಸಂಕಟಕ್ಕೊಳಗಾಗಿದ್ದಾರೆ. ವೀರಭದ್ರನೂ ಕೆಲವು ಸಲ ಕ್ಷೋಭೆಗೊಳಗಾಗುತ್ತಿದ್ದನು. ಇದೇ ಹಣದ ಚೆಲ್ಲಾಟ! ॥150॥ ವೀರಭದ್ರನು ಹೇಳಿದನು, "ಬಾಬಾ, ಈ ಮದುವೆಯ ಬಂಧನವು ಒಂದು ದೊಡ್ಡ ಅಡೆತಡೆ. ಹಣದ ಕೊರತೆಯು ನನಗೆ ಸಂಕಟ ತರುತ್ತಿದೆ. ಈ ಸ್ಥಿತಿಗೆ ಉಪಶಮನವನ್ನು ಹೇಳಿ. ಅದರಿಂದಾಗಿ ನಾನು ನನ್ನ ಸಂಸಾರವನ್ನು ಸಮಾನವಾಗಿ ತೂಗಿಸುವಂತಾಗಲಿ. ॥151॥ "ನಾನು ನಿನ್ನ ಚರಣಗಳಲ್ಲಿ ನಮಿಸುತ್ತೇನೆ. ನಿನ್ನನ್ನು ಮೋಸಪಡಿಸುವುದು ಒಳ್ಳೆಯದಲ್ಲ. ನನ್ನ ಸಂಕಟವನ್ನು ನಿವಾರಿಸಬೇಕೆಂದು ನಿನ್ನಲ್ಲಿ ಬೇಡಿಕೊಳ್ಳುತ್ತೇನೆ. ಅದೂ ಅಲ್ಲದೆ ನೀನೇ ಈ ಮದುವೆ ನಡೆಯುವಂತೆ ಮಾಡಿದೆ." ॥152॥ ನಾನು ಅವನಿಗೆ ತುಂಬ ಸುಬೋಧೆಯನ್ನು ಮಾಡಿದೆ. ಮತ್ತು ಪ್ರೀತಿಯಿಂದ ಆಶೀರ್ವದಿಸಿದೆ. "ಅಲ್ಲಾ-ಮಾಲಿಕನಿಗೆ ಪೂರ್ತಿಯಾಗಿ ತಿಳಿದಿದೆ. ಕೇವಲ ಅವನು ಮಾತ್ರ ನಿನ್ನ ಸಂಕಟವನ್ನು ನಿವಾರಿಸಬಲ್ಲ." ॥153॥ ವೀರಭದ್ರನ ಮನೋಗತವನ್ನು ತಿಳಿದು ಮತ್ತು ಅವುಗಳು ಪೂರೈಸುತ್ತವೆಂಬುದನ್ನು ಅರಿತು ನಾನು ಅವನಿಗೆ ಆಶ್ವಾಸನೆ ನೀಡಿದೆ. ಯಾವ ರೀತಿಯಲ್ಲೂ ದುಃಖಿತನಾಗಬಾರದೆಂದು ತಿಳಿಸಿದೆ. ॥154॥ "ನಿನ್ನ ಸೌಭಾಗ್ಯದ ಕಾಲವು ಹತ್ತಿರ ಬಂದಿದೆ. ಅನವಶ್ಯಕವಾಗಿ ತಳಮಳಗೊಳ್ಳಬೇಡ. ನಿನಗೆ ದ್ರವ್ಯವು ಶುಭವಾಗಿ ಕೈಸೇರುತ್ತದೆ ಮತ್ತು ನಿನಗೆ ಅದು ಸಾಕಾದಷ್ಟು ಇರುತ್ತದೆ. ॥155॥ "ದ್ರವ್ಯವು ನನ್ನನ್ನು ತಿರಸ್ಕರಿಸುವಂತಿದೆ. ನನ್ನ ಪತ್ನಿಯ ಸಣ್ಣ ಸಣ್ಣ ವಸ್ತುಗಳ ಆಸೆಯು ನಿಲ್ಲುವುದಿಲ್ಲ. ತೇಜೋವಧೆಯು ಸಾಕಷ್ಟು, ಮದುವೆಯಾದವರ ಅವಸ್ಥೆ ಇನ್ನು ಹೆಚ್ಚು ಬೇಡ." ॥156॥ ಅದು ಹಾಗಿರಲಿ. ಅನಂತರ ಒಂದು ಅದ್ಭುತ ನಡೆಯಿತು! ಗೌರಿಯ ಗ್ರಹಗತಿಗಳ ಗೌರವ ಶಕ್ತಿಯನ್ನು ನೋಡಿ! ಆ ಬಂಜರು ಭೂಮಿಯ ಬೆಲೆ ಏರಿತು. ದೇವರ ರೀತಿಗಳು ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ॥157॥ ಒಬ್ಬ ಖರೀದಿ ಮಾಡುವವನು ಆ ಭೂಮಿಯನ್ನು ಒಂದು ಲಕ್ಷ ರೂಪಾಯಿಗಳಿಗೆ ಕೊಳ್ಳಲು ಮುಂದೆ ಬಂದನು. ಅವನು ಅರ್ಧದಷ್ಟು ಹಣವನ್ನು ನಗದು ಪಾವತಿಸಿದ್ದು ಉಳಿದ ಅರ್ಧವನ್ನು ಕಂತುಗಳಲ್ಲಿ ಪಾವತಿಸಲು ಒಪ್ಪಿಕೊಂಡನು. ॥158॥ ಪ್ರತಿವರ್ಷ ಎರಡು ಸಾವಿರ ರೂಪಾಯಿಗಳನ್ನು ಬಡ್ಡಿಯ ಸಮೇತ ಪಾವತಿಸಲು ಒಪ್ಪಿಗೆ ಆಗಿತ್ತು. ಈ ರೀತಿ ಇಪ್ಪತ್ತೈದು ವರ್ಷಗಳಲ್ಲಿ ಗೌರಿಗೆ ಪೂರ್ತಿ ಹಣ ಸೇರುತ್ತಿತ್ತು. ॥159॥ ಪ್ರತಿಯೊಬ್ಬರೂ ಈ ವಹಿವಾಟಿಗೆ ಒಪ್ಪಿಗೆ ನೀಡಿದರು. ಚನ್ನಬಸಪ್ಪ ಗುರವನು ಒಂದು ವಿಷಯವನ್ನು ಹೇಳಿದನು. "ಶಂಕರನಿಗೆ ಅರ್ಪಿತವಾದ ಹಣವೆಲ್ಲದಕ್ಕೂ ಗುರವನು ಮೊದಲನೆಯ ಮಾಲೀಕನಾಗಿರುತ್ತಾನೆ. ॥160॥ "ಗುರವನಾಗಿ ನನ್ನ ಭಾಗಕ್ಕೆ ಬಡ್ಡಿಯ ಅರ್ಧಮೊತ್ತ ನನಗೆ ಸೇರಬೇಕು. ಅದಕ್ಕಿಂತ ಕಡಿಮೆಯಾಗಿ ನಾನೇನನ್ನೂ ಒಪ್ಪುವುದಿಲ್ಲ." ॥161॥ ವೀರಭದ್ರನು ಏನನ್ನೂ ಕೊಡಲಿಲ್ಲ. ಚನ್ನಬಸಪ್ಪನು ಸುಮ್ಮನೆ ಇರಲಿಲ್ಲ. ಇದು ವಾದವಿವಾದಗಳಿಗೆ

ಅವಕಾಶ ನೀಡಿತು. ಇಬ್ಬರೂ ನನ್ನ ಹತ್ತಿರ ಬಂದರು. ॥162॥ ಶಂಕರನೊಬ್ಬನೇ ಆ ಭೂಮಿಯ ಪೂರ್ಣ ಒಡೆಯ. ಅದನ್ನು ಮತ್ತೆ ಯಾರೂ ಉಪಯೋಗಿಸಲು ಸಾಧ್ಯವಿಲ್ಲ. ದುರಾಶೆಯ ಸಂಭ್ರಮದಲ್ಲಿ ವ್ಯರ್ಥವಾಗಿ ಸಿಲುಕಬೇಡ" ನಾನು ಇಬ್ಬರಿಗೂ ಹೇಳಿದೆನು. ॥163॥ "ಇದು ಶಂಕರನಿಗೆ ಅರ್ಪಿಸಿದ ಜಮೀನಿನ ಬೆಲೆ. ಗೌರಿಯಲ್ಲದೆ ಮತ್ತೆ ಯಾರಾದರೂ ಅದರ ಮೇಲೆ ಹಕ್ಕನ್ನು ಬೇಡಿದಲ್ಲಿ ಅವರಿಗೆ ಏನೂ ದೊರೆಯುವುದಿಲ್ಲ. ॥164॥ "ದೇವರ ಅಪ್ಪಣೆಯಿಲ್ಲದೆ ಮತ್ತೆ ಯಾರಾದರೂ ಈ ಹಣವನ್ನು ಮುಟ್ಟಿದಲ್ಲಿ ನಿಜವಾಗಿಯೂ ದೇವರ ಕೋಪಕ್ಕೆ ಕಾರಣರಾಗುತ್ತಾರೆ. ತಮ್ಮ ವಿನಾಶವನ್ನು ಆಹ್ವಾನಿಸುತ್ತಾರೆ. ಈ ಸಂಪತ್ತೆಲ್ಲವೂ ಸಂಪೂರ್ಣವಾಗಿ ದೇವರ ಸ್ವತ್ತು. ॥165॥ "ಪ್ರಭುತ್ವವು ಪೂಜಾರಿಯ ಮೇಲೆ ಅವಲಂಬಿತವಾಗಿದೆ. ಗೌರಿಯು ಸಂಪೂರ್ಣ ವಾರಸುದಾರಳು. ಮತ್ತೆ ಯಾರಿಗೂ ಯಾವ ಹಕ್ಕೂ ಇಲ್ಲ. ಇದು ಗೌರಿಯ ಸ್ವಂತ ಹಣವೇ ಆಗಿದೆ. ॥166॥ ಆದುದರಿಂದ ನಾನು ಅವರಿಬ್ಬರಿಗೂ ಗೌರಿಯ ಪರವಾಗಿ ಹೇಳಿದೆ. "ಅವಳು ಇಚ್ಛೆಯಂತೆ ನಡೆಯಿರಿ. ಅದರಿಂದ ನೀವು ಕೃತಾರ್ಥರಾಗುವಿರಿ." ॥167॥ "ಅವಳ ಇಚ್ಛೆಗೆ ವಿರುದ್ಧವಾಗಿ ನೀವೇನಾದರೂ ವರ್ತಿಸಿದರೆ, ದೇವರು ರಾಜಿಯಾಗುವುದಿಲ್ಲ. ವೀರಭದ್ರಪ್ಪನಿಗೆ ಸ್ವತಂತ್ರವ್ಯವಹಾರ ಮಾಡಲು ಅಧಿಕಾರವಿಲ್ಲ. ॥168॥ ಯಾವಾಗ ನಾನು ಸ್ಪಷ್ಟವಾಗಿ ಈ ವಿಷಯದಲ್ಲಿ ನನ್ನ ವಿಚಾರಗಳನ್ನು ತಿಳಿಸಿದೆನೋ, ಆಗ ವೀರಭದ್ರನು ನನ್ನ ಮೇಲೆ ಕೋಪಗೊಂಡು ಬೈಗಳ ಮಳೆಯನ್ನೇ ಸುರಿಸಿದನು. ॥169॥ ಅವನು ಹೇಳಿದನು, "ಬಾಬಾ, ನನ್ನ ಪತ್ನಿಯ ಮಾಲೀಕತ್ವವನ್ನು ಸ್ಥಾಪಿಸಿ ನೀನು ಎಲ್ಲ ದ್ರವ್ಯವನ್ನು ನಿನ್ನ ಹಿತಕ್ಕಾಗಿ ಮಾಡಿಕೊಳ್ಳಬೇಕೆಂದು ಮನದಲ್ಲೇ ಯೋಚಿಸುತ್ತಿರುವೆ." ॥170॥ ಈ ಮಾತುಗಳನ್ನು ಕೇಳಿ ನಾನು ಸ್ತಬ್ಧನಾದೆ. ಅಲ್ಲಾಮಿಯಾನ ಕಾರ್ಯಗಳೆಲ್ಲವೂ ಅಗಾಧ! ಅನವಶ್ಯಕವಾಗಿ ಏಕೆ ಖೇದಪಡಲಿ! ॥171॥ ವೀರಭದ್ರಪ್ಪನು ನನಗೆ ಈ ಬೈಗುಳಗಳನ್ನು ಹೇಳಿ, ಬಹಳ ಕೋಪಗೊಂಡು ಮನೆಯಲ್ಲಿ ತನ್ನ ಪತ್ನಿಯ ಮೇಲೆ ಕೂಗಾಡಿದನು. ಅನಂತರ ಅವಳು ಮಧ್ಯಾಹ್ನ ನನ್ನ ದರ್ಶನಕ್ಕೆ ಬಂದಾಗ ನನ್ನಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸಿದಳು. ॥172॥ "ಬಾಬಾ, ಬೇರೊಬ್ಬರ ಮಾತುಗಳನ್ನು ಕೇಳಿ ನನ್ನ ಮೇಲೆ ಅವಕೃಪೆ ತೋರಬೇಡ. ನಾನು ನಿನ್ನಲ್ಲಿ ಮೊರೆಯಿಡುತ್ತೇನೆ. ಇನ್ನು ಮುಂದೆಯೂ ನನ್ನನ್ನು ನಿನ್ನ ಮಗಳ ರೀತಿ ಪ್ರೀತಿಮಾಡು. ॥173॥ ಅವಳ ಈ ಮಾತುಗಳನ್ನು ಕೇಳಿ, ನಾನು ಅವಳಿಗೆ ಪೂರ್ಣ ಭರವಸೆ ನೀಡಿದೆನು. "ನಾನು ನಿನಗೆ ಸಪ್ತಸಾಗರಗಳೂ ಭರಿಸದಷ್ಟು ಕೃಪೆಹರಿಸುತ್ತೇನೆ. ಖಿನ್ನಳಾಗಬೇಡ." ॥174॥ ಅದೇ ದಿನ ರಾತ್ರಿ ಗೌರೀಬಾಯಿಯು ನಿದ್ರಿಸುತ್ತಿರುವಾಗ ಅವಳಿಗೆ ಒಂದು ಕನಸಾಯಿತು. ಶಂಕರನು ಅವಳ ಸ್ವಪ್ನದಲ್ಲಿ ದರ್ಶನ ನೀಡಿದನು. ಅವನು ಏನು ಹೇಳಿದನೆಂಬುದನ್ನು ಕೇಳಿರಿ. ॥175॥ "ನೋಡು, ಈ ಹಣವೆಲ್ಲವೂ ನಿನ್ನದೇ. ಯಾರಿಗೂ ಏನನ್ನೂ ಕೊಡಬೇಡ. ಅದರ ವ್ಯವಸ್ಥೆಯ ಬಗ್ಗೆ ನಾನು ನಿರ್ದೇಶನ ನೀಡುತ್ತೇನೆ. ಯಾವಾಗಲೂ ಅದೇ ರೀತಿ ಸದಾಕಾಲ ನಡೆಸಿಕೊಂಡು ಹೋಗು. ॥176॥ "ದೇವಾಲಯಕ್ಕಾಗಿ ಹಣವನ್ನು ಖರ್ಚುಮಾಡು. ಚನ್ನಬಸಪ್ಪನು

ಹೇಳುವ ರೀತಿಯಲ್ಲಿ ನಡೆ. ನನಗೆ ಅವನ ಮೇಲೆ ಭರವಸೆಯಿದೆ. ಇದು ರೂಢಿಯ ಆಚರಣೆಯಾಗಲಿ. ॥177॥ ಹಣವನ್ನು ಬೇರೆ ಯಾವ ಉದ್ದೇಶಕ್ಕಾಗಿಯಾದರೂ ಉಪಯೋಗಿಸುವ ಅವಶ್ಯಕತೆ ಉಂಟಾದಲ್ಲಿ ಈ ಹಣವನ್ನು ಅವ್ಯವಸ್ಥೆಗೊಳಿಸಬೇಡ. ಆಗ ಮಸೀದಿಯ ಬಾಬಾರವರನ್ನು ಕೇಳದೆ ಯಾವುದೇ ವ್ಯವಸ್ಥೆ ಮಾಡಬೇಡ." ॥178॥ ಗೌರೀಬಾಯಿಯು ನನಗೆ ಈ ದೃಷ್ಟಾಂತವನ್ನು ವಿವರವಾಗಿ ತಿಳಿಸಿದಳು. ನಾನೂ ಸಹ ಅವಳಿಗೆ ಆ ಕನಸಿನಲ್ಲಿ ಕೊಟ್ಟ ನಿರ್ದೇಶನವನ್ನು ಚಾಚೂ ತಪ್ಪದೆ ಪಾಲಿಸಲು ತಿಳಿಸಿದೆ. ॥179॥ "ನಿನಗೆ ಸೇರಿದ ಅಸಲನ್ನು ನಿನ್ನಲ್ಲೇ ಇಟ್ಟುಕೋ. ಬಡ್ಡಿಯ ಅರ್ಧ ಹಣವನ್ನು ಚನ್ನಬಸಪ್ಪನಿಗೆ ಕೊಡು. ಇದನ್ನು ನಿತ್ಯ ಪದ್ಧತಿ ಮಾಡಿಕೊಂಡು ಹೋಗು. ವೀರಭದ್ರನಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ." ॥180॥ ನಾವು ಈ ರೀತಿ ಮಾತನಾಡುತ್ತಿರುವಾಗ, ಅವರಿಬ್ಬರೂ ಜಗಳವಾಡುತ್ತಲೇ ಅಲ್ಲಿಗೆ ಬಂದರು. ನಾನು ಅವರಿಬ್ಬರನ್ನೂ ಸಮಾಧಾನ ಪಡಿಸಲು ಬಹಳ ಉಪಾಯ ಮಾಡಬೇಕಾಯಿತು. ॥181॥ ನಾನು ಅವರಿಗೆ ಗೌರೀಬಾಯಿಗೆ ಆದಂತಹ ಶಂಕರನ ಕನಸನ್ನು ವಿವರವಾಗಿ ತಿಳಿಸಿದೆ. ಅದನ್ನು ಕೇಳಿದನಂತರ ವೀರಭದ್ರನು ಉನ್ಮತ್ತನಾದನು. ॥182॥ ವೀರಭದ್ರನು ಪ್ರತಿಪಕ್ಷದ ಮೇಲೆ ಯಥೇಚ್ಛವಾಗಿ ಕಾರಣವೇ ಇಲ್ಲದೆ ಲಕ್ಷಾಂತರ ಬೈಗಳ ಮಳೆಸುರಿಸಿದನು. ಅವನ ಬೈಗಳು ಯದ್ವಾತದ್ವಾ ಇದ್ದು ಮತ್ತೊಬ್ಬನನ್ನು ಭೀತಿಗೊಳಿಸಿ ಸಂದಿಗ್ಧ ಪರಿಸ್ಥಿತಿಗೆ ಒಳಪಡಿಸಿದವು. ॥183॥ ಅವನೂ ಸಹ ಕೋಪೋದ್ರಿಕ್ತನಾಗಿ, ಶಾಪಗಳನ್ನೂ ಬೈಗಳನ್ನೂ ಬಡಬಡಿಸಿದನು. ಅವನು ಹೇಳಿದನು, "ನಿನ್ನನ್ನು ಎಲ್ಲಿ ನೋಡಿದರೂ ಅಲ್ಲಿಯೇ ಕೊಲ್ಲುವೆನು." ॥184॥ ವೀರಭದ್ರನು, ಉನ್ಮತ್ತನಾಗಿ ಚನ್ನಬಸಪ್ಪನನ್ನು ನೋಡುತ್ತ ಹೇಳಿದನು, "ನಾನು ನಿನ್ನನ್ನು ಚೂರು ಚೂರು ಮಾಡಿ ತಿಂದುಹಾಕುತ್ತೇನೆ." ॥185॥ ಚನ್ನಬಸಪ್ಪನು ಭಯಗ್ರಸ್ತನಾದನು. ಅವನು ನನ್ನ ಪಾದಗಳನ್ನು ಗಟ್ಟಿಯಾಗಿ ಹಿಡಿದು ಪ್ರಾರ್ಥಿಸಿದನು, "ನನ್ನನ್ನು ಸಂಕಟ ಮುಕ್ತನನ್ನಾಗಿ ಮಾಡಿ." ಅನಂತರ ನಾನು ಅವನಿಗೆ ಅಭಯವನ್ನಿತ್ತೆನು. ॥186॥ ಆಗ ನಾನು ದೀನನಾದ ಚನ್ನಬಸಪ್ಪನಿಗೆ ಧೈರ್ಯದಿಂದ ಇರಲು ಹೇಳಿದೆನು. "ನೀನು ವೀರಭದ್ರಪ್ಪನ ಕೈಯಲ್ಲಿ ಸಾಯಲು ನಾನು ಬಿಡುವುದಿಲ್ಲ." ॥187॥ ಅದು ಹಾಗಿರಲಿ. ಅನಂತರ, ವೀರಭದ್ರನಿಗೆ ಒಂದು ವಾತದ ಸನ್ನಿಯುಂಟಾಗಿ ಮರಣ ಉಂಟಾಯಿತು. ಈ ರೀತಿ ವೀರಭದ್ರನ ಅಂತ್ಯವಾಯಿತು. ಅವನು ಸರ್ಪಯೋನಿಯಲ್ಲಿ ಮತ್ತೆ ಹುಟ್ಟಿದನು. ಈ ರೀತಿ ಅವನ ದೇಹದ ಆಕಾರ ಬದಲಾಯಿತು. ॥188॥ ಚನ್ನಬಸಪ್ಪನು ಭಯ ಪೀಡಿತನಾದನು ಮತ್ತು ಭಾವೋದ್ವೇಗದಿಂದಲೇ ಮರಣಹೊಂದಿದನು. ಅವನು ಕಪ್ಪೆಯಾಗಿ ಪುನರ್ಜನ್ಮ ಪಡೆದನು. ಇದೇ ಅವರ ಕಥೆ. ॥189॥ ಪೂರ್ವಜನ್ಮದ ವೈರತ್ವದಿಂದಾಗಿ ವೀರಭದ್ರನು ಸರ್ಪವಾಗಿ ಹುಟ್ಟಿ ದುರ್ಧರವಾದ ಕಪ್ಪೆಯ ಯೋನಿಯಲ್ಲಿ ಹುಟ್ಟಿದ ಚನ್ನಬಸಪ್ಪನನ್ನು ಹಿಂಬಾಲಿಸಿದನು. ಕೊನೆಯಲ್ಲಿ ವೀರಭದ್ರನು ಅವನನ್ನು ಹಿಡಿದನು. ॥190॥ ಆ ಬಡಪಾಯಿ ಚನ್ನಬಸಪ್ಪನು ಕಪ್ಪೆಯಾಗಿ ಹಾವಾಗಿರುವ ವೀರಭದ್ರನ ಬಾಯಲ್ಲಿ ಸಿಕ್ಕಿಬಿದ್ದನು. ಅವನ ಆಕ್ರಂದನವನ್ನು ಕೇಳಿ ನನಗೆ ಅನುಕಂಪ

ಉಂಟಾಯಿತು. ॥191॥ ಹಿಂದೆ ನೀಡಿದ ವಚನಗಳನ್ನು ಸ್ಮರಿಸಿ, ನಾನು ಚನ್ನಬಸಪ್ಪನನ್ನು ಹಾವಿನ ಬಾಯಿಂದ ರಕ್ಷಿಸಿ ಪ್ರಾಣಘಾತನ್ನು ಉಳಿಸಿಕೊಂಡೆ. ॥192॥ ಅಲ್ಲಾನು ಭೀತಿಗ್ರಸ್ತರಾದ ತನ್ನ ಭಕ್ತರ ಸಂಕಟ ಸಮಯದಲ್ಲಿ ಧಾವಿಸಿ ಬರುತ್ತಾನೆ. ಅವನು ತನ್ನ ಭಕ್ತರನ್ನು ರಕ್ಷಿಸಲು ನನ್ನನ್ನು ಕಳುಹಿಸಿದ್ದಾನೆ. ॥193॥ ಇದೇ ನಿನ್ನ ಪ್ರತ್ಯಕ್ಷ ಅನುಭವ. ವೀರಭದ್ರನನ್ನು ಓಡಿಸಲಾಯಿತು. ಚನ್ನಬಸಪ್ಪನನ್ನು ಈ ಸಂಕಟದಿಂದ ದಾಟಿಸಲಾಯಿತು. ಇದೆಲ್ಲವೂ ದೇವರ ಲೀಲೆ. ॥194॥ ಅದು ಹಾಗಿರಲಿ. ಈಗ ಚಿಲುಮೆಯನ್ನು ತುಂಬಿಸು. ಸೇದಿದ ಮೇಲೆ ನಾನು ನನ್ನ ಸ್ವಂತಧಾಮಕ್ಕೆ ಹಿಂತಿರುಗುತ್ತೇನೆ. ನೀನೂ ನಿನ್ನ ಧಾಮಕ್ಕೆ ಹೋಗಬಹುದು. ನನ್ನನ್ನು ಸ್ಮರಿಸು. ॥195॥ ಈ ರೀತಿ ನುಡಿದ ನಂತರ, ನಾನು ಚಿಲುಮೆಯನ್ನು ಸೇದಿದೆನು. ಸತ್ಸಂಗದಲ್ಲಿ ಸುಖಪಟ್ಟು ನಾನು ನಡೆಯುತ್ತ ಮನೆಗೆ ಹಿಂತಿರುಗಿದೆನು. ನಾನು ಪರಮಾನಂದಪಟ್ಟೆನು. ॥196॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಶ್ರೀ ಸಾಯಿಮುಖದಿಂದ ಬಂದ ಕಥೆಗಳ ನಿರೂಪಣೆ" ಎಂಬ ನಲವತ್ತೇಳನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಬೆವರುವುದು, ಸೆಟೆಯುವುದು, ರೋಮಾಂಚನ, ಸ್ವರಬದಲಾವಣೆ, ನಡುಕ, ದೇಹದ ಬಣ್ಣ ಬದಲಾಗುವುದು, ಕಣ್ಣೀರು ಹರಿಯುವುದು, ಪ್ರಜ್ಞಾಶೂನ್ಯವಾಗುವುದು. (ಪ್ರೀತಿ, ಕರುಣೆ, ಸಹನೆ, ಕ್ಷಮೆ, ತ್ಯಾಗ / ವೈರಾಗ್ಯ, ಅನುಕಂಪ, ವಿಶ್ವಾಸ, ತಾಳ್ಮೆ)





# ಅಧ್ಯಾಯ - 48

|| ಅಥಃ ಶ್ರೀ ಸಾಯಿ ಸಚ್ಚರಿತೆ ||



## "ಶಂಕೆಯುಳ್ಳ ಭಕ್ತರಿಗೆ ಅನುಗ್ರಹ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಈಗ ನಾನು ಈ ಅಧ್ಯಾಯವನ್ನು ಪ್ರಾರಂಭಿಸುತ್ತಿದ್ದಂತೆ, ಒಬ್ಬ ಅತ್ಯಂತ ಜಿಜ್ಞಾಸುವಾದ ಶ್ರೋತೃವು ಯಾರು ಇಲ್ಲಿಯವರೆಗೆ ಆದರದಿಂದ ಆಲಿಸಿರುವಿರೋ ಅವರು "ಶ್ರೀ ಸಾಯಿಯು ಗುರುವೋ, ಸದ್ಗುರುವೋ?" ಎಂದು ಕೇಳಿದರು. ||1|| ಅವರ ತೃಪ್ತಿಗಾಗಿ ನಾನು ಸದ್ಗುರುವಿನ ಗುಣಲಕ್ಷಣಗಳನ್ನು, ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ಅವು ಶ್ರೀಸಾಯಿ ಸಮರ್ಥರಲ್ಲಿರುವ ಗುಣಗಳನ್ನು ಹೋಲುತ್ತವೆ. ||2|| ಯಾರಿಂದ ವೇದಾಧ್ಯಯನದ ಜ್ಞಾನವು ಪ್ರಾಪ್ತವಾಗುವುದೋ ಸಕಲ ಶಾಸ್ತ್ರಗಳ ಜ್ಞಾನವು ತಿಳಿಯುವುದೋ, ವೇದಾಂತದ ತತ್ತ್ವವು ತಿಳಿಯುವುದೋ, ಅವರನ್ನು ಜ್ಞಾನಿಗಳು ಎಂದು ಕರೆಯುತ್ತಾರೆ. ಸದ್ಗುರುಗಳೆಂದು ಕರೆಯುವುದಿಲ್ಲ. ||3|| ಯಾರು ಶ್ವಾಸವನ್ನು ನಿರೋಧಿಸುತ್ತಾರೋ, ಅಥವಾ ತಪ್ತಮುದ್ರೆಯನ್ನು ಧಾರಣ ಮಾಡಿರುತ್ತಾರೋ ಅಥವಾ ಶ್ರೋತೃಗಳನ್ನು ವಾದ ವಾಗ್ವೈಖರಿಯಿಂದ ರಂಜಿಸುತ್ತಾರೋ ಅಂತಹವರನ್ನು ಜ್ಞಾನಿಗಳು ಎನ್ನುತ್ತಾರೆ. ಸದ್ಗುರುಗಳೆಂದು ಪರಿಗಣಿಸುವುದಿಲ್ಲ. ||4|| ಅಂತಹ ಬೋಧಕರು ತಮ್ಮ ಶಿಷ್ಯರಿಗೆ ಆ ನಾಮದ ಜಪಮಾಡಲು. ಆಜ್ಞೆಮಾಡುತ್ತಿದ್ದರು. ಆದರೆ ಯಾರೂ ಈ ಸಾಧನೆಗಳ ಫಲಪ್ರಾಪ್ತಿಯಾದಾಗ ಉಂಟಾಗುತ್ತವೆ ಎಂದು ಖಚಿತವಾಗಿ ಹೇಳಲಾರರು. ||5|| ಬ್ರಹ್ಮತತ್ವದ ನಿರೂಪಣೆಯು ಬಹಳ ರಸವತ್ತಾಗಿರುತ್ತದೆ ಜ್ಞಾನವು ಕೇವಲ ತೋರಿಕೆಯದು

ಆದರೆ ಅಲ್ಲಿ ಸ್ವಾನುಭವದ ಪೂರ್ಣ ಕೊರತೆ ಇದೆ. ಆ ಜ್ಞಾನವು ಮಾತ್ರ ಕೇವಲ ಮೇಲು ಮೇಲಿನದು. ಅದು ಶಬ್ದಗಳಕೋಶವಾಗಿದೆ. ॥6॥ ಇಂತಹ ವಿವರಣೆಗಳನ್ನು ಯಾರು ಸ್ಪಷ್ಟವಾಗಿ ಕೇಳುವರೋ ಅಂತಹವರು ಇಹದ ಮತ್ತು ಪರದ ಎರಡೂ ಅನುಭವಗಳ ಬಗ್ಗೆ ಉದಾಸೀನವಾಗಿರುವರು. ಆದರೆ ಸ್ವಸ್ವರೂಪಾನಂದದ ಅನುಭವದ ರುಚಿಯು ಸ್ಪಷ್ಟವಾಗಿರುತ್ತದೆ. ಮತ್ತು ಕೇವಲ ಅದರ ಅನುಭವಿಯುಮಾತ್ರ ಇತರರಿಗೆ ಅದನ್ನು ನೀಡಬಲ್ಲನು. ॥7॥ ಯಾರು ಸಂಪೂರ್ಣ ಶಾಸ್ತ್ರಜ್ಞಾನಿಯೋ, ಪೂರ್ಣಾನುಭವಿಯೋ, ಅಪರೋಕ್ಷ ಜ್ಞಾನಿಯೋ, ಅವನಿಗೆ ಮಾತ್ರ ಶಿಷ್ಯರಿಗೆ ಪ್ರಬೋಧಿಸಲು ಅಧಿಕಾರವಿರುತ್ತದೆ. ಅಂತಹ ವ್ಯಕ್ತಿಯನ್ನು ಮಾತ್ರ ಸದ್ಗುರುವೆಂದು ಕರೆಯುತ್ತಾರೆ. ॥8॥ ಸ್ವಾನುಭವವಿಲ್ಲದೇ ಇರುವವನು ಶಿಷ್ಯನಿಗೆ ಯಾವ ರೀತಿ ಅದನ್ನು ನೀಡಬಲ್ಲನು? ಅಪರೂಪದ ಅನುಭವವಿಲ್ಲದೇ ಇರುವವನು ಸದ್ಗುರುವೆಂದು ಕರೆಸಿಕೊಳ್ಳಲು ಅರ್ಹನಲ್ಲ॥9॥ ಯಾರು ತನ್ನ ಕನಸಿನಲ್ಲಿಯೂ ಶಿಷ್ಯನಿಂದ ಯಾವುದೇ ರೀತಿಯ ಸೇವೆ ಅಥವಾ ಲಾಭವನ್ನು ನಿರೀಕ್ಷಿಸುವುದಿಲ್ಲವೋ ಅವನನ್ನು ಸದ್ಗುರುವೆಂದು ತಿಳಿ. ಅದಕ್ಕೆ ಬದಲಾಗಿ, ಅವನು ಶಿಷ್ಯನಿಗಾಗಿ ತನ್ನ ದೇಹವನ್ನು ಸವೆಸಲು ಇಚ್ಛಿಸುತ್ತಾನೆ. ॥10॥ ಯಾರು ತನ್ನ ಶಿಷ್ಯನನ್ನು ನಿಕೃಷ್ಟನೆಂದು ಭಾವಿಸದೆ ಕೇವಲ ಗುರುವೇ ಶ್ರೇಷ್ಠ ಎಂಬಂತಹ ಅಹಂಭಾವವನ್ನು ತ್ಯಜಿಸಿರುವನೋ ಅಂತಹವನೇ ನಿಜವಾದ ಹಿತಕಾರಿಯಾದ ಸದ್ಗುರುವೆಂದು ಪರಿಗಣಿಸಬಹುದು. ॥11॥ ಅವನು ಶಿಷ್ಯನೇ ಪೂರ್ಣಬ್ರಹ್ಮ ಎಂಬ ನಂಬಿಕೆಯಿಟ್ಟು ಅವನನ್ನು ತನ್ನ ಸ್ವಂತ ಪುತ್ರನಂತೆಯೇ ಪ್ರೀತಿಸುವನು. ತನ್ನ ಯೋಗಕ್ಷೇಮಕ್ಕಾಗಿ ಅವನಿಂದ ಏನನ್ನೂ ನಿರೀಕ್ಷಿಸುವುದಿಲ್ಲ. ಅಂತಹ ಸದ್ಗುರುವೇ ಈ ಜಗತ್ತಿನಲ್ಲಿ ಶ್ರೇಷ್ಠನಾದವನು. ॥12॥ ಯಾರು ಪರಮಶಾಂತಿಯ ನಿವಾಸವೋ, ವಿದ್ವತ್ತಿನ ಅಭಿಮಾನ ಹೊಂದಿಲ್ಲವೋ, ಅವನು ಹಿರಿಯರು–ಕಿರಿಯರು ಎಂದಾಗಲೀ, ಶ್ರೀಮಂತರು–ಬಡವರು ಎಂಬ ಭೇದಭಾವ ಮಾಡುವುದಿಲ್ಲ ಮತ್ತು ಅವನೇ ಸದ್ಗುರು. ॥13॥ ಸರ್ವೇಸಾಧಾರಣವಾಗಿ ಇಂತಹುವೇ ಸದ್ಗುರುವಿನ ಲಕ್ಷಣಗಳು. ಇವುಗಳನ್ನು ನಾನುಗ್ರಹಿಸಿ ಸಂಕ್ಷಿಪ್ತವಾಗಿ ನಿವೇದಿಸಿರುತ್ತೇನೆ. ಅನನ್ಯವಾಗಿ ಶರಣಾದ ಶ್ರೋತೃಗಳಿಗಾಗಿ ತಿಳಿಸಿರುತ್ತೇನೆ. ॥14॥ ಸಾಯಿ ದರ್ಶನದಿಂದ ತುಷ್ಟರಾದ ಭಾಗ್ಯವಂತರಿಗೆ ನಾನು ಹೆಚ್ಚಿಗೆ ಮತ್ತೇನನ್ನು ಹೇಳಲಿ? ಇವೆಲ್ಲವೂ ಸತ್ಯವಾಗಿಯೂ ಸದ್ಗುರುವಿನ ಲಕ್ಷಣಗಳು. ॥15॥ ಜನ್ಮಜನ್ಮಾಂತರಗಳ ಪುಣ್ಯಾತಿಶಯದ ಫಲಗಳ ಸಂಚಯದಿಂದಲೇ ನನಗೆ ಈಗ ಸದ್ಗುರು ಸಾಯಿಯ ಚರಣಗಳು ದೊರೆತಿವೆ. ॥16॥ ಅವರು ತಾರುಣ್ಯದ ಹೊಸ್ತಿಲಲ್ಲಿದ್ದರೂ ಅವರ ಸ್ವಂತದ್ದಾಗಿ ಏನೂ ಇರಲಿಲ್ಲ. ಸಂಸಾರವಿಲ್ಲ, ಧನವಿಲ್ಲ, ಆಧಾರವಿಲ್ಲ, ಮನೆಯಿಲ್ಲ. ಅವರು ಕೇವಲ ತಂಬಾಕು ಮತ್ತು ಚಿಲುಮೆಯನ್ನು ಸೇದುತ್ತಿದ್ದರು. ಮತ್ತು ಅವರಿಗೆ ಅತಿಶಯವಾದ ಮನೋನಿಗ್ರಹವಿತ್ತು. ॥17॥ ಹದಿನೆಂಟನೆಯ ವಯಸ್ಸಿನಲ್ಲಿಯೂ ಅವರು ಮನಸ್ಸಿನ ಮೇಲೆ ಪೂರ್ಣವಾಗಿ ಜಯಹೊಂದಿದ್ದರು. ಅವರು ಸದಾ ಏಕಾಂತದಲ್ಲಿ ನಿರ್ಭಯನಾಗಿರುತ್ತಿದ್ದರು. ಸದಾ ತಮ್ಮ ಸ್ವಸ್ವರೂಪದಲ್ಲಿ ಲೀನವಾಗಿರುತ್ತಿದ್ದರು. ॥18॥ ತಮ್ಮ ಭಕ್ತರ ಪರಿಶುದ್ಧವಾದ ಬಂಧನವನ್ನು,

ನೋಡಿ, ತಾವು ಭಕ್ತಪರಾಧೀನ ಎಂಬುದು ಅವರ ನಂಬಿಗೆಯಾಗಿತ್ತು. ತಮ್ಮ ಭಕ್ತ ಪ್ರೇಮವನ್ನು ಭಕ್ತವೃಂದಕ್ಕೆ ತೋರಿಸಲು ಅವರ ಜೊತೆಯಲ್ಲಿ ಅತ್ಯಂತ ಪ್ರೇಮದಿಂದ ವಾಸಮಾಡುತ್ತಿದ್ದರು. ॥19॥ ಜಯತು ಅನಂತಾನಂತ ಪರಬ್ರಹ್ಮ! ಜಯತು ದೀನೋದ್ಧಾರ ಪ್ರಸನ್ನ ವದನ! ಜಯತು ಚೈತನ್ಯಘನ ಭಕ್ತಾಧೀನ! ॥20॥ ಜಯ, ಜಯ, ದ್ವಂದ್ವಾತೀತನಿಗೆ! ಜಯ ಜಯ ಗುಣಾತೀತನಿಗೆ – ಗುಣಸಂಪನ್ನನಿಗೆ! ಸರ್ವಸಾಕ್ಷಿಯೂ ಮತ್ತು ಸರ್ವಾತೀತನೂ! ಭಕ್ತರಲ್ಲದವರೆಲ್ಲರ ತಿಳಿವಿಗೂ ಅತೀತನಾದವನು! ॥21॥ ಜಯ ಜಯ ಭವ ಸಂತಾಪಹರಣ! ಜಯಜಯ ಭವ ಗಜ ವಿದಾರಣ! ಜಯ ಜಯ ಆಶ್ರಿತಪ್ರೇಮ ಪೂರ್ಣ! ಸಂಕಟ ನಿರಸನಾ ಸದ್ಗುರುರಾಯ! ॥22॥ ನೀವು ನಿರಾಕಾರದಲ್ಲಿ ಲೀನವಾಗಿ ಅವ್ಯಕ್ತರಾಗಿರುವಿರಿ. ಆದರೆ ನೀವು ನಿಮ್ಮ ಭಕ್ತರ ಕಲ್ಯಾಣವನ್ನು ದೇಹವನ್ನು ಬಿಟ್ಟಮೇಲೆಯೂ ಮಾಡುತ್ತಿರುವಿರಿ. ॥23॥ ಯಾರು ನಿಮ್ಮಲ್ಲಿ ಭಕ್ತಿ ಇಡುವರೋ ಅವರು ಈಗಲೂ ಅದೇ ರೀತಿಯ ಅನುಭವಗಳನ್ನು ಪಡೆಯುತ್ತಿದ್ದಾರೆ. ನೀವು ಈಗ ಅವ್ಯಕ್ತವಾಗಿದ್ದರೂ ಇದು ನಡೆಯುತ್ತಲೇ ಇದೆ ॥24॥ ನೀವು ಈ ಪಾಮರನನ್ನು ನಿಮಿತ್ತ ಮಾತ್ರ ಮಾಡಿ ಅವಿದ್ಯೆಯೆಂಬ ಅಂಧಕಾರವನ್ನು ತೊಲಗಿಸಿ ನಿಮ್ಮ ಸಮರ್ಥವಾದ ಆತ್ಮಚರಿತ್ರೆಯನ್ನು ಭಕ್ತ ಉದ್ಧಾರಕ್ಕಾಗಿ ಪ್ರಕಟಿಸಿರುವಿರಿ. ॥25॥ ಭಗವಂತನ ಅಸ್ತಿತ್ವದಲ್ಲಿ ನಂಬಿಕೆ ಹಾಗೂ ಅವನಲ್ಲಿ ಶ್ರದ್ಧೆ ಇವೆರಡೂ ಭಕ್ತನಿಗೆ ಇರಲೇಬೇಕಾದ ಹೃದಯ ದೀಪಗಳು. ಪ್ರೇಮ–ಸ್ನೇಹವೆಂಬ ಎಣ್ಣೆಯಲ್ಲಿ ಮುಳುಗಿಸಿದ ಬತ್ತಿಯನ್ನು ಬೆಳಗಿಸಿ. ಜ್ಞಾನಜ್ಯೋತಿಯು ಪ್ರಕಟಗೊಳಿಸುತ್ತವೆ. ॥26॥ ಪ್ರೇಮವಿಲ್ಲದ ಜ್ಞಾನವು ಶುಷ್ಕವು. ಯಾರಿಗಾದರೂ ಅದರಿಂದ ಏನು ಪ್ರಯೋಜನ? ಪ್ರೀತಿಯಿಲ್ಲದೆ ಸಮಾಧಾನವಿಲ್ಲ. ಪ್ರೇಮವು ಅವಿಚ್ಛಿನ್ನವಾದುದು. ॥27॥ ಪ್ರೇಮದ ಶಕ್ತಿಯನ್ನು ಯಾವ ರೀತಿ ವರ್ಣಿಸಲಿ? ಅದರ ಮುಂದೆ ಪ್ರತಿಯೊಂದೂ ತುಚ್ಛವಾದುದು. ಗಹನವಾದ ಪ್ರೇಮವಿಲ್ಲದೆ, ಶ್ರವಣ, ವಾಚನ ಎರಡೂ ನಿಷ್ಫಲ. ॥28॥ ಪ್ರೇಮ ಪಾಶದಲ್ಲಿ ಬಂಧಿತನಾದಾಗ ಭಕ್ತಿ, ನಿರ್ವಿಕಾರತ್ವ, ಶಾಂತಿ ಮತ್ತು ತೃಪ್ತಿ ಎಲ್ಲವೂ ನಿಜಸಂಪತ್ತಿನ ಸಮೇತವಾಗಿ ಮುಕ್ತಿಯನ್ನು ದಯಪಾಲಿಸುತ್ತದೆ. ॥29॥ ಭಕ್ತಿಯಿಲ್ಲದೆ ಪ್ರೇಮವು ಹುಟ್ಟುವುದಿಲ್ಲ. ಎಲ್ಲಿ ಭಕ್ತಿಯೋ ಅಲ್ಲಿ ದೇವರು. ಭಕ್ತಿ ಇದ್ದಲ್ಲಿ ಪ್ರೇಮ ಸಾಗರವೇ ಇರುತ್ತದೆ. ಕೇವಲ ಭಕ್ತಿ ಮಾತ್ರದಿಂದಲೇ ಭವಸಾಗರವನ್ನು ದಾಟಬಹುದು. ॥30॥ ಸಾಯಿ ಚರಿತ್ರೆಯು ಗಂಗೋದಕದಷ್ಟು ಪವಿತ್ರ, ತಮ್ಮ ಸ್ತೋತ್ರವನ್ನು ಅವರೇ ಶೋಭಿತಗೊಳಿಸಿದ್ದಾರೆ. ಹೇಮಾದನು ಕೇವಲ ನಿಮಿತ್ತಮಾತ್ರನು. ॥31॥ ಸಾಯಿ ಸಚ್ಚರಿತೆಯ ಶ್ರವಣವು ಶ್ರೋತೃಗಳನ್ನು ಮತ್ತು ವಚನಕಾರನನ್ನು ಶುದ್ಧೀಕರಿಸುತ್ತದೆ. ಪಾಪ–ಪುಣ್ಯಗಳು ದೂರವಾಗಿ ಇಬ್ಬರೂ ನಿತ್ಯ ಮುಕ್ತರಾಗುತ್ತಾರೆ. ॥32॥ ಇದನ್ನು ಕೇಳಿದಂತಹ ಶ್ರೋತೃಗಳು ಭಾಗ್ಯವಂತರು ಹಾಗೆಯೇ ವಚನಕಾರನೂ ಸಹ. ಶ್ರೀ ಸಾಯಿ ಸ್ತೋತ್ರವು ಧನ್ಯ. ಅದು ತನ್ನ ಭಕ್ತರಿಗೆ ಬಹು ಪವಿತ್ರವಾದುದು.॥33॥ ಪರಿಶುದ್ಧ ಮನಸ್ಸಿನಿಂದ ಮತ್ತು ಸದ್ಭಕ್ತಿಯಿಂದ ಚರಿತ್ರೆಯನ್ನು ಆಲಿಸಿರುವವರ ಸಕಲ ಮನೋರಥಗಳೂ ಸದಾಕಾಲ ಪೂರ್ಣವಾಗಿ ನೆರವೇರುತ್ತವೆ. ॥34॥ ಈ ಸಚ್ಚರಿತೆಯನ್ನು

ಪರಮಶ್ರದ್ಧೆ ಮತ್ತು ಗೌರವಗಳಿಂದ ಆಲಿಸುವವರು ಸಾಯಿಚರಣಗಳಲ್ಲಿ ಭಕ್ತಿಯನ್ನು ಅನಾಯಾಸವಾಗಿ ಪಡೆದು ಕೂಡಲೇ ಅದರ ಲಾಭವನ್ನು ಪಡೆಯುತ್ತಾರೆ. ॥35॥ ಸಾಯಿಸ್ಮರಣೆ ಮತ್ತು ಭಕ್ತಿಭಾವದಿಂದ ಸಾಯಿಚರಣ ಸೇವೆ ಮಾಡುವವರು, ತಮ್ಮ ಇಂದ್ರಿಯಗಳನ್ನು ತಮ್ಮ ಇಚ್ಛೆಯಿಂದಲೇ ನಿಗ್ರಹಿಸಬಲ್ಲವರಾಗುವರು ಮತ್ತು ಸಂಸಾರಸಾಗರವನ್ನು ದಾಟುವರು. ॥36॥ ಈ ಸಾಯಿ ಚರಿತ್ರೆಯ ಕಥನವು ಭಕ್ತರೆಂಬ ಚಾತಕ ಪಕ್ಷಿಗಳಿಗೆ ಪರಿಶುದ್ಧವಾದ ಜಲವು ಸಿಕ್ಕಂತೆ ಶ್ರೋತೃಗಳು ಅದನ್ನು ಆಲಿಸಿದ ನಂತರ ಧ್ಯಾನ ಮಾಡಬೇಕು ಮತ್ತು ಶ್ರೀಗಳವರ ಕೃಪೆ ಪಡೆಯಬೇಕು. ॥37॥ ಶ್ರೋತೃಗಳು ಇದನ್ನು ಸರ್ವಾವಸ್ಥೆಗಳಲ್ಲಿಯೂ ಸಾವಧಾನವಾಗಿ ಆಲಿಸಿದಲ್ಲಿ ಭವಸಾಗರವನ್ನು ದಾಟುವುದು, ಕರ್ಮಬಂಧನಗಳನ್ನು ಕಳಚಿಕೊಳ್ಳುವುದು, ಸುಲಭವಾಗುತ್ತದೆ. ॥38॥ ಅದು ಹಾಗಿರಲಿ. ಕಥೆಯು ಯಾವಾಗ ಪ್ರಾರಂಭವಾಗುವುದೆಂದು ಆಶ್ಚರ್ಯಪಡುತ್ತಿರಬಹುದು. ಈಗ ಪ್ರಸ್ತಾವನೆಯನ್ನು ನೀಡುತ್ತ ಅವರ ಅಸ್ವಸ್ಥತೆಯನ್ನು ದೂರಮಾಡುತ್ತೇನೆ. ॥39॥ ಹಿಂದಿನ ಅಧ್ಯಾಯದಲ್ಲಿ ವೈರ, ಹತ್ಯೆ ಮತ್ತುಋಣ ಮುಂತಾದ ಕರ್ಮಗಳ ಫಲವನ್ನು ಜೀವನದಲ್ಲಿ ಅನುಭವಿಸಿ ಮುಗಿಸಬೇಕೆಂದು ಹೇಳಿದೆ ಮತ್ತು ಅದಕ್ಕಾಗಿ ಪುನರ್ಜನ್ಮ ಪಡೆಯಬೇಕಾಗುತ್ತದೆ, ಎಂದು ತಿಳಿಸಿದೆ. ॥40॥ ಈ ರೀತಿ ಪಾಪ ಮಾಡಿದವರು ಅವುಗಳನ್ನು ನೆನಪಿನಲ್ಲಿಡುವುದಿಲ್ಲ. ಆದರೆ ಸಂತರು ಎಂದಿಗೂ ಮರೆಯುವುದಿಲ್ಲ. ಅವರು ತಮ್ಮ ಭಕ್ತರು ಎಲ್ಲಿಯೇ ಜನ್ಮತಾಳಿರಲಿ ಅವರ ಸಂಕಟಗಳನ್ನು ನಿವಾರಣೆ ಮಾಡುತ್ತಾರೆ. ॥41॥ ಗುರುವಿನಲ್ಲಿಟ್ಟ ಭಕ್ತಿ, ಯಾವುದೇ ಕಾರ್ಯದಲ್ಲಿ ತೊಡಗಿದ್ದರೂ ಭಕ್ತರಿಗೆ ಗುರುಕೃಪೆಯ ಫಲವನ್ನು ಕರುಣಿಸುವುದೆಂಬುದಕ್ಕೆ ನಿದರ್ಶನವಾಗಿ ಒಂದು ಕಥೆಯಿದೆ. ॥42॥ ಯಾವುದೇ ಕರ್ಮದ ಆರಂಭದಲ್ಲಿ ಹರಿಸ್ವರೂಪಿ ಗುರುವಿನ ಚರಣಗಳನ್ನು ಸ್ಮರಿಸಿದಲ್ಲಿ ಮತ್ತು ಕಾರ್ಯದಲ್ಲಿ ಪೂರ್ಣಶ್ರದ್ಧೆಯನ್ನು ತೋರಿಸಿದಲ್ಲಿ ಆ ಭಕ್ತರ ಚಿಂತೆಯನ್ನು ಗುರು ನಿವಾರಿಸುತ್ತಾನೆ. ॥43॥ ನಾನು ಕೇವಲ ಕಾರ್ಯವನ್ನು ಮಾಡುವವನು. ಸಮರ್ಥ ಗುರು, ಹರಿಸ್ವರೂಪನು ಫಲ ನೀಡುವವನು. ಈ ರೀತಿಯ ದೃಢ ನಿರ್ಧಾರ ಮಾಡುವವನು ಸಂಸಾರ ಸಾಗರವನ್ನು ದಾಟುತ್ತಾನೆ. ॥44॥ ಹಾಗೆ ನೋಡಿದಾಗ ಸಂತರು ಆರಂಭದಲ್ಲಿ ಉಗ್ರವಾಗಿ ಕಾಣಬಹುದು. ಆದರೆ ಅಂತರಂಗದಲ್ಲಿ ನಿಸ್ವಾರ್ಥ ಪ್ರೇಮವಿರುತ್ತದೆ. ಆದ್ದರಿಂದ ಸ್ವಲ್ಪ ಧೈರ್ಯದಿಂದ ತಾಳ್ಮೆಯಿಂದ ಇರಬೇಕು. ಕೊನೆಯಲ್ಲಿ ಅವರ ಕಲ್ಯಾಣವನ್ನೇ ಉಂಟುಮಾಡುತ್ತಾರೆ. ॥45॥ ಯಾರು ಸಂತರ ಸತ್ಸಂಗದ ನೆರಳಿನಲ್ಲಿ ಇರುತ್ತಾರೋ, ಆಗ ಬೇರೆಯವರ ತಾಪ, ವಿಧಿಬರಹದಿಂದುಂಟಾದ ತಾಪ, ಹಾಗೂ ಜಗತ್ತಿನ ಮಾಯೆ ಅವುಗಳು ಕೂಡಲೇ ಭಸ್ಮವಾಗುತ್ತವೆ. ಆದ್ದರಿಂದ ಸಂತರ ಚರಣಗಳಲ್ಲಿ ವಿನಮ್ರನಾಗು. ॥46॥ ವಿನಯಪೂರ್ವಕವಾಗಿ, ಅಹಂಕಾರದಿಂದ ಉಬ್ಬದೆ ಸಂತರಲ್ಲಿ ಶರಣಾಗತನಾಗು. ನಿನ್ನ ಹಿತಕ್ಕಾಗಿ ಪ್ರಾರ್ಥಿಸು. ಆಗ ಗುರು ನಿನಗೆ ಚಿತ್ತಶಾಂತಿಯನ್ನು ನೀಡುತ್ತಾನೆ. ॥47॥ ಅಲ್ಪಜ್ಞಾನದ ಬಗ್ಗೆ ಅಹಂಕಾರ ಪಡುವವರು ಮತ್ತು ಸಂತರ ವಚನಗಳನ್ನು ಶಂಕಿಸುವವರು ನಾಶಹೊಂದುತ್ತಾರೆ. ಆದರೆ, ಅನಂತರ ನಿಧಾನವಾಗಿ

ಭಕ್ತಿಲಭಿಸಿ, ಕಲ್ಯಾಣಹೊಂದುತ್ತಾರೆ. ॥48॥ ಪರಿಶುದ್ಧಮನದಿಂದಾಗಲೀ ಕಪಟದಿಂದಾಗಲೀ ಸಂತರ ಚರಣಗಳಲ್ಲಿ ಶರಣಾಗುವವರು ಅಂತ್ಯದಲ್ಲಿ ಮುಕ್ತಿಯನ್ನು ಪಡೆಯುತ್ತಾರೆ. ಸಂತರ ಮಹತ್ತು ಅಗಾಧ! ॥49॥ ಈಗ ಪೂರ್ಣಶ್ರದ್ಧೆಯಿಂದ, ಈ ಬೋಧನೆಯನ್ನು ತಿಳಿಸುವಂತಹ ಕಥೆಯನ್ನು ಕೇಳಿರಿ. ಶ್ರೋತೃಗಳು ಸ್ವಾನಂದದಿಂದ ತುಂಬಿಹೋಗುತ್ತಾರೆ. ಅದೇ ರೀತಿ ವಾಚಕರೂ ಸಂತೋಷಭರಿತರಾಗುತ್ತಾರೆ.॥50॥ ಅಕ್ಕಲಕೋಟೆ ನಿವಾಸಿಯಾದ, ಸಪಟಣೇಕರ ಎಂಬ ವಕೀಲನ ಅನುಭವವನ್ನು ಕೇಳಿರಿ. ಮನಸ್ಸು ಉಲ್ಲಸಿತವಾಗುತ್ತದೆ. ॥51॥ ಅವನು ಕಾನೂನು ವಿದ್ಯಾಭ್ಯಾಸ ಮಾಡುತ್ತಿರುವಾಗ ರಾತ್ರಿ ಹಗಲು ಅಧ್ಯಯನ ಮಾಡುತ್ತಿದ್ದನು. ಆಗ ಆತನಿಗೆ ಶೇವಡೆ ಎಂಬ ಮತ್ತೊಬ್ಬ ವಿದ್ಯಾರ್ಥಿಯ ಭೆಟ್ಟಿಯಾಯಿತು. ಆಗ ಇಬ್ಬರೂ ಪರಸ್ಪರ ವಿಚಾರ ವಿನಿಮಯಮಾಡಿಕೊಂಡರು. ॥52॥ ತರಗತಿಯ ಇತರ ಸಹಾಧ್ಯಾಯಿಗಳೂ ಸಹ ಅಲ್ಲಿಗೆ ಬಂದು ಒಂದು ಕೋಣೆಯಲ್ಲಿ ಒಟ್ಟಿಗೆ ಕುಳಿತರು. ತಮ್ಮ ತಮ್ಮ ಸಿದ್ಧತೆಯನ್ನು ಮುಗಿಸಲು ಪರಸ್ಪರ ಪ್ರಶ್ನೆಹಾಕಲು ಪ್ರಾರಂಭಿಸಿದರು. ॥53॥ ಇದರಲ್ಲಿ ಏನಾದರೂ ತಪ್ಪಿದೆಯೇ ಎಂದು ಪರಸ್ಪರ ಅರಿತುಕೊಳ್ಳಲು ಹಾಗೂ ಸರಿಯಾದ ಉತ್ತರವನ್ನು ತಿಳಿಯಲು ಮತ್ತು ಸಂಶಯಗಳಿದ್ದಲ್ಲಿ ಪರಿಹರಿಸಿಕೊಂಡು ಶಾಂತಚಿತ್ತದವರಾಗಲು ಹೀಗೆ ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದರು. ॥54॥ ಶೇವಡೆಯು ಪ್ರಶ್ನೆಗಳನ್ನು ಉತ್ತರಿಸುವುದರಲ್ಲಿ ಬಹಳ ತಪ್ಪುಗಳನ್ನು ಮಾಡಿದನು. ಆದ್ದರಿಂದ, ಕೊನೆಯಲ್ಲಿ ಬೇರೆ ವಿದ್ಯಾರ್ಥಿಗಳೆಲ್ಲರೂ ಇವನ ಅಭ್ಯಾಸ ಸಾಕಷ್ಟಿಲ್ಲದಿರುವಾಗ ಪರೀಕ್ಷೆಯಲ್ಲಿ ಹೇಗೆ ಪಾಸಾಗುವನೆಂದು ಶಂಕಿಸಿದರು. ॥55॥ ಅವರೆಲ್ಲರೂ ಅವನನ್ನು ಉಪಹಾಸ ಮಾಡಿದರೂ ಶೇವಡೆಯು ಮಾತ್ರ ತಾನು ಸಾಕಷ್ಟು ಓದಿರಲಿ, ಬಿಡಲಿ, ಸರಿಯಾದ ಸಮಯದಲ್ಲೇ ತೇರ್ಗಡೆಹೊಂದುವೆನೆಂದು ಪೂರ್ಣವಿಶ್ವಾಸವಿಟ್ಟಿದ್ದನು. ॥56॥ "ನಾನು ಓದದಿದ್ದರೂ ಸಹ, ನನಗೆ ನನ್ನ ಸಾಯಿಬಾಬಾ ಇದ್ದಾರೆ. ನನ್ನನ್ನು ಉತ್ತೀರ್ಣಮಾಡಿಸುತ್ತಾರೆ. ನಾನೇಕೆ ಕಾಳಜಿ ಮಾಡಲಿ? ॥57॥ ಈ ಮಾತುಗಳನ್ನು ಕೇಳಿ ಸಪಟಣೇಕರನು ಆಶ್ಚರ್ಯಗೊಂಡನು. ಶೇವಡೆಯನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ಅವನನ್ನು ಪ್ರಶ್ನಿಸತೊಡಗಿದನು. ॥58॥ "ಓಹ್! ಈ ಸಾಯಿಬಾಬಾ ಯಾರು? ನೀನು ಇಷ್ಟೊಂದು ಅವರ ಗುಣವರ್ಣನೆ ಮಾಡುತ್ತಿರುವೆ! ಮತ್ತು ಅವರಲ್ಲಿ ಪೂರ್ಣವಿಶ್ವಾಸವಿಟ್ಟಿರುವೆ! ಅವರೆಲ್ಲಿ ವಾಸಮಾಡುತ್ತಾರೆ?" ॥59॥ ಅದಕ್ಕೆ ಉತ್ತರವಾಗಿ ಶೇವಡೆಯು ಸಾಯಿಬಾಬಾರವರ ಮಹತ್ವವನ್ನು, ಅವರಲ್ಲಿಟ್ಟ ತನ್ನ ವಿಶ್ವಾಸವನ್ನು ಪೂರ್ಣವಾಗಿ ಸ್ಪಷ್ಟವಾಗಿ ಬಿಚ್ಚುಮನಸ್ಸಿನಿಂದ ತಿಳಿಸಿದನು. ॥60॥ "ಸುಪ್ರಸಿದ್ಧವಾದ ಅಹಮದ್‌ನಗರಜಿಲ್ಲೆಯಲ್ಲಿ ಶಿರಡಿ ಎಂಬ ಹಳ್ಳಿಯಿದೆ. ಅಲ್ಲಿಯ ಮಸೀದಿಯಲ್ಲಿ ಒಬ್ಬ ಫಕೀರನಿದ್ದಾನೆ. ಅವನು ಸತ್ಪುರುಷನೆಂಬ ಖ್ಯಾತಿಹೊಂದಿದವನು. ॥61॥ "ಅನೇಕ ಜಾಗಗಳಲ್ಲಿ ಅನೇಕ ಸಂತರಿದ್ದಾರೆ. ಆದರೆ ಅವರನ್ನು ಭೇಟಿಮಾಡಲು ಅಮೋಘವಾದ ಪುಣ್ಯಫಲವಿರಬೇಕು. ಕೇವಲ ಪ್ರಯತ್ನ ಮಾತ್ರದಿಂದ ಈ ಸಂಯೋಗ ಲಭಿಸುವುದಿಲ್ಲ. ॥62॥ "ನನಗೆ ಅವರಲ್ಲಿ ಪೂರ್ಣವಿಶ್ವಾಸವಿದೆ. ಅವರು ಹೇಳಿದ್ದೆಲ್ಲ ನಡೆಯುತ್ತದೆ. ಮತ್ತು ಅವರ

ನುಡಿಗಳು ಸತ್ಯವಾಗುತ್ತವೆ. ಅದರಲ್ಲಿ ಎಂದಿಗೂ ಯಾವುದೇ ವ್ಯತ್ಯಾಸವುಂಟಾಗುವುದಿಲ್ಲ. ॥63॥ "ನಾನು ಎಷ್ಟೇ ಪ್ರಯತ್ನಪಟ್ಟರೂ ಈ ವರ್ಷ ನಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದಿಲ್ಲ. ಆದರೆ ಮುಂದಿನ ವರ್ಷ ಅಪ್ರಯಾಸವಾಗಿಯೇ ಪಾಸಾಗುತ್ತೇನೆ. ಇದು ಸತ್ಯ, ಸತ್ಯ, ಸತ್ಯ. ॥64॥ "ನನಗೆ ಅವರು ಆಶ್ವಾಸನೆ ನೀಡಿದ್ದಾರೆ. ನನಗೆ ಅವರಲ್ಲಿ ಪೂರ್ಣ ಭರವಸೆ ಇದೆ. ಏಕೆಂದರೆ ಅವರ ಮಾತುಗಳು ಎಂದಿಗೂ ಸುಳ್ಳಾಗುವುದಿಲ್ಲ. ಇದು ನಿಶ್ಚಯ. ॥65॥ "ಆದರಲ್ಲೇನು ಆಶ್ಚರ್ಯ? ಅದು ನಡೆದೇ ನಡೆಯುತ್ತದೆ, ನಾನು ಮುಂದಿನ ಪರೀಕ್ಷೆಯಲ್ಲಿ ಪಾಸಾಗುತ್ತೇನೆ." ಸಪಟ್‌ಣೇಕರನಿಗೆ ಈ ಮಾತುಗಳು ಹಾಸ್ಯಾಸ್ಪದವಾಗಿಯೂ ಸಂಶಯಭರಿತವಾಗಿಯೂ ಕಂಡವು. ॥66॥ ಅವನ ಮನಸ್ಸು ಸಂಶಯ ಭರಿತವಾಗಿದ್ದುದರಿಂದ, ಆ ಮಾತುಗಳನ್ನು ಅವನು ಹೇಗೆ ಮೆಚ್ಚಲು ಸಾಧ್ಯ? ಏನಾದರೂ, ಶೇವಡೆಯು ಅಲ್ಲಿಂದ ಹೊರಟುಹೋದನು. ಅನಂತರ ಏನಾಯಿತೆಂಬುದನ್ನು ಕೇಳಿರಿ. ॥67॥ ಅನಂತರ, ಸ್ವಲ್ಪ ಸಮಯವಾದಮೇಲೆ ಶೇವಡೆಯ ಮಾತುಗಳು ಸತ್ಯವಾದುವು. ಅವನು ಎರಡು ಪರೀಕ್ಷೆಗಳಲ್ಲೂ ತೇರ್ಗಡೆಹೊಂದಿದನು. ಮತ್ತು ಸಪಟಣೇಕರನು ಆಶ್ಚರ್ಯಚಕಿತನಾದನು. ॥68॥ ಹತ್ತು ವರ್ಷಗಳು ಕಳೆದವು. ಸಪಟಣೇಕರನು ಏಕಾಏಕಿ ದುರ್ದೈವಕ್ಕೆ ಒಳಗಾಗಿ ಉದ್ವಿಗ್ನ ಮನದವನಾದನು. ಅವನು ಬಹಳ ಉದಾಸನಾದನು. ॥69॥ ಸನ್ 1913ರಲ್ಲಿ ಅವನ ಒಬ್ಬನೇ ಮಗನು ಡಿಫ್ತೀರಿಯದಿಂದಾಗಿ ಮೃತಪಟ್ಟನು. ಪುತ್ರವಿಯೋಗದಿಂದಾಗಿ ಅವನು ಜೀವನದಲ್ಲೇ ಜಿಗುಪ್ಸೆಹೊಂದಿದನು. ॥70॥ ಅವನು ಪಂಢರಾಪುರದಿಂದ ಪ್ರಾರಂಭಿಸಿ ಗಾಣಗಾಪುರ ಮತ್ತಿತರ ಎಲ್ಲ ತೀರ್ಥಕ್ಷೇತ್ರಗಳಿಗೂ ಯಾತ್ರೆ ಮಾಡಿದನು. ಆದರೆ ಅವನ ಅಂತರಂಗದಲ್ಲಿ ಶಾಂತಿಯೇ ಇರಲಿಲ್ಲ. ನಂತರ ಅವನು ವೇದಾಂತವನ್ನು ಅಭ್ಯಾಸಮಾಡಿದನು. ॥71॥ ಇದೇ ರೀತಿ ಕೆಲವು ಸಮಯ ಕಳೆಯಿತು. ಅವನು ಮನಶ್ಶಾಂತಿ ಉಂಟಾಗಲೆಂದು ಕಾಯುತ್ತಿದ್ದನು. ಈ ರೀತಿ ಕಾಯುತ್ತಿರುವಾಗ ಅವನಿಗೆ ಶೇವಡೆಯ ವೃತ್ತಾಂತ ನೆನಪಿಗೆ ಬಂದಿತು. ॥72॥ ಅವನು ಶೇವಡೆಯ ದೃಢ ನಿಶ್ಚಯವನ್ನು ಮತ್ತು ಸಾಯಿಚರಣಗಳಲ್ಲಿದ್ದ ಅವನ ವಿಶ್ವಾಸವನ್ನು ಸ್ಮರಿಸಿಕೊಂಡನು. ಆಗ ಶ್ರೀಗಳ ದರ್ಶನಕ್ಕೆ ಹೋಗಬೇಕೆಂಬ ಮನಸ್ಸುಂಟಾಯಿತು. ॥73॥ ಅವನಿಗೆ ಸಂತರ ದರ್ಶನ ಮಾಡುವ ಮನಸ್ಸಾಯಿತು. ಸನ್ 1913ರಲ್ಲಿ ಶಿರಡಿಯಾತ್ರೆ ಮಾಡಲು ತನ್ನ ಸೋದರನ ಜೊತೆಯಲ್ಲಿ ಹೊರಟನು. ॥74॥ ಶೇವಡೆಯ ನೆನಪನ್ನು ಒಂದು ಕಾರಣ ಮತ್ತು ನೆನಪನ್ನಾಗಿ ಮಾಡಿ ಸಾಯಿಯು ಅವನನ್ನು ತಮ್ಮ ಚರಣಗಳಿಗೆ ವಂದಿಸಲು ಕರೆಯಿಸಿಕೊಂಡರು. ॥75॥ ಸಪಟ್‌ಣೇಕರನು ತನ್ನ ಕುಟುಂಬದವರ ಜೊತೆಯಲ್ಲಿ, ತನ್ನ ಚಿಕ್ಕ ತಮ್ಮ ಪಂಡಿತರಾವ್‌ನನ್ನು ಕರೆದುಕೊಂಡು ಸಪರಿವಾರವಾಗಿ ಸಂತರ ದರ್ಶನಕ್ಕೆಂದು ಶಿರಡಿಗೆ ಹೊರಟನು. ॥76॥ ಈ ರೀತಿ ಅವರಿಬ್ಬರೂ ಅಲ್ಲಿಗೆ ಬಂದು ಕೂಡಲೇ ಶ್ರೀಗಳ ದರ್ಶನಕ್ಕೆಂದು ಹೊರಟರು. ಅವರಿಗೆ ದೂರದಿಂದ ಬಾಬಾವರ ದರ್ಶನವಾಯಿತು. ಮತ್ತು ಅಷ್ಟರಲ್ಲೇ ತೃಪ್ತಿಹೊಂದಿದರು. ॥77॥ ದೂರದಿಂದಾಗಿದ್ದರೂ ಸಹ, ಬಾಬಾ ಅವರ ಕಣ್ಣುಗಳು ಅವರನ್ನು ದೃಷ್ಟಿಸಿದ ಕೂಡಲೆ ಹತ್ತಿರ

ಹೋದರು. ಇಬ್ಬರೂ ತಮ್ಮ ಕೈಗಳನ್ನು ಜೋಡಿಸಿ ಬಾಬಾರವರ ಮುಂದೆ ಕಾಯುತ್ತ ನಿಂತುಕೊಂಡರು. ॥78॥ ಇಬ್ಬರೂ ಬಹು ವಿನಯದಿಂದ ಬಾಬಾರವರ ಸಮ್ಮುಖದಲ್ಲಿ ಪ್ರಣಾಮ ಸಲ್ಲಿಸಿದರು. ಮತ್ತು ಒಂದು ತೆಂಗಿನಕಾಯಿಯನ್ನು ಶುದ್ಧ ಪ್ರೇಮ ಭಕ್ತಿಗಳಿಂದ ಸಮರ್ಪಿಸಿದರು. ॥79॥ ಸಪಟ್ಣೇಕರನು ತೆಂಗಿನಕಾಯಿಯನ್ನು ಸಮರ್ಥರ ಚರಣಗಳಲ್ಲಿ ಸಮರ್ಪಿಸಿದಾಗ ಬಾಬಾರವರು, "ನಡಿ, ಹೊರಡು! ಎಂದು ಸಪಟ್ಣೇಕರನಿಗೆ ಧಿಕ್ಕರಿಸಿ ನುಡಿದರು. ॥80॥ ಸಪಟ್ಣೇಕರನು ಚಿಂತಾಗ್ರಸ್ತನಾದನು. 'ಬಾಬಾರವರು ಅದೇಕೆ ಕೋಪಿಸಿಕೊಂಡರು? ಬಾಬಾರವರಿಗೆ ಪರಿಚಿತರಾದವರನ್ನು ನೋಡಿ ಅದರ ಇಂಗಿತವೇನೆಂಬುದನ್ನು ತಿಳಿಯಬೇಕೆಂದು ವಿಚಾರ ಮಾಡಿದನು. ॥81॥ ದರ್ಶನವು ಅದೆಷ್ಟು ಪ್ರಸನ್ನತೆಯನ್ನುಂಟುಮಾಡಿತ್ತೋ, ಈ ಮಾತುಗಳು ಅಷ್ಟೇ ವಿರೋಧದ ರೀತಿ ಖಿನ್ನತೆಯನ್ನುಂಟುಮಾಡಿದವು. ಚಿಂತೆಯಿಂದ ಅಧೋವದನನಾಗಿ ಹಿಂದಕ್ಕೆ ಸರಿದು ಕುಳಿತುಕೊಂಡನು. ॥82॥ "ಈಗ ಮತ್ತಾರಲ್ಲಿಗೆ ಹೋಗಲಿ? ಯಾವ ಭಕ್ತನನ್ನು ಪ್ರಶ್ನಿಸಲಿ? ಬಾಬಾರವರ ಮಾತುಗಳ ಅರ್ಥವೇನು? ಮತ್ತಾರಲ್ಲಿ ನನ್ನ ಮನೋಗತವನ್ನು ತೋಡಿಕೊಳ್ಳಲಿ?" ಎಂದು ಅವನು ಅಚ್ಚರಿಗೊಂಡನು. ॥83॥ ಇಂತಹ ಮನಃಸ್ಥಿತಿಯನ್ನು ನೋಡಿ ಯಾರೋ ಒಬ್ಬರು ಅವನನ್ನು ತೃಪ್ತಿಪಡಿಸಲೋಸುಗ ಬಾಳಾ ಶಿಂಪಿಯ ಹೆಸರನ್ನು ಸೂಚಿಸಿದರು. ಅವನು ಇರುವ ಸ್ಥಳವನ್ನು ಹುಡುಕಿದನು. ॥84॥ ಸಪಟ್ಣೇಕರನು ಅವನಿಗೆ ಸಕಲ ವೃತ್ತಾಂತವನ್ನೂ ತಿಳಿಸಿದನು. ಮತ್ತು ಹೇಳಿದನು, "ಬಾಬಾರವರು ನನ್ನನ್ನು ಅತ್ಯುಗ್ರವಾದ ವಚನಗಳನ್ನು ಉಪಯೋಗಿಸಿ ಧಿಕ್ಕರಿಸಿದರು. ॥85॥ "ನೀನಾದರೂ ಸ್ವಲ್ಪ ನನ್ನ ಜೊತೆ ಬಂದು ಶಾಂತಭಾವದ ದರ್ಶನ ಮಾಡಿಸು. ನನಗೆ ಕೇವಲ ಬಾಬಾರವರ ಕೃಪಾದೃಷ್ಟಿ ಬೇಕು. ನನ್ನ ಮೇಲೆ ಕೋಪಿಸಿಕೊಳ್ಳುವುದನ್ನು ಇಚ್ಛಿಸುವುದಿಲ್ಲ." ॥86॥ ಅದಕ್ಕೆ ಬಾಳಾನು ಒಪ್ಪಿಕೊಂಡನು. ಸಪಟ್ಣೇಕರನು ನಿಶ್ಚಿಂತನಾದನು. ಅವನು ಬಾಬಾರವರ ಚಿತ್ರಪಟವೊಂದನ್ನು ಖರೀದಿಸುವಂತೆ ಮಾಡಿ, ಬಾಬಾರವರ ದರ್ಶನಕ್ಕೆ ಹೊರಟನು. ॥87॥ ಬಾಳಾ ಶಿಂಪಿಯು ಅವನ ಜೊತೆಯಲ್ಲಿದ್ದನು. ಅವನ ಕೈಯಲ್ಲಿ ಚಿತ್ರಪಟವಿದ್ದಿತು. ಅವನು ಬಾಬಾರವರಿಗೆ ಅದನ್ನು ಕೊಡುತ್ತ ಬಾಬಾರವರಲ್ಲಿ ವಿಜ್ಞಾಪಿಸಿಕೊಂಡನು. ॥88॥ "ಓ, ದೇವಾ! ಇದು ಯಾರ ಚಿತ್ರ?" ಅದರ ಕಡೆ ನೋಡುತ್ತ ಬಾಬಾ ತಮ್ಮ ಬೆರಳನ್ನು ಸಪಟ್ಣೇಕರನ ಕಡೆ ತೋರಿಸುತ್ತ ಉತ್ತರಿಸಿದರು "ಇದು ಅವನ ಪ್ರೇಮಿಯ ಚಿತ್ರಪಟ." ॥89॥ ಇದನ್ನು ಹೇಳುತ್ತ ಬಾಬಾರವರು ನಕ್ಕರು. ಅಲ್ಲಿದ್ದ ಗುಂಪೆಲ್ಲವೂ ನಕ್ಕಿತು. "ಬಾಬಾ, ಇದರ ಹಿಂದಿರುವ ಇಂಗಿತವೇನು?" ಬಾಳಾನು ಬಾಬಾರವರನ್ನು ಕೇಳಿದನು. ॥90॥ ಆ ಕ್ಷಣದಲ್ಲಿ ಬಾಳಾ ಸಪಟ್ಣೇಕರನಿಗೆ ಹೇಳಿದನು, "ದರ್ಶನ ತೆಗೆದುಕೋ. ಬೇಗ ಮಾಡು!" ಅನಂತರ ಅವನು ನಮಸ್ಕಾರ ಮಾಡುತ್ತಿರುವಾಗ "ನಡಿ ಹೊರಡು" ಎಂಬ ಉದ್ಗಾರವು ಕೇಳಿಸಿತು. ॥91॥ ಹಿಂದಿನ ಅದೇ ಮಾತುಗಳು, "ನಡಿ. ಹೊರಡು" ಇನ್ನೂ ನನ್ನನ್ನು ಬೇಟೆಯಾಡುತ್ತಿವೆ. ಈಗ ಏನು ಮಾಡಲಿ? ಸಪಟ್ಣೇಕರನು ಆಶ್ಚರ್ಯದಿಂದ ದಿಗ್ಭ್ರಮೆ ಹೊಂದಿದನು. ॥92॥ ಅನಂತರ, ಅವರಿಬ್ಬರೂ ಇನ್ನೂ ಬಾಬಾರವರ ಮುಂದೆ

ಕೈಗಳನ್ನು ಜೋಡಿಸಿ ನಿಂತಿರುವಾಗ, ಬಾಬಾರವರು ತಮ್ಮ ಅಂತಿಮ ಆದೇಶವನ್ನು ನೀಡಿದರು. “ಇಲ್ಲಿಂದ ಕೂಡಲೇ ಹೊರಟುಹೋಗು!” ॥93॥ “ಸ್ವಾಮಿ ಸಮರ್ಥ! ಯಾರೂ ನಿಮ್ಮ ಮಾತುಗಳನ್ನು ಎಂದಿಗೂ ಉಲ್ಲಂಘಿಸುವುದಿಲ್ಲ. ಹಾಗಿರುವಾಗ ನಮ್ಮಂತಹ ಪಾಮರರ ಕಥೆಯೇನು? ನಾನು ಈ ಕ್ಷಣವೇ ಹೊರಡುತ್ತೇನೆ! ॥94॥ “ನಿಮ್ಮ ಮಹಾನ್ ಉದಾರತೆಯನ್ನು ಕೇಳಿ, ನಾನು ನಿಮ್ಮ ದರ್ಶನಕ್ಕೆಂದು ಬಂದೆ. ಆದರೆ, 'ನಡಿ. ಹೊರಡು' ಎಂಬ ಮಾತುಗಳಿಂದ ಸತ್ಕಾರ ಪಡೆದೆ. ಇದೆಂತಹ ಚಮತ್ಕಾರ, ಅರ್ಥವಾಗಲಿಲ್ಲ! ॥95॥ “ನಾನು ನಿಮ್ಮ ಕೃಪಾದೃಷ್ಟಿಗಾಗಿಹಾಗೂ ಆಶೀರ್ವಚನಗಳಿಗಾಗಿ ಬಂದೆ. ಮತ್ತೆ ಬೇಗನೆ ದರ್ಶನ ಸಿಗುತ್ತದೆಂಬ ಆಶೆಯಿದೆ!” ಈ ಆಶ್ವಾಸನೆಯನ್ನು ಅವನು ಬೇಡಿದನು. ॥96॥ ಬಾಬಾರ ಮನದಲ್ಲಿ ಏನಿದೆಯೆಂಬುದನ್ನು ಅರಿಯುವಂತಹ ಜ್ಞಾನಿಗಳು ಯಾರಿದ್ದಾರೆ? ಆದರೆ ಅವರ ಆದೇಶವನ್ನು ಮನ್ನಿಸುತ್ತ ತಮ್ಮ ಮನೆಗೆ ಹಿಂತಿರುಗಿದರು. ॥97॥ ಅವರ ಪ್ರಥಮ ದರ್ಶನ ಈ ರೀತಿ ಇತ್ತು! ಅವರಿಬ್ಬರೂ ಅದರಿಂದಾಗಿ ಬಹಳ ಖಿನ್ನರಾದರು. ಕಿಂಚಿತ್ತೂ ವಿಳಂಬಮಾಡದೆ ಅವರಿಬ್ಬರೂ ತಮ್ಮ ಮನೆಗಳಿಗೆ ಹಿಂತಿರುಗಿದರು. ॥98॥ ಮತ್ತೊಂದು ವರ್ಷ ಕಳೆಯಿತು. ಆದರೂ ಅವನ ಮನಸ್ಸಿಗೆ ಸಮಾಧಾನವಿರಲಿಲ್ಲ. ಅವನು ಪುನಃ ಗಾಣಗಾಪುರಕ್ಕೆ ಹೋದನು. ಆದರೆ ಅವನ ಮನಸ್ಸು ಮತ್ತಷ್ಟು ಉದ್ವಿಗ್ನವಾಯಿತು. ॥99॥ ಅನಂತರ ಸಪಟಣೇಕರನು ವಿಶ್ರಾಂತಿಗೆಂದು ಮಾಢೇಗಾಂವಕ್ಕೆ ಹೋದನು. ಕೊನೆಯಲ್ಲಿ ಕಾಶಿಗೆ ಹೊರಡಲು ನಿಶ್ಚಯಿಸಿದನು. ॥100॥ ಕಾಶಿಗೆ ಹೊರಡಲು ಕೇವಲ ಇನ್ನೆರಡು ದಿನಗಳು ಮಾತ್ರ ಇದ್ದವು. ಅವನ ಪತ್ನಿಯು ಒಂದು ಕನಸನ್ನು ಕಂಡಳು. ಅವರ ಕಾಶಿಯ ಪ್ರವಾಸ ಈಡೇರಲಿಲ್ಲ. ॥101॥ ನಾನು ಆ ಕನಸಿನ ಚಮತ್ಕಾರವನ್ನು ಮತ್ತು ಅದರ ಅದ್ಭುತ ಪರಿಣಾಮವನ್ನು ತಿಳಿಸುತ್ತೇನೆ. ಶ್ರವಣ ತತ್ಪರರಾಗಿ ಕೇಳಿ. ಇದು ಸಾಯಿಯ ಲೀಲಾಚರಿತ್ರೆ, ॥102॥ ಅವಳು ತನ್ನ ಹಾಸಿಗೆಯಲ್ಲಿ ಮಲಗಿರುವಾಗ, ಅವಳಿಗೆ ಈ ಸ್ವಪ್ನವುಂಟಾಯಿತು. ಅವಳು ಒಂದು ನೀರಿನ ಬಿಂದಿಗೆಯನ್ನು ಹೊತ್ತು ಲಕ್ಕಡಶಾನ ಬಾವಿಯ ಕಡೆ ಹೋಗುತ್ತಿದ್ದಳು. ॥103॥ “ಅಲ್ಲಿ ಒಂದು ಬೇವಿನ ಮರದ ಕೆಳಗಡೆ ಒಬ್ಬ ಫಕೀರನು ಕುಳಿತಿದ್ದನು. ತನ್ನ ತಲೆಗೆ ರುಮಾಲು ಸುತ್ತಿದ್ದವನು ನನ್ನ ಕಡೆ ಬಂದನು” ಎಂದು ಅವಳು ಹೇಳಿದಳು. ॥104॥ “ನೀನು ಇಷ್ಟೇಕೆ ತೊಂದರೆ ತೆಗೆದುಕೊಳ್ಳುತ್ತಿರುವೆ, ಮಗು!” ಎಂದು ಫಕೀರನು ಕೋಮಲ ಸ್ವರದಲ್ಲಿ ನುಡಿದನು. “ನಾನು ನಿನ್ನ ಬಿಂದಿಗೆಯನ್ನು ಪೂರ್ತಿಯಾಗಿ ನಿರ್ಮಲವಾದ ಜಲದಿಂದ ತುಂಬಿಸುತ್ತೇನೆ.” ॥105॥ ಅವಳು ಫಕೀರನಿಂದಾಗಿ ಭಯಭೀತಳಾದಳು. ಅವಳು ಖಾಲಿ ಬಿಂದಿಗೆಯನ್ನೇ ಹಿಡಿದು ಮನೆಗೆ ಹಿಂತಿರುಗಿದಳು. ಫಕೀರನು ಅವಳನ್ನು ಹಿಂಬಾಲಿಸಿದನು. ॥106॥ ಅಂತಹ ಕನಸನ್ನು ಕಂಡ ಆಕೆ ಎಚ್ಚರಗೊಂಡು ಕಣ್ಣುಗಳನ್ನು ತೆರೆದಳು. ತನ್ನ ಪತ್ನಿಯ ಕನಸನ್ನು ಕೇಳಿ, ಮತ್ತೆ ಶಿರಡಿಗೆ ಹೋಗಲು ನಿಶ್ಚಯಿಸಿದನು. ॥107॥ ಅವರು ಕೂಡಲೇ ಅಲ್ಲಿಂದ ಹೊರಟು ಶಿರಡಿಯನ್ನು ಮಾರನೆಯ ದಿನವೇ ತಲುಪಿದರು. ಅವರು ಅಲ್ಲಿಗೆ ಹೋದಕೂಡಲೇ ಮಸೀದಿಗೆ ಹೋದರು. ಆ ಸಮಯದಲ್ಲಿ

ಬಾಬಾರವರು ಲೇಂಡಿಯಲ್ಲಿದ್ದರು. ॥108॥ ಬಾಬಾರವರು ಹಿಂತಿರುಗಿ ಬರುವವರೆಗೆ ಅವರು ಅಲ್ಲಿಯೇ ಕಾಯುತ್ತ ಕುಳಿತರು. ಅನಂತರ ಬಾಬಾರವರು ಸ್ವಲ್ಪ ಸಮಯದಲ್ಲೇ ಹಿಂತಿರುಗಿದರು. ॥109॥ ಕನಸಿನಲ್ಲಿ ಕಂಡ ಅದೇ ರೂಪ ನಖಶಿಖಾಂತವಾಗಿ ಒಂದೇ ಆಗಿರುವುದನ್ನು ನೋಡಿದ ಆ ಮಹಿಳೆಯು ವಿಸ್ಮಿತಳಾದಳು. ದಿಟ್ಟಿಸಿ ನೋಡತೊಡಗಿದಳು. ॥110॥ ಬಾಬಾರವರ ಚರಣಗಳನ್ನು ತೊಳೆದನಂತರ ಆ ಮಹಿಳೆಯು ದರ್ಶನ ತೆಗೆದುಕೊಳ್ಳಲು ಮುಂದೆ ಹೋದಳು. ಸಾಯಿ ಚರಣಗಳಿಗೆ ವಂದಿಸಿ ಅವರನ್ನೇ ದೃಷ್ಟಿಸುತ್ತ ಕುಳಿತುಕೊಂಡಳು. ॥111॥ ಅವಳ ವಿನಮ್ರತೆಯನ್ನು ನೋಡಿ ಸಾಯಿನಾಥರ ಮನಸ್ಸು ಉಲ್ಲಸಿತಗೊಂಡಿತು. ನಿಧಾನವಾಗಿ ಬಾಬಾರವರು ಒಂದು ಕಥೆ ಹೇಳಲು ಪ್ರಾರಂಭಿಸಿದರು. ಅದರಿಂದ ಅವಳ ವ್ಯಥೆಯು ನಿವಾರಣೆಯಾಯಿತು. ॥112॥ ಅನಂತರ, ನಿತ್ಯ ಕ್ರಮಾನುಸಾರ, ಬಾಬಾರವರು ತಮ್ಮ ಸ್ವಂತ ರೋಗದ ಬಗ್ಗೆ ಸವಿಸ್ತಾರವಾಗಿ ಅಲ್ಲಿದ್ದ ಮೂರನೆಯ ವ್ಯಕ್ತಿಯ ಜೊತೆ ಪ್ರೀತಿಯ ಸ್ವರದಿಂದ ಹೇಳಲು ಪ್ರಾರಂಭಿಸಿದರು. ॥113॥ ನಿಜವಾಗಿಯೂ ಅದು ಆ ಮಹಿಳೆಯ ಸ್ವಂತ ಕಥೆಯೇ ಆಗಿತ್ತು. ಅವಳೇ ಹೇಳಿದ ರೀತಿಯಲ್ಲಿತ್ತು. ಅದನ್ನು ಅವಳ ಉಪಸ್ಥಿತಿಯಲ್ಲಿ ಹೇಳುತ್ತಿದ್ದು, ಆಕೆ ಅದನ್ನು ಅತಿ ಸಾವಧಾನದಿಂದ ಕೇಳುತ್ತಿದ್ದಳು. ॥114॥ “ನನ್ನ ಕೈಗಳು, ಹೊಟ್ಟೆ ಮತ್ತು ಸೊಂಟ ಇವುಗಳು ಬಹುಕಾಲದಿಂದ ತುಂಬ ನೋವನ್ನನುಭವಿಸುತ್ತಿದ್ದವು. ಯಾವುದರಿಂದಲೂ ಉಪಶಮನವಿಲ್ಲದೆ ಔಷಧಿಗಳನ್ನು ತೆಗೆದುಕೊಂಡು ಬೇಸರವಾಗಿದೆ. ॥115॥ “ಈ ಔಷಧಿಗಳಿಂದ ಯಾವುದೇ ಗುಣಕಾಣದೆ ಅವುಗಳನ್ನುತೆಗೆದುಕೊಂಡು ಬೇಸರವಾಗಿದೆ. ಆದರೆ ಈಗ ಏಕಾಏಕಿ ಎಲ್ಲ ನೋವುಗಳು ಮಾಯವಾಗಿರುವುದು ಆಶ್ಚರ್ಯಕರವಾಗಿದೆ.” ॥116॥ ಅಂತಹ ಕಥೆಯನ್ನು ಮೂರನೆಯ ವ್ಯಕ್ತಿಗೆ ಆ ಮಹಿಳೆಯ ಹೆಸರನ್ನೂ ಹೇಳದೆ ಅಥವಾ ಅವಳ ನಾಮನಿರ್ದೇಶವನ್ನೂ ಮಾಡದೆ ಹೇಳಿದ್ದರು. ಇದು ನಿಜವಾಗಿಯೂ ಅವಳ ಕಥೆಯಾಗಿದ್ದು, ಕೇವಲ ಅವಳಿಗೆ ಮಾತ್ರ ಸಂಬಂಧಪಟ್ಟುದಾಗಿತ್ತು. ॥117॥ ಅನಂತರ, ಒಂದೆರಡು ತಿಂಗಳುಗಳ ನಂತರ, ಬಾಬಾರವರು ವರ್ಣಿಸಿದ ರೀತಿಯಲ್ಲಿ ಅವಳ ವ್ಯಥೆಯೆಲ್ಲವೂ ನಿವಾರಣೆಯಾಯಿತು. ಅದು ಅವಳಿಗೆ ಆಗ ಸ್ಪಷ್ಟವಾಗಿ ಅರಿವಾಯಿತು. ॥118॥ ಆ ಮಹಿಳೆಯ ಕಾಮನೆಗಳು ಪೂರೈಸಿದವು. ಅನಂತರ ಸಪಟಣೇಕರನು ದರ್ಶನ ತೆಗೆದುಕೊಂಡನು. ಬಾಬಾರವರು ಮತ್ತೆ ‘ನಡಿ, ಹೊರಡು’ ಎಂಬ ಮಾತುಗಳಿಂದ ಅವನನ್ನು ಸಂಬೋಧಿಸಿದರು. ॥119॥ “ನಾನು ಹೇಗೆ ತಪ್ಪುಮಾಡಿದೆ ಎಂಬುದು ತಿಳಿದಿಲ್ಲ! ಬಾಬಾರವರು ನನ್ನ ಮೇಲೆ ಅಳಿಸಲಾರದ ಬೇಸರ ಪಟ್ಟಿದ್ದಾರೆ. ನಾನು ನಮಸ್ಕರಿಸಿದಾಗಲೆಲ್ಲಾ ಅವರ ಉತ್ತರವು ಅದೊಂದೇ. ಅದು ಅವರ ಪರಿಪಾಠವಾಗಿದೆ. ॥120॥ “ನನ್ನ ಪೂರ್ವಜನ್ಮಗಳ ಪಾಪಗಳ ಸಂಗ್ರಹವೇ ಅವರಿಗೆ ನನ್ನ ಮೇಲೆ ಕೋಪವನ್ನುಂಟುಮಾಡುತ್ತಿದೆ. ನನ್ನ ಕಣ್ಣ ಮುಂದೆಯೇ ಅವರು ಇತರರೊಡನೆ ಅತ್ಯಂತ ಪ್ರೇಮದಿಂದ ವರ್ತಿಸುತ್ತಾರೆ. ॥121॥ “ಇದೀ ಭಕ್ತಸಮೂಹವೇ, ಬೆಳಗ್ಗೆ ಮತ್ತು ಸಂಜೆ ನಿತ್ಯ ದೀಪಾವಳಿಯ ಆನಂದವನ್ನು ಅನುಭವಿಸುತ್ತಿದ್ದಾರೆ. ಕೇವಲ ನಾನು ಮಾತ್ರ ‘ನಡಿ, ಹೊರಡು’ ಎಂಬ ಮಾತುಗಳನ್ನು

ಕೇಳುತ್ತಲಿದ್ದೇನೆ. ॥122॥ "ನನ್ನ ಯಾವುದೋ ಕರ್ಮವು ಅವರನ್ನು ವಿಕೋಪಗೊಳಿಸುತ್ತಿದೆ ಮತ್ತು ಧರ್ಮವಿಲೋಪವನ್ನುಂಟು ಮಾಡುತ್ತಿದೆ. ಈ ಕಾರಣದಿಂದಲೇ ಬಾಬಾರವರು ನನ್ನನ್ನು ಈ ಮಟ್ಟದಲ್ಲಿ ಕುಳ್ಳಿರಿಸಿದ್ದಾರೆ ಎಂದೆನಿಸುತ್ತಿದೆ. ॥123॥ "ಆರಂಭದಲ್ಲಿ ಬಾಬಾರವರ ವಿಷಯದಲ್ಲಿ ಕುತರ್ಕದಿಂದಲೂ, ಸಂಶಯಗಳಿಂದಲೂ ಕೂಡಿದ್ದೆನು. ಬಹುಶಃ ಅದೇ ಕಾರಣದಿಂದಲೋ ಏನೋ, ಬಾಬಾರವರು ಈ ಉಪಾಯದಿಂದ ನನ್ನನ್ನು ಆ ಸ್ಥಿತಿಯಲ್ಲಿ ಇಟ್ಟಿದ್ದರು." ॥124॥ ಆದುದರಿಂದ, ಅವನು ಬಾಬಾರವರು ತನ್ನನ್ನು ಅನುಗ್ರಹಿಸುವವರೆಗೆ ತಾನು ಅಲ್ಲಿಯೇ ಏಕಾಗ್ರಚಿತ್ತನಾಗಿ ಸುಸ್ಥಿರ ಮನಸ್ಸಿನವನಾಗಿ ವಾಸಿಸುವೆನೆಂದು ನಿರ್ಧರಿಸಿದನು. ॥125॥ ತ್ರಿವಿಧ ತಾಪಗಳಿಂದ ನರಳುತ್ತಿರುವವರು ಸಾಯಿ ದರ್ಶನಕ್ಕಾಗಿ ತವಕಿಸುವವರಾದಲ್ಲಿ ಯಾರು ತಾನೇ ಯಾವುದೇ ಪರಿಹಾರವಿಲ್ಲದೆ ನಿರಾಶರಾಗಿ ಹಿಂತಿರುಗಿದ್ದಾರೆ? ॥126॥ ಆ ದಿನ, ಅವನು ಬಹಳ ಖಿನ್ನನಾಗಿದ್ದನು. ಅನ್ನ ಪಾನವು ರುಚಿಸದೇ ಹೋಯಿತು. ಅವನಿಗೆ ಎಲ್ಲಿಗೂ ಹೋಗಬೇಕೆಂದೆನಿಸಲಿಲ್ಲ. ಮತ್ತು ನಿದ್ದೆಮಾಡಲೂ ಆಗಲಿಲ್ಲ. ॥127॥ ಬಾಬಾರು ಒಬ್ಬರೇ ಆಸೀನರಾಗಿದ್ದು ಹತ್ತಿರ ಯಾರೂ ಇಲ್ಲದಿರುವಂತಹ ಸಮಯಕ್ಕಾಗಿ ಕಾದುನೋಡಲು ಅವನು ನಿಶ್ಚಯಿಸಿದನು. ಆಗ ಅವನು ಬಾಬಾರವರ ಪಾದಗಳನ್ನು ಹಿಡಿಯಬೇಕೆಂದುಕೊಂಡನು. ॥128॥ ಸಪಟ್ಣೇಕರನು ಈ ನಿಶ್ಚಯವನ್ನು ಮಾಡಿದ ಕೂಡಲೇ ಅವನ ಈ ನಿರ್ಧಾರವು ಫಲ ನೀಡಿತು. ಅವನು ಭಾವೋದ್ವೇಗದಿಂದ ಉನ್ಮತ್ತನಾಗಿ ಬಾಬಾರವರ ಚರಣಗಳನ್ನು ಹಿಡಿದನು. ॥129॥ ಅವನು ತನ್ನ ತಲೆಯನ್ನು ಚರಣಗಳಲ್ಲಿ ಇಟ್ಟಕೂಡಲೇ ಬಾಬಾರವರು ತಮ್ಮ ಕೈಯನ್ನು ಅವನ ತಲೆಯ ಮೇಲಿಟ್ಟರು. ಆಗ ಸಪಟ್ಣೇಕರನು ಅವರ ಚರಣಗಳನ್ನು ಒತ್ತಲು ಪ್ರಾರಂಭಿಸಿದನು. ಆಗ ಒಬ್ಬ ಕುರಿಕಾಯುವ ಹೆಂಗಸು ಅಲ್ಲಿಗೆ ಬಂದಳು. ॥130॥ ಆ ಮಹಿಳೆಯು ಅಲ್ಲಿಗೆ ಬಂದ ಕೂಡಲೇ ಬಾಬಾರವರ ಸೊಂಟವನ್ನ ಒತ್ತಲು ಪ್ರಾರಂಭಿಸಿದಳು. ಬಾಬಾರವರು ನಿತ್ಯಕ್ರಮಾನುಸಾರ ಅವಳೊಡನೆ ಮಾತನಾಡಲು ಪ್ರಾರಂಭಿಸಿದರು. ॥131॥ ಆ ಕಥೆಯ ಚಮತ್ಕಾರವೇನೆಂದರೆ, ಸಪಟ್ಣೇಕರನು ಎಚ್ಚರಿಕೆಯಿಂದ ಅದನ್ನು ಕೇಳಿದಾಗ ಅದು ಅಕ್ಷರಶಃ ಅವನದೇ ಕಥೆಯೆಂದು ಅರ್ಥವಾಯಿತು. ॥132॥ ಒಬ್ಬ ಕುರಿಕಾಯುವ ಮಹಿಳೆಯು ಸರಿಯಾದ ಪ್ರತಿಸ್ಪಂದನ ನೀಡಿದ್ದರೂ ಸಹ ಸಪಟ್ಣೇಕರನು ತನ್ನದೇ ಆದ ಕಥೆಯನ್ನು ಕೇಳುತ್ತ ಅಂತರಂಗದಲ್ಲೇ ಚಕಿತನಾದನು. ॥133॥ ಅದೊಂದು ದಿನಸಿ ವ್ಯಾಪಾರಿಯ ಕಥೆಯಂತೆ ಹೇಳಲ್ಪಟ್ಟಿದ್ದರೂ ಸಹ, ಅದು ನಿಜವಾಗಿಯೂ ಅವನ ಮತ್ತು ಮರಣಹೊಂದಿದ್ದ ಅವನ ಮಗ ಮತ್ತು ಮೃತ್ಯುವಿನ ಬಗೆಗೆ ಆಗಿತ್ತು. ॥134॥ ಅದು ಯಾರಾದರೂ ಆಪ್ತಬಂಧುಗಳೋ ಅಥವಾ ಅತ್ಯಂತ ಪರಿಚಿತರೋ ಹುಟ್ಟಿದಾಗಿನಿಂದ ಸಾಯುವವರೆಗೆ ವಿವರವಾಗಿ ಎಲ್ಲವನ್ನೂ ಹೇಳಿದ ರೀತಿಯಲ್ಲಿತ್ತು. ॥135॥ ಆ ಕಥೆಯನ್ನು ಆ ಮಹಿಳೆಗೆ ಹೇಳಿದ್ದರೂ, ಅವಳಿಗೆ ಅದರ ಜೊತೆ ಯಾವುದೇ ಸಂಬಂಧವಿರಲಿಲ್ಲ. ಅದೊಂದು ತಂದೆ ಮತ್ತು ಮಗನ ಕಥೆಯಾಗಿದ್ದು ಅದು ಎಲ್ಲ ರೀತಿಯಲ್ಲೂ ಕೇವಲ ಅವರಿಬ್ಬರಿಗೆ ಮಾತ್ರ ಸಂಬಂಧಿಸಿದುದಾಗಿತ್ತು.

॥136॥ ಅದು ಹೇಗಾದರೂ ಆಗಿರಲಿ. ಸಪಟ್ಣೇಕರನು ತನ್ನದೇ ಸ್ವಂತ ಕಥೆಯನ್ನು ಸಾಯಿಯ ಮುಖದಿಂದ ಈ ರೀತಿ ಕೇಳಿದಾಗ ಪರಮ
ವಿಸ್ಮಯಹೊಂದಿದನು. ಸಾಯಿಚರಣಗಳಲ್ಲಿ ಅವನ ಗೌರವ ಮಿಗಿಲಾಯಿತು. ॥137॥ ಅವನು ಕೌತುಕ ಭರಿತನಾದನು! ಇದೆಲ್ಲವೂ ಬಾಬಾರವರಿಗೆ
ಹೇಗೆ ತಿಳಿಯಿತು? ಆದರೆ ಬಾಬಾರವರಿಗೆ ಅಂಗೈಯಲ್ಲಿ ನೆಲ್ಲಿಕಾಯಿ ಹಿಡಿದಹಾಗೆ ಎಲ್ಲವೂ ಅತಿ ಸುಲಭವಾಗಿ ತಿಳಿದಿತ್ತು. ॥138॥ ಅವರು ಸ್ವಯಂ
ತಾವೇ ಬ್ರಹ್ಮ ಸ್ವರೂಪರಾಗಿರುವಾಗ, ಇಡೀ ವಿಶ್ವವೇ ಅವರ ಕುಟುಂಬವಾಗಿತ್ತು. ಅವರು ಈ ವಿಶ್ವದಲ್ಲೇ ಸರ್ವವ್ಯಾಪಿಯಾಗಿದ್ದರು. ಅದೇ ಸಾಯಿಯ
ಗುಣಧರ್ಮವಾಗಿತ್ತು. ॥139॥ ಸಾಯಿಯೇ ಎಲ್ಲ ಜೀವಿಗಳ ಐಕ್ಯತೆಗೆ ಸಾಕ್ಷಿಯಾದ ಅವತಾರ ಸ್ವರೂಪರಾಗಿದ್ದಾರೆ. ಅವರು ಇಡೀ ವಿಶ್ವ ಸ್ವರೂಪರಾಗಿರುವಾಗ
ಅವರನ್ನು ಅನ್ಯರೆಂದು ಪರಿಗಣಿಸಲು ಹೇಗೆಸಾಧ್ಯ? ॥140॥ ಯಾರು ಪರಮಪುರುಷನಲ್ಲಿ ಒಂದಾಗಿರುವರೋ, ಅವರು ದ್ವೈತಭಾವದ ಪ್ರಶ್ನೆ
ಹೇಗಾಗುತ್ತಾರೆ? ಅಂತಹ ವ್ಯಕ್ತಿಗೆ ನೋಡುವವನು, ನೋಟ ಮತ್ತು ನೋಡಲ್ಪಡುವುದು ಮೂರೂ ಒಂದೇ. ಆಕಾಶವು ಯಾವುದೇ ಬಣ್ಣದಿಂದಾಗಲಿ
ಅಥವಾ ಕೊಳೆಯಿಂದಾಗಲಿ ಪ್ರಭಾವಿತವಾಗುವುದಿಲ್ಲ. ॥141॥ ಬಾಬಾರವರು ಮಹಾನ್ ಅಂತರ್ಜ್ಞಾನಿಯಾಗಿದ್ದರು. ಇದು ಸಪಟ್ಣೇಕರನ
ಅರಿವಿಗೆ ಬಂದಿತು. ಒಳ್ಳೆಯವರು ಮತ್ತು ಸಜ್ಜನರಾದ ಬಾಬಾರವರು ಅವನಿಗೆ ಏನು ಹೇಳಿದರೆಂಬುದನ್ನು ಕೇಳಿರಿ. ॥142॥ ತಮ್ಮ ಬೆರಳನ್ನು ಅವನ
ಕಡೆ ತೋರಿಸುತ್ತ ಬಾಬಾರವರು ಆಶ್ಚರ್ಯದಿಂದ ಈ ಮಾತುಗಳನ್ನು ಹೇಳಿದರು. "ಅವನ ಮಗನನ್ನು ನಾನೇ ಕೊಂದಿರುವೆನೆಂದು ಅವನು
ಹೇಳುತ್ತಾನೆ. ಅದಕ್ಕಾಗಿ ಅವನು ನನ್ನನ್ನು ಬೈಯುತ್ತಿದ್ದಾನೆ! ॥143॥ "ನಾನೇನಾದರೂ ಜನರ ಮಕ್ಕಳನ್ನು ಕೊಲ್ಲುವೆನೇ? ಅವನು ಮಸೀದಿಗೆ ಬಂದು
ಏಕೆ ಅಳಬೇಕು? ಒಳ್ಳೆಯದು; ನಾನು ಈಗ ಅದನ್ನು ಮಾಡುತ್ತೇನೆ. ನಾನು ಅವನ ಸ್ವಂತ ಮಗನನ್ನು ಅವನ ಹೆಂಡತಿಯ ಗರ್ಭದಲ್ಲಿಯೇ ಮತ್ತೆ
ಹಿಂದಕ್ಕೆ ತರುತ್ತೇನೆ. ॥144॥ "ಆ ಮಹಿಳೆಗೆ ಸತ್ತು ಹೋದ ರಾಮದಾಸನನ್ನು ಹಿಂದಕ್ಕೆ ಕಳುಹಿಸಿದಹಾಗೆ, ನಾನು ಅವನ ಮಗನನ್ನೇ ಅವನ
ಹೆಂಡತಿಯ ಗರ್ಭದಲ್ಲಿ ಹಿಂದಕ್ಕೆ ತರುತ್ತೇನೆ." ॥145॥ ಅದನ್ನು ಕೇಳಿ ಸಪಟ್ಣೇಕರನು ಬಾಬಾರವರನ್ನೇ ದೃಷ್ಟಿಸುತ್ತ ಕಾಯುತ್ತ ಕುಳಿತನು.
ಬಾಬಾರವರು ತಮ್ಮ ಕೈಯನ್ನು ಅವನ ತಲೆಯಮೇಲಿಟ್ಟು ಅವನಿಗೆ ಭರವಸೆಯನ್ನಿತ್ತರು. ॥146॥ ಅವರು ಹೇಳಿದರು, "ಈ ಚರಣಗಳು ಪುರಾತನ.
ನಿನ್ನ ವ್ಯಥೆಯು ದೂರವಾಯಿತು. ನನ್ನಲ್ಲಿ ಪೂರ್ಣ ಭರವಸೆಯನ್ನಿಡು. ನೀನು ಕೂಡಲೇ ಕೃತಾರ್ಥನಾಗುವೆ." ॥147॥ ಸಪಟ್ಣೇಕರನು ಬಾಬಾರವರ
ಚರಣಗಳನ್ನು ಒತ್ತುತ್ತಿರುವಾಗಲೇ ಅವನು ಈ ಮಧುರ ವಚನಗಳನ್ನು ಕೇಳಿಸಿಕೊಂಡನು. ಭಾವೋದ್ವೇಗದಿಂದ ಅವನ ಕಣ್ಣುಗಳು ಅಶ್ರುಮಯವಾದವು.
ಅವನು ಬಾಬಾರವರ ಚರಣಗಳಿಗೆ ವಂದಿಸಿದನು. ॥148॥ ಅವನು ಎಂಟು ಸಾತ್ವಿಕ ಭಾವಗಳಿಂದ ತುಂಬಿಕೊಂಡಿದ್ದನು. ಅವನ ಕಣ್ಣುಗಳು ಆನಂದ
ಭಾಷ್ಪದಿಂದ ತುಂಬಿಕೊಂಡಿದ್ದು ಅವುಗಳಿಂದ ಬಾಬಾರವರ ಚರಣಗಳನ್ನು ಪ್ರೀತಿಯಿಂದ ಅಭಿಷೇಕಮಾಡಿದನು. ॥149॥ ಪುನಃ ಬಾಬಾರವರು

ತಮ್ಮ ಕೈಗಳನ್ನು ಅವನ ತಲೆಯ ಮೇಲಿಟ್ಟು ಹೇಳಿದರು, "ಏನೂ ಚಿಂತೆ ಮಾಡದೆ ಶಾಂತನಾಗಿರು." ಅನಂತರ ಸಪಟ್ನೇಕರನು ತಾನು ತಂಗಿದ್ದ ಜಾಗಕ್ಕೆ ಹೋಗಿ ನಂತರ ಸಂತೋಷದಿಂದ ಹಿಂತಿರುಗಿದನು. ॥150॥ ನೈವೇದ್ಯವನ್ನು ತಯಾರಿಸಿ ಅದನ್ನು ತನ್ನ ಪತ್ನಿಯ ಕೈಗೆ ನೀಡಿದನು. ಅನಂತರ ಪೂಜೆ ಮತ್ತು ಆರತಿಗಳನ್ನು ಮಾಡಿದ. ಅನಂತರ ಬಾಬಾರವರಿಗೆ ಊಟದೆಲೆಯನ್ನು ಹಾಕಿದ. ॥151॥ ಅದರ ಮೇಲೆ ನೀರು ಪ್ರೋಕ್ಷಿಸಿದ. ವಿಧಿಪೂರ್ವಕವಾಗಿ ಎಲ್ಲವನ್ನೂ ಮಾಡಿದನು. ನೈವೇದ್ಯವನ್ನು ಕಣ್ಣುಗಳಿಗೆ ಒತ್ತಿಕೊಂಡು, ಮಂತ್ರಗಳನ್ನು ಹೇಳುತ್ತಾ ಪ್ರಾಣ, ಅಪಾನ, ವ್ಯಾನ ಇತ್ಯಾದಿ ಪಂಚಪ್ರಾಣಗಳಿಗೆ ಅರ್ಪಿಸಿದನಂತರ ಬಾಬಾರವರಿಗೆ ಸಮರ್ಪಿಸುತ್ತಿದ್ದನು. ॥152॥ ಅನಂತರ ನಿತ್ಯಕ್ರಮಾನುಸಾರ ಬಾಬಾರವರು ಅದನ್ನು ಹಸ್ತದಿಂದ ಸ್ಪರ್ಶಿಸಿ ನೈವೇದ್ಯವನ್ನು ಸ್ವೀಕರಿಸುತ್ತಿದ್ದರು. ಸಪಟ್ನೇಕರನು ಹರ್ಷಪಟ್ಟನು. ॥153॥ ಅನಂತರ ಅಲ್ಲಿದ್ದ ಇತರ ಭಕ್ತರೆಲ್ಲರೂ ಬಾಬಾರವರ ಚರಣಗಳಿಗೆ ವಂದಿಸಿದರು. ಸಪಟ್ನೇಕರನು ಆ ಗುಂಪಿನಲ್ಲಿ ದಾರಿಮಾಡಿಕೊಂಡು ತ್ವರಿತವಾಗಿ ಒಂದು ನಮಸ್ಕಾರ ಮಾಡಿದನು. ॥154॥ ಈ ರೀತಿ, ಆ ಗಡಿಬಿಡಿಯಲ್ಲಿ ತಲೆಗಳು ಒಂದಕ್ಕೊಂದು ಡಿಕ್ಕಿಹೊಡೆದವು. ಅನಂತರ ಬಾಬಾರವರು ಸಪಟ್ನೇಕರನ ಹತ್ತಿರ ಸೌಮ್ಯವಾಗಿ ಹೇಳಿದರು, ॥155॥ "ಅರೇ! ನೀನು ಏಕೆ ಪದೇ ಪದೇ ನಮಸ್ಕಾರ ಮಾಡುತ್ತಿರುವೆ? ಕೇವಲ ಒಂದು ಸಲ ಆದರದಿಂದ ಸತ್ಕಾರಪೂರ್ವಕವಾಗಿ ಮಾಡಿದರೆ ಸಾಕು!" ॥156॥ ಅದು ಹಾಗಿರಲಿ. ಆ ರಾತ್ರಿ ಚಾವಡಿಯ ಮೆರವಣಿಗೆಯು ಇತ್ತು. ಸಪಟ್ನೇಕರನಿಗೆ ಅದು ಬಹಳ ಇಷ್ಟವಿತ್ತು. ಅವನು ಪ್ರೀತಿಯಿಂದ ಪಾಲಕಿಯ ಮುಂದೆ ದಂಡವನ್ನು ಹಿಡಿದು ಆನಂದದಿಂದ ಭಾಗವಹಿಸಿದನು. ॥157॥ ಶ್ರೋತೃಗಳು ಈ ಚಾವಡಿಯ ಉತ್ಸವದ ಬಗ್ಗೆ ಈಗಾಗಲೇ ತಿಳಿದಿದ್ದಾರೆ. ಆದ್ದರಿಂದ ಈ ಗ್ರಂಥವನ್ನು ಅತಿ ವಿಸ್ತಾರ ಮಾಡುವುದನ್ನು ತಪ್ಪಿಸಲು ಅದನ್ನು ಮತ್ತೆ ಹೇಳುವುದಿಲ್ಲ. ॥158॥ ಅನಂತರ ಆ ರಾತ್ರಿ, ಸಪಟ್ನೇಕರನು ಬಾಬಾರವರ ಬದಲು ಪಾಂಡುರಂಗನನ್ನು ಕಾಣುತ್ತಿದ್ದನು. ಇದು ಬಾಬಾರವರ ಅಗಾಧ ಲೀಲೆಯಾಗಿತ್ತು. ॥159॥ ಅನಂತರ ಅವನು ಮಾರನೆಯ ದಿನ ಅಲ್ಲಿಂದ ನಿರ್ಗಮಿಸಲು ಅನುಮತಿ ಬೇಡಿದಾಗ, ಅವನಿಗೆ ಊಟಮಾಡಿಕೊಂಡು ಹೊರಡಲು ಹೇಳಿದರು. ಅವನು ಆಜ್ಞೆಯನ್ನು ಯಥಾವತ್ತಾಗಿ ಪಾಲಿಸಿದನು. ಅನಂತರ ಹೊರಡುವ ಮೊದಲು ದರ್ಶನಕ್ಕಾಗಿ ಹೋದನು. ॥160॥ ಅನಂತರ, ಏಕಾಏಕಿ ಒಂದು ಯೋಚನೆ ಹುಟ್ಟಿತು. "ಈಗೇನಾದರೂ ಬಾಬಾರವರು ದಕ್ಷಿಣೆ ಬೇಡಿದರೆ ನಾನು ಅದನ್ನು ಹೇಗೆ ಕೊಡಲಿ?" ॥161॥ ಅವನಲ್ಲಿದ್ದ ಹಣವು ಖರ್ಚಾಗಿಹೋಗಿತ್ತು, ಕೇವಲ ಹಿಂದಕ್ಕೆ ಹೋಗುವ ದರದಷ್ಟು ಮಾತ್ರವೇ ಉಳಿದಿತ್ತು, ಆದ್ದರಿಂದ, ಬಾಬಾರವರೇನಾದರೂ 'ನನಗೆ ದಕ್ಷಿಣೆ ಕೊಡು' ಎಂದು ಕೇಳಿದರೆ. ಏನು ಹೇಳಬೇಕೆಂದು ಮನದಲ್ಲಿಯೇ ವಿಚಾರಮಾಡಿದನು. ॥162॥ ಅವನು ಬಾಬಾರವರ ಕೈಯಲ್ಲಿ ಒಂದು ರೂಪಾಯಿಯನ್ನು ಅವರು ಕೇಳದೆಯೇ ನೀಡಬೇಕೆಂದು ನಿಶ್ಚಯಿಸಿದನು. ಅವರೇನಾದರೂ ಕೇಳಿದಲ್ಲಿ ಮತ್ತೊಂದು ರೂಪಾಯಿಯನ್ನು ನೀಡಬಹುದು ಮತ್ತೆ

ಕೇಳಿದಲ್ಲಿ ಏನೂ ಇಲ್ಲವೆಂದು ತಿಳಿಸಬೇಕಾಗುತ್ತದೆ. ||163|| ಅವನು ಬಾಬಾರವರಿಗೆ ಕೇವಲ ರೈಲು ಪ್ರಯಾಣದ ದರ ಮಾತ್ರ ಉಳಿದಿದೆಯೆಂದು ಸ್ಪಷ್ಟವಾಗಿ ಹೇಳುವೆನೆಂದು ನಿರ್ಧರಿಸಿ, ಬಾಬಾರವರ ದರ್ಶನಕ್ಕೆಂದು ಹೊರಟನು. ||164|| ಹಿಂದೆ ಮಾಡಿದ ದೃಢ ನಿಶ್ಚಯದನುಸಾರವಾಗಿ, ಅವನು ಬಾಬಾರವರ ಕೈಯಲ್ಲಿ ಒಂದು ರೂಪಾಯಿಯನ್ನಿಟ್ಟಾಗ ಮತ್ತೊಂದು ರೂಪಾಯಿಯನ್ನು ಬಾಬಾರವರು ಕೇಳಿದರು. ಅದನ್ನು ನೀಡಿದ ನಂತರ ಬಾಬಾರವರು ಅವನಿಗೆ ಹೇಳಿದರು. ||165|| "ಈ ತೆಂಗಿನ ಕಾಯಿಯನ್ನು ತೆಗೆದುಕೋ. ಇದನ್ನು ನಿನ್ನ ಪತ್ನಿಯ ಸೆರಗಿನಲ್ಲಿ ಹಾಕು. ಅನಂತರ ಕ್ಷೇಮವಾಗಿ ಜೀವದ ಯಾವ ಕಳವಳವೂ ಇಲ್ಲದೆ ಹೋಗು. ||166|| ಅನಂತರ, ಒಂದು ವರ್ಷ ಕಳೆಯಿತು. ಅವರಿಗೆ ಒಬ್ಬ ಪುತ್ರನು ಜನಿಸಿದನು. ಅವರಿಬ್ಬರೂ ಎಂಟು ತಿಂಗಳ ಮಗನ ಜೊತೆ ದರ್ಶನಕ್ಕಾಗಿ ಬಂದರು. ||167|| ಅವರು ಮಗನನ್ನು ಬಾಬಾರವರ ಚರಣಗಳಲ್ಲಿಟ್ಟರು. ಸಂತರ ಲೀಲೆಗಳು ವಿಚಿತ್ರ! ಅನಂತರ ಇಬ್ಬರೂ ತಮ್ಮ ಕೈಗಳನ್ನು ಜೋಡಿಸಿ ವಿನಯದಿಂದ ಪ್ರಾರ್ಥಿಸಿದರು. ಅದನ್ನು ಆಲಿಸಿರಿ. ||168|| "ಓ! ಸಾಯಿನಾಥ! ನಿಮ್ಮ ಉಪಕಾರವನ್ನು ನಾವು ಹೇಗೆ ತೀರಿಸುವುದು? ನಮಗೆ ಸ್ವಲ್ಪವೂ ಅರ್ಥವಾಗುತ್ತಿಲ್ಲ. ನಿಮ್ಮ ಚರಣಗಳಲ್ಲಿ ನಮ್ಮ ಹಣೆಗಳನ್ನು ಇಡಬಹುದಷ್ಟೆ! ||169|| "ನಾವಾದರೋ ಹೀನರು, ದೀನರು ಮತ್ತು ಪಾಮರರು. ಅನಾಥರಾದ ನಮ್ಮ ಮೇಲೆ ಕೃಪೆಮಾಡಿ. ಇಂದಿನಿಂದ ನಿಮ್ಮ ಚರಣಗಳಲ್ಲಿ ನಾವು ಶರಣಾಗಿದ್ದೇವೆ. ||170|| "ನಾವು ಜಾಗೃತರಾಗಿರುವಾಗ ಮತ್ತು ಸ್ವಪ್ನದಲ್ಲಿ, ಹಗಲು-ರಾತ್ರಿ ಅನೇಕ ತರಂಗಗಳು ಮನದಲ್ಲಿ ಎದ್ದು ಪೀಡಿಸುತ್ತವೆ. ಆದ್ದರಿಂದ ತಮ್ಮ ನಾಮಸಂಕೀರ್ತನೆಯಲ್ಲಿ ನಮ್ಮ ಮನಸ್ಸು ನಿಲ್ಲಲಿ." ||171|| ಅದು ಹಾಗಿರಲಿ. ಅನಂತರ, ಆ ಬಾಲಕಮುರಳೀಧರ ಮತ್ತು ಭಾಸ್ಕರ ಮತ್ತು ದಿನಕರ ಎಂಬ ಮತ್ತಿಬ್ಬರು ಬಾಲಕರ ಜೊತೆಯಲ್ಲಿ ಸಪಟ್ಣೇಕರನು ಪ್ರಸನ್ನಹೊಂದಿದನು. ||172|| ಅನಂತರ, ತನ್ನ ಪತ್ನಿಯ ಜೊತೆಯಲ್ಲಿ ಅವನು ದಯಾಮಯ ಸಾಯಿಯವರಿಗೆ ಪ್ರಣಾಮಸಲ್ಲಿಸಿದನು. ಅವನ ಚಂಚಲ ಮನಸ್ಸು ಸ್ಥೈರ್ಯದಿಂದ ತುಂಬಿಕೃತಾರ್ಥನಾಗಿ ಹಿಂತಿರುಗಿದನು. ||173|| ನಾನು ಈ ಕಥೆಯನ್ನು ಪ್ರಾರಂಭಿಸಿದಾಗ ಸಂಕ್ಷಿಪ್ತವಾಗಿ ಹೇಳಲು ಉದ್ದೇಶಿಸಿದ್ದೆ. ಆದರೆ ಸಾಯಿನಾಥರು ನನ್ನನ್ನು ಮಾತನಾಡುವಂತೆ ಮಾಡುತ್ತಿದ್ದಾರೆ. ಹಾಗಾಗಿ ಈ ಗ್ರಂಥವು ವಿಸ್ತಾರವಾಯಿತು. ||174|| ಈ ಹೇಮಾಡನು ಅವರಿಗೆ ಶರಣಾಗಿದ್ದಾನೆ. ಈಗ ಶ್ರೋತೃಗಳಿಗೆ ಮುಂದಿನ ಅಧ್ಯಾಯದಲ್ಲಿ ನಿರೂಪಿಸುವ ಕಥೆಯ ಬಗ್ಗೆ ಸೂಚನೆ ನೀಡೋಣ. ||175|| ಆ ಕಥೆಯು ಇದಕ್ಕಿಂತ ಹೆಚ್ಚು ಚೆನ್ನಾಗಿದೆ. ಸಾಯಿಯವರು ಚಮತ್ಕಾರಗಳನ್ನು ಇಚ್ಛೆಪಡುತ್ತಿದ್ದ ತಮ್ಮ ಭಕ್ತನ ಆಶೆಯನ್ನು ಮೌನವಾಗಿ ಪೂರೈಸಿದರು. ||176|| ಸಾಯಿಯ ಗುಣವಿಶೇಷಗಳುಕೊಂಡಾಡಲ್ಪಡುತ್ತಿರುವಾಗಲೇ ಕೇವಲ ದೋಷಗಳನ್ನು ಮಾತ್ರವೇ ನೋಡುವಂತಹ ಜನರೂ ಇದ್ದರು. ಅವರಿಗೆ ಸ್ವಾರ್ಥ ಅಥವಾ ಪರಮಾರ್ಥಗಳ ಉದ್ದೇಶವೇನೂ ಇಲ್ಲ. ದೋಷವನ್ನು ಕಂಡುಹಿಡಿಯುವುದೊಂದೇ ಅವರ ಗುರಿ. ||177|| "ಸಾಯಿ ಬಾಬಾರವರು ಸಂತರಾಗಿರಬಹುದು. ಆದರೂ ಅವರು ನನಗೆ ಒಂದು ಅನುಭವ

ಕೊಡದಿದ್ದಲ್ಲಿ, ನನಗೆ ಯಾವುದೇ ಪುರಾವೆ ಇಲ್ಲದಿದ್ದಲ್ಲಿ, ನಾನು ಅವರನ್ನು ನಂಬುವುದಿಲ್ಲ ಮತ್ತು ಸ್ವೀಕರಿಸುವುಡಿಲ್ಲ" – ಇದು ಅವರ ನುಡಿ. ॥178॥
ಮುಂದಿನ ಅಧ್ಯಾಯದಲ್ಲಿ, ಒಬ್ಬನು ಅವರನ್ನು ಪರೀಕ್ಷಿಸಲೆಂದೇ ಹೋಗಿದ್ದರೂ, ಅವನ ಆಶೆಗಳು ಪೂರೈಸಿದ್ದವು. ಸಜ್ಜನರಾದ ಶ್ರೋತೃಗಳು ಅದನ್ನು ಕೇಳಲೇಬೇಕು. ॥179॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಶಂಕೆಯುಳ್ಳ ಭಕ್ತರಿಗೆ ಅನುಗ್ರಹ" ಎಂಬ ನಲವತ್ತೆಂಟನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಮುದ್ರೆಯೆಂಬುದು ಕೆಂಪಾಗಿ ಕಾದ ತಾಮ್ರದ ಮುದ್ರೆ ಹಾಕುವ ಸಲಕರಣೆ. ವಿಷ್ಣುವಿನ ಭಕ್ತರು ತಮ್ಮ ದೇಹದ ಮೇಲೆ ಒತ್ತಿಸಿ ಕೊಳ್ಳುವ ಮುದ್ರೆ,
2. ಲೆ| ಕರ್ನಲ್ ಎಂ. ಬಿ. ನಿಂಬಾಳ್ಕರ್ (ನಿವೃತ್ತ) ಹೇಳಿರುವರು. ಸಪಟ್ಣೇಕರ ಮತ್ತು ಅವರ ಪತ್ನಿ ಪಾರ್ವತೀ ಬಾಯಿಯವರಿಗೆ ಎಂಟು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದರು. ಬಾಬಾರವರು ಪಾರ್ವತೀಬಾಯಿಯ ಹಣೆಗೆ ಉದಿಯ ತಿಲಕವನ್ನಿಟ್ಟು ಅನೇಕಬಾರಿ ಅವಳಿಗೆ ಬೇಕಾದಷ್ಟು ಮಕ್ಕಳನ್ನು ಪಡೆಯಬಹುದೆಂದು ತಿಳಿಸಿದ್ದರು.



# ಅಧ್ಯಾಯ - 49

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಸಂತರ ನಿಜ ಪರೀಕ್ಷೆ ಮತ್ತು ಮನೋನಿಗ್ರಹ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಎಲ್ಲಿ ವೇದಗಳು, ಪುರಾಣಗಳು ಸದ್ಗುರುವಿನ ಗುಣಗಾನವನ್ನು ಎಲ್ಲ ವಿಧದಲ್ಲೂ ಸಾಂಗೋಪಸಾಂಗವಾಗಿ ಮಾಡಿ ದಣಿದಿರುವರೋ ಅಲ್ಲಿ ನಾನೊಬ್ಬ ಜ್ಞಾನೋದಯವಾಗದೇ ಇರುವ ಅಜ್ಞಾನಿ. ಮೌನವಾಗಿದ್ದರೆ ಒಳ್ಳೆಯದು. ॥1॥ ನಿಜವಾಗಿಯೂ ಹೇಳಬೇಕೆಂದರೆ, ಮೌನವೇ ಸದ್ಗುರುವಿನ ಸ್ತೋತ್ರದ ಸಾರ. ಆದರೆ ಸಾಯಿಯ ಗುಣ ವಿಶೇಷಗಳು ಹೇಗಿವೆಯೆಂದರೆ ಮೌನವನ್ನೇ ಮರೆಯುವಂತೆ ಮಾಡುತ್ತವೆ. ॥2॥ ಸಾಯಿಯ ಲೀಲೆಗಳು ಅಗಾಧ! ಭಲೇ ಭಲೇ! ಅದನ್ನು ನಾನು ಅರಿತಾಗ ಮೌನವಾಗಿರಲು ಸಾಧ್ಯವಿಲ್ಲ. ಯಾವಾಗ ನಾನು ಈ ಪಕ್ವಾನ್ನಗಳ ರುಚಿಯನ್ನು ನಾಲಿಗೆಯ ಮೇಲೆ ಆಸ್ವಾದಿಸುವೆನೋ, ಆ ಮಧುರತೆಯು ಶ್ರೋತೃಗಳನ್ನು ನೆನಪಿಗೆ ತರುತ್ತದೆ. ॥3॥ ಅವರೆಲ್ಲರೂ ಇದರಲ್ಲಿ ಭಾಗವಹಿಸಲು ನನ್ನ ಜೊತೆ ಸೇರಬೇಕೆನ್ನಿಸುತ್ತಿದೆ. ಅದರಿಂದಾಗಿ ನನ್ನ ಆನಂದವೂ ದ್ವಿಗುಣವಾಗುತ್ತದೆ. ಈ ಹಬ್ಬವನ್ನು ಏರ್ಪಡಿಸುವುದಕ್ಕೆ ಇದು ನನ್ನ ಕಾರಣ. ॥4॥ ಇದರಲ್ಲಿ ಪಾಲುದಾರರಾಗಲು ಮಿತ್ರರು ಅಥವಾ ಸಜ್ಜನರು ಇಲ್ಲದಿದ್ದರೆ ಅತ್ಯುತ್ತಮವಾದ ಪಕ್ವಾನ್ನಗಳೂ ಸಹ ಒಬ್ಬನೇ ವ್ಯಕ್ತಿಯು ಮಾತ್ರ ಇದ್ದಾಗ ತಮ್ಮ ರುಚಿಯನ್ನು ಕಳೆದುಕೊಳ್ಳುತ್ತವೆ. ॥5॥ ಸಾಯಿಯವರು ಸಕಲ ಇಚ್ಛೆಗಳನ್ನೂ ಪೂರೈಸಿಕೊಂಡವರು. ಸಾಯಿಯೇ ಸಕಲ ಸಂತರಿಗೂ ಅಲಂಕಾರಪ್ರಾಯರು.

ಸಾಯಿಯು ತಮ್ಮ ಭಕ್ತರಿಗೆ ಆಶ್ರಯದಾತರೂ ದುರ್ಧರವಾದ ಭವಸಾಗರದ ಭ್ರಮೆಯನ್ನು ನಿವಾರಿಸುವವರೂ ಆಗಿದ್ದಾರೆ. ॥6॥ ಅವರ ಲೀಲೆಗಳನ್ನು ವರ್ಣಿಸಲು ಪದಗಳೇ ಇಲ್ಲ. ನನ್ನ ಮಾತಿನಲ್ಲಿ ಅವರನ್ನು ವರ್ಣಿಸಲು ಸಾಧ್ಯವಿಲ್ಲ. ಅವರು ಅಗ್ರಾಹ್ಯ ಮತ್ತು ಅವರಗುಣಗಳು ಅರಿಯಲು ಅಸದಳ. ಅವುಗಳನ್ನು ನಾನು ಹೇಗೆ ಅರಿಯಲಿ! ॥7॥ ಅವರು ಕಲ್ಯಾಣಗುಣಗಳ ಸಾರವೇ ಆಗಿದ್ದಾರೆ. ಆ ಸಾಯಿಯು ತಮ್ಮ ಕೃಪೆಯಿಂದ ತಮ್ಮ ಚರಿತ್ರೆಯನ್ನು ನನಗೆ ನೆನಪಿಸಿಕೊಟ್ಟು ಈ ಗ್ರಂಥವನ್ನು ಪರಿಪೂರ್ಣಗೊಳಿಸುತ್ತಾರೆ. ಅದನ್ನು ಅರ್ಥಮಾಡಿಕೊಳ್ಳಿರಿ. ॥8॥ ನಾನು ಅವರ ಅಗಾಧ ಮಹಿಮೆಗಳನ್ನು ಹಾಡಲು ಪ್ರಯತ್ನಿಸುತ್ತಿದ್ದೇನೆ. ಆದರೆ ಅಂತಹ ಕಥನ ಮಾಡಲು ಯಾರು ತಾನೇ ಸಮರ್ಥರು? ಯಾವಾಗ ಪರಾ[1] ಏನೂ ಮಾಡದೆಯೇ ಹಿಂತಿರುಗುತ್ತದೆಯೋ, ಆಗ ಪಶ್ಯಂತಿ[2] ಮತ್ತು ಮಧ್ಯಮ[3] ಏನು ಮಾಡಲು ಸಾಧ್ಯ? (ಅವಾಕ್ಕಾದಾಗ ಮಾತು ಹೊರಡುವುದಿಲ್ಲ.) ॥9॥ ಯಾವಾಗ ಈ ಮೂರು ಬಾಯಿ ತೆರೆಯುವುದಿಲ್ಲವೋ ಆಗ ನಾಲ್ಕನೆಯದು, ವೈಖರೀ[4]ಯು ಏನು ಮಾಡಬಲ್ಲದು? ಅದು ನನಗೆ ಸಂಪೂರ್ಣವಾಗಿ ಅರಿವಿದ್ದರೂ ಸಹ ನನಗೆ ಮನಸ್ಸು ತಡೆಯುತ್ತಿಲ್ಲ! ॥10॥ ಸದ್ಗುರುವಿನ ಚರಣಗಳಲ್ಲಿ ವಿನಮ್ರನಾಗದೆ ಆತ್ಮಸಾಕ್ಷಾತ್ಕಾರವನ್ನು ಪಡೆಯಲು ಸಾಧ್ಯವಿಲ್ಲ. ಸಂತರು ಸ್ವತಃ ಶ್ರೀಹರಿಯ ಸ್ವರೂಪರು. ನಾನು ಅವರ ಕೃಪಾಹಸ್ತವನ್ನು ಪ್ರಾರ್ಥಿಸುತ್ತೇನೆ. ॥11॥ ಗುರುಚರಣಗಳಲ್ಲಿ ಪ್ರೀತಿಮಾತ್ರವೇ ಕೇವಲ ಸರ್ವಸ್ವವನ್ನೂ ಸಾಧಿಸಲು ಕಾರಣ. ಸಂತರ ಸಹವಾಸದ ಆಶೆ ಮತ್ತು ಅವರಿಗಾಗಿ ಪ್ರೀತಿ, ಇವು ನಮ್ಮದಾಗಲಿ. ॥12ಪೂರ್ಣ ದೇಹಾಭಿಮಾನದಿಂದ ತುಂಬಿರುವವನು ಭಕ್ತನೆಂದು ಕರೆಸಿಕೊಳ್ಳಲು ಯೋಗ್ಯನಲ್ಲ. ಸ್ವಯಂ ಪೂರ್ಣ ನಿರಭಿಮಾನವುಳ್ಳವನು ಮಾತ್ರ ನಿಜವಾದ ಭಕ್ತನು. ॥13॥ ಯಾರು ತಮ್ಮ ಜ್ಞಾನದ ಬಗ್ಗೆ ಗರ್ವಿಸುತ್ತಾನೋ, ಯಾರು ಕೇವಲ ಶ್ರೇಷ್ಠತ್ವದ ಅಭಿಮಾನದಿಂದ ಇರುವನೋ ಅವನು ಹುಸಿ ದಂಭಾಚಾರವುಳ್ಳವನಾಗಿರುವನು. ಅಂತಹವನು ಪ್ರತಿಷ್ಠಿತ ಭಕ್ತನಾಗಲು ಹೇಗೆ ಸಾಧ್ಯ? ॥14॥ ಗುರುವಿನ ಕೀರ್ತಿಯನ್ನು ಹಾಡದಿರುವವನು ನಿಜವಾಗಿಯೂ ದೌರ್ಭಾಗ್ಯಶಾಲಿಯು. ಯಾರು ಕಿವುಡನಲ್ಲದಿದ್ದರೂ ಆಲಿಸುವುದಿಲ್ಲವೋ ಅವನು ಮಂದಮತಿಯ ಮೂರ್ತಿವಂತನಾಗಿರುತ್ತಾನೆ. ॥15॥ ತೀರ್ಥಯಾತ್ರೆ, ವ್ರತ, ಯಜ್ಞ, ದಾನಗಳಿಗಿಂತ ತಪಸ್ಸನ್ನು ಆಚರಿಸುವುದು ಮಿಗಿಲಾದುದು. ಅದಕ್ಕಿಂತ ಮಿಗಿಲು ಹರಿಭಜನೆ. ಆದರೆ ಎಲ್ಲಕ್ಕಿಂತ ಶ್ರೇಷ್ಠವಾದುದು ತನ್ನ ಗುರುವಿನ ಧ್ಯಾನ. ॥16॥ ತನ್ನ ಭಕ್ತರಿಗೆ ಕೇವಲ ಸಾಯಿ ಮಾತ್ರ ಧ್ಯಾನವಸ್ತು, ಸಾಯಿಯೇ ಅವರ ಉಪಾಸನಾ ದೈವ. ಸಾಯಿಯೇ ಗುಪ್ತನಿಧಿ. ಅದನ್ನು ಕೃಪಣತ್ವವಿಲ್ಲದೆ ಕಾಪಾಡಬೇಕು. ॥17॥ ಕೆಲವೊಮ್ಮೆ ನಾನೇದರೂ ಆಲಸಿಯಾದಲ್ಲಿ ಅಂತರ್ಯಾಮಿ ಸಾಯಿಯು ಪ್ರಾತಃ ಪರಿ ಅಲ್ಲ. ನಾನೇನಾದರೂ ಯಾವ ಕಥೆಯನ್ನಾದರೂ ಮರೆತು ಹೋದಲ್ಲಿ ಅವರು ಸಮಯೋಚಿತವಾಗಿ ನೆನಪಿಸುತ್ತಾರೆ. ॥18॥ ಕ್ಷಣಕಾಲ ಸುಖವಾಗಿ ಕುಳಿತುಕೊಳ್ಳಬೇಕೆಂದರೂ ನನಗೆ ಸಾಧ್ಯವಿರಲಿಲ್ಲ. ಕಥೆಯು ಯಾವ ರೀತಿ ಅಕಲ್ಪಿತವಾಗಿಯೇ ಉಕ್ಕಿ ಬರುತ್ತಿತ್ತೆಂದರೆ, ಕೈಯಲ್ಲಿ ಲೇಖನಿಯನ್ನು ಹಿಡಿಯಲೇಬೇಕಾಗುತ್ತಿತ್ತು.

॥19॥ ಈ ರೀತಿ ತಮ್ಮ ಭಕ್ತರಿಗೆ ತಮ್ಮ ಅದ್ಭುತ ಚರಿತ್ರೆಯನ್ನು ಕೇಳಿಸಲು ಮತ್ತು ನನ್ನದೇ ಆದ ಸ್ವಾರ್ಥಪೂರಿತ ಕಾರಣಗಳಿಂದಾಗಿ ಅವರು ಈ ಸತ್‌ಚರಿತ್ರೆಯನ್ನು ನಾನು ಬರೆಯುವಂತೆ ಮಾಡಿದ್ದಾರೆ. ॥20॥ ಅದಲ್ಲದೇ ಇದ್ದರೂ ಸಂತರ ಚರಿತ್ರೆಗಳು ಅವರಿಂದಲೇ ಸೃಷ್ಟಿಯಾಗಿವೆ ಮತ್ತು ಬರೆಯಲ್ಪಟ್ಟಿವೆ. ಅವರಿಂದ ಸ್ಫೂರ್ತಿಯು ಉಂಟಾಗದಿದ್ದಲ್ಲಿ, ಪ್ರತಿ ಹೆಜ್ಜೆಯಲ್ಲೂ ನೀರಸವಾಗಿರುತ್ತವೆ. ॥21॥ ಆದ್ದರಿಂದಪ್ಪಪಾಳುವಾದ ಸಾಯಿನಾಥರು ನನ್ನ ಮನಸ್ಸಿನ ಅಂತರಾಳದಲ್ಲಿ ಪ್ರವೇಶಿಸಿ ನನ್ನಿಂದ ಈ ಗ್ರಂಥವನ್ನು ಬರೆಯಿಸಿ ನನ್ನ ಮನೋರಥವನ್ನು ತೃಪ್ತಿಪಡಿಸಿದ್ದಾರೆ. ॥22॥ ಶ್ರೀಸಾಯಿಯ ನಾಮವನ್ನು ಜಪಿಸುತ್ತಿರುವಂತಾದಲ್ಲಿ ಅಂತರಂಗದಲ್ಲಿ ಅವರ ವಚನಗಳನ್ನು ಚಿಂತನ ಮಾಡುವಂತಾದಲ್ಲಿ, ಮನದಲ್ಲಿಯೇ ಅವರ ರೂಪವನ್ನು ಧ್ಯಾನಿಸುವಂತಾದಲ್ಲಿ ನಾನು ಪೂರ್ಣವಾದ ಸಮಾಧಾನ ಹೊಂದುತ್ತೇನೆ. ॥23॥ ಯಾರು ಶ್ರೀಸಾಯಿಯ ನಾಮವನ್ನು ಮುಖದಿಂದ ಉಚ್ಚರಿಸುತ್ತಿರುತ್ತಾರೋ, ಅಂತರಂಗದಲ್ಲಿ ಶ್ರೀಸಾಯಿಯ ಮೇಲೆ ಪ್ರೀತಿ ಹೊಂದಿರುತ್ತಾರೋ ಮತ್ತು ಎಲ್ಲ ಕರ್ಮಗಳನ್ನೂ ಸಾಯಿಯ ಪ್ರೀತ್ಯರ್ಥವಾಗಿ ಮಾಡುತ್ತಾರೋ ಅವರಿಗೆ ಸಾಯಿಯು ಪರಮ ಋಣಿಯಾಗಿರುತ್ತಾರೆ. ॥24॥ ಈ ಸಂಸಾರ ಬಂಧನವನ್ನು ಕಿತ್ತೊಗೆಯಲು ಅದಕ್ಕಿಂತ ಅನ್ಯ ಸಾಧನವಿಲ್ಲ. ಸಾಯಿಯ ಕಥೆಯು ಪರಮ ಪಾವನ. ಸದಾ ಸೇವೆಯನ್ನು ಕಲ್ಪಿಸುವಂತಹದೂ ಸುಖದಾಯಿನಿಯೂ ಆಗಿದೆ. ॥25॥ ಚರಣಗಳನ್ನು ಸಾಯಿಯ ಪ್ರದಕ್ಷಿಣೆ ಮಾಡಲು ಉಪಯೋಗಿಸಿ. ಕಿವಿಗಳನ್ನು ಸತ್‌ಚರಿತೆಯನ್ನು ಕೇಳಲು ಉಪಯೋಗಿಸಿ ಸರ್ವಾಂಗಗಳಿಂದಲೂ ಪ್ರೀತಿಯಿಂದ ಆಲಿಂಗನಮಾಡಿ ಮತ್ತು ಕಣ್ಣುಗಳನ್ನು ಸಾಯಿಯ ದರ್ಶನಮಾಡಲು ಉಪಯೋಗಿಸಿರಿ. ॥26॥ ಅವರ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುತ್ತ ಬನ್ನಿರಿ. ನಿಮ್ಮ ಮಸ್ತಕವನ್ನು ಅವರ ಚರಣಗಳಲ್ಲಿ ಇಡಿ. ನಾಲಿಗೆಯು ಕೇವಲ ಅವರ ಹೆಸರನ್ನು ಜಪಿಸಲಿ. ಮೂಗು ಕೇವಲ ನಿರ್ಮಾಲ್ಯ (ದೇವರಿಗೆ ಅರ್ಪಿಸಿಟ್ಟ ಹೂವು)ವನ್ನು ಆಘ್ರಾಣಿಸಲಿ. ॥27॥ ಈಗ ಹಿಂದಿನ ಅಧ್ಯಾಯದಲ್ಲಿ ತಿಳಿಸಿದಂತಹ ಒಬ್ಬ ಭಕ್ತ, ಪವಾಡವನ್ನು ಬಯಸುವವನ ಕಥೆಯನ್ನು ನಿಮಗೆ ವಚನ ನೀಡಿದಂತೆ ಮುಂದುವರೆಸುತ್ತೇನೆ. ॥28॥ ಅವನು ಸ್ವಯಂ ಸ್ವಾರ್ಥ ಅಥವಾ ಪರಮಾರ್ಥದಿಂದ ಪ್ರಚೋದಿತನಾಗಿರಲಿಲ್ಲ. ಅವನಿಗೆ ಸಂತರ ಮಹತ್ವವು ಗೊತ್ತಿರಲಿಲ್ಲ. ಆದರೂ ಸಂತರ ವರ್ಣನೆ ಕೇಳಿದಾಗ ಮನದಲ್ಲಿ ಅವಿಶ್ವಾಸ ತುಂಬಿರುತ್ತಿತ್ತು. ॥9॥ ಅವನ ಸ್ನೇಹಿತರು ಸಾಯಿಯ ಕಥೆಗಳನ್ನು ಹೇಳುತ್ತಿದ್ದರು. ಅವನು ಅವುಗಳನ್ನು ಕೇಳಿ ದೋಷಗಳನ್ನು ಕಂಡುಹಿಡಿಯುತ್ತಿದ್ದನು. ಅವುಗಳಿಗೆ ಸ್ವಾನುಭವದ ಪುಷ್ಟಿಯು ದೊರಕದೇ ಇದ್ದಲ್ಲಿ ಅವುಗಳನ್ನು ಒಪ್ಪುತ್ತಿರಲಿಲ್ಲ. ॥30॥ ಅವನ ಹೆಸರು ಹರಿ ಕನೋಬಾ (ಹರಿಭಾವು). ಅವನು ಸಾಯಿಯನ್ನು ಪರೀಕ್ಷೆಮಾಡಲು ತನ್ನ ಸ್ನೇಹಿತರೊಡನೆ ಮುಂಬಯಿಯಿಂದ ಯಾತ್ರೆ ಹೊರಟನು. ॥31॥ ಆದರೆ ಸಕಲರ ಅಂತರಂಗವನ್ನೂ ಪ್ರಕಾಶಿಸುವ ಸಾಯಿಯ ಕುಶಲತೆಯನ್ನು ಯಾರು ತಾನೇ ಅರಿಯಲು ಸಾಧ್ಯ? ಅವುಗಳು ಅದ್ಭುತವೂ ನಿರ್ಧಾರಿತವೂ ಆಗಿದ್ದವು. ॥32॥ ಸಾಯಿ ಸಮರ್ಥರಿಗೆ ಹರಿ ಭಾವುವಿನ ಉದ್ದೇಶವು

ಅವನು ಶಿರಡಿಗೆಂದು ಹೊರಟಾಗಲೇ ತಿಳಿದಿತ್ತು. ಅವನು ಕೇವಲ ಒಂದು ಚಮತ್ಕಾರವನ್ನು ಆಶಿಸಿದ್ದನು. ಮತ್ತು ಅವನು ಕೇವಲ ಅದಕ್ಕಾಗಿ ಅರ್ಹನಾಗಿದ್ದನು. ॥33॥ ಅವರು ಅವನಿಗೆ ಅದರ ರುಚಿ ತೋರಿಸಿದರು. ಮತ್ತು ತಮ್ಮ ಭಕ್ತನನ್ನಾಗಿ ಮಾಡಿದರು. ಅವನ ಪ್ರವಾಸದ ಶ್ರಮವು ಸಾರ್ಥಕವಾಯಿತು. ಸಂತರು ನಿಜವಾಗಿಯೂ ತಮ್ಮ ಯುಕ್ತಿಯನ್ನು ಪ್ರಯೋಜಕವನ್ನಾಗಿ ಮಾಡುವರು. ॥34॥ ಕೋಪರಗಾಂವನಲ್ಲಿ ಹರಿ ಭಾವು ತನ್ನ ಸ್ನೇಹಿತರ ಜೊತೆಯಲ್ಲಿ ಒಂದು ಟಾಂಗಾ ಹತ್ತಿದನು. ಗೋದಾವರಿಯಲ್ಲಿ ಸ್ನಾನ ಮಾಡಿ ಶಿರಡಿಯ ಕಡೆ ಯಾವುದೇ ವಿಳಂಬ ಮಾಡದೇ ಹೊರಟನು. ॥35॥ ಕೋಪರಗಾಂವನಿಂದ ಹೊರಟು ಬಂದ ಮೇಲೆ, ಅವನು ತನ್ನ ಕೈಕಾಲುಗಳನ್ನು ತೊಳೆದುಕೊಂಡು ಸಂತರನ್ನು ನೋಡಲು ಮತ್ತು ಅವರನ್ನು ತಿಳಿದುಕೊಳ್ಳಲು ಹೊರಟನು. ॥36॥ ಹರಿ ಭಾವುವು ಒಂದು ಜೊತೆ ಹೊಸ ಚಪ್ಪಲಿಗಳನ್ನು ಪಾದಗಳಲ್ಲಿ ಧರಿಸಿ, ಜರಿಯ ರುಮಾಲನ್ನು ತಲೆಯ ಮೇಲೆ ತೊಟ್ಟು, ಸಾಯಿಬಾಬಾರವರ ದರ್ಶನ ಮಾಡಲು ಉತ್ಕಂಠಿತ ಮನದವನಾಗಿ ಹೊರಟನು. ॥37॥ ಅನಂತರ, ಅವನು ಮಸೀದಿಗೆ ಬಂದು, ಸಾಯಿಯನ್ನು ದೂರದಿಂದಲೇ ನೋಡಿದನು. ಕೂಡಲೇ ಅವನಿಗೆ ಅವರ ಹತ್ತಿರ ಹೋಗಿ ಸಾಷ್ಟಾಂಗ ಪ್ರಣಾಮ ಮಾಡಬೇಕೆಂಬ ಮನಸ್ಸುಂಟಾಯಿತು. ॥38॥ ಆದರೆ ಅವನಿಗೆ ಚಪ್ಪಲಿಗಳಿಂದಾಗಿ ಅಡಚಣೆ ಎದುರಾಯಿತು. ಅವುಗಳನ್ನುಇಡಲು ಒಂದು ಸುರಕ್ಷಿತ ಸ್ಥಳವಿರಲಿಲ್ಲ. ಕೊನೆಯಲ್ಲಿ, ಒಂದು ಮೂಲೆಯನ್ನು ಹುಡುಕಿ ಅಲ್ಲಿ ಅವುಗಳನ್ನು ಬಿಟ್ಟನು. ॥39॥ ಅನಂತರ, ಅವನು ದರ್ಶನಕ್ಕಾಗಿ ಮೇಲೆ ಹತ್ತಿದನು. ಪ್ರೀತಿಯಿಂದ ಸಾಯಿ ಚರಣಗಳಲ್ಲಿ ವಂದಿಸಿದನು. ಉದಿ ಮತ್ತು ಪ್ರಸಾದ ಸ್ವೀಕರಿಸಿ ವಾಡೆಗೆ ಹೋಗಲು ಹಿಂತಿರುಗಿದನು. ॥40॥ ಅವನು ಚಪ್ಪಲಿಗಳನ್ನು ಧರಿಸಲು ಹೋದಾಗ, ಅವುಗಳು ಅಲ್ಲಿರಲಿಲ್ಲ. ಬಹಳ ಹುಡುಕಾಡಿದ ಮೇಲೆ ಅವುಗಳಿಲ್ಲದೆಯೇ ಖಿನ್ನವದನನಾಗಿ ಹಿಂತಿರುಗಿದನು. ಅವುಗಳ ಆಶೆಯನ್ನೇ ಬಿಟ್ಟನು. ॥41॥ ಅಲ್ಲಿ ಅತಿ ದೊಡ್ಡ ಗುಂಪು ಇದ್ದು ಬರುವವರು, ಹೋಗುವವರು ಹೆಚ್ಚಾಗಿದ್ದರು. ಆದ್ದರಿಂದ ಅವನು ನಿಜವಾಗಿ ಯಾರನ್ನು ತಾನೇ ಕೇಳಲು ಸಾಧ್ಯ? ಯಾವುದೇ ಪರಿಹಾರ ಹೊಳೆಯಲಿಲ್ಲ. ॥42॥ ಈ ರೀತಿ ಅವನ ಮನಸ್ಸು ಬಹಳ ಕ್ಷೋಭೆಗೊಂಡಿತ್ತು. ಅವನ ಕಣ್ಣಮುಂದೆ ಕೇವಲ ಚಪ್ಪಲಿಗಳು ಮಾತ್ರ ಇದ್ದವು. ಅವನ ಮನಸ್ಸು ಚಪ್ಪಲಿಗಳ ಮೇಲೆ ಕೇಂದ್ರೀಕೃತವಾಗಿತ್ತು. ಮತ್ತು ಅವನ ಮನಸ್ಸಿನ ಪೂರ್ತಿ ಕೇವಲ ಚಪ್ಪಲಿಗಳೇ ತುಂಬಿದ್ದುವು. ॥43॥ ಅವನು ಅವುಗಳನ್ನು ಬಹಳ ಆಶೆಯಿಂದ ಖರೀದಿಸಿದ್ದನು. ಆದರೆವು ಈಗ ಕಳೆದುಹೋಗಿದ್ದವು! ಅದು ಯಾರೋ ಕಳ್ಳರು ಕದ್ದಿರುವರೆಂಬುದು ನಿಶ್ಚಯವಾಯಿತು. ॥44॥ ಅದು ಹಾಗಿರಲಿ. ಅನಂತರ ಅವನು ಸ್ನಾನಮಾಡಿ ಪೂಜೆ, ನೈವೇದ್ಯಗಳನ್ನು ಅರ್ಪಿಸಿ, ಇತರರೊಡನೆ ಪಂಕ್ತಿಯಲ್ಲಿ ಊಟಮಾಡಲು ಕುಳಿತನು. ಆದರೆ ಅವನ ಮನಸ್ಸಿಗೆ ಸಮಾಧಾನವಿರಲಿಲ್ಲ. ॥45॥ "ಸಭಾ ಮಂಟಪವು ಸಾಯಿಯ ಸ್ಥಾನ! ಸಾಯಿಯ ಕಣ್ಣು ತಪ್ಪಿಸಿ ನನ್ನ ಚಪ್ಪಲಿಗಳನ್ನು ಯಾರು ತಾನೇ ತೆಗೆದುಕೊಳ್ಳಲು ಸಾಧ್ಯ? ಇದೊಂದು ಸಣ್ಣ ಅಚ್ಚರಿಯೇ?" ॥46॥

ಅವನು ದುಃಖಿತನಾದನು. ಅನ್ನ ಪಾನಾದಿಗಳ ಮೇಲೆ ಮನಸ್ಸು ನಿಲ್ಲದಾಯಿತು. ಅನಂತರ ತನ್ನ ಕೈಗಳನ್ನು ತೊಳೆದುಕೊಳ್ಳಲು ಹೊರಗೆ ಬಂದನು. ॥47॥ ಅದೇ ಸಮಯದಲ್ಲಿ, ಒಬ್ಬ ಮರಾಠಾ ಬಾಲಕನು ಅಲ್ಲಿಗೆ ಅನಿರೀಕ್ಷಿತವಾಗಿ ಬಂದನು. ಅವನು ಒಂದು ಕೋಲಿನ ತುದಿಗೆ ಕಳೆದುಹೋಗಿದ್ದ ಚಪ್ಪಲಿಗಳನ್ನು ಕಟ್ಟಿ ಬಾವುಟದ ರೀತಿ ಹಾರಿಸುತ್ತಿದ್ದನು. ॥48॥ ಒಂದು ಗುಂಪು ಜನರು ಊಟವಾದ ಮೇಲೆ ತಮ್ಮ ಕೈ ತೊಳೆದುಕೊಳ್ಳುತ್ತಿದ್ದರು. ಆ ಬಾಲಕನು ಯಾರನ್ನೋ ಹುಡುಕುತ್ತಿದ್ದನು. ಅವನು ಹೇಳಿದನು, "ಬಾಬಾರವರು ನನ್ನ ಕೈಗೆ ಈ ಕೋಲನ್ನು ಕೊಟ್ಟು ಇಲ್ಲಿಗೆ ಕಳುಹಿಸಿದ್ದಾರೆ. ॥49॥ ಅವರು ನನಗೆ ಹೇಳಿದರು, "ಮಗನೇ, ಹರಿಯ ಮಗ, ಜರಿಯ ಪೇಟ (ರುಮಾಲು) ಎಂದು ಕರೆಯುತ್ತಾ ಹೋಗು. ಯಾರು ಅದನ್ನು ತಮ್ಮದೆಂದು ಕಾತರದಿಂದ ಕೇಳುತ್ತಾರೋ ಅವರಿಗೆ ಕೊಡು. ॥50॥ "ಆದರೆ ಮೊದಲು ಅವನು ಕಾನೋಬಾನ ಮಗ ಹರಿ ಮತ್ತು ಜರಿಯ ರುಮಾಲು ಧರಿಸಿದ್ದಾನೆಂಬುದನ್ನು ಖಚಿತಪಡಿಸಿಕೋ. ತುಂಬ ಗಲಾಟೆ ಮಾಡಬೇಡ." ॥51॥ ಬಾಲಕನ ಕೂಗುಕಿವಿಗೆ ಬಿದ್ದಕೂಡಲೇ ತನ್ನ ಚಪ್ಪಲಿಗಳನ್ನು ಗುರುತಿಸಿ ಹರಿ ಭಾವು ಆಶ್ಚರ್ಯದಿಂದ ಅವನ ಕಡೆ ಧಾವಿಸಿದನು. ॥52॥ ಹರಿ ಭಾವುವಿನ ಕಣ್ಣುಗಳು ಆನಂದಾಶ್ರುಗಳಿಂದ ತುಂಬಿದವು. ತನ್ನ ಕಳೆದುಹೋಗಿದ್ದ ಚಪ್ಪಲಿಗಳನ್ನು ನೋಡಿ ಭಾವೋದ್ವೇಗದಿಂದ ಗಂಟಲು ಗದ್ಗದಗೊಂಡಿತು. ಆಶ್ಚರ್ಯಭರಿತನಾದನು. ॥53॥ ಅವನು ಹುಡುಗನಿಗೆ ಹೇಳಿದನು, "ಬಾ, ಬಾ, ಇಲ್ಲಿ ನೋಡೋಣ! ಆ ಚಪ್ಪಲಿಗಳನ್ನು ತೆಗೆದುಕೊಂಡು ಬಾ." ಅವುಗಳನ್ನು ನೋಡಿ ಅವನು ಹೇಳಿದನು, "ಇವು ನಿನಗೆ ಎಲ್ಲಿ ದೊರೆತವು? ನನಗೆ ಸ್ಪಷ್ಟವಾಗಿ ಹೇಳು." ॥54॥ ಹುಡುಗನು ಹೇಳಿದನು, "ನನಗೆ ಅದೆಲ್ಲಾ ತಿಳಿಯದು. ನಾನು ಕೇವಲ ಬಾಬಾರವರ ಆಜ್ಞೆಯನ್ನು ಮಾತ್ರ ಪಾಲಿಸುತ್ತೇನೆ. ಕಾನೋಬನ ಮಗ ಹರಿಯಾಗಿದ್ದರೆ ಜರಿ ಅಂಚಿನ ರುಮಾಲನ್ನು ನನಗೆ ತೋರಿಸಬೇಕು. ॥55॥ "ನಾನು ಅವನಿಗೆ ಮಾತ್ರ ಈ ಚಪ್ಪಲಿಗಳನ್ನು ಕೊಡುತ್ತೇನೆ. ನಾನು ಮತ್ತೆ ಯಾರನ್ನೂ ಗುರುತಿಸುವುದಿಲ್ಲ. ಬಾಬಾರವರ ಈ ಕುರುಹುಗಳು ಯಾರಲ್ಲಿವೆಯೋ ಅವನು ಮಾತ್ರ ಈ ಪಾದರಕ್ಷೆಗಳನ್ನು ತೆಗೆದುಕೊಳ್ಳಬಹುದು." ॥56॥ "ಓ ಬಾಲಕ, ಇವು ನನ್ನ ಚಪ್ಪಲಿಗಳು." ಹರಿ ಭಾವು ಆ ರೀತಿ ಹೇಳಿದ್ದರೂ ಅವನು ಅವುಗಳನ್ನು ಅವನಿಗೆ ಕೊಡಲು ಇಚ್ಛಿಸಲಿಲ್ಲ. ಅನಂತರ ಅವನು ಬಾಬಾರವರು ಹೇಳಿದ್ದ ಎಲ್ಲ ಕುರುಹುಗಳಿಂದ ಒಪ್ಪಿಸಲು ಪ್ರಯತ್ನಿಸಿದನು. ॥57॥ "ಓ ಬಾಲಕ, ನಾನೇ ಆ ಹರಿ, ಕಾನೋಬಾನ ಮಗ. ಈ ಮಾತುಗಳು ಎಲ್ಲ ರೀತಿಯಲ್ಲೂ ಸತ್ಯ, ಅವುಗಳು ಎಲ್ಲ ರೀತಿಯಲ್ಲೂ ನನಗೆ ಸರಿಹೊಂದುತ್ತವೆ. ॥58॥ "ಈಗ ಈ ಜರಿ ಅಂಚಿನ ರುಮಾಲನ್ನು ನೋಡು, ಅದು ನಿನ್ನ ಸಂದೇಹವನ್ನೆಲ್ಲ ದೂರಮಾಡುತ್ತದೆ. ಅನಂತರ, ನಾನು ಈ ಪಾದರಕ್ಷೆಗಳ ಒಡೆಯನೆಂದು ಸಾಬೀತಾಗುವುದು. ಮತ್ತು ಇನ್ನು ಯಾರೂ ಅವುಗಳನ್ನು ತಮ್ಮದೆಂದು ದಾವೆ ಹಾಕುವುದಿಲ್ಲ." ॥59॥ ಆ ಬಾಲಕನಿಗೆ ಅನಂತರ ಮನದಟ್ಟಾಯಿತು. ಅವನು ಹರಿ ಭಾವುವಿಗೆ ಪಾದರಕ್ಷೆಗಳನ್ನು ನೀಡಿದನು. ಅವನ ಆಸೆಗಳು ಪೂರೈಸಿದವು.

ಸಾಯಿಯು ನಿಜವಾದ ಸಂತರೆಂದು ಅನುಭವಕ್ಕೆ ಬಂದಿತು. ॥60॥ ಅವನು ಯೋಚಿಸಿದನು, 'ನಾನು ಜರಿ ಅಂಚಿನ ರುಮಾಲನ್ನು ಧರಿಸಿದ್ದರೂ ಅದು ಅಷ್ಟು ವಿಶೇಷವಾಗಿದೆಯೇನು? ಅದು ನನ್ನ ತಲೆಯ ಮೇಲಿದೆ ಮತ್ತು ಎಲ್ಲರಿಗೂ ಕಾಣುತ್ತದೆ. ॥61॥ 'ಆದರೆ ನಾನು ಬಹಳ ದೂರದ ಊರಿನಿಂದ ಬಂದಿದ್ದೇನೆ. ಇದು ಶಿರಡಿಗೆ ನನ್ನ ಮೊದಲ ಪ್ರವಾಸ. ಸಾಯಿಬಾಬಾರವರಿಗೆ ನನ್ನ ಹೆಸರು ಹರಿ ಎಂದು ಹೇಗೆ ತಿಳಿಯಿತು? ॥62॥ 'ಕಾನೋಬಾನು ನನ್ನ ತಂದೆ ಮತ್ತು ಯಾರಿಗೂ ಅವರ ಪರಿಚಯವಿಲ್ಲ ಅಥವಾ ಅವರನ್ನು ನೋಡಿಯೂ ಇಲ್ಲ. ಅವರನ್ನು ಕಾ ಎಂದು ಸಂಬೋಧಿಸುತ್ತಿದ್ದರು. ನಾನು ಅತಿ ಆಶ್ಚರ್ಯ ಚಕಿತನಾಗಿದ್ದೇನೆ. ॥63॥ 'ಪೂರ್ವದಲ್ಲಿ ಯಾವಾಗ ನನ್ನ ಸ್ನೇಹಿತರು ನನಗೆ ಸಂತ ಸಾಯಿಯವರ ಮಹತ್ತನ್ನು ತಿಳಿಸಿದರೋ ಆಗ ನಾನು ಅವುಗಳನ್ನು ನಂಬಲಿಲ್ಲ. ಆದರೆ ಈಗ ನಿಜವಾಗಿಯೂ ಪಶ್ಚಾತ್ತಾಪ ಪಡುತ್ತಿದ್ದೇನೆ. ॥64॥ 'ಈಗ ನನಗೆ ಈ ಅನುಭವ ಉಂಟಾಗಿರುವಾಗ, ಸಾಯಿಬಾಬಾರವರ ಶಕ್ತಿಯನ್ನು ಅರಿತಿರುವೆನು. ಸಂಶಯಕ್ಕೆ ಸ್ಥಳವಿಲ್ಲ. ಶ್ರೀಸಾಯಿಯು ಮಹಾನುಭಾವರೆಂದು ಅರಿತಿರುವೆನು.' ॥65॥ ಪ್ರತಿಯೊಬ್ಬರ ಭಾವವೂ ಅವರವರ ಅನುಭವಕ್ಕನುಗುಣವಾಗಿರುತ್ತದೆ, ಹಾಗೆಯೇ ಹರಿಭಾವುವಿನ ಅನುಭವವೂ ಸಹ. ಅವನಿಗೆ ಸಂತರ ಪರೀಕ್ಷೆ ಮಾಡುವ ಆಶೆಯಿತ್ತು ಮತ್ತು ಪರಮಾರ್ಥ ಸಾಧನೆಯ ಬಯಕೆ ಇರಲಿಲ್ಲ. ॥66॥ ಸಾಈ ಸಮರ್ಥರು ಮಹಾನುಭಾವರೆಂದು ಬಂಧುಮಿತ್ರರು ಹೇಳುತ್ತಿದ್ದರು. ಶಿರಡಿಗೆ ಹೋದ ಉದ್ದೇಶ ಅದನ್ನು ಪ್ರತ್ಯಕ್ಷವಾಗಿ ಅನುಭವಿಸಬೇಕೆಂಬುದು ಅಥವಾ ಒಂದು ಚಮತ್ಕಾರವನ್ನು ನೋಡುವುದಾಗಿತ್ತು. ॥67॥ ಸಂತರ ಚರಣಗಳಲ್ಲಿ ತಮ್ಮ ಜೀವನವನ್ನೇ ಸಮರ್ಪಿಸಿ ದೇವರನ್ನು ಕಾಣುವುದು ಅವನ ಮನದಲ್ಲಿ ಯತ್ಕಿಂಚಿತ್ತೂ ಇರಲಿಲ್ಲ. ಊಸರವಳ್ಳಿಯ ಆಟ ಅದೆಲ್ಲಿಯವರೆಗೆ? ॥68॥ ಒಬ್ಬ ಸಂತರ ಬಾಗಿಲಲ್ಲಿ ಆದರ ಪೂರ್ವಕವಾಗಿ ಒಂದು ಚಮತ್ಕಾರವನ್ನು ನೋಡಬೇಕೆಂದುಕೊಂಡಿದ್ದೆನು. ಈಗ ಒಂದು ಜೊತೆ ಹೊಸಪಾದರಕ್ಷೆಗಳು ನನ್ನ ಸ್ವಂತ ಕೈಗಳಲ್ಲೇ ನನ್ನ ಮನೆಬಾಗಿಲಿನಲ್ಲೇ ನನಗೆ ಸೇರಿವೆ. ॥69॥ ಅದಲ್ಲದಿದ್ದರೂ, ಅವು ಕೇವಲ ಕ್ಷುಲ್ಲಕವಾದ ಪಾದರಕ್ಷೆಗಳು. ಅವೇನಾದರೂ ಕಳೆದುಹೋಗಿದ್ದರೆ ಅದೇನು ನಷ್ಟ ಉಂಟಾಗುತ್ತಿತ್ತು? ಆದರೆ, ಅದರಿಂದಾಗಿ ಮನದಲ್ಲಿ ಏರ್ಪಡುವ ತಳಮಳವು ಅವು ಸಿಗುವವರೆಗೆ ಶಾಂತಗೊಳ್ಳುತ್ತಿರಲಿಲ್ಲ. ॥70॥ ಸಂತರ ಅನುಗ್ರಹ ಪಡೆಯಲು ಎರಡು ಮಾರ್ಗಗಳಿವೆ. ಒಂದು ಭಕ್ತಿ ಮತ್ತೊಂದು ಜ್ಞಾನ. ಜ್ಞಾನಮಾರ್ಗವು ಗಹನ ಮತ್ತು ಶ್ರಮಭರಿತ. ಭಕ್ತಿಮಾರ್ಗವು ಸರಳ. ॥71॥ ಭಕ್ತಿಯ ಮಾರ್ಗವು ಈ ರೀತಿ ಅಷ್ಟು ಸುಲಭ ಮತ್ತು ಪಡೆಯಲು ಸಾಧ್ಯವಿರುವಾಗ ಎಲ್ಲರೂ ಅದನ್ನು ಅನುಸರಿಸಬಾರದೇಕೆ? ಅದಕ್ಕಾಗಿ ಅಷು ಮಹಾಭಾಗ್ಯಸಂಪತ್ತನ್ನು ಹೊಂದಿರಬೇಕು. ಆಗ ಮಾತ್ರವೇ ಅದನ್ನು ಪಡೆಯಬಹುದು. ॥72॥ ಕೋಟಿ ಜನ್ಮಗಳ ಪುಣ್ಯದಿಂದಲೇ ಯಾರಿಗಾದರೂ ಸಂತರ ಸಂಗ ದೊರೆಯುತ್ತದೆ. ಸಂತರ ಸಮಾಗಮದ ಸುಖವೇ ನಿಜಭಕ್ತಿಯನ್ನು ವಿಕಸಿತಗೊಳಿಸುತ್ತದೆ. ॥73॥ ಎಲ್ಲರಿಗೂ ನಮ್ಮ ಪ್ರವೃತ್ತಿಯುಗ್ಗೆ ತಿಳಿದಿದೆ. ಎಲ್ಲಿ ಆಸಕ್ತಿ ಇರುವುದೋ

ಅಲ್ಲಿ ನಿವೃತ್ತಿಯೇನೆಂಬುದು ಗೊತ್ತಿಲ್ಲ. ಮನದ ವೃತ್ತಿಯು ಈ ರೀತಿ ಇರುವಾಗ ಅದನ್ನು ಭಕ್ತಿಯೆನ್ನಬಹುದೇ? ॥74॥ ನಮ್ಮ ಭಕ್ತಿಯು ಅದೆಷ್ಟು ಶಕ್ತಿಯುತವಾಗಿದೆಯೋ ಅಷ್ಟೇ ನಮಗೆ ಪ್ರಾಪ್ತಿಯುಂಟಾಗುತ್ತದೆ. ಇದು ಎಲ್ಲ ಸಮಯದಲ್ಲೂ ನಿಶ್ಚಿತವೇ. ಅದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ॥75॥ ನಾವು ವಿಷಯಭೋಗಗಳಿಗಾಗಿ ಹಗಲು ರಾತ್ರಿ ಸಾಯಿಯ ಪಾಶದಲ್ಲಿ ಬಂಧಿತರಾಗಿ ಅವುಗಳನ್ನು ಪಡೆದೆವು. ಆದೆ ಯಾರು ಪರಮಾರ್ಥಕ್ಕಾಗಿ ಬಂದರೋ ಅವರು ಪರಮಾರ್ಥವನ್ನು ಪಡೆದರು. ॥76॥ ಅದು ಹಾಗಿರಲಿ. ಇಲ್ಲಿ ಮತ್ತೊಂದು ಕಥೆಯಿದೆ. ಸೋಮದೇವ ಸ್ವಾಮಿ ಎಂಬ ವ್ಯಕ್ತಿಯು ಸಾಯಿಯನ್ನು ಪ್ರತ್ಯಕ್ಷವಾಗಿ ಪರೀಕ್ಷಿಸಲು ಶಿರಡಿಗೆ ಬಂದನು. ॥77॥ ಸನ್ 1906ನೆಯ ಇಸವಿಯಲ್ಲಿ, ಉತ್ತರಕಾಶಿಲ್ಲಿ ಈ ಗೃಹಸ್ಥನು ಭಾಯೀಜಿಯನ್ನು ಭೇಟಿಮಾಡಿದನು. ಭಾಯೀಜಿಯು ಒಂದು ಧರ್ಮಶಾಲೆಯಲ್ಲಿ ತಂಗಿದ್ದನು. ॥78॥ ಭಾಯೀಜಿಯು ಹೆಸರುವಾಸಿಯಾದ ದಿವಂಗತ ದೀಕ್ಷಿತನ ಸೋದರನಾಗಿದ್ದನು. ಅವನು ಬದರಿ ಕೇದಾರ ಯಾತ್ರೆ ಮಾಡುತ್ತಿದ್ದಾಗ ಮಾರ್ಗದಲ್ಲಿ ಅವನನ್ನು ಭೇಟಿಯಾದನು. ॥79॥ ಬದರಿ ಕೇದಾರಗಳನ್ನು ಹಿಂದೆ ಬಿಟ್ಟು, ಭಾಯೀಜಿಯು ಕೆಳಗೆ ಬಂದನು. ಮಾರ್ಗಮಧ್ಯದಲ್ಲಿ ಅನೇಕ ವಿಶ್ರಾಂತಿಗೃಹಗಳನ್ನು ಅನೇಕ ಯಾತ್ರಿರ ಗುಂಪುಗಳನ್ನು ನೋಡಿದನು. ॥80॥ ಅವರಲ್ಲಿ ಒಬ್ಬನು, ಅನಂತರ ಹೆಸರುವಾಸಿಯಾದ ಹರಿದ್ವಾರದ ಸ್ವಾಮಿಯಾದನು. ಅವನು ಬಾಬಾರವರ ಮಾರ್ಗದರ್ಶನ ಪಡೆಯುವ ಅದೃಷ್ಟಶಾಲಿಯಾಗಿದ್ದನು. ॥81॥ ಅವನ ಈ ಕಥೆಯು ಬೋಧಪ್ರದವಾಗಿದೆ. ಅದು ಬಾಬಾರವರ ಸ್ವರೂಪವನ್ನು ದರ್ಶಿಸುತ್ತದೆ. ಅದು ಶ್ರೋತೃಗಳಿಗೆ ಸಂತಸವನ್ನು ನೀಡಿ ಎಲ್ಲರಿಗೂ ನಿಜವಾದ ಆನಂದವನ್ನು ತರುತ್ತದೆ. ॥82॥ ಭಾಯೀಜಿಯು ಪ್ರಾತರ್ವಿಧಿಗಾಗಿ ಹೋಗುತ್ತಿದ್ದಾಗ ಅವನು ಈ ಸ್ವಾಮೀಜಿಯನ್ನು ಭೇಟಿಯಾದನು. ಸಹಜವಾಗಿಯೇ ಮಾತನಾಡುತ್ತ ಪರಸ್ಪರ ಇಷ್ಟಪಡಲು ಪ್ರಾರಂಭಿಸಿದರ83॥ ಬುವಾನು ಉತ್ತರ ಕಾಶಿಯಲ್ಲಿದ್ದಾಗ, ಗಂಗೋತ್ರಿ ಕಣಿವೆಯ ಕೆಳಗಡೆ ಡೆಹರಾಡೂನಿನಿಂದ ಸುಮಾರು 70 ಕೋಶಗಳಷ್ಟು ದೂರದಲ್ಲಿ ಈ ಭೇಟಿಯು ನಡೆಯಿತು. ॥84॥ ಬುವಾನು ಪ್ರಾತಃಕಾಲದಲ್ಲಿ ಕೈಯಲ್ಲಿ ಒಂದು ತಂಬಿಗೆ ಹಿಡಿದು ಬಹಿರ್ದೆಶೆಗೆಂದು ಹೊರಟನು. ಭಾಯೀಜಿಯು ಸಹ ಅದೇ ಉದ್ದೇಶದಿಂದ ಅದೇ ಸ್ಥಳಕ್ಕೆ ಹೊರಟನು. ॥85॥ ಪ್ರಥಮವಾಗಿ ಇಬ್ಬರ ದೃಷ್ಟಿಯೂ ಒಂದಾಯಿತು. ಅನಂತರ ಮಾರ್ಗದ ಮಧ್ಯದಲ್ಲಿ ಪರಸ್ಪರ ಭೇಟಿಯಾದರು. ಪರಸ್ಪರ ಕುಶಲವನ್ನು ಸಂತೋಷದಿಂದ ಮತ್ತು ತೃಪ್ತಿಯಿಂದ ಹಂಚಿಕೊಂಡರು. ॥86॥ ಸಂಭಾಷಣೆಯಿಂದ ಪರಸ್ಪರ ಇಷ್ಟಪಡಲು ಪ್ರಾರಂಭಿಸಿದರು. ಮತ್ತು ಪರಸ್ಪರ ಅನ್ಯೋನ್ಯತೆಯಿಂದ ವಾರ್ತಾಲಾಪ ಮಾಡಿದರು. ॥87॥ "ಹರಿದ್ವಾರದಲ್ಲಿ ನಿಮ್ಮ ವಾಸ. ನಾಗಪುರದಲ್ಲಿ ನನ್ನ ವಾಸ. ನೀವೇನಾದರೂ ಆ ದಿಕ್ಕಿನಲ್ಲಿ ಬಂದರೆ ನಿಮ್ಮನ್ನು ದರ್ಶಿಸುವ ಸೌಭಾಗ್ಯವನ್ನು ನೀಡಿರಿ. ॥88॥ "ನೀವೇನಾದರೂ ನಿಮ್ಮ ಯಾತ್ರೆಯ ಮಧ್ಯೆ ಬಂದರೆ ನಮ್ಮ ಮನೆಯನ್ನು ಪವಿತ್ರಗೊಳಿಸಿ. ದರ್ಶನಭಾಗ್ಯವನ್ನು ಒದಗಿಸಿರಿ. ನಿಮಗಾಗಿ ಅಲ್ಪಸೇವೆ ಮಾಡುವ ಅವಕಾಶ ಒದಗಿಸಿಕೊಡಿರಿ. ॥89॥ "ದಯಮಾಡಿ ನನ್ನನ್ನು ಸ್ಮರಿಸಿ

ನಿಮ್ಮ ಪಾದಗಳನ್ನು ನಮ್ಮ ಮನೆಯವರೆಗೆ ಬೆಳೆಸಿರಿ. ಇದು ನನ್ನ ವಿನಂತಿ. ನಾರಾಯಣನು ಈ ಇಚ್ಛೆಯನ್ನು ಪೂರೈಸಲಿ." ॥90॥ ಈ ಸಂಭಾಷಣೆಯು, ಈ ರೀತಿಯಲ್ಲಿ ಸನ್ 1906ರಲ್ಲಿ ಉತ್ತರಕಾಶಿಯಲ್ಲಿ ನಡೆಯಿತು. ॥91॥ ಅವರಿಬ್ಬರೂ ಪರಸ್ಪರ ವಿಳಾಸಗಳನ್ನು ಬರೆದುಕೊಂಡರು. ಬಯಲು ಪ್ರದೇಶ ತಲುಪಿದ ಕೂಡಲೇ ಅವರು ತಮ್ಮ ತಮ್ಮ ದಾರಿಹಿಡಿದು ಹೊರಟರು. ॥92॥ ಐದು ವರ್ಷಗಳ ನಂತರ, ಸಾಯಿ ಸಮಾಗಮದ ವೇಳೆಯು ಕೂಡಿಬಂದಿತ್ತು. ಸ್ವಾಮಿಗೆ ಭಾಯೀಜಿಯನ್ನು ಭೇಟಿಮಾಡುವ ಉತ್ಕಟವಾದ ತವಕ ಉಂಟಾಯಿತು. ॥93॥ ಸನ್ 1911ನೆಯ ಇಸವಿಯಲ್ಲಿ ಸ್ವಾಮಿಯು ನಾಗಪುರಕ್ಕೆ ಬಂದನು. ಶ್ರೀಸಾಯಿನಾಥರ ಚರಿತ್ರೆಗಳನ್ನು ಕೇಳಿ ಅವನು ಪವಿತ್ರಾನಂದಭರಿತನಾದನು. ॥94॥ ಭಾಯೀಜಿಯು ಅವನಿಗೆ ಒಂದು ಪರಿಚಯದ ಪತ್ರವನ್ನು ಕೊಟ್ಟನು. ಅದರಿಂದ ಅವನು ಶಿರಡಿಕ್ಷೇತ್ರಕ್ಕೆ ಸುಖವಾಗಿ ತಲಪುವಂತಾಯಿತು. ಈ ರೀ ಪ್ರವಾಸದ ಯೋಜನೆಯನ್ನು ತಯಾರಿಸಿ ಸ್ವಾಮಿಯು ನಾಗಪುರದಿಂದ ಹೊರಟನು. ॥95॥ ಮನಮಾಡ್‌ನಲ್ಲಿ ಇಳಿದಾಗ ಕೋಪರಗಾಂವನ ರೈಲು ಸಿದ್ಧವಾಗಿತ್ತು, ಅಲ್ಲಿ ಅವನು ದರ್ಶನದ ಆನಂದವನ್ನು ಊಹಿಸಿ ಅನುಭವಿಸುತ್ತ ಒಂದು ಟಾಂಗಾದಲ್ಲಿ ಹೊರಟನು. ॥96॥ ನೀವು ಎಲ್ಲಿಯೇ ಹೋಗಲಿ ಸಂತರ ವರ್ತನೆ ಮತ್ತು ಚಲನವಲನಗಳು ಒಂದಕ್ಕಿಂತ ಮತ್ತೊಂದು ವಿಭಿನ್ನವಾಗಿರುತ್ತವೆ. ಅವು ಎಂದಿಗೂ ಎಲ್ಲ ಕಡೆಯೂ ಒಂದೇ ಆಗಿರುವುದಿಲ್ಲ. ॥97॥ ಒಬ್ಬ ಸಂತರ ಆಚರಣೆಯು ಮತ್ತೊಬ್ಬರ ರೀತಿಯಂತಿರುವುದಿಲ್ಲ. ಅದು ಅವರ ಯೋಗ್ಯಾಯೋಗ್ಯತೆಯನ್ನು ಪ್ರಮಾಣೀಕರಿಸುವ ಸಾಧನವಾಗಿರುವುದಿಲ್ಲ. ॥98॥ ಸಂತ ದರ್ಶನಕ್ಕೆಂದು ಮೊದಲು ಹೋದಾಗ ಈ ರೀತಿಯ ಕಾತರತೆ ಏಕೆ ಹೊಂದಿರಬೇಕು? ಯಾರೊಬ್ಬರು ಕೇವಲ ಅವರ ವರ್ತನೆಯನ್ನು ಮಾತ್ರ ನೋಡಲು ಹೋದಾಗ ತಮ್ಮ ಕಲ್ಯಾಣದಿಂದ ವಂಚಿತರಾಗುತ್ತಾರೆ. ॥99॥ ಆದರೆ ಸ್ವಾಮೀಜಿಯ ಮನಸ್ಸಿನ ವೃತ್ತಿಯು ಯಾವ ರೀತಿ ಇತ್ತೆಂದರೆ ಅಲ್ಲಿ ಅನೇಕ ತರ್ಕ–ಕುತರ್ಕಗಳು ಎದ್ದವು. ದೂರದಿಂದಲೇ ಶಿರಡಿಯ ಬಾವುಟಗಳನ್ನು ನೋಡಿದಾಗ ಅವನ ಕಲ್ಪನೆಯು ಗೊಂದಲಮಯವಾಯಿತು. ॥100॥ ಅವನ ಜೊತೆಯಲ್ಲಿದ್ದ ಉಳಿದ ಜನರೆಲ್ಲರೂ, ಮಸೀದಿಯ ಮೇಲೆ ಹಾರಾಡುತ್ತಿದ್ದ ಬಾವುಟವನ್ನು ದೂರದಿಂದ ನೋಡಿದ ಕೂಡಲೇ, ಬಹಳ ಪ್ರೀತಿಯಿಂದ ಅವುಗಳಿಗೆ ನಮಿಸಿದನು. ॥101॥ ಅವರ ಮನಸ್ಸುಗಳು ಅನಂತರ ದೊರಕುವ ಸಾಯಿದರ್ಶನದ ಬಗ್ಗೆ ಉತ್ಕಂಠಿತವಾಗಿದ್ದರೂ ಸಹ, ಅವರು ತಾವು ಕಂಡಂತಹ ಬಾವುಟಗಳಿಗೆ ಅಗೌರವ ತೋರುವುದನ್ನು ಸಹಿಸುತ್ತಿರಲಿಲ್ಲ. ॥102॥ ಬಾವುಟಗಳದರ್ಶನವು ಪ್ರೇಮಭಾವವನ್ನು ಸ್ಫುರಿಸುತ್ತದೆ. ಈ ಅನುಭವವು ಎಲ್ಲರಿಗೂ ತಿಳಿದಿರುವಂತಹುದೇ. ಅದೊಂದು ಭಕ್ತಿ ಪ್ರೇಮದ ಲಕ್ಷಣ, ವಿಲಕ್ಷಣವಾದದ್ದೇನಲ್ಲ. ॥103॥ ಆದರೆ, ಆ ಬಾವುಟಗಳನ್ನು ದೂರದಿಂದ ನೋಡಿದ ಕೂಡಲೇ ಅಲ್ಲಿ ಸ್ವಾಮಿಯ ಕುತ್ಸಿತ ಮನಸ್ಸಿನಲ್ಲಿ ಅನೇಕ ಕಲ್ಪನೆಗಳು ಹುಟ್ಟಿದವು. ಅವರ ಮನಸ್ಸಿನ ರಚನೆಯೇ ವಿಚಿತ್ರವಾದುದು. ॥104॥ "ಪತಾಕೆಗಳನ್ನು ಇಚ್ಛಿಸುವುದು ಸಾಧುತ್ವದ ಲಕ್ಷಣವೇನು? ದೇವಾಲಯಗಳ ಮೇಲೆ ಬಾವುಟಗಳನ್ನು

ಹಾರಿಸುವುದು ಸಾಧುತ್ವದ ಕೊರತೆಯನ್ನು ತೋರಿಸುತ್ತದೆ. ॥105॥ ಒಂದು ವೇಳೆ ಒಬ್ಬ ಸಂತನು ಈ ರೀತಿ ಗೌರವವನ್ನು ಅಪೇಕ್ಷಿಸಿದರೆ, ಅದು ಕೇವಲ ಲೋಕಪ್ರಿಯತೆಗಾಗಿ ಅಷ್ಟೆ, ಅಂತಹ ಸಾಧುವಿನ ಮಹತ್ವವನ್ನು ನಾನು ಮಾನ್ಯ ಮಾಡುವುದಿಲ್ಲ. ಅದು ಅವನ ಅಪರಿಪಕ್ವತೆಯ ಕುರುಹು." ॥106॥ ಸಾರಾಂಶದಲ್ಲಿ, ಸ್ವಾಮಿಯು ತನ್ನ ಮನಸ್ಸಿಗೆ ಬಂದ ಅಭಿಪ್ರಾಯದಂತೆ, ಸಂತರ ವರ್ತನೆಯನ್ನು ನಿಶ್ಚಯಿಸಿದನು. ಮತ್ತು ಸಾಯಿಯ ಅನುಗ್ರಹವನ್ನು ತೆಗೆದುಕೊಳ್ಳದಿರಲು ನಿಶ್ಚಯಿಸಿದನು. ॥107॥ ಇಲ್ಲಿಗೆ ಬಂದುದು ನಿಷ್ಪ್ರಯೋಜಕವಾಯಿತೆಂದು ಅವನು ಯೋಚಿಸಿದನು. ಸ್ವಾಮಿಯು ಬಹಳ ಬೇಸರಪಟ್ಟು ಕೂಡಲೇ ಅಲ್ಲಿಂದಲೇ ಹಿಂತಿರುಗಬೇಕೆಂದು ನಿರ್ಧರಿಸಿದನು. ॥108॥ "ಅಗ್ಗದ ಜನಪ್ರಿಯತೆಯನ್ನು ಗಳಿಸುವುದು ಒಂದು ರೀತಿಯ ದುರಭಿಮಾನವೇ ಸರಿ. ಒಬ್ಬ ಸಂತನಿಗೆ ಇಂತಹ ಮೋಹ ಅದೇಕೆ? ಆ ಬಾವುಟಗಳನ್ನು ನೋಡಿದರೆ ಮತ್ತೆ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ॥109॥ "ಈ ಸಂತನು ತನ್ನ ದೊಡ್ಡತನವನ್ನು ತೋರಿಸಲು ಬಾವುಟಗಳನ್ನು ಹಾರಿಸುತ್ತ ಜನರನ್ನು ತನ್ನ ದರ್ಶನಕ್ಕಾಗಿ ಆಕರ್ಷಿಸುತ್ತಾನೆ. ಇದು ಸಂತಗುಣದ ಕೊರತೆಯನ್ನು ತೋರಿಸುತ್ತದೆ. ನಾನು ದರ್ಶನಕ್ಕೆ ಏಕೆ ಹೋಗಬೇಕು? ॥110॥ 'ಅಂತಹ ದರ್ಶನದಿಂದ ನನಗೆ ಎಂತಹ ಮನಃಶಾಂತಿ ದೊರೆತೀತು? ಇದು ಒಂದು ಡಂಭಾಚಾರದ ಧ್ವಜದ ಪ್ರದರ್ಶನ. ಇದರಿಂದ ನನಗೆ ಯಾವ ರೀತಿಯ ಸಮಾಧಾನವೂ ದೊರಕುವುದಿಲ್ಲ." ॥111॥ ಅವನು ಹೇಳಿದನು, "ನಾನು ಇಲ್ಲಿಂದಲೇ ಹಿಂತಿರುಗಿ ಮನೆಗೆ ಹೋಗುವುದೇ ಒಳ್ಳೆಯದು. ಅವನನ್ನು ನೋಡುವುದು ಅಂತಹ ಒಳ್ಳೆಯ ಯೋಚನೆಯಲ್ಲ. ನನಗೆ ನಿಜವಾಗಿಯೂ ಅತೃಪ್ತಿಯುಂಟಾಗಿದೆ." ॥112॥ ಅನಂತರ ಅವನ ಸಹಪ್ರಯಾಣಿಕರು ಅವನಿಗೆ ಹೇಳಿದರು. "ನೀನು ಇಷ್ಟು ದೂರ ಏಕೆ ಬಂದೆ? ಈ ಬಾವುಟಗಳು ನಿನ್ನ ಮನಸ್ಸನ್ನು ಇಷ್ಟು ಗಲಿಬಿಲಿ ಏಕೆ ಮಾಡಬೇಕು? ॥113॥ "ನಾವು ಈಗ ಶಿರಡಿಯ ಸಮೀಪ ಬಂದಿದ್ದೇವೆ. ನೀನು ಇನ್ನು ರಥ, ಪಾಲಕೀ (ಪಲ್ಲಕ್ಕಿ), ಕುದುರೆ ಮತ್ತೆಲ್ಲ ಸರಂಜಾಮುಗಳನ್ನು ನೋಡಿ ಇನ್ನೂ ಮತ್ತೆಷ್ಟು ತಳಮಳಗೊಳ್ಳುತ್ತೀಯೆ?" ॥114॥ ಇದನ್ನು ಕೇಳಿ ಸ್ವಾಮಿಯು ಮತ್ತಷ್ಟು ಉದ್ರೇಕಗೊಂಡನು. ಈ ರೀತಿಯ ಸಾಧುಗಳನ್ನು ವಾದ್ಯ ನಗಾರಿಗಳಿಂದ, ಪಲ್ಲಕ್ಕಿ, ಕುದುರೆ ಅವುಗಳಿಂದ ಕೂಡಿರುವ ಅಬ್ಬರ ಆಡಂಬರಗಳನ್ನು ನೋಡಿದ್ದೇನೆ. ॥115॥ ಈ ರೀತಿ ಯೋಚಿಸಿ, ಸೋಮದೇವಜಿಯು ಹಿಂದಕ್ಕೆ ಹೊರಟನು. "ಶಿರಡಿಗೆ ಬರುವ ವಿಚಾರ ಬಂದದ್ದೇ ಒಳ್ಳೆಯದಾಗಲಿಲ್ಲ. ಈಗ ಮತ್ತೆ ನದಿಯ ದಡಕ್ಕೆ ಹೋಗುವ ರಸ್ತೆಯನ್ನು ಹಿಡಿಯೋಣ." ॥116॥ ಅನಂತರ, ಅವನ ಸಹಪ್ರಯಾಣಿಕರು ಅವನನ್ನು ಒತ್ತಾಯ ಮಾಡಲು ಪ್ರಾರಂಭಿಸಿದರು. "ಇಲ್ಲಿಯವರೆಗೆ ಬಂದದ್ದಾಗಿದೆ, ಹಿಂತಿರುಗಿ ಹೋಗಬೇಡ. ॥117॥ "ನಾವು ಇಲ್ಲಿಯವರೆಗೆ ಬಂದಾಗಿರುವುದರಿಂದ ಮುಂದೆ ಹೋಗೋಣ. ಈ ರೀತಿಯ ದುರುದ್ದೇಶಪೂರಿತವಾದ ಅಥವಾ ಹಾನಿಕಾರಕ ಯೋಚನೆಗಳನ್ನು ಮಾಡಬೇಡ. ಮಸೀದಿಯ ಮೇಲೆ ಹಾರಾಡುತ್ತಿರುವ ಬಾವುಟಗಳಿಗೂ ಸಾಧುವಿಗೂ ಏನೂ ಸಂಬಂಧವಿಲ್ಲ. ॥118॥ "ಈ

ಸಂತನಿಗೆ ಬಾವುಟಗಳು ಬೇಡ, ಲೋಕಪ್ರಿಯತೆಯಾಗಲೀ, ಮರ್ಯಾದೆಗಳಾಗಲೀ ಬೇಡ. ಆದರೆ ಈ ಗ್ರಾಮಸ್ಥರು ಆಭೂಷಣಾಲಂಕಾರಗಳನ್ನು ಇಚ್ಛೆಪಡುತ್ತಾರೆ. ಅದು ಅವರ ಭಕ್ತಿಗೆ ಪ್ರಮಾಣವಷ್ಟೆ. ॥119॥ "ಬಾವುಟಗಳ ಕಡೆ ನೋಡಬೇಡ. ಸುಮ್ಮನೆ ಹೋಗಿ ದರ್ಶನ ಪಡೆ. ಅಲ್ಲಿ ಒಂದು ಕ್ಷಣವೂ ನಿಲ್ಲಬೇಡ. ಅನಂತರ ಕೂಡಲೇ ನೀನು ಅಲ್ಲಿಂದ ಹೊರಡಬಹುದು." ॥120॥ ಅಷ್ಟರಲ್ಲಿ, ಅವರು ಶಿರಡಿಗೆ ಹೋಪದಲ್ಲಿಯೇ ಇದ್ದುದರಿಂದ, ಈ ಸರಳ ಉಪದೇಶವನ್ನು ಕೇಳಿ ಅವನು ಮನಸ್ಸಿನ ಅಶಾಂತಿಯನ್ನು ತೆಗೆದುಹಾಕಿ ಅನಂತರ ಮನಸ್ಸಿನಲ್ಲಿ ತಳಮೊಳ್ಳಬಾರದೆಂದು ವಿಚಾರಮಾಡಿದನು. ॥121॥ ಅದು ಹಾಗಿರಲಿ. ಶ್ರೀಸಮರ್ಥರನ್ನು ನೋಡಿದ ಕೂಡಲೇ ಬುವಾನು ಕರಗಿಹೋದನು. ಅವನ ಕಣ್ಣುಗಳು ಪ್ರೇಮಾಶ್ರುಗಳಿಂದ ತುಂಬಿಕೊಂಡವು. ಅವನ ಗಂಟಲು ಗದ್ಗದಗೊಂಡಿತು. ॥122॥ ಅವನ ಚಿತ್ತವು ಸುಪ್ರಸನ್ನಗೊಂಡಿತು. ಕಣ್ಣುಗಳು ಉಲ್ಲಾಸದಿಂದ ಸುಖಸಂಪನ್ನಗೊಂಡವು. ಅವನು ಬಾಬಾರವರ ಚರಣಧೂಲಿಯಲ್ಲಿ ಸ್ನಾನಮಾಡಲು ಉತ್ಕಂಠಿತನಾದನು. ॥123॥ ಆ ಸುಂದರ ಮನೋಹರ ರೂಪವನ್ನು ನೋಡಿ ಅವನ ಮನಸ್ಸು ಮತ್ತು ನಯನಗಳು ಆಶ್ಚರ್ಯಚಕಿತವಾದವು. ಮತ್ತು ಅವನು ತೀವ್ರವಾಗಿ ದೃಷ್ಟಿಸುತ್ತ ನಿಂತುಬಿಟ್ಟನು. ಅವನು ಮೋಹದಿಂದ ಆವರಿಸಲ್ಪಟ್ಟನು. ॥124॥ ಕುತರ್ಕಗಳು ಅವನ ಮನದಿಂದ ಜಾರಿಹೋದವು. ಅವನ ಚಿತ್ತವು ದರ್ಶನದ ಆನಂದದಿಂದ ಅರಳಿಹೋಯಿತು. ಬುವಾನು ಆಳವಾಗಿ ತಲ್ಲೀನನಾದನು. ॥125॥ ಆ ಮಹಾನುಭಾವನನ್ನು ನೋಡುತ್ತ ಸೋಮದೇವನು ಪರಮ ಆಹ್ಲಾದಹೊಂದಿದನು. ಅವನು ಆತ್ಮಾರಾಮನಲ್ಲಿ ಸ್ಥಿರವಾಗಿ ಅಲ್ಲಿಯೇ ಎಂದೆಂದಿಗೂ ನೆಲಸಲು ಇಚ್ಛಿಸಿದನು. ॥126॥ ಕೇವಲ ದರ್ಶನ ಮಾತ್ರದಿಂದಲೇ ಎಲ್ಲ ಸಂಶಯಗಳೂ ನಿವೃತ್ತಿಹೊಂದಿದವು. ಅವನ ಮನಸ್ಸು ಪ್ರಶಾಂತವಾಯಿತು. ದ್ವೈತಭಾವವು ಅವನನ್ನು ತೊರೆಯಿತು. ಅವನು ಪೂರ್ಣಐಕ್ಯತಾಭಾವವನ್ನು ಅನುಭವಿಸಿದನು. ॥127॥ ಅವನ ವಾಕ್ಕು ನಿಶ್ಶಬ್ದವಾಗಿ ಮೌನದಿಂದ ತುಂಬಿತು. ಕಣ್ಣುಗಳು ಮಿಟುಕಿಸದೇ ಹೋದವು. ಅಂತರಂಗ ಬಹಿರಂಗಗಳಲ್ಲಿ ಚೈತನ್ಯವು ಘನವಾಗಿ ಆವರಿಸಿತು. ಅವನು ಸಮರಸಭಾವದ ಸಮಾಧಾನ ಹೊಂದಿದನು. ॥128॥ ಮೊದಲು, ಬಾವುಟಗಳನ್ನು ನೋಡಿ ಹಿಂತಿರುಗಲು ಇಚ್ಛಿಸಿದ್ದನು. ಅನಂತರ ಅವನ ಕಣ್ಣುಗಳು ಪ್ರೇಮೋದ್ರೇಕದಿಂದ ತುಂಬಿದವು. ಎಂಟು ಸಾತ್ವಿಕ ಭಾವಗಳು ಮುನ್ನುಗ್ಗಿಬಂದವು. ಅವನು ಬಾಬಾರವರ ಪ್ರೇಮದಿಂದ ಆವರಿಸಲ್ಪಟ್ಟನು. ॥129॥ "ಎಲ್ಲಿ ಮನಸ್ಸು ಪೂರ್ಣವಾಗಿ ಲೀನವಾಗಿದೆಯೋ ಅದೇ ನಮ್ಮ ನಿವಾಸ." ತನ್ನ ಸ್ವಂತ ಗುರುವಿನ ಮಾತುಗಳನ್ನು ನೆನಪಿಸಿಕೊಂಡನು. ಬುವಾನು ಪ್ರೇಮದಿಂದ ಉತ್ಕಂಠಿತನಾದನು. ॥130॥ ಬುವಾನು ನಿಧಾನವಾಗಿ ಮುಂದೆ ಬಂದನು. ಅವನು ಹಾಗೆ ಮಾಡುತ್ತಿದ್ದ ಹಾಗೆಯೇ ಮಹಾರಾಜರು ಕೋಪಗೊಂಡರು. ಅವರು ಬೈಗುಳ ಸುರಿಮಳೆಯನ್ನೇ ಕರೆದರು. ಅದು ಬುವಾನ ಪ್ರೀತಿಯನ್ನು ದ್ವಿಗುಣಗೊಳಿಸಿತು. ॥131॥ ಸಮರ್ಥ ಬಾಬಾರವರ ವರ್ತನೆಯು ವಿಚಿತ್ರವಾಗಿತ್ತು, ಅವರು ಒಂದು ವಿಲಕ್ಷಣರೂಪವನ್ನು ಧರಿಸಿ ನರಸಿಂಹಾವತಾರವನ್ನು ಪ್ರದರ್ಶಿಸಿದರು.

ಅದೊಂದು ಹತ್ತಿರದ ಸಾಮ್ಯತೆಯಾಗಿತ್ತು. ॥132॥ "ನನ್ನ ಆಷಾಢಭೂತಿತನವನ್ನು ನನ್ನಲ್ಲಿಯೇ ಬಿಡು. ಹೊರಡು. ನಿನ್ನ ಮನೆಗೆ ಹಿಂತಿರುಗು, ಎಚ್ಚರ! ಮತ್ತೆ ಏನಾದರೂ ನನ್ನ ಮಸೀದಿಗೆ ಹಿಂತಿರುಗಿ ಬಂದೀಯೆ! ॥133॥ "ಮಸೀದಿಯ ಮೇಲೆ ಪತಾಕೆಗಳನ್ನು ಹಾರಿಸುವವನನ್ನು ದರ್ಶನ ಮಾಡುವ ಅವಶ್ಯಕತೆ ನಿನಗೇನಿದೆ? ಇದು ಸಂತರ ಲಕ್ಷಣವೇನು? ಇಲ್ಲಿ ಒಂದು ಕ್ಷಣವೂ ನಿಲ್ಲಬೇಡ!" ॥134॥ ಅದು ಹಾಗಿರಲಿ. ನಂತರ ಈ ಸ್ವಾಮಿಯು, ಸಂಶಯಗ್ರಸ್ತ ಚಿತ್ತವುಳ್ಳವನಾಗಿ ಸಭಾಮಂಟಪಕ್ಕೆ ಪ್ರವೇಶಿಸಿದನು. ಸಾಯಿಯ ಮೂರ್ತಿಯನ್ನು ದೂರದಿಂದಲೇ ನೋಡಿದ. ಸ್ವಾಮಿಗೆ ಸುಮ್ಮನೆ ಇರಲಾಗಲಿಲ್ಲ. ॥135॥ "ಈ ಮಾತುಗಳು ನನ್ನ ಸ್ವಂತ ವಿಚಾರಗಳ ಪ್ರತಿಧ್ವನಿಯು" ಇದನ್ನು ಕೇಳಿ, ಆ ಶಬ್ದಗಳು ಅಕ್ಷರಶಃ ಕಿವಿಯ ಮೇಲೆ ಬಿದ್ದು, ಬುವಾನು ನಾಚಿಕೆಯಿಂದ ಬೇರೂರಿದನು. ಮಹಾರಾಜರು ಅಂತರ್ಜ್ಞಾನಿಯೆಂಬುದನ್ನು ಅರಿತನು. ॥136॥ "ಅದೆಂತಹ ಮೂರ್ಖ ನಾನು! ಮತ್ತು ಮಹಾರಾಜರು ಅದೆಷ್ಟು ಬುದ್ಧಿವಂತರು! ಅವರ ಬಗೆಗಿನ ನನ್ನ ಆಲೋಚನೆಗಳು ಅದೆಷ್ಟು ತಪ್ಪಾಗಿದ್ದವು! ಅವರ ಅಂತರಂಗವು ಅದೆಷ್ಟು ಶುದ್ಧವಾಗಿದೆ! ॥137॥ ಸಾಯಿಯು ಕೆಲವರನ್ನು ಆಲಂಗಿಸುತ್ತಿದ್ದರು. ಕೆಲವರನ್ನು ತಮ್ಮ ಕೈಯಿಂದ ಸ್ಪರ್ಶಿಸುತ್ತಿದ್ದರು. ಕೆಲವರಿಗೆ ಆಶ್ವಾಸನೆ ನೀಡುತ್ತಿದ್ದರು. ಮತ್ತು ಕೆಲವರ ಕಡೆ ಕೃಪಾವಲೋಕನ ಮಾಡುತ್ತಿದ್ದರು. ॥138॥ ಅವರು ಕೆಲವರನ್ನು ಹಾಸ್ಯವದನರಾಗಿ ನೋಡುತ್ತಿದ್ದರು. ಕೆಲವರು ದುಃಖಿತರಾದವರಿಗೆ ಸಾಂತ್ವನ ನೀಡುತ್ತಿದ್ದರು. ಕೆಲವರಿಗೆ ಉದಿ ಪ್ರಸಾದ ನೀಡುತ್ತಿದ್ದರು. ಈ ರೀತಿ ಅವರು ಎಲ್ಲರನ್ನೂ ಸಮಾಧಾನಪಡಿಸುತ್ತಿದ್ದರು. ॥139॥ ಇದು ಹೀಗಿರಲು, ಅವರು ಕೇವಲ ನನ್ನಲ್ಲಿ ಮಾತ್ರ ಏಕೆ ಕ್ರೋಧಿತರಾದರು? ಅದು ನನ್ನ ಹಿಂದಿನ ವರ್ತನೆಯಿಂದ ಆಗಿರಬೇಕ ಅದು ಕೋಪವಲ್ಲ. ಆದರೆ ನನಗೆ ನೀಡಿದ ಬೋಧೆ. ಅದು ನನಗೆ ಲಾಭದಾಯಕವಾಯಿತು. ॥140॥ ಅದು ಹಾಗಿರಲಿ. ಅನಂತರ ಅಂದುಕೊಂಡಂತೆಯೇ ನಡೆಯಿತು. ಸ್ವಾಮಿಯು ಬಾಬಾರವರಲ್ಲಿ ಅದೆಷ್ಟು ಲೀನನಾದನೆಂದರೆ, ಸಾಯಿಯ ಕೃಪೆಯಿಂದ ಅವನು ನಿರ್ಮಲನಾದನು ಮತ್ತು ಬಾಬಾರವರ ಚರಣಗಳಲ್ಲಿ ಅನನ್ಯನಾಗಿ ನಿರಂತರವಾಗಿ ನೆಲಸಿದನು. ॥141॥ ಸಾಯಿಭಕ್ತಿಪ್ರಭಾವದ ಶಕ್ತಿಯು ಎಲ್ಲ ತರಹದ ದುರ್ವ್ಯಸನಗಳ ಮಾತ್ಸರ್ಯವನ್ನೂ ದೂರಮಾಡಲಿ ಶಾಂತಿ, ಶ್ರೀ ಮತ್ತು ಧೈರ್ಯಗಳು ಹುಟ್ಟುವಂತೆ ಮಾಡಲಿ. ತನ್ನ ಭಕ್ತರೆಲ್ಲರೂ ತಮ್ಮ ತಮ್ಮ ಗುರಿ ತಲಪುವಂತಾಗಲಿ. ॥142॥ ಈ ಚರ ಮತ್ತು ಅಚರ ವಿಶ್ವವು ದೇವಗಂಧರ್ವರು, ಯಕ್ಷರು, ಸುರ ಮತ್ತು ಅಸುರರು. ಇವರಿಂದ ತುಂಬಿಹೋಗಿದೆ. ಅಖಿಲವಿಶ್ವದಲ್ಲಿ ಸಾಯಿಯು ಸರ್ವವ್ಯಾಪಿಯು ಮತ್ತು ನಿರಂತರ ಸತ್ಯವಾಗಿ ತುಂಬಿರುವರು. ॥143॥ ಅವರೇನಾದರೂ ಆಕಾರವನ್ನು ಸ್ವೀಕರಿಸದೇ ಇದ್ದಲ್ಲಿ ಸದಾ ನಿರಾಕಾರವಾಗಿ ಇದ್ದಿದ್ದರೆ, ಆಗ ನಾವು ಮಾನವ ಸಮುದಾಯವು ಅವರ ಸಹಾಯವನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಲವಮಾತ್ರವೂ ಉಪಕೃತರಾಗುತ್ತಿರಲಿಲ್ಲ. ॥144॥ ತಾತ್ಪರ್ಯವೆಂದರೆ, ಸಾಯಿಯು ಈ ಲೀಲಾವಿಗ್ರಹರೂಪವನ್ನು ಧರಿಸದಿದ್ದರೆ, ಲೋಕ ಸಂಗ್ರಹ ಮಾಡದೇ ಇದ್ದಿದ್ದಲ್ಲಿ ಅಥವಾ ದುಷ್ಟ, ದುರ್ಜನರನ್ನು,

ನಿಗ್ರಹಿಸದಿದ್ದರೆ, ತಮ್ಮ ಭಕ್ತರನ್ನು ಯಾವ ರೀತಿ ಅನುಗ್ರಹ ಮಾಡಲು ಸಾಧ್ಯವಾಗುತ್ತಿತ್ತು? ॥145॥ ಈಗ ಈ ಅಧ್ಯಾಯವು ಕೊನೆಯಾಗುತ್ತಿರುವಾಗ ನನಗೆ ಮತ್ತೊಂದು ಪ್ರಸಂಗವು ನೆನಪಿಗೆ ಬಂದಿದೆ. ಅದು ಸಾಯಿಯ ಸದುಪದೇಶಗಳಿಗೆ ಉದಾಹರಣೆಯಾಗಿದೆ. ಆದುದರಿಂದ ಅದನ್ನು ಮನನಮಾಡುವವರಿಗೆ ಅದು ಹಿತಕಾರಿಯಾಗಿರುತ್ತದೆ. ॥146॥ ಆ ವೃತ್ತಾಂತವು ಬಹಳ ಸಣ್ಣದು. ಅದರ ಸ್ಮರಣೆಯೂ ಅವರಿಗೆ ಕಲ್ಯಾಣಕಾರಿಯಾಗಿರುತ್ತದೆ. ಆದ್ದರಿಂದ ಶ್ರೋತೃಗಳೇ, ಕ್ಷಣಕಾಲ ನಿಮ್ಮ ಗಮನವನ್ನು ಹರಿಸಿರೆಂದು ಪ್ರಾರ್ಥಿಸುತ್ತೇನೆ. ॥147॥ ಒಮ್ಮೆ, ಭಕ್ತದ ಮಾಳಸಾಪತಿಯು ನಾನಾಸಾಹೇಬನ ಜೊತೆಯಲ್ಲಿ ಮಸೀದಿಯಲ್ಲಿ ಕುಳಿತಿದ್ದನು. ಅಲ್ಲಿ ನಡೆದಂತಹ ಚಮತ್ಕಾರವನ್ನು ಕೇಳಿರಿ. ॥148॥ ಸಮರ್ಥ ಸಾಯಿಯವರ ದರ್ಶನಕ್ಕಾಗಿ ವೈಜಾಪೂರದ ನಿವಾಸಿಯಾದ ಒಬ್ಬ ಶ್ರೀಮಂತ ಗೃಹಸ್ಥನು ತನ್ನ ಕುಟುಂಬದ ಸಮೇತನಾಗಿ ಬಂದನು. ॥149॥ ಸ್ತ್ರೀಯರನ್ನು ಬುರ್ಖಾದಲ್ಲಿ ನೋಡಿ ನಾನಾನು ತನ್ನ ಮನದಲ್ಲಿಯೇ ಸಂಕೋಚಪಟ್ಟು ಎದ್ದು ಹೊರಡಬೇಕೆಂದು ಯೋಚಿಸಿದನು. ಅವರಿಗೆ ಮತ್ತಷ್ಟು ಜಾಗ ಮತ್ತಷ್ಟು ಸ್ವಾತಂತ್ರ್ಯ ಮತ್ತು ತೃಪ್ತಿಯನ್ನು ನೀಡಬಹುದೆಂದುಕೊಂಡನು. ॥150॥ ಆದುದರಿಂದ, ನಾನಾನು ಪಕ್ಕಕ್ಕೆ ಸರಿದು ಏಳಲು ಹೋದಾಗ ಬಾಬಾರವರು ಅವನನ್ನು ತಡೆದರು. ಅವರು ಹೇಳಿದರು, "ಯಾರ್ಯಾರು ಬರಲಿಚ್ಛಿಸುವರೋ ಅವರು ಮೇಲೆ ಬರುತ್ತಾರೆ. ನೀನು ಸ್ವಸ್ಥ ಮನಸ್ಸಿನಿಂದ ಕುಳಿತುಕೊ." ॥151॥ "ಅವನೂ ದರ್ಶನಕ್ಕಾಗಿ ಬಂದನು. ಆದರೆ ನೀವು ಕೂಡ ಬಂದಿರಿ. ಏನೂ ತೊಂದರೆಯಿಲ್ಲ" ಎಂದು ಅವರಿಗೆ ಸಲಹೆನೀಡಲಾಯಿತು. ಅವರು ಮೇಲೆ ಬರಬಾಬಾರವರಿಗೆ ವಂದಿಸಿದರು. ॥152॥ ಅವರಲ್ಲೊಬ್ಬ ಮಹಿಳೆಯು ವಂದಿಸುತ್ತಿರುವಾಗ ಬುರ್ಖಾವನ್ನು ಮೇಲೆ ಎತ್ತಿದಳು. ಅವಳ ಅಸೀಮ ಸೌಂದರ್ಯವನ್ನು ಕಂಡು ನಾನಾನು ಮನಸ್ಸಿನಲ್ಲಿಯೇ ಮೋಹಭರಿತನಾದನು. ॥153॥ ಎಲ್ಲ ಜನರ ಎದುರಿಗೆ ಅವಳ ಕಡೆ ಬಹಿರಂಗವಾಗಿನೋಡಲು ಸಂಕೋಚಪಟ್ಟನು. ಆದರೆ ಅಂತರಂಗದಲ್ಲಿಯೇ ಆಸೆಪಟ್ಟನು. ಆದರೆ ಆ ರೀತಿ ವರ್ತಿಸಲು ಹೇಗೆ ಸಾಧ್ಯ? ಅವನು ತನ್ನ ಮೋಹಪರವಶತೆಯನ್ನು ತಡೆಯಲು ಅಸಮರ್ಥನಾದನು. ॥154॥ ಬಾಬಾರವರ ಸನ್ನಿಧಿಯಲ್ಲಿ ಅವನು ಅಂತರಂಗದಲ್ಲಿಯೇ ಲಜ್ಜಿತನಾದನು. ಆದ್ದರಿಂದ ಅವನು ತನ್ನ ಮುಖವನ್ನು ಎತ್ತಲಿಲ್ಲ. ಆದರೆ ಕಣ್ಣುಗಳು ಮಾತ್ರ ಅಲೆದಾಡಿದವು. ನಾನಾನು ಸಂದಿಗ್ಧತೆಯಲ್ಲಿ ಮುಳುಗಿದನು. ॥155॥ ಇದು ನಾನಾನ ಅಂತರಂಗದ ಡೋಲಾಯಮಾನವಾದ ವೃತ್ತಿಯಾಗಿತ್ತು. ಸರ್ವಾಂತರ್ಯಾಮಿಯಾದ ಬಾಬಾರವರಿಗೆ ಎಲ್ಲವೂ ತಿಳಿದಿತ್ತು. ಇತರರಿಗೆ ಅದು ಹೇಗೆ ತಿಳಿಯುತ್ತದೆ? ಅವರು ಆ ಪದಗಳ ಅರ್ಥದ ಗೋಜುಬಿಡಿಸಬೇಕಾಯಿತು. ॥156॥ ಈ ರೀತಿ ಗಾಬರಿಗೊಂಡ ನಾನಾನ ಮನಸ್ಸನ್ನು ತಿಳಿದು, ಬಾಬಾರವರು ಅವನನ್ನು ಸಹಜ ಸ್ಥಿತಿಗೆ ಕರೆತರಲು ನಿಶ್ಚಯಿಸಿದರು. ಅವರು ನೀಡಿದ ಉಪದೇಶವನ್ನು ಕೇಳಿರಿ. ॥157॥ "ನಾನಾ, ನಿನ್ನಮನಸ್ಸು ಏಕೆ ಕದಡಿಹೋಗಿದೆ? ಇಂದ್ರಿಯಗಳು ತಮ್ಮ ನಿಜಧರ್ಮದಂತೆ ವರ್ತಿಸಲು ಬಿಡು. ಅವುಗಳ ಮಧ್ಯೆ ಪ್ರವೇಶಿಸಬೇಡ. ಅದರಲ್ಲಿ ಹಾನಿಯೇನೂ ಇಲ್ಲ. ॥158॥ "ಬ್ರಹ್ಮದೇವನು

ಈ ಸುಂದರ ವಿಶ್ವವನ್ನು ಸೃಷ್ಟಿಸಿದ್ದಾನೆ. ಅದರ ಸೌಂದರ್ಯವನ್ನು ಶ್ಲಾಘಿಸುವುದು ನಮ್ಮ ಕರ್ತವ್ಯ. ಇಲ್ಲದಿದ್ದರೆ ಸೃಷ್ಟಿಯ ರಸಿಕತೆಯು ವ್ಯರ್ಥವಾಗುತ್ತದೆ. ಮನಸ್ಸು ನಿಧಾನವಾಗಿ, ಕ್ರಮೇಣ ಸ್ಥಿರವಾಗಿಯೂ ಶಾಂತವಾಗಿಯೂ ನಿಲ್ಲುತ್ತದೆ. ॥159॥ "ಯಾವಾಗ ಮುಂದಿನ ಬಾಗಿಲು ತೆರೆದಿದೆಯೋ, ಆಗ ಹಿಂದಿನ ಬಾಗಿಲಿನಿಂದ ಏಕೆ ಹೋಗಬೇಕು? ಎಲ್ಲಿ ಪರಿಶುದ್ಧ ಅಂತರಂಗವಿದೆಯೋ ಅಲ್ಲಿ ಯಾವುದೇ ರೀತಿಯ ಕಷ್ಟವಿರುವುದಿಲ್ಲ. ॥160॥ "ನಮ್ಮ ಅಂತರಂಗದಲ್ಲಿ ಕೆಟ್ಟ ಯೋಚನೆ ಇಲ್ಲದಿರುವಾಗ, ನಾವು ಏಕೆ ಇತರರಿಗಾಗಿ ಹೆದರಬೇಕು? ಕಣ್ಣುಗಳು ತಮ್ಮ ಕೆಲಸ ಮಾಡಬಹುದು. ಹಾಗಿರುವಾಗ ನೀನು ಏಕೆ ಪೇಚಾಡಬೇಕು?" ॥161॥ ಮಾಧವರಾವನು ಅಲ್ಲಿಯೇ ಇದ್ದನು. ಸ್ವಾಭಾವಿಕವಾಗಿಯೇ ಅವನಿಗೆ ಕುತೂಹಲದ ಮನಸ್ಸು ಇತ್ತು. ತನ್ನ ಕೌತುಕವನ್ನು ತೃಪ್ತಿಪಡಿಸಲು ಅವನು ಆ ಪದಗಳ ಭಾವದ ಬಗ್ಗೆ ಕೇಳಿದನು. ॥162॥ ಮಾಧವರಾವನು ಈ ರೀತಿ ಕೇಳಿದಾಗ ನಾನಾ ಹೇಳಿದನು, "ಈಗ ಸದ್ಯಕ್ಕೆ ಸ್ವಲ್ಪ ಸುಮ್ಮನಿರು. ಬಾಬಾರವರ ಮನೋಗತವನ್ನು ನಾವು ವಾಡಾಗೆ ಹೋಗುವಾಗ ವಿವರಿಸುತ್ತೇನೆ॥163॥ ಕ್ಷೇಮ-ಕುಶಲವಾರ್ತೆಗಳ ನಂತರ ಸಾಯಿ ಸಮರ್ಥರಿಗೆ ಅಭಿವಂದನೆ ಮಾಡಿ ನಾನಾನು ಮಾಧವರಾವನ ಸಮೇತ ತನ್ನ ಮನೆಗೆ ಹಿಂತಿರುಗಲು ಹೊರಟನು. ॥164॥ ಅವನು ಕೂಡಲೇ ನಾನಾನನ್ನು ಪ್ರಶ್ನಿಸಿದನು, "ಮನಸ್ಸು ನಿಧಾನವಾಗಿ, ಕ್ರಮೇಣ ಸ್ಥಿರವಾಗಿಯೂ ಶಾಂತವಾಗಿಯೂ ನಿಲ್ಲುತ್ತದೆ" ಎಂಬ ಬಾಬಾರವರ ಮಾತುಗಳ ಅರ್ಥವೇನು? ಅದರ ಸ್ಪಷ್ಟವಾದ ಅರ್ಥವನ್ನು ವಿವರಿಸು." ॥165॥ ನಾನಾಗೆ ಅದರ ಅರ್ಥವನ್ನು ವಿವರಿಸುವ ಮನಸ್ಸಾಗಲಿಲ್ಲ. ಆ ವಿಷಯವನ್ನು ತಪ್ಪಿಸಲು ಪ್ರಯತ್ನಿಸಿದನು. ಅದು ಮಾಧವನ ಮನಸ್ಸಿನಲ್ಲಿ ಇನ್ನೂ ಹೆಚ್ಚು ಸಂಶಯವನ್ನು ಹುಟ್ಟಿಸಿತು. ಅದರಿಂದ ಅವನು ತಳಮಳಗೊಂಡನು. ॥166॥ ಅನಂತರ ತನ್ನ ಅಂತರಂಗವನ್ನು ಬಿಟ್ಟು ನಾನಾ ಅಲ್ಲಿ ಏನು ನಡೆಯಿತು ಎಂಬುದನ್ನೆಲ್ಲವನ್ನೂ ಮಾಧವರಾವನ ಒತ್ತಾಯಕ್ಕಾಗಿ ಅವನಿಗೆ ತಿಳಿಸಿದನು. ಈ ರೀತಿ ಗೂಢಾರ್ಥವನ್ನು ತಿಳಿಸಿದನು. ॥167॥ ಬಾಬಾರವರು ಅದೆಷ್ಟು ದಕ್ಷರು! ಯಾರ ಮನಸ್ಸು ಎಲ್ಲಿಯೇ ಅಲೆದಾಡಲಿ, ಅವರು ಸ್ವಯಂಸಾಕ್ಷಿಯಾಗಿದ್ದಾರೆ. ಅವರು ಎಲ್ಲದಕ್ಕೂ ಪ್ರತ್ಯಕ್ಷಸಾಕ್ಷಿ. ॥168॥ ಶ್ರೋತೃಗಳು, ಈ ಸಣ್ಣದಾದ ಅದ್ಭುತ ಚರಿತ್ರೆಯನ್ನು ಕೇಳಿ ಆಶ್ಚರ್ಯಪಟ್ಟಿರಬಹುದು. ಅದರ ಆಳವಾದ ಅರ್ಥವನ್ನು ನೋಡಿದರೆ ಅತ್ಯಮೂಲ್ಯವಾದ ಸ್ಥೈರ್ಯ ಮತ್ತು ಧೀರತೆಯನ್ನು ಪಡೆಯುತ್ತಾರೆ. ॥169॥ ಮನಸ್ಸು ಸ್ವಭಾವತಃ ಚಂಚಲ. ಆದರೆ ಅದನ್ನು ಹಿಡಿತದಲ್ಲಿಡದೆ ಸಡಿಲವಾಗಿ ಬಿಡಬೇಡಿ. ಇಂದ್ರಿಯಗಳು ಗಲಿಬಿಲಿಗೊಂಡಿದ್ದರೂ ಸಹ ದೇಹವನ್ನು ಅಶಾಂತಿಯಿಂದ ವರ್ತಿಸಲು ಬಿಡಬೇಡಿ. ॥170॥ ಇಂದ್ರಿಯಗಳ ಮೇಲೆ ವಿಶ್ವಾಸವಿಡಲು ಆಗುವುದಿಲ್ಲ. ವಿಷಯಾರ್ಥಗಳಿಗಾಗಿ ಲಾಲಸೆ ಪಡಬೇಡಿ. ಕ್ರಮ ಕ್ರಮೇಣ ನಿಧಾನವಾಗಿ ಅಭ್ಯಾಸ ಮಾಡಿದಲ್ಲಿ, ಚಂಚಲತೆಯು ಮಾಯವಾಗುತ್ತದೆ. ॥171॥ ಇಂದ್ರಿಯಗಳಿಗೆ ಗುಲಾಮನಾಗಬೇಡ. ಅವುಗಳು ಎಲ್ಲ ಸಮಯದಲ್ಲೂ ನಿಗ್ರಹಿಸಲ್ಪಟ್ಟಿರುವುದಿಲ್ಲ. ಅವುಗಳನ್ನು ವಿಧಿಪೂರ್ವಕವಾಗಿ (ಆಗಿನ ಪ್ರಸಂಗಗಳಿಗನುಸಾರವಾಗಿ)

ಅಧೀನದಲ್ಲಿಟ್ಟುಕೊಳ್ಳಬೇಕು. ॥172॥ ಸೌಂದರ್ಯವು ದೃಷ್ಟಿಯ ವಿಷಯವಸ್ತುವಾಗಿದೆ. ಸುಂದರ ವಸ್ತುಗಳನ್ನು ನಿರ್ಭಯವಾಗಿ ನೋಡಬೇಕು. ಅದರಲ್ಲಿ ನಾಚಿಕೆ ಅಥವಾ ಪೇಚಾಟಕ್ಕೆ ಅವಕಾಶವಿಲ್ಲ. ಕೇವಲ ಕೆಟ್ಟ ಯೋಚನೆಗಳಿಗೆ ಪುಷ್ಟಿ ನೀಡಬಾರದು. ॥173॥ ಮನಸ್ಸನ್ನು ವಾಸನಾರಹಿತವನ್ನಾಗಿ ಮಾಡಿ ಭಗವಂತನ ಸೃಷ್ಟಿಯನ್ನು ವೀಕ್ಷಿಸಿ. ಆಗ ಸಹಜವಾಗಿಯೇ ಇಂದ್ರಿಯಗಳು ದಮನಗೊಳ್ಳುತ್ತವೆ. ಮತ್ತು ವಿಷಯಸುಖದ ಅನುಭವ ಮರೆತುಹೋಗುತ್ತದೆ. ॥174॥ ರಥವನ್ನು ಸರಿಯಾದ ಮಾರ್ಗದಲ್ಲಿ ಕರೆದುಕೊಂಡು ಹೋಗಲು ಸಾರಥಿಯೇ ಮೂಲಕಾರಣ. ಅದೇ ರೀತಿ ಬುದ್ಧಿಯು ನಮಗೆ ಹಿತಕಾರಣಿಯಾಗಿದ್ದು ಇಂದ್ರಿಯಗಳ ಆಕರ್ಷಣೆಯ ಬಗ್ಗೆ ಸದಾ ಎಚ್ಚರದಿಂದ ಇರಬೇಕು. ॥175॥ ಸಾರಥಿಯು ರಥವನ್ನು ಹತೋಟಿಯಲ್ಲಿಟ್ಟುಕೊಳ್ಳುವಂತೆ ಬುದ್ಧಿಯು ಇಂದ್ರಿಯಗಳನ್ನು ನಿರ್ಬಂಧದಲ್ಲಿಟ್ಟುಕೊಂಡು ಹಠಮಾರಿ ಶರೀರವನ್ನು ಮತ್ತು ಮಿತಿಮೀರಿದ ಮನಸ್ಸಿನ ಚಂಚಲತೆಯನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತದೆ. ॥176॥ ಒಮ್ಮೆ ಒಬ್ಬ ವ್ಯಕ್ತಿಯು ಶರೀರ, ಇಂದ್ರಿಯ, ಮನಸ್ಸುಗಳ ಭೋಕ್ತೃತ್ವದಿಂದ ಬಿಡುಗಡೆ ಹೊಂದಿದ ಮೇಲೆ ವಿಷ್ಣುಪಾದದಲ್ಲಿ ಸ್ಥಾನವನ್ನು ಪಡೆಯುತ್ತಾನೆ. ಬುದ್ಧಿಯ ಸಾಮರ್ಥ್ಯ ಈ ರೀತಿ ಇರುತ್ತದೆ. ॥177॥ ಕಣ್ಣುಗಳು ಮತ್ತು ಇತರ ಇಂದ್ರಿಯಗಳನ್ನು ಕುದುರೆಗಳೆಂದು ನಿಶ್ಚಯಿಸಬಹುದು. ರೂಪ, ರಸ ಮತ್ತಿತರ ವಿಷಯಗಳು ನರಕಕ್ಕೆ ತಲುಪುವ ಮಾರ್ಗಗಳೆಂದು ಪರಿಗಣಿಸಬೇಕು. ॥178॥ ಕೇವಲ ಯತ್ಕಿಂಚಿತ್ ವಿಷಯಾಭಿಲಾಷೆಯೂ ಪಾರಮಾರ್ಥಿಕ ಸುಖವನ್ನು ನಾಶಮಾಡುತ್ತದೆ. ಆದ್ದರಿಂದ ಅದನ್ನು ನಿಶ್ಶೇಷವಾಗಿ ತ್ಯಾಗಮಾಡಿ. ಆಗ ಮಾತ್ರವೇ ಮೋಕ್ಷವು ಲಭಿಸುತ್ತದೆ. ॥179॥ ಬಾಹ್ಯದ ಇಂದ್ರಿಯಗಳನ್ನು ನಿಗ್ರಹಿಸಿದರೂ ಸಹ, ಅಂತಃಕರಣದಲ್ಲಿ ಆಸಕ್ತಿ ಇದ್ದರೆ ಜನ್ಮಮರಣದ ಚಕ್ರವು ಕೊನೆಗೊಳ್ಳುವುದಿಲ್ಲ. ಇಂದ್ರಿಯ ವಿಷಯವಾಸನೆಗಳು ಅತ್ಯಂತ ಘಾತಕವಾಗಿರುತ್ತವೆ. ॥180॥ ವಿವೇಕವಂತ ಸಾರಥಿಯ ಸಹಾಯದಿಂದ, ವಿವೇಕದಿಂದ ಅವುಗಳ ಲಗಾಮನ್ನು ಹಿಡಿತದಲ್ಲಿಟ್ಟುಕೊಂಡಾಗ, ಇಂದ್ರಿಯವೆಂಬ ಕುದುರೆಗಳು ಕನಸಿನಲ್ಲಿಯೂ ಕುಮಾರ್ಗದಲ್ಲಿ ಪ್ರವೃತ್ತರಾಗುವುದಿಲ್ಲ. ॥181॥ ಯಾರಿಗಾದರೂ ಅಂತಹ ನಿಗ್ರಹಿ, ದಕ್ಷ, ಕುಶಲ, ಚತುರ ಸಾರಥಿಯು ಅದೃಷ್ಟವಶಾತ್ ದೊರಕಿದಲ್ಲಿ ಅವನು ಚತುರನಾಗಿ ದೃಢನಿರ್ಧಾರವನ್ನು ಹೊಂದಿದಾಗ ವಿಷ್ಣುಪಾದವು ಅದು ಹೇಗೆ ದೂರವಾಗುತ್ತದೆ? ॥182॥ ಅಂತಹ ಪದವು ಪರಬ್ರಹ್ಮ ನಿವಾಸ. ಅವನ ಮತ್ತೊಂದು ಹೆಸರೇ 'ವಾಸುದೇವ'. ಅದು ಸರ್ವೋತ್ಕೃಷ್ಟವಾದ ಪರಮಪದ. ಮತ್ತು ಪರಾತ್ಪರವಾದ ಪರಂಧಾಮ. ॥183॥ ಅದು ಹಾಗಿರಲಿ, ಇಲ್ಲಿಗೆ ಈ ಅಧ್ಯಾಯವು ಮುಗಿಯಿತು. ಮುಂದಿನದು ಇನ್ನೂ ಹೆಚ್ಚು ಗಮನ ಸೆಳೆಯುವಂತಹುದು. ಮತ್ತು ಅನೇಕ ಸದ್ಭಕ್ತರ ಅಂತರಂಗವನ್ನು ರಂಜಿಸುತ್ತದೆ. ಅದನ್ನು ಕ್ರಮಬದ್ಧವಾಗಿ ಆಲಿಸಿರಿ. ॥184॥ ಅದು ಹಾಗಿರಲಿ. ಕೊನೆಯಲ್ಲಿ ಹೇಮಾಡನು ತನ್ನನ್ನೇ ಸದ್ಗುರುವಿನ ಚರಣಗಳಲ್ಲಿ ಅರ್ಪಿಸಿ ಕೊಂಡಿದ್ದಾನೆ. ಆ ಸದ್ಗುರುವು ಜಗತ್ಪಾಲಕನು. ಬುದ್ಧಿ ಪ್ರೇರಕನು. ಅಂತಹವರ ಚರಣಗಳಲ್ಲಿ ಅವನು ಆಭಾರಪೂರ್ವಕವಾಗಿ ಶರಣಾಗಿದ್ದಾನೆ. ॥185॥

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಸಂತರ ನಿಜಪರೀಕ್ಷೆ ಮತ್ತು ಮನೋನಿಗ್ರಹ" ಎಂಬ ನಲವತ್ತೊಂಭತ್ತನೆ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ

1. ನಾಲ್ಕು ಹಂತಗಳಲ್ಲಿ ಬರುವ ಮಾತುಗಳು – ಉಸಿರಿನಿಂದ ಬರುವ ಮೊದಲ ನುಡಿಗಳು.
2. ಎರಡನೆಯದು – ಸ್ಪಷ್ಟೋಚ್ಚಾರಣೆ.
3. ಮೂರನೆಯದು – ಮೊದಲನೆಯದರಿಂದ ಶ್ವಾಸನಾಳ ಮತ್ತು ಗಂಟಲಿನಿಂದ ಹೊರಬರುವ ಶಬ್ದ.
4. ನಿಜವಾದ ಮಾತುಗಳು – ನಾಲ್ಕನೆಯ ಹಂತದ್ದು.
5. ಚಿಕಿತ್ಸೆವು ಮನೆಯ ಕಾಂಪೌಂಡಿನ ಗೋಡೆಗಿಂತ ಮುಂದೆ ಹೋಗುವುದಿಲ್ಲ.



# ಅಧ್ಯಾಯ – 50

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಅಜ್ಞಾನ ನಿರ್ಮೂಲನ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ನನ್ನ ಜನ್ಮದಾತರಾದ ತಂದೆ ತಾಯಿಯರಿಗೆ ನಾನೆಷ್ಟು ಋಣಿಯೋ ಅದಕ್ಕೆ ಮಿತಿಯಿಲ್ಲ. ನನಗೆ ಅವರು ಮಾನವ ದೇಹವನ್ನು ನೀಡಿದ್ದಾರೆ. ಮತ್ತು ನಾನು ಯಾವುದೋ ಕ್ರಿಮಿಯಾಗಿ ಹುಟ್ಟಲಿಲ್ಲ. ॥1॥ ನಾನು ತಾಯಿಯ ಗರ್ಭದಲ್ಲಿದ್ದಾಗ ಯಾತನೆ ನೀಡಲಿಲ್ಲ. ನಾನು ಕುರುಡ, ಕುಂಟ, ಮಾಲೆಗಣ್ಣಿನವ, ತೊದಲು ನುಡಿಯುವ, ಕಿವುಡ ಮತ್ತು ಮೂಕನಾಗಿ ಹುಟ್ಟಲಿಲ್ಲ. ನಾನು ಪೂರ್ಣ ಆರೋಗ್ಯವಂತನಾಗಿ, ಪೂರ್ಣವಾಗಿ ಚೆನ್ನಾಗಿ ರೂಪುಗೊಂಡು ಹುಟ್ಟಿರುವೆನು. ॥2॥ ಆ ದೇವರ ಅನುಗ್ರಹದಿಂದ, ಒಂದು ಉತ್ತಮವಾದ ಬ್ರಾಹ್ಮಣ ವರ್ಣದ ಕುಟುಂಬದಲ್ಲಿ, ದೇವತೆಗಳು ಗೌರವ ಸಲ್ಲಿಸುವ ವರ್ಣದಲ್ಲಿ ಇಳಿದು ಬಂದಿರುವೆ ಮತ್ತು ಬಹಳ ಅದೃಷ್ಟವಂತನಾಗಿರುವೆ. ॥3॥ ನಾವು ಕೋಟ್ಯನುಕೋಟಿ ಜನ್ಮವೆತ್ತುವುದರಿಂದ ಪ್ರತಿ ಜನ್ಮದಲ್ಲೂ ತಂದೆ ಮತ್ತು ತಾಯಿಯರು ಇರುತ್ತಾರೆ. ಆದರೆ ಯಾವ ಮಾತಾಪಿತೃಗಳು ಜನ್ಮ ಮರಣದ ಚಕ್ರವನ್ನು ನಾಶ ಮಾಡಲು ಉಪಯುಕ್ತರಾಗುತ್ತಾರೋ ಅವರು ಮಾತ್ರ ಬಹಳ ಅಪರೂಪ. ॥4॥ ನಿಜವಾದ ಜನ್ಮದಾತನು ತಂದೆ, ಎರಡನೆಯವನು ಉಪನಯನವನ್ನು (ಯಜ್ಞೋಪವೀತಧಾರಣೆ) ಮಾಡುವವನು ಮತ್ತು ಮೂರನೆಯವನು ನಮ್ಮನ್ನು ಅನ್ನ ಪ್ರದಾನ ಮಾಡಿ ಬೆಳೆಸುವವನು, ನಾಲ್ಕನೆಯವನು

ನಮ್ಮನ್ನು ಭಯ, ಸಂಕಟ ಮತ್ತು ದುಃಖಗಳಿಂದ ರಕ್ಷಿಸುವವನು. ॥5॥ ಈ ಜಗತ್ತಿನಲ್ಲಿ ಸರ್ವರೂ ಸರಿ ಸಮಾನರೇ. ಆದರೆ ಕೃಪಾಳುವಾದ ಸದ್ಗುರುವಲ್ಲದೆ ಬೇರೆ ಯಾವ ನಿಜವಾದ ಜನಕನೂ ಇಲ್ಲ. ನಿಜವಾದ ಸಾಧನೆಗಾಗಿ ಆಶ್ಚರ್ಯದಿಂದ ಅವನ ಮಾತನ್ನು ಕೇಳಿರಿ. ॥6॥ ಯಾರು ಜನನಿಯ ಗರ್ಭದಲ್ಲಿ ವೀರ್ಯನಿಕ್ಷೇಪ ಮಾಡಿ ಯೋನಿಯ ಮೂಲಕ ಜನ್ಮವಾಗುವುದಕ್ಕೆ ಕಾರಣರಾಗುವರೋ ಅವರು ಕೇವಲ ಲೌಕಿಕವಾದ ತಂದೆ. ಆದರೆ ಸದ್ಗುರುವಾದರೋ ಅಲೌಕಿಕ ತಂದೆಯಾಗಿದ್ದಾರೆ. ॥7॥ ಗುರುವಾದರೋ ತನ್ನ ವೀರ್ಯಾಣುವನ್ನು ವ್ಯಯಮಾಡದೆ ಇದ್ದರೂ ತನ್ನ ಪುತ್ರನಿಗೆ ಜನ್ಮನೀಡುತ್ತಾನೆ. ಹಾಗೂ ಪೂರ್ಣ ಅನುಗ್ರಹ ಮಾಡುತ್ತಾನೆ. ॥8॥ ಜನನ-ಮರಣಗಳ ಚಕ್ರದಿಂದ ಮುಕ್ತಿ ನೀಡುವವನಿಗೆ ನಾನು ನಮಸ್ಕರಿಸುತ್ತೇನೆ. ಕರುಣಾಘನ, ಜ್ಞಾನಪ್ರಕಾಶ, ವೇದದಲ್ಲಿನ ಗುಹ್ಯವಾದ ಸತ್‌ಚಿತ್ ಪ್ರತಿಪಾದಕವಾದ ಜ್ಞಾನ ನೀಡುವವನು, ಸರ್ವವ್ಯಾಪಕ ಹಾಗೂ ಗುರುವರ್ಯನು ನೀನು. ॥9॥ ಸಂಸಾರದ ಕತ್ತಲನ್ನು ದೂರಮಾಡುವ ದಿನಕರನಿಗೆ ನಮಸ್ಕರಿಸುತ್ತೇನೆ. ಆತ್ಮಾನುಭವ ಹೊಂದಿರುವ ಸಂತರಲ್ಲಿ ಶ್ರೇಷ್ಠನಾದವನು, ಭಕ್ತರ ಚಿತ್ತ ಚಕೋರಗಳಿಗೆ ಚಂದ್ರಮನು, ಕಲ್ಪತರುವು ಮತ್ತು ಗುರುವರ್ಯನೂ ಆದವನಿಗೆ ನಮಿಸುವೆನು. ॥10॥ ಗುರುರಾಯನ ಮಹಿಮೆಯು ಅಗಾಧ. ವರ್ಣಿಸಲು ಹೋದಾಗ ಪದಗಳು ಸಾಲದಾಗಿ ಮಾತು ಸೋಲುತ್ತದೆ. ಅದರ ಬದಲು ಮೌನವಾಗಿರುವುದು ಲೇಸು ಮತ್ತು ಗುರುವಿನ ಚರಣಗಳಲ್ಲಿ ತಲೆಯನ್ನಿಡುವುದು ಲೇಸು. ॥11॥ ಪೂರ್ವಜನ್ಮದಲ್ಲಿ ಅವಿಚ್ಛಿನ್ನವಾಗಿ ಯಾರು ಮಹಾ ತಪಸ್ಸುಗಳನ್ನು ಆಚರಿಸದೇ ಇರುವರೋ ಅವರು ಮೂರು ರೀತಿಯ ತಾಪಗಳ ನಿವಾರಕವಾದ ಸಂತ ದರ್ಶನವನ್ನು ಪಡೆಯಲಾರರು॥12॥ ಯಾರು ಪರಮಾರ್ಥವನ್ನು, ಮೋಕ್ಷವನ್ನು ಅಥವಾ ತಮ್ಮ ಸ್ವಹಿತವನ್ನು ಅಪೇಕ್ಷಿಸುವರೋ, ಅವರು ಸಂತರಿಗೆ ಪೂರ್ಣ ಶರಣಾಗಬೇಕು. ಆಗ ಅವರಿಗೆ ಯತ್ಕಿಂಚಿತ್ತೂ ಕೊರತೆ ಇರುವುದಿಲ್ಲ. ॥13॥ ಸತ್ಸಂಗವು ಧನ್ಯ! ಧನ್ಯ! ಅದರ ಮಹತ್ವವನ್ನು ಯಾವರೀತಿ ವರ್ಣಿಸಬಹುದು! ಸದ್‌ಭಕ್ತರು ವಿವೇಕ, ವಿರಕ್ತಿಯನ್ನೂ, ಪರಮಶಾಂತಿಯನ್ನೂ ಅನುಭವಿಸುತ್ತಾರೆ. ॥14॥ ಸಾಯಿಯವರು ಕೇವಲ ಚೈತನ್ಯ ಮೂರ್ತಿ! ಅವ್ಯಕ್ತದ ಸ್ಥಿತಿಯಿಂದವ್ಯಕ್ತಸ್ವರೂಪವನ್ನು ಪಡೆದಿದ್ದಾರೆ. ಅವರ ವಿಷಯರಹಿತ ಸ್ಥಿತಿಯನ್ನು ಯಾರು ತಾನೇ ನಿಶ್ಚಿತವಾಗಿ ವರ್ಣಿಸಬಲ್ಲರು? ॥15॥ ಅವರು ತಮ್ಮಲ್ಲಿ ಶರಣಾಗಿ ಭಾವ ಪೂರಿತರಾದವರಿಗೆ ಮತ್ತು ಪ್ರೀತಿಯ ಭಕ್ತರಿಗೆ, ಶ್ರೋತೃಗಳಿಗೆ, ಅವರ ಮೇಲೆ ಕರುಣಾಭರಿತರಾಗಿ ತಮ್ಮ ಚರಿತ್ರೆಯನ್ನು ತಾವೇ ಹೇಳುತ್ತಾರೆ. ಚರಿತ್ರೆಗಳೇ ಅವರ ದೇವಾಲಯ. ॥16॥ ತಲೆಯ ಮೇಲೆ ತಮ್ಮ ಹಸ್ತಸ್ಪರ್ಶ ಮಾಡಿದ ಕೂಡಲೇ ಅಹಂಭಾವವು ಚೂರುಚೂರಾಗುತ್ತದೆ. ಮತ್ತು 'ಸೋಹಂ' (ನಾನೇ ಅವನು) ಎಂಬ ಭಾವವು ಪ್ರತಿಧ್ವನಿಸಿ ಕಣ್ಣಿಗೆ ಕಾಣುವಂತಹ ಇಡೀ ವಿಶ್ವವನ್ನೇ ಆನಂದಭರಿತವನ್ನಾಗಿ ಮಾಡುತ್ತದೆ. ॥17॥ ಪಾಮರನಾದ ನನಗೆ ಅವರ ಕೀರ್ತಿಯನ್ನು ವರ್ಣಿಸುವ ಶಕ್ತಿ ಎಲ್ಲಿದೆ? ಅವರು ತಾವೇ ಈ ಗ್ರಂಥವನ್ನು ತಮ್ಮ ಕೃಪೆಯಿಂದ ತಮ್ಮ ಭಕ್ತರ ಪ್ರೀತಿಗಾಗಿ ಬೆಳಕಿಗೆ ತಂದು

ಪ್ರಕಟಿಸಿದ್ದಾರೆ. ॥18॥ ಸಾಯಿಯ ಚರಣ ಧೂಳಿಯಲ್ಲಿ ಹೊರಳಾಡುವೆ. ಶ್ರೋತೃಗಣಕ್ಕೆ ಅಭಿವಂದಿಸುವೆ. ಸಾಧುಗಳಿಗೆ ಸಂತರಿಗೆ ಮತ್ತು ಸಜ್ಜನರಿಗೆ ನಮಿಸುವೆ. ಮತ್ತು ಎಲ್ಲರನ್ನೂ ಪ್ರೇಮದಿಂದ ಅಪ್ಪಿಕೊಳ್ಳುವೆ. ॥19॥ ಸಾಯಿಯವರು ಸಂಪೂರ್ಣ ನೀತಿಭರಿತವಾಗಿರುವ ಚರಿತ್ರೆಗಳನ್ನು ಸಹಜವಾಗಿ ಲೀಲಾಜಾಲವಾಗಿ ಹೇಳುತ್ತಿದ್ದರು. ನಿತ್ಯಶಾಂತಿಯೇ ಅವರ ಆಭೂಷಣವಾಗಿತ್ತು. ಮಹಾನ್ ಸಂತರೂ ಸಹ ಅವರನ್ನು ಕುರಿತು ಧ್ಯಾನಿಸುತ್ತಿದ್ದರು. ॥20॥ ಅವರನ್ನು ಸೂರ್ಯನಿಗೆ ಹೋಲಿಸುವುದು ಸರಿಯಲ್ಲ. ಏಕೆಂದರೆ ಸೂರ್ಯನು ಮುಳುಗುತ್ತಾನೆ. ಅಥವಾ ಚಂದ್ರನ ಉಪಮೆಯೂ ಸರಿಯಲ್ಲ. ಏಕೆಂದರೆ ಅವನು ಕ್ಷಯಿಸುತ್ತಾನೆ ಮತ್ತು ವೃದ್ಧಿಸುತ್ತಾನೆ. ಈ ಸಾಯಿ ಮಾತ್ರ ಸದಾ ಕಾಲವೂ ಸಂಪೂರ್ಣರು. ॥21॥ ಹೇಮಾಡನು ಅವರ ಚರಣಗಳಲ್ಲಿ ವಿನೀತಭಾವಯುಕ್ತನಾಗಿ, ಶ್ರೋತೃಗಳಿಗೆ ಪ್ರೀತಿಯಿಂದ ಅರಿಕೆಮಾಡಿಕೊಳ್ಳುತ್ತಿದ್ದಾನೆ. ಈ ಕಥನವನ್ನು ಶ್ರದ್ಧಾಯುಕ್ತರಾಗಿ ಏಕಾಗ್ರಚಿತ್ತದಿಂದ ಗಮನವಿಟ್ಟು ಆಲಿಸಲು ಕೇಳಿಕೊಳ್ಳುತ್ತಿದ್ದಾನೆ. ॥22॥ ಭೂಮಿಯನ್ನು ಉತ್ತಮವಾಗಿ ಉಳಲಾಗಿದೆ, ಬೀಜಗಳನ್ನು ಬಿತ್ತಲಾಗಿದೆ. ಆದರೆ ಕೃಪಾಘನರಾದ ನೀವು ಮಳೆತರದಿದ್ದರೆ ಅಲ್ಲಿ ಸುಗ್ಗಿಯು ಹೇಗೆ ಆಗುತ್ತದೆ? ॥23॥ ಸಂತರ ಕಥೆಗಳು ಕಿವಿಗಳ ಮೇಲೆ ಬಿದ್ದಾಗ ಅಲ್ಲಿ ಯಾವುದೇ ಪಾತಕಗಳು ನಿಲ್ಲುವುದಿಲ್ಲ. ಕಥಾ ಶ್ರವಣದಿಂದ ಪುಣ್ಯಗಳು ಮೊಳಕೆಗೊಳ್ಳುತ್ತವೆ. ಇಂತಹ ಅಪರೂಪದ ಸರ್ವಸಮಯದ ಲಾಭಪಡೆಯಿರಿ. ॥24॥ ಸಾಲೋಕ್ಯತೆ ಆದಿಯಾಗಿ ನಾಲ್ಕು (ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯ) ಮುಕ್ತಿಗಳೂ[1] ನಮಗೆ ಆಸಕ್ತಿ ಉಂಟುಮಾಡುವುದಿಲ್ಲ. ಸಾಯಿಯಲ್ಲಿ ನಿಶ್ಚಲ ಭಕ್ತಿಯನ್ನು ಇರಿಸಿ. ಇದೇ ನಮಗೆ ಪರಮ ಪ್ರಾಪ್ತಿಯು. ॥25॥ ನಾವು ಸ್ವಲ್ಪವೂ ಬದ್ಧರಾಗಿರುವುದಿಲ್ಲದಿರುವಾಗ ಮುಕ್ತಿಯ ಜೊತೆ ನಮಗೇನು ಸಂಬಂಧ? ಸಂತರಲ್ಲಿ ಭಕ್ತಿಯು ನಮ್ಮಲ್ಲಿ ಉದಯಿಸಲಿ. ಕೇವಲ ಅದು ಮಾತ್ರ ನಮ್ಮ ಅಂತರಂಗವನ್ನು ಪರಿಶುದ್ಧಗೊಳಿಸಬಲ್ಲದು. ॥26॥ ಎಲ್ಲಿ ನೀನು ಮತ್ತು ನಾನು ಎಂಬ ಭಾವವು ಉದಯಿಸುವುದಿಲ್ಲವೋ, ಅಂತಹ ಸ್ಥಿತಿಯೇ ಸಹಜ ಸ್ಥಿತಿಯಾಗಿರುತ್ತದೆ. ನಮಗೆ ಅಂತಹ ಅಭೇದ ಭಕ್ತಿಯ ಅವಶ್ಯಕತೆ ಇದೆ. ನಾವು ಸಾಯಿಯವರಲ್ಲಿ ಈ ವರವನ್ನು ಬೇಡೋಣ. ॥27॥ ಈಗ ಶ್ರೋತೃಗಳಲ್ಲಿ ಇದೊಂದೇ ವಿನಂತಿ, ಯಾವಾಗ ಅವರು ಈ ಗ್ರಂಥವನ್ನು ಓದಲು ಕೈಗೆತ್ತಿಕೊಳ್ಳುತ್ತಾರೋ, ವಾಚನ ಮಾಡುವವನು, ವಾಚನ ಮತ್ತು ವಾಚಕವಸ್ತು ಮೂರೂ ಏಕಾತ್ಮ ಸ್ಥಿತಿಯನ್ನು ಹೊಂದುತ್ತವೆ. ॥28॥ ಹೇಮಾಡಪಂತನನ್ನು ಪಕ್ಕಕ್ಕೆ ಸರಿಸಿರಿ. ಏಕೆಂದರೆ ಈ ಸಚ್ಚರಿತೆಯ ಕರ್ತನು ಅವನಲ್ಲ. ಅವನು ಕೇವಲಭಕ್ತರ ಹಿತಾರ್ಥಕ್ಕಾಗಿ ಇರುವ ನಿಮಿತ್ತ ಮಾತ್ರ, ॥29॥ ಒಂದು ವೇಳೆ ದೈವವಶಾತ್ ಒಂದು ಕಪ್ಪೆಚಿಪ್ಪು ಸಿಕ್ಕಿದಾಗ ಅದನ್ನೇನಾದರೂ ಬಿಸಾಡಿಬಿಟ್ಟರೆ ನೀನು ಒಂದುಮುತ್ತನ್ನು ಕಳೆದುಕೊಳ್ಳುವೆ. ಯಾವ ರೀತಿ ಅಶ್ವತ್ಥವೃಕ್ಷವು[2] ಉತ್ಪತ್ತಿಯಾಗುವುದೆಂಬುದರ ಬಗ್ಗೆ ಏಕೆ ಚಿಂತಿಸುವೆ? ನಿನ್ನ ಕ್ಷೇಮದ ವಿಷಯದಲ್ಲಿ ಉದಾಸನಾಗಬೇಡ. ॥30॥ ಇಲ್ಲಿ ಶಬ್ದಗಳನ್ನು ಮಾತನಾಡುವವರು, ಬರೆಯುವವರು ಸಾಯಿಯಲ್ಲದೆ ಮತ್ತೆ ಯಾರೂ ಇಲ್ಲ. ಅವರು ಸ್ವತಃ ಕೇಳಿಸಿಕೊಳ್ಳುವ ವಿಷಯ. ಕೇಳುವವರು

ಮತ್ತು ಕೇಳುವ ಕ್ರಿಯೆ ಎಲ್ಲವೂ ತಾವೇ. ಈ ಏಕಾತ್ಮತೆಯನ್ನು ಕಳೆದುಕೊಳ್ಳಬಾರದು. ॥31॥ ಎಲ್ಲಿ ಕಿವಿಗಳು ಗೌರವ ಪೂರ್ವಕವಾಗಿ ಕೇಳಲು ಸಿದ್ಧವಾಗಿಲ್ಲವೋ ಮತ್ತು ಎಲ್ಲಿ ಮನಸ್ಸು ಏಕಾಗ್ರತೆಯಿಂದ ಇಲ್ಲವೋ ಆಗ ಅಲ್ಲಿ ಕೇಳುವುದಾಗಲೀ ಅಥವಾ ಓದುವುದಾಗಲೀ ಇರುವುದೇ ಇಲ್ಲ. ಆಗ ಯಾರಿಗಾದರೂ ಆ ಶಬ್ದಾರ್ಥ ಹೇಗೆ ತಿಳಿಯುತ್ತದೆ? ॥32॥ ಆಲಿಸುವಾಗ ಅದನ್ನು ನಿರಭಿಮಾನದಿಂದ ಕೇಳಿರಿ. ಶ್ರೋತೃಗಳು ಸಾಯಿಯು ತಮ್ಮ ಚಿತ್ತದಲ್ಲಿ ನೆಲೆಯೂರಿದ್ದಾರೆಂದು ಅರಿಯಬೇಕಷ್ಟೆ. ಆಗ ಮಾತ್ರ ಸರಿಯಾದ ಶ್ರವಣದ ಸಾರ್ಥಕತೆಯುಂಟಾಗುತ್ತದೆ. ಅದ್ವೈತ ಭಾವ ಅಖಂಡವಾಗಿ ನೆಲೆಸಲಿ. ॥33॥ ಅನಂತರ, ನೀರಿನ ಅಲೆಗಳು ಎಲ್ಲವೂ ಯಾವರೀತಿ ನೀರಿನಲ್ಲಿ ಸೇರಿಹೋಗುತ್ತವೆಯೋ ಅದೇ ರೀತಿ ಇಂದ್ರಿಯಗಳ ಸಕಲ ಪ್ರವೃತ್ತಿಗಳೂ ಸಾಯಿ ರೂಪದಲ್ಲಿ ನಿಶ್ಚಿತವಾಗಿ ಸಮರಸಗೊಳ್ಳುತ್ತವೆ. ॥34॥ ಕೇವಲ ಈ ರೀತಿಯಲ್ಲಿ ಮಾತ್ರ ಜ್ಞಾನಿಗಳು ಪರಮಾರ್ಥ ಬೋಧವನ್ನು ಅರಿಯುತ್ತಾರೆ. ವಿನೋದಪ್ರಿಯರು ವಿನೋದದ ಸಂತಸವನ್ನು ಅನುಭವಿಸುತ್ತಾರೆ. ಕವಿತಾ ಕೋವಿದರು ಪದ ಪ್ರಬಂಧಗಳನ್ನು ಮೆಚ್ಚುತ್ತಾರೆ. ಈ ರೀತಿ ಎಲ್ಲರೂ ಈ ಗ್ರಂಥದಿಂದ ಆನಂದಪಡುತ್ತಾರೆ. ॥35॥ ಅದು ಹಾಗಿರಲಿ. ಪೂರ್ವದಲ್ಲಿ ಈ ಸಚ್ಚರಿತೆಯಲ್ಲಿ, ಮೂವತ್ತೊಂಭತ್ತನೆಯ ಅಧ್ಯಾಯದಲ್ಲಿ ಸಮರ್ಥರು ತಮ್ಮ ಉತ್ತಮ ಭಕ್ತರೊಬ್ಬರಿಗೆ ನೀಡಿದ ಉಪದೇಶವನ್ನು ಉಲ್ಲೇಖಿಸಲಾಗಿದೆ. ॥36॥ ಭಕ್ತನು ಬಾಬಾರವರ ಹತ್ತಿರವಿದ್ದಾಗ, (ಆ ಸಮಯದಲ್ಲಿ) ಅವನು ಭಗವದ್ಗೀತೆಯ ನಾಲ್ಕನೆಯ ಅಧ್ಯಾಯವನ್ನು ಮೊದಲಿನಿಂದ ಪಾರಾಯಣ ಮಾಡುತ್ತಿದ್ದನು. ॥37॥ ಒಂದು ಕಡೆ ಅವನು ಬಾಬಾರವರ ಚರಣ ಸೇವೆಮಾಡುತ್ತಿದ್ದನು. ಬಾಯಿಯಿಂದ ಮೆಲ್ಲಗೆ ಆ ಪ್ರಾರ್ಥನೆ ಹೇಳುತ್ತಿದ್ದನು. ಮೂವತ್ತಮೂರನೆಯ ಶ್ಲೋಕ ಮುಗಿದಾಗ, ಅವನು ಮೂವತ್ತನಾಲ್ಕನೆಯ ಶ್ಲೋಕವನ್ನು ಪ್ರಾರಂಭಿಸಿದನು. ॥38॥ ನಿಶ್ಚಲವಾದ ಮನಸ್ಸಿನಿಂದ ಮತ್ತು ಮನವನ್ನು ಪೂರ್ಣವಾಗಿ ತಲ್ಲೀನಗೊಳಿಸಿ ಅವನು ಬಹಳ ಮೃದುವಾಗಿ ಶಬ್ದಗಳನ್ನು ಉಚ್ಚರಿಸುತ್ತಿದ್ದನು. ಆದರೆ ಇತರರು ಯಾರಿಗೂ ಅವುಗಳು ಎಲ್ಲಿಯವು ಎಂಬುದು ತಿಳಿದಿರಲಿಲ್ಲ. ॥39॥ ಅವನು ಮೂವತ್ತನಾಲ್ಕನೆಯ ಶ್ಲೋಕವನ್ನು ಪ್ರಾರಂಭಿಸಿದಾಗ ಸಾಯಿನಾಥರು ತಮ್ಮ ಭಕ್ತೋತ್ತಮನನ್ನು ಅನುಗ್ರಹಿಸಿ ಅವನನ್ನು ಸನ್ಮಾರ್ಗಕ್ಕೆ ತರಬೇಕೆಂದು ನಿಶ್ಚಯಿಸಿದರು. ॥40॥ ಆ ಭಕ್ತನ ಹೆಸರು ನಾನಾ (ಚಾಂದೋರಕರ್). ಅನಂತರ ಬಾಬಾರವರು ಅವನಿಗೆ ಹೇಳಿದರು. "ನಾನಾ, ಅದೇನನ್ನು ಮನಸ್ಸಿನಲ್ಲಿಯೇ ಗುಣಗುಣಿಸುತ್ತಿರುವೆ! ಬಾಯಿ ಬಿಟ್ಟು ಸ್ಪಷ್ಟವಾಗಿ ಜೋರಾಗಿ ಹೇಳಬಾರದೇ? ॥41॥ "ಸ್ವಲ್ಪ ಸಮಯದಿಂದ ನೀನು ಏನನ್ನೋ ಗುಣಗುಣಿಸುತ್ತಿರುವಂತೆ ಕಾಣುತ್ತದೆ. ಆದರೆ ನಿನ್ನ ಧ್ವನಿಯು ಸ್ಫುಟವಾಗಿಲ್ಲ ಅದರ ರಹಸ್ಯವೇನು?" ॥42॥ ಅನಂತರ ನಾನಾ ಸ್ಪಷ್ಟವಾಗಿ ಹೇಳಿದನು, "ನಾನು ಗೀತೆಯನ್ನು ಬಾಯಿಪಾಠ ಹೇಳುತ್ತಿದ್ದೆನು. ಇತರರಿಗೆ ಶಾಂತಿಭಂಗವಾಗದೇ ಇರಲೆಂದು ಪದಗಳನ್ನು ಗುಣುಗುಣಿಸುತ್ತಿದ್ದೆನು." ॥43॥ "ಅದು ಬೇರೆಯವರಿಗೆ ಇರಲಿ, ಆದರೆ ನನಗಾಗಿ ಸ್ಪಷ್ಟವಾಗಿ ಹೇಳು. ನೀನು ಏನು ಪಠಿಸುತ್ತಿರುವೆಯೆನ್ನುವುದು ನನಗೆ ತಿಳಿದಿದೆಯೇ?

ಅದನ್ನು ಸ್ಪಷ್ಟವಾಗಿ ಹೇಳು." ॥44॥ ಅನಂತರ, 'ತದ್ವಿದ್ಧಿ ಪ್ರಣಿಪಾತೇನ' ಎಂಬ ಪದಗಳಿಂದ ಪ್ರಾರಂಭವಾಗುವ ಶ್ಲೋಕವನ್ನು ಉಚ್ಚಸ್ವರದಲ್ಲಿ ಹೇಳುತ್ತ ನಾನಾನು ತಾನು ಹೇಳುತ್ತಿರುವುದನ್ನು ಪ್ರಣಾಮ ಪೂರ್ವಕವಾಗಿ ಹೇಳಿದನು. ಅದನ್ನು ಆಲಿಸಿದ ಬಾಬಾರವರು ಸಮಾಧಾನಹೊಂದಿದರು. ॥45॥ ಅನಂತರ, ಆ ಶ್ಲೋಕದ ಅರ್ಥವನ್ನು ಪ್ರಶ್ನಿಸಿದಾಗ ನಾನಾನು ಹಿಂದಿನ ಆಚಾರ್ಯರು ಹೇಳಿದ ರೀತಿಯಲ್ಲಿ ಅದರ ಅರ್ಥವನ್ನು ವಿವರವಾಗಿ ತಿಳಿಸಿದನು. ಬಾಬಾರವರು ತಲೆ ಅಲ್ಲಾಡಿಸಿದರು. ॥46॥ ಅವರು ಮತ್ತೆ ನಾನಾನನ್ನು ಪ್ರಶ್ನಿಸಿದರು, "ನಾನಾ, ಮೂರನೆಯ ಚರಣವಾದ 'ಉಪದೇಕ್ಷ್ಯಂತಿ ತೇ ಜ್ಞಾನಂ', ಅದರ ಮೇಲೆ ಮನನ ಮಾಡು. ॥47॥ "ಅದರಲ್ಲಿ, 'ತೇ' ಅನ್ನುವ ಅಕ್ಷರದ ನಂತರ 'ಅ' ಅಕ್ಷರಕ್ಕೆ ಒಂದು ಅವಗ್ರಹವಿದೆ. ಅದನ್ನು ಅಜ್ಞಾನ ಎಂಬ ಪದವನ್ನಾಗಿ ಓದಿದರೆ ಅರ್ಥವು ವಿರುದ್ಧವಾಗಿ ಉಂಟಾಗುವುದೋ ಏನೋ, ಪರಿಗಣಿಸು. ॥48॥ "ಶಂಕರಾನಂದ, ಜ್ಞಾನೇಶ್ವರ, ಆನಂದಗಿರಿ, ಶ್ರೀಧರ, ಮಧುಸೂದನ ಇತ್ಯಾದಿ ಭಾಷ್ಯಕಾರರು, 'ಜ್ಞಾನ' ಎನ್ನುವ ಪದದ ಆಧಾರದ ಮೇಲೆ ಅರ್ಥವನ್ನು ವಿವರಿಸಿರುತ್ತಾರೆ. ॥49॥ "ಮತ್ತು ಇದನ್ನು ಪ್ರತಿಯೊಬ್ಬರೂ ಮಾನ್ಯಮಾಡಿದ್ದಾರೆ. ಅದೂ ಸಹ ನನಗೆ ಗೊತ್ತು, ಆದರೆ ನಾವು ತಿಳಿದೂ ಸಹ ಶಂಕೆಯ ಚಿಹ್ನೆಹಾಕಿ ಕೌತುಕವನ್ನು ಅನುಭವಿಸುವುದಕ್ಕೆ ತಡೆ ಏಕೆ ಉಂಟುಮಾಡಬೇಕು?" ॥50॥ ಈ ರೀತಿ ನುಡಿದ ಕೃಪಾಘನ ಸಾಯಿಯವರು ಚಕೋರಮತ್ತು ಚಾತಕ ಪಕ್ಷಿಗಳಿದ್ದಂತೆ ಭಕ್ತರಿಗೆ ತಮ್ಮ ಬೋಧಾಮೃತಗಳನ್ನು ಸುರಿಸಿದರು. ಅದನ್ನು ನಾನು ಈಗಾಗಲೇ ನಿರೂಪಣೆ ಮಾಡಿದ್ದೇನೆ. ॥51॥ ಆದರೆ ಈ 'ಸಾಯಿ ಲೀಲ' (ಮಾಸಿಕ ಪುರವಣಿಯಲ್ಲಿ ಸಚ್ಚರಿತೆಯ ಅಧ್ಯಾಯಗಳು ಪ್ರಕಟಗೊಂಡಿದ್ದವು.) ವಾಚಕರು ಈ ಅರ್ಥವಿವರಣೆಯಿಂದ ಕೌತುಕರಾಗಿರಲಿಲ್ಲ. ಆದರೂ ಕೆಲವರು ಶಂಕಿತರಾದರು. ಇದು ಅತ್ಯಂತ ಆಶ್ಚರ್ಯಕಾರಕ. ॥52॥ ಅದರಿಂದ ಅವರು ಸಮಾಧಾನಹೊಂದಬಹುದು ಮತ್ತು ವಿಷಯವು ಪ್ರಮಾಣೀಕರಿಸಲ್ಪಡಬಹುದು. ನಾನು 'ಅಜ್ಞಾನ' ಎಂಬ ಪದದ ಸಮರ್ಥನೆಯನ್ನು ಮಾಡಲು ಇನ್ನೂ ಸ್ವಲ್ಪ ಪ್ರಯತ್ನವನ್ನು ಮಾಡುತ್ತೇನೆ. ॥53॥ ಬಾಬಾರವರಿಗೆ ಸಂಸ್ಕೃತ ಜ್ಞಾನ ಇದೆಯೇ ಎಂಬ ಶಂಕೆಯೂ ಕೆಲವರಿಗೆ ಇತ್ತು. ಸಂತರಿಗೆ ತಿಳಿಯದೇ ಇರುವುದು ಏನೂ ಇಲ್ಲ. ಶಂಕೆಯ ಕಾರಣ ಮತ್ತೇನೋ ಇರುವಂತೆ ಕಾಣುತ್ತದೆ. ॥54॥ 'ಏಕ'(ಒಂದು ಪರಬ್ರಹ್ಮ)ವನ್ನು ಅರಿತವನು ಎಲ್ಲವನ್ನೂ ತಿಳಿದಿರುತ್ತಾನೆ ಎಂಬ ಶೃತಿವಾಕ್ಯವು ಯಾರಿಗೆ ತಾನೇ ತಿಳಿಯದು? ಸಾಯಿಗೆ ಈ ಅಪರೋಕ್ಷ ಜ್ಞಾನವು ಇದ್ದಿತು. ॥55॥ ಇಡೀ ವಿಶ್ವವನ್ನು ಅಂಗೈಯಲ್ಲಿ ಹಿಡಿದುಕೊಂಡಿರುವ ಆಮಲಕ (ನೆಲ್ಲಿಕಾಯಿ)ದಂತೆ ನೋಡುವಂತಹ ಸಂತರಿಗೆ ಏನು ತಾನೇ ತಿಳಿಯುವುದಿಲ್ಲ? ಸೂರ್ಯನೂ ಸಹ ಅವರಿಂದಾಗಿಯೇ ಪ್ರಕಾಶವಾಗಿರುತ್ತಾನೆ. ॥56॥ ಯಾರಿಗೆ ಈ ಏಕಪರಬ್ರಹ್ಮದ ಜ್ಞಾನವಿದೆಯೋ ಅವರಿಗೆ ಬೇರೆ ಯಾವುದೇ ಜ್ಞಾನವಿಲ್ಲದೇ ಇರಲು ಹೇಗೆ ಸಾಧ್ಯ? ಯಾವುದೇ ವಿದ್ಯೆಯಲ್ಲಿ ಏನೇ ಇರಲಿ ಅವೆಲ್ಲವೂ ಅವರಿಗೆ ತಿಳಿದಿರುತ್ತದೆ. ಹಾಗಿರುವಾಗ ಸಂಸ್ಕೃತದ ಬಗ್ಗೆ ಏನು ವಿಶೇಷತೆ? ॥57॥ 'ಸಾಯಿ ಲೀಲ'ಪುರವಣಿಯ ವಾಚಕರು

ಕೆಲವರು ಹೇಳುತ್ತಾರೆ, "ನಾನಾನು ಅಪ್ರಾಮಾಣಿಕ ವ್ಯಕ್ತಿ. ಅದು ತನ್ನದೇ ಆದ ಕಲ್ಪನೆಯಿಂದ ಕಲ್ಪಿತವಾದದ್ದು ಮತ್ತು ಅವನು ಇದನ್ನು ಅಜ್ಞಾನ ವ್ಯಂಜಕನಾಗಿ ಈ ಅಪ್ರಯೋಜಕವಾದುದನ್ನು ಬರೆದಿರುತ್ತಾನೆ. ॥58॥ "ಅವನು ತಾನೇ ಅವಗ್ರಹ ಪೀಡಿತನಾಗಿ ಈ ಅಜ್ಞಾನಕಾಡವನ್ನು ಸೃಷ್ಟಿಸಿದ್ದಾನೆ. ಅವನು ತಾನು ಮಹಾಜ್ಞಾನಿಯೆಂದು ಪ್ರದರ್ಶಿಸಲು ಅನವಶ್ಯಕವಾಗಿ ಈ ವಿತಂಡ ವಾದವನ್ನು ರಚಿಸಿದ್ದಾನೆ. ॥59॥ "ಎಲ್ಲಿ ಯಾವುದೇ ಅನಿಶ್ಚಿತ ಸ್ಥಿತಿಯು ಇಲ್ಲವೋ ಅದನ್ನು ಪ್ರಸ್ತಾಪಿಸಿದ್ದಾನೆ. ಜ್ಞಾನ ಎಂಬ ಪದದ ಬದಲು ಅವನು 'ಅಜ್ಞಾನ' ಎಂಬ ಪದವನ್ನು ಹಾಕಿದ್ದಾನೆ. ಈ ರೀತಿಯಲ್ಲಿ ಅವನು ಗೀತೆಗೆ ವಿಪರೀತ ಅರ್ಥವನ್ನು ಕೊಟ್ಟಿದ್ದಾನೆ. ॥60॥ ಆದರೆ ವಸ್ತುಸ್ಥಿತಿಯನ್ನು ನೋಡಿ ಸೂಕ್ಷ್ಮಚಿತ್ತದಿಂದ ವಿಚಾರ ಮಾಡಿದಾಗ 'ಸಾಯಿಲೀಲ' ಪುರವಣಿಯ ಮೂವತ್ತೊಂಭತ್ತನೆಯ ಅಧ್ಯಾಯಕ್ಕೂ ಯಾವುದೇ ಅಸಂಬದ್ಧತೆಯು ಇರುವುದಿಲ್ಲ. ॥61॥ ನಿನ್ನ ಅಭಿಪ್ರಾಯಗಳು ಯಾವುದೇ ಇರಬಹುದು ಮತ್ತು ನಾನಾನು ಪ್ರಾಮಾಣಿಕನೋ ಅಥವಾ ಅಪ್ರಾಮಾಣಿಕನೋ, ಅದೊಂದು ಅಸಂಬದ್ಧವಾದ ಪ್ರಲಾಪವೆಂದು ಭಾವಿಸಿ ಆ ನಿರೂಪಣೆಯನ್ನು ನಂಬಬೇಡ. ॥62॥ ನಾನಾನ ಬಗೆಗಿನ ದ್ವೇಷಭಾವವನ್ನು ಪಕ್ಕಕ್ಕೆ ಸರಿಸಿ, ವಾಚಕರು ಭಾವ ವಿಕಾರವಶರಾಗಬಾರದು. ಮೇಲು ಮೇಲಿನ ದೃಷ್ಟಿದೋಷವನ್ನು ದೂರಸರಿಸಿದಾಗ ಉಳಿಯುವುದು ಅವನ ನಿರ್ದೋಷಿಯೆಂಬ ಭಾವನೆ. ॥63॥ 'ಸಾಯಿಲೀಲೆ'ದು ಉತ್ತಮೋತ್ತಮವಾದ ಪುರವಣಿ. ಮೂವತ್ತೊಂಭತ್ತನೆಯ ಅಧ್ಯಾಯದಲ್ಲಿ ಓದದೆ, ಈಗಿನ ಅಧ್ಯಾಯವನ್ನು ಅರ್ಥಮಾಡಿಕೊಳ್ಳಲು ಸುಲಭಸಾಧ್ಯವಲ್ಲ. ॥64॥ 'ಭಗವದ್ಗೀತೆ'ಯ ನಾಲ್ಕನೆಯ ಅಧ್ಯಾಯದಲ್ಲಿ 'ಜ್ಞಾನಮುಖಿ'ಯಲ್ಲಿ ಶ್ರೀಕೃಷ್ಣನ ಒಂದು ಪ್ರವಚನವಿದೆ ಮತ್ತು ಮೂವತ್ತನಾಲ್ಕನೆಯ ಶ್ಲೋಕವು ಅಜ್ಞಾನದ ಬಗ್ಗೆ ಇದೆ. ॥65॥ "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ॥" ॥66॥ ಇದು ಗೀತೆಯ ಒಂದು ಮುಖ್ಯವಾದ ಶ್ಲೋಕ. ಮೂರನೆಯ ಚರಣದಲ್ಲಿ ಜ್ಞಾನ ಎಂಬ ಪದಕ್ಕೆ ಮುಂಚೆ ಒಂದು ತಡೆ ಇದ್ದು ಅಲ್ಲಿ ಅಜ್ಞಾನ ಎಂಬ ಪದ ಉಂಟಾಗುತ್ತದೆ. ॥67॥ ಸಂದಿಗ್ಧತೆಯನ್ನು ಪರಿಗಣಿಸದೇ ಇದ್ದಲ್ಲಿ, ಜ್ಞಾನ ಎಂಬ ಪದವನ್ನು ನಿಸ್ಸಂದೇಹವಾಗಿ ಓದಬೇಕು. ಅದಕ್ಕೆ ವಿರುದ್ಧವಾದ ಯಾವುದೇ ದುರಾಗ್ರಹವೂ ಇಲ್ಲ. ಅದು ಸ್ವಾಭಾವಿಕವಾಗಿ ಸರ್ವತ್ರ ಸ್ವೀಕರಿಸಲು ಅನುವಾಗುವಂತಹ ಅರ್ಥ ನೀಡುತ್ತದೆ. ॥68॥ "ಜ್ಞಾನದಿಂದಲೇ ಕೈವಲ್ಯ" – ಇದು ಶೃತಿ ವಾಕ್ಯ ಮತ್ತು ಸರ್ವತ್ರ ಮಾನ್ಯವಾಗಿದೆ. ಆದರೆ ತತ್ತ್ವಜ್ಞರ ಈ ಜ್ಞಾನದ ಉಪದೇಶವು ಅನವಶ್ಯಕವಾದ ಬಂಧನವಾಗಿರುವುದಿಲ್ಲ. ॥69॥ ನಾನೇ ಆತ್ಮ, ನಿರ್ಮಲವಾದ ಸಾಕ್ಷಿ, ಶುದ್ಧ, ಬುದ್ಧ, ಮುಕ್ತ, ಸರ್ವವ್ಯಾಪಿ, ಪರಮ ಚೈತನ್ಯ, ಅತ್ಯುಜ್ವಲ, ಅದ್ವಯಾನಂದದಲ್ಲಿ ತುಂಬಿದೆ. ॥70॥ ಆದರೆ ನಾನು ಅಜ್ಞಾನವೂ ಅಲ್ಲ, ಅಜ್ಞಾನದಿಂದ ಹುಟ್ಟಿರುವ ಕಾರ್ಯವೂ ಅಲ್ಲ. 'ಅಯಮಾತ್ಮಾ ಬ್ರಹ್ಮ'ವೇ (ಈ ಆತ್ಮವೇ ಬ್ರಹ್ಮ) ನಾನು ಎಂಬುದನ್ನು ಅರ್ಥಮಾಡಿಕೋ ಮತ್ತು ನಾನು ಪ್ರಜ್ಞಾನದ ನಿಧಿ ಎಂಬುದನ್ನೂ ಆನಂದಘನವೆಂದೂ ತಿಳಿದುಕೋ. ॥71॥'ಅಹಂಬ್ರಹ್ಮಾಸ್ಮಿ' ನಾನೇ

ಬ್ರಹ್ಮ (ಯಜುರ್ವೇದ) ಎಂಬ ವಾಕ್ಯವು ನಿತ್ಯವೂ ನನಗೆ ಸ್ಫೂರ್ತಿಯಾಗಿರುತ್ತದೆ. ಅದು ಕೇವಲ ಶುದ್ಧ 'ವಿದ್ಯೆ'ಯೆಂದು ತಿಳಿದುಕೋ. "ನಾನೊಬ್ಬ ಪಾಪಿ, ದುರದೃಷ್ಟವಂತ ಮತ್ತು ದೈವಹೀನ" ಎಂಬ ವೃತ್ತಿಗಳು ಅವಿದ್ಯೆಯಿಂದಾಗಿ ಹುಟ್ಟುತ್ತದೆ. ॥72॥ ಈ ಮಾಯೆಯು ಪುರಾತನ ಅಥವಾ ಅನಂತ ಶಕ್ತಿಯುತವಾದುದು. ಅವಿದ್ಯೆಯಿಂದಾಗಿ ಚರಣಗಳು ಬಂಧಿತಸ್ಥಿತಿಯಲ್ಲಿರುತ್ತವೆ. ಜ್ಞಾನದಿಂದಲೇ ಎಲ್ಲ ಬಂಧನಗಳಿಂದಲೂ ವಿಮುಕ್ತಿಹೊಂದುತ್ತವೆ. ಇದೇ ಅನಾದಿಕಾಲದಿಂದ ಬಂದಂತಹ ಜೀವದ ಸ್ಥಿತಿ. ॥73॥ ನಾಮ ಮತ್ತು ರೂಪಗಳ ಸಕಲ ಭ್ರಮೆಯೂ ಮಾಯೆಯಿಂದ ಉಂಟಾಗುತ್ತದೆ. ಮಾಯೆಯನ್ನು ವಿವರಿಸಲು ಪದಗಳು ಸಾಲದು. ಮತ್ತು ಅದು ನಿಶ್ಚಿತವಾಗಿಯೂ ದಾಟಲು ಬಹಳ ದುರ್ಗಮವಾಗಿರುತ್ತದೆ. ॥74॥ ಅನೇಕ ಕಲ್ಪನಾ ಪೂರಿತ ಯೋಚನೆಗಳು ಎಲ್ಲಿ ಹುಟ್ಟುತ್ತವೆಯೋ ಅದೇ ಮಾಯೆಯ ಆವಾಸಸ್ಥಾನ. ಬದ್ಧ ಮತ್ತು ಮುಕ್ತ ಸ್ಥಿತಿಗಳೆರಡೂ ನಿಶ್ಚಿತವಾಗಿಯೂ ಕಲ್ಪನೆ ಮಾತ್ರದಿಂದಲೇ ಹುಟ್ಟುತ್ತವೆ. ॥75॥ "ಜ್ಞಾನದೇವತು ಕೈವಲ್ಯಂ" – ಜ್ಞಾನದಿಂದಲೇ ಕೈವಲ್ಯ ಪ್ರಾಪ್ತಿಯು. ಶೃತಿಯ ಈ ಪ್ರಮೇಯವು ಅಬಾಧಿತ ಮತ್ತು ಅನಂತ ಸತ್ಯ. ಆದರೆ ಪಾಪಕರ್ಮಗಳು ನಶಿಸುವವರೆಗೆ ಜ್ಞಾನದ ಉದಯವು ಅಸಾಧ್ಯ. ॥76॥ ಯಾರು ಶುದ್ಧಜ್ಞಾನದಿಂದ ಗಹನವಾಗಿ ಪ್ರಭಾವಿತರಾಗಿರುವನೋ ಅವನು ಎಲ್ಲಾ ಆಶೆಗಳನ್ನೂ ತ್ಯಾಗಮಾಡಿರುವನೆಂದು ತಿಳಿ. ಅವನು ಮಾಯೆಯಿಂದ ಬಂಧಿಸಲ್ಪಟ್ಟಿರುವುದಿಲ್ಲ. ಅವನಲ್ಲಿ ಯಾವುದೇ ವಿಕಾರಕ್ಕಾಗಲಿ ಅಥವಾ ಭಾವೋದ್ವೇಗಕ್ಕಾಗಲಿ ಜಾಗವಿಲ್ಲ. ॥77॥ ಪರಮಜ್ಞಾನಿಯಾದ ಶುಕಸಾರಿಕಾ ಮುನಿಯು, ಶಂಕೆಗಳಿಂದಾಗಿ ಹಾನಿಗೊಳಗಾದನು. ಶಂಕೆಗಳಿಂದಾಗಿ ಅಜ್ಞಾನವು ಹುಟ್ಟುತ್ತದೆ. ಅದನ್ನು ಗುರುವಿನಿಂದಲ್ಲದೆ ತೆಗೆದು ಹಾಕಲು ಸಾಧ್ಯವಿಲ್ಲ. ॥78॥ ಯಾವಾಗ ಜ್ಞಾನಿಯ ಮನಸ್ಸಿನಲ್ಲಿ ವಿಕಲ್ಪ (ಸಂಶಯ)ವು ಪ್ರವೇಶಿಸುತ್ತದೆಯೋ ಅಂತಹ ವ್ಯಕ್ತಿಯು ಜ್ಞಾನಿಯಾದರೂ ಅಭಿಮಾನಿಯಾಗುತ್ತಾನೆ. ಒಂದು ದೊಡ್ಡ ಪಾತ್ರೆಯ ಹಾಲಿಗೆ ಒಂದು ತೊಟ್ಟು ಹುಳಿ ಹಿಂಡಿದಾಗ ಆ ಹಾಲೆಲ್ಲವೂ ಒಡೆದು ಹೋಗುತ್ತದೆ. ॥79॥ ಆದ್ದರಿಂದ 'ಅಜ್ಞಾನ'ವನ್ನು ಅರಿಯುವುದು ಅವಶ್ಯಕ. ಒಮ್ಮೆ ಅದನ್ನು ತೆಗೆದು ಹಾಕಿದಾಗ ಮನಃಶುದ್ಧಿಯುಂಟಾಗುತ್ತದೆ. ಅದಾದ ನಂತರ ಅನಂತ ಜ್ಞಾನವು ಪ್ರಕಟವಾಗುತ್ತದೆ. ಮತ್ತು ಮನಸ್ಸಿಗೆ ಅಭೇದವಾದ ಸಮಾಧಿಯು ಉಂಟಾಗುತ್ತದೆ. ॥80॥ ಯಾರು ತಮ್ಮ ದ್ರವ್ಯ ಮತ್ತು ವೈಭವದ ಧ್ಯಾನದಲ್ಲಿ ತಲ್ಲೀನರಾಗಿರುತ್ತಾರೋ, ಇಂದ್ರಿಯ ವಿಷಯ ಲಾಲಸೆಗಳಿಂದ ಅತೃಪ್ತ ಮನದವರಾಗಿದ್ದಾರೋ, ತಮ್ಮ ಸ್ತ್ರೀ ಮತ್ತು ಮಕ್ಕಳ ಬಗ್ಗೆ ಅಖಂಡವಾಗಿ ಚಿಂತಿಸುತ್ತಿರುತ್ತಾರೋ, ಅವರ ಜ್ಞಾನವು ಕೇವಲ ಅಜ್ಞಾನವೇ ಅಗಿರುತ್ತದೆ. ॥81॥ ಈ ರೀತಿ, ಯಾರು ಧನ, ಸುತ, ಪತ್ನಿ ಇವುಗಳಿಂದ ಮೋಹಿತರಾಗಿರುತ್ತಾರೋ ಅವನು ಜ್ಞಾನಿಯಾಗಿದ್ದರೂ ತನ್ನ ಹಿತವನ್ನು ಅರಿತಿರುವುದಿಲ್ಲ. ಆದ್ದರಿಂದ ಅವನಲ್ಲಿ ಭಕ್ತಿಯಿಲ್ಲದೇ ಇರುವವರೆಗೆ ಅವನ ಜ್ಞಾನವು ಅಜ್ಞಾನದಿಂದ ಆವೃತವಾಗಿರುತ್ತದೆ. ॥82॥ ಎಲ್ಲ ಜೀವ ಸಮುದಾಯವು ಅಜ್ಞಾನಯುಕ್ತವಾಗಿದೆ. ಅಜ್ಞಾನದಿಂದ ಮುಕ್ತನಾಗಬೇಕಾದರೆ ಮೊದಲು ಜ್ಞಾನಿಯಾಗಿ ಅನಂತರ ಜ್ಞಾನಾತೀತನಾಗಬೇಕು.

ಆ ಸ್ಥಿತಿಯು ನಿಜವಾಗಿಯೂ ಬ್ರಹ್ಮಸ್ವರೂಪವೇ ಅಥವಾ ತಾನೇ ಬ್ರಹ್ಮನೂ ಆಗುತ್ತಾನೆ. ॥83॥ ಅಜ್ಞಾನವು ಮಾಯವಾದಾಗ ಜ್ಞಾನವು ಪ್ರಕಟಗೊಳ್ಳುತ್ತದೆ. ಜ್ಞಾನಿಯು ಕ್ಷಮಾಶಾಲಿಯಾಗಿರುತ್ತಾನೆ. ದೇಹಾಭಿಮಾನವು ಹೋಗದೇ ಇರುವವರೆಗೆ, ಅವನು ಪ್ರಕೃತಿ(ಮಾಯೆ)ಯ ಅಧೀನದಲ್ಲಿ ಇರುತ್ತಾನೆ. ॥84॥ ರಾಮ, ಕೃಷ್ಣ ಮುಂತಾದ ಅವತಾರಗಳು, ಸನತ್, ಸನಕ ಮುಂತಾದ ಸಂತರು, ಇತರ ಜ್ಞಾನಿಗಳು, ಮಾಯೆಯನ್ನು ಕಿಂಕರಳನ್ನಾಗಿ ಮಾಡಿಕೊಂಡಿರುತ್ತಾರೆ. ಆದರೆ ಅವಳು ಇತರರನ್ನು ಮೂರ್ಖರನ್ನಾಗಿ ಮಾಡುತ್ತಾಳೆ. ॥85॥ ಆತ್ಮವು ಎಲ್ಲ ಜೀವಿಗಳ ಹೃದಯಗಳಲ್ಲಿ ನೆಲಸಿದ್ದರೂ ಸಹ, ಅದರ ಸ್ವರೂಪ ಸ್ಥಿತಿಯು ಯಾರಿಗೂ ತಿಳಿದಿಲ್ಲ. ಮಾಯೆಯ ಅತರ್ಕ್ಯವಾದ ಸ್ಥಿತಿಯು ಈ ರೀತಿ ಇದೆ. ಅದನ್ನು ಮುಚ್ಚಿರುವ ಆವರಣಗಳು ಅಗಾಧ. ॥86॥ "ನಾನೇ ಕರ್ತ ಮತ್ತು ನಾನೇ ಅದನ್ನು ಅನುಭವಿಸುವವನು" ಎಂಬ ಮಿಥ್ಯಾಭಿಮಾನದ ಭಾವವು ದೂರವಾಗುವುದಿಲ್ಲವೋ ಮತ್ತು ಎಲ್ಲಿಯವರೆಗೆ ಹೃದಯಸ್ಥನಾದ ಪರಮಾತ್ಮನಲ್ಲಿ ಶರಣಾಗುವುದಿಲ್ಲವೋ, ಅಲ್ಲಿಯವರೆಗೆ ಅವನು ಆತ್ಮಸಾಕ್ಷಾತ್ಕಾರ ಪಡೆಯಲು ಸಾಧ್ಯವಿಲ್ಲ. ॥87॥ ನಿತ್ಯಾನಿತ್ಯ ವಸ್ತು ವಿವೇಚನೆ, ಶ್ರವಣ, ಮನನ, ನಿಧಿಧ್ಯಾಸನ, ಮತ್ತು ಆರು ಸದ್ಗುಣಗಳಾದ ಶಮದಮಾದಿ ಷಟ್ಕ (ಶಮ, ದಮ, ಉಪರತಿ, ತಿತೀಕ್ಷೆ, ಶ್ರದ್ಧೆ ಮತ್ತು ಸಮಾಧಾನ) – ಇವುಗಳು ಮಾತ್ರ ಅಜ್ಞಾನವನ್ನು ಹೊಡೆದೋಡಿಸಲು ಸಾಧ್ಯ. ॥88॥ 'ಜಗತ್ತು ನನಗಿಂತ ಭಿನ್ನ', 'ನಾನು ಪರಿಮಿತ ಮತ್ತು ಪರಿಚ್ಛಿನ್ನ', 'ನಾನೇ ಈ ದೇಹ' ಎಂಬ ಭಾವ – ಇವೆಲ್ಲವೂ ಅಸ್ಪಷ್ಟವಾದ ಅಜ್ಞಾನ. ॥89॥ ಈ ವೇದಾಂತ ಶಾಸ್ತ್ರದಲ್ಲಿ, ಜ್ಞಾನವನ್ನು ಪ್ರತಿಪಾದಿಸುವಂತಹುದರಲ್ಲಿ ನಾಲ್ಕು ಪೂರ್ವಭಾವಿ ಆವಶ್ಯಕತೆಗಳು ಇರುತ್ತವೆ. ಅವುಗಳನ್ನು ಭಾಷ್ಯಕಾರನು ಪರಮ ಕರುಣೆಯಿಂದ ವಿಸ್ತಾರ ಪೂರ್ವಕವಾಗಿ ವರ್ಣಿಸಿದ್ದಾನೆ. ॥90॥ ಯೋಗ್ಯ ಅಧಿಕಾರಿ, ವಿಷಯ, ಅವರ ನಡುವಿನ ಸಂಬಂಧ – ಈ ಮೂರು ಮತ್ತು ನಾಲ್ಕನೆಯದು ಅದರ 'ಪ್ರಯೋಜನ'. ಪ್ರಯೋಜನವನ್ನು ಎಚ್ಚರಿಕೆಯಿಂದ ವಿವರಿಸಿದಲ್ಲಿ ಅಲ್ಲಿ ಅಜ್ಞಾನದ ನಿವಾರಣೆಯು ಉಂಟಾಗುತ್ತದೆ. ॥91॥ಜೀವ–ಬ್ರಹ್ಮರ ಸಂಪೂರ್ಣ ಐಕ್ಯತೆಯು ವೇದಾಂತದ ಮುಖ್ಯವಾದ ವಿಷಯವಾಗಿದೆ. ಈ ಐಕ್ಯತೆಯ ತತ್ತ್ವವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಇರುವುದೇ ಅಜ್ಞಾನವನ್ನು ನಾಶಮಾಡುವಂತಹ ಪ್ರಯೋಜನ. ॥92॥ ಆದುದರಿಂದ, ಈ ಅಜ್ಞಾನವನ್ನು ಮೂಲದಿಂದಲೇ ತೆಗೆದುಹಾಕುವುದೇ ಸ್ವರೂಪಾನಂದ ಪ್ರಾಪ್ತಿಯಾಗಿದೆ. ಆದುದರಿಂದ ಎಲ್ಲ ಯುಕ್ತಿ ಪ್ರಯುಕ್ತಿಗಳಿಂದ ಅಜ್ಞಾನವನ್ನು ನಾಶಮಾಡುವುದು ಆವಶ್ಯಕವಾಗಿದೆ. ॥93॥ ದ್ವೈತಭಾವವನ್ನು ತೆಗೆದುಹಾಕದ ಹೊರತು ಅವನನ್ನು ಜ್ಞಾನಿಯೆಂದು ಕರೆಯಲಾಗುವುದಿಲ್ಲ. ಯಾವ ವ್ಯಕ್ತಿಗೆ ದೇಹಾಭಿಮಾನವಿದೆಯೋ ಅಂತಹವನ ಜ್ಞಾನವನ್ನು ಸಂಪೂರ್ಣ ಅಜ್ಞಾನವೆಂದೇ ಕರೆಯಬಹುದು. ॥94॥ ಅವನು ತನ್ನ ಸ್ವಂತ ಜ್ಞಾನವನ್ನು ತೋರಿಕೆಯಾಗಿ ಮಾಡುತ್ತಾನೆ. ಆದರೆ ಅವಿಹಿತವಾದ ಕರ್ಮಗಳನ್ನು ಆಚರಿಸುತ್ತಾನೆ. ಅಂತಹವನು ಸತ್ತಹಾಗೆಯೇ. ಅವನು ನಿದ್ರಿಸುತ್ತಿರುವ ಕುಂಭಕರ್ಣನು[3]. ॥95॥ ವೈದಿಕ ಕ್ರಮಾನುಸಾರ ವರ್ತಿಸದೇ ಇರುವವನು ಮತ್ತು ನಾಲ್ಕು

ವರ್ಣಗಳಿಗೆ ನಿಗದಿತ ವಿಧಿಪರಿಪಾಲನೆ ಮಾಡದೇ ಇರುವವನು, ಅಂತಹ ವ್ಯಕ್ತಿಯ ಚಿತ್ತಶುದ್ಧಿಯ ಸಾಧನವೇ ಅವಿದ್ಯೆಯನ್ನು ದೂರಮಾಡುವುದು. ||96|| ಬ್ರಹ್ಮ ಮತ್ತಿತರರೂ ಸಹ ಮೂರು ಗುಣಗಳಿಂದ (ಸತ್ವ, ರಜ, ತಮ) ಮೋಹಿತರಾಗುತ್ತಾರೆ. ಮತ್ತು ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಈ ಪಂಚವಿಕಾರಗಳಿಂದ, ಕಾಮ ಮತ್ತು ನಾಲಿಗೆ ಇವುಗಳ ವಿವಿಧ ಪರಿವರ್ತನ ಸಂಯೋಜನೆಗಳಿಂದ ಮೋಹಿತರಾಗುತ್ತಾರೆ ||97|| ಜಗತ್ತಿನ ಎಲ್ಲ ಚಲಿಸುವ ಜೀವಿಗಳು ಅನಾದಿಕಾಲದಿಂದಲೂ ಅಜ್ಞಾನ ಮತ್ತು ಮಾಯೆಯಿಂದ ಆವೃತವಾಗಿವೆ. ರಾಗ ದ್ವೇಷ ಇತ್ಯಾದಿ ವಿಕಾರಗಳು ಮೋಹಿತವಾಗಿವೆ. ಮತ್ತು ಸರ್ವವೂ ಅಜ್ಞಾನದಿಂದ ಆವೃತವಾಗಿದೆ. ||98|| ಪ್ರತಿಯೊಂದು ಜೀವಿಯೂ ಅವಿದ್ಯೆಗೆ ಬದ್ಧವಾಗಿದೆ. ಅದರ ಶುದ್ಧರೂಪವನ್ನು ಪ್ರಕಟಿಸಲು ಅವಿದ್ಯೆ, ಕಾಮ ಮತ್ತು ಕರ್ಮಬಂಧನಗಳನ್ನು ಕಡಿದುಹಾಕುವ ಅವಶ್ಯಕತೆಯಿರುತ್ತದೆ. ||99|| ಹಸುವಿನ ಕೆಚ್ಚಲುಗಳು ಹಾಲಿನಿಂದ ತುಂಬಿ ಉಕ್ಕುತ್ತಿರುತ್ತವೆ. ಆದರೆ ಹಸುವಿನ ಉಣ್ಣೆ ಅಲ್ಲಿಯೇ ಗಟ್ಟಿಯಾಗಿ ಕಚ್ಚಿ ಅಂಟಿಕೊಂಡಿರುತ್ತದೆ. ಆದರೆ ಅವು ರಕ್ತವನ್ನು ಹೀರಿ ಸುಖ ಪಡುವುದರಿಂದ ಅವುಗಳಿಗೆ ಹಾಲಿನ ರುಚಿ ಹೇಗೆ ತಿಳಿದಿರುತ್ತೆ? ||100|| ಕಪ್ಪೆ ಮತ್ತು ಭ್ರಮರವನ್ನು ಗಮನಿಸಿ. ಸುಂದರವಾದ ಕಮಲದಲ್ಲಿ ಅವೆರಡೂ ಮನೆಮಾಡಿಕೊಂಡಿರುತ್ತವೆ. ಆದರೆ ಪರಿಮಳಭರಿತ ಪರಾಗವು ಭ್ರಮರದ ವಿಹಾರ ನೆಲೆಯಲ್ಲಿರುತ್ತದೆ. ಆದರೆ ಕಪ್ಪೆಯು ಮಾತ್ರ ಕೆಸರಿನಲ್ಲಿಯೇ ಇರುತ್ತದೆ. ||101|| ತಮ್ಮ ಸಮ್ಮುಖದಲ್ಲಿ ಜ್ಞಾನದ ರಾಶಿಯೇ ಇದ್ದರೂ ಸಹ, ಒಬ್ಬ ಮೂರ್ಖನು ಅಜ್ಞಾನದಿಂದ ಆಕರ್ಷಿಸಲ್ಪಡುತ್ತಾನೆ. ಮತ್ತು ಮೂರ್ಖನಿಗೆ ಅಜ್ಞಾನವು ಜ್ಞಾನದಂತೆಯೇ ಮನವನ್ನು ಒಲಿಸುತ್ತದೆ. ಅಂತಹವನಿಗೆ ಜ್ಞಾನದ ಬೋಧೆಯಿಂದೇನಾಗುತ್ತದೆ? ||102|| ಅಜ್ಞಾನವನ್ನು ಪೂರ್ಣವಾಗಿ ನಿರ್ಮೂಲನ ಮಾಡಿದಲ್ಲಿ ಬ್ರಹ್ಮಜ್ಞಾನವು ತನಗೆ ತಾನೇ ಪ್ರಕಟವಾಗುತ್ತದೆ. ಆದ್ದರಿಂದ ಅವಿದ್ಯೆಯ ಪ್ರತಿಪಾದನೆಯನ್ನು ಆರಂಭದಲ್ಲಿಯೇ ತಿಳಿದುಕೊಳ್ಳುವುದು ಅವಶ್ಯಕ, ಅದನ್ನು ತಿಳಿಯಿರಿ. ||103|| ಬ್ರಹ್ಮಜ್ಞಾನಕ್ಕೆ ಸಮಾನವಾದ ಪರಿಶುದ್ಧತೆಯನ್ನು ಈ ಮೂರುಲೋಕಗಳಲ್ಲಿಯೂ ಯಾವುದೂ ಹೊಂದಿರುವುದಿಲ್ಲ. ಆ ಜ್ಞಾನದ ಉಪದೇಶವು ಅತ್ಯಂತ ಮಾನ್ಯತೆ ಪಡೆದಿದೆ. ಅದಿಲ್ಲದೆ ಜೀವನವು ನಿಷ್ಫಲ. ||104|| ಈ ಬ್ರಹ್ಮನು ಬುದ್ಧಿಯಿಂದ ಅರಿತುಕೊಳ್ಳುವ ವಸ್ತುಗಳಿಗೆ ಸಮನಾದ ಪರಿಣಾಮವಾಗಿದ್ದಲ್ಲಿ ಅದರ ಆನಂದವನ್ನು ಅನುಭವಿಸುವ ಸ್ವಲ್ಪವಾದರೂ ಇಂದ್ರಿಯ ಸುಖದೊರಕುತ್ತಿತ್ತು. ಅದರಿಂದಾಗಿ ಆವ್ಯಕ್ತಿಯು "ಇದೇ ಅದು" ಎಂದು ಹೇಳಬಹುದಾಗಿತ್ತು. ||105|| ಬ್ರಹ್ಮತತ್ತ್ವವನ್ನ ಉದ್ದೇಶದಲ್ಲಿ ಬುದ್ಧಿಶಕ್ತಿಯನ್ನು ಹೊಂದಿದೆ. ಆದರೆ ಇಂದ್ರಿಯ ಸಂತೋಷದಿಂದಾಚೆಗೆ ಇರುವುದನ್ನು ಬುದ್ಧಿಶಕ್ತಿಯಿಂದ ಗ್ರಹಿಸಬಹುದಾಗಿದೆ. ಇದನ್ನೇ ಸ್ಮೃತಿಗಳು ಘೋಷಿಸುತ್ತವೆ. ಆದರೆ ಶ್ರುತಿಗಳು ಅದನ್ನು ಒಪ್ಪುವುದಿಲ್ಲ. ||106|| ಯಾವಾಗ ಬುದ್ಧಿ ಇತ್ಯಾದಿಗಳ ಅಭಾವವಿದೆಯೋ ಆಗ ಗ್ರಹಣಶಕ್ತ್ಯಾಧನವು ಮಾಯವಾಗಿರುತ್ತದೆ. ಆಗ ಬ್ರಹ್ಮನ ಅಸ್ತಿತ್ವ ಭಾವವು ಮಾನ್ಯತೆಗೆ ಆಧಾರವಾಗಿ ಹೇಗಿರಲು ಸಾಧ್ಯ? ||107|| ಕರಣಗಳಿಗೆ (ಪಂಚೇಂದ್ರಿಯಗಳಿಗೆ) ಗೋಚರವಾಗುವುದು,

ಅವೆಲ್ಲವೂ ಅಸ್ತಿತ್ವದಲ್ಲಿವೆ ಮತ್ತೆ ಇನ್ನೇನೂ ಇರುವುದಿಲ್ಲ – ಇದು ಎಲ್ಲರಿಗೂ ಚೆನ್ನಾಗಿ ತಿಳಿದಿರುವ ವಿಷಯ. ಅಂದರೆ ಬ್ರಹ್ಮನು ಕದಾಚಿತ್ ಅಸ್ತಿತ್ವದಲ್ಲಿಯೇ ಇಲ್ಲ. ॥108॥ ಇಲ್ಲಿಯವರೆಗೆ ಹೇಳಿದುದೆಲ್ಲದರ ಅರ್ಥವು ಇದೇ. ಆದರೆ ಅದೇನಾದರೂ ನಿಜವಾಗಿದ್ದರೆ ಅದು ಅನರ್ಥವೇ ಸರಿ. ಅದು ಕೇವಲ ಬುದ್ಧಿಯನ್ನು ಮಾತ್ರ ನಿರಂತರವಾಗಿ ಸತ್ ಸ್ವರೂಪವೆಂದು ತೋರಿಸಿ ಸೂಕ್ಷ್ಮತೆಯ ತಾರತಮ್ಯದ ಪರಂಪರೆಯ ಅರ್ಥವನ್ನು ತಿಳಿಸಿಕೊಡುತ್ತದೆ. ॥109॥ ಅದೂ (ಬುದ್ಧಿ) ಸಹ ಲಯವಾಗಲಿ. ಹಾಗಿದ್ದಾಗ್ಯೂ ಅದು ಅಸ್ತಿತ್ವದ ಜೊತೆಯಲ್ಲಿ ಸೇರಿ ಅಲ್ಲಿ ನಿಲ್ಲುತ್ತದೆ. ಏಕೆಂದರೆ ನಿಸ್ಸಂದೇಹವಾಗಿ ಆತ್ಮವು ವಿಶ್ವದ ಮೂಲಕಾರಣವಾಗಿದೆ ಮತ್ತು ಎಲ್ಲ ಅಳಿವೂ ಸಹ ಅಸ್ತಿತ್ವದ ಮೂಲದಲ್ಲಿಯೇ ನೆಲೆಸಿದೆ॥110॥ ಒಂದು ಮಡಕೆಗೆ ಕಲ್ಲನ್ನು ಎಸೆದಾಗ, ಅದರ ರೂಪವು ಒಡೆದು ಹೋಗಿ ಕೇವಲ ಚೂರುಗಳು ಉಳಿಯುತ್ತವೆ. ಮಡಕೆಯ ರೂಪವು ನಾಶವಾಗಿದ್ದರೂ, ಆ ಚೂರುಗಳು ಅದರ ಇರುವಿಕೆಯನ್ನು ಸೂಚಿಸುತ್ತವೆ. ॥111॥ ಅದರ ಪರಿಣಾಮವಾಗಿ ಮಡಕೆಯ ರೂಪವು ನಾಶವಾಗಿದ್ದರೂ ಮಡಕೆಯ ಅಸ್ತಿತ್ವಕ್ಕೆ ನಾಶವು ಇರುವುದಿಲ್ಲ. ಏಕೆಂದರೆ ಮಡಕೆಯ ಚೂರುಗಳು ಅದರ ಅಖಂಡತ್ವಕ್ಕೆ ಕುರುಹಾಗಿ ಉಳಿಯುತ್ತವೆ. ಆದ್ದರಿಂದ ಖಚಿತವಾಗಿಯೂ ಅದು ಅವುಗಳಲ್ಲಿರುವ ಅಸ್ತಿತ್ವದ ಸಾರ. ॥112॥ ಯಾವುದೇ ಸಮಯದಲ್ಲಾದರೂ ಪರಿಣಾಮದ ಪರ್ಯವಸಾನವು ಶೂನ್ಯದಲ್ಲಿ ಅಂತ್ಯಗೊಳ್ಳುವುದಿಲ್ಲ. ಪರ್ಯವಸಾನವು ಅಸ್ತಿತ್ವ ನಿಷ್ಠೆಯಲ್ಲಿ ಲಯವಾಗುತ್ತದೆ. ಇದು ಸತ್ ಎಂಬ ಪ್ರತ್ಯಯದಲ್ಲಿ ಲೀನವಾದ ಸದ್ಬುದ್ಧಿಯಂತಿರುತ್ತದೆ. ॥113॥ ಎಲ್ಲ ತೀರ್ಥಸ್ಥಳಗಳೂ ವ್ರತಗಳೂ ಪವಿತ್ರವಾದವು. ಆದರೆ ಬ್ರಹ್ಮಜ್ಞಾನವು ಇನ್ನೂ ಹೆಚ್ಚು ಪವಿತ್ರ. ಅನಂತರ ಬ್ರಹ್ಮಜ್ಞಾನದ ಅರಿವಿಲ್ಲದ ಭಜನೆ–ಪೂಜೆಗಳು ನಿರರ್ಥಕ. ॥114॥ ಚಿತ್ತವು ಅವಿದ್ಯೆಯಿಂದ ಮಲಿನವಾಗಿದೆ. ಅಂತಹ ಚಿತ್ತವನ್ನು ಭಗವದ್ಭಕ್ತಿಯಿಂದಲ್ಲದೆ ಶುಭ್ರಗೊಳಿಸಲು ಆಗುವುದಿಲ್ಲ. ಈಶ್ವರ ಭಕ್ತಿಯಿಂದಲ್ಲದೆ ಜ್ಞಾನವು ಉದಯಿಸುವುದಿಲ್ಲ. ॥115॥ ಆದುದರಿಂದ ಮೊದಲು ಅಜ್ಞಾನವು ಏನೆಂಬುದನ್ನು ತಿಳಿಯಿರಿ. ಅದನ್ನು ವಿವರಿಸಿದ ಮೇಲೆ ಮತ್ತು ಅದರಿಂದ ಬೋಧನೆಯನ್ನು ಸಂಗ್ರಹಿಸಿದ ಮೇಲೆ ಬಂಧನ ವಿಮೋಚನೆಯುಂಟಾಗುತ್ತದೆ. ಕೇವಲ ಭಕ್ತಿಮಾತ್ರವೇ ಅದಕ್ಕೆ ಪ್ರಮಾಣ. ॥116॥ ಒಂದು ವೇಳೆ ಕಾಲುಗಳನ್ನು ಮುಂದೆ ಮಾಡಿ ಹುಟ್ಟುವ ಮಗುವಿನ ಕಣ್ಣಿಗೆ ಅಂಜನ ಹಚ್ಚಿದರೆ, ಭೂಮಿಯೊಳಗೆ ಇಹ ಸಂಪತ್ತನ್ನು ಕಾಣಬಹುದು. ಅದೇ ರೀತಿ ಭಕ್ತಿಯನ್ನು ಅವಲಂಬಿಸಿದಾಗ ಅಜ್ಞಾನವು ನಾಶವಾಗಿ ಜ್ಞಾನೋದಯವುಂಟಾಗುತ್ತದೆ. ॥117॥ ಜ್ಞಾನವೆಂದರೇನೇ ಆತ್ಮಸಾಕ್ಷಾತ್ಕಾರದ ಪ್ರಾಪ್ತಿ. ಅದಕ್ಕಾಗಿ ಅಜ್ಞಾನ ನಿವೃತ್ತಿಯಾಗಬೇಕು. ಭಗವದ್ಭಕ್ತಿಯನ್ನು ಅಳವಡಿಸಿಕೊಳ್ಳದಿದ್ದರೆ ಮಾಯೆಯ ಶಕ್ತಿಯು ಅಪರಿಮಿತವಾಗುತ್ತದೆ. ॥118॥ ಜ್ಞಾನ ಮತ್ತು ಅಜ್ಞಾನ ಎರಡೂ ಒಟ್ಟಿಗೆ ಮಿಶ್ರವಾಗಿರುತ್ತವೆ. ಅಜ್ಞಾನವನ್ನು ಬಿಸಾಡಿ ಕೇವಲ ಜ್ಞಾನವನ್ನು ಮಾತ್ರ ಆಯ್ದುಕೊಳ್ಳಿರಿ. ಅಕ್ಕಿಯಲ್ಲಿ ಕಲ್ಲು ಮತ್ತಿತರ ಕಸವನ್ನು ತೆಗೆದು ಹಾಕಿದ ನಂತರ ಅಕ್ಕಿಯನ್ನು ಬಿಸಿನೀರಿನಲ್ಲಿ ಬೇಯಿಸುವ ರೀತಿಯಲ್ಲಿ ಮಾಡಬೇಕು. ॥119॥ ಭಗವಂತನು ಸರ್ವ

ಭೂತಗಳಲ್ಲಿಯೂ ನೆಲಸಿರುವವನು. ಜ್ಞಾನಕ್ಕಾಗಿ ಯಜ್ಞ ಮತ್ತು ಇತರ ಉಪಾಸನೆಗಳನ್ನು ಮಾಡುವರು. ಆದರೆ ಒಮ್ಮೆ ವಿಶ್ವತೋಮುಖನಾದ ಕೃಷ್ಣನನ್ನು ದರ್ಶಿಸಿದಾಗ ಅಜ್ಞಾನವು ಜ್ಞಾನವನ್ನು ಉಳಿಸಿ ತಾನು ಸುಟ್ಟುಹೋಗುತ್ತದೆ. ॥120॥ ಈಗ ಜ್ಞಾನಕ್ಕಾಗಿ ಮಾಡುವ ಯಜ್ಞದ ಸ್ವರೂಪವನ್ನು ನೋಡೋಣ. 'ಅಹಂ ಬ್ರಹ್ಮಾಸ್ಮಿ' (ನಾನೇ ಬ್ರಹ್ಮ) ಎಂಬ ಸ್ತೂಪಕ್ಕೆ ಬಲಿಯನ್ನು ಕಟ್ಟಿ, ಪಂಚ ಮಹಾಭೂತಗಳನ್ನು ಯಜ್ಞಮಂಟಪವನ್ನಾಗಿ ಮಾಡಿ, ಜೀವ ಮತ್ತು ಈಶ್ವರ ಭೇದವೆಂಬ ಪಶುವನ್ನು ಬಲಿಕೊಡಬೇಕು. ॥121॥ ಪಂಚೇಂದ್ರಿಯಗಳು ಮತ್ತು ಪಂಚಪ್ರಾಣಗಳು ಮಾತ್ರವೇ ಈ ಯಜ್ಞಕ್ಕೆ ಬೇಕಾಗಿರುವುದು. ಮನಸ್ಸು ಮತ್ತು ಬುದ್ಧಿಯ ಟೊಳ್ಳು ಜಾಗದಲ್ಲಿ ಜ್ಞಾನವೆಂಬ ಅಗ್ನಿಯನ್ನು ಪ್ರದೀಪ್ತಿಗೊಳಿಸಬೇಕು. ॥122॥ ಯಜ್ಞಕರ್ತನು ಜೀವಿಯೆಂಬ ಯಜಮಾನ. ಅಜ್ಞಾನವೆಂಬ ತುಪ್ಪದ ಆಹುತಿ ಕೊಡಬೇಕು. ಆತ್ಮಾನಂದದಲ್ಲಿಯೇ ನಿಮಗ್ನನಾಗಿ ಯಜ್ಞದ ಕೊನೆಯಲ್ಲಿ ಆ ಜೀವಿಗೆ ಅವಭೃತ ಸ್ನಾನ ಮಾಡಿಸಬೇಕು. ॥123॥ ತಾತ್ಪರ್ಯವೆಂದರೆ, ಅಜ್ಞಾನವೆಂಬ ತುಪ್ಪದ ಆಹುತಿಯನ್ನು ನೀಡದೆ ಇದ್ದಲ್ಲಿ ಜ್ಞಾನವೆಂಬ ಅಗ್ನಿಯು ಎಂದಿಗೂ ಪ್ರಕಟವಾಗುವುದಿಲ್ಲ. ಜೀವ ಮತ್ತು ಈಶ್ವರರ ಮಧ್ಯೆ ಇರುವ ಭೇದವನ್ನು ಸುಟ್ಟಾಗ ಮಾತ್ರವೇ ಆತ್ಮಜ್ಞಾನ (ಬ್ರಹ್ಮಜ್ಞಾನ)ವು ಪ್ರಕಟಗೊಳ್ಳುತ್ತದೆ. ॥124॥ ಸ್ವಚ್ಛವಾದ ಕನ್ನಡಿಯು ಧೂಳಿನಿಂದ ಮುಚ್ಚಿದ ರೀತಿಯಲ್ಲಿ, ಅಗ್ನಿಯ ಪ್ರಕಾಶವು ಹೊಗೆಯಿಂದ ಆವರಿಸಿದ ರೀತಿಯಲ್ಲಿ, ಜ್ಞಾನವು ಕಾಮ ಕ್ರೋಧಗಳಿಂದ ತುಂಬಿದ ಅಜ್ಞಾನದಿಂದ ಆವರಿಸಲ್ಪಟ್ಟಿದೆ. ॥125॥ ರಾಹುವು ಚಂದ್ರಬಿಂಬವನ್ನು ಮುಚ್ಚುವ ರೀತಿಯಲ್ಲಿ, ಪಾಚಿಯು ನೀರನ್ನು ಮರೆಮಾಡುವ ರೀತಿಯಲ್ಲಿ, ಮಾಯೆಯು ಸ್ವಯಂಪ್ರಕಾಶವಾದ ಜ್ಞಾನವನ್ನು ಪರದೆಯಾಗಿ ಆಚ್ಛಾದಿಸುತ್ತದೆ.॥126॥ ಮಹಾ ಪಂಡಿತರ ಬುದ್ಧಿಶಕ್ತಿಯು ಭ್ರಷ್ಟವಾಗಿದೆ ಮತ್ತು ಅವರು ಅಧೋಗತಿ ಹೊಂದುತ್ತಾರೆ. ಅವರಿಗೆ ಇಂತಹ ಸಂದರ್ಭವನ್ನು ತಡೆಯುವ ಉಪಾಯವು ತಿಳಿದಿದೆ. ಆದರೆ ಅವರು ಅದನ್ನು ಪಾಲಿಸುವುದಿಲ್ಲ ಮತ್ತು ಮನಸೋ ಇಚ್ಛೆ ಆಚರಣೆ ಮಾಡುತ್ತಾರೆ. ॥127॥ ನೋಡಲು ಸಾಧ್ಯವಿದ್ದರೂ ಸಹ ಅಂಧರಂತೆ ವರ್ತಿಸುವರು. ತಮ್ಮ ಸತ್ಸಂಗವನ್ನೆಲ್ಲ ತ್ಯಜಿಸಿ ಲಜ್ಜೆಗೆಟ್ಟ ರೀತಿ ವರ್ತಿಸುವರು. ಒತ್ತಾಯದ ಕೆಟ್ಟ ಸಹವಾಸದಿಂದಾಗಿ ಚಿಂತೆಗೆ ಕಾರಣರಾಗಿ ತಮ್ಮ ಸ್ವೇಚ್ಛೆಯಂತೆ ನಡೆಯುತ್ತಾರೆ. ॥128॥ ಲೌಕಿಕ ಜೀವನದಲ್ಲಿ ನಿವೃತ್ತರಾಗಿ ವಾನಪ್ರಸ್ಥಾಶ್ರಮದಲ್ಲಿರುವವರು ಗೃಹಸ್ಥಾಶ್ರಮಕ್ಕೆ ತಿರುಗುತ್ತಾರೆ ಮತ್ತು ದೃಢ ನಿರ್ಧಾರದಿಂದಲೇ ಮಾಡಬಾರದ ಕಾರ್ಯಗಳಲ್ಲಿ ಮಗ್ನರಾಗುತ್ತಾರೆ. ಅವರು ಅಸಹ್ಯ ವಸ್ತುಗಳನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸುತ್ತಾರೆ. ॥129॥ ಅಂತಹ ಅಪರಾಧಗಳು ಮತ್ತು ಪಾಪಗಳನ್ನು ಪ್ರಯತ್ನಪೂರ್ವಕವಾಗಿ ತಡೆದಿದ್ದರೂ ಸಹ, ಅವರು ಅಜ್ಞಾನದಿಂದಾಗಲಿ ಅಥವಾ ದೈವ ನಿಯಮದಂತೆ ಪಾಪಕೂಪದಲ್ಲಿ ಬೀಳುತ್ತಾರೆ. ಅಂತಹ ಸ್ಥಿತಿಯನ್ನು ಏನು ಹೇಳಲಿ? ಅದು ಜ್ಞಾನಿಗಳ ಬುದ್ಧಿವಂತಿಕೆಯೇ? ॥130॥ ಒಂದು ವೇಳೆ ಒಬ್ಬ ಮಹಾಜ್ಞಾನಿಯು ಇದ್ದರೂ, ಪಾಪದ ನೆರಳನ್ನೂ ಬಯಸದವನು, ದೀಪದಿಂದ ಪತಂಗವು ಮೋಸಹೋಗುವಂತೆ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳಲ್ಲಿ ಭೇದವನ್ನು

ಕಂಡುಹಿಡಿಯಲಾರದೇ ಹೋಗುವನು. ॥131॥ ಪಾಪ ಕಾರ್ಯ ಮಾಡುವುದು ಅಜ್ಞಾನವೆಂಬುದು ಅವನಿಗೆ ಪೂರ್ಣವಾಗಿ, ಖಚಿತವಾಗಿ ತಿಳಿದಿದೆ. ಆದರೆ ಕಾಮ ಪ್ರವೃತ್ತಿಯ ಕಾರಣದಿಂದಾಗಿ, ಅವನು ಅದಕ್ಕೆ ಓಗೊಡುವುದಿಲ್ಲ. ॥132॥ ಈ ಎಲ್ಲ ಕ್ರಿಯೆಗಳನ್ನು ಕೇವಲ ಕಾಮದಿಂದಲೇ ಮಾಡುತ್ತಾರೆ. ಆಸೆಗಳೇ ಎಲ್ಲಾ ಅನರ್ಥಗಳಿಗೆ ಕಾರಣ. ಅದು ಕ್ರೋಧ ರೂಪದಲ್ಲಿ ಪರ್ಯವಸಾನವಾಗುತ್ತದೆ. ॥133॥ ಯಾವಾಗ ಆಸೆಗಳ ತೃಪ್ತಿಗೆ ಅಡೆತಡೆಗಳುಂಟಾಗುವುದೋ, ಆಗ ಆ ಕಾಮವು ಕ್ರೋಧವಾಗಿ ಬದಲಾಗುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಮೋಕ್ಷಕ್ಕೆ ವಿರುದ್ಧವಾಗಿರುತ್ತದೆ. ಇಂತಹ ಕಾರ್ಯದ ಗತಿಯು ಜ್ಞಾನಕ್ಕೆ ಪ್ರತಿಬಂಧಕವಾಗುತ್ತದೆ. ॥134॥ ಆ ಜೀವವು ಕಾಮ ಮತ್ತು ಕ್ರೋಧಗಳಿಂದ ಉಂಟಾಗುವ ತ್ರಾಸದಲ್ಲಿ ಸಿಕ್ಕಿಕೊಳ್ಳುತ್ತದೆ. ಬ್ರಹ್ಮಸ್ವರೂಪ ಅತ್ಯಂತ ಹತ್ತಿರದಲ್ಲೇ ಇದ್ದು ಜ್ಞಾನದ ಪಂಕ್ತಿಯಲ್ಲೇ ವಾಸಮಾಡುತ್ತದೆ. ॥135॥ ಅವುಗಳು (ಕಾಮ, ಕ್ರೋಧ) ಯಾವುದೇ ನೀರಿಲ್ಲದಿದ್ದರೂ ಮುಳುಗಿಸುತ್ತವೆ. ಅಲ್ಲಿ ಯಾವುದೇ ಬೆಂಕಿ ಇಲ್ಲದಿದ್ದರೂ ಸುಡುತ್ತವೆ. ಯಾವುದೇಆಯುಧವಿಲ್ಲದಿದ್ದರೂ ಕೊಲ್ಲುತ್ತವೆ. ಮತ್ತು ಯಾವುದೇ ಹಗ್ಗವಿಲ್ಲದಿದ್ದರೂ ಬಂಧಿಸುತ್ತವೆ. ॥136॥ ಅತ್ಯಂತ ಜ್ಞಾನಿಯಾಗಿದ್ದರೂ ಅವುಗಳನ್ನು ತಡೆಯಲಾಗುವುದಿಲ್ಲ. ಮತ್ತು ಅವುಗಳ ಎದುರಲ್ಲಿ ಪಣ ಕಟ್ಟಿದರೂ ಸೋಲುತ್ತಾರೆ. ಅವುಗಳು ವಿಶ್ವದ ಮಹಾಪ್ರಳಯಕ್ಕೆ ಕಾರಣವಾಗುವ ಸಾಮರ್ಥ್ಯ ಹೊಂದಿರುತ್ತವೆ. ಮತ್ತು ಜೀವಿಗಳನ್ನು ಅವರ ಅರಿವಿಗೆ ಬರದಂತೆಯೇ ನುಂಗಿಬಿಡುತ್ತವೆ. ॥137॥ ಕಾಮ ಮತ್ತು ಕ್ರೋಧಗಳು ಜ್ಞಾನ ಗರ್ಭವನ್ನು ಪೊರೆಯಂತೆ ಆವರಿಸುತ್ತವೆ. ಅದು ಕಾಳಸರ್ಪವು ಚಂದನದ ವೃಕ್ಷದ ಬೇರುಗಳನ್ನು ಸುತ್ತುವರೆಯುವ ರೀತಿಯಲ್ಲಿ ಇರುತ್ತದೆ. ॥138॥ ಇಂದ್ರಿಯಗಳು, ಬುದ್ಧಿ ಮತ್ತು ಮನಸ್ಸು – ಇವುಗಳು ಆ ಕಾಮನೆಗಳ ನಿವಾಸವಾಗಿವೆ. ಅವುಗಳ ಪ್ರಭಾವದಿಂದ ಜೀವಿಯ ಜ್ಞಾನವು ಕುಂದುತ್ತದೆ ಮತ್ತು ಅವನು ಮೋಹಿತನಾಗುತ್ತಾನೆ. ॥139॥ ನಿನಗೇನಾದರೂ ಚಂದನವು ಬೇಕಾದರೆ, ನೀನು ಆ ಕಾಳಸರ್ಪವನ್ನು ಕೊಲ್ಲಬೇಕಾಗುತ್ತದೆ. ಕಾಮ–ಕ್ರೋಧಗಳ ತೆರೆಯನ್ನು ತೆಗೆದುಹಾಕಬೇಕಾಗುತ್ತದೆ. ಆಗ ಜ್ಞಾನದ ಭಂಡಾರವನ್ನೇ ಪಡೆಯಬಹುದು. ॥140॥ ಸರ್ಪವನ್ನು ಸಾಯಿಸದೆ ಯಾರಾದರೂ ಚಂದನವನ್ನು ಪಡೆಯಲು ಸಾಧ್ಯವೇ? ಕೃಷ್ಣಸರ್ಪವನ್ನು ಕೊಲ್ಲದೆ ಹುದುಗಿಟ್ಟ ಧನವನ್ನು ಪಡೆಯಲು ಸಾಧ್ಯವೇ? ॥141॥ ಅದೇ ರೀತಿ, ಪರತತ್ತ್ವವನ್ನು ಮತ್ತು ಆತ್ಮಜ್ಞಾನವನ್ನು ಪಡೆಯಲು ಮಾಯೆಯ ಪರದೆಯನ್ನು ಸರಿಸಬೇಕು. ಪ್ರಕೃತಿಯು ಸಹಜವಾಗಿಯೇ ನಿಸ್ಸಾರವಾದುದು. ಆದರೆ ಅದೊಂದು ಸಾಧನವಾಗಬಹುದು. ॥142॥ ಆದುದರಿಂದ ಮೊದಲು ಇಂದ್ರಿಯಗಳನ್ನು ನಿಗ್ರಹಿಸಿ. ಆಗ ಕಾಮ–ಕ್ರೋಧಗಳು ಸಾಯುವವು. ಜೀವಿಯು ಕಾಮಕ್ರೋಧಗಳ ಅಧೀನ. ಜ್ಞಾನವು ಅಜ್ಞಾನದ ಆವರಣದಿಂದ ಸುತ್ತುವರೆದಿದೆ. ॥143॥ ಇಂದ್ರಿಯಗಳು ದೇಹಕ್ಕಿಂತ ಸೂಕ್ಷ್ಮ. ಮನಸ್ಸು ಅವೆರಡಕ್ಕಿಂತ ಸೂಕ್ಷ್ಮ. ಬುದ್ಧಿಯು ಮನಸ್ಸಿಗಿಂತಲೂ ಸೂಕ್ಷ್ಮ. ಪರಮಾತ್ಮನು ಬುದ್ಧಿಗಿಂತಲೂ ಅತ್ಯಂತ ಶ್ರೇಷ್ಠ. ॥144॥ ಇಂತಹ ಪರಾತ್ಪರ ಪರಮ ಸತ್ಯವು ಸರ್ವ ಸಂಸಾರ

ಧರ್ಮಗಳನ್ನು ವರ್ಜಿಸಿ ನಿಲ್ಲುತ್ತದೆ. ಅಂತಹ ಪರಮಾತ್ಮ ತತ್ತ್ವ ಪರಮ ಹಿತವಾದುದು. ಅದು ಮಧುರವಾದ ಅಮೃತ ಸ್ವರೂಪದ ನಿಜ ತತ್ತ್ವ. ॥145॥ ಶುದ್ಧ, ಬುದ್ಧ, ನಿತ್ಯ, ಮುಕ್ತ – ಇವುಗಳೇ ನಿಜವಾದ ಅಭೇದ ಸ್ಥಿತಿಯ ತತ್ತ್ವ. ಅದೇ ಪರಮಾನಂದ ಸ್ವರೂಪ ಮತ್ತು ಸಮಂಜಸವಾದ ಜೀವಿಯ ಚೈತನ್ಯಯುಕ್ತ ಸ್ಥಿತಿ. ॥146॥ ಪಂಚೀಕರಣ'ವೆಂದು ಹೆಸರಿಸುವುದು ಮಾಯೆಯ ರೂಪದರ್ಶನವಷ್ಟೆ. ಅದು ಅಧ್ಯಾರೋಪ (ಒಂದರ ಮೇಲೊಂದು) ಮತ್ತು ಅಪವಾದ (ಇಂದ್ರಿಯ ಯುಕ್ತ)ಗಳ ಒಂದೇ ಸಾಧನ. ಇದರ ಪ್ರಬೋಧ (ಪ್ರಜ್ಞೆಯ)ದ ಅವಶ್ಯಕತೆ ಇರುತ್ತದೆ. ॥147॥ ಅಪಂಚೀಕೃತ (ನ್ಯಾಯ ಸಮ್ಮತ ಮಿಲನ) ಪಂಚ ಮಹಾಭೂತಗಳನ್ನು ಪಂಚ ತನ್ಮಾತ್ರಗಳೆಂದು ಕರೆಯುತ್ತಾರೆ. ಅವುಗಳ ವಿಕಸನವು ಅಂದರೆ ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳು ಆತ್ಮದ ಸೂಕ್ಷ್ಮ ಶರೀರವನ್ನಾಗಿ ಮಾಡುತ್ತವೆ. ॥148॥ ಪಂಚಭೂತಗಳ ಪಂಚೀಕರಣದಿಂದ ಆತ್ಮದ ವಿರಾಟ್ ಉದಯವಾಗುತ್ತದೆಂಬುದನ್ನು ಗಣನೆಗೆ ತರಬೇಕು. ಇದು ಆತ್ಮದ ಸ್ಥೂಲ ದೇಹವಾಗುತ್ತದೆ. ಜ್ಞಾನಿಗಳು ಅದನ್ನೇ 'ವಿರಾಟ್' ಎಂದು ಕರೆಯುತ್ತಾರೆ. ॥149॥ ಸ್ಥೂಲ – ಸೂಕ್ಷ್ಮ ಶರೀರಗಳ ಉದಯಕ್ಕೆ ಕಾರಣ ಕೇವಲ ಸ್ವಸ್ವರೂಪದ ಬಗೆಗಿನ ಅಜ್ಞಾನ ಅದರ ಗೋಚರವೆ ಅವ್ಯಾಕೃತದಿಂದ ಉಂಟಾದುದು ಎಂಬುದು ತಿಳಿದಿರಲಿ. ಆತ್ಮಕ್ಕೆ ಕಾರಣೀಭೂತವಾದುದು ದೇಹ (ಪಂಚಭೂತಗಳ ಸಂಯೋಗವೇ ಅವ್ಯಾಕೃತ್.) ॥50॥ ಇದು ಕಾರಣ ಶರೀರವೆಂದು ಪ್ರಖ್ಯಾತವಾಗಿದೆ. ಅದು ಚೈತನ್ಯದ ಪ್ರತಿಬಿಂಬಯುತವಾಗಿದೆ. ಕೇವಲ ಅಜ್ಞಾನದ ಕಾರಣಭೂತವಾಗಿದ್ದು ಅದು ಅವ್ಯಾಕೃತ (ಬೆಳವಣಿಗೆಯಿಲ್ಲದಿರುವುದು) ಮತ್ತು ಅವ್ಯಕ್ತವೆಂದು ತಿಳಿಯಲ್ಪಡುತ್ತದೆ. ॥151॥ ಆತ್ಮದ ಬಗ್ಗೆ ಅಜ್ಞಾನವೇ ಇದರ ಕಾರಣ. ಅದು ವಿಭಜನೆಯಾಗಿರುವುದೋ ಇಲ್ಲವೋ ಅಥವಾ ಎರಡೂ ಅಲ್ಲವೋ. ದೇಹ ಭಾವವು ನಾಶವಾಗಬೇಕಾದರೆ ಅದು ಕೇವಲ ಬ್ರಹ್ಮಾತ್ಮೈಕ ಜ್ಞಾನ (ಬ್ರಹ್ಮ ಮತ್ತು ಆತ್ಮದ ಸಂಯೋಗ ಜ್ಞಾನ)ದಿಂದ ಮಾತ್ರವೇ. ॥152॥ ಸ್ವಸ್ವರೂಪದ ಅವಸ್ಥೆಯಲ್ಲಿ ನಿಲ್ಲುವುದೆ ಮೋಕ್ಷ ಅಥವಾ ಬಂಧ ವಿಮೋಚನೆ. ಸ್ವಸ್ವರೂಪಾವಸ್ಥೆಯಲ್ಲಿರುವುದೇ ಅಲ್ಲದೆ ಬೇರೆ ಯಾವ ಮೋಕ್ಷವೂ ಇಲ್ಲ. ॥153॥ ಒಂದು ವೇಳೆ ಕೇವಲ ಬ್ರಹ್ಮಾತ್ಮೈಕತ್ವದ ಜ್ಞಾನವನ್ನು ಸಾಧಿಸಿದಲ್ಲಿ ಅಜ್ಞಾನವು ದೂರವಾಗುತ್ತದೆ. ಆದುದರಿಂದ ಅಜ್ಞಾನವನ್ನು ತಿಳಿದುಕೊಳ್ಳಲು ಅದರ ನಿರೂಪಣೆಯ ಅವಶ್ಯಕತೆಯಿರುತ್ತದೆ. ॥154॥ ಅವಿದ್ಯೆಯಿಂದ ಮಲಿನವಾಗಿರುವುದು ಕಳಂಕಿತವಾಗುವ ಸ್ಥಿತಿಯನ್ನು ತಲುಪುತ್ತದೆ. ಅಂತಹ ಸ್ಥಿತಿಯನ್ನು ಸತ್ ಎಂದು ಈಗಿನ ವಸ್ತುಸ್ಥಿತಿಯಿಂದು ಕರೆಯುತ್ತಾರೆ. ಈ ರೀತಿ ಅದು ಅರ್ಥವನ್ನು ತಿಳಿಸುವಂತಹ ಅಥವಾ ಚಿಹ್ನೆಯನ್ನು ಸೂಚಿಸುವಂತಹ ಪದವಾಗಿ ಅಸ್ತಿತ್ವವನ್ನು ಹೊಂದುತ್ತದೆ. ॥155॥ ಅದು ಮೂಲತಃ ಅತೀಂದ್ರಿಯವಾಗಿದ್ದರೂ, ಬುದ್ಧಿಯಿಂದ ಗ್ರಹಿಸಲು ಸಾಧ್ಯವಾಗುವಂತೆ ಪದವನ್ನಾಗಿ ಮಾಡಿದೆ. ಆಗ ಮಾತ್ರವೇ ಅದರ ಸ್ವರೂಪವು ಮನವನ್ನು ಪ್ರವೇಶಿಸಿ 'ಓಂಕಾರ' ರೂಪವನ್ನು ಪಡೆದಿದೆ. ॥156॥ ಓಂಕಾರ ಬ್ರಹ್ಮನ ಮೇಲೆ ಧ್ಯಾನಿಸುತ್ತ ಮತ್ತು ಈಶ್ವರ ಸ್ಮರಣೆ ಮಾಡುತ್ತ ಯಾರು

ದೇಹಾವಸಾನ ಹೊಂದುತ್ತಾರೋ ಅವರ ಜೀವನ ಸಾರ್ಥಕವಾಗುತ್ತೆ! ||157|| ಅದು ಹಾಗಿರಲಿ. ಆಡುವ ಮಾತಿನಿಂದ, ಅವ್ಯಕ್ತವಾದ ಬ್ರಹ್ಮನ ಸ್ವರೂಪವು ಹುಟ್ಟುತ್ತದೆ. ಈ ಅವ್ಯಕ್ತತ್ವದಿಂದ ಮಹತ್‌ತತ್ತ್ವವು ಹುಟ್ಟುತ್ತದೆ. ಅದು ಅವ್ಯಕ್ತತ್ವದ ಪ್ರಾದುರ್ಭಾವ. ಮತ್ತು ಅದರಿಂದಲೇ ಅಹಂಭಾವವು ಹುಟ್ಟುತ್ತದೆ. ||158|| ಪಂಚ ತನ್ಮಾತ್ರಗಳಿಂದ ಅಹಂಕಾರ ಹುಟ್ಟುತ್ತದೆ. ಮುಂದೆ ಪಂಚಮಹಾ ಭೂತಗಳನ್ನು ಹುಟ್ಟಿಸುತ್ತದೆ. ಮತ್ತು ಈ ಪ್ರಪಂಚವೂ ಈ ಐದು ಪಂಚಭೂತಗಳಿಂದಲೇ ಹುಟ್ಟುತ್ತದೆ. ||159|| ವಿಶ್ವದ ಬಗೆಗಿನ ಅಜ್ಞಾನವೇ ನಿಜವಾಗಿ ಜಗತ್ತಿನ ರೂಪ ದರ್ಶನದ ಸೂಚನೆ. ಅದರಿಂದ ಜಗತ್ತಿನ ರೂಪ ಲಕ್ಷಣಗಳು ಪ್ರಕಟಗೊಳ್ಳುತ್ತವೆ. ಈ ಅಜ್ಞಾನ ನಾಶವಾಗಬೇಕಾದರೆ, ಅಜ್ಞಾನ ಎಂಬುದನ್ನು ವಿವರಿಸುವುದು ಅಗತ್ಯ. ||160|| ಯಾವುದು ಅತ್ಯಂತ ಶುದ್ಧವಾಗಿಯೂ, ನಿರ್ಮಲವಾಗಿಯೂ ಇರುವುದೋ, ಅದು ಕೇವಲ ಚಿನ್ಮಾತ್ರ, ಇದರಿಂದ ಬೇರೆಯಾಗಿರುವುದು ಮಲಿನವಾದುದು. ಇವೆರಡನ್ನೂ ಮಿಶ್ರಮಾಡುವುದು ಸರಿಯಲ್ಲ. ||161|| ಬ್ರಹ್ಮನು ಅಂತರಂಗದಲ್ಲಿ ಪ್ರಕಟವಾಗುವುದಕ್ಕಿಂತ ಖಂಡಿತವಾಗಿಯೂ ಬೇರೆ ಎಂಬುದನ್ನು ತಿಳಿ. ಆದ್ದರಿಂದ ಸರಿಯಾದ ಉಪದೇಶದ ಶಕ್ತಿಯಿಂದ ಅಜ್ಞಾನದ ಪದರುಗಳನ್ನು ಪಕ್ಕಕ್ಕೆ ಸರಿಸುವ ಅವಶ್ಯಕತೆಯೂ ಇದೆ. ||162|| ನಿದ್ರೆಯಲ್ಲಿ ಕನಸನ್ನು ಅನುಭವಿಸುವ ಮನಸ್ಸು ತ್ರಿಭುವನಗಳನ್ನು ಕಣ್ಣುಗಳಿಂದಲ್ಲದೇನೇ ಸ್ವಯಂ ನೋಡುತ್ತದೆ. ಇವೆಲ್ಲದಕ್ಕೂ ಅವಿದ್ಯೆಯೇ ಕಾರಣ. ||163|| ಒಂದು ವಸ್ತುವನ್ನು ಗ್ರಹಿಸುತ್ತಿರುವಾಗ, ಅದು ಬೇರೆಯಂತೆಯೇ ಕಾಣುತ್ತದೆ. ಹಗ್ಗವು ಹಾವಿನ ರೀತಿ ಕಾಣುವಂತೆ ಮತ್ತು ಕಪ್ಪೆಚಿಪ್ಪಿನಲ್ಲಿರುವ ಬೆಳ್ಳಿಯಂತೆ ಕಾಣುತ್ತದೆ. ||164|| ಕೇವಲ ಸೂರ್ಯನ ಕಿರಣಗಳನ್ನು ಮಾತ್ರ ಗ್ರಹಿಸಿ. ಜನರು ಅದನ್ನು 'ಮರೀಚಿಕೆ' ಎಂದು ಕರೆಯುತ್ತಾರೆ. ಆದರೆ ಇದು ಕೇವಲ ಮಾಯೆಯ ಆಟ. ಅದರ ಮುಂದೆ ಜ್ಞಾನಿಗಳೂ ಹತಾಶರಾಗುತ್ತಾರೆ. ||165|| ಯಾವಾಗ ಒಬ್ಬನು ಉರಿಯುವ ಕಟ್ಟಿಗೆಯನ್ನು ಹಿಡಿದು ಸುತ್ತಿಸಿ ಝುಳಪಿಸುತ್ತಾನೋ, ಅಲ್ಲಿ ಕಾಣುವುದು ದೊಡ್ಡ ಕೊಳ್ಳಿಯಷ್ಟೆ. ಇಲ್ಲಿಯೂ ಸಹ ಅದು ಮಾಯೆಯ ಅಚ್ಚರಿಯೇ. ||166|| ನಿಜವಾದ ಅಗ್ನಿಯನ್ನು ನೋಡುತ್ತಿರುವಾಗ ಅಲ್ಲಿ ಕೊಳ್ಳಿಗೆ ಜಾಗವಿಲ್ಲ. ಅದೇ ರೀತಿ ಮಾಯೆಯಿಂದ ಉಂಟಾದ ವಿಸ್ತಾರವಾದ ಮೋಹವು ನಿಜವಾಗಿಯೂ ಅಸ್ತಿತ್ವದಲ್ಲಿಲ್ಲದಿರುವ ಜಗತ್ತನ್ನು ಸೃಷ್ಟಿಸುತ್ತದೆ. ||167|| ಇಂತಹ ದೃಢ ನಿರ್ಧಾರದ ಸಹಾಯದಿಂದ ಭ್ರಮೆಯು ದೂರವಾಗುತ್ತದೆ. ಆಗ ಮಾತ್ರವೇ ಈ ಸಂಸಾರದ ಅಸ್ತಿತ್ವವು ಇರುವಿಕೆಯನ್ನು ಕಳೆದುಕೊಳ್ಳುತ್ತದೆ. "ನಾನು ಈ ದೇಹ, ಅವಳು ನನ್ನ ಹೆಂಡತಿ ಮತು ಇದು ನನ್ನ ಮನೆ" – ಇವೆಲ್ಲವೂ ವ್ಯರ್ಥವಾದ ಪರಿಶ್ರಮವಾಗಿರುತ್ತದೆ. ||168|| ಜ್ಞಾನಿಗಳೆಂದಾಗಲಿ, ಪಂಡಿತರೆಂದಾಗಲಿ ಹೆಸರುವಾಸಿಯಾಗಿರುವವರು ತಮ್ಮ ಪುತ್ರ, ಪಶು ಇತ್ಯಾದಿಗಳ ಬಗ್ಗೆ ಆಶಾಪಾಶದಿಂದ ಬಂಧಿತರಾಗಿದ್ದಲ್ಲಿ ಲೌಕಿಕ ವಸ್ತುಗಳಿಗೆ ಬಂಧಿತರಾದವರು, ಲವಲೇಶವಾದರೂ ಸುಖವನ್ನು ಅನುಭವಿಸುವುದಿಲ್ಲ. ||169|| ಶಾಸ್ತ್ರಗಳಲ್ಲಿ ಕುಶಲತೆ ಹೊಂದಿರುವ ಪ್ರಜ್ಞಾವಂತರು ಬೇರೆ ಯಾವ ವ್ಯಕ್ತಿಯನ್ನೂ ತಮಗೆ ಸರಿಸಮವೆಂದು ಭಾವಿಸುವುದಿಲ್ಲ. ಅವರ ಅಂತರಂಗದಲ್ಲಿ

ಅಸಮಾಧಾನವು ತುಂಬಿಕೊಂಡು ಅತೃಪ್ತಿಯು ಹೆಚ್ಚಾಗುತ್ತದೆ. ॥170॥ ಕೇವಲ ಇದು ಮಾತ್ರವೇ ಮಾಯೆ ಅಥವಾ ಅಜ್ಞಾನ ಅಥವಾ ಅವಿದ್ಯೆ, ಪ್ರಕೃತಿ ಪ್ರಧಾನವಾದ ಪ್ರಾಮುಖ್ಯತೆ ಪಡೆಯುತ್ತದೆ. ಆರಂಭದಲ್ಲಿಯೇ ಜ್ಞಾನಿಯು ಇವುಗಳನ್ನು ದೂರ ಮಾಡಲು ಪ್ರಾರಂಭಿಸಬೇಕು. ಆಗ ಮಾತ್ರವೇ ಜ್ಞಾನವು ಉದಯಿಸುತ್ತದೆ. ॥171॥ ಈ ಜ್ಞಾನವಾದರೋ ಸ್ವಯಂ ಪ್ರಕಾಶವಾಗಿರುತ್ತದೆ. ಇದರ ಬಗ್ಗೆ ಉಪದೇಶ ನೀಡುವುದು ಅನವಶ್ಯಕ. ಅಜ್ಞಾನವು ನಾಶವಾದಾಗ ಜ್ಞಾನೋಲ್ಲಾಸವು ಪ್ರಕಟವಾಗುತ್ತದೆ. ॥172॥ ಅದು ರತ್ನದಂತೆ ತೇಜಃಪುಂಜವಾಗಿರುತ್ತದೆ. ಅದು ವರ್ಷಾನುಗಟ್ಟಲೆ ಕಾಲ ಕೊಳೆ ಮತ್ತು ಧೂಳಿನಿಂದ ಅಮುಕಲ್ಪಟ್ಟು ಅದರ ನೆನಪೇ ಮರೆಯಾಗಿ ಹೋಗಿರುತ್ತದೆ. ॥173॥ ಅನಂತರ, ಕರ್ಮ-ಧರ್ಮಗಳ ಸಂಯೋಗದಿಂದ ಸಮಯ ಕೂಡಿ ಬಂದು ಕೈಗಳಿಗೆ ದೊರಕಿದಲ್ಲಿ ಅದು ತನ್ನ ತೇಜಸ್ಸನ್ನು ಪೂರ್ಣವಾಗಿ ಕಳೆದುಕೊಂಡಿರುತ್ತದೆ. ಏಕೆಂದರೆ ಅದು ಕಲ್ಲು ಮತ್ತು ಮಣ್ಣು ಹೆಂಟೆಗಳ ಮಧ್ಯೆ ಇರುತ್ತದೆ. ॥174॥ ಅನಂತರ ಅದನ್ನು ಚೆನ್ನಾಗಿ ಶುಭ್ರಗೊಳಿಸಿ, ಕಸ ಮತ್ತು ಕೊಳೆಯನ್ನು ತೆಗೆದಾಗ ಅದು ತನ್ನ ಹಿಂದಿನ ಹೊಳಪನ್ನು ಪಡೆಯುತ್ತದೆ. ಮತ್ತು ತೇಜಃಪುಂಜವಾಗುತ್ತದೆ. ಜ್ಞಾನದ ಸಾಕ್ಷಾತ್ಕಾರದ ಅವಸ್ಥೆಯೂ ಅದೇ ರೀತಿ ಇರುತ್ತದೆ. ॥175॥ ಕೊಳೆ ಮತ್ತು ಧೂಳು ಅಜ್ಞಾನವು. ಈ ಅಜ್ಞಾನವು ಜ್ಞಾನವನ್ನು ಆವರಿಸಿರುತ್ತದೆ. ಧೂಳು ಮತ್ತು ಕೊಳೆಗಳನ್ನು ತೆಗೆದ ಮೇಲೆ ಆ ರತ್ನವು ಸಹಜವಾಗಿಯೇ ಪ್ರಕಾಶಮಾನವಾಗುತ್ತದೆ. ॥176॥ ನಿತ್ಯಾನಿತ್ಯ ವಸ್ತುವಿವೇಕವು ಪಾಪಕರ್ಮಗಳನ್ನು ನಾಶಪಡಿಸುತ್ತದೆ. ಅದು'ಇತ್ರವೇ ಸತ್ತ್ವಶುದ್ಧಿಯ ಪ್ರದಾಯಕವಾಗಿದೆ. ಮತ್ತು ಅದರಿಂದಲೇ ಜ್ಞಾನದ ಉತ್ಪಾದನೆಯನ್ನು ಮಾಡುತ್ತದೆ. ॥177॥ ಈ ಜಗತ್ತು ಮಾಯೆಯ ಮಾರುಕಟ್ಟೆ ಅಲ್ಲಿ ಅಸಲಿ ಮತ್ತು ನಕಲಿ ವಸ್ತುಗಳು ಅಪಾರ. ಅಲ್ಲಿ ಅನೇಕ ಗ್ರಾಹಕರು ನಕಲಿ ವಸ್ತುಗಳನ್ನು ಅಸಲಿಯೆಂದು ನಂಬಿ ತೆಗೆದುಕೊಳ್ಳಲು ತಯಾರಾಗಿದ್ದಾರೆ. ॥178॥ ಆದರೆ ಅನೇಕ ಬುದ್ಧಿವಂತರ ಬುದ್ಧಿಯು ನಕಲಿಯನ್ನು ಅಸಲಿಯಿಂದ ಖಚಿತ ಪಡಿಸಿಕೊಳ್ಳಲು ಆಗದೆ ಚದುರಿಹೋಗುತ್ತದೆ. ಅವರು ಕಪಟಗಳನ್ನು ಉಂಟುಮಾಡುವ ಸೂಚನೆಗಳನ್ನು ತಿಳಿದಿರಬೇಕು. ॥179॥ ಆದುದರಿಂದ, ಅಸಲಿ ಮತ್ತು ನಕಲಿ ಇವುಗಳ ವ್ಯತ್ಯಾಸಗಳನ್ನು ಶೋಧಿಸುವವರನ್ನು ಹೊಂದಿರಬೇಕು. ಅವನು (ಸದ್ಗುರು) ಸುಲಭವಾಗಿ ಈ ವ್ಯತ್ಯಾಸಗಳನ್ನು ತೋರಿಸುತ್ತಾನೆ ಮತ್ತು ಅಜ್ಞಾನವು ಕೊನೆಯಲ್ಲಿ ಮಾಯವಾಗುತ್ತದೆ. ॥180॥ ಒಮ್ಮೆ ಅಜ್ಞಾನವನ್ನು ತೆಗೆದು ಹಾಕಿದರೆ ನಂತರ ಜ್ಞಾನವು ಉಳಿಯುತ್ತದೆ. ಮಾಯೆಯು ಸಹಜವಾಗಿಯೇ ಮಾಯವಾಗುತ್ತದೆ. ಅಲ್ಲಿ ಉಳಿಯುವುದು ಕೇವಲ ಸದ್ವಸ್ತುವೆಂಬುದನ್ನು ತಿಳಿ. ಅದಕ್ಕೆ ಯಾವ ಪ್ರತ್ಯಕ್ಷ ಪ್ರಮಾಣವೂ ಬೇಡ. ॥181॥ ಬುದ್ಧಿಯ ದೃಷ್ಟಿಯು ಉಜ್ವಲವಾಗಿದ್ದರೂ, ಅದು ಕಲ್ಪನೆಯ ಅಂಧಕಾರದಿಂದಾಗಿ ಮಂಕಾಗಿರುತ್ತದೆ. ಈ ಅಂಧಕಾರವು ಉಪದೇಶ (ಆಧ್ಯಾತ್ಮ ಬೋಧನೆ)ದಿಂದಾಗಿ ಮರೆಯಾಗುತ್ತದೆಅನಂತರ ಉಳಿಯುವುದೇ ಪೂರ್ಣಜ್ಞಾನ. ॥182॥ ನಿಜವಾಗಿಯೂ, ಒಂದು ವೇಳೆ ಮಾರ್ಗದಲ್ಲಿ ಹಾರವೊಂದು ಬಿದ್ದಿದ್ದರೆ, ಆ ಸಂಗತಿಯನ್ನು ನೋಡಿದರೆ ಹಾವಿನ ತರಹ

ಕಾಣುತ್ತದೆ. ಇದಕ್ಕೆ ಅಜ್ಞಾನವೊಂದೇ ಕಾರಣ. ॥183॥ ನೀವು ಜೇಬಿನಲ್ಲಿ ಹುದುಗಿಸಿಟ್ಟ ದೀಪವನ್ನು ಬೆಳಗಿಸಿದಾಗ ಅಜ್ಞಾನವು ಮಾಯವಾಗುತ್ತದೆ. ಸತ್ಯ ಸ್ವರೂಪವು ಪ್ರಕಟವಾಗುತ್ತದೆ. ಹಾವಿನ ಜೊತೆಗಿನ ಹೋಲಿಕೆಯು ತಾನಾಗಿಯೇ ಮಾಯವಾಗುತ್ತದೆ. ॥184॥ ಆದುದರಿಂದ ಅಜ್ಞಾನದ ಅಪಾಯ ಮತ್ತು ತೊಂದರೆಯನ್ನು ನಿವಾರಿಸಲು ಇರುವ ಉಪಾಯವೇ 'ಉಪದೇಶ'. ಆದ್ದರಿಂದ ಜ್ಞಾನಿಗಳು ಅಜ್ಞಾನಕ್ಕೆ ಕಾರಣವಾದುದು ಯಾವುದೆಂಬುದನ್ನು ತಿಳಿಸುವ ಉಪದೇಶ ನೀಡಿ ಬಳಲಿಹೋಗುತ್ತಾರೆ. ॥185॥ ವರ್ತಮಾನದಲ್ಲಿ ನಾವು ಈ ಅಸತ್‌ನ ಪ್ರಪಂಚದಲ್ಲಿರುವುದು ಪೂರ್ವದಲ್ಲಿ ಅಜ್ಞಾನದಿಂದ ನಾವು ಮಾಡಿದ ಕರ್ಮ(ಪ್ರಾರಬ್ಧ)ಗಳಿಂದಾಗಿಯೇ. ಮೊಟ್ಟಮೊದಲು ಈ ಜ್ಞಾನವು ಅತ್ಯವಶ್ಯಕ. ॥186॥ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಜ್ಞಾನವು ಸತ್ಯ ಮತ್ತು ಬ್ರಹ್ಮನು ಅನಂತ! ಅವಿದ್ಯೆ, ಮಾಯೆ ಮತ್ತೆಲ್ಲವೂ ತಪ್ಪು ಕಲ್ಪನೆಗೆ ಕಾರಣಗಳು. ಯಾವಾಗ ಈ ತಪ್ಪು ಕಲ್ಪನೆಯು ದೂರವಾಗುವುದೋ, ಆಗ ಮಾತ್ರವೇ ಜ್ಞಾನದ ಬಗೆಗಿನ ತಪ್ಪು ಗ್ರಹಿಕೆಯು ದೂರವಾಗುವುದು. 187॥ ಯಾರು ದೇಹಾಭಿಮಾನವನ್ನು ತ್ಯಜಿಸಿಲ್ಲವೋ, ಅವನನ್ನು ಬುದ್ಧಿವಂತನೆಂದು ಯಾರು ಕರೆಯುತ್ತಾರೆ? ದುರಭಿಮಾನವನ್ನು ಅಧಿಷ್ಠಾನ ಮಾಡಿಕೊಂಡಿರುವವನು ಅಜ್ಞಾನದ ಮೂರ್ತಿವಂತನೇ ಸರಿ. ॥188॥ ಇಡೀ ಜಗತ್ತನ್ನು ಪೂರ್ಣವಾಗಿ ಆವರಿಸಿರುವ ಮಾಯೆಯ ಪ್ರವಾಹವೆಂದು ಕರೆಯಲ್ಪಡುವುದು. ಕೇವಲ ಸಂಸಾರದ ಅನಿತ್ಯತೆ ಮತ್ತು ಅದಕ್ಕೆ ಅಜ್ಞಾನವೇ ಮೂಲಾಧಾರವು. ॥189॥ ಅದು ಅಜ್ಞಾನದಿಂದಲೇ ಉದ್ಭವಿಸುತ್ತದೆಅದರ ವೈಭವವೂ ಅಜ್ಞಾನದಿಂದ ಹುಟ್ಟಿರುತ್ತದೆ. ಏಕತ್ವದ ಬದಲು ಅನೇಕತ್ವ ಭಾವವು ಇದ್ದಲ್ಲಿ ಅದರ ಆಶ್ರಯ ಸ್ಥಾನವೂ ಅಜ್ಞಾನವೇ. ॥190॥ ಎಲ್ಲಿ ಕಿಂಚಿತ್ ಪ್ರಕಾಶ ಮತ್ತು ಕಿಂಚಿತ್ ಅಂಧಕಾರವಿರುವುದೋ (ಸಂಧ್ಯಾ ಕಾಲ), ಅಲ್ಲಿ ಮಾರ್ಗದಲ್ಲಿರುವ ಹಗ್ಗವು ಸರ್ಪವಾಗಿ ಕಂಡಾಗ ಅವನು ಭಯಭೀತನಾಗುತ್ತಾನೆ. ॥191॥ ಅದು ಹಾವು ಎನ್ನುವ ತಪ್ಪು ಗ್ರಹಿಕೆಯು ಕೇವಲ ಅಜ್ಞಾನ. ಆ ಅಜ್ಞಾನವು ಸತ್ಯವನ್ನು ಮರೆಮಾಡುತ್ತದೆ. ಈ ಅಜ್ಞಾನವು ದೂರವಾಗುವವರೆಗೆ ಮನಸ್ಸು ನಿರ್ಭಯವಾಗಿರುವುದಿಲ್ಲ. ॥192॥ ಕೆಲವರಿಗೆ ಅದು ಹೂವಿನ ಮಾಲೆಯಂತೆ ಕಾಣುತ್ತದೆ. ಕೆಲವರು ಅದನ್ನು ಕೋಲು ಎನ್ನುತ್ತಾರೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಇದೆಲ್ಲವೂ ಒಂದು ತಪ್ಪು ಗ್ರಹಿಕೆ ಮತ್ತು ಭ್ರಾಂತಿಯ ವಿಪರೀತ ಭಾವ. ॥193॥ ಯಾರು ಕೇವಲ ಆಗಮ ವಚನಗಳ ಅನುಸಾರ ನಡೆದುಕೊಳ್ಳುತ್ತಾರೋ ಮತ್ತು ದೇವರಲ್ಲಿ ಭಕ್ತಿ ಇಟ್ಟಿರುತ್ತಾರೋ ಅವರು ಮಾತ್ರ ಬ್ರಹ್ಮಜ್ಞಾನಕ್ಕೆ ಅಧಿಕಾರಿಯಾಗಿರುತ್ತಾರೆ. ಆದರೆ ನಾಸ್ತಿಕನು ಜನ್ಮಜನ್ಮಾಂತರಗಳಲ್ಲಿಯೂ ಅದನ್ನು ಪಡೆಯಲು ಸಾಧ್ಯವಿಲ್ಲ. ॥194॥ ಯಾರು ಈ ವಿಶ್ವವನ್ನು ಚರ ಮತ್ತು ಅಚರ ಜೀವಿ ಮತ್ತು ವಸ್ತುಗಳಿಗೆ ಆವಾಸ ಸ್ಥಾನವನ್ನಾಗಿ ನೋಡುವರೋ, ದೇವರ ಸೃಷ್ಟಿಯಂತಲ್ಲದೆ ಭಾವಿಸುವರೋ ಅವರು ಭ್ರಮಿತಗೊಂಡಿರುತ್ತಾರೆ. ಅವರು ಎಂದಿಗೂ ಜನನ–ಮರಣದ ಚಕ್ರವನ್ನು ತಪ್ಪಿಸಿಕೊಳ್ಳಲಾರರು. ಅವರಿಗೆ ಬ್ರಹ್ಮತತ್ವವು ದುರ್ಗಮ. ಆದರೆ ಅರ್ಹತೆ ಪಡೆದವರಿಗೆ (ಹಿಂದಿನ ಶ್ಲೋಕದ) ಅದು ಬಹಳ ಸುಗಮ.

॥195॥ ಎಷ್ಟೇ ಪ್ರವಚನಗಳು ಅಥವಾ ವಿವಿಧ ವೇದಗಳ ಸ್ವೀಕಾರವು ಕೆಲಸಕ್ಕೆ ಬರುವುದಿಲ್ಲ. ಅಥವಾ ವಿವಿಧ ಆಧ್ಯಾತ್ಮ ಗ್ರಂಥಗಳ ಅರ್ಥವನ್ನು ಅರಿಯಬಲ್ಲ ಬುದ್ಧಿಶಕ್ತಿಯಾಗಲಿ, ಅಥವಾ ಗ್ರಂಥಾವಲೋಕನ ಹಾಗೂ ಅನೇಕ ಗ್ರಂಥಗಳ ಶ್ರವಣಮಾಡುವುದಾಗಲಿ ಉಪಯೋಗಕ್ಕೆ ಬರುವುದಿಲ್ಲ. ॥196॥ ಶಬ್ದಗಳನ್ನು ಉಪಯೋಗಿಸಿ ಶಬ್ದಜ್ಞಾನವನ್ನು ಪಡೆಯಬಹುದು. ಅದು ಬ್ರಹ್ಮಜ್ಞಾನವನ್ನು ಅಥವಾ ಸತ್‌ಸ್ವರೂಪವನ್ನು ನೀಡಬಲ್ಲದೇ? ಬುದ್ಧಿಯು ವಿವೇಕ ಸಂಪನ್ನವಾಗಿರುತ್ತದೆ. ಆದರೆ ಬ್ರಹ್ಮ ಅಥವಾ ಸತ್ ಅದರ ಅಧೀನದಲ್ಲಿರುವುದಿಲ್ಲ. ॥197॥ ಶ್ರುತಿಗಳು ಅದನ್ನು ವರ್ಣಿಸಲು ಉತ್ಕಟೇಚ್ಛೆ ಹೊಂದಿರುತ್ತವೆ. ಆದರೆ ಅವು ಬ್ರಹ್ಮ ಅಥವಾ ಸತ್‌ನ್ನು ಅನುಭವಿಸಿರುವುದಿಲ್ಲ. ಆದ್ದರಿಂದ ಅವುಗಳು ಬ್ರಹ್ಮ ತತ್ತ್ವದ ವೈಭವವನ್ನು ವರ್ಣಿಸುವುದರ ಕಡೆ ಮುಖಮಾಡಿವೆ. ಅಂತಹ ಜ್ಞಾನ ಸಾಧನೆಯ ಆಸೆಯನ್ನು ತ್ಯಜಿಸಿರುತ್ತವೆ. ॥198॥ ಷಟ್‌ದರ್ಶನಗಳು (ಆರು ವೇದಾಂತ ಮಾರ್ಗಗಳು) ವಾದ ಮಾಡುತ್ತಲೇ ಇಲ್ಲಿಯವರೆಗೆ ತಮ್ಮನ್ನು ಪ್ರಯೋಗಿಸಿರುವುವು. ಆದರೆ ಆತ್ಮವಸ್ತುವನ್ನು ವರ್ಣಿಸಲಾಗಿಲ್ಲ ಮತ್ತು ಶಬ್ದಗಳ ವ್ಯಾಪ್ತಿಯಲ್ಲಿ ಬಂದಿಲ್ಲ. ॥199॥ ಮಹಾನ್ ಶಬ್ದಪಂಡಿತರು ಸೂರ್ಯನ ಮುಂದೆ ಮಿಂಚಿನ ಹುಳುವಿನಂತೆ ಸತ್ ವಸ್ತುವಿನ ಮುಂದೆ ಆಗುತ್ತಾರೆ. ಒಮ್ಮೆ ಆತ್ಮ ಸಾಕ್ಷಾತ್ಕಾರ ಹೊಂದಿದ ಕೂಡಲೇ, ಅರ್ಥವಿಲ್ಲದ ಶಬ್ದ ಜಾಲವು ಮಾಯವಾಗುತ್ತದೆ. ॥200॥ ಈ ಜಗತ್ತಿನಲ್ಲಿ, ರಾತ್ರಿಯ ಅಂಧಕಾರದ ಸಮಯದಲ್ಲಿ ಒಂದು ದೀಪದ ಬೆಳಕಿನಲ್ಲಿ ಎಲ್ಲ ಚಟುವಟಿಕೆಗಳೂ ನಡೆಯುವುದನ್ನು ಗಮನಿಸಿ. ಆದರೆ ಸೂರ್ಯನು ಹುಟ್ಟಿದಾಗ ಉದಯ ಕಾಲದಲ್ಲಿ ಜನರು ದೀಪಗಳನ್ನು ಉಪೇಕ್ಷಿಸುತ್ತಾರೆ. ॥201॥ ಆದ್ದರಿಂದ ಶಬ್ದಗಳಿಂದ ವರ್ಣಿಸಲಾಗದಂತಹ ಸತ್‌ನ್ನು ಯಾವರೀತಿ ಉಪದೇಶಿಸಲು ಸಾಧ್ಯ? ಆದ್ದರಿಂದ ವಕ್ತಾರನು ಕೇವಲ ಮಾತುಗಳಿಂದಲೇ ಅಜ್ಞಾನವನ್ನು ನಾಶಪಡಿಸುವ ಗುರಿಯನ್ನಿಟ್ಟುಕೊಳ್ಳಬೇಕು. ॥202॥ ಯಾವಾಗ ಶ್ರದ್ಧೆ ಮತ್ತು ಆತ್ಮತತ್ವದ ಇರುವಿಕೆಯ ಬುದ್ಧಿಯಿಂದ ಪೂಜೆಯನ್ನು ಮಾಡುವರೋ, ಆಗ ಮಾತ್ರ ಆತ್ಮವು ಪ್ರಸನ್ನವಾಗಿ ಪರಮಾತ್ಮ ಜ್ಞಾನವನ್ನು ಪ್ರಕಟಗೊಳಿಸುತ್ತದೆ. ಅದು ಆರಾಧಕನಿಗೆ ಉಪಲಬ್ಧವಾಗುತ್ತದೆ. ॥203॥ ಆತ್ಮದ ಜಾಗದಲ್ಲಿ ಪರಮಾತ್ಮನ ಧ್ಯಾನ ಮಾಡಿದಲ್ಲಿ, ಎರಡರ ಮಧ್ಯೆ ಯಾವುದೇ ಭೇದ ಭಾವ ಮಾಡದೇ ಇದ್ದಲ್ಲಿ ಮತ್ತು ಈ ರೀತಿಯಲ್ಲಿ ಉಪಾಸನೆ ಮಾಡಿದಲ್ಲಿ ಆತ್ಮವು ಉಪಾಸಕನಲ್ಲಿ ಪ್ರಸನ್ನಗೊಳ್ಳುತ್ತದೆ. ॥204॥ ಇದಲ್ಲದೆ ಇನ್ನು ಬೇರೆ ಯಾವ ಸಾಧನೆಯೂ ಇಲ್ಲ. ಅದರಿಂದ ಆತ್ಮನು ಪ್ರಸನ್ನನಾಗುತ್ತಾನೆ. ಸಾಧಕನು ಆತ್ಮನಲ್ಲಿ ನಿರತನಾಗುತ್ತಾನೆ. ಆಗ ಆತ್ಮವೇ ಅವನ ಮೇಲೆ ಕೃಪೆ ತೋರುತ್ತದೆ. ॥205॥ ಈ ಗ್ರಂಥದ ಉದ್ದೇಶವು ಸಮಾಪ್ತಿಯಾದಾಗ ವಕ್ತಾರನು ಯಾವಾಗಲೂ ಶ್ರೋತೃಗಳನ್ನು ಪ್ರಾರ್ಥಿಸುತ್ತಾನೆ. ಅವರನ್ನು ಶ್ರವಣ ಶ್ರಮದಲ್ಲಿ ನಿರತರನ್ನಾಗಿ ಮಾಡಿದ್ದಕ್ಕಾಗಿ ಕ್ಷಮೆಬೇಡುತ್ತಾನೆ. ಸರ್ವತ್ರ ಇದು ಶಿಷ್ಟಾಚಾರ. ॥206॥ ಆದರೆ ಸಚ್ಚರಿತೆಯ ವಿಷಯದಲ್ಲಿ ಈ ರೀತಿ ಇಲ್ಲ. ಏಕೆಂದರೆ ನನಗೆ ಅದನ್ನು ಬರೆಯುವ ಕರ್ತೃತ್ವ ಇಲ್ಲ. ಸಾಯಿಯು ತಾವೇ ತಮ್ಮ ಕಥೆಯನ್ನು ನನ್ನ ಕೈಯಲ್ಲಿ ಲೇಖನಿಯನ್ನು ಹಿಡಿಸಿ

ಬರೆಸುತ್ತಿದ್ದಾರೆ. ॥207॥ ಆದುದರಿಂದ, ನಾನು ಈ ಗ್ರಂಥಕರ್ತೃವಲ್ಲ. ನನ್ನಿಂದ ಯಾರೂ ಯಾವುದೇ ರೀತಿಯ ತೊಡಕ್ಕೆ ಒಳಗಾಗಿಲ್ಲ! ನಾನೇನಾದರೂ ಶ್ರೋತೃಗಳಲ್ಲಿ ಕ್ಷಮೆ ಬೇಡಿದಲ್ಲಿ, ನಾನು ಅನವಶ್ಯಕವಾಗಿಯೇ ಕರ್ತೃತ್ವವನ್ನು ನನ್ನ ಮೇಲೆ ಹಾಕಿಕೊಂಡಂತೆ ಆಗುತ್ತದೆ. ॥208॥ ಅದರ ಗುಣಲಕ್ಷಣಗಳಲ್ಲಿ ಅಥವಾ ನನ್ನ ಅನಿಶ್ಚಿತತೆಯಲ್ಲಿ ಯಾವುದೇ ರೀತಿಯ ನನ್ನ ಅಧಿಕಾರವಿರುವುದಿಲ್ಲ. ಸಾಯಿಯೇ ಸ್ವತಃ ಕರ್ತೃಗಳಾಗುವಾಗ, ಅದು ಈ ವಿಷಯವನ್ನು ಮುಕ್ತಾಯಗೊಳಿಸುತ್ತದೆ. ॥209॥ ಸಾಯಿಯ ಅನುಮತಿ ಪಡೆದ ನಂತರ ನಾನು ಇದನ್ನು ಅವರು ಹೇಳಿದ ರೀತಿಯಲ್ಲೇ ನಿರೂಪಣೆ ಮಾಡಿರುತ್ತೇನೆ. ಮತ್ತು ಶ್ರೋತೃಗಳಿಗಾಗಿ ನಾನು ಅಜ್ಞಾನದ ವಿವೇಚನೆಯನ್ನು ನಿರ್ದಿಷ್ಟವಾಗಿ ಮಾಡಿರುತ್ತೇನೆ. ॥210॥ ನನ್ನ ಆತ್ಮದಲ್ಲೇ ವ್ಯಾಪಿಸಿ, ಗುರುದೇವರು ಈ ವಿಷಯದ ಮೇಲೆ ಬೆಳಕು ಚೆಲ್ಲಿ, ತಮ್ಮ ಸ್ವಂತ ವೈಭವ, ತಮ್ಮ ಶಕ್ತಿ ಮತ್ತು ತಮ್ಮ ಗೌರವ ಇವುಗಳನ್ನು ಪ್ರಕಟಿಸಿದ್ದಾರೆ. ॥211॥ ಯಾರು ಈ ಗ್ರಂಥದಲ್ಲಿ ಗುಣಗಳನ್ನು ಅಥವಾ ದೂಷಣೆಗಳನ್ನು ಕಂಡು ಹಿಡಿಯುವರೋ, ಅವನು ನನ್ನ ಪೂರ್ಣಗೌರವವನ್ನು ಪಡೆಯುತ್ತಾನೆ. ಏಕೆಂದರೆ ಅವನು ತಾನೇ ನಿಜ ನಾರಾಯಣ ಸ್ವರೂಪನಾಗಿದ್ದಾನೆ. ॥212॥ ಶ್ರೀಸಾಯಿಯು ತಮ್ಮ ಭಕ್ತರ ಪರಮ ಹಿತಕ್ಕಾಗಿ ತಾವೇ ಸ್ವಯಂ ತಮ್ಮ ಚರಿತ್ರೆಯನ್ನು ಸೃಷ್ಟಿಸಿ, ಹೇಮಾಡನ ಕೈಹಿಡಿದು ಬರೆಸಿದ್ದಾರೆ. ॥213॥ ಶ್ರೀಸಾಯಿಯು ಲೋಕದ ಅನುಗ್ರಹಕ್ಕಾಗಿಯೇ ತಮ್ಮ ಶರೀರವನ್ನು ಪರಿಗ್ರಹಿಸಿದ್ದರು. ಅವರು ದುರಾಲೋಚನೆಗಳನ್ನು ಕುತರ್ಕಗಳನ್ನು ನಾಶಮಾಡಿ ಲೋಕಸಂಗ್ರಹವನ್ನು ರಕ್ಷಿಸಲು ಹೀಗೆ ಮಾಡಿದ್ದರು. ॥214॥ ಆದ್ದರಿಂದ ಹೇಮಾಡನು ತಾನೇ ಅವರ ಚರಣಗಳಲ್ಲಿ, ಅನನ್ಯ ಭಾವದಿಂದ ಸಾಷ್ಟಾಂಗ ಪ್ರಣಾಮ ಮಾಡುತ್ತಾನೆ. ಶ್ರೋತೃಗಳು ಸಂಪೂರ್ಣವಾಗಿ ಗಮನಕೊಟ್ಟು ಮುಂದೆ ಬರುವಂತಹ ಗಮನ ಸೆಳೆಯುವ ಕಥೆಗಳನ್ನು ಕೇಳಿರಿ. ॥215॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಅಜ್ಞಾನ ನಿರ್ಮೂಲನೆ" ಎಂಬ ಐವತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ

1. ಸಾಲೋಕ್ಯತೆ – ಯಾವುದೇ ದೇವತೆಯ ಲೋಕದಲ್ಲೇ ಇರುವುದು.

ಸಾಮೀಪ್ಯತೆ – ದೇವತೆಯ ಸಮೀಪ ಇರುವುದು.

ಸಾರೂಪ್ಯತೆ – ದೇವತೆಯ ಸ್ವರೂಪವೇ ಆಗುವುದು.

ಸಾಯುಜ್ಯತೆ – ದೇವತೆಯಲ್ಲಿ ಲೀನವಾಗುವುದು.

2. ವೆಂಕಟೇಶ ಸ್ತೋತ್ರದಲ್ಲಿ ಹೇಳಿರುವಂತೆ ಆಲದ ಮರ ಹಸುವಿನ ಸಗಣಿಯ ಗೊಬ್ಬರವಿದ್ದರೆ ಸೊಗಸಾಗಿ ಬೆಳೆಯುತ್ತದೆ.
3. ರಾವಣನ ಸೋದರ – ಸದಾ ಗೊರಕೆಹೊಡೆಯುತ್ತ ನಿದ್ರಿಸುವವನು.
4. ಪಂಚಭೂತಗಳನ್ನು ಸರಿಯಾದ ಪ್ರಮಾಣದಲ್ಲಿ ಸೇರಿಸುವುದು.
5. ಸರಿಯಾಗಿ ಬೆಳೆದಿಲ್ಲ. ವೇದಗಳಲ್ಲಿ ಹೇಳಿದೆ – ಪಂಚಭೂತಗಳಿಂದ ಎಲ್ಲಾ ಜೀವಿಗಳ ಸೃಷ್ಟಿಯಾಗಿದೆ.
6. ಆರು ಶಾಸ್ತ್ರಗಳಲ್ಲಿ ಒಂದಾದ – ಸಾಂಖ್ಯಶಾಸ್ತ್ರದಲ್ಲಿ ಹೇಳಿರುವ 25 ತತ್ತ್ವಗಳಲ್ಲಿ ಎರಡನೆಯದು.



# ಅಧ್ಯಾಯ – 51

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಮೂವರು ಭಕ್ತರ ಚರಿತ್ರೆ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಜಯ! ಜಯ! ಸಾಯಿ! ಭಕ್ತರಿಗೆ ಆಧಾರವಾಗಿರುವವರೇ! ಗೀತೆಯ ಅರ್ಥದ ಮೇಲೆ ಪ್ರಕಾಶ ಬೀರಿದ ಗುರುವರ್ಯರೇ! ಸರ್ವಸಿದ್ಧಿಗಳನ್ನೂ ದಯಪಾಲಿಸುವವರೇ! ನನ್ನ ಮೇಲೆ ಕೃಪೆಮಾಡಿ! ॥1॥ ಬೇಸಿಗೆಯ ಉಷ್ಣತೆಯನ್ನು ಶಮನಮಾಡಲು ಚಂದನವು ಮಲಯ ಪರ್ವತದ ಮೇಲೆ ಬೆಳೆಯುತ್ತದೆ. ಭೂಮಿಯ ಮೇಲೆ ಮಳೆ ಸುರಿದು ವಿಶ್ವದ ಜನರಿಗೆಲ್ಲ ಸುಖವನ್ನು ತಂದುಕೊಡುತ್ತದೆ. ॥ಅಥವಾ ವಸಂತಕಾಲದಲ್ಲಿ ದೇವಪೂಜೆಗಾಗಿ ಪುಷ್ಪಗಳು ಅರಳುತ್ತವೆ ಅಥವಾ ಶ್ರೋತೃಗಳ ಸಮಾಧಾನಕ್ಕಾಗಿ ಕಥೆಗಳ ಅಥವಾ ದೃಷ್ಟಾಂತಕಥೆಗಳ ನಿರೂಪಣೆ ಪರಂಪರೆಯು ಉದಯಿಸುತ್ತದೆ. ॥3॥ ಸಾಯಿ ಚರಿತ್ರೆಯನ್ನು ಆಲಿಸುವಂತಹ ಶ್ರೋತೃಗಳೂ, ಹೇಳುವ ವಚನಕಾರನೂ, ಇಬ್ಬರೂ ಪವಿತ್ರರಾಗುವರು. ಶ್ರೋತೃಗಳ ಕಿವಿಗಳು ಹಾಗೂ ವಾಚನಕಾರನ ಬಾಯಿಯೂ ಪವಿತ್ರವಾಗುವುವು. ॥4॥ ಹಿಂದಿನ ಅಧ್ಯಾಯದಲ್ಲಿ, ಯಾವರೀತಿ ಅಜ್ಞಾನವು ನಾಶವಾಗಿ ಜ್ಞಾನವು ಪ್ರಕಟಗೊಳ್ಳುತ್ತದೆಂಬುದನ್ನು ನಿರೂಪಿಸಲಾಯಿತು. 'ತದ್ವಿದ್ಧಿ ಪ್ರಣಿಪಾತೇನ' ಎಂದು ಪ್ರಾರಂಭವಾಗುವ ಶ್ಲೋಕದ ಪದಗಳ ಅರ್ಥವನ್ನು ತಿಳಿಸಲಾಯಿತು. ॥5॥ ಭಗವದ್ಗೀತೆಯ ಕೊನೆಯಲ್ಲಿ ಹದಿನೆಂಟನೆಯ ಅಧ್ಯಾಯದ ಪರಿಸಮಾಪ್ತಿಯಲ್ಲಿ ಎಪ್ಪತ್ತೆರಡನೆಯ ಶ್ಲೋಕದಲ್ಲಿ ಶ್ರೀಕೃಷ್ಣನು ಅರ್ಜುನನ್ನು ಪ್ರಶ್ನಿಸುತ್ತಾನೆ. ॥6॥

"ಇಲ್ಲಿಯವರೆಗೆ ನೀಡಿರುವ ಪ್ರವಚನದಿಂದ ಈಗ ನಿನ್ನ ಮೋಹವು ದೂರಸರಿಯಿತೇ?" ಇದು ಒಂದು ಸ್ಪಷ್ಟವಾದ ಪ್ರಶ್ನೆಯಾಗಿತ್ತು. ಅವನಿಗೆ 'ಜ್ಞಾನಪ್ರಾಪ್ತಿ ಉಂಟಾಯಿತೇ' ಎಂಬುದಾಗಿರಲಿಲ್ಲ. ॥7॥ ಅದೇ ರೀತಿ ಪಾರ್ಥನು ಪ್ರತ್ಯುತ್ತರ ನೀಡಿದನು, "ನನ್ನ ಮೋಹವು ನುಚ್ಚುನೂರಾಯಿತು." ಅವನು ಹೇಳಿದನು "ನನಗೆ ಜ್ಞಾನಪ್ರಾಪ್ತಿಯುಂಟಾಗಿಲ್ಲ. ಆದರೆ ನನ್ನ ಮೋಹವು ಮಾತ್ರ ನಾಶವಾಗಿದೆ." ॥8॥ ಮೋಹಕ್ಕೆ ಮತ್ತೊಂದು ಹೆಸರೇ ಅಜ್ಞಾನ. ಅವೆರಡೂ ಬೇರೆ ಬೇರೆಯಾಗಿ ಕಾಣುತ್ತವೆ. ಅವುಗಳ ಅರ್ಥದಲ್ಲಿ ಯಾವ ಭಿನ್ನತೆಯೂ ಇಲ್ಲ. ಗೀತಾರ್ಥ ತಿಳಿದವರಿಗೆ ಇದು ಗೊತ್ತು. ॥9॥ "ನೀನು ನೀಡಿರುವ ತತ್ತ್ವ ಬೋಧೆಯಿಂದ ನನ್ನ ಮೋಹವು ನಶಿಸಿಹೋಗಿದೆ" ಎಂದು ಅರ್ಜುನನು ಶ್ರೀಕೃಷ್ಣನಿಗೆಹನ್ನೊಂದನೆಯ ಅಧ್ಯಾಯದ ಪ್ರಾರಂಭದಲ್ಲಿಯೇ ಹೇಳಿದ್ದಾನೆ. ॥10॥ ಈಗಿನ ಹೊಸ ಅಧ್ಯಾಯದಲ್ಲಿ ಕಾಕಾಸಾಹೇಬ ದೀಕ್ಷಿತ್ (ಹರಿಸೀತಾರಾಮ ದೀಕ್ಷಿತ್) ಬಗೆಗಿನ ಒಂದು ವಿಶಿಷ್ಟವಾದ ಚರಿತ್ರೆಯನ್ನು, ಅವನು ಹೇಗೆ ಶಿರಡಿಯಲ್ಲಿ ನೆಲಸಿದನು ಎಂಬುದನ್ನು ಹೇಳುವೆನು. ॥11॥ ಮೊದಲಿನಿಂದಲೇ ಅವನು ಶಿರಡಿಗೆ ಯಾವ ರೀತಿ ಋಣಾನುಬಂಧ ಹೊಂದಿದ್ದನು. ಹಿಂದಿನ ಜನ್ಮದಿಂದಾಗಿ ಯಾವರೀತಿ ಸಾಯಿ ಜೊತೆ ದೃಢಸಂಬಂಧಹೊಂದಿದ್ದನು. ಇವೆಲ್ಲವನ್ನೂ ನಿರ್ಧರಿಸುವ ಮೂಲಕಾರಣ ಯಾವುದು ಎಂಬುದನ್ನು ಈಗ ಕೇಳಿರಿ. ॥12॥ ಅವನ ಬಗ್ಗೆ ಅನೇಕ ಚರಿತ್ರೆಗಳು ಅಲ್ಲಿನ ಹಿರಿಯರಿಗೆ ಕಿರಿಯರಿಗೆ ತಿಳಿದಿದೆ. ಆದರೆ ಅವನು ಮೊಟ್ಟ ಮೊದಲು ಶಿರಡಿಗೆ ಹೇಗೆ ಬರುವಂತಾಯಿತು ಎಂಬುದು ಮಾತ್ರ ಯಾರಿಗೂ ತಿಳಿದಿಲ್ಲ. ॥13॥ಇದೊಂದು ಅನೇಕ ಪೂರ್ವಜನ್ಮಗಳ ಪುಣ್ಯಗಳ ಫಲವು. ಭಗವಂತನ ಕೃಪಾದೃಷ್ಟಿಯನ್ನು ದಯಪಾಲಿಸಿ, ಅನಂತರ ಸದ್ಗುರುವಿನ ಭೇಟಿ ತಂದುಕೊಟ್ಟಂತಹ ಚರಿತ್ರೆ, ಆ ಸದ್ಗುರುವಾದರೋ ತಮ್ಮ ಶಿಷ್ಯರಿಗೆ ಸ್ವಾನಂದದ ಪುಷ್ಟಿ ನೀಡುವಂತಹವರು. ॥14॥ ಈ ಅಧ್ಯಾಯದಲ್ಲಿ ನಾನು ಶ್ರೋತೃಗಳಿಗೆ ಹೆಸರಾಂತ ಮೂವರು ಭಕ್ತರ ಮೂರು ಕಥೆಗಳನ್ನು ವರ್ಣಿಸುತ್ತೇನೆ. ಅವು ಶ್ರೋತೃಗಳ ಹೃದಯವನ್ನು ಪ್ರಕಾಶಿಸುತ್ತವೆ. ॥15॥ ನಾವು ಪರಮಾರ್ಥಸಾಧನೆಗಾಗಿ ಕೋಟ್ಯನುಕೋಟಿ ಇತರೆ ಉಪಾಯಗಳನ್ನು ಕೈಗೆತ್ತಿಕೊಳ್ಳಬಹುದು. ಆದರೆ ಸದ್ಗುರುವಿನ ಕೃಪಾದೃಷ್ಟಿಯಿಲ್ಲದೆ ಪರಮಾರ್ಥವನ್ನು ಪಡೆಯಲು ಸಾಧ್ಯವಿಲ್ಲ. ॥16॥ ಈ ವಿಚಾರದ ಮಧುರವಾದ ಚರಿತ್ರೆಯನ್ನು ಕೇಳುವುದರಿಂದ ಶ್ರೋತೃಗಳ ಕಾತರತೆಯುತ್ಪತ್ತಿಹೊಂದುತ್ತದೆ. ಅಂತಹ ಚರಿತ್ರೆಗಳ ಬಗ್ಗೆ ಒಲವು ಹೆಚ್ಚಾಗಿ ಆತ್ಮದ ಹಿತಚಿಂತನೆಯು ಬಲವಾಗುತ್ತದೆ. ॥17॥ ಈ ಪರಮ ಪಾವನ ಚರಿತ್ರೆಯು ಗುರುವಿಭಕ್ತರನ್ನು ಸಮಾಧಾನಗೊಳಿಸುತ್ತದೆ. ಶ್ರೋತೃಗಳು ಸಾವಧಾನಚಿತ್ತದಿಂದ ತಮ್ಮ ಹಿತಕ್ಕಾಗಿ ಆಲಿಸಬೇಕು. ॥18॥ ಹರಿಸೀತಾರಾಮ ದೀಕ್ಷಿತನು ಕಾಕಾ ಸಾಹೇಬನೆಂದೇ ಸಾಯಿಬಾಬಾರ ಸಕಲ ಭಕ್ತರಿಗೆ ಗೌರವದಿಂದ ಪರಿಚಿತನಾದವನು. ಆತನನ್ನು ಪ್ರೀತಿಯಿಂದ ಸ್ಮರಿಸೋಣ. ॥19॥ ಅವನ ಪೂರ್ವ ವೃತ್ತಾಂತವು ಚೆನ್ನಾಗಿ ಪರಿಚಿತವಾಗಿದ್ದು, ಆನಂದದಾಯಕವಾಗಿಯೂ, ಮನೋಹರವಾಗಿಯೂ ಇತ್ತು. ಆದ್ದರಿಂದ, ನಾನು ಆದರಪೂರ್ವಕವಾಗಿ ಅದನ್ನು ಭಾವಪೂರ್ಣ ಭಕ್ತರಿಗೆ ತಿಳಿಸುವೆನು.

ಅವನ ಚರಿತ್ರೆಯನ್ನು ಕೇಳಲು ಉತ್ಸುಕರಾದವರಿಗೆ ಅದು ಸುಖವನ್ನು ನೀಡುತ್ತದೆ. ॥20॥ ಸನ್ 1909ನೆಯ ಇಸವಿಯವರೆಗೆ 'ಸಾಯಿ' ಎಂಬ ಹೆಸರನ್ನೂ ಅರಿಯದವನು, ಸಾಯಿಯ ಪರಮಭಕ್ತನಾದನು ಮತ್ತು ಅದೇ ರೀತಿ ಎಲ್ಲರಿಗೂ ಪರಿಚಿತನಾದನು. ॥21॥ ನಾನಾ ಸಾಹೇಬ ಚಂದೋರಕರನು ವಿಶ್ವವಿದ್ಯಾಲಯದ ಶಿಕ್ಷಣಾನಂತರ ಒಮ್ಮೆ ಲೋಣಾವಾಳಕ್ಕೆ ಬಂದನು. ॥22॥ ದೀಕ್ಷಿತನು ಅವನ ಹಳೆಯ ಸ್ನೇಹಿತನಾಗಿದ್ದು, ಅವನನ್ನು ಅನೇಕ ವರ್ಷಗಳ ನಂತರ ಅಲ್ಲಿ ಭೇಟಿಯಾದನು. ಅವರು ಪರಸ್ಪರ ಸುಖದುಃಖಗಳ ಬಗ್ಗೆ ಮಾತುಕತೆ ನಡೆಸಿದರು. ॥23॥ ದೀಕ್ಷಿತನು ಅವನಿಗೆ, ಲಂಡನ್ ನಗರದಲ್ಲಿ ಒಮ್ಮೆ ರೈಲುಗಾಡಿಯನ್ನು ಹತ್ತುವಾಗ ಕಾಲು ಜಾರಿ ಅಪಘಾತ ಉಂಟಾದುದರ ಬಗ್ಗೆ ತಿಳಿಸಿದನು. ನೂರಾರು ಉಪಶಮನದ ಉಪಾಯಗಳನ್ನು ಮಾಡಿದರೂ ಅವನಿಗೆ ಉಂಟಾಗಿದ್ದ ಕಾಲಿನ ಯಾತನೆ ಕಡಿಮೆಯಾಗಿರಲಿಲ್ಲ. ॥24॥ ಅವರ ಸಹಜ ಸಂಭಾಷಣೆಯ ಮಧ್ಯದಲ್ಲಿ ಈ ನೋವಿನ ಕಥೆಯು ವಿವರವಾಗಿ ಬಂದಿತು. ನಾನಾನಿಗೆ ಇಂತಹ ಸಂದರ್ಭಗಳಲ್ಲಿ ಶ್ರೀಸಾಯಿ ಬಾಬಾರವರ ಕೃಪಾಮಹಿಮೆಯು ಸ್ಮರಣೆಗೆ ಬಂದಿತು. ॥25॥ "ನಿನಗೆ ಈ ಕುಂಟುವಿಕೆಯಿಂದ ಶಾಶ್ವತವಾದ ಬಿಡುಗಡೆಯುಂಟಾಗಬೇಕೆಂಬ ಇಚ್ಛೆಯಿದೆಯೇ? ಹಾಗಿದ್ದಲ್ಲಿ ನನ್ನ ಗುರುವಿನ ದರ್ಶನಕ್ಕಾಗಿ ಬಾ" ಎಂದು ನಾನಾ ಅವನಿಗೆ ಹೇಳಿದನು. ॥26॥ ಅನಂತರ, ನಾನಾ ಇದೊಂದು ಲೀಲಾವಿಶೇಷವೆಂದು ಭಾವಿಸಿ ಸಾಯಿಯ ವೃತ್ತಾಂತವನ್ನು, ಸ್ವಭಾವ, ಮಹತ್ವವೆಲ್ಲವನ್ನೂ, ಸಂತಶಿರೋಮಣಿ ಸಾಯಿಯ ಮಹಿಮೆಯನ್ನೂ ದೀಕ್ಷಿತನಿಗೆ ವಿವರಿಸಿದನು. ॥27॥ "ನನ್ನ ಭಕ್ತರನ್ನು ಎಷ್ಟೇ ದೂರದಲ್ಲಿದ್ದರೂ, ಏಳು ಸಮುದ್ರಗಳಾಚೆ ಇದ್ದರೂ ಸಹ, ಗುಬ್ಬಚ್ಚಿಯ ಕಾಲಿಗೆ ದಾರಕಟ್ಟಿ ಎಳೆದುಕೊಳ್ಳುವ ರೀತಿಯಲ್ಲಿ ನನ್ನ ಹತ್ತಿರಕ್ಕೆ ಎಳೆದುಕೊಳ್ಳುತ್ತೇನೆ." ॥28॥ ಇದು ಬಾಬಾರವರ ನಿತ್ಯ ಆಶ್ವಾಸನೆ. ಅದೂ ಅಲ್ಲದೆ ನಾನಾ ಒಂದು ದೊಡ್ಡ ಪ್ರವಚನವನ್ನೇ ನೀಡಿದನು. ಅವನು ಹೇಳಿದನು, "ನೀನು ಬಾಬಾರವರ ಮನುಷ್ಯನಾಗಿಲ್ಲದಿದ್ದಲ್ಲಿ ನೀನು ಅವರ ಕಡೆಗೆ ಆಕರ್ಷಿತನಾಗುವುದಿಲ್ಲ. ॥29॥ "ನೀನು ಅವರ ಮನುಷ್ಯನಾಗದಿದ್ದಲ್ಲಿ ನಿನಗೆ ಅವರ ದರ್ಶನವೂ ಆಗುವುದಿಲ್ಲ. ಇದು ಬಾಬಾರವರ ಪ್ರಮುಖ ವಿಶೇಷತೆ. ನೀನಾಗಿಯೇ ಅಲ್ಲಿಗೆ ಹೋಗುವೆಯೇನು?" ॥30॥ ಅದು ಹಾಗಿರಲಿ. ಸಾಯಿಯ ಬಗ್ಗೆ ಈ ವಿವರಣೆಯನ್ನೆಲ್ಲಾ ಕೇಳಿದ ಮೇಲೆ ದೀಕ್ಷಿತನಿಗೆ ಅಂತಃಕರಣದಲ್ಲಿ ತೃಪ್ತಿಯುಂಟಾಯಿತು. ಅನಂತರ ಅವನು ನಾನಾಗೆ ಹೇಳಿದನು, "ನಾನು ಬಾಬಾರವರ ದರ್ಶನ ತೆಗೆದುಕೊಳ್ಳುತ್ತೇನೆ. ॥31॥ "ನನ್ನ ಕಾಲಿನ ನೋವಿನ ಬಗ್ಗೆ ಏಕೆ ಮಾತಾಡಬೇಕು? ಈ ದೇಹವಿಡೀ ನಶ್ವರ! ಈ ಕಾಲು ನೋವು ಅದೆಷ್ಟು ಕಾಲ ಇರುವುದೋ ಇರಲಿ. ನನಗೆ ಅದರ ಬಗ್ಗೆ ಚಿಂತೆಯಿಲ್ಲ. ॥32॥ "ನಾನು ನಿನ್ನ ಗುರುವಿನ ದರ್ಶನಕ್ಕಾಗಿ ಹೋಗುತ್ತೇನೆ. ಆದರೆ ಅದು ನಿರತಿಶಯವಾದ ಸೌಖ್ಯವನ್ನು ಸಂಪಾದಿಸಲೆಂದು ಮಾತ್ರ, ನನಗೆ ಅಲ್ಪಸುಖಗಳ ಕಾಮನೆ ಇಲ್ಲ. ನಾನು ಅವುಗಳನ್ನು ಬೇಡುವುದೂ ಇಲ್ಲ. ॥33॥ "ಬ್ರಹ್ಮನಲ್ಲಿ ಐಕ್ಯವಾಗುವುದಕ್ಕಿಂತ ಸುಖವು ಮತ್ತೊಂದಿಲ್ಲ. ಅದೊಂದು ಅತ್ಯಮೂಲ್ಯವಾದ ಆನಂದ.

ಕೇವಲ ಅಂತಹ ಅಮೂಲ್ಯ ಬ್ರಹ್ಮಾನಂದಕ್ಕಾಗಿ ಮಾತ್ರ ನಿನ್ನ ಗುರುಗಳಿಗೆ ಶರಣು ಹೋಗುತ್ತೇನೆ. ॥34॥ "ಈ ನನ್ನಕುಂಟುಕಾಲು ಹಾಗೆಯೇ ಇರಲಿ. ಅದು ನನ್ನನ್ನು ಪೀಡಿಸುವುದಿಲ್ಲ. ಆದರೆ ನಾನು ಪ್ರಾರ್ಥಿಸುವುದೊಂದೇ. ಏನೆಂದರೆ, ನನ್ನ ಕುಂಟು ಮನಸ್ಸಿನ ಚಂಚಲತೆಯು ನಿಲ್ಲಲಿ. ॥35॥ "ನಾನು ಬಹಳ ಪ್ರಯತ್ನಗಳನ್ನು ಮಾಡಿ ದಣಿದಿದ್ದೇನೆ. ಆದರೆ ನನ್ನ ಮನಸ್ಸು ನಿಶ್ಚಲವಾಗಿಲ್ಲ. ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಎಷ್ಟೇ ಪ್ರಯತ್ನಪಟ್ಟರೂ ಅದು ನನಗರಿವಿಲ್ಲದೆಯೇ ಎಲ್ಲೆಲ್ಲೋ ಓಡುತ್ತದೆ. ॥36॥ "ಮನೋ ನಿಗ್ರಹದ ಪ್ರಯತ್ನದಲ್ಲಿ ಅದೆಷ್ಟೇ ಗಮನವಿಟ್ಟರಲಿ, ಅದು ಯಾವಾಗ ತಪ್ಪಿಸಿ ಓಡುತ್ತದೆಯೋ ತಿಳಿಯುವುದೇ ಇಲ್ಲ! ನನಗೆ ಬಹಳ ಆಶ್ಚರ್ಯವಾಗುತ್ತದೆ! ॥37॥ "ಅದುಹರಿಧಾನಾ, ನನ್ನ ಹೃದಯಪೂರ್ವಕವಾಗಿ ನಾನು ನಿನ್ನ ಗುರುವಿನ ದರ್ಶನ ಪಡೆಯುತ್ತೇನೆ. ನಾನು ಅವನಲ್ಲಿ ನನ್ನ ಮನಸ್ಸಿನ ಕುಂಟುತನವನ್ನು ಹೋಗಲಾಡಿಸೆಂದು ಪ್ರಾರ್ಥಿಸುತ್ತೇನೆ." ॥38॥ ಯಾವ ಭಕ್ತನು ಈ ನಶ್ವರವಾದ ಶರೀರದ ಸೌಖ್ಯದ ಬಗ್ಗೆ ಉದಾಸರಾಗಿ ಪರಮಾರ್ಥ ಸುಖಕ್ಕಾಗಿ ಹಂಬಲಿಸುವರೋ ಅಂತಹ ಭಕ್ತರ ಪರಮಾರ್ಥ ಪ್ರಾಪ್ತಿಗಾಗಿ ಸಾಯಿಯವರು ಪರಮ ಉಲ್ಲಾಸ ಹೊಂದುತ್ತಾರೆ. ॥39॥ ಆಗಿನ ವಿಧಾನ ಪರಿಷತ್ತಿನ ಚುನಾವಣೆಯು ಎಲ್ಲ ಕಡೆಯಲ್ಲಿಯೂ ಮಾತುಕತೆಯ ವಿಚಾರವಾಗಿತ್ತು. ಜನರು ಸಾರ್ವತ್ರಿಕವಾಗಿಯೇ ಈ ಕೆಲಸದಲ್ಲಿ ಮಗ್ನರಾಗಿದ್ದರು. ॥40॥ ಕಾಕಾ ಸಾಹೇಬನು ಅನಿರೀಕ್ಷಿತವಾಗಿ ಅಹಮದ್‌ನಗರಕ್ಕೆ ತಾನೇ ತನ್ನ ಪರವಾಗಿ ಲೋಕಮತಗಳ ಬೇಡಿಕೆಗಾಗಿ ಬಂದನು. ಅಲ್ಲಿ ತನ್ನ ಸ್ನೇಹಿತರನ್ನು ಭೇಟಿಮಾಡುತ್ತಿದ್ದನು. ॥41॥ ಅಲ್ಲಿ ಕಾಕಾಸಾಹೇಬ ಮಿರೀಕರ್ ಎಂಬ ಮುಖ್ಯಸ್ಥನೊಬ್ಬನಿದ್ದನು. ಅವನು ದೀಕ್ಷಿತನ ಕುಟುಂಬದ ಸ್ನೇಹಿತನಾಗಿದ್ದನು. ಆದ್ದರಿಂದ ಅವನ ಮನೆಯಲ್ಲಿ ಠಿಕಾಣಿ ಹೂಡಿದನು. ॥42॥ ಆ ಕಾಲದ ಪದ್ಧತಿಯಂತೆ ನಗರದಲ್ಲಿ ಕುದುರೆಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಆದ್ದರಿಂದ ಎಲ್ಲ ವರ್ಗದ ಜನರೂ ಅದಕ್ಕೆ ಸಂಬಂಧಿಸಿದ ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರು. ॥43॥ ಕೋಪರಗಾಂವನ ಮಾಮಲೇದಾರನಾದ ಬಾಳಾಸಾಹೇಬ ಮಿರೀಕರನು ಈ ಪ್ರದರ್ಶನದ ಸಲುವಾಗಿ ಅಹಮದ್‌ನಗರ ಪಟ್ಟಣದಲ್ಲಿಯೇ ಇದ್ದನು. ॥44॥ ದೀಕ್ಷಿತನ ಕೆಲಸ ಮುಗಿದಮೇಲೆ ಅವನು ಅಲ್ಲಿಗೆ ಬಂದನು "ಶಿರಡಿಗೆ ಹೋಗುವುದು ಹೇಗೆ? ನನ್ನನ್ನು ಅಲ್ಲಿಗೆ ಯಾರು ಕರೆದುಕೊಂಡು ಹೋಗುತ್ತಾರೆ?" ಇದು ಅವನ ಯೋಚನೆ. ॥45॥ ಒಮ್ಮೆ ಕೆಲಸ ಮುಗಿದು ಹೋದ ಮೇಲೆ ಅವನ ಗಮನವೆಲ್ಲ ಶಿರಡಿಗೆ ಹೋಗುವ ಮಾರ್ಗದ ಬಗ್ಗೆಯೇ ಇತ್ತು. ದೀಕ್ಷಿತನಿಗೆ ಬಾಬಾರವರ ದರ್ಶನದ ಅವಕಾಶ ದೊರೆಯಬೇಕೆಂದು ತೀವ್ರವಾದ ಇಚ್ಛೆಯಿತ್ತು. ॥46॥ "ನನ್ನ ಜೊತೆ ಯಾರು ಬರುತ್ತಾರೆ? ನನ್ನನ್ನು ಯಾರು ಬಾಬಾರವರ ಮುಂದೆ ಕರೆದುಕೊಂಡು ಹೋಗಿ ಅವರ ಚರಣಗಳಲ್ಲಿಡುತ್ತಾರೆ?" ಇದು ದೀಕ್ಷಿತನ ಕಾಳಜಿಯಾಗಿತ್ತು. ॥47॥ ಒಮ್ಮೆ ಚುನಾವಣೆಯ ಕೆಲಸಗಳು ಮುಗಿದು ಹೋದಮೇಲೆ ದೀಕ್ಷಿತನು ಶಿರಡಿಗೆ ಹೇಗೆ ಹೋಗುವುದು ಎಂದೇ ಚಿಂತಿಸುತ್ತಿದ್ದನು. ಅವನು ಮಿರೀಕರನಲ್ಲಿ ಸಾದರಪೂರ್ವಕವಾಗಿ ವಿನಂತಿಸಿಕೊಂಡನು.

॥48॥ ಬಾಳಾಸಾಹೇಬ ಮಿರೀಕರನು ಕಾಕಾಸಾಹೇಬ ಮಿರೀಕರನ ಮಗ. ಅವರು ತಮ್ಮಲ್ಲಿ ಯಾರು ದೀಕ್ಷಿತನ ಜೊತೆಯಲ್ಲಿ ಶಿರ್ಡಿಗೆ ಹೋಗಬೇಕೆಂದು ಪರಸ್ಪರ ವಿಚಾರಮಾಡಲಾರಂಭಿಸಿದರು. ॥49॥ ಅವರಿಬ್ಬರಲ್ಲಿ ಯಾರೊಬ್ಬರು ದೀಕ್ಷಿತನ ಜೊತೆಯಲ್ಲಿ ಬಂದರೂ ಮತ್ತೊಬ್ಬರ ಅವಶ್ಯಕತೆ ಇರುತ್ತಿರಲಿಲ್ಲ. ಹಾಗಿರುವಾಗ ಅವನ ಜೊತೆ ನಿಶ್ಚಯವಾಗಿ ಯಾರು ಹೋಗಬೇಕೆಂಬುದರ ಬಗ್ಗೆ ಆವಶ್ಯಕ ಚರ್ಚೆ ನಡೆಯಿತು. ॥50॥ ಮನುಷ್ಯನಾದರೋ ಮಾನವೀ ಕಲ್ಪನೆಗಳನ್ನು ಮಾಡುತ್ತಾನೆ. ಆದರೆ ಈಶ್ವರನ ಯೋಜನೆಯೇ ಬೇರೆ ಇರುತ್ತದೆ. ದೀಕ್ಷಿತನ ಶಿರಡಿಯಾತ್ರೆಯಲ್ಲಿ ಅಕಲ್ಪಿತವಾದ ಘಟನೆಯು ನಡೆಯಿತು. ॥51॥ ಈ ಕಡೆ ಈ ರೀತಿಯ ತಳಮಳ ಉಂಟಾಗಿತ್ತು. ಮತ್ತೊಂದು ಕಡೆ ನಡೆದ ಕ್ಷೋಭೆಯನ್ನು ಗಮನಿಸಿರಿ. ಭಕ್ತನ ಪ್ರಬಲವಾದ ಇಚ್ಛೆಯನ್ನು ಅರಿತ ಸಮರ್ಥರು ಯಾವ ರೀತಿ ಅನುಕಂಪ ತೋರಿಸಿದರು ಎಂಬುದನ್ನು ನೋಡಿರಿ. ॥52॥ ಈ ರೀತಿ ದೀಕ್ಷಿತನು ಚಿಂತಾಕ್ರಾಂತನಾಗಿ ಕುಳಿತಿರಲು, ಮಾಧವರಾವ್ ತಾನೇ ನಗರಕ್ಕೆ ಬಂದನು. ಜನರೆಲ್ಲರೂ ಆಶ್ಚರ್ಯಚಕಿತರಾದರು. ॥53॥ ಮಾಧವರಾವ್‌ನ ಮಾವ(ಹೆಂಡತಿಯ ತಂದೆ)ನು ನಗರದಿಂದ ಅವನ ಅತ್ತೆಯವರು ತೀವ್ರತರವಾದ ರೋಗಪೀಡಿತರಾದುದರಿಂದ ಪತ್ನಿ ಸಮೇತ ನೋಡಬರುವಂತೆ ತಂತಿ ಸಂದೇಶವನ್ನು ಕಳಿಸಿದ್ದನು. ॥54॥ ತಂತಿಯು ಕೈಸೇರುತ್ತಲೇ ಅವನು ಬಾಬಾರವರ ಅನುಮತಿ ಪಡೆದು ಹೊರಡಲು ತಯಾರಿ ಮಾಡಿಕೊಂಡನು. ಅವರಿಬ್ಬರೂ ಚಿಥಲಿ ರೈಲ್ವೇ ನಿಲ್ದಾಣವನ್ನು ತಲುಪಿದರು. ॥55॥ ಅವರು ಮೂರು ಘಂಟೆಗೆ ಇದ್ದ ರೈಲು ಗಾಡಿಯನ್ನು ಹಿಡಿದು ನಗರಕ್ಕೆ ಹೋದರು. ಅವರು ಒಂದು ಟಾಂಗಾದಲ್ಲಿ ಮನೆಬಾಗಿಲ ಬಳಿ ಬಂದಿಳಿದರು. ॥56॥ ಅದೇ ಸಮಯದಲ್ಲಿ, ನಾನಾ ಸಾಹೇಬ ಪಾನಸೇ ಮತ್ತು ಅಪಾಸಾಹೇಬಗದ್ರೆ ಇಬ್ಬರೂ ಸಹ ಪ್ರದರ್ಶನದ ನಿಮಿತ್ತವಾಗಿಯೇ ಬಂದಿದ್ದರು. ಅವರಿಬ್ಬರೂ ಅದೇ ಮಾರ್ಗದಲ್ಲಿ ಹೋಗುತ್ತಿದ್ದರು. ॥57॥ ಮಾಧವರಾವ್‌ನು ಟಾಂಗಾದಿಂದ ಇಳಿಯುತ್ತಿದ್ದ ಹಾಗೆಯೇ ಅನಿರೀಕ್ಷಿತವಾಗಿ ಅವರನ್ನು ನೋಡಿದನು. ಅವರಿಗೆ ಬಹಳ ಆಶ್ಚರ್ಯವಾಯಿತು. ಹಾಗೂ ಆನಂದವನ್ನು ತಡೆಯಲಾರದೆ ಹೋದರು. ॥58॥ ಆಗ ಅವರು "ಇದು ನೋಡಿ! ಸುದೈವದಿಂದ ಶಿರಡಿಯ ವಿಠೋಬ ಮಂದಿರದ ಸೇವಕನಾದ ಮಾಧವರಾವ್‌ನು ಇಲ್ಲಿದ್ದಾನೆ! ದೀಕ್ಷಿತನನ್ನು ಶಿರಡಿಗೆ ಕರೆದುಕೊಂಡು ಹೋಗಲು ಅವನಿಗಿಂತ ಮತ್ಯಾರು ಉತ್ತಮರು?" ಎಂದು ಹೇಳಿದರು. ॥59॥ ಅನಂತರ ಅವನನ್ನು ಕರೆಯುತ್ತಾ ಹೇಳಿದರು, "ದೀಕ್ಷಿತ್ ಕಾಕಾನು ಮಿರೀಕರನಲ್ಲಿಗೆ ಬಂದಿರುವನು. ಹೋಗಿ ನೋಡು. ಬಾಬಾರವರ ಲೀಲೆಗಳನ್ನು ಅವಲೋಕಿಸು. ॥60॥ "ದೀಕ್ಷಿತನು ನಮ್ಮ ವಿಶೇಷ ಮಿತ್ರ, ಅವನ ಜೊತೆ ನಿನ್ನ ಪರಿಚಯ ಉಂಟಾಗುತ್ತದೆ. ಅವನು ಶಿರಡಿಗೆ ಹೋಗಲು ಕಾತರಿಸುತ್ತಿದ್ದಾನೆ. ನಿನ್ನ ಆಗಮನವು ಅವನನ್ನು ಪ್ರಸನ್ನಗೊಳಿಸುತ್ತದೆ. ॥61॥ ಈ ಸಂದೇಶವನ್ನು ಮಾಧವರಾವ್‌ನಿಗೆ ನೀಡಿ ಅವರು ದೀಕ್ಷಿತನಿಗೆ ಸಮಾಚಾರ ಮುಟ್ಟಿಸಿದರು. ಅದನ್ನು ಕೇಳುತ್ತಿದ್ದಂತೆಯೇ ಅವನ ಚಿಂತೆಯು ದೂರವಾಗಿ ಸಂತೋಷಹೊಂದಿದನು. ॥62॥ ಮಾಧವರಾವ್‌ನು ತನ್ನ

ಮಾವನ ಮನೆಗೆ ಹೋದಾಗ ಅವನ ಅತ್ತೆಯವರು ಆರೋಗ್ಯವಾಗಿರುವುದು ಕಂಡುಬಂದಿತು. ಆದ್ದರಿಂದ ಸ್ವಲ್ಪ ಕಾಲ ವಿಶ್ರಮಿಸಿದನು. ಅನಂತರ ಮಿರೀಕರನು ಅವನಿಗೆ ಹೇಳಿ ಕಳುಹಿಸಿದನು. ॥63॥ ಅವನ ಆಹ್ವಾನವನ್ನು ಮನ್ನಿಸಿ, ಸೂರ್ಯಾಸ್ತಮದ ಸ್ವಲ್ಪ ಸಮಯಾನಂತರ ಮಾಧವರಾವ್‌ನು ದೀಕ್ಷಿತನನ್ನು ಭೇಟಿಮಾಡಲು ಹೊರಟನು. ॥64॥ ಅದು ಅವನ ಪ್ರಥಮ ಭೇಟಿಯಾದುದರಿಂದ ಬಾಳಾ ಸಾಹೇಬನುಅವನನ್ನು ಪರಿಚಯಿಸಿದನು. ಅನಂತರ ಇಬ್ಬರೂ ಅದೇ ರಾತ್ರಿ 10 ಘಂಟೆಯ ರೈಲು ಗಾಡಿಯನ್ನು ಹಿಡಿಯಲು ನಿರ್ಧರಿಸಿದರು. ॥65॥ ಈ ಯೋಜನೆಯು ನಿಶ್ಚಿತವಾದ ನಂತರ ಮುಂದೆ ಎಂತಹ ಲೀಲೆ ಜರುಗಿತು ಎನ್ನುವುದನ್ನು ನೋಡಿ. ಬಾಳಾ ಸಾಹೇಬನು ಬಾಬಾರವರ ಚಿತ್ರಪಟದ ಮೇಲಿನ ಪರದೆಯನ್ನು ಸರಿಸಿದನು. ॥66॥ ಅದೊಂದು ಬಾಬಾರವರ ಛಾಯಾಚಿತ್ರವಾಗಿತ್ತು, ಅದು ಬಾಬಾರವರ ನಿಸ್ಸೀಮ ಭಕ್ತನಾದ ಮೇಘಾನು ಪರಮಪ್ರೀತಿಯಿಂದ ಬಾಬಾರವರನ್ನು ತ್ರಿನೇತ್ರಧಾರಿ ಪವಿತ್ರ ಶಂಕರನ ಅವತಾರವೆಂದು ಪೂಜಿಸುತ್ತಿದ್ದುದಾಗಿತ್ತು. ॥67॥ ಅದರ ಗಾಜು ಒಡೆದು ಹೋಗಿದ್ದದ ರಿಪೇರಿಗಾಗಿ ಬಾಳಾಸಾಹೇಬನ ಹತ್ತಿರ ನಗರಕ್ಕೆ ಕಳುಹಿಸಲಾಗಿತ್ತು. ಈ ರೀತಿಯಲ್ಲಿ ಅದು ಆರಂಭದಲ್ಲಿ ಶಿರಡಿಯನ್ನು ಬಿಟ್ಟಿತ್ತು. ॥68॥ ಈ ಚಿತ್ರಪಟವು ರಿಪೇರಿಯಾಗಿ ಮಿರೀಕರನ ಬೈಠಕ್ ಖಾನೆಯಲ್ಲಿ ಬಟ್ಟೆಯಲ್ಲಿ ಸುತ್ತಿಡಲ್ಪಟ್ಟಿತ್ತು. ಅದು ದೀಕ್ಷಿತನಿಗಾಗಿ ಕಾಯುತ್ತಿತ್ತು. ॥69॥ ಬಾಳಾಸಾಹೇಬನು ಅಸ್ತ್ರ ಪ್ರದರ್ಶನದ ಸಮಾಪ್ತಿಯ ನಂತರ ಅದನ್ನು ಹಿಂತಿರುಗಿಸಬೇಕಾಗಿತ್ತು. ಅದಕ್ಕೆ ಇನ್ನೂ ಸ್ವಲ್ಪ ಸಮಯವಿತ್ತು. ಆದ್ದರಿಂದ ಅವನು ಅದನ್ನು ಮಾಧವರಾವ್‌ನಿಗೆ ಒಪ್ಪಿಸಿದನು. ॥70॥ ಬಟ್ಟೆಯನ್ನು ಸರಿಸಿ ಅದನ್ನು ಅನಾವರಣಮಾಡಿದನು. ಅದನ್ನು ಮಾಧವರಾವ್‌ನ ಸುಪರ್ದಿಗೆ ಕೊಡಲು ಹೇಳಿದನುಶಿರಡಿಯವರೆಗೆ ಸಂತೋಷವಾಗಿ ಬಾಬಾರವರ ಜೊತೆಯಲ್ಲಿ ಹೋಗು.” ॥71॥ ಆ ಚಿತ್ರಪಟದ ಮೇಲೆ ಮೊದಲ ದೃಷ್ಟಿಯು ಬೀಳುತ್ತಲೇ ಸರ್ವಾಂಗ ಮನೋಹರ ರೂಪವನ್ನು ನೋಡಿ ಕಾಕಾ ಸಾಹೇಬನು ಆನಂದತುಲಿತನಾದನು. ಅದರ ಮುಂದೆ ಗೌರವದಿಂದ ಪ್ರಣಾಮ ಸಲ್ಲಿಸುತ್ತ ಅದನ್ನು ಆಲೋಕಿಸಲು ಪ್ರಾರಂಭಿಸಿದನು.॥72॥ ಈ ವಿಚಿತ್ರ ಘಟನೆಯನ್ನು ಅನುಭವಿಸುತ್ತ ಮತ್ತು ಸಾಯಿಸಮರ್ಥರ ರಮ್ಯ ಹಾಗೂ ಪವಿತ್ರ ಛಾಯಾಚಿತ್ರವನ್ನು ಅನಿರೀಕ್ಷಿತವಾಗಿ ಕಂಡು ದೀಕ್ಷಿತನ ಕಣ್ಣುಗಳು ತುಂಬಿ ಬಂದವು. ॥73॥ ಯಾರ ದರ್ಶನಕ್ಕಾಗಿ ಹಂಬಲಿಸುತ್ತಿದ್ದನೋ, ಅವರ ರೂಪವು ಮೂರ್ತಿವತ್ತಾಗಿಮಾರ್ಗದಲ್ಲಿಯೇ ನೋಡಲು ದೊರಕಿ ಅವನು ಅತ್ಯಂತ ಆಹ್ಲಾದ ಭರಿತನಾದನು. ॥74॥ ಅದು ಕಾಕಾಸಾಹೇಬ ಮಿರೀಕರನ ಮನೆಯಲ್ಲಿದ್ದು, ಅದೇ ಸಮಯಕ್ಕೆ ದೀಕ್ಷಿತನೂ ಅಲ್ಲಿದ್ದು, ಇವನಿಗಿಂತ ಮುಂಚೆಯೇ ಶಿರ್ಡಿಯಿಂದ ಬಂದಿದ್ದುದು ಎಲ್ಲವೂ ವಿಚಿತ್ರವಾದ ಯೋಗವೆನ್ನಿಸಿತು. ॥75॥ ದೀಕ್ಷಿತನಮನದ ಹಂಬಲವನ್ನು ತೃಪ್ತಿಪಡಿಸಲು ಸಾಯಿ ಸಮರ್ಥರು ಒಂದು ನೆಪಮಾಡಿಕೊಂಡು ಅಲ್ಲಿಗೆ ಬಂದಂತೆ ತೋರಿತು. ॥76॥ ಲೋಣಾವಾಳದಲ್ಲಿಯೇ, ನಾನಾನನ್ನು ಭೇಟಿಮಾಡಿ ಅವನೊಡನೆ ಸಾಕಷ್ಟು ಮಾತನಾಡಿದಾಗಲೇ ಬಾಬಾರವರೆಡೆಗೆ ಗುರುತ್ವಾಕರ್ಷಣ ಉಂಟಾಗಿತ್ತು, ಅದು ಭೇಟಿಗೆ ಅಂಕುರ ನೀಡಿತ್ತು.

॥77॥ ಇಲ್ಲದಿದ್ದರೆ ಈ ಚಿತ್ರಪಟವು ಶಿರಡಿಯಿಂದ ಇಲ್ಲಿಗೆ ಈ ಸಮಯದಲ್ಲಿ ಏಕೆ ಬಂದಿತು ಮತ್ತು ಇಲ್ಲಿಯವರೆಗೆ ಈ ಸ್ಥಳದಲ್ಲಿ ಮುಟ್ಟಿತು? ॥78॥ ಅದು ಹಾಗಿರಲಿ. ಈ ನಿರ್ಧಾರದ ನಂತರ ಮಾಧವರಾವ್ ಮತ್ತು ದೀಕ್ಷಿತ ಇಬ್ಬರೂ ಆ ಚಿತ್ರಪಟವನ್ನು ತಮ್ಮೊಡನೆ ಆನಂದದಿಂದ ತೆಗೆದುಕೊಂಡು ಹೊರಟರು. ॥79॥ ಅವರಿಬ್ಬರೂ ರಾತ್ರಿಯ ಊಟವಾದ ನಂತರ ರೈಲು ನಿಲ್ದಾಣಕ್ಕೆ ಹೊರಟರು. ಅವರು ಎರಡನೆಯ ದರ್ಜೆಯ ದರವನ್ನು ಕೊಟ್ಟು ಟಿಕೇಟುಗಳನ್ನು ತೆಗೆದುಕೊಂಡರು. ॥80॥ ಹತ್ತು ಗಂಟೆ ಹೊಡೆಯುತ್ತಲೇ ರೈಲುಗಾಡಿಯ ಧ್ವನಿ ಕೇಳಿಸಿತು. ಅವರಿಗೆ ಎರಡನೆಯ ದರ್ಜೆಯ ಬೋಗಿಗಳು ಪ್ರಯಾಣಿಕರಿಂದ ಭರ್ತಿಯಾಗಿದ್ದುದು ಕಂಡುಬಂದಿತು. ॥81॥ ಈ ಪರಿಸ್ಥಿತಿಯನ್ನು ಕಂಡ ಇಬ್ಬರೂ ಚಿಂತಿತರಾದರು. ಸಮಯವೂ ಬಹಳ ಅಲ್ಪವಾಗಿತ್ತು. ಅದಕ್ಕಾಗಿ ಏನು ವ್ಯವಸ್ಥೆ ಮಾಡಬೇಕು? ಅದು ಹೇಗೆ? ॥82॥ ಅದು ಹಾಗಿರಲಿ. ಈಗ ಜನಸಂದಣಿ ಹೆಚ್ಚಾಗಿದ್ದುದರಿಂದ ಇಬ್ಬರೂ ತಮ್ಮ ಸ್ಥಳಕ್ಕೆ ಹಿಂತಿರುಗಿ ಮರುದಿನ ಶಿರಡಿಗೆ ಹೋಗಲು ನಿಶ್ಚಯಿಸಿದರು. ॥83॥ ಆ ಕ್ಷಣದಲ್ಲಿ, ದೀಕ್ಷಿತನಿಗೆಪರಿಚಿತನಾದ ರೈಲು ಬಂಡಿಯ ರಕ್ಷಕ (ಗಾರ್ಡ್) ಕಣ್ಣಿಗೆ ಬಿದ್ದನು. ಅವನು ಅವರಿಗೆ ಮೊದಲನೆಯ ದರ್ಜೆಯಲ್ಲಿ ಪ್ರಯಾಣ ಮಾಡುವ ಏರ್ಪಾಡು ಮಾಡಿದನು. ॥84॥ ಅನಂತರ ರೈಲುಗಾಡಿಯಲ್ಲಿ ಕುಳಿತುಕೊಂಡು ಇಬ್ಬರೂ ಬಾಬಾರವರ ವಿಷಯ ಮನಸಾರೆ ಮಾತನಾಡಲು ಪ್ರಾರಂಭಿಸಿದರು. ॥85॥ ಈ ರೀತಿ ಪ್ರಯಾಣ ಸುಖಕರವಾಯಿತು, ಸಮಯವು ಬೇಗನೆ ಕಳೆದು ಹೋಯಿತು. ರೈಲುಗಾಡಿಯು ಕೋಪರಗಾಂವನ್ನು ತಲುಪಿತು. ಅವರು ಸಂತೋಷದಿಂದ ಅಲ್ಲಿ ಇಳಿದರು. ॥86॥ ಅದೇ ಸಮಯದಲ್ಲಿ ಅನಿರೀಕ್ಷಿತವಾಗಿ ಅವರು ರೈಲು ನಿಲ್ದಾಣದಲ್ಲಿ ನಾನಾ ಸಾಹೇಬ ಚಾಂದೋರಕರನನ್ನು ನೋಡಿದರು. ॥87॥ ನಾನಾ ಸಹ ಬಾಬಾರವರ ದರ್ಶನಕ್ಕಾಗಿ ಶಿರಡಿಗೆ ಹೋಗುತ್ತಲಿದ್ದನು. ಈ ಒಂದು ಅನಿರೀಕ್ಷಿತ ಯೋಗವನ್ನು ಕಂಡು ಮೂವರೂ ಅಚ್ಚರಿಗೊಂಡರು. ॥88॥ ಅನಂತರ ಮೂವರೂ ಒಂದು ಟಾಂಗಾವನ್ನು ಬಾಡಿಗೆಗೆ ತೆಗೆದುಕೊಂಡು ಉತ್ಸಾಹದಿಂದ ಮಾತನಾಡುತ್ತ ಹೊರಟರು. ಮಾರ್ಗಮಧ್ಯದಲ್ಲಿ ಗೋದಾವರಿಯಲ್ಲಿ ಸ್ನಾನಮಾಡಿ ಪವಿತ್ರ ಶಿರಡಿಯನ್ನು ತಲಪಿದರು. ॥89॥ ಅನಂತರ ಸಾಯಿಯವರ ದರ್ಶನ ಮಾಡಿದ ದೀಕ್ಷಿತನ ಹೃದಯ ಕರಗಿತು. ಅವನ ಕಣ್ಣುಗಳು ಅಶ್ರುಪೂರ್ಣವಾದವು. ಸ್ವಾನಂದದ ಜಲವು ಉಕ್ಕಿಹರಿಯಿತು. ॥90॥ "ನಾನೂ ನಿನಗಾಗಿ ಕಾಯುತ್ತಿದ್ದೆನು. ಅನಂತರ ಶಾಮಾನನ್ನು ನಿನ್ನ ಭೇಟಿಗೆಂದು ನಗರಕ್ಕೆ ಕಳುಹಿಸಿದೆನು" ಎಂದು ಸಾಯಿಯು ಅವನಿಗೆ ಸ್ಪಷ್ಟವಾಗಿ ತಿಳಿಸಿದರು. ॥91॥ ಈ ಮಾತುಗಳನ್ನು ಕೇಳಿದ ದೀಕ್ಷಿತನ ಶರೀರ ರೋಮರೋಮಗಳೂ ಹರ್ಷಿತಗೊಂಡವು. ಗಂಟಲು ಭಾವೋದ್ವೇಗದಿಂದ ತುಂಬಿಬಂದಿತು. ಮನಸ್ಸು ಪ್ರಫುಲ್ಲಗೊಂಡಿತು. ಅವನ ಸರ್ವಾಂಗಗಳೂ ಬೆವರಿನಿಂದ ತೋಯ್ದುಹೋಗಿತ್ತು. ॥92॥ ಅವನ ದೇಹವು ಸೂಕ್ಷ್ಮವಾಗಿ ಕಂಪಿಸಿತು. ಚಿತ್ತಸ್ವಾನಂದದಲ್ಲಿ ತಲ್ಲೀನವಾಯಿತು. ಕಣ್ಣುಗಳು ಅರ್ಧತೆರೆದಿದ್ದವು. ಅವನು ಆನಂದಘನದಲ್ಲಿ ಮುಳುಗಿಹೋದನು. ॥93॥ "ಈದಿನ ನನ್ನ ದೃಷ್ಟಿಯು ಸಫಲವಾಯಿತು" ಎಂದು

ನುಡಿಯುತ್ತ ಬಾಬಾರವರ ಚರಣಗಳನ್ನು ಅಪ್ಪಿಹಿಡಿದನು. ಅವನು ನಿಜವಾಗಿಯೂ ಧನ್ಯ! ಸೃಷ್ಟಿಯು ಅವನ ಆನಂದವನ್ನು ಭರಿಸಲಾಗಲಿಲ್ಲ. ॥94॥ ವರುಷಗಳು ಕಳೆದವು. ಸಾಯಿ ಚರಣಗಳಲ್ಲಿ ಅವನ ನಿಷ್ಠೆಯು ದೃಢಗೊಂಡಿತು. ಅವನು ಪೂರ್ಣವಾಗಿ ಸಾಯಿಕೃಪೆಯನ್ನು ಸಂಪಾದಿಸಿದನು ಮತ್ತು ಸಾಯಿ ಸೇವೆಯಲ್ಲಿ ಈ ದೇಹವನ್ನು ಸವೆಸಿದನು. ॥95॥ ಸಾಯಿ ಸೇವೆಯನ್ನು ಯಥಾಸಾಂಗವಾಗಿ ನಡೆಸಲು ಅವನು ಒಂದು ಮನೆ ಅಥವಾ ಆಶ್ರಮವನ್ನು ಶಿರಡಿಯಲ್ಲಿ ಕಟ್ಟಿ ಅನೇಕ ವರ್ಷಗಳು ಅಲ್ಲಿ ನೆಲಸಿ ಸಾಯಿ ಕೀರ್ತಿಯನ್ನು ಹರಡಿದನು. ॥96॥ ಸಾರಾಂಶದಲ್ಲಿ, ಯಾರು ಸಾಯಿಗಾಗಿ ಪರಿತಪಿಸುತ್ತಾರೋ ಅವರ ಕೆಲಸಗಳೆಲ್ಲವೂ ನಿಶ್ಚಯವಾಗಿಯೂ ಫಲಕಾರಿಯಾಗುತ್ತವೆ. ಸಾಯಿಯು ತನ್ನ ಭಕ್ತರಿಗೆ ವಿಶ್ರಾಮಧಾಮನು ಮತ್ತು ಪರಮಸುಖನೀಡುವವನೂ ಆಗಿರುವನು. ॥97॥ ಚಂದ್ರನಿಗೆ ಚಕೋರಗಳು ಹಲವಾರು, ಆದರೆ ಚಕೋರಗಳಿಗೆ ನಾಥನು ಒಬ್ಬನೇ ಚಂದ್ರ, ಅದೇ ರೀತಿ ಒಬ್ಬ ತಾಯಿಗೆ ಅನೇಕ ಮಕ್ಕಳಿರಬಹುದು. ಆದರೆ ಮಕ್ಕಳಿಗೆ ಒಬ್ಬಳೇ ತಾಯಿ. ॥98॥ ದಿನಕರನಿಗೆ ನೈದಿಲೆಗಳು ಅನೇಕ, ಆದರೆ ನೈದಿಲೆಗಳಿಗೆ ಒಬ್ಬನೇ ಸೂರ್ಯ. ಅದೇ ರೀತಿ ನಿನ್ನ ಭಕ್ತರು ಅನೇಕ, ಆದರೆ ಗುರುವರ, ಅವರಿಗೆಲ್ಲ ನೀನೊಬ್ಬನೇ ತಂದೆ. ॥99॥ ಮೇಘಕ್ಕೆ ಅನೇಕ ಚಾತಕಗಳಿರುತ್ತವೆ, ಆದರೆ ಚಾತಕಗಳಿಗೆ ಒಂದೇ ಮೇಘ, ಅದೇ ರೀತಿ ಅವರಿಗೆ ಅನೇಕ ಭಕ್ತರಿದ್ದಾರೆ. ಆದರೆ ಅವರೆಲ್ಲರಿಗೆ ಮಾತ್ರ ಅವರೊಬ್ಬರೆ ತಾಯಿ ಮತ್ತು ತಂದೆ. ॥100॥ ಯಾರು ತನ್ನಲ್ಲಿ ಸಹಜವಾದ ಸದ್ಭಾವದಿಂದ ಶರಣಾಗುವರೋ ಅವರ ಗೌರವವನ್ನು ಕಾಪಾಡುತ್ತಾರೆ. ಅವರ ಕಾಮನೆಗಳನ್ನು ಇಚ್ಛಾಪೂರ್ವಕವಾಗಿ ಪೂರೈಸುತ್ತಾರೆ. ಅದನ್ನು ಇಂದಿಗೂ ಪ್ರತ್ಯಕ್ಷವಾಗಿ ಕಾಣಬಹುದು. ॥101॥ ಈ ಜಗತ್ತಿನ ಎಲ್ಲ ಜೀವಿಗಳೂ ಒಮ್ಮೆ ಮೃತ್ಯುವಿನ ಕೈಯಲ್ಲಿ ಅಂತ್ಯವನ್ನು ಕಾಣಬೇಕಾಗುತ್ತದೆ. ಸಾಯಿಯು ದೀಕ್ಷಿತನ ಮರಣಭಯವನ್ನು ಹೋಗಲಾಡಿಸುತ್ತ ಅಭಯವನ್ನಿತ್ತರು, “ನಾನು ನಿನ್ನನ್ನು ವಿಮಾನದಲ್ಲಿ ಕರೆದೊಯ್ಯುತ್ತೇನೆ.” ॥102॥ ಸಾಯಿ ನುಡಿದಂತೆ ದೀಕ್ಷಿತನ ಅಂತ್ಯವಾಯಿತು. ಸಾಯಿಯ ಗುಣಗಾನ ಮಾಡುತ್ತಲೇ ಮರಣ ಹೊಂದಿದನು. ಅದು ನನ್ನ ಕಣ್ಣಮುಂದೆಯೇ ನಡೆಯಿತು. ॥103॥ ನಾವಿಬ್ಬರೂ ಒಂದು ರೈಲುಗಾಡಿಯಲ್ಲಿನ ಬೆಂಚಿನ ಮೇಲೆ ಅಕ್ಕಪಕ್ಕದಲ್ಲಿ ಕುಳಿತುಕೊಂಡು ಸಾಯಿ ಸಮರ್ಥರ ಚರಿತ್ರೆಯಲ್ಲಿ ಮಗ್ನರಾಗಿದ್ದೆವು. ಆಗ ಅವನು ತತ್‌ಕ್ಷಣವೇ ಒಂದು ವಿಮಾನದಲ್ಲಿ ಹೊರಟುಹೋದನು. ॥104॥ ಅವನು ತನ್ನ ತಲೆಯನ್ನು ನನ್ನ ಭುಜದ ಮೇಲೆ ವಾಲಿಸುತ್ತ ಅನಿರೀಕ್ಷಿತವಾಗಿ ಒದಗಿ ಬಂದ ಅವಕಾಶವನ್ನು ಬಳಸಿಕೊಂಡನು. ದೀಕ್ಷಿತನು ಕೂಡಲೇ ವಿಮಾನದಲ್ಲಿ ಒಂದು ಜಾಗಹಿಡಿದು ಸ್ವರ್ಗಸುಖವನ್ನು ಅನುಭವಿಸಿದನು. ॥105॥ ಅಲ್ಲಿ ಯಾವುದೇ ಕುಗ್ಗುವಿಕೆಯಾಗಲಿ, ಸನ್ನಿಪಾತವಾಗಲಿ ಇರಲಿಲ್ಲ. ಯಾವುದೇ ಗುರುಗುರು ಶಬ್ದವಾಗಲಿ, ತೀವ್ರನೋವಾಗಲಿ ಇರಲಿಲ್ಲ. ಅವನ ಶರೀರವು ಎಲ್ಲ ರೀತಿಯಿಂದಲೂ ಮಾತುಕತೆ, ಚಲನ, ನೋಟ ಎಲ್ಲವೂ ಸಾಮಾನ್ಯವಾಗಿಯೇ ಇದ್ದು ನಿಶ್ಚಲವಾಗಿ ಹೋಯಿತು. ॥106॥ ಈ ರೀತಿ ಭೌತಿಕ ಶರೀರವನ್ನು ತ್ಯಜಿಸಿದನು. ಅವನ ಜ್ಯೋತಿಯು

ಆತ್ಮಸ್ವರೂಪದಲ್ಲಿ ಲೀನವಾಯಿತು. ವಿಮಾನಮಾರ್ಗದಲ್ಲಿ ಹೊರಟು ತನ್ನ ಸ್ವಸ್ವರೂಪದಲ್ಲಿ ನೆಲಸಿದನು. ಅವನ ಆತ್ಮಜ್ಯೋತಿಯು ಬ್ರಹ್ಮನಲ್ಲಿ ಲೀನವಾಯಿತು. ॥107॥ ಅವನು ಪೂರ್ಣವಾಗಿ ಸಾಯಿಯ ಚರಣಗಳಲ್ಲಿ ಧ್ಯಾನಮಾಡಿದಾಗ ಅವನ ದೇಹಾಭಿಮಾನವು ಪೂರ್ಣವಾಗಿ ನಾಶವಾಯಿತು. ಅವನು ಪೂರ್ಣಸಮಾಧಾನಚಿತ್ತವುಳ್ಳವನಾಗಿ ತನ್ನನ್ನು ತಾನೇ ಪೂರ್ಣವಾಗಿ ಕೃಷ್ಣಾರ್ಪಣ ಮಾಡಿದ್ದನು. ॥108॥ ಶಕೆ 1848 (ಕ್ರಿ.ಶ. 1926) ಹಿಂದೂ ಪಂಚಾಂಗದಲ್ಲಿ ಜ್ಯೇಷ್ಠಮಾಸದ ಕೃಷ್ಣಪಕ್ಷದ ಏಕಾದಶಿ ತಿಥಿಯ ದಿನ (ಹುಣ್ಣಿಮೆಯ ನಂತರದ 11ನೆಯ ದಿನ) ದೀಕ್ಷಿತನು ಬ್ರಹ್ಮಪದವನ್ನು ಪಡೆದನು. ಈ ಕರ್ಮಭೂಮಿಯನ್ನು ತ್ಯಜಿಸಿದನು. ॥109॥ ಅದನ್ನು ದೇಹಾವಸಾನವೆಂದಾದರೂ ಕರೆಯಿರಿ ಅಥವಾ ವಿಮಾನವು ಆಗಮಿಸಿತು ಎಂದಾದರೂ ಹೇಳಿರಿ. ಅವನು ಸಾಯಿ ಚರಣಗಳಲ್ಲಿ ಲೀನವಾದನು. ಪ್ರತಿಯೊಬ್ಬರಿಗೂ ಈ ಚರಿತ್ರೆಯ ಪ್ರಮಾಣದ ಅರಿವಿ॥110॥ "ಪ್ರತಿಯೊಬ್ಬರೂ ಉಪಕಾರದ ಋಣಮುಕ್ತರಾಗಬೇಕು" ಎಂದು ನಂಬಿದವನು ಸಂಪೂರ್ಣವಾದ ಭಕ್ತಿಯಿಂದ ದೂರವಾಗಬೇಕು. ಈ ಒಂದು ಉಪಕಾರಕ್ಕೆ ಪ್ರತಿಯಾಗಿ ನೀಡುವ ಉಡುಗೊರೆ ಈ ಜಗತ್ತಿನಲ್ಲಿ ಏನೂ ಇಲ್ಲ. ಹಾಗೂ ಕನಸಿನಲ್ಲಿಯೂ ಅದು ಸಾಧ್ಯವಿಲ್ಲ. ॥111॥ 'ಚಿಂತಾಮಣಿ'ಯನ್ನು ಕೊಡುವೆನೆಂದು ಯಾರಾದರೂ ಯೋಚಿಸಿದಲ್ಲಿ ಅದು ನಿತ್ಯಚಿಂತೆಯನ್ನು ಹೆಚ್ಚಿಸುತ್ತದೆ. ಉಪಕಾರವನ್ನು ಈ ರೀತಿಯ ವಸ್ತುವಿನಿಂದ ಋಣಮುಕ್ತವಾಗಬಹುದೆಂದು ಯೋಚಿಸಿದಲ್ಲಿ ಅದೊಂದು ಮಗುವಿನ ಯೋಚನೆಯಂತಾಗುತ್ತದೆ. ॥112॥ ಒಳ್ಳೆಯದು, ಗುರುವಿಗೆ ಕಲ್ಪತರು'ವನ್ನು ನೀಡಿ ಮೆಚ್ಚಿಸಲು ಪ್ರಯತ್ನಿಸಿದಲ್ಲಿ, ನಿರ್ವಿಕಲ್ಪತೆಯನ್ನು ನೀಡುವಂತಹ ಜ್ಞಾನವುಳ್ಳ ಗುರುವಿಗೆ ನೀಡಿದಲ್ಲಿ ಅದು ಎಲ್ಲಾ ಋಣಗಳಿಂದಲೂ ಮುಕ್ತನನ್ನಾಗಿ ಮಾಡುವುದೇನು? ॥113॥ ಅದು ಹಾಗಿರಲಿ. ಇವುಗಳೆಲ್ಲದರ ಬದಲಾಗಿ ಯಾರಾದರೂ ಗುರುವಿಗೆ ಪರುಶಮಣಿಯನ್ನು ನೀಡಿದಲ್ಲಿ ಪರುಶಮಣಿಯು ಲೋಹವನ್ನು ಚಿನ್ನಮಾಡುತ್ತದೆ. ಆದರೆ ಗುರುವು ಬ್ರಹ್ಮರಸವನ್ನೇ ಪಡೆಯುವಂತೆ ಮಾಡುತ್ತಾನೆ. ॥114॥ ಯಾರಾದರೂ ಗುರುವಿಗೆ ಕಾಮಧೇನುವನ್ನು ಅರ್ಪಿಸಿ ಈ ರೀತಿ ಋಣಮುಕ್ತನಾದೆನೆಂದು ಭಾವಿಸಿದಲ್ಲಿ ಅವನು ಕಾಮನೆಗಳನ್ನು ಅತ್ಯಂತ ಪ್ರಮಾಣಕ್ಕೆ ಹೆಚ್ಚಿಸಿಕೊಳ್ಳುತ್ತಾನೆ. ಗುರುವಾದರೋ ನಿಷ್ಕಾಮನಾಗಿಯೂ ನೀಡಲು ಇಚ್ಛಿಸುತ್ತಾನೆ. ॥115॥ ಯಾರಾದರೂ ಇಡೀ ವಿಶ್ವದ ಸಂಪತ್ತನ್ನೇ ಗುರುವಿಗೆ ನೀಡಿ ಋಣಮುಕ್ತನಾಗಲು ಇಚ್ಛಿಸಿದಲ್ಲಿ, ಮಾಯಾರಹಿತ ವಸ್ತುಗಳನ್ನು ನೀಡಿರುವಂತಹವನಿಗೆ ಮಾಯೆಯ ವಸ್ತುಗಳನ್ನು ಪ್ರತಿಯಾಗಿ ಕೊಡಲು ಸಾಧ್ಯವೇ? ॥116॥ ಯಾರಾದರೂ ತಮ್ಮ ದೇಹವನ್ನು ಗುರುವಿಗೆ ಸಮರ್ಪಿಸಿದಲ್ಲಿ ಅದಾದರೋ ಕೇವಲ ನಶ್ವರ ವಸ್ತು. ತನ್ನ ಜೀವನವನ್ನೇ ಅರ್ಪಿಸುವೆನೆಂದರೆ ಅದು ಕೇವಲ ಮಿಥ್ಯೆಯ ಸ್ವರೂಪ. ॥117॥ ಸದ್ಗುರುವು ಸತ್ಯ ವಸ್ತುವನ್ನು ನೀಡುವವನು. ಅವನಿಗೆ ಮಿಥ್ಯಾವಸ್ತುಗಳನ್ನು ಅರ್ಪಿಸಿದರೆ ಅದು ಹೇಗೆ ತಿರುಗಿ ಕೊಟ್ಟಂತಾಗುತ್ತದೆ? ಆದ್ದರಿಂದ ಗುರುವಿನ ಋಣ ತೀರಿಸುವುದು ಅಸಾಧ್ಯವಾದುದು. ॥118॥ ಆದುದರಿಂದ, ಅನನ್ಯ ಶ್ರದ್ಧೆಯಿಂದ ಪೂರ್ಣವಾಗಿ

ಸಾಷ್ಟಾಂಗಪ್ರಣಾಮ ಮಾಡಿ ನಿನ್ನ ಶಿರವನ್ನು, ಸದ್ಗುರು ಚರಣಗಳಲ್ಲಿ ಉಪಕಾರಗಳ ಸ್ಮರಣೆಯನ್ನು ತುಂಬಿಕೊಂಡು ಮನವನ್ನು ಇಡು. ॥119॥ ಅಖಂಡವಾದ ಗುರುವಿನ ಉಪಕಾರವನ್ನು ಸ್ಮರಿಸುವುದೇ ಶಿಷ್ಯನಿಗೆ ಭೂಷಣ. ಯಾರು ಈ ಉಪಕಾರವನ್ನು ತಿರುಗಿ ಕೊಡಲು ಇಚ್ಛಿಸುತ್ತಾರೋ ಅಂತಹ ಶಿಷ್ಯನು ತನ್ನ ಸುಖವನ್ನು ಕಳೆದುಕೊಳ್ಳುತ್ತಾನೆ. ॥120॥ ಈ ಕಥೆಯನ್ನು ಇಷ್ಟು ಆಲಿಸಿದ ಮೇಲೆ, ಶ್ರೋತೃಗಳು ಮತ್ತಷ್ಟು ಕೇಳಲು ಇಚ್ಛಿಸುತ್ತಾರೆ. ಈ ಜಿಜ್ಞಾಸೆಯಿಂದ ತುಂಬಿದ ಆತುರತೆಯನ್ನು ನೋಡಿ, ಒಂದು ಸಣ್ಣ ಕಥೆಯನ್ನು ಹೇಳುತ್ತೇನೆ. ॥121॥ ಸಂತರೂ ಸಹ ಇತರ ಸಂತರಲ್ಲಿ ಬಂಧುಪ್ರೇಮ ತೋರಿಸುತ್ತಾರೆ. ಸಾಂಸಾರಿಕ ನಿಯಮಗಳನ್ನು ವ್ಯಕ್ತಪಡಿಸುತ್ತಾರೆ. ಅಥವಾ ಲೋಕಸಂಗ್ರಹವನ್ನು ದಕ್ಷ ರೀತಿಯಲ್ಲಿ ಮಾಡಿ ಅದರ ಮರ್ಮವನ್ನು ತಿಳಿಯುವಂತೆ ಮಾಡುತ್ತಾರೆ. ॥122॥ ಅಥವಾ ಸ್ವಯಂ ಸಾಯಿಯವರೇ ಆ ಪಾತ್ರಗಳಲ್ಲಿ ನಟಿಸಿ ತಮ್ಮ ಭಕ್ತರ ಕಲ್ಯಾಣ ಉಂಟುಮಾಡುತ್ತಾರೆ. ಮತ್ತು ಅವರಿಗೆ ಪರಮಾರ್ಥದ ಶಿಕ್ಷಣ ನೀಡುತ್ತಾರೆ. ॥123॥ ಶ್ರೋತೃಗಳು ಇದಕ್ಕೆ ನಿದರ್ಶಕವಾದ ಒಂದು ಸಣ್ಣ ಕಥೆಯನ್ನು ಕೇಳಿರಿ. ಆಗ ಸಂತರು ಯಾವ ರೀತಿ ಇನ್ನಿತರ ಸಂತರನ್ನು ಅರ್ಥಮಾಡಿಕೊಳ್ಳುತ್ತಾರೆ, ಅವರ ಇಂಗಿತವನ್ನು ಮಾತುಗಳ ಪ್ರಯೋಗವಿಲ್ಲದೆಯೇ ಅರಿಯುತ್ತಾರೆ ಎಂಬುದು ತಿಳಿಯುತ್ತದೆ. ॥124॥ ಒಮ್ಮೆ ಗೋದಾವರಿಯ ತೀರದಲ್ಲಿ ರಾಜಮಹೇಂದ್ರಿ ಎಂಬ ಪ್ರಖ್ಯಾತ ನಗರಿಯಲ್ಲಿ ಶ್ರೀವಾಸುದೇವ ಆನಂದನು ಬೀಡುಬಿಟ್ಟನು. ಅವನ ಕುಲದ ಹೆಸರು 'ಸರಸ್ವತಿ' ಎಂದು. ॥125॥ ಅವನು ಮಹಾನರಲ್ಲಿ ಅತಿ ಮಹಾನನೂ, ಅಂತರ್ಜ್ಞಾನಿಯೂ, ಕರ್ಮಮಾರ್ಗದ ಕಟ್ಟಾ ಅಭಿಮಾನಿಯೂ ಆಗಿದ್ದನು. ಅವನ ಕೀರ್ತಿಯು ಗಂಗೆಯ ರೀತಿಯಲ್ಲಿ ಅಖಂಡವಾಗಿಯೂ ಈ ಮಹೀತಲದಲ್ಲೇ ವ್ಯಾಪಿಸಿತ್ತು. ॥126॥ ಅವನ ಬಗ್ಗೆ ಕಿವಿಯಿಂದ ಕಿವಿಗೆ ಬಂದ ಮಾತಿನಿಂದ ಅರಿತ ಪುಂಡಲೀಕರಾವ್ ಮತ್ತಿತರರು, ನಾಂದೇಡಿನನಿವಾಸಿಗಳು ಅವನ ದರ್ಶನಮಾಡಲು ದೃಢವಾದ ನಿರ್ಧಾರ ಮಾಡಿದರು. ॥127॥ ಹೇಗಾದರೂ, ಅನಂತರ ಇಡೀ ಗುಂಪು ನಾಂದೇಡನ್ನುಬಿಟ್ಟು ರಾಜಮಹೇಂದ್ರಿಯ ಗೋದಾವರಿ ತೀರದಲ್ಲಿ ಪ್ರಾತಃಕಾಲದಲ್ಲಿ ಸ್ವಾಮಿಯ ದರ್ಶನಕ್ಕಾಗಿ ಬಂದು ತಲುಪಿದರು. ॥128॥ ಅದೊಂದು ಸುಪ್ರಭಾತ ಮಂಗಳ ಸಮಯವಾಗಿದ್ದು, ನಾಂದೇಡಿನ ಸಮಸ್ತ ಜನಸಮೂಹವು ಸ್ನಾನಕ್ಕೆಂದು ಗಂಗಾತೀರಕ್ಕೆ ಸ್ತೋತ್ರ ಪಾಠಮಾಡುತ್ತ ತೆರಳಿದರು. ॥19॥ ಸ್ವಾಮಿಯು ಅಲ್ಲಿ ಕುಳಿತಿರುವುದನ್ನು ನೋಡಿದ ಜನ ಸಮೂಹವು ಸದ್ಭಾವಯುಕ್ತರಾಗಿ ಸಾಷ್ಟಾಂಗ ಪ್ರಣಾಮಮಾಡಿದರು. ಸಹಜವಾದ ಕುಶಲೋಪರಿಸಂಭಾಷಣೆಯಲ್ಲಿ ಶಿರಡಿಯ ವಿಷಯವೂ ಬಂದಿತು. ॥130॥ ಸಾಯಿಯ ಹೆಸರು ಕಿವಿಯ ಮೇಲೆ ಬೀಳುತ್ತಲೇ ಸ್ವಾಮಿಯು ತಮ್ಮ ಕೈಗಳನ್ನು ಜೋಡಿಸಿ ವಂದಿಸುತ್ತ ಹೇಳಿದರು. "ಅವನು ನನ್ನ ಸೋದರ, ಆಶಾರಹಿತನು. ಅವನ ಮೇಲೆ ನನಗೆ ನಿಸ್ಸೀಮ ಪ್ರೇಮ." ॥131॥ ಅಲ್ಲಿಂದ ಒಂದು ತೆಂಗಿನಕಾಯಿಯನ್ನು ಎತ್ತಿಕೊಂಡು ಪುಂಡಲೀಕರಾವನಿಗೆ ಕೊಡುತ್ತ ಹೇಳಿದರು, "ನೀನು ಶಿರಡಿಗೆ ಹೋದಾಗ ನನ್ನ ಸೋದರನ ಚರಣಕಮಲಗಳಿಗೆ ವಂದಿಸಿದಾಗ ಈ ಶ್ರೀಫಲವನ್ನು

ಅವರಿಗೆ ಅರ್ಪಿಸು. ॥132॥ "ಅವನಿಗೆ ನನ್ನ ನಮಸ್ಕಾರಗಳನ್ನು ತಿಳಿಸು ಮತ್ತು ಈ ದೀನನ ಮೇಲೆ ಕೃಪೆತೋರುವಂತೆ ಪ್ರಾರ್ಥಿಸು ನನ್ನನ್ನು ಮರೆಯಬೇಡ ಮತ್ತು ನನ್ನ ಮೇಲಿನ ನಿನ್ನ ಪ್ರೀತಿ ನಿರಂತರವಾಗಿ ವೃದ್ಧಿಯಾಗಲಿ. ॥133॥ "ಶಿರಡಿಗೆ ಹೋದಾಗ ಇವನ್ನು ನನ್ನ ಸೋದರನಿಗೆ ಆದರ ಪೂರ್ವಕವಾಗಿ ಮರೆಯದೆ ಅರ್ಪಿಸು" ಎಂದು ಮತ್ತೆ ಮತ್ತೆ ಹೇಳಿದರು. ॥134॥ "ನಾವಾದರೋ ಸ್ವಾಮಿಗಳು. ನಿಬಂಧನೆಗಳಿಗನುಗುಣವಾಗಿ ಬೇರೆಯಾರಿಗೂ ವಂದಿಸುವಂತಿಲ್ಲ. ಆದರೆ ಈ ನಿಯಮವನ್ನು ಈ ಪ್ರಸಂಗದಲ್ಲಿ ಉಲ್ಲಂಘಿಸಿದಲ್ಲಿ ಅದು ಕಲ್ಯಾಣಕಾರಿಯಾಗಿಯೇ ಇರುತ್ತದೆ. ॥135॥ "ಆದ್ದರಿಂದ, ನೀನು ಸಾಯಿಯ ದರ್ಶನ ತೆಗೆದುಕೊಂಡಾಗ ಈ ವಿಷಯವನ್ನು ಮರೆಯಬೇಡ. ಸಾಯಿಚರಣಗಳಲ್ಲಿ ಈ ಶ್ರೀಫಲವನ್ನು ಮರೆಯದೆ ಸಮರ್ಪಿಸು." ॥136॥ ಸ್ವಾಮಿಯವರ ಈ ಮಾತುಗಳನ್ನು ಕೇಳಿ, ಪುಂಡಲೀಕರಾವನು ಅವರ ಚರಣಗಳಿಗೆ ವಂದಿಸುತ್ತ ಹೇಳಿದನು, "ನಾನು ಸ್ವಾಮಿಗಳ ಅನುಜ್ಞೆಯಂತೆಯೇ ಮಾಡುತ್ತೇನೆ. ॥137॥ "ನಾನು ನಿಮ್ಮ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸ್ತೇನೆ. ಮತ್ತು ಈ ಸೇವಾವಕಾಶಕ್ಕಾಗಿ ನಾನು ಧನ್ಯನೆಂದೇ ಭಾವಿಸುತ್ತೇನೆ." ಈರೀತಿ ಪುಂಡಲೀಕರಾವನು ಸ್ವಾಮಿಗೆ ಅನನ್ಯ ಶರಣಾಗಿ ಅಲ್ಲಿಂದ ಹೊರಟನು. ॥138॥ ಸ್ವಾಮಿಯು ಬಾಬಾರವರನ್ನು ತಮ್ಮ ಸೋದರನೆಂದು ಕರೆದಾಗ ಅದು ಅರ್ಥಹೀನವಾಗಿತ್ತೇನು? ಬಾಬಾರವರು ಶೃತಿಗಳಲ್ಲಿ ಹೇಳಿದರೀತಿಯಲ್ಲಿ ಅಗ್ನಿಹೋತ್ರಿಯಂತೆ ಬೆಳಗ್ಗೆ ಮತ್ತು ಸಂಜೆ ಅಗ್ನಿಗೆ ಆಹುತಿಗಳನ್ನು ಅರ್ಪಿಸುತ್ತಿದ್ದರು. ॥139॥ ಜನರು 'ಧುನಿ'ಯೆಂದು ಕರೆಯುತ್ತಿದ್ದ, ಅಗ್ನಿಯು ಬಾಬಾರವರ ಎದುರಿಗೆ ಸದಾಕಾಲ ಹಗಲು, ರಾತ್ರಿ ಉರಿಯುತ್ತಿತ್ತು. ಇದು ಬಾಬಾರವರ ವ್ರತವಾಗಿತ್ತು. ॥140॥ ಅಗ್ನಿಹೋತ್ರ ಮತ್ತಿತರ ಕರ್ಮಗಳು ಚಿತ್ತಶುದ್ಧಿಕಾರಕವಾದ ಸಾಧನಗಳಾಗಿವೆ. ಬ್ರಹ್ಮತ್ವವನ್ನು ಪಡೆಯುವ ಸಾಧನವನ್ನಾಗಿ ಅದನ್ನು ಜನರು ಆಚರಿಸಲೆಂದು ಬಾಬಾರವರು ಈ ರೀತಿ ವರ್ತಿಸಿದರು. ॥141॥ ಶ್ರೀವಾಸುದೇವಾನಂದ ಸರಸ್ವತಿಯವರು ಒಬ್ಬ ಸನ್ಯಾಸಿಯಾಗಿದ್ದು ಇದೇ ರೀತಿಯ ಅಗ್ನಿಹೋತ್ರಿಯ ವ್ರತದ ಆಚರಣೆಮಾಡುತ್ತಿದ್ದರು. ಬಾಬಾರವರನ್ನು ತಮ್ಮ ಸೋದರನೆಂದು ಕರೆದರೆ ಆಶ್ಚರ್ಯವೇನು? ಅವರು ವ್ಯರ್ಥವಾಗಿ ನುಡಿಯುವರೇನು? ॥142॥ ಅನಂತರ, ಒಂದು ತಿಂಗಳಿಗೂ ಮುಂಚೆಯೇ, ಪುಂಡಲೀಕರಾವನಿಗೆ ತನ್ನ ನಾಲ್ವರು ಮಿತ್ರರ ಜೊತೆ ಸಾಯಿ ದರ್ಶನಕ್ಕೆ ಹೊರಡುವ ಅವಕಾಶ ದೊರಕಿತು. ॥143॥ ಅವನು ತನ್ನ ಸಾಮಾನುಗಳನ್ನು ವಿಧವಿಧವಾದ ಹಣ್ಣುಗಳನ್ನು ಮತ್ತು ಎಚ್ಚರಿಕೆಯಿಂದ ನೆನಪಿಸಿಕೊಂಡ ತೆಂಗಿನಕಾಯಿಯ ಸಮೇತ ಹೊರಟನು. ಅವರೆಲ್ಲರೂ ಸಾಯಿ ದರ್ಶನಕ್ಕೆಂದು ಸಂತೋಷದಿಂದ ಅವಿಕಲ ಮನಸ್ಥಿತಿಯಿಂದ ಹೊರಟರು. ॥144॥ ಅನಂತರ ಅವರು ಮನಮಾಡ್‌ನಲ್ಲಿ ಇಳಿದರು. ಅಲ್ಲಿ ಕೋಪರಗಾಂವಕ್ಕೆ ರೈಲುಗಾಡಿ ಹೊರಡಲು ಇನ್ನೂ ಸ್ವಲ್ಪ ಸಮಯವಿತ್ತು. ಅವರಿಗೆ ತುಂಬಾ ಬಾಯಾರಿಕೆಯಾಗಿದ್ದರಿಂದ ಹತ್ತಿರವಿದ್ದ ಒಂದು ತೊರೆಯ ಬಳಿಗೆ ಹೋದರು. ॥145॥ ಖಾಲಿ ಹೊಟ್ಟೆಯಲ್ಲಿ ನೀರನ್ನು ಕುಡಿಯುವುದು ದೇಹಕ್ಕೆ ಹಾನಿಕಾರಕವಾದ್ದರಿಂದ ಒಂದು ಸಣ್ಣ ಹಿಡಿ ಅವಲಕ್ಕಿಯನ್ನು ಒಂದು

ಬಟ್ಟೆಯ ಮೂಲೆಯಲ್ಲಿ ಕಟ್ಟಿ ಹಗುರವಾದ ಉಪಾಹಾರಕ್ಕಾಗುತ್ತದೆಂದು ತೆಗೆದುಕೊಂಡು ಹೊರಟರು. ॥146॥ ಒಂದು ಚಿಟಿಕೆ ಅವಲಕ್ಕಿಯನ್ನು ಬಾಯಲ್ಲಿ ಹಾಕಿಕೊಂಡಾಗ ಅದು ಬಹಳ ಖಾರವಾಗಿತ್ತು, ತೆಂಗಿನಕಾಯಿಯಿಲ್ಲದೆ ಅವಲಕ್ಕಿಯು ನಿರುಪಯುಕ್ತವಾಗಿತ್ತು, ಪ್ರಯತ್ನವೆಲ್ಲವೂ ನಿರರ್ಥಕವೆನಿಸಿತು. ॥147॥ ಅನಂತರ ಅವರಲ್ಲೊಬ್ಬನು ಇತರರಿಗೆ ತಿಳಿಸಿದನು. "ನನಗೆ ಒಂದು ಯುಕ್ತಿಯ ನೆನಪಾಯಿತು. ತೆಂಗಿನಕಾಯಿಯನ್ನು ಒಡೆದು ಅವಲಕ್ಕಿ ಜೊತೆ ಕಲಸಿ. ಆಗ ಅವಲಕ್ಕಿಯ ರುಚಿನೋಡಿ." ॥148॥ ತೆಂಗಿನಕಾಯಿ ಹೆಸರು ಹೇಳುತ್ತಲೇ ಅದು ಕೈಯಲ್ಲಿ ತಯಾರಾಗಿ ಬಂದಿತು. ಅದನ್ನು ಒಡೆಯಲು ತಡವಾಗಲಿಲ್ಲ. ಅದನ್ನು ಅವಲಕ್ಕಿ ಜೊತೆಯಲ್ಲಿ ಬೆರೆಸಲು ರುಚಿಯು ಹೆಚ್ಚಾಯಿತು. ಅನಂತರ ಅವರು ನೀರನ್ನು ಕುಡಿದರು. ॥149॥ ತೆಂಗಿನ ಕಾಯಿ ಯಾರದ್ದು ಎಂದು ಯಾರೂ ಕೇಳಲಿಲ್ಲ. ಹಸಿವೆಯು ಅದೆಷ್ಟು ಮಿತಿಮೀರಿತ್ತೆಂದರೆ ಅವರೆಲ್ಲರೂ ಅದನ್ನು ಮರೆತುಹೋದರು. ॥150॥ ಅದು ಹೇಗಿದೆಯೋ ಹಾಗೆಯೇ ಇರಲಿ. ಅವರು ರೈಲುಗಾಡಿಯಲ್ಲಿ ಕುಳಿತು ಕೋಪರಗಾಂವಗೆ ಹೊರಟು ತಮ್ಮ ಮುಂದಿನ ಗಮ್ಯಸ್ಥಾನವನ್ನು ತಲುಪಿದರು. ಮಾರ್ಗದಲ್ಲಿ ಪುಂಡಲೀಕರಾವನು ಆ ನಿರ್ದಿಷ್ಟ ತೆಂಗಿನ ಕಾಯಿಯನ್ನು ನೆನಪಿಸಿಕೊಂಡನು. ॥151॥ ಶಿರಡಿಯು ಹತ್ತಿರವಾದುದನ್ನು ನೋಡಿ ಪುಂಡಲೀಕರಾವನು ಮನದಲ್ಲಿ ತಳಮಳಗೊಂಡನು. ವಾಸುದೇವ ಆನಂದರು ಕೊಟ್ಟ ತೆಂಗಿನಕಾಯಿಯನ್ನು ಅವಲಕ್ಕಿ ಜೊತೆ ಬೆರೆಸಿತಿಂದುದು ದೊಡ್ಡ ತಪ್ಪು ಎಂದು ಅರಿವಾಯಿತು. ॥152॥ ಆ ತೆಂಗಿನ ಕಾಯಿಯನ್ನು ಒಡೆಯಲಾಗಿದೆಯೆಂದು ತಿಳಿದ ಪುಂಡಲೀಕನು ಭಯಗೊಂಡನು. ಅವನ ದೇಹವು ನಡುಗಿತು. ಅವನು ಸಂತರಿಗೆ ಅಪಚಾರ ಮಾಡಿದ್ದನು. ॥153ಅವನು ಬಹು ಸಂತಾಪಗೊಂಡನು. ಅವನು ಎಂಥಾ ಪಾಪಮಾಡಿದ್ದನು! ಅವನು ಸ್ವಾಮಿಯ ಶಾಪವನ್ನು ಸಂಪಾದಿಸಿಕೊಂಡಿದ್ದನು. ತೀರ ತಡವಾಗಿ ಅದಕ್ಕಾಗಿ ಪ್ರಲಾಪಿಸುವುದು ವ್ಯರ್ಥ! ॥154॥ ತೆಂಗಿನ ಕಾಯಿಯ ಈ ರೀತಿಯ ಉಪಯೋಗ ಒಂದು ಬಲೆಯೇ ಆಗಿತ್ತು. ಪುಂಡಲೀಕರಾವನ ಮನಸ್ಸು ವಿಸ್ಮಯದಿಂದ ತಟಸ್ಥವಾಯಿತು. ॥155॥ 'ಈಗ ನಾನು ಬಾಬಾರವರಿಗೆ ಏನನ್ನು ಸಮರ್ಪಿಸಲಿ? ಅವರಿಗೆ ಯಾವ ರೀತಿ ಇದನ್ನು ವಿವರಿಸಲಿ ಅವರಿಗೆ ನನ್ನ ಮುಖ ಹೇಗೆ ತೋರಿಸಲಿ! ಆ ಶ್ರೀಫಲವನ್ನು ಮತ್ತೆ ಹಿಂದಕ್ಕೆ ತರಲಾಗದ ಸ್ಥಿತಿಯುಂಟಾಗಿದೆ!' ॥156॥ ಪುಂಡಲೀಕರಾವನು ಸಾಯಿಯ ಚರಣಕ್ಕೆ ಸಮರ್ಪಿಸಬೇಕಾಗಿದ್ದುದನ್ನು ಉಪಹಾರಕ್ಕಾಗಿ ಉಪಯೋಗಿಸಿದ್ದರ ಬಗ್ಗೆ ಯೋಚಿಸಿ ಬಹಳ ಖಿನ್ನನಾದನು. ಅವನು ಹೇಳಿದನು, "ಇದು ಸಂತರಿಗೆ ಮಾಡಿದ ಅಪಮಾನ" ॥157॥ ಈಗ, ಬಾಬಾರವರು ಶ್ರೀಫಲವನ್ನು ಕೇಳಿದರೆ, ಎಲ್ಲರೂ ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ, ಮನಮಾಡ್‌ನಲ್ಲಿ ಅದನ್ನು ಫಲಾಹಾರಕ್ಕಾಗಿ ಉಪಯೋಗಿಸಿಯಾಗಿದೆ. ॥158॥ ಆ ದಿನ ಅವರ ಹತ್ತಿರ ತೆಂಗಿನಕಾಯಿಯು ಇಲ್ಲವೆಂದು ಹೇಳಲು ನಾಚಿಕೆಯಾಗುತ್ತದೆ. ಒಂದು ಸುಳ್ಳು ಹೇಳಿದರೆ ಯಾವ ಪ್ರಯೋಜನವೂ ಇರಲಿಲ್ಲ, ಏಕೆಂದರೆ ಸಾಯಿ ಮಹಾರಾಜರು ಸರ್ವಸಾಕ್ಷಿಯಾಗಿದ್ದರು. ॥159॥ ಅದು

ಹಾಗಿರಲಿ, ಇಡೀ ಸಮೂಹವು ಸಾಯಿಯ ದರ್ಶನ ಮಾಡಿ ಸುಖಸಂಪನ್ನವಾಯಿತು. ಕಣ್ಣುಗಳು ಆನಂದಾಶ್ರುಗಳಿಂದ ತುಂಬಿತು. ಮುಖವು ಪ್ರಸನ್ನತೆಯಿಂದ ತುಂಬಿತು. ॥160॥ ಈಗಿನ ದಿನಗಳಲ್ಲಿ ನಾವು ತಂತಿರಹಿತ ಸಂದೇಶಗಳನ್ನು ಹಗಲು – ರಾತ್ರಿ ಕಳುಹಿಸುತ್ತೇವೆ. ಅದಕ್ಕಾಗಿ ಅಭಿಮಾನವಶರಾಗಿ ಹೆಮ್ಮೆಪಡುತ್ತಿದ್ದೇವೆ. ॥161॥ ಅದಕ್ಕಾಗಿ ಅನೇಕ ಕಟ್ಟಡಗಳನ್ನು ಕಟ್ಟಬೇಕಾಗುತ್ತದೆ. ಅಪಾರ ಹಣ ಖರ್ಚು ಮಾಡಬೇಕಾಗುತ್ತದೆ. ಆದರೆ ಸಂತರಿಗೆ ಈ ರೀತಿಯ ಯಾವ ಸಾಧನಗಳ ಅವಶ್ಯಕತೆಯೂ ಇರುವುದಿಲ್ಲ ಅವರು ಮನಸ್ಸಿನ ಭಾವನಾತ್ಮಕತರಂಗಗಳಿಂದಲೇ ಸಂದೇಶಗಳನ್ನು ಕಳಿಸುವರು. ॥162॥ ಸ್ವಾಮಿಯು ಪುಂಡಲೀಕರಾವ್‌ನಿಗೆ ತೆಂಗಿನ ಕಾಯಿಯನ್ನು ಕೊಟ್ಟ ಸಮಯದಲ್ಲೇ ಅವನು ಆಗಲೇ ಸಾಯಿನಾಥರಿಗೆ ಸಂದೇಶವನ್ನು ಭಾವತರಂಗಗಳ ಮೂಲಕ ಕಳುಹಿಸಿದ್ದನು. ॥163॥ ಪುಂಡಲೀಕರಾವ್‌ನು ದರ್ಶನ ತೆಗೆದುಕೊಳ್ಳುತ್ತಿರುವಾಗ ಸಾಯಿಬಾಬಾರವರು ತಾವಾಗಿಯೇ ಕೇಳಿದರು "ನನ್ನ ಸೋದರನಿಂದ ತೆಗೆದುಕೊಂಡು ಬಂದ ವಸ್ತುವನ್ನು ತಂದುಕೊಡು." ॥164॥ ಆಗ ಖಿನ್ನನಾದ ಪುಂಡಲೀಕರಾವ್‌ನು ಶ್ರೀ ಬಾಬಾರವರ ಚರಣಗಳನ್ನು ಹಿಡಿದು ಹೇಳಿದನು, "ನಿಮ್ಮ ಕ್ಷಮೆ ಬೇಡುವುದರ ಹೊರತು ನಾನು ಏನು ಹೇಳಲಿ? ॥165॥ "ನಾನು ತೆಂಗಿನಕಾಯಿಯನ್ನು ಜ್ಞಾಪಿಸಿಕೊಂಡೆ. ಆದರೆ ನಮ್ಮ ಹಸಿವನ್ನು ತೃಪ್ತಿ ಪಡಿಸಲು ತೊರೆಯ ಹತ್ತಿರ ಹೋದಾಗ ಎಲ್ಲರೂ ಮರೆತು ಹೋದೆವು. ॥166॥ "ಅಲ್ಲಿ ನಾವು ಲಘು ಉಪಹಾರಕ್ಕಾಗಿ ಅವಲಕ್ಕಿಯನ್ನು ಮಾಡುವಾಗ ಈ ತೆಂಗಿನಕಾಯಿಯನ್ನೇ ಒಡೆದು ಮಿಶ್ರಮಾಡಿದೆವು. ಆದ್ದರಿಂದ ನಾನು ಮತ್ತೊಂದು ಶ್ರೀಫಲವನ್ನು ತರುತ್ತೇನೆ. ಅದನ್ನು ದಯವಿಟ್ಟು ಹಿಂಜರಿಯದೆ ಸ್ವೀಕರಿಸಿರಿ." ॥167॥ ಈ ರೀತಿ ಹೇಳುತ್ತ ಪುಂಡಲೀಕರಾವ್‌ನು ಶ್ರೀಫಲವನ್ನು ತರಲು ಎದ್ದನು. ಸಾಯಿಮಹಾರಾಜರು ಅವನ ಕೈಹಿಡಿದು ಹೋಗುವುದನ್ನು ತಡೆದರು. ಇದನ್ನು ಅಲ್ಲಿದ್ದ ಇತರರು ಗಮನಿಸಿದರು. ॥168॥ "ತಿಳಿಯದೆಯೇ ನಾನು ವಿಶ್ವಾಸಘಾತವನ್ನು ಮಾಡಿದೆ. ನೀವಾದರೋ ಕೃಪಾಳು. ನನಗೆ ನಿಮ್ಮಲ್ಲಿ ಆಶ್ರಯ ನೀಡಿ. ನನ್ನನ್ನು ಕ್ಷಮಿಸಿರಿ. ಹೇ ಕೃಪಾವಂತನೇ! ನಾನು ಪೂರ್ಣವಾಗಿ ಅಪರಾಧಿ. ॥169॥ "ನಾನು ಸಜ್ಜನ ಸಾಧುಗಳಾದ ಸ್ವಾಮಿಯವರ ಮಾತುಗಳನ್ನು ಕಡೆಗಣಿಸಿದ್ದೇನೆ. ತಮಗೆ ಅರ್ಪಿಸಬೇಕಾದ ಫಲವನ್ನು ನಾನು ತಿಂದಿರುವೆನು. ॥170॥ "ಇದು ಒಬ್ಬ ಸಂತರನ್ನು ಅತಿಕ್ರಮಣ ಮಾಡಿದಂತೆ. ಈ ಪಾಪವನ್ನು ಪರಿಹರಿಸಲು ಏನಾದರೂ ಉಪಾಯವಿದೆಯೇ? ನಾನು ಅದೆಷ್ಟು ನಿರ್ಲಜ್ಜನಾಗಿದ್ದೇನೆ!" ॥171॥ ಅನಂತರ, ನಡೆದ ಘಟನೆಯನ್ನು ಆಲಿಸಿದ ಶ್ರೀಸಾಯಿನಾಥರು ನಗುತ್ತ ಹೇಳಿದರು, "ನೀನು ತೆಂಗಿನಕಾಯಿಯನ್ನು ಜವಾಬ್ದಾರಿಯಿಂದ ತರಲಾಗದಿದ್ದಲ್ಲಿ ಅದನ್ನೇಕೆ ತೆಗೆದುಕೊಂಡೆ! ॥172॥ "ನನ್ನ ಸೋದರನಿಗೆ ನಿನ್ನ ಮಾತುಗಳಲ್ಲಿ ಅಗಾಧವಾದ ನಂಬಿಕೆ ಇತ್ತು. ಆ ವಸ್ತುವನ್ನು ನೀನು ನನಗೆ ಕೊಡುವೆಯೆಂಬ ನಿಶ್ಚಲವಾದ ನಂಬಿಕೆ ಇತ್ತು. ॥173॥ "ಅದರ ಪರಿಣಾಮ ಏನಾಯಿತು? ಇದು ನಿನ್ನ ಮೇಲಿನ ವಿಶ್ವಾಸಕ್ಕೆ ಬೆಲೆಯೇನು? ನನ್ನ ಸೋದರನ ಇಚ್ಛೆಯು ಪೂರ್ಣವಾಗದಾಯಿತು. ಇದು ನೀನು

ಕೆಲಸಮಾಡುವ ಪರಿಯೇನು?" ॥174॥ ಮತ್ತೆ ಹೇಳಿದರು, " ಆ ಫಲದ ಯೋಗ್ಯತೆಯನ್ನು ಬೇರೆ ಮತ್ತೆಷ್ಟು ಕೊಟ್ಟರೂ ಹೋಲಿಸಲು ಸಾಧ್ಯವಿಲ್ಲ! ಅದೇನು ನಡೆಯಬೇಕಿತ್ತೋ ನಡೆದುಹೋಗಿದೆ. ಅನವಶ್ಯಕವಾಗಿ ಅದರ ಬಗ್ಗೆ ಏಕೆ ಗಾಢವಾಗಿ ಚಿಂತಿಸಬೇಕು? ॥175॥ "ಅದು ಕೇವಲ ನನ್ನ ಸಂಕಲ್ಪದಿಂದಲೇ ಸ್ವಾಮಿಯು ನಿನಗೆ ತೆಂಗಿನಕಾಯಿಯನ್ನು ಕೊಟ್ಟನು. ಮತ್ತು ನನ್ನ ಸಂಕಲ್ಪದಿಂದಾಗಿಯೇ ಅದು ಒಡೆಯಲ್ಪಟ್ಟಿತು. ನೀನು ಅನವಶ್ಯಕವಾಗಿ ಅದರ ಕರ್ತೃತ್ವವನ್ನೇಕೆ ತೆಗೆದುಕೊಳ್ಳುವೆ? ॥176॥ "ನಿನ್ನ ಬುದ್ಧಿಯು ಅಹಂಭಾವದಿಂದ ತುಂಬಿರುವುದರಿಂದಲೇ ನೀನು ಮನದಲ್ಲಿಯೇ ಅಪರಾಧಿ ಭಾವವನ್ನು ಹೊಂದಿರುವೆ. ಕೇವಲ ನಿರಹಂಕರ್ತೃತ್ವವನ್ನು ಹೊಂದಿರು. ಎಲ್ಲಾ ತಪ್ಪು ಭಾವನೆಯು ಹೊರಟುಹೋಗುತ್ತದೆ. ॥177॥ "ಒಳ್ಳೆಯ ಅಥವಾ ಪುಣ್ಯದ ಕೆಲಸ ಮಾಡಲು ಅಭಿಮಾನವೇಕೆ ಬೇಕು? ಪಾಪದಿಂದ ಏಕೆ ದೂರವಾಗಬೇಕು? ಎರಡರ ಪರಿಣಾಮವೂ ಒಂದೇ! ಆದ್ದರಿಂದ ನಿರಭಿಮಾನದಿಂದ ವರ್ತಿಸು. ॥178॥ "ನೀನು ನನ್ನನ್ನು ಭೇಟಿಯಾಗಲಿ ಎನ್ನಿಸಿತು. ಆದ್ದರಿಂದ ತೆಂಗಿನಕಾಯಿಯನ್ನು ನಿನ್ನ ಕೈಗಳಿಗೆ ಒಪ್ಪಿಸಲಾಯಿತು. ಇದೇ ನಿಜವಾದ ಸತ್ಯ, ಸತ್ಯ, ಸತ್ಯ! ॥179॥ "ಅದೂ ಅಲ್ಲದೆ ನೀವೆಲ್ಲರೂ ನನ್ನ ಮಕ್ಕಳು. ನೀವು ತಿಂದ ಶ್ರೀಫಲವು ನನಗೆ ಸಮರ್ಪಿಸಿದಂತೆಯೇ ಆಯಿತು. ಅದನ್ನು ನಿಶ್ಚಿತವಾಗಿಯೂ ನಾನೇ ಸ್ವೀಕರಿಸಿದ್ದೇನೆಂದು ನಂಬಿಕೊಳ್ಳಿರಿ." ॥180॥ ಯಾವಾಗ ಪುಂಡಲೀಕರಾವನು ಇದನ್ನು ಅರ್ಥಮಾಡಿಕೊಂಡನೋ ಆಗ ಅವನ ಮನಸ್ಸು ಸಾಯಿಯ ವಚನಗಳಿಂದಾಗಿ ಶಾಂತವಾಯಿತು ಮತ್ತು ಅವನ ಉದ್ವಿಗ್ನತೆಯೂ ಕ್ರಮಕ್ರಮೇಣ ಕರಗಿ ಹೋಯಿತು. ॥181॥ ತೆಂಗಿನ ಕಾಯಿಯ ನಷ್ಟವು ಒಂದು ಕೇವಲ ನಿಮಿತ್ತ ಮಾತ್ರ, ಉಪದೇಶದಿಂದ ಉದ್ವಿಗ್ನವಾದ ಮನಸ್ಸನ್ನು ಶಾಂತಗೊಳಿಸಲಾಯಿತು. ಈ ರೀತಿ ಅಹಂಕಾರಭರಿತರಾದ ಅವರೆಲ್ಲರೂ ಅಭಿಮಾನ ನಿರ್ಮುಕ್ತರಾಗಿ ದೋಷಮುಕ್ತರಾದರು. ॥182॥ ಈ ಕಥೆಯ ಸಾರವೆಂದರೆ, ಯಾರ ಮನಸ್ಸು ನಿರಹಂಕಾರ ವೃತ್ತಿಯಿಂದ ಇದೆಯೋ ಅವರೆಲ್ಲರೂ ಪರಮಾರ್ಥಕ್ಕೆ ಅಧಿಕಾರಿಗಳಾಗಿ ಸಹಜವಾಗಿಯೇ ಭವಸಾಗರವನ್ನು ದಾಟಬಲ್ಲವರಾದರು. ॥183॥ ಈಗ ಮೂರನೆಯ ಭಕ್ತನ ಮಧುರವಾದ ಮತ್ತು ಅದ್ಭುತವಾದ ಅನುಭವವನ್ನು ಕೇಳಿರಿ. ಇದು ಬಾಬಾರವರ ಅಮೂಲ್ಯವಾದ ವೈಭವ ಸಾಮರ್ಥ್ಯವೆರಡನ್ನೂ ಸೂಚಿಸುತ್ತದೆ. ॥184॥ ಬಾಂದ್ರಾ ತಾಲೂಕ್, ಬಾಂದ್ರಾ ನಗರದ ಉತ್ತರ ಭಾಗದ ಸಾಂತಾಕ್ರೂಜ್ ಎಂಬ ನಗರದಲ್ಲಿ 'ದುರಂಧರ' ಎಂಬ ಹರಿಭಕ್ತನೊಬ್ಬನಿದ್ದನು. ॥185॥ ಸಕಲ ಬಂಧುಗಳೂ ಸಂತ ಪ್ರೇಮಿಗಳಾಗಿದ್ದರು. ಅವರು ಶ್ರೀರಾಮನಲ್ಲಿ ಅತ್ಯಂತ ನಿಷ್ಠೆಯಿಟ್ಟಿದ್ದರು. ರಾಮನಾಮದಲ್ಲಿ ಅನನ್ಯ ಶ್ರದ್ಧೆಯಿಟ್ಟಿದ್ದರು. ಅವರು ಅನವಶ್ಯಕವಾಗಿ ಇತರರ ವಿಷಯದಲ್ಲಿ ಚೆಲ್ಲಾಟವಾಡಲು ಇಚ್ಛಿಸುತ್ತಿರಲಿಲ್ಲ. ॥186॥ ಅವರು ಸರಳ ಜೀವನ ನಡೆಸುತ್ತಿದ್ದರು. ಹಾಗೆಯೇ ಅವರ ಮಕ್ಕಳೂ ಸಹ. ಆ ಸಂಸಾರದ ಮಹಿಳೆಯರೂ ನಿರ್ದೋಷಿಗಳಾಗಿ ಆಚರಣೆ ಮಾಡುತ್ತಿದ್ದರು. ಆದ್ದರಿಂದ ಚಕ್ರಪಾಣಿಯು (ಭಗವಾನ್ ವಿಷ್ಣುವು) ಅವರಿಗೆ ಋಣಿಯಾಗಿದ್ದನು. ॥187॥ ಬಾಳಾರಾಮ ಎಂಬಾತ ಅವರಲ್ಲೊಬ್ಬನು.

ಅವನು ವಿಠಲನ ಭಕ್ತನಾಗಿಯೂ ಪುಣ್ಯ ಶ್ಲೋಕಿಯೂ ಆಗಿದ್ದನು. ಅವನನ್ನು ರಾಜದರಬಾರಿನಲ್ಲಿ ಗೌರವಿಸಲಾಗಿತ್ತು. ಅವನು ಎಲ್ಲರಿಗೂ ಮೆಚ್ಚಿನವನಾಗಿದ್ದನು. ॥188॥ ಸನ್ 1878ನೇ ಇಸವಿ ಫೆಬ್ರವರಿ 19ನೇ ತಾರೀಕಿನಂದು ಒಬ್ಬ ರಾಮಭಕ್ತೆಯ ಹೊಟ್ಟೆಯಲ್ಲಿ ಈ ರತ್ನವು ಜನಿಸಿತು. ॥189॥ ಅವನು ಪಾಠಾರೇ ಪ್ರಭು ಜಾತಿಗೆ ಆಭೂಷಣನಾಗಿದ್ದನು. ಅದೊಂದು ಪ್ರಸಿದ್ಧವಾದ ವಂಶದ ಕುಟುಂಬವಾಗಿತ್ತು.ಸನ್ 1878ರಲ್ಲಿ ಅವನು ಮುಂಬಯಿಯಲ್ಲಿ ಜನ್ಮತಾಳಿದ್ದನು. ॥190॥ ಅವನು ಪಾಶ್ಚಿಮಾತ್ಯ ಶಿಕ್ಷಣದಲ್ಲಿ ಪಾರಂಗತನಾಗಿದ್ದನು ಮತ್ತು ಪರಿಣಿತ ವಕೀಲನಾಗಿದ್ದನು. ಅವನು ತತ್ತ್ವಜ್ಞಾನದಲ್ಲಿ ನಿಷ್ಣಾತನಾಗಿದ್ದು ಎಲ್ಲೆಡೆ ವಿದ್ವಾಂಸನೆಂದು ವಿಖ್ಯಾತನಾಗಿದ್ದನು. ॥191॥ ಅವನಿಗೆ ಪಾಂಡುರಂಗನ ಮೇಲೆ ಅತಿಯಾದ ಪ್ರೇಮ. ಪರಮಾರ್ಥದ ಕಡೆ ಪರಮ ಒಲವು. ತಂದೆಯ ಆರಾಧ್ಯದೈವ ರಾಮನಾಗಿದ್ದರೂ ಪುತ್ರನ ನಿಜವಾದ ದೈವ ವಿಠಲನಾಗಿದ್ದನು. ॥192॥ ಎಲ್ಲ ಸೋದರರೂ ಪದವೀಧರರಾಗಿದ್ದು ಒಳ್ಳೆಯ ವೃತ್ತಿಗಳಲ್ಲಿದ್ದು ಧರ್ಮಪರರಾಗಿದ್ದರು. ಶುದ್ಧವಂಶದಲ್ಲಿ ಶುದ್ಧ ಸಂಸ್ಕಾರವೇ ಬರುತ್ತದೆ. ಅದರಲ್ಲಿಯೂ ಬಾಳಾರಾಮನು ಅಪೂರ್ವ ವ್ಯಕ್ತಿಯಾಗಿದ್ದನು. ॥193॥ ಅವನಿಗೆ ಸರಳ, ಶುದ್ಧ ವಿಚಾರ ಸರಣಿಯನ್ನು ಮಂಡಿಸುವ ಸಾಮರ್ಥ್ಯವಿತ್ತು, ಕುಶಾಗ್ರಬುದ್ಧಿಯುಳ್ಳವನಾಗಿ ಸದಾಚಾರ ಸಂಪನ್ನನಾಗಿದ್ದನು. ಈ ರೀತಿ ಅವನ ಗುಣಗಳು ಅನುಕರಣೀಯವಾಗಿದ್ದವು.॥194॥ ಅವನು ಸಮಾಜಸೇವೆಯಲ್ಲಿ ಪೂರ್ಣ ನಿರತನಾಗಿದ್ದು ಆ ಸಮಾಜ ವೃತ್ತಾಂತವನ್ನು ಬರೆದು ಪ್ರಕಟಿಸಿದನು. ತಾನು ಕೈಗೆತ್ತಿಕೊಂಡ ವ್ರತವು (ವೃತ್ತಿ) ಪೂರ್ಣವಾದ ನಂತರ ಪರಮಾರ್ಥವನ್ನು ಸಾಧಿಸಲು ನಿಶ್ಚಯಿಸಿದನು. ॥195॥ ಈ ಮಾರ್ಗದಲ್ಲಿಯೂ ಅವನು ಇತರರನ್ನು ಮೀರಿಸುವಂತಾದನು ಮತ್ತು ಭಗವದ್ಗೀತೆ ಮತ್ತು ಜ್ಞಾನೇಶ್ವರಿ ಗ್ರಂಥಗಳನ್ನು ಅಧ್ಯಯನ ಮಾಡಿ ಪ್ರಾವೀಣ್ಯತೆಯನ್ನು ಪಡೆದನು. ಅವನು ಆಧ್ಯಾತ್ಮವಿಷಯದಲ್ಲಿಯೂ ಹೆಸರುವಾಸಿಯಾದನು. ॥196॥ ಅವನು ಸಾಯಿಯ ಪರಮಭಕ್ತನಾಗಿದ್ದನು. ಅವನು ಸನ್ 1925ರಲ್ಲಿ ಚಿಕ್ಕವಯಸ್ಸಿನಲ್ಲಿಯೇ ಬ್ರಹ್ಮೀಭೂತನಾದನು. ಅವನ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಕೇಳಿ. ॥197॥ ಸನ್ 1925ನೆಯ ಇಸವಿ ಜೂನ್ ಮಾಹೆಯ 9ನೆಯ ತಾರೀಕಿನಲ್ಲಿ, ಈ ಲೋಕಯಾತ್ರೆಯನ್ನು ಮುಗಿಸಿ ವಿಠಲನಲ್ಲಿ ವಿಲೀನವಾದನು. ॥198॥ ಸನ್ 1912ನೆಯ ಇಸವಿಯಲ್ಲಿ ಒಂದು ಮಂಗಳ ದಿನದಲ್ಲಿ ಧುರಂಧರ ಸೋದರರಿಗೆ ಸಾಯಿ ದರಬಾರಿನಲ್ಲಿ ಸಂತ ದರ್ಶನದ ಯೋಗ ದೊರಕಿತು. ॥199॥ ಆರು ತಿಂಗಳುಗಳ ನಂತರ, ಅವನ ಹಿರಿಯ ಸೋದರ ಬಾಬುಲ್‌ಜಿಯು ವಾಮನರಾವ್‌ನ ಜೊತೆಯಲ್ಲಿ ಸಾಯಿ ದರ್ಶನ ತೆಗೆದುಕೊಂಡು ಆನಂದದಿಂದ ಹಿಂತಿರುಗಿದನು. ॥200॥ ಅವರು ಪಡೆದಂತಹ ಮಧುರ ಅನುಭವವನ್ನೇ ತಾವೂ ಪಡೆಯಬೇಕೆಂದು ಬಾಳಾರಾಮ ಮತ್ತಿತರರೆಲ್ಲರೂ ಈ ಅಪೂರ್ವ ದರ್ಶನ ಲಾಭಕ್ಕೆಂದು ಶಿರಡಿಗೆ ಹೋದರು. ॥201॥ ಇನ್ನೂ ಅವರು ತಲುಪುವ ಮೊದಲೇ ಬಾಬಾರವರು ಹೇಳಿದರು, "ಈ ದಿನ, ನನ್ನ ದರಬಾರಿನ ಅನೇಕ ಜನರು ಇಲ್ಲಿಗೆ ಬರುತ್ತಿದ್ದಾರೆ." ॥202॥ ಈ ಪ್ರೀತಿಯ ವಾರ್ತೆಯನ್ನು,

ಕೇಳಿ ದುರಂಧರ ಸೋದರರು ಬಹಳ ವಿಸ್ಮಯಗೊಂಡರು. ಏಕೆಂದರೆ ಅವರು ತಮ್ಮ ಶಿರಡಿಯಾತ್ರೆಯ ಬಗ್ಗೆ ಯಾರಿಗೂ ತಿಳಿಸಿರಲಿಲ್ಲ. ಅದರ ಬಗ್ಗೆ ಬಾಬಾರವರು ಹೇಗೆ ಅರಿತರು? ॥203॥ ಅನಂತರ ಸಾಯಿಯನ್ನು ದರ್ಶಿಸಿ ಓಡಿಬಂದು ಅವರ ಚರಣಗಳನ್ನು ತಬ್ಬಿಹಿಡಿದರು. ನಿಧಾನವಾಗಿ ಮಾತುಕತೆ ಪ್ರಾರಂಭವಾಯಿತು. ಮತ್ತು ಪ್ರತಿಯೊಬ್ಬರೂ ಸುಖ ಸಂತುಷ್ಟಿಯನ್ನು ಪಡೆದರು. ॥204॥ ಜೊತೆಗೆ, ಅಲ್ಲಿ ನೆರೆದ ಜನರನ್ನು ನೋಡಿ ಬಾಬಾರವರು ಮತ್ತೆ ನುಡಿದರು, "ನೋಡಿ, ಇವರೆಲ್ಲರೂ ನನ್ನ ದರಬಾರಿನ ಜನರು, ನಾನು ಅವರು ಬರುವ ಬಗ್ಗೆ ಆಗಲೇ ಹೇಳಿದ್ದೆನು." ॥205॥ ಬಾಬಾ ಇನ್ನು ಏನು ಹೇಳಿದರೆಂಬುದನ್ನು ಕೇಳಿರಿ. ಪ್ರತಿಶಬ್ದವೂ ಸತ್ಯವೇ. "ಹಿಂದಿನ 60 ಜನ್ಮಗಳಿಂದ ನಾವು ನೀವು ಪರಸ್ಪರ ಬಲ್ಲೆವು ಎಂಬುದನ್ನು ನೆನೆಸಿಕೊಳ್ಳಿರಿ." ॥206॥ ಬಾಳಾರಾಮ ಮತ್ತು ಸೋದರರು, ಎಲ್ಲರೂ ವಿನಯಸಂಪನ್ನರು. ಇಬ್ಬರೂ ಬಾಬಾರವರ ಸಮ್ಮುಖದಲ್ಲಿ ಕೈಜೋಡಿಸಿ ಅವರ ಚರಣಗಳಲ್ಲಿ ದೃಷ್ಟಿಯಿಟ್ಟು ನಿಂತರು. ॥207॥ ಶ್ರೀಸಾಯಿಯವರ ದರ್ಶನ ಮಾಡಿ ಬಾಳಾರಾಮ ಮತ್ತಿತರರು ಹರ್ಷದಲ್ಲಿ ಉಲ್ಲಾಸಯುಕ್ತರಾದರು. ಅತಿ ಭಕ್ತಿಯುತರಾಗಿ ಪ್ರೇಮಾವಸ್ಥೆಯಲ್ಲಿ ತಲ್ಲೀನರಾದರು. ಅವರು ತಮ್ಮ ಪ್ರಯತ್ನಪೂರ್ವಕ ಯಾತ್ರೆಯು ಸಾರ್ಥಕವಾಯಿತೆಂದು ಭಾವಿಸಿದರು. ॥208॥ ಕಣ್ಣುಗಳು ಅಶ್ರುಗಳಿಂದ ತುಂಬಿದವು. ಗಂಟಲುಗಳು ಭಾವೋದ್ವೇಗದಿಂದ ಉಬ್ಬಿಬಂದವು. ಅವರ ಶರೀರಗಳು ರೋಮಾಂಚನಗೊಂಡವು. ಎಲ್ಲಾ ಎಂಟುರೀತಿಯ ಸಾತ್ವಿಕ ಭಾವಗಳು ತುಂಬಿಬಂದವು. ॥209॥ ಬಾಳಾರಾಮನ ಅವಸ್ಥೆಯನ್ನು ನೋಡಿ ಸಾಯಿನಾಥರು ಆನಂದಗೊಂಡರು. ಅವರು ಎಲ್ಲರೊಡನೆ ಮಾತನಾಡಲು ಪ್ರಾರಂಭಿಸಿದರು. ಪ್ರೀತಿಯಿಂದ ಕಥೆಗಳನ್ನು ಹೇಳುತ್ತ ಉಪದೇಶ ನೀಡಲಾರಂಭಿಸಿದರು. ॥210॥ "ಯಾರು ಚಂದ್ರನು ವೃದ್ಧಿಯಾಗುವ ಶುಕ್ಲಪಕ್ಷದಲ್ಲಿ ನನ್ನನ್ನು ಭಜಿಸುವನೋ, ಪೂಜಿಸುವನೋ ಮತ್ತು ತಮ್ಮ ಪ್ರಿಯರಿಗೂ ಭಾವನೆಗಳನ್ನೆಲ್ಲ ಸಮರ್ಪಿಸುವನೋ ಅವನು ನಿಜವಾಗಿಯೂ ಧನ್ಯ! ॥211॥ "ಯಾರು ತಮ್ಮ ಮನದಲ್ಲಿ ದೃಢವಿಶ್ವಾಸದಿಂದ ತನ್ನ ಗುರುವಿನ ಸೇವೆಯಲ್ಲಿ ನಿರತನೋ ಅಂತಹವನಿಗೆ ಈಶ್ವರನು ಸದಾ ಋಣಿಯಾಗಿರುತ್ತಾನೆ. ಯಾರೂ ಅವನನ್ನು ವಕ್ರದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ. ॥212॥ ಯಾರು ಅರ್ಥಗಳಿಗೆಯನ್ನೂ ವ್ಯರ್ಥ ಮಾಡದೆ, ಗುರುವಿನ ಉಪಾಸನೆಯಲ್ಲಿ ಆಸಕ್ತನೋ, ಅವನಿಗೆ ಅವರು ಅನಂತ ಮತ್ತು ಶಾಶ್ವತ ಸುಖವನ್ನೊಯಪಾಲಿಸಿ, ಈ ಭವಸಾಗರವನ್ನು ದಾಟಿಸುತ್ತಾರೆ." ॥213॥ ಈ ಮಾತುಗಳನ್ನು ಕೇಳಿ ಎಲ್ಲರ ಕಣ್ಣುಗಳು ಆನಂದಾಶ್ರುಗಳಿಂದ ತುಂಬಿಬಂದವು. ಅವರ ಮನಸ್ಸು ಸುಪ್ರಸನ್ನವಾದವು. ಅವರ ಹೃದಯಗಳು ತುಂಬಿಬಂದವು. ॥214॥ ಈ ಸಾಯಿ ವಚನಗಳೆಂಬ ಪುಷ್ಪಮಾಲೆಯನ್ನು ಎಲ್ಲರೂ ಗೌರವದಿಂದ ಧರಿಸಿಕೊಂಡರು. ಎಲ್ಲರೂ ಹರ್ಷಗೊಂಡರು. ಆ ಕಾರಣದಿಂದಾಗಿಯೇ ಅವರೆಲ್ಲರೂ ಭಕ್ತಿಭಾವದಿಂದ ತುಂಬಿದರು. ॥215॥ ಅದು ಹಾಗಿರಲಿ. ಅವರೆಲ್ಲರೂ ಊಟವಾದ ಮೇಲೆ ವಾಡಾಗೆ ಹೋಗಿ ವಿಶ್ರಮಿಸಿದರು. ಮಧ್ಯಾಹ್ನದ ವೇಳೆ ಅವರು ಮತ್ತೆ ಹೋಗಿ ಬಾಬಾರವರ ಮುಂದೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿದರು.

॥216॥ ಬಾಳಾರಾಮನು ಅತ್ಯಂತ ವಿನಯಪೂರ್ವಕವಾಗಿ ಬಾಬಾರವರ ಚರಣಗಳನ್ನು ಒತ್ತಲು ಪ್ರಾರಂಭಿಸಿದನು. ಆಗ ಬಾಬಾರವರು ತಮ್ಮ ಚಿಲುಮೆಯನ್ನು ಅವನಿಗೆ ನೀಡಿ ಅದನ್ನು ಸೇದಲು ಸನ್ನೆಮಾಡಿದರು. ॥217॥ ಅನಂತರ, ಚಿಲುಮೆಯನ್ನು ಪ್ರಸಾದವೆಂದು ಪರಿಗಣಿಸಿ, ಅದನ್ನು ಸೇದುವ ಅಭ್ಯಾಸವಿಲ್ಲದಿದ್ದರೂ ಸಹ, ಬಾಳಾರಾಮನು ಕೆಲವು ದಮ್ಮುಗಳನ್ನು ಬಹಳ ಕಷ್ಟದಿಂದ ಎಳೆದನು ಮತ್ತೆಅದನ್ನು ಬಾಬಾರವರಿಗೆ ಹಿಂದಕ್ಕೆ ನೀಡಿ ಅವರಿಗೆ ಭಕ್ತಿಯಿಂದ ನಮಸ್ಕರಿಸಿದನು. ॥218॥ ಅದು ಬಾಳಾರಾಮನಿಗೆ ಭಾಗ್ಯದ ದಿನವಾಗಿತ್ತು. ಆ ದಿನದಿಂದ ಅವನ ಉಬ್ಬಸ ರೋಗವು ಸಂಪೂರ್ಣವಾಗಿ ಗುಣವಾಗಿ ಅವನಿಗೆ ಬಹಳ ಸಮಾಧಾನವಾಯಿತು. ॥219॥ ಈ ಉಬ್ಬಸರೋಗವು ಈಗಿನ ಒಂದೆರಡು ದಿನದೊಡದರೆಯಾಗಿರಲಿಲ್ಲ. ಅವನು ಪೂರ್ಣ ಆರು ವರ್ಷಗಳಿಂದ ನರಳುತ್ತಿದ್ದನು. ಆದರೂ ಅದು, ಕಿವಿಯಲ್ಲಿ ಒಂದು ಮಂತ್ರವನ್ನು ಉಚ್ಚರಿಸಿದಂತೆ ಗುಣವಾಗಿತ್ತು. ಚಿಲುಮೆಯ ಪ್ರಭಾವ ಈ ರೀತಿ ಇತ್ತು. ॥220॥ ಆ ದಿನದಿಂದ, ಅವನು ಚಿಲುಮೆಯಲ್ಲಿ ಒಂದು ದೀರ್ಘವಾದ ಉಚ್ಛ್ವಾಸವನ್ನು ಎಳೆದು, ವಿನಯಪೂರ್ವಕವಾಗಿ ಪ್ರಣಾಮ ಸಲ್ಲಿಸುತ್ತ ಅದನ್ನು ಹಿಂತಿರುಗಿಸುತ್ತಿದ್ದನು. ಉಬ್ಬಸರೋಗವು ಪೂರ್ಣವಾಗಿ ಗುಣವಾಯಿತು. ಅದು ಮತ್ತೆಂದಿಗೂ ಬರಲೇ ಇಲ್ಲ. ॥221॥ ಆದರೆ, ಮಧ್ಯದಲ್ಲಿ ಒಂದು ದಿನ ಬಾಳಾರಾಮನಿಗೆ ಕೆಮ್ಮು ಬಂದಿತು. ಎಲ್ಲರಿಗೂ ಪರಮವಿಸ್ಮಯವಾಯಿತು. ಯಾರಿಗೂ ಅದರ ಕಾರಣ ಅರ್ಥಮಾಡಿಕೊಳ್ಳಲು ಆಗಲಿಲ್ಲ. ॥222॥ ಅನಂತರ, ಅವರು ಈ ವಿಷಯದಲ್ಲಿ ಗಹನವಾಗಿ ಹೋದಾಗ ಕಂಡುಬಂದ ವಿಷಯವೆಂದರೆ, ಅದೇ ದಿನವೇ ಬಾಬಾರವರು ತಮ್ಮ ದೇಹವನ್ನು ತ್ಯಜಿಸಿ ತಮ್ಮ ಭಕ್ತನಿಗೆ ಅದರ ಬಗ್ಗೆ ಒಂದು ಸೂಚನೆ ಕೊಟ್ಟಿದ್ದರು. ॥223॥ ಬಾಳಾರಾಮನಿಗೆ ಕೆಮ್ಮು ಬಂದ ದಿನವೇ ಬಾಬಾರವರು ತಮ್ಮ ದೇಹವನ್ನು ಭೂಮಿಗೆ ಅರ್ಪಿಸಿ ಅದರ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದರು. ॥224॥ ಆ ದಿನದಿಂದ ತನ್ನ ಮರಣದ ದಿನದವರೆಗೆ ಅವನು ಎಂದಿಗೂ ಕೆಮ್ಮಿನಿಂದ ನರಳಲಿಲ್ಲ. ಯಾರಾದರೂ ಚಿಲುಮೆಯ ಈ ಅನುಭವವನ್ನು ಮರೆಯಲು ಸಾಧ್ಯವೇ? ॥225॥ ಅದೊಂದು ಗುರುವಾರ ಮತ್ತು ಚಾವಡಿಗೆ ಮೆರವಣಿಗೆ ಹೋಗುವ ದಿನ. ಆದ್ದರಿಂದ ಆನಂದವು ದ್ವಿಗುಣಗೊಂಡಿತು. ಅದೊಂದು ನಿಜವಾಗಿಯೂ ಅವಿಸ್ಮರಣೀಯ ದಿನ. ॥226॥ ರಾತ್ರಿ 8 ರಿಂದ 9 ಗಂಟೆಯವರೆಗೆ ಬಾಬಾರವರ ಸಮ್ಮುಖದಲ್ಲಿ ಅಂಗಳದಲ್ಲಿ ಭಜನೆಗಳನ್ನು ಹಾಡುತ್ತಿದ್ದರು. ತಾಳ, ಮೃದಂಗ, ಮತ್ತಿತರ ವಾದ್ಯಗಳನ್ನು ಬಹಳ ಲವಲವಿಕೆ, ಉತ್ಸಾಹಗಳಿಂದ ಬಾರಿಸುತ್ತಿದ್ದರು. ॥227॥ ಒಂದು ಕಡೆ ಅಭಂಗಗಳನ್ನು ಹಾಡುತ್ತಿದ್ದರು. ಮತ್ತೊಂದು ಕಡೆ ಪಲ್ಲಕ್ಕಿಯನ್ನು ಅಲಂಕರಿಸುತ್ತಿದ್ದರು. ಪಲ್ಲಕ್ಕಿಯು ಸಿದ್ಧವಾದ ಕೂಡಲೇ ಬಾಬಾರವರು ಚಾವಡಿಗೆ ಹೊರಡುತ್ತಿದ್ದರು. ॥228॥ ಈ ಹಿಂದೆಯೇ ನಾನು ವಿಶಿಷ್ಟವಾದ ಪಲ್ಲಕ್ಕಿ ಮೆರವಣಿಗೆಯನ್ನು ಮೂವತ್ತೇಳನೆಯ ಅಧ್ಯಾಯದಲ್ಲಿ ವಿವರಿಸಿದ್ದೇನೆ. ಅದು ಇಲ್ಲಿ ಪುನರುಕ್ತಿಯಾಗುತ್ತದೆ. ॥229॥ ಬಾಬಾರವರು ಒಂದು ರಾತ್ರಿಯನ್ನು ಮಸೀದಿಯಲ್ಲಿ, ಮಾರನೆಯದನ್ನು ಚಾವಡಿಯಲ್ಲಿ

ಕಳೆಯುತ್ತಿದ್ದರು. ಬಾಬಾರವರ ಈ ನಿತ್ಯಕ್ರಮವು ಸತತವಾಗಿ ಆಮರಣಾಂತ ಅವ್ಯಾಹತವಾಗಿ ನಡೆಯುತ್ತಿತ್ತು.॥230॥ ಈ ಚಾವಡಿ ಸಮಾರಂಭವನ್ನು ನೋಡಲು ಬಾಳಾರಾಮನು ಪ್ರೇಮದಿಂದ ಉಲ್ಲಸಿತನಾದನು. ಆದ್ದರಿಂದ ಚಾವಡಿ ಮೆರವಣಿಗೆಯ ಸಮಯಕ್ಕೆ ದುರ್ಧರರೆಲ್ಲರೂ ಹಿಂತಿರುಗಿದರು. ॥231॥ ಶಿರಡಿಕ್ಷೇತ್ರದ ಸ್ತ್ರೀಪುರುಷರೆಲ್ಲರೂ ಬಾಬಾರವರ ಜೊತೆಯಲ್ಲಿ, ಉಲ್ಲಾಸದಿಂದ ಜಯಜಯಕಾರ ಮಾಡುತ್ತಲೇ ಚಾವಡಿಗೆ ಹೊರಟರು. ॥232॥ ಶ್ಯಾಮಸುಂದರವೆಂಬ ಕುದುರೆಗೆ ಚಿನ್ನದ ಜರಿಯ ಬಟ್ಟೆಯನ್ನು ಹೊದಿಸಿ ಸುಂದರವಾಗಿ ಅಲಂಕಾರ ಮಾಡುತ್ತಿದ್ದರು. ಅದು ಬೆಡಗಿನಿಂದ ನಡೆಯುತ್ತ ಮೆರವಣಿಗೆಯಲ್ಲಿ ಮುಂದೆ ನಡೆಯುತ್ತಿತ್ತು. ॥233॥ ಕೊಂಬು, ಕಹಳೆ, ತುತ್ತೂರಿ, ಮತ್ತಿತರ ಸಂಗೀತ ವಾದ್ಯಗಳ ಘೋಷ ಮೊಳಗುತ್ತಿದ್ದವು. ಶೃಂಗಾರಪೂರ್ಣ ಶ್ಯಾಮಕರ್ಣ(ಕುದುರೆ)ಯ ಸಹಿತ ಪಲ್ಲಕ್ಕಿ ಮತ್ತು ಸಾಯಿಯವರ ಜೊತೆಯಲ್ಲಿ ಮೆರವಣಿಗೆ ಹೊರಡುತ್ತಿತ್ತು. ಸಾಯಿಯವರು ಭಕ್ತರ ಜೊತೆ ನಡೆದು ಬರುವಾಗ ಯಾರಾದರೂ ಒಬ್ಬರು ತಲೆಯಮೇಲೆ ಅಲಂಕೃತ ಛತ್ರಿಯನ್ನು ಹಿಡಿಯುತ್ತಿದ್ದರು. ॥234॥ ಕೆಲವರು ತಮ್ಮ ಕೈಗಳಲ್ಲಿ ಬಾವುಟಗಳನ್ನು ಮತ್ತು ಕಾಗದದ ಅಲಂಕಾರಗಳನ್ನು ಹಿಡಿದಿರುತ್ತಿದ್ದರು. ಕೆಲವರು ಶ್ರೀಗಳ ತಲೆಯ ಮೇಲೆ ಅಲಂಕೃತ ಛತ್ರಿಯನ್ನು ಹಿಡಿದಿರುತ್ತಿದ್ದರು. ಕೆಲವರು ಚಾಮರಗಳನ್ನೂ ಮತ್ತು ನವಿಲುಗರಿಗಳಿಂದ ಬೀಸುತ್ತಿದ್ದರು. ಮತ್ತೆ ಇತರರು ಸುತ್ತಲೂ ಪಂಜಿನ ದೀಪಗಳನ್ನು ಹಿಡಿದಿರುತ್ತಿದ್ದರು. ॥235॥ ಸುಸ್ವರವಾದ ಮೃದಂಗ, ತಾಲ, ಘೋಲ ಮತ್ತಿತರ ಮಧುರವಾದ್ಯಗಳನ್ನು ನುಡಿಸುತ್ತಅಸಂಖ್ಯಾತ ಭಕ್ತರು ಬಾಬಾರವರ ಅಕ್ಕಪಕ್ಕಗಳಲ್ಲಿ ಭಜನೆ ಮಾಡುತ್ತ ನಡೆಯುತ್ತಿದ್ದರು. ॥236॥ ಅದು ಹಾಗೆಯೇ ಇರಲಿ. ಈ ರಮ್ಯವಾದ ಮೆರವಣಿಗೆಯು ಚಾವಡಿಯ ಎದುರಿಗೆ ಬಂದಾಗ ಬಾಬಾರವರು ನಿಂತು ಉತ್ತರದಿಕ್ಕಿಗೆ ತಿರುಗಿಕೊಂಡು ತಮ್ಮ ಕೈಗಳಿಂದ ವಿಧಿಪೂರ್ವಕ ಚಾಲನೆಗಳನ್ನು ಮಾಡುತ್ತಿದ್ದರು. ॥237॥ ಬಾಬಾರವರ ಬಲಭಾಗದಲ್ಲಿ ಭಗತ್‌ನು (ಮಾಳಸಾಪತಿ) ಬಾಬಾರವರ ಮೇಲುವಸ್ತ್ರದ ತುದಿಯನ್ನು ಹಿಡಿದುಕೊಂಡು ಮತ್ತು ಬಾಬಾರವರ ಎಡಗಡೆ ತಾತ್ಯಾಪಾಟೀಲನು ಕಂದಿಲು ಹಿಡಿದುಕೊಂಡು ನಡೆಯುತ್ತಿದ್ದರು. ॥238॥ ಬಾಬಾರವರ ಮುಖವು ಪೀತಾಂಬರವರ್ಣದ್ದಾಗಿತ್ತು, ಕಂದೀಲಿನ ಬೆಳಕು ಅದರ ಮೇಲೆ ಬಿದ್ದಾಗ ಅದು ತಾಮ್ರಮಿಶ್ರಿತ ಹಳದಿ ಸುವರ್ಣದ ರೀತಿ ಪ್ರಕಾಶಮಾನವಾಯಿತು. ಅದು ಅರುಣ ಕಾಲದ ಬೆಳಕಿನ ರೀತಿ ಅವರ ಮುಖವು ಸುಂದರವಾಗಿ ಕಾಣುತ್ತಿತ್ತು. ॥239॥ ಆ ಸಮಯದ ಪವಿತ್ರ ದರ್ಶನವೇ ಧನ್ಯ! ಬಾಬಾರವರುತ್ತರಾಭಿಮುಖವಾಗಿ ಏಕಾಗ್ರಮನಸ್ಸಿನಿಂದ ನಿಂತು ಅವರು ಯಾರನ್ನೋ ಕರೆಯುತ್ತಿರುವಂತೆ ಕಾಣುತ್ತಿದ್ದರು. ಏಕೆಂದರೆ ಅವರು ತಮ್ಮ ಬಲಗೈಯನ್ನು ಅರ್ಧಕ್ಕೆ ಎತ್ತುತ್ತಿದ್ದರು. ॥240॥ ಅಲ್ಲಿಂದ ಅವರನ್ನು ಚಾವಡಿಯವರೆಗೆ ಕರೆದುಕೊಂಡು ಹೋಗಿ ಅತ್ಯಂತ ಗೌರವದಿಂದ ಆಸನ ಗ್ರಹಿಸುವಂತೆ ಮಾಡುತ್ತಿದ್ದರು. ದಿವ್ಯವಾದ ಅಲಂಕಾರ ವಸ್ತ್ರ ಹಾಗೂ ಆಭೂಷಣಗಳನ್ನು ಅರ್ಪಿಸಿ ಅವರ ಅಂಗಾಂಗಗಳಿಗೆ ಚಂದನವನ್ನು ಲೇಪಿಸುತ್ತಿದ್ದರು. ॥241॥ ಕೆಲವೊಮ್ಮೆ ರತ್ನಗಳ ತುರಾಯಿಯಿಂದ

ತುಂಬಿದ ರುಮಾಲನ್ನು, ಕೆಲವೊಮ್ಮೆ ರತ್ನಖಚಿತ ರುಮಾಲು, ಕೆಲವೊಮ್ಮೆ ಗಂಗಳ ತುರಾಯಿ, ಕೆಲವೊಮ್ಮೆ ಸುವರ್ಣ ಮುಕುಟ, ಕೆಲವೊಮ್ಮೆ ಚಿನ್ನದ ಜರಿ ಕೆಲಸದ ಮೇಲಂಗಿ ಇವುಗಳನ್ನು ಅರ್ಪಿಸುತ್ತಿದ್ದರು. ॥242॥ ವಜ್ರ, ಮುತ್ತು ಮತ್ತು ರತ್ನಗಳ ಕಂಠೀಹಾರಗಳನ್ನು ಬಾಬಾರವರ ಕುತ್ತಿಗೆಗೆ ಪ್ರೀತಿಯಿಂದ ಹಾಕಲಾಗುತ್ತಿತ್ತು. ಕೆಲವರು ಅವರ ಹಣೆಯ ಮೇಲೆ ಸುಗಂಧ ಪೂರಿತ ಕಸ್ತೂರಿ ತಿಲಕವನ್ನಿಡುತ್ತಿದ್ದರು. ॥243॥ ಕೆಲವರು ಅವರ ಚರಣಗಳನ್ನು ತೊಳೆಯುತ್ತಿದ್ದರು. ಅರ್ಘ್ಯ ಮತ್ತು ಪಾದ್ಯಗಳಿಂದ ಪೂಜಿಸುತ್ತಿದ್ದರು. ಕೆಲವರು ಕೇಸರಿ ಮತ್ತಿತರ ಸುಗಂಧದ್ರವ್ಯಗಳನ್ನು ದೇಹಕ್ಕೆ ಹಚ್ಚುತ್ತಿದ್ದರು ಮತ್ತು ತಾಂಬೂಲವನ್ನು ಅವರ ಬಾಯಲ್ಲಿಡುತ್ತಿದ್ದರು. ॥244॥ ಅವರು ಬಾಬಾರವರಿಗೆ ಕರ್ಪೂರದೀಪ ಪಂಚಾರತಿಯನ್ನು ಬೆಳಗುತ್ತಿದ್ದರು. ಅವರ ಮುಖ ಚಹರೆಯ ಶೋಭೆಯು ಅನುಪಮವಾಗಿತ್ತು. ॥245॥ ಸಾಯಿಯ ಮುಖದ ತೇಜಸ್ಸು ಪಾಂಡುರಂಗನ ಮೂರ್ತಿಯ ವದನದಲ್ಲಿನ ದಿವ್ಯ ತೇಜಸ್ಸಿನಂತೆ ಶೋಭಾಯಮಾನವಾಗಿರುತ್ತಿತ್ತು. ಅದನ್ನು ದರ್ಶಿಸಿದ ದುರಂಧರರು ವಿಸ್ಮಯಾಪನ್ನರಾಗಿದ್ದರು. ॥246॥ ಯಾವ ರೀತಿ ಈ ಭೂಮಿಯ ಮೇಲೆ ಯಾರೂ ನಭೋಮಂಡಲದಲ್ಲಿ ಉಂಟಾಗುವ ಮಿಂಚನ್ನು ನೋಡಲಾರರೋ, ಹಾಗೆಯೇ ಸಾಯಿಯ ಮುಖದ ತೇಜಸ್ಸು ಪ್ರಕಾಶಗೊಂಡಾಗ ಎಲ್ಲರ ಕಣ್ಣುಗಳನ್ನು ಕುರುಡಾಗಿಸಿತು. ॥247॥ ಕಾಕಡ ಆರತಿಯು ಬೆಳಗಿನ ಜಾವದಲ್ಲಿ ನಡೆಯುತ್ತಿತ್ತು. ದುರಂಧರ ಮತ್ತಿತರರು ಅಲ್ಲಿಗೆ ಹೋದರು. ಅಲ್ಲಿಯೂ ಅವರು ಬಾಬಾರವರ ಮುಖದಲ್ಲಿ ಅದೇ ತೇಜಸ್ಸನ್ನು ಕಂಡರು. ॥248॥ ಅಂದಿನ ನಂತರ, ಆಮರಣಾಂತ ಬಾಳಾರಾಮನು ಸಾಯಿ ಚರಣಗಳಲ್ಲಿ ಅತ್ಯಂತ ನಿಷ್ಠೆಯಿಟ್ಟಿದ್ದನು. ಅದು ನಿಶ್ಚಿತವಾಗಿಯೂ ಸ್ಥಿರಗೊಂಡಿತ್ತು, ಮತ್ತು ಅದು ಎಂದಿಗೂ ಯತ್ಕಿಂಚಿತ್ತೂ ಅಲುಗಾಡಲಿಲ್ಲ. ॥249॥ ಹೇಮಾಡನು ಸಾಯಿಚರಣಗಳಲ್ಲಿ ಶರಣಾಗಿದ್ದಾನೆ. ಮುಂದಿನ ಅಧ್ಯಾಯದಲ್ಲಿ ಈ ಗ್ರಂಥವು ಪೂರ್ಣಗೊಳ್ಳುತ್ತದೆ. ಸಿಂಹಾವಲೋಕನದ ನಿರೂಪಣೆಯು ಇರುತ್ತದೆ. ಕೊನೆಯ ಬಾರಿಗೆ ನಿಮ್ಮ ಗಮನವನ್ನು ನೀಡಿರಿ. ॥250॥

ಎಲ್ಲರಿಗೂ ಶುಭವಾಗಲಿ.


ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಮೂವರು ಭಕ್ತರ ಚರಿತ್ರೆ" ಎಂಬ ಐವತ್ತೊಂದನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ಭಾರತದ ಪಶ್ಚಿಮ ಭಾಗ, ಮಲಬಾರ್ ಕರಾವಳಿ.
2. ದೀಕ್ಷಿತನಿಗೆ ಸೇರಿದ ಬಹಳ ಆಸ್ತಿ ಇತ್ತು.
3. ಅದು ಸನ್ 1926ನೆಯ ಇಸವಿ ಜುಲೈ 5ನೇ ತಾರೀಕು.
4. ಎಲ್ಲಾ ಆಶೆಗಳನ್ನೂ ಪೂರೈಸುವ ರತ್ನ.
5. ಇಚ್ಛೆಗಳನ್ನು ಪೂರೈಸುವ ವೃಕ್ಷ.
6. ಕಬ್ಬಿಣವನ್ನು ಸುವರ್ಣವನ್ನಾಗಿ ಮಾಡುವ ಪರಶುಮಣಿ.
7. ಇಚ್ಛೆಗಳನ್ನು ಪೂರೈಸುವ ಸ್ವರ್ಗದ ಹಸು- ಕಾಮಧೇನು.



# ಅಧ್ಯಾಯ – 52

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಗ್ರಂಥದ ಸಿಂಹಾವಲೋಕನ"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಈಗ ಒಂದು ಪುನರಾವಲೋಕನವನ್ನು ಮಾಡೋಣ. ಅದರಿಂದ ಈ ಗ್ರಂಥವನ್ನು 'ವಿಷಯಾನುಕ್ರಮಣಿಕೆ'ಯಿಂದ ಮುಕ್ತಾಯ ಮಾಡೋಣ ಮತ್ತು ಸಿಂಹಾವಲೋಕನದಿಂದ ಈ ಗ್ರಂಥವು ಸಂಕ್ಷಿಪ್ತಗೊಳ್ಳುತ್ತದೆ. ॥1॥ ಬಾಬಾರವರ ಭಕ್ತರು ಅವರು ದೇಹದಲ್ಲಿದ್ದಾಗ ಉಂಟಾದ ಅನುಭವಗಳನ್ನು "ಸಾಯಿಲೀಲ"ದಲ್ಲಿ ಪ್ರಕಟಿಸಿದ್ದಾರೆ. ಅವುಗಳನ್ನು ಸ್ಮರಿಸಲೆಂದೇ ಬಾಬಾರವರು ಈ ಗ್ರಂಥವನ್ನು ಬರೆಸಿದ್ದಾರೆ. ॥2॥ "ಸಾಯಿಲೀಲ"ವು ಪರಮ ಪವಿತ್ರ, ಅದರಲ್ಲಿ 'ಸಚ್ಚರಿತೆ'ಯ ಅಧ್ಯಾಯ ಒಂದೊಂದರಂತೆ ಧಾರಾವಾಹಿಯಾಗಿ ಪ್ರಕಟವಾಗಿದೆ. ಇದನ್ನು ನಿನ್ನದೆಸ್ವಂತ ಗುರುವಿನ (ಗುರುಚರಿತ್ರೆ) ಚರಿತ್ರೆಯೆಂದು ಓದಿರಿ. ಇದು ಇಹಪರವೆರಡಕ್ಕೂ ಪ್ರಬೋಧಕವಾಗಿದೆ. ॥3॥ ಬಾಬಾರವರ ಬಗೆಗಿನ ಅಸಂಖ್ಯಾತ ಚರಿತ್ರೆಗಳಿವೆ. ಆದರೂ, ಈ ಹೇಮಾಡಪಂತನು ಶಾಸ್ತ್ರ ವಿದ್ಯೆಯನ್ನರಿಯದೇ ಇರುವವನು ಹಾಗೂ ಸಾಮಾನ್ಯಜ್ಞಾನವನ್ನೂ ತಿಳಿಯದವನು. ಅವರ ಜೀವನ ಚರಿತ್ರೆಯನ್ನು ತಮ್ಮ ಕೈಯಲ್ಲಿ ಅವನ ಕೈ ಹಿಡಿದು ಬಾಬಾ ಬರೆಯಿಸಿದ್ದಾರೆ. ॥4॥ ಕೆಲವರು ಗುರುಗಳು ತಮ್ಮ ಖ್ಯಾತಿಯನ್ನೇ ಅವರ ಶಿಷ್ಯರುಗಳಿಗೆ ನೀಡುತ್ತಾರೆ. ತಮ್ಮ ದೇಹ ತ್ಯಾಗ ಮಾಡಿದ ನಂತರ ಅವರ ಬಗ್ಗೆ ಗ್ರಂಥ ರಚಿಸಲು ಸ್ಫೂರ್ತಿಯುಂಟಾಗುತ್ತದೆ. ॥5॥ ಸಾಯಿಯವರು ಪರಿಪರಿಯಾದ ವಿವಿಧ

ಕಥೆಗಳನ್ನು ಹೇಳಿದಾಗ ಅವುಗಳು ಅತ್ಯಂತ ಗಹನವಾಗಿಯೂ ಅಗಾಧ ಪ್ರಾಶಸ್ತ್ಯವುಳ್ಳವೂ ಆಗಿದ್ದವು. ಶ್ರೋತೃಗಳು ಅತ್ಯಂತ ತಲ್ಲೀನರಾಗಿ ತಮ್ಮ ಹಸಿವು ಬಾಯಾರಿಕೆಗಳನ್ನು ಮರೆತೇ ಬಿಟ್ಟರು. ॥6॥ ಸಾಯಿಯ ಸ್ವರೂಪವನ್ನು ತಮ್ಮ ಕಣ್ಣುಗಳಿಂದ ದರ್ಶನಮಾಡಿದವರು ತಮ್ಮ ತ್ರಿವಿಧ ತಾಪ(ಆದಿದೈವಿಕ, ಆದಿಭೌತಿಕ, ಆಧ್ಯಾತ್ಮಿಕ)ಗಳಿಂದ ಮುಕ್ತರಾಗುತ್ತಾರೆ. ಅಂತಹ ಪ್ರತಾಪಯುಕ್ತ ತೇಜಸ್ಸುಳ್ಳ ಸಾಯಿಯನ್ನು ಸಾದ್ಯಂತವಾಗಿ ಹೇಗೆ ವರ್ಣಿಸಲಾಗುತ್ತದೆ? ॥7॥ ಅಂತಹ ಸಾಯಿಯವರು, ಉದಾರತೆಯ ಕೀರ್ತಿವಂತರು, ತಮ್ಮ ಹೆಸರಾಂತ ಜೀವನ ಚರಿತ್ರೆಯನ್ನು ತಮ್ಮಲ್ಲಿಭಕ್ತಿ ಇಟ್ಟಿರುವವರ ಉದ್ಧಾರಕ್ಕಾಗಿ ಬರೆಯಿಸಿರುತ್ತಾರೆ. ॥8॥ ಪವಿತ್ರ ಗೋದಾವರಿಯಲ್ಲಿ ಸ್ನಾನಮಾಡಿ, ಬಾಬಾರವರ ಸಮಾಧಿಯ ದರ್ಶನ ಮಾಡಿ, ಈ ಸತ್‌ಚರಿತ್ರೆಯನ್ನು ಕೇಳಿರಿ. ಮೂರು ವಿಧವಾದ ತಾಪಗಳೂ ನಾಶಹೊಂದುತ್ತವೆ. ॥9॥ ಕೇವಲ ಸಹಜವಾಗಿಯಾದರೂ ಅವರ ಕಥೆಗಳನ್ನು ಹೇಳಿದಲ್ಲಿ ಅವರು ತಮಗೆ ಅರಿವಿಲ್ಲದೆಯೇ ಪರಮಾರ್ಥದಲ್ಲಿ ಹೆಜ್ಜೆಯಿಡುತ್ತಾರೆ. ಆದರೆ ಒಮ್ಮೆ ಈ ಗ್ರಂಥದ ಕಡೆಗೆ ಕಣ್ಣು ಹಾಯಿಸಿದಲ್ಲಿ ಕೋಟಿ ಪಾಪಗಳೂ ನಾಶಹೊಂದುವುವು. ॥10॥ ಯಾರು ಈ ಜನ್ಮ–ಮರಣದ ಚಕ್ರವನ್ನು ಅಂತ್ಯಗೊಳಿಸಲು ಇಚ್ಛಿಸುತ್ತಾರೋ ಅವರು ಗುರುಚರಣಗಳಲ್ಲಿ ಆಸ್ಥೆಯನ್ನು ಇಟ್ಟು ಅಖಂಡವಾಗಿ ನಿರಂತರ ಭಕ್ತಿಯಿಂದ ಸ್ಮರಣೆಮಾಡಬೇಕು. ॥11॥ ಉಪೇಕ್ಷೆಯೇ ಮಿಥ್ಯಾಜ್ಞಾನಕ್ಕೆ ಕಾರಣ. ಆತ್ಮಸ್ವರೂಪದ ಅನಾದರಣದಿಂದಲೇ ಜನನ ಮರಣದ ಚಕ್ರವು ಹುಟ್ಟುತ್ತದೆ. ಅದೇ ಶ್ರೋತೃಗಳ ಅಧಃಪತನಕ್ಕೆ ಕಾರಣ. ॥12॥ ಮೋಹ ಅಂದರೆ ಮಿಥ್ಯಾಜ್ಞಾನ, ಆತ್ಮಸ್ಥೂಲದ ದೇಹ, ಮನಸ್ಸು, ಇಂದ್ರಿಯಗಳು ಮತ್ತು ಅವುಗಳಲ್ಲಿ ಅಭಿಮಾನವನ್ನು ಇಟ್ಟಲ್ಲಿ ಅದನ್ನೇ ವಿದ್ವಜ್ಜನರು ಸಾಕಷ್ಟು ಪರಿಶೀಲಿಸಿ ಮೃತ್ಯುವೆಂದು ಕರೆದಿತ್ತಾರೆ. ॥13॥ ಸಾಯಿ ಕಥಾಸಾಗರವನ್ನು ಮಂಥನಮಾಡಿದಲ್ಲಿ ಸಾಯಿ ಕಥೆಗಳ ಕಥನವು ಮಧುರವಾಗಿಯೂ ನಿತ್ಯನೂತನವಾಗಿಯೂ ಇದ್ದು ಶ್ರೋತೃಗಳನ್ನ ಅಧಃಪತನದಿಂದ ರಕ್ಷಿಸುತ್ತವೆ. ॥14॥ ಸಾಯಿಯ ಗುಣಮಯವಾದ ಸ್ಥೂಲಸ್ವರೂಪವು, ತುಂಬಿ ಉಕ್ಕುತ್ತಿರುವ ಬೃಹತ್ತಾದ ಪಾತ್ರೆಯ ರೀತಿಯಲ್ಲಿದ್ದು, ಅದನ್ನು ಧ್ಯಾನ ಮಾಡಿದಲ್ಲಿ ಅತಿ ಸೂಕ್ಷ್ಮತಮವಾದ ಆತ್ಮಸ್ವರೂಪವನ್ನು ಪ್ರಕಟಗೊಳಿಸುತ್ತದೆ. ॥15॥ ಸಗುಣ ಸ್ವರೂಪದಲ್ಲಿ ಲೀನವಾಗದೇ ಇದ್ದಲ್ಲಿ ಯಾರೂ ಆತ್ಮಜ್ಯೋತಿಯ ಪ್ರಕಾಶವನ್ನು ಅರ್ಥಮಾಡಿಕೊಳ್ಳಲಾರರು. ಯಾವುದೇ ಗುಣವಿಶೇಷಗಳಿಲ್ಲದ ಪರಬ್ರಹ್ಮವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಕಷ್ಟ, ಅಥವಾ ಅದು ಗ್ರಹಿಸಲಸಾಧ್ಯವಾಗಿದೆ. ॥16॥ ಸಾಯಿಯವರು ತಮ್ಮ ಪ್ರೀತಿಯ ಭಕ್ತರನ್ನು ತಮ್ಮ ಶಕ್ತಿಯಲ್ಲಿ ಶ್ರದ್ಧೆಯಿಟ್ಟವರಿಗೆ ತಮ್ಮ ಚರಣಗಳ ದರ್ಶನ ನೀಡಿ ಅವರು ದೇಹದಲ್ಲಿದ್ದಂತೆಯೇ ತಮ್ಮ ದೇಹವನ್ನು ಮರೆಯುವಂತೆ ಮಾಡಿದರು. ಅವರ ಅರಿವಿಲ್ಲದೆಯೇ ಅವರನ್ನು ಪಾರಮಾರ್ಥದ ಹಾದಿಯಲ್ಲಿ ನಡೆಸಿದರು. ॥17॥ ನದಿಯು ಸಾಗರವನ್ನು ಆಲಿಂಗನ ಮಾಡುತ್ತಲೇ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತದೆ ಅದೇ ರೀತಿ ಒಬ್ಬ ಭಕ್ತನು ಶರಣಾಗತನಾದಾಗ ಸಾಯಿಯು ದ್ವೈತ (ಎರಡು)ಭಾವವನ್ನೂ ಪ್ರತ್ಯೇಕತಾ ಭಾವವನ್ನೂ ದೂರಮಾಡುತ್ತಾರೆ. ॥18॥ ಯಾವಾಗ ಒಂದು ದೀಪದ ಎರಡು ಜ್ವಾಲೆಗಳು

ಪರಸ್ಪರ ಆಲಂಗಿಸುವುವೋ ಮತ್ತು ಒಂದಾಗುವುವೋ ಆ ಕೂಡಲೇ ದ್ವೈತ ಸ್ಥಿತಿಯು ಮಾಯವಾಗಿ ಒಂದೇ ದೀಪಷ್ಟು ಏಕತ್ವವನ್ನು ಹೊಂದುತ್ತದೆ. ॥19॥ ಕರ್ಪೂರ ಮತ್ತು ಅದರ ಸುವಾಸನೆ, ಸೂರ್ಯ ಮತ್ತು ಅದರ ಪ್ರಕಾಶ, ಸುವರ್ಣ ಮತ್ತು ಅದರ ಕಾಂತಿ ಇವುಗಳು ನಿಶ್ಚಿತವಾಗಿಯೂ ಪ್ರತ್ಯೇಕವಾಗಿರುವುವೇನು? ॥20॥ ನದಿಯು ಸಾಗರವನ್ನು ಪ್ರವೇಶಿಸಿದ ಕೂಡಲೇ ನಿಜವಾಗಿಯೂ ಸಾಗರವೇ ಆಗುವ ರೀತಿಯಲ್ಲಿ ಮತ್ತು ಉಪ್ಪನ್ನು ಸಾಗರದಲ್ಲಿ ಹಾಕಿದಕೂಡಲೇ ಸಾಗರದಲ್ಲಿ ಲೀನವಾಗುವ ರೀತಿಯಲ್ಲಿ. ॥21॥ ಅದೇ ರೀತಿ ಭಕ್ತರು ಸಾಯಿ ಚರಣಗಳಲ್ಲಿಶರಣಾಗತರಾದ ಕೂಡಲೇ, ಅವರ ಅಗಲಿಕೆ ಇನ್ನು ಲವಲೇಶವಾದರೂ ಉಳಿಯುವುದಿಲ್ಲ. ಭಕ್ತರು ಸಾಯಿಯಲ್ಲಿ ಒಂದಾಗಿ ತಮ್ಮ ಅಹಂಭಾವವನ್ನು ತ್ಯಜಿಸುತ್ತಾರೆ. ॥22॥ ಜಾಗೃತ್, ಸ್ವಪ್ನ ಅಥವಾ ಸುಷುಪ್ತಿ ಸ್ಥಿತಿಯಲ್ಲಿ ಸಾಯಿಮಯ ವೃತ್ತಿಯನ್ನು ತುಂಬಿದ್ದಲ್ಲಿ, ಅದು ಈ ಶರೀರವು ಸಂಸಾರ ನಿವೃತ್ತಿಯನ್ನು ಹೊಂದಿರುವ ಸ್ಥಿತಿಯಲ್ಲದೆ ಮತ್ತೇನು! ॥23॥ ಅದು ಹಾಗಿರಲಿ. ಈಗ ನಾನು ಸಾಷ್ಟಾಂಗ ಪ್ರಣಾಮ ಮಾಡುತ್ತ ನಿಮ್ಮ ಚರಣಗಳಲ್ಲಿ ಈ ವರವನ್ನು ಬೇಡುತ್ತೇನೆ. ಏನೆಂದರೆ – ನನ್ನ ಆಶೆಗಳು, ವಾಂಛೆಗಳು ಇದ್ದಕ್ಕಿದ್ದಹಾಗೆ ಬೇರೆ ಕಡೆಗೆ ಎಂದಿಗೂ ನನ್ನನ್ನು ಆಕರ್ಷಿಸದೆ ಇರಲಿ. ॥24॥ ಯಾರು ಬ್ರಹ್ಮನಿಂದ ಸ್ತಂಭದವರೆಗೆ ಸರ್ವವ್ಯಾಪಿಯಾಗಿ, ಒಂದು ಸಣ್ಣ ಮಣ್ಣಿನ ಘಟದಿಂದ ದೊಡ್ಡ ಮನೆಯವರೆಗೆ ಒಳಗೆ ಹೊರಗೆ ಸರ್ವವ್ಯಾಪಿಯಾದ ಆಕಾಶದ ರೀತಿ, ಸರ್ವ ಭೂತಗಳಲ್ಲಿಯೂ ಪರಿಪೂರ್ಣವಾಗಿದ್ದು ಯತ್ಕಿಂಚಿತ್ತೂ ವಿಷಮತೆಯನ್ನು ತೋರಿಸುವುದಿಲ್ಲವೋ, ॥25॥ ಯಾರಿಗೆ ಸಕಲ ಭಕ್ತರೂ ಸರಿಸಮಾನರೋ, ಯಾರಿಗೆ ಮಾನ, ಅಪಮಾನಗಳು ಬಾಧಿಸುವುದಿಲ್ಲವೋ, ಯಾರ ಮನಸ್ಸಿಗೆ ಪ್ರಿಯ, ಅಪ್ರಿಯಗಳು ಬರುವುದಿಲ್ಲವೋ, ಮತ್ತು ಯಾರಿಗೆ ಎಳ್ಳಷ್ಟೂ ವಿಷಮತಾ ಭಾವವು ಉಂಟಾಗುವುದಿಲ್ಲವೋ, ॥26॥ ಅಂತಹ ಸಾಯಿಸಮರ್ಥರಿಗೆ ನಾನು ಶರಣಾಗುತ್ತೇನೆ. ಅವರ ಸ್ಮರಣೆಯು ಸರ್ವ ಇಷ್ಟಾರ್ಥ ನೆರವೇರಿಸುವುದು. ನನ್ನ ಹಣೆಯನ್ನು ಅವರ ಚರಣಗಳಲ್ಲಿ ಅಖಂಡವಾಗಿ ಸ್ಥಾಪಿಸಿ ನಾನು ಕೃತಾರ್ಥನಾಗುವೆನು. ॥27॥ ಈಗ ನಾನು ಸಜ್ಜನರಾದ ಪರಮ ಭಕ್ತರಾದ ಶ್ರೋತೃಗಳೆಲ್ಲರಿಗೂ ನನ್ನ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ನೀವೆಲ್ಲರೂ ನನ್ನ ಸನ್ಮಿತ್ರರಾಗಿದ್ದೀರಿ. ನಾನು ನಿಜವಾಗಿಯೂ ಈಗ ಹೇಳುವುದನ್ನು ಕೇಳಿರೆಂದು ವಿನಂತಿಸಿಕೊಳ್ಳುತ್ತೇನೆ. ॥28॥ ಪ್ರತಿ ತಿಂಗಳೂ, ನೀವು ಸ್ವಲ್ಪ ಸಮಯವನ್ನು ಈ ಕಥೆಗಳನ್ನು ಕೇಳಿಸಿಕೊಳ್ಳಲು ಇಲ್ಲಿಯವರೆಗೆ ನಿಗದಿಪಡಿಸಿದ್ದೀರಿ. ನೀವು ಯಾರ ಕಥೆಗಳನ್ನು ಕೇಳಿಸಿಕೊಂಡರೋ ಅವರನ್ನು ಕ್ಷಣಾರ್ಧ ಮಾತ್ರವೂ ಮರೆಯಬೇಡಿರಿ. ॥29॥ ನೀವು ಎಲ್ಲಿಯವರೆಗೆ ಸಪ್ರೇಮಚಿತ್ತರಾಗಿ ಸಾಯಿ ಕಥೆಗಳನ್ನು ಕೇಳಿಸಿಕೊಳ್ಳುವಿರೋ, ಆ ಸಮಯದವರೆಗೆ, ನನಗೆ ವಕ್ತಾರರಾದ ಸಾಯಿಯು ಉತ್ಸಾಹವನ್ನು ತುಂಬುತ್ತಾರೆ. ॥30॥ ಶ್ರೋತೃಗಳು ಪೂರ್ಣವಾಗಿ ಆಸಕ್ತರಾಗದೇ ಇದ್ದಲ್ಲಿ ವಕ್ತಾರನು ಎಂದಿಗೂ ಸುಪ್ರಸನ್ನನಾಗುವುದಿಲ್ಲ. ಪರಸ್ಪರ ಪ್ರಸನ್ನತೆಯಿಲ್ಲದಿದ್ದಲ್ಲಿ ಆಲಿಸುವ ಶ್ರಮವು ವ್ಯರ್ಥ. ॥31॥ ಈ ಸಂಸಾರ ಸಾಗರವು ದಾಟಲು ಪರಮ ದುಸ್ತರವಾದುದು. ಅಲ್ಲಿ ಮೋಹದ ಅಸಂಖ್ಯಾತ

ಅಲೆಗಳು ಎದ್ದು ಕೆಟ್ಟ ವಿಚಾರಗಳೆಂಬ ದಡಕ್ಕೆ ಅಪ್ಪಳಿಸುತ್ತವೆ. ಮತ್ತು ಮನಃಸ್ಥೈರ್ಯವೆಂಬ ಮರವನ್ನೇ ಬುಡಮೇಲಾಗಿ ಉರುಳಿಸುತ್ತದೆ. ॥32॥ ಅಹಂಭಾವವೆನ್ನುವ ಬಿರುಗಾಳಿಯು ಜೋರಾಗಿ ಬೀಸಿ ಕೆರೆಯನ್ನು ಕಲಕಿ ರಾಡಿಯನ್ನಾಗಿ ಮಾಡುತ್ತದೆ. ಕ್ರೋಧ, ದ್ವೇಷ ಇತ್ಯಾದಿ ಭಾರೀ ಮೊಸಳೆಗಳು ಅಲ್ಲಿ ನಿರ್ಭಯವಾಗಿ ಓಡಾಡುತ್ತವೆ. ॥33॥ ಅಸಂಖ್ಯಾತ ನೀರಿನ ಸುಳಿಗಳು, 'ನಾನು ಮತ್ತು ನನ್ನದು' ಎಂಬ ದುರಹಂಕಾರದ ವಾಸನೆಗಳು, ವಿಕಲ್ಪಗಳು ಅಲ್ಲಿ ಸುತ್ತುತ್ತವೆ. ನಿಂದೆ, ಅಸೂಯೆ, ತಿರಸ್ಕಾರ ಇತ್ಯಾದಿ ಅಸಂಖ್ಯಾತ ಜಲಚರಗಳು ಸಮೃದ್ಧಿಯಾಗಿರುತ್ತವೆ. ॥34॥ ಈ ಜಲಾಶಯವು ಈ ರೀತಿ ಭಯಂಕರವಾಗಿಯೂ ತೀಕ್ಷ್ಣವಾಗಿಯೂ ಇದ್ದರೂ, ಸದ್ಗುರುವು ಇದರ ಅಗಸ್ತ್ಯಮುನಿಯಾಗಿ ಅದನ್ನು ನಾಶಮಾಡುತ್ತಾರೆ. ಅವರ ಚರಣಧೂಳಿಯ ದಾಸರಿಗೆ ಮಾತ್ರ ಎಳ್ಳಷ್ಟೂ ಭಯವಿಲ್ಲ. ॥35॥ ಆದುದರಿಂದ, ಸಾಯಿ ಸಮರ್ಥ ಸದ್ಗುರುವು ನಾವೆಯಾಗಿ ಅವರಲ್ಲಿ ಶರಣಾದ ನಮ್ಮೆಲ್ಲರನ್ನೂ ಭವಸಾಗರದಲ್ಲಿ ಮತ್ತೊಂದು ದಡಕ್ಕೆ ಕರೆದೊಯ್ಯುತ್ತಾರೆ. ॥36॥ ಈ ಭವಸಾಗರವು ದಾಟಲು ಬಹು ಅಸಾಧ್ಯವಾದುದು. ಸಾಯಿಯ ಚರಣಗಳನ್ನು ನಿನ್ನ ನಾವೆಯನ್ನಾಗಿ ಮಾಡಿಕೊಂಡರೆ ಅದು ನಿನ್ನನ್ನು ನಿರ್ಭಯವಾಗಿ ಮತ್ತೊಂದು ದಡಕ್ಕೆ ಕರೆದೊಯ್ಯುತ್ತದೆ. ನಿಶ್ಚೆಯ ಲೀಲೆಯನ್ನು ಗಮನಿಸು. ॥37॥ ಅಂತಹ ವ್ರತವನ್ನು ಆಚರಿಸಿದಲ್ಲಿ ಈ ಸಂಸಾರದ ದುಃಖದ ತೀವ್ರತೆಯು ಅನುಭವಕ್ಕೆ ಬರುವುದಿಲ್ಲ. ಇದಕ್ಕಿಂತ ಹೆಚ್ಚಾದ ಲಾಭವು ಮತ್ತೊಂದಿಲ್ಲ. ಇದೇ ಶಕ್ತಿಯೇ ನಮ್ಮನ್ನು ಒಳ್ಳೆಯ ಸ್ಥಿತಿಯಲ್ಲಿ ಇಡುವಂತಹುದು. ॥38॥ ಸಾಯಿ ಚರಣಗಳಲ್ಲಿ ಅತ್ಯಂತ ಭಕ್ತಿಯನ್ನಿಟ್ಟು, ನಯನಗಳಲ್ಲಿ ಸಾಯಿಯ ಮೂರ್ತಿಯನ್ನು ಸರ್ವಭೂತಗಳಲ್ಲಿಯೂ ಸಾಯಿಯನ್ನೇ ದರ್ಶನ ಮಾಡುವುದು, ಅಂತಹ ಸ್ಥಿತಿಯು ಎಲ್ಲಾ ಭಕ್ತರಿಗೂ ಉಂಟಾಗಲಿ. ॥39॥ ಪೂರ್ವಜನ್ಮದಲ್ಲಿ ಸ್ವಚ್ಛಂದ ಪ್ರವೃತ್ತಿಯಿಂದಾಗಿ ನಾನು ದಾರಿ ತಪ್ಪಿದ್ದೇನೆ. ಈಗಲಾದರೂ ನಾನು ಆಶೆಗಳನ್ನು ದೂರಮಾಡಿ ಸದ್ಗತಿಯನ್ನು ಪಡೆಯಬೇಕು. ॥40॥ ಶ್ರೀಸಾಯಿ ಸಮರ್ಥರೇ ತಮ್ಮ ರಕ್ಷಕರು ಮತ್ತು ಯಾವುದೂ ತಮ್ಮನ್ನು ಸೋಕಲಾರದು ಎಂಬ ದೃಢವಾದ ವಿಶ್ವಾಸವಿಟ್ಟು ನಿರ್ಭೀತರಾಗಿರುವರೋ ಅಂತಹ ಸಾಯಿ ಭಕ್ತರೇ ಧನ್ಯ! ॥41॥ ಅದು ಹಾಗಿರಲಿ. ಈಗ ನನ್ನ ಮನಸ್ಸಿನಲ್ಲಿ ಒಂದು ಯೋಚನೆ ಬರುತ್ತಿದೆ. ಅವರ ಚರಣಗಳನ್ನು ಗಟ್ಟಿಯಾಗಿ ಹಿಡಿದು ಸಕಲ ಭಕ್ತಜನರಿಗಾಗಿ ಒಂದು ವರವನ್ನು ಪ್ರಾರ್ಥಿಸಬೇಕೆನ್ನಿಸುತ್ತಿದೆ. ॥42॥ ಈ ಗ್ರಂಥವು ಪ್ರತಿಯೊಂದು ಮನೆಯನ್ನೂ ತಲಪಲಿ ಮತ್ತು ಅದನ್ನು ನಿತ್ಯವೂ ಓದುವಂತಾಗಲಿ ಮತ್ತು ಪ್ರೇಮದಿಂದ ನಿಯಮಪೂರ್ವಕವಾಗಿ ಪಾರಾಯಣ ನಡೆಯಲಿ ಮತ್ತು ಎಲ್ಲರ ಸಂಕಟಗಳನ್ನೂ ದೂರಮಾಡಲಿ ಎಂದು ಪ್ರಾರ್ಥಿಸುತ್ತೇನೆ. ॥43॥ ಯಾತುಚಿರ್ಭೂತರಾಗಿ, ಶ್ರದ್ಧಾಭಕ್ತಿಗಳಿಂದ, ಪ್ರೇಮದಿಂದ ಈ ಗ್ರಂಥವನ್ನು ನಿರಂತರ ಏಳು ದಿನಗಳ ಕಾಲ ಪಾರಾಯಣ ಮಾಡುತ್ತಾರೋ ಅವರ ಅನಿಷ್ಟಗಳೆಲ್ಲವೂ ತೊಲಗುತ್ತವೆ. ॥44॥ ಈ ಗ್ರಂಥವು ಅಧ್ಯಾತ್ಮ ತಂತುಗಳಿಂದ ಹೆಣೆಯಲ್ಪಟ್ಟಿದೆ. ಇದು ಸಂಪೂರ್ಣವಾಗಿ ಕೃಷ್ಣ ಹಾಗೂ ಬ್ರಹ್ಮನ ಕಥೆಗಳಿಂದ ತುಂಬಿದೆ. ಇದು ಬ್ರಹ್ಮ ಮತ್ತು

ಆತ್ಮದ ಸಂಯೋಗದ ಅಮೃತಸಾರದಿಂದ ಸಮೃದ್ಧಿಯಾಗಿದೆ. ಇದು ಅದ್ವೈತದ ಅಪೂರ್ವ ಆನಂದದಿಂದ ಉಕ್ಕಿ ಹರಿಯುತ್ತಿದೆ. ॥45॥ ಇದು ಏಕನಾಥರ ಕಾವ್ಯ ನಂದನವಾಗಿದೆ. ಇದೊಂದು ಮೂವತ್ತೆರಡು ಅಧ್ಯಾಯಗಳ ವೃಂದಾವನವಾಗಿದೆ. ಜ್ಞಾನಿಗಳು ಮತ್ತ ಅಜ್ಞಾನಿಗಳು ಇಬ್ಬರೂ ಈ ಹಾಲಿನಿಂದ ಮಾಡಿದ ರುಚಿಕರವಾದ ಸಿಹಿತಿಂಡಿಯ ರುಚಿಯನ್ನು ಆಸ್ವಾದಿಸಬಲ್ಲರು. ॥46॥ ಈ ಸತ್ ಚರಿತೆಯನ್ನು ಆಲಿಸಿದರೆ ಅಥವಾ ನಿಯಮ ಪೂರ್ವಕವಾಗಿ ಪಾರಾಯಣ ಮಾಡಿದಲ್ಲಿ ಸಾಯಿ ಸಮರ್ಥರ ಚರಣಗಳು ಲಭಿಸಿ ಎಲ್ಲ ಸಂಕಟಗಳನ್ನೂ ವಿಳಂಬವಿಲ್ಲದೆಯೇ ಹಾರಿಸುತ್ತವೆ. ॥47॥ ಧನವನ್ನು ಇಚ್ಛಿಸುವವರಿಗೆ ಧನಪ್ರಾಪ್ತಿಯಾಗುತ್ತದೆ. ಯಾರು ತಮ್ಮ ವ್ಯವಹಾರದಲ್ಲಿ ಶುದ್ಧ ನಿಷ್ಠೆ ಇಡುತ್ತಾರೋ ಅವರಿಗೆ ಪೂರ್ಣ ಯಶಸ್ಸು ಲಭಿಸುತ್ತದೆ. ಅವರವರ ನಿಷ್ಠೆಗನುಸಾರವಾಗಿ ಫಲವು ದೊರಕುತ್ತದೆ. ಭಕ್ತಿಯಿಲ್ಲದಿದ್ದಲ್ಲಿ ಯಾವ ಅನುಭವವಾಗುವುದಿಲ್ಲ. ॥48॥ ಆದರ ಪೂರ್ವಕವಾಗಿ ಈ ಗ್ರಂಥ ಪಠಣ ಮಾಡಿದಲ್ಲಿ, ಸಾಯಿ ಸಮರ್ಥರು ಸುಪ್ರಸನ್ನರಾಗುತ್ತಾರೆ. ಸಾಯಿ ಅವರ ಅಜ್ಞಾನವನ್ನೂ ದಾರಿದ್ರ್ಯವನ್ನೂ ನಾಶಮಾಡಿ ಜ್ಞಾನವನ್ನು ನೀಡಿ ಧನ ಸಂಪನ್ನರನ್ನಾಗಿ ಮಾಡುತ್ತಾರೆ. ॥49॥ ಈ ಗ್ರಂಥರಚನೆಯು ಸಾಯಿಯವರ ಸೂಚನೆಯಿಂದಲೇ ಆಗಿದ್ದು ಅವರ ಗುಪ್ತಮನದಿಚ್ಛೆಯಾಗಿತ್ತು. ಅವರ ಚರಣಗಳಲ್ಲಿ ಅನುರಕ್ತನಾಗಿರುವ ಭಕ್ತನ ಜೀವಿತವೇ ಧನ್ಯ! ॥50॥ ಈ ಸಚ್ಚರಿತೆಯ ಕೊನೆಯ ಪಕ್ಷ ಒಂದು ಅಧ್ಯಾಯವನ್ನಾದರೂ ನಿತ್ಯವೂ ನಿಯಮಪೂರ್ವಕವಾಗಿ ಶಾಂತ ಮತ್ತು ಏಕಾಗ್ರ ಚಿತ್ತದಿಂದ ಪಾರಾಯಣ ಮಾಡುವ ಅಭ್ಯಾಸ ಮಾಡಬೇಕು. ಅದು ಅಮಿತವಾದ ಸುಖವನ್ನೂ ಅತ್ಯಂತ ಆನಂದವನ್ನೂ ಉಂಟುಮಾಡುತ್ತದೆ. ॥51॥ ಯಾರು ಸ್ವಹಿತವನ್ನು ಬಯಸುತ್ತಾರೋ ಅವರು ನಿಜವಾಗಿಯೂ ಈ ಗ್ರಂಥದ ಪಾರಾಯಣ ಮಾಡಬೇಕು. ಅವರು ಜನ್ಮಜನ್ಮಗಳಲ್ಲೂ ಸಾಯಿಗೆ ಉಪಕೃತರಾಗಿರುತ್ತಾರೆ. ಜನನ ಮರಣಗಳ ಚಕ್ರದಲ್ಲಿಯೂ ಅವರು ಸಾಯಿಯನ್ನು ಸ್ಮರಿಸುತ್ತ ಹರ್ಷಭರಿತರಾಗುತ್ತಾರೆ. ॥52॥ ಈ ಗ್ರಂಥವನ್ನು ತಮ್ಮ ಮನೆಯಲ್ಲಿಯೇ ಸಾಯಿಯ ಉತ್ಸವಗಳಂದು ನಿಯಮಪ್ರಕಾರ ಪಾರಾಯಣ ಮಾಡಬೇಕು. ಅವು ಗುರುಪೂರ್ಣಿಮೆ, ಗೋಕುಲಾಷ್ಟಮಿ, ಪುಣ್ಯ ತಿಥಿ ಮತ್ತು ರಾಮನವಮಿ ಇವು ಆ ದಿನಗಳು. ॥53॥ ಈ ಜನ್ಮದಲ್ಲಿ ಚಿತ್ತದ ಆಶೆಗಳು ಯಾವ ಯಾವ ರೀತಿ ಇರುವುದೋ ಅದೇ ರೀತಿ ಮುಂದಿನ ಜನ್ಮ ಉಂಟಾಗುತ್ತದೆ. ಶಾಸ್ತ್ರಗಳೂ ಸಹ ಪ್ರತಿಯೊಬ್ಬರೂ ತಮ್ಮ ಮರಣ ಕಾಲದಲ್ಲಿ ಯಾವ ರೀತಿ ಮನಃಸ್ಥಿತಿಯಿರುವುದೋ ಅದೇ ಜನ್ಮ ಪಡೆಯುತ್ತಾರೆ ಎಂಬ ನಂಬಿಕೆಯನ್ನು ಸಮ್ಮತಿಸುತ್ತವೆ. ॥54॥ ಶ್ರೀಸಾಯಿಯು ತಮ್ಮ ಭಕ್ತರಿಗೆ ಆಧಾರ. ಅವರಿಲ್ಲದೆ ಮಾರ್ಗದಲ್ಲಿನ ವಿಘ್ನಗಳು ನಾಶವಾಗುವುದಿಲ್ಲ. ತಾಯಿಯು ತನ್ನ ಮಕ್ಕಳ ಬಗ್ಗೆ ಕೋಮಲ ಭಾವ ಹೊಂದಿರುವುದನ್ನು ನೋಡಿದರೆ ಆಶ್ಚರ್ಯವೇನಿದೆ? ॥55॥ ಇದಕ್ಕಿಂತ ಮಿಗಿಲಾಗಿ ನಾನು ಕಥೆಗಳನ್ನು ಹೇಗೆ ನಿರೂಪಣೆಮಾಡಲಿ? ಶಬ್ದಗಳು ಅದರಲ್ಲಿ ಸೋಲುತ್ತವೆ. ಆದ್ದರಿಂದ ಮೌನವನ್ನು ಆಶ್ರಯಿಸುವುದೇ ಒಳ್ಳೆಯದೆಂದು ಕಾಣುತ್ತದೆ. ಇದೇ ಸ್ತುತಿಸಲು ಅತ್ಯುತ್ತಮವಾದ ಮಾರ್ಗ. ॥56॥ ಆದರೂ, ಯಾರಿಗಾದರೂ

ಮೋಕ್ಷದ ಇಚ್ಛೆಯು ಮನದಲ್ಲಿ ಬಲವಾಗಿದ್ದಲ್ಲಿ, ಕೇವಲ ಶುಭ ಕರ್ಮಗಳನ್ನು ಮಾತ್ರವೇ ನಿತ್ಯವೂ ಮಾಡಬೇಕು. ಶ್ರವಣ ಇತ್ಯಾದಿ ನವವಿಧ ಭಕ್ತಿಗಳನ್ನು ಅಭ್ಯಸಿಸಬೇಕು. ಅದರಿಂದ ಅಂತಃಕರಣ ಶುದ್ಧಿಯಾಗುತ್ತದೆ. ॥57॥ ಇದು ಸದ್ಗುರುವಿನ ಅನುಗ್ರಹವಿಲ್ಲದೆ ಸಾಧ್ಯವಿಲ್ಲ. ಅವರಿಲ್ಲದೆ ಪರತತ್ತ್ವ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. "ನಾನು ಬ್ರಹ್ಮ" ಎಂಬುದನ್ನು ನಿತ್ಯವೂ ಸ್ಮರಿಸುವವನು ಗುರುನಿಷ್ಠೆಯಲ್ಲಿ ಪ್ರವೀಣನಾಗುತ್ತಾನೆ. ॥58॥ ಗುರು ಶಿಷ್ಯರ ಈ ಸಂಬಂಧವು ತಂದೆ-ಮಗನ ರೀತಿಯಲ್ಲಿರುತ್ತದೆ. 'ಗುರು' ಎನ್ನುವ ಪದ ಕೇವಲ ಗೌರವಕ್ಕಾಗಿ ಮಾತ್ರ, ತಂದೆಯು ಕೇವಲ ಇಹ ಸುಖಕ್ಕೆ ಪಾತ್ರನನ್ನಾಗಿ ಮಾಡುತ್ತದೆ. ಆದರೆ ಗುರುವು ಮಾತ್ರ ಇಹದಲ್ಲೂ, ಪರದಲ್ಲೂ ಸುಖವನ್ನು ನೀಡುತ್ತಾನೆ. ॥59॥ ತಂದೆಯು ಕೇವಲ ಕ್ಷಣಿಕ ಸಂಪತ್ತನ್ನು ಕೊಡುತ್ತಾನೆ. ಆದರೆ ಗುರುವು ಅಕ್ಷಯ ಸಂಪತ್ತನ್ನು ನೀಡುತ್ತಾನೆ. ಅವನು ನಿಮಗೆ ಅವಿನಾಶಿ ಖುಷಿ ಅನುಭವ ನೀಡಿ, ನಿಮಗರಿವಿಲ್ಲದೆಯೇ ಅದನ್ನು ನಿಮ್ಮ ಕೈಗಳಲ್ಲಿಡುತ್ತಾನೆ. ॥60॥ ತಾಯಿಯು ಒಂಭತ್ತು ತಿಂಗಳ ಕಾಲ ತನ್ನ ಗರ್ಭದಲ್ಲಿ ಧರಿಸಿ ಅನಂತರ ಜನ್ಮ ನೀಡಿ ಹೊರಗೆ ತರುತ್ತಾಳೆ. ಗುರುವು ತಾಯಿಯ ರೀತಿಗೆ ವಿರುದ್ಧ. ಅವನು ನಿನ್ನನ್ನು ಹೊರಗಿನ ನಿನ್ನತನದಿಂದ ಒಳಗಿನ ಆತ್ಮ ಸ್ಥಿತಿಗೆ ಕರೆದೊಯ್ಯುತ್ತಾನೆ. ॥61॥ ಅಂತ್ಯದಲ್ಲಿ 'ಗುರು, ಗುರು' ಎಂದು ಸದಾ ಸ್ಮರಿಸುತ್ತಾ ಇದ್ದಲ್ಲಿ ಶಿಷ್ಯನು ನಿಸ್ಸಂದೇಹವಾಗಿ ಸಾಯುಜ್ಯವನ್ನು ಪಡೆಯುತ್ತಾನೆ. ಗುರುವಿನ ಪ್ರೇರೇಪಣೆಯಿಂದಲೇ ಪೂರ್ಣಬ್ರಹ್ಮನಲ್ಲಿ ಅವನು ಐಕ್ಯವಾಗುತ್ತಾನೆ. ॥62॥ ಗುರುವಿನ ಕರಗಳ ಆಘಾತವು ಜನ್ಮ ಮರಣಗಳ ಚಕ್ರವನ್ನು ಬುಡಮೇಲಾಗಿಸುತ್ತದೆ. ಗುರುವಿನ ಕರಗಳ ತಾಡನದಿಂದ ದೇಹವೇನಾದರೂ ಅಂತ್ಯವನ್ನು ಕಂಡಲ್ಲಿ ಅಂತಹ ಶಿಷ್ಯನಿಗಿಂತ ಭಾಗ್ಯವಂತನು ಮತ್ತೆ ಯಾರು ಇದ್ದಾರೆ? ॥63॥ ಕೈಯಲ್ಲಿ ಖಡ್ಗ, ತೋಮರ, ರಾಜದಂಡ, ಶೂಲ ಅಥವಾ ಬೇರೆ ಯಾವುದಾದರೂ ಆಯುಧವನ್ನು ಹಿಡಿಯುವುದು ಗುರುವಿಗವಶ್ಯಕ. ಅದರ ಆಘಾತದಿಂದ ಶಿಷ್ಯನು ಶುದ್ಧನಾಗುತ್ತಾನೆ. ಮತ್ತು ಸತ್ಯಜ್ಞಾನದಿಂದ ಸದ್ಗುರುವಿನ ಮೂರ್ತಿಯನ್ನು ದರ್ಶಿಸುತ್ತಾನೆ. ॥64॥ ತಮ್ಮ ದೇಹವನ್ನು ಅದೆಷ್ಟು ಜತನ ಮಾಡಿದರೂ ಯಾವುದಾದರೂ ಒಂದು ಸಮಯದಲ್ಲಿ ಅದು ನಾಶಹೊಂದುತ್ತದೆ. ಆದ್ದರಿಂದ ಅದು ಗುರುವಿನ ಕೈಯಿಂದ ಪೆಟ್ಟು ತಿಂದಲ್ಲಿ ಪುನರ್ಜನ್ಮದಿಂದ ಬಿಡುಗಡೆಹೊಂದುತ್ತದೆ. ॥65॥ ಹೊಡಿ, ನನ್ನನ್ನು ಅಷ್ಟರಮಟ್ಟಿಗೆ ಹೊಡಿ. ಅದರಿಂದ ನಾನು ಸಾಯಬೇಕು ಮತ್ತು ಅದರಿಂದಾಗಿ ನನಗೆ ಪುನರ್ಜನ್ಮ ಇರಬಾರದು. ಸಹಿಸಲಸಾಧ್ಯವಾಗದಷ್ಟು ನನ್ನನ್ನು ಹೊಡಿ. ॥66॥ ನನ್ನ ಕರ್ಮ ಅಕರ್ಮಗಳನ್ನು ಸುಡು. ನನ್ನ ಧರ್ಮ, ಅಧರ್ಮ ವರ್ತನೆಗಳನ್ನು ಕೊನೆಗಾಣಿಸು. ಅದರಿಂದಾಗಿ ನಾನು ಪರಮಸುಖವನ್ನು ಪಡೆಯುವಂತಾಗಲಿ. ಈ ರೀತಿ ನನ್ನ ಮೋಹದಿಂದುಂಟಾದ ಭ್ರಮೆಯನ್ನು ಹರಿದು ಹಾಕಿ ಓಡಿಸು. ॥67॥ ನನ್ನ ಸಂಕಲ್ಪ ವಿಕಲ್ಪಗಳನ್ನು ಹೊಡೆದೋಡಿಸು ಮತ್ತು ನನ್ನನ್ನು ನಿರ್ವಿಕಲ್ಪನನ್ನಾಗಿ ಮಾಡು. ನನಗೆ ಪುಣ್ಯವೂ ಬೇಡ, ಪಾಪವೂ ಬೇಡ. ನನಗೆ ಮತ್ತೊಂದು ಜನ್ಮದ ಸಂಕಟಬೇಡ. ॥68॥ ನಿನಗೆ ಶರಣಾಗತನಾದಲ್ಲಿ, ನೀನು ನಾಲ್ಕು ದಿಕ್ಕುಗಳಲ್ಲೂ

ಇರುವೆ. ಪೂರ್ವದಲ್ಲಿ, ಪಶ್ಚಿಮದಲ್ಲಿ ಮತ್ತು ಎಲ್ಲ ದಿಕ್ಕುಗಳಲ್ಲಿ, ಮೇಲೆ ಆಕಾಶದಲ್ಲಿ ಮತ್ತು ಕೆಳಗೆ ಪಾತಾಳದಲ್ಲಿ ಎಲ್ಲೆಡೆಯೂ ನೀನಿರುವೆ. ॥69॥ ನೀನು ಎಲ್ಲ ಕಡೆಯಲ್ಲಿ ನೆಲೆಸಿರುವೆ. ನನ್ನಲ್ಲೂ ನೀನಿರುವೆ. ಮತ್ತಿನ್ನೇನು ಹೇಳಲಿ? ನನ್ನ ಮತ್ತು ನಿನ್ನ ನಡುವಿನಭೇದಭಾವದ ಯೋಚನೆಯಿಂದಲೇ ನನಗೆ ಸಂಕಟವಾಗುತ್ತದೆ. ॥70॥ ಆದುದರಿಂದ ಹೇಮಾಡನು ಅನನ್ಯನಾಗಿ ಶರಣಾಗಿದ್ದು ಸದ್ಗುರುವಿನ ಚರಣಗಳನ್ನು ಗಟ್ಟಿಯಾಗಿ ಹಿಡಿದಿದ್ದಾನೆ. ಪುನರ್ಜನ್ಮ - ಮರಣದ ಚಕ್ರದಿಂದ ಬಿಡುಗಡೆಹೊಂದಿ ತನ್ನ ಉದ್ಧಾರಹೊಂದುತ್ತಾನೆ. ॥71॥ ಹೇಮಾಡನನ್ನು ನಿಮಿತ್ತನನ್ನಾಗಿ ಮಾಡಿ, ಅವರು ತಮ್ಮದೇ ಜೀವನ ಚರಿತ್ರೆಯನ್ನು ಅಸಂಖ್ಯಾತ ಭಕ್ತರ ಉದ್ಧಾರಕ್ಕಾಗಿ, ತಾವೇ ಬರೆದಿದ್ದಾರೆ. ಇದೊಂದು ಅಪೂರ್ವವಾದ ಕಾರ್ಯವಲ್ಲವೆ? ॥72॥ ಈ ಶ್ರೀ ಸಾಯಿ ಸಮರ್ಥ ಚರಿತೆಯು ನನ್ನ ಕೈಯಿಂದ ಬರೆಯಲ್ಪಟ್ಟಿರುವುದೂ ಒಂದು ಅಘಟಿತ ಘಟನೆಯೇ ಸರಿ! ಸಾಯಿಯ ಕೃಪೆಯಿಲ್ಲದೆ ಇದ್ದಲ್ಲಿ ನನ್ನಂತಹ ಪಾಮರನಿಂದ ಈ ಕಾರ್ಯವು ಖಂಡಿತವಾಗಿಯೂ ಅಸಾಧ್ಯ. ॥73॥ ಅವರ ಜೊತೆಗಿನ ನನ್ನ ಸಹವಾಸವು ಬಹಳ ದಿವಸಗಳದ್ದಲ್ಲ. ನನಗೆ ಸಂತರನ್ನು ಅರಿಯುವ ಅನುಭವವಾಗಲಿ, ಅವರ ಸೂಕ್ಷ್ಮಗ್ರಹಣ ಶಕ್ತಿಯ ಅರಿವಾಗಲಿ ಇರಲಿಲ್ಲ. ಅದೂ ಅಲ್ಲದೆ ನಾನು ಯಾವಾಗಲೂ ಶೋಧಕ ಭಾವದಿಂದಲೇ ಇರುತ್ತಿದ್ದೆ ಮತ್ತು ಅವಿಶ್ವಾಸ ಪೂರ್ವಕವಾಗಿಯೇ ನೋಡುತ್ತಿದ್ದೆ. ॥74॥ ನಾನು ಎಂದಿಗೂಯಾರನ್ನೂ ಅನನ್ಯಭಾವದಿಂದ ಪೂಜಿಸಿರಲಿಲ್ಲ. ನಾನು ಎಂದಿಗೂ ಒಂದು ಕ್ಷಣವಾದರೂ ಭಜನೆ ಮಾಡಲು ಕುಳಿತಿಲ್ಲ. ಅಂತಹ ವ್ಯಕ್ತಿಯ ಕೈಯಿಂದ ತಮ್ಮ ಜೀವನ ಚರಿತ್ರೆಯನ್ನು ಬರೆಸಿ ಅವರು ತಾವು ಜನರಿಗಾಗಿ ಏನೆಲ್ಲ ಮಾಡಬಹುದೆನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ॥75॥ ಅವರು ತಮ್ಮದೇ ವಚನಗಳನ್ನು ಪೂರೈಸಲು ಸಾಯಿಯು ತಾವೇ ಈ ಗ್ರಂಥಕ್ಕಾಗಿ ಪ್ರಸಂಗಗಳನ್ನು ನೆನಪಿಗೆ ತಂದುಕೊಟ್ಟು ತಮ್ಮದೇ ಕಾರ್ಯವನ್ನು ಪೂರೈಸಿದ್ದಾರೆ. 'ಹೇಮಾಡ' ಅನ್ನುವುದು ಕೇವಲ ಹೆಸರಿಗೆ ಮಾತ್ರ. ॥76॥ ಒಂದು ಸೊಳ್ಳೆಯು ಮೇರುಪರ್ವತವನ್ನು ಎತ್ತಲು ಸಾಧ್ಯವೇ? ಅಥವಾ ಒಂದು ಟಿಟ್ಟಿಭ ಪಕ್ಷಿಯು ಸಾಗರವನ್ನು ಖಾಲಿಮಾಡಬಲ್ಲುದೆ? ಆದರೆ ಸದ್ಗುರುವಿನ ಆಶ್ರಯವಿರುವಾಗ ಅದ್ಭುತಗಳು ಸಂಭವಿಸಬಹುದು. ॥77॥ ಅದು ಹಾಗಿರಲಿ. ಈಗ ಶ್ರೋತೃಗಳೇ, ನಾನು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಗ್ರಂಥವು ಈಗ ಸಂಪೂರ್ಣವಾಗಿದೆ. ನಾನು ಸಾಯಿಯದನ್ನು ಸಾಯಿಗೇ ಸಮರ್ಪಿಸುತ್ತೇನೆ. ॥78॥ ನಾನು ಶ್ರೋತೃವೃಂದಕ್ಕೆ, ಹಿರಿಯರು, ಕಿರಿಯರು ಎಲ್ಲರಿಗೂ ಸಾಷ್ಟಾಂಗ ಪ್ರಣಾಮ ಸಲ್ಲಿಸುತ್ತೇನೆ. ನಿಮ್ಮ ಸಹವಾಸದಲ್ಲಿಯೇ ಈ ಸಾಯಿ ಚರಿತ್ರೆಯ ಕಥಾಸರಣಿಯು ಪೂರ್ಣಗೊಂಡಿದೆ. ॥79॥ ಇದನ್ನು ಪೂರ್ಣಮಾಡಲು ನಾನು ಯಾರು? ಇದು ಒಂದು ವ್ಯರ್ಥವಾದ ಅಹಂಕಾರ. ಏಕೆಂದರೆ ಸಾಯಿಯು ಸೂತ್ರಧಾರರು. ಹಾಗಿರುವಾಗ ನಾನು ಇದನ್ನು ಮಾಡಿದೆ ಎಂದು ಹೇಳಲು ನಾನು ಯಾರು? ॥80॥ ಆದ್ದರಿಂದ, ಎಲ್ಲಾ ಸಂಕಟಗಳಿಗೆ ಮೂಲಕಾರಣವಾದ ಅಹಂಕಾರವನ್ನು ತ್ಯಾಗಮಾಡಿ, ಮನೋಜ್ಞವಾದ ಮತ್ತು ಬೋಧಪ್ರದವಾದ ನಮ್ಮ ಗುರುವಿನಗುಣಗಳನ್ನು ಹಾಡಿ ಹೊಗಳೋಣ.

ಈಗ ನಾನು ಮಾತುಗಳ ಈ ಯಜ್ಞ(ವಾಗ್ಯಜ್ಞ)ವನ್ನು ಪೂರ್ಣಗೊಳಿಸುತ್ತೇನೆ. ॥81॥ ಈ ಗ್ರಂಥವು ಪೂರ್ಣವಾಯಿತು. ನನ್ನ ಮನೋರಥವು ಈಡೇರಿತು. ಸಾಯಿಯ ಕಾರ್ಯವು ಪರಿಪೂರ್ಣಗೊಂಡಿತು. ನನ್ನ ಜನ್ಮದ ಉದ್ದೇಶ ಸಾರ್ಥಕಗೊಂಡಿತು. ॥82॥ ಇಂತಹ ಗ್ರಂಥವನ್ನು ಮೊದಲಿನಿಂದ ಕೊನೆಯವರೆಗೆ ಸಮಗ್ರವಾಗಿ ಅಧ್ಯಯನ ಮಾಡಿದಲ್ಲಿ ಮನೋಕಾಮನೆಗಳು ಪೂರೈಸಲ್ಪಡುತ್ತವೆ. ಸದ್ಗುರುವಿ ಚರಣಗಳನ್ನು ಹೃದಯಕ್ಕೆ ಹತ್ತಿರವಾಗಿ ಧರಿಸಿದಲ್ಲಿ ಭವಸಾಗರವನ್ನು ದಾಟಬಹುದಾಗಿದೆ. ॥83॥ ರೋಗಿಗಳು ಆರೋಗ್ಯವಂತರಾಗುತ್ತಾರೆ. ದರಿದ್ರರು ಧನಿಕಾಗುತ್ತಾರೆ. ಸಂಕಲ್ಪ ವಿಕಲ್ಪಗಳಲ್ಲಿ ಹೊಯ್ದಾಡುತ್ತಿರುವವರೂ ಮನೋಸ್ಥೈರ್ಯವನ್ನು ಪಡೆಯುತ್ತಾರೆ. ಮತ್ತು ದೀನರು ಔದಾರ್ಯ ಹೊಂದುತ್ತಾರೆ. ॥84॥ ಈ ಗ್ರಂಥದ ಮತ್ತೆ ಮತ್ತೆ ಪಾರಾಯಣವು ಪಿಶಾಚಿಗಳ ಮತ್ತು ಅಪಸ್ಮಾರದ ಬಾಧೆಯನ್ನು ದೂರಮಾಡುತ್ತದೆ. ಅದನ್ನು ಶ್ರವಣ ಮಾಡಿದರೆ ಮೂಕರು, ಕುರುಡರು, ವಿಕಲಾಂಗರು ಮತ್ತು ಕಿವುಡರು ಸುಖಿ ಪಡೆಯುತ್ತಾರೆ. ॥85॥ ಯಾರು ಶಕ್ತಿವಂತ ಪರಮೇಶ್ವರನನ್ನು ಮರೆತು ಹೋಗಿರುವರೋ ಅವರು ಮತ್ತು ಅವಿದ್ಯೆಯಿಂದ ಮೋಹಿತರಾಗಿರುವರೋ ಅವರೂ ಸಹ ಉದ್ಧಾರವಾಗುತ್ತಾರೆ. ॥86॥ ಯಾರು ಮಾನವನಾದಾಗ್ಯೂ ರಾಕ್ಷಸರಂತೆ ವರ್ತಿಸುವರೋ, ತಮ್ಮ ದೇಹವನ್ನು ವ್ಯರ್ಥವಾದ ಜಗತ್ತಿನಲ್ಲಿ ಮಗ್ನಗೊಳಿಸುತ್ತಾರೋ, ಈ ಸಂಸಾರವನ್ನೇ ಸುಖದ ಗಣಿಯೆಂದು ನಂಬಿರುವರೋ ಅವರೂ ಸಹ ಉದ್ಧಾರವಾಗುತ್ತಾರೆ. ॥87॥ ಸಾಯಿನಾಥರ ಕಾರ್ಯಗಳು ಅಗಾಧ! ಹೇಮಾದನು ಅವರ ಚರಣಗಳಲ್ಲಿ ಶಾಶ್ವತವಾಗಿ ನೆಲೆಗೊಂಡಿದ್ದಾನೆ. ಅವನನ್ನು ತಮ್ಮ ಸೇವೆಯಲ್ಲಿ ಸಾಧನವನ್ನಾಗಿ ಮಾಡಿ ತಮ್ಮ ಈ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿಕೊಂಡರು. ॥88॥ ಅಂತಿಮವಾಗಿ, ಜಗತ್ತಿನ ಚಾಲಕನಾದ, ಪ್ರಬುದ್ಧಿಯನ್ನು ಪ್ರೇರೇಪಿಸುವ ಸದ್ಗುರುವಿನ ಚರಣಗಳಲ್ಲಿ ಪ್ರೇಮಪೂರ್ವಕವಾಗಿ ನನ್ನ ಮಸ್ತಕವನ್ನು, ಗ್ರಂಥವನ್ನೂ ಅವರಿಗೇ ಅರ್ಪಿಸಿದ್ದೇನೆ. ॥89॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾದಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ "ಗ್ರಂಥದ ಸಿಂಹಾವಲೋಕನ" ಎಂಬ ಐವತ್ತೆರಡನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ:

1. ದುರದೃಷ್ಟವಶಾತ್, ಹೇಮಾಡಪಂತನು ಮರಣಹೊಂದಿದನು. ಅವನ ಕಾಗದಗಳ ಜೊತೆಯಲ್ಲಿ ಗ್ರಂಥದ ಅನುಕ್ರಮಣಿಕೆಯು ಸಿಗಲಿಲ್ಲ. ಆದ್ದರಿಂದ, ಅದು ಒಬ್ಬ ದಕ್ಷ ಮತ್ತು ಅಮೂಲ್ಯ ಸಾಯಿಬಾಬಾ ಭಕ್ತ, ಶ್ರೀ ಬಿ. ವಿ. ದಿಯೋ ನಿವೃತ್ತ ಮಾಮಲೇದಾರನ ಕೈಯಲ್ಲಿ ರಚಿಸಲ್ಪಟ್ಟಿತು. ಈ ಅಧ್ಯಾಯದ ಟಿಪ್ಪಣಿಯು ತುಂಡು ಚೀಟಿಗಳಲ್ಲಿ ದೊರಕಿದವು. ಅದರಲ್ಲಿ ಕೆಲವು ಅಸ್ತವ್ಯಸ್ತವಾಗಿದ್ದವು. ಕೆಲವು ಅಪೂರ್ಣವಾಗಿದ್ದವು. ಕೆಲವು ಜಾಗಗಳಲ್ಲಿ ಸರಿಯಾಗಿ ಅರ್ಥಮಾಡಿಕೊಳ್ಳದಂತೆ ಇದ್ದವು.


ಹೇಮಾಡಪಂತನು ಈ ಅಧ್ಯಾಯದಿಂದ ಈ ಗ್ರಂಥವನ್ನು ಮುಕ್ತಾಯಗೊಳಿಸಲು ಯೋಜನೆ ಮಾಡಿದ್ದನೆಂದು ಕಂಡು ಬರುತ್ತದೆ. ಅದರಿಂದಾಗಿ ಈ ಗ್ರಂಥವು "ಶ್ರೀ ಗುರು ಚರಿತ್ರೆ"ಯ ರೀತಿಯಲ್ಲಿ ಕೇವಲ ಐವತ್ತು ಅಧ್ಯಾಯಗಳನ್ನು ಹೊಂದಿರುತ್ತಿತ್ತು.

ಹೇಮಾಡಪಂತನು ಈ ಗ್ರಂಥವನ್ನು ರಚಿಸಲು ಏಳು ವರುಷಗಳ ಕಾಲ ತೆಗೆದುಕೊಂಡನು ಎಂಬ ವಿಷಯವನ್ನು ಗಮನಿಸಬಹುದು.

2. ಅಗಸ್ತ್ಯ ಮುನಿಯು ಸಾಗರದಲ್ಲಿ ಅಡಗಿಕೊಂಡಿದ್ದ ಕಾಲಿಯ ಎಂಬ ರಾಕ್ಷಸನನ್ನು ಕೊಲ್ಲಲು ದೇವತೆಗಳ ವಿನಂತಿಯ ಮೇರೆಗೆ ಸಾಗರದ ನೀರನ್ನೆಲ್ಲ ಕುಡಿದನು ಎಂದು ಹೇಳುತ್ತಾರೆ.

3. ಎರಡೂ ಓವಿಗಳು 45 ಮತ್ತು 46ನೇ ಸಂಖ್ಯೆಯವು ನಿರಾಕರಿಸಲ್ಪಡುತ್ತವೆ. (ಓವಿ ಛಂದಸ್ಸಿನಲ್ಲಿ ರಚಿಸಲ್ಪಟ್ಟ ಶ್ಲೋಕಗಳು)

4. ಕೈ ಬರಹದ ಹಸ್ತಪ್ರತಿಯಲ್ಲಿ ಈ ಅಧ್ಯಾಯದ ಮುಕ್ತಾಯದ ಓವಿ ಛಂದಸ್ಸಿನ ಶ್ಲೋಕ ಹಿಂದಿನ ಅಧ್ಯಾಯಗಳಲ್ಲಿ ಹೇಳಿರುವ ಮುಕ್ತಾಯದ ಓವಿಯಾಗಿರಲಿಲ್ಲ.



# ಅಧ್ಯಾಯ - 53

॥ ಅಥಃ ಶ್ರೀ ಸಾಯಿ ಸಚ್ಚರಿತೆ ॥



## "ಅವತರಣಿಕೆ (ಸಂಕ್ಷಿಪ್ತ ನಿರೂಪಣೆ)"

ಶ್ರೀ ಗಣೇಶನಿಗೆ ಪ್ರಣಾಮಗಳು.
ಶ್ರೀ ಸರಸ್ವತಿಗೆ ಪ್ರಣಾಮಗಳು.
ಶ್ರೀ ಗುರುವಿಗೆ ಪ್ರಣಾಮಗಳು.
ಶ್ರೀ ಕುಲದೇವತೆಗೆ ಪ್ರಣಾಮಗಳು.
ಶ್ರೀ ಸೀತಾರಾಮಚಂದ್ರನಿಗೆ ಪ್ರಣಾಮಗಳು.
ಶ್ರೀ ಸದ್ಗುರು ಸಾಯಿನಾಥನಿಗೆ ಪ್ರಣಾಮಗಳು.

ಶ್ರೀ ಸಾಯಿಯು ಸಾಕ್ಷಾತ್ ಬ್ರಹ್ಮಸ್ವರೂಪರು. ಸಂತ ಚಕ್ರವರ್ತಿಗಳ ಸಾಮ್ರಾಟ. ಸಮರ್ಥ ಸದ್ಗುರು. ಅವರ ಕೀರ್ತಿಯು ದಶ ದಿಕ್ಕುಗಳಿಗೆಲ್ಲ ಹರಡಿರುವುದು. ಗುರು ಸಾರ್ವಭೌಮರು ಬುದ್ಧಿ ಮತ್ತು ಸ್ಫೂರ್ತಿಗಳೆರಡನ್ನೂ ದಯಪಾಲಿಸುವವರು. ॥1॥ ನಾನು ಅವರಲ್ಲಿ ಅನನ್ಯ ಭಾವದಿಂದ ಶರಣಾಗಿದ್ದೇನೆ. ಅವರ ಪುಣ್ಯ ಚರಣಗಳಲ್ಲಿ ವಂದಿಸುತ್ತೇನೆ. ಅವರು ಈ ಸಂಸಾರದ ಭಯವನ್ನು ನಿವಾರಿಸುವವರು ಮತ್ತು ಜನ್ಮ-ಮರಣಗಳ ವ್ಯೂಹವನ್ನು ಭೇದಿಸುವವರು. ॥2॥ ಹಿಂದಿನ ಅಧ್ಯಾಯದಲ್ಲಿ, "ಪ್ರಥಮವಾಗಿ ಸಿಂಹಾವಲೋಕನವನ್ನು ನೀಡುವೆ. ಅನಂತರ ಅವತರಣಿಕೆಯನ್ನು ಕೊಡುತ್ತೇನೆ" ಎಂದು ಈ ಗ್ರಂಥವನ್ನು ಸಂಪೂರ್ಣಗೊಳಿಸುವ ಮುನ್ನವೇ ವಚನ ನೀಡಿದ್ದೆ. ॥3॥ ಹೇಮಾದಪಂತರು ಈ ರೀತಿ ಹೇಳಿದ್ದರೂ ಅದು ಆ ರೀತಿ ನಡೆಯಲಿಲ್ಲ. ಅವತರಣಿಕೆಯ ರೂಪವನ್ನು ಕೊಟ್ಟಿರಲಿಲ್ಲ. ಅಥವಾ ಅದು ಲಕ್ಷ್ಯಕ್ಕೆ ಬರದೇ ಇರಬಹುದು. ॥4॥ ಯಾರು ಗ್ರಂಥ ರಚನೆಯನ್ನು ಪ್ರಾರಂಭಿಸಿರುತ್ತಾರೋ ಅವರೇ ಅದನ್ನು ಪೂರ್ಣಗೊಳಿಸಬೇಕು. ಮತ್ತು ಕೊನೆಯಲ್ಲಿ ಅವತರಣಿಕೆಯನ್ನು ಕೊಡಬೇಕು. ಇದು ಸರ್ವತ್ರ ಇರುವಂತಹ ನಿಯಮ. ॥5॥ ಆದರೆ ಒಂದು ನಿಯಮಕ್ಕೆ ಅನೇಕ ಅಪವಾದಗಳು ಇರುತ್ತವೆ. ಅದನ್ನು ಇಲ್ಲಿಯೇ ಕಾಣಬಹುದು. ನಾವು

ಇಚ್ಛಿಸಿದಂತೆ ಯಾವುದೂ ನಡೆಯುವುದಿಲ್ಲ. ಕೇವಲ ಬಾಬಾರವರ ಮನೋಗತವೇ ತಳ್ಳಿಹಾಕಬಲ್ಲುದು. ॥6॥ ಹೇಮಾಡನು ಅನಿರೀಕ್ಷಿತವಾಗಿ ಮರಣಹೊಂದಿದನು. ಪ್ರತಿಯೊಬ್ಬರೂ ದುಃಖಿತರಾದರು. ಅವತರಣಿಕೆಯು ಪತ್ತೆಯಾಗಲಿಲ್ಲ. ಕುರುಹು ಸಿಗಲಿಲ್ಲಪ್ರತಿಯೊಬ್ಬರೂ ಗಲಿಬಿಲಿಗೊಂಡರು. ॥7॥ ಅಣ್ಣಾಸಾಹೇಬನ ದಾಖಲೆಗಳು ಅಗಾಧವಾಗಿದ್ದು ಅದನ್ನು ಹುಡುಕುವುದು ಅತಿ ಪ್ರಯಾಸಕರವಾಗಿತ್ತು. ಅವರ ಮಗ ಶ್ರೀ ಗಜಾನನನು ಹುಡುಕಲು ಪ್ರಯತ್ನಿಸಿ ನನಗೆ ಅವಶ್ಯವಾಗಿದ್ದುದನ್ನು ಕೊಟ್ಟನು. ॥8॥ ಅಣ್ಣಾಸಾಹೇಬನು ಅತಿ ನಿಪುಣನಾಗಿದ್ದನು. ಒಂದು ಸಣ್ಣ ಚೀಟಿಯ ತುಂಡನ್ನೂ ವ್ಯರ್ಥ ಮಾಡುತ್ತಿರಲಿಲ್ಲ. ಅವನು ಸುವ್ಯವಸ್ಥೆಯಿಂದ ಶೋಭಾಯಮಾನವಾಗಿ ಕೆಲಸಮಾಡುತ್ತಿದ್ದನು. ಅದು ಅವನ ಸ್ವಭಾವವಾಗಿತ್ತು. ॥9॥ ಅವನು ಕಾಗದದ ಚೂರುಗಳಲ್ಲಿ ಒಂದು ಅಧ್ಯಾಯವನ್ನು ಬರೆದು, ಅದು ಇರುವ ಹಾಗೆಯೇ ಮುದ್ರಣಕಾರನಿಗೆಕೊಟ್ಟಿರುತ್ತಿದ್ದನು. ಅನವಶ್ಯಕವಾದ ಖರ್ಚು ಅವನಿಗೆ ನೋವುಂಟುಮಾಡುತ್ತಿತ್ತು. ಅವನನ್ನು ಮತ್ತೆ ಯಾರಿಗೂ ಹೋಲಿಸಲು ಸಾಧ್ಯವಿಲ್ಲ. ॥10॥ ಅವನಿಗೆ ಆ ನಿರ್ಜೀವ, ಅಸಹಾಯ ಕಾಗದದ ಚೂರುಗಳ ಮೇಲೆ ಕರುಣೆ ಉಕ್ಕಿಬಂದಿತ್ತು. 'ಅವುಗಳು ಸಂತರ ಕೇಸರಿಯಾದ ಶ್ರೀ ಸಾಯಿಬಾಬಾರವರ ಸೇವೆ ಮಾಡದ ಹೊರತು ಅವುಗಳ ಉದ್ಧಾರ ಹೇಗೆ ಆಗುತ್ತದೆ.' ॥11॥ ಹೇಮಾಡನು ಈ ರೀತಿ ಯೋಚಿಸಿದ್ದಿರಬಹುದು. ಆದ್ದರಿಂದಲೇ ಈ ಕಾಗದದ ತುಂಡುಗಳನ್ನೆಲ್ಲ ಒಟ್ಟುಮಾಡಿ ಅವುಗಳೂ ಸಹ ಸೇವೆ ಮಾಡಬಹುದೆಂದು ಯೋಚಿಸಿದ್ದನು. ಬಹುಶಃ ಅದು ಅವನ ಉದಾತ್ತವಾದ ಉದ್ದೇಶವಾಗಿದ್ದಿತು. ॥12॥ ಹಿಂದಿನ (ಅಂತಿಮ) ಅಧ್ಯಾಯವನ್ನು ಈ ರೀತಿಯಿಂದಲೇ ಮಾಡಿರಬೇಕು. ಅದಕ್ಕಾಗಿಯೇ ಸಣ್ಣಸಣ್ಣ ಕಾಗದದ ಚೂರುಗಳಲ್ಲಿ ಬರೆದಿಟ್ಟಿರಬೇಕು. ಈ ಸಮಸ್ಯೆಗಾಗಿ ಬಹಳ ರೀತಿಯ ಯೋಚನೆಗಳನ್ನು ಮಾಡಲಾಗಿತ್ತು. ಆದರೂ ಅವತರಣಿಕೆಯ ಈ ಕಾಗದದ ತುಂಡುಗಳು ಇತರೆ ಕಾಗದದ ಚೂರುಗಳ ಜೊತೆ ಸಿಗಲಿಲ್ಲ. ॥13॥ ಈ ವಿಷಯವನ್ನು ಗಜಾನನರಾವ್ ಮತ್ತಿತರರಿಗೆ ಹೇಳಲಾಯಿತು. ಅದನ್ನು ಬಾಬಾಸಾಹೇಬ ತರ್ಖಡರವರಿಗೂ ತಿಳಿಸಲಾಯಿತು. ಅವರು ಶಿರಡಿಸಂಸ್ಥಾನದ ಕೋಶಾಧ್ಯಕ್ಷರಾಗಿದ್ದರು. ಅವರೆಲ್ಲರೂ ಅವತರಣಿಕೆಯು ಇರಲೇಬೇಕೆಂಬ ಅಭಿಪ್ರಾಯ ಪಟ್ಟರು. ॥14॥ ಬಾಬಾಸಾಹೇಬರು ಒಂದು ಸಮಯದ ಪರಿಮಿತಿಯನ್ನು ನಿಗದಿಪಡಿಸಿ ಅದನ್ನು 'ಶ್ರೀಸಾಯಿಲೀಲ'ದಲ್ಲೂ ಪ್ರಕಟಿಸಿ ಪ್ರಚುರಗೊಳಿಸಿದರು. ಸಮಯವು ಕಳೆಯಿತು. ಆದರೂ ಅವತರಣಿಕೆಯು ಪ್ರಕಟಗೊಳ್ಳಲಿಲ್ಲ. ॥15॥ ಹೇಮಾಡ ಗೋವಿಂದನು ಸದ್ಗುಣಗಳ ಗಣಿಯೆ ಆಗಿದ್ದನು. ಅವನಿಗೆ ವೇದಾಂತವು ಬಾಯಿಪಾಠವಾಗಿ ಬರುತ್ತಿತ್ತು ಮತ್ತು ಅದು ಅವನ ಅಧೀನದಲ್ಲಿತ್ತು. ಅವನ ಗ್ರಂಥವು ಗುರುಕೃಪೆಯನ್ನು ಪ್ರಸಾದವಾಣಿಯಂತೆ ಪ್ರಕಟಿಸಿತ್ತು. ಗುರುಕೃಪೆಯು ನಿಜವಾಗಿಯೂ ಅದ್ಭುತವೇ ಸರಿ. ॥16॥ ಸದ್ಗುರು ಸಾಯಿಯಭಕ್ತರು ಅಸಂಖ್ಯಾತರು. ಅವರಲ್ಲಿ ಹೇಮಾಡಪಂತನು ಕವಿರತ್ನ. ಅವನಷ್ಟು ಪ್ರಜ್ಞಾವಂತರು ಮಾತ್ರವೇ ಇದನ್ನು ಬರೆಯಲು ಸಾಧ್ಯ. ॥17॥ ಅವತರಣಿಕೆಯು ಎಲ್ಲಿಂದಲೂ ಪ್ರಕಟಗೊಳ್ಳಲಿಲ್ಲ. ನನ್ನ ಮನಸ್ಸು ಬಹಳ

ಖಿನ್ನವಾಯಿತು. ನಾನು ದತ್ತ ಗುರು ಶ್ರೀಸಾಯಿಬಾಬಾರವರನ್ನು ಪ್ರಾರ್ಥಿಸಿದೆ, ಮತ್ತು ಅವರ ಕರುಣೆಗಾಗಿ ಶ್ರದ್ಧಾಪೂರ್ವಕವಾಗಿ ಬೇಡಿಕೊಂಡೆ. ॥18॥ ನಾನಾದರೋ ಪಾಮರ ಮತ್ತು ಮಂದಬುದ್ಧಿಯವನು. ನನಗೆ ವಿಚಾರ ಕುಶಲತೆಯಾಗಲಿ ವಿದ್ಯೆಯ ಗಂಧವಾಗಲೀ ಇಲ್ಲ. ಓವೀ ಕಾವ್ಯ ಪ್ರಬಂಧದ ಜ್ಞಾನವಿಲ್ಲದ ನಾನು ಕವಿತ್ವವನ್ನು ಹೇಗೆ ರಚಿಸಲಿ? ॥19॥ ಆದರೆ ನನಗೆ ಒಂದು ಆಧಾರವಿತ್ತು. ಯಾವಾಗ ಶ್ರೀಗುರುವು ನನಗೆ ಅನುಕೂಲವಾಗಿರುವರೋ ಆಗ ಮೇರುಪರ್ವತವನ್ನು ಒಂದು ಸೊಳ್ಳೆಯ ರೀತಿಯಲ್ಲಿ ಮೇಲೆತ್ತಬಹುದು. ಅವರ ಶಕ್ತಿಯು ಅಪಾರ. ॥20॥ಪುನಃ ನಾನು ಉಮಾ ರಮಣನಾದ ಶಿವನನ್ನು ಪ್ರಾರ್ಥಿಸಿದೆನು. ಅದ್ದರಿಂದ ಸಾಯಿನಾರಾಯಣನು ನನ್ನ ಮೇಲೆ ಕೃಪೆ ತೋರಿ ನನ್ನ ಬುದ್ಧಿಯನ್ನು ಪ್ರೇರೇಪಿಸಿ ಅವತರಣಿಕೆಯನ್ನು ಕೂಡಲೇ ಬರೆಯುವಂತಾಗಲಿ. ॥21॥ ನನಗೆ ಕಾವ್ಯ ರಚಿಸುವ ಶಕ್ತಿಯಿಲ್ಲ. ಶ್ರೀಗುರುರಾಯರಿಗೆ ನನ್ನ ಬುದ್ಧಿಯ ಪರಿಮಿತಿಯ ಅರಿವಿದೆ. ನನ್ನ ತಲೆಯನ್ನು ಅವರ ಚರಣಗಳಲ್ಲಿಟ್ಟು ಅವತರಣಿಕೆಯನ್ನು ಬರೆಯಲು ಪ್ರಾರಂಭಿಸುತ್ತೇನೆ. ॥22॥ ಶ್ರೀ ಸಾಯಿ ಸಚ್ಚರಿತೆ ಗ್ರಂಥದ ಈ ಭಾಗ ಅಂದರೆ ಅವತರಣಿಕೆಯು ಸಾಯಿವಕ್ರತುಂಡ(ಗಣಪತಿ)ನಿಂದ ರಚಿಸಲ್ಪಡುತ್ತದೆ. ಅವನ ವೈಭವವು ಅದ್ಭುತ ಹಾಗೂ ಪ್ರಚಂಡ, ನನ್ನ ಬಾಯಿಯು ಕೇವಲ ಅವನ ನಿಮಿತ್ತಮಾತ್ರ. ॥23॥ ಮೊದಲನೆಯ ಅಧ್ಯಾಯದಲ್ಲಿ ಮಂಗಳಾಚರಣ. ವಿಘ್ನಗಳನ್ನು ನಿವಾರಿಸುವಂತಹ ಮತ್ತು ವಿಶ್ವಕ್ಕೆ ಕಾರಣನಾದವನಿಗೆ, ಗೌರೀಶಂಕರನ ಕೊರಳಹಾರದಂತಿರುವವನಿಗೆ, ಶ್ರೀ ಗಜವದನನಿಗೆ ನಮಿಸುತ್ತೇನೆ. ॥24॥ ಅಭಿನವ ವಾಗ್ವಿಲಾಸಿನಿ, ನಾಲ್ಕು ಕಲೆಗಳಲ್ಲೂ ಅಧಿಷ್ಠಾತ್ರಿಯೂ, ವಿಶ್ವಮೋಹಿನಿಯೂ ಆದ ಶ್ರೀಶಾರದಾದೇವಿಗೆ, ಇಷ್ಟಾರ್ಥಗಳನ್ನು ದಯಪಾಲಿಸುವವಳಿಗೆ ಪ್ರಣಾಮಗಳು. ॥25॥ ಕುಲ ಗುರುಗಳಿಗೆ, ಆಪ್ತರಿಗೆ, ಇಷ್ಟರಿಗೆ, ಗುರು ಜನರಿಗೆ, ಸಗುಣಾವತಾರ ಸ್ವರೂಪಿ ಸಂತರಿಗೆ, ಸಜ್ಜನರಿಗೆ, ಸಾಯಿ ಭಗವಾನರಿಗೆ ನಮಿಸುತ್ತ ಮೋಕ್ಷವನ್ನು ದಯಪಾಲಿಸುವ ಸದ್ಗುರುವಿಗೆ ಶರಣಾಗತರಾಗೋಣ. ॥26॥ ಗೋಧಿಯನ್ನು ಬೀಸುವ ಕಥೆಯನ್ನು ನಿರೂಪಿಸುತ್ತ ಹೇಗೆ ಕಾಲರಾ ಮಹಾಮಾರಿಯು ಪೂರ್ಣವಾಗಿ ಉಪಶಮನವಾಯಿತು ಎಂಬುದನ್ನು ವಿವರಿಸಲಾಗಿದೆ. ಮತ್ತು ಸಾಯಿಯವರ ಸಾಮರ್ಥ್ಯವನ್ನೂ ಮಹತ್ತನ್ನೂ ವರ್ಣಿಸಲಾಗಿದೆ. ॥27॥ ಎರಡನೆಯ ಅಧ್ಯಾಯದಲ್ಲಿ ಈ ಗ್ರಂಥದ ಪ್ರಯೋಜನವನ್ನು ಕೊಟ್ಟಿದೆ. ಜೊತೆಗೆ ಹೇಮಾದ ಪಂತನ ನಾಮಕರಣ, ಗುರುವಿನಅವಶ್ಯಕತೆಯ ಬಗೆಗಿನ ವಿವಾದದ ಖಂಡನೆ ಮತ್ತು ಹೇಮಾದನ ಮೊದಲ ದರ್ಶನ – ಈ ವಿಷಯಗಳೂ ವರ್ಣಿಸಲ್ಪಟ್ಟಿವೆ. ॥28॥ ಈ ಗ್ರಂಥವನ್ನು ಬರೆಯಲು ಸಾಯಿಯ ಮುಖದಿಂದಲೇ ನೀಡಿದ ಅನುಜ್ಞೆಯನ್ನು ಮತ್ತು ರೋಹಿಲನ ವೃತ್ತಾಂತದ ಕಥನವನ್ನು ಮೂರನೆಯ ಅಧ್ಯಾಯದಲ್ಲಿಸಂಪೂರ್ಣವಾಗಿ ವಿವರಿಸಲಾಗಿದೆ. ॥29॥ ಮುಂದೆ, ಜಗತ್ತಿನ ಚಾಲಕನ ಕಂಠಾಭರಣಗಳಂತೆ ಇರುವ ಸಾಧು ಸಂತರ ಅವತರಣ ಈ ಭೂಮಂಡಲದಲ್ಲಿ ಉಂಟಾಗುವ ಕಾರಣಗಳನ್ನು ವಿಸ್ತಾರವಾಗಿ ತಿಳಿಸಿದೆ. ॥30॥ ಅತ್ರಿಯ ಪುತ್ರ, ದತ್ತನ ಅವತಾರ, ಸಾಕ್ಷಾತ್ ಕಲ್ಪವೃಕ್ಷವೇ ಆಗಿರುವ ಸಾಯಿಯು ಶಿರಡಿ ಕ್ಷೇತ್ರಕ್ಕೆ ಪ್ರಥಮ ಬಾರಿಗೆ

ಬಂದ ವಿಷಯವೆಲ್ಲವನ್ನೂ ಸಮಗ್ರವಾಗಿ ನಾಲ್ಕನೆಯ ಅಧ್ಯಾಯದಲ್ಲಿ ವರ್ಣಿಸಲಾಗಿದೆ. ॥31॥ ಶಿರಡಿ ಕ್ಷೇತ್ರದಿಂದ ಮರೆಯಾದುದು ಮತ್ತು ಪುನಃ ಶ್ರೀಮಂತನಾದ ಚಾಂದ ಪಾಟೀಲನ ಜೊತೆಯಲ್ಲಿ ಪ್ರಕಟಹೊಂದಿದುದು ಎಲ್ಲರಿಗೂ ವಿಸ್ಮಯವನ್ನುಂಟು ಮಾಡಿತು. ॥32॥ ಗಂಗಾಗೀರ್ ಮತ್ತಿತರ ಸಂತರ ಸಮ್ಮೇಳನ, ತನ್ನ ತಲೆಯ ಮೇಲೆ ದೂರದಿಂದ ಮಡಕೆಯಲ್ಲಿ ನೀರನ್ನು ಹೊತ್ತುಕೊಂಡು ಬಂದು ಒಂದು ತೋಟವನ್ನು ನಿರ್ಮಾಣಮಾಡಿದ ವಿಷಯವೆಲ್ಲವನ್ನೂ ಸಂಪೂರ್ಣವಾಗಿ ಐದನೆಯ ಅಧ್ಯಾಯದಲ್ಲಿ ನಿರೂಪಿಸಲಾಗಿದೆ. ॥33॥ ರಾಮನವಮಿಯಂತಹ ಮಹಾನ್ ಉತ್ಸವದಲ್ಲಿ ಬಾಳಾ ಬುವಾನು ಕೀರ್ತನಕಾರನಾದುದು, ಮತ್ತು ಮಸೀದಿ ಮಾಯಿಯ ಜೀರ್ಣೋದ್ಧಾರದ ಕಥನವೂ ಸವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ॥34॥ ಮುಂದಿನದು ಬಾಬಾರವರ ಸಮಾಧಿ, ಖಂಡಯೋಗ, ಧೋತಿ, ಪೋತಿ ಇತ್ಯಾದಿ ಪ್ರಯೋಗಗಳ ಬಗ್ಗೆ ವಿವರಿಸಿದೆ. ಬಾಬಾರವರು ಹಿಂದುವೋ ಅಥವಾ ಮುಸ್ಲಿಮರೋ ಎಂಬುದರ ಬಗ್ಗೆ ಮತ್ತು ಸಂತರ ಅದ್ಭುತವಾದ ಅಂತರಾತ್ಮದ ಸ್ಥಿತಿಯ ಬಗ್ಗೆ ತಿಳಿಸುತ್ತದೆ. ॥35॥ ಬಾಬಾರವರ ವೇಷ–ಭೂಷಣ, ವರ್ತನೆ, ಔಷಧಿಗಳನ್ನು ನೀಡುವುದು, ಚಿಲುಮೆಯನ್ನು ಸೇದುವುದು. ಅವರ ಜಾತಿ, ಧುನಿ, ದೀಪಗಳು, ಅವರ ಅನಾರೋಗ್ಯ ಮತ್ತು ಅವರ ಸೇವೆ – ಇವುಗಳೆಲ್ಲದರ ನೋಟವು ಅಗಮ್ಯವಾಗಿದ್ದವು! ॥36॥ ಭಾಗೋಜಿ ಸಿಂಧೆಯ ಕುಷ್ಠರೋಗ, ಖಪರ್ಡೆಯ ಮಗನಿಗೆ ಉಂಟಾದ ಗ್ರಂಥಿಜ್ವರ(ಪ್ಲೇಗ್)ಕ್ಕೆ ಔಷಧಿ, ಮತ್ತು ನಾನಾ ಸಾಹೇಬ ಚಂದೋರಕರನ ಪಂಢರಿಯ ದರ್ಶನದ ಆಕಾಂಕ್ಷೆ ಇವೆಲ್ಲವನ್ನೂ ಪಂಡಿತೋತ್ತಮನಾದ ಕವಿ ಹೇಮಾಡಪಂತನು ಅತ್ಯುತ್ತಮವಾಗಿ ವರ್ಣಿಸಿದ್ದಾನೆ. ॥37॥ ಮಾನವ ಜನ್ಮದ ಅಪೂರ್ವ ಮಹಿಮೆ, ಸಾಯಿಯ ಭಿಕ್ಷಾವೃತ್ತಿಯ ವರ್ಣನೆ, ಬಾಯಜಾ ಬಾಯಿಯ ಸಂತ ಸೇವೆ ಹಾಗೂ ಬಾಬಾರವರಿಗೆ ಸ್ವತಃ ಕೈಗಳಿಂದಲೇ ಭೋಜನವನ್ನು ಮಾಡಿಸುವುದು; ॥38॥ ಬಾಬಾರವರು, ತಾತ್ಯಾಪಾಟೀಲ, ಕೋತೆ ಮತ್ತು ಮ್ಹಾಳಸಾಪತಿ ಮೂವರೂ ರಾತ್ರಿ ವೇಳೆ ಮಸೀದಿಯಲ್ಲಿ ಮಲಗುತ್ತಿದ್ದುದು ಮತ್ತುಖುಬ್ಬರ ಮೇಲೆ ಸರಿಸಮಾನವಾದ ಪ್ರೀತಿಯನ್ನು ಬಾಬಾರವರು ತೋರಿಸುತ್ತಿದ್ದುದು; ॥39॥ ಅಲ್ಲದೆ ಶಾಂತಿ ಮತ್ತು ಜ್ಞಾನದಿಂದ ತುಂಬಿದ ಬಾಬಾರವರ ಮತ್ತು ರಾಹತಾ ಹಳ್ಳಿಯ ಖುಶಾಲ ಚಂದನ ಮಧ್ಯೆ ಇದ್ದ ಪರಸ್ಪರ ಪ್ರೇಮ ಸಂಬಂಧವು ಎಂಟನೆಯ ಅಧ್ಯಾಯದಲ್ಲಿ ಸಂತೋಷಕರವಾಗಿ ನಿರೂಪಿಸಲ್ಪಟ್ಟಿದೆ. ॥40॥ ಭಕ್ತಶ್ರೇಷ್ಠರಾದ ತಾತ್ಯಾಸಾಹೇಬ ನೂಲ್ಕರ್ ಮತ್ತು ತಾತ್ಯಾ ಪಾಟೀಲ ಮತ್ತು ಒಬ್ಬ ಆಂಗ್ಲ ಗೃಹಸ್ಥನು ಇವರೆಲ್ಲರೂಬಾಬಾರವರ ಆಜ್ಞೆ ಪಾಲಿಸದಿದ್ದುದಕ್ಕೆ ಯಾವ ರೀತಿ ಘೋರ ಪ್ರಾಯಶ್ಚಿತ್ತವಾಯಿತು. ॥41॥ ಯಾವ ರೀತಿ ಬಾಬಾರವರು ಭಿಕ್ಷಾನ್ನವನ್ನು ಸೇವಿಸುವ ಮೊದಲು ಪಂಚ ಮಹಾಯಜ್ಞಗಳನ್ನು ಮಾಡುತ್ತಿದ್ದರು, ಯಾವ ರೀತಿ ಬಾಬಾರವರು ಭಿಕ್ಷಾಟನೆ ಮಾಡಲು ಅಧಿಕಾರ ಸಂಪನ್ನರಾಗಿದ್ದರು ಇವೆಲ್ಲವನ್ನೂ ಚತುರತೆಯಿಂದ ವರ್ಣಿಸಲಾಗಿದೆ. ॥42॥ ಮತ್ತು ಯಾವ ರೀತಿ ಕಟ್ಟಾ ಪ್ರಾರ್ಥನಾ ಸಮಾಜವಾದಿಯಾಗಿದ್ದ ಹೆಸರಾಂತ ಬಾಬಾ ಸಾಹೇಬ ತರ್ಖಡನು ಅತ್ಯಂತ ನಿಷ್ಠಾವಂತ ಸಾಯಿ

ಭಕ್ತನಾದನು ಎಂಬ ಉತ್ಕೃಷ್ಟ ಕತೆಯನ್ನು ಒಂಭತ್ತನೆಯ ಅಧ್ಯಾಯದಲ್ಲಿ ಕೊಟ್ಟಿದೆ. ॥43॥ ಯೋಗೇಶ್ವರರಾದ ಬಾಬಾರವರ ಹಾಸಿಗೆಯು ಒಂದು ಉದ್ದವಾದ ಮಣೆ ನಾಲ್ಕು ಕೈ ಅಳತೆ ಉದ್ದವಾಗಿದ್ದು, ಒಂದು ಗೇಣು (9 ಅಂಗುಲ) ಅಗಲವಾಗಿದ್ದು ಮೇಲ್ಛಾವಣಿಯಿಂದ ನೇತಾಡುತ್ತಲಿತ್ತು. ॥44॥ ಬಾಬಾರವರು ಶಿರ್ಡಿಗೆ ಮೊದಲು ಬಂದಾಗಿನ ವಿವರ, ಇಲ್ಲಿ ಎಷ್ಟು ವರ್ಷಗಳಿಂದ ವಾಸ್ತವ್ಯ ಹೂಡಿದ್ದರು ಮತ್ತು ಯಾವಾಗ ಅವರು ಈ ಭೌತಿಕ ದೇಹವನ್ನು ತ್ಯಜಿಸಿದರು ಎಂಬುದೆಲ್ಲವನ್ನೂ ಹೃದಯಂಗಮವಾಗಿ ನಿರೂಪಿಸಲಾಗಿದೆ. ॥45॥ ಅಂತರಂಗದಲ್ಲಿ ಶಾಂತರಾಗಿ ವಿಕಾರರಹಿತ ಸ್ಥಿತಿಯಲ್ಲಿದ್ದರೂ, ಹೊರನೋಟಕ್ಕೆ ಕಠೋರ ಪ್ರವೃತ್ತಿಯನ್ನು ತೋರಿಸುತ್ತ ನಿತ್ಯವೂ ಚಿತ್ತದಲ್ಲಿ ಲೋಕದ ಜನರನ್ನು ಒಟ್ಟಾಗಿ ಒಂದುನಿಶ್ಚಿತ ಮಾರ್ಗದಲ್ಲಿ ನಡೆಸುವುದೇ ಗುರುರಾಯರ ತಪ್ಪದ ರೀತಿಯಾಗಿತ್ತು. ॥46॥ ವೇದಶಾಸ್ತ್ರಗಳನ್ನು ಮತ್ತು ಧರ್ಮಲಕ್ಷಣಗಳನ್ನು ಪರಮಾರ್ಥ ಮತ್ತು ವ್ಯವಹಾರದ ಶಿಕ್ಷಣ ಮತ್ತು ಭಕ್ತರ ಹಾಗೂ ಭಕ್ತರಲ್ಲದವರ ಚಿತ್ತವನ್ನು ಪರೀಕ್ಷಿಸುವುದು ಇವೆಲ್ಲವೂ ಸದ್ಗುರುವಿನ ಪ್ರಚಂಡ ಚಾಣಕ್ಯೆಯಾಗಿತ್ತು. ॥47॥ ಬಾಬಾರವರ ನಿತ್ಯ ಆಸನ, ಬಾಬಾರವರ ಜ್ಞಾನ, ಬಾಬಾರವರ ಧ್ಯಾನ ಮತ್ತು ಬಾಬಾರವರ ಸ್ನಾನ, ಅವರ ಸಾಮರ್ಥ್ಯ ಹಾಗೂ ಅವರ ಮಹಿಮೆ ಇವುಗಳ ಸಂಪೂರ್ಣ ವರ್ಣನೆಯು ಹತ್ತನೆಯ ಅಧ್ಯಾಯದಲ್ಲಿ ಬಂದಿದೆ. ॥48॥ ಬಾಬಾರವರು ಸದಾ ಸಚ್ಚಿದಾನಂದಸ್ವರೂಪದ ಸ್ಥಿತಿಯಲ್ಲೇ ಇರುವುದು ಎಲ್ಲೆಡೆಯಲ್ಲಿಯೂ ಪ್ರಖ್ಯಾತಿ ಹೊಂದಿತ್ತು. ಡಾಕ್ಟರ್ ಪಂಡಿತನ ಪ್ರೀತಿಯ ಭಕ್ತಿ ಮತ್ತು ಸಿದ್ಧಿಕ್(ಫಾಲ್ಕೆ)ನ ವರ್ತನೆ ಎಲ್ಲವೂ ವರ್ಣಿಸಲ್ಪಟ್ಟಿವೆ. ॥49॥ ಮೋಡಗಳ ಮೇಲಿನ ಅವರ ಅಧಿಕಾರ, ಬೆಂಕಿಯ ಮೇಲಿನ ಅವರ ವಿಲಕ್ಷಣ ಶಕ್ತಿ ಮತ್ತು ಬಿರುಗಾಳಿಯಿಂದ ಅವರು ರಕ್ಷಣೆ ಮಾಡಿದ ವಿಷಯಗಳು ಹನ್ನೊಂದನೆಯ ಅಧ್ಯಾಯದಲ್ಲಿ ರಸವತ್ತಾಗಿ ವರ್ಣಿಸಲ್ಪಟ್ಟಿವೆ. ॥50॥ ಕಾಕಾ ಮಹಾಜನಿ, ಧುಮಾಲ (ನಾಸಿಕ್‌ನ ವಕೀಲ), ನಾನಾ ಸಾಹೇಬ ನಿಮೋಣಕರ್, ಒಬ್ಬ ಮಾಮಲೇದಾರ ಮತ್ತು ಒಬ್ಬ ವೈದ್ಯ (ಡಾಕ್ಟರ್) – ಇವರ ಬಗೆಗಿನ ಭಿನ್ನ ಭಿನ್ನ ಪ್ರಕಾರದ ಪ್ರಸಂಗಗಳು ಮಧುರ ವಾಣಿಯಲ್ಲಿ ವರ್ಣಿಸಲ್ಪಟ್ಟಿವೆ. ॥51॥ ಮತ್ತು ನಾಸಿಕ್‌ನ ಅಗ್ನಿಹೋತ್ರಿಯಾಗಿ ಸಂಶಯ ಭರಿತನಾದ ಮತ್ತು ಸಂತ ಘೋಲಾಪ ರಾಮನ ಅನುಯಾಯಿಯಾದ 'ಮುಳೆ'ಗೆ ನೀಡಿದ ವಿಶಿಷ್ಟವಾದ ಸಾಯಿದರ್ಶನದ ಬಗ್ಗೆ ಹನ್ನೆರಡನೆಯ ಅಧ್ಯಾಯದಲ್ಲಿ ನಿರೂಪಣೆ ಇದೆ. ॥52॥ ಬಾಳಾ ಶಿಂಪಿಯ ಮಲೇರಿಯಾ ಜ್ವರವನ್ನು ಕಪ್ಪುನಾಯಿಗೆ ಮೊಸರನ್ನವನ್ನು ತಿನ್ನಿಸಿ ಗುಣಪಡಿಸಿದುದು, ಬಾಪುಸಾಹೇಬ(ಬೂಟಿ)ನ ಮಹಾಮಾರಿ (ಕಾಲರಾ) ರೋಗವನ್ನು ಅಕ್ರೋಟ್ ಮತ್ತು ಪಿಸ್ತಗಳನ್ನು ತಿನ್ನಿಸಿ ಉಪಶಮನಗೊಳಿಸುದುದು; ॥53॥ ಆಳಂದಿಯ ಸ್ವಾಮಿಯು ಕಿವಿಯ ರೋಗದಿಂದ ನರಳುತ್ತಿದ್ದು ಅದನ್ನು ಕೇವಲ ಆಶೀರ್ವಚನಗಳಿಂದ ಗುಣಪಡಿಸಿದುದು, ಕಾಕಾ ಮಹಾಜನಿಯ ಭೇದಿಯನ್ನು ಕಡಲೆಕಾಯಿಬೀಜ ನೀಡಿ ಗುಣಪಡಿಸಿದುದು. ॥54॥ ಹರ್ದಾದ ಭಕ್ತನಾದ ದತ್ತೋಪಂತ ತೀವ್ರವಾದ ಹೊಟ್ಟೆನೋವಿನಿಂದ ನರಳುತ್ತಿರಲು, ಸಮಸ್ತಜನರು ನೋಡುತ್ತಿರಲು ಅವಘಡುರಿಗೆ ಆಶೀರ್ವಚನಗಳಿಂದಲೇ

ಅವನನ್ನು ಗುಣಪಡಿಸಿದುದು. ॥55॥ ಮತ್ತೊಬ್ಬ ಭೀಮಾಜಿ ಪಾಟೀಲನಿಗೆ ತೀವ್ರವಾದ ಕಫ ಕ್ಷಯವು ಇದ್ದು ಉದಿಯ ಲೇಪನದಿಂದ ಅವನು ಗುಣಹೊಂದಿದುದು. ಇವೆಲ್ಲವನ್ನೂ ಹದಿಮೂರನೆಯದರಲ್ಲಿ ವಿವರಿಸಲಾಗಿದೆ. ॥56॥ ನಾಂದೇಡಿನ ಪಾರಸಿ, ಸೇಟ್ ರತನಜಿಯು ಹೆಸರಾಂತ ವ್ಯಾಪಾರಿಯು, ಪುತ್ರ ಸಂತಾನವಿಲ್ಲದೆ, ಅತ್ಯಂತ ಖಿನ್ನ ಮನದವನಾಗಿದ್ದನು. ಅವನಿಗೆ ಪುತ್ರ ಸಂತಾನವನ್ನು ದಯಪಾಲಿಸಲು, ಅವನ ಹರ್ಷವು ಮುಗಿಲಿಗೇರಿತು. ॥57॥ ನಾಂದೇಡ್ ಪಟ್ಟಣದ ಸಂತಮೌಳಿಸಾಹೇಬನು ಕೂಲಿಕೆಲಸಮಾಡುತ್ತಿದ್ದು ಗುರುತು ಮರೆಮಾಡಿ ಇದ್ದವನು ಸಾಯಿಯಿಂದ ಬಂದಂತಹ ಸಂಕೇತದಿಂದ ಎಲ್ಲರಿಗೂ ಪರಿಚಿತನಾದನು. ಹದಿನಾಲ್ಕನೆಯ ಅಧ್ಯಾಯದಲ್ಲಿ ಅದೊಂದು ಅದ್ಭುತ ಚರಿತ್ರೆ. ॥58॥ ನಾರದೀಯ ಕೀರ್ತನ ಪದ್ಧತಿಯನ್ನು ಬಾಬಾರವರು ದಾಸಗಣುವಿಗೆ ಹೇಳಿದ್ದರು. ಚೋಳ್ಕರನಿಗೆ ತುಂಬ ಸಕ್ಕರೆ ಹಾಕಿದ ಚಹಾವನ್ನು ಕೊಟ್ಟು ಅವನ ವ್ರತಕ್ಕೆ ಪ್ರತಿಫಲ ನೀಡಿದರು. ॥59॥ ಔರಂಗಾಬಾದ್‌ನಿಂದ ಬಂದು ಹಲ್ಲಿಯು ಬಂದು ಮಸೀದಿಯಲ್ಲಿ ಮತ್ತೊಂದನ್ನು ಭೇಟಿಮಾಡಿದ್ದು ಮತ್ತು ಅವುಗಳ ಚುರಚುರಗುಟ್ಟುವ (ಮಾತುಗಳ) ಕಥೆಯನ್ನು ಹದಿನೈದನೆಯ ಅಧ್ಯಾಯದಲ್ಲಿ ನಿರೂಪಿಸಲಾಗಿದೆ. ॥60॥ ಸಂತತಿ, ಸಂಪತ್ತಿಗಳಿಂದ ಸಂಪನ್ನನಾದ ಒಬ್ಬ ಗೃಹಸ್ಥನು ಸಾಯಿಯವರ ಯಶೋದುಂದುಭಿಯನ್ನು ಕೇಳಿ ಶಿರಡಿಗೆ ಬ್ರಹ್ಮಜ್ಞಾನ ಪ್ರಾಪ್ತಿಗೆಂದು ಬಂದನು. ॥61॥ ಬ್ರಹ್ಮಪ್ರಾಪ್ತಿಯನ್ನು ಇಚ್ಛಿಸುವವನು ಸಂಸಾರದಲ್ಲಿ ವಿರಕ್ತಿಯನ್ನು ಹೊಂದಿರಬೇಕು. ಪ್ರಪ್ರಥಮವಾಗಿ ಧನಾಸಕ್ತಿಯನ್ನು ಚಿತ್ತದಿಂದ ದೂರಮಾಡಬೇಕು. ॥62॥ ಆದರೆ ಅವನು ಬಾಬಾರವರಿಗೆ ಕೇವಲ ಐದು ರೂಪಾಯಿಗಳನ್ನು ಅದೂ ಸ್ವಲ್ಪಸಮಯಕ್ಕಾಗಿ ಸಾಲಕೊಡಲಾರದೇ ಹೋದನು. ಅವನು ಬಟ್ಟೆಯಲ್ಲಿ ಅತಿದೊಡ್ಡ ಹಣದ ಗಂಟು ಇದ್ದರೂ ಕೊಡದವನು ಬ್ರಹ್ಮನನ್ನು ಪಡೆಯಲು ಹೇಗೆ ಸಾಧ್ಯ? ॥63॥ ಸಾಯಿಯ ಬೋಧಾಶೈಲಿಯು ಅತಿಸುಂದರವಾಗಿದ್ದು ಹೇಮಾಡದನ ಮಾತುಗಳು ಹಾಲು ಸಕ್ಕರೆ ಬೆರೆತ ಪ್ರಸಾದದಂತೆ ಇತ್ತು. ಇಂತಹ ಮನೋಹರವಾದ ಕಥೆಯು ಅಧ್ಯಾಯ ಹದಿನಾರನೆಯದರಲ್ಲಿದೆ. ॥64॥ ಹಿಂದಿನ ಕಥೆಯ ಮುಂದುವರೆಯುವಿಕೆ, ಬ್ರಹ್ಮಜ್ಞಾನದ ವಿಸ್ತಾರವಾದ ಕಥನ, ಧನಲೋಭದ ಪೂರ್ಣನಾಶ ಇವುಗಳ ಮಧುರವರ್ಣನೆಯು ಅಧ್ಯಾಯ ಹದಿನೇಳನೆಯದರಲ್ಲಿದೆ. ॥65॥ ಗುರುಚರಿತೆಯ ಬಗೆಗಿನ ಸಾಠೆಯ ಕಥೆ, ರಾಧಾಬಾಯಿಯ ಉಪದೇಶದ ಕಥೆ, ಮತ್ತು ಹೇಮಾಡದನಿಗೆ ಅನುಗ್ರಹ ಇವೆಲ್ಲವೂ ಹದಿನೆಂಟನೆಯ ಅಧ್ಯಾಯದಲ್ಲಿ ಕುಶಲತೆಯಿಂದ ತಿಳಿಸಲಾಗಿದೆ. ॥66॥ ಈ ಅನುಗ್ರಹದ ವಿಸ್ತಾರವಾದ ಕಥನ, ಶ್ರೀ ಸಾಯಿಯ ಬೋಧನೆಗಳ ಗಹನವಾದ ಅರ್ಥ (ಹೇಮಾಡದನ ಪ್ರಕಾರ) ಈ ವಿಚಾರಗಳನ್ನು ಅಧ್ಯಾಯ ಹತ್ತೊಂಭತ್ತನೆಯದರಲ್ಲಿ ಕೊಟ್ಟಿದೆ. ॥67॥ ದಾಸಗಣುವು, 'ಈಶಾವಾಸ್ಯ ಭಾವಾರ್ಥ ಬೋಧಿನಿ' (ಈಶಾವಾಸ್ಯ ಉಪನಿಷತ್ತಿನ ಭಾವಾರ್ಥ)ಯನ್ನು ಪ್ರಾರಂಭಿಸಿದ್ದನು. ಆ ವಿಷಯದಲ್ಲಿ ಅವನಿಗೆ ಅನೇಕ ಶಂಕೆಗಳು ಉತ್ಪನ್ನವಾಗಿದ್ದವು. ಅದನ್ನು ಬಾಬಾರವರಲ್ಲಿ ಪ್ರಶ್ನಿಸಿದನು. ॥68॥ ಬಾಬಾ ಹೇಳುತ್ತಾರೆ – "ಕಾಕಾ ಸಾಹೇಬ ದೀಕ್ಷಿತನ

ಮನೆಕೆಲಸದವಳು ಅದನ್ನು ನಿವಾರಿಸುತ್ತಾಳೆ." ಸದ್ಗುರುವಿನ ಮಹಿಮೆಯು ಅಸಾಧಾರಣ. ಅದರ ಬಗೆಗಿನ ಮನೋರಂಜಕವಾದ ನಿರೂಪಣೆಯು ಇಪ್ಪತ್ತನೆಯದರಲ್ಲಿದೆ. ॥69॥ ಒಬ್ಬ ಸದ್ಗುಣಿಯಾದ ಪ್ರಾಂತಾಧಿಕಾರಿ, ಮತ್ತೊಬ್ಬ ವಿದ್ವಾಂಸ ಪಾಟಣಕರ, ಮೂರನೆಯವನು ಒಬ್ಬ ಪ್ರತಿಭಾವಂತ ವಕೀಲ – ಈ ಮೂವರೂ ಅನುಗ್ರಹೀತರಾದುದು ಇಪ್ಪತ್ತೊಂದರಲ್ಲಿ ಪ್ರಸ್ತಾಪಿತವಾಗಿದೆ. ॥70॥ ಮಸೀದಿಮಾಯಿಯು ಸಂಸಾರಸಾಗರವನ್ನು ದಾಟಲು ಸಹಾಯ ಮಾಡುತ್ತಾಳೆ. ಅದು ದ್ವಾರಾವತಿ ದ್ವಾರಕೆಯಲ್ಲದೆ ಬೇರೆ ಅಲ್ಲ. ಬಾಬಾ ಇದನ್ನು ಸಕಲ ಲೋಕಕ್ಕೆ ತಿಳಿಸುತ್ತಿದ್ದರು. ಆದರೆ ಯಾರೊಬ್ಬರೂ ಅದರ ಅಂತರಾರ್ಥವನ್ನು ತಿಳಿದುಕೊಳ್ಳಲಿಲ್ಲ. ॥71॥ ಮಸೀದಿಮಾಯಿಯ ಗುಣಗಾನ ಮಾಡುತ್ತಿದ್ದ ಮಿರೀಕರ್ (ಕೋಪರಗಾಂವದ ಮಾಮಲೇದಾರ ಬಾಳಾಸಾಹೇಬ ಮಿರೀಕರ್) ಮತ್ತು ಬುಟಿಯವರು ಹಾವಿನ ಕಡಿತದಿಂದ ರಕ್ಷಿಸಲ್ಪಟ್ಟರು. ಅಮೀರಶಕ್ಕರನ ವಾತರೋಗ ಗುಣವಾಯಿತು ಮತ್ತು ಅವನು ಹಾವಿನ ಭಯದಿಂದ ರಕ್ಷಿಸಲ್ಪಟ್ಟನು. ॥72॥ ಹೇಮಾಡನು ಚೇಳಿನ ಕಡಿತದ ಸಂಕಟದಿಂದ ರಕ್ಷಿಸಲ್ಪಟ್ಟನು. ಮತ್ತು ಇತರರು ಸರ್ಪದ ಕಡಿತದ ಸಂಕಟ ಮತ್ತು ಅಕಾಲ ಮೃತ್ಯುವಂತಹ ದುರ್ಘಟನೆಗಳಿಂದ ನಿವಾರಿಸಲ್ಪಟ್ಟರು. ಈ ಪ್ರಸಂಗಗಳೆಲ್ಲವೂ ಇಪ್ಪತ್ತೆರಡನೆಯದರಲ್ಲಿ ಪ್ರಕಟಗೊಂಡಿವೆ. ॥73॥ ಯೋಗಾಭ್ಯಾಸಿಯ ಶಂಕೆಗಳನ್ನು ಯಾವರೀತಿ ದೂರಮಾಡಲಾಯಿತು, ಶಿರಡಿಯ ಮಾಧವರಾವ ದೇಶಪಾಂಡೆಯು ಸರ್ಪದ ಕಡಿತದಿಂದ ಹೇಗೆ ಗುಣಪಡಿಸಲ್ಪಟ್ಟನು, ಧುನಿ, ಕಟ್ಟಿಗೆ, ಮೇಕೆಯಬಲಿ ಇವೆಲ್ಲವನ್ನೂ ಅತ್ಯಂತ ರಮ್ಯವಾಗಿ ವರ್ಣಿಸಲಾಗಿದೆ. ॥74॥ ಬಡೇ ಬಾಬಾನ ಗೌರವ ಹಾಗೂ ವೈಭವ, ಗುರುವಿನ ಆಜ್ಞೆಯಲ್ಲಿ ಅವನಿಗಿದ್ದ ನಿಷ್ಠೆಯ ಅಭಾವ, ಅವನಿಗೆ ಕೊಟ್ಟದ್ದಕ್ಕಿಂತಲೂ ಹೆಚ್ಚು ಆಸೆಪಡುವುದು ಮತ್ತು ಅವನ ಅತೃಪ್ತ ಸ್ವಭಾವ; ॥75॥ ಕಾಕಾ ಸಾಹೇಬದೀಕ್ಷಿತ, ಭಕ್ತರಲ್ಲಿ ಶ್ರೇಷ್ಠನಾದವನು, ಗುರುವಿನ ಆಜ್ಞೆಯಲ್ಲಿ ಪರಮೈಕನಿಷ್ಠನಾದವನು, ಅವನ ಜೊತೆಯಲ್ಲಿ ಸದ್ಗುರುವು ಯಾವ ರೀತಿ ವಿಶಿಷ್ಟವಾದ ಲೀಲೆಗಳನ್ನು ನಡೆಸುತ್ತಿದ್ದರು, ಇವೆಲ್ಲವನ್ನೂ ಉತ್ಕೃಷ್ಟವಾಗಿ ಇಪ್ಪತ್ತಮೂರನೆಯದರಲ್ಲಿ ವಿವರಿಸಲಾಗಿದೆ. ॥76॥ ಪುಟಾಣೆ(ಹುರಿಗಡಲೆ)ಗಳ ನಿಮಿತ್ತ ಮಾಡಿಕೊಂಡು ಹೇಮಾಡಪಂತನಿಗೆ ಒಂದು ಪಾಠವನ್ನು ಕಲಿಸಿದರು. ಸದ್ಗುರುವಿನ ಸ್ಮರಣೆ ಮಾಡದೆ ಯಾವುದೇ ವಿಷಯವಾಸನೆಗಳನ್ನು ಅನುಭವಿಸಲು ಸಾಧ್ಯವಿಲ್ಲ. ॥77॥ ಸಾಯಿಯು ಅಣ್ಣಾ ಬಾಬರೆ ಮತ್ತು ಮೌಶಿಬಾಯಿ ಇಬ್ಬರ ಮಧ್ಯೆ ಕಲಹವನ್ನುಂಟುಮಾಡಿದರು. ಈ ರೀತಿಯ ವಿನೋದಕಲಹವನ್ನು ಕವಿವರ್ಯನು ಇಪ್ಪತ್ತನಾಲ್ಕನೆಯದರದಲ್ಲಿ ಹಾಡಿದನು. ॥78॥ ಅಹಮದ್‌ನಗರದ ನಿವಾಸಿಯಾದ ದಾಮೂ ಅಣ್ಣಾಕಾಸಾರ ಎಂಬ ಭಕ್ತನು ಹತ್ತಿ ಮತ್ತು ಅಕ್ಕಿಯ ಒಂದು ದೊಡ್ಡ ವ್ಯಾಪಾರ ಮಾಡಬೇಕೆಂದು ಇಚ್ಛಿಸಿದನು. ॥79॥ ಉದ್ಯಮದಲ್ಲಿ ಹಾನಿಯುಂಟಾಗುವುದು ಸತ್ಯ. ಮಾವಿನ ಹಣ್ಣುಗಳನ್ನು ತಿಂದಲ್ಲಿ ಪುತ್ರ ಸಂತಾನವಾಗುತ್ತದೆಂದು ಜ್ಞಾನಸೂರ್ಯರಾದ ಸಾಯಿಯು ಹೇಳುತ್ತಿದ್ದರು. ಇವೆಲ್ಲವನ್ನೂ ಇಪ್ಪತ್ತೈದರಲ್ಲಿ ವಿವರಿಸಲಾಗಿದೆ. ॥80॥ ಪಂತ ಎಂಬ ಹೆಸರಿನ ಒಬ್ಬ ಭಕ್ತನು ಇನ್ನೊಬ್ಬ ಸಂತರ ಅನುಯಾಯಿಯಾಗಿದ್ದವನಿಗೆ

ತತ್‌ಕ್ಷಣವೇ ಒಂದು ಸೂಚನೆಯನ್ನು ಕೊಡಲಾಗಿ, ಅದರಿಂದ ಪಂತನು ಅತ್ಯಂತ ಹರ್ಷಗೊಂಡನು. ॥81॥ ಹರಿಶ್ಚಂದ್ರ ಪಿತಳೆ ಎಂಬ ಭಕ್ತನ ಮಗ, ಅಪಸ್ಮಾರದಿಂದ ನರಳುತ್ತಿದ್ದವನು ಕೇವಲ ಒಂದು ಕೃಪಾದೃಷ್ಟಿಯಿಂದಲೇ ಆ ರೋಗದಿಂದ ಮುಕ್ತನಾದನು. ॥82॥ ಪಿತಳೆ ಎಂಬ ಭಕ್ತನಿಗೆ ಮೂರು ರೂಪಾಯಿಗಳನ್ನು ಕೊಟ್ಟು, ಹಿಂದೆಯೇ ಎರಡು ರೂಪಾಯಿಗಳನ್ನು ಕೊಟ್ಟಿದ್ದಾಗಿದೆ ಎಂದು ತಿಳಿಸಲಾಯಿತು. ಬಾಬಾರವರು ಅವುಗಳನ್ನು ಪೂಜಿಸಲು ತಿಳಿಸಿದರು. ಇಂತಹ ಮನಮೋಹಕ ಕಥನವನ್ನು ಇಪ್ಪತ್ತಾರನೆಯದರಲ್ಲಿ ತಿಳಿಸಿದೆ. ॥83॥ ಕಾಕಾ ಮಹಾಜನಿಯು ಭಾಗವತ ಪೋಥಿ(ಗ್ರಂಥ)ಯನ್ನು ಭಗವಾನರ ಕೈಯಲ್ಲಿಟ್ಟು ಪ್ರಸಾದವಾಗಿ ತಿರುಗಿ ಸ್ವೀಕರಿಸಬೇಕೆಂದಿದ್ದಾಗ ಭಗವಾನರು (ಬಾಬಾ) ಅದನ್ನು ಮಾಧವ (ಮಾಧವರಾವ್ ದೇಶಪಾಂಡೆ ಶಿರ್ಡೀಕರ)ನಿಗೆ ಕೊಟ್ಟರು. ॥84॥ ವಿಷ್ಣುಸಹಸ್ರನಾಮ ಪೋಥಿಯು ರಾಮದಾಸಿಯ ಸುಗ್ರಹದಲ್ಲಿತ್ತು. ಬಾಬಾರವರು ಅದನ್ನು ಅಲ್ಲಿಂದ ಅವನಿಗೆ ತಿಳಿಯದಂತೆ ತೆಗೆದುಕೊಂಡು ಅದನ್ನೂ ಸಹ ಮಾಧವರಾವನಿಗೆ ಕೊಟ್ಟರು. ॥85॥ ಯಾವರೀತಿ ದಯಾಘನ ಸಾಯಿಯು ಶಾಮರಾವನಿಗೆ (ಮಾಧವರಾವ) ವಿಷ್ಣುಸಹಸ್ರನಾಮ ಪೋಥಿಯನ್ನು ಕೊಟ್ಟು ಅನುಗ್ರಹಿಸಿದರು ಎಂಬ ಕಥೆಯ ನಿರೂಪಣೆಯು ಇಪ್ಪತ್ತೇಳನೆಯದರಲ್ಲಿ ಕೊಟ್ಟಿದೆ. ॥86॥ ಭಕ್ತನಾದ ಲಖಮೀಚಂದ ಮುನಶಿ, ಚಿಡೀಬಾಯಿ ಬರ್ಹಾಂಪುರದವಳು ಮತ್ತು ಮಹಾಪುಣ್ಯವಂತ ಮೇಘಾ ಎಂಬ ಬ್ರಾಹ್ಮಣ – ಇವರೆಲ್ಲರೂ ಬಾಬಾರವರ ಚರಣಗಳಿಗೆ ಬಂದರು. ॥87॥ ಅವರೆಲ್ಲರಿಗೂ ಸ್ವಪ್ನ ದೃಷ್ಟಾಂತವನ್ನು ನೀಡಿ, ಅವರಿಗೆ ಎಚ್ಚರದ ಸ್ಥಿತಿಯಲ್ಲಿ ಅನುಭವಗಳನ್ನು ನೀಡಿದರು. ಸದ್ಗುರು ಮಾಉಲಿಯ ಈ ಅದ್ಭುತಕಾರ್ಯಗಳು ಅಗಮ್ಯವಾದವು. ಇವೆಲ್ಲವನ್ನೂ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಪ್ರೇಮದಿಂದ ತಿಳಿಸಲಾಗಿದೆ. ॥88॥ ಮದ್ರಾಸಿನಿಂದ ಒಂದು ಭಜನ ಮಂಡಳಿಯು ಭೋಳಾ ಶಂಕರರಾದ ಬಾಬಾರವರ ದಾನ ಮತ್ತು ಔದಾರ್ಯ ತೋರುವ ಪರಿಯನ್ನು ಪ್ರತ್ಯಕ್ಷವಾಗಿ ನೋಡಲು ಶಿರಡಿಗೆ ಬಂದರು. ॥89॥ ರಘುನಾಥ ತೆಂಡುಲಕರ್‌ನ ಮಗನು ಪರೀಕ್ಷೆಗೆ ಕುಳಿತ ರೀತಿ ಮತ್ತು ಅವನ ನಿವೃತ್ತಿ ವೇತನದ ಬಗೆಗಿನ ಸಂಕಟವು ದೂರವಾದ ರೀತಿ ಇವುಗಳು ಬಾಬಾರವರ ಮನೋಹರ ಲೀಲೆಗಳಾಗಿದ್ದವು. ॥90॥ ಯಾವ ರೀತಿ ಸಾಯಿ ಚರಣಗಳಲ್ಲಿ ಪರಮ ಭಕ್ತಿಯನ್ನಿಟ್ಟಿದ್ದ ಡಾ। ಕ್ಯಾಪ್ಟನ್ ಹಾಟೆಯು ಬೆಳಗಿನ ಜಾವದಲ್ಲಿ ದರ್ಶನದ ದೃಷ್ಟಾಂತ ಪಡೆದನು ಎಂಬುದು ಇಪ್ಪತ್ತೊಂಭತ್ತನೆಯದರಲ್ಲಿ ವಿವರಿಸಲಾದ ಅತ್ಯಂತ ಮನೋಹರವಾದ ಚರಿತ್ರೆಯಾಗಿದೆ. ॥91॥ ಸಪ್ತಶೃಂಗಿ ದೇವಿಯ ಉಪಾಸಕನಾದ ಕಾಕಾಜಿ ವೈದ್ಯ ಎಂಬ ವ್ಯಕ್ತಿಗೆ ದೇವಿಯು ಸ್ವಪ್ನದರ್ಶನ ಕೊಟ್ಟು ಸಂತರ ನಾಯಕರಾದ ಸಾಯಿಯ ದರ್ಶನಮಾಡಲು ಹೇಳಿದ್ದಳು. ॥92॥ ಶಾಮರಾವ್‌ನು ಅದೇ ದೇವಿಯ ಹತ್ತಿರ ಒಂದು ಹರಕೆಮಾಡಿಕೊಂಡಿದ್ದು, ಅದನ್ನು ಪೂರೈಸಲು ಶಾಮಾನು ಮೂವತ್ತು ವರ್ಷಗಳ ನಂತರ ವಾಣಿಗೆ ಹೋದನು ಮತ್ತು, ॥93॥ ರಾಹತಾದ ಕುಶಾಲಚಂದ ಸೇಠನು ಮತ್ತು ಪಂಜಾಬಿ ಬ್ರಾಹ್ಮಣನಾದ ರಾಮಲಾಲ ಇಬ್ಬರಿಗೂ ಸ್ವಪ್ನದಲ್ಲಿ

ದರ್ಶನವಿತ್ತು "ಶಿರಡಿಗೆ ಹೋರಡು" ಎಂದು ಸಾಯಿಯು ಹೇಳಿದ ವಿಷಯಗಳು ಮೂವತ್ತನೆಯ ಅಧ್ಯಾಯದಲ್ಲಿ ಹೇಳಿದೆ. ॥94॥ ವಿಜಯಾನಂದ ಎಂಬ ಮದ್ರಾಸಿನ ಯತಿಯು ಮಾನಸ ಸರೋವರಕ್ಕೆಂದು ಹೊರಟಿದ್ದನು. ಶ್ರೀ ಹೃಷಿಕೇಶಿ ಸ್ವರೂಪರಾದ ಬಾಬಾರವರು ಅವನನ್ನು ತಮ್ಮ ಚರಣಗಳಲ್ಲಿ ಹಿಡಿದು ನಿಲ್ಲಿಸಿದರು. ॥95॥ ಮತ್ತೊಬ್ಬ ಪ್ರಮುಖ ಭಕ್ತ ಮಾನಕರನು ಸಾಯಿ ಚರಣಗಳಲ್ಲಿನ ಮಧುವನ್ನು ಹೀರಲು ಬಂದಂತಹ ದುಂಬಿಯಂತಿರುವವನ ಉದ್ಧಾರ ಮತ್ತು ಕ್ರೂರವಾದ ನೋವಿನಿಂದ ನರಳುತ್ತಿದ್ದ ಹುಲಿಯ ಉದ್ಧಾರ – ಇವುಗಳ[illegible]ದರವಾಗಿ ಮೂವತ್ತೊಂದನೆಯ ಅಧ್ಯಾಯದಲ್ಲಿ ವರ್ಣಿಸಲಾಗಿದೆ. ॥96॥ ನಾಲ್ವರು ಸಜ್ಜನ ಸಂತರು ದೇವರಿಗಾಗಿ ಕಾಡಿನಲ್ಲಿ ಅಲೆದಾಡುತ್ತಿರುವಾಗ, ಅವರಲ್ಲಿ ಅಹಂಭಾವ ತ್ಯಜಿಸಿದ ಒಬ್ಬರಿಗೆ (ಬಾಬಾರವರಿಗೆ) ಗುರುರಾಯರು ದರ್ಶನ ನೀಡಿದುದು; ॥97॥ ಗೋಖಲೆ ಬಾಯಿಯು ಉಪವಾಸ ಮಾಡುತ್ತಿದ್ದ ಅಸಾಮಾನ್ಯ ಪ್ರಸಂಗ ಮತ್ತು ಸಾಯಿಯವರೇ ಹೇಳಿದ ಇದೇ ರೀತಿಯ ಮತ್ತೊಂದು ಕಥೆ – ಇವುಗಳು ಮೂವತ್ತೆರಡನೆಯದರಲ್ಲಿ ಹೇಮಾದನಿಂದ ಹಾಡಲ್ಪಟ್ಟಿದೆ. ॥98॥ ನಾರಾಯಣ ಜಾನಿಯ ಸ್ನೇಹಿತನೊಬ್ಬನನ್ನು ಏಕಾಏಕಿ ಒಂದು ಚೇಳು ಕುಟುಕಿದ ಕಥೆ, ಮತ್ತೊಬ್ಬ ಭಕ್ತನ ಮಗಳು ತೀವ್ರವಾದ ಜ್ವರದಿಂದ ನರಳುತ್ತಿದ್ದು; ॥99॥ ಯಾವ ರೀತಿ ಚಾಂದೋರಕರನ ಮಗಳು ಪ್ರಸೂತಿವೇದನೆಯಿಂದ ಗಾಬರಿಗೊಂಡಿದ್ದು ಅಂತರಾಳದಲ್ಲೇ ಸ್ವತಃ ದುಃಖಿತಳಾಗಿದ್ದು, ಪ್ರತಿಯೊಬ್ಬರೂ ಅತ್ಯಂತ ಚಿಂತಿತರಾಗಿಯೂ, ದುಃಖಿತರಾಗಿಯೂ ಇದ್ದ ಪ್ರಸಂಗವು; ॥100॥ ಕುಲಕರ್ಣಿ ಸಾಹೇಬ ಎಂಬ ಭಕ್ತಶ್ರೇಷ್ಠ, ಭಜನಕಾರನಾದ ಬಾಳಾ ಬುವಾನು ನಿಜವಾಗಿಯೂ ಉದಿಯ ಗುಣಕಾರಿಯಾದ ಶಕ್ತಿಯನ್ನು ಅರಿತುದು; ॥101॥ ಭಕ್ತನಾದ ಹರಿಭಾವು ಕರ್ಣಿಕ, ಅತಿ ಶ್ರದ್ಧಾವಂತ ಹಾಗೂ ಭಾವುಕನಾದ ವ್ಯಕ್ತಿ. ಈತನ ದಕ್ಷಿಣೆಯ ಕಥೆಯು ಅತ್ಯಂತ ಮೋಹಕವಾಗಿಯೂ, ಬೋಧಪ್ರದಾಯಕವಾಗಿಯೂ ಅಧ್ಯಾಯ ಮೂವತ್ತಮೂರನೆಯದರಲ್ಲಿ ವರ್ಣಿಸಲ್ಪಟ್ಟಿದೆ. ॥102॥ ಮಾಲೇಗಾಂವ್‌ನ ಒಬ್ಬ ವೈದ್ಯನು ತನ್ನ ಸೋದರಳಿಯನ ಮೂಳೆಯ ವ್ರಣದಿಂದಾಗಿ ಬಹಳ ಜರ್ಝರಿತನಾಗಿದ್ದುದು ಮತ್ತು ಭಕ್ತಶ್ರೇಷ್ಠನಾದ ಡಾಕ್ಟರ್ ಪಿಳ್ಳೆಯು ನಾರುಹುಳುವಿನಿಂದಾಗಿ ದುರ್ಧರವಾಗಿ ಪೀಡಿತನಾಗಿದ್ದುದು. ॥103॥ ಶಿರಡಿಯ ಬಾಪಾಜಿಯು (ಶಾಮಾನ ಸೋದರನು) ತನ್ನ ಪತ್ನಿಯ ಗ್ರಂಥಿಜ್ವರ (ಪ್ಲೇಗು)ದಿಂದಾಗಿ ಜರ್ಝರಿತನಾಗಿದ್ದುದು ಮತ್ತು ಇರಾಣಿಯ ಚಿಕ್ಕ ಹುಡುಗಿಯು ಅಪಸ್ಮಾರ ರೋಗದಿಂದ ತೀವ್ರವಾಗಿ ನರಳುತ್ತಿದ್ದುದು; ॥104॥ ಹಾರ್ದಾದಿಂದ ಬಂದಿದ್ದ ಒಬ್ಬ ಗೃಹಸ್ಥನು ಮೂತ್ರ ಕೋಶದ ಕಲ್ಲುಗಳಿಂದಾಗಿ ಅತಿ ನೋವಿನಿಂದ ನರಳುತ್ತಿದ್ದುದು ಮತ್ತು ಮುಂಬಯಿಯ ಒಬ್ಬ ಕಾಯಸ್ಥ ಪ್ರಭು ಜಾತಿಗೆ ಸೇರಿದ ಮಹಿಳೆಯ ಪ್ರಸೂತಿ ರೋಗವು; ॥105॥ ಮೇಲೆ ಹೇಳಿದ ವ್ಯಾಧಿಗಳ ಸಂಕಟಗಳನ್ನು ಯಾವುದೇ ಸಮಯದ ಲೋಪವಿಲ್ಲದೆ ಕೇವಲ ಉದಿಯ ಲೇಪನ ಮಾತ್ರದಿಂದಲೇ ಸಂಪೂರ್ಣವಾಗಿ ಉಪಶಮನಗೊಳಿಸಿರುವುದು – ಇವುಗಳನ್ನು ಮೂವತ್ತನಾಲ್ಕನೆಯ ಅಧ್ಯಾಯದಲ್ಲಿ ರಸವತ್ತಾಗಿ ನಿರೂಪಿಸಲಾಗಿದೆ. ॥106॥ ಮಹಾಜನಿಯ

ಮಿತ್ರನೊಬ್ಬನು, ಕೇವಲ ನಿರ್ಗುಣದಲ್ಲಿ ಪೂರ್ಣವಾಗಿ ಶ್ರದ್ಧೆಯಿಟ್ಟವನು, ಒಂದೇ ಒಂದು ದರ್ಶನ ಮಾಡಿದ ಕೂಡಲೇ ಮೂರ್ತಿಪೂಜಕನಾದನು. ॥107॥ ಗುರುವಿನ ಮಹತ್ವದಿಂದ ಬೀಜವುಳ್ಳ ದ್ರಾಕ್ಷಿಗಳನ್ನು ಕೂಡಲೇ ಬೀಜ ರಹಿತವಾದುದನ್ನಾಗಿ ಮಾಡಿ, ಮುಂಬಯಿನ ಒಬ್ಬ ವಕೀಲ ಧರಮಸಿ ಜೇಠಾಭಾಯಿ ಠಕ್ಕರನಿಗೆ ಅವುಗಳನ್ನು ಕೊಡಲಾಯಿತು. ॥108॥ ಬಾಂದ್ರಾನಿಂದ ಬಂದಿದ್ದ ಒಬ್ಬ ಕಾಯಸ್ಥನಿಗೆ ನಿದ್ರೆ ಸುಖವಾಗಿ ಬರದೆ ಅಸ್ವಸ್ಥನಾಗಿದ್ದನು. ಅವನು ಮತ್ತು ನೇವಾಸಾದ ಬಾಳಾ ಪಾಟೀಲ ಇಬ್ಬರೂ ಉದಿಯ ಅನುಭವಗಳನ್ನು ಪಡೆದಿದ್ದುದು ಅಧ್ಯಾಯ ಮೂವತ್ತೈದನೆಯದರಲ್ಲಿ ಕೊಟ್ಟಿದೆ. ॥109॥ ಗೋವಾದಿಂದ ಬಂದಿದ್ದ ಇಬ್ಬರು ಗೃಹಸ್ಥರು ಭಿನ್ನ ಭಿನ್ನವಾದ ಹರಕೆಯನ್ನು ಹೊತ್ತಿದ್ದರು, ಒಬ್ಬನು ನೌಕರಿ ಪಡೆಯಲು ಮತ್ತು ಇನ್ನೊಬ್ಬನು ಕಳ್ಳನನ್ನು ಹಿಡಿಯಲು. ॥110॥ ಇಬ್ಬರೂ ತಮ್ಮ ಹರಕೆಗಳನ್ನು ಮರೆತಿದ್ದರು. ಆದರೆ ಸಾಯಿ ಸಮರ್ಥರು ಅವರಿಗೆನೆನಪಿಸಿಕೊಟ್ಟರು. ತ್ರಿಕಾಲಜ್ಞಾನಿಯಾದ ಸಕಲ ಬ್ರಹ್ಮಾಂಡದಲ್ಲಿ ವ್ಯಾಪಿಸಿರುವವನ ಕೀರ್ತಿಯನ್ನು ಯಾರು ತಾನೇ ವರ್ಣಿಸಲು ಸಾಧ್ಯ? ॥111॥ ಔರಂಗಾಬಾದ್‌ನ ಸಖಾರಾಮನ ಪತ್ನಿಯು ಸಾಯಿಚರಣಗಳಲ್ಲಿ ಸಂತಾನ ಪ್ರಾಪ್ತಿಯ ವರಕ್ಕಾಗಿ ಧಾವಿಸಿದಳು. ಒಂದು ತೆಂಗಿನ ಕಾಯಿಯನ್ನು ನೀಡಿ ಯಾವ ರೀತಿ ಅವಳ ಇಚ್ಛೆಯನ್ನು ಪೂರೈಸಿದರೆಂಬುದರ ಕಥೆಯು ಅಧ್ಯಾಯ ಮೂವತ್ತಾರರಲ್ಲಿ ಹೇಳಲ್ಪಟ್ಟಿದೆ. ॥112॥ ಹೇಮಾಡನು ಚಾವಡಿ ಶುಭಗಳನ್ನು ಮತ್ತು ಸಂತೋಷಕರವಾದ ಉತ್ಸವಗಳನ್ನು ತಾನೇ ಖುದ್ದಾಗಿ ನೋಡಿ ಮಾಡಿರುವ ವರ್ಣನೆಯು ಅಧ್ಯಾಯ ಮೂವತ್ತೇಳರಲ್ಲಿ ಬಹಳ ಕುತೂಹಲಕಾರಿಯಾಗಿ ಮೂಡಿ ಬಂದಿದೆ. ॥113॥ ವಿವಿಧ ರೀತಿಯ ಪದಾರ್ಥಗಳನ್ನು ಹಂಡೆಯಲ್ಲಿ ಹಾಕಿ ನಾನಾ ರೀತಿಯ ಪಕ್ವಾನ್ನಗಳನ್ನು ಬೇಯಿಸಿ ತಯಾರು ಮಾಡಿ ಎಲ್ಲರಿಗೂ ಪ್ರಸಾದ ಭೋಜನವನ್ನಾಗಿ ಬಡಿಸುತ್ತಿದ್ದುದರ ಮನೋಹರವಾದ ವರ್ಣನೆಯು ಮೂವತ್ತೆಂಟನೆಯ ಅಧ್ಯಾಯದಲ್ಲಿದೆ॥114॥ 'ತದ್ವಿದ್ಧಿ ಪ್ರಣಿಪಾತೇನ' ಎಂಬ ಗೀತಾ ಶ್ಲೋಕದ ವಿವರಣೆಯನ್ನು ಚಾಂದೋರಕರನಿಗೆ ತಿಳಿಸಿ ಅವನ ಸಂಸ್ಕೃತ ಪಾಂಡಿತ್ಯದ ಗರ್ವವನ್ನು ತೆಗೆದುಹಾಕಿದುದು. ॥115॥ ಸಂತರ ಮಹಾರಾಜನು ಬಾಪೂಸಾಹೇಬ ಬುಟಿಗೆ ಒಂದು ಮಂದಿರವನ್ನು ಕಟ್ಟಲು ಆಜ್ಞಾಪಿಸಿದ ವಿಚಾರ ಮೂವತ್ತೊಂಬತ್ತನೆಯ ಅಧ್ಯಾಯದಲ್ಲಿ ವರ್ಣಿತವಾಗಿದೆ. ॥116॥ ದೇವಾನು (ಬಾಲಕೃಷ್ಣ ವಿಶ್ವನಾಥದೇವ) ತನ್ನ ತಾಯಿಯ ಹರಕೆಯನ್ನು ಪೂರೈಸಲು ಬ್ರಾಹ್ಮಣರಿಗೆ ಭೋಜನವನ್ನು ನೀಡಿದನು. ಅದಕ್ಕಾಗಿ ಪತ್ರ ಲೇಖನದ ಮೂಲಕ ಬಾಬಾರವರನ್ನು ಆಮಂತ್ರಿಸಿದನು. ॥117॥ ಅದೇ ದಿನ, ಮೂವರು ಹಿರಿಯ ವ್ಯಕ್ತಿಗಳು ಯತಿವೇಷವನ್ನು ಧರಿಸಿ ಅಲ್ಲಿಗೆ ಬಂದು ಬ್ರಾಹ್ಮಣರ ಜೊತೆಯಲ್ಲಿ ಊಟಮಾಡಿದ್ದರು. ಗುರುರಾಯರ ಚೆಲ್ಲಾಟವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ॥118॥ ಹೇಮಾಡನಿಗೆ ಒಂದು ಸ್ವಪ್ನದರ್ಶನ ನೀಡಿ, ಬಾಬಾರವರು ಒಂದು ಭಾವಚಿತ್ರದ ರೂಪದಲ್ಲಿ ಭೋಜನಕ್ಕೆ ಬಂದರು – ಇದು ನಲವತ್ತನೆಯ ಅಧ್ಯಾಯದಲ್ಲಿರುವ ರಸಭರಿತ ವರ್ಣನೆ. ॥119॥ ಕವಿಯು ಭಾವಚಿತ್ರದ ಕಥೆಯನ್ನು ವಿಸ್ತಾರವಾಗಿ ಭಕ್ತರಿಗೆ ತಿಳಿಸಿರುತ್ತಾನೆ. ಸದ್ಗುರುವಿನ ಮಹಿಮೆಯು ತರ್ಕಕ್ಕೆ

ನಿಲುಕದ್ದು. ಅದರ ನಿರೂಪಣೆಯು ರಮಣೀಯ ಹಾಗೂ ರಸಭರಿತ. ॥120॥ ರುದ್ರಾವತಾರ ತಾಳಿ ಉರಿಯುವ ಜ್ವಲಂತೆ ಕೆಂಪಾಗಿ ಶ್ರೀಸಾಯಿಯವರು ದೇವಾನ ಮೇಲೆ ಕ್ರೋಧಿತರಾಗಿ ಬೈಗಳ ಸುರಿಮಳೆಯನ್ನೇ ಕರೆದರು. ॥121॥ ಶ್ರೀಹರಿ ಸಾಯಿಯು ಹೇಳಿದರು, "ನಿತ್ಯವೂ ನಿಯಮಾನುಸಾರ ಶ್ರೀಜ್ಞಾನೇಶ್ವರಿಯನ್ನು ಓದು" ಮತ್ತು ಕನಸಿನಲ್ಲಿಯೂ ಬಂದು ಪಾರಾಯಣ ಕ್ರಮವನ್ನು ತಿಳಿಸಿಕೊಟ್ಟರು. ಹೇಮಾಡನು ಇದನ್ನು ನಲವತ್ತೊಂದನೆಯ ಅಧ್ಯಾಯದಲ್ಲಿ ವಿವರಿಸಿದ್ದಾನೆ. ॥122॥ ದಾತೆ ಎಂಬ ಭಕ್ತನು ತ್ರಿಪುಂಡ್ರವನ್ನು ಲೇಪಿಸಿದುದು, ಸಾಯಿ ನಿಧನಕ್ಕೆ ಪೂರ್ವಸೂಚನೆ, ರಾಮಚಂದ್ರ ಪಾಟೀಲ ಮತ್ತು ತಾತ್ಯಾಪಾಟೀಲ ಕೋತೆಯವರುಗಳ ಮರಣವನ್ನು ತಪ್ಪಿಸಿದುದು ಮತ್ತು, ॥123॥ ಸಾಯಿ ಸದ್ಗುರುವಿನ ನಿರ್ಯಾಣದ ವಾರ್ತೆಯು ಶ್ರೋತೃಗಳಲ್ಲಿ ಉದ್ವಿಗ್ನತೆಯನ್ನು ಹುಟ್ಟಿಸಿತು. ಮತ್ತು ಹೇಮಾಡನ ಚಿತ್ತವೂ ವ್ಯಾಕುಲತೆಯಿಂದ ತುಂಬಿತು – ಇವುಗಳೇ ನಲವತ್ತೆರಡನೆಯ ಅಧ್ಯಾಯದಲ್ಲಿರುವ ಪವಿತ್ರ ಕಥೆಗಳು. ॥124॥ ಬಾಬಾರವರ ನಿಧನ ವೃತ್ತಾಂತವು ನಿಜವಾಗಿಯೂ ಹಿಂದಿನ ಅಧ್ಯಾಯದಲ್ಲಿಯೇ ಅಪೂರ್ಣವಾಗಿದ್ದು, ಹೇಮಾಡನು ನಲವತ್ತಮೂರು ಮತ್ತು ನಲವತ್ತನಾಲ್ಕನೆಯ ಅಧ್ಯಾಯಗಳಲ್ಲಿ ಪೂರ್ಣಗೊಳಿಸಿದ್ದಾನೆ. ॥125॥ ಒಮ್ಮೆ ಕಾಕಾ ಸಾಹೇಬ ದೀಕ್ಷಿತನು, ಕಾಕಾ ಮಹಾಜನಿ ಮತ್ತು ಮಾಧವರಾವ ಸಮೇತವಾಗಿ ಏಕನಾಥ ಭಾಗವತವನ್ನು ಪಾರಾಯಣ ಮಾಡುತ್ತಿರುವಾಗ, ಮನಸ್ಸಿನಲ್ಲೇ ಕೆಲವು ಶಂಕೆಗಳು ಹುಟ್ಟಿದವು. ॥126॥ ಮಾಧವರಾವನು ಶಂಕೆಯನ್ನು ನಿವಾರಿಸಿದನು. ಆದರೆ ದೀಕ್ಷಿತನ ಮನಸ್ಸು ಸಮಾಧಾನ ಹೊಂದಲಿಲ್ಲ. ಆನಂದರಾವ ಪಾಖಡೆಯು ತನಗೆ ಉಂಟಾದ ಒಂದು ಸ್ವಪ್ನದ ಬಗ್ಗೆ ತಿಳಿಸಿದನು ಮತ್ತು ಅದು ಅವನ ಶಂಕೆಯನ್ನು ದೂರಮಾಡಿತು ॥127॥ ಸಾಯಿಸಮರ್ಥರು ವಿವರಣೆ ನೀಡುತ್ತ ಮ್ಹಾಳಸಾಪತಿಯು ಅದೇಕೆ ಮೇಲ್ಛಾವಣಿಯಿಂದ ನೇತಾಡುತ್ತಿದ್ದ ಹಲಗೆಯ ಮೇಲೆ ನಿದ್ರಿಸಲು ಸಾಧ್ಯವಾಗಿರಲಿಲ್ಲ – ಈ ಎಲ್ಲ ಕಥೆಗಳನ್ನೂ ಅಧ್ಯಾಯ ನಲವತ್ತೈದರಲ್ಲಿ ಕುತಲತೆಯಿಂದ ತಿಳಿಸಿದೆ. ॥128॥ ಬಾಬಾರವರ ಚರಿತ್ರೆಯು ಅದ್ಭುತ! ಅವರು ಒಂದೇ ಜಾಗದಲ್ಲಿ ಸ್ಥಿರವಾಗಿ ನೆಲಸಿದ್ದರು. ಆದರೆ ಎಲ್ಲ ಕಡೆ ತಿರುಗಾಡುತ್ತಿದ್ದರು. ಜನರಿಗೆ ತಮ್ಮ ಚಮತ್ಕಾರ ದೃಶ್ಯಗಳನ್ನು ತೋರಿಸುತ್ತಿದ್ದರು. ಕಾಶಿ ಮತ್ತು ಗಯೆ ಕಡೆಗಿನ ಯಾತ್ರೆಗಳು ವಿಚಿತ್ರವಾಗಿದ್ದವು. ॥129॥ ಸಂತರತ್ನ ಸಾಯಿಯು ಶಾಮಾನಿಗೆ ಚಾಂದೋರಕರನ ಮಗನ ಮದುವೆಯಲ್ಲಿ ಭಾಗವಹಿಸಿ ಬರಲು ಹೇಳಿದ್ದರು. ಮತ್ತು ಶಾಮಾನು ಬಾಬಾರವರನ್ನು ಗಯೆಯಲ್ಲಿ ಆ ಸಮಯದಲ್ಲಿ ಒಂದು ಛಾಯಾಚಿತ್ರದ ಮೂಲಕ ದರ್ಶಿಸಿದನು. ॥130॥ ಎರಡು ಮೇಕೆಗಳ ಪೂರ್ವಜನ್ಮದ ಕಥನವು ಮೂರು ಕಣ್ಣುಗಳುಳ್ಳ ಸಾಯಿಯವರಿಂದಲೇ ತಿಳಿಸಲ್ಪಟ್ಟು ಅದು ಅತಿ ರಮ್ಯವಾಗಿ ಮಧುರವಾಗಿ ಪವಿತ್ರವಾಗಿ ಮತ್ತು ಗಹನವಾಗಿ ಅಧ್ಯಾಯ ನಲವತ್ತಾರನೆಯದರಲ್ಲಿ ವರ್ಣಿಸಲ್ಪಟ್ಟಿದೆ. ॥131॥ ಅದೇ ರೀತಿ ಒಂದು ಹಾವು ಮತ್ತು ಒಂದು ಕಪ್ಪೆ ಅಥವಾ ಒಬ್ಬ ಲೋಭಿಯಾದ ಧನಿಕ ಮತ್ತು ಸಾಲಗಾರ ಮತ್ತು ಅವರ ಪೂರ್ವಜನ್ಮಗಳ ಕಥೆಯನ್ನು ತ್ರಿಮೂರ್ತಿಸ್ವರೂಪ (ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ)ರಾದ

ಸಾಯಿಯವರಿಂದ ಹೇಳಲ್ಪಟ್ಟಿದೆ. ॥132॥ ಶತ್ರುತ್ವ, ಹತ್ಯೆ ಮತ್ತು ಋಣ ಇವುಗಳನ್ನು ತೀರಿಸಲೇಬೇಕು ಮತ್ತುಅದಕ್ಕಾಗಿ ಪುನರ್ಜನ್ಮ ಉಂಟಾಗುತ್ತದೆ. ಇಂತಹ ಕಥಾಮೃತವನ್ನು ಬಾಬಾರವರು ಹೃದಯಂಗಮವಾಗಿ ಅಧ್ಯಾಯ ನಲವತ್ತೇಳರಲ್ಲಿ ಪಾನಮಾಡಿಸಿದ್ದಾರೆ. ॥133॥ ಭಕ್ತ ಶ್ರೇಷ್ಠರಲ್ಲೊಬ್ಬನಾದ ಶೇವಡೆಯು ಯಾವ ರೀತಿ ವಕೀಲರ ಪರೀಕ್ಷೆಯನ್ನು ಎದುರಿಸಿದನು ಮತ್ತು ಇನ್ನೊಬ್ಬ ಸಂದೇಹವೃತ್ತಿಯವನಾದ ಸಪಟಣೇಕರನು ಯಾವ ರೀತಿ ಅನುಗ್ರಹ ಪಡೆದನು ಎಂಬುದು ಅಧ್ಯಾಯ ನಲವತ್ತೆಂಟನೆಯದರಲ್ಲಿ ನಿರೂಪಿಸಲಾಗಿದೆ. ॥134॥ ಮುಂಬಯಿ ನಿವಾಸಿಯಾದ ಹರಿ ಕಾನೋಬಾ ಮತ್ತು ಕುಟಿಲ ಮನಸ್ಸಿನ ಸ್ವಾಮಿ ಸೋಮದೇವ ಇಬ್ಬರೂ ಶಿರಡಿಗೆ ಸಂತರ ಪರೀಕ್ಷೆ ಮಾಡಲು ಬಂದಾಗ, ತಮ್ಮ ಹೃದಯಗಳಲ್ಲಿ ಅಹಂಕಾರವನ್ನು ತುಂಬಿಕೊಂಡಿದ್ದರು. ॥135॥ ಅವರು ದರ್ಶನ ತೆಗೆದುಕೊಂಡಕೂಡಲೇ ಅವರ ಮನೋಗತವೇನಿತ್ತೆಂದು (ಬಾಬಾ) ತಿಳಿಸಲು ಇಬ್ಬರೂ ಕೂಡಲೇ ಲಜ್ಜಿತರಾದರು. ಅವರು ಸಾಯಿ ಚರಣಗಳಿಂದ ಆಕರ್ಷಿಸಲ್ಪಟ್ಟು ಅವರ ಜನ್ಮಾಂತರಗಳ ಪಾಪಗಳು ನಾಶಹೊಂದಿದವು. ॥136॥ ಬಾಬಾರವರ ಸನ್ನಿಧಿಯಲ್ಲಿ ಕುಳಿತಾಗ, ಒಬ್ಬ ಸುಂದರ ಸ್ತ್ರೀರೂಪವನ್ನು ನೋಡಿ ಮನಸ್ಸಿನಲ್ಲಿ ವಿಕಾರಗಳು ಹುಟ್ಟಿ ಚಾಂದೋರಕರರ ಮನಸ್ಸು ಕಸಿವಿಸಿಗೊಂಡಿತು. ಈ ಕಥೆಯು ನಲವತ್ತೊಂಭತ್ತನೆಯ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟಿದೆ. ॥137॥ ರಘುನಾಥರ ಮಗ (ಗೋವಿಂದರಾವ್ ದಾಬೋಳ್ಕರ್)ನು "ತದ್ವಿದ್ಧಿ ಪ್ರಣಿಪಾತೇನ" ಎಂಬುದರ ಅರ್ಥವನ್ನು ಪ್ರಮಾಣಗಳ ಸಮೇತ ವಾದಗಳನ್ನು ನೀಡಿ ವಿಸ್ತಾರವಾಗಿ ಐವತ್ತನೆಯ ಅಧ್ಯಾಯದಲ್ಲಿ ವರ್ಣಿಸಿದ್ದಾನೆ. ॥138॥ ಹರಿಸೀತಾರಾಮ ದೀಕ್ಷಿತ, ಬಾಳಾರಾಮ ದುರಂಧರನೆಂಬ ಭಕ್ತ ಮತ್ತು ನಾಂದೇಡಿನ ವಕೀಲನಾದ ಪುಂಡಲೀಕ ಈ ಮೂವರು ಪ್ರಥಮವಾಗಿ ಶಿರಡಿಗೆ ಯಾವ ರೀತಿ ಬಂದರು? ॥139॥ ಪ್ರತಿಯೊಬ್ಬರ ಕಥೆಯೂ ಅದ್ಭುತ! ಅವುಗಳನ್ನು ಆಲಿಸಿದ ಶ್ರೋತೃಗಳು ವಿಸ್ಮಿತರಾದರು ಮತ್ತು ಅವರ ಭಕ್ತಿ ಮನೋಭಾವವು ಉದ್ಭವಿಸಿತು. ಈ ವಿಷಯಗಳೆಲ್ಲವನ್ನೂ ಐವತ್ತೊಂದನೆಯ ಅಧ್ಯಾಯದಲ್ಲಿ ವರ್ಣಿಸಲಾಗಿದೆ. ॥140॥ ಈ ಗ್ರಂಥದ ಸಿಂಹಾವಲೋಕನ ಮಾಡಿದ ಮೇಲೆ ಹೇಮಾಡನು ಒಂದು ವರವನ್ನು ಬೇಡುತ್ತಾನೆ. ಅದೇನೆಂದರೆ ದುಷ್ಟರ ಮನಸ್ಸಿನ ದುಷ್ಟತನವು ನಾಶವಾಗಲಿ ಮತ್ತು ಶಿಷ್ಟರ ರಕ್ಷಣೆ ಉಂಟಾಗಲಿ. ॥141॥ ಸದ್ಗುರುವಿನ ಚರಣಗಳಲ್ಲಿ ಶರಣಾಗಿ ಮಸ್ತಕವನ್ನೂ ಲೇಖಣಿಯನ್ನೂ ಅರ್ಪಿಸಿ ಗ್ರಂಥವನ್ನು ಸಂಪೂರ್ಣವಾಗಿ ಮುಕ್ತಾಯಗೊಳಿಸಿ ಕೃತಾರ್ಥನಾದ ಸಂಗತಿ ಅಧ್ಯಾಯ ಐವತ್ತೆರಡನೆಯದರಲ್ಲಿ ಬಂದಿದೆ. ॥142॥ ಈ ರೀತಿಯಲ್ಲಿ ಗೋವಿಂದರಾವನು ಶ್ರೀಸಾಯಿ ಸಚ್ಚರಿತೆಯ ಅಧ್ಯಾಯಗಳ ಸರಮಾಲೆಯನ್ನು ಪೂರ್ಣಗೊಳಿಸಿದ್ದಾನೆ. ನಾನು ಅವರ ಚರಣಗಳಿಗೆ ಪ್ರೇಮದಿಂದ ವಂದಿಸುತ್ತೇನೆ ಮತ್ತು ವಿಶ್ವಮಾತೆಯಾದ ಗುರುವಿಗೂ ಪ್ರಣಾಮ ಸಲ್ಲಿಸುತ್ತೇನೆ. ॥143॥ ಪ್ರತಿಯೊಂದು ಅಧ್ಯಾಯದ ಸಾರಾಂಶವನ್ನು ನೀಡುವುದೇ ಅವತರಣಿಕೆಯೆಂದು ಕರೆಯಲ್ಪಡುತ್ತದೆ. ಅದು ಮುಮುಕ್ಷು (ಪಾರಮಾರ್ಥ ಬಯಸುವವರು) ಗಳಿಗೆ ಸನ್ಮಾರ್ಗವಾಗಿದೆ. ॥144॥ ಇದನ್ನು ಸುಂದರವಾದ ಸೀರೆಯ

ಹರಿದು ಚಿಂದಿಯಾದ ಅಂಚು ಎಂದು ತಿರಸ್ಕರಿಸಬಹುದು. ಆದರೆ ಈ ದಾಸನು ಚತುರ ಶ್ರೋತೃಗಳಿಗೆ ಒಮ್ಮೆ ಇದನ್ನು ಆಲಿಸಿರೆಂದು ವಿನಂತಿಸಿಕೊಳ್ಳುತ್ತಿದ್ದಾನೆ. ॥145॥ ಗುಂಡು ಗುಂಡಾದ ಮುದ್ದಾದ ಮಗುವಿನ ಹಣೆಗೆ ಕೆಟ್ಟ ದೃಷ್ಟಿ ಬೀಳದೆ ಇರಲೆಂದು ಒಂದು ಕಪ್ಪು ಚುಕ್ಕೆ ಇಡುವಂತೆ, ಬಾಳಾ(ದೇವಾ)ನು ಈ ಸುಂದರ ಗ್ರಂಥವೆಂಬ ವಸ್ತ್ರಕ್ಕೆ ಈ ಕಪ್ಪು ಚುಕ್ಕೆಯನ್ನು ಈ ಅವತರಣಿಕೆಯ ರೂಪದಲ್ಲಿ ಇಟ್ಟಿದ್ದಾನೆ. ॥146॥ ಈ ಸುಂದರ ಗ್ರಂಥವು ಷಡ್ರಸಗಳಿಂದ ಕೂಡಿದ ಭೋಜನದ ರೀತಿಯಲ್ಲಿದೆ ಮತ್ತು ವಿವಿಧ ಅಧ್ಯಾಯಗಳು ವಿಧವಿಧವಾದ ಪದಾರ್ಥಗಳ ರೀತಿಯಲ್ಲಿದೆ ಅಂತಹ ಮೃಷ್ಟಾನ್ನ ಭೋಜನವು ಜೀರ್ಣವಾಗಲು ಮಜ್ಜಿಗೆ ಇರಬೇಕು. ಆ ಉದ್ದೇಶದಿಂದಲೇ ಅವತರಣಿಕೆಯನ್ನು ಬರೆಯಲಾಗಿದೆ. ॥147॥ ಈ ಗ್ರಂಥವು ಸದಾ ಫಲನೀಡುವ ಕಾಮಧೇನುವಾಗಿದೆ ಮತ್ತು ಪ್ರತಿಯೊಂದು ಅಧ್ಯಾಯವೂ ಪರಿಶುದ್ಧ ಹಾಗೂ ಮತ್ತು ಪವಿತ್ರವಾಗಿದೆ. ಅವತರಣಿಕೆಯು ಕರಿಮಣಿಗಳ ಮಾಲೆಯಾಗಿ ಕೆಟ್ಟ ಅಥವಾ ಬದ್ಧ ದ್ವೇಷವನ್ನು ತೊಲಗಿಸುತ್ತದೆ. ॥148॥ ಅಹಾಗಿರಲಿ. ನಾನು ಈಗ ಹೇಮಾಡಪಂತನು ಅಧ್ಯಾಯಗಳನ್ನು ಸಂಗ್ರಹಣೆ ಮಾಡಿದ ರೀತಿಯನ್ನು ಯಥಾ ಶಕ್ತಿ ವಿವರಿಸುತ್ತೇನೆ. ಶ್ರೋತೃಗಳು ಆದರಪೂರ್ವಕವಾಗಿ ಕೇಳಿರಿ. ॥149॥ ಪ್ರಥಮವಾಗಿ ಆರಂಭದಲ್ಲಿ ಸದ್ಗುರುವಿನ ಸ್ತೋತ್ರವಿದೆ. ನಂತರ ವೇದಾಂತದ ನಿರೂಪಣೆಯಿದೆ. ಮತ್ತು ಸಾಯಿಯ ಬ್ರಹ್ಮಸ್ವರೂಪದ ವರ್ಣನೆಯಿದೆ. ತದನಂತರ ಅನುಭವಗಳ ಕಥನವಿದೆ. ॥150॥ ಮೂಲತಃ ಹೇಮಾಡನು ಶಾಸ್ತ್ರಗಳಲ್ಲಿ ಮತ್ತು ಸಾಹಿತ್ಯದಲ್ಲಿ ಪಂಡಿತನಾಗಿದ್ದನು. ಮತ್ತು ಸದ್ಗುರು ಸಾಯಿಯ ಪ್ರಸನ್ನತೆಯಿಂದ ಅವನು ತತ್ಕ್ಷಣವೇ ಒಬ್ಬ ಪ್ರತಿಭಾ ಸಂಪನ್ನನಾದನು. ಅದರಿಂದ ಈ ಗ್ರಂಥವೆಂಬ ಪಕ್ವಾನ್ನವನ್ನು ಸಿದ್ಧಪಡಿಸಿದನು. ॥151॥ ಅದರ ಮಧುರತೆಯನ್ನು ಮತ್ತು ಒಳ್ಳೆಯತನಗಳನ್ನು ಅನುಭವಿಸುವವನು, ಜನ್ಮ ಮರಣಗಳ ಚಕ್ರವು ಅಂತ್ಯವಾಗುವುದನ್ನು ಕಾಣುತ್ತಾನೆ. ಮತ್ತು ಶಾಸ್ತ್ರ ಸಮ್ಮತವಾಗಿ ಖಡಾಖಂಡಿತವಾಗಿ ನಿರ್ವಾಣವನ್ನು ಪಡೆಯುತ್ತಾನೆ. ॥152॥ ಈ ಗ್ರಂಥದಲ್ಲಿ ಹೇಮಾಡನ ರಸಭರಿತ ಭಾಷೆಯೂ ಸಾಯಿಯ ಪ್ರಸಾದದ ಲಾಭವೂ ಇರುವಾಗ, ಇದರ ವೈಭವವನ್ನು ಹೇಗೆ ವರ್ಣಿಸಲಿ? ನಿಜವಾಗಿಯೂ ಇದೊಂದು ಸಿಹಿಯಾದ ಕಬ್ಬಿನ ರಸ. ॥153॥ ಇದಕ್ಕೆ ಅನೇಕ ಗ್ರಂಥಕಾರರು ಇರಬಹುದು. ಆದರೆ ಅವರಿಗೆ ಧರ್ಮಸಂಸ್ಕಾರಯುಕ್ತ ಭಾಷೆಯ ಅಧಿಕಾರವಿರುವುದಿಲ್ಲ.ಹಾಗಾಗಿ ಒಬ್ಬ ವಿಶ್ವಾಧಾರನಾಗಿರುವ, ರಮಾಪತಿಯಾಗಿರುವ, ಆಚಾರ ಪೂರ್ವಕನಾದ ನಿಜವಾದ ಸದ್ಗುರುವಿನ ಅವಶ್ಯಕತೆಯಿದೆ. ॥154॥ ಶಾಸ್ತ್ರಗಳನ್ನು ಅಧ್ಯಯನ ಮಾಡಿದರೂ ಸದ್ಗುರುವಿನ ಕೃಪೆಯಿಲ್ಲದೆ ಇಂತಹ ಗ್ರಂಥ ರಚನೆ ಸಾಧ್ಯವಿಲ್ಲ. ಇದು ನಿಜವಾಗಿಯೂ ಮೂರು ಕಾಲಗಳಲ್ಲಿಯೂ ಸತ್ಯ. ॥155॥ ಶ್ರೀ ಸಾಯಿ ಸಚ್ಚರಿತೆಯನ್ನು ಯಾರು ತಾನೇ ವರ್ಣಿಸಲು ಸಾಧ್ಯ? ಈ ಗ್ರಂಥದ ಯೋಗ್ಯತೆಯು ಅದೆಷ್ಟು ಅನುಪಮ! ಅದಕ್ಕಾಗಿ ಹೇಮಾಡಪಂತನಂತಹ ರಚನಕಾರನನ್ನು ಗುರುತಿಸಲಾಗಿದೆ. ಇದು ಮುಮುಕ್ಷುಗಳಿಗೆ ಪರಮ ಸೌಭಾಗ್ಯ. ॥156॥ ಈ ಗ್ರಂಥವು ಭೂಮಿಯ ಮೇಲೆ ಇರುವವರೆಗೆ ಇದರ

ಕೀರ್ತಿ ಇಡೀ ಭೂಮಂಡಲದಲ್ಲಿ ಹರಡುತ್ತದೆ. ಗೋವಿಂದರಾಯನು ಮುಮುಕ್ಷುಗಳಿಗೆ ಸಮಯಕ್ಕೆ ಬೇಕಾದ ಧನಸಂಪತ್ತನ್ನು ನೀಡಿದ್ದಾನೆ. ॥157॥ ಈ ಮಿಗಿಲಾದ ಗ್ರಂಥವು ಧನ್ಯ, ಧನ್ಯ! ಇದು ಸಾಯಿ ಸದ್ಗುರುವಿನ ಪ್ರಸಾದದಿಂದ ಜನಿಸಿರುವುದು. ಇದು ಮುಮುಕ್ಷು ಜೀವಿಗಳಿಂದ ಮಾನ್ಯತೆಯನ್ನು ಪಡೆಯುತ್ತದೆ ಮತ್ತು ಅವರ ವಿಚಾರಗಳ ಕೊರತೆಯನ್ನು ನಿವಾರಿಸುತ್ತದೆ. ॥158॥ ಅನಂತಜನ್ಮಗಳ ಸುಕೃತಗಳ ಭಂಡಾರದಿಂದಾಗಿಯೇ ಗೋವಿಂದರಾವನಿಗೆ ಸಾಯಿಸೇವೆಮಾಡಲು ಈ ಸದವಕಾಶವು ದೊರಕುವಂತಹ ಮಧುರ ಫಲವನ್ನು ನೀಡಿತು. ॥159ಹೇಮಾಡಪಂತನಾದರೋ ಅನನ್ಯ ಭಕ್ತನಾಗಿದ್ದನು. ಅವನು ಕವಿಯು ಹಾಗೂ ವೇದಾಂತವಿದ್ಯೆಯಲ್ಲಿ ಆಸಕ್ತನಾಗಿದ್ದನು. ಅವನು ಹಗಲು ರಾತ್ರಿ ಸಾಯಿ ಸದ್ಗುರುವಿನ ಚರಣಗಳಲ್ಲಿ ಅನುರಕ್ತನಾಗಿದ್ದನು. ॥160॥ ವೇದಾಂತದ ವಿಷಯವು ಅತಿ ಗಹನವಾದುದು. ಭಕ್ತಿ, ಜ್ಞಾನ, ವೈರಾಗ್ಯಗಳು ಕೂಡಿಕೊಳ್ಳದೆ ಮತ್ತು ಗುರುವಿನ ಅನುಗ್ರಹವಿಲ್ಲದೆ ಇಂತಹ ಗ್ರಂಥವನ್ನು ಬರೆಯುವುದು ಅಸಾಧ್ಯ. ॥161॥ ಇವುಗಳು ಅಧ್ಯಾಯಗಳಲ್ಲಿ, ಚಿನ್ನದ ಗುಳಿಗಳು. ಅವುಗಳಲ್ಲಿ ಅಮೂಲ್ಯವಾದ ರತ್ನಗಳು ತುಂಬಿಕೊಂಡಿವೆ ಮತ್ತು ಅವುಗಳಿಂದ ಅರ್ಥಗಳೆಂಬ ಪ್ರಭಾ ಕಿರಣಗಳನ್ನು ಗೋವಿಂದರಾವನ ಮಹಾ ಪ್ರಯತ್ನದಿಂದ ಹೊರಗೆ ತೆಗೆದಿದ್ದಾನೆ. ॥162॥ ನಾನಾ ಅಧ್ಯಾಯಗಳನ್ನು ಸುಗಂಧಭರಿತ ಪುಷ್ಪಗಳ ಮಾಲೆಗಳನ್ನಾಗಿ ಮಾಡಿ ಶ್ರೀ ಸಾಯಿ ಸದ್ಗುರುವಿನ ಕೊರಳಿಗೆ ಗೋವಿಂದನು, ಪ್ರೀತಿಯ ಮಗುವಿನಂತೆ, ತನ್ನ ಶಕ್ತಿಗೆ ಅನುಸಾರವಾಗಿ ನಿರ್ಮಲ ಮನಸ್ಸಿನಿಂದ ತೊಡಿಸಿದ್ದಾನೆ. ॥163॥ ನಾನಾ ಅಧ್ಯಾಯಗಳು ಪರಿಶುದ್ಧವಾದ ಚಿನ್ನದ ಕಲಶಗಳಂತೆ. ಅವುಗಳಲ್ಲಿ ಶ್ರೀಸಾಯಿ ಸಚ್ಚರಿತೆ ಎಂಬ ಗಂಗೆಯನ್ನು ತುಂಬಿದ ರಘುನಾಥ ಪುತ್ರನು ಮೋಕ್ಷಾರ್ಥಿಗಳ ಗರ್ವವನ್ನು ಓಡಿಸುತ್ತಾನೆ. ॥164॥ ನಾನಾ ಗ್ರಂಥಗಳೆಂಬ ರಣರಂಗದಲ್ಲಿ ರಘುನಾಥನ ಪುತ್ರನು ಅಧ್ಯಾಯಗಳೆಂಬ ಯಶಸ್ತಂಭಗಳನ್ನು ನಿಲ್ಲಿಸಿ ದರ್ಪ, ಅಭಿಮಾನ, ದಂಭಾಚಾರಗಳೆಂಬ ರಾಕ್ಷಸರನ್ನು ತನ್ನ ಬುದ್ಧಿಯೆಂಬ ಕತ್ತಿಯಿಂದ ಕತ್ತರಿಸಿ ಹಾಕಿದ್ದಾನೆ. ॥165॥ ಈ ಗ್ರಂಥವು ಖಚಿತವಾದ ಪಂಚಾರತಿಯಾಗಿದ್ದು ಸಂತರ ಮಹಾರಾಜನಿಗೆ ಆರತಿ ಬೆಳಗುವಂತಹುದು. ಅಧ್ಯಾಯಗಳಲ್ಲಿ ನಿರೂಪಿಸಲಾಗಿರುವ ಕಥೆಗಳು ಎಣ್ಣೆಯ ಬತ್ತಿಗಳು ಅದರ ಜ್ಯೋತಿಯು ವಿರಕ್ತಿಯನ್ನು ಮತ್ತು ಮನಶ್ಶಾಂತಿಯನ್ನು ಉಂಟುಮಾಡುತ್ತವೆ. ॥166॥ ಈ ಗ್ರಂಥ ಮಾಯೆಯು ವಿಶ್ವಮೋಹಿನಿಯು. ಅಧ್ಯಾಯಗಳು ಬಾಹುಗಳಾಗಿ ಆಕಾಶದೆತ್ತರಕ್ಕೆ ಎದ್ದು ನಿಂತಿವೆ. ಈ ಕಥೆಗಳ ಅರ್ಥಗಳು ಕಂಕಣಗಳಾಗಿ ದೇಹವನ್ನು ಅಲಂಕರಿಸಿ ಸಾಯಿಬ್ರಹ್ಮನನ್ನು ಆಲಂಗಿಸಲು ಸಜ್ಜಾಗಿವೆ. ॥167॥ ಸಾಯಿ ಸಚ್ಚರಿತೆಯು ಗ್ರಂಥಗಳ ಸಾಮ್ರಾಟ. ಅಧ್ಯಾಯಗಳು ಬಹು ರಮ್ಯವಾಗಿ, ಚತುರತೆಯಿಂದ ಕೂಡಿದ್ದು, ಶ್ರದ್ಧೆ, ಜ್ಞಾನ, ವೇದಾಂತದ ಸೌಂದರ್ಯ ಮತ್ತು ಅನಂತ ಕೀರ್ತಿಯ ವೈಭವವನ್ನು ಒಳಗೊಂಡಿವೆ. ॥168॥ ಸಾಯಿ ಸಚ್ಚರಿತೆಯು ಪರಮಾರ್ಥ ಜ್ಞಾನ ದೊರಕುವ ಮಾರುಕಟ್ಟೆಯಾಗಿದೆ. ಪ್ರತಿಯೊಂದು ಅಧ್ಯಾಯವೂ ಅಲ್ಲಿರುವ ಒಂದೊಂದು ವ್ಯಾಪಾರ ಸ್ಥಳ. ಅಮೋಘ ಕಥೆಗಳು ಅಲ್ಲಿ ಸಂಗ್ರಹಗೊಂಡಿರು

ವಸ್ತುಗಳು. ಅವುಗಳನ್ನು ಕವಿಶ್ರೇಷ್ಠನು ಅಚ್ಚುಕಟ್ಟಾಗಿ ಜೋಡಿಸಿ ಇಟ್ಟಿರುವನು. ॥169॥ ಈ ಗ್ರಂಥವು ಗಂಗೆಯ ಪಾತ್ರೆಯಷ್ಟು ಮಹತ್ತಾಗಿದೆ. ಅಧ್ಯಾಯಗಳು ಚೊಕ್ಕವಾದ ಘಟ್ಟಗಳ ರೀತಿ ರಚಿಸಲ್ಪಟ್ಟಿವೆ. ಕಥೆಗಳ ರಸಾಮೃತವು ಪ್ರವಾಹದ ರೀತಿ – ಗುರುವಿನ ಕೃಪೆಯಿಂದ ಹಾಗೂ ಅಗಾಧ ಸಾಮರ್ಥ್ಯದಿಂದ ತುಂಬಿ ಹರಿಯುತ್ತಿದೆ. ॥170॥ ಈ ಗ್ರಂಥವು ಕೇವಲ ಆಶೆಗಳನ್ನು ಪೂರೈಸುವ ಕಲ್ಪವೃಕ್ಷವಲ್ಲ.ಈ ಸಂಸಾರದಲ್ಲಿ ಮುಳುಗಿರುವವರಿಗೆ ಬರಡಾಗಿ ಕಾಣಬಹುದು. ಆದರೆ ಮೋಕ್ಷಾರ್ಥಿಗಳಿಗೆ ಕೇವಲ ಮೋಕ್ಷದ ಪ್ರತ್ಯಕ್ಷ ಅನುಭವವನ್ನೇ ದಯಪಾಲಿಸುತ್ತದೆ॥171॥ ಕೇವಲ ಇದೊಂದನ್ನೇ ಸ್ಮಾರಕವೆಂದು ಕರೆಯಬಹುದು. ಅದು ಸಂಸಾರದ ಕತ್ತಲೆಯನ್ನು ನಾಶಪಡಿಸಿ, ಮೋಹ, ಮಾಯೆಗಳ ನರಕದಿಂದ ನಮ್ಮನ್ನು ರಕ್ಷಿಸುತ್ತದೆ. ಅದು ನಿಜವಾಗಿಯೂ ಅಕ್ಷಯವಾದ ಶಾಂತಿಯನ್ನು ನೀಡುವಂತಹುದಾಗಿದೆ. ॥172॥ ಗ್ರಂಥಕಾರನಾದ ಗೋವಿಂದರಾವನು, ಸಾಯಿ ಸದ್ಗುರುವಿನ ಚರಣ ಕಮಲಗಳಲ್ಲಿ ಒಂದು ದುಂಬಿಯಾಗಿ ನಿತ್ಯವೂ ಹೊಸದಾದ ಮಕರಂದವನ್ನು ಹೀರಿ ಅದನ್ನು ಆಸ್ವಾದಿಸುತ್ತಿದ್ದಾನೆ. ॥173॥ ಅವನ ಉಪನಾಮವು 'ದಾಭೋಲಕರ್ ಎಂದು. ಅವನು ಆಂಗ್ಲ ಸರ್ಕಾರವಿದ್ದಾಗ ಅಲ್ಲಿಯ ನೌಕರಿಯಲ್ಲಿ ತತ್ಪರನಾಗಿದ್ದನು. ಅವನು ವಿದ್ಯಾ, ವಿನಯ, ಆಚಾರ, ವಿಚಾರ ಮತ್ತು ಅಧಿಕಾರ ಸಂಪನ್ನನಾಗಿದ್ದನು. ॥174॥ ರಮಾಬಾಯಿಯು ಅವನ ಪತ್ನಿ. ಅವಳು ಸುಶೀಲೆ, ಭಕ್ತಿಪೂರ್ವಕವಾಗಿ ಸದ್ಗುಣಗಳ ಗಣಿಯಾಗಿ, ತನ್ನ ಪತಿಗೆ ನಿಷ್ಠಾವಂತಳಾಗಿ ಮತ್ತು ಸದಾಕಾಲ ಪತಿಗೆ ವಿಧೇಯಳಾಗಿಯೂ ಇದ್ದಳು. ಅವಳು ಸಾಯಿಚರಣಗಳಲ್ಲಿ ಧೃಢವಾದ ನಿಷ್ಠೆಯುಳ್ಳವಳಾಗಿದ್ದಳು. ॥175॥ ವೆಂಗುರ್ಲ್ಯಾದ ಹತ್ತಿರ ಇರುವ ದಾಭೋಲೀ ಎಂಬ ಸ್ಥಳವು ಕವಿಯ ಮೂಲ ಸ್ಥಳವಾಗಿತ್ತು. ಅನಂತರ 'ಕೇಳವೆ' ಎನ್ನುವ ಗ್ರಾಮವು ಕವಿಯ ಹೆಂಡತಿಯ ಪೂರ್ವಜರ ವಾಸ ಸ್ಥಳವಾಗಿತ್ತು. ॥176॥ ಶಕೆ 1781 (ಕ್ರಿ.ಶ. 1859)ರಲ್ಲಿ ಕೃಷ್ಣ ಪಕ್ಷದ ಮಾರ್ಗಶಿರ ಮಾಸದ ಐದನೆಯ ದಿನದಲ್ಲಿ ರಘುನಾಥನ ಪತ್ನಿಯಾದ ಲಕ್ಷ್ಮಿಗೆ ಮಹಾ ಪುಣ್ಯವಂತನಾದ ಮತ್ತು ಅನುಗ್ರಹೀತನಾದ ಗೋವಿಂದನು ಜನಿಸಿದನು. ॥177॥ ಅವನು ಗೌಡ ಸಾರಸ್ವತ ಬ್ರಾಹ್ಮಣ ಜಾತಿಗೆ ಸೇರಿದವನು. ಅವನದು ಭರದ್ವಾಜ ಗೋತ್ರ, ಅವನು ಶಕೆ 1851ರಲ್ಲಿ 70ನೇ ವಯಸ್ಸಿನಲ್ಲಿ ಆಷಾಢ ಮಾಸದ ಕೃಷ್ಣಪಕ್ಷದ ಒಂಭತ್ತನೆಯ ದಿನ ಮರಣ ಹೊಂದಿದನು. ॥178॥ ಶಕೆ 1844ರಲ್ಲಿ (ಕ್ರಿ.ಶ. 1922), ಚೈತ್ರಮಾಸದಲ್ಲಿ ಅವನು ಈ ಗ್ರಂಥವನ್ನು ಬರೆಯಲು ಪ್ರಾರಂಭಿಸಿದನು. ಮತ್ತು ಶಕೆ 1851 (ಕ್ರಿ. ಶ. 1929)ರ ಜ್ಯೇಷ್ಠಮಾಸದಲ್ಲಿ ಐವತ್ತೆರಡನೆಯ ಅಧ್ಯಾಯದವರೆಗೆ ಪೂರ್ಣಗೊಳಿಸಿದನು. ॥179॥ ಗೋವಿಂದರಾವ್‌ನಿಗೆ ಒಬ್ಬನೇ ಮಗ ಮತ್ತು ಐದು ಜನ ಹೆಣ್ಣುಮಕ್ಕಳಿದ್ದರು. ಅವರಲ್ಲಿ ನಾಲ್ಕು ಜನ ಹೆಣ್ಣುಮಕ್ಕಳಿಗೆ ಮದುವೆಯಾಗಿತ್ತು, ಇನ್ನೊಬ್ಬಳು ಅವಿವಾಹಿತೆಯಾಗಿದ್ದು ವೈದ್ಯಕೀಯ ವ್ಯಾಸಂಗದಲ್ಲಿದ್ದಳು. ಮಗನಿಗೂ ಮದುವೆಯಾಗಿ ವೈದ್ಯಕೀಯ ಅಧ್ಯಯನ ಮಾಡುತ್ತಿದ್ದನು. ॥180॥ ಈಗ ನಾನು ಪಾರಾಯಣದ ಪದ್ಧತಿಯನ್ನು ತಿಳಿಸುತ್ತೇನೆ. ಜೊತೆಗೆ ಒಂದು ಸಪ್ತಾಹದ (ಏಳು ದಿನಗಳೊಳಗೆ ಓದುವುದು) ಸುಲಭವಾದ

ಮಾರ್ಗವನ್ನೂ ತಿಳಿಸುತ್ತೇನೆ. ಗುರುಚರಿತ್ರೆ ಹಾಗೂ ಇತರ ಅಂತಹ ಗ್ರಂಥಗಳನ್ನೂ ಪಾರಾಯಣಮಾಡುವ ರೀತಿ ಅದೆ. ಶ್ರೋತೃಗಳು ಗಮನವಿಟ್ಟು ಆಲಿಸಿರಿ. ॥181॥ ಪಾರಾಯಣವನ್ನು ಪರಿಶುದ್ಧವಾದ ಅಂತರಂಗದಿಂದ ಭಕ್ತಿಪೂರ್ವಕವಾಗಿ ಮಾಡಿ. ಇದನ್ನು ಒಂದು ಅಥವಾ ಎರಡು ಅಥವಾ ಮೂರುದಿನಗಳಲ್ಲಿ ಪೂರ್ಣಗೊಳಿಸಿರಿ. ಸಾಯಿ ನಾರಾಯಣನು ಸಂತೋಷಪಡುತ್ತಾನೆ. ॥182॥ ಇಲ್ಲದಿದ್ದರೆ, ಸುಲಭವಾಗಿ ಒಂದು ವಾರದಲ್ಲಿ ಪೂರ್ಣಗೊಳಿಸಿರಿ. ಅದರಿಂದ ಅತೀವ ಪುಣ್ಯ ಸಂಪತ್ತಿಯು ದೊರೆಯುತ್ತದೆ. ಸಾಯಿಯು ಮನದಾಸೆಗಳನ್ನು ಪೂರೈಸುತ್ತಾರೆ. ಮತು ಸಂಸಾರದ ಭಯವೂ ನಾಶವಾಗುತ್ತದೆ. ॥183॥ ಒಂದು ಗುರುವಾರದಂದು, ಬೆಳಗಿನ ಜಾವದಲ್ಲಿ ಸ್ನಾನಮಾಡಿ, ನಿಮ್ಮ ನಿತ್ಯವಿಧಿಗಳನ್ನು ಬೇಗನೆ ಪೂರ್ಣಗೊಳಿಸಿ, ನಿಮ್ಮ ಆಸನ (ಪ್ರಾರ್ಥನೆಗಾಗಿ ಮೀಸಲಿಟ್ಟ ಆಸನ)ದ ಮೇಲೆ ಕುಳಿತುಕೊಳ್ಳಿರಿ. ॥184॥ ಒಂದು ರಮ್ಯವಾದ ಮಂಟಪವನ್ನು ಬಾಳೆಯ ಕಂದು, ಕದಳಿಮರಗಳಿಂದ ಮಾಡಿರಿ. ಅದರ ಮೇಲೆ ಸುಂದರವಾದ ವಸ್ತ್ರವನ್ನು ಹೊದಿಸಿರಿ ಮತ್ತು ಅಂದವಾಗಿ ಅಲಂಕರಿಸಿರಿ. ॥185॥ ಅದರಲ್ಲಿ, ಗ್ರಂಥಕ್ಕಾಗಿ ಒಂದು ಎತ್ತರವಾದ ಆಸನವನ್ನು ಇಡಿ. ಅದರ ನಾಲ್ಕು ಪಕ್ಕಗಳಲ್ಲಿ ವರ್ಣರಂಜಿತ ರಂಗೋಲಿ[3]ಯಿಂದ ಅಲಂಕರಿಸಿರಿ. ಅದು ಅತ್ಯಂತ ನಯನ ಮನೋಹರವಾಗಿರಲಿ. ॥186॥ ಸಾಯಿ ಸದ್ಗುರುವಿನ ಒಂದು ಪ್ರತಿಮೆಯನ್ನು ಮಾಡಿ ಅಥವಾ ಸಾಯಿಯ ಒಂದು ಸುಂದರ ಚಿತ್ರವನ್ನು ತೆಗೆದುಕೊಂಡು, ಅದನ್ನು ಜೋಪಾನವಾಗಿ ಎತ್ತರದ ಆಸನದ ಮೇಲೆ ಇಡಿರಿ. ಅವರಿಗೆ ಪ್ರೀತಿಯಿಂದ ಪ್ರಣಾಮಸಲ್ಲಿಸಿ. ॥187॥ ಗ್ರಂಥವನ್ನು ಒಂದು ರೇಷಿಮೆಯ ಬಟ್ಟೆಯಲ್ಲಿ ಕಟ್ಟಿ ಸದ್ಗುರುವಿನ ಸನ್ನಿಧಿಯಲ್ಲಿ ಇಡಿ. ಚಿತ್ರಪಟ ಮತ್ತು ಗ್ರಂಥ ಎರಡನ್ನೂ ಪಂಚೋಪಚಾರಗಳಿಂದ ಪೂಜೆ ಮಾಡಿ, ನಂತರ ಗ್ರಂಥವನ್ನು ಪಾರಾಯಣ ಮಾಡಲು ಪ್ರಾರಂಭಿಸಿರಿ. ॥188॥ ಪವಿತ್ರವಾದ ಎಂಟು ದಿನಗಳ ಕಾಲ, ಆ ಹರಕೆ ನಿಯಮಗಳನ್ನು ಪಾಲಿಸುತ್ತ, ಕೇವಲ ಹಾಲು ಮತ್ತು ಹಣ್ಣುಗಳನ್ನು ಅಥವಾ ಯಾವುದಾದರೂ ಒಂದು ರೀತಿಯ ಹುರಿದ ಕಾಳುಗಳನ್ನು ಸ್ವೀಕರಿಸಿ, ಕೇವಲ ಒಂದು ಬಾರಿ ಮಾತ್ರ ಊಟ ಮಾಡುತ್ತ ಅಥವಾ ದಿನದಲ್ಲಿ ಒಂದೇ ಊಟ ಮಾಡುತ್ತ ಇರಬೇಕು. ॥189॥ ಪೂರ್ವಕ್ಕೆ ಮುಖಮಾಡಿ, ಸದ್ಗುರುವಿನ ಮೂರ್ತಿಯನ್ನು ಹೃದಯದಲ್ಲಿ ಸ್ಥಾಪಿಸಿ, ಶಾಂತ ಮನಸ್ಸಿನಿಂದ ಹರ್ಷಭರಿತರಾಗಿ ಪಾರಾಯಣ ಮಾಡಿರಿ. ॥190॥ ಈ ಏಳು ದಿನಗಳಲ್ಲಿ, ಮೊದಲನೆಯ ದಿನದಂದು ಮೊದಲ ಎಂಟು ಅಧ್ಯಾಯಗಳು, ಎರಡನೆಯ ದಿನ ಮುಂದಿನ ಎಂಟು ಅಧ್ಯಾಯಗಳನ್ನು, ಅನಂತರ ಮೂರನೆಯ ದಿನ ಮುಂದಿನ ಏಳು ಅಧ್ಯಾಯಗಳು. ಅನಂತರ ಎಂಟು, ಆರು, ಎಂಟು ಮತ್ತು ಏಳು ಅಧ್ಯಾಯಗಳು ಮುಂದಿನ ನಾಲ್ಕು ದಿನಗಳಲ್ಲಿ ಪೂರೈಸಿರಿ. ಎಂಟನೆಯ ದಿನ ಕೇವಲ ಅವತರಣಿಕೆಯನ್ನು ಪಾರಾಯಣ ಮಾಡಬೇಕು. ॥191॥ ಎಂಟನೆಯದಿನ, ವ್ರತಾಚರಣೆಗಳನ್ನೂ ಮಾಡಿದನಂತರ ಸಾಯಿನಾರಾಯಣನಿಗೆ ನೈವೇದ್ಯವನ್ನು ಅರ್ಪಿಸಿ, ಬಂಧುಮಿತ್ರರು ಮತ್ತು ಬ್ರಾಹ್ಮಣರನ್ನು ಕರೆದು ಯಥಾಶಕ್ತಿ ದಕ್ಷಿಣೆಯನ್ನು ಕೊಟ್ಟು ಪಠನಮಾಡಿರಿ. ॥192॥ ವೈದಿಕ

ಬ್ರಾಹ್ಮಣರನ್ನು ಆಹ್ವಾನಿಸಿ, ರಾತ್ರಿ ವೇಳೆಯಲ್ಲಿ ವೇದ ಘೋಷ ಮಾಡಿಸುತ್ತ ಅವರಿಗೆ ಸಿಹಿಯಾದ ಸ್ವಾದಯುಕ್ತ ಹಾಲನ್ನು ನೀಡಿ ಅವರಿಗೆ ಗೌರವಪೂರ್ವಕವಾದ ಬೀಳ್ಕೊಡುಗೆ ನೀಡಿ. ಅವರು ದೈಹಿಕವಾಗಿ ಮಾನಸಿಕವಾಗಿ ತೃಪ್ತಿ ಹೊಂದಿರಬೇಕು. ॥193॥ ಅಂತ್ಯದಲ್ಲಿ ಸದ್ಗುರು ಚರಣಗಳಿಗೆ ನಮಿಸಿ, ತಕ್ಕ ಮಟ್ಟಿಗೆ ದಕ್ಷಿಣೆ ಅರ್ಪಿಸಿರಿ. ಅದನ್ನು ಸಂಸ್ಥಾನದ ಸಂಪತ್ತನ್ನು ವೃದ್ಧಿಗೊಳಿಸಲು (ಶಿರಡಿ ಸಂಸ್ಥಾನದ) ಖಜಾನೆಗೆ ಕಳುಹಿಸಿರಿ. ॥194॥ ಸಾಯಿ ಭಗವಾನರು ಅತ್ಯಂತ ಸಂತಸಪಹೊಂದಿ, ಆ ಭಕ್ತನನ್ನು ಅನುಗ್ರಹಿಸುತ್ತಾರೆ. ಸಾಂಸಾರಿಕ ಕ್ಲೇಶ ರೂಪದಲ್ಲಿರುವ ಸರ್ಪವು ನಾಶವಾಗಿ ಮೋಕ್ಷದ ನಿಧಿ ತೆರೆದುಕೊಳ್ಳುತ್ತದೆ. ॥195॥ ಶ್ರೋತೃಗಳೇ, ಸಂತರ ಸನ್ನಿಧಿಯಲ್ಲಿ ಮನೆಯವರಂತೆಯೇ ಇರಿ. ನೀವು ಅವತರಣಿಕೆಯನ್ನು ಮರೆಯಬಹುದು. ಆದರೆ ಗ್ರಂಥದ ಅರ್ಥದ ಮೇಲೆ ಒಂದು ಕಣ್ಣಿಡಿ. ನಿಮ್ಮ ಚರಣಗಳಲ್ಲಿ ಇದೊಂದು ಈ ಕಿಂಕರನ ವಿನಯಪೂರ್ವಕವಾದ ಪ್ರಾರ್ಥನೆ. ॥196॥ ಸಜ್ಜನರಾದ ಶ್ರೋತೃಗಳೇ, ಈ ವಿನೀತ ದಾಸನ ಮೇಲೆ ಕಾಲದ ಅಂತ್ಯದವರೆಗೂ ದಯೆ ತೋರಿಸಿರಿ. ನನ್ನ ತಲೆಯನ್ನು ನಿಮ್ಮ ಚರಣಗಳಲ್ಲಿ ಇಡುತ್ತೇನೆ. ಬಾಬಾನ 'ಬಾಳ' ಆಗಿರುವ ನಾನು ಈ ರೀತಿ ನಿಮ್ಮನ್ನು ಪ್ರಾರ್ಥಿಸುತ್ತೇನೆ. ॥197॥ ಅತಿಯಾದ ಕೊರತೆಯು ಏನೇ ಇರಲಿ, ಅದು ನನಗೆ ಅನ್ವಯಿಸುತ್ತದೆ. ಸಾರವನ್ನು ತೆಗೆದುಕೊಳ್ಳಿರಿ. ಶ್ರೋತೃಗಳೇ, ಮತ್ತು ನಿಮ್ಮ ಮನಸ್ಸು ಬೆಳಗುವ ರೀತಿಯಲ್ಲಿನಡೆದುಕೊಳ್ಳಿರಿ. ॥198॥ ಶಿವನಂದನನಾದ ಶ್ರೀ ಗಣೇಶ ಸಾಯಿಗೆ ನಮಸ್ಕಾರಗಳು. ಕಮಲಾಸನನಾದ ಬ್ರಹ್ಮದೇವ ಸಾಯಿಗೆ ನಮಸ್ಕಾರಗಳು. ಮಧುಸೂದನನಾದ ವಿಷ್ಣು ಸಾಯಿಗೆ ನಮಸ್ಕಾರಗಳು. ಪಂಚ ಮುಖಿನಾದ ಶಂಕರಸಾಯಿಗೆ ನಮಸ್ಕಾರಗಳು. ॥199॥ ಅತ್ರಿಯ ಕುಮಾರನಾದ ದತ್ತಾತ್ರೇಯ ಸಾಯಿಗೆ ನಮಸ್ಕಾರಗಳು. ಪಾಕನೆಂಬ ರಾಕ್ಷಸನನ್ನು ಕೊಂದ ಇಂದ್ರ ಸಾಯಿಗೆ ನಮಸ್ಕಾರಗಳು. ನಿಶಾರಮಣ ಸಾಯಿಚಂದ್ರನಿಗೆ ನಮಸ್ಕಾರಗಳು. ಅಗ್ನಿನಾರಾಯಣ ಸಾಯಿಗೆ ನಮಸ್ಕಾರಗಳು. ॥200॥ ರುಕ್ಮಿಣಿಯ ಪತಿ ಶ್ರೀಕೃಷ್ಣಸಾಯಿಗೆ ನಮಸ್ಕಾರಗಳು. ಮನೋಲಸೂರ್ಯ ಸಾಯಿಗೆ ನಮಸ್ಕಾರಗಳು. ಜ್ಞಾನಸಾಗರ ಸಾಯಿಗೆ ನಮಸ್ಕಾರಗಳು. ಜ್ಞಾನೇಶ್ವರ ಶ್ರೀಸಾಯಿಗೆ ನಮಸ್ಕಾರಗಳು. ॥201॥ ಅವತರಣಿಕೆಯು ವಾಕ್ ಪುಷ್ಪಾಂಜಲಿ. ಇದೇ ರೀತಿಯದು ದಿಷ್ಟಾಮಗಳಿಂದ ನಮಸ್ಕರಿಸುವುದು. ಅವುಗಳನ್ನು ಗುರುಚರಣಗಳಲ್ಲಿ ಸಮರ್ಪಿಸುತ್ತ ಪ್ರಾರ್ಥಿಸಿದ್ದೇನೆ. ಸಾಯಿಮಾತೆಯು ಸಂತೋಷಪಡಲಿ. ॥202॥

ಎಲ್ಲರಿಗೂ ಶುಭವಾಗಲಿ.

ಸಂತರು ಮತ್ತು ಸಜ್ಜನರಿಂದ ಪ್ರೇರಿತನಾದ ಭಕ್ತ ಹೇಮಾಡಪಂತನು ರಚಿಸಿದ ಶ್ರೀ ಸಾಯಿಸಮರ್ಥ ಸಚ್ಚರಿತೆಯ"ಅವತರಣಿಕೆ (ಸಂಕ್ಷಿಪ್ತ ನಿರೂಪಣೆ)" ಎಂಬ ಐವತ್ತಮೂರನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಶ್ರೀ ಸಮರ್ಥ ಸದ್ಗುರು ಸಾಯಿನಾಥರ ಚರಣಗಳಿಗೆ ಸಮರ್ಪಣವಾಗಲಿ.

।ಸನ್ಮಂಗಳವಾಗಲಿ।

ಟಿಪ್ಪಣಿ

1. ಕಥೆಯು 11ನೆಯ ಅಧ್ಯಾಯದಲ್ಲಿ ಕೊಟ್ಟಿದೆ. ಡಾ॥ ಪಂಡಿತ್ ವಿಷಯವದು. ಆದ್ದರಿಂದ ಸತ್‌ಚರಿತೆಯ 42ನೆಯ ಅಧ್ಯಾಯದಲ್ಲಿ ಮುದ್ರಿಸಲಾಗಿದೆ.
2. ಬಾಳೆಗಿಡದ ತರಹದ ಗಿಡ ಮತ್ತು ಹೂವುಗಳು.
3. ನೆಲದ ಮೇಲೆ ಬಣ್ಣದ ಪುಡಿಯಿಂದ ಬರೆದಂತಹ ಚಿತ್ರ. (ರಂಗೋಲಿ)
4. ಗಂಧ, ಹೂವು, ಊದು ಬತ್ತಿ, ದೀಪ ಮತ್ತು ನೈವೇದ್ಯ
5. ಸ್ನಾನ ಮಾಡಿ ಶುಭ್ರವಾದ ಬಟ್ಟೆಗಳನ್ನು ಧರಿಸುವುದು. ಉಪವಾಸ, ಶುದ್ಧವಾಗಿ ಮತ್ತು ನೀತಿಯುತವಾಗಿ (ಬ್ರಹ್ಮಚರ್ಯಪಾಲನೆ) ಇರುವುದು ಮತ್ತು ನೆಲದ ಮೇಲೆ ಮಲಗುವುದು.

॥ಈ ಗ್ರಂಥದ ಸಮಾಪ್ತಿ॥



ದ್ವಾರಕಾಮಾಯಿ



ನಂದಾದೀಪ

# ಸಾಯಿಬಾಬಾರವರ ಜೀವನದ ಘಟನೆಗಳು

## (ಆಧಾರ – ಸಾಯಿ ಸಚ್ಚರಿತೆ)

ಮೂಲ: ಮರಾಠಿ – ನಿವೃತ್ತ ಲೆ. ಕರ್ನಲ್ ನಿಂಬಾಳ್ಕರ್

ಆಂಗ್ಲ ಅನುವಾದ : ಜರೀನ್

| ವರ್ಷ | ಘಟನೆ |
|---|---|
| 1838 | ಶ್ರೀ ಸಾಯಿಬಾಬಾರವರ ಜನ್ಮದ ವರ್ಷ (ಅಂದಾಜು) – *(ಇಂಗ್ಲೀಷ್) ಸಚ್ಚರಿತೆ (ಅ-10, ಓ.ವಿ-43)* |
| 1842–1854 (ಅಂದಾಜು) | ಸುಮಾರು 12 ವರ್ಷಗಳ ಕಾಲ ಬಾಬಾರವರು ತಮ್ಮ ಗುರುವಿನೊಡನೆ ಇದ್ದರು. ಬಹುಶಃ ಅವರ ಗುರು ಸೂಫಿ ಫಕೀರ ಅಥವಾ ವೆಂಕೂಸಾ ಅಲಿಯಾಸ್ ಗೋಪಾಲರಾವ್ ದೇಶಮುಖ. ಅವರ ಗುರು ಯಾರು ಎನ್ನುವುದು ನಿಶ್ಚಯವಾಗಿಯೂ ಯಾರಿಗೂ ಗೊತ್ತಿಲ್ಲ. ಬಾಬಾರವರು ಶಿರಡಿಯಲ್ಲಿ ಬೇವಿನ ಮರದಡಿ ಭೂಮಿಯ ಒಳಗಿನ ಗುಹೆಯಲ್ಲಿ ತಮ್ಮ ಗುರುವಿನ ಸಮಾಧಿಯ ಹತ್ತಿರ 12 ವರ್ಷಗಳ ಕಾಲ ಕಳೆದಿದ್ದಾರೆಂದು ಕೆಲವರ ಊಹೆ. *–(ಇಂಗ್ಲೀಷ್) ಸಚ್ಚರಿತೆ ಅ–4 ಓ.ವಿ 139, ಮತ್ತು ದಾಸಗಣುರವರ 'ಭಕ್ತ ಲೀಲಾಮೃತ' ಅ–26.* |
| 1846 | ಹತ್ತರಿಂದ ಹನ್ನೊಂದನೆಯ ವಯಸ್ಸಿನಲ್ಲಿ ಶಿರಡಿಗೆ ದೇವಿದಾಸನ ಆಗಮನ. – *(ಇಂಗ್ಲೀಷ್) ಸಚ್ಚರಿತೆ ಅಧ್ಯಾಯ 5, ಓ.ವಿ–147.* |
| 1854 | ಒಂದು ಬೇವಿನ ಮರದ ಕೆಳಗಡೆ ಸುಮಾರು 16 ವರ್ಷಗಳ ಬಾಲಕನಾಗಿ ಶಿರಡಿಯಲ್ಲಿ ಶ್ರೀ ಸಾಯಿಬಾಬಾರವರ ದರ್ಶನ. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ 4, ಓ.ವಿ – 111* |
| 1854 – 1857 | ಶ್ರೀ ಸಾಯಿಬಾಬಾರವರು ನೀರಿನ ಮಡಕೆಗಳನ್ನು ಈಗಿನ ಸಮಾಧಿ ಮಂದಿರದ ಹತ್ತಿರದ ಬಾವಿಯಿಂದ ತಮ್ಮ ಹೆಗಲಿನ ಮೇಲೆ ಹೊತ್ತುಕೊಂಡು ಹೋಗಿ ಒಂದು ತೋಟವನ್ನು ಮಾಡಿದ್ದರು. ಸಂತ ಗಂಗಾಗೀರ ಮಹಾರಾಜರು, ಇಂತಹ ರತ್ನವನ್ನು ಪಡೆದ ಶಿರಡಿಯೇ ಧನ್ಯ ಎಂದನು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–5, ಓ.ವಿ–51.* |
| 1857 | ಶ್ರೀ ಸಾಯಿಬಾಬಾರವರು ಶಿರಡಿಯಿಂದ ಕಣ್ಮರೆಯಾದರು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–5, ಓ.ವಿ–3.* |
| 1858 | ಶ್ರೀ ಸಾಯಿಬಾಬಾರವರು ಮತ್ತೆ ಚಾಂದಭಾಯಿ ಪಾಟೀಲನ ಸೋದರಳಿಯನ ಮದುವೆ ದಿಬ್ಬಣದ ಜೊತೆ ಶಿರಡಿಗೆ ಬಂದರು. ಅಲ್ಲಿಂದೇ ಖಾಯಂ |

ನೆಲೆಸಿದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–5, ಓ.ವಿ–23*

1878 ಶ್ರೀ ಅಕ್ಕಲಕೋಟೆ ಮಹಾರಾಜರ ನಿರ್ವಾಣ. – *(ಉಲ್ಲೇಖ) ಶ್ರೀ ಗುರುಲೀಲಾಮೃತ*

1885 ಸಂತ ಆನಂದನಾಥರು ಯೇವಲಾದಿಂದ ಶಿರಡಿಗೆ ಬಂದರು. ಬಾಬಾರವರನ್ನು ರತ್ನವೆಂದು ಕರೆದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–5, ಓ.ವಿ–42*

1886 ಬಾಬಾರವರು ತಮ್ಮ ಪ್ರಾಣವನ್ನು ಊರ್ಧ್ವಗತಿಗೆ ಏರಿಸಿ ಮೂರು ದಿನಗಳ ಕಾಲ ಸಮಾಧಿಯಲ್ಲಿದ್ದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–44, ಓ.ವಿ–64*

1889 ಅಬ್ದುಲ್ಲಾನು ಶ್ರೀ ಸಾಯಿಯ ಜೊತೆಯಲ್ಲಿಯೇ ಇರಲು ನಾಂದೇಡಿನಿಂದ ಶಿರಡಿಗೆ ಬಂದನು. – *(ಉಲ್ಲೇಖ) ಭಕ್ತರ ಅನುಭವಗಳು*

1892 (ಸುಮಾರು) ನಾನಾ ಸಾಹೇಬ ಚಂದೋರಕರನು ಶಿರಡಿಗೆ ಮೊದಲ ಬಾರಿ ಬಂದನು. – *(ಉಲ್ಲೇಖ) ದೀಪದಿಂದ ದೀಪಹಚ್ಚು ಚಂದೋರಕರನ ಜೀವನ ಚರಿತ್ರೆ*

1894 (ಸುಮಾರು) ದಾಸಗಣು ಮಹಾರಾಜನು ಚಂದೋರಕರನ ಜೊತೆ ಮೊದಲಬಾರಿಗೆ ಶಿರಡಿಗೆ ಬಂದನು. – *(ಉಲ್ಲೇಖ) ಎ.ಆರ್. ಅಭ್ಯಂಕರರವರ ಸಂತ ದಾಸಗಣು*

1896 ಕೋಪರಗಾಂವದ ಸರ್ಕಲ್ ಇನ್ಸ್‌ಪೆಕ್ಟರ್ ಗೋಪಾಲಗುಂಡನು ಶಿರಡಿಯಲ್ಲಿ ಮೊದಲ ಬಾರಿಗೆ 'ಉರುಸ್' ಹಬ್ಬವನ್ನು ಪ್ರಾರಂಭಿಸಿದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–6, ಓ.ವಿ–47.*

1897 ಬಾಬಾರವರ ಕೃಪೆಯಿಂದ ದಾಮೂ ಅಣ್ಣಾನಿಗೆ ಪುತ್ರ ನಾನಾ ಸಾಹೇಬ ರಸನೆಯ ಜನನ. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–25, ಓ.ವಿ–102*

1898 ಬಾಬಾರವರು ಮಸೀದಿಯಲ್ಲಿ ಒಂದು ಸಣ್ಣ ಹಲಗೆಯನ್ನು ಚಿಂದಿಗಳಿಂದ ನೇತಾಡುವಂತೆ ಕಟ್ಟಿ ಅದರ ಮೇಲೆ ಮಲಗಿದುದು. – (ಉಲ್ಲೇಖ) ಸಚ್ಚರಿತೆ, ಅಧ್ಯಾಯ–10, ಓ.ವಿ–17.

1898 ತಾತ್ಯಾ ಪಾಟೀಲ್ ಬಾಬಾ ಅವರ ಜೊತೆಯಲ್ಲಿ ಮಸೀದಿಯಲ್ಲೆ ಮಲಗಲಾರಂಭಿಸಿದನು. – *(ಉಲ್ಲೇಖ) ಸಾಯಿಸಚ್ಚರಿತೆ ಅಧ್ಯಾಯ–8, ಓ.ವಿ–122).*

1899–1900 ನಾನಾ ಚಂದೋರಕರನ ಭಾವ ಬಿನಿವಾಲೆಯು ಗೋದಾವರಿ ತೀರದಲ್ಲಿದ್ದ ದತ್ತ ಮಂದಿರದ ದರ್ಶನ ಮಾಡದೆಯೇ ಶಿರಡಿಗೆ ಬಂದುದು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–38, ಓ.ವಿ–146.*

1900 ಚಂದೋರಕರನ ಪುತ್ರ ಬಾಪು ಮುಗ್ಧತೆಯಿಂದ ಬಾಬಾರವರ ಹಣೆಗೆ ಗಂಧವನ್ನು ಹಚ್ಚಿದನು. ತದನಂತರ ಇತರ ಭಕ್ತರಿಗೂ ಅದನ್ನು ಅನುಸರಿಸುವ ಧೈರ್ಯ ಬಂದಿತು. – *(ಉಲ್ಲೇಖ) ಭಕ್ತರ ಅನುಭವಗಳು*

1900 ಶಾಮಾನು (ಮಾಧವರಾವ್ ದೇಶಪಾಂಡೆ) ಬಾಬಾರವರ ಅನುಮತಿ ಪಡೆದು ಗಯೆಯಿಂದ ಬಂದಿದ್ದ ವ್ಯಕ್ತಿಗೆ ಬಾಬಾರವರ ಚಿತ್ರಪಟವನ್ನು ಕೊಟ್ಟನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–46, ಓ.ವಿ–80–82*

| | |
|---|---|
| **1900–1902** (ಸುಮಾರು) | ಬಾಬಾರವರು ಚಂದೋರ್ಕರನಿಗೆ ವಿದ್ಯಾವಂತ ಪಂಡಿತರಂತೆ ಗೀತೆಯ ಶ್ಲೋಕವನ್ನು ವಿವರಿಸಿದುದು.-*(ಉಲ್ಲೇಖ)ಸಚ್ಚರಿತೆ, ಅಧ್ಯಾಯ-39 ಮತ್ತು 50* |
| **1903** | ದಾಸಗಣುವು ಸರ್ಕಾರಿ ನೌಕರಿಯನ್ನು ತ್ಯಜಿಸಿ ನಾಂದೇಡ್‌ನಲ್ಲಿ ಕೀರ್ತನೆ ಮಾಡಲು ಪ್ರಾರಂಭಿಸಿದುದು. – *ಭಕ್ತರ ಅನುಭವಗಳು* |
| **1903** | ದಾಸಗಣುವಿನ 'ಸಂತ ಕಥಾಮೃತ'ದ ಪ್ರಕಟಣೆ. – *ಭಕ್ತರ ಅನುಭವಗಳು* |
| **1904** | ರಾವ್‌ಬಹಾದುರ್ ಹೆಚ್. ವಿ. ಸಾಠೆಯು ತನ್ನ 49ನೆಯ ವಯಸ್ಸಿನಲ್ಲಿ ಶಿರಡಿಗೆ ಬಂದುದು. – *ಭಕ್ತರ ಅನುಭವಗಳು* |
| **1904** | ಚಂದೋರ್ಕರನ ಮಗಳು ಮೀನಾ ತಾಯಿಯು ಪ್ರಸವದ ತೊಂದರೆಯಲ್ಲಿದ್ದಾಗ ಬಾಬಾರವರು ಶಿರಡಿಯಿಂದ ಬಾಪುಗೀರ ಗೋಸಾವಿಯ ಕೈಯಲ್ಲಿ 'ಉದಿ'ಯನ್ನು ಸುಖಪ್ರಸವಕ್ಕಾಗಿ ಕಳಿಸಿದುದು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-33* |
| **1906** | ದಾಸಗಣುವಿನ 'ಭಕ್ತ ಲೀಲಾಮೃತ' ಗ್ರಂಥದ ಪ್ರಕಟಣೆ. – *ಭಕ್ತರ ಅನುಭವಗಳು* |
| **1906** | ಚಂದೋರ್ಕರನಿಗೆ ಪಂಡರಾಪುರಕ್ಕೆ ವರ್ಗಾವಣೆ, ಬಾಬಾರವರ ಭಜನೆಯ ಲೀಲೆ. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-7, ಓವಿ-111-120.* |
| **1907** | 25 ವರ್ಷ ವಯಸ್ಸಿನ ರಾಧಾಕೃಷ್ಣಬಾಯಿ ಅಂದರೆ ಸುಂದರಾಬಾಯಿ ಕ್ಷೀರಸಾಗರ ಎಂಬ ವಿಧವೆಯು ಪಂಡರಾಪುರದಿಂದ ಶಿರಡಿಗೆ ಬಂದುದು. – *'ಸಾಯಿ ಸರೋವರ' ಭಾಗ –2* |
| **1908** | ಶಿರಡಿಯಲ್ಲಿ ರಾವ್ ಬಹಾದೂರ್ ಸಾಠೆಯ 'ವಾಡಾ'ದ ನಿರ್ಮಾಣ. – *(ಉಲ್ಲೇಖ) ಭಕ್ತರ ಅನುಭವಗಳು* |
| **1908** | ಚೈತ್ರ ಮಾಸ, ಶುಕ್ಲ ಪಕ್ಷ, ಏಕಾದಶಿಯ ದಿವಸ ಕಾಶೀರಾಂ ಶಿಂಪಿಯ ಮರಣ. – *(ಉಲ್ಲೇಖ) ಸಚ್ಚರಿತೆಯ ಮಹಾತ್ಮ್ಯೆ.* |
| **1908** | ಗೋದಾವರಿ ತೀರದ ರಾಜಮಂಡ್ರಿಯಲ್ಲಿ ನಾಂದೇಡಿನ ಪುಂಡಲೀಕರಾಯನು ವಾಸುದೇವಾನಂದ ಸರಸ್ವತಿಯನ್ನು ಭೇಟಿಯಾದಾಗ ಬಾಬಾರವರಿಗೆ ಕೊಡಲು ಒಂದು ತೆಂಗಿನ ಕಾಯಿಯನ್ನು ಕೊಟ್ಟುದು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-51, ಓವಿ-125 ಮತ್ತು 132* |
| **1908** | ತಾತ್ಯಾ ಸಾಹೇಬ ನೂಲ್ಕರನು, ಪಂಡರಾಪುರದ ಉಪನ್ಯಾಯಾಧೀಶನು ಮೊದಲ ಬಾರಿಗೆ ಶಿರಡಿಗೆ ಬಂದುದು. – *(ಉಲ್ಲೇಖ) ಸಾಯಿಲೀಲ, ಮೇ ಮತ್ತು ಜೂನ್ 1991* |
| **1908** | ತಾತ್ಯಾ ಸಾಹೇಬ ನೂಲ್ಕರ್, ಮಾಧವರಾವ್ ದೇಶಪಾಂಡೆ ಮತ್ತಿತರರು ಬಾಬಾರವರಿತ್ತ ಸ್ಫೂರ್ತಿಯಿಂದ ಶಿರಡಿಯಲ್ಲಿ ಮೊದಲ ಬಾರಿಗೆ ಗುರುಪೂರ್ಣಿಮೆಯನ್ನು ಆಚರಿಸಿದುದು. – *(ಉಲ್ಲೇಖ) ದಾಸ ಗಣುವಿನ 'ಶಿರಡಿ' ಮತ್ತು ಭಕ್ತರ ಅನುಭವಗಳು* |
| **ನವೆಂಬರ್ 2, 1909** | ಹರಿಸೀತಾರಾಂ ದೀಕ್ಷಿತನು ಶಿರಡಿಗೆ ಮೊದಲ ಬಾರಿಗೆ ಬಂದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-4, ಓವಿ-157.* |

ಡಿಸೆಂಬರ್ 10, 1909 ಸಾಯಿಬಾಬಾರವರು ಚಾವಡಿಯಲ್ಲಿ ದಿನಬಿಟ್ಟು ದಿನ ಮಲಗಲು ಪ್ರಾರಂಭಿಸಿದರು. ಹಾಗಾಗಿ ಶೇಜಾರತಿ ಮತ್ತು ಕಾಕಡಾರತಿಗಳನ್ನು ಅಲ್ಲಿಯೇ ಮಾಡಲಾಗುತ್ತಿತ್ತು. *– (ಉಲ್ಲೇಖ) ಸಚ್ಚರಿತೆ, ಅಧ್ಯಾಯ–37, ಓ.ವಿ–118.*

ಡಿಸೆಂಬರ್ 15, 1909 ಒಬ್ಬ ವೈದ್ಯರಿಗೆ ಬಾಬಾರವರು ಭಗವಾನ್ ರಾಮನ ರೂಪದಲ್ಲಿ ದರ್ಶನ ನೀಡಿದುದು. *– (ಉಲ್ಲೇಖ) ಸಚ್ಚರಿತೆ, ಅಧ್ಯಾಯ–13, ಓ.ವಿ–151.*

1909 ಬಾಪುಸಾಹೇಬ ಜೋಗ (ಸಖಾರಾಮ ಹರಿ ಜೋಗ)ನು ಸರ್ಕಾರಿ ನೌಕರಿಯಿಂದ ನಿವೃತ್ತಿಹೊಂದಿ ತನ್ನ ಪತ್ನಿಯೊಡನೆ ಶಿರಡಿಯಲ್ಲಿ ಶಾಶ್ವತವಾಗಿ ನೆಲಸಲು ಬಂದುದು. *– (ಉಲ್ಲೇಖ) ಗುಜರಾತಿಯ ಸಚ್ಚರಿತೆ, ಅಧ್ಯಾಯ–44.*

1909 ನಾರಾಯಣಗಾಂವ್ ವಾಸಿ ಭೀಮಾಜಿ ಪಾಟೀಲ ತನ್ನ ಕ್ಷಯರೋಗದ ವಿಮುಕ್ತಿಗಾಗಿ ಶಿರಡಿಗೆ ಬಂದುದು.*–(ಉಲ್ಲೇಖ) ಸಚ್ಚರಿತೆ, ಅಧ್ಯಾಯ–13, ಓ.ವಿ–34.*

1909 ಬಾಲಾಸಾಹೇಬ ಭಾಟೆಯು ಪ್ರಪ್ರಥಮವಾಗಿ ಶಿರಡಿಗೆ ಬಂದಾಗ ಬಾಬಾರವರು ಅವನಿಗೆ ಕಾಷಾಯ ವಸ್ತ್ರ ನೀಡಿದುದು. ಪ್ರಾಪಂಚಿಕ ಬದುಕಿನ ಬಗ್ಗೆ ಭಾಟೆಯಾಗೆ ಇದ್ದ ವಿರಕ್ತ ಭಾವವನ್ನು ವ್ಯಕ್ತಗೊಳಿಸಿತು. *– (ಉಲ್ಲೇಖ) ಸಚ್ಚರಿತೆ, ಅಧ್ಯಾಯ–33, ಓ.ವಿ–147, ಭಕ್ತರ ಅನುಭವಗಳು.*

1910 ಈ ವರ್ಷದವರೆಗೆ ಅನೇಕ ಸಂದರ್ಭಗಳಲ್ಲಿ ಬಾಬಾರವರು ಈ ಹಂಡೆಯಲ್ಲಿ ಅಡಿಗೆ ಮಾಡುತ್ತಿದ್ದರು. ಅನಂತರ ಭಕ್ತರು ತರುತ್ತಿದ್ದ ನೈವೇದ್ಯವು ಅದೆಷ್ಟು ಹೆಚ್ಚಾಗಿತ್ತೆಂದರೆ ಬಾಬಾರವರು ಅಡಿಗೆ ಮಾಡುವ ಪ್ರಮೇಯವೇ ಬರದೆ ಎಲ್ಲರಿಗೂ ಸಾಕಷ್ಟು ಆಹಾರ ಕೊಡಲಾಗುತ್ತಿತ್ತು. *– (ಉಲ್ಲೇಖ) ಸಚ್ಚರಿತೆ, ಅಧ್ಯಾಯ–38.*

1910 ರಾಮಚಂದ್ರ ಆತ್ಮಾರಾಮ ಅಲಿಯಾಸ್ ಬಾಬಾ ಸಾಹೇಬ ತರ್ಖಡ ಮುಂಬಯಿಯ ಬಾಂದ್ರಾದಿಂದ ಶಿರಡಿಗೆ ಮೊದಲ ಬಾರಿಗೆ ಬಂದನು. *– (ಉಲ್ಲೇಖ) ಪ್ರಭಾಕರ್.*

ಮೇ 1910 ಮೋರೇಶ್ವರ ಪ್ರಧಾನನು ಮುಂಬಯಿಯ ಸಾಂತಾಕ್ರೂಜ್‌ನಿಂದ ಶಿರಡಿಗೆ ಮೊದಲ ಬಾರಿಗೆ ಬಂದನು. *– (ಉಲ್ಲೇಖ) ಭಕ್ತರ ಅನುಭವಗಳು.*

1910 ಅಣ್ಣಾಸಾಹೇಬ ದಾಭೋಳಕರನು ಸಾಯಿಬಾಬಾರವರ ದರ್ಶನ ಮಾಡಿದ್ದು ಹೇಮಾಡಪಂತ ಎಂಬ ಹೆಸರು ಪಡೆದದ್ದು. *– (ಉಲ್ಲೇಖ) ಸಚ್ಚರಿತೆ, ಅಧ್ಯಾಯ–2, ಓ.ವಿ–137 ಇತ್ಯಾದಿ.*

1910 ಬಿ. ವಿ. ದೇವನು ಚಾಂದೋರಕರನಿಂದಾಗಿ ಮೊದಲ ಬಾರಿಗೆ ಸಾಯಿಬಾಬಾರವರ ದರ್ಶನ ಮಾಡಿದನು.*– (ಉಲ್ಲೇಖ) ಸಚ್ಚರಿತೆ, ಅಧ್ಯಾಯ–40 ಮತ್ತು 41.*

1910 ನಾಗಪುರದ ಶ್ರೀಮಾನ್ ಬುಟಿಯು ಶಿರಡಿಯಲ್ಲಿ ನೆಲಸಲು ಪ್ರಾರಂಭಿಸಿದನು. *– (ಉಲ್ಲೇಖ) ಪ್ರಭಾಕರ್.*

1910 ಹರಿಶ್ಚಂದ್ರ ಪಿತಳೆಯ ಮಗ ಗುಣಮುಖನಾದುದು ಮತ್ತು ಅವನಿಗೆ ಎರಡು ರೂಪಾಯಿಗಳನ್ನು ಕೊಡಲಾಯಿತು.

| | |
|---|---|
| | – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-26, ಓ.ವಿ-57.* |
| 1910 | ಬಾಬಾರವರು ಒಬ್ಬ ಅಕ್ಕಸಾಲಿಯ ಮಗಳ ಜೀವನವನ್ನು ಧುನಿಯಲ್ಲಿ ತಮ್ಮ ಕೈ ಹಾಕಿ ಉಳಿಸಿದರು. ಅದರಿಂದ ಅವರಕೈ ಸುಟ್ಟು ಹೋಯಿತು. ವೈದ್ಯ ಪರಮಾನಂದರು ಅದನ್ನು ಗುಣ ಪಡಿಸಲು ಮುಂಬಯಿಯಿಂದ ಬಂದರು. ಭಾಗೋಜಿ ಸಿಂಧೆ ಎಂಬ ಕುಷ್ಠರೋಗಿಯಾದ ಭಕ್ತನೊಬ್ಬ ಆ ಗಾಯಕ್ಕೆ ಪಟ್ಟಿ ಕಟ್ಟಿ ತೋಳನ್ನು ಮಾಲೀಷು ಮಾಡುವ ಅವಕಾಶ ಪಡೆದನು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-7, ಓ.ವಿ-73 ರಿಂದ ಮುಂದಕ್ಕೆ* |
| ಡಿಸೆಂಬರ್ 5, 1910 | ದಾದಾ ಸಾಹೇಬ ಖಪರ್ಡೆಯು ಅಮರಾವತಿಯಿಂದ ಶಿರಡಿಗೆ ಮೊದಲ ಬಾರಿಗೆ ಬಂದನು. (ಮತ್ತು ಡಿಸೆಂಬರ್ 12ನೇ ತಾರೀಖು ಹಿಂತಿರುಗಿದನು.) – *(ಇಂಗ್ಲೀಷ್) ಖಪರ್ಡೆಯ ದಿನಚರಿಯ ಪತ್ರ.* |
| ಡಿಸೆಂಬರ್ 10, 1910 | ಬಾಬಾರವರು ಕಾಕಾ ಸಾಹೇಬ ದೀಕ್ಷಿತನಿಗೆ ತನ್ನದೇ ಸ್ವಂತ ವಾಡಾ (ಛತ್ರ)ವನ್ನು ಕಟ್ಟಲು ತಮ್ಮ ಒಪ್ಪಿಗೆ ನೀಡಿದರು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-4, ಓ.ವಿ-164.* |
| ಕ್ರಿಸ್‌ಮಸ್, 1910 | ಲಾಲಾ ಲಕ್ಷ್ಮೀ ಚಂದನು ಶಿರಡಿಗೆ ಆಗಮಿಸಿದನು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-28, ಓ.ವಿ-33.* |
| ಡಿಸೆಂಬರ್, 1910 | ಮದರಾಸಿ ಸನ್ಯಾಸಿ ವಿಜಯಾನಂದನು ಶಿರಡಿಯಲ್ಲಿ ಮೃತನಾದನು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-31, ಓ.ವಿ-56.* |
| 1910 | ಮೇಘಾನು ಶಿರಡಿಯಲ್ಲಿ ಶಾಶ್ವತವಾಗಿ ನೆಲೆಸಲು ಹಿಂತಿರುಗಿದನು. ಅವನ ಮೊದಲ ಭೇಟಿ ಸುಮಾರು 1908ರಲ್ಲಿತ್ತು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-28, ಓ.ವಿ-145.* |
| 1911 | ಕಾಕಾ ಸಾಹೇಬ ದೀಕ್ಷಿತನ ವಾಡಾವು ಭಕ್ತರಿಗಾಗಿ ರಾಮನವಮಿಯ ದಿನ ಗೃಹಪ್ರವೇಶದ ವಿಧಿವಿಧಾನಗಳ ನಂತರ ತೆರೆಯಲ್ಪಟ್ಟಿತು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-4, ಓ.ವಿ-166.* |
| ಮಾರ್ಚ್ 1911 | ಉಪನ್ಯಾಯಾಧೀಶ ತಾತ್ಯಾಸಾಹೇಬ ನೂಲ್ಕರನು ಶಿರಡಿಯಲ್ಲಿ ಮರಣಹೊಂದಿದನು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-31, ಓ.ವಿ-119.* |
| ಮಾರ್ಚ್ 1911 | ಮೇಘಾನು ಕೇವಲ ಒಂದು ಕಾಲಿನ ಮೇಲೆ ನಿಂತು ಬಾಬಾರವರ ಆರತಿ ಮಾಡಲು ಪ್ರಾರಂಭಿಸಿದನು. – *(ಇಂಗ್ಲೀಷ್) ಭಕ್ತರ ಅನುಭವಗಳು.* |
| 1911 | ದ್ವಾರಕಾಮಾಯಿಯ ಅಂಗಳವನ್ನು ಜೀರ್ಣೋದ್ಧಾರ ಮಾಡಲಾಯಿತು. ಬಾಬಾರವರು ರಾತ್ರಿ ನಿಲ್ಲಿಸಿದ್ದ ಕಂಭಗಳನ್ನು ಬುಡಮೇಲು ಮಾಡುತ್ತಿದ್ದರು. ಬಾಬಾರವರು ತಾತ್ಯಾನ ರುಮಾಲನ್ನು ಹಳ್ಳಕ್ಕೆ ಬಿಸಾಡಿ ಬೆಂಕಿ ಹೊತ್ತಿಸಿದರು. ನಂತರ ಒಂದು ಜರಿಯಂಚಿನ ರುಮಾಲನ್ನು ಬದಲಾಗಿ ನೀಡಿದರು.- *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ-6, ಓ.ವಿ- 137 ರಿಂದ ಮುಂದಕ್ಕೆ* |

1911 ಬಾಬಾರವರು ಕಾಕಾ ಮಹಾಜನಿಯ ಬೇಧಿಯನ್ನು ಕಡಲೆಕಾಯಿ ಬೀಜದಿಂದ ಗುಣಪಡಿಸಿದರು. ಆಗ ಅಂಗಳದ ರಿಪೇರಿ ಕೆಲಸ ಪ್ರಾರಂಭವಾಗಿತ್ತಷ್ಟೆ. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-13, ಓವಿ-134 ರಿಂದ ಮುಂದಕ್ಕೆ*

1911 ಹಾಜಿ ಸಿದ್ದಿಕ್ ಫಾಲ್ಕೆಯು ಶಿರಡಿಯಲ್ಲಿ ನೆಲಸಿದನು ಮತ್ತು 9 ತಿಂಗಳುಗಳ ಕಾಲ ದ್ವಾರಕಾಮಾಯಿಗೆ ಪ್ರವೇಶ ನಿಷಿದ್ಧಗೊಳಿಸಲಾಗಿತ್ತು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-11, ಓವಿ-78 ರಿಂದ ಮುಂದಕ್ಕೆ*

1911 ಸೋಮದೇವ ಸ್ವಾಮಿಯು ಹರಿದ್ವಾರದಿಂದ ಶಿರಡಿಗೆ ಬಂದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-49, ಓವಿ-93*

27–6–1911 ಕಾಶೀನಾಥ ಗೋವಿಂದ ಉಪಾಸನಿಯು ಮೊದಲ ಬಾರಿಗೆ ಶಿರಡಿಗೆ ಬಂದನು. – *(ಉಲ್ಲೇಖ) ಸಾಯಿಬಾಬಾರವರ ಜೀವನ ಕಥನ ಭಾಗ – 2 ನರಸಿಂಹ ಸ್ವಾಮಿಜಿ.*

ಡಿಸೆಂಬರ್ 1911 ಉಪಾಸನಿಯು ಶ್ರೀ ಸಾಯಿನಾಥರ ವೈಭವವನ್ನು ಹೊಗಳುವ ಕಾವ್ಯದ ರಚನೆ ಮಾಡಿದನು. (ಶ್ರೀ ಸಾಯಿನಾಥ ಮಹಿಮಾ ಸ್ತೋತ್ರಮ್) – *(ಉಲ್ಲೇಖ) ಖಪರ್ಡೆಯ ದಿನಚರಿ.*

ಡಿಸೆಂಬರ್ 1911 ಶಿರಡಿಯಲ್ಲಿ ಬ್ಯುಬೋನಿಕ್ ಪ್ಲೇಗು (ಗ್ರಂಥಿ ಜ್ವರ) ಉಲ್ಬಣಿಸಿದುದು. – *(ಉಲ್ಲೇಖ) ಸಾಯಿಬಾಬಾ ಜೀವನ ಕಥನ ಭಾಗ – 2*

1911 ಬಾಬಾರವರು ಶಿರಡಿಯಲ್ಲಿ ಕಾಲರಾವನ್ನು ಹೊಗಲಾಡಿಸಲು ಗೋಧಿಯನ್ನು ಬೀಸಿದುದು. ಹೇಮಾಡಪಂತ ದಾಭೋಳ್ಕರನಿಗೆ ಶ್ರೀಸಾಯಿ ಸಮರ್ಥ ಸಚ್ಚರಿತೆಯನ್ನು ಬರೆಯಲು ಸ್ಫೂರ್ತಿ ನೀಡಿತು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-1, ಓವಿ-110 ಮತ್ತು 134 ಇತ್ಯಾದಿ.*

5–12–1911 ದಾದಾ ಸಾಹೇಬ ಖಪರ್ಡೆಯು ಮತ್ತೆ ಶಿರಡಿಗೆ ಕುಟುಂಬ ಸಮೇತನಾಗಿ ಬಂದು 3 ತಿಂಗಳುಗಳ ಕಾಲ ನೆಲಸಿದನು. ಕೃಷ್ಣ ಜೋಗೇಶ್ವರ್ ಭೀಷ್ಮನು (ಸಗುಣೋಪಾಸನೆಯ ಕರ್ತೃ) ಅವನ ಜೊತೆ ಬಂದನು. – *(ಉಲ್ಲೇಖ) ಖಪರ್ಡೆಯ ದಿನಚರಿ.*

ಡಿಸೆಂಬರ್ 11, 1911 ವಾಮನರಾವ ಪಾಟೀಲ, ನಂತರ ಸ್ವಾಮಿ ಶರಣಾನಂದ ಎಂದು ಕರೆಯಲ್ಪಟ್ಟವನು 22ನೆಯ ವಯಸ್ಸಿನಲ್ಲಿ ಮೊದಲಬಾರಿಗೆ ಶಿರಡಿಗೆ ಬಂದನು. – *(ಉಲ್ಲೇಖ) ಸಾಯಿಬಾಬಾ – ಬೈ – ಶರಣ ಮತ್ತು ಖಪರ್ಡೆಯ ದಿನಚರಿ.*

ಡಿಸೆಂಬರ್ 13, 1911 ಚಂದ್ರಭಾನ್ ಶೇಠ, ರಾಹತಾದ ಕುಶಾಲಚಂದನ ಚಿಕ್ಕಪ್ಪನ ಮರಣ. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-8, ಓವಿ-129*

ಡಿಸೆಂಬರ್ 16, 1911 ಕ್ಯಾಪ್ಟನ್ ಡಾಕ್ಟರ್ ಹಾಟೆ ಶಿರಡಿಗೆ ಮೊದಲ ಬಾರಿಗೆ ಯುವಕನಾಗಿ ಬಂದನು. ಅವನು ಎಲ್.ಎಂ.ಎಸ್.ಎಸ್. ಪರೀಕ್ಷೆಗೆ ಕುಳಿತಿದ್ದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-29, ಓವಿ-146 ಮತ್ತು ಭಕ್ತರ ಅನುಭವಗಳು.*

ಡಿಸೆಂಬರ್ 19, 1911 ನಾಥಸಂಘಕ್ಕೆ ಸೇರಿದ ಶ್ರೀ ರಾಮ ಮಾರುತಿಯು ಥಾನೆಯ ಭಿವಂಡಿಯ ಕಲ್ಯಾಣದವನು ಶಿರಡಿಗೆ ಬಂದು 34 ದಿನಗಳ ಕಾಲ ನೆಲಸಿದನು. – *(ಉಲ್ಲೇಖ)*

| | |
|---|---|
| | *ಸಚ್ಚರಿತೆ, ಅಧ್ಯಾಯ-34, ಓ.ವಿ-150. ಮತ್ತು ಭಕ್ತರ ಅನುಭವಗಳು.* |
| 1912 | ಸಗುಣ ಮೇರು ನಾಯಕ 23ನೇಯ ವಯಸ್ಸಿನಲ್ಲಿ ಶಿರಡಿಗೆ ಬಂದು ಬಾಬಾರವರ ಆಜ್ಞೆಯಮೇರೆಗೆ ಒಂದು ಸಾರ್ವಜನಿಕ ಉಪಾಹಾರಗೃಹವನ್ನು ನಡೆಸಲು ಪ್ರಾರಂಭಿಸಿದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-5, ಓ.ವಿ-61 ಮತ್ತು ಅಧ್ಯಾಯ-26, ಓ.ವಿ-130.* |
| 1912 | ಖಾಪರ್ಡೆಯ ಚಿಕ್ಕಮಗ ಬಲವಂತ ಬ್ಯುಬೋನಿಕ್ ಪ್ಲೇಗ್‌ನಿಂದ ಗುಣಮುಖನಾದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-7, ಓ.ವಿ-101, 107.* |
| ಜನವರಿ 3, 1912 | ಮೇಘಾನು ಮಂತ್ರಶಾಸ್ತ್ರದ ರೀತಿ ಗಾಯತ್ರಿಮಂತ್ರದ ಪುರಶ್ಚರಣೆಯನ್ನು ಪೂರ್ಣ ಗೊಳಿಸಿದಾಗ, ಬ್ರಾಹ್ಮಣರಿಗೆ ಹಾಗೂ ಇತರ ಭಕ್ತರಿಗಾಗಿ ಸಾಠೆಯವಾಡೆಯಲ್ಲಿ ಉದ್ಯಾಪನೆಯನ್ನು ಆಚರಿಸಿದನು. – *(ಉಲ್ಲೇಖ) ಖಾಪರ್ಡೆಯ ದಿನಚರಿ.* |
| 1912 | ಮಸೀದಿಯ ಜೀರ್ಣೋದ್ಧಾರ ಮತ್ತು ಅದರ ನೆಲಹಾಸು ಹಾಕಿದ ನಂತರ ಬಾಬಾರವರು ಒಂದು ಸೂಕ್ತವಾದ ಆಸನವನ್ನು ಪರಿಗ್ರಹಿಸಿದುದು ಮತ್ತು ತಮ್ಮ ಮಾಮೂಲಿನ ಗೋಣಿಚೀಲವನ್ನು ತ್ಯಜಿಸಿದುದು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-6, ಓ.ವಿ-125 ರಿಂದ ಮುಂದಕ್ಕೆ* |
| 19–1–1912 | ಮೇಘಾನು ಶಿರಡಿಯಲ್ಲಿ ಮೃತಹೊಂದಿದನು. ಬಾಬಾ ಅವನ ಮರಣಕ್ಕಾಗಿ ದುಃಖಿಸಿದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-31, ಓ.ವಿ-119 -123* |
| 20–1–1912 | ಬಾಪು ಸಾಹೇಬ ಜೋಗನು ಮೇಘಾನ ಸಾವಿನ ನಂತರ ಪ್ರತಿದಿನವೂ ಮಸೀದಿ ಮತ್ತು ಚಾವಡಿಗಳಲ್ಲಿ ದಿನನಿತ್ಯದ ಆರತಿಗಳನ್ನು ಮಾಡಲು ಪ್ರಾರಂಭಿಸಿದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-43, ಓ.ವಿ-163 ಮತ್ತು ಖಾಪರ್ಡೆಯ ದಿನಚರಿ.* |
| ಜನವರಿ 1912 | ತಾತ್ಯಾ ಕೋತೆ ಪಾಟೀಲನ ತಂದೆ ಗೋವಿಂದ ಕೋತೆಯು ಶಿರಡಿಯಲ್ಲಿ ಮರಣಹೊಂದಿದನು. ಹಾಗಾಗಿ ತಾತ್ಯಾನು 14 ವರ್ಷಗಳ ನಂತರ ಮನೆಯೊಡೆಯನ ಜವಾಬ್ದಾರಿ ವಹಿಸಬೇಕಾಯಿತು. ತದನಂತರ ಅವನು ಮಸೀದಿಯಲ್ಲಿ ಬಾಬಾರವರೊಡನೆ ಮಲಗಲಿಲ್ಲ. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-8, ಓ.ವಿ-124 ಮತ್ತು ಖಾಪರ್ಡೆಯ ದಿನಚರಿ.* |
| ಫೆಬ್ರವರಿ 25, 1912 | ಮಾಧವರಾವ್ ದೇಶಪಾಂಡೆ(ಶಾಮಾ)ಯು ಶಿರಡಿಯಿಂದ ಹೊರಟು ಕಾಕಾ ಸಾಹೇಬ ದೀಕ್ಷಿತನ ಮಗನ ಉಪನಯನ (ಮುಂಜಿ)ದಲ್ಲಿ ಭಾಗವಹಿಸಿ ಮತ್ತೆ ನಾಗಪುರ, ಗ್ವಾಲಿಯರ್ ಮತ್ತು ಗಯಾ ಯಾತ್ರೆಗಳಿಗೆ ಮುಂದುವರೆದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-46, ಓ.ವಿ-80 ಮತ್ತು ಖಾಪರ್ಡೆಯ ದಿನಚರಿ.* |
| ಮಾರ್ಚ್ 15, 1912 | ಖಾಪರ್ಡೆಯು ಅಮರಾವತಿಗೆ ಹಿಂತಿರುಗಿದನು. ತನ್ನ ಪತ್ನಿಯನ್ನು ಶಿರಡಿಯಲ್ಲಿಯೇ ನಿಲ್ಲಿಸಿದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-27, ಓ.ವಿ-147.* |
| ರಾಮನವಮಿ 1912 | ಶಿರಡಿಯಲ್ಲಿ ರಾಮನವಮಿಯ ಉತ್ಸವದ ಪ್ರಾರಂಭ. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-6, ಓ.ವಿ-59 ಇತ್ಯಾದಿ.* |
| ಏಪ್ರಿಲ್ 1912 | ಬಾಳಾರಾಮ ಧುರಂಧರನು ಶಿರಡಿಯಲ್ಲಿ ಪ್ರಥಮವಾಗಿ ದರ್ಶನ ಪಡೆದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-51, ಓ.ವಿ-199 ಇತ್ಯಾದಿ.* |

ಶ್ರಾವಣ ಪೂರ್ಣಿಮೆ 1912 ಬೇವಿನ ಮರದ ಕೆಳಗೆ ಗುರುಸ್ಥಾನದಲ್ಲಿ ಪಾದುಕೆಗಳನ್ನು ಸ್ಥಾಪಿಸಲಾಯಿತು. – *(ಇಂಗ್ಲೀಷ್) ಸಚ್ಚರಿತ, ಅಧ್ಯಾಯ-5, ಓವಿ-59*

1913 ಸಪಟ್ಣೇಕರನು ಮೊದಲ ಬಾರಿ ಶಿರಡಿಗೆ ತನ್ನ ಸೋದರನೊಡನೆ ಬಂದನು. – *(ಇಂಗ್ಲೀಷ್) ಸಚ್ಚರಿತ, ಅಧ್ಯಾಯ-48, ಓವಿ-74 ಇತ್ಯಾದಿ.*

1913 ಬಾಳಾಬುವಾ ಸುತಾರ್(ಸತಾರ್‌ಕರ್)ನ್ನು ಶಿರಡಿಗೆ ಕೀರ್ತನೆ ಮಾಡಲು ಆಹ್ವಾನಿಸಲಾಯಿತು. ಬಾಬಾರವರು ಅವನನ್ನು ಗುರುತಿಸಿ ಹಿಂದಿನ ನಾಲ್ಕು ವರ್ಷಗಳಿಂದಲೂ ಅವನ ಪರಿಚಯವಿದೆಯೆಂದು ಹೇಳಿದರು. ಅದು ಅವನು ಬಾಬಾರವರ ಚಿತ್ರಪಟಕ್ಕೆ ನಮಸ್ಕರಿಸಿದುದರಿಂದ ಆಗಿತ್ತು. – *(ಇಂಗ್ಲೀಷ್) ಸಚ್ಚರಿತ, ಅಧ್ಯಾಯ-6, ಓವಿ-94 ರಿಂದ ಮುಂದಕ್ಕೆ ಮತ್ತು ಅಧ್ಯಾಯ-33, ಓವಿ-153ರಿಂದ ಮುಂದಕ್ಕೆ*

1913 ಶ್ರೀಯುತ ಆರ್. ಬಿ. ಪುರಂದರೆಯ ಪತ್ನಿ ಮತ್ತು ತಾಯಿಯವರಿಗೆ ಬಾಬಾರವರು ಪಂಢರಾಪುರದ ವಿಠಲ ಮತ್ತು ರಖುಮಾಯಿಯಾಗಿ ದರ್ಶನವಿತ್ತರು. – *(ಇಂಗ್ಲೀಷ್) ಭಕ್ತರ ಅನುಭವಗಳು.*

ಮೇ 1913 ವಾಮನರಾವ ಪಾಟೀಲ, ಅಂದರೆ ಸ್ವಾಮಿ ಸಾಯಿ ಶರಣಾನಂದಜೀಯವರು ಮತ್ತೆ ಶಿರಡಿಗೆ ಬಂದು 11 ತಿಂಗಳ ಕಾಲ ವಾಸ ಮಾಡಿದರು. ಅವರ ವಯಸ್ಸು ಅಂದಾಜು 24–25 ವರ್ಷಗಳು. – *(ಇಂಗ್ಲೀಷ್) ಸಾಯಿಬಾಬಾ – ಪ – ಶರಣ.*

1913 ರಾವ್ ಬಹಾದೂರ್ ಸಾಠೆಗೆ ಕೊನೆಗೊಮ್ಮೆ ಮಗ ಹುಟ್ಟಿದನು ಮತ್ತು ಬಾಬಾರವರ ಮಾತುಗಳು ಸತ್ಯವಾದವು. ಸಾಠೆಯು ತನ್ನ 50ನೆಯ ವಯಸ್ಸಿನಲ್ಲಿ ಮರುಮದುವೆ ಆದನು. ಅವನಿಗೆ ಪುತ್ರ ಸಂತಾನದ ನಂಬಿಕೆಯಿತ್ತು. ಈ ಮಗನು ಎರಡು ಹೆಣ್ಣು ಮಕ್ಕಳಾದ ಮೇಲೆ ಜನಿಸಿದ್ದನು. – *(ಇಂಗ್ಲೀಷ್) ಸಾಯಿಬಾಬಾರವರ ಶಿಷ್ಯ ಮತ್ತು ನರಸಿಂಹಸ್ವಾಮಿಗಳ ನುಡಿಗಳು.*

ಫೆಬ್ರವರಿ 22, 1914 ದಹಾಣುವಿನ ಮಾಮಲೇದಾರನಾಗಿದ್ದ ಬಿ. ವಿ. ದೇವನನ್ನು ಬಾಬಾರವರು ಚಿಂದಿಯ ಕಳ್ಳನೆಂದು ಬೈದಿದ್ದರು. ಕೋಪಗೊಂಡ ನಂತರ ಅವನಿಗೆ ಜ್ಞಾನೇಶ್ವರಿಯನ್ನು ಓದಲು ಅಪ್ಪಣೆ ಮಾಡಿದರು. – *(ಇಂಗ್ಲೀಷ್) ಸಚ್ಚರಿತ, ಅಧ್ಯಾಯ-41, ಓವಿ-86 ಮತ್ತು 137.*

ಫೆಬ್ರವರಿ 22, 1914 ಸ್ವಾಮಿ ರಾಮಬಾಬಾ, ಒಬ್ಬ ಯೋಗವಿದ್ಯಾರ್ಥಿ ಶ್ರೀ ಸಾಯಿಬಾಬಾರವರ ದರ್ಶನ ಮಾಡಿದಾಗ ಅವರು ಭಕ್ರಿಯನ್ನು ಈರುಳ್ಳಿಯ ಜೊತೆ ತಿನ್ನುತ್ತಿದ್ದುದನ್ನು ನೋಡಿ ಬಾಬಾರವರನ್ನು ತಪ್ಪಾಗಿ ತೀರ್ಮಾನಿಸಿದನು. – *(ಇಂಗ್ಲೀಷ್) ಸಚ್ಚರಿತ, ಅಧ್ಯಾಯ-23, ಓವಿ-12 ರಿಂದ 20.*

ರಾಮನವಮಿ 1914 ಬಾಳಾ ಬುವಾ ಸುತಾರ(ಸತಾರಕರ್)ನು ರಾಮನವಮಿಯ ದಿವಸ ಕೀರ್ತನೆ ಮಾಡಲು ಶಿರಡಿಗೆ ಬಂದನು. – *(ಇಂಗ್ಲೀಷ್) ಸಚ್ಚರಿತ, ಅಧ್ಯಾಯ-6, ಓವಿ-97 ರಿಂದ 116.*

ಏಪ್ರಿಲ್ 2, 1914 ಬಿ. ವಿ. ದೇವನಿಗೆ ಕನಸಿನಲ್ಲಿ ಒಂದು ದಿವ್ಯದರ್ಶನ ಉಂಟಾಯಿತು. ಅದರಲ್ಲಿ ಬಾಬಾರವರು ಗ್ರಂಥದ ಪಾರಾಯಣೆಯ ವಿಧಿಯ ಬಗ್ಗೆ ನಿರ್ದೇಶನ

ನೀಡಿದ್ದರು. (ಅಧ್ಯಾಯದ ಕೊನೆಯಲ್ಲಿನ ಟಿಪ್ಪಣಿಯನ್ನು ನೋಡಿ.) – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-41, ಓವಿ-60 ರಿಂದ ಮುಂದಕ್ಕೆ*

ಜುಲೈ 25, 1914 ಉಪಾಸನಿಯು ಬಾಬಾರವರ ಅನುಮತಿಯಿಲ್ಲದೆಯೇ ಶಿರಡಿಯಿಂದ ನಿರ್ಗಮಿಸಿದನು. – *(ಉಲ್ಲೇಖ) ನರಸಿಂಹ ಸ್ವಾಮಿಯು ರಚಿಸಿದ ಸಾಕ್ಷಿಯ ಸಾಕ್ಷ್ಯ*

1914 ಸಪಟ್ಣೇಕರನು ಮತ್ತೆ ಅಕ್ಕಲಕೋಟೆಯಿಂದ ಶಿರಡಿಗೆ ಪತ್ನಿ ಸಮೇತನಾಗಿ ಬಂದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-48, ಓವಿ-148 ರಿಂದ ಮುಂದಕ್ಕೆ*

ರಾಮನವಮಿ 1915 ದಾಸಗಣುವು ಕೀರ್ತನ ನಡೆಸಿದನು ಮತ್ತು ತದನಂತರ ಪ್ರತಿವರ್ಷವೂ ಅದನ್ನು ಮುಂದುವರೆಸಿದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-6, ಓವಿ-116.*

1915 ಬಾಬಾರವರು ಉಬ್ಬಸರೋಗದಿಂದಾಗಿ ತೀವ್ರ ಅಸ್ವಸ್ಥರಾಗಿಯೂ ನಿಶ್ಶಕ್ತರಾಗಿಯೂ ಇದ್ದರೂ ಸಹ ಅನಾರೋಗ್ಯಪೀಡಿತಳಾದ ರಾಧಾಕೃಷ್ಣಮಾಯಿಯ ಮನೆಯ ಛಾವಣಿ ಮೇಲೆ ಹತ್ತಿದರು. ಅವರು ಪಿಂಪಳೇಕರ್‌ನಿಗೆ ಏಣಿಯನ್ನು ತಂದಿದ್ದಕ್ಕಾಗಿ ಎರಡು ರೂಪಾಯಿಗಳನ್ನು ಕೊಟ್ಟರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-19, ಓವಿ-235 ರಿಂದ ಮುಂದಕ್ಕೆ*

1915 ಬಲರಾಮ ಮಾನಕರನು ಶಿರಡಿಯಲ್ಲಿ ಮೃತಿಹೊಂದಿದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-31, ಓವಿ-117.*

ಡಿಸೆಂಬರ್ 1915 ಮುಂಬಯಿಯ ಶ್ರೀಮತಿ ತರ್ಖಡಳು ಮಾನಕರನ ಮಗನ ಹತ್ತಿರ ಬಾಬಾರವರಿಗೆ ಪೇಡಾವನ್ನು ಕಳುಹಿಸಿದ್ದಳು. ಅದು ಅವಳ ಮನೆಯಲ್ಲಿ ನೈವೇದ್ಯವಾಗಿ ಸಮರ್ಪಿಸಿ ಉಳಿದುದಾಗಿತ್ತು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-9, ಓವಿ-146ರಿಂದ156.*

ಡಿಸೆಂಬರ್ 30, 1915 ಬುಟಿಯ ವಾಡೆಯ ಕೆಲಸ(ಈಗಿನ ಸಮಾಧಿಮಂದಿರ)ವನ್ನು ಪ್ರಾರಂಭಿಸಲಾಯಿತು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-4, ಓವಿ-167. ಮತ್ತು ಟಿಪ್ಪಣಿಯ ದಿನಚರಿ.*

1916 ದಾಸಗಣುವು ಬಾಬಾರವರಿಂದ ನಾಮ ಸಪ್ತಾಹ ಮಾಡುವಂತಾಯಿತು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-4, ಓವಿ-83*

1916 ರಾಧಾಕೃಷ್ಣಮಾಯಿಯು ತನ್ನ 35ನೆಯ ವಯಸ್ಸಿನಲ್ಲಿ ನಿಧನಳಾದಳು. – *(ಉಲ್ಲೇಖ) ಭಕ್ತರ ಅನುಭವಗಳು*

1916 ಮದರಾಸಿನ ಭಜನಾಮಂಡಲಿಯು ಶಿರಡಿಗೆ ಆಗಮಿಸಿತು. ಬಾಬಾರವರು ಒಬ್ಬ ಮಹಿಳೆಗೆ ಶ್ರೀರಾಮನಾಗಿ ದರ್ಶನ ನೀಡಿದರು ಮತ್ತು ಅವಳ ಪತಿಗೆ ಸ್ವಪ್ನದರ್ಶನ ನೀಡಿ ಅವನ ದೃಷ್ಟಿಕೋಣವನ್ನೇ ಬದಲಾಯಿಸಿದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-29, ಓವಿ-3, 40, 81 ಮತ್ತು 82 ರಿಂದ ಮುಂದಕ್ಕೆ*

1916 ಮಾಲೇಗಾಂವನ ವೈದ್ಯನ ಸೋದರಳಿಯನ ಮೂಳೆಯ ಕ್ಷಯವನ್ನು ಉದಿಯಿಂದ ಗುಣಪಡಿಸಿದರು ಮತ್ತು ವೈದ್ಯನು ಸ್ವತಃ ಬಾಬಾರವರ ದರ್ಶನ ಪಡೆದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-34, ಓವಿ-5 ರಿಂದ ಮುಂದೆ ಮತ್ತು ಓವಿ 31, 45 ಇತ್ಯಾದಿ.*

1916 ದಾಭೋಳ್ಕರ್‌ನು ನಿವೃತ್ತಿ ಹೊಂದಿದನು. ಗುರುಪೂರ್ಣಿಮೆಯ ಸಂದರ್ಭದಲ್ಲಿ ಅಣ್ಣಾಸಾಹೇಬ ಚಿಂಚಣೀಕರನು ತಾನಾಗಿ ಬಾಬಾರವರಲ್ಲಿ ದಾಭೋಳ್ಕರನಿಗೆ

ಮತ್ತೊಂದು ವೃತ್ತಿ ಸಿಗಲೆಂದು ಪ್ರಾರ್ಥಿಸಿದನು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–3, ಓ.ವಿ–72–73*

ವಿಜಯದಶಮಿ (ದಸರಾ) 1916 ಬಾಬಾರವರು ತಮ್ಮ ಮಹಾಸಮಾಧಿಯು ಭವಿಷ್ಯದಲ್ಲಿ ಸೀಮೋಲ್ಲಂಘನದ ಸಮಯದಲ್ಲಿಯೇ ನಡೆಯುತ್ತದೆಯೆಂದು, ಅವರು ಕೋಪೋದ್ರಿಕ್ತರಾಗಿ ತಮ್ಮ ಉಡುಪನ್ನು ಕಳಚಿ ಧುನಿಯೊಳಗೆ ಬಿಸಾಡಿದಾಗ, ಸೂಚಿಸಿದ್ದರು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–42, ಓ.ವಿ–18 ರಿಂದ ಮುಂದಕ್ಕೆ*

1916 ರಾಮಚಂದ್ರ ದಾದಾ ಪಾಟೀಲನು ಅನಾರೋಗ್ಯ ಪೀಡಿತನಾದನು. ಬಾಬಾರವರು ಅವನಿಗೆ ಸ್ವಪ್ನ ದರ್ಶನ ನೀಡಿ, ಅಂದಿನಿಂದ ಎರಡು ವರ್ಷಗಳಲ್ಲಿ ವಿಜಯದಶಮಿಯ ದಿನ, ತಮ್ಮ ಹೆಸರಿನ ಬದಲಿಗೆ ತಾತ್ಯಾನ ಹೆಸರನ್ನು ನಮೂದಿಸಿ ಆತನು ನಿಧನನಾಗುವನೆಂದು ತಿಳಿಸಿದರು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–43, ಓ.ವಿ–45 ರಿಂದ ಮುಂದಕ್ಕೆ*

1916 ಗೋಪಾಲ ನಾರಾಯಣ ಅಂಬೇಡಕರ್, ಪುಣೆಯ ಒಬ್ಬ ಭಕ್ತ ಶಿರಡಿಗೆ ಬಂದನು. ಅವನ ಆರ್ಥಿಕ ಪರಿಸ್ಥಿತಿಯಿಂದಾಗಿ ಅವನು ಆತ್ಮಹತ್ಯೆ ಮಾಡಿಕೊಳ್ಳಲು ನಿಶ್ಚಯಿಸಿದನು. ಅದರೆ ಬಾಬಾರವರು ಅವನನ್ನು ರಕ್ಷಿಸಿದರು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–26, ಓ.ವಿ–114.*

1917 ಮುಂಬಯಿಯ ಸಾಠೆಯು 'ಗುರು ಚರಿತ್ರೆ'ಯ 'ಪಾರಾಯಣ' ಮಾಡಿದನು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–18, ಓ.ವಿ–43–57.*

1917 ರಾಧಾಬಾಯಿ ದೇಶಮುಖಿಣಿ ಗುರುಮಂತ್ರ ಸಿಗುವವರೆಗೆ ಉಪವಾಸ ಮಾಡುವೆನೆಂಬ ವ್ರತ ಹಿಡಿದಳು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–19, ಓ.ವಿ–35.*

1917 ಬಾಬಾರವರು ಹೇಮಾಡಪಂತನಿಗೆ ಅನುಗ್ರಹ ವರ್ಷ ಸುರಿಸಿದರು. ಅರತಿಯ ನಂತರ ಕೈತುಂಬ ಕಲ್ಲುಸಕ್ಕರೆ ನೀಡಿ ಒಂದು ಮುಖ್ಯವಾದ ಪಾಠ ಕಲಿಸಿದರು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–19, ಓ.ವಿ–117, 118*

1917 ಹೋಳಿ ಹುಣ್ಣಿಮೆಯ ದಿನ ಮುಂಜಾನೆಯ ಸಮಯದಲ್ಲಿ ಬಾಬಾರವರು ಹೇಮಾಡಪಂತನಿಗೆ ಸ್ವಪ್ನದರ್ಶನ ನೀಡಿ ತಾವು ಆ ದಿನ ಊಟಕ್ಕೆ ಬರುವೆನೆಂದು ತಿಳಿಸಿದರು. ಅದರೆ ಅವರು ನಿಜವಾಗಿಯೂ 9 ವರ್ಷಗಳ ನಂತರ ಭೇಟಿಯಾದ ಅಲಿಮುಹಮದ್‌ನು ತಂದ ಒಂದು ಚಿತ್ರಪಟದ ರೂಪದಲ್ಲಿ ಬಂದು ಆ ಬಹುಮಾನ ನೀಡಲು ಕಾರಣವನ್ನು ಸೂಚಿಸಿದ್ದರು. – *(ಇಂಗ್ಲೀಷ್) ಸಚ್ಚರಿತೆ, ಅಧ್ಯಾಯ–40, ಓ.ವಿ–113 ಇತ್ಯಾದಿ.*

1917 ಮೇ ತಿಂಗಳಲ್ಲಿ ಲೋಕಮಾನ್ಯ ತಿಲಕರು ದಾದಾ ಸಾಹೇಬ ಖಪರ್ಡೆಯೊಂದಿಗೆ ಸಾಯಿಯ ದರ್ಶನಕ್ಕೆ ಬಂದರು.
– *(ಇಂಗ್ಲೀಷ್) ಖಪರ್ಡೆಯ ದಿನಚರಿ. ಸಾಯಿ ಭಕ್ತರ ಅನುಭವಗಳು*

ಗುರುಪೂರ್ಣಿಮೆ 1917 ದಹಾಣುವಿನ ಹರಿಬಾಬು ಕಾರ್ನಿಕ್‌ನಿಗೆ ಬಾಬಾರವರಿಗೆ ಒಂದು ರೂಪಾಯಿ ಹೆಚ್ಚಿಗೆ ನೀಡಬೇಕೆಂಬ ಇಚ್ಛೆಯುಂಟಾಯಿತು. ಅದರೆ ಅದು

| | |
|---|---|
| | ಪೂರೈಸಲಾಗಿರಲಿಲ್ಲ. ಹಾಗಿದ್ದಾಗ್ಯೂ ನಾಸಿಕದ ಕಾಳಾರಾಮನ ಮಂದಿರದಲ್ಲಿ ನರಸಿಂಹ ಮಹಾರಾಜರು ಕೇವಲ ಒಂದು ರೂಪಾಯಿಯನ್ನು ಅವನಿಂದ ಕೇಳಿ ಪಡೆದರು. – *(ಇಂಗ್ಲಿಷ್) ಸಚ್ಚರಿತೆ, ಅಧ್ಯಾಯ–33, ಪಿ.ಪಿ–119.* |
| 1917 | ಅಪ್ಪಾ ಸಾಹೇಬ ಕುಲಕರ್ಣಿಯ ಭಕ್ತಿಗೆ ಮೆಚ್ಚಿ ಬಾಬಾರವರು ಥಾನೆಯಲ್ಲಿನ ಅವನ ಮನೆಗೆ ಹೋಗಿ ಅವನ ಕುಟುಂಬದ ಯೋಗಕ್ಷೇಮವನ್ನು ವಿಚಾರಿಸಿದರು ಮತ್ತು ನಂತರ ಕುಲಕರ್ಣಿಯಿಂದ ಅವನ ಇಚ್ಛೆಯನ್ನು ಪೂರೈಸಲು 10 ರೂಪಾಯಿಗಳನ್ನು ವಸೂಲಿ ಮಾಡಿದರು. – *(ಇಂಗ್ಲಿಷ್) ಸಚ್ಚರಿತೆ, ಅಧ್ಯಾಯ–33, ಪಿ.ಪಿ–147.* |
| 1917 | ಉಪಾಸನಿ ಮಹಾರಾಜನು ಸಾಕೋರಿಯಲ್ಲಿ ಶಾಶ್ವತವಾಗಿ ನೆಲಸಿದನು. – *(ಇಂಗ್ಲಿಷ್) ನರಸಿಂಹ ಸ್ವಾಮಿಯವರ 'ಸಾಕೋರಿಯ ಸಾಧು'* |
| 1918 | ಮೋರೇಶ್ವರ ವಾಮನ ಪ್ರಧಾನನು ಲೆಂಡಿಬಾಗ್‌ನ್ನು ಖರೀದಿಸಿ ನಂತರ ಸಂಸ್ಥಾನಕ್ಕೆ ಅದನ್ನು ಉಡುಗೊರೆಯಾಗಿ ನೀಡಿದನು. – *(ಇಂಗ್ಲಿಷ್) ಪ್ರಧಾನ್* |
| 1918 | ಬಾಪು ಸಾಹೇಬ ಬುಟಿಯ ಅಳಿಯ ಪ್ರೊಫೆಸರ್ ನರ್ಕೆಗೆ ಪುಣೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಒಂದು ವೃತ್ತಿ ದೊರೆಯಿತು. – *(ಇಂಗ್ಲಿಷ್) ನರಸಿಂಹ ಸ್ವಾಮಿಯವರ 'ಭಕ್ತರ ಅನುಭವಗಳು'.* |
| ಆಗಸ್ಟ್ 1918 | ಬಾಬಾರವರು ಹೇಮಾಡಪಂತನಿಗೆ ಒಂದು ಲೋಟ ಮಜ್ಜಿಗೆಯನ್ನು ಕೊಟ್ಟು ಅವನಿಗೆ ಕುಡಿಯಲು ಸಮಜಾಯಿಸಿದರು. – *(ಇಂಗ್ಲಿಷ್) ಸಚ್ಚರಿತೆ, ಅಧ್ಯಾಯ–38, ಪಿ.ಪಿ–182* |
| ಆಗಸ್ಟ್ 1918 (ಅಂದಾಜು) | ಬಾಬಾರವರು ಸದ್ಯದಲ್ಲಿಯೇ ತಮ್ಮ ಭೌತಿಕ ದೇಹವನ್ನು ತ್ಯಜಿಸುವೆನೆಂದು ತಿಳಿದಿದ್ದರಿಂದ ಅವರು ಕರೀಮನಿಗೆ ಆಹಾರ ಮತ್ತು 250 ರೂಪಾಯಿಗಳನ್ನು ಔರಂಗಾಬಾದ್‌ನ ಷಂಸುದ್ದೀನ್ ಫಕೀರನಿಗೆ ಕೊಟ್ಟು ಇಸ್ಲಾಮಿನ ಧರ್ಮದ ರೀತಿಯಲ್ಲಿ ತಮ್ಮ ದೇಹದ ಅಂತ್ಯಕ್ರಿಯೆಗಳನ್ನು ನಡೆಸಬೇಕೆಂದು ತಿಳಿಸಲು ಹೇಳಿದರು. ಬನ್ನೆ ಮಿಯಾನಿಗೆ ಒಂದು ಸಂದೇಶ ತಲುಪಿಸಲು ಕರೀಮನಿಗೆ ಹೇಳಿದ್ದರು. ಅದೂಗೆ ಇಸ್ಲಾಮಿನ್ ಕ್ಯಾಲೆಂಡರ್ ಪ್ರಕಾರ ಬೆಳಕು ಅರುವ ತಿಂಗಳು ಮತ್ತು ದಿನ ಇವುಗಳನ್ನೂ ಸೂಚಿಸಿದ್ದರು. – *(ಇಂಗ್ಲಿಷ್) ನರಸಿಂಹ ಸ್ವಾಮಿಯವರ 'ಭಕ್ತರ ಅನುಭವಗಳು' ಭಾಗ – 3.* |
| ಗಣೇಶ ಚತುರ್ಥಿ, 9 ಸೆಪ್ಟೆಂಬರ್ 1918 | ನರ್ಮದಾ ನದಿಯ ತೀರದಲ್ಲಿರುವ ಮಹೇಶ್ವರಿ (ಊರಿನ ಹೆಸರು)ಯಲ್ಲಿ ದಾಸಗಣು ಮಹಾರಾಜನು 'ಸ್ತವನ ಮಂಜರಿ'ಯನ್ನು ಮುಕ್ತಾಯಗೊಳಿಸಿದನು. – *(ಇಂಗ್ಲಿಷ್) 'ಸ್ತವನ ಮಂಜರಿ', ಪಿ.ಪಿ–159* |
| ಸೆಪ್ಟೆಂಬರ್ 28, 1918 | ಬಾಬಾರವರಿಗೆ ಹಿಂದಿನ 2–3 ದಿನಗಳಿಂದ ಜ್ವರವಿದ್ದುದರಿಂದ ಅವರು ಆಹಾರವನ್ನು ಬಿಟ್ಟರು. ಅದರಿಂದ ದಿನೇ ದಿನೇ ಶಕ್ತಿಹೀನರಾದರು. – *(ಇಂಗ್ಲಿಷ್)* |

*ದಾದಾ ಸಾಹೇಬ್ ಖಾಪರ್ಡೆ ಅವರಿಗೆ ಬರೆದ (ಸಾಯಿಲೀಲಾ, ಅಕ್ಟೋಬರ್ 1987) ಪ್ರೊಫೆಸರ್ ನರ್ಕೆಯವರ ಪತ್ರ*

**ಅಕ್ಟೋಬರ್ 1, 1918** ಸಾಯಿಬಾಬಾರವರು ವಝೆ ಎಂಬ ಭಕ್ತನಿಗೆ 'ರಾಮ ವಿಜಯ'ದ ಪಾರಾಯಣ ಪ್ರಾರಂಭಿಸಲು ಹೇಳಿದರು ಮತ್ತು ಅದನ್ನು 14 ದಿನಗಳ ಕಾಲ ಕೇಳಿಸಿಕೊಂಡರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-43, ಓ.ವಿ-35.*

**ಅಕ್ಟೋಬರ್ 8, 1918** ಬಾಬಾರವರು ದರವೇಶರ ಹುಲಿಯೊಂದಕ್ಕೆ ಮುಕ್ತಿ ನೀಡಿದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-31, ಓ.ವಿ-166*

**ಅಕ್ಟೋಬರ್ 15, ಮಂಗಳವಾರ 1918** ವಿಜಯದಶಮಿಯಂದು ಲಕ್ಷ್ಮೀಬಾಯಿ ಶಿಂಧೆಯು ಬಾಬಾರವರಿಂದ ಒಂಭತ್ತು ರೂಪಾಯಿಗಳನ್ನು ದಾನವಾಗಿ ಪಡೆದಳು. ನಂತರ ಅದೇ ದಿನ ಮಧ್ಯಾಹ್ನ 2.30ಕ್ಕೆ ಆಗ ಏಕಾದಶಿಯಾಗಿದ್ದು, ಬಾಬಾರವರು ಈ ಭೌತಿಕ ಶರೀರವನ್ನು ತ್ಯಜಿಸಿದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-43, ಓ.ವಿ-11.*

**ಅಕ್ಟೋಬರ್ 16, ಬುಧವಾರ 1918** ಲಕ್ಷ್ಮಣ್ ಮಾಮಾ ಜೋಷಿಯು ಒಂದು ಸ್ವಪ್ನದರ್ಶನ ಪಡೆದು ಬಾಬಾರವರು ಶಿರಡಿಯಲ್ಲಿ ಕಾಕಡಾರತಿ ಮಾಡಲು ಅವನನ್ನು ಕರೆದರು. ದಾಸಗಣುವೂ ಸಹ ಒಂದು ಸ್ವಪ್ನದರ್ಶನ ಪಡೆದು ಅದರಲ್ಲಿ ಬಾಬಾರವರು ತಾವು ಶಿರಡಿಯನ್ನು ಬಿಟ್ಟುಹೋಗುತ್ತಿರುವುದಾಗಿ ತಿಳಿಸಿ ಅವನು ಬಹಳ ಪುಷ್ಪಗಳೊಂದಿಗೆ ಬೇಗನೆ ಬರಲು ತಿಳಿಸಿದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-43, ಓ.ವಿ-162-3, ಅಧ್ಯಾಯ-43, ಓ.ವಿ-69 ರಿಂದ 71.*

**ಅಕ್ಟೋಬರ್ 16, ಬುಧವಾರ ಅಕ್ಟೋಬರ್ 1918** ಮುಂಬಯಿಯಿಂದ ಅನನ್ಯ ಭಕ್ತನಾದ ಅಮೀರಭಾಯಿ ಹಕ್ಕರ್ ಮತ್ತು ಕೋಪರಗಾಂವ್‌ನ ಮಾಮಲೇದಾರ ಇಬ್ಬರೂ ಆಗಮಿಸಿದರು. ಬಾಬಾರವರ ದೇಹವನ್ನು ಎಲ್ಲಿಡಬೇಕೆಂಬುದರ ಬಗ್ಗೆ ವಾದ ಪ್ರತಿವಾದಗಳು ನಡೆದವು. ಕೊನೆಯಲ್ಲಿ ಬೂಟಿವಾಡಾವನ್ನು ಬಾಬಾರವರ ಸಮಾಧಿಗಾಗಿ ನಿಶ್ಚಯಿಸಲಾಯಿತು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-43*

**ಅಕ್ಟೋಬರ್ 16, ಬುಧವಾರ 1918** ಸಾಯಿಬಾಬಾರವರ ದೇಹವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ನಂತರ ಸಂಜೆಯವೇಳೆಗೆ ಬೂಟಿವಾಡೆಯ ಮಧ್ಯ(ಗರ್ಭ)ದಲ್ಲಿ ನೆಲಸಿಡಲಾಯಿತು. – *(ಉಲ್ಲೇಖ) ಪ್ರೊಫೆಸರ್ ನರ್ಕೆಯವರ ಪತ್ರ, ದಿನಾಂಕ 5-11-1918.*

**ಅಕ್ಟೋಬರ್ 27, 1918** ಬಾಬಾರವರ ಮಹಾನಿರ್ವಾಣದ ಹದಿಮೂರು ದಿನಗಳ ನಂತರ ಭಕ್ತರು ಬಾಳಾಸಾಹೇಬ ಭಾಟೆ ಮತ್ತು ಉಪಾಸನಿ ಮಹಾರಾಜ್‌ರ ನೇತೃತ್ವದಲ್ಲಿ ಅಪರಕರ್ಮಗಳನ್ನು ಆಚರಿಸಿದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-44.*

**ಅಕ್ಟೋಬರ್ 27, 1918** ನಾನಾವಲಿಯು ಬಾಬಾರವರ ಅಗಲಿಕೆಯಿಂದ ಅತ್ಯಂತ ದುಃಖಿತನಾಗಿ ಹದಿಮೂರನೆಯ ದಿನ ಯಾವಾಗಲೂ ಅವರನ್ನು ಕರೆಯುವ ರೀತಿಯಲ್ಲಿ 'ಕಾಕಾ, ಕಾಕಾ' ಎಂದು ಕರೆಯುತ್ತ ನಿಧನ ಹೊಂದಿದನು. ನಾನಾವಲಿಯ ಸಮಾಧಿಯು ಲೆಂಡಿಬಾಗ್‌ನಲ್ಲಿದೆ. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-18, ಓ.ವಿ-*

*106 ವರ್ಷ ಭಕ್ತರ ಅನುಭವಗಳು*

ನವೆಂಬರ್ 5, 1918 ಶೇಠ ಕುಶಾಲಚಂದನು ಮರಣಹೊಂದಿದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-8, ಓ.ವಿ-131.*

ಡಿಸೆಂಬರ್ 24 ರಿಂದ 26, 1918 ಶಿರಡಿಯ ಭಕ್ತರು ಬಾಪುಸಾಹೇಬ ಬುಟಿಯ ಅಧ್ಯಕ್ಷತೆಯಲ್ಲಿ, ಬಾಬಾರವರ ಸಮಾಧಿಗೆ ನಿತ್ಯ ಪೂಜಾವಿಧಿಗಳೊಡನೆ ಅನುಕೂಲವಾಗುವಂತೆ ಮಾಡಲು ಒಂದು ಕಮಿಟಿಯನ್ನು ರಚಿಸಿದರು. – *(ಉಲ್ಲೇಖ) ಪ್ರಧಾನ್.*

ಜನವರಿ 1919 ಪುಣೆಯಲ್ಲಿ ನಾನಾ ಸಾಹೇಬ ನಿಮೋಣಕರ್‌ನ ನಿಧನ. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-12, ಓ.ವಿ-56 ರಿಂದ 66.*

1921 ನಾಸಿಕ್‌ನ ನಾರಾಯಣ ಮೋತಿರಾಮ್ ಜಾನಿಗೆ ಒಂದು ಸ್ವಪ್ನದರ್ಶನದಲ್ಲಿ ಬಾಬಾರವರು ಒಂದು ನೆಲಮಾಳಿಗೆಯಿಂದ ಹೊರಬಂದು ಅವನ ಆರೋಗ್ಯವು ಸುಧಾರಿಸುವ ಭರವಸೆ ನೀಡಿ ಅವನು ಮತ್ತೊಂದು ವಾರದಲ್ಲಿ ತನ್ನ ಕಾಲಿನ ಮೇಲೆ ನಡೆಯುವನೆಂದು ತಿಳಿಸಿದರು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-33, ಓ.ವಿ-126.*

1921 ಅಣ್ಣಾಸಾಹೇಬ ದಾಭೋಳ್ಕರ್‌ಗೆ ಸಚಿವಾಲಯದಲ್ಲಿ ಆರು ತಿಂಗಳುಗಳ ಕಾಲದ ಒಂದು ವೃತ್ತಿಯು ದೊರೆಯಿತು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ-3, ಓ.ವಿ-161.*

1921 ಕಲ್ಲಿನಿಂದ ಕಟ್ಟಿದಂತಹ ವಾಡಾ ಈಗ ಸಮಾಧಿ ಮಂದಿರವಾಗಿರುವುದನ್ನು ಕಟ್ಟಿಸಿದಂತಹ ಬಾಪುಸಾಹೇಬ ಬುಟಿಯು ಮುಂಬಯಿಯಲ್ಲಿ ನಿಧನ ಹೊಂದಿದನು. – *(ಉಲ್ಲೇಖ) ಪ್ರಧಾನ್.*

ಆಗಸ್ಟ್ 1921 ನಾನಾಸಾಹೇಬ ಚಂದೋರಕರನು ತನ್ನ 61ನೆಯ ವಯಸ್ಸಿನಲ್ಲಿ ಮುಂಬಯಿಯ ಕಲ್ಯಾಣದಲ್ಲಿ ನಿಧನ ಹೊಂದಿದನು. – *(ಉಲ್ಲೇಖ) ದೇವಾಜ 'ಬಾಬಾರವರ ಜೀವನ ಚರಿತ್ರೆ'*

1921 ಅಹಮದ್ ನಗರದ ಜಿಲ್ಲಾನ್ಯಾಯಾಲಯದ ಒಪ್ಪಿಗೆ ಪಡೆದು ಶ್ರೀ ಸಾಯಿಬಾಬಾ ಸಂಸ್ಥಾನವು ಸ್ಥಾಪಿಸಲ್ಪಟ್ಟಿತು. – *(ಉಲ್ಲೇಖ) ಪ್ರಧಾನ್.*

1922 ಹಿಂದೂ ಪಂಚಾಂಗದ ಚೈತ್ರ ಮಾಸದಲ್ಲಿ 'ಶ್ರೀ ಸಾಯಿ ಸಚ್ಚರಿತೆ'ಯ ಬರವಣಿಗೆಯು ಪ್ರಾರಂಭವಾಯಿತು.–*(ಉಲ್ಲೇಖ) ಸಚ್ಚರಿತೆ, ಅಧ್ಯಾಯ-53, ಓ.ವಿ-179.*

ಸೆಪ್ಟೆಂಬರ್ 11, 1922 ಏಕಾದಶಿಯಂದು ಮಾಳಸಾಪತಿಯು ಶಿರಡಿಯಲ್ಲಿ ನಿಧನ ಹೊಂದಿದನು. – *(ಉಲ್ಲೇಖ) ನರಸಿಂಹ ಸ್ವಾಮಿಯವರ 'ಸಾಯಿಬಾಬಾರವರ ಜೀವನ ಚರಿತ್ರೆ'*

ಏಪ್ರಿಲ್ 1923 ಲಕ್ಷ್ಮಣ ಗಣೇಶ ಅಲಿಯಾಸ್ ಕಾಕಾ ಮಹಾಜನಿಯು ಸಂಪಾದಕರಾಗಿರುವ 'ಸಾಯಿಲೀಲ' ಎಂಬ ಪುರವಣಿಯ ಮೊದಲ ಸಂಚಿಕೆ ಪ್ರಕಟಗೊಂಡಿತು.

ಸೆಪ್ಟೆಂಬರ್ 30, 1924 ಎಸ್.ಎಸ್. ನಮಾಲ್ಕರ್‌ನು ಸಾಠೆವಾಡಾವನ್ನು ಖರೀದಿಸಿದನು ಮತ್ತು ಅವನ ಉತ್ತರಾಧಿಕಾರಿಗಳು 1939ರಲ್ಲಿ ಸಂಸ್ಥಾನಕ್ಕೆ ಉಡುಗೊರೆಯಾಗಿ ನೀಡಿದರು.

| | |
|---|---|
| | *– (ಉಲ್ಲೇಖ) ಪ್ರಧಾನ್.* |
| 1924 | ಬಾಳಾರಾಮ ಧುರಂಧರನು ತನ್ನ 47ನೆಯ ವಯಸ್ಸಿನಲ್ಲಿ ಮರಣಹೊಂದಿದನು. *– (ಉಲ್ಲೇಖ) ಸತ್ಚರಿತ್, ಅಧ್ಯಾಯ–51, ಓವಿ–198* |
| 1925 | ದಾಸಗಣುವಿನ ಪುಸ್ತಕ 'ಭಕ್ತ ಸಾರಾಮೃತ' ಪ್ರಕಟಗೊಂಡಿತು. *– (ಉಲ್ಲೇಖ) ಭಕ್ತರ ಅನುಭವಗಳು* |
| ಆಗಸ್ಟ್ 17, 1925 | ಹಜರತ್ ತಾಜುದ್ದೀನ್‌ಬಾಬಾರವರು ನಾಗಪುರದಲ್ಲಿ ತಮ್ಮ 64ನೆಯ ವರ್ಷದಲ್ಲಿ ಭುವಿಯಿಂದ ಮರೆಯಾದರು. |
| | *– (ಉಲ್ಲೇಖ) ಸತ್ಚರಿತ್, ಅಧ್ಯಾಯ–41, ಓವಿ–29.* |
| 1926 | ಬಾಪುಸಾಹೇಬ ಜೋಗನು ಸಕೋರಿಯಲ್ಲಿ ತನ್ನ 70ನೆಯ ವಯಸ್ಸಿನಲ್ಲಿ ಮೃತನಾದನು. ಅವನ ಸಮಾಧಿಯು ದತ್ತಮಂದಿರದ ಹತ್ತಿರದಲ್ಲಿದೆ. |
| | *– (ಉಲ್ಲೇಖ) ಸತ್ಚರಿತ್, ಅಧ್ಯಾಯ–28, ಓವಿ–75, ಅಧ್ಯಾಯ–44, ಓವಿ–145.* |
| ಜುಲೈ 5, 1926 | ಕಾಕಾಸಾಹೇಬ ದೀಕ್ಷಿತನು ತನ್ನ 62ನೆಯ ವಯಸ್ಸಿನಲ್ಲಿ ಮೃತನಾದನು. (ಜ್ಯೇಷ್ಠ ಮಾಸದ ಕೃಷ್ಣಪಕ್ಷದ ಏಕಾದಶಿ) |
| | *– (ಉಲ್ಲೇಖ) ಸತ್ಚರಿತ್, ಅಧ್ಯಾಯ–51, ಓವಿ–109 ಮತ್ತು ಸಾಯಿ ಬಾಬಾರವರ ಜೀವನ ಚರಿತ್ರೆ ಭಾಗ–8.* |
| 1928 | ರಾವ್‌ಬಹಾದುರ್ ಸಾಠೆಯ ಮಾವನಾದ ಗಣೇಶ ದಾಮೋದರ ಅಲಿಯಾಸ್ ದಾದಾ ಕೇಳ್ಕರ್ ಮರಣಹೊಂದಿದನು. |
| | *– (ಉಲ್ಲೇಖ) ಭಕ್ತರ ಅನುಭವಗಳು* |
| 1929 | ಜ್ಯೇಷ್ಠ ಮಾಸದಲ್ಲಿ ಸಚ್ಚರಿತೆಯು ಮುಕ್ತಾಯವಾಯಿತು. ಆದರೆ 52ನೆಯ ಅಧ್ಯಾಯದಲ್ಲಿ 'ಅವತರಣಿಕೆ' ಅಂದರೆ ವಿಷಯಸೂಚಿ ಅಥವಾ ಪರಿಷ್ಕರಣೆಯು ದಾಭೋಳ್ಕರನು ಅದರ ಬಗ್ಗೆ ಸೂಚಿಸಿದ್ದರೂ ಅದು ದೊರಕಿಲಿಲ್ಲ. ಆದ್ದರಿಂದ ಬಾಲಕೃಷ್ಣ ದೇವನು ಅದನ್ನು ಬರೆದನು. ಹಾಗೆ ಈ ಗ್ರಂಥಕ್ಕೆ 53ನೆಯ ಅಧ್ಯಾಯವನ್ನು ಸೇರಿಸಲಾಯಿತು. *– (ಉಲ್ಲೇಖ) ಸತ್ಚರಿತ್, ಅಧ್ಯಾಯ–53, ಓವಿ–179 ಮತ್ತು ಅಧ್ಯಾಯ–53, ಓವಿ–1.* |
| ಜುಲೈ 15, 1929 | ಗೋವಿಂದ ಆರ್ ದಾಭೋಳ್ಕರ್ (ಹೇಮಾಡಪಂತ) ತನ್ನ 70ನೆಯ ವಯಸ್ಸಿನಲ್ಲಿ ಮೃತನಾದನು. *– (ಉಲ್ಲೇಖ) ಸತ್ಚರಿತ್, ಅಧ್ಯಾಯ–53, ಓವಿ–178* |
| ನವಂಬರ್ 26, 1930 | ಶ್ರೀ ಸಾಯಿ ಸಚ್ಚರಿತೆಯನ್ನು ಗ್ರಂಥವನ್ನಾಗಿ ಮೊದಲ ಬಾರಿಗೆ ರಾಮಚಂದ್ರ ಆತ್ಮಾರಾಮ ತರ್ಖಡನು ಪ್ರಕಟಿಸಿದನು ಮತ್ತು ಅದರ ಹಕ್ಕುಗಳನ್ನು ಸಂಸ್ಥಾನಕ್ಕೆ ನಿರ್ವಹಿಸಲಾಯಿತು. |
| ಅಕ್ಟೋಬರ್ 8, 1935 | ಕೆ. ಜೆ. ಭೀಷ್ಮ, 'ಸಾಯಿ ಸಗುಣೋಪಾಸನೆ'ಯ (ಆರತಿ) ಕರ್ತೃ ತನ್ನ 81ನೆಯ ವಯಸ್ಸಿನಲ್ಲಿ ಮೃತನಾದನು. *– (ಉಲ್ಲೇಖ) ಶ್ರೀ ಸಾಯಿಲೀಲಾ ಅಕ್ಟೋಬರ್ 1987.* |

| | |
|---|---|
| 1938 | ಲಕ್ಷ್ಮಣ ಗಣೇಶ್ ಅಲಿಯಾಸ್ ಕಾಕಾ ಮಹಾಜನಿಯು ನಿಧನ ಹೊಂದಿದನು. ಅಮರಾವತಿಯ ಗಣೇಶ ಶ್ರೀಕೃಷ್ಣ ಅಲಿಯಾಸ್ ದಾದಾ ಸಾಹೇಬ್ ಖಪರ್ಡೆಯು ತನ್ನ 84ನೆಯ ವಯಸ್ಸಿನಲ್ಲಿ ಮೃತನಾದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–6, 12, 13.* |
| 1939 | ಚೆನ್ನೈನ ಬಿ. ವಿ. ನರಸಿಂಹ ಸ್ವಾಮೀಜಿಯು ಸಾಯಿಬಾಬಾರವರ ವಿಷಯವನ್ನು ಹರಡಲು ಪ್ರಾರಂಭಿಸಿದರು. ಹಾಗಾಗಿ ದಕ್ಷಿಣ ಭಾರತದ ಜನರು ಶಿರಡಿಗೆ ಯಾತ್ರಾರ್ಥಿಗಳಾಗಿ ಬರಲು ಪ್ರಾರಂಭಿಸಿದರು. – *(ಉಲ್ಲೇಖ) ಭಕ್ತರ ಅನುಭವಗಳು, ಮುನ್ನುಡಿ.* |
| ಏಪ್ರಿಲ್ 26, 1940 | ಮಾಧವರಾವ್ ದೇಶಪಾಂಡೆ (ಶಾಮಾ) ತನ್ನ 80ನೆಯ ವಯಸ್ಸಿನಲ್ಲಿ ಮರಣಹೊಂದಿದನು.– *(ಉಲ್ಲೇಖ) ಸಂತ ಚೂಡಾಮಣಿ.* |
| ಜೂನ್ 29, 1940 | ಭಾಪುಸಾಹೇಬ ಎಸ್. ಬಿ. ಧುಮಾಲ್ ನಾಸಿಕದ ವಕೀಲನು 67ನೆಯ ವಯಸ್ಸಿನಲ್ಲಿ ಮರಣಹೊಂದಿದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–12, ಓವಿ–46.* |
| ಜನವರಿ 20, 1941 | ದಾಮೂ ಅಣ್ಣಾ ರಸನೆಯು ಮೃತನಾದನು. – *(ಉಲ್ಲೇಖ) ಸಚ್ಚರಿತೆ, ಅಧ್ಯಾಯ–25.* |
| ಜುಲೈ 1, 1941 | ಬಿ. ವಿ. ನರಸಿಂಹಸ್ವಾಮೀಜಿಯು ಮದ್ರಾಸಿನ ಅಖಿಲ ಭಾರತ ಸಾಯಿ ಸಮಾಜವನ್ನು ಸ್ಥಾಪಿಸಿದರು. – *(ಉಲ್ಲೇಖ) ಸಾಯಿಸುಧಾ, ಜೂನ್ 1991.* |
| ಡಿಸೆಂಬರ್ 24, 1941 | ಉಪಾಸನಿ ಮಹಾರಾಜರು ಶಿರಡಿಯ ಹತ್ತಿರ ಇರುವ ಸಾಕೋರಿಯಲ್ಲಿ ತಮ್ಮ 71ನೆಯ ವಯಸ್ಸಿನಲ್ಲಿ ಮೃತರಾದರು. – *(ಉಲ್ಲೇಖ) ಸಾಕೋರಿಯ ಸಾಧು* |
| 1944 | 'ಶ್ರೀ ಸಾಯಿಲೀಲ' ಪುರವಣಿಯ ಪ್ರಕಟಣೆಯನ್ನು 3 ವರ್ಷಗಳ ಕಾಲ ನಿಲ್ಲಿಸಲಾಗಿತ್ತು. ಅದನ್ನು ಮತ್ತೆ 1947ರಲ್ಲಿ ಪುನಃ ಪ್ರಾರಂಭಿಸಲಾಯಿತು. |
| 1945 | ತಾತ್ಯಾ ಜಿ ಕೋತೆ ಪಾಟೀಲನು ಮೃತನಾದನು. |
| 1948 | ಬಾಳಾಸಾಹೇಬ ದೇವಾನು ಮೃತನಾದನು. |
| 1948 | ಆರ್. ಬಿ. ಪುರಂದರೆಯು ಮೃತನಾದನು. |
| ರಾಮನವಮಿ 1951 | ಒಂದು ದೊಡ್ಡ ಅಂಗಳವನ್ನು ಕಟ್ಟಲಾಯಿತು. ಸಮಾಧಿ ಮಂದಿರವನ್ನು ವಿಸ್ತರಿಸಿ 400 ರಿಂದ 500 ಭಕ್ತರು ಹಿಡಿಸುವಷ್ಟು ಜಾಗ ಒದಗಿಸಲಾಯಿತು. – *(ಉಲ್ಲೇಖ) ನೋಡಿರಿ ಮೇಲಿನ ಫಲಕ.* |
| ಸೆಪ್ಟೆಂಬರ್ 29, 1952 | ಒಂದು 'ಚಿನ್ನದ ಕಲಶ'ವನ್ನು ಸಮಾಧಿಮಂದಿರದ ಮೇಲೆ ಸ್ಥಾಪಿಸಲಾಯಿತು. – *(ಉಲ್ಲೇಖ) ಸಾಯಿಲೀಲ, ಅಕ್ಟೋಬರ್, ನವೆಂಬರ್, ಡಿಸೆಂಬರ್ 1952.* |
| ಜುಲೈ 14, 1953 | ವಾಮನರಾವ್ ಪಾಟೀಲನು ಸನ್ಯಾಸ ಸ್ವೀಕರಿಸಿದನು. ಅವನ ವಯಸ್ಸು 64 ಆಗಿದ್ದು ಶ್ರೀಸಾಯಿ ಶರಣಾನಂದ ಎಂಬ ನಾಮ ನೀಡಲಾಯಿತು. – *(ಉಲ್ಲೇಖ) ಸಾಯಿಬಾಬಾ ಚರಿತ, ಪುಟ 380* |

| | |
|---|---|
| ಏಪ್ರಿಲ್ 1954 | ಅಬ್ದುಲ್ ಬಾಬಾ ತನ್ನ 83ನೆಯ ವಯಸ್ಸಿನಲ್ಲಿ ಮರಣಹೊಂದಿದನು. *–(ಉಲ್ಲೇಖ) ಸಾಯಿ ಬಾಬಾ ಜೀವನ ಚರಿತ್ರೆ ಭಾಗ-3* |
| ಅಕ್ಟೋಬರ್ 7, 1954 | ಸಾಯಿನಾಥರ ಬೃಹತ್ ಮೂರ್ತಿಯೊಂದನ್ನು ಸಮಾಧಿ ಮಂದಿರದಲ್ಲಿ ಪ್ರತಿಷ್ಠಾಪಿಸಲಾಯಿತು. ಮತ್ತು ಸ್ವಾಮಿ ಶ್ರೀ ಸಾಯಿಶರಣಾನಂದರ ಪವಿತ್ರ ಹಸ್ತಗಳಿಂದ ಅದರ ಪ್ರಾಣಪ್ರತಿಷ್ಠಾಪನೆ ಮಾಡಲಾಯಿತು. *– (ಉಲ್ಲೇಖ) ಶ್ರೀ ಸಾಯಿಲೀಲಾ, ಏಪ್ರಿಲ್ 1981* |
| ಅಕ್ಟೋಬರ್ 19, 1956 | ಬಿ. ವಿ. ನರಸಿಂಹ ಸ್ವಾಮೀಜಿಯವರು ತಮ್ಮ 82ನೆಯ ವಯಸ್ಸಿನಲ್ಲಿ ದೇಹತ್ಯಾಗ ಮಾಡಿದರು. |
| 1962 | ದಾಸಗಣು ಮಹಾರಾಜರು ಕಾರ್ತಿಕ ಕೃಷ್ಣಪಕ್ಷ ಏಕಾದಶಿಯಂದು 95ನೆಯ ವಯಸ್ಸಿನಲ್ಲಿ ಅತೀತರಾದರು. |
| ಜೂನ್ 2, 1963 | ಲಕ್ಷ್ಮೀಬಾಯಿ ತುಕಾರಾಮ ಶಿಂಧೆ, ಬಾಬಾರವರಿಂದ 9 ನಾಣ್ಯಗಳನ್ನು ಸ್ವೀಕರಿಸಿದವಳು ಮರಣಹೊಂದಿದಳು. *– (ಉಲ್ಲೇಖ) ಸಚ್ಚರಿತೆ, ಅಧ್ಯಾಯ-42* |
| 1964 | ರಾಮಚಂದ್ರ ದಾದಾ ಪಾಟೀಲ ನಿಧನ ಹೊಂದಿದನು. *– (ಉಲ್ಲೇಖ) ಸಚ್ಚರಿತೆ, ಅಧ್ಯಾಯ-42* |
| 1984 | ಸಂಸ್ಥಾನದ ಹೊಸ ವಿಶ್ವಸ್ಥಮಂಡಳಿಯನ್ನು ನೇಮಕಮಾಡಲಾಯಿತು. ಡಾ|| ಪಿ. ಕೆ. ಸಾವಂತ್‌ರವರು ನಾಲ್ಕು ವರ್ಷಗಳ ಕಾಲ ಅಧ್ಯಕ್ಷರಾಗಿದ್ದು ನಂತರ ಶ್ರೀ ಎಂ. ಆರ್. ಪಾಟೀಲ ಒಂದು ವರ್ಷಕಾಲ ಇದ್ದರು. |
| ಸಪ್ಟೆಂಬರ್ 1, 1989 | ಪ್ರೊಫೆಸರ್ ಡಾಕ್ಟರ್ ಲೇಖಾ ಪಾಠಕ್‌ರ ಅಧ್ಯಕ್ಷತೆಯಲ್ಲಿ 25 ಸದಸ್ಯರ ಹೊಸ ವಿಶ್ವಸ್ಥ ಮಂಡಲಿಯ ನೇಮಿಸಲಾಯಿತು. |
| ಮೇ 4, 1990 | 'ಭಕ್ತನಿವಾಸ'ದ ಶಂಕುಸ್ಥಾಪನೆ ಮಾಡಲಾಯಿತು. |
| 1 ಸೆಪ್ಟೆಂಬರ್ 1994 | ಹೊಸ ವಿಶ್ವಸ್ಥ ಮಂಡಲಿಯನ್ನು ನೇಮಿಸಿ ಡಿ. ಎಂ. ಸುಖಟಣಕರರವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. |
| 2001 | ಗುರುಸ್ಥಾನ್, ಚಾವಡಿ, ದ್ವಾರಕಾಮಾಯಿ ಮತ್ತು ಅದರ ಪಕ್ಕದ ಭಾಗ ಎಲ್ಲವೂ ಸೇರಿದಂತೆ ಇಡೀ ಸಮಾಧಿ ಮಂದಿರಮುಚ್ಚುಯವನ್ನು ಸಂಪೂರ್ಣವಾಗಿ ನವೀಕರಿಸಲಾಯಿತು, ಸಾಠೆವಾಡಾವನ್ನು ಕೆಡವಿಹಾಕಿ. |
| ಅಗಸ್ಟ್ 23, 2004 | ಸಂಸ್ಥಾನದ ಹೊಸ ವಿಶ್ವಸ್ಥಮಂಡಲಿಯನ್ನು ನೇಮಕಾತಿ ಮಾಡಿ ಶ್ರೀ ಜೆ. ಎಂ. ಸಪಾನೆಯವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. |

||ಓಂ ಶ್ರೀ ಸಾಯಿರಾಮ್||